ನವಯುಗ
ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂದ
ಪ್ರಕಟವಾದ ...
ಉಡುಪಿ, ದ. ಕನ್ನಡ

Regd. No. M. 3618

LICENCE No. 31
Licensed to Post without Prepayment

ಚಂದಾ 5-12-0
ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ನವಯುಗ

4-6-1953

Vol 32 No 39 NAVAYUGA WEEKLY POST BOX NO 22 UDIPI

ವರ್ಷ ೩೨ ವಾರ ೩೯

ಅಂತರಂಗ
ಶಿಸ್ತುಬದ್ಧ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಆಸ್ಕಾರ್ ವೈಲ್ಡರು ಸುಪ್ರಸಿದ್ಧ ಸಾಹಿತಿ. ಒಂದು ದಿನ ಅವರಲ್ಲಿಗೆ ಅತಿಥಿಯೋರ್ವರು ಬಂದರು. "ಸಾಹಿತ್ಯ, ನರ್ತನ, ಕಲೆ, ಸಾಹಿತ್ಯ, ಸಂಸ್ಕೃತಿ ಮುಂತಾದವುಗಳಲ್ಲಿ ಮನಸ್ಸು ತೊಡಗಿಸುವುದೆಂದರೆ ವ್ಯರ್ಥ ಸಮಯ ಹಾಳುಮಾಡುವುದೇ" ಎಂದು ಬಿಟ್ಟರು.

ಮರುದಿನ ಮುಂಜಾನೆ ಅತಿಥಿ ಮಹಾಶಯರು ಏಳುವುದಕ್ಕೆ ಬಹಳ ಮುಂಚೆ ಆಸ್ಕಾರ್ ವೈಲ್ಡರು ಹೊರಗೆಲ್ಲಿಗೋ ಹೋಗಿದ್ದರು. ಅತಿಥಿಗಳು ಕಾದು ಕಾದು ಬೇಸತ್ತು ಕುಳಿತರು. ಮಧ್ಯಾಹ್ನದ ಸುಮಾರಿಗೆ ಆಸ್ಕಾರ್ ವೈಲ್ಡರು ಮನೆಗೆ ಬಂದಾಗ "ಏನು ಸ್ವಾಮಿ, ಇಷ್ಟು ಹೊತ್ತು ಎಲ್ಲಿದ್ದಿರಿ" ಎಂದು ಪ್ರಶ್ನೆ ಬಂತು.

"ಬಹಳ ಅಗತ್ಯದ ಕೆಲಸವಿತ್ತು. ನನ್ನ ಪುಸ್ತಕದ ಕರಡು ಪ್ರತಿಯನ್ನು ತಿದ್ದುವುದಕ್ಕೆ ಕುಳಿತೆ."

"ಹಾಂ, ಅದೂ ಒಂದು ಕೆಲಸವೇ!"

"ಅಲ್ಲವೇ, ಮತ್ತೆ. ಹಾಗೆ ನೋಡುತ್ತಿರುವಾಗ ಒಂದು ಅಲ್ಪ ವಿರಾಮ ನನಗೆ ಅನಗತ್ಯವೆಂದು ಕಂಡುಬಂತು, ಅದನ್ನು ತೆಗೆದು ಹಾಕಲು ಹೇಳಿದೆ.

"ಸರಿ ದಿನವಿಡೀ ಮಾಡಿದ ಕೆಲಸವೆಂದರೆ ಇಷ್ಟೇ? ಅಷ್ಟೇ? ವ್ಯರ್ಥ ಸಮಯ ಕಳೆದಿರಿ."

"ಸ್ವಲ್ಪ ನಿಲ್ಲಿ—ಅಲ್ಪ ವಿರಾಮ ತೆಗೆದು ಹಾಕಬೇಕೋ ಬೇಡವೋ ಎಂದು ಮರಳಿ ಯೋಚನೆಗೆ ತೊಡಗಿದೆ. ಪರಿಣಾಮವಾಗಿ ಅಲ್ಪವಿರಾಮ ಅಗತ್ಯವೆಂದೇ ಸ್ಪಷ್ಟ ಗೋಚರಿಸಿತು!" ಎಂದು ಆಸ್ಕಾರ್ ವೈಲ್ಡ್ ನುಡಿದಾಗ, ಅತಿಥಿಗಳು ಮೂಕರಾಗಿಯೇ ಉಳಿದರು. ಮುಖ್ಯವಾದ ಕೆಲಸದ ಪರಿಯನ್ನು ನೋಡಿ ಅವರು ಅಚ್ಚರಿ ಪಟ್ಟಿರಬೇಕು!

ಕೆಲಸದ ನಡುವೆ-

ಎಲಿಜಬೆತ್ ರಾಜಕುಮಾರಿ

(1951ರಲ್ಲಿ ಅರಸರ ಜನ್ಮ ದಿನದಂದು ... ಬಕ್ಕಿಂಗಾಮ್ ಅರಮನೆಯಿಂದ ... ಅಶ್ವಾರೂಢಳಾಗಿ ಹೊರಟಾಗ)

ಅಬ್ಬ-ಇಷ್ಟು ದೊಡ್ಡವರಾಗಿ ಬೆಳೆದ ಬಳಿಕವೂ ಕೆಲಸದ ನಡುವೆ ಆಟದ ಯೋಚನೆ ಮಾಡುವುದೇ? ಎಂದು ನಮ್ಮಲ್ಲಿ ಅನೇಕರು ಮೂಗು ಮುರಿಯಬಹುದು. ಆದರೆ ನೀವೇ ತಪ್ಪಿ ಬಿದ್ದಿರುವಿರೆಂದು ಸೌಮ್ಯವಾಗಿ ಸೂಚಿಸಲು ಅಣಿಯಾದರೆ ನೀವು ಸಿಟ್ಟುಗೊಳ್ಳುವುದಿಲ್ಲವಷ್ಟೆ! ಒಮ್ಮೆ ಒಬ್ಬ ಚೀನೀಯನು ಅಮೇರಿಕಾದಲ್ಲಿದ್ದಾಗ ಕೆಲವರು ಬೇಸ್ ಬಾಲ್ ಎಂಬ ಆಟ ಆಡುತ್ತಿದ್ದುದನ್ನು ನೋಡಿದ. ಆಟಗಾರರು ಅತ್ಯಂತ ಉತ್ಸಾಹದಿಂದ ಚೆಂಡನ್ನು ತುಳಿಯುತ್ತಿದ್ದರು, ಅದು ನೆಗೆದತ್ತ ರೊಯ್ಯನೆ ಹಾರುತ್ತಿದ್ದರು. ಆಟ ಆಡುತ್ತಿದ್ದರು ಒಟ್ಟಾರೆ ಅವರಿಗೆ ಬೆವರಿನ ಸ್ನಾನವೇ ಆಗಿತ್ತು. ಈ ಜನ ಏತಕ್ಕಾಗಿ ಇಷ್ಟು ಕಷ್ಟಪಡುವರಪ್ಪಾ- ಆ ಚೆಂಡಿಗಾಗಿ ಇಂಥ ಹೋರಾಟ ನಡೆಸುವುದೇಕೆ ಎಂದು ಚೀನೀಯನು ಯೋಚಿಸಿದ. ಹಾಗೆಯೇ "ಏನಪ್ಪಾ, ಈ ಕೆಲಸವನ್ನು ಒಬ್ಬ ಕೂಲಿಯಿಂದ ಮಾಡಿಸಬಹುದಿತ್ತಲ್ಲ!" ಎಂದು ಹೇಳಿದ. ಬಹುಶಃ ಆಡುವುದೆಂದರೆ ಏನೆಂಬುದೇ ಈ ಮಹಾಶಯನಿಗೆ ತಿಳಿದಿರಲಿಕ್ಕಿಲ್ಲ. ಅವನಿಗೆ ಕೆಲಸವೇ ದೊಡ್ಡದೆನಿಸಿರಬಹುದು. ಆದರೆ ಎಷ್ಟೋ ಮಂದಿ ಕಠಿಣ ಕೆಲಸವನ್ನು ಸಹ ಲೀಲಾಜಾಲವಾಗಿ ಮಾಡಿ ಮುಗಿಸುವ ರೀತಿ ನೋಡಿದರೆ, ಆಟವೂ ಕೆಲಸವೆಂದು ತೋರುವುದಿಲ್ಲವೆ?

ನಮಗೆ ಆಟ ಮತ್ತು ಕೆಲಸ ಎರಡೂ ಮತ್ತೊಂದಕ್ಕಿಲ್ಲಿ ಅಗತ್ಯವಾಗಿ ಬೇಕು. ಮನುಷ್ಯನ ಶಕ್ತಿ ಸಾಮರ್ಥ್ಯಗಳು ಬಚ್ಚಿಟ್ಟುಕೊಂಡಂತೆ ಆ ಭಂಡಾರ ತುಂಬಿಬರುವ ವ್ಯವಸ್ಥೆಯೂ ಅವಶ್ಯ. ಕೆಲವೊಮ್ಮೆ ಎಡೆಬಿಡದೆ ತಿಂಗಳುಗಟ್ಟಳೆ ಕಾಲ ಕೆಲಸದಲ್ಲಿಯೇ ನಿಮಗ್ನರಾಗಿರುವವರನ್ನು ನಾವು ನೋಡುತ್ತೇವೆ. ಅವರಿಗೆ ದುಡಿಮೆಯೇ ಜೀವನವೆಂದು ಕಾಣುತ್ತದೆ. ಹಾಗೆಂದು ದುರ್ದೈವದಿಂದ ಅವರೆಲ್ಲಿಯಾದರೂ ಅಸ್ವಸ್ಥಗೊಂಡು ವೈದ್ಯನೊಬ್ಬನೊಡನೆ ಸಲಹೆ ಕೇಳಬೇಕಾಗಿ ಬಂದಾಗ, ನಿರಾಶೆಯೇ ಅವರಿಗೆ ಕಾದಿರುತ್ತದೆ. "ಇನ್ನು ಆರು ತಿಂಗಳ ಕಾಲ ನಿಮಗೆ ಪೂರ್ಣ ವಿರಾಮ ಬೇಕೇ ಬೇಕು" ಎಂದು ಆ ಡಾಕ್ಟರು ವಿಧಿಸುತ್ತಾನೆ! ಆದರೆ ಆಟ ಮತ್ತು ಕೆಲಸವನ್ನು ಸಮನ್ವಯ ರೀತಿಯಲ್ಲಿ ಅಳವಡಿಸಿಕೊಂಡವನ ಭವಿಷ್ಯ ಇಂಥ ಪರಿಣಾಮಕ್ಕೆ ಗುರಿಯಾಗುವುದು ಇಲ್ಲವೆಂದರೂ ಸಲ್ಲುತ್ತದೆ.

ಆಟಕ್ಕೂ ಕೆಲಸಕ್ಕೂ ಮುಖ್ಯವಾದ ಭೇದವೊಂದಿದೆ- ಅದನ್ನು ಹೇಗೆ ವರ್ಣಿಸಬಹುದು. ಮನೋವಿಜ್ಞಾನಿಯೋರ್ವನಿಗೆ ಜೇನು ಹುಳ ಸಾಕುವುದು ಒಂದು ಆಟವಾಗಬಹುದು. ಅದರಂತೆ ಹೂವಾಡಿಗನಿಗೆ ಬಡಗಿತನವೊಂದು ಆಟವಾದರೆ ಬಡಗಿಗೆ ಚಿತ್ರ ಬಿಡಿಸುವುದೊಂದು ಆಟ. ಚಿತ್ರಕಾರನಿಗೆ ಅಡುಗೆ ಮಾಡುವುದೊಂದು ಆಟವಾದರೆ ಅಡುಗೆ ಭಟ್ಟನಿಗೆ ಮನೋವಿಜ್ಞಾನದ ಅಭ್ಯಾಸವು ಒಂದು ಆಟ — ಹೀಗೆ ಅವನ ಮುಖ್ಯ ಕಸುಬಿಗಿಂತ ಭಿನ್ನವಾದ ಕ್ರಿಯೆಗಳು ಆಟವೆಂದೇ ಹೇಳಬಹುದು. ಕೆಲಸಕ್ಕೂ ಆಟಕ್ಕೂ ಇರುವ ಮುಖ್ಯ ವ್ಯತ್ಯಾಸವಿಷ್ಟೆ: ಆಟವನ್ನು ನಾವು ಮನಸ್ಸಿನ ಇಚ್ಛೆಯಂತೆ ಕೈಗೊಳ್ಳಬಲ್ಲೆವು, ಬಿಡಬಲ್ಲೆವು. ಬಾಹ್ಯ ಒತ್ತಾಯವು ಆಟವನ್ನು ನಿಯಂತ್ರಿಸುವುದಿಲ್ಲ. ಅದರಲ್ಲಿ ನಮಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಒಂದು ಆಟದಲ್ಲಿ ಬೇಸರ ಬಂದರೆ ಇನ್ನೊಂದಕ್ಕೆ ಜಾರಿಕೊಳ್ಳಬಲ್ಲೆವು. ಆದರೆ ಕೆಲಸ ಹೀಗಿರುವುದಿಲ್ಲ. ಅದು ಜೀವನಾವಶ್ಯಕವಿರುತ್ತದೆ. ಅದನ್ನು ಬಿಟ್ಟುಬಿಡುವುದು ಎಷ್ಟು ಕಷ್ಟವೋ, ಅಷ್ಟೇ ಕಷ್ಟ ಚಂಚಲ ಮನಸ್ಸಿನ ಇಚ್ಛೆಯನ್ನು ತಡೆದು ಹಿಡಿದು, ರೂಢಿ ನಿಯಮಕ್ಕೆ ಹೊಂದಿಕೊಳ್ಳುವುದಾಗಿರುತ್ತದೆ.

ಕೆಲಸ ನಮಗೆ ದುಡ್ಡು ಸಂಪಾದಿಸಿಕೆ ... ಮಾಡಲೇ ಬೇಕು. ಆದುದರಿಂದ ಅದು ಅವಸರದ ಕ್ರಿಯೆ. ಅದರಲ್ಲಿ ನಮ್ಮ ಅಭಿರುಚಿಗಳು ವ್ಯಕ್ತವಾಗುವುದಕ್ಕೆ ಅವಕಾಶ ಸಿಗದೆ ಹೋದರೆ ಆಶ್ಚರ್ಯವಿಲ್ಲ. ಎಷ್ಟೋ ವೇಳೆ ನಾವು ಆ ಕೆಲಸದಲ್ಲಿ ನೈಪುಣ್ಯವಿಲ್ಲದವರಾಗಿರಬಹುದು; ನಮ್ಮ ಕೆಲಸ ಅಧಿಕಾರೀ ವರ್ಗಕ್ಕೆ ತೃಪ್ತಿ ತಾರದೆ ಇರಲೂಬಹುದು. ಈ ಭಯ, ಸಂದೇಹ ಮತ್ತು ಆತುರಗಳು ಕೆಲಸ ಮಾಡುವಾಗ ನಮ್ಮನ್ನು ಬಾಧಿಸುತ್ತವೆ. ಭಯವೂ ವಿನೋದವೂ ಜೊತೆಯಾಗಿ ಸಾಗಲಾರವೆಂಬುದನ್ನು ನೆನೆದರೆ, ಆಟಕ್ಕೂ ಕೆಲಸಕ್ಕೂ ಇರುವ ತಾರತಮ್ಯ ಸ್ಪಷ್ಟಗೊಳ್ಳುತ್ತದೆ. ಚಿತ್ರಕಾರನೊಬ್ಬನು ಸುಂದರ ಚಿತ್ರವನ್ನು ಬಿಡಿಸದಿದ್ದರೆ, ಜನ ಅವನನ್ನು ಆದರಿಸಲಿಕ್ಕಿಲ್ಲ. ತನ್ನ ವೃತ್ತಿಯಲ್ಲಿ ಚಿತ್ರಕಾರ ಪಡೆದ ಕೌಶಲ್ಯವೇ ಅವನ ಮಾನದಂಡವಾಗಿ ಅಲ್ಲಿ ಪರಿಣಮಿಸುತ್ತದೆ. ಹಾಗೆಂದು ಅವನು ಅಡುಗೆ ಮಾಡಿದಪಕ್ಷದಲ್ಲಿ ಉಪ್ಪು, ಹುಳಿ, ಖಾರ ಹೆಚ್ಚುಕಡಿಮೆಯಾದರೂ "ಓ, ಚೆನ್ನಾಗಿದೆ ನೋಡಲ ಕೈಯಲ್ಲವೆ!" ಎಂದು ನಕ್ಕುಬಿಡುತ್ತೇವೆ.

(೧೪ನೇ ಪುಟ ನೋಡಿರಿ)

ಸಾವಿರ ವರ್ಷ ಪುರಾತನವಾದ ರಾಜವಂಶ

ಬ್ರಿಟಿಷ್ ಸಾಮ್ರಾಜ್ಯ ಲಕ್ಷ್ಮಿಯ ಅಧಿಕಾರ ವ್ಯಾಪ್ತಿ ಮತ್ತು ಸ್ವರೂಪ

ಇದೇ ಜೂನ್ ೨ರಲ್ಲಿ ಮಹಾರಾಣಿ ಎಲಿಜಬೆಥಳ ಕಿರೀಟ ಧಾರಣೆ ಜರಗಿದ ವೆಸ್ಟ್ ಮಿನಿಸ್ಟರ್ ಇಗರ್ಜಿ 1937ನೇ ಮೇ 12ರಂದು ಆರನೆ ಜಾರ್ಜರ ಕಿರೀಟ ಧಾರಣೆ ನೆರವೇರಿದ್ದೂ ಇಲ್ಲಿಯೇ

ಬ್ರಿಟಿಷರಾಣಿ ಎರಡನೆ ಎಲಿಜಾಬೆಥಳ ಕಿರೀಟಧಾರಣಾ ಮಹೋತ್ಸವದ ವಾರ್ತೆ ಈಗಾಗಲೇ ಲೋಕದಲ್ಲಿ ಎಲ್ಲೆಲ್ಲೂ ಜನಜನಿತವಾಗಿರುತ್ತದೆ ರಾಣಿ ಎಲಿಜಾಬೆಥಳು ಒಂದು ಮಹಾ ಸಾಮ್ರಾಜ್ಯದ ಅರಸಿಯಾಗಿರುವಳು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ದೇಶಗಳೂ, ಅಧೀನ ರಾಜ್ಯಗಳೂ ಮಂಡಳಗಳೂ ಜಗತ್ತಿನಲ್ಲಿ ಅಲ್ಲಿ ಇಲ್ಲಿ ತುಂಬಾ ಕಡೆ ಹರಡಿವೆ ಸಾಮ್ರಾಜ್ಯದ ಮೂಲಪೀಠವನ್ನು ಇಂಗ್ಲೆಂಡಿನ ಎಲ್ಲ ಭಾಗಗಳನ್ನೂ ಸಾಕ್ಸನ್ ವಂಶದ ಅರಸನೊಬ್ಬನ ಕೈಕೆಳಗ ಒಂಭತ್ತನೇ ಶತಮಾನದಲ್ಲಿ ತಂದು ಸ್ಥಾಪಿಸಿದರು ಮುಂದ ಇಂಗ್ಲೆಂಡವ ಅರಸರು ವೇಲ್ಸಿನ ಮೇಲೂ ಆಯರ್ಲೆಂಡದ ಮೇಲೂ ಜೈತ್ರಯಾತ್ರೆಗೈದು ಅವನ್ನು ವಶೀಕರಿಸಿದರು ಆ ಬಳಿಕ ಸ್ಕಾಟ್‌ಲೇಂಡಿನ ಆರನೇ ಜೇಮ್ಸನನ್ನು ಇಂಗ್ಲೆಂಡಿನ ಮೊದಲನೆ ಜೇಮ್ಸನೆಂದು ಕರೆದು ಇಂಗ್ಲೆಂಡಿನ ರಾಜಪೀಠಕ್ಕೆ ಅವನನ್ನು ಏರಿಸಿದುದರಿಂದ ಜೇಮ್ಸನ ವಂಶದವರೇ ಇಂಗ್ಲೆಂಡಿಗೂ ಸ್ಕಾಟ್‌ಲೇಂಡಿಗೂ ಸಂಯುಕ್ತವಾಗಿ ಅರಸುತನವನ್ನು ನಡೆಸಿ ಬರುವಂತಾಯಿತು ಗ್ರೇಟ್ ಬ್ರಿಟನು ಹಾಗೂ ಉತ್ತರ ಆಯರ್ಲೆಂಡು (೧೯೨೦ರಲ್ಲಿ ಆಯರ್ಲೆಂಡಿನ ದಕ್ಷಿಣ ಪಾರ್ಶ್ವದ ಇಪ್ಪತ್ತಾರು ಕೌಂಟಿಗಳು ಸ್ವತಂತ್ರಗೊಂಡವು) ಮತ್ತು ಇತರ ರಾಜ್ಯ ಮತ್ತು ಮಂಡಳಗಳ ರಾಣಿ ರಾಷ್ಟ್ರಕೂಟದ ಪ್ರಮುಖೆ, ಧರ್ಮ ರಕ್ಷಕಿ ಎಂಬುದಾಗಿ ಎರಡನೇ ಎಲಿಜಬೆಥಳ ಬಿರುದು

ಮೂಲಪೀಠ

ಈ ರಾಣಿಗೆ ವಿಶಾಲವಾದ ಸಾಮ್ರಾಜ್ಯವಿದೆಯೆಂದವಷ್ಟೆ! ಮೂಲ ಪೀಠವಾಗಿ ಇಂಗ್ಲೆಂಡು, ವೇಲ್ಸ್, ಉತ್ತರ ಆಯರ್ಲೆಂಡು ಮತ್ತು ಸ್ಕಾಟಲೆಂಡಗಳಿವೆ ಅಧೀನ ರಾಜ್ಯಗಳಲ್ಲಿ ಕೆನಡಾ ಆಸ್ಟ್ರೇಲಿಯಾ, ನ್ಯೂಜೀಲೆಂಡ, ದಕ್ಷಿಣ ಆಫ್ರಿಕಾ ಪಾಕಿಸ್ತಾನ ಮತ್ತು ಸಿಲೋನುಗಳು ಮುಖ್ಯವಾಗಿವೆ ಇವೆಲ್ಲ ರಾಜ್ಯಗಳು ಬ್ರಿಟಿಷ ರಾಣಿಗೆ ನಿಷ್ಠೆಯನ್ನು ತೋರಿಸುತ್ತವೆ, ಮಾತ್ರವಲ್ಲ ಅಲ್ಲಿಯ ಸರಕಾರಗಳಲ್ಲಿ ರಾಣಿಯ ಹೆಸರಿನಲ್ಲಿ ಕೆಲಸ ನಡೆಸುತ್ತವೆ ರಾಷ್ಟ್ರಕೂಟದ ಸದಸ್ಯರ ಸಲುಗೆಯ ಸಂಬಂಧದ ಪ್ರತೀಕವಾಗಿ ಬ್ರಿಟಿಷ ರಾಣಿ ಇರುತ್ತಾಳೆ ಭಾರತವು ಸಾರ್ವಭೌಮಾಧಿಕಾರ ಸಂಪನ್ನವಾದ ಸ್ವತಂತ್ರ ಗಣರಾಜ್ಯವಾಗಿರುವುದರಿಂದ ಬ್ರಿಟಿಷ ರಾಣಿಗೆ ನಿಷ್ಠೆ ವ್ಯಕ್ತಪಡಿಸುವ ಪ್ರಶ್ನೆ ಇರುವುದಿಲ್ಲ ಆದರೂ ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳೊಡನೆ ಇಟ್ಟಿರುವ ಸಂಬಂಧದ ದ್ಯೋತಕವಾಗಿ ಬ್ರಿಟಿಷ ರಾಣಿಯನ್ನು ಗೌರವಿಸಲಾಗುವುದು ಅಂತೆಯೇ ರಾಷ್ಟ್ರಕೂಟದ ಪ್ರಮುಖೆಯೆಂದೂ ತಿಳಿಯಲ್ಪಡುವುದು

ಈ ಸಾಮ್ರಾಜ್ಯದ ಮೂಲ ಪೀಠ ಬ್ರಿಟನಿನಲ್ಲಿದೆ ರಾಣಿಗೆ ನಿಷ್ಠೆ ತೋರುವ ರಾಷ್ಟ್ರಕೂಟದ ಇತರ ರಾಜ್ಯಗಳಲ್ಲಿ ಅಲ್ಲಿಯ ಮಂತ್ರಿಮಂಡಳದ ಸಲಹೆಯ ಮೇರೆಗೆ ರಾಣಿಯು ತನ್ನ ಪ್ರತಿನಿಧಿಯಾಗಿ ಗವರ್ನರ ಜನರಲನ್ನು ನೇಮಿಸುವಳು ತನ್ನ ದೇಶದಲ್ಲಿರುವ ಘಟನಾತ್ಮಕ ಸಂಪ್ರದಾಯದಂತೆ ರಾಣಿಯ ಅಧಿಕಾರವನ್ನು ಆ ರಾಜ್ಯದಲ್ಲಿ ನಡೆಸಿಕೊಂಡು ಸಾಮಾನ್ಯಾಡಳಿತೆಯನ್ನು ಸಾಗಿಸುವುದು ಗವರ್ನರ ಜನರಲರ ಕಾರ್ಯ ರಾಣಿಯ ಪ್ರತಿನಿಧಿಯಾದ ಮಾತ್ರಕ್ಕೆ ಅವನಿಗೆ ಬ್ರಿಟನಿನ ಸರಕಾರದಲ್ಲಿ ಅಧಿಕೃತವಾದ ಸಂಬಂಧ ಗವರ್ನರ ಜನರಲನಿಗಿಲ್ಲ ತನ್ನ ದೇಶದಲ್ಲಿಸಹ ರಾಣಿಯ ಅನುಪಸ್ಥಿತಿಯ ಹೊರತು ಗವರ್ನರ ಜನರಲನಿಗೆ ಅಧಿಕೃತ ಅಸ್ತಿತ್ವವಿಲ್ಲ ವಸಾಹತುಗಳು, ಸಂರಕ್ಷಿತ ಮಂಡಳಗಳು, ವಿಶ್ವಸ್ತ ಪ್ರದೇಶಗಳು ಮುಂತಾದ ಅಧೀನರಾಜ್ಯಗಳಲ್ಲಿ ರಾಣಿಯ ಪ್ರತಿನಿಧಿಯಾಗಿ ಗವರ್ನರರು, ಹೈ ಕಮಿಶನರು ಅಥವಾ ರಸಿಡೆಂಟರು ಇರುವರು ಇವರ ನೇಮಕವು ರಾಣಿಯಿಂದಾಗುತ್ತದೆ ರಾಣಿಯ ಘಟನಾತ್ಮಕ ಕೆಲಸಗಳೆಲ್ಲ ಇವರಿಂದ ನಿರ್ವಹಿಸಲಡುತ್ತವೆ ಇದಲ್ಲದೆ ಇವರಿಗೆ ವಿವಿಧ ಆಳಿತ ಹಾಗೂ ಶಾಸನಾಧಿಕಾರಿಗಳೂ ಇರುತ್ತವೆ ತಂತಮ್ಮ ದೇಶಗಳ ಒಳ್ಳೆಯದಕ್ಕೂ ಕೆಟ್ಟದಕ್ಕೂ ಇವರು ಬ್ರಿಟಿಷ್ ಸರಕಾರಕ್ಕೆ ಹೊಣೆಯಾಗಿರುವರು

ರಾಜವಂಶ

ರಾಷ್ಟ್ರಕೂಟದ ಪ್ರತಿಯೊಂದೂ ರಾಷ್ಟ್ರಕ್ಕೆ ತನ್ನದೇ ಆದ ಸ್ವತಂತ್ರಘಟನೆಯಿರುತ್ತದೆ ।ಒಂದೊಂದೂ ದೇಶವು ತನ್ನದೇ ಆದ ಕಟ್ಟು ಕಟ್ಟಳೆ, ರೀತಿ ನೀತಿಗಳನ್ನಯ ಆಳಲ್ಪಡುತ್ತದೆ ಹೀಗಿರುವುದರಿಂದ ಬ್ರಿಟಿಷ್ ಘಟನೆಯು ಉಳಿದ ದೇಶಗಳ ಘಟನೆಗಿಂತ ಭಿನ್ನವಾಗಿರುವುದು ಸ್ವಾಭಾವಿಕ

ಬ್ರಿಟನಿನಲ್ಲಿ ರಾಜವಂಶವು ಪುರಾತನ ಕಾಲದಿಂದ ನಡೆದುಬಂದಿರುತ್ತದೆ. ಸುಮಾರು ಒಂದು ಸಾವಿರ ವರ್ಷಗಳಲ್ಲಿ ಒಂದು ಸಲ ಮಾತ್ರ ಇದು ಕಡಿದಿದೆ. ರಾಜವಂಶದಲ್ಲಿ ನೇರವಾದ ಉತ್ತರಾಧಿಕಾರಿ ಸಿಗದೆದ್ದಾಗಲೂ ವಂಶ ಪಾರಂಪರ್ಯವಾಗಿ ಸಿಂಹಾಸನದ ಅಧಿಕಾರ ಪ್ರಾಪ್ತವಾಗುವ ಸಂಪ್ರದಾಯಕ್ಕೆ ಧಕ್ಕೆಯಾಗಿಲ್ಲ ರಾಣಿ ಎಲಿಜಾಬೆಥಳು ಕ್ರಿ ಶ ೮೨೯ರಲ್ಲಿ ಇಡೀ ಇಂಗ್ಲೆಂಡನ್ನು ಒಂದಾಗಿಸಿದ ಸಾಕ್ಸನ್ ಅರಸ ಎಗ್ಬರ್ಟನ ಪೀಳಿಗೆಯವಳು ಈ ರೀತಿ ಸಿಂಹಾಸನಾಧಿಕಾರವು ಇಷ್ಟು ವರ್ಷ ಕಾಲ ಕೈ ಬದಲಾಗದ ನಡೆದುಬಂದ ಉದಾಹರಣ ಇತಿಹಾಸದಲ್ಲಿ ಬೇರೆ ಸಿಗುವುದು ಕಷ್ಟ ಬ್ರಿಟನಿನಲ್ಲಿ ಆಡಳಿತವು ಅಲಿಖಿತವಾದ ಕಾಯಿದೆಯಂತೆ ನಡೆಯದೆ ಸಂಪ್ರದಾಯದಂತೆ ಸಾಗಿಸಲ್ಪಡುತ್ತಿರುವುದೇ ರಾಣಿಯ ಸಿಂಹಾಸನ ಇಂದಿಗೂ ಉಳಿಯಲು ಕಾರಣ ಈ ಸಂಪ್ರದಾಯಗಳು ಅಧಿಕೃತ ಶಾಸನಗಳಲ್ಲವಾದುದರಿಂದ ಏನಾದರೂ

1948ನೇ ಆಗೋಸ್ತು ತಿಂಗಳಲ್ಲಿ ತನ್ನ ತಂದೆ (ಕಿಂಗ್ ಜಾರ್ಜ್ VI) ತಾಯಿ ಮತ್ತು ಸಹೋದರಿಯೊಂದಿಗೆ ಮಹಾರಾಣಿ ಎಲಿಜಬೆಥಳು (ಆಗ ಯುವರಾಣಿ ಎಲಿಜಬೆಥ್)

ಹೆಚ್ಚುಕಡಿಮೆಯಾದರೆ ನ್ಯಾಯಸ್ಥಾನಕ್ಕೆ ಹೋಗಿ ನ್ಯಾಯ ಕೇಳಲು ಬರುವುದಿಲ್ಲ ಆದರ ಸಾಮಾನ್ಯ ಜನತೆಯ ರೀತಿನೀತಿಗಳಂತೆ ಈ ಸಂಪ್ರದಾಯವಿರುವುದರಿಂದ ಯಾರಿಗೂ ಅಸಮಾಧಾನಕ್ಕೆ ಎಡೆ ಇರುವುದಿಲ್ಲ ಜನರ ಬಲವನ್ನೂ ರೀತಿನೀತಿಯನ್ನೂ ಆಡಳಿತವು ಅವಲಂಬಿಸಿರುವುದರಿಂದ, ಬದಲಾದ ಪರಿಸ್ಥಿತಿಯೊಡನೆ ಬಹು ಸುಲಭದಲ್ಲಿ ಯಾವುದಕ್ಕೂ ಗಂಭೀರವಾದ ಹಾನಿಯಾಗದಂತ ತಾನಾಗಿ ಹೊಂದಿಕೊಳ್ಳುವುದೂ ಸಾಧ್ಯವಾಗಿದೆ ಈ ಕಾರಣದಿಂದಲೇ ಅರಸೊತ್ತಿಗೆಯನ್ನು ಉಳಿಕೊಂಡು ಬಂದಿದ್ದರೂ ರಾಜ್ಯಾಧಿಕಾರವನ್ನು ಜನತೆಯು ಸ್ವೀಕರಿಸಿ ಕಡಿಮೆ ಮಾಡುವಂತಾಯಿತು.

೧೭೦೦ ರಲ್ಲಿ ಜಾರಿಯಾದ ಕಾಯಿದೆಯಂತೆ ಬ್ರಿಟಿಷ ಸಿಂಹಾಸನವು ಮೊದಲನೇ ಜೇಮ್ಸನ ಮೊಮ್ಮಗಳಾದ ರಾಜಕುಮಾರಿ ಸೋಫಿಯಾಳಿಗೂ ಅವಳ ಉತ್ತರಾಧಿಕಾರಿಗಳಿಗೂ ಪ್ರೊಟೆಸ್ಟಂಟರಾಗಿರುವಷ್ಟು ಕಾಲ ದೊರೆಯುತ್ತದೆ ಆ ಬಳಿಕದ ಕಾಯಿದೆಗಳೂ ಇದನ್ನು ಪುರಸ್ಕರಿಸಿವೆ. ಈ

LIFE INSURANCE SELLING?

"Canara Mutual" has demonstrated that life insurance selling can be as respectable a profession as any other Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent Educated young men who want to carve out a brilliant independent career will please contact

THE MANAGING DIRECTOR

The CANARA MUTUAL ASSURANCE CO. Ltd.

Head Office **UDIPI**, S INDIA ESTD 1935

ರುವ ಸಾಲಿಗೇ ಮುಂದಕ್ಕೂ ಸಿಂಹಾಸನ ದೊರೆಯ ಬೇಕೆಂಬ ನಿರ್ಬಂಧವಿಲ್ಲದಿದ್ದರೂ ರಾಷ್ಟ್ರ ಕೂಟದ ಸದಸ್ಯ ರಾಷ್ಟ್ರಗಳ ಸಾಮಾನ್ಯ ಒಪ್ಪಿಗೆಯಿಲ್ಲದೆ ಅರಸೊತ್ತಿಗೆಯನ್ನು ಬೇರೆ ಜನರಿಗೆ ಕೊಡಲು ಸಾಧ್ಯವಿಲ್ಲ.

ಸಿಂಹಾಸನಾಧಿಕಾರ

ಸಿಂಹಾಸನಾಧಿಕಾರ ಯಾರಿಗೆ ಸಲ್ಲತಕ್ಕದ್ದೆಂಬ ಬಗ್ಗೆ ವಿಶೇಷ ಕಾಯಿದೆ ಇದೆ ಇದರಂತೆ ಸಮ್ರಾಟನ ಮಕ್ಕಳು ತಮ್ಮ ಹಿರಿತನದ ರೀತಿಯಲ್ಲಿ ಕ್ರಮವಾದ ವಾರಸುದಾರರಾಗುತ್ತಾರೆ. ಸಣ್ಣ ಮಗನ ಬಳಿಕ ಅಥವಾ ಗಂಡು ಮಕ್ಕಳೇ ಇಲ್ಲದ ಸಂದರ್ಭದಲ್ಲಿ ಹೆಣ್ಣು ಮಕ್ಕಳ ತಮ್ಮ ಹಿರಿತನದ ರೀತಿಯಲ್ಲಿ ಸಿಂಹಾಸನಕ್ಕೆ ಅಧಿಕಾರಿಗಳು. ಮಗಳೋರ್ವಳು ಉತ್ತರಾಧಿಕಾರಿಯಾಗಿ ಬಂದಾಗ ಅವಳಿಗೆ ರಾಜನ ಅಧಿಕಾರವೆಲ್ಲ ಪ್ರಾಪ್ತವಾಗುತ್ತದೆ; ಮತ್ತು ಅರಸನಂತೆಯೇ ಅವಳನ್ನು ನಡೆಸಿಕೊಳ್ಳಲಾಗುತ್ತದೆ. ಸಂಪ್ರದಾಯದಂತೆ ಅರಸನ ಮಡದಿಗೆ ಅರಸನಷ್ಟೇ ಗೌರವ ಮತ್ತು ಸ್ಥಾನಮಾನಗಳಿದ್ದರೂ ಬ್ರಿಟಿಷ ಘಟನೆಯು ಸಿಂಹಾಸನಾಧಿಕಾರಿಯಾಗಿ ಬಂದ ಹೆಣ್ಣು ಮಗಳ ಗಂಡನಿಗೆ ಈ ಮನ್ನಣೆಯನ್ನು ಕೊಟ್ಟಿರುವುದಿಲ್ಲ ಇಂಗ್ಲಿಷ್ ಇತಿಹಾಸದಲ್ಲಿ ಈಗಿನದನ್ನು ಬಿಟ್ಟರೆ ಮೊದಲು ಮೂರು ಸಲ ಇಂಥ ಪ್ರಸಂಗ ಉದ್ಭವಿಸಿತ್ತು. ರಾಜಕುಮಾರ ಅಲ್ಬರ್ಟನನ್ನು ವಿಕ್ಟೋರಿಯಾ ರಾಣಿ ಮದುವೆಯಾದುದು ಕೊನೆಯ ಪ್ರಸಂಗ. ಸ್ಪೈನಿನ ರಾಜ ಫಿಲಿಪನನ್ನು ರಾಣಿ ಮೇರಿ ಟ್ಯೂಡರಳು ಮದುವೆಯಾದುದೂ ಡೆನ್ಮಾರ್ಕಿನ ರಾಜ ಕುಮಾರ ಜಾರ್ಜನನ್ನು ರಾಣಿ ಅನ್ ವಿವಾಹಗೊಂಡುದೂ ಇದಕ್ಕೆ ಹಿಂದಿನ ಘಟನೆಗಳು. ರಾಣಿ ಎಲಿಜಾಬೆಥಳು ಡ್ಯೂಕ್ ಆಫ್ ಎಡಿನಬರ್ಗರನ್ನು ಮದುವೆಯಾಗಿರುವುದರಿಂದ ಈಗಿನದು ನಾಲ್ಕನೇ ಉದಾಹರಣೆ.

ಕಳೆದ ವರುಷ ಲಂಡನಿನಲ್ಲಿ ಕಾಮನ್‌ವೆಲ್ತ್ ಆರ್ಥಿಕ ಪರಿಷತ್ತು ಜರಗಿತ್ತಷ್ಟೆ. ಆಗ ಮಹಾರಾಣಿಯವರು ಬಕ್ಕಿಂಗ್‌ಹಾಮ್ ಅರಮನೆಯಲ್ಲಿ ಇತರ ರಾಷ್ಟ್ರಗಳ ಪ್ರಧಾನಿಗಳಿಗೂ ಹಣಕಾಸು ಮಂತ್ರಿಗಳಿಗೂ ಡಿನ್ನರ್ ಪಾರ್ಟಿ ಕೊಟ್ಟಿದ್ದರು ಆ ಕಾಲದಲ್ಲಿ ತೆಗೆದ ಈ ಗ್ರೂಪ್ ಚಿತ್ರದಲ್ಲಿ ಮಹಾರಾಣಿ ಎಲಿಜಬೆಥರನ್ನೂ ಹಿಂದೀ ಸರಕಾರದ ಹಣಕಾಸಿನ ಮಂತ್ರಿ ಮಾನ್ಯ ಸಿ. ಡಿ. ದೇಶಮುಖ್ ಮೊದಲಾದವರನ್ನು ಕಾಣಬಹುದು.

ಹದಿನೇಳನೇ ಶತಮಾನದಿಂದೀಚೆಗೆ ಬ್ರಿಟನಿನ ಘಟನಾಸೂತ್ರದಂತೆ ಒಬ್ಬ ರಾಜನ ಆಡಳಿತದ ಕೊನೆಗೂ ಇನ್ನೊಬ್ಬನ ಪ್ರಾರಂಭಕ್ಕೂ ನಡುವೆ ವಿಳಂಬವಾಗುವುದಿಲ್ಲ. ತಮ್ಮ ಹಿಂದಿನ ಅರಸರ ಮರಣದ ಬೆನ್ನಿಗೇ ಉತ್ತರಾಧಿಕಾರಿಗಳು ರಾಜ್ಯಸೂತ್ರವನ್ನು ವಹಿಸಿಕೊಳ್ಳುವರು. ಹೊಸ ರಾಜನ ನೇಮಕದ ಘೋಷಣೆಯನ್ನು ಆದಷ್ಟು ತ್ವರಿತದಲ್ಲಿ ಮಾಡಲಾಗುವುದು. ಇದಕ್ಕೋಸ್ಕರ ಒಂದು ಸಮಿತಿಯು ಇರುತ್ತದೆ. ಇದರಂತೆ ಹದಿನೆಂಟನೆ ಶತಮಾನದ ವರೆಗಿದ್ದ ಇನ್ನೊಂದು ಸಂಪ್ರದಾಯವನ್ನೂ ಸಡಿಲಿಸಲಾಗಿದೆ. ಒಬ್ಬ ರಾಜನ ಮೃತ್ಯುವಿನ ಪರಿಣಾಮವಾಗಿ ಪಾರ್ಲಿಮೆಂಟು ಸ್ವಯಂ ವಿಸರ್ಜನೆಗೊಳ್ಳುವುದೆಂದೂ, ರಾಜನಿಂದ ನೇಮಕಗೊಂಡ ಅಧಿಕಾರಸ್ಥಾನಗಳು ರದ್ದಾಗುವುವೆಂದೂ ಕೋರ್ಟು ವ್ಯವಹಾರಗಳೆಲ್ಲ ಸ್ಥಗಿತಗೊಳ್ಳುವುವೆಂದೂ ಒಂದು ರೂಢಿ ಇದ್ದಿತು. ಆದರೆ ೧೮೬೭ರಲ್ಲಿ ಜನತಾ ಪ್ರಾತಿನಿಧ್ಯ ಕಾಯಿದೆಯು ಮಂಜೂರಾದನಂತರ ಪಾರ್ಲಿಮೆಂಟಿನ ಕಾಲಾವಧಿಯು ರಾಜನ ಮೃತ್ಯುವನ್ನು ಅವಲಂಬಿಸಿರುವುದಿಲ್ಲ ಪಾರ್ಲಿಮೆಂಟಿನ ಸದಸ್ಯರು ನೂತನ ರಾಜನಿಗೆ ನಿಷ್ಠೆಯನ್ನು ವ್ಯಕ್ತಪಡಿಸುವವರೆಗೆ ಮಾತ್ರ ಪಾರ್ಲಿಮೆಂಟು ಮುಂದೂಡಲ್ಪಡುತ್ತದೆ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದುದರ ಬಗ್ಗೆ ಘೋಷಣೆಯಾದೊಡನೆಯೇ ರಾಜನಿಗೆ ತೋರುವ ಪ್ರತಿಜ್ಞೆಯನ್ನು ಪಾರ್ಲಿಮೆಂಟಿನ ಸದಸ್ಯರು ಕೈಗೊಳ್ಳುವರು. ಇದಲ್ಲದೆ ೧೯೦೧ರಲ್ಲಿ ಪಾಸಾದ ಕಾನೂನಿನಂತೆ ರಾಜನಿಂದ ನೇಮಕಗೊಂಡ ಅಧಿಕಾರ ಸ್ಥಾನಗಳು ಅವನ ಮೃತ್ಯುವಿನ ಕಾರಣದಿಂದ ರದ್ದಾಗದೆ ಮುಂದುವರಿಯುತ್ತವೆ. ಹೊಸರಾಜನು ತದ್ವಿರುದ್ಧ ಆಜ್ಞೆ ಹೊರಡಿಸುವ ವರೆಗೆ ಹಿಂದಿನ ರಾಜನ ಮುದ್ರೆಯೇ ಉಪಯೋಗದಲ್ಲಿರುತ್ತದೆ. ಇದರಂತೆ ನ್ಯಾಯಾಲಯಗಳ ವ್ಯವಹಾರಗಳೂ ಕ್ರಮದಂತೆ ನಡೆಯುತ್ತವೆ. ರಾಜಾಧಿಕಾರದ ಚಲಾವಣೆ ಅಬಾಧಿತವಾಗಿ ಸಾಗುತ್ತದೆ

ಮಹತ್ವದ ಉತ್ಸವ

ಪಟ್ಟಾಭಿಷೇಕ ಮಹೋತ್ಸವವು ಪ್ರತಿಯೊಂದೂ ಘಟ್ಟದಲ್ಲಿ ಹಿಂದಿನ ವೈಭವಗಳನ್ನು ಹೋಲುತಿದ್ದರೂ, ಆ ಮರ್ಯಾದೆಯನ್ನು ಉಳಿಸಿಕೊಂಡು ಬಂದಿರುತ್ತದೆ. ಸಾಮಾನ್ಯವಾಗಿ ನೂತನ ರಾಜನು (ಅಥವಾ ರಾಣಿಯು) ಅಧಿಕಾರಕ್ಕೆ ಬಂದ ೧೪ ತಿಂಗಳುಗಳಲ್ಲಿ ಈ ಉತ್ಸವವು ನೆರವೇರುತ್ತದೆ. ಈ ಉತ್ಸವವು ಜನತೆಗೂ ರಾಜನಿಗೂ ಇರುವ ಸಂಬಂಧವನ್ನು ಎತ್ತಿ ತೋರಿಸುವಂತೆ ಮೂರು ಘಟ್ಟದಲ್ಲಿರುತ್ತದೆ- ಜನರು ರಾಜನನ್ನು ಹಾಗೆಂದು ಸ್ವೀಕರಿಸುವುದು, ಮತ್ತು ರಾಜನಲ್ಲಿ ಪ್ರತಿಜ್ಞಾವಿಧಿ ಮೊದಲನೆಯದು, ಎರಡನೆಯ ಭಾಗ ಕೇವಲ ಧಾರ್ಮಿಕ ವಿಧಿಯೆನ್ನಬಹುದಾದ ತೈಲಲೇಪನ ಮತ್ತು ಕಿರೀಟಧಾರಣ ವಾಗಿರುತ್ತದೆ. ಮೂರನೆಯದು ಧರ್ಮಾಧಿಕಾರಿಗಳು ರಾಜನಿಗೆ ಕೊಡುವ ಸನ್ಮಾನ. ಈ ಉತ್ಸವವು ವೆಸ್ಟ ಮಿನಿಸ್ಟರ್ ಎಬೆಯಲ್ಲಿ ಧರ್ಮಾಧಿಕಾರಿಗಳ, ಪಾರ್ಲಿಮೆಂಟು ಸದಸ್ಯರ, ಮತ್ತು ಇತರ ಪ್ರಮುಖರ ಸಮ್ಮುಖದಲ್ಲಿ ನಡೆಯುತ್ತದೆ

ಇದಲ್ಲದೆ ಇನ್ನೂ ಕೆಲವು ಉತ್ಸವಗಳು ಈಗಲೂ ಆಚರಿಸಲ್ಪಡುತ್ತವೆ. ಕಾಲವು ಹಿಂದಿನಂತೆ ಈಗಿಲ್ಲ. ಜನರ ಮತ್ತು ಸ್ವತಃ ಸಿಂಹಾಸನಾರೂಢರ ದೃಷ್ಟಿಕೋನಗಳು ಮಾರ್ಪಾಟು ಹೊಂದಿರುತ್ತವೆ. ಹೀಗಿದ್ದರೂ ಶತಮಾನಗಳ ಹಿಂದೆ ಇದ್ದ ಸಾಂಪ್ರದಾಯದಂತೆ ಈಗಲೂ ಕೆಲವು ಸಂಗತಿಗಳು ನೆರವೇರುತ್ತವೆ.

(೧೫ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 171/1953.

ಲಕ್ಷ್ಮೀನಾರಾಯಣ ಗೋಪಾಲ ಕಾಮತ್- ಗೋಪಾಲ ಕಾಮತರ ಮಗ- ಹಾಲಿ ಬೊಂಬಾಯಿ ಸಿಟಿಯಲ್ಲಿರುವವರು, ವಾದಿ.

ಮತ್ತು

ಟಿ. ಸಂಜೀವ ಶೆಣೈ- ಟಿ. ನರಸಿಂಹ ಶೆಣೈಯವರ ಮಗ- ಕುಂದಾಪುರ ತಾಲೂಕು ತೆಕ್ಕಟ್ಟೆಯಲ್ಲಿರುವವರು, ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ವಾದಿಯು ಕುಟುಂಬದ ಮುಂಚಿನ ಯಜಮಾನರಾಗಿದ್ದ ಈಗ ಮೃತಪಟ್ಟ ಎನ ಗೋಪಾಲ ಕಾಮತರಿಗೆ ಪ್ರತಿವಾದಿಯು ತಾ 18-3-50 ರಲ್ಲು ಪಡೆದ ಪ್ರತಿಫಲ ರೂ. 150/-ಕ್ಕೆ ಬರಕೊಟ್ಟ ಡಿ. ಪ್ರೊ. ನೋಟು ಪ್ರಕಾರ ಬಡ್ಡಿ ಸಹಿತ ಸಲ್ಲುವ ಒಟ್ಟು ಐವೇಜು ಕೇಳಿ ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ತಾ 19-6-53ಕ್ಕೆ ಅಖೈರು ತನ್ಖಿಗೆ ಇಟ್ಟಿರುತ್ತದೆಂತಲೂ, ಸದ್ರಿ ತಾರೀಕು ಹಗಲು ಘಂಟೆ 10-45ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಲು ತಪ್ಪಿದರೆ, ನಿಮ್ಮನ್ನು ಶಿಕ್ಷಾವಾದಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲಾದೀತು

(By order of court)

K. Vittal Nayak

Vakil for plaintiff

Udipi: Date 29—5—1953.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / Zandu Brahmi Hair Oil — ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ 3-8-0 ಕಾಲು ಬಾಟ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ / Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

ಝಂಡೂ ಬಾಲಾಮೃತ / Zandu Balamrutam — ಅನಾರೋಗ್ಯವುಳ್ಳ ಮಕ್ಕಳಿಗೆ ಆದರ್ಶ ಟಾನಿಕ್ 4 ಔನ್ಸ್ ಬಾಟ್ಲಿ 1ರ ರೂ. 1-0-0

ಝಂಡೂ ಬಾಮ್ / Zandu Balm — ತಲೆ ಸಿಡಿತ ನೋವು ಮೊದಲಾದ ಬೇನೆಗಳಿಗೆ ! ಸೀಸೆಗೆ ರೂ 1.

ದಕ್ಷಿಣಕನ್ನಡದ ನಮ್ಮ ಸ್ಟಾಕಿಸ್ಟರು —

ಮಂಗಳೂರು. ಷಾ ಕಂಪೆನಿ, ಬಂದರಕಟ್ಟೆ.
ಉಡುಪಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸ್ಟಿಟ್ಯೂಟ್ ಲಿಮಿಟೆಡ್.
ಕಾರ್ಕಳ ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು. ಪೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು

ಧೀರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ರಾಜ ಮುಕುಟದ ಅವರ್ಣನೀಯ ಶೋಭೆ

ಪ್ರಪಂಚದಲ್ಲಿಯೇ ಅತ್ಯಪೂರ್ವವಾದ ಅಮೂಲ್ಯ ಮುತ್ತು ರತ್ನಗಳ ಸಂಗ್ರಹ

ರಾಜನೆಂದೊಡನೆಯೇ ನೆನಪಿಗೆ ಬರುವ ಸಂಗತಿಗಳಲ್ಲಿ ಕಿರೀಟ ಮತ್ತು ತತ್ಸಂಬಂಧಿ ಆಭರಣಗಳು ಮುಖ್ಯವಾದವು. ಮಕುಟ ಧರಿಸಿದ ಶಿರದ ಮುಂದೆ ಮಣಿಯುವುದೇ ಪ್ರತಿಯೊಬ್ಬ ಪ್ರಜೆಯ ಧರ್ಮವಾಗಿರುತ್ತದೆ. ರನ್ನನ ಗದಾಯುದ್ಧದಲ್ಲಿ ಭೀಮನು ದುರ್ಯೋಧನನ ಊರುಭಂಗ ಮಾಡಿದ ಬೆನ್ನಿಗೆ ಮುಕುಟಭಂಗವನ್ನು ಮಾಡಿದ ಅದ್ಭುತ ವರ್ಣನೆ ಇದೆ. ಭೀಮನು ದುರ್ಯೋಧನನ ಮಣಿಜಡಿತ ಮಕುಟವನ್ನು ಎಡಗಾಲಿನಿಂದ ಒದ್ದಾಗ, ಧರ್ಮರಾಯ, ಬಲರಾಮ ಆದಿಯಾಗಿ ಅಲ್ಲಿದ್ದ ಎಲ್ಲರೂ ಆಕ್ಷೇಪವೆತ್ತಿದರು. ದುರ್ಯೋಧನನು ಧರ್ಮಲಂಡನಾದರೂ ಅವನ ಶಿರಸ್ಸಿನಲ್ಲಿ ಶೋಭಿಸುವ ಕಿರೀಟಕ್ಕೆ ತಲೆಬಾಗುವುದು ನಮ್ಮ ಕರ್ತವ್ಯ; ಅವರ ಅಪಮಾನ ಸಲ್ಲದೆಂದು ಧರ್ಮರಾಯ ಭೀಮನಿಗೆ ಹೇಳುತ್ತಾನೆ. ಇಂಥ ಮಕುಟ ಸಾಮಾನ್ಯವಾದುದಲ್ಲ ಮುತ್ತು ರತ್ನಗಳಿಂದ, ಅತ್ಯಮೂಲ್ಯವಾದ ಮಣಿ ವಿಶೇಷಗಳಿಂದ ಅದು ಕಲಾತ್ಮಕವಾಗಿ ರಚಿಸಲ್ಪಟ್ಟಿರುತ್ತದೆ. ಬ್ರಿಟಿಷ್ ಸಾಮ್ರಾಜ್ಞಿಯ ಸಂಗತಿಯಲ್ಲೂ ಈ ಮಾತನ್ನು ಅಷ್ಟೇ ಚೆನ್ನಾಗಿ ಹೇಳಬಹುದು. ಈಗ ಕಾಣಸಿಗುವ ಬೆಲೆ ಬಾಳುವ ಆಭರಣ ಮತ್ತು ಒಡವೆಗಳಲ್ಲಿ ಅತ್ಯುತ್ತಮವಾದವುಗಳೆನ್ನಬಹುದಾದ ಹೆಚ್ಚಿನ ಮುತ್ತು ಮತ್ತು ಮಣಿಗಳ ಸಂಗ್ರಹವು ಬ್ರಿಟಿಷ ಕಿರೀಟದ ಆಭರಣಗಳೆಂದರೂ ಸಲ್ಲುತ್ತದೆ. ಸುಮಾರು ಒಂದು ಸಾವಿರ ವರ್ಷದಿಂದೀಚೆಗೆ ಪ್ರತಿಯೊಂದೂ ಕಿರೀಟಧಾರಣಾ ಮಹೋತ್ಸವದ ಸಂದರ್ಭದಲ್ಲಿ ಈ ಆಭರಣಗಳು ತಮ್ಮ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿರುತ್ತವೆ. ಬ್ರಿಟಿಷರ ಸಾಹಸ ಮತ್ತು ಪರಾಕ್ರಮದ ಪ್ರತೀಕವಾಗಿ ಈ ಆಭರಣಗಳು ಮತ್ತು ಒಡವೆಗಳಿವೆಯೆಂದು ಬಣ್ಣಿಸುವವರು ಅನೇಕ. ಇವುಗಳ ಹೊಳಪು ಮತ್ತು ಉನ್ನತ ದರ್ಜೆಯ ದೆಸೆಯಿಂದಾಗಿ ಜಗತ್ತಿನಲ್ಲಿಯೇ ಬಹು ಅಮೂಲ್ಯವಾಗಿ ಇವು ಪರಿಗಣಿಸಲ್ಪಟ್ಟಿವೆ; ಮತ್ತು ಜನಪ್ರಿಯತೆಯ ದೃಷ್ಟಿಯಿಂದಲೂ ಅನ್ಯಾದೃಶವಾಗಿರುತ್ತವೆ.

ಸಂದರ್ಶಕರ ಸಾಲು

ಈ ಆಭರಣಗಳನ್ನು ಕಿರೀಟಧಾರಣ ಮಹೋತ್ಸವ ಕಾಲವನ್ನುಳಿದ ಸಮಯದಲ್ಲಿ ಲಂಡನ್ ಗೋಪುರದಲ್ಲಿ ಇಟ್ಟಿರುವರು. ಅಲ್ಲಿ ಪ್ರತಿ ವರ್ಷವೂ ಸಾವಿರಾರು ಸಂದರ್ಶಕರು ಇವುಗಳನ್ನು ನೋಡಿ, ಅದನ್ನು ಮಾಡಿದವರ ಕೌಶಲ್ಯವನ್ನೂ ಅವುಗಳ ಜ್ವಾಜ್ವಲ್ಯತೆಯನ್ನೂ ಮೆಚ್ಚಿ ಹಿಂತಿರುಗುವರು. ಎಂಟು ವರ್ಷಗಳ ವರೆಗೆ ಯುದ್ಧದ ಆಕಸ್ಮಿಕದಿಂದ ಸಂರಕ್ಷಿಸಲೆಂದು ವಿಂಡ್ಸರ್ ಕ್ಯಾಸಲ್ಲಿನ ನೆಲ ಮಾಳಿಗೆಯಲ್ಲಿ ಭದ್ರವಾಗಿ ಇಟ್ಟಿದ್ದ ಈ ಆಭರಣಗಳನ್ನು ೧೯೪೭ ರಲ್ಲಿ ಮರಳಿ ಲಂಡನ್ ಗೋಪುರಕ್ಕೆ ತೆಗೆದುಕೊಂಡುಹೋದಾಗ ಪ್ರತಿದಿನವೂ ಆರು ಸಾವಿರ ಜನರು ಇವುಗಳ ದರ್ಶನಾಪೇಕ್ಷಿಗಳಾಗಿ ಬರುತಿದ್ದರು! ಕಿರೀಟ ಧಾರಣ ಮಹೋತ್ಸವದ ವರ್ಷವಂತೂ ಜನರೆದುರು ಈ ಒಡವೆಗಳನ್ನು ಪ್ರದರ್ಶಿಸುವ ಉತ್ಸಾಹವೇ ಉತ್ಸಾಹ. ವೆಸ್ಟ್ ಮಿನಿಸ್ಟರ್ ಎಬೇಯಲ್ಲಿ ಉತ್ಸವ ನಡೆಯಲಿರುವ ಕೆಲ ಸಮಯ ಪೂರ್ವದಲ್ಲಿ ಸಾದಾ ಉಡುಪು ಧರಿಸಿದ ಪತ್ತೆದಾರಿ ಪೋಲೀಸರ ಕಾವಲಿನಲ್ಲಿ ಈ ಆಭರಣಗಳನ್ನು ಅಲ್ಬೆಮಾರ್ಲೆ ಸ್ಟ್ರೀಟಿಗೆ ತೆಗೆದುಕೊಂಡು ಹೋಗುವರು. ಅಲ್ಲಿ ಹಗಲು, ರಾತ್ರಿ ಪೋಲೀಸರ ಕಾವಲಿರುತ್ತದೆ. ಅಧಿಕೃತವಾಗಿ ಈ ಎಲ್ಲ ಆಭರಣಗಳು ಲಾರ್ಡ್ ಚೆಂಬರ್ಲೇನರ ಸಂರಕ್ಷಣೆಯಲ್ಲಿರುತ್ತವೆ. ಲಂಡನ್ ಗೋಪುರದಿಂದ ವೆಸ್ಟ್ ಮಿನಿಸ್ಟರ್ ಎಬಿಗೆ ಕೊಂಡೊಯ್ದು ಮರಳಿಸುವ ಮತ್ತು ಅವುಗಳ ರಕ್ಷಣೆ ನೋಡಿಕೊಳ್ಳುವ ಮಹತ್ವದ ಹೊಣೆ ಇವರದಾಗಿರುತ್ತದೆ. ಒಂದು ಸಾವಿರ ವರ್ಷಗಳಿಂದ ಈ ಸಂಗ್ರಹ ನಡೆದಿರುತ್ತದೆಂದು ಹೇಳಿದರೂ, ಹೆಚ್ಚಿನವುಗಳನ್ನು ಎರಡನೇ ಚಾರ್ಲ್ಸನ ಕಿರೀಟ ಧಾರಣೋತ್ಸವಕ್ಕಾಗಿ (೧೬೬೦) ಮಾಡಿಸಲಾಗಿರುತ್ತದೆ. ಕ್ರಾಮ್‌ವೆಲ್ಲನ ಅಲ್ಪಾವಧಿಯ ಆಡಳಿತದಲ್ಲಿ ಬ್ರಿಟಿಷ್ ರಾಜರ ಮುಕುಟಾಭರಣಗಳು ಪೂರ್ಣ ನಷ್ಟಗೊಂಡವು. ಗಿಡುಗನಂತಿರುವ ತೈಲ ತುಂಬುವ ಚಿನ್ನದ ಪಾತ್ರೆ, ತೈಲ ಸುರುವಬೇಕಾದ ಚಿನ್ನದ ಚಮಚ ಮತ್ತೊಂದೆರಡು ಒಡವೆಗಳು ಮಾತ್ರ ಕ್ರಾಮವೆಲ್ಲನ ಕೈಗೆ ಸಿಗಲಿಲ್ಲ. ಈ ಒಡವೆಗಳು ಜೋನ್ ಅರಸನ ಕಾಲದವುಗಳು. ಇವನ್ನು ಬಿಟ್ಟರೆ ಉಳಿದವುಗಳೆಲ್ಲ ಎರಡನೇ ಚಾರ್ಲ್ಸನ ಪುನಃಸ್ಥಾಪನೆಯ ಕಾಲದಿಂದೀಚೆಗೆ ತಯಾರಿಸಲ್ಪಟ್ಟವುಗಳಾಗಿರುತ್ತವೆ. ಹೀಗಿದ್ದರೂ ಈ ಆಭರಣಗಳನ್ನು ರಚಿಸುವಾ
ಹಿಂದಿನ ಸಂಸ್ಕೃತಿಯನ್ನು ನೆನಪಿನಲ್ಲಿ '
ಟ್ಟುಕೊಂಡಂತೆ ಕಾಣುತ್ತದೆ.

ಕಿರೀಟ ಕೊಡುವ ಕೀಟಲೆ

ವೆಸ್ಟ್ ಮಿನಿಸ್ಟರ್ ಎಬಿಯ ಉತ್ಸ
ಕಾಲದಲ್ಲಿ ಸಾಮ್ರಾಜ್ಞಿಯು ಧರಿಸುವ
ರೀಟಕ್ಕೆ ಎಡ್ವರ್ಡ್ ದಿ ಕನ್‌ಫೆಸ್ಸರನ
ರೀಟವೆಂದು ಕರೆಯುವರು. ಎಡ್ವರ್ಡ
ಮಹಾರಾಜನು ಧರಿಸುತಿದ್ದ ಕಿರೀಟ
ಮಾದರಿಯಲ್ಲಿಯೇ ಚಾರ್ಲ್ಸ್ ಅರಸ
ಗೋಸ್ಕರ ಈ ಮಕುಟವನ್ನು ಸರ್ ರೊ
ಬರ್ಟ್ ವೇನರ್ ಎಂಬವನು ತಯಾರಿ
ದನು. ಸಮಾರಂಭದ ಪೂರ್ವಕಾಲದ
ಸ್ವಲ್ಪ ಹೊತ್ತು ಮಾತ್ರ ಈ ಕಿರೀಟವನ
ಧರಿಸುವುದು ವಾಡಿಕೆ. ಇದು ಸುಮಾರ
ಏಳು ರಾತಲು ಭಾರವಾಗಿರುತ್ತದೆ. ಆದ
ದರಿಂದ ಇದನ್ನು ತಲೆಯ ಮೇಲೆ ಹೊ
ತ್ತು ಗಂಭೀರವಾಗಿ ಕೂತುಕೊಳ್ಳುವುದೆ
ದೊಡ್ಡ ಕಷ್ಟ. ಒಂದು ಉದಾಹರಣೆಯ
ಮೂಲಕ ಇದನ್ನು ಸ್ಪಷ್ಟಗೊಳಿಸಬ
ದು. ಇಂದಿಗೆ ೧೧೫ ವರ್ಷಗಳ ಪೂರ್ವ
ದಲ್ಲಿ ವಿಕ್ಟೋರಿಯಾ ಮಹಾರಾಣಿಯ
ರಾಜ್ಯಾಭಿಷೇಕವು ವೆಸ್ಟ್ ಮಿನಿಸ್ಟರ್ ಎ
ಯಲ್ಲಾಯಿತು. ಈ ಉತ್ಸವದ ಸಿದ್ಧ
ಯು ಅತ್ಯಂತ ವಿಜೃಂಭಣೆಯಿಂದ ನ
ದಿತ್ತು. ಭಾರತವನ್ನು ಸಂಪೂರ್ಣವಾ
ಜಯಿಸಿದ್ದುದರಿಂದ ಆ ಕಾಲದಲ್ಲಿ ಲೋ
ಕದಲ್ಲಿ ಬ್ರಿಟಿಷ ಸಾಮ್ರಾಜ್ಯವೇ ಅ
ದೊಡ್ಡದು. ಆದುದರಿಂದ ಈ ವಿಶಾಲ ಸಾ
ಮ್ರಾಜ್ಯದ ಗೌರವಾರ್ಥವಾಗಿ ಉತ್ಸವ
ಗಾಂಭೀರ್ಯವನ್ನು ಹೆಚ್ಚಿಸಲು ಸುಮಾ
ರು ೩೦ ತಜ್ಞರ ವಿಶೇಷ ಸಮಿತಿಯೊ
ದು ಪ್ರತಿಕ್ಷಣದ ವಿವರ್ತನವನ್ನೂ ಕೂಲ
ಕಷ ಚರ್ಚೆ ಮತ್ತು ಸಮಾಲೋಚ
ಯಿಂದ ಸಿದ್ಧಗೊಳಿಸಿತ್ತು. ಎಣಿಸಿದಂ
ಅತ್ಯಂತ ಗಂಭೀರ ರೀತಿಯಿಂದ ಉತ್ಸ
ತೊಡಗಿತು. ಎಲ್ಲವೂ ಮಧ್ಯಕಾಲ
ವರೆಗೆ ಚೆನ್ನಾಗಿ ನಡೆಯಿತು. ಆದರೆ ಇಷ್ಟ
ರಲ್ಲಿ ತಲೆಯ ಮೇಲೆ ಹೊತ್ತಿದ್ದ ಭಾರ
ಕಿರೀಟದ ದೆಸೆಯಿಂದ ವಿಕ್ಟೋರಿಯಾ
ಮಹಾರಾಣಿ "ಆಹ್, ಆಹ್" ಎಂದು
ರಳಹತ್ತಿದರು. ಇದರಿಂದ ಗಾಬರಿಗೊಂಡ
ಕೆಂಟರ್ಬರಿಯ ಆರ್ಚ್‌ಬಿಶಪರು ಮಹಾ
ರಾಣಿಯ ಬೆರಳಿಗೆ ಸಿಕ್ಕಿಸಬೇಕಾಗಿದ್ದ
ಉಂಗುರವನ್ನು ತಪ್ಪು ಬೆರಳಿಗೆ ಇಟ್ಟರು.
ಈ ಬೆರಳಿಗೆ ಉಂಗುರ ಸಣ್ಣದಾದುದರಿಂ
ದ, ಬೆರಳು ಉಂಗುರದಲ್ಲಿ ಸಿಕ್ಕಿಕೊಂಡಿ
ತು. ಮಹಾರಾಣಿಗೆ ಇದರಿಂದ ಎಷ್ಟು

"ನವ್ರೋದಯ"
ಕನ್ನಡ ವಾಚನಮಾಲೆ

ಒಂದರಿಂದ ಐದನೆಯ ಪುಸ್ತಕಗಳು ಈಗಾಗಲೇ ಟೆಕ್ಸ್ಟ ಬುಕ್ ಕಮಿಟಿಯವರಿಂದ ಮಂಜೂರಾಗಿವೆ.

ಈ ಪುಸ್ತಕಗಳು ನವೀನ ಆಕಾರದಲ್ಲಿ ನವೀನ ರೀತಿಯಲ್ಲಿ ಆಯಾಯ ತರಗತಿಗೆ ತಕ್ಕಂತೆ ಅಕ್ಷರಗಳನ್ನು- ಬಣ್ಣದ ಚಿತ್ರಗಳನ್ನು ಬಳಸಿಕೊಂಡು ಮಕ್ಕಳ ಮನವನ್ನು ಆಕರ್ಷಿಸುವಂತಿದ್ದು ಪ್ರತಿ ಶಾಲೆಗಳಿಗೆ ಉಪಯೋಗಕರವಾಗಿವೆ.

ಬೆಲೆ: I 0-8-0; II 0-10-0; III 0-12-0;
IV 0-12-0; V 0-14-0.

ಬರೆದವರು: ಕಯ್ಯಾರ ಕಿಂಞಣ್ಣ ರೈ.

ONE WORLD ENGLISH READERS I.
For Ist Form & 6th Standard
By S Mukunda Rao Re. 1-0-0
Teacher's Guide Book - - Re. 1-0-0

ಪ್ರಕಾಶಕರು:
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್.
ಶಾರದಾ ಛಾಪಖಾನೆ
ರಥಬೀದಿ - - - ಮಂಗಳೂರು ೧.
ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನೋವಾಯಿತೆಂದರೆ ಅವರು ಒಮ್ಮೆಗೇ ಬೊಬ್ಬಿರಿದರು. ಮಹಾರಾಣಿಗೆ ಮುಜುರೆ ಮಾಡಿ ಗೌರವಸಲ್ಲಿಸಲೆಂದು ಎಡೆಯ ಮೆಟ್ಟಿಲುಗಳನ್ನೇರಿ ಬರುತ್ತಿದ್ದ ಒಬ್ಬ ಲಾರ್ಡರು ಈ ಬೊಬ್ಬೆಯನ್ನು ಕೇಳಿ ಕ್ಷಣಕಾಲ ತಲೆಕೆಡಿಸಿ, ಮೆಟ್ಟಿಲಿಂದ ಉರುಳಿ ಕೆಳಗೆ ಬಿದ್ದರು!

ಅಮೂಲ್ಯ ಮುತ್ತು ರತ್ನಗಳು

ವಿಕ್ಟೋರಿಯಾ ಮಹಾರಾಣಿ ಗೋಸ್ಕರ ತಯಾರಿಸಿದ ಇನ್ನೊಂದು ಸಣ್ಣ ಕಿರೀಟವನ್ನು ಉತ್ಸವದ ಉಳಿದ ಸಮಯದಲ್ಲಿ ಧರಿಸುವುದು ಈಗಿನ ವಾಡಿಕೆಯಾಗಿರುತ್ತದೆ. ಪಾರ್ಲಿಮೆಂಟಿನ ಅಧಿವೇಶನವನ್ನು ಉದ್ಘಾಟಿಸುವಾಗ ಇದೇ ಕಿರೀಟವು ಧರಿಸಲ್ಪಡುತ್ತದೆ. ಈ ಕಿರೀಟ ಕೇವಲ ೩೯ ಔನ್ಸುಗಳು (ಎಂದರೆ ಎರಡೂವರೆ ರಾತಲಿಗೂ ಕಡಿಮೆ) ಭಾರವಿರುತ್ತದೆ. ಎಡ್ವರ್ಡರ ಕಿರೀಟಕ್ಕೆ ಚಿನ್ನದ ಸುತ್ತು ಇದ್ದು, ಅದರಲ್ಲಿ ಅತ್ಯಮೂಲ್ಯವಾದ ವಜ್ರಗಳು, ಮಾಣಿಕ್ಯಗಳು, ಪಚ್ಚೆಕಲ್ಲುಗಳು, ನೀಲಮಣಿಗಳು ಮತ್ತು ಮುತ್ತುಗಳು ಅಂಕಿತವಾಗಿವೆ. ಕ್ರೂಜೆಯೂ ಇತರ ಅಲಂಕಾರಗಳೂ ಬಂಗಾರದಿಂದ ರಚಿಸಲ್ಪಟ್ಟಿವೆ. ಆಭರಣಗಳ ಮಹತ್ವವನ್ನು ಲೆಕ್ಕಕ್ಕೆ ತೆಗೆದು ಕೊಂಡಲ್ಲಿ ಇದಕ್ಕಿಂತಲೂ ಎರಡನೇ ಕಿರೀಟವೇ ಪ್ರಧಾನವಾದುದೆಂದು ಹೇಳಬೇಕು. ಇದರಲ್ಲಿ ಇರುವ ಮಣಿರತ್ನಗಳು ಅತ್ಯುತ್ತಮ ಸಂಗ್ರಹ. ಇದಕ್ಕಿರುವ ಪ್ಲಾಟಿನಮ ಸುತ್ತಿನಲ್ಲಿ ೨೭೮೩ ವಜ್ರಗಳು, ೨೭೭ ಮುತ್ತುಗಳು, ೧೭ ನೀಲಮಣಿಗಳು ೧೧ ಪಚ್ಚೆಕಲ್ಲುಗಳು, ಮತ್ತು ೫ ಮಾಣಿಕ್ಯದ ಹರಳುಗಳಿವೆ. ಎಲಿಜಾಬೆಥ ರಾಣಿಯು ಕಿವಿಯೋಲೆಯ ಮುತ್ತುಗಳೂ, ೧೦೪೩ರಲ್ಲಿ ಎಡ್ವರ್ಡ ದಿ ಕನ್‌ಫೆಸರು ಧರಿಸಿದ್ದ ನೀಲಮಣಿಯೂ ಎರಡನೇ ಚಾರ್ಲ್ಸ್ ಧರಿಸಿದ್ದ ಸ್ಟ್ಯುಯರ್ಟ ನೀಲಮಣಿಯೂ ಈ ಕಿರೀಟದಲ್ಲಿರುತ್ತವೆ. ಏಳನೇ ಎಡ್ವರ್ಡರಿಗೆ ದಕ್ಷಿಣ ಆಫ್ರಿಕೆಯ ಪರವಾಗಿ ಕಾಣಿಕೆ ನೀಡಲಾದ ಎರಡನೇ ಸ್ಟಾರ ಆಫ ಆಫ್ರಿಕಾ ಎಂಬ ಅತ್ಯಮೂಲ್ಯ ಹೀರವೂ ಈ ಕಿರೀಟದಲ್ಲಿದೆ. ಭಾರತದ ಇತಿಹಾಸ ಪ್ರಸಿದ್ಧ ಕೊಹಿನೂರು ವಜ್ರವು ಆರನೇ ಜಾರ್ಜ ಅರಸರ ಪತ್ನಿ ಎಲಿಜಾಬೆಥ ರಾಣಿಯ ಕಿರೀಟದಲ್ಲಿದೆ. ಇದನ್ನು ವಾಪಾಸು ಪಡೆಯುವ ಕುರಿತು ಭಾರತದ ಪಾರ್ಲಿಮೆಂಟಿನ ಕಳೆದ ಅಧಿವೇಶನದಲ್ಲಿ ಪ್ರಶ್ನೋತ್ತರಗಳಾಗಿದ್ದುವು. ಬ್ರಿಟಿಷ್ ಪತ್ರಿಕೆಗಳು ಕೊಹಿನೂರು ವಜ್ರವನ್ನು ಭಾರತಕ್ಕೆ ಕೊಡುವ ವಿಷಯದಲ್ಲಿ ತೀವ್ರ ವಿರೋಧ ವ್ಯಕ್ತಗೊಳಿಸಿದ್ದುವು. ಕೆಲವು ಸಹೃದಯರು ಇಕ್ಕಡೆಯವರ ಮನೋಭಾವನೆಯನ್ನು ಹೃದಯಂಗಮ ಮಾಡಿಕೊಂಡು ಯಾರ ಅಭಿಮಾನಕ್ಕೂ ಕುಂದಾಗದ ಒಂದು ಉಪಾಯ ಸೂಚಿಸಿದ್ದರು. ಭಾರತಕ್ಕೆ ಕೊಹಿನೂರು ವಜ್ರವನ್ನು ಎಲಿಜಬೆಥ ರಾಣಿಯು ವಾಪಸು ಕೊಡುವ ಇಚ್ಛೆ ವ್ಯಕ್ತ ಮಾಡಬೇಕು; ಆಗ ಭಾರತವು ತನ್ನ ಸ್ನೇಹದ ದ್ಯೋತಕವಾಗಿ ಅದು ಸಿಮ್ಹಾಸನದ ಹತ್ತಿರವೇ ಇರಲೆಂದು ಅಧಿಕೃತವಾಗಿ ಸಾರಬೇಕು: ಎಂದರೆ ವಜ್ರ ಭಾರತದ್ದೆಂದೂ ರಾಣಿಯ ಕಿರೀಟದಲ್ಲಿಯೇ ಇದಿರಬೇಕೆಂದೂ ಆಗುತ್ತದೆ.

ಬಿಗಿಯಾದ ಕಾವಲು

ಇವಲ್ಲದೆ ನಾಲ್ಕನೇ ಜಾರ್ಜರಿಗೆಂದು ಆರು ಸಾವಿರ ಪವನುಗಳ ವೆಚ್ಚದಿಂದ ಸಿದ್ಧಪಡಿಸಿದ ಖಡ್ಗಗಳು, ರಾಜದಂಡಗಳು (ಇವುಗಳಲ್ಲಿ ಒಂದು ಲೋಕದಲ್ಲಿಯೇ ದೊಡ್ಡದೆನಿಸಿದ ಎರಡೂವರೆ ಇಂಚು ಉದ್ದದ ಅತ್ಯಮೂಲ್ಯವಾದ ಸ್ಟಾರ್ ಆಫ್ ಆಫ್ರಿಕಾ ವಜ್ರದಿಂದ ಕೂಡಿದೆ) ಕ್ರೈಸ್ತ ಧರ್ಮದ ಸಾರ್ವಭೌಮತ್ವವನ್ನು ತೋರಿಸುವ ಚಿನ್ನದ ಗೋಳ ಊರು ಗೋಲು ಉಂಗುರ ಇತ್ಯಾದಿ. ಇತರ ಅಮೂಲ್ಯ ವಸ್ತುಗಳೂ ಈ ಆಭರಣಗಳಲ್ಲಿ ಸೇರಿವೆ. ಇವೆಲ್ಲವುಗಳ ಒಟ್ಟು ಬೆಲೆ ಸುಮಾರು ಮೂರು ಮಿಲಿಯ ಪವನುಗಳೆಂದು ೧೯೦೦ರಲ್ಲಿ ಲೆಕ್ಕ ಹಾಕಿದ್ದರು. ಈಗ ಈ ಬೆಲೆಯು ಐದಾರು ಪಟ್ಟವಿರಲೇಬೇಕು. ಆದುದರಿಂದ ಇಷ್ಟು ಬೆಲೆಯ ಆಭರಣಗಳನ್ನು ಸುರಕ್ಷಿತವಾಗಿಡುವುದು ದೊಡ್ಡ ಸಮಸ್ಯೆಯಾಗಿರುತ್ತದೆ. ಇವುಗಳನ್ನು ಇಡುವ ಕೋಣೆಯ ಗೋಡೆಗಳು ಎಂಟು ಅಡಿ ದಪ್ಪವಾಗಿರುತ್ತವೆ! ಕೇವಲ ಒಂದು ಬಾಗಿಲಿರುತ್ತದೆ. ವೈಜ್ಞಾನಿಕವಾದ ಸಂರಕ್ಷಣಾ ಸಾಧನಗಳಿರುತ್ತವೆ. ಮನುಷ್ಯ ಸಹಜವಾದ ಕಾವಲೂ ಭದ್ರವಾಗಿರುತ್ತದೆ. ಹಲವು ಸಲ ಅಪರಾಧಗಳನ್ನು ಮಾಡಿ ಹೆಸರಾದ ಪರಿಚಯದ ದರೋಡೆ ಕೋರರು ಬಳಿಯಲ್ಲಿ ಸುಳಿಯುವುದನ್ನು ಕಂಡಾಗ ... ಮುಖದಲ್ಲಿ ಆಗುವ

(೧೪ನೇ ಪುಟ ನೋಡಿರಿ)



ಪಾರ್ಲಿಮೆಂಟ್ ಪ್ರಾರಂಭವಾಗುವ ಹಾಗೂ ಇತರ ವಿಶೇಷ ಸಮಾರಂಭಗಳಲ್ಲಿ ಮಾತ್ರವೇ ಆಂಗ್ಲ ರಾಜ್ಯಾಧಿಕಾರಿಗಳು ಅಂದರೆ ರಾಜ ರಾಣಿ ಧರಿಸುವ ವಿವಿಧ ವಜ್ರ ವೈಢೂರ್ಯಗಳಿಂದ ಕೂಡಿದ ಇತಿಹಾಸ ಪ್ರಸಿದ್ಧ ಅತ್ಯಮೂಲ್ಯ ಕಿರೀಟ. ಈ ಕಿರೀಟದಲ್ಲಿ 2783 ವಜ್ರಗಳೂ 277 ಮುತ್ತುಗಳೂ 17 ನೀಲ ರತ್ನಗಳೂ 11 ಪಚ್ಚೆ ಕಲ್ಲುಗಳೂ 5 ಮಾಣಿಕ್ಯಗಳೂ ಇವೆ.

ಮಧುವಿಗಿಂತಲು ಮಧುರವಾದ ಕಥಾಸಂಗ್ರಹ

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಪಡಿಯಚ್ಚುಗಳಿವೆ.

"ಮಧುವನ"ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. "ಮಿಂಚಿನ ಗರಿ" "ಕಾಮನ ಬಿಲ್ಲು" ಎಂಬ ಸಂಗ್ರಹಗಳು ಹೊರಟರೂ ಅಲ್ಲಿ ಕಾಣಲಾಗದ ಹೆಸರುಗಳ ಕೆಲವು "ಮಧುವನದಲ್ಲಿ ನಮಗೆ ಪರಿಚಿತವಾಗಿ ... "ಮಧುವನ"ದ ಸಂಪಾದಕರ ಕೆಲಸವು ಸಣ್ಣದಲ್ಲ. ಹತ್ತು ಎಷ್ಟು ಹಾಲು ಕರೆದರೂ ಅದನ್ನು ಹೆಪ್ಪು ಹಾಕುವ ಹೊಣೆಯು ಅಪರವಾಗಿದೆ. ಅದನ್ನು ಎಲ್ಲರೂ ಒಪ್ಪುವಂತೆ ಕೊಸೆದಿದ್ದಾರೆ. ... ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಬರೆದ ವಿಮರ್ಶಾತ್ಮಕ ಟಿಪ್ಪಣಿಗಳು ಇವೆಲ್ಲ ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಸೊಬಗನ್ನು ಹೆಚ್ಚಿಸಿವೆ. ಕಲೆಯ ದೃಷ್ಟಿಯಿಂದ ಇದೊಂದು ಉಚ್ಚ ತರಗತಿಯ ಕಥಾಸಂಗ್ರಹವಾಗಿದೆ.

— ... ಗೋಕಾಕ.

... ಆಕರ್ಷಕ ಹೊರ ಪ್ರೈ. ಬೆಲೆ ರೂ. ೩—೧—೦.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತವೆ.

From:

The Executive Officer,
Sri Ananthapadmanabha Temple, Perdoor, S. K.

TENDER NOTICE

Sealed tenders are invited by the undersigned up to 4 P. M. on 12—6—53 for the works shown below (to be executed at the temple). The tenders should be sent separately for each work in sealed cases, superscribing the name of the work on each, accompanied by a chalan, intoken of having remitted the prescribed earnest money deposit shown against each work in to the temple treasury. Intending tenderers, can peruse the estimates in the office of the undersigned during office hours on any working day. Tenderers, or their authorized agents may be present in the office of the undersigned at 11 A. M. on 13—6—53 when the tenders will be opened. The undersigned reserves to himself the right of rejecting any tender, without assigning reasons therefore.

Name of work	Amount of estimate	Earnest money
Urgent improvements to the Kalyana Mantapa	Rs 4300/-	Rs 100/-
Urgent improvements to the Executive officer's quarters	Rs 1720/-	Rs 40/-

N. B — The earnest money deposit will be refunded only after satisfactory completion of the work.

K. B. Shetty,
Executive Officer

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.
"Popular buildings", MANGALORE—I.



ಮಿತ ದರದಲ್ಲಿ
ಟಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.

ವಿವರಗಳಿಗೆ ಬರೆಯಿರಿ:

MUBARAK & CO
Watch & Clock Specialists,
MADRAS 3

ಮುಬಾರಕ್ & ಕೊ
ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್
ಮದ್ರಾಸ ೩.

ದಾವಣಗೆರೆಯಲ್ಲಿ ಏಕೀಕರಣ ಪರಿಷತ್ತು

ರಾಜಧಾನಿಯ ಕುರಿತು ಆಂಧ್ರ ಪ್ರಮುಖರಲ್ಲಿ ಸರ್ವಸಾಮಾನ್ಯಾಭಿಪ್ರಾಯ

ಹೊಸ ರಾಜಧಾನಿ

ಮುಂಬಿನ ಅಕ್ಟೋಬರದಲ್ಲಿ ಆಂಧ್ರ ರಾಜ್ಯವು ಸ್ಥಾಪಿಸಲ್ಪಡುವುದರಿಂದ ಈಗ ಆಂಧ್ರದ ಮುಖಂಡರು ಈ ವಿಷಯದಲ್ಲಿ ಹೆಚ್ಚಿನ ಆಸ್ಥೆಯನ್ನು ವಹಿಸಿ ದುಡಿಯುತ್ತಿರುವುದು ಕ್ರಮ ಪ್ರಾಪ್ತವಾಗಿರುತ್ತದೆ. ಇದೇ ಜೂನು ೧ನೇ ತಾರೀಕಿಗೆ ಮದ್ರಾಸು ಶಾಸನ ಸಭೆಗಳ ಆಂಧ್ರ ಸದಸ್ಯರ ಸಭೆಯನ್ನು ಕರೆದಿದ್ದರು. ಆಂಧ್ರದ ನೂತನ ರಾಜಧಾನಿಯಾಗಿ ಯಾವ ನಗರವಿರಬೇಕೆಂಬುದನ್ನು ನಿರ್ಣಯಿಸುವುದೇ ಈ ಸಭೆಯ ಉದ್ದೇಶ. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಟಿ. ಪ್ರಕಾಶಮರು ವಹಿಸಿಕೊಳ್ಳಬೇಕೆಂದು ಶಾಸನ ಸಭಾಧ್ಯಕ್ಷ ಶ್ರೀ ಶಿವಷಣ್ಮುಗಂ ಪಿಳ್ಳೆಯವರು ಸೂಚಿಸಿದರು. ಇದರಿಂದ ಆಂಧ್ರರಿಗೆ ಯೋಗ್ಯ ನಿರ್ಣಯಕ್ಕೆ ಬರಲು ಹೆಚ್ಚು ಅನುಕೂಲವೇ ಆಯಿತೆಂದು ಹೇಳಬಹುದು. ಈ ಸಭೆಯ ಮುಂದೆ ಎರಡು ನಗರಗಳ ಹೆಸರನ್ನು ರಾಜಧಾನಿಗೋಸ್ಕರ ಸೂಚಿಸಲಾಯಿತು. ಕಮ್ಯೂನಿಸ್ಟರು ವಿಜಯವಾಡಾವನ್ನು ನೂತನ ಆಂಧ್ರದ ರಾಜಧಾನಿಯನ್ನಾಗಿ ಸ್ವೀಕರಿಸಬೇಕೆಂದು ಆಗ್ರಹಪಡಿಸಿದರು. ಆದರೆ ಕಾಂಗ್ರೆಸ ಮತ್ತು ಪ್ರಜಾ ಸಮಾಜವಾದಿ ಪಕ್ಷಗಳು ಸಂಯುಕ್ತವಾಗಿ ಕರ್ನೂಲು ನಗರವೇ ಆಂಧ್ರದ ಹೊಸ ರಾಜಧಾನಿಯಾಗಬೇಕೆಂದು ಹೇಳಿವೆ. ಕಾಂಗ್ರೆಸ್ ಮತ್ತು ಪ್ರಜಾ ಸಮಾಜವಾದಿ ಪಕ್ಷಗಳು ಆಂಧ್ರ ರಾಜ್ಯದ ಮಟ್ಟಿಗೆ ಒಂದು ಸಾಮಾನ್ಯ ತಳಹದಿಯ ಮೇಲೆ ಒಟ್ಟಾಗಿ ದುಡಿಯಲು ನಿರ್ಣಯ ಮಾಡಿವೆ. ಈ ತಳಹದಿಯ ಮೇಲಿಂದಲೇ ರಾಜಧಾನಿಯ ಬಗ್ಗೆ ಕೂಡ ಒಮ್ಮತದ ಅಭಿಪ್ರಾಯಕ್ಕೆ ಒಂದಾಗಿರುತ್ತದೆ. ಆಂಧ್ರದಲ್ಲಿಯೇ ರಾಯಲ ಸೀಮೆಯ ಪ್ರದೇಶಕ್ಕೂ ಮುಖ್ಯ ಆಂಧ್ರ ದೇಶಕ್ಕೂ ಬಲವಾದ ಭಿನ್ನಾಭಿಪ್ರಾಯವಿದೆಯೆಂಬುದು ಎಲ್ಲರಿಗೂ ಗೊತ್ತಿದೆ. ರಾಯಲ ಸೀಮೆಯವರು ಆಂಧ್ರ ರಾಜ್ಯದಲ್ಲಿ ತಾವು ಸೇರಲು ಇಚ್ಛಿಸುವುದಿಲ್ಲವೆಂದು ನುಡಿದ ಪ್ರಸಂಗಗಳೂ ಇವೆ. ಹೀಗಿರುವಾಗ ರಾಯಲ ಸೀಮೆಯವರು ಮನವೊಲಿಸುವುದಕ್ಕಾಗಿ ಶ್ರೀಭಾಗ ಒಪ್ಪಂದವನ್ನು ಕಾರ್ಯಾಚರಣೆಗೆ ತರುವ ಉಪಾಯವನ್ನು ಅವಲಂಬಿಸುವುದು ಅನಿವಾರ್ಯವಾಗಿ ಪರಿಣಮಿಸಿತು. ಈ ಒಪ್ಪಂದದ ಆಧಾರದ ಮೇಲೆಯೇ ರಾಯಲ ಸೀಮೆಯಲ್ಲಿ ನೂತನ ಆಂಧ್ರದ ರಾಜಧಾನಿಯನ್ನು ಸ್ಥಾಪಿಸಬೇಕೆಂದೂ ಅದಕ್ಕೆ ಕರ್ನೂಲು ನಗರವೇ ತಕ್ಕುದಾದುದೆಂದೂ ಕಾಂಗ್ರೆಸ್ ಮತ್ತು ಪ್ರಜಾಸಮಾಜವಾದೀ ಧುರೀಣರು ಅಭಿಪ್ರಾಯಪಟ್ಟಿರುವರು. ಆದರೆ ಈ ಮಾತಿಗೆ ಕಮ್ಯೂನಿಸ್ಟರು ಮೊದಲಿಂದಲೂ ಆಕ್ಷೇಪ ವ್ಯಕ್ತಪಡಿಸುತ್ತಾ ಬಂದಿರುವರು. ಇದೇನೇ ಇರಲಿ- ಕರ್ನೂಲು ರಾಜಧಾನಿಯಾಗಿ ಚುನಾಯಿಸಲ್ಪಟ್ಟು, ಆಂಧ್ರದ ಮುಂದಿನ ಒಂದು ಸಮಸ್ಯೆ ಕಳೆದುದು ಸಂತೋಷ.

ಸಾಮಾನ್ಯ ಕಾರ್ಯಕ್ರಮಗಳು

ಕಾಂಗ್ರೆಸ ಮತ್ತು ಪ್ರಜಾ ಸಮಾಜವಾದಿ ಪಕ್ಷಗಳು ಸಾಮಾನ್ಯ ಕಾರ್ಯಕ್ರಮವೊಂದನ್ನು ಅಂಗೀಕರಿಸಿವೆಯೆಂದೆವಷ್ಟೆ! ಇವುಗಳ ಸ್ವರೂಪ ಹೆಚ್ಚುಕಡಿಮೆ ನೆಹರೂರಿಗೆ ಜಯಪ್ರಕಾಶ ನಾರಾಯಣರು ನೀಡಿದ ೧೪ ಅಂಶಗಳ ಸೂಚನೆಯಂತೆಯೇ ಇದೆ. ಆದರೆ ಅಷ್ಟು ವಿವರವಾಗಿ ಮಾತ್ರ ಇರದೆ ಮುಖ್ಯವಾದ ಆರು ಅಂಶಗಳನ್ನು ಒಳಗೊಂಡಿರುತ್ತದೆ. ಶ್ರೀ ಪ್ರಕಾಶಮರೂ ಶ್ರೀ ಸಂಜೀವ ರೆಡ್ಡಿಯವರೂ ತಂತಮ್ಮ ಪಕ್ಷಗಳ ಕಡೆಯಿಂದ ಮಾತುಕತೆಗಳನ್ನು ನಡೆಸಿ ಈ ಒಪ್ಪಂದಕ್ಕೆ ಬಂದಿರುವರು. ಇದರಂತೆ (೧) ಭೂ ಸಾಗುವಳಿಯ ಮತ್ತು ಭೂ ಕಂದಾಯದ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಲಾಗುವುದು (೨) ಆಡಳಿತದಲ್ಲಿ ಲಂಚಗುಳಿತನವನ್ನು ನಿರ್ಮೂಲಗೊಳಿಸಿ ನೈರ್ಮಲ್ಯವನ್ನೂ ಕಾರ್ಯಕ್ಷಮತೆಯನ್ನೂ ಹೆಚ್ಚಿಸಲಾಗುವುದು (೩) ನೀರಾವರಿ ಮತ್ತು ಇತರ ಅಭಿವೃದ್ಧಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡಲ್ಪಡುವುದು. (೪) ಅಭಿವೃದ್ಧಿ ಕಾರ್ಯಗಳಲ್ಲಿ ಹಿಂದುಳಿದ ಪ್ರದೇಶಗಳನ್ನು ಮೊದಲು ಗಮನಿಸಲಾಗುವುದು (೫) ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರೀ ಪದ್ಧತಿಯನ್ನು ಪ್ರೋತ್ಸಾಹಿಸಲಾಗುವುದು (೬) ಔದ್ಯಮಿಕ ವಿಕಾಸವು ಸಂಪನ್ನವಾಗುವಂತೆ ಮುಖ್ಯವಾಗಿ ಗ್ರಾಮೋದ್ಯೋಗಗಳು ಬೆಳೆಯುವಂತೆ ನೋಡಿಕೊಳ್ಳಲಾಗುವುದು. ಈ ಸಾಮಾನ್ಯ ತತ್ವಗಳು ಎಲ್ಲರಿಗೂ ಒಪ್ಪಿಗೆಯಾಗುವಂತಿವೆ. ಆದರೆ ಇವುಗಳ ಕಾರ್ಯಾಚರಣೆಯ ವಿವರಗಳು ತಿಳಿಯದೆ ಈ ಒಪ್ಪಂದದ ಸಾಧಕ ಬಾಧಕಾಂಶಗಳನ್ನು ವಿಮರ್ಶಿಸಲು ಬರುವುದಿಲ್ಲ. ನೆಹರೂ ಮತ್ತು ಜಯಪ್ರಕಾಶನಾರಾಯಣರ ಮಾತುಕತೆಗಳು ನೆನೆಗುದಿಗೆ ಬೀಳಲಿಕ್ಕೆ ಉದ್ದೇಶ ಮತ್ತು ಧ್ಯೇಯದಲ್ಲಿ ಕಂಡುಬಂದ ಭಿನ್ನಾಭಿಪ್ರಾಯ ಕಾರಣವಲ್ಲ-- ಕಾರ್ಯಸಾಧನೆಯ ಸ್ವರೂಪವೇ ಅದಕ್ಕೆ ಹೊಣೆ ಎಂಬುದನ್ನು ನೋಡಿದರೆ ಆಂಧ್ರದ ಪ್ರಜಾ ಸಮಾಜವಾದಿಗಳೂ ಕಾಂಗ್ರೆಸಿಗರೂ ಮಾಡಿಕೊಂಡ ಒಪ್ಪಂದದ ಕುರಿತು ಸಂಶಯವೇಳುತ್ತದೆ. ಆದರೂ ಇಂಥ ಭಿನ್ನತೆಯನ್ನು ನೀಗಿ ಏಕೋದ್ದೇಶದಿಂದ ನ್ಯಾಯಮಾರ್ಗವನ್ನು ಹಿಡಿದು ಸಾಗುವುದರಲ್ಲಿಯೇ ಶ್ರೇಯಸ್ಸಿದೆ ಎಂಬುದನ್ನು ಒಪ್ಪಬೇಕು. ಮಧ್ಯಪಾನ ನಿಷೇಧದ ಸಂಬಂಧದಲ್ಲಿ ಯಾವ ತರದ ನಿಷ್ಕರ್ಷೆಯನ್ನು ಇವರು ಕೈಗೊಳ್ಳಲಿಲ್ಲವೆಂದು ತಿಳಿಯುತ್ತದೆ. ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ವ್ಯಕ್ತಗೊಂಡುದರಿಂದ ಸದ್ಯಕ್ಕೆ ಈ ವಿಷಯವನ್ನು ಬದಿಗೆ ಸರಿಸುವರೆಂದು ಕೇಳುತ್ತೇವೆ.

"ಜನ್ಮಸಿದ್ಧ ಹಕ್ಕು"

ಮದ್ರಾಸು ಸರಕಾರವು ಆಂಧ್ರ ವಿಶ್ವವಿದ್ಯಾಲಯಕ್ಕೆ ರಾಯಲ ಸೀಮೆಯಲ್ಲಿರುವ ಕಾಲೇಜುಗಳನ್ನು ಸೇರಿಸುವ ವಿಚಾರ ಮಾಡಿರುತ್ತದೆ. ಈಗ ಕರ್ನೂಲು, ಅನಂತಪುರ, ಕಡಪಾ, ಮದನಪಳ್ಳಿ ಮತ್ತು ತಿರುಪತಿಗಳಲ್ಲಿ ಹತ್ತು ಮೊದಲನೇ ಮತ್ತು ಎರಡನೇ ವರ್ಗದ ಕಾಲೇಜುಗಳು ಇರುತ್ತವೆ. ಅನಂತಪುರದಲ್ಲಿರುವ ಕಾಲೇಜುಗಳಲ್ಲಿ ಒಂದು ಇಂಜನಿಯರಿಂಗ್ ಕಲಾಶಾಲೆಯಾಗಿರುತ್ತದೆ. ಹಾಗೆಯೇ ತಿರುಪತಿಯಲ್ಲಿ ಹೆಂಗಸರ ದ್ವಿತೀಯ ಶ್ರೇಣಿಯ ಕಾಲೇಜೊಂದಿದೆ. ಇವೆಲ್ಲವನ್ನು ಆಂಧ್ರ ವಿಶ್ವ ವಿದ್ಯಾಲಯಕ್ಕೆ ಸೇರಿಸಬೇಕೆಂದು ಹಿಂದಿನಿಂದಲೂ ಪ್ರಯತ್ನಗಳು ನಡೆದಿದ್ದುವು. ಆದರೆ ವಿಶ್ವ ವಿದ್ಯಾಲಯವನ್ನು ವಾಲ್ಟೇರದಲ್ಲಿ ಸ್ಥಾಪಿಸಿದ್ದುದರಿಂದ ರಾಯಲ ಸೀಮೆಯವರು ಇದನ್ನು ವಿರೋಧಿಸಿ, ಮದ್ರಾಸು ವಿಶ್ವ ವಿದ್ಯಾಲಯದೊಡನೆಯೇ ಸೇರಿಕೊಂಡರು. ಸರಕಾರವು ಈಗ ಮಾಡಿರುವ ನಿರ್ಣಯದಂತೆ ಆಂಧ್ರ ವಿಶ್ವ ವಿದ್ಯಾಲಯ ವಾಲ್ಟೇರದಲ್ಲಿಯೇ ಇರುತ್ತದೆ, ರಾಯಲ ಸೀಮೆಯ ಕಾಲೇಜುಗಳು ಮಾತ್ರ ಅದರೊಂದಿಗೆ ಸೇರುತ್ತವೆ. ಇದಲ್ಲದೆ ಅನಂತಪುರದಲ್ಲಿ ಆನರ್ಸ್ ತರಗತಿಯನ್ನು ಕಲಿಸಲು ವ್ಯವಸ್ಥೆ ಮಾಡಲ್ಪಡುವುದು. ಹೀಗೆ ಒಂದೆಡೆ ಆಂಧ್ರದಲ್ಲಿ ನೂತನ ರಾಜ್ಯವು ಅಸ್ತಿತ್ವದಲ್ಲಿ ಬರಲು ಆಗತ್ಯವಿರುವ ಪೂರ್ವಭಾವಿ ಸಿದ್ಧತೆಗಳು ನಡೆದಿರುವಾಗ, ಕರ್ನಾಟಕದ ದಾವಣಗೆರೆಯಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತೊಂದು ಕಳೆದ ೨ನೇ ತಾರೀಕಿಗೆ ಸೇರಿತು. ನಮ್ಮ ಜಿಲ್ಲೆಯ ರಾಜಕೀಯ ಮುಂದಾಳುಗಳಾದ ಶ್ರೀ ಕೋಟ ರಾಮಕೃಷ್ಣ ಕಾರಂತರು ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದರು. ಕರ್ನಾಟಕ ರಾಜ್ಯವನ್ನು ನಿರ್ಮಿಸುವುದು ನಮ್ಮ ಜನ್ಮಸಿದ್ಧ ಹಕ್ಕೆಂದೂ ಅದನ್ನು ಕೃತಿಗಿಳಿಸಿಯೇ ತೀರಬೇಕೆಂದೂ ಕಾರಂತರು ಜನತೆಗೆ ಕರೆಕೊಟ್ಟರು. ಕಾರಂತರ ಭಾಷಣದಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ಇತಿಹಾಸ, ಕಾಂಗ್ರೆಸು ಇದುವರೆಗೆ ಕೊಡುತ್ತ ಬಂದ ಭರವಸೆಯ ವರ್ಣನೆ, ಮತ್ತು ಈಗ ತಾನು ಕೊಟ್ಟ ಮಾತಿನಂತೆ ಕಾಂಗ್ರೆಸು ನಡೆದುಕೊಳ್ಳುತ್ತಿಲ್ಲವೆಂಬ ಆಪಾದನೆಗಳು ತುಂಬಿದ್ದುವು. ನೆಹರೂರವರು ಏಕೀಕರಣ ಕನ್ನಡಿಗರು ಸಾಧಿಸಬೇಕಾದುದೆಂದು ಹೇಳಿರುವ ಮಾತನ್ನು ಕಾರಂತರು ಎತ್ತಿ ಹಿಡಿದು, ಈ ಪ್ರಯತ್ನದಲ್ಲಿ ವಿಧ್ವಂಸಕ ಕೃತ್ಯಗಳಿಗೆ ಮಾತ್ರ ಆಸ್ಪದ ಕೊಡಬಾರದೆಂದು ಹೇಳಿದರು. ಇದರಂತೆ ಮೈಸೂರು ಮತ್ತು ಕನ್ನಡದ ಉಳಿದ ಭಾಗಗಳಲ್ಲಿ ಉಂಟಾಗಿರುವ ಈಗಿನ ಸೌಹಾರ್ದಮಯವಾದ ವಾತಾವರಣವನ್ನು ಯಾರೊಬ್ಬರೂ ಕೆಡಿಸಕೂಡದೆಂದು ಬಿನ್ನವಿಸಿದರು.

ಸ್ವೀಕರಿಸಿದ ಗೊತ್ತುವಳಿ

ಈ ಪರಿಷತ್ತು ಸ್ವೀಕರಿಸಿದ ಗೊತ್ತುವಳಿಯಲ್ಲಿ ಭಾಷಾವಾರು ರಾಜ್ಯರಚನೆಯ ಪ್ರಶ್ನೆಯನ್ನು ವಿಚಾರಿಸುವುದಕ್ಕೋಸ್ಕರ ನೇಮಿಸಲ್ಪಡುವ ಸಮಿತಿಯು ಕರ್ನಾಟಕ ಏಕೀಕರಣವನ್ನು ವಿಳಂಬ ಮಾಡುವುದಕ್ಕೆ ಹೂಡಿದ ಹಂಚಿಕೆಯೆಂದು ಹೇಳಿರುವರು. ಈ ಸಮಿತಿಯೊಡನೆ ಪರಿಷತ್ತು ಸಂಪರ್ಕವನ್ನು ಇಟ್ಟುಕೊಳ್ಳಲಾರದೆಂದು ಎಚ್ಚರಿಸಿರುವರು. ಮಾತ್ರವಲ್ಲ ಇದೇ ಆಗಸ್ಟ ೯ನೇ ತಾರೀಕಿನೊಳಗಾಗಿ ಗಡಿ ನಿರ್ಣಯಿಸುವ ಸಮಿತಿಯು ನೇಮಕವಾಗಬೇಕೆಂದೂ ಕರ್ನಾಟಕ ರಾಜ್ಯವನ್ನು ೧೯೫೪ನೇ ಅಕ್ಟೋಬರ ೧ನೇ ದಿನಾಂಕದೊಳಗೆ ಸ್ಥಾಪಿಸಬೇಕೆಂದೂ ಈ ಗೊತ್ತುವಳಿ ಹೇಳುತ್ತದೆ. ಈ ಗಡಿ ನಿರ್ಣಯಿಸುವ ಸಮಿತಿಯು ಸ್ವತಂತ್ರವಾಗಿ ವರ್ತಿಸಬೇಕೆಂದೂ ಯಾವದೇ ವರ್ಚಸ್ಸಿಗೆ ಒಳಗಾಗಬಾರದೆಂದೂ ಗೊತ್ತುವಳಿ ಜೋರು ಕೊಟ್ಟಿದೆ. ಇಂಥ ಸಮಿತಿಯ ನಿಷ್ಪಕ್ಷಪಾತ ತೀರ್ಮಾನಕ್ಕೆ

ಏಳು ವರುಷಗಳಲ್ಲಿ ಫಲ

ನಮ್ಮ ಪಿಗ್ಮಿ ಮುಡಿಪುದಾರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು, ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ಗದಾರರು ಇತ್ಯಾದಿ ತರಗತಿಯವರಿರುವರು. ಅವರ ಪಿಗ್ಮಿ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕವುಳ್ಳ ದೂರ ದರ್ಶಿ ಸಂಪನ್ನ ಪಿಗ್ಮಿ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ವಹಿವಾಟು ರೂ 5,00,000,00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI

All Secondary Schools may subscribe to

"NAVAYUGA"

WEEKLY

since it has been approved by the Director of Public Instruction, Madras.

ಭದ್ರವಾದ ಆರ್ಥಿಕ ವ್ಯವಸ್ಥೆಯ ನೆಲಗಟ್ಟು

ಔದ್ಯಮಿಕ ಕ್ಷೇತ್ರದಲ್ಲಿ ಸಮತೂಕವನ್ನು ಸಾಧಿಸಿಕೊಳ್ಳುವ ಪ್ರಯತ್ನ

ನ್ನಡಿಗರು ಒಪ್ಪಬೇಕೆಂದು ಪರಿಷತ್ತು ನಂತಿಸುತ್ತದೆ. ಹೆಚ್ಚುಕಡಿಮೆ ಇದೇ ಕಾಲದಲ್ಲಿ ಕಾಂಗ್ರೆಸಿನ ಮಹಾ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀಮನ್ನಾರಾಯಣ ಆಗರ್ವಾಲರು ಧಾರವಾಡ, ಹುಬ್ಬಳ್ಳಿಗಳಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು. ಅವರು ಅಲ್ಲಿ ಮಾಡಿದ ಭಾಷಣದಲ್ಲಿ ಕರ್ನಾಟಕ ರಾಜ್ಯ ನಿರ್ಮಾಣ ಪ್ರಶ್ನೆಯನ್ನು ಪ್ರಸ್ತಾಪಿಸಿದರು. ಕಾಂಗ್ರೆಸು ಭಾಷಾವಾರು ಪ್ರಾಂತಗಳನ್ನು ಮಾಡುವ ವಿಷಯದಲ್ಲಿ ವಚನ ಭ್ರಷ್ಟವಾಗಿದೆ ಎಂಬ ಆರೋಪವನ್ನವರು ಅಲ್ಲಗಳೆದು, ಆಂಧ್ರ ರಾಜ್ಯವನ್ನು ಸ್ಥಾಪಿಸುವ ನಿರ್ಣಯದಿಂದ ಕಾಂಗ್ರೆಸು ಇಂಥ ಬೇಡಿಕೆಯನ್ನು ತಿರಸ್ಕರಿಸಿಲ್ಲವೆಂದು ಸ್ಪಷ್ಟಗೊಳ್ಳುವುದಾಗಿ ಸಾರಿದರು. ಉಚ್ಚ ಮಟ್ಟದ ಸಮಿತಿಯು ನೇಮಕಗೊಂಡ ಒಂದು ವರ್ಷದಲ್ಲಿ ತನ್ನ ವರದಿಯನ್ನು ಒಪ್ಪಿಸುವುದು. ಅದು ಕೈ ಸೇರಿದ ಅಲ್ಪಾವಧಿಯಲ್ಲಿಯೇ ಕೇಂದ್ರ ಸರಕಾರವು ಮುಂದಿನ ಕ್ರಮ ಕೈಗೊಳ್ಳುವುದು. ಹೀಗಿರುವುದರಿಂದ ಈ ಪ್ರಶ್ನೆಯನ್ನು ಹತ್ತಿಪ್ಪತ್ತು ವರ್ಷಗಳು ಮುಂದೊಡುವ ಪ್ರಶ್ನೆ ಇಲ್ಲವೆಂದೂ ಕರ್ನಾಟಕ ಏಕೀಕರಣ ಬೇಗನೇ ನೆರವೇರುವುದೆಂದೂ ಹೇಳಿದರು. ಆದರೆ ಈ ಉದ್ದೇಶದಿಂದ ಕೈಗೊಳ್ಳಲ್ಪಡುವ ವಿಧ್ವಂಸಕ ಕೃತ್ಯಗಳು, ಉಪವಾಸಾದಿ ವಾಮಮಾರ್ಗಗಳ ಮೂಲಕ ಹೇರುವ ಒತ್ತಾಯ ಮುಂತಾದುವನ್ನು ಅನುಚಿತವೆಂದು ಆಗರ್ವಾಲರು ಖಂಡಿಸಿ ಮಾತನಾಡಿದರು. ಗಡಿ ನಿರ್ಣಯಿಸುವ ಸಮಿತಿಯ ಶಿಫಾರಸುಗಳನ್ನು ಕನ್ನಡಿಗರೂ ಇತರರೂ ನ್ಯಾಯವೆಂದು ಮೌನವಾಗಿ ಒಪ್ಪಿಕೊಳ್ಳಬೇಕೆಂದು ಕೇಳಿಕೊಂಡರು. ಮೈಸೂರಿನೊಡನೆ ಕನ್ನಡದ ಉಳಿದ ಪ್ರದೇಶಗಳು ಸೇರುವ ವಿಚಾರದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ ಸಮಿತಿಯು ಅನುಕೂಲಾಭಿಪ್ರಾಯದ ನಿರ್ಣಯ ಸ್ವೀಕರಿಸುವಂತೆ ನೋಡಿಕೊಳ್ಳಬೇಕೆಂದು ಧಾರವಾಡ ಜಿಲ್ಲಾ ಕಾಂಗ್ರೆಸ ಕಾರ್ಯಕರ್ತರಿಗೆ ಆಗರ್ವಾಲರು ಗಟ್ಟಿಯಾಗಿ ಸೂಚಿಸಿದರೆಂದೂ ತಿಳಿಯುತ್ತದೆ.

ವಿರುದ್ಧಾಭಿಪ್ರಾಯ

ಇನ್ನು ಮದ್ರಾಸು ರಾಜ್ಯದ ಸ್ಥಿತಿಗತಿಯತ್ತ ದೃಷ್ಟಿ ಹರಿಯಿಸಿದರೆ, ಅಲ್ಲಿಯ ಚಿತ್ರವು ಮನಕರಗುವಂಥದಿರುತ್ತದೆ. ಆರ್ಥಿಕ ತುಟಾಗ್ರತೆಯ ಕಾರಣದಿಂದ ಮದ್ರಾಸು ರಾಜ್ಯವು ತುಂಬ ಪೇಚಾಡುತ್ತಿದೆ. ಮುಖ್ಯವಾಗಿ ಬರಗಾಲ ಮತ್ತು ಬಿರುಗಾಳಿಯು ಆ ನಾ ಹು ತ ಗ ಳು ರಾಜ್ಯದ ಆರ್ಥಿಕ ಸಮತೂಕ ಹದಗೆಡಿಸಿದುವು. ಕೇಂದ್ರ ಸರಕಾರಕ್ಕೆ ಈ ವಿಷಯದಲ್ಲಿ ನೆರವಾಗಬೇಕೆಂದು ಮದ್ರಾಸು ಸರಕಾರ ಮಾಡಿದ ಬಿನ್ನಹಕ್ಕೆ ಹೆಚ್ಚಿನ ಬೆಲೆ ಬಂದಿರುವುದಿಲ್ಲ. ಅರ್ಥಸಚಿವ ಶ್ರೀ ದೇಶಮುಖರು ಇತ್ತೀಚೆಲ್ಲಿಯೇ ಮದ್ರಾಸಿಗೆ ಬಂದು ಶ್ರೀ ರಾಜಗೋಪಾಲಾಚಾರಿ ಮುಂತಾದವರೊಡನೆ ಸಮಾಲೋಚನೆ ನಡೆಸಲಿರುವರು. ಇದುವರೆಗೆ ಬಂದ ವರದಿಗಳಂತೆ ಕೇಂದ್ರವು ಮದ್ರಾಸಿನ ಬಿನ್ನಹವನ್ನು ಸಂಪೂರ್ಣವಾಗಿ ತಿರಸ್ಕರಿಸಿರುವುದಿಲ್ಲ. ಮದ್ರಾಸು ಸರಕಾರದವರು ಕೇಂದ್ರಕ್ಕೆ ತಮ್ಮ ನಿಲುಮೆಯನ್ನು ಸ್ಪಷ್ಟೀಕರಿಸಲು ಕಳಿಸಿದ್ದ ಪ್ರತಿನಿಧಿ ಮಂಡಳವು ತನ್ನ ಕಾರ್ಯದಲ್ಲಿ ಸಂಪೂರ್ಣ ಯಶಸ್ವಿಯಾಗದಿದ್ದರೂ ಸ್ವಲ್ಪ ಮಟ್ಟಿಗೆ ಸಾಫಲ್ಯ ಪಡೆದಿರುತ್ತದೆ. ದೇಶಮುಖರೇ ಸುಳ್ಳಿಕರಿಸಿದಂತೆ ಮದ್ರಾಸಿಗೆ ಸುಮಾರು ಮೂರು ಕೋಟಿ ರುಪಾಯಿಗಳ ನೆರವು ದೊರೆಯಬಹುದು. ಈ ಪ್ರಮಾಣವು ತೃಪ್ತಿದಾಯಕವಾಗಿರುತ್ತದೋ? ಮದ್ರಾಸು ಸರಕಾರವು ಇಷ್ಟು ಅಲ್ಪ ನೆರವಿನಿಂದ ಸಮಾಧಾನಹೊಂದುವಂತಿದೆಯೋ? ಇಲ್ಲವೆಂಬುದೇ ನಿಜವಾದ ಉತ್ತರ. ಪಂಚವಾರ್ಷಿಕ ಯೋಜನೆಯಂತೆ ಹೆಗಲೇರಿರುವ ಹೊಸ ಹೊಣೆಗಾರಿಕೆಯನ್ನೂ ಬರಗಾಲದ ಪೀಡೆಯನ್ನೂ ಜೊತೆಯಾಗಿ ನಿರ್ವಹಿಸಬೇಕಾದರೆ ಕೇಂದ್ರ ಉದಾರ ಹಸ್ತದಿಂದ ಮದ್ರಾಸಿನ ಸಹಾಯಕ್ಕೆ ಧಾವಿಸಬೇಕೆಂದು ರಾಜಾಜಿಯವರು ಒತ್ತಾಯಿಸುತ್ತಿರುವರು. ರಾಜಾಜಿಯವರ ನಿಲುಮೆಗೂ ಕೇಂದ್ರದ ಅರ್ಥಸಚಿವರ ನಿಲುಮೆಗೂ ಎಷ್ಟು ವ್ಯತ್ಯಾಸವಿದೆಯೆಂದರೆ - ಪರಸ್ಪರ ವಿರುದ್ಧ ದಿಸೆಯಲ್ಲಿಯೇ ಇಬ್ಬರ ವಾದವೂ ಸಾಗುತ್ತಿರುವಂತೆ ತೋರುತ್ತದೆ. ದೇಶಮುಖರು ಮದ್ರಾಸು ರಾಜ್ಯವು ಆಳತೆಗೆಟ್ಟು ಪಂಚವಾರ್ಷಿಕ ಯೋಜನೆಯಲ್ಲಿ ಸೇರದ ಕಾರ್ಯಗಳಿಗೆ ಹಣ ವೆಚ್ಚ ಮಾಡಿ, ಈಗಿನ ಕಷ್ಟಕ್ಕೆ ಬಿದ್ದಿರುತ್ತದೆ ಎಂದು ಆರೋಪಿಸಿದ್ದುಂಟು. ಇದಕ್ಕೆ ರಾಜಗೋಪಾಲಾಚಾರ್ಯರು ಪಂಚ ವಾರ್ಷಿಕ ಯೋಜನೆಯ ತಯಾರಕರು ರಾಜ್ಯದ ಆದಾಯ ಸ್ಫೋಟದ ಕಲ್ಪನೆಯನ್ನೆ ಮಾಡದೆ ಅಂಕಿಸಂಖ್ಯೆಗಳನ್ನು ಕೂಡಿಸಿರುವರೆಂದು ಪ್ರತ್ಯುತ್ತರ ಕೊಟ್ಟಿದ್ದುಂಟು. ಯೋಜನೆಯ ಅವಧಿಯಲ್ಲಿ ರಾಜ್ಯಗಳು ೩೩೦ ಕೋಟಿ ರುಪಾಯಿಗಳನ್ನು ಉಳಿಸಿ ಪೂರೈಸಬೇಕೆಂದು ಯೋಜನಾ ಆಯೋಗದವರು ಬರೆದು ಹಾಕಿದ್ದರೂ ವ್ಯವಹಾರದಲ್ಲಿ ಕಳೆದೆರಡು ವರ್ಷಗಳ ಅವಧಿಯಲ್ಲಿ ೧೧೧ ಕೋಟಿ ರೂಪಾಯಿಗಳಿಗೆ ಹೆಚ್ಚು ಉಳಿಕೆಯಾಗಿರುವುದಿಲ್ಲ. ಈ ಹಣವನ್ನು ಸಹ ಕಾದಿಟ್ಟ ನಿಧಿ ಮುಂತಾದವುಗಳಿಂದ ಕೂಡಿಸಿರುವುದರಿಂದ, ಇನ್ನು ಮುಂದಿನ ಮೂರು ವರ್ಷಗಳಲ್ಲಿ ಇದೇ ಪ್ರಮಾಣದಲ್ಲಿ ಹಣ ದೊರೆಯುವುದು ಅಸಾಧ್ಯವೆಂದು ರಾಜಾಜಿಯ ಅಭಿಮತ.

ಔದ್ಯೋಗಿಕ ಸಮಸ್ಯೆ

ಭಾರತದ ಮುಂದಿರುವ ಆರ್ಥಿಕ ಸ್ವರೂಪದ ಇನ್ನೂ ಕೆಲವು ವಿಷಯಗಳು ಕಳೆದವಾರ ವಿವಿಧ ಪ್ರಸಂಗಗಳಲ್ಲಿ ಚರ್ಚೆಗೆ ಬಂದವು. ನಮ್ಮ ಔದ್ಯೋಗಿಕ ಮತ್ತು ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟದಲ್ಲಿರುವುದು ರಾಷ್ಟ್ರಾಭ್ಯುದಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಸಂಗತಿಯಾಗಿರುತ್ತದೆ. ನಮ್ಮ ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ದೇಶದೊಳಗಿನ ಸಂಪತ್ತು ಹೆಚ್ಚಿಸುವುದೇ ಮುಖ್ಯ ಮಾರ್ಗವೆಂದು ಎಲ್ಲರೂ ಒಪ್ಪಿಕೊಂಡಿರುವರು. ಆದುದರಿಂದ ಆಯಾತವನ್ನು ಕಡಿಮೆ ಮಾಡಿ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸುವುದೇ ನಮ್ಮ ಮುಖ್ಯ ಸಮಸ್ಯೆಯಾಗಿರತ್ತದೆ. ವಾಣಿಜ್ಯ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಆಯಾತ ನಿರ್ಯಾತ ಸಲಹಾ ಮಂಡಳಿಯಲ್ಲಿ ಮಾತನಾಡುವಾಗ ಗ್ರಾಹಕರ ಆವಶ್ಯಕತೆಗಳನ್ನು ದೇಶೀಯ ಉದ್ದಿಮೆಗಳೇ ಪೂರೈಸುವಂತಾಗಬೇಕೆಂಬುದರಿಂದ ಆಯಾತ ನಿಯಂತ್ರಣವನ್ನು ಹೇರಲಾಗಿದೆಯೆಂದು ವಿವರಿಸಿದರು. ಹಾಗೆಯೇ ನಮ್ಮ ಆವಶ್ಯಕತೆಗಳನ್ನು ದೇಶದೊಳಗೆಯೇ ಪೂರೈಸಲು ಅಸಾಧ್ಯವೆಂದು ಕಂಡು ಬಂದ ಪಕ್ಷದಲ್ಲಿ ಈ ನಿಯಂತ್ರಣವನ್ನು ಸಡಿಲುಗೊಳಿಸಬೇಕಾಗಿ ಬರುವುದೆಂದೂ ಅವರು ಹೇಳಿದರು. ದೇಶೀ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡಬೇಕೆನ್ನುವುದು ಪ್ರತ್ಯಕ್ಷವಾಗಿ ರಾಷ್ಟ್ರಾಭಿಮಾನದ ದೃಷ್ಟಿಯಿಂದ ಮತ್ತು ಪರೋಕ್ಷವಾಗಿ ಆತ್ಮಕಲ್ಯಾಣದ ಉದ್ದೇಶದಿಂದ ಸರ್ವಥಾ ಅಪೇಕ್ಷಣೀಯ ಹೌದಾದರೂ ನಮ್ಮ ಬಡತನವನ್ನು ಕಂಡರೆ ಅಗ್ಗದರದ ಮಾಲುಗಳಿಗೆ ನಾವು ಮಾರು ಹೋಗುವುದು ತೀರ ಸ್ವಾಭಾವಿಕ. ಆದುದರಿಂದ ಗ್ರಾಮೋದ್ಯೋಗಗಳಿಗೆ ಮತ್ತು ದೇಶೀಯ ಕೈಗಾರಿಕೆಗಳಿಗೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುವಾಗಲೇ ವಿದೇಶದ ಸರಕುಗಳ ಕೂಡೆ ಸ್ಪರ್ಧೆಯನ್ನು ಹೂಡುವ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನಗಳೂ ನಡೆಯುವುದವಶ್ಯ. ಉತ್ಪಾದನೆ ಹೆಚ್ಚಿಸುವುದೇ ಮುಖ್ಯೋದ್ದೇಶವಾಗಿದ್ದಾಗ ಯಂತ್ರೋಪಕರಣಗಳ ಪರಮಾವಧಿ ಉಪಯೋಗವನ್ನು ಪಡೆಯಬೆತ್ನಿಸುವುದು ಇಂದು ಅತ್ಯಂತ ಜರೂರಾಗಿರುತ್ತದೆ. ಈ ವಿಷಯದಲ್ಲಿ ದೇಶಮುಖರು ಮಾಡಿದ ಸೂಚನೆಗಳು ಮಹತ್ವದವು.

ಮುಖ್ಯೋದ್ದೇಶ

ಆದರೆ ಒಂದು ಸಂಗತಿಯನ್ನು ನಾವಿಲ್ಲಿ ಅವಶ್ಯ ನೆನಪಿಟ್ಟುಕೊಳ್ಳಬೇಕು—ಪಂಚವಾರ್ಷಿಕ ಯೋಜನೆಯನ್ನು ಕಾರ್ಯಕಾರಿಯಾಗಿಸುವುದಕ್ಕಾಗಲೀ ಜನರಜೀವನ ಮಟ್ಟವನ್ನು ಸುಧಾರಿಸುವುದಕ್ಕಾಗಲೀ ನಾವು ಕೈಗೊಳ್ಳುವ ಕ್ರಮಗಳ ಪರಿಣಾಮದಲ್ಲಿ ರಾಷ್ಟ್ರೀಯ ಜೀವನಕ್ಕೆ ಪೋಷಕವಾಗುವಂತಿರಬೇಕು. ಉದಾಹರಣೆಗೆ ನಿರುದ್ಯೋಗವನ್ನು ಕಡಿಮೆ ಮಾಡಬೇಕು; ಸಾಧ್ಯವಿದ್ದರೆ ಅದು ಸಂಪೂರ್ಣ ನಿರ್ಮೂಲನಾಗಬೇಕು. ನಾವು ಯಾಂತ್ರೀಕರಣದ ಮೋಹಕ್ಕೆ ಬಲಿಬಿದ್ದು ಉತ್ಪಾದನೆ ಹೆಚ್ಚಿಸಲು ನೋಡಿದರೆ ಗ್ರಾಮೋದ್ಯೋಗಗಳನ್ನು ಅವಲಂಬಿಸಿರುವ ಕೋಟ್ಯಾವಧಿ ಜನರನ್ನು ಕೆಲಸಗೇಡಿಗಳಾಗಿ ಮಾಡಿದಂತಾಗುತ್ತದೆ. ಔದ್ಯಮಿಕ

(೧೦ನೇ ಪುಟ ನೋಡಿರಿ)

WANTED

1. A trained graduate of Science & Maths.
2. A [illegible] Mathematics or History graduate.
3. A qualified drawing teacher.

A lady is preferred for each post. Untrained graduates also may apply for 1 & 2. Lower grade teachers also may apply for 3, for which additional needlecraft qualification will be preferred. Scales of pay and D. A. will be at Govt. rates. Applications should reach the Correspondent by the 15th June. Applicants should send copies of their applications to the D. E. O. of S. Kanara also.

MANIPAL HIGH SCHOOL, Manipal: 31—5—'53. — **Dr. T. Madhava A. Pai,** Correspondent.

Bhuvanendra Products Limited

KATAPADI, S. KANARA.

ದೀರ್ಘಕಾಲದ ಅನುಭವ, ಉತ್ತಮ ಆಯ್ಕೆಯ ದ್ರವ್ಯಗಳು ಯೋಗ್ಯ ಪರಿಣಾಮ—ಇದರಿಂದ ಉಪಯೋಗಿಸುವವರಿಗೆ ಪ್ರೀತಿ ಮತ್ತು ವಿಶ್ವಾಸ.

ನಿಮಗೆ ಬೇಕಾಗುವ ಖಾತ್ರಿ ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು—ನಿಮ್ಮ ನಾಜೂಕು ಪೆನ್ನುಗಳಿಗೆ ಬೇಕಾದ ಉತ್ತಮ ಶಾಯಿ (Real ink)

ನಿತ್ಯ ಉಪಯೋಗಕ್ಕೆ ಹಿತವಾದ ಮಿತವಾದ ಪರಿಮಳದ ಕ್ಯಾಸ್ಟರ್ ಆಯಿಲ್ ಬಗ್ಗೆ ನಮ್ಮ ನೆನಪಿರಲಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.
Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೪-೬-'೫೩

ಯೋಜನೆಗಾಗಿ ಸಾಲ

ಭಾರತ ಸರಕಾರದ ಹಣಕಾಸಿನ ವಿಭಾಗವು ಹೊರಡಿಸಿರುವ ಒಂದು ಹೇಳಿಕೆಯಿಂದ ಸರಕಾರವು ಈ ವರ್ಷ ಸುಮಾರು ೭೫ ಕೋಟಿ ರುಪಾಯಿಗಳ ಸಾಲವನ್ನು ಎತ್ತುವ ನಿರ್ಣಯ ಮಾಡಿರುವುದೆಂದು ತಿಳಿದಿದೆ. ಈ ಸಾಲವನ್ನು ಮೊದಲನೇ ರಾಷ್ಟ್ರೀಯ ಯೋಜನಾ ಸಾಲವೆಂದು ಕರೆಯಲಾಗುವುದು. ಇದೇ ಜೂನು ೫ನೇ ದಿನಾಂಕದಿಂದ ಈ ಸಾಲಕ್ಕೋಸ್ಕರ ಚಂದಾವನ್ನು ಸ್ವೀಕರಿಸಲಾಗುವುದು. ಸಾಲವು ಪೂರ್ತಿ ತುಂಬಿತೆಂದು ತಿಳಿದೊಡನೆಯೇ ಚಂದಾ ಹಣ ಸ್ವೀಕರಿಸುವುದನ್ನು ನಿಲ್ಲಿಸಲಾಗುವುದು. ಏನಿದ್ದರೂ ಜೂನು ೧೦ನೇ ದಿನಾಂಕದ ಬಳಿಕ ಚಂದಾವು ಸ್ವೀಕರಿಸಲ್ಪಡುವುದಿಲ್ಲ. ಸಾಲದ ಮೇಲೆ ಶೇಕಡಾ ಮೂರೂವರೆ ಸಲಿಯ ಬಡ್ಡಿಯನ್ನು ಕೊಡಲಾಗುವುದು. ಜೂನ್ ಮತ್ತು ದಶಂಬರ ತಿಂಗಳುಗಳ ಮೊದಲನೇ ತಾರೀಕಿಗೆ ಅರ್ಧ ವರ್ಷಕ್ಕೆ ಸಲ್ಲಲಿರುವ ಬಡ್ಡಿಯನ್ನು ಪಾವತಿ ಮಾಡುವರು. ಸಾಲವು ೧೯೬೧ನೇ ಇಸವಿಯ ಜೂನು ೧ನೇ ತಾರೀಕಿಗೆ ಮರು ಪಾವತಿ ಮಾಡಲ್ಪಡುವುದು. ಪ್ರತಿ ನೂರು ರೂಪಾಯಿಯ ಬಾಂಡಿಗೆ ರೂ. ೯೮-೪-೦ ಕೊಟ್ಟು ಅದನ್ನು ಪಡೆಯಬೇಕು. ಚಂದಾ ಹಣವನ್ನು ನಗದಿ ಹಣದ ರೂಪದಲ್ಲಿ ಅಥವಾ ೧೯೫೩-೫೪ನೇ ವರ್ಷಗಳಿಗೆ ಪಾವತಿಯಾಗಲಿರುವ ಶೇಕಡಾ ಮೂರು ಸಲಿಯ ಬಡ್ಡಿಯ ಪತ್ರಗಳಲ್ಲಿ ತುಂಬಬಹುದು. ಈ ಸಾಲವನ್ನು ಎತ್ತುವ ಉದ್ದೇಶವು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೋಸ್ಕರ ಹಣವನ್ನು ಪೂರೈಸುವುದೆಂಬುದು ತೀರ ಸ್ಪಷ್ಟವಾಗಿರುತ್ತದೆ. ಸರಕಾರವು ಕೈಗೊಂಡಿರುವ ಯೋಜನೆಗಳಿಗೆ ಹಣದ ಪೂರೈಕೆಯು ಅತ್ಯಗತ್ಯವಾಗಿರುವುದರಿಂದ ಈ ರೀತಿ ಸಾಲವನ್ನು ಕೂಡಿಸುವುದು ಅನಿವಾರ್ಯವಾಗಿರುತ್ತದೆ. ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರವು ಐದು ವರ್ಷಗಳ ಅವಧಿಯಲ್ಲಿ ಸುಮಾರು ೩೮೫ ಕೋಟಿ ರುಪಾಯಿಗಳನ್ನು ಈ ರೀತಿ ಸಾಲವೆತ್ತಿ ಕೂಡಿಸಬಹುದೆಂದು ಹೇಳಿದೆ. ಇದರಲ್ಲಿ ರಾಷ್ಟ್ರೀಯ ಉಳಿತಾಯದ ಚಳುವಳಿ ಮುಂತಾದ ಠೇವಣಾತಿಗಳ ಮೂಲಕ ಎತ್ತಿದ ಹಣವೂ ಸೇರಿರುತ್ತದೆ. ೧೯೫೦-೫೧ನೇ ಸಾಲಿನಲ್ಲಿ ರಾಷ್ಟ್ರೀಯ ಉಳಿತಾಯದ ಚಳುವಳಿ ಮುಂತಾದವುಗಳಿಂದ ಕೂಡಿಸಿದ ಹಣವು ಕೇವಲ ೩೯ ಕೋಟಿ ರೂಪಾಯಿ ಮಾತ್ರ. ಆದುದರಿಂದ ಸರಕಾರವು ಈಗ ಸಾಲವನ್ನು ಪಡೆಯಬಯಸಿದರೆ ಅದರಿಂದ ತೊಂದರೆಯಿಲ್ಲವೆಂದೇ ಹೇಳಬೇಕು. ೧೯೫೧ನೇ ವರ್ಷದಲ್ಲಿ ಸರಕಾರವು ೨೦ ಕೋಟಿ ರೂಪಾಯಿಗಳ ಸಾಲವನ್ನು ಪಡೆದಿದ್ದಿತು. ೧೯೫೨-೫೩ರ ಮುಂಗಡ ಪತ್ರದಲ್ಲಿ ೭೫ ಕೋಟಿ ರೂಪಾಯಿಗಳ ಸಾಲವೆತ್ತುವುದಕ್ಕೆ ಅನುಕೂಲ ಮಾಡಿದ್ದರೂ, ಅಂಥ ಸಾಲವನ್ನು ಕೇಳಿರಲಿಲ್ಲ. ಈಗ ಪಡೆಯಬೇಕೆಂದಿರುವ ೭೫ ಕೋಟಿ ರೂಪಾಯಿಗಳ ಸಾಲವು ಸ್ವಾತಂತ್ರ್ಯೋತ್ತರದಲ್ಲಿ ಅತೀ ದೊಡ್ಡ ಮೊತ್ತವಾಗಿರುತ್ತದೆ. ಅರ್ಥ ಸಚಿವರಾದ ದೇಶಮುಖರು ಈ ವರ್ಷ ಪಾರ್ಲಿಮೆಂಟಿನ ಮುಂದೆ ಮುಂಗಡ ಪತ್ರವನ್ನು ಮಂಡಿಸಿ ಮಾಡಿದ ಭಾಷಣದಲ್ಲಿ ಈ ಸಾಲವನ್ನು ಎತ್ತುವುದಕ್ಕೆ ಸರಕಾರ ಇಚ್ಛಿಸಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿರದಿದ್ದರೂ ಸೂಚ್ಯವಾಗಿ ಉಲ್ಲೇಖಿಸಿದ್ದರು. ೧೯೫೩-೫೪ನೇ ವರ್ಷಗಳಲ್ಲಿ ಮರುಪಾವತಿಯಾಗಬೇಕಿರುವ ಹಣವನ್ನು ಉಳಿಸಿಕೊಳ್ಳಲು ನೋಡಲಾಗುವುದೆಂದು ದೇಶಮುಖರು ಆಗ ಹೇಳಿದ ಮಾತಿನ ಅರ್ಥ ಈಗ ಸ್ಪಷ್ಟವಾಗಿರುತ್ತದೆ. ಸುಮಾರು ೧೨೫ ಕೋಟಿ ರೂಪಾಯಿಯಷ್ಟು ೧೯೫೩-೫೪ನೇ ವರ್ಷ ಪಾವತಿಯಾಗುವ ಸಾಲವಿರುತ್ತದೆ. ಇದರಲ್ಲಿಯೂ ಜನರು ಸ್ವೇಚ್ಛೆಯಿಂದ ನೀಡಬಹುದಾದ ಉಳಿತಾಯದ ಹಣದಲ್ಲಿಯೂ ೭೫ ಕೋಟಿ ರೂಪಾಯಿಗಳನ್ನು ಸಾಲವಾಗಿ ಪಡೆಯಲು ಬಯಸಿದ್ದು ಚೆನ್ನಾದ ಕ್ರಮವಾಗಿರುತ್ತದೆ. ಬಡ್ಡಿಯ ದರವನ್ನು ಮೂರೂವರೆ ಶೇಕಡಾವಿಗೆ ಏರಿಸಿರುವುದರಿಂದ ಸಾಲಕ್ಕೆ ನವೀನವಾದ ಆಕರ್ಷಣೆ ಬಂದಿರುತ್ತದೆ. ಪೇಟೆಯ ಈಗಿನ ಧಾರಣೆಯನ್ನು ನೋಡಿದರೆ ಬಡ್ಡಿಯ ಮೇಲೆ ಆದಾಯ ತೆರಿಗೆ ಕೊಡಬೇಕಾಗುವುದಾದರೂ ಠೇವಣಾತಿದಾರರಿಗೆ ನಷ್ಟವಿಲ್ಲ. ಈ ಆಕರ್ಷಣೆಗೆ ಒಪ್ಪವಿಡುವಂತೆ ಸಾಲವು ಅಲ್ಪಾವಧಿಯದಾಗಿರುತ್ತದೆ. ಇಷ್ಟೆಲ್ಲ ಅನುಕೂಲ ಸರಕಾರ ಪಡೆಯಬೇಕೆಂದಿರುವ ರಾಷ್ಟ್ರೀಯ ಯೋಜನಾ ಸಾಲಕ್ಕೆ ಇರುವುದರಿಂದ ಇದು ಬೇಗನೇ ತುಂಬಿಕೊಳ್ಳುವುದೆಂದು ನಿರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ. ಮುಂಬಯಿಯ ವರ್ತಕ ಸಮಾಜದವರು ಸರಕಾರದ ನಿರ್ಣಯವನ್ನು ಸಾಮಾನ್ಯವಾಗಿ ಸ್ವಾಗತಿಸಿರುವರು. ಬೇರೆಡೆಯೂ ಈ ಸಾಲಕ್ಕೆ ಪ್ರೋತ್ಸಾಹ ದೊರೆತಿರುತ್ತದೆ. ಭಾರತದ ರಿಜರ್ವ ಬೇಂಕಿನ ಮುಂಬಯಿ, ಮದ್ರಾಸು, ಕಲ್ಕತ್ತ ಮತ್ತು ಡಿಲ್ಲಿ ಆಫೀಸುಗಳಲ್ಲಿಯೂ ಇಂಪೀರಿಯಲ್ ಬೇಂಕಿನ ಕಚೇರಿಗಳಲ್ಲಿಯೂ ಈ ಸಾಲವನ್ನು ತುಂಬಬಹುದು. ಹಣವನ್ನು ಶೇಖರಿಸಿ ಇಡುವುದಕ್ಕಿಂತ ಉತ್ಪಾದಕ ಉದ್ಯಮಗಳಲ್ಲಿ ನಿಕ್ಷೇಪಿಸುವುದು ತುಂಬ ಪ್ರಯೋಜನಕಾರಿ ಮತ್ತು ಲಾಭಪ್ರದವೆಂದು ಸಿದ್ಧಗೊಂಡಿರುತ್ತದೆ. ಭಾರತದಂಥ ಹಿಂದುಳಿದ ದೇಶದಲ್ಲಿ ಮುಂದಿನ ಅಭಿವೃದ್ಧಿಯ ಆಸೆಯಿಂದ ಹೆಚ್ಚು ಹೆಚ್ಚು ಉಳಿತಾಯವನ್ನು ಸಾಧಿಸುವುದು ಇಷ್ಟವಾಗಿರುತ್ತದೆ. ಉಳಿತಾಯದ ಪ್ರವೃತ್ತಿಗೆ ಪ್ರೋತ್ಸಾಹ ಕೊಡುವ ಇಂಥ ಉದ್ಯಮದಲ್ಲಿ ದೇಶದ ನಾಗರಿಕರು ಮನಃಪೂರ್ವಕ ಸಹಕರಿಸಿ ರಾಷ್ಟ್ರ ಕಲ್ಯಾಣಕ್ಕೆ ತಮ್ಮ ಪಾಲಿನ ಕಾಣಿಕೆ ನೀಡಲು ಮುಂಬರಬೇಕು. ಸರಕಾರದ ಸಾಲವು ಜನಹಿತದ ಉದ್ದೇಶಕ್ಕಾಗಿರುವುದರಿಂದ, ಸಾಲ ತುಂಬಲು ಹಣ ಕೊಡುವವನ ವ್ಯಾಪಾರೀ ಬುದ್ಧಿಗೂ ಹೆಚ್ಚು ಸದುದ್ದೇಶವೇ ಜನರಿಗೆ ಗೋಚರಿಸುತ್ತದೆ. ಈ ಪುಣ್ಯ ಪಡೆಯುವ ಸುಸಂಧಿಯನ್ನು ಅನುಕೂಲವಿದ್ದವರು ಯಾರೂ ಕಳೆದುಕೊಳ್ಳಲಾಗದೆಂದು ಸೂಚಿಸುತ್ತೇವೆ.

ಬ್ರಿಟಿಷ್ ರಾಣಿಯ ರಾಜ್ಯಾಭಿಷೇಕ
ಲಂಡನಿನಲ್ಲಿ ಕೇಂದ್ರೀಕೃತವಾದ ವಿಶ್ವದೃಷ್ಟಿ

ಈ ವಾರದ ವಾರ್ತೆಗಳಲ್ಲಿ ವಿಶೇಷ ರೀತಿಯಿಂದ ಉಲ್ಲೇಖಿಸಲ್ಪಡಬೇಕಾದುದು ಬ್ರಿಟಿಷ್ ರಾಣಿ ಎರಡನೇ ಎಲಿಜಾಬೆತರ ಕಿರೀಟ ಧಾರಣಾ ಮಹೋತ್ಸವವಾಗಿರುತ್ತದೆ. ಮಂಗಳವಾರ ದಿನ (೨ನೇ ತಾರೀಕು) ಅತ್ಯಂತ ವೈಭವದಿಂದ ಲಂಡನಿನ ವೆಸ್ಟ್‌ಮಿನಿಸ್ಟರ್ ಎಬೆಯಲ್ಲಿ ಚಾರಿತ್ರಿಕವಾದ ಈ ಸಮಾರಂಭವು ನೆರವೇರಿತು. ರಾಣಿಯು ಬಕ್ಕಿಂಗಹಾಮು ಅರಮನೆಯಿಂದ ಶೃಂಗರಿಸಿದ ರಾಜರಥದಲ್ಲಿ ಕುಳಿತು ವೆಸ್ಟ್‌ಮಿನಿಸ್ಟರ್ ಎಬೆಗೆ ಮೆರವಣಿಗೆ ಹೊರಟಾಗ ದಾರಿಯಲ್ಲಿ ಸುಮಾರು ಹತ್ತು ಲಕ್ಷ ಜನರು ಅತ್ಯಂತ ಉದ್ವೇಗ ಮತ್ತು ಉತ್ಸಾಹದಿಂದ ಕೂಡಿದವರಾಗಿ ಈ ದೃಶ್ಯವನ್ನು ನೋಡಿ, ರಾಣಿಯನ್ನು ಜಯಕಾರದಿಂದ ಸ್ವಾಗತಿಸಿದರು. ಸುಮಾರು ೩೦ ನಿಮಿಷಗಳ ಸವಾರಿಯ ನಂತರ ರಾಣಿಯು ಎಬೆಯನ್ನು ಪ್ರವೇಶಿಸಿದರು. ಅಲ್ಲಿ ನೆರೆದಿದ್ದ ಲಾರ್ಡ್ಸರ, ಡ್ಯೂಕರ, ವೈಕೌಂಟ್ಸರ, ಕಾಮನ್ಸರ, ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರತಿನಿಧಿಗಳ, ಮತ್ತು ವಿದೇಶ ರಾಯಭಾರಿಗಳ ಸಮ್ಮುಖದಲ್ಲಿ ರಾಣಿಯ ತಲೆಯ ಮೇಲೆ ಕೆಂಟರ್ಬರಿಯ ಆರ್ಚಬಿಶಪರು ಸುವರ್ಣ ಮುಕುಟವನ್ನಿಟ್ಟರು. ಮಂಗಳ ವಾದ್ಯಗಳೂ ಹರ್ಷೋದ್ಗಾರಗಳೂ ಮೊಳಗುತ್ತಿರಲು, ಜಗತ್ತಿನ ಮೂಲೆ ಮೂಲೆಗೂ ಆಕಾಶವಾಣಿ, ಟೆಲಿವಿಜನ್ ಮುಂತಾದವುಗಳು ಈ ಸುದ್ದಿಯನ್ನು ಬಿತ್ತರಿಸಿದುವು. ಪದ್ಧತಿಯಂತೆ ನೆರವೇರಬೇಕಾದ ಪ್ರತಿಜ್ಞಾ ವಿಧಿಗಳು ಮುಗಿದನಂತರ ರಾಣಿಯು ಮರಳಿ ಬಕ್ಕಿಂಗಹಾಮು ಅರಮನೆಗೆ ಮೆರವಣಿಗೆಯಲ್ಲಿ ಹೋದರು.

ಅನುಪಮ ಕಾಣಿಕೆ

ಜಗತ್ತಿನ ದೃಷ್ಟಿಯನ್ನು ತನ್ನ ಕಡೆಗೆ ಸೆಳೆದುಕೊಂಡಿರುವ ಐತಿಹಾಸಿಕ ಮಹತ್ವದ ಈ ಸನ್ನಿವೇಶದಲ್ಲಿ ಕಡಲ ರಾಣಿಗೆ ಗೌರವ ತರುವ ಇನ್ನೊಂದು ವಾರ್ತೆಯೂ ಬಂದಿರುತ್ತದೆ. ಹಿಮಾಲಯದ ಅಜೇಯ ಶಿಖರವೆನಿಸಿದ ಗೌರೀ ಶಂಕರವನ್ನು ಈ ಹಿಂದೆ ಅನೇಕ ಪರ್ವತಾರೋಹಿಗಳು ಏರಲೆತ್ನಿಸಿ, ವಿಫಲರಾಗಿದ್ದರಷ್ಟೇ. ಕಳೆದ ವರ್ಷ ಸ್ವಿಸ್ ಪರ್ವತಾರೋಹಿಗಳ ತಂಡವೊಂದು ಪ್ರಯತ್ನಿಸಿ ಸುಮಾರು ೨೮೪೩೦ ಅಡಿ ಎತ್ತರ ಹೋಗಿ ಅಲ್ಲಿಂದ ಮರಳಬೇಕಾಯಿತು. ಈ ಬೇಸಗೆಯಲ್ಲಿ ಕರ್ನಲ್ ಹಂಟರ ನೇತೃತ್ವದ ಬ್ರಿಟಿಷ್ ತಂಡವೊಂದು ಈ ಸಾಹಸವನ್ನು ಕೈಗೊಂಡ ಸಂಗತಿ ಈಗಾಗಲೇ ಜನಜನಿತವಾಗಿರುತ್ತದೆ. ಈ ಗುಂಪು ತನ್ನ ಎಂಟನೇ ಶಿಬಿರದಿಂದ ಕೊನೆಯ ಪ್ರಯತ್ನವನ್ನು ಮಾಡಲು ಪ್ರಯತ್ನಿಸಿದಲ್ಲಿ ಹವಾಮಾನದ ಪ್ರತಿಕೂಲತೆಯ ದೆಸೆಯಿಂ ಪ್ರಯೋಜನ ಬರಲಿಲ್ಲವೆಂದು ಮೊನ್ನೆಯವರೆಗೆ ವಾರ್ತೆ ಇದ್ದಿತು. ಆದರೂ ಕೊನೆಯ ಪ್ರಯತ್ನವೊಂದನ್ನು ನಡೆಸುವ ಅವಕಾಶ ದೊರೆತಿದ್ದುದರಿಂದ, ಈ ತಂಡ ವಿಜಯಿಯಾಗುವ ಆಶೆ ಹೋಗಿರಲಿಲ್ಲ. ವಾಸ್ತವವಾಗಿಯೂ ಪರ್ವತಾರೋಹಿಗಳ ಈ ಗುಂಪು ತನ್ನ ಉದ್ದೇಶದಲ್ಲಿ ಸಾಫಲ್ಯ ಪಡೆಯಿತೆಂದು ಈಗ ಪ್ರಕಟಗೊಂಡಿ

ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ

ಕೆನರಾ ಮ್ಯೂಚುವಲ್ ವಿಮಾ ಸಂಸ್ಥೆಯು ತನ್ನ ಹದಿನೆಂಟು ವರ್ಷಗಳ ಅಲ್ಪ ಕಾರ್ಯಾವಧಿಯಲ್ಲಿಯೇ ಭಾರತೀಯ ವಿಮಾ ಸಂಸ್ಥೆಗಳ ಸಾಲಿನಲ್ಲಿ ಗಣನೀಯವಾದ ಸ್ಥಾನವನ್ನು ಪಡೆದಿರುತ್ತದೆ. ಕಂಪೆನಿಯ ಸ್ಥಾಪಕರು ಉಜ್ವಲ ರಾಷ್ಟ್ರಾಭಿಮಾನದಿಂದಲೂ ನಮ್ಮ ಹಣವನ್ನು ನಮ್ಮ ಸಂಸ್ಥೆಗಳಲ್ಲಿಯೇ ನಿಕ್ಷೇಪಿಸುವುದರಿಂದ ಸರಕಾರಕ್ಕೆ ದೊರಕುವ ಸಹಾಯ ಮತ್ತು ರಾಷ್ಟ್ರಾಭಿವೃದ್ಧಿಗೆ ಅದರಿಂದ ಉಂಟಾಗುವ ಪ್ರಯೋಜನವನ್ನು ಮನಗಂಡು ಈ ಉದ್ಯಮವನ್ನು ತೊಡಗಿದರು. ಸ್ಥಾಪಕರ ಉದ್ದೇಶಕ್ಕೆ ಅನುಕೂಲವಾಗಿ ಕೆನರಾ ಮ್ಯೂಚುವಲ್ ಕಂಪೆನಿಯು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಪ್ರಗತಿಯನ್ನು ತೋರಿಸುತ್ತಾ ಬಂದಿರುತ್ತದೆ. ಸ್ಥಾಪನೆಯಾದ ಲಾಗಾಯ್ತು ಕಂಪೆನಿಯು ಬಾಧ್ಯಸ್ಥ ಪಾಲಿಸಿದಾರರಿಗೆ ಆಕರ್ಷಣೀಯವಾದ ಮತ್ತು ಸಾಕಷ್ಟು ದೊಡ್ಡ ಮೊತ್ತದ ಬೋನಸನ್ನು ಹಂಚಿರುತ್ತದೆ. ಈಗಿನ ದಿನಮಾನಗಳಿಗೊಪ್ಪುವ ರೀತಿಯಲ್ಲಿ ಮ್ಯೂಚುವಲ್ (ಅಥವಾ ಪರಸ್ಪರಾವಲಂಬಕವಾದ) ಸಂಸ್ಥೆಯಾಗಿ ವ್ಯವಹಾರದಲ್ಲಿ ಭದ್ರತೆಯನ್ನೂ ಪಾಲಿಸಿದಾರರ ಶ್ರೇಯಸ್ಸನ್ನೂ ಕಾಯ್ದುಕೊಂಡು ಬಂದಿರುವ ಈ ಕಂಪೆನಿಯ ದಕ್ಷವಾದ ಆಡಳಿತೆಯು ಪ್ರಶಂಸನೀಯವಾಗಿರುತ್ತದೆ.

ಈ ಸಂಸ್ಥೆಯು ಪ್ರಕೃತದ ವಾತಾವರಣವನ್ನು ಅನುಲಕ್ಷಿಸಿ ಏಳೆಂಟು ಲಕ್ಷ ರೂಪಾಯಿ ವ್ಯಯಿಸಿ ಬೆಂಗಳೂರು ನಗರದಲ್ಲಿ ನವ್ಯ-ಭವ್ಯ ಕಟ್ಟೋಣವನ್ನು ನಿರ್ಮಿಸಿ ಅಖಿಲ ಕನ್ನಡಿಗರ ಲಕ್ಷ್ಯವನ್ನೇ ಸೆಳೆದಿರುವುದೆನ್ನಬಹುದು. ಇದು ನಮಗೆ, ಜಿಲ್ಲೆಗೆ, ಮುಖ್ಯತಃ ಉಡುಪಿಗೊಂದು ಹೆಗ್ಗಳಿಕೆ. ಕೆನರಾ ಮ್ಯೂಚುವಲಿಗೆ ಅಖಿಲ ಭಾರತದಲ್ಲಿ ಮಹೋನ್ನತ ಸ್ಥಾನ ಕಾದಿರುತ್ತದೆ ಎಂಬುದರ ಹೆಗ್ಗುರುತು.

ದ ಮೇ ೨೯ನೇ ದಿನಾಂಕ ಶಿಖರವನ್ನು ಮುಟ್ಟುವ ಪ್ರಯತ್ನ ವಿಫಲಗೊಂಡರೂ ಮರುದಿನ ನಡೆಸಿದ ಸಾಹಸದ ಪರಿಣಾಮವಾಗಿ ಅಜೇಯವಾದ ಗೌರಿಶಂಕರ ಶಿಖರವನ್ನು ಮುಟ್ಟುವುದು ಸಾಧ್ಯವಾಯಿತೆಂದು ತಿಳಿದಿದೆ. ಬ್ರಿಟಿಷ ರಾಣಿಗೆ ಕಿರೀಟ ಧಾರಣ ಮಹೋತ್ಸವದ ಕಾಲದಲ್ಲಿ ತಮ್ಮ ಕಾಣಿಕೆಯಾಗಿ ಈ ವಿಜಯ ವಾರ್ತೆಯನ್ನು ತಿಳಿಸಬೇಕೆಂಬ ಮಹತ್ವಾಕಾಂಕ್ಷೆ ಬ್ರಿಟಿಷ ಪರ್ವತಾರೋಹಿಗಳಿಗಿದ್ದಿತು. ಈ ಅಪೇಕ್ಷೆಯು ಪೂರ್ಣಗೊಂಡಿತು. ಮಹಾರಾಣಿ ಎಲಿಜಾಬೆತರು ತಂಡದ ಸದಸ್ಯರ ಕಾಣಿಕೆಯನ್ನು ಅಕ್ಕರೆಯಿಂದ ಸ್ವೀಕರಿಸಿ, ಶುಭ ಸಂದೇಶ ಕಳಿಸಿರುವರು.

ಸುವರ್ಣ ಸಂಧಿ

ಲೋಕದಲ್ಲಿ ಇನ್ನು ಮುಂದೆ ಸಾಧಿಸಲಿರುವ ಮಹತ್ವದ ಪ್ರಸಂಗಗಳ ಮುನ್ಸೂಚನೆಯೆಂದು ಬ್ರಿಟಿಷ ಪರ್ವತಾರೋಹಿಗಳ ಯಶಸ್ಸನ್ನು ನೆನೆಯಬಹುದೋ ಏನೋ! ಜಾಗತಿಕ ವಾತಾವರಣವು ಇನ್ನೂ ವಿಷಮ ಪರಿಸ್ಥಿತಿಯನ್ನು ಇದಿರಿಸುತ್ತಿದೆಯಾದರೂ ಸಾಕಷ್ಟು ಪ್ರಯತ್ನ ಪಟ್ಟರೆ, ಶಾಂತಿ ಸೌಹಾರ್ದವನ್ನು ನೆಲೆಗೊಳಿಸಬೇಕೆಂಬ ಅಪೇಕ್ಷೆ ಪೂರ್ಣಗೊಳ್ಳುವ ಲಕ್ಷಣಗಳು ಕಾಣುತ್ತಿವೆ. ಸರ್ವನಾಶ ಅಪರಿಹಾರ್ಯವೆಂದು ಕೆಲವೇ ತಿಂಗಳುಗಳ ಹಿಂದೆ ಕಟ್ಟಿಕೊಂಡಿದ್ದ ಪೂರ್ವ — ಪಶ್ಚಿಮಗಳ ನಡುವಣ ವೈಷಮ್ಯ ಭಾವವು ಇಂದು ಯೋಗ್ಯ ಚಿಕಿತ್ಸೆಯಿಂದ ನಿವಾರಣೆ ಹೊಂದುವುದು ಸಾಧ್ಯವೆಂದು ತಿಳಿದಿರುತ್ತದೆ. ಲಂಡನಿನ ಸಮಾರಂಭ ಮುಗಿದ ಮರುದಿನವೇ (ತಾ ೩) ಸೇರಿದ ಕಾಮನ್‌ವೆಲ್ತ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತು ಅಂಥ ಪ್ರಯತ್ನಗಳನ್ನು ಇನ್ನೂ ನಡೆಸುವುದಕ್ಕೆ ಉದಾಹರಣೆಯಾಗಿರುತ್ತದೆ. ಆ ಪರಿಷತ್ತಿನಲ್ಲಿ ಸ್ವತಂತ್ರ ಸ್ಥಾನಮಾನವನ್ನು ಪಡೆದ ಭಾರತದ ಪ್ರಧಾನಿ ನೆಹರೂರು ಜಾಗತಿಕ ಸಮಸ್ಯೆಗಳ ಕುರಿತು ವ್ಯಕ್ತಪಡಿಸುವ ಅಭಿಪ್ರಾಯಕ್ಕೆ ಮಹತ್ವ ಬರುವುದು ನಿಶ್ಚಯವೆಂಬುದಾಗಿ ನಿರೀಕ್ಷಕರ ಅಭಿಪ್ರಾಯ. ಲಂಡನಿನಲ್ಲಿ ಕಾಲಿರಿಸುವಾಗಲೂ ಅದಕ್ಕೆ ಮುಂಚಿನ ಸಂದರ್ಭಗಳಲ್ಲೂ ನೆಹರೂರವರು ಕೊರಿಯವೇ ಮುಂತಾದ ಎಲ್ಲ ಸಮಸ್ಯೆಗಳನ್ನೂ ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳುವುದಕ್ಕೆ ಇಂದು ಹೆಚ್ಚು ಅನುಕೂಲವಾದ ವಾತಾವರಣವಿದೆ ಎಂದಿರುವರು. ಎಲ್ಲ ಮಹತ್ವದ ವಿಷಯಗಳ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಶಾಂತಿಯನ್ನು ಕಾಪಾಡಲು ಚತುಃರಾಷ್ಟ್ರಗಳ ಪ್ರತಿನಿಧಿಗಳು ಒಂದೆಡೆ ಸೇರಿ ಚರ್ಚಿಸಬೇಕೆಂಬ ಚರ್ಚಿಲರ ಸೂಚನೆಗೆ ನೆಹರೂ ಬಹಿರಂಗವಾಗಿ ಸಮರ್ಥನೆ ಕೊಟ್ಟಿರುವರು. ಹೀಗಿರುವುದರಿಂದ ಚರ್ಚಿಲರಿಗೆ ನೆಹರೂರೊಡನೆ ಬಿಚ್ಚು ಮನಸ್ಸಿನ ಮಾತುಕತೆಯಾಡುವದ ಸಂಭವ.

ನಗೀಬರ ಸೂಚನೆ

ನೆಹರೂರೊಡನೆ ನಡೆವ ಚರ್ಚೆಯಿಂದ ಬ್ರಿಟನು ತಿಳಿದುಕೊಳ್ಳಬೇಕಾದ ಇನ್ನೊಂದು ಪ್ರಾಮುಖ್ಯ ವಿಚಾರವಿದೆ. ಈಗ್ಗೆ ಕೆಲಸಮಯದಿಂದ ಸುಯೇಜ ಕಾಲುವೆಯ ಸಂಬಂಧದಲ್ಲಿ ಆಂಗ್ಲೋ ಇಜಿಪ್ಶಿಯನರೊಳಗೆ ತಿಕ್ಕಾಟ ನಡೆದಿರುವುದು ಪ್ರಸಿದ್ಧ. ಈಜಿಪ್ತಿನ ಪ್ರಧಾನಿ ಜನರಲ್ ನಗೀಬರು ನೆಹರೂರನ್ನು ಜಾಗತಿಕ ಮುತ್ಸದ್ದಿ ಎಂಬ ಗೌರವದಿಂದಲೂ ರಾಷ್ಟ್ರೀಯ ಆಶೋತ್ತರಗಳನ್ನು ಹೃದಯಂಗಮ ಮಾಡಿಕೊಳ್ಳಬಲ್ಲ ಮಹಾನ ಭಾವನೆಯಿಂದಲೂ ಲಂಡನಿಗೆ ಹೋಗುವ ದಾರಿಯಲ್ಲಿ ಕೈರೋ ವಿಮಾನ ನಿಲ್ದಾಣದಲ್ಲಿ ಭೇಟಿಯಾಗಿರುವರು. ಈ ಸಂದರ್ಭದಲ್ಲಿ ಈಜಿಪ್ತದ ನಿಲುವೆಯನ್ನು ಸ್ಪಷ್ಟವಾಗಿ ನೆಹರೂರಿಗೆ ತಿಳಿಯಪಡಿಸಲಾಯಿತೆಂದೂ ಕೆಲವು ಮಹತ್ವದ ಕಾಗದ ಪತ್ರಗಳನ್ನು ನಗೀಬರು ನೆಹರೂರಿಗೆ ಒಪ್ಪಿಸಿದರೆಂದೂ ತಿಳಿಯುತ್ತದೆ. ಕಾಮನವೆಲ್ತ ಪ್ರಧಾನಿಗಳ ಪರಿಷತ್ತಿನಲ್ಲಿ ಸುಯೇಜ್ ಕಾಲುವೆಯ ತಂಟೆಯು ಚರ್ಚೆಗೆ ಬಂದಾಗ ನೆಹರೂರವರು ಈಜಿಪ್ತಿನ ನಿಲುವೆಯನ್ನು ಯಶಸ್ವಿಯಾಗಿ ಮಂಡಿಸುವರೆಂದು ನಗೀಬರಿಗೆ ಆತ್ಮವಿಶ್ವಾಸವಿದೆ. ನೆಹರೂರವರು ಈ ಹಿಂದೆ ಇಜಿಪ್ತಿನ ನಿಲುವೆಯ ಕುರಿತು ಸಹಾನುಭೂತಿ ತೋರಿಸಿದ್ದೇ ಇದಕ್ಕೆ ಕಾರಣ. ನೆಹರೂರವರು ಭಾರತಕ್ಕೆ ಮರಳುವಾಗ ಎರಡು ಮೂರು ದಿನ ಕೈರೋದಲ್ಲಿ ಉಳಿದು ನಗೀಬರೊಡನೆ ವಿವರವಾದ ಮಾತುಕತೆ ನಡೆಸುವರೆಂದು ತಿಳಿದಿದೆ.

ಸಿಂಗಮನರೀ ಹಾರಾಟ

ಕೊರಿಯಾದಲ್ಲಿ ಸಂಧಾನ ಮಾತುಕತೆಗಳು ಇನ್ನಾಲ್ಕು ದಿನ ಮುಂದೆ ಬಿದ್ದು ಈ ದಿನ (ತಾ ೮) ಮರಳಿ ಆರಂಭಿಸಲ್ಪಡಬೇಕಾಗಿವೆ. ವಿನಿಮಯಕ್ಕೊಳ್ಪಡುವ ಯುದ್ಧಕೈದಿಗಳ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರಸಂಘ ಮಾಡಿದ ಸೂಚನೆಗಳನ್ನು ಕಮ್ಯೂನಿಸ್ಟರು ಇನ್ನೂ ಪರಿಶೀಲಿಸುವುದರಿಂದ ಈ ರೀತಿ ಮಾತುಕತೆಗಳು ಮುಂದೂಡಲ್ಪಟ್ಟವು. ಇದುವರೆಗಿನ ಲಕ್ಷಣಗಳನ್ನು ನೋಡಿದರೆ ಸಂಯುಕ್ತ ರಾಷ್ಟ್ರಸಂಘ ತನ್ನ ನಿಲುವೆಗಳಲ್ಲಿ ಇನ್ನು ಪರಿವರ್ತನೆಗಳನ್ನು ಮಾಡಲಿಕ್ಕಿಲ್ಲವೆಂದು ತಿಳಿಯುತ್ತದೆ. ಮಾತುಕತೆಗಳು ಫಲಪ್ರದವಾಗುತ್ತವೆ ಇಲ್ಲವೆ ಎಂಬ ಸಂದೇಹದ ತೂಗುಯ್ಯಾಲೆಯಲ್ಲಿ ಸಂಬಂಧಿಸಿದ ರಾಷ್ಟ್ರಗಳೆಲ್ಲ ಇರುವಾಗ, ದಕ್ಷಿಣ ಕೊರಿಯಾದ ಸರಕಾರವು ಅಪ್ರಸ್ತುತದ ಮಾತುಗಳನ್ನು ತೊಡಗಿರುತ್ತದೆ. ಚೀನೀ ಸೈನ್ಯವನ್ನು ಕೊರಿಯಾದ ನೆಲದಿಂದ ಸಂಪೂರ್ಣ ಹಿಂತೆಗೆದುಕೊಳ್ಳಬೇಕೆಂದೂ ಕೊರಿಯಾದ ಭವಿತವ್ಯದ ಕುರಿತು ನಡೆಯುವ ಯಾವುದೇ ಮಾತುಕತೆಗಳಲ್ಲಿ ಭಾಗವಹಿಸಲು ದಕ್ಷಿಣ ಕೊರಿಯಾಕ್ಕೆ ಅಧಿಕಾರವಿದೆಯೆಂದೂ, ಕೊರಿಯಾದ ಮೇಲೆ ವಿದೇಶೀ ದಾಳಿಯಾದರೆ ಅದನ್ನು ಪ್ರತಿಭಟಿಸುವ ಆಶ್ವಾಸನೆಯನ್ನು ರಾಷ್ಟ್ರಸಂಘ ಕೊಡಬೇಕೆಂದೂ ದಕ್ಷಿಣ ಕೊರಿಯಾ ಹೇಳಿದೆ. ಇಡೀ ಕೊರಿಯದ ಮೇಲೆ ತನ್ನದೇ ಸಾರ್ವಭೌಮಾಧಿಕಾರವಿರುತ್ತದಾಗಿಯೂ ಇದನ್ನು ರಾಷ್ಟ್ರಸಂಘ ಸ್ವೀಕರಿಸಬೇಕೆಂದೂ ದಕ್ಷಿಣ ಕೊರಿಯಾ ಸಾರಿರುತ್ತದೆ. ಸಂಯುಕ್ತ ರಾಷ್ಟ್ರಸಂಘವು ಕಮ್ಯೂನಿಸ್ಟರೊಡನೆ ಒಪ್ಪಂದ ಮಾಡಿಕೊಳ್ಳಕೂಡದು, ಒಂದು ವೇಳೆ ಮಾತುಕತೆಯ ಪರಿಣಾಮವಾಗಿ ಯುದ್ಧ ನಿಲ್ಲಿಸಿದ ಪಕ್ಷದಲ್ಲಿ ಕೊರಿಯಾವೇ ಏಕಾಕಿಯಾಗಿ ಯಾಲೂ ನದಿಯನ್ನೂ ದಾಟಿ ಮಂಚೂರಿಯದ ಮೇಲೆ ದಾಳಿ ಮಾಡುವುದೆಂಬ ಉತ್ತರಕುಮಾರನ ಪೌರುಷ ವರ್ಣನೆಯನ್ನೂ ದಕ್ಷಿಣ ಕೊರಿಯಾ ಮಾಡಿದೆ.

ದಕ್ಷಿಣ ಕೊರಿಯಾಕ್ಕೆ ಎಚ್ಚರಿಕೆ

ದಕ್ಷಿಣ ಕೊರಿಯಾದ ಬಾಯಿ ಬಡಾಯವನ್ನು ಅಮೇರಿಕಾ ಸಹಿಸುವಂತಿಲ್ಲ. ಹಾಗಿರುವಂತೆ ಕೊರಿಯಾ ಯುದ್ಧವನ್ನು ಮುಂದುವರಿಸುವ ಅಥವಾ ನಿಲ್ಲಿಸುವ ಹೊಣೆ ಅಮೇರಿಕದ ಮೇಲೆಯೇ ಇದೆ. ರಾಷ್ಟ್ರಸಂಘವು ಸಾಂಕೇತಿಕ ಮಹತ್ವವನ್ನು ಮಾತ್ರ ಪಡೆದಿರುತ್ತದೆ. ಆದುದರಿಂದ ಸಿಂಗಮನರ ಸರಕಾರಕ್ಕೆ ಯುದ್ಧ ಮಾಡುವುದು ಬೇಕೆಂದಿದ್ದರೆ, ಅಥವಾ ಶಾಂತಿ ಸಾಧಿಸುವ ಹಂಬಲ ಪ್ರಕಟಗೊಳಿಸಬೇಕಿದ್ದರೆ ದಕ್ಷಿಣ ಕೊರಿಯಾದ ಈ ಉದ್ಧಟ ನಾಲಿಗೆಯ ಮಾತುಗಳನ್ನು ಕೇಳಿ ಸುಮ್ಮನಿದ್ದರೆ ಆಗದು. ಹೊರಗಿನ ಶಸ್ತ್ರಾಸ್ತ್ರಗಳ ಮತ್ತು ಇತರ ಸಾಮಗ್ರಿಗಳ ಪೂರೈಕೆಯಿಲ್ಲದೆ ಎರಡು ವಾರಗಳ ಕಾಲ ಕೂಡ ಯುದ್ಧ ಮಾಡಲಾಗದ ದಕ್ಷಿಣ ಕೊರಿಯಾ ಯಾಲೂ ನದಿಯನ್ನು ದಾಟಿ ಏಕಾಕಿಯಾಗಿ ಕಾಳಗ ಕೊಡುವೆನೆಂದುದು ನಿಜಕ್ಕೂ ಆಶ್ಚರ್ಯ. ಅಮೇರಿಕಾ ದಕ್ಷಿಣ ಕೊರಿಯಾದ ಕೈಬಿಟ್ಟರೆ ಡಾ| ಸಿಂಗಮನರೀಯವರ ಸರಕಾರ ತ್ರಿಶಂಕು ಸ್ವರ್ಗ ಸದೃಶವಾಗುವುದು ನಿಶ್ಚಯ. ದಕ್ಷಿಣ ಕೊರಿಯಾದ ಸರಕಾರವು ನಿರ್ದಾಕ್ಷಿಣ್ಯದಿಂದಲೂ ಬೇಟೆ... ದುಸ್ಸಾಹಸದಿಂದಲೂ ವರ್ತಿಸುತ್ತಿದೆ ಎಂಬುದಕ್ಕೆ ಭಾರತವನ್ನು ಸ್ವತಂತ್ರ ರಾಷ್ಟ್ರಸಂ... ಎಂಬ ಒಂದೇ ಹೇಳಿಕೆ ಸಾಕು. ಭಾರತ, ಪೋಲಂಡ ಮತ್ತು ಝೆಕೊಸ್ಲೊವಾಕಿಯಗಳು ಸ್ವಿಟ್ಜರ್‌ಲ್ಯಾಂಡ ... ಕ್ಕೊಪ್ಪಿದ ಯುದ್ಧಕೈದಿಗಳ ಕಾವಲಿಗೆ ನಿಂತರೆ ಕೊರಿಯಾದಲ್ಲಿ ... ಹಬ್ಬುವುದೆಂದೂ ಕೊರಿಯಾದ ಮುಖಂಡರು ಹೇಳುವರು. ಆದುದರಿಂದ ಐಸೆನ್‌ಹಾವರರು ಕೊನೆಯ ಎಚ್ಚರಿಕೆಯನ್ನು ದಕ್ಷಿಣ ಕೊರಿಯಾಕ್ಕೆ ಕೊಡುವುದು ಅವಶ್ಯವೆನಿಸಿತು. ಸಂಯುಕ್ತ ರಾಷ್ಟ್ರಸಂಘವು ಮಾಡಿಕೊಳ್ಳುವ ಒಡಂಬಡಿಕೆಯ ವಿರುದ್ಧ ಚಕಾರ ಶಬ್ದವೆತ್ತಿದರೆ ಅಮೇರಿಕಾ ದಕ್ಷಿಣ ಕೊರಿಯಾಕ್ಕೆ ಕೊಡುವ ಎಲ್ಲ ತರದ ಸಹಾಯವನ್ನು ಹಿಂತೆಗೆದು ಕೊಳ್ಳುವುದೆಂದು ಹೇಳಿದ ಪರಿಣಾಮವಾಗಿ ಸಿಂಗಮನರೀಯವರು ತಮ್ಮ ಹಾರಾಟವನ್ನು ನಿಲ್ಲಿಸಿರುವರೆಂದೂ, ಕೊರಿಯಾದ ಮಾತುಕತೆಗಳ ಕುರಿತು ತಮ್ಮ ಅಭಿಪ್ರಾಯ ಒದಗಿಸುವ ಹವಣಿಕೆಯಲ್ಲಿರುವರೆಂದೂ ಈಚಿನ ವರದಿಗಳು ತಿಳಿಸುತ್ತಿವೆ. ದಕ್ಷಿಣ ಕೊರಿಯಾವು ತನ್ನ ಕ್ಷೀಣಿಸಿದ ದೃಷ್ಟಿಯಿಂದ ಅಮೇರಿಕದವನ ಘನಾಭಿಪ್ರಾಯವನ್ನು ವ್ಯಕ್ತಗೊಳಿಸುವುದು ಸಲ್ಲದೆಂದು ಸಿಂಗಮನರಿ ಈಗ ಅರಿತವರಂತೆ!



ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಉಡುಪಿ.
ಇವರು ಬೆಂಗಳೂರಿನಲ್ಲಿ ಹೊಸತಾಗಿ ನಿರ್ಮಿಸಿದ ಭವ್ಯವಾದ ಕಟ್ಟೋಣ. ಇದರ ಉದ್ಘಾಟನಾ ಸಮಾರಂಭವು ೨೨-೫-೫೩ರಲ್ಲು ಮೈಸೂರಿನ ಮುಖ್ಯಮಂತ್ರಿ ಮಾನ್ಯ ಶ್ರೀ ಹನುಮಂತಯ್ಯನವರಿಂದ ಸಂಭ್ರಮದಿಂದ ನೆರವೇರಿತು

ಉಡುಪಿ

ಕಸ್ತೂರ್ಬಾ ಮೆಡಿಕಲ್ ಕಾಲೇಜು

ಬೊಂಬಾಯಿ ಸರಕಾರದಿಂದ ಮನ್ನಣೆ ಪಡೆದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಉಡುಪಿ ತಾಲೂಕಿನ ಮಣಿಪಾಲದಲ್ಲಿ ಇದೇ ತಿಂಗಳ 30ಕ್ಕೆ ಕಸ್ತೂರ್ಬಾ ಮೆಡಿಕಲ್ ಕಾಲೇಜು ಎಂಬ ವೈದ್ಯಕೀಯ ಕಾಲೇಜನ್ನು ಎಕೆಡಮಿ ಒಫ್ ಜನರಲ್ ಎಡ್ಯುಕೇಶನಿನವರು ತೆರೆಯುವರು. ಕಾಲೇಜಿಗೆ ಬೇಕಾದ ಹೆಚ್ಚಿನ ಕಟ್ಟಡಗಳು ಈಗಾಗಲೇ ಪೂರ್ತಿಗೊಂಡಿದ್ದು ಉಳಿದವುಗಳ ಕೆಲಸ ಭರದಿಂದ ಸಾಗುತ್ತಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಇಲ್ಲಿ ಪ್ರವೇಶವಿದ್ದು ಪ್ರಾರಂಭದಲ್ಲಿ 100 ಮಂದಿಗೆ ಎಡೆಮಾಡಿ ಕೊಡಲಾಗುವುದು. ಕಾಲೇಜಿನ ಪ್ರೊಫೆಸರರ ನೇಮಕವೂ ಈಗಾಗಲೇ ಆಗಿರುವುದು. ಮದ್ರಾಸು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರೊಫೆಸರ್ ಕೆಪ್ಟನ್. ಎನ್. ಮಂಗೇಶರಾಯರು ಪ್ರಿನ್ಸಿಪಾಲರಾಗಿರುವರು. ಪ್ರಾರಂಭೋತ್ಸವದ ಪೂರ್ವಸಿದ್ಧತೆ ನಡೆಯುತ್ತಲಿದೆ. ಮದ್ರಾಸು ಸರಕಾರದ ಒಪ್ಪಿಗೆಯನ್ನು ಇಷ್ಟರಲ್ಲಿ ಪಡೆದು ಮುಂಬಯಿ ಸರಕಾರವು ಈ ಕಾಲೇಜಿಗೆ ಅಂಗೀಕಾರ ಕೊಟ್ಟಿರುವುದಾಗಿ ಅಧಿಕೃತವಾಗಿ ತಿಳಿದು ಬರುತ್ತದೆ.

(೭ನೇ ಪುಟದಿಂದ)

ವಿಕಾಸದ ಪ್ರಶ್ನೆಯಲ್ಲಿ ಹೆಚ್ಚು ಜನರಿಗೆ ಕೈತುಂಬ ಕೆಲಸವನ್ನು ಕೊಡುವುದೇ ಮುಖ್ಯೋದ್ದೇಶವಾಗಬೇಕೆಂಬುದಕ್ಕೆ ಸರಕಾರದ ಸಮ್ಮತಿಯೂ ಇರುತ್ತದೆ. ಈ ಮುಖ್ಯ ಧ್ಯೇಯವು ಪೂರೈಸುವ ಪಕ್ಷದಲ್ಲಿ ಪಂಚವಾರ್ಷಿಕ ಯೋಜನೆಗಾಗಲೀ ಇತರ ರೀತಿಯಲ್ಲಾಗಲೀ ನಮಗೆ ವಿದೇಶಗಳು ನೆರವಾಗುವುದಾದರೆ–ಅದಕ್ಕೇ ಆಕ್ಷೇಪಿಸುವುದು ಅನಗತ್ಯ. ಭಾರತದಲ್ಲಿ ಅಮೇರಿಕದ ರಾಯಭಾರಿಗಳಾಗಿರುವ ಚಾರ್ಜ್ ಅಲೆನ್ನರು ಭಾರತದಲ್ಲಿ ಅಮೇರಿಕವು ತೊಡಗುವ ಬಂಡವಾಳ ಕೇವಲ ವ್ಯವಹಾರ ಧರ್ಮವನ್ನು ಅನುಸರಿಸುತ್ತಿದೆಯಲ್ಲದೆ ಯಾವುದೇ ರಾಜಕೀಯ ಉದ್ದೇಶ ಇದರಲ್ಲಿ ಹುದುಗಿಲ್ಲವೆಂದಿರುವರು. ತಮ್ಮ ಬಂಡವಾಳಕ್ಕೆ ಯೋಗ್ಯ ಪ್ರತಿಫಲ ದೊರೆಯಬೇಕೆಂದು ಅಮೇರಿಕರನ್ನರಾಗಲೀ ಇತರರಾಗಲೀ ಅಪೇಕ್ಷಿಸುವುದು ತಪ್ಪೆಂದ್ಯ ಹೇಳಲಾರೆವು. ಬ್ರಿಟನದಲ್ಲಿ ಭಾರತದ ರಾಯಭಾರಿಗಳಾಗಿರುವ ಶ್ರೀ ಬಿ. ಜಿ. ಖೇರರು ಬ್ರಿಟಿಷ್ ವ್ಯಾಪಾರಿಗಳ ಪರಿಷತ್ತಿಂದರಲ್ಲಿ ಮಾತನಾಡುವಾಗ ವಿದೇಶೀ ಬಂಡವಾಳವನ್ನು ಭಾರತವು ಸಕ್ಕತಯುಕ್ತೂ ಸ್ವಾಗತಿಸುವುದೆಂದು ಹೇಳಿರುವರು. ದೇಶಮುಖರು ಈಚಿನ ತಮ್ಮ ಸಂಚಾರ ಕಾಲದಲ್ಲಿ ಭಾರತವು ತನ್ನ ಸ್ವಂತ ಉಳಿತಾಯದಲ್ಲಿ ಹಿಂದೆಬಿದ್ದ ಲಕ್ಷಣ ಈಗ ಕಂಡುಬರುತಿದ್ದು ವಿದೇಶದ ನೆರವು ಎಣಿಸಿದುದಕ್ಕಿಂತ ಹೆಚ್ಚಾಗಿ ದೊರೆಯುವ ಭರವಸೆ ಇದೆ ಎಂದಿರುವರು. ಈ ಮಾತುಗಳನ್ನೆಲ್ಲ ವಿಮರ್ಶಿಸಿದರೆ—ನಾವು ಹೆಜ್ಜೆ ಮುಂದಿಡುವಾಗ ಸದಾ ಜಾಗರೂಕರಾಗಿರಬೇಕಾದಂತೆ, ಅಭಿವೃದ್ಧಿಯ ಯೋಜನೆಗಳ ಕಾರ್ಯಾಚರಣೆಯಲ್ಲಿಯೂ ಸತರ್ಕತೆ ವಹಿಸುವ ಆವಶ್ಯಕತೆ ಸ್ಪಷ್ಟವಾಗಿರುತ್ತದೆ.

ಮುನಿಸಿಪಲ್ ಕೌನ್ಸಿಲು ಸಭೆಯು

ಕಳೆದ ತಾ 30ರಲ್ಲಿ ಚೆರ್‌ಮನ್ ಶ್ರೀ ಯು ಎಸ್ ನಾಯ್ಕರ ಅಧ್ಯಕ್ಷತೆಯಲ್ಲಿ ಸೇರಿತು ಲ್ಯಾಟ್ರಿನ್ ಅಥೋರಿಟಿಗೆ ಈ ಕೌನ್ಸಿಲಿನ ಪ್ರತಿನಿಧಿಯಾಗಿ ವಕೀಲ್ ಶ್ರೀ ಎಮ್. ವಿಠಲ ಕಾಮತರು ಸರ್ವಾನುಮತದಿಂದ ಆರಿಸಲ್ಪಟ್ಟರು. ಸೊಳ್ಳೆ ಕಾಟ ನಿವಾರಣೆಗಾಗಿ ಪಬ್ಲಿಕ್ ಹೆಲ್ತ್ ಆಕ್ಟಿನ ಸಂಭಕ್ತನೆ ಪ್ರಕರಣವನ್ನು ಮುನಿಸಿಪಲ್ ಕ್ಷೇತ್ರದಲ್ಲಿ ಜ್ಯಾರಿ ಮಾಡುವುದೆಂದಾಯಿತು. ಮುನಿಸಿಪಲ್ ಶಿಬಂದಿಗೆ ತಿಂಗಳೊಂದರ ೧೦ ರಾಯಿ ಮೂರರಂತೆ ಮನೆ ಬಾಡಿಗೆ ಕೊಡಲು ಕೌನ್ಸಿಲಿನ ಅನುಮತಿ ದೊರೆಯಿತು. ವೃತ್ತಿ ಕರ ಗೆಯನು ಜಾಸ್ತಿ ಮಾಡಬೇಕೆನ್ನುವ ಆಫೀಸಿನ ಸೂಚನೆಗೆ ಕೌನ್ಸಿಲಿನ ಒಪ್ಪಿಗೆ ದೊರೆಯಲಿಲ್ಲ. ಮುನಿಸಿಪಲ್ ತೆಂಕಣ ಶಾಲೆಯ ಕಟ್ಟಡವನ್ನು ಕ್ರಯಕ್ಕೆ ಪಡೆಯುವುದಾದರೆ, ಮತ್ತು ಟ್ರೈನಿಂಗ್ ಶಾಲಾ ಕಟ್ಟೋಣವನ್ನು ಧರ್ಮಾರ್ಥ ಕೊಡುವುದಾದರೆ, ಸರಕಾರಕ್ಕೆ ಹೊಸ ಕಟ್ಟಡವನ್ನು ಸರಕಾರಿ ಹೆಮ್ಮಕ್ಕಳ ಹ್ಯಾಸ್ಕೂಲಿಗಾಗಿ ಕೊಡಬಹುದೆಂದು ಕೌನ್ಸಿಲಿನ ತೀರ್ಮಾನವಾಯಿತು. ವಿಾನು ಮಾರ್ಕೆಟಿನ ಕಿಸ್ತು ಹಣ ಬಾಕಿಗೆ ಕಂಟ್ರಾಕ್ಟರರ ಮೇಲೆ ವ್ಯಾಜ್ಯ ದಾಖಲು ಮಾಡಬೇಕೆಂದು ನಿರ್ಣಯವಾಯಿತು.

ಸ್ಯಾಕಲ್ ಸವಾರಿ— ಸ್ಥಳೀಯ ಕ್ರಿಶ್ಚಿಯನ್ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿ ಇವಾನ್ಸ್ ಫ್ರೆಂಕ್ ಎಂಬಾತನು ಎಲ್ಲೂರು ಭಂಡಾರಿ ಗದ್ದೆಯಲ್ಲಿ ಕಳೆದ ತಾ 30ರಲ್ಲು ಸ್ಯಾಕಲ್ ಸವಾರಿ ಪ್ರಾರಂಭಿಸಿ ಮರುದಿನ ಸಂಜೆ ಏಳು ಗಂಟೆಗೆ ಅಂತ್ಯಗೊಳಿಸಿದನು. ಈ ತರುಣನು 37 ಗಂಟೆ ಕಾಲ ಸತತ ಸ್ಯಾಕಲ್ ಸವಾರಿ ಮಾಡಿದಂತಾಯಿತು. ಈ ಸಮಾರಂಭವು ಡಾ॥ ಡಬ್ಲ್ಯು. ಎ ಸುಟಕ್ಕರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ. ಜಿಲ್ಲೆಗೆ 2000 ಕಿ. ವಾ. ವಿದ್ಯುಚ್ಛಕ್ತಿಯನ್ನು ಮೈಸೂರು ಸರಕಾರವು ಬೇಗನೆ ಕೊಡಲೊಪ್ಪಿದೆ ಎಂದು ಮೈಸೂರು ಸರಕಾರದ ವಿದ್ಯುಚ್ಛಕ್ತಿ ಖಾತೆಯ ಕಾರ್ಯದರ್ಶಿಗಳಾದ ಶ್ರೀ ಎಚ್ ಚೆನ್ನಯ್ಯನವರು ಉಡುಪಿ ನಗರ ಸಭೆಯ ಚೆಯರ್‌ಮೆನರಿಗೆ ತಿಳಿಸಿರುವರಲ್ಲದೆ ಈ ವಿಷಯವನ್ನು ಮದ್ರಾಸು ಸರಕಾರಕ್ಕೂ ತಿಳಿಸಿರುವುದಾಗಿ ಬರೆದಿರುವರು. ಇದೇ ರೀತಿಯಲ್ಲಿ ಮಂಗಳೂರಿನ ಕೆನರಾ ಚೇಂಬರ್ ಒಫ್ ಕೊಮರ್ಸ್ ಅವರಿಗೂ ತಿಳಿಸಿರುವರಾಗಿ ವರದಿಯಾಗಿದೆ, ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ದ. ಕ. ಜಿಲ್ಲೆಯ ಪ್ರವಾಸ ಕಾಲದಲ್ಲಿ ಅವರಿಗೆ ಅರ್ಪಿಸಲ್ಪಟ್ಟ ಮಾನಪತ್ರ ಮನವಿಗಳಿಗೆ ಉತ್ತರ ಕೊಡುವಾಗಲೇ ಹೀಗೆಯೇ ಹೇಳಿದ್ದರು.

ಅಡಕೆ "ಕೊಳೆ ರೋಗ" ಅಥವಾ ಮಹಾಳಿ

ಮಳೆ ಪ್ರಾರಂಭವಾದೊಡನೆ, ನಮ್ಮ ಜಿಲ್ಲೆಯಲ್ಲಿ ಅಡಕೆ ಬೆಳೆಯು ಕೊಳೆರೋಗಕ್ಕೆ ತುತ್ತಾಗಿ, ಎಳೆ ಅಡಕೆಯು ಕೊಳೆತು ಬೀಳುವುದರಿಂದ ರೈತರಿಗೆ ಅಪಾರ ನಷ್ಟವಾಗುವುದೆಂದೂ, ಈ ರೋಗವನ್ನು "ಬೊರ್ಡೋ" ಮಿಶ್ರಣ ಚಿಮಿಕಿಸುವುದರಿಂದ ತಡೆಗಟ್ಟಿ, ಪೈರನ್ನು ಕಾಪಾಡಬಹುದೆಂದು ಎಲ್ಲವರಿಗೂ ಈಗ ತಿಳಿದ ವಿಷಯವಾಗಿದೆ. ಈ ಮದ್ದು ಪ್ರಯೋಗದ ಕೆಲವು ವಿಷಯಗಳನ್ನು ರೈತರು ಜಾಗ್ರತೆಯಿಂದ ಅನುಸರಿಸಿ ತಮ್ಮ ಅಡಕೆ ಬೆಳೆಯನ್ನು ಕಾಪಾಡಬಹುದು.

1. ಮಳೆ ಪ್ರಾರಂಭವಾದೊಡನೆ ಆದಷ್ಟು ಬೇಗನೆ ಮೊದಲನೆಯ ಬಾರಿ ಔಷಧಿ ಪ್ರಯೋಗ ಮಾಡಬೇಕು. [ಈ ವರ್ಷ ನೀರಿನ ಅಭಾವದಿಂದ ಹೆಚ್ಚಿನ ಅಡಕೆ ತೋಟಗಳು ಬಳಲಿರುವುದರಿಂದ, ಮಳೆ ಬರುವ ಮುಂಚೆ ತವಾಗಿಯೇ ಔಷಧಿ ಹಾಕುವುದು ತೊಂದರೆ]

2. ಸೇಕಡಾ ಒಂದು ಸಳೆ (1%) ದ್ರಾವಕವನ್ನು ಮಾತ್ರ ಉಪಯೋಗಿಸಬೇಕು, (ಅಂದರೆ 5ರಾತ್ಲು ಮೈಲು ತುತ್ತು, 5ರಾತ್ಲು ಸುಣ್ಣ, 50 ಗೇಲನ್ ನೀರು) ಇದಕ್ಕಿಂತ ಹೆಚ್ಚಿನ ಪ್ರಮಾಣದ ಔಷಧಿ ಉಪಯೋಗದಿಂದ ಮರಕ್ಕೆ ಹಾನಿಯಾಗಬಹುದು.

3. ಒಳ್ಳೆಯ ಹೊಸ ಸುಣ್ಣವನ್ನೇ ಉಪಯೋಗಿಸಬೇಕು. ಹಳೇ ಸುಣ್ಣವಾದರೆ 5 ರಾತ್ಲು ಮೈಲು ತುತ್ತಿಗೆ 10 ರಾತ್ಲು ವರೆಗೂ ಸುಣ್ಣ ಹಾಕಬೇಕಾಗುವುದು ಹೀಗೆ ಹೆಚ್ಚು ಸುಣ್ಣ ಹಾಕುವುದು ಮರಗಳಿಗೆ ಹಾನಿಕರವಾದುದರಿಂದ ಒಳ್ಳೆಯ ಹೊಸ ಸುಣ್ಣವನ್ನು ಮೈಲು ತುತ್ತಿನಷ್ಟೇ ಪ್ರಮಾಣದಲ್ಲಿ ಸೇರಿಸಿ ಮಿಶ್ರಣ ತಯಾರಿಸಿ, ಪರೀಕ್ಷಿಸಿ, ಉಪಯೋಗಿಸಬೇಕು.

4. ಯಾವ ತರದ ಎಣ್ಣೆ ಅಥವಾ ಅಂಟು ಪದಾರ್ಥಗಳನ್ನೂ ಈ ಮಿಶ್ರಣಕ್ಕೆ ಸೇರಿಸುವ ಅಗತ್ಯವಿಲ್ಲ. ಸೇಕಡಾ ಒಂದರ ಖಾಲಿ "ಬೊಡೋ" ಮಿಶ್ರಣವನ್ನು ಉಪಯೋಗಿಸಿದರೆ ಅದೇ ಕೊಳೆರೋಗವನ್ನು ತಡೆಗಟ್ಟುವುದರಲ್ಲಿ ಸಂದೇಹ ವಿಲ್ಲ.

5. ಮದ್ದು ಪ್ರಯೋಗವನ್ನು ಸಣ್ಣ ಹನಿರೂಪದಲ್ಲಿಯೇ (Mist Spray) ಪ್ರತಿ ಅಡಕೆಯ ಗೊನೆಗೂ ತಗಲುವಂತೆ ಚಿಮಿಕಿಸಬೇಕಲ್ಲದೆ, ಇಡೀ ಮರಕ್ಕೆ ಸಳೆಗೆ ಪ್ರಯೋಗ ಮಾಡಕೂಡದು.

6 ಮಳೆ ವಿರಾಮ ದೊರೆತೊಡನೆ, ಎರಡನೇ ಮತ್ತು ಮೂರನೇ ಸಲ ಇದೇ ರೀತಿ 40–45 ದಿವಸಗಳೊಳಗೆ, ಸೇಕಡಾ ಒಂದು ಸಳೆ ಔಷಧಿ ಪ್ರಯೋಗದಿಂದ, ಇಡೀ ಬೆಳೆಯನ್ನು ಕೊಳೆರೋಗದಿಂದ ಕಾಪಾಡಬಹುದು.

ಮೇಲಿನ ಕ್ರಮಗಳನ್ನನುಸರಿಸಿದಲ್ಲಿ, ನಿಮ್ಮ ಅಡಕೆ ಮರಗಳಿಗೂ ತೊಂದರೆಯಾಗದು

ಕೆ. ತೇಜಪ್ಪ ಶೆಟ್ಟಿ, B Sc.
Ag. D. I. H.
S. K. ಮಾರ್ಕೆಟ್ ಕಮಿಟಿ,
ಮಂಗಳೂರು.

ಮಂಗಳೂರು ಸರ್ವಕಾಲಿಕ ಬಂದರಾಗುವುದು— ಮಂಗಳೂರು ಬಂದರವನ್ನು ಸರ್ವಕಾಲಿಕ (All weather) ಬಂದರನ್ನಾಗಿ ಅಭಿವೃದ್ಧಿಗೊಳಿಸಲು ಭಾರತ ಸರಕಾರವು ನಿಶ್ಚಯಿಸಿದೆ ಎಂದು ತಿಳಿದು ಬಂದಿದೆ. ಪೂನಾದ ಸೆಂಟ್ರಲ್ ವಾಟರ್ ಎಂಡ್ ರಿಸರ್ಚ್ ಸ್ಟೇಶನಿನವರು ಮಂಗಳೂರು ಬಂದರದ ಮಾದರಿಯಲ್ಲಿ ಒಂದು ಬಂದರನ್ನು ರಚಿಸಿ ವಿವಿಧ ಸವ ಸ್ಯಗಳ ಕುರಿತು ಸಂಶೋಧನೆಯನ್ನು ನಡೆಸಿದ್ದರು.

ಎರಡನೆ ಎಲಿಜಬೆತ್ ರಾಣಿಯ ಕಿರೀಟ ಮಹೋತ್ಸವ ದಿನದಲ್ಲಿ ಹೊರಬಿದ್ದ ಹೊಸ ನಾಣ್ಯ.

MAHATMA GANDHI MEMORIAL COLLEGE, UDIPI.

Registrations for Junior Intermediate and B.A. classes are now open. Candidates seeking admission should apply for registration. Admissions begin June 10, 1953.

H. Sunder Rao, M. A.,
PRINCIPAL.

ಚಿಕ್ಕ ಮಕ್ಕಳ ಅಕ್ಕರೆಯ ಸಚಿತ್ರ ಪದ್ಯ ಪುಸ್ತಕ–

ಕೆ. ಹೊನ್ನಯ್ಯ ಶೆಟ್ಟರಿಂದ ರಚಿತವಾದ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ ಅಭಿನಯಿಸಲಿಕ್ಕೂ, ಅನುಕೂಲವಾದ ಪದ್ಯಗಳು! ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0–6–0

ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿಯೂ ಸಿಗುತ್ತವೆ.

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ಶಾಲೆಗಳಿಗೆ ಬೇಕಾಗುವ ರಿಜಿಸ್ಟ್ರಿ ಫಾರ್ಮುಗಳು ಸಿಗುತ್ತವೆ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ, ಚಿಲ್ಲರೆಯಾಗಿಯೂ ಮಾರಲ್ಪಡುತ್ತವೆ

ಬೆಲೆ ಪ್ರತಿ 1ಕ್ಕೆ 0—1—0
„ „ 100ಕ್ಕೆ 4—0 -0

ನವಯುಗ ಪ್ರೆಸ್, ಉಡುಪಿ

ಮಂಗಳೂರು

ಬುದ್ಧ ಜಯಂತಿ— ಮಂಗಳೂರಿನ ತರುಣ ಕಲಾವೃಂದದವರ ನೇತೃತ್ವದಲ್ಲಿ ಕಳೆದ ತಾ 28ರಲ್ಲು ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ರಾಷ್ಟ್ರಕವಿ ಶ್ರೀ ಎಮ್. ಗೋವಿಂದ ಪೈಗಳವರ ಅಧ್ಯಕ್ಷತೆಯಲ್ಲಿ ಬುದ್ಧ ಜಯಂತಿಯು ಜರಗಿತು. ವೃಂದದ ಅಧ್ಯಕ್ಷ ಶ್ರೀ ಎಮ್. ಪ್ರಭಾಕರ ರಾಯರು ಸ್ವಾಗತ ಭಾಷಣಮಾಡಿದರು. ಶ್ರೀ ಕೆ. ಕೆ. ಶೈಗಳು ಬುದ್ಧನ ಕುರಿತು ಮಾತನಾಡುತ್ತಾ ಅತನ ತತ್ವ ಪುನರುತ್ಥಾನವಾಗುವ ವಾತಾವರಣ ಇಂದು ಭಾರತದಲ್ಲಿ ತೋರುತ್ತಿದೆ ಎಂದರು. ಅಧ್ಯಕ್ಷರು ತಮ್ಮ ಭಾಷಣ ಮುಗಿಸಿ ತಾವು ಬರೆದು ತಂದ ಬುದ್ಧನ ಜೀವನ ಮತ್ತು ಉಪದೇಶಗಳನ್ನೊಳಗೊಂಡ ಪ್ರೌಢಲೇಖವನ್ನು ಓದಿದರು.

ಮಹಾಸಭೆ— ಹೊಟೇಲು ಮಜೂರರ ಮಹಾಸಭೆಯು ಶ್ರೀ ಎಚ್ ಮಹಾಬಲ ಶೈಗಳ ಅಧ್ಯಕ್ಷತೆಯಲ್ಲಿ ಜರಗಿ ಬೇಡಿಕೆ ಪತ್ರವನ್ನು ಅಂಗೀಕರಿಸಲಾಯಿತು.

ನಿಧನ— ಮಂಗಳೂರಿನ ಎಲೋಸಿಯಸ್ ಕಾಲೇಜಿನ ಅಧ್ಯಾಪಕರಾಗಿದ್ದ ಮತ್ತು ಮದ್ರಾಸಿನ ಮಾಜಿ ಮಂತ್ರಿಗಳಾಗಿದ್ದ ಶ್ರೀ ಸಿ. ಜೆ. ವಾರ್ಕಿಯವರು ಎರ್ನಾಕುಳಮಿನಲ್ಲಿ ಕಳೆದ ತಾ 25 ರಲ್ಲು ನಿಧನ ಹೊಂದಿದರೆಂದು ತಿಳಿಸಲು ವಿಷಾದ ಪಡುತ್ತೇವೆ

ದ. ಕ. ಜಿಲ್ಲಾ ಬಲ್ಯಾಯ ಮಹಾಸಂಘದ— ವಾರ್ಷಿಕ ಮಹಾಸಭೆಯು ಕಳೆದ ತಾ. 29 ರಂದು ಮಿಶನ್ ಹೈಸ್ಕೂಲಿನಲ್ಲಿ ಮಂಗಳೂರು ನಗರ ಸಭಾ ಸದಸ್ಯ ಶ್ರೀ ಎಮ್. ರಮಾನಾಥ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಕೌನ್ಸಿಲರ್ ಶ್ರೀ ಕೆ. ವಾಮನ ಪಂಡಿತರು ಮಹಾ ಸಭೆಯ ಉದ್ಘಾಟನೆ ಮಾಡಿದರು. ಬಳಿಕ ಕಾರ್ಯದರ್ಶಿಯು ಸುಂದರನವರು ವರದಿಯನ್ನೋದಿದರು. ಶ್ರೀಗಳಾದ ಪಿ. ಕೆ. ನಾರಾಯಣ, ವಿ. ಕೆ. ಬಲ್ಯಾಯ, ನಾರಾಯಣ ಜೋಯ್ಸರ್ ಮೊದಲಾದವರು ಮಾತನಾಡಿದರು. ಕಾರ್ಯಕಾರೀ ಸಮಿತಿಗೆ ಸದಸ್ಯರ ಚುನಾವಣೆ ನಡೆಯಿತು.

ಕೌನ್ಸಿಲು ಮೀಟಿಂಗು— ಮಂಗಳೂರು ಕೌನ್ಸಿಲು ಸಭೆಯು ತಾ 30 ರಲ್ಲು ಚೇರ್‌ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಅಗ್ನೆಸ್ ಕಾಲೇಜಿಗೆ ಹೋಗುವ ವಿದ್ಯಾರ್ಥಿನಿಯರಿಗೆ ಹಾಗೂ ಇತರರಿಗೆ ಕೂಡಾ ಪ್ರಯೋಜನ ದೊರಕುವಂತೆ 15ನೇ ನಂಬ್ರದ ಸಿಟಿ ಬಸ್ಸಿನ ದಾರಿಯನ್ನು ಅಲ್ಪ ಬದಲಾಯಿಸುವ ಸೂಚನೆಯನ್ನು ನಗರ ಸಭೆಯು ಒಪ್ಪಿತು ಮುನಿಸಿಪಲ್ ಕಮಿಶನರರು ಒಂದು ಮೋಟಾರ್ ಕಾರನ್ನು ಪಡೆಕೊಂಡಿರುವ ಕಾರಣ ಅವರಿಗೆ ರೂ. 2600-0-0ನ್ನು ಮುಂಗಡವಾಗಿ ಕೊಡಲು ಮಂಜೂರಾತಿ ಯಾಯಿತು. ಜಪ್ಪಿನ ಶಿಶು ವಿಹಾರದ ಖರ್ಚಿಗೋಸ್ಕರ ಚಾಲ್ತಿ ವರ್ಷಕ್ಕೆ ರೂ. 1200-0-0ನ್ನು ಮಂಜೂರು ಮಾಡಲಾಯಿತು. ಸ್ಥಳೀಯ ಲೈಬ್ರರಿಯ ಅಥೊರಿಟಿಗೆ ಶ್ರೀಗಳಾದ ಗೋಪಾಲ ನಾಲನ್ನ ಮತ್ತು ಹರಿಶ್ಚಂದ್ರ ಆಚಾರ್ಯರನ್ನು ಆರಿಸಲಾಯಿತು.

ಶ್ರೀ ಬಿ ಕೊರಗಪ್ಪ ರೈಗಳ ಸೂಚನೆಯಂತೆ ಕೌನ್ಸಿಲು ಈ ಕೆಳಗಿನ ನಿರ್ಣಯಗಳನು ಮಂಜೂರು ಮಾಡಿತು. (1) ಅಕ್ಕಿಧಾರಣೆಯನ್ನು 1952ರ ಧಾರಣೆಗೆ ಇಳಿಸಲು ಸರಕಾರದೊಡನೆ ಕೇಳಿ ಕೊಳ್ಳಬೇಕು. ರೇಶನನ್ನು 12ಔನ್ಸ್‌ಗಳಿಗೆ(ರೇಶನ್‌ಕಾರ್ಡು 2)ಬ ಹಿರಂಗ ಮಾರ್ಕೆಟಿನಲ್ಲಿ ಅಕ್ಕಿ ಧಾರಣೆಯನು ಇಳಿಸಬೇಕು ಮತ್ತು ಧಾರಣೆಯನ್ನು ಕೂಡಾ ಒಂದು ನಿಶ್ಚಿತವಾಗಿರಿಸಬೇಕು.

ಮೂಲ್ಕಿ— ಇಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಜೆ, ನಾರಾಯಣನವರು ಕಾಸರಗೋಡಿಗೆ ವರ್ಗಾಯಿಸಲ್ಪಟ್ಟ ಕಾರಣ, ಅವರಿಗೆ ಕಳೆದ ತಾ 29 ರಲ್ಲು ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಸತ್ಕಾರ ಕೂಟವೊಂದು ಏರ್ಪಡಿಸಲಾಗಿತ್ತು ಶ್ರೀಗಳಾದ ಎಮ್. ಕೆ. ಎಲ್ಲಪ್ಪ, ಕೆ. ಸೋಮಪ್ಪ ಸುವರ್ಣ ಚೆನ್ನ ಕೋಟ್ಯಾನ್, ಮೊದಲಾದವರು ಅತಿಥಿಯ ಗುಣಗಾನ ಮಾಡಿ ಮಾತನಾಡಿದರು. ಶ್ರೀ ಜೆ. ನಾರಾಯಣನವರು ಕೃತಜ್ಞತೆ ಸೂಚಿಸಿದರು.

ಕುತ್ಪಾಡಿ— ಇಲ್ಲಿಯ 'ತರುಣ ವೃಂದ'ದ ಪ್ರಥಮ ವಾರ್ಷಿಕೋತ್ಸವವು ಕಳೆದ ತಾ 29ರಂದು ಡಾ| ಕೆ. ಮೋಹನದಾಸ ಶೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಮಿರಾಜ ಸೆಟ್ಟರು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಶ್ರೀನಿವಾಸ ಪುರಾಣಿಕರು 'ತರುಣರು' ವಿಷಯವನ್ನೆತ್ತಿ ಮಾತನಾಡಿದರು. "ನಾರಿಯೋ ಮಾರಿಯೋ" ಎಂಬ ಕನ್ನಡ ನಾಟಕ ಪ್ರದರ್ಶನವಾಗಿ ಶ್ರೀ ಕೆ. ಶ್ರೀಧರ ಸೆಟ್ಟರ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉದ್ಯಾವರ— ಸ್ಥಳೀಯ ಪಂಚಾಯತ ಬೋರ್ಡು ಚುನಾವಣೆಯು ನಡೆದು ಶ್ರೀಗಳಾದ ಭಾಸ್ಕರ ಸೆಟ್ಟಿ (ಅಧ್ಯಕ್ಷ), ರಾಮಕೃಷ್ಣಾಚಾರ್, ವಾಸುದೇವ ರಾವ್, ಯು. ಎಸ್ ಗಿರಿಯಪ್ಪ, ಯು. ಕೆ. ಮೋಸೆಸ್, ಅನಂತ ಶ್ಯಾನುಭಾಗ್, ಬಾಜಿ ಅಬ್ದುಲ್‌ಕರ್ ಸಾಹೇಬ್, ಗಿರಿಯಪ್ಪ ಸುವರ್ಣ ಆನಂದ ಮೆಂಡನ್, ಕೊರಗ ಮೇಸ್ತ್ರಿ ಮತ್ತು ಎ. ಲೋಬೋ ಮೆಂಬರರಾಗಿ ಆರಿಸಲ್ಪಟ್ಟರು.

ಮೂಲ್ಕಿ— ಶ್ರೀ ಆನೆಗೊಂದಿ ಮಠಾಭ್ಯುದಯ ಪ್ರಚಾರ ಸಭೆಯು ಕಳೆದ ತಾ 24ರಲ್ಲು ಶ್ರೀ ಬಿ. ಗೋಪಾಲ ಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯು ಕೈಗೊಂಡಿರುವ ರಚನಾತ್ಮಕ ಕಾರ್ಯಕ್ರಮಗಳನ್ನು ಸಭೆಯು ಅಂಗೀಕರಿಸಿತು. ಶ್ರೀಗುರು ಪಟ್ಟವು ಶೀಘ್ರದಲ್ಲೇ ಆಗುವಂತೆ ಪ್ರಾರ್ಥನೆಯಾಯಿತು.

ಹಿರ್ಗಾನ— ಸ್ಥಳೀಯ ಪಂಚಾಯತ ಬೋರ್ಡು ಚುನಾವಣೆಯಲ್ಲಿ ಶ್ರೀ ಜಾರ್ಕಳ ದಿವಾಕರ ಹೆಗ್ಡೆಯವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಹಂಗಾರಕಟ್ಟೆ— ಕಳದ ತಾ 24ರಲ್ಲು ಇಲ್ಲಿಯ ಶಾಲಾ ಬಾವಿಯ ಕೆಸರನ್ನು ತೆಗೆಯುವ ಕಾರ್ಯವನ್ನು ಶಾಲಾ ವಿದ್ಯಾರ್ಥಿಗಳು ಊರವರ ಸಹಕಾರದಿಂದ ನೆರವೇರಿಸಿದರು. ಹಲವು ವರ್ಷಗಳಿಂದ ಈ ಬಾವಿಯ ಕೆಸರು ತೆಗೆಯದೆ ನೀರು ಹಾಳಾಗಿತ್ತು.

ಬೆಳ್ಮಣ್ಣು— ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ಮಕ್ಕಳ ವಾರ್ಷಿಕ ಹಬ್ಬವು ಕಳೆದ ತಾ. 23ರಂದು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ತಹಶಿಲ್ದಾರ್ ಶ್ರೀ ಬಿ. ರಾಮರಾವ್, ಡಿಪ್ಯುಟಿ ತಹಶಿಲ್ದಾರ್ ಶ್ರೀ ಸಂಜೀವ ಪ್ರಭು, ಶಾಲಾ ಜೂನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರ್, ಶ್ರೀ ಪಿ. ಕೃಷ್ಣ ರಾವ್ ಮೊದಲಾದವರು ಆಗಮಿಸಿದ್ದರು. ಮರುದಿನ ಮಕ್ಕಳ ವಿವಿಧ ವಿನೋದಾವಳಿಗಳಿಂದ ಹಬ್ಬವು ಕೊನೆಗೊಂಡಿತು.

ಕುಂಬಳೆ— ಕಾಸರಗೋಡು ತಹಶಿಲ್ದಾರ್ ಶ್ರೀ. ಪಿ. ಎನ್. ಪೋಸೋಟಿ ಮೊದಲಾದವರು, ಕಳೆದ ತಾ. 26ರಲ್ಲು ಕುಂಬಳೆಗೆ ಬಂದು ಇಲ್ಲಿಯ ಅಕ್ಕಿ ವ್ಯಾಪಾರಿಗಳನ್ನು ಕರೆದು ಅಕ್ಕಿ ಸೇರಿಗೆ ಹತ್ತಾಣೆಗಿಂತ ಹೆಚ್ಚು ದರದಲ್ಲಿ ವಿಕ್ರಯ ಮಾಡಕೂಡದಾಗಿ ಕೇಳಿಕೊಂಡಿರುವರು.

ಕುಂದಾಪುರ— ಕಳೆದ ತಾ 27ರಲ್ಲಿ ಶ್ರೀ ವೈ. ಮಂಜಯ್ಯ ಸೆಟ್ಟಿ ಎಮ್. ಎಲ್ ಎ. ಅವರ ಹಿರಿತನದಲ್ಲಿ ಭೂದಾನ ಯಜ್ಞ ಸಭೆಯು ಜರಗಿತು. ಸಂತ ವಿನೋಭಾ ಭಾವೆಯವರ ತತ್ವ ಪ್ರಣಾಲಿಯಂತೆ ಆಗತ್ಯವುಳ್ಳ ಕಾರ್ಯಚಟುವಟಿಕೆಗಳಲ್ಲಿ ಒಂದು ಭೂದಾನ ಯಜ್ಞ ಸಮಿತಿಯನ್ನು ಸ್ಥಾಪಿಸಲಾಯಿತು. ಸ್ವಸಂತೋಷದಿಂದ ಮುಂದೆ ಬಂದು 50 ಎಕ್ರೆ ಭೂಮಿ ಕೊಡುತ್ತೇನೆಂದು ಅಧ್ಯಕ್ಷರು ಚಿತ್ತದಿಂದ ಭೂಮಿಯು ದಾನ ಪತ್ರ ಬರೆದು ವಿನೋಭಾ ಭಾವೆಯವರಿಗೆ ಕಳುಹಿಸುವ ನಿರ್ಣಯವಾಯಿತು ಕಂಟ್ರೋಲ್‌ನಿಂದ ಅಕ್ಕಿ ಪಡೆದು ಸಹಕಾರಿ ಸಂಘದ ಮೂಲಕ ಬಡವರಿಗೆ ಹಂಚುವ ವ್ಯವಸ್ಥೆ ಮಾಡಬೇಕೆನ್ನುವ ನಿರ್ಧಾರವಾಯಿತು.

ಕಿರೀಟ ಧಾರಣ ಸಮಾರಂಭದ ವೇಳೆ ಸಾರ್ಜೆಂಟ್ ಧರಿಸುವ ರತ್ನಖಚಿತವಾದ ರಾಜದಂಡ.

ಚಂದಾದಾರರಲ್ಲಿ ವಿನಂತಿ

ವಿಳಾಸ ಬದಲಾದೊಡನೆ ದಯವಿಟ್ಟು ತಿಳಿಸಿರಿ.

ಚಂದಾಹಣವನ್ನು ಸಕಾಲದಲ್ಲಿ ಕಳುಹಿಸಿ ಪ್ರೋತ್ಸಾಹಿಸಿರಿ.

ಚಂದಾದಾರಿಕೆಯನ್ನು ಮುಂದುವರಿಸುವ ಇಚ್ಛೆಯಿಲ್ಲವಾದರೆ ಹಾಗೆಯೇ ತಿಳಿಸಿರಿ. ಆದರೆ ಹಾಗೆ ತಿಳಿಸುವಾಗ ಚಂದಾಹಣ ಬಾಕಿ ಇದ್ದರೆ ಅದನ್ನಾದರೂ ಕೊಟ್ಟು ಸಹಕರಿಸಿರಿ.

ನಾವು ಕಾರ್ಡು ಬರೆದು, ನೀವು ಮೌನವಾಗಿದ್ದು ಮತ್ತೆ ನಾವು ವಿ. ಪಿ. ಕಳಿಸಿದರೆ ಅದನ್ನು ದಯಮಾಡಿ ಇನ್ಕಾರು ಮಾಡಬೇಡಿರಿ. ವಿ. ಪಿ. ಮಾಡಬಾರದಾಗಿದ್ದರೆ ಮುಂದಾಗಿ ಸೂಚಿಸಿರಿ.

ಮೆನೇಜರ್

ಬಾಲಚಂದ್ರ

ಶಿಕ್ಷಣ ಸಂಬಂಧವಾದ ಮಾಸಪತ್ರಿಕೆ

ಸ್ಥಾಪಕರು:
ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ. ಎಲ್. ಟಿ

ಸಂಪಾದಕರು:
ಕೆ. ಆರ್ ಶೆಣೈ ಮತ್ತು ಕೆ ಎಚ್. ಶೆಟ್ಟಿ

ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯಾವಶ್ಯಕವಾದ ಪತ್ರಿಕೆ.

ವಾರ್ಷಿಕ ಚಂದಾ ರೂ. 3-0-0

ಮೆನೇಜರ್,
ಬಾಲಚಂದ್ರ, ಉಡುಪಿ

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ. ಎ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್ ಲಾ, ಎಫ್. ಆರ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

— ನಡಿಯುವ ಚಿತ್ರ —

ಸಿನ್ನರ್ ಆಫ್ ಮ್ಯಾಗ್ಡಾಲಾ

ತಾ. 4-6-53ರಿಂದ

ನಗದವರನ್ನು ನಗಿಸುವ ಹಾಸ್ಯಮಯ ಚಿತ್ರ

ಗುಮಾಸ್ತಾ (ಹಿಂದಿ)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಉಡುಪಿಯ ಪ್ರಥಮ ವಸತಿ ಮತ್ತು ಉಪಾಹಾರಗೃಹ ಯಾವುದೆಂದು ಬಲ್ಲಿರಾ?

ಸುಪಿ ನಿವಾಸ

(ತಾಲೂಕು ಕಚೇರಿ ಬಳಿ)

ಅಂದಿನಿಂದ ಇಂದಿನ ವರೆಗೂ ಪ್ರಥಮ ದರ್ಜೆಯ ಹೋಟೆಲಾಗಿ ಜನಪ್ರಿಯವಾಗಿ ಜನಸೇವೆ ಮಾಡುತ್ತದೆ

ಎಚ್. ವೆಂಕಟೇಶ ನಾಯಕ್,
ಮ್ಯಾಲಕ

ಇಂದು ನಮ್ಮ ನಾಡಿನಲ್ಲಿ ತೋರಿಕೆಯ ಪ್ರಜಾ ಪ್ರಭುತ್ವವು ನಡೆಯುತ್ತಿದೆ. ಅಂದರೆ ಸ್ವರಾಜ್ಯದ ಅರಿವು ಎಲ್ಲ ಪ್ರಜೆಗಳವರೆಗೂ ಬೆಳಗಿ ಮುಟ್ಟಲಿಲ್ಲ. ಈ ಬಗ್ಗೆ ಜನತೆಗಾಗಲೀ ಯಾ ಜನತಾ ಪ್ರತಿನಿಧಿಗಳಿಗಾಗಲೀ ದೋಷ ಕೊಟ್ಟು ಫಲವಿಲ್ಲ. ಎರಡುನೂರು ವರ್ಷಗಳ ಬ್ರಿಟಿಷರ ಗುಲಾಮಗಿರಿಯನ್ನು ಕಳೆದು ಇಂದು ನಮ್ಮನಾಡು ತಲೆ ಎತ್ತಿ ನಿಂತಿದೆ. ಪ್ರಜಾರಾಜ್ಯವು ರಾಜ್ಯಭಾರ ನಡೆಸುತ್ತಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ನೆಹರೂರವರ ಬದಲಾಗಿ ಜಯಪ್ರಕಾಶರು ಗದ್ದುಗೆಯನ್ನೇರಿದರೂ ಸಮಾಜದ ರಚನೆಯಲ್ಲಿ ಒಮ್ಮೆಗೆಯೇ ಬದಲಾವಣೆಯಾಗುವುದು ಶಕ್ಯವಿಲ್ಲ.

ಇಂದು ಸಮಾಜದಲ್ಲಿ ಪಕ್ಷಪಂಗಡಗಳು ವ್ಯಾಪಕಗೊಂಡಿವೆ. ಅವು ತಮ್ಮ ಗುರಿ ಸಾಧಿಸುವುದಕ್ಕಾಗಿ ಸಾಮ್ರಾಜ್ಯವಾದ, ಪೂಂಜೀವಾದ ಸಾಮ್ಯವಾದ ಸಮತಾವಾದ ಮೊದಲಾದ ವಾದಗಳನ್ನು ಮುಂದುಮಾಡಿ ಈ ವಾದಗಳ ಬೇಲಿಯಿಂದ ಜನತೆಯನ್ನು ತಮ್ಮ ಕಡೆಗೆ ಎಳೆಯುವ ಪ್ರಯತ್ನದಲ್ಲಿ ಮಗ್ನವಾಗಿವೆ. ಇಂದು ಸಮಗ್ರ ಜಗತ್ತು ವಿಜ್ಞಾನದಿಂದ ಬಹಳ ಪ್ರಗತಿ ಸಾಧಿಸಿದೆ. ಶಾಸ್ತ್ರೀಯ ಶೋಧನೆಯಿಂದ ವಿಶಾಲವಾದ ವ್ಯಾಪಕ ಜಗತ್ತು ಚಿಕ್ಕದಾಗಿದೆ. ಜಗತ್ತಿನ ಮೂಲೆ ಮೂಲೆಗಳಲ್ಲಿಯ ರಾಷ್ಟ್ರಗಳು ಒಂದನ್ನೊಂದು ಸಮೀಪಿಸಿವೆ. ವಾದಗಳ ಪ್ರೋತ್ಸಾಹನದಿಂದ ವಿಜ್ಞಾನದ ಪ್ರಗತಿಯಿಂದ ದೇಶಗಳು ಒಂದನ್ನೊಂದು ಆಲಿಂಗನೆ ಮಾಡಲು ಸಮೀಪಿಸುತ್ತಿವೆ. ಆದರೆ ಇಂದಿನ ಈ ಆಲಿಂಗನವು ರಾಮ ಭರತರಂತೆ ಪ್ರೇಮದ ಆಲಿಂಗನೆಯಲ್ಲ. ಇದು ಶಿವಾಜಿ ಅಫಜಲಖಾನರ ಆಲಿಂಗನೆಯಂತೆ ಮೋಸದ ಆಲಿಂಗನೆಯಾಗಿದೆ, ಯುದ್ಧಖೋರ ಎಂದು ಜಟ್ಟಿಗಳ ಆಲಿಂಗನೆಯಾಗಿದೆ. ಇಂದು ಶಿವಾಜಿ ಅಫಜಲಖಾನರ ಆಲಿಂಗನೆಯನ್ನು ರಾಮ ಭರತರ ಆಲಿಂಗನೆಯನ್ನಾಗಿ ಪರಿವರ್ತನೆಗೊಳಿಸಬೇಕಾಗಿದೆ.

ನಾಶ ವಿಜ್ಞಾನಗಳ ಬೇಗೆಯಿಂದ ಬೆಂದು ಬೇಸತ್ತ ಜಗತ್ತು ಇಂದು ಭಾರತ ವರ್ಷದ ಕಡೆಗೆ ತನ್ನ ದೀನ ದೃಷ್ಟಿಯಿಂದ ನೋಡುತ್ತಿದೆ. ಹಿಂದೆ ಸಮಾಜದಲ್ಲಿ ನರಬಲಿ ಪ್ರಾಣಿಬಲಿ ಹಾಗೂ ಯಜ್ಞಯಾಗಾದಿಗಳು ವಿಕೋಪಕ್ಕೆ ಹೋಗಿ ಮುಟ್ಟಿದ್ದವು. ಇಂಥ ಸನ್ನಿವೇಷದಲ್ಲಿ ಜಗತ್ತಿಗೆ ಸುಖ ಶಾಂತಿಯ ದಾರಿ ತೋರಿಸಲು ಭಗವಾನ್ ಬುದ್ಧನ ಅವತಾರವು ನಮ್ಮ ನಾಡಿನಲ್ಲಿಯೇ ಆಯಿತು. ಸಮಾಜದಲ್ಲಿ ನಡೆಯುತ್ತಿರುವ ಹಿಂಸೆಯ ತಾಂಡವವನ್ನು ಆತನು ಕೊನೆಗೊಳಿಸಿದನು. ಜನತೆಗೆ ಅಹಿಂಸೆಯ ಸಾರವನ್ನು ಕಲಿಸಿ ಸಮಾಜಕ್ಕೆ ಸುಖಶಾಂತಿಯ ಮಾರ್ಗ ದರ್ಶನ ಮಾಡಿದನು.

ಸಂದರ್ಶಿಸಿರಿ!
ಸಂತೃಪ್ತಿ ಪಡೆಯಿರಿ!
ಶ್ರೀ ಕೃಷ್ಣ ಕೆಫೆ
ಗವಿ ಓಣಿ.
•
ಶಾರದಾ ಭವನ
ಕಮರಿ ಪೇಟೆ
ಹುಬ್ಬಳ್ಳಿ.

The New Karnataka Provident Insurance Company Ltd

The Register of members and share transfer books of the Company will remain closed from the 15th June 1953 to 19th July 1953 (both days inclusive)

(By order of the Board)

UDIPI,) 24-4-'53) M. H Shetty, Manager

ಸಂತ ವಿನೋಬಾ ಭಾವೆಯವರಿಂದ

ಸಮಾಜದ ವಿಷಮತೆಯನ್ನು ನೀಗಲು ಮೂರನೆಯ ಮಾರ್ಗದ ಆವಿಷ್ಕಾರ

(ಶ್ರೀ ... ವಿನೋಬಾ ಸಹಯಾತ್ರಿ, ಭೂದಾನಯಜ್ಞ ಕಮಿಟಿ ಕುಂದಾಪುರ)

ಕಾಲವು ಕಳೆಯಿತು ಸಮಾಜದಲ್ಲಿ ಹಿಂಸೆಯು ಕಮ್ಮಿಯಾಯ್ತು. ಆದರೆ ರಾಜಕಾರಣದಲ್ಲಿ ಹಿಂಸೆಯ ಪ್ರಾಧಾನ್ಯತೆಯು ವಿಕೋಪಕ್ಕೆ ಹೋಗಿ ಮುಟ್ಟಿತು. ಸಶಸ್ತ್ರ ಯುದ್ಧದ ಹೊರತಾಗಿ ರಾಜ್ಯವು ಹಸ್ತಾಂತರವಾಗುವ ರೀತಿಯನ್ನೇ ಜಗತ್ತು ಅರಿಯದಾಗಿತ್ತು. ಇಂಥ ಸಮಯದಲ್ಲಿಯೇ ಮಹಾತ್ಮ ಗಾಂಧಿಯವರ ಜನ್ಮವು ನಮ್ಮಲ್ಲಿಯೇ ಆದುದು. ಅವರು ರಾಜಕಾರಣದಲ್ಲಿ ಅಹಿಂಸೆಯ ಕಾರ್ಯಾಚರಣೆ ಮಾಡಿದರು. ಸೂರ್ಯಾಸ್ತವಾಗದ ಸಿಂಹಾಸನದ ಅಲ್ಲದೆ ಸೋಲರಿಯದ ಸುಸಜ್ಜಿತ ಸೈನ್ಯ ಮತ್ತು ವ್ಯವಸ್ಥಿತವಾಗಿ ನಡೆಯುತ್ತಿರುವ ಬ್ರಿಟಿಷ ಸಾಮ್ರಾಜ್ಯದಿಂದ ಅಹಿಂಸಾತ್ಮಕವಾಗಿ ಭರತ ಭೂಮಿಯನ್ನು ಸ್ವಾತಂತ್ರ್ಯಗೊಳಿಸಿದರು. ಇದರಿಂದಾಗಿ ಜಗತ್ತಿನ ಮುಂದಿದ್ದ ಬಹು ದೊಡ್ಡ ಜಟಿಲ ಸಮಸ್ಯೆಯು ಅಹಿಂಸಾತ್ಮಕವಾಗಿ ಬಿಡಿಸಲ್ಪಟ್ಟಿತು. ಹೀಗೆ ಜಗತ್ತಿನ ಇತಿಹಾಸದಲ್ಲಿಯೇ ಅಹಿಂಸೆಯ ಧ್ವಜವನ್ನೇರಿಸಿ ಅಮರಗೊಳಿಸಿ ಮಹಾತ್ಮರು ಅಮರರಾದರು.

ಇಂದು ನಾಶದ ವಿಜ್ಞಾನಗಳಿಂದ ಬೆಂದು ಬೇಸತ್ತ ಜಗತ್ತಿಗೆ ಸಂತ ವಿನೋಬಾ ಭಾವೆಯವರು ಹೊಸಮಾರ್ಗವನ್ನು ತೋರಿಸುತ್ತಿದ್ದಾರೆ. ಇಂದು ಸಂತ ಪುರುಷರ ಸತತ ಚಿಂತನೆಯಿಂದ "ಭೂದಾನ ಯಜ್ಞ" ಎನ್ನುವ ಯೋಜನದ ಆವಿಷ್ಕಾರವಾಗಿದೆ. ಭೂದಾನ ಯಜ್ಞವು ಎಲ್ಲ ವಾದಗಳನ್ನು ಮೀರಿರುತ್ತದೆ. ವಾದವು ಪ್ರತಿ ಪಕ್ಷೀಯ ಕಲ್ಯಾಣವನ್ನು ಬಯಸುವುದಿಲ್ಲ. ಆದರೆ ವಿನಾಶವನ್ನು ಇಚ್ಛಿಸುತ್ತದೆ. ಈ ಆಂದೋಲನವು ಒಂದನ್ನೊಂದು ಪರಸ್ಪರ ಪ್ರೇಮದಿಂದ ಒಂದುಗೂಡಿಸುವ ಯೋಗವಾಗಿದೆ. ಇದು

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ. 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45¼ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ 3 ಕೋಟಿಯನ್ನು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೊಲಿಸಿ ಇರುವುದು ಉತ್ತಮ ರೇವದಾತಿ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ –

ಜಿ. ಆರ್. ಮಾಲ್ಯ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ]

ಹೊಸಕೆರೆ ಚಿದಂಬರಯ್ಯನವರ

ಕನ್ನಡದಲ್ಲಿ ಭಗವದ್ಗೀತೆಯ ಸಮೂಲ ಶ್ಲೋಕ ಮತ್ತು ಅನುವಾದ.

ಬೆಲೆ 0—12—0

ನವಯುಗ ಪ್ರೆಸ್, ಉಡುಪಿ.

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಗವಂತನ ಆದೇಶದಂತೆ ಅಧ್ಯಾತ್ಮ ತಳಹದಿ ಮೇಲೆ ನಡೆಯುವ ಆಂದೋಲನವಾಗಿದೆ. ವಿಸ್ತಾರೀ ಸಂಕೇತ, ಕಾಲದ ಕರೆ, ಜನತೆಯ ಕೂಗು ಈ ಮೂರರ ತ್ರಿವೇಣಿ ಸಂಗಮವೇ ಭೂದಾನ ಯಜ್ಞವಾಗಿದೆ.

ಪ್ರಚಲಿತ ಸಮಾಜ ಪದ್ಧತಿಯಲ್ಲಿ ವಿಷಮತೆಯನ್ನು ನೀಗಲು ಎರಡು ಮಾರ್ಗಗಳಿವೆ. ಒಂದನೆಯದು ಕೊಲೆಯದೀತಿ. ಎರಡನೆಯದು ಕಾಯಿದೆಯ ಪದ್ಧತಿಯು. ಮಾನವ ಸೃಷ್ಟಿಯು ಇಷ್ಟು ಕಾಲದ ಅನುಭವದಿಂದ ಸಮಾಜದಲ್ಲಿ ಕೊಲೆಯ ಮಾರ್ಗವು ತಿರಸ್ಕರಿಸಲ್ಪಟ್ಟಿದೆ. ಅಂದರೆ ಈ ಮಾರ್ಗದಿಂದ ಮನುಷ್ಯನು ಮನುಷ್ಯನನ್ನೇ ನಾಶಗೊಳಿಸುತ್ತಾನೆ. ಈ ಮಾರ್ಗವು ಮಾನವನಲ್ಲಿರುವ ಮನುಷ್ಯತ್ವಕ್ಕೆ ವಿಸಂಗತವಾದ ಸಂಗತಿಯಾಗಿದೆ. ಇಂದಿನ ಸುಧಾರಿಸಿದ ಸಮಾಜಕ್ಕೆ ಇದು ಶೋಭಿಸುವ ವಿಷಯವಲ್ಲ. ಇದು ಮುಂದರಿದ ಮಾನವ ಸಮಾಜವನ್ನು ಹಿಂದಕ್ಕೊಯ್ದು ವನ್ಯ ಪಶುಗಳ ಸಾಲಿಗೆ ಮುಟ್ಟಿಸುವ ಕಾರು ಸಂಸ್ಕೃತಿಗೆ ಒಪ್ಪುವ ವಿಷಯವಾಗಿದೆ.

ಇನ್ನು ಎರಡನೆಯದಾದ ಕಾಯ್ದೆಯ ಮಾರ್ಗವು ಅಪೂರ್ಣವಾಗಿದೆ. ಇದಕ್ಕೆ ಸ್ವಂತ ಅಸ್ತಿತ್ವವೇ ಇಲ್ಲ. ಉದಾ:- ಇಂದಿನ ಸರಕಾರವು ಘೋಸಬಂದಿ, ಶಾರದಾ ಬಿಲು ಮೊದಲಾದ ಕಾನೂನನ್ನು ಮಾಡಿದೆ. ಸರಕಾರೀ ದೃಷ್ಟಿಯಿಂದ ಅವುಗಳು ಅಮಲಿನಲ್ಲಿ ಬಂದಿವೆ. ಆದರೆ ಇಂದು ಸಮಾಜದಲ್ಲಿ ಅವು ವ್ಯವಸ್ಥಿತವಾಗಿ ಅಮಲಿನಲ್ಲಿ ಬರಲಿಲ್ಲ. ಎಲ್ಲಿಯವರೆಗೆ ಸಮಾಜದಲ್ಲಿ ಅನುಕೂಲ ಪರಿಸ್ಥಿತಿ ಇರುವುದಿಲ್ಲವೊ ಅಲ್ಲಿಯವರೆಗೆ ಕಾಯ್ದೆಯ ಅಮಲಬಜಾವಣೆಯಾಗಲಾರದು.

ಸಂತ ವಿನೋಬಾ ಭಾವೆಯವರ ಸತತ ಚಿಂತನೆಯಿಂದ ಇಂದು ಮೂರನೆಯ ಮಾರ್ಗದ ಬಾಗಿಲು ತೆರೆದಿದೆ. ಇಂದಿನ ಪರಿಸ್ಥಿತಿಯಲ್ಲಿ ಸಮಾಜದಲ್ಲಿಯ ವಿಷಮತೆಯನ್ನು ನಾಶಿಸಲು ಭೂದಾನ ಯಜ್ಞ ಆಂದೋಲನವು ಒಂದು ತಾರಕ ಮಂತ್ರವಾಗಿದೆ. ಇದು ಪ್ರೇಮ ಪ್ರೇಮದಿಂದ ಪರಸ್ಪರ ಪ್ರೀತಿಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಕಲ್ಯಾಣ ಮಾಡುವ ಹಾಗೂ ಇಬ್ಬರಿಗೂ ಹಿತವೀಯುವ ಮಾರ್ಗವಾಗಿಯದೆ. ಈ ಮಾರ್ಗಕ್ಕೆ ಪ್ರತಿಕ್ರಿಯೆಯ ಭಯವಿಲ್ಲ. ಮೊದಲನೆ ಎರಡೂ ಮಾರ್ಗಗಳಿಗೂ ಪ್ರತಿಹಿಂಸೆ ಪ್ರತಿಕ್ರಿಯೆಯ ಅಂಜಿಕೆಯು ಇದ್ದೇ ಇರುತ್ತದೆ. ಈ ಮಾರ್ಗಕ್ಕೆ ಪ್ರತಿ ಹಿಂಸೆ ಪ್ರತಿಕ್ರಿಯೆಯ ಬದಲಾಗಿ ಪ್ರತಿಪ್ರೇಮವಿದೆ. ಇದು ಶುದ್ಧ ಪ್ರೇಮದಿಂದ ಪ್ರೇತಾಧಿಕಾರಿಗಳಿಂದ ಇಬ್ಬರನ್ನು ಸತ್ಯದ ಕಡೆಗೆ ಕೊಂಡೊಯ್ಯುವ ಸಂದಾಧೀಶನಾಗಿದೆ. ಸದಾಚಾರದಿಂದ ಸತ್ ಪ್ರವೃತ್ತಿಯಿಂದ ಇಬ್ಬರನ್ನು ಪ್ರೇಮದಿಂದ ಒಂದುಗೂಡಿಸುವ ತಾರಕ ಸೂತ್ರವಾಗಿದೆ. ಕಾಲದ ಕರೆಗನುಸರಿಸಿ ಸಂತ ಪುರುಷರ ಸತತ ಚಿಂತನೆಯಿಂದ ಹೊರಟ ಈ ಮೂರನೆಯ ಮಾರ್ಗವು ಈಗ ಮಿಂಚಿನ ವೇಗದಿಂದ ದೇಶಾದ್ಯಂತ ಪ್ರಚಾರಗೊಳ್ಳುತ್ತಲಿದೆ.

ಬ್ರಿಟಿಷರು ಚಕಿತಿಯಿಂದ ರಾಜ್ಯ ಬಿಟ್ಟುಕೊಟ್ಟು ಹಿಂದುಸ್ಥಾನದ ಪ್ರೇಮ ಗಳಿಸಿಕೊಂಡರು. ಸಮಸ್ತ ಸಂಸ್ಥಾನಾಧಿಪತಿಗಳು ರಾಜ್ಯ ಬಿಟ್ಟುಕೊಟ್ಟು ಗೌರವ ಉಳಿಸಿಕೊಂಡರು. ರಾಜ್ಯದ ಮೋಹ ಬಿಡದ ಜುನಾಗಡದ ನವಾಬನನ್ನು ಪ್ರಜೆಗಳು ರಾಜ್ಯ ಭ್ರಷ್ಟಗೊಳಿಸಿದರು. ಆತನು ಜೀವ ಉಳಿಸಿಕೊಳ್ಳಲು ಪಾಕಿಸ್ಥಾನ ಸೇರಬೇಕಾಯ್ತು.

ಇಂಥ ಸಮಯದಲ್ಲಿ ನಮ್ಮಲ್ಲಿಯ ಭೂಮಾಲಿಕರಿಗೆ ತಮ್ಮನ್ನುಳಿಸಿಕೊಳ್ಳಲು ಭೂದಾನ ಯಜ್ಞವು ಸಂತ ವಿನೋಬಾರವರು ಕೊಟ್ಟ ಕೃಪಾಛತ್ರವಾಗಿದೆ. ಈ ಸುವರ್ಣಾವಕಾಶದ ಸದುಪಯೋಗ ಪಡೆದು ಭೂಮಾಲಿಕರು ಕೃತಾರ್ಥರಾಗಲೆಂಬೇ ಭಗವಂತನ ಆದೇಶ. ಈ ಸ್ವಿವೇಕದ ಲಾಭಪಡೆಯದಿದ್ದರೆ ಜುನಾಗಢದ ನವಾಬನ ಅವಸ್ಥೆಯನ್ನು ಭೂಮಾಲಿಕರಿಗೆ ಒದಗಿದರೆ ಆಶ್ಚರ್ಯಪಡಲಾಗದು.

ಕಾಲವು ನಮಗಾಗಿ ಕಾಯುವುದಿಲ್ಲ. ನಮ್ಮಲ್ಲಿಯ ಭೂಮಾಲಿಕರು ಕಾಲದ ಕರೆಗನುಗುಣವಾಗಿ ಇದೀಗ ಮುಂದೆ ಬಂದು ಈ ಯಜ್ಞ ಕಾರ್ಯದಲ್ಲಿ ತಮ್ಮ ಭೂಮಿಯ ನ್ಯಾಯದ ಪಾಲಿನ ಮೇಲುತನವನ್ನು ಅರ್ಪಿಸಿಕೊಟ್ಟು ಸಂತ ವಿನೋಬಾ ಭಾವೆಯವರ ಆಶೀರ್ವಾದ ಪಡೆಯಲೆಂದೇ ಜನತೆಯ ಹಾರೈಕೆ.

ಕೊರೊನೇಶನ್ ದರ್ಬಾರಿನಲ್ಲಿ ನೋಡಸಿಕ್ಕುವ ವಜ್ರಖಚಿತ ಕಿರೀಟ

ಆಫ್ರಿಕದ ಅತ್ಯಪೂರ್ವ 516½ ಕ್ಯಾರೆಟ್ ಭಾರವುಳ್ಳ ವಜ್ರವು ಏಳನೆ ಎಡ್ವರ್ಡ್ ದೊರೆಗೆ ಪಾರಿತೋಷವಾಗಿ ಕೊಡಲ್ಪಟ್ಟಿತ್ತು. ಅದು ಇಂದಿಗೂ ಬ್ರಿಟಿಷ್ ಕಿರೀಟದಲ್ಲಿ ರಾರಾಜಿಸುತ್ತಿದೆ.

(೫ನೇ ಪುಟದಿಂದ)

ವಿಕಾರವನ್ನು ನೋಡಿ ನಗು ಬರುತ್ತದೆಂದು ಕಾವಲಿನ ಅಧಿಕಾರಿಗಳು ಹೇಳುವುದುಂಟು. ಇದರಂತೆ ಕಾವಲಿನ ಸಾಧನಗಳೆಲ್ಲ ಸರಿಯಾಗಿವೆಯೋ ಇಲ್ಲವೋ ಎಂಬುದನ್ನು ತಿಳಿಯುವ ಹಂಚಿಕೆಯೂ ಆಕಸ್ಮಿಕವಾಗಿ ಒಮ್ಮೊಮ್ಮೆ ನೆರವೇರುತ್ತದೆ. ಕಳೆದ ಅಕ್ಟೋಬರದಲ್ಲಿ ನಡೆದ ಪ್ರಸಂಗವೊಂದನ್ನು ಇಲ್ಲಿ ಉಲ್ಲೇಖಿಸಬಹುದು. ಗೋಪುರದ ಭಯಸೂಚಕ ಗಂಟೆಯನ್ನು ಬಾರಿಸಿದುದನ್ನು ಕೇಳಿ ಎಲ್ಲ ಸಂರಕ್ಷಣಾ ಸಾಧನಗಳೂ ಆ ಕಡೆ ಓಡಿ ಬಂದವು. ಬಂದ ಮೇಲೆ ಗಂಟೆಯು ಬಾರಿಸುವಿಕೆ ಕೇವಲ ಆಕಸ್ಮಿಕವೆಂದು ತಿಳಿಯಿತು. ಇದರಂತೆ ಆರನೇ ಜಾರ್ಜರ ಕಿರೀಟಧಾರಣ ಮಹೋತ್ಸವದ ಮೂರು ತಿಂಗಳ ಅನಂತರ ನಡೆದ ಒಂದು ಘಟನೆಯೂ ಮೋಜಿನದು. ಒಂದು ಫ್ಯೂಸ್ ಪೆಟ್ಟಿಗೆ ಉರಿದು ಹೋದುದರಿಂದ ಎಲ್ಲ ದೀಪಗಳೂ ನಂದಿದವು. ಒಂದು ಉಕ್ಕಿನ ಪದಾರ್ಥವು ಆಭರಣಗಳ ಮೇಲೆ ಬಿದ್ದುಬಿಟ್ಟಿತು. ಈ ಸಪ್ಪಳ ಕೇಳಿದೊಡನೆಯೇ ಒಬ್ಬ ವಿಶೇಷ ಕಾವಲಿಗನನ್ನು ಅಲ್ಲಿ ನಿಲ್ಲಿಸಿ, ಉಳಿದೆಲ್ಲರೂ ಮದ್ದು ತುಂಬಿದ ಕೋವಿಗಳನ್ನು ಹಿಡಿದುಕೊಂಡು ಸುತ್ತಲೂ ಧಾವಿಸಿದರು. ಆಭರಣಗಳನ್ನು ನೋಡಲೆಂದು ಬಂದ ಸಂದರ್ಶಕರನ್ನು ದೂರ ಕಳಿಸಲಾಯಿತು. ಗೋಪುರದ ಒಳಗಿದ್ದವರಲ್ಲಿ ಯಾರನ್ನೂ ಹೊರಗೆ ಹೋಗಗೊಡದೆ ಕಾವಲು ನಿಂತರು. ಆ ಸ್ಫೋಟನದ ಶಬ್ದ ಕೇಳಿದುದರಿಂದ ಬೆಂಕಿ ನಂದಿಸುವ ಇಂಜಿನುಗಳು ಓಡಿ ಬಂದವು. ಆದರೆ ಎಲ್ಲವನ್ನು ಚೆನ್ನಾಗಿ ಪರಿಶೀಲಿಸಿದಾಗ, ಏನೂ ಅವಾಂತರವಾಗಿಲ್ಲೆಂದೂ ಕೇವಲ ಫ್ಯೂಸ್ ಉರಿದು ಹೋಯಿತೆಂದೂ ತಿಳಿಯಿತು. ಏನಪ್ಪಾ, ಏನು ಚಮತ್ಕಾರ ನಡೆಯಿತು? ಎಂದು ಕೊರಳೆತ್ತಿ ನೋಡುತ್ತಿದ್ದವರಿಗೆ ಇಷ್ಟು ತುಚ್ಛವಾದ ಸ್ಪಷ್ಟೀಕರಣದಿಂದ ಮುಖಕ್ಕೆ ತಣ್ಣೀರಿನ ಚಿದಂತಾಯಿತು.

ಕಳ್ಳತನದ ಚಮತ್ಕಾರ

ಈ ಅಮೂಲ್ಯ ರತ್ನಾಭರಣಗಳನ್ನು ಕಂಡು, ಮೋಹಿಸಿ, ಕದ್ದುಕೊಳ್ಳಲು ಬಯಸಿದ ಉದಾಹರಣೆ ಇಲ್ಲವೆಂದಲ್ಲ—ಎರಡನೇ ಚಾರ್ಲ್ಸನ ಕಾಲದಲ್ಲಿ ಕರ್ನಲ್ ಬ್ಲಡ್ ಎಂಬಾತನು ಈ ಒಡವೆಗಳನ್ನು ಅಪಹರಿಸುವ ಪ್ರಯತ್ನ ಮಾಡಿದ್ದಾನೆಂದು ಒಂದು ವದಂತಿ ಇರುತ್ತದೆ. ಇವನು ಒಳ್ಳೆ ಅದೃಷ್ಟವಂತನಾದ ಸೈನಿಕನಾಗಿದ್ದ. ಆದರೆ ಚಾರ್ಲ್ಸ್ ಅರಸನ ಪುನಃ ಪ್ರಸ್ಥಾಪನೆಯ ದಿನದಿಂದ ಅವನನ್ನು ದುರಾದೃಷ್ಟ ಪೀಡಿಸತೊಡಗಿತು. ಇದರಿಂದ ಪಾರಾಗ ಬಯಸುವ ಹಂಚಿಕೆ ಎಂಬುದಾಗಿ ರಾಜಭಂಡಾರದ ಈ ಅಮೂಲ್ಯ ಆಭರಣಗಳನ್ನು ಕದಿಯಲು ಮನಸ್ಸು ಮಾಡಿದ. ಗೋಪುರದ ಕಾವಲಿಗನಾಗಿ ನಂಬಿಗಸ್ಥನಾದ ಎಡ್ವರ್ಡ್ಸನೆಂಬ ಮುದುಕನು ಮಾತ್ರ ಇರುವನೆಂಬುದನ್ನು ಇವನು ತಿಳಿದುಕೊಂಡ, ೧೬೭೧ರ ವಸಂತ ಕಾಲದಲ್ಲಿ ಒಬ್ಬ ಪಾದ್ರಿಯ ವೇಷದಲ್ಲಿ, ಹೆಂಗಸೊಬ್ಬಳ ಜೊತೆಗೆ ಅವನು ಗೋಪುರಕ್ಕೆ ಬಂದು ತನಗೆ ಆಭರಣಗಳನ್ನು ನೋಡುವ ಬಯಕೆ ಇದೆಯೆಂದು ಹೇಳಿದ. ಈ ಸಂದರ್ಶನ ಕಾಲದಲ್ಲಿ ಹೆಂಗಸು ಅಸ್ವಸ್ಥಗೊಂಡಂತೆ ನಟಿಸಿದಳು. ಎಡ್ವರ್ಡ್ಸನೂ ಅವನ ಹೆಂಡತಿಯೂ ಹತ್ತಿರದ ಊಟದ ಹೋಟೆಲಿಗೆ ಕರೆದುಕೊಂಡು ಹೋಗಿ ಅವಳ ಶುಶ್ರೂಷೆ ಮಾಡಿದರು. ಇದಕ್ಕೋಸ್ಕರ ಬ್ಲಡ್ಡನು ತುಂಬ ಕೃತಜ್ಞತೆಯನ್ನು ತೋರಿಸಿದ. ಒಂದೆರಡು ದಿನಗಳಲ್ಲಿ ತನ್ನ ಹೆಂಡತಿಯ ಸೇವೆ ಮಾಡಿದುದಕ್ಕೆ ಪ್ರತಿಯಾಗಿ ಕಾಣಿಕೆ ಎಂದು ಒಂದು ಡಜನು ಗ್ಲೋವ್ಸಿನ ಜೊತೆಯನ್ನು ಎಡ್ವರ್ಡ್ಸನ ಹೆಂಡತಿಗೆ ಕೊಟ್ಟ. ಹೀಗೆ ಮೈತ್ರಿ ಬೆಳೆಯಿತು. ಬ್ಲಡ್ಡನ ಸಲಹೆಯಂತೆ ಅವನ ಸೋದರಳಿಯನೊಬ್ಬನಿಗೆ ಎಡ್ವರ್ಡ್ಸನ ಮಗಳನ್ನು ಕೊಟ್ಟು ವಿವಾಹ ಮಾಡಿ ಆತ್ಮೀಯತೆಯನ್ನು ಚಿರಸ್ಥಾಯಿಯಾಗಿಸುವ ಹವಣಿಕೆಯೂ ನಡೆಯಿತು. ಒಂದು ಮುಂಜಾನೆ ಏಳು ತಾಸಿಗೆ ಮೂವರು ಕದೀಮರನ್ನು ಬ್ಲಡ್ಡನು ತನ್ನ ಜೊತೆಯಲ್ಲಿ ಕರೆತಂದು, ಇವರಲ್ಲಿ ಒಬ್ಬನು ತನ್ನ ಅಳಿಯನೆಂದೂ ಮತ್ತಿಬ್ಬರು ಸ್ನೇಹಿತರೆಂದೂ ಪರಿಚಯ ಮಾಡಿಸಿದ. ಈ ಸಂದರ್ಭದಲ್ಲಿ ಗೋಪುರದಲ್ಲಿಟ್ಟಿರುವ ಆಭರಣಗಳನ್ನು ನೋಡಲು ಇವರಿಗೆಲ್ಲ ಆಸೆ ಇದೆ ಎಂದು ಹೇಳಿದ. ಬ್ಲಡ್ಡನ ಪ್ರಾಮಾಣಿಕತನದ ಮೇಲೆ ವಿಶ್ವಾಸವಿಟ್ಟ ಎಡ್ವರ್ಡನು ಗೋಪುರಕ್ಕೆ ಇವರನ್ನು ಕರೆದೊಯ್ದಾಗ, ಅವರು ಅವನ ಮೇಲೆ ತಿರುಗಿ ಬಿದ್ದರು. ಎಡ್ವರ್ಡನು ಬೊಬ್ಬೆ ಹಾಕಲು ಪ್ರಯತ್ನಿಸಿದುದನ್ನು ಕಂಡು ಸಾಯಬಡಿದರು. ಈ ಕದೀಮರು ಕಿರೀಟ, ರಾಜದಂಡ ಮುಂತಾದುವನ್ನೆಲ್ಲ ತೆಗೆದುಕೊಂಡು ಹೋಗುವುದರಲ್ಲಿದ್ದಾಗ ಆಕಸ್ಮಿಕವಾಗಿ ಎಡ್ವರ್ಡ್ಸನ ಮಗನೂ ಅಳಿಯನೂ ಅಲ್ಲಿಗೆ ಬಂದರು. ಅವರನ್ನು ದೂರದಿಂದ ಕಂಡ ಎಡ್ವರ್ಡ್ಸನು ಸ್ವಲ್ಪ ಚೇತರಿಸಿಕೊಂಡು ಬೊಬ್ಬೆ ಹಾಕಿದನು. ಎಡ್ವರ್ಡ್ಸನ ಮಗಳು ಭಯಸೂಚಕ ಗಂಟೆಯನ್ನು ಬಾರಿಸಿದಳು. ಅವನ ಅಳಿಯ ಬ್ಲಡ್ಡನನ್ನು ಕೈಹಿಡಿದು ನಿಲ್ಲಿಸಿದ. ಹೀಗೆ ಕಳವಾದ ಆಭರಣಗಳು ಮರಳಿ ದೊರೆತವು. ಅರಸನ ಮುಂದೆ ಬ್ಲಡ್ಡನನ್ನು ನಿಲ್ಲಿಸಿದಾಗ, ಅವನು ತಾನು ಮಾಡಿದ ಅಪರಾಧಕ್ಕೆ ಇಸಿತೂ ಖೇದ ವ್ಯಕ್ತಪಡಿಸಲಿಲ್ಲ. ಬದಲು ಚಾರ್ಲ್ಸನ ಜೀವವನ್ನು ಘಾತಕರಿಗಳಿಂದ ತಾನು ಈ ಹಿಂದೆ ಕನಿಷ್ಠ ಪಕ್ಷ ಒಂದು ಬಾರಿಯಾದರೂ ಉಳಿಸಿರುವೆನೆಂದು ಕತೆ ಕಟ್ಟಿ ಹೇಳಿದ. ಈ ಕಾರಣದಿಂದ ಅರಸನು ಬ್ಲಡ್ಡನನ್ನು ಕ್ಷಮಿಸಿದನಲ್ಲದೆ ಅವನ ದುರವಸ್ಥೆ ಕಂಡು ಐನೂರು ಪವನುಗಳ ಪೆನ್ಶನ್ ಕೊಟ್ಟ. ಪಾಪದ ಎಡ್ವರ್ಡ್ಸನಿಗೂ ಅವನ ಮಗನಿಗೂ ನಿಜವಾಗಿ ಬಹುಮಾನ ಸಿಗಬೇಕಾಗಿತ್ತು! ಆದರೆ, ಅವರಿಗೆ ದೊರೆತುದು ... ತೋಷಕ. ಇದನ್ನು ಎಕ್ಸ್‌ಚೇಕರಿನಿಂದ ಪಡೆಯಲು ತುಂಬ ಕಷ್ಟವಿದ್ದುದರಿಂದ ಕೊನೆಗೂ ಎಡ್ವರ್ಡ್ಸನು ಅದನ್ನು ಅರ್ಧ ಬೆಲೆಗೆ ಬೇರೆಯಾರಿಗೋ ಮಾರಿ ಅಲ್ಪ ತೃಪ್ತನಾಗಿಯೇ ಉಳಿಯಬೇಕಾಯಿತು!

ಲಂಡನ್ ಮತ್ತು ಬರ್ಮಿಂಗಹಾಮ್ ನಗರಗಳಲ್ಲಿ ಎರಡನೆ ಎಲಿಜಬೆತ್ ರಾಣಿಯ ಕಿರೀಟಧಾರಣಾ ಮಹೋತ್ಸವದ ನಿಮಿತ್ತ ಈಚೆಗೆ ಜರಗಿದ ಬ್ರಿಟಿಷ್ ಕೈಗಾರಿಕೆಯ ವಸ್ತುಪ್ರದರ್ಶನ ಸಂತೆಯಲ್ಲಿ ಮಹಿಳೆಯೊಬ್ಬಳು ಗುದ್ದಿ ಕೈಗಾರಿಕೆಗೆ ಬೇಕಾಗುವಷ್ಟು ಮಿಶ್ರಪ್ರ... ಸರಬರಾಯಿ ಮಾಡಬಲ್ಲ ... ಪ್ಲಾಂಟನ್ನು ತೋರಿಸುತ್ತಿರುವಳು.

ಶಾರಂಙ್ಗಧರ ಸಂಹಿತಾ

ಅರ್ಥಸಹಿತ ಅಮೂಲ್ಯ ವೈದ್ಯ ಪುಸ್ತಕ
ಪ್ರಥಮ ಭಾಗ ಮಾತ್ರ 2–3ನೇ ಭಾಗಗಳು ಪ್ರಿಂಟಿನಲ್ಲಿವೆ.
ವ್ಯಾಪಾರಸ್ಥರಿಗೆ ಧಾರಾಳ ಕಮಿಷನ್ ಪುಸ್ತಕದ ಕ್ರಯ ರೂ 1–4–0.
ಹೆಚ್ಚಿನ ವಿವರಕ್ಕೆ ಪತ್ರವ್ಯವಹಾರ ಮಾಡಿರಿ.
ಯಂ. ವಿಷ್ಣು ಬಳ್ಳಿರಾಯ, ಮಾಯಿಪ್ಪಾಡಿ ಪೋಸ್ಟ್, ದ. ಕ.

ದಿ ಬೊಂಬೆಲೈಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂದ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ವಾಸ, ಊಟ, ಉಪಹಾರ, ಬೈಠಕ್, ... ಕ್ಷಣ ...
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ... ನೋಡಿದರೆ
ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್ಟ್

ಕೆಲಸದ ನಡುವೆ—

(೧ನೇ ಪುಟದಿಂದ)

ಮನುಷ್ಯನ ಮನಸ್ಸಿನ ಸಮತೂಕವನ್ನು ಉಳಿಸಿಕೊಳ್ಳುವುದೇ ಮಹತ್ವದ ಸಾಮ್ಯತೆ ಎಂದು ಎಲ್ಲರಿಗೂ ಗೊತ್ತಿದೆ. ಕವಿಯೋರ್ವನು ಸಮರಸವೇ ಜೀವನ ಎಂದು ಕೊರಳೆತ್ತಿ ಹಾಡಿರುವನು ಈ ಸಾಮರಸ್ಯವನ್ನು ಸ್ಥಾಪಿಸುವುದಕ್ಕೆ ನಮಗೆ ಹಲವು ಹವ್ಯಾಸಗಳು ನೆರವಾಗುತ್ತವೆ. ಸಾಮಾನ್ಯವಾಗಿ ಚಲಚ್ಚಿತ್ರ ತಾರೆಯರನ್ನು ಮತ್ತು ಖ್ಯಾತನಾಮರನ್ನು ಭೇಟಿಯಾದಾಗ ನಿಮ್ಮ ಮೆಚ್ಚಿನ ಹವ್ಯಾಸ ಯಾವುದೆಂದು ಕೇಳದೆ ಇರುವುದಿಲ್ಲ. ಡ್ವೈಟ್ ಐಸೆನ ಹಾವರರಂಥ ಸೇನಾಧಿಪತಿ ಕೂಡ ಬ್ರಿಜ್ ಆಡುತ್ತಿದ್ದರು, ಕುದುರೆ ಸವಾರಿ ಮಾಡುತ್ತಿದ್ದರು, ಸುರಸ ಕಾದಂಬರಿ ಓದುತ್ತಿದ್ದರು. ತಮ್ಮ ಕಾರ್ಯಭಾರದ ದೆಸೆಯಿಂದ ಈ ಆಟಗಳ ಕಡೆಗೆ ಗಮನ ಕೊಡಲು ಆಗದೆ ಹೋದಾಗ ಅವರ ಪ್ರಕೃತಿ ಕೆಟ್ಟಿತು. "ನೀವು ನಿಮ್ಮ ವಿರಾಮ ಕಾಲದ ಆಟ ವಿನೋದಗಳನ್ನು ತ್ಯಜಿಸಕೂಡದು ಇದೂ ಒಂದು ಆಜ್ಞೆ" ಎಂದು ಮೇಲಧಿಕಾರಿಗಳು ಎಚ್ಚರಿಸಿದರಂತೆ! ಇದರ ಮೇಲಿಂದ ನಮ್ಮ ಸಾಮಾನ್ಯ ವೃತ್ತಿಯನ್ನು ಬಿಟ್ಟುಳಿದ ಏನಾದರೊಂದು ಕೆಲಸವನ್ನು ಆಟವೆಂದೇ ತಿಳಿದು ಮಾಡುವುದು ಮನಸ್ಸಿನ ಸ್ವಾಸ್ಥ್ಯಕ್ಕೂ ಆರೋಗ್ಯಕ್ಕೂ ಒಳ್ಳೆಯದೆಂದು ಸ್ಪಷ್ಟವಾಗುತ್ತದೆ.

ಹೀಗಿದ್ದರೂ ನಮ್ಮಲ್ಲಿ ಹೊಟ್ಟೆ ಪಾಡಿನ ವ್ಯವಸ್ಥೆ ಮಾಡಿಕೊಡದ ಯಾವ ಹವ್ಯಾಸವೇ ಇರಲಿ-ಅದನ್ನು ತಿರಸ್ಕಾರ ದೃಷ್ಟಿಯಿಂದ ನೋಡುವುದೂ ಅನಾವಶ್ಯಕವೆಂದು ಹೀಗಳೆಯುವುದೂ ಸರ್ವಸಾಮಾನ್ಯವಾಗಿರುತ್ತದೆ. ನಮ್ಮಲ್ಲಿ ಕೆಲಸಗಳು ಮುಗಿದ ಬಳಿಕ ಆಟದ ಚಿಂತೆ ಎಂದು ಹೇಳುವ ಜನರೂ ಅನೇಕ. ಪರಿಣಾಮವಾಗಿ ಅವರಿಗೆ ಆಡುವುದಕ್ಕೆ ಅವಕಾಶವೇ ದೊರೆಯುವುದಿಲ್ಲ. ಕೆಲಸದ ಗೀಳು ಹಿಡಿದವನಿಗೆ ಎಷ್ಟು ಮಾಡಿ ಮುಗಿಸಿದರೂ ಮುಗಿಯದ ಕೆಲಸದ ರಾಶಿ ಇರುತ್ತದೆ. ಇನ್ನು ಕೆಲವರಿಗೆ ಆಟ ವಿನೋದಗಳಿಗಾಗಿ ಹಣ ವೆಚ್ಚ ಮಾಡುವ ಚಿಂತೆ-ಕೆಲಸ ಹಣ ಸಂಪಾದಿಸಿ ಕೊಡುವಾಗ ಈ ಸಂಗತಿಗಳು ಹಣದ ವೆಚ್ಚಕ್ಕೆ ಕಾರಣವಾಗುತ್ತವೆಂದು ಅವರ ದೂರು. ನಾನು ನಾಲ್ಕು ವರ್ಷವಾದರೂ ಒಂದೂ ಸಿನೆಮಾ ನೋಡಿಲ್ಲ-ರಜೆಯಲ್ಲಿ ಮನೆಬಿಟ್ಟು ಹೊರಗೆ ಹೋರಟಿದ್ದಿಲ್ಲ ಎನ್ನುವ ಭೂಪ ತನ್ನ ಮೋಟಾರು ಕಾರಿಗೆ ೩೦೦೦ ಮೈಲು ಪ್ರಯಾಣಿಸಿದ ಬಳಿಕವೂ ಎಣ್ಣೆ ತುಂಬಿಸಲಿಲ್ಲವೆಂದವನಷ್ಟೇ ಬುದ್ಧಿವಂತನಾದದ್ದು!

ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದುವೆಲ್ಲವೂ ಒಬ್ಬನ ಕೆಲಸವಾಗಬಹುದಾದಂತೆ ಆಟವಾಗಿಯೂ ಮಾರ್ಪಾಡಬಲ್ಲವು. ಅದು ಅವನವನ ಮನೋವೃತ್ತಿಯನ್ನೂ ಬಲವನ್ನೂ ಹೊಂದಿಕೊಂಡಿರುತ್ತದೆ. ಮನೋ ವೈಜ್ಞಾನಿಕ ದೃಷ್ಟಿಯಿಂದ ನೋಡಿದರೆ, ಇಂಥ ಹವ್ಯಾಸಗಳು ನಮ್ಮ ಮನಸ್ಸಿನಲ್ಲಿ ತುಂಬಿರುವ ಸುಪ್ತ ಆಶೋತ್ತರಗಳನ್ನು ಪೂರೈಸುತ್ತವೆ. ಚಿತ್ತದ ಕಿಲ್ಬಿಷವನ್ನು ದೂರೀಕರಿಸಿ ಪವಿತ್ರ ಮಾಡುತ್ತವೆ ಮನುಷ್ಯನಲ್ಲಿ ಸಾಹಜಿಕವಾದ ಮೂಲ ಪ್ರವೃತ್ತಿಗಳಿಗೆ ಸ್ವಾಭಾವಿಕವಾದ ನಿರ್ಗಮ ಮಾರ್ಗವನ್ನು ಕಲ್ಪಿಸಿ ಕೊಡುತ್ತವೆ ಭಾರತೀಯ ಸಂಸ್ಕೃತಿ ಉದಾಹರಣೆಯನ್ನು ತೆಗೆದುಕೊಂಡರೆ ಚದರಂಗದ ಆಟ ಇದಕ್ಕೊಂದು ನಿದರ್ಶನ ಹಿಂಸೆ ಮಾಡಬಾರದೆನ್ನುವ ಬೌದ್ಧರು ಚದುರಂಗದಾಟದಲ್ಲಿ - ಇದಿರಾಳಿಯನ್ನು ಬುದ್ಧಿ ಕೌಶಲ್ಯದಿಂದ ಹಣ್ಣು ಮಾಡಿ ಸೋಲಿಸಬೇಕೆಂಬುವದಕ್ಕೆ ಸಮ್ಮತಿಸುವರು. ನೆತ್ತರನ್ನು ಈ ಚದುರಂಗದಾಟ ಬೇಡುವುದಿಲ್ಲ—ಮತ್ತು ಆಟದ ಉತ್ಸಾಹವೇ ಇಲ್ಲಿ ಪ್ರಧಾನಭಾವವಾಗಿದೆಯಲ್ಲದ, ದ್ವೇಷ, ಮಾತ್ಸರ್ಯ ಮತ್ತು ಸ್ಪರ್ಧೆಯಿಲ್ಲ.

ನಮ್ಮಲ್ಲಿ ಅನೇಕರು ನಮ್ಮ ಮೂಲ ವೃತ್ತಿಗಳಿಗೆ ಪೋಷಕವಾದ ಕೆಲವು ಹವ್ಯಾಸಗಳನ್ನು ಬೆಳೆಸಿಕೊಳ್ಳುವುದರಿಂದ ಹಿತವಿದೆ ಇದರಲ್ಲಿ ಕಳೆದ ಸಮಯ ದುರುಪಯೋಗಗೊಂಡಿತೆಂದು ಚಿಂತಿಸುವುದ ಬೇಡ. ಅಂಚೆ ಟಿಕೇಟುಗಳ ಸಂಗ್ರಾಹಕನು ಕೂಡಿಡುವ ಬುದ್ಧಿಯನ್ನು ಬೆಳೆಸಿಕೊಳ್ಳುವನು. ಅದರಂತೆ ಬಡಗಿತನವನ್ನೂ ಅವನು ಕಲಿತುಕೊಂಡರೆ ಉತ್ಪಾದಕ ಕ್ರಿಯೆಯಲ್ಲಿ ಪರಿಣತಿ ಪಡೆಯುವನು. ಗಡ್ಡ ಬೆಟ್ಟಗಳನ್ನು ಹತ್ತಿ ಇಳಿಯಲು ಪ್ರಯತ್ನಿಸಿದರೆ ಕೀರ್ತಿದಾಹಕ್ಕೆ ತೃಪ್ತಿ ದೊರೆಯುವುದು, ಇತರರಿಗಿಂತ ತಾನು ಮೇಲೆಂಬ ಅಭಿಮಾನ ಮೂಡುವುದು ನಮ್ಮ ಬದುಕನ್ನು ಸುಂದರವಾಗಿಸುವ ಅನೇಕ ಬಗೆಗಳಲ್ಲಿ ಇಂಥದೂ ಒಂದೆಂದು ತಿಳಿದು, ಸೊಗಸುಗಾರರಾಗೋಣ! - ಔಂಕತ್ತೃತ್॥

THE VIJAYA BANK Ltd., COONDAPUR.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಮಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ಸಾಲವನ್ನು ಬರೆಮಾಡಿಕೊಳ್ಳುವರೆ ರಿಜಿಸ್ಟ್ರು ನೋಟೀಸು ಕೊಟ್ಟಾಗ್ಯೂ ಅವರು ತಮ್ಮ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಅವರು ಈಡಿಟ್ಟ ನಗಗಳನ್ನು ಇದೇ ತಾ 11 6 1953ನೇ ಗುರುವಾರ ಹಗಲು ಘಂಟೆ 2ಕ್ಕೆ ಸರಿಯಾಗಿ ಅಥವಾ ನಮಗೆ ಯುಕ್ತಕಂಡ ಯಾವದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂನಲ್ಲಿ ಹುಟ್ಟಿ ಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿನ ಐವೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸಲಾಗಿಯದೆ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮತ್ತು ಬಡ್ಡಿ (Balance)
307/50	ಶ್ರೀ ಬಿ ರಾಮದಾಸ ಕಾಮತ್ ಅನಂತಯ್ಯ ಕಾಮತರ ಮಗ, ವ್ಯಾಪಾರಸ್ಥ, ಕುಂದಾಪುರ, ದ. ಕ.	339 7 0
421/50	ಶ್ರೀ ಗೋವಿಂದ ಶೆಟ್ಟಿ, ಕುಪ್ಪಯ್ಯ ಶೆಟ್ರ ಅಳಿಯ, ಆಲೂರು ಮನೆ, ದೇವಲ್ಕುಂದ ಗ್ರಾಮ p. o. ಹಕ್ಲಾಡಿ ದ. ಕ	130 5 0
671/50	ಶ್ರೀ ಬಿ. ಮೊನಪ್ಪ ಶೆಟ್ಟಿ, ಕೃಷ್ಣಪ್ಪ ಶೆಟ್ರ ಅಳಿಯ, ಉಪಾಧ್ಯಾಯರು, ಬೋರ್ಡ್ ಹೈಸ್ಕೂಲು ಕುಂದಾಪುರ, ಹಾಲಿ ನೇರಳ್ ಹೈಸ್ಕೂಲ್ ಬಾರ್ಕೂರು. ದ. ಕ.	207 11 0
120/51	ಶ್ರೀ ಅಸೋಡು ನಾರಾಯಣ ಶೆಟ್ಟಿ, ಕೃಷ್ಣಪ್ಪ ಶೆಟ್ರ ಅಳಿಯ, ವ್ಯಾಪಾರಸ್ಥ, ಅಸೋಡು ಗ್ರಾಮ, p. o. ಕೋಟೇಶ್ವರ.	631 0 0
033/51	ಶ್ರೀ ಎಚ್ ನರಸಿಂಹ ಹೆಗ್ಡೆ, ತೇಜಪ್ಪ ಹೆಗ್ಡೆಯರ ಅಳಿಯ, ಓರಿಯಾಣ ದೊಡ್ಡ ಮನೆ, p. o. ಹಾಲಾಡಿ	92 7 0
29/52	ಶ್ರೀ ತೇಜಪ್ಪ ಶೆಟ್ಟಿ, ಸುಬ್ಬಯ ಶೆಟ್ರ ಅಳಿಯ, ಸಾಕರ್ಳಿ ಮಕ್ಕಿ ಮನೆ, ಹಕ್ಲೂರು ಗ್ರಾಮ, p. o. ಗಂಗೊಳ್ಳಿ	67 8 0
107/52	ಶ್ರೀ ಯು ಗೋಪಾಲ ಶೇಟ್, ಸುಬ್ರಾಯ ಶೇಟರ ಮಗ, ಜುವೆಲರ್ c/o ಪದ್ಮಯ ಶೇಟ್, ಉಡುಪಿ ಹಾಲಿ ಕುಂದಾಪುರದಲ್ಲಿರುವವರು	87 5 0
507/52	ಶ್ರೀ ಯಚ್. ವೆಂಕಪ್ಪ, ವೆಂಕ್ಟರ ಮಗ, ಫೋರೆಸ್ಟ್ ಗಾರ್ಡ್, ಕಾಳಾವರ ಗ್ರಾಮ, p. o. ಕಾಳಾವರ, ದ ಕ.	26 6 0

ಕುಂದಾಪುರ, 29—5—53

M. Srinivas Shetty
Agent

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 141/1953

ಅಚ್ಚು ಪೂಜಾರಿ ಅಪ್ಪಣ್ಣ ಪೂಜಾರಿಯ ಅಳಿಯ, ಹೆರ್ಗ ಗ್ರಾಮದ ಪರ್ಕಳ- ವಾದಿ

ಮತ್ತು

1. ಸಂಕು ಪೂಜಾರಿ, ಸುಬ್ಬ ಪೂಜಾರಿ ಮಗ, ಉಡುಪಿ ತಾಲೂಕು ಅಂಬಾರು ಗ್ರಾಮ
2. ಬೆಮ್ಮ ಪೂಜಾರಿ, ಬಾಬಣ್ಣ ಪೂಜಾರಿ ಮಗ, ಕಾರ್ಕಳ ತಾಲೂಕು ಯೆಲ್ಲಾರೆ ಗ್ರಾಮದ ಮುಡ್ಕ್ಯಾರು ಎಂಬಲ್ಲಿರುವವ

—ಪ್ರತಿವಾದಿಯು

ಇವರೊಳಗೆ—

ಸದ್ರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ವಾದಿಗೆ ಪ್ರತಿವಾದಿರು ತಾ 14-8 47ರಲ್ಲಿ ಬರೆಕೊಟ್ಟ ರೂ. 50/-ರ ಡಿ. ನೋಟಿನ ಬಾಕಿ ಅಸಲು ಬಡ್ಡಿ ವಗೈರೆ ಕೇಳಿ ವಾದಿಯು ಮೇಲ್ಕಂಡ ದಾವೆ ಮಾಡಿರುತ್ತಾನಾಗಿಯೂ ಅದು 2ನೇ ಪ್ರತಿವಾದಿಯ ನೋಟೀಸಿನ ಬಗ್ಗೆ 17-6-53 ಕ್ಕೆ ತನ್ನಿಗೆ ಬಿಟ್ಟಿರುತ್ತದಾಗಿಯೂ ಸಹಾ ಈ ಮೂಲಕ ತಿಳಿಸಲಾಗಿಯದೆ

D. N Krishnamoorthy Rao
Advocate for plaintiff
Udipi, Dated 28—5—53.

ರೋಚನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ** ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಸಂ॥ ಅಂಬಳೆ ರಾಮಸ್ವಾಮಿ ಅಯ್ಯರರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಭಸ್ಮವು ಈ ಹೊಟ್ಟೆನೋವನ್ನು (Menstrual Stomack pain) ನಿರ್ಮೂಲಿಸಿ, ಮಾಸಿಕ ಹೆಚ್ಚು ಕಡಿಮೆಗಳನ್ನು ಸರಿಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನಗಳನ್ನು ಶೀಘ್ರ ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ ತಾರುಣ್ಯದ ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳುಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ **ವಿಶೇಷವಾಗಿ 16-18 ವರ್ಷ ಮಕ್ಕಳಿಲ್ಲದ ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.**

ಕ್ರಯ — 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M O. ಕಳಿಸಿರಿ. ಕೂಡಲೆ ಪಾರ್ಸೆಲ್ ರವಾನೆ ವಿ. ಪಿ. ಇಲ್ಲ. ಪ್ಯಾಕಿಂಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ-

A ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ,

ಚಾಮರಾಜಾ ರೋಡ್ ಕ್ರಾಸ್, ಮೈಸೂರು (South India)

ಬಾಳಿನ ಮುನ್ನೋಟವುಳ್ಳ ಪ್ರತಿಯೊಬ್ಬರೂ ಸಂಪಾದನೆಯ ಸ್ವಲ್ಪಾಂಶವನ್ನಾದರೂ ಸತತವಾಗಿ ಗಳಿಸಲು ಪ್ರಯತ್ನಿಸುತ್ತಾರೆ.

ನೀವೂ ನಿಮ್ಮ ಸಂಪಾದನೆಗೆ ತಕ್ಕಂತೆ,ತಿಂಗಳ, 3ತಿಂಗಳ ಯಾ 6ತಿಂಗಳ ಕಂತಿನಂತೆ ಪಾವತಿ ಮಾಡಬಹುದಾದ ಸಾವಿರ ರೂಪಾಯಿ ಒಳಗಿನ ವಿಮೆಯ ಮೂಲಕ ಸಾಧ್ಯವಾದಷ್ಟು ಹಣವನ್ನು ಶೇಖರಿಸುವ ನಿರ್ಧಾರ ಮಾಡಿರಿ.

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ,

The New Karnataka Provident Insurance Co. Ltd. UDIPI.

ದರ ಬಹಳ ಕಡಿಮೆ ಮಾಡಿದೆ!

ಸರ್ವತರದ ಮುದ್ರಣ ಕಾರ್ಯಗಳಿಗೆ ವಿಚಾರಿಸಿರಿ.—

ನವಯುಗ ಪ್ರೆಸ್

ಸಂತೆಕಟ್ಟೆ, ಉಡುಪಿ.

ಮದುವೆ, ಉಪನಯನ, ಮತ್ತಿತರ ಸಮಾರಂಭಗಳ ಆಮಂತ್ರಣ ಪತ್ರಿಕೆಗಳನ್ನು ನಾಲ್ಕೇ ಗಂಟೆಗಳಲ್ಲಿ ತಯಾರಿಸಿ ಕೊಡಲಾಗುವುದು

(೩ನೇ ಪುಟದಿಂದ)

ಗ್ರೇಟ್ ಬ್ರಿಟನಿನಲ್ಲಿ ನಾಗರಿಕನಿಗೆ ಇಷ್ಟ ರಾಜಸಂದರ್ಶನದ ಅಧಿಕಾರವು ಈಗಲೂ ಇರುತ್ತದೆ. ಆದರೆ ಸಾಮಾನ್ಯವಾಗಿ ಈ ಸಂದರ್ಶನದ ಲಾಭವನ್ನು ಪಡೆಯುವವರು ಮಂತ್ರಿಮಂಡಳದ ಸದಸ್ಯರು, ಅವರ ಪತ್ನಿಯರು, ವಿದೇಶಗಳ ರಾಯಭಾರಿಗಳು, ರಾಜಕುಟುಂಬದ ಸದಸ್ಯರು ಅವರೇ. ರಾಣಿಯು ಓಲಗಕೊಡುವ ಪದ್ಧತಿಯೂ ನಡೆದುಕೊಂಡು ಬಂದಿವೆ. ಆ ಸಮಯದಲ್ಲಿ ಇಂದಿಂಥವರು ಇಂಥಿಂಥ ಉಡುಪಿನಲ್ಲಿ ಹಾಜರಿರಬೇಕೆಂಬ ಪರಿಪಾಟಿಯಿದೆ. ಮೊದಲಿನ ಕಾಲಕ್ಕಿಂತ ಸ್ವಲ್ಪ ಕಡಿಮೆಯಾಗಿಳದಂತೆ ಕಂಡುಬಂದರೂ ರಾಜಕುಟುಂಬದಲ್ಲಿ ಪುತ್ರೋತ್ಸವ, ವಿವಾಹ ಸಮಾರಂಭವನ್ನು, ಮತ್ತು ಸ್ಮಶಾನಯಾತ್ರೆಯನ್ನು ಹಿಂದಿನ ಕ್ರಮದಂತೆಯೇ ಆಚರಿಸುತ್ತಿರುವರು. ಸಾಮ್ರಾಟನ ಜನ್ಮದಿನವನ್ನು ಅತ್ಯಂತ ವೈಭವ ಮತ್ತು ಉತ್ಸವದೊಡನೆ ಆಚರಿಸುವ ಪರಿಪಾಟಿಯು ನಿಂದು ಹೋಗಿಲ್ಲ. ಕುಮಾರಿಸವಾರಿಯು ಈಗ ಈ ಉತ್ಸವ ಜರಗುತ್ತದೆ. ಬೇರೆ ದೇಶಗಳ ಅಧಿಪತಿಯಾಗಲೀ ರಾಜನಾಗಲೀ ಬ್ರಿಟನನ್ನು ಸಂದರ್ಶಿಸಿದಾಗ ರಾಜವೈಭವದೊಡನೆ ಅವನಿಗೆ ಸ್ವಾಗತ ಕೊಡಲ್ಪಡುತ್ತದೆ. ಇದರಂತೆ ರಾಜನಿಗೆ ಸಲ್ಲತಕ್ಕ ಕಾಣಿಕೆ ಮುಂತಾದುವುಗಳು ಬಕ್ಕಿಂಗ್ ಹಾಮ ಅರಮನೆಯಲ್ಲಿ ಅರ್ಪಿಸಲ್ಪಡುತ್ತವೆ. ಆದರೆ ಈ ಸಮಯ ರಾಜನು ಉಪಸ್ಥಿತನಿರಬೇಕೆಂಬ ಕಟ್ಟಳೆ ಮಾತ್ರ ಉಳಿದಿಲ್ಲ. ಪಾರ್ಲಿಮೆಂಟಿನ ಅಧಿವೇಶನದ ಪ್ರಾರಂಭದಲ್ಲಿ ನಡೆಯುವ ರಾಜರ ಮೆರವಣಿಗೆಯೂ ಮಹತ್ವದ ಉತ್ಸವ.

ಪರಮಾಧಿಕಾರ

ರಾಜನು ಸಮಾಜದ ಮುಖಂಡನೂ ಹೌದು. ಹದಿನಾಲ್ಕನೇ ಶತಮಾನದಿಂದ ತೊಡಗಿ ಇಂದಿನ ವರೆಗೆ ಈ ಅಭಿಪ್ರಾಯವು ಸಾಂಪ್ರದಾಯಿಕವಾಗಿಯೂ ಜನತೆಯ ಇಚ್ಛೆಯಂತೆಯೂ ರೂಢಿಗೊಂಡಿರುತ್ತದೆ. ವೈಜ್ಞಾನಿಕ, ಕಲಾತ್ಮಕ ಔದ್ಯಮಿಕ ಧಾರ್ಮಿಕ ಸ್ವರೂಪದ ಸಮಾರಂಭಗಳಲ್ಲಿ ರಾಜನು ಭಾಗವಹಿಸುವುದನ್ನು ಜನರು ತುಂಬ ಮೆಚ್ಚುತ್ತಾರೆ, ಮತ್ತು ಅದಕ್ಕೆ ಪ್ರಾಮುಖ್ಯತೆಯನ್ನೂ ಕೊಡುತ್ತಾರೆ. ಇದರಂತೆ ರಾಜನು ರಾಜ್ಯದ ಮೂರ್ತಿಮಂತ ಪ್ರತೀಕ. ಸಾಮ್ರಾಜ್ಯದ ವರಿಷ್ಠ ಸ್ಥಾನದಲ್ಲಿ ಅವನಿರುವನು. ಶಾಸನ ಸಭೆಗಳ ಮುಖ್ಯಾಂಗವಾಗಿ ಬ್ರಿಟನಿನ ನ್ಯಾಯಾಂಗದ ಮುಖ್ಯನಾಗಿ, ಸೇನೆ, ಹಡಗು ಮತ್ತು ವೈಮಾನಿಕ ಪಡೆಗಳ ಮುಖಂಡನಾಗಿ, ಇಂಗ್ಲಿಷ ಚರ್ಚಿನ ವರಿಷ್ಠನಾಗಿ, ವಿದೇಶ ವ್ಯವಹಾರಗಳಲ್ಲಿ ಜನತೆಯ ಮುಖ್ಯ ಪ್ರತಿನಿಧಿಯಾಗಿ ರಾಜನು ವ್ಯವಹರಿಸುವನು. ಕೆಲವು ಶತಮಾನಗಳಿಂದ ನಡೆದ ನಿಧಾನವಾದ ಕ್ರಾಂತಿಯ ಪರಿಣಾಮವಾಗಿ ಅರಸನಿಗಿರುವ ಈ ಸಾರ್ವಭೌಮಾಧಿಕಾರವು ಜನರನ್ನು ಚಿತ್ರಹಿಂಸೆಗೆ ಈಡುಮಾಡುವ ಕ್ರೂರವಾದ ಆಯುಧವಾಗದೆ—ಜನಮತಕ್ಕೆ ರೂಪು ಕೊಡುವ ಬಲ ಕುಂಠವಾಗಿ ಪರಿಣಮಿಸಿದೆ. ಇಂದು ರಾಜ (ಅಥವಾ ರಾಣಿ)ನು ತನ್ನ ಮಂತ್ರಿಗಳ ಸಲಹೆ ಕೇಳದೆ ಏನನ್ನೂ ಮಾಡುವಂತಿಲ್ಲ. ರಾಜನು ಆಳುವನೇ ಹೊರತು ಆಡಳಿತ ನಡೆಸುವುದಿಲ್ಲ. ರಾಜನ ಹೆಸರಿನಲ್ಲಿ ಬ್ರಿಟನಿನ ಸರಕಾರವು ಆಡಳಿತ ಸಾಗಿಸುತ್ತದೆ.

ಸಾಮಾನ್ಯವಾಗಿ ಕಾಯಿದೆ ಕಾನೂನುಗಳೆಲ್ಲ ಅಧಿಕಾರವನ್ನು ಮಂತ್ರಿಮಂಡಳಕ್ಕೆ ಒಪ್ಪಿಸಿಕೊಟ್ಟಿದ್ದರೂ ರಾಜನಿಗೇ ಒಪ್ಪಿಸಲ್ಪಟ್ಟ ಕೆಲವು ವಿಶಿಷ್ಟ ಹಕ್ಕುಗಳು ಈಗಲೂ ಇವೆ. ರಾಜ್ಯದ ವರಿಷ್ಠ ಸ್ಥಾನದ ಬಲದಿಂದ ವಿದೇಶಗಳೊಡನೆ ಯಾವುದೇ ತರದ ಸಂಬಂಧವನ್ನು ಸ್ಥಾಪಿಸುವುದು ಅರಸನಿಗೆ ಸೇರಿದೆ. ವಿದೇಶಗಳಿಗೆ ರಾಯಭಾರಿಗಳನ್ನು ಕಳಿಸುವ ಮತ್ತು ವಿದೇಶೀ ರಾಯಭಾರಿಗಳನ್ನು ಸ್ವೀಕರಿಸುವುದು ಅವನ ಕೈಯ ಅಧಿಕಾರ. ಒಪ್ಪಂದವನ್ನು ಮಾಡಿಕೊಳ್ಳುವುದಾಗಲೀ ಯುದ್ಧವನ್ನು ಘೋಷಿಸುವುದಾಗಲೀ ಶಾಂತಿಕರಾರು ಮಾಡಿಕೊಳ್ಳುವುದಾಗಲೀ ರಾಜನ ಅಧಿಕಾರ. ಸೈನ್ಯದ ವರಿಷ್ಠನಾದುದರಿಂದ ವಿದೇಶಗಳ ಆಕ್ರಮಣ ಕಾಲದಲ್ಲಿ, ಅಥವಾ ಆಂತರಿಕ ಕ್ಷೋಭೆ ಮತ್ತು ಗಲಭೆಗಳಾದಾಗ ಶಸ್ತ್ರ ಧರಿಸಬಲ್ಲ ಪ್ರತಿಯೊಬ್ಬನ ಸೇವೆಯನ್ನೂ ಪಡೆಯುಕೊಳ್ಳುವ ಹಕ್ಕು ಅವನಿಗಿದೆ. ತನ್ನ ರಾಜ್ಯದ ಸಾರ್ವಭೌಮಾಧಿಕಾರ ಪಡೆದಿರುವುದರಿಂದ ಪಾರ್ಲಿಮೆಂಟನ್ನು ಕರೆಯುವ, ಅದರ ಮೇಲೆ ಸ್ವಾಮ್ಯ ವಹಿಸುವ ಅದನ್ನು ವಿಸರ್ಜಿಸುವ ಅಧಿಕಾರ ಅರಸನಿಗಿದೆ. ಪಾರ್ಲಿಮೆಂಟಿನ ಎರಡೂ ಮನೆಗಳಲ್ಲಿ ವಿಧ್ಯುಕ್ತವಾಗಿ ಪಾಸಾದ ಮಸೂದೆ ಕಾಯಿದೆಯಾಗುವುದಕ್ಕೆ ರಾಜನ ಸಮ್ಮತಿ ಬೇಗತ್ಯ.

ತುಂಬು ಗೌರವ

ನ್ಯಾಯಾಂಗವು ಆಡಳಿತದಿಂದ ಪೂರ್ಣ ಸ್ವತಂತ್ರವಾಗಿದ್ದರೂ, ನ್ಯಾಯಸ್ಥಾನದ ಅಧಿಕಾರ ವ್ಯಾಪ್ತಿಯು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ರಾಜನಿಂದಲೇ ದತ್ತವಾಗಿರುತ್ತದೆ. ಅಪರಾಧಿಯನ್ನು ಕ್ಷಮಿಸುವ, ಶಿಕ್ಷೆ ಕಡಿಮೆ ಮಾಡುವ [illegible] ಅಧಿಕಾರ ರಾಜನಿಗಿರುತ್ತದೆ. ಆದರೆ ಸಂಬಂಧಿಸಿದ ರಾಜ್ಯಗಳ ಕಾರ್ಯದರ್ಶಿಯ ಸಲಹೆ ಕೇಳಿಕೊಳ್ಳದೆ ಇಂಥ ಅಧಿಕಾರವನ್ನು ಉಪಯೋಗಿಸುವುದಿಲ್ಲ ವೆನ್ನಬಹುದು.

ಇದರಂತೆ ಎಲ್ಲ ಗೌರವ ಸ್ಥಾನಗಳನ್ನು ನೇಮಿಸುವುದೂ ಬಿರುದು ಬಾವಲಿಗಳನ್ನು ನೀಡುವುದೂ ನ್ಯಾಯಾಧಿಕಾರಿಗಳು, ಸೈನ್ಯಾಧಿಕಾರಿಗಳು, ಗವರ್ನರರು, ರಾಯಭಾರಿಗಳು, ಸಲಹೆಗಾರರು, ಧರ್ಮಾಧಿಕಾರಿಗಳು ಮುಂತಾದವರನ್ನು ನೇಮಿಸುವುದೂ ರಾಜನ ಹಕ್ಕು. ಮಂತ್ರಿಯು ಅಧಿಕಾರ ಸ್ವೀಕರಿಸುವುದಕ್ಕೂ ಮಂತ್ರಿಮಂಡಳದ ರಚನೆಯಾಗುವುದಕ್ಕೂ ಮುಂಚೆ ರಾಜನ ಒಪ್ಪಿಗೆ ಅವಶ್ಯಕ.

ಮಂತ್ರಿಗಳೇ ಆಡಳಿತ ನಡೆಸಿದರೂ ಚಲೋ ಆಡಳಿತೆ ನಡೆಯುವಂತೆ ನೋಡಿಕೊಳ್ಳುವ ಹೊಣೆಯು ರಾಜನ ಮೇಲೂ ಇರುತ್ತದೆ. ರಾಷ್ಟ್ರೀಯ ಜೀವನದ ಗತಿಯ ಸೂಕ್ಷ್ಮ ಪರಿಚಯವನ್ನು ರಾಜನಿಗೆ ಮಾಡಿಸುತ್ತಿರಲೇ ಬೇಕು. ನಿಷ್ಪಕ್ಷಪಾತವಾದ ವರ್ತನೆಯನ್ನು ರಾಜನು ಇಟ್ಟುಕೊಳ್ಳಬೇಕಾಗಿ ಒಂದರೂ ರಾಜ್ಯದ ಆಗುಹೋಗುಗಳಲ್ಲಿ ಅವನು ಆಸಕ್ತಿ ವಹಿಸಬಲ್ಲನು. ಪ್ರೀವಿ ಕೌನ್ಸಿಲಿನ ಸಭೆಗಳನ್ನು ಕರೆದು, ಮಂತ್ರಿಮಂಡಳವನ್ನು ನೆರೆಯಿಸಿ, ಅಧಿಕಾರಿಗಳನ್ನು ಕರೆಸಿ, ಮುಖ್ಯ ನಿರ್ಣಯಗಳನ್ನು ಓದಿಸಿ, ಕಾಗದ ಪತ್ರಗಳನ್ನು ತರಿಸಿ, ಓದಿ, ಅವುಗಳಿಗೆ ರುಜು ಹಾಕಿ ರಾಜನು ನಿತ್ಯ ವ್ಯವಹಾರವನ್ನು ದಕ್ಷತೆಯಿಂದ ನಡೆಸುವುದು ವಾಡಿಕೆ. ಹೀಗಿರುವುದರಿಂದ ಬ್ರಿಟಿಷ್ ಸಾಮ್ರಾಜ್ಯ ಲಕ್ಷ್ಮಿಯನ್ನು ಕಂಡರೆ ಎಲ್ಲರಲ್ಲೂ ಗೌರವ ಉಕ್ಕೇರುತ್ತದೆ.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	„ 8,77,860
ಕ್ಷೇಮ ನಿಧಿ	. .	„ 1,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 2 ತಿಂಗಳಿನ ವ್ಯಾಪ್ತಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ ಎ ಬಿ ಯಲ್ ವಕೀಲ್.
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ವಾಯುಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು - ಆಯುರ್ವೇದ ಭೂಷಣ ಎಂ ವಿ ಶಾಸ್ತ್ರೀ.

ಇತರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಿದ ಲೃಪ್ತಿಕರವಾದ ಧುರಂಧರಸಾಯನ



ಚಿಕಿತ್ಸಾ ಸಲಹೆಗೆ— ಡಾ॥ ಎಂ ಸಿ ಶಾಸ್ತ್ರೀ, ಎಲ್ ಐ ಎಂ
ಕೊಡಿಯಾಲಬೈಲು ಪೋಸ್ಟ್ (ಮಂಗಳೂರು)
ಚಿಕಿತ್ಸಕರು ಡಾ॥ ಐ ಕೆ ವಿಠಲ ಪುರಾಣ್ ಕುಂಜಿಬೆಟ್ಟು

ಪ್ರಕಟಣೆ

ಬಂಟರ ಯಾನ ನಾಡವರ ಸಂಘ
ಮುಂಬಯಿ

ಈ ಸಂಘದವರು [illegible] ವೇತನವನ್ನು ಸಾಲವಾಗಿ ಕೊಡುವಂತೆ ನಿಶ್ಚಯಿಸಿರುವುದರಿಂದ, ಅಪೇಕ್ಷಿಸುವವರು ತಮ್ಮ [illegible] ಸಹಿತವಾದ ಸ್ಕೂಲ್ ಸರ್ಟಿಫಿಕೇಟನ್ನು ಸಂಘದ ಇಬ್ಬರು ಸದಸ್ಯರ ಶಿಫಾರಸು ಪತ್ರದೊಂದಿಗೆ ಈ ಕೆಳಗಿನ ವಿಳಾಸಕ್ಕೆ ತಾ 12-6-53 ಒಳಗೆ ತಲಪುವಂತೆ ಕಳುಹಿಸಬೇಕಾಗಿ ಅಪೇಕ್ಷಿಸಲಾಗುತ್ತದೆ.

ಗೌರವ ಕೋಶಾಧಿಕಾರಿ.
ಬಂಟರ ಯಾನ ನಾಡವರ ಸಂಘ.
17, [illegible] ಸ್ಟ್ರೀಟ್,
ಮುಂಬಯಿ 1

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ [illegible] ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ವಾರದ ಒಳಿತು ಕೆಡುಕುಗಳು

ತಾ. ೪—೬—೫೩ರಿಂದ ತಾ. ೧೦—೬—೫೩ರ ವರೆಗೆ.

ಮೇಷ—ಈ ವಾರದಲ್ಲಿ ನಿಮ್ಮಲ್ಲಿ ಒಳ್ಳೆ ಶಕ್ತಿಯೂ ಆಶಕ್ತಿಗೆ ತಕ್ಕುದಾದ ಯುಕ್ತಿಯೂ ತತ್ಸದೃಶವಾದ ಸಾಹಸಗಳೂ ಇರುವುದರಿಂದ ನಿಮ್ಮ ಸಂಕಲ್ಪಗಳೆಲ್ಲವೂ ಕಾರ್ಯರೂಪಕ್ಕೆ ಬರಲಿವೆ. ಉದ್ಯೋಗಕ್ಕೆ ತಕ್ಕುದಾದ ಫಲವು ಸಿಕ್ಕಿಯೇ ತೀರುವುದು ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಕೈಯಲ್ಲಿ ಸ್ವಲ್ಪ ಧನವನ್ನು ಸಂಗ್ರಹಿಸುವಿರಿ. ಕೆಲವೊಮ್ಮೆ ಮಿತ್ರ ಜನರಲ್ಲಿ ವಂಚನಾ ನಿಮಿತ್ತ ಮನಸ್ತಾಪವುಂಟಾಗಲಿದೆ. ತಾ 4, 8, 9 ಈ ದಿನಗಳಲ್ಲಿ ಭೋಗ ಸುಖ ಲಾಭಗಳು ಲಭಿಸುವವು.

ವೃಷಭ—ಕಳೆದ ವಾರಕ್ಕಿಂತ ಕೊಂಚ ಈ ವಾರದಲ್ಲಿ ಸುಧಾರಣೆ ಹೊಂದುವಿರಿ ನಿಮ್ಮ ಧನಪತಿಯು ಸ್ವಸ್ಥಾನಕ್ಕೆ ಸೇರಿದ್ದರಿಂದ ಋಣದ ತಗಾದೆ ದೂರವಾಗುವದು, ದಿನದ ಖರ್ಚಿಗೆ ಸಾಕಷ್ಟು ದುಡಿಯುವಿರಿ. ಕೆಲವೊಮ್ಮೆ ದೂರದೃಷ್ಟಿಯಿಲ್ಲದೆ ದುಡುಕಿ ಕಾರ್ಯದಲ್ಲಿ ನಷ್ಟಹೊಂದುವ ಸಂಭವವಿದೆ. ಮಕ್ಕಳು ಸೇವಕ ವರ್ಗದವರು ವಿರೋಧವಾಗಿ ವರ್ತಿಸುವರು. ತಾ 4, 5, 6, 10 ಈ ದಿನಗಳಲ್ಲಿ ವಿಜಯ ಲಾಭ ಸುಖಗಳಿವೆ.

ಮಿಥುನ—ನಿಮ್ಮ ಆರ್ಥಿಕ ಪರಿಸ್ಥಿತಿಯು ಇಂದು ಕೊಂಚ ಸುಧಾರಿಸುವುದಾದರೂ ಆರೋಗ್ಯವು ಮಾತ್ರ ಚೆನ್ನಾಗಿರದು ಪಿತ್ತ ಪ್ರಕೋಪದಿಂದ ನಿದ್ರಾಹೀನ ಮೂರ್ಛೆ ವ್ಯಾಧಿಗಳು ಉಂಟಾಗುವವು. ಅತ್ಮೀಯರ ವಿರಹ ತಾಪಕ್ಕೆ ಗುರಿಯಾಗುವಿರಿ. ಚಂಚಲವಾದ ಮನಸ್ಸು ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯಲಿದೆ. ಜನತೆಯಿಂದ ತಿರಸ್ಕೃತರಾಗುವಿರಿ ಆದರೂ ವಾರದ ಆದ್ಯಂತ ದಿನಗಳನ್ನು ಳಿದು ಮಿಕ್ಕ ದಿನಗಳಲ್ಲಿ ಮಿತ್ರ ಜನರ ಮೂಲಕ ಭೋಗ ಲಾಭಗಳನ್ನು ಪಡೆವಿರಿ.

ಕರ್ಕಟಿ—ಒಂದೊಮ್ಮೆಗೆ ನಿಮ್ಮ ಪರಿಸ್ಥಿತಿಯಲ್ಲಿ ಕ್ರಾಂತಿಯುಂಟಾಗಲಿದೆ, ಖರ್ಚಿನ ದಾರಿಯನ್ನೇ ಕಾಣದ ಹೀನಿಂದು ಹಣದ ಬಿಕ್ಕಟ್ಟಿಗೆ ಸಿಲುಕುವ ಪ್ರಸಂಗ ಬರಲಿದೆ. ರತ್ನ ಜನರಿಂದ ಪಂಚಿಸಲ್ಪಡುವಿರಿ. ಪಿತ್ತ ದೋಷದಿಂದ ಆರೋಗ್ಯ ಕೆಡಲಿದೆ. ಗೃಹ ಕೃತ್ಯದಲ್ಲಿ ಅವ್ಯವಸ್ಥೆಯು ತಲೆದೋರುವದು. ಆದರೂ ಬೃಹಸ್ಪತ್ಯಾಚಾರ್ಯರ ಕೃಪಾದೃಷ್ಟಿಗೊಳಗಾದ ನಿಮಗೆ ವಾರಾಂತ್ಯದ 4 ದಿನಗಳು ಹಿಂದಿನಂತೆ ಸುಖದ ದಿನಗಳಾಗಲಿವೆ.

ಸಿಂಹ—ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ನಿಮ್ಮ ಸ್ಥಿತಿಯು ಸುಧಾರಿಸುತ್ತಲಿದೆ. ಕೋರ್ಟು ಕಚೇರಿಗಳಲ್ಲಿನ ವ್ಯವಹಾರಗಳಲ್ಲಿ ವಿಜಯಿಗಳಾಗುವಿರಿ. ನಿಮ್ಮ ಪ್ರಯತ್ನಕ್ಕಿಂತ ಹೆಚ್ಚಿನ ಫಲ ಲಾಭವಾಗಲಿದೆ ಆರೋಗ್ಯವು ಸುಧಾರಿಸೀತು ಸಾಹಸಿಗಳಾದ ಯುವಕ ಜನತೆಗೂ ನೌಕರಿ ವ್ಯಾಪಾರೀ ವರ್ಗಕ್ಕೂ ಈ ಕಾಲವು ಉತ್ತಮವಿದೆ. ವಾರದ ಆದ್ಯಂತ ದಿನಗಳು ಅತೀವ ಉತ್ತಮವಿವೆ.

ಕನ್ಯಾ—ಬಹುತೇಕ ನಿಮ್ಮ ತಾಪತ್ರಯಗಳು ದೂರೀಕೃತವಾಗಲಿವೆ. ನಿಸರ್ಗತಃ ಶುಭರಾದ ಬುಧ ಗುರು ಶುಕ್ರರು ಇಂದು ನಿಮ್ಮ ಭಾಗಕ್ಕೆ ಅನುಕೂಲರಾಗಿರುವುದರಿಂದ ನೀವು ಕೈಗೊಂಡ ಕಾರ್ಯಗಳಲ್ಲಿ ವಿಜಯ ಲಾಭಗಳನ್ನು ಪಡೆವಿರಿ. ಧನಧಾನ್ಯ ವಸನಾದಿಗಳಿಗೆ ಕೊರತೆ ಯಿಲ್ಲದ ಕಾರಣ ಸಂಸಾರವು ಸುಖದಿಂದ ಸಾಗಲಿದೆ. ಆದರೆ ವಾತ ಪ್ರಕೋಪದಿಂದ ಆರೋಗ್ಯಕ್ಕೆ ಆಗಾಗ ಧಕ್ಕೆ ತಗಲೀತು ವಾರಾದಿಯ 3 ದಿನಗಳಲ್ಲಿ ಧನಾಪ್ತಿ ಗೃಹ ಸುಖ ವಿಜಯ ಮಾನಾದಿಗಳನ್ನು ಪಡೆವಿರಿ.

ತುಲಾ—ಸದ್ಯದ ದಿನಗಳು ನಿಮ್ಮ ಭಾಗಕ್ಕೆ ಅತೀವ ಅನಿಷ್ಟಕಾರಿಗಳೆನ್ನಲು ವಿಷಾದವಾಗುತ್ತಿದೆ ಪ್ರತಿಯೊಬ್ಬ ಗ್ರಹನೂ ಪ್ರತಿಕೂಲನಾಗಿರುವ ಕಾರಣ ನಿಮ್ಮ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗುವವು. ಸಂಕಲ್ಪಗಳು ಗಗನಗೋಪುರಗಳಂತೆ ಕುಸಿದು ಬೀಳುವವು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇತರರ ಮಾತಂತಿರಲಿ ನಿಮ್ಮ ಆಪ್ತ ಬಂಧುಗಳೇ ನಿಮಗೆ ನೆರವಾಗಲೊಲ್ಲರು, ವಾರದ ಆದ್ಯಂತ ದಿನಗಳು ಅತೀವ ಅನಿಷ್ಟಕಾರಿಗಳಾದಾವು.

ವೃಶ್ಚಿಕ—ನಿಮ್ಮ ಭಾಗಕ್ಕೆ ಈ ವಾರವು ಕಳೆದ ದಿನಗಳಿಗಿಂತ ಉತ್ತಮವೆನಿಸೀತು. ಅಕಸ್ಮಾತ್ತಾಗಿ ಹೆರವರಿಂದ ಧನಲಾಭವಾಗುವ ಯೋಗವಿದೆ. ವಿದ್ಯಾರ್ಥಿಗಳಿಗೂ ಸೇವಕ ವರ್ಗದವರಿಗೂ ನೌಕರಿ ಲೇಖಕ ವರ್ಗದವರಿಗೂ ಈ ಕಾಲವು ಅತ್ಯನುಕೂಲವಾಗಿದೆ, ಆದರೆ ವ್ಯಾಪಾರಿಗಳಿಗೆ ಅನಿರೀಕ್ಷಿತ ನಷ್ಟವುಂಟಾದೀತು. ವಿರೋಧಿಗಳ ಪೀಡೆಯಿಂದಾಗಿ ಕಾರ್ಯಹಾನಿ ಧನನಾಶ ಮಾನಚ್ಯುತಿಗಳುಂಟಾಗುವ ಸಂಭವವಿದೆ. ತಾ 5 ರಿಂದ 9ರ ವರೆಗಿನ ದಿನಗಳಲ್ಲಿ ನಿಮ್ಮ ಪ್ರಯತ್ನವು ಒಳ್ಳೆ ಫಲ ನೀಡುವದು.

ಧನುः—ಗ್ರಹರು ವಿರುದ್ಧ ಸ್ಥಾನವನ್ನಾಶ್ರಯಿಸಿದ ಕಾರಣ ನಿಮ್ಮ ಉತ್ಪತ್ತಿಯ ಮಾರ್ಗಗಳು ಕಟ್ಟಾಗಿ ಖರ್ಚಿನ ದಾರಿಗಳು ದ್ವಿಗುಣವಾಗವವು. ಆದ್ದರಿಂದ ನಿಮ್ಮ ಹಿಂದಿನ ಸಂಚಯವೆಲ್ಲವೂ ಪೂರ್ಣವಾಗಿ ಇಂದು ಸಾಲವಮಾಡಬೇಕಾದ ಪರಿಸ್ಥಿತಿ ಬರಲಿದೆ. ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲಿ ವಿರಕ್ತಿ ತೋರಬಹುದು. ವಿದ್ಯೋಪಜೀವಿಗಳಿಗೆ ಕಾಲಯಾಪನೆಯು ಕಷ್ಟವಾಗಲಿದೆ. ತಾ. 4, 8, 9ರಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಮಕರ:—ನಿಮ್ಮ ಅದೃಷ್ಟದ ದ್ವಾರವಿಂದು ತೆರೆದಿರುವುದು. ಎಂತಹ ಮಹತ್ಕಾರ್ಯವೇ ಇರಲಿ ಪರಾಪೇಕ್ಷೆಯಿಲ್ಲದೆ ಕೇವಲ ಸ್ವಯಂ ಶಕ್ತಿ ಯುಕ್ತಿಗಳಿಂದ ಸಾಧಿಸುವಿರಿ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲಹರಣ ಮಾಡುವಿರಿ, ನೌಕರಿ ಜನರಿಗೆ ಉದ್ಯೋಗದಲ್ಲಿ ಪ್ರಗತಿಯಿದೆ. ಆಕಸ್ಮಿಕವಾಗಿ ಪರ್ಯಟನವು ಪ್ರಾಪ್ತವಾಗುವ ಯೋಗವಿದೆ. ತಾ. 5, 6 ಈ ವಾರದಲ್ಲಿ ಉತ್ಕೃತ್ತಮ ದಿನಗಳು.

ಕುಂಭ:—ದಿನಗಳೆದಂತೆ ಪರಿಸ್ಥಿತಿಯು ಕೆಡುತ್ತಾ ಬರುತ್ತಿದೆ. ಯಾವ ಕಾರ್ಯವನ್ನು ಮಾಡಿದರೂ ಮುಂದಾಗಿ ವಿಘ್ನಗಳು ಬಂದು ಅರ್ಧದಲ್ಲೇ ಕಾರ್ಯಗಳನ್ನು ನಿಲ್ಲಿಸುವ ಪ್ರಸಕ್ತಿ ಬರಲಿದೆ. ಸರ್ವತ್ರ ಕಷ್ಟನಷ್ಟಗಳೇ ಪ್ರಾಪ್ತವಾಗುವವಲ್ಲದೆ ತನುಮನಗಳಿಗೂ ಸುಖಶಾಂತಿ ಲಭಿಸದು. ವಿರೋಧಿ ಜನರು ಪ್ರತೀಕಾರಾಸಕ್ತರಾಗುವರು. ಆಪ್ತ ಮಿತ್ರರೂ ಸಹ ನಿಮ್ಮನ್ನು ಅಣಕಿಸಿ ನಗೆ ನೋಡಲಾರರು ತಾ 4, 8, 9 ಈ ದಿನಗಳಲ್ಲಿ ಧನ ಸುಖ ಮಾನಾದಿಗಳು ಲಭಿಸುವವು.

ಮೀನ—ದೈವವು ಸಾಕಷ್ಟು ಅನುಕೂಲವಿರುವದು. ಪ್ರಯತ್ನಕ್ಕೆ ತಕ್ಕುದಾದ ಫಲ ಪ್ರಾಪ್ತಿಯಾಗುವದರಿಂದ ಹಣದ ಅಡಚಣೆಯುಂಟಾಗದು. ನೌಕರಿ ವ್ಯಾಪಾರೀ ಜನರಿಗೆ ಒಳ್ಳೆಯ ಕೀರ್ತಿ ಯಶಸ್ಸುಗಳಿವೆ. ಶ್ರಮಜೀವಿಗಳಿಗೂ ಸೇವಕ ಜನತೆಗೂ ಲೇಖಕ ವರ್ಗದವರಿಗೂ ದಿನಯಾಪನೆಯು ಸ್ವಲ್ಪ ದುಸ್ತರವಾಗಲಿದೆ, ದುರ್ಜನರ ಸಂಸರ್ಗದಿಂದಾಗಿ ಜನಾಪವಾದಕ್ಕೆ ಗುರಿಯಾಗುವ ಸಂಭವವಿದೆ. ತಾ 5, 6, 10 ಈ ದಿನಗಳಲ್ಲಿ ನಿಮ್ಮ ಮನೋರಥವು ನೆರವೇರುವದು.

ಭರ್ತ್ಸ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫—೯—೦ .... ಪೋಸ್ಟ ಖರ್ಚು ರೂ. ೦—೧೪—೦

—: ವಿಳಾಸ.—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಪೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಇದೀಗ ಹೊಸ ಆವೃತ್ತಿ ಪ್ರಕಟವಾಗಿದೆ

ಸುಲಭವಾಗಿ ಇಂಗ್ಲಿಷ್

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾಧಾರಣ 1—8—0 ಉತ್ತಮ 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಋತುಸ್ರಾವ ನಿಂತಿತು

'ಆನಮಿರ' ಬತ್ತಿಗಳನು ಉಪಯೋಗಿಸಿದರೆ ಹದಿನೆಂಟು ಋತುಸ್ರಾವವಾಗದವರು, ಹಸೋಟಿಗೆ ಬರುವರು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದುವರು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಂದಿಗೆ ಖಾತ್ರಿ ಗುಣವಾಗದಿದ್ದಲ್ಲಿ; ರೂ. 3-4 ಸ್ಪೆಶ್ಯಲ್ ರೂ. 5-ಎಕ್ಸ್‌ಟ್ರಾ ಸ್ಪೆಶ್ಯಲ್ ರೂ. 8] ಬಿಡಿ ಹಣವಾಪಸ ಪ್ರತ್ಯೇಕ]

MIS D. DEVEE, F. DB. (N. J.)

Tollygunge CALCUTTA

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

Edited, Printed & Published By K. H. Shetty at the Navayuga Press, Udipi, S. India

Regd : No.
M. 3618

LICENCE No. 31
Lic nsed to Post without Prepaymen

ನವಯುಗ

11-6-1953

NAVAYUGA WEEKLY POST BOX NO 22 UDIPI

Vol 32
No 40

ವರ್ಷ ೩೨
ವಾರ ೪೦

ನವಯುಗ
ಆರೋಗ್ಯ ಮಂತ್ರಿ
ಡಾ. ಎ. ಬಿ. ಶೆಟ್ಟರಿಂದ
ಉದ್ಘಾಟಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
ಆರು ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ಅಂತರಂಗ
ಕ್ಷತ್ರ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಇಂಗ್ಲೆಂಡಿನ ಮಾಜಿ ಪ್ರಧಾನ ಮಂತ್ರಿಗಳಲ್ಲಿ ಲಾರ್ಡ್ ನಾರ್ಥ್‌ರು ಒಬ್ಬರು. ಇವರಿಗೆ ಪಾರ್ಲಿಮೆಂಟಿನ ಸಭೆಯಲ್ಲಿ ಕುಳಿತಲ್ಲಿಯೇ ತೂಕಡಿಸುವ ಅಭ್ಯಾಸವಿದ್ದಿತು. [illegible] ಆರಂಭಿಸುವುದಕ್ಕೆ ಮುಂಚೆ ಅವರು, ಸರ್ ಗ್ರೆ ಕೂಪರರ ಕೂಡೆ ಮಹತ್ವದ ವಿಷಯಗಳ ಟಿಪ್ಪಣಿ ಬರೆದಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದರು.

ಒಂದು ಸಲ ಹಡಗು ನಿರ್ಮಾಣದ ಕುರಿತು ಪಾರ್ಲಿಮೆಂಟಿನಲ್ಲಿ ಜೋರಾದ ಚರ್ಚೆ ನಡೆಯಿತು. ಐತಿಹಾಸಿಕ ಉದಾಹರಣೆಗಳನ್ನು ಕೊಡುತ್ತಾ ಸುದೀರ್ಘ ಭಾಷಣವನ್ನು ಅನೇಕ ಸದಸ್ಯರು ಮಾಡುತ್ತಿದ್ದರು. ಒಬ್ಬರಂತೂ ನೋವಾನ ಪ್ರಳಯ ಕಾಲದ ನಾವೆಯ ವರ್ಣನೆಯನ್ನು ಮಾಡುತ್ತಿದ್ದರು, ಮತ್ತು ಅಲ್ಲಿಂದ ಮೊದಲನೇ ಎಲಿಜಬೆಥ್ ರಾಣಿಯ ಕಾಲದ ಹಡಗು ಪಡೆಗಳ ನಿರ್ಮಾಣದ ವರೆಗಿನ ಅವಧಿಯಲ್ಲಿ ನಡೆದ ವಿಕಾಸದ ವರ್ಣನೆಯನ್ನು ವಿವರವಾಗಿ ಅಸ್ಖಲಿತ ವಾಣಿಯಲ್ಲಿ ಮಾಡಿದರು. ಇದರಿಂದ ಬೇಸತ್ತ ಕೂಪರರು ತೂಕಡಿಸುತ್ತಿದ್ದ ಪ್ರಧಾನಿ ನಾರ್ಥ್‌ರನ್ನು ಎಚ್ಚರಿಸಿ, ಭಾಷಣಕಾರರು ವ್ಯರ್ಥ ಸಮಯ ಹಾಳು ಮಾಡುತ್ತಿರುವುದನ್ನು ನಿಲ್ಲಿಸಬೇಕೆಂದು ಬಯಸಿದರು.

ಲಾರ್ಡ್ ನಾರ್ಥ್‌ರು ನಿದ್ದೆಯಿಂದ ಗಡಿಬಿಡಿಯಲ್ಲಿ ಎದ್ದು ಭಾಷಣಕಾರರೊಡನೆ "ತಾವು ಎಲ್ಲಿಯ ವರೆಗೆ ಬಂದಿರಿ" ಸ್ವಾಮಿ ಎಂದು ಕೇಳಿದರು.

ಸದಸ್ಯರು ಬಹಳ ಅಭಿಮಾನದಿಂದ 'ರಾಣೀ ಮೊದಲನೇ ಎಲಿಜಬೆಥ್ ಸಾಮ್ರಾಜ್ಞಿಯ ರಾಜ್ಯಕಾಲಕ್ಕೆ ಮುಟ್ಟಿದೆ" ಎಂದುತ್ತರಿಸಿದರು.

ಆಗ ಲಾರ್ಡ್ ನಾರ್ಥ್‌ರು ಸರ್ ಕೂಪರರ ಕಡೆಗೆ ತಿರುಗಿ "ಗ್ರೆ, ನೀವು ನನ್ನನ್ನು ಬಹಳ ಬೇಗನೇ ಎಬ್ಬಿಸಿದಿರಿ ಇನ್ನೂ ಕನಿಷ್ಠ ಎರಡು ಶತಮಾನಗಳಿವೆ ಅಷ್ಟು ಹೊತ್ತು ನನಗೆ ನಿದ್ರಿಸಲು ಬಿಡುತ್ತಿದ್ದರೆ?" ಎಂದು ಬೇಸರದಿಂದ ಅವರು ನುಡಿದರು.

ತೂಕಡಿಕೆಯ ಸುಖ

ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ಮಕ್ಕಳು ತಾಯಿ ದೇವರನ್ನು ಸ್ತುತಿಸಿ ಹಾಡುವ ಪದ್ಯವೊಂದರಲ್ಲಿ "ಚಿಕ್ಕವನು ನ ಸಿರಲು ತೊಟ್ಟಿಲೊಳಗಿರಿಸಿ" ತಾಯಿ ಜೋಗುಳ ಹಾಡಿದ ಆ ಜೋಗುಳಕ್ಕೆ ಕಿವಿಗೊಟ್ಟಂತೆಯೇ ಮೈ ಮರೆತು, ಕಣ್ಣು ಮುಚ್ಚಿ ಸುಖವಾಗಿ ಮಲಗಿಸಿದ ಉಲ್ಲೇಖವಿದೆ. ಮಗುವಿಗೆ ತೂಕಡಿಕೆ ಬಂದರೆ ಸಾಕು, ಅದರ ಬೆನ್ನನ್ನು ಮೆಲ್ಲನೆ ತಟ್ಟಿ ಮಲಗಿಸುತ್ತೇವೆ. ಸುಖನಿದ್ರೆಯ ಪರಿಣಾಮವಾಗಿ ಮಗುವಿನಲ್ಲಿ, ಮನುಷ್ಯನಲ್ಲಿ ಇಲ್ಲದ ಉಲ್ಲಾಸ ಮತ್ತು ಲವಲವಿಕೆ ತುಂಬುತ್ತದೆ. ಮನುಷ್ಯ ಪ್ರಾಣಿಮಾತ್ರವಲ್ಲ ಸಕಲ ಜೀವ ಜಂತುಗಳಿಗೂ ನಿದ್ರೆಯು ಅತ್ಯಾವಶ್ಯಕವಾದುದಾಗಿರುತ್ತದೆ. ಪ್ರಪಂಚದಲ್ಲಿ ನಷ್ಟವಾಗಿರುವ ಕೋಟ್ಯಂತರ ಜೀವ ರಾಶಿಗಳಲ್ಲಿ ಚೇತನ ತುಂಬಿ ಕರೆಯುವುದಕ್ಕೆ ಸುಖ ನಿದ್ರೆಯೇ ಏಕಮೇವ ಕಾರಣ. ಅನ್ನಪಾನೀಯ ಮತ್ತು ವಾಯು ಸೇವನೆಯಿಲ್ಲದೆ ದಿನಗಳೆಯಲಾರನೆಂದು ಹೇಳುವುದುಂಟು. ಇವರ ಜೊತೆಗೆ ಸುಖನಿದ್ರೆಯನ್ನೂ ನಾವು ಸೇರಿಸಬೇಕು. ನಿದ್ದೆಗೇಡಿಯಾಗಿ ಯಾವ ಮನುಷ್ಯನೂ ಸ್ವಾಸ್ಥ್ಯವನ್ನು ಅನುಭವಿಸಲಾರ.

ಆದುದರಿಂದ ನಮಗೆ ತೂಕಡಿಸುವ ಚಟವಿರಬೇಕೆಂದು ಹೇಳುವುದು–ತೂಕಡಿಸುವಾತನಿಗೆ ರಾವಣನ ತಮ್ಮ ಕುಂಭಕರ್ಣನೇ ಆದರ್ಶ. ವರ್ಷದ ಆರು ತಿಂಗಳು ಸುಖ ನಿದ್ದೆಯಲ್ಲಿ ಉಳಿದಾರು ತಿಂಗಳು ಇಂದ್ರ ಪೂಜೆ ಮಾಡುವ ಮಹಾನುಭಾವ ಕುಂಭಕರ್ಣನೆಂದು ಕೇಳಿದ್ದೇವೆ. ನಾವು ಆರು ತಿಂಗಳು ಬಿಟ್ಟುಬಿಡದ ಮಲಗಿ ನಿದ್ರಿಸುವುದಿಲ್ಲವಾದರೂ ದಿನದ ಅರೆವಾಸಿಯಷ್ಟು ಆರಾಮವಾಗಿ ಕಳೆಯುತ್ತೇವೆಂಬುದೇನೊ ನಿರ್ವಿವಾದ. ಆರೋಗ್ಯ ಶಾಸ್ತ್ರದ ಅಭಿಪ್ರಾಯದಂತೆ ಸಾಮಾನ್ಯ ಗೃಹಸ್ಥನಿಗೆ ಎಂಟು ತಾಸುಗಳ ನಿದ್ರೆ ಪ್ರತಿದಿನವೂ ಅಗತ್ಯ. ಇನ್ನು ನಾಲ್ಕು ತಾಸು ಕಾಲ ನಾವು ಹರಟೆಯಲ್ಲಿ, ಸುಖಸಂಕಟ ವಿನೋದದಲ್ಲಿ ಕಳೆಯಬಲ್ಲ ಸುಖವಾದ ನಿದ್ರೆಯು ಕೊಡುವಷ್ಟು ಲಾಭವನ್ನು ಕೊಡದಿದ್ದರೂ ಇಂಥ ಹವ್ಯಾಸ ನಮ್ಮ ಸ್ವಾಸ್ಥ್ಯಕ್ಕೆ ಪೋಷಕವಾಗಿರುತ್ತದೆಂದು ಬಲ್ಲವರ ಹೇಳಿಕೆ. ಸುಖನಿದ್ರೆಯ ಅರೆವಾಸಿ ಲಾಭವಾದರೂ ಇಂಥ ಹವ್ಯಾಸದಿಂದ ದೊರಕದಿರದು.

ವಾಲ್ಮೀಕಿಯು ಬರೆದ ಆದೀ ರಾಮಾಯಣದಲ್ಲಿ ಇನ್ನೊಬ್ಬ ಪುಣ್ಯಾತ್ಮನ ವರ್ತನೆಯೂ ಇದೆ. ರಾಮನ ತಮ್ಮ ಲಕ್ಷ್ಮಣನು ವನವಾಸದ ಹದಿನಾಲ್ಕು ವರ್ಷಗಳಲ್ಲಿ ಕಣ್ಣಿಗೆ ಎಣ್ಣೆ ಹಚ್ಚಿಕೊಂಡು ಸೀತಾರಾಮರನ್ನು ಹಗಲೂ ರಾತ್ರಿ ಕಾದುನಿಂತು ಕಾಪಾಡಿದನೆಂದು ವಾಲ್ಮೀಕಿ ಮಹರ್ಷಿ ಹೇಳುತ್ತಾರೆ. ಒಂದು ದಿನ ನಿದ್ದೆಗೇಡಿಗಳಾದರೆ ಏನೇನೋ ನಮಗೆ ಕಷ್ಟದಾಗುತ್ತಿರುವಾಗ ಲಕ್ಷ್ಮಣ ಹದಿನಾಲ್ಕು ವರ್ಷಕಾಲ ಶಯನಿಸಲಿಲ್ಲವೆಂಬುದನ್ನು ನಂಬಲು ಕಷ್ಟ. ಬಹುಶಃ ಶ್ರೀ ರಾಮಾನುಗ್ರಹದಿಂದ ಆವನಿಗೆ ಈ ಅದ್ಭುತ ಸಾಮರ್ಥ್ಯ ಒಂದಿರಬಹುದು. ಆದರೆ ಅಣ್ಣನ ಸೇವೆ ಮಾಡಲಿಕ್ಕೆ ಇದೆ ಎಂಬ ಕಾರಣಕ್ಕಾಗಿ ಅಲ್ಲವಾದರೂ—ಇತರ ತಾಪತ್ರಯಗಳ ನೆಪದಿಂದ ನಿದ್ದೆಗೇಡಿಗಳಾಗಿರುವ ಜನರು ನಮ್ಮಲ್ಲಿ ಅನೇಕ. ಏನೇನು ಪ್ರಯತ್ನಿಸಿದರೂ ನಿದ್ರಾ ದೇವಿಯನ್ನು ಒಲಿಸಿಕೊಳ್ಳಲಾರದೆ ಸಂಕಟಪಡುವ ಜನರನ್ನು ಕಂಡು ನಮಗೆ ಮರುಕವುಂಟಾಗುತ್ತದೆ. ಕೆಲವು ಸಮಯದ ಹಿಂದೆ ಕಲ್ಕತ್ತೆಯ ಶ್ರೀಮಂತರೊಬ್ಬರು ತಮ್ಮ ನಿದ್ದೆ ಬಾರದ ರೋಗವನ್ನು ಉಪಶಮನ ಮಾಡಲು ಇನ್ನಿಲ್ಲದ ರೀತಿ ಪ್ರಯತ್ನಪಟ್ಟರು. ಹೇಳಿದ ಕೇಳಿದ ಪ್ರತಿಯೊಂದೂ ಮದ್ದನ್ನು ಉಪಯೋಗಿಸಿ ನೋಡಿದರೂ ಪ್ರಯೋಜನವಾಗದೆ ಹೋಯಿತು. ವರ್ತಮಾನ ಪತ್ರಿಕೆಗಳಲ್ಲಿ ತನಗೆ ನಿದ್ರೆ ಬರಿಸುವಾತನಿಗೆ ಒಂದು ಲಕ್ಷ ರೂಪಾಯಿಗಳ ಪುರಸ್ಕಾರ ಕೊಡುವುದಾಗಿ ಪ್ರಕಟಿಸಿದರು. ದುರ್ದೈವದಿಂದ ಅಷ್ಟು ದೊಡ್ಡ ಮೊತ್ತದ ಹಣವನ್ನು ಬಹುಮಾನವಾಗಿ ಪಡೆಯುವ ಅದೃಷ್ಟ ಯಾರಿಗೂ ದಕ್ಕಲಿಲ್ಲ, ಆ ಶ್ರೀಮಂತನಿಗೆ ನಿದ್ದೆಗೇಡಿಯಾಗುವ ಯೋಗ ತಪ್ಪಲಿಲ್ಲ.

ಪೇಟೆಯಲ್ಲಿ ನಿದ್ರಾದೇವಿಯನ್ನು ಒಲಿಸಲಿಕ್ಕಾಗಿ ಅನೇಕ ನಮೂನೆಯ ಔಷಧಿಗಳು ಪ್ರಚಾರದಲ್ಲಿವೆ. ಹೆಚ್ಚಿನವುಗಳಿಂದ ನಿದ್ದೆ ಬಾರದ ಹುಚ್ಚನಿಗೂ ನಿದ್ದೆ ಬರುತ್ತದೆ ಆದರೆ ಈ ಮದ್ದುಗಳ ಸೇವನೆಯಿಂದ ಸ್ವಾಸ್ಥ್ಯಕ್ಕೆ ಮಾತ್ರ ತುಂಬ ಹಾನಿಯುಂಟು. ನಿದ್ರೆಬರಿಸುವುದಕ್ಕೋಸ್ಕರ ಸದಾಕಾಲ ಈ ಔಷಧಗಳನ್ನು ಸೇವಿಸುವುದೊಂದು ಚಟವಾಗುತ್ತದಲ್ಲದೆ— ಇತರ ದೋಷಗಳೂ ಮೆಲ್ಲನೆ ಕಾಣಿಸಿಕೊಳ್ಳುತ್ತವೆ. ಆದುದರಿಂದ ಇಂಥ ಮದ್ದುಗ[illegible] ಹೊರತಾಗಿ ಸುಖ ನಿದ್ದೆ ಬರಿಸಲು ಬೇರೆ ಉಪಾಯವಿಲ್ಲವೆ ಎಂಬುದನ್ನು ಆಗತ್ಯವಾಗಿ ವಿಮರ್ಶಿಸಿ, ಪ್ರಯೋಗಿಸಿ, ನೋಡುವುದು ಒಳ್ಳೆಯದು.

ಉಳಿದವುಗಳಂತೆ ನಿದ್ದೆಯೂ ಒಂದು ಅಭ್ಯಾಸ. ಆದುದರಿಂದ ನಿದ್ದೆ ಬರಿಸುವ ಅಭ್ಯಾಸವನ್ನು ಬೆಳೆಸಿಕೊಂಡರೆ ಗಂಭೀರ ಸಮಾರಂಭದ ನಡುವೆಯೂ ತೂಕಡಿಸುವ ಚಟವನ್ನು ಬಿಡಲಾರೆವು. ನಮ್ಮಲ್ಲಿ ಕೆಲವರು ನಿದ್ದೆ ಬಿಡುವುದಕ್ಕೋಸ್ಕರವೆಂದೆ ಕೆಲವು ಚಟಗಳನ್ನು ಅನುಸರಿಸುವರು. ಉದಾಹರಣೆಗೆ ಬಯಲಾಟ ಅಥವಾ ಕೋಲದ ರಾತ್ರಿ, ಅಥವಾ ಸ್ಟ್ರಾಂಗ್ ಕಾಫಿ ಕುಡಿದು ನಿದ್ದೆಯನ್ನು ದೂರೀಕರಿಸುವ ಯತ್ನಮಾಡುವರು. ಹೊಸಬರಲ್ಲಿ ಈ ಪ್ರಯೋಗ ಯಶಸ್ವಿಯಾಗಬಹುದು ಆದರೆ ಮೊದಲೇ ಹೇಳಿದಂತೆ ಈ ಪರಿಣಾಮ ಎಲ್ಲರಲ್ಲೂ [illegible] ಕಂಡು ಬರಲಿಕ್ಕಿಲ್ಲ. ನಿದ್ದೆಯನ್ನು ಹಿಡಿಸುವುದು ಕಷ್ಟವಾದೀತು. ಮನೋ ಧೈರ್ಯದಿಂದ ನಿದ್ದೆಯನ್ನು ಹಿಡಿಸಬಹುದು; ಆದರೆ ದೇ

([illegible]ನೇ ಪುಟ ನೋಡಿರಿ)

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—

ಕೆ. ಹೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ ಅಭಿನಯಿಸಲಿಕ್ಕೂ [illegible] ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0—6—0

ಪ್ರತಿಗಳು ನಮ್ಮಲ್ಲಿ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುವವು ಬರೆಯಿರಿ
ನವಭಾರತ ಪುಸ್ತಕ ಭಂಡಾರ. ಉಡುಪಿ

ಭೂಮಾತೆ ಎಂದಿನವರೆಗೆ ಉಣಿಸಿಯಾಳು?

ಇನ್ನು ನೂರುವರ್ಷ ಅನ್ನಕ್ಷಾಮದ ಭಯಕ್ಕೆ ಆಸ್ಪದವಿಲ್ಲೆಂದು ತಜ್ಞರ ಅಭಿಪ್ರಾಯ

ಮಳೆಗಾಲವು ತೊಡಗಲಿರುವ ಈ ಸಮಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರ ಗಮನವೂ ಬೇಸಾಯದ ಕಡೆಗೆ ಹರಿಯುತ್ತದೆ. ಭೂಮಿ ತಾಯಿಯ ಅನುಗ್ರಹದ ಮೇಲೆಯೇ ನಮ್ಮ ಹೊಟ್ಟೆಯ ಹಸಿವು ತೃಪ್ತಿ ಹೊಂದಬೇಕಾಗಿರುತ್ತದೆ. ಆದರೆ ಒಂದೆಡೆ ಕ್ಷಾಮ ಡಾಮರಗಳ ಹಾವಳಿ ಹೆಚ್ಚಿದಂತೆ, ಇನ್ನೊಂದೆಡೆ ಜನಸಂಖ್ಯೆಯೂ ಅತ್ಯಂತ ಭರದಿಂದ ಏರುತ್ತಿರುವುದನ್ನು ಕಾಣುತ್ತೇವೆ. ಮನುಷ್ಯನ ಉಪಯೋಗಕ್ಕೆ ಸಾಲುವಷ್ಟು ಆಹಾರೋತ್ಪಾದನೆಯಾಗುತ್ತಿಲ್ಲವೆಂಬ ದೂರೂ ಇದೆ. ನಮ್ಮ ಜನಸಂಖ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸದಿದ್ದರೆ, ಹೊಟ್ಟೆಗಿಲ್ಲದೆ ಸಾಯಬೇಕಾದ ಪರಿಸ್ಥಿತಿ ಸಮ್ಮದಲ್ಲಿಯೇ ಬಂದೀತೆಂದುಕೊಂಡಿದ್ದೇವೆ. ಇಂಥದರಲ್ಲಿ ಯಾರಾದರೊಬ್ಬ ಮಹನೀಯರು ಈ ವಿಷಯದಲ್ಲಿ ಭಯಾಕುಲರಾಗುವ ಅಗತ್ಯವಿಲ್ಲವೆಂದೂ ಲೋಕದ ಈಗಿನ ಜನಸಂಖ್ಯೆಯ ಮೂರು ಪಾಲಿನಷ್ಟನ್ನು ಭೂಮಿ ದೇವಿಯು ಸಾಕಿ ಸಲಹಬಲ್ಲಳೆಂದೂ ನಮಗೆ ಧೈರ್ಯ ಹೇಳಿದರೆ ಎಷ್ಟು ಸಂತೋಷವಾಗಲಿಕ್ಕಿಲ್ಲ!

ಜನಸಂಖ್ಯೆಯ ಹೆಚ್ಚಳ

ಕಳೆದ ಅರ್ಧ ಶತಕದಲ್ಲಿ ಅಮೇರಿಕದಲ್ಲಿ ಜನಸಂಖ್ಯೆಯು ಇಮ್ಮಡಿಯಾಗಿರುತ್ತದೆ. ಆದರೂ ಈ ಅವಧಿಯಲ್ಲಿ ಶೇಕಡಾ ಹತ್ತರಷ್ಟು ಹೆಚ್ಚು ಭೂಮಿಯನ್ನು ಸಾಗುವಳಿ ಮಾಡಿರುವರು. ಹಾಗೆಂದು ಅಮೇರಿಕ ಇದು ೫೦ ವರ್ಷಗಳಿಗೆ ಹಿಂದೆ ತಿಂದುಣ್ಣುತ್ತಿದ್ದುದಕ್ಕಿಂತ ಹೆಚ್ಚು ಸುಖದಲ್ಲಿ ಇಂದು ಜೀವನ ನಿರ್ವಹಿಸುತ್ತಿರುವರಲ್ಲದೆ, ವಿದೇಶಗಳಿಗೆ ಹೇರಳ ಧಾನ್ಯವನ್ನು ನಿರ್ಯಾತ ಮಾಡಲೂ ಸಾಮರ್ಥ್ಯ ಪಡೆದಿರುವರು. ಜನಸಂಖ್ಯೆಯ ಹೆಚ್ಚಳವನ್ನು ನಿವಾರಿ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಲು ಯೋಗ್ಯ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡುದೇ ಈ ಸಮೃದ್ಧಿಗೆ ಕಾರಣ. ಈ ಸಂಗತಿಯು ಲೋಕದ ಇತರ ಜನರಿಗೂ ಸಂತೋಷಪ್ರದವಾಗುವುದರಲ್ಲಿ ಸಂದೇಹವಿಲ್ಲ. ಎಲ್ಲ ಕಡೆಯೂ ಜನಸಂಖ್ಯೆಯು ಮಿತಿಮೀರಿ ಹೆಚ್ಚುತ್ತದೆ, ಮತ್ತು ಸಾಮಾನ್ಯವಾಗಿ ಕೃಷಿಯ ಉತ್ಪಾದನಾ ಸಾಮರ್ಥ್ಯವನ್ನದು ಮೆಟ್ಟಿ ನಿಂತಿರುತ್ತದೆ. ಹೀಗಿದ್ದರೂ ಮನುಷ್ಯ ಪ್ರಯತ್ನ ಪಟ್ಟರೆ ಸಮೃದ್ಧಿಯನ್ನು ಕೈಗೂಡಿಸಬಲ್ಲನೆಂದು ಅಮೇರಿಕಾದ ಉದಾಹರಣೆ ಹೇಳುತ್ತದೆ.

ಹತ್ತೊಂಭತ್ತನೇ ಶತಮಾನದ ಆದಿಯಿಂದ ಈ ವರೆಗೆ ಲೋಕದ ಜನಸಂಖ್ಯೆಯು ನೂರಕ್ಕೆ ೧೬೫ರಷ್ಟು ಹೆಚ್ಚಿಕೊಂಡಿರುತ್ತದೆ. ಈ ಅವಧಿಯಲ್ಲಿ ಯುರೋಪಿನ ಜನಸಂಖ್ಯೆಯು ಹತ್ತುಪಾಲು ಹೆಚ್ಚಿರುತ್ತದೆ. ಇಂದು ಲೋಕದಲ್ಲಿರುವ ಜನರಲ್ಲಿ ಮೂರರಲ್ಲಿ ಒಂದಂಶದಷ್ಟು ಯುರೋಪ್ಯ ಮೂಲದವರಾಗಿರುವರು. ಈ ಪ್ರಮಾಣವು ೧೮೦೦ರಲ್ಲಿ ಎಂಟರಲ್ಲಿ ಒಂದಂಶವೂ ಇರಲಿಲ್ಲ. ಇಂಗ್ಲಿಷ ಮಾತನಾಡುವ ಜನರಲ್ಲಿ ಮೂರರಲ್ಲಿ ಎರಡಂಶ ಅಮೇರಿಕಾದಲ್ಲಿರುವರು. ೧೮೦೦ರಲ್ಲಿ ಕೇವಲ ಐದರಲ್ಲಿ ಒಂದಂಶ ಮಾತ್ರ ಅಲ್ಲಿದ್ದರು. ಹೀಗೆ ಜನಸಂಖ್ಯೆ ಹೆಚ್ಚಿಕೊಳ್ಳಲು ಔದ್ಯೋಗಿಕ ವಿಪ್ಲವವೇ ಮೂಲಕಾರಣವೆಂದು ಹೇಳಬಹುದು. ಯಾಂತ್ರಿಕ ಸಲಕರಣೆಗಳನ್ನು ಉಪಯೋಗಿಸಿ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವುದು ಸಾಧ್ಯವೆಂದು ಕಂಡು ಬಂದ ಗಳಿಗೆಯಿಂದ ಮನುಷ್ಯನು ಔದ್ಯಮಿಕ ಕೇಂದ್ರಗಳಲ್ಲಿ ನೆಲೆಸ ಹತ್ತಿದನು.

ಕಳೆದ ದಶಕದಲ್ಲಿ ಯಂತೂ ಜನಸಂಖ್ಯೆ ಬಹಳಷ್ಟು ಹೆಚ್ಚಿಕೊಂಡಿರುತ್ತದೆ. ಪ್ರತಿದಿನದ ಪ್ರತಿ ನಿಮಿಷ ೩೬ ತಿನ್ನುವ ಹೊಸ ಬಾಯಿಗಳು ಹುಟ್ಟಿಕೊಂಡವು. ಹಾಗೆಂದು ಪಾಶ್ಚಾತ್ಯ ದೇಶಗಳಲ್ಲಿ ಇಷ್ಟು ಹೆಚ್ಚು ಜನಸಂಖ್ಯೆ ಕಂಡು ಬರಲಿಲ್ಲ. ಅಮೇರಿಕದಲ್ಲಿ ಪ್ರತಿ ದಿನಕ್ಕೆ ೧೦೦೦೦ ಶಿಶುಗಳು ಜನಿಸಿದವು ಎಂದರೆ ನಿಮಿಷಕ್ಕೆ ೩-೬ರಷ್ಟು ಜನನ ಪ್ರಮಾಣವಿದ್ದಿತು. ಪೂರ್ವ ಏಶಿಯಾದ ರಾಷ್ಟ್ರಗಳಲ್ಲಿ ಮಾತ್ರ ಪರಿಸ್ಥಿತಿ ತದ್ವಿರುದ್ಧವಾಗಿತ್ತು. ಜಪಾನಿನಲ್ಲಿ ಪ್ರತಿ ದಿನಕ್ಕೆ ಮೂರು ಸಾವಿರ ಶಿಶುಗಳು ಹುಟ್ಟಿಕೊಂಡವು. ಭಾರತದಲ್ಲಿಯಂತೂ ಈ ದಶಕದ ಐದು ಕೋಟಿ ಜನಸಂಖ್ಯೆ ಹೆಚ್ಚಿರುತ್ತದೆ.

ತಲೆಯೊಂದರ ನೆಲ

ಸಂಯುಕ್ತ ರಾಷ್ಟ್ರ ಸಂಘವು ಭೂಪೃಷ್ಠದ ಐದೂವರೆ ಕೋಟಿ ಚದರ ಮೈಲು ನೆಲದಲ್ಲಿ ೧೯೫೦ ನೇ ಇಸವಿಯಲ್ಲಿ ೨೪೦ ಕೋಟಿ ಜನರು ವಾಸಿಸುತ್ತಿದ್ದರೆಂದು ಎಣಿಕೆ ಹಾಕಿದೆ. ಸುಮಾರು ಒಂದು ಕೋಟಿ ಚದರ ಮೈಲು ನೆಲವು ಹಿಮಾವೃತವಾಗಿದೆ; ಬಂಜರಾಗಿದೆ; ಅಥವಾ ಜವುಗು ಪ್ರದೇಶವಾಗಿದೆ ಅರ್ಥಾತ್ ಜನನಿವಾಸಕ್ಕೆ ಸರ್ವಥಾ ಅಯೋಗ್ಯವೆನಿಸಿದೆ. ಉಳಿದ ನೆಲದ ಅರೆವಾಸಿಯಲ್ಲಿ ಜನಸಂಖ್ಯೆ ತೀರಾ ವಿರಳವಾಗಿ ಚದರಿಕೊಂಡಿದೆ. ಆದುದರಿಂದ ಲೋಕದ ಜನರನ್ನು ಆಧರಿಸಬಲ್ಲ ಯೋಗ್ಯತೆ ಕೇವಲ ಎರಡೂಕಾಲು ಕೋಟಿ ಚದರಮೈಲು ವಿಸ್ತಾರದ ನೆಲಕ್ಕೆ ಇದೆಯೆಂದು ಸ್ಪಷ್ಟಗೊಳ್ಳುತ್ತದೆ. ಭೂಮಿಯ ನಿವಾಸಿಗಳಲ್ಲಿ ನೂರಕ್ಕೆ ೯೦ರಷ್ಟು ಭೂಮಧ್ಯರೇಖೆಯಿಂದ ೫೦ ಡಿಗ್ರಿ ಉತ್ತರ ಅಕ್ಷಾಂಶದವರೆಗಿನ ಪ್ರದೇಶದಲ್ಲಿ ಚಾಚಿರುವ ನೆಲದಲ್ಲಿಯೇ ವಾಸಿಸುವರು. ಭೂಮಿಯ ನೆಲಪ್ರದೇಶದ ಹಳದಲ್ಲಿ ಅರಂಶದಷ್ಟು, ಮತ್ತು ಜಲಭಾಗದ ಅರೆವಾಸಿಗೂ ಹೆಚ್ಚು ಈ ವಿಭಾಗದಲ್ಲಿದೆ.

ಜನಸಂಖ್ಯೆಯ ಅಭಿವೃದ್ಧಿಯ ದೃಷ್ಟಿಯಿಂದ ಲೋಕವನ್ನು ಮೂರು ಗುಂಪಾಗಿ ವಿಭಾಗಿಸಬಲ್ಲೆವು –

(೧) ಸ್ಥಿರವಾಗಿ ಏರುವ ಜನಸಂಖ್ಯಾ ಪ್ರದೇಶಗಳು- ಮನುಷ್ಯಜಾತಿಯ ಐದರಲ್ಲಿ ಒಂದಂಶ ಈ ಪ್ರದೇಶದಲ್ಲಿರುವರು. ಮುಖ್ಯವಾಗಿ ಪಶ್ಚಿಮ ಯುರೋಪು, ಉತ್ತರ ಅಮೇರಿಕಾ ಮತ್ತು ಆಸ್ಟ್ರೇಲಿಯಾ ನ್ಯೂಜೀಲೇಂಡುಗಳೇ ಇವು.

(೨) ಶಿಶು ಜನನ ಮತ್ತು ಮರಣ ಪ್ರಮಾಣವು ಇಳಿಯುತ್ತಿದ್ದರೂ ಒಟ್ಟಿನಲ್ಲಿ ಜನಸಂಖ್ಯೆ ಏರುತ್ತಿರುವ ಪ್ರದೇಶಗಳು. ಇಲ್ಲಿ ಕೂಡ ಲೋಕದ ಜನಸಂಖ್ಯೆಯ ಐದರಲ್ಲಿ ಒಂದು ಪಾಲು ನೆಲಸಿದೆ. ಪೂರ್ವ ಮತ್ತು ದಕ್ಷಿಣ ಯುರೋಪು, ರಶಿಯಾ, ಜಪಾನು ಪಶ್ಚಿಮ ಏಶಿಯಾ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದಲ್ಲಿರುವ ಕೆಲವು ವರ್ಗಗಳು ಈ ಗುಂಪಿಗೆ ಸೇರುವೆ.

(೩) 'ಹುಟ್ಟುವ ಶಿಶುಗಳ ಪ್ರಮಾಣ ಏನೇನೂ ತಗ್ಗದಿದ್ದರೂ ಸಾಯುವವರ ಸಂಖ್ಯೆ ಮಾತ್ರ ಕಡಿಮೆಗೊಂಡಿರುವ ಒಂದೇ ಸಮನೆ ಹೆಚ್ಚುತ್ತಿರುವ ಸಂಖ್ಯಾ ಪ್ರದೇಶಗಳು. ಮನುಷ್ಯಜಾತಿಯ ಉಳಿದ (ಐದರಲ್ಲಿ ಮೂರಾಂಶ) ರೆಲ್ಲ ಇದಕ್ಕೆ ಸೇರಿರುವರು. ಮುಖ್ಯವಾಗಿ ಏಶಿಯಾ ಆಫ್ರಿಕಾ, ದಕ್ಷಿಣ ಅಮೇರಿಕಗಳೇ ಇವು.

ವ್ಯವಸಾಯ ಪ್ರದೇಶ

ಭೂಮಿಯ ನೆಲ ಪ್ರದೇಶದಲ್ಲಿ ನೂರಕ್ಕೆ ೭-೮ರಷ್ಟು ಮಾತ್ರ ಸಾಗುವಳಿ ಮಾಡಲ್ಪಡುತ್ತಿದೆ. ಒಟ್ಟು ಸಾಗುವಳಿ ಭೂಮಿಯು ೩೫೦ಕೋಟಿ ಎಕ್ರೆ ಎಂದು ಅಂದಾಜು ಮಾಡಿದೆ. ಇದನ್ನೆ ಇನ್ನೊಂದು ರೀತಿ ಹೇಳುವುದಾದಲ್ಲಿ ಪ್ರತಿಯೊರ್ವನಿಗೆ ಒಂದು ಎಕ್ರೆ ಭೂಮಿ ಸಾಗುವಳಿ ಮಾಡುವನೆಂದು ಹೇಳಿಕೊಳ್ಳಬಹುದು. ಲೋಕದಲ್ಲಿ ಹೆಚ್ಚು ಪ್ರಮಾಣದಲ್ಲಿ ಸಾಗುವಳಿ ಭೂಮಿ ಇರುವ ದೇಶಗಳಲ್ಲಿ ಅಮೇರಿಕ ಮತ್ತು ರಶಿಯಾಗಳು ಮುಖ್ಯ. ಅಮೇರಿಕದಲ್ಲಿ ಸಾವಿರಕ್ಕೆ ೧೬೨ ಮತ್ತು ರಶಿಯಾದಲ್ಲಿ ೧೮೯ ಎಕ್ರೆ ಭೂಮಿ ವ್ಯವಸಾಯಕ್ಕೊಳಪಟ್ಟಿವೆ. ಇಲ್ಲಿ ದನಕರುಗಳ ಮೇವಿಗಾಗಿ ವಿಸ್ತಾರವಾದ ಹುಲ್ಲುಗಾವಲುಗಳೂ ಮೈದಾನಗಳೂ ಉರುವಲಿಗೆ ಅರಣ್ಯ ಪ್ರದೇಶಗಳೂ ಹೇರಳವಾಗಿವೆ. ಜಾನುವಾರುಗಳಿಂದ ದೊರೆಯುವ ಉತ್ಪತ್ತಿಯೂ ಭೂಸಾಗುವಳಿಯಿಂದ ದೊರಕುವ ಅನ್ನವೂ ಅಮೇರಿಕದ ಕೃಷಿಯನ್ನೂ ಆಹಾರವನ್ನೂ ಸಮದಲ್ಲಿಟ್ಟಿರುತ್ತವೆ. ೫೦ ವರ್ಷಗಳಿಗೆ ಹಿಂದೆ ಅಮೇರಿಕದಲ್ಲಿ ಪ್ರತಿಯೊರ್ವನಿಗೆ ೫-೪ ಎಕ್ರೆ ಭೂಮಿ ಬರುತ್ತಿದ್ದರೆ ಈಗ ಮೂರೇ ಎಕ್ರೆ ಉಳಿದಿದೆ. ಹೀಗಿದ್ದರೂ ಕೃಷಿ ಕ್ರಮದಲ್ಲಿ ಮಾಡಿದ ಸುಧಾರಣೆಯ ಪರಿಣಾಮವಾಗಿ ಕೃಷಿಯ ಉತ್ಪನ್ನವು ಅಮೇರಿಕದ ಜನಸಂಖ್ಯೆಯ ಅಗತ್ಯಕ್ಕೆ ಸಾಕಷ್ಟಾಗುತ್ತದೆ.

ಸಾಗುವಳಿಗೆ ಒಳಗಾದ ಭೂಮಿ ಮುಕ್ಕಾಲಂಶ ಪಡೆದಿರುವ ೧೩ ದೇಶಗಳಲ್ಲಿ ಲೋಕದ ಜನಸಂಖ್ಯೆಯ ಮೂರರಲ್ಲಿ ಎರಡಂಶದಷ್ಟು ನೆಲಸಿರುವರು. ಇದರಲ್ಲಿ ಪ್ರತಿಯೊಂದು ತಲೆಗೆ ಸರಾಸರಿ ಅಂದರೆ ೬-೫ ಎಕ್ರೆ ಭೂಮಿ ಇದ್ದರೆ

(೧೧ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other. Canara Mutual agents enjoy respect and regard from the public.

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact

THE MANAGING DIRECTOR,
The CANARA MUTUAL ASSURANCE CO. Ltd.,
Head Office: UDIPI, S. INDIA. ESTD. 1935



ರಾಮತೀರ್ಥ ಬ್ರಾಹ್ಮಿ ತೈಲ

ರ್ಜಿಸ್ಟರ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ. ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3-8-0
ಸಣ್ಣ ಬಾಟ್ಲಿಗೆ ರೂ 2-0-0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶೆರ್ಪಾ ತೇನಸಿಂಗರ ಸಾಹಸ ಜೀವನ

ಗೌರೀಶಂಕರವನ್ನೇರಿ ಶಿಖರದಲ್ಲಿ ಶಿರಸ್ಸಿಟ್ಟ ಪುಣ್ಯಜೀವಿ

ಟಿಬೇಟಿನ ನಿವಾಸಿಗಳು ಹಿಮಾಲಯ ಉತ್ತುಂಗ ಶಿಖರವಾದ ಗೌರೀಶಂಕರವನ್ನು ಕುರಿತು ಹೀಗೆ ವರ್ಣಿಸುವುದುಂಟು "...ಸ್ವರ್ಗದ ಈ ದಿವ್ಯ ಶಿಖರದಲ್ಲಿ ದೇವಾಧಿದೇವನ ವಜ್ರ ಶಕ್ತಿನಿವಾಸವಾಗಿದೆ. ಸ್ವರ್ಗಲೋಕದ ಆಕಾಶಗಳು ಇಲ್ಲಿ ಬಂದು ಆ ಅರುಣೋದಯಕ್ಕೂ ಶ್ರದ್ಧಾಂಜಲಿ ಅರ್ಪಿಸುತ್ತವೆ... ಈ ದಿವ್ಯಧಾಮದಲ್ಲಿ ಸಂಚರಣ ಮಾಡುವ ಸಾಹಸ ಅಮರರಲ್ಲಿ ಸ ಇಲ್ಲ" ಮೊನ್ನೆಯ ವರೆಗೆ ಒಂದರ ಹಿಂದೊಂದೆಂಬಂತೆ ಗೌರೀಶಂಕರವನ್ನು ಏರಲೆಳಸುವ ಪ್ರಯತ್ನಗಳು ವಿಫಲಗೊಂಡುದನ್ನು ಕಂಡು ಟಿಬ್ಬತೀಯರ ಈ ವಿಶ್ವಾಸವೇ ನಿಜ ಇದ್ದೀತೆಂದು ನಂಬಿದ್ದೆವು. ಆದರೆ ಇಂದು ಬಂದಿರುವ ಸಂತೋಷವಾರ್ತೆಯಂತೆ ಗೌರೀಶಂಕರ ಮನುಷ್ಯನನ್ನು ಉತ್ಸಾಹಕ್ಕೂ ಅದ್ಭುತ ತಪಸ್ಸಿಗೆ ತಲೆದೂಗಿ ಇಷ್ಟಾರ್ಥವನ್ನು ಅನುಗ್ರಹಿಸಿರುತ್ತದೆ. ಅಜೇಯವೆನಿಸಿದ್ದ ಶಿಖರ ಸಾನುವನಸವತಲಕಕೆಗೆ ಇಂಬುಗೊಟ್ಟವೆ ಬ್ರಿಟಿಷ್ ಪರ್ವತಾರೋಹಿ ತಂಡದ ನ್ಯೂಝೀಲೇಂಡ್ ಸದಸ್ಯ ಮಿಸ್ಟರ್ ಇ. ಪಿ. ಹಿಲಾರಿ ಮತ್ತು ನೇಪಾಳದಲ್ಲಿ ಹಿಮಾಲಯದ ಹುಲಿ ಎಂದು ಕರೆಯಲ್ಪಡುವ ಶ್ರೀ ತೇನ ಸಿಂಗರು ಈ ಅಭೂತಪೂರ್ವ ದಾಖಲೆಯನ್ನು ಸ್ಥಾಪಿಸಿ, ಚಿರಂತನ ಕೀರ್ತಿ ಸಂಪಾದಿಸಿರುವರು

ಹಿಮಾಲಯದ ಹುಲಿ

ಯಸ್ಯಪಿತೇನಸಿಂಗರ ಹೆಸರು ಭಾರತದಲ್ಲಿ ಇದೇ ಈಗ ಪ್ರಸಿದ್ಧಗೊಂಡಿರುವುದಾದರೂ ಪಾಶ್ಚಾತ್ಯ ದೇಶಗಳಲ್ಲಿ ತೇನಸಿಂಗರ ಹೆಸರು ಹಿಮಾಲಯದಷ್ಟೇ ಚಿರಪರಿಚಿತವಾಗಿರುತ್ತದೆ. ವಿದೇಶಗಳಲ್ಲಿ ರಾಷ್ಟ್ರೀಯ ಧುರೀಣರು ಪಡೆಯುವಷ್ಟೇ ಪ್ರಾಧಾನ್ಯವನ್ನು ಕವಿಗಳು ಕಲಾಕಾರರು ಆಟಗಾರರು ಮತ್ತು ತೇನಸಿಂಗರಂಥ ಸಾಹಸಿಗಳು ಪಡೆಯುವುವೆಂಬುದು ಅಭಿನಂದನೀಯವಾದಂತೆ ಅನುಕರಣೀಯವಾದ ವಿಷಯ. ಇಂಥ ಸಾಹಸಿಗಳ ಜೀವನ ಚರಿತ್ರವನ್ನೊಳಗೊಂಡ ಪುಸ್ತಕಗಳು ಆಚ್ಛಾಗಿ ಪ್ರಕಟಗೊಂಡಾಗ, ಅವುಗಳನ್ನು ಅತ್ಯಂತ ಆಸ್ಥೆಯಿಂದ ಕೊಂಡು ಓದುವ ಜನರಿಗೆ ಮಿತಿ ಇಲ್ಲ. ಆದರೆ ನಮ್ಮ ಜಡ ಪ್ರಕೃತಿಗೆ ಏನೆನ್ನೋಣ. ಅನ್ಯ ತೇನ ಸಿಂಗರಂಥ ಸಾಹಸಿಯ ಹೆಸರನ್ನು ಇದೀಗ ಮೊದಲನೇ ಬಾರಿ ನಾವು ಕೇಳುತ್ತಿರುವುದಕ್ಕೆ ಬೇರೇನು ಸ್ಪಷ್ಟೀಕರಣ ಬೇಕಿದೆ!

ತೇನ ಸಿಂಗರನ್ನು ಗೌರೀಶಂಕರ ವಿಜಯಿಯೆಂದು ಸನ್ಮಾನಿಸಲು ಭಾರತದಲ್ಲಿಯೂ ನೇಪಾಳದಲ್ಲಿಯೂ ಈಗ ಭರದಿಂದ ಸಿದ್ಧತೆಗಳು ನಡೆದಿವೆ. ಆದರೆ ನಮಗಿಂತ ನೂರಾರು ಪಾಲು ಹೆಚ್ಚು ಸಂಭ್ರಮದ ಸ್ವಾಗತ ಈ ಸಾಹಸಿಗೆ ಪಾಶ್ಚಾತ್ಯ ದೇಶಗಳಲ್ಲಿ ಕಾದಿರುತ್ತದೆಂಬುದು ನಿರ್ವಿವಾದ. ತೇನ ಸಿಂಗರಿಗೆ ೪೦ರ ವಯಸ್ಸು. ಪೂರ್ವ ನೇಪಾಳದ ಸೋಲೋಖುಂಬ ಎಂಬ ಹಳ್ಳಿಯಲ್ಲಿ ಹುಟ್ಟಿದ ಗೂರ್ಖಾ. ಬಾಲ್ಯದಿಂದಲೂ ತೇನ ಸಿಂಗರಿಗೆ ಶಾಂತಿಮಯ ಜೀವನ ನೀರಸವೆಂದೇ ಭಾಸವಾಗುತ್ತಿತ್ತು. ಹೀಗಾಗಿ ಮನೆಯಿಂದ ಓಡಿಹೋಗಿ ಡಾರ್ಜಿಲಿಂಗದಲ್ಲಿ ಹಿಮಾಲಯಾರೋಹಣ ಪ್ರಯತ್ನ ಮಾಡುತ್ತಿದ್ದ ಒಂದು ದಳವನ್ನು ಸೇರಿಕೊಂಡರು. ಈ ದಳದಲ್ಲಿ ಕೂಲಿಯಾಗಿ ಶೆರ್ಪಾ ತೇನ ಸಿಂಗರು ಕೆಲಸಮಾಡಿದರು. ಅಂದಿನಿಂದ ತೊಡಗಿದ ಈ ಸಾಹಸಮಯ ಜೀವನದಲ್ಲಿ ತೇನ ಸಿಂಗರು ಹಿಮಾಲಯದ ಎಷ್ಟೋ ಸಣ್ಣ ದೊಡ್ಡ ಗಿರಿ ಶಿಖರಗಳನ್ನು ತುಳಿದು ಏರಿ ಬಂದಿರುವರು. ಆದರೆ ಗೌರೀ ಶಂಕರರ ಮುಂದೆ ಶಿರವಣಿಯಬೇಕೆಂಬ ಏಕಮಾತ್ರ ಅಭಿಲಾಷೆ ಕೈಗೂಡಿರಲಿಲ್ಲ. ಮೊನ್ನೆ ತಾನೆ ಶೇರ್ಪಾ ತೇನ ಸಿಂಗರು ಆ ದಿವ್ಯಧಾಮದ ದರ್ಶನ ಭಾಗ್ಯ ಪಡೆದರು.

ದೃಢ ಸಂಕಲ್ಪ

೧೯೩೫ರಲ್ಲಿ ಪ್ರಸಿದ್ಧ ಆಂಗ್ಲ ಪರ್ವತಾರೋಹಿ ಎರಿಕ್ ಶಿಪ್ಟನರ ದಳದಲ್ಲಿ ಸೇರಿಕೊಂಡು ಶೆರ್ಪಾ ತೇನ ಸಿಂಗರು ೨೪ ಸಾವಿರ ಅಡಿ ಎತ್ತರಕ್ಕೆ ಮುಟ್ಟಿದ್ದರು. ಆದರೆ ಸಾಮಾನು ಹೊರುವ ಸಾಮಾನ್ಯ ಕೂಲಿಯಾಗಿದ್ದುದರಿಂದ ತೇನ ಸಿಂಗರಿಗೆ ಈ ವಿಜಯದ ಶ್ರೇಯ ದೊರಕುವಂತಿರಲಿಲ್ಲ! ಆದರೆ ಈ ಆರೋಹಣ ಕಾಲದಲ್ಲಿ ತೇನ ಸಿಂಗರ ಮಹತ್ವಾಕಾಂಕ್ಷೆ ನಿಶ್ಚಯವಾಗಿಯೂ ಜಾಗೃತಗೊಂಡಿತು. ೨೪ ಸಾವಿರ ಅಡಿ ಎತ್ತರ ಹೋದಾಗ ಹಿಮಾಚ್ಛಾದಿತ ಶರೀರವೊಂದು ಅವರಿಗೆ ಕಾಣಿಸಿತು. ಇದು ವಿಲಿಯಂ ಎಂಬ ಹೆಸರಿನ ೧೯-೨೦ ವರ್ಷ ವಯಸ್ಸಿನ ತರುಣನ ಹೆಣವಾಗಿತ್ತು. ಒಂದು ವರ್ಷಕ್ಕೆ ಮುಂಚೆ ಧನ ಮತ್ತು ಸಾಧನವಿಹೀನನಾಗಿ ಭಾರತಕ್ಕೆ ಒಂದು ಕೇವಲ ಇಚ್ಛಾಶಕ್ತಿಯುಬಲದಿಂದ ಸಂಕಷ್ಟಗಳನ್ನು ಕಡೆಗಣಿಸಿ ಇಷ್ಟು ಎತ್ತರದ ವರೆಗೆ ಈ ಸಾಹಸಿ ತರುಣ ಏರಿಬಂದಿದ್ದನು! ಪುರುಷಾರ್ಥಲಕ್ಷ್ಯದ ಪೂರ್ತಿಗಾಗಿ ಅದಮ್ಯ ಉತ್ಸಾಹವನ್ನು ಪ್ರಕಟಪಡಿಸಿ, ಗೌರೀಶಂಕರದ ಸಮ್ಮುಖದಲ್ಲಿ ಪ್ರಾಣತ್ಯಜಿಸಿದ ಈ ಉದಾಹರಣೆಯನ್ನು ಪ್ರತ್ಯಕ್ಷ ಕಂಡು ಶೆರ್ಪಾತೇನಸಿಂಗರು ಅಲ್ಲಿಯೇ ಸಂಕಲ್ಪ ಕೈಗೊಂಡರು — "ನನ್ನ ಬದುಕಿನ ಧ್ಯೇಯ ಗೌರೀ ಶಂಕರವನ್ನು ಏರಿ ಆ ದೇವಾಧಿದೇವನ ಚರಣಾರಜವನ್ನು ಸ್ಪರ್ಶಿಸುವುದೇ ನಿಜ!" ಈ ದೃಢಸಂಕಲ್ಪದೊಂದಿಗೆ ವಿಲಿಯಮನ ಮೃತದೇಹಕ್ಕೆ ಸಮ್ಮಾನಪೂರ್ವಕ ವಂದನೆಗೈದರು.

ಮುಂದೆ ಎರಡು ವರ್ಷಗಳಲ್ಲಿ ಸ್ವಿಸ ಆರೋಹಣಾದಳದೊಂದಿಗೆ ಕೇದಾರನಾಥ ಸತ್ಪುಪಾನ ಮತ್ತು ಬದರೀನಾಥಗಳಿಗೆ ತೇನಸಿಂಗರು ಹೋದರು. ೧೯೫೦ರಲ್ಲಿ ಅವರು ಇಟಾಲಿಯನ್ ಪ್ರೊಫೆಸರರೊಬ್ಬರ ಮಾರ್ಗದರ್ಶಕನಾಗಿ ಕೆಲಸ ಮಾಡಿದರು. ಇನ್ನೊಂದು ಆಂಗ್ಲ ದಳವನ್ನು ಕೂಡಿಕೊಂಡು ನಂಗಾ ಪರ್ವತವನ್ನು ಏರಿದರು. ಆದರೆ ಈ ಪ್ರಥಮ ಪ್ರಯತ್ನ ಅಸಫಲಗೊಂಡಿತಲ್ಲದೆ ಇಬ್ಬರ ಸದಸ್ಯರು ಮೃತ್ಯುವನ್ನಪ್ಪಿದರು. ೧೯೫೧ರಲ್ಲಿ ಫ್ರಾನ್ಸಿ ಸಿಂದಡೂಲಿವನರ ನೇತೃತ್ವದಲ್ಲಿ ಇನ್ನೊಂದು ದಳ ನಂಗಾ ಪರ್ವತಾರೋಹಣ ಮಾಡಿದಾಗಲೂ ಶೆರ್ಪಾ ತೇನ ಸಿಂಗರು ಮಾರ್ಗದರ್ಶನ ಕಾರ್ಯ ಕೈಗೊಂಡರು. ದುರ್ದೈವದಿಂದ ಈ ದಳವೂ ಧ್ಯೇಯ ಸಾಧನೆಯಲ್ಲಿ ಹಿಂದುಳಿಯಿತು; ಮಾತ್ರವಲ್ಲ ಡೂಲಿಯವರೂ ಮಾರ್ಗ ಮಧ್ಯದಲ್ಲಿಯೇ ತೀರಿಕೊಂಡರು.

ಗೌರೀಶಂಕರ ದರ್ಶನ

ತೇನ ಸಿಂಗರ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಡಾರ್ಜಿಲಿಂಗದಲ್ಲಿರುವರು. ಮನೆಯತ್ತ ಯಾರೇ ಬಂದರೂ ಅವರಿಗೆ ಭವ್ಯ ಸ್ವಾಗತ ದೊರೆಯುತ್ತದೆ. ಚಾ ಕುಡಿಸದೆ ಕಳಿಸುವ ಪರಿಪಾಟವೇ ಇಲ್ಲ. ಪೂರ್ವಜರು ನೇಪಾಳಿಗಳಾದರೂ ಡಾರ್ಜಿಲಿಂಗದಲ್ಲಿಯೇ ತೇನ ಸಿಂಗರು ನೆಲಸಿರುವರು. ಇವರ ಲೋಕಪ್ರಿಯತೆಗೆ ವಿನೋದ ಪ್ರಿಯತೆಯೂ ಒಂದು ಕಾರಣ ಎಷ್ಟೇ ದುರ್ಗಮ ಪ್ರದೇಶವಿರಲಿ, ದಾರಿಯು ಎಷ್ಟೇ ಕಠಿಣವಾಗಿರಲಿ, ನಗುಮುಖದಿಂದ ಈ ಸಾಹಸಿ ಅಪಗಳನ್ನೆದುರಿಸಿ ಪಾರಾಗಿ ಹೋಗುವರು. ಎಂಥ ಭಯಂಕರ ಪರಿಸ್ಥಿತಿಯಲ್ಲೂ ಕುಗ್ಗದೆ ಮುನ್ನಡೆಯುವ ಮನೋದಾರ್ಢ್ಯ ತೇನಸಿಂಗರಿಗಿದೆ. ಕಳೆದ ವರ್ಷ ಸ್ವಿಸ್ ಪರ್ವತಾರೋಹಿ ತಂಡದೊಂದಿಗೆ ಸೇರಿಕೊಂಡು ಗೌರೀಶಂಕರದ ೨೮,೨೧೦ ಅಡಿ ಎತ್ತರವನ್ನು ಸೇರಿದ ತೇನಸಿಂಗರಿಗೆ ಆಗ ಅವರ ಸಂಗಾತಿಯಾಗಿದ್ದ ರೆಮೆಂಡ್ ಲಂಬರ್ಟರು ಸ್ವಿಜರ್‌ಲೇಂಡಿನಿಂದ ಬರೆದ ಪತ್ರ ಹೀಗಿತ್ತು "ನೀವು ಯುರೋಪಿಗೆ ಬಂದ ಪಕ್ಷದಲ್ಲಿ ಸರ್ವತ್ರ ನಿಮಗೆ ಭವ್ಯ ಸ್ವಾಗತ ಕಾದಿರುತ್ತದೆ. ನಿಮ್ಮ ಹೆಸರು ಇಲ್ಲಿ ಎಲ್ಲ ಪರ್ವತಾರೋಹಿಗಳಿಗೂ ಚೆನ್ನಾಗಿ ತಿಳಿದಿರುತ್ತದೆ."

ನೇಪಾಳ ಸರಕಾರವು ಈ ಶೂರನಿಗೆ ನೇಪಾಳ ಪ್ರತಾಪವರ್ಧಕನೆಂಬ ಉಪಾಧಿಯನ್ನು ಅನುಗ್ರಹಿಸಿ ಕಳೆದ ವರ್ಷ ಗೌರವಿಸಿತು.

೧೯೫೨ರಲ್ಲಿ ತೇನಸಿಂಗರು ಶಿಖರವನ್ನು ಮುಟ್ಟಲು ಇನ್ನು ೮೦೦ ಅಡಿ ಮುನ್ನಡೆಯಬೇಕೆಂದಿರುವಾಗಲೇ ಪ್ರಾಣವಾಯುವಿನ ಅಭಾವ ಕಂಡುಬಂದುದರಿಂದ ಮರಳಬೇಕಾಯಿತು. ನಲುವತ್ತು ಡಿಗ್ರಿ ಶೂನ್ಯ ತಾಪಮಾನದ ಈ ಅನಿವಾರ್ಯ ಪರಿಸ್ಥಿತಿಯಲ್ಲಿ ಕೂಡ ತೇನಸಿಂಗರು ಹನ್ನೆರಡು ತಾಸುಗಳ ಕಾಲ ಜೀವ ಹಿಡಿದುಕೊಂಡಿದ್ದರೆಂಬುದು ನಿಜವಾಗಿಯೂ ಆಶ್ಚರ್ಯದ ಸಂಗತಿ!

ಮೊನ್ನೆಯದು ಕೂಡಿ ಶೆರ್ಪಾ ತೇನ ಸಿಂಗರು ಒಂಭತ್ತು ಸಲ ಗೌರೀ ಶಂಕರವನ್ನು ಏರಿದಂತಾಯಿತು. ಆದರೆ ಯಾವ ಕಾಲಕ್ಕೂ ವಿದೇಶಿಯರಂತೆ ವಿಜಯಾಭಿಲಾಷೆಯು ಅವರನ್ನು ಮದೋನ್ಮತ್ತರನ್ನಾಗಿ ಮಾಡಿರಲಿಲ್ಲ ಧರ್ಮಪರಾಯಣತೆಯ ಪರಿಣಾಮದಿಂದೆಂಬಂತೆ ತೇನ ಸಿಂಗರು ತಮ್ಮ ಸಾಹಸವನ್ನು ಹಿಮಾಲಯ ವಿಜಯವೆಂದು ವರ್ಣಿಸದೆ ಗೌರೀ ಶಂಕರ ದರ್ಶನ... ದೇವಭೂಮಿ ಎನಿಸಿದ ಈ ಉತ್ತುಂಗ ಶಿಖರದಲ್ಲಿ ಪಾದಾರ್ಪಣ ಮಾಡಿ ಅಲ್ಲಿಯ ಮಾಹಾತ್ಮ್ಯವನ್ನು ತನ್ನ ಕಣ್ಣುಗಳಿಂದ ಕಂಡು ಧನ್ಯನಾಗಬೇಕೆಂಬ ಅಭಿಲಾಷೆ ತೇನ ಸಿಂಗರದು. ೧೯೫೨ನೇ ಅಕ್ಟೋಬರದಲ್ಲಿ ನಡೆದ ಪ್ರಯತ್ನದ ಮುಖ್ಯಸ್ಥರಾದ ಡಾ| ಗೆಬ್ರಿಯಲ್ ಶೆವೆಲ್ ತೇನ ಸಿಂಗರ ಮನೋಭಾವನೆಯನ್ನು ಹೀಗೆ ಕರೆದಿರುವರು— "ತೇನ ಸಿಂಗರು ಹಿಮಾಲಯ ವಿಜಯದಂಥ ಅಪಮಾನ ಜನಕ ಮಾತನ್ನಾಡುವುದಿಲ್ಲ. ಗೌರೀ ಶಂಕರದ ಶಿಖರದಲ್ಲಿ ತಲೆಬಾಗಿ ವಂದಿಸುವುದೇ ಅವರ ಬಯಕೆ. ಈಶ್ವರನು ಈ ಪುಣ್ಯವನ್ನು ಕೊಟ್ಟು ರಕ್ಷಿಸಲೆಂಬುದೇ ಅವರ ಪ್ರಾರ್ಥನೆ."

ಮಾನವ ಧರ್ಮ

ತೇನ ಸಿಂಗರಿಗೆ ವಿಶ್ವವ್ಯಾಪಿ ಕೀರ್ತಿಯನ್ನು ಸಂಪಾದಿಸಿ ಕೊಟ್ಟ ಪುಣ್ಯ ಸ್ವಿಸ್ ಪರ್ವತಾರೋಹಿ ಲಂಬರ್ಟರಿಗೆ ಸೇರಿದೆ. ಅವರ ಪ್ರಯತ್ನದಿಂದ ತೇನ ಸಿಂಗರಿಗೆ ಸ್ವಿಸ್ ಆಲ್ಪೈನ

(ಕಡೇ ಪುಟ ನೋಡಿರಿ)

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್
Zandu Brahmi Hair Oil — ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸವೀಯುವುದು. ೧ ಪೌಂಡಿಗೆ ರೂ. 3-8-0 ಕಾಲು ಬಾಟ್ಲಿಗೆ ರೂ. 1.

ಝೂಂಡೂ ಸರಸಪರಿಲ್ಲಾ
Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. ೪ಔನ್ಸ್ ಬಾಟ್ಲಿ ೧ರ ರೂ. 1-5-0

Zandu Zuvi Drops
ಝೂಂಡೂ ಜ್ಯೂವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ. 10 ಸಿ. ಸಿ. ಸೀಸೆಯ ಬೆಲೆ—ರೂ. 2-12-0

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು:—

ಮಂಗಳೂರು. ಶಾ ಕಂಪೆನಿ, ಹಂಪನಕಟ್ಟೆ.
ಉಡುಪಿ. ಕೆಸರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸ್ಟಿಟ್ಯೂಟ್ ಲಿಮಿಟೆಡ್.
ಕಾರ್ಕಳ. ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಹೈದರಾಬಾದು ರಾಜ್ಯವನ್ನು ಒಡೆಯುವ ಹುನ್ನ

ನೆರೆಯ ಭಾಷಾ ಪ್ರದೇಶಗಳಲ್ಲಿ ವಿಲೀನಗೊಳಿಸಲು ಪ್ರದೇಶ ಕಾಂಗ್ರೆಸದ ಅನೂಕೂಲಾಭಿಪ್ರಾಯ

ಪರ್ವತಾರೋಹಿಗಳ ಸಾಹಸ

ಕಳೆದ ವಾರದ ಸಂಚಿಕೆಗಳಲ್ಲಿ ಗೌರೀಶಂಕರ ಪರ್ವತ ಶಿಖರವನ್ನೇರಿದ ಕರ್ನಲ ಹಂಟರ ತಂಡವನ್ನು ಅಭಿನಂದಿಸುವುದೇ ಮುಖ್ಯವಾದುದೆಂದು ತೋರುತ್ತದೆ. ಕರ್ನಲ ಹಂಟರು ತೆಗೆದುಕೊಂಡು ಬಂದ ಎರಡನೇ ಬ್ರಿಟಿಷ್ ತಂಡವು ೨೯೦೦೨ ಅಡಿ ಎತ್ತರದ ಗೌರೀಶಂಕರ ಶಿಖರವನ್ನೇರಿ ಪ್ರಪಂಚದ ಹಿಂದಿನೆಲ್ಲ ದಾಖಲೆಗಳನ್ನು ಮುರಿದು ಹೊಸ ವಿಕ್ರಮ ಸ್ಥಾಪಿಸಿದ್ದಕ್ಕೆ ವಿಶ್ವದ ಮೂಲೆ ಮೂಲೆಯಿಂದಲೂ ಅಭಿನಂದನಾತ್ಮಕ ಸಂದೇಶಗಳು ರಾಶಿರಾಶಿಯಾಗಿ ಬಂದು ಬೀಳುತ್ತಿವೆ. ಭಾರತೀಯರಾದ ನಮಗೆ ತುಂಬ ಅಭಿಮಾನ ನೀಡುವ ಸಂಗತಿಯೂ ಈ ವಿಜಯದಲ್ಲಿದೆ. ಅದೇನೆಂದರೆ ಸಾಮಾನ್ಯ ಕೂಲಿ ಜನರಂತಿದ್ದ ಶೆರ್ಪಾ ತೇನಸಿಂಗರು. ಸರ್ವ ಪ್ರಥಮವಾಗಿ ಗೌರೀಶಂಕರವನ್ನೇರಿ ಆ ದಿವ್ಯಧಾಮದಲ್ಲಿ ಶಿರಸ್ಸನ್ನಿಟ್ಟರು. ಅವರ ಹಿಂದೆ ಕರ್ನಲ್ ಹಂಟರ ತಂಡದ ಸದಸ್ಯರಾದ ನ್ಯೂಜಿಲೆಂಡದ ಹಿಲಾರಿ ಶಿಖರವನ್ನಾರೋಹಿಸಿದರು. ಹೀಗೆ ಜನ್ಮತಃ ನೇಪಾಳಿಯಾದ ಭಾರತೀಯ ನಾಗರಿಕನೋರ್ವನು ಪ್ರಪಂಚದಲ್ಲಿ ಚಿರಸ್ಥಾಯಿಯಾದ ಕೀರ್ತಿಯನು ಗಳಿಸಿದುದಕ್ಕೆ ಎಲ್ಲರೂ ಪ್ರಶಂಸೋದ್ಗಾರಗಳನ್ನು ಹೊರಡಿಸುವಾಗಲೇ ತೇನಸಿಂಗರ ಪತ್ನಿಗೆ ಈ ವಿಜಯದ ವಾರ್ತೆಯನ್ನು ತಿಳಿಸಿದಾಗ ಅವಳ ಬಾಯಿಂದ ಮಾತೇ ಹೊರಡಲಿಲ್ಲವಂತೆ! ಆದರೂ ಗೌರೀಶಂಕರವೇರಿ ವಿಕ್ರಮ ಸ್ಥಾಪಿಸಿದ ಸಾಹಸಿಯ ಪತ್ನಿ ಎಂಬ ಅಭಿಮಾನ ತನಗಿದೆ ಎಂದವಳು ಹೇಳಿದಳು. ಇದು ಸಾಹಜಿಕವಾದುದೇ ಸರಿ. ಭಾರತ ಸರಕಾರವು ತೇನಸಿಂಗರಿಗೆ ಅಭಿನಂದನೆಗಳನ್ನು ಕಳಿಸಿದೆಯಲ್ಲದೆ ಸದ್ಯದಲ್ಲಿಯೇ ಅಪೂರ್ವವಾದ ಸುವರ್ಣಪದಕವನ್ನು ಕೊಟ್ಟು, ರಾಷ್ಟ್ರಪತಿಗಳು ಗೌರವಿಸುವರೆಂದು ಕೇಳುತ್ತೇವೆ. ಇದರಂತೆ ನೇಪಾಳಿ ಸರಕಾರವು ತನ್ನ ಮಾತೃಭೂಮಿಗೆ ತಂದುಕೊಟ್ಟ ಕೀರ್ತಿಗಾಗಿ ತೇನಸಿಂಗರಿಗೆ ಜೀವಾವಧಿ ವೇತನವನ್ನು ಕೊಡಲು ಆಲೋಚಿಸುತ್ತಿದೆ. ಪಶ್ಚಿಮ ಬಂಗಾಳ ಸರಕಾರವು ವಿಶೇಷ ದೂತನ ಮೂಲಕ ತನ್ನ ಅಭಿನಂದನೆಗಳನ್ನು ತೇನಸಿಂಗರ ಪತ್ನಿಗೆ ತಿಳಿಸುವ ಏರ್ಪಾಡು ಮಾಡಿತು. ದೇಶ ವಿದೇಶಗಳಿಂದ ಅನುದಿನವೂ ಇಂಥ ಸಹಸ್ರಾರು ಪತ್ರಗಳು ಕಾಠಮಂಡೂವಿಗೆ ಬರುತ್ತಿವೆ. ಬ್ರಿಟಿಷ ತಂಡದವರು ಈಗ ೧೬೦ ಮೈಲು ದೂರದ ಕಾಠಮಂಡೂವಿಗೆ ಹಿಂತಿರುಗುತ್ತಿದ್ದಾರೆಂದು ತಿಳಿದಿದೆ. ಇನ್ನು ಕೆಲವೇ ದಿನಗಳಲ್ಲಿ ಅವರು ಸಂಭ್ರಮದ ಸ್ವಾಗತ ಪಡೆಯಲಿರುವರು. ಕರ್ನಲ ಹಂಟರು ಹಿಲಾರಿ ಮತ್ತು ತೇನಸಿಂಗರನ್ನು ಕೂಡಲೇ ಲಂಡನಿಗೆ ವಿಮಾನಮೂಲಕ ಕಳುಹಿಸುವ ವ್ಯವಸ್ಥೆಯಲ್ಲಿರುವರಂತೆ. ಸಾಧ್ಯವಾದರೆ ತಂಡದ ೧೩ ಮಂದಿ ಸದಸ್ಯರನ್ನು ಕೂಡಿಕೊಂಡು ಲಂಡನ್ನಿಗೆ ತೆರಳುವ ಆಲೋಚನೆ ಅವರಿಗಿದೆ. ಇದಕ್ಕೆ ಹಣ ಬೇಕು.

ತ್ರಿಭಾಗ ಒಪ್ಪಂದದ ಮನ್ನಣೆ

ವಿಶ್ವದೃಷ್ಟಿಯನ್ನು ತನ್ನೆಡೆಗೆ ಸೆಳೆದುಕೊಂಡ ಘಟನೆ ಇದೆಂದು ಒಪ್ಪಿಕೊಂಡು ನಮ್ಮ ನಿತ್ಯ ವ್ಯವಹಾರದ ಸುಖಕಷ್ಟಗಳತ್ತ ದೃಷ್ಟಿ ಹರಿಯಿಸಿದರೆ, ಅಲ್ಲಿ ದೇಶದ ವಿವಿಧ ಸಮಸ್ಯೆಗಳ ಚಿತ್ರ ಕಾಣುತ್ತದೆ. ಭಾಷಾನುಗುಣ ಪ್ರಾಂತರಚನೆಗಳ ಪ್ರಶ್ನೆ ಅವುಗಳಲ್ಲೊಂದು. ಸದ್ಯಕ್ಕೆ ಆಂಧ್ರ ರಾಜ್ಯ ನಿರ್ಮಾಣ ಕಾರ್ಯವೇ ಪ್ರಾಶಸ್ತ್ಯ ಪಡೆದಿರುವುದರಿಂದ ಅದರ ಕುರಿತು ಹೆಚ್ಚು ಗಮನ ಕೊಡುವುದು ಕ್ರಮಪ್ರಾಪ್ತವಾದುದು. ಕಳೆದ ವಾರ ಹೇಳಿದಂತೆ ಮದ್ರಾಸು ಶಾಸನ ಸಭೆಯ ಆಂಧ್ರ ಪ್ರದೇಶದ ಸದಸ್ಯರು ಶ್ರೀ ಟಿ. ಪ್ರಕಾಶಮರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಾತ್ಕಾಲಿಕ ರಾಜಧಾನಿಯಾಗಿ ಯಾವ ನಗರವನ್ನು ಅಂಗೀಕರಿಸಬೇಕೆಂದು ಚರ್ಚಿಸಿದರು. ಐದು ದಿನಗಳ ವರೆಗೆ ನಡೆದ ಈ ಬಿಸಿಬಿಸಿ ಚರ್ಚೆಯಲ್ಲಿ ಒಟ್ಟು ೪೦ ಸದಸ್ಯರು ೩೦ ತಾಸುಗಳಷ್ಟು ಕಾಲ ಮಾತನಾಡಿದರು. ಸಭೆಯು ಮುಂದೆ ಕರ್ನೂಲನ್ನು ರಾಜಧಾನಿಯಾಗಿ ಸ್ವೀಕರಿಸಬೇಕೆಂಬ ಕಾಂಗ್ರೆಸು, ಪ್ರಜಾ ಸಮಾಜವಾದಿ ಪಕ್ಷಗಳ ಮೂಲಸೂಚನೆಯಿದ್ದಿತು. ಕೃಷಿಕರ ಲೋಕ ಪಕ್ಷವು ಚರ್ಚೆಯ ಕಾಲದಲ್ಲಿ ಈ ಸೂಚನೆಗೆ ತನ್ನ ಬೆಂಬಲವನ್ನು ಕೊಟ್ಟಿತು. ತದ್ವಿರುದ್ಧವಾಗಿ ಕಮ್ಯೂನಿಸ್ಟರು ವಿಜಯವಾಡವನ್ನು ರಾಜಧಾನಿಯಾಗಿ ಸೂಚಿಸಿದರು. ಕರ್ನೂಲು ನಗರಕ್ಕಿಂತ ವಿಜಯವಾಡದಲ್ಲಿಯೇ ಹೊಸ ರಾಜಧಾನಿಯನ್ನು ರಚಿಸಲು ಹೆಚ್ಚು ಅನುಕೂಲತೆಗಳೂ ಸೌಕರ್ಯಗಳೂ ಇವೆಯೆಂದು ಕಮ್ಯೂನಿಸ್ಟ ಸದಸ್ಯರು ತುಂಬ ಒತ್ತಾಯ ಕೊಟ್ಟು ವಾದಿಸಿದರು. ಆಂಧ್ರರಾಜ್ಯದ ಕೇಂದ್ರಸ್ಥಾನದಲ್ಲಿ ವಿಜಯವಾಡವಿದೆ ಎಂದೂ ಕಮ್ಯೂನಿಸ್ಟರು ಆ ನಗರದ ಶ್ರೇಷ್ಠತೆಯನ್ನು ಮನಗಾಣಿಸಿಕೊಟ್ಟರು. ಗುಂಟೂರು ರಾಜಧಾನಿಯಾಗಬೇಕೆಂದು ಬೇರೆ ಕೆಲವರು ಮಂಡಿಸಿದ ಸೂಚನೆಗೆ ಏನೇನೂ ಬೆಂಬಲ ದೊರೆಯಲಿಲ್ಲ. ಚರ್ಚೆಯನ್ನು ವಿಮರ್ಶಿಸಿ ಹೇಳುವುದಾದಲ್ಲಿ ಕಮ್ಯೂನಿಸ್ಟರ ಸೂಚನೆ ಯಥಾಯೋಗ್ಯವಾಗಿದ್ದಿತೆಂದು ತೋರುತ್ತದೆ. ವಿಜಯವಾಡಕ್ಕೆ ರಾಜಧಾನಿಯಾಗಲು ಬೇಕಾದ ಎಲ್ಲ ಸೌಲಭ್ಯಗಳೂ ಇರುತ್ತವೆ; ಮತ್ತು ನೂತನ ಆಂಧ್ರದ ಹೃದಯಸ್ಥಾನವಾಗಿ ಅದು ಶೋಭಿಸುತ್ತದೆ. ಆದರೆ ಕಾಂಗ್ರೆಸು ಮತ್ತು ಪ್ರಜಾ ಸಮಾಜವಾದಿ ಪಕ್ಷಗಳೂ, ಅವರೊಡನೆ ಕೃಷಿಕರ ಲೋಕಪಕ್ಷವೂ ರಾಯಲಸೀಮೆಯವರ ಮನಸ್ಸಂತೋಷಗೊಳಿಸುವುದಕ್ಕಾಗಿ ತ್ರಿಭಾಗ ಒಪ್ಪಂದದ ವ್ಯವಸ್ಥೆಯಂತೆ ನಡೆಸಲು ನಿರ್ಣಯಿಸಿದುವು; ಮತ್ತು ಆ ಪ್ರಕಾರ ತಾತ್ಕಾಲಿಕ ರಾಜಧಾನಿಯನ್ನು ರಾಯಲಸೀಮೆಯಲ್ಲಿ ನೆಲೆಗೊಳಿಸಲು ನಿಶ್ಚಯಿಸಿದುವು. ಹಿಂದಿನ ಸದ್ಗೃಹಸ್ಥರ ಸಖ್ಯ ಒಪ್ಪಂದವನ್ನು ಮುರಿಯದೆ ಗೌರವಿಸಲಾಯಿತೆಂಬ ಕೀರ್ತಿ ಕರ್ನೂಲಿನ ಆಯ್ಕೆಯಿಂದ ಕಾಂಗ್ರೆಸ್ ಮತ್ತು ತತ್ಸಂಬಂಧಿ ಧುರೀಣರಿಗಿದೆ ಅವರಂತೆ ಸಹಬಾಂಧವ್ಯದ ಕನಸು ಕಾಣುವ ಜನರು ಕರ್ನೂಲು ಪ್ರಕೃತ ರಾಜಧಾನಿಯಾದರೆ ಅದರಿಂದ ಕೆಟ್ಟದ್ದೇನೂ ಇಲ್ಲವೆನ್ನುವರು.

ಪ್ರಜಾ ತಾಂತ್ರಿಕರ ಪ್ರಾಬಲ್ಯ

ಸದ್ಯಕ್ಕೆ ಕರ್ನೂಲು ನಗರವು ಜಿಲ್ಲಾ ಕೇಂದ್ರವಾಗಿರುತ್ತದ. ಸಿಕಂದರಾಬಾದು ದ್ರೋಣಾಚಲಂ ರೈಲ್ವೆ ಮಾರ್ಗದಲ್ಲಿರುತ್ತದೆ. ಹೈದರಾಬಾದು ಗಡಿಗೆ ೩ ಮೈಲು ದೂರದಲ್ಲಿರುತ್ತದೆ. ಹುಂದ್ರಿ ಮತ್ತು ತುಂಗಭದ್ರಾ ನದಿಗಳ ಸಂ ಸ್ಥಳ ಇದು. ಸದ್ಯಕ್ಕೆ ಸೆಕ್ರೆಟೇರಿಯ ಮತ್ತು ಗವರ್ನರರ ನಿವಾಸಗಳಿಗೆ ಇಲ್ಲಿ ಸ್ಥಳ ದೊರೆಯಬಹುದು. ಉ ಕಾರ್ಯಾಲಯಗಳನ್ನು ಅಲ್ಲಲ್ಲಿ ಹಂಚಬೇಕು. ರಾಜಧಾನಿಯಾಗಿ ಈ ವನ್ನು ಬೆಳೆಸುವುದು ವೆಚ್ಚದ ಬಾಬವೆಂಬ ಹೆದರಿಕೆ ಇದೆ. ಕೇಂದ್ರ ಸರದ ಆರ್ಥಿಕ ಸಚಿವರು ರಾಜಧಾ ಆಯ್ಕೆಯ ಸಂಬಂಧದಲ್ಲಿ ಯ ಆಕ್ಷೇಪಣೆಯನ್ನು ವ್ಯಕ್ತಗೊಳಿಸದಿದ್ದ ರಾಜಧಾನಿಯಾಗಿ ಅಂಗೀಕರಿಸಿದ ನ ಅಭಿವೃದ್ಧಿಗೆ ಹೆಚ್ಚು ವೆಚ್ಚ ಬರುವದಲ್ಲಿ ಅದನ್ನು ತಾವು ವಹಿಸಿಕೊಳ್ಳದಿದು ಸ್ವಾಭಾವಿಕವೆಂದು ಮದ್ರಾಸಿ ಹೇಳಿರುವರು. ಇದನ್ನು ಇನ್ನು ಗಮ ಕೊಂಡರೇನು ಪ್ರಯೋಜನ? ಆಂಧ್ರ ಜ್ಯ ವಿಧೇಯಕದ ಕರಡನ್ನು ಈಗ ಗೊಳಿಸುತ್ತಿರುವರೆಂದು ಕೇಳುತ್ತೇವೆ. ರಲ್ಲಿ ಆಂಧ್ರ ರಾಜ್ಯದ ಶಾಸನ ಸಭೆ ಸದಸ್ಯರ ಸಂಖ್ಯೆ, ಹೈಕೋರ್ಟು, ಧಾನಿ, ಲೋಕಸಭೆ ಮತ್ತು ರಾಜ್ಯ ತ್ತಿನಲ್ಲಿ ಪ್ರಾತಿನಿಧ್ಯ, ಅಧಿಕಾರಿಗಳ ವರ್ಗ ನಿವೃತ್ತ ಅಧಿಕಾರಿಗಳಿಗೆ ವೇ ವಂತಾದವೆಲ್ಲ ಮಹತ್ವದ ಗಳು ನಿರೂಪಿಸಲ್ಪಡುತ್ತ ಒಡಿಸಾ ರಾಜ್ಯವನ್ನು ಪ್ರತ್ಯೇಕಿಸು ಉಂಟಾದ ತೊಂದರೆಗಳು ಮರು ದಂತೆ ಆಗಿನ ಅನುಭವದಿಂದ ಈ ಯ.ಕವನ್ನು ಪೋಷಿತವಾಡು ಕ್ಕೆ ಹೆಚ್ಚಿನ ಲಕ್ಷ್ಯ ಕೊಡುತ್ತಿರು ಕರ್ನೂಲು ರಾಜಧಾನಿಯಾಗಿ ಯುತವಾದುದರಿಂದ ಇನ್ನು ಈ ಯನ್ನು ಬರೆದು ಮುಗಿಸುವುದಕ್ಕೆ ಬವಿಲ್ಲ. ವಸೂದೆಯು ಮೈಸೂರು ತ್ತು ಮದ್ರಾಸು ಶಾಸನಸಭೆಗಳಲ್ಲಿ ಸಲ್ಪಟ್ಟು ಸ್ವೀಕಾರಗೊಂಡಬಳಿಕ, ದ್ರ ಪಾರ್ಲಿಮೆಂಟಿನಲ್ಲಿ ಪಾಸಾಗತಕ್ಕ ಹೀಗೆ ಮುಂದಿನ ಅಕ್ಟೋಬರ ೧ನೇ ತಾರೀಕದಂದು ಹೊಸ ರಾಜ್ಯವು ಅಸ್ತಿತ್ವಕ್ಕೆ ಬರುತ್ತದೆ; ಮತ್ತು ಸುಮಾರು ಲ್ಕು ಚದರ ಮೈಲು ವಿಸ್ತೀರ್ಣದ ಲೂ ಗುಡ್ಡಬೆಟ್ಟಗಳಿಂದಾವೃತ್ತವಾ ಡುವೆ ಹಳ್ಳದಂತಿರುವ ಕರ್ನೂಲು ವು ರಾಜಧಾನಿಯಾಗಿಕಂಗೊಳಿಸುತ್ತ ಕಮ್ಯೂನಿಸ್ಟರ ಸೂಚನೆಯು ೪೩ ಕೂಲ ಮತ್ತು ೭೯ ಪ್ರತಿಕೂಲ ಮ ಯಿಂದ ಬಿದ್ದುಹೋದುದನ್ನು ನೋಡ ಗ, ಭಾವೀ ಆಂಧ್ರ ರಾಜ್ಯದಲ್ಲಿ ಪ್ರ ತಂತ್ರಾತ್ಮಕ ರಾಜ್ಯ ಪದ್ಧತಿಯಲ್ಲಿ ಯುಳ್ಳ ಕಾಂಗ್ರೆಸ್ಸು, ಪ್ರಜಾ ಜವಾದಿ, ಕೃಷಿಕರ ಲೋ ಇವು ಪ್ರಾಬಲ್ಯ ಪಡೆದು ಕಾರ ರಚಿಸುವುವೆಂದು ಹೇಳಿಯುತ್ತ

ಹೈದರಾಬಾದಿನ ಭವಿಷ್ಯ

ಇಂಥದರಲ್ಲಿ ಆಂಧ್ರದ ರಾಜಕೀ ಭದ್ರತೆಯ ಕುರಿತು ಕಳವಳಕ್ಕೆ ಕ

"ನವ್ಯೋದಯ"
ಕನ್ನಡ ವಾಚನಮಾಲೆ

ಒಂದರಿಂದ ಐದನೆಯ ಪುಸ್ತಕಗಳು ಈಗಾಗಲೇ ಟೆಕ್ಸ್ಟ ಬುಕ್ ಕಮಿಟಿಯವರಿಂದ ಮಂಜೂರಾಗಿವೆ.

ಈ ಪುಸ್ತಕಗಳು ನವೀನ ಆಕಾರದಲ್ಲಿ ನವೀನ ರೀತಿಯಲ್ಲಿ ಆಯಾಯ ತರಗತಿಗೆ ತಕ್ಕಂತೆ ಅಕ್ಷರಗಳನ್ನು- ಬಣ್ಣದ ಚಿತ್ರಗಳನ್ನು ಬಳಸಿಕೊಂಡು ಮಕ್ಕಳ ಮನವನ್ನು ಆಕರ್ಷಿಸುವಂತಿದ್ದು ಪ್ರತಿ ಶಾಲೆಗಳಿಗೆ ಉಪಯೋಗಕರವಾಗಿವೆ.

ಬೆಲೆ: I 0-8-0; II 0-10-0; III 0-12-0; IV 0-12-0; V 0-14-0.

ಬರೆದವರು: ಕಯ್ಯಾರ ಕಿಂಞಣ್ಣ ರೈ.

ONE WORLD ENGLISH READERS I.
For Ist Form & 6th Standard
By S. Mukunda Rao Re. 1-0-0
Teacher's Guide Bock - - Re. 1-0-0

ಪ್ರಕಾಶಕರು:
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್.
ಶಾರದಾ ಛಾಪಖಾನೆ
ರಥಬೀದಿ - - - ಮಂಗಳೂರು ೧.
ಇತರ ಪುಸ್ತಕಗಳ ಕಟಲಾಗಿಗೆ ಬರೆಯಿರಿ.

ಭಾರತಕ್ಕೆ ಹೆಚ್ಚು ನೆರವುಕೊಡುವ ನಿಶ್ಚಯ

ಡಲ್ಲೆಸರಿಂದ ಅಮೇರಿಕನ್ ಸಹಾಯದ ಮೊತ್ತವನ್ನು ಏರಿಸಲು ಪ್ರಾಮಾಣಿಕವಾದ ಶಿಫಾರಸು

ತೋರುವುದಿಲ್ಲ. ಶ್ರೀ ಪ್ರಕಾಶಮರೇ ಮಂತ್ರಿ ಮಂಡಳ ರಚಿಸಿದರೂ ಆಶ್ಚರ್ಯವಿಲ್ಲ. ಕಮ್ಯೂನಿಷ್ಟರು ಮಾತ್ರ ವಿರೋಧಿ ಗುಂಪಾಗಿಯೇ ಕೆಲಸಮಾಡಬೇಕಾಗುವುದು. ಇಷ್ಟು ಮಾತ್ರದಿಂದ ಆಂಧ್ರ ಧುರೀಣರಿಗೆ ತೃಪ್ತಿಯಾಗಿದೆಯೆಂದು ಎಣಿಸಲು ಆಧಾರ ಸಾಲದು. ಬಳ್ಳಾರಿಯ ಕುರಿತು ನ್ಯಾಯಮೂರ್ತಿ ಮಿಶ್ರರು ಕೊಟ್ಟ ತೀರ್ಪಿನ ವಿರುದ್ಧ ಆಂಧ್ರರು ಹುಯಿಲೆಬ್ಬಿಸಿರುವರು. ಶ್ರೀ ಪ್ರಕಾಶ ಮರಂಥ ಹೊಣೆಗಾರ ವ್ಯಕ್ತಿಗಳು ಸಹ ಗಡಿನಿರ್ಣಯ ಸಮಿತಿಯೇ ಈ ಕುರಿತು ಕೊನೆಯ ನಿರ್ಣಯ ಕೈಗೊಳ್ಳಬಲ್ಲುದೆಂದು ಉದ್ಗರಿಸಿರುವರು ಇದು ತಪ್ಪು ತಿಳುವಳಿಕೆಯೆಂದೇ ಹೇಳಬೇಕು. ಗಡಿನಿರ್ಣಯ ಸಮಿತಿಯು ಬಳ್ಳಾರಿ ಮತ್ತು ಮದ್ರಾಸು ನಗರದ ಪ್ರಶ್ನೆಗಳನ್ನು ವಿಚಾರಿಸುವುದಿಲ್ಲವೆಂದು ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಅಗರ್ವಾಲರು ಹೇಳಿದುದನ್ನು ಆಂಧ್ರರು ಗಮನಿಸಬೇಕು. ಇದರಂತೆ ಆಂಧ್ರರು ಸಾಮಯಿಕವಲ್ಲದ ಇನ್ನೊಂದು ಆಸೆಯನ್ನೂ ಕಟ್ಟಿಕೊಂಡಿರುವರು. ಹೈದರಾಬಾದು ರಾಜ್ಯವು ವಿಭಜನೆ ಹೊಂದಿ ವಿಶಾಲಾಂಧ್ರವು ರಚಿಸಲ್ಪಡುವುದೆಂದೂ ಹೈದರಾಬಾದು ನಗರವು ಆಗ ಆಂಧ್ರದ ಶಾಶ್ವತ ರಾಜಧಾನಿಯಾಗುವುದೆಂದೂ ಅವರ ಪ್ರಾಮಾಣಿಕವಾದ ವಿಶ್ವಾಸವಾಗಿರುತ್ತದೆ. ಹೈದರಾಬಾದು ರಾಜ್ಯವನ್ನು ಒಡೆಯದೆ ಬಿಟ್ಟರೆ ದಕ್ಷಿಣದಲ್ಲಿ ಭಾಷಾನುಗುಣ ಪ್ರಾಂತರಚನೆ ಎಂಬುದು ನಾಟಕೀಯ ವೆನಿಸುತ್ತದೆ. ಈ ಅಭಿಪ್ರಾಯಕ್ಕೆ ಎಲ್ಲರೂ ಸಮ್ಮತಿಸುವರು ಆದರೆ ಹೀಗೆ ರಾಜ್ಯವನ್ನು ತುಂಡುಮಾಡುವುದಕ್ಕೆ ಭಾರತ ಸರಕಾರ ಈಗ ಅಥವಾ ಇನ್ನು ಹತ್ತು ವರ್ಷಗಳ ಮೇಲಾದರೂ ಸಿದ್ಧವಿದೆಯೆಂಬುದು ಮಹತ್ವದ ಪ್ರಶ್ನೆ. ಹೈದರಾಬಾದು ಪ್ರದೇಶ ಕಾಂಗ್ರೆಸು ಸಮಿತಿಯು ಮೊನ್ನೆ ತಾನೆ ಕೈಗೊಂಡ ಗೊತ್ತುವಳಿಯು ಹೈದರಾಬಾದು ರಾಜ್ಯವನ್ನು ಒಡೆದು ನೆರೆಯ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳೊಡನೆ ವಿಲೀನೀಕರಿಸುವುದಕ್ಕೆ ಜೋರು ಕೊಟ್ಟಿದೆ. ಅದೇ ಕಾಲಕ್ಕೆ ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣರಾಯರು ಈ ಪ್ರಶ್ನೆಯನ್ನು ಅವಸರದಿಂದ ನಿರ್ಣಯಿಸತಕ್ಕದಲ್ಲವೆಂದು ಹೇಳಿರುವರು. ಭಾರತ ಸರಕಾರ ನೇಮಿಸಲಿರುವ ಉಚ್ಚಾಧಿಕಾರಸಂಪನ್ನ ಆಯೋಗವು ಈ ವಿಷಯದಲ್ಲಿ ಯೋಗ್ಯಮಾರ್ಗದರ್ಶನ ಮಾಡುವುದೆಂದು ಆಶಿಸೋಣ. ಈ ಆಯೋಗವನ್ನು ಬಹಿಷ್ಕರಿಸಬೇಕೆಂದು ಹೇಳಿದ ದಾವಣಗೆರೆಯ ಏಕೀಕರಣ ಪರಿಷತ್ತಿನ ನಿರ್ಣಯಕ್ಕಿಂತಲೂ ಇದರ ಮುಂದೆ ಅಂಕೆ ಅಂಶಗಳ ಬಲದಿಂದ ತನ್ನ ನಿಲುವನ್ನು ಸ್ಪಷ್ಟೀಕರಿಸಬೇಕೆಂದು ಹೈದರಾಬಾದಿನ ಪ್ರದೇಶ ಕಾಂಗ್ರೆಸ್ ಸಮಿತಿ ತೀರ್ಮಾನಿಸಿದುದು ವ್ಯವಹಾರ್ಯವೂ ಪ್ರಶಂಸನೀಯವೂ ಆಗಿರುತ್ತದೆ.

ರಾಜಾಜಿ–ದೇಶಮುಖ ಭೇಟಿ

ಮೊದಲೇ ಸೂಚಿಸಿದಂತೆ ಶ್ರೀ ದೇಶಮುಖರು ಮದ್ರಾಸಿಗೆ ಆಗಮಿಸಿ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನೂ ಹಣಕಾಸಿನ ಮಂತ್ರಿ ಶ್ರೀ ಸುಬ್ರಹ್ಮಣ್ಯಂರನ್ನೂ ಕಂಡು ಮಾತನಾಡಿದರು. ಮಾತುಕತೆಯ ವಿವರಗಳು ಬಹಿರಂಗಗೊಂಡಿಲ್ಲವಾದರೂ ಮದ್ರಾಸು ಸರಕಾರದ ಆರ್ಥಿಕ ಪರಿಸ್ಥಿತಿ ಮತ್ತು ಬರಗಾಲ ಪರಿಹಾರ ಕಾರ್ಯಗಳ ಕುರಿತಾಗಿ ವಿಚಾರ ವಿನಿಮಯ ಮಾಡುವುದೇ ಈ ಭೇಟಿಯ ಉದ್ದೇಶವಾಗಿತ್ತೆಂಬುದು ಸ್ವತಃ ಸಿದ್ಧ. ದೇಶಮುಖರು ಮದ್ರಾಸಿಗೆ ಬಂದೊಡನೆಯೇ ಪತ್ರಿಕಾ ಪ್ರತಿನಿಧಿಗಳ ಮುಂದೆ ಮಾತನಾಡುವಾಗ ಮದ್ರಾಸಿಗೆ ಕೇಂದ್ರ ಸರಕಾರ ಕೊಡಬೇಕೆಂದಿರುವ ಸುಮಾರು ಮೂರು ಕೋಟಿ ರೂಪಾಯಿಗಳ ನೆರವು ಯಥೇಷ್ಟವಾಯಿತೆಂದು ಹೇಳಿರುವರು. ಕೇಂದ್ರ ಸರಕಾರದ ಸಹಾಯವು ಸಾಮಾನ್ಯವಾಗಿ ಅಲ್ಪಾವಧಿಯ ಸಾಲರೂಪವಲ್ಲಿರುತ್ತದೆ. ಬರಗಾಲ ನಿವಾರಣೆಗಾಗಿ ಕೈಗೊಂಡ ಪರಿಹಾರ ಕಾರ್ಯಗಳು ಇನ್ನು ಮುಂದಿನ ಐದಾರು ತಿಂಗಳು ಕಾಲ ನಿರಾತಂಕವಾಗಿ ನಡೆಯುವಂತೆ ನೋಡಲು ಈ ಸಹಾಯ ಹಣ ಸಾಕೆಂಬುದು ದೇಶಮುಖರ ಅಭಿಪ್ರಾಯ. ಪರಿಸ್ಥಿತಿಯು ಬೇಗನೇ ಸುಧಾರಿಸಿದರೆ ಇಷ್ಟು ಹಣವೂ ಬೇಕಾಗಲಿಕ್ಕಿಲ್ಲವೆನ್ನಬಹುದು. ದೇಶಮುಖರ ಮಾತಿನ ಮೇಲಿಂದ, ಕೇಂದ್ರ ಸರಕಾರವು ಮದ್ರಾಸಿಗೆ ನೀಡುವ ಹಣಸಹಾಯವು ಕೇವಲ ಬರಗಾಲ ಕಾಮಗಾರಿಗಳಿಗೆ ಮಾತ್ರ ಸೀಮಿತವಿದೆ. ಸಂಬಂಧಿಸಿದ ಇತರ ಯೋಜನೆಗಳ ಕುರಿತು ಕೇಂದ್ರ ಸರಕಾರಕ್ಕೆ ಏನೇನೂ ಹೊಣೆಗಾರಿಕೆ ಇರುವುದಿಲ್ಲ ಆದುದರಿಂದಲೇ ಮದ್ರಾಸು ಸಂಸ್ಥಾನದವರು ಹಣ ಸಾಲದೆಂಬ ಕಾರಣಕ್ಕಾಗಿ ನಿಲ್ಲಿಸಿರುವ ಅಭಿವೃದ್ಧಿ ಯೋಜನೆಗಳ ಬಗ್ಗೆ ಅವರು ಏನು ಆಶ್ವಾಸನೆ ಕೊಡಲೂ ಮುಂಬರಲಿಲ್ಲ. ರಾಜ್ಯ ಸರಕಾರವು ಇಂಥ ವೆಚ್ಚಗಳಿಗೆ ಹಣವನ್ನು ಎಲ್ಲಿಂದ ಪೂರೈಸಬೇಕೆಂದು ತಾನಾಗಿಯೇ ನಿರ್ಣಯಿಸಬೇಕೆಂದು ಅವರ ಸೂಚನೆ ಇದೆ. ಇದರಂತೆ ಆಂಧ್ರ ರಾಜ್ಯ ನಿರ್ಮಾಣದ ಬಳಿಕ ಮದ್ರಾಸು ಸರಕಾರದ ವಶಕ್ಕೆ ಪಂಚವಾರ್ಷಿಕ ಯೋಜನೆಯಲ್ಲಿ ಒಪ್ಪಿಸಿಕೊಟ್ಟ ಯೋಜನೆಗಳ ಪುನರ್ವಿಮರ್ಶೆಯಾಗುವುದೂ ಅವಶ್ಯವಾಗಿರುತ್ತದೆ. ಇಂಥ ಪುನರ್ವಿಮರ್ಶೆಯ ಕಾಲದಲ್ಲಿ ಯೋಜನಾ ಆಯೋಗವು ಶಾಶ್ವತವಾಗಿ ಬರಗಾಲ ಪರಿಹಾರೋಪಾಯಗಳನ್ನು ಯೋಚಿಸಿ ತಕ್ಕ ಏರ್ಪಾಡುಗಳನ್ನು ಮಾಡಬಲ್ಲುದು. ಮದ್ರಾಸು, ಉತ್ತರ ಕರ್ನಾಟಕ, ಮಹಾರಾಷ್ಟ್ರ ಮುಂತಾದ ಪ್ರದೇಶಗಳಲ್ಲಿ ವರ್ಷಂಪ್ರತಿ ಕಾಣಿಸಿಕೊಳ್ಳುವ ಬರಗಾಲದ ಪೀಡೆಗಳನ್ನು ಹೋಗಲಾಡಿಸುವುದಕ್ಕೆ ತತ್ಕಾಲ ಉಪಶಮನಕ್ಕಿಂತಲೂ ಶಾಶ್ವತ ಉಪಾಯಗಳೇ ಪರಿಣಾಮಕಾರಿಯೆಂದು ಸರಕಾರ ಮನಗಾಣುವುದು ವಿಹಿತ.

ಡಲ್ಲೆಸರ ಅನುಗ್ರಹ

ಯೋಜನಾ ಆಯೋಗ ಈ ಕುರಿತು ಮಹತ್ವವನ್ನು ಕೊಟ್ಟಂತೆ ತೋರುವುದಿಲ್ಲ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ವರ್ಣಿಸಿದ ಉಪಕ್ರಮಗಳನ್ನು ಪೂರೈಸುವುದೇ ಅದಕ್ಕೆ ಮಹತ್ವದ ಜವಾಬ್ದಾರಿಯೆಂದು ತೋರಿದೆ. ಯೋಜನೆಯಲ್ಲಿ ಆರು ನೂರು ಕೋಟಿ ರೂಪಾಯಿಗಳ ಕೊರತೆ ಕಾಣಿಸಿಕೊಂಡಿರುವುದರಿಂದ ಅದನ್ನು ತುಂಬಿಕೊಳ್ಳುವ ಚಿಂತೆ ಯೋಜನಾ ಆಯೋಗಕ್ಕಿರುವುದು ಸಹಜವಾದುದು. ಈ ಸಂಬಂಧದಲ್ಲಿ ಅಮೇರಿಕಾದಿಂದ ಈಚೆಗೆ ಬಂದಿರುವ ವಾರ್ತೆಗಳು ಆಶಾದಾಯಕವಾಗಿವೆ. ವಿದೇಶಗಳ ನೆರವಿನಿಂದ ಈ ಕೊರತೆಯನ್ನು ಬಾಯ್ಗೂಡಿಸಬೇಕೆಂದು ಭಾರತ ಸರಕಾರ ಇಚ್ಛಿಸುತ್ತಿದ್ದಂತೆಯೇ ಅಮೇರಿಕಾ ಈ ವರ್ಷ ಸುಮಾರು ೫೫ ಕೋಟಿ ರೂಪಾಯಿಗಳ ನೆರವು ನೀಡಲಿರುವುದೆಂದು ತಿಳಿದು ಬಂದಿದೆ. ಮೊನ್ನೆ ತಾನೆ ಭಾರತವನ್ನು ಸಂದರ್ಶಿಸಿದ ಡಲ್ಲೆಸರು ಮತ್ತು ಅವರೊಡನಿದ್ದ ಪರಸ್ಪರ ಸಂರಕ್ಷಣಾ ವಿಭಾಗದ ಡೈರೆಕ್ಟರ ಸ್ಟಾಸೆನ್ನರು ಅಮೇರಿಕನ್ ಕಾಂಗ್ರೆಸ್ ಸಮಿತಿಗಳ ಮುಂದೆ ಸಾಕ್ಷ್ಯಕೊಡುವಾಗ ಭಾರತಕ್ಕೆ ಪಂಚವಾರ್ಷಿಕ ಯೋಜನೆಯ ಬಗ್ಗೆ ಕೊಡುವ ಹಣದ ಮೊತ್ತವನ್ನು ಏರಿಸಬೇಕೆಂದು ಸೂಚಿಸಿದರು. ಐಸೆನ್‌ಹೋವರರು ಅಧ್ಯಕ್ಷರಾಗಿ ಚುನಾಯಿತರಾದ ಬೆನ್ನಿಗೇ ಅಮೇರಿಕವು ಸಂರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಹಣ ವೆಚ್ಚಮಾಡುವ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ಅಭಿವೃದ್ಧಿ ಕಾರ್ಯಕ್ಕೋಸ್ಕರ ನೀಡುತ್ತಿದ್ದ ಹಣವನ್ನು ಕಡಿಮೆ ಮಾಡುವ ಲಕ್ಷಣಗಳು ಕಂಡು ಬಂದವು. ಇದರಂತೆ ಭಾರತಕ್ಕೂ ಪಾಕಿಸ್ಥಾನಕ್ಕೂ ಒಟ್ಟಿಗೆ ೯೭ ಮಿಲಿಯ ಡಾಲರುಗಳಷ್ಟು ಸಹಾಯ ಮಾತ್ರ ಕೊಡಲು ಅಮೇರಿಕಾ ನಿರ್ಣಯಿಸಿತು. ಆದರೆ ಭಾರತದಲ್ಲಿ ಟ್ರೂಮನ ಸರಕಾರದ ರಾಯಭಾರಿಯಾಗಿದ್ದ ಚೆಸ್ಟರ್ ಬೌಲ್ಸ್ ಮುಂತಾದ ಅಮೇರಿಕನ್ ಧುರೀಣರು ಭಾರತಕ್ಕೊಂದೇ ಇನ್ನು ಮೂರುವರ್ಷಕಾಲ ಪ್ರತೀ ವರ್ಷ ಇನ್ನೂರು ಮಿಲಿಯ ಡಾಲರು ಸಹಾಯ ಕೊಡಬೇಕೆಂದು ಪ್ರತಿಪಾದಿಸುತ್ತಿದ್ದರು. ಡಲ್ಲೆಸರು ಇಷ್ಟರ ಮಟ್ಟಿಗೆ ತಮ್ಮ ಸರಕಾರದ ನೀತಿಯನ್ನು ಬದಲಿಸದಿದ್ದರೂ ಭಾರತಕ್ಕೆ ಕೊಡಬೇಕೆಂಬ ನೆರವಿನ ಮೊತ್ತವನ್ನು ಹೆಚ್ಚಿಸಲು ಶಿಫಾರಸು ಮಾಡಿದ್ದು ಸ್ತುತ್ಯ. ಭಾರತದ ಅರ್ಥಸಚಿವ ದೇ[illegible] ಹೊಸ ನೆರವು ನಮ್ಮ ಅವಶ್ಯಕತೆಗಳ ದೃಷ್ಟಿಯಿಂದ ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲವೆಂದಿರುವರು. ಈ ವರ್ಷ ನಾವು ಉಪಯೋಗಿಸಬಲ್ಲಂಥದ್ದಷ್ಟು ಹಣ ಇದರಿಂದ ದೊರೆತಂತಾಯಿತೆಂದು ದೇಶಮುಖರ ಅಭಿಪ್ರಾಯ. ಮುಂದಿನ ವರ್ಷಗಳಲ್ಲಿ ನಮ್ಮ ವೆಚ್ಚ ಹೆಚ್ಚಿಕೊಂಡಂತೆ ಅಮೇರಿಕನ ಸಹಾಯದ ಮಿತಿಯೂ ಏರಬಹುದೆಂಬ ಆಸೆಯಿದೆ. ಡಲ್ಲೆಸರೂ ಸ್ಟಾಸೆನ್ನರೂ ಈ ಮಾತನ್ನು ಸೂಚ್ಯವಾಗಿ ಉಲ್ಲೇಖಿಸಿರುವರು.

ಸಂಶಯ ಪರಿಹಾರ

ಡಲ್ಲೆಸರು ಹೊಸ ದಿಲ್ಲಿಗೆ ಬಂದು ಪ್ರಧಾನಿ ನೆಹರೂರವರನ್ನು ಮತ್ತು ಯೋಜನಾ ಆಯೋಗದ ಸದಸ್ಯರನ್ನು ಕಂಡು ವಿಚಾರ ವಿನಿಮಯ ನಡೆಸಿದ ಕಾಲದಲ್ಲಿ ಭಾರತವನ್ನು ಅಮೇರಿಕ ಕಾಣುವ ದೃಷ್ಟಿ ಸಾಕಷ್ಟು ಸ್ಪಷ್ಟವಾಗಿದ್ದಿತು. ಪಾಕಿಸ್ತಾನ ಮತ್ತು ಇತರ ದೇಶಗಳಲ್ಲಿ ಮಾಡಿದಂತೆ ಡಲ್ಲೆಸರು ಸೈನ್ಯಾಧಿಕಾರಿಗಳನ್ನು ಭಾರತದಲ್ಲಿ ಭೇಟಿಯಾಗಲಿಲ್ಲ. ನೆಹರೂರನ್ನು ಕಂಡು ಭಾರತದ ವಿದೇಶ ಧೋರಣೆಯ ತಿಳುವಳಿಕೆ ಮಾಡಿಕೊಂಡರು;

೨ನೇ ಪುಟ ನೋಡಿ

ಏಳು ವರುಷಗಳಲ್ಲಿ ಫಲ

ನಮ್ಮ ಸಿಗ್ಮ ಮುದಿಪುದ ರರಲ್ಲಿ ದಿನವಿಡಿ ಕೆಲಸ ಮಾಡುವ ಶ್ರಮಜೀವಿಗಳು, ಅಂಗಡಿಗಾರರು ವಕೀಲರು, ಡಾಕ್ಟರರು, ಎಂಜಿನಿಯರರು, ಬೇಸಾಯಗಾರರು, ವರ್ತಕರು ಇತ್ಯಾದಿ ತರಗತಿಯವರಿರುವರು. ಅವರ ಸಿಗ್ಮ ಮುಡಿಪುಗಳು ಚಿಕ್ಕ ಪುಟ್ಟ ಠೇವಣಾತಿಗಳಿಂದ ಪ್ರಾರಂಭವಾದುವು ಅಂದು ಇಲಿಯಂತಿದ್ದುವು ಇಂದು ಹುಲಿಯಂತಾಗಿವೆ. ಅಂತಹ ವಿವೇಕಪೂರ್ಣ ಮೂರ ಸರ್ಟಿಫಿಕೇಟನ್ನ ಸಿಗ್ಮ ಠೇವಣಾತಿದಾರರ ಕೂಟಕ್ಕೆ ನೀವೂ ಕೂಡಾ ಸೇರಿ ಭಾಗ್ಯವಂತರಾಗಬೇಕಾಗಿ ಆಹ್ವಾನಿಸುತ್ತೇವೆ.

ಆಧಾರ ನಿಧಿಗಳು ರೂ 5,00,000 00ಕ್ಕೂ ಮಿಕ್ಕಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ. 1925 ಹೆಡ್ ಆಫೀಸು: ಉಡುಪಿ

THE CANARA INDUSTRIAL & BANKING SYNDICATE LIMITED

Estd: 1925 H. O: UDIPI

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸುರಕ್ಷಿತತೆ, ಭದ್ರತೆ ಮತ್ತು ಸೇವಾತತ್ಪರತೆ
ಇವುಗಳಿಗೆ
ತವರುಮನೆಯಂತಿದ್ದು, ನಿಮ್ಮೆಲ್ಲರ ಸ್ನೇಹ, ಸಹಕಾರಗಳನ್ನು
ಅಪೇಕ್ಷಿಸುವ ಬೇಂಕು.

THE CANARA BANKING CORPORATION LTD.

Estd: 1906] [H. O.: UDIPI, (S. India)

ನವಯುಗ

ಉಡುಪಿ, ಗುರುವಾರ ೧೧-೬-'೫೩

ಸಿಂಗಮನರೀ ಹಾರಾಟ

ಕೊರಿಯಾದಲ್ಲಿ ಯುದ್ಧ ನಿಲ್ಲಿಸುವ ಬಗ್ಗೆ ಮಾಡಿದ ಪ್ರಯತ್ನಗಳು ಫಲ ಕೊಡುವ ಮಟ್ಟಕ್ಕೆ ಬಂದು ಮುಟ್ಟುವಾಗ, ದಕ್ಷಿಣ ಕೊರಿಯಾ ಅಪಸ್ವರವನ್ನೆತ್ತಿ, ಕ್ಷೋಭೆ ತುಂಬಿದ ವಾತಾವರಣವನ್ನು ನಿರ್ಮಿಸಲು ನೋಡುತ್ತಿದೆ. ಅಧ್ಯಕ್ಷ ಸಿಂಗಮನರೀಯವರಿಗೆ ಈಗ ತಾನೆ ಸಂಯುಕ್ತ ರಾಷ್ಟ್ರ ಸಂಘವು ಕಮ್ಯೂನಿಸ್ಟರೊಡನೆ ಮಾಡಿಕೊಂಡ ಒಪ್ಪಂದವು ಅಸಹ್ಯವೆನಿಸಿರುತ್ತದೆ. ಲೋಕದ ಎಲ್ಲ ಮುತ್ಸದ್ದಿಗಳೂ ಈ ಒಪ್ಪಂದ ನೆರವೇರಿದುದಕ್ಕೆ ಸಂತೋಷ ವ್ಯಕ್ತಗೊಳಿಸುತ್ತಿರುವಾಗ ಸಿಂಗಮನರೀಯವರು ಮುಖ ಗಂಟಿಕ್ಕಿಕೊಂಡರಲ್ಲದೆ-ಯಾರೂ ಎಣಿಸದ ರೀತಿಯಲ್ಲಿ ದಂಡಿನ ಕಾಯಿದೆಯನ್ನು ಸಾರಿರುವರು. ದಕ್ಷಿಣ ಕೊರಿಯಾದ ಎಲ್ಲ ಸಶಸ್ತ್ರ ಪಡೆಗಳನ್ನೂ ರಾಷ್ಟ್ರದಲ್ಲಿ ಉಂಟಾಗಿರುವ ಗಂಭೀರ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಿರುವಂತೆ ಇವರು ಹೇಳಿರುವರು: ವಿದೇಶಗಳಲ್ಲಿರುವ ಮಿಲಿಟರಿ ಅಧಿಕಾರಿಗಳನ್ನೂ ರಜೆಯ ಮೇಲಿರುವ ಸೈನಿಕರನ್ನೂ ದಕ್ಷಿಣ ಕೊರಿಯಕ್ಕೆ ತಕ್ಷಣ ಮರಳಿ ಬರಬೇಕೆಂದು ಆಜ್ಞೆ ಕೊಟ್ಟಿರುವರು. ರಜೆಯ ಮೇಲೆ ಹೋಗಲಿದ್ದ ಸೈನಿಕರ ರಜೆಯನ್ನು ರದ್ದುಗೊಳಿಸಿರುವರು. ಮಂತ್ರಿ ಮಂಡಳದ ಸಭೆಯೊಂದನ್ನು ಕರೆದ ಬೆನ್ನಿಗೆ ಸಿಂಗಮನರೀಯವರ ಈ ಘೋಷಣೆ ಹೊರಬಿದ್ದಿತು. ಈ ನಾಟಕೀಯ ನಡವಳಿಕೆಯಿಂದ ಸಂಯುಕ್ತ ರಾಷ್ಟ್ರ ಸಂಘದ ವಲಯದಲ್ಲಿ ಆಶ್ಚರ್ಯವುಂಟಾಗಿರುತ್ತದೆ. ಹಾಗೆಂದು ಸಿಂಗಮನರೀಯವರಿಗೆ ಕಮ್ಯೂನಿಸ್ಟರೊಡನೆ ಒಡಂಬಡಿಕೆ ಮಾಡಿಕೊಳ್ಳುವುದು ಬೇಕಾಗಿರಲಿಲ್ಲವೆಂಬ ಸಂಗತಿ ಈ ಮೊದಲೇ ಸ್ಪಷ್ಟವಾಗಿದ್ದಿತು. ಸಂಯುಕ್ತರಾಷ್ಟ್ರ ಸಂಘವು ಕಮ್ಯೂನಿಸ್ಟರ ಕೂಡೆ ಸಂಧಿ ಕರಾರು ಮಾಡಿಕೊಂಡ ಪಕ್ಷದಲ್ಲಿ ದಕ್ಷಿಣ ಕೊರಿಯಾವೊಂದೇ ಉತ್ತರ ಕೊರಿಯಾದ ಮೇಲೆ ಯುದ್ಧ ಕೈಗೊಳ್ಳುವುದಲ್ಲದೆ, ಯಾಲೂ ನದಿಯನ್ನು ದಾಟಿ ಮಂಚೂರಿಯಕ್ಕೂ ಧಾಳಿ ಇಡುವುದೆಂಬ ಬೆದರಿಕೆಯನ್ನು ಸಿಂಗಮನರೀ ಕಳೆದ ವಾರ ಹಾಕಿದ್ದರು. ಆದರೆ ಅಧ್ಯಕ್ಷ ಐಸನ್ ಹಾವರರು ಸಿಂಗಮನರೀಯವರ ಕಿವಿಯನ್ನು ಚೆನ್ನಾಗಿ ಹಿಂಡಿ, ಸುಮ್ಮನುಳಿಯಬೇಕೆಂದು ಒತ್ತಾಯಿಸಿದ್ದರು. ಒಲ್ಲದ ಮನಸ್ಸಿನಿಂದಲೇ ಆದರೂ ದಕ್ಷಿಣ ಕೊರಿಯಾ ಸಂಧಿ ಕರಾರಿಗೆ ಸಹಿ ಹಾಕುವುದೆಂಬ ಆಶೆ ಆ ಬಳಿಕ ಉಂಟಾಯಿತು. ಆದರೆ ದಕ್ಷಿಣ ಕೊರಿಯಾದ ಪ್ರತಿನಿಧಿಯು ರಾಜಿಪಂಚಾಯತಿಕೆಯಲ್ಲಿ ಭಾಗವಹಿಸಲಿಲ್ಲ ಮಾತ್ರವಲ್ಲ ಸಿಂಗಮನರೀಯವರು ಅಧ್ಯಕ್ಷ ಐಸೆನಹೋವರರಿಗೆ ಒಂದು ಸಂದೇಶ ಕಳಿಸಿ, ಕೆಲವು ಶರ್ತಗಳನ್ನು ಮುಂದಿಟ್ಟರು. ಅದರಂತೆ ಕೊರಿಯಾದಿಂದ ಎಲ್ಲ ವಿದೇಶೀ ಸೈನ್ಯಗಳೂ ಹೊರಡಬೇಕು; ಅಮೇರಿಕವು ದಕ್ಷಿಣ ಕೊರಿಯಾದ ಸಂರಕ್ಷಣೆಯ ಹೊಣೆ ಹೊರುವಂತೆ ಒಪ್ಪಂದ ಮಾಡಿಕೊಳ್ಳಬೇಕು; ಮತ್ತು ಏಕೀಕೃತ ಕೊರಿಯಾವನ್ನು ಕಟ್ಟುವ ದಕ್ಷಿಣ ಕೊರಿಯಾದ ಪ್ರಯತ್ನಗಳನ್ನು ತಡೆಯಕೂಡದು. ಇದಕ್ಕೆ ಐಸೆನ್ ಹಾವರರು ಉತ್ತರಕೊಟ್ಟದ್ದು, ಎಲ್ಲಕ್ಕಾ ಮೊದಲು ಸಿಂಗಮನರೀಯವರು ಯುದ್ಧ ಕೈದಿಗಳ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರ ಸಂಘ ಮಾಡುವ ಕರಾರಿನ ವಿರುದ್ಧ ತುಟಿಯೆತ್ತಬಾರದೆಂದು ತಿಳಿಸಿರುವರು ದಕ್ಷಿಣಕೊರಿಯಾದ ಸಂರಕ್ಷಣಾಭಾರ ಹೊರುವ ಆಶ್ವಾಸನೆಯನ್ನು ಅವರು ನೀಡಿದರೂ ಸಿಂಗಮನರೀಯವರಿಗೆ ಅಮೇರಿಕನ್ ಒತ್ತಾಯ ಹಿಡಿಸದೆ ಹೋಯಿತು. ಈಗ ಕೊರಿಯಾದಲ್ಲಿ ದಕ್ಷಿಣಕೊರಿಯಾದ ೫ ಲಕ್ಷ ಸೈನಿಕರು ಸುಮಾರು ಮುಕ್ಕಾಲಂಶ ಪ್ರದೇಶದಲ್ಲಿ ಯುದ್ಧ ನಡೆಸುತ್ತಿರುವರು. ಈ ಸೈನ್ಯಬಲದ ಮೇಲೆ ಸಿಂಗಮನರೀ ಆಶೆ ಕಟ್ಟಿಕೊಂಡಂತಿದೆ. ಆದರೆ ಕಮ್ಯೂನಿಸ್ಟರ ಕೂಡೆ ೧೦ ಲಕ್ಷ ಸೈನ್ಯವಿದೆ ಎಂಬುದನ್ನೂ ದಕ್ಷಿಣ ಕೊರಿಯದ ಸೈನ್ಯಕ್ಕೆ ಸಾಮಾಗ್ರಿಗಳನ್ನು ಅಮೇರಿಕಾ ಒದಗಿಸುತ್ತಿದೆ ಎಂಬುದನ್ನೂ ನೆನೆದರೆ ಸಿಂಗಮನರೀ ಹಾರಾಟ ನಡುನೀರಿನಲ್ಲಿ ಬೀಸುವ ರೀತಿಯಲ್ಲಿದೆ ಎಂಬುದು ವ್ಯಕ್ತವಾಗುತ್ತದೆ. ಸಿಂಗಮನರೀಯವರ ಬೆಂಬಲಕ್ಕೆ ಅಮೇರಿಕದಿಂದ ರಿಪಬ್ಲಿಕನ್ನ ಧುರೀಣರಾದ ಟಾಫ್ಟ್ ಮುಂತಾದವರು ಇದ್ದಂತಿದೆ. ಕೊರಿಯಾದ ಮಟ್ಟಿಗೆ ಅಮೇರಿಕಾವು ಸಂಯುಕ್ತ ರಾಷ್ಟ್ರಸಂಘದೊಂದಿಗೆ ಹೆಜ್ಜೆ ಇಡಕೂಡದೆಂದು ಟಾಫ್ಟರು ಮೊನ್ನೆ ಹೇಳಿದಾಗ ಒಪ್ಪಂದವನ್ನು ಮಾಡಬೇಕೆಂದು ಭಾರತ ಬ್ರಿಟನುಗಳು ಒತ್ತಾಯಿಸುತ್ತಿರುವುದಕ್ಕೆ ಅವರಲ್ಲಿ ಅಸಮಾಧಾನ ತುಂಬಿದ್ದು ಸ್ಪಷ್ಟಗೊಳ್ಳುತಿತ್ತು. ಐಸೆನ ಹಾವರರು ಇದಕ್ಕೆ ಮಾರ್ನುಡಿದು ನಮಗೆ ಒಂದೆಡೆ ಸ್ನೇಹಿತರು ಬೇಕು. ಇನ್ನೊಂದೆಡೆ ಬೇಡವೆಂಬ ನೀತಿ ಸಲ್ಲದೆಂದು ಹೇಳಿದ್ದರೂ ಟ್ಯಾಫ್ಟರಿಗೆ ತೃಪ್ತಿಯಾಗಿಲ್ಲ. ಸಿಂಗಮನರೀಯವರು ಕೈದಿಗಳ ಯೋಗಕ್ಷೇಮ ನೋಡಿಕೊಳ್ಳಲು ಬರುವ ತಟಸ್ಥ ರಾಷ್ಟ್ರದ (ಭಾರತದ) ಸೈನ್ಯವನ್ನು ಹೊಡೆದೋಡಿಸಲಾಗುವುದೆಂದೂ ಚೀನೀ ಕಮ್ಯೂನಿಸ್ಟರನ್ನು ಬಗ್ಗು ಬಡೆಯಲು ಚ್ಯಾಂಗ ಕೈಶೇಕರು ದಕ್ಷಿಣದಲ್ಲಿ ಧಾಳಿ ಕೈಗೊಳ್ಳುವಂತೆ ವಿನಂತಿಸಲಾಗುವುದೆಂದೂ ಹೇಳಿ ಎಲ್ಲರ ಸಹಾನುಭೂತಿಯನ್ನು ಕಳೆದುಕೊಂಡಿರುವರು. ಏಕೀಕೃತ ಕೊರಿಯಾವನ್ನು ಕೈಗೂಡಿಸುವುದು ರಾಷ್ಟ್ರಸಂಘದ ಉದ್ದೇಶವಾಗಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ ಉಳಿದ ಸಮಸ್ಯೆಗಳ ಇತ್ಯರ್ಥವನ್ನೆ ಅದು ಹೊಂದಿಕೊಂಡಿದೆಂಬುದನ್ನು ಮರೆಯಲಾಗದು. ರಾಷ್ಟ್ರಸಂಘವು ಕಮ್ಯೂನಿಸ್ಟರನ್ನು ಆಕ್ರಮಣ ಪ್ರದೇಶದಿಂದ ಹಿಂದೆ ದೂಡಿದೆ; ಮತ್ತು ೯ನೇ ದಿನಾಂಕ ಯುದ್ಧ ವಿರಾಮ ರೇಖೆಯನ್ನು ಗೊತ್ತು ಹಚ್ಚುವುದಕ್ಕೆ ಸಭೆಯೂ ಸೇರಿರುತ್ತದೆ. ಇಂಥದರಲ್ಲಿ ರಾಷ್ಟ್ರ ಸಂಘದ ಅಭಿಪ್ರಾಯವನ್ನು ಮನ್ನಿಸುವುದೇ ಸಿಂಗಮನರೀಯವರಿಗೆ ಉಚಿತವಲ್ಲದೆ, ಹಾರಾಟ ಚೀರಾಟ ಯೋಗ್ಯ ಫಲ ಕೊಡದು.

ಯುದ್ಧ ಕೈದಿಗಳ ಸಂಬಂಧದಲ್ಲಿ ಒಪ್ಪಂದ

ಭಾರತದ ಮೇಲೆಯೇ ಅಧಿಕ ಹೊಣೆ

ಕಳೆದ ಮೂರು ವರ್ಷಗಳಿಂದ ಕೊರಿಯದ ನೆಲದಲ್ಲಿ ನಡೆಯುತಿದ್ದ ಕಾಳಗವು ಈಗ ನಿಲ್ಲುವುದೆಂಬ ನಿಶ್ಚಿತ ಸೂಚನೆ ಕಾಣಿಸಿಕೊಂಡಿದೆ. ಇನ್ನು ಹೆಚ್ಚೆಂದರೆ ಹತ್ತಿಪ್ಪತ್ತು ದಿನಗಳ ವಿಳಂಬವಾದೀತೋ ಅಥವಾ ಅಷ್ಟೂ ಇಲ್ಲವೊ ಎನ್ನುವಷ್ಟರ ಮಟ್ಟಿಗೆ ಪರಿಸ್ಥಿತಿಯು ಆಶಾದಾಯಕವಾಗಿರುತ್ತದೆ. ಸಂಯುಕ್ತರಾಷ್ಟ್ರ ಸಂಘವು ಕೊನೆಯಸಲ ಮಾಡಿದ ಸೂಚನೆಗಳು ಸಾಮಾನ್ಯತ: ಸ್ವೀಕಾರಾರ್ಹವಾಗಿದ್ದವೆಂಬುದನ್ನು ಮೊದಲೇ ತಿಳಿಸಿರುವೆವಷ್ಟೆ! ಇದಕ್ಕೆ ಕಮ್ಯೂನಿಸ್ಟರ ಪ್ರತಿಕ್ರಿಯೆ ಏನೆಂಬುದನ್ನು ತಿಳಿದುಕೊಳ್ಳದೆ ಸಂಧಾನದ ಮಾತುಕತೆಗಳು ಸಫಲಗೊಳ್ಳುವುವೊ ಇಲ್ಲವೊ ಎಂಬುದು ಸ್ಪಷ್ಟವಾಗಿರಲಿಲ್ಲ. ಆದರೆ ಕಮ್ಯೂನಿಸ್ಟರು ತಮ್ಮ ಪ್ರತಿಕ್ರಿಯೆಯನ್ನು ಇಷ್ಟರಲ್ಲಿಯೇ ತಿಳಿಸಿ, ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಭವಿಷ್ಯ ನಿರ್ಣಯವನ್ನು ಯಾವ ರೀತಿ ಕೈಗೊಳ್ಳಬೇಕೆಂಬುದನ್ನು ನಿರ್ಧರಿಸಿರುವರು. ಸಂಯುಕ್ತರಾಷ್ಟ್ರ ಸಂಘದ ಕಡೆಯಿಂದ ಮಾಡಿದ ಸೂಚನೆಯಲ್ಲಿ ಸ್ವದೇಶಕ್ಕೆ ಮರಳಿ ಹೋಗಲು ಒಪ್ಪದ ಯುದ್ಧ ಕೈದಿಗಳನ್ನು ೯೦ ದಿನಗಳವರೆಗೆ ತಟಸ್ಥ ರಾಷ್ಟ್ರಗಳ ಗುಂಪಿನ ಸಂರಕ್ಷಣೆಗೆ ಒಪ್ಪಿಸಬೇಕು. ಆ ಅವಧಿಯಲ್ಲಿ ಕಮ್ಯೂನಿಸ್ಟರು ಈ ಕೈದಿಗಳನ್ನು ಕಂಡು ಸ್ವದೇಶಕ್ಕೆ ಮರಳಬೇಕೆಂದು ಮನವೊಲಿಸಬಹುದು. ಆದರೆ ಇದಕ್ಕೆ ಒಪ್ಪದ ಉಳಿದ ಕೈದಿಗಳನ್ನೆಲ್ಲ ಸಂಯುಕ್ತ ರಾಷ್ಟ್ರ ಸಂಘಕ್ಕೆ ಒಪ್ಪಿಸಿ ಕೊಡಬೇಕು ಎಂದಿತ್ತು. ಇದನ್ನು ಕಮ್ಯೂನಿಸ್ಟರು ಒಪ್ಪದೆ ಪ್ರತಿಸೂಚನೆ ಮಾಡಿದರು.

ಸಂಧಿ ಕರಾರಿಗೆ ಸಹಿ

ಇವು ಎಣಿಸಿದುದಕ್ಕಿಂತಲೂ ಹೆಚ್ಚು ಅನುಕೂಲವಾಗಿರುತ್ತವೆ. ೯೦ ದಿನಗಳವರೆಗೆ ತಟಸ್ಥ ರಾಷ್ಟ್ರಗಳ ವಶದಲ್ಲಿರುವ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಭವಿಷ್ಯ ನಿರ್ಣಯವನ್ನು ಆ ಕೂಡಲೇ ಸೇರುವ ರಾಜಕೀಯ ಪರಿಷತ್ತು ೩೦ ದಿನಗಳಲ್ಲಿ ನಿರ್ಣಯಿಸಬೇಕು. ಆಗ ಉಭಯ ಸಮ್ಮತ ನಿರ್ಧಾರಕ್ಕೆ ಬರಲಾಗದಿದ್ದ ಪಕ್ಷದಲ್ಲಿ ತಟಸ್ಥ ರಾಷ್ಟ್ರವೊಂದರಲ್ಲಿ ಕೈದಿಗಳನ್ನು ಒಯ್ದು ಬಿಡಬೇಕು ಎಂಬುದು ಕಮ್ಯೂನಿಸ್ಟರ ಪುನರ್ವಿಮರ್ಶಿತ ಅಭಿಪ್ರಾಯ. ಹೀಗೆ ಒಟ್ಟಾರೆ ಮೇಲಿಂದ ಕಮ್ಯೂನಿಸ್ಟ ಚೈನಾ ಮತ್ತು ರಶಿಯಾಗಳು ಹಿಂದೊಮ್ಮೆ ತಿರಸ್ಕರಿಸಿದ ಭಾರತದ ಠರಾವನ್ನೆ ಈ ಒಪ್ಪಂದದಕರಾರು ಹೋಲುತ್ತದೆ. ಆದುದರಿಂದ ಸಂಯುಕ್ತರಾಷ್ಟ್ರ ಸಂಘವು ಈ ಶರ್ತಗಳನ್ನು ಒಪ್ಪಿಕೊಳ್ಳುವುದೆಂಬ ಸಂಪೂರ್ಣ ಭರವಸೆ ಇದ್ದಿತು. ಈಗ ತಾನೆ ಬಂದ ವರದಿಗಳಂತೆ ಸಂಧಿ ಕರಾರಿಗೆ ಇಕ್ಕಡೆಯವರೂ ಜೂನ್ ೮ನೇ ದಿನಾಂಕ ಸಹಿಹಾಕಿದರು. ಇದುವರೆಗೆ ಯುದ್ಧದಲ್ಲಿ ಸುಮಾರು ೨೦ ಲಕ್ಷ ಜನರಿಗೆ ಸಾವು ನೋವುಗಳು ಸಂಭವಿಸಿವೆ. ಬೇಗನೇ ಎಂದರೆ ಇದೇ ೨೦ನೇ ದಿನಾಂಕದೊಳಗಾಗಿ ಯುದ್ಧ ನಿಲ್ಲುವುದು ನಿಶ್ಚಿತವೆಂಬ ಅಭಿಪ್ರಾಯವು-ಕದನ ವಿರಾಮದ ಮಾತುಕತೆಗಳ ಯಶಸ್ಸಿಗೆ ಆತಂಕವಾಗಿದ್ದ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಪ್ರಶ್ನೆ ಇತ್ಯರ್ಥಗೊಂಡುದರಿಂದ—ಈಗ ಪುಷ್ಟಿ ಪಡೆದಿರುತ್ತದೆ. ಹೀಗಾಗಿ ೧೫೦ ಮೈಲು ಉದ್ದದ ರಣರಂಗದಲ್ಲಿ ಚಕಮಕಿಗಳು ಕ್ಷೀಣವಾಗಿದೆ, ಶಾಂತ ವಾತಾವರಣವೇ ಈಗ ಕಂಡುಬರುತ್ತಿದೆ.

ನೆಹರೂರಿಂದ ಅಭಿನಂದನೆ

ಸಾಮಾನ್ಯವಾಗಿ ಸೈನಿಕರೆಲ್ಲರಿಗೂ ಈಗ ನಡೆದ ಒಪ್ಪಂದದಿಂದ ಸಂತೋಷವೆನಿಸಿದೆ. ಅವರೆಲ್ಲರ ನಾಲಗೆಯ ಮೇಲೆ "ಶಾಂತಿ" ಎಂಬೀ ಶಬ್ದವು ಕುಣಿಯುತ್ತಿದೆಯಾಗಿ ವರದಿಗಳು ಹೇಳುತ್ತವೆ. ಕೇವಲ ಸೈನಿಕರಿಗೆಂದಷ್ಟೇ ಅಲ್ಲ— ಜಗತ್ತಿನ ರಾಷ್ಟ್ರಗಳ ನಾಯಕ ಮಂಡಳಕ್ಕೂ ಈಗ ನೆರವೇರಿದ ಒಡಂಬಡಿಕೆಯು ಸಂತೋಷವನ್ನುಂಟುಮಾಡಿವೆ. ಭಾರತವು ಕೊರಿಯಾ ಕದನ ವಿರಾಮದ ಸಂಗತಿಯಲ್ಲಿ ಪೂರ್ವ ಮತ್ತು ಪಶ್ಚಿಮದಬಣಗಳ ಯಥಾರ್ಥ ನಿಲುಮೆಯನ್ನು ಮನವರಿಕೆ ಮಾಡಿಕೊಂಡು ಗೌರವ ಪೂರ್ಣ ಒಡಂಬಡಿಕೆಯಾಗುವಂತೆ ಯತ್ನಿಸಿ, ಪ್ರತ್ಯಕ್ಷವಾಗಿಯಲ್ಲವಾದರೂ ಇಧೀಗ ಪರೋಕ್ಷವಾಗಿ ಯಶಸ್ಸು ಪಡೆದುದರಿಂದ, ಅದಕ್ಕೆ ಆನಂದವೆನಿಸುವುದು ಸ್ವಾಭಾವಿಕ. ಪ್ರಧಾನಿ ನೆಹರುಗಳು ಲಂಡನಿನಿಂದ ಅಧ್ಯಕ್ಷ ಐಸೆನ್ ಹೋವರ್ ಮತ್ತು ಚೀನೀ ಪ್ರಧಾನಿ ಚೌ ಎನ್ ಲಾಯರಿಗೆ ಅಭಿನಂದನಾಪರ ಸಂದೇಶಗಳನ್ನು ಕಳಿಸಿ, ಮಹತ್ವದ ಬಿಕ್ಕಟ್ಟೊಂದನ್ನು ಮುತ್ಸದ್ದಿತನದಿಂದ ಅಂತ್ಯಗೊಳಿಸಿದುದಕ್ಕೆ ಸಂತೋಷ ವ್ಯಕ್ತಪಡಿಸಿರುವರು. ಜಾಗತಿಕ ಶಾಂತಿಗೆ ಪೂರ್ವ ಪೀಠಿಕೆಯಾಗಿ ಯುದ್ಧ ಕೈದಿಗಳ ವಿನಿಮಯದ ಸಂಗತಿಯಲ್ಲಾದ ಈಗಿನ ಒಪ್ಪಂದವಿರುವುದಾಗಿ ತಾನು ಭಾವಿಸುತ್ತೇನೆಂದು ನೆಹರೂ ಈ ಸಂದೇಶದಲ್ಲಿ ಹೇಳಿರುವರು.

ಹೆಚ್ಚಿದ ಜವಾಬ್ದಾರಿ

ಕೊರಿಯಾದಲ್ಲಿ ಯುದ್ಧ ನಿಲ್ಲಿಸಬೇಕೆಂಬ ಭಾರತದ ಬಯಕೆ ಪೂರ್ಣಗೊಳ್ಳುತ್ತಿದ್ದಂತೆ, ಅದರ ಮೇಲಿನ ಹೊಣೆಗಾರಿಕೆಯೂ ಹೆಚ್ಚಿಕೊಳ್ಳುತ್ತಿದೆ. ಸಂಧಿಗಾಗಿ ತನ್ನ ಕಾತರವನ್ನು ಭಾರತ ತೋರಿಸಿ, ಮೊದಲಿಂದಲೂ ನೈತಿಕ ನೆಲಗಟ್ಟಿನ ಮೇಲೆ ತನ್ನ ನಿಲುವೆಯನ್ನು ಸ್ಥಾಪಿಸಿದ್ದುದರಿಂದ ಭಾರತವನ್ನೆ ನಿಷ್ಪಕ್ಷಪಾತವಾದ ನಿರ್ಣಯ ಕೊಡಬಲ್ಲ ರಾಷ್ಟ್ರವೆಂದು ಉಭಯ ಪಕ್ಷದವರೂ ಆಶ್ರಯಿಸಿರುವರು. ಭಾರತವು ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷಸ್ಥಾನದಲ್ಲಿರುತ್ತದೆ; ಮತ್ತು ಉಳಿದ ಸದಸ್ಯ ರಾಷ್ಟ್ರಗಳಾದ ಪೋಲಂಡ, ಜೆಕೊಸ್ಲೊವಾಕಿಯಾ ಮತ್ತು ಸ್ವಿಜರ್‌ಲೇಂಡ್, ಸ್ವೀಡನುಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿದಾಗ ತೀರ್ಪು ಕೊಡುವ ಅಧಿಕಾರ ಭಾರತಕ್ಕೆ ಸೇರಿದೆ. ಇದೆಲ್ಲಕ್ಕಿಂತ ಮಹತ್ವದ ಸಂಗತಿ ಇನ್ನೊಂದಿದೆ. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಸಂರಕ್ಷಣೆಯ ಹೊಣೆಯನ್ನು ಭಾರತವೇ ಹೊರಬೇಕಾಗುತ್ತದೆ; ಅದಕ್ಕೋಸ್ಕರ ಸಶಸ್ತ್ರ ಸೈನಿಕರ ಪಡೆಯನ್ನು ಕೊರಿಯಾಕ್ಕೆ ಭಾರತ ಕಳಿಸಬೇಕು. ದಕ್ಷಿಣ ಕೊರಿಯಾವು ಭಾರತದ ಮೇಲೆ ಉರಿ ಕಾರುತ್ತಿರುವಾಗ ಮತ್ತು ಒಪ್ಪಂದದ ವಿರುದ್ಧ ಗುಲ್ಲೆಬ್ಬಿಸುತ್ತಿರುವಾಗ ಈ ಕೆಲಸ ಎಣಿಸಿದಷ್ಟು ಸುಲಭವೆಂದು ತೋರುವುದಿಲ್ಲ. ಇದರಂತೆ ರಾಜಕೀಯ ಪರಿಷತ್ತಿನಲ್ಲಿ ಭವಿಷ್ಯ ನಿರ್ಣಯವಾಗದ ಕೈದಿಗಳು ಪ್ರಾಯಶಃ ಭಾರತದಲ್ಲಿಯೇ ಬಿಡುಗಡೆ ಮಾಡಲ್ಪಡುವ ಸಂಭವ ಹೆಚ್ಚು. ಇವರ ಪೋಷಣೆಯ ವೆಚ್ಚವನ್ನು ಸಂಯುಕ್ತ ರಾಷ್ಟ್ರ ಸಂಘ ವಹಿಸಿಕೊಂಡರೂ, ಅವರಿಗೆ ಉಳಕೊಳ್ಳಲು ತಕ್ಕ ಅನುಕೂಲತೆಗಳನ್ನು ಭಾರತ ಸರಕಾರ ಮಾಡಿಕೊಡಬೇಕಾಗುವುದು. ಇದು ಸಣ್ಣ ವಿಷಯವೆಂದು ದುರ್ಲಕ್ಷಿಸುವಂತಿಲ್ಲ. ಆದರೂ ಲೋಕ ಶಾಂತಿಯನ್ನು ಕಾಪಾಡಿಕೊಳ್ಳುವ ಘನವಾದ ಉದ್ದೇಶಕ್ಕೋಸ್ಕರ ನೆಹರೂರವರು ತಮ್ಮ ಎಲ್ಲ ಬುದ್ಧಿವಂತಿಕೆಯನ್ನೂ ವರ್ಚಸ್ಸನ್ನೂ ಈ ಸಂಗತಿಯಲ್ಲಿ ಉಪಯೋಗಿಸಲು ಸಿದ್ಧರಿರುವುದು ಶುಭ ಲಕ್ಷಣ

ಪ್ರಧಾನಿಗಳ ಪರಿಷತ್ತು

ಪ್ರಕೃತಕ್ಕೆ ನೆಹರೂರವರು ಲಂಡನಿನಲ್ಲಿದ್ದು ರಾಷ್ಟ್ರಕೂಟದ ಪ್ರಧಾನಿಗಳ ಪರಿಷತ್ತಿನಲ್ಲಿ ಭಾಗವಹಿಸಿದರು. ಈ ಪರಿಷತ್ತಿನ ಮಹತ್ವವನ್ನು ಮುಂದೆ ಸೇರಲಿರುವ ಬೆರ್ಮುಡಾದ ತ್ರಿರಾಷ್ಟ್ರ ಪರಿಷತ್ತಿನ ಹಿನ್ನೆಲೆಯಲ್ಲಿ ವಿಮರ್ಶಿಸಬೇಕಾಗಿರುತ್ತದೆ. ಜಾಗತಿಕ ಸಮಸ್ಯೆಗಳನ್ನೆಲ್ಲ ಈ ಪರಿಷತ್ತು ಆಮೂಲಾಗ್ರವಾಗಿ ಪರ್ಯಾಲೋಚಿಸುತ್ತಿದೆಯಲ್ಲದೆ, ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳ ಆರ್ಥಿಕ ಸಮತೋಲನವನ್ನು ಕಾಯ್ದುಕೊಳ್ಳುವ ವಿಚಾರವನ್ನೂ ಮಾಡುತ್ತದೆ. ಯುದ್ಧ ಪ್ರಿಯರೆನಿಸಿದ ಚರ್ಚಿಲ್ಲರು ಕೂಡ ಈಗ ಶಾಂತಿದೂತನ ದಾಸ್ಯವಹಿಸಲು ಮುಂಬಂದಿರುವುದರಿಂದ ಜಾಗತಿಕ ಸ್ಥಿತಿಯಲ್ಲಿ ಮಹತ್ವದ ಪರಿವರ್ತನೆಯನ್ನು ಎಲ್ಲರೂ ಅಪೇಕ್ಷಿಸಬಹುದು. ರಶಿಯಾದೊಡನೆ ಮುಖ್ಯ ವಿಷಯಗಳಲ್ಲಿ ಸಾಮಾನ್ಯ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ಚರ್ಚಿಲರು ಮಾಡಿದ ಸೂಚನೆಗೆ ರಾಷ್ಟ್ರಕೂಟದ ಎಲ್ಲ ಪ್ರಧಾನರೂ ಸಮ್ಮತಿಯನ್ನು ತೋರಿಸುವರು ಮಾತ್ರವಲ್ಲ ರಶಿಯಾದ ಪ್ರತಿಕ್ರಿಯೆಯೇನೆಂಬ ಬಗ್ಗೆ ಸೂಕ್ಷ್ಮವಾದ ಅಭ್ಯಾಸವೂ ಲಂಡನಿನಲ್ಲಿ ನಡೆದಿರುತ್ತದೆ. ಪ್ರಾವ್ಡಾ ಪತ್ರಿಕೆಯು ಬೆರ್ಮುಡಾದಲ್ಲಿ ಸೇರಲಿರುವ ತ್ರಿರಾಷ್ಟ್ರ ಪರಿಷತ್ತು ರಶಿಯಾದ ವಿರುದ್ಧ ಹುಯಿಲೆಬ್ಬಿಸುವುದನ್ನೇ ಉದ್ದೇಶವಾಗಿಟ್ಟುಕೊಂಡಿದೆ ಎಂದು ಹಿಂದೊಮ್ಮೆ ಆರೋಪಿಸಿದ್ದಿತು. ಈಗ ಲಂಡನಿನಲ್ಲಿ ರಶಿಯಾದ ಮೆಲೆಂಕೋವರು ಬೆರ್ಮುಡಾ ಪರಿಷತ್ತನ್ನೆ ತಪ್ಪಿಸುವ ಬಗ್ಗೆ ಹೊಸ ಸೂಚನೆ ಕಳಿಸಿರುವರೆಂಬ ವದಂತಿ ಹಬ್ಬಿರುತ್ತದೆ

ಮೆಲೆಂಕೋವರು ಏನಂತೆ?

ಇದಕ್ಕೆ ಪೋಷಕವಾಗುವಂತೆ ರಶಿಯದ ರಾಯಭಾರಿ ಜೆಕೋಬ ಮಲಿಕರು ಪ್ರಧಾನಿ ಚರ್ಚಿಲರನ್ನು ಅವರ ನಿವಾಸದಲ್ಲಿ ಗುಪ್ತವಾಗಿ ಭೇಟಿಯಾಗಿ ತಾಸೆರಡು ತಾಸು ಕಾಲ ರಹಸ್ಯ ಮಾತುಕತೆಗಳನ್ನು ನಡೆಸಿದ ಸುದ್ದಿ ಬಂದಿದೆ. ಸರಕಾರದ ಕಡೆಯಿಂದ ಇದು ಸೌಹಾರ್ದಯುತವಾದ ಘಟನೆಯಾಗಿತ್ತೆಂಬ ಹೇಳಿಕೆ ದೊರೆತರೂ ರಾಜಕೀಯ ವರ್ತುಲಗಳಲ್ಲಿ ಇದಕ್ಕೆ ತುಂಬ ಮಹತ್ವ ದೊರೆತಿರುತ್ತದೆ ಮೆಲೆಂಕೋವರು ಐಸೆನ ಹಾವರರಿಗೆ ಒಂದು ಸಂದೇಶವನ್ನು ಕಳಿಸಿಕೊಟ್ಟಿರುವರೆಂದೂ ಅದರ ಸಾರಾಂಶವನ್ನು ಚರ್ಚಿಲರಿಗೆ ಕೂಡ ಮುಟ್ಟಿಸಿರುವರೆಂದೂ ಬಂದ ಸುದ್ದಿಯ ಮೇಲಿಂದ, ರಶಿಯಾವು ಬೆರ್ಮುಡಾ ಪರಿಷತ್ತಿಗೆ ಮೊದಲೇ ಚತೂರಾಷ್ಟ್ರಗಳ ಧುರೀಣರ ಪರಿಷತ್ತು ಸೇರಿಸುವ ಪ್ರಯತ್ನದಲ್ಲಿರುವದೆಂದು ಊಹಿಸಲಾಗಿದೆ. ಫ್ರಾನ್ಸಿನಲ್ಲಿ ಯುದ್ಧೋತ್ತರಕಾಲದ ೧೮ನೇ ಮಂತ್ರಿಮಂಡಳವು ಕೆಲದಿನಗಳ ಹಿಂದೆ ಉರುಳಿಕೊಂಡು ೧೯ನೇ ಮಂತ್ರಿಮಂಡಳವು ಇನ್ನೂ ರಚಿಸಲ್ಪಟ್ಟಿಲ್ಲವಾದುದರಿಂದ ಇದೇ ೧೬ನೇ ದಿನಾಂಕ ತೊಡಗುವುದೆಂದಿದ್ದ ಬೆರ್ಮುಡಾ ಪರಿಷತ್ತು ಹಿಂದೆ ಬಿದ್ದಿದೆ ಇದರಿಂದ ರಶಿಯಾದ ಹೊಸ ಸೂಚನೆಗಳನ್ನು ವಿವರವಾಗಿ ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರಲು ಸಹಾಯವಾದೀತೆಂದು ಊಹಿಸಬಹುದು. ಬೆರ್ಮುಡಾದ ತ್ರಿರಾಷ್ಟ್ರ ಪರಿಷತ್ತು ಜರಗುವುದು ನಿಶ್ಚಿತವೆಂದಿಟ್ಟುಕೊಂಡರೂ, ಅದಕ್ಕೆ ಮುಂಚೆ ಚರ್ಚಿಲರು ಮೆಲೆಂಕೋವರನ್ನು ಕಂಡು ಮಾತನಾಡುವುದು ಸಂಭವನೀಯ. ಇದರಿಂದ ಬೆರ್ಮುಡಾ ಪರಿಷತ್ತಿನಲ್ಲಿ ರಶಿಯಾದ ಕೂಡೆ ಗೌರವಯುತ ಸಂಧಿಗೆ ತಳಹದಿಯನ್ನು ನಿರ್ಮಿಸಲು ನೆರವು ದೊರೆತೀತು.

ಭಾರತ-ಪಾಕ ಸಂಧಾನ

ತಮ್ಮ ಲಂಡನ್ ವಾಸ್ತವ್ಯದಲ್ಲಿ ಪ್ರಧಾನಿ ನೆಹರೂರವರು ಮೂರು ಬಾರಿ ಪಾಕಿಸ್ತಾನದ ಪ್ರಧಾನಿ ಮಹಮ್ಮದ ಅಲಿಯವರನ್ನು ಭೇಟಿಯಾಗಿ ಭಾರತ-ಪಾಕ ಸಮಸ್ಯೆಗಳ ಕುರಿತು ಪ್ರಾಸ್ತಾವಿಕ ಮಾತುಕತೆಗಳನ್ನು ನಡೆಸಿದರು. ಮುಖ್ಯವಾದ ಪ್ರಶ್ನೆಯನ್ನು ತೀರ್ಮಾನಿಸುವುದಕ್ಕೆ ಉಭಯ ರಾಷ್ಟ್ರಗಳು ಸಾಮಾನ್ಯ ಉಪಾಯವನ್ನು ಗೊತ್ತು ಹಚ್ಚಿದರೆ, ಅದರ ಬೆನ್ನಿಗೆ ನಿರಾಶ್ರಿತರ ಆಸ್ತಿಯ ಸಮಸ್ಯೆ, ಕಾಲುವೆ ನೀರಿನ ತಂಟೆ ಮುಂತಾದ ಇನ್ನಿತರ ಸಂಗತಿಗಳೂ ತನ್ನಿಂದ ತಾನೆ ನಿವಾರಣೆ ಹೊಂದುವುದು ಸಾಧ್ಯವೆಂದು ಸರ್ವಸಾಮಾನ್ಯವಾದ ಅಭಿಪ್ರಾಯ. ಲಂಡನಿಗೆ ಹೋಗುವುದಕ್ಕೆ ಮುಂಚಿತವಾಗಿ ನೆಹರೂರವರು ಶ್ರೀನಗರಕ್ಕೆ ಭೇಟಿ ಕೊಟ್ಟಿದ್ದು ಶೇಖ ಅಬ್ದುಲ್ಲಾರ ಕೂಡೆ ಕಾಶ್ಮೀರ ಪ್ರಸಂಗದಲ್ಲಿ ವಿಚಾರ ವಿನಿಮಯ ಮಾಡಿರುವರು. ಮಾತ್ರವಲ್ಲ ಹೊಸ ಡಿಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುವಾಗ ಕಾಶ್ಮೀರ ತಂಟೆಯನ್ನು ಭಾರತ ಪಾಕಿಸ್ತಾನಗಳಿಗೆ ತೀರ್ಮಾನಿಸಿಕೊಳ್ಳಲು ಬಿಡುವುದೇ ಉಳಿದವರು ತಂಟೆಯ ಪರಿಹಾರಕ್ಕೆ ನೆರವಾಗಬಹುದಾದ ರೀತಿ ಎಂದು ಸ್ಪಷ್ಟಗೊಳಿಸಿರುವರು. ನೆಹರೂರವರು ಸಿಂಹಳದ ಪ್ರಧಾನಿ ಸೇನಾನಾಯಕೆಯವರನ್ನೂ ಲಂಡನ್ನಿನಲ್ಲಿ ಒಮ್ಮೆ ಕಂಡರು. ಇವರಿಂದ ಸಿಂಹಳದಲ್ಲಿರುವ ಹತ್ತು ಲಕ್ಷ ಭಾರತೀಯ ನಿವಾಸಿಗಳ ಸಮಸ್ಯೆಯು ಕೊನೆಗೊಮ್ಮೆ ತೀರ್ಮಾನಕ್ಕೆ ಬರಬಹುದು; ಬಹುಜನ ಭಾರತೀಯ ಮೂಲದವರಿಗೆ ನಾಗರಿಕ ಹಕ್ಕುಗಳು ದೊರೆಯಬಹುದು. ಸೇನಾನಾಯಕೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಆಶ್ರಿತ ಸಮುದಾಯದ ವರೆಗೆ ಸಮಸ್ಯೆಯ ಪರಿಹಾರವನ್ನು ಮುಂದಕ್ಕೆ ಹಾಕುವಂತಿಲ್ಲ ಎಂದಿರುವರು. ಮುಂದಿನ ವಾರ ಮರಳಿ ನೆಹರೂ-ಸೇನಾನಾಯಕೆ ಭೇಟಿ ನಡೆಯಲಿದೆ ಈ ಮಾತುಕತೆಯಲ್ಲಿ ಭಾಗವಹಿಸಲು ಸಿಂಹಳದಲ್ಲಿ ಭಾರತದ ಹೈಕಮಿಶನರರಾದ ಶ್ರೀ ದೇಸಾಯಿಯವರೂ ಲಂಡನ್ನಿಗೆ ತೆರಳುವರು.

ಉಡುಪಿ

ಉಡುಪಿ ಕಾಂಗ್ರೆಸ್ ಕಮಿಟಿಯ

ಕಾರ್ಯನಿರ್ವಾಹಕ ಸಮಿತಿ ಸಭೆಯು ತಾ 4ರಲ್ಲು ಶ್ರೀ ಬಾಳ್ಕಟ್ಟೆ ಬೀರು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರಾಮಾಂತರಗಳಲ್ಲಿ ಜನತೆಗೆ ನ್ಯಾಯವಾದ ಬೆಲೆಯಲ್ಲಿ ಅಕ್ಕಿ ಸಿಗುವಂತೆ ಅಲ್ಲಲ್ಲಿ ಮರ್ಯಾದಸ್ಥ ಸಾಹುಕಾರರ ಕಮಿಟಿಗಳನ್ನು ರಚಿಸಬೇಕೆಂದು ನಿರ್ಣಯವಾಯಿತು. ಸೇಂದಿಗೆ ಏಟಾಕಿದವರ ವಿಷಾದ ಕ್ರಿಯದಲ್ಲಿ ಜನತೆಗೆ ಅಕ್ಕಿ ದೊರೆಯುವಂತೆ ನಗರದ ಸಾಹುಕಾರರೂ ಸ್ವಾರ್ಥ ತ್ಯಾಗ ಮಾಡಿ ಸಹಕರಿಸಬೇಕೆಂದು ವಿನಂತಿಸಲಾಯಿತು. ಮದ್ರಾಸು ಸರಕಾರದ ಹೊಸ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯನ್ನು ಸ್ವಾಗತಿಸಿ ಅದಕ್ಕೆ ಎಲ್ಲರೂ ಬೆಂಬಲವೀಯಬೇಕೆನ್ನುವ ಕುಂಬಾರ, ಮಡಿವಾಳ, ಕ್ಷೌರಿಕ ಚ ಸ್ವರ ವೃತ್ತಿಯವರ ಮಕ್ಕಳಿಗೆ ವಿದ್ಯಾ ಸವಲತ್ತುಗಳನ್ನು ಕೊಟ್ಟ ಬಗ್ಗೆ ಮದ್ರಾಸು ಸರಕಾರವನ್ನು ಅಭಿನಂದಿಸುವ ಮಣಿಪಾಲದಲ್ಲಿ ಕಸ್ತೂರಿ ಬಾ ಮೆಡಿಕಲ್ ಕಾಲೇಜ್ ಸ್ಥಾಪಿಸುವಂತಾಗಲು ಸಹಕರಿಸಿದ ಮದ್ರಾಸು ಸರಕಾರವನ್ನು ಅದಕ್ಕೆ ಮನ್ನಣೆ ಕೊಡಲು ಒಪ್ಪಿದ ಬೊಂಬಾಯಿ ಸರಕಾರವನ್ನು ಅಭಿನಂದಿಸುವ ನಿರ್ಣಯಗಳಾದವು. ಶ್ರೀ ಟಿ ಎ. ಪೈ. ಎಂ ಎಲ್. ಎ. ಅವರು ಸಭೆಯಲ್ಲಿ ಹಾಜರಿದ್ದರು.

ಕೋಪರೇಟಿವ್ ಜಾಯಿಂಟ್ ರಿಜಿಸ್ಟ್ರಾರ್ ಶ್ರೀ ಕೆ. ಮುತ್ತುಕೃಷ್ಣ ನಾಯುಡುರವರು ಇದೇ ತಾ ೩ರಂದು ಸಂಜೆ ಮಂಗಳೂರಿನ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ ಶ್ರೀ ಕೆ. ಕೇಶವ ಕಿಣಿಯವರೊಂದಿಗೆ ಉಡುಪಿಯ ಕೋಆಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿ ಇನ್ಸ್‌ಪೆಕ್ಷನ್ ನಡೆಸಿದರು. ಈ ಸಂಘಕ್ಕೆ ಎಮ್ಮೆ ಪಡೆಕೊಳ್ಳುವ ಬಗ್ಗೆ ಮುಂಬರಿಗೆ ಸರಕಾರಿ ಸಾಲ ತುಂಬಾ ಕೊಡಲಾಗುವುದೆಂದು ರಿಜಿಸ್ಟ್ರಾರರು ಹೇಳಿದರು. ಒಳ್ಳೆಯ ಬೀಜದ ಕೋಣಗಳನ್ನು ಸಂಘವು ಸಾಕುವ ವ್ಯವಸ್ಥೆ ಮಾಡಿ ಉತ್ತಮ ವರ್ಗದ ಎಮ್ಮೆಗಳನ್ನು ಉತ್ಪತ್ತಿ ಮಾಡಿದ್ದಲ್ಲಿ ಹಾಲಿನ ಪೂರೈಕೆಗೆ ತುಂಬಾ ಅನುಕೂಲವಾದೀತೆಂದು ಸಲಹೆಯಿತ್ತರು. ಸಂಘದ ಅಧ್ಯಕ್ಷ ಡಾ। ಟಿ ಎಂ ಎ. ಪೈಗಳು ಸಂಘದ ಕುರಿತಾದ ಮಾಹಿತಿಯನ್ನಿತ್ತರು. ಸಂಘದ ಗೌರವ ಕಾರ್ಯದರ್ಶಿ ಶ್ರೀ ಎಸ್. ವಾಮನ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಮಟ್ಟಿ ರಾಮಕೃಷ್ಣರಾಯರ ನಿಧನ—ಉಡುಪಿಯ ಪ್ರಸಿದ್ಧ ಕ್ರಿಮಿನಲ್ ವಕೀಲರೆಂದು ಜಿಲ್ಲೆಯಲ್ಲೆಲ್ಲ ಹೆಸರಾದ ಶ್ರೀ ಮಟ್ಟಿ ರಾಮಕೃಷ್ಣರಾಯರು ಇದೇ ತಾ ೩ರಲ್ಲು ಮಧ್ಯಾಹ್ನ ಹೃದಯ ಸ್ತಂಭನದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಉಡುಪಿಯ ವಕೀಲರಲ್ಲೆಲ್ಲ ಬಹಳ ಪ್ರಭಾವಶಾಲಿಗಳಾಗಿದ್ದರು. ಇವರು ಸಾಹಸಿಯಾಗಿಯೂ ವಿಶಾಲ ಪ್ರಪಂಚಾನುಭವವುಳ್ಳವರಾಗಿಯೂ ಚತುರ ಸಂಭಾಷಣಗಾರರಾಗಿಯೂ ಇದ್ದರು. ಇವರಿಗೆ ಸಾಯುವ ಕಾಲದಲ್ಲಿ 66 ವರ್ಷ ಪ್ರಾಯವಾಗಿತ್ತು. ಮೃತರ ದುಃಖಿತ ಬಂಧು ಬಳಗದವರೊಡನೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇವೆ.

ದುಃಖ ಸೂಚನೆ — ದಿವಂಗತರು ಉಡುಪಿ ಬಾರ್ ಎಸೋಸಿಯೇಶನಿನ ಸದಸ್ಯರಾಗಿದ್ದು [illegible] ಉಪಾಧ್ಯಕ್ಷರೂ ಆಗಿದ್ದರು. ಕೋರ್ಟಿನ ಪ್ರಾರಂಭವಾಗುವಾಗ ಅವರ ಕುರಿತು ದುಃಖ ಸೂಚಿಸಲಾಯಿತು. ಡಿ ಮುನ್ಸಿಫ್ ಶ್ರೀ ಅಬ್ದುಲ್ ರಹೀಂ ಅವರು, ಬಾರ್ ಹಿರಿಯ ವಕೀಲ್ ಶ್ರೀ ಕೆ ಜಿ ಬಲ್ಲಾಳರು ಸಂತಾಪಸೂಚಕ ಮಾತುಗಳನ್ನಾಡಿದರು.

ಎಂ. ಜಿ. ಎಂ. ಕಾಲೇಜಿನಲ್ಲಿ— ಇದೇ ತಾ. 16ನೇ ಸಂಜೆ 4 ಗಂಟೆಗೆ ಸ್ವಾಮಿ ವಿವೇಕಾನಂದರ ಭಾವಚಿತ್ರದ ಅನಾವರಣ ಸಮಾರಂಭವು ಸ್ವಾಮಿ ಆದಿದೇವಾನಂದರಿಂದ ಜರಗಲಿದೆ.

ವಿವಾಹ ಸಮಾರಂಭ—ಶ್ರೀ ಹಬ್ರಿ ಭುಜಂಗ ಬಲ್ಲಾಳರ ಪುತ್ರ ಶ್ರೀ ಗಂಗಾಧರ ಹೆಗ್ಡೆಯವರಿಗೂ ಶ್ರೀ ಎಸ್. ನಾಗಪ್ಪ ಹೆಗ್ಡೆಯವರ ಪುತ್ರಿ ಕುಮಾರಿ ಸುಗಂಧಿಯವರಿಗೂ ಇದೇ ತಾ ೪ರಂದು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿಜೃಂಭಣೆಯಾದ ವಿವಾಹವಾಯಿತು.

— ತಾ. 12—6—53 ರಿಂದ —
[illegible] ಸಂಗೀತ ಸರ್ವಪೂರ್ಣವಾದ
ಬದ್‌ನಾಮ್
ಬಲರಾಜ್ ಸಹಾನಿ, ಶ್ಯಾಮಾ ಮೊದಲಾದವರು
ಬರುವ ಚಿತ್ರಗಳು: ಸ್ತ್ರೀ ಸಾಹಸಂ, ನಿರಪರಾಧಿ ಇತ್ಯಾದಿ
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ



(೫ನೇ ಪುಟದಿಂದ ಮುಂದುವರಿದುದು)

ಯೋಜನಾ ಆಯೋಗದಿಂದ ಹಿಂದುಳಿದ ರಾಷ್ಟ್ರವೊಂದರ ಅಭಿವೃದ್ಧಿಯ ಕಾರ್ಯಕ್ರಮಗಳ ಪರಿಚಯವಾಯಿತು ಈಗ ಅಮೇರಿಕಕ್ಕೆ ಮರಳಿದ ಬಳಿಕ ಡಲ್ಲೇಸರಿಗೆ ಭಾರತದ ಕುರಿತು ನಿಜವಾದ ಆಸ್ಥೆ ಇರುತ್ತದೆಂದು ಸ್ಪಷ್ಟವಾಗಿ ಗೋಚರಿಸುತ್ತದೆ. ನಮ್ಮಲ್ಲಿಯ ಕಮ್ಯೂನಿಸ್ಟರು ಡಲ್ಲೇಸರ ಆಗಮನದ ವಿರುದ್ಧ ಕರಿ ನಿಶಾನೆ ತೋರಿಸಿ ಗುಲ್ಲೆಬ್ಬಿಸಲು ಪ್ರಯತ್ನಿಸಿದರೂ, ಡಲ್ಲೇಸರಿಂದ ಭಾರತಕ್ಕೆ ಪ್ರಯೋಜನವಿದೆ ಎಂಬುದೀಗ ಹೆಚ್ಚು ಸ್ಪಷ್ಟವಾಗಿರುತ್ತದೆ. ಆಗ್ನೇಯ ಏಶಿಯದ ಹಿಂದುಳಿದ ರಾಷ್ಟ್ರಗಳನ್ನು ಅಮೇರಿಕ ಕಡೆಗಣಿಸಿದೆ. ಪಶ್ಚಿಮ ಯುರೋಪಿನ ಸೈನ್ಯ ಬಲವರ್ಧನೆಯ ಕಡೆಗೇ ಅದರ ಒಲವು ಅಧಿಕವೆಂಬ ಭಾವನೆ ಆಗ್ನೇಯ ಏಶಿಯಾದ ನಿವಾಸಿಗಳಲ್ಲಿದೆ. ಅಮೇರಿಕವು ಏಶಿಯದ ರಾಷ್ಟ್ರಗಳ ಸಂಶಯ ನಿವಾರಣೆಗೆ ಪ್ರಯತ್ನಿಸಬೇಕೆಂದು ಡಲ್ಲೇಸರು ಸ್ಪಷ್ಟವಾದ ಮಾತುಗಳಲ್ಲಿ ತಮ್ಮ ಸರಕಾರಕ್ಕೆ ಸೂಚಿಸಿರುವರು. ಸ್ಟ್ಯಾಸೆನ್ನರೂ ನಾವು ಮಿಲಿಟರಿ ಶಕ್ತಿಯನ್ನು ಹೆಚ್ಚಿಸುತ್ತಾ ಹೋದಲ್ಲಿ, ಅವರ ಒತ್ತಡಕ್ಕೆ ಸಿಲುಕಿ ನಜ್ಜುಗುಜ್ಜಾದೇವು ಕಾರಣ ವಿದೇಶಗಳಿಗೆ ಸಹಾಯ ನೀಡುವ ಕಾರ್ಯಕ್ರಮದ ಪುನರ್ವಿಮರ್ಶೆ ಅಗತ್ಯ ಎಂದಿರುವರು. ಅಮೇರಿಕದೊಡನೆ ಭಾರತ ಸರಕಾರವು ಅಧಿಕ ಸಹಕಾರವನ್ನು ತೋರಿಸುತ್ತಾ ಬಂದರೆ, ಅದು ಕೊಡುವ ನೆರವಿನ ಮೊತ್ತವು ಹೆಚ್ಚಿಕೊಂಡೀತೆಂಬುದನ್ನು ಸ್ಟ್ಯಾಸೆನ್ನರು ಧ್ವನಿಸಿರುವರು. ಭಾರತವು ಶಾಂತಿ ಸುಭಿಕ್ಷೆಗಳ ಉದ್ದೇಶಕ್ಕಾಗಿ ಅಮೇರಿಕಾದೊಡನೆಯೇ ಏಕೆ, ಯಾವುದೇ ರಾಷ್ಟ್ರದ ಕೂಡ ಸಹಕರಿಸಲು ಸಿದ್ಧವಿದೆ. ಇದನ್ನು ಭಾರತ ಸರಕಾರ ಅನುಸರಿಸಿದ ಇಂದಿನವರೆಗಿನ ಧೋರಣೆಯು ಧೃಢವಾಗಿ ನಿರೂಪಿಸುತ್ತಿದೆ. ಅಮೇರಿಕದಲ್ಲಿ ಕೆಲವುದಿನ ಸಂಚರಿಸಿದ ಭಾರತದ ಉಪರಾಷ್ಟ್ರಾಧ್ಯಕ್ಷ ಡಾ। ರಾಧಾಕೃಷ್ಣನ್ನರು ಭಾರತದ ಈ ನಿಲುಮೆಯನ್ನು ತಮ್ಮ ಭಾಷಣಗಳಲ್ಲಿ ಚೆನ್ನಾಗಿ ಬಿಂಬಿಸಿರುವರು ಬಲಾಬಲರಾಜಕಾರಣದಲ್ಲಿ ಭಾರತಕ್ಕೆ ತಿಲಾಂಶವು ವಿಶ್ವಾಸವಿಲ್ಲವೆಂಬುದನ್ನು ರಾಧಾಕೃಷ್ಣನ್ನರು ಅಮೇರಿಕಾದ ಜನತೆಗೆ ತಿಳಿಸಿರುವರು. ಮಾನವನ ಸುಖಸಂತೋಷಗಳು ವರ್ಧಿಸುವಂತೆ ಸಮಸ್ಯೆಗಳ ಶಾಂತ ಪರಿಹಾರೋಪಾಯಗಳನ್ನು ಯೋಚಿಸುವುದೇ ಭಾರತದ ಧ್ಯೇಯವೆಂದು ರಾಧಾಕೃಷ್ಣನ್ನರು ಪ್ರಕಟಗೊಳಿಸಿರುವರು. ವಿದೇಶಗಳಲ್ಲಿ ಮುಖ್ಯವಾಗಿ ಅಮೇರಿಕಾದಲ್ಲಿ ಭಾರತದ ಬಗೆಗಿರ ಬಹುವಾದ ಸುಪ್ತ ಸಂಶಯಗಳು ಈ ಸ್ಪಷ್ಟೀಕರಣದಿಂದ ಬಹು ಮಟ್ಟಿಗೆ ದೂರವಾಗುವುದು ನಿಶ್ಚಯ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R E P. 706/52

S C. 138/47

ಶಿರಾಲಿ ಶ್ರೀ ಭವಾನಿ ಶಂಕರ ದೇವರ ಭಂಡಾರ, ಚಿತ್ರಾಪುರ ಮಠ — ಅರ್ಜಿದಾರ.

ಭವಾನಿಬಾಯಿ ಯಾನೆ ಲಕ್ಷ್ಮೀದೇವಿ ಬಾಯಿ ಸಹಾ — ಎದುರು.

ಅರ್ಜಿದಾರನ ಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವುದೇನೆಂದರೆ-

1 ಭವಾನಿ ಬಾಯಿ ಯಾನೆ ಲಕ್ಷ್ಮೀದೇವೀ ಬಾಯಿ ಹೊಸ ಕೋಟೆ ನರಸಿಂಗರಾಯರ ಹೆಂಡ್ತಿ ಬಿಜೂರು ಗ್ರಾಮ

2. ಗಿರಿಜಾಬಾಯಿ- ಮಾಡಿಮನೆ ಪದ್ಮನಾಭಯ್ಯನ ಹೆಂಡ್ತಿ- ಉಡುಪಿ ಕಸಬಾ

ಮೇಲಿನ ಡಿಕ್ರಿಯ ಸಮಾಧಾನಾರ್ಥವಾಗಿ ನಡ್ಸಿದ ಅಮಲ್ಜಾರಿಯಲ್ಲಿ ಎದುರು ಸ್ಥಿರಾಸ್ತಿ ಲೈಲಾಂ ಮಾಡಿಸುವಬಗ್ಗೆ ಅರ್ಜಿದಾರನು ಹಾಜರ್ಪಡಿಸಿದ ಮುಸ್ತಿಹಾರಿನ ಶರ್ತ ನಿರ್ಣಯಿಸುವರೆ ತಾ. 27 6 53ಕ್ಕೆ ಮುಮ್ಮೆರಿ ತಪ್ಪಿಗೆಯಿಡಲಾಗಿದೆ. ಆ ಕಾರಣ ನಿಮ್ಮ ಏನಾದ್ರು ಆಕ್ಷೇಪವಿದ್ದರೆ ಸದ್ರಿ ದಿನ್ನ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ, ವಕೀಲರ ದ್ವಾರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ತಿಳಿಸು ಪಡ್ಸಿದೆ.

G Sanjeeva Rao B A LL. B.
Pleader for Petitioner
Kundapur. Date 1—6—53

ಮಂಗಳೂರು

ಅಖಿಲ ಭಾರತ ಸುಪಾರಿ ಫೆಡರೇಶನಿನ ಮಹಾ ಸಭೆಯು—ಕಳೆದ ತಾ. 31ರಲ್ಲು ಶ್ರೀ ಎನ್ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಕೆ. ಗೋವಿಂದ ಭಟ್ಟರು ಅಧ್ಯಕ್ಷರಾಗಿಯೂ ಶ್ರೀ ಎಚ್. ಎಲ್. ವೀರಭದ್ರಪ್ಪನವರು ಉಪಾಧ್ಯಕ್ಷರಾಗಿಯೂ ಶ್ರೀ ಎನ್. ಶಂಕರ ಭಟ್ಟರು ಗೌರವ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಜೆ. ವಿಷ್ಣು ಮೂರ್ತಿ ಭಟ್ಟ, ಬಿ ವಿ. ಹನುಮಂತ ರಾವ್, ಎನ್ ಶ್ರೀಕಂಠಯ್ಯ, ಬಿ ಆರ್. ಶಿವಣ್ಣ ಐತಾಳ ಜೆ. ಆರ್. ಹೆಗ್ಡೆ ಕಿಲಾರ್, ಜಿ. ಎಮ್. ಹೆಗ್ಡೆ ಸಾರ್, ಇವರು ಕಾರ್ಯಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು. ಸಭೆಯಲ್ಲಿ ದಿವಂಗತ ಆರ್. ಕೆ. ಷಣ್ಮುಖಂ ಚೆಟ್ಟಿಯಾರರ ನಿಧನಕ್ಕೆ ದುಃಖ ಸೂಚಿಸಲಾಯಿತು. ಬಳಿಕ ಈಚಲಬೀಜವನ್ನು ಅಡಿಕೆಯೆಂದು ಮಾರುವುದನ್ನು ಖಂಡಿಸುವ ಭಾರತ ಸರಕಾರವು ಅಕರಿತು. ತೀವ್ರ ಕಾರ್ಯ ಕೈಕೊಳ್ಳಬೇಕೆನ್ನುವ ಕೇಂದ್ರ ಸರಕಾರದ ಅಡಿಕೆ ಸಮಿತಿಯನ್ನೂ ತೆಂಗು ಸಮಿತಿಯನ್ನೂ ಒಟ್ಟು ಸೇರಿಸಬಾರದೆಂದು ಭಾರತ ಸರಕಾರವನ್ನು ಕೇಳಿಕೊಳ್ಳುವ ಠರಾವುಗಳಾದವು ಈ ಸಭೆಗೆ ಶಿವಮೊಗ್ಗೆಯ ಅಡಿಕೆ ಮಾರ್ಕೆಟಿಂಗ್ ಆಫೀಸರ್ ಶ್ರೀ ಗಿರಿಯಪ್ಪನವರೂ ಮಾರ್ಕೆಟ್ಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಉಬೇದುಲ್ಲಾ ಸಾಹೇಬರೂ ಬಂದಿದ್ದು ಚರ್ಚೆಯಲ್ಲಿ ಭಾಗವಹಿಸಿದ್ದರು.

ಅಕ್ಕಿಯ ಬೆಲೆ—ಏರುತ್ತಿರುವ ಅಕ್ಕಿಯ ಬೆಲೆಯನ್ನು ತಡೆಗಟ್ಟಬೇಕೆಂದು ಜಿಲ್ಲಾ ಕಲೆಕ್ಟರರಲ್ಲಿಗೆ ಶಿಷ್ಟಮಂಡಳಗಳು ಬರುತ್ತಿವೆ ಕಳೆದ ತಾ. 31ರಲ್ಲು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಸಭೆಯೊಂದು ಜರಗಿ ಅಕ್ಕಿಯ ಬೆಲೆ ಸೇರಿಗೆ ಏಳಾಣೆಯಾಗಬೇಕು ಮಿತದರದ ಅಂಗಡಿಗಳಲ್ಲಿ 12 ಔನ್ಸ್ ಮಿತಿಯಲ್ಲಿ ಅಕ್ಕಿಯ ವಿತರಣೆಯಾಗಬೇಕು. ಎಂಬ ನಿರ್ಣಯಗಳಾದುವು. ಇದೇ ತಾ. 1ರಲ್ಲು ಮಜೂರರ ಮೆರವಣಿಗೆಯೊಂದು ಅಕ್ಕಿಯ ಬೆಲೆ ಇಳಿಯಬೇಕು, ಜಿಲ್ಲೆಯಿಂದ ಅಕ್ಕಿ ಹೊರಗೆ ಸಾಗದಂತೆ ತಡೆಗಟ್ಟಬೇಕೆಂದು ಘೋಷಿಸುತ್ತ, ಕಲೆಕ್ಟರರ ಕಚೇರಿಗೆ ತೆರಳಿ, ಇಪ್ಪತ್ತು ಸಾವಿರ ಮಂದಿಯ ಸಹಿಯನ್ನೊಳಗೊಂಡ ಮನವಿಯೊಂದನ್ನು ಕಲೆಕ್ಟರರಿಗೆ ಒಪ್ಪಿಸಲಾಯಿತು.

ಮಂಜೇಶ್ವರ ಕಲಾಪ್ರೇಮಿ ನಾಟ್ಯ ಸಭೆಯವರು—ಕಳೆದ ತಾ. 31ರಂದು ರಾತ್ರಿ ಡೊನ್ ಬೋಸ್ಕೊ ಭವನದಲ್ಲಿ ತಮ್ಮ ನೃತ್ಯಗಳನ್ನು ಪ್ರದರ್ಶಿಸಿದರು. ಈ ಕಲಾಪ್ರೇಮಿ ನಾಟ್ಯ ಸಭೆಯು ಮಂಜೇಶ್ವರದ ಶ್ರೀ ವಿ. ಎಲ್. ಭಕ್ತರಿಂದ ಸ್ಥಾಪಿತವಾದುದು.

ಮಂಗಳೂರು ಬೆಸೆಂಟ್ ಬಾಲಿಕಾ ಪಾಠ ಶಾಲೆಯಿಂದ ಕಳೆದ ಮಾರ್ಚಿ ತಿಂಗಳಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ 23 ಮಂದಿ ವಿದ್ಯಾರ್ಥಿನಿಯರಲ್ಲಿ 19 ಮಂದಿ ತೇರ್ಗಡೆ ಹೊಂದಿರುತ್ತಾರೆ.

ರೈತ ಸಂಘಟನೆಗಳ ಸಂಯುಕ್ತ ರಂಗ—ಪುತ್ತೂರು ತಾಲೂಕು ರೈತ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಕೆ. ಸಂವರ ರೈಗಳ ವ್ಯವಸ್ಥಾಪಕತ್ವದಲ್ಲಿ ಜಿಲ್ಲೆಯ ಎಲ್ಲಾ ರೈತ ಸಂಘಟನೆಗಳ ಸಂಯುಕ್ತ ರಂಗವೊಂದನ್ನು ಸ್ಥಾಪಿಸುವ ಕುರಿತು ಆಲೋಚಿಸುವರೇ ರೈತ ಪ್ರಮುಖರ ಸಭೆಯೊಂದು ಇದೇ ತಾ 1ರಲ್ಲು ಮಂಗಳೂರಿನ ಶಿಶ್ವ ಭವನದಲ್ಲಿ ಜರಗಿತು. ಸಭೆ ಕರೆದುದರ ಉದ್ದೇಶವನ್ನು ಶ್ರೀ ವಿಠಲದಾಸ ಶೆಟ್ಟರು ವಿವರಿಸಿದರು. ಶ್ರೀ ಬಿ ಮೋಹನರಾಯರು ರೈತಸಂಘದ ಧೋರಣೆಯನ್ನು ವಿವರಿಸಿದರು. ಶ್ರೀ. ಬಿ ವಿ- ಕಕ್ಕಿಲ್ಲಾಯರು ಕೆಲವು ಸಲಹೆಗಳನ್ನಿತ್ತರು. ಶ್ರೀಗಳಾದ ಕೆ. ಉಗ್ಗಪ್ಪ, ಗೋವಿಂದನ್ ಡಾ। ಸಂಜೀವನಾಥ, ಎ ಕೃಷ್ಣ ಶೆಟ್ಟಿ, ಎಚ್. ಕೃಷ್ಣಪ್ಪ. ಕೆ. ಅಂಬು ಮೊದಲಾದವರು ಮಾತನಾಡಿದರು. ಕೊನೆಗೆ ಸಭೆಯನ್ನು ಇದೇ ತಾ 26ಕ್ಕೆ ಮುಂದರಿಸಲಾಯಿತು.

ಕುಂಬಳೆ- ಸ್ಥಳೀಯ ಬೋರ್ಡ್ ಹಾ॥ ಎ॥ ಶಾಲೆಯಿಂದ 20ರಲ್ಲಿ 14, ಹೋಲಿ ಫೆಮಿಲಿ ಶಾಲೆಯಿಂದ 5ರಲ್ಲು 5, ಇಚ್ಲಂಪಾಡಿ ಎಯಿಡೆಡ್ ಶಾಲೆಯಿಂದ 18ರಲ್ಲಿ 9, ಮಂಗಲ್ಪಾಡಿ ಬೋರ್ಡ್ ಹಾ॥ ಎ॥ ಶಾಲೆಯಿಂದ 11ರಲ್ಲಿ 8 ಈ ಪ್ರಕಾರ ವಿದ್ಯಾರ್ಥಿಗಳು ಕಳೆದ ಇ. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಪಾಸಾಗಿರುವರು.

ಕಾರ್ಕಳ—ಇಲ್ಲಿಯ ಬೋರ್ಡ್ ಹೈಸ್ಕೂಲಿನಿಂದ ಕಳೆದ ಮಾರ್ಚ ತಿಂಗಳ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ 72 ಮಂದಿಯಲ್ಲಿ 69 ಮಂದಿ (ಸೇಕಡಾ 96) ಪಾಸಾಗಿರುವರು.

ಜಾನುವಾರು ಕಟ್ಟೆ—ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 31ರಲ್ಲು ಶ್ರೀ ಕೆ. ರಾಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಸಬ್ಬಣ್ಣ ಹೆಗ್ಡೆಯವರ ಭಾಷಣವಾದ ಬಳಿಕ ಮಕ್ಕಳ ವಿವಿಧ ವಿನೋದಾವಳಿಗಳಾದುವು ಮುಖ್ಯೋಪಾಧ್ಯಾಯ ಶ್ರೀ ಬಿ. ಯಾಕೂಬ್ ಸಾಹೇಬರು ಧನ್ಯವಾದಗಳನ್ನು ಅರ್ಪಿಸಿದರು.

ಅಲೆವೂರು- ಶ್ರೀ ಅಲೆವೂರು ಬದರಿನಾರಾಯಣಾಚಾರ್ಯರು ಇದೀಗ ಒಂಭತ್ತನೇ ಬಾರಿ ಬದರಿ ಯಾತ್ರೆಯನ್ನು ಕೈಕೊಂಡಿರುವರು.

ಶಿರ್ವ:—ಸ್ಥಳೀಯ ಹಿಂದೂ ಹಾ॥ ಎ॥ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 30ರಲ್ಲು ಉಡುಪಿ ಸರಕಾರಿ ತರಬೇತಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ವರದಿವಾಚನವಾದ ಬಳಿಕ ಶ್ರೀಗಳಾದ ಎಲ್ ಮೆಂಡೋನ್ಸ್, ಕೆ. ಬಿ. ನಾಯಕ್ ಮೊದಲಾದವರು ಮಾತನಾಡಿದರು. ನಂತರ ನಾಟಕವೇ ಮೊದಲಾದ ವಿವಿಧ ವಿನೋದಾವಳಿಗಳಾದುವು. ಈ ಶಾಲೆಯಿಂದ ಇ ಎಸ್. ಎಲ್ ಸಿ. ಪರೀಕ್ಷೆಗೆ ಕುಳಿತ 10 ಮಂದಿಯಲ್ಲಿ 8 ಮಂದಿ ತೇರ್ಗಡೆ ಹೊಂದಿರುವರು.

ಪ್ರಕಟಣೆ

ಉಡುಪಿ ತಾಲೂಕು ಆತ್ರಾಡಿ ಗ್ರಾಮದಲ್ಲಿರುವ ಹಿರೆಬೆಟ್ಟು ಪಟೇಲ್ ಎಚ್. ತಿಮ್ಮಪ್ಪ ಹೆಗ್ಡೆಯು ಈ ಮೂಲಕ ತಿಳಿಸುವುದೇನೆಂದರೆ-

ನಾನು ಈ ದಿನ ಬೆಳಿಗ್ಗೆ 8 ಗಂಟೆಗೆ ಆತ್ರಾಡಿಯಿಂದ ಉಡುಪಿಗೆ ಶಂಕರ ವಿಟ್ಠಲ್ ಬಸ್ಸಿನ ಕಾರ್ಕಳ ಕಟ್ ಸರ್ವಿಸಿನಲ್ಲಿ ಬರುವಾಗ ನನ್ನ ಹೆಸರಿನ ಬೊಂಬಾಯಿ ಲೈಫ್ ಇನ್ಶೂರೆನ್ಸ್ ಕಂಪೆನಿಯ ಒಂದು ಸಾವಿರದ ಪೋಲಿಸಿ ಒಂದು ಮತ್ತು ಅದಕ್ಕೆ ಸಂಬಂಧಿಸಿದ ರಶೀದಿ ವಗೈರೆ ಮತ್ತು ನಾಲ್ಕು ಸಾವಿರ ರೂಪಾಯಿಯ ಒಂದು ಈಡು ದಸ್ತಾವೇಜು ಇದ್ದ ಒಂದು ಕವರು ಫರಾಮೋಶಿಯಿಂದ ಬಸ್ಸಿನಲ್ಲೇ ಉಳಿದಿರುತ್ತದೆ ಅದು ಸಿಕ್ಕಿದವರು ದಯಮಾಡಿ ನನಗಾಗಲೀ ನನ್ನ ಮಾವ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯ ಡೈರೆಕ್ಟರ್ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರಿಗಾಗಲೀ ತಂದು ಕೊಡುವಂತೆ ಅಪೇಕ್ಷಿಸುತ್ತೇನೆ. ಹಾಗೆ ತಂದು ಕೊಟ್ಟವರಿಗೆ ಯುಕ್ತ ಪಾರಿತೋಷಕವನ್ನು ಕೊಡಲಾಗುವುದು

H. Thimmappa Hegde

ಪ್ರಕಟಣೆ

ದಿ ಜವಹಾರಲಾಲ್ ಫ್ರಿ ನೈಟ್ ಹೈಸ್ಕೂಲ್, ಮುಂಬಾಯಿ

1950ನೇ ಇಸವಿಯಲ್ಲಿ ಸ್ಥಾಪನೆಯಾಗಿ ಸರಕಾರದಿಂದ ಮಾನ್ಯತೆಯನ್ನು ಪಡೆದು, ಅಕ್ಟೋಬರ 1952ರ "ಪಬ್ಲಿಕ್ ಪರೀಕ್ಷೆ"ಯಲ್ಲಿ 100% ಯಶಸ್ವಿಯಾಗಿ ಮತ್ತು ಮಾರ್ಚ್ 53ರಲ್ಲಿ ಪರೀಕ್ಷೆಯಲ್ಲಿ 25% ಯಶಸ್ವಿಯಾಗಿ ಸರಕಾರ ತಥಾ ಜನತೆಯಿಂದ ಯೋಗ್ಯ ಶಿಫಾರಸನ್ನು ಪಡೆದು, ಸೇವೆಯನ್ನು ಸಲ್ಲಿಸುವ "ದಿ ಜವಾಹರಲಾಲ ಫ್ರೀ ನೈಟ್ ಹೈಸ್ಕೂಲ್" ಶೀಘ್ರದಲ್ಲಿಯೇ ರೈಲ್ವೆ ನಿಲ್ದಾಣ ಸಮೀಪ ಒಂದು ಯೋಗ್ಯ ಕಟ್ಟಡವನ್ನು ಪ್ರವೇಶಿಸಲಿರುವುದು.

ನೂತ್ರನ್ನದ ಗೋಕುಲದಾಸ್ ಆಸ್ಪತ್ರೆಯ ಸಮೀಪದಲ್ಲಿರುವ "ಲೋರ್ಡ್ ಹಾರ್ಡಿಂಜ್" ಮಾರವಾಡಿ ವಿದ್ಯಾಲಯದಲ್ಲಿ ಇನ್ನೊಂದು ಹೊಸ ಪ್ರಥಮಾರ್ಧ ಶಾಲೆಯನ್ನು ಇದೇ ಜೂನ್ ತಿಂಗಳಿನಿಂದ ತೆರೆಯಲಾಗುವುದು. ಸೇರಬಯಸುವವರು ಗೌರವ ಪ್ರಿನ್ಸಿಪಾಲರಿಗೆ ಕೂಡಲೇ ಅರ್ಜಿಯನ್ನು ಸಲ್ಲಿಸಿರಿ

ಯಮ್. ಎಸ್. ರಾವ್
ಗೌರವ ಪ್ರಿನ್ಸಿಪಾಲರು.

ಜೀವನ ಶಿಕ್ಷಣ
(ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿದೆ)
ಮಕ್ಕಳನ್ನು ಯಾವ ವಿಧಿ--ವಿಧಾನಗಳಿಂದ ತರಬೇತು ಮಾಡಬಹುದೆಂಬುದನ್ನು ಹಲವಾರು ಘಟನೆಗಳಿಂದ ಚಿತ್ರಿಸುವ
ಶ್ರೀ. ಕೆ. ಕೆ. ಸೆಟ್ಟರ ನವೀನ ನಾಟಕ.
ಪ್ರೇಮ-ಕಾಮದ ದೃಶ್ಯಗಳೇ ಇಲ್ಲದ ಮಕ್ಕಳಿಗುಚಿತವಾದ ಬೋಧಪ್ರದ ಪುಸ್ತಕ.
ಬೆಲೆ: ರೂ. 1—2—0.
ಮೆನೇಜರ್ ಜನತಾ ಸಾಹಿತ್ಯಮಾಲೆ,
ಕೆನರಾ ಛಾಪಖಾನೆ, ಹಂಪನಕಟ್ಟೆ, ಮಂಗಳೂರು.

(೩ನೇ ಪುಟದಿಂದ)

ಯನ್ಸ್ ಕ್ಲಬ್ಬಿನ ಸದಸ್ಯತ್ವ ದೊರೆಯಿತು. ವಿದೇಶಗಳಲ್ಲಿ ಈ ಗೌರವ ದೊರೆತುದನ್ನು ಕಂಡು ಡೆಲ್ಲಿಯ ಇಂಡಿಯನ್ ಹಿಮಾಲಯನ್ ಕ್ಲಬ್ಬು ತೇನ ಸಿಂಗರನ್ನು ತನ್ನ ಸಂಸ್ಥೆಯ ಸದಸ್ಯರಾಗಿ ಸ್ವೀಕರಿಸಿತು. ಇದರಂತೆ ತೇನಸಿಂಗರಲ್ಲಿ ಸುಪ್ತನಾಗಿದ್ದ ಅಸಾಧಾರಣ ಯೋಗ್ಯತೆ ಮತ್ತು ಪ್ರತಿಭೆಯನ್ನು ಬೆಳಕಿಗೆ ತಂದ ಶ್ರೇಯಸ್ಸು ಯಾವನೊಬ್ಬ ದೇಶೀಯನಿಗಲ್ಲದೆ ಟಿಲ್‌ಮೇನನೆಂಬ ವಿದೇಶೀಯನಿಗೆ ಇದು ಸೇರಿದೆ. ಅವರೊಂದಿಗೆ ತೇನಸಿಂಗರು ೧೯೩೮ರಲ್ಲಿ ೨೬೦೦೦ ಅಡಿ ಎತ್ತರವನ್ನು ಮುಟ್ಟಿದ್ದರು

ಗೌರೀಶಂಕರವನ್ನು ... ೧೯೨೧ರಿಂದ ಇದುವರೆಗೆ ೧೧ ಪ್ರಯತ್ನಗಳು ನಡೆದುವು. ಅಂಥ ಒಂಭತ್ತು ಪ್ರಯತ್ನಗಳಲ್ಲಿ ತೇನಸಿಂಗರು ಭಾಗವಹಿಸಿದರು ಪ್ರತಿಯೊಂದು ದಳವೂ ಹಿಂದಿನವರು ಗಳಿಸಿದ ಅನುಭವದ ಬಲದಿಂದ ಹೊಸ ಹೊಸ ಸಾಧನ ಸಲಕರಣೆಗಳನ್ನು ಉಪಯೋಗಿಸಿ ವಿಜಯ ಗಳಿಸುವ ಅಭಿಲಾಷೆಯಿಂದ ಕಾರ್ಯಾರಂಭಿಸುತಿತ್ತು. ಇವರಿಗೆ ಶೆರ್ಪಾ ತೇನ ಸಿಂಗರ ಸ್ವಾನುಭವವು ಅಮೂಲ್ಯ ಕೈಪಿಡಿಯಾಗಿತ್ತು. ೧೯೫೦ರ ನವಂಬರದಲ್ಲಿ ನಂಗಾ ಪರ್ವತವನ್ನು ಏರಿ ಹೋಗಲು ಬಯಸಿ ಬಂದ ಆಂಗ್ಲ ಪರ್ವತಾರೋಹಿ ತಂಡದಲ್ಲಿ ತೇನ ಸಿಂಗರಿದ್ದರು. ಆ ಕಾಲದಲ್ಲಿ ಮಾನವ ಧರ್ಮದ ಪಾಲನೆಯನ್ನು ತೇನ ಸಿಂಗರು ಹೇಗೆ ಮಾಡಿದರೆಂಬುದನ್ನು ಆ ದಳದ ಏಕಮಾತ್ರ ಜೀವಿತ ಸದಸ್ಯ ಮಿ. ಮಾರ್ಶರು ಮಾರ್ಮಿಕವಾಗಿ ವರ್ಣಿಸಿರುವರು. ದಶಂಬರ ೫ರಲ್ಲಿ ದಳದ ಉಳಿದ ಸದಸ್ಯರನ್ನು ಹುಡುಕಾಡುವ ಸಾಹಸಕ್ಕೆ ತೇನ ಸಿಂಗರೇ ಪ್ರೋತ್ಸಾಹ ಕೊಟ್ಟರು. ೮ನೇ ದಿನಾಂಕ ಮಾರ್ಶರನ್ನು ಹಿಮಪಾತವೊಂದು ಮೃತ್ಯುವಿನ ಅಪ್ಪುಗೆಯಲ್ಲಿ ಸಿಲುಕಿಸಲು ನೋಡಿದಾಗ ಸರ್ಕಸ್ ತೇನ ಸಿಂಗರೇ ಜೀವವುಳಿಸಿದರು! ನಿದ್ರೆಯಲ್ಲಿದ್ದಾಗ ಹಿಮಶಿಲೆಯೊಂದು ಪರ್ವತವನ್ನೆ ನಡುಗಿಸಿ ಕೆಳಗೆ ಉರುಳಿ ಬರುತಿದ್ದುದನ್ನು ತೇನ ಸಿಂಗರು ನೋಡಿ ಮಾರ್ಶರನ್ನು ಎಚ್ಚರಿಸಿ ಎಬ್ಬಿಸಿ, ಸಂರಕ್ಷಿಸಿದರು. ಈ ಉಪಕಾರಕ್ಕೆ ಎಷ್ಟು ಕೃತಜ್ಞತೆಗಳನ್ನು ಅರ್ಪಿಸಿದರೂ ಕಡಿಮೆಯೇ ಸೈ.

ಪ್ರಕಟಣೆ

ಬಿಲ್ಲವರ ಎಸೋಸಿಯೇಶನ್ ಮುಂಬಯಿ.

ಈ ಮೇಲಿನ ಎಸೋಸಿಯೇಶನಿಂದ ವಿದ್ಯಾರ್ಥಿವೇತನ ಪಡೆಯಲಿಚ್ಛಿಸುವ ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳು ವಿದ್ಯಾರ್ಥಿವೇತನದ ಅರ್ಜಿ ಪತ್ರಗಳಿಗಾಗಿ ಬರುವ ಜೂನ್ ತಿಂಗಳ 30ನೇ ತಾರೀಕಿನೊಳಗೆ ಬರೆಯಬೇಕು. ವಿದ್ಯಾರ್ಥಿವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಕಳೆದ ವರ್ಷಾವಧಿ ಪರೀಕ್ಷೆಯ ಫಲಿತಾಂಶವನ್ನು ತಿಳಿಸಿ ಮಾರ್ಕ್ ಲಿಸ್ಟನ್ನು ಕಳುಹಿಸಿ ವೇತನ ಮುಂದುವರಿಸುವರೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಬೇಕೆಂದು ಈ ಮೂಲಕ ತಿಳಿಸಲಾಗುತ್ತದೆ.

17, ರಘುನಾಥ ದಾದಾಜಿ ಸ್ಟ್ರೀಟ್ ಮುಂಬಯಿ 1 | ಟಿ. ತನಿಯ, ಗೌ। ಪ್ರ। ಕಾರ್ಯದರ್ಶಿ

ಸ್ವೀಕಾರ—ವಿಮರ್ಶೆ

ಬದುಕಿನ ಸುಳಿಯಲ್ಲಿ

ಬರೆದವರು: ಸೇವನನಿರಾಜಮಲ್ಲ.
ಪ್ರಕಾಶಕರು: ಪ್ರತಿಭಾ ಗ್ರಂಥ ಮಾಲೆ, ಧಾರವಾಡ.
ಬೆಲೆ: ಎರಡು ರೂಪಾಯಿ.

ದಕ್ಷಿಣ ಕನ್ನಡ ಜಿಲ್ಲೆ ಪ್ರಚಲಿತವಿರುವ ಅಳಿಯ ಸಂತಾನ ಪದ್ಧತಿಯ ಕುಟುಂಬವೊಂದರ ಚಿತ್ರವನ್ನು ಈ ಸಾಮಾಜಿಕ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ತುಳುನಾಡಿನ ಪರಿಸರವನ್ನು ಚೆನ್ನಾಗಿ ಉಪಯೋಗಿಸಿಕೊಂಡಿರುವುದು ಕಾದಂಬರಿಯ ವೈಶಿಷ್ಟ್ಯವಾಗಿರುತ್ತದೆ. ಇಲ್ಲಿ ವರ್ಣಿತವಾಗಿರುವ ಸಂಗತಿಗಳೆಲ್ಲವೂ ವಾಸ್ತವವಾಗಿರುವುದರಿಂದ ಕಾದಂಬರಿ ಕಳೆಕಟ್ಟಿದೆ. ಸಂಜೀವ ಮತ್ತು ಪಾರ್ವತಿಯ ಮದುವೆಯು ಮೊದಲನೇ ರಾತ್ರಿಯಿಂದ ಕಾದಂಬರಿಯು ತೊಡಗುತ್ತದೆ. ಆದರೆ ಈ ದಾಂಪತ್ಯ ಕೂಡಿ ಬರುವುದಿಲ್ಲ. ಪಾರ್ವತಿಗೆ ತನ್ನ ಮನೆಯವರಲ್ಲಿಯೇ ಬಾಲ್ಯದಿಂದಲೂ ಇದ್ದ ಬಾಬುವಿನ ಮೇಲೆ ಮನಸ್ಸು. ಹೀಗೆ ಸಂಜೀವನನ್ನು ಪತಿಯಾಗಿ ಸ್ವೀಕರಿಸಲೊಪ್ಪದ ಅವಳು ತನ್ನ ಮನಸ್ಸಿನ ಒಲವಿಗೆ ಅತ್ತ ಹೋಗುವ ಯತ್ನಗಳು ಗಾಯದ ಮೇಲಿನ ಉಪ್ಪಿನಂತಾಗುತ್ತವೆ. ಸಂಜೀವ ಹೆಂಡತಿಯನ್ನು ಒಲಿಸಿಕೊಳ್ಳಲಾರದೆ ಸೋತು, ಸೋದರ ಮಾವ ರಾಮಪ್ಪ ಸೆಟ್ಟರ ಜೊತೆಗೆ ಮುಂಬಯಿ ಸೇರುತ್ತಾನೆ. ಪಾರ್ವತಿಯ ದುರವಸ್ಥೆ ಕಂಡು ಮನೆಯವರೆಲ್ಲರೂ ... ಅಳಿಯ ಬಾಬುವಿನ ಮೂಲಕ ಪಾರ್ವತಿಯನ್ನು ಮನೆಗೆ ಬರಮಾಡಿಸುವರು. ಹೀಗೆ ಗಂಡನಿಂದ ದೂರಾದ ಪಾರ್ವತಿಗೆ ಬೇಕಾದ ಬಾಬುವಿನ ಸಹವಾಸ ಸಿಗುತ್ತದೆ. ಇಷ್ಟು ಕಥೆಯಾದರೂ ಕಾದಂಬರಿಯಲ್ಲಿ ಎದ್ದು ಕಾಣುವ ಇನ್ನೊಂದು ಮುಖ್ಯದ ಪಾತ್ರವಿದೆ. ಅವರೇ ಕೋಟಿಚೆನ್ನಯ್ಯಗಳು. ಈ ದೈವಗಳು ಸ್ತ್ರೀಲೋಲ, ಸಂಜೀವನ ತಾಯಿ ಸೀತಕ್ಕನಂತೆ ನಾರಾಯಣ ಶೆಟ್ಟರ ಜೊತೆ ... ನಿಟ್ಟಿಕೊಡಲೆಯೂ ಅವರಿಗೆ ಸಲುಗೆ. ಇದು ಬಿಟ್ಟರೆ ಊರ ಕರ್ಣವರ ... ರ ಮಾನ ಕಳೆದ ಕೀರ್ತಿ ಇವರಿಗಿದೆ. ಕಾದಂಬರಿಯಲ್ಲಿ ಯಥಾರ್ಥವಾಗಿ ಮೂಡಿ ಬಂದ ಚಿತ್ರಣ ಇವರದೇ ಎಂದು ಹೇಳಬಹುದು. ಮುಖ್ಯ ಪಾತ್ರಗಳಾದ ಪಾರ್ವತಿಯ ಮತ್ತು ಬಾಬುವಿನ ಮನಸ್ಸನ್ನು ಬಿಡಿಸಿ ಚಿತ್ರಿಸಲು ಲೇಖಕರು ಪ್ರಯತ್ನಿಸದಿರುವುದು ಒಂದು ಕೊರತೆಯಾಗಿ ಕಾಣುತ್ತದೆ. ಇನ್ನೊಂದು ದೋಷವೆಂದರೆ, ಕಥೆಯಲ್ಲಿ ಏಕಸೂತ್ರತೆ ಇಲ್ಲ. ನೇರವಾಗಿ ಕಾದಂಬರಿಯು ಬರುವ ಅಚೆ ಈಚೆ ನೂಕುನುಗ್ಗಲಾಗಿ ಮುನ್ನಡೆಯುತ್ತದೆ. ತುಳುನಾಡಿನ ಜಾನಪದ ಜೀವನವನ್ನು ತಂದು ತುರುಕುವುದಕ್ಕೋಸ್ಕರವೋ ಬಂದ ಘಟನೆಗಳು ಸೇರಿಕೊಂಡಿವೆ. ಇವು ಸ್ವತಂತ್ರ ಪ್ರಸಂಗಗಳೆಂಬುದರಲ್ಲಿ ಅನುಮಾನವಿಲ್ಲವಾದರೂ ಮೂಲಕಥೆಗೆ ಅವು ಪೋಷಕವಾಗಿವೆ ಎಂದೆನಿಸುವುದಿಲ್ಲ. ಉದಾಹರಣೆಗೆ ಲಿಂಗಪ್ಪ ನಾರಾಯಣ ಸೆಟ್ಟರಿಗೆ ಹೇಳುವ ಅಜ್ಜಕತೆ, ದೇವಪ್ಪನ ಮಾವ ಕೂಕ್ರ ಸೆಟ್ಟಿಯ ವ್ಯವಹಾರದ ವರ್ಣನೆ ಇತ್ಯಾದಿ ಮುಖ್ಯ ಕತೆಗೆ ಸಂಬಂಧಿಸಿದಂತೆಯೇ ಇಲ್ಲ. ರಾಮಪ್ಪನವರ ಚರಿತ್ರ ಚಿತ್ರಣ ಕೋಟಿಚೆನ್ನಯ್ಯಗಳ ಚಿತ್ರದಂತೆ ಸುಂದರವಾಗಿ ಮೂಡಿ ಬಂದಿದ್ದರೂ ಅವರ ಅಗತ್ಯ ಕಥೆಯಲ್ಲಿ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಹೀಗೆಂದ ಮಾತ್ರಕ್ಕೆ ಓದುಗರಿಗೆ ಕಾದಂಬರಿ ಬೇಸರ ತರುವುದೆಂದು ನಿರ್ಣಯಿಸಲಾಗದು. ದಶವತ್ತಾರದ ಸನ್ನಿವೇಶಗಳ ಮಧ್ಯೆ ಸಹಜವಾಗಿಯೂ ಓದುಗರು ಮೈ ಮರೆಯುವರು. ವಾಸ್ತವ ಚಿತ್ರವನ್ನು ಚಮತ್ಕಾರವಾಗಿ ಹೆಣೆದ ಮಲ್ಲರ ಸಾಹಿತ್ಯ ಸಿದ್ಧಿಗೆ ತಲೆದೂಗುವರು.

ಜೀವನ ಶಿಕ್ಷಣ— ಜನತಾ ಸಾಹಿತ್ಯ ಮಾಲೆಯ ಒಂದನೆ ಮಣಿ-ಲೇಖಕರು ಶ್ರೀ ಕೆ ಕೆ ಸೆಟ್ಟಿ. ಪ್ರಕಾಶಕರು— ಬಾಲಸಾಹಿತ್ಯ ಮಂಡಲ, ಮಂಗಳೂರು, ಬೆಲೆ ರೂ 1 2–0

ಇಂದಿನ ಜೀವನದ ಹೋರಾಟವನ್ನು ಎದುರಿಸಲು ಇಂದು ಬಾಲಕರನ್ನು ಹೇಗೆ ತಯಾರಿ ಮಾಡಬೇಕು ಎಂಬ ವಿಚಾರವನ್ನು ಚಿತ್ತಾಕರ್ಷಕ ಘಟನೆಗಳಿಂದ ಚಿತ್ರಿಸುವ ಹೊಸ 'ನಾಟಕ'ವಿದು.

ಸ್ಯಾಂಡ್ ಫೋರ್ಡ್ ಎಂಡ್ ಮರ್ಟನ್ ಎಂಬ ಪುಸ್ತಕವನ್ನು ಓದಿದ ಫಲವೇ ಜೀವನ ಶಿಕ್ಷಣ ಎಂದು ಲೇಖಕರ ಮೊದಲ ಮಾತಿನಿಂದ ಧ್ವನಿತವಾಗುತ್ತದೆ, ಕ್ರೈಸ್ತ ತತ್ವಾನುಗುಣವಾಗಿ ಬಾಲಕರನ್ನು ಯಾಸನೀತಿ ಸತ್ಯನಿಷ್ಠೆ, ಸರಳತೆ, ಪ್ರಾಮಾಣಿಕತೆ, ಸ್ವಾವಲಂಬನೆ ತಂಬೇತಿಯೊಂದಿಗೆ ಜೀವನದ ಹೋರಾಟವನ್ನು ಎದುರಿಸಲು ಮಾಡಬೇಕು ಎಂಬುದು ಸ್ಯಾಂಡ್ ಫೋರ್ಡ್ ಎಂಡ್ ಮರ್ಟನ್ ಪುಸ್ತಕದಲ್ಲಿದ್ದರೆ ಈ ಪುಸ್ತಕದಲ್ಲಿ ಗಾಂಧಿತತ್ವಗಳನ್ನು ನಿದರ್ಶಿಸಿ ಅದೇ ಮಾದರಿಯಲ್ಲಿ ವಿದ್ಯಾರ್ಥಿಗಳನ್ನು ತರಬೇತಿ ಮಾಡುವ ವಿಧಾನವನ್ನು ಚಿತ್ರಿಸಲಾಗಿದೆ. ಕನ್ನಡದಲ್ಲಿ ಹೊಸ ರೀತಿಯಿಂದ ಬರೆಯಲ್ಪಟ್ಟ ಈ ಪುಸ್ತಕವು ಉಪಯುಕ್ತವಾಗಿ ಉಪಯೋಗಿಸಲು ತಕ್ಕದಾಗಿದೆ, ಪ್ರತಿಗಳು ಕೆನರಾ ಪ್ರೆಸ್ಸಿನಲ್ಲಿ ದೊರೆಯುತ್ತವೆ.

One World English Readers for Form I & class VI. By S. Mukunda Rao, M. A. L. T.

ಮೇಲಿನ ಇಂಗ್ಲಿಷ್ ರೀಡರುಗಳ ಭಾಗ I ಮತ್ತು II ನ್ನು ಒಂದೇ ಕೂಡಿದ ಪುಸ್ತಕದ ಬೆಲೆ 1-0-0 ಮಾತ್ರ ಮೇಲಿನ ಪುಸ್ತಕದ "Teachers guide" by S. Mukunda Rao. M. A. L. T. ಬೆಲೆ. ರೂ. 1—0—0

ಪ್ರಕಾಶಕರು. ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ... ರಥಬೀದಿ ಮಂಗಳೂರು.

ಹಲವು ವರುಷಗಳಿಂದ ಉಪಾಧ್ಯಾಯರಾಗಿದ್ದುಕೊಂಡು ವಿಶಾಲ ಅನುಭವವುಳ್ಳ ಶ್ರೀ ಮುಕುಂದ ರಾಯರು ಆಧುನಿಕ ಸಿಲೆಬಸ್ಸಿಗೆ ಅನುಸಾರವಾಗಿ I ಫಾರ್ಮಿಗೆ ಯಾ VI ನೆ ತರಗತಿಗೆ ಯೋಗ್ಯವಾದ ರೀತಿಯಲ್ಲಿ ಈ ಪುಸ್ತಕಗಳನ್ನು ಬರೆದಿರುತ್ತಾರೆ ಜಿಲ್ಲೆಯ ಉಪಾಧ್ಯಾಯರೊಬ್ಬರು ಮಾಡಿದ ನೂತನ ಸಾಹಸಕ್ಕೆ ತಕ್ಕ ಪ್ರೋತ್ಸಾಹ ದೊರೆಯಬೇಕಾಗಿದೆ

For rotection and Provision Consult
The New Guardian of India Life Insurance Co., Ltd.
Estd] Head office: MADRAS [1934

NEW BUSINESS Exceeds	...	66½	Lakhs-
PREMIUM INCOME ,,	..	15	,,
LIFE FUND ,,	...	54¾	,,
ASSETS ,,	..	60¼	,,
BUSINESS IN FORCE Nearly		3	Crores-

A Policy in this Progressive Life Office is good investment; its Agency is valuable business connection
Applications for Representation are invited from energetic influential persons, with good connection. Please apply to:
G. R. Wallia, Branch Manager,
Diamond Building, Hampankatta, MANGALORE, S. K.

ಪಾತ್ರೆ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಜಾಗ್ರತೆಯ ಗಮನ ಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 61

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!
ಬಿಸ್ಸಿ ಸ್ನಾನ, ಊಟ, ಉಪಹಾರ, ಲೈಟ್, ಶಯನ ಇತ್ಯಾದಿ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ?
ಪ್ರೊಪ್ರೈಟರ್—ಕೆ. ವೆಂಕಟ್ರಮಣ ಭಟ್ಟ

ಉಡುಪಿಯ ಕುಂಜಿಬೆಟ್ಟಿನಲ್ಲಿ ನೂತನವಾಗಿ ತೆರೆಯಲಾದ
ಅಂಬಾ ಭವನ
ಸರ್ವ ಸೌಕರ್ಯ ಕೂಡಿದ ಮೇಲ್ದರ್ಜೆಯ ಊಟ ಮತ್ತು ಉಪಹಾರ ಗೃಹ.
ಕಾಲೇಜು ವಿದ್ಯಾರ್ಥಿಗಳಿಗೆ ಬಹಳ ಅನುಕೂಲ
ಸಂದರ್ಶಿಸಿ ಸಂತೃಪ್ತರಾಗಿರಿ
ಬಿ. ಎ. ತಿಮ್ಮಪ್ಪ ಶೆಟ್ಟಿ, —ಪ್ರೊಪ್ರೈಟರ್.

ತೂಕಡಿಕೆಯ ಸುಖ

(೧ನೇ ಪುಟದಿಂದ)

ಹಕ್ಕಿ ಸುಖನಿದ್ರೆ ಅತ್ಯವಶ್ಯವಾದ ಗಳಿಗೆಯಲ್ಲಿ ಮನಸ್ಸು ಹೊಯ್ದಾಡ ಹತ್ತುವುದು ನಿಶ್ಚಯ. ಹಸಿವನ್ನು ದಬಾಯಿಸಿ ಒಂದೆರಡು ದಿನ ಉಪವಾಸ ಮಾಡಿದಾಗ ದೇಹ ಕ್ಷೀಣಿಸಿ ಬಾಡುವಂತೆ, ಬಲಾತ್ಕಾರದಿಂದ ನಿದ್ರೆಯನ್ನು ಓಡಿಸಿದಾಗ, ದೇಹ ಚೇತನ ಹೀನವಾಗುವುದು.

ಸಾಮಾನ್ಯವಾಗಿ ನಮಗೆ ಸೆಖೆಗಾಲದಲ್ಲಿ ಹೊದೆಯಲು ವಸ್ತ್ರ ಬೇಕೆಂದು ತೋರುವದಿಲ್ಲ. ಚಳಿಗಾಲದಲ್ಲಿ ಎರಡೆರಡು ಕಂಬಳಿ ಹೊದೆದು ಕೊಂಡರೂ ಚಳಿ ಹೋಗದಿರಬಹುದು ಆದರೆ ಕೆಲವು ಮನುಷ್ಯರು ೧೦೦ ಡಿಗ್ರಿಗಳ ತಾಪಮಾನದಲ್ಲೂ ಕಂಬಳಿ ಹೊದೆದು ಕೊಂಡು ಮಲಗುವರು; ಇನ್ನು ಕೆಲವರು ಮಾಘಮಾಸದ ಕೊರೆಯುವ ಚಳಿಗೂ ಹೊರಗೆ ಜಗಲಿಯಲ್ಲಿ ಬಿಟ್ಟ ಮೈಯಿಂದ ಸುಖವಾಗಿ ಪವಡಿಸುವರು. ಇದೆಲ್ಲ ಅವರವರ ಅಭ್ಯಾಸದ ಫಲ. ನಿದ್ದೆಯೂ ಹಾಗೆಯೇ. ಎಲ್ಲರಿಗೂ ಇಷ್ಟು ನಿದ್ದೆ ಅಗತ್ಯವೆಂದು ತಕ್ಕಡಿಯಲ್ಲಿ ತೂಕಮಾಡಿ ನಿಷ್ಕರ್ಷಿಸಲು ಸಾಧ್ಯವಿಲ್ಲ. ಥಾಮಸ್ ಆಲ್ವಾ ಎಡಿಸನ್ ಎಂಬ ಪ್ರಸಿದ್ಧ ವೈಜ್ಞಾನಿಕನು ತನ್ನ ಸಂಶೋಧನೆಗಳನ್ನು ನಡೆಸುತಿದ್ದಂತೆಯೇ ತಾಸೆರಡು ತಾಸು ನಿದ್ರೆ ಹೋಗುತಿದ್ದನೆಂದು ಕೇಳಿದ್ದೇವೆ. ಅದರಂತೆ ನೆಪೊಲಿಯನ್ ಬೋನ ಪಾರ್ಟೆಯು ರಣರಂಗದ ನಡುವೆ ಕೆಲವು ಗಳಿಗೆ ತೂಕಡಿಸುವುದಿತ್ತಂತೆ. ನಮ್ಮ ಕಾಲದಲ್ಲಿಯೇ ಮಹಾತ್ಮಾ ಗಾಂಧೀಜಿಯವರು ಮಾಡುವ ನಿದ್ರೆ ಬಹಳ ಮೋಜಿನ ಸುದ್ದಿಯಾಗಿರುತ್ತದೆ. ಕೆಲವು ತಾಸುಗಳ ಚರ್ಚೆ ನಡೆದು ಮಹತ್ವದ ವಿಷಯಗಳು ಇತ್ಯರ್ಥಗೊಂಡೊಡನೆಯೇ ಬಾಪೂಜಿ "ಸರಿ, ಇನ್ನು ನಾನು ಇಪ್ಪತ್ತು ನಿಮಿಷ ನಿದ್ರಿಸುತ್ತೇನೆ"ಎನ್ನುವುದಿತ್ತು. ರೈಲು ಪ್ರಯಾಣದ ಸಮಯದಲ್ಲಿ ಕೂಡ "ಆ ಸ್ಟೇಶನು ಬರಲು ಐದು ನಿಮಿಷವಿದೆಯಷ್ಟೆ! ಇದರೊಳಗೆ ನಾನೊಂದು ಸಣ್ಣ ನಿದ್ದೆ ಮಾಡಿ ಮುಗಿಸುತ್ತೇನೆ" ಎಂದವರು ಅಲ್ಲೇ ಒರಗುತಿದ್ದರು. ಸರಿಯಾಗಿ ಅಷ್ಟು ಸಮಯ ನಿದ್ರಿಸಿ ಯಾರೊಬ್ಬರೂ ಎಚ್ಚರಿಸದೇನೇ ಗಾಂಧೀಜಿ ಏಳುತಿದ್ದರು ಇಂಥ ನಿದ್ರೆಯನ್ನು ನಾವು ಬೇರೆಲ್ಲಿ ಕಾಣಬಲ್ಲೆವು?

ನಮ್ಮಂಥ ಸಾಮಾನ್ಯ ಮನುಷ್ಯರಿಗೆ ನಿದ್ದೆ ಸುಮ್ಮನೆ ಬೇಕೆಂದಾಗ ಬರುವುದಿಲ್ಲ ಪ್ರಕೃತಿ ಧರ್ಮಕ್ಕೆ ಸರಿಯಾಗಿ ರಾತ್ರಿ ಹೊತ್ತು ನಿದ್ದೆಯನ್ನು ಹಗಲು ಕೆಲಸವನ್ನೂ ನಾವು ಮಾಡುತ್ತೇವೆ ಮಲಗಲು ಹೋಗುವುದಕ್ಕೆ ಮುಂಚೆ ಅದಕ್ಕೊಸ್ಕರ ಸಿದ್ಧತೆಯನ್ನು ನಾವೆಲ್ಲರೂ ಮಾಡಿಕೊಳ್ಳುತ್ತೇವೆ. ಮಿದುವಾದ ಹಾಸಿಗೆಯನ್ನು ಹಾಸಿಕೊಳ್ಳುತ್ತೇವೆ. ಶಯನ ಗೃಹವನ್ನು ಅಭಿರುಚಿಗೊಪ್ಪುವ ರೀತಿಯಲ್ಲಿ ಶೃಂಗರಿಸುವ ರಸಿಕರೂ ಇದ್ದಾರೆ. ಹೊಟ್ಟೆ ತುಂಬಿರುವಾಗ ನಿದ್ದೆ ಬರುವುದಿಲ್ಲವಾದುದರಿಂದ ಊಟದ ಬಳಿಕ ಒಂದು ತಾಸು ತಡೆದೇ ಹಾಸಿಗೆ ಸೇರುತ್ತೇವೆ. ಹಸಿದ ಹೊಟ್ಟೆಯಲ್ಲೂ ನಿದ್ದೆ ಬರುವುದಿಲ್ಲ. ಆದುದರಿಂದ ಏನನ್ನಾದರೂ ಸ್ವಲ್ಪ ತಿಂದು ನೀರು ಕುಡಿಯುತ್ತೇವೆ. ಮನಸ್ಸು ಮತ್ತು ದೇಹಕ್ಕೆ ನಿಕಟ ಬಾಂಧವ್ಯವಿರುತ್ತದೆ. ಮನಸ್ಸಿನಲ್ಲಿ ಉದ್ವೇಗ, ವ್ಯಾಕುಲ, ಚಿಂತೆ, ದುಃಖ ಮುಂತಾದುವುಗಳು ನೆಲಸಿರುವಾಗ ಸುಖವಾದ ನಿದ್ರೆ ಬರುವುದಿಲ್ಲ. ಆದುದರಿಂದ ಮನಸ್ಸನ್ನು ಚಿಂತೆ ಬೇಸರಗಳಿಂದ ದೂರಗೊಳಿಸಿ ಆನಂದಮಯ ವಾತಾವರಣದಲ್ಲಿ ಪವಡಿಸುವುದು ನಮ್ಮ ಅಭ್ಯಾಸ. ತಾಯಿ ಹೇಳುವ ಜೋಗುಳಪಾಡು ಕಂದಮ್ಮನಲ್ಲಿ ಇಂಥ ಉತ್ತಮ ಪರಿಣಾಮನ್ನುಂಟು ಮಾಡುತ್ತದೆ. ಬೆಳೆದು ದೊಡ್ಡವರಾದವರು ಮನಸ್ಸನ್ನು ಸ್ವಪ್ರಯತ್ನದಿಂದಲೇ ಪ್ರಸನ್ನವಾಗಿಡಬಲ್ಲರು.

ನಿದ್ರಾ ಸುಖದಿಂದ ಉತ್ತಮ ಚೇತನ ಮರಳಿ ಲಭ್ಯವಾಗುತ್ತವೆಂದು ವೈಜ್ಞಾನಿಕ ಅಭಿಪ್ರಾಯ. ನಿದ್ರೆಯಲ್ಲಿ ನಾವು ಮಾಡುವ ಚಲನವಲನಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನಿದ್ರಿಸುವ ಕಲೆಯ ಅಧ್ಯಯನವನ್ನು ಈ ವಿಜ್ಞಾನಿಗಳು ಮಾಡಿರುವರು. ಮಲಗಿದಾತನ ನಿಮಿಷದ ಚಿತ್ರವನ್ನು ತೆಗೆದು ಅವನ ಮನೋಭಾವವನ್ನು ಶಾರೀರಕ ಸ್ಥಿತಿಯನ್ನು ಇದ್ದುದಿದ್ದಂತೆ ಗ್ರಹಿಸಲು ಅಪಾರ ಪರಿಶ್ರಮಪಟ್ಟಿರುವರು. ನಿದ್ದೆಯಲ್ಲಿ ನಾವೇನು ಮಾಡುತ್ತೇವೆಂಬುದರ ನಿಜವಾದ ಅರಿವು ನಮ್ಮಲ್ಲಿ ಸಾಮಾನ್ಯವಾಗಿ ಯಾರಿಗೂ ಇರುವುದಿಲ್ಲ. ಆದರೂ ಸುಖದಿಂದಪವಡಿಸುವ ತಮ್ಮನ್ನು ಜಿಜ್ಞಾಸೆಯ ದೃಷ್ಟಿಯಿಂದ ನಾವು ನೋಡಿದರೆ, ಅವನು ಪ್ರತಿ ಎರಡು ಮೂರು ನಿಮಿಷಗಳಿಗೊಮ್ಮೆ ಕೈಕಾಲು ಆಡಿಸುವುದನ್ನು, ಮಗ್ಗುಲು ಬದಲಿಸುವುದನ್ನು, ಆಳವಾಗಿ ಉಸಿರೆಳೆಯುವುದನ್ನು ಕಣ್ಣುಗಳನ್ನು ಮುಚ್ಚಿರುವುದನ್ನು, ಮುಖದ ಮೇಲೆ ಕುಣಿಯುವ ಹೊಳಪನ್ನು ಕಾಣಬಲ್ಲೆವು. ಎದುರಿಗೆ ಬಂದ, ನಿಂತಾಗ ಕಾಣಿಸಿದ ಚೆಲುವು ಮತ್ತು ಮೋಹಕತೆ ಸುಖ ನಿದ್ರಾಸಕ್ತನಾದ ವ್ಯಕ್ತಿಯಲ್ಲಿ ನಮಗೆ ಗೋಚರಿಸುತ್ತದೆ ನಿಜವಾಗಿಯೂ ಈ ಸಮಯದಲ್ಲಿ ಆ ವ್ಯಕ್ತಿಯ ಶಾರೀರಕ ಸ್ಥಿತಿಯಲ್ಲಿ ಮಾರ್ಪಾಟುಗಳುಂಟಾಗುತ್ತವೆ. ಹೃದಯದ ಬಡಿತ ನಿಧಾನವಾಗುತ್ತದೆ; ರಕ್ತಚಲನೆ ಮಂದಗೊಳ್ಳುತ್ತದೆ. ಮಾಂಸಖಂಡಗಳು ಶಿಥಿಲವಾಗುತ್ತವೆ ಪ್ರಜ್ಞೆಯು ಲುಪ್ತವಾಗುತ್ತದೆ ಮನಸ್ಸಿಗೂ ಶರೀರಕ್ಕೂ ಉದ್ದಿಷ್ಟವಾದ ಯಾವುದೇ ಕೆಲಸವಿಲ್ಲದಿರುವುದರಿಂದ ಅವು ವಿರಾಮ ಪಡೆಯುತ್ತವೆ. ಹೀಗೆ ಹಗಲಿನಲ್ಲಿ ಕೆಲಸ ಮಾಡಿ ಕಳೆದುಕೊಂಡ ಚೇತನವು ಮರಳಿ ದೊರೆಯುತ್ತದೆಂದು ಹೇಳಬಹುದು.

ಬೆಟರಿ ಚಾರ್ಜುಮಾಡುವುದೆಂದು ಕೇಳಿದ್ದೇವೆ. ಸುಖವಾದ ನಿದ್ರೆಯನ್ನು ಇದಕ್ಕೆ ಹೋಲಿಸಬಹುದು. ಸುಖವಾಗಿ ನಿದ್ರೆಯನ್ನು ಅನುಭವಿಸಲು ನಾವು ಪ್ರಯತ್ನಪಡುವುದು ಅಗತ್ಯವಿಲ್ಲ. ಶರೀರ ಅಥವಾ ಮನಸ್ಸೇ ನಮಗೆ ನಿದ್ದೆ ಯಾವಾಗ ಬೇಕೆಂಬುದನ್ನೂ ಎಷ್ಟು ಬೇಕೆಂಬುದನ್ನೂ ಸೂಚಿಸುತ್ತದೆ. ನಿದ್ದೆ ಮಾಡುವುದರಲ್ಲಿ ಕಾರ್ಪಣ್ಯ ಸಲ್ಲದಾದರೂ ಕಾಪಟ್ಯವೂ ತ್ಯಾಜ್ಯ. ಒಂದು ಗಾದೆ ಕೇಳಲ್ಲವೆ? ನಿದ್ದೆ ಬಂದವನನ್ನು ಎಚ್ಚರಿಸಬಹುದು; ಆದರೆ ನಿದ್ದೆ ಬರಿಸಿಕೊಂಡ ಕಪಟಿಯನ್ನಲ್ಲ! ಅವಶ್ಯಕತೆಯನ್ನು ಮೀರಿ ನಿದ್ರಿಸುವಾತ ಧೀಟು ಸೋನಾರಿ.

ಚಿಕ್ಕಂದಿನಲ್ಲಿ ಓದಿದ ಇನ್ನೊಂದು ಕಥೆಯನ್ನು ನಿಮಗೂ ನೆನಪು ಮಾಡಿಕೊಟ್ಟರೆ ನಿದ್ದೆಗೇಡಿಗಳಾಗುವುದು ಅಪಹರಿಹಾರ್ಯವೇನಲ್ಲವೆಂದು ಮಂದಟ್ಟಾಗುತ್ತದೆ. ಸುಖನಿದ್ರೆ ಬರಿಸುವ ಕಂಬಳಿಯನ್ನು ರಾಜನೊಬ್ಬನು ಭಿಕ್ಷುಕನಲ್ಲಿ ಕಂಡನೆಂಬುದೇ ಆ ಕಥೆಯ ತಿರುಳು ಮನಸ್ಸಿನಲ್ಲಿ ನೂರಾರು ಚಿಂತೆಗಳನ್ನು ಹಚ್ಚಿಕೊಂಡವನಿಗೆ ನಿದ್ದೆ ಮಾಡುವ ಪುರಸೊತ್ತೆಲ್ಲಿದೆ? ನಿದ್ದೆ ನೀಡುವ ಸುಖಕ್ಕಿಂತಲೂ ಹೆಚ್ಚು ಸುಖವನ್ನು ಈ ಚಿಂತೆ ಮತ್ತು ನೋವುಗಳ ವಿಚಾರ ಮಾನಸಿಕವಾಗಿ ಅವನಿಗೆ ಕೊಡಬಹುದು. ಆದರೆ ನಿದ್ರೆ ಮನಸ್ಸಿನ ಮೇಲೆ ಮಾಡುವ ಪರಿಣಾಮಕ್ಕಿಂತಲೂ ಶರೀರದ ಮೇಲೆ ಬೀರುವ ವರ್ಚಸ್ಸು ಹೆಚ್ಚು ಮಹತ್ವದ್ದು. ಆದುದರಿಂದ ನಮ್ಮ ಶಾಸನ ಸಭೆಗಳಲ್ಲಿ ಅಥವಾ ಪಾರ್ಲಿಮೆಂಟಿನಲ್ಲಿ ಸದಸ್ಯರು ತೂಕಡಿಸುವ ಚಪಲವನ್ನು ತೋರಿದರೆ, ಅದು ಭಾಷಣಗಾರರು ಆಡುವ ಮಾತಿನ ಪ್ರವಿಯಿಂದ ಬೇಸರಗೊಂಡಲ್ಲವೆಂದೂ ಈ ಮಹಾಶಯರಿಗಾದ ಶಾರೀರಿಕ ದಣಿವೇ ಕಾರಣವೆಂದೂ ಹೇಳಬಹುದು. ಸಭೆಸಮಾರಂಭಗಳಲ್ಲಿ ಮಾತನಾಡುವವರು ಕೆಲವೇ ಮಂದಿ; ಅವರಾಡುವ ಮಾತಿಗೆ ಸಭ್ಯತೆಯ ಸೀಮೆ ಇದ್ದರೆ, ಅಲ್ಪ ಉಪಸ್ಥಿತರಿರುವ ಎಲ್ಲರೂ ಕುಳಿತುಕೊಳ್ಳುವ ರೀತಿ ಮತ್ತು ಗಾಂಭೀರ್ಯದ ಮೇಲೆ ಹತೋಟಿಯೂ ಅತ್ಯಂತ ಅಗತ್ಯ. ನಿದ್ದೆಯು ಮನುಷ್ಯನ ಬುದ್ಧಿ ಸ್ವಾತಂತ್ರ್ಯಕ್ಕೆ ದಕ್ಕುವಂತಹದಲ್ಲ. ಆದುದರಿಂದ ಈ ಸ್ವಾತಂತ್ರ್ಯದ ಅಪಹರಣವಾದ ಗಳಿಗೆಯಲ್ಲೆಲ್ಲ ಸಭಾಧ್ಯಕ್ಷರು ಮಾನ್ಯ ಸದಸ್ಯರನ್ನು ಎಚ್ಚರಿಸುವುದು ಸಂಪ್ರದಾಯ. — ಚಿಂತತ್ವಾ ||

ಡಿಪ್ಯೂಟಿ ಕಮಿಷನರ್ ಹಿಂದೂ ರಿಲೀಜಯಸ್ ಮತ್ತು ಚರಿಟೆಬಲ್ ಎಂಡೋಮೆಂಟ್ಸ್, ಕೊಯಂಬುತ್ತೂರು, ಇವರ ಮುಂದೆ—

O. A. No. 42-1952.

ಪುಟ್ಟಯ್ಯ ಸೆಟ್ಟಿ... ...ಅರ್ಜಿದಾರ.

ವತ್ತು

ವೀರಣ್ಣ ಸೆಟ್ಟಿ.. ......ಎದ್ರಿ

ಅರ್ಜಿದಾರನು ಸೂರಪ್ಪ ಸೆಟ್ರು ಮರಣಾನಂತರ ತನ್ನ ಕುಟುಂಬದಲ್ಲಿ ತಾನು ಹಿರಿಯನಾದ ಕಾರಣ ತನ್ನನ್ನು ಕುಂದಾಪುರ ತಾಲೂಕು ಚಿತ್ತೂರು ಗ್ರಾಮದ ಮಾರ್ಣಕಟ್ಟೆ ಬ್ರಹ್ಮಲಿಂಗ ದೇವಸ್ಥಾನದ ಪಾರುಪತ್ತೇಗಾರನನ್ನಾಗಿ ನೇಮಿಸಬೇಕಾಗಿ ಕೊಟ್ಟ ಅರ್ಜಿಯು ಈ ಕೋರ್ಟಿನ ಮುಂದೆ ಕೊಯಂಬುತ್ತೂರಿನಲ್ಲಿ ತಾ. 30—6—1953ಕ್ಕೆ ಇಟ್ಟಿರುತ್ತದೆ. ಆಕ್ಷೇಪಗಳು ಇದ್ದಲ್ಲಿ ಸದರಿ ದಿವಸ ದಾಖಲಾಗತಕ್ಕದ್ದು. ತಪ್ಪಿದಲ್ಲಿ ಆಕ್ಷೇಪ ಶಿವಾಯಿ ಎಕ್ಸ್‌ಪಾರ್ಟಿ ತೀರ್ಮಾನವಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

By order

B. B Shetty

Advocate for Petitioner

Mangalore: Date 1—6—1953.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ . .	ರೂ. 20,00,000
ತೆತ್ತ ಪಾಲು ಭಂಡವಾಳ . .	„ 8,77,860
ಕ್ಷೇಮ ನಿಧಿ . .	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¾°/, ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಮಧುವಿಗಿಂತಲು ಮಧುರವಾದ ಕಥಾಸಂಗ್ರಹ

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಪಡಿಯಚ್ಚುಗಳಿವೆ.

„ಮಧುವನ"ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. „ನವಿಲುಗರಿ" „ಕಾಮನ ಬಿಲ್ಲು" ಎಂಬ ಸಂಗ್ರಹಗಳು ಹೊರಟರೂ ಅಲ್ಲಿ ಕಾಣಲಾರದ ಹೆಸರುಗಳ ಕೆಲವು „ಮಧುವನದಲ್ಲಿ ನಮಗೆ ಪರಿಚಿತವಾಗಿ ನಿಲ್ಲುತ್ತವೆ. „ಮಧುವನ"ದ ಸಂಪಾದಕರ ಕೆಲಸವು ಸಣ್ಣದಲ್ಲ. ಹತ್ತು ಎಮ್ಮೆ ಹಾಲು ಕರೆದರೂ ಅದನ್ನು ಹೆಪ್ಪು ಹಾಕುವ ಹೊಣೆಯು ಅವರದಾಗಿದೆ. ಅದನ್ನು ಎಲ್ಲರೂ ಒಪ್ಪುವಂತೆ ಕೊನೆಗಾಣಿಸಿದ್ದಾರೆ. ಲೇಖಕ, ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಬರೆದ ನಿಮರ್ಶಾತ್ಮಕ ಟಿಪ್ಪಣಿಗಳು ಇವೆಲ್ಲ ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಸೊಬಗನ್ನು ಹೆಚ್ಚಿಸಿವೆ. ಕಲೆಯ ದೃಷ್ಟಿಯಿಂದ ಇದೊಂದು ಉಚ್ಚ ತರಗತಿಯ ಕಥಾಸಂಗ್ರಹವಾಗಿದೆ.

— ವಿ. ಕೃ. ಗೋಕಾಕ.

ಬಿಳಿ ಕಾಗದ- ಆಕರ್ಷಕ ಹೊರ ಮೈ. ಬೆಲೆ ರೂ. 3—0—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಭೂಮಾತೆ ಎಂದಿನ ವರೆಗೆ ಉಣಿಸಿಯಾಳು?

(೨ನೇ ಪುಟದಿಂದ)

ದಲ್ಲಿ ಅತಿ ಕಡಿಮೆ ಅಂದರೆ ೦.೩೯ ಎಕ್ರೆ ಭೂಮಿ ಇದೆ. ಸಾಗುವಳಿಗೆ ಯೋಗ್ಯವಾದ ಭೂಮಿಯಲ್ಲಿ ಶೇಕಡಾ ೩.೬ ಕೆನಡಾದಲ್ಲಿ ಮತ್ತು ೧೨.೪ ಚೀನಾದಲ್ಲಿ ವ್ಯವಸಾಯಕ್ಕೆ ಒಳಗಾಗಿವೆ.

ಭೂಪೃಷ್ಠದ ಪರಿಸ್ಥಿತಿಯನ್ನು ಹೊಂದಿಕೊಂಡು ಬೇರೆ ಬೇರೆ ಜಾತಿಯಾಗಿ ವಿಂಗಡಿಸಿದರೆ ಪ್ರತಿ ನೂರು ಎಕ್ರೆಯಲ್ಲಿ ಬಯಲು ೪೧ ಎಕ್ರೆ, ಸೀರಭೂಮಿ ೩೩ ಎಕ್ರೆ; ಗುಡ್ಡ ಬೆಟ್ಟಗಳು ೧೪ ಎಕ್ರೆ, ಪರ್ವತ ರಾಶಿಗಳು ೧೨ ಎಕ್ರೆ ಇವೆ. ಬಯಲು ಪ್ರದೇಶದ ೯೫%, ಸೀರಭೂಮಿಯ ೭೫%, ಗುಡ್ಡ ಬೆಟ್ಟಗಳ ೨೫% ಮತ್ತು ಪರ್ವತ ರಾಶಿಯ ೫% (ಅರ್ಥಾತ್ ಒಟ್ಟು ನೆಲದ ಮೂರರಲ್ಲಿ ಎರಡಂಶ) ಏನಾದರೊಂದು ಕೃಷಿಗೆ ಚೆನ್ನಾಗಿದೆ. ಆದರೆ ಹವಾಮಾನ ಮತ್ತು ಭೂಗುಣವನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳುವಾಗ ಒಟ್ಟು ನೆಲ ಪ್ರದೇಶದ ಕಾಲಂಶ ಮಾತ್ರ ಕೃಷಿ ಯೋಗ್ಯವೆಂದು ಸಿದ್ಧಗೊಂಡಿದೆ

ಉತ್ಪಾದನೆಯ ಮಟ್ಟ

ಸಾಮಾನ್ಯವಾಗಿ ೧೫೦ ಅಡಿಗಿಂತ ಕೆಳಗಿನ ಪ್ರದೇಶದಲ್ಲಿಯೇ ಬೇಸಾಯ ನಡೆಯುತ್ತದೆ. ವಿಸ್ತಾರವಾದ ಬಯಲು ಪ್ರದೇಶಗಳೂ ತಗ್ಗಾದ ಸೀರಭೂಮಿ ಮತ್ತು ಗುಡ್ಡ ಪ್ರದೇಶಗಳೂ ಹೀಗೆ ವ್ಯವಸಾಯಕ್ಕೊಳಗಾಗಿವೆ. ಬಯಲು ಪ್ರದೇಶವೆಂದೊಡನೆಯೇ ಬೇಸಾಯ ಮಾಡಬಹುದೆಂದು ಅರ್ಥವಲ್ಲ—ಶೀತೋಷ್ಣಗಳು ಬೇಸಾಯಕ್ಕೆ ಅನುಕೂಲವಿಲ್ಲದೆ ಇರಬಹುದು, ಮಳೆ ಇಲ್ಲದೆ ಅಥವಾ ಜವುಗಾಗಿ ಬೇಸಾಯ ಮಾಡಲು ಸಾಧ್ಯವಾಗದೆ ಹೋದೀತು. ಹೀಗೆ ಭೂಗುಣದ ಜೊತೆಗೆ ಹವಾಗುಣವೂ ಚೆನ್ನಾಗಿದ್ದಲ್ಲಿ ಬಯಲುಗಳು ವ್ಯವಸಾಯಕ್ಕೆ ಯೋಗ್ಯ. ಸುಮಾರು ೧೫ ಇಂಚು ವಾರ್ಷಿಕ ಮಳೆಯೂ ಬೆಳೆ ಬೆಳೆಯಿಸಲು ಅಗತ್ಯವೇ ಕಿರುವುದೆಂದು ಲೆಕ್ಕಕ್ಕೆ ಹಿಡಿದರೆ ಒಟ್ಟು ನೆಲದ ಮೂರರಲ್ಲಿ ಒಂದಂಶ ಮಾತ್ರ ಸಾಗುವಳಿಗೆ ಯೋಗ್ಯ. ಬೆಳೆ ಬೆಳೆಯುವ ಕಾಲದಲ್ಲಿಯೇ ಮಳೆ ಬರುವುದಾದಲ್ಲಿ ೧೧ ಇಂಚು ಮಳೆಯಿಂದಲೇ ಸಾಗುವಳಿ ಮಾಡಬಹುದಾದ ಪ್ರದೇಶಗಳೂ ಇವೆ. ಅದೇ ಉಷ್ಣವಲಯದಲ್ಲಿ ಕೆಚ್ಚಿನ ನೀರು ಆವಿಯಾಗಿ ಹೋಗುವುದರಿಂದ ೪೦ ಇಂಚು ಮಳೆ ಬಂದರೂ ಬೆಳೆಗೆ ಸಾಕಾಗಲಿಕ್ಕಿಲ್ಲ. ಇದರಂತೆ ಉಷ್ಣಮಾನವೂ ಸಸ್ಯಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಮಳೆ ಚೆನ್ನಾಗಿದ್ದು ಭೂಗುಣ ಉತ್ತಮವಾಗಿದ್ದಾಗಲೂ ಉಷ್ಣತಾಮಾನದ ವೈಪರೀತ್ಯದಿಂದ ಬೆಳೆ ಬೆಳೆಯಲು ಆತಂಕ ಒದಗುವುದುಂಟು. ಆದುದರಿಂದ ಕೇವಲ ಕೂಡಿಸಿ ಕಳೆಯುವುದರಿಂದ ಮತ್ತು ಗುಣಾಕಾರ ಭಾಗಾಕಾರದಿಂದ ಭೂಮಿಯ ಕೃಷ್ಯುತ್ಪಾದನಾ ಸಾಮರ್ಥ್ಯವನ್ನು ಸುಲಭದಲ್ಲಿ ಅಳೆಯಲಾರೆವು.

ಇದರಂತೆ ಬೇಸಾಯಕ್ಕೆ ಯೋಗ್ಯ ಅನುಕೂಲತೆ ಇದ್ದರೂ ಜನ ವಸತಿಯೇ ಇಲ್ಲದ್ದರಿಂದ ಬಂಜರಾದ ಭೂಮಿಯೂ ಇದೆ. ಉದಾಹರಣೆಗೆ ಎಮೆಜಾನ್ ನದೀ ಬಯಲು, ಬರ್ಮಾದ ಇರಾವತಿ ನದಿ ಪ್ರದೇಶ ನ್ಯೂಗಿನಿ, ಸುಮಾತ್ರಾ ಮುಂತಾದವುಗಳನ್ನು ಹೆಸರಿಸಬಹುದು. ಯೋಗ್ಯ ಕೆಲಸಗಾರರಿದ್ದರೆ ಇನ್ನೂ ಹೆಚ್ಚು ಭೂಮಿಯನ್ನು ಹೊಸತಾಗಿ ವ್ಯವಸಾಯಕ್ಕೆ ಗುರಿಪಡಿಸಲು ಸಾಧ್ಯ.

ಈಗಿರುವಂತೆ ನೀರಾವರಿಗೊಳಗಾದ ಪ್ರದೇಶವು ಹತ್ತರಲ್ಲಿ ಒಬ್ಬನ ಹಸಿವನ್ನು ಕಳೆಯುತ್ತದೆ. ಸದ್ಯಕ್ಕೆ ಇಪ್ಪತ್ತು ಕೋಟಿ ಎಕ್ರೆ ಭೂಮಿಯು ನೀರಾವರಿಗೊಳಗಾಗಿರುತ್ತದೆ ಇನ್ನೊಂದು ೨೦ ಕೋಟಿ ಎಕ್ರೆ ಭೂಮಿಗೆ ನೀರುಣಿಸಬಹುದೆಂದು ತಜ್ಞರ ಅಭಿಪ್ರಾಯ. ಚೀನಾದಲ್ಲಿ ೨,೧೫ ೦೦,೦೦೦ ಎಕ್ರೆ, ಭಾರತದಲ್ಲಿ ೪,೨೨,೦೦,೦೦೦ ಎಕ್ರೆ ಅಮೇರಿಕಾದಲ್ಲಿ ೨,೬೨ ೦೦ ೦೦೦ ಎಕ್ರೆ ಮತ್ತು ಪಾಕಿಸ್ಥಾನದಲ್ಲಿ ೨ ೦೨,೦೦ ೦೦೦ ಎಕ್ರೆ ಭೂಮಿಗೆ ನೀರುಣಿಸುವ ಮಹಾ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಇಳಿಯುತ್ತಿವೆ.

ಕಳೆದ ಅರ್ಧ ಶತಮಾನದಲ್ಲಿ ನೀರಾವರಿ ಕ್ಷೇತ್ರದಲ್ಲಿ ಮಹತ್ವದ ಪ್ರಗತಿಯು ಕೈಗೂಡಿರುತ್ತದೆ. ಈಜಿಪ್ಟವನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು ಒಂದೇ ಬೆಳೆಯ ಕೃಷಿ ಕ್ರಮವನ್ನು ಬದಲಿಸಿ ಈಗ ಅಲ್ಲಿ ಅನೇಕ ಬೆಳೆಯನ್ನು ಬೆಳೆಯಲು ಸಾಧ್ಯವಾಗುವಂತೆ ನೀರಾವರಿ ಕ್ರಮವನ್ನು ಪರಿವರ್ತಿಸಿರುವರು. ಆಸ್ವಾನ್ ಅಣೆಕಟ್ಟಿನಂಥ ವಿಸ್ತಾರವಾದ ಯೋಜನೆಗಳಿಂದ ಮಹಾ ಜಲಾಶಯಗಳನ್ನು ನಿರ್ಮಿಸಿ ಸತತ ನೀರಿನ ಪೂರೈಕೆಯಾಗುವಂತೆ ನೋಡಿಕೊಂಡಿರುವರು. ಭಾರತದಲ್ಲಿಯೂ ಈಗಿನ ನೀರಾವರಿ ಪ್ರಮಾಣವನ್ನು ಒಂದೂವರೆ ಪಾಲಷ್ಟು ಏರಿಸಲು ಸಿದ್ಧತೆಗಳು ನಡೆದಿವೆ. ನಮ್ಮ ದೇಶದಲ್ಲಿ ಹೆಚ್ಚುಕಡಿಮೆ ಪ್ರತಿಯೊಂದು ರಾಜ್ಯವೂ ಅನಿಶ್ಚಿತವಾದ ಮಳೆಯನ್ನು ಹೊಂದಿಕೊಂಡಿರುತ್ತದೆ. ಇದರ ಭೀಕರ ಪರಿಣಾಮವನ್ನು ಇಲ್ಲವಾಗಿಸಲು ನೀರಾವರಿ ಯೋಜನೆಗಳಿಗೆ ಗಮನ ಕೊಡುವುದೇ ಯೋಗ್ಯ ಉಪಾಯ

ಹೆಚ್ಚು ಪರಿಶ್ರಮದ ಅಗತ್ಯ

ಸಾಮಾನ್ಯವಾಗಿ ಮೊದಲಿದ್ದ ಉತ್ಪಾದನೆಯು ಈಗ ದೊರೆಯುತ್ತಿಲ್ಲವೆಂಬ ಸಂಗತಿಯೂ ಸಂಶೋಧನೆಯಿಂದಲೂ ಅನುಭವದಿಂದಲೂ ವ್ಯಕ್ತಗೊಂಡಿದೆ ಆಸ್ಟ್ರೇಲಿಯಾ ಅರ್ಜೆಂಟೀನಾ, ಕೆನಡಾ, ದಕ್ಷಿಣ ಆಫ್ರಿಕಾ, ವೆನೆಜುಯೇಲಾ ಮುಂತಾದ ದೇಶಗಳಲ್ಲಿ ಎಕ್ರೆಯೊಂದರ ಉತ್ಪಾದನಾ ಸಾಮರ್ಥ್ಯ ಕಳೆಗುಂದಿದೆ ಒಂದು ಕಾಲದಲ್ಲಿ ಅತಿ ಹೆಚ್ಚು ಉತ್ಪಾದನಾ ಸಾಮರ್ಥ್ಯ ಪಡೆದವುಗಳೆಂದು ಹೆಸರುಗೊಂಡಿದ್ದ ಉತ್ತರ ಆಫ್ರಿಕಾ ಟೈಗ್ರಿಸ್ ಮತ್ತು ಯುಫ್ರೆಟಿಸ್ ನದಿಗಳ ಬಯಲು, ಭಾರತ ಮತ್ತು ಚೀನಾದ ವಿಸ್ತಾರವಾದ ಹೆಸರು ಹೊಲಗಳು ಇಂದು ನಿಧಾನವಾಗಿ ಬಂಜರಾಗುತ್ತಾ ನಡೆದಿವೆ.

ಆದುದರಿಂದ ಇಂದು ಎಂದಿಗಿಂತಲೂ ಹೆಚ್ಚು ಜಾಗ್ರತೆಯಿಂದ ಭೂಮಿಯನ್ನು ಸಾಗು ಮಾಡಬೇಕೆಂಬ ದಕ್ಷ ಒತ್ತಾಯ ಬಂದಿರುತ್ತದೆ. ಪೋಷಕಾಂಶಗಳು ಮುಖ್ಯವಾಗಿ ಸಾರಜನಕ ಮತ್ತು ಪಿಷ್ಟಗಳು ತುಂಬಿರುವ ಆಹಾರದ ಬೆಳೆಯನ್ನು ಎಲ್ಲ ರೀತಿಯಿಂದಲೂ ಅಭಿವೃದ್ಧಿಗೊಳಿಸಬೇಕೆಂದು ತಜ್ಞರ ಸಲಹೆ. ಕೆಲವರಂತೂ ರಸಾಯನಿಕ ಪರಿಣಾಮಗಳಿಗೆ ಗುರಿಪಡಿಸಿದ ಬೀಜಗಳನ್ನು ಉಪಯೋಗಿಸಿ ಉತ್ಪಾದನೆಯನ್ನು ಏರಿಸಲು ಪ್ರಯತ್ನಿಸಬೇಕೆಂದಿರುವರು. ಆದರೆ ಈ ಬೀಜಗಳನ್ನು ಅಗ್ಗದರದಲ್ಲಿ ಪೂರೈಸುವುದು ಸರ್ವದಾ ಅಸಾಧ್ಯವಾದುದರಿಂದ ಆ ಕ್ರಮವನ್ನು ಅನುಸರಿಸಲಾರೆವು

ಇದರಂತೆ ಉತ್ಪಾದನೆ ಹೆಚ್ಚಿಸುವ ಪ್ರಯತ್ನಗಳಿಗೆ ಪೇಟೆಯ ವಾತಾವರಣದಿಂದಲೂ ಪ್ರೋತ್ಸಾಹ ಅಥವಾ ನಿರುತ್ಸಾಹ ದೊರಕದೆ ಇಲ್ಲ. ಕೃತಕ ರೀತಿಯಿಂದ ಉಳಿತಾಯವನ್ನಾಗಲೀ ಕೊರತೆ ತೋರಿಸುವ ಹವ್ಯಾಸ ಈಗ ಹೆಚ್ಚಿರುವುದರಿಂದ ಕೃಷ್ಯುತ್ಪನ್ನದ ಪ್ರಯತ್ನಗಳ ಮೇಲೆ ಇವುಗಳ ಪರಿಣಾಮ ಹೆಚ್ಚಿರುತ್ತದೆ. ಇದರಂತೆ ಭೂಮಾತೆಯು ಇನ್ನು ಎಷ್ಟು ಜನ ಮಕ್ಕಳನ್ನು ಪೋಷಿಸಿಯಾಳೆಂಬ ಪ್ರಶ್ನೆಗೆ ಉತ್ತರ ಕೊಡುವಾಗ, ಆ ಮಕ್ಕಳು ಎಂಥ ಜೀವನ ಮಟ್ಟವನ್ನು ಹೊಂದಿರಬೇಕೆಂಬುದನ್ನೂ ಯೋಚಿಸಬೇಕು. ಈಗಿದ್ದರೂ ಈ ಕೆಳಗಿನ ಅಂಶಗಳನ್ನು ಕಣ್ಮುಂದಿಟ್ಟುಕೊಂಡು ಭೂಮಿ ತಾಯಿಯು ಸಲಹಬಲ್ಲ ಮಕ್ಕಳ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳೋಣ—

ದೀರ್ಘಕಾಲೀನ ಪರಿಣಾಮ

(೧) ಈಗಿನ ವ್ಯವಸಾಯ ಪದ್ಧತಿಗಳೇ ಇನ್ನುಮುಂದೆಯೂ ಅನೇಕ ವರ್ಷಗಳ ವರೆಗೆ ಉಳಿಯುವುವೆಂದು ನಾವೆಣಿಸೋಣ, ಮತ್ತು ಆಹಾರೋತ್ಪಾದನೆಯಲ್ಲಿ ಹೆಚ್ಚಳವುಂಟಾಗುವುದಿದ್ದರೆ ಅದು ಹಿಂದುಳಿದ ಪ್ರದೇಶಗಳಲ್ಲಿ ಸುಧಾರಿಸಿದ ಕ್ರಮದ ಅನುಸರಣೆ ಮಾಡಿದುದರಿಂದ ಮಾತ್ರವೆಂದೂ ತೆಗೆದುಕೊಳ್ಳೋಣ ಈ ಲೆಕ್ಕಾಚಾರದ ಮೇಲಿಂದ ಸುಮಾರು ೬೫೦ ಕೋಟಿ ಜನರು ಸುಲಭವಾಗಿ ಭೂಮಾತೆ ನೀಡುವ ಅನ್ನವನ್ನುಂಡು ಸುಖದಿಂದಿರಬಹುದೆಂದು ತಿಳಿಯಲ್ಪಟ್ಟಿದೆ.

(೨) ಇವರೊಂದಿಗೆ ಲೋಕದಲ್ಲಿ ಏರುತ್ತಿರುವ ಜನಸಂಖ್ಯಾ ಪ್ರಮಾಣ ಮತ್ತು ಇಳಿಯುತ್ತಿರುವ ಜೀವನ ಮಟ್ಟವು ಉತ್ಪಾದನಾಯೋಗ್ಯವಾದ ಎಲ್ಲ ಭೂಮಿ ಮತ್ತು ಸಾಧನಗಳನ್ನು ಉಪಯೋಗಿಸಲು ನಮ್ಮನ್ನು ಒತ್ತಾಯಿಸುತ್ತವೆಂದಿಟ್ಟುಕೊಳ್ಳೋಣ ಹೀಗಾದರೆ ಸುಮಾರು ೪೦ ಲಕ್ಷ ಚದರ ಮೈಲು ಪ್ರದೇಶವು ಉಷ್ಣವಲಯದಲ್ಲಿ ಕೃಷ್ಯುತ್ಪಾದನೆಗೆ ಒಳಗಾಗುತ್ತದೆ. ಈ ಪ್ರದೇಶದ ಬೆಳೆಯು ಜಾವಾದಲ್ಲಿಯ ಜನವಸತಿಯನ್ನು ಪೋಷಿಸಲು ಸಾಕಾಗುತ್ತದೆ. ಪ್ರಕೃತ ಜಾವದಲ್ಲಿ ವ್ಯವಸಾಯ ಯೋಗ್ಯವಾದ ಒಟ್ಟು ನೆಲದ ಶೇಕಡಾ ೬೦ ಅಂದರೆ ೫೨,೦೦೦ ಚದರ ಮೈಲು ಸಾಗುವಳಿಗೆ ಒಳಗಾಗಿದ್ದು ೪೨೦ ಲಕ್ಷ ಜನರು ಇದನ್ನು ಹೊಂದಿಕೊಂಡಿರುವರು. ಉತ್ಪಾದನೆ ಹೆಚ್ಚಿಸುವ ಪ್ರದೇಶದ ಜನಸಾಂದ್ರತೆಗೆ ಜಾವಾ ಮತ್ತು ಫ್ರಾನ್ಸುಗಳನ್ನು ಮಾದರಿಯಾಗಿ ತೆಗೆದುಕೊಂಡ ಪಕ್ಷದಲ್ಲಿ ಭೂಮಾತೆಯು ಸಲಹಬಹುದಾದ ಜನರ ಸಂಖ್ಯೆ ೯೬೦ ಕೋಟಿಯಾಗುತ್ತದೆ.

ಈ ಲೆಕ್ಕಾಚಾರದ ಮೇಲೆ ಪರಿಶೀಲಿಸಿಟ್ಟರೆ. ಈಗ ಜನ ಸಂಖ್ಯೆ ಮಿತಿಮೀರಿ ಹೆಚ್ಚಿದೆ ಎಂಬ ವಿವಾದಕ್ಕೆ ಕಾರಣವೇ ಉಳಿಯುವುದಿಲ್ಲ. ಆದರೆ ಒಂದು ಮಾತು ಮಾತ್ರ ನಿಜ— ಈಗಿರುವಂತೆ ಜನ ಸಂಖ್ಯೆಯು [illegible] ಸಮವಾಗಿ ಹಂಚಿಹೋಗಿಲ್ಲ. ಕೆಲವೆಡೆ ಸಾಂದ್ರತೆ ಹೆಚ್ಚಿದರೆ ಇನ್ನು ಕೆಲವೆಡೆ ಅತಿ ವಿರಳ ಪ್ರಮಾಣದಲ್ಲಿ ಜನಸಂಖ್ಯೆ ಇದೆ. ಆದುದರಿಂದ ಜನ ಸಾಂದ್ರತೆ ಕೇಂದ್ರೀಕೃತವಾದ

(೧೨ನೇ ಪುಟ ನೋಡಿರಿ)

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ ೧೯೧೦)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ಪಿ ಶಾಸ್ತ್ರೀ

ಇ ರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸ ಲ್ಪಟ್ಟ ಅಮೋಘವಾದ ಧುರಂಧರ ರಸಾಯನ

ಹೆಚ್ಚಿನ ಮಾಹಿತಿಗೆ ಡಾ। ಯಂ. ಸಿ ಶಾಸ್ತ್ರೀ, ಯಲ್ ಐ. ಎಂ.

ಕೊಡಿಯಾಲಬೈಲು ಪೋಸ್ಟು. (ಮಂಗಳೂರು)

ಸ್ಥಾನಿಕ ಡಾ। ಐ ಕೆ. ಶಿವರಾಮರಾವ್, ಕುಂಜಿಬೆಟ್ಟು.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಮುಳು ಕಡ್ಡಿ ಮದ್ದು ನಮ್ಮ ಶ್ರೀ ಸಿಕ್ಕುತ್ತದೆ

RLGD

ಅಮೃತಾಂಜನ ಲಿಮಿಟೆಡ್

ಮುಂಬಯಿ ಮದ್ರಾಸು ಮತ್ತು ಕಲ್ಕತ್ತ

ವಾರದ ಒಳಿತು ಕೆಡುಕುಗಳು

ತಾ. ೧೧—೬—೫೩ರಿಂದ ತಾ. ೧೮—೬—೫೩ರ ವರೆಗೆ.

ಮೇಷ— ಪ್ರಕೃತದ ಗ್ರಹಸ್ಥಿತಿಯು ನಿಮಗೆ ಅತೀವ ಉತ್ತಮ ವಿರುವದು. ಅದ ಕಾರಣ ನಿಮ್ಮ ಯಾವತ್ತೂ ಮನಃ ಸಂಕಲ್ಪಗಳು ಅಚಿರದಲ್ಲಿ ಅನಾಯಾಸದಿಂದ ನೆ ವೇರುವವೆ. ಬಂಧು ಮಿತ್ರರ ನೆರವು ಚೆನ್ನಾಗಿರುವುದು. ಗ್ರಹಚಾಪತ್ರಯಗಳೆಲ್ಲವೂ ಮಾಯವಾಗಿ ಸುಖದಿಂದ ಕಾಲ ಕಳೆವಿರಿ. ಆರ್ಥಿಕ ಮತ್ತು ಆರೋಗ್ಯ ವಿಚಾರದಲ್ಲಿ ಏನೊಂದೂ ಕೊರತೆಯಿರಲಾರದು. ತಾ. 12, 13 ಈ ದಿನಗಳಲ್ಲಿ ವಿಜಯ ಧನವಸನಗಳ ಲಾಭವಿದೆ.

ವೃಷಭ—ಹಿಂದಿಗಿಂತ ಎಷ್ಟೋ ಸುಧಾಂಸಲಿದೆ ನಿಮ್ಮ ಪರಿಸ್ಥಿತಿಯು. ಕೈಯಲ್ಲಿ ವಿಶೇಷ ಧನವಿಲ್ಲದಿದ್ದರೂ ದಿನಯಾಪನೆಗೆ ತಕ್ಕಷ್ಟು ಧನ ಸಂಗ್ರಹವಾಗುವದು. ಮಾನಸಿಕ ಧೈರ್ಯ ಸ್ಥೈರ್ಯಗಳು ಬೇಕಾಗುವುದರಿಂದ ಹೆಚ್ಚಿನ ಬೆಂಬಲವಿಲ್ಲದೆ ಯಾವ ಕಾರ್ಯವನ್ನೂ ಸಾಧಿಸಲಾರಿರಿ. ಉಷ್ಣಪಿತ್ತ ಪ್ರಕೋಪದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ಆಪ್ತಜನರಲ್ಲಿ ಮನಸ್ತಾಪ ಹುಟ್ಟೀತು. ತಾ.11 14, 15, 16, ಅನುಕೂಲ ದಿನಗಳು.

ಮಿಥುನ— ಸದ್ಯದ ದಿನಗಳು ತುಂಬಾ ಅನಿಷ್ಟಕಾರಿಗಳೆಂಬರೆ ತಪ್ಪಾಗದು. ಧನಾಗಮದ ಮಾರ್ಗಗಳು ಅತ್ಯಲ್ಪವಾಗಿದ್ದು ಸರ್ವತೋಮುಖದಿಂದ ಖರ್ಚುಗಳು ಪ್ರಾಪ್ತವಾಗುತ್ತವೆ. ದಿನಯಾಪನೆಯು ಕಲವಾಗಿ ಸಿಕ್ಕ ಸಿಕ್ಕವರೊಡನೆ ಸಾಲ ಕಡ ಮಾಡಬೇಕಾಗಿ ಬರುವದು. ಹೆಂಡತಿ ಮಕ್ಕಳು ಆಪ್ತೇಷ್ಟರೂ ಕೂಡ ನಿಮ್ಮಿಂದ ದೂರವಾಗಲಿರುವರು. ಹೆಚ್ಚೇಕೆ ತನುವ ನಗೆಗೆ ಈಡಾಗುವ ಸುಖಶಾಂತಿಗಳು ಲಭಿಸಲಾರವು. ತಾ 12, 13, 17, ಈ ದಿನಗಳು ಉಳಿದ ದಿನಗಳಿಗಿಂತ ಪ್ರಶಸ್ತವೆನಿಸುವವು.

ಕರ್ಕಾಟ— ಕೃಷ್ಣ ಪಕ್ಷದ ಚಂದ್ರ ನೋಡಾದಿ ನಿಮ್ಮ ಅದೃಷ್ಟವು ಕ್ಷಯಿಸುತ್ತಾ ಬರುತ್ತದೆ. ರವಿಕುಜ ಬುಧರು ನಿಮ್ಮ ವ್ಯಯಸ್ಥಾನಕ್ಕೆ ಈಗೀಗ ಬರುತ್ತಿರುವರು. ಅದ ಕಾರಣ ಹಣದ ಬಿಕ್ಕಟ್ಟು ಉಂಟಾಗಲಿದೆ. ಆದರೂ ಸುರಗುರುಗಳ ಪೂರ್ಣ ಕೃಪಾ ಕಟಾಕ್ಷಕ್ಕೊಳಗಾದ ನಿಮಗೆ ಅಂತಹ ದುಷ್ಕರ ಪ್ರಸಂಗಗಳೊದಗಲಾರವು. ತಾ. 12, 13, 17 ನಿಷ್ಕಾರಣ ಕಲಹಗಳಾಗಲಿವೆ ಜಾಗ್ರತೆ.

ಸಿಂಹ— ಹಿಂದಿನ ದುಃಖಕಷ್ಟಗಳನ್ನು ಮರೆಸುವ ಶುಭದಿನಗಳಿಂದು ಬರುತಿವೆ. ಧೈರ್ಯ ತಾಳಿರಿ. ನಿಮ್ಮ ಪ್ರಯತ್ನಕ್ಕಿಂತ ದ್ವಿಗುಣವಾದ ಫಲವು ಲಭಿಸುವದು. ಹಲವಾರು ತೆರದಿಂದ ಧನಾಗಮವಾಗಲಿದೆ. ಕೈಗೊಂಡ ಪ್ರತಿಯೊಂದು ಕಾರ್ಯಗಳೂ ಜಯಶೀಲಗಳಾಗಲಿವೆ. ಯಾವ ಭಾಗದಲ್ಲೂ ಕೊರತೆಯಿರದು. ಆದರೆ ಅಷ್ಟಮಸ್ಥಾನದಲ್ಲಿ ವಕ್ರಿಯಾಗಿ ಬಂದಿರುವ ಶನೈಶ್ವರನು ಕೈಯಲ್ಲಿ ಕಾಸು ನಿಲ್ಲಲು ಬಿಡನು. ತಾ. 14, 15, 16, ಹೊರತಾಗಿ ಉಳಿದ ದಿನಗಳು ಪ್ರಶಸ್ತವಿವೆ.

ಕನ್ಯಾ— ನಿಮ್ಮ ಅದೃಷ್ಟವಿಂದು ಉತ್ತಮ ಸ್ಥಿತಿಗೆ ಬಂದಿರುವದು. ಭಾಗ್ಯಗತರಾದ ಬೃಹಸ್ಪತ್ಯಾಚಾರ್ಯರು ನಿಮ್ಮ ಹಿಂದಿನ ಸಾಲಕಡಗಳಿಂದ ಪಾರುಗಾಣಿಸಲಿರುವರು ಹೆಚ್ಚಿನ ಕಾರ್ಯಗಳಲ್ಲಿ ಜಯವನ್ನು ಸಂಪಾದಿಸುವಿರಿ. ಮಾಡಿದ್ದಲ್ಲಿ ನಿರೀಕ್ಷಿಸಿದುದಕ್ಕಿಂತ ಅಧಿಕವಾದ ಫಲವೂ ಲಭಿಸುವದು. ಆದರೆ ಜನ್ಮಗತನಾದ ಶನಿಯು ಆಗಾಗ ದೇಹಪೀಡೆಯನ್ನುಂಟುಮಾಡಲಿರುವನು. ವಾರದ ಅದ್ಯಂತ ದಿನಗಳನ್ನು ಬಿಟ್ಟುಳಿದ ದಿನಗಳು ಅತ್ಯುತ್ತಮವಿವೆ.

ತುಲಾ—ಇಂದಿನ ನಿಮ್ಮ ಪರಿಸ್ಥಿತಿಯು ಬಹಳ ಶೋಚನೀಯವಿರುವದು. ಸಕಲ ಗ್ರಹಮಂಡಲವೇ ನಿಮ್ಮ ಭಾಗಕ್ಕೆ ಪ್ರತಿಕೂಲವಾಗಿ ನಿಂತಿರುವುದರಿಂದ ನೀವು ಇತಿಕರ್ತವ್ಯ ಮೂಢರಾಗಿ ನಿರುತ್ಸಾಹದಿಂದ ಉದಾಸೀನವನ್ನು ತಾಳುವಿರಿ. ದೇಹಾಲಸ್ಯ ಆರ್ಥಿಕ ಮುಗ್ಗಟ್ಟು ಆಪ್ತೇಷ್ಟರ ವಿರಹ ಗೃಹಚಾಪತ್ರಯಗಳು ಮುಂತಾದ ಅನಿಷ್ಟ ಪರಂಪರೆಗಳು ಸದಾ ನಿಮ್ಮನ್ನು ಪೀಡಿಸಲಿವೆ. ವಾರಾಂತ್ಯದ 4 ದಿನಗಳಲ್ಲಿ ಕೊಂಚ ಅನಿಷ್ಟಗಳು ಕಡಿಮೆಯಾದಾವು.

ವೃಶ್ಚಿಕ—ನಿಮ್ಮ ಕಾರ್ಯಗಳಿಂದು ಪ್ರಯತ್ನದಿಂದ ಸಾಧ್ಯವಾಗಲಿವೆ. ವಿರೋಧಿಗಳ ಉಪಟಳವು ಅಸಹನೀಯವಿರುವದು. ಆತ್ಮೀಯರ ವಂಚನೆಗೆ ಗುರಿಯಾದೀರಿ. ವ್ಯಾಪಾರದಲ್ಲಿ ನಷ್ಟಗಳೊದಗುವ ಸಂಭವವಿದೆ. ಪಿತ್ತೋಷ್ಣದೋಷದಿಂದ ಆರೋಗ್ಯ ಕೆಡುವದು. ನೌಕರಿವರ್ಗದವರಿಗೂ ವಿದ್ಯಾರ್ಥಿಗಳಿಗೂ ಈ ಕಾಲವು ಅನುಕೂಲವಿದೆ. ವಾರದ ಅದ್ಯಂತ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಧನು—ಕಾಲವು ಅತೀವ ಕೆಟ್ಟಿದೆ. ಶುಕ್ರಾಚಾರ್ಯರೊಬ್ಬರನ್ನುಳಿದು ಇತರ ಎಲ್ಲ ಗ್ರಹರೂ ಪ್ರತಿಕೂಲರಾಗಿರುವರು, ನಿಮ್ಮ ಪರಿಶ್ರಮವಿಂದು ಹೆಚ್ಚಿನಂಶ ವಿಫಲವಾಗಲಿವೆ. ಗೃಹಚಾಪತ್ರಯಗಳು ದಿನೇ ದಿನೇ ಹೆಚ್ಚಲಿವೆ. ಮನೆಯವರಲ್ಲೇ ಪರಸ್ಪರ ಮನಸ್ತಾಪ ಕಲಹಗಳುಂಟಾಗುವ ಸಂಭವವಿದೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾನವುಳಿಸಿಕೊಳ್ಳುವದು ಕಷ್ಟವೆನಿಸೀತು. ವಾರಾದಿಯ ಮೂರು ದಿನಗಳು ಸ್ವಲ್ಪ ಉತ್ತಮವಿರುವವು.

ಮಕರ—ಸದ್ಯ ನೀವೇ ಧನ್ಯರೆನ್ನಬೇಕು. ನಿಮ್ಮ ಪ್ರತಿಯೊಂದು ಕಾರ್ಯ ಕಲಾಪಗಳೂ ಇಂದು ನಿರ್ವಿಘ್ನದಿಂದ ಕೊನೆಗೊಂಡಲಿವೆ. ನಿರೀಕ್ಷಿಸಿದುದಕ್ಕಿಂತ ಅಧಿಕವಾದ ಫಲವು ಲಭಿಸುವದು. ಸಾಮಾಜಿಕ ರಾಜಕೀಯ ರಂಗಗಳಲ್ಲಿ ನಿಮ್ಮ ಬಯಕೆಯಂತೆ ಕಾರ್ಯವು ನೆರವೇರಲಿದೆ. ಸೇವಕ ವರ್ಗದವರಿಗೆ ಕೊಂಚ ದೇಹಾಲಸ್ಯ ಹಣದ ಅಡಚಣೆಗಳು ಕಾಣಿಸಿಯಾವು. ತಾ. 12ರಿಂದ 16ರ ವರೆಗಿನ ದಿನಗಳು ಅನುಕೂಲವಿವೆ.

ಕುಂಭ—ನಿಮ್ಮ ಅದೃಷ್ಟವಿಂದು ತೀರಾ ಕೆಳಮಟ್ಟಕ್ಕಿಳಿದ ಆಪ್ತೇಷ್ಟ ಜನರೂ ಕೂಡಾ ನಿಮ್ಮನ್ನು ವಕ್ರದೃಷ್ಟಿಯಿಂದ ಕಾಣುವರು. ಹೆಂಡತಿ ಮಕ್ಕಳೊಳು ಕೂಡಾ ನಿಮಗೆ ವಿರೋಧವಾಗಿ ವರ್ತಿಸುವರು. ಹಣದ ಬಿಕ್ಕಟ್ಟು ಅತಿಯಾಗಲಿದೆ. ದಿನಯಾಪನೆಯು ಕಲವಾಗಿ ಹೆರರ ಕೂಡೆ ಸಾಲಮಾಡಬೇಕಾಗಿ ಬರುವದು. ಬಂಧುಜನರಿಂದುಂಟಾದ ಅಡಚಣೆಯಿಂದ ಮನಸ್ಸು ಅತೀವ ದುಃಖಿತವಾಗಲಿದೆ. ತಾ. 14, 15, 16, 17, ಈ ದಿನಗಳು ಇದ್ದುದರಲ್ಲಿ ಉತ್ತಮ ವಿವೆ.

ಮೀನ—ವಿಘ್ನ ಪರಂಪರೆಗಳಿಂದ ನೀವು ಕೈಕೊಂಡ ಕಾರ್ಯಗಳನ್ನು ಅರ್ಧದಲ್ಲೇ ಕೈಬಿಡಬೇಕಾಗುವುದು. ಶುಭವಂಚನೆಗೆ ಸಿಲುಕಿ ಕಷ್ಟನಷ್ಟಗಳಿಗೀಡಾದೀರಿ. ಸ್ತ್ರೀಜನರಿಂದ ಕಾರ್ಯವೈಫಲ್ಯಗಳೂ ಬರುವವು ನಿಮಗೆ ನೆಮ್ಮದಿಯಿರದು. ಕಾಮಕ್ರೋಧಾದಿಗಳಿಂದಾಗಿ ಆರೋಗ್ಯವು ಕೆಡಲಿದೆ. ಅಂತೂ ಈ ವಾರವನ್ನು ಕಷ್ಟದಿಂದ ಕಳೆಯಬೇಕಾದೀತು. ತಾ. 11, 17, ಈ ಎರಡು ದಿನಗಳಲ್ಲಿ ಕೊಂಚ ನಿಮ್ಮ ಇಷ್ಟಾರ್ಥ ಸಿದ್ಧಿಸೀತು.

(೧೧ನೇ ಪುಟದಿಂದ)

ಭಾರತ ಮತ್ತು ಚೀನಾದಂಥ ರಾಷ್ಟ್ರಗಳು ಮಾತ್ರ ಕಳವಳಗೊಳ್ಳುತ್ತಿವೆ. ಇಲ್ಲಿ ಕೂಡ ಭೂಮಾತೆಯ ಪೋಷಕ ಶಕ್ತಿ ಕಡಿಮೆಯಾಗಿದೆ ಎನ್ನುವುದಕ್ಕಿಂತಲೂ ಮನುಷ್ಯ ಪರಿಶ್ರಮದ ಪ್ರಮಾಣವೇ ಇಳಿದಿದೆ ಎನ್ನುವುದರಲ್ಲಿ ತಥ್ಯವಿದೆ. ನಾವು ಅಧಿಕ ಪರಿಶ್ರಮ ವಹಿಸಿ ಬೆವರಿಳಿಸಿ ದುಡಿಯುವ ಮನಸ್ಸು ಮಾಡಿದರೆ ಊಟಕ್ಕಿಲ್ಲದೆ ಒದ್ದಾಡುವ ಪರಿಸ್ಥಿತಿ ಉಳಿಯುವುದಿಲ್ಲ.

ಆದರೆ ಉತ್ಪಾದನೆ ಹೆಚ್ಚಿಸುವ ರಭಸದಲ್ಲಿ ನಾವು ಶೀಘ್ರ ಪ್ರತಿಫಲವನ್ನು ಮಾತ್ರ ಅಪೇಕ್ಷಿಸುವ ಸಂಕುಚಿತ ಬುದ್ಧಿಯನ್ನುಪಯೋಗಿಸಿದರೆ ಅದರಿಂದ ಪ್ರಯೋಜನ ದೊರೆಯಲಿಕ್ಕಿಲ್ಲ. ಕೃಷಿಯ ಅಭಿವೃದ್ಧಿಗೆ ಹಣವನ್ನುಪಯೋಗಿಸುವಾಗ ದೀರ್ಘಕಾಲೀನ ಲಾಭವನ್ನು ದೃಷ್ಟಿಯಲ್ಲಿಡಬೇಕಾಗುತ್ತದೆ. ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ಕಳೆದೆರಡು ವರ್ಷಗಳಲ್ಲಾದ ಪ್ರಗತಿಯ ವರದಿಯೂ ಈ ಮಾತಿಗೆ ಸಾಕ್ಷ್ಯ ಕೊಡುತ್ತದೆ. ಹಾಗೆಯೇ ವ್ಯವಸಾಯ ಯೋಗ್ಯ ಭೂಮಿಯನ್ನು ಸಂಪೂರ್ಣ ಉಪಯೋಗಿಸುವ ಆವೇಶದಲ್ಲಿ ಜಾನುವಾರುಗಳಿಗಾಗಿ ಹುಲ್ಲುಗಾವಲು, ಮರಗಿಡಗಳು ಬೆಳೆಯಲು ಗುಡ್ಡ ಮತ್ತು ಅರಣ್ಯಗಳನ್ನು ನಾಶಪಡಿಸಲಾಗದು.

ಈ ಎಲ್ಲ ಸಂಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೊನೆಯ ನಿರ್ಣಯಕ್ಕೆ ಬರುವಾಗ ಈಗಿನ ಜನಸಂಖ್ಯೆಯು ಮೂರು ಪಾಲು ಜನರು ಸುಖವಾಗಿ ದಿನದೂಡಲು ಭೂಮಾತೆ ಬಿಡುವಳೆಂದು ಹೇಳಬಹುದು. ಈಗಿನ ರೀತಿಯಲ್ಲಿಯೇ ಜನಸಂಖ್ಯೆ ಹೆಚ್ಚಿಕೊಂಡರೆ ಇನ್ನು ನೂರು ವರ್ಷಗಳಲ್ಲಿ ನಾವು ಒಬ್ಬರಿಗೆ ಮೂವರಾಗುವುದು ನಿಶ್ಚಯ.

ಶೋಭನವಾಗಿ ನಿಮ್ಮ ವರ್ಷವಾದರೇನು? ಸತಿಯ ಶರೀರದಲ್ಲಿ ಸೇರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಸತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ಸಕಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ** ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ ಅಂಬಳೆ ರಾಮಸ್ವಾಮಿ ಅಯ್ಯರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಭಸ್ಮವು ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಮಾನಸಿಕ ಹೆಚ್ಚು ಕಡಿಮೆಗಳನ್ನು ಸರಿಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನಗಳನ್ನು, ಶೀಘ್ರ ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ ತಾರುಣ್ಯವ ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇದ್ದಾ ದಿನಗಳುಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ. **ವಿಶೇಷವಾಗಿ 16-18 ವರ್ಷ ಮಕ್ಕಳಿಲ್ಲದ ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.**

ಕ್ರಯ—2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ. 7 ರೂ. M. O. ಮಾಡಿರಿ. ಕೂಡ್ಲೆ 0 ಪಾರ್ಸೆಲ್ ರವಾನೆ. ವಿ ಪಿ. ಇಲ್ಲ. ಪ್ಯಾಕಿಂಗ್ ಉಚಿತ ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ—

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ,

ಚಾಮರಾಜಾ ರೋಡ್ ಕ್ರಾಸ್, ಮೈಸೂರು. (South India)

ಬರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟೆ ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸಗಳನು ಉಪಯೋಗಿಸಿದರೆ ಹಡಕಪ್ಪು ಋತುಸ್ರಾವವಾಗದು, ಹಕೋಟಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಕ್ಷಿಯಾಗಿ ಮುಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3-4 ಸ್ಪೆಶಲ್ ರೂ. 5- ಅಧಿಕ ಶಕ್ತಿ ಸ್ಪೆಶಲ್ ರೂ. 7 [ಪ್ರತ್ಯೇಕ ಅಂಚೆ ಖರ್ಚು ಪ್ರತ್ಯೇಕ]

M/s D. DEVEE, F DB. (N. J.)

Tollygunge CALCUTTA

ಪ್ರತಿನಿಧಿಗಳು: ಶರ್ಮಾ ಕಂಪೆನಿ, ಮಂಗಳೂರು

Edited, Printed & Published By K. H. Shetty at the Navayuga Press, Udipi, S. India

Regd. No. M. 5419
LICENCE No. 51

ನವಯುಗ

18–6–1953
Vol 32 No. 41 NAVAYUGA WEEKLY POST BOX NO 22 UDIPI

ನಮ್ಮ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ಹುಡುಗರ ಬುದ್ಧಿವಂತಿಕೆಯನ್ನು ವರ್ಣಿಸುವ ಹಲವು ಸ್ವಾರಸ್ಯ ಪ್ರಸಂಗಗಳನ್ನು ಓದುವ ಪುಣ್ಯ ನಮಗೆ ಈ ಸಮಯ ದೊರೆಯುವುದುಂಟು. ವರ್ಷ ವರ್ಷವೂ ಈ ಮೋಜು ನಮಗೆ ಸಿಗುತ್ತದೆ. ಹುಮಾಯೂನನು ಯಾರು ಎಂದು ಕೇಳಿದ ಪ್ರಶ್ನೆಗೆ ಔರಂಗಜೇಬನ ಮಗನೆಂಬ ಉತ್ತರವೂ ಅಲೆಗ್ಜಾಂಡರನು ಮಾಡಿದ ಸಾಹಸವೇನೆಂಬುದಕ್ಕೆ ಬೌದ್ಧ ಧರ್ಮ ಸ್ಥಾಪನೆಯೆಂಬುದೂ ನಮಗೆ ತಮಾಷೆಯಾಗುತ್ತದೆ. ಹೆಚ್ಚಿನ ವಿದ್ಯಾರ್ಥಿಗಳಿಗೆ ಮಹಾತ್ಮಾಗಾಂಧಿಯ ಹೆಸರಿನ ಸಂಪೂರ್ಣ ಕಲ್ಪನೆಯಿಲ್ಲ; ನೆಹರೂರ ಹೆಸರನ್ನು ಕೇಳಿದ ಹುಡುಗರೂ ಬಹಳ ಕಡಿಮೆ. ಯುದ್ಧಕಾಲದಲ್ಲಿ ಬ್ರಿಟನಿನ ಮುಖ್ಯಮಂತ್ರಿಯಾರೆಂದು ಕಾಲೇಜು ಹುಡುಗನನ್ನು ಕೇಳಿದರೆ ಅವನು ವಾಸ್ಕೋಡಗಾಮನೆಂದು ಹೇಳಿದ ಪ್ರಸಂಗವುಂಟು. ಆದರೂ ಈ ಹುಡುಗರು ತಮ್ಮ ಕಲಿವಿನ ಬಗ್ಗೆ ಅಭಿಮಾನದಿಂದ ಕೂಡಿರುವರು, ತಮ್ಮ ಪ್ರಚಂಡ ಬುದ್ಧಿವಂತಿಕೆಯ ಕುರಿತು ಗರ್ವಪಡುವರು. ಆದರೆ ಪ್ರಾಮಾಣಿಕ ಹಿತದೃಷ್ಟಿಯುಳ್ಳ ಯಾವನೊಬ್ಬನಿಗೂ ಈ ಶೋಚನೀಯ ಪರಿಸ್ಥಿತಿಯನ್ನು ಕಂಡು ಕನಿಕರ ಉಂಟಾಗುತ್ತದೆ

ಇದೇ ಮಾತನ್ನು ನಮ್ಮ ಪಂಚವಾರ್ಷಿಕ ಯೋಜನೆಯ ಮಟ್ಟಿಗೂ ಸಾಮಾನ್ಯವಾಗಿ ಹೇಳಬಹುದೋ ಏನೋ! ಪಂಚವಾರ್ಷಿಕ ಯೋಜನೆಯು ನಮ್ಮ ನಾಡಿನ ಉತ್ಪಾದಕ ಸ್ರೋತಗಳನ್ನೆಲ್ಲ ಕಾರ್ಯಾನ್ವಿತಗೊಳಿಸುವಂತೆ ರಚಿಸಲ್ಪಟ್ಟಿದೆ ಎಂದು ಸರಕಾರ ಹೇಳುತ್ತದೆ. ಆದರೆ ಆ ಸರಕಾರದಲ್ಲಿಯೇ ಎಷ್ಟು ಮಂದಿಗೆ ಯೋಜನೆಯ ಯಶಸ್ಸಿನ ಬಗ್ಗೆ ಧೈರ್ಯವಿದೆ ಎಂಬುದು ಸಂಶಯಾಸ್ಪದ. ಇದರಂತೆ ನಿಮ್ಮ ನಮ್ಮಂಥ ಹಲವರಿಗೆ ಪಂಚವಾರ್ಷಿಕ ಯೋಜನೆಯ ತಿರುಳು ಪತ್ರಿಕೆಗಳ ಮುಖಾಂತರ ವೇದ್ಯವಾಗಿರಬಹುದಾದರೂ—ನಿರಕ್ಷರ ಕುಕ್ಷಿಗಳಾದ ಭಾರತದ ಹಳ್ಳಿಯ ಕೋಟ್ಯಂತರ ಜನರಿಗೆ ಈ ಯೋಜನೆಯ ಪರಿಚಯ ಏನೇನೂ ಇರಲಿಕ್ಕಿಲ್ಲ. ಸ್ವತಃ ಓದು ಬರಹ ಬಲ್ಲವರಲ್ಲಿ ಸಹ ಈ ಯೋಜನೆಯ ಪರಿಚಯವಿದ್ದವರು ಮತ್ತು ಆಸ್ಥೆಯುಳ್ಳವರು ನೂರಕ್ಕೆ ಒಬ್ಬರಿಗಿಂತ ಅಧಿಕ ದೊರೆಯಲಾರರೆಂದೇ ಹೇಳಬೇಕು.

ಸರಕಾರ ಹಳ್ಳಿಗರನ್ನು ಕಡೆಗಣಿಸಿರುತ್ತದೆ ಎಂದು ಇದರ ಅಭಿಪ್ರಾಯವಲ್ಲ.

—ಮಧುಪರ್ಕ—

ಮೊನ್ನೆ ಮೊನ್ನೆ ಪತ್ರಿಕೆಗಳಲ್ಲಿ ಪ್ರಕಟಗೊಂಡ ಸಂಗತಿ—

ಕಲ್ಕತ್ತೆಯ ಒಬ್ಬ ವಿದ್ಯಾರ್ಥಿ ಪರೀಕ್ಷೆಯ ಎಂಟು ಉತ್ತರ ಪತ್ರಿಕೆಗಳಲ್ಲೂ ಒಂದೇ ಒಂದು ಉತ್ತರ ಬರೆದಿದ್ದ. ತನ್ನ ಗ್ರಾಮದೇವತೆಯ ಹೆಸರನ್ನು ೧೦೮ ಬಾರಿ ಒಂದೂ ತಪ್ಪಿಲ್ಲದೆ ಲಿಖಿಸಿದ್ದ. ಪರೀಕ್ಷಕರು ಇದನ್ನು ಕಂಡು ದಂಗಾದರು. ಆದರೂ ನಿಯಮದಂತೆ ಸೊನ್ನೆ ಮಾರ್ಕು ಕೊಟ್ಟು ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಸಮಿತಿಗೆ ಕಳುಹಿಸಿ ಕೊಟ್ಟರು

ಪರೀಕ್ಷಾ ಸಮಿತಿ ಕೂಡ ಈ ವಿಚಿತ್ರವನ್ನು ಕಂಡು ಅಚ್ಚರಿಪಟ್ಟಿತು. ಸ್ವತಃ ವಿದ್ಯಾರ್ಥಿಯನ್ನೇ ಕಂಡು ಈ ಮೋಸ್ಯದ ರಹಸ್ಯವನ್ನರಿಯಲು ಅದು ನಿರ್ಧರಿಸಿ ಹುಡುಗನನ್ನು ಬರಮಾಡಿತು. ಹುಡುಗ ಏನು ಹೇಳಿದ ಗೊತ್ತೆ— "ಅದು ನಮ್ಮ ಗ್ರಾಮದೇವತೆಯ ಹೆಸರು. ಕಾರಣ ನಾನು ಪಾಸಾಗುವೆನೆಂಬ ಸಂಶಯವೇ ನನಗೆ ಇರುವುದಿಲ್ಲ.'

ಮುಂದೆ ಹುಡುಗ ತಾನು ಏಕಾಗಿ ಹಾಗೆ ಬರೆದೆನೆಂಬುವನ್ನೂ ವಿವರಿಸಿದ. ಪರೀಕ್ಷೆಗೆ ಕೆಲವು ದಿನ ಮುಂಚೆ ಗ್ರಾಮದೇವತೆಯು ಅವನಿಗೆ ಸ್ವಪ್ನದಲ್ಲಿ ಪ್ರತ್ಯಕ್ಷಗೊಂಡಳು. "ಮಗೂ, ಹೆದರಬೇಡ. ನನ್ನನ್ನು ನೆನೆದುಕೋ. ನೀನು ಮಾಡಬೇಕಾದುದೆಂದರೆ ಇಷ್ಟೆ— ೧೦೮ ಸಲ ನನ್ನ ಹೆಸರನ್ನು ಬರೆದು ಬಿಡು. ವಿಜಯ ನಿನ್ನದು!''

ಆ ವಿದ್ಯಾರ್ಥಿ ಈಗಲೂ ತಾನು ಪಾಸಾಗುವುದು ನಿಶ್ಚಯವೆಂದು ತಿಳಿದುಕೊಂಡಿರುವನಂತೆ!

ಇದು ನೋಡಿ ನೀವು ತಡವರಿಸುವುದು ಬೇಡವೆಂದರೆ ನಿಮಗೆ ಸಮಾಧಾನವಾಗದು, ಅಲ್ಲವೆ? ಕರ್ತವ್ಯ ಮರೆತವರು ಫಲವನ್ನೇ ಕಟ್ಟಿಕೊಂಡಿರುವ ನಾಳಿನ ಜನಾಂಗ ನಿಮಗೆ ಹೆದರಿಕೆ ಬರಿಸುತ್ತದೆ!

ತಡವರಿಸುವುದೇಕೆ?

ಯೋಜನಾ ಆಯೋಗದ ಸದಸ್ಯರಾದ ಶ್ರೀಮತಿ ದುರ್ಗಾಬಾಯಿ ದೇಶಮುಖರು ಹೇಳುವಂತೆ, ಪೇಟೆಯವರಿಗಿಂತ ಹಳ್ಳಿಗರಲ್ಲೇ ನಮ್ಮ ಯೋಜನೆಯ ಕುರಿತು ಅಧಿಕ ಉತ್ಸಾಹ ಮೂಡಿಬರುವಂತಿದೆ. ಜನಪದ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಲಾದ ಹಳ್ಳಿಗಳ ಜನರು ಯೋಜನೆಯ ಪ್ರಯೋಜನವನ್ನು ಪ್ರತ್ಯಕ್ಷ ಅನುಭವಿಸುವರಾದುದರಿಂದ ಅವರಿಗೆ ಸರಕಾರ ಕೈಕೊಂಡಿರುವ ಕೆಲಸದ ಮಹತ್ವ ತಿಳಿಯದಿರಲಿಕ್ಕಿಲ್ಲ. ಇದರಂತೆ ವಿವಿಧೋದ್ದೇಶದ ಅಣೆಕಟ್ಟು ಮುಂತಾದ ಕ್ಷೇತ್ರದ ಜನರಿಗೂ ನಮ್ಮ ರಾಷ್ಟ್ರೀಯ ಯೋಜನೆಯೆಂದರೆ ಗೌರವವುತ್ಪನ್ನವಾದೀತು.

ನಾವು ಹೀಗೆ ಆಶಾವಾದಿಗಳಾಗಿರುವಾಗಲೇ ನಿರಾಶೆಯ ಮೋಡ ವಾಸ್ತವವಾಗಿಯೂ ಕವಿದಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ಭಾರತದ ಜನಪದ ಅಭಿವೃದ್ಧಿ ಯೋಜನೆಗಳಿಗೆ ಮಾತೃಸ್ಥಾನದಲ್ಲಿರುವ 'ಇಟಾವಾ'ದಲ್ಲಿ ಸಂಚರಿಸಿದ ಮಹನೀಯರೊಬ್ಬರ ಅನುಭವ ಕಥನವನ್ನು ಕೇಳಿರಿ. ರೋಟಕ ಕಾಲೇಜಿನಲ್ಲಿ ಮೂರನೇ ವರ್ಷ ವ್ಯಾಸಂಗ ಮಾಡುತ್ತಿದ್ದ ಒಬ್ಬ ವಿದ್ಯಾರ್ಥಿಯನ್ನು ಪಂಚವಾರ್ಷಿಕ ಯೋಜನೆಯೆಂದರೇನಪ್ಪಾ ಎಂದು ಕೇಳಿದರೆ, ಅವನು ಆ ಹೆಸರನ್ನೇ ಕೇಳಿರಲಿಲ್ಲವಂತೆ! ಹುಡುಗ ಚೆನ್ನಾಗಿ ಇಂಗ್ಲಿಷು ಮಾತನಾಡುತ್ತಿದ್ದ, ಅರ್ಥಶಾಸ್ತ್ರವು ಅವನ ವ್ಯಾಸಂಗದ ವಿಷಯ. ಆದರೆ ಭಾರತೀಯರ ಆರ್ಥಿಕ ಪರಿಸ್ಥಿತಿಯ ರೂಪರೇಷೆಯನ್ನೇ ಬದಲಾಯಿಸಬಲ್ಲ ಪಂಚವಾರ್ಷಿಕ ಯೋಜನೆಯನ್ನು ಅವನು ಕೇಳಿಯೇ ಇಲ್ಲ! ಅವನೊಡನೆ ಸಿಂಧ್ರಿ ಇರುವುದೆಲ್ಲಿ, ಅದರಿಂದ ನಮಗೇನು ದೊರೆಯುತ್ತದೆ ಎಂದು ಕೇಳಿದರೆ, ನಕಾರಾತ್ಮಕವಾದ ಉತ್ತರವೇ ಬಂತು. ಅವನಿರುವ ರೋಟಕದ ಪ್ರದೇಶಕ್ಕೆ ನಿಕಟ ಭವಿಷ್ಯದಲ್ಲಿಯೇ ವಿದ್ಯುತ್ತನ್ನು ಪೂರೈಸುವ ಭಾಕ್ರಾ ಅಣೆಕಟ್ಟಿನ ವಿಷಯವೂ ಅವನಿಗೆ ಗೊತ್ತಿಲ್ಲ. ದಾಮೋದರ ಕಣಿವೆಯ ಪ್ರದೇಶದಲ್ಲಿ ಬೊಕಾರೊ ವಿದ್ಯುತ್ ಕೇಂದ್ರವನ್ನು ನೆಹರೂ ಆಗ ತಾನೆ ಉದ್ಘಾಟಿಸಿ ಬಂದಿದ್ದರು; ವರ್ತಮಾನಪತ್ರಿಕೆಗಳಲ್ಲಿ ತುಂಬಾ ಈ ಸುದ್ದಿ ಪ್ರಕಟಗೊಂಡಿತ್ತು. ಆದರೆ ನಾಳಿನ ಜನಾಂಗ ಕಟ್ಟುವ ಈ ವಿದ್ಯಾರ್ಥಿಗೆ ದಾಮೋದರ ನದೀ ಕಣಿವೆಯ ಕಿಂಚಿತ್ ಪರಿಚಯವೂ ಇಲ್ಲ. ದಾಮೋದರ ನದಿ ಎಲ್ಲಿದೆ ಎಂದು ಕೇಳಿದರೆ, ಸ್ವಲ್ಪ ನಾಚಿ ಕೆಂಪಗಾದ. "ಓ, ಅಲ್ಲಿದೆ' ಎಂದು ಪ್ರ… ಸಲು ಪ್ರಯತ್ನಿಸಿದ. 'ಅಲ್ಲಿ ಅಂದರೆ ಎಲ್ಲಿ?" ಎಂದು ಕೇಳಿದಾಗ "ದಕ್ಷಿಣ ಭಾರತದಲ್ಲಿ" ಎಂದುಬಿಟ್ಟ ಭೂಪ. "ಮಹಾರಾಯಾ, ನೀನು ಪೇಪರು ಓದುವುದುಂಟೋ?' ಎಂದು ಪ್ರಶ್ನಿಸಿದ್ದಕ್ಕೆ "ನಿಶ್ಚಯವಾಗಿಯೂ ಓದುತ್ತೇನೆ. ದಿನಾಲೂ ಹಿಂದುಸ್ತಾನ ಟೈಮ್ಸನ್ನು ಕೊಂಡುಕೊಳ್ಳುತ್ತೇನೆ" ಎಂದ.

ಇಟಾವಾದಂಥ ಕಡೆಯಲ್ಲಿ ಜನಪದ ಅಭಿವೃದ್ಧಿ ಯೋಜನೆಯ ಕುರಿತು ಪ್ರತಿಯೊಬ್ಬರಿಗೂ ವಿಶೇಷ ಆಸಕ್ತಿ ಉತ್ಸಾಹ ಮತ್ತು ತಿಳುವಳಿಕೆ ಇರಬೇಕಾದದ್ದು ಸಹಜ. ಅಂಥದರಲ್ಲಿ ಈ ವಿದ್ಯಾರ್ಥಿಯ ಜ್ಞಾನಸಂಪತ್ತನ್ನು ಕಂಡು ನಾವೆಲ್ಲರೂ ಬೆಕ್ಕಸ ಬೆರಗಾಗುತ್ತೇವೆ. ಇವನನ್ನೊಂದು ಅಪವಾದವೆಂದು ಪರಿಗ್ರಹಿಸೋಣವೆಂದರೆ ಅದೂ ಕಷ್ಟ. ಏಕೆಂ… ಒಬ್ಬ ವಿದ್ಯಾರ್ಥಿಯೊಡನೆ (ಅವನು ವಿಜ್ಞಾನದ ವ್ಯಾಸಂಗಿ) ಪಂಚವಾರ್ಷಿಕ ಯೋಜನೆಯ ಕುರಿತು ಕೇಳಿದಾಗ ಅವನಿಗೆ ತಿಳಿದುದು ಇಷ್ಟೆ. "ನಮ್ಮ ರಾಷ್ಟ್ರೀಯ ಸಂಪತ್ತನ್ನು ಯಶಸ್ವಿಯಾಗಿ ಉಪಯೋಗಿಸಿಕೊಳ್ಳಲು ಕೈಕೊಂಡ ಉಪಕ್ರಮ."

(೧೦ನೇ ಪುಟ ನೋಡಿ)

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—



ಕೆ. ಪೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ ಅಭಿನಯಿಸಲಿಕ್ಕೂ ಅನುಕೂಲವಾದ ಪದ್ಯಗಳು! ಮಂಜೂರಾತಿ ಪಡೆದು ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ

ಬೆಲೆ: 0—6—0

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಬೆರಗುಗೊಳಿಸುವ ಕರ ಕೌಶಲ

ತಸ್ಕರ ವಿದ್ಯೆಯ ಅದ್ಭುತ ಪ್ರಯೋಗ

ಸಜ್ಜನರೊಬ್ಬರು ಮೋಟಾರು ಕಾರಿನಲ್ಲಿ ಎಲ್ಲಿಗೋ ಹೋಗುತ್ತಿದ್ದರು. ಮಾರ್ಗದಲ್ಲಿ ಯಾರೋ ಅವರ ಕಾರನ್ನು ನಿಲ್ಲಿಸಿ „ನಾನು ಜೈಲಿನಿಂದ ಓಡಿಬಂದ ಒಬ್ಬ ಕೈದಿ. ನನ್ನನ್ನು ನಿಮ್ಮ ಮೋಟರಿನಲ್ಲಿ ಕುಳ್ಳಿರಿಸಿ ಎಲ್ಲಿಗಾದರೂ ಮುಟ್ಟಿಸಿದರೆ ನಾನು ಬದುಕಿರುವಷ್ಟು ದಿನ ನಿಮಗೆ ಕೃತಜ್ಞನಾಗಿರುತ್ತೇನೆ" ಎಂದು ಕೈಜೋಡಿಸಿದ. ಅವರು ಕನಿಕರದಿಂದ ಗಾಡಿಯಲ್ಲಿ ಕುಳ್ಳಿರಿಸಿಕೊಂಡರು. ಮಾತುಕತೆಯ ನಡುವೆ „ಯಾವ ಅಪರಾಧಕ್ಕಾಗಿ ನೀನು ಜೈಲು ಸೇರಿಕೊಂಡೆ?" ಎಂದು ಪ್ರಶ್ನಿಸಿದರು.

„ಕಿಸೆ ಕತ್ತರಿಸಿದ ಅಪರಾಧಕ್ಕೆ."

ಮೋಟಿನ ಉತ್ತರವನ್ನು ಕೇಳಿದೊಡನೆಯೆ ಸಜ್ಜನರ ಎದೆ ಧಸಕ್ಕೆಂದಿತು. ಪರಿಣಾಮವಾಗಿ ಮಾರ್ಗದ ನಡುವೆ ನಿಂತಿದ್ದ ಪೋಲೀಸು ಪಥಪ್ರದರ್ಶಕನ ಸೂಚನೆಯಂತೆ ನಡೆಯಲಾರದೆ ಹೋದರು.

ಪೋಲೀಸರು ಗಾಡಿ ನಿಲ್ಲಿಸಿದರು. ಅವರ ನಂಬ್ರ ಮತ್ತು ಇತರ ಆವಶ್ಯಕ ಸಂಗತಿಗಳನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡರು. ಕೈದಿಯು ಸುರಕ್ಷಿತ ಸ್ಥಾನವನ್ನು ಸೇರಿದಾಗ, ಅವನು ಸಜ್ಜನರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ „ಮಹಾಶಯ! ನಾನು ನಿಮ್ಮ ಋಣವನ್ನು ತೀರಿಸುವುದೆಂತೊ, ತಿಳಿಯದು. ಆದರೂ ನೀವು ಇಂದು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಇದನ್ನು ತೆಗೆದುಕೊಳ್ಳಿರಿ" ಎಂದು ಕಿಸೆಯಿಂದ ಏನನ್ನೊ ತೆಗೆದು ಕೈಗಿತ್ತ.

ಸಜ್ಜನರು ಅದನ್ನು ಬಿಡಿಸಿ ನೋಡುತ್ತಾರೆ ಪೋಲೀಸರು ತನ್ನ ಕಾರನ್ನು ನಿಲ್ಲಿಸಿ ನಂಬ್ರ ಮುಂತಾದುವನ್ನು ಬರೆದಿಟ್ಟುಕೊಂಡಿದ್ದ ಟಿಪ್ಪಣಿ ಪುಸ್ತಕವೇ ಅದು!

ಹೇಗಿದೆ ಕಿಸೆಗಳ್ಳರ ಕೈಚಳಕ!

ಪ್ರಯಾಣಿಸುವಾಗ ನಿಲ್ದಾಣಗಳಲ್ಲಿಯೂ ವಿನೋದಕ್ಕೆಂದು ಸಿನೇಮಾ ನೋಡ ಹೋದರೆ ಅಲ್ಲಿ ಟಿಕೇಟು ಆಫೀಸಿನ ಮುಂದೆಯೂ ನಾವೆಲ್ಲರೂ ಒಂದು ಪ್ರಕಟಣೆಯನ್ನು ಕಾಣುತ್ತೇವೆ: "ಕಿಸೆಗಳ್ಳರ ಎಚ್ಚರವಿರಲಿ!" ಎಂದು ನಮಗದು ತಿಳಿಸುತ್ತದೆ. ಆದರೆ ಕಿಸೆಗಳ್ಳರಿಗೆ ಈ ಬೋರ್ಡು ತೂಗಾಡಿಸಿರುವುದು ಕಾಣಿಸದು. ಕಾರಣ ನೀವು ಎಚ್ಚರಿಕೆಯಿಂದ ಇದ್ದು ಪಾಕೇಟಿನ ಮೇಲೆ ಸದಾ ಕೈಬೆರಳು ಆಡಿಸುತ್ತಿದ್ದಂತೆಯೇ ಅದನ್ನು ಜಾರಿಸಿ ಬಿಡುವ ಮಾಯಕದ ಕಲೆಯಲ್ಲಿ ಅವರು ನೈಪುಣ್ಯ ಪಡೆದಿರುವರು. ಇಂಥವರ ಕೌಶಲವನ್ನು ಅಪರಾಧವೆಂದು ನಿಂದಿಸೋಣವೇ ಅಥವಾ ಚಮತ್ಕಾರವಾದ ಕಲೆಯೆಂಬುದಾಗಿ ಪ್ರಶಂಸಿಸೋಣವೇ ಎಂಬುದು ಸಮಸ್ಯೆಯಾಗುತ್ತದೆ. ಯೂರೋಪಿನ ಆಸ್ಟ್ರಿಯಾ ದೇಶದಲ್ಲಿ ಒಬ್ಬ ಪ್ರಾಮಾಣಿಕನಾದ ಕಿಸೆಗಳ್ಳ ಇದ್ದಾನೆ. ಅವನ ಜೀವನಕಾಲದ ಕೌತುಕದ ವರ್ಣನೆ ಕೇಳಿದರೆ, ನಾವೆಲ್ಲರೂ ಬೆರಗಾಗುತ್ತೇವೆ. ಮಾತ್ರವಲ್ಲ ಕಿಸೆ ಕತ್ತರಿಸುವುದು ಸುಲಭವಲ್ಲವೆಂದೂ ಅದು ಅನುಪಮ ಕಲೆಯೆಂದೂ ಒಪ್ಪುತ್ತೇವೆ.

ಪೋಲೀಸರು ಅವನನ್ನು ಯಾವಾಗಲೂ ಬಂಧಿಸಿದುದಿಲ್ಲ; ಅವನ ಮೇಲೆ ಆರೋಪ ಹೊರಿಸಿ, ಕೇಸು ನಡೆಸಿದವರೂ ಇಲ್ಲ. ಯಾವ ಕೋರ್ಟು ಅವನಿಗೆ ದಂಡನೆ ವಿಧಿಸಿರುವುದಿಲ್ಲ. ಕಾನೂನು ಅವನನ್ನು ಅಪರಾಧಿಯೆಂಬುದಾಗಿ ಘೋಷಿಸಿರುವುದಿಲ್ಲ. ಆದರೂ ಎಲ್ಲರಿಗೂ ಅವನೊಬ್ಬ ವಿಶ್ವವಿಖ್ಯಾತ ಕಿಸೆಗಳ್ಳನೆಂದು ಗೊತ್ತಿದೆ. ಸೈನಿಕನಿಂದ ಸೇನಾಧಿಪತಿಯ ವರೆಗೆ, ರಾಜ ಮಹಾರಾಜರಿಂದ ಪತ್ರಿಕಾ ಪ್ರತಿನಿಧಿಗಳ ವರೆಗೆ ಅವನು ಎಲ್ಲರ ಕಿಸೆಯನ್ನೂ ಕತ್ತರಿಸಿರುವನು. ಇಷ್ಟೇ ಅಲ್ಲ ತನ್ನ ಕೈಯ ಚಮತ್ಕಾರವನ್ನು ಪ್ರದರ್ಶಿಸುವುದಕ್ಕೋಸ್ಕರ ಕಿಸೆಕಳೆದುಕೊಂಡವರಿಂದಲೇ ಪುರಸ್ಕಾರವನ್ನೂ ಪಡೆದಿರುವನು! ಕಾನೂನು ಕಾಯಿದೆಯಂತೆ ಯಾವುದು ದಂಡನೀಯವಾದ ಮಹಾಪರಾಧವಾಗುತ್ತದೋ ಅದನ್ನು ತನ್ನ ಜೀವಿತೋಪಾರ್ಜನದ ಸಾಧ್ಯನವನ್ನಾಗಿಸಿಕೊಂಡು, ಸುಖಸಂತೋಷದಿಂದ ದಿನಗಳೆಯುವ ಆ ಮಹಾನುಭಾವನ ಹೆಸರು ಬೋರಿಸ್ ಬೋರಾ.

ಬೋರಿಸ್ ಬೋರಾ ಕಿಸೆ ಕತ್ತರಿಸುವ ವಿದ್ಯೆಯಲ್ಲಿ ಎಷ್ಟರ ಮಟ್ಟಿಗೆ ಪಳಗಿರುವನೆಂದರೆ, ಗುಪ್ತ ಪೋಲೀಸ್ ಅಧಿಕಾರಿಗಳು ಕೂಡ ಅವನ ಚಾತುರ್ಯವನ್ನು ಕಲಿಯಲು ಅಪೇಕ್ಷಿಸಿ, ಒರುವರು. ತನಗೆ ಸಲ್ಲಬೇಕಿರುವ ಗುರುದಕ್ಷಿಣೆಗಾಗಿ ಬೋರಿಸ್ ಬೋರಾ ಅವರ ಮೇಲೆಯೇ ಕತ್ತರಿ ಪ್ರಯೋಗ ನಡೆಸುತ್ತಿದ್ದ! ವಾಸ್ತವವಾಗಿಯೂ ಬೋರಿಸ್ ಬೋರಾನ ಅದ್ಭುತ ಚಮತ್ಕಾರ ಕಣ್ಣಾರೆ ಕಂಡರೂ ಸ್ವಪ್ನ ಭ್ರಮಣವನ್ನು ಉಂಟುಮಾಡುತ್ತದೆ. ಗುಪ್ತಚಾರರು ಎಷ್ಟೇ ಸತರ್ಕರಿರಲಿ, ಬೋರಿಸ್ ಬೋರಾನ ಮಾಯಕದ ಕಲೆಯನ್ನು ಕಂಡು ಮುಗ್ಧಗೊಂಡಾರೇ ಹೊರತು, ಅದರ ರಹಸ್ಯೋದ್ಘಾಟನವನ್ನು ಮಾಡಲಾರರು.

೧೯೪೮ರಲ್ಲಿ ಯುಗೊಸ್ಲಾವಿಯಾದಲ್ಲಿ ಒಂದು ಅಂತಾರಾಷ್ಟ್ರೀಯ ಪೋಲಿಸು ಸಭೆಯನ್ನು ಕರೆದಿದ್ದರು. ಕಿಸೆ ಕತ್ತರಿಸುವ ಅದ್ಭುತವನ್ನು ಇವರಿಗೆ ತೋರಿಸಲು ಬೋರಿಸ್ ಬೋರಾನಿಗೂ ಈ ಸಭೆಗೆ ಬರಬೇಕೆಂದು ಆಮಂತ್ರಣವಿದ್ದಿತು. ಮೂರು ದಿನಗಳ ವರೆಗೆ ಸಭೆಯು ಬಿಡದೆ ನಡೆಯಿತು. ಅದರ ಸಮಾಪ್ತಿಯು ಆಶ್ಚರ್ಯದ ಪರಾಕಾಷ್ಠತೆಯನ್ನೇ ಮುಟ್ಟಿತು. ಈ ಅಲ್ಪಾವಧಿಯಲ್ಲಿ ಬೋರಿಸ್ ಬೋರಾ ಅಲ್ಲಿ ನೆರೆದಿದ್ದ ಅಂತರಾಷ್ಟ್ರೀಯ ಖ್ಯಾತಿಯುಳ್ಳ ಪ್ರತ್ಯೇಕ ವ್ಯಕ್ತಿಯ ಮೇಲೆ ತನ್ನ ಹಸ್ತ ಕೌಶಲವನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದ! ತನ್ನ ಕೌಶಲ್ಯ ಮತ್ತು ಜಾಗರೂಕ ಬುದ್ಧಿಗೋಸ್ಕರ ಅಹಂಕಾರವಿದ್ದ ಮಹಾ ಪೋಲೀಸು ಅಧಿಕಾರಿಗಳಿಗೂ ಗುಪ್ತದಳದ ಅಧಿಪತಿಗಳಿಗೂ ತಮ್ಮ ಕಿಸೆ ಕತ್ತರಿಸಿ ಹೋದುದು ತಿಳಿಯಲೇ ಇಲ್ಲ. ಅವರೆ ಬೀಳ್ಕೊಡುವ ಭೋಜನದ ಬಳಿಕ ಬೋರಿಸ್ ಬೋರಾ ಒಂದು ದೊಡ್ಡ ಚೀಲವನ್ನು ತೆಗೆದುಕೊಂಡು ಬಂದು ತಾನು ಕದ್ದಿದ್ದ ವಸ್ತುಗಳನ್ನೆಲ್ಲ ಆವರವರಿಗೆ ತಂದು ಮುಟ್ಟಿಸಿದಾಗ, ಅಂತಾರಾಷ್ಟ್ರೀಯ ಸ್ವರೂಪದಲ್ಲಿ ನಡೆಯುವ ಅಪರಾಧಗಳ ಶೋಧಕರೆಂಬ ಗರ್ವ ತಳೆದ ಈ ಅಧಿಕಾರಿಗಳ ಮುಖ ಮಂಕಾಯಿತು!

ಇದಕ್ಕಿಂತಲೂ ಅಧಿಕ ರೋಮಾಂಚಕವಾದ ಪ್ರದರ್ಶನವನ್ನು ೧೯೪೭ರಲ್ಲಿ ಬೋರಿಸ್ ಬೋರಾ ಜರ್ಮನಿಯಲ್ಲಿ ಮಾಡಿದ್ದನು. ಮಿತ್ರ ರಾಷ್ಟ್ರೀಯ ಸೇನಾಪತಿಗಳ ಒಂದು ಭೋಜನ ಕೂಟದಲ್ಲಿ ಬೋರಿಸ್ ಬೋರಾನಿಗೂ ಆಮಂತ್ರಣ ಕಳಿಸಿದ್ದರು. ಭೋಜನ ಸಮಾರಂಭದ ನಡುವೆ ಬೋರಾ ಪ್ರತ್ಯೇಕ ಸೇನಾಪತಿಯ ಕಿಸೆಯನ್ನು ಚಾತುರ್ಯದಿಂದ ಕತ್ತರಿಸಿಬಿಟ್ಟ. ಅವರಿಗೆ ಅದರ ಸುಳಿವೂ ಹತ್ತಗೊಡಲಿಲ್ಲ. ಇಷ್ಟೇ ಅಲ್ಲ, ಇನ್ನೂ ಒಂದು ಹೆಜ್ಜೆ ಮುಂದಿಟ್ಟ. ಭೋಜನ ಸಮಾರಂಭದ ಸಮ್ಮಾನನೀಯ ಅತಿಥಿಗಳಾದ ರಶಿಯನ್ ಸೇನಾಪತಿ ಮಾರ್ಶಲ್ ಝುಕೋವರ ಜೇಬಿನಲ್ಲಿ ತಾನು ಕಿಸೆ ಕತ್ತರಿಸಿ ಸಂಪಾದಿಸಿದ ಎಲ್ಲ ವಸ್ತುಗಳನ್ನೂ ಜಾಣತನದಿಂದ ತುಂಬಿಸಿದ. ದೊಡ್ಡ ದೊಡ್ಡ ಮಾತುಗಳ ನಡುವೆ ಭೋಜನ ಮುಗಿಯಿತು. ಎಲ್ಲರೂ ಸಿಗರೇಟು ಮತ್ತು ಕರವಸ್ತ್ರವನ್ನು ತೆಗೆಯುವುದಕ್ಕೋಸ್ಕರ ತಂತಮ್ಮ ಕಿಸೆಗೆ ಕೈ ಹಾಕಿದರು!...ಅರೆ, ಎಲ್ಲರೂ ಆಶ್ಚರ್ಯದಿಂದ ಸ್ತಬ್ಧರಾದರು. ಅಷ್ಟರಲ್ಲಿ ಬೋರಿಸ್ ಬೋರಾ. ಮಾರ್ಶಲ್ ಝುಕೋವರ ಕಡೆಗೆ ತಿರುಗಿ "ಮಾರ್ಶಲ್, ನಿಮ್ಮ ಕಿಸೆಯಿಂದೇನೂ ಹೋಗಲಿಲ್ಲವಷ್ಟೆ!" ಎಂದ. ರಶಿಯನ್ ಸೇನಾಪತಿ ತನ್ನ ಕಿಸೆ ಮುಟ್ಟಿ ನೋಡಿದರೆ, ಅದರೊಳಗಿಂದ ಉಳಿದವರು ಕಳೆದುಕೊಂಡ ಎಲ್ಲ ವಸ್ತುಗಳೂ ಒಂದೊಂದಾಗಿ ಹೊರಬಂದವು. ರಶಿಯನ್ ಮಾರ್ಶಲರಿಗೆ ನಿಜವಾಗಿಯೂ ನಾಚಿಕೆಯಾಯಿತು. ಆದರೆ ಉಳಿದೆಲ್ಲರ ನಡುವೆ ಸ್ವಯಂ ಬೋರಿಸ್ ಬೋರಾ ಅಟ್ಟಹಾಸ ಮಾಡುತ್ತಿದ್ದುದನ್ನು ಕಂಡವರಿಗೆ ನಿಜಸಂಗತಿ ತಿಳಿದು ಹೋಯಿತು. ಆ ಕೂಡಲೇ ಅವರು ಗೊಳ್ಳೆಂದು ನಕ್ಕ ರಭಸಕ್ಕೆ ಕೋಣೆಯ ನಾಲ್ಕು ಗೋಡೆಗಳು ಸಿಡಿದು ಹೋಗಬೇಕು. ಬೋರಾ ತೋರಿಸಿದ ಈ ತಸ್ಕರ ವಿದ್ಯೆಯಿಂದ ಮಾರ್ಶಲ ಝುಕೋವರು ತುಂಬ ಪ್ರಭಾವಿತರಾದರು; ಎಂತಲೇ, ರಶಿಯನ್ ಸೇನೆಯ ಉಳಿದ ಅಧಿಕಾರಿಗಳೊಡನೆ ಭೇಟಿ ಮಾಡಿಸಲು ಬೋರಿಸ್ ಬೋರಾನನ್ನು ಅವರು ತನ್ನ ಡೇರೆಗೆ ಕರೆದುಕೊಂಡು ಹೋದರು. ಅಲ್ಲಿ ಸಹ ಬೋರಿಸ್ ಬೋರಾ ಪ್ರತಿಯೋರ್ವ ಸೇನಾಧಿಕಾರಿಯ ಕಿಸೆ ಕತ್ತರಿಸದೆ ಬಿಡಲಿಲ್ಲ.

ಈ ವೃತ್ತಿಯಿಂದ ಬೋರಿಸ್ ಬೋರಾ ಲಕ್ಷಾಂತರ ಹಣ ಗಳಿಸಿರುವನು. ದೊಡ್ಡ ದೊಡ್ಡ ಗೌರವ ಸಮಾರಂಭಗಳಲ್ಲಿ ಅವನಿಗೆ ಆಮಂತ್ರಣ ಹೋಗುತ್ತದೆ. ಅಲ್ಲಿ ಎಲ್ಲರೂ ಮೂಗಿಗೆ ಬೆರಳೇರಿಸುವಂತೆ ಬೋರಾ ತನ್ನ ಚಮತ್ಕಾರವನ್ನು ತೋರಿಸುವನು. ಕೇವಲ ಕಿಸೆ ಕತ್ತರಿಸುವುದೊಂದೇ ಅಲ್ಲ- ನಿಮ್ಮ ವಸ್ತ್ರವನ್ನು ನೀವೆಲ್ಲಿ ಎಷ್ಟು ರಕ್ಷಿತ ಗಿಟ್ಟರೂ, ಅದನ್ನು ಬೋರಾ ಹಾರಿಸಬಲ್ಲ.

ಒಂದು ಸಲ ಸುಪ್ರಸಿದ್ಧ ಪತ್ರಿಕಾ ಪ್ರತಿನಿಧಿಯೋರ್ವರು ಬೋರಿಸ್ ಬೋರಾನ ಸಂದರ್ಶನಾಪೇಕ್ಷೆಯಿಂದ ಬಂದರು. ಇಬ್ಬರೂ ಮಾತುಕತೆಯನ್ನು ತೊಡಗಿ ಕೆಲವು ನಿಮಿಷಗಳು ಸಂದಿರಬಹುದು, ಪತ್ರಿಕಾ ಪ್ರತಿನಿಧಿಗೆ ತಾವೇಕೋ ತಾನು ಧರಿಸಿದ ಷರಾಯಿ ಕೆಳಗೆ ಜಾರುತ್ತಿದ್ದಂತೆ ಭಾಸವಾಯಿತು. ನೋಡುವಾಗ, ಸೊಂಟಕ್ಕೆ ಬಿಗಿದಿದ್ದ ಪಟ್ಟಿಯೇ ಮಾಯ! ಯಾವಾಗ ಇದು ನಡೆಯಿತೆಂಬುದರ ಗೋಚರವೇ ಇಲ್ಲ.

ಇನ್ನೊಬ್ಬ ಪತ್ರಿಕಾಪ್ರತಿನಿಧಿಯ ಕೂಡೆಯೂ ಇಂಥವೇ ವಿನೋದ ನಡೆಯಿತು. ಮಾತುಕತೆಯೆಲ್ಲ ಮುಗಿದ ಬಳಿಕ ಪತ್ರಿ

(೧೧ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other. Canara Mutual agents enjoy respect and regard from the public

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact

THE MANAGING DIRECTOR.
The CANARA MUTUAL ASSURANCE CO. Ltd.,
Head Office: UDIPI, S. INDIA. ESTD: 1935

ಹಿಮವಂತನ ದುರ್ಗಮ ಕೋಟೆ

ಒಂದು ಇಣುಕು ನೋಟದಿಂದಲೇ ರೋಮಾಂಚನ

ಹೆಚ್ಚು ಕಡಿಮೆ ಗೌರೀಶಂಕರ ಶಿಖರದ ಮೇಲೆ ಶೇರ್ಪಾ ತೇನ ಸಿಂಗ ಮತ್ತು ಹಿಲಾರಿಯವರು ವಿಜಯ ಪತಾಕೆಯನ್ನು ಹಾರಿಸಿದ ಸಮಯದಲ್ಲೇ ಹಿಮಾಲಯ ಪ್ರದೇಶದಲ್ಲಿ ಇದು ವರೆಗೆ ಪಾದಾಕ್ರಾಂತವಾಗದಿದ್ದ ೨೨೬೫೦ ಅಡಿ ಎತ್ತರದ ಪಾಂಚಚೂಲಿ ಎಂಬ ಶಿಖರವನ್ನು ಶ್ರೀ ಪಿ. ಎನ್. ನಿಕೋರೆಯವರ ನೇತೃತ್ವದಲ್ಲಿ ಹೊರಟ ಭಾರತೀಯ ತಂಡವೊಂದು ಆರೋಹಿಸಿದೆ ಎಂಬ ವಾರ್ತೆ ಈಗ ಬಂದಿರುತ್ತದೆ. ಈ ತಂಡವು ತನ್ನ ಮೂರನೆ ಶಿಬಿರವನ್ನು ಕಳೆದ ಮೇ ೨೨ನೇ ತಾರೀಕಿಗೆ ಸ್ಥಾಪಿಸಿದ್ದಾಗಿಯೂ ಕೂಲಿ ಅಜೀಬಾನು ಇನ್ನೂ ಎತ್ತರದಲ್ಲಿ ಶಿಬಿರವನ್ನು ಸ್ಥಾಪಿಸಬಯಸಿ ಮುನ್ನಡೆದನೆಂದೂ ಮೇ ೨೪ಕ್ಕೆ ಪತ್ರ ಮೂಲಕ ತಿಳಿಸಿದರು. ಮೇ ೨೬ನೇ ದಿನಾಂಕ ಪಾಂಚಚೂಲಿ ಶಿಖರವನ್ನೇರಿ ವಿಜಯ ಸಂಪಾದಿಸಿದರೆಂದು ಈಗ ತಿಳಿದಿದೆ. ಈ ಶಿಖರವು ಅಲ್ಮೋರಾದ ಹತ್ತಿರವಿದ್ದೆ, ೧೯೫೦ರಲ್ಲಿ ಸ್ಕಾಟಿಶ್-ಕುಮಾಂವ ತಂಡವೊಂದು ಇದನ್ನು ಏರಲು ಪ್ರಯತ್ನಿಸಿ, ವಿಫಲವಾಗಿತ್ತು. ಕಳೆದ ವರ್ಷ ಹ್ಯಾರೇರ ಎಂಬ ಜರ್ಮನನು ೨೧ ಸಾವಿರ ಅಡಿ ಎತ್ತರ ಸಾಗಿದ ನಂತರ ಪ್ರಯತ್ನವನ್ನು ಬಿಟ್ಟುಕೊಟ್ಟನು. ಹೀಗೆ ಹಿಮಾಲಯದಲ್ಲಿ ಇರುವ ಅನೇಕಾನೇಕ ಶಿಖರಗಳು ಎತ್ತರದಲ್ಲಿ ಕಡಿಮೆಯಾಗಿದ್ದರೂ ಅವನ್ನು ಏರಿ, ಶಿಖರವನ್ನು ಮುಟ್ಟುವುದು ಸುಲಭವಾಗಿರುವುದಿಲ್ಲ ಎಂದ ಮೇಲೆ ಹಿಮಾಲಯದ ಹಾಗು ಜಗತ್ತಿನ ಶೈಲ ಶೃಂಗಗಳಲ್ಲಿಯೇ ಅತ್ಯುನ್ನತವೆನಿಸಿದ ೨೯೦೦೨ ಅಡಿ ಎತ್ತರದ ಗೌರೀಶಂಕರದ ಮೇಲೆ ವಿಜಯ ಪತಾಕೆಯನ್ನು ಹಾರಿಸುವ ಕೆಲಸ ಎಷ್ಟು ಕಷ್ಟಸಾಧ್ಯವೆಂದು ಊಹಿಸಬಹುದು.

ಆಧ್ಯಾತ್ಮಿಕ ಮಹತ್ವ

ಹೆಸರೇ ಸೂಚಿಸುವಂತೆ ಹಿಮಾಲಯದಲ್ಲಿ ಸದಾ ಮಂಜು ಕವಿದಿರುತ್ತದೆ. ಇಲ್ಲಿಯ ತಾಪಮಾನದಲ್ಲಿ ಯಾವ ಸಸ್ಯ ಜೀವಿಗಳೂ ಬದುಕುವುದು ಅಸಾಧ್ಯವೆಂದಿರುವಾಗ, ಮನುಷ್ಯನು ನೆಲಸುವುದೆಂತು? ಆದರೂ ನಮ್ಮ ಇತಿಹಾಸ–ಪುರಾಣಗಳನ್ನು ನೋಡಿದರೆ ಋಷಿ ಮುನಿಗಳು ಹಿಮವತ್ಪರ್ವತ ಪ್ರದೇಶಗಳಲ್ಲಿ ವರ್ಷಗಟ್ಟಳೆ ತಪಸ್ಸನ್ನು ಕೈಗೊಳ್ಳುತಿದ್ದರು ಎಂಬುದು ವ್ಯಕ್ತವಾಗುತ್ತದೆ. ಈಚಿನ ವರ್ಷಗಳಲ್ಲಿ ರಾಮಕೃಷ್ಣ ಮಿಶನಿನ ಸ್ವಾಮಿ ಅಖಂಡಾನಂದರು ಶಂಕರನ ನಿವಾಸವೆನಿಸಿದ ಕೈಲಾಸಪರ್ವತದವರೆಗೆ ಹೋಗಿದ್ದರು. ಆದರೆ ಶಿವನು ವಾಸಿಸುತ್ತಿರುವನೆಂಬುದಕ್ಕೆ ಕುರುಹುಗಳಿವೆಯೆಂದು ಹೇಳಿದ ಆ ವಿಶಿಷ್ಟ ಸ್ಥಳವನ್ನು ನೋಡುವುದು ಅವರಿಂದಾಗಲಿಲ್ಲ. ಮಹಾಭಾರತದ ಅಂತ್ಯದಲ್ಲಿ ಪಾಂಡವರು ಹಿಮಾಲಯ ಯಾತ್ರೆಯನ್ನು ಕೈಗೊಂಡ ಕರುಣಾಜನಕ ಆದರೂ ರೋಮಹರ್ಷಕ ವೃತ್ತಾಂತವನ್ನು ನಾವು ಕೇಳಿದ್ದೇವೆ. ಇದರಂತೆ ಆ ಅಸಹ್ಯ ಶೀತವಲಯದಲ್ಲಿ ಜೀವಧಾರಣ ಮಾಡಿದೆಂದ ಮಹಾಯೋಗಿಗಳ ಕತೆಯನ್ನೂ ಕೇಳಿದ್ದೇವೆ. ಇವುಗಳನ್ನು ನಂಬಬಹುದೋ ಹೇಗೆ ಎಂದು ಸಂಶಯಾತ್ಮಕ ಪ್ರವೃತ್ತಿಯನ್ನು ನಾವು ತೋರುತ್ತಿದ್ದಂತೆಯೇ ಪಾಶ್ಚಾತ್ಯ ಇತಿಹಾಸ ಮತ್ತು ದರ್ಶನದ ಪ್ರಖ್ಯಾತ ವಿದ್ವಾಂಸರಾದ ಡಾ. ಪಾಲ್ ಬ್ರಂಟನ್ ಹೀಗೆ ಹೇಳುವರು:

"ನನ್ನ ಮಿತ್ರರಾದ ಯೋಗೀ ಪ್ರಣವಾನಂದರ ಗುರು ಸ್ವಾಮಿ ಜ್ಞಾನಾನಂದರು ಕೇವಲ ಲಂಗೋಟಿಯನ್ನು ಧರಿಸಿ ಪೂರಾ ಚಳಿಗಾಲವನ್ನು ಗಂಗೋತ್ರಿಯಲ್ಲಿ ಕಳೆದರು. ಬೆಂಕಿಯುರಿಯದ ಮತ್ತು ಬಾಗಿಲಿಲ್ಲದ ಒಂದು ಗುಹೆಯಲ್ಲಿ ಅವರು ವಾಸಿಸುತಿದ್ದರು. ಆ ವಾತಾವರಣ ಅವರಿಗೆ ಅಭ್ಯಾಸವಾಗಿ ಹೋಯಿತಂತೆ. ಸುಮಾರು ಏಳುಅಡಿ ದಪ್ಪವಾಗಿ ಸುರಿಯುವ ಹಿಮದ ನಡುವೆ ಸಾಮಾನ್ಯ ಮನುಷ್ಯನೊಬ್ಬ ಕೇವಲ ಲಂಗೋಟಿಧರಿಸಿ ಇಡೀ ಚಳಿಗಾಲ ಕಳೆದನೆಂದರೆ, ಇದಕ್ಕಿಂತ ಆಶ್ಚರ್ಯವಾಗುವದೇನುಂಟು? ಈ ರಹಸ್ಯದ ಉದ್ಘಾಟನೆಗಾಗಿ ನಾನು ಪ್ರಯತ್ನಿಸಿದಾಗ, ಈ ಸಂಗತಿಗಳು ತಿಳಿದವು. ಹಠಯೋಗ ಪ್ರದೀಪಿಕಾ ಮತ್ತು ಭಗವದ್ಗೀತೆ ಎಂಬೆರಡು ಹಿಂದೂ ಗ್ರಂಥಗಳು ನನ್ನ ನೆನಪಿಗೆ ಬಂದವು. ಪ್ರದೀಪಿಕಾದಲ್ಲಿ ಶಾರೀರಕ ಕ್ರಿಯೆಗಳ ಮೇಲೆ ಹತೋಟಿಯನ್ನಿಡುವ ಕ್ರಮದ ವರ್ಣನೆ ಇದೆ. ಸೆಖೆ ಮತ್ತು ಚಳಿಯಿಂದ ಮನುಷ್ಯ ಏನೇನೂ ಪ್ರಭಾವಿತನಾಗದೆ ಹೇಗೆ ಇರಬಲ್ಲನೆಂದು ಇದು ವಿವರಿಸುತ್ತದೆ. ಗೀತೆಯಲ್ಲಿ ಮನುಷ್ಯನು ಪೂರ್ಣತಃ ಆತ್ಮಲೀನನಾದ ಮೇಲೆ ಸೆಖೆ ಶೀತಗಳು ಅವನಮೇಲೆ ಏನೂ ಪ್ರಭಾವವುಂಟುಮಾಡಲಾರವು ಎಂದು ಹೇಳಿದೆ."

ವೈಜ್ಞಾನಿಕ ಜಿಜ್ಞಾಸೆ

ಆದರೆ ಇಂದು ಹಿಮಾಲಯಾರೋಹಣವನ್ನು ಕೈಗೊಳ್ಳುವವರು ಆಧ್ಯಾತ್ಮಿಕ ಜಿಜ್ಞಾಸೆಯಿಂದ ಕೂಡಿರದೆ, ವೈಜ್ಞಾನಿಕ ರಹಸ್ಯವನ್ನು ಅರಿಯುವ ಸಾಹಸಿಗಳಾಗಿರುವರು. ಪ್ರಾಗೈತಿಹಾಸಿಕ ಯುಗದ ಜೀವಜಂತುಗಳ ನಿವಾಸ ಸ್ಥಾನವಾಗಿ ಹಿಮಾಲಯವಿದೆ ಎಂದು ವಿಜ್ಞಾನಿಗಳ ಅಭಿಪ್ರಾಯ. ಈಗ ಲುಪ್ತಪ್ರಾಯವಾಗಿರುವ ಪಶುಪಕ್ಷಿಗಳು ಹಿಮಾಲಯದಲ್ಲಿ ಸುರಕ್ಷಿತವಾಗಿರುತ್ತವೆ ಎಂದವರು ಹೇಳುತ್ತಾರೆ. ಅಮೇರಿಕಾದ ಪಕ್ಷಿ ಸಂಗ್ರಹಾಲಯಗಳ ವ್ಯವಸ್ಥಾಪಕ ಡಾ. ರೇನಾಲ್ಡ್ಸರು ನೇಪಾಳದ ಕಂದರಗಳಲ್ಲಿ ಕೆಲವು ಲುಪ್ತ ಪಕ್ಷಿಗಳ ಶೋಧವಗಡಲು ಬಂದಿದ್ದರು. ಇದರಂತೆ ಹಿಮಾಲಯವು ಭೂಮಿಯ ಗುಣ, ವಾತಾವರಣದ ಗತಿವಿಧಿ ಮುಂತಾದವುಗಳ ಸಂಬಂಧದಲ್ಲೂ ವಿಶೇಷ ಜ್ಞಾನವನ್ನು ಮಾಡಿಕೊಡುವಂತಿದೆ. ಪೃಥ್ವಿಯ ಆಕರ್ಷಣ ಶಕ್ತಿ, ಜಲವಾಯು ಮತ್ತು ನೆಲದ ರಚನೆ ಮತ್ತು ಅವು ಹೊರಡುವ ಪರಿವರ್ತನೆ ಮುಂತಾದ ಸಂಗತಿಗಳಲ್ಲಿ ಎಷ್ಟು ಅಮೂಲ್ಯ ಸಂಶೋಧನೆ ಮಾಡುವುದಕ್ಕೂ ಹಿಮಾಲಯದಲ್ಲಿ ಆಸ್ಪದವಿದೆ. ಒಬ್ಬ ಸ್ವಿಸ್ ಪರ್ವತಾರೋಹಿಯಾದ ವೈಜ್ಞಾನಿಕರು ಹಿಮಾಲಯದ ಸರ್ವೆ ಮಾಡಿ ಹೇಳಿದ ಈ ಮಾತುಗಳು ಅಕ್ಷರಶಃ ಸತ್ಯ– "ಒಂದುವೇಳೆ ನಾನು ಪುನರ್ಜನ್ಮ ಸಿದ್ಧಾಂತವನ್ನು ಒಪ್ಪಿಕೊಂಡರೆ ಹಿಮಾಲಯವನ್ನು ಆರೋಹಿಸುವುದಕ್ಕಾಗಿ ನನಗೆ ಸಾವಿರಜನ್ಮ ಕೊಡು ದೇವರೆ ಎಂದು ಪ್ರಾರ್ಥಿಸುತ್ತೇನೆ" ಹಿಮಾಲಯ ಅಷ್ಟು ರೋಮಾಂಚಕವಾಗಿದೆ.; ಆಕರ್ಷಣೀಯವಾಗಿದೆ. ಅದರಂತೆ ಭಯಂಕರವೂ ಹೌದು. "ಹಿಮಾಲಯದ ದಾನವ" ನೆಂದು ಹೆಸರಾದ ಪ್ರಾಣಿ ವರ್ಗದ ಹೆಜ್ಜೆ ಕಳೆದ ವರ್ಷ ಸ್ವಿಸ್ ಪರ್ವತಾರೋಹಿಗಳಿಗೆ ದೊರಕಿದ್ದಿತು. ಆದರೆ ಈ ವರ್ಷ ಕರ್ನಲ್ ಹಂಟರ ನೇತೃತ್ವದಲ್ಲಿ ಗೌರೀಶಂಕರ ಶಿಖರವನ್ನು ಏರಿ ಯಶಸ್ಸುಗಳಿಸಿದ ತಂಡಕ್ಕೆ ಇಂಥ ಯಾವ ಚಮತ್ಕಾರವೂ ಗೋಚರಕ್ಕೆ ಬರಲಿಲ್ಲ. ಟಿಬ್ಬೇತೀಯರು ಈ ಭಯಂಕರ ಪ್ರಾಣಿಯು ಹಿಮಾಲಯದ ಕಾಡುಗಳಲ್ಲಿ ವಾಸಿಸುತಿದ್ದು, ಬಂಡೆಗಲ್ಲುಗಳ ಮೇಲೆ ಹಬ್ಬಿದಪಾಚಿಯನ್ನು ತಿನ್ನುತ್ತದೆ. ಈ ದಾನವನು ನೆಟ್ಟಗೆ ನಿಂತುಕೊಂಡರೆ ಏಳೆಂಟು ಅಡಿ ಎತ್ತರವಿರುವನು. ಶರೀರದ ತುಂಬ ಕರಡಿಯಂತೆ ಕೂದಲುಗಳಿವೆ, ಮುಖ ಅಂಡಾಕಾರವಾಗಿದ್ದು ಮಂಗನ ಮೋರೆಯನ್ನು ಹೋಲುತ್ತದೆ. ಆದರೆ ಈ ಪ್ರಾಣಿ ಮನುಷ್ಯನಿಗೆ ಏನೂ ಹಾನಿ ಮಾಡುವುದಿಲ್ಲ. ಮರಗಿಡಗಳನ್ನು ಮುರಿದು ಹಾಳುಗೆಡವುತ್ತದೆ. ಬೆಂಕಿ ಮತ್ತು ಧ್ವನಿಯಿಂದ ಹೆದರಿಕೊಳ್ಳುತ್ತದೆ. ಒಮ್ಮೆ ಟಿಬ್ಬೇತೀಯ ಶಿಕಾರಿಯೊಬ್ಬನು ಗಾಯಗೊಂಡ ಈ ದಾನವನ ಕಾಲಿಗೆ ಪಟ್ಟಿಕಟ್ಟಿ ಉಪಚರಿಸಿದನು. ದಾನವನು ಈ ಉಪಚಾರವನ್ನು ಮೌನವಾಗಿ ಸ್ವೀಕರಿಸಿ, ಎದ್ದುಹೋದನಂತೆ!

ಸೃಷ್ಟಿ ವೈಚಿತ್ರ್ಯ

ಇದಲ್ಲದೆ ಹಿಮಕರಡಿಯನ್ನು ಹೋಲುವ ಇನ್ನೊಂದು ಪ್ರಾಣಿಯೂ ಕಣ್ಣಿಗೆ ಕಾಣಿಸಿದೆ. ಮನುಷ್ಯ ಮಾತ್ರದವನು ಹಿಮಾಲಯದ ಎತ್ತರದಲ್ಲಿ ನೆಲಸಿ ಬಾಳಲಾರನಾದರೂ. ಈ ಪ್ರಾಣಿಗಳು ನಿರ್ಭೀತ ಜೀವನವನ್ನು ನಡೆಸುತ್ತಿರುವುದು ಆಶ್ಚರ್ಯ. ಮನುಷ್ಯನನ್ನು ವಿಮಾನಮೂಲಕ ಕೊಂಡುಹೋಗಿ ಗೌರೀಶಂಕರ ಶಿಖರದ ಮೇಲೆ ಪೆರಚೂಟ್ ಕೊಡೆಯ ಮುಖಾಂತರ ಇಳಿಸಿದರೆ, ಬೇರೆ ಪ್ರಾಣವಾಯುವಿನ ಪೂರೈಕೆಯಿಲ್ಲದೆ ಕೇವಲ ಅಲ್ಲಿಯ ಗಾಳಿಯನ್ನು ಸೇವಿಸಿಕೊಂಡು ಒಂದೂವರೆ ನಿಮಿಷ ಕಾಲ ಅವನು ಬದುಕಬಲ್ಲನು! ಆ ಬಳಿಕ ಮೂರ್ಛೆಬರುವುದೂ ಪ್ರಾಣ ಹೋಗುವುದೂ ನಿಶ್ಚಯ. ಪ್ರಾಣವಾಯುವನ್ನು ತುಂಬಿಕೊಂಡು ಹೋದ ಪಕ್ಷದಲ್ಲೂ ಕೆಲವು ತಾಸುಗಳ ಕಾಲ ಅಲ್ಲಿರಬಹುದು. ಹಾಗೆಂದು ೬೦ ಡಿಗ್ರಿ ಶೂನ್ಯ ತಾಪಮಾನದಲ್ಲಿ ಸುತ್ತು? ತಾಸಿಗೆ ೧೫೦ ಮೈಲು ವೇಗದಲ್ಲಿ ಚಲಿಸುವ ಗಾಳಿಯ [illegible] ...ಪ್ಪುವುದು ಖಂಡಿತ. ಈ ಬಾರಿ ತೇನಸಿಂಗ

(೯ನೇ ಪುಟ ನೋಡಿರಿ)

ಪುತ್ತೂರು. ಡಿ. ಮುನ್ಸಿಫ್
ಕೋರ್ಟಿನಲ್ಲಿ.

O. S. 95/53

ಕೃಷ್ಣ ಭಾಗವತ...... ....ವಾದಿ.
ಶಿವರಾಯ ಕೊಡಾ ....ಪ್ರತಿವಾದಿರು.

1 ನೆ ಪ್ರತಿವಾದಿ ಶಿವ ರಾಯ. ಕೃಷ್ಣ ಭಾಗವತರ ಮಗ.

4 ನೇ ಪ್ರತಿವಾದಿ ಕುಂಞಾಮಿನಾ. ಅದ್ದಬ್ಯಾರಿ ವಿಧವೆ.

5 ನೆ ಪ್ರತಿವಾದಿ ಮರಿಯಮ್ಮ

6 ನೆ ಪ್ರತಿವಾದಿ ಅಬ್ದುಲ್ ರಹಿಮಾನ್
ಯೂಸ ಅದ್ದ್ಯಾರಿ

7 ನೆ ,, ಆಸಮ್ಮ

8 ,, ಶೀಫ (5–8 ಅದ್ದಬ್ಯಾರಿಯ ಮಕ್ಕಳು.) ಪುತ್ತೂರು ತಾಲೂಕು ಬಜಾಲ ಗ್ರಾಮದಲ್ಲಿರುವ.

ಇವರಿಗೆ ತಿಳಿಯಪಡಿಸುವದು.

ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ 29–6–53 ಕ್ಕೆ ಇಟ್ಟಿರುವದರಿಂದ ಆ ದಿವಸ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಾಜರಾಗಿ [illegible] ತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವದು.

B. Chidananda Rao
Pleader for Plaintiff
ಪುತ್ತೂರು ತಾ: [illegible]

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / Zandu Brahmi Hair Oil — ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸನೀಯುವುದು.
1 ಪೌಂಡಿಗೆ ರೂ. 3–8–0 ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ / Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1–5–0

Zandu Zuvi Drops / ಝಂಡೂ ಜ್ಯುವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ–ರೂ. 2-12-0

ದಕ್ಷಿಣಕನ್ನಡದಲ್ಲಿ ಸ್ಟಾಕಿಸ್ಟರು:—

ಮಂಗಳೂರು. ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸಿಟ್ಯೂಟ್ ಲಿಮಿಟೆಡ್.
ಕಾರ್ಕಳ. ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಲಿಸ್ಬನಿನ ಭಾರತೀಯ ಕಚೇರಿ ಮುಚ್ಚಲ್ಪಟ್ಟಿತು

ಭಾರತದ ನ್ಯಾಯವಾದ ಕೇಳಿಕೆಗೆ ಪೋರ್ಚುಗೀಜ ಸರಕಾರದ ಸಂಪೂರ್ಣ ತಿರಸ್ಕಾರ

ಸಾಮಾಜಿಕ ಹಿತ

ರಾಜಗೋಪಾಲಾಚಾರಿಯವರು ಕಳೆದವಾರ ತಮಿಳುನಾಡಿನ ಕೆಲವು ಸ್ಥಾನಗಳನ್ನು ಸಂಚರಿಸಿದರು. ಈ ಸಂದರ್ಭದಲ್ಲಿ ಅವರು ಅನೇಕ ಸಭೆ ಮತ್ತು ಸಮಾರಂಭಗಳಲ್ಲಿ ಭಾಗವಹಿಸಿ ನೆರೆದ ಜನತೆಯನ್ನು ಉದ್ದೇಶಿಸಿ ಮಾತನಾಡಿದರು. ಮದ್ರಾಸು ಸರಕಾರದ ನೀತಿ ಮತ್ತು ಧೋರಣೆಯ ಮೇಲೆ ಬೆಳಕು ಚೆಲ್ಲುವಂತೆ ಈ ಮಾತುಗಳು ಇದ್ದುವು. ನೇಕಾರರ ಸಭೆಯೊಂದರಲ್ಲಿ ರಾಜಾಜಿಯವರು ಮದ್ರಾಸು ಸರಕಾರವು ಕೇಂದ್ರದ ಮುಂದೆ ನೇಕಾರರ ಪರವಾಗಿ ಇಟ್ಟ ಬೇಡಿಕೆಯು ನ್ಯಾಯಪೂರ್ಣವಾದುದೆಂಬುದನ್ನು ಒತ್ತಿ ಹೇಳಿದರು ಮದ್ರಾಸುರಾಜ್ಯದ ೫೦ ಲಕ್ಷ ನೇಕಾರ ಕುಟುಂಬಗಳು ಜೀವಿತೋಪಾರ್ಜನೆಗಾಗಿ ಅವಲಂಬಿಸಿಕೊಂಡಿರುವ ಕೈಮಗ್ಗದ ಉದ್ದಿಮೆಯನ್ನು ಸುರಕ್ಷಿಸುವುದು ಸಾಮಾಜಿಕ ಹಿತದೃಷ್ಟಿಯಿಂದ ಅತ್ಯವಶ್ಯಕವಾದ ಕ್ರಮವಾಗಿರುತ್ತದೆ. "ನನ್ನೊಡನೆ ೧೨ ಕೈಮಗ್ಗಗಳು ಮತ್ತೊಂದು ಗಿರಣಿ ಇವುಗಳಲ್ಲಿ ಯಾವುದನ್ನು ಮುಚ್ಚೋಣವೆಂದು ಕೇಳಿದರೆ ಗಿರಣಿಯನ್ನು ಮುಚ್ಚಿಬಿಡಿರೆಂಬುದೇ ನನ್ನ ಉತ್ತರ" ಎಂದವರು ಹೇಳಿದರು. ಈ ಮಾತಿನ ತಿರುಳನ್ನು ಮರೆಯುವ ದಡ್ಡರು ನಾವಾಗಬಾರದು. ಔದ್ಯಮಿಕ ಕ್ಷೇತ್ರದಲ್ಲಿ ಪ್ರಗತಿ ಮತ್ತು ಯಶಸ್ಸನ್ನು ಹಾರೈಸುತಿದ್ದಂತೆಯೇ ನಾವು ಸಾಮಾಜಿಕ ಕೇಡುಗಳಿಗೆ ಅದರಿಂದ ಅವಕಾಶ ದೊರೆಯದಂತೆ ಜಾಗರೂಕತೆಯನ್ನು ವಹಿಸುವುದವಶ್ಯ. ಲಕ್ಷಾಂತರ ಜನರ ಹೊಟ್ಟೆಗೆ ಪೆಟ್ಟು ಹಾಕಿ ಕೆಲವೇ ಗಿರಣಿ ಮಾಲಕರ ಬೊಕ್ಕಸ ಬೆಳೆಸುವ ನೀತಿಯು ಸರಿಯಲ್ಲ. ಭಾರತದಲ್ಲಿ ನಿರುದ್ಯೋಗ ಹೆಚ್ಚಿಕೊಂಡಿರುವಾಗ, ಯಾವ ವಿಧಾನದಿಂದಲೂ ಅದು ಇನ್ನಷ್ಟು ಅಧಿಕ ಸೀಡೆ ಕೊಡುವಂಥ ಕ್ರಮವನ್ನು ಪ್ರೋತ್ಸಾಹಿಸಕೂಡದು. ನಾವು ಔದ್ಯಮಿಕ ಕ್ಷೇತ್ರದಲ್ಲಿ ಪಾಶ್ಚಾತ್ಯರ ಬೆನ್ನು ಹಿಡಿಯಲು ಅಸಾಧ್ಯವಾದರೂ ಚಿಂತಿಲ್ಲ- ನಮ್ಮ ಬಾಂಧವರನ್ನು ಕೆಲಸಗೇಡಿಗಳಾಗಿಯೂ ಹಸಿದ ಹೊಟ್ಟೆಯವರಾಗಿಯೂ ಬಿಡುವ ಪರಿಸ್ಥಿತಿಯನ್ನು ಪುರಾತನ ಸಂಪ್ರದಾಯಕ್ಕೆ ಅಂಟಿಕೊಂಡಾದರೂ ಇದಿರಿಸಬೇಕು. ಇಲ್ಲಿ ಸಾಮಾಜಿಕ ಯೋಗಕ್ಷೇಮದ ದೃಷ್ಟಿಯೇ ಮುಖ್ಯ. ಈ ಕಾರಣದಿಂದ ರಾಜಾಜಿಯವರು ಸಕ್ಕರೆಗಿಂತ ಬೆಲ್ಲವನ್ನು- ಅದರಲ್ಲೂ ತಾಳೆ ಬೆಲ್ಲವನ್ನು ಉಪಯೋಗಿಸುವುದು ಒಳ್ಳೆಯದೆಂದು ನುಡಿದುದು ಯೋಗ್ಯ. ಸಕ್ಕರೆಯನ್ನು ಯಂತ್ರದಲ್ಲಿ ತಯಾರಿಸಬೇಕಾಗುತ್ತದೆ. ಆದರೆ ಬೆಲ್ಲದ ತಯಾರಿಯು ಒಂದು ಗೃಹೋದ್ಯಮವಾಗಿರುತ್ತದೆ. ತಾಳೆ ಬೆಲ್ಲದ ತಯಾರಿಯಂತೂ ಹಿಂದೆ ಮದ್ಯದ ಗತ್ತಿಗೆ ಹಿಡಿಯುತಿದ್ದ ಜನರಿಗೆ ಕೆಲಸ ಕೊಡುವ ಉದ್ಯೋಗವಾಗಿ ಪರಿಣಮಿಸಿದೆ. ಪಾನಪ್ರತಿಬಂಧದಿಂದ ಕೆಲಸ ಕಳೆದುಕೊಂಡ ಜನರಿಗೆ ಇದು ರ...

ಧೋರಣೆಗೆ ಬೆಂಬಲ

ಪಾನ ಪ್ರತಿಬಂಧವನ್ನು ಕೈಗೊಂಡುದರಿಂದ ಆದ ಅನೇಕ ಅನಾಹುತಗಳನ್ನು ವಿವರಿಸುವ ಭರದಲ್ಲಿ ಸರಕಾರೀ ಧೋರಣೆಯ ಕಟು ವಿಮರ್ಶಕರು ಅದು ಹಲವು ಜನರ ಕೆಲಸವನ್ನು ಕಳೆಯಿತೆಂದಿರುವರು. ಆದರೆ ರಾಜಗೋಪಾಲಾಚಾರಿಯವರ ಹೇಳಿಕೆಯಂತೆ ತಾಳೆ ಬೆಲ್ಲದ ಉದ್ಯೋಗವು ಅಂಥವರಿಗೆ ಜೀವನೋಪಾಯಕ್ಕೆ ಸಾಧನವೆನಿಸಿದೆ. ಸಾಮಾಜಿಕ ಹಿತವನ್ನು ಅನುಲಕ್ಷಿಸಿ ಸರಕಾರವು ಪಾನ ನಿಷೇಧವನ್ನು ಜ್ಯಾರಿಗೆ ತಂದಿತು; ಅದರಿಂದ ನೇರಾಗಿ ದುಷ್ಪರಿಣಾಮವನ್ನು ಅನುಭವಿಸುವ ಜನರಿಗೆ ಪ್ರತಿ ಉದ್ಯೋಗವನ್ನು ಕಲ್ಪಿಸಿಕೊಟ್ಟಿತು. ತಾಳೆ ಬೆಲ್ಲವನ್ನು ಉಪಯೋಗಿಸುವ ಜನರು ಹೆಚ್ಚಿದಂತೆ ಈ ಉದ್ಯೋಗದಲ್ಲಿ ತೊಡಗಿದ ಜನರ ಶ್ರೇಯಸ್ಸಾಗುತ್ತದೆ. ಮದ್ಯಪಾನವನ್ನು ಜ್ಯಾರಿಗೆ ತಂದುದಕ್ಕೆ ಹಲವರು ಆಕ್ಷೇಪಿಸುವುದುಂಟು. ರಾಜಗೋಪಾಲಾಚಾರಿಯವರು ಇಂಥವರ ಮಾತಿಗೆ ಮರುಳಾಗಬೇಡಿರೆಂದು ಬಡ ಜನರಿಗೆ ಉಪದೇಶಿಸಿದರು. ಮನುಷ್ಯನು ಮಾಡುವ ಅನರ್ಥಗಳಿಗೆ ಮೂಲದಲ್ಲಿ ಮದ್ಯಪಾನವಿದೆ ಎಂಬುದನ್ನು ಅವರು ತೋರಿಸಿಕೊಟ್ಟರು. ಹಿಂದೆ ಹೆಂಡ ಕುಡುಕರಾಗಿದ್ದ ಹಳಬರಿಗೆ ಈಗ ಈ ದುರಭ್ಯಾಸಕ್ಕೆ ಅವಕಾಶವಿಲ್ಲದ್ದು ಕಂಡು ಸಿಟ್ಟು ಬಂದರೂ ಚಿಂತಿಲ್ಲ - ಈಗಿನ ಜನಾಂಗ ವಿಷ ಸಾದೃಶವಾದ ಮದ್ಯವನ್ನು ಮುಟ್ಟದೆ ದೂರ ಉಳಿಯಬೇಕೆಂದು ರಾಜಾಜಿ ಹೇಳಿದರು. ಇದರಿಂದ ಸರಕಾರಕ್ಕೆ ಬರುವ ಉತ್ಪನ್ನವು ಕಳ್ಳತನ ಮತ್ತು ದರೋಡೆಯ ಸಂಪಾದನೆಯಂತೆಯೇ ಎಂದವರು ಹೇಳಿದರು. ರಾಜಾಜಿಯವರ ಈ ಮಾತಿನ ಮಹತ್ವ ತಿಳಿಯಬೇಕಾದರೆ ಮೊನ್ನೆ ಬೃಹನ್ಮುಂಬಯಿಯ ಪಾನನಿರೋಧ ಸಮಿತಿಯ ಸಭೆಯಲ್ಲಿ ಅಂತಾರಾಷ್ಟ್ರೀಯ ಪಾನನಿರೋಧ ಸಮಿತಿಯ ಅಧ್ಯಕ್ಷರಾದ ಡಾ. ರಾಬರ್ಟ ಪಿಯರ್ಸನ್ನರು ಮಾಡಿದ ಭಾಷಣವನ್ನು ಗಮನಿಸಬೇಕು. ಮದ್ಯಪಾನವು ಲೈಂಗಿಕ ಅಪರಾಧಗಳಿಗೆ ಮೂಲವಾಗಿರುತ್ತದೆ. ಒಟ್ಟಾರೆ ಒದಗುವ ಅಪರಾಧಗಳಲ್ಲಿ ಅರೆವಾಸಿಯಷ್ಟು ಮದ್ಯಪಾನದಿಂದಲೇ ಸಂಭವಿಸುತ್ತದೆ. ಮದ್ಯಪಾನದಿಂದ ಅಪರಾಧಗಳು ಬೆಳೆದಂತೆ ಕುಡುಕನ ಶಾರೀರಕ ದಾರ್ಢ್ಯವೂ ಮನೋ ಸ್ಥೈರ್ಯವೂ ಕುಂದುತ್ತವೆ. ಸರಕಾರವು ಮದ್ಯದ ಮಾರಾಟದಿಂದ ಬರುವ ಹಣದ ಹತ್ತುಪಾಲಿನಷ್ಟು ಮದ್ಯಸೇವನೆಯಿಂದ ಉಂಟಾದ ಅನಾಹುತಗಳನ್ನು ತಡೆಗಟ್ಟಲು ಉಪಯೋಗಿಸಬೇಕಾಗುವುದು. ನ್ಯಾಯಾಲಯಗಳು, ಜೈಲುಗಳು ಪೋಲೀಸು ಸಿಬಂಧಿ, ಆಸ್ಪತ್ರೆಗಳು ಇವುಗಳ ವೆಚ್ಚ ಮಿತಿಮೀರುವುದಕ್ಕೆ ಕುಡುಕತನವೇ ಕಾರಣ. ಆದುದರಿಂದ ಕುಡುಕತನಕ್ಕೆ ಪ್ರೋತ್ಸಾಹಕೊಡುವುದೆಂದರೆ ಕಾಯಿದೆ ಒಪ್ಪಿದ ಕ್ರಮಬದ್ಧ ಸುಲಿಗೆ ಎಂದೇ ಅರ್ಥವಾಗುವುದು. ಇದಕ್ಕೆ ಅವಕಾಶನೀಡದ ರಾಜಾಜಿ ಮುಂತಾದ ರಜಿಯಂಥ ಧೀರರು ಇನ್ನೂ ಅನೇಕ ಜನ ದೊರೆತರೆ, ಲೋಕ ಕಲ್ಯಾಣವಾಗುತ್ತದೆ. ಎಂದು ಮುಂತಾಗಿ ಪಿಯರ್ಸನ್ನರು ಹೇಳಿದರು. ಈ ಕಾರಣದಿಂದ ವಿವೇಕಶೀಲರು ಪಾನನಿರೋಧ ಕಿತ್ತೊಗೆಯಬೇಕೆಂದು ಹೇಳಲಾರರು. ವ್ಯಕ್ತಿಸ್ವಾತಂತ್ರ್ಯದ ಹೆಸರಲ್ಲಿ ಪಾನನಿರೋಧಕ್ಕೆ ಅವಕಾಶ ಕೊಡಕೂಡದೆಂದು ಹೇಳುವವರು ವೈಮಾನಿಕನಿಗೆ ಕಳ್ಳು ಕುಡಿಯಲು ಬಿಡಬೇಕೆಂದೂ ಲಫಂಗನಿಗೆ ವ್ಯಭಿಚಾರಕ್ಕೆ ಅವಕಾಶ ಮಾಡಿಕೊಡಬೇಕೆಂದೂ ಹೇಳುವಷ್ಟು ಗಂಡಾಂತರಕಾರಿ.

ಅಹಿಂಸಾತ್ಮಕ ಹೆಜ್ಜೆ

ಆದುದರಿಂದ ಸರಕಾರ ಇಟ್ಟ ಸರಿಯಾದ ಹೆಜ್ಜೆಗಳನ್ನು ಅನುಸರಿಸಿ ನಡೆಯುವುದು ನಮಗೆ ಹೆಮ್ಮೆಯ ಮಾತಾಗಬೇಕು: ನಮ್ಮ ಸರಕಾರದ ನೇತೃತ್ವದಲ್ಲಿರುವ ಧುರೀಣರು ಬಹಳ ಜಾಗರೂಕತೆಯಿಂದ ಪ್ರತಿಯೊಂದೂ ಸನ್ನಿವೇಶವನ್ನು ತೂಗಿ ನೋಡಿ ಮುನ್ನಡಿ ಇಡುತ್ತಿರುವರು. ರಾಷ್ಟ್ರೀಯ ಅಂತಾರಾಷ್ಟ್ರೀಯ ಕ್ಷೇತ್ರಗಳೆರಡರಲ್ಲೂ ಈ ಅಂಶ ವ್ಯಕ್ತವಾಗುತ್ತದೆ. ಮೊನ್ನೆ ಜೂನ್ ೧೧ನೇ ದಿನಾಂಕ ಭಾರತ ಸರಕಾರವು ಪೋರ್ಚುಗಲಿನೊಡನೆ ಮಾಡಿಕೊಂಡ ಸಂಬಂಧವಿಚ್ಛೇದನೆಯನ್ನು ಇದಕ್ಕೆ ಉದಹರಿಸಬಹುದು. ಲಿಸ್ಬನಿನಲ್ಲಿರುವ ಭಾರತದ ಪ್ರತಿನಿಧಿ ಕಚೇರಿಯನ್ನು ಅಂದು ಮುಚ್ಚಿಬಿಡಲಾಯಿತು. ಇದು ಅನಿರೀಕ್ಷಿತವೆನ್ನಲು ಬಾರದು; ಆದುದರಿಂದ ಈ ವಾರ್ತೆ ಯಾರಿಗೂ ಆಶ್ಚರ್ಯವುಂಟು ಮಾಡಲಿಲ್ಲ. ಭಾರತ ಸರಕಾರವು ಇದುವರೆಗೆ ಅನುಸರಿಸಿಕೊಂಡು ಬಂದ ಧೋರಣೆಯನ್ನು ವಿಮರ್ಶಿಸಿದರೆ, ಸತ್ಯಾಗ್ರಹ ಸ್ವರೂಪದ ಹೋರಾಟದಲ್ಲಿ ಈಗಿನದು ಮಹತ್ವದ ಹೆಜ್ಜೆ ಎಂದು ವ್ಯಕ್ತಗೊಳ್ಳುತ್ತದೆ. ಭಾರತದಲ್ಲಿರುವ ಫ್ರೆಂಚ ಮತ್ತು ಪೋರ್ತುಗೀಜ ವಸಾಹತುಗಳನ್ನು ಭಾರತದ ಅಧೀನ ಬಿಟ್ಟುಗೊಡಬೇಕೆಂದು ನಮಗೆ ಸ್ವಾತಂತ್ರ್ಯ ದೊರೆತ ಬಳಿಕ ಪದೇ ಪದೇ ಕೇಳಿಕೊಳ್ಳಲಾಗಿತ್ತು. ಮಹಾ ಸಾಮ್ರಾಜ್ಯದ ಒಡೆತನವನ್ನು ಅನುಭವಿಸುತಿದ್ದ ಬ್ರಿಟಿಷರು ಭಾರತದಿಂದ ಕಾಲ್ತೆಗೆದ ಮೇಲೆ ಫ್ರೆಂಚ ಮತ್ತು ಪೋರ್ತುಗೀಜರಿಗೆ ಇಲ್ಲಿನ ನೆಲದ ಮೇಲೆ ಕಾಲೂರುವ ಅಧಿಕಾರವಿಲ್ಲವೆಂಬುದು ಭಾರತದ ನಿಲುವು. ಫ್ರೆಂಚರು ಅಧಿಕಾರವನ್ನು ಭಾರತಕ್ಕೆ ಹಸ್ತಾಂತರಿಸುವ ಸಂಬಂಧದಲ್ಲಿ ನಮ್ಮ ಸರಕಾರದೊಡನೆ ಮಾತುಕತೆ ನಡೆಸಲು ಪ್ರಾರಂಭದಲ್ಲಿ ಒಪ್ಪಿಕೊಂಡರು ಆದರೆ ಈಗ ಇವರೂ ಮುಗ್ಗಾಟಿಕೊಳ್ಳಲು

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL &
BANKING SYNDICATE LTD.,

Estd: 1925 H. O: UDIPI, S. India.



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ರಜಿಸ್ಟರ್ಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ಚುರುಕಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅರಣ್ಯ ಸಂಪನ್ಮಂಡಲದ ಸುಯೋಗ್ಯ ಬಿನ್ನಹ

ವೃಕ್ಷಾರೋಪಣದ ಮಹತ್ವವನ್ನು ಅರಿತು ನಿರ್ವಹಿಸಬೇಕಾದ ನಾಗರಿಕ ಕರ್ತವ್ಯ

ನೋಡುತಿದ್ದಾರೆ. ಅದು ಹೇಗಿದ್ದರೂ ಪೋರ್ತುಗೀಜರು ಮಾತ್ರ ಭಾರತ ಸರಕಾರದ ನ್ಯಾಯವಾದ ಸೂಚನೆಯನ್ನು ವಿಚಾರಿಸುವುದಕ್ಕೆ ಒಡಂಬಡಲಿಲ್ಲ. ಪೋರ್ಚುಗಾಲಿನ ಸರ್ವಾಧಿಕಾರಿ ಡಾ ಸಾಲಾಜಾರರು ಭಾರತದಲ್ಲಿರುವ ಗೋವಾ, ದಮನ ಮತ್ತು ದೀವಿಗಳೆಂಬ ವಸಾಹತುಗಳನ್ನು ಭಾರತ ಸರಕಾರಕ್ಕೆ ಒಪ್ಪಿಸಿಕೊಡುವ ತತ್ವವನ್ನೇ ಅಮಾನ್ಯ ಮಾಡಿರುವರು. ಈ ಬಗ್ಗೆ ೧೯೪೮ನೇ ಇಸವಿಯಿಂದ ಕಾಲಕಾಲಕ್ಕೆ ಭಾರತ ಸರಕಾರವು ವಿನಂತಿಮಾಡಿಕೊಂಡಿದ್ದಿತು. ಉಭಯರಾಷ್ಟ್ರಗಳಲ್ಲಿ ಮಾತುಕತೆಗಳು ಶಾಂತಿಯುತವಾಗಿ ನಡೆದು ಸ್ನೇಹಸೌಹಾರ್ದದ ವಾತಾವರಣದಲ್ಲಿ ಹಸ್ತಾಂತರದ ಕಾರ್ಯ ನೆರವೇರಬೇಕೆಂದು ಭಾರತ ಸರಕಾರದ ಇಚ್ಛೆಯಾಗಿದ್ದಿತು. ಆದರೆ ಭಾರತ ಸರಕಾರದ ಯಾವ ವಿನಂತಿಯನ್ನೂ ವಿಚಾರಿಸಲು ದಾ ಸಾಲಾಜಾರರು ಸಿದ್ಧರಿಲ್ಲದ್ದರಿಂದ, ಲಿಸ್ಬನದಲ್ಲಿರುವ ಭಾರತೀಯ ಪ್ರತಿನಿಧಿ ಕಚೇರಿಯನ್ನು ಮುಚ್ಚಿಬಿಡುವುದೇ ಲೇಸೆಂದು ತೋರಿತು.

ನೈತಿಕ ವರ್ಚಸ್ಸಿನ ಸಾಮರ್ಥ್ಯ

ಈ ಪ್ರತಿನಿಧಿ ಕಚೇರಿಯನ್ನು ಮುಚ್ಚಿದ್ದರಿಂದ ಭಾರತಕ್ಕೆ ಹಾನಿಯೇನೂ ಇಲ್ಲ. ಪೋರ್ಚುಗಾಲ ಮತ್ತು ಭಾರತಗಳಲ್ಲಿ ನಡೆಯುವ ವ್ಯಾಪಾರ ಚಿಂತೆ ಹುಟ್ಟಿಸುವಂತಿಲ್ಲ. ಅಲ್ಲದೆ ಭಾರತ ಸರಕಾರವು ಪೋರ್ಚುಗೀಜ ಸರಕಾರದೊಂದಿಗೆ ಸಂಪರ್ಕವನ್ನು ಸಂಪೂರ್ಣ ಕಡಿಯಿತೆಂದೂ ಇದರ ಅರ್ಥವಲ್ಲ. ಗೋವೆ ಮುಂತಾದ ಪೋರ್ಚುಗೀಜ ವಸಾಹತಿನಲ್ಲಿರುವ ಭಾರತೀಯರ ಒಳಮನದ ಬಯಕೆಗೆ ನೈತಿಕ ಬೆಂಬಲವನ್ನು ತೋರಿಸುತ್ತಾ ಬಂದಿರುವ ಭಾರತವು ಗಾಂಧೀಜಿ ತೋರಿಸಿದ ಅಹಿಂಸಾತ್ಮಕ ಸತ್ಯಾಗ್ರಹದ ದಾರಿಯನ್ನೇ ಈ ದಿಸೆಯಲ್ಲಿ ತುಳಿಯಿತು. ಇದು ಸೌಮ್ಯ ನಿಷೇಧ ಸೂಚನೆ; ಗೋವೆ ಮುಂತಾದ ಪ್ರದೇಶಗಳ ಭಾರತೀಯರ ಕೈ ಬಲಗೊಳಿಸುವ ಕ್ರಮ. ನೆಹರೂರವರು ಅನೇಕ ವೇಳೆ ಭಾರತವು ತನ್ನ ಪ್ರದೇಶಕ್ಕೆ ಹೊಂದಿಕೊಂಡಿರುವ ಫ್ರೆಂಚ ಮತ್ತು ಪೋರ್ಚುಗೀಜ ವಸಾಹತುಗಳ ಸಂಬಂಧದಲ್ಲಿ ಹೇಳಿದ ಮಾತುಗಳಿಗೆ ಈಗಿನ ಕ್ರಮವು ಹೊಂದಿಕೊಂಡಿದೆ. ಯುದ್ಧ ಅಥವಾ ಸೈನ್ಯಬಲವನ್ನು ಉಪಯೋಗಿಸದೆ, ಶಾಂತಿ ಮಾರ್ಗದಿಂದ ಕ್ರಾಂತಿ ಸಾಧಿಸುವುದೇ ಭಾರತದ ಉದ್ದೇಶ. ಸೈನ್ಯಬಲವನ್ನು ಉಪಯೋಗಿಸುವುದು ಭಾರತದ ವಿದೇಶ ನೀತಿಗೆ ಕಳಂಕಪ್ರಾಯವಿರುವಂತೆ, ಅವ್ಯವಹಾರ್ಯವೂ ಆಗಿದೆ. ಏಕೆಂದರೆ ಡಾ| ಸಾಲಾಜಾರರಂಥ ಕುತಂತ್ರಿಗಳು ಸಾಮ್ರಾಜ್ಯವನ್ನು ತಮ್ಮ ಮುಷ್ಟಿಯಲ್ಲಿ ಉಳಿಸಿಕೊಳ್ಳಲು ಹೂಡಿದ ಉಪಾಯಗಳ ನಡುವೆ ಭಾರತಕ್ಕೆ ಶಾಂತಿ ಮಾರ್ಗ ಬಿಟ್ಟರೆ ಬೇರೆ ದಾರಿ ಇಲ್ಲ. ಗೋವೆ, ದೀವದಮನಗಳು ಪೋರ್ಚುಗಾಲಿನ ಅವಿಭಾಜ್ಯ ಅಂಗಗಳೆಂಬುದಾಗಿ ಪೋರ್ಚುಗೀಜ ಘಟನೆಯಲ್ಲಿ [illegible] ವೆಯಿಂದ ಕೆಲವು ಕೈಗೊಂಬೆ ಪ್ರತಿನಿಧಿಗಳು ಹೋಗಿ ಪಾರ್ಲಿಮೆಂಟಿನಲ್ಲಿ ಭಾಗವಹಿಸುತ್ತಾರೆ. ಪೋರ್ಚುಗಾಲವು ಅಟ್ಲಾಂಟಿಕ ಒಪ್ಪಂದಕ್ಕೆ ಸೇರಿದ ರಾಷ್ಟ್ರವಾದುದರಿಂದ ಭಾರತ ಸರಕಾರವು ಪೋರ್ಚುಗಾಲಿಗೆ ಸೇರಿದ ಪ್ರದೇಶದ ಮೇಲೆ ದಾಳಿಯನ್ನು ನಡೆಸಿದರೆ, ಅಟ್ಲಾಂಟಿಕ ರಾಷ್ಟ್ರಗಳೆಲ್ಲ ಧಾವಿಸಿ ಬರುತ್ತವೆ. ಭಾರತದ ವಿರುದ್ಧ ಅಂತರರಾಷ್ಟ್ರೀಯ ಪ್ರತಿಕ್ರಿಯೆಯುಂಟಾಗುತ್ತದೆ. ಹೀಗೆ ಅನುಕೂಲ ಪರಿಸ್ಥಿತಿಯನ್ನು ಕಂಡುಕೊಂಡ ಸಾಲಝಾರರು ಗೋವೆ ಮುಂತಾದೆಡೆಯ ಭಾರತೀಯರ ಮೇಲೆ ಅತ್ಯುಗ್ರ ನಿಯಮ ನಿರ್ಬಂಧಗಳನ್ನು ಹೇರಿರುವರು. ವ್ಯಕ್ತಿಸ್ವಾತಂತ್ರ್ಯಕ್ಕೆ ಅಲ್ಲಿ ಅವಕಾಶವಿಲ್ಲ; ದಬ್ಬಾಳಿಕೆಗೆ ತುದಿ ಮೊದಲಿಲ್ಲ. ರಾಜಕೀಯ ಚಳುವಳಿ ಮತ್ತು ಚಟುವಟಿಕೆಗಳಿಗೆ ಅವಕಾಶವಿಲ್ಲ. ಕ್ಷೋಭೆ ತುಂಬಿದ ಈ ವಾತಾವರಣವನ್ನು ಅಲ್ಲಿಯ ಪ್ರಜಾಜನರು ಹೆಚ್ಚು ಸಮಯ ತಾಳ್ಮೆಯಿಂದ ಸಹಿಸುವರೆಂದಿಟ್ಟುಕೊಳ್ಳಲಾಗದು. ಭಾರತ ಸರಕಾರ ಕೂಡ ಇನ್ನು ಮುಂದೆ ಮೌನವನ್ನು ಧರಿಸುವುದೆಂಬ ಅಭಿಪ್ರಾಯವೂ ಬೇಡ. ತನ್ನ ನೈತಿಕ ವರ್ಚಸ್ಸಿನ ಬಲದಿಂದ ಭಾರತದ ಅವಿಭಾಜ್ಯ ಅಂಗವಾದ ಈ ವಸಾಹತುಗಳನ್ನು ಅದು ಇಂದಲ್ಲ ನಾಳೆ ಪಡೆದೇ ತೀರುವುದು.

ಐಕ್ಯಮತ್ಯದ ಶುಭ ಲಕ್ಷಣ

ಸರಿಯಾದ ಮಾರ್ಗದಲ್ಲಿ ಹೆಜ್ಜೆ ಇಡುತ್ತಿರುವವರಿಗೆ ವಿಜಯ ಕಟ್ಟಿಟ್ಟದ್ದು ಎಂಬುದಕ್ಕೆ ಭಾರತ-ಪಾಕ ಸಂಬಂಧ ಈಗ ಹೆಚ್ಚು ಹೆಚ್ಚು ಸೌಹಾರ್ದಯುತವಾಗಿ ಪರಿಣಮಿಸುತ್ತಿರುವುದೇ ನಿದರ್ಶನ. ಭಾರತ ಸರಕಾರವು ಸಹೋದರ ವಾತ್ಸಲ್ಯವನ್ನು ಪಾಕಿಸ್ತಾನೀ ಪ್ರಜೆಗಳ ಮೇಲೆ, ಮತ್ತು ಅಲ್ಲಿಯ ಧುರೀಣರ ಮೇಲೆ ತೋರಿಸುತ್ತಾ ಬಂದಿರುತ್ತದೆ. ಆದರೆ ಸ್ವತಃ ಪಾಕಿಸ್ತಾನೀ ಸರಕಾರದ ಧುರೀಣರು ಭಾರತದ ಸ್ನೇಹ ಹಸ್ತವನ್ನು ಸ್ವೀಕರಿಸಿ ಪರಸ್ಪರ ಮೈತ್ರಿಯನ್ನು ಸ್ಥಾಪಿಸಿಕೊಳ್ಳಲು ಸಿದ್ಧರಿರಲಿಲ್ಲ. ಭಾರತದ ವಿರುದ್ಧ ಆಕ್ರೋಶವೆಬ್ಬಿಸುವುದರಿಂದಲೇ ತಮ್ಮ ಕಲ್ಯಾಣವಾಗುವುದೆಂಬ ಅವರ ಭ್ರಮ-ನಿರಸನವಾಗಲು ಇಷ್ಟು ದೀರ್ಘ ಕಾಲ ಸಂದಿತು; ಮತ್ತು ಅಪಾರ ಕಷ್ಟನಷ್ಟಗಳಿಗೆ ಹೆಗಲು ಕೊಡಬೇಕಾಯಿತು. ಈಗಿನ ಪ್ರಧಾನಿ ಮಹಮ್ಮದಾಲಿಯವರು ರಾಜಕೀಯ ಹೊಣೆಗಾರಿಕೆಯನ್ನು ಹೊತ್ತ ಪ್ರಾರಂಭದಲ್ಲಿಯೇ ತುಂಬ ಮುತ್ಸದ್ದಿತನದಿಂದ ನಡೆದುಕೊಂಡಿರುವುದು ಶುಭಲಕ್ಷಣವಾಗಿದೆ. ಲಂಡನಿನಲ್ಲಿ ನೆಹರೂರೊಡನೆ ಅವರು ನಡೆಸಿದ ಭೇಟಿಗಳ ಪರಿಣಾಮವಾಗಿ ಉಭಯ ರಾಷ್ಟ್ರಗಳು ಐಕ್ಯಮತ್ಯದಿಂದ ಕೂಡಿ ಬಾಳುವುದು ಸಾಧ್ಯವೆಂಬ ಸಂಗತಿ ಹೆಚ್ಚು ಹೆಚ್ಚು ಸ್ಪಷ್ಟಗೊಳ್ಳುತ್ತಿದೆ. ಲಂಡನಿನಲ್ಲಿ ನೆಹರೂರವರೂ ಮಹಮ್ಮದಾಲಿಯವರೂ ಮಾಡಿದ ಸಾರ್ವಜನಿಕ ಭಾಷಣಗಳು ಮತ್ತು ಪತ್ರಿಕಾಗೋಷ್ಠಿಯಲ್ಲಿ ನೀಡಿದ ಹೇಳಿಕೆಗಳು ಮಾತುಕತೆಗಳಲ್ಲಿ ಆಶಾದಾಯಕ ಪ್ರಗತಿಯಾದುದನ್ನು ಬೆಳಕಿಗೆ ತಂದಿವೆ. ಎಲ್ಲವೂ ಪ್ರಾಸ್ತಾವಿಕ ಘಟ್ಟದಲ್ಲಿದ್ದರೂ ಸಹ, ವಿವಾದಾತ್ಮಕ ಪ್ರಸಂಗಗಳ ಪರಿಹಾರದ ಬಗ್ಗೆ ಉಭಯ ಪಕ್ಷದವರಿಗೂ ಸಮ್ಮತವಾದ ಸೂತ್ರದ ಆವಿಷ್ಕಾರವಾಗುವುದು ಸಾಧ್ಯವೆಂದು ಕಂಡುಬಂದಿದೆ. ಕಾಶ್ಮೀರ ಸಮಸ್ಯೆಯೂ ಇದಕ್ಕೆ ಅಪವಾದವಾಗಿಲ್ಲವೆಂದು ತಿಳಿಯುತ್ತದೆ. ಕಾಶ್ಮೀರದ ಮುಖ್ಯಮಂತ್ರಿ ಶೇಖ್ ಅಬ್ದುಲ್ಲಾರು ಮುಸ್ಲಿಮರ ಪ್ರಚಂಡ ಸಭೆಯಲ್ಲಿ ಮೊನ್ನೆ ರಮಜಾನ ಹಬ್ಬದ ಸಂದರ್ಭ ಮಾತನಾಡುವಾಗ ಭಾರತ-ಪಾಕ ಪ್ರಧಾನಿಗಳ ಮಾತುಕತೆಗಳಿಂದ ಕಾಶ್ಮೀರ ಸಮಸ್ಯೆ ಯಥೋಚಿತವಾಗಿ ಪರಿಹರಿಸಲ್ಪಡಬಹುದೆಂದು ಸೂಚಿಸಿದರು. ಮೌಲಾನಾ ಆಝಾದರು ನಿನ್ನೆಮೊನ್ನೆ ಶ್ರೀನಗರಕ್ಕೆ ಖಾಸಗಿ ಭೇಟಿಕೊಟ್ಟಾಗ, ಕಾಶ್ಮೀರ ಸಮಸ್ಯೆಯ ಕುರಿತು ಭಾರತ ಕಾಶ್ಮೀರಗಳ ಸರಕಾರೀ ನಿಲುವೆಯಲ್ಲಿ ಪ್ರಗತಿಯಾಗಿರಬಹುದೆಂದೂ ಊಹೆ.

ಪರಿವರ್ತಿತ ಧೋರಣೆ

ಮೊನ್ನೆ ಮೊನ್ನೆಯವರೆಗೆ ಭಾರತ ಸರಕಾರವು ಪಾಕಿಸ್ತಾನದೊಡನೆ ಇಟ್ಟುಕೊಂಡ ಧೋರಣೆಯು ಬಹು ವಿಪರೀತವೆಂದು ಹೇಳಿದ ಜನರು ಸಹ ಈಗ ತಮ್ಮ ಮನಸ್ಸು ಬದಲಾಯಿಸಿ ನೆಹರೂರ ಬೆಂಬಲಕ್ಕೆ ನಿಂತಿರುವರೆಂಬುದೆ ಆಶ್ಚರ್ಯವೇಸ್ಸೆ. ಹಿಂದೂ ಮಹಾ ಸಭೆಯ ಡಾ ಎನ್. ಬಿ. ಖರೆ ಇಂಥ [illegible] ಜನ ಸಂಘ, ಹಿಂದೂ ಮಹಾಸಭೆ ರಾಮರಾಜ್ಯ ಪರಿಷತ್ತು ಮುಂತಾದ [illegible] ಜಾತೀಯವಾದಿ ಸಂಸ್ಥೆಗಳು ಜಮ್ಮುವಿನ ಪ್ರಜಾ ಪರಿಷತ್ತು ಹೂಡಿದ ಚಳುವಳಿಗೆ ಬೆಂಬಲ ಕೊಡುತ್ತಿದ್ದುವಷ್ಟೆ! ಈ ಚಳುವಳಿಯನ್ನು ಈಚೆಗೆ ಕಾಶ್ಮೀರ ಸಮಸ್ಯೆಯ ಮಟ್ಟಿಗೆ ಕಂಡುಬಂದ ಪ್ರಗತಿಯನ್ನನುಲಕ್ಷಿಸಿ ನಿಲ್ಲಿಸಿಬಿಡಬೇಕೆಂದು ಡಾ| ಪಿ. ಆರ್. ಪರಂಜಪೆ ಮುಂತಾದ ಮಹಾರಾಷ್ಟ್ರದ ಧುರೀಣರು ಹೇಳಿಕೆ ಹೊರಡಿಸಿದ್ದರು. ಪ್ರಜಾಪರಿಷತ್ತಿನ ಚಳುವಳಿಯು ತನ್ನ ಉದ್ದೇಶಸಾಧನೆಯಲ್ಲಿ ಸಾಕಷ್ಟು ಸಫಲತೆ ಪಡೆದಿದೆಯೆಂದೂ ಭಾರತ ಪಾಕ ಪ್ರಧಾನಿಗಳು ಸಧ್ಯ ಮಾತುಕತೆಯಲ್ಲಿ ತೊಡಗಿರುವುದರಿಂದ ಸರಕಾರದ ವಿರುದ್ಧ ಹೋಗದೆ ಅದರ ನಿಲುವೆಯ ಮೇಲೆ ಪ್ರಭಾವ ಬೀ[illegible] ಮಹಾರಾಷ್ಟ್ರದ ಧುರೀಣರಭಿಪ್ರಾಯ. ಡಾ. ಖರೆಯವರು ಇದನ್ನು ಬಿಚ್ಚು ಮನಸ್ಸಿನಿಂದ ಪುರಸ್ಕರಿಸಿರುವರು. ರಾಷ್ಟ್ರ ಪ್ರೇಮವನ್ನು ತೋರಿಸುವ ರೀತಿಯೇ ಜಮ್ಮು ಚಳುವಳಿಯನ್ನು ನಿಲ್ಲಿಸುವುದಾಗಿದೆ ಎಂದವರು ಹೇಳಿರುವರು. ಇವುಗಳ ಮೇಲಿಂದ ನೆಹರೂರವರು ಶಾಂತವಾದ ಆದರೂ ಸಂಕರ್ಷಕವಾದ ಧೋರಣೆಯನ್ನು ಅನು-

UDIPI MUNICIPALITY

TENDER NOTICE

Sealed tenders will be received by the Commissioner, Udipi Municipality, up to 4 P M o 29 -6-1953 for the following works -

Name of work	Estimate	Earned money deposit
1 Providing surface dressing with precoated chips ½" thick along Kadbettu Road	Rs 6550/-	Rs 165/-
2 Providing surface dressing with precoated chips ½" thick along Kadekoppal Road	Rs. 2550/-	Rs 65/-

Tenders must be submitted in sealed covers separately for each work and the tenders will be opened at 4-30 P. M on the same day

Particulars of tender, schedule of quantities and detailed specifications etc can be obtained on payment of Rs 2 - per each set

Any other information required may be obtained from the Municipal Office during Office hours on working days.

Municipal Office, Udipi
Dated 9-6-1953.

K Gopala Menon,
Commissioner,
Udipi Municipality, Udipi

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.
"Popular Buildings", MANGALORE—1.

Estd: 1906
THE CANARA BANKING CORPORATION LTD.
H. O.: UDIPI, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ

ಉಡುಪಿ, ಗುರುವಾರ ೧೮-೬-'೫೩

ಸಂದೇಹ ಸರಿಯೆ?

ಈಚೆಗೆ ಕೊರಿಯದಲ್ಲೂ ಇನ್ನಿತರ ಕಡೆಗಳಲ್ಲೂ ನಡೆಯುತ್ತಿರುವ ಪ್ರಗತಿಯನ್ನು ಗಮನಿಸಿದರೆ, ಸ್ಟಾಲಿನ್ನರ ನಿಧನದ ಬಳಿಕ ರಶಿಯಾದ, ಆವನಾತಿಗೆ, ಕಮ್ಯೂನಿಸ್ಟರ ಪ್ರವೃತ್ತಿಯಲ್ಲಿ ಗಣ್ಯ ಪರಿವರ್ತನೆಯು ಸ್ಪಷ್ಟವಾಗಿ ಕಂಡುಬರುತ್ತದೆ. ಕಮ್ಯೂನಿಸ್ಟರು ಈಗ ನಡೆಸಿರುವ ಶಾಂತಿಯ ಸತ್ರವನ್ನು ವಿಮರ್ಶಿಸುವಾಗ ಕಮ್ಯೂನಿಸ್ಟ ಒಣಕ್ಕೆ ನಿಜವಾಗಿ ಶಾಂತಿ ಬೇಕಾಗಿದೆ ಎಂದು ವ್ಯಕ್ತವಾಗುತ್ತದೆ. ಇದು ಶಾಶ್ವತವಾದ ಇಚ್ಛೆಯೋ ಕೇವಲ ತಾತ್ಕಾಲಿಕ ಸ್ವರೂಪದ್ದೋ ಎಂಬ ಬಗ್ಗೆ ಮಾತ್ರ ಇಂದು ಮತಭೇದವು ಕಂಡುಬರುತ್ತದೆ. ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು, ಭಾರತದ ಪ್ರಧಾನಿ ನೆಹರೂ ಮುಂತಾದವರು ಕಮ್ಯೂನಿಸ್ಟರ ಮನದೊಲವು ತಿರುಗಿದ ಈ ಸಂದರ್ಭದ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಯುರೋಪು ಮತ್ತು ಏಶಿಯಾದ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ನಡುವೆ ತಿಕ್ಕಾಟವನ್ನು ಕಡಿಮೆ ಮಾಡುವುದಕ್ಕೆ ಇದುವೇ ಪ್ರಶಸ್ತಕಾಲವೆಂಬ ಅಭಿಪ್ರಾಯವು ರೂಪುಗೊಳ್ಳುತ್ತಿದೆ. ಬೆರ್ಮುಡಾದಲ್ಲಿ ಸದ್ಯದಲ್ಲಿಯೇ ಸೇರಲಿರುವ ತ್ರಿರಾಷ್ಟ್ರ ಪರಿಷತ್ತಿನಲ್ಲಿ ರಶಿಯಾ ಮತ್ತು ಕಮ್ಯೂನಿಸ್ಟ ಬಣದ ಇತರ ರಾಷ್ಟ್ರಗಳೊಂದಿಗೆ ಸೌಮನಸ್ಯದ ಸಂಬಂಧವನ್ನು ಪ್ರಸ್ಥಾಪಿಸಿಕೊಳ್ಳುವ ಬಗ್ಗೆ ಪ್ರಯತ್ನಗಳು ನಡೆಯಲಾರದೀತೆಂಬ ಹಂಬಲವನ್ನು ರಾಷ್ಟ್ರಕೂಟದ ಪ್ರಧಾನಿಗಳ ಪರಿಷತ್ತು ತೋರಿಸಿರುವುದು. ಆದರೆ ಈ ಎಲ್ಲ ವಿಷಯಗಳಲ್ಲಿ ಅಮೇರಿಕದ ನಿಲುವೆಯು ಹಿಂಜರಿಯುವಂತಿದೆ. ಇದು ಘರ್ಷಣೆಯನ್ನು ಕಡಿಮೆಮಾಡಿ ಜಾಗತಿಕ ಸಮಸ್ಯೆಗಳಿಗೊಂದು ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನಕ್ಕೆ ಎಷ್ಟರಮಟ್ಟಿಗೆ ಪೋಷಕವಾಗಿರುತ್ತದೆಂದು ಹೇಳಲು ಬಾರದು. ಮೇಲಿಂದ ನೋಡುವಾಗ ಅಮೇರಿಕವು ಹಿಂಜರಿಯುವುದೇಕೆ ಎಂಬುದೇ ಅರ್ಥವಾಗಲೊಲ್ಲದು. ಚೀನಾದಂಥ ಪ್ರಬಲ ರಾಷ್ಟ್ರವನ್ನು ಅಮೇರಿಕ ಸರಕಾರವು ಅದು ಕಮ್ಯೂನಿಸ್ಟರು ಕಟ್ಟಿದ ಸರಕಾರವೆಂಬುದಕ್ಕಾಗಿ ಮನ್ನಿಸದೆ ಇರುವುದು ಸರಿಯೆ? ನೆಹರೂರವರು ಹತ್ತು ಹಲವು ಬಾರಿ ಚೀನಾದ ಪ್ರಜಾರಾಜ್ಯಕ್ಕೆ ಜಗತ್ತಿನಲ್ಲಿ ಯೋಗ್ಯ ಸ್ಥಾನಮಾನ ದೊರೆಯಬೇಕೆಂದೂ ಅದರ ಕಂಠಸ್ವರಕ್ಕೆ ಎಲ್ಲರೂ ಕಿವಿಗೊಡುವ ಪರಿಸ್ಥಿತಿಯುಂಟಾಗಬೇಕೆಂದೂ ಹೇಳಿಕೆ ಕೊಟ್ಟಿರುವರು. ಏಶಿಯಾದ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನದಲ್ಲಿ ಇಡೀ ಭೂಖಂಡದ ಐದರಲ್ಲಿ ಒಂದುಪಾಲು ಜನಸಂಖ್ಯೆ ಪಡೆದ ಚೀನಾದ ಮಾತಿಗೆ ಅವಕಾಶವಿಲ್ಲವೇವಾದರೆ, ಮಾನವ ಕೋಟಿಗೆ ಅಂಥ ಪ್ರಯತ್ನದಿಂದ ಏನು ಪ್ರಯೋಜನ ದೊರೆತೀತೆಂತೂ ಹೇಳಲು ಬಾರದು. ಅಮೇರಿಕವು ತಾತ್ವಿಕವಾಗಿ ಕಮ್ಯೂನಿಸ್ಟರನ್ನು ದ್ವೇಷಿಸುವುದೆಂದಿಟ್ಟುಕೊಳ್ಳೋಣವೆ? ರಶಿಯಾದ ಕಮ್ಯೂನಿಸ್ಟ ಸರಕಾರವನ್ನು ಅದು ಮನ್ನಿಸಿದೆ; ಮತ್ತು ರಾಷ್ಟ್ರ ಸಂಘದ ಮಹಾರಾಷ್ಟ್ರಗಳಲ್ಲಿ ಒಂದಾಗಿ ರಶಿಯಾ ಮೆರೆಯುತ್ತಿದೆ. ಚೀನಾಕ್ಕೂ ಇಂಥದೇ ಸ್ಥಾನ ದೊರೆಯಬೇಕಾದದ್ದು ನ್ಯಾಯ. ಅಲ್ಲದೆ ಒಂದು ಸರಕಾರವನ್ನು ಮನ್ನಿಸುವುದೆಂದರೆ ಆ ಸರಕಾರದ ಧೋರಣೆಗೆ ಒಪ್ಪಿಗೆ ಕೊಡುವುದು ಎಂಬ ಅರ್ಥ ಸರ್ವಥಾ ಬರುವುದಿಲ್ಲ. ಹೀಗಿರುವುದರಿಂದ ಚೀನಾದ ನೂತನ ಸರಕಾರವನ್ನು ಮನ್ನಿಸುವ ಮತ್ತು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅದಕ್ಕೆ ಸ್ಥಾನ ಕಲ್ಪಿಸಿಕೊಡುವ ನಿರ್ಣಯವನ್ನು ಅಮೇರಿಕಾ ಮಾಡಿದರೆ, ಅದರಿಂದ ಅದರ ಆಂತರಿಕ ಧೋರಣೆಗೆ ಏನೇನೂ ಬಾಧೆ ಬರುವುದಿಲ್ಲ. ಐಸೆನ ಹೋವರರು ಕೊರಿಯಾದಲ್ಲಿ ತೋರಿದ ಮುತ್ಸದ್ದಿತನವನ್ನು ಚೀನಾಕ್ಕೆ ಪ್ರಾತಿನಿಧ್ಯ ಕೊಡುವುದೇ ಮುಂತಾದ ಸಂಗತಿಗಳಲ್ಲಿಯೂ ತೋರಿಸಬೇಕಾದುದು ಅಗತ್ಯ. ಕೊರಿಯಾದಲ್ಲಿ ಯುದ್ಧ ನಿಂತ ಬಳಿಕ ಸೇರುವ ರಾಜಕೀಯ ಪರಿಷತ್ತಿನ ಸ್ವರೂಪ ಹೇಗಿದೆ ಎಂಬುದು ಇನ್ನೂ ತಿಳಿದು ಬರದಿದ್ದರೂ, ಅದರಲ್ಲಿ ನಿಶ್ಚಯವಾಗಿಯೂ ಚೀನಾಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ಕೊಡುವ ಪ್ರಶ್ನೆ ಬಂದೇ ಬರುತ್ತದೆ. ಅಮೇರಿಕಾ ಇದನ್ನು ತಿರಸ್ಕರಿಸುವುದೆಂದು ಹೇಳಲಾಗುತ್ತಿದ್ದರೂ ಈ ನಿರ್ಣಯವನ್ನು ಪುನರ್ವಿಮರ್ಶಿಸಿ ಲೋಕದ ಗತಿ ವಿಧಿಯೊಡನೆ ಹೊಂದಿಕೊಂಡು ಹೋಗುವ ಅವಕಾಶ ಇನ್ನೂ ಇದೆ. ರಾಷ್ಟ್ರಸಂಘದಲ್ಲಿ ಅಮೇರಿಕದ ಪ್ರತಿನಿಧಿಗಳಾಗಿರುವ ಲಾಜರು ಈ ಪ್ರಶ್ನೆ ಎತ್ತಲ್ಪಟ್ಟರೆ, ಅಮೇರಿಕಾವು ಪ್ರತಿಷೇಧಾಧಿಕಾರವನ್ನು ಪ್ರಯೋಗಿಸಿಯಾದರೂ, ಕಮ್ಯೂನಿಸ್ಟ ಚೀನಾವನ್ನು ರಾಷ್ಟ್ರಸಂಘದಿಂದ ಹೊರಗೇ ಇಡುವುದು ಎಂದಿರುವರು. ಇಂಥ ಧಾರ್ಷ್ಟ್ಯವನ್ನು ಅಮೇರಿಕ ತೋರಿಸಕೂಡದೆಂದು ಸವಿನಯಪೂರ್ವಕ ವಿನಂತಿಸಿಕೊಳ್ಳುತ್ತೇವೆ. ಕಮ್ಯೂನಿಸ್ಟ ಬಣಗಳೊಡನೆ ಸ್ನೇಹದಿಂದಿರುವ ಮೂಲಕ, ನಿಧಾನವಾಗಿ ಕಮ್ಯೂನಿಸ್ಟ ಪ್ರಭಾವವನ್ನು ತಗ್ಗಿಸಲು ಬರುತ್ತದೆ. ಸಾಮಾನ್ಯವಾಗಿ ಅನುಕೂಲವೆಂದು ತೋರಿಬಂದ ಸಂದರ್ಭವನ್ನು ಉದಾರ ಮನಸ್ಸಿನಿಂದ ಸದುಪಯೋಗ ಪಡಿಸಲು ನೋಡುವುದರಲ್ಲಿ ಹಿತವಿದೆ. ಬದಲು ಚೀನಾದಂಥ ಕಮ್ಯೂನಿಸ್ಟ ರಾಷ್ಟ್ರವನ್ನು ನ್ಯಾಯಸಮ್ಮತ ರೀತಿಯಲ್ಲಿ, ಲೋಕ ಮೆಚ್ಚುವ ರೀತಿಯಲ್ಲಿ, ನಡೆಸಿಕೊಳ್ಳದಿದ್ದರೆ, ಅಮೇರಿಕದ ಉದ್ದೇಶವೇ ಸಂಶಯಕ್ಕೀಡಾಗಬಹುದು. ಪರಿಣಾಮವಾಗಿ ಕಮ್ಯೂನಿಸ್ಟರಿಂದ ದೂರವಿರಬಯಸಿದ ಅಮೇರಿಕದ ಸಂಬಂಧವನ್ನೆ ನಿಧಾನವಾಗಿ ಕಡಿದುಕೊಳ್ಳಲು ಉಳಿದ ರಾಷ್ಟ್ರಗಳು ಬಯಸಬಹುದು. ಇದು ಲೋಕ ಕಲ್ಯಾಣದ ದೃಷ್ಟಿಯಿಂದ ಯಾರಿಗೂ ಶ್ರೇಯಸ್ಸು ತರುವಂಥದಲ್ಲ. ಅದ ಕಾರಣ ಐಸೆನ ಹೋವರರು ತಮ್ಮ ದೇಶದ ಜನರಲ್ಲಿ ಕಮ್ಯೂನಿಸ್ಟರ ಬಗ್ಗೆ ತೀವ್ರ ಭಾವನೆ ವೃದ್ಧಿಗೊಳ್ಳುವುದಕ್ಕೆ ಪ್ರೋತ್ಸಾಹ ಕೊಡುವುದನ್ನು ನಿಲ್ಲಿಸಿ, ಔದಾರ್ಯ ವರ್ತನೆಯನ್ನು ಇಟ್ಟುಕೊಂಡರೆ ಕ್ಷೇಮ.

ನೇಪಾಳದಲ್ಲಿ ಹೊಸ ಮಂತ್ರಿಮಂಡಳ

ಶ್ರೀ ಮಾತೃಕಾಪ್ರಸಾದ ಕೊಯಿರಾಲರಿಗೆ ಪ್ರಧಾನಿ ಪಟ್ಟ.

ಭಾರತದ ನೆರೆಯ ನೇಪಾಳದಲ್ಲಿ ಈಚೆ ಕೆಲವು ತಿಂಗಳುಗಳಿಂದ ಮಂತ್ರಿಮಂಡಳವನ್ನು ಬರಖಾಸ್ತುಮಾಡಿ ಅರಸು ತ್ರಿಭುವನರು ಸಲಹೆಗಾರ ಮಂಡಳದ ಮುಖಾಂತರ ಆಡಳಿತವನ್ನು ನಡೆಸುತ್ತಿದ್ದರಷ್ಟೆ! ಈಗತಾನೆ ತಿಳಿದುಬಂದಿರುವಂತೆ ಅರಸು ತ್ರಿಭುವನರು ಸಲಹೆಗಾರ ಮಂಡಳವನ್ನು ಮುಕ್ತಾಯಗೊಳಿಸಿ, ಶ್ರೀ ಎಂ. ಪಿ. ಕೊಯಿರಾಲಾರವರ ಧುರೀಣತ್ವದಲ್ಲಿ ಹೊಸ ಮಂತ್ರಿಮಂಡಳದ ರಚನೆಗೆ ಅವಕಾಶ ಮಾಡಿಕೊಟ್ಟಿರುವರು. ಶ್ರೀ ಎಂ ಪಿ ಕೊಯಿರಾಲಾರವರು ಈ ಮುಂಚೆಯೂ ನೇಪಾಳದ ಪ್ರಧಾನಿಗಳಾಗಿದ್ದರು. ಇವರು ಕಾಂಗ್ರೆಸಿನಲ್ಲಿ ಶ್ರದ್ಧೆಯಿದ್ದವರು, ಹಾಗೆಂದು ನೇಪಾಳೀ ಕಾಂಗ್ರೆಸಿನ ಅಧ್ಯಕ್ಷರೂ ಇವರ ತಮ್ಮಂದಿರೂ ಆದ ಶ್ರೀ ಬಿ. ಪಿ. ಕೊಯಿರಾಲಾರವರ ಕೂಡೆ ಘರ್ಷಣೆ ಸಂಭವಿಸಿದುದರಿಂದ ನೇಪಾಳದಲ್ಲಿ ಮಂತ್ರಿ ಮಂಡಳವೇ ಉರುಳಿಹೋಗುವ ಪರಿಸ್ಥಿತಿ ಬಂದೊದಗಿತು. ಶ್ರೀ ಎಂ. ಪಿ. ಕೊಯಿರಾಲಾರವರು ಈ ಸಂದಿಗ್ಧ ಸಮಯದಲ್ಲಿ ಪ್ರಧಾನಿ ಪಟ್ಟಕ್ಕೆ ರಾಜೀನಾಮೆಯನ್ನು ಕೊಟ್ಟುದರಿಂದ ಮಂತ್ರಿ ಮಂಡಳವು ವಿಸರ್ಜನೆ ಹೊಂದಿತು. ಹೊಸ ಮಂತ್ರಿ ಮಂಡಳವನ್ನು ರಚಿಸುವಷ್ಟರ ಮಟ್ಟಿನ ಸಾಮರ್ಥ್ಯ ಪಡೆದ ಬೇರೆಯಾರೊಬ್ಬರೂ ತೋರಿ ಬರಲಿಲ್ಲವಾದುದರಿಂದ ಅರಸು ತ್ರಿಭುವನರು ಸಲಹೆಗಾರ ಮಂಡಲವನ್ನು ರಚಿಸಿ, ರಾಜ್ಯಭಾರವನ್ನು ತಮ್ಮ ಕೈಯಲ್ಲಿಯೇ ನೇರಾಗಿ ತೆಗೆದುಕೊಂಡರು. ಕಾಂಗ್ರೆಸಿನಿಂದ ಹೊರಬಿದ್ದ ಶ್ರೀ ಎಂ. ಪಿ. ಕೊಯಿರಾಲಾರು ರಾಷ್ಟ್ರೀಯ ಪ್ರಜಾಪ್ರಭುತ್ವವೆಂಬ ಹೊಸ ಪಕ್ಷವನ್ನು ಸ್ಥಾಪಿಸಿಕೊಂಡರು; ಮತ್ತು ನೇಪಾಳದಲ್ಲಿ ಪ್ರಜಾಪ್ರಭುತ್ವ ಪದ್ಧತಿಗೆ ಒಗ್ಗುವ ರೀತಿ ಮಂತ್ರಿ ಮಂಡಳದ ರಚನೆಯಾಗಬೇಕೆಂದೂ ಸಲಹೆಗಾರ ಮಂಡಳದ ಆಡಳಿತವನ್ನು ಮುಕ್ತಾಯಗೊಳಿಸಬೇಕೆಂದೂ ಚಳವಳ ಹೂಡಿದರು. ಅರಸು ತ್ರಿಭುವನರು ಅಸೌಖ್ಯದಿಂದ ಬಳಲುತ್ತಿರುವುದನ್ನು ಮತ್ತು ರಾಷ್ಟ್ರೀಯ ಪ್ರಜಾಪ್ರಭುತ್ವಪಕ್ಷಕ್ಕೆ ಹೆಚ್ಚಿನ ಬೆಂಬಲ ಜನರಿಂದ ದೊರೆತಿರುವುದನ್ನು ಗಮನಿಸಿ, ಶ್ರೀ ಎಂ. ಪಿ. ಕೊಯಿರಾಲಾರಿಗೆ ನೂತನ ಮಂತ್ರಿ ಮಂಡಳ ರಚಿಸಲು ಅಧಿಕಾರ ಕೊಡಲಾಗಿದೆ. ಕೊಯಿರಾಲಾರ ಈ ಮಂತ್ರಿ ಮಂಡಳದಲ್ಲಿ ಅವರ ಪಕ್ಷದ ನಾಲ್ವರು ಮತ್ತೊಬ್ಬ ಸ್ವತಂತ್ರ ಸದಸ್ಯರಿರುವರು. ನೇಪಾಳದಲ್ಲಿ ಬೇಗನೇ ಸಾರ್ವಜನಿಕ ಚುನಾವಣೆಗಳನ್ನು ನಡೆಸುವ ಉದ್ದೇಶವು ಹೊಸ ಸರಕಾರಕ್ಕಿದೆ.

ನಿಕರದ ಕಾಳಗ

ಕೊರಿಯಾದಲ್ಲಿ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಸಂಬಂಧದಲ್ಲಿ ಕಳೆದ ವಾರ ನಡೆದ ಒಪ್ಪಂದವು ಜಗತ್ತಿನ ಮೂಲೆ ಮೂಲೆಯಿಂದಲೂ ಸ್ವಾಗತ ಪಡೆಯಿತು. ಕದನವನ್ನು ನಿಲ್ಲಿಸುವ ಬಗ್ಗೆ ಸಂಧಾನದ ಮಾತುಕತೆಗಳು ಇನ್ನೂ ಮುಂದರಿಯುತ್ತಿವೆ. ಈಗ ಉಳಿದಿರುವ ಒಂದೇ ಒಂದು ಮಹತ್ವದ ಅಂಶವೆಂದರೆ ಉಭಯಸಮ್ಮತವಾದ ಯುದ್ಧ ವಿರಾಮ ರೇಖೆಯನ್ನು ಗೊತ್ತುಹಚ್ಚುವುದು. ಈ ಗಡಿ ರೇಖೆಯ ಸಂಬಂಧದಲ್ಲಿ ಕಳೆದ ವರ್ಷ ಸಂಧಾನ ಮಾತುಕತೆಗಳು ತೊಡಗಿದಾಗ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದ್ದರು. ಆದರೆ ಈಗ ಅದರ ಅವಧಿಯು ಮುಗಿದು ಹೋಗಿದೆ. ಕಾರಣ, ಉಭಯ ಪಕ್ಷಗಳ ಸೈನ್ಯಗಳು ಈಗಿರುವ ಸ್ಥಾನಗಳ ಮೇಲಿಂದ ಹೊಸ ರೇಖೆಯನ್ನು ನಿರ್ಣಯಿಸಬೇಕಾಗಿದೆ. ಹೀಗಿರುವುದರಿಂದ ಉಭಯ ಪಕ್ಷದವರೂ, ಮುಖ್ಯತಃ ಕಮ್ಯೂನಿಸ್ಟರು, ಆದಷ್ಟು ಹೆಚ್ಚು ಪ್ರದೇಶವನ್ನು ತಕ್ಷಣ ಆಕ್ರಮಿಸಿ ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಹವಣಿಸುತ್ತಿದ್ದಾರೆ. ಕೆಲವು ತಿಂಗಳುಗಳಲ್ಲಿ ಕೈಬಿಟ್ಟು ಹೋದ ಮುಖ್ಯ ಪ್ರದೇಶಗಳ ಮೇಲೆ ಅವರು ಪುನರಾಕ್ರಮಣಮಾಡಿರುವರು ಅಪಾರ ಸೈನ್ಯಬಲವನ್ನು ಉಪಯೋಗಿಸಿ ರಾಷ್ಟ್ರ ಸಂಘದ ಪಡೆಗಳ ವಿರುದ್ಧ ಭೀಕರ ಕಾಳಗ ಕೊಡುತ್ತಿರುವರೆಂದು ವರದಿಗಳು ಹೇಳುತ್ತವೆ. ಕಳೆದವಾರ ಶಾಂತವಾಗಿ ಕಂಡುಬಂದ ರಣರಂಗ ಈಗ ಪ್ರಕ್ಷುಬ್ಧವಾಗಿರುತ್ತದೆ. ಎರಡೂ ಕಡೆಯವರಿಗೆ ಅಪಾರ ಜನ ಮತ್ತು ಸಾಮಾನುಗಳ ನಷ್ಟವುಂಟಾಗಿರುತ್ತದೆ. ಕಮ್ಯೂನಿಸ್ಟ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಪಡೆಗಳಿಗಿಂತಲೂ ದಕ್ಷಿಣ ಕೊರಿಯನ್ನರ ಕೈಯೇ ಮುಂದೆ ಎಂಬಂತಿದೆ. ಹಾಗೆಂದು, ಉತ್ತರದವರ ಸೈನ್ಯ ಬಲದ ಮುಂದೆ ರಾಷ್ಟ್ರ ಸಂಘ ಹಾಗೂ ದಕ್ಷಿಣ ಕೊರಿಯನ್ನರ ಕಾದಾಟವು ಯಶಸ್ವಿಯಾಗದೆ ಅವರು ನಿಧಾನವಾಗಿ ಹಿಮ್ಮೆಟ್ಟುವ ಪ್ರಸಂಗವುಂಟು. ರಾಷ್ಟ್ರಸಂಘದ ವಿಮಾನಗಳು ಶತ್ರು ರಾಜ್ಯದ ಮೇಲೆ ಭೀಕರ ಬಾಂಬು ದಾಳಿಯನ್ನು ನಡೆಸಿರುವ ವರದಿಯೂ ಬಂದಿರುತ್ತದೆ. ಒಟ್ಟಾರೆ ಮೇಲೆ,

ಕೊರಿಯದಲ್ಲಿ ಯುದ್ಧ ನಿಲ್ಲುವುದಕ್ಕೆ ಮುಂಚಿತವಾಗಿ, ದೀಪ ಆರುವುದಕ್ಕೆ ಮೊದಲು ಬುಗ್ಗೆಂದು ಒಮ್ಮೆ ಉರಿದು ಹೋಗುವಂತೆ, ನಿಕರದ ಕಾಳಗ ನಡೆದಿದೆ ಎಂದು ವರ್ಣಿಸಬಹುದು.

ತಟಸ್ಥ ರಾಷ್ಟ್ರಗಳ ಒಪ್ಪಿಗೆ

ಕೊರಿಯದ ಘರ್ಷಣೆಯು ನಿಂತು ಹೋಗುವುದೆಂಬ ಆಶಾದಾಯಕ ವಾತಾವರಣ ಕಂಡುಬಂದ ಗಳಿಗೆಯಲ್ಲಿ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗಮನರೀಯವರು ಜಾಗತಿಕ ಮುತ್ಸದ್ದಿಗಳಿಗೆಲ್ಲ ಹೊಸ ತಲೆಸಿಡಿತವನ್ನು ಉಂಟುಮಾಡಿದರು. ಅಧ್ಯಕ್ಷ ಐಸೆನಹಾವರರು ಸಿಂಗಮನರೀಯವರಿಗೆ ಧೈರ್ಯಕೊಟ್ಟು ಆಶ್ವಾಸನೆ ನೀಡಿದ ಬಳಿಕವೂ ಅವರಿಗೆ ಸಮಾಧಾನವುಂಟಾಗದ್ದರಿಂದ, ಸಂಯುಕ್ತ ರಾಷ್ಟ್ರಸಂಘಕ್ಕೆ ಪೇಚು ಉಂಟಾಯಿತು. ಕದನ ವಿರಾಮದ ಮಾತುಕತೆಗಳಿಗೆ ಸೈಗುಟ್ಟುವುದಕ್ಕೆ ೯೯ ಸರಕಾರ ನಿರಾಕರಿಸಿದ ಪಕ್ಷದಲ್ಲಿ- ಮತ್ತು ರಾಷ್ಟ್ರ ಸಂಘ ಕಾದಾಟವನ್ನು ನಿಲ್ಲಿಸಿದ ಬಳಿಕವೂ ದಕ್ಷಿಣ ಕೊರಿಯನ್ನರು ಉತ್ತರದ ಮೇಲೆ ದಾಳಿ ನಡೆಸಿದಲ್ಲಿ ವಿಲಕ್ಷಣ ಪರಿಸ್ಥಿತಿಯೇ ಒದಗುತ್ತದಲ್ಲವೆ? ಇದರ ಮೇಲೆ ತಟಸ್ಥ ರಾಷ್ಟ್ರಗಳ ಸಮಿತಿಯ ಅಧ್ಯಕ್ಷಸ್ಥಾನದ ಭಾರತವು ಯುದ್ಧ ಕೈದಿಗಳ ಯೋಗಕ್ಷೇಮ ಕ್ಕೋಸ್ಕರ ಕಳಿಸುವ ಸೈನ್ಯವನ್ನು ಹೊಡೆದೋಡಿಸಲಾಗುವುದೆಂದು ಸಿಂಗಮನರೀ ಸಾರಿದುದರಿಂದ ಭಾರತವೇ ಮೊದಲಾದ ತಟಸ್ಥ ರಾಷ್ಟ್ರ ಸಮಿತಿಯ ಸದಸ್ಯರಿಗೆ ವ್ಯಸನವುಂಟಾಯಿತು. ನೆಹರೂರವರು ಭಾರತವು ಕೊರಿಯಾಕ್ಕೆ ಸೈನ್ಯವನ್ನು ಕಳುಹಿಸಲು ಒಪ್ಪಿದೆ ಎಂದು ಹೇಳಿದರೂ, ದಕ್ಷಿಣ ಕೊರಿಯಾವು ಆಕ್ಷೇಪವೆತ್ತಿದ ಸಂಗತಿಯನ್ನು ಪ್ರಸ್ತಾಪಿಸಿದಾಗ ಹೀಗೆಂದರು.-"ದಕ್ಷಿಣ ಕೊರಿಯಾದ ಮೇಲೆ ಸಂಯುಕ್ತ ರಾಷ್ಟ್ರ ಸಂಘದ ನಿಯಂತ್ರಣವಿದೆ; ಆದುದರಿಂದ ರಾಷ್ಟ್ರ ಸಂಘವು ದಕ್ಷಿಣ ಕೊರಿಯಾವನ್ನು ತನ್ನ ಅಧಿಕಾರ ಒಲದಲ್ಲಿ ಇಟ್ಟುಕೊಳ್ಳುವುದೆಂಬ ಆಸೆ ಇದೆ. ಒಂದು ವೇಳೆ ರಾಷ್ಟ್ರ ಸಂಘ ಈ ಕೆಲಸದಲ್ಲಿ ಅಸಮರ್ಥವೆಂದು ಕಂಡುಬಂದರೆ, ನಾವು ಮುಂದೆ ಯೋಚಿಸಬೇಕಾಗುವುದು." ಸಂಧಿಗಾಗಿ ನೆಹರೂರಿಗೆ ಆತುರವಿದ್ದರೂ ದಕ್ಷಿಣ ಕೊರಿಯನ್ನರಿಂದ ಅಪಮಾನಿತರಾಗುವ ದುರ್ಧರ ಪ್ರಸಂಗವನ್ನು ಭಾರತ ಇಚ್ಛಿಸುವುದಿಲ್ಲ.

ಈ ತೆರನ ಸಂಶಯವನ್ನು ತಟಸ್ಥ ರಾಷ್ಟ್ರ ಸಮಿತಿಯ ಇನ್ನೊಂದು ಸದಸ್ಯ ರಾಷ್ಟ್ರವಾದ ಸ್ವಿಜರಲೆಂಡು ಕೂಡ ತೋರಿಸಿತು. ಸಂಬಂಧಿಸಿದ ಎಲ್ಲರೂ ಅರ್ಥಾತ್ ದಕ್ಷಿಣ ಕೊರಿಯ ಕೂಡ, ಒಮ್ಮತದಿಂದ ಸದಸ್ಯ ರಾಷ್ಟ್ರ ಸಮಿತಿಯ ನೇಮಕವನ್ನು ಒಪ್ಪದಿದ್ದರೆ, ಸ್ವಿಜರಲೆಂಡು ಈ ಹೊಣೆಯನ್ನು ವಹಿಸಿಕೊಳ್ಳಲಾರದೆಂದು ಅದು ಹೇಳಿತು. ಆದರೆ ಹಿಂದಿನಿಂದ ದಕ್ಷಿಣ ಕೊರಿಯಾದ ಮೇಲೆ ರಾಷ್ಟ್ರ ಸಂಘದ ವರ್ಚಸ್ಸು ಇದೆ ಎಂಬ ಕುರಿತು ಅಧಿಕೃತ ಸಾಕ್ಷ್ಯ ದೊರೆತುದರಿಂದ ಅದು ತಟಸ್ಥ ರಾಷ್ಟ್ರ ಸಮಿತಿಯಲ್ಲಿ ಸೇರಲೊಪ್ಪಿದೆ.

ಕಮ್ಯೂನಿಸ್ಟರ ಬುದ್ಧಿ

ಹೀಗೆ ಮೊದಲು ತೋರಿಬಂದ ಸಂದೇಹಗಳೂ ಸಂಶಯಗಳೂ ಸಾಮಾನ್ಯವಾಗಿ ನಿವಾರಣೆ ಹೊಂದಿದುದರಿಂದ ತಟಸ್ಥ ರಾಷ್ಟ್ರ ಸಮಿತಿಯ ಐದೂ ಸದಸ್ಯ ರಾಷ್ಟ್ರಗಳು ಈ ಹೊಣೆಗೆ ಹೆಗಲು ಕೊಡಲು ನಿರ್ಧರಿಸಿವೆ. ಭಾರತ ಸರಕಾರದ ಸೈನ್ಯ ಶಾಖೆಯು ಪ್ರಧಾನಿ ನೆಹರೂರ ಆದೇಶದಂತೆ ಕೊರಿಯಾಕ್ಕೆ ಕಳಿಸಬೇಕಾದ ಸೈನಿಕರ ಮತ್ತು ಸೈನ್ಯಾಧಿಕಾರಿಗಳ ವಿವರ ಸಿದ್ಧಗೊಳಿಸುವುದರಲ್ಲಿ ತೊಡಗಿದೆ ಎಂದು ಕೇಳುತ್ತೇವೆ. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳು ಸುಮಾರು ೫೦ ಸಾವಿರ ಇರಬಹುದೆಂದೂ ಅವರ ಸಂರಕ್ಷಣೆಗಾಗಿ ೫ ಸಾವಿರ ಭಾರತೀಯ ಸೈನಿಕರ ಬಲ ಬೇಕಾದೀತೆಂದೂ ತಿಳಿದಿದೆ. ನೆಹರೂರವರು ಭಾರತಕ್ಕೆ ಮರಳಿದ ಮೇಲೆ ಈ ವಿಷಯದಲ್ಲಿ ಕೊನೆಯ ನಿರ್ಣಯವಾಗಬೇಕು. ಸಿಂಗಮನರೀ ಸರಕಾರವನ್ನು ಕೊನೆಗಾದರೂ ಒಲಿಸಬಹುದೆಂದು ಈಚಿನ ವರದಿಗಳು ಹೇಳುತ್ತವೆ. ಕದನ ವಿರಾಮ ಒಪ್ಪಂದಕ್ಕೆ ದಕ್ಷಿಣ ಕೊರಿಯಾವು ಸಹಿ ಹಾಕುವ ಪ್ರಶ್ನೆಯೇ ಇರುವುದಿಲ್ಲವಾದುದರಿಂದ, ದಕ್ಷಿಣ ಕೊರಿಯದ ಆಕ್ಷೇಪಕ್ಕೆ ಬೆಲೆ ಬರುವುದಿಲ್ಲ. ಇನ್ನು ಭಾರತೀಯ ಸೈನ್ಯಕ್ಕೆ ದಕ್ಷಿಣ ಕೊರಿಯನ್ನರೊಡನೆ ಘರ್ಷಣೆ ನಡೆಯಿತೆ, ಯಾವುದಾದರೊಂದು ದೂರದ ಕೊರಿಯನ್ ದ್ವೀಪಕ್ಕೆ ಕೈದಿಗಳನ್ನು ವರ್ಗಾಯಿಸಿ ಅಲ್ಲಿ ಅವರನ್ನೆಲ್ಲ ಭಾರತಕ್ಕೆ ಒಪ್ಪಿಸಬಹುದೆಂದೂ ತಿಳಿದಿದೆ. ಹೀಗೆ ಕೊರಿಯಾದ ಬಿಕ್ಕಟ್ಟನ್ನು ಬಗೆಹರಿಸಲು ಕಮ್ಯೂನಿಸ್ಟರು ಅನುಕೂಲ ವಾತಾವರಣವನ್ನು ಕಲ್ಪಿಸುತ್ತಿದ್ದಂತೆ ಯುರೋಪಿನ ಬಗ್ಗೆಂಟುಗಳೂ ಬಿಡಿಸಲ್ಪಡುವುದಕ್ಕೆ ಯೋಗ್ಯ ಕ್ರಮ ಕೈಗೊಳ್ಳುತ್ತಿರುವರು. ಉದಾಹರಣೆಗೆ ಪೂರ್ವ ಜರ್ಮನಿಯಲ್ಲಿ ಕಮ್ಯೂನಿಸ್ಟ ವಿರೋಧಿಗಳನ್ನು ನಿರೋಧಿಸಲು ಕಠಿಣ ಕೊಂಡ ಉಗ್ರೋಪಾಯಗಳನ್ನು ಅಲ್ಲಿಯ ಸರಕಾರ ಹಿಂದೆಗೆದುಕೊಂಡಿದೆ. ಸಾಮೂಹಿಕ ಕೃಷಿಯ ಕುರಿತು ರೈತರ ಮೇಲೆ ಒತ್ತಾಯ, ವ್ಯಾಪಾರೀ ವರ್ಗದ ಮೇಲೆ ನಿರ್ಬಂಧಗಳು, ಕಮ್ಯೂನಿಸ್ಟರಲ್ಲದ ಶಿಕ್ಷಕ ವರ್ಗದ ಮೇಲಿನ ದಬ್ಬಾಳಿಕೆ, ಪೂರ್ವ ಮತ್ತು ಪಶ್ಚಿಮ ಜರ್ಮನಿಯ ನಡುವೆ ಹೋಗಿ ಬರುವವರ ಮೇಲಿನ ಧಳನೆ ನಿಯಂತ್ರಣದವುಗಳು ಈಗ ತೆಗೆಯಲಾಗಿವೆ. ರಾಜಕೀಯ ಕೈದಿಗಳ ಬಿಡುಗಡೆಯೂ ಬೇಗನೇ ಆಗಲಿದೆ. ಇವೆಲ್ಲ ಕ್ರಮಗಳನ್ನು ನೋಡಿದಲ್ಲಿ ಜರ್ಮನಿಯ ಪುನರೇಕೀಕರಣಕ್ಕೆ ಇವು ಪೋಷಕವಾಗಿರುವುದು ವ್ಯಕ್ತವಾಗುತ್ತದೆ. ಪರಿಣಾಮವಾಗಿ ಕಮ್ಯೂನಿಸ್ಟ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ನಡುವಿನ ಸಮಸ್ಯೆಗಳೆಲ್ಲ ಬೇಗನೇ ಪರಿಹಾರ ಹೊಂದಬಹುದೆಂದು ಎಲ್ಲರೂ ಆಶಿಸುತ್ತಿರುವರು.

ಉಡುಪಿ

ಚಿನ್ನದ ಮೆಡಲ್ ಪಾರಿತೋಷ— ಉಡುಪಿಯ ಕೆ. ಮಣಿ ಮತ್ತು ತೆಂಗಿನ ಲೂಯಿಸ್-ಇವರು ಈ ಬಾರಿ ಸಾಗರದ ಯುನಿವರ್ಸಿಟಿಯ ಎಮ್. ಎ. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಅತ್ಯಧಿಕ ಮಾರ್ಕನ್ನು ಪಡೆದು ಹರಿಹರ ಹಿಂಗ್ಲಿ ಮೆಮೋರಿಯಲ್ ಚಿನ್ನದ ಮೆಡಲ್ ಪಾರಿತೋಷವನ್ನು ಪಡೆದಿರುವರು.

ಮುನಿಸಿಪಲ್ ಕೌನ್ಸಿಲಿನ ಸಭೆಯು ತಾ 13 ರಲ್ಲಿ ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಪ್ರಶ್ನೋತ್ತರಗಳಾದವು. ಮುನಿಸಿಪಲ್ ಕ್ಷೇತ್ರದಲ್ಲಿಯ ಹೈಸ್ಕೂಲುಗಳಲ್ಲಿ ಕಲಿಯುವ ಬಡ ವಿದ್ಯಾರ್ಥಿಗೆ ವರ್ಷಂಪ್ರತಿಯೂ ಕೊಡುವ ಪಾರಿತೋಷವನ್ನು ಕೊಡಲು ಅರ್ಹತೆಯನ್ನು ಸೂಚಿಸುವರೇ ಸ್ಥಳೀಯ ಹೈಸ್ಕೂಲುಗಳ ಹೆಡ್ಮಾಸ್ತರರ ಕಮಿಟಿ ರಚನೆಯಾಯಿತು. ಉಡುಪಿ ಪೇಟೆಯಲ್ಲಿ ಕೊಡಲಾಗುವ ರೇಶನ್ ಮಿತಿಯನ್ನು 12 ಔನ್ಸಿಗೇರಿಸ ಬೇಕೆಂದು ಅಕ್ಕಿ ಬೆಲೆ ಇಳಿದುದನ್ನು ಕಡಿಮೆ ಮಾಡಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ವಿನಂತಿಸಬೇಕೆನ್ನುವ ಶ್ರೀ ಕೆ. ದೇವೇಂದ್ರ ಶೆಣ್ಯಯವರ ನಿರ್ಣಯಗಳು ಬಹುಮತದಿಂದ ಪಾಸಾದವು.

ಯೂನಿಯನ್ ಸ್ಕ್ವಾಟ್ ಸ್ಕೂಲ್ ಯೋಜನೆ— ಇದೇ ತಾ. 14 ರಲ್ಲಿ ಉಡುಪಿಯ ಕೆಲವು ಕರುಣಾ ವೆಂಡರ್ ಹಾಲಿನ ಶಾಲೆಯಲ್ಲಿ ಶ್ರೀ ಎಮ್. ಪಾಂಡುರಂಗ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ ಯೂನಿಯನ್ ಸ್ಕ್ವಾಟ್ ಸ್ಕೂಲ್ ಎಂಬ ಹೆಸರಿನಿಂದ ರಾತ್ರಿಶಾಲೆಯೊಂದನ್ನು ಜುಲಾಯಿ ತಿಂಗಳಿಂದ ಪ್ರಾರಂಭಿಸಲು ನಿಶ್ಚಯಿಸಿರುವರು. 1951 ರ ಮದ್ರಾಸು ಇ. ಎಸ್. ಎಲ್. ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಈ ಶಾಲೆಯಲ್ಲಿ ತರಬೇತು ಮಾಡಲಾಗುವುದು. ಅಪೇಕ್ಷಿತ ವಿದ್ಯಾರ್ಥಿಗಳು ಜುಲಾಯಿ ತಾ 2 ರೊಳಗಾಗಿ ಈ ಶಾಲಾ ಸಮಿತಿ ಅಧ್ಯಕ್ಷ ಶ್ರೀ ಬಿ. ಸಚ್ಚಿದಾನಂದ ರಾವ ಶ್ರೀ ಕೃಷ್ಣಾ ವಾಚ್‌ವರ್ಕ್ಸ್, ಉಡುಪಿ, ಇವರಿಗೆ ಬರಕೊಳ್ಳಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ತಿದ್ದುಪಡಿ— ಇದೇ ತಾ 11 ರ ನವಯುಗ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ ಎಡ್ವಕೇಟ್ ಬಿ ಬಿ ಶೆಟ್ರ ಡಿಸ್ಟ್ರಿಕ್ಟ ಕಮಿಶನರ್ ಹಿಂದೂ ರಿಲೀಜಿಯಸ್ ಮತ್ತು ಚಾರಿಟೆಬಲ್ ಎಂಡೋಮೆಂಟ್ಸ್ ಕೋರ್ಟು ಇವರಲ್ಲಿ ನೋಟೀಸಿನ ಸರಿಯಾದ ನಂಬ್ರ O. A. No. 42/1953 ಆಗಿರುತ್ತದೆ.

ಸಂ. ನ.

ವಿವಾಹ ಸಮಾರಂಭಗಳು— ಶ್ರೀ ಸಾಮಾನಾದಿ ಗುತ್ತುರಾಮಯ್ಯ ಸೆಟ್ಟರ ಪುತ್ರ ಶ್ರೀ ಎಸ್. ಶಿವಾಜಿ ಸೆಟ್ಟಿಯವರ ಕೊಯಮತ್ತೂರು ರೇಡಿಯೋ ಹೌಸಿನ ಶ್ರೀ ಕೆ. ಕೆ. ಸೆಟ್ಟರ ಪುತ್ರಿ ಕುಮಾರಿ ವಿನೋದಿನಿಯನ್ನು ಇದೇ ತಾ 12ರಲ್ಲಿ ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿಯೂ, ಬೆದ್ರಮಾರ್ ಶ್ರೀ ತಿಮ್ಮಪ್ಪ ರೈಗಳ ಪುತ್ರ ಡಾ. ವಿಠಲ ರೈಗಳು ಕರಿಯಂಗಳ ಗುತ್ತು ಶ್ರೀ ಕಾಂತಪ್ಪ ಮಾರ್ಲರ ಪುತ್ರಿ ಬಿ. ಪುಷ್ಪವತಿಯನ್ನು ಇದೇ ತಾ. 12ರಲ್ಲಿ ಮಂಗಳೂರು ರಥಬೀದಿ ಬಳಿಯ ಶ್ರೀ ಕೆ ಎಸ್. ಪಾಲಂಬಲಯ್ಯನವರ ಪುತ್ರ ಶ್ರೀ ಕೆ. ಎಸ್. ಶ್ರೀನಿವಾಸ ಮೂರ್ತಿಯವರು ಶ್ರೀ ಅಂಬಲಪಾಡಿ ರಾಮದಾಸ ಬಲ್ಲಾಳರ ಪುತ್ರಿ ಸರೋಜಾವತಿಯನ್ನು ಇದೇ ತಾ 12ರಲ್ಲಿ ಪಥಾವಿನ ಅಂಬಲಪಾಡಿ ಗೃಹದಲ್ಲೂ ವಿವಾಹವಾದರು.

WANTED

For the National High School Barkur (S. K.) 2 Graduate Assistants—Science & Social Studies—Mathematics Graduates too may apply. Pay L. T. or B. T Rs 85/-—5—145/- Graduates Rs. 65/- per month. Dearness allowance at Govt rates.

Appointment for one year for the present.

Apply before 22—6—1953 to
MANAGER & CORRESPONDENT,
NATIONAL HIGH SCHOOL,
Barkur (S. K.)

Copy to be submitted to District Educational Officer, Mangalore (S. K.).

ನಿಮಗೆ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ: 1—0—0
ಉತ್ತಮ ಪ್ರತಿ ರೂ. 2—0—0
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಡೆಯುವ ಚಿತ್ರ
ವರಲಕ್ಷ್ಮಿ, ಅಂಜಲಿದೇವಿ, ನಟಿಸಿದ
ನಿರಪರಾಧಿ.
ಶ್ರೀ ರಾಮ ಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.
ಮುಂದಿನ ಬದಲಾವಣೆ
ಸರ್ವಾಧಿಕಾರಿ.

No Finer
RUBBER STAMP
LINE-HALFTONE BLOCK
made anywhere than!
CROWN
RUBBER STAMP CO
PHONE 205

(೫ನೇ ಪುಟದಿಂದ)

ಸರಿಸುತ್ತಿರುವುದರಿಂದ ಔಚಿತ್ಯ ಸ್ಪಷ್ಟಗೊಳ್ಳುತ್ತದೆ. ಭಾರತದಲ್ಲಿ ನೆಹರೂರಿಗೆ ಈ ರೀತಿ ಬೆಂಬಲ ಕಂಡು ಬಂದರೂ ಪಾಕಿಸ್ತಾನದಲ್ಲಿ ಮಹಮ್ಮದಾಲಿಯವರ ಕೈ ಅಷ್ಟು ಬಲಯುತವಾಗಲಿಲ್ಲವೆಂಬಂತೆ ತೋರುತ್ತದೆ. ಏಕೆಂದರೆ ಮಹಮ್ಮದಾಲಿಯವರು ರಚಿಸಿದ ಸರಕಾರದಲ್ಲಿ ವಿದೇಶಾಂಗ ಸಚಿವರಾದ ಜಾಫರುಲ್ಲಾ ಖಾನರು ಮೊನ್ನೆ ಪತ್ರಿಕಾ ಪ್ರತಿನಿಧಿಯೋರ್ವನ ಮುಂದೆ ಹೇಳಿದ ಮಾತುಗಳು ತೀರಾ ಅನುಚಿತವಾಗಿರುತ್ತದೆ. ಕಾಶ್ಮೀರ ಸಮಸ್ಯೆ ಯಾವ ಕ್ಷಣದಲ್ಲಿ ಸ್ಫೋಟಗೊಳ್ಳುವುದೋ ತಿಳಿಯದು ಎಂದು ಮುಂತಾಗಿ ಅವರು ಗಳುಹಿಸಿದುದು ಗರ್ಹಣೀಯವಾಗಿರುತ್ತದೆ. ಹಿಂದಿನ ಸರಕಾರಗಳು ಅವ್ಯಾಹತವಾಗಿ ಪ್ರೋತ್ಸಾಹಿಸಿದ ಭಾರತ ವಿರೋಧ ಪ್ರವೃತ್ತಿಯನ್ನು ಕತ್ತರಿಸಿಯುವುದಕ್ಕೆ ಮಹಮ್ಮದಾಲಿಯವರಿಗೆ ಇನ್ನು ಹೆಚ್ಚು ಧೈರ್ಯ ಸ್ಥೈರ್ಯ ಮತ್ತು ಸಮಯಾವಕಾಶ ಬೇಕಾದೀತು. ಆದರೂ ಜನತೆಯ ಸಹಕಾರ ಮಹಮ್ಮದಾಲಿಯವರಿಗೆ ಸಂಪೂರ್ಣ ದೊರೆತು ಭಾರತದೊಡನೆ ಸ್ಥಿರವಾದ ಮೈತ್ರಿ ಏರ್ಪಡಲೆಂದು ಹಾರೈಸುವುದು ಎಲ್ಲರ ಕರ್ತವ್ಯ

ನಮ್ಮ ಅರಣ್ಯ ಸಂಪತ್ತು

ರಾಜಕೀಯ ಗೊಂದಲಗಳ ನಡುವೆ ನಾವು ಇತರ ಸಂಗತಿಗಳನ್ನು ಅಲಕ್ಷಿಸುವಂತಿಲ್ಲವಷ್ಟೆ! ಮಳೆ ಮೋಡವು ನೀರು ಸುರಿಸುತ್ತಿರುವ ಈ ಪ್ರಸಂಗದಲ್ಲಿ ಉಲ್ಲೇಖನೀಯವಾದ ಒಂದೆರಡು ಸಂಗತಿಗಳಿವೆ. ಮೊದಲನೆಯದು ಮದ್ರಾಸು ಮುಂಬಾಯಿ ಹಾಗೂ ಇತರ ರಾಜ್ಯಗಳು ಜಪಾನೀ ಪದ್ಧತಿಯಂತೆ ಭತ್ತದ ವ್ಯವಸಾಯವನ್ನು ಮಾಡುವುದಕ್ಕೆ ಪ್ರೋತ್ಸಾಹ ಕೊಡುವ ವ್ಯವಸ್ಥೆಗಳನ್ನು ಏರ್ಪಡಿಸಿವೆ. ಇವುಗಳ ಉಪಯೋಗವನ್ನು ಸಂಪೂರ್ಣ ಪಡೆದುಕೊಂಡು, ರೈತರು ಲಾಭ ಗಳಿಸುವರೆಂದು ಹಾರೈಸುತ್ತೇವೆ. ಇದರಂತೆ ಕನ್ನಡದ ನೆಲಕ್ಕೆ ನೀರುಣ್ಣಿಸುವ ತುಂಗಭದ್ರಾ ಅಣೆಕಟ್ಟಿನಿಂದ ಈ ತಿಂಗಳಲ್ಲಿ ನೀರು ಬಿಡುವರೆಂದೂ ತಿಳಿದಿದೆ. ಇದರಿಂದ ಸಾವಿರಾರು ಎಕ್ರೆ ಜಮೀನು ವ್ಯವಸಾಯಕ್ಕೆ ಒಳಪಡುತ್ತದೆ. ಹಾಗೆಯೇ ವೃಕ್ಷಾರೋಪಣದ ಮಹತ್ವವನ್ನೂ ದೇಶದಲ್ಲಿ ಬಿಂಬಿಸಲು ಪ್ರಯತ್ನ ನಡೆದಿದೆ. ಡೆಹರಾಡೂನಿನಲ್ಲಿ ಸಭೆ ಸೇರಿದ ಅರಣ್ಯ ಸಂಪನ್ಮಂಡಲವು ಅನೇಕ ಉಪಯುಕ್ತ ಸೂಚನೆಗಳನ್ನು ಮಾಡಿರುತ್ತದೆ. ಭಾರತದ ಭೂಭಾಗದಲ್ಲಿ ಮೂರರಲ್ಲಿ ಒಂದು ಪಾಲಾದರೂ ಅರಣ್ಯವಿರಬೇಕೆಂದು ಅದು ಹೇಳಿದೆ. ಈಗ ಆರರಲ್ಲಿ ಒಂದಂಶವೂ ಮರಗಿಡಗಳಿಂದ ತುಂಬಿಲ್ಲ. ವರ್ಷವರ್ಷವೂ ನಷ್ಟಪ್ರಾಯವಾಗುತ್ತಿರುವ ಅರಣ್ಯಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯ; ಮತ್ತು ಹೊಸತಾಗಿ ಮರಗಿಡಗಳನ್ನು ನೆಟ್ಟು ಪೋಷಿಸುವುದೂ ಅತ್ಯಗತ್ಯ. ಈ ವರ್ಷ ಮಳೆಗಾಲಿಯು ತಡವಾಗಿ ಬೀಸಹತ್ತಿದೆ. ಉತ್ತರ ಭಾರತದ ಮರುಭೂಮಿ ವ್ಯಾಪಕಗೊಳ್ಳುತ್ತಿದೆ. ಈ ಗಂಡಾಂತರಗಳನ್ನು ತಪ್ಪಿಸಲಿಕ್ಕೆ ಎಲ್ಲೆಲ್ಲೂ ತಂಪು ನೀಡುವ ಮರಗಳನ್ನು ನೆಡುವುದೊಂದೇ ಉಪಾಯ. ಮಣ್ಣು ಕೊಚ್ಚಿ ಹರಿಯುವುದನ್ನು ತಡೆಗಟ್ಟದಿದ್ದರೆ ಭೂಸಾರವು ನಷ್ಟಹೊಂದಿ, ಬೆಳೆಯು ಕಡಿಮೆಯಾಗುತ್ತದೆ. ಆದುದರಿಂದ ಪ್ರಾಚೀನ ಭಾರತದಲ್ಲಿ ಎಲ್ಲೆಲ್ಲೂ ತುಂಬಿದ ಅರಣ್ಯಗಳನ್ನು ಪುನಃ ಸ್ವಂತ ಪರಿಶ್ರಮದಿಂದ ಸೃಷ್ಟಿಸಬೇಕು. ಇದರಂತೆ ಅರಣ್ಯಗಳಲ್ಲಿರುವ ವನ್ಯಮೃಗಗಳ ಸಂರಕ್ಷಣಾ ಕಾರ್ಯವೂ ನೆರವೇರಬೇಕು. ಬೇಟೆಯಾಡುವುದು ಮುಂತಾದುವುಗಳ ಮೇಲೆ ನಿಯಂತ್ರಣ ವಿರಬೇಕು. ಜಿಂಕೆ ಮುಂತಾದವುಗಳನ್ನು ಮನುಷ್ಯನು ಬೇಟೆಯಾಡಿಕೊಂಡರೆ, ಹುಲಿ ಚಿರತೆಗಳು ಆಹಾರವನ್ನು ಹುಡುಕುತ್ತಾ ಜನ ಜಾನುವಾರುಗಳ ಬೇಟೆಗೆ ಬರುವ ಅಂಜಿಕೆಯುಂಟು. ಇದರಂತೆ ಅಪೂರ್ವ ಮೃಗಗಳನ್ನು ಕೊಲ್ಲುವುದರಿಂದ, ಅವುಗಳ ಪೀಳಿಗೆಯೇ ನಶಿಸಿ ಹೋಗುತ್ತದೆ. ಆನೆ, ಮಂಗ ಮುಂತಾದುವುಗಳ ಮೇಲೆ ಕೈಮಾಡದ ನಮ್ಮಂಥ ಸಂಪ್ರದಾಯವಾದಿಗಳು ಇತರ ವನ್ಯಮೃಗಗಳನ್ನು ಸಹಾನುಭೂತಿಯಿಂದ ಕಾಣುವ ಕಾಲವೀಗ ಬಂದಿರುತ್ತದೆ.

ಫಲಿಮಾರು—ಇದೇ ತಾ ೮ರಂದು ಇಲ್ಲಿಯ ಬೋರ್ಡು ಹಾ। ಪ್ರಾ। ಶಾಲಾ ಅಧ್ಯಾಪಕರಾದ ಶ್ರೀ ಎಮ್. ತೋಮನವರು ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಲಿರುವುದರಿಂದ ಅವರನ್ನು ಸನ್ಮಾನಿಸುವ ಕೂಟವೊಂದು ಫಲಿಮಾರು ಕೇಂದ್ರ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಜರಗಿತು. ಶ್ರೀಗಳಾದ ಕೆ. ಮುದ್ದು ಶೆಟ್ಟಿ, ಕೆ. ರಾಮರಾವ್, ಕೆ. ವೆಂಕಟ್ರಾಯ ಪೈ ಮೊದಲಾದವರು ಮಾತನಾಡಿದರು.

ಶಿರ್ವ— ಸ್ಥಳೀಯ ಬಂಟಕಲ್ಲು ದುರ್ಗಾ ಹಾ। ಪ್ರಾ। ಶಾಲೆಯ ವಾರ್ಷಿಕೋತ್ಸವವು ಶಿರ್ವ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಮೋನಪ್ಪರು ವರದಿ ವಾಚನ ಮಾಡಿದ ನಂತರ ಮನೋರಂಜನೆ ಕಾರ್ಯಕ್ರಮಗಳಾದುವು.

The CATHOLIC BANK LTD.,

ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಉಡ್ಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರೀ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತ ಗಡುವಿಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಸದ್ರೀ ಸಾಲವನ್ನು ಒರೆಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರೀಯವರಿಗೆಯೂ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರೀಯವರು ಈಡಿಟ್ಟ ನಗಗಳನ್ನು 1953ನೇ ಇಸವಿ ಜೂನ್ ತಿಂಗಳ ತಾರೀಕು 7ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಯಾ ಇನ್ನಿತರ ದಿನಗಳಲ್ಲಿ ಪುನ ನೋಟೀಸು ಕೊಡದೇನೇ ಬ್ಯಾಂಕಿನ ಸರಾರದಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ.	ಮೊಬಲಗು.
28/347	ಲಾದ್ರು ಡಿ ಸೋಜ, ಇನಾಸ್ ಡಿ ಸೋಜರ ಮಗ, ಆರೂರು ಗ್ರಾಮ, ಬ್ರಹ್ಮಾವರ ಪೋಸ್ಟ್.	ರೂ. 40
28/467	ಶ್ರೀಮತಿ ಜ.ಆಲ್ಫ್ರೆಡ್ ಬ್ರಾಗ್ಸ್, ಮಾರ್ಸೆಲ್ ಬ್ರಾಗ್ಸರ ಹೆಂಡತಿ, ಕಲ್ಯಾಣಪುರ ಪೋಸ್ಟ್	ರೂ. 75
28/474	ಗ್ರಿಗೋರಿ ರೊಡ್ರಿಗಸ್, ಜೋನ್ ರೊಡ್ರಿಗಸರ ಮಗ, ಬೊಲ್ಜೆ, ಉದಿಯಾವರ ಪೋಸ್ಟ್	ರೂ. 180
28/511	ಕೊಗ್ಗಣ್ಣ ಕಾಮತ್, ಮಂಜುನಾಥ ಕಾಮತರ ಮಗ, ಬೊಲ್ಲಾರ ಗುಡ್ಡೆ, ಉದಿಯಾವರ ಪೋಸ್ಟ್	ರೂ. 80
28/723	ಮೊಹಮದ್ ಸಹೇಬ, ಶಾಬ. ಸಹೇಬರ ಮಗ, ಕೊಡವೂರು, ಮಲ್ಪೆ ಪೋಸ್ಟ್	ರೂ. 150
28/853	ಕೆ. ಗಿರಿರಾಯ ಪೈ, ರಾಮಚಂದ್ರ ಪೈಯವರ ಮಗ, ವ್ಯಾಪಾರಿ, ಗುಂಡಿಬೈಲು, ಉಡ್ಪಿ ಪೋಸ್ಟ್	ರೂ. 90
28/950	ಗೋಪಾಲ ಭಕ್ತ, ಸುಬ್ರಾಯ ಭಕ್ತರ ಮಗ, ವ್ಯಾಪಾರಿ, ಗುಂಡಿಬೈಲು, ಉಡ್ಪಿ ಪೋಸ್ಟ್	ರೂ. 345
28/1611	ಎಮ್. ಮೊನ್ಸ ಪೂಜಾರಿ, ಉಪಾಧ್ಯಾಯ, ಮಿಶನ್ ಹೈಸ್ಕೂಲು, ಉಡ್ಪಿ ಪೋಸ್ಟ್	ರೂ. 78

V. J. Andrade,
Agent.

ಪ್ರತಿ ಮನೆಯಲ್ಲೂ ಇರಬೇಕಾದ ಉಪಯುಕ್ತ ಪುಸ್ತಕ—
ಡಾಕ್ಟರ್ ವಿ. ಆರ್. ಕೊರಡ್ಕಲ್ಲರಿಂದ ರಚಿತವಾದ

ಮನೆ ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೇ ಸುಲಭವಾಗಿ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಅತ್ಯುಪಯೋಗಿ ವೈದ್ಯ ಪುಸ್ತಕ.

ಗರ್ಭರಕ್ಷಣೆ, ಬಾಣಂತಿತನ, ಶಿಶುಪಾಲನೆ ಮೊದಲಾದ ವಿಷಯಗಳನ್ನು ವಿವರವಾಗಿ ಕೊಡಲಾಗಿದೆ. **ಬೆಲೆ: ರೂ. 2—8—0**

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ

ಕಡಂದಲೆ— ಸ್ಥಳೀಯ ಬೋರ್ಡು ಹಾ। ಪ್ರಾ। ಶಾಲೆಯಿಂದ ಇ. ಎಸ್. ಎಲ್. ಸಿ ಪರೀಕ್ಷೆಗೆ ಕುಳಿತ 21 ಮಂದಿಯಲ್ಲಿ 19 ಮಂದಿ ಪಾಸಾಗಿರುವರು.

ಕಾಪೂರು—ಕುಂಜತ್ತಬೈಲು ಹರಿಜನ ಕಾರ್ಯ ನಿರ್ವಾಹಕ ಕಮಿಟಿಯವತಿಯಿಂದ ಇದೇ ತಾ 7ರಲ್ಲು ಆಸುಪಾಸಿನ ಗ್ರಾಮಗಳ ಹರಿಜನರ ಮಹಾ ಸಭೆಯೊಂದು ಶ್ರೀ ಗಿ. ಈಶ್ವರ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಗಂಗಪ್ಪ, ಟಿ ವಿಠಲ ಮಾಸ್ತರರು ಮಾತನಾಡಿದರು. ಹರಿಜನಾಭಿವೃದ್ಧಿಗೆ ಅನುಕೂಲವಾಗುವಂತಹ ಕೆಲವು ನಿರ್ಣಯಗಳಾದುವಲ್ಲದೆ ಅವನ್ನು ಹರಿಜನರ ಬಿನ್ನವತ್ತಳೆಯಾಗಿ ಸರಕಾರಕ್ಕೆ ಕಳುಹಿಸಬೇಕೆಂದಾಯಿತು. "ಕೊಡ್ದಬ್ಬು ಸ್ವಾಮಿ"ಯವರ ನಾಮಸಂಕೀರ್ತನೆಯಾಗಿ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕೊರಂಕ್ರಪಾಡಿ–ಬೈಲೂರು ಶಾಲಾ ಮೈದಾನಿನಲ್ಲಿ ತಾ 3ರಲ್ಲಿ ಶ್ರೀ ಟಿ ಎ. ಪೈ, ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ಆಸ್ತೂರಿ ಕಲಾಮಂಡಳಿಯ ವರ್ಧಂತಿ ಆಚರಿಸಲ್ಪಟ್ಟಿತು. ಅಧ್ಯಕ್ಷರು ಕಲಾಮಂಡಳಿಯ ಕಾರ್ಯಕ್ರಮಗಳನ್ನು ಶ್ಲಾಘಿಸಿ ಮಾತನಾಡಿದರು. ಈ ಸಂದರ್ಭದಲ್ಲಿ 'ಮುಂತ್ಸುನ ಮದ್ಮೆ' ಎಂಬ ತುಳು ನಾಟಕವು ಎಂ. ಎಸ್. ಸರೋಜ G II. ಸೋನ್ಸ್, ಮಲ್ಪೆ ಕೃಷ್ಣಪ್ಪ, ಶ್ರೀಪತಿ ಭಟ್, ಎ ಎ ಎಸ್. ಪದ್ಮ, ಡಿ. ಎಸ್. ಕೆಮ್ಮಣ್ಣು, ಶಿವರಾವ್, ಅಂಗರ ಕೋಟ್ಯಾನ್ ಮಲ್ಪೆ ಅಂದು ಸಾಹೇಬ್, ಸೋಮಪ್ಪ ಮೊದಲಾದವರಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಕೃಷ್ಣಪ್ಪ ಮತ್ತು ಸೋನ್ಸರ ಪಾತ್ರಗಳು ಜನಮೆಚ್ಚುಗೆ ಪಡೆದುವು. ಶ್ರೀ ಕೆ. ಬಾಲಕೃಷ್ಣ ಶೆಟ್ಟರ ಭಾಷಣ, ಡಿ. ಎಸ್. ಕೆಮ್ಮಣ್ಣರ ಧನ್ಯವಾದಗಳಿದ್ದುವು.

ಕಾರ್ಕಳ ತಾಲೂಕು ಪಂಚಾಯತ ಸಮ್ಮೇಲನವು— ಇದೇ ತಾ 14 ರಲ್ಲು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳ ಪಂಚಾಯತ ಬೋರ್ಡಿನ ಅಧ್ಯಕ್ಷರಾದ ಶ್ರೀ ಆರ್. ಹರಿ ಶೆಣೈಯವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಂಚಾಯತಬೋರ್ಡ ಮತ್ತು ಜನಹಿತ ಯೋಜನೆ ಇವುಗಳ ಸಹಾಯದಿಂದ ಜಿಲ್ಲೆಯ ಹಲವು ಗ್ರಾಮಾಭಿವೃದ್ಧಿಯ ಕೆಲಸವನ್ನು ಮಾಡುವುದು ಈ ಸಮ್ಮೇಳನದ ಉದ್ದೇಶವಾಗಿದೆ ಜನಹಿತ ಯೋಜನೆ ಮತ್ತು ಪಂಚಾಯತ ಬೋರ್ಡುಗಳ ಕೆಲಸವು ಒಂದೇ ಆಗಿರುತ್ತದೆ. ದೇಶದ ಎಲ್ಲಾ ಸಮಸ್ಯೆಗಳನ್ನು ಬಗೆ ಹರಿಸಲು ಹಲವು ಸಂಸ್ಥೆಗಳ ಸಹಕಾರವು ಅವಶ್ಯಕವಾಗಿವೆ. ಕೇವಲ ಕೆಲವು ಮಂದಿಗಳ ಸಹಾಯದಿಂದ ಇದನ್ನು ಬಗೆಹರಿಸಲಾಗುವುದಿಲ್ಲ. ಜನರು ಸಹಕರಿಸಬೇಕು ಎಂದು ಮುಂತಾಗಿ ಹೇಳಿದರು. ಬಳಿಕ ಶ್ರೀ ಕೆ ಸದಾನಂದ ಹೆಗ್ಡೆ, ಎಮ್. ಪಿ. ಅವರು ಮಾತನಾಡುತ್ತಾ ಪಂಚವಾರ್ಷಿಕಯೋಜನೆಯಲ್ಲಿ ಸರಕಾರವು ಕೃಷಿಗೆ ತುಂಬಾ ಪ್ರಾಶಸ್ತ್ಯವನ್ನು ಕೊಟ್ಟಿದೆ. ದ. ಕ. ಜಿಲ್ಲೆಗೆ ಈ ಯೋಜನೆಯಿಂದ ದೊರಕಿದ ವಿಷಯಗಳು ಹಲವಾರು ಇವೆ. ಸರಕಾರವು ಈ ಜಿಲ್ಲೆಗೆ ಇಷ್ಟರತನಕ 139 ಲಕ್ಷ ರೂಪಾಯಿಯನ್ನು ಖರ್ಚುಮಾಡಿ ಎದ್ದರು. ಆದರೆ ಜಿಲ್ಲೆಯ ಉತ್ಪತ್ತಿಯು ಕೇವಲ 131 ಲಕ್ಷವಾಗಿರುತ್ತದೆ ಎಂದು ಹೇಳಿದರು. ಕೊನೆಗೆ ಅವರು ಪಂಚಾಯತ ಬೋರ್ಡುಗಳು ಒರೆ.ಪ ಮಾಡದು ವರ್ಷಗಳಲ್ಲಿ ಇನ್ನೂ ಅಧಿಕ ಕೆಲಸವನ್ನು ಮಾಡಬೇಕೆಂದು ಕೇಳಿಕೊಂಡರು. ಅ ಮೇಲೆ ಹೊಸದಾದ ಇಂಡಿಯನ್ ಸೋಶಲ್ ಸರ್ವಿಸ್ ಸಸ್ಥೆಯ. ದಿ ಘಾ। ಎಲ್ ಎಲಮಟಾಂಡ್, ಇವರು ಜನಹಿತ ಯೋಜನೆಯಲ್ಲಿ ಸಾರ್ವಜನಿಕರ ಸಹಕಾರದ ಕುರಿತು ಭಾಷಣ ಮಾಡಿದರು. ಶ್ರೀ ಕೆ. ಜಿ. ಕಾಮತರು ವಂದನೆ ಸಮರ್ಪಿಸಿದರು.

ಹಿಮವಂತನ ದುರ್ಗಮ ಕೋಟೆ

(೩ನೇ ಪುಟದಿಂದ)

ಮತ್ತು ಹಿಲಾರಿಯವರು ಕೇವಲ ೧೫ ನಿಮಿಷ ಕಾಲ ಗೌರೀಶಂಕರ ಶಿಖರದಲ್ಲಿದ್ದರು. ಮೋಡ ಮತ್ತು ಮಂಜು ಕವಿದಿದ್ದುದರಿಂದ ದೂರದೃಶ್ಯವು ಅವರಿಗೆ ಚೆನ್ನಾಗಿ ಕಾಣಿಸುತ್ತಿದ್ದಿಲ್ಲ ಹೆಚ್ಚುಸಮಯ ಅವರು ಉತ್ತುಂಗ ಶಿಖರದಮೇಲೆ ನಿಲ್ಲುವಂತೆಯೂ ಇರಲಿಲ್ಲ. ಸುಮಾರು ೨೫೦೦೦ ಅಡಿ ಎತ್ತರವನ್ನು ಮುಟ್ಟಿದ ಬಳಿಕ ಮನುಷ್ಯನ ಮನಸ್ಸು ಸ್ತಿಮಿತದಲ್ಲಿ ಇರುವುದಿಲ್ಲವೆಂದು ಹಿಂದಿನವರ ಅನುಭವ. ಅದು ಶರೀರದಿಂದ ಬೇರೆಯಾದಂತೆ ತೋರುತ್ತದಂತೆ. ಶರೀರವನ್ನು ಎತ್ತಿಕೊಂಡು ಮೇಲೆ ಹೋಗುವುದು ಬಹಳ ಪ್ರಯಾಸವೆನಿಸುವುದಂತೆ. ಈ ಪರ್ವತ ಯಾತ್ರೆಯ ಮೂಲಕ ಕಷ್ಟಗಳಿಂದ ಜರ್ಜರಿತವಾದ ದೇಹವನ್ನು ಮುಸ್ಸಿನ ಹೊಯ್ದಾಟದ ನಡುವೆ ಮೇಲೆತ್ತಿಕೊಂಡು ಸಾಗುವುದೆಂತು? ಗೌರೀಶಂಕರ ಶಿಖರದ ಬುಡವನ್ನು ತಲಪುವುದಕ್ಕೋಸ್ಕರ ನೇಪಾಳದಲ್ಲಿ ೧೬೦ ಮೈಲು ದೂರ ಜಾಡ್ಯ ತುಂಬಿದ ದುರ್ಗಮ ಪ್ರದೇಶದಲ್ಲಿ ಕಾಲ್ನಡೆಯಿಂದ ಸಾಗಬೇಕು. ಕುದುರೆ ಇತ್ಯಾದಿಗಳಿಂದ ಏನೇನೂ ಪ್ರಯೋಜನವಿಲ್ಲ. ೨೦ ಮೈಲು ನಡೆದೊಡನೆಯೇ ವಾತಾವರಣವು ಅತ್ಯಂತ ಸೆಕೆಯಿಂದ ಅತ್ಯಂತ ಚಳಿಗೆ ಇಳಿಯುತ್ತದೆ. ೧೦, ೧೫, ೨೦ ಸಾವಿರ ಎತ್ತರವೇರಿದಂತೆ ನಮ್ಮ ಮನಸ್ಸಿಗೆ ಏನೇನೋ ಆಗುತ್ತದೆ. ಎಷ್ಟೋ ಸಂಗಾತಿಗಳು ಎತ್ತರವನ್ನು ಪರಲೋಕವೆ ಹಿಂದುಳಿದು ಬಿಡುವರು ೨೦ ಸಾವಿರ ಅಡಿ ಎತ್ತರವನ್ನು ಒಲ್ಲೆ ಕೆಲವು ಸಾಹಸಿಗರು ಮಾತ್ರ ಏರಿಯಾರು. ಮುಂದೆ ಕಾಣುವುದು ಅಕ್ಷಯ ಹಿಮಾವೃತವಾದ ಪ್ರದೇಶ. ಈ ಎತ್ತರದಲ್ಲಿ ಹಿಮರಾಶಿಯ ಕಾಣಿಸುವುದುಂಟು. ಆ ಬಳಿಕ ಒಂದೆರಡು ಕಾಗೆಗಳು ಕಾಣಿಸಬಹುದೋ ಏನೋ, ೨೩ ಸಾವಿರ ಅಡಿ ಎತ್ತರದಲ್ಲಿ ೧೦ ಅಡಿಯಷ್ಟು ಅಗಲ ರೆಕ್ಕೆಯುಳ್ಳ ಹದ್ದುಗಳಿರುತ್ತವೆ ಆದರೆ ಗೌರೀಶಂಕರ ಶಿಖರ ಇನ್ನೂ ಒಂದು ಮೈಲು ಎತ್ತರಬಲ್ಲದೆ! ಈ ಪರಿಸ್ಥಿತಿಯಲ್ಲಿ ಒಂದೂವರೆ ಮಣ ಭಾರ ಹೊರುವ ಶೇರ್ಪಾ ಕೂಲಿಗಳು ಇದು ಸೇರಿಗಿಂತ ಹೆಚ್ಚು ಹೊರಲು ಸಾಧ್ಯವಾಗುವುದಿಲ್ಲ ಪ್ರಾಯಿಮಸ್ ಸ್ಟೌವ್ ಮತ್ತು ಪ್ರಾಣವಾಯುವಿನ ಸಲಕರಣೆಗಳನ್ನು ಹಿಡಿದುಕೊಂಡು ಸಾಗುವುದೂ ಕಷ್ಟ. ಕಡಿದಾದ ಗಿರಿಯನ್ನು ಹತ್ತುವುದೇ ಪ್ರಯಾಸ ಕಾಲು ಜಾರಿದರೆ ಸಾವಿರಾರು ಅಡಿಗಳ ಕೆಳಗೆ ಬಿದ್ದು ನುಚ್ಚುನುರಿಯಾಗುವ ಭಯ. ಬಿರುಗಾಳಿ, ಹಿಮಪಾತಇವುಗಳು ನಿರಂತರ ಒಂದಕ್ಕೊಂದು ಸ್ಥಾನ ಕೊಡುತ್ತಿರುತ್ತವೆ. ಡೇರೆಗಳನ್ನು ಬಲವಾಗಿ ಊರದಿದ್ದರೆ ಅವು ಕ್ಷಣಕಾಲವೂ ನಿಲ್ಲಲಾರವು. ಕಾಲು ಮರಗಟ್ಟಿ ಹೋದೀತು. ನರಮಾಂಸಗಳು ಸಂಕುಚಿತಗೊಂಡು, ಅನ್ನ ಸೇರದೆ ಹೋಗಬಹುದು. ನಿದ್ದೆ ಬಾರದೆ ಇದ್ದರೂ ಆಶ್ಚರ್ಯವಿಲ್ಲ. ಮನುಷ್ಯನ ಭಾರವೂ ಅಷ್ಟು ಎತ್ತರದಲ್ಲಿ ಕಡಿಮೆಯಾಗಿ ತೋರುತ್ತದೆ. ತುಟಿ ನೀಲವಾಗುತ್ತದೆ; ಕಣ್ಣು ಚಂಚಲಗೊಂಡು ಎಗಡೆರಡು ವಸ್ತು ಗೋಚರಿಸುತ್ತವೆ ಬಿಸಿಲಿನ ಜಳಕ್ಕೆ ಕನ್ನಡಿಯಂತೆ ಹೊಳೆಯುವ ಹಿಮಪ್ರಕಾಶದಿಂದ ಕಣ್ಣು ಕಳೆದುಕೊಂಡವರೂ ಇದ್ದಾರೆ! ಕಂಠ ಬಿಗಿದುಕೊಳ್ಳುತ್ತದೆ. ಇಷ್ಟು ಮತ್ತು ಇನ್ನು ಹೆಚ್ಚು ಕಷ್ಟಪರಂಪರೆಗಳು ಕಾದಿದ್ದರೂ-ಹಿಮವಂತನ ಕರೆಯ ಮೋಹ ಮಾತ್ರ ಸಾಹಸಿ ಪರ್ವತಾರೋಹಿಯಲ್ಲಿ ಅದನ್ನು ಉತ್ಸಾಹವನ್ನು ತುಂಬುತ್ತದೆ. ಎಷ್ಟಿದ್ದರೂ ಕೈಬಿಟ್ಟಂತೆ ತೋರಿದಾಗ ಅವನಿಗೆ ಅಂತಃಸ್ಫೂರ್ತಿಯೇ ಆಧಾರ!

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣತೋರುವುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/–; ಸ್ಪೆಶಲ್ ರೂ. 5/– ಅಧಿಕಾಧಿಕ ಸ್ಪೆಶಲ್ ರೂ. ೭/–[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.D.S.(N.J.)
Tollygunge, CALCUTTA.
ಸ್ಟಾಕಿಸ್ಟರು: ಶಾಮಕಂಪೆನಿ, ಮಂಗಳೂರು.

ಮಂಗಳೂರು

ದ. ಕ. ಜಿಲ್ಲಾ ಶ್ರೀ ರಜಕ ಕುಲೋದ್ಧಾರ ಸಂಘದ— ಕಾರ್ಯ ಸಮಿತಿ ಸಭೆಯು ತಾ 7ರಲ್ಲಿ ಶ್ರೀ ಕೆ. ಬೇಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಸರಕಾರವು ಅಗಸ, ಕುಂಬಾರ, ಕ್ಷೌರಿಕ ಮತ್ತು ಬೆಸ್ತರೆಂಬ ನಾಲ್ಕು ಹಿಂದುಳಿದ ಜಾತಿಯ ಮಕ್ಕಳಿಗೆ ಹಳ್ಳಿಗಳ ಶಾಲೆಗಳಲ್ಲಿ III ಫಾರ್ಮಿನ ವರೆಗೆ ಧರ್ಮಾರ್ಥ ಶಿಕ್ಷಣ ಕೊಡಬೇಕೆಂದು ಮಾಡಿದ ನಿರ್ಣಯವನ್ನು ಸ್ವಾಗತಿಸಲಾಯಿತು. ಇದನ್ನು ಮುನಿಸಿಪಾಲಿಟಿ ಮತ್ತು ಮೇಜರ್ ಪಂಚಾಯತ್ ಪ್ರದೇಶಗಳಿಗೂ ಅನ್ವಯಿಸುವಂತೆ ಮಾಡಬೇಕೆಂದು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.

ಜನಸಂಘದ ಪ್ರಚಾರ ಸಭೆಯು– ತಾ 7ರಲ್ಲಿ ಉರ್ವ ಮಾರುಕಟ್ಟೆಯಬಳಿ ಶ್ರೀ ಎಚ್. ಭಾಸ್ಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೊರಗಪ್ಪ, ಪ್ರಭಾಕರ ಭಟ್ಟ ಮೊದಲಾದವರು ಮಾತನಾಡುತ್ತಾ, ನಾವೆಲ್ಲರೂ ಭಾರತೀಯರೆಂಬ ಸರ್ವಜನ ಭಾವನೆಯಿಂದ ದೇಶೋದ್ಧಾರ ಕಾರ್ಯವೆಸಗಬೇಕಲ್ಲದೆ, ಅಮೇರಿಕದ ಹಣವಾಗಲೀ ರಷ್ಯದ ತತ್ವವಾಗಲೀ ನಮ್ಮ ಉದ್ಧಾರ ಮಾಡಲಾರದು ಎಂದು ಮುಂತಾಗಿ ತಿಳಿಸಿದರು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮುಂಬಾಯಿ ಬ್ರಾಂಚ್:

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಮೇಲ್ಕಂಡ ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಆಧೀನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿರುವುದರಿಂದ ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸು ಕಳುಹಿಸಿರುವಲ್ಲಿ ಆ ಪೈಕಿ ಕೆಲವರು ನೋಟೀಸು ಪಡೆದು ವ, ಬಾಕಿಯವರು ನೋಟೀಸು ಪಡೆಯದೆ ಇದ್ದು ಸದರಿ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟು ಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಸುವುದೇನೆಂದರೆ— ಸದರಿ ಸಾಲಗಾರರು ಅವರಿಂದ ಈ ಮೇಲ್ಕಾಣಿಸಿದ ಬೇಂಕಿಗೆ ಸಲ್ಲಬೇಕಾದ ಅಸಲು ಬಡ್ಡಿ ವಗೈರೆ ವ, ನೋಟೀಸು ಖರ್ಚು ಸಮೇತ- ಏನೇನನ್ನು ಇದೇ 1953ನೇ ಇಸವಿ ಜುಲೈ ತಾ 4ರಲ್ಲಿ ಹಗಲು ಗಂಟೆ 2ರ ಒಳಗೆ ಪಾವತಿ ಮಾಡದಿದ್ದರೆ, ಅದೇ ದಿವಸ ಹಗಲು ಗಂಟೆ 2—35ಕ್ಕೆ ಸರಿಯಾಗಿ ಯಾ ತದನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ನಗಗಳನ್ನು ನಮ್ಮ ಬೇಂಕಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಲೋನ್ ನಂಬ್ರ ಮತ್ತು ತಾರೀಕು.	ಸಾಲಪಡೆದವರ ಹೆಸರು ಮತ್ತು ವಿಳಾಸ.	ಮೊಬಲಗು ರೂ.		
63/52 26-3 52	ಇ. ಜೆ ಡಿ'ಸೋಜ, ಎಸ್ಪ್ಲನೇಡ್ ಮೇನ್ಶನ್ ಫೋರ್ಟ್ ಬೊಂಬಾಯಿ.	90	0	0
68/52 12-4-52	ಆಲ್ಬರ್ಟ್ ಡಿ'ಸೋಜ, ಒಪೊಜಿಟ್ ಬೈಕಳ ರೈಲ್ವೆ ಸ್ಟೇಶನ್ ಮುಹಮ್ಮದ್ ಬಿನ್ ಬಿಲ್ಡಿಂಗ್ ಬೊಂಬಾಯಿ, 8.	31	0	0

(Sd) P. P. Lobo Prabhu
Manager, Bombay.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	ರೂ. 20,00,000
ತೆತ್ತ ಪಾಲು ಭಂಡವಾಳ	„ 5,77,800
ಕ್ಷೇಮ ನಿಧಿ	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಪಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾವ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಜಿಲ್ಲಾ ಬೋರ್ಡು ಸಭೆಯು— ಇದೇ ತಾ. 20ರಲ್ಲಿ ಪೂರ್ವಾಹ್ನ 10 ಗಂಟೆಗೆ ಸರಿಯಾಗಿ ಜಿಲ್ಲಾಬೋರ್ಡು ಆಫೀಸಿನಲ್ಲಿ ಜರಗುವುದು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು— ತಾ 7ರಲ್ಲಿ ಜರಗಿ ಈ ಕೆಳಗಿನ ನಿರ್ಣಯವನ್ನು ಸ್ವೀಕರಿಸಿತು. "ಅಕ್ಕಿಯ ಬೆಲೆಯು ವಿಪರೀತ ಏರಿದುದರಿಂದ ಜನಸಾಮಾನ್ಯರಿಗುಂಟಾದ ಸಂಕಷ್ಟಕ್ಕಾಗಿ ಈ ಜಿಲ್ಲಾ ಕಾಂಗ್ರೆಸ್ ಕಮಿಟಿಯು ತೀವ್ರ ಸಂತಾಪ ಪಡುತ್ತದೆ. ಮಾತ್ರವಲ್ಲದೆ ಕೂಡಲೇ ಕಡಿಮೆ ಬೆಲೆಯ ಅಂಗಡಿಗಳನ್ನು ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಅಧಿಕವಾಗಿ ತೆರೆಯುವಂತೆಯೂ ಹಾಗೆ ಕಾರ್ಡು ಮೂಲಕ ಅಕ್ಕಿ ಪಡೆಯುವವರಿಗೆ ಕೊಡುವ ಅಕ್ಕಿ ಪ್ರಮಾಣವನ್ನು ಕನಿಷ್ಠಪಕ್ಷ ದಿನಕ್ಕೆ 8 ಔನ್ಸಿಗಾದರೂ ಏರಿಸಬೇಕಾಗಿಯೂ ಮದ್ರಾಸು ಸರಕಾರವನ್ನು ಜಿಲ್ಲಾ ಕಲೆಕ್ಟರರನ್ನು ಒತ್ತಾಯಿಸುತ್ತದೆ.

"ಈ ಜಿಲ್ಲಾ ಕಾಂಗ್ರೆಸ್ ಕಮಿಟಿಯು ವ್ಯಾಪಾರಸ್ಥರಲ್ಲಿಯೂ ಜಮೀನ್ದಾರರಲ್ಲಿಯೂ ಹಾಗೂ ಇತರ ಜನರಲ್ಲಿಯೂ ಅಕ್ಕಿಯ ಬೆಲೆ ಕಡಿಮೆಯಾಗುವಂತೆ ಮಾಡುವುದರಲ್ಲಿ ಸಹಕರಿಸಬೇಕಾಗಿಯೂ, ಲಾಭಬಡುಕತನವನ್ನು ದಾಸ್ತಾನು ಗಾರಿಯನ್ನು ಬಿಡಬೇಕಾಗಿಯೂ ವಿನಂತಿ ಮಾಡಿಕೊಳ್ಳುತ್ತದೆ.

ದ. ಕನ್ನಡಕ್ಕೆ ಮೈಸೂರಿನ ವಿದ್ಯುಚ್ಛಕ್ತಿ ಉಭಯ ಸರಕಾರಗಳ ಒಪ್ಪಂದ— ಮೈಸೂರು ಸರಕಾರವು ದಕ್ಷಿಣ ಕನ್ನಡ ಜಿಲ್ಲೆಗೆ 2800 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಪೂರೈಸುವುದು. ಈ ವಿದ್ಯುಚ್ಛಕ್ತಿ ಪೂರೈಕೆಯನ್ನು ಎರಡು ವರ್ಷಗಳ ನಂತರ 3000 ಕಿಲೋವ್ಯಾಟುಗಳು ಆರು ವರ್ಷ ನಂತರ 6000 ಕಿಲೋವ್ಯಾಟುಗಳು ಹೆಚ್ಚಿಸಲಾಗುವುದು.

ಮೈಸೂರು ಸರಕಾರವು ಜೋಗ್ ಜಲಪಾತದ ಮಹಾತ್ಮಾ ಗಾಂಧಿ ವಿದ್ಯುತ್ ಕೇಂದ್ರ ಸ್ಥಾಪನೆಯನ್ನು ಕೈಕೊಂಡಿದೆ, ಅದಕ್ಕೆ ಸುಮಾರು 25 ಲಕ್ಷ ರೂ. ವೆಚ್ಚ ಬರಬಹುದು. ಜೋಗ್ ದಿಂದ ಮದ್ರಾಸು ಸರಕಾರವು ವಿದ್ಯುತ್ತನ್ನು ಪಡೆದು ದ. ಕ. ಜಿಲ್ಲೆಗೆ ಸರಬರಾಯಿ ಮಾಡುವುದು. ಈ ಬಗ್ಗೆ ಪ್ರಾರಂಭದಲ್ಲಿ ಸುಮಾರು 85 ಲಕ್ಷ ರೂ. ಖರ್ಚಾಗಬಹುದು. ಜೋಗ್ ವಿದ್ಯುತ್ ಯೋಜನೆಯ ಪ್ರಾರಂಭದಲ್ಲಿ ಕಾರ್ಕಳ ವಿದ್ಯುತ್ ಸ್ಟೇಶನನ್ನು ಉಪಯೋಗಿಸಲಾಗುವುದೆಂದೂ ಆಗ ಮೈಲುಗಳು ಹೆಚ್ಚು, ಸರಕಾರ ಈ ಯೋಜನೆಗೆ ವಿದ್ಯುತ್ ದೊರೆಯುವುದೆಂದೂ ತಿಳಿದು ಬರುತ್ತದೆ.

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ ಹಾಗೂ ಮದ್ರಾಸಿನ ಸಾರ್ವಜನಿಕ ಲೋಕೋಪಯೋಗಿ ಮಂತ್ರಿ ಶ್ರೀ ಎನ್. ರಂಗಾರೆಡ್ಡಿ ಹಾಗೂ ಉಭಯ ಸರಕಾರಗಳ ಅಧಿಕಾರಿಗಳ ಸಭೆಯಲ್ಲಿ ಮೇಲಿನ ನಿರ್ಣಯ ಕೈಕೊಳ್ಳಲಾಯಿತು. ಈ ವಿದ್ಯುಚ್ಛಕ್ತಿಯ ಒಟ್ಟು ಬಿಕ್ಕಿನ ಮೇಲೆ ನೂರಕ್ಕೆ ಹತ್ತರಷ್ಟು ಸರಬರಾಜನ್ನು ಮದ್ರಾಸು ಸರಕಾರವು ಮೈಸೂರು ಸರಕಾರಕ್ಕೆ ಕೊಡಬೇಕು ಎಂದೂ ಈ ಸಭೆಯಲ್ಲಿ ಗೊತ್ತಾಯಿತು. ದ. ಕ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಕುರಿತು ಈ ಉಭಯ ಸರಕಾರಗಳಲ್ಲಿ ಅನೇಕ ವರ್ಷ ಮಾತುಕತೆ ನಡೆದ ನಂತರ ಈಗ ಈ ಒಡಂಬಡಿಕೆಯಾಗಿದೆ. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಶ್ರೀಗಳಾದ ಕೆ. ಸದಾನಂದ ಹೆಗ್ಡೆ, ಎಂ. ಪಿ. ವೈಕುಂಠ ಬಾಳಿಗ, ಎಂ. ಎಲ್. ಎ. ಬಿ. ಎಸ್. ಎಂ. ಎಲ್. ಎ, ಎಸ್. ನರಸಪ್ಪಯ್ಯ, ಎಂ. ಎಲ್. ಸಿ, ಬಿ. ಮಂಜಯ್ಯ ಹೆಗ್ಡೆ, (ಡಿ; ಬೊ. ಪ್ರೆಸಿಡೆಂಟ್) ಕೆ. ಸದಾನ ನಾರಾಯಣ ಅಡಿಗ (ನಗರ ಸಭಾಧ್ಯಕ್ಷ) ಡಾ| ನಾಗಪ್ಪ ಆಳ್ವ, ಬಿ. ಎಸ್. ಭಾಸ್ಕರ ರೈ, ಕ್ರಿಶ್ಚಿಯನ್ ಪಾರ್ಯಸ್ಟ, ಬಿ. ಆರ್. ಕರ್ಕೇರ ಮೊದಲಾದವರು ಹಾಜರಿದ್ದರು.

ತಡವರಿಸುವುದೇಕೆ?

(೧ನೇ ಪುಟದಿಂದ)

ಇದು ತರ್ಕಶುದ್ಧವಾದ ವಿವರಣೆ. ಆದರೆ ಇದಕ್ಕೂ ಹೆಚ್ಚು ವಿಷಯ ಅವನಿಗೆ ಗೊತ್ತಿಲ್ಲ. ವಿದ್ಯಾರ್ಥಿಯ ಅಜ್ಞಾನಕಂಡು ಅತಿಥಿಗಳು ಬೇಸರಪಡಬಾರದೆಂದೂ ತಪ್ಪರಿಣಾಮವಾಗಿ ಕಾಲೇಜಿನ ಕುರಿತು ಕೆಟ್ಟ ನಿರ್ಣಯ ಮಾಡಬಾರದೆಂದೂ ಎಣಿಸಿ ಪ್ರಿನ್ಸಿಪಾಲರು "ಸದ್ಯದಲ್ಲಿಯೇ ಯೋಜನಾ ಆಯೋಗದ ಸದಸ್ಯರನ್ನು ಕರೆತಂದು ವಿದ್ಯಾರ್ಥಿಗಳಿಗೆ ಉಪನ್ಯಾಸ ಕೊಡಿಸಬೇಕೆಂದಿದ್ದೇನೆ" ಎಂದು ಹೇಳಿದರಂತೆ.

ನಿಜವಾಗಿ ನಮಗೆ ಉಪನ್ಯಾಸ ಬೇಕೋ, ಪತ್ರಿಕೆಯಲ್ಲಿ ಪ್ರಕಟಣೆ ಬೇಕೋ ಅಥವಾ ಕಾರ್ಯಕ್ಷೇತ್ರದಲ್ಲಿ ಧುಮುಕುವ ಉತ್ಸಾಹ ಬೇಕೋ ಎಂಬುದನ್ನು ನಾವೀಗ ನಿರ್ಣಯಿಸುವ ಕಾಲ ಬಂದಿದೆ. ಪಂಚವಾರ್ಷಿಕ ಯೋಜನೆಯನ್ನು ಜ್ಯಾರಿಯಲ್ಲಿ ತರಲು ನಿಶ್ಚಯಿಸಿ ಕಾರ್ಯತತ್ಪರವಾಗಿರುವ ಸರಕಾರದೊಂದಿಗೆ, ನಾವು ಕೂಡಿ ನಡೆಯದಿದ್ದರೆ ಅದು ಯಶಸ್ವಿಯಾಗಲಿಕ್ಕೆ ಸಾಧ್ಯವಿಲ್ಲ. ಯೋಜನೆಯನ್ನು ಬಿಡಿಸಿ ಓದಿದಲ್ಲಿ ಸಾರ್ವಜನಿಕ ಸಹಕಾರವು ಅತ್ಯಗತ್ಯವೆಂಬ ಸಂಗತಿಯನ್ನು ಸ್ಪಷ್ಟವಾಗಿ ನಿರೂಪಿಸಿರುವುದು ವ್ಯಕ್ತವಾಗುತ್ತದೆ. ಹೀಗಿರುತ್ತಾ, ನಾವು ಅದರಲ್ಲಿ ಏನೇನೂ ಕುತೂಹಲವನ್ನು ತೋರಿಸದೆ, ಸರಕಾರವೇ ಎಲ್ಲವನ್ನೂ ಪೂರೈಸುವುದೆಂದೂ, ಕುಳಿತಲ್ಲಿಯೇ ನಮ್ಮ ಜೀವನ ಮಟ್ಟ ಹೆಚ್ಚುತ್ತದೆಂದೂ ಭಾವಿಸುವುದು ಎಷ್ಟು ದೊಡ್ಡ ತಪ್ಪು! ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಏನೂ ಬರೆಯದೆ "ದೇವಿ ನೀನೇ ಗತಿ" ಎಂದು ದೃಢ ವಿಶ್ವಾಸದಿಂದ ಕುಳಿತು ತೇರ್ಗಡೆ ಹೊಂದಲು ನೋಡಿದಂತೆಯೇ ಇದಲ್ಲವೆ? ಈ ಸಂಗತಿಯನ್ನು ನಾವು ಗಂಭೀರವಾಗಿ ಆಲೋಚಿಸಬೇಕು.

ಕೆಲವು ದಿನಗಳ ಹಿಂದೆ ಪ್ರಧಾನಿ ನೆಹರೂರವರು ಭಾರತ ಸೇವಕ ಸಮಾಜದ ನಿಯಂತ್ರಕರನ್ನು ಉದ್ದೇಶಿಸಿ ಮಾತನಾಡುವಾಗ "ಸದ್ಯ ಭಾರತದಲ್ಲೆಲ್ಲ ನನಗೆ ಶೂನ್ಯವೇ ತುಂಬಿರುವಂತೆ ಕಾಣುತ್ತದೆ. ಭಾರತ ಸೇವಕ ಸಮಾಜವು ಈ ಶೂನ್ಯವನ್ನು ಎಷ್ಟರ ಮಟ್ಟಿಗೆ ತುಂಬ ಬಲ್ಲುದೆಂದು ನಾನು ತಿಳಿಯಲು ಅಪೇಕ್ಷಿಸುತ್ತೇನೆ" ಎಂದು ಉದ್ಗಾರ ಹೊರಡಿಸಿದ್ದರು. ನಮ್ಮ ದೇಶದ ಈಗಿನ ಪರಿಸ್ಥಿತಿಯ ಕುರಿತು ಇದಕ್ಕೂ ಹೆಚ್ಚು ಗಂಭೀರವಾದ ಉದ್ಗಾರವನ್ನು ಹೊರಡಿಸಲಾರೆವು. ನಾವು ಭಾರತವನ್ನು ಮರಳಿ ಕಟ್ಟಬೇಕೆಂಬ ಸಂಕಲ್ಪವನ್ನು ಮಾಡಿದ್ದರೂ ಅದರ ಮಾರ್ಗವು ಯಾವುದೆಂಬುದನ್ನು ತಿಳಿಯದೆ ಅಂಧಕಾರದಲ್ಲಿಯೇ ಕೈಯಾಡಿಸುತ್ತಿದ್ದೇವೆ ನಮ್ಮ ರಾಷ್ಟ್ರೀಯಧ್ಯೇಯ ಮತ್ತು ಅದನ್ನು ಸೇರುವ ಮಾರ್ಗದ ಸ್ಪಷ್ಟಕಲ್ಪನೆ ಈಗ ನಮಗಿಲ್ಲದಿರುವುದು ದುರ್ದೈವ. ಸ್ವಾತಂತ್ರ್ಯ ಪಡೆಯುವುದಕ್ಕೋಸ್ಕರ ನಡೆದ ಸಂಗ್ರಾಮ ಕಾಲದಲ್ಲಿ ರೂಪಿಸಿದಷ್ಟು ಸ್ಪಷ್ಟವಾದ ಮತ್ತು ನಿಚ್ಚಳವಾದ ಧ್ಯೇಯ ಮತ್ತು ಸಾಧನಾ ಮಾರ್ಗದ ಚಿತ್ರವು ನಮಗಿಂದು ದೊರಕದಂತಾಗಿರುತ್ತದೆ. ಆದುದರಿಂದಲೇ ರಾಜಕೀಯ ರಂಗಗಳಲ್ಲಿಯೂ ಶೈಕ್ಷಣಿಕ ಮುಂತಾದ ಇತರ ಕ್ಷೇತ್ರಗಳಲ್ಲಿಯೂ ಎಂದಿಲ್ಲದ ಜಡತ್ವ ಮತ್ತು ಸೋಮಾರಿತನ ಕಾಣಿಸಿಕೊಂಡಿದೆ. ಕೆಲಸ ಮಾಡುವ ಹುರುಪಿನ ಬದಲು ಪ್ರಚಾರ ಪ್ರಭಾವವೇ ತೋರಿ ಬರುತ್ತಿದೆ.

ನಮ್ಮ ಮುಂದೆ ಪಂಚವಾರ್ಷಿಕ ಯೋಜನೆಯಂಥ ಮಹತ್ವದ ಕಾರ್ಯವಿರುವಾಗಲೂ ನಾವು ಇದನ್ನು ಪೂರೈಸಿ ತೀರುವೆವೆಂಬ ನಿಶ್ಚಿತ ವಿಶ್ವಾಸವನ್ನು ತಳೆಯುವಷ್ಟರ ಮಟ್ಟಿನ ಉತ್ಸಾಹವನ್ನು ಹೊಂದಿರುವುದಿಲ್ಲ. ಕಾಂಗ್ರೆಸು ಭಾರತ ಸೇವಕ ಸಮಾಜ ಇತ್ಯಾದಿಯಾದ ಅಂಗಗಳೆಲ್ಲವೂ ಇವೆ. ಹಾಗೆಂದು ಅವುಗಳು ಜನರನ್ನು ಕೆಲಸಕ್ಕೆ ಪ್ರಚೋದಿಸುವ ಸಾಮರ್ಥ್ಯವನ್ನು ಒಂದೋ ಕಳೆದುಕೊಂಡಂತೆ ಅಥವಾ ಇನ್ನೂ ಪಡೆದಿಲ್ಲವೆಂಬಂತೆ ತೋರುತ್ತದೆ. ಪ್ರಾಯಶಃ ಹಳ್ಳಿಯ ಮೂಲೆಯಲ್ಲಿರುವ ಒಕ್ಕಲಿಗನ ಕಣ್ಣ ಮುಂದೆ ಕೂಡ ಸ್ಪಷ್ಟವಾಗಿ ನಿಲ್ಲಬಹುದಾದ ನಿಶ್ಚಿತ ಧ್ಯೇಯದ ಚಿತ್ರನೇ ನಮ್ಮಲ್ಲಿ ಇಲ್ಲ; ಇದ್ದರೂ ನಾವಿನ್ನೂ ಪ್ರಯೋಗ ನಡೆಸುವ ಸಿದ್ಧತೆಯಲ್ಲಿರುವೆವೇ ಹೊರತು ಕೆಲಸದ ಸಂಪೂರ್ಣ ಹೊಣೆಗಾರಿಕೆಗೆ ಹೆಗಲು ಕೊಡಲಾರದವರಾಗಿದ್ದೇವೆ.

ಈ ವಿಷಮ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದುದೇನು? ನಮ್ಮ ಜನರಲ್ಲಿ ಸಂಪತ್ತನ್ನು ಹೆಚ್ಚಿಸಿ ಕೊಳ್ಳುವುದಕ್ಕೆ ಸ್ವಂತ ಕೈಕಾಲುಗಳನ್ನು ಆಡಿಸುವುದು ಅತ್ಯಗತ್ಯವೆಂಬ ಭಾವನೆಯನ್ನು ಪ್ರತಿಯೋರ್ವನಲ್ಲಿಯೂ ಮಾಡಿಸಬೇಕು. ಪಂಚವಾರ್ಷಿಕಯೋಜನೆಯ ವಿಸ್ತೃತವಿವರಗಳನ್ನೆಲ್ಲ—ಅದರಒಟ್ಟು ಚಿತ್ರವನ್ನು ಪ್ರತಿಯೋರ್ವನ ಕಣ್ಣ ಮುಂದೆ ನಿಲ್ಲಿಸ ಬೇಕು. ಶಾಲೆ ಮತ್ತು ಕಾಲೇಜುಗಳುನಮ್ಮ ರಾಷ್ಟ್ರೀಯ ಯೋಜನೆಯ ಮಹತ್ವಗಳನ್ನು ಪ್ರಚುರ ಪಡಿಸುವ ಸಂಸ್ಥೆಗಳಾಗ ಬೇಕು. ಉದಾಹರಣೆಗೆ ಶಾಲಾ ಪಠ್ಯ ಪುಸ್ತಕಗಳಲ್ಲಿ ಪಂಚವಾರ್ಷಿಕಯೋಜನೆ, ಜನಪ[…] ಅಭಿವೃದ್ಧಿ ಕೇಂದ್ರಗಳು, ಭಾರತದ ವಿವಿಧೋದ್ದೇಶ ಅಣೆಕಟ್ಟು, ಔದ್ಯಮಿಕ ಕ್ಷೇತ್ರದ ಪ್ರಗತಿ ಮುಂತಾದವುಗಳ ಕುರಿತು ಚೆನ್ನಾದ ಶಿಕ್ಷಣ ಕೊಡಲ್ಪಡಬೇಕು. ಯೋಜನೆ ಪ್ರತ್ಯಕ್ಷವಾಗಿ ಕಾರ್ಯಾನ್ವಿತಗೊಳ್ಳುವ ಸ್ಥಳಗಳಲ್ಲೆಲ್ಲ ಹಳ್ಳಿಯ ಜನರು ಚೆನ್ನಾಗಿ ತಿಳಿಯುವ ರೀತಿಯಲ್ಲಿ ವಿಷಯಗಳು ನಿರೂಪಿಸಲ್ಪಡಬೇಕು. ಅಂಕಸಂಖ್ಯೆಗಳ ಜ್ಞಾನಕ್ಕಿಂತಲೂ ಒಟ್ಟು ಪ್ರಯೋಜನದ ತಿಳಿವು ಮುಖ್ಯವಾಗಿರುತ್ತದೆ. ಸುಧಾರಿತ ಬೀಜಗಳು, ಸಿಂಧ್ರಿಯ ಗೊಬ್ಬರ, ಜೋಗದ ವಿದ್ಯುತ್ತು, ವಿಶಾಖಪಟ್ಟಣದ ಹಡಗು, ಬೆಂಗಳೂರಿನ ವಿಮಾನ ಎಂದು ಮುಂತಾ[…] ನಮ್ಮ ರಾಷ್ಟ್ರೀಯ ಪ್ರವೃತ್ತಿಯನ್ನು ಪ್ರಚೋದಿಸುವ ಸಂಗತಿಗಳನ್ನು ಹೇಳಬೇಕು. ಈ ಜವಾಬ್ದಾರಿಯನ್ನು ಸ್ವಾತಂತ್ರ್ಯ ಸಂಗ್ರಾಮದ ಸೈನಿಕರು ಈಗ ರಚನಾತ್ಮಕ ಕ್ಷೇತ್ರದ ಕಾರ್ಯಕರ್ತರಾಗಿ ವಹಿಸಿಕೊಳ್ಳಲಿ! ಭಾರತದಲ್ಲಿ ಕವಿದ ಶೂನ್ಯವನ್ನು ಕಳೆಯಲಿ!

—ಓಂತತ್ಸತ್

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 241/1953

ದಿ. ಉಡುಪಿ ಮುನ್ಸಿಪಲ್ ಕೌನ್ಸಿಲ್ —ಯ ದ್ರ ಕಮೀಶನರು.............ವಾದಿ.

ಮತ್ತು

ಅಜೀಜ ಅಂಮದ್ ಸಾಹೇಬ ಕೂಡ ಪ್ರತಿವಾದಿಯು.

ಇವರೊಳಗೆ—

2ನೇ ಪ್ರತಿವಾದಿ- ರಾಮಚಂದ್ರ ಭಟ್ಟ ಅನಂತ ಭಟ್ರ ಮಗ-ಉಡುಪಿ ತಾಲ್ಕು ಶಿವಳ್ಳಿ ಗ್ರಾಮದ ಯಿಂದ್ರಾಳಿ ಯವರಿಗೆ ಈ ಮೂಲ್ಕ ತಿಳಿಸುವದೇನೆಂದರೆ

ಮೇಲ್ಕಂಡ ವ್ಯಾಜ್ಯದ 1ನೆ ಪ್ರತಿವಾದಿ ಯಿಂದ-ಬರತಕ್ಕ ಪ್ರೊಪರ್ಟಿ Tax ಬಗ್ಗೆ ವಾದಿಯು ದಾಕ್ಲು ಮಾಡಿದ ಸದ್ರಿ ವ್ಯಾಜ್ಯದಲ್ಲಿ 2ನೆ ಪ್ರತಿವಾದಿಯು ನೋಟ್ಸಿನ ಬಗ್ಗೆ ತಾ. 2-7-1953ಕ್ಕೆ ಯಿಡೋಣಾಗಿರುವದೆ- ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ 2ನೆ ಪ್ರತಿವಾದಿಯು ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯಂತ ತಿಳಿಸೋಣಾಗಿದೆ.

N. V. Kamath
Advocate for Plantiff.

ಉಡುಪಿ 13-6-53

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. N. 671/1946
R. E. P. 614/1952

ಮಹಮ್ಮದ ಬ್ಯಾರಿ ಸಹಾ —ಅರ್ಜಿದಾರ
ಮೊದಿಂ ಕುಟ್ಟಿ ಬ್ಯಾರಿ, ವಾಳಿಗೆ ಮುಹಮ್ಮದ ಬ್ಯಾರಿ ಮಗ, ಕಾಸರಗೋಡು ತಾಲೂಕು ಮುಳಿಯಾರು ಗ್ರಾಮದ ಬಾಖಿಕೆರೆ-
ಡಿಫಾಂಡೆ

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ ಜಗ್ತಾ ಡಿಫಾಂಡೆಂಟಿನ ಸ್ಥಿರಾಸ್ತಿಗಳು ಏಲಂ ಬಗ್ಗೆ ಅರ್ಜಿದಾರರು ಅಪೇಕ್ಷಿಸಿ ಹಾಜ್ರುಪಡಿಸಿ ಏಲಂ ಯಿಸ್ತಿಹಾರು ಶರ್ತಗಳು ನಿರ್ಣಯಿಸುವರೆ ತಾ. 29-6-1953ಕ್ಕೆ ಯಿಟ್ಟಿರು ಸಂಗ್ತಿ ತಿಳಿಸೋಣಾಗಿದೆ,

Sd/ **P. Ahmad**
Advocate for Petitioner.

ಕಾಸರಗೋಡು, 9-6-53

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. NO. 244/1953

ದಿ ಉಡುಪಿ-ಮುನ್ಸಿಪಲ್ ಕೌನ್ಸಿಲ್ ಯು ದ್ರ ಕಮೀಶನರ.................ವಾದಿ

ಮತ್ತು

ಅಜೀಜ್ ಅಂಮದ್ ಸಾಹೇಬ ಕೂಡ ಪ್ರತಿವಾದಿರು.

ಇವರೊಳಗೆ—

2ನೇ ಪ್ರತಿವಾದಿ— ರಾಮಚಂದ್ರ ಭಟ್ಟ ಅನಂತ ಭಟ್ರ ಮಗ, ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಯಿಂದ್ರಾಳಿ-ಯವರಿಗೆ ಯಿ ಮೂಲ್ಕ ತಿಳಿಸುವದೇನೆಂದರೆ-

ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿಯಿಂದ ಬರತಕ್ಕ ಪ್ರೊಪರ್ಟಿTax ಬಗ್ಗೆ ವಾದಿಯು ದಾಕ್ಲು ಮಾಡಿದ ಸದ್ರಿ, ವ್ಯಾಜ್ಯದ 2ನೆ ಪ್ರತಿವಾದಿಯು ನೋಟ್ಸ ಬಗ್ಗೆ ತಾರೀಕು 2 7-1953ಕ್ಕೆ ಯಿಡೋಣಾಗಿದೆ- 2ನೇ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಆ ದಿವ್ಸ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

N. V. Kamath,
Advocate for Plaintiff

ಉಡುಪಿ, 13-6 53.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್‌ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾನಧಿ ಪೊಲಿಸಿಗಳ ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಟೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನ**ಗೊಳ್ಳುವ ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ|| **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) **ನಿರ್ಮೂ**ಲಿಸಿ, ಮಾನಸಿಕ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭ ಪತನವನ್ನೂ ನಿವಾರಿಸಿ, **ಬಂಜೆತನ** ವನ್ನುಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿ ಪಾರ್ಸೆಲ್ ರವಾನೆ. ವಿ ಪಿ. ಇಲ್ಲ. **ಕ್ಯಾಟಲಾಗ್ ಉಚಿತ.**

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.**(South India)

ಬೆರಗುಗೊಳಿಸುವ ಕರ ಕೌಶಲ

(೨ನೇ ಪುಟದಿಂದ)

ಕಾ ಪ್ರತಿನಿಧಿಯು ಕೆಲವು ವಿಷಯಗಳ ಟಿಪ್ಪಣಿ ಬರೆಯಲು ಕುಳಿತ. ಇದರ ನಡುವೆ ಸಮಯ ಎಷ್ಟಾಯಿತೆಂದು ಅವನು ತನ್ನ ಕೈಗಡಿಯಾರದ ಕಡೆ ದೃಷ್ಟಿ ಹರಿಯಿಸಿದಾಗ, ಅದೆಲ್ಲಿದೆ? ಆಗ ಬೋರಿಸ್ ಬೋರಾ "ಸ್ವಾಮಿ, ನಿಮ್ಮ ಬಲಗೈಯನ್ನು ನೋಡಬಾರದೇ" ಎಂದು ಹೇಳಿದ. ಪತ್ರಿಕಾ ಪ್ರತಿನಿಧಿಯ ವಿಸ್ಮಯಕ್ಕೆ ಮಿತಿ ಇರಲಿಲ್ಲ. ಎಡಕೈಗೆ ಕಟ್ಟಿಕೊಂಡಿದ್ದ ಗಡಿಯಾರ ಬಲಗೈಗೆ ಬಿಗಿಯಲ್ಪಟ್ಟಿತ್ತು!

ಇನ್ನೊಬ್ಬ ಪತ್ರಿಕಾ ಪ್ರತಿನಿಧಿಯ ಕತೆಯೂ ಸ್ವಾರಸ್ಯವಾಗಿದೆ: ಇವನೂ ತನ್ನ ಪತ್ರಿಕೆಯ ಕಡೆಯಿಂದ ಬೋರಿಸ ಬೋರಾನ ಸಂದರ್ಶನ ಬಯಸಿ ಬಂದಿದ್ದ. ಮಾತುಕತೆ ನಡೆದಂತೆಯೇ ಬೋರಿಸ್ ಬೋರಾ "ನೀನು ಸ್ವಾಮಿ ಚಳಿಗಾಲದಲ್ಲೂ ನೀವು ಕುತ್ತಿಗೆಗೆ ಟೈ ಕಟ್ಟಿಕೊಳ್ಳುವುದಿಲ್ಲವೇ" ಎಂದು ಪ್ರಶ್ನಿಸಿದ. ಪತ್ರಿಕಾ ಪ್ರತಿನಿಧಿಯ ಹೆಂಡತಿಯೇ ಸ್ವತಃ ಇವರು ಹೊರಡುವ ವೇಳೆ ಟೈ ಬಿಗಿದು ಕಟ್ಟಿದ್ದಳು! ಈ ಪ್ರಶ್ನೆ ಕೇಳಿದವನೇ ಕುತ್ತಿಗೆಯ ಸುತ್ತಲೂ ಕೈಯಾಡಿಸಹತ್ತಿದ. ಇದೇನೆಂದು ಕಣ್ಣು ಕಣ್ಣು ಬಿಡುತ್ತಿರುವಾಗ ಬೋರಿಸ್ ಬೋರಾನ ಬೆರಳುಗಳ ನಡುವೆ ತನ್ನ ಕುತ್ತಿಗೆಯ ಟೈ ಕುಣಿಯುತ್ತಿದ್ದುದು ತೋರಿತು.

ಇನ್ನೂ ಒಂದು ಪ್ರಸಂಗವನ್ನು ಕೇಳಿ ಬಿಡಿ: ಅವನು "ಕ್ರೈಮ್ ರಿಪೋರ್ಟ್" (ಅಪರಾಧಿ ವಿವರಣ) ಬರೆಯುವುದರಲ್ಲಿ ಆಂಗ್ಲ ಪತ್ರಿಕೋದ್ಯಮಿಗಳಲ್ಲೆ ಅಪ್ರತಿಮನೆಂಬುದಾಗಿ ಹೆಸರು ಹೊಂದಿದ್ದ. ಬ್ರಿಟನಿನ ವಿಶ್ವವಿಖ್ಯಾತ ಗುಪ್ತಚರ ವಿಭಾಗ ಸ್ಕಾಟ್ ಲೇಂಡ್ ಯಾರ್ಡಿನ ಪ್ರತಿಯೊಂದು ರಹಸ್ಯವೂ ಇವನ ದೃಷ್ಟಿಗೆ ಮರೆಯಾಗದೆ, ಪತ್ರಿಕೆಯಲ್ಲಿ ಪ್ರಕಟಗೊಳ್ಳುತಿತ್ತು. ಇದರಿಂದ ಬ್ರಿಟನ್ನಿನ ಗುಪ್ತಚರ ವಿಭಾಗಕ್ಕೆ ಈ ಪತ್ರಿಕಾ ಪ್ರತಿನಿಧಿಯ ಚಿಂತೆಯೇ ಚಿಂತೆ. ಅವನಿಂದ ಯಾವ ಸಂಗತಿಯನ್ನೂ ಮುಚ್ಚಿಡುವುದು ಸಾಧ್ಯವಾಗುತ್ತಿರಲಿಲ್ಲ. ಏನು ಚಮತ್ಕಾರ ಮಾಡಿ ಈ ಗುಪ್ತ ಸುದ್ದಿಗಳನ್ನು ಪತ್ರಿಕಾ ಪ್ರತಿನಿಧಿ ಸಂಗ್ರಹಿಸಿಕೊಳ್ಳುತಿದ್ದನೆಂಬುದೂ ತಿಳಿದಾಯಿತು. ಇಂಥವನಿಗೆ ಬೋರಿಸ್ ಬೋರಾ ಚಳ್ಳೆಕಾಯಿ ತಿನ್ನಿಸಿದ! ಅವನನ್ನು ಭೇಟಿ ಮಾಡಿಗನಾಗಿ ಮಾಡಿದ: ಸಂದರ್ಶನದ ಟಿಪ್ಪಣಿಯನ್ನು ಪತ್ರಿಕಾ ಪ್ರತಿನಿಧಿ ಬರೆದುಕೊಳ್ಳಲೆಂದು ತನ್ನ ಕಿಸೆಗೆ ಕೈ ಇಕ್ಕಿದಾಗ, ಪೆನ್ಸಿಲು ಸಿಗಲೇ ಇಲ್ಲ. ಒಡನೆಯೇ ಇದು ಬೋರಾನ ಚಮತ್ಕಾರವೆಂದವನು ಗ್ರಹಿಸಿದ. "ನನಗೆ ಬರೆಯಬೇಕು; ನನ್ನ ಪೆನ್ಸಿಲು ಕೊಡು" ಎಂದ. "ಅಯ್ಯೊ ನನ್ನೊಡನೆ ಪೆನ್ಸಿಲಿಲ್ಲ. ಬೇಕಾದರೆ ಸಿಗರೇಟು ತೆಗೆದುಕೊ" ಎಂದು ಸಿಗರೇಟು ಕೇಸು ಮುಂದಿಟ್ಟನು. ಅದು ಯಾರದು? ಒಳಕಿಸೆಯಲ್ಲಿ ಪತ್ರಿಕಾ ಪ್ರತಿನಿಧಿ ಇಟ್ಟುಕೊಂಡಿದ್ದ ಸಿಗರೇಟು ಕೇಸೇ ಅದು!

ಇಷ್ಟೆಲ್ಲ ಚಮತ್ಕಾರವನ್ನು ಕೇಳಿ ನೀವು ಬಹಳ ಬೆರಗಾಗಿದ್ದರೆ ಇನ್ನೂ ಒಂದು ಸಂಗತಿಯಿಂದ ಹೌಹಾರಿ ಬೀಳಬಹುದು: ಮಾತಿನ ನಡುವೆ ಪತ್ರಿಕಾ ಪ್ರತಿನಿಧಿಯೋರ್ವನು ಧರಿಸಿದ್ದ ಕನ್ನಡಕವನ್ನೇ ಬೋರಿಸ್ ಬೋರಾ ಅಪಹರಿಸಿದನೆಂದರೆ ನಂಬಲು ಸಾಧ್ಯವಿದೆಯೆ? ಟಿಪ್ಪಣಿ ಬರೆಯುವಾಗ ಅಕ್ಷರಗಳು ಏಕೋ ಮಸುಕು ಮಸುಕಾಗಿ ತೋರಲು, ಕನ್ನಡಕವನ್ನು ಒರಸಿ, ಮರಳಿ ಧರಿಸುವ ಉದ್ದೇಶದಿಂದ ಪತ್ರಿಕಾ ಪ್ರತಿನಿಧಿ ಕಿವಿಗಳ ಸಂದಿಗೆ ಕೈಯೊಡ್ಡಿಸಿದ. ಆಗ ಅವನ ಮನಸ್ಸಿನಲ್ಲಿ ಏನಾಗಿರಬಹುದೆಂದು ನೀವೇ ಕಲ್ಪಿಸಿಕೊಳ್ಳಿ. ಆಗ ಬೋರಿಸ್ ಬೋರಾ ಒಸಗೆ ಮರುಕಪಡುವವರಂತೆ "ಪಾಪ, ನಿಮ್ಮ ಕನ್ನಡಕವನ್ನು ಮರೆತು ಬಂದಿರೋ ಏನೊ! ಚಿಂತೆಯಿಲ್ಲ, ನನ್ನ ಈ ಕನ್ನಡಕ ಆಗಬಹುದೋ ನೋಡಿರಿ" ಎಂದು ತಾನು ಧರಿಸಿದ್ದ ಕನ್ನಡಕವನ್ನೇ ಪತ್ರಿಕಾ ಪ್ರತಿನಿಧಿಯ ಮುಂದಿಟ್ಟ.

ಕೇವಲ ಪತ್ರಿಕಾಕರ್ತರು ಮಾತ್ರ ಮೂರ್ಖರೆಂದು ತಿಳಿಯಬೇಡಿ. ಪೋಲೀಸು ಅಧಿಕಾರಿಗಳ ಗರ್ವಭಂಗ ಮಾಡಿದ ಕೀರ್ತಿಯೂ ಬೋರಿಸ್ ಬೋರಾಗೆ ಇದೆ. ಒಮ್ಮೆ ಇಬ್ಬರು ಪೋಲೀಸು ಇನ್ಸ್‌ಪೆಕ್ಟರರ ಜೊತೆಗೆ ಬೋರಿಸ್ ಬೋರಾ ಎಲ್ಲಿಗೋ ಹೋಗುತಿದ್ದ. ಮಾರ್ಗದಲ್ಲಿ ಅವನು ಅವರಲ್ಲೊಬ್ಬನ ಟೈ ಹಾರಿಸಿದ. ತುಸು ಸಮಯದ ಬಳಿಕ ಆ ಇನ್ಸ್‌ಪೆಕ್ಟರರಿಗೆ ಇದು ತಿಳಿಯಬರಲು, ಅವರಿಗೆ ತುಂಬ ಲಜ್ಜೆ ಎನಿಸಿತು. ಎರಡನೇ ಇನ್ಸ್‌ಪೆಕ್ಟರರಿಗೆ ತನ್ನ ಸಂಗಾತಿಯ ಅಜಾಗರೂಕತೆ ಕಂಡು ನಗು ಬಂತು. ಆದರೆ ಗಾಡಿಯಿಂದ ಅವರು ಕೆಳಗೆ ಇಳಿಯುವ ಕ್ಷಣದಲ್ಲಿ ಆ ಇನ್ಸ್‌ಪೆಕ್ಟರ ಧರಿಸಿದ್ದ ಇಜಾರು ಕೆಳಗೆ ಜಾರಬಿದ್ದಿತು. ಅದರ ಪಟ್ಟಿಯನ್ನು ಬೋರಿಸ್ ಕದ್ದು ಬಿಟ್ಟಿದ್ದ.

ಇನ್ನೊಮ್ಮೆ ಲಂಕೇಶೈರಿನ ಪೋಲೀಸ್ ತರಬೇತಿ ಕಾಲೇಜಿನ ಪೋಲೀಸು ಅಧಿಕಾರಿಗಳು ಕಿಸೆ ಕತ್ತರಿಸುವ ವಿದ್ಯೆಯನ್ನು ಕಲಿಯಲು ಬೋರಿಸ್ ಬೋರಾನ ಬಳಿಗೆ ಬಂದರು. ಮರಳುವಾಗ ಅವನನ್ನು ಈ ಅಧಿಕಾರಿಗಳು ತಮ್ಮೊಡನೆ ಕರೆದುಕೊಂಡು ಹೋದರು. ಮೋಟಾರು ಚಲಿಸುತ್ತಿದ್ದಂತೆಯೇ ಡ್ರೈವರನ ಕೈಗಡಿಯಾರ ಮಾಯವಾಯಿತು. ಪೋಲೀಸು ಅಧಿಕಾರಿಗಳ ಜೊತೆಗೆ ಅವನಿದ್ದ ಅಲ್ಪ ಸಮಯದಲ್ಲಿ ಬೋರಿಸ್ ಬೋರಾ ಲಕ್ಷ ಮಾಡಿದಂತೆ ಒಂದು ನೂರು ವಸ್ತುಗಳನ್ನು ಕದ್ದುಕೊಂಡ. ಪೋಲೀಸು ಅಧಿಕಾರಿಯ ಪೆನ್ನು, ಕರೆನ್ಸಿ ನೋಟುಗಳು, ಗುಪ್ತ ಪದಿಗಳು, ರಿಸ್ಟ್ ವಾಚು ಎಲ್ಲವನ್ನೂ ಅಪಹರಿಸಿಯಾಯಿತು.

ಈ ವಿಖ್ಯಾತ ಕಿಸೆಗಳ್ಳನು ಹುಟ್ಟಿದ್ದು ಯುಗೊಸ್ಲಾವಿಯಾದಲ್ಲಿ. ಆದರೆ ಮುಂದೆ ಇವನು ಆಸ್ಟ್ರಿಯಾದಲ್ಲಿ ನೆಲೆನಿಂತ. ಹನ್ನೆರಡನೇ ವಯಸ್ಸಿನಲ್ಲಿಯೇ ಅವನಿಗೆ ಕಿಸೆ ಕತ್ತರಿಸುವ ಪ್ರಯೋಗದ ಕುರಿತು ಆಸಕ್ತಿ ಮೂಡಿತು. ಅಂದಿನಿಂದಲೇ ಆ ಸಮಯದ ಹೆಸರಾದ ಕಿಸೆಗಳ್ಳರ ಚಮತ್ಕಾರದ ಅಧ್ಯಯನಕ್ಕೆ ತೊಡಗಿದ. ತಾನು ಕಲಿತ ಕೌಶಲದ ಪರೀಕ್ಷಾ ಪ್ರಯೋಗವನ್ನು ತನ್ನ ಸಹಚರರ ಮೇಲೆ ಮಾಡಿ ನೋಡುತಿದ್ದ. ಈ ಕಲೆಯಲ್ಲಿ ಪೂರ್ಣನಿಷ್ಣಾತನಾಗುವುದಕ್ಕೋಸ್ಕರ ಸ್ವಲ್ಪ ದೊಡ್ಡವನಾದ ಮೇಲೆ ಬೋರಿಸ್ ಬೋರಾ ಮನೆ ಬಿಟ್ಟು ಓಡಿಯೂ ಹೋದ. ಹಲವು ವರ್ಷಗಳ ವರೆಗೆ ವಿಶ್ವದಲ್ಲೆಲ್ಲ ತಿರುಗಾಡಿ, ಖ್ಯಾತನಾಮರಾದ ಕಿಸೆಗಳ್ಳರ ಜೊತೆಯಲ್ಲಿದ್ದುಕೊಂಡು, ಈ ಉದ್ಯೋಗದ ಸೂಕ್ಷ್ಮ ಅಭ್ಯಾಸವನ್ನು ಅವಗತ ಮಾಡಿಕೊಂಡ. ಬೋರಿಸ್ ಬೋರಾ ಅತ್ಯಂತ ಪರಿಶ್ರಮಪೂರ್ವಕ ಸಂಪಾದಿಸಿದ ಈ ಕಲೆಯನ್ನು ಅವನ ಮಕ್ಕಳು ಈಗಾಗಲೇ ಕರಗತ ಮಾಡಿಕೊಂಡಿರುವರು. ಸ್ವಯಂ ಬೋರಿಸ್ ಬೋರಾನ ಕಿಸೆಯನ್ನು ಕತ್ತರಿಸುವಷ್ಟು ಪಟುತ್ವದ ಕೌಶಲವನ್ನು ಈ ಮಕ್ಕಳು ಪಡೆದಿರುವರು. ಆದರೆ ಇಷ್ಟು ಮಾತ್ರದಿಂದ ತನ್ನ ತಂದೆಯ ಬುದ್ಧಿಮಂತಿಕೆಯನ್ನೆಲ್ಲ ಪಡೆದೆವೆಂದು ಮಕ್ಕಳು ಗರ್ವಪಡುವುದು ಬೇಡವೆಂದು ಬೋರಿಸ್ ಬೋರಾ ಹೇಳುತ್ತಾನೆ — ಏಕೆಂದರೆ ಪ್ರಸಿದ್ಧ ಕಿಸೆಗಳ್ಳನಿದ್ದಂತೆ, ಬೋರಾ ಶ್ರೇಷ್ಠ ಸಂಗೀತಜ್ಞನೂ ಹೌದು.

ಇಂದು ಬೋರಿಸ್ ಬೋರಾ ಅಂತಾರಾಷ್ಟ್ರೀಯ ಕೀರ್ತಿ ಸಂಪನ್ನನಾದ ವ್ಯಕ್ತಿ. ಚಾರ್ಲಿ ಚಾಪ್ಲಿನ್ನರ ಹೆಸರಿನಷ್ಟೆ ವಿಶ್ವವಿಖ್ಯಾತವಾದದ್ದು ಅವನ ಹೆಸರು. ಅವನ ಹಸ್ತಕೌಶಲದಲ್ಲಿ ಸಿಕ್ಕಿ ಬಿದ್ದ ಲೋಕ ಧುರೀಣರೂ ಅನೇಕ. ಈಗ ಕೊರಿಯಾದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸೇನಾಧ್ಯಕ್ಷರಾಗಿರುವ ಜನರಲ್ ಮಾರ್ಕ್‌ಕ್ಲಾರ್ಕರನ್ನು, ಇಂಗ್ಲೆಂಡಿನ ಮಾಜಿ ಯುದ್ಧ ಮಂತ್ರಿ ಇಮಾನುಯೆಲ್ ಶಿನ್‌ವೆಲರನ್ನು, ಯುಗೊಸ್ಲಾವಿಯಾದ ಭೂತಪೂರ್ವ ಸಮ್ರಾಟ ಪೀಟರನ್ನು, ಇಂಗ್ಲೆಂಡಿನ ರಾಣಿಯ ಸಹೋದರಿ ರಾಜಕುಮಾರಿ ಮಾರ್ಗರೇಟಳನ್ನು — ಎಲ್ಲರನ್ನೂ ಬೋರಿಸ್ ಬೋರಾ ಮಂಕುಗೊಳಿಸಿದ.

ಸನ್ಮಾನ ಮತ್ತು ಸಂಪತ್ತಿನ ದೃಷ್ಟಿಯಿಂದ ಬೋರಿಸ್ ಬೋರಾನ ಸ್ಥಿತಿ ಪ್ರಸಿದ್ಧ ಇಂದ್ರಜಾಲಿಕರಾದ ಶ್ರೀ ಪಿ. ಸಿ. ಸರ್‌ಕಾರ್ ಮುಂತಾದವರಷ್ಟೇ ಒಳ್ಳೆಯದಿರುತ್ತದೆ. ಅವನು ಲಕ್ಷಾಧೀಶ, ಮತ್ತು ಆಧುನಿಕ ಜಗತ್ತಿನಲ್ಲಿ ಲಭ್ಯವಿರುವ ಎಲ್ಲ ಸುಖೋಪಭೋಗಗಳನ್ನೂ ಸಂತೋಷದಿಂದ ಅನುಭವಿಸುತ್ತಿರುವನು. ಆದರೆ ಕೇವಲ ಒಂದೇ ಒಂದು ಬಯಕೆಯು ಅಪೂರ್ಣವಾಗಿಯೇ ಉಳಿದಿದೆಯಂತೆ — ಅಮೇರಿಕಾದ ಈಗಿನ ಅಧ್ಯಕ್ಷ ಡ್ವೈಟ್ ಐಸೆನ್‌ಹೋವರರ ಅಂಡರ್‌ವೇರ್ (ಲಂಗೋಟಿ) ಹಾರಿಸಬೇಕೆಂದು ಅವನ ಮಹತ್ವಾಕಾಂಕ್ಷೆ! ಈ ಸಂಗತಿಯಲ್ಲಿ ತನಗೆ ಎಂದೋ ವಿಜಯ ದೊರೆಯಬಹುದಿತ್ತೆಂದೂ ಆದರೆ ಐಸೆನ್‌ಹೋವರರಿಗೆ ತಾನೆಂದರೆ ಬಹಳ ಅಂಜಿಕೆ ಇದೆಯಾಗಿ, ಅವರ ಬಳಿ ಸಾರುವುದೇ ಕಷ್ಟವಾಗಿದೆಯೆಂದೂ ಬೋರಿಸ ಬೋರಾನ ಹೇಳಿಕೆ.

—ನವನೀತ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಚಾಚುಕೊಳ್ಳುವುದು ಜೇನುನೊಣ ಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ—

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ಹೇರ ಮತ್ತು ಸ್ವಕ್ತತನ ಹೇಸ ಸ್ಥಿತಿಯನ್ನು ನಿರ್ಮಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಪ್ರವರ [illegible]



ಹೆಚ್ಚಿನ ವಿವರಕ್ಕಾಗಿ ಡಾ। ರಾಂ ಸಿ ಶಾಸ್ತ್ರೀ, ಯಲ್. ಎ. ಎಂ.

ಕೊಡಿಯಾಲಬೈಲು ಪೋಸ್ಟ್, (ಮಂಗಳೂರು)

ಶಾಖೆ:— ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು.

ಉಡುಪಿಯ ಕುಂಜಿಬೆಟ್ಟಿನಲ್ಲಿ

ನೂತನವಾಗಿ ತೆರೆಯಲಾದ

ಅಂಬಾ ಭವನ

ಸರ್ವ ಸೌಕರ್ಯಗಳಿಂದೊಡಗೂಡಿದ ಮೇಲ್ತರಗತಿಯ ಊಟ ಮತ್ತು ಉಪಾಹಾರ ಗೃಹ.

ಕಾಲೇಜು ವಿದ್ಯಾರ್ಥಿಗಳಿಗೆ

ಬಹಳ ಅನುಕೂಲ

ಸಂದರ್ಶಿಸಿ ಸಂತೃಪ್ತರಾಗಿರಿ

ಬಿ. ಎ. ತಿಮ್ಮಪ್ಪ ಶೆಟ್ಟಿ,

—ಪ್ರೊಪ್ರೈಟರ್.

ವಾರದ ಒಳಿತು ಕೆಡುಕುಗಳು

ತಾ. ೧೮—೬—೫೩ರಿಂದ ತಾ. ೨೪—೬—೫೩ರ ವರೆಗೆ.

ಮೇಷ — ಧನ್ಯರೆನ್ನಬೇಕು ನಿಮ್ಮನ್ನು. ಸಕಲ ಗ್ರಹಮಂಡಲವೇ ಈ ವಾರದಲ್ಲಿ ನಿಮಗೆ ಪೂರ್ಣ ಬೆಂಬಲ ಕೊಡುವದು. ನಿಮ್ಮ ಪ್ರಯತ್ನವಿಂದು ಕೇವಲ ಹೆಸರಿಗೆ ಮಾತ್ರ. ಕಾರ್ಯವು ತಾನಾಗಿ ಫಲ ಕೊಡವಾಗಲಿದೆ. ಯಾವ ಭಾಗದಲ್ಲೂ ನ್ಯೂನತೆ ತೋರಿಕೆಗಳು ಕಾಣಿಸಲಾರವು. ಉದ್ಯಮದಲ್ಲಿ ವಿಜಯಿಗಳು ಕೀರ್ತಿಶಾಲಿಗಳು ಆಗುವಿರಿ. ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವ ಗಣ್ಯ ವ್ಯಕ್ತಿಗಳೆನಿಸುವಿರಿ. ತಾ. 19 ರಿಂದ 23 ರ ವರೆಗಿನ ದಿನಗಳು ಅತೀವ ಪ್ರಶಸ್ತಗಿವೆ.

ವೃಷಭ—ಈ ಕಾಲವು ಕಳೆದ ವಾರಕ್ಕಿಂತಲೂ ಅನಿಷ್ಟವಾಗಿ ಪರಿಣಮಿಸುವದು. ನಿಮ್ಮ ಬಯಕೆಯಂತೆ ಯಾವ ಕಾರ್ಯವೂ ನೆರವೇರದು. ಆಪ್ತೇಷ್ಟ ಜನರಲ್ಲಿ ಕಲಹವಾಗುವದು. ಸೇವಕ ವರ್ಗದವರಿಗೂ ವಿದ್ಯೋಪಜೀವಿಗಳಿಗೂ ಕಾಲಯಾಪನೆಯು ಅತೀವ ಕಷ್ಟವಾಗುವದು. ಮಕ್ಕಳ ಆರೋಗ್ಯದತ್ತ ವಿಶೇಷ ಲಕ್ಷ್ಯಕೊಡಿರಿ. ಅಧಿಕಾರಿವರ್ಗದವರ ಪೀಡೆಗೆ ಗುರಿಯಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳು ಸ್ವಲ್ಪ ಉತ್ತಮ.

ಮಿಥುನ — ಕಳೆದ ವಾರಕ್ಕಿಂತ ಸ್ವಲ್ಪ ಉತ್ತಮವಾಗಲಿದೆ ಈ ವಾರವು ಸ್ವಂತ ಖರ್ಚನ ಸಲುವಾಗಿ ಬೇರೆ ಸ್ವಾತಂತ್ರ್ಯ ಕಬೇಕಾಗಿಲ್ಲ. ಸದಾ ಪರ್ಯಟನದಲ್ಲೇ ಕಾಲ ಕಳೆಯಬೇಕಾದೀತು. ಕನಸುಮನಗಳಾಗಿ ಆಶಸ್ತ ಸುಖ ಶಾಂತಿಗಳು ಲಭಿಸವು. ಗಾಳಿಗೆ ದುರಾಗಿದ್ದ ದೀಪದಂತೆ ಮನಸ್ಸು ಸದಾ ಚಂಚಲವಾಗಿರುವದು. ಗುರು ಹಿರಿಯರ ಮನಸ್ತಾಪಕ್ಕೊಳಗಾದೀರಿ ವಾರದ ಅಂತ್ಯದ ದಿನಗಳು ಸ್ವಲ್ಪ ಉತ್ತಮವಾಗಿವೆ

ಕರ್ಕಾಟಕ—ದಿನಗಳೆದಂತೆ ನಿಮ್ಮ ಅದೃಷ್ಟವು ಕ್ಷೀಣವಾಗುತ್ತ ಬರುತ್ತಿದೆ. ಕಷ್ಟದಿಂದ ದುಡಿದ ಧನವೂ ನಿಮ್ಮ ಬಹುಮುಖವಾದ ಖರ್ಚುಗಳನ್ನು ಇದಿರಿಸಲಾಗದು. ಶತ್ರು ಜನರಿಂದ ಪರಾಭವ ಹೊಂದುವಿರಿ. ಮಾತುಬಲ್ಲ ಜಾಣನಿಗಾದರೂ ವಾಕ್ಕಲಹವು ಅನಿವಾರ್ಯವೆನಿಸೀತು. ಆದರೆ ಲೇಖಕರಿಗೂ ಸೇವಕ ಜನತೆಗೂ ಈ ಕಾಲವು ಕಷ್ಟದಾಯಿಯಾಗಲಾರದು. ತಾ. 19, 20, 21 ರಲ್ಲಿ ನಿಮ್ಮ ಬಯಕೆಗಳು ನೆರವೇರುವವು.

ಸಿಂಹ—ಕಷ್ಟ ಸುಖಗಳು ಅಂಥ ನಷ್ಟಗಳೂ ಸಮತೂಕದಲ್ಲಿ ನಿಲ್ಲಲಿವೆ. ನಿಮಗೀ ವಾರದಲ್ಲಿ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆವಿರಿ ಹಲವು ವಿಧದಿಂದ ಧನವು ನಿಮ್ಮ ಕೈಸೇರಲಿದೆ. ಆದರೆ ದಿನಾಂತ್ಯದಲ್ಲಿ ಮಾತ್ರ ಕೈಯಲ್ಲಿ ಕಾಸುಳಿಯಲಾರದು ರಾಜಕೀಯರಂಗದಲ್ಲಿ ನಿಮ್ಮಿಚ್ಛೆಯಂತೆ ಕಾರ್ಯವು ಸಿದ್ಧಿಸುವದು ತಾ. 18, 22, 23 ಈ ದಿನಗಳಲ್ಲಿ ವಿಜಯ ಭೋಗಲಾಭಗಳಿವೆ.

ಕನ್ಯಾ—ಜನ್ಮಗತನಾದ ಶನಿಯು ಆಗಾಗ ದೇಹಾಲಸ್ಯವನ್ನುಂಟು ಮಾಡಲಿರುವನಾದರೂ ನಿಮಗೆ ಇತರ ಯಾವ ತೆರನಾದ ಕೊರತೆಯು ಕಾಣಿಸದು. ನಿಮ್ಮ ಬಯಕೆಯಂತೆ ಪ್ರತಿಯೊಂದು ಕಾರ್ಯವೂ ಜರಗುವದು ಆರ್ಥಿಕ ಸ್ಥಿತಿಯು ಅತ್ಯುತ್ತಮವಾಗಲಿದೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗುವಿರಿ. ವ್ಯಾಪಾರ ವ್ಯವಹಾರ ರಾಜಕೀಯ ಸಾಮಾಜಿಕ ಕಾರ್ಯದಲ್ಲೂ ವಿಜಯಿಗಳಾಗುವಿರಿ, ತಾ 19 20 21 24 ಈ ದಿನಗಳಲ್ಲಿ ನಿಮ್ಮ ಬಯಕೆಯು ಪೂರ್ಣವಾಗಲಿದೆ.

ತುಲಾ—ಅಂತೂ ಗಂಡಾಂತರದಿಂದ ನೀವಿಂದು ಪಾರಾದಿರೆನ್ನಬಹುದು. ಕತ್ರಾಪಿ ಆರ್ಥಿಕ ಭಾಗದಲ್ಲಿ ಕೊಂಚ ಸುಧಾರಣೆಯು ದೀತು. ಆದರೆ ಪ್ರವಾಸದಲ್ಲಿ ಕಷ್ಟನಷ್ಟಗಳೊದಗಲಿವೆ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ ಸ್ತ್ರೀಯರ ನಿಮಿತ್ತ ಕಲಹ ಕಚ್ಚಾಟ ಅಪವಾದಗಳೂ ಪ್ರಾಪ್ತವಾಗುವ ಯೋಗವಿದೆ. ತಾ 18 22 23 ಉಳಿದ ದಿನಗಳಿಗಿಂತ ಲೇಸಾಗಬಹುದು.

ವೃಶ್ಚಿಕ:— ನೀವಿಂದು ಯುಕ್ತಿಶಕ್ತಿಗಳಲ್ಲಿ ಅದ್ವಿತೀಯರಿರುವಿರಾದರೂ ಶತ್ರುಜನರ ಪೀಡೆಯಿಂದ ಮುಕ್ತರಾಗುವದು ಅಪ್ರವೆನಿಸೀತು ಕಾರಣ ನಿಮ್ಮ ಧನಮಾನಗಳಿಗೆ ಅವರಿಂದ ಹೆಚ್ಚಿನ ಧಕ್ಕೆಯುಂಟಾಗಲಿದೆ. ಆದರೂ ಧನಸುಖಸಂಪತ್ತಿಗಳು ನಿಮಗನುಕೂಲವಾಗಿರುವ ಕಾರಣ ಹಣದ ಅಡಚಣೆಯುಂಟಾಗದು. ದೈಹಿಕ ಮಾನಸಿಕ ಸುಖಕ್ಕೂ ಕೊರತೆ ಕಾಣಿಸದು. ಮನೆಯಾಕೆಯು ಕಲಹಪ್ರಿಯಳಾದಾಳು. ತಾ. 22, 23 ಮಾತ್ರ ಒಳ್ಳೆಯದಲ್ಲ.

ಧನು:—ಕಳೆದ ವಾರಕ್ಕಿಂತ ಸ್ವಲ್ಪ ಉತ್ತಮವೆನಿಸುವವು ಈ ದಿನಗಳು. ಹಣದ ಬಿಕ್ಕಟ್ಟಿನಿಂದ ಬಳಲುತ್ತಿದ್ದ ನಿಮಗೆ ಆಕಸ್ಮಾತ್ ಧನಲಾಭವಾಗಲಿದೆ. ಅಂತೂ ದಿನಯಾಪನೆಯು ಸಲುವಾಗಿ ಹೆರವರ ಮುಖ ನೋಡುವ ಪ್ರಸಂಗ ಬರದು. ಆದರೆ ಹೊಡತಿ ಮಕ್ಕಳ ಆರೋಗ್ಯ ಕೆಡಲಿದೆ. ಕಫ ದೋಷಕ್ಕೆ ಗುರಿಯಾದೀರಿ. ರಾಜಕೀಯದಲ್ಲಿ ಪರಾಭವವುಂಟಾದೀತು. ಶ್ರಮ ಜೀವಿಗಳಿಗೆ ಕಾಲವು ಚೆನ್ನಾಗಿಲ್ಲವು. ತಾ, 18. 24 ಒಳ್ಳೆಯವಲ್ಲ

ಮಕರ—ನೀವು ಹೇಳಿದ್ದೇ ಮಾತು ಮಾಡಿದ್ದೇ ಕಾರ್ಯ. ನಿಮ್ಮ ಮಾತನ್ನು ವಿರೋಧಿಸುವವರಿರಲಾರರು ಎಂತಹ ಮಹತ್ವಾರ್ಯವಿದ್ದರೂ ನಿಮ್ಮ ಭಾಗಕ್ಕೆ ತೃಣಸಮವೆನಿಸುವದು ಮನೋರೋಗದಿಂದ ಮುಕ್ತರಾಗುವಿರಿ, ಧರ್ಮ ಕಷ್ಟಗಳಲ್ಲಿ ಅನಾದರವುಂಟಾದೀತು. ಪಿಜ ತಿಯರೊಡನೆ ಕಲಹವಾಗಲಿದೆ ತಾ, 22, 23, 24 ಈ ದಿನಗಳಲ್ಲಿ ನಿಮ್ಮ ಯಾವತ್ತು ಬಯಕೆಗಳು ಸಫಲಗಳಾಗಲಿವೆ.

ಕುಂಭ—ಕಳೆದ ದಿನಗಳಿಗಿಂತ ಈ ಕಾಲವು ಸ್ವಲ್ಪ ಉತ್ತಮವೆನಿಸೀತು. ಉದ್ಯೋಗ ವ್ಯಾಪಾರಂಗಳಲ್ಲಿ ದಿನೇ ದಿನೇ ಪ್ರಗತಿ ಕಾಣುತ್ತದೆ ಹಣದ ಬಿಕ್ಕಟ್ಟು ದೂರವಾಗಲಿದೆ ಆದರೆ ಅಕ್ರಿಯರಿಂದುಂಟಾದ ಮನೋವೇದನೆಯು ನಿಮ್ಮನ್ನು ಅತೀವ ಬಾಧಿಸಲಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು ಆಪ್ತೇಷ್ಟರ ವಿರಹ ವ್ಯಥೆಗೊಳಗಾದೀರಿ. ವಾರದ ಅಂತ್ಯದ ದಿನಗಳು ಅನುಕೂಲವಾಗಿವೆ.

ಮೀನ—ಪರಿಸ್ಥಿತಿಯು ಕೊಂಚ ಬಿಕ್ಕಟ್ಟಿಗೆ ಬಂದಿದೆ. ನಿಮ್ಮ ಪ್ರಯತ್ನವಿಂದು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗುವದು, ಶತ್ರುಜನರು ಮಿತ್ರರ ಸೋಗು ಹಾಕಿಕೊಂಡು ನಿಮ್ಮನ್ನು ವಂಚಿಸಲಿರುವರು, ತಂದೆ ಮಕ್ಕಳೊಳು ಗಂಡ ಹೆಂಡಿರೊಳು ಕಲಹವಾದೀತು ನಾನಾ ಪ್ರಕೋಪಕ್ಕೆ ಸಿಲುಕಿ ಕಷ್ಟಪಡುವಿರಿ, ಕೈಯಲ್ಲಿನ ತುತ್ತು ಬಾಯಿಗೆ ಬಂದಿಲ್ಲವೆಂಬಂತಹ ಅನೇಕ ಘಟನೆಗಳು ಜರಗುವವು. ವಾರಾದಿಯ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲವು.

ಮಂಗ್ಳೂರು ಸ್ಮಾಲ್ ಕಾಸು ಜಡ್ಜರ ಕೋರ್ಟಿನಲ್ಲಿ.

S. C. No. 213/53.

ಕರ್ನಾಟಕ ಸೇವಿಂಗ್ಸ್ ಫಂಡ್ ಪ್ರೊಪ್ರೈಟರ್ ಎ. ವಿ. ಶೆಣೈ —ವಾದಿ

ಮತ್ತು

1. ಕೋಚ ಪೂಜಾರಿ, 2. ದೂಮ ಪೂಜಾರಿ, 3. ಬಾಬ್ಬ ಪೂಜಾರಿ.

—ಪ್ರತಿವಾದಿಯರು.

1. ಮಂಗ್ಳೂರು ತಾಲೂಕು ಮೂಲ್ಕಿ ಗ್ರಾಮದ ಹೊಸಮನೆ ಶಿವಪ್ಪ ಪೂಜಾರಿ ಮನೆಯಲ್ಲಿರುವ ಕೂಸ ಪೂಜಾರಿಗಳ ಮಗ ಕೋಚ ಪೂಜಾರಿ. ಮೊಹಂತ್ಯಾರು ಪೋಸ್ಟು.

2. ಮಂಗ್ಳೂರು ತಾಲೂಕು ಪುದು ಗ್ರಾಮದ ಕೇಪು ಲಿಂಗಪ್ಪ ಪೂಜಾರಿಗಳ ಮನೆಯಲ್ಲಿರುವ ಕೂಸ ಪೂಜಾರಿಗಳ ಮಗ ದೂಮ ಪೂಜಾರಿಗಳಿಗೆ, ಪೋಸ್ಟು ಪುದು.

ಮೇಲೆ ಹೇಳಿದ ವಾದಿಯು ನಿಮ್ಮಿಬ್ಬರ ಮೇಲೂ ಮತ್ತು ನಿಮ್ಮ ಅಣ್ಣ ಬಾಬಪ್ಪ ಪೂಜಾರಿಯವರ ಮೇಲೂ ದಾಖಲು ಮಾಡಿದ ಮೇಲಿನ ದಾವೆಯು ತಾ. 2-7-1953ನೇ ಹಗಲು ಗಂಟೆ 11ಕ್ಕೆ ನಿಮ್ಮ ಹಾಜರಿಗೂ ತನಿಖೆಗೂ ಇಟ್ಟಿರುತ್ತದೆ ನೀವು ಆ ದಿನ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ತಕ್ಕ ಸವಾಬು ಕೊಡಲು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿರುತ್ತದೆ.

K Narasimha Holla.
ವಾದಿ ಕಡೆ ಎಡ್ವೋಕೇಟ್.

ಮಂಗ್ಳೂರು, ತಾ. 10-6-53

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೀವಾಜ್‌ ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:—

ಜಿ. ಆರ್ ವಾಲ್ಕ, ಬ್ರಾಂಚ್ ಮೇನೇಜರ್,

ಡಾಯಮಂಡ್ ಬಿಲ್ಡಿಂಗ್, 'ಂಪನಕಟ್ಟೆ, ಮಂಗಳೂರು [ದ. ಕ.]

ಖಾತ್ರಿ ಚಿನ್ನದ ನೆಕ್‌ಲೇಸ್ ತರಹೆವಾರು ಚೈನುಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಉಡ್ಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
೬ ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

Regd. No.
M 3618

ನವಯುಗ

LICENCE No. 31
Licensed to Post without Prepayment

ಅಂತರಂಗ
ಶಿಕ್ಷಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

25-6-1953

Vol 32
No 42

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೨

—ಮಧುಪರ್ಕ—

ಬರ್ಮಾದೇಶದ ರಾಜ ಥೀಬಾ ಆತ್ಮಜ್ಞಾನದ ಸಂಬಂಧದಲ್ಲಿ ರಾಜರ್ಷಿ ಜನಕರಂತೆಯೇ ಖ್ಯಾತನಾದನು. ಮಿತಿಯಿಲ್ಲದ ರಾಜೈಶ್ವರ್ಯದ ನಡುವೆ ಇರುತ್ತಿದ್ದರೂ ಅವರಿಗೆ ಸಮ್ಯಕ್ ದೃಷ್ಟಿ ಪ್ರಾಪ್ತವಾಗಿತ್ತು. ಒಂದು ರಾತ್ರಿ ಸಂಚಾರಿ ಭಿಕ್ಷುವೋರ್ವನು ಅವರಲ್ಲಿಗೆ ಬಂದನು. ರಾಜರಿಂದ ಸತ್ಕಾರ ಪಡೆದು, ಆಸನಾಸೀನನಾದೊಡನೆಯೇ "ಮಹಾರಾಜ, ನಿಮ್ಮ ಜ್ಞಾನಯೋಗದ ಕೀರ್ತಿಯನ್ನು ನಾನು ಕೇಳಿದ್ದೇನೆ. ಆದರೆ ಭೋಗ ವಿಲಾಸದ ಪ್ರಜ್ವಲಿತ ಅಗ್ನಿಯ ನಡುವೆ ಇದ್ದುಕೊಂಡೂ ನೀವು ವೈರಾಗ್ಯ ಸಂಪನ್ನತೆ ಪಡೆದಿರುವಿರೆಂಬುದನ್ನು ಮಾತ್ರ ನಾನು ನಂಬುವಂತಿಲ್ಲ. ನಾನು ಅನೇಕಾನೇಕ ವರ್ಷಗಳಿಂದ ಅಖಂಡ ತಪಸ್ಸು ಮಾಡುತ್ತಿದ್ದೇನೆ. ಆದರೆ ಇದುವರೆಗೂ ಆತ್ಮದೃಷ್ಟಿ ಲಭ್ಯವಾಗಿಲ್ಲ. ನೀವು ಇದನ್ನು ಪಡೆದಿರಾದರೂ ಹೇಗೆ?" ಎಂದು ಕೇಳಿದ.

ಥೀಬಾ ಮುಗುಳು ನಕ್ಕರು. "ಸ್ವಾಮಿ, ನೀವು ಸಮಯವಲ್ಲದ ಸಮಯ ಬಂದಿರುವಿರಿ. ಈಗ ನನಗೆ ರಾಜಕಾರ್ಯವಿದೆ. ನಿಮ್ಮ ಪ್ರಶ್ನೆಗೆ ಸ್ವಲ್ಪ ತಡೆದು ಉತ್ತರಿಸುತ್ತೇನೆ. ಈ ನಡುವೆ ನೀವು ಕೈಯಲ್ಲೊಂದು ದೀಪ ಹಿಡಿದುಕೊಂಡು ನನ್ನ ಅಂತಃಪುರದ ವೈಭವವನ್ನು ನೋಡಿ ಬನ್ನಿರಿ. ಆದರೊಂದು ಮಾತು. ದೀಪ ನಂದಿಹೋಗದಂತೆ ಜಾಗರೂಕರಿರಬೇಕು. ಅನ್ಯಥಾ ನೀವು ಮಾರ್ಗ ಭ್ರಷ್ಟರಾಗುವಿರಿ. ಅದನ್ನು ಕಂಡು ಹಿಡಿಯುವುದು ನಿಮಗೆ ಅಸಾಧ್ಯವೆನಿಸೀತು."

ಭಿಕ್ಷು ಅಂತಃಪುರವನ್ನೆಲ್ಲ ಸುತ್ತಿ ಬಂದ ಮೇಲೆ "ಸ್ವಾಮಿ, ಅಂತಃಪುರದಲ್ಲಿರುವ ಸುಂದರಿಯರೆಲ್ಲ ನಿಮಗೆ ಮೆಚ್ಚುಗೆಯಾದರೆ? ರಸಪಾನದಿಂದ ನಿಮಗೆ ಸುಖ ದೊರೆಯಿತೆ? ಅಪ್ಸರೆಯರನ್ನು ನಾಚಿಸುವ ನರ್ತಕಿಯರಿಂದ ನಿಮಗೆ ಮನೋರಂಜನೆ ಯಾಯಿತೆ?" ಎಂದು ರಾಜ ಕೇಳಿದರು.

"ಮಹಾರಾಜ, ನಾನು ಆ ಮದನೋತ್ಸವದ ನಡುವೆ ದೀರ್ಘ ಕಾಲ ಇದ್ದುದೇನೋ ನಿಜ. ಆದರೆ ನಾನು ಏನನ್ನೂ ನೋಡಲಿಲ್ಲ; ನನಗೆ ಏನೂ ಕೇಳಿಸಲಿಲ್ಲ. ನನ್ನ ದೃಷ್ಟಿ ಮತ್ತು ಮನಸ್ಸು ಕೈಯಲ್ಲಿದ್ದ ದೀಪದ ಮೇಲೆಯೇ ಇದ್ದಿತು. ಅದು ನಂದಿ ಹೋದರೆ ನಾನು ಮಾರ್ಗ ತಪ್ಪುವೆನೆಂದಿದ್ದಿರಿ. ಕಾರಣ ಸರ್ವ ಪ್ರಯತ್ನ ಮಾಡಿ ಆ ದೀಪವನ್ನು ಬೀಸುವ ಗಾಳಿಯಿಂದ ಸುರಕ್ಷಿತವಾಗಿಡಲು ಪ್ರಯತ್ನಿಸಿದೆ."

"ಭಿಕ್ಷು, ಹಾಗಾದರೆ ನಿಮಗೆ ಆತ್ಮ ದೃಷ್ಟಿಯು ಬೇಗನೆ ಕೈದೊರೆಯುವುದು" ಎಂದು ರಾಜಾ ಥೀಬ ನುಡಿಯಲು, ಭಿಕ್ಷು ಲಜ್ಜೆಯಿಂದ ತಲೆತಗ್ಗಿಸಿದ.

ಬದುಕಿಗೊಂದು ಅರ್ಥ

ಮನುಷ್ಯನನ್ನು ಆಧ್ಯಾತ್ಮಿಕ ದೃಷ್ಟಿಯಿಂದ ವಿವೇಚಿಸುವವರಿಗಿಂತಲೂ ಇಂದು ವೈಜ್ಞಾನಿಕ ಆ ಮಾತಿಗೆ, ಆದಿಭೌತಿಕ ದೃಷ್ಟಿಯಿಂದ ನೋಡುವವರೇ ಹೆಚ್ಚಿಕೊಂಡಿರುವರು. ಪರಿಣಾಮತಃ ಮನುಷ್ಯನಿಗೊಂದು ಆತ್ಮವೆಂಬುದಿದೆ; ಹಾಗೆಯೇ ಪರಮಾತ್ಮನೆಂಬ ಚೈತನ್ಯವೊಂದಿದೆ; ಆತ್ಮವು ಕೆಟ್ಟದನ್ನು ಬದಿಗೆ ಸರಿಸಿ ಒಳ್ಳೆಯದನ್ನು ಹಿಡಿದುಕೊಳ್ಳಲು ಸದಾ ಪ್ರಯತ್ನಶೀಲವಾಗಿರುತ್ತದೆ ಎಂಬ ತತ್ವವನ್ನು ಈ ಕಾಲದಲ್ಲಿ ಸಂಶಯದಿಂದಲೇ ನೋಡುತ್ತಿರುವರು. ಶ್ರದ್ಧೆ ಅಥವಾ ವಿಶ್ವಾಸ ಮೂಲವಾಗಿರುವ ಸಿದ್ಧಾಂತಕ್ಕೆ ಇದು ಕುಠಾರಾಘಾತವಾಗಿದೆ ಎಂದು ಆಸ್ತಿಕ ಮಹಾಜನರು ಬೊಬ್ಬಿಡುವರು. ಇಂದಿನ ವೈಜ್ಞಾನಿಕರು ಹಿಂದಿನವರ ಭಾವನೆ ಮತ್ತು ನಂಬಿಗೆಗಳೆಲ್ಲವೂ ಆಧಾರರಹಿತವಾದುವುಗಳೆಂದೂ ಸ್ವಕಪೋಲ ಕಲ್ಪಿತ ಸಿದ್ಧಾಂತಗಳೇ ಅವೆಂದೂ ಹೀಗಳೆಯುವರು. ಪ್ರತ್ಯಕ್ಷವಾಗಿ ಪ್ರಯೋಗಶಾಲೆಯಲ್ಲಿ ಸಿದ್ಧಾಂತೀಕರಿಸಲು ಬಾರದುದೆಲ್ಲ ಇಲ್ಲವೆಂಬುದೇ ಇಂದಿನವರ ಖಂಡನೆಯ ಆಧಾರ. ಆದರೆ ಈ ವಿಜ್ಞಾನಿಗಳಾದರೂ ಈ ಸೃಷ್ಟಿ ವೈಚಿತ್ರ್ಯದಲ್ಲಿ ಏನನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವರು? ಅವರ ಪಂಚೇಂದ್ರಿಯಗಳಾಗಲೀ ಬುದ್ಧಿವಂತಿಕೆಯಿಂದ ಸಾಧಿಸಿದ ಯಂತ್ರೋಪಕರಣಗಳಾಗಲೀ ಪರಿಪೂರ್ಣತೆಯ ಹಂತವನ್ನು ಮುಟ್ಟಿವೆಯೇ? ಇದನ್ನು ವಿವೇಕಶೀಲರಾಗಿ ನಾವು ವಿಮರ್ಶಿಸಿದರೆ ವೈತಂಡವಾದಗಳ ತಾಂಡವ ನಡೆದ ಈ ಕಾಲದಲ್ಲಿ 'ನಾಸ್ತಿ' ಎಂದೊಬ್ಬ ಹೇಳಿದರು ಕೂಡ ಅದನ್ನೆ ಸಂಶಯದಿಂದ ಕಂಡು ಅಸ್ತಿ ಎಂದೇ ಅನೀತು!

ನಮ್ಮ ಇಂದಿನ ಸಂಶಯ ದೃಷ್ಟಿಯ ಆಧಾರದ ಮೇಲಿಂದ ನಾವು ಯಾವುದೇ ವಸ್ತುವಿನ ಗುಣವಿಮರ್ಶೆ ಮಾಡಿದರೆ ಅದು ಸಂಪೂರ್ಣ ಸರಿಯಾಗದು. ನಮಗೆ ಬೆಳ್ಳಗೆ ಕಾಣಿಸುವ ಸೂರ್ಯನ ಬೆಳಕನ್ನು ಲೋಲಕದಮೂಲಕ ನೋಡಿದಾಗ ಸಪ್ತವರ್ಣಗಳ ಪಟ್ಟಿ ಗೋಚರಿಸುತ್ತದೆ. ಶುದ್ಧ ಗಂಗಾಜಲವನ್ನು ಸೂಕ್ಷ್ಮದರ್ಶಕದ ಮುಂದಿಟ್ಟು ಪರೀಕ್ಷಿಸಿದರೆ, ಅದರಲ್ಲಿ ಅಸಂಖ್ಯ ಕೀಟಾಣುಗಳು ನೆಲಸಿರುವುದು ತೋರುತ್ತದೆ. ನಾವು ಸತ್ಯವೆಂದು ಭಾವಿಸಿದ ಪ್ರತಿಯೊಂದು ವಿಚಾರವೂ ಸಾಪೇಕ್ಷವಾಗಿರುತ್ತದೆಯೇ ಹೊರತು, ವಿಶ್ವದೃಷ್ಟಿಯಿಂದ ಅದು ನಿಜಸ್ವರೂಪವೆನ್ನಲು ಹೇಳಲಾರೆವು. ಇಂಥವರಲ್ಲಿ ವಿಜ್ಞಾನ ತೋರಿಸುವ ಸಂಶಯ ಎಷ್ಟು ಅರ್ಥಹೀನ. ನಮ್ಮ ಭೂಮಿಯು ಇನ್ನೂರು ಕೋಟಿ ವರ್ಷ ಪುರಾತನವಾದುದೆಂದು ವಿಜ್ಞಾನ ಹೇಳುತ್ತದೆ. ಭಾರತದ ನಾಗರಿಕನ ಸರಾಸರಿ ಆಯುರ್ಮಾನ ೩೫ ವರ್ಷವೂ ಇಲ್ಲ. ಹೀಗಿದ್ದರೂ ನಮಗೆ ವಿಶ್ವನಿಯಮವನ್ನು ಧಿಕ್ಕರಿಸುವ, ಸೃಷ್ಟಿಯ ಸಂಕಲ್ಪವನ್ನು ಆಹ್ವಾನಿಸುವ ಎದೆಗಾರಿಕೆಯುಂಟು! ಭೂಮಿಯ ರಚನೆಯ ಬಳಿಕ ಕಳೆದು ಹೋದ ಆ ಸುದೀರ್ಘ ಅವಧಿಯಲ್ಲಿ ಏನೆಲ್ಲ ನಡೆಯಿತೆಂಬುದನ್ನು ಯಾರಾದರೂ ಕಂಡದ್ದುಂಟೆ ಕೇಳಿದ್ದುಂಟೇ? ಎಂದ ಮೇಲೆ, ಡಾರ್ವಿನನಂಥ ಈಗಿನ ವಿಜ್ಞಾನಿಗಳು ಮನುಷ್ಯನು ಮೊದಲು ಮಂಗನಾಗಿದ್ದನೆಂದೂ ಮೂಲದಲ್ಲಿ ಅಣುಜೀವಿಯ ಸ್ವರೂಪವೇ ಅವನದೆಂದೂ ವಾದಿಸುವುದನ್ನು ನಾವೇಕೆ ನಂಬಬೇಕು? ಇದು ಕೇವಲ ತರ್ಕ ಅಥವಾ ಕುಶಲವಾದ ಊಹನೆಯೆಂದೇಕೆ ಮೂಲೆ ಗುಂಪು ಮಾಡಬಾರದು?

ಇಲ್ಲಿ ಕಲ್ಪನೆಯ ವಿಲಾಸಕ್ಕೆ ಅವಕಾಶ ಅಗತ್ಯವಾಗಿ ಮಾಡಿಕೊಡಬೇಕೆಂದು ವಿಜ್ಞಾನಿಗಳು ಅಭಿಪ್ರಾಯ ಪಡುವರು. ಸುಪ್ರಸಿದ್ಧ ವಿಜ್ಞಾನಿ ಐನ್‌ಸ್ಟೀನರು ಸಹ ಹತ್ತು ಹನ್ನೆರಡು ಸಿದ್ಧಾಂತವಾಗದ ತರ್ಕಗಳ ಆಧಾರದ ಮೇಲೆಯೇ ತಮ್ಮ ಸಂಶೋಧನೆಗಳನ್ನು ನಡೆಸಿದರು. ಗಣಿತದ ಅನೇಕ ಸಮಸ್ಯೆಗಳನ್ನು ಅಬದ್ಧ ಪ್ರತಿಪಾದನೆ ಎಂಬ ರೀತಿ ಅನುಸರಿಸಿ ಬಿಡಿಸಲು ನೋಡುವುದುಂಟು. ಆದುದರಿಂದ ಭೌತಿಕ ವಿಜ್ಞಾನಿಗಳು ಮೂಲದಲ್ಲಿ ಒಂದಿದ್ದದ್ದು ಎರಡಾಗಿ ಒಡೆದು ಬೆಳೆಯುವ ಅಮೀಬವೇ ಮುಂದೆ ಗಂಡು ಹೆಣ್ಣು ಎಂಬ ಲಿಂಗಧಾರಣೆ ಮಾಡಿದ ಜೀವಜಂತುಗಳಾಗಿ ಆಕಸ್ಮಿಕ ಪರಿವರ್ತನೆಯನ್ನು ಹೊಂದಿದುವು ಎನ್ನುವರು. ನಮ್ಮಂಥ ಆಸ್ತಿಕರು ದೇವರೇ ಗಂಡು ಹೆಣ್ಣಿನ ಸೃಷ್ಟಿಯನ್ನು ಮಾಡಿದನೆನ್ನುತ್ತೇವೆ. ಪ್ರಕೃತಿ ಮತ್ತು ಪುರುಷನೆಂದು ಹಿಂದೂಗಳು, ಈವ ಮತ್ತು ಆದಾಮನೆಂದು ಕ್ರಿಶ್ಚಿಯನ್ನರು ಮನುಷ್ಯ ಸೃಷ್ಟಿಯ ವೈಚಿತ್ರ್ಯದ ಮೂಲಕಲ್ಪನೆ ಮಾಡಿರುವರು.

ಇಂಥ ಪರಿವರ್ತನೆಗಳು ಏಕಾಗಿ ಅಗತ್ಯವೆನಿಸಿದುವು? ಕೊಜೆಮಣ್ಣನ್ನು ಹದಮಾಡಿದ ಬಳಿಕವೇ ಬೇಕಾದ ರೂಪ ಕೊಟ್ಟು ಬೆಂಕಿಯಲ್ಲಿ ಕಾಯಿಸಿ ಸುಂದರವಾದ [illegible]ಉಪಯೋಗದ ಒಡವೆಗಳನ್ನು ನಾವು ಮಾಡುವಂ[illegible] ಕರ್ಮಭೂಮಿಯಲ್ಲಿ ಕೆಟ್ಟದು ಅಳಿದು, ಒಳ್ಳೆಯದು ಉಳಿಯಬೇಕೆಂಬುದಕ್ಕಾಗಿ, ಸೃಷ್ಟಿಯಲ್ಲಿ ಹೊಸ ಪ್ರಯೋಗಗಳು ನಡೆದವೆಂದು ಹೇಳೋಣ. ಇಂಥ ಪರಿವರ್ತನೆ ವಿಜ್ಞಾನ ಹೇಳುವಂತೆ ಎಲ್ಲೋ ಆಕಸ್ಮಿಕವಾಗಿಯೇ ಯಾರಿಗೂ ತಿಳಿಯದಂತೆಯೇ ಸಾಧ್ಯವೆನಿಸಿರಬಹುದು. ಗೌರೀಶಂಕರ ಶಿಖರದ ಆರೋಹಣವನ್ನು ಮಾಡುವುದರಲ್ಲಿ ದೊರೆತ ಯಶಸ್ಸಿಗೆ ಹಿಂದೆ ಪರ್ವತಾರೋಹಣ ಪ್ರಯತ್ನಗೈದ ಮಹಾನುಭಾವರ ಅನುಭವಗಳ ಹಿನ್ನೆಲೆ, ಮತ್ತು ತೇನಸಿಂಗ, ಹಿಲರಿಯಂಥವರ ಎದೆಗಾರಿಕೆ ಕಾರಣವಾದಂತೆ ಸಮಸ್ತ ಜೀವ ಜಂತುಗಳು ಒಳ್ಳೆಯ ಅವಸ್ಥೆಗೆ ಬರಲು ಮಾಡುತ್ತಿದ್ದ ಒಟ್ಟು ಪ್ರಯತ್ನದ ಹಿನ್ನೆಲೆಯೂ ಕೆಲವೇ ಜಂತುಗಳ ಸ್ವಂತ ಪರಿಶ್ರಮವೂ ಈ ಚಮತ್ಕಾರವನ್ನು [illegible] ಮಾಡಿತು. ಹಿಂದೂ ದರ್ಶನವು ಪುನರಪಿ ಜನನಂ ಪುನರಪಿ ಮರಣಂ ಎಂಬುದಾಗಿ, ಮತ್ತು ಜನ್ಮ ಜನ್ಮಾಂತರಗಳೆಂಬುದಾಗಿ ವರ್ಣಿಸಿದ ಸಿದ್ಧಾಂತಕ್ಕೂ ಡಾರ್ವಿನನ ಹೇಳಿಕೆಗೂ ಏನು ಮಹಾ ಅಂತರವುಂಟು?

(೧೦ನೇ ಪುಟ ನೋಡಿರಿ)

ಪ್ರತಿ ಮನೆಯಲ್ಲೂ ಇಟ್ಟಿರಬೇಕಾದ ಉಪಯುಕ್ತ ಪುಸ್ತಕ—
ಡಾಕ್ಟರ್ ವಿ. ಆರ್. ಕೊರಡ್ಕಲ್ಲರಿಂದ ರಚಿತವಾದ

ಮನೆ ಮದ್ದು

ನೂರಾರು ಕಾಹಿಲೆಗಳಿಗೆ ಮನೆಯಲ್ಲೆ ಸುಲಭವಾಗಿ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಅತ್ಯುಪಯೋಗಿ ವೈದ್ಯ ಪುಸ್ತಕ.

ಗರ್ಭರಕ್ಷಣೆ, ಬಾಣಂತಿತನ, ಶಿಶುಪಾಲನೆ ಮೊದಲಾದ ವಿಷಯಗಳನ್ನು ವಿವರವಾಗಿ ಕೊಡಲಾಗಿದೆ.

ಬೆಲೆ: ರೂ 2—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾಪರಾಧಿಗಳಿಗೆ ನಾಗರಿಕ ತರಬೇತಿ

ಉಗ್ರಶಿಕ್ಷೆಯ ಸ್ಥಾನದಲ್ಲಿ ಯೋಗ್ಯ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆ

ಅಪರಾಧ ಪ್ರವೃತ್ತಿಯನ್ನು ನೋಡುವ ದೃಷ್ಟಿಯಲ್ಲಿ ಇಂದು ಸಾಕಷ್ಟು ಕ್ರಾಂತಿಯಾಗಿರುತ್ತದೆ. ಮನೋವೈಜ್ಞಾನಿಕ ಕ್ಷೇತ್ರದಲ್ಲಿ ದುಡಿಯುವ ತಜ್ಞರು ಅಪರಾಧಗಳ ಕಡೆಗೆ ಸಾಮಾನ್ಯವಾಗಿ ರೂಢಿಯಿರುವ ಅಭಿಪ್ರಾಯವನ್ನು ಪರಿವರ್ತಿಸುವುದಕ್ಕೆ ನೋಡಿ, ಯಶಸ್ಸು ಪಡೆದಿರುವರು. ಇದರ ಪರಿಣಾಮವಾಗಿ ದೈಹಿಕ ಬೇನೆಗಳ ಪಟ್ಟಿಗೆ ವೈದ್ಯರು ಹೇಗೋ, ಹಾಗೆ ಮಾನಸಿಕವಾದ ರೋಗಗಳಿಗೂ ತಜ್ಞರ ಸಲಹೆ ಮತ್ತು ಚಿಕಿತ್ಸೆಗಳು ಅಗತ್ಯವೆಂದು ಈಗ ತಿಳಿಯಲ್ಪಡುತ್ತಿದೆ. ಮನುಷ್ಯನ ಮನಸ್ಸನ್ನು ಸ್ವಚ್ಛವಾಗಿಡುವ, ಬುದ್ಧಿಯನ್ನು ಒಳ್ಳೆಯದಾಗಿಡುವ ಮತ್ತು ನಡತೆಯನ್ನು ಕಲಂಕರಹಿತ ಮಾಡುವ ಕೆಲಸದಲ್ಲಿ ಮನೋವೈಜ್ಞಾನಿಕ ಸ್ವರೂಪದ ಸಂಶೋಧನೆ ಮತ್ತು ಪ್ರಯೋಗಗಳು ತುಂಬ ಮಹತ್ವವನ್ನು ಪಡೆದಿವೆ. ಮನೋವಿಜ್ಞಾನವು ಸಾಮಾಜಿಕ ತಿಳುವಳಿಕೆಯನ್ನು ಹೆಚ್ಚಿಸುವುದರಲ್ಲಿ ಬಹಳಷ್ಟು ಕೆಲಸ ಮಾಡಿರುತ್ತದೆ. ವೇದಾಂತದಿಂದ ಹಿಡಿದು ಅಪರಾಧಗಳ ವರೆಗೆ ಇದುವರೆಗೆ ಜನರಲ್ಲಿದ್ದ ಕಲ್ಪನೆ ಮತ್ತು ಮಾಹಿತಿಯನ್ನು ಬುಡಮೇಲು ಮಾಡಿರುತ್ತದೆ. ಮನುಷ್ಯನ ಒಳ್ಳೆಯತನವನ್ನು ಮೆಚ್ಚುವುದಕ್ಕಿಂತಲೂ ಹೆಚ್ಚು ಕೆಟ್ಟತನವನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕೆಂದು ಮನೋವಿಜ್ಞಾನ ಹೇಳುತ್ತದೆ. ಮನುಷ್ಯನನ್ನು ದುರಾಚಾರಗಳಿಗೆ ಪ್ರೇರಿಸುವ ಸಾಧನ ಮತ್ತು ವಾತಾವರಣಗಳೇ ಪ್ರಬಲವಾಗಿವೆಯಲ್ಲದೆ, ಅವುಗಳ ಮುಂದೆ ಅವನ ಸದಸದ್ವಿವೇಕ ಬುದ್ಧಿಯ ಚೈತನ್ಯ ಶಕ್ತಿಹೀನವಾಗಿ ಭಾಸವಾಗುತ್ತದೆಂದು ಮನೋವಿಜ್ಞಾನಿಗಳ ಮತ. ಆತ್ಮಿಕ ಬಲವನ್ನು ವೃದ್ಧಿಗೊಳಿಸುವುದಕ್ಕೆ ನಾವು ನಿರಂತರ ಪ್ರಯತ್ನ ಪಡಬೇಕಾಗುವುದು; ಮತ್ತು ಅದಕ್ಕೆ ಯೋಗ್ಯ ತರಬೇತಿಯೂ ಅಗತ್ಯ. ನಮ್ಮ ಚಂಚಲ ಮನಸ್ಸನ್ನು ವಿವೇಕದ ಮುಷ್ಟಿಯಲ್ಲಿ ಸದಾಕಾಲ ಹಿಡಿದುಕೊಳ್ಳುವಷ್ಟು ಜಾಗರೂಕ ಪ್ರವೃತ್ತಿಯು ನಮ್ಮಲ್ಲಿ ಕಾಣಿಸಿಕೊಳ್ಳುವುದಕ್ಕೆ ಶಿಕ್ಷಣವೂ ಬೇಕು; ಮತ್ತು ಅನುಕೂಲ ವಾತಾವರಣವೂ ಬೇಕು. ಮನುಷ್ಯ ಹುಟ್ಟಿನಿಂದ ಪಡೆದುಬಂದದ್ದು ಕೇವಲ ಮೂಲ ಪ್ರವೃತ್ತಿಗಳನ್ನು ಮಾತ್ರ; ಆ ಪ್ರವೃತ್ತಿಗಳು ಜೀವನದಲ್ಲಿ ಯಾವ ಗತಿವಿಧಿಯನ್ನು ಹೊಂದುವುವೆಂಬುದನ್ನು ಅವನವನಿಗೆ ದೊರೆಯುವ ವಾತಾವರಣವನ್ನು ಮುಖ್ಯವಾಗಿ ಗಮನಿಸಿ ನಿರ್ಣಯಿಸಬೇಕಾಗುವುದು. ಆದುದರಿಂದಲೇ "ನಿನ್ನ ಸ್ನೇಹಿತನನ್ನು ತೋರಿಸಿದರೆ ನಿನ್ನ ವ್ಯಕ್ತಿತ್ವ ವರ್ಣನೆಯನ್ನು ಮಾಡುವೆ" ಎಂಬ ನಾಣ್ಣುಡಿ ಹುಟ್ಟಿಕೊಂಡಿತು. ಸಹವಾಸದ ಲಾಭದೋಷಗಳನ್ನು ಕಂಡೇ ಸರ್ವಜ್ಞ "ಸಜ್ಜನರ ಸಂಗ ಹೆಜ್ಜೇನು ಸವಿದಂತೆ ದುರ್ಜನರ ಕೂಡೆ ಒಡನಾಟ.

❖

ಆದುದರಿಂದ ಪಾಶ್ಚಾತ್ಯ ದೇಶಗಳಲ್ಲಿ ಇಂದು ಅಪರಾಧಿಗಳನ್ನು ನಡೆಸಿಕೊಳ್ಳುತ್ತಿರುವ ರೀತಿಯಲ್ಲಿ ಮೂಲಭೂತ ಬದಲಾವಣೆ ಕಂಡುಬರುತ್ತದೆ. ಪ್ರಾಯ ಭರಿತರಾದ ಜನರು ಮಾಡುವುದಕ್ಕಿಂತಲೂ ಹೆಚ್ಚು ಹಾವಳಿಯನ್ನು ಇನ್ನೂ ಎಳೆಯವರಾದ ಹುಡುಗರು ಮತ್ತು ತಾರುಣ್ಯಾವಸ್ಥೆಯಲ್ಲಿ ಕಾಲಿಟ್ಟ ಜನರು ಮಾಡುವರೆಂಬ ಸಂಗತಿ ಎಲ್ಲರಿಗೂ ಗೊತ್ತು. ಮನುಷ್ಯನ ಬುದ್ಧಿ ಮತ್ತು ನಡತೆಯನ್ನು ರೂಪಿಸುವುದಕ್ಕೂ ತಿದ್ದುವುದಕ್ಕೂ ಸುಯೋಗ್ಯವಾದ ಆ ಕಾಲವನ್ನು ದಂಡ ಶಾಸ್ತ್ರದ ಪ್ರಯೋಗಗಳಿಗೋಸ್ಕರ ಉಪಯೋಗಿಸುವುದಕ್ಕಿಂತ, ಅಪರಾಧಿಯಲ್ಲಿ ಮಾನವೀಯ ಭಾವನೆಯನ್ನು ಪ್ರಚೋದಿಸುವುದಕ್ಕೆ ಉಪಯೋಗಿಸಿದರೆ ಒಳ್ಳೆಯದಲ್ಲವೆ? ಆದುದರಿಂದ ಅಸಂಖ್ಯ ತಜ್ಞರ ಆಶ್ರಯದಲ್ಲಿ, ನುರಿತ ಮನೋವಿಜ್ಞಾನಿಗಳ ನೇತೃತ್ವದಲ್ಲಿ ಇಂಥ ಬಾಲಾಪರಾಧಿಗಳನ್ನು ಉತ್ತಮ ನಾಗರಿಕರನ್ನಾಗಿ ತರಬೇತಿ ಮಾಡುವ ಕೇಂದ್ರಗಳು ತೆರೆಯಲ್ಪಟ್ಟಿವೆ. ಪಾಶ್ಚಾತ್ಯ ದೇಶಗಳು ಮುನ್ನಡೆದಷ್ಟು ಹೆಚ್ಚು ಭಾರತದಲ್ಲಿ ಈ ಪ್ರಗತಿ ಸಾಧಿಸುವುದು ಕಠಿಣವೆನಿಸಿದೆ. ಹೀಗಿದ್ದರೂ ಈ ಹೊಸ ಪ್ರಯೋಗಗಳಿಗೆ ಅವಕಾಶ ಮಾಡಿಕೊಡುವ ಕೆಲವು ಕೇಂದ್ರಗಳು ನಮ್ಮಲ್ಲಿಯೂ ಇವೆ. ಸಾಮಾನ್ಯವಾಗಿ ಇವುಗಳನ್ನು ಸುಧಾರಣಾಲಯಗಳೆಂದು ಕರೆಯುವರು. ಪಾಶ್ಚಾತ್ಯ ದೇಶಗಳಲ್ಲಿ "ಸರಳು ಕಾಣದ ಸೆರೆಮನೆಗಳು" ತುಂಬ ಪ್ರಸಿದ್ಧವಾಗಿವೆ. ಕಾನೂನು ದೃಷ್ಟಿಯಲ್ಲಿ ಈ ಕೇಂದ್ರಗಳು ಸೆರೆಮನೆಗಳಾದರೂ ಅಲ್ಲಿ ಮನಸ್ಸನ್ನು ತಿದ್ದುವ ಕೆಲಸವೇ ನಡೆಯುತ್ತದಲ್ಲದೆ, ದಂಡ ಪ್ರಯೋಗಕ್ಕೆ ಪ್ರಾಶಸ್ತ್ಯವಿಲ್ಲ. ಭಾರತದಲ್ಲಿ ಮಕ್ಕಳ ದಂಡ ಶಾಸ್ತ್ರದನ್ವಯ ಮಾಡಿದ ತಪ್ಪುಗಳಿಗಾಗಿ ಶಿಕ್ಷೆಗೆ ಗುರಿಯಾದ ಹುಡುಗ ಹುಡುಗಿಯರನ್ನು ತಿದ್ದುವುದು ಈ ಕೇಂದ್ರಗಳ ಕರ್ತವ್ಯ. ಸರಕಾರವೇ ಸ್ವಂತ ಮೇಲ್ವಿಚಾರಣೆಯಿಂದ ಖರ್ಚು ವೆಚ್ಚವನ್ನೆಲ್ಲ ಸಹಿಸಿ ಇಂಥ ಕೇಂದ್ರಗಳನ್ನು ತೆರೆಯುತ್ತದೆ. ಕೆಲವೊಮ್ಮೆ ಖಾಸಗಿ ಜನರು ಸಾಕಷ್ಟು ಉತ್ಸಾಹ ತೋರಿಸಿದರೆ, ಅವರಿಗೆ ಸರಕಾರವು ಸಹಾಯ ಮಾಡಿ ಈ ಕೇಂದ್ರಗಳನ್ನು ನಡೆಸುವುದುಂಟು. ಮದರಾಸು ರಾಜ್ಯದಲ್ಲಿ ಚೆಂಗಲ್ಪೇಟೆ ಎಂಬಲ್ಲಿ ದೊಡ್ಡ ಹುಡುಗರಿಗಾಗಿ ಒಂದು ಸುಧಾರಣಾಲಯವಿದೆ. ಇಡೀ ರಾಜ್ಯಕ್ಕೆ ಈ ಮಾದರಿಯ ಕೇಂದ್ರ ಇದೊಂದೇ. ರಾಣಿ ಪೇಟೆ, ತಂಜಾವೂರು ಮತ್ತು ಬಳ್ಳಾರಿಗಳಲ್ಲಿ ಬೇರೆ ಮೂರು ಸುಧಾರಣಾಲಯಗಳು ಹನ್ನೆರಡು ವರ್ಷಕ್ಕೆ ಚಿಕ್ಕದ ಬಾಲಾಪರಾಧಿಗಳಿಗಾಗಿ ಇವೆ. ಚೆಂಗಲ್ಪೇಟೆಯ ಕೇಂದ್ರದಲ್ಲಿ ೧೨-೧೮ ವರ್ಷ ವಯಸ್ಸಿನವರು ಇರುವರು.

❖

ಚೆಂಗಲ್ಪೇಟೆಯ ಈ ಕೇಂದ್ರವು ವಿಜಯನಗರ ವಂಶದ ತಿಮ್ಮರಸನು ಕಟ್ಟಿಸಿದ್ದ ಪುರಾತನವಾದ ಕೋಟೆಯೊಂದರ ಮೇಲಿದೆ. ಇಲ್ಲಿರುವ ರಾಜ ಮಹಲನ್ನು ತಿಮ್ಮರಸನ ಅರ್ಧಾಂಗಿಯು ಕಂಜೀವರಮ್ಮಿನಲ್ಲಿರುವ ಶ್ರೀ ವರದರಾಜ ದೇವರನ್ನು ಪೂಜಿಸುವುದಕ್ಕೋಸ್ಕರ ಉಪಯೋಗಿಸುತ್ತಿದ್ದಳು. ಈ ಭವನದ ಮೇಲಿಂದ ಕಂಜೀವರಮ್ಮಿನ ದೇವಾಲಯವು ಚೆನ್ನಾಗಿ ಗೋಚರಿಸುತ್ತದೆ. ಹಿಂದೂ ಆಳಿಕೆಯ ಮುಕ್ತಾಯದ ಬಳಿಕ ಕೋಟೆಯು ಮುಸಲ್ಮಾನರ ಕೈಸೇರಿತು. ಕೊನೆಗೆ ಅದು ಈಸ್ಟ್ ಇಂಡಿಯಾ ಕಂಪೆನಿಯವರ ವಶಕ್ಕೆ ಬಂದಿತು. ಕಂಪೆನಿಯವರು ಈ ಕೋಟೆಯಲ್ಲಿ ಒಂದು ಸೆರೆಮನೆಯನ್ನು ಕಟ್ಟಿಸಿದರು. ೧೮೮೭ರಲ್ಲಿ ವಿದ್ಯಾ ಇಲಾಖೆಯ ಮೇಲ್ವಿಚಾರಣೆಯಲ್ಲಿ ಚೆಂಗಲ್ಪೇಟೆಯ ಸುಧಾರಣಾಲಯ ಸ್ಥಾಪನೆಗೊಂಡಿತು. ೧೯೨೦ರಲ್ಲಿ ಮದ್ರಾಸು ಮಕ್ಕಳ ದಂಡಶಾಸ್ತ್ರವು ಕಾಯಿದೆಯಾದ ಬಳಿಕ ಈ ಶಾಲೆಯನ್ನು ಈಗಿನ ಹೆಸರಾದ "ಸೀನಿಯರ್ ಸರ್ಟಿಫೈಡ್ ಸ್ಕೂಲ್" ಎಂದು ಕರೆದರು. ಮಕ್ಕಳನ್ನು ಅವರು ಬೆಳೆಯಬೇಕಾದ ಸ್ವಾಭಾವಿಕ ವಾತಾವರಣದಿಂದ ಬೇರ್ಪಡಿಸಿ ಈ ರೀತಿ ಕೇಂದ್ರಗಳಲ್ಲಿ ನೆಲೆಗೊಳಿಸುವುದು ಅಷ್ಟೊಂದು ಒಳ್ಳೆಯದಲ್ಲವೆಂದು ನಮಗೆ ತಿಳಿದಿದೆ. ಆದರೆ ತೀರಾ ಕೆಟ್ಟ ನಡತೆಯವರಿಗೆ ಮತ್ತು ಮನಸ್ಸಿನ ಮೇಲೆ ನಿಯಂತ್ರಣವಿಲ್ಲದವರಿಗೆ ಇಂಥ ಕೇಂದ್ರಗಳಲ್ಲಿ ತರಬೇತಿ ದೊರೆಯುವುದು ಅತ್ಯವಶ್ಯ. ಒಳ್ಳೆಯ ನಡತೆಯನ್ನೂ ಗುಣಶೀಲಗಳನ್ನೂ ಮನೆಯಲ್ಲಿರುವಾಗ ಮಗುವಿಗೆ ಇಟ್ಟುಕೊಳ್ಳಲು ಆಗದಿದ್ದರೆ ಇಂಥ ತರಬೇತಿ ಕೇಂದ್ರಗಳಲ್ಲಾದರೂ ಅದಕ್ಕೆ ಯೋಗ್ಯ ಶಿಕ್ಷಣವು ತಜ್ಞರಿಂದ ದೊರೆತರೆ ಕ್ಷೇಮ. ಕಾರ್ಯಾಲಯಗಳಲ್ಲಿ, ಶಾಲೆಗಳಲ್ಲಿ ಆಟ ವಿನೋದಗಳಲ್ಲಿ ಮತ್ತು ನಾಲ್ಕುಮಂದಿಯೊಟ್ಟಿಗೆ ಕೂಡಿ ಬೆರೆಯುವುದರಲ್ಲಿ ಮಗುವಿಗೆ ಆಸ್ಥೆಯುಂಟಾಗುವಂತೆ ಈ ಸುಧಾರಣಾಲಯಗಳು ನೋಡುತ್ತವೆ; ಮತ್ತು ತನ್ಮೂಲಕ ತನ್ನ ವ್ಯಕ್ತಿತ್ವವನ್ನು ಯೋಗ್ಯರೀತಿಯಲ್ಲಿ ವಿಕಸಿಸಿಕೊಳ್ಳಲೂ ಸುತ್ತಣ ಪರಿಸ್ಥಿತಿಯೊಂದಿಗೆ ಆರೋಗ್ಯಕರವಾದ ಸಾಮಂಜಸ್ಯವನ್ನು ಸ್ಥಾಪಿಸಿಕೊಳ್ಳಲೂ ನೆರವು ನೀಡುತ್ತವೆ. ಚೆಂಗಲ್ಪೇಟೆಯಲ್ಲಿರುವ ಸುಧಾರಣಾಲಯವು ಈ ಕೆಲಸದಲ್ಲಿ ಉಳಿದೆಲ್ಲ ಸಂಸ್ಥೆಗಳಿಗೆ ಆದರ್ಶಪ್ರಾಯವಾಗಿದೆ ಎಂಬುದಕ್ಕೆ ಡಾ. ಗಾಲ್ವೇಯೆಂಬವರು ಕೊಟ್ಟ ಪ್ರಶಸ್ತಿಯೇ ಸಾಕು. ರಾಷ್ಟ್ರಸಂಘದ ತಜ್ಞರಾದ ಈ ಮಹನೀಯರು ಚೆಂಗಲ್ಪೇಟೆಯ ಶಾಲೆಯ ಮಾದರಿಯನ್ನು ಮೆಚ್ಚಿಕೊಂಡದ್ದಲ್ಲದೆ, ಭಾರತದಲ್ಲಿರುವ ಬೇರೆ ಕೇಂದ್ರಗಳೂ ಈ ಶಾಲೆಯ ಅನುಕರಣೆ ಮಾಡುವಂತೆ ಅಧಿಕಾರಿಗಳು ನೋಡಬೇಕೆಂದು ಶಿಫಾರಸು ಮಾಡಿರುವರು.

❖

(೧೧ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other. Canara Mutual agents enjoy respect and regard from the public.

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact.

THE MANAGING DIRECTOR.
The CANARA MUTUAL ASSURANCE CO. Ltd.,
Head Office: **UDIPI**, S. INDIA. ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3-8-0
ಸಣ್ಣ ಬಾಟ್ಲಿಗೆ ರೂ 2-0-0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕೊರಿಯಾದ ಹಟಮಾರಿ ಮುದುಕ

ಸಿಂಗ್ಮನ್‌ರ್ಹೀಗೆ ಕೊರಿಯನ್ನರ ಕೈವಾರಿ ತಾನೆನ್ನುವ ಹೆಮ್ಮೆ

ಶಿಸಪೊಡೆಯಲ್ಲಿ ಕರಡಿ ಪ್ರವೇಶಿಸಿದಂತೆ ಕೊರಿಯಾದ ಯುದ್ಧವಿರಾಮದ ಸಂಧಿಯಲ್ಲಿ ಉಸ್ತಟವರ್ತನೆಯಿಂದ ಆತಂಕವನ್ನು ತಂದೊಡ್ಡುವ ದಕ್ಷಿಣ ಕೊರಿಯಾದ ಅಧ್ಯಕ್ಷ ಸಿಂಗ್ಮನ್‌ರ್ಹೀಯವರ ಮೇಲೆ ಈಗ ಎಲ್ಲರೂ ಉರಿದು ಬಿದ್ದಿರುವರು. ಎಪ್ಪತ್ತೆಂಟು ವರ್ಷ ವಯಸ್ಸಿನ ಭೀಷ್ಮಾಚಾರ್ಯರು ಪೌರುಷ ಪರಾಕ್ರಮದ ಪ್ರದರ್ಶನ ಮಾಡುವುದನ್ನು ನೋಡಿದರೆ, ಅಮೇರಿಕನಂತಿರಲಿ ಸಂಯುಕ್ತ ರಾಷ್ಟ್ರ ಸಂಘಕ್ಕೂ ತಲೆನೋವು ಬರುತ್ತದೆ. ಉತ್ತರ ಕೊರಿಯನ್ನರ ಆಕಸ್ಮಿಕ ಧಾಳಿಯಿಂದ ದಕ್ಷಿಣ ಕೊರಿಯವನ್ನು ರಕ್ಷಿಸಲು ಧಾವಿಸಿದ ಅಮೇರಿಕ ಮತ್ತು ಸಂಯುಕ್ತ ರಾಷ್ಟ್ರ ಸಂಘ ಇವೆರಡರ ಆಜ್ಞೆಯನ್ನು ಮೀರಿ ಸಿಂಗ್ಮನ್ನರು ಕೊರಿಯಾದಲ್ಲಿ ಕ್ಷೋಭೆ ತುಂಬಿದ ವಾತಾವರಣವನ್ನು ನಿರ್ಮಿಸಿರುವರು. ಇವರ ಈ ರೀತಿಯ ಛಲ ಮತ್ತು ವಿರೋಧಾಭಾಸ ಮೂಲವಾದ ವರ್ತನೆಯ ಮರ್ಮವೇನಿರಬಹುದು?

ನಿಷ್ಕರುಣ ಹೃದಯ

ಡಾ. ಸಿಂಗ್ಮನ್‌ರ್ಹೀಯವರು ಕೇವಲ ನಿಷ್ಕರುಣಿ, ಉಂಡಮನೆಯ ಗಳ ಎಣಿಸುವ ಜಾತಿಗೆ ಸೇರಿದವರೆಂದು ದೂರುವುದುಂಟು. ಆದರೆ ಅವರಷ್ಟು ಹೆಚ್ಚು ಕೊರಿಯದ ಮೇಲೆ ವಾತ್ಸಲ್ಯ ಮತ್ತು ಅಭಿಮಾನವಿಟ್ಟಿರುವ ಇನ್ನೊಬ್ಬ ವ್ಯಕ್ತಿ ಸಿಗಲಿಕ್ಕಿಲ್ಲ. ರ್ಹೀಯವರಿಗೆ ಕೊರಿಯವೇ ಲೋಕ. ಅದನ್ನುಳಿದು ಬೇರೆ ಜಗತ್ತಿಲ್ಲ. ಇಂದು ವಿಭಜನೆಗೊಂಡಿರುವ ಕೊರಿಯವನ್ನು ಒಂದು ಗೂಡಿಸುವೆನೆಂದವರು ದೃಢ ಸಂಕಲ್ಪ ಬದ್ಧರಾಗಿರುವರು. ಕೊರಿಯಾದ ಉದ್ಧಾರಕ್ಕೆ ತಮ್ಮನ್ನು ಬಿಟ್ಟರೆ ಬೇರೆ ಯಾರೊಬ್ಬರೂ ಉಳಿದಿಲ್ಲವೆಂದು ಅವರು ಗಟ್ಟಿ ನಂಬಿರುವರು. ಅದುದರಿಂದ ತನ್ನ ಅಧಿಕಾರ ಚಲಾವಣೆಯನ್ನು ನಿರ್ಭಾಧಿತ ಮಾಡುವುದಕ್ಕೆ ಅವರು ಭಗೀರಥ ಪ್ರಯತ್ನ ಮಾಡುತ್ತಾರೆ. ಇದರಲ್ಲಿ ಒಳ್ಳೆಯದು, ಕೆಟ್ಟದು ಎಂದು ತಾರತಮ್ಯ ಮಾಡುವುದಕ್ಕೆ ಅವರು ಹೋಗುವುದಿಲ್ಲ. ತನಗೆ ಅಗತ್ಯ ವೆನಿಸಿದ್ದೆಲ್ಲ ಒಳ್ಳೆಯದು, ಸೇರದೆ ಇದ್ದುದೆಲ್ಲ ಕೆಟ್ಟದು ಮತ್ತು ತ್ಯಾಜ್ಯವಾದುದೆಂದು ಸಿಂಗ್ಮನ್ನರ ಮತ. ಇಂಥ ಕಠೋರ ಮನಸ್ಸಿಂಬಾಗುವುದಕ್ಕೆ ಅವರ ಬಾಲ್ಯ ಮತ್ತು ತಾರುಣ್ಯದ ಪ್ರಥಮ ದಿನಗಳ ಕಟು ಅನುಭವವೇ ಕಾರಣ. ಶಾಲೆಯಲ್ಲಿ ಅವರು ಉತ್ತಮ ಶಿಕ್ಷಣವನ್ನು ಪಡೆದರು. ಶುದ್ಧ ಚೀನೀ ಭಾಷೆಯಲ್ಲಿ ಲಲಿತ ಕವನಗಳನ್ನೂ ಬರೆದರು. ಹಾಗೆಂದು ಈ ವಿದ್ಯಾರ್ಥಿ ದೆಸೆಯಲ್ಲಿಯೇ ಅನೇಕ ಚಿತ್ರಹಿಂಸೆಗಳನ್ನೂ ಸೆರೆಮನೆ ವಾಸವನ್ನೂ ಪಡೆದು, ಮೃದು ಮನಸ್ಸು ಕಲ್ಲಾಗುವಂತೆ ಮಾಡಿದರು. ರಾಜವಂಶಕ್ಕೆ ಸೇರಿದವರಾಗಿದ್ದರೂ ಸಿಂಗ್ಮನ್ನರು ಕೊರಿಯದಲ್ಲಿ ಆಳುತ್ತಿದ್ದ ಶಕ್ತಿಹೀನ ರಾಜರು ಜಪಾನೀಯರ ವರ್ಚಸ್ಸಿಗೆ ಬಗ್ಗುವನ್ನು ಕಂಡು ರೋಚ್ಚಿಗೆದ್ದು, ರಾಜಕೀಯ ಸಂಘಟನೆ ಮಾಡಿದರು. ಪರಿಣಾಮದಲ್ಲಿ ಏಳು ವರ್ಷಗಳ ಸೆರೆಮನೆವಾಸ ಮಾಡಬೇಕಾಯಿತು. ಈ ಕಾಲದಲ್ಲಿ ಅವರ ಕೊರಳಿಗೆ ಎರಡು ರಾತಲು ತೂಕದ ಗುಂಡನ್ನು ಸತತ ತೂಗ ಹಾಕಿದ್ದರು. ಉರಿಯುವ ಬಿದಿರ ಕಡ್ಡಿಗಳಿಂದ ಬೆರಳಿನ ಕಣ್ಣುಗಳನ್ನು ನೋಯಿಸಿದ್ದರು. ಇಂಥ ಪೆಟ್ಟು ತಿಂದುದರಿಂದಲೇ ಇರಬೇಕು--ಅವರ ನಡತೆಯಲ್ಲಿ ಮಾರ್ದವ ಮತ್ತು ಸಮಾಧಾನವಿಲ್ಲ!

ದೇಶ ಭ್ರಷ್ಟನ ತಪಸ್ಸು

೧೯೦೪ರಲ್ಲಿ ಬಿಡುಗಡೆ ಹೊಂದಿದ ಬಳಿಕ ಸಿಂಗ್ಮನ್ನರು ಅಮೇರಿಕಕ್ಕೆ ತೆರಳಿ ಬಂತಾರಾಷ್ಟ್ರೀಯ ಕಾಯಿದೆಯಲ್ಲಿ ಪಾಂಡಿತ್ಯ ಪಡೆದು ಪಿ. ಎಚ್. ಡಿ. ಪದವಿ ಸಂಪಾದಿಸಿದರು. ೧೯೧೦ರಲ್ಲಿ ಅವರು ಕೊರಿಯಾಕ್ಕೆ ವಾಪಾಸು ಬಂದಾಗ, ಅಲ್ಲಿ ಸಂಪೂರ್ಣ ಜಪಾನೀ ಆಕ್ರಮಣ ನಡೆದದ್ದು ಕಂಡು ಸಿಟ್ಟಿಗೆದ್ದರು. ಈ ಚಳುವಳಿಯಿಂದ ಆತ್ಮಘಾತವಾಗುವ ಸಂಭವ ಕಂಡು ಬರಲು ಹವಾಯಿ ದ್ವೀಪಕ್ಕೆ ಪಲಾಯನ ಮಾಡಿದರು. ಇಲ್ಲಿ ಸುಮಾರು ೩೦ ವರ್ಷ ಕಾಲ ದೇಶಭ್ರಷ್ಟನಂತೆ ದಿನಗಳೆದರು. ಕೆಲವು ದೇಶನಿಷ್ಠೆಯ ಕೊರಿಯನ್ನರು ತಾತ್ಕಾಲಿಕ ಕೊರಿಯನ್ ಪ್ರಜಾರಾಜ್ಯವನ್ನು ೧೯೧೯ರಲ್ಲಿ ಸ್ಥಾಪಿಸಿ, ಅದಕ್ಕೆ ಡಾ. ರ್ಹೀಯವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ತಮ್ಮ ಈ ಇಸ್ಲೇಟು ರಾಜ್ಯಕ್ಕೆ ಮನ್ನಣೆ ದೊರಕಿಸಿ ಕೊಳ್ಳುವ ಪ್ರಯತ್ನದಲ್ಲಿ ಸಿಂಗ್ಮನ್‌ರ್ಹೀಯವರು ಪೂರ್ವ ಹಾಗು ಪಶ್ಚಿಮದ ದೇಶಗಳ ತುಂಬ ಹಾರಾಡಿದರು. ಆದರೆ ಇವರೆಂದುದಕ್ಕೆ ಯಾರೊಬ್ಬರೂ ಕಿವಿಗೊಡಲಿಲ್ಲ. ಹೀಗೆ ಬಾಗ ಹಾಕುತ್ತ ೧೯೩೪ರಲ್ಲಿ ಕ್ರಿಶ್ಚಿಯನ್ ಪಂಥ ಸ್ವೀಕರಿಸಿದ್ದ ರ್ಹೀಯವರು ವಿಯನ್ನದ ಸ್ತ್ರೀಯೊಬ್ಬಳ ಕೈ ಹಿಡಿದು ಎರಡನೆ ಬಾರಿ ಮದುವೆಯಾದರು. ಚೀನಾದ ಚಿಯಾಂಗ ಕೈ ಶೇಕರನ್ನು ಬಿಟ್ಟರೆ ಉಳಿದವರಾರೂ ಇವರನ್ನು ಸಹಾನುಭೂತಿಯಿಂದ ನೋಡಲಿಲ್ಲ. ಜಪಾನೀಯರ ವಿರುದ್ಧ ಸಿಂಗ್ಮನ್‌ರ್ಹೀ ಮೂವತ್ತು ಸಾವಿರ ಕೊರಿಯನ್ನರ ಸೇನೆಯೊಂದಿಗೆ ಹೋರಾಡಿದರು. ಎರಡನೆ ಮಹಾ ಯುದ್ಧದಲ್ಲಿ ಜಪಾನು ಶರಣಾಗತವಾದುದೇ ತಡ—ರ್ಹೀಯವರ ಆಶಾ ಸಿದ್ಧಿಯಾಯಿತು. ದಕ್ಷಿಣ ಕೊರಿಯಾದ ಸಿಯೋಲದಲ್ಲಿ ವಿಮೋಚನೆಯ ಉತ್ಸವ ಜರಗುತ್ತಿದ್ದಾಗ ಈ ಭೀಷ್ಮಾಚಾರ್ಯರು ಪ್ರತ್ಯಕ್ಷರಾಗಿ ಮರಳಿಬಂದರು. ಜನತೆ ಅತ್ಯಂತ ಹರ್ಷದಿಂದ ಇವರನ್ನು ಸ್ವಾಗತಿಸಿತು. ರ್ಹೀಯವರು ಆ ಕೂಡಲೇ ಅಧಿಕಾರ ಸ್ಥಾನವನ್ನು ತನಗೋಸ್ಕರ ಭದ್ರಗೊಳಿಸಲು ಪ್ರಯತ್ನಿಸಿ ಯಶಸ್ಸುಗಳಿಸಿದರು. ಸಂಯುಕ್ತ ರಾಷ್ಟ್ರ ಸಂಘದ ನೇತೃತ್ವದಲ್ಲಿ ಉತ್ತರ ದಕ್ಷಿಣ ಕೊರಿಯಾಗಳೆರಡರಲ್ಲೂ ಚುನಾವಣೆ ನಡೆಯಬೇಕೆಂದಾಗ ರ್ಹೀ ಅದನ್ನು ಬಲವಾಗಿ ವಿರೋಧಿಸಿದರು. ೧೯೪೮ರಲ್ಲಿ ದಕ್ಷಿಣ ಕೊರಿಯದಲ್ಲಿ ಮಾತ್ರ ಚುನಾವಣೆ ನಡೆದು, ರ್ಹೀ ಅಧ್ಯಕ್ಷ ಪಟ್ಟಕ್ಕೆ ಬಂದರು.

ತನ್ನದೊಂದೇ ಗೊತ್ತು

ಆ ಮುಂದೆಯೂ— ಅವರ ಮೇಲೆಯೂ ಗೋಡೆಯ ಮೇಲೆ ಕುಳಿತ ಬೆಕ್ಕಿನಂತೆಯೇ ಸಿಂಗ್ಮನ್‌ರ್ಹೀಯವರು ವರ್ತಿಸುವರು. ಅವರ ಮನಸ್ಸಿನ ಉದ್ದೇಶವನ್ನು ಯಾರೊಬ್ಬನೂ ಮುಂದಾಗಿ ತಿಳಿದುಕೊಳ್ಳಲಾರ. ಜಾಣರಾದ ಅಮೇರಿಕನ್ನರಿಗೆ ಕೂಡ ಚಳ್ಳೆ ಹಣ್ಣು ತಿನ್ನಿಸಿದ ಮುತ್ಸದ್ದಿ ಸಿಂಗ್ಮನ್‌ರ್ಹೀ! ಕೊರಿಯಾವನ್ನು ಏಕೀಕರಿಸುವುದಕ್ಕೆ ಅಗತ್ಯ ಬಿದ್ದರೆ ಯುದ್ಧವನ್ನು ಕೈಗೊಳ್ಳಲೂ ತಾವು ಸಿದ್ಧರೆಂದು ಸಿಂಗ್ಮನ್ನರು ಮೊದಲಿಂದಲೂ ಹೇಳುತಿದ್ದರು. ಅಮೇರಿಕೆಯನ್ನು ಶಸ್ತ್ರಾಸ್ತ್ರ ಪೂರೈಕೆಗೋಸ್ಕರ ಯಾವಾಗಲೂ ಪೀಡಿಸುತಿದ್ದರು. ಆದರೆ ಈ ಮುದುಕನ ಕೈಗೆ ಬಂದೂಕು ಕೊಟ್ಟರೆ ಎಲ್ಲಿ ತೃತೀಯ ಜಾಗತಿಕ ಯುದ್ಧಕ್ಕೆ ನಾಂದಿ ಹೇಳುವನೋ ಎಂಬ ಭಯದಿಂದ ಅಮೇರಿಕ ಸುಮ್ಮನುಳಿಯಿತು. ಅಮೇರಿಕನ್ನರನ್ನು ದೊಣ್ಣೆಗಬ್ಬಿಸಲೆಂದೋ ಏನೋ— ಸಿಂಗ್ಮನ್‌ರ್ಹೀ ಕೊರಿಯಕ್ಕಾಗಿ ಹೋರಾಡುವುದಕ್ಕೆ ಅಮೇರಿಕೆಯು ಬರಬೇಕಾಗಿಲ್ಲ ಎಂದು ಸಾರಿದರು. ಹೀಗೆ ಹೇಳಿದ ಹತ್ತೇ ವಾರಗಳಲ್ಲಿ ಉತ್ತರದ ಕಮ್ಯೂನಿಸ್ಟರು ದಕ್ಷಿಣದವರ ಮೇಲೆ ಆಕ್ರಮಣ ನಡೆಸಿದಾಗ— ರ್ಹೀಯವರ ಬಾಯಿಂದ ಬೇರೆಯೇ ಮಾತು ಬಂದದ್ದು, ಅಮೇರಿಕಾ ಎಷ್ಟು ಸಹಾಯ ಮಾಡಿದರೂ ದಕ್ಷಿಣ ಕೊರಿಯಕ್ಕೆ ಸಾಕಾಗದಾಯಿತು. ಹಾಗೆಂದು ನಡೆದ ಸಹಾಯಕ್ಕೆ ಪ್ರತಿಯಾಗಿ ಕೃತಜ್ಞತೆಯ ಒಂದೇ ಒಂದು ಮಾತನ್ನು ಅವರು ಹೇಳಿಲ್ಲ; ಅವರ ವರ್ತನೆಯಂತೂ ಗರ್ಜನೆಯೇ ಆಗಿಯೇ ಇರುತ್ತದೆ. ಬೇರೆಯವರ ಹಿತ ನುಡಿಗಳನ್ನು ಕೇಳಿಯೇ ಗೊತ್ತಿಲ್ಲದವರಂತೆ, ಸಿಂಗ್ಮನ್‌ರ್ಹೀ ನಡೆದುಕೊಂಡಿರುವರು ರಾಷ್ಟ್ರಸಂಘ ಮತ್ತು ಅಮೇರಿಕೆಯ ಸೂಚನೆ ಮತ್ತು ಸಲಹೆಗಳನ್ನು ಕೊರಿಯಾ ಯುದ್ಧರಂಗದಲ್ಲೂ ರಾಜಕೀಯ ಕ್ಷೇತ್ರದಲ್ಲೂ ಯಾವಾಗಲೂ ಮುರಿಯುವ ಅಭ್ಯಾಸ ರ್ಹೀಯವರಿಗಿದೆ. ಕಮ್ಯೂನಿಸ್ಟರೆಂದರೆ ಅವರಿಗೆ ಬದ್ಧ ದ್ವೇಷ. ಅದಕ್ಕಾಗಿಯೇ ಅಮೇರಿಕ ರ್ಹೀಯವರ ಕೈಗೊಂಬೆಯಂತೆ ಕುಣಿಯುತ್ತದೆ. ರಶಿಯದಷ್ಟೇ ಜಪಾನನ್ನು ರ್ಹೀ ವಿರೋಧಿಸುತ್ತಾರೆ. ಕೊರಿಯಾದ ದುರ್ದೆಶೆಗೆ ಜಪಾನೇ ಹೊಣೆ ಎಂದವರ ಅಚಲ ನಂಬಿಗೆ. ಕೊರಿಯಾದ ರಣರಂಗದಲ್ಲಿ ರಾಷ್ಟ್ರಸಂಘದ ಸೈನ್ಯಬಲ ತಗ್ಗಿಕೊಂಡಾಗ ಜಪಾನೀ ಸೈನಿಕರನ್ನು ಉಪಯೋಗಿಸುವ ಸೂಚನೆ ಬಂದಿತ್ತು. ಸಿಂಗ್ಮನ್ನರು ಆಗ ಜಪಾನೀ ಸೈನಿಕರನ್ನು ಮೊದಲು ಕೊಂದು ಆ ಬಳಿಕ ಕಮ್ಯೂನಿಸ್ಟರ ಕೂಡೆ ಕಾಳಗ ಮಾಡುವ ಬೆದರಿಕೆ ಹಾಕಿದರು. ಜಪಾನೀಯರ ಆಳಿಕೆಯ ಕಾಲದಲ್ಲಿ ದಂಗೆಗಾರರಾಗಿದ್ದ ರ್ಹೀಯವರನ್ನು ಹಿಡಿದು ಕೊಟ್ಟ... ಮೂರು ಲಕ್ಷ ಡಾಲರು ಬಹುಮಾನ ಘೋಷಿಸಿದ್ದು ... ರಿದ್ದುದೇ ಈ ವೈರದ ಹೇತು. ಇಂಥ ರ್ಹೀಯವರನ್ನು ಜನತೆ ಮೆಚ್ಚಿಕೊಳ್ಳುತ್ತಿಲ್ಲವಾದರೂ, ಅವರ ಆಳಿಕೆ ಸಂತೋಷಪ್ರದವಾಗಿಲ್ಲ. ಪೋಲೀಸರದೇ ಕಾರುಬಾರು. ಇವರು ನಿರ್ದಯರು ನೀಚರು, ನಿರಂಕುಶಾಧಿಕಾರಿಗಳು ಲಂಚಗುಳಿಗಳು; ಒಂದಲ್ಲ ಒಂದು ಸಲ ಸರಕಾರಕ್ಕೆ ಮೋಸ ಮಾಡಿದವರೇ ಆಗಿರುವರು. ರ್ಹೀಯೊಬ್ಬರೇ ಪವಿತ್ರ ಚರಿತ್ರರು. ಉತ್ಕಟ ದೇಶ ವಾತ್ಸಲ್ಯವನ್ನಿಟ್ಟುಕೊಂಡು ಶತಮಾನಗಳ ಪಾಳೆಯ ಗಾರಪದ್ಧತಿ ಮತ್ತು ದಶಮಾನಗಳ ಜಪಾನೀ ದಾಸ್ಯದಿಂದ ಜರ್ಜರಿತವಾದ ಕೊರಿಯವನ್ನು ಆಳುತ್ತಿರುವುದು ಅವರು ಮೋಜಿಯಾಗಿ ದ್ದಂತೆ ದೊಡ್ಡ ದೆನ್ನೆಯ ಮಾತೂ ಹೌದು. ಅಖಿಲ ಕೊರಿಯಾದ ಅಧಿನಾಯಕನಾಗಿ ಮೆರೆಯಬೇಕೆಂಬುದೊಂದೇ ಮುದುಕನಿಗೆ ಈ ... ಎಂಬ... ವಿಲಕ್ಷಣ ವ್ಯಕ್ತಿಯ ಈ ಉದ್ದೇಶ ಸಾಧನೆಯು ಲೋಕ ನೀತಿಗಳಿಗೂ ವಿಲಕ್ಷಣವಾಗಿರುವುದಕ್ಕೆ ಈಗಿನ ಘಟನೆಗಳೇ ರುಜುವಾತು.

(ಆಧಾರದಿಂದ)

ZANDU ಝೂಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝೂಂಡೂ ಬ್ರಾಹ್ಮೀ ಹೇರ್ ಆಯಿಲ್ } ಮಿದುಳಿಗೆ ತಂಪು- ಮನಸ್ಸಿಗೆ
Zandu Brahmi Hair Oil } ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ತಲಿಗೆ ರೂ. 1.

ಝೂಂಡೂ ಸರಸಪರಿಲ್ಲಾ } ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿ
Zandu Sarasaparilla } ಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ 1-5-0

Zandu Zavi Drops } ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾ
ಝೂಂಡೂ ಜ್ಯಾವಿ ಡ್ರೋಪ್ಸ್ } ಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ- ರೂ. 2-.2-0

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು:—
ಮಂಗಳೂರು. ಶಾ ಕಂಪೆನಿ, ಜಂಟನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್.
ಇನ್ಸಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.
ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಶ್ರೀ ರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಬಳ್ಳಾರಿಯಲ್ಲಿ ಆಂಧ್ರರು ನಡೆಸಿದ ಗುಲ್ಲು

ಭಾರತ ಸರಕಾರದ ನಿರ್ಣಯದ ಮೇಲೆ ಏನೊಂದೂ ಪರಿಣಾಮ ಮಾಡದೆಂದು ಮೌಲಾನಾ ಅಜಾದರ ಹೇಳಿಕೆ

ತೆಲುಗರ ಪುಂಡಾಟಿಕೆ

ಮರಳಿ ವಾರ್ತಾಲಾಪಗಳಲ್ಲಿ ಆಂಧ್ರ ರಾಜ್ಯ ರಚನೆಯ ಪ್ರಶ್ನೆಗೆ ಪ್ರಾಶಸ್ತ್ಯ ಬಂದಿರುತ್ತದೆ. ಇದಕ್ಕೆ ಕಾರಣರೂಪದಲ್ಲಿ ಬಳ್ಳಾರಿಯಲ್ಲಿ ಆಂಧ್ರದ ಪುಂಡರು ನಡೆಸಿದ ಗಲಭೆ ಮತ್ತು ಗೊಂದಲಗಳಿವೆ. ಬಳ್ಳಾರಿಯನ್ನು ಮೈಸೂರಿನೊಡನೆ ಸೇರಿಸತಕ್ಕುದೆಂದು ನ್ಯಾಯಮೂರ್ತಿ ಮಿಶ್ರಾರವರು ಕೊಟ್ಟ ತೀರ್ಪನ್ನು ವಿರೋಧಿಸುವ ನೆವದಲ್ಲಿ ಬಳ್ಳಾರಿಯ ಕೆಲವು ಆಂಧ್ರರು ಜನಮೆಚ್ಚದ ಪುಂಡಾಟಿಕೆಯನ್ನು ನಡೆಸಿದರು. ಕನ್ನಡಿಗರನ್ನು ನೋಯಿಸುವುದು ಮತ್ತು ಉದ್ರೇಕಪರ ಭಾಷಣಗಳ ಮೂಲಕ ಆಂಧ್ರರಲ್ಲಿ ವೈಷಮ್ಯ ಬಿತ್ತುವುದು ಈ ಚಟುವಟಿಕೆ ನಡೆಸುವವರ ಕಾರ್ಯಕ್ರಮವಾಗಿದೆ. ಉದಾಹರಣೆಗೆ ೧೫ನೇ ದಿನಾಂಕ ಕನ್ನಡದಲ್ಲಿ ಬರೆದ ನೈನ ಬೋರ್ಡುಗಳನ್ನೆಲ್ಲ ಕಿತ್ತುಹಾಕುವುದು, ಶಾಲೆ, ಹೈಸ್ಕೂಲು ಮುಂತಾದವುಗಳನ್ನು ಮುಚ್ಚಬೇಕೆಂದು ವಿನಾಃಕಾರಣ ಒತ್ತಾಯಿಸುವುದು, ಅಂಗಡಿಗಳನ್ನು ಲೂಟಿ ಮಾಡುವುದು ಇವೇ ಮೊದಲಾದ ದುಷ್ಕೃತ್ಯಗಳನ್ನು ಆಂಧ್ರರು ನಡೆಸಿದರು. ಆಂಧ್ರ ಮುಖಂಡರಾದ ಶ್ರೀ ಕೋಟಿ ರೆಡ್ಡಿ, ತಿಮ್ಮಾರೆಡ್ಡಿ ಮುಂತಾದವರು ಸಾರ್ವಜನಿಕ ಸಭೆಯೊಂದರಲ್ಲಿ ಮಿಶ್ರರ ತೀರ್ಪನ್ನು ಉಗ್ರವಾಗಿ ಖಂಡಿಸಿದ್ದಲ್ಲದೆ— ಬಳ್ಳಾರಿಯನ್ನು ಇನ್ನೊಂದು ಕುರುಕ್ಷೇತ್ರ ಮಾಡಿಯಾದರೂ ಆಂಧ್ರರಿಗೆ ನ್ಯಾಯ ಸಿಗುವಂತೆ ಮಾಡಬೇಕೆಂದು ಪ್ರೇರೇಪಣೆಯೊದಗಿಸಿದುದರಿಂದ ಈ ಎಲ್ಲ ಅನರ್ಥಗಳು ಸಂಭವಿಸಿದುವು ತಿಳಿವಳಿಕೆಯುಳ್ಳ ಯಾವ ಹೊಣೆಗಾರ ವ್ಯಕ್ತಿಯೂ ಘಟನಾತ್ಮಕವಲ್ಲದ ಮಾರ್ಗಗಳನ್ನು ಉಪಯೋಗಿಸಿ ರಾಜಕೀಯ ಉದ್ದೇಶ ಸಾಧಿಸಬೇಕೆಂದು ಹೇಳಲಾರ. ಇಂಥದರಲ್ಲಿ ಆಂಧ್ರ ಧುರೀಣರು ಕಲಿಯುಗದ ಕುರುಕ್ಷೇತ್ರವನ್ನು ಕುರಿತಾದ ಪೊಲಸು ಮಾತುಗಳನ್ನಾಡುವುದು ಮತ್ತು ತಿಳಿಗೇಡಿಗಳನ್ನು ದುಷ್ಕೃತ್ಯವೆಸಗಲು ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸುವುದು ಸರ್ವಥಾ ಸರಿಯಲ್ಲ. ಇಂಥ ಪುಂಡಾಟಿಕೆ ನಡೆದ ಸಮಯದಲ್ಲಿ. ಪೋಲೀಸರು ಇತ್ಯಾದಿ ಸರಕಾರೀ ಅಧಿಕಾರಿಗಳು ಆಂಧ್ರದ ಪಕ್ಷವಹಿಸಿದವರೆಂಬಂತೆ ನಿಷ್ಕ್ರಿಯರಾಗಿ ಕೈಕಟ್ಟಿ ಕುಳಿತಿದ್ದರೆಂದೂ ಕನ್ನಡಿಗರ ಆಕ್ಷೇಪವಿದೆ. ಇದು ನಿಜವಾದಲ್ಲಿ—ಸರಕಾರ ಇಂಥ ಕರ್ತವ್ಯ ಪರಾಙ್ಮುಖರಾದ ಅಧಿಕಾರಿಗಳ ವಿರುದ್ಧ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳುವುದವಶ್ಯ.

ಅಜಾದರಿಂದ ಖಂಡನೆ

ಸದ್ಯ ಬಳ್ಳಾರಿಯಲ್ಲಿ ಶಾಂತಿಯನ್ನು ಮರಳಿ ಸ್ಥಾಪಿಸಿರುವರೆಂದು ವರದಿ ಬಂದಿರುತ್ತದೆ. ಸರಕಾರವು ಹೊಸ ಪೋಲಿಸ ಮುಖ್ಯಾಧಿಕಾರಿಯನ್ನು ಈ ಗಲಭೆ ಅಣಗಿಸುವುದಕ್ಕೋಸ್ಕರ ಕಳಿಸಿದ್ದು, ಅವರು ಎಲ್ಲ ಜಾಗ್ರತೆ ವಹಿಸಿ ಯಾವದೇ ಕ್ರಮದ ಅನ್ಯಾಯಗಳು ಘಟಿಸದಂತೆ ದಕ್ಷತೆ ವಹಿಸುತ್ತಿರುವರು. ಹಾಗೆಂದು ಆಂಧ್ರರಲ್ಲಿ ಮಾತ್ರ ಸಹೃದಯತೆ ಉಂಟಾಗಿರುವುದು ಕಂಡುಬಂದಿಲ್ಲ. ಬಳ್ಳಾರಿಯಲ್ಲಿ ನಡೆದ ಗಲಭೆ ಗೊಂದಲಗಳನ್ನು ಖಂಡಿಸಿ ಮೌಲಾನಾ ಅಜಾದರು ಕೇಂದ್ರ ಸರಕಾರದ ಪರವಾಗಿ ಒಂದು ಹೇಳಿಕೆಯನ್ನು ಹೊರಡಿಸಿರುವರು. ಇದರಲ್ಲಿ ಆಂಧ್ರರ ಪುಡುಗುತನವನ್ನು ಉಗ್ರವಾಗಿ ಪತ್ತಿಕ್ಕಲಾಗುವುದೆಂದು ಹೇಳಿದ್ದಾರಲ್ಲದೆ, ಪುಂಡಾಟಿಕೆಯ ಪರಿಣಾಮವಾಗಿ ಸರಕಾರದ ನಿರ್ಣಯವು ಲೇಶ ಮಾತ್ರವೂ ಬದಲಾಗದೆಂದೂ ಹೇಳಿರುವರು. ವಿಧ್ವಂಸಕ ಕೃತ್ಯಗಳನ್ನು ಒಡನೆಯೇ ದಮನಿಸುವುದು ಕರ್ತವ್ಯವಾಗುತ್ತದಲ್ಲದೆ, ಅವುಗಳಿಗೆ ಹೆದರಿಕೊಂಡೆಂಬಂತೆ, ಸರಕಾರದ ನೀತಿಯಲ್ಲಿ ಪರಿವರ್ತನೆ ಮಾಡುವುದು ಅನರ್ಥಕ್ಕೆ ಹೇತುವಾದೀತು ಭಾರತ ಸರಕಾರಕ್ಕೆ ಇಂಥ ಅಂಜುಬುರುಕತನವಿಲ್ಲೆಂದು ಮೌಲಾನಾ ಅಜಾದರು ಸಕಾಲದಲ್ಲಿ ಸ್ಪಷ್ಟಗೊಳಿಸಿದ್ದು ಸಂತೋಷಪ್ರದ. ಆಂಧ್ರರು ಭಾರತದ ಉಪ ಪ್ರಧಾನಿಗಳ ಹಿತೋಕ್ತಿಯನ್ನು ಕಿವಿಗೊಟ್ಟು ಕೇಳಿ, ಸುಮ್ಮನುಳಿಯುತಿದ್ದರೆ ಒಳ್ಳೆಯದಿತ್ತು. ಆದರೆ ಅವರು ಇದರಿಂದ ಇನ್ನಷ್ಟು ಅಸಂತೋಷಗೊಂಡಂತೆ, ತೋರಿಸಿಕೊಂಡಿರುವರು. ಮೌಲಾನಾ ಅಜಾದರು ಕೊಟ್ಟ ಹೇಳಿಕೆಯಲ್ಲಿ ನ್ಯಾಯಮೂರ್ತಿ ಮಿಶ್ರಾರ ವರದಿಯು ಸಂಬಂಧಿಸಿದ ಎಲ್ಲ ಸಂಗತಿಗಳ ಕೂಲಂಕಷ ಅವಲೋಕನದ ಪರಿಣಾಮವಾಗಿ ಸಿದ್ಧಗೊಂಡಿತ್ತೆಂದು ವಿಶದೀಕರಿಸಿರುವರಲ್ಲದೆ, ಬಳ್ಳಾರಿ ತಾಲೂಕು ಕನ್ನಡಕ್ಕೆ ಸೇರಿದ ಪ್ರದೇಶವೆಂಬುದನ್ನು ಭಾರತ ಸರಕಾರ ಅದಕ್ಕೂ ಮುಂಚೆಯೇ ಚೆನ್ನಾಗಿ ಗ್ರಹಿಸಿದ್ದಿತೆಂದು ಧ್ವನಿಸಿರುವರು. ಭಾರತ ಸರಕಾರದ ಸಾವಾ ನ್ಯಾಬಿಪ್ರಾಯಕ್ಕೆ ಮಿಶ್ರರ ವರದಿಯು ಸಂಶೋಧಿತ ಒಪ್ಪಿಗೆಯನ್ನು ಕೊಟ್ಟಂತೆ ಪರಿಣಮಿಸಿತು. ಇದರಲ್ಲಿ ಆಂಧ್ರರಿಗೆ ಅನ್ಯಾಯವಾಗಿದೆಯೆಂದು ಇನ್ನೂ ಬೊಬ್ಬಿಡುವುದರಲ್ಲಿ ಏನು ಪುರುಷಾರ್ಥವಿದೆ?

ಅನಾವಶ್ಯಕವಾದ ಗುಲ್ಲು

ಆದರೆ ಈ ಮಾತನ್ನು ಆಂಧ್ರರು ಕೇಳಬೇಕಲ್ಲ! ತಮಗೆ ಹಿತ ನುಡಿಯಲು ಬಂದ ಮೌಲಾನಾ ಅಜಾದರ ಮೇಲೆ ಆಂಧ್ರರು ತಿರುಗಿಬಿದ್ದರು ಸಾರ್ವಜನಿಕ ವೇದಿಕೆಯಮೇಲಿಂದ ಅಜಾದರ ಹೇಳಿಕೆಯನ್ನು ಅರ್ಥ ಶೂನ್ಯವೆಂದು ಹೀಗಳೆದರು. ಅಜಾದರು ಹಾಗೆ ಪ್ರಕಟಣೆ ಹೊರಡಿಸಿದುದೇ ತಪ್ಪೆಂದು ಒಪ್ಪಿಕೊಂಡು ಹೇಳಿಕೆ ನೀಡಬೇಕಾಗಿ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು. ದಿನಾಂಕ ೨೦ರಂದು ಆಂಧ್ರ ವಿಚಾರಣೆಯು ಈ ರೀತಿಯಲ್ಲಿ ಆಚರಿಸಲ್ಪಟ್ಟಿತು. ಇದನ್ನು ವಿಮರ್ಶಿಸಿದರೆ ನಾವು ಭಾಷಾರಾಜ್ಯಗಳ ಹೆಸರಿನಲ್ಲಿ ಅನುಚಿತ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುತ್ತಿರುವೆವೊ ಎಂದೆನಿಸುತ್ತದೆ. ತಮ್ಮ ಪಕ್ಷಕ್ಕೆ ಆಗಬಹುದಾದ ಅಲ್ಪ ನಷ್ಟವನ್ನು ಕೂಡ ಇನ್ನೊಂದು ಪಕ್ಷಕ್ಕಾಗಬಹುದಾದ ದೊಡ್ಡ ಲಾಭದ ಮೇಲಿಂದ ಸಹಿಸಿಕೊಳ್ಳಲಾಗದ ಜನರು ನಾವಾಗಿ ಪರಿಣಮಿಸಿದ್ದೇವೆ. ಜನಮತಕ್ಕೆ ಅವಕಾಶ ಕೊಡಬೇಕೆಂದು ಈಗ ಆಂಧ್ರರು ಮರಳಿ ಬೇಡುವುದರಲ್ಲಿ ಅರ್ಥವೇನು? ಸರಕಾರೀ ಜನಗಣನೆಯ ಆಧಾರದ ಮೇಲಿಂದಲೇ ಮಿಶ್ರರು ಬಳ್ಳಾರಿಯು ನ್ಯಾಯವಾಗಿ ಕನ್ನಡಕ್ಕೆ ಸಲ್ಲತಕ್ಕುದೆಂದು ಹೇಳಿರುವರು. ಇನ್ನೂ ಇನ್ನೂ ಈ ಮತ್ತು ಇಂಥದೇ ಹಳೆಯ ಪ್ರಶ್ನೆಗಳನ್ನು ಕೆದಕಿ ತೆಗೆಯುವುದು ಅನಾವಶ್ಯಕ. ಇಕ್ಕಡೆಯವರೂ ವಿಭಜನೆಯ ಈ ಸಂಧಿಕಾಲದಲ್ಲಿ ತಮಗೊದಗಬಹುದಾದ ಸಾಮಾನ್ಯ ಆತಂಕ ಮತ್ತು ತೊಡಕುಗಳನ್ನೂ ಕಷ್ಟನಷ್ಟಗಳನ್ನೂ ತಾಳ್ಮೆಯಿಂದ ಸಹಿಸಿ ಕೂಡುವುದರಲ್ಲಿ ಔಚಿತ್ಯವಿದೆ. ನಾಳೆ ನೇಮಕಗೊಳ್ಳಬೇಕಿರುವ ಗಡಿ ನಿರ್ಣಯ ಸಮಿತಿಯು ತೀರ್ಪಿಗೂ ಈ ಮಾತು ಅನ್ವಯಿಸುತ್ತದೆ. ನ್ಯಾಯಬದ್ಧವಾಗಿ ಒಮ್ಮೆ ಇತ್ಯರ್ಥಗೊಂಡ ವಿಷಯದ ಮೇಲೆ ವ್ಯರ್ಥವಾದವಿವಾದಗಳನ್ನು ಜ್ಯಾರಿಯಲ್ಲಿಡುವುದೂ ವಿಧ್ವಂಸಕ ಕೃತ್ಯಗಳಿಗೆ ತೊಡಗುವುದೂ ಆಂಧ್ರರಿಗಾಗಲೀ-ಕನ್ನಡಿಗರಿಗಾಗಲೀ ಶೋಭಿತರುವುದಿಲ್ಲ. ಪುಂಡಾಟಿಕೆ ಮತ್ತು ಅಶಾಂತ ವಾತಾವರಣವನ್ನು ಪ್ರತಿಭಟಿಸಿ ಶಾಂತಿ ಮತ್ತು ವ್ಯವಸ್ಥೆಗಳನ್ನು ನೆಲೆಗೊಳಿಸುವುದು ಭಾಷಾ ರಾಜ್ಯದ ಪ್ರಶ್ನೆಗಿಂತಲೂ ಹೆಚ್ಚು ಮಹತ್ವದ್ದಾಗುವುದರಿಂದ, ಆಂಧ್ರರು ನಡೆಸಿದ ಕಾರ್ಯ ಅವರ ಉದ್ದೇಶಕ್ಕೆ ಸರ್ವಥಾ ಪೋಷಕವೆನಿಸದು.

ತುಂಗಭದ್ರೆಯ ಅಣೆಕಟ್ಟು

ಆಂಧ್ರ ರಾಜ್ಯವು ಮುಂದಿನ ಅಕ್ಟೋಬರ ೧ನೇ ದಿನಾಂಕ ಅಸ್ತಿತ್ವಕ್ಕೆ ಬಂದೇ ತೀರುವುದೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಹೇಳಿರುವರು. ಅದಕ್ಕೆ ಮುಂಚೆ ವಿಭಜನೆಗೆ ಸಂಬಂಧಿಸಿದೆಲ್ಲ ಸಂಗತಿಗಳು ಇತ್ಯರ್ಥಗೊಳ್ಳುವುವೊ ಹೇಗೆಂಬ ಬಗ್ಗೆ ಸಂಶಯವಿದ್ದರೂ, ರಾಜ್ಯರಚನೆಯ ದಿನವನ್ನು ಇವು ಮುಂದೂಡಲಾರವೆಂದು ರಾಜಾಜಿ ಸ್ಪಷ್ಟಗೊಳಿಸಿರುವರು. ಇನ್ನು ನಿರ್ಣಯವಾಗದೆ ಉಳಿಯಬಹುದಾದ ವಿಷಯಗಳನ್ನು ಭಾರತ-ಪಾಕಿಸ್ತಾನ ವಿಭಜನೆಯ ಬಳಿಕ ಮಾತುಕತೆ, ವಿಚಾರ-ವಿನಿಮಯಗಳಿಂದ ಬಗೆಹರಿಸಲು ನೋಡಿದಂತೆಯೇ ಇತ್ಯರ್ಥವಾಡಲಾಗುವುದೆಂದು ಅವರು ಹೇಳಿರುವರು. ವಿಭಜನಾ ಸಮಿತಿಯಲ್ಲಿ ಮದ್ರಾಸಿನ ಈಗಿನ ಸರಕಾರದ ಕೈಯೇ ಬಲವಾಗಿದೆಯೆಂದು ಆಂಧ್ರರು ದೂರುವುದನ್ನು ರಾಜಾಜಿ ಖಂಡಿಸಿದರು. ಈ ಎಲ್ಲ ಸಂಗತಿಯಲ್ಲಿ ಭಾರತ ಸರಕಾರವೇ ತೀರ್ಪುಕೊಡುವ ಸ್ಥಾನದಲ್ಲಿದೆ ಮತ್ತು ಆ ಹೊಣೆಯನ್ನು ಹೊತ್ತುಕೊಂಡಿದೆ ಎಂದು ರಾಜಾಜಿ ಹೇಳಿರುವರು. ಆದಕಾರಣ ಆಂಧ್ರ ಜನತೆ ಮದ್ರಾಸು ಸರಕಾರವು ತಮಗೆ ಅನ್ಯಾಯ ಮಾಡುವುದೆಂದು ಸಂಶಯಗ್ರಸ್ತವಾಗುವುದು ಬೇಡ. ಮದ್ರಾಸ ರಾಜ್ಯಕ್ಕೆ ಆಂಧ್ರದ ವಿಭಜನೆಯಿಂದ ಪ್ರತ್ಯಕ್ಷವಾಗಿ ಒದಗುವ ನಷ್ಟಗಳಲ್ಲಿ ತುಂಗಭದ್ರಾ ಯೋಜನೆಯ ವೆಚ್ಚ ಮುಖ್ಯವಾದುದೆನ್ನಬಹುದು. ತುಂಗಭದ್ರೆಗೆ ಅಣೆಕಟ್ಟು ಹಾಕುವುದಕ್ಕೆ ಮದ್ರಾಸು ಸರಕಾರದ ಹಣ ಪೂರೈಸಿತು. ಈಗ ಅಣೆಕಟ್ಟಿನ ಫಲವನ್ನುಣ್ಣುವ ಭಾಗ್ಯ ಮೈಸೂರಿನೊಡನೆ ಸೇರಲಿರುವ ಬಳ್ಳಾರಿ ಜಿಲ್ಲೆಗೂ ಹೊಸತಾಗಿ ನಿರ್ಮಿತವಾಗುವ ಆಂಧ್ರ ರಾಜ್ಯಕ್ಕೂ ದೊರೆತಿದೆ. ಮದ್ರಾಸು ಸರಕಾರ ತಾನು ಮಾಡಿದ ವೆಚ್ಚಕ್ಕೆ ಏನ ಪರಿಹಾರ ಪಡೆಯುವುದೋ ಗೊತ್ತಿಲ್ಲ. ರಾಜಾಜಿಯವರು ಈ ವಿಷಯವನ್ನು ಸಹ ಭಾರತ ಸರಕಾರಕ್ಕೆ ಒಪ್ಪಿಸಿಕೊಟ್ಟಿದ್ದು ಅದು ಸಮುಚಿತ ನಿರ್ಣಯವನ್ನು ಕೈಗೊಳ್ಳುವುದೆಂದು ಹೇಳಿರುವರು. ಸಾಲವು... ಲಗಳ ಪಾಲುಪಟ್ಟಿ ಯಾಗುವಾಗ ಭಾರ

DO YOU KNOW.................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 H. O. UDIPI, S. India.

ಬೇತೂಲದಲ್ಲಿ ಪ್ರಜಾ ಸಮಾಜವಾದಿ ಪರಿಷತ್ತು

ಭಾಷಾರಾಜ್ಯಗಳ ಸಂಬಂಧದಲ್ಲಿ ಕಾಂಗ್ರೆಸಿನ ನಿಲುವೆಯನ್ನು ಸಾಮಾನ್ಯತಃ ಒಪ್ಪುವ ಗೊತ್ತುವಳಿ

ಸರಕಾರವು ಮದ್ರಾಸಿನ ಮನನೋಯಿಸದೆಂದು ಹಾರೈಸೋಣ.

ಆಂಧ್ರದ ಪ್ರಾತಿನಿಧ್ಯ ಪ್ರಮಾಣ

ಕೇಂದ್ರ ಸರಕಾರವು ಆಂಧ್ರ ರಾಜ್ಯವನ್ನು ನಿರ್ಮಿಸುವ ಸಂಬಂಧದಲ್ಲಿ ಮಸೂದೆಯ ಕರಡನ್ನು ಈಗಾಗಲೇ ತಯಾರಿಸಿದೆ; ಮತ್ತು ಮೈಸೂರು ಹಾಗೂ ಮದ್ರಾಸು ರಾಜ್ಯಗಳಿಗೆ ಪರಿಶೀಲನೆಗೋಸ್ಕರ ಕಳಿಸಿರುತ್ತಿದೆ. ಮದ್ರಾಸು ಮಂತ್ರಿಮಂಡಳವು ಇನ್ನೂ ಇದನ್ನು ವಿಚಾರಿಸುತ್ತಿದೆ. ಮಸೂದೆಯ ಕರಡಿನಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಮಾತ್ರ ಸೂಚಿಸಲ್ಪಡಬಹುದು. ಒಬ್ಬನ ಬುದ್ಧಿವಂತಿಕೆಗಿಂತ ಇಬ್ಬರ ಜಾಣ್ಮೆಗೆ ಯಾವಾಗಲೂ ಬೆಲೆ ಹೆಚ್ಚಲ್ಲವೆ? ಇದೇ ಜೂಲೈ ೧೩ನೇ ದಿನಾಂಕ ಈ ಮಸೂದೆಯನ್ನು ಚರ್ಚಿಸುವುದಕ್ಕೋಸ್ಕರ ಮದ್ರಾಸು ಶಾಸನ ಸಭೆಯು ಸೇರುತ್ತಿದೆ. ಈಗ ಆಂಧ್ರರು ಪರಿಸೀಮನಾ ಆಯೋಗದ ಚಟುವಟಿಕೆಯಲ್ಲಿಯೂ ರಾಜಧಾನಿಯಾದ ಕರ್ನೂಲನ್ನು ಸಿಂಗರಿಸುವುದರಲ್ಲೂ ಹೆಚ್ಚು ಆಸಕ್ತಿ ವಹಿಸಿರುವರು. ಪರಿಸೀಮನಾ ಆಯೋಗವು ಆಂಧ್ರಕ್ಕೆ ಕೇಂದ್ರ ಪಾರ್ಲಿಮೆಂಟಿನಲ್ಲಿ ೩೮ ಪ್ರಾತಿನಿಧ್ಯವಿರಬೇಕೆಂದೂ, ಶಾಸನ ಸಭೆಯ ಸದಸ್ಯರ ಸಂಖ್ಯೆ ಇದರ ಆರು ಪಟ್ಟು ಇರಬೇಕೆಂದೂ ಸೂಚಿಸಿದೆ. ಆಂಧ್ರ ಧುರೀಣರ ದೃಷ್ಟಿಗೆ ಶಾಸನ ಸಭಾಸದಸ್ಯರ ಸಂಖ್ಯೆಯನ್ನು ಕನಿಷ್ಠ ಪಕ್ಷ ಏಳು ಪಟ್ಟಾದರೂ ಹೆಚ್ಚಿಸುವುದವಶ್ಯವೆಂದು ತೋರಿದೆ. ಮದ್ರಾಸಿನ ಶಿಕ್ಷಣ ಮಂತ್ರಿ ಡಾ॥ ಎಂ. ವಿ. ಕೃಷ್ಣರಾಯರು, ಶಾಸನ ಸಭೆಯ ಕಮ್ಯೂನಿಷ್ಟ ಮುಖಂಡ ಶ್ರೀ ನಾಗಿರೆಡ್ಡಿ ಮುಂತಾದವರು ಆಂಧ್ರ ಶಾಸನ ಸಭೆಯ ಸದಸ್ಯ ಪ್ರಮಾಣವನ್ನು ಹೆಚ್ಚಿಸಬೇಕೆಂದು ಜೋರಾಗಿ ಪ್ರತಿಪಾದಿಸಿರುವರು. ಜನಸಾಂದ್ರತೆ ವಿರಳವಾಗಿದೆಯೆಂಬ ಕಾರಣಕ್ಕಾಗಿ ಬೇರೆ ಕೆಲವು ರಾಜ್ಯಗಳಿಗೆ ಕೇಂದ್ರದ ಪ್ರಾತಿನಿಧ್ಯದ ಎಂಟು ಪಾಲಿನವರೆಗೂ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿರುವಾಗ, ತಮ್ಮ ಬೇಡಿಕೆ ನ್ಯಾಯಸಮ್ಮತವೆಂದು ಇವರ ಅಭಿಪ್ರಾಯ. ಈ ಸೂಚನೆಯನ್ನು ಪರಿಸೀಮನಾ ಆಯೋಗ ಅಂಗೀಕರಿಸಿದರೆ ಶಾಸನ ಸಭೆಯ ಬಲವು ೨೨೮ರಿಂದ ೨೬೬ಕ್ಕೆ ಏರುವುದು.

ಸಾಲವೆತ್ತುವ ನಿಶ್ಚಯ

ಪತ್ರಿಕಾಗೋಷ್ಠಿಯ ಮುಂದೆ ಮಾತನಾಡುವಾಗ ರಾಜಾಜಿಯವರು ಈಚೆಗೆ ಕೇಂದ್ರದ ಅರ್ಥಸಚಿವರಾದ ಶ್ರೀ ದೇಶಮುಖರು ಮದ್ರಾಸು ಸರಕಾರದೊಡನೆ ನಡೆಸಿದ ಮಾತುಕತೆಗಳನ್ನೂ ಪ್ರಸ್ತಾಪಿಸಿದರು. ಪರಸ್ಪರ ವಿಚಾರ ವಿನಿಮಯಕ್ಕೊದಗಿದ ಈ ಅವಕಾಶದಿಂದ ಒಳ್ಳೆಯ ಪ್ರಯೋಜನವಾಯಿತೆಂದು ರಾಜಾಜಿ ತಿಳಿಸಿದರು. ಅವರೆನ್ನುವಂತೆ, ಕೇಂದ್ರ ಸರಕಾರವು ಮದ್ರಾಸಿನ ನಿಲುವೆಯನ್ನು ಮೆಚ್ಚಿಕೊಂಡಿತು. ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಡದ ಕೆಲವು ಉದ್ಯಮಗಳಲ್ಲಿ ಮದ್ರಾಸು ಸರಕಾರದ ಪ್ರವೃತ್ತವಾಗಿದ್ದರಿಂದಲೇ ಒಂಡವಳ ವೆಚ್ಚದ ಯೋಜನೆಗಳನ್ನು ನಡೆಸಲು ಹಣಾಭಾವದಿಂದ ಮದ್ರಾಸಿಗೆ ಕಷ್ಟವೆನಿಸಿತೆಂದು ದೇಶಮುಖರು ಹಿಂದೊಮ್ಮೆ ಆರೋಪಿಸಿದ್ದರು. ಈ ಸಂದರ್ಶನದ ಫಲವಾಗಿ ಮದ್ರಾಸು ಸರಕಾರ ನ್ಯಾಯವಾಗಿ ಕೈಗೊಳ್ಳಬೇಕಾದ ಯೋಜನೆಗಳಲ್ಲಿಯೇ ಪ್ರವೃತ್ತವಾಗಿತ್ತೆಂದು ದೇಶಮುಖರಿಗೆ ಸಮಾಧಾನವಾಯಿತು. ಮದ್ರಾಸು ಸರಕಾರದ ಆರ್ಥಿಕ ದುಃಸ್ಥಿತಿಯನ್ನೂ ದೇಶಮುಖರು ಗ್ರಹಿಸಿಕೊಂಡರು. ಆದಕಾರಣ ಕೇಂದ್ರ ಸರಕಾರದಿಂದ ಏನಾದರೂ ಧನ ಸಹಾಯ ದೊರೆತರೂ ದೊರೆಯಬಹುದು ಹಾಗೆಂದು ರಾಜ್ಯಾಭಿವೃದ್ಧಿಯ ಕಾರ್ಯವನ್ನೇನು ಸ್ಥಗಿತಗೊಳಿಸಲು ಬರುತ್ತದೆಯೆ? ಇದಕ್ಕೆ ಅಪಾರ ಬಂಡವಾಳ ಬೇಕು. ರಾಜಾಜಿಯವರು ಈ ಬಂಡವಾಳವನ್ನು ಶೇಖರಿಸುವುದಕ್ಕೆ ೫ ಕೋಟಿ ರೂಪಾಯಿಗಳನ್ನು ಸಾಲವೆತ್ತಲು ನಿರ್ಧರಿಸಿರುವರು. ಪ್ರತಿಯೊಂದೂ ಜಿಲ್ಲೆಯಿಂದ ೨೫ ಲಕ್ಷ ರೂಪಾಯಿಗಳು ಸಾಲ ರೂಪದಲ್ಲಿ ಸಿಗುವಂತೆ ಒಂದು ಯೋಜನೆ ಮಾಡಿರುವುದಾಗಿ ರಾಜಾಜಿ ಪ್ರಕಟಪಡಿಸಿದರು. ಕೇಂದ್ರ ಸರಕಾರವು ದೊಡ್ಡ ದೊಡ್ಡ ಯೋಜನೆಗಳಿಗಾಗಿ ಕೊಡುವ ಹಣವು ಮೇಲುಮೇಲಿನ ವೆಚ್ಚಕ್ಕೆ ಮಾತ್ರ ಸಾಕು. ಮೂಲ ವೆಚ್ಚವನ್ನೆಲ್ಲ ಕರಕೊಡುವವರೇ ಹೊರಬೇಕು. ಈಗ ಪ್ರಾರಂಭಿಸಿರುವ ಯೋಜನೆಗಳನ್ನು ತಡೆಹಿಡಿಯಲು ಬಾರದು. ಆದುದರಿಂದ ಸಾಮಾನ್ಯ ಜನರಿಗೆ ಕೂಡ ಸರಕಾರದ ಕಷ್ಟಕಾಲದಲ್ಲಿ ಸಹಾಯ ಮಾಡಲು ಅನುಕೂಲವಾಗುವಂತೆ ಸಾಲವೆತ್ತುವುದಕ್ಕೆ ಸರಕಾರ ನಿರ್ಧರಿಸಿದೆ. ಭಾರತ ಸರಕಾರದವರು ಎತ್ತಿದ ೭೫ ಕೋಟಿ ರೂಪಾಯಿಗಳ ಸಾಲ ತುಂಬಿಕೊಂಡ ರೀತಿಯನ್ನು ವೀಕ್ಷಿಸಿದರೆ, ಮದ್ರಾಸು ಸರಕಾರದ ಸಾಲವೂ ಅತ್ಯಂತ ಶೀಘ್ರದಲ್ಲಿ ತುಂಬಿಕೊಳ್ಳಬಹುದೆಂದು ತೋರುತ್ತದೆ.

ಭಯಾನಕ ಘಟನೆಗಳು

ಮದ್ರಾಸಿನಲ್ಲಿ ಇಂದು ಅಪಘಾತ ಇತ್ಯಾದಿಗಳು ಭೀತಿಯನ್ನು ಹುಟ್ಟಿಸುವಷ್ಟು ಹೆಚ್ಚಿವೆ. ಊಟಕ್ಕೆ ತತ್ವಾರವೆಂದು ಸಂಬಳ ಸಾಲದೆಂದು ಆತ್ಮಹತ್ಯೆ ಮಾಡಿಕೊಳ್ಳುವವರ ಜೊತೆಗೆ ಪ್ರಕೃತಿಯೂ ಮುನಿದುಕೊಂಡಿದ್ದಿತು. ಈ ವರ್ಷ ಮಳೆಯು ಬಹಳ ತಡವಾಗಿಯೇ ಕಾಣಿಸಿಕೊಂಡಿತು. ಜಲಾಶಯಗಳೆಲ್ಲ ಜಲಹೀನವಾದ ಕಾರಣ, ವಿದ್ಯುಚ್ಛಕ್ತಿಯ ಪೂರೈಕೆಯಲ್ಲಿ ಆಗಿಂದಾಗ್ಗೆ ಕಡಿತಗಳನ್ನು ಮಾಡುವ ಅಗತ್ಯ ಬಂತು. ಈಗ ಮುಂಗಾರು ಮಳೆ ಜೋರು ಜೋರಾಗಿ ಸುರಿಯಲು ತೊಡಗಿದ್ದರೂ ಒಟ್ಟಾರೆ ಈ ವರ್ಷ ಮಳೆಯು ಸಾಧಾರಣವೆಂದು ವಾಯುಮಂಡಲದ ನಿರೀಕ್ಷಣಾಧಿಕಾರಿಗಳ ಹೇಳಿಕೆ. ಮುಂಬಯಿಯಂಥ ನಗರಗಳಲ್ಲಿ ಒಂದೇ ದಿನದೊಳಗೆ ೧೩ ಇಂಚಿನಷ್ಟು ಹೆಚ್ಚು ಮಳೆ ಬಿದ್ದು, ಯಾತಾಯಾತಗಳು ತಡೆಹಿಡಿಯಲ್ಪಡಬೇಕಾಯಿತು. ಇದರಂತೆ ಬಂಗಾಳಖಾತದಲ್ಲಿ ಬೀಸಿದ ಗಾಳಿಯ ಪರಿಣಾಮದಿಂದೆಂಬಂತೆ ಮೀನು ಹಿಡಿಯಲು ಕಟಮರಗಳಲ್ಲಿ ಕಡಲಿಗೆ ಬಿಟ್ಟು ಹೋಗಿದ್ದ ಸುಮಾರು ೩೩೦ ಬೆಸ್ತರು ೪-೫ ದಿನಗಳ ವರೆಗೆ ಕಾಣೆಯಾದರು. ಬೆಸ್ತರ ಕುಟುಂಬ ವರ್ಗವೆಲ್ಲ ಒಟ್ಟಾಗಿ ಸರಕಾರಕ್ಕೆ ದೂರು ಕೊಂಡೊಯ್ದು ಬಳಿಕ ಸರಕಾರ ಸರ್ವ ಪ್ರಯತ್ನ ಮಾಡಿ ಈ ಬೆಸ್ತರನ್ನು ಹುಡುಕಲು ನೋಡಿತು. ಭಾರತೀಯ ನೌಕಾದಳದ ರಾಣಾ ವಿನಾಶಿಕೆಯೂ ವಿಮಾನಗಳೂ ಬೆಸ್ತರನ್ನು ಹುಡುಕಲು ಹೊರಟವು. ಇವುಗಳು ಬೆಸ್ತರ ಪತ್ತೆಹಚ್ಚುವುದರಲ್ಲಿ ಸಾಮಾನ್ಯ ಯಶಸ್ಸುಗಳಿಸಿರುವುದು. ಸುಮಾರು [illegible]ಯಷ್ಟು ಬೆಸ್ತರು ಸ್ವಪ್ರಯತ್ನದಿಂದಲೇ ದಡ ಸೇರಿಕೊಂಡರು. ಇನ್ನು ಕೆಲವರನ್ನು ಬಂಗಾಳಖಾತದಲ್ಲಿ ಸಂಚರಿಸುತ್ತಿದ್ದ ವ್ಯಾಪಾರಿ ಹಡಗುಗಳು ಎತ್ತಿಕೊಂಡವು. ಆದರೆ ಇನ್ನೂ ವರೆಗೆ ಸುಮಾರು ೩೦-೪೦ ಬೆಸ್ತರ ಸುಳಿವು ಹತ್ತಿಲ್ಲವೆಂದು ಕೇಳುತ್ತೇವೆ. ಕೆಲವೇ ದಿನಗಳ ಹಿಂದೆ ಇದಕ್ಕಿಂತಲೂ ಅಧಿಕ ರೋಮಾಂಚಕವೂ ಭಯಪ್ರದವೂ ಆದ ಘಟನೆ ನಡೆಯಿತು. ದಕ್ಷಿಣ ರೈಲ್ವೆಯ ಧರ್ಮಾವರಂ ಪಾಕಾಲ ವಿಭಾಗದಲ್ಲಿ ಮುಟಕಲಚೆರುವು ಮತ್ತು ಬತ್ತಾಲಪುರಂ ನಿಲ್ದಾಣಗಳ ನಡುವೆ ಒಂದು ಗೂಡ್ಸ್ ಗಾಡಿ ಮತ್ತು ಇನ್ನೊಂದು ಮಿಕ್ಸೆಡ್ ಗಾಡಿಗಳು ಢಿಕ್ಕಿ ಹೊಡೆದು, ೭೦ ಮಂದಿ ಮೃತ್ಯುಗೊಂಡರು. ಇನ್ನೂ ಹೆಚ್ಚಿನವರಿಗೆ ತೀವ್ರ ಗಾಯವಾಯಿತು. ಮದನಪಲ್ಲಿ, ಚಿತ್ತೂರು ಮುಂತಾದೆಡೆಗಳಲ್ಲಿ ಈಗ ಚಿಕಿತ್ಸೆ ನಡೆಯುತ್ತಿದೆ. ರೈಲ್ವೆ ಅಧಿಕಾರಿಗಳೂ, ರೈಲ್ವೆ ಖಾತೆಯ ಉಪಮಂತ್ರಿ ಮಾನ್ಯ ಶ್ರೀ ಅಳಗೇಶನ್ನರೂ ಈ ಸ್ಥಳ ಸಂದರ್ಶನ ಮಾಡಿ, ಅಪಘಾತಕ್ಕೀಡಾದವರಿಗೆ ಸಹಾನುಭೂತಿ ತೋರಿರುವರು. ಇದರಲ್ಲಿ ಮೃತ್ಯುಗೊಂಡವರ ಕುಟುಂಬಕ್ಕೆ ಭಾರತ ಸರಕಾರ ಪರಿಹಾರ ಧನ ನೀಡುವುದೆಂದ ರೈಲ್ವೆ ಖಾತೆಯ ಉಪಮಂತ್ರಿ ಹೇಳಿರುವರು.

ಪ್ರಜಾ ಸಮಾಜವಾದಿ ಪರಿಷತ್ತು

ಭಾರತದ ಪ್ರಜಾ ಸಮಾಜವಾದಿ ಪಕ್ಷದ ಸಭೆಯು ಕಳೆದವಾರ ಬೇತೂಲ ನಗರದಲ್ಲಿ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಕಾರ್ಯದರ್ಶಿ ಶ್ರೀ ಅಶೋಕ ಮೆಹತಾರವರು ಸಭೆಯ ಮುಂದೆ ಒಪ್ಪಿಸಿದ ವರದಿಯಲ್ಲಿ ಸರಕಾರದೊಡನೆ, ಅರ್ಥಾತ್ ಕಾಂಗ್ರೆಸಿನೊಡನೆ ಹೊಂದಿಕೊಂಡು ಹೋಗುವ ವಿಷಯದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯದ ಮೇಲೆ ತೀವ್ರ ಮತಭೇದವು ಕಾಣಿಸಿಕೊಂಡಿತು: ಸಹಕರಿಸುವ ಪ್ರಶ್ನೆಯೇ ಪ್ರಜಾ ಸಮಾಜವಾದಿಗಳಿಗೆ ರುಚಿಸಿದಂತೆ ತೋರುವುದಿಲ್ಲ. ನೆಹರೂರವರು ಈ ಹಿಂದೆ ಪರಸ್ಪರ ಸಹಕರಿಸಬಹುದೋ ಹೇಗೆಂಬುದನ್ನು ವಿಚಾರಿಸುವುದಕ್ಕೆ ತಾವಾಗಿ ಕರೆಕೊಟ್ಟದ್ದರಿಂದ ಜಯಪ್ರಕಾಶ ನಾರಾಯಣರು ಮಾತುಕತೆಗೆ ತೊಡಗಿದರು. ನಿಜವಾಗಿ ಪ್ರಜಾ ಸಮಾಜವಾದಿಗಳಿಗೆ ತಮ್ಮ ಪಕ್ಷದ ಅಸ್ತಿತ್ವವನ್ನು ಎಲ್ಲ ರೀತಿಯಿಂದಲೂ ಉಳಿಸುವುದೇ ಬೇಕಾಗಿದೆಯಲ್ಲದೆ, ಸಹಕಾರ ತೋರಿಸುವ ಮನಸ್ಸು ಇದ್ದಂತಿಲ್ಲ. ಈ ವೈಮನಸ್ಯದ ಪ್ರತೀಕವೋ ಎಂಬಂತೆ ಸಹಕಾರ ತತ್ವಕ್ಕೆ ಪ್ರಾಶಸ್ತ್ಯ ಕೊಟ್ಟ ಅಶೋಕ ಮೆಹತಾರು ರಾಜೀನಾಮೆಯನ್ನು ಕೊಡುವ ಪ್ರಸಂಗ ಬಂತು. ಜಯಪ್ರ[illegible]ವ ಅಗತ್ಯ ಬಿತ್ತು. ಆದರೆ ಪ್ರಜಾ ಸಮಾಜವಾದಿ ಪಕ್ಷದ ಈ ಧುರೀಣರು ತಮ್ಮ ಹುದ್ದೆಯನ್ನು ಬಿಟ್ಟುಗೊಟ್ಟರೆ, ಪಕ್ಷ ತೀರಾ ದುರ್ಬಲ ಹೊಂದುವದೆಂಬುದನ್ನು ಮನಗಂಡು, ಡಾ. ರಾಮ ಮನೋಹರ ಲೋಹಿಯಾ, ರಾಜೀನಾಮೆ ಹಿಂತೆಗೆಯಲ್ಪಡುವಂತೆ ಪ್ರಯತ್ನಿಸಿ, ಯಶಸ್ಸುಗಳಿಸಿದರು. ಪ್ರಜಾ ಸಮಾಜವಾದೀ ಪರಿಷತ್ತಿನ ಫಲಶ್ರುತಿಯಾಗಿ ಸಮಾಜವಾದೀ ಭಾರತ ನಿರ್ಮಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ನಿರ್ಣಯಕ್ಕೊಂದು ಸಮಿತಿ ನೇಮಕ ಹೊಂದಿತು.

ಭಾಷಾರಾಜ್ಯದ ತತ್ವ

ಕಾಂಗ್ರೆಸಿಗೂ ಪ್ರಜಾ ಸಮಾಜವಾದಿಗಳಿಗೂ ತಾತ್ವಿಕ ಕ್ಷೇತ್ರದಲ್ಲಿ ವಿಶೇಷ ಅಂತರವಿಲ್ಲೆಂದೂ, ವ್ಯವಹಾರ್ಯವಾದ ಕೆಲವು ತೊಡಕುಗಳು ಮಾತ್ರ [illegible] ಸಾಮಾನ್ಯವಾಗಿ ಹೇಳಲಾಗುತ್ತದೆ. ಕಾಂಗ್ರೆಸಿನ ಮತ್ತು ಪ್ರಜಾ ಸಮಾಜವಾದಿಗಳ ಧೋರಣೆಯಲ್ಲಿ ಎದ್ದು ಕಾಣುವ ಅಂತರ ತನ್ಯಾವುದೆಂದರೆ, ಕಾಂಗ್ರೆಸು ಪ್ರತಿಯೊಂದೂ ಹೆಜ್ಜೆಯನ್ನು ಸಾವಧಾನದಿಂದ, ದೂರದರ್ಶಿತ್ವದಿಂದ, ಭದ್ರ ನೆಲ

(೭ನೇ ಪುಟ ನೋಡಿರಿ)



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO.
Watch & Clock Specialists,
MADRAS 3.
ಮುಬಾರಕ್ ಆ್ಯಂಡ್ ಕೊ.
ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್,
ಮದ್ರಾಸು 3.

Estd: 1906
THE CANARA BANKING CORPORATION LTD.
H. O.: UDIPI, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ.

ದಿ ಕೆನರಾ ಬ್ಯಾಂಕಿಂಗ್ ಕೊಪೊರ್ರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ
ಉಡುಪಿ, ಗುರುವಾರ ೨೫-೬-'೫೩.

ಸ್ವಪ್ರಯತ್ನದ ಫಲ

ಕೇಂದ್ರ ಮಂತ್ರಿಮಂಡಳದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತಕೌರರು ಈಚೆಗೆ ತಾವು ರಶಿಯಾದಲ್ಲಿ ಮಾಡಿದ ಪ್ರವಾಸದ ಅನುಭವಗಳನ್ನು ಪತ್ರಿಕಾ ಗೋಷ್ಠಿಯೊಂದರಲ್ಲಿ ವಿವರಿಸಿ ಹೇಳಿದರು. ರಶಿಯಾ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿದ ಪ್ರಗತಿಯನ್ನು ಕಂಡು ಅಭ್ಯಸಿಸುವುದಕ್ಕೋಸ್ಕರ ಅಮೃತಕೌರರು ರಶಿಯಾಕ್ಕೆ ತೆರಳಿದ್ದರು. ಅವರು ತಾವು ಪಡೆದ ಅನುಭವಗಳನ್ನು ವಿವರಿಸಿದ್ದರ ಮೇಲಿಂದ ಹೇಳುವುದಾದಲ್ಲಿ, ರಶಿಯಾ ಅಸಾಧಾರಣ ಹಾಗೂ ಅದ್ಭುತವಾದ ಯಶಸ್ಸನ್ನು ಕೈಗೂಡಿಸಿಕೊಂಡಿದೆ ಎಂದು ವ್ಯಕ್ತವಾಗುತ್ತದೆ. ಕಮ್ಯೂನಿಸ್ಟ ಪ್ರತಿನಿಧಿಯೊಬ್ಬನು ಮಾಸ್ಕೋ ಸಂದರ್ಶನ ಮಾಡಿ ತನ್ನ ಅನುಭವಗಳನ್ನು ಭಾರತದಲ್ಲಿ ವಿವರಿಸುವಾಗ, ಅವುಗಳ ನಿಜತ್ವದ ಬಗ್ಗೆ ಸಂದೇಹ ಪ್ರಕಟಿಸುವ ನಮಗೆ, ಸ್ವತಃ ಕೇಂದ್ರ ಮಂತ್ರಿಮಂಡಳದ ಸದಸ್ಯರೊಬ್ಬರ ಅನುಭವ ರೋಮಾಂಚಕಾರಿ ಎನಿಸುತ್ತದೆ. ಅವರಿನ್ನುವಂತೆ ರಶಿಯಾದಲ್ಲಿ ಒಟ್ಟು ಆದಾಯದಲ್ಲಿ ಸಾವಿರಕ್ಕೆ ೨೨೨ ರಷ್ಟು ಸಂರಕ್ಷಣಾ ವೆಚ್ಚವಾಗಿದ್ದರೆ, ೬೬೨ ರಷ್ಟು ಶಿಕ್ಷಣ, ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳಿಗೋಸ್ಕರ ವ್ಯಯವಾಗುತ್ತದೆ. ಶಿಕ್ಷಣಕ್ಕಿಂತಲೂ ಆರೋಗ್ಯ ವಿಷಯಕ್ಕೆನೇ ಅಧಿಕ ಮಹತ್ವವನ್ನು ಕೊಟ್ಟಿರುವರೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಕ್ರಾಂತಿಯ ಮುಂಚೆ ಹಿಂದುಳಿದ ಪ್ರದೇಶವೆಂದು ಪರಿಗಣಿತವಾದ ಉಸ್ಬೇಕಿಸ್ತಾನದಲ್ಲಿ ಪ್ರತಿ ೩೧ ಸಾವಿರ ಜನರಿಗೆ ಒಬ್ಬ ವೈದ್ಯನಿದ್ದರೆ, ಇಂದು ೮೫೦ ಜನರಿಗೊಬ್ಬ ವೈದ್ಯನು ಇರುವನೆಂದು ಅಂಕೆ ಸಂಖ್ಯೆಗಳು ತಿಳಿಸುತ್ತವೆ. ೩೫ ವರ್ಷಗಳ ಅವಧಿಯಲ್ಲಿ ರಶಿಯಾವು ಇಂಥ ಅದ್ಭುತ ಪ್ರಗತಿಯನ್ನು ಕೈಗೂಡಿಸಿಕೊಂಡಿತು. ಪ್ರತಿಯೊಂದು ಹಳ್ಳಿಗೂ ಸಾಮಾನ್ಯ ಔಷಧಾಲಯವಿರುತ್ತದೆ. ಕೆಲವು ಹಳ್ಳಿಗಳ ಗುಂಪಿಗೆ ಒಂದು ದೊಡ್ಡ ಆಸ್ಪತ್ರೆ ಇದೆ. ಕ್ಷ-ಕಿರಣದ ಸಲಕರಣಗಳಂಥ ಆಧುನಿಕ ಸೌಲಭ್ಯಗಳು ಈ ಆಸ್ಪತ್ರೆಯಲ್ಲಿ ದೊರೆಯುತ್ತವೆ. ಆಸ್ಪತ್ರೆಗಳಲ್ಲದೆ ಆರೋಗ್ಯಧಾಮಗಳೂ ವಿಶೇಷವಾಗಿವೆ. ಕೂಲಿಕಾರರಿಗಾಗಿ ವಿಶೇಷ ಕೇಂದ್ರಗಳು ಇವೆ. ರೋಗ ಚಿಕಿತ್ಸೆಗಿಂತಲೂ ರೋಗ ಬಾರದ ವಿಧಾನಗಳನ್ನು ಜನರಿಗೆ ತಿಳಿಯಪಡಿಸುವ ಕ್ರಮಕ್ಕೆ ಅಧಿಕ ಪ್ರಾಶಸ್ತ್ಯ ಕೊಡಲ್ಪಟ್ಟಿದೆ. ಪ್ರತಿಯೊಂದು ವಯಸ್ಸಿನವರಿಗೂ ತಾವು ಆರೋಗ್ಯವಾಗಿರಲು ಏನು ಮಾಡಬೇಕೆಂಬುದನ್ನು ವಿವರವಾಗಿ ತಿಳಿಸುವ ಪುಸ್ತಕಗಳು ಬರೆಯಲ್ಪಟ್ಟಿವೆ. ಪ್ರತಿವರ್ಷವೂ ೨೦ರಿಂದ೨೫ಸಾವಿರ ವೈದ್ಯಕೀಯ ಪದವೀಧರರು ಹೊರಬೀಳುತ್ತಾರೆ. ಈಗ ರಶಿಯಾದಲ್ಲಿ ಎರಡು ಲಕ್ಷ ವೈದ್ಯರು ಇದ್ದಾರೆ. ಆದರೂ ಈ ಸಂಖ್ಯೆ ಸಾಕೆಂದು ತೋರುವುದಿಲ್ಲ. ಹಳ್ಳಿಗಳಲ್ಲಿ ಕೆಲಸ ಮಾಡುವ ವೈದ್ಯರಿಗೆ ತಮ್ಮ ಸಂಬಳದ ಶೇಕಡಾ ೨೦ನ್ನು ಹಳ್ಳಿಯಲ್ಲಿ ಕೆಲಸಮಾಡಿದ್ದಕ್ಕೋಸ್ಕರ ಹೆಚ್ಚಾಗಿ ಕೊಡುತ್ತಾರೆ. ಇದರಿಂದ ಹಳ್ಳಿಯಲ್ಲಿಯೇ ಕೆಲಸ ಮಾಡುವ ಉತ್ಸಾಹ ಡಾಕ್ಟರರಿಗೆ ಉಂಟಾಗುತ್ತದೆ. ಒಟ್ಟಾರೆ ಮೇಲೆ ಆರೋಗ್ಯದ ಸಂದೇಶ ಮತ್ತು ವೈದ್ಯಕೀಯ ಚಿಕಿತ್ಸೆಯನ್ನು ಪ್ರತಿಯೋರ್ವನಿಗೂ ಮುಟ್ಟಿಸುವ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿರುತ್ತದೆ ಎಂದು ಅಮೃತಕೌರರ ಅಭಿಪ್ರಾಯ. ನಮ್ಮ ದೇಶದಲ್ಲಿ ಅಂಥ ಪ್ರಗತಿಯನ್ನು ಕೈಗೂಡಿಸುವುದಕ್ಕೆ ಹಣವೊಂದೇ ಆಗತ್ಯವಲ್ಲ-ಅನುಕೂಲತೆಗಳೂ ಬೇಕು. ಸರಕಾರದೊಡನೆ ಹಣವಿಲ್ಲದಿದ್ದಾಗ, ಜನರು ಸ್ವೇಚ್ಛೆಯಿಂದ, ತಮ್ಮ ಮಕ್ಕಳ ಮತ್ತು ಸಾರ್ವಜನಿಕರ ಹಿತಕ್ಕೋಸ್ಕರ ಹಣವನ್ನು ತೊಡಗಿಸಿ, ಕೆಲಸ ಮಾಡಲು ಸಾಧ್ಯವುಂಟು. ಇಂಥ ಜನತಾ ಪ್ರಯತ್ನದ ಆದರ್ಶ ಸಂಸ್ಥೆಯಾಗಿ ಇಷ್ಟರಲ್ಲೇ ಮಣಿಪಾಲದಲ್ಲಿ ಉದ್ಘಾಟಿಸಲ್ಪಡಲಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಉದಾಹರಿಸಬಹುದು. ಇಲ್ಲಿ ಪ್ರಕೃತ ನೂರು ಮಂದಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ವ್ಯಾಸಂಗವನ್ನು ನೀಡಲಾಗುವುದು. ಸರಕಾರದ ನೆರವು ಈ ಪ್ರಯತ್ನಕ್ಕೆ ದೊರೆತುದಕ್ಕಿಂತಲೂ ಹೆಚ್ಚು ಸಾರ್ವಜನಿಕ ಪ್ರೋತ್ಸಾಹ ಕಂಡುಬಂದಿದೆ. ಈ ಮಾದರಿಯ ಉದ್ಯಮಗಳು ದಕ್ಷತೆಯಿಂದ ಕೆಲಸಮಾಡಿದ ಪಕ್ಷದಲ್ಲಿ, ಭಾರತದ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಕೂಡ ನಾವು ಗಮನಾರ್ಹ ಪ್ರಗತಿಯನ್ನು ಕಾಣಬಹುದು. ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಬಯಕೆ ನಮ್ಮಲ್ಲಿರುವುದರಿಂದ, ಸರಕಾರದ ಮುಖ ನೋಡದೆ, ಸಾರ್ವಜನಿಕರ ಸೇವೆಗಿರುವ ಪ್ರತಿಯೊಂದೂ ಅವಕಾಶವನ್ನು ನಾವಾಗಿ ಕಂಡುಕೊಂಡು, ಅದರಲ್ಲಿ ಪ್ರವೃತ್ತರಾಗಿ, ಕೃತಕೃತ್ಯರಾಗುವುದರಿಂದ ಶ್ರೇಯಸ್ಸಿದೆ. ಆಗ ರಶಿಯಾದ ಮಾದರಿ ನಮಗೆ ಜಾದುಗಾರಿಕೆ ಎಂಬ ಭ್ರಮೆಯುಂಟಾಗದೆ ಸ್ವಪ್ರಯತ್ನದ ದ್ಯೋತಕವೆಂಬ ತಿಳಿವಳಿಕೆ ಮೂಡಬಲ್ಲುದು.

ರಾಷ್ಟ್ರಸಂಘದ ಪ್ರಯತ್ನವೆಲ್ಲ ನಿಷ್ಫಲ
ಯುದ್ಧ ಕೈದಿಗಳ ಬಿಡುಗಡೆ ಅತ್ಯಂತ ಆಕ್ಷೇಪಾರ್ಹ

ಕೊರಿಯದಲ್ಲಿ ಎಲ್ಲವೂ ಸರಿಯಾಗಿ ನಡೆಯಿತು; ಇನ್ನೇನು ಯುದ್ಧ ವಿರಾಮ ಒಪ್ಪಂದಕ್ಕೆ ಸಹಿ ಹಾಕುವುದಷ್ಟೆ ಬಾಕಿಯುಳಿದಿದೆ ಎಂದು ಕಳೆದ ೧೭ನೇ ದಿನಾಂಕ ವಾರ್ತೆ ಬಂದಿತು. ಪಾನ ಮುಂಜಾಮದಲ್ಲಿ ಸಂಧಿಯ ಮಾತುಕತೆ ನಡೆಸುವ ರಾಷ್ಟ್ರ ಸಂಘೀಯ ಮತ್ತು ಕಮ್ಯೂನಿಸ್ಟ ಪ್ರತಿನಿಧಿಗಳು ಎರಡೂ ಪಕ್ಷದವರು ನಿಲ್ಲಿಸಿದ ಸೈನ್ಯದ ನಡುವೆ ಯುದ್ಧ ವಿರಾಮ ರೇಷೆಯ ಬಗ್ಗೆ ಒಪ್ಪಂದಕ್ಕೆ ಬಂದರೆಂದು ಆ ವಾರ್ತೆ ಹೇಳಿತು. ಇದರಿಂದ ಜಾಗತಿಕ ಶಾಂತಿ ಸ್ಥಾಪನೆಗೆ ಪೂರ್ವಭಾವಿಯಾದ ಎಲ್ಲ ಸಿದ್ಧತೆಗಳೂ ಸಾಂಗವಾಗಿ ಪೂರೈಸಲ್ಪಟ್ಟಂತಾಯಿತೆಂದು ಲೋಕ ಸಂತೋಷಗೊಂಡಿತು. ಹೀಗಿದ್ದಾಗಲೇ ದಿನಾಂಕ ೧೮ರಂದು ದಕ್ಷಿಣ ಕೊರಿಯಾದ ಅಧ್ಯಕ್ಷ ಡಾ. ಸಿಂಗ್ಮನ್ರ್ಹೀಯವರು ಕಮ್ಯೂನಿಸ್ಟ ವಿರೋಧಿಗಳಾದ, ಕೊರಿಯಕ್ಕೆ ರಾಷ್ಟ್ರ ನಿಷ್ಠೆಯನ್ನು ವ್ಯಕ್ತಪಡಿಸಿದ, ಸುಮಾರು ೨೬ ಸಾವಿರ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಲು ಅಪ್ಪಣೆ ಇತ್ತರೆಂಬ ವಿಸ್ಮಯಕಾರಕ ಸುದ್ದಿ ಬಂತು. ಈಗಾಗಲೇ ಆಗಿರುವ ಯುದ್ಧ ಕೈದಿಗಳ ಒಪ್ಪಂದವು ಕಾರ್ಯಾನ್ವಿತಗೊಳ್ಳುವುದಕ್ಕೆ ಇದಕ್ಕಿಂತ ದೊಡ್ಡ ಬೇರೆ ಅಡಚಣೆ ಇಲ್ಲವಾದುದರಿಂದ ಕೊರಿಯಾ ಸಂಧಾನದ ಆಶೆ ಆ ಕೂಡಲೇ ಹಗಲುಗನಸಾಗಿ ಮಾರ್ಪಟ್ಟಿತು

ನಿಜಕ್ಕೂ ದಿಗ್ಭ್ರಮೆ

ಡಾ. ಸಿಂಗ್ಮನ್ರ್ಹೀಯವರ ವರ್ತನೆ ನಿಜಕ್ಕೂ ದಿಗ್ಭ್ರಮೆ ಹಿಡಿಸುವಂತಿದೆ. ಯುದ್ಧ ಕೈದಿಗಳ ಬಿಡುಗಡೆ ಈ ಮುದುಕನ ಹಟಮಾರಿ ತನದ ಪ್ರಥಮಾನುಭವವೇನಲ್ಲ- ಇದಕ್ಕೆ ಮುಂಚೆಯೇ ಸಿಂಗ್ಮನ್ನರು ತಾನು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ವಿರುದ್ಧನಿರುವೆನೆಂದು ಬಹಿರಂಗವಾಗಿಯೇ ಸಾರಿರುವರು. ಒಪ್ಪಂದದ ಮಾತುಕತೆಗಳು ಪ್ರಾರಂಭವಾದ ದಿವಸಗಳಿಂದ ಸಿಂಗ್ಮನ್ರ್ಹೀ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿರುವರು. ಕೊರಿಯಾದ ಏಕೀಕರಣವಾಗಲೇ ಬೇಕು; ಇಲ್ಲದಿದ್ದರೆ ದಕ್ಷಿಣ ಕೊರಿಯಾವೊಂದೇ ಉತ್ತರದವರ ಮೇಲೆ ಮತ್ತು ಯಾಲೂ ನದಿಯನ್ನು ದಾಟಿ ಚೀನೀ ನೆಲದ ಮೇಲೆ ಕೂಡ ಧಾಳಿ ನಡೆಸುವುದೆಂದು ಅವರು ಮೊನ್ನೆ ಮೊನ್ನೆ ಗಂಭೀರ ಹೇಳಿಕೆಯನ್ನಿತ್ತರೂ, ರಾಷ್ಟ್ರ ಸಂಘ ಇದು ಕೇವಲ ಬಾಯ್ಬಡಕತನವೆಂದು ತಿಳಿದುಕೊಂಡಿತು. ಅಮೆರಿಕಾದ ವರ್ಚಸ್ಸು ದಕ್ಷಿಣಕೊರಿಯಾವನ್ನು ಮುಷ್ಟಿಯೊಳಗಿಟ್ಟುಕೊಂಡೀತೆಂಬ ನಿಶ್ಚಲ ಭರವಸೆಯ ಮೇಲಿಂದ ರಾಷ್ಟ್ರಸಂಘ ಕೆಲಸಮಾಡಿತು. ಆದರೆ ಈಗ ದಕ್ಷಿಣ ಕೊರಿಯಾ ರಾಷ್ಟ್ರಸಂಘದ ಅಧಿಕಾರವನ್ನೆ ಪ್ರಶ್ನಿಸುವ ಎದೆಗಾರಿಕೆ ತೋರಿಸಿದೆ. ಅಮೇರಿಕಾದ ನೀರಿನ ಋಣವನ್ನು [illegible]ಡಿಸುಕೊಂಡವರಂತೆ ನಡೆದಿದೆ. ಪರಿಣಾಮತಃ ರಾಷ್ಟ್ರಸಂಘ ದಿಕ್ಕುತೋಚದೆ ಕುಳಿತಿದ್ದರೆ, ಅಮೇರಿಕಾ ತನ್ನ ಮುಖಭಂಗವಾಗುವುದನ್ನು ಕಂಡು ಗೊಂದಲಕ್ಕೆ ಬಿದ್ದಿದೆ.

ಕಮ್ಯೂನಿಸ್ಟ್ ಪ್ರಚಾರ

ಅಮೇರಿಕಾವು ಸಿಂಗ್ಮನ್ರ್ಹೀಯವರನ್ನು ಗದರಿಸಿ ಬೆದರಿಸಿ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ನೋಡಿದಂತೆಯೇ ಸಿಂಗ್ಮನ್ರ್ಹೀಯವರು ಅಮೇರಿಕಾದ ಆಜ್ಞೆಗೆಸೇ ಕೈಹಾಕಿ, ನೋವುಂಟುಮಾಡಿರುವರು. ಇದು ಸ್ವತಃ ಅಮೇರಿಕನ್ನರಿಗೆ ಅಸಹ್ಯವೆನಿಸಿದೆ. ಯುದ್ಧ ಕೈದಿಗಳ ಬಿಡ

ಮುಖರ್ಜಿಯವರ ನಿಧನ

ಡಾ| ಶ್ಯಾಮಪ್ರಸಾದ ಮುಖರ್ಜಿಯವರು ಭಾರತೀಯ ಪಾರ್ಲಿಮೆಂಟಿನ ವಿರೋಧಿ ಗುಂಪಿನಲ್ಲಿ ತೇಜಸ್ವಿಗಯಾದ ವ್ಯಕ್ತಿ. ಅವರು ಮೊನ್ನೆ ದಿನಾಂಕ ೨೩ರಂದು ಮುಂಜಾನೆ ೩-೪೦ಕ್ಕೆ ಶ್ರೀನಗರದಲ್ಲಿ ಹೃದಯವಿಕಾರದಿಂದ ಮೃತ್ಯುಗೊಂಡರೆಂದು ಇದೀಗ ಸುದ್ದಿ ಬಂದಿದೆ. ಡಾ| ಮುಖರ್ಜಿಯವರು ಜನಸಂಘದ ಧುರೀಣರು. ಈಚೆಗೆ ಜಮ್ಮೂದಲ್ಲಿ ನಡೆದ ಪ್ರಜಾಪರಿಷತ್ತಿನ ಚಳುವಳಿಯಲ್ಲಿ ತುಂಬ ಆಸಕ್ತಿಯನ್ನು ವಹಿಸಿದ್ದರು. ಈ ಚಳುವಳಿಯನ್ನು ಬೆಂಬಲಿಸಲೆಂದು ಕಾಶ್ಮೀರ ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ, ಜಮ್ಮೂ ಪ್ರವೇಶ ಮಾಡಿದ್ದರಿಂದ, ಅವರನ್ನು ಬಂಧಿಸಿ, ಸ್ಥಾನಬದ್ಧತೆಯಲ್ಲಿ ಇಡಲಾಗಿತ್ತು. ಹೀಗೆ ಸೆರೆಮನೆಯಲ್ಲಿಡುವುದರ ವಿರುದ್ಧ ಕಾಶ್ಮೀರ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆ ನಡೆಯುತ್ತಿದ್ದಂತೆಯೇ, ಡಾ| ಮುಖರ್ಜಿ ಮರಣಗೊಂಡರು. ಇವರಿಗೆ ಕೇವಲ ೫೨ ವರ್ಷ ಪ್ರಾಯ. ಹೆಸರಾದ ಅಶುತೋಷ ಮುಖರ್ಜಿಯವರ ದ್ವಿತೀಯ ಪುತ್ರ. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ, ೧೯೩೪ರಲ್ಲಿ ಆ ಸಂಸ್ಥೆಯ ಉಪಕುಲಪತಿಸ್ಥಾನಕ್ಕೆ ಏರಿದ ವಿದ್ವಾಂಸ. ೧೯೩೭ರಿಂದ ೧೯೪೭ರ ವರೆಗೆ ಬಂಗಾಳದ ಶಾಸನಸಭೆಯ ಸದಸ್ಯರಾಗಿ ಕೆಲಸ ಮಾಡಿದ್ದರು. ೧೯೪೭ರಲ್ಲಿ ನೆಹರೂ ಮಂತ್ರಿಮಂಡಲದಲ್ಲಿ ಸೇರಿಕೊಂಡರು. ೧೯೫೧ರ ಸಾರ್ವತ್ರಿಕ ಚುನಾವಣೆಗೆ ಕೆಲಸಮಯ ಮುಂಚೆ ರಾಜೀನಾಮೆಕೊಟ್ಟು ಜನಸಂಘವನ್ನು ಸ್ಥಾಪಿಸಿದರು. ಪಾರ್ಲಿಮೆಂಟಿನಲ್ಲಿ ಇವರು ತಮ್ಮ ಅಸ್ಖಲಿತ ಹಾಗೂ ಸುಸಂಬದ್ಧ ವಾಗ್ಧೋರಣೆಗೆ ಹೆಸರಾಗಿದ್ದರು. ಸರಕಾರದೊಡನೆ ವೈಯಕ್ತಿಕ ಭಿನ್ನಾಭಿಪ್ರಾಯವಿದ್ದರೂ, ಎಲ್ಲರ ಸ್ನೇಹಕ್ಕೂ ಪಾತ್ರನೆನಿಸಿದ ಮಹಾನುಭಾವ ಡಾ| ಮುಖರ್ಜಿ. ಭಾರತದ ಮಹಾಬೋಧಿ ಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡಿರುವರು. ರಾಷ್ಟ್ರನಿಷ್ಠೆಯಲ್ಲಿ ಮುಖರ್ಜಿ ಶ್ರೇಷ್ಠ ವರ್ಗಕ್ಕೆ ಸೇರಿದವರೆಂದು ಶ್ರದ್ಧಾಂಜಲಿಯನ್ನರ್ಪಿಸುತ್ತಾ ಡಾ| ರಾಜೇಂದ್ರ ಪ್ರಸಾದ, ಕಟಜೂ, ರಾಜಾಜಿ ಮುಂತಾದೆಲ್ಲರೂ ಕೊಂಡಾಡಿರುವರು. ಇವರ ಮರಣದಿಂದ ರಾಷ್ಟ್ರಕ್ಕೆ, ಮುಖ್ಯತಃ ಬಂಗಾಳಕ್ಕೆ ನಷ್ಟವಾದಂತೆ, ಜಾತೀಯ ಸಂಸ್ಥೆಗಳ ಮಹಾ ಪೋಷಕರೊಬ್ಬರು ಕಣ್ಮರೆಗೊಂಡರೆನ್ನಬಹುದು

ಗಡೆಯ ಪರಿಣಾಮವಾಗಿ, ಕೊರಿಯಾದಲ್ಲಿ ಸಂಧಾನಕ್ಕೆ ಪ್ರತಿಕೂಲ ವಾತಾವರಣ ನಿರ್ಮಿಸಿದಂತಾಗಿದೆ. ಕಮ್ಯೂನಿಸ್ಟ ಪಕ್ಷಕ್ಕೆ ಇದಿರು ಪಕ್ಷದವರನ್ನು ಮನಸ್ವೀಯಾಗಿ ಹೀನೈಸಲು ಇದಕ್ಕಿಂತ ಚಲೋದಾದ ಬೇರೆ ಪ್ರಸಂಗವಿಲ್ಲ. ಸಿಂಗ್ಮನ್ರೀಯವರು ಸಾರ್ವಭೌಮಾಧಿಕಾರವುಳ್ಳ ಸ್ವತಂತ್ರ ರಾಜ್ಯವೊಂದರ ಘಟನಾತ್ಮಕ ಅಧ್ಯಕ್ಷರಾಗಿದ್ದರೂ—ಅವರ ಪ್ರತಿಯೊಂದೂ ಕೃತಿಯು ಹಿನ್ನೆಲೆಯಲ್ಲಿ ಅಮೇರಿಕನ್ ಕೈವಾಡವಿದೆ ಎಂದು ಕಮ್ಯೂನಿಸ್ಟರು ತಿಳಿದು, ಅದರಂತೆ ಆರೋಪಿಸಿರುವರು ಸಿಂಗ್ಮನ್ರೀಯವರಿಗೆ ಅಮೇರಿಕದ ಬಲವೇ ಸರ್ವಸ್ವವೂ ಆಗಿರುವುದರಿಂದ, ಅಮೇರಿಕದ ಹೇಳಿಕೆಯಂತೆಯೇ ಯುದ್ಧ ಕೈದಿಗಳ ಬಿಡುಗಡೆ ನಡೆದಿದೆಯೆಂದು ಕಮ್ಯೂನಿಸ್ಟರು ಪ್ರಚಾರ ಮಾಡುವಾಗ ಅದನ್ನು ಅಲ್ಲಗಳೆಯುವ ಪರಿಸ್ಥಿತಿ ಉಳಿದಿಲ್ಲ

ನೆಹರೂರಿಂದ ಖಂಡನೆ

ರ್ಹೀಯವರ ನಿಲುವೆಯನ್ನು ಲೋಕದ ಯಾವ ರಾಷ್ಟ್ರವೂ ಮೆಚ್ಚಿಕೊಂಡಿಲ್ಲ ಇದು ಅತ್ಯಂತ ಗಂಭೀರ ಸ್ವರೂಪದ ಘಟನೆಯೆಂದು ಬ್ರಿಟನ್ನಿನ ಪ್ರಧಾನಿ ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಹೇಳಿಕೆ ಕೊಟ್ಟರು. ನೆಹರೂರವರು ದಕ್ಷಿಣ ಕೊರಿಯಾದ ಅಧ್ಯಕ್ಷರು ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಿದ ಕೃತಿಯು ಅತ್ಯಂತ ಆಕ್ಷೇಪಾರ್ಹವಾದುದೆಂದು ಹೇಳಿರುವರು. ಮಾತ್ರವಲ್ಲ ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಉದ್ದೇಶ ಪೂರ್ವಕವಾಗಿಯೇ ತಡೆಯೊಡ್ಡುವ ಪ್ರಯತ್ನವಿದೆಂದು ಸಾರಿರುವರು. ಯುದ್ಧ ಕೈದಿಗಳ ವಿನಿಮಯದ ಒಪ್ಪಂದದಂತೆ ಏರ್ಪಡುವ ಪಂಚ ತಟಸ್ಥ ರಾಷ್ಟ್ರಗಳ ಸಮಿತಿಯ ಕಾರ್ಯಕ್ಕೆ ರ್ಹೀಯವರ ಈಗಿನ ಕೃತಿಯಿಂದ ಪೂರಾ ತೊಂದರೆಯುಂಟಾಗುತ್ತದೆ. ತಟಸ್ಥ ರಾಷ್ಟ್ರ ಮಂಡಳದ ಆಧ್ವರ್ಯವನ್ನು ವಹಿಸುವ ಮತ್ತು ಯುದ್ಧ ಕೈದಿಗಳ ಯೋಗ ಕ್ಷೇಮಕ್ಕಾಗಿ ಸೈನ್ಯ ಕಳಿಸುವ ಹೊಣೆ ಭಾರತದ ಮೇಲಿರುವುದರಿಂದ, ಭಾರತ ಸರಕಾರ ಮೊದಲಿಗಿಂತಲೂ ಹೆಚ್ಚು ಈಗ ಜಾಗರೂಕತೆ ವಹಿಸಬೇಕಾಗಿದೆ. ತಟಸ್ಥ ರಾಷ್ಟ್ರ ಮಂಡಳದಲ್ಲಿ ಸೇರಿಕೊಂಡು, ತನ್ನ ಹೊಣೆಯನ್ನು ನಿರ್ವಹಿಸುವ ನಿರ್ಣಯಕ್ಕೆ ಭಾರತ ಈಗಲೂ ಅಂಟಿಕೊಂಡಿದೆ. ಹಾಗೆಂದು, ಯುದ್ಧ ನಿಲುಗಡೆಯ ಒಪ್ಪಂದದ ನೆಲಗಟ್ಟೇ ಕುಸಿಯುವಂತೆ ರ್ಹೀ ನಡೆದು ಕೊಂಡಿರುವುದರಿಂದ, ಆ ತಪ್ಪಿನ ಪ್ರಾಯಶ್ಚಿತ್ತ ಮೊದಲು ಆಗಬೇಕು.

ಸರಕಾರೀ ಸಹಾಯ

ರಾಷ್ಟ್ರಸಂಘ ಅಮೇರಿಕಾವಿಗೆ ದಕ್ಷಿಣ ಕೊರಿಯಾದ ಮೇಲಿರುವ ತಕ್ರೋಟಿಯನ್ನು ನಂಬಿ, ಕಮ್ಯೂನಿಸ್ಟರೊಡನೆ ಸಂಧಾನಕ್ಕೆ ಬಂತು. ಈಗ ಕಮ್ಯೂನಿಸ್ಟರು ದಕ್ಷಿಣ ಕೊರಿಯಾವನ್ನು ಸಿಸ್ತು ನಿಯಂತ್ರಣದಲ್ಲಿ ಇಡಲು ಸಾಧ್ಯವಿದೆಯೋ ಇಲ್ಲವೋ ಎಂದು ನೇರವಾಗಿ ಪ್ರಶ್ನಿಸಿರುವರು. ಬಿಡುಗಡೆ ಮಾಡಿದ ಎಲ್ಲ ಕೈದಿಗಳನ್ನು ಮರಳಿ ಬಂಧಿಸಬೇಕೆಂದು ಅವರು ಒತ್ತಾಯಿಸಿರುವರು. ರಾಷ್ಟ್ರಸಂಘದ ಸೈನಿಕರು ಒಮ್ಮೆ ಪಾರಾದವರನ್ನು ಇನ್ನೊಮ್ಮೆ ಬಂಧಿಸುವ ಸಾಹಸಮಾಡುತಿದ್ದರೂ ಇದುವರೆಗೆ ಒಂದು ಸಾವಿರ ಕೈದಿಗಳು ಮಾತ್ರ ಸೆರೆಹಿಡಿಯಲ್ಪಟ್ಟರು. ಉಳಿದ ೨೫ ಸಾವಿರ ಸೈನಿಕರಿಗೆ ದಕ್ಷಿಣ ಕೊರಿಯದ ನಾಗರಿಕರು ಆಶ್ರಯ ಕೊಡಬೇಕೆಂದೂ, ಅವರನ್ನು ರಾಷ್ಟ್ರಸಂಘದ ಸೈನಿಕರಿಗೆ ಒಪ್ಪಿಸಿಕೊಡುವ ಯಾವುದೇ ಉದ್ಯಮದಲ್ಲಿ ಪ್ರವೃತ್ತರಾದರೆ ಅತ್ಯುಗ್ರ ಶಿಕ್ಷೆ ಕಾದಿದೆಯೆಂದೂ ರ್ಹೀಯವರ ಸರಕಾರ ಸಾರಿರುತ್ತದೆ. ಈ ಸೈನಿಕರನ್ನೆಲ್ಲ ದಕ್ಷಿಣ ಕೊರಿಯದ ಸೇನೆಯಲ್ಲೇ ಭರ್ತಿ ಮಾಡುವ ಹಂಚಿಕೆ ಸಿಂಗ್ಮನ್ರ್ಹೀಯವರಿಗಿದೆ. ಪರಿಣಾಮವಾಗಿ ದಕ್ಷಿಣ ಕೊರಿಯಾದ ಸೈನ್ಯ ಬಲ ೧೬ ಡಿವಿಜನುಗಳಿಂದ ೨೦ಕ್ಕೆ ಏರುವುದು.

ರಾಬರ್ಟಸನ್ನರ ದೌತ್ಯ

ಹಿಂದೂ ಪತ್ರಿಕೆಯ ನ್ಯೂಯಾರ್ಕ ಬಾತ್ಮೀದಾರರು ಹೇಳುವಂತೆ ಅಧ್ಯಕ್ಷ ರ್ಹೀಯವರನ್ನು ನ್ಯಾಯಬದ್ಧವಾದ ರೀತಿಯಲ್ಲಿ ಈಗ ಪದಚ್ಯುತರನ್ನಾಗಿ ಮಾಡುವುದು ಸಾಧ್ಯವಿರುತಿದ್ದರೆ. ಚಿಯಾಂಗ ಕೈಶೇಕರ ಕೊಮಿಂಟಾಂಗವೊಂದನ್ನು ಬಿಟ್ಟು, ಉಳಿದೆಲ್ಲ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳು [illegible] ತಿದ್ದುವು ಬದರೆ ನಿಯಮದಂತೆ ಚ.ನಾಯಿತ ಪ್ರತಿನಿಧಿಯಾಗಿ ಅಧ್ಯಕ್ಷ ಸ್ಥಾನಕ್ಕೆ ಬಂದ ಸಿಂಗ್ಮನ್ರ್ಹೀಯವರಿಗೆ ತಮ್ಮ ಸ್ಥಾನಚ್ಯುತಿಯ ಅಂಜಿಕೆಯೇ ಇಲ್ಲ. ಈಗ ಅಮೇರಿಕಾದ ಮುಖವನ್ನೆ ಎಲ್ಲ ರಾಷ್ಟ್ರಗಳೂ ನೋಡುತ್ತಾ ಕುಳಿತಿವೆ. ಸಿಯೋಲದಲ್ಲಿ ರ್ಹೀಯವರನ್ನು ರಾಷ್ಟ್ರ ಸಂಘದ ವರಿಷ್ಠ ಸೇನಾಧಿಪತಿ ಜನರಲ್ ಮಾರ್ಕ ಕ್ಲಾರ್ಕರು ಭೇಟಿಯಾಗಿ ಬಂದರು. ರಾಷ್ಟ್ರ ಸಂಘಕ್ಕೆ ನೀಡಿದ ವಚನವನ್ನು ರ್ಹೀ ಮುರಿದರೆಂದು ಕ್ಲಾರ್ಕರು ಆರೋಪಿಸಿದ್ದರೂ ರ್ಹೀಯವರು ಬೇಗನೇ ತಮ್ಮ ತಪ್ಪು ತಿದ್ದಿಕೊಂಡಾರೆನ್ನುವ ಆಶೆಯನ್ನು ಅವರು ವ್ಯಕ್ತಪಡಿಸಿದರು. ಇತ್ತ ಅಮೇರಿಕಾದ ಅಧ್ಯಕ್ಷ ಐಸೆನ ಹಾವರರು ದೂರ ಪ್ರಾಚ್ಯದ ವ್ಯವಹಾರ ಖಾತೆಯ ಉಪ ಕಾರ್ಯದರ್ಶಿ ರಾಬರ್ಟಸನ್ನರನ್ನು ಆಗತ್ಯದ ದೌತ್ಯದ ಮೇಲೆ ರ್ಹೀ [illegible]ಗೆ ಕಳಿಸಿರುವರು.

(೫ನೇ ಪುಟದಿಂದ)

ಗಟ್ಟಿನಲ್ಲಿ ಇಡುತ್ತಿದೆ; ಪ್ರಜಾ ಸಮಾಜವಾದಿಗಳು ತ್ವರಿತ ಗತಿಯನ್ನು ಮೆಚ್ಚಿಕೊಳ್ಳುವರು. ಸಂಯಮ ಮತ್ತು ಸಮಾಧಾನದ ಮಾತು ಅವರಿಗೆ ಹಿಡಿಸುವುದಿಲ್ಲ. ಎಲ್ಲವೂ ಈಗ, ಈಕ್ಷಣ ಮೂರ್ತೀಭವಿಸಬೇಕೆಂದವರ ಅಭಿಪ್ರಾಯ. ಆದರೆ ಭಾಷಾರಾಜ್ಯಗಳ ವಿಷಯದಲ್ಲಿ ಪ್ರಜಾ ಸಮಾಜವಾದಿ ಪಕ್ಷ ಕೈಕೊಂಡ ನಿರ್ಣಯ ನೋಡಿದರೆ ಅದು ನಾವು ಅಪೇಕ್ಷಿಸಿದಷ್ಟು ಪ್ರಾಗತಿಕವಾಗಿಲ್ಲವೆಂದೇ ತೋರುತ್ತದೆ. ಉದಾಹರಣೆಗೆ ಕನ್ನಡಿಗರೇ ಮುಂತಾಗಿ ಎಲ್ಲ ಭಾಷಾಭಿಮಾನಿಗಳೂ ಬೇಗನೇ ಭಾಷಾರಾಜ್ಯ ನಿರ್ಮಾಣವಾಗಬೇಕೆನ್ನುವಾಗ, ಈ ಪರಿಷತ್ತು ಭಾರತ ಸರಕಾರದ ನಿಲುವೆಯನ್ನೇ ಪುರಸ್ಕರಿಸಿರುತ್ತದೆ: ಉಚ್ಚ ಮಟ್ಟದ ಆಯೋಗವನ್ನು ಸ್ವಾಗತಿಸಿದೆಯಲ್ಲದೆ, ಕಾಂಗ್ರೆಸು ಹೇಳುವಂತೆ, ಭಾಷೆಗಿಂತಲೂ ಹೆಚ್ಚು ರಾಷ್ಟ್ರದ ಐಕ್ಯ, ಸಂಸ್ಕೃತಿ, ಆರ್ಥಿಕ ಭದ್ರತೆ, ಆಡಳಿತಾನುಕೂಲತೆ ಇವೆಲ್ಲವನ್ನೂ ಗಮನಿಸಬೇಕೆಂದಿದೆ. ಒಂದು ರೀತಿಯಿಂದ ಈ ಗೊತ್ತುವಳಿ ಕಾಂಗ್ರೆಸಿನ ನಿಲುವೆಯಷ್ಟೂ ಪ್ರಾಗತಿಕವಾಗಿಲ್ಲ. ಉದಾಹರಣೆಗೆ, ಹೊಸ ಭಾಷಾರಾಜ್ಯಗಳನ್ನು ರಚಿಸುವಾಗ, ಘಟನೆಯ ಪರಿಶಿಷ್ಟದಲ್ಲಿ ಸೂಚಿಸಲಾದ ಭಾರತದ ೧೪ ಮುಖ್ಯ ಭಾಷೆಗಳನ್ನು ಮಾತ್ರ ಇದು ಮನ್ನಿಸುತ್ತದೆ. ಬೇರೆ ಭಾಷೆಗಳಿಗೆ ಮಹತ್ವವನ್ನೇ ಕೊಡುವುದಿಲ್ಲ. ಇದರ ಆವಶ್ಯಕತೆ ಈಗ ಕಂಡು ಬರುವುದಿಲ್ಲೆಂಬುದು ನಿಜ. ಆದರೂ ಪ್ರಗತಿಗಾಮಿಗಳೂ ತಮಗೆ ಆಸ್ಥೆ ಇಲ್ಲದ ವಿಷಯಗಳಲ್ಲಿ ಹಿಂದುಳಿಯುವರೆಂಬುದಕ್ಕೆ ಈ ಮಾತು ನಿದರ್ಶನ ಪರಿಷತ್ತಿನ ಕೊನೆಯಲ್ಲಿ ಕೃಪಲಾನಿಯವರು ತಮಗೆ ಒಪ್ಪಿತವಾದ ತತ್ವಗಳ ಮಟ್ಟಿಗೆ ಸರಕಾರದೊಡನಿರಲಿ, ಇತರರ ಕೂಡೆಯಾಗಲಿ—ಸಹಕರಿಸಲು ಪ್ರಜಾ ಸಮಾಜವಾದಿಗಳು ಸಿದ್ಧರಿರುವರೆಂದು ಹೇಳಿದುದು ಸ್ವಾಗತಾರ್ಹ.

ಮುಟ್ಟುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹಡತಪ್ಪಿ ಮುಟ್ಟುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. ೭/-[ವಿ. ಪಿ. ಪಾರ್ಸೆಲ್ ಚಾರ್ಜಿ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಉಡುಪಿ

ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಪ್ರಾರಂಭೋತ್ಸವವು ಇದೇ ತಾ 30ನೇ ಮಂಗಳವಾರ ಬೆಳಿಗ್ಗೆ 10ಗಂಟೆಗೆ ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರ ಹಸ್ತದಿಂದ ಜರಗಲಿರುವುದು.

ಕೋಪರೇಟಿವ್ ಯೂನಿಯನ್ ಮಹಾ ಸಭೆಯು— ತಾ 20ನೆ ಶನಿವಾರ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಜಿ. ಬಲ್ಲಾಳ್, ಪಿ. ವಿ. ಆಚಾರ್, ಕೆ. ಗಣಪಯ್ಯ ಸೆಟ್ಟಿ, ಎಲ್. ಎಮ್. ದೇಸಾ, ಎಮ್. ರಾಮಕೃಷ್ಣ ಭಟ್, ಪಿ. ವೆಂಕಟಕೃಷ್ಣ ರಾವ್ ಮತ್ತು ಎಸ್. ಅಣ್ಣಯ್ಯ ಹೆಗ್ಡೆಯವರು ಡೈರೆಕ್ಟರರಾಗಿ ಆರಿಸಲ್ಪಟ್ಟರು. ಶ್ರೀ ಕೆ. ಜಿ. ಬಲ್ಲಾಳರು ಅಧ್ಯಕ್ಷರಾಗಿಯೂ, ಶ್ರೀ ಪಿ. ವಿ. ಆಚಾರ್ಯರು ಕಾರ್ಯದರ್ಶಿಯಾಗಿಯೂ ಕೂಡಾ ಚುನಾಯಿಸಲ್ಪಟ್ಟರು.

ಸಾಲ ಕೊಟ್ಟರೆ ದೀಪ— ಜನಮತವನ್ನು ಅನುಲಕ್ಷಿಸಿ, ನಗರದಲ್ಲಿ ಅವಶ್ಯವಿರುವಲ್ಲಿ ಕೆಲವು ದೀಪಗಳನ್ನು ಹಾಕಬೇಕೆಂದು ನಗರ ಸಭೆಯವರು ನಿರ್ಣಯಿಸಿ, ದೀಪಗಳನ್ನು ಹಾಕುವಂತೆ ಸ್ಥಳೀಯ ಇಲೆಕ್ಟ್ರಿಕ್ ಕಂಪನಿಯನ್ನು ಕೇಳಿಕೊಂಡಿದ್ದರು. ಆದರೆ ದೀಪ ಕೊಡಬೇಕಾದರೆ ನಗರ ಸಭೆಯವರು ಕಂಪೆನಿಗೆ ಇಂತಿಷ್ಟು ಸಾಲಕೊಡಬೇಕೆಂಬುದಾಗಿ ತಿಳಿಸಿರುವರಾಗಿ ಕೇಳುತ್ತೇವೆ. ಇದರಂತೆ ದೂರದ ಕನೆಕ್ಶನಿಗೂ ಸಾಲ ಕೊಡಬೇಕಾಗುವುದೆಂದು ತಿಳಿದು ಬರುತ್ತದೆ. ಉದಾಹರಣಾರ್ಥವಾಗಿ ಎಂ. ಜಿ. ಎಂ. ಕಾಲೇಜಿಗೆ ದೀಪ ಸಿಗಬೇಕಾದರೆ ಕಾಲೇಜಿನವರು ರೂ. 900/- ನಗರಸಭೆಯವರು300/—ರೂ. ಸಾಲ ಕೊಡಬೇಕಾಗುವುದಂತೆ. ಖಾಸಗಿ ಕನೆಕ್ಶನಿಗೂ ಹೀಗೆಯೇ ಆದರೆ ವಿದ್ಯುತ್ತಿನ ಪ್ರಯೋಜನವನ್ನು ಎಷ್ಟು ಜನರು ಪಡೆಯುವರೆಂದು ತಿಳಿಯದಾಗಿದೆ. ಪೇಟೆಯ ಖಾಸಗಿ ಜನರು ಲೈಟ್ ಹಾಕಿಸುವುದೇ ಕಷ್ಟದಿಂದ. ಹೀಗಿರುವಾಗ ಇಲೆಕ್ಟ್ರಿಕ್ ಕಂಪೆನಿಯವರು ಸಾಲ ಕೇಳುವುದು ಶೋಚನೀಯವೂ ವಿಪರ್ಯಾಸವೂ ಆಗಿದೆ. ನಗರ ಸಭೆಯವರಿಗೇ ಹಣದ ಆವಶ್ಯಕತೆ ಇರುವಾಗ ಅವರು ಸಾಲಕೊಟ್ಟು ದೀಪಗಳನ್ನು ಪಡೆಯುವಂತೆ ತೋರುವುದಿಲ್ಲ ಆದ್ದರಿಂದ ಸಂಬಂಧಪಟ್ಟವರು ಈ ಧೋರಣೆಯನ್ನು ಬದಲಾಯಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಿದೆ.

ನಗರ ಆರೋಗ್ಯವು— ಅಲಕ್ಷಿಸಲ್ಪಟ್ಟಿದೆ ಎಂಬುದಕ್ಕೆ ದಿನೇ ದಿನೇ ಹೆಚ್ಚುತ್ತಿರುವ ಫೈಲೇರಿಯಾ ರೋಗದ ದೃಷ್ಟಾಂತವೊಂದೇ ಸಾಕು. ಸದ್ಯ ಸುಮಾರು 100 ಜನರು ಫೈಲೇರಿಯಾ ಪೀಡಿತರಾಗಿದ್ದಾರೆಂದು ತಿಳಿದು ಬರುತ್ತದೆ ಈ ಕುರಿತು ಸಂಬಂಧಪಟ್ಟವರು ತೀವ್ರ ಮತ್ತು ಯೋಗ್ಯಕ್ರಮ ಕೈಗೊಳ್ಳದಿದ್ದರೆ ಹೆಚ್ಚಿನ ಹಾನಿ ಸಂಭವಿಸಬಹುದು.

ದ. ಕ. ಜಿಲ್ಲಾಬೋರ್ಡು ಸಭೆಯು— ತಾ 20ರಂದು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳ್ತಂಗಡಿಯ ನಾಗರಿಕರು ಬೋರ್ಡು ಹೈಸ್ಕೂಲನ್ನು ತೆರೆಯಲು ಸ್ವಲ್ಪ ಖರ್ಚು, ಕಟ್ಟಡ, ಪ್ರಯೋಗಶಾಲೆ ಮತ್ತು ಫರ್ನಿಚರನ್ನು ಒದಗಿಸಲು ಒಪ್ಪಿದರೂ ಶಾಲೆಯನ್ನು ತೆರೆಯುವ ಸೂಚನೆಯನ್ನು ಮುಂದಕ್ಕೆ ಹಾಕಲಾಯಿತು. ದ. ಕ. ಜಿಲ್ಲೆಗೆ ಜೋಗಿನಿಂದ ವಿದ್ಯುಚ್ಛಕ್ತಿಯನ್ನು ಪೂರೈಸುವ ಕುರಿತು ಮದ್ರಾಸು ಮತ್ತು ಮೈಸೂರು ಸರಕಾರಗಳು ಒಪ್ಪಂದಕ್ಕೆ ಸಹಿಹಾಕಿದುದಕ್ಕೆ ಎರಡೂ ಸರಕಾರಗಳಿಗೆ ಸಭೆಯು ಧನ್ಯವಾದವನ್ನರ್ಪಿಸಿತು. ಈ ಕೆಲಸವನ್ನು ಬೇಗನೆ ಪ್ರಾರಂಭಿಸಬೇಕೆಂದು ಕೇಳಿಕೊಂಡಿತು. ಸುಜೀರ್ ಗ್ರಾಮದ ಶ್ರೀ ಕೆ. ನಾರಾಯಣ ಭಂಡಾರಿ ಸುಜೀರ್ ಬೋರ್ಡು ಶಾಲೆಯ ಆಟದ ಬಯಲಿಗೋಸ್ಕರ ದಾನವಾಗಿ ಕೊಟ್ಟದರಕಾಸ್ತು ಭೂಮಿಯನ್ನು ಸ್ವೀಕರಿಸಿ, ಅವರಿಗೆ ಧನ್ಯವಾದ ಅರ್ಪಿಸಿತು.

ಕಾರ್ಕಳ ತಾಲೂಕಿನಲ್ಲಿ ಕಾರ್ಕಳ—ಬಳ್ಳಿ—ಬೆಳ್ಳಿ—ಮಣಿಪುರ ರೋಡಿನಲ್ಲಿ, ಅಲೆವೂರು ನದಿಗೆ ಒಂದು ಸಂಕವನ್ನು ಕಟ್ಟಬೇಕೆಂಬ ಸೂಚನೆಯನ್ನು ಸರಕಾರದ ಮಂಜೂರಿಗೆ ಕಳಿಸಬೇಕೆಂದಾಯಿತು. ಕಾರ್ಕಳ ತಾಲೂಕಿನಲ್ಲಿ ಕಾರ್ಕಳ ಕೇಬಾ ಮತ್ತು ಕುಕ್ಕುಂದೂರು ಈ ಗ್ರಾಮಗಳ ಮಧ್ಯೆ ಒಂದು ಸೆಕೆಂಡರಿ ಶಾಲೆಯನ್ನು ತೆರೆಯಲು ಕಾರ್ಕಳ ಆಗರ್ಜರಿಯ ಗುರುಗಳ ಕೇಳಿಕೆಗೆ ಒಪ್ಪಿಗೆ ದೊರೆಯಿತು. ಪುತ್ತೂರು ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಲ್ಲಿ ಮಲೇರಿಯಾ ನಿವಾರಣೆ ಯೋಜನೆಯನ್ನು ಮುಂದುವರಿಸಲು ರೂಪಾಯಿ 20,000 ಕೆ ಹಲು ಜಿಲ್ಲಾ ಬೋರ್ಡು ಒಪ್ಪಿತು.

ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಬಿ. ಎಲ್. ಭಾಸ್ಕರರೈಗಳು ದಾನವಾಗಿ ಕೊಟ್ಟ ಜಿಲ್ಲಾ ಬೋರ್ಡು ಮಾಜಿ ಅಧ್ಯಕ್ಷರಾದ ದಿವಂಗತ ಡಾ| ಕೆ. ವಿಠಲ ಸೆಟ್ಟರ ಮತ್ತು ಶ್ರೀ ಬಿ. ಎಮ್. ಹೆಗ್ಡೆಯವರ ಭಾವಚಿತ್ರಗಳನ್ನು ಬೋರ್ಡು ಸ್ವೀಕರಿಸಿ, ಅವರಿಗೆ ಧನ್ಯವಾದವನ್ನು ಅರ್ಪಿಸಿದ್ದಲ್ಲದೆ ತಾ 28ರಲ್ಲು ಅಪರಾಹ್ನ 3ಗಂಟೆಗೆ ಚಿತ್ರಗಳನ್ನು ಅನಾವರಣ ಮಾಡಬೇಕೆಂದೂ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರನ್ನು ಅನಾವರಣ ಮಾಡಲು ಕೇಳಿಕೊಳ್ಳಬೇಕೆಂದೂ ನಿಶ್ಚಯಿಸಲಾಯಿತು.

ಜುಲೈ ತಾ 7 ರಂದ ಹೊಸತಾಗಿ ತೆಗೆದುಕೊಂಡ ಎಲ್. ಟಿ. ಉಪಾಧ್ಯಾಯರ ಸಂಬಳವು ತಿಂಗಳೊಂದರ ರೂಪಾಯಿ 90ಕ್ಕಿಂತ ಕಡಿಮೆಯಾದ್ದರಿಂದ ಅದನ್ನು ರೂಪಾಯಿ 95ಕ್ಕೆ ಏರಿಸಲು ನಿಶ್ಚಯಿಸಲಾಯಿತು ಹೆಜಮಾಡಿ ಡಾ| ಎ| ಶಾಲೆಯನ್ನು ಪ್ರೈಸ್ಕೂಲಾಗಿ ಮಾರ್ಪಡಿಸಿ IV ಫಾರಮನ್ನು ಇದೇ ತಾ 29 ರಂದು ತೆರೆಯಲಾಗುವುದು.

ಮಂಗಳೂರು

ದ.ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಕರ್ನಾಟಕ ಚೇಂಬರ್ ಒಫ್ ಎಗ್ರಿಕಲ್ಚರ್ ಪತಿಯಿಂದ ಹೊರಡಿಸಿದ ಸಾರ್ವಜನಿಕ ವಿನಂತಿ

ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಕ್ರಯವು ದಿನೇ ದಿನೇ ಏರುತ್ತಾ ಇರುವುದು ಕಂಡು ಬರುತ್ತಿದೆ. ಹೀಗೆ ಅಕ್ಕಿಯ ಕ್ರಯವು ಇನ್ನು ಮುಂದಕ್ಕೂ ಮೇಲೇರ ಬಹುದೆಂದು ಊಹಿಸಿ ಜನತೆಯು ಗಾಬರಿಗೊಳ್ಳಲು ಕಾರಣವಿದೆ. ಒಂದು ಕಡೆಯಿಂದ ಮಳೆಗಾಲವು ಬಂತು ಒಂದು ಕಡೆಯಿಂದ ಪರದೇಶದಿಂದ ಅಕ್ಕಿಯು ಆಮದಾಗುವುದಿಲ್ಲವೆಂದು ಜನತೆಯು ತಿಳಿದಂತಿದೆ. ಈ ಅಭಿಪ್ರಾಯವು ಸರಿಯಲ್ಲ. ನಮ್ಮ ಜಿಲ್ಲಾಧಿಕಾರಿಗಳ ವಶ ಈ ಮೂರು ತಿಂಗಳ ಮಟ್ಟಿಗೆ ಬೇಕಾಗುವಷ್ಟು ಅಕ್ಕಿಯು ದಾಸ್ತಾನು ಇದೆ ಎಂದು ನಮಗೆ ತಿಳಿದು ಬಂದಿದೆ. ಈ ಅಕ್ಕಿಯು ತಂಜಾವೂರು ಮತ್ತು ಒರಿಸ್ಸಾದಿಂದ ಬಂದಿರುತ್ತದೆ. ನಮ್ಮ ಜಿಲ್ಲೆಯಲ್ಲಿ ವರ್ಗಧಾರರಾಗಲೀ, ಕೃಷಿಕರಾಗಲೀ, ವ್ಯಾಪಾರಸ್ಥರಾಗಲಿ, ಲಾಭ ದೃಷ್ಟಿಯಿಂದಲೂ, ಸ್ವಾರ್ಥದಿಂದಲೂ ಅಕ್ಕಿಯನ್ನು ವಿಕ್ರಯಿಸದೆ ದಾಸ್ತಾನು ಇಟ್ಟುಕೊಳ್ಳುವುದಾದರೆ ಸರಕಾರವು ಒಡನೆ ತಮ್ಮ ವಶದಲ್ಲಿರುವ ಅಕ್ಕಿಯನ್ನು ಫೇರ್ ಪ್ರೈಸ್ ಶೋಪುಗಳ ಮೂಲಕ 7 ಔನ್ಸಿನಂತೆ ವಿತರಣೆ ಮಾಡಲು ಸಿದ್ಧವಾಗಿಯೇ ಇದೆ. ಇಂಥಾ ಪ್ರಸಂಗ ಬರುವಾಗ ಅಕ್ಕಿ ಬೆಳೆಸುವವರು ಸ್ವಲ್ಪ ಜಾಗರೂಕರಾಗಿರ ಬೇಕಾಗಿದೆ. ಗ್ರಾಮಾಂತರ (ಮೇಜರ್ ಪಂಚಾಯತ್ ಬೋರ್ಡು) ಗಳಲ್ಲಿಯೂ, ಫೇರ್ ಪ್ರೈಸ್ ಶೋಪುಗಳನ್ನು ತೆರೆದು 4 ಔನ್ಸಿನಷ್ಟು ಅಕ್ಕಿ ಕೊಡಬೇಕೆಂದು ನಾವು ಸರಕಾರದೊಡನೆ ಕೇಳಿಕೊಂಡಿದ್ದೇವೆ. ಸರಕಾರವು ನಮ್ಮ ಅರಿಕೆಯನ್ನು ಮನ್ನಿಸಬಹುದೆಂದು ಊಹೆ ಇದೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಬೆಳೆಸುವವರೆಲ್ಲರೂ ಅಕ್ಕಿಯನ್ನು ರಹಸ್ಯವಾಗಿ ದಾಸ್ತಾನು ಇಡದೆ ಜನತೆಯ ಹಿತ ದೃಷ್ಟಿಯಿಂದ ನ್ಯಾಯವಾದ ಬೆಲೆಗೆ ಮಾರ್ಕೆಟ್ಟಿನಲ್ಲಿ ವಿಕ್ರಯಿಸ ಬೇಕಾಗಿ ವಿನಂತಿಸಲಾಗಿದೆ.

ಈ ಸಂದರ್ಭದಲ್ಲಿ ನಾವು ದಕ್ಷಿಣ ಕನ್ನಡದ ಜನತೆಯಲ್ಲಿಯೂ, ಅರಿಕೆ ಮಾಡಿ ಕೊಳ್ಳುವುದೇನೆಂದರೆ ಬೇಜವಾಬ್ದಾರಿ ಜನಗಳು ಮಾಡುವ ಪ್ರಚಾರಕ್ಕೆ ತಾವು ಒಳಗಾಗದೆ ಮತ್ತು ಭಯ ಪಡದೆ ತಮ್ಮ ಸರಕಾರವು ಜನರ ರಕ್ಷಣೆಯ ಬಗ್ಗೆ ತಕ್ಕ ಏರ್ಪಾಡನ್ನು ಮಾಡುವುದೆಂದು ವಿಶ್ವಾಸವನ್ನಿಡ ಬೇಕಾಗಿದೆ.

ಭತ್ತದ ಬೆಳೆಯ ಸ್ಪರ್ಧೆ

ಜಿಲ್ಲಾ ಕಲೆಕ್ಟರರು ಜೂನ್ 15ನೇ ದಿನಾಂಕ ಜಿಲ್ಲೆಯಲ್ಲಿ 1952-53ರಲ್ಲಿ ಅತೀ ಹೆಚ್ಚು ಭತ್ತ ಬೆಳೆಯಿಸಿದ ಪುತ್ತೆತ್ತೂರು ಸೂರಿಂಜೆ ಬೈಲಗುತ್ತು ಶ್ರೀ ಕೆ. ಸುಂದರ ಶೆಟ್ಟರವರಿಗೆ ಜಿಲ್ಲಾ ಬಹುಮಾನವನ್ನು ತಮ್ಮ ಆಫೀಸಿನಲ್ಲಿ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರರ ಮತ್ತು ಸ್ಥಳೀಯ ಎಗ್ರಿಕಲ್ಚರಲ್ ಉದ್ಯೋಗಸ್ಥರ ಸಮ್ಮುಖದಲ್ಲಿ ಒಪ್ಪಿಸಿದರು. ಶ್ರೀ ಸುಂದರ ಶೆಟ್ರು ಒಂದು ಎಕ್ರೆಯಲ್ಲಿ 7920 ರಾತ್ತಲ್ಲು (125 ಮುಡಿ) ಭತ್ತ ಬೆಳೆಸಿರುತ್ತಾರೆ.

ಮಂಗಳೂರು ತಾಲೂಕು ಮತ್ತು ಸಾರಸ್ವತ್ ಬ್ರಾಹ್ಮಣರ ಬಹುಮಾನಗಳು ಕೂಡ ರೆವಿನ್ಯೂ ಡಿವಿಜನಲ್ ಆಫೀಸಿನಿಂದ ತಾ. 13ರಂದು ಅವರಿಗೆ ಕೊಡಲ್ಪಟ್ಟವು.

ಅಕ್ಕಿಯ ಧಾರಣೆಯ ಕುರಿತು ಜಿಲ್ಲಾ ಕಲೆಕ್ಟರರ ಬಳಿಗೆ ಶಿಷ್ಟ ಮಂಡಲ

ಶ್ರೀಗಳಾದ ಎಫ್. ಎಕ್ಸ್. ಡಿ. ಪಿಂಟೊ, ಬಿ. ಆರ್. ಕರ್ಕೇರ, ಬಿ. ಬಿ. ಶೆಟ್ಟಿ, ಎ. ಶಂಕರ ಆಳ್ವ, ಎಮ್. ಕೆ. ದೇವರಾಜ್ ಇವರನ್ನೊಳಗೊಂಡ ಶಿಷ್ಟ ಮಂಡಳಿಯೊಂದು ಜಿಲ್ಲಾ ಕಾಂಗ್ರೆಸ್ ಕಮಿಟಿ ಪತಿಯಿಂದ ಜಿಲ್ಲಾ ಕಲೆಕ್ಟರರನ್ನು ಕಂಡು ಜಿಲ್ಲೆಯಲ್ಲಿ ಅಕ್ಕಿ ಹಾಗೂ ಇತರ ದವಸಧಾನ್ಯ, ವ, ಆಹಾರ ವಸ್ತುಗಳ ಬೆಲೆ ಏರದಂತೆ ತಕ್ಕ ಏರ್ಪಾಡನ್ನು ಮಾಡಬೇಕಾಗಿ ಕೇಳಿಕೊಂಡಿರುತ್ತದೆ. ಅಧಿಕಾರಿಗಳು ಈ ಕಡೆಗೆ ವಿಶೇಷ ಗಮನವನ್ನು ಕೊಡುತ್ತಿರುವರಾಗಿಯೂ, ಅಕ್ಕಿಯ ಪರಿಮಾಣವನ್ನು 7 ಔನ್ಸಿಗೆ ಸರಕಾರವು ಏರಿಸಿರುವುದಾಗಿಯೂ, ಜಿಲ್ಲೆಗೆ ಬರುವ ಮೂರು ತಿಂಗಳಿಗೆ ಬೇಕಾಗುವಷ್ಟು ಅಕ್ಕಿಯು ಇರುವುದಾಗಿಯೂ, ಜಿಲ್ಲೆಯಿಂದ ಹೊರಗೆ ಹೋಗುವ ಅಕ್ಕಿಯನ್ನು ಹೋಗದಂತೆ ಮಾಡುವ ಯಾವತ್ತು ಪ್ರಯತ್ನವನ್ನು ಮಾಡಲಾಗಿದೆಯೆಂದೂ, ತಿಳಿದು ಬರುತ್ತದೆ. ರೇಶನ್ ಅಂಗಡಿಗಳನ್ನು ಪಳ್ಳಿ, ಪ್ರಾಂತ್ಯಗಳಲ್ಲಿ ತೆರೆಯುವಂತೆಯೂ, ಅಕ್ಕಿಯ ಬೆಲೆಯು ಮುಡಿ 1ಕ್ಕೆ ರೂ. 25ಕ್ಕೆ ಮೀರದಂತೆಯೂ, ತಕ್ಕ ನಿಗಾ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತವೆ. ಸಾರ್ವಜನಿಕರಲ್ಲಿ ಮಳೆಗಾಲದಲ್ಲಿ ಅಕ್ಕಿಗೆ ಬೆಲೆ ಏರೀತೆಂಬ ಶಂಕೆಗೆ ಅವಕಾಶವಿಲ್ಲ ಎಂದು ಜಿ. ಕಾ. ಕಮಿಟಿ ಪ್ರ. ಕಾರ್ಯದರ್ಶಿಗಳು ತಿಳಿಸುತ್ತಾರೆ.

ನಿಧನ— ಜಿಲ್ಲಾ ಕೋರ್ಟಿನ ನಿವೃತ್ತ ಶಿರಸ್ತೇದಾರರಾಗಿದ್ದ ಶ್ರೀ. ಪಿ. ಶಂಕರನಾರಾಯಣ ರಾವ್, ಬಿ. ಎ. ಅವರು ತಾ 17ರಂದು 75ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದವಾಗುವುದು.

ಹುಜೂರು ಟ್ರೆಜರಿಯಲ್ಲಿ— ನೋಸ ಗೊಳಿಸಿದ ಅಪಾದನೆಯಲ್ಲಿ ಸೆರೆಹಿಡಿಯಲ್ಪಟ್ಟ ರೋಬರ್ಟ್ಸ್ ಮತ್ತು ಅವರ ಹೆಂಡತಿ ಶಾಂತಿ ರೋಬರ್ಟ್ಸ್ ಅವರ ಮೇಲಿನ ಮೊಕದ್ದಮೆಯ ವಿಚಾರಣೆಯು ಅದೇ ತಾ 19ರಲ್ಲಿ ನಡೆಯಬೇಕಾಗಿದ್ದುದನ್ನು ಜುಲಾಯಿ 2ಕ್ಕೆ ಮುಂದರಿಸಲಾಗಿದೆ ಎಂದು ತಿಳಿದುಬರುತ್ತದೆ. ಆಪಾದಿತರಿಬ್ಬರನ್ನು ಜಾಮೀನಿನಲ್ಲಿ ಬಿಡಬೇಕೆಂದು ಮಾಡಿದ ಅರ್ಜಿಗಳು ನಿರಾಕರಿಸಲ್ಪಟ್ಟವೆ.

ಮಂಗಳೂರು ನಗರ ಸಭೆಯು—

ತಾ. 15ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಗುಜ್ಜರಕೆರೆ ರಸ್ತೆಗೆ ತಾರು ಹಾಕುವುದಕ್ಕಾಗಿ ರೂ. 3900, ಉರ್ವದಿಂದ ಸುಲ್ತಾನ ಬತ್ತೇರಿ ರಸ್ತೆಯಲ್ಲಿ ಸಂಕವನ್ನು ಪುನಃರ್ರಚಿಸುವುದಕ್ಕಾಗಿ ರೂ. 2500, ಸುಲ್ತಾನ ರಸ್ತೆಯಲ್ಲಿ ಮೋರಿಯನ್ನು ಉದ್ಧಮಾಡುವುದಕ್ಕಾಗಿ ರೂ. 1101, ನಂದಿಗುಡ್ಡೆ ರಸ್ತೆ ದುರಸ್ತಿಗಾಗಿ ರೂ 3730 ಮಂಜೂರಾಯಿತು.

ಮಂಗಳೂರು ನಗರ ಸಭಾಕ್ಷೇತ್ರದೊಳಗೆ ಒಂದು 'ನಾಟಕಮಂಟಪ' ವಿರಬೇಕೆಂಬ ಡಾ| ಎಮ್. ಸಿ. ಶಾಸ್ತ್ರಿಗಳ ಮಂಜೂರಾದ ಠರಾವಿನ ಕುರಿತು ಚರ್ಚೆ ನಡೆದು ಆ ಕುರಿತು ಎಲ್ಲ ವಿವರಗಳ ಒಂದು ಅಂದಾಜನ್ನು ತಯಾರಿಸಿ ಕೊಡಬೇಕಾಗಿ ಆ ವಿಚಾರವನ್ನು ಮುಂದುವರಿಸಲಾಯಿತು. ನಗರ ಸಭೆಯ ದೀಪಹಚ್ಚುವರೇ ಮುಂತಾದ ಕೆಳಗಿನ ನೌಕರರಿಗೆ ಮನೆ ಬಾಡಿಗೆ ಭತ್ಯೆ ಮತ್ತು ಸಂಬಳದಲ್ಲಿ ರೂ 3 ಹೆಚ್ಚಿಸುವುದೆಂಬ ಕುರಿತು ನಿರ್ಣಯವಾಗಿ ಒಪ್ಪಿಗೆಗಾಗಿ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಮಂಗಳೂರು ಬಾವುಟಗುಡ್ಡೆಯಲ್ಲಿರುವ ಇದ್ಗಾ ಪ್ರಾರ್ಥನಾ ಮಂದಿರದ ಸುತ್ತ ಮತ್ತು ಹುಲ್ಲು ಬೆಳೆಯಿಸಿ ವಿಹಾರ ಯೋಗ್ಯವಾದ ಸ್ಥಳವನ್ನಾಗಿ ಮಾಡುವ ನಗರ ಯೋಜನಾ ಸಮಿತಿಯ ನಿರ್ಣಯಕ್ಕೆ ಪರವಾಗಿ 18 ಮತಗಳೂ ವಿರೋಧವಾಗಿ 8 ಮತಗಳೂ ದೊರೆತವು.

ಹರಿಜನ ಸಂಸ್ಥೆಗಳು— ಈ ವರೆಗೆ ಮಂಗಳೂರು ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಆಡಳಿತದಲ್ಲಿದ್ದ ಕದ್ರಿ ಹುಡುಗರ ಬೋರ್ಡಿಂಗ್, ಉಡಿಯಾಲ ಬೈಲು ಹುಡುಗಿಯರ ಬೋರ್ಡಿಂಗ್, ಅತ್ತಾವರ ಹುಡುಗರ ಎಲಿಮೆಂಟರಿ ಶಾಲೆ, ಹಾಗೂ ಕೊಡಿಯಾಲ ಬೈಲು, ದೇರೆ ಬೈಲು, ಪುತ್ತೂರು, ಮತ್ತು ಶಿವಳ್ಳಿಯ ಹರಿಜನ ಬೋರ್ಡಿಂಗುಗಳನ್ನು ಮದರಾಸು ಸರಕಾರವು ತನ್ನ ಆಡಳಿತಕ್ಕೊಳಪಡಿಸಲು ನಿರ್ಧರಿಸಿದೆ.

ವರ್ಗಾವರ್ಗಿ— ಜಿಲ್ಲಾ ಪೋಲೀಸು ಸುಪರಿಂಡೆಂಟರಾಗಿದ್ದ ಶ್ರೀ. ಎನ್. ರಾಮಯ್ಯನವರಿಗೆ ಕೃಷ್ಣ ಜಿಲ್ಲೆಗೆ ವರ್ಗವಾಗಿದೆ, ಅವರ ಬದಲಿಗೆ ಮಲಬಾರಿನಲ್ಲಿದ್ದ ಶ್ರೀ. ಟಿ. ಕಾರ್ಲ್‌ಸನ್ ಅವರು ವರ್ಗಾಯಿಸಲ್ಪಟ್ಟಿದ್ದಾರೆ.

ಟ್ರೈಜಂ ಡೆಪ್ಯುಟಿ ಕಲೆಕ್ಟರ್ ಶ್ರೀ. ಕೆ. ಆರ್. ಕೃಷ್ಣ ಸ್ವಾಮಿಯವರ ಸ್ಥಾನದಲ್ಲಿ ಶ್ರೀ. ಎಚ್. ನರಸಿಂಹನವರು ನೇಮಿಸಲ್ಪಟ್ಟಿದ್ದಾರೆ.

ಕಾರ್ಕಳ— ಬೋರ್ಡು ಹೈಸ್ಕೂಲಿನಿಂದ S. S. L. C. ಪರೀಕ್ಷೆಗೆ ಕುಳಿತ 72 ಮಂದಿಯಲ್ಲಿ 70 ಮಂದಿ (ಸೇಕಡಾ 97) ಪಾಸಾಗಿದ್ದಾರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮಂಜೇಶ್ವರ— ಶ್ರೀ. ಬಿ. ಬೊಮ್ಮಯ್ಯ ಚಂದಯ್ಯ ಶೆಟ್ಟರು ಹೊಸತಾಗಿ ಕಟ್ಟಿಸಿದ ಗೃಹಪ್ರವೇಶ ಸಮಾರಂಭವು ತಾ 19ರಲ್ಲಿ ವಿವಿಧ ಕಾರ್ಯಕ್ರಮಗಳಿಂದ ವೈಭವದಿಂದ ನೆರವೇರಿತು.

ವಿವಾಹ ಸಮಾರಂಭಗಳು

ಬ್ರಹ್ಮಾವರ ರಾಮಣ್ಣ ಶೆಟ್ರ ಪುತ್ರಿ ಸೌ| ಸಂಜೀವಿಯನ್ನು ಬೇಳೂರು ಧನ್ನಾಡಿ ಮನೆ ಅಣ್ಣ ಶೆಟ್ರ ಪುತ್ರ ಶ್ರೀ. ಶಿವರಾಮ ಶೆಟ್ಟರು ಇದೇ ತಾ 17 ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿಯೂ, ಕಾರ್ಕಳ ದಾಸಪ್ಪ ಹೆಗ್ಡೇರ ಪುತ್ರಿ ಸೌ| ಸುಮತಿಯನು ತೋನ್ಸೆ ಕೃಷ್ಣಯ್ಯ ಹೆಗ್ಡೇರ ಪುತ್ರ ಶ್ರೀ ಚಂದ್ರಪಾಲ ಹೆಗ್ಡೆಯವರು ತಾ 19ರಲ್ಲಿ ಕಾರ್ಕಳ ಶ್ರೀ. ಎಸ್. ವಿ. ಟಿ. ಶಾಲೆಯಲ್ಲಿಯೂ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಡಾ: ಕೆ. ವಿಟ್ಠಲ ಶೆಟ್ಟರ ಪುತ್ರಿ ಸೌ ಸುಧಾಳನ್ನು ಬಿಟ್ಟಿಗುತ್ತು ನಾರಾಯಣ ಆಳ್ವರವರ ಪುತ್ರ ಶ್ರೀ ಪ್ರಭಾಕರ ಹೆಗ್ಡೆಯವರು ತಾ 19 ರಲ್ಲಿ ಮಂಗಳೂರು ರಾಮ ಕೃಷ್ಣ ವಿದ್ಯಾರ್ಥಿ ಭವನದಲ್ಲಿಯೂ ಮಂಡ್ಯೆ ಕೆಳಗಿನ ಮನೆ ವೆಂಕಪ್ಪ ಶೆಟ್ಟರ ಪುತ್ರಿ ಸೌ| ಗುಲಾಬಿಯನ್ನು ಬಾಳುತ್ತಾರು ಪದ್ಮಣ್ಣ ಶೆಟ್ಟರ ಪುತ್ರ ಶ್ರೀ ಭುಜಂಗ ಶೆಟ್ಟರು ತಾ 19ರಲ್ಲಿ ಕೋಟೇಶ್ವರ ದೇವಸ್ಥಾನದಲ್ಲಿಯೂ ಪುತ್ತೂರು ಕೆ. ಕರಿಯಪ್ಪ ರೈಗಳ ಪುತ್ರಿ ಸೌ| ಕಸ್ತೂರಿಯನ್ನು ಅತ್ತೂರು ಮೂಡ್ರಗುತ್ತು ಪರೇಲ್ ತಾಡ ಶೆಟ್ರ ಪುತ್ರ ಡಾ| ಕೆ. ಶಂಕರ ಶೆಟ್ಟರು ತಾ 19ರಲ್ಲಿ ಪುತ್ತೂರು ಗೌಡ ವಿದ್ಯಾರ್ಥಿ ನಿಲಯದಲ್ಲಿಯೂ ತಲಪಾಡಿ ದೊಡ್ಡ ಮನೆ ನಾರಾಯಣ ನಾಯ್ಕರ ಪುತ್ರಿ ಸೌ| ವಸಂತಿಯನ್ನು ಸಾವಣ್ಣಾಡಿಗುತ್ತು ನಾರಾಯಣ ಶೆಟ್ರ ಪುತ್ರ ಶ್ರೀ ಭವಾನಿ ಶಂಕರ ಶೆಟ್ಟರು ತಾ 19 ರಲ್ಲಿ ಮಂಗಳೂರು ಜ್ಯೋತಿ ಟಾಕೀಸಿನಲ್ಲಿಯೂ ಮುಲ್ಕಿಯ ಎಡ್ವಕೇಟ್ ಶ್ರೀ. ಎಸ್. ರಾಮಯ್ಯ ನಾಯ್ಕರ ಪುತ್ರಿ ಸೌ| ಸತ್ಯವತಿಯನ್ನ ಕೆ. ಪಿ. ಶೀನಪ್ಪ ಶೆಟ್ಟರ ಪುತ್ರ ಡಾ| ಎಂ ಬಾಲ ಕೃಷ್ಣ ಶೆಟ್ಟರು ತಾ 20 ರಲ್ಲಿ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿಯೂ ಸೂಡಾ ಪರೇಲ್ ಶೀನಪ್ಪ ಹೆಗ್ಡೇರ ಪುತ್ರಿ ಸೌ| ಸರೋಜಿನಿಯನ್ನು ಉಳಿಯಾರಗೊಳಿ ದೇಜಪ್ಪ ಶೆಟ್ರ ಪುತ್ರ ಶ್ರೀ ದಿವಾಕರ ಹೆಗ್ಡೆಯವರು ತಾ 22 ರಲ್ಲಿ ಸೂಡಾ ದೇವಸ್ಥಾನದಲ್ಲಿಯೂ ಕೆನರಾ ನರ್ಸರಿಯ ಕೃಷ್ಣ ಮುದ್ದಣ್ಣ ಶೆಟ್ಟರ ಪುತ್ರಿ ಸೌ| ಸುನಂದಳನ್ನು ಪಾದೂರು ಕೊಲ್ಲಬೆಟ್ಟು ಗುತ್ತು ವೆಂಕಟ ಶೆಟ್ರ ಪುತ್ರ ಶ್ರೀ. ಬಿ ಸುಂದರ ಹೆಗ್ಡೆ, ಬಿ. ಎ. ಅವರು ತಾ 22 ರಲ್ಲಿ ಉಡುಪಿ ಶ್ರೀ ರಾಮ ಕೃಷ್ಣ ಥಿಯೇಟರಿನಲ್ಲಿಯೂ ವಿವಾಹವಾದರು.

ಕುಡುಮಲ್ಲಿಗೆ— ತೀರ್ಥಹಳ್ಳಿ ತಾಲೂಕು ಕುಡುಮಲ್ಲಿಗೆ ಎಂಬಲ್ಲಿ ಡಾ| ಯು. ಚಂದ್ರಶೇಖರ, ಇವರ "ಪ್ರೇಮ ಮೆಡಿಕಲ್ ಹೋಲ್" ಎಂಬ ಡಿಸ್ಪೆನ್ಸರಿಯ ಉದ್ಘಾಟನಾ ಸಮಾರಂಭವು ತಾ. 12-6-53ರಲ್ಲಿ ಶ್ರೀ ಹುಗುಲವಳ್ಳಿ ರಂಗಯ್ಯ ಗೌಡರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ನೆರವೇರಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No 244/1953

ರಾಮಕೃಷ್ಣ ಭಟ್ಟ —ವಾದಿ

ಮತ್ತು

ಚೆಲ್ಲ ಪೂಜಾರಿ —ಪ್ರತಿವಾದಿ.

ಇವರೊಳಗೆ.

ಮೇಲ್ಕಂಡ ವ್ಯಾಜ್ಯವು ವಾದಿಯು ಪ್ರತಿವಾದಿ ಮೇಲೆ ಚಾಲಗೇಣಿ ಗೇಣಿ ಬಾಕಿಗೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತ್ಯ ವ್ಯಾಜ್ಯದ ನೋಟೀಸು ತಾ. 13-7-53ಕ್ಕೆ ಇಟ್ಟಿರುವದರಿಂದ ಆ ದಿವಸ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದಿದ್ದರೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

Date 22-6-53 Udipi.

ವಿವಿಧ ಪಾತ್ರೆಗಳು



ಯಾನಸ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯರ
ರಥಬೀದಿ ಉಡುಪಿ.

ತಾ. 23—6—1953ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಪತ್ತೇದಾರಿ ಸಾಹಸ ಪೂರ್ಣ:—

ದಿಗಂಬರ ಸ್ವಾಮಿಯರ್

ಸರೋಜ, ನಂಬಿಯಾರ, ಲಲಿತ,ಪದ್ಮಿನಿ, ದ್ರೌಪದಿ, ರಾಗಿಣಿ, ಮೊದಲಾದವರು

ಬರುವ ಚಿತ್ರ "ಕಲ್ಯಾಣಿ"

ಜನತೆಯ ಸಮ್ಮತಿಯಿಂದ ಕ್ರಾಂತಿ

(ಡಾಕ್ಟರ್ ಸರ್ವಪಳ್ಳಿ ರಾಧಾಕೃಷ್ಣನ್)

"ಭೂಮಿಯ ಸಮಸ್ಯೆಯು ಇಂದು ನಮ್ಮ ಧ್ಯಾನವನ್ನು ಪ್ರಬಲವಾಗಿ ಆಕರ್ಷಿಸುತ್ತಿದೆ. ಜಮೀನುದಾರಿಕೆಯನ್ನು ನಾಶಗೊಳಿಸಿ ಅವರ ಭೂಮಿಯನ್ನೆಲ್ಲ ರೈತರು ಬಲಾತ್ಕಾರದಿಂದ ವಶಪಡಿಸಿಕೊಳ್ಳಬೇಕೆಂದು ಕೆಲವರು ಹೇಳುತ್ತಾರೆ. ಭೂಸಮಸ್ಯೆಯನ್ನು ನಿವಾರಿಸುವ ಉಪಾಯಗಳಲ್ಲಿ ಇದು ಒಂದಾಗಿರುತ್ತದೆ! ಆದರೆ ಭಾರತ ದೇಶದ ಪರಂಪರೆ ಮತ್ತು ಪ್ರಕೃತಿ, ಅದರ ಸಂವಿಧಾನ ಘಟನೆ ಮತ್ತು ಗಾಂಧೀಜಿಯವರ ಪ್ರಕ್ರಿಯೆಗಳು ಇದಕ್ಕೆ ಪ್ರತಿಕೂಲವಾಗಿವೆ. ಈ ಸಮಸ್ಯೆಯನ್ನು ಪರಿಹರಿಸಲು ಭಾರತವು ಜನತಂತ್ರದ ಪದ್ಧತಿಯನ್ನು ಅನುಸರಿಸುತ್ತಿದೆ. ಆದರೆ ಆಚಾರ್ಯ ವಿನೋಬಾ ಭಾವೆಯವರ ಮಾರ್ಗವು ಅದಕ್ಕಿಂತಲೂ ಹೆಚ್ಚು ಉಚ್ಚವಾಗಿದೆ. ಅವರು ಕಾಡಿನ ನಿಯಮವನ್ನು ತ್ಯಜಿಸಿ ಪ್ರೇಮದ ನಿಯಮವನ್ನು ಸ್ವೀಕರಿಸುತ್ತಾರೆ. ವಿನೋಬಾಜಿಯವರು ಶಾಸನಾಸಿನ ಆಶ್ರಯವನ್ನೂ ಕೂಡ ಪಡೆಯಲಿಲ್ಲ. ಅವರ ಆಧಾರವೆಲ್ಲ ಪ್ರೇಮದ ಶ್ರೇಷ್ಠ ನಿಯಮವನ್ನವಲಂಬಿಸುತ್ತಿದೆ. ಈ ರೀತಿಯಲ್ಲಿ ಅವರು ಮೂಲಗಾಮಿ ಪರಿವರ್ತನೆಗಾಗಿ ದೇಶವನ್ನು ಸಿದ್ಧಗೊಳಿಸುತ್ತಿದ್ದಾರೆ. ಈ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯು ಅಧಿಕಾರ ಪ್ರಯೋಗ ಯಾ ಬಲ ಪ್ರಯೋಗದಿಂದಾಗದು; ಅದು ಕೇವಲ ಒಪ್ಪಿಗೆಯಿಂದಾಗುವುದು. ಭಾರತ ದೇಶವು ತನ್ನ ಸಮಸ್ಯೆಯನ್ನು ಈ ಪ್ರಕ್ರಿಯೆಯಿಂದ ನಿವಾರಿಸಿದರೆ, ಅದು ಲೋಕಕ್ಕೆಲ್ಲ ಒಂದು ಉಚ್ಚ ಆದರ್ಶವನ್ನು ತೋರಿಸಿದಂತಾಗುವುದು. ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯು ಸಾರ್ವತ್ರಿಕ ಸತ್ತಾವಾದಿ ಪ್ರಕ್ರಿಯೆಗಳಿಂದಾಗಲಿ, ಸರ್ವಾಧಿಕಾರಿ ಸರಕಾರಗಳಿಂದಾಗಲೀ ಸಫಲತಾಪೂರ್ವಕವಾಗಿ ಸಾಧ್ಯವಾಗುವುದಿಲ್ಲ; ಆದರೆ ಅದು ಜನತಂತ್ರಾತ್ಮಕ ಉಪಾಯಗಳಿಂದಲೇ ಸಾಧ್ಯವಾಗಬಹುದೆಂಬುದು ಆವಾಗಲೇ ಪ್ರಪಂಚಕ್ಕೆ ತಿಳಿದುಬರುವುದು.

[ತಾ. 27—3—53ಕ್ಕೆ ಹೊಸದಿಲ್ಲಿಯಲ್ಲಿ ಭಾರತ ಸರಕಾರದ ಉಪಾಧ್ಯಕ್ಷ ಡಾಕ್ಟರ್ ಸರ್ವಪಳ್ಳಿ ರಾಧಾಕೃಷ್ಣನ್‌ರವರು ಕಾಂಗ್ರೆಸು ಪ್ರಜಾ-ಸಮಾಜವಾದಿ ಮತ್ತು ಇತರ ಪಾರ್ಲಿಮೆಂಟರಿ ಸದಸ್ಯರಿಗೆ ಭೂದಾನ ಸಂಪತ್ತಿನಲ್ಲಿ ಕೊಟ್ಟ ಭಾಷಣದಿಂದ.]

ದ. ಕನ್ನಡ ಜಿಲ್ಲಾ ಭೂದಾನ ಸಮಿತಿಯ ಕಚೇರಿಯಿಂದ
ರಥಬೀದಿ, ಮಂಗಳೂರು— 1.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಸ್ವೀಕಾರ—ವಿಮರ್ಶೆ

ಭಾರತದ ಐಕ್ಯ—

ಬರೆದವರು: ಜವಾಹರಲಾಲ ನೆಹರೂ. ಕನ್ನಡಕ್ಕೆ ಅನುವಾದಿಸಿದವರು: ಗುಡ್ಡಪ್ಪ, ಐ. ಎಲ್. ಪ್ರಕಾಶಕರು: ಪೂರ್ಣಿಮಾ ಪ್ರಕಾಶನ, ಮಾತುಂಗ, ಮುಂಬಯಿ ೧೯. ಬೆಲೆ: ಎಂಟಾಣೆ.

ಸದ್ಯ ನಮ್ಮ ಪ್ರಧಾನಮಂತ್ರಿಗಳಾಗಿರುವ ನೆಹರೂರವರು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಸಹ ಧೀರೋದಾತ್ತ ವ್ಯಕ್ತಿತ್ವ ಸಂಪನ್ನರಾಗಿದ್ದಾರೆಂಬುದು ಸರ್ವವಿಶ್ರುತವಿದೆ. ಭಾರತವು ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸುತ್ತಿದ್ದುದಕ್ಕೆ ಚೇತನ ಪ್ರವಾಹ ಎಲ್ಲಿಂದ ಒಸರೊಡೆಯುತ್ತಿದೆ ಎಂದೆಲ್ಲರೂ ಕುತೂಹಲದಿಂದ ಕೇಳುತ್ತಿದ್ದ ಆ ಕಾಲದಲ್ಲಿ ಭಾರತೀಯ ಸಂಸ್ಕೃತಿಯೇ ಹಿಂಗದ ಬುಗ್ಗೆಯಾಗಿ ನಮ್ಮ ಸ್ಫೂರ್ತಿಯನ್ನೂ ಸದ್ವಿಚಾರವನ್ನೂ ನಮಗೆ ಕರುಣಿಸಿದೆ ಎಂದು ನೆಹರೂ ಸಯುಕ್ತಿಕವಾಗಿ ಪ್ರತಿಪಾದಿಸಿರುವರು. ಭಾರತದ ಶ್ರೇಯಸ್ಸಿಗೆ ಸಾಂಸ್ಕೃತಿಕ ಐಕ್ಯವೇ ಮೂಲವೆಂದು ನೆಹರೂರವರು ಹಿಂದೆಯೂ ಈಗಲೂ ಸಾರುತ್ತಾ ಬಂದಿರುವರು. ಪ್ರಕೃತ ಪುಸ್ತಕವು ನೆಹರೂ ೧೯೩೮ರಷ್ಟು ಹಿಂದೆ ಅಮೇರಿಕದ ಫಾರಿನ್ ಎಫೇರ್ಸ್ ಎಂಬ ಪತ್ರಿಕೆಯಲ್ಲಿ ಬರೆದೊಂದು ಆಂಗ್ಲ ಲೇಖನದ ಅನುವಾದ. ಇಂದಿನ ಪರಿಸ್ಥಿತಿಗೂ ಅಂದಿನ ನೆಹರೂ ಹೇಳಿಕೆಗೂ ಇರುವ ಅಂತರವೆಂದರೆ ಸರಿಯಾಗಿ ಹತ್ತು ವರ್ಷಗಳಲ್ಲಿ, ಅಂದರೆ ೧೯೪೭ರಲ್ಲಿ, ರಾಜಕೀಯದೃಷ್ಟಿಯಿಂದ ನಾವು ಸ್ವತಂತ್ರರಾದೆವೆಂಬ ಸಂಗತಿ ಮಾತ್ರ, ಭಾರತೀಯರ ಆರ್ಥಿಕ, ಸಾಮಾಜಿಕ ಉನ್ನತಿಯಾಗುವುದು ಇನ್ನೂ ಬಾಕಿಯಿದೆ. ಈ ಮೌಲ್ಯವನ್ನು ಸಾಧಿಸುವುದಕ್ಕೆ ರಾಜಕೀಯ ಚಟುವಟಿಕೆಗಿಂತಲೂ ರಾಷ್ಟ್ರೀಯ ದೃಷ್ಟಿ ಪ್ರಾಮುಖ್ಯವಾಗಿರುತ್ತದೆ. ನಮ್ಮ ರಾಷ್ಟ್ರೀಯ ದೃಷ್ಟಿಯಲ್ಲಿ ಐಕ್ಯಮತ್ಯದ ಅಗತ್ಯವಿದೆ. ಪ್ರಕೃತ ಪುಸ್ತಕ ಭಾರತದ ಸಾಂಸ್ಕೃತಿಕ ಮಹತ್ವದ ಯಥಾರ್ಥಜ್ಞಾನದಿಂದ ನಮ್ಮ ಘನವಾದ ಉದ್ದೇಶ ನೆರವೇರುತ್ತದೆಂಬುದನ್ನು ಸೂಚಿಸುತ್ತದೆ.

ನಾಲ್ಕು ಅಧ್ಯಾಯಗಳು—

ಬರೆದವರು: ರವೀಂದ್ರನಾಥ ಠಾಕೂರರು. ಕನ್ನಡಿಸಿದವರು: "ಧನ್ವಂತಿ" ಪ್ರಕಾಶಕರು: ಎಚ್. ಎಸ್. ರಾವ್ ಬ್ರದರ್ಸ್ ಚಿಕ್ಕಪೇಟೆ, ಬೆಂಗಳೂರು ನಗರ. ಬೆಲೆ: ಒಂದು ರೂಪಾಯಿ.

ಇದೊಂದು ಪ್ರೇಮ ಪ್ರಾಧಾನ್ಯವಾದ ಕಿರು ಕಾದಂಬರಿ. ಇಲಾ ಮತ್ತು ಅತೀಂದ್ರ ಇದರ ಪ್ರಮುಖ ಪಾತ್ರಗಳು. ಕ್ರಾಂತಿಕಾರ ಮುಖಂಡ ಇಂದ್ರನಾಥನ ಪಕ್ಷಕ್ಕೆ ಒಳಗಾಗಿರುವ ಇವರು ಪ್ರೇಮಾನುಬಂಧನ ಸುಖದಿಂದ ವಂಚಿತರಾಗಬೇಕಾಗುತ್ತದೆ. ಈ ಕಥಾವಸ್ತು ಸಾಮಾನ್ಯ ಓದುಗರಿಗೆ ಗ್ರಹಿಕೆಯಾಗುವಷ್ಟು ಸುಲಭದಲ್ಲಿ ನಿರೂಪಿಸಲಾಗಿದೆಯೆಂದು ತೋರುವುದಿಲ್ಲ. ಹಾಗೆಂದು ಗುರುದೇವರ ಪ್ರಸಿದ್ಧ ಕೃತಿಗಳಲ್ಲಿ ಇದೊಂದೆಂಬುದರಿಂದ ಕುತೂಹಲಗೊಂಡು, ಓದಿ, ಸವಿನೋಡಬಹುದು. ಅನುವಾದ ಚೊಕ್ಕವಿದೆ.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮುಂಬಾಯಿ ಬ್ರಾಂಚ್:

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಮೋಲ್ಕಂಡ ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದಿರುವುದರಿಂದ ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸು ಕಳುಹಿಸಿದುದರಲ್ಲಿ ಆ ಪೈಕಿ ಕೆಲವರು ನೋಟೀಸು ಪಡೆದು ವ, ಬಾಕಿಯವರು ನೋಟೀಸು ಡೆಲಿವರಿ ಸಿಕ್ಕದೆ ಸದರಿ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಸುವುದೇನೆಂದರೆ:- ಸದರಿ ಸಾಲಗಾರರು ಅವರಿಂದ ಈ ಮೇಲ್ಕಾಣಿಸಿದ ಬೇಂಕಿಗೆ ಸಲ್ಲಬೇಕಿರುವ ಅಸಲು ಬಡ್ಡಿ ವಗೈರೆ ವ, ನೋಟೀಸು ಖರ್ಚು ಸಮೇತ- ಎಲ್ಲವನ್ನು ಇದೇ 1953ನೇ ಇಸವಿ ಜುಲೈ ತಾ. 4ರಲ್ಲು ಹಗಲು ಗಂಟೆ 2ರ ಒಳಗೆ ಪಾವತಿ ಮಾಡದಿದ್ದರೆ, ಅದೇ ದಿವಸ ಹಗಲು ಗಂಟೆ 2—3ಕ್ಕೆ ಸರಿಯಾಗಿ ಯಾ ತದನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ನಗಗಳನ್ನು ನಮ್ಮ ಬೇಂಕಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಲೋನ್ ನಂಬ್ರ ಮತ್ತು ತಾರೀಕು	ಸಾಲಪಡಕೊಂಡವರ ಹೆಸರು ಮತ್ತು ವಿಳಾಸ.	ಮೊಬಲಗು ರೂ. ಆ. ಪೈ.
84/51 5-6-51	ಎಚ್. ಎಸ್. ಭಂಡಾರಿ, ಭಂಡಾರಿ ಮೆಟಲರ್ಜಿಕಲ್ ಕೋರ್ಪೋರೇಶನ್, ಲಿಮಿಟೆಡ್, ವಿಕ್ರೋಳಿ, ಬೊಂಬೆ.	569 6 0
85/51 6-6-51	—do—	954 13 0

(Sd) P. P. Lobo Prabhu,
MANAGER.

For Protection and Provision Consult

The New Guardian of India Life Insurance Co., Ltd.

Estd] Head office: MADRAS [1934

NEW BUSINESS Exceeds	...	66½ Lakhs.
PREMIUM INCOME "	...	15 "
LIFE FUND "	...	54½ "
ASSETS "	...	60½ "
BUSINESS IN FORCE	Nearly	3 Crores.

A Policy in this Progressive Life Office is good investment: its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia, *Branch Manager*,
Diamond Building, Hampankatta, MANGALORE, S. K.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿಯ ಕೊಳ್ಳುವುದೆಲ್ಲಿ?

ರಾಮೇಶ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಎಂದಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟರಮಣ ಭಟ್

SEX & LOVE BOOKS

Tales of Human Passion & Intrigue.
—*Verman's Famous "Night" Series*—
BY MICHAEL OWEN

- NIGHT IN BOMBAY —
- NIGHT IN CALCUTTA —
- NIGHT IN BERLIN —

Stirring, unforgettable tales depicting the night life of these great cities.

Re. 1/- only each, plus V. P. charges.

Omnibus volume of all three for Rs. 2/6/- only. For full list of sensation and hot books along with samples, send an addressed envelope.

VERMAN & CO., (N)
Post Box No. 51,
SAHARANPUR (U. P.)

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಬದುಕಿಗೊಂದು ಅರ್ಥ

(೧ನೇ ಪುಟದಿಂದ)

ಸಾಮಾನ್ಯವಾಗಿ ಹೆಚ್ಚಿನವರು ಒಂದು ದಾರಿ ಹಿಡಿದರೆ, ಕೆಲವೇ ಮಂದಿ ಅದನ್ನು ಬಿಟ್ಟು ಬೇರೆ ಮಾರ್ಗ ತುಳಿಯುವರು- "ಊರಿಗೊಂದು ದಾರಿಯಾದರೆ ಪೋರನಿಗೊಂದು ದಾರಿ" ಎನ್ನುತ್ತಾರಲ್ಲ, ಹಾಗೆ. ಆದರೆ ಈ ಕೆಲವೇ ವಕ್ರಮಾರ್ಗಿಗಳ ಕೈಯಿಂದ ಉತ್ಕ್ರಾಂತಿಯ ವೈಚಿತ್ರ್ಯ ನೆರವೇರುತ್ತದೆ. ನಮ್ಮ ಕಾಲದಲ್ಲಿಯೇ ಎಲ್ಲರೂ ಹಿಂಸಾ ಮೂಲವಾದ ಶಸ್ತ್ರಾಸ್ತ್ರ ಸನ್ನದ್ಧ ಸೈನ್ಯ ಬಲದಿಂದ ದಾಸ್ಯವನ್ನು ನೀಗಿ, ಸ್ವಾತಂತ್ರ್ಯ ಪಡೆಯುವ ಸಾಮಾನ್ಯ ದಾರಿಯನ್ನು ಬಿಟ್ಟುಕೊಟ್ಟು ಅಹಿಂಸಾತ್ಮಕ ಸತ್ಯಾಗ್ರಹವನ್ನು ಅನುಸರಿಸಿ ದಾಸ್ಯ ಶೃಂಖಲೆಯನ್ನು ಕಡಿದೊಗೆದ ಮಹಾತ್ಮ ಗಾಂಧೀಯ ಉದಾಹರಣೆಯುಂಟು. ಲೋಕಕ್ಕೆ ಇರುವುದು ಅವರೊಬ್ಬರೇ ಮಹಾತ್ಮ. ಅವರೂ ಅನೇಕ ಕೋಟಿಯ ನಡುವೆ ಅನೇಕ ಶತಕಗಳಿಗೊಬ್ಬ. ಇಂಥ ಧೈರ್ಯದ ಹೆಜ್ಜೆ ಇಡುವುದು ಎಲ್ಲರಿಗೆ ಸಾಧ್ಯವಿಲ್ಲ; ಏಕೆಂದರೆ ಪರಿಣಾಮ ಸ್ವರೂಪದಲ್ಲಿ ಇದಿರಿಸಬೇಕಾಗುವ ಕಷ್ಟನಷ್ಟಗಳು ಮತ್ತು ತೊಂದರೆ ತಾಪತ್ರಯಗಳು ಸಾಮಾನ್ಯರ ಎದೆ ನಡುಗಿಸುತ್ತವೆ. ಹಾಗೆಂದು ಇದ್ದ ಸ್ಥಿತಿಯಲ್ಲಿಯೇ ಸದಾಕಾಲ ಇರುವುದು ನಿಸರ್ಗ ನಿಯಮವಲ್ಲ, ಸಾಹಿತಿ ಕಾರಂತರು ನಿಸರ್ಗದ ಚೆಲುವನ್ನು ಮೆಚ್ಚಿ ಹಾಡುವ ವ್ಯಕ್ತಿತ್ವ ಪಡೆದಿರುವರು. ಅವರ ಮರಳಿ ಮಣ್ಣಿಗೆಯಂಥ ಪುಸ್ತಕವನ್ನು ಓದಿದರೆ ನಮ್ಮ ಪಡು ಕರಾವಳಿಯ ನೆಲ ನಿಮಿಷ ನಿಮಿಷಕ್ಕೂ ಬದಲಾಗುವ ಚಂದ ಮನವರಿಕೆಯಾಗುತ್ತದೆ. ಹೀಗೆ ಬದಲಾವಣೆಯನ್ನು ಹೊಂದುವುದೂ ಅದನ್ನು ಮೆಚ್ಚಿಕೊಳ್ಳುವುದೂ ನಮ್ಮೆಲ್ಲರ ಪ್ರಕೃತಿ ಧರ್ಮ. ಹಿಮವು ಬಿಸಿಲಿಂದ ಕರಗಿ ನೀರಾಗಿ ಹರಿದರೆ ಅದರಿಂದ ಮಹಾ ನದಿಗಳು ಹುಟ್ಟಿಕೊಂಡು, ವಿಶಾಲವಾದ ಬಯಲು ನೀರುಂಡು, ಸಸ್ಯಶ್ಯಾಮಲವಾಗುತ್ತವೆ; ಲಕ್ಷೋಪಲಕ್ಷ ಜನರ ಜೀವನ ನಡೆಯುತ್ತದೆ. ಈ ರೀತಿ ಲೋಕಕ್ಕೆ ಕಲ್ಯಾಣವುಂಟು ಮಾಡುವುದಕ್ಕೋಸ್ಕರವೇ ಹಿಮ ಕರಗುವ ಕೆಲಸ ನಡೆಯಿತೆಂದು ಇಟ್ಟುಕೊಳ್ಳಬಹುದು.

ಸೃಷ್ಟಿರಚನೆಯಲ್ಲಿ ಇದುವರೆಗೆ ಆದ ವೈಚಿತ್ರ್ಯಗಳಲ್ಲಿ ಮನುಷ್ಯನೇ ಅಪ್ರತಿಮ. ಏಕೆಂದರೆ ಯಾವ ಜೀವ ಜಂತುವಿಗೂ ಇಲ್ಲದ ರೀತಿಯಲ್ಲಿ ವಿಚಾರ ಸಾಮರ್ಥ್ಯವನ್ನು ಅವನು ಪಡೆದಿರುವನು. ಉಳಿದ ಪ್ರಾಣಿಗಳೆಲ್ಲ ಪ್ರವೃತ್ತಿ ಮೂಲವಾದ ರೀತಿನೀತಿಗಳಂತೆ ನಡೆದು ಕೊಳ್ಳುವಾಗ, ಮನುಷ್ಯನು ಬುದ್ಧಿಜನ್ಯವಾದ ವಿಚಾರ ಬಲವನ್ನು ಹೆಚ್ಚಾಗಿ ಪಡೆದಿರುವನು. ಪ್ರಸಿದ್ಧ ಪ್ರಾಣಿ ಶಾಸ್ತ್ರಜ್ಞರೊಬ್ಬರು ಹೇಳುವಂತೆ ಈ ಘಟ್ಟದಲ್ಲಿ ದೇವರು ಮನುಷ್ಯನನ್ನು "ನೀನು ಇದು ವರೆಗೆ ಮೂಲ ಪ್ರವೃತ್ತಿಗಳದಾಸ್ಯವನ್ನು ಅಂಗೀಕರಿಸಿ ನಡೆಯುತಿದ್ದಿ. ಆದರೆ ಇನ್ನು ಮುಂದೆ ನಿನ್ನ ವಿಚಾರ ಬಲದಿಂದ ಅವುಗಳ ಹತೋಟಿಯಿಂದ ದೂರಗೊಳ್ಳಬೇಕು. ನೀನು ಕದಿಯಬಾರದು, ಕೊಲ್ಲಬಾರದು, ಬದುಕಿಗಿಂತಲೂ ಹೆಚ್ಚು ಬಾಳ್ವೆಯ ತತ್ವವನ್ನು ಮೆಚ್ಚಬೇಕು" ಎಂದರು.

ಯೋಗಿ ಅರವಿಂದರು ಅರ್ವಾಚೀನ ಪ್ರಪಂಚಕ್ಕೆ ಪ್ರಾಚೀನ ಭಾರತದ ವೇದಾಂತ ಸಾರವನ್ನು ಅನುಗ್ರಹಿಸಿದ ಮಹಾನುಭಾವರೆಂದು ಬಲ್ಲೆವು. ಅವರು ಪೂರ್ಣ ಯೋಗದ ಸಾಧಕರು. ಅರವಿಂದರ ದೃಷ್ಟಿಯಲ್ಲಿ ಮನುಷ್ಯ ಪ್ರಾಣಿತತ್ವಕ್ಕಿಂತಲೂ ದೈವತ್ವಕ್ಕೆ ಹೆಚ್ಚು ಸಮೀಪಗತನಾಗುತ್ತಾ ಸಾಗಿರುವನು. ಇದೇ ಅಭಿಪ್ರಾಯವನ್ನು ಕೆಲವೊಂದು ಪ್ರಾಣಿಶಾಸ್ತ್ರಜ್ಞರು ಪುರಸ್ಕರಿಸುವುದನ್ನು ಕಾಣುತ್ತೇವೆ. ಉತ್ಕ್ರಾಂತಿಯ ಕೊನೆಯ ಮೆಟ್ಟಿಲು ಈಗಿನ ಮನುಷ್ಯನಲ್ಲ — ಮನುಷ್ಯ ಕೇವಲ ಮಧ್ಯಕಾಲದ ಪ್ರತೀಕ. ಅವನ ಸ್ವರೂಪದಲ್ಲಿ ಗುಣವರ್ತನೆಯಲ್ಲಿ ಪರಿವರ್ತನೆಯಾಗಲಿಕ್ಕುಂಟು. ಈ ಪರಿವರ್ತನೆಗೆ ಮೂಲಾಧಾರವಾಗಿ ಮನುಷ್ಯನ ಆತ್ಮಚೈತನ್ಯವಿದೆ; ನೀತಿಯ ನೆಲಗಟ್ಟಿದೆ; ಸದಸದ್ವಿವೇಕದ ಬಲವಿದೆ. ಈಗಿನ ಮನುಷ್ಯನಲ್ಲಿ ಪ್ರಾಣಿಸಹಜವಾದ, ವಿಧ್ವಂಸಕವಾದ ಪ್ರವೃತ್ತಿಗಳ ಪ್ರಾಬಲ್ಯವೇ ಕಾಣುತ್ತದೆ. ಆದರೆ ಮುಂದಿನ ಮನುಷ್ಯನಲ್ಲಿ ಸದ್ಭಾವನೆಗಳೂ ಸದ್ವಿಚಾರಗಳೂ ಆಧ್ಯಾತ್ಮಿಕ ದೃಷ್ಟಿಯೂ ವಿಕಸಿತಗೊಳ್ಳಲಿವೆ. ಭೋಗವಿಲಾಸಗಳನ್ನು ಅನುಭವಿಸುತ್ತಿದ್ದರೂ ಮನುಷ್ಯ ಅವುಗಳ ದಾಸ್ಯಸ್ವೀಕರಿಸದ ಹಂತವೊಂದಿದೆ. ಈ ದೇಹದ ಬಂಧನವನ್ನಳಿದು ಉನ್ನತಾವಸ್ಥೆಯನ್ನು ಹೊಂದುವುದು ಅವನಿಗೆ ಶಕ್ಯವಿದೆ. ಅರವಿಂದರು ಹೇಳುವಂತೆ ಮನುಷ್ಯನೊಂದು ತಾವರೆಯ ಬಳ್ಳಿಯಂತಿರುವನು. ನೀರ ಮೇಲೆ ಎಲೆ ತೇಲುತ್ತಿದೆ. ಒಂದು ಹೂವಿನ ಮೊಗ್ಗೂ ಕಾಣಿಸಿಕೊಂಡಿದೆ. ಇನ್ನು ಸ್ವಲ್ಪ ಸಮಯ ಸಂದ ನಂತರ ಆ ಮೊಗ್ಗು ಅರಳಿಕೊಂಡು ಸಹಸ್ರದಳ ಸಹಿತವಾದ ಸುವಾಸನಾಭರಿತವಾದ ಕಮಲವಾಗಿ ಕಾಣಿಸುತ್ತದೆ. ಆಗಲೇ ತಾವರೆಯ ಜನ್ಮ ಸಾರ್ಥಕ್ಯ. ಮನುಷ್ಯನೂ ಅಂಥ ಮೊಗ್ಗು ಪಡೆದಿರುವನು. ಅದನ್ನು ಅರಳಿಕೊಂಡು ದಶದಿಕ್ಕುಗಳಿಗೂ ಕಂಪು ಬೀರುವುದು ಇದಿದೆ.

ಇದ್ದ ಸ್ಥಿತಿಯನ್ನೇ ಮೆಚ್ಚಿಕೊಂಡು, ಬದಲಾವಣೆಗೆ ಅಂಜಿ ಕುಳಿತರೆ ಪ್ರಗತಿಯು ಸಾಧ್ಯವಿಲ್ಲ. ವಾತಾವರಣವನ್ನು ಧಿಕ್ಕರಿಸಿ ನಡೆಯುವ ಪ್ರವೃತ್ತಿಗಳ ಪ್ರಾಬಲ್ಯವನ್ನು ಆತ್ಮಶಕ್ತಿಯಿಂದ ಆಹ್ವಾನಿಸುವ ಕೆಚ್ಚು ಉಳ್ಳವರು ಮಾತ್ರ ಮುಂದಿನ ಪೀಳಿಗೆಯ ಜನಕರಾದಾರು. ಸ್ವತಂತ್ರ ರೀತಿಯಿಂದ ವರ್ತಿಸಿದ ತುಂಟರು ಲೋಕಾಪವಾದ ಮತ್ತು ಲೋಕ ನೀತಿಗೆ ಬೆದರದೆ, ಉದಾತ್ತವಾದ ಶ್ರೇಯಸ್ಕರ ಕೆಲಸ ಮಾಡಿದವರು ಮಾತ್ರ ಹೊಸ ಜನಾಂಗವನ್ನು ಸೃಷ್ಟಿಗೈಯಬಲ್ಲರು. ಉತ್ಕ್ರಾಂತಿಯ ಘಟ್ಟಗಳು ತೀರ ಅಸ್ಥಿರವಾಗಿವೆ. ಅಸ್ಥಿರತೆಯಿಂದ ಅಸ್ಥಿರತೆಗೆ ಹಾರುತ್ತಿರುವುದೇ ಉತ್ಕ್ರಾಂತಿಯಲ್ಲಿ ಪ್ರಗತಿ. ಇದ್ದುದರಲ್ಲಿ ತೃಪ್ತಿ ಪಡೆದು ಸುಮ್ಮನುಳಿದಾಗಲೇ ಉತ್ಕ್ರಾಂತಿಯು ನಿಲ್ಲುತ್ತದೆ. ಹಿಂದೆ ಮನುಷ್ಯನನ್ನು ಮೂಲ ಪ್ರವೃತ್ತಿಗಳು ನಿಯಂತ್ರಿಸುತಿದ್ದುವು. ಇಂದು ಅವನ ಮೇಲೆ ಹತೋಟಿ ಇರುವುದು ವಿವೇಕಕ್ಕೆ ಮಾತ್ರ. ತನ್ನ ಕರ್ತವ್ಯವೇನೆಂಬುದನ್ನು ವಿಚಾರಿಸುವ ಶಕ್ತಿ ಅವನಿಗೆ ದೈವದತ್ತವಾಗಿ ಬಂದಿದೆ. ತಾನೇ ಶೋಧಿಸಿ ಕಲಿಯುವ ಅಪೂರ್ವ ಸಾಹಸಕ್ಕೂ ಅವನು ಇಳಿದಿರುವನು. ಆದರೂ ಪ್ರಾಣಿ ತತ್ವವು ಪೂರ್ಣ ಬಿಟ್ಟು ಹೋಗಿಲ್ಲವಾದುದರಿಂದ ಇಂದಿನ ಸಭ್ಯತೆಯ ರೂಢಿ ನಿಯಮಗಳನ್ನವನು ಕಳಚಿ ಔದ್ಧತ್ಯಕ್ಕೆ ಮನಗೊಡುವುದುಂಟು. ಒಳ್ಳೆಯದು ಮತ್ತು ಕೆಟ್ಟುದನ್ನು ತಿಳಿದುಕೊಳ್ಳಬಲ್ಲ ವಿಚಾರ ಸಾಮರ್ಥ್ಯವಿದ್ದರೂ ಅದು ಒಮ್ಮೊಮ್ಮೆ ಪ್ರವೃತ್ತಿಗಳ ವರ್ಚಸ್ಸಿನಿಂದ ಶಕ್ತಿ ಕಳೆದು ಕೊಳ್ಳುವುದುಂಟು. ವಿವೇಕ ತಪ್ಪಿದಾಗ ಅವನ ವ್ಯಕ್ತಿತ್ವದ ವರ್ಚಸ್ಸು ಕುಗ್ಗುತ್ತದೆ. ವಿವೇಕ ಬಲಗೊಂಡಾಗ ವ್ಯಕ್ತಿತ್ವ ಪ್ರತಿಭಾನ್ವಿತವೂ ದೇದೀಪ್ಯಮಾನವೂ ಆಗುತ್ತದೆ. ಆದುದರಿಂದ ವ್ಯಕ್ತಿತ್ವದ ಪ್ರಭೆಯನ್ನು ಕಾಪಾಡಿಕೊಳ್ಳುವುದೇ, ಅದನ್ನು ಇನ್ನೂ ಉಜ್ವಲವಾಗಿಸುವುದೇ ಮನುಷ್ಯನ ಈಗಿನ ಧರ್ಮ.

ಮನುಷ್ಯನ ವ್ಯಕ್ತಿತ್ವವನ್ನು ನಾವು ಮನ್ನಿಸಿ ನಡೆಯುವುದರಲ್ಲಿಯೇ ಶ್ರೇಯಸ್ಸುಂಟು. ಈ ವ್ಯಕ್ತಿತ್ವ ಕಳೆಗುಂದುವುದಕ್ಕೆ ಅವಕಾಶ ಕೊಡಕೂಡದು. ದೇವರೊಬ್ಬನಿರುವುದು ನಿಜ; ಅವನು ನಮ್ಮನ್ನು ಸೃಷ್ಟಿಸಿ, ವಿಚಾರ ಶಕ್ತಿಯನ್ನು ಅನುಗ್ರಹಿಸಿದುದರಿಂದ ಕೆಟ್ಟುದನ್ನು ತಿಳಿದುಕೊಳ್ಳುವ ಕಣ್ಣನ್ನು ನಮಗೆ ಕೊಟ್ಟಂತಾಗಿದೆ. ನಮ್ಮ ಅಜ್ಞಾನದಿಂದ ಈ ಕಣ್ಣಿಗೊಂದು ಪರೆಕಟ್ಟಿಕೊಂಡರೆ, ಅದಕ್ಕೆ ದೇವರು ಹೊಣೆಯಾಗಲಾರ. ಏಕಾಣುಜೀವಿಯಾದ ಅಮೀಬ ಸ್ವಂತ ವಿಚಾರ ಸಾಮರ್ಥ್ಯ ಪಡೆದ ಮನುಷ್ಯನಾಗುವುದಕ್ಕೆ ಎಷ್ಟೋ ಕೋಟಿ ವರ್ಷಗಳು ಸಂದಿವೆ. ಹಾಗೆಂದು ಪೂರ್ಣಯೋಗ ಹೇಳುವ ದೈವೀ ಪ್ರಕೃತಿಯ ಮನುಷ್ಯನ ಆವಿರ್ಭಾವಕ್ಕೆ ಅಷ್ಟು ದೀರ್ಘಕಾಲ ಬೇಡ. ನಮ್ಮ ಇನ್ನುಮುಂದಿನ ಹೆಜ್ಜೆಗಳು ತೀವ್ರವಾಗುತ್ತವೆ; ಅವುಗಳು ಪ್ರಾಯೋಗಿಕ ರೂಪದಲ್ಲಿರದೆ, ನಿಶ್ಚಿತ ಫಲಕೊಡುವಂತೆಯೇ ಇರುತ್ತವೆ ಏಕೆಂದರೆ ನಮಗೆ ಬುದ್ಧಿ ಇದೆ; ವಿಚಾರಬಲವಿದೆ. ಸಾಮಾನ್ಯ ಪಕ್ಷಿಯ ಸೃಷ್ಟಿಯಾಗುವುದಕ್ಕೆ ಸಹಸ್ರಾರು ವರ್ಷ ಸಂದಿದ್ದರೂ ಮನುಷ್ಯ ತನ್ನ ಬುದ್ಧಿ ಬಲದಿಂದ ಗಾಳಿಯಲ್ಲಿ ಹಾರಾಡಲು ಯೋಗ್ಯತೆ ಪಡೆದಿರುವನು. ಇದೇ ಬುದ್ಧಿ ಬಲದಿಂದ ನಾಳೆ ದೇವತಾ ಮನುಷ್ಯನ ಆವಿರ್ಭಾವವಾಗದಿರದು. ಈ ಕ್ರಿಯೆಯಲ್ಲಿ ನಿಮ್ಮ-ನಮ್ಮಂಥ ಜನಸಾಮಾನ್ಯರು ನೀಡಬಹುದಾದ ಸಹಕಾರವಿಷ್ಟೆ. ಆದರೆ ಬುದ್ಧಿವಂತಿಕೆಯೊಂದಿಗೆ ಮನಸ್ಸಾಕ್ಷಿಯನ್ನೂ ಸೇರಿಸಿ ಕೆಲಸ ಮಾಡಬೇಕು. ಬುದ್ಧಿವಂತಿಕೆಯೆಂಬ ಕುದುರೆಯ ಚಲನ ನಿಯಂತ್ರಿಸುವ ವಾಘೆಯೇ ಮನಸ್ಸಾಕ್ಷಿ ಅಥವಾ ಆತ್ಮಚೈತನ್ಯ.

—ಓಂತತ್ಸತ್||

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	.	.	ರೂ. 20,10,000
ತೆತ್ತ ಪಾಲು ಭಂಡವಾಳ	.	.	,, 8,77,860
ಕ್ಷೇಮ ನಿಧಿ	.	.	,, 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಪ್ತಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚ ರೂ. ೦-೧೪-೦

—:ವಿಳಾಸ:—

ಫಾಲಪ್ಪಾ ಕಾಪಣಗೇರಿ ಆಯುರ್ವೇದ ಔಷಧಾಲಯ, ಗದಗ.

ಉಡುಪಿ ಡಿ. ಮು. ಕೋರ್ಟಿನಲ್ಲಿ-

O. P. No. 23/1953

ರಾಧಮ್ಮ ಶೆಡ್ತಿ, ಗುಡೆಬೆಟ್ಟು ದೊಡ್ಡಮನೆ ಚಂದಯ್ಯ ಶೆಟ್ರ ಮಗಳು, ಉಡುಪಿ ತಾಲೂಕು ವಾರಂಬಳ್ಳಿ ಗ್ರಾಮದ ಗುಡೆ ಬೆಟ್ಟಿನಲ್ಲಿ ವಾಸವಳು— ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರಳ ಕಿರಿ ಸಹೋದರ ಮೃತ ಬಿ. ನರಸಿಂಹ ಶೆಟ್ರು ತಾರೀಕು 22-2-53 ರಲ್ಲಿ ಮೃತ ಪಟ್ಟಿರುವುದರಿಂದ ಸದ್ರಿ ನರಸಿಂಹ ಶೆಟ್ರು ತಾ. 1-11-1952ರಲ್ಲಿ ರಿಜಿಸ್ಟರ್ ಮಾಡಿಸಿ ಬರೆದಿಟ್ಟ ವೀಲ್ ನಾಮೆ ಪ್ರಕಾರ ಮೃತ ನರಸಿಂಹ ಶೆಟ್ರು ಬಾಬ್ತು ದಿ ಬಾಂಬೇ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ದಿ ವೃದ್ಧಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮತ್ತು ಬ್ರಹ್ಮಾವರ ಕೋ ಒಪರೇಟಿವ್ ಸೊಸೈಟಿ ಲಿಮಿಟೆಡ್ ಇವರಿಂದ ಬರಬೇಕಾದ ಹಣಗಳನ್ನು ವಸೂಲು ಪಡೆಯುವ ಬಗ್ಗೆ ತನ್ನ ಹೆಸರಿನಲ್ಲಿ Succession Certificate ಕೊಡಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಅರ್ಜಿಯು ತಾ. 11-7-53 ಕ್ಕೆ ವಿಚಾರಣೆಗಿರುತ್ತದೆ. ಆ ಕುರಿತು ತಕ್ರಾರು ಇದ್ದವರು ಸದ್ರಿ ತಾರೀಕು ದಿವಸ ಹಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. Varadaraya Pai
Advocate for Petitioner.

Udipi Date 20—6—1953.

ಬಾಲಾಪರಾಧಿಗಳಿಗೆ ನಾಗರಿಕ ತರಬೇತಿ.

(೨ನೇ ಪುಟದಿಂದ)

ಮಕ್ಕಳನ್ನು ಸ್ವಾಗತಿಸುವ ಕೇಂದ್ರದಲ್ಲಿ ಪ್ರಾಯೋಗಿಕ ಕ್ರಮವನ್ನು ಅನುಸರಿಸಲಾಗುವುದು. ಹುಡುಗರನ್ನು (೧) ಅತ್ಯಂತ ಹೆಚ್ಚು ಭದ್ರತೆ (೨) ಸಾಧಾರಣ ಭದ್ರತೆ ಮತ್ತು (೩) ಕನಿಷ್ಠ ಭದ್ರತೆ ಎಂಬುದಾಗಿ ಮೂರು ಗುಂಪು ಮಾಡುವರು. ಹೀಗೆ ಮಾಡುವಾಗ ಹುಡುಗರು ಹಿಂದೆ ಏನು ಮಾಡಿರುವರೆಂಬುದನ್ನೂ ಈ ಸುಧಾರಣಾಲಯದಲ್ಲಿ ಹೇಗೆ ನಡೆದುಕೊಂಡಿರುವರೆಂಬುದನ್ನೂ ಗಮನಿಸಲಾಗುವುದು. ಈ ವರ್ಗೀಕರಣವನ್ನು ಅಮೇರಿಕಾ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಅನುಸರಿಸಲಾಗುವ ಕ್ರಮದ ಮೇಲಿಂದಲೇ ಮಾಡುತ್ತಿರುವರು. ಇದರಿಂದ ಎಲ್ಲ ನಮೂನೆಯ ಅಪರಾಧಗಳನ್ನು ಮಾಡಿದ ಎಲ್ಲ ಮನೋವೃತ್ತಿಯ ಹುಡುಗರೂ ಒಟ್ಟಿಗೆ ಸೇರಿ ಯಾರನ್ನೂ ಸುಧಾರಿಸಲಿಕ್ಕಾಗದಂಥ ದುರ್ಧರ ಪ್ರಸಂಗವನ್ನು ತಪ್ಪಿಸಿದಂತಾಗಿದೆ. ಈ ಹುಡುಗರನ್ನು ಬೇರೆಬೇರೆ ಗುಂಪಾಗಿ ವಿಂಗಡಿಸಿದ ಬಳಿಕವೂ ಅವರ ವಾಸಸ್ಥಾನವೆಲ್ಲ ಒಂದೇ ಆವರಣದಲ್ಲಿದ್ದರೆ, ಮತ್ತು ಕಾರ್ಯಾಲಯಗಳಲ್ಲಿ, ಶಾಲಾ ತರಗತಿಯಲ್ಲಿ, ಆಟವಿನೋದಗಳಲ್ಲಿ ಈ ಗುಂಪುಗಳೆಲ್ಲ ಒಟ್ಟಾಗಿ ಬೆರೆಯುವುದಾದರೆ, ಹುಡುಗರ ಗುಣಶೀಲಗಳನ್ನು ತಿದ್ದುವ ಕೆಲಸ ಕಠಿಣವೆನಿಸುತ್ತದೆ.ಹಾಗೆಂದು ಇದರಿಂದ ಇನ್ನೊಂದು ಪ್ರಯೋಜನವೂ ಇದೆ. ಅತ್ಯಂತ ಹೆಚ್ಚು ಭದ್ರತೆಯಲ್ಲಿರುವ ಹುಡುಗರು ತಮಗಿಂತ ಹೆಚ್ಚು ಸ್ವಾತಂತ್ರ್ಯ ಪಡೆದ ಕನಿಷ್ಠ ಭದ್ರತೆಯ ಹುಡುಗರನ್ನು ನೋಡಿ ತಾವು ಕೂಡ ಅವರಂತೆ ಒಳ್ಳೆಯ ನಡತೆ ಮತ್ತು ಗುಣ ಸಂಪನ್ನರಾಗಲು ಪ್ರಯತ್ನಿಸುವರು. ಅದರಂತೆ ಕನಿಷ್ಠ ಭದ್ರತೆಯ ಹುಡುಗರು ಅಪ್ಪಿತಪ್ಪಿಯಾದರೂ ತಮ್ಮಿಂದ ಪ್ರಮಾದನಾಗಬಾರದೆಂದು ಬಯಸಿ, ಇನ್ನೂ ಒಳ್ಳೆಯವರಾಗುವರು. ಏಕೆಂದರೆ, ಅಲ್ಪ ಪ್ರಮಾದಕ್ಕೋಸ್ಕರ ತಮ್ಮಂತೆಯೇ ಇರುವ ಬೇರೆ ಹುಡುಗರ ಕಷ್ಟ ಅವರಿಗೆ ಹೆದರಿಕೆ ಬರಿಸುತ್ತದೆ. ಚೆಂಗಲ್ಪೇಟೆಯ ಶಾಲೆಯಲ್ಲಿ ಒಟ್ಟು ಏಳು ಗೃಹಗಳಿವೆ. ಬೇರೆ ಯಾರೊಡನೆಯೂ ಬೆರೆಯಲು ಬಿಡಲ್ಪಡದ ಅತ್ಯಂತ ಹೆಚ್ಚು ಭದ್ರತೆಯ ಹುಡುಗರು ನೇತಾಜೀ ಭವನದಲ್ಲಿರುವರು. ಭದ್ರತೆಯ ಕ್ರಮ ಕೈಗೊಳ್ಳುವ ಅಗತ್ಯವಿಲ್ಲದ ಕನಿಷ್ಠ ಭದ್ರತೆಯ ಹುಡುಗರು ಗಾಂಧೀ ಭವನದಲ್ಲಿರುವರು. ಈ ಎರಡು ಗುಂಪಿನ ನಡುವಿನ ಜಾತಿಯವರು ರಾಜಾಜಿ ಭವನ, ರಾಜೇಂದ್ರ ಭವನ, ನೆಹರೂ ಭವನ ಮತ್ತು ನಾರಾಯಣನ್ ಭವನವೆಂಬ ಉಳಿದ ಗೃಹಗಳಲ್ಲಿರುವರು. ವರ್ಗೀಕರಣ ಮಾಡುವುದಕ್ಕೆ ಮುಂಚೆ ಸುಮಾರು ನಾಲ್ಕು ವಾರಗಳವರೆಗೆ ಸ್ವಾಗತ ಕೇಂದ್ರದಲ್ಲಿ ಇಡುವರು. ಈ ಅವಧಿಯಲ್ಲಿ ಪ್ರತಿಯೊಬ್ಬ ಹುಡುಗನ ಸಾಮಾಜಿಕ ಇತಿಹಾಸವನ್ನು ಸಂಗ್ರಹಿಸಿ ಅವನ ಕುರಿತು ಆದಷ್ಟು ಹೆಚ್ಚು ಮಾಹಿತಿಯನ್ನು ಕಲೆಹಾಕುವರು. ಈ ರೀತಿ ವರ್ಗೀಕರಣ ಮಾಡುವುದಕ್ಕೆ ನೇಮಿಸಲಾದ ಸಮಿತಿಯು ವಾರಕ್ಕೊಮ್ಮೆ ಸಭೆ ಸೇರುತ್ತದೆ. ಹೊಸ ಹುಡುಗನಿಗೆ ತಕ್ಕುದಾದ ತರಬೇತಿ ಕ್ರಮವನ್ನು ಇದ ಯೋಜಿಸುತ್ತದೆ. ಹುಡುಗನ ಸ್ವಂತ ಪ್ರವೃತ್ತಿ, ತಂದೆಯ ವೃತ್ತಿ ಮತ್ತು ಆ ಹುಡುಗನು ಬಂದ ಪ್ರದೇಶದಲ್ಲಿ ಅವನ ಜೀವಿಕೋಪಾರ್ಜನೆಗೆ ಇರಬಹುದಾದ ಅನುಕೂಲತೆಗಳು ಇವನ್ನೆಲ್ಲ ಹೊಂದಿಕೊಂಡು ಹುಡುಗನಿಗೆ ಶಾಲೆಯಲ್ಲಿ ಏನು ಶಿಕ್ಷಣ ಕೊಡಬೇಕೆಂದು ನಿರ್ಧರಿಸುವರು. ಉದಾಹರಣೆಗೆ ಮಧುರಾ ಅಥವಾ ಕೊಯಂಬುತ್ತೂರು ಪ್ರದೇಶದ ಹುಡುಗನಾಗಿದ್ದರೆ ಅವನಿಗೆ ನೇಯ್ಗೆಯ ಶಿಕ್ಷಣ ಕೊಡಲ್ಪಡುವುದು.

❖

ಸಾಮಾನ್ಯವಾಗಿ ಆರನೇ ತರಗತಿಯ ವರೆಗೆ ಶಿಕ್ಷಣವು ಕೊಡಲ್ಪಡುತ್ತದೆ. ಶಿಕ್ಷಣದಲ್ಲಿ ವಿಶೇಷ ಅಭಿರುಚಿಯನ್ನು ವ್ಯಕ್ತಪಡಿಸುವ ಹುಡುಗರಿದ್ದರೆ ಅವರನ್ನು ಸ್ಥಳೀಯ ಹೈಸ್ಕೂಲುಗಳಿಗೆ ದಾಖಲು ಮಾಡುವರು.ಈ ಹೈಸ್ಕೂಲುಗಳಲ್ಲಿ ಪ್ರವೇಶ ದೊರಕಿಸುವ ಬಗ್ಗೆ ಹುಡುಗರಿಗೆ ಇಂಗ್ಲಿಷನ್ನು ಸಹ ವಿಶೇಷ ರೂಪದಲ್ಲಿ ಕಲಿಸುವರು ರಾತ್ರಿಯಲ್ಲಿ ನಿಯಮಿತವಾಗಿ ತರಗತಿಗಳು ನಡೆಯುತ್ತವೆ. ಚಿತ್ರಗಳ ಮೂಲಕ ಶಿಕ್ಷಣ ನೀಡುವ ಕ್ರಮವನ್ನೀಗ ಅನುಸರಿಸ ತೊಡಗಿರುವರು. ಇದಲ್ಲದೆ ತರಗತಿಯ ಗೋಡೆಗಳ ಮೇಲೆ ಚಿತ್ರಗಳು ನಕಾಶೆಗಳು, ಚಾರ್ಟು ಮುಂತಾದುವುಗಳು ಇದ್ದು, ಪಾಠ ಕಲಿಯಲು ಇವುಗಳಿಂದ ತುಂಬ ಸಹಾಯವಾಗುತ್ತದೆ. ಈ ತರಗತಿಗಳ ಶಿಕ್ಷಣ ಮತ್ತು ಕಾರ್ಯಾಲಯದ ದುಡಿತ ಸರದಿಯಾಗಿ ನಡೆಯುತ್ತದೆ. ಬೆಳಗ್ಗೆ ಓದು ಬರೆಹಕ್ಕಾಗಿ ಬರುವ ಹುಡುಗರು ಸಂಜೆ ಕೆಲಸಕ್ಕೆ ಹೋಗುತ್ತಾರೆ. ಹಾಗೆಯೇ ಬೆಳಗ್ಗೆ ಕೆಲಸ ಮಾಡಿದವರು ಸಂಜೆ ಪಾಠ ಕಲಿಯಲು ಬರುವರು. ಬಡಗಿತನ, ನೇಯ್ಗೆ, ಲೋಹದ ಕೆಲಸ, ಕಮ್ಮಾರ ವೃತ್ತಿ, ಹೊಲಿಗೆ ತೋಟಗಾರಿಕೆ, ಕೃಷಿ, ಚಾಪೆ ಮಾಡುವುದು, ಮನೆ ಕಟ್ಟುವುದು ಇವುಗಳಲ್ಲದೆ ಬೇಡು ಬಜಾಯಿಸುವುದನ್ನೂ ವೃತ್ತಿಪರ ಶಿಕ್ಷಣವಾಗಿ ಈ ಕೇಂದ್ರ ಸ್ವೀಕರಿಸಿದೆ. ಆದಷ್ಟು ಮಟ್ಟಿಗೆ ತರಗತಿಯಲ್ಲಿ ಕಲಿಸುವುದಕ್ಕೂ ಕೈಯಿಂದ ಸ್ವತಃ ಮಾಡುವ ಕೆಲಸಕ್ಕೂ ಸಂಬಂಧವಿರುವಂತೆ ನೋಡಿರುವರು ಗಾಂಧೀಜಿಯವರು ಪ್ರತಿಪಾದಿಸುತ್ತಿದ್ದ ಮೂಲ ಶಿಕ್ಷಣ ಪದ್ಧತಿಗೆ ಇದು ಅನುಗುಣವಾಗಿರುತ್ತದೆ. ಉದಾಹರಣೆಗೆ ಬಡಗಿತನವನ್ನು ಕಲಿಯುವ ಹುಡುಗನಿಗೆ, ಮರ ಮತ್ತು ಮೋಪುಗಳು ಎಲ್ಲಿಂದ ದೊರಕುತ್ತವೆ ಎಂಬುದನ್ನು (ಭೂಗೋಳ), ಬೇರೆ ಬೇರೆ ಜಾತಿಯ ಮರಗಳು ಹಾಳಾಗದಂತೆ ನೋಡಿಕೊಳ್ಳಬೇಕಾದ ಕ್ರಮವನ್ನು (ತಾಂತ್ರಿಕ ವಿಜ್ಞಾನ) ಬೇಕಾದ ಆಕಾರವನ್ನು ಕೊಡುವ ಮತ್ತು ಅಳತೆಗೆ ಸರಿಯಾಗಿ ಕೆಲಸ ಮಾಡುವುದನ್ನು (ಗಣಿತ) ಆಗಲೇ ಕಲಿಸುವರು. ಇಲ್ಲದೆ ಆಟವಿನೋದಗಳಿಗೂ ಈ ಕೇಂದ್ರದಲ್ಲಿ ಅವಕಾಶವುಂಟು. ಪೆರೇಡುಗಳು, ಶಿಬಿರಗಳು, ಸ್ಕೌಟು, ನಾಟಕಗಳು, ಆಟಗಳು ಮುಂತಾದುವು ನಡೆಯುತ್ತವೆ. ಹುಡುಗನ ಶಾರೀರಿಕ ದಾರ್ಢ್ಯವನ್ನು ಹೆಚ್ಚಿಸುವುದಕ್ಕೂ ಲಕ್ಷ್ಯ ಪೂರೈಸಲ್ಪಡುತ್ತದೆ. ಬೆಳಗ್ಗೆ ಈ ಬಗ್ಗೆ ತರಬೇತಿಕೊಡುವರು. ಸಂಜೆಹೊತ್ತು ಫೂಟ್‌ಬಾಲ್, ವೋಲಿಬಾಲ್, ರಿಂಗ್ ಟೆನ್ನಿಸ್, ಬ್ಯಾಡ್‌ಮಿಂಟನ್ ಮುಂತಾದ ಆಟ ಆಡುವರು. ಸೂರ್ಯ ನಮಸ್ಕಾರ, ಯೋಗಾಸನ ಮುಂತಾದುವುಗಳನ್ನು ಹುಡುಗರು ಮಾಡುವರು. ಶಾಲೆಯ ಬೇಂಡು ವಾದನವು ಉತ್ಕೃಷ್ಟವಾಗಿರುತ್ತದೆ ಸಂಗೀತದಲ್ಲಿ ಸಾಮಾನ್ಯಾಭಿರುಚಿಯುಳ್ಳ ಹುಡುಗರಿಗೆ ಮುಂಪಕ್ಕೆ ಹೆಸರುಪಡೆಯಲು ಇದು ಸಹಾಯಕವೆಂದು ಸಿದ್ಧಗೊಂಡಿದೆ.

❖

ಹುಡುಗರ ವ್ಯಕ್ತಿತ್ವದ ನೈತಿಕ ಬೆಳವಣಿಗೆಯನ್ನು ಸಾಧಿಸಲು ಸಾಮೂಹಿಕ ಪ್ರಾರ್ಥನೆಯೇ ಮುಂತಾದ ಕ್ರಮಗಳಿವೆ. ಧಾರ್ಮಿಕ ಹಾಗೂ ನೈತಿಕ ವಿಚಾರಗಳನ್ನು ತರಗತಿಯಲ್ಲಿ ಕಲಿಸಲಾಗುವುದು. ಹಾಗೆಯೇ ದೇವಾಲಯ ಮುಂತಾದ ಪವಿತ್ರ ಕ್ಷೇತ್ರಗಳಿಗೆ ಸಂದರ್ಶನವನ್ನು ಕೊಡುವ ಏರ್ಪಾಡು ಇದೆ. ದಿನದ ಕೆಲಸ ತೊಡಗುವುದಕ್ಕೆ ಮುಂಚೆ ಶಾಲಾ ವಠಾರದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ನಡೆಸುವರು; ಮತ್ತು ದಿನಕ್ಕೊಬ್ಬನಂತೆ ಯಾರಾದರೊಬ್ಬ ಹುಡುಗನು ಇಲ್ಲಿ ನೆರೆದವರನ್ನು ಉದ್ದೇಶಿಸಿ ಮಾತನಾಡುವನು. ಇದರಿಂದ ಭಾಷಣ ಕಲೆಯ ಅಭ್ಯಾಸವೂ ಹುಡುಗರಿಗಾಗುತ್ತದೆ. ಮಾತ್ರವಲ್ಲ ಸಭಾಕಂಪನದಂಥ ದೋಷ ಸಹಾ ದೂರಾಗುವುದು. ನಾಟಕ ಮುಂತಾದವುಗಳಲ್ಲಿ ಅಭಿರುಚಿಯುಳ್ಳ ಹುಡುಗರಿಗಾಗಿ ತೆರೆದ ಬಯಲಿನಲ್ಲಿ ರಂಗಸ್ಥಳವನ್ನು ನಿರ್ಮಿಸಿರುವರು. ಹಾಗೆಯೇ ಶುಚಿತ್ವ ಮತ್ತು ಸೌಂದರ್ಯ ವೃದ್ಧಿಯನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಬಹುಮಾನಗಳನ್ನು ಕೊಡುವ ವ್ಯವಸ್ಥೆ ಮಾಡಲ್ಪಟ್ಟಿದೆ. ಹಾಗೆಯೇ ಕಲಿಯುವುದರಲ್ಲಿ, ಆಟಗಳಲ್ಲಿ, ನಾಟಕ ವಿನೋದಗಳಲ್ಲಿ ಮತ್ತು ಕಾರ್ಯಕ್ಷೇತ್ರದಲ್ಲಿ ತೋರಿಸಿದ ಜಾಣ್ಮೆಗಾಗಿ ಸ್ಪರ್ಧಾತ್ಮಕ ಬಹುಮಾನಗಳೂ ಕೊಡಲ್ಪಡುತ್ತವೆ. ಲೆಫ್ಟಿನೆಂಟ್ ಕರ್ನಲ್ ಫೋರ್ಡ್ ಥೋಮ್ಸನ್ನರು ಶುರುಮಾಡಿದ ಕಾನೂನು ವರ್ಗವು ಪ್ರತಿದಿನವೂ ಅಪರಾಹ್ನ ಸಭೆಸೇರಿ ಹುಡುಗರು ಮಾಡಿದ ತಪ್ಪುಗಳನ್ನು ಚರ್ಚಿಸಿ, ಯೋಗ್ಯ ದಂಡನೆಯನ್ನು ವಿಧಿಸುತ್ತದೆ. ಈ ಹುಡುಗರನ್ನು ಶಿಕ್ಷಿಸುವ ಅಧಿಕಾರವು ಶಾಲೆಯ ಮುಖ್ಯೋಪಾಧ್ಯಾಯರಿಗೆ ಮತ್ತು ನಡತೆಯನ್ನು ತರಬೇತಿಗೊಳಿಸುವ ವಿಭಾಗದ ಮುಖ್ಯಸ್ಥರಿಗೆ ಮಾತ್ರ ಇದೆ. ಶಾಲೆಯಲ್ಲಿ ಯಾವರೀತಿ ನಡೆದುಕೊಳ್ಳತಕ್ಕದ್ದೆಂದೂ ಈ ನಿಯಮಗಳನ್ನು ಮೀರಿದವರಿಗೆ ಏನು ದಂಡನೆ ವಿಧಿಸಬೇಕೆಂಬುದನ್ನೂ ಹುಡುಗರು ಮುಂಚಿತವಾಗಿ ನಿರ್ಣಯಿಸುವರು. ಇದಲ್ಲದೆ ಹುಡುಗರು ತಾವಾಗಿಯೇ ಒಂದು ಬೇಂಕನ್ನೂ ಅಂಗಡಿಯನ್ನೂ ನಡೆಸುತ್ತಿರುವರು. ಒಬ್ಬ ಅಧ್ಯಾಪಕರು ಇದರ ಮೇಲ್ವಿಚಾರಣೆ ನೋಡಿಕೊಳ್ಳುವರು. ಇದರಿಂದ ತಮ್ಮ ಮುಂದಿನ ಜೀವನದಲ್ಲಿ ನೆರವಾಗಬಹುದಾದ ಅಂಗಡಿ ಲೆಕ್ಕ ಮತ್ತು ಬೇಂಕಿಂಗ ವ್ಯವಹಾರದ ಮಾಹಿತಿ ದೊರೆಯುತ್ತದೆ. ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆಗಳಲ್ಲಿ ಆಯಾ ದಿನದ ವಿಶೇಷ ವರ್ತಮಾನಗಳನ್ನು ಕರಿಹಲಗೆ ಮೇಲೆ ಬರೆಯುವ ಕ್ರಮವಿದೆ. ಈ ಹುಡುಗರ ಸಂತೋಷಕ್ಕೋಸ್ಕರ ಒಂದು ರೇಡಿಯೋ ಕೂಡ ಇಡಲ್ಪಟ್ಟಿದೆ. ರಾಜಾಜಿಯವರು ಈಚೆಗೆ ಮಾಡಿದ ಸಹಾಯದಿಂದ ಒಂದು ಮುಖ ನೋಡುವ ಕನ್ನಡಿಯನ್ನು ಕೊಂಡುಕೊಂಡಿರುವರು. ಹುಡುಗರು ಎಷ್ಟೂ ಕಾಗದ ಬರೆಯಬಹುದು. ಹಾಗೆಯೇ ಮನೆ ಮತ್ತು ಬಂಧುಗಳಿಂದ ಪಡೆಯಬಹುದು. ತಂದೆ ತಾಯಿ ಮತ್ತು ಬಂಧು ಬಳಗದವರನ್ನು ಭೇಟಿಯಾಗಲೂ ಅವಕಾಶವುಂಟು ಮನೆಗೆ ಹೋಗಿ ನಾಲ್ಕು ದಿನವಿದ್ದು ಬರಲಿಕ್ಕೂ ಬಿಡುವರು. ಸಿನೆಮಾ ನೋಡಲು, ತಿರುಗಾಡಿ ಬರಲು ಹುಡುಗರಿಗೆ ಅಸ್ಪದವಿದೆ.

❖

ಈ ಹುಡುಗರು ಈಚೆಗೆ ತಾವೇ ಸ್ವಂತ ಪರಿಶ್ರಮಪಟ್ಟು ಒಂದು ಓದುಮನೆಯನ್ನು ಕಟ್ಟಿರುವರು.ಹಾಗೆಯೇ ನೀರಾವರಿಯ ಉದ್ದೇಶದಿಂದ ಬಾವಿ ಒಂದನ್ನು ಅಗೆದಿರುವರು ಇದಕ್ಕೆ ಬೇಕಾದ ಕುಶಲ ಕೆಲಸಗಾರರಿಗಾಗಿ ೯೦ ರೂಪಾಯಿಗಳನ್ನು ಮಾತ್ರ ಹೊರಗೆ ಕೊಡಬೇಕಾಯಿತು. ಆದರೂ ಬಾವಿ ತೋಡುವುದರಲ್ಲಿ ಅನುಸರಿಸಬೇಕಾದ ತಂತ್ರ ಮುಂತಾದವುಗಳ

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸ್ತ್ರೀಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ಪ್ರವರ ರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ ಸಿ. ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲು ಪೋಸ್ಟ್, (ಮಂಗಳೂರು)

ಏಜೆಂಟರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ನ್ನು ಹುಡುಗರಿಗೆ ಈ ಕೆಲಸಗಾರರು ಕಲಿಸಿದುದರಿಂದ ನಷ್ಟವೇನೂ ಆಗಲಿಲ್ಲ. ಹುಡುಗರು ಕಾರ್ಯಶಾಲೆಯ ತೋಟದಲ್ಲಿ ದಿನಾಲೂ ಕೆಲಸ ಮಾಡುವರು. ಇದರ ಉತ್ಪನ್ನವು ವರ್ಷದಲ್ಲಿ ಹತ್ತು ತಿಂಗಳವರೆಗೆ ಯಥೇಷ್ಟವಾಗುತ್ತದೆ. ಇವೆಲ್ಲವನ್ನು ನೋಡಿದಲ್ಲಿ ಶಾಲೆಯಲ್ಲಿ ಸೆರೆಮನೆಯ ಭಾವನೆಗೆ ಕೂಡ ಅವಕಾಶವಿಲ್ಲದಂತೆ ಮಾಡಿರುವರೆಂದೂ ಸ್ವಂತ ಮನೆಯಂತೆಯೇ ಪ್ರತಿಯೊಂದೂ ಅನುಕೂಲತೆಗಳು ಕಲ್ಪಿಸಲ್ಪಟ್ಟಿವೆ ಎಂದೂ ವ್ಯಕ್ತವಾಗುತ್ತದೆ. ಮುಂದೆ ಬೆಳೆದು ನಾಗರಿಕರಾಗಬೇಕಿರುವ ಈ ಹುಡುಗರಿಗೆ ಬಾಲ್ಯಾವಸ್ಥೆಯಲ್ಲಿ ಉತ್ತಮ ರೀತಿಯ ತರಬೇತಿಯನ್ನು ಒದಗಿಸಿಕೊಡುವ ಈ ಮಾದರಿಯ ಅಸಂಖ್ಯ ಕೇಂದ್ರಗಳ ಅಗತ್ಯ ಬಹಳಷ್ಟಿರುತ್ತದೆ. ಅಪರಾಧಿಗಳೆಂದು ಬರೆದು ಮನುಷ್ಯತ್ವದ ಸ್ಥಾನದಲ್ಲಿ ಮೃಗ ಚಪಲವನ್ನು ಪ್ರಚೋದಿಸುವುದೆತ್ತ? ಮತ್ತು ನಿಜವಾದ ಅಪರಾಧಿಗಳನ್ನು ಸಹ ಯೋಗ್ಯ ಶಿಕ್ಷಣ ಮತ್ತು ಬೋಧನೆಗಳ ಮೂಲಕ ಮತ್ತು ತಕ್ಕ ಸೌಲಭ್ಯಗಳಿಂದ ನಿಜವಾದ ಮನುಷ್ಯರನ್ನಾಗಿ ಪರಿವರ್ತಿಸುವುದೆತ್ತ? ಎರಡನೆಯದೇ ಅತ್ಯುತ್ಕೃಷ್ಟ ಕಾರ್ಯವೆಂಬುದನ್ನು ಯಾರೊಬ್ಬರೂ ಅಲ್ಲಗಳೆಯುವುದಿಲ್ಲ. ಈ ಕೆಲಸದಲ್ಲಿ ಇನ್ನು ಹೆಚ್ಚಿನ ಯಶಸ್ಸು ಪ್ರಾಪ್ತವಾಗಬೇಕಾದರೆ ಚೆಂಗಲ್ಪೇಟೆಯ ಸುಧಾರಣಾಲಯದಂಥ ಕೇಂದ್ರಗಳಲ್ಲಿ ಮನೋ ವೈಜ್ಞಾನಿಕರ ಮತ್ತು ಮನೋರೋಗಗಳಿಗೆ ಚಿಕಿತ್ಸೆ ಮಾಡಬಲ್ಲ ತಜ್ಞರ ನೆರವು ಅಧಿಕಾಧಿಕವಾಗಬೇಕು. ಹಣದ ಅನುಕೂಲತೆಯಂತೂ ಧಾರಾಳವಾಗಿ ಬೇಕೇ ಬೇಕು. ಆಗ ನೂತನ ಸಂಶೋಧನೆಗಳನ್ನು ಮಾಡಲೂ ಅತ್ಯಾಧುನಿಕ ಸೌಕರ್ಯಗಳನ್ನು ಮಾಡಿಕೊಡಲೂ ಸಾಧ್ಯವಾದೀತು. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಅವಲಂಬಿಸಿಯೇ ಅಪರಾಧ ಪ್ರವೃತ್ತಿಗೆ ಪ್ರೋತ್ಸಾಹ ದೊರೆಯುತ್ತದಾದುದರಿಂದ ರೋಗೋಪಶಮನದ ಈ ಕೆಲಸಕ್ಕಿಂತಲೂ ರೋಗ ಬಾರದಂತೆ ನಿರೋಧಿಸುವ ಉಪಾಯಗಳಿಗೆ ಅಧಿಕ ಮಹತ್ವವೂ ಪ್ರಾಶಸ್ತ್ಯವೂ ಸಲ್ಲತಕ್ಕದ್ದೆಂದು ಹೇಳಿದರೆ ಅಪ್ರಾಸಂಗಿಕವಾಗಲಾರದು. ಹಾಗೆಂದು ರೋಗ ವ್ಯಾಪಿಸಿಕೊಂಡೀತೆಂಬ ಆಶಯ ಇದ್ದಾಗ್ಯೂ ಅದನ್ನು ನಿರೋಧಿಸಲು ಮಾಡುವ ಪ್ರಯತ್ನಗಳಲ್ಲಿ ಆಲಸ್ಯವೇ ಕಂಡು ಬರುತ್ತದೆ ಆದುದರಿಂದ ರೋಗೋಪಶಮನದ ಕೆಲಸವನ್ನೆ ನಾವು ಹೆಚ್ಚು ತ್ವರಿತವಾಗಿಯೂ ವಿಚಕ್ಷಣತೆಯಿಂದಲೂ ಮುನ್ನಡೆಸಬೇಕಾಗಿ ಬಂದಿದೆ. ಮಕ್ಕಳ ಯೋಗ ಕ್ಷೇಮ ಮತ್ತು ಅವುಗಳ ಬೆಳವಣಿಗೆಗೆ ಸರಕಾರವೂ ಜನರೂ ಸಹಕರಿಸಿ ಉತ್ತಮೋತ್ತಮ ಅನುಕೂಲತೆಗಳನ್ನು ಮಾಡಿಕೊಟ್ಟಂತೆಲ್ಲ ಈಗ ಪೋಲೀಸರು, ನ್ಯಾಯಾಲಯಗಳು, ಸೆರೆಮನೆಗಳು, ಆಸ್ಪತ್ರೆಗಳು ಇತ್ಯಾದಿ ಕೆಲಸಕ್ಕೆ ವೆಚ್ಚವಾಗುವ ಹಣದ ಪ್ರಮಾಣ ತಗ್ಗಿಕೊಂಡೀತು. ಆ ಕಾಲಬರುವುದೆಂದೊ ಎಂಬ ಸಂದೇಹ ಬಹುಶಃ ಇನ್ನೊಂದೆರಡು ದಶಕಗಳವರೆಗಂತೂ ಹೋಗದು.

—ಸಂಪಾದಿತ.

ವಾರದ ಒಳಿತು ಕೆಡುಕುಗಳು

ತಾ. ೨೫—೬—೫೩ರಿಂದ ತಾ. ೧—೭—೫೩ರ ವರೆಗೆ.

ಮೇಷ—ದೈವವು ಸಂಪೂರ್ಣ ಬಲಶಾಲಿಯಾಗಿರುದು. ನಿಮ್ಮ ನಾಗುಪ ಪ್ರದರ್ಶನಶಕ್ತಿಗಳು ಸುಸಂಧಿಯಾಗಿದೆ. ಎಂತಹ ಕಾರ್ಯವೇ ಇರಲಿ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆವ ಪ್ರಸಂಗವೆಂದೆಂದಿಗೂ ಬರಲಾರದು. ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಒಳ್ಳೆ ಸ್ಥಾನಮಾನಗಳನ್ನು ಪಡೆವಿರಿ ನಿಮ್ಮ ಆರ್ಥಿಕ ಸಂಪತ್ತು ಅತ್ಯುತ್ತಮ ಮಟ್ಟಕ್ಕೆ ಬರಲಿದೆ. ಯಾವೊಂದು ತೆರನಾದ ತಾಪತ್ರಯಗಳೂ ಇಂದು ನಿಮ್ಮ ಸಮೀಪ ಸೋಂಕಲೊಲ್ಲದು. ಉದ್ಯೋಗ ಉದ್ಯಮ ವ್ಯವಹಾರಗಳಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲಪ್ರಾಪ್ತಿಯಿದೆ. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ಈಡೇರಲಿದೆ.

ವೃಷಭ—ಕಾಲವು ಅತೀ ಬಿಕ್ಕಟ್ಟಿನದ್ದಿರುವುದು ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಿಕೊಳ್ಳುವದು. ಮನಸ್ಸಿನ ಧೈರ್ಯಸ್ಥೈರ್ಯಗಳು ಮಾಯವಾಗುವುದರಿಂದ ಯಾವ ಕಾರ್ಯಕ್ಕೂ ಕೈಯಿಕ್ಕಲಾರಿರಿ. ಆಪ್ತಜನ ವರ್ಗದಲ್ಲೂ ಕಲಹವುಂಟಾಗುವದು. ಗೃಹತಾಪತ್ರಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಬರಲಿವೆ. ಉಷ್ಣಪಿತ್ಥ ಪ್ರಕೋಪದಿಂದಾಗಿ ಆರೋಗ್ಯವು ಕೆಡುವದು. ಆರ್ಥಿಕ ಮುಗ್ಗಟ್ಟು ಅತಿಯಾಗುವುದರಿಂದ ಕಾಲಯಾಪನೆಯು ಬಹಳ ಕಷ್ಟವಾಗುವದು. ವಾರದ ಆದ್ಯಂತ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸಿಕೊಳ್ಳವು.

ಮಿಥುನ—ಸಂದು ಹೋದ ದಿನಗಳಿಗಿಂತ ಸದ್ಯದದಿನಗಳು ಕೊಂಚ ಉತ್ತಮವೆನ್ನಿಸಲಿವೆ ನಿಮ್ಮ ಉದ್ಯೋಗದಲ್ಲಿ ಖರ್ಚಿಗೆತಕ್ಕಷ್ಟು ಫಲಪ್ರಾಪ್ತಿಯಾಗಲಿದೆ. ಮಿತ್ರ ವರ್ಗದವರ ಬೆಂಬಲವು ಚೆನ್ನಾಗಿರುವುದರಿಂದ ಹೆಚ್ಚಿನ ನಿಮ್ಮ ಬಯಕೆಗಳು ಈಡೇರುವವು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಪ್ರವಾಸದಿಂದಾಗಿ ಕಷ್ಟನಷ್ಟಗಳುಂಟಾವವಲ್ಲದೆ ದೇಹ ಮನಸ್ಸುಗಳಿಗೆ ಸುಖಶಾಂತಿಯಿರದು. ಶತ್ರುವರ್ಗದವರ ಭಯವು ಹೆಚ್ಚೀತು ಮನಸ್ಸು ವಿಶೇಷ ಚಂಚಲವಾಗಿದ್ದು ದುರ್ಮಾರ್ಗದತ್ತ ಹೆಚ್ಚಾಗಿ ಓಡಲಿದೆ. ವಾರಾದಿಯ 3 ದಿನಗಳು ಇಪ್ಸಿತ ಫಲದಾಯಿಗಳಿವೆ.

ಕರ್ಕಟ—ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ಫಲಪ್ರಾಪ್ತಿಯು ಉತ್ತಮ ತರನಾಗಿದೆ. ಸಂಕಲ್ಪದಂತೆ ಕಾರ್ಯವೂ ಸಿದ್ಧಿಸಲಿದೆ. ಗೃಹತಾಪತ್ರಯಗಳು ದೂರವಾಗಿ ನೆಮ್ಮದಿಯಿಂದ ಕಾಲಕಳೆವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನೌಕರಿ ವ್ಯಾಪಾರಿಗಳಿಗೂ ಸೇವಕ ವರ್ಗದವರಿಗೂ ಈ ಕಾಲವು ನಿರೀಕ್ಷಿತ ಫಲವನ್ನೀಯುವುದು. ಆದರೆ ರಾಜಕೀಯದಲ್ಲಿ ಮಾತ್ರ ಫಲವು ವಿಪರೀತವಾದೀತು. ಕೆಲವೊಮ್ಮೆ ವಾಕ್ಕಲಹಕ್ಕೆ ಗುರಿಯಾಗುವ ಸಂಭವವಿದೆ. ತಾ. 26ರಿಂದ 30ರ ವರೆಗಿನ ದಿನಗಳು ಅನುಕೂಲವಾಗಿವೆ.

ಸಿಂಹ—ಧನಲಾಭ ಪತಿಯಾದ ಬುಧನು ವ್ಯಯದಲ್ಲಿರುವನಾದರೂ ಸುಖಭಾಗ್ಯಪತಿಯಾದ ಅಂಗಾರಕನು ಲಾಭಸ್ಥಾನಕ್ಕೆ ಬಂದಿರುವುದರಿಂದ ನಿಮಗೀವಾರದಲ್ಲಿ ಹೆಚ್ಚಿನ ಖರ್ಚುವೆಚ್ಚಗಳು ಪ್ರಾಪ್ತವಾಗುವುದಾದರೂ ಸಾಕಷ್ಟು ಲಾಭವೂ ಇರುವುದರಿಂದ ಹಣದ ಅಡಚಣೆಗೆ ಸಿಲುಕಲಾರಿರಿ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಕೋರ್ಟುಕಛೇರಿಗಳ ವ್ಯವಹಾರದಲ್ಲಿ ವಿಜಯಿಗಳಾಗುವಿರಿ. ನೀವು ಕೈಗೊಂಡ ಹೆಚ್ಚಿನ ಕಾರ್ಯಗಳು ನಿಮ್ಮಂತೆಯೇ ಕೊನೆಗೊಂಡುವವು. ವಾರಾಂತ್ಯದ 3 ದಿನಗಳು ನಿಮ್ಮ ಇಷ್ಟಪ್ರದಗಳವೆ.

ಕನ್ಯಾ—ಈ ವಾರದಲ್ಲಿ ನಿಮ್ಮ ಅದೃಷ್ಟವು ಉತ್ತಮವಾಗಿರುವದು. ಯಾವದೇ ಕಾರ್ಯವಿರಲಿ ನಿಮಗದು ತೃಣ ಸಮವೆನಿಸುವದು. ಗುರುಹಿರಿಯರ ಅನುಗ್ರಹವೂ ಮಿತ್ರರ ಬೆಂಬಲವೂ ಚೆನ್ನಾಗಿರುವುದರಿಂದ ನಿಮ್ಮ ಬಯಕೆಗಳೆಲ್ಲವೂ ಕಾರ್ಯರೂಪಕ್ಕೆ ಬರಲಿವೆ ವಾತ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಧಕ್ಕೆ ತಗಲೀತು. ಶ್ರಮಜೀವಿಗಳಾದ ಸೇವಕ ಜನತೆಗೆ ಮಾತ್ರ ಈ ಕಾಲವು ಅಷ್ಟೊಂದು ಉತ್ತಮವಾಗಿಲ್ಲವು ವಾರದ ಆದ್ಯಂತ ದಿನಗಳು ನಿಮ್ಮ ಬಯಕೆಯನ್ನು ಪೂರೈಸುವುದರಲ್ಲಿ ಹೆಚ್ಚಿನ ಶಕ್ತಗಳಾಗಿವೆ.

ತುಲಾ:— ನಿಮ್ಮ ಪರಿಸ್ಥಿತಿಯಲ್ಲಿ ಏನೊಂದೂ ಸುಧಾರಣೆಯಾಗಿಲ್ಲವು. ಆದರೆ ಆರ್ಥಿಕ ಮತ್ತು ಆರೋಗ್ಯಭಾಗಗಳಲ್ಲಿ ಕೊಂಚ ಉತ್ತಮಮಟ್ಟಕ್ಕೆ ಬಂದಿರುವಿರಿ. ವ್ಯಾಪಾರ ನೌಕರಿವರ್ಗದವರ ಪ್ರಯತ್ನವು ಯಶಸ್ವಿಯಾಗುವದು. ಪ್ರವಾಸಕ್ಕೀಕಾಲವು ಉಚಿತವಲ್ಲ. ನಾನಾರೀತಿಯ ಶೋಕಾನರ್ಥಗಳು ನಿಮ್ಮನ್ನು ಸದಾ ಬೆನ್ನಟ್ಟಿ ಬರಲಿದೆ. ಹಣದ ಸಲುವಾಗಿ ಕೆಲವೊಮ್ಮೆ ಮಾತು ಮಾತು ಮುಂದರಿದು ಕೋರ್ಟಿಗೆಹೋಗುವ ಪ್ರಸಂಗವೂ ಬರಬಹುದು. ತಾ. 25 ಮತ್ತು 1 ನಿಮ್ಮ ಮನೋರಥಗಳನ್ನು ಪೂರ್ತಿಮಾಡಲಿವೆ.

ವೃಶ್ಚಿಕ— ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿ ಶನ್ಯಂಗಾರಕರು ನಿಂತಿರುವುದರಿಂದ ಶತ್ರುಜನರ ಪೀಡೆಯೂ ಮನೆಯವರೊಳಗೆ ಪರಸ್ಪರ ಕಲಹ ಕಚ್ಚಾಟಗಳೂ [illegible]ಚ್ಚಲಿವೆ ವಿಶೇಷತಃ ನಿಮ್ಮ ಧನಮಾನಗಳಿ[illegible] ಧಕ್ಕೆಯುಂಟಾದೀತು. ಆದರೆ ಧನಪತಿಗಳಾದ ಬೃಹಸ್ಪತ್ಯಾಚಾರ್ಯರು ನಿಮ್ಮ ಮೇಲೆ ಪೂರ್ಣ ಅನುಗ್ರಹವಿಟ್ಟಿರುವುದರಿಂದ ಹೆಚ್ಚಿ[illegible] ಅನಿಷ್ಟಗಳಿಂದ ಪಾರಾಗುವಿರಿ, ಆಕಸ್ಮಿಕವಾ[illegible] ಪರ ಸ್ತ್ರೀಧನವು ನಿಮ್ಮ ಕೈಸೇರಲಿದೆ. ಬಂಧುಮಿತ್ರರ ಬೆಂಬಲವೂ ಉತ್ತಮ ನಿಮಗೆ ತಾ. 25, 29, 30ರಲ್ಲಿ ಭೋಗಲಾಭ ವಿಜಯ ಸುದಿನಗಳು ಲಭಿಸುವವು.

ಧನು— ಶೋಕ ತಾಪಗಳಿಂದ ಸಂ[illegible]ಕಷ್ಟಿಂದ ನಿಮ್ಮ ದುರ್ದಿನಗಳು ಇನ್ನೂ ಮುಗಿದಿಲ್ಲವು. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ಲಭಿಸದಕಾರಣ ಹಣದ ಅಡಚಣೆಗೆ ಸಿಲುಕುಬಾ ಕಷ್ಟಕ್ಕೊಳಗಾಗುವಿರಿ. ಹೆಂಡತಿ ಮಕ್ಕಳ ಆರೋಗ್ಯವು ಕೆಡಲಿರುವುದು, ಮಾತ್ರವಲ್ಲ ವಾತ ಕಫ ಪ್ರಕೋಪದಿಂದಾಗಿ ನಿಮ್ಮ ಆರೋಗ್ಯವು ನೆಟ್ಟಗಿರದು. ನಾನಾತರದ ತಾಪತ್ರಯಗಳಿಗೆ ಸಿಲುಕಿದ ನಿಮ್ಮ ತನುಮನಗಳಿಗೆ ಎಂದೂ ಸುಖಶಾಂತಿಯು ಲಭಿಸಲಾರದು. ತಾ. 25, 27 ಮತ್ತು 1 ಮಾತ್ರ ನಿಮಗೆ ಸ್ವಲ್ಪ ಸುಖ ನೆಮ್ಮದಿಯನ್ನೀಯಲಿವೆ.

ಮಕರ— ನಿಮ್ಮ ಅದೃಷ್ಟವಿಂದು ಅತ್ಯುತ್ತಮವಿರುವುದು. ನಿಮ್ಮ ಬಯಕೆಗಳೆಲ್ಲವೂ ಇಂದು ಕಾರ್ಯರೂಪಕ್ಕೆ ಬರಲಿವೆ. ನದಂತೆ ಕಾರ್ಯಗಳು ಏನೊಂದೂ ವಿಘ್ನ ವಿದ್ರೋಹಗಳಿಲ್ಲದೆ ನಿರಾತಂಕವಾಗಿ ಅನಾಯಾಸದಿಂದ ಅಲ್ಪಾವಕಾಶದಲ್ಲೇ ಸಿದ್ಧಿಸಲಿ[illegible] ಯಾವೊಂದುತರದ ಅನಿಷ್ಟಗಳೂ ನಿಮ್ಮ ಮೊಸ ಬರಲಾರವು. ಸಮಾಜದಲ್ಲಿ ಗೌರವಸ್ಥಾನ ಪ್ರಾಪ್ತಿಯಾಗುವದು. ಶತ್ರುವರ್ಗದವರು ಶರಣುಬರುವರು, ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ತಾ. 25, 29, 30 ಈ ದಿನಗಳು ಈ ವಾರದ ಉತ್ತಮಗಳಾಗಿವೆ.

ಕುಂಭ— ನಿಮ್ಮ ದೇಹ ಪತಿಯಾದ ಶನೈಶ್ಚರನು ವಕ್ರಿಯಾಗಿ ಅಷ್ಟಮದಲ್ಲಿರುವುದರಿಂದ ನಿಮ್ಮ ಆರೋಗ್ಯಕ್ಕೆ ವಾತ ಪ್ರಕೋಪದಿಂದಾಗಿ ಧಕ್ಕೆಯುಂಟಾಗಲಿದೆ. ನೀ[illegible] ಜನರೊಡನೆ ಕಲಹ ಕಚ್ಚಾಟಗಳುಂಟಾಗುವು. ಬಂಧುವರ್ಗದವರಿಂದುಂಟಾದ ಆಪತ್ತಿಯಿಂದ ವಿಶೇಷ ದುಃಖಭಾಗಿಗಳಾಗುವಿರಿ ನೌಕರಿ ವ್ಯಾಪಾರಾದಿ ಉದ್ಯೋಗಗಳಲ್ಲಿ ಸುಕ್ತತಕ್ಕ ಫಲವಿಲ್ಲ ಗುರುಹಿರಿಯರ ಅಗ್ರಹಕ್ಕೊಳಗಾಗಲಿರುವಿರಿ ಹೆಂಡತಿ ಮಕ್ಕಳ ಆರೋಗ್ಯದತ್ತ ವಿಶೇಷ ಗಮನಕೊಡಿರಿ. ತಾ. 29, 30 ಮಾತ್ರ ಒಳ್ಳೆಯದಲ್ಲ.

ಮೀನ— ನಿಮ್ಮ ಅದೃಷ್ಟವಿಂದು ಬಲ ದುರ್ಬಲವಿರುವುದು. ದೇಹಪೀಡೆ ವ್ಯಾಚ್ಯುತಿ ಕಾರ್ಯಭಂಗಗಳು ಮೇಲಿಂದಮೇಲೆ ಕಾಣಿಸಲಿವೆ ನಿಮ್ಮ ನಿರತಕ್ಕ ವಸ್ತು ವದವೆಳೂ ನಿಮ್ಮ ಭೋಗಕ್ಕೆ ಲಭಿಸಲಾರವು, ಗೃಹತಾಪತ್ರಯವು ಅಧಿಕವಾಗುವದು. ಹೆಂಡತಿ ಮಕ್ಕಳೊಡನೆ ನಿತ್ಯ ಕಲಹ ತಪ್ಪದು, ಖರ್ಚಿನ ಮಾರ್ಗಗಳು ಕ್ಷಣೇ ಕ್ಷಣೇ ಅಧಿಕವಾಗುವುದರಿಂದಲೂ ಆದಾಯವು ಸ್ವಲ್ಪವಾಗುತ್ತ ಬರುವುದರಿಂದಲೂ ಹಣದ ಅಡಚಣೆಯು ಅಧಿಕವಾಗುವುದು. ಮರ್ಯಾದೆಯಿಂದ ದಿನ ಕಳೆವುದು ಕಷ್ಟವೆನಿಸೀತು. ವಾರಾಂತ್ಯದ 3 ದಿನಗಳು ಹೆಚ್ಚಿನ ಕಷ್ಟದಾಯಿಗಳಾಗವು.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಮಾಸಿಕ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ. 7 ರೂ. M. O. ಮಾಡಿರಿ. ಕೂಡಲೆ ರಿ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.**

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.**(South India)

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ.

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

Regd. No.
M. 3618

LICENCE No. 31
Licensed to Post without Prepayment

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

2-7-1953

Vol 32
No 43

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೩

ಕೊರಿಯದಲ್ಲಿಂದು ಕಾಳಗ ನಡೆಯುತ್ತಿದೆ. ಮೂರು ವರ್ಷಗಳಿಗೂ ಮಿಕ್ಕಿ ಈ ಕಾಳಗ ನಡೆಯಿತು. ಸಂಧಿಯು ಆಶೆ ಕಾಣಿಸಿಕೊಂಡಿತೆನ್ನುವಾಗ, ಡಾ. ಸಿಂಗ್ಮನ್‌ರ್ಹೀಯ ಹುಚ್ಚಾಟದಿಂದ, ಎಲ್ಲವೂ ಮಣ್ಣುಮುಕ್ಕಿದಂತಾಗಿದೆ. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳಲು ಪಂಚ ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷಸ್ಥಾನದಲ್ಲಿರುವ ಭಾರತ ಒಂದು ಸೈನ್ಯದಳವನ್ನು ಕಳುಹಿಸಬೇಕೆಂದಿದೆ. ಈ ಸೈನ್ಯದ ಬರವನ್ನು ದಕ್ಷಿಣ ಕೊರಿಯಾದ ಸರಕಾರ ಪ್ರಚಂಡವಾಗಿ ಪ್ರತಿಭಟಿಸುತ್ತಿದೆ. ಭಾರತವನ್ನು ಕಮ್ಯೂನಿಸ್ಟ ರಾಷ್ಟ್ರವೆಂದೇ ಸಿಂಗ್ಮನ್‌ರ್ಹೀ ಸರಕಾರ ತಪ್ಪು ತಿಳಿದುಕೊಂಡಿದೆ. ಭಾರತೀಯರು ಮನೆಬಿಟ್ಟು ಹೊರಗೆ ಹೊರಡಬಾರದೆಂದು ಆ ಸರಕಾರ ಭಿತ್ತಿಪತ್ರಗಳನ್ನು ಹೊರಡಿಸಿ, ದಕ್ಷಿಣ ಕೊರಿಯನ್ನರ ಮನಸ್ಸಿನಲ್ಲಿ ಭಾರತ ವಿರೋಧಿ ಭಾವನೆಗಳಿಗೆ ಪ್ರಚೋದನೆ ಕೊಡುತ್ತಿದೆ. ಆದರೆ ಅದೇ ಕೊರಿಯಾದ ನೆಲದಲ್ಲಿ ಭಾರತೀಯ ಸೈನ್ಯ ಪಡೆಯು ಆಂಬುಲೆನ್ಸ ದಳವೊಂದು ಗಾಯಾಳು ಸೈನಿಕರಿಗೆ ವೈದ್ಯಕೀಯ ಚಿಕಿತ್ಸೆಯನ್ನು ಕೊಡುತ್ತಾ ಉಪಚರಿಸುತ್ತಿದೆ. ಸೌಖ್ಯ ಹೊಂದಿರುವ ನಾಗರಿಕರು ಭಾರತವನ್ನು ಬೈದು ಭಂಗಿಸುವ ದಕ್ಷಿಣ ಕೊರಿಯಾದ ಸರಕಾರವನ್ನು ಬೆಂಬಲಿಸಬಹುದು; ಹಾಗೆಂದು ನಿಜವಾಗಿಯೂ ಭಾರತದಿಂದ ಸಹಾನುಭೂತಿಯನ್ನೂ ಸಹಾಯವನ್ನೂ ಪಡೆದ ಯುದ್ಧಕ್ಷೇತ್ರದ ಸೈನಿಕರು ಭಾರತವನ್ನು ತುಂಬ ಗೌರವದಿಂದ ನೋಡುತ್ತಾರೆ; ಆದರ ನೀಡುತ್ತಾರೆ.

ಹಾಗಾದರೆ, ನಾವು ಬಾಯಿಂದ ಬೊಬ್ಬೆಹುಯ್ಯುವುದೇ ಒಂದು ವಿಷಯ; ಮತ್ತು ಮನಸ್ಸಿಂದ ಆಶೀರ್ವದಿಸುವುದೇ ಬೇರೊಂದು ವಿಷಯ- ಎಂದಂತಾಯಿತು. ಹೊರಗಿಂದ ನೋಡುವಾಗ, ನಮಗೆ ಯಾವುದಾದರೊಂದು ಸಂಗತಿಯ ಅಗತ್ಯ ಇರದ ಗಳಿಗೆಯಲ್ಲಿ, ಅತ್ಯಂತ ತುಚ್ಛವೆಂಬೇ ಆ ವಿಷಯ ವಸ್ತು ಅಥವಾ ವ್ಯಕ್ತಿ ಗೋಚರಿಸಬಹುದು. ಆದರೆ, ನಿಜವಾಗಿ ನಮಗೆ ಆವಶ್ಯಕತೆಯುಂಟಾದಾಗ, ಅಥವಾ ಗಂಡಾಂತರ ಪರಿಸ್ಥಿತಿಯಲ್ಲಿ ಅಯಾಚಿತವಾಗಿ ಆ ವಸ್ತು ಉಪಯೋಗಕ್ಕೆ ಬಂದಾಗ ನಮ್ಮ ತಿರಸ್ಕಾರವೆಲ್ಲ ಮಾಯವಾಗಿ, ಆದರ ಮತ್ತು ಗೌರವದ ಭಾವನೆಗಳಿಗೆ ಸ್ಥಾನ ಬಿಟ್ಟುಕೊಡುತ್ತದೆ. ಈ ರೀತಿ ಮೂಡಿದ ಒಳ್ಳೆಯ ಅಭಿಪ್ರಾಯವು ಆ ಜೀವನ ಪರ್ಯಂತ ಮಸಕಾಗುವುದಿಲ್ಲ; ಬದಲಾಗುವುದೂ ಇಲ್ಲ.

ಆದುದರಿಂದ, ನಾವೊಂದು ಕೆಲಸ ಮಾಡುವಾಗ ಅಂಥ ಅಲ್ಪತ ಪರಿಣಾಮವನ್ನು, ಸತ್ಪರಿಣಾಮವನ್ನು, ಉಂಟುಮಾಡಲಿಕ್ಕೆ, ಹವಣಿಸಬೇಕು. ನಮ್ಮ ಬಗ್ಗೆ ನಾಲ್ಕು ಮಂದಿಯು ಒಳ್ಳೆಯ ಮಾತನ್ನಾಡುವಂತೆ ನಾವು ನಡೆದುಕೊಳ್ಳತಕ್ಕದ್ದು. ಬೇರೆ ಜನರನ್ನು ನಮ್ಮೆಡೆಗೆ ಆಕರ್ಷಿಸಿಕೊಂಡು, ಅಥವಾ ನಾವಾಗಿ ಅವರನ್ನು ಬರಮಾಡಿಕೊಂಡು ಅವರ ಅಗತ್ಯಗಳ ತಪಸೀಲು ಬರೆದು, ಅವುಗಳಲ್ಲಿ ನಮ್ಮಿಂದ ಕೂಡಿದ್ದನ್ನೆಲ್ಲ ಪೂರೈಸುವ ಚಳಲಕ್ಕೆ ತೊಡಗಬೇಕೆಂದೇನು ಇದರ ಅರ್ಥವಲ್ಲ. ನಾವು ನಮ್ಮಷ್ಟಕ್ಕೆ ಇರುತ್ತಿದ್ದಂತೆಯೇ ನಮ್ಮನ್ನು ಕಂಡು, ಸಹಾಯವನ್ನಪೇಕ್ಷಿಸುವ ಜನರು ಅನೇಕ. ನಮಗೆ ಯಾರ ಗೊಡವೆಯೂ ಬೇಡವೆಂದು ಜಾಣ ಗಳಿಗೆಯಲ್ಲಿ ಸಹ, ನಮ್ಮಿಂದ ಏನಾದರೂ ಉಪಕಾರವಾದೀತೆಂದು ಬಯಸಿ ಬರುವವರಿರುವರು. ಅವರ ಮನ ನೋಯದಂತೆ ನಾವು ನಡೆದುಕೊಂಡರೆ ನಮಗೆ ನಷ್ಟವಾಗುವುದಿಲ್ಲ. ಅವರಿಗೆ ಯೋಗ್ಯ ಸಮಾಧಾನವನ್ನು ನಾವು ಕೊಡಬಲ್ಲೆವಾದರೆ, ನಮಗಾಗಿ ಒಂದು ಜನದ ಪ್ರೀತ್ಯಾದರಗಳನ್ನು ಸಂಪಾದಿಸಿಕೊಂಡಂತೆಯೇ ಆಯಿತು.

ಸಹಾನುಭೂತಿಯನ್ನು ಪ್ರದರ್ಶಿಸುವುದು ಮನುಷ್ಯನು ಮಾಡಬಹುದಾದ ಒಳ್ಳೆಯ ಕೆಲಸಗಳಲ್ಲಿ ಒಂದು. ಆದರೆ ಈ ಸಹಾನುಭೂತಿ ಒಳ್ಳೆಯ ಉದ್ದೇಶಕ್ಕಾಗಿ ಇರಬೇಕೆಂಬುದು ನಿರ್ವಿವಾದ. ಪ್ರತಿಯೊಂದು ಕ್ರಿಯೆಯನ್ನೂ ನಾವು ಒಳ್ಳೆಯ ಅಥವಾ ಕೆಟ್ಟ ಉದ್ದೇಶಕ್ಕೋಸ್ಕರ ಬಳಸಬಲ್ಲೆವು. ದೇಹಕ್ಕೆ ಪೋಷಕವಾದ ಸಕ್ಕರೆ ಸಿಹಿ ಮಾತ್ರ ರೋಗದಂಥ ಉಪಟಳವನ್ನೂ ಕೊಡುತ್ತದೆ. ಪ್ರಾಣಘಾತಕವಾದ ವಿಷವೂ ಕೆಲವೊಮ್ಮೆ ರೋಗೋಪಶಮನಕ್ಕೆ ಆವಶ್ಯವೆನಿಸುತ್ತದೆ. ಅದರಂತೆ ಸಹಾನುಭೂತಿಯೂ ಇಷ್ಟ-ಅನಿಷ್ಟ ಪರಿಣಾಮಗಳೆರಡನ್ನೂ ಮಾಡಬಲ್ಲುದು ನಾವಿಲ್ಲಿ ವಿವರಿಸಬೇಕಾದದ್ದು ಹಿತವನ್ನುಂಟುಮಾಡಬಲ್ಲ ಸಹಾನುಭೂತಿಯ ವಿಚಾರವನ್ನು ತಾನೆ! ಕನ್ನಡದಲ್ಲಿ ಸುಪ್ರಸಿದ್ಧ ವಿಡಂಬನಕಾರರೆನಿಸಿದ ಬೀಚಿಯವರು "ಹಾನುಭೂತಿಯ ಸಂಪು"ಎಂಬೊಂದು ಬರಹದಲ್ಲಿ ಅರ್ವಾಚೀನ ಕಾಲದಲ್ಲಿ ಸಹಾನುಭೂತಿಯು ಪ್ರವಾಹ ಹರಿಯುವ ಬಗೆಯನ್ನು ಸ್ವಾರಸ್ಯವಾಗಿ ಚಿತ್ರಿಸಿರುವರು. ಅದು ಸಹಾನುಭೂತಿಯ ಪರಿಣಾಮವಾಗಿ ನಗರದ ನಾಗರಿಕರೆಲ್ಲರೂ ತೊಂದರೆಗೀಡಾಗುವ ಪ್ರಸಂಗ ಬರುತ್ತದೆ; ಈ ಸಹಾನುಭೂತಿ ಸುಡುಗಾಡು ಸೇರಲೆಂದೇ ತೋರುತ್ತದೆ.

ನಡು ವಯಸ್ಸಿನ ಗಂಡಸೊಬ್ಬ ತನ್ನ ಹೆಂಡತಿಯೊಡನೆ "ಇಪ್ಪತ್ತು ವರ್ಷಗಳಿಗೆ ಹಿಂದೆ ನಾನು ತುಂಬು ತಾರುಣ್ಯಾವಸ್ಥೆಯಲ್ಲಿದ್ದೆ. ಏನೇನೋ ಸುಖ ಸ್ವಪ್ನಗಳಲ್ಲಿ ತೇಲುತಿದ್ದೆ. ಆದರೆ ಇಂದು ಅವೆಲ್ಲ ಮೃಗಜಲ ಸದೃಶವೆಂಬ ಸತ್ಯ ಗೋಚರಿಸುತ್ತದೆ" ಎಂದು ತನ್ನ ಆ ದಿನಗಳ ಮನೋಭಾವನೆಯನ್ನು ನೊಂದ ಮನದಿಂದ ಹೊರಗೆಡವಿದನಂತೆ. ಅವನಿಗೆ ತನ್ನ ಬೆಂದ ಹೃದಯಕ್ಕೆ ಒಂದಿಷ್ಟು ತಂಪು ಬೇಕಿದ್ದಿತು. ಆ ತಂಪನ್ನು ತವನಾಗಿ ತಂದುಕೊಳ್ಳಬೇಕಷ್ಟೆ, ಎಂತಲೇ ಈ ಉದ್ಗಾರ. ಹೊಡ ... ಗಳಿಗೆಯಲ್ಲಿ ಅವನು ತನ್ನೊಳಗೇನೇ ಈ ರೀತಿ ಗೊಣಗಾಡಿರಲೂ ಸಾಕು. ಆದರೆ ಅಕ್ಕಪಕ್ಕದವರಲ್ಲಿದ್ದ ಗಳಿಗೆ ಏನಾದರೊಂದು ರೀತಿಯ ಸಮಾಧಾನದ ಮಾತು ಆಡದಿದ್ದರೆ ... ಚೆನ್ನಾದುದಲ್ಲ. ಅವಳೆಂದಳು— "ನಿಜ, ನಿಜ ಆ ಕಾಲದಲ್ಲಿ ಹೀಗಾಗು

(ಮಾರನೇ ಪುಟ ನೋಡಿರಿ)

ಮಧುಪರ್ಕ

ಯಮರಾಜನ ದರ್ಬಾರಿನಲ್ಲಿ ಶಾಂತಿ ತುಂಬಿತ್ತು. ಸಗ್ಗಾವಸ್ಥೆಯಲ್ಲಿ ಒಬ್ಬನನ್ನು ಅಲ್ಲಿ ತಂದು ನಿಲ್ಲಿಸಿದ್ದರು. ಚಿತ್ರಗುಪ್ತರು ಆ ಮನುಷ್ಯನ ಪಾಪ ಪುಣ್ಯಗಳ ವಿವರಗಳನ್ನೊಳಗೊಂಡ ತಮ್ಮ ಪುಸ್ತಕದ ಪುಟ ತೆರೆದು, ಓದಿದರು—

"ನಿನ್ನ ಇಡೀ ಜೀವನವು ಪಾಪಪೂರ್ಣವಾಗಿದೆ. ನಿನ್ನ ಸಹಾಯ ಅಗತ್ಯವಿದ್ದವರಿಗೆ ನೀನು ಕ್ರೌರ್ಯವನ್ನು ತೋರಿಸಿದಿ. ನಿನ್ನಿಂದ ದಯಾ ಯಾಚನೆ ಮಾಡಿದವರಿಗೆ ನೀನು ಕಠೋರ ತಮವಾದ ನಿಷ್ಕರುಣವಾದ, ಕರಗದ ಕಲ್ಲಿನಂಥ ವರ್ತನೆಯಿಂದ ನೋಯಿಸಿದಿ. ಏಕಾಂತದ ದೀನ ದರಿದ್ರರು ನಿನ್ನ ನೆರವಿಗಾಗಿ ಹಾತೊರೆಯುತ್ತಿದ್ದಾಗ ನೀನು ಅವರನ್ನು ಭಯವಿಹ್ವಲರನ್ನಾಗಿಸಿ, ತಿರಸ್ಕರಿಸಿದಿ. ಪಿತೃಹೀನ ಬಾಲಕರ ಸಂಪತ್ತನ್ನು ನೀನು ಅಪಹರಿಸಿ, ಅವರ ಬಾಯಿಯ ತುತ್ತನ್ನು ಕಸಿದು ಕೊಂಡಿ. ನಿನಗೂ ಜನ್ಮವಿತ್ತ ಆ ಬಡಮಾತೆಯ ಇತರ ಪುತ್ರರ ರಕ್ತಶೋಷಣೆಯನ್ನು ನೀನು ಮಾಡಿದಿ. ನಿನ್ನ ಪಾಲಿಸಿ ಪೋಷಿಸಿದ ಕೈಗಳಿಗೆ ನೀನು ದುಃಖ ದುಮ್ಮಾನಗಳನ್ನು ಕೊಟ್ಟಿರುವಿ. ರಾತ್ರಿಯ ಸಮಯ ನಿನಗೆ ಮಲಗಿ ಸುಖನಿದ್ರೆಯಲ್ಲಿರಲು ಅನುಕೂಲತೆಯೊದಗಿಸಿದವರಿಗೆ, ನೀನು ಹಗಲಿನ ಬೆಳಕಿನಲ್ಲೇ ವಿಶ್ವಾಸ ಘಾತ ಮಾಡಿದಿ."

"ಸರಿಯೇ, ನಾನಿವೆಲ್ಲವನ್ನು ಮಾಡಿದವನೇ."

"ಹಾಗಾದರೆ, ನಿನಗೆ ನರಕ ವಾಸವೇ ಗತಿ" ಎಂದು ಯಮರಾಜ ತೀರ್ಪು ಹೇಳಿದ.

ಇದನ್ನು ಕೇಳಿ ಮನುಷ್ಯ ಬೊಬ್ಬೆಬಿಟ್ಟು ನುಡಿದ. "ಅಯ್ಯೋ, ಇನ್ನು ನನ್ನನ್ನು ಅಲ್ಲಿ ಕಳಿಸುವಿರಾ? ಇಷ್ಟರ ವರೆಗಂತೂ ನಾನು ನರಕದಲ್ಲಿಯೇ ಇದ್ದು ಬಂದಿದ್ದೇನೆ. ನಾನಿದ್ದ ಆ ನರಕಕ್ಕಿಂತಲೂ ಭಿನ್ನವಾದ ನರಕ ಬೇರೊಂದಿದೆಯೇ, ಯಮರಾಜ?"

ಎದೆಯ ಕೊರಗು

ಮಧುವಿಗಿಂತಲು ಮಧುವಾದ ಕಥಾ ಸಂಗ್ರಹ.

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಪಡಿಯಚ್ಚುಗಳಿವೆ.

"ಮಧುವನ"ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. "ನವಿಲುಗರಿ" "ಕಾಮನ ಬಿಲ್ಲು" ಎಂಬ ಸಂಗ್ರಹಗಳು ಹೊರಟರೂ ಅಲ್ಲಿ ಕಾಣಲಾರದ ಹೆಸರುಗಳ ಕೆಲವು "ಮಧುವನ"ದಲ್ಲಿ ನಮಗೆ ಪರಿಚಿತವಾಗಿ ಸಿಕ್ಕುತ್ತವೆ. "ಮಧುವನ"ದ ಸಂಪಾದಕರ ... ಹಾಲು ಕರೆದರು. ಅದನ್ನು ಬಿಸ್ಸು ಹಾಕುವ ಹೊಣೆ ... ಅದನ್ನು ಎಲ್ಲಿಯೂ ಒಪ್ಪುವಂತೆ ಕೊನೆಗಾಣಿಸಿದ್ದಾರೆ. ಲೇಖಕ, ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಬರೆದ ವಿಮರ್ಶಾತ್ಮಕ ಟಿಪ್ಪಣಿಗಳು ಇವೆಲ್ಲ ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಸೊಬಗನ್ನು ಹೆಚ್ಚಿಸಿವೆ. ಕತೆಯ ದೃಷ್ಟಿಯಿಂದ ಇದೊಂದು ಉತ್ತಮ ತರಗತಿಯ ಕಥಾಸಂಗ್ರಹವಾಗಿದೆ.

—ವಿ. ಕೃ. ಗೋಕಾಕ.

ಬಿಳಿ ಕಾಗದ- ಆಕರ್ಷಕ ಮುಖಪುಟ. ಬೆಲೆ ರೂ. 3—0—0.
ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತವೆ.

ಆಕರ್ಷಕವಾದ ನಗರ—ಚಂಡೀಗಢ

ಪೂರ್ವ ಪಂಜಾಬದ ನೂತನ ರಾಜಧಾನಿ

ಭಾರತ ವಿಭಜನೆಗೊಂಡುದರ ಪರಿಣಾಮವಾಗಿ, ಪಂಜಾಬದ ರಾಜಧಾನಿಯಾಗಿದ್ದ ಲಾಹೋರ ನಗರ ಪಾಕಿಸ್ತಾನಕ್ಕೆ ಸೇರಿದ ಪಶ್ಚಿಮ ಪಂಜಾಬದ ಪಾಲಿಗೆ ಹೋಯಿತು. ಭಾರತದಲ್ಲಿ ಉಳಿದ ಪೂರ್ವ ಪಂಜಾಬಕ್ಕೆ ಯೋಗ್ಯವಾದ ರಾಜಧಾನಿಯಾಗಬಲ್ಲ ನಗರ ಯಾವುದೂ ಉಳಿಯಲಿಲ್ಲ. ಪರಿಣಾಮತಃ ಹೊಸತೊಂದು ರಾಜಧಾನಿಯನ್ನು ಕಟ್ಟಿಸಿ ಅದರಲ್ಲಿ ಸರಕಾರದ ಕೇಂದ್ರವನ್ನು ಸ್ಥಾಪಿಸಿಕೊಳ್ಳುವ ಅಗತ್ಯ ಅನಿವಾರ್ಯವೆನಿಸಿತು. ಭಾರತ ಅಮೇರಿಕಾ, ಇಂಗ್ಲೆಂಡ, ಫ್ರಾನ್ಸ ಇತ್ಯಾದಿ ದೇಶಗಳ ಅಂತರಾಷ್ಟ್ರೀಯ ಖ್ಯಾತಿವೆತ್ತ ಹನ್ನೆರಡು ಮಂದಿ ನಗರ ಶಿಲ್ಪಿಗಳ ಕೈಗೆ ಪೂರ್ವ ಪಂಜಾಬಕ್ಕೊಂದು ನೂತನ ರಾಜಧಾನಿಯನ್ನು ನಿರ್ಮಿಸುವ ಕೆಲಸವನ್ನು ಒಪ್ಪಿಸಿಕೊಡಲಾಯಿತು. ಈ ಶಿಲ್ಪಿಗಳು ಅತ್ಯಾಧುನಿಕ ಪದ್ಧತಿಯನ್ನನುಸರಿಸುತ್ತಿರುವ ಈ ನಗರ ತ್ವರಿತ ಗತಿಯಿಂದ ರೂಪುಗೊಳ್ಳುತ್ತಿದೆ.

❖

ಈ ನಗರವು ಪೂರ್ಣಗೊಂಡಾಗ, ಪ್ರಧಾನಿ ಜವಾಹರಲಾಲರು ಹೇಳುವಂತೆ ನಮ್ಮ ಉತ್ಪಾದಕ ಹಾಗೂ ಕ್ರಿಯಾಶೀಲ ಪ್ರಗತಿಯ ದ್ಯೋತಕವಾಗಬಲ್ಲುದು. ಸ್ವಾತಂತ್ರ್ಯೋತ್ತರದ ದಿನಗಳಲ್ಲಿ ನಾವು ಪಡೆದ ಯಶಸ್ಸಿಗೊಂದು ಭವ್ಯ ನಿದರ್ಶನವೆನಿಸಬಲ್ಲುದು. ಅಪಾರ ನೀರಿನ ಪೂರೈಕೆ ಮತ್ತು ಯಥೇಷ್ಟ ವಿದ್ಯುಚ್ಛಕ್ತಿಗಳ ಬಲದಿಂದ, ಈ ನಗರ ನಿರ್ಮಾಣ ಕಾರ್ಯವು ೧೯೫೭ರ ಸುಮಾರಿಗೆ ಸಂಪೂರ್ಣ ಮುಗಿಯುವ ನಿರೀಕ್ಷೆ ಇದೆ. ಆಗ ಈ ನಗರದಲ್ಲಿ ಐದು ಲಕ್ಷ ಜನರು ನೆಲಸಬಹುದು. ಆದರೆ ನಗರ ನಿರ್ಮಾಣದ ಪ್ರಥಮ ಘಟ್ಟದಲ್ಲಿ ಕೆಲಸವು ಸುಮಾರು ೧೪ ಚದರ ಮೈಲು ವಿಸ್ತಾರದಲ್ಲಿ, ೧೬೪೪೭೫೦೦೦ ರೂಪಾಯಿಗಳ ವೆಚ್ಚದಲ್ಲಿ ಒಂದೂವರೆ ಲಕ್ಷ ಜನರ ವಸತಿಗೆ ಯೋಗ್ಯ ಸೌಕರ್ಯವನ್ನೊದಗಿಸುವ ಮಟ್ಟಿಗೆ ಮಾತ್ರ ನಿಯಮಿತವಿದೆ. ಈಗಾಗಲೇ ಸಹಸ್ರಾರು ವಸತಿಗೃಹಗಳು ತಲೆಯೆತ್ತಿವೆ. ೫೦ ಮೈಲಿಗಿಂತಲೂ ಹೆಚ್ಚು ಉದ್ದ ಮಾರ್ಗ ರಚನೆಯಾಗಿವೆ. ಕೆಲವು ಸರಕಾರೀ ಕಚೇರಿಗಳನ್ನು ಇಲ್ಲಿಗೆ ಒಯ್ಯಲಾಗಿದೆ. ಹೀಗಿರುವುದರಿಂದ ನಗರದ ತುಂಬೆಲ್ಲ ಉತ್ಸಾಹ ಮತ್ತು ಕ್ರಿಯಾಪಟುತ್ವ ಲಕ್ಷ್ಯವಾಗುತ್ತಿದೆ.

❖

ಚಂಡೀಗಢವೆಂದು ಈ ನಗರದ ಹೆಸರು. ಚಂಡೀಗಢ ನಿಧಾನವಾಗಿ ರೂಪುಗೊಳ್ಳುತ್ತಿದ್ದಂತೆಯೇ ಪೂರ್ವ ಪಂಜಾಬದ ಸರಕಾರವು ತನ್ನ ಮುಂದಿನ ಶಾಸನ ಸಭಾಧಿವೇಶನವು ಅಕ್ಟೋಬರ ತಿಂಗಳಲ್ಲಿ ಈ ನಗರದಲ್ಲಿ ಕರೆಯಬೇಕೆಂದಿದೆ. ಕೆಲವು ಕಚೇರಿಗಳನ್ನು ಸಹ ಇಲ್ಲಿಗೆ ವರ್ಗಾಯಿಸಲು ನಿಶ್ಚಯಿಸಿದೆ. ಸಿಮ್ಲಾದ ಉಲ್ಲಾಸಪ್ರದವಾದ ತಂಪಾದ ವಾತಾವರಣವನ್ನು ಬಿಟ್ಟುಕೊಟ್ಟು ಈ ಅರ್ಧನಿರ್ಮಿತ ನಗರಕ್ಕೆ ಬರುವ ಮನಸ್ಸು ಶಾಸನಸಭಾ ಸದಸ್ಯರಿಗಾಗಲೀ ಸರಕಾರೀ ಅಧಿಕಾರಿಗಳಿಗಾಗಲೀ ಇರುವುದಿಲ್ಲ. ಆದರೂ ಸರಕಾರ ಧೈರ್ಯದಿಂದ ಈ ನಿರ್ಧಾರ ಕೈಗೊಂಡಿದೆ. ಶಾಸನಸಭೆಯು ಸೇರಲಿರುವ ಭವನದ ನಿರ್ಮಾಣ ಇನ್ನೂ ಆಗಿಲ್ಲ. ಈಗ ಅದರ ರಚನೆಯ ವಿಚಾರ ಮಾತ್ರ ನಡೆದಿದೆ- ಕೆಲಸ ಮುಗಿಯುವಾಗ ಇನ್ನು ಎರಡು ವರ್ಷಗಳು ಸಂದುಹೋಗುತ್ತವೆ. ಆದರೆ ಈಗಾಗಲೇ ನಿರ್ಮಿಸಿದ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಶಾಲವಾದ ಭವನವೊಂದಿದೆ. ಅಕ್ಟೋಬರದ ಅಧಿವೇಶನವನ್ನು ಇಲ್ಲಿ ಜರಗಿಸಬೇಕೆಂದು ಸರಕಾರದ ಅಭಿಪ್ರಾಯ. ಈ ಕಾಲೇಜಿನಿಂದ ಒಂದು ಫರ್ಲಾಂಗು ದೂರದಲ್ಲಿರುವ ಹಾಸ್ಟೆಲಿನಲ್ಲಿ ಶಾಸನಸಭಾ ಸದಸ್ಯರಿಗೆ ಉಳಕೊಳ್ಳಲು ಅನುವುಮಾಡಿಕೊಡಲಾಗುವುದು. ಅಷ್ಟುಹೊತ್ತಿಗಾಗಲೇ ಒಂದು ಅಧಿಕಾರಿಗಳ ವಸತಿಗೃಹವೂ ಸಿದ್ಧಗೊಳ್ಳುವುದರಿಂದ, ಸಂದರ್ಶಕರಿಗೆ ಕೂಡ ಯೋಗ್ಯ ಸ್ಥಳ ದೊರೆಯುತ್ತದೆ. ಈ ಅಧಿವೇಶನಕಾಲದಲ್ಲಿ ನಗರವನ್ನು ಸಂದರ್ಶಿಸಬಯಸಿ ಬರಬಹುದಾದ ಶಾಸನಸಭಾ ಸದಸ್ಯರ ಬಂಧುಬಳಗ ಹಾಗೂ ಇಷ್ಟಮಿತ್ರರಿಗಾಗಿ ಕೆಲವು ಗೃಹಗಳನ್ನು ಕಾಯ್ದಿಡಲಾಗುವುದು.

❖

ಪ್ರಕೃತಕ್ಕೆ ಈ ಹೊಸ ನಗರದಲ್ಲಿ ಸುಮಾರು ಇಪ್ಪತ್ತು ಸಾವಿರ ಜನ ವಸತಿ ಇದೆ. ಇದರಲ್ಲಿ ಅರೆವಾಸಿ ಕೂಲಿಕಾರರು. ಅಕ್ಟೋಬರ ಮಾಸದಲ್ಲಿ ಸಿಮ್ಲಾದಿಂದ ೧,೨೦೦ ಸರಕಾರೀ ಅಧಿಕಾರಿಗಳು ಈ ನಗರಕ್ಕೆ ಆಗಮಿಸಲಿರುವರು. ಈಗ ಸುಮಾರು ೨೫ ಸಾವಿರ ಜನವಸತಿಗೆ ಯಥೇಷ್ಟವಾದ, ಶೈಕ್ಷಣಿಕ, ವೈದ್ಯಕೀಯ ಮತ್ತು ವಸತಿಯ ಸೌಕರ್ಯಗಳು ಲಭ್ಯವಿವೆ. ಪ್ರತಿಯೊಂದರಲ್ಲೂ ೧೨ ಹಾಸಿಗೆಗಳಿರುವ ಅತ್ಯಾಧುನಿಕ ಸಾಧನ ಸಲಕರಣೆಗಳಿಂದ ಸುಸಜ್ಜಿತವಾದ ಎರಡು ಚಿಕಿತ್ಸಾಲಯಗಳು ಈಗಾಗಲೇ ಸೇವೆ ಸಲ್ಲಿಸುತ್ತಿವೆ. ಈ ರಾಜಧಾನಿಗೆ ಭಾಕ್ರಾ-ನಾಂಗಲ ಯೋಜನೆಯಿಂದ ವಿದ್ಯುಚ್ಛಕ್ತಿ ಪೂರೈಸಲ್ಪಡುವುದು. ಆದರೆ ಈ ಮಧ್ಯಂತರದ ಅವಧಿಯಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೋಸ್ಕರ ರಾಜ್ಯ ಸರಕಾರವು ೨೫೦ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸುವ ಥರ್ಮಲ್ ಕೇಂದ್ರವೊಂದನ್ನು ತೆರೆದಿದೆ. ಸುಮಾರು ೧೦ ಲಕ್ಷ ರೂಪಾಯಿಗಳನ್ನು ಮಾರ್ಗದಲ್ಲಿ ಬೆಳಕಿನ ಕಂಭಗಳನ್ನು ನೆಡುವುದಕ್ಕಾಗಿ ಮತ್ತು ನೆಲದೊಳಗಿಂದ ವಿದ್ಯುಚ್ಛಕ್ತಿಯನ್ನು ಪೂರೈಸುವ ಕೆಲಸಕ್ಕಾಗಿ ತೆಗೆದಿಟ್ಟಿರುವರು. ಹಾಗೆಯೇ ಒಂದು ಟೆಲಿಫೋನು ಎಕ್ಸ್‌ಛೇಂಜ ಆಫೀಸನ್ನೂ ಟಪ್ಪಾಲು ಮತ್ತು ತಂತಿ ಕಛೇರಿಯನ್ನೂ ತೆರೆದಿರುವರು. ನೀರನ್ನು ಒದಗಿಸುವ ಉದ್ದೇಶದಿಂದ ಸರಕಾರವು ಈಚೆಗೆ ೨೩ ತೂತು ಬಾವಿಗಳನ್ನು ಕೊರೆಯಿಸಿತು. ಇವುಗಳಲ್ಲಿ ೧೪ ಬಾವಿಗಳ ಬಾಯಿಯನ್ನು ಸದ್ಯಕ್ಕೆ ಮುಚ್ಚಿದ್ದು, ಉಳಿದವುಗಳಿಂದ ಬರುವ ನೀರೇ ಈಗ ಬೇಕಾದಷ್ಟಾಗಿದೆ.

❖

ಚಂಡೀಗಢದಲ್ಲಿ ನಡೆಸಿದ ತಜ್ಞರ ಸಂಶೋಧನೆಯಂತೆ, ಇಲ್ಲಿ ನೆಲದೊಳಗೆ ಧಾರಾಳವಾಗಿ ನೀರು ದೊರೆಯುತ್ತಿದೆ. ಇಲ್ಲಿಯಷ್ಟು ನೀರಿನ ಸೌಲಭ್ಯವಿರುವ ಕೇಂದ್ರಗಳು ಭಾರತದಲ್ಲಿಯೇ ವಿರಳವೆಂದು ತಿಳಿದಿದೆ. ಸುಮಾರು ೬೦ ಸುರಂಗಗಳನ್ನು ತೋಡಿದಾಗ ಅವುಗಳಲ್ಲಿ ೨೮ ಪ್ರಯತ್ನಗಳು ಯಶಸ್ವಿಯಾದವು. ಇವುಗಳಲ್ಲಿಯೇ ಕೆಲವನ್ನು ತೂತು ಬಾವಿಗಳಾಗಿ ಪರಿವರ್ತಿಸಿದಾಗ ಪ್ರತಿ ತಾಸಿಗೆ ೧೫-೨೦ ಸಾವಿರ ಗೆಲನುಗಳಷ್ಟು ನೀರನ್ನು ಅವು ಕೊಟ್ಟವು. ನೀರಿನ ಬರವು ನೂತನ ರಾಜಧಾನಿಗೆ ಸರ್ವಥಾ ಬಾರದೆಂದು ಭರವಸೆ ಇದೆ. ಸರಕಾರದ ಕಚೇರಿಗಳನ್ನು ನೆಲೆಗೊಳಿಸುವುದಕ್ಕಾಗಿ ಈಗಾಗಲೇ ೧೦೦೦ ಕಚ್ಚಾಗೃಹಗಳನ್ನು ಹಂಗಾಮಿಯಾಗಿ ಸಿದ್ಧಗೊಳಿಸಿರುವರು. ಸದ್ಯದಲ್ಲಿಯೇ ಇನ್ನೊಂದು ಸಾವಿರ ಗೃಹಗಳು ತಯಾರಾಗಲಿವೆ. ೧೦೧ ರೂಪಾಯಿಯಿಂದ ೫೦೦ ರೂಪಾಯಿಯ ವರೆಗೆ ಸಂಬಳ ಪಡೆವ ಅಧಿಕಾರಿಗಳಿಗಾಗಿ ೫೦೦ ಮನೆಗಳೂ ಮಂತ್ರಿಗಳು, ನ್ಯಾಯಾಧೀಶರು, ಆರ್ಥಿಕ ಕಮಿಶನರುಗಳು, ಕಾರ್ಯದರ್ಶಿಗಳು ಮತ್ತಿತರ ೨೦೦೦ ರೂಪಾಯಿಗಿಂತಲೂ ಅಧಿಕ ಸಂಬಳ ಪಡೆವ ಸರಕಾರೀ ಅಧಿಕಾರಿಗಳು ಇವರಿಗ[illegible]

(೧೧ ನೇ ಪುಟ ನೋಡಿರಿ)

LIFE INSURANCE SELLING?

"Canara Mutual" has demonstrated that life insurance selling can be as respectable a profession as any other. Canara Mutual agents enjoy respect and regard from the public.

We have at our Head Office a newest psychological test that can state within an hour the chances of success in the field of a prospective agent. Educated young men who want to carve out a brilliant independent career will please contact.

THE MANAGING DIRECTOR
The CANARA MUTUAL ASSURANCE CO. Ltd.
Head Office: **UDIPI**, S. INDIA. ESTD: 1935

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ. ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ. ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ನಾವು ಹೊಸ ದಾರಿ ತುಳಿಯೋಣ!

ಶಿಕ್ಷಣ ಪದ್ಧತಿಯಲ್ಲಿ ಕ್ರಾಂತಿ ಕೈಗೂಡಿಸುವುದೇ ನಮ್ಮ ಧ್ಯೇಯ

ಮದ್ರಾಸು ಸರಕಾರದವರು ಪ್ರಾಥಮಿಕ ಶಿಕ್ಷಣಕ್ರಮದಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನು ಬಯಸಿ, ಇಷ್ಟರಲ್ಲೇ ರಾಜ್ಯದಲ್ಲೆಲ್ಲ ಹೊಸ ಯೋಜನೆಯೊಂದನ್ನು ಕಾರ್ಯಾನ್ವಿತಮಾಡುವುದರಲ್ಲಿ ಹವಣಿಸಿರುವುದು ಎಲ್ಲರಿಗೂ ತಿಳಿದಿದೆ. ಈ ಯೋಜನೆಯ ಸದುದ್ದೇಶವನ್ನು ಮನಗಾಣದೆ, ಅದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಯೋಗ್ಯತೆ ತಗ್ಗುವುದೆಂದೂ, ಅಧ್ಯಾಪಕರ ಕೆಲಸ ಹೆಚ್ಚುವುದೆಂದೂ, ಹಲವಾರು ಅಧ್ಯಾಪಕರು ನಿರುದ್ಯೋಗಿಗಳಾಗುವರೆಂದೂ ಹತ್ತು ಹಲವು ಬಗೆಯಿಂದ ಟೀಕೆಗಳನ್ನು ಕೇಳುತ್ತೇವೆ. ಅದೇ ಇನ್ನೊಂದು ವರ್ಗದವರಿಂದ, ನಮ್ಮ ಶಿಕ್ಷಣ ಪದ್ಧತಿಯು ಸ್ವತಂತ್ರ ಭಾರತದ ಪ್ರಜೆಗಳಿಗೆ ಯೋಗ್ಯವಾಗಿಲ್ಲವೆಂದೂ, ಅದರಲ್ಲಿ ಮೂಲಭೂತವಾದ ಬದಲಾವಣೆ ಅತ್ಯಗತ್ಯವೆಂದೂ ಪ್ರತಿಪಾದಿಸುವುದನ್ನು ಕೇಳುತ್ತೇವೆ. ಪರಸ್ಪರ ವಿರೋಧಾಭಾಸವನ್ನುಂಟುಮಾಡುವ ಇವೆರಡು ವಿಚಾರ ಪ್ರಣಾಳಿಗಳಲ್ಲಿ ಒಳ್ಳೆಯದು ಯಾವುದೆನ್ನುವುದನ್ನು ನಾವೀಗ ಅಗತ್ಯ ಮನವರಿಕೆ ಮಾಡಿಕೊಳ್ಳಬೇಕು.

oo oo

ಮಾನವನ ಜೀವನ ನಿರ್ಮಾಣದಲ್ಲಿ ಶಿಕ್ಷಣ ಪದ್ಧತಿ ಮತ್ತು ಪಠ್ಯಪುಸ್ತಕಗಳು ಮಹತ್ವದ ಪರಿಣಾಮವನ್ನುಂಟುಮಾಡುತ್ತವೆ. ಶಿಕ್ಷಣದ ಉದ್ದೇಶವು ಮನುಷ್ಯನನ್ನು ಸುಸಂಸ್ಕೃತನನ್ನಾಗಿಸುವುದಾಗಿದೆ. ಬಾಲ್ಯಾವಸ್ಥೆಯಿಂದಲೇ ಮನುಷ್ಯನು ಸಂಸ್ಕಾರಗಳನ್ನು ತನ್ನ ನಿತ್ಯ ಜೀವನದಲ್ಲಿ ಅಡಗಿಸಿಕೊಂಡು, ಜೀವನ ವಿಕಾಸವನ್ನು ಸಾಧಿಸಿಕೊಳ್ಳುವನು. ನಮ್ಮ ಪುರಾತನ ಋಷಿಮುನಿಗಳು ಜನ್ಮದಿಂದ ಮೃತ್ಯು ಪರ್ಯಂತ ಷೋಡಶ ಸಂಸ್ಕಾರಗಳ ಮೂಲಕ ಅವನನ್ನು ಸಭ್ಯನನ್ನಾಗಿ ಸುಸಂಸ್ಕೃತನನ್ನಾಗಿ ಮಾಡಲು ಎಣಿಸಿದ್ದರು. ಈ ಸಂಸ್ಕಾರಗಳು ವಾಸ್ತವವಾಗಿ ಮನುಷ್ಯ ಜೀವನದ ಮೆಟ್ಟಲುಗಳು. ಪ್ರತ್ಯೇಕ ಪ್ರಾಣಿಯಲ್ಲಿ ಕೆಲವೊಂದು ಸಂಸ್ಕಾರಗಳು ಜನ್ಮತಃ ಲಭ್ಯವಾಗುತ್ತವೆ. ಹೆಚ್ಚಿನವುಗಳು ಶಿಕ್ಷಣ ಹಾಗೂ ವಾತಾವರಣದ ಮೂಲಕ ದೊರೆಯುತ್ತವೆ. ಇನ್ನು ವಿಕಸಿತಗೊಳ್ಳದ ಸುಪ್ತ ಚೇತನವು ಯೋಗ್ಯ ಶಿಕ್ಷಣ ಹಾಗೂ ವಾತಾವರಣವನ್ನನುಲಕ್ಷಿಸಿ, ಜಾಗೃತಗೊಳ್ಳುತ್ತದೆ. ಬಾಲ್ಯಾವಸ್ಥೆಯು ಉತ್ತಮ ಗುಣ ಶೀಲಗಳನ್ನೂ ಸಂಸ್ಕಾರಗಳನ್ನೂ ಬಿತ್ತಿ ಬೆಳೆಯಿಸಲು ಪ್ರಶಸ್ತವಾದ ಕಾಲವೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಶಾಲಾ ಶಿಕ್ಷಣವನ್ನು ಕೊಡುವ ನಮ್ಮ ಉದ್ದೇಶ ಅವರನ್ನು ಯೋಗ್ಯ ನಾಗರಿಕರನ್ನಾಗಿ, ಸಭ್ಯ ಹಾಗೂ ಸುಸಂಸ್ಕೃತ ಪ್ರಜೆಯನ್ನಾಗಿ ಮಾಡುವುದೆನ್ನುವುದರಲ್ಲಿ ಪ್ರತಿಮಾತಿಲ್ಲ.

oo oo

ಪಾಶ್ಚಾತ್ಯರ ಆಡಳಿತ ಕಾಲದಲ್ಲಿದ್ದ ಶಿಕ್ಷಣ ಪದ್ಧತಿ ಸ್ವಾತಂತ್ರ್ಯೋತ್ತರದ ಇಷ್ಟು ವರ್ಷಗಳಲ್ಲಿ ಇನ್ನೂ ಬದಲಾಗಿಲ್ಲ. ಇದಕ್ಕೆ ಅನೇಕ ಕಾರಣಗಳು ಇರಬಹುದು. ಆದರೆ ಸ್ವತಂತ್ರ ರಾಷ್ಟ್ರದ ಪ್ರಜೆಗಳ ಕರ್ತವ್ಯ ಭಾರವನ್ನು ನೋಡಿದರೆ, ನಮ್ಮ ಶಿಕ್ಷಣ ಪದ್ಧತಿಯಲ್ಲಿ ಶೀಘ್ರಾತಿಶೀಘ್ರ ಮೂಲಭೂತ ಸುಧಾರಣೆಗಳು ನಡೆಯುವುದವಶ್ಯವೆಂದು ವಿದಿತಗೊಳ್ಳುತ್ತದೆ. ಇಂದಿನ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಚಾರಿತ್ರ್ಯ ನಿರ್ಮಾಣಕ್ಕೆ ಪ್ರಾಧಾನ್ಯ ಕೊಡಲ್ಪಡದೆ, ಪುಸ್ತಕ ವ್ಯಾಸಂಗಕ್ಕೆಯೇ ಎಲ್ಲ ಮಹತ್ವ ಸಲ್ಲುತ್ತದೆ. ಪರೀಕ್ಷೆ ಪಾಸಾಗುವುದೊಂದೇ ವಿದ್ಯಾರ್ಥಿಯ ಧ್ಯೇಯವಾಗಿರುತ್ತದಲ್ಲದೆ—ಗುಣಶೀಲ ಸಂಪನ್ನ ವ್ಯಕ್ತಿಯಾಗುವ ಸಂಕಲ್ಪ ಅವರಿಗಿಲ್ಲ. ಪರಿಣಾಮವಾಗಿ ವಿದ್ಯಾರ್ಥಿಗಳು ಅನುಶಾಸನ ಹೀನರಾಗಿ ಉಚ್ಛೃಂಖಲ ಪ್ರವೃತ್ತಿಯನ್ನು ತೋರಿಸುತ್ತಿರುವರು. ಮಾತಾಪಿತರ ಮತ್ತು ಗುರುಜನರ ಆದರವಿಲ್ಲದೆ ಅಹಂಕಾರದಿಂದ ನಡೆದುಕೊಳ್ಳುವರು. ದೊಡ್ಡವರು ಮೂರ್ಖರೆಂದೂ ರೂಢಿಯ ಗುಲಾಮರೆಂದೂ ಅಂಧ ಶ್ರದ್ಧೆಯವರೆಂದೂ ವಿದ್ಯಾರ್ಥಿಗಳು ಜರೆಯುವರು. ವಿಲಾಸ, ದುರ್ವ್ಯಸನ, ಸ್ವಚ್ಛಂದತೆ, ಮತ್ತು ಚಾರಿತ್ರ್ಯ ಪತನಗಳು ಇಂದಿನ ವಿದ್ಯಾರ್ಥಿಗಳಲ್ಲಿ ಕಾಣಸಿಗದಿರುವುದೇ ಅಪೂರ್ವ. ಧರ್ಮ ಕೇವಲ ಟೊಳ್ಳೆಂದೂ, ಮರ್ಯಾದೆಗಳು ಅಂಧ ಪರಂಪರೆಯೆಂದೂ ಘೋಷಿಸಿ, ಅವುಗಳ ಅಸ್ತಿತ್ವವನ್ನು ನಿರ್ಮೂಲಿಸಲು ಟೊಂಕ ಕಟ್ಟಿದವರಂತೆ ವಿದ್ಯಾರ್ಥಿಗಳಿರುವರು. ಶ್ರಮ ಜೀವನದ ಬೆಲೆಯು ತಗ್ಗಿ ಸುಖಲೋಲುಪತೆ ಹೆಚ್ಚಿದೆ. ಸರಳ ಜೀವನದ ಸ್ಥಾನದಲ್ಲಿ ಬಡಿವ ಮೆಚ್ಚಮಾಡುವ ಚಟ ಅಂಟಿಕೊಂಡಿದೆ.

oo oo

ಈ ಮಾತುಗಳನ್ನು ವಿದ್ಯಾರ್ಥಿವೃಂದದ ಮೇಲಿನ ದ್ವೇಷದಿಂದ ಬರೆಯದೆ, ಅವರ ಮನಃಸ್ಥಿತಿಯನ್ನು ಕಂಡು ಕನಿಕರಿಸಿ ಇಂಥ ಉದ್ಗಾರವನ್ನೆತ್ತಿದ್ದಾಗಿದೆ. ವಿದ್ಯಾರ್ಥಿಗಳಲ್ಲಿ ಶಿಕ್ಷಣ ಮತ್ತು ವ್ಯಾಸಂಗಗಳ ಕಡೆಗೆ ಶ್ರದ್ಧೆ ಮತ್ತು ಗುರುಗಳಲ್ಲಿ ಭಕ್ತಿ ವಿಶ್ವಾಸಗಳು ಎಷ್ಟರ ಮಟ್ಟಿಗೆ ತಗ್ಗಿವೆ ಎಂಬುದಕ್ಕೆ ಈ ವರ್ಷ ಮದ್ರಾಸು ವಿಶ್ವವಿದ್ಯಾಲಯದ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶವನ್ನು ನೋಡಿದರೆ ತಿಳಿಯುತ್ತದೆ. ಪ್ರತಿ ಶತಮಾನವತ್ತೊಂದರಷ್ಟು ವಿದ್ಯಾರ್ಥಿಗಳು ಮಾತ್ರ ತೇರ್ಗಡೆ ಹೊಂದಿದರು, ಎಂದ ಮೇಲೆ ನಿರುಪಯೋಗಿ ವಿದ್ಯಾರ್ಥಿಗಳ ಪ್ರಮಾಣವೇ ಹೆಚ್ಚಾಯಿತೆಂಬುದು ಸ್ವಯಂವ್ಯಕ್ತ. ಈ ನಿರುಪಯೋಗಿ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ನಾವು ಭಾರತವನ್ನು ಸಂಪನ್ನ ರಾಷ್ಟ್ರವಾಗಿ ಹೇಗೆ ಪುನಾರಚಿಸಬಲ್ಲೆವು? ಇದಕ್ಕಿರುವ ಒಂದೇ ಪರಿಹಾರವು ಧಾರ್ಮಿಕ ಹಾಗೂ ನೈತಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಬಾಲ್ಯಾವಸ್ಥೆಯಿಂದಲೂ ಕೊಡುತ್ತಿರಬೇಕು. ಜಾತಿಮತಭೇದವನ್ನು ಬದಿಗೊತ್ತಿ, ಮನುಷ್ಯನನ್ನು ಸುಸಂಸ್ಕೃತನಾಗಿಸಬಲ್ಲ ರೀತಿ ಧಾರ್ಮಿಕ ಹಾಗೂ ನೈತಿಕ ಶಿಕ್ಷಣವನ್ನು ಕೊಡಲು ಸಾಧ್ಯವುಂಟು. ವಿದ್ಯಾರ್ಥಿಗಳಲ್ಲಿ ಅಭ್ಯಾಸಶೀಲತೆಯನ್ನೂ, ಕೆಲಸ ಮಾಡುವ ಉತ್ಸಾಹವನ್ನೂ, ಸಕಲ ಜೀವನದ ಆದರ್ಶವನ್ನೂ ಸುಸಂಸ್ಕೃತ ವಿಚಾರವನ್ನೂ ನೆಲೆಗೊಳಿಸುವುದಕ್ಕೆ ಇದಕ್ಕಿಂತ ಬೇರೆ ಉತ್ತಮ ಉಪಾಯವಿರುವುದಿಲ್ಲ.

oo oo

ವರ್ತಮಾನ ಶಿಕ್ಷಣ ಪದ್ಧತಿಯು ಬಹಳ ದೀರ್ಘ ಕಾಲವನ್ನು ತಿನ್ನುತ್ತದೆ. ಹತ್ತು ಹದಿನೈದು ವರ್ಷಗಳ ವ್ಯಾಸಂಗಮಾಡಿದ ಬಳಿಕವೂ ಮನಸಿಗೆ ಮನುಷ್ಯ ಜೀವನಕ್ಕೆ ಯೋಗ್ಯವಾದ ಮಾರ್ಗ ದರ್ಶನ ದೊರೆತಿರುವುದಿಲ್ಲ. ಅತ್ಯಾವಶ್ಯಕವಾದ ವಿಷಯಗಳನ್ನು ಪಾಠ್ಯ ಕ್ರಮದಲ್ಲಿ ಸೇರಿಸಿಕೊಳ್ಳದೆ, ಅನಾವಶ್ಯಕವಾದ ವಿಷಯಗಳನ್ನೇ ಕಲಿಸುತ್ತಿರುವುದರಿಂದ ಶಿಕ್ಷಣವೇ ನಿರುಪಯೋಗಿ ಎನಿಸಿದೆ. ನಿರುಪಯುಕ್ತ ಶಿಕ್ಷಣದ ಪರಿಣಾಮವಾಗಿ ನಿರುದ್ಯೋಗಿಗಳ ಸಂಖ್ಯಾ ಪ್ರಮಾಣವು ದಿನದಿನಕ್ಕೂ ಅಧಿಕಗೊಳ್ಳುತ್ತಿದೆ. ಆದುದರಿಂದ ನಾವು ಈ ವಿಷಯಗಳಲ್ಲಿ ಬೇಗನೇ ಪರಿವರ್ತನೆಯನ್ನು ರೂಢಿಗೆ ತರಬೇಕು. ದೀರ್ಘಕಾಲಿನ ಶಿಕ್ಷಣ ಕ್ರಮದಿಂದ ಮನುಷ್ಯ ಜೀವನದ ಅಮೂಲ್ಯ ಸಮಯವು ವ್ಯರ್ಥ ಹೊಂದುತ್ತದೆ. ಪದವಿ ದೊರೆಯುವತನಕದ ೧೫ ವರ್ಷಗಳ ದೀರ್ಘ ವ್ಯಾಸಂಗದ ಅವಧಿಯಲ್ಲಿ ಹೆಚ್ಚು ಕಡಿಮೆ ಅರೆವಾಸಿ ರಜಾದಿನಗಳ ರೂಪದಲ್ಲಿ ಏನೊಂದು ಶಿಕ್ಷಣವಿಲ್ಲದೆ ಹೋಗುತ್ತದೆ. ಆದಿತ್ಯವಾರ, ಶನಿವಾರ ಒಪ್ಪೊತ್ತು, ಹಬ್ಬ ಹುಣ್ಣಿಮೆಗಳು ಒಂದೂವರೆ ಎರಡು ತಿಂಗಳು ಉದ್ದವಾದ ಬೇಸಗೆಯ ರಜೆಗಳು ವಿದ್ಯಾರ್ಥಿಗಳ ಅತ್ಯಮೂಲ್ಯ ಸಮಯವನ್ನು ಹಾಳುಮಾಡಲಿಕ್ಕಾಗಿಯೇ ಇವೆ. ರಜೆಯನ್ನು ವಿದ್ಯಾರ್ಥಿಗಳು ಅತ್ಯಂತ ಕೆಟ್ಟ ರೀತಿಯಲ್ಲಿ ಕಳೆಯುವುದನ್ನು ನಾವು ಕಾಣುತ್ತೇವೆ. ಆಲಸಿಗಳಾಗಿ ಅವರು ಬಿದ್ದುಕೊಳ್ಳಬಹುದು, ದುರ್ವ್ಯಸನಗಳಲ್ಲಿ ಪ್ರವೃತ್ತರಾಗಬಹುದು, ಏನಿಲ್ಲದಿದ್ದರೂ ತಂದೆ ತಾಯಿಗಳ ಮೇಲೊಂದು ಹೊರೆಯಾಗಿ ಅವರು ರಜಾದಿನ ಕಳೆಯುವರೆನ್ನುವುದು ನಿಶ್ಚಯ.

oo oo

ಬೀಡವಂಗಡಿಯವನು ವರ್ಷದ ಮುನ್ನೂರ ಅರುವತ್ತು ದಿನವೂ ಅಂಗಡಿ ತೆರೆದಿಡುವನು. ಸರಕಾರೀ ಮತ್ತು ಖಾಸಗಿ ಸಂಸ್ಥೆಗಳಿಗೆ ಕೂಡ ಆದಿತ್ಯವಾರವೊಂದೇ ರಜೆ ಇದೆ. ಇವನ್ನು ನೋಡಿದಲ್ಲಿ ನಮ್ಮ ಶಾಲಾ ಕಾಲೇಜುಗಳು ಐದು ತಾಸು ಕೆಲಸ ಮಾಡಿ ವರ್ಷದ ಆರು ತಿಂಗಳು ರಜೆಯ ನೆಪದಲ್ಲಿ ಮುಚ್ಚಿರುವುದು ತೀರಾ ಆಕ್ಷೇಪಣೀಯವೆನಿಸುತ್ತದೆ. ಶಿಕ್ಷಕರಿಗೆ ಇದು ವಿರಾಮವನ್ನೊದಗಿಸುವುದರಿಂದ, ಅವರು ಹೆಚ್ಚು ಹೆಚ್ಚು ರಜೆಯನ್ನು ಕೇಳಲು ಹಾತೊರೆಯುವರು. ಕೊರತನ್ನು ವಿದ್ಯಾರ್ಥಿಗಳಿಗಾಗುತ್ತಿರುವ ಹಾನಿಯನ್ನೂ ಅ[illegible]. ನಮ್ಮ ಶಿಕ್ಷಣ ಕ್ರಮದಲ್ಲಿರುವ ಇನ್ನೊಂದು ಮುಖ್ಯ ದೋಷ-ಪುಸ್ತಕ ವ್ಯಾಸಂಗಕ್ಕಿರುವ ಮಹತ್ವ. ಶ್ರಮ ಮೂಲವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು; ಮನುಷ್ಯನ ಜೀವನಕ್ಕೆ ಪೋಷಕವಾದ ಬಹುಮುಖ ವಿದ್ಯೆಗಳ ಪರಿಚಯ ಮಾಡಿಕೊಡುವ ಕೇಂದ್ರಗಳು ಶಾಲಾ ಕಾಲೇಜುಗಳಾಗಬೇಕು. ಪರಂಪರಾಗತವಾದ ವೃತ್ತಿ ಮತ್ತು ಉದ್ಯೋಗಗಳನ್ನು ಭಾವೀ ಜನಾಂಗವೆನಿಸಿದ ಹುಡುಗ-ಹುಡುಗಿಯರು ತಿರಸ್ಕಾರದಿಂದ ಕಂಡು ಮರೆತು ಬಿಡದಂತೆ ದಕ್ಷತೆಯನ್ನು ವಹಿಸಬೇಕು. ದೀರ್ಘ ಕಾಲೀನ ಶಿಕ್ಷಣವು ಅಲ್ಪಾವಧಿಗೆ ಇಳಿದಾಗ, ಕುಟುಂಬದ ಉದ್ಯೋಗ ಮತ್ತು ವೃತ್ತಿಗಳಲ್ಲಿ ಆದಾರ ಬೆಳೆದಂತೆ, ನಿರುದ್ಯೋಗವು ದೂರಗೊಂಡು, ಕುಟುಂಬಕ್ಕೆ [illegible] ವೃದ್ಧಿ [illegible] ಹೆಚ್ಚು ಸಹಾಯ ದೊರೆಯುತ್ತದೆ. ಔದ್ಯೋಗಿಕ ಮತ್ತು ಕೃಷಿ ಶಿಕ್ಷಣಕ್ಕೆ ನಾವಿಂದ ಪ್ರಾಧಾನ್ಯ ಕೊಡಬೇಕು. ನಮಗೆ ಅಮೇರಿಕಾ ಮತ್ತು ಇಂಗ್ಲೆಂಡ್‌ಗಳಲ್ಲಿ ಏನಾಗುತ್ತಿದೆ ಎಂಬುದು ತಿಳಿಯದಿದ್ದರೂ ಪರವಾ ಇಲ್ಲ; ನಮ್ಮ ಸುತ್ತು ಮುತ್ತಣ ಪರಿಸ್ಥಿತಿಯಲ್ಲಿ ಯೋಗ್ಯ ಜೀವನವನ್ನು

(೯ನೇ ಪುಟ ನೋಡಿರಿ)

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / Zandu Brahmi Hair Oil — ಮೆದುಳಿಗೆ ತಂಪು— ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1·

ಝಂಡೂ ಸರಸಪರಿಲ್ಲಾ / Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

Zandu Zuvi Drops / ಝಂಡೂ ಜ್ಯುವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ—ರೂ. 2-12-0

ಜಿಲ್ಲೆಯಲ್ಲಿರುವ ನಮ್ಮ ಸ್ಟಾಕಿಸ್ಟರು:

ಮಂಗಳೂರು: ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್. ಇನ್ಸ್ಟಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಶೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಥಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಾಂಚೇರಿ, ಕೊಚ್ಚಿ.

ಕೊರಿಯಾ ಸಂಧಾನದ ಆಶೆ ಮರಳಿ ಚಿಗುರಿತು

ರಾಬರ್ಟಸನ್ನರ ದೌತ್ಯಕ್ಕೆ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಸಾಮಾನ್ಯ ಯಶಃಪ್ರಾಪ್ತಿ

ಜಾಗತಿಕ ಕುತೂಹಲವನ್ನು ಕೆರಳಿಸಿರುವ ಒಂದೇ ಒಂದು ಸಂಗತಿ, ಈಚಿನ ದಿನಗಳಲ್ಲಿ ದಕ್ಷಿಣ ಕೊರಿಯಾದ ಅಧ್ಯಕ್ಷ ಡಾ| ಸಿಂಗ್ಮನ್ ರ್ಹೀಯವರು ತೋರಿಸುತ್ತಿರುವ ಛಲವೆನ್ನಬೇಕು. ಈ ಹಟಮಾರಿತನದ ಮುಂದೆ ಕಬ್ಬನ್ನು ಎರಡು ತುಂಡು ಮಾಡಿದ ಬಳಿಕ, ಅದನ್ನು ಮೊದಲಿನಂತೆ ಇಡಿಯಾಗಿಸಬೇಕೆಂದು ಬೀರಬಲನು ಮಗುವಿನಂತೆ ಛಲತೊಟ್ಟುದು ಹೆಚ್ಚೆನಿಸುವುದಿಲ್ಲ. ಡಾ| ಸಿಂಗ್ಮನ್ನರ್ಹೀಯವರ ಮನವೊಲಿಸಲು ಮಾಡುತ್ತಿರುವ ಉಪಾಯಗಳಿಗೆ ಮತ್ತು ಡಾ| ಸಿಂಗ್ಮನ್ನರ್ಹೀಯವರು ತಟಪಟನೆ ಹಾರಾಡುತ್ತಿರುವುದಕ್ಕೆ ಇದಕ್ಕೂ ಯೋಗ್ಯವಾದ ಉಪಮೆ ದೊರೆಯದು. ಸಿಂಗ್ಮನ್ನರ್ಹೀ ಹಟಮಾರಿತನಕ್ಕೆ ಅಮೇರಿಕಾ ಮಣಿಯದಿದ್ದ ಪಕ್ಷದಲ್ಲಿ– ಅದರ ಮುಖಭಂಗವಂತೂ ಆಗಿಯೇ ತೀರುವುದು. ಅಲ್ಲದೆ ರಾಷ್ಟ್ರಸಂಘ ಯಾವುದಕ್ಕಾಗಿ ಕೊರಿಯದಲ್ಲಿ ಹೋರಾಡಿತೋ ಆ ಉದ್ದೇಶವೇ ಅರ್ಥಶೂನ್ಯವಾಗುವುದು.

ರಾಬರ್ಟಸನ್ನರ ದೌತ್ಯ

ಆದುದರಿಂದಲೇ ಸಿಂಗ್ಮನ್ರ್ಹೀಯವರನ್ನು ಚತುರೋಪಾಯ, ಬೆದರಿಕೆ, ಹಾಗೂ ಸಂಧಾನಗಳ ಮೂಲಕ ಹಾದಿಗೆ ತರುವುದರಲ್ಲಿ ಸಕಲರ ಶ್ರೇಯಸ್ಸು ನಿಹಿತವಾಗಿದೆ ಎಂದು ಐಸೆನ ಹಾವರರು ತರ್ಕಿಸಿದರು. ವಿದೇಶ ಶಾಖೆಯ ದೂರ ಪ್ರಾಚ್ಯ ವ್ಯವಹಾರಗಳ ಉಪಕಾರ್ಯದರ್ಶಿ ರಾಬರ್ಟಸನ್ನರನ್ನು ಡಾ| ರ್ಹೀಯವರೊಡನೆ ಭೇಟಿಗಾಗಿ ಕಳುಹಿಸಿದರು. ರ್ಹೀಯವರನ್ನು ಹೇಗಾದರೂ ಮಾಡಿ ಕದನ ವಿರಾಮಕ್ಕೆ ಒಡಂಬಡಿಸುವುದೇ ರಾಬರ್ಟಸನ್ನರ ದೌತ್ಯದ ಉದ್ದೇಶ. ಕೊರಿಯಾದಲ್ಲಿ ಯುದ್ಧ ನಿಲ್ಲಿಸುವುದಕ್ಕೋಸ್ಕರ ಈಗ ನಡೆಸಿದ ಪ್ರಯತ್ನಗಳು ಫಲಕೊಡದೆ, ಯುದ್ಧ ಮುಂದುವರಿಯುವಂತಾದರೆ, ಅದು ಅಮೇರಿಕದ ಮೇಲೆ ದೊಡ್ಡ ಭಾರವಾಗುವುದು ಮಾತ್ರವಲ್ಲ, ಐಸೆನಹಾವರ ನೀತಿ ಅಮೇರಿಕಾದ ನಾಗರಿಕರ ಮುನಿಸಿಗೂ ಅವಕಾಶ ಮಾಡಿಕೊಡುವ ಭಯವಿದೆ. ಆದುದರಿಂದ ಸ್ವಹಿತಸಾಧನೆಯನ್ನು ಕೈಗೂಡಿಸುವುದಕ್ಕಾಗಿಯಾದರೂ ಕೊರಿಯದಲ್ಲಿ ಯುದ್ಧ ನಿಲ್ಲಿಸುವುದಕ್ಕಿರುವ ಈಗಿನ ಪರಿಸ್ಥಿತಿಯ ಉತ್ತಮ ಉಪಯೋಗ ಮಾಡಿಕೊಳ್ಳಬೇಕೆಂದು ಐಸೆನ ಹಾವರರಿಗೆ ಅನಿಸಿದೆ. ರಾಬರ್ಟಸನ್ನರ ದೌತ್ಯ ಕೂಡ ನಿಷ್ಫಲಗೊಂಡರೆ, ಮುಂದಿನ ಕ್ರಮವನ್ನು ನಿಶ್ಚಯಿಸುವುದು ಅಮೇರಿಕಾದಂತೆ. ಸಂಯುಕ್ತ ರಾಷ್ಟ್ರಸಂಘಕ್ಕೂ ಪ್ರತಿಬೇಸರ ತರಿಸುವ ವಿಷಯ.

ನೆಹರೂರವರ ಸಲಹೆ

ಈ ತಲೆ ಬೇಸರವುಂಟಾಗದ ರೀತಿಯಲ್ಲಿ ಎಲ್ಲ ಪ್ರಶ್ನೆಯೂ ಇತ್ಯರ್ಥ ಹೊಂದೀತು, ರಾಬರ್ಟಸನ್ನರು ತಮಗೊಪ್ಪಿಸಿದ ಕಾರ್ಯದಲ್ಲಿ ಯಶಸ್ಸನ್ನು ಪಡೆದಾರು ಎಂದು ಲೋಕವೇ ಆಶಿಸುತ್ತಿದ್ದಿತು. ಭಾರತದ ಪ್ರಧಾನಿ ನೆಹರೂರವರು ಈ ನಡುವೆ ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯನ್ನು ಕರೆಸುವ ವಿಚಾರ ಮಾಡಬೇಕೆಂಬುದಾಗಿ ಸೂಚನೆ ಮಾಡಿದರು. ಡಾ. ರ್ಹೀಯವರ ವರ್ತನೆಯಿಂದುಂಟಾದ ಕೊರಿಯಾದ ಪರಿಸ್ಥಿತಿಯನ್ನು ವಿವೇಚಿಸುವುದಕ್ಕೆ ರಾಷ್ಟ್ರ ಸಂಘ ಸಭೆ ಸೇರುವುದವಶ್ಯವೆಂದು ನೆಹರೂರ ಅಭಿಪ್ರಾಯ. ಆದರೆ ನೆಹರೂರವರು ಈ ಸಭೆ ಯಾವಾಗ ಸೇರಬೇಕು ಎಂಬುದನ್ನು ನಿರ್ದಿಷ್ಟವಾಗಿ ಸೂಚಿಸಲಿಲ್ಲ. ರಾಬರ್ಟಸನ್ನರ ದೌತ್ಯ ಇನ್ನೂ ನಡೆದಿರುವಾಗ ಈ ರೀತಿ ರಾಷ್ಟ್ರ ಸಂಘ ಸಭೆ ಸೇರುವುದರಿಂದ ಸಂಧಾನದ ದಾರಿಯಲ್ಲಿ ಏನಾದರೂ ಪ್ರಗತಿಯಾಗುವುದಿದ್ದರೆ ಅದಕ್ಕೆ ತಡೆ ಬಂದೀತೆಂದು ಅನೇಕ ಪಾಶ್ಚಾತ್ಯ ರಾಷ್ಟ್ರಗಳು ಅಭಿಪ್ರಾಯಪಟ್ಟವು. ನೆಹರೂ ಈಗಲೇ ಇಂಥ ಸಭೆಯನ್ನು ಸೇರಿಸುವ ಅಭಿಪ್ರಾಯವುಳ್ಳವರೆಂದುಕೊಂಡ ರಾಷ್ಟ್ರಗಳೆಲ್ಲ—ಬ್ರಿಟನು, ಅಮೇರಿಕಾ ಇತ್ಯಾದಿ—ಈ ಸೂಚನೆಯಿಂದ ಲಾಭ ದೊರೆಯದೆಂದು ಹೇಳಿದುವು.

ರಾಯಭಾರದ ಪರಿಣಾಮ

ಹೀಗೆ ಬಂದ ಪ್ರತಿಕ್ರಿಯೆಯನ್ನು ರಾಷ್ಟ್ರಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ ಲೆಸ್ಟರ ಪಿಯರ್ಸನ್ನ ಹಾಗೂ ಮುಖ್ಯ ಕಾರ್ಯದರ್ಶಿ ಡಾ. ಹೆಮ್ಮರಶೆಲ್ಡರು ತಮ್ಮಲ್ಲಿಯೇ ವಿಚಾರಿಸಿಕೊಂಡು—ತತ್ಕಾಲ ಸಭೆಯನ್ನು ಸೇರಿಸಬಾರದೆಂದೂ ಅಮೇರಿಕದ ರಾಯಭಾರದ ಪರಿಣಾಮವನ್ನು ನಿರೀಕ್ಷಿಸುತ್ತಾ ಕುಳಿತಿರಬೇಕೆಂದೂ ನಿಶ್ಚಯಿಸಿದರು. ಅಮೇರಿಕಾದ ಕಡೆಯಿಂದ ಡಾ| ರ್ಹೀಯವರನ್ನು ರಾಬರ್ಟಸನ್ನರು ಗುರುವಾರದಿಂದ ಸೋಮವಾರದ ವರೆಗೆ ಒಟ್ಟು ನಾಲ್ಕು ಬಾರಿ ಭೇಟಿಯಾದರು. ಈ ಭೇಟಿಯ ಕಾಲಕ್ಕೆ ಕೊರಿಯಾದಲ್ಲಿ ಸಂಯುಕ್ತ ರಾಷ್ಟ್ರಸಂಘದ ವರಿಷ್ಠ ಸೇನಾಧಿಪತಿ ಜನರಲ್ ಮಾರ್ಕ ಕ್ಲಾರ್ಕರು ಮತ್ತು ದಕ್ಷಿಣ ಕೊರಿಯದಲ್ಲಿ ಅಮೇರಿಕದ ರಾಯಭಾರಿ ಉಪಸ್ಥಿತರಿದ್ದರು. ನಾಲ್ಕು ಸಲ ಭೇಟಿಯಾದ ಪರಿಣಾಮವಾಗಿ, ಡಾ. ರ್ಹೀಯವರು ಇದೀಗ ಅಮೇರಿಕದೊಡನೆ ಕೆಲವು ಶರ್ತಗಳೊಡನೆ ಸಹಕರಿಸಲು ಸಿದ್ಧರಿರುವರೆಂಬ ವಾರ್ತೆ ಬಂದಿದೆ. ರಾಬರ್ಟಸನ್ನರು ತಮ್ಮ ಮೂರನೇ ಭೇಟಿಯ ಕಾಲಕ್ಕೆ ಅತ್ಯಂತ ಮಹತ್ವದ ಸೂಚನೆಗಳನ್ನು ಮಾಡಿದ ಪ್ರಯುಕ್ತ, ಡಾ. ರ್ಹೀ ತಕ್ಷಣ ತಮ್ಮ ಮಂತ್ರಿಮಂಡಳದ ಸಭೆ ಸೇರಿಸಿದ್ದರು. ಈಗ ಅಮೇರಿಕಾ ಮತ್ತು ರ್ಹೀ ಸರಕಾರಗಳು ಐದು ಅಂಶಗಳ ಒಂದು ಯೋಜನೆಯನ್ನು ಒಪ್ಪಿದ್ದು–ಅವುಗಳಂತೆ ಡಾ. ರ್ಹೀಯವರು ಇನ್ನು ಯಾವ ಯುದ್ಧ ಕೈದಿಗಳನ್ನೂ ಬಿಡುಗಡೆ ಮಾಡುವುದಿಲ್ಲ. ತತ್ಕಾಲ ಸಂರಕ್ಷಣಾ ಒಪ್ಪಂದವೊಂದಕ್ಕೆ ಅಮೇರಿಕಾ ಒಪ್ಪುತ್ತದೆ; ಕೊರಿಯಾದಲ್ಲಿ ಯುದ್ಧ ನಿಂತಬಳಿಕ ಕಾಯಂ ಒಪ್ಪಂದಕ್ಕೆ ಅಮೇರಿಕಾ ಸಿದ್ಧವಿದೆ.

ಕಮ್ಯೂನಿಸ್ಟ ಪ್ರತಿಕ್ರಿಯೆ

ಇದು ಎಲ್ಲಿಗೆ ಬಂದು ಮುಟ್ಟಿತೆಂದರೆ– ರ್ಹೀಯವರ ಇಚ್ಛೆ ಪೂರ್ತಿಯಾಯಿತು. ರ್ಹೀಯವರು ಐಸೆನ ಹೋವರರ ಭರವಸೆಯ ಮಾತಿನ ಬದಲು ಕಾರ್ಯತಃ ಒಪ್ಪಂದಕ್ಕೆ ಬರುವುದಕ್ಕೆ ಒತ್ತಾಯಿಸಿದ್ದರು ಆದರೆ ಕಮ್ಯೂನಿಸ್ಟರು ಇದಕ್ಕೆ ತೀವ್ರ ಆಕ್ಷೇಪವನ್ನು ಎತ್ತುವ ಭಯದಿಂದ, ಐಸೆನ ಹಾವರರು ಈ ಪ್ರಶ್ನೆಯನ್ನು ಮೊದಲು ಯುದ್ಧ ನಿಲ್ಲಲಿ, ಆ ಬಳಿಕ ನೋಡೋಣ ಎಂದು ಮುಂದೂಡುತ್ತ ಬಂದರು. ಈಗ ರ್ಹೀಯವರಿಗೆ ದೊರೆತ ವಿಜಯವನ್ನು ನೋಡಿದರೆ, ಯುದ್ಧ ನಿಲ್ಲಿಸುವ ಮಾರ್ಗದಲ್ಲಿ ಇನ್ನೊಂದು ಅಡ್ಡಿಯನ್ನು ಉಪಸ್ಥಿತಗೊಳಿಸಿದಂತಾಯಿತೋ ಎನ್ನುವ ಸಂದೇಹ ಬರುತ್ತದೆ. ಮೊದಲೇ ಹೇಳಿದಂತೆ, ಕಮ್ಯೂನಿಸ್ಟರು ಅಮೇರಿಕಾ ಈಗ ಒಪ್ಪಿಕೊಂಡಂತೆ ಮಾಡಿಕೊಳ್ಳುವ ಸಂರಕ್ಷಣಾ ಒಪ್ಪಂದವನ್ನು ನಿಶ್ಚಯಕ್ಕೂ ಆಕ್ಷೇಪಿಸಿ, ಯುದ್ಧ ನಿಲ್ಲಿಸುವುದಕ್ಕೆ ಇದು ಅನುಕೂಲವಾದ ಪರಿಸ್ಥಿತಿಯಲ್ಲವೆಂದು ನಿರ್ಣಯಿಸಬಹುದು. ರ್ಹೀಯವರ ಆತಂಕ ಸಾರಾದುದಕ್ಕೆ ರಾಷ್ಟ್ರಸಂಘಕ್ಕೆ ಸಂತೋಷವಾದರೂ, ಕಮ್ಯೂನಿಸ್ಟರೊಡ್ಡಬಹುದಾದ ಆಕ್ಷೇಪ ಶಾಂತಿಯನ್ನು ನೆಲೆಗೊಳಿಸುವ ಉದ್ದೇಶವನ್ನು ವ್ಯರ್ಥಗೊಳಿಸುವುದು.

ತತ್ವಕ್ಕೋಸ್ಕರ ಯುದ್ಧ.

ನಿಜ ಹೇಳಬೇಕೆಂದರೆ, ಕೊರಿಯಾದಲ್ಲಿ ಇಷ್ಟು ದೀರ್ಘಕಾಲ ಯುದ್ಧ ನಡೆದುದೇ ದೊಡ್ಡ ತಪ್ಪು–೩೮ನೇ ಅಕ್ಷಾಂಶದ ಉತ್ತರಕ್ಕೆ ಆಕ್ರಮಣಕಾರಿ ಕಮ್ಯೂನಿಸ್ಟರನ್ನು ಅಟ್ಟಿದ ಬಳಿಕ, ರಾಷ್ಟ್ರಸಂಘ ಯುದ್ಧವನ್ನು ನಿಲ್ಲಿಸಬೇಕಿದ್ದಿತು. ಭಾರತದ ಪ್ರಧಾನಿ ನೆಹರೂ ಆಗ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದರು. ರಾಷ್ಟ್ರಸಂಘದ ಕರ್ತವ್ಯ ಆಗ ಸಂಪೂರ್ಣ ನಿರ್ವಹಿಸಿದಂತಾಗುತ್ತಿತ್ತು. ಆದರೆ ಮೇಕಾರ್ಥರರ ಹುರುಪಿನ ಫಲವೆಂಬಂತೆ ಯುದ್ಧ ವ್ಯಾಪಕ ಕ್ಷೇತ್ರವನ್ನೊಳಗೊಂಡಿತು. ಈಗ ಸಂಧಾನವಾಗದಿದ್ದರೆ ಉಳಿಗಾಲವಿಲ್ಲ. ಸಂಧಾನ ಮಾಡೋಣವೆಂದರೆ ಮಾರ್ಗವಿಲ್ಲ ಎಂಬಂತಾಗಿದೆ. ಡಾ. ಹೆಮ್ಮರ ಶೆಲ್ಡರು ಯುದ್ಧದಲ್ಲಿ ಅಂತಿಮ ವಿಜಯವನ್ನು ಒಂದು ಪಕ್ಷವು ಸಾಧಿಸಿ, ಕರನಸ್ನಿಸುವ ಪ್ರಾಚೀನ ಪರಂಪರೆಯ ಸಾಲಿನಲ್ಲಿ ತತ್ವಕ್ಕೋಸ್ಕರ ಯುದ್ಧ ನಡೆಸಿ ಉಭಯತರಿಗೂ ಗೌರವತರುವ ಒಡಂಬಡಿಕೆಗೆ ಬರುವುದನ್ನು ಈಗ ಕಲಿಯಬೇಕೆಂದು ಹೇಳಿರುವರು. ಈ ಹೊಸ ನೀತಿ ಕೊರಿಯಾಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ. ಕೊರಿಯಾದಲ್ಲಿ ಕೆಲವು ದಿನಗಳ ಹಿಂದೆ ಡಾ. ರ್ಹೀಯವರೂ ಅವರ ಅನುಯಾಯಿಗಳೂ ಚರ್ಚಿಲ ನೆಹರೂರಂಥ ಜಗತ್ಪ್ರಖ್ಯಾತ ರಾಜಕಾರಣಿಗಳಿಗೂ, ಭಾರತದಂಥ ಉದಾತ್ತ ಧೋರಣೆಯ ರಾಷ್ಟ್ರಕ್ಕೂ ಸಂಬಂಧಿಸಿ ಹೇಳಿದ ಮಾತುಗಳು ಅತ್ಯಂತ ಹೇಯವಾಗಿವೆ; ಸಭ್ಯತೆ ಮಟ್ಟಿಗೆ ಅವು ಅವಾಚ್ಯ ಶಬ್ದಗಳೇ ನಿಜ. ಆದರೂ ಭಾರತ ಪಂಚ

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome your association with the POPULAR.

The Popular Insurance Co. Ltd.

"Popular Buildings", MANGALORE—1.

ವಿಜಯೀ ಪರ್ವತಾರೋಹಿಗಳಿಗೆ ಗೌರವಕೂಟ

ಬ್ರಿಟಿಷ್ ತಂಡದ ಅಭೂತಪೂರ್ವ ಯಶಸ್ಸನ್ನು ಕೊಂಡಾಡಿ ಸತ್ಕರಿಸುವ ಕಾರ್ಯಕ್ರಮ

ತಟಸ್ಥ ರಾಷ್ಟ್ರಗಳಲ್ಲಿ ಸೇರಿಕೊಳ್ಳುವ ನಿರ್ಣಯ ಬರಲಿಲ್ಲ– ಎಲ್ಲವೂ ಶಾಂತಿ ಪೂರ್ವಕ, ಸುಸೂತ್ರವಾಗಿ ಸಾಗಿಸಲ್ಪಡಬಹುದೆಂಬ ಭರವಸೆ ದೊರೆತಾಗ ಭಾರತದ ಸೈನ್ಯ ಕೊರಿಯಾಕ್ಕೆ ಹೋಗುವುದೆಂದು ನೆಹರೂ ಹೇಳಿರುವರು.

ಮುಹಮ್ಮದಾಲಿಯವರ ಸೌಜನ್ಯ

ಭಾರತದ ಪ್ರಧಾನಿ ನೆಹರೂರವರು ಇಂಗ್ಲೆಂಡಕ್ಕೆ ಎಲಿಜಾಬೆಥ ರಾಣಿಯ ಕಿರೀಟಧಾರಣಾ ಮಹೋತ್ಸವಕ್ಕೆ ಹೋದವರು ಈಗತಾನೆ ಭಾರತಕ್ಕೆ ಮರಳಿ ಬಂದಿರುವರು. ಲಂಡನ್ನಿನಲ್ಲಿ ಅವರು ರಾಷ್ಟ್ರಕೂಟದ ಪ್ರಧಾನಿಗಳ ಪರಿಷತ್ತಿನಲ್ಲಿ ಭಾಗವಹಿಸಿದರು. ಮಾತ್ರವಲ್ಲ ಪಾಕಿಸ್ತಾನ ಮತ್ತು ಸಿಂಹಳಗಳ ಪ್ರಧಾನಿಗಳ ಕೂಡೆ ಸಮಾಲೋಚನೆ ಯನ್ನೂ ಮಾಡಿದರು. ಭಾರತ-ಪಾಕ ಸಂಬಂಧವು ಮಹಮ್ಮದಾಲಿಯವರು ಪಾಕಿಸ್ತಾನದ ಪ್ರಧಾನಿಗಳಾದ ಕ್ಷಣದಿಂದ ದಿನದಿನಕ್ಕೂ ಸುಧಾರಿಸುತ್ತಿರುವದು ಸಂತೋಷಪ್ರದ. ನಿರ್ದಿಷ್ಟ ವಿಷಯಗಳಾವುದನ್ನೂ ವಿಶೇಷ ಗಮನಕೊಟ್ಟು ಚರ್ಚೆ ನಡೆಯದಿದ್ದರೂ ಪ್ರಾಸ್ತಾವಿಕ ಮಾತುಕತೆಗಳ ಮೇಲಿಂದ ಭಾರತ-ಪಾಕಿಸ್ತಾನಗಳು ಭಾರತ-ಬರ್ಮಾ ಸಂಬಂಧದಂತೆ ಸೌಹಾರ್ದಯುತವೂ ಸ್ನೇಹಪರವೂ ಆಗುವ ದಿನ ಹೆಚ್ಚು ದೂರವಿಲ್ಲೆಂದು ವ್ಯಕ್ತಗೊಳ್ಳುತ್ತದೆ. ಕಾಶ್ಮೀರದಂಥ ಜಟಿಲ ಪ್ರಶ್ನೆಯನ್ನು ಸಹ ಪರಸ್ಪರ ಮಾತುಕತೆಗಳ ಮೂಲಕ ಇತ್ಯರ್ಥಗೊಳಿಸುವುದಕ್ಕೆ ಪ್ರಧಾನಿ ದ್ವಯರು ಒಪ್ಪುತೆ ತೋರಿಸಿರುವರು. ವಿದೇಶೀಯರ ಹಸ್ತಾಕ್ಷೇಪದಿಂದಲೇ ಈ ಪ್ರಶ್ನೆ ಇಷ್ಟು ದೀರ್ಘಕಾಲ ಬಗೆಹರಿಯದೆ ಉಳಿಯಿತೆಂಬುದೇನು ನಿರಾಧಾರ ಆರೋಪವಲ್ಲ. ಪಾಕಿಸ್ತಾನದ ಪ್ರಧಾನಿಗಳು ಕಾಶ್ಮೀರವನ್ನು ಇಬ್ಭಾಗವಾಗಿ ವಿಭಜಿಸುವ ಪ್ರಸಂಗವನ್ನೆ ಎತ್ತಲಿಲ್ಲ ಎನ್ನುವುದೂ ಸಮಾಧಾನಕರ. ಅವರಿನ್ನುವಂತೆ ಕಾಶ್ಮೀರ ಪ್ರಶ್ನೆಯು ಇನ್ನು ಒಂದು ವರ್ಷದವಧಿಯಲ್ಲಿ ನಿರ್ಣಯಿಸಲ್ಪಡುವುದು. ನೆಹರೂರವರು ಮುಂಬಯಿಯಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ಆರುತಿಂಗಳೊಳಗೇನೆ ಈ ಪ್ರಶ್ನೆ ಇತ್ಯರ್ಥಗೊಂಡರೂ ಆದೀತೆಂದು ಆಶಿಸಿರುವುದು ಯಥಾ ಯೋಗ್ಯ. ಆದರೆ ಈ ಪ್ರಶ್ನೆಯನ್ನು ಬಿಡಿಸುವಾಗ ಕಾಶ್ಮೀರಿಗಳ ಇಚ್ಛೆಗೆ ಕೊಡಬೇಕಾದ ಮಹತ್ವವನ್ನು ಉಪೇಕ್ಷಿಸುವಂತಿಲ್ಲ. ನೆಹರೂರವರು ಮೊದಲಿಂದಲೂ ಹೇಳುತ್ತಾ ಬಂದಂತೆ, ಕಾಶ್ಮೀರಿ ಜನತೆಯು ಬಹುಮತದ ಅಭಿಮತದಂತೆಯೇ ಆ ಪ್ರದೇಶದ ಭವಿಷ್ಯ ನಿರ್ಣಯಿಸಲ್ಪಡುವುದು ನ್ಯಾಯ. ಶೇಖ ಅಬ್ದುಲ್ಲಾ ಈ ಮಾತನ್ನು ಈಗಲೂ ಜೋರಾಗಿ ಪ್ರತಿಪಾದಿಸುವರು.

ನಗೀಬರೊಡನೆ ಮಾತುಕತೆ

ಮುಂಬಯಿಗೆ ಬಂದಿಳಿಯುವುದಕ್ಕೆ ಮುಂಚೆ ನೆಹರೂರವರು ಈಜಿಪ್ತದ ರಾಜಧಾನಿ ಕೈರೋದಲ್ಲಿ ಮೂರು ದಿನಗಳ ಕಾಲ ಜನರಲ್ ನಗೀಬರ ಅತಿಥಿಯಾಗಿ ಉಳಿದುಕೊಂಡರು. ಈಜಿಪ್ತವು ಕಳೆದ ವರ್ಷ ಜನರಲ್ ನಗೀಬರ ಸರ್ವಾಧಿಕಾರತ್ವದಲ್ಲಿ ಕ್ರಾಂತಿಕಾರಿ ಹೆಜ್ಜೆಯನ್ನು ತುಳಿಯಲಾರಂಭಿಸಿತಷ್ಟೆ! ಈಗ್ಗೆ ಕೆಲವು ದಿನಗಳಿಗೆ ಮುಂಚೆ ಜನರಲ್ ನಗೀಬರು ಫರೂಕ ಅರಸರ ಸಿಂಹಾಸನ ತ್ಯಾಗದ ಬಳಿಕ ಹೆಸರಿಗೆ ಮಾತ್ರ ಉಳಿದಿದ್ದ ಅರಸೊತ್ತಿಗೆಯನ್ನೂ ನಷ್ಟಗೊಳಿಸಿ, ಈಜಿಪ್ತವನ್ನು ಭಾರತದಂತೆ ಪ್ರಜಾರಾಜ್ಯವಾಗಿ ಘೋಷಿಸಿದರು; ಮತ್ತು ತಾವೇ ಅಧ್ಯಕ್ಷಪಟ್ಟವನ್ನು ಏರಿರುವರು. ಹೊಸ ಮುಖ್ಯಮಂತ್ರಿ, ಸೇನಾಧಿಕಾರಿ ಇತ್ಯಾದಿ ನೇಮಕಗಳೂ ನಡೆದುವು. ಇನ್ನು ಮೂರು ವರ್ಷಗಳಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಜನರಲ್ ನಗೀಬರು ಅತ್ಯಂತ ಬುದ್ಧಿವಂತಿಕೆಯಿಂದ ಬಿಡಿಸಬೇಕಾದ ಪ್ರಶ್ನೆ ಸುಯೇಜ ಕಾಲುವೆಯ ತಂಟೆಯಾಗಿರುತ್ತದೆ. ಬ್ರಿಟನ್ನಿಗೆ ತೆರಳುವ ಮುನ್ನ ಪ್ರಧಾನಿ ನೆಹರುಗಳು ನಗೀಬರನ್ನು ಕೈರೋ ನಿಲ್ದಾಣದಲ್ಲಿ ಭೇಟಿಯಾಗಿ ಅವರ ನಿಲುವೆಯನ್ನು ಅವಗತ ಮಾಡಿಕೊಂಡಿದ್ದರು. ರಾಷ್ಟ್ರಕೂಟದ ಪ್ರಧಾನಿಗಳ ಪರಿಷತ್ತಿನಲ್ಲಿ ಕೂಡ ಈ ವಿಷಯವನ್ನು ನೆಹರೂ ಸಮಾಲೋಚಿಸಿದರು. ಈಗ ಅದರ ಪರಿಣಾಮವನ್ನು ನಗೀಬರಿಗೆ ನೆಹರೂ ತಿಳಿಯಪಡಿಸಿರಬೇಕು. ಹಾಗೆಂದು ಕೊರಿಯಾ ಸಮಸ್ಯೆಯನ್ನು ಬಿಡಿಸುವುದಕ್ಕೆ ಭಾರತ ಮಾಡಿದಂತೆ ಸುಯೇಜ ಕಾಲುವೆ ತಂಟೆಯನ್ನೂ ಪರಿಹರಿಸಲು ನೆಹರೂ ನಿರ್ದಿಷ್ಟ ಸಲಹೆಗಳನ್ನು ಮುನ್ನಿಡಲಿಲ್ಲವೆಂದು ನಂಬಲಾಗಿದೆ. ಇನ್ನೂ ಹೆಚ್ಚು ಉತ್ಸಾಹ ಮತ್ತು ಸಮಾಧಾನಕರವಾದ ಮಾರ್ಗದಿಂದ ಉಭಯತರರೂ ಈ ತಂಟೆಯನ್ನು ದೂರೀಕರಿಸಬೇಕೆಂದು ನೆಹರೂರ ಅಭಿಪ್ರಾಯ. ಆದರೆ ಈ ಸಂಬಂಧ ಮರಳಿ ಮಾತುಕತೆಗಳನ್ನು ತೊಡಗಲು ಈಗ ಕಾಲವು ಪ್ರಶಸ್ತವಾಗಿಲ್ಲ. ಚರ್ಚಿಲರು ಈಗ ಅನಾರೋಗ್ಯದಿಂದಿರುವರು. ಪರಿಣಾಮವಾಗಿ ಅತ್ಯಂತ ಜರೂರಾಗಿ ಜುಲೈ ೮ನೇ ದಿನಾಂಕ ಸೇರಬೇಕೆಂದಿದ್ದ ಬೆರ್ಮುಡಾದ ತ್ರಿರಾಷ್ಟ್ರ ಪರಿಷತ್ತು ಸಹ ಮುಂದೆ ಬಿದ್ದಿರುತ್ತದೆ.

ಬ್ರಿಟಿಷ ತಂಡಕ್ಕೆ ಸತ್ಕಾರ

ಭಾರತಕ್ಕೆ ನೆಹರೂ ಆಗಮಿಸುವ ಕಾಲದಲ್ಲಿ ರಾಜಕೀಯ ಮಹತ್ವದ ವಿಷಯಗಳನೇಕ ಅವರ ನಿರ್ಣಯವನ್ನು ಕಾಯುತ್ತಿದ್ದರೂ, ಭಾರತದಲ್ಲಿ, ಅದೂ ಉತ್ತರ ಭಾರತದಲ್ಲಿ ಗೌರೀಶಂಕರ ಶಿಖರವನ್ನೇರಿ ವಿಜಯ ಸಂಪಾದಿಸಿ ಬಂದ ಶೇರ್ಪಾ ತೇನಸಿಂಗ ನೋರ್ಕೆ ಮತ್ತು ಸರ್. ಎಡ್ಮಂಡ ಹಿಲಾರಿ ಹಾಗು ಬ್ರಿಟಿಷ ಪರ್ವತಾರೋಹಿ ತಂಡದ ಧುರೀಣತ್ವ ವಹಿಸಿದ ಸರ್. ಜೋನ್ ಹಂಟರನ್ನು ಸತ್ಕರಿಸುವ ಗೌಜಿಯೇ ಒಂದು ದೊಡ್ಡ ಸುದ್ದಿ. ಈರ ಮಂಡೂದಲ್ಲಿ ನೇಪಾಳ ಸರಕಾರವು ತೇನಸಿಂಗರಿಗೆ "ನೇಪಾಳ ತಾರಾ" ಎಂಬ ಬಿರುದನ್ನು ಕೊಟ್ಟು ಗೌರವಿಸಿತು. ಅಲ್ಲದೆ ಎಲ್ಲರಿಗೂ ಅಮೂಲ್ಯ ಕಾಣಿಕೆಯನ್ನೂ ಕೊಟ್ಟಿತು. ಕಲಕತ್ತೆಯಲ್ಲಿ ಪೌರ ಸಭೆ, ಸರಕಾರ, ಹಾಗೂ ಸ್ಟೇಟ್ಸ್ ಮೇನ್ ಪತ್ರಿಕೆ ಇತ್ಯಾದಿಗಳ ವತಿಯಿಂದ ಪರ್ವತಾರೋಹಿ ತಂಡಗಳ ಗೌರವಾರ್ಥ ಸಮಾರಂಭಗಳು ಜರುಗಿದುವು. ತೇನಸಿಂಗರಿಗೆ ಮನೆಕಟ್ಟಿಕೊಳ್ಳುವುದಕ್ಕೆ ದಾನಗಳು, ಹಮ್ಮಿಣಿಗಳು, ಮತ್ತು ಬಹುಮಾನಗಳು ಕೊಡಲಾದುವು. ಸರ್ ಹಂಟ್, ಸರ್ ಹಿಲಾರಿ ಇತ್ಯಾದಿಯವರಿಗೂ ಯಥೋಚಿತ ರೀತಿಯಲ್ಲಿ ಸನ್ಮಾನ ಮಾಡಿದರು. ಆಕಾಶವಾಣಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಏರ್ಪಡಿಸಿದ್ದರು. ಹಂಟ್ ಹಾಗೂ ತೇನಸಿಂಗರು ತಮ್ಮ ಅನುಭವಗಳನ್ನು ವಿವರಿಸಿದರು. ದಿನಾಂಕ ೨೮ರಂದು ಹೊಸದಿಲ್ಲಿಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪರ್ವತಾರೋಹಿಗಳನ್ನು ಅವರ ವಿಜಯಕ್ಕಾಗಿ ಸತ್ಕರಿಸಿ ಚಿನ್ನದ ಪದಕಗಳನ್ನು ಉಡುಗೊರೆಯಾಗಿ ಅರ್ಪಿಸಿದರು. ದಿಲ್ಲಿಯ ಪುರಸಭೆಯೂ ಪೌರ ಸತ್ಕಾರದ ಏರ್ಪಾಟು ಮಾಡಿತು. ತೇನಸಿಂಗರ ಕಥನದಂತೆ ಗೌರೀಶಂಕರ ಶಿಖರದ ತುದಿಯಲ್ಲಿ ಮಂಜು ಕಡಿದರೆ, ಇಬ್ಬರು ಮಾತ್ರ ಆರಾಮವಾಗಿ ನಿಂತುಕೊಳ್ಳಬಹುದು. ಅದಕ್ಕೆ ೨೦ ಅಡಿಗಳ ಕೆಳಗೆ ಇಬ್ಬರು ಮಲಗಿಕೊಳ್ಳಬಹುದಾದಷ್ಟು ಜಾಗವಿದೆ. ಹಿಲಾರಿ ಮತ್ತು ತೇನಸಿಂಗರು ಜೊತೆಯಾಗಿಯೇ ಶಿಖರವನ್ನೇರಿ, ಪರಸ್ಪರರನ್ನು ಅಪ್ಪಿಕೊಂಡರು. ತೇನಸಿಂಗರು ರಾಷ್ಟ್ರಸಂಘ, ಭಾರತ, ನೇಪಾಳ ಮತ್ತು ಬ್ರಿಟನ್ನುಗಳ ರಾಷ್ಟ್ರಧ್ವಜಗಳನ್ನು ಹಾರಿಸಿದಾಗ, ಹಿಲಾರಿಯವರು ಅವರ ಚಿತ್ರವನ್ನು ತೆಗೆಕೊಂಡರು. ಆ ದಿನ ಮೋಡಗಳಿಲ್ಲದೆ, ಪ್ರಖರ ಸೂರ್ಯನ ಬಿಸಿಲಿನಿಂದ ಹೊಳೆಯುತಿತ್ತು. ಟಿಬೇಟಿನ ಮಗ್ಗುಲು, ನೇಪಾಳದ ಅಂಕುಡೊಂಕು ಮಾರ್ಗಗಳು ಗೋಚರಿಸುತಿದ್ದುವು. ಕ್ಷಿತಿಜದ ಅಂಚಿನವರೆಗೂ ದೃಷ್ಟಿ ಹರಿಯುತಿತ್ತು. ಅನತಿ ದೂರದಲ್ಲಿಯೇ ಕಾಂಚನಗಂಗಾ ಶಿಖರವು ಶೋಭಿಸುತಿತ್ತು. ಆದರೆ ಈ ಚೆಲುವನ್ನು ಬಹಳ ಸಮಯದ ವರೆಗೆ ನೋಡುತ್ತಿರಲಾಗಲಿಲ್ಲ. ಪ್ರಾಣವಾಯುವಿನ ಕೊರತೆಯ ಭಯದಿಂದ ಈ ವಿಜಯಿಗಳು ಅಲ್ಪಾವಕಾಶದಲ್ಲಿಯೇ ತೃಪ್ತಿಪಡೆಯಬೇಕಾಯಿತು.

ಆಂಧ್ರರ ಗುಲ್ಲು ತಗ್ಗಿತು

ಉತ್ತರ ಭಾರತದ ಈ ಗದ್ದಲವನ್ನು ಬಿಟ್ಟು, ದಕ್ಷಿಣಕ್ಕೆ ಇಳಿದರೆ, ಇಲ್ಲಿ ಆಂಧ್ರ ರಾಜ್ಯದ ಪುರಸ್ಕರ್ತರು ಕೆಲವರು ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವುದರ ವಿರುದ್ಧ ನಡೆಸಿದ ವಿಧ್ವಂಸಕ ಕೃತ್ಯಗಳು ಗೋಚರಿಸುತ್ತವೆ. ಕಳೆದ ವಾರ ಬರೆದಂತೆ ಆಂಧ್ರರು ನ್ಯಾಯ ಸಮ್ಮತವಲ್ಲದ ರೀತಿ ತಮ್ಮ ಆಂದೋಲನವನ್ನ ಹೂಡಿದರು. ಮೌಲಾನಾ ಆಜಾದರಂಥ ಹಿರಿಯ ಮುತ್ಸದಿಗಳು ಈ ಚಟುವಟಿಕೆಗಳನ್ನು ಖಂಡಿಸಿ ಮಾತನಾಡಿದ್ದನ್ನು ಅವಹೇಳನ ಗೈಯುವುದಕ್ಕೂ ಆಂಧ್ರರಲ್ಲಿ ಕೆಲವರು ಹಿಂಜರಿಯಲಿಲ್ಲ. ಆಂಧ್ರ ಪ್ರದೇಶ ಕಾಂಗ್ರೆಸು ಈ ಹಿಂಸಾಚಾರಗಳನ್ನು ಖಂಡಿಸದೆ ಸುಮ್ಮನೆ ಕುಳಿತಿದ್ದುದರಿಂದ ಈ ಅನುಚಿತ ಕೃತ್ಯಗಳಿಗೆ ಅದು ಮೌನ ಸಮ್ಮತಿಯನ್ನು ವ್ಯಕ್ತಪಡಿಸುತ್ತಿದೆಯೋ ಎಂದು ಸಂದೇಹಪಡಲು ಅವಕಾಶವುಂಟಾಯಿತು. ಅಖಿಲ ಭಾರತ ಕಾಂಗ್ರೆಸ ಸಮಿತಿಯು ಈ ವಿಷಯದಲ್ಲಿ ಆಂಧ್ರ ಕಾಂಗ್ರೆಸಿಗರನ್ನು ಎಚ್ಚರಿಸಿದ ಪರಿಣಾಮವಾಗಿಯೋ ಎಂಬಂತೆ– ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ವಿಜಯವಾಡದಲ್ಲಿ ಸೇರಿದ ಆಂಧ್ರ ಕಾಂಗ್ರೆಸ್ ಸಮಿತಿಯು ಘಟನಾತ್ಮಕವಲ್ಲದ ಈ ಆಂದೋಲನವನ್ನು ಖಂಡಿಸಿದೆ. ಅದೇ ಸಮಯಕ್ಕೆ ಗಡಿ ನಿರ್ಣಯ ಸಮಿತಿಯು ತನ್ನ ಕಾರ್ಯವನ್ನು ತೊಡಗುವಾಗ, ಬಳ್ಳಾರಿಯ ಬಗ್ಗೆ ಆಂಧ್ರರಿಗಿರುವ ನ್ಯಾಯಪೂರ್ಣವಾದ ಹಕ್ಕುಗಳನ್ನು ಇನ್ನೊಮ್ಮೆ ವಿಚಾರಣೆಗೆ ತೆಗೆದುಕೊಳ್ಳಬೇಕೆಂದೂ ವಿನಂತಿಸಿ.... ಆಗಿಯೂ ಆಂಧ್ರರಿಗೆ ಅನ್ಯಾಯವಾಗದಂತೆ ಎಲ್ಲ ಪ್ರಯತ್ನವನ್ನೂ ಮಾಡುವುದಾಗಿಯೂ ಅದು ಭರವಸೆ ನೀಡಿದೆ. ಕಾಂಗ್ರೆಸು ತುಸು ತಡವಾಗಿಯಾದರೂ ಈ ರೀತಿ ಹಿಂಸಾಚಾರವನ್ನು ಖಂಡಿಸಿದುದರಿಂದ ಆಂಧ್ರ ಮಹಾಸಮಿತಿಯ ಅಭಾದಿತವಾಗಿ ಮುನ್ನಡೆಸುತ್ತಿದ್ದ ಗುಲ್ಲು ಗೊಂದಲಗಳು ಮೊದಲಿನ ರಾಹನ್ನು ಕಳೆದುಕೊಂಡಿವೆ. ಕನ್ನಡಿಗರಿಗೆ ಇದು ಸಂತೋಷವುಂಟುಮಾಡುವ ಸಂಗತಿ. ಮಾತ್ರವಲ್ಲ ಸರಕಾರದವರು ಹಿಂಸಾಚಾರಕ್ಕೆ ಪ್ರೋತ್ಸಾಹಕೊಟ್ಟ ಕೆಲವರನ್ನು ಕಾಯಿದೆಯಂತೆ ವಿಚಾರಣೆಗೆ ಗುರಿಪಡಿಸಿರುವವರು. ಪ್ರಜಾಪರಿಷತ್ತಿನ ಆಂಧ್ರ ಶಾಖೆಯ ಕಾರ್ಯದರ್ಶಿಯವರು ಸಹ ಅನುಚಿತ ಚಟುವಟಿಕೆಗಳನ್ನು ಖಂಡಿಸುವ ಪ್ರಕಟಣೆ ಹೊರಡಿಸಿದ್ದರು. ಆದರೆ ಈ ರೀತಿ ಪ್ರಕಟಣೆ ಹೊರಡಿಸಿದ್ದಕ್ಕೆ ಅವರಿಗೆ ಅಧಿಕಾರವಿಲ್ಲ..... ಪಕ್ಷದ ಪ್ರಕಾಶಕರು ಹೇಳುವುದನ್ನು ನೋಡಿದರೆ, ಪ್ರಜಾಪಕ್ಷದವರು ಪ್ರೋತ್ಸಾಹ ವಿಧ್ವಂಸಕ ಕೃತ್ಯಗಳಿಗೆ ಉಂಟೇನೋ ಎಂದು ಸಂಶಯಿಸುವಂತಿದೆ. ಬೇತೂಲದಲ್ಲಿ ಪ್ರಜಾ ಸೋಶಲಿಸ್ಟರ ಪರಿಷತ್ತು ನಡೆದ ಕಾಲಕ್ಕೆ ಸ್ವೀಕರಿಸಿದ ಗೊತ್ತುವಳಿಯು ನಡಾವಳಿಯಕ್ಕೆ ಆಂಧ್ರ ಕೇಸರಿಯು ಹೇಳಿಕೆ ಪ್ರೋತ್ಸಾಹಕವಾಗಿರುವುದಿಲ್ಲ.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್
ಮದ್ರಾಸು 3.

Estd: 1906
THE CANARA BANKING CORPORATION LTD.
H. O.: UDIPI, (S. India)
ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ
ಉಡುಪಿ, ಗುರುವಾರ ೨-೭-'೫೩

ವನಮಹೋತ್ಸವ

ಒಳ್ಳೆಯ ವಿಷಯವೊಂದನ್ನು ಎಷ್ಟು ಸಲ ಒತ್ತಿಯೊತ್ತಿ ಹೇಳಿದರೂ ಅದನ್ನು ಪುನರಾವರ್ತನೆಯೆಂಬುದಾಗಿ ಅಥವಾ ಅನಾವಶ್ಯಕವೆಂಬುದಾಗಿ ಕಡೆಗಣಿಸಬಾರದು. ಹಾಗೆ ಪೃಥಕ್ವಾಗಿ ಪುನಸ್ಮರಣ ಮಾಡುವುದರ ಮೂಲಕವೇ ನಾವು ಒಳ್ಳೆಯ ಸಂಗತಿಯನ್ನು ಸದಾ ಅನುಷ್ಠಾನದಲ್ಲಿಡುವುದು ಸಾಧ್ಯವೆಂಬ ಅನುಭವ ಹೇಳುತ್ತದೆ. ಆದುದರಿಂದ ವರ್ಷವರ್ಷವೂ ವನಮಹೋತ್ಸವದಂಥ ಚಟುವಟಿಕೆಗಳನ್ನು ಸಾರ್ವಜನಿಕರು ಹೆಚ್ಚು ಹೆಚ್ಚು ಉತ್ಸಾಹದಿಂದ ನಡೆಸಬೇಕೆಂದು ಕೇಳುತ್ತಾ ಬಂದರೆ ಅದರಲ್ಲಿ ಅನುಚಿತವಾದುದೇನೂ ಇಲ್ಲವೆಂದು ಹೇಳಬಹುದು. ವನಮಹೋತ್ಸವವನ್ನು ಮುನ್ಷೀಜೀಯವರು ೧೯೫೦ರಲ್ಲಿ ನಮ್ಮ ಮುಂದೆ ಬಂದು ಸಂಪ್ರದಾಯವಾಗಿ ಹಾಕಿಕೊಟ್ಟರು. ಆ ವರ್ಷ ಸುಮಾರು ೪ ಕೋಟಿಗೂ ಮಿಾರಿ ಸಸಿಗಳನ್ನು ನೆಡಲಾಯಿತು. ಅವುಗಳಲ್ಲಿ ಪ್ರತಿಶತ ೬೮ ಬದುಕಿಕೊಂಡಿವೆಯೆಂದು ಕೇಂದ್ರದ ಕೃಷಿಮಂತ್ರಿ ಡಾ। ಪಂಜಾಬರಾವ ದೇಶಮುಖರ ಹೇಳಿಕೆಯಿಂದ ತಿಳಿದುಬರುತ್ತದೆ. ಈ ಸಲ ನಾವು ನಾಲ್ಕನೇ ವನಮಹೋತ್ಸವದ ಸಪ್ತಾಹವನ್ನು ಆಚರಿಸುತ್ತಿದ್ದೇವೆ. ಸಸಿಗಳನ್ನು ನೆಟ್ಟು, ಪೋಷಿಸಿ, ನಮ್ಮ ಅರಣ್ಯ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕೆಂಬುದೇ, ಈ ಚಳುವಳಿಯ ಉದ್ದೇಶವಾಗಿರುತ್ತದೆ. ಸಸಿಗಳನ್ನು ನೆಡುವುದಕ್ಕೆ ಮಳೆಗಾಲ ತೊಡಗಿದ ಈ ದಿನಗಳಷ್ಟು ಅನುಕೂಲವಾದ ಸಮಯ ಬೇರೆ ದೊರೆಯದೆಂಬುದರಿಂದ ಪ್ರತಿ ವರ್ಷವೂ ಜುಲೈ ಪ್ರಥಮ ವಾರವನ್ನು ಸಸಿಸಪ್ತಾಹವನ್ನಾಗಿ ಪರಿಗಣಿಸಲಾಗುತ್ತಿದೆ. ಮರಗಿಡಗಳನ್ನು ನೆಟ್ಟು ಪೋಷಿಸಬೇಕೆನ್ನುವ ಮಾತಿನಲ್ಲಿ ಉತ್ತಮ ತತ್ವವು ಅಡಗಿರುತ್ತದೆ. ಈ ವರ್ಷ ಮಳೆಗಾಲವು ತುಸು ತಡವಾಗಿಯೇ ಆಗಮಿಸಿತು. ಈ ರೀತಿ ತಡವಾಗಿ ಮಳೆ ಬರಲು ಕಾರಣವೇನೆಂದು ಸಂಶೋಧನೆ ನಡೆಸಿರುವರೋ ಇಲ್ಲವೋ ಗೊತ್ತಿಲ್ಲ. ಆದರೂ ನಮಗೆ ದೊರೆತಿರುವ ವೈಜ್ಞಾನಿಕ ಅನುಭವದ ಮೇಲಿಂದ ಹೇಳುವುದಾದಲ್ಲಿ ಮರಗಿಡಗಳ ಹತ್ತಿರವು ಮಳೆಗಾಳಿಯ ಚಲನೆಯ ಮೇಲೆ ಪರಿಣಾಮವನ್ನು ಉಂಟುಮಾಡಬಲ್ಲವು. ವೃಕ್ಷ ಸಂಪತ್ತು ಧಾರಾಳವಾಗಿರುವ ಪಶ್ಚಿಮ ಘಟ್ಟಗಳು, ಹಿಮಾಲಯದ ತಪ್ಪಲು ಮುಂತಾದ ಪ್ರದೇಶಗಳಲ್ಲಿಯೇ ಮಳೆಯ ರಭಸ ಹೆಚ್ಚಿರುತ್ತದೆ ಎಂದು ಭೂಗೋಳದ ಪಾಠ ಕಲಿತ ವಿದ್ಯಾರ್ಥಿಗೆ ತಿಳಿದಿರುತ್ತದೆ. ಮಳೆಗಾಳಿಯನ್ನು ಆಕರ್ಷಿಸುವುದಕ್ಕೆ ತಂಪಾದ ವಾತಾವರಣವನ್ನುಂಟುಮಾಡುವ ಮರಗಿಡಗಳು ಅತ್ಯಾವಶ್ಯಕವೆಂದು ಇದರಿಂದ ವ್ಯಕ್ತವಾಗುತ್ತದೆ. ಮಳೆಯನ್ನು ಬರಿಸುವುದಕ್ಕೆ ಮಾತ್ರವಲ್ಲ ಮಳೆಯ ರಭಸಕ್ಕೆ ಕೊಚ್ಚಿ ಹೋಗುವ ಭೂಸಾರವನ್ನು ಉಳಿಸುವುದಕ್ಕೂ ಮರಗಿಡಗಳು ಅಗತ್ಯವೆಂದು ಸಂಶೋಧನೆಗಳೂ ಅನುಭವವೂ ಖಚಿತಪಡಿಸಿವೆ. ಸಾರವತ್ತಾದ ಮಣ್ಣನ್ನು ಮಳೆ ನೀರಿನಲ್ಲಿ ಕೊಚ್ಚಿ ಹೋಗಲು ಬಿಟ್ಟ ಪಕ್ಷದಲ್ಲಿ ಭೂಮಿಯ ಉತ್ಪಾದನಾ ಸಾಮರ್ಥ್ಯವು ಕುಸಿದು ನಾವು ಹೊಟ್ಟೆ ಹಸಿದಿರಬೇಕಾದ ಪ್ರಸಂಗ ಬಂದೀತು. ಗಿಡಮರಗಳ ಬೇರುಗಳು ಮಣ್ಣಿನ ಪದರಿನಲ್ಲಿ ಆಳವಾಗಿ ಬೇರೂರಿ ಪ್ರತಿಯೊಂದೂ ಕಣವನ್ನು ತಮ್ಮ ಕಕ್ಷೆಯಲ್ಲಿ ಬಿಗಿಯಾಗಿ ಹಿಡಿದುಕೊಳ್ಳುವುದರಿಂದ ಮಳೆಯ ಜೋರಿಗೆ ಮಣ್ಣು ಕೊಚ್ಚಿ ಹೋಗದೆ ಉಳಿಯುತ್ತದೆ. ವನಮಹೋತ್ಸವವನ್ನು ಆಚರಿಸಲೇ ಬೇಕೆಂಬುದಕ್ಕೆ ಇದೂ ಒಂದು ಪ್ರಬಲವಾದ ಕಾರಣ. ಇದಲ್ಲದೆ ಇನ್ನೂ ಅನೇಕ ಬಗೆಯಿಂದ ನಮಗೆ ಮರಗಿಡಗಳನ್ನು ಹೆಚ್ಚಾಗಿ ನಟ್ಟು ಬೆಳೆಸುವುದರಿಂದ ಪ್ರಯೋಜನ ದೊರೆಯುತ್ತದೆ ಈಗ ಸಂಶೋಧನೆಯ ಫಲವಾಗಿ ಸೂರ್ಯ ಪಾತ್ರೆಯಿಂದ ಅಡುಗೆ ಮಾಡುವ ಹವಣಿಕೆ ನಡೆದಿದ್ದರೂ, ಸಾಮಾನ್ಯವಾಗಿ ನಾವೆಲ್ಲರೂ ಕಟ್ಟಿಗೆಯನ್ನು ಬಳಸುವವರೇ ಆಗಿದ್ದೇವೆ. ಮರಗಿಡಗಳ ಅಭಾವದ ಕಾರಣದಿಂದ ಇಂದು ಅಮೂಲ್ಯವಾದ ಸೆಗಣಿಯನ್ನೇ ಬೆರಣಿಯಾಗಿ ತಟ್ಟಿ ಒಲೆಯೊಳಕ್ಕೆ ತುಂಬಿ ಉರಿಸುತ್ತೇವೆ ಭೂಸಾರವನ್ನು ಎಲ್ಲ ರೀತಿಯಿಂದಲೂ ಹೆಚ್ಚಿಸಬಲ್ಲ ಸೆಗಣಿಯು ಹೀಗೆ ಉರಿದು ಬೂದಿಯಾಗಿ ಹೋಗುವುದರಿಂದ, ನಾವು ಬೆಳೆಯಿಸುವ ಕೃಷಿಗೆ ಯೋಗ್ಯ ಪ್ರತಿಫಲ ದೊರೆಯುತ್ತಿಲ್ಲ. ಮರಗಿಡಗಳನ್ನು ಹೆಚ್ಚಾಗಿ ನೆಟ್ಟು ಬೆಳೆಸಿದರೆ, ನಾವಾಗ ಉರುವಲಿಗಾಗಿ ಈ ಕಟ್ಟಿಗೆಯನ್ನು ಬಳಸಿಕೊಂಡು, ಸೆಗಣಿಯನ್ನು ಗದ್ದೆಯಲ್ಲಿ ಕೃಷಿಗೋಸ್ಕರ ಉಪಯೋಗಿಸಬಲ್ಲೆವು. ಈ ರೀತಿ ಮರಗಿಡಗಳಿಂದ ಪ್ರತ್ಯಕ್ಷ ಹಾಗೂ ಪರೋಕ್ಷ ಮಾರ್ಗಗಳಿಂದ ಭೂಮಿಯ ಉತ್ಪಾದನಾ ಶಕ್ತಿಯಲ್ಲಿ ಹೆಚ್ಚುವಳಿ ಕಾಣಿಸಿಕೊಳ್ಳಲು ಅನುಕೂಲವಿದೆ ಇವೆಲ್ಲವುಗಳ ಜೊತೆಗೆ ಹಣ್ಣುಹಂಪಲುಗಳನ್ನು ನೀಡುವ ಗಿಡಮರಗಳನ್ನು ಪೋಷಿಸಿದ ಪಕ್ಷದಲ್ಲಿ, ಆಹಾರದ ಸಮಸ್ಯೆಯನ್ನೂ ಬಹಳಮಟ್ಟಿಗೆ ಬಿಡಿಸಬಲ್ಲೆವು.. ನಮ್ಮ ಪುರಾತನ ಋಷಿಮುನಿಗಳು ಕಾಡಿನ ನಡುವೆ ಪರ್ಣಕುಟೀರಗಳನ್ನು ಕಟ್ಟಿಕೊಂಡು ನೆಲಸಿದ್ದುದು, ಮತ್ತು ರಾಜ ಮಹಾರಾಜರು ಮಾರ್ಗದ ಇಕ್ಕೆಲಗಳಲ್ಲಿಯೂ ನೆರಳು ಕೊಡುವ ಮರಗಳನ್ನು ನೆಟ್ಟುದು ನಮಗೆಲ್ಲ ಮಾದರಿಯಾಗಬೇಕು. ಭಾರತೀಯ ಪರಂಪರೆಯಲ್ಲಿ ಮರಗಿಡಗಳನ್ನು ಹಚ್ಚುವುದಕ್ಕೆ ಮಹತ್ವವನ್ನು ಕೊಟ್ಟಿರುವರು. ಪುಣ್ಯಕಾರ್ಯವೆಂಬುದಾಗಿ ನಮ್ಮ ಹಿರಿಯರು ಭಾವಿಸಿದ ಈ ಕೆಲಸವನ್ನು ಅತ್ಯಂತ ಉತ್ಸಾಹದಿಂದ ನಾವೂ ಮುಂದುವರಿಸಬೇಕು. ಯಾವ ಸ್ಥಳವನ್ನೂ ಖಾಲಿಬಿಡುವುದು ಚಂದವಲ್ಲ. ಸಸ್ಯಶ್ಯಾಮಲವಾದ ಪ್ರದೇಶವನ್ನೂ ಒಂದೂ ಮರವಿಲ್ಲದೆ ಬೆಂಗಾಡಾಗಿರುವ ಜಾಗವನ್ನೂ ನೋಡಿದಲ್ಲಿ, ನಮಗೆ ಮೊದಲಿನದು ಕೊಡುವ ಸಂತೋಷ ಮತ್ತು ಎರಡನೆಯದರಿಂದುಂಟಾಗುವ ಬೇಸರ ವಿರೋಧಾಭಾಸಪೂರ್ಣವೆಂದೆನಿಸುತ್ತದೆ ನಮ್ಮ ನಾಡಿನ ಅರಣ್ಯ ಸಂಪತ್ತು ಈಗ ಇರುವುದರ ಇಮ್ಮಡಿಯಾದರೂ ಆಗಬೇಕೆಂಬುದು ಬಲ್ಲವರ ಅಭಿಪ್ರಾಯವಿರುತ್ತದೆ. ಭಾರತದಲ್ಲಿ ಒಟ್ಟು ಭೂಭಾಗದ ಆರರಲ್ಲಿ ಒಂದು ಪಾಲಿನಷ್ಟು ಅರಣ್ಯ ಪ್ರದೇಶವುಂಟೆಂದು ತಜ್ಞರು ಹೇಳುತ್ತಾರೆ. ಆದುದರಿಂದ ನಮಗೆ ಲಭ್ಯವಿರುವ ಎಲ್ಲ ಉಪಾಯಗಳನ್ನೂ ಬುದ್ಧಿವಂತಿಕೆಯಿಂದ ಪ್ರಯೋಗಿಸಿ, ಒಂದಂಗುಲ ಸ್ಥಳವನ್ನು ಖಾಲಿಬಿಡದೆ ಏನಾದರೊಂದು ಒಳ್ಳೆಯ ಸಸಿಯನ್ನು ನೆಟ್ಟು ಸುಖ ಸಮೃದ್ಧಿಯ ನೆಲಗಟ್ಟನ್ನು ಹಾಕಬೇಕಾದುದು ಕರ್ತವ್ಯ. ಹಲವಾರುಮಂದಿ ಟೀಕಿಸುವಂತೆ ವನಮಹೋತ್ಸವವೊಂದು ಆಡಂಬರವಲ್ಲ—ಅಥವಾ ವ್ಯರ್ಥ ಶ್ರಮವೂ ಅಲ್ಲ. ರಾಷ್ಟ್ರದ ಪುನಾರಚನೆಯಲ್ಲಿ ವನಮಹೋತ್ಸವಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಇದನ್ನೂ ನಾವು ಮನಗಾಣದಿದ್ದರೆ ನಮ್ಮ ರಾಷ್ಟ್ರ ಮುಂದಕ್ಕೆ ಬರುವಂತಿಲ್ಲ. ಕೊರತೆ ಮತ್ತು ಹಸಿವಿನ ಸಮಸ್ಯೆ ಬಗೆಹರಿಯುವಂತೆಯೂ ಇಲ್ಲ. ಕಾರಣ, ಸ್ಫೂರ್ತಿಯನ್ನೂ ಚೈತನ್ಯವನ್ನೂ ತಂದುಕೊಂಡು ನಾವು ಈ ಮಾದರಿಯ ಉತ್ಸವವನ್ನು ಹೃತ್ಪೂರ್ವಕ ಆಚರಿಸಬೇಕು. ಪ್ರತಿಯೊಬ್ಬ ಪ್ರಾಯ ಪ್ರಬುದ್ಧನೂ ಒಂದೊಂದು ಸಸಿಯನ್ನು ನಟ್ಟು ಅವುಗಳ ರಕ್ಷಣೆ ಮಾಡಿದನೆಂದರೆ, ಒಂದು ವರ್ಷದಲ್ಲಿ ೧೭ ಕೋಟಿಯಷ್ಟು ಗಿಡಮರಗಳು ಹೆಚ್ಚಿಕೊಳ್ಳುತ್ತವೆ. ಆದರೆ ಸಾಮಾನ್ಯವಾಗಿ ನೆಟ್ಟ ಸಸಿಗಳೆಲ್ಲ ರಕ್ಷಕರಿಲ್ಲದೆ ಆಡುಗಳ ಮತ್ತು ದನ ಕರುಗಳ ಬಾಯಿಗೆ ಬಲಿಯಾಗುವುದು ವಾಡಿಕೆ. ಹೀಗಾಗ ಕೂಡದು. ನಾವು ಸಸಿಗಳನ್ನು ನೆಟ್ಟ ಮಾತ್ರಕ್ಕೆ ಕರ್ತವ್ಯ ಮುಗಿಯಲಿಲ್ಲ—ಅವುಗಳ ಪೋಷಣೆಯನ್ನೂ ಮಾಡತಕ್ಕದು. ಎರಡನೇ ಮತ್ತು ಮೂರನೇ ವನಮಹೋತ್ಸವಗಳಲ್ಲಿ ನೆಟ್ಟ ಗಿಡಗಳಲ್ಲಿ ಪ್ರತಿ ಶತ ೫೩ ಬದುಕಿವೆ ಎಂದು ತಿಳಿಯುತ್ತದೆ. ಈ ಶೇಕಡಾವು ನೂರಕ್ಕೆ ನೂರಲ್ಲದಿದ್ದರೂ ೮೦-೯೦ ರಷ್ಟಾದರೂ ಹೆಚ್ಚುವುದವಶ್ಯ. ಇದಕ್ಕೆ ಗಿಡ ಮರಗಳ ಮೇಲೆ ಅವುಗಳನ್ನು ನೆಟ್ಟವರಿಗೆ ಆಸ್ಥೆ ಉಳಿಯುವಂತೆ ಮಾಡುವುದು ಒಳ್ಳೆಯ ಯೋಜನೆ. ಮಾರ್ಗದ ಪಕ್ಕದಲ್ಲಿ ನೆಟ್ಟ ಮರಗಿಡಗಳ ರಕ್ಷಣಾಭಾರವನ್ನು ನೆರೆಯ ನಾಗರಿಕರಿಗೆ ವಹಿಸಿ ಕೊಡಬೇಕೆಂದೂ, ಅದರಿಂದ ಬೀಳುವ ಕಟ್ಟಿಗೆ ಮತ್ತು ಹಣ್ಣು ಹಂಪಲುಗಳ ಮೇಲೆ ಅವನಿಗೆ ಅಧಿಕಾರ ಕೊಡಬೇಕೆಂದೂ ರಾಜಾಜಿ ಸೂಚಿಸಿರುವುದು ಒಳ್ಳೆಯದು. ಈ ರೀತಿ ಪ್ರತಿಫಲದ ಭರವಸೆ ಇಲ್ಲದಿದ್ದರೆ ಸಸಿ ಸಪ್ತಾಹದ ರಹಸ್ಯವನ್ನು ಅರಿತಿದ್ದವರಿಗೂ ನಿರುತ್ಸಾಹವಾದೀತು. ಸಾಗುವಳಿ ಭೂಮಿಯ ಮೇಲಿನ ಒಡೆತನ, ಅದರಲ್ಲಿ ತಾನು ಮಾಡಬಹುದಾದ ಕೃಷಿ ಮತ್ತು ಹಚ್ಚಬಹುದಾದ ಮರಗಿಡಗಳ ಮೇಲೆ ಸ್ವಾಮ್ಯ ಇವು ರೈತರಿಗೆ ದೊರೆಯುವುದರಲ್ಲಿ ನ್ಯಾಯವುಂಟು. ಮೂಲಭೂತವಾದ ಈ ನ್ಯಾಯ ಸಿಗುವಂತಾದರೆ, ನಮ್ಮ ಹಳ್ಳಿಗಾಡುಗಳಲ್ಲಿ ವನಮಹೋತ್ಸವಕ್ಕೆ ಅತ್ಯಧಿಕ ಬೆಂಬಲ ದೊರೆಯಬಲ್ಲುದು. ಇದನ್ನು ರಾಷ್ಟ್ರೀಯ ಉತ್ಸವವಾಗಿ ಆಚರಿಸುವುದು ಸರಕಾರಕ್ಕೆ ಹೆಚ್ಚು ಕಾಡುತರುತ್ತದೆ ಎಂದು ಕೆಲವರು ಆಕ್ಷೇಪಿಸುವುದುಂಟು. ಇಷ್ಟರವರೆಗೆ ಒಟ್ಟಿಗೆ ೪೬ ಲಕ್ಷ ರೂಪಾಯಿಗಳು ಮಾತ್ರ ಇದಕ್ಕೆ ವಿನಿಯೋಗವಾಯಿತೆಂಬುದನ್ನು ನೋಡಿದರೆ, ಈ ವೆಚ್ಚ ಜನರ ಮೇಲೆ ಬೀರಿದ ಪ್ರಭಾವದ ಪ್ರಮಾಣದಿಂದ ಹೆಚ್ಚೆನ್ನಲಾರೆವು. ಕಾರಣ—ಜನರೆಲ್ಲರೂ ಸ್ವಯಂಸ್ಫೂರ್ತಿಯಿಂದ ಈ ಉತ್ಸವದಲ್ಲಿ ಭಾಗಿಗಳಾಗಿ, ಸಸ್ಯ ಸಂಪತ್ತನ್ನು ಹೆಚ್ಚಿಸಲೆಂದು ಕೋರುತ್ತೇವೆ.

ಎಂ. ಜಿ. ಎಂ. ಕಾಲೇಜ್ I ಗ್ರೇಡಾಯಿತು

ಮಾನ್ಯ ಮಂತ್ರಿ ಎ. ಬಿ. ಶೆಟ್ಟರಿಂದ ಬಿ. ಎ. ತರಗತಿಯ ಉದ್ಘಾಟನೆ.

ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನಿನ ವತಿಯಿಂದ, ಡಾ। ಮಾಧವ ಪೈಗಳ ಮುಂದಾಳುತ್ವದಿಂದ ನಾಲ್ಕಾರು ವರ್ಷಗಳ ಹಿಂದೆ ಸ್ಥಾಪಿತವಾದ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್ ವಿಸ್ಮಯಕರ ಪ್ರಗತಿಯನ್ನು ಸಾಧಿಸಿರುವುದೆನ್ನಬಹುದು. ಇದು ಜಿಲ್ಲೆಗೊಂದು ಭೂಷಣ, ಕಾಲೇಜಿನ ಅಧಿಕಾರ ವರ್ಗಕ್ಕೊಂದು ಹೆಗ್ಗಳಿಕೆಯ ವಿಷಯವಾಗಿದೆ. ಕಣ್ಣಿನ ಸೆಳೆವ ಸ್ವತಂತ್ರ ಕಟ್ಟಡ, ಸರ್ವೋಪಕರಣ, ಉತ್ತಮ ಲೈಬ್ರೆರಿ ಮೊದಲಾದವನ್ನು ಕಾಲೇಜ್ ಕ್ಷಿಪ್ರಾವಧಿಯಲ್ಲೇ ಪಡೆದಿರುತ್ತದೆ. ಈ ವರೆಗೆ ಕಾಲೇಜ್ II ಗ್ರೇಡ್ ಮಾತ್ರ ಆಗಿತ್ತು. ಆದರೆ ಕಾಲೇಜ್ ಅಧಿಕಾರಿಗಳ ಪ್ರಯತ್ನದಿಂದ ಇದೀಗ I ಗ್ರೇಡಿಗೇರಿದಂತಾದುದು ಈ ಡಿವಿಜನಿನ ವಿದ್ಯಾರ್ಥಿಗಳ ಭಾಗ್ಯೋದಯವೆನ್ನಬಹುದು. ಕಳೆದ ತಾ.30ನೇ ಸಂಜೆ ಬಿ. ಎ. ಜೂನಿಯರ್ ತರಗತಿಯನ್ನು ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ಉದ್ಘಾಟಿಸಿದರು. ಶ್ರೀ. ಕೆ. ಸದಾನಂದ ಹೆಗ್ಡೆ, ಎಂ.ಪಿ. ಯವರು ಅಧ್ಯಕ್ಷತೆ ವಹಿಸಿದ್ದರು. ಡಾ। ಎಸ್. ಆರ್. ಪೈಗಳು ಸ್ವಾಗತ ಭಾಷಣ ಮಾಡಿದ ಬಳಿಕ ಡಾ। ಟಿ. ಎಂ. ಎ. ಪೈಗಳು ಕಾಲೇಜಿನ ಸ್ಥಾಪನೆಯ ಸಂಕ್ಷೇಪ ಪರಿಚಯವನ್ನು ತಮ್ಮ ಭಾಷಣದಲ್ಲಿ ನೀಡಿದರು. ಅಧ್ಯಕ್ಷ ಭಾಷಣವಾದ ಮೇಲೆ ಮಂತ್ರಿಗಳು ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜ್ ವಿದ್ಯಾಭ್ಯಾಸದ ಕುರಿತು ಪ್ರಸ್ತಾಪಿಸಿ ಈ ಕಾಲೇಜು ಯೋಗ್ಯ ವಿದ್ಯಾವಂತ ಯುವಕ ಯುವತಿಯರನ್ನು ತಯಾರಿಸುವಂತಾಗಲೆಂದು ಹಾರೈಸಿ ಬಿ. ಎ. ಕ್ಲಾಸನ್ನು ತೆರೆದರು. ಜನ ಪ್ರಿಯರೂ ಸಮರ್ಥರೂ ಆದ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂತ್ರಿಗಳು ಕಾಲೇಜನ್ನು ಪರಿಶೀಲಿಸಿ ಮಂಗಳೂರಿಗೆ ಹಿಂತೆರಳಿದರು.

ಮಣಿಪಾಲದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜು

ಮಾನ್ಯಮಂತ್ರಿ ಶ್ರೀ. ಎ. ಬಿ. ಶೆಟ್ಟರಿಂದ ಉದ್ಘಾಟನೆ

ಸುಮಾರು ಎರಡು ವರ್ಷಗಳ ಹಿಂದೆ ಮಣಿಪಾಲದ ದಿ ಎಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ರಿಜಿಸ್ಟ್ರಾರರೂ ಉಡುಪಿಯಲ್ಲಿ ತಮ್ಮ ಅನೇಕ ಮುಖವಾದ ಚಟುವಟಿಕೆಗಳಿಂದ ಖ್ಯಾತಿಪಡೆದವರೂ ಆದ ಡಾ| ಟಿ. ಮಾಧವ ಪೈಗಳು ಒಂದು ವೈದ್ಯಕೀಯ ಶಿಕ್ಷಣ ಕೊಡುವ ಕಾಲೇಜನ್ನು ತೆರೆಯುವ ಯೋಜನೆ ಮುಂದಿಟ್ಟಾಗ ಅದನ್ನು ಉಪೇಕ್ಷೆಯಿಂದ ನೋಡಿದವರೇ ಅನೇಕ. ಏಕೆಂದರೆ ಈಗಿನ ದಿನಮಾನಗಳಲ್ಲಿ ವೈದ್ಯಕೀಯ ಕಾಲೇಜೊಂದನ್ನು ತೆರೆಯುವುದೆಂದರೆ ಸಾಮಾನ್ಯವಾದ ಕೆಲಸವಲ್ಲ—ಅದೂ ಖಾಸಗಿಯಾದ ಸಂಸ್ಥೆಯೊಂದು ತನ್ನೊಡನೆ ಸಾಕಷ್ಟು ಬಂಡವಾಳವಿಲ್ಲದೆ, ಸಾಧನ ಸಲಕರಣೆಗಳಿಲ್ಲದೆ, ಇಂಥದೊಂದು ಮಹೋದ್ಯಮವನ್ನು ತೊಡಗುವ ಸಾಹಸಕ್ಕೆ ಇಳಿಯುವುದು ಅರ್ಥಶೂನ್ಯ ಮಾತೆಂದು ಹಲವರು ಅಭಿಪ್ರಾಯಪಟ್ಟರು. ಆದರೆ ಇಂದು ಮಣಿಪಾಲದಲ್ಲಿ ಭವ್ಯವಾಗಿ ನಿರ್ಮಿಸಲ್ಪಟ್ಟ ಕಸ್ತೂರ್ಬಾ ಮೆಡಿಕಲ್ ಕಾಲೇಜು ಅಂಥವರ ಸಂದೇಹಗಳಿಗೆ ಸಮಾಧಾನ ಕೊಡುತ್ತದೆ; ಟೀಕೆಗಳಿಗೊಂದು ಆಹ್ವಾನ ನೀಡುತ್ತದೆ.

ಪೈಗಳ ಯೋಜನೆ

ಈಗಾಗಲೇ ಜನಜನಿತವಾದಂತೆ ಡಾ. ಮಾಧವ ಪೈಗಳು ಮುಂದಿಟ್ಟ ಯೋಜನೆಯು ಶೈಕ್ಷಣಿಕ ಕ್ಷೇತ್ರದಲ್ಲಿಯೇ ಅಭೂತಪೂರ್ವವಾದದ್ದು; ಮತ್ತು ಅದ್ಭುತವಾದದ್ದು. ಈ ಕ್ರಾಂತಿಕಾರಿ ಲಕ್ಷಣಗಳನ್ನು ಕಂಡೇ ಹೆಚ್ಚಿನವರು ಜನತೆ ಬೆಂಬಲ ಈ ಯೋಜನೆಗೆ ಸಿಗುವುದೋ ಇಲ್ಲವೋ ಎಂದು ಭಯಪಟ್ಟಿದ್ದರು. ಆದರೆ ಮಾಧವ ಪೈಗಳು ಮಾಡಿದ ಸರಳ ಸೂಚನೆಗಳು ಈ ಮಾದರಿಯ ಸಾಹಸಕ್ಕೆ ಅತ್ಯಂತ ಯೋಗ್ಯವಾಗಿದ್ದವು. ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಇಚ್ಛಿಸುವ ಪ್ರತಿಯೊರ್ವ ವಿದ್ಯಾರ್ಥಿಯು ಪ್ರಾರಂಭದಲ್ಲಿ ಮೂರು ಸಾವಿರ ರೂಪಾಯಿಗಳ ದಾನವನ್ನು ಕೊಡಬೇಕು. ಒಂದು ನೂರು ವಿದ್ಯಾರ್ಥಿಗಳನ್ನು ಪ್ರತಿವರ್ಷವೂ ಕಾಲೇಜಿಗೆ ದಾಖಲು ಮಾಡಿಕೊಳ್ಳಲಾಗುವುದು. ಹೀಗೆ ವರ್ಷಕ್ಕೆ ಮೂರು ಲಕ್ಷ ರೂಪಾಯಿಗಳಂತೆ ಮೊದಲಿನ ಹತ್ತು ವರ್ಷಗಳಲ್ಲಿ ಕೂಡುವ ೩೦ ಲಕ್ಷ ರೂಪಾಯಿಗಳ ದಾನದಿಂದ ಕಾಲೇಜಿಗೆ ಬೇಕಾದ ಸಾಧನ ಸಲಕರಣೆಗಳನ್ನು ಒದಗಿಸಲಾಗುವುದು. ಒಮ್ಮೆ ಕಾಲೇಜು ತನ್ನೆಲ್ಲ ಆವಶ್ಯಕತೆಗಳನ್ನು ಪೂರೈಸಿ ಭವ್ಯವಾಗಿ ತಲೆಎತ್ತಿ ನಿಲ್ಲುವಂತಾದ ಬಳಿಕ, ಈ ದಾನ ಕೊಡಬೇಕೆಂದು ವಿದ್ಯಾರ್ಥಿಗಳಿಗಿರುವ ನಿರ್ಬಂಧ ಉಳಿಯುವುದಿಲ್ಲ.

ಜನತೆಯ ಬೆಂಬಲ

ಈ ಯೋಜನೆಯ ಆಶಯ-ಹಣಾಭಾವದಿಂದ ಅಥವಾ ಸರಕಾರ ಒಂದು ಕೆಲಸ ಮಾಡಲು ಚೇತನ ಪಡೆದಿಲ್ಲವೆನ್ನುವ ಕಾರಣದಿಂದ, ದೇಶದ ಆವಶ್ಯಕತೆಗಳ ಪೂರೈಕೆಯಾಗುವ ಕೆಲಸ ನಿಲ್ಲಲಾಗದೆಂಬುದೇ ಆಗಿರುತ್ತದೆ. ಹಣದ ದೃಷ್ಟಿಯಿಂದ ಅನುಕೂಲವುಳ್ಳ, ಮತ್ತು ವೈದ್ಯಕೀಯ ಶಿಕ್ಷಣ ಪಡೆಯುವ ಅಭಿಲಾಷೆಯುಳ್ಳ ವಿದ್ಯಾರ್ಥಿಗಳು ತಮ್ಮ ಸಂಪತ್ತಿನ ಒಂದಂಶವನ್ನು ರಾಷ್ಟ್ರದ ಜನಹಿತಕ್ಕೋಸ್ಕರ ಧಾರೆ ಎರೆಯಬೇಕೆಂದು ಡಾ| ಮಾಧವ ಪೈಗಳು ಯೋಜಿಸಿದ್ದು ಅತ್ಯಂತ ಸಮಾಧಾನಕರವೂ ಅನುಕರಣೀಯವೂ ಪ್ರಗತಿಶೀಲವೂ ರಾಷ್ಟ್ರದ ಅಭಿವೃದ್ಧಿಗೆ ಪೋಷಕವೂ ಆದ ಉಪಾಯವೆಂದು ಈಗ ಎಲ್ಲರೂ ಅಭಿಮಾನದಿಂದ ಹೇಳುತ್ತಿರುವರು. ಸರಕಾರಕ್ಕೆ ಸಹ ಸ್ವಂತ ಹೊಣೆಯಿಂದ ಈ ಮಾದರಿಯ ಸಾಹಸಕ್ಕೆ ಇಳಿಯುವ ಧೈರ್ಯವಿಲ್ಲದಾಗ, ಡಾ| ಪೈಗಳು ಜನತಾ ಸಹಕಾರ ದೊರೆತೇ ತೀರುವುದೆಂಬ ನಿಶ್ಚಲ ಭರವಸೆಯಿಂದ ಕೆಲಸವನ್ನು ಕೈಗೊಂಡು ಮುನ್ನಡೆದುದು ಅವರ ಎದೆಗಾರಿಕೆಗೊಂದು ನಿದರ್ಶನ. ಸತತ ಪ್ರಯತ್ನಗಳ ಮೂಲಕ ಕರ್ನಾಟಕ ವಿಶ್ವವಿದ್ಯಾನಿಲಯದ ಸೇರ್ಪಡೆಯನ್ನು ದೊರಕಿಸಿದ್ದಲ್ಲದೆ, ಮುಂಬಯಿ ಮತ್ತು ಮದ್ರಾಸು ರಾಜ್ಯ ಸರಕಾರಗಳ ಬೆಂಬಲವನ್ನೂ ಡಾ. ಪೈಗಳು ಪಡೆದುಕೊಂಡರು.

ಉದ್ಘಾಟನೋತ್ಸವ

ಮೊನ್ನೆ ದಿನಾಂಕ ೩೦-೬-೧೯೫೩ನೇ ಮಂಗಳವಾರ ಪೂರ್ವಾಹ್ನ ೧೦–೧೫ಕ್ಕೆ ಈ ಕಾಲೇಜಿಗಾಗಿ ಹೊಸತಾಗಿ ನಿರ್ಮಿಸಿದ ಭವ್ಯವಾದ ಅಸ್ಥಿಪಂಜರ ರಚನಾ ಶಾಸ್ತ್ರ ವಿಭಾಗದಲ್ಲಿ ಉದ್ಘಾಟನಾ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಅಖಿಲ ಭಾರತ ವ್ಯಾಪ್ತಿಯುಳ್ಳ ಈ ಕಾಲೇಜಿನಲ್ಲಿ ಪ್ರಕೃತಕ್ಕೆ ದಕ್ಷಿಣ ಭಾರತದ ವಿದ್ಯಾರ್ಥಿಗಳ ಬಾಹುಳ್ಯವಿದೆ. ಮದ್ರಾಸು ಸರಕಾರದ ಸಾರ್ವಜನಿಕ ಆರೋಗ್ಯ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಶೆಟ್ಟರು ಕಾಲೇಜಿನ ಉದ್ಘಾಟನೆಯನ್ನು ಮಾಡಿದರು. ಮಾನ್ಯ ಮಂತ್ರಿಗಳು ಮಣಿಪಾಲಕ್ಕೆ ಆಗಮಿಸಿದೊಡನೆಯೇ ಅವರಿಗೆ ಸಂಭ್ರಮದ ಸ್ವಾಗತವನ್ನು ನೀಡಲಾಯಿತು. ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿಗಳು ಮಂತ್ರಿಗಳಿಗೆ ಗೌರವ ರಕ್ಷೆಯನ್ನು ನೀಡಿದರು. ಡಾ| ಮಾಧವ ಪೈ, ಎಕಾಡೆಮಿಯ ಅಧ್ಯಕ್ಷ ಶ್ರೀ. ವೈಕುಂಠ ಬಾಳಿಗಾ, ಕಾಲೇಜಿನ ಪ್ರಿನ್ಸಿಪಾಲರಾದ ಕೆಪ್ಟನ್ ಎನ್. ಮಂಗೇಶ ರಾವ್ ಮುಂತಾದವರು ಮಂತ್ರಿಗಳನ್ನು ಕಿಕ್ಕಿರಿದು ತುಂಬಿದ ಮತ್ತು ಆಕರ್ಷಕವಾಗಿ ಶೃಂಗರಿಸಿದ ಸಭಾಭವನಕ್ಕೆ ಕರೆದೊಯ್ದರು. ಊರ ಪರವೂರ ನಾಗರಿಕರೂ ಜಿಲ್ಲೆ ಹಾಗೂ ಹೊರನಾಡಿನ [illegible] ಈ ಸಮಾರಂಭಕ್ಕೆ ಚಿತ್ತೈಸಿದ್ದರು.

ಸಂಭ್ರಮದ ಸ್ವಾಗತ

ಪ್ರಾರಂಭದಲ್ಲಿ ಶ್ರೀ. ಎಸ್. ಕೆ. ಶ್ರೀಪತಿ ಆಚಾರ್ಯರು ಸಂಸ್ಕೃತದಲ್ಲಿ ಶ್ರೀಯಃ ಪ್ರಾರ್ಥನೆಯನ್ನು ಮಾಡಿದರು. ಸ್ವಾಮಾಲೆಗಳನ್ನಿತ್ತು ಮಂತ್ರಿಗಳನ್ನು ಗೌರವಿಸಲಾಯಿತು. ನಂತರ ಡಾ| ಪೈಗಳು ಸ್ವಾಗತ ಭಾಷಣ ಮಾಡುತ್ತಾ, ವೈದ್ಯಕೀಯ ಶಿಕ್ಷಣ ಸೌಲಭ್ಯವನ್ನೊದಗಿಸಿಕೊಡುವ ಈ ಕಾಲೇಜಿನ ಇತಿಹಾಸವನ್ನು ಹೃದಯಂಗಮವಾಗಿ ವಿವರಿಸಿದರು. ವಿದ್ಯಾಸಂಸ್ಥೆಗಳ ಮೇಲೆ ನಿಯಮನಿರ್ಬಂಧಗಳ ಬಂಧನ ಹೇರುವುದಕ್ಕಿಂತಲೂ ಹೆಚ್ಚು ಅವುಗಳ ಉದ್ದೇಶದಿಂದ ನೆರವೇರುವ ಸೇವೆಯನ್ನು ಗಮನಿಸಬೇಕೆಂಬುದು ಡಾ. ಪೈಗಳ ಅಭಿಪ್ರಾಯವಾಗಿರುತ್ತದೆ. ಡಾ| ಪೈಗಳ ಈ ಅಭಿಪ್ರಾಯವನ್ನು ಪುಷ್ಟೀಕರಿಸುವ ರೀತಿಯಲ್ಲಿಯೇ ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಸಂದೇಶಗಳು ಬಂದಿದ್ದವು. ಅವುಗಳಲ್ಲಿ ಮುಖ್ಯವಾದವುಗಳನ್ನು ಶ್ರೀ ಟಿ. ಎ. ಪೈಗಳು ಓದಿ ಹೇಳಿದರು. ಮದ್ರಾಸು, ಮುಂಬಯಿ ಹಾಗೂ ಕೇಂದ್ರ ಸರಕಾರದ ಮಂತ್ರಿಗಳು, ರಾಜಾಜಿ, ಗವರ್ನರ ಶ್ರೀಪ್ರಕಾಶ್, ಶ್ರೀ. ನಿಜಲಿಂಗಪ್ಪ, ಆಂಧ್ರ ವಿಶ್ವವಿದ್ಯಾನಿಲಯದ ಉಪಕುಲಪತಿ ಮುಂತಾದವರು ಸಂದೇಶ ಕಳುಹಿಸಿ ಕಾಲೇಜಿಗೆ ಇತೋಪ್ಯತಿಶಯವಾದ ಶ್ರೇಯಸ್ಸನ್ನು ಕೋರಿದರು.

ಮಂತ್ರಿಗಳ ಪ್ರಶಂಸೆ

ಮಾನ್ಯ ಶ್ರೀ ಎ. ಬಿ. ಶೆಟ್ಟರು ಆ ಬಳಿಕ ಕಾಲೇಜನ್ನು ವಿಧ್ಯುಕ್ತವಾಗಿ ಉದ್ಘಾಟಿಸುತ್ತಾ ಡಾ. ಪೈ ಹಾಗೂ ಎಕೆಡೆಮಿಯ ಉತ್ಸಾಹೀ ಕಾರ್ಯಕರ್ತರ ಸಾಹಸವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು. ಕಷ್ಟ ಪರಂಪರೆಗಳು ಕಾದಿದ್ದರೂ ಎದೆಗುಂದದೆ ಧ್ಯೇಯದ ಕಡೆಗೆ ಮುನ್ನಡಿ ಇಟ್ಟ ಮಾಧವ ಪೈಗಳ ವ್ಯಕ್ತಿತ್ವವನ್ನು ಅವರು ಬಹಳವಾಗಿ ಮೆಚ್ಚಿಕೊಂಡರು. ಖಾಸಗಿ ಸಂಸ್ಥೆಯೊಂದು ಈ ತೆರನಾದ ಮಹೋದ್ಯಮದಲ್ಲಿ ಕೈಹಾಕುವುದು ಎಲ್ಲಕ್ಕೂ ಹೆಚ್ಚು ಧೈರ್ಯದ ಕ್ರಮವೆಂದು ಮಂತ್ರಿಗಳು ಹೇಳಿದರು. ಹಳ್ಳಿಗಳಲ್ಲಿ ಆರೋಗ್ಯ ಪ್ರಚಾರ ಹಾಗೂ ವೈದ್ಯಕೀಯ ಸೌಲಭ್ಯಗಳು ದುರ್ಲಕ್ಷಿಸಲ್ಪಡುತ್ತಿವೆ. ಅವುಗಳನ್ನು ದೂರೀಕರಿಸುವುದಕ್ಕೆ ದಕ್ಷರಾದ ವೈದ್ಯರ ಆವಶ್ಯಕತೆ ತುಂಬ ಇದೆ. ಆದುದರಿಂದಲೇ ರಾಜಾಜಿಯವರು ಕಡಿಮೆ ಅವಧಿಯಲ್ಲಿ ಯೋಗ್ಯತಾಸಂಪನ್ನ ವೈದ್ಯರನ್ನು ತರಬೇತಿಮಾಡಿದರೆ ಆಗದೆ ಎಂದೊಂದು ಯೋಜನೆ ತಯಾರಿಸಿದ್ದುಂಟು. ವೈದ್ಯಕೀಯ ಶಿಕ್ಷಣಕ್ಕೆ ಹೆಚ್ಚು ಅವಕಾಶ ದೊರೆಯುವುದಕ್ಕೆ ಪ್ರತಿಭಾಸಂಪನ್ನ ಶಿಕ್ಷಕವೃಂದವೂ ಬೇಕು. ಈ ದೃಷ್ಟಿಯಿಂದ ಈಗ ೫೫ನೇ ವಯಸ್ಸಿಗೆ ನಿವೃತ್ತಿಹೊಂದುತ್ತಿರುವ ವೈದ್ಯಕೀಯ ಶಿಕ್ಷಕರನ್ನು ೬೦ ವರ್ಷದ ವರೆಗೂ ಉಳಿಸಿಕೊಳ್ಳುವ ವಿಚಾರ ನಡೆದಿದೆ. ದಕ್ಷಿಣ ಕನ್ನಡದಲ್ಲಿ ಬ್ಯಾಂಕಿಂಗ್, 'ಇನ್ಶೂರೆನ್ಸ್' ಕಂಪೆನಿಗಳನ್ನೂ ವಿದ್ಯಾಸಂಸ್ಥೆಗಳನ್ನೂ ಯೋಗ್ಯ ರೀತಿಯಲ್ಲಿ ನಡೆಯಿಸುತ್ತಾ ಬಂದ ಡಾ| ಮಾಧವ ಪೈಗಳ ಸಾಹಸವನ್ನು ಎಲ್ಲರೂ ಅನುಸರಿಸಬೇಕು. ಅನುಕೂಲವುಳ್ಳವರೆಲ್ಲ ಈ ಕಾಲೇಜಿಗೆ ನೆರವು ಕೊಡಬೇಕು. ಈ ಕಾಲೇಜು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರವಲ್ಲ ಹೊರನಾಡಿಗೂ ಒಂದು ಭೂಷಣ ಎಂದು ಮಂತ್ರಿಗಳು ಕೊಂಡಾಡಿ, ಕಾಲೇಜಿಗೆ ಉತ್ತರೋತ್ತರ ಯಶಸ್ಸು ದೊರೆಯಲೆಂದು ಹಾರೈಸಿದರು. ಮಂತ್ರಿಗಳಿಗೆ ಈ ಶುಭದಿನದ ನೆನಪಿಗೆಂದು ಗಂಧದ ಕೆತ್ತನೆಯ ಕಸ್ತೂರ್ಬಾ ಕೆಲೆಂಡರನ್ನು ಕಾಲೇಜು ಪ್ರಿನ್ಸಿಪಾಲರು ಒಪ್ಪಿಸಿದರು.

ಆಭಾರ ಪ್ರದರ್ಶನ

ಕಾಲೇಜು ವಿದ್ಯಾರ್ಥಿಗಳು ಕಾಸ್ಕೆಟಿನಲ್ಲಿ ಅರ್ಪಿಸಿದ ಮಾನಪತ್ರಕ್ಕೆ ಡಾ| ಪೈಗಳು ಅತ್ಯಂತ ಸ್ಫೂರ್ತಿಯುತವಾದ ಉತ್ತರವನ್ನು ಕೊಟ್ಟರು. ಮಕ್ಕಳ ಹಿತದೃಷ್ಟಿಗಾಗಿ ಹೆತ್ತವರ ಮಾಡಬೇಕಾದ ತ್ಯಾಗದ ಆದರ್ಶವನ್ನವರು ಪ್ರತಿಪಾದಿಸಿದರು. ಅಲ್ಲದೆ, ಹಲವರಿಂದ ಬಂದ ಸೂಚನೆಯಂತೆ, ಇನ್ನು ಮುಂದೆ ಕಾಲೇಜಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡುವ ವಿಧಾನವನ್ನೂ ಪ್ರಕಟಪಡಿಸಿದರು. ಇದರಂತೆ ೬೦ ಸೀಟುಗಳನ್ನು ಮಾತ್ರ ಮುಂಚಿತವಾಗಿ ಕಾದಿಡಲಾಗುವುದು. ೨೦ ಸೀಟುಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೋಸ್ಕರ ಕೊಡಲಾಗುವುದು. ಉಳಿದುದರಲ್ಲಿ ಹತ್ತು ಸೀಟುಗಳು ಡಾಕ್ಟರರ ಮಕ್ಕಳಿಗೋಸ್ಕರ ಕಾದಿಡಲ್ಪಡುತ್ತವೆ. ಬಾಕಿ ೧೦ ಸೀಟುಗಳು ಸಾಮಾನ್ಯ ವಿದ್ಯಾರ್ಥಿಗಳಿಗೆ ತೆರೆದಿರುತ್ತವೆ.

ಅನಂತರ ಸಭಿಕರ ಕಡೆಯಿಂದ ಡಾ| ಕೊಯಿಲೊ, ಕೆ. ಸಿ. ನಂಬಿಯಾರ, ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿನಿಧಿಗಳಾದ ಡಾ| ಜೋಶಿ ಮಾತನಾಡಿದರು.

ಎಕಡೆಮಿಯ ಅಧ್ಯಕ್ಷ [illegible] ವೈಕುಂಠ ಬಾಳಿಗಾ ಈ ಕೆಲಸಕ್ಕೆ ನೆರವಾದೆಲ್ಲರಿಗೂ ಹೃತ್ಪೂರ್ವಕ ಆಭಾರ ಮನ್ನಿಸಿದರು. ಕೊನೆಯಲ್ಲಿ ಮಾನ್ಯ ಮಂತ್ರಿಗಳನ್ನೂ ಇತರರನ್ನೂ ಕಾಲೇಜಿನ ಕಟ್ಟಡಗಳ ಸುತ್ತ ತಿರುಗಾಡಿಸಲಾಯಿತು.

ಡಾ| ಟಿ. ಎಂ. ಎ. ಪೈಗಳಿಗೆ ಕಾಂಗ್ರೆಸ್ ಕಮಿಟಿಯ ಮಾನಪತ್ರ—ಉಡುಪಿಯ ನವನಿರ್ಮಾಣ ಕರ್ತ, ಮೆಡಿಕಲ್ ಕಾಲೇಜ್ ಸ್ಥಾಪಿಸಿದ ಭಗೀರಥ ಡಾ| ಟಿ. ಎಂ. ಎ. ಪೈಗಳಿಗೆ ತಾ 30 ರಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯರು ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಸೇರಿದ ಸಭೆಯಲ್ಲಿ ಮಾನಪತ್ರವೊಂದನ್ನು ಅರ್ಪಿಸಿದರು. ಡಾ| ಪೈಗಳು ಈ ರೀತಿ ಗೌರವಿಸಿದುದಕ್ಕೆ ಆಭಾರ ಸೂಚಿಸಿ ಮಾತನಾಡಿ ಮೆಡಿಕಲ್ ಕಾಲೇಜಿನ ಅಭ್ಯುದಯಕ್ಕೆ ಸರ್ವರೂ ಸಹಕರಿಸಬೇಕೆಂದರು. ಅಧ್ಯಕ್ಷರು ಅತಿಥಿಗಳ ಸಾಹಸವನ್ನು ಕೊಂಡಾಡಿ ಭಾಷಣವಿತ್ತ ಮೇಲೆ ಕಾರ್ಯದರ್ಶಿ ಶ್ರೀ. ಕೆ. ನರಹರಿ ಕಾಮತರು ಧನ್ಯವಾದಗಳನ್ನರ್ಪಿಸಿದರು. (ಮಂತ್ರಿ ಎ. ಬಿ. ಶೆಟ್ಟರಿಗೂ ಮಾನಪತ್ರ ಕೊಡುವ ವ್ಯವಸ್ಥೆಯಾಗಿತ್ತು. ಆದರೆ ಅವರು ಬರಲಾಗದ ಪರಿಸ್ಥಿತಿಯನ್ನು ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಗಳು ಸಭಾರಂಭದಲ್ಲಿ ಸೂಚಿಸಿದ್ದರು.)

ಮಂಗಳೂರು

ಜಿಲ್ಲಾ ಬೋರ್ಡು ಆಫೀಸಿನಲ್ಲಿ ಭಾವಚಿತ್ರ ಅನಾವರಣ ಸಮಾರಂಭ

ತಾ. 28ರಂದು ಬೆಳಿಗ್ಗೆ ಜಿಲ್ಲಾ ಬೋರ್ಡಿನ ಸಭಾಭವನದಲ್ಲಿ ಜಿಲ್ಲಾ ಬೋರ್ಡಿನ ಮಾಜಿ ಪ್ರೆಸಿಡೆಂಟ್ ದಿವಂಗತ ಡಾ॥ ವಿಠಲ ಶೆಟ್ಟರ ಭಾವಚಿತ್ರವನ್ನು ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರೂ, ಈಗತಾನೆ ನಿವೃತ್ತಿಹೊಂದಿದ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಭಾವಚಿತ್ರವನ್ನು ಶ್ರೀ. ಕೆ. ಆರ್. ಆಚಾರ್ಯರೂ ಅನಾವರಣ ಮಾಡಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರಿನ ಬಿಶೋಫ್ ರೈ ಫಾ। ಬಿ. ಎಸ್. ಪೆರಿಸ್ ಅವರು ವಹಿಸಿದ್ದರು.

ಶ್ರೀ ಎ. ಬಿ. ಶೆಟ್ಟರು ಡಾ॥ ವಿಠಲ ಶೆಟ್ಟರ ಕುರಿತು ಮಾತನಾಡುತ್ತಾ "ಶ್ರೀ ವಿಠಲ ಶೆಟ್ಟರು ಜಿಲ್ಲಾ ಬೋರ್ಡು ಮತ್ತು ನಗರ ಸಭೆಯ ಅಧ್ಯಕ್ಷರಾಗಿ ಸಾರ್ವಜನಿಕ ಕೆಲಸಮಾಡಿದರು. ಅವರು ತಮ್ಮ ಆಡಳಿತೆಯ ಕಾಲದಲ್ಲಿ ಜಿಲ್ಲಾ ಬೋರ್ಡು ಸಭಾ ಭವನವನ್ನು, ಜಿಲ್ಲೆಯಲ್ಲಿ ಹಲವು ಶಾಲೆಗಳನ್ನು ಮತ್ತು ಆಸ್ಪತ್ರೆಯನ್ನು ಕಟ್ಟಿಸಿದರು. ಅವರು ಡಾಕ್ಟರರಾಗಿದ್ದರೂ ತನ್ನ ಕೆಲಸವನ್ನು ಬಿಟ್ಟು ಸಾರ್ವಜನಿಕ ಕೆಲಸವನ್ನು ಶ್ರಮಪಟ್ಟು ಮಾಡಿದರು" ಎಂದು ಹೇಳಿದರು.

ಬಳಿಕ ಜಿಲ್ಲಾ ಬೋರ್ಡಿನ ಆಡಳಿತೆ ಕುರಿತು ಮಾತನಾಡುತ್ತಾ "ಜಿಲ್ಲಾ ಬೋರ್ಡಿನಲ್ಲಿ ಪ್ರಬಲವಾದ ಪ್ರತಿ ಪಕ್ಷ ಇರಬೇಕು. ಯಾವ ನಿರ್ಣಯವನ್ನಾದರೂ ಕೂಡಾ, ಅದನ್ನು ಸರಿಯಾಗಿ ಚರ್ಚಿಸಿ ಕಾರ್ಯರೂಪಕ್ಕೆ ತರಬೇಕು. ಜಿಲ್ಲಾ ಬೋರ್ಡು ಸದಸ್ಯರಿಗೆ ರಾಜಕೀಯ ಶಿಕ್ಷಣದ ತರಬೇತಿ ಸ್ಥಳವಾಗಿದೆ. ನಾನು ಜಿಲ್ಲಾ ಬೋರ್ಡು ಪ್ರೆಸಿಡೆಂಟನಾಗಿದ್ದಾಗ ಪ್ರಬಲವಾದ ಪ್ರತಿ ಪಕ್ಷ ಮತ್ತು ಜಿಲ್ಲಾ ಬೋರ್ಡಿನವರು ಮತ್ತು ನಗರ ಸಭೆಯವರು ಮದ್ರಾಸು ಕೊರ್ಪರೇಶನಿನಂತೆ ವಿವಿಧ ಅಧ್ಯಕ್ಷರ ಕಾಲದಲ್ಲಿ ಮಾಡಿದ ಅಭಿವೃದ್ಧಿ ಕುರಿತು ಸಾರ್ವಜನಿಕರಿಗೆ ತಿಳಿಯುವಂತೆ ಮಾಡಲು ಪುಸ್ತಕಗಳನ್ನು ಪ್ರಕಟಿಸಬೇಕು" ಎಂದೂ ಹೇಳಿದರು.

ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ ಅವರು ಮಾತನಾಡಿದರು. ಜಿಲ್ಲಾ ಬೋರ್ಡಿನ ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಸ್ವಾಗತ ಭಾಷಣ ಮಾಡಿದರು. ಡಾ॥ ಕೆ. ನಾಗಪ್ಪ ಆಳ್ವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

WANTED

a trained Mathematics Graduate immediately. Apply to the Correspondent, Christian High School, Udipi. Copy of application to be sent to the D. E. O., S. Kanara.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. ೫—೮—೦

ನವಭಾರತ ಬುಕ್ ಡಿಪೊ, ಉಡುಪಿ
ನವಯುಗ ಪ್ರೆಸ್, ಉಡುಪಿ.

ಜಿಲ್ಲಾ ಬೋರ್ಡಿನ ಸಭೆಯು— ತಾ 27ರಲ್ಲಿ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನದ ಬಗ್ಗೆ ದುಃಖ ಸೂಚಕ ನಿರ್ಣಯವಾಯಿತು. ಜಿಲ್ಲಾ ಬೋರ್ಡಿನ, ಮಂಗಳೂರು ಕೇಂದ್ರದ ಕಚೇರಿಯಲ್ಲಿ ಕೆಲಸ ಮಾಡುವ ನೌಕರರಿಗೆ ಎರಡು ತಿಂಗಳ ಸಂಬಳವನ್ನು ಮುಂಗಡ ಕೊಡಬೇಕೆನ್ನುವ ಆಕ್ಷೇಪ ಪುರದಲ್ಲಿ ವಾರದ ಸಂತೆ ತೆರೆಯಬೇಕೆನ್ನುವ—ಮೂಡಬಿದ್ರೆಯಿಂದ ಬಜ್ಪೆವರೆಗೆ ಟೆಲಿಗ್ರಾಫ್ ಲೈನನ್ನು ಮುಂದರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳಬೇಕೆನ್ನುವ ನಿರ್ಧಾರವಾಯಿತು. ಇಂದಿನ ಸಭೆಯು ಕೊನೆಯ ಸಭೆಯಾದುದರಿಂದ ಬೋರ್ಡು ಪ್ರೆಸಿಡೆಂಟರ ಸೇವೆಯನ್ನು ಪ್ರಶಂಶಿಸಿ ಕೆಲವರು ಮಾತನಾಡಿದರು. ಅಧ್ಯಕ್ಷ ಹೆಗ್ಡೆಯವರು ಮೆಂಬರರ ಮತ್ತು ಕಾರ್ಯದರ್ಶಿಯರ ಸಹಕಾರಕ್ಕಾಗಿ ಉಪಕಾರ ಸ್ಮರಣೆ ಮಾಡಿದರು.

ಮಂಗಳೂರು ನಗರ ಸಭೆಯು— ತಾ 27ರಲ್ಲು ಶ್ರೀ ಕೆ. ಸೂರ್ಯ ನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ಅಕಾಲ ನಿಧನದ ಕುರಿತು ಸಂತಾಪ ಸೂಚಿಸುವ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಮದ್ರಾಸು ಸರಕಾರವು ಮಂಗಳೂರು ನಗರದ ನೀರು ಸರಬರಾಯಿಗೋಸ್ಕರ ರೂ 10·5 ಲಕ್ಷವನ್ನು ಸಾಲಕೊಡಲು ನಿಶ್ಚಯಿಸಿದೆ. ಆದುದರಿಂದ ಉಳಿದ 15 ಲಕ್ಷವನ್ನು ಸೇಕಡಾ 4½ರ ಬಡ್ಡಿಯ ದರದಲ್ಲಿ ಸಾಲವೆತ್ತಲು ನಿರ್ಧಾರವಾಯಿತು ಈ ಸಾಲವನ್ನು 15 ಕಂತುಗಳಲ್ಲಿ ಮರು ಪಾವತಿ ಮಾಡಿ ಪ್ರತಿ 5 ವರ್ಷಗಳಲ್ಲಿ ⅓ನೆ ಅಂಶ ಸಾಲವನ್ನು ತೀರಿಸಲಾಗುವುದು.

ಗೌರಿಶಂಕರ ವಿಜಯ ಟೆನ್ನಿಸ್ ಸಿಂಗರಿಗೆ ಶುಭವನ್ನು ಕೋರುತ್ತಾ, ಅವರಿಗೆ ರೂ 51ನ್ನು ಕೊಡಲು ನಗರ ಸಭೆಯು ನಿಶ್ಚಯಿಸಿತು. ಈ ಹಣವನ್ನು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರಿಗೆ ಕಳುಹಿಸಿ ಟೆನ್ನಿಸ್‌ರಿಗೆ ಕೊಡುವಂತೆ ತಿಳಿಸಬೇಕೆಂದಾಯಿತು.

ಸಂತಾಪ ಸೂಚಕ ಸಭೆ— ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನಕ್ಕಾಗಿ ಸಂತಾಪ ಸೂಚಿಸುವ ಸಭೆಯು ಕೇಂದ್ರ ಮೈದಾನಿನಲ್ಲಿ ತಾ 23ರಲ್ಲಿ ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಮರುದಿನ ಹಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ತೈಲಚಿತ್ರ ಅನಾವರಣ— ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘದ ಜಿಲ್ಲಾ ಶಾಖೆಯಲ್ಲಿ ದಿವಂಗತ ಎಮ್. ವೆಂಕಟೇಶ ಪೈಗಳ ಒಂದು ತೈಲಚಿತ್ರವನ್ನು ಅನಾವರಣ ಮಾಡಲಾಯಿತು. ನಿವೃತ್ತ ನ್ಯಾ। ಮೂ। ಶ್ರೀ ಕೆ. ಪಿ. ಲಕ್ಷ್ಮಣರಾಯರು ಅಧ್ಯಕ್ಷರಾಗಿದ್ದರು. ಶಾಖೆಯ ಅಧ್ಯಕ್ಷ ಶ್ರೀ ಕೆ. ಸದಾನಂದ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದ ಮೇಲೆ ಜಿಲ್ಲಾ ಸ್ಕೌಟ್ ಕಮಿಶನರ್ ಶ್ರೀ ಬಿ. ಸೋಮಶೇಖರ ರಾಯರು ದಿವಂಗತರ ಕುರಿತು ಮಾತನಾಡಿದರು. ಶ್ರೀ ಎಸ್. ನರಸಿಂಹಯ್ಯನವರು ವಂದನೆಗಳನ್ನರ್ಪಿಸಿದರು.

ಬಡಾನಿಡಿಯೂರು— ಬಡಾನಿಡಿಯೂರು, ಕೆರೆತೋಟಬೆಟ್ಟು ಗ್ರಾಮಗಳಿಗಾಗಿ ಕೆಲವು ವರುಷದ ಹಿಂದೆ ಜನರ ಕೇಳಿಕೆಯ ಮೇರೆಗೆ ಬಡಾನಿಡಿಯೂರಿನಲ್ಲಿ ಬ್ರಾಂಚ್ ಪೋಸ್ಟಾಫೀಸೊಂದನ್ನು ತೆರೆಯಲಾಗಿತ್ತು. ಅದರೂ ಅದು ಎರಡೂ ಗ್ರಾಮದ ಜನತೆಗೆ ಹೆಚ್ಚಿನ ಪ್ರಯೋಜನವಾಗದ ಮೂಲೆಯೊಂದರಲ್ಲಿ ಸ್ಥಾಪಿತವಾಗಿತ್ತು. ಇಲ್ಲಿನ ನಿವಾಸಿಗರು ಈ ಅಂಚೆಮನೆ ಜನವಸತಿಯಿಲ್ಲದ ಮೂಲೆಯೊಂದರಲ್ಲಿರುವುದರಿಂದ ದೈನಂದಿನ ಉಪಯೋಗಕ್ಕೆ ದೀಳುವ ಮತ್ತು ಹೆಚ್ಚಿನ ಪ್ರಯೋಜನಕಾರಿಯಾದ ಇಂತಹ ಜನೋಪಯೋಗಿ ಸಂಸ್ಥೆಯ ಸದುಪಯೋಗಪಡಿಸಿಕೊಳ್ಳಲು ಅನಾನುಕೂಲವೆಂದು ಅಂಚೆ ಮತ್ತು ತಂತಿ ಶಾಖಾ ಸುಪರಿಂಟೆಂಡರಿಗೂ ಪೋಸ್ಟ್‌ಮಾಸ್ಟರ ಜನರಲರಿಗೂ ಮನವಿಯೊಂದನ್ನು ಕಳುಹಿಸಿದ್ದರು.

ಜನರ ಕೋರಿಯನ್ನು ಮನ್ನಿಸಿ ಇದೇ ಮೇ ತಾ. 7ರಂದು ಅಂಚೆ ಮತ್ತು ತಂತಿ ಶಾಖಾ ಸುಪರಿಂಟೆಂಡರು ಸ್ವತಃ ಇಲ್ಲಿಗೆ ಬಂದು ಪರಿಸ್ಥಿತಿಯನ್ನು ಪರಿಶೀಲಿಸಿ ಜನರ ಕೇಳಿಕೆಗಳು ನ್ಯಾಯವಾದುದು ಎಂದು ಮನಗಂಡು ಅಂಚೆ ಆಫೀಸನ್ನು ಎರಡೂ ಗ್ರಾಮಗಳ ಜನತೆಗೆ ಉಪಯೋಗವಾಗುವಂತೆ ಕೇಂದ್ರ ಸ್ಥಳಕ್ಕೆ ವರ್ಗಾಯಿಸುವರೆ ಹುಕುಂ ಕೊಟ್ಟಂತೆ ತಾ. 29-6-1953ರಿಂದ ಅಂಚೆಮನೆ ಗ್ರಾಮದ ಕೇಂದ್ರ ಸ್ಥಳದಲ್ಲಿ ಸ್ಥಾಪಿತವಾಗಿದೆ. ಇನ್ನಾದರೂ ಈ ಜನೋಪಯೋಗಿ ಸಂಸ್ಥೆಯ ಹೆಚ್ಚಿನ ಪ್ರಯೋಜನ ಜನತೆಗೆ ಸಿಗುವಂತಾಗಲೆಂದು ಹಾರೈಕೆ.

ಕುಂಬಳೆ— ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನದ ನಿಮಿತ್ತವಾಗಿ ತಾ. 24ರಲ್ಲು ಹೆಚ್ಚಿನ ಅಂಗಡಿಗಳು ಹರತಾಳವನ್ನಾಚರಿಸಿದ್ದವು. ಸಂಜೆ ಶ್ರೀ. ಬಾಬುರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಸಂತಾಪಸೂಚಕ ನಿರ್ಣಯವಾಯಿತು.

ಇಲ್ಲಿಯ ಕೆಲವು ಯುವಕರ ಪರಿಶ್ರಮದ ಫಲವಾಗಿ ಪೇಟೆನಲ್ಲಿ ವಾಚನಾಲಯವೊಂದು ತೆರೆಯಲ್ಪಟ್ಟಿದೆ.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ತಾ. 26ರಲ್ಲು ಶ್ರೀ. ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು, ಕೆಲವು ಕಾಮಗಾರಿಕೆಗಳ ಬಗ್ಗೆ ಹಣ ಮಂಜೂರಾದುದಲ್ಲದೆ ವನಮಹೋತ್ಸವವನ್ನು ಆಚರಿಸಬೇಕೆಂದಾಯಿತು.

ಕುರುಕಾಲು— ತಾ, ೨೭-೬ ೫೩ರಲ್ಲಿ ಪಂಚಾಯತ ಬೋರ್ಡಿನ ಸಭೆಯು ಶ್ರೀ. ಕೆ. ವಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದು ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ಆಕಸ್ಮಿಕ ನಿಧನದ ಬಗ್ಗೆ ದುಃಖ ಸೂಚಿಸಲಾಯಿತು.

ಕುಂದಾಪುರ— ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಇವರ ಸನ್ಮಾನಾರ್ಥವಾಗಿ ಸತ್ಕಾರ ಕೂಟವೊಂದು ತಾ 28ರಲ್ಲಿ ಕುಂದಾಪುರ 'ಪೂರ್ಣಿಮಾ' ಥಿಯೇಟರಿನಲ್ಲಿ ಜರಗಿತು. ಸಮಾರಂಭದ ಅಧ್ಯಕ್ಷಸ್ಥಾನವನ್ನು ಡಿ। ಮುನ್ಸಿಫ್ ಜನಾಬ್ ಯು. ಹಮ್ಮಬ ಅವರು ವಹಿಸಿದ್ದರು.

ಉಡುಪಿ

ದುಃಖಸೂಚಕ ಸಭೆ— ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ಅಕಾಲ ನಿಧನದ ಬಗ್ಗೆ ಉಡುಪಿಯ ನಾಗರೀಕರ ಸಂತಾಪಸೂಚಕ ಸಭೆಯು ತಾ. 24ರಂದು ಸಂಜೆ ರಥಬೀದಿಯಲ್ಲಿ ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಅನಂತಕೃಷ್ಣ ಶರ್ಮ ರಾಮದಾಸ ಶೆಣೈ ಮತ್ತು ಎ. ಜೆ. ಆಳ್ವ ಯವರು ದಿವಂಗತರ ಕುರಿತು ಭಾಷಣವಿತ್ತರು. ದುಃಖ ಸೂಚಕ ನಿರ್ಣಯವು ಸ್ವೀಕೃತವಾದ ಬಳಿಕ ಎರಡು ನಿಮಿಷಗಳ ಮೌನ ಪ್ರಾರ್ಥನೆ ನಡೆಯಿತು. ಅಂದು ಪೂರ್ವಾಹ್ನ ಸ್ಥಳೀಯ ಸಂಸ್ಕೃತ ಕಾಲೇಜಿನಲ್ಲೂ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಸಭೆಯು ಪ್ರಿನ್ಸಿಪಲ್ ಕೌಲಗಿ ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಶೋಕ ಸೂಚಕ ಗೊತ್ತುವಳಿಯಾಯಿತು.

ಮುನಿಸಿಪಲ್ ಕೌನ್ಸಿಲು ಸಭೆಯು— ತಾ 27ರಲ್ಲು ಸಂಜೆ ವೈಸ್ ಚೇರ್‌ಮೆನ್ ಡಾ॥ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮವಾಗಿ ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು.

ವನಿತಾಸಪ್ತಾಹದ ಬಗ್ಗೆ ರೂ 25 ಮಂಜೂರು ಮಾಡಲಾಯಿತು. ಹಿಂದೂ ಪ್ರಸೂತಿ ಸದನಕ್ಕೆ ಸಹಾಯ ಧನ ರೂ 60/ ಕೊಡಬಹುದೆಂದಾಯಿತು. ಶ್ರೀ ಕೆ. ಸದಾನಂದ ಶ್ಯಾನುಭೋಗರಿಗೆ ಎರಡು ಕುದುರೆ ಶಕ್ತಿಯ ಇಲೆಕ್ಟ್ರಿಕ್ ಮೋಟರ್ ಇಡಲು ಲೈಸನ್ಸು ಕೊಡುವ ವಿಚಾರದಲ್ಲಿ ಚರ್ಚೆ ನಡೆದು ಕೊನೆಗೆ ಬಹುಮತದಿಂದ ಲೈಸನ್ಸು ಕೊಡುವುದೆಂದಾಯಿತು. ಗುಂಡಿಬೈಲು ಕಡಿಯಾಳಿ ಮಾರ್ಗಗಳ ಮಧ್ಯೆ ಇರುವ ಗ್ರಿ— ಬಾಡಿಗಾಗಿ ಕಲ್ಲಿನ ಕಾಲ್ವಾರಿ ಹಾಸನ್ನು ಕೂಡಲೇ ದುರಸ್ತಿ ಪಡಿಸಬೇಕೆನ್ನುವ ಶ್ರೀಮತಿ ಮನೋರಮಾ ದೇವಿಯವರ ನಿರ್ಣಯವು ಸರ್ವಾನುಮತದಿಂದ ಪಾಸಾಯಿತು. ಎಪ್ರಿಲ್ ತಿಂಗಳಾಂತ್ಯದಲ್ಲಿ ಉಡುಪಿಗೆ ಬಂದಾಗ ಈ ನಗರ ಸಭೆಯು ಗವರ್ನರರಿಗೆ ಕೊಟ್ಟ ಮಾನಪತ್ರದ ಬೇಡಿಕೆಗಳ ಕುರಿತು ಬಂದ ಸರಕಾರ ಮೆಮೊರಾಂಡಮನ್ನು ರಿಕಾರ್ಡು ಮಾಡಲಾಯಿತು.

ವನಿತಾಸಪ್ತಾಹ ಕಾರ್ಯಕ್ರಮ— ಜುಲಾಯಿ ತಾ 1ರಿಂದ 7ರ ತನಕ ನಗರದ ಹೈಸ್ಕೂಲ್, ಕಾಲೇಜು, ಬಾಲಿಕಾ ಪಾಠಶಾಲೆ ಮೊದಲಾದ ಸ್ಥಳಗಳಲ್ಲಿ ಸಂಜೆ ಗಂಟೆ 4½ರಿಂದ ಸಾಗಿ ಆಚರಿಸಲಾಗುವುದೆಂದೂ ಕೊನೆಯ ದಿನ ಸಂಜೆ 5–30ಕ್ಕೆ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ಸಾರ್ವಜನಿಕ ಸಭೆ ಜರಗಲಿರುವುದಾಗಿಯೂ, ಮುನಿಸಿಪಲ್ ಕಮಿಶನರು ತಿಳಿಸುತ್ತಾರೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 213/53

ಕೃಷ್ಣ ಮರಕಾಲ —ವಾದಿ.

ಮತ್ತು

ಜೋಸೆಫ್ ಫೆರ್ನಾಂಡಿಸ್—ಇನಾಸ ಫೆರ್ನಾಂಡಿಸರ ಮಗ ಬಡಾನಿಡಿಯೂರು ಗ್ರಾಮದ ತೋಟಂ —ಪ್ರತಿವಾದಿ.

ಇವರೊಳಗೆ—

ವಾದಿಗೆ ಪ್ರತಿವಾದಿಯು ತಾ 30-3-50 ರಲ್ಲು ರೂ 50ಕ್ಕೆ ಬರಕೊಟ್ಟ ಡಿಮಾಂಡ ನೋಟು ಪ್ರಕಾರ ಬರತಕ್ಕ ಅಸಲು ಬಡ್ಡಿ ಖರ್ಚುಗಳ ವಸೂಲಿಗೆ ವಾದಿಯು ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾ. 6 7–53ಕ್ಕೆ ಪ್ರತಿವಾದಿಯ ನೋಟೀಸಿನ ಬಗ್ಗೆ ಇಟ್ಟಿದೆ. ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಪ್ರತಿವಾದಿಯು ಸ್ವತಹಾ ವ ವಕೀಲ ದ್ವಾರಾ ಸದ್ರಿ ನಂಬ್ರದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗುವರೇ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವನ್ನು ಪ್ರತಿವಾದಿಯ ಗೈರು ಹಾಜ್ರಿಯಿಂದ ತೀರ್ಮಾನಿಸಲ್ಪಡುವುದು.

Gratian C. Rego
Vakil for Plaintiff.

ಉಡುಪಿ ತಾರೀಕು. 27—6—53

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 270/195.

ದಿ ಕೆಥೊಲಿಕ್ ಬೇಂಕ್, ಲಿಮಿಟೆಡ್ ಉಡುಪಿ ಬ್ರೇಂಚ್ ಇವರ ಏಜಂಟ್ ವಿನ್ಸೆಂಟ್ ಅಂದ್ರಾದೆ —ವಾದಿ

ಮತ್ತು

ಪಿ. ಎಮ್. ಹುಸ್ಸೇನ್ ಸಾಹೇಬ್ —ಪ್ರತಿವಾದಿ

ಇವರೊಳಗೆ,

ಪಿ. ಎಮ್. ಹುಸ್ಸೇನ್ ಸಾಹೇಬ್, ಹೆಡ್‌ಮಾಸ್ಟರ್, ಮುನಿಸಿಪಲ್ ಹಿಂದುಸ್ತಾನಿ ಶಾಲೆ, ಮಸೀದಿ ರಸ್ತೆ, ಉಡುಪಿ —ಪ್ರತಿವಾದಿ

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ವಾದಿಯು ಪ್ರತಿವಾದಿ ಮೇಲೆ J. L. No. 26/130 ಮತ್ತು J. L. No. 26/1393 ಇವುಗಳ ಬಗ್ಗೆ ಬರಬೇಕಾದ ರೂ 54–10ಕ್ಕೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ಅಜ್ಜಿರು ನೋಟೀಸಿನ ಬಗ್ಗೆ 20-7-1953ಕ್ಕೆ ಇಟ್ಟಿರುವುದರಿಂದ ಆ ದಿವಸ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಅರಿಕೆ ಮಾಡಿಕೊಳ್ಳತಕ್ಕದ್ದು

K. Varadaraya Pa
Advocate for Plainti

ಉಡುಪಿ ತಾ 30 6-1953

...ವು ಹೊಸದಾರಿ ತುಳಿಯೋಣ!

(೩ನೇ ಪುಟದಿಂದ)

...ಹಿಸುವ ಬಗೆ ಏನೆಂಬುದನ್ನು ತಿಳಿಸಿ ...ಡುವ ಶಿಕ್ಷಣ ಮಾತ್ರ ದೊರೆಯಲಿ.

ಂಂ ಂಂ

ಈ ಹಂಬಲವನ್ನು ಹೆಚ್ಚಿಸ ವಿದ್ಯಾ...ಸ್ಥೆಗಳು ನಡೆಯಿಸಿ ಕೊಡುವುದಿಲ್ಲ. ...ಗಳು ಭಾರತದ ಪ್ರಾಚೀನ ಸಾಂಪ್ರದಾ...ಗಳ ಮಹತ್ವವನ್ನು ಸಾಕಷ್ಟು ಮನ...ಕೆ ಮಾಡಿಕೊಂಡಾತೆಯೂ ಇಲ್ಲ ಜನ...ಣದ ಕಡೆಗೆ ದೃಷ್ಟಿಹರಿಯಿಸಿದರೆ. ನ...ನಿರಕ್ಷರ ಕುಕ್ಷಿಗಳನ್ನು ಅಕ್ಷರಸ್ಥರನ್ನಾ...ವುದಕ್ಕೆ ಈಗಿನ ಪದ್ಧತಿ ಯೋಗ್ಯ...ಪಾಯವನ್ನು ಸೂಚಿಸುವುದಿಲ್ಲ ವಿದ್ಯಾ...ಗಳು ಐದು ವರ್ಷಕಾಲದ ಪ್ರಾಥಮಿ... ಶಿಕ್ಷಣಪಡೆದರೂ ಅವರ ಜ್ಞಾನ ಹೆಚ್ಚು...ಳ್ಳುವುದಿಲ್ಲ. ಐದು ವರ್ಷಗಳ ಶಿಕ್ಷ...ಂತ್ಯದಲ್ಲಿ ಅವರು ಶಿಕ್ಷಣಪಡೆಯದಿರು...ದ್ದರೆ ಹೇಗಿರುತಿದ್ದರೋ ಅದಕ್ಕಿಂತ ... ಕೆಟ್ಟ ಸ್ಥಿತಿಗೆ ಇಳಿದು...ಡುವರು. ವಿನೋಬಾ ಭಾವೆ...ವರು ಶಿಕ್ಷಣದ ಮಟ್ಟವು ದಿನ ದಿನ...ಕ್ಕೆ ಕುಸಿಯುತ್ತಿರುವುದನ್ನು ಮತ್ತೆ ...ಸು ವಿದ್ಯಾರ್ಥಿಗಳಿಗೆ ಮಾಡುತ್ತಿರುವ ...ನ್ಯಾಯವನ್ನು ಮನಗಂಡು, ಹೊರಡಿ... ಉದ್ಗಾರ ಅತ್ಯಂತ ಗಂಭೀರವಾ...—"ಕುಶಿಕ್ಷಣ ಕೊಡುವುದಕ್ಕಿಂತ ...ಕ್ಷಣವೇ ಅತ್ಯಂತ ಯೋಗ್ಯವಾದುದು. ...ವನವನ್ನು ಉನ್ನತ ಮಟ್ಟಕ್ಕೆ ಏರಿಸು... ಶಿಕ್ಷಣ ಪದ್ಧತಿಯನ್ನು ಯೋಚಿಸುತ್ತೆ...ಕ್ಕೆ ನಮಗೆ ಕಾಲಾವಕಾಶ ಅಗತ್ಯವಿ...ರೆ, ಅಲ್ಲಿಯ ವರೆಗೆ ಈಗ ಕೊಡಲಾಗು...ರುವ ಕುಶಿಕ್ಷಣವನ್ನಾದರೂ ನಿಲ್ಲಿಸಿ...ಡೋಣ. ಕೆಟ್ಟ ಶಿಕ್ಷಣವನ್ನು ಕೊಡು...ರುವ ನಮ್ಮ ಶಾಲಾ ಕಾಲೇಜುಗಳು ...ಷ್ಟು ಸಮಯ ಬಾಗಿಲು ಮುಚ್ಚಿಕೊಂ...ಡ್ಡರೆ, ಕ್ಷೇಮವೇ ನಿಜ." ಈ ಮಾತನ್ನು ...ಸರಕಾರವೂ ವಿಶ್ವವಿದ್ಯಾನಿಲಯವೂ ಶಿಕ್ಷ... ವಿಷಯದಲ್ಲಿ ತಜ್ಞರಾದವರೂ ಯೋಗ್ಯ...ಮಹತ್ವವನ್ನು ಕೊಟ್ಟು ವಿಚಾರಿಸಬೇಕು. ...ದೃಷ್ಟಿಯಿಂದ ನೋಡಿದರೆ, ಮದ್ರಾ...ಸ ಸರಕಾರ ಪ್ರಾರಂಭಿಸಬೇಕೆಂದು ಯೋ...ಚಿಸಿದ ನೂತನ ಪ್ರಾಥಮಿಕ ಶಿಕ್ಷಣ ಪದ್ಧ...ತಿ ತತ್ಕಾಲಕ್ಕೆ ಅತ್ಯಂತ ಸಮಂಜಸವಾದು...ದು ಹೊಳೆಯುದಿರದು.

— ಕಾರ್ತಿಕೇಯ.

...ಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ.

R E P 144/53
O S 45/1950

ಅರ್ಜಿದಾರ—ಶಂಕರ ನಾರಾಯಣ ಅ...ಳ.

ಎದ್ರಿ—ಪ ಮೇಶ್ವರ ಮಧ್ಯಸ್ಥ, ನಾರಾಯಣ ಮಧ್ಯಸ್ಥರ ಮಗ, ಕುಂದಾಪುರ ತಾಲ್ಲೂಕು ...ರಿಮಂಜೇಶ್ವರ ಗ್ರಾಮ.

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂ...ದೆ:—

...ೇಲಿನ ಅಮಲ್ಜಾರಿಯಲ್ಲಿ ಅಜಿ ದಾರನ ಕ...ಮಿಂದ ದಾಖಲು ಮಾಡಿದ ... ...ರಿ ಬಿಸ್ತಿ ಹಾಂವ ಕರ್ಜ ನಿರ್ಣಯಿಸುವ ಬಗ್ಗೆ ...ದ್ರಿ ಅಮಲ್ಜಾರಿಯನ್ನು ತಾ. 8-7-1953 ...ಇಟ್ಟಿರುತ್ತದೆ. ಅಕಾರಣ ನಿಮ್ಮದೇನಾದ...ರೂ ಆಕ್ಷೇಪವಿದ್ದಲ್ಲಿ, ಆ ದಿವಸ ಕೋರ್ಟಿ...ನಿಂದ ಹಾಜರಾಗಿ ಜ್ಯಾಹೀರು ಮಾಡಿ ಕೊ...ಳ್ಳತಕ್ಕದೆಂದು ಸದ್ರಿ ಈ ಮೂಲಕ ತಿಳಿಸಲಾ...ಗಿರುವುದು.

A. N. Rao.
ಅರ್ಜಿದಾರನ ಕಡೆ ಎಡ್ವೊಕೇಟ್

...ದಾಪುರ. 12-6-53

ಸ್ವೀಕಾರ—ವಿಮರ್ಶೆ

ಬಣ್ಣದ ಬದುಕು—

ಬರೆದವರು: ಅ. ನ ಕೃಷ್ಣರಾಯರು
ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. 3-0-0

ಇದು ಅ. ನ. ಕೃಷ್ಣರಾಯರು ೧೯೩೪ ರಿಂದ ಬರೆಯುತ್ತಾ ಬಂದಿರುವ ಕಲಾವಿದ ಮಾಲೆಯ ಕುಸುಮ. ಇಲ್ಲಿ ಅರಳಿಕೊಂಡಿರುವುದು ನೃತ್ಯ ಕಲೆಯನ್ನು. ಬಣ್ಣದ ಬದುಕು ಕಾದಂಬರಿಯಲ್ಲಿ ನಾಟ್ಯಕಲೆಯನ್ನು ಎರಡು ಭಿನ್ನ ಮುಖದಿಂದ ಕಾಡ ಇಬ್ಬರು ಕಲಾವಿದರ ಚಿತ್ರ ಮೂಡಿದೆ. ಮೊದಲಿಗೆ ನಾಟ್ಯಕಲೆಯಲ್ಲಿ ನೈಪುಣ್ಯ ಪಡೆದುಕೊಂಡರೂ ಕೀರ್ತಿ ಕಾಮಿಯಾಗಿ, ಆದರ್ಶವನ್ನು ಮರೆತ ಕೀರ್ತಿ ಎಂಬ ನಾಯಕನನ್ನು ಕಾಣುತ್ತೇವೆ. ಇದರ ಬೆನ್ನಿಗೆ ಕಷ್ಟಪಟ್ಟು ಕೈಗೂಡಿಸಿಕೊಂಡ ನಾಟ್ಯ ಸಿದ್ಧಿಯನ್ನು ನಾಲ್ಕು ಮಂದಿ ಮೆಚ್ಚುವಂತೆ ಆದಕ್ಕೆ ಸಲ್ಲತಕ್ಕ ಸಕಲ ಗೌರವಾದರಗಳೊಂದಿಗೆ ಉನ್ನತ ಮಟ್ಟಕ್ಕೆ ಏರಿಸಿದ ಕಲ್ಪನಾಳನ್ನು ನೋಡುತ್ತೇವೆ. ಇವರಿಬ್ಬರ ಪಾತ್ರ ಚಿತ್ರಣಕ್ಕೆ ಬಣ್ಣಗೂಡಿಸುವಂತೆ ಚೀಮಾನಂದ, ಆನಂದರಾಯ, ರಾಮಸ್ವಾಮಿ, ಜಯಮ್ಮ ಇತ್ಯಾದಿ ಜನರ ಬಳಗವಿದೆ. ಕಾದಂಬರಿಕಾರರು ಪಾತ್ರ ಸೃಷ್ಟಿಯಲ್ಲಿ ಮಾತ್ರ ತುಂಬ ಕೈ ಸಡಿಲು ಬಿಡುತ್ತಾರೆ. ತಾನು ಹೇಳುವುದನ್ನೆ ನಂಬಿ ಕಾತರ ಹೊಳ್ಳುವಂತೆ ನನ್ನನ್ನು ಆಗ್ರಹಪಡಿಸುವ ಪ್ರವೃತ್ತಿ ಅ.ನ.ಕೃ. ಕಾದಂಬರಿಗಳಲ್ಲಿ ಬಹಳ ಹೆಚ್ಚು. ಈ ದೋಷ ಇಲ್ಲಿಯೂ ಕಾಣಿಸಿಕೊಂಡಿದೆ. ಐರೋಪ್ಯ ಪ್ರವಾಸದ ಘಟನೆಗಳನ್ನು ಇದಕ್ಕೆ ಉದಾಹರಿಸಬಹುದು. ಇವರಂತೆ ಅಲ್ಲಲ್ಲಿ ಅನಾವಶ್ಯಕವಾದ ಕಥಾನಕವೂ ಇದೆ. ಮಲಯಾದ ಪ್ಲಾಂಟೇಶನ್ನಿನ ಪ್ರಸಂಗವಾಗಲೀ ಡಾಕ್ಟರ್ ಶೇಷಗಿರಿರಾಯರ ಜೀವನಚಿತ್ರವಾಗಲೀ ಕಾದಂಬರಿಯ ವಸ್ತುವಿನ ಪೋಷಣೆಮಾಡುವುದಿಲ್ಲ. ಕಾದಂಬರಿಯನ್ನು ಕೀರ್ತಿ, ವಸುಂಧರಾ, ಕಲ್ಪನಾ ಎಂದು ಮೂರು ಭಾಗಗಳಾಗಿ ವಿಂಗಡಿಸಿದುದರ ಔಚಿತ್ಯ ಗೊತ್ತಾಗುವುದಿಲ್ಲ ವಸುಂಧರಾ ಎಂಬ ದ್ವಿತೀಯ ಭಾಗ ಕಲ್ಪನೆಯ ಪಾತ್ರ ಪೋಷಣೆ ಮಾಡಿದೆಎನ್ನಬಹುದಲ್ಲದೆ ಆ ಕಾದಂಬರಿಯಲ್ಲಿ ವಸುಂಧರೆಗೂ ಒಂದು ಸ್ಥಾನವಿದೆ ಎನ್ನಲು ಧೈರ್ಯ ಸಾಲದು. ವಸುಂಧರೆಗಿಂತ ವಿಜಯನಿಗೆ ಕಾದಂಬರಿಯಲ್ಲಿ ಉತ್ತಮ ಸ್ಥಾನ ದೊರೆತಿದೆ. ಈ ತೆರನ ಲೋಪದೋಷಗಳಿದ್ದರೂ ಈ ಕಾದಂಬರಿ ಅನಕೃ ಇದುವರೆಗೆ ಹಿಡಿದ ವಿಕಮಾಯ ಹಾದಿ ಬಿಟ್ಟು ಜನಪ್ರಿಯತೆ ಗಳಿಸಬಹುದಾದ ಹೊಸ ದಾರಿಯನ್ನು ತುಳಿದಿದೆ ಎಂಬ ಸಮಾಧಾನ ಮಾತ್ರ ಉಂಟು.

ನವೀನ ಕಾದಂಬರಿ

ಬಾಳಿನ ಬೆಡಗು

ವಿದ್ಯೆಕಲಿತ ಯುವಕನೋರ್ವನು ವರಿಸಿದ ಹಳ್ಳಿಯ ಮುಗ್ಧೆಯೋರ್ವಳ ಆದರ್ಶ
ಪ್ರೇಮವನ್ನು ಅರಿಯದೆ, ಆಕೆಯನ್ನು ತ್ಯಜಿಸಿ ಓದು ಕಲಿತ ಬೆಡಗಿನ ಹೆಣ್ಣಿನ
ನಟನೆಗೆ ಮರುಳಾಗಿ, ಹಾಳಾಗಿ, ಸ್ವಾಮಿಯೋರ್ವರ ಅನುಗ್ರಹದಿಂದ
ಮತ್ತೆ ಮಿಲನವಾಗುವಾಗ ಕಥಾವಸ್ತುವನ್ನೊಳಗೊಂಡ
ಶ್ರೀ. ಯು. ನಾರಾಯಣ ಭಟ್ಟರು ಬರೆದ ಸರಸ—ಸುಂದರ ಕಾದಂಬರಿ.

ಬೆಲೆ. ರೂ. **1—4—0** ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ..., ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರ ವರ್ಗ!
ಮೇಲಾಗಿ ಉಡುಪಿ ಪ್ರಖ್ಯಾತ ..., ತಿಂಡಿ ತಿನಸು, ಇವುಗಳ ರುಚಿ ಬೇರೆ ಹೇಳಬೇಕೆ?

ಪ್ರೊಪ್ರೈಟರ್—ಕೆ. ವೆಂಕಟ್ರಮಣ ಭಟ್

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. S. No. 51/1953

ರಾಮಕ್ಕ ಹೆಂಗ್ಸು, ನೆಕ್ರಾಜೆ ಅಕ್ಕು ಹೆಂಗ್ಸಿನ ಮಗಳು ಮತ್ತು ನೆಕ್ರಾಜೆ ಮೂವಪ್ಪ ಶೆಟ್ಟರವರ ಹೆಂಡ್ತಿ, ಕಾಸರಗೋಡು ತಾಲ್ಲೂಕು ಕಳಂಗ್ರೆ ಗ್ರಾಮದಲ್ಲಿರುವವರು — ವಾದಿ

ಮತ್ತು

ಕೃಷ್ಣಯ್ಯ ಕೂಡಾ ೪ ಜನರು—ಪ್ರತಿವಾದಿರು.

ಯಿಷಿಹಾಳಗೆ

ಸದ್ರಿ ವ್ಯಾಜ್ಯದ 2ರಿಂದ 4ನೇ ಪ್ರತಿವಾದಿರಿಗೆ ನೋಟೀಸು. ತಾ. 20-6-1953.

2ನೇ ಪ್ರತಿವಾದಿ, ಕುಸುಮ ಹುಗ್ಸು, 1ನೇ ಪ್ರತಿವಾದಿ ರವರ ಇನ್ಸ್‌ಪೆಕ್ಟರ್ ಕೃಷ್ಣಯ್ಯನವರ ಹೆಂಡ್ತಿ, ಕಾಸರಗೋಡು ತಾಲ್ಲೂಕು ಹೊಸದುರ್ಗ ಕ್ಯಾಂಪಿಯಲ್ಲಿರುವವರು.

3ನೇ ಪ್ರತಿವಾದಿ, ಕೊಟ್ಟಿಯೂರ ಮಾಲಿಂಗ, ಮ ಣಿಯಾಣಿ, ಮಾಕು ಹೆಂಗ್ಸಿನ ಮಗ.

4ನೇ ಪ್ರತಿವಾದಿ, ಬೀದ್ಯಾನ ಬ್ಯಾರಿ ಅಬ್ರಹಾಮ ಬ್ಯಾರಿಗಳ ಮಗ. 3ನೇ ಪ್ರತಿವಾದಿಯು ನೆಕ್ರಾಜೆ ಗ್ರಾಮದ ಪೈಕಿದಲ್ಲಿಯೂ, 4ನೇ ಪ್ರತಿವಾದಿಯು ಸದ್ರಿ ಗ್ರಾಮದ ವಿಶಾಕ್ಷದಿ ಎಂಬಲ್ಲಿಯೂ ಇರುವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಸಕ್ಸಿ ಬಗ್ಗೆ ತಾ. 3-7-53ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ.

ಪ್ರತಿವಾದಿರು ಆ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರಾಗದಿದ್ದರೆ ತಪ್ಪಿತ್ತ ಅವರನ್ನು ಎಕ್ಸ್‌ಪಾರ್ಟೆ ಮಾಡಿ ವಾದಿಯ ಗುಣಕ್ಕೆ ಸದ್ರಿ ವ್ಯಾಜ್ಯದ ತೀರ್ಮಾನವಾಗುವದು.

Sd/ K. Ganesh Rao
B. A. L. L.B.
Vakil for plaintiff

Kasaragod Dated 20—6—1953

ಎದೆಯ ಕೊರಗು

(೧ನೇ ಪುಟದಿಂದ)

ವುದು ತೀರ ಸ್ವಾಭಾವಿಕ. ಆದರೆ ನಿಮಗಿಂತ ನಾನು ಪುಣ್ಯಾತ್ಮಳು. ಇಪ್ಪತ್ತು ವರ್ಷಗಳ ಹಿಂದೆ ನಾನು ಕೈಗೂಸಾಗಿದ್ದೆ. ನನ್ನ ಮನಸ್ಸಿನಲ್ಲಿ ಏನಿತ್ತೆಂದು ಯಾರಿಗೆ ಗೊತ್ತು. ಹಿಂದಿನವನ್ನು ನೆನೆದು ನೀವು ಪಡುವ ದುಃಖ ಕಂಡರೆ, ನನ್ನ ಭಾಗ್ಯಕ್ಕೆ ನೀವು ನಲಿದು, ಆ ಬೇಸರ ಕಳೆಯಬೇಕೆಂದು ತೋರುತ್ತದೆ.”

ಈ ಮಾತು ಕೋರಿಕೆಗೆ ವ್ಯಂಗ್ಯಭರಿತವಾಗಿದ್ದರೂ ಸಹಾನುಭೂತಿಯನ್ನು ತೋರುವುದಕ್ಕೆ ಸಿದ್ಧಳಾದ ಮಡದಿಯ ಉತ್ಕಂಠತೆ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅಂತಃಕರಣ ಮಿಡಿಯುವ ಬಗೆಯೇ ಹೀಗೆ. ನಮ್ಮ ಬದುಕಿನಲ್ಲಿ ಚೆಲುವು ನಲಿವುಗಳು ತುಂಬಿ ಉಲ್ಲಾಸ ಲಾಸ್ಯವಾಡಲು, ನಾವೊಬ್ಬರೇ ಇದ್ದರೆ ಆಗುವುದಿಲ್ಲ. ನಾಲ್ಕು ಮಂದಿ ಬಂಧುಬಳಗದವರು, ಇಷ್ಟಮಿತ್ರರು ಸೇರಿದರೆ ಮಾತ್ರ ಸಂತೋಷ ಉಕ್ಕೇರುತ್ತದೆ. ದುಃಖದಗಳಿಗೆಯಲ್ಲೂ ಹಾಗೇನೆ. ಒಬ್ಬನ ಹೆಂಡತಿ ಮರಣಾಸನ್ನನಾದ ಗಂಡನ ಬಳಿ ಕುಳಿತು, ಶೋಕತಪ್ತಳಾಗಿ ಕಣ್ಣೀರು ಕರೆಯುತ್ತಿದ್ದರೆ, ಆ ದುಃಖದ ನೋವು ತೀಕ್ಷ್ಣವಾಗಿರುತ್ತದೆ. ಆ ವಿಷಮ ಪರಿಸ್ಥಿತಿಯಲ್ಲಿ, ಸಾಂತ್ವನದ ನಾಲ್ಕು ಮಾತು ಹೇಳಿ ನೊಂದ ಹೃದಯಕ್ಕೆ ಸಮಾಧಾನ ಮಾಡುವ ಆತ್ಮೀಯರೊಬ್ಬರು ಬಳಿಯಲ್ಲಿದ್ದಾರೆ. ಆಗ ದುಃಖ ಭಾರ ತಗ್ಗುತ್ತದೆ.

ಸಂತೋಷದಲ್ಲಿ ಉಕ್ಕೇರಿದುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಮತ್ತು ಅತ್ಯಂತ ಶೀಘ್ರವಾಗಿ ದುಃಖದಿಂದ ನಾವು ಜಗ್ಗುತ್ತೇವೆ. ಮಗನ ಮದುವೆಯ ಸಂಭ್ರಮದಲ್ಲಿ ತಾಯಿ ನಕ್ಕು ನಲಿದುದನ್ನೂ ಅದೇ ಮಗನು ಮೃತ್ಯುಶಯ್ಯೆಯಲ್ಲಿ ಮಲಗಿರುವಾಗ ಮಾತೃಹೃದಯ ಶೋಕತಪ್ತವಾದುದನ್ನೂ ಯೋಚಿಸಿದರೆ, ಪಕ್ಕದೆಯ ಎರಡನೇ ಪಡಿಯೇ ಭಾರದಿಂದ ತಗ್ಗುತ್ತದೆ. ಆದುದರಿಂದ ಸಂತೋಷದ ಕಾಲದಲ್ಲಿ ಆಪ್ತೇತ್ಯರು ಬಾರದಿದ್ದರೂ ತೊಂದರೆಯಿಲ್ಲ—ದುಃಖದ ಕಾಲದಲ್ಲಿ ತನ್ನವರೆನ್ನುವ ಜನರು ಆಗತ್ಯ ಬೇಕು. ಕಲ್ಲು ಮನಸ್ಸಿನ ಔರಂಗಜೇಬನಂಥಹ ಅರಸನೂ ಸಾಯುವ ಗಳಿಗೆಯಲ್ಲಿ ತನ್ನ ಮಗನಿಗೆ ಬರೆದ ಓಲೆ ನೋಡಿರಿ! ಅದರಲ್ಲಿ ಶೋಕಾಕುಲವಾದ ಭಾವನೆಗಳೇ ತುಂಬಿ, ತುಳುಕುತ್ತವೆ. ಸಾಯುವ ಕಾಲದಲ್ಲಿ ಗಂಡನ ತೊಡೆಯಲ್ಲಿ ತಲೆಯಿಟ್ಟು ಸ್ವರ್ಗ ಸೇರಿದರೆ, ಮಗನ ಕೈಯಿಂದ ಗಂಗಾಜಲಪಾನ ಮಾಡಿ ನಾರಾಯಣ ಎಂದು ಕೊನೆಯುಸಿರು ಬಿಡುವಂತಾದರೆ—ಅದಕ್ಕೆ ಮಿಗಿಲಾದ ಪುಣ್ಯ ಬೇರಿಲ್ಲವೆಂದು ನಾವೆಲ್ಲ ನಂಬುತ್ತೇವೆ. ಈ ಭಾವನೆ ಧರ್ಮಮೂಲವೆನ್ನುವದಕ್ಕಿಂತಲೂ ಮಾನವನ ಸ್ವಭಾವಕ್ಕೆ ಅನ್ವಯವಾಗಿ ಬಂದ ತಿಳಿವೊಂದು ಹೇಳುವದೇ ಸರಿ.

ದುಃಖದಗಳಿಗೆಯಲ್ಲಿ ನಾವು ಕಣ್ಣೀರ ಕೋಡಿ ಹರಿಸುವವನನ್ನು ಕಂಡು ಇದು ಅಸ್ವಾಭಾವಿಕವಾದುದೆಂದು ಟೀಕಿಸುವುದು ಬೇಡ. ನಿಜವಾಗಿ ಹಾಗಿಲ್ಲ. ಮಾನಸಶಾಸ್ತ್ರಿಯೋ ಎಂದು ಹೇಳುವಂತೆ ಆನಂದಾವೃತ್ತಿಗಿಂತಲೂ ದುಃಖಾವೃತ್ತಿ ಹೆಚ್ಚು ಸಹಜವಾದದ್ದು. ದೇವರು ನಮ್ಮ ನೋವೆಲ್ಲ ತೊಳೆದು ಹೋಗುವಂತೆ ಕಣ್ಣೀರನ್ನು ಸೃಷ್ಟಿಸಿರುವನೆಂದು ಅವರ ಅಭಿಪ್ರಾಯ. ಆದುದರಿಂದ ದುಃಖದಗಳಿಗೆಯಲ್ಲಿ ಬೇಕಾದಷ್ಟು ಅತ್ತು ಬಿಡೋಣ. ಇದರಿಂದ ಮನಸ್ಸಿನ ಭಾರ ತಗ್ಗುತ್ತದೆ. ಹಿಂದೆ ರಾಜಮಹಾರಾಜರ ಅರಮನೆಗಳಲ್ಲಿ ನೃತ್ಯಾಗಾರ, ಶಯ್ಯಾಗಾರ, ಉದ್ಯಾನವನಗಳಂತೆ ಕೋಪಭವನ, ಶೋಕಭವನಗಳೂ ಇದ್ದುವೆಂದು ಕೇಳುತ್ತೇವೆ. ರಾಮನನ್ನು ಕಾಡಿಗೆ ಕಳಿಸುವುದಕ್ಕೆ ಪೂರ್ವಭಾವಿಯಾಗಿ ಕೈಕೆಯಿಯು ಕೋಪಭವನಕ್ಕೆ ಹೋಗಿ, ಅಲ್ಲಿ ತನ್ನೆಲ್ಲ ಆಭರಣಗಳನ್ನು ಕಿತ್ತೆಸೆದು ಸೀರೆ ಕುಪ್ಪಸಗಳೆನ್ನೆಲ್ಲ ಕಳಚಿ, ಕೇಶರಾಶಿಯನ್ನು ಕೆದರಿಕೊಂಡು ಬಿದ್ದಳೆಂದು ರಾಮಾಯಣದಲ್ಲಿದೆ. ಇದರಂತೆ ರಾಮನು ಕಾಡಿಗೆ ಹೋಗುವ ಸಮಯ ದಶರಥನು “ರಾಮಾ, ರಾಮಾ” ಎಂದು ದುಃಖಸಂತಪ್ತನಾದ ವರ್ಣನೆಯೂ ಅದರಲ್ಲಿದೆ. ಇದರಿಂದ ಮನುಷ್ಯನ ಭಾವನೆಗಳನ್ನು ಸಭ್ಯತೆಯ ಹೆಸರಿನಲ್ಲಿ ಅದುಮಿಹಿಡಿಯುವುದಕ್ಕಿಂತಲೂ, ಇದ್ದುದಿದ್ದಂತೆ ಪ್ರಕಟಿಸುವುದಕ್ಕೆ ಹೆಚ್ಚು ಅವಕಾಶ ಕೊಡುವುದೇ ಯೋಗ್ಯವೆಂದು ಸ್ಪಷ್ಟಗೊಳ್ಳುತ್ತದೆ.

ಹಾಗೆಂದು ದಶರಥನಂತೆ ದುಃಖವಿಹ್ವಲರಾಗಿ, ರಾಮನೊಡನೆಯೇ ನಾವೂ ಇಹಲೋಕ ಬಿಟ್ಟು ತೆರಳುವಂತೆ ವ್ಯಾಕುಲಗೊಳ್ಳುವುದು ಅಪೇಕ್ಷಣೀಯವಲ್ಲ. ಎಂಥ ದುಃಖ ನೋವುಗಳೂ ಮರಣಾಂತಿಕವಾಗಬಾರದು; ಮರಣದವರೆಗೆ ಉಳಿಯುವಂಥವೂ ಆಗಬಾರದು. ದುಃಖದಿಂದ ಮರ್ಮಾಹತರಾಗುವ ಜನರು ಭಾವನಾಲೋಕದ ಸಮತೋಲವನ್ನು ಉಳಿಸಿಕೊಳ್ಳಲಾರದ ದುರ್ಬಲರೇ ನಿಜ. ಒಂದು ರೀತಿಯಿಂದ ನೋಡಿದರೆ, ತಮ್ಮ ದೌರ್ಬಲ್ಯಕ್ಕಾಗಿಯೇ ಅವರು ದುಃಖಿಸುವರಲ್ಲದೆ, ತಮಗಾದ ದುಃಖಕ್ಕಾಗಿ ಅವರು ಗೋಳಿಡುವುದಲ್ಲ.

ದುಃಖ ದುಮ್ಮಾನಗಳ ಗಳಿಗೆಯಲ್ಲಿ ದೊಡ್ಡವರು ಆತ್ಮೀಯರಾಗಿ ಬಂದು ನಮಗೆ ಸಮಾಧಾನ ಮಾಡುವುದು ವಾಡಿಕೆ. ಅಂಥ ಪುಣ್ಯವಿಲ್ಲದ ಬಡಪಾಯಿಗಳಿಗೆ ಹೇಗೂ, ಆ ಸುವರ್ಣ ಅವಕಾಶವನ್ನು ಕಳೆದುಕೊಂಡ ಆತ್ಮೀಯನಿಗೂ ಈ ಲೋಕವೊಂದು ನರಕ! “ಆಪತ್ತಿನಲ್ಲಿ ಇಣಿಕಿ ಕೂಡ ನೋಡದ ಬಂಧುವೇಕೆ?” ಎಂದು ಕವಿ ಸೋಮೇಶ್ವರ ಕೇಳಿರುವನು. ಆದರೆ ಬೆಳೆದು ದೊಡ್ಡವರಾದ ಆತ್ಮೀಯರಿಗಿಂತಲೂ ಚಿಕ್ಕ ಮಕ್ಕಳು ನಮಗೆ ಸಾಂತ್ವನ ನೀಡುವ ಯೋಗ್ಯ ಜನರಾಗಬಲ್ಲರು. ನಮಗೆ ಮಕ್ಕಳೆದುರು ದುಃಖಿಸುವುದಕ್ಕೆ ನಾಚಿಕೆಯಾಗುವುದಿಲ್ಲ. ಹಿರಿಯರೆದುರು ಅಳುವಾಗ ಅವರಲ್ಲಿ ಕೋಪಾವಿಷ್ಟರಾಗಿ ಬೈದು ಬಿಡುವರೋ ಹಂಗಿಸಿ ಗೇಲಿಮಾಡುವರೋ ಎಂಬ ಸಂಶಯ ಸುಪ್ತ ಮನಸ್ಸಿನಲ್ಲಿ ಇರುತ್ತದೆ. ಆದರೆ ಮಕ್ಕಳ ಮನಸ್ಸು ಕೋಮಲವಾಗಿರುತ್ತದೆ. ಅವು ದೊಡ್ಡವರು ಅಳುವುದನ್ನು ಕಂಡು, ತಾವೇ ಅನುಭವಿಗಳಾದ ಹಿರಿಯರೆಂಬಂತೆ, ಅಳುತ್ತಿರುವ ದೊಡ್ಡವರಿಗೆ ಬಗೆಬಗೆಯಿಂದ ಸಮಾಧಾನ ಮಾಡುತ್ತವೆ. ಅವು ಸಮಾಧಾನ ಮಾಡುವ ರೀತಿ ಕಂಡು, ನಮ್ಮ ದುಃಖ ಇನ್ನೂ ಹೆಚ್ಚಿಕೊಂಡೀತು. ಇದರಿಂದ ದುಃಖದ ಭಾರ ಮತ್ತಷ್ಟು ಕಡಿಮೆಯಾದೀತು. ಒಂದು ವೇಳೆ ಯಾವರೀತಿಯಿಂದಲೂ ಸಮಾಧಾನ ಮಾಡಲಾಗದ ಮಗುವೊಂದಿದ್ದರೆ, ಅದು ದೊಡ್ಡವರು ಅಳುತ್ತಿರುವುದನ್ನು ಕಂಡು, ತಾನೂ ಅಳುತ್ತದೆ. ಈ ರೀತಿ ಸಹಾನುಭೂತಿ ಪ್ರಕಟಿಸುತ್ತದೆ. ಆಗ ಮಗುವಿನ ದುಃಖ ಶಮನ ಮಾಡುವುದಕ್ಕಾಗಿ, ದೊಡ್ಡವರು ತಮ್ಮ ದುಃಖವನ್ನು ಮರೆತು ಬಿಡುವುದಕ್ಕಿಂತ ಒಳ್ಳೆಯದಾದದ್ದು ಮನುಷ್ಯನಿಗೆ ಬೇರೇನಿದೆ?

ಆಂಗ್ಲ ಕವಿಯೋರ್ವನು ಬರೆದೊಂದು ಕವನದ ಸಾಲನ್ನು ಕನ್ನಡದಲ್ಲಿಯೂ ಓದಬಹುದು:—ಮೃತ್ಯುಗೊಂಡ ಸೈನಿಕ ಪತಿಯ ಪಕ್ಕದಲ್ಲಿ ಕುಳಿತು ಸ್ತ್ರೀಯೋರ್ವಳು ಬಿದ್ದು ಬಿದ್ದು ಅಳುತ್ತಿದ್ದಳು. ಎಷ್ಟು ಸಮಾಧಾನ ಮಾಡಿದರೂ ದುಃಖ ತಡೆಯದ ಸ್ಥಿತಿಯಲ್ಲಿದ್ದಾಗ, ಅಲ್ಲಿದ್ದ ಜಾಣನೊಬ್ಬ ಅವಳ ಒಬ್ಬನೇ ಒಬ್ಬ ಎಳೆಗೂಸನ್ನು ತಂದು ಬಿಡುತ್ತಾನೆ. ಆ ಮಗುವನ್ನು ನೋಡಿದವಳಿಗೆ, ಎಲ್ಲ ನೋವು ಸಂಕಟಗಳೂ ದೂರಾದಂತೆನಿಸಿ, ದುಃಖ ಮರೆಯಾಗುತ್ತದೆ. ಸಹಾನುಭೂತಿಯಂತೆ, ದುಃಖ ಕಳೆಯುವುದಕ್ಕೆ ಪ್ರೀತಿಯ ವಸ್ತು ಕೂಡ ಆಗತ್ಯ. ವಿಮಾ ಏಜಂಟನೊಬ್ಬ ತನ್ನ ವ್ಯವಹಾರ ಮಾಡುತ್ತಾ “ನೀವು ಆಕಸ್ಮಾತ್ತಾಗಿ ನಾಳೆ ಮೃತರಾದರೆ ನಿಮ್ಮ ಹೆಂಡತಿ ಅನಾಥಳಾಗುವಳು” ಎಂದನು. ಅವನಾತ “ಛೆ ಛೆ, ಹಾಗೇನಿಲ್ಲ. ನನ್ನ ಪತ್ನಿಯಂಥ ಸುಂದರಿಗೆ ಬೇರೆ ಯಾರಾದರೊಬ್ಬ, ನನಗಿಂತಲೂ ಒಳ್ಳೆಯವನಾದ ಗಂಡ ಸುಲಭದಲ್ಲಿ ದೊರೆಯುತ್ತಾನೆ. ಆಗ ನನ್ನನ್ನವಳು ಪೂರ್ಣ ಮರೆಯಬಲ್ಲಳು. ಜೀವ ವಿಮೆ ಮಾಡಿಟ್ಟರೆ ಆ ಹಣದಿಂದಲಾದರೂ ಅವಳಿಗೆ ನನ್ನ ನೆನಪು ಉಕ್ಕಿ ಬಂದೀತು. ಇದು ಅವಳ ಭಾವೀ ಸಂಸಾರವನ್ನು ಹಾಳುಗೆಡುವುದು ನಿಶ್ಚಯ.” ಎಂದು ಹೇಳಿ ಜಾರಿಕೊಂಡನಂತೆ!

— ಓ ತತ್ಸತ್ ||

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶ್ಯೂರನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಜೀವದಾರಿ ಅಂತೆಯೇ ಇದರ ಏಜನ್ಸಿ ಇರುವುದು ಚತುರ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಾಗಿಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯವಿಟ್ಟು ಬರೆಯಿರಿ:—

ಜಿ. ಆರ್‌ ನಾಲ್ಕ, ಬ್ರಾಂಚ್ ಮೆನೇಜರ್,

ಜಾಯ್‌ಲ್ಯಾಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	„ 8,77,860
ಕ್ಷೇಮ ನಿಧಿ	. .	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼°/ₒ ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

“ಕುಮಾರಿ” ಪಿಲ್ಲೆಗಳನ್ನು ಉಪಯೋಗಿಸಿದರೆ ಖದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, P.H.S. (N.J.)
CALCUTTA. 40
ಸ್ಟಾಕಿಸ್ಟರು: ರಮಾಕಂಪೆನಿ, ಮಂಗಳೂರು.

ಆಕರ್ಷಕವಾದ ನಗರ-ಚಂಡೀಗಢ

(೨ನೇ ಪುಟದಿಂದ)

೩೦ ಗೃಹಗಳು ಅಕ್ಟೋಬರದ ಒಳಗಾಗಿ ರಚಿಸಲ್ಪಡುತ್ತವೆ.

❀

೫೦೦ ರೂಪಾಯಿಯಿಂದ ೨೦೦೦ದ ನಡುವೆ ಸಂಬಳ ಪಡೆವ ಅಧಿಕಾರಿಗಳಿಗಾಗಿ ೪೦ ಮನೆಗಳ ಸಪ್ಟಂಬರ ಅಂತ್ಯದೊಳಗೆ ಪೂರ್ತಿಗೊಳ್ಳಲಿವೆ. ನವೆಂಬರದಲ್ಲಿ ೮೦೦ ಮನೆಗಳು ಬೇರೆ ಬೇರೆ ಸರಕಾರೀ ಅಧಿಕಾರಿಗಳಿಗಾಗಿ ಸಿದ್ಧಗೊಳ್ಳುತ್ತವೆ. ೧೩ ಬಗೆಯಾಗಿ ವಿಂಗಡಿಸಲ್ಪಟ್ಟ ೩೨೨೮ ಮನೆಗಳನ್ನು ರಾಜ್ಯ ಸರಕಾರದ ಅಧಿಕಾರಿಗಳಿಗಾಗಿ ೨೯೮೦೪೮೯೦ ರೂಪಾಯಿಗಳ ವೆಚ್ಚದಿಂದ ಕಟ್ಟಿಸುವ ನಿರ್ಣಯ ಮಾಡಲ್ಪಟ್ಟಿದೆ. ಮುಖ್ಯ ಮಂತ್ರಿಯ ಗೃಹಕ್ಕೋಸ್ಕರ ಎರಡು ಲಕ್ಷ ರೂಪಾಯಿ ವೆಚ್ಚ ಬರಲಿವೆ. ಈ ಕಟ್ಟಡದ ರಚನೆಯ ಚಿತ್ರವನ್ನೀಗ ಮಾಡುತ್ತಿರುವರು. ಮಂತ್ರಿಗಳ ಗೃಹಕ್ಕೆ ಪ್ರತಿಯೊಂದಕ್ಕೂ ೭೫ಸಾವಿರ ರೂಪಾಯಿ ತಗಲಿದರೆ, ಹೈಕೋರ್ಟು ನ್ಯಾಯಾಧೀಶರು ಮತ್ತು ಆರ್ಥಿಕ ಕಮಿಶನರುಗಳ ಮನೆಗೆ ೬೦ ಸಾವಿರ ರೂಪಾಯಿ ವೆಚ್ಚವಾಗುವುದು. ಶಾಸನ ಸಭಾಧ್ಯಕ್ಷರು, ಕೌನ್ಸಿಲಿನ ಸಭಾಪತಿಗಳು, ಮತ್ತು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಮಂತ್ರಿಗಳಿಗೆ ಕಟ್ಟಿಸಲಾಗುವ ಮಾದರಿಯ ಮನೆಗಳು ದೊರೆಯುತ್ತವೆ. ಈ ಹತ್ತು ಬಂಗಲೆಗಳನ್ನು ಬಿಟ್ಟರೆ ಉಳಿದೆಲ್ಲವೂ ಎರಡು ಮಾಳಿಗೆಯಿಂದ ಕೂಡಿವೆ. ಸರಕಾರವು ತನ್ನ ಇತರ ಸಿಬಂಧಿಗಳಿಗಾಗಿಯೂ ಯೋಗ್ಯ ವಸತಿ ಸೌಕರ್ಯವನ್ನು ನೀಡಲು ಹವಣಿಸಿದೆ. ಪ್ರತಿಯೊಂದು ಮನೆಯಲ್ಲಿ ಎರಡು ಕೋಣೆಗಳು, ಇಬ್ಬದಿಯಲ್ಲೂ ವರಾಂಡಗಳು, ಮತ್ತು ಸಾಕಷ್ಟು ವಿಶಾಲವಾದ ಅಂಗಳ, ಬಚ್ಚಲುಮನೆ, ಪಾಯಖಾನೆ, ಮತ್ತು ಸೀರಿನ ಪೂರೈಕೆ ಇರುವ ಅಡುಗೆ ಮನೆ ಇವುಗಳು ಇರುತ್ತವೆ. ಮಾಳಿಗೆ ಇರುವ ಮನೆಗಳಲ್ಲೆಲ್ಲ ಪಡಸಾಲೆಯೂ ಮಾಳಿಗೆಯಲ್ಲಿ ಮೂರು ಮಲಗುವ ಕೋಣೆಗಳೂ ಹೆಚ್ಚು.

❀

ಈ ಗೃಹಗಳನ್ನೆಲ್ಲ ಚಳಿಗಾಲದಲ್ಲಿ ಬೆಚ್ಚನಾಗಿಯೂ, ಸೆಕೆಗಾಲದಲ್ಲಿ ತಣ್ಣಗಾಗಿಯೂ ಇಡಲು "ಸನ್ ಬ್ರೇಕರ್ಸ್" ಸಲಕರಣೆಯನ್ನೊದಗಿಸಿರುವರು. ರಾಜ್ಯದ ಗವರ್ನರರು ವಾಸಿಸುವ "ರಾಜ ಭವನ"ದ ನಿರ್ಮಾಣಕ್ಕೋಸ್ಕರ ೨೬೨೮೦೦೦ ರೂಪಾಯಿ ಕರ್ಚಾಗುತ್ತದೆ. ಕಾಂಕ್ರೀಟಿನಿಂದ ಇದನ್ನೊಂದು ಗುಮ್ಮಟದ ಆಕಾರದಲ್ಲಿ ರಚಿಸಲಾಗುವುದು. ಈ ಭವನದ ಹಿನ್ನೆಲೆಯಲ್ಲಿ ಹಿಮಾಲಯದ ಸೌಂದರ್ಯ ವಿದ್ಯುಕ್ತವಾಗಿಂಡ, ಮುಂಗಡೆ ಮುಖ್ಯ ಮಂತ್ರಿ, ನ್ಯಾಯಾಧೀಶ ಸರಕಾರೀ ಅಧಿಕಾರಿಗಳು ಇತ್ಯಾದಿ ಜನರ ವಸತಿ ಗೃಹಗಳು ನೆಲೆಸುವುದರಿಂದ, ಚಂಡೀಗಢದ ನೋಟ ಅತ್ಯಾಕರ್ಷಕವೂ ರಮಣೀಯವೂ ಆಗುತ್ತದೆ. ಮಾರ್ಗಗಳ ರಚನೆಯಲ್ಲೂ ಇಲ್ಲಿ ಹೊಸ ಹಾದಿಯನ್ನು ತುಳಿದಿರುವರು. ಮಕ್ಕಳಿಗಾಗಿ, ಸೈಕಲು ಸವಾರರಿಗಾಗಿ ಮೋಟಾರು ಕಾರುಗಳಿಗಾಗಿ, ಮತ್ತು ಕಾಲ್ನಡೆಯವರಿಗಾಗಿ ಬೇರೆ ಬೇರೆ ಮಾರ್ಗಗಳು ರಚನೆಗೊಂಡಿವೆ. ಪಟ್ಟಣದಲ್ಲಿ ಗಲಭೆ ಮತ್ತು ಗದ್ದಲಗಳನ್ನು ಕಡಿಮೆ ಮಾಡುವುದಕ್ಕೋಸ್ಕರ ನೆಲವಡಿ ೧೮ ಅಡಿಗಳ ಆಳದಲ್ಲಿ ಮಾರ್ಗದ ರಚನೆಯೂ ನಡೆದಿದೆ. ಪರಿಣಾಮವಾಗಿ ಕಾಲ್ನಡೆಯ ಪಥಿಕರಿಗೆ ಆಧುನಿಕ ನಗರಗಳು ವಂಚಿಸುತ್ತಿದ್ದ ಮನಃಶಾಂತಿ ಮತ್ತು ಗೌರವವನ್ನು ಮರಳಿದೊರಕಿಸಿ ಕೊಟ್ಟಂತಾಯಿತೆಂದು ನಗರ ಶಿಲ್ಪಿಗಳ ಅಭಿಪ್ರಾಯ.

❀

ನ್ಯೂಯಾರ್ಕ್ ನಗರದ ಆಲ್ಬರ್ಟ್ ಮೇಯರರಿಗೆ ಈ ನಗರ ರಚನೆಯ ಭಾರವನ್ನು ಮೂಲದಲ್ಲಿ ಒಪ್ಪಿಸಿ ಕೊಡಲಾಯಿತು. ಬ್ರಹನ್ಮುಂಬಯಿಯ ಯೋಜನೆಯಲ್ಲಿ ಸಹಾಯಕನಾಗಿ ದುಡಿದ ಯುವಕನ್ನು ಇವರಿಗದ ಮುಂದೆ ಸುಪ್ರಸಿದ್ಧ ಫ್ರೆಂಚ ನಗರ ಶಿಲ್ಪಿ ಮಾನ್ಸರ್ ಲೀ ಕರ್ಬುಸೀಯರ್, ಇ. ಮಾಕ್ಸ್‌ವೆಲ್ ಫ್ರೈ, ಮತ್ತು ಎಂ. ಸಿ. ಜೇನ್ನೆರೆಟ್ ಇವರೂ ನಗರ ನಿರ್ಮಾಣ ಕಾರ್ಯಕ್ಕೋಸ್ಕರ ಆಹ್ವಾನಿಸಲ್ಪಟ್ಟರು. ಇವರೆಲ್ಲರ ಸಂಯುಕ್ತ ಪ್ರಯತ್ನದ ಫಲವಾಗಿ ನಗರ ರಚನೆಯ ಅಂತಿಮ ಯೋಜನೆ ಸಿದ್ಧಗೊಂಡಿತು. ಸರಕಾರೀ ನಿಲಯನನ್ನೊಳಗೊಂಡು ಎಲ್ಲ ಸರಕಾರೀ ಭವನಗಳೂ, ಶಾಸನ ಸಭಾ ಭವನ, ಸೆಕ್ರೆಟೇರಿಯಟ್, ಹೈಕೋರ್ಟು ಮತ್ತು ವಸತಿ ಗೃಹಗಳಲ್ಲಿ ಹೆಚ್ಚಿನವುಗಳನ್ನು ಮಾನ್ಸರ್ ಲೀ ಕರ್ಬುಸೀಯರ್ ಸ್ವಯಂ ಯೋಜಿಸಿ, ರೂಪ ರೇಖೆ ಹಾಕಿಕೊಟ್ಟರು. ಈ ನಗರದ ಮೂಲ ಸೂತ್ರವೆಂದರೆ–೨೫ ವಿಭಾಗಗಳಾಗಿ ವಿಂಗಡಿಸಿದ ಈ ನಗರದ ಪ್ರತಿಯೊಂದೂ ವಿಭಾಗಕ್ಕೆ ತನ್ನದೇ ಆದ ಅಂಗಡಿಗಳು, ಸಂತೆಗಳು, ಸಿನೇಮಾಗಳು, ಶಾಲೆಗಳು, ಆರೋಗ್ಯ ಹಾಗೂ ವಿಹಾರ ಕೇಂದ್ರಗಳು, ಈಜುವ ಕೊಳ, ವ್ಯಾಯಾಮ ಗೃಹಗಳು ಮುಂತಾದುವೆಲ್ಲ ಇರುತ್ತವೆ. ದಟ್ಟ ವಸತಿ ಇರುವ ಪ್ರದೇಶಗಳಲ್ಲಿ ವೇಗವಾಗಿ ಓಡುವ ಯಾವುದೇ ವಾಹನಗಳು ಬಾರದೆ, ಹೊರಗಿಂದಲೇ ಒಸರಿ ಹೋಗುತ್ತವೆ. ಜನವಸತಿ ಕಡಿಮೆಯಿರಬಹುದಾದ ಭಾಗದಲ್ಲಿ ಕೆಲವು ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಲಾಗುವುದು. ಈ ರೀತಿ ಪಂಜಾಬಿನಲ್ಲೊಂದು ಹೊಸ ರಾಜಧಾನಿಯು ಅತ್ಯಂತ ಆಕರ್ಷಕವಾದ ರೀತಿಯಲ್ಲಿ ತಲೆ ಎತ್ತುತ್ತಿದೆ. ಆಂಧ್ರ ರಾಜ್ಯವು ಬೇರೆಯಾದೊಡನೆಯೇ [illegible] ಕಷ್ಟಪಟ್ಟು ಹೊಸ ಹೊಸ ಕಟ್ಟಡಗಳನ್ನು, ಅನುಕೂಲತೆಗಳನ್ನು ಒದಗಿಸಿಕೊಡುವ ಪ್ರಮೇಯ ಬರುತ್ತದೆ. ಈಗಿನ ಕಷ್ಟಕಾಲದಲ್ಲಿ ಹೀಗೆ ಹಣ ವೆಚ್ಚ ಮಾಡಲು ಸಾಮಾನ್ಯವಾಗಿ ಯಾರಿಗೂ ಮನಸ್ಸು ಬಂದಿದ್ದರೂ, ಇದು ಅನಿವಾರ್ಯವೆಂದು ತಿಳಿದು ಸಹಿಸಬೇಕು ಮಾತ್ರ.

(ಆಂಧ್ರ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 196/೫೩

ಅಲೆವೂರು ರಾಮಚಂದ್ರ ಶಿಣೈ –ವಾದಿ.

ಮತ್ತು

ಗೋಪಾಲಕೃಷ್ಣ ಭಟ್ಟ ಕೂಡ 8 ಜನರು

–ಪ್ರತಿವಾದಿಗಳು.

3ನೇ ಪ್ರತಿವಾದಿ ನಾರಾಯಣ ಭಟ್ಟ, 4ನೇ ಪ್ರತಿವಾದಿ ಕೃಷ್ಣ ಭಟ್ಟ, ನರಸಿಂಹ ಭಟ್ಟರ ಮಗಂದಿರು,

6ನೇ ಪ್ರತಿವಾದಿ ಪುಟ್ಟು ಯಾನೆ ಅನಂತ ಪದ್ಮನಾಭ ಭಟ್ಟ, 7ನೇ ಪ್ರತಿವಾದಿ ಗೋವಿಂದ ಭಟ್ಟ, ಸುಬ್ಬಣ ಭಟ್ಟರ ಮಗಂದಿರು,

8ನೇ ಪ್ರತಿವಾದಿ ರಾಘವೇಂದ್ರ ಭಟ್ಟ–ರಾಮಕೃಷ್ಣ ಭಟ್ಟರ ಮಗ, ಕಾಕಿನಾಡ ರೆಸ್ಟೊರೆಂಟ್ ಬಳಿ "ರಾಮಾಂಜನೇಯ" ಕಾಫಿ ಕ್ಲಬ್‌ನಲ್ಲಿರುವವರು–ಇವರುಗಳಿಗೆ

ವಾದಿಯು ದಾವಾ ಆಸ್ತಿಯ ಬಾಬ್ತು ತನ್ನ 2/5ನೇ ಅಂಶಕ್ಕೆ 1ನೇ, 2ನೇ ಪ್ರತಿವಾದಿಗಳ ಕಳೆದ ನಂದನ ಸಂ|ರಕ್ಕೆ ಬರತಕ್ಕ ಮೂಲಗೇಣಿ ಬಾಕಿಯನ್ನು ಬಡ್ಡಿ ಸಮೇತ ಕೇಳಿ ಮಾಡಿದ್ದು ನಿಮ್ಮಗಳ ಸಮಕ್ಷಮ ತೀರ್ಮಾನವಾಗಬೇಕಾದ ಕಾರಣ ನಿಮ್ಮಗಳನ್ನು ಸೇರ್ಸಿ ದಾಖಲ್ಲ ಮಾಡಿದ ಮೇಲ್ಕಂಡ ದಾವೆಯು ಈ ಕೋರ್ಟಿನಲ್ಲಿ ತಾ. 15-7-1953ಕ್ಕೆ ತನಿಖೆಗೆ ಇಟ್ಟಿರುತ್ತದೆಯಾದ್ದರಿಂದ ನೀವು ಸದ್ರಿ ದಿನ ಹಗಲು ಘಂಟೆ 10-45 ಹಾಜರಾಗಬೇಕಾಗಿಯೂ, ಹಾಜರಾಗದಿದ್ದರೆ ನಿಮ್ಮಗಳನ್ನು ಶಿಕ್ಷಾ ಮಾಡಿ ಸದ್ರಿ ದಾವೆಯನ್ನು ತೀರ್ಮಾನವಾಡಲಾದೀತು ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ.

(By order of court)

K. Vittal Nayak,

Vakil for Plaintiff.

Udipi. 24-6-53

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ತೋಲಕ್ಕಿಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ದಿ ಬೊಂಬೆಲೈಫ್ ಎಶ್ಶೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಶೂರೆನ್ಸ್ ಕೊ. ಲಿಮಿಟೆಡ್

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:–ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಬಲಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವರಸಾಯನ.



ಹೆಚ್ಚಿನ ಮಾಹಿತಿಗೆ– ಡಾ| ಯಂ ಸಿ ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು – ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ



ಬರೇ ರೂ-5 ಕ್ಕೆ 15 ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ವಾರದ ಒಳಿತು ಕೆಡುಕುಗಳು

ತಾ. ೨—೭—೫೩ರಿಂದ ತಾ. ೮—೭—೫೩ರ ವರೆಗೆ.

ಮೇಷ— ನಿಮ್ಮ ಅದೃಷ್ಟದ ಬಾಗಿಲಿನ್ನು ತೆರೆದಿರುವುದು. ನೀವು ಆಡಿದ್ದೇ ಮಾತು ಮಾಡಿದ್ದೇ ಕಾರ್ಯವಾಗುವದು ಮಣ್ಣು ಹಿಡಿದರೂ ಹೊನ್ನಾಗಿ ಪರಿಣಮಿಸುವದು. ನಷ್ಟವಾದ ವಸ್ತು ಪಡೆವೆ ೧ಳೂ ಪುನಃ ಕೈಸೇರಲಿವೆ. ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ದಿನೇ ದಿನೇ ಪ್ರಗತಿಯುಂಟಾಗಲಿದೆ. ಯಾವ್ರೊಂದು ತರದ ಶೋಕ ತಾಪಗಳೂ ನಿಮಗುಂಟಾಗವು. ಸಮಾಜದಲ್ಲಿ ಕೀರ್ತಿ, ಲಾಭ, ಮನ್ನಣೆಗಳನ್ನು ಪಡೆವಿರಿ. ಆಲಸಿಗರಾಗದೆ ಇಂತಹ ಸುಸಮಯವನ್ನು ಸಾರ್ಥಕಗೊಳಿಸುವದು ನಿಮ್ಮ ಆದ್ಯ ಕರ್ತವ್ಯ. ತಾ 2, 5, 6 ಈ ದಿನಗಳು ಅತೀವ ಪ್ರಶಸ್ತವಿವೆ.

ವೃಷಭ— ಕಷ್ಟ ಪರಂಪರೆಗಳಲ್ಲಿ ಸಿಲುಕಿದ ನಿಮಗೆ ಮುಂದೇನು ಮಾಡಬೇಕೆಂಬುದು ಸಹಾ ತಿಳಿಯದೆ ನಿಷ್ಕ್ರಿಯರಾಗುವಿರಿ. ಗೃಹ ತಾಪತ್ರಯಗಳು ಒಂದರ ಮೇಲೊಂದು ಬರಲಿವೆ. ಅಧಿಕಾರಿ ವರ್ಗದವರಿಂದ ನಿತ್ಯ ದುಃಖಕ್ಕೊಳಗಾಗುವಿರಿ. ಪಿತ್ತೋಷ್ಣ ದೋಷವು ಆರೋಗ್ಯವನ್ನು ಕೆಡಿಸಲಿದೆ. ಅನಿರೀಕ್ಷಿತ ಪರ್ಯಟನದಿಂದ ಕಷ್ಟ ನಷ್ಟಗಳು ಹೆಚ್ಚುವವು ನಿಮ್ಮ ಅನುಯಾಯಿಗಳೂ ನಿಮಗೆ ಎದುರು ನಿಲ್ಲುವರು. ಮನಸ್ಸಿನಲ್ಲಿ ಸದಾ ಸಂದೇಹವು ನೆಲೆಗೊಳ್ಳುವದು. ಆಪ್ತೀಯರ ಬೆಂಬಲವು ಎಳ್ಳಷ್ಟು ಲಭಿಸದ ನಿಮಗೆ ತಾ 5, 6 ಈ ದಿನಗಳು ಹೆಚ್ಚಿನ ನಷ್ಟ ದುಃಖ ಅನಾರೋಗ್ಯಪ್ರದಗಳಿವೆ.

ಮಿಥುನ— ಹೆದರಿದ ಹರಿಣದಂತೆ ನಿಮ್ಮ ಮನಸ್ಸು ವಿಶೇಷ ಚಂಚಲವಾಗಿ ಯಾವ ಕಾರ್ಯವನ್ನೂ ಧೈರ್ಯದಿಂದ ಮುಂದುವರಿಸದೆ ಮಧ್ಯೆ ಬಿಡುವ ಪ್ರಸಂಗಗಳು ಅನೇಕ ಬರಲಿವೆ. ಅದರೂ ಇಂದಿನ ಪರಿಸ್ಥಿತಿಯಲ್ಲಿ ನಿಮ್ಮ ಖರ್ಚುವೆಚ್ಚಗಳಿಗೆ ಸರಿಯಾದ ಉತ್ಪತ್ತಿಯು ಕಾಣಿಸುವುದರಿಂದ ಹಣದ ಅಡಚಣೆಯುಂಟಾಗದು. ಗುರುಹಿರಿಯರ ಅಗ್ರಹಕ್ಕೊಳಗಾದ ನಿಮಗೆ ಬಂಧು ಮಿತ್ರರ ನೆರವು ಲಭಿಸುವುದರಿಂದ ದಿನಯಾಪನೆಯು ದುಸ್ತರವೆನಿಸದು ಪ್ರವಾಸವು ಅನಿಷ್ಟದಾಯಿಯಾದೀತು. ತಾ 3, 4, 5, 6 ಅನುಕೂಲ.

ಕರ್ಕಟ— ನಿಮ್ಮ ವ್ಯಯಸ್ಥಾನದಲ್ಲಿ ರವ್ಯಂಗಾರಕರಿರುವುದಾದರೂ ಶುಭಲಾಭಪತಿಯೂ ಬೃಹಸ್ಪತಿಯೂ ಲಾಭದಲ್ಲಿರೋಣದರಿಂದ ಖರ್ಚಿಗಿಂತ ಅಧಿಕವಾದ ಧನಾಗಮವಿರುವುದು. ಹಣದ ಬಿಕ್ಕಟ್ಟುಂಟಾಗದು, ಪಿತ್ತಪ್ರಕೋಪದಿಂದಾಗಿ ದುಃಸ್ವಪ್ನ ನಿದ್ರಾರಾಹಿತ್ಯಗಳು ಕಾಣಿಸಲಿವೆ. ಕೆಲವೊಮ್ಮೆ ಮಾತಿಗೆ ಮಾತು ಬೆಳೆದು ಕಲಹದಲ್ಲಿ ಪರ್ಯವಸಾನಗೊಳ್ಳುವದು. ಬಲಿಷ್ಠರಾದ ವಿರೋಧಿಗಳೂ ಇಂದು ಶರಣು ಬರುವರು ಸದಾಚಾರ ಸತ್ಕರ್ಮ ನಿರತರಿಗೆ ವಾರಾಂತ್ಯದ 4 ದಿನಗಳು ಶ್ರೇಯಸ್ಕರವಿವೆ.

ಸಿಂಹ—ಕಷ್ಟದಿಂದಾಗಿ ಇಷ್ಟವನ್ನು ಸಾಧಿಸುವಿರಿ. ಪರಿಶ್ರಮಕ್ಕಿಂತಲೂ ಅಧಿಕವಾಗಿ ಫಲವು ಲಭಿಸುವದು. ಹಿಡಿದ ಕಾರ್ಯವನ್ನು ಎಷ್ಟೇ ವಿಘ್ನಗಳು ಬಂದರೂ ಕೈಬಿಡದೆ ಕೊನೆಗಾಣಿಸಿಯೇ ತೀರುವ ನಿಮ್ಮ ಹಠವಾಗಿ ತನಕ್ಕೆ ಶತ್ರುವರ್ಗದವರೂ ಕೂಡ ನಿಮಗಿನ ಮೇಲೆ ಬೆರಳಿಡುವರು, ಆದರೆ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಲೋಕೋಕ್ತಿಯಿದ್ದರೂ ನೀವಿಂದ ಚಿಕ್ಕ ಚಿಕ್ಕವರೊಡನೆ ಜಗಳ ಮಾಡಲಿರುವಿರಿ. ರಾಜಕೀಯ ಕ್ಷೇತ್ರದಲ್ಲಿ ವಿಜಯ ಲಕ್ಷ್ಮಿಯು ನಿಮ್ಮ ಹಸ್ತಗತಳಾಗುವಳೆಂದರೆ ಅತಿಶಯೋಕ್ತಿಯಾಗದು. ತಾ 2, 7, 8 ಈ ದಿನಗಳು ಇಷ್ಟಪ್ರದಗಳಿವೆ

ಕನ್ಯಾ— ಅನುಕೂಲ ವಾತಾವರಣವು ಬಂದಿರುವದು. ನಿಮ್ಮ ಸಕಲ ಬಯಕೆಗಳೂ ಇಂದು ಫಲಿಸಲಿವೆ. ಮಿತ್ರ ವರ್ಗದವರೂ ಬಂಧುಗಳೂ ಹಲವು ತೆರದಿಂದ ನಿಮ್ಮೊಡನೆ ಸಹಕರಿಸುವರು. ಸಾಲ ಕಡಗಳಿಂದ ನಿವೃತ್ತರಾಗಿ ಸಾಕಷ್ಟು ಧನವೂ ಕೂಡ ನಿಮಗೆ ಕೈಯಲ್ಲಿ ಲಭಿಸಲಿದೆ. ಪ್ರತಿಯೊಂದು ಉದ್ಯೋಗದಲ್ಲೂ ಪ್ರಗತಿಯ ಚಿಹ್ನೆಗಳೇ ಕಾಣಿಸುವವು. ಕೆಲವೊಮ್ಮೆ ವಾತ ಪ್ರಕೋಪದಿಂದಾಗಿ ಸಂದು ಸಂದುಗಳಲ್ಲಿ ನೋವು ಕಾಣಿಸಲಿದೆ, ವಾರಾದಿಯ 3 ದಿನಗಳಲ್ಲಿ ಸ್ಥಾನಮಾನ ಧನ ವಿಜಯ ಸುಖಗಳು ಅನಾಯಾಸದಿಂದ ಲಭಿಸುವದು.

ತುಲಾ:— ದಿನೇ ದಿನೇ ಪ್ರಗತಿಯ ಚಿಹ್ನೆಗಳು ಕಂಡು ಬರುತ್ತಿವೆ. ನಿಮ್ಮ ಶ್ರಯತ್ನವಿಂದು ಸಫಲವಾಗಲಿದೆ. ಅನುದಿನ ಖರ್ಚುವೆಚ್ಚಗಳಿಗಾಗಿ ಹಿರವನ್ನಾಶ್ರೈಸುವ ಪ್ರಸಂಗಗಳುಂಟಾಗದು ವ್ಯಾಪಾರದಲ್ಲೂ ನೌಕರಿಯಲ್ಲೂ ಸಾಕಷ್ಟು ಫಲಪ್ರಾಪ್ತಿಯಿದೆ. ದೇಹದಲ್ಲಿ ನಿಶ್ಶಕ್ತಿ ಕ್ಷೀಣತೆಗಳು ಕಾಣಿಸುವವು. ಅಧಿವ್ಯಾಧಿಗಳಿಗೀಡಾದ ನಿಮಗೆ ನೀಚ ಜನರಿಂದ ಅನಿಷ್ಟಗಳುಂಟಾಗುವ ಸಂಭವವಿದೆ. ಪರ್ಯಟನವು ಅನಿಷ್ಟಕಾರಿಯಾದೀತು. ತಾ. 3ರಿಂದ 6ರ ವರೆಗಿನ ದಿನಗಳು ಧನಲಾಭ ಸುಖಮಾನಪ್ರದಗಳಿವೆ.

ವೃಶ್ಚಿಕ:—ಪ್ರಬಲರಾದ ವಿರೋಧಿಗಳು ಸೇಡು ತೀರಿಸಿಕೊಳ್ಳಲು ಸಮಯ ಸಾಧಿಸುತಿರುವರು. ಸದ್ಯದ ದಿನಗಳನ್ನು ನೀವು ಅತೀವ ಜಾಗರೂಕತೆಯಿಂದ ಕಳೆಯಬೇಕಾಗಿವೆ. ಸ್ತ್ರೀ ವರ್ಗವೇ ನಿಮ್ಮ ಮೇಲೆ ಮುಂದುಬೀಳಲಿದೆ. ಏಕಸ್ಮಿಕತ್ತ ಜನನಿಂದೆ ಕಲಹಗಳಿಗೆ ಗುರಿಯಾಗುವಿರಿ. ಆದರೂ ಧನಸುಖಗಳ ಅನುಗ್ರಹವು ನಿಮ್ಮ ಮೇಲೆ ಚೆನ್ನಾಗಿರುವುದರಿಂದ ಖರ್ಚಿಗಾಗಿ ಚಿಂತಿಸಬೇಕಾಗಿಲ್ಲ. ನಿಮ್ಮ ದೇಹದ ಆರೋಗ್ಯವೂ ಉತ್ತಮವಿದ್ದೀತು. ವಾರಾಂತ್ಯದ 4 ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಸಿದ್ಧಿಸುವವು.

ಧನುಃ— ನಿಮ್ಮ ದುರ್ದೈವವಿಂದು ಪ್ರಬಲವಾಗಿ ಕಾಡುತ್ತಿರುವುದು. ಯಾವ ಭಾಗದಲ್ಲೂ ನಿಮಗೆ ಸುಖ ನೆಮ್ಮದಿಗಳಿಲ್ಲವು. ಹಣದ ಬಿಕ್ಕಟ್ಟು ದಿನದಿಂದ ದಿನಕ್ಕೆ ಹೆಚ್ಚಲಿದೆ. ಆರೋಗ್ಯವಂತೂ ಚೆನ್ನಾಗಿರದು. ಆಪ್ತೀಯರೇ ವಿರೋಧಿಗಳಂತೆ ವರ್ತಿಸುವರು. ಚಂಚಲವಾದ ಮನಸ್ಸು ನಿಮ್ಮ ಹಿಡಿತಕ್ಕೆ ಸಿಲುಕದೆ ನಿಮ್ಮನ್ನು ದುರ್ಮಾರ್ಗಪ್ರವರ್ತಕರನ್ನಾಗಿ ಮಾಡುವದು ಸಮಾಜದ ನಿಂದಾಪವಾದಗಳಿಗೆ ಗುರಿಯಾಗುವಿರಿ. ಅರ್ಧಾಂಗಿಯೂ ಕಲಹ ಪ್ರಿಯಳಾಗುವಳು. ಆದರೂ ತಾ. 2, 7, ಈ ದಿನಗಳಲ್ಲಿ ಕೊಂಚ ಸುಖನೆಮ್ಮದಿಗಳಿಗವಕಾಶವಿದೆ.

ಮಕರ:— ಹಲವಾರು ಸಮಯದಿಂದ ಸಂಕಲ್ಪರೂಪದಿಂದಿದ್ದ ನಿಮ್ಮ ಕಾರ್ಯಗಳು ಇಂದು ಕಾರ್ಯರೂಪಕ್ಕೆ ಬರಲಿವೆ. ಇಚ್ಛೆಯಂತೆ ಪ್ರತಿಯೊಂದು ಕಾರ್ಯವೂ ಸಿದ್ಧಿಸುವದು. ಜನತೆಯಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ಆರೋಗ್ಯದಲ್ಲಿ ಪ್ರಗತಿಹೊಂದುವಿರಿ, ಆರ್ಥಿಕ ಭಾಗವೂ ವೃದ್ಧಿಗೊಳ್ಳುವದು. ಬಲಿಷ್ಠರಾದ ವಿರೋಧಿಗಳು ಇಂದು ಶರಣುಬರುವರು. ರಾಜಕೀಯದಲ್ಲಿ ನಿಮ್ಮ ಸಂಕಲ್ಪದಂತೆ ಕಾರ್ಯವು ನೆರವೇರಲಿದೆ. ಕಾಯಕಷ್ಟಜೀವಿಗಳಿಗೆ ಮಾತ್ರ ಕಾಲವು ಚೆನ್ನಾಗಿಲ್ಲವು. ತಾ. 3, 4 ಅತೀವ ಪ್ರಶಸ್ತವಿವೆ.

ಕುಂಭ:— ನೌಕರಿ ಜನತೆಗೂ ವ್ಯಾಪಾರೀವರ್ಗಕ್ಕೂ ಈ ಕಾಲವು ಸಾಕಷ್ಟು ಉತ್ಕರ್ಷವಾಗಿಯೇ ಇರುವದು. ಹೆಚ್ಚಿನ ಕಾರ್ಯಗಳೂ ಕೂಡ ನಿಮ್ಮಂತೆಯೇ ಕೊನೆಗೊಳ್ಳುವವು. ಸಾಂಸಾರಿಕ ತಾಪತ್ರಯಗಳಿಗೆ ಸಿಲುಕಲಿರುವಿರಿ, ಹೆಂಡತಿ ಮಕ್ಕಳ ಆರೋಗ್ಯ ಕೆಡಲಿದೆ. ಬಂಧುವರ್ಗದವರು ನಿಮ್ಮನ್ನು ಸಂಶಯದೃಷ್ಟಿಯಿಂದ ನೋಡುವರು. ಸ್ತ್ರೀ ಪುತ್ರರ ವಿರಹವ್ಯಥೆಗೂ ಅವಕಾಶವಿದೆ. ಖರ್ಚಿಗೆ ತಕ್ಕ ಆದಾಯವಿರುವುದರಿಂದ ದಿನಯಾಪನೆಯು ದುಸ್ತರವಾಗದು. ತಾ. 2, 5, 6 ಈ ದಿನಗಳು ಬೇರೆ ದಿನಗಳಿಗಿಂತ ಉತ್ತಮವಿರುವವು.

ಮೀನ:— ನಿಮ್ಮ ಅದೃಷ್ಟವಿಂದು ಕೀಳ ಹೀನ ಸ್ಥಿತಿಗೆ ಬಂದಿದೆ. ಯಾವ ಉದ್ಯಮವನ್ನು ಮಾಡಿದರೂ ನೀವು ಕೃತಕೃತ್ಯರಾಗಲಾರಿರಿ. ದಿನಯಾಪನೆಯು ಬಹಳ ಕಷ್ಟಸಾಧ್ಯವಾಗುವದು. ಇಂತಹ ಪರಿಸ್ಥಿತಿಯಲ್ಲಿ ಆಪ್ತೇಷ್ಟರು ಬಾಧುಗಳು ಕೂಡ ನಿಮ್ಮನ್ನು ದೂರದಿಂದಲೇ ತ್ಯಜಿಸುವರು. ಒಂದೆಡೆ ನಿಲ್ಲಲು ಅವಕಾಶ ದೊರೆಯದೆ ಸದಾ ಪರ್ಯಟನದಲ್ಲೇ ಕಾಲಕಳೆವಿರಿ. ದೇಹಾಲಸ್ಯ ಆರ್ಥಿಕ ಬಿಕ್ಕಟ್ಟು ಪ್ರಿಯಜನವಿಯೋಗಗಳಿಂದ ಸಂತಪ್ತರಾದ ನಿಮಗೆ ತಾ 3, 4, 7, 8 ಈ ದಿನಗಳಲ್ಲಿ ಕೊಂಚ ಶಾಂತಿಯುಂಟಾದೀತು.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಟೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain)ನಿರ್ಮೂಲಿಸಿ, ಬಹಿಷ್ಟೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನುಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಉತ್ಕೃಷ್ಟವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.** ಜವಾಬಿಗಾಗಿ 2 ಆಣೆ ಸ್ಟ್ಯಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಗೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು**.(South India)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಿ.ನಂಬ್ರ 276/1953.

ದಿ ಸದರ್ನ ಇಂಡಿಯಾ ಎಪೆಕ್ಸ್ ಬೇಂಕ್ ಲಿಮಿಟೆಡ್ ಉಡುಪಿ —ವಾದಿ

ಮತ್ತು

ಯು. ಗಣಪತಿ ಶೆಣೈ ಕೂಡಾ ಪ್ರತಿವಾದಿರು ಇವರೊಳಗೆ

1ನೇ ಪ್ರತಿವಾದಿ- ಯು. ಗಣಪತಿ ಶೆಣೈ- ದಾಸಪ್ಪ ಶೆಣೈರ ಮಗ—ಉಡುಪಿ ಕಸಬಾ- ಇವರಿಗೆ,

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 30-12-1952ರಲ್ಲಿ ರೂಪಾಯಿ 600/ ಕ್ಕೆ ಬರೆದು ಕೊಟ್ಟ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಕೂಡಾ ರು. 626 11-4ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 14 7-1953ಕ್ಕೆ ಪ್ರಥಮ ತನಿಖೆ ಬಗ್ಗೆ ಇಡಲಾಗಿರುವುದರಿಂದ ಆ ದಿವಸ 1ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರ ಹರಿಸದೆ ಇದ್ದರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂಬ ಸಂಗ್ತಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

M. Damodar Kamath,
Advocate for Plaintiff.

ಉಡುಪಿ, ತಾರೀಕು 26 6-53.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 316/53

ದಿ. ಪಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಇವರ ಟೌನ್ ಬ್ರೇಂಚ್ - ಉಡ್ಪಿ —ವಾದಿ

ಮತ್ತು

ಯು ಗಣಪತಿ ಶೆಣೈ ಕೂಡ 2 ಜನರು —ಪ್ರತಿವಾದಿರು

1ನೇ ಪ್ರತಿವಾದಿ ಯು ಗಣಪತಿ ಶೆಣೈ- ದಾಸಪ್ಪ ಶ್ಯಾನಭಾಗರ ಮಗ- ಕಲ್ಸಂಕ, ಉಡ್ಪಿ ಕಸಬಾ ಯವರಿಗೆ.

ನೀವು ಕೂಡ ಈ ದಾವೆಯ 3 ಜನ ಪ್ರತಿವಾದಿರು ವಾದಿ ಬೇಂಕಿಗೆ ರೂ 250-0-0ಕ್ಕೆ ತಾ 5-2-1953ರಲ್ಲಿ ಜೋಕಸ್ತರಾಗಿ ಬರೆಕೊಟ್ಟ ಪ್ರೊಮಿಸರಿ ನೋಟು ಪ್ರಕಾರ ಬಾಕಿ ಪೂರಾ ಅಸಲು ಬಡ್ಡಿ ಖರ್ಚುಗಳನ್ನು ಬರಮಾಡಿಕೊಳ್ಳುವರೆ ದಾಖಲ್ ಮಾಡಿದ ಮೇಲ್ಕಂಡ ದಾವೆಯು ಈ ಕೋರ್ಟಿನಲ್ಲಿ ತಾ 17 7 53ಕ್ಕೆ ಇತ್ಯರ್ಥ ತನ್ಗಿಗೆ ಇಟ್ಟಿರುತ್ತದೆಂತಲೂ, ನೀವು ಸದ್ರಿ ದಿನ ಹಗಲು ಘಂಟೆ 10-45ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಬೇಕೆಂತಲೂ, ತಪ್ಪಿದ್ರೆ ನಿಮ್ಮನ್ನು ಬಿಟ್ಟು ಮಾಡಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲಾಗುವದೆಂತಲೂ ಈ ಮೂಲಕ ತಿಳಿಸಲಾಗುತ್ತದೆ

(By order of court)

K. Vittal Nayak
Vakil for Plaintiff.

Udipi, 26 6-53

Edited, Printed & Published By K. H. Shetty at the Navayuga Press, Udipi, S. India

Regd No.
M 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ| ಚಂದಾ 5 12-0
6 ತಿಂಗಳಿಗೆ 3- 0-0
ಬಿಡಿ ಪ್ರತಿಗೆ 0- 2 0

ನವಯುಗ

9-7-1953

Vol 32
No 44

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೪

ಅಂತರಂಗ
ಪಕ್ಷ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ಈ 24ನ್ನು ಸಿಗುತ್ತವೆ.
ವಿವರಕ್ಕೆ ಬರೆಯಿರಿ
ಮೆನೇಜರ್,
ಅಂತರಂಗ, ಉಡುಪಿ

ಇದು ಜಿಲ್ಲಾ ಅಂತರಂಗದಲ್ಲಿರುವ ಮಣಿಪಾಲದಲ್ಲಿ
ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು
ಸೃಷ್ಟಿಸಿದ ಜಿಲ್ಲೆಯ ನವ ಬ್ರಹ್ಮ
ಟಿ. ಎಂ. ಎ. ಪೈಗಳು.

ಮಧುಪರ್ಕ

ದೈತ್ಯ ಶ್ರೇಷ್ಠನಾದ ಬಲಿ ಚಕ್ರವರ್ತಿಯು ಸರ್ವೈಶ್ವರ್ಯ ಸಂಪನ್ನನಾದ ರಾಜನಾಗಿದ್ದನು. ಅವನ ಕಾಲದಲ್ಲಿ ಭೂಮಿಯು ಉಳಲ್ಪಡದೆಯೇ ಸಕಲ ಧಾನ್ಯವನ್ನು ಉತ್ಪಾದಿಸುತ್ತಿತ್ತು. ನದಿಗಳ ನೀರು ಎಂದೆಂದೂ ಬತ್ತುತ್ತಿರಲಿಲ್ಲ. ಬಲಿ ಚಕ್ರವರ್ತಿಯು ವೇದ ಯಾಗಗಳನ್ನು ಎಲ್ಲಾ ಪ್ರಜಾ ಜನರೂ ನೆರವೇರಿಸುತ್ತಿದ್ದರು. ಇತರ ದುರ್ಗುಣವು ಆ ಚಕ್ರವರ್ತಿಯ ಬೆನ್ನನ್ನು ಬಿಡಲಿಲ್ಲ. ಬಲಿಗೆ ತನ್ನ ಸಾಮ್ರಾಜ್ಯ ವೈಭವದಿಂದ ಗರ್ವಿತನಾಗಿ, ಅಹಂಕಾರವನ್ನು ಬೆಳೆಸಿಕೊಳ್ಳುವ ದುರಾದೃಷ್ಟ ಪ್ರಾಪ್ತವಾಯಿತು.

ಈ ಸಮಯ ದೇವರಾಜ ಇಂದ್ರನು ಬಲಿಯನ್ನು ಕಂಡು ಸಾಕ್ಷಾತ್ ಭಗವಂತನ ಒಂದು ದಿನ ಒಡನೆ ಸಂಭಾಷಣೆ ನಡೆಯುತ್ತಿದ್ದಾಗಲೇ, ಬಲಿಚಕ್ರವರ್ತಿಯ ದೇಹದಿಂದ ತೇಜಸ್ಸೊಂದು ಹೊರಟು ಭಾಗ್ಯಶ್ರೀ ಲಕ್ಷ್ಮಿಯ ರೂಪ ತಳೆಯಿತು. ಲಕ್ಷ್ಮಿಯು ದೇವರಾಜ ಇಂದ್ರನನ್ನು ಸಂಬೋಧಿಸಿ "ನಾನು, ನಾಗೇಂದ್ರ ಬಲಿಯನ್ನು ತ್ಯಜಿಸಿ, ನಿಮ್ಮ ರಾಜ್ಯದಲ್ಲಿ ವಾಸ ಮಾಡಲು ಬಂದಿದ್ದೇನೆ. ನನ್ನ ನಾಲ್ಕು ಚರಣಗಳಿಗೆ ಸ್ಥಿರ ಆಧಾರ ಕೊಡಬಲ್ಲವರಲ್ಲಿ ನಾನು ಸ್ಥಾಯಿಯಾಗಿ ವಾಸಿಸುವೆನು" ಎಂದಳು.

"ಹಾಗಾದರೆ ದೇವಿ, ನಿಮ್ಮ ನಾಲ್ಕು ಚರಣಗಳನ್ನು ನಾನಿಲ್ಲಿಯೇ ಸ್ಥಿರಗೊಳಿಸುವೆ. ನಮ್ಮ ರಾಷ್ಟ್ರಮಾತೆ ಅನ್ನಪೂರ್ಣೆಯನ್ನಾಗಿ ರೂಪಿಸುವ ಈ ಭೂಮಿಯು ಒಂದು ಚರಣ. ನಮ್ಮ ಬುದ್ಧಿ ಬಲದಿಂದ ಸುನಿಯಂತ್ರಿತ ರೀತಿಯಲ್ಲಿ ಸಂಗ್ರಹಿಸಿ ಅನ್ನವನ್ನು ಉತ್ಪತ್ತಿ ಮಾಡಿದ ಆಹಾರ ಜಲರಾಶಿಯು ಇನ್ನೊಂದು ಚರಣವನ್ನು ಆಶ್ರಯಿಸಲಿ. ಸಮೃದ್ಧವಾದ ರಾಷ್ಟ್ರದ ಜನಶಕ್ತಿಯು ಮೂರನೆಯದು. ಈ ಜನಶಕ್ತಿಯ ಪೂರ್ಣ ಉಪಯೋಗದಿಂದ ನಾವು ಸಂಪನ್ನ ರಾಷ್ಟ್ರವನ್ನು ಕಟ್ಟುತ್ತೇವೆ. ನಾಲ್ಕನೆಯ ಚರಣವನ್ನು ನಮ್ಮ ಪ್ರಜಾ ಜನರ ಸೇವಕರಾದ ನಮ್ಮೆಲ್ಲರೂ ಪರಾಕ್ರಮಿಗಳೂ ದಯಾನಿಧಿಗಳೂ ಸದಾಚಾರಿಗಳೂ ಆಗಿರುವರು."

ಇಂದ್ರನ ಈ ಮಾತು ಕೇಳಿ ಭಾಗ್ಯಶ್ರೀ ಲಕ್ಷ್ಮಿಯು ಆನಂದ ತುಂದಿಲಳಾದಳು. "ದೇವರಾಜ, ಬಲಿಯ ರಾಷ್ಟ್ರದಲ್ಲಿ, ನಾನು ಮೂರು ಚರಣಗಳನ್ನು ಮಾತ್ರ ಇಡಬಲ್ಲವಳಾಗಿದ್ದೆ. ಆದುದರಿಂದಲೇ ಅಲ್ಲಿ ಸ್ಥಿರವಾಗಿ ಉಳಿಯದೆ ಓಡಬೇಕಾಗಿ ಬಂತು. ಜನತೆಯು ಸದಾಚಾರವನ್ನು ಕಳೆದುಕೊಂಡು ನೀತಿ ಭ್ರಷ್ಟವಾದಲ್ಲಿ, ಅಲ್ಲಿಯ ಭೂಮಿ, ಜಲ ಹಾಗೂ ಅಗ್ನಿಗಳೂ ನಿಸ್ತೇಜಗೊಳ್ಳುತ್ತವೆ. ನಾನು ತೀಕ್ಷ್ಣಶಕ್ತಿಯಾಗಿದ್ದೇನೆ— ನನಗೆ ಲೋಕ ಸಿಂಹಾಸನ ಬೇಕು" ಎಂದು ಲಕ್ಷ್ಮಿ ಕೃತಜ್ಞತೆಯಿಂದ ನುಡಿದಳು.

ಡಾ. ಟಿ. ಎಂ. ಎ. ಪೈಯವರ ಸಾಮರ್ಥ್ಯದಿಂದ ಸ್ಥಾಪಿತ
ಜಿಲ್ಲಾ ಪ್ರಸಿದ್ಧ ಕಸ್ತೂರ್ಬಾ ಮೆಡಿಕಲ್
ಕಾಲೇಜನ್ನು ಉದ್ಘಾಟಿಸಿದ
ಆರೋಗ್ಯಮಂತ್ರಿ ಎ. ಬಿ. ಶೆಟ್ಟರು

ನೂತನ ಆದರ್ಶ

ವರ್ತಮಾನ ಪತ್ರಿಕೆಗಳನ್ನು ಓದುತ್ತಿರುವವರಿಗೆ "ಆ ಗಿರಣಿಯಲ್ಲಿ ಕೂಲಿಕಾರರು ಎರಡು ದಿನಗಳಿಂದ ಮುಷ್ಕರ ಹೂಡಿರುವರು. ಪರಿಣಾಮವಾಗಿ ನಾಲ್ಕು ಸಾವಿರ ಕೆಲಸದ ತಾಸು ವ್ಯರ್ಥ ಕಳೆಯಿತು" ಎಂಬಿತ್ಯಾದಿ ವರದಿಗಳು ಕಾಣಸಿಗುತ್ತವೆ. ಇದರ ಮಹತ್ವವನ್ನು ನಾವಿಂದು ತಿಳಿದುಕೊಳ್ಳುವ ಕಾಲ ಬಂದಿದೆ– ಗಿರಣಿಯ ಕೆಲಸಗಾರರು ಸಂಪುಹೂಡಿದ ಉದ್ದೇಶವು ಏನೇ ಇರಲಿ—ಕೆಲಸದ ಸಮಯ ಹಾಳಾಗಿ ಹೋಯಿತೆಂಬದು ಅವರ ಮುಷ್ಕರದ ಕಾರಣಕ್ಕಿಂತಲೂ ಹೆಚ್ಚು ಮಹತ್ವದಿಂದ ಕೂಡಿದ ಸಂಗತಿಯಾಗಿರುತ್ತದೆ. ಸಾಮಾನ್ಯವಾಗಿ ಈ ರೀತಿ ಕೆಲಸದ ಸಮಯ ನಷ್ಟವಾದುದರ ಲೆಕ್ಕಾಚಾರವನ್ನು ಸರಕಾರದ ಕೂಡೆ ಹೆಸರು ದಾಖಲುಮಾಡಿಕೊಂಡ ಕಂಪೆನಿಗಳು ಇಡುತ್ತವೆ. ಸರಕಾರ ಇವುಗಳನ್ನು ಅತ್ಯಂತ ಶ್ರದ್ಧೆಯಿಂದ ಅಭ್ಯಸಿಸುತ್ತದೆ. ಕೆಲಸದ ಸಮಯ ಹಾಳಾಯಿತೆಂಬುದರ ಅರ್ಥ– ಉತ್ಪಾದನೆಯು ಅಷ್ಟರಮಟ್ಟಿಗೆ ತಗ್ಗಿಕೊಂಡಿತೆಂಬುದೇ ಆಗಿದೆ. ಕೆಲಸಗಾರರು ಎಂದಿನಂತೆ ಕೆಲಸಕ್ಕೆ ಬಂದು, ತಮಗೊಪ್ಪಿಸಿದ ಹೊಣೆಗಾರಿಕೆಯನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದ ಪಕ್ಷದಲ್ಲಿ ಉತ್ಪಾದನೆಯು ಎಷ್ಟರಮಟ್ಟಿಗೆ ವೃದ್ಧಿಗೊಳ್ಳುತಿತ್ತೋ, ಸಂಪಿನ ಪರಿಣಾಮವಾಗಿ ಆ ಉತ್ಪಾದನೆಯಾಗುವುದು ನಿಂತುಹೋಯಿತು. ಪರಿಣಾಮದಲ್ಲಿ ದೇಶವು ಅಷ್ಟು ಸಂಪತ್ತನ್ನು ಕಳೆದುಕೊಂಡಿತು.

ಹೀಗೆ ಸಂಪತ್ತನ್ನು ಕಳೆದುಕೊಳ್ಳುವುದು ಭಾರತದಂಥ ಬಡ ರಾಷ್ಟ್ರಕ್ಕೆ ನಿಶ್ಚಯವಾಗಿಯೂ ಹೇಳಿಸಿರುವುದಕ್ಕ ಭಾರತಕ್ಕೆ ಮಾತ್ರವಲ್ಲ ಸಂಪತ್ಸಮೃದ್ಧವಾಗಬಯಸುವ ಯಾವ ಸರಕಾರವೂ ಜನಶಕ್ತಿ ಹೀಗೆ ಹ್ರಾಸವಾಗುವುದನ್ನು ಕಂಡು ಸುಮ್ಮನೆ ಉಳಿಯುವಂತಿಲ್ಲ. ನಾವು ಆರೋಗ್ಯ ಕಳೆದುಕೊಂಡರೆ, ಅದನ್ನು ಮರಳಿ ಸಂಪಾದಿಸಬಲ್ಲೆವು. ಹಣ ಕಳೆದುಕೊಂಡರೆ ಇನ್ನೊಮ್ಮೆ ಗಳಿಸಬಲ್ಲೆವು. ಆದರೆ ಸಮಯ ನಷ್ಟಮಾಡಿಕೊಂಡರೆ, ಆ ಸಮಯವನ್ನು ಯಾವ ರೀತಿಯಿಂದಲೂ ತುಂಬಿಕೊಳ್ಳಲಾರೆವು ಎಂದೊಂದು ಸುಭಾಷಿತವಿದೆ. ನಷ್ಟವನ್ನು ಮಾಡಿಕೊಳ್ಳುವುದು ಎಂದಿಗೂ ಹಿತಾವಹವಲ್ಲವಾದರೂ–ಸಮಯದ ನಷ್ಟವು ಎಲ್ಲಕ್ಕಿಂತಲೂ ಪಡೆದ ದೊಡ್ಡ ತಪ್ಪೆನ್ನುವುದರಲ್ಲಿ ಸಂಶಯವಿಲ್ಲ. ಆದಕಾರಣ ನಾವು ಸಮಯದ ಸದುಪಯೋಗವನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ಮಾಡಿಕೊಳ್ಳಲು ಸಾಧ್ಯವಿದ್ದ ಎಲ್ಲಾ ಉಪಾಯಗಳನ್ನೂ ಯೋಜಿಸಿಕೊಳ್ಳಬೇಕು. ಸರಕಾರದ ಗಮನಕ್ಕೆ ಬಾರದ ರೀತಿಯಲ್ಲಿ ಸಹಸ್ರಾರು ಜನರ ಶಕ್ತಿಯು ವ್ಯರ್ಥ ಹಾಳಾಗುವುದನ್ನು ನಾವು ಕಾಣುತ್ತೇವಲ್ಲವೆ? ಕೇವಲ ನಿರುದ್ಯೋಗಿಗಳನ್ನು ಮಾತ್ರವಲ್ಲ ಉದ್ಯೋಗದಲ್ಲಿ ನಿರತರಾದವರಲ್ಲಿ ಸಹ ಜನ ಶಕ್ತಿಯ ಹ್ರಾಸಕ್ಕೆ ಕಾರಣರಾದ ಮಹಾನುಭಾವರು ತೋರುತ್ತಾರೆ. ಉತ್ಪಾದನದಲ್ಲಿ ನಿರತನಾದ ಮನುಷ್ಯನನು ತನ್ನ ನಿರುಪಯುಕ್ತ ಕೆಲಸಗಳ ಕಡೆಗೆ ಆಕರ್ಷಿಸಿಕೊಂಡು ದೇಶಕ್ಕೆ ಹಾನಿಯನ್ನುಂಟು ಮಾಡತಕ್ಕ ಜನರ ಹಾವಳಿ ಈಗೀಗ ಬಹಳ ಹೆಚ್ಚುತ್ತಿರುವದಿದೆ.

ಸುಲಭದ ಒಂದು ಉದಾಹರಣೆಯಾಗಿ ಕೆಲಸ ಬಿಟ್ಟವನನ್ನು ತೋರಿಸಬಹುದು. ಈ ಮಹಾನುಭಾವ ನಾಲ್ಕು ರಸ್ತೆ ಕೂಡುವ ಸ್ಥಳದಲ್ಲಿ ಅಥವಾ ಸಂತೆಯ ಜಾಗದಲ್ಲಿ ತನ್ನ ಕಸರತ್ತುಗಳನ್ನು ತೋರಿಸುತ್ತಾನೆ. ಅವನ ಕೊಳಲಿನ ಧ್ವನಿ ಹಾಗೂ ಡೋಲಿನ ಶಬ್ದ ಕೇಳಿಸಿದೊಡನೆಯೇ ಅತ್ಯಂತ ಜರೂರಾದ ಕೆಲಸದ ಮೇಲೆ ದಾರಿ ನಡೆಯುವವರು ಸಹ, ಅಲ್ಲಿ ನೆರೆಯುತ್ತಾರೆ. ನಾಲ್ಕು ... ಅವನು ಹತ್ತು ಹತ್ತು ಜನರನ್ನಾದರೂ ತನ್ನ ಸುತ್ತ ನೆರಿಸಬಲ್ಲನು. ಅಲ್ಲಿಂದ ಮುಂದೆ ಕನಿಷ್ಠ ಒಂದು ತಾಸಿನಷ್ಟು ಸಮಯವಾದರೂ ತನ್ನ ಕಪಿಚೇಷ್ಟೆಗಳನ್ನು ಹಾಗೂ ಜಾದೂವನ್ನು ತೋರಿಸುವನು. ಹೀಗೆ ಆ ಐವತ್ತು ಮಂದಿ ತಮ್ಮ ಒಂದು ತಾಸು ಸಮಯವನ್ನು ಡೊಂಬರಾಟದವನ ತಮಾಷೆ ನೋಡಲು ಉಪಯೋಗಿಸಿದಂತಾಯಿತು. ಒಟ್ಟಿನಲ್ಲಿ ೫೦ ತಾಸು ಮನುಷ್ಯಶಕ್ತಿ ಇದಕ್ಕೆ ವೆಚ್ಚಗೊಂಡಿತು. ಈ ಖರ್ಚು ಲಾಭಪ್ರದವೆಂದು ನಿಶ್ಚಯವಾಗಿಯೂ ಅದು ನಷ್ಟವೆನ್ನಬೇಕು. ರಸ್ತೆ ನಡೆಯುವವರಲ್ಲಿ ಕೆಲಸವಿಲ್ಲದವರು ಯಾರೂ ಇರಲಿಕ್ಕಿಲ್ಲ. ಏನಾದರೊಂದು ವಿಶೇಷ ಉದ್ದೇಶವನ್ನಿಟ್ಟುಕೊಂಡೇ ಅವರು ಪೇಟೆಗೆ ಬಂದಿರಬೇಕು. ಅಂಥವರಲ್ಲಿ ಯುಕ್ತಿಯೇ ವಿಸ್ಮಯ ನೋಟವು ನೋಡುವ ಚಪಲವನ್ನು ಹುಟ್ಟಿಸಿ, ತಾನು ನಾಲ್ಕು ಕಾಸು ಸಂಪಾದಿಸಿದ ಈ ಡೊಂಬ ನ್ಯಾಯದಲ್ಲಿ ದೇಶಕ್ಕೆ ದೊಡ್ಡ ನಷ್ಟವನ್ನುಂಟುಮಾಡಿದನು. ನಾ

(೩ನೇ ಪುಟ ನೋಡಿರಿ)

ವಿಧಾಯಕ ಚಟುವಟಿಕೆಗಳ ಮೀಮಾಂಸೆ

ಅತ್ಯಗತ್ಯವಾಗಿ ಬಿಡಿಸಲ್ಪಡಬೇಕಾದ ರಾಷ್ಟ್ರೀಯ ಸಮಸ್ಯೆಗಳ ಚಿತ್ರ

ನಮ್ಮ ಸ್ವಾತಂತ್ರ್ಯದ ಶಿಲ್ಪಿ ಎನಿಸಿದ ಮಹಾತ್ಮಾ ಗಾಂಧೀಯವರು ರಾಷ್ಟ್ರೀಯ ಕ್ಷೇತ್ರದ ವಿಭಿನ್ನ ರಂಗಗಳಲ್ಲಿ ರಚನಾತ್ಮಕ ಕಾರ್ಯವು ನಡೆಯದೆ ಕೇವಲ ರಾಜಕೀಯ ಸ್ವರಾಜ್ಯ ಮಾತ್ರ ದೊರೆತರೆ, ಅದೊಂದು ದೊಡ್ಡ ಲಾಭವೆನ್ನಲಾಗದು ಎನ್ನುವ ಅಭಿಪ್ರಾಯ ಪಟ್ಟಿದ್ದರು. ಇದಕ್ಕಾಗಿಯೇ ಮಹಾತ್ಮಾಜೀಯವರು ತಮ್ಮ ಅಷ್ಟದಶ ಸೂತ್ರಗಳ ರಚನಾತ್ಮಕ ಕಾರ್ಯಕ್ರಮವನ್ನು ಮುಂದಿಟ್ಟರು. ಆದರೆ ಅದನ್ನು ನಾವು ಉದಾಸೀನತೆಯಿಂದ ನೋಡಿದೆವು. ಹಾಗೆಂದು ಸ್ವಾತಂತ್ರ್ಯೋತ್ತರದ ಈ ದಿನಗಳಲ್ಲಿ ಪ್ರತಿ ಕ್ಷಣಕ್ಕೂ ನಮಗೆ ಗಾಂಧೀಜಿಯ ಹೇಳಿಕೆ ಎಷ್ಟು ಸತ್ಯವೆಂಬುದು ಮನವರಿಕೆಯಾಗುತ್ತಾ ಬರುತ್ತಿದೆ. ನಮ್ಮ ರಾಷ್ಟ್ರೀಯ ಜೀವನವನ್ನು ಸಂಪನ್ನ ಹಾಗೂ ಸಮೃದ್ಧ ಮಾಡುವಲ್ಲಿ ಅದ್ಭುತ ಚಮತ್ಕಾರಗಳು ಅಥವಾ ಘೋಷಣಗಳು ಕೆಲಸಕ್ಕೆ ಬಾರವೆಂದೂ, ಯೋಗ್ಯ ಧುರೀಣತ್ವವನ್ನು ಪಡೆದುಕೊಂಡು ಆರ್ಥಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ರಂಗದಲ್ಲಿ ಪರಿಶ್ರಮ ಪೂರ್ವಕ ದುಡಿಯುವುದರಿಂದ ಮಾತ್ರವೇ ನಾವು ಉದ್ಧಾರ ಹೊಂದಬಲ್ಲೆವೆಂದೂ ಈಗ ಖಚಿತವಾಗಿ ನಾವು ತಿಳಿದುಕೊಳ್ಳುವ ಕಾಲ ಬಂದಿರುತ್ತದೆ. ಬಲ್ಲವರೆಲ್ಲರೂ ಹೇಳುವಂತೆ—ರಾಷ್ಟ್ರಗಳಲ್ಲಿ ಸಮೃದ್ಧಿ ಹಾಗೂ ಐಶ್ವರ್ಯಗಳು ರಾಷ್ಟ್ರೀಯ ಮನೋವೃತ್ತಿಯ ಮತ್ತು ಸ್ವದೇಶ ನಿಷ್ಠರಾದ ಲಕ್ಷಾಂತರ ಪ್ರಜೆಗಳ ಪರಿಶ್ರಮದಿಂದಲೇ ಕೈಗೂಡಿದೆ. ಪ್ರತಿಭಾ ಸಂಪನ್ನ ವ್ಯಕ್ತಿಗಳಿಗಿಂತಲೂ ಒಂದು ತೂಕ ಹೆಚ್ಚು ಗೌರವವು ಪರಿಶ್ರಮಿಯಾದ ನಾಗರಿಕನಿಗೆ ಸಲ್ಲತಕ್ಕದ್ದು. ಏಕೆಂದರೆ ಬುದ್ಧಿವಂತನಾದವನು ತೋರಿಸುವ ಮಾರ್ಗದಲ್ಲಿ ನಡೆಯುವ ಕೆಚ್ಚನ್ನು ಅಷ್ಟು ಪ್ರತಿಭೆ ಪಡೆಯದ ಸಾಮಾನ್ಯ ನಾಗರಿಕನು ದರ್ಶಿಸುವುದು ಮಹಾ ಸಾಹಸವಾಗಿರುತ್ತದೆ. ಗಾಂಧೀಜಿಯವರು ತಾವು ಸ್ವತಃ ಇಂಥ ಉದಾತ್ತ ಮಾರ್ಗವನ್ನು ನಡೆದು ತೋರಿಸಿದ್ದರು. ಸ್ವಾತಂತ್ರ್ಯಕ್ಕಾಗಿ ಆಂದೋಲನ ಹೂಡಿದ ಸಮಯದಲ್ಲಿ ಹೆಚ್ಚಿನ ಕಾಂಗ್ರೆಸ ಕಾರ್ಯಕರ್ತರು ಮಹಾತ್ಮಾಜೀಯ ಮಾರ್ಗದರ್ಶನವನ್ನು ಸ್ವೀಕರಿಸಿ, ಅವರ ನಿಷ್ಠಾವಂತ ಅನುಯಾಯಿಗಳಾಗಿ ಕೆಲಸ ಮಾಡಿದರು. ಆದರೆ, ಸ್ವಾತಂತ್ರ್ಯ ಬಂದ ಗಳಿಗೆಯಿಂದ ಅಧಿಕಾರದ ಹಂಬಲ ಮತ್ತು ಆರಾಮದ ಅಭಿಲಾಷೆ ಕಾಂಗ್ರೆಸು ಕಾರ್ಯಕರ್ತರಲ್ಲಿ ಮನೆಮಾಡತೊಡಗಿತು. ಕಾಂಗ್ರೆಸು ಸಂಸ್ಥೆಯ ಪುಸ್ತಕಗಳಲ್ಲಿ ಲಕ್ಷಾಂತರ ಕ್ರಿಯಾ ಶೀಲ ಸದಸ್ಯರ ಹೆಸರು ಬರೆಯಲ್ಪಟ್ಟಿದೆ. ಆದರೆ ಕಾಂಗ್ರೆಸಿನ ಮಹಾ ಕಾರ್ಯದರ್ಶಿಗಳೇ ಈ ಜನರ ಕ್ರಿಯಾ ಶೀಲತೆಯ ಬಗ್ಗೆ ಸಂದೇಹಪಡುತ್ತಾರೆ. ಇದು ಕಾಂಗ್ರೆಸಿಗೆ ಭೂಷಣಪ್ರಾಯವಾದುದೇ?

೦೦ ೦೦

ಶ್ರೀಮನ್ನಾರಾಯಣ ಅಗ್ರವಾಲರು ಮಹಾತ್ಮಾ ಗಾಂಧೀಜಿಯ ಅಪ್ರತಿಮ ಶಿಷ್ಯರೆಂದು ಹೆಸರುಗೊಂಡಿರುವರು. ಭಾರತದ ಪುನಾರಚನೆಯು ಯಾವ ಬಗೆಯಲ್ಲಿ ಆಗಬೇಕೆಂದು ಗಾಂಧೀಜಿ ಬಯಸಿದ್ದರೋ ಅದಕ್ಕೆ ಸಂಬಂಧಿಸಿದೆಲ್ಲ ಸಂಗತಿಗಳ ಆಳವಾದ ಜ್ಞಾನವನ್ನು ಶ್ರೀಮನ್ನಾರಾಯಣ ಅಗ್ರವಾಲರು ಸಂಪಾದಿಸಿಕೊಂಡಿರುವರು. ಇಂದು ಕಾಂಗ್ರೆಸು ಸಂಸ್ಥೆಯ ಮಹಾ ಕಾರ್ಯದರ್ಶಿ ಸ್ಥಾನದಲ್ಲಿದ್ದುಕೊಂಡು, ಅವರು ತನ್ನ ಜೀವಮಾನದಲ್ಲಿ ಕಾಂಗ್ರೆಸಿಗೆ ಮಾರ್ಗದರ್ಶನ ಮಾಡಿದ ಮಹಾತ್ಮಾಜೀಯ ಧ್ಯೇಯೋದ್ದೇಶಗಳನ್ನು ಕಾಂಗ್ರೆಸು ಕಾರ್ಯಕರ್ತರ ಮುಂದೆ ಸ್ಪಷ್ಟವಾಗಿ ಇಡಲು ಪ್ರಯತ್ನಪಡುತ್ತಿರುವರು. ಈಚೆಗೆ ಅವರು ಬರೆದೊಂದು ಪುಸ್ತಕದಲ್ಲಿ ನೇರಿ ಉಲ್ಲೇಖಿಸಿದಂತೆ, ಕಾಂಗ್ರೆಸಿಗರು ಕ್ರಿಯಾ ಪಟುತ್ವವನ್ನು ದರ್ಶಿಸುವ ಸ್ಥಾನದಲ್ಲಿ ಕ್ರಿಯಾ ಶೂನ್ಯತೆಯನ್ನು ತೋರಿಸುವುದಕ್ಕೆ ತುಂಬ ಬೇಸರ ಹಾಗು ವಿವಂಚನೆಯನ್ನು ವ್ಯಕ್ತಗೊಳಿಸಿರುವರು. ಕಾಂಗ್ರೆಸು ಸಂಸ್ಥೆಯು ತನ್ನ ಹಿಂದಿನ ಪ್ರಭೆಯನ್ನು ಮತ್ತು ಚೈತನ್ಯವನ್ನು ಕಳೆದುಕೊಂಡಿದೆ ಎನ್ನುವುದುಂಟು. ಹಾಗೆಯೇ ಕಾಂಗ್ರೆಸ್ ಸಂಸ್ಥೆಯಲ್ಲಿ ಚೈತನ್ಯ ಮತ್ತು ಚಟುವಟಿಕೆಯನ್ನೂ ಮರಳಿ ತುಂಬಬೇಕೆನ್ನುವವರೂ ಇದ್ದಾರೆ. ಆದರೆ ಈ ರೀತಿ ಪುನಃ ಸ್ಫೂರ್ತಿ ಮತ್ತು ಚೈತನ್ಯವನ್ನು ತುಂಬುವುದಕ್ಕೆ ಕಾಂಗ್ರೆಸ್ ಕಾರ್ಯಕರ್ತರ ಈಗಿನ ಮನೋಭಾವನೆ ಬದಲಾಗಬೇಕಾದುದು ಅತ್ಯಗತ್ಯವೆಂಬ ಮಾತನ್ನು ಹೆಚ್ಚಿನವರು ಮರೆಯುವರು. ಹಿಂದಿನಂತೆ ಈಗ ಕೂಡ ಮೌನವಾಗಿ ಜನಹಿತಕರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಜನತಾ ಕಲ್ಯಾಣಕ್ಕಾಗಿ ದುಡಿಯದಿದ್ದ ಪಕ್ಷದಲ್ಲಿ, ಕಾಂಗ್ರೆಸು ಜನಪ್ರಿಯತೆಯನ್ನು ಕೊನೆಯವರೆಗೂ ಉಳಿಸಿಕೊಳ್ಳಲಾರದು. ಈಗ ರಾಷ್ಟ್ರೀಯ ಕ್ಷೇತ್ರದಲ್ಲಿ ಕಾಂಗ್ರೆಸು ಸಂಸ್ಥೆಯೇ ದೊಡ್ಡದು; ಮತ್ತು ಜನತಾ ಬೆಂಬಲವೂ ಈ ಪಕ್ಷಕ್ಕೆ ಪ್ರಬಲವಾಗಿರುತ್ತದೆ. ಪ್ರಜಾ ಸಮಾಜವಾದಿಗಳ ಮತ್ತು ಸರ್ವೋದಯ ಸಮಾಜದ ಧ್ಯೇಯ ಧೋರಣೆಗಳು ಮತ್ತು ಕಾಂಗ್ರೆಸಿನ ಮೂಲ ತತ್ವಗಳು ಸಾಮಾನ್ಯತಃ ಒಂದೇ ಎಂಬುದನ್ನು ಗಮನಿಸಿದರೆ, ಕಾಂಗ್ರೆಸು ಸಂಸ್ಥೆಯ ಮಹತ್ವ ಇನ್ನಷ್ಟು ಚೆನ್ನಾಗಿ ವ್ಯಕ್ತಗೊಳ್ಳುತ್ತದೆ. ಹೀಗೆ ಉದಾತ್ತ ಧ್ಯೇಯವನ್ನು ಕಾಂಗ್ರೆಸು ಇಟ್ಟುಕೊಂಡಿರುತ್ತದೆ ಎಂದ ಮಾತ್ರಕ್ಕೆ ನಮಗೆ ಸಿದ್ಧಿಯೂ ದೊರಕಿತೆ? ಇಲ್ಲವೆನ್ನುವುದು ನಿರ್ವಿವಾದ. ಕೇವಲ ಧ್ಯೇಯ ಚೆನ್ನಾಗಿದ್ದರೆ ಸಾಲದು; ಅದನ್ನು ಸಾಧಿಸುವ ಹಟವೂ ಬೇಕು; ಮತ್ತು ಅನುಷ್ಠಾನಾ ಮಾರ್ಗ ಉತ್ತಮವಾಗಿರಬೇಕು.

೦೦ ೦೦

ಸಾಮಾನ್ಯವಾಗಿ ನಾವಿಂದು ಸಾಮಾಜಿಕ ಹಾಗೂ ಆರ್ಥಿಕ ರಂಗದಲ್ಲಿ ಕ್ರಾಂತಿಯನ್ನುಂಟುಮಾಡಬೇಕೆನ್ನುತ್ತೇವೆ. ಇಂಥ ವಿಚಾರಗಳು ನಮ್ಮಲ್ಲಿ ಕೆಲವರ ಮನಸ್ಸಿನಲ್ಲಿಯೇ ಹುಟ್ಟುತ್ತವೆ. ಇದು ಎಲ್ಲರ ಮನಸ್ಸಿನಲ್ಲೂ ಬೇರು ಬಿಟ್ಟಿದ್ದಾದರೆ ಕ್ರಾಂತಿಯು ತಾನಾಗಿಯೇ ಮೈದೋರುವುದು. ಆದುದರಿಂದ ಇಂದು ನಮಗೆ ಬೇಕಾದುದು ರಕ್ತ ರಂಜಿತ ಕ್ರಾಂತಿಯಲ್ಲ—ವಿಚಾರ ಕ್ರಾಂತಿ; ಮನಸ್ಸಿನ ಭಾವನೆಗಳು ಮಾರ್ದವಗೊಂಡು ಬದಲಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಈಗಿನ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳಲೆತ್ನಿಸಬೇಕು. ಇಂದು ಪ್ರಪಂಚದಲ್ಲಿ ಬೇರೆಬೇರೆ ರಾಜಕೀಯ ಹಾಗು ತಾತ್ವಿಕ ಅಭಿಪ್ರಾಯಗಳಲ್ಲಿ ಭೇದವು ಭೌತಿಕ ಅಸ್ತಿತ್ವವನ್ನು ಪಡೆದಿರುವುದಕ್ಕಿಂತಲೂ ಹೆಚ್ಚು ಮನಸ್ಸಿನ ಹಿನ್ನೆಲೆಯನ್ನು ಆಧರಿಸಿರುತ್ತದೆ. ಆದುದರಿಂದ ಕಾಂಗ್ರೆಸಿಗರು ತಮ್ಮ ಸಂಸ್ಥೆಯನ್ನು ಉತ್ತಮಗೊಳಿಸಬೇಕೆಂದು ಬಯಸುವರಾದರೆ, ಮಾನಸಿಕ ಪರಿವರ್ತನೆಯನ್ನು ಸಾಧಿಸಬಲ್ಲ ಉಪಾಯಗಳನ್ನು ಪ್ರಥಮತಃ ಅನುಸರಿಸಬೇಕು. ಇದನ್ನು ನಾಳೆ ಮಾಡಿದರಾಯಿತು. ಎನ್ನುವ ವಿಳಂಬ ಧೋರಣೆ ಚೆನ್ನಾದುದಲ್ಲ—ನಾಳೆ ಬರುವುದರೊಳಗಾಗಿ, ಏನೇನು ಆಗಿಹೋಗುವುದೋ. ಈ ದಿನಮಾನಗಳಲ್ಲಿ ಊಹನೆಗೂ ನಿಲುಕದ ವಿಷಯ. ಜಗತ್ತು ಅಷ್ಟು ಸ್ವಂತಗತಿಯಿಂದ ಮುನ್ನಡೆಯುತ್ತಿದೆ. ಆದ ಕಾರಣ ನಾವೆಲ್ಲರೂ ಇಂದೇ ಸಂಕಲ್ಪ ಬದ್ಧರಾಗಿ, ನಾವು ಮಾಡಬೇಕೆಂದಿರುವ ಒಳ್ಳೆಯ ಕೆಲಸವನ್ನು ಕರ್ತವ್ಯ ಬುದ್ಧಿಯಿಂದ ಕಾರ್ಯಾನ್ವಿತಗೊಳಿಸಬೇಕು. ಮುಖ್ಯತಃ ರಚನಾತ್ಮಕ ಕ್ಷೇತ್ರದಲ್ಲಿ ನಾವು ಮಾಡತಕ್ಕ ಕೆಲಸಗಳು ಅನೇಕ ಬಗೆಯಾಗಿವೆ—ಅವುಗಳನ್ನು ಸ್ಥೂಲವಾಗಿ ವಿವರಿಸುವ ಪ್ರಯತ್ನವನ್ನು ಶ್ರೀ ಅಗ್ರವಾಲರು ತಮ್ಮ ಪುಸ್ತಕದಲ್ಲಿ ಮಾಡಿರುವರು. ಆದರೆ ಅವರೇ ಹೇಳುವಂತೆ, ಅಷ್ಟು ಮಾತ್ರಕ್ಕೆ ಕಾಂಗ್ರೆಸಿಗರ ಕೆಲಸ ಮುಗಿಯುವುದಿಲ್ಲ. ಮುಂಚಿತವಾಗಿ ಸಿದ್ಧಪಡಿಸಿಕೊಂಡ ಯೋಜನೆ ಎಲ್ಲ ಕಡೆಗೂ ಸಮವಾಗಿ ಉಪಯೋಗಕ್ಕೆ ಬರಲಿಕ್ಕಿಲ್ಲ. ನಾವು ನೀಲಿಬಣ್ಣದ ಸೀರೆಯೊಂದನ್ನು ಮಾತ್ರ ತಯಾರಿಸಿ, ಎಲ್ಲ ಹೆಂಗಸರ ಮೆಚ್ಚುಗೆಗೂ ಅದು ಪಾತ್ರವಾಗಬೇಕೆಂದು ಹಟ ಹಿಡಿಯುವಷ್ಟೇ ಮೂರ್ಖತನವು ಒಂದು ವಿಶಿಷ್ಟ ಯೋಜನೆ, ಎಲ್ಲ ಪರಿಸ್ಥಿತಿಗೂ ತಕ್ಕುದೆನ್ನುವ ಫಲವಾಗಿರುತ್ತದೆ. ಆದ ಕಾರಣ ನಮ್ಮ ರಚನಾತ್ಮಕ ಕಾರ್ಯಗಳೆಲ್ಲ ಆಯಾ ಕ್ಷೇತ್ರದ ವಿಶಿಷ್ಟ ವಾತಾವರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲ್ಪಟ್ಟಂಥವುಗಳಾಗಬೇಕು. ಅನೇಕ

(೧೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY LTD.,
Estd: 1935.] [Head Office: UDIPI, S. India.

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನೂತನ ಆದರ್ಶ

(೧ನೇ ಪುಟದಿಂದ)

ಮಾನ್ಯ ಡೊಂಬನೊಬ್ಬನು ದಿನಕ್ಕೆ ಹತ್ತು ಆಟಗಳನ್ನಾದರೂ ತೋರಿಸುವನೆಂದಿಟ್ಟುಕೊಂಡರೆ ತನ್ನೊಬ್ಬನ ಸಂಸಾರ ಪೋಷಣೆಯ ನೆವದಲ್ಲಿ ಅವನು ದೇಶದ ಜನಶಕ್ತಿಯ ದುರುಪಯೋಗ ಮಾಡುವ ಪ್ರಮಾಣವನ್ನು ದುರ್ಲಕ್ಷಿಸುವುದೇ ಸಾಧ್ಯವಿಲ್ಲ.

ಈ ಡೊಂಬನಂತೆ ವಿನೋದದೊಂದು ಉದ್ಯೋಗವನ್ನು ಮುಂದಿಟ್ಟು ನೋಡು. ಜನರ ಸಮಯ ಹಾಳು ಮಾಡುವ ಜನರು ಪೇಟೆಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಕಾಣಸಿಗುವರು. ಸದಾಚಾರಿಗಳಾದ ಜನರು ಈ ಮೋಹಕ ಆಟ ಹಾಗೂ ತಮಾಷೆಗಳಿಂದ ಆಕರ್ಷಿತರಾಗದೆ, ಕರ್ತವ್ಯ ಮರೆಯದೆ, ತಮ್ಮ ಕೆಲಸದಲ್ಲಿಯೇ ತಲ್ಲೀನರಾಗಬಹುದು ಆದರೆ ಶಾಂತಮಯ ಜೀವನವನ್ನು ನಿರ್ವಹಿಸುವವರಿಗೆ, ಇಂಥ ಜನರ ಉಪದ್ರವ ದೊಡ್ಡ ಆತಂಕವೆಂಬುದನ್ನು ಮರೆಯಬಾರದು ಇವರ ಜೊತೆಗೆನೇ ಸೇರಿಸಬಹುದಾದ ಇನ್ನೊಂದು ದೊಡ್ಡ ಗುಂಪು ಭಿಕ್ಷುಕರದ್ದು- ಇವರು ಪರೋಪಜೀವಿಗಳು. ದಯೆಯಿಂದ ನಿಜಕ್ಕೂ ಕಾಣಬೇಕಾದ ದುರ್ದೈವಿಗಳು ಇವರಲ್ಲಿ ಕೆಲವೇ ಮಂದಿ ಇರಬಹುದು. ಹೆಚ್ಚಿನವರು ಭಿಕ್ಷಾಟನೆಯನ್ನು ಜೀವನೋಪಾಯವಾಗಿ ಕೈಗೊಂಡ ಸೋಗಲಾಡಿಗಳೇ ನಿಜ. ಇವರು ನೋಡಲು ಹೃಷ್ಟಪುಷ್ಟರಾಗಿದ್ದಾರೆ. ಅವರಲ್ಲಿರುವ ಸಂಪತ್ತು, ಸಾಮಾನ್ಯ ಕೂಲಿಯಲ್ಲಿಯೂ ಪ್ರಾಯಶಃ ಇರಲಿಕ್ಕಿಲ್ಲ. ನಮ್ಮ ಮುಖ್ಯೋಪಾಧ್ಯಾಯರು ಹೇಳುತ್ತಿದ್ದ ಸಂಗತಿಯೊಂದು ನೆನಪಿಗೆ ಬರುತ್ತದೆ.. ಆ ಮುದುಕ "ಒಂದು ಪಾವಾಣೆ ಸ್ವಾಮೀ" ಎಂದು ಅಂಗಲಾಚುವಾಗ ಎಂಥವರ ಎದೆಯೂ ಕರಗಬೇಕು ನಮ್ಮಲ್ಲಿ ಚಿಲ್ಲರೆ ಪಾವಾಣೆ ಇಲ್ಲನಾದರೆ ಹತ್ತು ರೂಪಾಯಿ ನೋಟನ್ನು ಆ ಮುದುಕನಿಗೆ ಕೊಟ್ಟರೂ ೯-೧೫--ಒಂದು ಮುಕ್ಕಾಲು ಪೈಗಳು, ರೂ. ೯-೧೫-೯ನ್ನು ಅವನು ನಮಗೆ ವಾಪಾಸು ಕೊಡುತ್ತಾನೆ. ಸಾಮಾನ್ಯ ಕೂಲಿಯೊದನೆ ಕಾಫಿಗಾಗಿ ಉಳಿಸಿದ ಎರಡಾಣೆಗಿಂತ ಹೆಚ್ಚು ಹಣ ನೋಡಲು ಸಿಗಲಿಕ್ಕಿಲ್ಲ. ಆದರೆ ಈ ಭಿಕ್ಷುಕರ ಕೂಡೆ ಹತ್ತೈವತ್ತು ರೂಪಾಯಿಗಳು ಹರಕು ಅಂಗಿಯ ಒಳ ಜೇಬಿನಲ್ಲಿ ಸುರಕ್ಷಿತವಾಗಿವೆ! ಆದರೂ ಅವನು ಸಂತೃಪ್ತನಾಗದೆ, ಇತರರಿಗೆ ತೊಂದರೆ ಕೊಡುತ್ತಿರುವನು.

ನಿಜವಾಗಿಯೂ ಅತ್ಯಗತ್ಯದ ಕೆಲಸದಲ್ಲಿ ನಿಮಗ್ನರಾದವರನ್ನು ಈ ರೀತಿ ತಮ್ಮ ಲಕ್ಷ್ಯದಿಂದ ಪರಾವೃತ್ತರನ್ನಾಗಿಸುವ ಜನರ ಕಿರುಕುಳವನ್ನು ರಾಷ್ಟ್ರವು ಕ್ಷಮಿಸುವಂತಿಲ್ಲ. ಇದರಂತೆ ರಾಷ್ಟ್ರಕ್ಕೆ ದೊಡ್ಡ ಕೇಡನ್ನುಂಟುಮಾಡುವ ಇನ್ನೊಂದು ಪಂಗಡವುಂಟು_ಅದು ನಿರುದ್ಯೋಗಿ ಜನರದ್ದು. ಜನರು ನಿರುದ್ಯೋಗಿಗಳಾಗಿರುವುದಕ್ಕೆ ಕಾರಣ ಅನೇಕವಿರಬಹುದು ಆದರೆ ಬಹುಮುಖ್ಯ ಕಾರಣಗಳಿಂದ ನಿರುದ್ಯೋಗಿಗಳಾಗಿ ಅಲೆಯುತ್ತಿರುವವರಲ್ಲಿ ಯಾರೊಬ್ಬರೂ ಉಣ್ಣದೆ, ಉಡದೆ ದಿನ ಕಳೆಯುವುದಿಲ್ಲವಲ್ಲ! ಈ ಜನರು ಪರೋಪಜೀವಿಗಳಾಗಿ, ಹೆರವರ ಮೇಲೆ ಹೊರೆಯಾಗಿ ಬದುಕಿದ್ದುಕೊಂಡು, ಜನ ಶಕ್ತಿಯ ಹ್ರಾಸಕ್ಕೆ ಕಾರಣೀಭೂತರಾಗಿದ್ದಾರೆ. ನಿರುದ್ಯೋಗಿಗಳಿಗೆ ಕೆಲಸವನ್ನು ಸರಕಾರ ಒದಗಿಸಿಕೊಡಬೇಕೆನ್ನುವ ಕೂಗನ್ನು ನಾವು ಕೇಳುತ್ತೇವೆ. ಸರಕಾರದಂತೆ ಸಮಾಜ ಕೂಡ ನಿರುದ್ಯೋಗದ ನಿವಾರಣೆಯಲ್ಲಿ ಸಹಯೋಗನೀಡಬಲ್ಲುದೆಂಬ ಮಾತೂ ಸತ್ಯ. ಆದರೆ ನಿರುದ್ಯೋಗಿಗಳು ಸ್ವತಃ ಮಾಡಬಲ್ಲ ಕೆಲಸ ಅತ್ಯಂತ ಜರೂರಾದದ್ದು ಎಂಬುದನ್ನು ಇಲ್ಲಿ ಒತ್ತಿ ಹೇಳುವುದವಶ್ಯ. ಪ್ರತಿ ಕ್ಷಣಕ್ಕೂ ಭಾರತದಂಥ ದೇಶದಲ್ಲಿ ವ್ಯರ್ಥವಾಗಿ ವೆಚ್ಚವಾಗುವ ಜನಶಕ್ತಿಯ ಸದುಪಯೋಗವಾಗ ಬೇಕೆನ್ನುವವರು ಈ ನಿರುದ್ಯೋಗಿಗಳನ್ನು ಪ್ರಯೋಜನಕಾರಿಯಾದ ಕೆಲಸದಲ್ಲಿ ತೊಡಗಿಸ ಬೇಕೆನ್ನುವ ಸೂಚನೆಗೆ ಸಂಪೂರ್ಣ ಸಮ್ಮತಿ ನೀಡುವರು.

ಈ ಸೂಚನೆಯೆಂಥದ್ದು? ಕೆಲಸ ಇಲ್ಲವೆಂದು ಕೂಗೆಬ್ಬಿಸುವ ನಿರುದ್ಯೋಗಿಗಳು ತಮ್ಮ ಸ್ವಂತ ಪ್ರಯತ್ನದಿಂದ ಕೆಲಸ ಹೆಚ್ಚಬಹುದಾದ ಹೊಸ ಹೊಸ ಅವಕಾಶಗಳನ್ನೇಕೆ ಕಲ್ಪಿಸಿಕೊಳ್ಳ ಕೂಡದು? ಒಂದು ಉದಾಹರಣೆ ತೆಗೆದುಕೊಳ್ಳುವುದಾದಲ್ಲಿ- ಈ ನಿರುದ್ಯೋಗಿಗಳು ಬಂಜರು ಬಿದ್ದಿರುವ ಭೂಮಿಯನ್ನು ಉತ್ತು, ಅದರಲ್ಲಿ ಬೆಳೆ ತೆಗೆಯುವ ಪ್ರಯತ್ನವನ್ನೇಕೆ ಮಾಡಬಾರದು? ವನಮಹೋತ್ಸವದಂಥ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ವಹಿಸಿ, ದುಡಿಯಬಾರದೇಕೆ? ಸುಮ್ಮನೆ ತಿಂದುಂಡು ತಿರುಗುತ್ತಿರುವ ಸಮಯವನ್ನು ಮರಗಿಡಗಳ ರಕ್ಷಣಾ ಭಾರವನ್ನು ಹೊತ್ತು ಸದುಪಯೋಗಪಡಿಸಬಾರದೇಕೆ? ಜನಪದ ಅಭಿವೃದ್ಧಿ ಯೋಜನೆಗಳು ನಡೆಯುವಲ್ಲಿ ಉತ್ಸಾಹದಿಂದ ಭಾಗವಹಿಸಿದಲ್ಲಿ, ಕಾಲಾಂತರದಲ್ಲಾದರೂ ಉಂಟಾಗುವ ಒಳ್ಳೆಯ ಪರಿಸ್ಥಿತಿಯಿಂದ, ಈ ನಿರುದ್ಯೋಗಿಗಳಿಗೆ ಲಾಭವಾಗದೇ? ಇಂದು ಪ್ರತಿಯೊಂದೂ ಕ್ಷೇತ್ರದಲ್ಲಿ ತೀವ್ರ ಸ್ಪರ್ಧೆ ಕಂಡುಬರುತ್ತದೆ. ಇದರಲ್ಲಿ ಎಲ್ಲರನ್ನೂ ಸೋಲಿಸಿ ಮುಂದೋದಿದವನಿಗೆ ಮಾತ್ರ ಜಯ ಲಭ್ಯ. ನಿರುದ್ಯೋಗಿಗಳು ಸಹ ತಮ್ಮ ದುಸ್ಥಿತಿಯ ನಿವಾರಣೆಗೋಸ್ಕರ ಹೊಸ ಅವಕಾಶಗಳನ್ನು ತಾವಾಗಿ ಸೃಷ್ಟಿಸದಿದ್ದರೆ, ಅವರು ಆ ಜೀವನ ಪರ್ಯಂತ ತೊಳಲಾಡುತ್ತಿರಬೇಕಾಗುವುದು.

ಜನಶಕ್ತಿಯ ಹ್ರಾಸವಾದಲ್ಲಿ, ಅಥವಾ ಜನಶಕ್ತಿಯ ಚಟುವಟಿಕೆಗೆ ಯೋಗ್ಯ ಅವಕಾಶ ದೊರೆಯದಿದ್ದ ಪಕ್ಷದಲ್ಲಿ, ಜನರ ಗುಣಶೀಲಗಳ ಮೇಲೆ ದುಷ್ಪರಿಣಾಮವು ಬಿದ್ದೇ ಬೀಳುತ್ತದೆ. ಇಂಗ್ಲಿ ಭಾಷೆಯಲ್ಲಿ ಶೂನ್ಯ ಮನಸ್ಸು ಸೈತಾನನ ಭವ್ಯ ಗೃಹವೆನ್ನುವ ಒಂದು ಗಾದೆಯುಂಟು. ತುಳುವಿನಲ್ಲಿ ಕೂಡ ಕೆಲಸವಿಲ್ಲದ ಬಡಗಿಯು ಮಗುವಿನ ಮೈ ಕೆತ್ತಿದನೆನ್ನುವ ಮಾತುಂಟು. ಇವನ್ನು ದೃಷ್ಟಿಸಿ ಹೇಳುವುದಾದಲ್ಲಿ ಸದಾಚಾರ ಹಾಗು ಸದ್ವರ್ತನೆಗಳ ಮೂಲಾಧಾರವಾಗಿ ನಮ್ಮ ಜನಶಕ್ತಿಯ ಸದುಪಯೋಗವಾಗ ಬೇಕೆನ್ನುವುದು ಸ್ಪಷ್ಟಗೊಳ್ಳುತ್ತದೆ. ಕಳ್ಳತನ, ಕೊಲೆ, ದರೋಡೆ ಮುಂತಾದ ಕೆಟ್ಟ ಕೆಲಸಗಳು ಮಾಡಲಿಕ್ಕೆ ಒಳ್ಳೆಯ ಕೆಲಸವಿಲ್ಲದ ಕಾರಣದಿಂದಲೇ ಪ್ರಚೋದನೆಯನ್ನು ಪಡೆಯುತ್ತವೆ. ಕೈ ತುಂಬ ಕೆಲಸವನ್ನು ಒಬ್ಬನಿಗೆ ಕೊಟ್ಟು ಅವನಿಗದರ ಹೊಣೆಗಾರಿಕೆಯನ್ನು ಮನಗಾಣಿಸಿದರೆ- ಅದು ಮುಗಿಯುವವರೆಗೆ ಅವನಿಗೆ ಬೇರೆ ಸಂಗತಿಯನ್ನು ಗಮನಿಸುವುದಕ್ಕೆ ಅವಕಾಶವೇ ಸಿಗುವುದಿಲ್ಲ. ನಮ್ಮಲ್ಲಿ ಯಾರೊಬ್ಬರೂ ಆತ್ಮ ಸಂತೋಷದಿಂದ ದುರಾಚಾರವನ್ನು ಆಲಿಂಗಿಸುವುದಿಲ್ಲ. ಆದರೆ ಸದಾ ಏನಾದರೊಂದು ರೀತಿಯಲ್ಲಿ ವ್ಯಕ್ತೀಕರಿಸುವ ಹಂಬಲವುಳ್ಳ ಜನಶಕ್ತಿ, ಸನ್ಮಾರ್ಗ ದೊರೆಯದಿದ್ದಂತೆಲ್ಲ ದುರ್ಮಾರ್ಗಗಾಮಿಯಾಗುವ ಭಯವುಂಟು. ಮನೆಯಲ್ಲಿ ಪ್ರೀತಿ ಹಾಗೂ ವಾತ್ಸಲ್ಯಗಳನ್ನು ಪಡೆಯದವನ, ಬೀದಿಯ ಮೋಹದ ಬಲೆಯಲ್ಲಿ ಸುಖಶಾಂತಿ ಲಕ್ಷಿಸುವಂತೆ ವಿಷಯ ತೃಪ್ತಿಯ ನ್ಯಾಯ ಮಾರ್ಗ ಮುಚ್ಚಿದಾಗ ವ್ಯಭಿಚಾರವನ್ನವಲಂಬಿಸುವಂತೆ, ಜನಶಕ್ತಿಯ ಉತ್ತಮ ಉಪಯೋಗಕ್ಕೆ ಆಸ್ಪದ ದೊರೆಯದಾಗೆಲ್ಲ— ದುರಾಚಾರದ ತನ್ನ ವಿಷಪೂರಿತ ಹೆಡೆಯನ್ನೆತ್ತಿ ಬುಸುಗುಟ್ಟುತ್ತದೆ.

ಶಾಲೆ ಕಲಿಯುವ ವಿದ್ಯಾರ್ಥಿಗಳಿಗೆ ಓದುಬರೆಹದ ಜೊತೆಗೆ ಕೈತುಂಬ ಕೆಲಸವನ್ನು ಮಾಡಲು ಹೇಳಿದರೆ, ಬೀದಿ ಬಸವರಂತೆ ತಿರುಗಾಡಲು, ಸಿನಿಮಾ ನೋಡಲು, ಸಂಗೀತ ಕೇಳಲು ಅವಕಾಶ ದೊರೆಯದು. ಆಗ ದುಷ್ಟ ವಾತಾವರಣದಿಂದ ಉಂಟಾಗಬಹುದಾದ ಕೆಟ್ಟ ಚಾಳಿಗಳೂ ಅಂಟಿಕೊಳ್ಳುವುದಿಲ್ಲ. ನಮ್ಮ ಜನಶಕ್ತಿಯು ವ್ಯರ್ಥವಾಗಿ ಹಾಳುಗೊಳ್ಳುವುದನ್ನು ಕಂಡೂ ಸುಮ್ಮನುಳಿಯುವುದೆಂದರೆ ರಾಷ್ಟ್ರೀಯ ಜೀವನದ ಸರ್ವನಾಶ ಮಾಡಿದಂತೆ. ಸದಾಚಾರವನ್ನು ಕಳೆದುಕೊಂಡ ಯಾವ ನಾಡಿಗೂ ಲೋಕಶ್ರೀಯ ಸಿಂಹಾಸನವಾಗಬಲ್ಲ ಅಧಿಕಾರವಿಲ್ಲ ಎಂದ ಮೇಲೆ ಜನಶಕ್ತಿಯ ಸಮುಚಿತ ಪ್ರಮಾಣದ ಉಪಯೋಗ ಮಾಡಿಕೊಳ್ಳಲಿಕ್ಕೆ ನಾವು ಸರ್ವ ಪ್ರಯತ್ನವನ್ನೂ ದೃಢ ಸಂಕಲ್ಪದಿಂದ ಮುಂದೊತ್ತಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಜನತಾ ಸಹಕಾರಕ್ಕೆ ಸ್ವಾಗತವನ್ನು ಕೋರಿ, ಏನೇನು ಸೌಲಭ್ಯ ಮತ್ತು ಅನುಕೂಲತೆಗಳನ್ನು ಒದಗಿಸಿ ಕೊಟ್ಟಿರುವರೋ—ಇದೆಲ್ಲವೂ ಜನಶಕ್ತಿ ಸುಮ್ಮನೆ ಹಾಳಾಗುವುದನ್ನು ತಡೆದು ಹಿಡಿಯಲು ಮಾಡಿದ ಉಪಾಯವೆನ್ನಬೇಕು. ಇದರ ಸದಾಶಯವನ್ನು ತಿಳಿದುಕೊಂಡು ಜನರು ತಮ್ಮ ಶಕ್ತಿಸರ್ವಸ್ವವನ್ನು ವ್ಯಯ ಮಾಡಿ ರಾಷ್ಟ್ರ ಕಟ್ಟಲು ಸ್ವೇಚ್ಛೆಯಿಂದ ಮುಂಬಂದರೆ ಅದು ಸಮಷ್ಟಿಯ ಹಾಗೂ ವ್ಯಕ್ತಿಯ ಕಲ್ಯಾಣಕ್ಕೆ ನೆರವಾಗುತ್ತದೆ. ಒಂದುವೇಳೆ ಸ್ವಾಭಾವಿಕವಾದ ಆಲಸ್ಯ ಹಾಗು ಜಡತ್ವದ ನೆವದಿಂದ, ಈ ರೀತಿ ಜಾಗೃತಗೊಂಡು ನಷ್ಟವಾಗುತ್ತಿರುವ ಶಕ್ತಿಯನ್ನು ರಾಷ್ಟ್ರಹಿತಕ್ಕಾಗಿ ವ್ಯಯಿಸುವುದಕ್ಕೆ ಜನರಲ್ಲಿ ಸ್ವಯಂ ಸ್ಫೂರ್ತಿ ಇಲ್ಲವೆಂದು ತೋರಿದಲ್ಲಿ—ಕಡ್ಡಾಯದ ಪರಿಶ್ರಮ ಪಡೆದುಕೊಳ್ಳುವ ಸಿದ್ಧಾಂತವನ್ನು ಸ್ವೀಕರಿಸುವುದು ಒಳ್ಳೆಯದು. ರಾಷ್ಟ್ರದ ಕ್ಷೇಮಕ್ಕಾಗಿ ಪ್ರಜೆಯ ಮೇಲೆ ಈ ರೀತಿ ಒತ್ತಾಯ ಹೇರುವುದಕ್ಕೆ ಸರಕಾರಕ್ಕೆ ನಿಶ್ಚಯವಾಗಿಯೂ ಅಧಿಕಾರವುಂಟು

—ಓಂತತ್ಸತ್!!

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ Zandu Brahmi Hair Oil — ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 5-8-0 ಕಾಲು ರಾತ್ಲಿಗೆ ರೂ. 1-

ಝಂಡೂ ಸರಸಪರಿಲ್ಲಾ Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

Zandu Zuvi Drops ಝಂಡೂ ಜ್ಯುವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ—ರೂ. 2-12-0

ದಕ್ಷಿಣಕನ್ನಡದಲ್ಲಿ ನಮ್ಮ ವಿಕ್ರೇತರು:—
ಮಂಗಳೂರು: ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸಿಟ್ಯೂಟ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.
ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಾಂಚೇರಿ, ಕೊಚ್ಚಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ
ದೊಡ್ಡ ಸೈಜಿನ ನಿಘಂಟು.
ಬೆಲೆ ರೂ. 5—6—0
ನವಭಾರತ ಬುಕ್ ಡಿಪ್ಪೊ, ಉಡುಪಿ
ನವಯುಗ ಪ್ರೆಸ್, ಉಡುಪಿ.

ಶಾಲೆಗಳಿಗೆ ಬೇಕಾಗುವ ರಿಜಿಸ್ಟ್ರು
ಫಾರ್ಮುಗಳು ಸಿಗುತ್ತವೆ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ, ಚಿಲ್ಲರೆಯಾಗಿಯೂ ಮಾರಲ್ಪಡುತ್ತವೆ.
ಬೆಲೆ ಪ್ರತಿ 1ಕ್ಕೆ 0—1—0
,, ,, 100ಕ್ಕೆ 4—0—0
ನವಯುಗ ಪ್ರೆಸ್, ಉಡುಪಿ

ಜಮ್ಮೂ ಆಂದೋಲನ ನಿಲ್ಲುವುದೇ ನ್ಯಾಯ

ನೆಹರೂರಿಂದ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಮಾರ್ಗದರ್ಶನ

ಕಣ್ಮರೆಯಾದ ಕಿಲ್ಲೆ

ಕಳೆದ ವಾರ ನಮ್ಮ ಜಿಲ್ಲೆಗೆಯೇ ಭೂಷಣಪ್ರಾಯವಾದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಉದ್ಘಾಟನೆಯಾಯಿತೆನ್ನುವ ಸಂತೋಷಪ್ರದ ಸುದ್ದಿಯನ್ನು ಕೇಳಿದ ನಾವು ಈ ವಾರ ನಮ್ಮ ಜಿಲ್ಲೆಯು ಒಬ್ಬ ನಿಷ್ಠಾವಂತ ಕಾಂಗ್ರೆಸು ಕಾರ್ಯಕರ್ತರನ್ನು ಕಳೆದುಕೊಂಡಿತೆಂದು ವಿಷಾದಿಸಬೇಕಾಗಿದೆ. ಶ್ರೀ ಎನ್. ಎಸ್. ಕಿಲ್ಲೆಯವರು ಈಚೆಗೆ ಕೆಲವು ತಿಂಗಳಿಂದ ಅರ್ಬುದ (ಕ್ಯಾನ್ಸರ್) ರೋಗದಿಂದ ಬಳಲುತ್ತಿದ್ದರು; ಉತ್ತಮ ವೈದ್ಯಕೀಯ ಉಪಚಾರವನ್ನು ಒದಗಿಸಿದರೂ ಕಿಲ್ಲೆಯವರು ಮೃತ್ಯುವನ್ನೆದುರಿಸುವ ಹೋರಾಟದಲ್ಲಿ ಸೋತು ದಿನಾಂಕ ೪ರಂದು ಅಪರಾಹ್ನ ೨-೩೦ಕ್ಕೆ ತಮ್ಮ ೪೮ನೇ ವಯಸ್ಸಿನಲ್ಲಿ ದಿವಂಗತರಾದರು. ದಿ| ನಾರಾಯಣ ಕಿಲ್ಲೆಯವರು ತಮ್ಮ ಜೀವನದಲ್ಲಿ ಸಿದ್ಧಿಯನ್ನೂ ಯಶಸ್ಸನ್ನೂ ಗಳಿಸಿರುವರು. ಬಂಟರ ಕುಟುಂಬದಲ್ಲಿ ಜನಿಸಿದ ಕಿಲ್ಲೆಯವರು ಹೈಸ್ಕೂಲು ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ ಮುಗಿಸಿದರು. ಮಹಾತ್ಮ ಗಾಂಧೀಯವರು ಕಾಂಗ್ರೆಸಿನ ನೇತೃತ್ವವನ್ನು ವಹಿಸಿಕೊಂಡ ಗಳಿಗೆಯಿಂದ ಕಿಲ್ಲೆಯವರು ನಿಷ್ಠಾವಂತ ಕಾರ್ಯಕರ್ತರಾಗಿ ಕೆಲಸ ಮಾಡಿದರು. ಅವರ ಕಾಂಗ್ರೆಸ್ ಸೇವೆಯು ನಮ್ಮ ಜಿಲ್ಲೆಯಲ್ಲಿಯಷ್ಟೇ ಅಲ್ಲ ಅಖಿಲ ಕರ್ನಾಟಕದಲ್ಲಿ ಜನಜನಿತವಾಗಿದೆ. ಕಾಂಗ್ರೆಸು ಈ ಹಿಂದೆ ಎರಡು ಬಾರಿ ೧೯೩೭ ಮತ್ತು ೧೯೪೬ರಲ್ಲಿ ಚುನಾವಣೆಗೆ ಇಳಿದಾಗ ನಮ್ಮ ಜಿಲ್ಲೆಯಲ್ಲಿ ಪಡೆದ ಅಭೂತಪೂರ್ವ ಯಶಸ್ಸಿಗೆ ದಿ. ಕಿಲ್ಲೆಯವರ ಸ್ತುತ್ಯ ಪ್ರಯತ್ನಗಳೇ ಕಾರಣೀಭೂತವೆಂದರೆ ಸಲ್ಲುವುದು. ಕಾಂಗ್ರೆಸಿನ ಸಂದೇಶವನ್ನು ಮೂಲೆ ಮೂಲೆಗೂ ಬಿತ್ತರಿಸುವುದರಲ್ಲಿ, ಮತ್ತು ಜನಸಾಮಾನ್ಯರಿಗೂ ಚೆನ್ನಾಗಿ ಮನವರಿಕೆ ಮಾಡಿಕೊಡುವಲ್ಲಿ ಕಿಲ್ಲೆಯವರಿಗೆ ಸರಿದೊರೆಯಾಗಿ ನಿಲ್ಲಬಲ್ಲ ವ್ಯಕ್ತಿ ನಮ್ಮ ಜಿಲ್ಲೆಯಲ್ಲಿ ಬೇರೋರ್ವನಿಲ್ಲ. ಅವರು ಹರಿಜನ ಸೇವಕರಾಗಿ ಮಾಡಿದ ಸೇವೆಗಳು, ಜಿಲ್ಲಾ ಕಾಂಗ್ರೆಸು ಹಾಗು ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿಗಳ ಸದಸ್ಯರಾಗಿ ಮಾಡಿದ ಕೆಲಸಗಳು ಮರೆಯಲ್ಪಡುವಂಥದಲ್ಲ. ಅವರು ಇನ್ನೂ ರುಗ್ಣಶಯ್ಯೆಯಲ್ಲಿರುವಾಗ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿ ಸ್ಥಾನಕ್ಕೆ ನೇಮಕಗೊಂಡಿದ್ದರು. ಆದರೆ ಅದನ್ನು ನಿರ್ವಹಿಸುವ ಅವಕಾಶವನ್ನು ದೇವರು ಕಿಲ್ಲೆಯವರಿಗೆ ಅನುಗ್ರಹಿಸಲಿಲ್ಲ. ಕಾಯಿಲೆಯ ಸಮಯ ಕಿಲ್ಲೆಯವರನ್ನು ಕಂಡು ಯೋಗಕ್ಷೇಮ ವಿಚಾರಿಸಲು ಮದ್ರಾಸು ಗವರ್ನರ ಶ್ರೀ ಪ್ರಕಾಶರು, ಮೈಸೂರಿನ ಮುಖ್ಯ ಮಂತ್ರಿ ಹನುಮಂತಯ್ಯ ಮತ್ತು ಕೊಡಗಿನ ಮುಖ್ಯಮಂತ್ರಿ ಪೂಣಚ್ಚರವರು ಬಂದಿದ್ದುಂಟು. ಜಿಲ್ಲೆಯ ಕಾಂಗ್ರೆಸಿಗರಿಗೆ ಮತ್ತು ಜನಸಾಮಾನ್ಯರಿಗೆ ಕಿಲ್ಲೆಯವರ ಅನಾರೋಗ್ಯ ತುಂಬ ಚಿಂತನೆಯ ಸಂಗತಿಯಾಗಿದ್ದಿತು. ಕಿಲ್ಲೆಯವರ ಕಾಂಗ್ರೆಸ ನಿಷ್ಠೆಯಂತೆ ವಾಗ್ಮಿತೆಯೂ ಅತ್ಯಂತ ಪ್ರಸಿದ್ಧವಾದುದು. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಅವರು ಮಾತನಾಡತೊಡಗಿದರೆ, ಇಡೀ ಜನಸ್ತೋಮವೇ ತಲೆದೂಗಿ ನಲಿಯಬೇಕು- ಭಾಷಣ ಕಲೆಯನ್ನು ಸ್ತೋತೃ ಕಳೆಯೊಂದಿಗೆ ಕರಗತ ಮಾಡಿಕೊಂಡವರಲ್ಲಿ ಕಿಲ್ಲೆಯವರೇ ಅಗ್ರಗಣ್ಯ. ಜನರ ಮನಸ್ಸನ್ನು ಆಕರ್ಷಿಸಿ, ಅವರೆಲ್ಲರೂ ಭಲೆ ಎನ್ನುವಂತೆ ಮಾತನಾಡುವ ಚಾತುರ್ಯ ಕೈಗೂಡಿಸಲಿಕ್ಕೆ, ಯಕ್ಷಗಾನದಲ್ಲಿ ಅರ್ಥ ಹೇಳುವ ಅಭ್ಯಾಸವನ್ನು ಕಿಲ್ಲೆಯವರು ಮಾಡಿದ್ದುದೇ ಕಾರಣ. ನಮ್ಮ ಜಿಲ್ಲೆಯ ಮಟ್ಟಿಗಷ್ಟೇ ಅಲ್ಲ- ಹೊರನಾಡಿನಲ್ಲೂ ಕಿಲ್ಲೆಯವರು ಅಸಾಧಾರಣ ಅರ್ಥಧಾರಿಗಳೆಂದು ಹೆಸರು ಪಡೆದಿರುವರು. ತಮ್ಮ ಜೀವಮಾನದ ಕೊನೆಯ ದಿನಗಳಲ್ಲಿ ವಿಧಾಯಕ ಚಟುವಟಿಕೆಗಳ ಸಾಧನವೆನಿಸಿದ ಪತ್ರಿಕೋದ್ಯೋಗವನ್ನು ಕೈಗೊಂಡು ಸರ್ವೋದಯ ವಾರಪತ್ರಿಕೆಯನ್ನು ನಡೆಸಿಕೊಂಡು ಬಂದರು. ಆದರೆ, ದೇಶ ಸೇವೆಗೆ ಇನ್ನೂ ಅನೇಕ ವರ್ಷಗಳು ತೆರೆದಿದ್ದಂತೆಯೇ ಕಿಲ್ಲೆಯವರ ಆತ್ಮಜ್ಯೋತಿ ಕಣ್ಮರೆಯಾಯಿತು. ನಿಷ್ಠಾವಂತ ಕಾಂಗ್ರೆಸ ಭಕ್ತ ಹಾಗೂ ಅಪ್ರತಿಮ ವಾಗ್ಮಿಗಳೆಂದು ಜಿಲ್ಲೆಯ ಜನತೆ ಅವರನ್ನು ಸದಾ ಸ್ಮರಿಸುತ್ತದೆ; ತುಂಬು ಗೌರವಾದರಗಳೊಡನೆ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಜಮ್ಮೂ ಚಳುವಳಿ ನಿಲ್ಲಲಿ

ಕಿಲ್ಲೆಯವರ ನಿಧನಕ್ಕಾಗಿ ನಾವು ಶೋಕಾಶ್ರುಗಳನ್ನು ಸುರಿಸುತ್ತಿದ್ದಂತೆಯೇ ಹೊಸ ಡಿಲ್ಲಿಗೆ ಕಳೆದ ವಾರ ಆಗಮಿಸಿದ ಪ್ರಧಾನಿ ನೆಹರೂ ತಮ್ಮ ಸಂಚಾರ ಕಾಲದಲ್ಲಿ ನಿಧನ ಹೊಂದಿದ ಜನಸಂಘದ ನಾಯಕ ಹಾಗೂ ರಾಷ್ಟ್ರಸಭೆಯಲ್ಲಿ ಅದ್ವಿತೀಯನೆನಿಸಿದ ಡಾ. ಶ್ಯಾಮಪ್ರಸಾದ ಮುಕರ್ಜಿಯವರ ಆಕಸ್ಮಿಕ ಮೃತ್ಯುವಿನ ಬಗ್ಗೆ ತಮಗಾದ ಸಂತಾಪವನ್ನು ಸೂಚಿಸಿದರು. ಶ್ಯಾಮಪ್ರಸಾದ ಮುಕರ್ಜಿಯವರ ವ್ಯಕ್ತಿತ್ವದ ಪ್ರತಿಭೆಯನ್ನವರು ಮುಕ್ತಕಂಠದಿಂದ ಹೊಗಳಿದರು. ನೆಹರೂರವರ ಕಡೆಗೆ ಮುಖರ್ಜಿಯವರ ರೋಗಶಯ್ಯೆ ನಿಧನದ ಹಿನ್ನೆಲೆಯನ್ನು ಪರಿಶೀಲಿಸಬೇಕೆನ್ನುವ ಬೇಡಿಕೆಗಳು ಬಂದಿದ್ದವೆಂದೂ, ಹಲವರು ಈ ಸಂಬಂಧದಲ್ಲಿ ತೋರ್ಪಡಿಸಿದ ಸಂಶಯಗಳಿಗೆ ಪರಿಹಾರರೂಪದಲ್ಲಿ ನೆಹರೂ ಈ ಹೇಳಿಕೆಯನ್ನು ಹೊರಡಿಸಿದರೆಂದೂ ತಿಳಿಯುತ್ತದೆ. ಮುಖರ್ಜಿಯವರ ನಿಧನದ ಬೆನ್ನಿಗೆಯೇ ಜನಸಂಘ, ಹಿಂದೂಮಹಾಸಭೆ, ರಾಮರಾಜ್ಯ ಪರಿಷತ್ತು ಇತ್ಯಾದಿ ಸಂಘಗಳ ನಾಯಕರು ಕಾಶ್ಮೀರದಲ್ಲಿ ಏನು ನಡೆಯಿತೆಂಬುದನ್ನು ವಿಚಾರಿಸತಕ್ಕದ್ದೆಂದು ಆಗ್ರಹಪಡಿಸತೊಡಗಿದರು. ಪಶ್ಚಿಮ ಬಂಗಾಳದಲ್ಲಿ ಕೂಡ ಜನಾಭಿಪ್ರಾಯವು ನಿಷ್ಪಕ್ಷಪಾತ ವಿಚಾರಣೆಯೊಂದು ನಡೆದು ಮುಖರ್ಜಿಯವರ ಆಕಸ್ಮಿಕ ನಿಧನದ ರಹಸ್ಯವನ್ನು (ಇದ್ದರೆ) ಹೊರಗೆಡಹಬೇಕೆನ್ನುತಿತ್ತು. ಈ ರೀತಿ ಜನ ಹೇಳುತ್ತಿರುವುದರ ಕಡೆಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಶ್ರೀ ಬಿಧನ ಚಂದ್ರ ರಾಯ್ ಹಾಗೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ನೆಹರೂರವರ ಗಮನವನ್ನು ಸೆಳೆದರು. ಪರಿಣಾಮವಾಗಿ ನೆಹರೂ ದಿವಂಗತ ಮುಖರ್ಜಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ, ಕಾಶ್ಮೀರ ಪ್ರಶ್ನೆಯ ಪರಿಹಾರವನ್ನು ಶಾಂತರೀತಿಯಿಂದ ಕಂಡುಕೊಳ್ಳಬಯಸುವ ನಾವು ಅದಕ್ಕೆ ಅನುಕೂಲವಾದ ವಾತಾವರಣವನ್ನುಂಟುಮಾಡಬೇಕೆಂದು ಈ ದೃಷ್ಟಿಯಿಂದ ಜಮ್ಮೂವಿನ ಪ್ರಜಾಪರಿಷತ್ತಿನವರು ನಡೆಸುತ್ತಿರುವ ಆಂದೋಲನ ಹಿಂದೆಗೆಯಲ್ಪಡುವುದೆಂದು ತಾನು ಆಶಿಸುವುದಾಗಿಯೂ ಹೇಳಿದರು. ಪ್ರಧಾನಿಗಳ ಈ ಹೇಳಿಕೆಯನ್ನು ಜನಸಂಘ ಸ್ವಾಗತಿಸಿ, ತನ್ನ ಸತ್ಯಾಗ್ರಹ ಕಾರ್ಯಕ್ರಮವನ್ನು ನಿಲ್ಲಿಸಲು ನಿರ್ಧರಿಸಿದ ವರದಿ ಬಂದಿದೆ. ಮಾತ್ರವಲ್ಲ ಮುಖರ್ಜಿಯವರ ನಿಧನ ಕಾಲದ ಸಂಗತಿಗಳನ್ನೆಲ್ಲ ವಿವರವಾಗಿ ಕಾಶ್ಮೀರ ಸರಕಾರ, ಮತ್ತು ಮಂತ್ರಿಗಳು ತಿಳಿಯಪಡಿಸಿ, ಸಾರ್ವಜನಿಕರಲ್ಲಿರಬಹುದಾದ ಸಂಶಯದ ನಿವಾರಣೆ ಮಾಡಿರುವರು. ಜಮ್ಮೂ ಜನರ ಕೇಳಿಕೆಯಲ್ಲಿ ಹುರುಳಿಲ್ಲವೆನ್ನುವುದನ್ನು ನಾವು ಒಪ್ಪುವುದು ಶಕ್ಯವಿಲ್ಲವಾದರೂ ಕಾಶ್ಮೀರ ಸರಕಾರವು ಜಮ್ಮೂವಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಸಾಕಷ್ಟು ತೃಪ್ತಿದಾಯಕವಾದ ಒಳ್ಳೆಯ ಕೆಲಸಗಳನ್ನು ಕೈಗೊಂಡಿರುವುದನ್ನೂ ಮರೆಯುವಂತಿಲ್ಲ. ಜಮ್ಮು ಮತ್ತು ಲಢಾಕದ ಜನರಿಗೆ ಸ್ವಾಯತ್ತತೆಯನ್ನು ಕೊಡುವ ವಿಚಾರ ಕಾಶ್ಮೀರ ಸರಕಾರಕ್ಕುಂಟು; ಆರ್ಥಿಕ ಪ್ರಶ್ನೆಗಳನ್ನು ಮುಖ್ಯ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನೇಮಿಸಿದ ಸಮಿತಿಯೊಂದು ವಿಚಾರಿಸುತ್ತಿದೆ. ಹಿಂದುಳಿದ ಪ್ರದೇಶವೆನ್ನುವ ಕಾರಣಕ್ಕಾಗಿ ಅಲ್ಲಿ ಸುಧಾರಣೆ ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಅಧಿಕ ಪ್ರಾಶಸ್ತ್ಯವನ್ನು ಸರಕಾರ ಕೊಡುತ್ತಾ ಬಂದಿದೆ. ಭಾರತದೊಡನೆ ಅನಿರ್ಬಂಧ ವಿಲೀನಗೊಳ್ಳಬೇಕೆನ್ನುವ ಮಾತನ್ನು ಮಾತ್ರ ಪ್ರಕೃತ ಯಾರೂ ಆಡಬಾರದು: ಕಾಶ್ಮೀರ ಪ್ರಶ್ನೆ ಅಷ್ಟು ಸುಲಭದಲ್ಲಿ ಇತ್ಯರ್ಥ ಹೊಂದುವಂಥದಲ್ಲ; ಮತ್ತು ಭಾರತ ಈ ವಿಷಯದಲ್ಲಿ ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ನಿಲುವಿಗೆ ವಿರುದ್ಧ ಹೋಗುವಂತಿಲ್ಲ.

ಕಿಡಿಗೇಡಿತನದ ಖಂಡನೆ

ಇದೇ ಕಾಲಕ್ಕೆ ನೆಹರೂರವರು ಇನ್ನೊಂದು ಹೇಳಿಕೆಯನ್ನು ಕೊಟ್ಟು, ದಕ್ಷಿಣದಲ್ಲಿ ಆಂಧ್ರ ರಾಜ್ಯ ರಚನೆಯ ಪ್ರಶ್ನೆಯನ್ನೆತ್ತಿ ನಡೆಯುತ್ತಿರುವ ಅನುಚಿತ ಚಟುವಟಿಕೆಗಳು ಗರ್ಹಣೀಯವಾದವುಗಳೆಂದು ವಿಶದೀಕರಿಸಿದ್ದಾರೆ. ಆಂಧ್ರ ರಾಜ್ಯದ ಗಡಿಯ ಪ್ರಶ್ನೆಯನ್ನೆತ್ತಿಕೊಂಡು ನಡೆಯುತ್ತಿರುವ ವಿಧ್ವಂಸಕ ಹಾಗೂ ವಿನಾಶಕಾರೀ ಕೃತ್ಯಗಳು ಉದ್ದೇಶ ಸಾಧನೆಯಲ್ಲಿ ಆತಂಕಗಳಾಗಿಯೇ ಪರಿಣಮಿಸುತ್ತವಲ್ಲದೆ- ಅವುಗಳಿಂದ ತಿಲಾಂಶ ಪ್ರಯೋಜನವೂ ದೊರೆಯದೆಂಬುದನ್ನು ನೆಹರೂ ಸ್ಪಷ್ಟೀಕರಿಸಿರುವರು. ಮುಖ್ಯವಾಗಿ ನೆಹರೂರವರು ಚಿತ್ತೂರು ಜಿಲ್ಲೆಯ ತಿರುತ್ತಣಿ ಪ್ರದೇಶದಲ್ಲಿ ತಮಿಳರು ನಡೆಸುತ್ತಿರುವ ಗುಲ್ಲು ಗೊಂದಲಗಳನ್ನು ಖಂಡಿಸಿರುವರು. ಆಂಧ್ರದಲ್ಲಿ ಕೆಲವರು ಬಳ್ಳಾರಿಯ ಕನ್ನಡಿಗರ ಮೇಲೆ ಹರಿಹಾಯ್ದಂತೆ, ತಿರುತ್ತಣಿ ಪ್ರದೇಶದಲ್ಲಿ ತಮಿಳರು ಶ್ರೀ ಶಿವಜ್ಞಾನ ಗ್ರಾಮಣಿಯವರ ಧುರೀಣತ್ವದಲ್ಲಿ ಪುಂಡಾಟವನ್ನು ನಡೆಸಿದ್ದರು. ರೈಲು ಸಾರಿಗೆಯಲ್ಲಿ ತಡೆಯನ್ನೊಡ್ಡುವುದೇ ಮುಂತಾದ ದುಷ್ಟ ಚಟುವಟಿಕೆಗಳಿಂದ ಆಂಧ್ರರ ಗಡಿ ಪ್ರಶ್ನೆಯನ್ನು ಹೇಗೆ ನಿರ್ಣಯಿಸಬಹುದೆಂಬುದೇ ತನಗೆ ತಿಳಿಯದೆಂದು ನೆಹರೂ ಉದ್ಗರಿಸಿರುವರು. ಜನತೆ ತಮ್ಮ ಬೇಡಿಕೆಗಳನ್ನು ನ್ಯಾಯಬದ್ಧವಾದ ಮತ್ತು ಸರ್ವಸಮ್ಮತವಾದ ರೀತಿಯಲ್ಲಿ ಯೋಗ್ಯ ಪರಿಣಾಮವನ್ನು ಪಡೆದುಕೊಂಡು ಮುನ್ನಿಡಲು ಕಲಿಯುವುದು ಇಂದು ಅತ್ಯಾವಶ್ಯಕ. ಕೇವಲ ಭಾವೋದ್ರೇಕಗಳ ದಾಸ್ಯ ಸ್ವೀಕರಿಸಿ ಅನುಚಿತ ಕೆಲಸಗಳಿಗೆ ಮನಗೊಟ್ಟಿದ್ದರೆ, ಅದರಿಂದ ರಾಷ್ಟ್ರದ ಸಮಷ್ಟಿ ಹಿತಕ್ಕೆ ಧಕ್ಕೆ ತಗಲುತ್ತದೆ. ನೆಹರೂರವರು ಆಂಧ್ರ ರಾಜ್ಯ ನಿರ್ಮಾಣಾನಂತರ ಒಂದು ಅಥವಾ ಹೆಚ್ಚು ಗಡಿ ನಿರ್ಣಾಯಕ ಸಮಿತಿಗಳನ್ನು ನೇಮಿಸುವುದಾಗಿ ಹಿಂದೆ ಕೊಟ್ಟ ಆಶ್ವಾಸನೆಯ ಪುನಸ್ಸ್ಮರಣೆ ಮಾಡಿರುವರು. ಈ ಸಮಿತಿಯ ಮುಂದೆ ಸಂಬಂಧಿಸಿದವರೆಲ್ಲರೂ ತಮ್ಮ ವಿಚಾರಗಳನ್ನು ಮಂಡಿಸಲು ಅವಕಾಶವುಂಟು.

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ಪ್ರತ್ಯೇಕ ನ್ಯಾಯಾಂಗದ ಸ್ವಾಗತಾರ್ಹ ವ್ಯವಸ್ಥೆ

ಅಬಾಧಿತವಾದ ನ್ಯಾಯ ದೊರೆಯಬಲ್ಲ ಹೊಸ ಧೋರಣೆ.

ಮತ್ತು ಎಲ್ಲವನ್ನೂ ಪರಿಶೀಲಿಸಿದ ಬಳಿಕವೇ ಸಮಿತಿಯು ಸೀಮಾ ರೇಷೆಯನ್ನು ಗೊತ್ತು ಮಾಡುವುದು. ನೆಹರೂರವರ ಹೇಳಿಕೆಯನ್ನು ಪುಷ್ಟೀಕರಿಸುತ್ತಾ ರಾಜಾಜಿಯವರು ವಿಧ್ವಂಸಕ ಕೃತ್ಯಗಳು ತಕ್ಷಣ ನಿಲ್ಲಬೇಕೆಂದು ಹೇಳಿರುವರು. ಶಾಂತಿ ಭಂಗ ಹಾಗು ಅಕ್ರಮ ಕೃತ್ಯಗಳಲ್ಲಿ ತೊಡಗಿದವರ ವಿರುದ್ಧ ಉಗ್ರೋಪಾಯಗಳನ್ನು ಕೈಗೊಳ್ಳಲಾಗುವುದೆಂದು ಒತ್ತಿ ಹೇಳಿರುವರು. ಪರಿಣಾಮವಾಗಿ ತಿರುತ್ತಣಿಯ ತಮಿಳರ ಆಂದೋಲನ ಶಾಂತವಾಗತೊಡಗಿದೆ. ಆದರೆ ಬಳ್ಳಾರಿಯಲ್ಲಿ ಆಂಧ್ರ ಪುಢಾರಿಗಳು ಮಾತ್ರ ನೆಹರೂರ ಹೇಳಿಕೆಗೆ ತಮ್ಮದೇ ಟಿಪ್ಪಣಿ ಜೋಡಿಸಿರುವರು: ನೆಹರೂರ ಆಶ್ವಾಸನಾ ಬಲದ ಮೇಲಿಂದ ಬಳ್ಳಾರಿಯ ಪ್ರಶ್ನೆಯನ್ನು ಗಡಿ ನಿರ್ಣಯ ಸಮಿತಿಯ ಮುಂದೆ ಇಡಲು ಇನ್ನೊಂದು ಅವಕಾಶ ದೊರೆತಂತಾಯಿತೆಂಬ ಅವರ ಅಂಬೋಣ. ಆದರೆ ಈ ಜನಕ್ಕೆ ಸೀಮಾರೇಷೆಯನ್ನು ಗೊತ್ತು ಪಡಿಸುವ ಸಮಿತಿ, ಎಲ್ಲವನ್ನು ವಿಚಾರಿಸಿ, ತೀರ್ಮಾನಕ್ಕೆ ಬಂದ ಬಳ್ಳಾರಿ ತಾಲೂಕಿನ ಸಂಗತಿಯನ್ನು ಮರಳಿ ಎತ್ತುವಂತಿಲ್ಲವೆಂಬುದು ತಿಳಿದಂತಿಲ್ಲ. ಪ್ರೊ. ರಂಗಾರು ನೆಹರೂ ಹೇಳಿಕೆಯಲ್ಲಿ ಬಳ್ಳಾರಿಯ ಉಲ್ಲೇಖವೇ ಇರದ ಬಗ್ಗೆ ಕಾತರ ವ್ಯಕ್ತಗೊಳಿಸಿರುವರು.

ಆಂಧ್ರರಾಜ್ಯಕ್ಕೆ ಸಿದ್ಧತೆ

ಆಂಧ್ರರಾಜ್ಯ ವಿಧೇಯಕವು ಪಾರ್ಲಿಮೆಂಟಿನ ಅಗೋಸ್ತು ೩ಕ್ಕೆ ತೊಡಗುವ ಶರತ್ಕಾಲದ ಅಧಿವೇಶನದಲ್ಲಿ ಮಂಡಿಸಲ್ಪಡುತ್ತದೆ. ಮದ್ರಾಸು ಹಾಗೂ ಮೈಸೂರು ರಾಜ್ಯಗಳ ಸಲಹೆ ಮತ್ತು ಅಭಿಪ್ರಾಯಗಳನ್ನು ತಿಳಿದುಕೊಂಡ ಬಳಿಕ, ಕೇಂದ್ರ ಮಂತ್ರಿ ಮಂಡಳದ ಉಪ ಸಮಿತಿಯೊಂದು ಪುನರ್ವಿಮರ್ಶಿತ ಕರಡನ್ನು ಸಿದ್ಧಗೊಳಿಸಿತು. ಮಂತ್ರಿ ಮಂಡಳವು ಅದರ ಪರಿಶೀಲನೆ ಮಾಡಿ, ಮಸೂದೆಯ ಕರಡಿಗೆ ಒಪ್ಪಿಗೆ ಸೂಚಿಸಿಗುತ್ತದೆ. ಇಷ್ಟರಲ್ಲೇ ಮದ್ರಾಸು ಮತ್ತು ಮೈಸೂರು ಶಾಸನ ಸಭೆಗಳಲ್ಲಿ ಮಂಡಿಸುವುದಕ್ಕೋಸ್ಕರ ಮಸೂದೆಯನ್ನು ದೆಹಲಿಯಿಂದ ಕಳುಹಿಸಿರುವರು. ಈ ಮಸೂದೆಯಲ್ಲಿ ರಾಜಧಾನಿಯ ಹೆಸರನ್ನೇನೂ ಉಲ್ಲೇಖಿಸಿರುವುದಿಲ್ಲ. ರಾಜ್ಯ ಘಟನೆಯಲ್ಲಿ ಯಾವುದೇ ರಾಜ್ಯದ ರಾಜಧಾನಿಯ ಹೆಸರನ್ನು ಹೇಳಿಲ್ಲವಾದುದರಿಂದ, ಈ ಮಸೂದೆಯೊಂದು ಅದಕ್ಕೆ ಅಪವಾದವಾಗಲಾರದು. ಆದರೆ ಆಂಧ್ರರು ಬಹುಮತದಿಂದ ಕರ್ನೂಲನ್ನು ರಾಜಧಾನಿಯಾಗಿ ಆರಿಸಿರುವುದರಿಂದ, ಅದರ ವಿಸ್ತರಣಾ ಕಾರ್ಯಕ್ಕೋಸ್ಕರ ೪೦ ಲಕ್ಷ ರೂಪಾಯಿಗಳ ಸಹಾಯಧನವನ್ನು ಕೇಂದ್ರ ಸರಕಾರ ಕೊಡಲು ನಿರ್ಧರಿಸಿದೆ. ಕರ್ನೂಲಿಗೆ ವಿರೋಧ ಮತ ವ್ಯಕ್ತಗೊಳಿಸಿದ್ದ ಕಮ್ಯೂನಿಸ್ಟರು ಈಗ ರಾಜಧಾನಿಯ ಬಗ್ಗೆ ಇರುವ ಭಿನ್ನಾಭಿಪ್ರಾಯವನ್ನು ಮುಗಿಸಿಬಿಟ್ಟು, ಕರ್ನೂಲನ್ನು ಸ್ವೀಕರಿಸಲು ನಿರ್ಣಯಿಸಿರುವರು. ಆಂಧ್ರ ರಾಜ್ಯಕ್ಕೆ ಪ್ರತ್ಯೇಕ ಹೈಕೋರ್ಟು ಬೇಕೆಂದು ಆಂಧ್ರರು ನಿರ್ಣಯಿಸುವವರೆಗೆ ಮದ್ರಾಸು ಹೈಕೋರ್ಟಿನ ಅಧಿಕಾರವೇ ಆಂಧ್ರಕ್ಕೆ ವಿಸ್ತರಿಸಲ್ಪಡುವುದು. ಸಾಲಮೂಲಗಳ ಮತ್ತು ಸ್ಥಿರಚರಸೊತ್ತಿನ ವಿಭಜನೆಯ ಸಂಗತಿಯಲ್ಲೂ ಈಗ ಸಾಮಾನ್ಯವಾಗಿ ಒಂದು ನೀತಿಯನ್ನು ಅಂಗೀಕರಿಸಲಾಗಿದೆ- ಸ್ಥಿರಾಸ್ತಿಗಳೆಲ್ಲ ಈಗಿದ್ದ ಪ್ರದೇಶಕ್ಕೆಯೇ ಸೇರುತ್ತವೆ. ಆಯಾ ಪ್ರದೇಶಕ್ಕೆ ಹಂಚಿಹೋಗುವ ಜನಸಂಖ್ಯಾ ಪ್ರಮಾಣದ ಮೇಲೆ ಚರಾಸ್ತಿ ಪಾಲುಗೊಳ್ಳುತ್ತದೆ. ಮದ್ರಾಸು ಸರಕಾರ ಎತ್ತಿದ ಸಾಲಗಳನ್ನು ತೀರಿಸುವ ಹೊಣೆ ಅದಕ್ಕೆ ಸೇರಿದ ೧೩- ಆಂಧ್ರ ಹಾಗೂ ಮೈಸೂರು ರಾಜ್ಯಗಳ, ತಮ್ಮ ಪಾಲನ್ನು ಅದಕ್ಕೆ ತೆರಬೇಕು. ಹೆಚ್ಚಾಗಿ ಆಂಧ್ರರನ್ನೆ ಆಂಧ್ರ ಪ್ರದೇಶಕ್ಕೆ ವರ್ಗಾಯಿಸಲಾಗುವುದು. ಹಂಗಾಮಿಯಾಗಿ ಆಂಧ್ರಕ್ಕೆ ನೀಡಿದ ಅಧಿಕಾರಿಗಳ ಸೇವೆಯನ್ನು ಎರಡು ವರ್ಷಗಳ ಬಳಿಕ ಮರಳಿ ಮದ್ರಾಸರಾಜ್ಯಕ್ಕೆ ಒಪ್ಪಿಸಬಹುದು. ತುಂಗಭದ್ರೆಯ ಕಾಲುವೆಯ ವಿಷಯದಲ್ಲಿ ಮಾತ್ರ ಇನ್ನೂ ಒಂದು ನಿರ್ಣಯಕ್ಕೆ ಬಂದಿರುವುದಿಲ್ಲ ತುಂಗಭದ್ರೆಯ ಅಣೆಕಟ್ಟು ಮೈಸೂರಿಗೆ ಸೇರಲಿರುವ ಬಳ್ಳಾರಿಯ ಭಾಗದಲ್ಲಿರುವುದರಿಂದ, ಮೈಸೂರು ಸರಕಾರ ಅದರಮೇಲೆ ಅಧಿಕಾರ ಕೇಳುತ್ತದೆ ಮಾತ್ರವಲ್ಲ ರಾಯಲಸೀಮೆಯ ಜನರ ಉಪಯೋಗಾರ್ಥ ನಿರ್ಮಿಸಲಾಯಿತೆನ್ನುವ ಈ ಅಣೆಕಟ್ಟಿನ ಪ್ರಯೋಜನವನ್ನು-ಮುಖ್ಯವಾಗಿ ವಿದ್ಯುಚ್ಛಕ್ತಿಯನ್ನು-ತನ್ನ ಉಪಯೋಗಕ್ಕೆ ಉಪಯೋಗಿಸಿಕೊಳ್ಳಲು ಮೈಸೂರು ಆತುರ ಪ್ರಕಟಪಡಿಸಿದೆ ಎಂದು ವದಂತಿ. ಯೋಜನಾ ಆಯೋಗವು ಈ ಅಣೆಕಟ್ಟಿನ ಯೋಗಕ್ಷೇಮವನ್ನು ಯಾರಿಗೆ ಒಪ್ಪಿಸಿಕೊಡಬೇಕೆಂದು ಆಲೋಚಿಸುತ್ತಿದ್ದು, ಪ್ರಾಸ್ತಾವಿಕ ಚರ್ಚೆಗಳು ನಡೆಯುತ್ತಿವೆ.

ವರುಣ ದೇವರ ಪೂಜೆ

ತುಂಗಭದ್ರೆಗೆ ಹಾಕಿದ ಅಣೆಕಟ್ಟಿನ ಬಹ್ವಂಶವು ಈಗ ಮುಗಿದಿರುತ್ತದೆ. ಇದೇ ಜೂಲೈ ೧ನೇ ದಿನಾಂಕ ಕಾಲುವೆಗಳಲ್ಲಿ ನೀರನ್ನು ಹರಿಯಬಿಡುವ ಸಮಾರಂಭವು ಜರುಗಿತು. ಈ ಅಣೆಕಟ್ಟಿನಿಂದ ಈಗಿನ ಮದ್ರಾಸು ರಾಜ್ಯದ ಬಳ್ಳಾರಿ, ಅನಂತಪುರ, ಕರ್ನೂಲು, ಗಳೇ ಇತ್ಯಾದಿ ರಾಯಲಸೀಮಾ ಪ್ರದೇಶಕ್ಕೂ ಹೈದರಾಬಾದಿನ ರಾಯಚೂರು ಜಿಲ್ಲೆಗೂ ತುಂಬ ಪ್ರಯೋಜನ ಲಭಿಸುತ್ತದೆ. ಹೈದರಾಬಾದ ವಿಭಾಗದಲ್ಲಿ ೮೦ ವರ್ಷ ವಯಸ್ಸಿನ ವೃದ್ಧ ರೈತ ಶಂಕರಪ್ಪರೆಂಬವರು ಕಾಲುವೆಗೆ ನೀರು ಹರಿಯಿಸಿದರು. ಆಗಿನ ಸಂತೋಷದ ಸಂಭ್ರಮ ರಾಷ್ಟ್ರೀಯ ಸರಕಾರದ ಪ್ರಯತ್ನಗಳ ಆಯಾಸವನ್ನೆ, ಪರಿಹರಿಸಿತೆನ್ನಬೇಕು. ಪುರೋಹಿತರ ಮಂತ್ರೋಚ್ಚಾರಣೆ, ಖಾಜಿಗಳ ಕುರಾಣ ಪಠನೆ, ಹಳ್ಳಿಗರ ಸಂಸ್ತುತಿಗಳ ನಡುವೆ ಕಾಲುವೆಯಲ್ಲಿ ನೀರು ಹರಿಯತೊಡಗಿದಾಗ, ಜನರೆಲ್ಲ ಭಾರತವನ್ನು ಕಟ್ಟುವ ಒಂದೊಂದೇ ಪ್ರಯತ್ನಗಳು ಯಶಸ್ಸು ಪಡೆಯುವುದಕ್ಕೆ ಅಭಿಮಾನವೆನಿಸಿದುದು ಸ್ವಾಭಾವಿಕ. ಈ ವಿಸ್ತಾರವಾದ ಜಲಾಶಯವನ್ನು ಪಂಪಸಾಗರವೆಂದು ಕರೆಯುವುದಾಗಿ ಹೈದರಾಬಾದಿನ ಮಂತ್ರಿಗಳು ಸಾರಿದುದು ಇನ್ನಷ್ಟು ಅಭಿಮಾನದ ಸಂಗತಿ. ತುಂಗಭದ್ರೆಯ ಅಣೆಕಟ್ಟಿಗೆ ಮದ್ರಾಸು ಹಾಗೂ ಹೈದರಾಬಾದಿನ ಇಂಜೀನಿಯರರ ಕೌಶಲ್ಯ ಮತ್ತು ಸಾಹಸಗಳು ಕಾರಣವಾಗಿರುತ್ತವೆ. ಚೆಣಚು ಕಲ್ಲಿನಿಂದ ಕಟ್ಟಲಾದ, ಭಾರತಕ್ಕೆಯೇ ಮೊದಲ ಮಾದರಿಯ ಈ ಉದ್ಯಮದಿಂದ ಉಭಯ ರಾಜ್ಯಗಳಲ್ಲಿ ೩ ಲಕ್ಷಾಂತರ ಎಕ್ರೆ ಜಮೀನು ನೀರುಣ್ಣುತ್ತದೆ; ಮತ್ತು ಅಪಾರ ವಿದ್ಯುಚ್ಛಕ್ತಿಯೂ ಉತ್ಪಾದನೆ ಹೊಂದುತ್ತದೆ. ಪ್ರಾರಂಭದಲ್ಲಿ ಹೈದರಾಬಾದ ಕಡೆಯ ಕೆಲಸ ನಿಧಾನವಾ ನಡೆದರೂ, ಇದೀಗ ಅಲ್ಲಿ ಸಾಕಷ್ಟು ಪ್ರಗತಿ ಕಂಡುಬರುತ್ತದೆ. ಆದರೆ, ಈಚೆಗೆ ಮದ್ರಾಸು ಮತ್ತು ಹೈದರಾಬಾದು ರಾಜ್ಯಗಳೆರಡೂ ಆರ್ಥಿಕ ವಿಪನ್ನಾವಸ್ಥೆಯನ್ನೆದುರಿಸುವ ದೈವಗೇಡಿಗಳಾಗಿ ಪರಿಣಮಿಸಿರುವುದರಿಂದ, ತುಂಗಭದ್ರೆಯ ಅಣೆಕಟ್ಟಿನ ಮುಂದಿನ ಕೆಲಸವು ಹಿಂದೆ ಬೀಳುವ ಅಂಜಿಕೆಯುಂಟು. ಕೇಂದ್ರ ಸರಕಾರ ಶೀಘ್ರದಲ್ಲಿಯೇ ಧನಸಹಾಯವನ್ನು ಕೊಡದ ಪಕ್ಷದಲ್ಲಿ, ಈಗ ಕಟ್ಟಲಾದ ಅಣೆಕಟ್ಟಿನ ಪೂರ್ಣ ಪ್ರಯೋಜನವಿರಲಿ- ಕಾಲಂಶ ಲಾಭವೂ ಆಗುವಂತಿಲ್ಲ. ಇದರಂತೆ ಕಳೆದ ವಾರ ಮುಂಬಯಿ ಪ್ರದೇಶದಲ್ಲಿ ಕಟ್ಟಿಸಲಾಗುವ ಘಟಪ್ರಭೆಯ ಕಾಲುವೆಯ ಉದ್ಘಾಟನೆಯೂ ಮುಖ್ಯ ಮಂತ್ರಿ ಮುರಾರಜೀ ದೇಸಾಯರ ಕೈಯಿಂದ ನೆರವೇರಿತು. ಇದು ಉತ್ತರ ಕರ್ನಾಟಕದ ಬರಗಾಲ ಪ್ರದೇಶಗಳಿಗೆ ಕೈವಾರಿಯಾದ ಅಣೆಕಟ್ಟು. ವಿಂಧ್ಯಪರ್ವತ ಪ್ರದೇಶದಲ್ಲಿ ಹರಿಯುವ ತಪತೀ ನದಿಯ ನೀರನ್ನು ಚೆನ್ನಾಗಿ ಉಪಯೋಗಿಸುವ ಉದ್ದೇಶದಿಂದ ಕಟ್ಟಿದ ಕಾಕರಪಾರಾ ಅಣೆಕಟ್ಟಿನ ಉದ್ಘಾಟನೆಯೂ ಕಳೆದ ವಾರ ಜರಗಿತು. ಕೇಂದ್ರದ ಯೋಜನಾ ಮಂತ್ರಿ ಶ್ರೀ. ಗುಲಜಾರಿಲಾಲ ನಂದಾರವರು ಈ ಸಂದರ್ಭದಲ್ಲಿ ಅತ್ಯಂತ ಮನನೀಯವಾದ ಭಾಷಣ ಮಾಡಿದರು. ರಾಷ್ಟ್ರೀಯ ಪುನಾರಚನೆಯಲ್ಲಿ ಅಣೆಕಟ್ಟುಗಳು ನಿರ್ವಹಿಸುವ ತತ್ತ್ವವನ್ನೂ ಜನತೆಯು ಅದರಿಂದ ಪಡೆಯುವ ಅಮಿತ ಲಾಭವನ್ನು ನಂದಾ ಹೃದಯಂಗಮವಾಗಿ ವಿವರಿಸಿದರು. ಉತ್ಪಾದನೆಯು ಇಮ್ಮಡಿಸಾಗುವುದಕ್ಕೂ ಕೈಗಾರಿಕೋದ್ಯಮಗಳು ಬೆಳೆದು ನಿರುದ್ಯೋಗ ನಿರ್ಮೂಲ ಹೊಂದುವುದಕ್ಕೂ ವಿವಿಧೋದ್ದೇಶದ ಅಣೆಕಟ್ಟುಗಳೇ ನೆರವಾಗುತ್ತವೆಂದು ನಂದಾ ವರ್ಣಿಸಿದರು. ಈ ಮಾದರಿಯ ಜನಹಿತ ಯೋಜನೆಗಳನ್ನು ಕಂಡು ನಾಗರಿಕರ ಕೃತಜ್ಞತೆ ಉಕ್ಕೇರುತ್ತದೆ ಮತ್ತು ಉಪನಿಷತ್ತುಗಳಲ್ಲಿ ಹೇಳಿದ ಅಪೋ ವಾ ಅನ್ನಂ (ನೀರಿನಿಂದಲೇ ಅನ್ನ) ಎನ್ನುವ ವಾಕ್ಯದ ಮಹತ್ವ ತಿಳಿಯುತ್ತದೆ.

ಮುಂಬಯಿ ಸರಕಾರದ ಸಾಹಸ

ಜನತೆಗೆ ಇಷ್ಟೇ ಸಂತೋಷವನ್ನು ನೀಡಬಲ್ಲ ಇನ್ನೊಂದು ಒಳ್ಳೆಯ ಕೆಲಸವನ್ನು ಮುಂಬಯಿ ಸರಕಾರವು ಮಾಡಿರುತ್ತದೆ ಇದೇ ಜೂಲೈ ೧ನೇ ದಿನಾಂಕದಿಂದ ಮುಂಬಯಿ ರಾಜ್ಯದಲ್ಲಿ- ಕಾರ್ಯಾಂಗ ಮತ್ತು ನ್ಯಾಯಾಂಗಗಳು ಬೇರೆಬೇರೆಯಾಗಿ ಕೆಲಸ ನಿರ್ವಹಿಸುವ ಹೊಸ ವ್ಯವಸ್ಥೆಯು ಜಾರಿಗೆ ಬಂದಿರುತ್ತದೆ. ಮುಂಬಯಿಯ ಮುಖ್ಯ ಮಂತ್ರಿ ಶ್ರೀ ಮುರಾರಜಿ ದೇಸಾಯರು ಈ ಸಂದರ್ಭದಲ್ಲಿ ಆಕಾಶವಾಣಿ ಭಾಷಣ ಮಾಡಿ, ರಾಜ್ಯದ ಪ್ರಜೆಗಳೆಲ್ಲರಿಗೂ ನಾಗರಿಕ ಹಕ್ಕು ಬಾಧ್ಯತೆಗಳು ಅಬಾಧಿತವಾಗಿ ದೊರೆಯುವಂತೆ ಈ ಹೊಸ ವ್ಯವಸ್ಥೆ ಮಾಡಲಾಗಿದೆ ಎಂದರು. ಮುಂಬಯಿ ರಾಜ್ಯಕ್ಕಿಂತಲೂ ಮುಂಚೆ ಮದ್ರಾಸು ಸರಕಾರವು ನ್ಯಾಯಾಂಗವನ್ನು ಕಾರ್ಯಾಂಗಕ್ಕಿಂತ ಪ್ರತ್ಯೇಕವಾಗಿಡುವ ದಿಶೆಯಲ್ಲಿ ಪ್ರಾರಂಭಿಕ ಹೆಜ್ಜೆಗಳನ್ನು ಇಟ್ಟಿದ್ದಿತು. ಈಗ ಮದ್ರಾಸು ರಾಜ್ಯದಲ್ಲಿ ಒಂಬತ್ತು ಜಿಲ್ಲೆಗಳನ್ನು ಬಿಟ್ಟು ಉಳಿದೆಡೆಯಲ್ಲಿ ನ್ಯಾಯಾಂಗ-ಕಾರ್ಯಾಂಗಗಳನ್ನು ಪ್ರತ್ಯೇಕೀಕರಿಸಲಾಗಿದೆ. ಆದರೆ ಇಡೀ ರಾಜ್ಯದಲ್ಲಿಯೇ ಈ ಪ್ರಗತಿಶೀಲ ಧೋರಣೆಯನ್ನು ಏಕಕಾಲಕ್ಕೆ ಅನ್ವಯಿಸಿದ ಯಶಸ್ಸು ಮುಂಬಯಿ ರಾಜ್ಯಕ್ಕೆ ಸಲ್ಲಬೇಕು. ನಮ್ಮ ರಾಜ್ಯ ಘಟನೆಯಂತೆ ನಾಗರಿಕರ ಹಕ್ಕು ಬಾಧ್ಯತೆಗಳಿಗೆ ತಿಲಾಂಶವೂ ವ್ಯತ್ಯಯವುಂಟಾಗದಂತೆ ನೋಡಿಕೊಳ್ಳುವ ಮಹತ್ವದ ಹೊಣೆಗಾರಿಕೆಯು ನ್ಯಾಯಾಲಯಗಳಿಗೆ ಸೇರಿದೆ.

(೭ನೇ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No 230/1953

ಕೃಷ್ಣಯ್ಯ ... ವಾದಿ

ಮತ್ತು

ಕೃಷ್ಣ ಪೂಜಾರಿ, ... ಅಳಿಯ ಉಡುಪಿ ತಾಲ್ಲೂಕು ಮಟ್ಟು ಗ್ರಾಮ, ಹಾಲಿ Srinivasa Trading Company, 260 Sun Set Street, Vadgadi Bombay No, 3 ಎಂಬಲ್ಲಿರುವವರು. ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ,

ವಾದಿಗೆ ಪ್ರತಿವಾದಿಯು ತಾರೀಕು 9-5-1950ರಲ್ಲಿ ರೂಪಾಯಿ 201-8-0ಕ್ಕೆ ಬರೆದುಕೊಟ್ಟ ಡಿಮಾಂಡು ನೋಟಿನ ಸಾಲು ಬಡ್ಡಿ ರಜಿಸ್ಟ್ರು ನೋಟೀಸಿನ ಖರ್ಚು ಕೂಡಾ ರೂಪಾಯಿ 240 2-6ಕ್ಕೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿರುವ ಈ ದಾವೆಯು ತಾರೀಕು 27-7-1953ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಪ್ರತಿವಾದಿಯು ಸದ್ರಿ ತಾ 27-7-'53ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದ್ದಲ್ಲಿ ಆತನ ಗೈರುಹಾಜರಿಯಲ್ಲಿ ಈ ದಾವೆಯು ತೀರ್ಮಾನಿಸಲಾಗುವದು ಎಂಬ ಸಂಗ್ತಿ ತಿಳಿಸಲಾಗುತ್ತದೆ.

V. R. Kidiyur
Advocate for Plaintiff

ಉಡುಪಿ ತಾರೀಕು 2 ಜುಲೈ 1953

Estd: 1906
THE CANARA BANKING CORPORATION LTD.
H. O.: UDIPI, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ
ಉಡುಪಿ, ಗುರುವಾರ ೯-೭-'೫೩

ಕಾಂಗ್ರೆಸಿನ ಅಭಿಪ್ರಾಯ

ಆಗ್ರಾದಲ್ಲಿ ದಿನಾಂಕ ೬ ಮತ್ತು ೭ರಲ್ಲಿ ಶ್ರೀ ಜವಾಹರಲಾಲ ನೆಹರೂರ ಅಧ್ಯಕ್ಷತೆಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವು ದೇಶದ ಸಮಸ್ಯೆಗಳ ಮತ್ತು ಜಾಗತಿಕ ಪ್ರಶ್ನೆಗಳ ವಿಷಯದ ಮೇಲೆ ತನ್ನ ಅಭಿಪ್ರಾಯವೇನೆಂಬುದನ್ನು ಕೆಲವು ಗೊತ್ತುವಳಿಗಳ ಮೂಲಕ ಪ್ರಕಟಪಡಿಸಿದೆ. ಕಾಂಗ್ರೆಸು ಭಾರತದಲ್ಲಿ ಅತ್ಯಂತ ಜನಪ್ರಿಯವಾದ ಮತ್ತು ವ್ಯಾಪಕ ಕಾರ್ಯಕ್ಷೇತ್ರವುಳ್ಳ ಪಕ್ಷವಾಗಿದೆ. ಕಳೆದ ಮಹಾ ಚುನಾವಣೆಗಳ ಬಳಿಕ ದೇಶದಲ್ಲಿ ಕಾಂಗ್ರೆಸು ಪಕ್ಷದ ಉಮೇದುವಾರರೇ ಸರಕಾರವನ್ನು ನಡೆಸಿಕೊಂಡು ಬಂದಿರುವರು. ಆದಕಾರಣ ಅಖಿಲ ಭಾರತ ಕಾಂಗ್ರೆಸು ಸಮಿತಿ ನಿರ್ಧರಿಸುವ ಧೋರಣವು ಸರಕಾರದ ನಡವಳಿಕೆಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತದೆನ್ನುವಲ್ಲಿ ಸಂಶಯವಿಲ್ಲ. ಸರಕಾರಕ್ಕೆ ಯೋಗ್ಯ ಮಾರ್ಗದರ್ಶನವನ್ನು ಮಾಡುವ ಮತ್ತು ತಾನು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನೀಡಿದ ವಾಗ್ದಾನಗಳನ್ನು ಒಂದೊಂದೇಯಾಗಿ ಪೂರೈಸುವ ಕರ್ತವ್ಯಭಾರವು ಈಗ ಕಾಂಗ್ರೆಸು ಸಂಸ್ಥೆಯ ಮೇಲಿರುತ್ತದೆ. ಆದುದರಿಂದ ಈಚಿಗಿನ ಜಾಗತಿಕ ಪ್ರಶ್ನೆಗಳ ವಿಮರ್ಶೆಯಾಗಲೀ ದೇಶೀಯ ವ್ಯವಹಾರಗಳ ಸಂಬಂಧದಲ್ಲಿ ಸಲಹೆ ಸೂಚನೆಗಳಾಗಲೀ ಅತ್ಯಂತ ಸಮಂಜಸ ಹಾಗೂ ಉಪಯುಕ್ತವಾದವುಗಳಿನ್ನಬೇಕು. ಈ ದೃಷ್ಟಿಯಿಂದ ಕಾಂಗ್ರೆಸು ಸಮಿತಿಯು ಕೊರಿಯಾದಲ್ಲಿ ಡಾ. ಸಿಂಗ್ಮನ್ ರ್ಹೀಯವರು ಶಾಂತಿಗೆ ಆತಂಕಪ್ರಾಯವಾದ ಧೋರಣೆಯನ್ನು ಅನುಸರಿಸುತ್ತಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿರುವುದೂ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯು ಜರೂರಾಗಿ ಸೇರಬೇಕೆಂದು ಒತ್ತಾಯಿಸಿರುವುದೂ ಅತ್ಯಂತ ಸಮಂಜಸವಾದುದೆಂದು ಹೇಳಬಹುದು. ನೆಹರೂರವರು ಈ ಗೊತ್ತುವಳಿಯ ಸಂಬಂಧದಲ್ಲಿ ಮಾತನಾಡುತ್ತಾ ಭಾರತ ಸರಕಾರವು ಕೊರಿಯಾದಲ್ಲಿ ಶಾಂತಿಯನ್ನು ಬಯಸಿ ಸೈನ್ಯ ಕಳಿಸಲು ಉದ್ದೇಶಿಸಿದ ವಿನಾ ಯಾರಾವುದೇ ದುರಭಿಪ್ರಾಯವನ್ನು ಇಟ್ಟುಕೊಂಡಿಲ್ಲವೆಂದೂ ಸ್ಪಷ್ಟೀಕರಿಸಿದರು. ಡಾ. ರ್ಹೀಯವರಾಗಲೀ ದಕ್ಷಿಣ ಕೊರಿಯನ್ನರ ಮನಸ್ಸಿಗೆ ಮಾಘಾತವನ್ನುಂಟುಮಾಡುವಂತದ್ದೇ, ಕೊರಿಯಾದಲ್ಲಿ ಅನುಕೂಲ ಪರಿಸ್ಥಿತಿಯೊದಗದೆ, ಭಾರತದ ಸೈನ್ಯ ಅಲ್ಲಿ ಹೋಗುವಂತಿಲ್ಲವೆನ್ನುವ ಮಾತನ್ನೂ ನೆಹರೂ ವಿದಿತಗೊಳಿಸಿರುವುದು ಯೋಗ್ಯ. ಇದರಂತೆ ಆಫ್ರಿಕಾ ಹಾಗೂ ಏಶಿಯಾಗಳಲ್ಲಿ ಈಗ ತಾನೆ ಜಾಗೃತಗೊಳ್ಳುತ್ತಿರುವ ರಾಷ್ಟ್ರೀಯ ಭಾವನೆಯನ್ನು ಸಹಾನುಭೂತಿಯಿಂದ ಕಾಣುವ ಇನ್ನೊಂದು ಗೊತ್ತುವಳಿಯೂ ಸ್ವಾಗತಾರ್ಹ. ಆಫ್ರಿಕಾದಲ್ಲಿ ವರ್ಣೀಯವನ್ನು ನಡೆಸಿಕೊಳ್ಳುತ್ತಿರುವ ರೀತಿಯು ಈ ಶತಮಾನದ ನಾಗರಿಕತೆಗೆ ಕಲಂಕಪ್ರಾಯವಾಗಿರುತ್ತದೆ. ರಾಜಕೀಯ ಸ್ವಾತಂತ್ರ್ಯ ಹಾಗು ನಾಗರಿಕ ಹಕ್ಕು ಬಾಧ್ಯತೆಗಳಿಗಾಗಿ ಏಶಿಯಾ-ಆಫ್ರಿಕನ್ ಜನತೆಯು ತುಂಬ ಪ್ರಯತ್ನಶೀಲವಾಗಿರುತ್ತದೆ ಇದನ್ನು ಸರ್ವ ಪ್ರಯತ್ನ ಮಾಡಿ ದಮನಿಸುವ ಚಳುವಳಿಯನ್ನು ಅಲ್ಲಿಯ ಸರಕಾರಗಳು ನಡೆಯಿಸುವುದಕ್ಕೆ ಕೆಂದಲ್ಲ ಒಂದು ದಿನಪಶ್ಚಾತ್ತಾಪ ಪಡುವುದು ತಪ್ಪದು. ಇಂಡೋ ಚೀನಾದಲ್ಲಿ ಫ್ರೆಂಚ ಪಡೆಗಳು ಏಕಾಕಿಯಾಗಿ ರಾಷ್ಟ್ರೀಯ ಆಂದೋಲನವನ್ನು ತಡೆಗಟ್ಟಲೆತ್ನಿಸಿ ವಿಫಲಗೊಳ್ಳುತ್ತಿವೆ ಇದರಂತೆ ಆಫ್ರಿಕಾದಲ್ಲೂ ಬಹುಮತದ ವಿರೋಧವನ್ನು ಎದುರಿಸಿಕೊಂಡು ಸರಕಾರ ಕೆಲಸ ಮಾಡುವ ಭೀಕರ ಪರಿಸ್ಥಿತಿ ಇದೆ. ಜನತೆ ಸಮಾನತೆ ಹಾಗೂ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಈ ಹೋರಾಟವನ್ನು ಕಾಂಗ್ರೆಸು ಸಮರ್ಥಿಸಿರುವುದು ಅದರ ಹಿಂದಿನ ಉಜ್ವಲ ಪರಂಪರೆಗೆ ಅನುಗುಣವಾಗಿಯೇ ಇದೆ. ಇನ್ನು ಆಂತರಿಕ ಸಮಸ್ಯೆಗಳ ವಿಚಾರದಲ್ಲೂ ಕಾಂಗ್ರೆಸು ಸ್ಪಷ್ಟವಾದ ನಿಲುವೆಯನ್ನು ಅನುಸರಿಸುವುದಕ್ಕೆ ಮುಂದಾಗಿದೆ. ಭಾರತ ಪಾಕ ಸಂಬಂಧಗಳು ಸೌಹಾರ್ದಯುತವಾಗಿ ಬಿಡಿಸಲ್ಪಡುವುದಕ್ಕೆ ಅನುಕೂಲ ವಾತಾವರಣ ಕಂಡು ಬರುತ್ತಿರುವುದನ್ನು ಕಾಂಗ್ರೆಸು ಸಂತೋಷದಿಂದ ನೋಡಿದೆ. ಪ್ರಜಾ ಪರಿಷತ್ತಿನವರು ಜಮ್ಮುವಿನಲ್ಲಿ ನಡೆಸಿದ ಆಂದೋಲನದ ಪರಿಣಾಮದಿಂದ, ಜಾತೀಯತೆಗೆ ಪ್ರೋತ್ಸಾಹ ಕೊಟ್ಟಂತಾಯಿತೆಂದು ನೆಹರೂ ಹೇಳಿರುವುದು ಒಂದು ಎಚ್ಚರಿಕೆಯಾಗಿದೆ. ಇದರಂತೆ, ಭೂಪಮಸ್ಯೆ, ನಿರುದ್ಯೋಗ, ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣ ಇತ್ಯಾದಿಗಳನ್ನು ವಿಚಾರಿಸುವುದಕ್ಕೆ ಕಾಂಗ್ರೆಸು ಹೆಚ್ಚು ಆಸಕ್ತಿಯನ್ನು ತೋರಿಸಿರುತ್ತದೆ. ರಾಜಕೀಯ ಉದ್ದೇಶಕ್ಕಿಂತಲೂ ಹೆಚ್ಚು ಜನಹಿತದ ಧ್ಯೇಯವು ಕಾಂಗ್ರೆಸಿನ ಈ ಗೊತ್ತುವಳಿಗಳಲ್ಲಿ ನಿಹಿತವಾಗಿವೆ; ಮತ್ತು ಈ ನಿರ್ಣಯಗಳನ್ನು ಗಂಭೀರವಾಗಿ ಕಾರ್ಯರೂಪಕ್ಕೆ ಇಳಿಸುವುದರಲ್ಲಿಯೇ ಕಾಂಗ್ರೆಸು ಮತ್ತು ಭಾರತದ ಜನತೆಯ ಕ್ಷೇಮವಿದೆ. ವಿದೇಶ ಧೋರಣ ರಾಷ್ಟ್ರದ ಭದ್ರತೆಯನ್ನು ಕಾಯ್ದುಕೊಳ್ಳುವುದಕ್ಕೆ ನೆರವಾದಂತೆ, ಆಂತರಿಕ ಧೋರಣವು ಅಭಿವೃದ್ಧಿಗೆ ಪೋಷಕವಾಗಬೇಕು. ಇವೆರಡಕ್ಕೂ ನಡುವೆ ಸಮತೂಕ ಕಾಯ್ದುಕೊಂಡು ಮುನ್ನಡೆಯುವುದನ್ನೆ ಕಾಂಗ್ರೆಸಿನ ಹಿತೈಷಿಗಳೆಲ್ಲರೂ ಹಾರೈಸುವರು.

ಭಾರತ—ಪಾಕ ಸಂಬಂಧ ವಿಮರ್ಶೆ
ಕರಾಚಿಯಲ್ಲಿ ಪ್ರಧಾನಿದ್ವಯರ ಭೇಟಿ ನಿಶ್ಚಿತ

ಮಹಮ್ಮದಾಲಿಯವರು ಪಾಕಿಸ್ತಾನದ ಪ್ರಧಾನಿಗಳಾಗಿ ಅಧಿಕಾರವನ್ನು ಸ್ವೀಕರಿಸಿದ ಗಳಿಗೆಯಿಂದ ನೆಹರೂರೊಡನೆ ಅವರು ಭಾರತ–ಪಾಕ ಸಂಬಂಧದ ಕುರಿತು ವಿಮರ್ಶಾತ್ಮಕ ಮಾತುಕತೆಗಳನ್ನು ತೊಡಗುವುದು ಶೀಘ್ರ ನಿಶ್ಚಿತವೆಂದು ಅಧಿಕೃತವಾಗಿ ಹೇಳಲಾಯಿತು. ಇದಕ್ಕೆ ಮುಂಚೆ ನಾಜಿಮುದ್ದೀನ ಹಾಗು ನೆಹರೂರೊಡನೆ ಭೇಟಿ ನಡೆಯುವುದೆಂದಿದ್ದರೂ ಅಹಮ್ಮದೀಯಾ ಚಳುವಳಿಯು ಪಾಕಿಸ್ತಾನದಲ್ಲಿ ನಡೆಸಿದ ಉಪಟಳದ ಮೇಲಿಂದ ಇಂಥ ಭೇಟಿ ನಡೆಯುದೇನೊ ಎನ್ನುವ ಸಂಶಯ ತಲೆದೋರಿತ್ತು. ಆದರೆ ಅಹಮ್ಮದೀಯಾ ಚಳುವಳಿಯು ಹತ್ತಿಕ್ಕಲ್ಪಟ್ಟಂತೆ, ನಾಜಿಮುದ್ದೀನರ ಸ್ಥಾನ ಚ್ಯುತಿಯೂ ಸಂಭವಿಸಿ, ಮಹಮ್ಮದಾಲಿಯಂಥ ಸೌಜನ್ಯ ನಡವಳಿಕೆಯುಳ್ಳ ಮುತ್ಸದ್ದಿಗಳ ಕೈಗೆ ಪಾಕಿಸ್ತಾನ ಸರಕಾರದ ಸಂಚಾಲಕತ್ವ ಬಂದಿತು. ಲಂಡನಿನಲ್ಲಿ ಪ್ರಾಸ್ತಾವಿಕ ಮಾತುಕತೆಗಳನ್ನು ಪ್ರಧಾನಿದ್ವಯರು ಈ ಮುಂಚೆಯೇ ನಡೆಸಿರುವುದರಿಂದ ಈಗ ನೇರಾಗಿ ವಿಷಯ ಪ್ರವೇಶ ಮಾಡುವುದಷ್ಟೆ ಬಾಕಿಯುಳಿದಿದೆ. ಪ್ರಧಾನಿಗಳು ಪ್ರಥಮ ಸಭೆಯನ್ನು ಕರಾಚಿಯಲ್ಲಿ ನಡೆಸಬೇಕೆಂದು ಈ ಮುಂಚೆಯೇ ನಿರ್ಣಯವಾಗಿತ್ತು. ಆದರೆ ನಿಶ್ಚಿತ ದಿನಾಂಕವನ್ನು ಮಾತ್ರ ಪ್ರಕಟಪಡಿಸಿರಲಿಲ್ಲ. ಈಗ ಈ ಅಂಶವೂ ಸ್ಪಷ್ಟಗೊಂಡಿದೆ. ಇದೇ ಜುಲೈ ೨೫ನೇ ದಿನಾಂಕ ನೆಹರೂರವರು ಕರಾಚಿಗೆ ತೆರಳುವರು; ಮತ್ತು ಅಲ್ಲಿ ಎರಡು ದಿನಗಳ ಕಾಲ ಮಹಮ್ಮದಾಲಿಯವರೊಡನೆ ಮಾತುಕತೆ ನಡೆಸಿ, ೨೭ನೇ ತಾರೀಕಿಗೆ ವಾಪಾಸು ಬರುವರು. ಆಗೋಸ್ತು ೩ನೇ ದಿನಾಂಕ ಭಾರತದ ಪಾರ್ಲಿಮೆಂಟಿನ ಅಧಿವೇಶನ ನೇರಲಿರುವುದರಿಂದ ನೆಹರೂರವರಿಗೆ ಅನೇಕ ಅತ್ಯಗತ್ಯದ ವಿಷಯಗಳನ್ನು ಗಮನಿಸಬೇಕಾಗಿದೆ. ಹೀಗಾಗಿ ಮೊದಲನೇ ಭೇಟಿಯ ಅವಧಿಯು ಎರಡು ದಿನಗಳಷ್ಟು ಕಡಿಮೆಯಿದೆ. ಈ ಭೇಟಿಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಸಿದ್ಧಗೊಳಿಸುವ ಉದ್ದೇಶದಿಂದ ಭಾರತ-ಪಾಕಿಸ್ತಾನ ಸರಕಾರಗಳು ಈಗಾಗಲೇ ನೇಮಿಸಿರುವ ಮಾರ್ಗದರ್ಶನ ಸಮಿತಿಯು ಜುಲೈ ೧೪ನೇ ದಿನಾಂಕ ಸಭೆ ಸೇರಲಿದೆ. ಅಂತೂ ನೆಹರೂರವರು ಪ್ರಾರಂಭದಿಂದಲೂ ತೋರಿಸುತ್ತಾ ಬಂದ ಸೌಹಾರ್ದಪೂರ್ಣ ನಡವಳಿಕೆಯ ಯಥಾರ್ಥತೆಯನ್ನು ಮಹಮ್ಮದಾಲಿಯವರು ತಿಳಿದುಕೊಂಡು, ತಮ್ಮ ಸ್ನೇಹಹಸ್ತವನ್ನು ಮುನ್ನೀಡಿರುವುದು ಎಲ್ಲರಿಗೂ ಸಂತೋಷ ಬರಿಸುತ್ತದೆ.

ಜನತೆಯ ಬಯಕೆ

ನೆಹರೂರವರ ಹೇಳಿಕೆಯಂತೆ ಮೊದಲೇ ನಡೆಯುತಿದ್ದರೆ, ಭಾರತ-ಪಾಕ ಸಂಬಂಧವು ಈಗಿನಷ್ಟು ಬಿಕ್ಕಟ್ಟನ್ನು ಇದಿರಿಸುವ ಪ್ರಮೇಯವೇ ಒದಗುತ್ತಿರಲಿಲ್ಲ. ಕಾಶ್ಮೀರದಂಥ ಜಟಿಲ ಸಮಸ್ಯೆಯನ್ನು ಸುಲಭದಲ್ಲಿ ಪರಸ್ಪರ ಒಪ್ಪಿತವಾಗುವ ರೀತಿಯಲ್ಲಿ ಶಾಂತಿಯ ವಾತಾವರಣದಲ್ಲಿ ಮಾತುಕತೆ ನಡೆಸುವ ಮೂಲಕ ಬಿಡಿಸುವುದು ಯಾವಾಗಲೂ ಸಾಧ್ಯವಿತ್ತು. ಆದರೆ ಪಾಕಿಸ್ತಾನ ಸರಕಾರವು ಭಾರತದೊಡನೆ ಸ್ನೇಹ ಸಂಪರ್ಕದ ಲೇಶ ಮಾತ್ರ ಆಸೆಯನ್ನು ಇಟ್ಟುಕೊಳ್ಳದೆ ತಾನೇ ತಾನಾಗಿ ವರ್ತಿಸಿದುದರಿಂದ ಭಾರತ ಸರಕಾರದ ಪ್ರಯತ್ನಗಳೆಲ್ಲ ನಿಷ್ಫಲಗೊಂಡವು. ಜಾಗತಿಕ ದ್ವೇಷವನ್ನು ಕಡಿಮೆ ಮಾಡಿ, ವಿಶ್ವದ ಜನಾಂಗಗಳಲ್ಲಿ ಸಾಮರಸ್ಯವನ್ನುಂಟುಮಾಡಬೇಕೆನ್ನುವುದೇ ನೆಹರೂ ವಿದೇಶ ಧೋರಣದ ಹಿರಿಮೆ. ನೆಹರೂ ಜಾಗತಿಕ ವಿಷಯಗಳ ಬಗ್ಗೆ ಮಾತನಾಡುವಾಗ ನ್ಯಾಯವನ್ನು ಎತ್ತಿಹಿಡಿಯುತ್ತಾರೆ; ಮತ್ತು ಸಾಕಷ್ಟು ದೂರದರ್ಶಿತ್ವವನ್ನೂ ಪ್ರಕಟಿಸುತ್ತಾರೆ. ಕಾಶ್ಮೀರ ಪ್ರಶ್ನೆಯ ಇತ್ಯರ್ಥವನ್ನು ಉಭಯ ಸರಕಾರಗಳು ತಮ್ಮತಮ್ಮಲ್ಲೇ ಮಾತುಕತೆಗಳಿಂದ ಬಿಡಿಸಬಹುದೆಂದು ಭಾರತ ಮುಂಚೆಯೇ ಹೇಳುತಿತ್ತಾದರೂ—ವಿದೇಶೀಯರ ಕೈವಾಡದಿಂದ ಪಾಕಿಸ್ತಾನವು ಭಾರತದ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡಲಿಲ್ಲ. ಕಾಶ್ಮೀರ ಪ್ರಶ್ನೆಯನ್ನುಪಯೋಗಿಸಿ, ಪಾಕಿಸ್ತಾನದ ಮೇಲೆ ತಮ್ಮ ವರ್ಚಸ್ಸನ್ನು ಬೀರುವ ಅವಕಾಶ ದೂರವಾಗುತ್ತದೋ ಹೇಗೆ ಎಂದು ನೋಡುವುದಕ್ಕೆಯೇ ಹೊರಗಿನ ಕೆಲವು ದೇಶಗಳು ಉತ್ಸುಕತೆ ಪ್ರಕಟಿಸಿದುವು. ಭಾರತದ ನ್ಯಾಯಬದ್ಧ ನಿಲುಮೆಯನ್ನು ಮನವರಿಕೆ ಮಾಡಿಕೊಳ್ಳದೆ ಪಾಕಿಸ್ತಾನದ ಅಭಿಪ್ರಾಯವನ್ನೆ ಪುಷ್ಟೀಕರಿಸುವಂತೆ ಭದ್ರತಾಮಂಡಳ ನಡೆದುಕೊಂಡುದನ್ನ ಪಾಶ್ಚಾತ್ಯ ರಾಷ್ಟ್ರಗಳ ಕಿರುಕುಳಕ್ಕೆ ಉದಾಹರಣೆಯಾಗಿ ಕೊಡಬಲ್ಲೆವು. ಆದರೆ, ಈಗ ಪಾಕಿಸ್ತಾನ ಸರಕಾರವು ಸರಿದಾರಿಯನ್ನು ಗುರುತಿಸಿರುತ್ತದೆ; ಮತ್ತು ಅದರಲ್ಲಿ ನಡೆಯಲೂ ಮುಂಬಂದಿದೆ. ಆದುದರಿಂದ ಹಿಂದಿನ ಪ್ರಯತ್ನಗಳೆಲ್ಲ ಸೋಲನ್ನು ತಂದಂತೆ ಈಗಿನದೂ ನಿಷ್ಫಲವಾಗುವುದೆಂಬ ಸಂದೇಹಕ್ಕೆ ಅವಕಾಶವಿರುವುದಿಲ್ಲ. ಪ್ರಧಾನಿದ್ವಯರು ಒಳ್ಳೆಯ ಉದ್ದೇಶ ಹಾಗೂ ಸದಭಿಪ್ರಾಯದಿಂದ ಪ್ರೇರಿತರಾಗಿ ನಡೆಸುವ ಈ ಮಾತುಕತೆಗಳು ಭಾರತ-ಪಾಕ ಸಂಬಂಧವನ್ನು ಅತ್ಯಂತ ಸೌಹಾರ್ದಯುತವಾಗಿ ಮಾಡಲೆಂಬುದನ್ನೆ ಉಭಯ ರಾಷ್ಟ್ರಗಳ ಜನತೆ ಬಯಸುತ್ತವೆ.

ಕೊರಿಯಾದಲ್ಲಿ ಪ್ರಗತಿಯಿಲ್ಲ

ಜಾಗತಿಕ ಕ್ಷೇತ್ರದಲ್ಲಿ ಅಮೇರಿಕಾವಿಗೆ ತುಂಬ ಗೌರವವುಂಟು — ರಶಿಯಾದಲ್ಲಿ ಸರ್ವಾಧಿಕಾರವಿದೆ; ಕಮ್ಯೂನಿಸಂ ಲೋಕಹಿತಕ್ಕೆ ಕಂಟಕಪ್ರಾಯವಾದುದೆನ್ನುವ ಎಲ್ಲರಿಗೂ ಅಮೇರಿಕಾ ನೀತಿಯೇ ಅನುಸರಣೀಯವೆಂದು ತೋರುತ್ತದೆ. ಆದರೆ ಈಗೀಗ ಅಮೇರಿಕಾದ ರಾಜಕಾರಣ ಜಾ

ಗತಿಕ ಸಮಸ್ಯೆಗಳ ಮೇಲೆ ತನ್ನ ಮೊದಲಿನ ವರ್ಚಸ್ಸನ್ನು ಇಟ್ಟುಕೊಂಡಂತಿಲ್ಲ. ಅಮೇರಿಕಾದ ಧುರೀಣರು ದೂರದರ್ಶಿತ್ವವನ್ನು ತೋರಿಸುತ್ತಿರುವಂತೆ, ದುಡುಕುತನವನ್ನು ನಡೆಸುತ್ತಿರುವಂತೆ ಭಾಸವಾಗುತ್ತದೆ. ಪರಿಣಾಮವಾಗಿ ಅಮೇರಿಕಾದ ಧೋರಣೆ ಸೋಲನ್ನು ಅಪ್ಪಿಕೊಳ್ಳುತ್ತದೇನೋ ಎನ್ನುವ ಸಂದೇಹ ತಲೆಎತ್ತಿದೆ, ಇತರರ ಹಿತವಾದವನ್ನು ಮನಸ್ಸಿಗೊಟ್ಟು ಕೇಳಿ, ಅದರಂತೆ ನಡೆಯುವುದಕ್ಕೆ ಅಮೇರಿಕಾದ ಅಹಂಕಾರ ಬಿಡುವುದಿಲ್ಲ; ತಾವಾಗಿ ಸರ್ವಸಮ್ಮತವಾದ ಧೋರಣೆಯನ್ನು ನಿರ್ಧರಿಸಿ ಅನುಸರಿಸುವ ಬುದ್ಧಿವಂತಿಕೆಯಿಲ್ಲ. ಈ ಮಾದರಿಯಲ್ಲಿ ಅಮೇರಿಕಾದ ವಿದೇಶಾಂಗ ಧೋರಣೆ ಹೊಯ್ದಾಡುತ್ತಿದೆ. ಕಳೆದ ವಾರ ಕೊರಿಯಾದಲ್ಲಿ ಸಿಂಗ್ಮನ್ನ ರ್ಹೀಯವರನ್ನು ಮೂರು-ನಾಲ್ಕುಬಾರಿ ಭೇಟಿ ಮಾಡಿದ ರಾಬರ್ಟ್ಸನ್ನರು, ತಾವು ದೌತ್ಯ ವಹಿಸಿಕೊಂಡ ಉದ್ದೇಶ ಫಲಪ್ರದವಾಗುವುದೆನ್ನುವ ಆಶೆಯನ್ನು ವ್ಯಕ್ತಗೊಳಿಸಿದ್ದರು. ಸಿಂಗ್ಮನ್ನರ್ಹೀಯವರು ಕೆಲವು ಕರಾರುಗಳಿಗೊಳಪಟ್ಟು ಕೊರಿಯಾದಲ್ಲಿ ಯುದ್ಧ ನಿಲ್ಲಿಸಲು ಸಿದ್ಧರೆಂದೂ ಈ ಶರ್ತಗಳಿಗೆ ಅಮೇರಿಕಾ ಬದ್ಧವೆಂದೂ ಬಂದ ವಾರ್ತೆ ಸಾಮಾನ್ಯವಾಗಿ ಎಲ್ಲ ವರ್ತುಲಗಳಲ್ಲೂ ಸಂತೋಷದ ಸ್ವಾಗತ ಪಡೆಯಿತು. ಆದರೆ ಅದರ ಬೆನ್ನಿಗೆ ನಡೆದ ರ್ಹೀ-ರಾಬರ್ಟ್ಸನ್ನ ಭೇಟಿಗಳು ಅಂಥ ಆಶೆಗೆ ಸಾಕಷ್ಟು ಆಧಾರವಿಲ್ಲವೆಂಬುದನ್ನು ಪ್ರಕಟಿಸುತ್ತವೆ. ರ್ಹೀಯವರ ಮನವೊಲಿಸುವುದರಲ್ಲಿ ಅಮೇರಿಕಾ ಜಯಶೀಲವಾಗುವ ಭರವಸೆಯುಂಟು ಎನ್ನುವುದೊಂದೇ ಸುದ್ದಿ ಹೊರತು, ರ್ಹೀ ನೀತಿಯಲ್ಲಿ ಪರಿಮಾರ್ಜನೆಯಾದುದಕ್ಕೆ ಯಾವ ರುಜುವಾತೂ ದೊರೆಯುವುದಿಲ್ಲ. ಒಮ್ಮೆ ರ್ಹೀಯವರು ರಾಬರ್ಟ್ಸನ್ನರ ಸೂಚನೆಗಳಂತೆ ನಡೆಯುವ ಸಂಭವವುಂಟೆಂಬ ವಾರ್ತೆ ಬಂದರೆ, ಅದರ ಬೆನ್ನಿಗೆಯೇ ರ್ಹೀಯವರು ಯುದ್ಧ ನಿಲ್ಲಿಸುವ ಹಠವನ್ನು ಬಿಟ್ಟಿಲ್ಲವೆನ್ನುವ ಸುದ್ದಿ ಬರುತ್ತದೆ. ಅಂತೂ ಕೊರಿಯದ ಸಂಗತಿಯಲ್ಲಿ ಪ್ರಗತಿ ಏನೇನೂ ಆಗಿಲ್ಲವೆನ್ನುವುದನ್ನು ಮಾತ್ರ ನಿಸ್ಸಂಶಯವಾಗಿ ಹೇಳಬಲ್ಲೆವು.

ಸಿಂಗ್ಮನ್ನ ರ್ಹೀ ಬಗ್ಗುವುದಿಲ್ಲ

ಅಮೇರಿಕಾವು ಕೊರಿಯದಲ್ಲಿ ರ್ಹೀಯವರೊಡನೆ ನಡೆಸುತ್ತಿರುವ ಪ್ರಯತ್ನಗಳು ಫಲಕಾರಿಯಾಗುತ್ತದೆನ್ನುವುದರ ಜೊತೆಗೆ, —ರ್ಹೀಯವರು ಒಪ್ಪಲಿ, ಒಪ್ಪದಿರಲಿ. ಯುದ್ಧ ನಿಲ್ಲಿಸುವ ಉದ್ದೇಶಕ್ಕೆ ತಾನು ಬದ್ಧವಾಗಿದೆ ಎಂದೂ ಕದನ ವಿರಾಮ ಒಪ್ಪಂದವನ್ನು ಸಾಧಿಸಿಯೇ ತೀರುವುದಾಗಿಯೂ ಹೇಳುತ್ತಿದೆ. ಇದರ ತಾತ್ಪರ್ಯವನ್ನು ಸ್ಪಷ್ಟವಾಗಿ ಹೇಳಲಾರೆವು - ಅಂತೂ ಈಗ ತಲೆದೋರಿರುವ ಭಿನ್ನಾಭಿಪ್ರಾಯ ಹೀಗಿವೆ: ರ್ಹೀಯವರ ಹೇಳಿಕೆಯಂತೆ ಕದನ ವಿರಾಮದ ಬಳಿಕ ಸೇರುವ ರಾಜಕೀಯ ಪರಿಷತ್ತಿನಲ್ಲಿ ಕೊರಿಯಾದ ಏಕೀಕರಣದ ಮಾತುಕತೆಗಳು ನಡೆಯಬೇಕು, ಮತ್ತು ೯೦ ದಿನಗಳಲ್ಲಿ ಇವು ಉದ್ದೇಶ ಸಾಫಲ್ಯ ಪಡೆಯದಿದ್ದ ಪಕ್ಷದಲ್ಲಿ ದಕ್ಷಿಣ ಕೊರಿಯಾ ಯುದ್ಧ ಮುಂದುವರಿಸುತ್ತದೆ. ಆಗ ಅಮೇರಿಕಾ ಅದನ್ನು ಬೆಂಬಲಿಸುವ ವಾಗ್ದಾನ ಕೊಟ್ಟರೆ, ಈಗ ಯುದ್ಧ ನಿಲ್ಲಿಸುವುದಕ್ಕೆ ರ್ಹೀಯವರ ಆಕ್ಷೇಪವಿಲ್ಲ. ಈ ಶರ್ತಕ್ಕೆ ಒಡಂಬಡಲು ಅಮೇರಿಕಾ ಸಿದ್ಧವಿಲ್ಲ—ಏಕೆಂದರೆ, ಕೊರಿಯಾದ ಏಕೀಕರಣವನ್ನು ರಾಜಕೀಯ ಪರಿಷತ್ತಿನಲ್ಲಿ ಸಾಧಿಸಬಹುದು, ಅದೂ ೯೦ ದಿನಗಳ ಅವಧಿಯಲ್ಲಿ ಈ ಉದ್ದೇಶ ನೆರವೇರೀತು, ಎನ್ನುವ ಆಶೆ ಅಮೇರಿಕಾಕ್ಕೆ ಇಲ್ಲ. ಮಾತ್ರವಲ್ಲ ಕೊರಿಯಾದಲ್ಲಿ ಈಗ ನಡೆದಿರುವ ಯುದ್ಧದ ಉದ್ದೇಶವೇ ರ್ಹೀಯವರ ತಿಳುವಳಿಕೆಗಿಂತ ಭಿನ್ನಪ್ರಕಾರವಾಗಿದೆಯೆಂದು ಅಮೇರಿಕಾ ಹೇಳುತ್ತದೆ--ಕೊರಿಯಾದಲ್ಲಿ ಅಮೇರಿಕಾದ ಸೈನ್ಯ-ಆ ಮಾತಿಗೆ ಸಂಯುಕ್ತರಾಷ್ಟ್ರ ಸಂಘದ ಸೈನ್ಯ—ನಡೆಸುವ ಯುದ್ಧ ಕಮ್ಯೂನಿಸ್ಟ ಆಕ್ರಮಣವನ್ನು ತಡೆಗಟ್ಟುವುದಕ್ಕಾಗಿದೆಯಲ್ಲದೆ, ಕಮ್ಯೂನಿಸ್ಟರನ್ನು ಉತ್ತರ ಕೊರಿಯಾದಿಂದಲೂ ಓಡಿಸಿ, ರ್ಹೀಯವರಿಗೆ ತೃಪ್ತಿಕೊಡುವ ಏಕೀಕರಣ ಸಾಧಿಸುವುದಲ್ಲ. ಆದರೆ ರ್ಹೀಯವರಿಗೆ ಕಮ್ಯೂನಿಸ್ಟರನ್ನು ಬಗ್ಗುಬಡೆಯದ ವಿನಃ ಏನೊಂದೂ ಸಮಾಧಾನವಿಲ್ಲ. ಅವರಿಗೆ ಪ್ರೋತ್ಸಾಹ ಕೊಡುವಂತೆ ಅಮೇರಿಕಾದ ಸಿನೇಟ್ ಸದಸ್ಯರಲ್ಲಿ ಕೆಲವರು ರ್ಹೀಯವರ ನಿಲುವೇ ನ್ಯಾಯವೂ ಯೋಗ್ಯವೂ ಆದುದೆಂದು ಹೇಳುತ್ತಾ ತಿರುಗುವರು. ಸ್ವತಃ ಐಸೆನ ಹಾವರ ಮತ್ತು ಡಲ್ಲೇಸರು ಕೂಡ ರ್ಹೀಯವರ ಧೋರಣೆಯನ್ನು ಅರ್ಥಮಾಡಿಕೊಳ್ಳಬಹುದೆಂದು ಸಹಾನುಭೂತಿಯ ಮಾತು ಆಡುತ್ತಾ ಮನವೊಲಿಸುವ ಪ್ರಯತ್ನದಲ್ಲಿರುವರು. ಆದುದರಿಂದ ರ್ಹೀಯವರಿಗೆ ತಾನು ಹೇಳಿದುದೇ ಸರಿ ಎನ್ನುವ ಜಂಭ, ಮತ್ತು ತನ್ನ ಇಚ್ಛಾಪೂರ್ತಿಗಾಗಿ ಹಠಹಿಡಿಯುವುದರಲ್ಲಿಯೇ ಲಾಭ ಎಂದು ಖಚಿತವಾಗಿದೆ.

ನೆಹರೂರ ಸಲಹೆ

ಆದರೆ ಈ ಲಾಭ ಕಾಲಾಂತರದಲ್ಲಿ ಸಿಂಗ್ಮನ್ನ ರ್ಹೀಯವರಿಗೆ ಹಿತಾವಹವಾಗಲಿಕ್ಕಿಲ್ಲ. ಏಕೆಂದರೆ, ಈಗಾಗಲೇ ಅಮೇರಿಕದ ಸಹನೆ ಮಿತಿಮೀರಿದೆ. ಸಂಯುಕ್ತ ರಾಷ್ಟ್ರ ಸಂಘದ ವರಿಷ್ಠ ಸೈನಾಧಿಪತಿಗಳು, ಸಿಂಗ್ಮನ್ನ ರ್ಹೀಯವರು ಯುದ್ಧ ನಿಲ್ಲಿಸಲು ಒಡಂಬಡದೆ ಹೋದರೆ, ಅವರ ಸೈನ್ಯಕ್ಕೆ ನೀಡಲಾಗುವ ಪೂರೈಕೆಯನ್ನು ನಿಲ್ಲಿಸಿಬಿಡುವ ಹವಣಿಕೆಯಲ್ಲಿದ್ದಾರೆ. ಆಗ ದಕ್ಷಿಣ ಕೊರಿಯಾವು ತಾನಾಗಿ ಯುದ್ಧ ಮುಂದುವರಿಸಲಾಗದೆ ಸುಮ್ಮನುಳಿಯಬೇಕಾಗುವುದು. ಹಾಗೆಂದು ಕಮ್ಯೂನಿಸ್ಟರು ದಕ್ಷಿಣ ಕೊರಿಯಾ ಯುದ್ಧ ನಿಲ್ಲಿಸದೆ ಮುಂದುವರಿಸುವುದನ್ನು ಕಂಡು ಕದನ ನಿಲ್ಲಿಸುವ ಸಂಧಿಯೇ ನಿಷ್ಫಲವಾಯಿತೆಂದು ಸಾರಿ, ತಾವೂ ಪ್ರತಿಭಟನೆ ಕೊಟ್ಟರೆ ಆಗ ರಾಷ್ಟ್ರ ಸಂಘಕ್ಕೆ ಮರಳಿ ಯುದ್ಧ ಪ್ರವೃತ್ತವಾಗದೆ ಉಪಾಯವಿಲ್ಲ; ಅಂತೂ ಜಾಗತಿಕ ನ್ಯಾಯವನ್ನು ಎತ್ತಿ ಹಿಡಿಯುವುದಕ್ಕಾಗಿ ಕೊರಿಯಾದ ನೆಲದಲ್ಲಿ ಯುದ್ಧವನ್ನು ನಡೆಸಲುಪಕ್ರಮಿಸಿದ ರಾಷ್ಟ್ರ ಸಂಘದ ಈ ಪ್ರಥಮ ಉದ್ಯಮ ಅಯಶಸ್ವಿಯಾದರೆ, ಆಗ ರಾಷ್ಟ್ರ ಸಂಘದ ಗೌರವ ಮಣ್ಣು ಮುಕ್ಕುತ್ತದೆ; ಮತ್ತು ವಿಶ್ವಶಾಂತಿಗಾಗಿ ಪ್ರಯತ್ನಿಸುವ ಒಂದು ಮಹಾ ಸಂಸ್ಥೆಯ ಅಸ್ತಿತ್ವವೇ ಅದುರತೊಡಗುತ್ತದೆ. ಹೀಗೆ ಲೋಕಶಾಂತಿಯ ಕಟ್ಟಡವೇ ಕುಸಿದು ಬೀಳುವ ಭಯವುಂಟಾದ ಈ ಕಾಲದಲ್ಲಿ ಎಲ್ಲ ರಾಷ್ಟ್ರಗಳೂ ಮರಳಿ ಸಭೆಸೇರಿ, ಸಮಾಲೋಚನೆ ನಡೆಸಿ ಸೂಕ್ತ ನಿರ್ಣಯವನ್ನು ಸ್ವೀಕರಿಸುವ ಆವಶ್ಯಕತೆ ಎಂದಿಗಿಂತ ಹೆಚ್ಚಾಗಿದೆ. ಆದಕಾರಣ ಭಾರತದ ಪ್ರಧಾನಿ ನೆಹರೂರವರು ರಾಷ್ಟ್ರಸಂಘದ ಸಾಮಾನ್ಯ ಸಭೆಯನ್ನು ಸೇರಿಸುವ ವಿಚಾರ ಮಾಡಬೇಕೆಂದು ಇದೀಗ ಎರಡನೆಯ ಬಾರಿ ಲೆಸ್ಟರ ಪಿಯರ್ಸನ್ನರನ್ನು ಕೇಳಿಕೊಂಡಿರುವರು. ಮೊದಲನೇ ವಿನಂತಿಯನ್ನು ಅಮೇರಿಕಾದ ಸಂಧಾನ ಫಲಿಸುವುದೋ ಹೇಗೆ ನೋಡೋಣವೆಂದು ಉಪೇಕ್ಷೆಯಿಂದ ಕಂಡ ರಾಷ್ಟ್ರಗಳು ಎರಡನೇ ವಿನಂತಿಯ ಗಾಂಭೀರ್ಯವನ್ನು ನಿಧಾನವಾಗಿ ಮನನ ಮಾಡಿಕೊಳ್ಳುತ್ತಿವೆ.

ಸಂತಾಪ ಸೂಚಕ ಸಭೆಗಳು— ಶ್ರೀ. ಎಸ್. ಎಲ್. ಕಿಲ್ಲೆಯವರ ನಿಧನದ ಕುರಿತು ಮಂಗಳೂರು ಗಣಪತಿ ದೇವಸ್ಥಾನದ ಗೋಪುರದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ ಡಾ|| ಯು. ಪಿ. ಮಲ್ಯ, ಕೆ. ಆರ್. ಆಚಾರ್, ಕೆ ಸದಾನಂದ ಹೆಗ್ಡೆ ಶ್ರೀ. ಕೆ ಬಾಲಕೃಷ್ಣ ರಾವ್, ಎಂ. ಮಾಧವ ರಾವ್, ಬಿ. ಆರ್. ಕರ್ಕೇರ, ಗುರುವಪ್ಪ ಮೊದಲಾದವರಿಂದ ದಿವಂಗತರ ಗುಣಕಥನದ ಕುರಿತಾದ ಭಾಷಣಗಳಾದುವು.

ಇದೇ ರೀತಿಯಲ್ಲಿ ವಾಗೀಶ್ವರಿ ಯಕ್ಷಗಾನ ಕಲಾವರ್ಧಕ ಸಂಘದ ಆಶ್ರಯದಲ್ಲಿ ಬೋಳೂರು ಕುದ್ರೋಳಿಯ ಶಿವಭಕ್ತಿಯೋಗ ಸಂಘದಲ್ಲಿಯೂ ಸಂತಾಪಸೂಚಕ ಸಭೆಗಳಾದುವು.

ತಾ. ೪ರಂದು ಶ್ರೀ. ಅಸೋಕಶೆಟ್ಟಿ, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿಯ ಯುವಕ ಕಾಂಗ್ರೆಸಿನ ಸಭೆಯಲ್ಲೂ ಶ್ರೀ ಕಿಲ್ಲೆಯವರ ನಿಧನದ ಕುರಿತು ದುಃಖ ಪ್ರದರ್ಶಿಸಲಾಯಿತು.

ಮಳೆ-ನೆರೆ— ಎಳೆಂಟು ದಿವಸಗಳಿಂದ ಜಿಲ್ಲೆಯಲ್ಲೆಲ್ಲಾ ವಿಶೇಷ ಮಳೆಯಾಗಿ ನೆರೆಬಾಧೆ-ಗಾಳಿ ಮಳೆಯಿಂದ ಮನೆಗುಡಿಸಲುಗಳು ಬಿದ್ದು, ಬಹಳ ಹಾನಿ ಹೋಗಿ ನಷ್ಟ ಸಂಭವಿಸಿದ ವಾರ್ತೆ ಬಂದಿದೆ, ತಾ. ೭ರಲ್ಲಿ ಉದ್ಯಾವರ ಹೊಳೆಯಲ್ಲಿ ೯ ಕಿಂಟು ಜನರಿದ್ದ ದೋಣಿಯೊಂದು ಗಾಳಿಯಿಂದಾಗಿ ಮಗುಚಿಬಿದ್ದು ಎಲ್ಲರೂ ನೀರುಪಾಲಾದರೆಂದೂ ಆವರೆ ಸುರಕ್ಷಿತರಾಗಿ ದಡ ಸೇರಿದರೆಂದೂ ತಿಳಿದು ಬರುತ್ತದೆ.

ಸಾಫಲ್ಯ ಸೇವಾ ಸಂಘ, ಮುಂಬಯಿ ಗಾಣಿಗ ಯಾನೆ ಸಫಲಿಗ ಜಾತಿಯ ಬಡ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ವರೆಗೆ ಸಂಘದಿಂದ ವಿದ್ಯಾರ್ಥಿ ವೇತನ ಪಡೆಯುತ್ತಿ[illegible] ಹಾಗೂ ಇನ್ನು ಮುಂದೆ ಪಡೆ[illegible] ಮಾರ್ಕ್ ಕಾರ್ಡನ್ನು ಅರ್ಜಿಪತ್ರಗಳನ್ನು ಈ ತಿಂಗಳ ಅಂತ್ಯದೊಳಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಕಾರ್ಯದರ್ಶಿ, ಸಾಫಲ್ಯ ಸೇವಾ ಸಂಘ, ಪೋರ್ಟ್ ಚೇಂಬರ್ಸ್, ಬಿ, ಸೆಕೆಂಡ್ ಫ್ಲೋರ್, 6-10 ಡೀನ್ ಲೇನ್, ಫೋರ್ಟ್, ಬೊಂಬಾಯಿ.

ಮೆಡಿಕೊ-ಸರ್ಜಿಕಲ್ ಕ್ಲಿನಿಕ್- ಡಾ|| ಎಚ್. ಬಾಲಕೃಷ್ಣ ಶೆಟ್ಟಿ, ಎಂ. ಬಿ. ಬಿ. ಎಸ್. ಇವರ ಈ ಹೊಸ ಚಿಕಿತ್ಸಾಲಯ ದಿವಾ ತಾ 4—7—53ರಲ್ಲಿ ಮುಂಬಯಿಯಲ್ಲಿ 543 ಡಿಲಿಸ್ಲೆ ರೋಡಿನಲ್ಲಿ ವಿಜೃಂಭಣೆಯಿಂದ ಉದ್ಘಾಟಿಸಲ್ಪಟ್ಟಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. 25/1953

1 ಕೃಷ್ಣವೇಣಿ ಬ್ಯಾ-ಜಿ. ಅನಂತ ಸೇಟರ ಹೆಂಡ್ತಿ 2 ಕೃಷ್ಣ ಸೇಟ್ 3 ವೆಂಕಟೇಶ ಸೇಟ್ 4 ಶ್ರೀಪತಿ ಸೇಟ್ 5 ಸುಂದರ ಸೇಟ್ (ಮೈ) 6 ಪ್ರಭಾಕರ ಸೇಟ್ (ಮೈ) 7 ರಾಮಚಂದ್ರ ಸೇಟ್ (ಮೈ) ಜಿ. ಅನಂತ ಸೇಟರ ಮಗಂದಿರು —ಅರ್ಜಿದಾರ್‍ರು

ಶಿವಳ್ಳಿ ಗ್ರಾಮದ ಗುಂಡಿಬೈಲು—

1ನೇ ಅರ್ಜಿದಾರಳ ಗಂಡ ಮತ್ತು ಮಿಕ್ಕ ಅರ್ಜಿದಾರ್‍ರ ತಂದೆ ಹಾಲಿ ಮೃತಪಟ್ಟ ಜಿ. ಅನಂತ ಸೇಟರ ಬಾಬ್ತು-ಅರ್ಜಿಯ ಶೆಡ್ಯೂಲಿನಿಂದ ಕಾಣುವ 1ನೇ ಐಟಮಿನ ಚಿನ್ನದ ನಗಗಳನ್ನು ಮತ್ತು 2.-3ನೇ ಐಟಮುಗಳ ಹಣಗಳನ್ನು ವಸೂಲು ಪಡೆಯುವರೆ ತಾವು ಹಕ್ಕುದಾರರೆಂತಲೂ-ಆ ಕುರಿತು ತಮ್ಮ ಕಡೆಯಿಂದ 1ನೇ ಅರ್ಜಿದಾರಳ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸ ಬೇಕಾಗಿ ಸಹಾ ಸದರಿ ಅರ್ಜಿದಾರ್‍ರು, ಬರಕೊಂಡ ಮೇಲ್ಕಂಡ ಅರ್ಜಿಯು ತಾರೀಕು 25-7-53ಕ್ಕೆ ತನಿಖೆ ಬಗ್ಗೆ ಇಡಲಾಗಿಯದೆ. ಈ ಕುರಿತು ಯಾರಾದರೂ ಆಕ್ಷೇಪ ಹೇಳುವವರು ಇರುವ ಸಂಗ್ತಿಯಲ್ಲಿ ಅವರು ಸದರಿ ತಾರೀಕಿನ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ ಇದಿ ಮೂಲಕ ಸಮಸ್ತರಿಗೆ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Petitioner.

ತಾ. 6-7-53, ಉಡುಪಿ. ದ. ಕ.

ನಡಿಯುವ ಚಿತ್ರ

"ವಳಿಯಾಪತಿ" (ತಮಿಳು)

ಜಿ ಕೃಷ್ಣನ್, ಪುಳಿಮೂಟಿ, ಎಸ್. ಜಾನಕಿ.

ಮುಂದಿನ ಬದಲಾವಣೆ:—ಅಂಜಲಿ ಮತ್ತು ನಾಗೇಶ್ವರ ರಾವ್ ನಟಿಸಿದ

"ಸ್ತ್ರೀ ಸಾಹಸಂ"

12–7–53ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ಇಂಗ್ಲೀಷ್ ವರ್ಣಚಿತ್ರ

ಅಮೇರಿಕನ್ ಗುರಿಲ್ಲಾ ಇನ್ ದಿ ಫಿಲಿಪ್ಪೈನ್ಸ್.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.



(೫ನೇ ಪುಟದಿಂದ)

ಶಾಸನಾಂಗವು ಕಾಯಿದೆ ಎಂಬುದಾಗಿ ವಿಧಿಸಿದ ದನ್ನು ಜಾರಿಗೆ ತರುವುದು ಕಾರ್ಯಾಂಗದ ಕರ್ತವ್ಯ; ಮತ್ತು ಈ ರೀತಿ ಕಾಯಿದೆಯನ್ನು ನಾಗರಿಕರ ಮೇಲೆ ಹೊರಿಸುವಾಗ ಅನ್ಯಾಯಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳುವುದು ನ್ಯಾಯಾಲಯಗಳ ಕರ್ತವ್ಯ. ಹೀಗೆ ಇವು ಮೂರೂ ಒಂದೇ ಘಟಕದ ಪರಸ್ಪರ ಪೂರಕಾಂಗಗಳಾಗಿದ್ದುಕೊಂಡು ನಾಗರಿಕರ ಹಿತವನ್ನು ಎತ್ತಿ ಹಿಡಿಯುವುದು ನಾಡಿನ ಶ್ರೇಯಸ್ಸಿಗೆ ಪೋಷಕವಾಗಿರುತ್ತದೆ ಆದರೆ ಪಟ್ಟಿ ಸ ರಾಜ್ಯಗಳಲ್ಲಿ ಈಗ ಕಾರ್ಯಾಂಗವೇ ನ್ಯಾಯಾಂಗದ ಹೊಣೆಗಾರಿಕೆಯನ್ನೂ ಹೊತ್ತಿದೆ. ಪರಿಣಾಮವಾಗಿ ಕಾಯಿದೆಯನ್ನು ಅಮಲಿನಲ್ಲಿ ತರುವ ಜಿಲ್ಲಾ ಕಲೆಕ್ಟರನು ಜಿಲ್ಲಾ ಮೆಜಿಸ್ಟ್ರೇಟನಾಗಿ ನ್ಯಾಯ ದಾನ ಮಾಡುವ ಪರಿಪಾಟವುಂಟು. ಇದರಿಂದ ನ್ಯಾಯದಾನದಲ್ಲಿ ಹಸ್ತಕ್ಷೇಪ ಮಾಡುವ ಅವಕಾಶ ಬಹಳ ಹೆಚ್ಚು ಪ್ರಮಾಣದಲ್ಲಿದೆ. ರಾಜಕೀಯ ಧುರೀಣರ ಮತ್ತು ಸರಕಾರೀ ವರ್ಚಸ್ಸಿನ ಪರಿಣಾಮವು ನ್ಯಾಯ ದಾನದಲ್ಲಿ ತನ್ನ ಪ್ರಭಾವವನ್ನು ಬೀರಬಲ್ಲುದೆನ್ನುವ ಸಂಶಯ ನಾಗರಿಕರಿಗೆ ಉಂಟಾಗುತ್ತದೆ. ಇವುಗಳ ಪ್ರತ್ಯೇಕತೆಯಿಂದ ಪ್ರಜಾ ಪ್ರಭುತ್ವದ ಅಡಿಗಲ್ಲೆನಿಸಿದ ವ್ಯಕ್ತಿ ಸ್ವಾತಂತ್ರ್ಯಕ್ಕೆ ರಕ್ಷಣೆ ದೊರೆಯುತ್ತದೆ ಮುಂಬಯಿ ಸರಕಾರದಂತೆ ದಿಟ್ಟ ತನದ ಹೆಜ್ಜೆಯನ್ನು ಇತರ ರಾಜ್ಯಗಳೂ ಬೇಗನೆ ಮುನ್ನಿಡಲಿ; ಮತ್ತು ಮದ್ರಾಸು ರಾಜ್ಯದಲ್ಲಿ ಈ ಹೊಸ ಘೋಷಣೆ ಎಲ್ಲ ಜಿಲ್ಲೆಗಳಿಗೂ ಅನ್ವಯಗೊಳ್ಳಲಿ ಎಂಬುದೇ ಸಾಮಾನ್ಯವಾಗಿ ಕಂಡುಬರುವ ಅಭಿಪ್ರಾಯ.

ಮಂಗಳೂರು ವಕೀಲ ಸಂಘವು— ತಾ 4ರಲ್ಲು ಶ್ರೀ ಕೆ. ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಡಾ। ಶ್ಯಾಮಪ್ರಸಾದ ಮುಖರ್ಜಿ ಮತ್ತು ಶ್ರೀ ಟಿ. ಆರ್. ವೆಂಕಟ್ರಾಮ ಶಾಸ್ತ್ರಿಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿತು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

ಕ್ರಮಸಂಖ್ಯೆ 178/1953.

B. ಸಂಕಪ್ಪಯ್ಯ ಹೊಳ್ಳ, ದೇವರಾಜ ರಾಮಸ್ವಾಮ್ಯನವರ ಮಗ, ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದ ಗುಡ್ಡೆಅಂಗಡಿಯಲ್ಲಿರುವವರು. —ವಾದಿ

ಮತ್ತು

N. ಸದಾಶಿವ ಸೆಟ್ಟಿ, ಕೊಡ್ಯಡ್ಕ ಕೃಷ್ಣ ಸೆಟ್ರ ಮಗ ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದ ಕೊಡ್ಯಡ್ಕ, —ಪ್ರತಿವಾದಿರು.

ವಾದಿಯು ನಿಮ್ಮಿಂದ ಬರಾ ಖರಸಂದಾಯದ ಬಾಲಗೇಣಿ ಬಾಕಿ ಬಗ್ಗೆ ನಿಮ್ಮ ಮೇಲೆ ವಾಲಾಯ ಮಾಡಿದ ಮೇಲ್ಕಂಡ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 23-7-53ರಲ್ಲು ಬೆಳಿಗ್ಗೆ 10 ಗಂಟೆಯ ಸಮಯಕ್ಕೆ ಇಟ್ಟಿರುವ ಪ್ರಯುಕ್ತ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಪ್ರತಿವಾದವೇನಾದರೂ ಇರುವಲ್ಲಿ ಸದರಿ ತಾರೀಕಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ನಡೆಸಿಕೊಳ್ಳಬಹುದಾಗಿಯೂ, ತಪ್ಪಿದರೆ ಸದರಿ ದಾವೆಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ, ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

A. N. S. Achar
Advocate for Plaintiff.
Karkal, ತಾ. 6—7—53.

ಬ್ರಹ್ಮಾವರ— ಕಳೆದ ತಾ 21-6-53ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ಸಂಜೀವ ಭಟ್ಟರು ಇಲ್ಲಿ ಹೊಸತಾಗಿ ತೆರೆದ ಸೈಂಟ್ ಮೇರೀಸ್ ಸೀರಿಯನ್ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ಜರುಗಿಸಿದರು. ಬಾಲಕಿಯರ ಪ್ರಾರ್ಥನೆಯಾದನಂತರ ಹೈಸ್ಕೂಲಿನ ಕರೆಸ್ಪೊಂಡೆಂಟರಾದ ರೆ ಫಾದರ್. ಕೋಶಿಯವರು ಬ್ರಹ್ಮಾವರದಲ್ಲಿ ಹೈಸ್ಕೂಲಿನ ಆವಶ್ಯಕತೆಯನ್ನು ಸಮರ್ಥಿಸಿದ್ದಲ್ಲದೆ ಊರ ಮಹನೀಯರ ಸಹಾಯವನ್ನೂ ಕೋರಿದರು. ಶ್ರೀ. ಕೆ. ಜಗಜ್ಜೀವನದಾಸ ಸೆಟ್ಟಿ, ಶ್ರೀ ಬಿ. ಮಾಧವರಾವ್, ಡಾಕ್ಟರ್ ನಾರಾಯಣ ಪೈ, ಕೆ. ಯಲ್. ಕಾರಂತರು ಮೊದಲಾದವರು ಹೈಸ್ಕೂಲಿಗಾಗಿ ಪ್ರಯತ್ನಿಸಿದ ಕೋಶಿಯವರನ್ನು ಹರಸಿದುದಲ್ಲದೆ ಅವರಿಗೆ ಊರವರು ಪ್ರೋತ್ಸಾಹ ನೀಡಬೇಕಾಗಿ ಕೋರಿದರು. ನೂತನ ವಿದ್ಯಾಧಿಕಾರಿಗಳು ಅಧ್ಯಕ್ಷ ಭಾಷಣವಾದಮೇಲೆ ಹೈಸ್ಕೂಲಿನ ಉದ್ಘಾಟನಾ ಕಾರ್ಯವನ್ನು ವಾದ್ಯ ಘೋಷದೊಡನೆ ನೆರವೇರಿಸಿದರು.

ಹೆಜಮಾಡಿ— ಹೆಜಮಾಡಿ ಹೈಸ್ಕೂಲು ಕಮಿಟಿಯವರು ಕಟ್ಟಿಸಿದ ನೂತನವಾದ ಹೆಜಮಾಡಿ ಬೋರ್ಡು ಹೈಸ್ಕೂಲಿನ ಪ್ರಾರಂಭೋತ್ಸವವು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆರಿಂದ ಕಳೆದ ತಾ 29ರಲ್ಲು ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಗವರ್ನಮೆಂಟ್ ಪ್ಲೀಡರ್ ಶ್ರೀ ಬಿ. ಗಂಗಾಧರ ದಾಸರು ವಹಿಸಿದ್ದರು, ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಬಾಬು ಸೆಟ್ಟರು ರಾಷ್ಟ್ರ ಧ್ವಜವನ್ನು ಅರಳಿಸಿದ ಮೇಲೆ ಹೈಸ್ಕೂಲ್ ಕಮಿಟಿಯ ಅಧ್ಯಕ್ಷ ಡಾ। ಯಸ್. ಜಂಬನವರು ವಂದಿಯನ್ನೆಡಿ ಸರ್ವರ ಸಹಕಾರ ಕೋರಿದರು. ಹಲವರ ಭಾಷಣಗಳಾದ ಮೇಲೆ ಕಾರ್ಯದರ್ಶಿ ಡಾ। ಎಚ್. ಟಿ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಕೊಕ್ಕರ್ಣೆ— ತಾ 4ರಂದು ಬ್ರಹ್ಮಾವರ ಫಿರ್ಕಾ ರೆವಿನ್ಯೂ ಇನ್ಸ್ಪೆಕ್ಟರವರ ನೇತೃತ್ವದಲ್ಲಿ ಪಂಚಾಯತಬೋರ್ಡು ಪ್ರೆಸಿಡೆಂಟ್ ಕೆ. ಕೃಷ್ಣಯ್ಯ ನಾಯಕರ ಅಧ್ಯಕ್ಷತೆಯಲ್ಲಿ ವನಮಹೋತ್ಸವವನ್ನು ಆಚರಿಸಲಾಯಿತು. ಈ ಮಹೋತ್ಸವಕ್ಕೆ ಆಸಪಾಸಿನ ಗ್ರಾಮಾಧಿಕಾರಿಗಳು ಸಹಾ ನೆರೆದಿದ್ದರು; ಸಸಿ ನೆಡುವ ಕಾರ್ಯಕ್ರಮವು ಮುಕ್ತಾಯವಾದ ಬಳಿಕ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು

ಪರ್ಕಳ— ತಾ. 6—7—53ರಲ್ಲಿ ರಾಷ್ಟ್ರೀಯ ವನಮಹೋತ್ಸವ ಹಾಗೂ ಗೊಬ್ಬರ ಸಪ್ತಾಹವು ಆ ಬಗ್ಗೆ ನಿಯುಕ್ತರಾದ ಉಡ್ಪಿ ತಾಲೂಕು ಸಪ್ಲೈ ಆಫೀಸರ್ ಶ್ರೀ ಬಿ. ವಿಶ್ವನಾಥ ರೈಯವರ ನೇತೃತ್ವದಲ್ಲಿ ಯಶಸ್ವಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಪ್ರಥಮದಲ್ಲಿ ಶಾಲಾ ಮಕ್ಕಳಿಗೆ ಅವರು ಕೂಡಾ ವನ ಮಹೋತ್ಸವದಲ್ಲಿ ನೆರವೇರಬೇಕಾದ ಕಾರ್ಯಭಾಗವನ್ನು ತಿಳಿಸಿ, ಸಿಹಿ ತಿಂಡಿಗಳನ್ನು ಹಂಚಿದರು. ನಂತರ ಶಾಲಾ ಮಕ್ಕಳನ್ನು ಕೂಡಿಕೊಂಡು ಪುರಜನರ ಮೆರವಣಿಗೆ ಹೊರಟು ಪಂಚಾಯ ಬೋರ್ಡು ರಸ್ತೆ ಬದಿಗಳಲ್ಲಿ ಸಾಲು ಮರಗಳನ್ನು ನೆಡಲಾಯಿತು. ಮೆರವಣಿಗೆ ಮರಳಿ ಬಂದು, ಸಾರ್ವಜನಿಕ ಸಭೆಯು ಶ್ರೀ. ಬಿ ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ಜರಗಿ, ಅಧ್ಯಕ್ಷರ, ಸಭಿಕರ ಭಾಷಣಗಳಾಗಿ, ರಾಷ್ಟ್ರಾಧ್ಯಕ್ಷ ಬಾಬೂ ರಾಜೇಂದ್ರರ ಮತ್ತು ಕೇಂದ್ರ ಮಂತ್ರಿ ದೇಶಮುಖರ ಸಂದೇಶ, 'ನವಯುಗ'ದ ಅಗ್ರ ಲೇಖನಗಳನ್ನು ಅಧ್ಯಕ್ಷರು ಸಭೆಯ ಮುಂದೆ ಓದಿ ತಿಳಿಸಿದರು. ನಂತರ ಪಂಚಾಯತ ಬೋರ್ಡು ವತಿಯಿಂದ ಒದಗಿಸಲಾದ ಗಾಳಿ ಮರದ ಗಿಡಗಳನ್ನು ಎಲ್ಲಾ ಸಭಿಕರಿಗೆ ಹಂಚಲಾಯಿತು. ಮತ್ತು ರಸ್ತೆ ಬದಿಗಳಲ್ಲಿರುವ ಉತ್ತಮವಾದ ದೊಡ್ಡ ದೊಡ್ಡ ಮರಗಳನ್ನು ಸಾಯುವಂತೆ ಜನರು ಕೆತ್ತಿ ಹಾಳು ಕೆಡುವ ದುರಾಚಾರವು ಯಥೇಷ್ಟವಾಗಿ ನಡೆಯುತ್ತಿರುವುದನ್ನು ಖಂಡಿಸುವ ಠರಾವು ಪಾಸು ಮಾಡಿ, ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಬೇಕಾಗಿ ನಿರ್ಣಯಿಸಿ, ಧನ್ಯವಾದ ಸಮರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಉಡುಪಿ

ಶ್ರೀ ದತ್ತ ಮಂದಿರದಲ್ಲಿ ಧರ್ಮಾರ್ಥ ಶಿಕ್ಷಣ ಸೇವೆ— ನಿವೃತ್ತ ಉಪಾಧ್ಯಾಯ ಶ್ರೀ ಕೆ. ಶ್ರೀನಿವಾಸ ಕೆದ್ಲಾಯರು ಶ್ರೀ ದತ್ತ ಮಂದಿರದಲ್ಲಿ ದಿನಾಲೂ ಬೆಳಿಗ್ಗೆ ಮತ್ತು ರಾತ್ರಿ ಒಂದೊಂದು ಗಂಟೆ ನಿರಕ್ಷರಿಗಳಿಗೂ ವಯಸ್ಕರಿಗೂ ಶಾಲಾ ವಿದ್ಯಾರ್ಥಿಗಳಿಗೂ ಖಾಸಗಿಯಾದ ಧರ್ಮಾರ್ಥ ಶಿಕ್ಷಣವನ್ನು ಆರಂಭಿಸಿರುವುದು ಸ್ತುತ್ಯವಿದೆ. ಬಡವರಿಗೆ ಸ್ಲೇಟು, ಪುಸ್ತಕ ಒದಗಿಸುತ್ತಲೂ ಇರುವರು.

ಕಾಂಗ್ರೆಸ್ ಕಮಿಟಿ ಸಂತಾಪ ಸೂಚನೆ:— ಉಡುಪಿ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯು ಇದೇ ತಾ 7ರಂದು ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ದ. ಕ. ಜಿಲ್ಲೆಯ ಕಾಂಗ್ರೆಸ್ ಮುಂದಾಳುಗಳಲೊಬ್ಬರಾದ ಶ್ರೀ ಎನ್. ಎಸ್. ಕಿಲ್ಲೆಯವರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು. ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯಾಗಿ ಸಭಾಂತ್ಯವಾಯಿತು.

ಉದ್ಘಾಟನಾ ಸಮಾರಂಭ— ಉಡುಪಿಯ ಯೂನಿಯನ್ ನೈಟ್ ಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 5ನೇ ಪೂರ್ವಾಹ್ನ ಮೋಡರ್ನ ಶಾಲಾ ಭವನದಲ್ಲಿ ಶ್ರೀ. ಕೆ. ಜಗನ್ನಾಥ ನಾಯ್ಕರವರ ನೇತೃತ್ವದಲ್ಲಿ ನಡೆಯಿತು. ಶಾಲಾ ಸಮಿತಿಯ ಕಾರ್ಯದರ್ಶಿ ಶ್ರೀ ಗೋಕುಲಚಂದ್ರ ರಾಯರು ಸ್ವಾಗತ ಭಾಷಣವನ್ನು ಮಾಡುತ್ತಾ, ಶಾಲೆಯ ಉದ್ದೇಶಗಳನ್ನು ತಿಳಿಸಿ ಬಂದಿರುವ ಸಂದೇಶಗಳನ್ನು ಓದಿದರು. ಆ ಮೇಲೆ ಶ್ರೀಗಳಾದ ಉ. ಲಕ್ಷ್ಮೀನಾರಾಯಣ ಕಿಣಿ ಮತ್ತು ಕುಮಾರ ರೋಯ್‌ಗಳವರು ಶಾಲೆಯ ಶ್ರೇಯೋಭಿವೃದ್ಧಿಯನ್ನು ಕುರಿತಾಗಿ ಮಾತಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆಗಳಾದ ಮೇಲೆ, ಜನಗಣಮನದೊಂದಿಗೆ ಸಭಾಂತ್ಯವಾಯಿತು.

ವಿವಾಹ ಸಮಾರಂಭ

ಪುತ್ತೂರು ಹೊಸಮನೆ ದುಗ್ಗಪ್ಪ ಸೆಟ್ಟರ ಪುತ್ರಿ ಸೌ। ಲಲಿತಳನ್ನು, ಕಲ್ಲುಗುಡ್ಡೆ ಹೊಸಮನೆ ಶೀನ ಶೆಟ್ಟರ ಪುತ್ರ ಶ್ರೀ. ರಾಮಕೃಷ್ಣ ಶೆಟ್ಟರು ತಾ 3-7-53ರಲ್ಲಿ ಕಾಪು ಜನಾರ್ದನ ದೇವಸ್ಥಾನದಲ್ಲಿಯೂ, ಕೆಮ್ಮಣ್ಣು ಪಡುಮನೆ ಸಂಧ್ಯಪ್ಪ ಶೆಟ್ಟರ ಪುತ್ರ ಶ್ರೀ ಗೋಪಾಲಕೃಷ್ಣ ಹೆಗ್ಡೆರು ನಿಂಜೂರು ಬಿತ್ರಬೈಲು ನಾಗಣ್ಣ ಶೆಟ್ರ ಪುತ್ರಿ ಸೌ। ಜಯಂತಿಯನ್ನೂ, ಸದರಿ ಸಂಧ್ಯಪ್ಪ ಶೆಟ್ಟರ ಪುತ್ರ ಶ್ರೀ ವೆಂಕಪ್ಪ ಹೆಗ್ಡೆರ ಕೊಡಕ್ಕೂರು ಗುತ್ತು ಮಹಾಬಲ ಶೆಟ್ರ ಪುತ್ರಿ ಸೌ ವಸಂತಿಯನ್ನೂ ತಾ 3-7-53 ರಲ್ಲಿ ಕಟಪಾಡಿ ಎಸ್, ವಿ, ಎಸ್. ಹಾ। ಎ। ಶಾಲೆಯಲ್ಲಿಯೂ ವಿವಾಹವಾದರು.

ಸ್ವೀಕಾರ

ಬಂಟರಯಾನೆ ನಾಡವರ ಸಂಘದ ರಜತಮಹೋತ್ಸವ ಸ್ಮಾರಕ ಸಂಚಿಕೆ 1952

ತಾ 26—4—1953ರಲ್ಲಿ ಬೊಂಬಾಯಿಯಲ್ಲಿ ಮಂತ್ರಿ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಂಘದ ರಜತ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾದ ಈ ಸ್ಮಾರಕ ಸಂಚಿಕೆಯಲ್ಲಿ 1927—52ರ ವರದಿ, ಸಂಘದ ಅಧ್ಯಕ್ಷರುಗಳು, ಆಜೀವ ಸದಸ್ಯರುಗಳ ಚಿತ್ರಗಳು, ವಿಳಾಸಗಳು ಕೊಡಲ್ಪಟ್ಟಿವೆ.

ಪೌರ ನೀತಿ ಭಾಗ ೧ ಮತ್ತು ೨

ಎಲಿಮೆಂಟರಿ ಶಾಲೆಗಳ ಉಪಯೋಗಾರ್ಥವಾಗಿ ಶ್ರೀ. ಕೆ ಎಸ್. ಕಾರಂತರಿಂದ ಬರೆಯಲ್ಪಟ್ಟು ಕೆ. ಭೋಜ ರಾವ್ ಮತ್ತು ಕಂಪೆನಿ, ಮಂಗಳೂರು ಇವರಿಂದ ಪ್ರಕಟಿಸಲ್ಪಟ್ಟ ಈ ಸಚಿತ್ರ ಪುಸ್ತಕಗಳಲ್ಲಿ ಪೌರನೀತಿ ಪಾಠಗಳಿವೆ. ಬೆಲೆ ೧ನೇ ಭಾಗ 0-4-0 ೨ನೇ ಭಾಗ 0-5-5

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 202/1953.

ಅಣ್ಣಂಪ ಪೂಜಾರಿ —ವಾದಿಯು

ಮತ್ತು

1 ಬಾಗಿ ಪೂಜಾರ್ತಿ 2 ರಾಜೀವ ಪೂಜಾರಿ 3 ಜಲಜ ಪೂಜಾರ್ತಿ 4 ಕಮಲ ಪೂಜಾರ್ತಿ 5 ವಿಠಲ ಯಾನೆ ದಯಾನಂದ-ಬಾಬಣ್ಣ ಪೂಜಾರಿ ಮಕ್ಕಳು.

1ನೆಯವಳು ಕಾರಂದ್ರೆ ಗ್ರಾಮ ಬಾಕಿಯವರು ಪಾಂಗಾಳ ಗ್ರಾಮ —ಪ್ರತಿವಾದಿಯು

ಕಕ್ಷಿಗಾರರ ಕುಟುಂಬದಲ್ಲಿ ತಾರೀಕು 8-6-1942ರಲ್ಲಿ ಆದ ವಿಭಾಗ ಪತ್ರ ಪ್ರಕಾರ ಮೂಲಿಗಾರಿಗೆ ಪ್ರತಿವಾದಿರ ಹಿಸೆಯಿಂದ ಸಲತಕ್ಕ ಅಪ್ಪೆಜಂನು ತೆರುವರೆ ಪ್ರತಿವಾದಿರು ತಪ್ಪಿ ಸದ್ರಿ ಅಪ್ಪೆಜನ್ನು ವಾದಿಯು ತೆತ್ತದ್ದರಿಂದ ಹಾಗೆ ತೆತ್ತ ಹಣದ ಬಡ್ಡಿ ಕೂಡಾ ರುಪಾಯಿ 166 12-8ಕ್ಕೆ ವಾದಿಯು ಹೂಡಿದ ಮೇಲ್ಕಂಡ ವ್ಯಾಜ್ಯವು 2, 3ನೇ ಪ್ರತಿವಾದಿರಿಗೆ ನೋಟೀಸ್ ಮಾಡಿಕೊಡುವ ಬಗ್ಗೆ ಕೂಡಾ ತಾ 16-7-1953ಕ್ಕೆ ಇಟ್ಟದ್ದರಿಂದ ಸದ್ರಿ ಪ್ರತಿವಾದಿರಿಗೆ ಆಕ್ಷೇಪ ಏನಾದರೂ ಇದ್ದರೆ ಸದ್ರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಬಿನ್ನಹ ಮಾಡಿಕೊಳ್ಳತಕ್ಕದ್ದೆಂಬ ಸಂಗತಿ ಈ ಮೂಲಕ ತಿಳಿಸಿಯದೆ.

K. Laxminarayana Aithal
Vakil for Plaintiff
ಉಡುಪಿ, ತಾರೀಕು, 27-6-1953.



ಚಿಕ್ಕಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—

ಕೆ. ಹೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ ಮಕ್ಕಳಿಗೆ ಹಾಡಲಿಕ್ಕೂ ಅಭಿನಯಿಸಲಿಕ್ಕೂ, ಅನುಕೂಲವಾದ ಪದ್ಯಗಳು! ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0—6—0

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ:—
ನವಭಾರತ ಪುಸ್ತಕ ಭಂಡಾರ. ಉಡುಪಿ.

(೧ನೇ ಪುಟದಿಂದ)

ಕಾಂಗ್ರೆಸು ಕಾರ್ಯಕರ್ತರು ಸ್ವಪ್ರಯತ್ನದಿಂದ ಇಂಥ ಕೇಂದ್ರಗಳನ್ನು ತೆರೆದರೆ ಒಳ್ಳೆಯದು. ತಂತಮ್ಮ ಪ್ರದೇಶದಲ್ಲಿ ಜನತೆಗೆ ಯೋಗ್ಯ ಮಾಹಿತಿಯನ್ನು ಕೊಡುವ ಕೇಂದ್ರಗಳನ್ನು ಕಾಂಗ್ರೆಸಿಗರು ರೂಪಿಸಿಕೊಂಡಲ್ಲಿ, ಸರಕಾರೀ ಪ್ರಯತ್ನದ ಇಮ್ಮಡಿ ಮುಮ್ಮಡಿ ಅಧಿಕ ಪ್ರಯೋಜನ ದೊರೆಯುತ್ತದೆ. ಸರಕಾರದ ಕಡೆಯಿಂದ ಬಂದಂಥದೆಲ್ಲವೂ ಒತ್ತಾಯವೆಂದೇ ಪರಿಗಣಿಸಲ್ಪಡುತ್ತದೆ. ಆದರೆ ಸ್ವೇಚ್ಛೆಯಿಂದ ವಿಧಾಯಕ ಕಾರ್ಯಕರು ಕೈಗೊಳ್ಳುವ ಸೇವೆಯ ಕಾರ್ಯಕ್ಕೆ ಜನ ಬೆಂಬಲವು ಎಣಿಸದ ರೀತಿಯಲ್ಲಿ ಸಿಗುತ್ತದೆ. ನಾಗರಿಕರ ಹಕ್ಕು ಬಾಧ್ಯತೆಗಳನ್ನೂ ಕರ್ತವ್ಯ ಹಾಗೂ ಹೊಣೆಗಾರಿಕೆಯನ್ನೂ ತಿಳಿಸಿ, ಅವರನ್ನು ರಾಷ್ಟ್ರನಿಷ್ಠ ಪ್ರಜರಾಗಿ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಿಸೋಣ. ಇದರಂತೆ ಸರಕಾರೀ ಹಾಗೂ ಸಾರ್ವಜನೋಪಯೋಗೀ ಕೆಲಸಗಳಲ್ಲಿ ಆಸ್ಥೆಯನ್ನೂ ನಾವು ಉಂಟುಮಾಡಿಸೋಣ. ಪಂಚವಾರ್ಷಿಕ ಯೋಜನೆ, ಜನಪದ ಅಭಿವೃದ್ಧಿಯ ಕಾರ್ಯಕ್ರಮ ಇತ್ಯಾದಿಗಳಲ್ಲಿ ಸಾಮಾನ್ಯ ಜನಗಳು ಹೆಚ್ಚು ಹೆಚ್ಚು ಮನಸ್ಸು ಹಾಕುವಂತೆ ನೋಡಿಕೊಂಡರೆ ದೇಶಾಭ್ಯುದಯದಲ್ಲಿ ಅವರ ಉತ್ಸಾಹ ಉತ್ತೇಜಿಸಬಲ್ಲದು. ಆರೋಗ್ಯ, ನೈರ್ಮಲ್ಯ ರಕ್ಷಣೆ ಮತ್ತು ವೈದ್ಯಕೀಯ ಅನುಕೂಲತೆಗಳ ಬಗ್ಗೆಯೂ ನಾವು ಸಾಕಷ್ಟು ಹೆಚ್ಚು ದಕ್ಷತೆಯನ್ನು ತೋರಿಸಬಲ್ಲೆವು; ಅವಶ್ಯವಿದ್ದಲ್ಲಿ ಮಾಹಿತಿಯನ್ನು ದೊರಕಿಸಿಕೊಡಬಲ್ಲೆವು. ಮುಖ್ಯವಾಗಿ ಪಂಚವಾರ್ಷಿಕ ಯೋಜನೆಯ ಕುರಿತು ನಾಗರಿಕರಲ್ಲಿ ಸ್ಫೂರ್ತಿಯನ್ನು ತುಂಬ ಬಲ್ಲೆವು. ಯೋಜನೆಯಂತೆ ಅಧಿಕ ಆಹಾರ ಬೆಳೆಯುವುದರಿಂದ ಮಾತ್ರ ನಾವು ರಾಜಕೀಯ ದಾಸ್ಯದಂತೆ ಆರ್ಥಿಕ ದಾಸ್ಯವನ್ನೂ ದೂರೀಕರಿಸುವುದು ಸಾಧ್ಯ. ಈ ಯೋಜನೆಗೆ ಹಣದ ಅಭಾವ ಕಂಡುಬರುತ್ತಿರುವುದರಿಂದ ಉಳಿತಾಯದ ಪ್ರವೃತ್ತಿ ಪ್ರೋತ್ಸಾಹನೆಯನ್ನು ನೀಡುವ ಕೆಲಸವು ನಡೆಯಬೇಕು. ಯೋಜನೆಯು ಈಗಿರುವಂತೆ ಯೋಜನಾ ಆಯೋಗದಿಂದ ಯಂತ್ರಿಸಲ್ಪಡುತ್ತಿದ್ದರೂ ಅದು ಸ್ಥಿರರೂಪವನ್ನೇನು ತಡೆದಿಲ್ಲ. ಮುಖ್ಯವಾಗಿ ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲೆಯ ಪರಿಸ್ಥಿತಿ ಅವಶ್ಯಕತೆಗಳನ್ನು ಅನುಸರಿಸಿಯೇ ರೂಪಿಸುವುದಕ್ಕೆ ಯೋಜನಾ ಆಯೋಗ ಸಾರಿ ಕಲ್ಪಿಸಿದೆ. ಕಾಂಗ್ರೆಸ್ ಕಾರ್ಯಕರ್ತರು ಈ ಯೋಜನೆಗಳ ಕುರಿತು, ಸಂಬಂಧಿಸಿದ ಸರಕಾರೀ ವರ್ಗಕ್ಕೆ ಯೋಗ್ಯ ಸಲಹೆ ಸೂಚನೆಗಳನ್ನಿತ್ತು, ಜನರಲ್ಲಿ ಆಸಕ್ತಿಯನ್ನು ಉಂಟುಮಾಡಿಯೂ ನೆರವೀಯಬಲ್ಲರು.

೦೦ ೦೦

ಇವೆಲ್ಲವುಗಳಂತೆ, ಪಾನಪ್ರತಿಬಂಧ, ಗೋಸೇವೆ, ಅಸ್ಪೃಶ್ಯತೆಯ ನಿರ್ಮೂಲನ, ಹರಿಜನ ಹಾಗು ಆದಿವಾಸಿಗಳ ಉದ್ಧಾರ, ರೈತ ಹಾಗೂ ಕೂಲಿಕಾರರ ಯೋಗಕ್ಷೇಮ, ಆಕಸ್ಮಿಕ ದುರ್ಘಟನಾ ಪ್ರಸಂಗದಲ್ಲಿ ನೆರವು, ರಾಷ್ಟ್ರಭಾಷೆಯ ಪ್ರಚಾರ ಇತ್ಯಾದಿ ಹತ್ತು ಹಲವು ಕೆಲಸಗಳ ಹೊಣೆಯನ್ನು ಕಾಂಗ್ರೆಸು ಕಾರ್ಯಕರ್ತರು ಹೊತ್ತು, ಯಶಸ್ವಿಯಾಗಿ ನಿರ್ವಹಿಸಬೇಕು. ಗೋಸೇವೆಯನ್ನು ರಾಜಕೀಯ ಮಹತ್ವಕೊಟ್ಟು, ಅಥವಾ ಜಾತೀಯ ದೃಷ್ಟಿಯಿಂದ ವಿವೇಚಿಸುವುದು ದಡ್ಡತನ ಮಾತ್ರವಲ್ಲ ಅಪಾಯಕಾರಿಯೂ ಹೌದು: ಗೋಸೇವೆಯನ್ನು ನಾವು ಕೃಷಿಗೆ ಜಾನುವಾರುಗಳಿಂದ ದೊರಕುವ ಪ್ರಯೋಜನವನ್ನು ಗಮನಿಸಿ, ಮಾಡತಕ್ಕದ್ದು. ಸುಧಾರಿತ ರೀತಿನೀತಿಗಳನ್ನು ಕೃಷಿಪದ್ಧತಿಯಲ್ಲಿ ನಾವು ಅನುಸರಿಸಬಹುದು. ಹಾಗೆಂದು ಎತ್ತುಗಳ ಜಾಗಕ್ಕೆ ಟ್ರಾಕ್ಟರು ಭೂತವನ್ನು ಆಹ್ವಾನಿಸುವುದು ಮಾತ್ರ ಮೂರ್ಖತನ. ಟ್ರಾಕ್ಟರು ನಿರುದ್ಯೋಗದ ಹಾವಳಿಯನ್ನು ಮಾತ್ರ ಹೆಚ್ಚಿಸುವುದಲ್ಲ—ಜಾನುವಾರುಗಳಿಂದ ಸಿಗುವ ಅನೇಕ ಉಪಯುಕ್ತ ವಸ್ತುಗಳನ್ನು ನೀಡದ ಯಂತ್ರವೆಂಬುದನ್ನು ಸ್ಮರಿಸಬೇಕು. ಅದು ಹಾಲು ಕೊಡುವುದಿಲ್ಲ, ಗೊಬ್ಬರವನ್ನು ಒದಗಿಸುವುದಿಲ್ಲ. ಆದ ಕಾರಣ ಸಾಧ್ಯವಿರುವಷ್ಟು ಹೆಚ್ಚಾಗಿ ಈಗಿನ ಪಶು ಸಂಪತ್ತನ್ನು ನಾವು ಉಳಿಸಬೇಕು. ಇದರಂತೆ ಪಾನ ಪ್ರತಿಬಂಧವನ್ನು ಸಹಾನುಭೂತಿಯಿಂದ ನೋಡಬೇಕು. ಬ್ರಿಟಿಷರು ಅಬಕಾರಿ ಆದಾಯವನ್ನು ಶಿಕ್ಷಣದ ವೆಚ್ಚಕ್ಕೋಸ್ಕರ ವ್ಯಯಿಸುತ್ತೇವೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದರು. ಆದರೆ ಈ ಸಮಾಧಾನ ಕೇವಲ ಪೊಳ್ಳು: ಕುಡಿದು ಅಮಲೇರಿದವನಿಗೆ ಸಾವಿರ ಸುಭಾಷಿತಗಳನ್ನು ಹೇಳಿದರೂ ಪ್ರಯೋಜನವುಂಟೇ? ಎಂದಮೇಲೆ, ಕುಡುಕತನಕ್ಕೆ ಪ್ರೋತ್ಸಾಹಕೊಟ್ಟು, ಅದರಿಂದ ಬಂದ ಹಣವನ್ನು ಜನಹಿತಕ್ಕಾಗಿ ಉಪಯೋಗಿಸುತ್ತೇವೆ ಎನ್ನುವುದು ಕೇವಲ ಭ್ರಮೆ. ಕಾಂಗ್ರೆಸಿಗರು ಪಾನ ಪ್ರತಿಬಂಧದ ಯಶಸ್ಸನ್ನು ಧ್ಯೇಯವಾಗಿಟ್ಟು ದುಡಿಯಬೇಕು. ಪಾನ ಪ್ರತಿಬಂಧನಿಂದ ಹೆಂಗಸರು ತುಂಬ ಲಾಭ ಹೊಂದಿರುವರು. ನಮ್ಮ ದೇಶದಲ್ಲಿ ಸ್ತ್ರೀಯ ಸ್ಥಾನ ಮಹತ್ವ ಇನ್ನಾವ ಯಾವ ದೇಶಕ್ಕಿಂತಲೂ ಹೆಚ್ಚು. ಹಾಗೆ ಆದರ ತೋರಿಸುವ ನಾವು, ನಮ್ಮ ಚಟುವಟಿಕೆಗಳಲ್ಲಿ ಅವರ ಸಹಕಾರವನ್ನು ಆದಷ್ಟು ಹೆಚ್ಚು ಪಡೆಯಲು ಯತ್ನಿಸೋಣ. ಕಾಂಗ್ರೆಸು ಸಮಿತಿಗಳಲ್ಲಿ, ಸ್ಥಳೀಯ ಚಟುವಟಿಕೆಯ ಕೇಂದ್ರಗಳಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಪ್ರಾಶಸ್ತ್ಯ ನೀಡೋಣ.

—ಈ ಮಾದರಿ ಅತ್ಯಮೂಲ್ಯವಾದ ಸಲಹೆಗಳು ಶ್ರೀಮನ್ನಾರಾಯಣ ಅಗರ್ವಾಲರ ಪುಸ್ತಕದಲ್ಲಿ ಹೇರಳವಾಗಿರುತ್ತವೆ. ಅವುಗಳನ್ನು ಮನದಟ್ಟುಮಾಡಿಕೊಂಡು ಕಾಂಗ್ರೆಸ ಕಾರ್ಯಕರ್ತರು ಅನುಷ್ಠಾನದಲ್ಲಿ ತಂದುಕೊಳ್ಳುವುದು ರಾಷ್ಟ್ರಹಿತದ ದೃಷ್ಟಿಯಿಂದ ಅತ್ಯಂತ ಅಗತ್ಯವೂ ಅಪೇಕ್ಷಣೀಯವೂ ಆಗಿರುತ್ತದೆ. ಸರಳ ಹಾಗೂ ಸುಂದರವಾದ ಭಾಷೆಯಲ್ಲಿ ಬರೆದಿರುವ ಈ ಗ್ರಂಥ ಪಠಣದಿಂದ ಸಾಮಾನ್ಯ ನಾಗರಿಕರೂ ನಮ್ಮ ನಾಡಿನ ಒಡಮೂಡಿದ ಸಮಸ್ಯೆಗಳ ಮತ್ತು ಅವುಗಳ ಪರಿಹಾರೋಪಾಯಗಳ ಪರಿಚಯವನ್ನು ಮಾಡಿಕೊಳ್ಳಲು ಸಾಧ್ಯವಿದೆ. ನಾವೆಲ್ಲರೂ ಇಂದಿನ ಅವಶ್ಯಕತೆಯನ್ನು ಸ್ಪಷ್ಟವಾಗಿ ಬಿಂಬಿಸಿರುವ ಈ ಪುಸ್ತಕದ ಸಲಹೆ ಸೂಚನೆಗಳ ಅವಿರತ ಪ್ರಯೋಜನವನ್ನು ಪಡೆಯೋಣ.*

*CONSTRUCTIVE PROGRAMME FOR CONGRESSMEN-by S. N. AGARWAL Published by the All India Congress Committee, 7 Gantar Mantar Road, New Delhi. Price Eight annas

ಮಂಗಳೂರು

ಮಾನ್ಯ ಎ. ಬಿ. ಶೆಟ್ಟರಿಗೆ ನಗರ ಸಭೆಯ ಮನವಿ — ಮದ್ರಾಸು ಸರಕಾರದ ಆರೋಗ್ಯ ಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಶೆಟ್ಟರಿಗೆ ಇದೇ ತಾ. 1ರಂದು ಮಂಗಳೂರು ನಗರ ಸಭೆಯ ಕಡೆಯಿಂದ ಒಂದು ಮನವಿ ಅರ್ಪಿಸಲಾಯಿತು.

ಮಾನ್ಯ ಶ್ರೀ ಶೆಟ್ಟರು ಉತ್ತರವೀಯುತ್ತ ನಗರ ಸಭೆಗಳ ಕರ್ತವ್ಯ ಮತ್ತು ಅವುಗಳ ತಳಿತ ಕುರಿತು ಮಾತನಾಡಿ, ಮಂಗಳೂರು ನಗರವು ಮದ್ರಾಸು ರಾಜ್ಯದ ಇತರ ಯಾವುದೇ ನಗರಕ್ಕೆ ಕಡಿಮೆಯಿಲ್ಲವೆಂದು ತನ್ನ ಅನುಭವದಿಂದ ಹೇಳಿದರು. ಇತರ ಕಡೆಗಳಲ್ಲಿ ಕುಡಿಯಲು ಸಾಕಷ್ಟು ನೀರಿಲ್ಲದೆ ಜನರು ಪೇಚಾಡುತ್ತಿರುವುದನ್ನು ತಾನು ಸ್ವತಃ ನೋಡಿರುವೆನು. ಫೈಲೇರಿಯಾ ರೋಗವು ಮಂಗಳೂರಿನಲ್ಲಿ ಮಾತ್ರವಲ್ಲ, ಹಲವು ಕಡೆಗಳಲ್ಲಿರುವುದನ್ನು ತಾನು ನೋಡಿದ್ದೇನೆ. ಆದರೂ ನಲ್ಲಿ ನೀರಿನ ಸೌಕರ್ಯವಿಲ್ಲದ ನಗರ ಸಭೆಗಳಲ್ಲಿ ಅತಿ ದೊಡ್ಡ ಮುನಿಸಿಪಾಲಿಟಿಯಾದ ಮಂಗಳೂರಿಗೆ ನಲ್ಲಿನೀರಿನ ಸಂಬಂಧವಾಗಿ ಸರಕಾರ ಗ್ರಾಂಟನ್ನು ಕೊಟ್ಟಿದೆ ಎಂದು ಹೇಳಿದರು. ಮನವಿಯಲ್ಲಿ ಹೇಳಲಾದ ಇತರ ಬೇಡಿಕೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಾನು ವಿಚಾರ ವಿನಿಮಯ ಮಾಡುವುದಾಗಿ ಆಶ್ವಾಸನೆಯಿತ್ತರು.

ತದನಂತರ ಅಸಿಸ್ಟೆಂಟ್ ಡೈರೆಕ್ಟರ್ ಒಫ್ ಪಬ್ಲಿಕ್ ಹೆಲ್ತ್, ಮದ್ರಾಸು, ಅವರು ಫೈಲೇರಿಯಾ ರೋಗವನ್ನು ಹೇಗೆ ತಡೆಹಿಡಿಯಲು ಮತ್ತು ನಿವಾರಿಸಲು ಸಾಧ್ಯವಿದೆ ಎಂಬ ದರ ಕುರಿತು ವಿವರಿಸಿ ಭಾಷಣಮಾಡಿದರು. ಆ ಮೇಲೆ ಮಾನ್ಯ ಮಂತ್ರಿಗಳು ನಗರಸಭಾ ಕಚೇರಿಯ ವಠಾರದಲ್ಲಿ ಎರಡು ಸಸಿಗಳನ್ನು ನೆಟ್ಟು ವನಮಹೋತ್ಸವವನ್ನು ಆರಂಭಿಸಿದರು.

ದುಃಖ ಸೂಚಕ ಸಭೆ— ಲೇಖಕ ಹಾಗೂ ಪತ್ರಿಕೋದ್ಯಮಿಯಾಗಿದ್ದ ಶ್ರೀ ಕೆ. ಸದಾಶಿವ, ಅವರ ಅಕಾಲ ನಿಧನದ ಕುರಿತು ಸಂತಾಪ ಸೂಚಕ ಸಭೆಯು ಶ್ರೀ ಪಿ. ಎಮ್. ನಾರಾಯಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎಸ್. ಸಿ. ಶಾಸ್ತ್ರಿ ಮೊದಲಾದವರು ನುಡಿನಮನ ಸಲ್ಲಿಸಿದರು. ದಿವಂಗತರು ಬರೆದಿರುವ ಎರಡು ಕೃತಿಗಳನ್ನು ಮುದ್ರಿಸುವ ಬಗ್ಗೆ ನಿಧಿ ಸಂಗ್ರಹಿಸಲು 'ಸ್ಮಾರಕ ಸಮಿತಿ' ಯೊಂದು ರಚಿಸಲ್ಪಟ್ಟಿತು.

ಮನವಿ—ಇದೇ ತಾ 1ರಂದು ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರಿಗೆ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ, ಕನಾರ್ಟಿಕ ಚೇಂಬರ್ ಆಫ್ ಎಗ್ರಿಕಲ್ಚರ್, ಮತ್ತು ಪ್ರಜಾ ಸೋಶಲಿಸ್ಟ್ ಪಾರ್ಟಿ ಇವುಗಳ ಕಡೆಯಿಂದ ಮನವಿಯೊಂದನ್ನು ಅರ್ಪಿಸಲಾಯಿತು. ಅದರಲ್ಲಿ ಆಸ್ಪತ್ರೆಯನ್ನು ಒಂದು ದೊಡ್ಡ ಆಸ್ಪತ್ರೆಯನ್ನಾಗಿ ... ಮಾಡಬೇಕೆಂದೂ, ಫೇರ್ ಪ್ರೈಸ್ ಡಿಪೋಗಳನ್ನು ಹೆಚ್ಚಿಸಬೇಕೆಂದೂ, ಅಕ್ಕಿ ಹಂಚುಗೆಯನ್ನು ಏರಿಸಬೇಕೆಂದೂ, ಕೇಳಿಕೊಳ್ಳಲಾಗಿತ್ತು. ಶ್ರೀಗಳಾದ ಬಿ ಆರ್. ಕರ್ನಾಡ, ಎ. ರಾಕರಾಪ್ಪ, ಬಿ. ಬಿ. ಶೆಟ್ಟಿ, ಕೆ. ಆರ್. ಆಚಾರ್, ಎಫ್. ಎಕ್ಸ್. ಡಿ. ಪಿಂಟೊ, ಕೆ. ಎಸ್. ಅಳ್ವರು ಇವರು ಡೆಪ್ಯುಟೇಶನಲ್ಲಿದ್ದರು.

ಇಂಡಿಯನ್ ನೇವಿಗೆ ಆಯ್ಕೆ— ಎಸ್. ಆರ್. ಎಸ್. ಬೋಟಿನ ಸಿಪಾಯಿ ಸೀನಿಯರ್ ಇಂಟರಿನಲ್ಲಿ ಕಲಿಯುತ್ತಿದ್ದ ಶ್ರೀ ಬಾಪುರಾಜಸ್ವಾಮಿಯವರು ಇದೇ ಜೂನ್ ತಿಂಗಳಲ್ಲಿ ಇಂಡಿಯನ್ ನೇವಿಗೆ ಸಿಲೆಕ್ಟ್ ಆಗಿ ಕೊಚ್ಚಿನ್ ನೇವಲ್ ಬೇಸಿಗೆ ಟ್ರೇನಿಂಗಿಗೆ ಹೋಗಿ ಇದ್ದಾರೆ. ನವಂಬರ ತಿಂಗಳಲ್ಲಿ Devonshireಗೆ ಹೆಚ್ಚಿನ ತರಬೇತಿಗೆ ಕಳುಹಿಸಲ್ಪಡುವರು. ಇವರ ತಂದೆ ತಾಳಮನೆ ಕವಾಡಿ ರಘುರಾಜ ರೆಗ್ಯು 1914ನೇ ಯುದ್ಧದಲ್ಲಿ ಭಾಗವಹಿಸಿ ಬಂದಿರು. ಮೊಸೊಪಟೇಮಿಯಾದಲ್ಲಿ ಸರ್ವಿಸು ಮಾಡಿರುತ್ತಾರೆ. ಅಲ್ಲದೆ ಶ್ರೀ ಶೈಗಳು ಮಂಗಳೂರು ಸೆಂಟ್ರಲ್ ಹೈಸ್ಕೂಲಿನಲ್ಲಿ ಶ್ರೀ ಪಿನಾಲ್ ಅಧ್ಯಾಪಕರ ಸಹಪಾಠಿಗಳಾಗಿದ್ದರೆಂದು ತಿಳಿದು ಬರುತ್ತದೆ.

ದಿ| ವೆಂಕಟೇಶ ಪೈಗಳ ತೈಲಚಿತ್ರ ಅನಾವರಣವು—ಕಳೆದ ತಾ. 25ರಲ್ಲಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ದಿ| ಪೈಗಳು ಸಲ್ಲಿಸಿದ ಸಾರ್ವಜನಿಕ ಸೇವೆಯನ್ನು ಕೊಂಡಾಡಿ ಅವರ ತಿಳಿಯಾಗಿ ಹೇಳಲ್ಪಟ್ಟ ಮಾರ್ಗದರ್ಶನವನ್ನು ಮಾಡಿದವರೆಂದು ಮಂತ್ರಿಗಳು ಹೇಳಿದರು. ಶ್ರೀ ಅಪ್ಪು ರಾಯರು ಸ್ವಾಗತ ಭಾಷಣವನ್ನು ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ. ... ದಿ| ಪೈಗಳ ಆದರ್ಶ ಜೀವನದ ಕುರಿತಾದ ಭಾಷಣ ... ಮಾಡಿದರು. ಶ್ರೀ ಎಂ. ಮಾಧವ ರಾಯರು ಆಭಾರ ಮನ್ನಿಸಿದರು.

ಕ್ಲಾರ್ಕ್ ಟವರಿಗೆ ಸಿಡಿಲು—ಕೇಂದ್ರ ಸ್ಟೇಶನ ಸಮೀಪದ ಸ್ಟೇಟ್ ಬ್ಯಾಂಕ್ ಇರುವ ಕ್ಲಾರ್ಕ್ ಟವರಿಗೆ ತಾ 2ರಲ್ಲಿ ಸಿಡಿಲು ಹೊಡೆದು ಅದರ ಗೋಡೆ ಒಡೆದಿದ್ದು ಗಡಿಯಾರಕ್ಕೆ ಹಾನಿಯಾಗಿರುವುದಲ್ಲದೆ ಕಟ್ಟಡಕ್ಕೂ ಬಿರುಕು ಬಿಟ್ಟಿದೆ.

ಒಕ್ಕಲು ಹಿತ ಮಸೂದೆ—ನಮ್ಮ ಜಿಲ್ಲೆಗೆ ಒಕ್ಕಲು ಹಿತ ಮಸೂದೆ ಬೇಕೆಂದು ಶ್ರೀಗಳಾದ ಕೆ. ಆರ್. ಕಾರಂತ, ಬಿ. ಯಸ್. ಕಕ್ಕಿಲ್ಲಾಯ, ಡಿ. ಮೋಹನ ರಾವ್ ಮುಂತಾದವರಿಂದ ಸಹಿ ಇರುವ ಟೆಲಿಗ್ರಾಮು ಕಳೆದ ತಾ 27ರಲ್ಲಿ ಮುಖ್ಯಮಂತ್ರಿ ರಾಜಗೋಪಾಲಾಚಾರ್ಯರನ್ನು ಮದ್ರಾಸಿನಲ್ಲಿ ಕಂಡಾಗ ಈ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಲಾಗುವುದೆಂದು ಅವರು ಭರವಸೆ ಕೊಟ್ಟರೆಂದು ತಿಳಿದು ಬರುತ್ತದೆ.

ನಗರ ಕಾಂಗ್ರೆಸ್ ಕಮಿಟಿಯು—ತಾ 1ರಲ್ಲಿ ಶ್ರೀ ಬಿ. ಆರ್. ಕರ್ನಾಡ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎಸ್. ಎಸ್. ಶೆಟ್ಟಿಯವರ ಅಕಾಲ ನಿಧನಕ್ಕಾಗಿ ದುಃಖ ಸೂಚಕ ನಿರ್ಣಯವನ್ನು ಮಾಡಿತು. ಅಲ್ಲದೆ ಮೃತರ ಕುಟುಂಬ ಬಂಧುವರ್ಗದವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿತು.

ಪ್ರತಿ ಮನೆಯಲ್ಲೂ ಇರಲೇಬೇಕಾದ ಉಪಯುಕ್ತ ಪುಸ್ತಕ—
ಡಾಕ್ಟರ್ ವಿ. ಆರ್. ಕೊರಡ್ಕಲ್ಲರಿಂದ ರಚಿತವಾದ
ಮನೆ ಮದ್ದು
ಸಾಧಾರಣ ಕಾಯಿಲೆಗಳಿಗೆ ... ಮದ್ದು ಮಾಡಿಕೊಳ್ಳುವ
... ಉಪಯುಕ್ತ ...
ಗರ್ಭರಕ್ಷಣೆ, ಬಾಲಚಿಕಿತ್ಸೆ, ... ಸುಲಭ
ವಾಗಿ ತಿಳಿಸಲಾಗಿದೆ. ಬೆಲೆ: ರೂ. 2—8—0
...

ವಿಧಾಯಕ ಚಟುವಟಿಕೆಗಳ ಮೀಮಾಂಸೆ.

(೩ನೇ ಪುಟದಿಂದ)

ವಿಧವಾಗಿರುವ ಈ ಕಾರ್ಯಕ್ರಮಗಳಲ್ಲಿ ಕಾಂಗ್ರೆಸಿಗರು ತಮ್ಮ ಹೃದಯಕ್ಕೆ ಅತ್ಯಂತ ಪ್ರಿಯವಾದುದನ್ನು ಆರಿಸಿ, ಅವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಶ್ರದ್ಧಾಪೂರ್ವಕ ಪ್ರಯತ್ನ ಮಾಡಿದರೆ--ದೇಶಕ್ಕೆ ಕ್ಷೇಮವುಂಟು, ಕಲ್ಯಾಣವುಂಟು.

೦೦ ೦೦

ಕಾಂಗ್ರೆಸ ಕಾರ್ಯದರ್ಶಿಗಳು ವಿಧಾಯಕ ಕಾರ್ಯಕರ್ತರಿಗೆ ೨೪ ಜನ ಹಿತದ ಕೆಲಸಗಳನ್ನು ಹೃದಯಂಗಮವಾಗಿ ವಿವರಿಸಿರುವರು. ಭೂದಾನ ಯಜ್ಞ ಅವುಗಳಲ್ಲೊಂದು. ಭಾರತದಲ್ಲಿ ಲಕ್ಷಾಂತರ ಜನರಿಗೆ ನಾವು ಉದ್ಯೋಗವನ್ನು ಕಲ್ಪಿಸಿಕೊಡುವುದು ಅತ್ಯಂತ ಜರೂರಾದ ಮತ್ತು ತುಂಬ ಮಹತ್ವದ ಪ್ರಶ್ನೆ. ನಮ್ಮದು ಕೃಷಿ ಪ್ರಧಾನವಾದ ದೇಶ; ಮತ್ತು ಪ್ರತಿಶತ ೮೦ ಜನರು ಹಳ್ಳಿಗಳಲ್ಲಿಯೇ ನೆಲಸಿರುವರು. ಇವರಲ್ಲಿ ಸುಮಾರು ನಾಲ್ಕೂವರೆ ಕೋಟಿ ಜನರು ಭೂಮಿ ಇಲ್ಲದ ಕೆಲಸಗಾರರು. ಇವರಿಗೆ ಸ್ವಂತ ಭೂಮಿಯನ್ನು ನಾವೆಲ್ಲರೂ ಒಟ್ಟಾಗಿ ಪ್ರಯತ್ನಿಸಿ, ಒದಗಿಸಿಕೊಟ್ಟ ಪಕ್ಷದಲ್ಲಿ, ಅಷ್ಟೂ ಜನರ ಬಾಳ್ವೆಗೆ ಹೊಸ ರೂಪ ಬರುತ್ತದೆ. ಭಾರತದಲ್ಲಿ ಜಮೀನುದಾರ, ಜಾಗೀರುದಾರ ಮುಂತಾದವರ ಕೈಯಲ್ಲಿ ಹೇರಳ ಭೂಮಿ ಇದೆ. ಅವುಗಳನ್ನು ಪಡೆದುಕೊಂಡು, ಈ ಭೂಮಿ ಇಲ್ಲದ ಪ್ರಜೆಗಳಲ್ಲಿ ಹಂಚಲಿಕ್ಕೆ ಸಾಧ್ಯವುಂಟು. ಹಾಗೆಂದು ನಮ್ಮ ಘಟನೆಯಂತೆ ಈ ರೀತಿ ಸಾರ್ವಜನಿಕ ಉಪಯೋಗಕ್ಕಾಗಿ ಭೂಮಿ ಪಡೆಯುವಾಗ, ಅದರ ಒಡೆಯರಿಗೆ ಪರಿಹಾರ ಕೊಡಬೇಕಾಗುವುದು. ಈ ಪರಿಹಾರದ ಹಣವನ್ನು ನಾವೆಲ್ಲಿಂದ ಒದಗಿಸಬಲ್ಲೆವು? ಬದಲಿಗೆ, ಘಟನೆಗೆ ತಿದ್ದುಪಡಿ ಮಾಡಿ, ಪರಿಹಾರ ಕೊಡದೆನೇ ಭೂಮಿಯನ್ನು ಕಸಿದುಕೊಂಡು ಹಂಚಿದರೆ—ಆಗ ಕ್ಷೋಭೆ ಭುಗಿಲೇಳಬಹುದು. ಈ ತೊಂದರೆತಾಪತ್ರಯಗಳನ್ನು ಪರಿಹರಿಸುವುದಕ್ಕಾಗಿ ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಜ್ಞದ ಉಪಾಯವನ್ನು ಅನ್ವೇಷಿಸಿದರು. ದೇಶದೊಳಗೆ ಮಾತ್ರವಲ್ಲ—ವಿದೇಶಗಳಲ್ಲಿ ಕೂಡ ವಿನೋಬಾಜೀಯ ಚಳುವಳಿಗೆ ಪ್ರೋತ್ಸಾಹ ಮತ್ತು ಬೆಂಬಲ ದೊರಕಿರುತ್ತದೆ. ಏಕೆಂದರೆ ಭೂಮಿಯ ಹಸಿವು ಭಾರತದಂತೆ, ಬೇರೆಡೆಯಲ್ಲೂ ಸಮವಾಗಿ ಇದೆ. ಭೂದಾನ ಯಜ್ಞವು ಅಹಿಂಸಾತ್ಮಕ ಕ್ರಾಂತಿಯನ್ನೆ ಆದರ್ಶವಾಗಿಟ್ಟುಕೊಂಡಿರುವುದರಿಂದ, ಮತ್ತು ಮನುಷ್ಯನ ಒಳ್ಳೆಯತನಕ್ಕೆ ಪೋಷಕವಾಗಿಕೊಂಡು ಉತ್ತೇಜನ ನೀಡುವುದರಿಂದ--ಕಾಂಗ್ರೆಸು ಕಾರ್ಯಕರ್ತರು ಈ ಚಳುವಳಿಯನ್ನು ಅವಶ್ಯವಾಗಿ ಬೆಂಬಲಿಸಬೇಕು. ವಿನೋಬಾಜೀಯವರು ರಚಿಸಿದ ಭೂದಾನ ಸಮಿತಿಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು, ಈ ಮಹೋದ್ಯಮದಲ್ಲಿ ಕಾಂಗ್ರೆಸಿಗರು ಸಹಭಾಗಿಗಳಾಗಬೇಕು ಮಾತ್ರವಲ್ಲ-- ತಮ್ಮ ಕೈಯಲ್ಲಿಯೇ ದೊಡ್ಡ ಹಿಡುವಳಿಗಳನ್ನು ಇಟ್ಟುಕೊಂಡಿರುವ ಕಾಂಗ್ರೆಸಿಗರು, ಅವುಗಳನ್ನು ಬಡವರಿಗೆ ಹಂಚಿಕೊಟ್ಟು ಭೂದಾನ ಯಜ್ಞಕ್ಕೆ ತಮ್ಮ ಪಾಲನ್ನು ಸಮುಚಿತ ಸಲ್ಲಿಸಬೇಕು. ತನ್ನಲ್ಲಿ ಇಟ್ಟುಕೊಂಡವನು, ಇತರರನ್ನು ನೀಡಿರೆಂದು ಕೇಳುವುದು ಹಾಸ್ಯಾಸ್ಪದವಾದುದರಿಂದ ಅಗ್ರವಾಲರು ಈ ರೀತಿ ಸ್ಪಷ್ಟವಾಗಿ ಕಾಂಗ್ರೆಸ ಕಾರ್ಯಕರ್ತರನ್ನು ಕೇಳಿಕೊಂಡಿರುವರು. ವಿನೋಬಾಜೀಗೆ ಮುಂದಿನ ಮಾರ್ಚಿಯೊಳಗೆ ೨೫ ಲಕ್ಷ ಎಕ್ರೆ, ಹಾಗೂ ೧೯೫೭ ನೇ ವರ್ಷಾಂತ್ಯದೊಳಗೆ ಐದು ಕೋಟಿ ಎಕ್ರೆ ಭೂಮಿದಾನ ಪಡೆಯುವ ಬಯಕೆಯುಂಟು. ಅದನ್ನು ನೆರವೇರಿಸಲು ಕಾಂಗ್ರೆಸಿಗರು ಶ್ರಮಿಸುವುದು ಕರ್ತವ್ಯ.

೦೦ ೦೦

ಹೀಗೆ ಭೂಮಿ ಇಲ್ಲದ ಕೂಲಿಕಾರರ ಪ್ರಶ್ನೆಯನ್ನು ಅಹಿಂಸಾತ್ಮಕ ರೀತಿಯಿಂದ ನಿವಾರಿಸಿದರೆ ಸಾಲದು--ಭಾರತದಲ್ಲಿರುವ ೨೫ ಕೋಟಿ ಕೃಷಿಕರಲ್ಲಿ ಯಾರೊಬ್ಬರೂ ಪೂರ್ಣೋದ್ಯೋಗ ಪಡೆದಿಲ್ಲ. ಅವರಿಗೆ ಪೂರ್ಣೋದ್ಯೋಗ ಕೈಗೊಳ್ಳಲು ಅವಕಾಶ ದೊರೆತಿಲ್ಲ. ಈ ಕೊರತೆ ನೀಗಿಸುವುದಕ್ಕೆ ಕೈಮಗ್ಗ ಹಾಗು ಗೃಹೋದ್ಯಮಗಳನ್ನು ಬಳಸಬೇಕೆಂದು ಹೆಚ್ಚಿನವರ ಅಭಿಪ್ರಾಯವಿದೆ. ಈಚೆಗೆ ಸರಕಾರವು ಗೃಹೋದ್ಯಮ ಹಾಗೂ ಖಾದಿಯನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ತುಂಬ ಮಹತ್ವದ ಕ್ರಮಗಳನ್ನು ಕೈಗೊಂಡಿರುತ್ತದೆ. ಯಾಂತ್ರಿಕ ಸಲಕರಣೆಗಳ ಬಾಹುಳ್ಯದಿಂದ ಸಿದ್ಧ ಸರಕುಗಳ ಬೆಲೆಯು ತಗ್ಗುತ್ತದೆ. ಆದೇ ವ್ಯಕ್ತಿ ತಯಾರಿಸಿದ ವಸ್ತುಗಳ ಬೇಡಿಕೆಯು ಅದರ ತುಟ್ಟಿ ಬೆಲೆಯಿಂದಾಗಿ ಕುಸಿಯುತ್ತದೆ. ಈ ವಿಪರ್ಯಾಸವನ್ನು ಸಮನ್ವಯ ಮಾಡಿಕೊಳ್ಳುವುದಕ್ಕೆ ಇಂದಿನ ಎಲ್ಲ ವಿಚಾರಶೀಲರೂ ಪ್ರಯತ್ನಪಡಬೇಕು. ಅಗ್ರವಾಲರು ಗೃಹೋದ್ಯಮಗಳಲ್ಲಿ ಸಿದ್ಧವಾದ ಸರಕುಗಳಿಗೆ ನಾವು ಕೊಡುವ ಬೆಲೆ ಹೆಚ್ಚೆಂದು ಕಾಣುವುದು ಸ್ವಾಭಾವಿಕವೆಂದೂ, ಅದು ನ್ಯಾಯಬದ್ಧವಾದ ಬೆಲೆಯೇ ಆಗಿದೆ ಎಂದೂ ಹೇಳುತ್ತಾರೆ. ವಿದೇಶಗಳಲ್ಲಿ ನಿರುದ್ಯೋಗಿಗಳ ಹೊಟ್ಟೆ ಹೊರೆಯುವುದಕ್ಕಾಗಿ ಉದ್ಯೋಗಶೀಲರಾದವರು ತೆರಿಗೆ ಕೊಡಬೇಕಾಗುವ ಪ್ರಮೇಯವುಂಟು. ಆದುದರಿಂದ ನಾವು ಗೃಹೋದ್ಯಮದ ಸರಕುಗಳಿಗೆ ಹೆಚ್ಚು ಬೆಲೆ ಕೊಟ್ಟರೆ ಅಪ್ರತ್ಯಕ್ಷವಾಗಿ ಇಂಥ ತೆರಿಗೆಯನ್ನು ಪಾವತಿ ಮಾಡಿದಂತಾಗುವುದು. ತೆರಿಗೆ ಕಡ್ಡಾಯವಾಗಿದೆ. ಆದರೆ ತುಟ್ಟಿಯಾದ ಸರಕನ್ನು ಪಡೆದು ಕೊಳ್ಳುವುದೂ ಬಿಡುವುದು ನಮ್ಮ ಕೈಯಲ್ಲಿದೆ. ಗುಪ್ತದಾನಕ್ಕಾಗಿ ಹೆಸರಾದ ಭಾರತೀಯರು ಕೋಟ್ಯಾಂತರ ಜನರಿಗೆ ಅನ್ನ ಕೊಡುವ ಗೃಹೋದ್ಯಮಗಳನ್ನು ಬೆಂಬಲಿಸಲೇಬೇಕು; ಅನ್ಯಥಾ ನಮಗೆ ಉಳಿವಿನ ಮಾರ್ಗ ತೆರೆದಿಲ್ಲ; ಈ ದೃಷ್ಟಿಯಿಂದ ಗಾಂಧೀಜಿಯವರು ಪ್ರತಿಪಾದಿಸುತಿದ್ದ ಸ್ವದೇಶೀವ್ರತವೂ ಅನುಷ್ಠಾನ ಯೋಗ್ಯವಾಗಿರುತ್ತದೆ.

೦೦ ೦೦

ನಿರುದ್ಯೋಗದ ಪ್ರಶ್ನೆಯನ್ನು ನಾವು ಕೇವಲ ಸ್ವದೇಶೀ ವ್ರತಾವಲಂಬನದಿಂದ ಮಾತ್ರ ದೂರೀಕರಿಸಲಾರೆವು. ಇದಕ್ಕೆ ಶೈಕ್ಷಣಿಕ ಕ್ಷೇತ್ರದಲ್ಲಿ ಮೂಲಭೂತ ಕ್ರಾಂತಿ ನಡೆಯುವುದು ಪ್ರಧಾನಾವಶ್ಯಕತೆಯಾಗಿರುತ್ತದೆ. ನಮಗೊಂದು ಹೊಸತಾದ ಶೈಕ್ಷಣಿಕ ಯೋಜನೆ ಬೇಕೆಂದು ನಿರ್ಣಯಿಸಿ, ಅದನ್ನು ಸಂಶೋಧಿಸಿದ ಯಶಸ್ಸು ಮಹಾತ್ಮ ಗಾಂಧೀಯವರಿಗೆ ಸಲ್ಲುತ್ತದೆ. "ನಯೀ ತಾಲೀಮ" ಎಂಬುದಾಗಿ ಹೆಸರಾದ ಮೂಲ ಶಿಕ್ಷಣ ಯೋಜನೆಯು ನಮ್ಮ ಟೊಳ್ಳು ವಿದ್ಯೆಯ ಸ್ಥಾನದಲ್ಲಿ ಪ್ರತಿರೂಪಿಸಲು ಅತ್ಯಂತ ಯೋಗ್ಯವಾದ ಶಿಕ್ಷಣ ಪದ್ಧತಿಯಾಗಿರುತ್ತದೆ. ಕೇವಲ ಪಠ್ಯಪುಸ್ತಕಗಳನ್ನು ಉರು ಹಾಕಿಸುವ ಶಾಲಾ ಕಾಲೇಜುಗಳ ದಿನಗಳು ಮುಗಿದವೆಂದೂ, ಈಗ ರಚನಾತ್ಮಕ ಚಟುವಟಿಕೆಯನ್ನು ಕಲಿಸಿ, ತರಬೇತಿ ಕೊಡುವ ಶಾಲೆಗಳ ಆವಿರ್ಭಾವವಾಗಬೇಕೆಂದೂ ಅಗ್ರವಾಲರು ಹೇಳುತ್ತಾರೆ. ಸರಕಾರದವರು ಈ ದಿಸೆಯಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಿಲ್ಲ. ಎಲ್ಲಿಯೋ ಮದ್ರಾಸು ರಾಜ್ಯವೊಂದು ಈ ವರ್ಷದಿಂದ ಕ್ರಾಂತಿಕಾರಿ ಪದ್ಧತಿಯನ್ನು ಜ್ಯಾರಿಗೆ ತರಲು ನಿಶ್ಚಯಿಸಿದೆ. ಅದನ್ನು ವಿರೋಧಿಸಿ ಗುಲ್ಲೆಬ್ಬಿಸುವವರ ಬಾಂದಳ ನೋಡಿದರೆ, ಯೋಜನೆಯ ಯಶಸ್ಸಿನ ಬಗ್ಗೆ ಸಂದೇಹ ಒಡಮೂಡುತ್ತದೆ. ಕಾಂಗ್ರೆಸಿಗರು ಅವಶ್ಯವಾಗಿ ಮದ್ರಾಸು ಸರಕಾರದ ಯೋಜನೆಯನ್ನು ಸ್ವಾಗತಿಸಬೇಕು. ಅದು ಕಾರ್ಯಾನ್ವಿತಗೊಳ್ಳುವುದಕ್ಕೆ ಅಗತ್ಯವಿರುವ ಸಲಹೆ ಸೂಚನೆಗಳನ್ನು ಕೊಡಬೇಕು. ಮಾತ್ರವಲ್ಲ ಅಗ್ರವಾಲರು ಹೇಳುವಂತೆ, ತಾವೇ ಸ್ವತಃ ಯೋಗ್ಯ ರೂಪರೇಷೆಯನ್ನು ಹಾಕಿಕೊಂಡು ಮುಂದಿನ ಜನಾಂಗವೆನ್ನುವ ಇಂದಿನ ಮಕ್ಕಳಿಗೆ ಹೊಸ ಪದ್ಧತಿಯ ಶಿಕ್ಷಣವನ್ನು ನೀಡುವ ಸಾಹಸದಲ್ಲಿ ಪ್ರವೃತ್ತರಾಗತಕ್ಕದ್ದು. ಇದರ ಜೊತೆಗೆಯೇ ಮಾಡಬಹುದಾದ ಇನ್ನೊಂದು ಕೆಲಸವೆಂದರೆ-ಜನಶಿಕ್ಷಣ. ಮಕ್ಕಳಂತೆ, ದೊಡ್ಡವರ ಬುದ್ಧಿಯನ್ನೂ ವಿಕಸಿತಗೊಳಿಸಲು ನಾವು ಪ್ರಯತ್ನಶೀಲರಾಗೋಣ. ಜನ ಶಿಕ್ಷಣವು ಕೇವಲ ಅಕ್ಷರಾಭ್ಯಾಸಕ್ಕೆ ಸೀಮಿತವಾಗಿಲ್ಲ. ಒಂದು ರೀತಿ ವಿಚಾರಿಸಿದರೆ, ಅಕ್ಷರಾಭ್ಯಾಸಕ್ಕಿಂತ ಬೌದ್ಧಿಕ ಜ್ಞಾನಕ್ಕೆಯೇ ಹೆಚ್ಚು ಬೆಲೆ ಸಲ್ಲಬೇಕು. ರಾಜಕೀಯ ಹಾಗೂ ಸಾಮಾಜಿಕ ತಿಳುವಳಿಕೆಯನ್ನು ಮಾಡಿಕೊಡುವುದೇ ಜನಶಿಕ್ಷಣದ ಮುಖ್ಯೋದ್ದೇಶವಾಗಬೇಕು. ಹಾಗೆಂದು ಈ ಹೊಣೆಯನ್ನು ವೇತನ ಪಡೆಯುವ ಅಧ್ಯಾಪಕರನ್ನು ನೇಮಿಸಿ ನಾವು ನಿರ್ವಹಿಸಲಾರೆವು. ಸುಶಿಕ್ಷಿತ ತರುಣ ತರುಣಿಯರು ಸ್ವೇಚ್ಛೆಯಿಂದ ಜನಶಿಕ್ಷಣ ಕಾರ್ಯದಲ್ಲಿ ಮಗ್ನರಾದರೆ ಮಾತ್ರ ಈ ದಿಸೆಯಲ್ಲಿ ಪ್ರಗತಿ ಶಕ್ಯ. ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ದಿನಕ್ಕೆ ಒಂದೆರಡು ತಾಸು ಸಮಯವನ್ನು ಜನ ಶಿಕ್ಷಣಕ್ಕೋಸ್ಕರ ವ್ಯಯಿಸಿದರೆ ಆದೀತು. ಚೀನಾದೇಶದಲ್ಲಿ ಮಕ್ಕಳೇ ಹಿರಿಯರಿಗೆ ಶಿಕ್ಷಣ ಕೊಡುವ ಪದ್ಧತಿ ಅತ್ಯಂತ ಯಶಸ್ವಿಯಾಗಿರುತ್ತದೆ

೦೦ ೦೦

(೯ನೇ ಪುಟ ನೋಡಿರಿ)

ಬಾಳಿನ ಬೆಡಗು

ವಿದ್ಯೆಕಲಿತ ಯುವಕನೋರ್ವನು ವರಿಸಿದ ಹಳ್ಳಿಯ ಮುಗ್ಧೆಯೋರ್ವಳ ಆದರ್ಶ ಪ್ರೇಮವನ್ನು ಅರಿಯದೆ, ಅವಳನ್ನು ತ್ಯಜಿಸಿ ಓದು ಕಲಿತ ಬೆಡಗಿನ ಹೆಣ್ಣಿನ ನಟನೆಗೆ ಮರುಳಾಗಿ, ಹಾಳಾಗಿ, ಸ್ವಾಮಿಯೋರ್ವರ ಅನುಗ್ರಹದಿಂದ ಮತ್ತೆ ಮಿಲನವಾಗುವ ಕಥಾವಸ್ತುವನ್ನೊಳಗೊಂಡ

ಶ್ರೀ. ಯು. ನಾರಾಯಣ ಭಟ್ಟರು ಬರೆದ ಸರಸ—ಸುಂದರ ಕಾದಂಬರಿ.

ಬೆಲೆ: ರೂ. 1—4—0 ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಅವುಗಳ ರುಚಿ ಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಸ್ವೀಕಾರ—ವಿಮರ್ಶೆ

ಪ್ರಿಯದರ್ಶನಂ

ಲೇಖಕ ಮತ್ತು ಪ್ರಕಾಶಕ: ಯಂ. ಸೀತಾರಾಮಯ್ಯ, ಚೊಕ್ಕಾಡಿ ದಕ್ಷಿಣಕನ್ನಡ. ಬೆಲೆ: ರೂ. ೧-೦-೦.

"ಸುಖವು ಶಾಶ್ವತವಲ್ಲ, ದುಃಖ ಶಾಶ್ವತವಲ್ಲ ಸುಖದುಃಖವಾ ಸೂತ್ರ ಹಸ್ತದ ವಿಧಿಯೆ ಶಾಶ್ವತ ಸತ್ಯ, ನಿತ್ಯ!" ಎಂಬ ಸುಭಾಷಿತಕ್ಕೆ ನಳ-ದಮಯಂತಿ ಯರ ಕತೆಯನ್ನು ಅನ್ವಯಿಸಬಹುದು. ದುಃಖ ಸಂಕಟಗಳಿಂದ ಮನಸ್ಸು ವ್ಯಾಕುಲ ಗೊಂಡವರಿಗೆ ಯಾಗ್ನಿ ನಳ—ದಮಯಂತಿಯರ ಕಥಾವಾಚನಕೆ ಅಖ್ಯಾನವನ್ನು ಕೇಳಿ, ತಮ್ಮ ದುಃಖದ ಭಾರವನ್ನು ತಗ್ಗಿಸುವುದುಂಟು. ರಾಮಾಯಣ, ಮಹಾಭಾರತಗಳಲ್ಲಿ ರಾಮದೇವರ ಮತ್ತು ಪಂಚ ಪಾಂಡವರ ದುಃಖೋಪಶಮನಕ್ಕಾಗಿ ಈ ಕತೆಯನ್ನು ಋಷಿಗಳು ಹೇಳಿದರೆಂದು ಉಲ್ಲೇಖಿಸಲ್ಪಟ್ಟಿದೆ. ಪುರಾಣ ಕತೆಯೆಂಬ ಉಪೇಕ್ಷೆಯನ್ನು ತೋರದೆ, ತುಸು ಆಸ್ಥೆವಹಿಸಿದಲ್ಲಿ, ನಾವು ಮನುಷ್ಯನ ಜೀವನವನ್ನು ಆದರಿಸುವ ಅನೇಕ ಸಮಸ್ಯೆಗಳ ಚಿತ್ರವನ್ನೂ ಅವುಗಳ ಗತಿ ವಿಧಿಯ, ಜಾಡು ರೇಖೆಯನ್ನೂ ಇಲ್ಲಿ ಕಾಣಬಹುದು. ಶೇಕ್ಸ್‌ಪಿಯರನ ನಾಟಕಗಳಲ್ಲಿ ಬರುವ ಪಾತ್ರಗಳನ್ನು ಮನೋವೈಜ್ಞಾನಿಕ ಶಾಸ್ತ್ರದ ಬೆಳಕಿನಲ್ಲಿ ಅಭ್ಯಸಿಸಿ, ಮನುಷ್ಯನ ಸುಖ ದುಃಖಗಳ ಮೂಲದ ಮೇಲೆ ಪ್ರಕಾಶ ಚೆಲ್ಲುವ ಪ್ರಯತ್ನ ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತದೆ. ಇದರಂತೆ ನಮ್ಮ ಕಾವ್ಯ ಭಂಡಾರವನ್ನೂ ಈ ತೆರನ ಅಭ್ಯಾಸಕ್ಕೆ ಅಳವಡಿಸಿ ಕೊಳ್ಳುವುದು ಒಳ್ಳೆಯದು. ಪ್ರಿಯದರ್ಶನಂ ಅಂಥದ್ದೇ ಯಾವನ್ನು ಇಟ್ಟು ಕೊಂಡಿಲ್ಲವಾದರೂ, ಸಾಮಾನ್ಯ ರೀತಿಯಲ್ಲಿ ಮನಸ್ಸಿನ ಉದ್ವೇಗ, ಶೋಕ, ಸಂತಾಪ, ತಳಮಳ, ಗೊಂದಲ ವಿರಹ ವೇದನೆ ಮುಂತಾದೆಲ್ಲ ವಿಕಾರಗಳಿಗೆ ಯೋಗ್ಯ ಹಿನ್ನೆಲೆಯನ್ನು ಕಲ್ಪಿಸಿ ಕೊಟ್ಟಿದೆ. ಪುರಾಣ ಕತೆಗಳಲ್ಲಿ ಬುದ್ಧಿ ಮಂಕಾಗುವ ಸನ್ನಿವೇಶಗಳಿದ್ದರೆ, ಇಲ್ಲಿ ಲೇಖಕರು ಸ್ವಬುದ್ಧಿಯಿಂದ ತರ್ಕ ಶುದ್ಧವಾದ ಚಮತ್ಕಾರಕ ಪ್ರಸಂಗಗಳನ್ನು ಸೇರಿದು ಕತೆಗೆ ವಾಸ್ತವ ಕತೆಗೆ ಹೆಚ್ಚು ಹತ್ತಿರ ಬರುವಂತೆ ಮಾಡಿರುವರು ನಳನು ಋತುಪರ್ಣನಲ್ಲಿ ಆಶ್ರಯ ಪಡೆಯುವ ಪ್ರಸಂಗವನ್ನಿದಕ್ಕೆ ಉದಾಹರಿಸಬಹುದು, ಮನಸ್ಸನ್ನು ಕಲಕುವ ಮತ್ತು ಹೃದಯವನ್ನು ಸೂರೆಗೊಳ್ಳುವ ಈ ಕತೆ ನಿಜಕ್ಕೂ ಜನಪ್ರಿಯವಾದ್ದು. ಆದರೆ ಪ್ರಕೃತ ಪುಸ್ತಕವಿನ್ನು ಜನಾನುರಾಗ ಪಡೆವಂತೆ ತೋರುವುದಿಲ್ಲ. ಹಳೆಗನ್ನಡದ ಶೈಲಿಯನ್ನು ಅನಾವಶ್ಯಕ ಮೊಬಾಕಿ ಪ್ರಯೋಗಿಸಿರುವುದರಿಂದ ಈ ರೀತಿ ಹೇಳಬೇಕಾಗಿದೆ ಬದಲಾಗಿ ಚಲಾವಣೆಯ ಹೊಸಗನ್ನಡದಲ್ಲಿ ಈ ಉಪಾಖ್ಯಾನ ಬರೆದಿರುತ್ತಿದ್ದರೆ, ಆಗ ಪುಸ್ತಕದಿಂದ ಹೆಚ್ಚು ಪ್ರಯೋಜನ ದೊರಕುತ್ತಿತ್ತು. ಹಾಗೆ ತಿದ್ದಿ ಪ್ರಕಟಿಸುವುದೇ ಹೆಚ್ಚು ಒಳ್ಳೆಯದೆನಿಸುತ್ತದೆ. ಪಂಡಿತ ವರ್ಗಕ್ಕಿಂತಲೂ ಹೆಚ್ಚು ಪಾಮರರ ತಿಳಿವಿನಳವಿನೊಳಗೆ ಪುಸ್ತಕಗಳು ಬರಬೇಕಾದುದು ಈಗ ಅಗತ್ಯ.

ನಾನೇಕೆ ಹೀಗಾದೆ?

ಬರೆದವರು: ಬನ್ನಂಜೆ ರಾಮಾಚಾರ್ಯ. ಪ್ರಕಾಶಕರು ಟಿ ಶ್ರೀಪತಿ, ಬಿ. ಎ. ಕೃಷ್ಣವಿಹಾರ, ಕದ್ರಿದೇವಾಲಯದ ರಸ್ತೆ, ಕಂಕನಾಡಿ, ಮಂಗಳೂರು. ಬೆಲೆ: ರೂ. ೧—೪—೦.

ನಾನೇಕೆ ಹೀಗಾದೆ? ಎಂಬ ಪ್ರಶ್ನೆಯನ್ನು ಕಪಿನಿ ಕನ್ನಡಿಯೋ ಕೇಳಿಕೊಂಡು ತನ್ನ ಇಂದಿನ ದುರವಸ್ಥೆಯ ಹಿನ್ನೆಲೆಯಾಗಿ ಘಟಿಸಿದ ಪ್ರಸಂಗಗಳನ್ನು ನಿರೂಪಿಸುವ ಮೂಲಕ ಇಲ್ಲಿ ಕಥೆ ಓಡುತ್ತದೆ ಕಪಿನಿಗೆ ಬಾಲ್ಯದಿಂದಲೂ ಗೊತ್ತಿರುವ ತಾರೆ ಕಮಲೆಯೆಂಬ ವೇಶ್ಯೆಯಲ್ಲಿ ಮೊದಲೇ ಅನುರಕ್ತನಾದ ನಾಗೇಶರಾಯರ ಹೆಂಡತಿ ಯಾದಾಗ, ತಾರೆಯು ಬದುಕಿನಲ್ಲಿ ನಲಿವು ಚೆಲುವು ತರುವ ಸದುದ್ದೇಶದಿಂದ ಕಪಿನಿ ಪ್ರಯತ್ನಿಸುವನು. ನಾಗೇಶರಾಯರಿಗೆ ಅವನು ಗೆಳೆತನದ ಅಧಿಕಾರದಿಂದ ಸಲಹೆ ಕೊಡುವುದುಂಟು; ವೇಶ್ಯೆಯಾದ ಕಮಲೆಯಲ್ಲಿ ಹೋಗಿ ಅವಳೊಡನೆ ನಾಗೇಶರಾಯರನ್ನು ತಾರೆಗಾಗಿ ಭಿಕ್ಷೆ ಬೇಡುವುದೂ ಉಂಟು. ಕಪಿನಿಗೆ ತಾರೆಯ ಮೇಲೆ ಕರುಣೆ ಮತ್ತು ಹಂಬ ಕನಿಕರ, ಆದರೆ ಕಪಿನಿ—ತಾರೆಯರ ಸಂಪರ್ಕ ಸಲಿಗೆಗಳಾದಂತೆಲ್ಲ ಅವರ ಮನೋಭೂಮಿಕೆಯೂ ಪಲ್ಲಟಗೊಳ್ಳುತ್ತದೆ. ಸಹೋದರ—ಸಹೋದರಿಯರ ಸಂಬಂಧದಂತೆ ತೋರಿದುದು ಅವ್ಯಕ್ತವಾಗಿಯೋ ಪ್ರೇಮವೂ ಬಾಧಕವಾಗಿ ಪರಿಣಮಿಸುತ್ತದೆ. ಒಂದು ದಿನ ಚುಂಬನದ ದುರಂತವೂ ನಡೆಯುತ್ತದೆ. ಇಲ್ಲಿಂದ ಕಪಿನಿಯ ಪ್ರತ್ಯಕ್ಷ ಪತನಕ್ಕೆ ಆರಂಭ; ತಾರೆಯು ಬದುಕು ನೀರಾಗುವುದೂ ಇಲ್ಲಿಂದಲೇ. ಕೊನೆಗೆ ಕಮಲೆಯ ಕಂಗಿ ಪ್ರಭೆಯ ಮಾಯಾ ಮಿಂಚಿನ ಬಲೆಗೆ ಸಿಕ್ಕಿದ ಕಪಿನಿ, ತಾರೆಯನ್ನು ದುರಂತಕ್ಕೆ ತನಗರಿಯದಂತೆಯೋ ತಳ್ಳಿದನೆನ್ನಬಹುದು ತಾರೆಯಂತೂ ಹಾಗೆಯೇ ತಿಳಿದಳು. ಈ ಕತೆ ಕಪಿನಿಯದ್ದಲ್ಲ—ತಾರೆಯ ಕರುಣ ಕತೆ, ಇಲ್ಲಿ ಬರುವ ನಾಲ್ಕು ಪಾತ್ರಗಳು ಸಜೀವವಾಗಿವೆ, ವ್ಯಕ್ತಿತ್ವದ ವೈಶಿಷ್ಟ್ಯವನ್ನು ಸ್ಪಷ್ಟವಾಗಿ ಬಿಂಬಿಸುತ್ತವೆ. ತಾರೆ-ಕಪಿನಿಯರ ಸಂಬಂಧ ದುರಂತ ರೂಪದಲ್ಲಿ ಪರ್ಯವಸಾನಗೊಂಡುದಕ್ಕೆ ಇನ್ನೂ ವಿವರವಾದ, ವಿಸ್ತಾರವಾದ ಹಿನ್ನೆಲೆ ಇರುತ್ತಿದ್ದರೆ ಒಳ್ಳೆಯದೆಂದು ತೋರಿದರೂ—ಸಾಮಾನ್ಯ ಜ್ಞಾನಕ್ಕೆ ದೊರೆಕಾದ ಸಂಗತಿ ಅದೇನಲ್ಲ, ಎಂಬುದು ಸಮಾಧಾನ. ಕಪಿನಿಯ ತಾಯಿ ಗಂಗಜೆ ಮುಂತಾದ ಉಪೇಕ್ಷಿತ ಪಾತ್ರಗಳು ಕೂಡ ಆ ವಾತಾವರಣದಲ್ಲಿ ಭವ್ಯಸ್ಥಾನ ಪಡೆದಿರುತ್ತವೆ. ಎಲ್ಲಕ್ಕೂ ಹೆಚ್ಚು ಮೆಚ್ಚಿಕೆಯ ವಿಷಯವೆಂದರೆ, ನಿರರ್ಗಳವಾದ ಕಥಾನಿರೂಪಣ ಕೌಶಲ, ಮತ್ತು ಕಥೆಯ ಬಗ್ಗೆ ಕ್ಕೆ ಒಪ್ಪುವಂಥ ತೂಕದ ಮಾತು. ಬನ್ನಂಜೆಯವರ ಶೈಲಿಯ ವೈಶಿಷ್ಟ್ಯವೇ ಇದು. ಒಂದು ಮಾತು ಹೆಚ್ಚಿಲ್ಲ, ಕಡಿಮೆಯೂ ಅಲ್ಲ. ಔಚಿತ್ಯವರಿತು ಶಬ್ದ ಬಳಸಿಕೊಂಡೂ ಶೈಲಿಯ ಸ್ವಾರಸ್ಯವನ್ನು ಉಳಿಸಿಕೊಳ್ಳುವುದರಲ್ಲಿ ಬನ್ನಂಜೆಯವರು ಎತ್ತಿದ ಕೈಯೆನ್ನುವುದಕ್ಕೆ ಈ ಕಿರು ಕಾದಂಬರಿಯೇ ಒಂದು ನಿದರ್ಶನ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 183/1953

ಜಲಜಾಕ್ಷಿ ಅಂದು—ವಾದಿಳು.

ಕೃಷ್ಣ ಪೂಜಾರಿ, ವಂಕ್ತ ಪೂಜಾರಿ ಅಳಿಯ, ಉಪ್ಪಿ ತಾಲ್ಲೂಕು ಮಟ್ಟು ಗ್ರಾಮ ಹಾಲಿ Srinivas Trading Company, 260 Sun Set Street, Vadgadi, Bombay No 3ಲ್ಲಿ ಇರುತ್ತಾರೆ—ಪ್ರತಿವಾದಿ.

ಇವರೊಳಗೆ

ವಾದಿಯೊಳಗೆ ಪ್ರತಿವಾದಿಯು ಜಾಲಗೇಣಿಗೆ ಅನುಭವಿಸ್ಸಿ ಬರುವ ಆಸ್ತಿಗಳ ಸ್ವಾಧೀನತೆ, ಗೇಣಿ ಬಾಕಿ, ಹುಟ್ಟುವಳಿ ವಗೈರೇಗೆ ವಾದಿಳು ಮಾಡಿರುವ ಈ ದಾವೆಯು ತಾರೀಕು 21-7-1953ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ತಾರೀಕು 1-7-1953ನೇ ದಿವಸ ಬೆಳಿಗ್ಗೆ ಹತ್ತು ಗಂಟೆ ಮೇಲ್ಪಂಡ ಕೋರ್ಟಿನಲ್ಲಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಿಗೆ ಉಪಸರಿಲಿಕ್ಕೆ ತಪ್ಪಿದ್ರೆ ಈ ದಾವೆಯನ್ನು ಆತನ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

V. R. Kidiyur,

Advocate for Plaintiff

ಉಡುಪಿ, ತಾ. 1-7-1953



ಬರೇ ರೂ-5 ಕ್ಕೆ

15 ಜ್ಯುವೆಲಿನ

ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ 5ಕ್ಕೆ ದೊರೆಯುತ್ತವೆ ಬೇಗನೆ ಬರೆಯಿರಿ·

American Swiss Watch Suppliers,

Putlighar (N U.) Amritsar.

For Protection and Provision Consult

The New Guardian of India Life Insurance Co., Ltd.

Estd] Head office· **MADRAS** [1934

NEW BUSINESS Exceeds	...	66¼ Lakhs·
PREMIUM INCOME	„	15 „
LIFE FUND	„ ...	54¾ „
ASSETS	„ ·	60¼ „
BUSINESS IN FORCE	Nearly	3 Crores·

A Policy in this Progressive Life Office is good investment, its Agency is valuable business connection.

Applications for Representation are invited from energetic influential persons, with good connection· *Please apply to:*

G. R. Wallia, *Branch Manager,*

Diamond Building, Hampankatta, MANGALORE, S. K·

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: **1931.**] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	.	.	ರೂ. 20,00,000
ಕೆತ್ತ ಪಾಲು ಭಂಡವಾಳ	.	.	„ 6,77,860
ಕ್ಷೇಮ ನಿಧಿ	.	.	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 21 ತಿಂಗಳಿನ ನ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½°/° ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ. ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ

ಕೆ. ಸುಂದರರಾಮ ಶೆಟ್ಟಿ,

ಬಿ ಎ ಬಿ. ಯಲ್. ವಕೀಲ್,

ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಶಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಹೌಷಧ ಪರಸಾಯನ

ಹೆಚ್ಚಿನ ಮಾಹಿತಿಗೆ— ಡಾ॥ ಯಂ ಸಿ ಶಾಸ್ತ್ರೀ, ಯಲ್. ಐ ಎಂ

ಕೊಡಿಯಾಲ ಬೈಲು ಪೋಸ್ಟು. (ಮಂಗಳೂರು)

ಸ್ಟಾಕಿಸ್ಟರು.— ಡಾ॥ ಐ. ಕೆ. ವಿಠ್ಠಲಮೂರ್ತಿ, ಕುಂಜಿಬೆಟ್ಟು, ಉಡುಪಿ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No 13/1953

ಅಪ್ಪಂಜಿ ಸೆಟ್ಟಿ ಶ್ರೀನಿವಾಸ ಸೆಟ್ಟಿರ ಮಗಳು ಪಟ್ಟ ಸೆಟ್ಟಿ ... ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರಿ ವಾಸ್ತವ್ಯದವಳು ಅರ್ಜಿದಾರಳು ಅರ್ಜಿದಾರಳ ತಾಯಿ ಮೃತಪಟ್ಟ ಶ್ರೀ ದೇವಿ ಸೆಟ್ಟಿದೀಗೆ, ಕಾರ್ಕಳ ಪೋಸ್ಟು ಆಫೀಸಿನಲ್ಲಿ ನಂಬ್ರ 782 ನೇಗೆ ರಿಜಿಸ್ಟರ್ ಮಾಡಲ್ಪಟ್ಟ ನಂಬ್ರ No/Do 20361 ತಾರೀಕು 27-4-1945ನೇ ರೂಪಾಯಿ 500ರ ಮೊಬಲಗಿನ ಪೋಸ್ಟಆಫೀಸ್ ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟು ಪ್ರಕಾರ ಬರ ರೂಪಾಯಿ 650·0 ಪಡೆಯಲಿಗೆ ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡ ಬೇಕಾಗಿ ಅರ್ಜಿದಾರಳು ಮೇಲ್ಪಂಡ ಕೋರ್ಟಿನಲ್ಲಿ ಕೊಟ್ಟ ಮೇಲ್ಪಂಡ ಅರ್ಜಿಯು ತಾರೀಕು 14-7-1953ಕ್ಕೆ ತನಿಖೆಗೆ ಇಟ್ಟಿರುವದರಿಂದ ಸದರಿ ವಿಷಯದಲ್ಲಿ ಆಕ್ಷೇಪವುಳ್ಳವರು ಸದರಿ ತಾರೀಕಿನಲ್ಲು ಬೆಳಿಗ್ಗೆ 10ಗಂಟೆಗೆ ಮೇಲ್ಪಂಡ ಕೋರ್ಟು ಮುಂದೆ ಸ್ವತಹ ಅಥವಾ ವಕೀಲ ಮುಖಾಂತರ ಹಾಜರಾಗಿ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದು ಗಿಯೂ ತಪ್ಪಿದ್ದಲ್ಲಿ ಸದರಿ ಅರ್ಜಿಯು ಏಕಪಕ್ಷ ... ಮಾರ್ಪಡಿಸಲ್ಪಡುತ್ತದೆಂಬದಾಗಿಯೂ ಈ ಮೂಲಕ ತಿಳಿಯ ಪಡಿಸಲಾಗುತ್ತದೆ.

A. N Sitaramachar

Advocate for Petitioner

Karkala ತಾ 29-6-53

ವಾರದ ಒಳಿತು ಕೆಡುಕುಗಳು

ತಾ. ೯—೭—೫೩ರಿಂದ ತಾ. ೧೫—೭—೫೩ರ ವರೆಗೆ.

ಮೇಷ—ಸುಖ ಸಂತೋಷದಿಂದ ಕಾಲಕಳೆವ ನಿಮಗೆ ಯಾವೊಂದು ತರದ ಅನಿಷ್ಟಗಳೂ ಈ ವಾರದಲ್ಲಿ ಕಂಡು ಬರವು. ಗ್ರಹವೃಂದವೇ ನಿಮಗನುಕೂಲವಾಗಿರುವ ಈ ವೇಳೆಯನ್ನು ನೀವು ಸದುಪಯೋಗ ಮಾಡಿಕೊಳ್ಳುವದು ನಿಮ್ಮ ಆದ್ಯ ಕರ್ತವ್ಯ. ಪುಣ್ಯಕಾಲವೆಲ್ಲವೂ ಸಂಕಲ್ಪದಲ್ಲೇ ಕಳೆಯಿತೆಂಬಗಾದೆಯಂತೆ ಉದಾಸೀನತೆಯಿಂದ ಕಾಲಹರಣ ಮಾಡಿದರೆ ಪಶ್ಚಾತ್ತಾಪಗೊಳಗಾಗಬೇಕಾದ ಪ್ರಸಂಗ ಬರಲಿದೆ. ಇನ್ನು ಇಂತಹ ಸುಸಮಯವು ಸದ್ಯ ನಿಮಗೆ ದುರ್ಲಭವು ತಾ. 9, 10, 11. ಈ 3ದಿನಗಳು ಅತ್ಯುತ್ತಮವಿವೆ.

ವೃಷಭ—ಸದ್ಯದ ದಿನಗಳು ನಿಮಗೆ ಅತೀವ ದುಃಖದಾಯಿಗಳಾಗಿ ಪರಿಣಮಿಸಿರುವವು. ಆದರೆ "ದುಃಖಸ್ಯಾನಂತರಂ ಸುಖಂ" ಎಂಬಗಾದೆಯಿದೆಯಷ್ಟೆ. ಮೊದಲು ಕಷ್ಟವನ್ನನುಭವಿಸಿದವರು ಕೊನೆಗೆ ಸುಖಿಯಾಗುವರೆಂದು ಅಂತೆಯೇ ಮುಂದಿನ ಸುದಿನಗಳ ಮೇಲಿನ ಆಶೆಯಿಂದಲಾದರೂ ನೀವಿಂದು ಈ ಕಷ್ಟದ ಕಾಲವನ್ನು ಕಳೆಯಿರಿ. ಇಂತಹ ಕಷ್ಟ ಕಾಲದಲ್ಲಿ ನಿಮಗೆ ಹೆಂಡತಿ ಮಕ್ಕಳೂ ಕೂಡ ನೆರವಾಗರು. ತಾ. 12. 13. ಈ ದಿನಗಳು ಇದ್ದುದರಲ್ಲಿ ಉತ್ತಮ.

ಮಿಥುನ—ನಿಮ್ಮ ಗ್ರಹಚಾರವಿನ್ನೂ ಮುಗಿದಿಲ್ಲವು. ಆದ ಕಾರಣ ನಿಮ್ಮ ಪ್ರಯತ್ನವು ಅರಣ್ಯ ರೋದನದಂತೆ ನಿಷ್ಫಲವಾಗುವದು. ದೇಹಾರೋಗ್ಯ ನೆಟ್ಟಗಿರದು. ಮನಸ್ಸಿಗೆ ನೆಮ್ಮದಿಯಿರದು. ಕಷ್ಟಾರ್ಜಿತವಾದ ಧನವು ದುರುಪಯೋಗವಾಗುವದು. ಆದರೂ ಈ ಕಾಲದಲ್ಲಿ ನಿಮ್ಮ ಬಾಲ್ಯ ಮಿತ್ರರೂ ಬಂಧುಗಳೂ ನೆರವಾಗುವರೆಂಬುದು ಸುದೈವವೆನ್ನಬೇಕು. ಸ್ತ್ರೀಶತ್ರುಗಳೇನೂ ನಿಮಗೆ ಬಾಧಿಸಲಾರವು. ತಾ. 9, 10, 14, 15. ಈ ದಿನಗಳು ಅನುಕೂಲವಿವೆ.

ಕರ್ಕಟಿ—ಸುಖದುಃಖ ಲಾಭನಷ್ಟಗಳೆಲ್ಲವೂ ಸರಿಸಮಾನದಲ್ಲಿ ನಿಲ್ಲಲಿವೆ ನಿಮಗೀವಾರದಲ್ಲಿ. ನಾನಾ ತರದ ಖರ್ಚುಗಳು ಪ್ರಾಪ್ತವಾಗುವವಾದರೂ ಸದುದ್ಯಮದಿಂದ ಸಾಕಷ್ಟು ಧನ ಸಂಪಾದಿಸುವಿರಿ. ಕೈಯಲ್ಲೂ ಆಪದ್ಧನವಾಗಿರಿಸಿಕೊಳ್ಳುವಿರಿ. ಗುರುಹಿರಿಯರ ಅನುಗ್ರಹದಿಂದಾಗಿ ಸುಖ ಆರೋಗ್ಯಗಳಿಗೇನೂ ಕೊರತೆಯಿರದು. ಜತೆಗೆಯು ಬೆಂಬಲವು ಉತ್ತಮವಿರುವುದರಿಂದ ಹೆಚ್ಚಿನ ಕಾರ್ಯಗಳು ನಿಮ್ಮಂತೆ ಕೊನೆಗೊಳ್ಳಲಿವೆ. ತಾ. 12. 13. ಅನುಕೂಲ.

ಸಿಂಹ—ನಿಮ್ಮ ಪರಿಶ್ರಮಕ್ಕಿಂತಲೂ ಅಧಿಕವಾದ ಫಲವು ಲಭಿಸಲಿದೆ ನಿಮಗೀವಾರದಲ್ಲಿ ಜನತೆಯ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ನಿಮ್ಮ ಬಯಕೆಯಂತೆ ಕಾರ್ಯವು ನೆರವೇರುವುದರಲ್ಲಿ ಸಂಶಯವಿಲ್ಲ. ಆದರೂ ನೀವೆಷ್ಟೇ ದುಡಿದರೂ ಅನವಶ್ಯಕಗಳಾದ ಹಲವಾರು ಖರ್ಚುಗಳು ಪ್ರಾಪ್ತವಾಗಿ ನಿಮ್ಮನ್ನು ಬರಿಗೈಯವರನ್ನಾಗಿ ಮಾಡುವದು. ಮಾತಾಡಿದವರೊಡನೆ ಕಲಹ ತಪ್ಪದು. ಸುಖಾರೋಗ್ಯ ಸತಿಯ ಅನುಗ್ರಹವು ನಿಮಗೆ ಪರಿಪೂರ್ಣವಿರುವುದರಿಂದ ಈ ವಾರವನ್ನು ಸುಖದಿಂದ ಕಳೆವಿರಿ. ತಾ. 9. 10. 14. 15. ಅತ್ಯುತ್ತಮವಿದೆ.

ಕನ್ಯ—ಕಾಲವು ಅತ್ಯನುಕೂಲವಾಗಿದೆ. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ನೀವು ಕಾರ್ಯ ಕ್ಷೇತ್ರದಲ್ಲಿ ಮುನ್ನುಗ್ಗಿದರೆ ನಿಮ್ಮ ಬಯಕೆಯಂತೆ ಫಲವು ಸಿದ್ಧಿಸುವುದರಲ್ಲಿ ಸಂದೇಹವಿಲ್ಲವು. ಪಶು ಭೃತ್ಯ ಧನಧಾನ್ಯಾದಿ ಸಕಲ ಗೃಹ ಪರಿವಾರಗಳೂ ಅನ್ಯೋನ್ಯವಾಗಿರುವವು. ಸಂಪದ್ಭಾಗ್ಯವು ಉಚ್ಚಮಟ್ಟಕ್ಕೆ ಬರಲಿದೆ. ಆರೋಗ್ಯವು ಉತ್ತಮವಿರುವದು. ಪ್ರಿಯ ಜನರ ವಿರಹ ದುಃಖಕ್ಕೆಡೆಯಿದೆ ವಾರಾದಿಯ 5ದಿನಗಳಲ್ಲಿ ನಿಮ್ಮ ಅಭಿಲಾಷೆಗಳು ಈಡೇರುವವು

ತುಲಾ—ದಿನದಿಂದ ದಿನಕ್ಕೆ ನಿಮ್ಮ ಅದೃಷ್ಟವು ಬಲಶಾಲಿಯಾಗುತ್ತಾ ಬರುತ್ತಿದೆ. ಕ್ರಮೇಣ ನಿಮ್ಮ ಆರೋಗ್ಯ ಆರ್ಥಿಕ ಪರಿಸ್ಥಿತಿಯೂ ಉತ್ತಮ ಗೊಳ್ಳುವದು. ಹಣದ ವ್ಯವಹಾರದಿಂದಾಗಿ ಕಲಹ ವುಂಟಾದೀತು. ಅನಿರೀಕ್ಷಿತ ಶೋಕ ಅನರ್ಥಗಳಿಗವಕಾಶವಿದೆ ಗುರುಹಿರಿಯರ ಪ್ರಕೋಪಕ್ಕೆ ಸಿಲುಕಿದ ನೀವು ಜನನಿಂದೆಗೆ ಗುರಿಯಾದೀರಿ. ಪರ್ಯಟನವು ಕಷ್ಟ ನಷ್ಟದಾಯಿಯಾಗಿ ಪರಿಣಮಿಸೀತು. ವಾರಾಂತ್ಯದ 4 ದಿನಗಳು ಅನುಕೂಲವಿವೆ.

ವೃಶ್ಚಿಕ—ಪ್ರಬಲವಾದ ಶತ್ರು ವೃಂದವು ನಿಮ್ಮ ಧನಿಮಾನಗಳಿಗೆ ತುಂಬ ಹಾನಿಯನ್ನುಂಟು ಮಾಡಲಿದೆ. ಅರ್ಧಾಂಗಿಯೂ ಕೂಡ ಜಗಳ ಗಂಟಿಯಾದಾಳು. ಶಸ್ತ್ರಾದಿಗಳಿಂದ ಗಾಯಾದಿಗಳಾದಾವು. ಕಜ್ಜಿ ಹುಣ್ಣು ಮಗ್ಗರು ಚರ್ಮರೋಗಗಳು ಕಾಣಿಸಿಕೊಳ್ಳಲಿವೆ. ಆದರೂ ಗುರ್ವನುಗ್ರಹವು ಉತ್ತಮವಾಗಿರುವುದರಿಂದ ನಿಮ್ಮ ಕಾರ್ಯಗಳು ಸಫಲಗೊಂಡಾವು. ಸಂಪದ್ಭಾಗ್ಯವು ಉಚ್ಚಸ್ಥಿತಿಗೆ ಬರಲಿದೆ. ಜನತೆಯ ಬೆಂಬಲವುಳ್ಳ ನೀವು ವಾರಾಂತ್ಯದ 2 ದಿನಗಳಲ್ಲಿ ಇಷ್ಟವನ್ನು ಹೊಂದುವಿರಿ

ಧನು—ನಿಮ್ಮ ದೈವವಿಂದು ಅತೀವ ಹೀನಸ್ಥಿತಿಗೆ ಬಂದಿದೆ ಆದಕಾರಣ ಸಮಾಜದಲ್ಲಿ ಮರ್ಯಾದೆಯಿಂದ ದಿನಗಳೆಯಲು ಕಷ್ಟವೆನಿಸುವದು. ದೇಹಾರೋಗ್ಯವು ಕೆಡುವದು. ಶತ್ರುಗಳ ಪೀಡೆಯಿಂದಾಗಿ ಮನೋರೋಗವು ಮತ್ತಷ್ಟು ಪ್ರಬಲವಾದೀತು. ಸಾಂಸಾರಿಕ ತಾಪತ್ರಯಗಳ ದೆಸೆಯಿಂದಾಗಿ ಮನಸ್ಸಿಗೆ ಈಷತ್ತೂ ನೆಮ್ಮದಿಯಿರದು. ವಿದ್ಯಾ ಕೀರ್ತಿಗಳಿಗೆ ಹಾನಿ ಬರಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತನಷ್ಟ ಸಂಭವಿಸುವದು. ತಾ 9 10 ಮಾತ್ರ ಇತರ ದಿನಗಳಷ್ಟು ಅನಿಷ್ಟಕಾರಿಯಾಗವು.

ಮಕರ—ಸದ್ಯದ ಸ್ಥಿತಿಯಲ್ಲಿ ನೀವೇ ಧನ್ಯರು. ಪರಿಶ್ರಮವಿಲ್ಲದೆ ಕಾರ್ಯ ಸಾಧನೆಯಾಗುವದು. ಪ್ರತಿಯೊಂದು ಭಾಗವೂ ಅನ್ಯೂನವಾಗಿದ್ದು ಸುಖದಿಂದ ಕಾಲಯಾಪನೆ ಮಾಡುವಿರಿ. ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿನ ಕಾರ್ಯಗಳು ಯಶಸ್ವಿಯಾಗುವದಲ್ಲದೆ ಕೀರ್ತಿ ಸ್ಥಾನ ಮಾನಗಳನ್ನು ಪಡೆವಿರಿ. ದೇಹ ಮನಸ್ಸುಗಳಿಗೆ ಸುಖ ನೆಮ್ಮದಿಯುಂಟಾಗಲಿದೆ. ವಿದ್ಯಾರ್ಥಿಗಳಿಗೂ ನೌಕರಿಜನರಿಗೂ ವೃದ್ಧಿ ಮಾರ್ಗ ವಿಘ್ನ ವಿರ್ನ್ಯಾಗಳು ಪ್ರಾಪ್ತವಾದಾವು. ವಾರಾದಿಯ 5ದಿನಗಳು ಅತ್ಯುತ್ತಮವಾಗಿವೆ.

ಕುಂಭ—ಕಷ್ಟದ ದಿನಗಳು ಕಳೆಯುತ್ತಾ ಬಂದವು. ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವನ್ನಿಂದು ಕಾಣುವಿರಿ. ಆದರೂ ನಿಮ್ಮ ಖರ್ಚುವೆಚ್ಚಗಳು ಮಿತಿ ಮೀರಿರುವುದರಿಂದ ಹಣದ ಅಡಚಣೆ ತೊಲಗದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನವಿಡಿರಿ. ಮಕ್ಕಳು ಮರಿಗಳ ಆರೋಗ್ಯವೂ ಕೆಡಲಿರುವುದು. ಶತ್ರುಜನರ ಪೀಡೆ ಕಡಿಮೆಯಾಗದು. ಅಪೇಕ್ಷಿತ ವರ್ಗದವರ ವಿಯೋಗವುಂಟಾದೀತು. ವಾರಾಂತ್ಯದ 4ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿವೆ.

ಮೀನ—ಪ್ರಬಲವಾದ ದುರ್ವಿಧಿಯು ನಿಮ್ಮನ್ನಿಂದು ಕಾಡುತ್ತಿದೆ. ನಿಮ್ಮ ಪರಿಶ್ರಮವು ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗುವದು. ಸ್ಥಾನ ಪಲ್ಲಟವಾಗುವ ಯೋಗವಿದೆ. ದುರ್ಜನರ ಸಹವಾಸಕ್ಕೆ ಬಲಿ ಬಿದ್ದು ವೃಥಾ ಕಷ್ಟ ನಷ್ಟಗಳೂ ಜನನಿಂದೆಗೂ ಗುರಿಯಾದೀರಿ. ಮನೆಯಲ್ಲಿ ಪರಸ್ಪರ ಕಲಹವಾದೀತು, ಹೆಚ್ಚಿನ ಕಾಲವನ್ನು ಮಾರ್ಗದಲ್ಲಿ ಕಳೆವ ಪ್ರಸಂಗ ಬರಲಿದೆ. ತಾ. 14- 15. ಈ ಎರಡು ದಿನಗಳಲ್ಲಿ ಕಿಂಚಿದಾರೋಗ್ಯ ಲಾಭ ಸುಖಗಳಿವೆ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd., Moolky, S. K.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಎಲ್ಲ ಕಡೆ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು: ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ ಬಹಿಷ್ಟೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಬಹಿಷ್ಟೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, ಬಂಜೆತನ ವನ್ನುಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಉತ್ಸಾಹವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ.— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:—

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹಲವಷ್ಟಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ: ರೂ. 3/ ; ಸ್ಪೆಶ್ಯಲ್ ರೂ 5/ ಅಧಿಕಾಧಿಕ ಸ್ಪೆಶ್ಯಲ್ ರೂ. ೭/-[ವಿ. ಪಿ ಹಣ್ಣೆರಡಾಣೆ ಪ್ರತ್ಯೇಕ]

Mrs. P. DEVEE, F.U.S.(N.J.)
CALCUTTA. 40
ಸ್ಟಾಕಿಸ್ಟರು: ದಯಾಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

ನವಯುಗ

ಆರೋಗ್ಯ ಮಂತ್ರಿ
ಎ. ಬಿ. ಶೆಟ್ಟರಿಂಗ
ಸಿತವಾದ ವಾರ್ಷಿಕ,
ಉಡುಪಿ, ದ. ಕನ್ನಡ

ವಾರ್ಷಿಕ ಚಂದಾ 5-12-0
ಆರು ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

Reg No
M 3618

ನವಯುಗ

16-7-1953

LICENCE No. 31
Licensed to Post without Prepayment

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ 24ಕ್ಕೆ ಸಿಗುತ್ತವೆ
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

Vol 32
No 45

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೫

ಇಂದಿಗೆ ಸುಮಾರು ಆರು ವರುಷಗಳ ಹಿಂದೆಯೂ ಭಾರತದ ಜನತೆ ಈಗಿನದೇ- ರೀತಿ ಸರಕಾರ ಮಾತ್ರ ಪರಕೀಯರ ಕೈಯಲ್ಲಿದ್ದಿತು. ಬ್ರಿಟಿಷರು ರಾಜ್ಯಾಧಿಕಾರದ ಸೂತ್ರವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು, ಮತ್ತು ಭಾರತೀಯ ಜನತೆಯ ಮೇಲೆ ಶಾಸನ ನಡೆಸುತಿದ್ದರು. ಆ ಶಾಸನಕ್ಕೆ ಜನತೆಯ ಸಮ್ಮತಿ ಇದ್ದಿತೋ? ನಿಶ್ಚಯವಾಗಿಯೂ ಇರಲಿಲ್ಲ. ಜನತೆ ಮತ್ತು ಜನಸಾಮಾನ್ಯರ ಏಕಮೇವಾದ್ವಿತೀಯವಾದ ಪ್ರತಿನಿಧಿ ಸಂಸ್ಥೆ ಕಾಂಗ್ರೆಸು ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಸ್ವಾತಂತ್ರ್ಯದ ಚಳುವಳಿಯನ್ನು ನಡೆಸಿದ್ದಿತು. ಬ್ರಿಟಿಷ್ ಆಡಳಿತದಿಂದ ಸಾವಿರ ಪಾಲು ಒಳ್ಳೆಯದು ಉಂಟಾಗುತಿದ್ದರೂ—ಅದನ್ನು ಜನತೆ ಧಿಕ್ಕರಿಸುತಿತ್ತು. ಏಕೆಂದರೆ, ಜನತೆಯ ಇಚ್ಛೆಗೆ ವಿರುದ್ಧವಾಗಿ ಸರಕಾರ ತನ್ನ ಅಧಿಕಾರವನ್ನು ಚಲಾಯಿಸುತಿತ್ತು. ಹೀಗೆ ಜನತೆಯನ್ನು ಮೀರಿ ನಡೆಯುವ ಸರಕಾರಕ್ಕೆ ಅಳಿವೇ ನಿಶ್ಚಯ ಹೊರತು ಉಳಿಗಾಲವಿಲ್ಲ. ಕೊನೆಗೆ ಆದುದಾದರೂ ಹಾಗೆಯೇ. ಬ್ರಿಟಿಷರಿಗೆ ಭಾರತದಿಂದ ಸ್ನೇಹಪೂರ್ವಕವಾಗಿ ಕಾಲ್ತೆಗೆಯುವುದು ಅನಿವಾರ್ಯವೆನಿಸಿತು. ಜನತೆಯ ಕೃಪಾಛತ್ರದಲ್ಲಿ ಸರಕಾರವು ಬೇಕೇ ಹೊರತು, ಸರಕಾರ ಜನತೆಯಿಂದ ಪ್ರತ್ಯೇಕಗೊಂಡಲ್ಲಿ, ತನ್ನ ಹಿರಿಮೆ ಮತ್ತು ಉನ್ನತ ಸ್ಥಾನದ ಅಹಂಕಾರದಿಂದ ಜನತೆಯನ್ನೆ ಮೆಟ್ಟಿದಲ್ಲಿ—ಸರಕಾರ ಕ್ಷಣಕಾಲವೂ ಉಳಿಯದು.

ಭಾರತದ ಆಂದೋಲನ ಶಾಂತಿಪೂರ್ವಕ ನಡೆದಿದ್ದರೆ— ಈಗ ಇಂಡೋನೇಶಿಯಾ, ವಿಯೆಟ್‌ನಾಮ ಇತ್ಯಾದಿ ದೇಶಗಳಲ್ಲಿ, ಆಯಾ ಸರಕಾರದ ವಿರುದ್ಧ ಜನತೆಯ ಯುದ್ಧದ ರೂಪವನ್ನು ತಳೆದಿರುತ್ತಿತ್ತು. ಈಜಿಪ್ಟದಲ್ಲಿ ಕಳೆದ ವರ್ಷ ಸರಕಾರವನ್ನು ಉರುಳಿಸಿದ್ದಲ್ಲದೆ, ಈ ವರ್ಷ ಅರಸೊತ್ತಿಗೆಯನ್ನು ನಿರ್ಮೂಲಿಸಿ, ನಿರಂಕುಶಾಧಿಕಾರವನ್ನು ಕೊನೆಗೊಳಿಸಲಾಗಿದೆ. ಇರಾಣದಂಥ ಮಧ್ಯಪೂರ್ವದ ರಾಷ್ಟ್ರದಲ್ಲಿ ಸಹ ಇಂದು ಜನತೆ ಹಾಗೂ ಸರಕಾರದ ನಡುವೆ ಸ್ಪರ್ಧೆಯುಂಟಾಗಿದೆ. ಮುಸಾದಿಕರ ಸರಕಾರಕ್ಕೆ ಒಮ್ಮೆ ಬೆಂಬಲವನ್ನು ಇನ್ನೊಮ್ಮೆ ವಿರೋಧವನ್ನೂ ಅಲ್ಲಿಯ ಜನತೆ ಪ್ರದರ್ಶಿಸುತ್ತಿರುವುದನ್ನು ನೋಡುವಾಗ— ಇರಾಣದ ಸರಕಾರ ಗಡಗಡನೆ ನಡುಗುತ್ತಿರುವಂತೆ ಭಾಸವಾಗುತ್ತದೆ. ದಕ್ಷಿಣ ಆಫ್ರಿಕಾದಲ್ಲಂತೂ ವರ್ಣೀಯರನ್ನು ಸದೆಬಡಿಯಲು ಅಲ್ಲಿಯ ಸರಕಾರ ನಡೆಸುತ್ತಿರುವ ದಬ್ಬಾಳಿಕೆ, ಜನತೆಯ ಕೆಚ್ಚು ಮತ್ತು ಸಾಮರ್ಥ್ಯಕ್ಕೊಂದು ರ

ಮಧುಪರ್ಕ

[illegible]

[illegible]

[illegible]

ಅಳಿವು—ಉಳಿವು

ಹ್ವಾನವನ್ನು ನೀಡುತ್ತಿದೆ. ಇಲ್ಲೆಲ್ಲ ಜನತೆಯನ್ನು ದಮನಿಸುವ ಸರಕಾರದ ಕುಟಿಲ ನೀತಿ ತಾಂಡವವಾಡುತ್ತಿದೆ. ಹಾಗೆಂದು ಇತಿಹಾಸ ನಮಗೆ ಏನು ಹೇಳುತ್ತದೆ? ಜನತೆಯನ್ನು ಬಿಟ್ಟು ತಾನೇ ತಾನಾಗಿ ನಿಂತ ಸರಕಾರ ಇಂದಿಲ್ಲ ನಾಳೆ ಉರುಳಿ ಬೀಳುತ್ತದೆಂಬುದು ಸ್ವಯಂಸಿದ್ಧ. ಜನತೆಯ ಹೃದಯ ಸಿಂಹಾಸನದಲ್ಲಿ ಸರಕಾರ ನೆಲೆಗೊಳ್ಳಬೇಕಲ್ಲದೆ, ದರ್ಪ ಅಹಂಕಾರಗಳ, ಸೈನ್ಯ ಹಾಗೂ ಬಾಂಬುಗಳ ಬಲದಿಂದ ಸರಕಾರ ಸುರಕ್ಷಿತವಾಗಲಾರದು.

ದೇವರ ದಯೆಯಿಂದ ಭಾರತಕ್ಕೆ ಜನತೆಯ ಇಚ್ಛೆಯನ್ನು ಪ್ರತಿನಿಧೀಕರಿಸುವ ಸರಕಾರವೇ ದೊರೆತಿದೆ. ಕಳೆದ ಮಹಾ ಚುನಾವಣೆಗಳು ಜನತೆ ಏನು ಬಯಸುತ್ತದೆಂಬುದನ್ನು ಸ್ಪಷ್ಟವಾಗಿ ತಿಳಿಯುವ ಅಪೂರ್ವ ಸಾಧನವಾಗಿದ್ದಿತು. ಪ್ರಜಾಪ್ರಭುತ್ವ ಪದ್ಧತಿಯನ್ನು ಭಾರತವು ಅಂಗೀಕರಿಸಿರುವುದರಿಂದ ಜನತೆ ತನಗೆ ಹಿತಕಂಡ ಪಕ್ಷಕ್ಕೆ ಸರಕಾರವನ್ನು ನಡೆಸುವ ಗೌರವ ಹಾಗೂ ಹೊಣೆಗಾರಿಕೆಯನ್ನು ಕೊಡಲು ಅನುಕೂಲವುಂಟು. ಜನತೆಯು ತನಗೆ ಹಿತವುಂಟು ಮಾಡುವ ಸರಕಾರವನ್ನು ಎಂದಿಗೂ ಕೈಬಿಡುವುದಿಲ್ಲ. ಅದನ್ನು ಮೆಚ್ಚುತ್ತದೆ, ಮತ್ತು ಆದರಿಸುತ್ತದೆ. ಅದೇ ಕಾಲಕ್ಕೆ ತನಗೆ ಅಹಿತವುಂಟು ಮಾಡುವ ಸರಕಾರವನ್ನು ಕಿತ್ತೆಸೆದು, ಎಡಗಾಲಿಂದ ಒದೆಯುತ್ತದೆ!

ಸರಕಾರದ ಜವಾಬ್ದಾರಿ ಸ್ಥಾನಗಳಲ್ಲಿರುವ ವ್ಯಕ್ತಿಗಳು ಜನತೆಯ ಇಚ್ಛೆ ಆಕಾಂಕ್ಷೆಗಳನ್ನು ತಿಳಿದುಕೊಳ್ಳುವುದರಲ್ಲಿ ಬುದ್ಧಿವಂತರಿದ್ದರೆ, ಮತ್ತು ಜನತೆಯ ಒಲವಿನ ಓಟವನ್ನು ಮನದಂದು ಅದರಂತೆ ಪ್ರವರ್ತಿಸಿದರೆ, ಆಗ ರಾಷ್ಟ್ರ ಕಲ್ಯಾಣ ಕೈಗೂಡುತ್ತದೆ. ಸ್ವತಿ ಯಾಗಿ ಸೋವಾರಿಗಳೂ ಜನಪೀಡಿತರೂ ಆಗಿ ಪರಿಣಮಿಸಿದರೆ, ಜನತೆಯ ಸಾಮೂಹಿಕ ಭರ್ತ್ಸನೆ ಮತ್ತು ಕ್ರೋಧಕ್ಕೆ ಅವರು ಬಲಿಯಾಗಬೇಕಾಗುವುದು ಕೇವಲ [illegible] ಕಾರವುಳ್ಳ ರಾಜ್ಯದಲ್ಲಿಯ ಅವಸ್ಥೆಯೇ ಈ ರೀತನಾಗಿದೆ ಎಂದ ಮೇಲೆ—ಪ್ರಜಾಪ್ರಭುತ್ವ ಪದ್ಧತಿ ಜಾರಿಯಲ್ಲಿರುವ ದೇಶದಲ್ಲಿ ಸರಕಾರ ಮತ್ತು ಜನತೆಯ ಸಂಬಂಧ ಬಹಳ ನಾಜೂಕಾಗಿದೆ ಎನ್ನುವುದ ಸ್ವಯಂವ್ಯಕ್ತ. ಪ್ರಜಾಪ್ರಭುತ್ವ ಪದ್ಧತಿಯಂತೆ ಏನಾದರೂ ನೀತಿಗಳ ಸಂಬಂಧವೇ ಸರಕಾರ ಮತ್ತು ಜನತೆಯ ನಡುವೆ ಇರುವುದವರೆ ಒಂದು ಸರಕಾರ ಉರುಳಿ, ಇನ್ನೊಂದು ತಲೆ ಎತ್ತುತ್ತದೆ, ಆದರೆ ಜನತೆ ಹಾಗೆ ಉಳಿಸದೇ. ಸರಕಾರಕ್ಕೆ ಚ್ಯುತಿ ಬಂದೀತು. ಆದರೆ, ಜನತೆ ಅಳಿವು ಕಾಣದು.

ಈ ರಹಸ್ಯವನ್ನು ತಿಳಿದುಕೊಂಡೇ ನಮ್ಮ ಸರಕಾರವು ರಾಷ್ಟ್ರೀಯ ಅಭಿವೃದ್ಧಿ ಮುಂತಾದ ಯೋಜನೆಗಳಲ್ಲಿ ಸಾಕಷ್ಟು ಸರಕಾರೀ ನಿಯಂತ್ರಣವನ್ನು ಹೇರಿದಾಗ್ಯೂ ಜನತೆಯ ಸಹಕಾರಕ್ಕೆ ವಿಶೇಷ ಮಾರ್ಗವನ್ನು ಕಲ್ಪಿಸಿಕೊಟ್ಟಿರುತ್ತದೆ. ಸರಕಾರದ ಅಭಿಪ್ರಾಯವು ಜನತೆಯ ಸಾಮಾನ್ಯಾಭಿಪ್ರಾಯವೆನ್ನುವಂತೆ, ಜನಪ್ರತಿನಿಧಿಗಳ ಸಮ್ಮತಿ ಮುದ್ರೆ ಪಂಚವಾರ್ಷಿಕ ಯೋಜನೆಗೆ ಬಿದ್ದಿರುತ್ತದೆ. ಜನತೆ ನೇರವಾಗಿ ನೆರವಾಗಬಲ್ಲ ವಿಧಾನವೇ

(ಆನೇ ಪುಟ ನೋಡಿರಿ)

1952ನೆ ಇಸವಿಯ [illegible] ಮಾಡಿದ [illegible] [illegible] [illegible] ಉಪಯೋಗಿಸುತ್ತಿದ್ದ ಪ್ರಾಣವಾಯು [illegible] ಯಂತ್ರೋಪಕರಣ

ನೋವು ಕಳೆಯುವ, ಜೀವ ಉಳಿಸುವ ಹೊಸ ಶೋಧ

ಮನುಷ್ಯನ ಚಿಕಿತ್ಸಕ ಬುದ್ಧಿಯ ಅದ್ಭುತ ಆವಿಷ್ಕಾರ

ಉತ್ತರ ಧ್ರುವದಲ್ಲಿ ದೂರಸ್ಥಿತವಾದ ನಗರ ಸ್ಟೈಂಡ ಸ್ಟ್ಯಾಕ ಅಲ್ಲಿಯೊಂದು ಆರೋಗ್ಯ ಧಾಮವುಂಟು. ಕೆಲವೇ ದಿನಗಳಿಗೆ ಮುಂಚೆ ಇಲ್ಲಿ ನಡೆದ ಘಟನೆಯೊಂದು ಚಿಕಿತ್ಸಾ ವಿಜ್ಞಾನದಲ್ಲಿ ತನ್ನ ಪೃಷ್ಠವನ್ನು ಸದಾಕಾಲ ಕಾಯ್ದಿಟ್ಟುಕೊಳ್ಳುವಂತಿದೆ. ಒಬ್ಬ ಕಟ್ಟಿಗೆ ಒಡೆಯುವವನು ಕ್ಷಯರೋಗಕ್ಕೆ ಬಲಿಬಿದ್ದು, ಇಲ್ಲಿ ನೆಲೆಸಹತ್ತಿದ. ಹಲವು ತಿಂಗಳುಗಳಿಂದ ಅವನು ಈ ರೋಗಪೀಡಿತನಾಗಿದ್ದ–ಒಂದು ದಿನವಂತೂ ಅವನ ಅವಸ್ಥೆಯು ತೀರಾ ವಿವಂಚನೆಯನ್ನುಂಟುಮಾಡಿತು. ನರ್ಸರು ಇವನಿನ್ನು ಕೆಲವೇ ತಾಸುಗಳಲ್ಲಿ ಸಾಯುವುದೇ ನಿಶ್ಚಯವೆಂದು ಎಣಿಸಿದರು. ಆದಕಾರಣ ಜನರಲ್ ವಾರ್ಡಿನಿಂದ ಶವಗಳ ಕೋಣೆಗೇ ಅವನನ್ನೊಯ್ದರು!

ಆದರೆ ಪ್ರಮುಖ ವೈದ್ಯಕೀಯ ಅಧಿಕಾರಿಗಳಾದ ಡಾ. ಬಿ. ಓ. ಕಾರ್ಸಟೆನ್ಸನ್ನರು ನರ್ಸುಗಳನ್ನು ತಡೆದರು. ಈ ರೋಗಿಯು ಸಾಯುವುದೇ ನಿಶ್ಚಯವಾಗಿದ್ದರೆ, ಇನ್ನೂವರೆಗೆ ಅಪರೀಕ್ಷಿತವಾಗಿ ಉಳಿದಿರುವ ಅದೊಂದು ಔಷಧವನ್ನು ಇವನಮೇಲೆ ಏಕೆ ಪ್ರಯೋಗಿಸಬಾರದು? ಎಂದು ಡಾಕ್ಟರರು ಯೋಚಿಸಿದರು. ಈ ದಿವ್ಯೌಷಧದ ಮೇಲೆ ಲಕ್ಷಾಂತರ ವೈದ್ಯರ ಆಶಾಭರಿತ ದೃಷ್ಟಿ ನೆಟ್ಟಿದ್ದಿತು. ರೋಗಿ ಉಳಿದನಾದರೆ, ಈ ಔಷಧದ ಫಲ ಏನೆಂಬುದು ಸ್ವತಃ ಸಿದ್ಧಗೊಳ್ಳುತ್ತದೆ. ಒಂದು ವೇಳೆ ಮರಣವನ್ನೇ ಹೊಂದಿದರೆ, ಈ ಔಷಧದಲ್ಲಿ ಏನು ದೋಷವಿದೆ ಎಂಬುದನ್ನು ಪ್ರಯೋಗ ಮೂಲಕ ಕಂಡುಹಿಡಿಯಲಿಕ್ಕೆ ಅವಕಾಶವುಂಟಾಗುವುದು. ಹೀಗೆ ಯೋಚಿಸಿ ಡಾ. ಕಾರ್ಸಟೆನ್ಸನ್ನರು ಮೃತ್ಯು ಮುಖದಲ್ಲಿ ಚಡಪಡಿಸುತ್ತಿರುವ ಈ ದುರ್ದೈವಿಯ ಮೇಲೆ ನೂತನ ಔಷಧವನ್ನು ಪ್ರಯೋಗಿಸಿದರು.

ಒಂದು ದಿನ–ಎರಡು ದಿನ–ಇದೇ ರೀತಿ ಆ ಕಟ್ಟಿಗೆ ಒಡೆಯುವವನ ಮರಣದ ಗಳಿಗೆಯನ್ನು ಲೆಕ್ಕಹಾಕುತಿದ್ದಂತೆಯೇ ಹದಿನೈದು ದಿನಗಳು ಸಂದವು. ಆದರೆ ಅವನೇನು ಸಾಯಲಿಲ್ಲ ಹದಿನಾರನೇ ದಿನ ಇಡೀ ಆರೋಗ್ಯ ಧಾಮಕ್ಕೆಯೇ ಆಶ್ಚರ್ಯಜನಕವಾಗುವ ರೀತಿಯಲ್ಲಿ ರೋಗಿಯನ್ನು ಶವಗಳ ಕೋಣೆಯಿಂದ, ಮರಳಿ ಜನರಲ್ ವಾರ್ಡಿಗೆ ತಂದರು! ರೋಗಮುಕ್ತನಾಗುವುದರ ಜೊತೆಗೆಯೇ ಅವನು ಸ್ವಾಸ್ಥ್ಯವನ್ನೂ ಪಡೆಯತೊಡಗಿದ. ಕೆಲವೇ ವಾರಗಳಲ್ಲಿ ಅವನ ತೂಕ ೪೦ ರಾತಲು ಹೆಚ್ಚಿಕೊಂಡಿತು. ನಾಲ್ಕು ತಿಂಗಳುಗಳ ಮೇಲೆ ಅವನು ಸಂಪೂರ್ಣ ನಿರೋಗಿಯಾಗಿ ಆರೋಗ್ಯ ಧಾಮವನ್ನು ಬಿಟ್ಟು, ಸಂತೋಷದಿಂದ ನಲಿಯುತ್ತಾ ಮನೆಗೆ ಹೋದ.

ಕೇವಲ ಸ್ವೀಡನು ದೇಶವೊಂದರಲ್ಲಿಯೇ ಇದುವರೆಗೆ ೨೦,೦೦೦ ಕ್ಷಯರೋಗಿಗಳಿಗೆ ಪ್ರಾಣರಕ್ಷಕವಾದ ದಿವ್ಯೌಷಧವೆಂದು ಸಿದ್ಧಗೊಂಡ ಈ ಮದ್ದಿನ ಆವಿಷ್ಕಾರದ ಕತೆ ಹೀಗಿದೆ: ಈ ಔಷಧದ ಹೆಸರು ಬಹಳ ಉದ್ದ– ಪ್ಯಾರಾ-ಎಮಿನೋ ಸ್ಯಾಲಿಸಿಲಿಕ್ ಎಸಿಡ್ ಎಂಬುದಾಗಿದೆ. ಆದರೆ ಸಂಕ್ಷೇಪದಲ್ಲಿ 'ಪಾಸ್" ಅಥವಾ ಪಿ. ಎ. ಎಸ್. ಎನ್ನುತ್ತಾರೆ.

— ೨ —

ಇನ್ನೂ ಒಂದು ವಿಚಿತ್ರ ಆವಿಷ್ಕಾರವನ್ನು ಕೇಳಿಬಿಡಿ ಕೊರಿಯಾದಲ್ಲಿ ಸ್ವೀಡಿಶ್ ವೈದ್ಯರು ಹೆಚ್ಚಿನ ಗಾಯಾಳು ಸೈನಿಕರ ಪ್ರಾಣವನ್ನು ರಕ್ಷಿಸಲು ಅವರ ರಕ್ತಹೀನ ಶರೀರಕ್ಕೆ ಬೇರೊಬ್ಬನ ನೆತ್ತರನ್ನು ಪ್ರಯೋಗಿಸುವುದರ ಬದಲು "ಚುಕಂದರದ ರಸ"ವನ್ನು ಉಪಯೋಗಿಸಿ, ಸಾಫಲ್ಯ ಪಡೆದಿರುವರು. ಉತ್ತರ ಸ್ವೀಡನಿನಲ್ಲಿರುವ ಆಲೋರ್ ಬಂದರದಿಂದ ಗಡ್ಡೆ ಗಟ್ಟಿದ ಚುಕಂದರದ ರಸವನ್ನು ತುಂಬಿಕೊಂಡು ಸ್ಟಾಕ್ ಹೋಮಿನ ಉತ್ತರಕ್ಕೆ ಉಪಸಲಾ ಎನ್ನುವ ಬಂದರಕ್ಕೆ ಒಂದು ಹಡಗ ಹೊರಟಿತು. ಆದರೆ ಮಾರ್ಗದಲ್ಲಿಯೇ ಈ ರಸವನ್ನು ತುಂಬಿಟ್ಟಿದ್ದ ಟ್ಯಾಂಕಿಯೊಳಗೆ "ನ್ಯೂಕೊನೋಸ್ಟಾಕ್ ಮೆಸೆಂಟಿರಾಯಡಿಸ್" ಎನ್ನುವ ಕೀಟಾಣುಗಳು ಪ್ರವಿಷ್ಟವಾದುವು; ಮತ್ತು ಈ ರಸತುಂಬಿದ ಹಡಗವು ನಿರ್ದಿಷ್ಟ ಬಂದರವನ್ನು ತಲುಪುವಷ್ಟರೊಳಗೆ ರಾಸಾಯನಿಕ ಪರಿವರ್ತನೆಗಳ ಕಾರಣದಿಂದ, ಚುಕಂದರದ ರಸ ಸಂಪೂರ್ಣ ಭಿನ್ನ ಪದಾರ್ಥವಾಗಿ ಪರಿಣಮಿಸಿತು.

ಇಬ್ಬರು ತರುಣ ವೈಜ್ಞಾನಿಕರು ಈ ಪರಿವರ್ತಿತ ರಸದ ವಿಶ್ಲೇಷಣಾ ಕಾರ್ಯವನ್ನು ತೊಡಗಿ ಪರೀಕ್ಷೆ ನಡೆಸಿದರು. ಕೊನೆಯಲ್ಲಿ ಮನುಷ್ಯನ ರಕ್ತದಲ್ಲಿ ಮೂಲ ತತ್ವದ ರೂಪದಲ್ಲಿರುವ ಡೆಕ್ಸ್ಟ್ರಾನ್ ಎನ್ನುವ ಸಕ್ಕರೆಯನ್ನು ಬಿಟ್ಟರೆ, ಮಾನವ ರಕ್ತದ ಉಳಿದೆಲ್ಲ ಪದಾರ್ಥಗಳು ,ಈ ರಸದಲ್ಲಿವೆ ಎಂದು ಸಿದ್ಧಗೊಂಡಿತು. ಈಗ ಬ್ಲಡ್ ಪ್ಲಾಸ್ಮಾದಂಥ ಕಷ್ಟ ಸಾಧ್ಯ ಉಪಚಾರ ಮಾಡುವ ಆವಶ್ಯಕತೆಯೇ ಉಳಿಯಲಿಲ್ಲ. ನೂರಾರು ಗಾಯಾಳು ಸೈನಿಕರಿಗೆ ಈ ನೂತನ ಚುಕಂದರದ ರಸವನ್ನು ಕೊಟ್ಟು ಪುನರ್ಜೀವಿತರನ್ನಾಗಿ ಮಾಡಲು ಸಾಧ್ಯವಾಯಿತು.

— ೩ —

ಸ್ಕೆಂಡಿನೇವಿಯಾದಲ್ಲಿ ಇನ್ನೂ ಒಂದು ಹೊಸ ಜೀವನ ರಕ್ಷಕ ಸಾಧನದ ಆವಿಷ್ಕಾರವಾಗಿದೆ ಇದೂ ಒಂದು ಆಕಸ್ಮಿಕ ಪ್ರಯೋಗದ ಫಲ ಒಬ್ಬ ಮುದುಕನಿಗೆ ಬಹಳ ಭಯಕಾರಕವಾದ ಶ್ವಾಸಕೋಶದ ವ್ರಣದ ಪೀಡೆಯನ್ನು ಸಹಿಸುವುದಾಗಲಿಲ್ಲ ವೈದ್ಯರು ಇದನ್ನು ಶಸ್ತ್ರ ಚಿಕಿತ್ಸೆಯಿಂದ ಗುಣಮುಖ ಮಾಡಬೇಕಾದರೆ ಒಂಭತ್ತು ತಾಸು ಕಾಲ ತಗಲುತ್ತದೆ ಎಂದರು. ಆದರೆ ಎರಡು ತಾಸು ಸಮಯಕ್ಕಿಂತ ಹೆಚ್ಚು ಕಾಲ ಯಾರನ್ನೂ ಅಚೇತನಾವಸ್ಥೆಯಲ್ಲಿ ಇಡಲಿಕ್ಕೆ ಬರುವುದಿಲ್ಲ!

ಆದರೂ ಡಾಕ್ಟರರು ಮತ್ತಷ್ಟು ಆಲೋಚಿಸಿ "ಒಂದು ಆಶೆಯುಂಟು–ಅದೆಂದರೆ ನಾಡಿ ಮತ್ತು ಹೃದಯ ಗತಿಯ ರಕ್ಷಣೆ ಮಾಡುವ ಸ್ಪಾಯಿರೋಪಲ್ಸೇಟರ್ ಎನ್ನುವ ಹೊಸ ಯಂತ್ರ" ಎಂದರು ಇಷ್ಟರವರೆಗೆ ಈ ಯಂತ್ರದ ವಾಸ್ತವಿಕ ಪ್ರಯೋಗವನ್ನು ಮಾಡಿರಲಿಲ್ಲ ಸರಿ, ನೈಟ್ರಸ್ ಆಕ್ಸೈಡನ್ನು ಕೊಟ್ಟು ಆ ಮುದುಕನನ್ನು ದೀರ್ಘ ನಿದ್ರೆಗೆ ಗುರಿಮಾಡಿದರು. ಬಳಿಕ ಡಾಕ್ಟರರು ರೋಗಿಯ ಎದೆಯನ್ನು ಚೂರಿಯಿಂದ ಸಂಪೂರ್ಣ ತೆರೆದರು; ಮತ್ತು ಹೃದಯ ಹಾಗು ಶ್ವಾಸಕೋಶಗಳನ್ನು ಹೊರತೆಗೆದರು. ಶಸ್ತ್ರ ಚಿಕಿತ್ಸೆಯನ್ನು ಮಾಡಿ, ಪುನಃ ಅವನ್ನು ಮೊದಲಿನ ಸ್ಥಾನದಲ್ಲಿಯೇ ಇಟ್ಟು, ಹೊಲಿಗೆಯನ್ನು ಮುಗಿಸುವುದಕ್ಕೆ ೧೧ ತಾಸು ಸಮಯಬೇಕಾಯಿತು. ವೈಜ್ಞಾನಿಕದ ಪ್ರಯೋಗದ ಫಲವಾಗಿ ರೂಪುಗೊಂಡ ಈ ಯಂತ್ರದ ಪ್ರಭಾವದಿಂದ, ಆ ಮುದುಕ ಸಂಪೂರ್ಣ ಸ್ವಾಸ್ಥ್ಯವನ್ನು ಪಡೆದುಕೊಂಡನು.

ಇದರಂತೆ ಇನ್ನೂ ಒಂದು ಅದ್ಭುತ ಯಂತ್ರದ ವಿಷಯವನ್ನು ಕೇಳೋಣ. ಇನ್‌ಕ್ಯೂಬೇಟರ್ ಎಂದು ಈ ಯಂತ್ರದ ಹೆಸರು. ಈ ಯಂತ್ರದಿಂದ ಪೂರ್ಣಾವಧಿಗೆ ಮುಂಚೆಯೇ ಜನಿಸುವ ಮಕ್ಕಳ ಸ್ವಾಭಾವಿಕ ವಿಕಾಸವಾಗಿ, ಅವು ಪೂರ್ಣಾವಧಿಯ ಬೆಳವಣಿಗೆಯನ್ನು ಸಾಧಿಸುವಂತೆ ಮಾಡುವವು. ಸ್ವೀಡನಿನ ಟ್ರಾಲ್ ಹಟ್ಟನ್ ಆಸ್ಪತ್ರೆಯಲ್ಲಿ ಅವಧಿ ಮುಗಿಯುವುದಕ್ಕೆ ಮೂರು ತಿಂಗಳಿಗೆ ಮುಂಚೆಯೇ ಒಬ್ಬ ಹೆಂಗಸು ಒಂದೇ ಸಲ ಮೂರು ಹೆಣ್ಣು ಮಕ್ಕಳನ್ನು ಹೆತ್ತಳು. ಒಂದು ಮಗು ಆ ಕೂಡಲೇ ಮರಣಗೊಂಡಿತು. ಉಳಿದೆರಡರಲ್ಲಿ ಒಂದರ ತೂಕ ಎರಡು ರಾತಲು; ಇನ್ನೊಂದರದ್ದು ಒಂದೂವರೆ ರಾತಲು. ಇವುಗಳು ಬದುಕುವ ಆಶೆಯಿಲ್ಲ. ಆದರೂ ಪ್ರಾಣವಾಯು ಮತ್ತು ಕೃತ್ರಿಮ ಶಾರೀರಕ ಉಷ್ಣವನ್ನೂ ನಳಿಗೆಗಳ ಮೂಲಕ ಶಿಶುಗಳ ದೇಹಕ್ಕೆ ಪೋಷಕಾಂಶಗಳನ್ನೂ ಒದಗಿಸಿ ಇನ್‌ಕ್ಯೂಬೇಟರ್ ಯಂತ್ರದಲ್ಲಿ ಇಡಲಾಯಿತು. ಮೊದಲಿನ ಇಪ್ಪತ್ತನಾಲ್ಕು ತಾಸುಗಳಲ್ಲಿ ಶಿಶುಗಳ ತೂಕವು ಇಳಿಮುಖವಾಯಿತು. ಹಾಗೆಂದು ಆ ಬಳಿಕ, ನಿಧಾನವಾಗಿ ತೂಕ ಹೆಚ್ಚುತ್ತಾ ಹೋಯಿತು. ಮೂರು ಮಾಸಗಳ ಕಾಲ ಇದೇ ಪ್ರಕಾ

(೧೦ನೇ ಪುಟ ನೋಡಿರಿ)

ಉಡ್ಪಿ ಡಿ. ಮು ಕೋರ್ಟಿನಲ್ಲಿ

S. C. No. 283/1953.

Advocate A. ಲಕ್ಷ್ಮೀನಾರಾಯಣ ರಾವ್ ವಾದಿ.

ಮತ್ತು.

K. M. ಪದ್ಮಶೇಖರ ಪ್ರತಿವಾದಿ

ಇವರೊಳಗೆ.

ಮೇಲ್ಕಂಡ ವ್ಯಾಜ್ಯದ ವಾದಿಯು ಪ್ರತಿವಾದಿಯಿಂದ ಬರತಕ್ಕ ಬಾಡಿಗೆ ಬಗ್ಗೆ ಮಾಡಿದ್ದಾಗಿದ್ದು, ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿ ನೋಟೀಸಿನ ಬಗ್ಗೆ ತಾ 28–7–53ಕ್ಕೆ ಮುಟ್ಟಿಸುವದ್ರಿಂದ ಆ ದಿನ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದಿದ್ದರೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು

P. Padmanabha Rao

Vakil for Plaintiff

Dated 8–7–1953 Udipi

The Canara Mutual Assurance Co., LTD.

Estd. 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ಮಿಮಾ ಗಣನೆಯು 31–12–1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ. ದ. ಭಾರತ

ರಾಮತೀರ್ಥ

ಬ್ರಾಹ್ಮಿ ತೈಲ

ಸೀರಿಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಒಳ್ಳೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸಾಮೂಹಿಕ ದುಡಿಮೆಯ ಫಲ

ಹಳ್ಳಿಗರ ಸ್ವಯಂ ಪ್ರೇರಿತ ಕಾರ್ಯೋತ್ಸಾಹ

ಯೋಜನಾ ಆಯೋಗವು ಸ್ಥಳೀಯ ಯೋಜನೆಗಳಿಗೆ ತುಂಬ ಮಹತ್ವವನ್ನು ಕೊಟ್ಟಿದೆ. ದೊಡ್ಡ ದೊಡ್ಡ ಯೋಜನೆಗಳನ್ನು ಸರಕಾರದ ಸಂಪೂರ್ಣ ಹತೋಟಿಯಲ್ಲಿ ಇಟ್ಟುಕೊಳ್ಳುವುದು ಅತ್ಯಾವಶ್ಯಕವಾಗಿರುವಾಗ, ಸಾರ್ವಜನಿಕರು ಸಹಕರಿಸಬಹುದಾದ ಯೋಜನೆಗಳು ಸಣ್ಣ ಮಟ್ಟದ ಸ್ಥಳೀಯ ಅಭಿವೃದ್ಧಿಯ ಕಾರ್ಯಕ್ರಮಗಳೆನ್ನುವುದು ಸತ್ಯ. ಸರಕಾರವು ಜನರು ತಮ್ಮ ಸಂಪೂರ್ಣ ಸಹಕಾರವನ್ನು ರಾಷ್ಟ್ರ ಪುನರ್ನಿರ್ಮಾಣದ ಯೋಜನೆಗಳಿಗೆ ಕೊಡಬೇಕೆಂದು ಭಿನ್ನವಿಸಿಕೊಂಡಾಗ, ಹಳ್ಳಿಗಳಲ್ಲಿ ಜನಪದ ಅಭಿವೃದ್ಧಿಯೇ ಮುಂತಾದ ಯೋಜನೆಗಳಿಂದ ನೆರವೇರಬಲ್ಲ ಕಾರ್ಯಕ್ರಮಗಳನ್ನು ತನ್ನ ದೃಷ್ಟಿಯಲ್ಲಿಟ್ಟುಕೊಂಡಿತೆಂದೂ ಹೇಳಬಹುದು. ಯಾವ ಬಗೆಯ ಯೋಜನೆಯನ್ನೂ ನಿರ್ದಿಷ್ಟಪಡಿಸಿರದ ಅನೇಕಾನೇಕ ಹಳ್ಳಿಗಳು ಸ್ವಂತದ ಆವಶ್ಯಕತೆಗಳನ್ನು ಪೂರೈಸಲು ಸ್ವತಃ ಉತ್ಸಾಹದಿಂದ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೂ ಪಂಚವಾರ್ಷಿಕ ಯೋಜನೆ ಅವಕಾಶಮಾಡಿಕೊಟ್ಟಿದೆ. ಸ್ವಯಂ ಪ್ರೇರಣೆಯಿಂದ ಹಳ್ಳಿಗಳಲ್ಲಿ ನಡೆಯುವ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗಾಗಿ ೫ ಕೋಟಿ ರೂಪಾಯಿಗಳ ನೆರವು ಕೊಡಲು ಯೋಜನೆಯು ನಿರ್ಧರಿಸುತ್ತದೆ.

ಂಂ ಂಂ

ಈ ಅನುಕೂಲವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವ ಭಾರವೂ ಹೊಣೆಗಾರಿಕೆಯೂ ಹಳ್ಳಿಗಳ ಧುರೀಣರಿಗೆ ಸೇರಿರುತ್ತದೆ. ಮೊನ್ನೆ ಒಂದು ಭಾಷಣದಲ್ಲಿ ಯೋಜನಾ ಮಂತ್ರಿ ಶ್ರೀ ಗುಲ್ಜಾರಿಲಾಲ ನಂದಾರವರು ಯೋಜನಾ ಆಯೋಗ ಕಲ್ಪಿಸಿಕೊಟ್ಟ ಈ ಸೌಲಭ್ಯದ ಉಪಯೋಗವು ಎಣಿಸಿದಷ್ಟು ಹೆಚ್ಚು ಆದಂತೆ ಕಂಡುಬಂದಿಲ್ಲವೆಂದರು. ಕಾಂಗ್ರೆಸ ಹಾಗೂ ರಚನಾತ್ಮಕ ಕಾರ್ಯಕರ್ತರು ಈ ದಿಸೆಯಲ್ಲಿ ಉತ್ಸಾಹವನ್ನು ಕಾರ್ಯಮಗ್ನರಾಗಬೇಕೆಂದವರು ವಿನಂತಿಸಿದರು. ಹಳ್ಳಿಗಳಲ್ಲಿ ಅನೇಕ ಬಗೆಯ ಸುಧಾರಣೆಗಳು ಆವಶ್ಯವೆಂಬುದನ್ನು ಕೇವಲ ವಿದ್ವಾಂಸರಷ್ಟೇ ಹೇಳುತ್ತಿರದೆ ಹಳ್ಳಿಯ ನಿವಾಸಿಗಳೂ ತಮ್ಮ ಸ್ಥಿತಿಯನ್ನು ಸುಧಾರಿಸಿದರೆ ಆದೀತೆನ್ನುವ ಅಭಿಪ್ರಾಯವನ್ನು ಹೊಂದಿರುವರು. ಅವರಿಗೆ ಸ್ವಂತ ಪರಿಶ್ರಮದ ಮೂಲಕ ಅಭ್ಯುದಯವನ್ನು ಕೈಗೂಡಿಸಿಕೊಳ್ಳುವ ಮಾರ್ಗವನ್ನು ಸಮರ್ಥರಾದ ಜನರು ನಿರ್ದೇಶಿಸಿದ್ದಾದರೆ--ಅದ್ಭುತ ಚಟುವಟಿಕೆಯನ್ನು ತೋರಿಸಲು ಸಾಧ್ಯವುಂಟು. ಹಳ್ಳಿಗಳಲ್ಲಿ ಮತ್ತೈಕ್ಯವಿಲ್ಲ. ಅವರೆಲ್ಲರನ್ನೂ ಸಂಪನ್ನ ಭಾರತವನ್ನು ಕಟ್ಟುವ ಕೆಲಸಕ್ಕೆ ಉಪಯೋಗಿಸಿಕೊಳ್ಳುವುದು ಶಕ್ಯವಿಲ್ಲ. ಒಳ್ಳೆಯ ಕೆಲಸ ಮಾಡಿರೆಂದು ಹೇಳಿದರೆ ಅವರಿಗದರ ಮಹತ್ವ ಅರ್ಥವಾಗುವುದಿಲ್ಲ--ಎಂದೆಲ್ಲ ಟೀಕಿಸುವವರಿಗೆ ಹಳ್ಳಿಯ ಜನರ ಕಾರ್ಯೋತ್ಸಾಹ ಹಾಗೂ ದಕ್ಷತೆಯ ತಿಳುವಳಿಕೆ ಪರಿಚಯವೂ ಇಲ್ಲೆನ್ನಬೇಕು. ಹಳ್ಳಿಗರ ಸಾಮಾನ್ಯ ಪ್ರಯೋಜನ ಕೊಡುವ ಉದ್ದೇಶಕ್ಕಾಗಿ ಕಷ್ಟಪಟ್ಟು ಕೆಲಸ ಮಾಡಲು ಸದಾ ಸಿದ್ಧರೆಂಬುದಕ್ಕೆ ಭಾರತದ ಅನೇಕ ಹಳ್ಳಿಗಳಲ್ಲಿ ಈಗಾಗಲೇ ನಡೆದಿರುವ ವಿಧಾಯಕ ಚಟುವಟಿಕೆಗಳು ಸಾಕ್ಷಿ.

ಂಂ ಂಂ

ಅಂಥದೊಂದು ಸಾಹಸದ ವರ್ಣನೆ ಮಾಡಿದರೆ, ನಮ್ಮ ಜನಶಕ್ತಿಯ ಸಾಮರ್ಥ್ಯವೇನೆಂಬುದು ಚೆನ್ನಾಗಿ ವ್ಯಕ್ತಗೊಳ್ಳುತ್ತದೆ. ಮಧ್ಯಪ್ರದೇಶದ ಹಳ್ಳಿಯೊಂದರಲ್ಲಿ ೧೬ ಮೈಲು ಉದ್ದದ ಮಾರ್ಗರಚನೆಯನ್ನು ಆಸುಪಾಸಿನ ಹಳ್ಳಿಗರು ಸ್ವಂತ ಶ್ರಮದಿಂದ ಮಾಡಿರುವರೆಂದು ಸುದ್ದಿ ಬಂದಿದೆ. ಸಹಕಾರೀ ಪ್ರಯತ್ನವನ್ನು ಕೈಗೊಂಡರೆ ನಾವು ಏನನ್ನು ಸಾಧಿಸಬಲ್ಲೆವೆಂಬುದಕ್ಕೆ ಈ ಮಾರ್ಗವೊಂದು ನಿದರ್ಶನ. ಈ ಮಾರ್ಗಕ್ಕೋಸ್ಕರ ಸ್ವಯಂಸೇವಕರು ಧರ್ಮಾರ್ಥವಾಗಿ ದುಡಿದರು; ಮತ್ತು ಬುಲ್ಡಾನಾ ಜಿಲ್ಲೆಯ ಸಮೃದ್ಧ ಒಳನಾಡಿನ ವ್ಯಾಪಾರವು ಹೆಚ್ಚುವಂತೆ ನೋಡುವ ಈ ಮಾರ್ಗವನ್ನು ನಿರ್ಮಿಸಿದರು. ಈ ಮಾರ್ಗ ಒಂಭತ್ತು ಗ್ರಾಮಗಳನ್ನು ಹಾದು ಹೋಗುತ್ತವೆ; ಹಾಗೂ ೭ ಸಾವಿರ ಜನರ ಉಪಯೋಗಕ್ಕೆ ಬೀಳುತ್ತದೆ. ತಾಲೂಕಿನ ಮುಖ್ಯ ಪಟ್ಟಣ ಮತ್ತು ಇತರರ ವ್ಯಾಪಾರ ಕೇಂದ್ರಗಳಿಗೆ ಆಸುಪಾಸಿನ ಹಳ್ಳಿಗಳನ್ನು ಈ ರಸ್ತೆ ಜೋಡಿಸುವುದರಿಂದ, ವ್ಯಾಪಾರವು ಭರದಿಂದ ಬೆಳೆದು ಹಳ್ಳಿಗಳು ಅಭಿವೃದ್ಧಿ ಹೊಂದಲು ಅನುಕೂಲವೆನಿಸಿದೆ. ಮಾರ್ಗ ರಚನೆಗಾಗಿ ಪ್ರಾರಂಭದಲ್ಲಿ ಮಾಡಿದ ಕೆಲಸಗಳನ್ನು ರೂಪಾಯಿಗಳಲ್ಲಿ ಲೆಕ್ಕಮಾಡಿದರೆ ಅದು ೩೦೦೦೦ಕ್ಕೆ ಬರುತ್ತದೆ. ಇದಲ್ಲದೆ ಮಾರ್ಗಕ್ಕೆ ಹಾಕಲೆಂದು ಒಟ್ಟುಗೂಡಿಸಿದ ಮುರಕಲ್ಲು ಇತ್ಯಾದಿಗಳ ಬೆಲೆ ಕೇವಲ ೪೫೦೦೦ ರೂಪಾಯಿ. ಕೆಲಸ ಇಷ್ಟು ದೊಡ್ಡದಾದರೂ ಕೇವಲ ೬೫ ದಿನಗಳಲ್ಲಿ ಇದನ್ನು ಪೂರೈಸಲಾಯಿತೆಂಬುದು ಇನ್ನಷ್ಟು ಸಂತೋಷ ನೀಡುವ ವಿಚಾರ.

ಂಂ ಂಂ

೧೯೫೨ನೇ ಆಗೋಸ್ಟು ತಿಂಗಳಲ್ಲಿ ಕೆಲವು ಜನರು ಡಿಪ್ಯೂಟಿ ಕಮೀಶನರ ಬಳಿಗೆ ಹೋಗಿ ಸುಮಾರು ೧೫ ಮೈಲು ಉದ್ದದ ಈ ಮಾರ್ಗರಚನೆಯ ಅಗತ್ಯವನ್ನು ಬಿಂಬಿಸಿ, ಸರಕಾರ ಇದನ್ನು ಕೂಡಲೇ ಕೈಗೊಳ್ಳತಕ್ಕದ್ದೆಂದು ನಿವೇದಿಸಿದರು. ಆದರೆ ಡಿಪ್ಯೂಟಿ ಕಮೀಶನರು ಹಳ್ಳಿಯ ಜನಗಳೇ ಈ ಕೆಲಸವನ್ನು ಏಕೆ ಕೈಗೊಳ್ಳಕೂಡದೆಂದು ಯೋಚಿಸಿ, ಸ್ವಯಂ ಪ್ರೇರಣೆಯಿಂದ ಎಲ್ಲರ ಉಪಯೋಗಕ್ಕೆ ಬೀಳುವ ಇಂಥ ಕೆಲಸಗಳಲ್ಲಿ ಹಳ್ಳಿಗರು ಮಗ್ನರಾಗಬೇಕೆಂದು ಬನ್ನವಿಸಿಕೊಂಡರು. ತಮ್ಮ ಆಲೋಚನೆಯನ್ನು ಜಿಲ್ಲಾ ಹಾಗೂ ಗ್ರಾಮಾಧಿಕಾರಿಗಳೊಡನೆ ಡಿಪ್ಯೂಟಿ ಕಮೀಶನರು ಚರ್ಚಿಸಿದ್ದಲ್ಲದೆ, ಸಂಬಂಧಿಸಿದ ಹಳ್ಳಿಗಳಲ್ಲೂ ಯೋಗ್ಯ ಪ್ರಚಾರ ನಡೆಯಿತು. ಸರಕಾರಕ್ಕೆ ಬಿಟ್ಟು ಕೊಟ್ಟರೆ ಇನ್ನು ಹತ್ತೈವತ್ತು ವರ್ಷಗಳಲ್ಲಿಯಾದರೂ ಪೂರೈಸಲ್ಪಡದ ಈ ಮಾರ್ಗವನ್ನು ಜನರು ಸ್ವಂತ ದುಡಿಮೆಯಿಂದ ಬೇಗನೇ ನಿರ್ಮಿಸಲು ಯಾವ ಆತಂಕವೂ ಕಾಣಲಿಲ್ಲ. ಒಂದರ ಹಿಂದೊಂದೆಂಬಂತೆ ಅನೇಕ ಸಭೆಗಳು ಜರುಗಿ, ಆ ಪ್ರದೇಶದ ಹಳ್ಳಿಗರಿಂದ- ಎಲ್ಲ ಬಗೆಯ ಸಹಕಾರ ದೊರೆಯುವಂತೆ ನೋಡಿಕೊಂಡರು. ಗ್ರಾಮಾಧಿಕಾರಿ ಹಾಗೂ ಜನತಾ ಧುರೀಣರಿಂದ ಕೂಡಿದ ೨೦-೩೦ ಜನರ ಸಮಿತಿಯೊಂದು ಮಾರ್ಗ ರಚನೆಯ ವಿಷಯದಲ್ಲಿ ದಿಗ್ದರ್ಶನ ಮಾಡುವ ಹೊಣೆ ಹೊತ್ತುಕೊಂಡಿತು.

ಂಂ ಂಂ

ಈ ಸಮಿತಿಯು ಪ್ರತಿದಿನಕ್ಕೂ ಮಾಡಬೇಕಾದ ಕೆಲಸಗಳನ್ನು ಜಾಗರೂಕತೆಯಿಂದ ಗೊತ್ತುಮಾಡಿತು. ಎಲ್ಲ ವಿವರಗಳನ್ನೂ ಗುರುತಿಸಿದ್ದಲ್ಲದೆ ಒಂದಕ್ಕೊಂದು ಪೂರಕವಾಗುವಂತೆ, ಮತ್ತು ಪರಿಣಾಮದಲ್ಲಿ ಯಾಂತ್ರಿಕ ಕಾರ್ಯಕ್ರಮತೆಯನ್ನುಂಟುಮಾಡುವಂತೆ, ಕೆಲಸಗಳನ್ನು ಹಂಚಿಹಾಕಿದರು. ಡಿಪ್ಯೂಟಿ ಕಮೀಶನರು ಮತ್ತವರ ಕೈಕೆಳಗಿನ ಎಲ್ಲ ಸರಕಾರೀ ಅಧಿಕಾರಿಗಳು ಜನತೆಯ ಈ ಯೋಜನೆಗೆ ಸರಕಾರ ನೀಡಬಹುದಾದ ಸರ್ವ ಸಹಕಾರವನ್ನು ನೀಡಿದರು. ಈ ಮಾರ್ಗದ ಸರ್ವೆಯನ್ನು ನಡೆಸಲು ಸಂಬಂಧಿಸಿದ ಅಧಿಕಾರಿಗಳು ಸಹಾಯ ಮಾಡಿದರು. ಗ್ರಾಮ ಸಮಿತಿಯವರು ಪ್ರತಿದಿನ ಯಾರ್ಯಾರು ಎಷ್ಟು ತಾಸು ದುಡಿಯತಕ್ಕದ್ದೆಂಬ ಕುರಿತು ಒಂದು ದಾಖಲು ಪುಸ್ತಕವನ್ನು ಇಟ್ಟರು. ಇದರಂತೆ ಜನರು ಸ್ವಯಂ ಪ್ರೇರಣೆಯಿಂದ ಮಾರ್ಗರಚನೆಯಲ್ಲಿ ನೆರವಿತ್ತರು. ತಾವಾಗಿ ಕೆಲಸ ಮಾಡಲಾರದವರು ಕೂಲಿಗಳಿಗೆ ಕೊಡಬೇಕಾದ ಸಂಬಳವನ್ನೂ ತಮ್ಮ ಕೈಯಿಂದ ಕೊಟ್ಟರು. ಆಸುಪಾಸಿನ ಗ್ರಾಮಗಳಲ್ಲಿ ಪ್ರತಿಯೊಬ್ಬನೂ ನಾಲ್ಕೈದು ದಿನಗಳ ಶ್ರಮದಾನ ಮಾಡಬೇಕೆಂದು ಸಾಮಾನ್ಯವಾಗಿ ಗೊತ್ತುಮಾಡಿದ್ದರು. ಪ್ರತಿಯೊಬ್ಬ ಬೇಸಾಯಗಾರನಿಂದಲೂ ಧಾನ್ಯ ಕಂದಾಯದ ಒಂದು ಪ್ರಮಾಣವನ್ನು ವಂತಿಗೆಯಾಗಿ ಸಂಗ್ರಹಿಸಿದರು. ಗಾಡಿ ಹಾಗೂ ಜಾನುವಾರುಗಳನ್ನು ಕಲ್ಲು, ಮಣ್ಣು ಸಾಗಿಸುವುದಕ್ಕೆ ಉಪಯೋಗಿಸಿದರು. ಹೀಗೆ ಸಾಮಾನ್ಯವಾಗಿ ಐದಾರು ಸಾವಿರ ಜನ ಹಳ್ಳಿಗರು ಮಾರ್ಗರಚನೆ ಕಾರ್ಯದಲ್ಲಿ ಪ್ರತ್ಯಕ್ಷ ಪಾಲುಗೊಂಡರು. ಕೆಲವೊಮ್ಮೆ ಈ ಪ್ರಮಾಣ ಎಂಟಕ್ಕೂ ಮುಟ್ಟುತಿತ್ತು.

ಂಂ ಂಂ

ತಿಂಗಳಿಗೊಂದು ಸಲ ಮಾರ್ಗರಚನಾ ದಿನವನ್ನು ಆಚರಿಸುತಿದ್ದರು. ಆ ದಿನ ಎಲ್ಲರೂ ತಂತಮ್ಮ ಮನೆಕೆಲಸಗಳನ್ನೆಲ್ಲ ಬಾಕಿಯಿಟ್ಟು, ಇಲ್ಲಿ ಬಂದು ದುಡಿಯುತಿದ್ದರು. ಮೆರವಣಿಗೆಯಲ್ಲಿ ಬಂದು ಉತ್ಸಾಹದಿಂದ ಕೆಲಸ ಮಾಡುವುದು. ಒಂದು ರೀತಿಯ ಮನೋರಂಜನೆಯನ್ನೂ ಒದಗಿಸುತಿತ್ತು. ಹೆಂಗಸರೂ ಶಾಲಾ ಮಕ್ಕಳೂ ಈ ಮಾರ್ಗ ನಿರ್ಮಿಸಲು ನೆರವಾಗುತಿದ್ದರು. ಶಾಲೆಯ ಹುಡುಗರು ಆಟದ ಹೊರೆ ದಿನದಲ್ಲಿ ಮುರಕಲ್ಲು ಒಟ್ಟುಗೂಡಿಸಿ ರಾಶಿಮಾಡುವ ಕೆಲಸ ಮಾಡಿದರು. ಮಾರ್ಗದ ನಡುವೆ ಅರ್ಧ ಮೈಲು ಭಾಗವನ್ನು [illegible] ಬಂತು. ವಿಶೇಷ ಸಾಧನ ಸಲಕರಣೆಗಳ ಅಭಾವವಿದ್ದರೂ ಹಳ್ಳಿಗರು ಅತ್ಯುತ್ಸಾಹದಿಂದ ಪ್ರತಿಯೊಂದು ಅಂಗುಲ ಕೆಲಸವನ್ನು ಮಾಡಿ ಸಹಕಾರೀ ಶಕ್ತಿ ಏನು ಮಾಡಬಲ್ಲುದೆಂದು ತೋರಿಸಿಕೊಟ್ಟರು. ಹೀಗೆ ಹಳ್ಳಿಗರು ನೀಡಿದ ಶ್ರಮದಾನಕ್ಕೆ ಕೂಲಿ ಕೊಡುವ ಪಕ್ಷದಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿ ತಗಲೀತು. ಈ ಮಾರ್ಗದಿಂದ ಹಳ್ಳಿಗಳಿಗೆ ತುಂಬ ಪ್ರಯೋಜನ ದೊರೆಯುವುದೆಂಬುದನ್ನು ಮನಗಂಡು; ಮಾರ್ಗಕ್ಕೆ ಸಂಬಂಧಿಸಿದ ಭೂಮಿಯನ್ನು ಸ್ವೇಚ್ಛೆಯಿಂದ ಹಳ್ಳಿಗರು ದಾನ ನೀಡಿದರು. ಈ ರೀತಿ ದಾನಬಂದ ಭೂಮಿಯ ಬೆಲೆ ೫೦೦೦೦ ರೂಪಾಯಿ. ಈ ಶ್ರಮದಾನ ಯಜ್ಞದ ಮಹತ್ವವನ್ನು ಕಂಡ ನೆರೆ ಹಳ್ಳಿಗೆ [illegible] ಯಾತ್ರಿಕರು ಸುಮಾರು ಒಂದೂವರೆ ಸಾವಿರ ರೂಪಾಯಿ ಸಹಾಯ ಮಾಡಿದರು. ಈ [illegible] ತ್ರಿಕರಿಗೆ ನಡೆದು ಬರಲು ಯೋಗ್ಯ ಮಾರ್ಗವಿರಲಿಲ್ಲ. ಈ ಅಭಾವವನ್ನು ದೂರೀಕರಿಸಿದುದಕ್ಕೆ ಕೃತಜ್ಞತಾ [illegible] ಈ ಕಾಣಿಕೆಯನ್ನವರು ಕೊಟ್ಟರು. ಕಳೆದ ಹಳ್ಳಿಗರ ಪಾಲಿಗೆ ಇದು ಸ್ವಾವಲಂಬನೆಗಾಗಿ ಮಾಡಿದ ಪ್ರಯತ್ನದ ದ್ಯೋತಕವೇ ನಿಜ.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ / Zandu Brahmi Hair Oil — ಮೆದುಳಿಗೆ ತಂಪು– ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. ೩–೬–೦ ಕಾಲು ರಾತ್ಲಿಗೆ ರೂ. 1.

ಝಂಡೂ ಸರಸಪರಿಲ್ಲಾ / Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1 ರ ರೂ. 1–5–0

Zandu Zuvi Drops / ಝಂಡೂ ಜ್ಯುವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ–ರೂ. 2-12-0

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು:–

ಮಂಗಳೂರು: ಷಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್, ಇನ್ಸ್ಟಿಟ್ಯೂಟ್ ಲಿಮಿಟೆಡ್
ಕಾರ್ಕಳ. ವಿ. ವಿ. ಕಣ್ವೆ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.

ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧೀರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಾಂಚೇರಿ, ಕೊಚ್ಚಿ.

ರಾಜ್ಯ ಸರಕಾರಗಳ ಅಭಿವೃದ್ಧಿ ಸಾಲ

ಜನಹಿತದ ಯೋಜನೆಗಳಿಗಾಗಿ ಬಂಡವಳ ಒದಗಿಸುವ ಹಂಚಿಕೆ

ಜಮ್ಮೂ ಆಂದೋಲನವನ್ನು ನಿಲ್ಲಿಸಿಬಿಡುವುದೇ ಸದ್ಯಕ್ಕೆ ಯೋಗ್ಯವಾದ ಮಾರ್ಗವೆಂದು ಪ್ರಧಾನಿ ನೆಹರೂರವರು ಮಾಡಿದ ಸಲಹೆಗೆ ಪ್ರಜಾ ಪರಿಷತ್ತಿನ ಅಧ್ಯಕ್ಷ ಪಂಡಿತ ಪ್ರೇಮನಾಥ ಡೋಗ್ರಾರವರು ಒಪ್ಪಿಕೊಂಡಿರುವರು. ಪರಿಣಾಮದಲ್ಲಿ ಪ್ರಜಾ ಪರಿಷತ್ತಿನ ಚಳವಳಿಕ್ಕೆ ಬೆಂಬಲ ಸೂಚಿಸುತ್ತಿದ್ದ ರಾಮರಾಜ್ಯ ಪರಿಷತ್ತು, ಹಿಂದೂ ಮಹಾಸಭೆ ಮತ್ತು ಭಾರತೀಯ ಜನಸಂಘಗಳ ಚಟುವಟಿಕೆಗಳೂ ನಿಲ್ಲಿಸಲ್ಪಟ್ಟವು. ಪ್ರಧಾನಿ ನೆಹರೂರವರ ಬಿನ್ನಹದಲ್ಲಿ ಕಾಶ್ಮೀರ ಪ್ರಶ್ನೆಯನ್ನು ಹಿಂದಿನಕ್ಕಿಂತ ಭಿನ್ನವಾದ ದೃಷ್ಟಿಕೋಣದಿಂದ ವೀಕ್ಷಿಸಲಾಗುವುದೆನ್ನುವ ಧ್ವನಿ ಹೊರಟಿರುವುದೇ ಪ್ರಜಾ ಪರಿಷತ್ತಿನವರು ಈ ಅಂತಿಮ ನಿರ್ಣಯವನ್ನು ಕೈಗೊಳ್ಳಲು ಕಾರಣವಾಯಿತು. ಪ್ರೇಮನಾಥ ಡೋಗ್ರಾರವರು ಈ ಸಂಬಂಧದಲ್ಲಿ ಕೊಟ್ಟ ಹೇಳಿಕೆಯ ಮೇಲಿಂದ ಪ್ರಜಾ ಪರಿಷತ್ತಿನವರು ಹೂಡಿದ ಚಳವಳದ ಉದ್ದೇಶ ಸಾಧನೆಯು ಸಾಕಷ್ಟು ಫಲಿಸಿದೆ ಎನ್ನುವುದು ವ್ಯಕ್ತಗೊಳ್ಳುತ್ತದೆ. ಕಾಶ್ಮೀರ ಪ್ರಶ್ನೆಯನ್ನು ಬಿಡಿಸುವಾಗ ಜಮ್ಮೂವಿನ ಜನರ ಅಭಿಪ್ರಾಯಕ್ಕೆ ಮನ್ನಣೆ ದೊರಕುವಂತಾಗಬೇಕು, ಮತ್ತು ಭಾರತದೊಡನೆ ಲೀನವಾಗುವುದೇ ಜಮ್ಮೂ ಜನತೆಯ ಇಚ್ಛೆ ಎಂದವರು ಹೇಳುತ್ತಾ ಬಂದಿದ್ದರು. ಕಾಶ್ಮೀರ ಪ್ರಶ್ನೆಯನ್ನು ವಿಶಿಷ್ಟ ಸ್ಥಾನಮಾನಗಳಿಗೇರಿಸಿದ್ದ ಪ್ರಧಾನಿ ನೆಹರೂರವರು ಈ ಚಳವಳದಲ್ಲಿ ಜಾತೀಯ ಆಂದೋಲನವನ್ನು ಹೆಚ್ಚಾಗಿ ಗುರುತಿಸಿದರು. ಇಕ್ಕಡೆಯವರೂ ಈ ಸಂಗತಿಯನ್ನು ಸರಿಯಾದ ದೃಷ್ಟಿಕೋಣದಿಂದ ವಿಚಾರಿಸದೆ ಇದ್ದುದರಿಂದ-ಸತ್ಯಾಗ್ರಹವು ಅತ್ಯುಗ್ರ ಸ್ವರೂಪವನ್ನು ಮುಟ್ಟಿತೆಂದೂ ಡಾ। ಶ್ಯಾಮ ಪ್ರಸಾದ ಮುಖರ್ಜಿಯಂಥ ರಾಷ್ಟ್ರೀಯ ಧುರೀಣರನ್ನು ಬಲಿಗೊಂಡಿತೆಂದೂ ನಿಷ್ಪಕ್ಷಪಾತಿಗಳ ಅಭಿಪ್ರಾಯ. ಈಗ ಭಾರತ-ಪಾಕ ಸಂಬಂಧದ ವಿಮರ್ಶೆ ನಡೆಯಲಿದೆ, ಜೂಲೈ ೨೫ನೇ ದಿನಾಂಕ ನೆಹರೂರವರು ಕರಾಚಿಯಲ್ಲಿ ಮಹಮ್ಮದಾಲಿಯವರೊಡನೆ ಕಾಶ್ಮೀರ ಪ್ರಶ್ನೆಯೇ ಮುಂತಾದುವೆಲ್ಲ ಸಂಗತಿಗಳ ಕುರಿತು ಮಾತುಕತೆಯನ್ನಾಡಲಿರುವರು. ಆದಕಾರಣ, ಮಾತುಕತೆಗಳು ನಿರಾತಂಕವಾಗಿ ಸಾಗಲು ಆತಂಕಪ್ರಾಯವಾಗಬಹುದಾದ ಜಮ್ಮೂ ಆಂದೋಲನವನ್ನು ನಿಲ್ಲಿಸಿರುವುದು ಯೋಗ್ಯ ನಿರ್ಣಯವೆಂದು ಪ್ರಶಂಸೆ ಕೇಳಿಬರುತ್ತಿದೆ. ನಿಜ ಹೇಳಬೇಕೆಂದರೆ, ಡಾ। ಖರೆ, ಸಂತಾನಮ್ ಮುಂತಾದ ಮಹನೀಯರು ಇದಕ್ಕೂ ಹಿಂದೆಯೇ ಜಮ್ಮೂ ಚಳವಳವು ನಿಲ್ಲುವುದೇ ಸೂಕ್ತವೆಂದು ಸೂಚಿಸಿದ್ದರು. ಹಾಗೆಂದು ಭಾರತ ಸರಕಾರದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಕಂಡು ಬರದ್ದರಿಂದ ಜಮ್ಮೂ ಸತ್ಯಾಗ್ರಹ ಮುಂದುವರಿಯಿತು. ಈಗ ಜಮ್ಮೂ ಜನರ ಬೇಡಿಕೆಯನ್ನು ನಿಷ್ಪಕ್ಷ ಭಾವನೆಯಿಂದ ಪರಿಶೀಲಿಸಿ, ಶೇಖ್ ಅಬ್ದುಲ್ಲಾರ ಸರಕಾರಕ್ಕೆ ಮಾರ್ಗದರ್ಶನವನ್ನೂ ಪಾಕಿಸ್ತಾನದೊಡನೆ ಶಾಂತಿಯುತ ಸಂಧಾನವನ್ನೂ ಮುನ್ನಡೆಸುವುದು ಭಾರತ ಸರಕಾರದ ಹೊಣೆಯಾಗಿದೆ.

ಔದಾರ್ಯಭಾವನೆ ಬೇಕು

ಹಿಂದೆ ಹಲವುಸಲ ಸೂಚಿಸಿದಂತೆ ಜಮ್ಮೂ ಜನತೆಗೆ ಶೇಖ ಅಬ್ದುಲ್ಲಾರ ಸರಕಾರದ ಮೇಲೆ ಅಸಂತೋಷವುಂಟಾಗಲು ರಾಜಕೀಯ ಹಾಗೂ ಆರ್ಥಿಕ ಕಾರಣಗಳಿವೆ; ಇವುಗಳ ಜೊತೆಗೆ ಸಾಮಾಜಿಕ ಹಿತಸಂಬಂಧಗಳಿಗೆ ಎರವಾಗುವ ಭಯವೂ ಜಮ್ಮೂ ಜನತೆಯಲ್ಲಿ ಉಂಟಾಗಿದೆ. ರಾಜಕೀಯವಾಗಿ, ಶೇಖ ಅಬ್ದುಲ್ಲಾರು ಪದೇ ಪದೇ ಕಾಶ್ಮೀರದ ಸ್ವಾಯತ್ತಾಧಿಕಾರವನ್ನು ಕುರಿತು ತಮ್ಮ ಜನರ ಮುಂದೆ ದೀರ್ಘ ಭಾಷಣ ಮಾಡುತ್ತಿರುವರು. ಭಾರತದೊಡನೆ ಲೀನವಾಗ ಬಯಸುವ ಜಮ್ಮೂ ಜನತೆಗೆ ಶೇಖ ಅಬ್ದುಲ್ಲಾರ ಈ ಭಾಷಣಗಳಿಂದ ಭೀತಿ ತಲೆಗೋರಿದೆ. ಭಾರತ ಸರಕಾರವು ಕಾಶ್ಮೀರದ ಭವಿಷ್ಯನಿರ್ಣಯವನ್ನು ಅಲ್ಲಿಯ ಜನರೇ ನಿರ್ಣಯಿಸುವ ರೆಂಬ ತತ್ವವನ್ನು ಎಂದೋ ಒಪ್ಪಿಕೊಂಡಿದೆ. ಹೀಗಿರುವಾಗ ಶೇಖ ಅಬ್ದುಲ್ಲಾರು ಪದೇ ಪದೇ ತಮ್ಮ ಸೊಲ್ಲವಿಯನ್ನು ಹಾಡುತ್ತಿರುವುದರಲ್ಲಿ ಭೂಷಣವೇನೋ ತಿಳಿಯದು. ಇದರಂತೆ ಜಮ್ಮೂವಿನ ನಿಕೃಷ್ಟ ಪರಿಸ್ಥಿತಿಯನ್ನು ಸಹಾನುಭೂತಿಯಿಂದ ನೋಡಲು ಶೇಖ ಅಬ್ದುಲ್ಲಾರ ಸರಕಾರ ಸಾಕಷ್ಟು ಲಕ್ಷ್ಯ ಪುರೈಸಿಲ್ಲವೆಂದೂ ಜಮ್ಮೂ ಜನರ ದೂರುಂಟು, ಆರ್ಥಿಕ ದೃಷ್ಟಿಯಿಂದ ಜಮ್ಮೂ ಪರಿಸ್ಥಿತಿಯು ವಿವಂಚನೆಯನ್ನುಂಟು ಮಾಡುವಂಥದಿದೆ. ಕಾಶ್ಮೀರ ಸರಕಾರವು ಜನತೆಯ ವಿಶ್ವಾಸ ಸಂಪಾದಿಸುವ ರೀತಿಯಲ್ಲಿ ಈ ಸಮಸ್ಯೆಗಳನ್ನು ವಿವೇಚಿಸಿಲ್ಲದಿರುವುದರಿಂದ ಅಲ್ಲಿ ಆಂದೋಲನ ತಲೆ ಎತ್ತಿತೆಂದರೂ ಸಲ್ಲುವುದು. ಅದ ಕಾರಣ ಕೇವಲ ಜಾತೀಯವಾದಿಗಳ ಕಿರುಕುಳವೇ ಇದೆಂದು ಹೇಳುವುದು ಸಂಪೂರ್ಣ ಸತ್ಯವಲ್ಲ. ಈ ಪಟ್ಟಿಗೆ ಪ್ರಧಾನಿ ನೆಹರೂರವರು ತಮ್ಮ ನಿಲುಮೆಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅಪೇಕ್ಷಣೀಯ. ತಮ್ಮ ವ್ಯಕ್ತಿತ್ವದ ವರ್ಚಸ್ಸನ್ನು ಉಪಯೋಗಿಸಿಕೊಂಡು, ಶೇಖ ಅಬ್ದುಲ್ಲಾರ ಸರಕಾರ ಜಮ್ಮೂ ಜನತೆಯನ್ನು ಔದಾರ್ಯದಿಂದ ನೋಡಿಕೊಳ್ಳುವಂತೆ ಪ್ರಧಾನಿ ನೆಹರೂಗಳು ಪ್ರಯತ್ನಿಸಬೇಕಾದುದು ಈಗ ನೆಲೆಗೊಳ್ಳುತ್ತಿರುವ ಶಾಂತ ವಾತಾವರಣದ ಪ್ರಥಮಾವಶ್ಯಕತೆಯಾಗಿರುತ್ತದೆ.



"ಮುಟ್ಟಿದ್ದೆಲ್ಲ ಚಿನ್ನ" ವಾಗಿಸುವ ಅದ್ಭುತ ಮಾಯಾ ಶಕ್ತಿಯುಳ್ಳ ಡಾ| ಟಿ ಮಾಧವ ಪೈಗಳು ಮಣ್ಣನ್ನು ಹೊನ್ನಾಗಿ ಮಾರ್ಪಡಿಸಿದ ಮಣಿಪಾಲದಲ್ಲಿ ಸ್ಥಾಪಿಸಿದ ಕಸ್ತೂರ್ಬಾ ಮೆಡಿಕಲ್ ಕಾಲೇಜು.

ಸಾಲ ಎತ್ತುವ ನಿರ್ಧಾರ

ಆರ್ಥಿಕ ಭದ್ರತೆಯನ್ನು ಇಂದು ಜನರು ಎಲ್ಲಕ್ಕಿಂತಲೂ ಹೆಚ್ಚು ಅಪೇಕ್ಷಿಸುವರು. ವಿವಿಧ ಪಕ್ಷಪಂಗಡಗಳು ಮತ್ತು ಸರಕಾರ ಕೂಡ ಜನತೆಯ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ತನ್ನ ಧ್ಯೇಯವೆಂದು ಹೇಳುತ್ತದೆ. ಅನ್ನಬ್ರಹ್ಮನ ದೇಗುಲದ ಘಂಟಾನಾದವು ಎಲ್ಲರನ್ನೂ ಎಚ್ಚರಿಸುತ್ತಿರುವುದೇ, ಆರ್ಥಿಕ ವೈಷಮ್ಯವನ್ನು ಕಳೆದು, ಸಮಾನತೆಯನ್ನು ಸ್ಥಾಪಿಸುವ ಮತ್ತು ಜೀವನ ಮಟ್ಟವನ್ನು ಎತ್ತರಿಸುವ ಯೋಜನೆಗಳು ಕಾರ್ಯಾನ್ವಿತಗೊಳ್ಳುತ್ತಿರುವುದಕ್ಕೆ ಹೇತು. ಭಾರತ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿ ಅದನ್ನು ಕಾರ್ಯರೂಪದಲ್ಲಿ ಇಳಿಸಲು ಪ್ರಯತ್ನಿಸುತ್ತಿರುವುದರ ಉದ್ದೇಶವು ಜನರ ದುಃಸ್ಥಿತಿಯನ್ನು ನಿವಾರಿಸುವುದರಲ್ಲಿ ದೇಶದ ನೈಸರ್ಗಿಕ ಸಂಪತ್ತಿನ ಪರಮಾವಧಿ ಪ್ರಯೋಜನವನ್ನು ಪಡೆಯುವುದೇ ಆಗಿರುತ್ತದೆ. ಆದರೆ ಪ್ರತಿಯೊಂದೂ ಯೋಜನೆಯ ಪೂರೈಕೆಗೆ ಅಪಾರ ಬಂಡವಾಳದ ಅಗತ್ಯವುಂಟು. ಈ ಬಂಡವಳನ್ನು ಕೂಡಿಸುವುದು ಮಹಾ ಕಠಿಣ ಸಮಸ್ಯೆ. ಭಾರತ ಸರಕಾರವು ಕೆಲವು ದಿನಗಳಿಗೆ ಹಿಂದೆ ೭೫ ಕೋಟಿ ರೂಪಾಯಿಗಳ ಸಾಲವನ್ನು ಜನಹಿತದ ವಿವಿಧ ಉತ್ಪಾದಕ ಯೋಜನೆಗಳಿಗೋಸ್ಕರ ಪಡೆದುಕೊಂಡಿತು. ಈಗ ವಿವಿಧ ರಾಜ್ಯ ಸರಕಾರಗಳು ತಮ್ಮ ಪಾಲಿಗೆ ಪಂಚವಾರ್ಷಿಕ ಯೋಜನೆಯಿಂದ ಬಂದ ಹೊಣೆಗಾರಿಕೆಯನ್ನು ಪೂರೈಸುವುದಕ್ಕಾಗಿ ಜನರಿಂದ ಸಾಲವನ್ನೆತ್ತಲು ನಿರ್ಧರಿಸಿವೆ. ಮದ್ರಾಸು, ಮುಂಬಯಿ, ಉತ್ತರ ಪ್ರದೇಶಗಳಲ್ಲಿ ಪ್ರತಿಯೊಂದು ಐದು ಕೋಟಿ ರೂಪಾಯಿಗಳನ್ನೂ, ಪಶ್ಚಿಮ ಬಂಗಾಳ, ಮೈಸೂರು, ತಿರುಕೊಚ್ಚಿಗಳಲ್ಲಿ ಪ್ರತಿಯೊಂದು ಮೂರು ಕೋಟಿ ರೂಪಾಯಿಗಳನ್ನೂ, ಬಿಹಾರ, ಮಧ್ಯ ಪ್ರದೇಶ, ಮಧ್ಯ ಭಾರತ ಮತ್ತು ಸೌರಾಷ್ಟ್ರಗಳು ಒಂದೊಂದುಕೋಟಿರೂಪಾಯಿಯನ್ನೂ ಸಾಲ ಎತ್ತಲು ನಿರ್ಧರಿಸಿವೆ. ಹೀಗೆ ಭಾರತದ ೧೦ ರಾಜ್ಯ ಸರಕಾರಗಳು ಒಟ್ಟು ೨೮ ಕೋಟಿ ರೂಪಾಯಿಗಳನ್ನು ಜನರಿಂದ ಕೂಡಿಸುವ ಪ್ರಯತ್ನದಲ್ಲಿವೆ. ಈ ಹಣವನ್ನು ನೀರಾವರಿ, ವಿದ್ಯುಚ್ಛಕ್ತಿ ಹಾಗು ತತ್ಸಂಬಂಧಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ಮುಗಿಸಲು ಉಪಯೋಗಿಸಲಾಗುವುದು. ಮದ್ರಾಸನ್ನೊಂದು ಬಿಟ್ಟು ಉಳಿದೆಲ್ಲ ಕಡೆ ಜೂಲೈ ೧೫ ರಿಂದ ೨೫ನೇ ದಿನಾಂಕದ ವರೆಗೂ ಮದ್ರಾಸಿನಲ್ಲಿ ಮಾತ್ರ ಜೂಲೈ ೧೫ ರಿಂದ ೩೧ನೇ ತಾರೀಕಿನ ತನಕವೂ ಸಾಲವನ್ನು ಕೂಡಿಸಲಾಗುವುದು. ಈ ಸಾಲವು ಹತ್ತು ವರ್ಷಗಳ ಅವಧಿಯದು, ಬಡ್ಡಿಯ ದರ ಸಾಲಿಯಾನ ಸೇಕಡಾ ನಾಲ್ಕು. ಮುಂಬಯಿ ಮತ್ತು ಮತ್ತು ಪಶ್ಚಿಮ ಬಂಗಾಳ ಸರಕಾರಗಳ ಸಾಲವನ್ನು ಬಿಟ್ಟರೆ, ಉಳಿದ ರಾಜ್ಯಗಳು ರೂ. ೯೯-೮-೦ಕ್ಕೆ ರೂ. ೧೦೦-೦-೦ ಮುಖ ಬೆಲೆಯ ಸಾಲಪತ್ರವನ್ನು ಕೊಡುತ್ತವೆ.

DO YOU KNOW.. .. ..

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc, etc,? By saving and Banking your money you are helping to make India Strong and Prosperous

THE CANARA INDUSTRIAL & BANKING SYNDICATE LTD.,

Estd: 1925 H O UDIPI, S India

ಬಟ್ಟೆ ಮತ್ತು ನೂಲಿನ ನಿಯಂತ್ರಣ ರದ್ದು

ಭಾರತದಲ್ಲಿ ಜವುಳಿ ಉದ್ದಿಮೆಯ ಪರಿಸ್ಥಿತಿ ಉತ್ತಮವೆನ್ನುವ ಅಭಿಪ್ರಾಯ

ಮದ್ರಾಸು ರಾಜ್ಯದಲ್ಲಿ

ಜನತೆಯು ತನ್ನ ಅಭಿವೃದ್ಧಿಯ ಉದ್ದೇಶದಿಂದ ಸರಕಾರವು ಕೂಡಿಸಲೆತ್ನಿಸುವ ಈ ಸಾಲವನ್ನು ತುಂಬುವಲ್ಲಿ ಅತ್ಯಂತ ಉತ್ಸಾಹದಿಂದ ಮುಂಬರಬೇಕಾದುದು ಕರ್ತವ್ಯವೆಂದು ಹೇಳುವುದು ಅನಾವಶ್ಯಕ. ಈ ಸಲವಂತೂ ಸಾಲವು ತ್ವರಿಯಾಗಿಯೇ ತುಂಬ ಬಲ್ಲುದೆಂಬುದನ್ನು ಅದರ ಸ್ವರೂಪವೇ ವ್ಯಕ್ತಗೊಳಿಸುತ್ತದೆ. ಹನ್ನೆರಡು ವರ್ಷಗಳ ಬದಲು ಈ ಸಾಲದ ಅವಧಿಯು ೧೦ ವರ್ಷವೆಂದು ನಿರ್ಧರಿಸಿರುವುದೂ ಬಡ್ಡಿಯ ದರವನ್ನು ಸಾಲಿಯಾನ ಸೇಕಡಾ ೪ ಎಂದು ಇಟ್ಟಿರುವುದೂ ಮುಖ್ಯ ಆಕರ್ಷಣೆ ಎಂಬುದನ್ನಿಲ್ಲಿ ಸೂಚಿಸಲು ಬಯಸುತ್ತೇವೆ. ಹಿಚ್ಚಿನ ರಾಜ್ಯಗಳು ೮ ಆಣೆ ಪಟ್ಟವನ್ನು ಕೊಡಲೂ ಮುಂಬಾದಿರುವುದರಿಂದ ಬಡ್ಡಿಯ ದರೆ ನಿಜವಾಗಿ ರೂ. ೪-೦ ೯ ಆಗುತ್ತದೆ. ಮದ್ರಾಸು ರಾಜ್ಯದ ಸಾಲವನ್ನು ಕುರಿತು ಹೇಳುವುದಾದರೆ, ಸರಕಾರವು ತನ್ನ ಭದ್ರವಾದ ಆರ್ಥಿಕ ಪರಿಸ್ಥಿತಿಯ ಸ್ಪಷ್ಟ ಚಿತ್ರಣವನ್ನು ಕೊಡಲು ಮರೆತಿರುವುದಿಲ್ಲ. ರಾಜ್ಯ ಸರಕಾರಕ್ಕೆ ಸುಮಾರು ೭೫ ಕೋಟಿ ರೂಪಾಯಿಗಳ ಸಾಲವಿದೆ ಯಾದರೂ ಮೂಲವು ೪೪ ಕೋಟಿ ರೂಪಾಯಿಯಷ್ಟಿದೆ ಎಂಬುದನ್ನು ಸರಕಾರವು ತಿಳಿಸಿರುತ್ತದೆ. ಆದುದರಿಂದ ಈಗಿನ ಐದು ಕೋಟಿ ರೂಪಾಯಿಗಳ ಸಾಲದಿಂದ ಮದ್ರಾಸಿನ ಆರ್ಥಿಕ ಪರಿಸ್ಥಿತಿಗೆ ಹಾನಿಯುಂಟಾಗಲಾರದ, ಬದಲು ಅಭಿವೃದ್ಧಿ ಯೋಜನೆಗಳ ದೆಸೆಯಿಂದ, ಪರಿಸ್ಥಿತಿಯು ಉತ್ತಮಗೊಳ್ಳುವ ಭರವಸೆಯುಂಟು. ತಾನು ಎತ್ತಬೇಕೆಂದಿರುವ ೫ ಕೋಟಿ ರೂಪಾಯಿಗಳ ಸಾಲದಲ್ಲಿ ಸುಮಾರು ೧೪೨ ಲಕ್ಷ ರೂಪಾಯಿಗಳನ್ನು ಇದೇ ವರ್ಷ ಮರುಪಾವತಿ ಮಾಡಬೇಕಾಗಿರುವ ಸಾಲಕ್ಕೋಸ್ಕರ ವಿನಿಯೋಗಿಸಲಾಗುವುದೆಂದು ಸರಕಾರ ಹೇಳಿದೆ. ಅದೇ ಕಾಲಕ್ಕೆ ಈ ವರ್ಷ ಅವಧಿ ಮುಗಿಯುವ ಹಳೇ ಸಾಲ ಪತ್ರವನ್ನು ಹೊಸ ಸಾಲಕ್ಕೋಸ್ಕರ ಮರಳಿ ಪಡೆಯಲು ಸರಕಾರ ಇಚ್ಛಿಸಿದೆ. ಆದುದರಿಂದ ಸರಕಾರದ ಸಾಲ ತುಂಬಿ ಬರುವುದು ಹೆಚ್ಚಿನ ಕಷ್ಟದ ಮಾತಲ್ಲವೆಂದು ಹೇಳಬಹುದು. ಕಳೆದ ವರ್ಷ ರಾಜ್ಯ ಸರಕಾರ ಎತ್ತಲು ನಿರ್ಧರಿಸಿದ ಸಾಲವು ಎರಡು-ಮೂರು ದಿನಗಳಲ್ಲಿಯೇ ಕೂಡಿ ಬಂದಿತ್ತು. ಈ ವರ್ಷ ೧೫ ದಿನಗಳಷ್ಟು ದೀರ್ಘಾವಧಿಯನ್ನು ಸಾಲ ಪಡೆಯಲು ವಿಧಾಯಿಸಿದ್ದನ್ನು ನೋಡಿದರೆ ಜನರಲ್ಲಿ ಸಾಲದ ಬಗ್ಗೆ ಒಳ್ಳೆಯ ಪ್ರಚಾರ ಮಾಡುವುದು ಸರಕಾರದ ಉದ್ದೇಶವೆಂದು ಹೇಳಬೇಕಾಗುವುದು. ಸಾಲದಲ್ಲಿ ಹೆಚ್ಚಿನ ಅಂಶವು ಬೇಂಕು ಹಾಗು ವಿಮಾ ಸಂಸ್ಥೆಗಳಿಂದ ಕೂಡುವುದಾದರೂ—ಸಾಮಾನ್ಯ ಜನತೆಯೂ ಉಳಿತಾಯದ ಚಳವಳಿಯನ್ನು ಪ್ರೋತ್ಸಾಹಿಸುವ ಈ ಉದ್ಯಮದಲ್ಲಿ ಸಾಕಷ್ಟು ನೆರವೀಯಬಲ್ಲುದು. ಎಲ್ಲ ಸರಕಾರೀ ಖಜಾನೆಗಳಲ್ಲಿ, ರಿಜರ್ವ್ ಬೇಂಕಿನ ಬೆಂಗಳೂರು, ಮದ್ರಾಸು, ಮುಂಬಯಿ, ಕಲ್ಕತ್ತ ಮತ್ತು ದಿಲ್ಲಿ ಶಾಖೆಗಳಲ್ಲಿ ಹಾಗು ಇಂಪೀರಿಯಲ್ ಬೇಂಕಿನ ಮದ್ರಾಸು ರಾಜ್ಯದೊಳಗಿನ ಶಾಖೆಗಳಲ್ಲಿ ಈ ಸಾಲಕ್ಕೆ ಹಣ ತುಂಬಬಹುದು.

ಉಳಿತಾಯ ಪ್ರವೃತ್ತಿಗೆ ಪ್ರೋತ್ಸಾಹ

ಇನ್ನು ಮುಂದೆ ವರ್ಷ ವರ್ಷವೂ ಭಾರತದಲ್ಲಿ ರಾಜ್ಯ ಸರಕಾರಗಳು ೨೦-೩೦ ಕೋಟಿ ರೂಪಾಯಿಗಳನ್ನು ತಂತಮ್ಮ ಅಭಿವೃದ್ಧಿ ಯೋಜನೆಗಳನ್ನು ಪೂರೈಸುವುದಕ್ಕಾಗಿ ಎತ್ತುವುದು ಒಂದು ವೈಶಿಷ್ಟ್ಯವಾಗಿ ಪರಿಣಮಿಸಬಹುದು. ಇದಕ್ಕೆ ಸಾಕಷ್ಟು ಅವಕಾಶವುಂಟು. ಪಂಚವಾರ್ಷಿಕ ಯೋಜನೆಯಲ್ಲಿಯೇ ೬೦೦ ಕೋಟಿ ರೂಪಾಯಿಗಳ ಕೊರತೆಯನ್ನು ಕಾಣಿಸಿದ್ದು, ಇದನ್ನು ತುಂಬಲು ವಿದೇಶಗಳ ನೆರವು, ಹೊಸತಾಗಿ ಕರಾಕರಣೆ, ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಪ್ರೋತ್ಸಾಹಿಸುವುದರಿಂದ ದೊರೆಯಬಹುದಾದ ಸಾಲ ಮತ್ತು ಇವೆಲ್ಲ ಉಪಾಯಗಳು ಸಾಲದೆಂದು ತೋರಿದರೆ, ಕೊನೆಗೆ ಕೊರತೆಯ ಧನ ವಿನಿಯೋಗ ಪದ್ಧತಿ ಈ ಉಪಾಯಗಳನ್ನು ಸೂಚಿಸಲಾಗಿದೆ. ವಿದೇಶಗಳ ನೆರವು ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗೆ ದೊರೆಯಬಲ್ಲುದೋ ಹೇಳಲಾರೆವು. ಅದರಂತೆ ಹೊಸತಾಗಿ ಕರಾಕರಣೆಯನ್ನು ಮಾಡುವುದೂ ಸದ್ಯ ಹೇಳಿಸಿದುದಲ್ಲ— ಕರಭಾರ ವಿಚಾರಣಾ ಸಮಿತಿಯು ತನ್ನ ಕೆಲಸದಲ್ಲೀಗ ತತ್ಪರವಾಗಿರುವುದರಿಂದ ಅದರ ಶಿಫಾರಸುಗಳು ಬರುವವರೆಗೆ ಜನರ ಕರಭಾರವನ್ನು ಹೆಚ್ಚಿಸುವುದು ಸರಿಯಲ್ಲ. ಕೊರತೆ ಧನ ವಿನಿಯೋಗ ಪದ್ಧತಿಯೊಂದೇ ಇಂಥ ಪರಿಸ್ಥಿತಿಯಲ್ಲಿ ತೆರೆದಿರುವ ಏಕಮೇವ ಪರಿಹಾರ ಮಾರ್ಗವೆಂದು ಕಂಡು ಬರುತ್ತದೆ. ನಮ್ಮ ಹಣಕಾಸಿನ ಮಂತ್ರಿಗಳು ಈ ಪದ್ಧತಿಯನ್ನು ಅನುಸರಿಸುವುದಕ್ಕೆ ಹಿಂಜರಿಯುವುದಿಲ್ಲ ಹಾಗೆಂದು ಅತಿಪ್ರಸರಣ ಹಾಗೂ ಜನರ ಕ್ರಯಶಕ್ತಿಯು ಹ್ರಾಸಕ್ಕೆ ಇದು ಅವಕಾಶ ಮಾಡಿಕೊಡುವುದೆಂಬ ಭಯ ಸರ್ವತ್ರ ನೆಲಸಿರುವಾಗ ಈ ಅಸ್ತ್ರವನ್ನು ಅತ್ಯಂತ ದಕ್ಷತೆಯಿಂದಲೂ ಜಾಗರೂಕತೆಯಿಂದಲೂ ದೂರದೃಷ್ಟಿಯಿಂದಲೂ ಉಪಯೋಗಿಸುವುದು ಅತ್ಯಂತ ಅಗತ್ಯವಿದೆ. ಈ ಎಲ್ಲ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಜನರು ಉಳಿತಾಯವನ್ನು ಕೈಗೊಂಡು ಶೇಖರಿಸಿಡಬಹುದಾದ ಹಣವನ್ನು ಸಾಲರೂಪದಲ್ಲಿ ಪಡೆದು ಕಲ್ಯಾಣರಾಷ್ಟ್ರದ ಮಹಾಯೋಜನೆಗಳನ್ನು ಕೈಗೊಂಡು ಸಾಗಿಸುವುದು ಅತ್ಯಂತ ಸಮಂಜಸವಾದುದೆಂಬುದು ಸ್ಪಷ್ಟಗೊಳ್ಳುತ್ತದೆ. ಜನತೆಗೂ ರಾಷ್ಟ್ರಕ್ಕೂ ಒಂದೇ ಕಾಲದಲ್ಲಿ ಕ್ಷೇಮ ಮತ್ತು ಸುಭಿಕ್ಷೆಯನ್ನುಂಟುಮಾಡುವ ಈ ಉಪಾಯವನ್ನು ನಾವೆಲ್ಲರೂ ಸಮಾನ ಭೂಮಿಕೆಯಿಂದ ನೋಡಬೇಕು. ಸರಕಾರದವರಾದರೂ ಉಳಿತಾಯದ ಪ್ರವೃತ್ತಿಯಿಂದ ಉಂಟಾಗುವ ರಾಷ್ಟ್ರ ಕಲ್ಯಾಣದ ಚಿತ್ರವನ್ನು ಜನರ ಮುಂದೆ ಸ್ಪಷ್ಟವಾಗಿ ಇಡುವುದಕ್ಕೋಸ್ಕರ ಸ್ಥಳೀಯ ಅಭಿವೃದ್ಧಿ ಯೋಜನೆಗಳ ಕಡೆಗೆ ಅಧಿಕ ಗಮನವನ್ನು ಕೊಡಬೇಕು. ಜನರು ತಮ್ಮ ಹಣದಿಂದ ಸರಕಾರವು ತಮ್ಮ ಪ್ರದೇಶದಲ್ಲಿಯೇ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿದೆ ಎಂಬುದನ್ನು ಜನರು ನೋಡುವಾಗ ಅವರಲ್ಲಿ ಅಭಿಮಾನವೂ ಸಂತೃಪ್ತಿಯೂ ಸಹಜವಾಗಿ ಮೂಡಬಹುದು. ಈ ದಿಸೆಯಲ್ಲಿ ಮದ್ರಾಸ್ ಸರಕಾರದ ತನ್ನ ಸಾಲವನ್ನು ತಾಲೂಕು ಮಟ್ಟದಲ್ಲಿ ತಮ್ಮ ಹಣದ ಉಪಯೋಗವು ಆಯಾ ಪ್ರದೇಶದಲ್ಲಿ ಆಗಬೇಕೋ ಅದನ್ನು ಉಳಿದ ಪ್ರದೇಶದವರಲ್ಲಿ ಆಗಬೇಕೋ ಎನ್ನುವ ಬಗೆ ಸಾಕಷ್ಟು ವಿಚಾರಿಸಿ ಜನರು ಆಂಧ್ರ ರಾಜ್ಯದ ಅಭಿವೃದ್ಧಿಯನ್ನು ಬಯಸುವ ಎಲ್ಲರೂ ಈ ಸಾಲವನ್ನು ಸದುಪಯೋಗ ಮಾಡಿಕೊಳ್ಳಲು ಹಿಂಜರಿಯಲಾರರು. ಇದರಂತೆ ಆಯಾ ಜಿಲ್ಲೆಗಳ ಜನರಿಗೂ ಅವಕಾಶ ಒದಗಿಸಿಕೊಂಡುದು ಮುಂದಿನ ಹೆಜ್ಜೆಯಾಗಬಹುದೆಂದು ತೋರುತ್ತದೆ.

ಜವುಳಿ ನಿಯಂತ್ರಣ ರದ್ದು

ಈ ವಾರದ ಇನ್ನೊಂದು ವಿಶೇಷ ವರ್ತಮಾನವೆಂದರೆ, ಕೇಂದ್ರ ಸರಕಾರವು ಯುದ್ಧ ಕಾಲದಲ್ಲಿ ಹೇರಿದ್ದ ಜವುಳಿ ಹಾಗೂ ನೂಲಿನ ಮೇಲಿನ ನಿಯಂತ್ರಣವನ್ನು ರದ್ದುಗೊಳಿಸಿದ ಸಂಗತಿ. ಯುದ್ಧ ಕಾಲದಲ್ಲಿ ಬಟ್ಟೆಯ ಅಭಾವವು ಅತ್ಯಂತ ಉಗ್ರ ಪರಿಸ್ಥಿತಿಯನ್ನು ಮುಟ್ಟಿದುದರಿಂದ ಕೇಂದ್ರ ಸರಕಾರವು ಎಲ್ಲರಿಗೂ ನ್ಯಾಯವಾದ ಬೆಲೆಯಲ್ಲಿ ಬಟ್ಟೆ ಪೂರೈಕೆಯಾಗಬೇಕೆಂದು ನಿಯಂತ್ರಣವನ್ನು ಹೇರಲು ನಿರ್ಧರಿಸಿತು. ಜವುಳಿಯ ಉತ್ಪಾದನೆ ವಿತರಣೆ, ಹಾಗೆಯೇ ನೂಲಿನ ಹಂಚಿಕೆ, ಬೆಲೆ, ಪ್ರಮಾಣ ಮುಂತಾದುವುಗಳನ್ನೆಲ್ಲ ಸರಕಾರ ತನ್ನ ಹತೋಟಿಯಲ್ಲಿ ಇಟ್ಟುಕೊಂಡಿತು. ಯುದ್ಧಾನಂತರ ೧೯೪೮ರ ವೇಳೆಗೆ ಒಮ್ಮೆ ಇಂಗ್ಲೆಂಡ್‌ನಲ್ಲಿ ವಿನಿಯಂತ್ರಣವನ್ನು ಪ್ರಯೋಗಕ್ಕೆ ತಂದಿತಾದರೂ, ಸಾಟೆಯಲ್ಲಿ ಸಂಬಂಧಿಸಿದ ಜನರೆಲ್ಲ, ಮುಖ್ಯವಾಗಿ ವ್ಯಾಪಾರೀ ವರ್ಗದವರು, ಇದರ ದುರುಪಯೋಗ ಮಾಡಿಕೊಂಡುದರಿಂದ ಸರಕಾರವು ಮರಳಿ ಹಿಂದಿನ ನಿಯಂತ್ರಣ ಘೋಷಣೆಯನ್ನು ಅನುಸರಿಸುವುದು ಅತ್ಯಾವಶ್ಯಕವೆನಿಸಿತು. ಆದರೆ ಅಂದಿನಿಂದ ಇಂದಿನ ಪರಿಸ್ಥಿತಿಯು ತುಂಬ ಉಜ್ವಲಗೊಂಡಿರುತ್ತದೆ. ಭಾರತದಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ದಿಷ್ಟ ಪಡಿಸಿದ ಪ್ರಮಾಣಕ್ಕಿಂತ ಹೆಚ್ಚು ಬಟ್ಟೆಯ ಉತ್ಪಾದನೆಗೊಳ್ಳಬೇಕೆಂದು ನಿಶ್ಚಯಿಸಲಾಗಿತ್ತು. ಆ ಮಿತಿಯನ್ನು ಈಗಾಗಲೇ ನಮ್ಮ ಜವುಳಿ ಉತ್ಪಾದನೆಯು

(೧೧ನೇ ಪುಟ ನೋಡಿರಿ)



ಮಂತ್ರಿ ಶ್ರೀ ಎ ಬಿ ಶೆಟ್ಟರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಉದ್ಘಾಟನೆ ಮಾಡುತ್ತಿರುವುದು. ಎಡದಿಂದ ಬಲಕ್ಕೆ ಶ್ರೀ [illegible], ಡಾ ಸೂಪರಿಂಟೆಂಡೆಂಟ್, ಡಾ ಟಿ [illegible], ಶ್ರೀ ಎ ಬಿ ಶೆಟ್ಟಿ, ಶ್ರೀ ಟಿ ಎ ಪೈ, [illegible]

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and representatives. At whatever stage we welcome your association with the POPULAR.

The Popular Insurance Co. Ltd.

"Popular Buildings", MANGALORE 1

Estd· 1906

THE CANARA BANKING CORPORATION LTD

H O **UDIPI**, (S India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

ನವಯುಗ

ಉಡುಪಿ, ಗುರುವಾರ ೧೬-೭-'೫೩

ನಿರುದ್ಯೋಗದ ಸಮಸ್ಯೆ

ನಿರುದ್ಯೋಗದ ಸಮಸ್ಯೆಯನ್ನು ಎಲ್ಲರೂ ಗಂಭೀರವಾಗಿ ವಿಚಾರಿಸಲು ತೊಡಗಿರುವರೆಂಬುದಕ್ಕೆ ಅಖಿಲ ಭಾರತ ಕಾಂಗ್ರೆಸ ಸಮಿತಿಯು ಮೊನ್ನಿನ ತನ್ನ ಆಗ್ರಾ ಅಧಿವೇಶನದಲ್ಲಿ ಈ ಕುರಿತೊಂದು ಗೊತ್ತುವಳಿಯನ್ನು ಸ್ವೀಕರಿಸಿರುವುದೇ ಸಾಕ್ಷಿ. ನಿರುದ್ಯೋಗ ಅಥವಾ ಪೂರ್ಣೋದ್ಯೋಗವಿಲ್ಲದಿರುವಿಕೆ ಇವು ಭಾರತವನ್ನು ಸಂಪತ್ಸಮೃದ್ಧವಾಗಿ ಮಾಡಬೇಕೆನ್ನುವ ಎಲ್ಲ ವಿಚಾರವಂತರ ಮತ್ತು ಕಾರ್ಯಕರ್ತರ ಮಾರ್ಗದಲ್ಲಿ ಅಡ್ಡಬಂಡೆಗಳಾಗಿ ನಿಂತಿವೆ. ನಮ್ಮ ದೇಶದಲ್ಲಿ ಎಷ್ಟು ಜನರಿಗೆ ಉದ್ಯೋಗವಿಲ್ಲವೆಂಬುದನ್ನು ಕೇವಲ ಅಂದಾಜಿನ ಮೇಲೆ ಊಹಿಸಬೇಕೇ ಹೊರತು, ಬೇರೆ ದೇಶಗಳಲ್ಲಿ ದೊರಕುವ ಸಂಖ್ಯಾಜ್ಞಾನವನ್ನು ನಾವು ನಿರ್ದಿಷ್ಟವಾಗಿ ಇಲ್ಲಿ ಮಾಡಿಕೊಳ್ಳಲಾರೆವು. ಉದ್ಯೋಗ ವಿನಿಮಯ ಕಚೇರಿಗಳು ಕೆಲಸ ಮಾಡುತ್ತಿದ್ದರೂ ಅವುಗಳು ಕೂಡಿಸಿದ ಅಂಕೆ ಸಂಖ್ಯೆ ಸುಶಿಕ್ಷಿತರ ನಿರುದ್ಯೋಗದ ಒಂದಂಶವನ್ನು ಮಾತ್ರ ಸೂಚಿಸುತ್ತದೆ, ನಗರವಾಸಿಗಳಾದ ಸುಶಿಕ್ಷಿತ ನಿರುದ್ಯೋಗಿಗಳ ಚಿತ್ರವನ್ನಷ್ಟೆ ಅದು ಕೊಡುತ್ತದೆ. ಹಳ್ಳಿಗಾಡಿನಲ್ಲಿರುವ ಸುಶಿಕ್ಷಿತರಾಗಲೂ ಸಾಮಾನ್ಯ ನಿರುದ್ಯೋಗಿಗಳ ವಿಷಯದಲ್ಲಿ ನಮಗೆ ನಿರ್ದಿಷ್ಟ ಮಾಹಿತಿ ದೊರಕುತ್ತಿಲ್ಲ. ಸಾಧಾರಣತಃ ಕೃಷೀವಲರಾದೆಲ್ಲರೂ ವರ್ಷದಲ್ಲಿ ಆರು ತಿಂಗಳಿಗಿಂತಲೂ ಹೆಚ್ಚು ಸಮಯ ಕೆಲಸವಿಲ್ಲದೆ ನಿಷ್ಕ್ರಿಯರಾಗಿ ಕುಳಿತುಬಿಡುವರೆಂದು ಹೇಳುತ್ತಿರುವುದನ್ನು ಗಮನಿಸಿದರೆ, ನಮ್ಮಲ್ಲಿ ಪ್ರತಿಕ್ಷಣಕ್ಕೂ ಹ್ರಾಸವಾಗುತ್ತಿರುವ ಮನುಷ್ಯ ಶಕ್ತಿಯನ್ನು ಕಂಡು ಖೇದವೆನಿಸುತ್ತದೆ. ದೇವರ ದಯೆಯಿಂದ ಭಾರತದಲ್ಲಿ ಕುಟುಂಬ ಪದ್ಧತಿಯು ಪಾಶ್ಚಾತ್ಯ ದೇಶಗಳಷ್ಟು ಕೆಟ್ಟಿರುವುದಿಲ್ಲ. ಹೀಗಾಗಿ, ದುಡಿದು ತರುವ ಒಬ್ಬ ಮನುಷ್ಯನ ಆದಾಯದ ಮೇಲೆ ಕುಟುಂಬದ ಉಳಿದೆಲ್ಲ ಆಬಾಲವೃದ್ಧ ಸದಸ್ಯ ಸದಸ್ಯೆಯರು ಜೀವನ ನಿರ್ವಹಿಸಲು ಅವಕಾಶವುಂಟು. ಇದನ್ನೊಂದು ರೀತಿಯ ಸಾಮಾಜಿಕ ವಿಮೆಯೆಂದು ಕರೆದರೂ ಸಲ್ಲುವದು. ಹೀಗಿರುವದು ಇಷ್ಟು ಮಾತ್ರದಿಂದ ನಿರುದ್ಯೋಗದ ಪ್ರಶ್ನೆಯ ಬಗ್ಗೆ ಸಮಾಧಾನವನ್ನು ತಾಳುವ ಪರಿಸ್ಥಿತಿ ಈಗ ಉಳಿದಿಲ್ಲ. ನಾವು ಈ ಪ್ರಶ್ನೆಯನ್ನು ಹೊಸ ದೃಷ್ಟಿಕೋಣದಿಂದ ನೋಡುವುದು ಅತ್ಯಾವಶ್ಯಕ. ದೇಶದಲ್ಲಿ ಸಂಪತ್ತು ಹೆಚ್ಚಿಕೊಳ್ಳದಿದ್ದರೆ, ನಾವು ಆರ್ಥಿಕ ದಾಸ್ಯವನ್ನು ನೀಗಿಕೊಂಡು ಸ್ವಾವಲಂಬಿಗಳಾಗಲಾರೆವು. ಆದುದರಿಂದ ನಮ್ಮ ಜನಶಕ್ತಿಯನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರಾಭ್ಯುದಯವನ್ನು ಸಾಧಿಸಿಕೊಳ್ಳುವುದಕ್ಕೆ ಇಂದು ಅತ್ಯಂತ ಮಹತ್ವ ಪ್ರಾಪ್ತವಾಗಿರುತ್ತದೆ. ಕಾಂಗ್ರೆಸ ಸಮಿತಿಯು ಪಂಚವಾರ್ಷಿಕ ಯೋಜನೆಯನ್ನು ನಿರುದ್ಯೋಗ ನಿರ್ಮೂಲನಕ್ಕೆ ನೆರವಾಗುವ ರೀತಿಯಲ್ಲಿ ಪುನರ್ವಿಮರ್ಶಿಸಬೇಕೆಂದೂ ಈಗಿನ ಶಿಕ್ಷಣ ಪದ್ಧತಿಯನ್ನು ಪುನಃ ವ್ಯವಸ್ಥಿತಗೊಳಿಸಬೇಕೆಂದೂ ಭೂಮಿಯ ಹಂಚಿಕೆಯ ಪದ್ಧತಿಯಲ್ಲಿ ಬದಲಾವಣೆಯನ್ನು ತರಬೇಕೆಂದೂ ಸಹಕಾರಿ ನೀತಿಯನ್ನು ಅವಲಂಬಿಸುವುದೊಳಿತೆಂದೂ ಹೇಳಿ, ನಿರುದ್ಯೋಗದ ಸಮಸ್ಯೆಯನ್ನು ಈ ಉಪಾಯಗಳಿಂದ ದೂರ ಮಾಡಲು ಪಥ ನಿರ್ದೇಶಿಸಿದೆ. ಇದು ಕೇವಲ ಸ್ಥೂಲ ಸ್ವರೂಪದ ಗೊತ್ತುವಳಿಯಷ್ಟೇ ಹೊರತು, ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರಕಾರ ಕಾನೂನು ಮಾಡುವ ಸಂದರ್ಭದಲ್ಲಿ ಸಾಕಷ್ಟು ವಿವರವಾದ ಕಾರ್ಯಪ್ರಣಾಳಿಯನ್ನು ರೂಪಿಸಿಕೊಳ್ಳಬೇಕಾಗುವುದು. ಪಂಚವಾರ್ಷಿಕ ಯೋಜನೆಯನ್ನು ಕಾಂಗ್ರೆಸ್ಸೇತರ ಪಕ್ಷಗಳು—ಮುಖ್ಯವಾಗಿ ಪ್ರಜಾ ಸಮಾಜವಾದೀ ಪಕ್ಷವು—ಟೀಕಿಸುವಾಗ, ದೇಶದಲ್ಲಿ ತಾಂಡವವಾಡುವ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಈ ಯೋಜನೆ ಪ್ರಾಶಸ್ತ್ಯ ಕೊಟ್ಟಿಲ್ಲವೆನ್ನುವ ಅಭಿಪ್ರಾಯಕ್ಕೆ ಜೋರು ಕೊಡುತ್ತಾ ಬಂದಿವೆ. ಸರಕಾರವು ಹೊಸ ಹೊಸ ಅನುಕೂಲತೆ ಮತ್ತು ಸೌಕರ್ಯಗಳು ಹೆಚ್ಚಿಕೊಂಡಂತೆಲ್ಲ ಉದ್ಯೋಗವೂ ಹೆಚ್ಚಿಕೊಳ್ಳುವುದೆಂದು ಸಮಾಧಾನ ಹೇಳುತ್ತದೆ. ಒಂದು ದೃಷ್ಟಿಯಿಂದ ಸರಕಾರದ ಹೇಳಿಕೆಯಲ್ಲಿ ತಥ್ಯಾಂಶವಿದೆ ಎಂಬುದನ್ನು ಮನಗಾಣಬೇಕು. ವಿವಿಧೋದ್ದೇಶಗಳ ಅಣೆಕಟ್ಟೊಂದು ಪೂರ್ತಿಯಾದಾಗ, ಲಕ್ಷಾಂತರ ಎಕ್ರೆ ಭೂಮಿಯು ಅಧಿಕ ಸಾಗುವಳಿಗೆ ಗುರಿಯಾಗುತ್ತದಲ್ಲದೆ, ಅಪಾರ ವಿದ್ಯುಚ್ಛಕ್ತಿಯೂ ಉತ್ಪಾದನೆ ಹೊಂದಿ ಉದ್ಯೋಗಗಳು ಬೆಳೆಯುತ್ತವೆ. ಹೀಗೆ ವಿಸ್ತರಿಸಿದ ಕ್ಷೇತ್ರದಲ್ಲಿ ನಿರುದ್ಯೋಗಿಗಳಾದವರೆಲ್ಲಾ ಹೊಸತಾಗಿ ಉದ್ಯೋಗವನ್ನು ಕೈಗೊಳ್ಳಬಲ್ಲರು. ಇದೇ ವಾದಸರಣಿಯನ್ನು ಹಿಡಿದು ಸ್ವಲ್ಪ ಹೆಚ್ಚು ವಿಚಾರ ಮಾಡಿದರೆ, ನಾವು ಇದಕ್ಕಿಂತಲೂ ಒಳ್ಳೆಯ ರೀತಿಯಲ್ಲಿ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದಾದ ಒಂದು ಉಪಾಯ ಹೊಳೆಯುತ್ತದೆ. ಒಂದು ನೂರು ಮಂದಿಗೆ ಉದ್ಯೋಗ ಒದಗಿಸಿಕೊಡಬಲ್ಲ ನೂತನ ಪಥಾಪಶವನ್ನು ನಾವು ಒಂದು ಲಕ್ಷ ರೂಪಾಯಿಗಳ ವೆಚ್ಚದಿಂದ ಕಲ್ಪಿಸಿಕೊಡಲು ಸಾಧ್ಯವಿದ್ದಂತೆ, ಹತ್ತು ಸಾವಿರ ರೂಪಾಯಿಗಳ ಬಂಡವಾಳವನ್ನೇ ಉಪಯೋಗಿಸಿಕೊಂಡು ಅಷ್ಟು ಜನಕ್ಕೆ ಕೆಲಸ ಕೊಡಿಸಲೂ ಸಾಧ್ಯ. ಯೋಜನೆಯ ಸ್ವರೂಪವನ್ನು ಕಡಿಮೆ ಬಂಡವಾಳ ಸಾಕಾಗುವ ಆದರೆ ಅತ್ಯಧಿಕ ಜನಕ್ಕೆ ಉದ್ಯೋಗ ಕೊಡಬಲ್ಲ ರೀತಿಯಲ್ಲಿ ಪರಿವರ್ತಿಸಿದರೆ, ನಿರುದ್ಯೋಗದ ಸಮಸ್ಯೆಯನ್ನು ಎರಡು ಪ್ರಕಾರವಾಗಿ ಪರಿಹರಿಸಲು ನೋಡಿದಂತಾಗುತ್ತದೆ. ಉದ್ಯೋಗವನ್ನು ಒದಗಿಸಿಕೊಡುವ ವಿಷಯವು ರಾಷ್ಟ್ರೀಯ ವ್ಯಾಪಕತೆಯನ್ನು ತಳೆದಿರುವಂತೆ ಸ್ಥಳೀಯ ಸಮಸ್ಯೆಗಳಲ್ಲಿಯೂ ಒಂದ. ತುಂಗಭದ್ರೆಯ ಅಣೆಕಟ್ಟಿನಿಂದ ಲಕ್ಷಾಂತರ ಎಕ್ರೆ ಜಮೀನಿನಲ್ಲಿ ಹೆಚ್ಚು ಸಾಗುವಳಿಯಾಗುತ್ತವೆಂದು ದಕ್ಷಿಣ ಕನ್ನಡ ಜಿಲ್ಲೆಯ ನಿರುದ್ಯೋಗಿಗಳೆಲ್ಲ ಅಲ್ಲಿ ಹೋಗುವುದು ವ್ಯವಹಾರ್ಯವೆ? ಆದುದರಿಂದ ಸ್ಥಳೀಯ ಅಭಿವೃದ್ಧಿಯ ಕಡೆಗೆ ಸರಕಾರ ಮತ್ತು ಜನತೆ ಕೂಡಿಯೇ ಅಧಿಕ ಗಮನಕೊಟ್ಟರೆ, ನಿರುದ್ಯೋಗದ ಸಮಸ್ಯೆಯನ್ನು ಸಾಕಷ್ಟು ಯಶಸ್ವಿಯಾಗಿ ನಾವು ಬಿಡಿಸಬಲ್ಲೆವು. ಸ್ಥಳೀಯ ಅಭಿವೃದ್ಧಿ ಯೋಜನೆಗಳಿಗೆ ಸ್ವಲ್ಪ ಮಾತ್ರ ಬಂಡವಳ ಸಾಕು. ಹೀಗಾಗಿ ಬಂಡವಾಳವು ಸಮವಾಗಿ ಎಲ್ಲ ಕಡೆ ಹಂಚಿ ಬೀಳಲು ಅವಕಾಶವುಂಟು; ಮತ್ತು ಹೆಚ್ಚಿನ ಜನಕ್ಕೆ ಉದ್ಯೋಗ ಸಿಗುವ ಭರವಸೆಯುಂಟು. ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ಮುಂದಿನ ಮೂರು ವರ್ಷಗಳಿಗೆಯೇ ಕೋಟಿರೂಪಾಯಿಗಳ ಕೊರತೆ ಕಾಣಿಸಿರುವುದರಿಂದ, ಯೋಜನೆಯಲ್ಲಿ ಹೊಸತಾಗಿ ದೊಡ್ಡ ಅಣೆಕಟ್ಟು ಮುಂತಾದುವನ್ನು ಸೇರಿಸುವುದೇ ಅಸಾಧ್ಯ. ಅಂಥದರಲ್ಲಿ ಉದ್ಯೋಗ ಹೆಚ್ಚಿಸಲು ಅವಕಾಶ ಕಲ್ಪಿಸಿ ಕೊಡುವ ಏಕಮೇವ ಮಾರ್ಗವೆಂದರೆ, ಸ್ಥಳೀಯ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡುವುದೇ ಆಗಿರುತ್ತದೆ.

ರಾಬರ್ಟಸನ್ನರ ದೌತ್ಯದ ಫಲಶ್ರುತಿ

ಕಮ್ಯೂನಿಸ್ಟರು ರ್ಹೀಯ ಶರ್ತಕ್ಕೆ ಒಪ್ಪುವಂತಿಲ್ಲ

ಅಧ್ಯಕ್ಷ ಐಸೆನ ಹೋವರರ ಶಾಂತಿದೂತನಾಗಿ ಕೊರಿಯಾಕ್ಕೆ ಆಗಮಿಸಿ, ದಕ್ಷಿಣ ಕೊರಿಯಾದ ಅಧ್ಯಕ್ಷ ಡಾ| ಸಿಂಗ್ಮನ್ನ ರ್ಹೀಯವರೊಡನೆ ಸಂಧಾನ ಮಾತುಕತೆಗಳನ್ನು ನಡೆಸಿದ ರೋಬರ್ಟಸನ್ನರು ಇದೀಗ ಟೋಕಿಯೋದಿಂದ ವಾಷಿಂಗಟನ್ನಿಗೆ ಮರಳಿರುವರು. ಹದಿನಾರು ದಿವಗಳಷ್ಟು ದೀರ್ಘಕಾಲದ ತಮ್ಮ ಕೊರಿಯಾದ ವಾಸ್ತವ್ಯದಲ್ಲಿ ರಾಬರ್ಟಸನ್ನರು ೧೨ ಬಾರಿ ಸಿಂಗ್ಮನ್ನರ್ಹೀಯವರನ್ನು ಭೇಟಿ ಮಾಡಿ ಕೊರಿಯಾದಲ್ಲಿ ಕದನ ನಿಲುಗಡೆಯಾಗುವಂತೆ ದಕ್ಷಿಣ ಕೊರಿಯಾದ ಮನವೊಲಿಸುವ ಪ್ರಯತ್ನ ನಡೆಸಿದರು. ಈಗ ಪ್ರಕಟವಾಗಿರುವ ಸಂಗತಿಗಳು ಯಾವದೇ ನಿರ್ದಿಷ್ಟ ವಿಷಯಗಳನ್ನು ಹೇಳುತ್ತಿಲ್ಲ—ಪರಸ್ಪರ ವಿಸಂಗತವಾದ ಅಂಶಗಳನ್ನಷ್ಟೆ ಎತ್ತಿ ತೋರಿಸುತ್ತವೆ. ಒಂದು ಸುದ್ದಿಯಂತೆ, ರಾಬರ್ಟಸನ್ನರು ರ್ಹೀಯವರನ್ನು ತಾತ್ಪೂರ್ತಿಕವಾಗಿ ಕದನ ವಿರಾಮಕ್ಕೆ ಒಪ್ಪಿಸಿರುವರೆಂದು ತಿಳಿಯುತ್ತದೆ. ಕೊರಿಯಾದ ಏಕೀಕರಣವನ್ನು ಸಾಧಿಸುವುದೇ ಅಮೇರಿಕ ಹಾಗು ದಕ್ಷಿಣ ಕೊರಿಯಾದ ಧ್ಯೇಯಗಳೆಂಬುದನ್ನು ಉಭಯತರೂ ಸ್ಪಷ್ಟೀಕರಿಸಿರುವರಲ್ಲದೆ, ಅಮೇರಿಕಾ ಮತ್ತು ದಕ್ಷಿಣ ಕೊರಿಯಾಗಳು ಸಂರಕ್ಷಣ ಒಪ್ಪಂದವನ್ನು ಮಾಡಿಕೊಳ್ಳುತ್ತವೆ.

ರ್ಹೀ ಒಪ್ಪಿದ್ದು ಯಾವುದಕ್ಕೆ?

ಕೊರಿಯಾದಿಂದ ಹೊರಟ ಈ ಸಂಯುಕ್ತ ಪ್ರಕಟಣೆಯ ಆಶಯಕ್ಕೆ ಭಿನ್ನ ಸ್ವರೂಪದ ವಾರ್ತೆಯೊಂದು ರಾಬರ್ಟಸನ್ನರು ಸಿಯೋಲದಿಂದ ಟೋಕಿಯೋವಿಗೆ ಹೊರಟುನಿಂತಾಗ ಬಂದಿದೆ— ಡಾ. ಸಿಂಗ್ಮನ್ನ ರ್ಹೀಯವರು ಕೇವಲ ಮೂರು ತಿಂಗಳ ಮಟ್ಟಿಗೆ, ಅಂದರೆ ಕದನ ವಿರಾಮವಾದೊಡನೆಯೇ ಸೇರುವ ರಾಜಕೀಯ ಪರಿಷತ್ತಿನ ಅವಧಿ ಮುಗಿಯುವ ವರೆಗೆ ಮಾತ್ರ ಯುದ್ಧವನ್ನು ನಿಲ್ಲಿಸಲು ಒಪ್ಪಿರುವರು. ಅಷ್ಟರೊಳಗಾಗಿ ಕೊರಿಯಾದ ನೆಲದಿಂದ ಎಲ್ಲ ವಿದೇಶೀ ಪದಾತಿ ದಳವು ಹಿಂದೆ ಸರಿಯಬೇಕು; ಆದರೆ ಅಮೇರಿಕಾದ ವಿಮಾನ ಹಾಗೂ ನೌಕಾಪಡೆಗಳು ಕೊರಿಯಾದಲ್ಲಿ ಇರಬಲ್ಲವು ಎಂದು ಸಿಂಗ್ಮನ್ನರ ಅಭಿಪ್ರಾಯ. ಇದು ಮಾತ್ರವಲ್ಲ ತಟಸ್ಥ ಪಂಚ ರಾಷ್ಟ್ರಗಳಲ್ಲಿ ಕಮ್ಯೂನಿಷ್ಟ ರಾಷ್ಟ್ರಗಳೆಂದು ಹೆಸರಾದ ಪೋಲಂಡ ಮತ್ತು ಝೆ

ಡಾ| ಕೆ ಎಮ್. ರೈಗಳ ವಿದೇಶ ಪ್ರಯಾಣ



ಮದ್ರಾಸಿನ ಬರ್ನಾರ್ಡ್ ಇನ್ಸ್ಟಿಟ್ಯೂಟ್ ಒಫ್ ರೇಡಿಯೋಲೋಜಿಯ ಡೈರೆಕ್ಟರರಾದ ಡಾ| ಕೆ ಎಮ್ ರೈ, M B B S, F R C S (E) D M R (LOND) ಅವರನ್ನು ಡೆನ್ಮಾರ್ಕಿನ ಕೋಪನ್ ಹೇಗನಲ್ಲಿ ನಡೆಯಲಿರುವ ಏಳನೇ ಅಂತರ್ರಾಷ್ಟ್ರೀಯ ರೇಡಿಯೋಲೋಜಿ ಕೋಂಗ್ರೆಸ್ ಮತ್ತು ಅನಂತರ ಜರ್ಮನಿಯಲ್ಲಿ ಸೇರುವ ಇತರ ಕೆಲವು ಪರಿಷತ್ತುಗಳಿಗೆ ಹೋಗಲು ಸರಕಾರದ ಪ್ರತಿನಿಧಿಯಾಗಿ ಆರಿಸಿದಂತೆ ಡಾ| ರೈಗಳು ಇದೇ ತಾ| ೧೩ರಲ್ಲಿ ಮದ್ರಾಸಿನಿಂದ ಬೊಂಬಾಯಿಗೆ ತೆರಳಿ ಮರುದಿನ ವಿಮಾನದಲ್ಲಿ ಲಂಡನಿಗೆ ತೆರಳಿದ್ದಾರೆ. ಆರು ಏಳು ವಾರಗಳಲ್ಲಿ ಹಿಂತಿರುಗಿ ಬರಲಿರುವರೆಂದು ತಿಳಿದುಬರುತ್ತದೆ. ಡಾ| ರೈಗಳು ಇದು ಮೂರನೇ ಬಾರಿ ವಿದೇಶಕ್ಕೆ ತೆರಳುವುದಾಗಿದೆ.

ಕೊಸ್ಲೊವಾಕಿಯಾ ಮತ್ತು ದಕ್ಷಿಣ ಕೊರಿಯವು ಕಮ್ಯೂನಿಷ್ಟ ಪಕ್ಷಪಾತಿಯೆಂದು ತಿಳಿದಿರುವ ಭಾರತ-ಈದೇಶಗಳ ಸೈನಿಕರನ್ನು ದಕ್ಷಿಣ ಕೊರಿಯಾಕ್ಕೆ ಬರಗೊಡಿಸಬಾರದೆಂದೂ ಸಿಂಗ್ಮನ್ನರು ಕೇಳಿರುವರು. ಮತ್ತು ದಕ್ಷೆ ಜನರಲ್ ಮಾರ್ಕ್ ಕ್ಲಾರ್ಕರನ್ನು ಒಪ್ಪಿಸಿರುವರು ಈ ವಾರ್ತೆ ನಿಜವೇ ಆದರೆ ಕೊರಿಯಾದಲ್ಲಿ ಯುದ್ಧ ಕೈದಿಗಳನ್ನು ಸಿಂಗ್ಮನ್ನರ್ಹೀಯವರು ಅಕ್ರಮವಾಗಿ ಬಿಡುಗಡೆ ಮಾಡಿದುದು ನಿಂತ ಕದನ ವಿರಾಮ ಮಾತುಕತೆಗಳು ಈಗ ಮರಳಿ ತೊಡಗಿದುದರಿಂದ ಏನೊಂದೂ ಪ್ರಯೋಜನವಾಗಲಾರದು

ಕಮ್ಯೂನಿಸ್ಟರ ಪ್ರತಿಕ್ರಿಯೆ

ಹಿಂದೊಮ್ಮೆ ಗಾಳಿ ವರ್ತಮಾನ ಬಂದಾಗ ಡಾ ಸಿಂಗ್ಮನ್ನರ್ಹೀಯವರು ಅನೇಕ ರೀತಿಯ ಮೇಲೆ ವೇಚಾಟವನ್ನು ಹೇರಿ, ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ತಿರುಗಿಸಿಕೊಂಡರೆಂದು ಹೇಳಿದ್ದೆವು ಈಗ ನಡೆದುದನ್ನು ವಿಮರ್ಶಿಸಿದರೆ, ಡಾ ರ್ಹೀಯವರ

(ಹಿನೇ ಪುಟದಿಂದ)

ಏರಿರುತ್ತದೆ ಹೀಗಾಗಿ ಪೇಟೆಯಲ್ಲಿ ಹೇರಳ ಜವುಳಿಯು ದಾಸ್ತಾನು ಬಿದ್ದಿರುತ್ತದೆ ವಿದೇಶಗಳಲ್ಲಿ ಕೂಡ ಜವುಳಿಯ ಉದ್ದಿಮೆಯು ಮರಳಿ ಪ್ರಾದುರ್ಭಾವಕ್ಕೆ ಬಂದಿರುವುದರಿಂದ ನಮ್ಮ ನಿರ್ಯಾತ ವ್ಯಾಪಾರ ಕುಸಿಯಲು ಕಾರಣವೆನಿಸಿದೆ ಇಂಗ್ಲಂಡು ಯುದ್ಧ ಪೂರ್ವದ ಉತ್ಪಾದನಾ ಮಟ್ಟವನ್ನು ಈಗಾಗಲೇ ಮುಟ್ಟುತ್ತಿದೆ ಜಪಾನವು ಅಮೇರಿಕಾದ ಸಹಾಯ ಪಡೆದು ತನ್ನ ಜವುಳಿ ಉತ್ಪಾದನೆಯನ್ನು ಮರಳಿ ಮೊದಲಿನ ಪ್ರಮಾಣಕ್ಕೆಯೇ ತರುತ್ತಿದೆ ಇಟಲಿ ಜರ್ಮನಿಯಂಥ ದೇಶಗಳೂ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸಿರುತ್ತವೆ. ಆದಕಾರಣ, ವಿದೇಶಗಳ ಒಟ್ಟಿಯೊಂದಿಗೆ ಸ್ಪರ್ಧೆ ಹೂಡಲು ಭಾರತವು ಎಲ್ಲ ಬಗೆಯ ಉಪಾಯಗಳನ್ನು ಕೈಗೊಳ್ಳುವುದು ಇಂದು ಅಗತ್ಯವೆನಿಸಿದೆ. ಒಟ್ಟಿಯ ವಿನಿಯಂತ್ರಣದಿಂದ ಈ ಉದ್ದೇಶವು ನೆರವೇರೀತೆಂದು ಆಶಿಸುತ್ತೇವೆ. ಒಡ ಜನತೆಯು ನಿನಿಯಂತ್ರಣ ಧೋರಣೆಕ್ಕಾಗಿ ಬಯಸುವ ಅಗತ್ಯವೇನಿಲ್ಲ ಏಕೆಂದರೆ ಸರಕಾರವು ಪ್ರಾಯೋಗಿಕ ರೂಪದಲ್ಲಿ ವಿನಿಯಂತ್ರಣವನ್ನು ತಂದಿದ್ದು, ಪರಿಸ್ಥಿತಿಯು ದುರ್ಭರ ಹೊಂದಲು ಯಾರಾದರೂ ಯತ್ನಿಸಿದರೆ, ಹತೋಟಿಯನ್ನು ಸರಕಾರ ಮರಳಿ ಹೇರಲು ನಿರ್ಧರಿಸಿದೆ ಸದ್ಯದ ವಿನಿಯಂತ್ರಣದಿಂದ ನೇಕಾರರಿಗೂ ಲಾಭವುಂಟಾದೀತೆಂದು ನಂಬಲೆಡೆಯಿದೆ. ಇನ್ನು ಮುಂದೆ ನೂಲಿನ ವಿತರಣೆ, ಬೆಲೆ ಹಾಗೂ ಪ್ರಮಾಣಗಳ ನೆರವಿಂದ ಅವರಿಗೆ ಕಷ್ಟವನ್ನು ಇರಿಸಿಕೊಳ್ಳಬೇಕಾಗಿ ಬರಲಿಕ್ಕಿಲ್ಲ ಜನತೆಯೂ ಜವುಳಿ ಉದ್ದಿಮೆಯಲ್ಲಿ ನಿರತರಾದ ಜನರೂ ಈ ವಿನಿಯಂತ್ರಣವನ್ನು ಯಶಸ್ವಿಗೊಳಿಸಲು ಸಂಕಲ್ಪಿಸುವುದು ಶ್ರೇಯೋ ಮಾರ್ಗವೆಂದು ನಮ್ಮೆಣಿಕೆ. ನಿಯಂತ್ರಣಗಳಿಂದಾಗುವ ದುಷ್ಪರಿಣಾಮಗಳಿಲ್ಲ ದಂತಾಗಬೇಕೆಂದ ಪ್ರಾಮಾಣಿಕವಾಗಿ ಬಯಸುವವರೆಲ್ಲರೂ ಸರಕಾರದ ಈ ನಿರ್ಣಯಕ್ಕೆ ಭವ್ಯ ಸ್ವಾಗತ ಕೊಡುವುದು ಕ್ರಮಪ್ರಾಪ್ತವಾಗಿರುತ್ತದೆ

ಉಡುಪಿ

ವಿದಾಯಸತ್ಕಾರ- ಉಡುಪಿ ಹೆಡ್ ಪೋಸ್ಟಾಫೀಸಿನ ಅಕೌಂಟಂಟರಾಗಿದ್ದ ಶ್ರೀ ಕೃಷ್ಣ ಹೊಳ್ಳರು ಜುಲೈ ಟೆಗೆ ಪೋಸ್ಟಲ್ ಇನ್ಸ್‌ಪೆಕ್ಟರಾಗಿ ಹೋಗುವ ಕಾರಣ, ಅವರಿಗೆ ವಿದಾಯವನ್ನಿತ್ತು ಸತ್ಕರಿಸುವ ಸಮಾರಂಭವು ಇದೇ ತಾ ೯ರಲ್ಲು ಜರಗಿತು. ಕುಮಾರಿ ಸುನೀತಿಯವರ ಸಂಗೀತ ಶ್ರೀ ಬಿ. ಆರ್ ಕಾಮತ್ ಮೊದಲಾದವರ ಭಾಷಣ ಚಹ ಕೂಟ ಗಳಾದುವು

ವನಮಹೋತ್ಸವ— ತಾಲೂಕು ಕಚೇರಿಯಲ್ಲಿ ವನಮಹೋತ್ಸವವು ಸ್ಥಳೀಯ ಡಿ| ಮ್ಯಾಜಿಸ್ಟ್ರೇಟ್ ಶ್ರೀ ಅಬ್ದುಲ್ ರಹೀಂ ಅಹಮ್ಮದ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮುನ್ಸಿಪಲ್ ಕೌನ್ಸಿಲು ಸಭೆಯು- ತಾ. ೧೧ರಲ್ಲು ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಹಲ ಕೆಲವು ಸರಕಾರಿ ಚಿಟಿ, ಗಳು ಓದಲ್ಪ ಟ್ಟವು. ಮ್ಯೂನಿಸಿಪಲ್ ಎಲಿಮೆಂಟರಿ ಶಾಲೆಗಳಿಗೆ ರಾತ್ರಿ ಶಾಲಾ ವರ್ಷಕ್ಕೆ ಗುಮಾಸ್ತರ ಕೆಲವು ನೇಮಕಗಳು ಸಂಕ್ರಾಂತ್ ಮಾಡಲಾದುವು ವಕೀಲ್ ಶ್ರೀ ಪಿ. ವಿ. ಆಚಾರ್ಯರು ಸೂಚಿಸಿದ ನಿರ್ಣಯಗಳಂತೆ ವರ್ಷಾವಧಿ ಕಂಟ್ರಾಕ್ಟುಗಳನ್ನು ಜರಗಿಸಿ ಬ

ಹೋಗಳಿಗೆ ತಪ್ಪದಲ್ಲಿಯೇ ಬಿದ್ದಿರುವುದು ಸುಸ್ಪಷ್ಟವಾಗಿರುತ್ತದೆ ಕಮ್ಯೂನಿಸ್ಟರ ಅಥವಾ ಅವರೊಡನೆ ಸಹಾನುಭೂತಿಯಿಂದಿರುವವರ ಆಟ ಏನೊಂದೂ ನಡೆಯದಂತೆ ಡಾ| ರ್ಹೀಯವರು ಸಬಲ ಹಸ್ತಗಳನ್ನು ಪಡೆದುಕೊಂಡಿರುವರು ಅಮೇರಿಕಾವು ರ್ಹೀಯವರ ಬೇಡಿಕೆಗಳಿಗೆಲ್ಲ ಸಮ್ಮತಿ ಕೊಡುವಾಗ ಬೇರೆ ಮಿತ್ರ ರಾಷ್ಟ್ರಗಳ ಸಲಹೆಯನ್ನು ತೆಗೆದು ಕೊಂಡಿರುವುದಿಲ್ಲ ಆದುದರಿಂದ ಮಿತ್ರ ರಾಷ್ಟ್ರಗಳಿಗೆ ಅಸಮಾಧಾನವುಂಟಾಗಬಹುದು. ಎಲ್ಲಕ್ಕಿಂತಲೂ ಹೆಚ್ಚು ಗಂಭೀರ ವಿಷಯವೆಂದರೆ- ಈಗಾಗಲೇ ಸಹಿ ಹಾಕಲ್ಪಟ್ಟ ಯುದ್ಧ ಕೈದಿಗಳ ಒಪ್ಪಂದವನ್ನು ಅಮೇರಿಕಾದ ಅಪೇಕ್ಷನಕ್ಕೆ ಅನುಕೂಲವಾಗುವಂತೆ (ಅಥವಾ ರ್ಹೀಯವರಿಗೆ ಲಾಭಪ್ರದವಾಗುವಂತೆ) ತಿದ್ದಲು ಕಮ್ಯೂನಿಸ್ಟರು ಎಷ್ಟು ಮಾತ್ರಕ್ಕೂ ಒಪ್ಪಲಾರರು ಅಮೇರಿಕವು ದಕ್ಷಿಣ ಕೊರಿಯಾದೊಡನೆ ಸಂರಕ್ಷಣಾ ಒಪ್ಪಂದಕ್ಕೆ ಸಿದ್ಧಗೊಂಡ ವಾರ್ತೆ ಒಂದಕ್ಷಣದಿಂದ ಕಮ್ಯೂನಿಸ್ಟ ರೇಡಿಯೋ ಗುಲ್ಲೆಬ್ಬಿಸಲು ತೊಡಗಿರುತ್ತದೆ ಆದ ದರಿಂದ ರಾಬರ್ಟಸನ್ನರ ಪ್ರೇತ್ಯ ತಾತ್ಕಾಲಿಕ ಸಮಾಧಾನವನ್ನುಂಟು ಮಾಡಿದಂದಿನಿಯೇ ಪೂರ್ವ ತು ಕೊರಿಯಾದಲ್ಲಿ ಶಾಂತಿ ನೆಲೆಸುವುದೆನ್ನುವ ಆಶೆಯನ್ನು ನಾವು ಕಟ್ಟಿಕೊಳ್ಳಲಾರೆವು

ಹುಮೂನ ನಿವಾರಣೆಮಾಡಬೇಕು ಮತ್ತು ಆಸ್ಪತ್ರೆಯು ಆಟಮೈದಾನದ ಸ್ಥಳದಲ್ಲಿಯ ಕಲ್ಲುಗಳನ್ನು ತೆಗೆದು ಆಟವಾಡಲು ಅನುಕೂಲವಾಗುವಂತೆ ಮಾಡಬೇಕು ಎಂಬ ವಿಷಯಗಳು ಸರ್ವಾನುಮತದಿಂದ ಪಾಸಾದುವು

ಅದ್ವಿತೀಯ ಕಾರ್ಯ ಸಾಧಕ

ಡಾ| ಟಿ ಎಮ್. ಎ ಪೈಗಳಿಗೆ ಉಡುಪಿ ಆಫೀಸರ್ಸ್ ಕ್ಲಬ್ಬಿನವರ ಸತ್ಕಾರ— ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿ ಅದ್ವಿತೀಯ ಕಾರ್ಯಸಾಧಕರೆಂದು ಹೆಸರಾದ ಡಾ. ಟಿ ಮಾಧವ ಪೈಗಳನ್ನು ಗೌರವಿಸುವ ಸಲುವಾಗಿ ಇದೇ ತಾ ೧೨ರ ಸಂಜೆ ಉಡುಪಿ ಆಫೀಸರ್ಸ್ ಕ್ಲಬ್ಬಿನ ಸದಸ್ಯರು ಸತ್ಕಾರ ಕೂಟವೊಂದನ್ನು ಅತ್ಯುತ್ತಮ ರೀತಿಯಲ್ಲಿ ಏರ್ಪಡಿಸಿದ್ದರು ಸಂಪೂರ್ಣವಾಗಿ ಎಲ್ಲಾ ಆಫೀಸರರೂ ವಕೀಲರೂ ಡಾಕ್ಟರರು ನೆರೆದಿದ್ದ ಗಣ್ಯರೆಲ್ಲಾ ಆಮಂತ್ರಿತರಾಗಿದ್ದರು ಉಪಹಾರವಾದನಂತರ ಕ್ಲಬ್ಬಿನ ಅಧ್ಯಕ್ಷ ಹಾಗೂ ಸ್ಥಳೀಯ ಡಿ| ಮ್ಯಾಜಿಸ್ಟ್ರೇಟ್ ಜನಾಬ್ ಅಬ್ದುಲ್ ರಹೀಮ್ ಅಹಮ್ಮದ್ ಅವರು ತಮ್ಮ ಘನಗಂಭೀರ ಸ್ವಾಗತ ಭಾಷಣದಲ್ಲಿ ಆಫೀಸರ್ಸ್ ಕ್ಲಬ್ಬಿಂದರು ಒಲೇ ಆಫೀಸರರಿಗೆ ಮಾತ್ರ ಸೀಮಿತವಾಗಿದೆ ಆದು ಆಫೀಸರರೂ ನೋನ್ ಆಫೀಸರರೂ ಸಮ್ಮಿಳಿತವಾಗಿರುವ ವಿಚಾರವಿನಿಮಯಂತರ ಕೂಟವೆಂದೂ ಅದಕ್ಕೆ ಯೋಗ್ಯತೆಯನ್ನು ... ವಿವಿಧ ರಂಗಗಳಲ್ಲಿ ವಿಶಿಷ್ಟ ಸ್ಥಾನಮಾನವನ್ನು ಗಳಿಸಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿ ಅನವರತ ಕಾರ್ಯನಿರತರಾದ ಡಾ ಪೈಗಳನ್ನು ಆಫೀಸರ್ಸ್ ಕ್ಲಬ್ಬು ಸನ್ಮಾನಿಸುವುದೆಂದರೆ ಇದೇ ಉಡುಪಿಯ ನಿಜಕ್ಕೂ ವಿದ್ಯಾವಂತ ಗಣ್ಯರ ತಂಡವೇ ಸನ್ಮಾನಿಸಿದಂತೆ ಎಂದೂ ಡಾ ಪೈಗಳು ಮೆಡಿಕಲ್ ಕಾಲೇಜನ್ನು ... ಉಡುಪಿಯ ಹೆಸರನ್ನು ಭಾರತ ... ಡಾ. ಪೈಗಳ ... ಕ್ಲಬ್ಬಿನ ಉಪಾಧ್ಯಕ್ಷರೂ ಜನಪ್ರಿಯ ... ವಕೀಲರಲ್ಲೊಬ್ಬರೂ ಆದ ಶ್ರೀ ಪಿ. ವಿ ಆಚಾರ್, ಸ್ಥಳೀಯ ಸರಕಾರಿ ಆಸ್ಪತ್ರೆಯ ಹಿರಿಯ ಅಸಿಸ್ಟೆಂಟ್ ಸರ್ಜನ್ ಹಾಗೂ ಜನಪ್ರಿಯ ಡಾಕ್ಟರ ಪಿ ಆರ್ ನಾಯಕ್, ರಿಟಾಯರ್ಡ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫಿಷರೀಸ್ ಆದ ಶ್ರೀ ಯು ಸಂಗಪ್ಪ ಇವರು ತಮ್ಮ ... ಕ್ಷೇತ್ರ ... ಸರಕಾರಿ ಕಾರ್ಯಗಳನ್ನು ... ಉದ್ಯೋಗ ... ಗುಣಗಳನ್ನು ... ಡಾ| ಅವರು ಇನ್ನೂ ಹೆಚ್ಚು ಕಾರ್ಯಗಳನ್ನು ಮಾಡುವಂತೆ ದೇವರು ಅನುಗ್ರಹಿಸಲೆಂದರು. ಅನಂತರ ಡಾ ಪೈಗಳು ಮಾತನಾಡುತ್ತ ತಮಗಿತ್ತ ಗೌರವವು ನಿಮ್ಮೆಲ್ಲರ ಪ್ರೀತಿ ವಿಶ್ವಾಸಗಳನ್ನು ಪ್ರದರ್ಶಿಸುವಂತಹದಾಗಿದೆ ಎಂದು ಪ್ರಥಮತಃ ಹೇಳಿದರು ... ಕ್ಲಬ್ಬಿನ ಜನರಲ್ ಸೆಕ್ರೆಟರಿ ... ನನ್ನ ಬೆಳವಣಿಗೆ, ಈ ತನಕ ಸಾಧಿಸಿದ ಕಾರ್ಯಗಳು ಇತ್ಯಾದಿ ವಿಷಯಗಳನ್ನು ವಿವರಿಸಿ ತನ್ನ ಕಾರ್ಯಸಾಧನೆಗೆ ತಮ್ಮೆಲ್ಲರ ಸಹಕಾರ ಬೇಕಾಗಿದೆ ಎಂದು ಹೇಳಿದರು.

ಸಭಾಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಡಾ| ಪೈಗಳ ಶಕ್ತಿಸಾಮರ್ಥ್ಯಗಳನ್ನು ಉದಾಹರಿಸಿ ಮಾತನಾಡಿ ಅವರ ಕಾರ್ಯಗಳಿಗೆ ಈ ಕ್ಲಬ್ಬಿನ ಸಹಾನುಭೂತಿ ಸದಾ ಇದ್ದೇ ಇದೆ ಎಂದು ಧನ್ಯವಾದಗಳನ್ನರ್ಪಿಸಿದರು.

ಮಣಿಪಾಲ—ಇಲ್ಲಿಯ ಹೈಸ್ಕೂಲ್ ಮಟಂದಲ್ಲಿ ತಾ ೭ರಲ್ಲು ಸಸಿ ಮತ್ತು ಮಿತ್ರ ಗೊಬ್ಬರ ಸಪ್ತಾಹವು ಶ್ರೀ ಟಿ. ಎ ಪೈ, ಎಮ್ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು ಡಾ ಟಿ ಎಮ್ ಎ. ಪೈ ಶ್ರೀ ಲಕ್ಷ್ಮೀನಾರಾಯಣ ಶೆಟ್ಟಿಯವರ ಭಾಷಣಗಳಿದ್ದುವು

ಕಾಸರಗೋಡು ಡಿ ಮು ಕೋರ್ಟಿನಲ್ಲಿ-

O S No 110/1953.

ರಾಮಣ್ಣ ಶೆಟ್ಟಿ ವಾದಿಯು.

ಮತ್ತು

K. C. ಮಹಮ್ಮದ್ ಬ್ಯಾರಿ ಮೊದಲಾದ ಪ್ರತಿವಾದಿಗಳು.

3ನೇ ಪ್ರತಿವಾದಿ

ಮಂಜುಗುಣಿ ಬ್ಯಾರಿ, ಪೊಗ್ರಾಲ್ ಅಬ್ದುಲ್ಲ ರಹಿಮಾನ್ ಬ್ಯಾರಿಯ ಮಗ ಕಾಸರಗೋಡು ತಾಲೂಕು ಮುಳಿಯಾರು ೧೧ನೇ ಗ್ರಾಮದ ವಾಸ್ತವ್ಯದು ಎಂಬಲ್ಲಿರುವವ

ಸದ್ರಿ ವ್ಯಾಜ್ಯದ ವಾದೀದ ಕಡೆಯಿಂದ ನೋಟೀಸು-

ಪ್ರತಿವಾದಿ ಮೇಲೆ ಡಿಕ್ರೀ ... ಬಗ್ಗೆ ದಾವಾ ಹೂಡಿದ ಮೇಲ್ಕಂಡ ವ್ಯಾಜ್ಯ ತಾರೀಖು 8 8 1953ಕ್ಕೆ ... ದಿವಸ ... ಹಾಜರಾಗದಿದ್ದರೆ ... ಕೊಳ್ಳಲಾಗುವದು

K P V B EJMAN

Advocate for plaintiff

Kasaragod, 11—7—1953

ಉಡುಪಿ ಡಿ ಮು. ಕೋರ್ಟಿನಲ್ಲಿ

S C. No 229/1953

ಗಿರಿಯ ಪೂಜಾರಿ ವಾದಿ.

ಮತ್ತು

ಮುದ್ದಣ್ಣ ಶೆಟ್ಟಿ, ಮಂಜಯ್ಯ ಶೆಟ್ಟಿ ಆರೂರು ... ಉಳ್ಳೂರು ಗ್ರಾಮ ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ವಾದಿಯು ದಿವಾನಿ ನೋಟಿನ ಆಸಲು ಬಡ್ಡಿಗೆ ಮಾಡಿದ ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ನೋಟೀಸು ಬಗ್ಗೆ ತಾ 27 7-53ಕ್ಕೆ ಮುಂದೂಡಲಾಗಿರುವುದೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಆ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿಕ್ಕೊಳ್ಳತಕ್ಕದ್ದು ... ಯಿದೆ.

N. V Kamath

Advocate for plaintiff

ಉಡುಪಿ 13—7—1953

ತಾ 14—7—53 ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸ್ತ್ರೀ ಸಾಹಸಂ (ವಿನೋದ)

(ತಮಿಳು)

ಅಂಜಲಿದೇವಿ, ನಾಗೇಶ್ವರ ರಾವ್,

ಬರುವ ಚಿತ್ರ —

ರಾಜಾರಾಣಿ ದಮಯಂತಿ (ಹಿಂದಿ)

ತಾ 19—7—53ನೇ ಆದಿತ್ಯವಾರ ಬೆಳಿಗ್ಗೆ

ಡಕೋಟಾ ಲಿಲ್ DAKOTA LIL

(Cinecolor)

ಮಂಗಳೂರು

ಅನಾಥ ಬಾಲಕಾಶ್ರಮ—ದ. ಕ ಜಿಲ್ಲೆಯ ದೇವಸ್ಥಾನಗಳ ಎಗ್ಸಿಕ್ಯೂಟಿವ್ ಆಫೀಸರರ ಸಮ್ಮೇಳನವು ಇದೇ ತಾ 8ರಲ್ಲು ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಬೋರ್ಡಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ಕುಟ್ಟಿಕೃಷ್ಣನ್ ಮೆನೋನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂ ಅನಾಥಬಾಲಕಾಶ್ರಮವೊಂದನ್ನು ಸ್ಥಾಪಿಸುವ ಕುರಿತು ವಿಚಾರ ವಿನಿಮಯ ನಡೆದು, ಮಂಜೇಶ್ವರದಲ್ಲಿ ಸ್ಥಾಪಿಸುವ ನಿರ್ಣಯವಾಯಿತು. ಈ ಕಾರ್ಯಕ್ಕೆ ಸ್ಥಳವನ್ನು ಕೊಟ್ಟು ವರ್ಷಾವರ್ಷಕ್ಕೆ ಎರಡು ಸಾವಿರ ರೂಪಾಯಿಗಳನ್ನು ಕೊಡಲು ಶ್ರೀ ಮದನಂತೇಶ್ವರ ದೇವಸ್ಥಾನದವರು ಒಪ್ಪಿರುವರಾಗಿ ತಿಳಿದು ಬರುತ್ತದೆ.

ಜಾಮೀನಿನ ಮೇಲೆ ಬಿಡುಗಡೆ— ಸ್ವಲ್ಪ ಸಮಯ ಹಿಂದೆ ಹುಜೂರ್ ಟ್ರೆಜರಿಯಿಂದ ಲಕ್ಷಾಂತರ ರೂಪಾಯಿಗಳನ್ನು ಸುಳ್ಳು ಪೆನ್ಶನ್ ದಾಖಲೆಯಿಂದ ಅಪಹರಿಸಿದರೆಂಬ ಆರೋಪದ ಮೇಲೆ ದಸ್ತಗಿರಿಯಾದಲ್ಪಟ್ಟ ವಿ. ರೋಬರ್ಟ್ಸ್ ಮತ್ತು ಅವರ ಪತ್ನಿ ಶ್ರೀಮತಿ ಶಾಂತಿ ರೋಬರ್ಟ್ಸರವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಜಿಲ್ಲಾ ಸೆಶನ್ಸ್ ಜಡ್ಜರವರಲ್ಲಿ ಮಾಡಿದ ಅರ್ಜಿಗಳಲ್ಲಿ ಶ್ರೀಮತಿ ರೋಬರ್ಟ್ಸರನ್ನು ಮಾತ್ರ ಬಿಡುಗಡೆ ಮಾಡಲು ಅಪ್ಪಣೆಯಾಗಿದೆ.

ನಿಧನ—'ಮದ್ರಾಸಿನ ಉಡ್‌ಲ್ಯಾಂಡ್ಸ್' ಹೋಟೆಲಿನ ಮಾಲಕರಾದ ಶ್ರೀ ಕಡಂದಲೆ ಕೃಷ್ಣ ಭಟ್ಟರ ತಂದೆ ಶ್ರೀ ಸುಬ್ಬಣ್ಣ ಭಟ್ಟರು ಇದೇ ತಾ 4ರಲ್ಲು ರಾತ್ರಿ ತಮ್ಮ 86 ನೇ ವಯಸ್ಸಿನಲ್ಲಿ ಪರಲೋಕ ವಾಸಿಗಳಾದುದು ವಿಷಾದಕರವಿದೆ.

ವನಮಹೋತ್ಸವ—ಮದ್ರಾಸು ಸರಕಾರದ ರೆವಿನ್ಯೂ ಬೋರ್ಡಿನ ಪ್ರಥಮ ಸದಸ್ಯರಾದ ಶ್ರೀ ವಿ. ಎಸ್. ಕಾಡ್ವರ ಅಧ್ಯಕ್ಷತೆಯಲ್ಲಿ ತಾಲೂಕು ಕಚೇರಿಯಲ್ಲಿ ವನಮಹೋತ್ಸವವು ಜರಗಿತು. ಕೃಷಿ ಇಲಾಖೆಯ ಜಿಲ್ಲಾಧಿಕಾರಿ ಶ್ರೀ ಪಿ. ನಾರಾಯಣ ನಾಯರರು ಮರಗಳನ್ನು ಬೆಳೆಯಿಸುವ ವಿಚಾರವಾಗಿ ಭಾಷಣವಿತ್ತರು. ಶ್ರೀ ಬಿ. ವಿ. ಬಾಳಿಗ ಎಮ್. ಎಲ್. ಎ, ಸಿ. ಎಲ್. ಲೋಬೋ ಮೊದಲಾದವರು ಮಾತಾಡಿದರು. ಕಸಿಬ್ಬಾ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 326/1953.

ಶ್ರೀ ಕೆ. ನಾರಾಯಣರಾವ್ ರಿಸೀವರ್ ಎಡ್ವೋಕೇಟ್ ಉಡುಪಿ. ವಾದಿ.

ಮತ್ತು

ಶೀನ ಪೂಜಾರಿ—ಚಂದು ಪೂಜಾರಿ ಮಗ—ಅಂಜಾರು ಗ್ರಾಮದ ಓಂತಿಬೆಟ್ಟು ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ವಾದಿಯೊಳಗೆ ಪ್ರತಿವಾದಿಯು ಚಾಲಗೇಣಿಗೆ ಅನುಭವಿಸಿಬರುವ ಆಸ್ತಿಗಳ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರತಕ್ಕ ಕಳೆದ ನಂದನ ಸಂ||ದ ಗೇಣಿ-ವ-ಬಡ್ಡಿ ಬಾಕಿ ಬಗ್ಗೆ ವಾದಿಯು ಮಾಡಿದ ಮೊಕ್ಕದ್ದಮೆ ದಾವೆಯು ತಾ 30—7—53ಕ್ಕೆ ನೋಟಿಸು ಬಗ್ಗೆ ಇಡಲಾಗಿದೆ, ಸದ್ರಿ ಪ್ರತಿವಾದಿಯು ತನ್ನ ಉಜಾರ್ದಾರಿಯಿದ್ದರೆ ಆ ದಿವಸ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಯಾ-ವಕೀಲರ ಮುಖಾಂತ್ರ ಹಾಜರಾಗಿ ಉದಂಡಕ್ಕೆ ತಪ್ಪಿದ್ರೆ ಈ ದಾವೆಯನ್ನು ಆತನ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸಲಾಗಿಯದೆ.

(By order of the Court)

B. Sheenappa Hegde
Pleader for Plaintiff

Camp Udipi 13-7 1953

ರ್ ಶ್ರೀ ಎಚ್. ಜಿ. ಕೆದಿಲ್ಲಾಯರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದಲ್ಲಿ ಮುನಿಸಿಪಲ್ ಹಾ. ಎ. ಶಾಲಾ ವಿದ್ಯಾರ್ಥಿಗಳ ವಂದನೆಯಾಯ್ತು.

ಕಸ್ತೂರ್ಬಾ ಮೆಡಿಕಲ್ ಕಾಲೇಜು ಮಂಗಳೂರಿನಲ್ಲಿಯು ಶಿಕ್ಷಣದ ಏರ್ಪಾಡಿನ ಚರ್ಚೆ—ಮಣಿಪಾಲದಲ್ಲಿ ಸ್ಥಾಪಿತವಾದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಕೊನೆಯ ನಾಲ್ಕು ವರುಷಗಳ ಶಿಕ್ಷಣಕ್ಕೆ ಮಂಗಳೂರಲ್ಲಿ ಆಗಬೇಕಾದ ಏರ್ಪಾಡುಗಳ ಕುರಿತು ವಿಚಾರ ವಿನಿಮಯ ಮಾಡಲು ಇದೇ ತಾ 11ರಲ್ಲು ಎಸ್. ಸಿ. ಬೇಂಕಿನ ಭವನದಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಪ್ರಮುಖ ನಾಗರಿಕರ ಸಭೆ ಜರಗಿತು.

ಎಕಡೆಮಿ ಒಫ್ ಜನರಲ್ ಎಡ್ಯುಕೇಶನ್ ಇದರ ರಿಜಿಸ್ಟ್ರಾರ್ ಡಾ| ಟಿ ಮಾಧವ ಪೈಗಳು ಬಹಳ ಪ್ರಯತ್ನದಿಂದ ಪ್ರಾರಂಭಿಸಿರುವ ಮೆಡಿಕಲ್ ಕಾಲೇಜಿನ ಅಭಿವೃದ್ಧಿಗೆ ಮಂಗಳೂರಿನವರು ತಮ್ಮ ಪೂರ್ಣ ಸಹಾಯ ಸಹಕಾರಗಳನ್ನು ನೀಡಬೇಕೆಂದು ವಿನಂತಿಸಿದರು. ಪ್ರಥಮ ಒಂದೂವರೆ ವರ್ಷದ ಪ್ರಿ-ಕ್ಲಿನಿಕಲ್ ಅಧ್ಯಯನದ ನಂತರ ಮುಂದಿನ ನಾಲ್ಕು ವರ್ಷಗಳ ವಿದ್ಯಾಭ್ಯಾಸವನ್ನು ಮಂಗಳೂರಲ್ಲಿ ಮುಂದುವರಿಸಬೇಕಾಗಿದೆ. ಆದಕ್ಕಾಗಿ ಇಲ್ಲಿ ಕಡಿಮೆ ಪಕ್ಷ 400 ವಿದ್ಯಾರ್ಥಿಗಳ ವಸತಿ ಹಾಗೂ ಕಾಲೇಜು ಕಟ್ಟಡಗಳ ವ್ಯವಸ್ಥೆಯಾಗಬೇಕಾಗಿದೆ. ನಾನು ಹಣವನ್ನು ಕೇಳಲು ಬಂದಿಲ್ಲ. ಯಾರಾದರೂ ಅವರಾಗಿಯೇ ಕೊಟ್ಟಲ್ಲಿ ಸ್ವೀಕರಿಸುವೆನು. ಆದರೆ ಕಟ್ಟಡಗಳ ವ್ಯವಸ್ಥೆ ಮಂಗಳೂರವರ ಸಹಕಾರದಿಂದ ಆಗಬೇಕಾಗಿದೆ ಎಂದು ಹೇಳುತ್ತಾ ಮೆಡಿಕಲ್ ಕಾಲೇಜು ಹೇಗೆ ಸ್ಥಾಪನೆಯಾಯ್ತು, ಹೇಗೆ ನಡೆಯುತ್ತಿದೆ ಎಂದು ವಿವರಿಸಿ ಹೇಳಿದರು. ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಇತ್ಯಾದಿ ಕೊಡುವ ವ್ಯವಸ್ಥೆಯಾಗಬೇಕೆಂಬ ಶ್ರೀ ಎನ್. ಎಸ್. ಸುವರ್ಣರ ಕೇಳಿಕೆಯನ್ನು ಈಗ ಪೂರ್ತಿ ಮಾಡಲು ಸ್ವಲ್ಪ ಕಷ್ಟವೆಂದೂ ಮುಂದಕ್ಕೆ ಆ ಕುರಿತು ಯೋಗ್ಯ ಕ್ರಮ ಕೈಕೊಳ್ಳಲಾಗುವುದೆಂದೂ ಹೇಳಿದರು.

ಮಂಗಳೂರಲ್ಲಿ ಮಾಡಬಹುದಾದ ವ್ಯವಸ್ಥೆಯ ಕುರಿತು ಶ್ರೀಗಳಾದ ನರ್ಸಪ್ಪಯ್ಯ, ಜವಂಜ ಶೆಟ್ಟಿ, ಡಾ ಕೊಯಿಲೊ, ಡಾ. ಉಮೇಶ ರಾವ್, ಕೆ ಎಸ್. ಹೆಗ್ಡೆ, ಬಿ. ವಿ. ಬಾಳಿಗಾ, ಟಿ. ಎ. ಪೈ ಮೊದಲಾದವರು ಸಲಹೆಯನ್ನಿತ್ತರು. ಕಾಲೇಜು ಕಟ್ಟಡ ಆಸ್ಪತ್ರೆಯ ಹತ್ತಿರವಿರುವುದು ಉತ್ತಮವಾದರೂ ಹತ್ತಿರದ ಗವರ್ನಮೆಂಟ್ ಕಾಲೇಜು, ತಾಲೂಕು ಆಫೀಸು, ಬಿ ಟಿ. ಕಾಲೇಜು ಇತ್ಯಾದಿ ಸ್ಥಳಗಳು ಆ ಬಗ್ಗೆ ದೊರೆಯುವುದು ಕಠಿಣವಾದುದರಿಂದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಪಕ್ಕದಲ್ಲಿರುವ ಸುಮಾರು ಎಂಟು ಯಾ ಹತ್ತು ಎಕ್ರೆ ಖಾಲಿ ಸರಕಾರಿ ಸ್ಥಳವನ್ನು ಸರಕಾರದಿಂದ ಪಡೆದು ಅಲ್ಲಿ ಕಟ್ಟೋಣಗಳನ್ನು ಕಟ್ಟಿಸುವುದೆಂದೂ ನಿರ್ಧರಿಸಲಾಯಿತು. ಈ ವಿಷಯದಲ್ಲಿ ಸರಕಾರದ ನೆರವನ್ನು ಕೇಳಿಕೊಳ್ಳಲು ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು, ನ್ಯಾಯವಿಧಾಯಕರು, ಬಿಶಪರು, ಕೆಲವು ಡಾಕ್ಟರರು ಮತ್ತು ಪ್ರಮುಖ ನಾಗರಿಕರಿಂದೊಳಗೊಂಡ ಸುಮಾರು ಮೂವತ್ತು ಮಂದಿಯ ಕಮಿಟಿ ನೇಮಕವಾಗಿ ಶ್ರೀ ಎ. ಉಮಾನಾಥ ರಾಯರನ್ನು ಕನ್ವೀನರಾಗಿ ಆರಿಸಲಾಯಿತು. ಶ್ರೀ ನರ್ಸಪ್ಪಯ್ಯನವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಚುನಾವಣೆ—ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜ್ ಯೂನಿಯನ್ನಿನ ಚುನಾವಣೆಯು ಇದೇ ತಾ 8ರಲ್ಲು ನಡೆದು ಶ್ರೀಗಳಾದ ಎಮ್. ಮಂಜುನಾಥ ನಾಯ್ಕರು ಅಧ್ಯಕ್ಷರಾಗಿಯೂ ಎಚ್. ಗಣೇಶ ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ ಚುನಾವಣೆ ಹೊಂದಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು—ಕಾರ್ಯಕಾರಿ ಮಂಡಳಿಯ ಸಭೆಯು ಇದೇ ತಾ 11ರಲ್ಲು ಸೇರಿ ಶ್ರೀ ಎನ್. ಎಸ್. ಕಿಲ್ಲೆಯವರ ಅಕಾಲ ನಿಧನಕ್ಕಾಗಿ ಸಂತಾಪ ಸೂಚಿಸಿ ಅವರು ಕಳೆದ 30 ವರ್ಷಗಳಿಂದ ಕಾಂಗ್ರೆಸ್ಸಿಗೂ ದೇಶಕ್ಕೂ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ನಿರ್ಣಯಗಳಾದುವು.

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು—ತಾ 12ರಲ್ಲಿ ಜರಗಿ ಜಿಲ್ಲೆಯ ಹಿರಿಯ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎಚ್. ವಾಸುದೇವ ನಾಯಕರ ಅಕಾಲ ನಿಧನಕ್ಕಾಗಿ ಸಂತಾಪ ಸೂಚಿಸಿತು. ಶ್ರೀ ಎಮ್. ಎಲ್. ಸೆಟ್ಟರು ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು.

ಮಂಗಳೂರು ಟಪ್ಪಾಲು ತಂತಿ ಕೆಲಸಗಾರರ ಯೂನಿಯನ್ ವಾರ್ಷಿಕ ಸಭೆಯು—

ತಾ 12ರಲ್ಲಿ ಶ್ರೀ ಸಿ. ಕುಮಾರನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು, ಚಾಲ್ತಿ ವರ್ಷಕ್ಕೆ ಶ್ರೀಗಳಾದ ಪಿ ಕೆ. ಮೆನನ್ (ಅಧ್ಯಕ್ಷ) ಪಿ. ಮಾಧವನ್ ನಂಬಿಯಾರ್ (ಉಪಾಧ್ಯಕ್ಷ) ಬಿ. ಸದಾಶಿವ ರಾವ್ (ಕಾರ್ಯದರ್ಶಿ) ಸಿ. ಕೆ. ಅಪ್ಪು ಕುಟ್ಟನ್ ನಂಬಿಯಾರ್ (ಉಪಕಾರ್ಯದರ್ಶಿ) ಎಮ್. ಕೋರನ್ (ಕೋಶಾಧಿಕಾರಿ) ಮೊದಲಾದವರುಳ್ಳ ಕಾರ್ಯಕಾರೀ ಮಂಡಳಿಯು ರಚನೆಯಾಯಿತು.

ದಿ ಕೆಥೊಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ, ಬ್ರಾಂಚ್.

ಏಲಂ ನೋಟೀಸು.

ಈ ಕೆಳಗೆ ಹೆಸರುಕಾಣಿಸಿದ ಮಹನೀಯರು ಸದ್ರೀ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲದ ಅಸಲು ಬಡ್ಡಿ ವಗೈರೆ ಐವೇಜನ್ನು ಕ್ಲಪ್ತ ವಾಯಿದೆಗೆ ಕೊಡದೆ ಬಾಕಿಮಾಡಿರುವುದರಿಂದಲೂ, ಅಲ್ಲದೆ ಕ್ರಮಪ್ರಕಾರ ರಿಜಿಸ್ಟ್ರಿನೋಟೀಸು ಕೊಟ್ಟಲ್ಲಿ, ಕೆಲವರು ಪಡೆಕೊಂಡೂ ಕೆಲವರು ಪಡಕೊಳ್ಳದೆ ವಾಪಾಸು ಮಾಡಿರುವುದರಿಂದಲೂ ಸದ್ರೀಯವರಿಗೆ ಯಾ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ: ಸದ್ರಿ ನಗಗಳನ್ನು, ತಾ. 25—7—53ರ ಒಳಗೆ ಬಿಡಿಸದಿದ್ದಲ್ಲಿ, ಇದೇ ತಿಂಗಳ ತಾ. 30-7-53 ನೆ ಗುರುವಾರ ದಿನ ಅಪರಾಹ್ನ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
27/655	ಶೇಷಯ ಶೇರ್ವೆಗಾರ, ವೆಂಕಟ್ರಮಣ ಶೇರ್ವೆಗಾರರ ಮಗ, ಕುದ್ರುಬೆಟ್ಟು, ಉಪ್ಪೂರು ಗ್ರಾಮ, ಉಪ್ಪೂರು P. O.	ರೂ. 175.
27/1426	ಬಾಗಿ ಬೆಲ್ಚಾಡ್ತಿ, ರಾಮ ಬೆಲ್ಚಾಡನ ಹೆಂಡತಿ, ನಡಂಬಳ್ಳಿ, ಕಲ್ಯಾಣಪುರ P. O.	ರೂ. 25.
27/1699	ಗೋವಿಂದ ಸುವರ್ಣ, ತುಕ್ರ ಪೂಜಾರಿ ಮಗ, ಯೇಣಗುಡ್ಡೆ ಗ್ರಾಮ, ಕಟಪಾಡಿ. P. O.	ರೂ. 120.
28/278	—Do—	ರೂ. 35.
27/2272	ಗೋಪಾಲ ಶೇರ್ವೆಗಾರ, ಗಿರಿಯಪ್ಪ ಶೇರ್ವೆಗಾರರ ಮಗ, ಉಪ್ಪೂರು, ಉಪ್ಪೂರು. P. O.	ರೂ. 40.

ಕಲ್ಯಾಣಪುರ,
11-7-53.

S. Rebello,
Agent.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S 103/51.
R. E. P: 650/52.

ಅರ್ಜಿದಾರ ಆಲಂದೂರು ಹಿರಿಯಣ್ಣ ಸೆಟ್ಟಿ, ಎದ್ರಿರು. ವೆಂಕಟ್ರಮಣ ಸೇರಿಗಾರ ಸಹ ಇವರೊಳಗೆ 4 ಮತ್ತು 5 ನೇ ಎದ್ರಿರಿಗೆ ತಿಳಿಯಪಡಿಸಿದ್ದು.

4 ನೇ ಎದ್ರಿ. ಪರಮೇಶ್ವರ ಸೇರಿಗಾರ ಶೇಷಯ್ಯ ಸೇರಿಗಾರನ ಮಗ.

5. ಪಾರ್ವತಿ ಹೆಂಗ್ಸು. ಮಂಜುನಾಥ ಸೇರಿಗಾರನ ವಿಧವೆ. ಕುಂದಾಪುರ ತಾಲ್ಲೂಕ ಬೈಂದೂರು ಗ್ರಾಮದ ವ್ಯವಾದಿ.

ಸದ್ರಿ ಅಮಲ್ಜಾರಿಯಲ್ಲಿ ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರ್ತು ನಿರ್ಧರಿಸುವ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ನೋಲ್ಯಾಪ್ಸಿದ ಅರ್ಜಿ ತಾರೀಕು 23—7—53ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty
Advocate for Petitioner

ಮೊಕ್ಕಾಂ ಕುಂದಾಪುರ, ತಾ. 12-7-53.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಅಳಿವು—ಉಳಿವು

(೧ನೇ ಪುಟದಿಂದ)

ನೆಂಬುದನ್ನು ಮಾತ್ರ ಅದು ತಿಳಿದಿರುವಂತೆ ಕಾಣುವುದಿಲ್ಲ. ಇದನ್ನು ತಿಳಿಯಪಡಿಸುವುದಕ್ಕೆ ಸರಕಾರೀ ಅಧಿಕಾರಿಗಳು ಪ್ರಯತ್ನ ಪಡುತ್ತಿರುವರು. ಹಾಗೆ ಮಾಡುವಾಗ, ಅವರು ದರ್ಪ ಹಾಗೂ ತಾವು ಮೇಲೆನ್ನುವ ಅಹಂಕಾರವನ್ನು ತಿಲಾಂಶವೂ ತೋರಿಸಲಾಗದೆಂದು ಯೋಜನಾ ಆಯೋಗ ಅಪೇಕ್ಷಿಸುತ್ತದೆ. ಏಕೆಂದರೆ ಜನತೆಯ ಸಮ್ಮತಿ-ಅಥವಾ ಅಸಮ್ಮತಿಯನ್ನು ಉಪೇಕ್ಷೆಯಿಂದ ಕಾಣುವ ಕಾಲ ಎಂದೋ ಸಂದು ಹೋಗಿದೆ. ಸರಕಾರ ತನಗೆ ಖುಶಿ ತೋರಿದಂತೆ ವರ್ತಿಸುವ ಕಾಲ ಇದಲ್ಲ. ಜನತೆಯ ಮನವೊಲಿಸಿಕೊಂಡರೆ ಮಾತ್ರ ಸರಕಾರ ಮತ್ತು ರಾಜ್ಯಾಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಇಂದು ಸಾಧ್ಯವುಂಟೇ ಹೊರತು-ಅನ್ಯಥಾ ಅವರು ಸ್ಥಾನಭ್ರಷ್ಟರಾಗಬೇಕಾಗುವುದು. ಜನತೆಯೇ ಸ್ವಾಮಿ; ಸರಕಾರ ಅದರ ಸೇವಕನೆಂಬುದು ಪ್ರಜಾಪ್ರಭುತ್ವದ ಪಲ್ಲವಿ. ಇದನ್ನು ಸರಕಾರೀ ಅಧಿಕಾರಿಗಳು ಅರಿತುಕೊಂಡು ವಿನಯಶೀಲರಾಗಿ ಸಹೃದಯತೆಯಿಂದ ನಡೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡುವುದಕ್ಕೆ ಯೋಜನಾ ಆಯೋಗ ಮುಂಬಂದಿದೆ. ಮಾತ್ರವಲ್ಲ-ಇಡೀ ಆಡಳಿತ ಘಟಕವನ್ನು ಪುನಃ ವ್ಯವಸ್ಥೆಗೆ ಗುರಿಮಾಡುವ ವಿಚಾರವೂ ನಡೆದಿದೆ.

ಹೀಗೆಂದ ಮಾತ್ರಕ್ಕೆ ಜನತೆ ಮನಬಂದಂತೆ ಸರಕಾರವನ್ನು ಕುಣಿಸಬಹುದೆಂದು ತಿಳಿಯಲಾಗದು. ಹಾಗೆ ಕುಣಿಸುವ ಶಕ್ತಿ ಸಾಮರ್ಥ್ಯ ನಿಜಕ್ಕೂ ಜನತೆಗುಂಟು. ೧೮೫೭ರಲ್ಲಿ ಭಾರತದಲ್ಲಿ ನಡೆದ ಸಿಪಾಯಿ ದಂಗೆಯನ್ನು ಸ್ವಾತಂತ್ರ್ಯಾಂದೋಲನದ ಪ್ರಥಮ ಹೋರಾಟವೆಂದು ಕರೆಯುವ ನಮಗೆ- ಭಾರತೀಯರು ಕುರಿಗಳಲ್ಲ—ಹೇಡಿಗಳಲ್ಲ ಎನ್ನುವ ಹೆಮ್ಮೆಯುಂಟು. ಸರಕಾರದ ವಿರುದ್ಧ ಜನಮತವನ್ನು ಸಂಘಟಿಸುವ ಅಸಾಧಾರಣ ಕಾರ್ಯವನ್ನು ಅಂದಿನ ಕೆಲವು ಜನತಾ ಧುರೀಣರು ಕೈಗೂಡಿಸಿದ್ದರು. ಆಗ ಎಲ್ಲಿಯವರೆಗೆ ಜನತೆಯ ಬೆಂಬಲ ಪಡೆಯಲು ಯತ್ನಿಸಿದ್ದರೆಂದರೆ—ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯು ಜಗನ್ನಾಥ ಪುರಿಯ ಪಂಡರೊಬ್ಬರಿಗೆ ಕಾಗದ ಬರೆದು, ತೀರ್ಥಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಲ್ಲಿ ಬ್ರಿಟಿಷರ ವಿರುದ್ಧ ಭಾವನೆಯನ್ನು ಪ್ರಚೋದಿಸಲು ಈ ಪಂಡರು ನೆರವಾಗಬೇಕೆಂದು ಕೇಳಿದ್ದಳು. ಜನತೆಯ ಅಭಿಪ್ರಾಯವನ್ನು ರೂಪಿಸುವಲ್ಲಿ ಮತ್ತು ಅವರಿಗೆ ಮಾರ್ಗದರ್ಶನ ಮಾಡುವಲ್ಲಿ ಆ ಕಾಲದ ಪಂಡರ ವರ್ಚಸ್ಸು ಗಣನೀಯವಾಗಿದ್ದಿತು ಆದುದರಿಂದ ಜನತೆಯನ್ನು ಸದೆಬಡಿಯುವ ಸರಕಾರವಿದ್ದರೆ ಅದನ್ನು ನಿರ್ಮೂಲಿಸುವುದು ದೊಡ್ಡ ಮಾತಲ್ಲ. ಆದರೆ ಭಾರತದಲ್ಲಿ ಪರಿಸ್ಥಿತಿ ಹೇಗಿದೆ— ಜನತೆ ಮತ್ತು ಸರಕಾರವು ಒಂದೇ ನಾಣ್ಯದ ಎರಡು ಮುಖಗಳಂತೆ ಕೆಲಸ ಮಾಡುತ್ತಿವೆ; ಮಾಡಬೇಕು.

ನೀರು ಅನೇಕ ಕಾರಣಗಳಿಂದ ಹೊಲಸಾಗಿ ನಾರುತ್ತದೆ; ಪಾಪಾಚಿ ಹಾಗು ಹುಳುಕಡ್ಡಿಗಳಿಂದ ತನ್ನ ನೈರ್ಮಲ್ಯವನ್ನು ಕಳೆದುಕೊಳ್ಳುತ್ತದೆ. ಅಂಥ ಕಾಲದಲ್ಲಿ ಮೀನು ಇವೆಲ್ಲ ಕಶ್ಮಲಗಳನ್ನು ದೂರೀಕರಿಸಲು ತುಂಬ ನೆರವಾಗುತ್ತದೆ ಮೀನು ಆಗ ನೀರಿನ ಪರಮ ಮಿತ್ರ; ನೀರನ್ನು ಶುದ್ಧೀಕರಿಸುವ ಸಾಧನ. ಭಾರತದಲ್ಲಿ ಇಂದು ಸ್ಥಾಪಿಸಲ್ಪಟ್ಟಿರುವ ಸರಕಾರವು ಜನತೆಯಲ್ಲಿರುವ ಜಡತ್ವವನ್ನು ಕಳೆಯಲು ಪ್ರಯತ್ನಶೀಲವಾಗಿದೆ; ಆಲಸಿ ಹಾಗೂ ಸೋಮಾರಿ ಜನಾಂಗದ ಸ್ಥಾನದಲ್ಲಿ ಲವಲವಿಕೆಯಿಂದ ತುಂಬಿದ, ಉತ್ಸಾಹ ಪೂರ್ಣವಾದ, ಚೈತನ್ಯದಿಂದ ತುಳುಕಾಡುವ ನೂತನ ಜನಾಂಗವನ್ನು ನಿರ್ಮಿಸಿ, ಪ್ರತಿಷ್ಠಾಪಿಸುವ ಹಂಬಲ ನಮ್ಮ ಸರಕಾರಕ್ಕೆ ಇದೆ. ಸ್ವಾದಿಷ್ಟವಾದ ನಿರ್ಮಲೋದಕವನ್ನು ಭಾರತದಲ್ಲಿ ನೆಲೆಗೊಳಿಸಲು ನೆಹರೂ ಸರಕಾರ ಮೀನಿನೋಪಾದಿಯಲ್ಲಿ ಪರಿಶ್ರಮ ವಹಿಸುತ್ತದೆ. ಆದಕಾರಣ ನಮ್ಮ ಸರಕಾರದ ಈ ಪ್ರಯತ್ನಗಳಲ್ಲಿ ಜನತೆ ಸಹಾನುಭೂತಿಯನ್ನು ತೋರ್ಪಡಿಸಬೇಕಾದುದು ಮತ್ತು ಸಾಧ್ಯವಿದ್ದ ಮಟ್ಟಿಗೂ ಸಹಕಾರವನ್ನು ನೀಡಬೇಕಾದುದು ಕರ್ತವ್ಯ. ನಮ್ಮಲ್ಲಿ ಸರಕಾರ ಮತ್ತು ಜನತೆ ಅನ್ಯೋನ್ಯ ಪ್ರವೃತ್ತಿಯಿಂದ ಮುಂದೊಡು ರಾಷ್ಟ್ರದ ಕಲ್ಯಾಣ ಹಾಗೂ ಅಭಿವೃದ್ಧಿಗಳನ್ನು ಸಾಧಿಸುವಲ್ಲಿ ಭುಜಕ್ಕೆ ಭುಜ ಕೊಟ್ಟು ಮುನ್ನಡೆಯುವಂತಾಗಲೆಂಬುದೇ ಎಲ್ಲರ ಹಾರೈಕೆ,

—ಓಂತತ್ಸತ್"

ಜಿಲ್ಲಾ ಬೋರ್ಡು ಸಾಧಿಸಿದ ಕಾರ್ಯಗಳು

ಇದೇ ಕಳೆದ ಜೂನ್ 30ಕ್ಕೆ ಜಿಲ್ಲಾ ಬೋರ್ಡುಗಳ ಅವಧಿ ಮುಗಿದು ವಿಶೇಷಾಧಿಕಾರಿಗಳು ಬೋರ್ಡಿನ ಅಧಿಕಾರ ಸೂತ್ರವನ್ನು ಜುಲಾಯಿ 1ರಿಂದ ವಹಿಸಿಕೊಂಡಿರುವರು. ಈ ಸಂದರ್ಭದಲ್ಲಿ ಮತದಾರರು ಚುನಾಯಿಸಿದ ಪ್ರತಿನಿಧಿಗಳಿಂದ ಕ್ರೋಢೀಕೃತವಾದ ಬೋರ್ಡು ತನ್ನ ಅಧಿಕಾರಾವಧಿಯಲ್ಲಿ ಏನೇನು ಜನಹಿತ ಕಾರ್ಯಗಳನ್ನು ಸಾಧಿಸಿತೆಂಬುದನ್ನು ಮಹಾಜನರ ಮುಂದಿಡುವುದು ಯಥೋಚಿತವಾಗಿದೆ. ನಮ್ಮ ಜಿಲ್ಲಾ ಬೋರ್ಡಿನ ಅಧ್ಯಕ್ಷರು [illegible] ಅನುಭವದಿಂದ ಯೋಗ್ಯ ಮಾರ್ಗದಲ್ಲಿ ಮುಂದುವರಿಸಿದವರೂ ಪ್ರಖ್ಯಾತರಾಗಿದ್ದಾರೆ. ಸದ್ದಿಲ್ಲದೆ ದುಡಿದವರಾದರೂ, ಪ್ರಕಟಣೆ, ಪ್ರಸಿದ್ಧಿಗಳು ಅವರಿಗೆ ಒಗ್ಗದಿದ್ದರೂ ಕಾಲಸ್ಥಿತಿಗನುಸಾರವಾಗಿ ಅವರು ಕಲ್ಪಿಸಿದ ಆಡಳಿತ ವರದಿಯ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ರಸ್ತೆಗಳು—ಹೊಸ ಜಿಲ್ಲಾ ಬೋರ್ಡು ಆಡಳಿತದ 4 ವರ್ಷಗಳ ಅವಧಿಯಲ್ಲಿ ಒಟ್ಟು 52 ಮೈಲು 1 ಫರ್ಲಾಂಗ್ ಹೊಸ ರಸ್ತೆ ಮಾಡಲಾಗಿದೆ. ರಸ್ತೆಗಳು ದುರಸ್ತಿಯಾಗಿವೆ. ಮಂಗಳೂರಿಂದ ಕೈಕಂಬದವರೆಗೂ ಬಂಟ್ವಾಳ ಹೋಗುವ ಮಾರ್ಗದ ವರೆಗೂ ಡಾಮರು ಹಾಕುವಂತೆ ಬೋರ್ಡು ಪ್ರಯತ್ನ ಮಾಡಿದೆ. ಕುಂದಾಪುರ ಮತ್ತು ಹಿರಿಯಡ್ಕದಲ್ಲಿ ಎರಡು ವಿಶ್ರಾಂತಿ ನಿಲಯಗಳನ್ನು ಕಟ್ಟಿಸಲಾಗಿದೆ. ಅಲ್ಲದೆ ಕಾರ್ಕಳ ಮತ್ತು ಕಾಸರಗೋಡು ಬಂಗ್ಲೆಗಳಿಗೆ ವಿದ್ಯುದ್ದೀಪಗಳನ್ನೊದಗಿಸಲಾಗಿದೆ.

ವಿದ್ಯಾಭ್ಯಾಸ— ಬೋರ್ಡಿನ ಆಡಳಿತೆಯಲ್ಲೀಗ 12 ಪೂರ್ಣವಾದ ಹೈಸ್ಕೂಲುಗಳೂ ಒಂದು ಹೊಸತಾಗಿ IV ಫಾರ್ಮು ತೆರೆಯಲ್ಪಟ್ಟ ಹೈಸ್ಕೂಲೂ ಇದೆ. ಈ ಪೈಕಿ 9 ಹೈಸ್ಕೂಲುಗಳು ಈಗಿನ ಬೋರ್ಡು ಪ್ರಾರಂಭಿಸಿದವುಗಳಾಗಿವೆ. ಅಲ್ಲದೆ ಆ ಶಾಲೆಗಳ ಶಿಕ್ಷಣ ಮಟ್ಟವೂ ಉತ್ತಮ ಸ್ಥಿತಿಯಲ್ಲಿದೆ. ಈ ಅವಧಿಯಲ್ಲಿ 14 ಹಿ. ಎ. ಶಾಲೆಗಳೂ 141 ಪ್ರಾಥಮಿಕ ಶಾಲೆಗಳೂ ಆಗಿ ಈಗ ಬೋರ್ಡಿನ ಕೈಕೆಳಗೆ 96 ಹಿ. ಎ. ಶಾಲೆಗಳೂ 507 ಪ್ರಾಥಮಿಕ ಶಾಲೆಗಳೂ ಇವೆ. ಈ ಶಾಲೆಗಳನ್ನು ತೆರೆಯುವಲ್ಲಿ ಊರವರು ಕಟ್ಟಡ ಸಾಮಗ್ರಿ ಸಾಧನಗಳಿಂದ ಇನ್ನಿತರ ವೆಚ್ಚಗಳಿಗಾಗಿ ಐದು ಲಕ್ಷದಷ್ಟು ಸಹಾಯನಿತ್ತಿದ್ದಾರೆ.

ಸಾರ್ವಜನಿಕ ಆರೋಗ್ಯ 1949ರಲ್ಲಿ ಬೋರ್ಡಿನ ಕೈಕೆಳಗೆ 11 ಆಸ್ಪತ್ರೆಗಳು 28 ಗ್ರಾಮ ದಿಸ್ಪೆನ್ಸರಿಗಳಿದ್ದವು. ಇವುಗಳಲ್ಲಿ 11 ಇಂಗ್ಲಿಷ್ ಪದ್ಧತಿಗಳ ಮತ್ತು 16 ಆಯುರ್ವೇದೀಯ ಆಸ್ಪತ್ರೆಗಳಿದ್ದವು. ಉಳ್ಳಾಲ ಕಾಪುವರ ಗುತ್ತಿಗಾರುಗಳಲ್ಲಿ ಡಿಸ್ಪೆನ್ಸರಿಗಳನ್ನು ತೆರೆಯಲಾಗಿದೆ. ಕೊಕ್ಕಡ ಮತ್ತು ಬೆಳಪುಗಳಲ್ಲೂ ದಿಸ್ಪೆನ್ಸರಿಗಳು ತೆರೆಯಲಾಗಿವೆ ಈಗ ಬೋರ್ಡು 17 ಬಾಣಂತಿ ಮತ್ತು ಶಿಶು ಸಂಗೋಪನೆಯ ಕೇಂದ್ರಗಳನ್ನು ನಡೆಸುತ್ತಿದೆ. ಬೋರ್ಡಿನ ಆಡಳಿತ ವರದಿಯನ್ನು ಸರಕಾರವು ಕೂಡಾ ಉತ್ತಮವಾದುದೆಂದು ಒಳ್ಳೆ ಅಭಿಪ್ರಾಯದ ಸ್ತುತಿಯಿತ್ತುದು.

ವಿಟ್ಲ—ಶ್ರೀ ಎ. ಜೆ. ತಿರುಮಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ತಾ. 5ರಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಡಾ। ಶ್ಯಾಮಪ್ರಸಾದ ಮುಖರ್ಜಿಯವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಪ್ರಾರ್ಥನೆ ನಡೆಯಿತು.

ಮುದರಂಗಡಿ ಇದೇ ತಾ 7ರಲ್ಲಿ ಭಾರತ ವಾಚನಾಲಯದ ವಾರ್ಷಿಕೋತ್ಸವ ಮತ್ತು ಹೊಸ ಪುಸ್ತಕ ಭಂಡಾರದ ಉದ್ಘಾಟನಾ ಸಮಾರಂಭವನ್ನು ಅಥಮಾರು ಬೋರ್ಡು ಹೈಸ್ಕೂಲಿನ ಹೆಡ್ಮಾಸ್ತರ ಶ್ರೀ ಎಸ್. ಆರ್. ಆಚಾರ್, ಅವರು ನೆರವೇರಿಸಿದರು. ಹಲವರು ಈ ವಾಚನಾಲಯಕ್ಕೆ ಉದಾರ ಧನಸಹಾಯವನ್ನಿತ್ತು ಪ್ರೋತ್ಸಾಹಿಸಿದರು. ಡಾ॥ ಅನಂತರಾವ್, ಶ್ರೀ ಬಿ. ಜಿ. ಸೆಟ್ಟಿ, ಎ ಶ್ರೀಧರ ರಾವ್ ಮೊದಲಾದವರು ವಾಚನಾಲಯಕ್ಕೆ ಶುಭಕೋರಿ ಮಾತನಾಡಿದರು ಕಾರ್ಯದರ್ಶಿ ಗೋವಿಂದಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಸ್ಥಳೀಯ ಭಾರತ ವಾಚನಾಲಯದ ಸಭೆಯು ಇದೇ ತಾ. 8ರಲ್ಲಿ ಎಸ್. ಸುಂದರ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎಸ್. ಎಸ್. ಶಿಲ್ಲೆಯವರ ಅಕಾಲ ನಿಧನದ ಬಗ್ಗೆ ಶೋಕಸೂಚಕ ನಿರ್ಣಯವಾಯಿತು. ಶ್ರೀಗಳಾದ ಎಸ್. ಆರ್. ಶೆಟ್ಟಿ, ಬಿ. ಬಾಬು ಸೆಟ್ಟಿ, ಎ ಮೋಹನದಾಸ ಹೆಗ್ಡೆ, ಡಿ. ಜಿ. ಸೆಟ್ಟಿ, ಮೊದಲಾದವರು ದಿವಂಗತರ ಕುರಿತು ಮಾತನಾಡಿದರು.

ವಿರಾಜಪೇಟೆ - ವೀರರಾಜ ಪೇಟೆಯ ಕಾಂಗ್ರೆಸ್ ಕಮಿಟಿ ಸಭೆಯು ತಾ. 6ರಲ್ಲಿ ಸೇರಿ ಶ್ರೀ ಎಸ್. ಎಸ್. ಶಿಲ್ಲೆಯವರ ನಿಧನದ ಬಗ್ಗೆ ತನ್ನ ಶೋಕವನ್ನು ಪ್ರದರ್ಶಿಸಿತು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷಪಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

— ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಸೆಂಟರಾಕು ಬೊಂಬಾಯಿ ಮತ್ತು ಕಲ್ಕತ್ತ

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಪುರಪ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು.— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ನೋವು ಕಳೆಯುವ, ಜೀವ ಉಳಿಸುವ ಹೊಸ ಶೋಧ

(೩ನೇ ಪುಟದಿಂದ)

ರವಾಗಿ ಮನುಷ್ಯ ನಿರ್ಮಿತವಾದ ಕೃತ್ರಿಮ ಗರ್ಭ ಇನ್‌ಕ್ಯೂಬೇಟರದಲ್ಲಿ ಇಟ್ಟಲ್ಲಿ ಈ ಶಿಶುಗಳು ಜೀವಿತಾವಸ್ಥೆಯಲ್ಲಿ ಉಳಿದವಷ್ಟೇ ಅಲ್ಲ—ತೂಕವೂ ಪೂರ್ಣಾವಧಿಯಲ್ಲಿ ಜನನಕ್ಕೆ ಬಂದ ಶಿಶುವಿನಷ್ಟು ಹೆಚ್ಚಿಕೊಂಡಿತು. ಅಪೂರ್ಣವಾಗಿದ್ದ ಶಾರೀರಿಕ ಅಂಗ ಪ್ರತ್ಯಂಗಗಳೆಲ್ಲ ಸ್ವಾಭಾವಿಕ ರೂಪದಲ್ಲಿ ವಿಕಸಿತಗೊಂಡು ಸಂಪೂರ್ಣ ಬೆಳವಣಿಗೆಯನ್ನು ಸಾಧಿಸಿದ್ದವು!

— ೪ —

ಇನ್ನೊಂದು ಅದ್ಭುತ ಔಷಧವು ಸ್ವೀಡನ್ ದೇಶದಲ್ಲಿ ತುಂಬ ಜನಪ್ರಿಯತೆಯನ್ನು ಗಳಿಸಿದೆ. ಈ ಔಷಧದ ಕೃಪೆಯಿಂದ ಸ್ತ್ರೀಯರಿಗೆ ಪ್ರಸವ ವೇದನೆಯಿಂದ ಮುಕ್ತಿ ದೊರೆತಿದೆ. ಇದರ ಹೆಸರು—ಜೈಕೋಲೀನ್.

ಇದನ್ನು ಕಂಡುಹಿಡಿದ ಬಗೆಯೂ ರೋಮಾಂಚಕವಾಗಿದೆ— ಇದರ ಆವಿಷ್ಕಾರ ಮಾಡಿದ ನಿಲ್ಸ್ ಲಾಫ್‌ಗ್ರೇನರು ಸ್ಟಾಕ್‌ಹೋಮ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗಲೇ ಈ ಹೊಸ ಪ್ರಯೋಗವನ್ನು ಮಾಡಲು ತೊಡಗಿದ್ದರು. ತನ್ನ ಪ್ರಯೋಗಗಳನ್ನು ನಡೆಸಲು ಪ್ರಾಣಿಗಳನ್ನು ಕೊಂಡು ಕೊಳ್ಳುವಷ್ಟರ ಮಟ್ಟಿನ ಸಂಪತ್ತು ಲಾಫ್ ಗ್ರೇನರಿಗೆ ಇರಲಿಲ್ಲ. ಆದುದರಿಂದ ಸ್ವಂತ ಮೈಯ ಮೇಲೆಯೇ ಪ್ರಯೋಗ ಮಾಡುವುದರ ಮೂಲಕ ತನ್ನ ಪ್ರಯತ್ನಗಳನ್ನು ಇವರು ಮುಂದುವರಿಸಿದರು. ಈ ಕಾರ್ಯದಲ್ಲಿ ಅವರ ಸಹಪಾಠಿ ಬೆಂಗ್ಟ್ ಲುಂದಕ್ವಿಸ್ಟ್ ಎಂಬವರು ಸದಾ ನೆರವಾದರು. ಇವರಿಬ್ಬರೂ ಸ್ನೇಹಿತರು ಬಡತನದಿಂದ ಸೋಲು ಕಾಣದೆ, ಪ್ರಯೋಗಗಳನ್ನು ಅಂತಿಮ ಫಲ ದೊರಕುವವರೆಗೆ, ತಮ್ಮ ಪ್ರಾಣಗಳ ಪಣವನ್ನಿಟ್ಟು ಮುಂದುವರಿಸಿದರು. ಅವರು ತಮ್ಮ ಶರೀರದ ಮೇಲೆ ಅಲ್ಲಿ ಇಲ್ಲಿ ಎಲ್ಲಾಕಡೆ ಗಾಯವನ್ನು ಮಾಡಿಕೊಂಡರು ಮತ್ತು ಅಸಹ್ಯ ಪೀಡೆಯನ್ನು ತಾಳ್ಮೆಯಿಂದ ಕಂಡು, ಔಷಧದ ವೈಜ್ಞಾನಿಕ ಪರೀಕ್ಷೆ ನಡೆಸಿದರು. ಒಂದು ಸಲವಂತೂ ಪ್ರಯೋಗ ಮಾಡುವುದಕ್ಕೋಸ್ಕರ ಲಾಫ್ ಗ್ರೇನರು ತಮ್ಮ ನಾಲಗೆಯ ಮುಂದಿನ ತುಂಡನ್ನು ಕಡಿದರು. ಹೀಗೆ ತುಂಡಾದ ನಾಲಿಗೆಯ ಮೇಲೆ ತಮ್ಮ ನೂತನ ಔಷಧದ ಒಂದೆರಡು ಹನಿಯನ್ನು ಬಿಟ್ಟಾಗ, ಅವರ ಆನಂದಕ್ಕೆ ಮೇರೆ ಉಳಿಯಲಿಲ್ಲ. ಈ ನೋವಿನ ವಿರುದ್ಧ ನಾಲಿಗೆಯು ಸಂಪೂರ್ಣ ಚೇತನ ಹೀನವಾಗಿ ಅವರಿಗೆ ಆಗ ಭಾಸವಾಯಿತು!

ಇದೇ ತ್ಯಾಗ, ಮನಸ್ಸು ಮತ್ತು ದೃಢ ಸಂಕಲ್ಪದಿಂದ ಇಬ್ಬರೂ ಮಿತ್ರರು ಅನೇಕ ವರ್ಷಗಳ ವರೆಗೆ ಅನವರತ ಪ್ರಯೋಗದಲ್ಲಿ ಮಗ್ನರಾದರು. ಶರೀರದ ಪ್ರತ್ಯೇಕ ಅಂಗವನ್ನೂ ಗಾಯ ಗೊಳಿಸಿ, ಅದರಲ್ಲಿ ಔಷಧವನ್ನು ಹಾಕಿ ಈ ಮದ್ದಿನ ಗುಣಾವಗುಣಗಳ ಪರೀಕ್ಷೆ ಮಾಡಿದರು. ಇವುಗಳೆಲ್ಲ ಯಶಸ್ಸು ಸಂಪಾದಿಸಿದುದರಿಂದ ಈಗ ಲಕ್ಷಾಂತರ ಮಾತೆಯರು ಪ್ರಸವ ವೇದನೆಯ ಕಾರಣದಿಂದ ಅಸಹ್ಯ ಪೀಡೆಯನ್ನು ಇದಿರಿಸುವ ಪ್ರಮೇಯ ಉಳಿ... ಡುತ್ತಾ ತನ್ನ ಕಣ್ಣಗೊಂಬೆಯನ್ನು ಹಾಳು ಗೆಡವಿದರು; ಹೃದಯವನ್ನೂ ದುರ್ಬಲಗೊಳಿಸಿದರು; ದೇಹ ತುಂಬ ಗಾಯಮಾಡಿಕೊಂಡದ್ದಲ್ಲದೆ, ಇಡೀ ಶರೀರವನ್ನೆ ರಾಸಾಯನಿಕ ದ್ರವ್ಯಗಳ ಪ್ರಯೋಗದಿಂದ ವಿಷಪೂರಿತವನ್ನಾಗಿ ಮಾಡಿದರು. ಆದರೆ ಇಷ್ಟೆಲ್ಲ ಕಷ್ಟಪಟ್ಟುದಕ್ಕೆ, ಆತ್ಮತ್ಯಾಗವನ್ನು ಮಾಡಿದುದಕ್ಕೆ ಜೈಕೋಲೀನೆಂಬ ವೇದನಾ ನಿರೋಧಕ ದ್ರವ್ಯವು ಪ್ರಸಾದ ರೂಪದಲ್ಲಿ ದೊರೆಯಿತು.

ಇಂದು ಪಾಶ್ಚಾತ್ಯ ದೇಶಗಳಲ್ಲಿ ಈ ದಿವ್ಯೌಷಧವನ್ನು ತಯಾರು ಮಾಡುವ ಕಾರ್ಖಾನೆಗಳು ತಲೆ ಎತ್ತಿವೆ. ಕೇವಲ ಪ್ರಸವ ವೇದನೆಯ ನಿರ್ಮೂಲವಷ್ಟೇ ಅಲ್ಲ—ಪ್ರತ್ಯೇಕ ಪ್ರಕಾರದ ನೋವಿಗೂ ಈ ಮದ್ದು ರಾಮಬಾಣದಂತಿವೆ.

— ೫ —

ನೋವೆಂದರೇನೆ ಗಡಗಟ್ಟಿ ನಡುಗುವವರಿಗೆ ಜೈಕೋಲೀನದಷ್ಟೆ ಉತ್ತಮ ಪರಿಣಾಮವನ್ನು ಮಾಡುವ ಇನ್ನೊಂದು ಔಷಧ ಪ್ರಯೋಗದಿಂದಲೂ ವೇದನಾ ನಿರೋಧ ಕಾರ್ಯ ಅತ್ಯಂತ ಯಶಸ್ವಿಯಾಗಿ ನೆರವೇರುತ್ತದೆ

ಇದೊಂದು ಹೊಸ ನಮೂನೆಯ ಮದ್ದು-ಸುಟ್ಟ ಗಾಯವನ್ನು ಸ್ವಚ್ಛಗೊಳಿಸಬೇಕಾಗಿದೆ, ಅಥವಾ ಮೈಯ ಹಲಿಗೆಯನ್ನು ಬಿಚ್ಚಿ ತೆಗೆಯಬೇಕಾಗಿದೆ, ಅಥವಾ ಇಂಥದೇ ಬೇರೊಂದು ಬಗೆಯಿಂದ ನೋವುಂಟುಮಾಡುವ ಕೆಲಸ ಅಗತ್ಯವಿದೆ. ಆದರೆ ಈ ಅಸಹ್ಯ ನೋವಿನಿಂದ ಬೊಬ್ಬಿಡುವುದನ್ನು ನಿಲ್ಲಿಸುವುದೆಂತು? ಡಾಕ್ಟರರು ತಮ್ಮ ದವಾಖಾನೆಯಲ್ಲಿ ಅಥವಾ ರೋಗಿಯ ಮನೆಯಲ್ಲಿ ಒಂದು ಸಣ್ಣ ರಬ್ಬರಿನ ಮುಸುಕನ್ನು ಕೊಟ್ಟು, ಅದನ್ನು ಕೈಯಿಂದೆತ್ತಿ ಮುಖದ ಮುಂದೆ ಹಿಡಿದು, ಶ್ವಾಸವನ್ನು ಒಳಗೆ ಎಳೆದುಕೊಳ್ಳುವಂತೆ ಹೇಳುವರು. ಸರಿ—ಆಳವಾಗಿ ನಾಲ್ಕಾರು ಸಲ ಉಸಿರೆಳೆದುಕೊಂಡರೆ ಸಾಕು, ನೋವು ಮಾಯ. ಹಾಗೆಂದು ರೋಗಿಗೆ ಪ್ರಜ್ಞೆ ತಪ್ಪುವುದಿಲ್ಲ. ಎಲ್ಲಿಯಾದರೂ ನೋವು ಮರುಕಳಿಸಿದಂತೆ ಕಂಡರೆ, ಇನ್ನೊಮ್ಮೆ ಆ ಮುಸುಕನ್ನು ಮುಖದೆದುರು ಹಿಡಿದು ಉಸಿರೆಳೆಯಬೇಕು, ಮಾತ್ರ. ಡಾಕ್ಟರರು ತಮ್ಮ ಕೆಲಸ ಮುಗಿಸಿದ ಬಳಿಕ, ರೋಗಿಯು ನಿರಾತಂಕವಾಗಿ ಎದ್ದು ನಡೆದಾಡ ಬಲ್ಲನು. ಡಾಕ್ಟರರ ಕೆಲಸದಿಂದ ಅವನಿಗೇನೇನೂ ನೋವು ಕಾಣಿಸುವುದಿಲ್ಲ.

ಡ್ಯೂಕ್ ವಿಶ್ವವಿದ್ಯಾಲಯದಲ್ಲಿ ಹೀಗೆ ರೋಗಿಯು ಸ್ವತಃ ಪ್ರಯೋಗಿಸಿಕೊಳ್ಳಬಹುದಾದ ವೇದನಾ ನಿರೋಧವನ್ನು ಕುರಿತು ನಾಲ್ಕು ವರ್ಷಗಳಿಂದ ಪ್ರಯೋಗಗಳು ನಡೆದವು. ಸಾಮಾನ್ಯ ವೈದ್ಯಕೀಯ ಉಪಚಾರಗಳಲ್ಲಿ ಕ್ರಾಂತಿಕಾರ ಪರಿವರ್ತನೆಗಳನ್ನು ಈ ನೂತನ ಆವಿಷ್ಕಾರ ಸಾಧ್ಯವಾಗಿಸಿದೆ. ವೇದನಾ ನಿರೋಧಕವಾಗಿ ಉಪಯೋಗಿಸುವ ಈ ದ್ರವ್ಯ ನೀಲಿಬಣ್ಣದ ಟ್ರೈಲೀನ್ ಎನ್ನುವ ದ್ರವ. ಪ್ರಜ್ಞೆ ತಪ್ಪಿಸದೆ ವೇದನೆಯನ್ನು ನಿರೋಧಿಸುವುದಕ್ಕೆ ಹೆಸರಾದ ಔಷಧಗಳಲ್ಲಿ ಟ್ರೈಲೀನನ್ನು ಸರಿಗಟ್ಟುವಂಥದು ಇನ್ನೊಂದಿಲ್ಲವೆಂದು ಡ್ಯೂಕ ವಿಶ್ವವಿದ್ಯಾಲಯದ ವೈದ್ಯರ ಅಭಿಪ್ರಾಯ.

ನೋವನ್ನು ನಿಲ್ಲಿಸುವುದಕ್ಕೋಸ್ಕರ ಕೇವಲ ವಯಸ್ಕರಷ್ಟೇ ಅಲ್ಲ—ಮೂರು ನಾಲ್ಕು ವರ್ಷದ ಮಕ್ಕಳು ಕೂಡ ಈ ಔಷಧವನ್ನು ಯಶಸ್ವಿಯಾಗಿ ಉಪಯೋಗಿಸಬಲ್ಲರು. ಉತ್ತರ ಕೆರೋಲೀನಾದ ಹಳ್ಳಿಗಾಡಿನ ಗರ್ಭಿಣಿ ಹೆಂಗಸರೆಲ್ಲ ಡಾಕ್ಟರರ ನಿರೀಕ್ಷೆಯಲ್ಲಿದ್ದಂತೆ, ಈ ದ್ರವ್ಯವನ್ನು ಉಪಯೋಗಿಸಿಕೊಂಡು, ಸ್ವಸ್ಥಚಿತ್ತರಾಗಿ, ನೋವಿನ ಅನುಭವವಿಲ್ಲದೆ ಹಡೆದುಬಿಡುವರು.

ಡಾಕ್ಟರರು ಆಳತೆ ಮಾಡಿ ತಮ್ಮ ...
ಕಿಗೆ ಎಷ್ಟು ಎಷ್ಟು ನೋವಾಗುತ್ತವೆ
ತಿಳಿದುಕೊಳ್ಳಲಾರರು. ಆದುದರಿಂದ
ದನಾ ನಿರೋಧವನು ರೋಗಿಯು
ನಾಗಿ ಮಾಡಿಕೊಂಡರೆ ಕ್ಷೇಮ ನೋ
ನ ಅನುಭವವು ರೋಗಿಯ ವಯಸ್ಸ
ನ, ಜನಾಂಗ, ಸ್ವಭಾವ, ದೈಹಿಕ ಸ್ಥಿ
ವಿದ್ಯೆ, ಬುದ್ಧಿವಂತಿಕೆ, ವೃತ್ತಿ ಮ
ರೋಗ ಅಥವಾ ಗಾಯದ ಸ್ವರೂಪವ
ಹೊಂದಿಕೊಂಡಿರುತ್ತದೆ. ಆದುದ
ರೋಗಿಯು ತನ್ನ ನೋವನ್ನು ಮರೆ
ವಂತೆ ಶಾಂತನಾಗಿ ನೋಡಿಕೊಳ್ಳುವ
ಸಿದ್ಧೌಷಧ ಅತ್ಯಂತ ಜನಪ್ರಿ
ವೆನಿಸಿದೆ.

— ೬ —

ಸಂಯುಕ್ತ ರಾಷ್ಟ್ರ ಅಮೇರಿಕಾ
ಗಿಣಿಗಳಲ್ಲಿ ಟ್ರೈಲೀನನ್ನು ಮೊತ್ತಮೊದ
ಲು ಪ್ರಯೋಗಿಸಿ ನೋಡಿದರು.
ಇದರಿಂದ ವಿಷದ ದುಷ್ಪರಿಣಾಮ
ಗುವುದೆಂದು ಕೆಲವರು ದೂರಿದುದರಿ
ಪ್ರಚಾರ ಅಷ್ಟಾಗಿ ಹೆಚ್ಚಲಿಲ್ಲ. ಎರ
ಮಹಾಯುದ್ಧದ ಸಮಯ ಬ್ರಿಟಿಷ
ಜ್ಞಾನಿಕರು ಈ ದ್ರವ್ಯವನ್ನು ಚೆನ
ಪರೀಕ್ಷಿಸಿ ನೋಡಿದರು. ಟ್ರೈಲೀನ
ನ್ನಷ್ಟಕ್ಕೆ ವಿಷಾಕ್ತವಾಗಿಲ್ಲವೆಂದೂ,
ನ್ನು ತಯಾರಿಸುವಾಗ ಮೂರು ನಾ
ದಿನಗಳ ವರೆಗೆ ಗಾಳಿಯಲ್ಲಿ ಅಥ
ಸೂರ್ಯ ಶಾಖಕ್ಕೆ ಬಿಡುವುದರಿಂ
ವಿಷದ ಗುಣ ಈ ಔಷಧ
ಬಂತೆಂದೂ ಇವರಿಗೆ ತಿಳಿಯಿ
ಹೀಗಾಗದಂತೆ ನೋಡಿದುದರಿಂದ
ವೇದನಾ ನಿರೋಧದ ಸಾಧನವಾಗಿ
ಲೀನು ಅತ್ಯಂತ ಉಪಯುಕ್ತವೆನಿಸಿದೆ

ಪ್ರಸವ ವೇದನೆಯನ್ನು ನಿಲ್ಲಿಸು
ಕ್ಕೋಸ್ಕರ ಈ ಔಷಧವನ್ನು ಲಕ್ಷಾ
ಸ್ತ್ರೀಯರು ಉಪಯೋಗಿಸುತ್ತಿರೆಂದು
ಳಿದೆ. ನೋವನ್ನು ತಡೆಯುವಲ್ಲಿ ಮಹ
ತ್ವ ವಿಶೇಷವನ್ನು ಈ ಔಷಧ ಅನೇ
ನೇಕ ಜನರಲ್ಲಿ ಮೂಡಿಸಿರುವುದು
ಮಹಾ ಸಾಧನೆಯೆನ್ನಬೇಕು. ಯಾ
ದೇ ತರದ ನೋವನ್ನುಂಟುಮಾಡ
ರೋಗ ಮತ್ತು ಗಾಯಗಳ ಉಪಚಾ
ಲ್ಲಿ ಈ ದಿವ್ಯೌಷಧ ತುಂಬ ಪ್ರಯೋ
ಕ್ಕೆ ಬರುತ್ತದೆ. ಅತ್ಯಂತ ಕಿರಾತ
ರೋಗ ಕ್ಯಾನ್ಸರ್ (ಅರ್ಬುದ ರೋ
ಪ್ರಾರಂಭಾವಸ್ಥೆಯಲ್ಲಿ ಗುರುತಿಸಲ್ಪಡ
ಮನುಷ್ಯನನ್ನು ಕೊನೆಯಲ್ಲಿ ಮೃತ್ಯು
ಮುಖಕ್ಕೆ ನೂಕುತ್ತವೆ. ವ್ರಣಗಳು ಕ್ಯಾನ್
ರೋಗದಿಂದಲೇ ಉಂಟಾದವೋ ಇಲ್ಲ
ಎಂಬುದನ್ನು ಕಂಡುಹಿಡಿಯುವುದು ಸ
ಚೆ ಕಷ್ಟಸಾಧ್ಯವಾದ ವಿಷಯವಾಗಿ
ಆದರೆ ಈಗ ಟ್ರೈಲೀನಿನ ಸಹಾಯದಿ
ನೋವನ್ನು ತಡೆಗಟ್ಟಿ, ಪ್ರ
ಭಾಗವನ್ನು ಕಿತ್ತು ತೆಗೆದು, ಅದ
ಸೂಕ್ಷ್ಮದರ್ಶಕದ ಮೂಲಕ ಪರೀ
ಲು ಅವಕಾಶ ದೊರೆತಿದೆ ಹಲ್ಲುನೋ
ನಿಂದ ಬಳಲುವ ಜನರಿಗೂ ಟ್ರೈಲೀ
ಉಪಯೋಗ ಬಹಳ. ನೋವನ್ನು
ಪೂರ್ಣ ನಿರೋಧಿಸುವ ಈ ನೂತನ
ವಿಷ್ಕಾರಗಳು ರೋಗ ಪೀಡಿತ ಮಾನ
ಗೆ ಹೊಸ ಆಶೆಯನ್ನೂ ಚೇತನವ
ಕೊಟ್ಟು, ಕಾಪಾಡುತ್ತವೆ. ಮನುಷ
ಚಿಕಿತ್ಸಕ ಬುದ್ಧಿಯ ಅಸಾಮಾನ್ಯ
ಸ್ಸನ್ನು ಕಂಡು ಯಮರಾಯನಿ
ಈರ್ಷ್ಯೆಯುಂಟಾದೀತು!

(ಸಜಂಟ್ ಮತ್ತು ...

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್ಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಉಡ್ಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಮಾನವನು ಬಾಳ್ವೆಯ ಚಿತ್ರವನ್ನು ಜನ್ಮದಿಂದ ಮರಣ ಪರ್ಯಂತ ಚಿತ್ರಿಸಬಲ್ಲನು. ಆ ಕುರಿತು ರಸಭರಿತವಾದ, ಚಿತ್ರವಿಚಿತ್ರವಾದ ಕಾದಂಬರಿಗಳನ್ನು ಬರೆಯಬಲ್ಲನು; ಸುಂದರ ಕವಿತೆಗಳನ್ನು ಹಾಡಬಲ್ಲನು. ಆ ಅವಧಿಗೆ ಬೇಕಾದ ವಿಲಾಸ ಸಾಮಗ್ರಿಗಳನ್ನೇ ಮತ್ತೊಂದನ್ನೇ ಒದಗಿಸಿಕೊಂಡು ಶ್ರೀಮಂತ ದರಿದ್ರರೆಂಬ ಅಂತಸ್ತುಗಳನ್ನೇರ್ಪಡಿಸಬಲ್ಲನು. ಆದರೆ ಮರಣಾನಂತರದ ಕುರಿತು ಏನನ್ನೂ ಹೇಳಲಾರ; ಅಲ್ಲದೆ ಆ ಸಂದರ್ಭಕ್ಕೆ ಬೇಕಾದ ಯಾವ ಬುತ್ತಿಯನ್ನೂ ಒದಗಿಸಿಕೊಳ್ಳಲಾರ; ಸಂಪಾದಿಸಿಕೊಳ್ಳುವ ಮನಸ್ಸೂ ಮಾಡಲಾರ. ಅದೆಲ್ಲಾ ಅವನಿಗೆ ಕಾಟ್ಟುನ ಕತೆ! ಧರ್ಮರಾಯನು ಇದೇ ವಿಚಾರವನ್ನೇ ಯಕ್ಷನಿಗೆ ಹೇಳಿ ಜಗತ್ತಿನಲ್ಲಿ ಇದೊಂದು ಆಶ್ಚರ್ಯಕರವಾದ ಸಂಗತಿ ಎಂದಿದ್ದಾನೆ. ಇದು ಸೋಜಿಗದ ಸಂಗತಿ ಮಾತ್ರವಲ್ಲ; ಅತ್ಯಂತ ಗೂಢವಾದ ಸಂಗತಿಯೂ ಹೌದು.

ಜನ್ಮ ಪೂರ್ವದಲ್ಲಿ ಮನುಷ್ಯನೆಲ್ಲಿದ್ದ? ಅವನು ಎಲ್ಲಿಂದ ಬಂದ? ಹಾಗೆ ಜನ್ಮ ತಾಳಲು ಅವನಿಗೆ ಯಾವ ಶಕ್ತಿ ಪ್ರೇರಕವಾಯಿತು? ಆ ಶಕ್ತಿಯು ಮನುಷ್ಯನು ಜನ್ಮವೆತ್ತಿದ ಮೇಲೆ ಅವನ ಬಾಳ್ವೆಯ ಮೇಲೆ ತನ್ನ ಕೈಯಾಡಿಸುವುದಿಲ್ಲವೆ? ಮುಂದೆ ಒದಗುವ ಮರಣವೆಂದರೇನು? ಆ ಮೇಲೆ ಅವನ ಸಮಸ್ತ ಶಕ್ತಿ ಆಲೋಚನೆಗಳೆಲ್ಲಾ ಹೋಗುವುದಾದರೂ ಎಲ್ಲಿಗೆ? ಈ ಎಲ್ಲಾ ಪ್ರಶ್ನೆಗಳಲ್ಲಿ ಕೆಲವಕ್ಕಾದರೂ ಇಂದಿನ ಜಗತ್ತು ಸಮರ್ಪಕವಾಗಿ ಉತ್ತರ ಕೊಡಬಲ್ಲುದೆ? ಹಾಗೆಲ್ಲಾ ಉತ್ತರ ಕೊಡಲು ಇದು ಅಂಥಾ ಇಂಥಾ ಪ್ರಶ್ನೆಯಲ್ಲ! ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಪಡೆಯಲು ಉಪನಿಷತ್ಕಾಲದ ಮಹರ್ಷಿಗಳು ನಿರ್ಮಲವಾದ ವನಪ್ರದೇಶದಲ್ಲೋ, ರಮಣೀಯವಾದ ನದೀ ತಟದಲ್ಲೋ ಕುಳಿತು ಜನ್ಮವೆಲ್ಲಾ ಏಕಾಗ್ರತೆಯಿಂದ ಯೋಚಿಸಿ, ಕೊನೆಗೊಂದು ಗಡಿಗೆ ಮುಟ್ಟಿ ತಮ್ಮ ಅಭಿಪ್ರಾಯಗಳನ್ನೆಲ್ಲಾ ಭಾವೀ ಜನಾಂಗಕ್ಕೆ ಬರೆದಿಟ್ಟು ಹೋಗಿದ್ದಾರೆ. ಕಠೋಪನಿಷದಾದಿ ಉಪನಿಷತ್ತುಗಳು ಆತ್ಮನ ಅಸ್ತಿತ್ವ ಮತ್ತು ಪರ್ಯಟನದ ಕುರಿತು ಚರ್ಚಿಸಿವೆ. ಅವುಗಳೂ ಅವುಗಳ ಕರ್ತೃಗಳಾದ ಮಹರ್ಷಿಗಳೂ ನಮ್ಮ ಆಪ್ತರು. ನಾವಿಂದು ಈ ಜಿಜ್ಞಾಸೆ ಸಮಸ್ಯೆಯನ್ನು ಕೇವಲ ಆಪ್ತ ವಾಕ್ಯದ ಮೂಲಕವಾಗಿಯೇ ಬಿಡಿಸಬೇಕಾಗಿದೆ. ಪ್ರತ್ಯಕ್ಷದ ವಿಚಾರವೊಂದು ಅಥವಾ ಸಮಸ್ಯಾ ರೂಪದ ಪ್ರಶ್ನೆಯೂ ಕೇವಲ ಪ್ರತ್ಯಕ್ಷ ಸಾಕ್ಷಿಗಳಿಂದಲೇ ಬಗೆಹರಿಯಲಾರದು. ಕೆಲವು ವಿಚಾರಗಳನ್ನು ಅನುಮಾನ ಮತ್ತು ಆಪ್ತವಾಕ್ಯದ ಮೂಲಕ ಬಿಡಿಸಬೇಕಾಗಿದೆ. ಮರಣೋತ್ತರದ ಸಂಗತಿಗಳಿಗೆ ಆಪ್ತವಾಕ್ಯದ ವಿನಹ ಬೇರೆ ಗತಿಯೇ ಇಲ್ಲ.

ಮರಣವೆಂಬ ಶಬ್ದವನ್ನು ಕೇಳಿದೊಡನೆ ಮೂಗು ಮುರಿಯುವುದೇ ಲೌಕಿಕ ವ್ಯಕ್ತಿಗ

ಮರಣ—ಆ ಮೇಲೆ?

ಯ. ನಾ. ಉಡುಪ, ವಿದ್ವಾನ್, ಐರೋಡಿ.

ಳಿಗಂಬಂದಕ್ಕ ಪ ಬಲವಾದ ಒಂದು ಚಿಹ್ನೆ. ಆವರು ಆ ವಿಚಾರಗಳ ಚರ್ಚೆ ನಡೆಯುವಲ್ಲಿಂದ ಬಹು ಬೇಗನೆ ಜಟಿಸ್ಪಿಡುವರು. ಆ ವ್ಯಕ್ತಿಗಳೇ ಸ್ತ್ರೀಯರ ಸೌಂದರ್ಯ ವಿಲಾಸ ಬೆಡಗುಗಳ ಕುರಿತು ಅನ್ನ ನೀರುಗಳನ್ನು ಮರೆತು ಗಂಟೆಗಟ್ಟಲೆ ಮಾತಾಡುತ್ತಾ ಕುಳಿತುಕೊಳ್ಳುವರು. ಇದರ ಆಕರ್ಷಣೆಯು ಮಾನವನು ಅಧೋಗತಿಗಿಳಿಯುತ್ತಿರುವನೆಂಬುದಕ್ಕೊಂದು ಗುರುತು. ಮನುಷ್ಯನು ತನ್ನಂತಿರುವ ಮಾಂಸದ ಪ್ರತಿಮೆಗಳ ಕುರಿತಾಗಿಯೇ ಚಿಂತಿಸುವುದಕ್ಕೆ ಜನ್ಮಿಸಿಲ್ಲ. ಅಖಂಡ ಚಿಜ್ಜ್ಯೋತಿಯನ್ನು ಅಥವಾ ಅದರ ಅಂಶವನ್ನು ಮನನಮಾಡಿ ಮಾನವತ್ವದ ಮಟ್ಟದಿಂದ ಮೇಲಕ್ಕೇರಲು ಜನಿಸಿದವನು, ಮಾನವಾ! ಆ ವಿಲಾಸದ ಜೀವನವನ್ನು ನೀನಾಗಿ ಬಿಡದಿದ್ದರೆ ಅದೊಂದು ದಿನ ನೀನು ಶಕ್ತಿ ಕಳೆದುಕೊಂಡವನೆಂಬ ತಿರಸ್ಕಾರದಿಂದ ಬಿಟ್ಟೇ ಹೋಗುವುದಲ್ಲ! ಆಗ ಅದರೊಡನೆ ನಿನ್ನ ಕನಸುಗಳೆಲ್ಲಾ ನಡೆಯುವುವೆ? ಮರಣದ ಕರಿ ನೆರಳು ನೂನವನ ಸುತ್ತು ಹಾಸಿ ಹರಡುತ್ತಿರುವಾಗ ವಿಲಾಸ ಜೀವನವು ಬದಲಾಗಿ ಅದಕ್ಕೆ ಕಾಲುಕೊಟ್ಟು ಓಡಿಸಿಡುವುದು. ನೀನು ಜೀವನವೆಲ್ಲಾ ಅದನ್ನು ಪೋಷಿಸಿದ್ದರೂ ಅದು ನಿನ್ನನ್ನು ಎಂದೆಂದೂ ಪೋಷಿಸದು. ಮುಂದೆ ಕೆಲವು ದಿನಗಳಲ್ಲೇ ನಿನ್ನನ್ನು ಆವರಿಸುವ ಮೃತ್ಯುವಿಗೆ ನೀನು ಈಗಲಾದರೂ ತಯಾರಾಗುವುದು ಬೇಡವೆ? ನೀನು ಜನಿಸಿಯಂತೂ ಆಗಿಹೋಯಿತು, ಇನ್ನು ಮರಣದ ಉರುಳು ಕೊರಳಿಗೆ ಬೀಳದ ಮುನ್ನ ಮರಣದ ಕುರಿತು ಕುತೂಹಲದಿಂದ ಯೋಚಿಸುವುದು ಬೇಡವೆ? ಎಲ್ಲರಂತೆ ಲಾವೀಜ್ ಪ್ರಾಗರ್ ಎಂಬ ವ್ಯಕ್ತಿಯು ತನ್ನ ಜೀವನವನ್ನು ಪಾಂಡಿತ್ಯ ಸಂಪಾದನೆ ಮತ್ತು ಯಶಸ್ವಿನ ಸಂಗ್ರಹಕ್ಕಾಗಿಯೇ ಕಳೆಯುತ್ತಿರುವಾಗ ಆತನ ಏಕಮಾತ್ರ ಪುತ್ರನು ಮರಣ ಪಟ್ಟನು. ಅಂದೇ ಆತನು ಲೌಕಿಕ ವ್ಯಾಪಾರಗಳಲ್ಲಿ ಜಿಗುಪ್ಸೆಗೊಂಡನು. ಮರಣ ಮತ್ತು ಆ ಮೇಲಿನ ವಿಚಾರಗಳನ್ನು ತಿಳಿಯಲು ಅನುಭವಸ್ಥರಾದ ವೃದ್ಧರಿಗೂ, ಆಪ್ತ ವಾಕ್ಯ ರೂಪವಾದ ಪ್ರಾಚೀನ ತತ್ವಜ್ಞಾನಿಗಳ ಗ್ರಂಥಗಳಿಗೂ ಶರಣು ಹೋಗಿ ಒಂದು ನಿರ್ಧಾರಕ್ಕೆ ಬಂದು ತನ್ನ ಅನುಭವವನ್ನು ಗ್ರಂಥ ರೂಪವಾಗಿ ಬರೆದಿಟ್ಟನು. ನಮ್ಮಲ್ಲಿ ಎಷ್ಟು ಮಂದಿಗೆ ಮೃತ್ಯು ಪಾಶದ ಭಯವಿದೆ?

ಮರಣದ ಅನಂತರದ ಆತ್ಮನ ಕುರಿತೂ ಜ್ಞಾನವುಳ್ಳವನೇ ಆತ್ಮಜ್ಞಾನಿ. ಮರಣದ ಪ್ರಸ್ತಾವವೆತ್ತಲೂ ಕೆಲವರಿಗೆ ಅದರ ಭೀಕರ ಚಿತ್ರವು ಭಯವನ್ನುಂಟುಮಾಡಿ, ಬಿಡಲಾರದು. ಇವರೇ 'ಜಂಬು ತಿಂದಾದರೂ ಮತ್ತೇ ಲೋಕದಲ್ಲಿರಬೇಕು' 'ಜೀವವು ಬೆಲ್ಲಕ್ಕಿಂತ ಸಿಹಿ' ಎಂದು ಹೇಳುವುದು. ಕೆಲವರ ಭಾಗಕ್ಕೆ ಮರಣವು ಸುಖಕರವಾದದ್ದೂ ಹೌದು. ಅವರು ರೂಢಿ ಬಿದ್ದಂತೆ ಬಾದಿ ಜಗುಳುವರು. ಕೆಲವರಿಗೆ ಈ ಪ್ರಾಣವಾಯುವು ಕಣ್ಣು, ಕಿವಿ, ಬಾಯಿಗಳಲ್ಲಿ ಹೋರಟು ಹೋಗುವುದು. ಇವರಿಗೆ ತೀರಾ ಕಷ್ಟವಲ್ಲ. ಕೆಲವರಿಗೆ ಅಧೋದ್ವಾರದಿಂದ ಪ್ರಾಣ ಹೊರಡುವುದಿದೆ. ಅವರು ಬೊಬ್ಬಿಡುತ್ತಾ ಸಾಯುವರು. ಗುಣಸಂಪನ್ನನಾದ ಯೋಗಿಯು ನೆತ್ತಿಯಿಂದ ಪ್ರಾಣವನ್ನು ಹೊರಗೆ ಹಾಕಬಲ್ಲನು. ನೆಪೋಲಿಯನನು 'ಮರಣವು ಹೇಳುವಂಥಾ ಭಯಾನಕವಾದ ಸಂಗತಿಯಲ್ಲ. ಅದು ಶಕ್ತಿಶಾಲಿಗಳಿಗೆ ಮಾರ್ಗದರ್ಶನವನ್ನು ಮಾಡುವ ಬೆಳಕಾಗಿದೆ' ಎಂದು ಮರಣದ ಕುರಿತು ವ್ಯಾಖ್ಯಾನ ಮಾಡಿದ್ದಾನೆ. ಇದು ಅವನ ಊಹೆ. ಗ್ರೀಕ್ ದಾರ್ಶನಿಕನಾದ ಸಾಕ್ರೆಟಿಸನು — 'ಆತ್ಮವು ಅತ್ಯಂತ ಸೂಕ್ಷ್ಮವಾದ ಅಗ್ನಿಯ ಪರಮಾಣುವಾಗಿದೆ. ಜೀವದ ಪರಮಾಣು ಬೇರೆ ಪರಮಾಣುಗಳ ಮಧ್ಯದಲ್ಲಿರುವುದು' ಎಂದಿರುವನು. ಇವನು ದೇಹದಲ್ಲಿ ಸೂಕ್ಷ್ಮವಾದ ಜ್ಯೋತಿಸ್ವರೂಪದ ಆತ್ಮನೊಂದಿರುವ ಒಪ್ಪುತ್ತಾನೆ. ಈಗಿನ ಕೆಲವು ವಿಜ್ಞಾನ ವಿದ್ಯಾರ್ಥಿಗಳು ಹೇಳುವಂತೆ ಅವನು ಮರವು ಸಾವಿರ ಜೀವಾಣುಗಳ ಒಟ್ಟುಗೂಟಕ್ಕೆ ಜೀವವೆಂದಿಲ್ಲ. ಪ್ಲೇಟೋವು— 'ಆತ್ಮವು ಅಮರವಾದುದು. ಶುದ್ಧಾತ್ಮನನ್ನು ನಾಶಮಾಡುವುದು ಅಸಾಧ್ಯ'ವೆನ್ನುತ್ತಾನೆ. ಇವನ ಮತ್ತು ಅರಿಸ್ಟಾಟಲನ ಅಭಿಪ್ರಾಯವು ಸನಾತನ ಧರ್ಮೀಯರ ಅಭಿಪ್ರಾಯವನ್ನು ಬಿಟ್ಟಿಲ್ಲ. ಅರಿಸ್ಟಾಟಲನು— 'ಜೀವದಲ್ಲಿ ಇಂದ್ರಿಯ, ಮನಗಳ ಮತ್ತು ಬುದ್ಧಿ ಶಕ್ತಿಯುಳ್ಳವರ ಆತ್ಮವು ಬೇರೆ ಬೇರೆ. ಜೀವದಲ್ಲಿ ಇಂಥಾ ಹಲವು ವರ್ಗ ಮಾಡಬಹುದು. ಚೈತನ್ಯ ಭಾಗವಾದ ಆತ್ಮವು ಪರಮಾತ್ಮನ ಅಂಶವಾಗಿದ್ದು ಮರಣಾನಂತರ ಪರಮಾತ್ಮನನ್ನೇ ಸೇರುವುದು; ಆದರೆ ಆತ್ಮದ ಭೌತಿಕ ಭಾಗವು ಮರಣಾನಂತರ ನಾಶವಾಗಬಹುದು' ಎಂದು ಹೇಳಿರುವನು. ನಮ್ಮಲ್ಲಿಯ ಜೀವಾತ್ಮನ ಪರ್ಯಟನಕ್ಕೆ ತುಂಬಾ ಹೋಲುವುದು. ಎಪಿಕ್ಯೂರಿಯನ್ನರಲ್ಲಿ ಹೊಸಗೋಣೆ ಲ್ಯಾಕ್ರಿಸಿಯಸನು— 'ಜನ್ಮ [illegible] ನಾಶವು ಇರುವುದೆಂದು ಭಾವಿಸುವುದು. ಮರಣಾನಂತರ ಏನೊಂದು ಉಳಿಯದು' ದೇಶೀಯರ ನಾಸ್ತಿಕವಾದಿಗಳ ಪಕ್ಷ. ಈ ಅಭಿಪ್ರಾಯವೇ ನಮ್ಮಲ್ಲಿಯ ಹಲವು ಮಂದಿ ಆಂಗ್ಲ ವಿದ್ಯಾಭ್ಯಾಸಿಗಳಲ್ಲಿದೆ. ನಮ್ಮಲ್ಲಿಯೂ "ಮರಣಾನಂತರ ಏನೇನೋ ಏನಾದರೂ! ಅದಕ್ಕಾಗಿ ಸಾಲಮಾಡಿಯಾದರೂ ತುಪ್ಪ ಕುಡಿಯಬೇಕು" ಎನ್ನುವವರ ತಂಡವೊಂದಿತ್ತು. ನ್ಯಾಯಿಕರು— "ಜೀವವು ದೈವೀ ಶಕ್ತಿಯ ನಿಯಮಕ್ಕೊಳಪಟ್ಟಿದ್ದು ಇದು ಮನುಷ್ಯನ ಹೃದಯದಲ್ಲಿರುವುದು. ದೇಹದ ಎಲ್ಲಾ ಶಕ್ತಿಗಳ ಚಲನೆಗೂ ಜೀವನೇ ಸೂತ್ರಧಾರನಾಗಿರುವನು" ಎನ್ನುವರು. ಇದೂ ಸರಿಯಾದ ಅಭಿಪ್ರಾಯ. ಕಾಂಟನು—'ಆತ್ಮನ ಅಸ್ತಿತ್ವವನ್ನು ಒಪ್ಪುವುದರಿಂದಲೇ ಸುಖವಿದೆ' ಎಂದಿರುವನು. ಅಂತೂ ಪಾಶ್ಚಾತ್ಯ ತತ್ವಜ್ಞಾನಿಗಳಲ್ಲಿ ಹಲವರು ಆತ್ಮನ ಅಸ್ತಿತ್ವವನ್ನು ಅಮರತೆಯ ಬಗ್ಗೆ ಒಪ್ಪುತ್ತಿದ್ದರೂ ಮರಣಾನಂತರದ ಅವಸ್ಥೆಯ ಕುರಿತು ಸ್ಪಷ್ಟವಾಗಿ ಏನೂ ಹೇಳಿಲ್ಲ, ಇದಕ್ಕೆ [illegible] ಬಿಲ್ಲ. ಮರಣಾನಂತರದ ಆತ್ಮ ವಿಚಾರವು ಕೇವಲ ಪಾಂಡಿತ್ಯದ ತರ್ಕಕ್ಕೆ ನಿಲುಕಲಾರದು. ಆತ್ಮ ಶಕ್ತಿಯ ಸಾಮರ್ಥ್ಯಯುಳ್ಳ ತತ್ವ ಅದನ್ನು ಸ್ಪಷ್ಟ ಅರಿಯಬಲ್ಲರು.

(ಮುಂದುವರಿಯುವುದು)

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 71/1953

ತುಕ್ರ ಗೌಡ ಕೂಡಾ ವಾದಿಯು,

ಮೋನಪ್ಪ ಗೌಡ ಕೂಡಾ ಪ್ರತಿವಾದಿಯು,

8 ನೇ ಪ್ರತಿವಾದಿ—ಶೀನಪ್ಪ ಗೌಡ. ದೇರೆ ಗೌಡರ ಮಗ. ವ್ಯವಸಾಯ ಸಂಸ್ಥಾನದ ಕಡೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಶೀಕನಹಳ್ಳಿ ತಿಳಿಗೂರು ಎಂಬಲ್ಲಿ-ಯವನಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ,

ವಾದಿಯು ನಿಂನ ಮೇಲೆ ಕೂಡಾ ಮೂಲಗೇಣಿ ಬಾಕಿ ವಸೂಲಿ ಕುರಿತು ಮಾಡಿದ ನೋಟ್ಯಾಂತ ವ್ಯಾಜ್ಯವು ತಾ 24—7—53ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ದರೆ ದಿವಸ ಮುಟ್ಟೂರು ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉಪದರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತಿರ್ಮಾನಿಸಲಾಗುವುದು. ತಿಳಿದಿರಲಿ.

(sd) C. S. Shastry
Vakil for Plaintiffs.
ಪುತ್ತೂರು 30—6—53

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಛೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಗಳು, ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಸೇವನಾತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಾಗಿ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:—

ಜಿ. ಆರ್ ಮಲ್ಯ, ಬ್ರಾಂಚ್ ಮೆನೇಜರ್,

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ]

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	„ 8,77,850
ಕ್ಷೇಮ ನಿಧಿ	. .	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½°/ₒ ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಬಾಳಿನ ಬೆಡಗು

ಪಾಶ್ಚಿಮಾತ್ಯ ಯುವಕನೋರ್ವನು ಪರಿಸಿದ ಹಳ್ಳಿಯ ಮುಗ್ಧೆಯೋರ್ವಳ ಆದರ್ಶ ಪ್ರೇಮವನ್ನು ಅರಿಯದೆ, ಅವಳನ್ನು ತ್ಯಜಿಸಿ ಓದು ಕಲಿತ ಬೆಡಗಿನ ಹೆಣ್ಣಿನ ನಟನೆಗೆ ಮರುಳಾಗಿ, ಹಾಳಾಗಿ, ಸ್ವಾಮಿಯೋರ್ವರ ಅನುಗ್ರಹದಿಂದ ಮತ್ತೆ ಮಿಲನವಾಗುವ ಕಥಾವಸ್ತುವನ್ನೊಳಗೊಂಡ

ಶ್ರೀ. ಯ. ನಾರಾಯಣ ಭಟ್ಟರು ಬರೆದ ಸರಸ— ಸುಂದರ ಕಾದಂಬರಿ.

ಬೆಲೆ: ರೂ. 1—4—0 ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೧೬—೭—೫೩ರಿಂದ ತಾ. ೨೨—೭—೫೩ರ ವರೆಗೆ.

ಮೇಷ—ಹಿಂದಿನ ಧೈರ್ಯ ಸಾಹಸಗಳು ನಿಮ್ಮಲ್ಲಿಂದು ಕಾಣಲಾರವು. ಆದರೂ ಹಿಡಿದ ಕಾರ್ಯದಲ್ಲಿ ಯಶೋಲಾಭವಿದೆ, ಬಂಧುಗಳ ನೆರವು ಆಪ್ತೇಷ್ಟರ ಸಹಾಯದಿಂದಾಗಿ ವಿಪಕ್ಷೀಯರನ್ನು ಪರಾಭವಗೊಳಿಸುವಿರಿ. ನಿಮ್ಮ ಆರ್ಥಿಕ ಸ್ಥಿತಿಯೂ ಉತ್ತಮವಾಗಿಯೇ ಉಳಿಯುವದು. ಆದರೆ ಆರೋಗ್ಯವು ಕೆಡಲಿದೆ. ಮನಸ್ಸಿಗೆ ನೆಮ್ಮದಿಯಿರಲಾರದು. ರಾಜಕೀಯ ಕ್ಷೇತ್ರದಲ್ಲಿ ವಿಜಯವು ದುರ್ಲಭವಾದೀತು. ವಾರಾದಿಯ 5 ದಿನಗಳಲ್ಲಿ ನಿಮ್ಮ ಬಯಕೆಯು ನಿರ್ವಿಘ್ನದಿಂದ ನೆರವೇರಲಿದೆ.

ವೃಷಭ—ಬಹುತೇಕ ನಿಮ್ಮ ಕಷ್ಟ ಅನಿಷ್ಟಗಳು ದೂರವಾದುವೆನ್ನಬಹುದು. ನಿಮ್ಮ ಪರಿಶ್ರಮಕ್ಕಿಂತ ಅಧಿಕವಾದ ಫಲವು ಲಭಿಸಲಿದೆ. ನೆನೆದ ಕಾರ್ಯಗಳು ನಿರ್ವಿಘ್ನದಿಂದ ನೆರವೇರುವವು. ಎಂತಹ ದುಃಸಾಧ್ಯವಾದ ಕಾರ್ಯವು ಕೂಡ ನಿಮಗಿಂದು ತೃಣ ಸಮವೆನಿಸುವದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗಿ ನೆಮ್ಮದಿಯಿಂದ ಕಾಲಯಾಪನೆ ಮಾಡುವಿರಿ. ನೌಕರಿ ವರ್ಗದವರಿಗೆ ಅಧಿಕಾರಿ ಜನರಿಂದ ಪೀಡೆ ಅನಿಷ್ಟಗಳೊದಗಲಿವೆ. ವಾರಾಂತ್ಯದ 4 ದಿನಗಳಲ್ಲಿ ಲಾಭ ಸುಖ ವಿಜಯಗಳು ಲಭಿಸುವವು.

ಮಿಥುನ— ನಿಮ್ಮ ಪರಿಸ್ಥಿತಿಯಲ್ಲಿ ಯಾವೊಂದು ತರದ ವಿಶೇಷ ಮಾರ್ಪಾಟುಗಳುಂಟಾಗಲಾರವು. ತನುಮನಗಳಿಗೆ ಸುಖ ನೆಮ್ಮದಿಗಳು ಲಭಿಸಲೊಲ್ಲವು. ಪ್ರವಾಸದಲ್ಲಿ ದುಃಖ ನಷ್ಟಗಳಧಿಕವಾಗಲಿವೆ. ಗುರುಹಿರಿಯರೊಡನೆ ವಿರೋಧ ಆಪ್ತೇಷ್ಟರ ವಿರಹ ದುಃಖಕ್ಕೊಳಗಾದ ನಿಮ್ಮ ಮನಸ್ಸು ಹೆದರಿದ ಹರಿಣದಂತೆ ಅತೀವ ಚಂಚಲವಾಗಲಿದೆ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ಪ್ರಾಪ್ತಿಯಾಗದಿರುವದರಿಂದ ದಿನಯಾಪನೆಯು ದುಸ್ತರವಾಗದು. ತಾ. 21, 22 ಈ 2 ದಿನಗಳು ಇದ್ದುದರಲ್ಲಿ ಪ್ರಶಸ್ತವಾಗಿವೆ.

ಕರ್ಕಟ—ನೀವಿಂದು ನಿಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಲಕ್ಷ್ಯವನ್ನಿಡಬೇಕಾಗಿದೆ. ಪಿತ್ತೋಷ್ಣ ಪ್ರಕೋಪದಿಂದಾಗಿ ದುಃಸ್ವಪ್ನಗಳು ಬೀಳುವವು. ನಿದ್ರೆಗೆ ಹೆಚ್ಚಿನ ಭಂಗವುಂಟಾಗಲಿದೆ. ನಿಷ್ಕಾರಣ ಜನರೊಡನೆ ಕಲಹವಾದೀತು. ನಿಮ್ಮ ಭಾಗ್ಯ ಲಾಭ ಪತಿಗಳು ಲಾಭದಲ್ಲಿ ಒಟ್ಟಿಗೆ ಸೇರಿಕೊಂಡಿರುವದರಿಂದ ನಿಮ್ಮ ಸಾಂಪತ್ತಿಕ ಭಾಗವು ವೃದ್ಧಿಹೊಂದಲಿದೆ ನಿಮ್ಮ ಧೈರ್ಯೋತ್ಸಾಹಗಳಿಗೆ ಶತ್ರು ಜನರೂ ತಲೆ ತಗ್ಗಿಸಲಿರುವರು. ವಾರಾದಿಯ 3 ದಿನಗಳು ಸುಖಲಾಭ ಮಾನದಾಯಿಗಳಾಗಿವೆ.

ಸಿಂಹ—ಎಲ್ಲಾ ಗ್ರಹರೂ ಸದ್ಯ ನಿಮ್ಮ ಮೇಲೆ ವಕ್ರ ದೃಷ್ಟಿಯನ್ನು ಬೀರಿರುವದು ಅಂದಮೇಲೆ ಕೇಳಬೇಕೇ? ಕಾರ್ಯಾರಂಭಕ್ಕೆ ಮೊದಲಾಗಿಯೇ ವಿಘ್ನಗಳುಪಸ್ಥಿತವಾಗುವವು ಹಲಕೆಲವರೊಡನೆ ಕಲಹ ಕಚ್ಚಾಟಗಳಾಗುವವು. ರಾಜಕೀಯದಲ್ಲಿ ವಿಶೇಷ ಧನಹಾನಿಯೂ ಶತ್ರುಜನರಿಂದ ಪರಾಭವವೂ. ಪಿತ್ತೋಷ್ಣ ಪ್ರಕೋಪದಿಂದ ಅನಾರೋಗ್ಯವೂ ತಲೆದೋರಲಿದೆ. ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ನರಳಾಡುತ್ತಿರುವ ನಿಮಗೆ ತಾ. 19, 20 ಕೊಂಚ ಸುಖದಾಯಿಯಾದೀತು.

ಕನ್ಯಾ—ಇಂದಿನ ಸುದೈವಿಗಳೆನ್ನಬೇಕು ನಿಮ್ಮನ್ನು. ಸುಖಪತಿಗಳಾದ ಬೃಹಸ್ಪತ್ಯಾಚಾರ್ಯರೂ ಧನಭಾಗ್ಯಪರಾದ ಶುಕ್ರಾಚಾರ್ಯರೂ ಭಾಗ್ಯದಲ್ಲಿರುವುದರಿಂದಲೂ ಲಾಭಸ್ಥಾನದಲ್ಲಿ ರವಿಕುಜ ಬುಧರ ಸಮಾಗಮವಾಗುವುದರಿಂದಲೂ ಇಂದು ನಿಮ್ಮ ಆರ್ಥಿಕ ಸಂಪತ್ತು ಸರ್ವತೋಮುಖದಿಂದ ವೃದ್ಧಿಯೊಂದಲಿದೆ ನಿಮ್ಮ ಮನೋರಥಗಳೆಲ್ಲವೂ ನಿರ್ವಿಘ್ನದಿಂದ ನೆರವೇರುವವು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ತಾ 16 17, 18, 21, 22 ಈ ದಿನಗಳು ಅತೀವ ಪ್ರಶಸ್ತವಿವೆ.

ತುಲಾ—ದಿನೇ ದಿನೇ ನಿಮ್ಮ ಕರ್ತೃತ್ವ ಶಕ್ತಿಯು ಬೆಳೆಯುತ್ತಿರುವದು. ಕೇವಲ ಆತ್ಮಶಕ್ತಿಯಿಂದ ಎಂತಹ ಕಾರ್ಯವನ್ನೂ ಕೂಡಾ ಸಾಧಿಸಲು ಶಕ್ತರಾಗುವಿರಿ. ನಿಮ್ಮ ಪರಿಶ್ರಮವು ಸಫಲವಾಗುವುದರಿಂದ ಆರ್ಥಿಕ ಪೀಡೆಯಿಂದ ಮುಕ್ತರಾಗುವಿರಿ; ಜನತೆಯ ನೆರವು ನಿಮಗೆ ಲಭಿಸಲಿದೆ. ಸ್ಥಾನಮಾನಗಳೂ ಪ್ರಾಪ್ತವಾಗುವವು ಪರ್ಯಟನಕ್ಕೀ ಕಾಲವು ಉಚಿತವಲ್ಲ. ಆರೋಗ್ಯಕ್ಕೆ ಹಾನಿಯಿದೆ. ಆಕಸ್ಮಿಕ ಅನಿಷ್ಟಗಳೊದಗುವ ಸಂಭವವಿದೆ. ತಾ. 19, 20, ಇದ್ದುದರಲ್ಲಿ ಉತ್ತಮ ದಿನಗಳು.

ವೃಶ್ಚಿಕ—ವ್ಯಾಪಾರ ವ್ಯವಹಾರ ಮುಂತಾದವುಗಳಲ್ಲಿ ಆಕಸ್ಮಿಕ ನಷ್ಟಕಷ್ಟಗಳೊದಗುವವು. ಋಣದ ಸಲುವಾಗಿ ಜಗಳಗಳುಂಟಾಗುವವು. ದೇಹದಲ್ಲಿ ದೌರ್ಬಲ್ಯ, ಹೆಚ್ಚೀತು. ವಿನಾ ಕಾರಣ ಮಾತು ಬೆಳೆದು ಕಲಹದಲ್ಲಿ ಪರ್ಯವಸಾನ ಹೊಂದುವದು, ಆದರೂ ನಿಮ್ಮ ಆತ್ಮಶಕ್ತಿಯು ಚೆನ್ನಾಗಿರುವುದರಿಂದ ಹಿಡಿದ ಕಾರ್ಯದಲ್ಲಿ ವಿಜಯವನ್ನುಗಳಿಸುವಿರಿ. ವಿರೋಧಿಗಳ ಪೀಡೆಯಿಂದ ಮುಕ್ತರಾಗುವಿರಿ. ತಾ. 16, 17, 18, 21, 22, ಈ ದಿನಗಳಲ್ಲಿ ವಿಜಯ ಲಾಭ ಸುಖಾದಿಗಳು ಲಭಿಸುವವು.

ಧನು—ದಿನೇ ದಿನೇ ನಿಮ್ಮ ಪರಿಸ್ಥಿತಿಯು ಕೆಡುತ್ತಲಿದೆ. ಯಾವ ಕಾರ್ಯಕ್ಕೇ ಕೈಯಿಕ್ಕಲಿ ನಷ್ಟವೇ ಕಾಣಿಸುವದು, ವಿರೋಧಿಗಳಿಂದ ಧನಮಾನಾದಿಗಳಿಗೆ ತುಂಬಾ ಕೆಡುಕಿದೆ. ಮನಸ್ಸು ಅತೀವ ಚಂಚಲವಾಗುವದು ಗುರುಹಿರಿಯರ ಆಗ್ರಹಕ್ಕೆ ಗುರಿಯಾಗುವಿರಿ. ಶ್ರಮಜೀವಿಗಳಿಗೀ ಕಾಲವು ಅತ್ಯಂತ ದುಃಸಹವೆನಿಸುವದು. ಆಪ್ತಜನರ ವಿರಹ ದುಃಖಕ್ಕೊಳಗಾಗುವ ಸಂಭವವಿದೆ, ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸುವವು.

ಮಕರ—ಒಮ್ಮೆಗೇ ನಿಮ್ಮ ಪರಿಸ್ಥಿತಿಯಲ್ಲಿ ಹಲವಾರು ಮಾರ್ಪಾಟುಗಳುಂಟಾಗಲಿವೆ ತ್ವರಿತ ಗತಿಯಿಂದ ಸಾಗುತಿದ್ದ ನಿಮ್ಮ ವ್ಯಾಪಾರ ವ್ಯವಹಾರಾದಿ ಉದ್ಯಮಗಳು ಒಮ್ಮೆಗೇ ಕಟ್ಟುಗಲಿವೆ. ಆಯಕ್ಕಿಂತ ದ್ವಿಗುಣವಾಗಿ ವ್ಯಯವಾಗುವದು. ಸತಿಪತಿಗಳಲ್ಲಿ ನಿತ್ಯ ಕಲಹವಾದೀತು ಆಕಸ್ಮಿಕವಾಗಿ ಪ್ರವಾಸವು ಪ್ರಾಪ್ತವಾಗಿ ಹೆಚ್ಚಿನ ಕಷ್ಟ ನಷ್ಟಗಳಿಗೆ ಗುರಿಯಾಗುವಿರಿ. ವಾರಾಂತ್ಯದ 4 ದಿನಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲ ಸುಖಗಳು ಕಾಣಿಸುವವು.

ಕುಂಭ—"ದುಃಖಸ್ಯಾನಂತರಂ ಸುಖಂ" ಎಂಬ ಗಾದೆಯಂತೆ ಹಲಕೆಲವು ವಾರಗಳಿಂದ ಕಷ್ಟನಷ್ಟಗಳಿಗೀಡಾಗಿ ನಾನಾ ತರದ ತಾಪತ್ರಯಗಳಿಗೆ ಸಿಲುಕಿದ ನಿಮಗೆ ಇಂದು ಪೂರ್ಣ ವಿಶ್ರಾಂತಿ ನೆಮ್ಮದಿ ದೊರೆಯಲಿದೆ. ನಿಮ್ಮ ಪ್ರತಿಯೊಂದು ಕಾರ್ಯವೂ ಕೂಡ ನಿರೀಕ್ಷಿಸುವುದಕ್ಕಿಂತ ಹೆಚ್ಚಿನ ಫಲವೀಯುವುದು. ರಾಜಕೀಯ ರಂಗದಲ್ಲಿ ಅಪ್ರತಿಮ ವಿಜಯವನ್ನು ಪಡೆವಿರಿ, ಆರ್ಥಿಕ ಭಾಗವು ಅತೀವ ಉತ್ತಮ ಮಟ್ಟಕ್ಕೆ ಬರಲಿದೆ. ವಾರಾಂತ್ಯದ 2 ದಿನಗಳು ಇಷ್ಟಾರ್ಥ ಪ್ರದಗಳಿವೆ.

ಮೀನ—"ದೈವೇ ದುರ್ಬಲತಾಂ ಗತೇ ತೃಣಮಪಿ ಪ್ರಾಯೇಣ ವಜ್ರಾಯತೇ" ಎಂಬಂತೆ ಅದೃಷ್ಟ ಹೀನನಾದ ನರನಿಗೆ ಹುಲ್ಲು ಕಡ್ಡಿಯೂ ಕೂಡ ವಜ್ರಾಯುಧ ಸಮವೆನಿಸುವದು. ಅಂತೆಯೇ ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಉಂಟಾಗುವದು. ನಿಮ್ಮ ಕಾರ್ಯಕಲಾಪಗಳು ಮಧ್ಯಕ್ಕೆ ನಿಲ್ಲಲಿವೆ. ಜನತೆಯೊಡನೆ ವಿರೋಧ ಭಾವ ಬೆಳೆವುದು. ಆಪ್ತೇಷ್ಟರ ವಿರಹ, ಸತಿಪತಿಗಳ ಜಗಳ ಸಾಂಸಾರಿಕ ತಾಪತ್ರಯಗಳಿಂದ ನಿತ್ಯ ದುಃಖಿತರಾದ ನಿಮಗೆ ವಾರಾದಿಯ 3 ದಿನಗಳಲ್ಲಿ ಕೊಂಚ ಸುಖಲಾಭಗಳಿವೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 113/1953.

ವಿಷ್ಣು ಮೂರ್ತಿ ಚೈಕ್ಸ—ವಾದಿ.

ಸುಬ್ರಾಯ ಭಟ್ಟ ಕೂಡಾ—ಪ್ರತಿವಾದಿಯು

4ನೇ ಪ್ರತಿವಾದಿ ಸೀತಾರಾಮಯ್ಯ, ಲಕ್ಷ್ಮೀನಾರಾಯಣಯ್ಯನವರ ಮಗ ಪುತ್ತೂರು ತಾಲ್ಲೂಕು ಮರ್ಕರಾಜ ಗ್ರಾಮ ದೊಡ್ಡತೋಟ ಎಂಬಲ್ಲಿ ವಾಸ್ತವ್ಯ ದೊಡ್ಡ ತೋಟ-ಯವರಿಗೆ,

1ನೇ ಪ್ರತಿವಾದಿಯು ವಾದಿಗೆ ತಾರೀಕು 13 8-1945ರಲ್ಲು ರಿಜಿಸ್ಟ್ರಿ ಸಿರಿ ರುಪ್ಯಾ 1500ಕ್ಕೆ ಬರಕೊಟ್ಟ ದೋಕದಸ್ತಿ ಅಸಲು ವ ತಾ 13—8—51ರ ನಂತ್ರದ ಬಡ್ಡಿ ವ್ಸಲಿಗೂ ಮೇಲ್ಕಂಡ ದಾವಾ ದಾಖಲು ಮಾಡಿರುತ್ತಾನೆ ಅಲ್ಲದೆ ಸದ್ರಿ ಆಸ್ತಿಯ ನಂತ್ರದ ಜವಾಬ್ದಾರರಾದ ನಿಂಮ ಉಪ್ಪು ಶಿಕ್ಷಾ ದಾವಾ ಆಸ್ತಿ ಮೊಬಲಗಿನಿಂದ, ದಾವಾ ಖೈದು ಕೊಡಿಸಬೇಕೆಂತ ಕೂಡಾ ನಿವೃತ್ತಿ ಕೇಳಿರುತ್ತಾನೆ ಸದ್ರಿ ದಾವೆಯೂ ನಿಮ್ಮ ಹಾಜ್ರಾತಿ ಬಗ್ಗೆ ತಾ 23—7—1953ಕ್ಕೆ ಮ್ಯಾದೆಯಿರುವುದರಿಂದ, ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಮ್ಯಾದೆಗೆ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉತ್ತರಕೊಡತಕ್ಕದೆಂತಲೂ, ತಪ್ಪಿದ್ರೆ ನಿಂಮನ್ನು ಏಕ್ಸ್ ಪಾರ್ಟಿ ತೀರ್ಮಾನಿಸಲಾಗುವುದೆಂತಲೂ, ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿದೆ.

(Sd) **P. Krishna Bhat**
Vakil for Plaintiff

Puthur Date 1—7—53

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 128/1953.

ವಾದಿ–ಶ್ರೀ M. N. ಚಲುವಾ-ರಸೀವರ್,

ಪ್ರತಿವಾದಿ– ರಾಮಯ್ಯ ರೈ–ಗುಡ್ಡಪ್ಪ ರೈ ಅಳಿಯ ಪುತ್ತೂರು ತಾಲೋಕು ನೆಟ್ಟಣಿಗೆ ಮುಡ್ನೂರು ಗ್ರಾಮದ ಮೇಗಿನ ಮೇನಾಲ ಯೆಂಬಲ್ಲಿರ್ವವರು.

ಸದ್ರಿ ಪ್ರತಿವಾದಿಗೆ–ಪ್ರತಿವಾದಿಯು ಹಾಲಿ ಮೃತಪಟ್ಟ ಸರ್ವಕೋಡಿ ಚೆನ್ನಪ್ಪನವರಿಗೆ ತಾರೀಕು 12-4-1950ರಲ್ಲು ರುಪ್ಯಾ 500ಕ್ಕೆ ಬರಕೊಟ್ಟ ಡಿ ಪ್ರೊ. ನೋಟಿನ ಅಸಲು ಬಡ್ಡಿ ಮತ್ತು ವಕೀಲರ ನೋಟೀಸು ಖರ್ಚು ಸಹಾ ರುಪ್ಯಾ 587 8-0ರ ವಸೂಲಿ ಬಗ್ಗೆ ಪ. ಕ. ಸಬ್ ಕೋರ್ಟು ಕ್ರಮ ನಂಬ್ರ 236/1951ರಲ್ಲಿ ರಸೀವರನಾಗಿ ಆ ಕೋರ್ಟಿನಿಂದ ನೇಮಿಸಲ್ಪಟ್ಟ ಮೇಲೆ ಕಾಣ್ಸಿದ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಈ ದಾವೆಯು ತಾರೀಕು 23-7-1953ಕ್ಕೆ ಈ ಕೋರ್ಟಿನಲ್ಲಿ ತಸ್ತಿಗೆ ಇಟ್ಟಿದೆ. ಸದ್ರಿ ದಾವೆಗೆ ಪ್ರತಿವಾದಿಯು ಉದಹರಿಸುವದಿದ್ದರೆ ಸದ್ರಿ ಮ್ಯಾದೆ ದಿವಸ ಹಗಲು ಘಂಟೆ 11ಕ್ಕೆ ಈ ಕೋರ್ಟಿನಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಪ್ರತಿವಾದಿಗೆ ಶಿಕ್ಷಾ ಮಾಡಿ. ವ್ಯಾಜ್ಯ ತೀರ್ಮಾನಿಸಲ್ಪಡುವದು ಯೆಂತ ಯಿದರಿಂದ ತಿಳಿಸಲಾಗುತ್ತದೆ.

H. Sanjiva Shetty.
Advocate for Pltff.

ಪುತ್ತೂರು ತಾ, 3-7-53

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟ್ ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ**. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಸಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) **ನಿರ್ಮೂ**ಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಆತ್ಮುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ಸೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.**

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಸಿರಿ, ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ನಾರ್ತ್ ಕ್ರಾಸ್, **ಮೈಸೂರು** (South India)

ಋತುಸ್ರಾವ ನಿಂತಿತು

"ಕುಸೂರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/ ; ಸ್ಪೆಶ್ಯಲ್ ರೂ. 5/– ಅತಿ ಶಾಘಿನ ಸ್ಪೆಶ್ಯಲ್ ರೂ. 8/–[ವಿ. ಪಿ. ಪಾರ್ಸೆಲ್ ಚಾರ್ಜು ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸಾ ಕಿಸ ರು: ಶಹಾ ಕಂಪೆನಿ, ಮಂಗಳೂರು.

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ವಾಹಿತವಾದ ವಾರಪತ್ರಿಕೆ,
ಉಡುಪಿ, ದ. ಕನರ

ವಾ॥ ಚಂದಾ	5-12-0
6 ತಿಂಗಳಿಗೆ	3--0-0
ಬಿಡಿ ಪ್ರತಿಗೆ	0--2-0

Reg. No.
M 3618

LICENCE No. 31
Licensed to Post without Prepayment

ನವಯುಗ

23-7-1953

Vol 32
No. 46

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೬

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೇನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಈಗ ಭಾರತದ ಪಶ್ಚಿಮ ವಿಭಾಗದ ಮುಖ್ಯ ಸೇನಾಧಿಪತಿಗಳಾಗಿರುವ ಮೇಜರ್ ಜನರಲ್ ತಿಮ್ಮಯ್ಯನವರು ಮೊನ್ನೆಯೊಂದು ಭಾಷಣದಲ್ಲಿ ಹೇಳಿದ ಸಂಗತಿಯಿದು-

ಸ್ವಾತಂತ್ರ್ಯಾಂದೋಲನವು ಭಾರತದಲ್ಲಿ ನಡೆಯುತಿದ್ದ ಎರಡು ವರ್ಷಗಳ ಹಿಂದಿನ ಆ ಕಾಲದಲ್ಲಿ ತಿಮ್ಮಯ್ಯನವರು ಸೈನ್ಯದಲ್ಲಿ ಚಾಕರಿಯಾಗಿದ್ದರು ಮಾತ್ರ. ದೇಶದಲ್ಲಿ ಬ್ರಿಟಿಷರ ವಿರುದ್ಧ ಉಗ್ರದ ಚಳವಳಿ ಮತ್ತು ಸರಕಾರದಿಂದ ಅಸಾಧಾರಣ ತೋರಿಸಲ್ಪಡುತಿದ್ದ ಆ ಸಮಯದಲ್ಲಿ— ತಾನು ಸೈನ್ಯಕ್ಕೆ ಸೇರಿದುದು ಸರಿಯಾಯಿತೆ ಎನ್ನುವ ಶಂಕೆ ತಿಮ್ಮಯ್ಯನವರ ಮನಸ್ಸಿನಲ್ಲಿ ಮೂಡಿದ್ದರೆ ಅದು ತಪ್ಪಲ್ಲ.

ಇದಕ್ಕೆ ತಕ್ಕ ಸಮಾಧಾನವನ್ನು ಜವಾಹರಲಾಲ ನೆಹರೂರವರೇ ದಿವಂಗತ ಮೋತೀಲಾಲರು ಕೊಟ್ಟರು. ತಿಮ್ಮಯ್ಯನವರನ್ನು ಅವರು ಬಳಿ ಕರೆದು "ನೀನು ಚಿಂತಿಸಬೇಡ— ಸೈನ್ಯದಲ್ಲಿದ್ದುಕೊಂಡು ನೀನು ಯಶಸ್ಸನ್ನು ಗಳಿಸು. ಮುಂದೊಂದು ದಿನ ಭಾರತವು ಸ್ವತಂತ್ರಗೊಂಡಾಗ, ಅದಕ್ಕೆ ರಾಷ್ಟ್ರೀಯ ಸೈನ್ಯಾಧಿಕಾರಿಗಳ ಅವಶ್ಯಕತೆ ಬೀಳುವುದು. ಆಗ ನೀನು ಈ ಜವಾಬ್ದಾರಿಕೆ ಹೊರಲು ಈಗಿನಿಂದಲೇ ಸಿದ್ಧತೆ ನಡೆಸಬೇಕು" ಎಂದು ಆಶೀರ್ವದಿಸಿದರು.

ಈ ದೂರದರ್ಶಿತ್ವವೇ ಹಿರಿಯರ ಆಶೀರ್ವಾದದ ಸ್ವರೂಪ ವೈಶಿಷ್ಟ್ಯ.

ಹಿರಿಯರ ಆಶೀರ್ವಾದ

ಇನ್ನೂ ಐದು ವರ್ಷ ತುಂಬದ ಹುಡುಗ ತಂದೆಯನ್ನು ಬೈದು ಮಾತಾಡುವುದನ್ನು ನಾವಿಂದು ಕೇಳುತ್ತೇವೆ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಹಿರಿಯರ ಮೇಲಿನ ಗೌರವಾದರಗಳನ್ನು ಕಿರಿಯರು ಕಳೆದು ಬಿಡುವುದು ಇಂದಿನ ವಾಡಿಕೆಯಾಗಿ ತೋರುತ್ತದೆ. ಈ ಹುಡುಗರು ಸ್ವಲ್ಪ ದೊಡ್ಡವರಾಗಿ ಕುಡಿ ಮೀಸೆ ಮುಖದಲ್ಲಿ ಮೂಡಿತೋ ಇಲ್ಲವೋ- ಹಿರಿಯರ ಕಡೆಗೆ ಅವರು ತಿರಸ್ಕಾರವನ್ನೂ ಅವಜ್ಞೆಯನ್ನೂ ಏನೊಂದೂ ಸಂಕೋಚವಿಲ್ಲದೆ, ತೋರಿಸತೊಡಗುವರು. ಸಾಮಾನ್ಯ ಹಳ್ಳಿಗಾಡಿನ ಯುವಕ-ಯುವತಿಯರಿಗಿಂತಲೂ ಪೇಟೆಪಟ್ಟಣಗಳ ಸುಶಿಕ್ಷಿತ ತರುಣ ವೃಂದವು ಹಿರಿಯರ ಆಶೀರ್ವಾದವನ್ನು ತುಚ್ಛೀಕರಿಸಿ ಮಾತನಾಡುವುದು ಹೆಚ್ಚೆಂಬುದು ಅನುಭವ ಸಿದ್ಧವಾದ ಸಂಗತಿ. ಹೆತ್ತವರೂ ಹಿರಿಯರೂ ವಿದ್ಯಾಬುದ್ಧಿಯನ್ನು ಈ ಜನಕ್ಕೆ ಕಲಿಸಲು ಪರಿಶ್ರಮ ವಹಿಸಿದುದಕ್ಕೆ ಪ್ರತಿಫಲವಾಗಿ ಬಿರುನುಡಿಗಳೂ, ಉದಾಸೀನತೆ ಮತ್ತು ತಿರಸ್ಕಾರ ಭಾವನೆಯೂ ಕಿರಿಯರಿಂದ ದೊರೆಯುತ್ತವೆ. ಹಿರಿಯರಿಗೇನು ತಿಳಿದಿದೆ! ಅವರು ಕೇವಲ ಮೂರ್ಖರು ಎಂಬಂತೆ ಕಿರಿಯರು ನಡೆದುಕೊಳ್ಳುವುದು ಇಂದಿನ ಪರಿಪಾಟವಾಗಿದೆ. ಶಾಲೆಯಲ್ಲಿ ನಾಲ್ಕು ಅಕ್ಷರಗಳನ್ನು ಕಲಿತ ಮಾತ್ರಕ್ಕೆ ತಮ್ಮನ್ನು ಬುದ್ಧಿವಂತಿಕೆ, ಶಾಲೆಯ ಮುಖ ನೋಡದ ತಮ್ಮ ಹಿರಿಯರಲ್ಲಿ ಇಲ್ಲವೇ ಇಲ್ಲವೆನ್ನುವ ತಾತ್ಪರ್ಯ ನಮ್ಮ ಆಧುನಿಕ ಹುಡುಗ-ಹುಡುಗಿಯರಲ್ಲಿ ಮನೆಮಾಡಿದೆ. ಈ ರೀತಿಯ ವರ್ತನೆ ಹಾಗೂ ಭಾವನೆ ಅವರ ವ್ಯಕ್ತಿತ್ವದ ವಿಕಾಸವನ್ನು ಎಷ್ಟರ ಮಟ್ಟಿಗೆ ಕುಂಠಿತಗೊಳಿಸುವುದೆಂಬೂ ನೈತಿಕ ಬಲವನ್ನು ಕುಂದಿಸುವುದೆಂದೂ ಜೀವನದ ಮೇಲೆ ಏನು ದುಷ್ಪರಿಣಾಮವನ್ನು ಮಾಡುವುದೆಂದೂ ಈ ಕಿರಿಯರು ತಿಳಿದುಕೊಂಡರೆ, ಅದರಿಂದ ಮುಂದೆ ಇದಿರಿಸಬೇಕಾಗಿ ಬರುವ ಗಂಡಾಂತರಗಳು ತಪ್ಪಬಲ್ಲವು.

ನಮ್ಮ ಶೈಕ್ಷಣಿಕ ಪದ್ಧತಿಯಲ್ಲಿ ನೈತಿಕ ಶಿಕ್ಷಣಕ್ಕೆ ಪ್ರಾಧಾನ್ಯ ಕೊಡಬೇಕೆನ್ನುವವರು-- ನಾಳಿನ ಜನಾಂಗದ ಗುಣಶೀಲ ಸಂವರ್ಧನೆಯ ಒಳ್ಳೆಯ ಉದ್ದೇಶದಿಂದಲೇ ಈ ರೀತಿ ಬಿನ್ನವಿಸುತಿದ್ದಾರೆ. ಈಗ ಸಹಶಿಕ್ಷಣದಲ್ಲಿ ಯೋಗ್ಯ ನೀತಿ ಪಾಠಗಳು ಇರುತ್ತವೆ. ಎರಡನೆ ತರಗತಿಯ ಪದ್ಯಪುಸ್ತಕದಲ್ಲಿ ಒಂದು ಪದ್ಯವುಂಟು. "ಅಜ್ಜನು ಹೇಳಿದ ಮಾತನು ಎಲ್ಲ ಮಧುರಿಯು ಎಂದೂ ಕೇಳುವುದಿಲ್ಲ" ಎಂದು ಈ ಪದ್ಯ ತೊಡಗಿ, "ಹಿರಿಯರ ಮಾತನು ಕೇಳದೆ ಇದ್ದು ಮಾಡಿದ ಕೆಲಸಕ್ಕೆ ಆಯಿತು ಮುದ್ದು" ಎಂದು ಮುಗಿಯುತ್ತದೆ. ಅಜ್ಜನ ಮಾತು ಕೇಳದ ಮಧುರಿಯು ಪರಿಣಾಮದಲ್ಲಿ ನೊಂದ ಬಗೆಯನ್ನು ಒಳ್ಳೇ ಸ್ವಾರಸ್ಯವಾಗಿ ಈ ಪದ್ಯ ವರ್ಣಿಸುತ್ತದೆ. ಹುಡುಗರಿಗೆ ಇಷ್ಟು ಎಳೆ ವಯಸ್ಸಿನಲ್ಲಿ ಇಂಥ ಉತ್ತಮ ಪಾಠವು ಸಿಕ್ಕಿದರೂ ಅವರ ಶೀಲ ಈಗಿನ ಕೆಟ್ಟಸ್ಥಿತಿಗೆ ಇಳಿಯುತ್ತಿರುವುದನ್ನು ಕಂಡು ವ್ಯಥೆಯಾಗುತ್ತದೆ. ಹಿರಿಯರ ಆಶೀರ್ವಾದದಲ್ಲಿ ಏನಿದೆ? ಹಿರಿಯರ ಹಳೆ ಮಾತುಗಳನ್ನು ವಿಚಾರಿ ನಡೆಯುವುದರಿಂದ ಹಾನಿಯೇನು ಎಂದೆಲ್ಲ ಒಗೆಯುವಾಗ ನಮಗೆ ಉಳಿಯುವ ತರುಣ ತರುಣಿಯರು ತಮ್ಮ ತರ್ಕ ಬುದ್ಧಿಯ ತೀಕ್ಷ್ಣ ಪ್ರಯೋಗಕ್ಕೆ ಒಂದು ಅವಕಾಶ ಮಾಡಿಕೊಳ್ಳುವರೇ ಹೊರತು ವ್ಯಕ್ತಿತ್ವದ ಪೋಷಣೆಗೆ ನೆರವಾಗಬಲ್ಲುದೊಂದನ್ನೂ ಮಾಡುವುದಿಲ್ಲ. ಗುರು ಹಿರಿಯರ ಆಶೀರ್ವಾದವು ಒಲಿಯುವುದು ದೇವರ ಹರಕೆಗೆ ಸಮಾನವೆಂದು ಸಮಾಜದಲ್ಲಿ ಎಲ್ಲರೂ ಭಾವಿಸುವರು. ಋಷಿ ಮುನಿಗಳು "ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ" ಎಂಬ ಶ್ರುತಿಯಲ್ಲಿ ಗುರುಹಿರಿಯರನ್ನು ವ್ಯಕ್ತಗೊಳಿಸಿರುವರು.

ನಮ್ಮ ಹಿರಿಯರನ್ನು ಕುರಿತು ತಿರಸ್ಕಾರದಿಂದ ವರ್ತಿಸಲು ಕಿರಿಯರಿಗೆ ಅತ್ಯಂತ ಸಮಂಜಸವಾದ ಕಾರಣಗಳಿರಬಹುದು-- ನಮ್ಮ ಹಿರಿಯರಲ್ಲಿ ನಿನ್ನೇನೂ ಕೌಶಲ್ಯ, ಬುದ್ಧಿವಂತಿಕೆ ಅಥವಾ ಸಮಾಜದಲ್ಲಿ ಶ್ರೇಷ್ಠ ಸ್ಥಾನ ಪಡೆಯಲು ಬೇಕಾದ ವೈಶಿಷ್ಟ್ಯಗಳೊಂದೂ ಇಲ್ಲದಿರಬಹುದು. ಈ ಎಲ್ಲ ಅನುಕೂಲ್ಯಗಳು ಹಿರಿಯರಲ್ಲಿ ಇಲ್ಲವುದವರ್ಯವೆನ್ನುವ ನಮ್ಮ ಭಾವನೆಯೇ, ಸಮಾಜದಲ್ಲಿ ಹಿರಿಯರಿಗಿರುವ ಉನ್ನತ ಸ್ಥಾನವನ್ನು ಸ್ಪಷ್ಟಗೊಳಿಸುತ್ತದೆ! ಆದುದರಿಂದ ಸಂಪತ್ತು, ವಿದ್ಯಾ ಬುದ್ಧಿಗಳಂಥ ಅನುಕೂಲ್ಯಗಳಿಂದ ವಂಚಿತರಾದರೂ-- ಅವರು ನಮ್ಮ ಹಿರಿಯರೆನ್ನುವ ಅಭಿಮಾನವೊಂದೇ ನಮಗೆ ದೊರೆತರೆ ಸಾಕು, ನಮ್ಮ ಶಕ್ತಿ ವೃದ್ಧಿ ಹೊಂದುವುದು ನಿಶ್ಚಯ. ಈ ಅನುಕೂಲತೆಗಳಿಲ್ಲವೆನ್ನುವುದರಿಂದ ಅವರನ್ನು, ಹಿರಿಯರನ್ನು ಕಡೆಗಣಿಸುವ ನಾವು ತಮ್ಮ ವರ್ತನೆಯಿಂದ ಹಿರಿಯರ ಪರಿಸ್ಥಿತಿಯನ್ನು ಸುಧಾರಿಸಿದಂತಾಯಿತೆ? ಎಂಬುದನ್ನು ಅವಶ್ಯ ಯೋಚಿಸಬೇಕು. ಇದರಂತೆ ಹಿರಿಯರು ಸಾಕಷ್ಟು ವಿದ್ಯಾಬುದ್ಧಿ ಸಂಪನ್ನರನ್ನಾಗಿ ನಮ್ಮನ್ನು ಮಾಡಲಿಲ್ಲವೆಂದು ಕಿರಿಯರು ದೂರಿಕೊಳ್ಳಬಹುದು. ಬೇಕಾದಷ್ಟು ಹಣ ಹಾಗು ಅನುಕೂಲತೆ ಇದ್ದರೂ ನಮ್ಮನ್ನು ಕಾಲೇಜಿನ ಮೆಟ್ಟಲು ಹತ್ತಗೊಡಲಿಲ್ಲವೆಂದು ಬೇಸರ ಹೊಂದಬಹುದು. ಆದರೆ ಇದೂ ಸಹ ಹಿರಿಯರನ್ನು ತುಚ್ಛೀಕರಿಸಲು ಈ ಕಾರಣ ಏತಕ್ಕೂ ಸಾಲದು. ನಮ್ಮ ಹಿರಿಯರು ಕಿರಿಯರ ಶ್ರೇಯೋಭಿವೃದ್ಧಿಗಳನ್ನೇ ಧ್ಯೇಯವಾಗಿಟ್ಟುಕೊಂಡಿರುವರೆಂಬುದನ್ನು ಸರ್ವಥಾ ಮರೆಯಬಾರದು. ಅಂಥವರಲ್ಲಿ ಅವರು ಇನ್ನೂ ನಾಕಷ್ಟು ಅನುಭವವಿಲ್ಲದ ನಮ್ಮ ವಿಚಾರದಂತೆ ನಡೆದುಕೊಳ್ಳದಿದ್ದರೆ, ಅದಕ್ಕೆ ತುಂಬಾ ಅನುಭವ ಸಂಪನ್ನರಾದ ಹಿರಿಯರಿಗೆ ಸಬಲವಾದ ಕಾರಣಗಳು ದೊರಕಿರಬೇಕು. ಅವನ್ನು ಮನನ ಮಾಡಿಕೊಂಡು, ಹಿರಿಯರ ಕಡೆ ಸಹಾನುಭೂತಿ ತೋರಿಸುವುದರಿಂದ ನಮ್ಮ ಅವಜ್ಞೆಯ ಭಾವ ತಾನಾಗಿಯೇ ದೂರವಾಗುವುದು.

ಇವೆಲ್ಲ ಸಾಮಾನ್ಯ ಕಾರಣಗಳು. ನಿಜವಾಗಿಯೂ ಹಿರಿಯರ ವರ್ತನೆಯಿಂದ ನೊಂದುಕೊಳ್ಳಬೇಕಾಗಿ ಬರುವ ದೌರ್ಭಾಗ್ಯ ಕೆಲವು ಹುಡುಗ-ಹುಡುಗಿಯರ ಪಾಲಿಗೆ ಬರಬಹುದು. ತಾನು ಒಬ್ಬ ಶಕ್ತನ ಮಗನೆಂದು ಹೇಳಿಸಿಕೊಳ್ಳುವುದನ್ನು ಯಾವ ಮಹತ್ವಾಕಾಂಕ್ಷಿಯಾದ ತರುಣನೂ ಮೆಚ್ಚಲಾರನು. ಹಾಗೆಯೇ ನಾಗರಿಕರ ಮಗನೆನ್ನುವ ಕರ್ಣಕಠೋರ ನುಡಿಯಿಂದ ಹುಡುಗರು ಕುಗ್ಗುವ ಕೆಲವು ಉದಾಹರಣೆ ನಮ್ಮ ಮನಗಳು ಬೆಂದು ಹೋದಾವು. ಆದರೆ

(೯ನೇ ಪುಟ ನೋಡಿರಿ)



ಚಿಕ್ಕಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ-

ಕೆ. ಹೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದೊಂದೆ ಓದಿಗೆ ತರಗತಿ ವರೆಗಿನ ಮಕ್ಕಳಿಗೆ ಪಾಠದಲ್ಲಿಯೂ ಉಪಯೋಗಕ್ಕೆ ಬರುವ ಸುಂದರ ಪದ್ಯಗಳು! ಮಂಜೂರಾತಿ ಪಡೆದು, ಕೆಲವು ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.

ಬೆಲೆ: 0-6-0

ಪ್ರತಿಗಳು ಎಲ್ಲಾ ಪ್ರಮುಖ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತವೆ. ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಧುನಿಕ ನಾಗರಿಕತೆಗೊಂದು ಸವಾಲು

ಸರ್ವೋದಯ ನೀತಿಯಂತೆ ಜೀವನ ರೂಪಿಸಿದ ಮಾನವತೆಯ ಪೂಜಾರಿ ಸಂತ ಕಗಾವಾ

ಜಗತ್ತಿನ ಪುಣ್ಯಶ್ಲೋಕರ ಸಾಲಿನಲ್ಲಿ ನಾವು ಮಹಾತ್ಮಾ ಗಾಂಧೀಯವರನ್ನು ಅತ್ಯಗತ್ಯವಾಗಿ ಸೇರಿಸುತ್ತೇವೆ. ಮಾನವತೆಯ ಪೂಜಾರಿಯಾಗಿ ಬಾಳಿದ ಕರ್ಮಯೋಗಿ ಗಾಂಧಿಜಿ- ಆದುದರಿಂದ, ಲೋಕದ ಜನತೆ ಅವರನ್ನು ಗೌರವಾದರಗಳಿಂದ ಕಂಡು ಶಿರಬಾಗಿ ನಮಿಸುತ್ತದೆ. ಗಾಂಧೀಜಿ ನಮ್ಮನ್ನೆಲ್ಲ ಅಗಲಿಹೋದ ಬಳಿಕ, ಅವರ ಮಾರ್ಗದರ್ಶನದ ಬೆಳಕಿನ ನೆರವು ದೊರೆಯದೆ ನಾವೂ ಲೋಕದ ಇತರ ದೇಶಗಳ ಜನತೆಯೂ ತಬ್ಬಿಬ್ಬಾಗಿರುತ್ತೇವೆ. ಎಲ್ಲಿಯೋ ಒಬ್ಬ ವಿನೋಬಾ ಭಾವೆ ಭಾರತೀಯರ ಮುಂದೆ ಗಾಂಧೀಜಿಯವರಿಟ್ಟ ಆದರ್ಶವನ್ನು ಸರ್ವೋದಯ ಸಿದ್ಧಾಂತದ ರೂಪದಲ್ಲಿ ಎಲ್ಲರೂ ತಿಳಿದುಕೊಳ್ಳುವಂತೆ ಅಹೋರಾತ್ರಿ ಪರಿಶ್ರಮಿಸುತ್ತಿರಬಹುದು. ಕಾಕಾ ಕಾಲೇಲ್ಕರರಂಥವರು ತಮ್ಮ ಪಾದರಕ್ಷೆಗಳನ್ನು ಕದ್ದ ಕಳ್ಳನಿಗೆ ಗಾಂಧೀ ತತ್ವೋಪದೇಶಮಾಡಿ, ಅವನಲ್ಲಿ ಸುಪ್ತವಾಗಿರುವ ಮಾನವತೆಯನ್ನು ಜಾಗೃತಗೊಳಿಸಲು ನೋಡಬಹುದು. ಅಂಥ ಕಾರ್ಯಕಟುಗಳಿಗೆ ವಿಚಾರವಂತರ ಸಹಾನುಭೂತಿ ಯಾವಾಗಲೂ ಉಂಟು; ಯಾವ ದೇಶದಲ್ಲಿದ್ದರೂ ಉಂಟು. ಆದುದರಿಂದ ಪೂರ್ವದೇಶದ, ಸೂರ್ಯನು ಮೊದಲಾಗಿ ಉದಿಸುವ ಆ ಪುಣ್ಯಭೂಮಿ, ಜಪಾನಿನಲ್ಲಿ, ಸಂತ ಕಗಾವಾರನ್ನು ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಕಾಣುತ್ತಿರುವುದು ಸಹಜವೇ ಆಗಿದೆ. ಸಂತ ಕಗಾವಾ ವರ್ತಮಾನ ಕಾಲದ ಜಪಾನಿನಲ್ಲಿ ಸಾಮಾಜಿಕ ಉತ್ಕರ್ಷವನ್ನುಂಟುಮಾಡಲು ಹೆಣಗಿದ ಮಹಾಜೀವ- ಕರ್ಮಶಕ್ತಿಯ ಅವ್ಯಾಹತ ಸೇವನದಿಂದ ಜನಮನವನ್ನು ಮಾನವತೆಯ ಉಚ್ಚ ಆದರ್ಶದೆಡೆಗೆ ಆಕರ್ಷಿಸಿಕೊಂಡ ಪುಣ್ಯಾತ್ಮ. ಜಪಾನು ದೇಶದ ಗಾಂಧೀಜಿ ಎನ್ನುವ ಅಭಿಧಾನವನ್ನು ಅವರ ವ್ಯಕ್ತಿತ್ವದ ಔನ್ನತ್ಯವನ್ನು ಕಂಡೇ ನೀಡಲಾಗಿದೆ ಎನ್ನಬೇಕು. ಕಗಾವಾ ನಿಜಕ್ಕೂ ಮಾನವತೆಯ ಪ್ರತಿಪಾದಕ-"ನಾವು ಮನುಷ್ಯನನ್ನು ಕಡೆಗಣಿಸಿ ಸಮಾಜಕ್ಕೆ ಅಧಿಕ ಮಹತ್ವವನ್ನು ಕೊಟ್ಟಿರುವುದೇ ನಮ್ಮ ದೊಡ್ಡ ಪ್ರಮಾದ. ಮನುಷ್ಯನನ್ನು ನಾವು ಸಣ್ಣವನನ್ನಾಗಿಸಿ, ಸಮಾಜವನ್ನೇ ಭೂತಾಕಾರವಾಗಿ ಬೆಳೆಸಿಕೊಂಡಿದ್ದೇವೆ. ಫಲಸ್ವರೂಪವಾಗಿ ಮನುಷ್ಯನ ಉನ್ನತಿಯ ಸಾಧನವಾಗಿ ಸಮಾಜ ರೂಪುಗೊಳ್ಳುವ ಬದಲು, ಪಂಜರದಂತೆ ಅವನನ್ನು ನೆರೆಯುಟ್ಟಿದೆ. ನಮ್ಮ ನಿರುಪಾಯ ದೌರ್ಬಲ್ಯಕ್ಕೆ ಇದೇ ಕಾರಣ. ಮನುಷ್ಯನನ್ನು ಹೃದಯದಲ್ಲಿ ಸದಾ ಅಂತರ್ಯಾಮಿಯು ನೆಲಸಿರುವ ಆ ಮನುಷ್ಯನನ್ನು—ದೊಡ್ಡವನಾಗಿ ಮಾಡುವುದರಲ್ಲಿಯೇ ನಮ್ಮ ಶಕ್ತಿ ಸಾಮರ್ಥ್ಯಗಳಿವೆ." ಇದೇ ಸಂತ ಕಗಾವಾ ಲೋಕಕ್ಕೆ ನೀಡುವ ಅಮರ ಸಂದೇಶದ ಸ್ವರೂಪ.

❀

[illegible] ಮಹಾ ಯುದ್ಧದ ಬಳಿಕ ಜಪಾನೀ ಸೇನೆಗಳು ಆತ್ಮ ಸಮರ್ಪಣವನ್ನು ಮಾಡಿದವು. ಇದು ವೀರ ಯೋಧರಾದ ಜಪಾನೀಯರ ಪರಾಜಯ ಮಾತ್ರವಾಗಿರಲಿಲ್ಲ-ದೇವತ್ವದ ಜಂಭ ಕೊಚ್ಚಿಕೊಳ್ಳುತಿದ್ದ ಸಮ್ರಾಟ ಹೀರೋ ಹಿಟೋ ಅನುಭವಿಸಿದ ವ್ಯಕ್ತಿಗತ ಸೋಲೆಂದರೂ ಸಲ್ಲುವುದು. ತನ್ನ ದೇಶದಲ್ಲಿ ಭಗವಂತನ ಅವತಾರವೆಂದೇ ತಿಳಿಯಲ್ಪಡುತಿದ್ದ ಆ ಮಹಾನುಭಾವ ತನ್ನ ದೈವೀ ಪದವಿಯನ್ನೂ ಸಿಂಹಾಸನವನ್ನೂ ತ್ಯಜಿಸಿ ಸಾಮಾನ್ಯ ನಾಗರಿಕರ ಸಾಲಿನಲ್ಲಿ ಬಂದು ನಿಂತುಕೊಳ್ಳುವಂತೆ ಅಂದಿನ ಘಟನೆ ಮಾಡಿತು- ಜಪಾನಿನ ಸಮ್ರಾಟನು ಅಂದು ದೂರ ದರ್ಶಿತ್ವದಿಂದ ನಡೆದುಕೊಳ್ಳದಿರುತಿದ್ದರೆ, ಅದರ ಪರಿಣಾಮ ಅತ್ಯಂತ ಭೀಕರವಾಗುತಿತ್ತೆನ್ನುವುದರಲ್ಲಿ ತಿಲಾಂಶವೂ ಸಂದೇಹವಿಲ್ಲ. ಸಮಸ್ತ ಪ್ರಬುದ್ಧ ಸಮಾಜವು ಈ ಮುಂದಾಲೋಚನೆಯನ್ನು ಮೆಚ್ಚಿ ಇಂದು ಕೊಂಡಾಡುತ್ತದೆ. ಆದರೆ ಜಪಾನು ದೇಶದ ಸುಪ್ರಸಿದ್ಧ ಸಂತ ಕಗಾವಾರ ಬಲಯುತವಾದ ಪ್ರೇರಣೆಯ ಆಧಾರ ದೊರಕದಿರುತಿದ್ದರೆ ಚಕ್ರವರ್ತಿ ಹೀರೋ ಹಿಟೋ ಈ ಐತಿಹಾಸಿಕ ನಿರ್ಣಯವನ್ನು ಕೈಗೊಳ್ಳುತ್ತಿರಲಿಲ್ಲ. ಪರಿಸ್ಥಿತಿಯ ನಗ್ನ ಸ್ವರೂಪವನ್ನು ಕಂಡು ಕರ್ತವ್ಯವೇನೆಂಬುದನ್ನು ತಿಳಿಯದೆ ದಿಙ್ಮೂಢನಾಗಿ ಕುಳಿತ ಹೀರೋ ಹಿಟೋ ಸಂತ ಕಗಾವಾರನ್ನು ಕರೆಸಿ, ಜಪಾನಿನ ಜನತೆಯ ವಾಸ್ತವಿಕ ಸ್ವಾಮಿಯಾಗಲು ತಾನೇನು ಮಾಡಲೆಂದು ಪರಾಮರ್ಶೆ ಕೇಳಿದಾಗ, ಕಗಾವಾ ಹೀಗೆಂದರು—"ಮಹಾ ಸ್ವಾಮಿ, ಪ್ರಜೆಗಳ ಹೃದಯದಲ್ಲಿ ನಿವಾಸಿಸುವಾತನೇ ನಿಜವಾದ ಅರಸನು. ಯಾವುದಾದರೊಂದು ರಾಷ್ಟ್ರದ ಉತ್ಕರ್ಷಕ್ಕೂ ಅಲ್ಲಿಯ ರಾಜನ ಪ್ರಜಾ ವಾತ್ಸಲ್ಯಕ್ಕೂ ಪ್ರತ್ಯಕ್ಷ ಸಂಬಂಧವಿದೆ. ತನ್ನ ಜನತೆಯ ನಿಜವಾದ ಸೇವಕನೆಂದು ತಿಳಿದುಕೊಳ್ಳುವ ರಾಜನೇ ವಸ್ತುತಃ ಜನತೆಯ ಸ್ವಾಮಿಯಾಗಿರುತ್ತಾನೆ." ಈ ಮಾನವವಾದೀ ದೃಷ್ಟಿಕೋಣವೇ ಸಂತ ಕಗಾವಾರ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ನೋಡಸಿಗುತ್ತದೆ. ಅವರು ರಾಜ್ಯ, ರಾಜ್ಯಾಧಿಕಾರಿ, ರಾಷ್ಟ್ರ, ರಾಜನೀತಿ ಇವೆಲ್ಲವನ್ನೂ ಮನುಷ್ಯನ ಕಲ್ಯಾಣದ ಸಾಧನ ಮಾತ್ರವೆಂದು ತಿಳಿಯುತ್ತಾರೆ; ಮತ್ತು ಮಾನವನಿಗೆ ಸರ್ವೋಚ್ಚ ಸ್ಥಾನವನ್ನು ಕೊಡುತ್ತಾರೆ. ಭಾರತೀಯ ವಿಚಾರ ಪರಂಪರೆಯಲ್ಲಿ ಮಾನವನನ್ನು ವಿರಾಟ್ ಸ್ವರೂಪಿಯೆಂದು ವರ್ಣಿಸುವ ಹಾಗೆ ಕಗಾವಾ ಸಹ ಮನುಷ್ಯನನ್ನು ಈಶ್ವರನ ಭೌತಿಕ ರೂಪವೆಂದು ಮನ್ನಿಸಿ, ಕರ್ಮ ಸದೃಶವಾದ ನದಿಯು ಅವನನ್ನು ನಾಲ್ಕೂ ದಿಕ್ಕಿನಿಂದ ಆವರಿಸಿ, ಕಲ್ಯಾಣ ಸಿಂಧುವಿನಿಂದಾವೃತನಾದ ಪುನೀತನನ್ನಾಗಿ ಮಾಡಲಿ ಎನ್ನುತ್ತಾರೆ.

ಗಾಂಧೀಜಿಯಂತೆ ಕಗಾವಾ ಸಹ ಜೀವನವನ್ನು ವಿಭಜಿಸುವುದಿಲ್ಲ. ಬದುಕನ್ನು ಅವಿಭಾಜ್ಯ ಅಂಗವನ್ನಾಗಿ ಕಗಾವಾ ಸ್ವೀಕರಿಸುತ್ತಾರೆ. ರಾಜನೀತಿ, ಅರ್ಥ ಶಾಸ್ತ್ರ, ಧರ್ಮ ಎಲ್ಲವನ್ನೂ ಜೀವನದಲ್ಲಿ ಪರಸ್ಪರ ಪೋಷಕಾಂಗಗಳಾಗಿ ಕಗಾವಾ ಭಾವಿಸುತ್ತಾರೆ. ಆದುದರಿಂದಲೇ ಅವರ ಬಾಳ್ವೆಯಂತೆ ರಾಜಕೀಯಕೂಡ ನಿಷ್ಕಲವೂ ಸ್ಪಷ್ಟವೂ ಆಗಿರುತ್ತದೆ. ಕಮ್ಯೂನಿಸ್ಟ ತತ್ವದ ಕೆಲವು ಅಂಶವನ್ನು ಅವರು ಮಾನವ ಕಲ್ಯಾಣ ಹಾಗೂ ಸಾಮಾಜಿಕ ಹಿತ ದೃಷ್ಟಿಯಿಂದ ಒಳ್ಳೆಯದೆನ್ನುತ್ತಾರೆ. ಪ್ರಾಚೀನ ವೇದಗಳು ಕೂಡ ಸಮಾನತೆಯ ಮಂತ್ರವನ್ನು ಜಪಿಸುತಿದ್ದುವೆಂಬುದು ಭಾರತೀಯ ವಿಚಾರಕರಿಗೆ ತಿಳಿದೇ ಇದೆ. "ವ್ಯಾವಹಾರಿಕ ಜೀವನ ದರ್ಶನವೆಂದು ಕಮ್ಯೂನಿಸಮ್ಮನ್ನು ತಿಳಿದುಕೊಳ್ಳುವ ಬದಲು- ಸಂಪೂರ್ಣವಾಗಿ ಮಾನವನೇ ನಿರ್ಮಿಸಿದ ವಿಕೃತಿ ಹಾಗೂ ಅಸಮಾನತೆಯ ಬೆಳಕಿನಲ್ಲಿ ಸಾಮಾಯಿಕ ಎಚ್ಚರಿಕೆ ಎಂದೇ ಅವನ್ನು ನಾನು ತಿಳಿಯುತ್ತೇನೆ. ಇಂದಿನ ಮನುಷ್ಯನು ತನಗೆ ತಾನೇ ಭ್ರಷ್ಟಗೊಂಡಿರುವನೆಂದೂ ತನ್ನ ನೆರೆಯವನನ್ನು ಸಹೋದರನೆಂದು ತಿಳಿಯುವ ಭಾವನೆ ಅವನಲ್ಲಿ ಉಳಿದಿಲ್ಲವೆಂದೂ ಈ ಎಚ್ಚರಿಕೆ ಅರ್ಥವಿಸುತ್ತದೆ. ಮನುಷ್ಯನಲ್ಲಿರುವ ಜೀವತ್ವವು ಸಂಪೂರ್ಣ ಕ್ಷೀಣವಾಗಿರುತ್ತದೆ; ಮತ್ತದರ ಸ್ಥಾನದಲ್ಲಿ ಪಶುತ್ವ ತನ್ನ ಆಕ್ರಮಣವನ್ನು ಮಾಡತೊಡಗಿದೆ. ಪ್ರಾಯಶಃ ನಿಕಟ ಭವಿಷ್ಯದಲ್ಲಿಯೇ ಮಾನವನ ನಾಗರಿಕತೆ ಕೊಡಲಿಯೇಟಿಗೆ ಬಲಿಯಾದೀತೆಂದು ಭಯವುಂಟಾಗಿದೆ.... ಹೀಗಿದ್ದರೂ ಆತ್ಮಿಕ ವಿಕಾಸದ ದಿಸೆಯಲ್ಲಿ ಕಮ್ಯೂನಿಸಂ ಕೇವಲ ಅಸಫಲಗೊಂಡಿದೆ. ರಷಿಯಾದಲ್ಲಿ ಧರ್ಮ ಹಾಗೂ ಭಗವಂತನ ಮೇಲೆ ಹೇರಿದ ನಿರ್ಬಂಧವನ್ನು ನೋಡಿದರೆ, ಕಮ್ಯೂನಿಸಮ್ಮಿನಲ್ಲಿ ನೈತಿಕ ಶಕ್ತಿ ಕೇವಲ ಲುಪ್ತ ಪ್ರಾಯವಾಗಿರುವುದು ಗೋಚರಿಸುತ್ತದೆ." ಈ ಮಾತು ಸಂತ ಕಗಾವಾರ ಭಾವನೆ ಹೇಗೆ ಪರಿಯುಕ್ತದೆಂಬುದನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತದೆ. ಅವರು ಮಾನವತೆಯ ಪೂಜಾರಿಯಾದುದರಿಂದ, ಸೇವೆಗೆ ಅತ್ಯಂತ ಮಹತ್ವ ಕೊಡುವರು. ತನ್ನ ಜೀವನವನ್ನವರು ಇದಕ್ಕೋಸ್ಕರ

[೧೦ನೇ ಪುಟ ನೋಡಿ.]

The Canara Mutual Assurance Co., LTD.

Estd· 1935.]   [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಪಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಪಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫]   ಪ್ರಧಾನ ಕಾರ್ಯಾಲಯ: ಉಡುಪಿ. ದ ಭಾರತ



ರಾಮತೀರ್ಥ

ಬ್ರಾಹ್ಮಿ ತೈಲ

ಸ್ಟೆರಲ್ ನಂ ೧]   [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಧ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

SR

FAMOUS FOR QUALITY BEEDIES

ಎಸ್. ಆರ್.
ಉತ್ಕೃಷ್ಟವಾದ ಬೀಡಿಗಳೆಂದೆ
ಪ್ರಖ್ಯಾತಿಪಟ್ಟದ್ದು
ಇದಕ್ಕೆ ಗಿರಾಕಿಗಳು ದಿನೇ ದಿನೇ ಹೆಚ್ಚುತ್ತಿದೆ.

S. R. Beedi Works UDIPI S.K.

ಗುಜರಾಥದ ಬೆಂಗಾಡಿಗೆ ನೀರಿನ ಪೂರಯಿಕೆ

ಸೂರತ್ ಜಿಲ್ಲೆಯ ಕಕ್ರಪಾರಾ ಅಣೆಕಟ್ಟು

— ೧ —

ಕೆಲವು ದಿವಗಳ ಹಿಂದೆ ಕೇಂದ್ರ ಸರಕಾರದ ಯೋಜನಾ ಮಂತ್ರಿ ಶ್ರೀ ಗುಲಜಾರಿಲಾಲನಂದಾರು ಸೂರತ್ ಜಿಲ್ಲೆಯ ಮಾಂಡ್ವಿ ತಾಲೂಕಿನಲ್ಲಿ ತಾಪಿ ನದಿಗೆ ಅಡ್ಡಲಾಗಿ ಕಟ್ಟಿದ ಕಕ್ರಪಾರ ಅಣೆಕಟ್ಟನ್ನು ಉದ್ಘಾಟಿಸಿದರು. ಈ ಅಣೆಕಟ್ಟು ಗುಜರಾಥಿನ ವ್ಯವಸಾಯಾಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದೆಂದು ಪರಿಗಣಿಸಲ್ಪಟ್ಟಿರುತ್ತದೆ ದಕ್ಷಿಣದಲ್ಲಿ ತುಂಗಭದ್ರಾ ನದೀ ಯೋಜನೆಯಿಂದ ರಾಯಲಸೀಮೆ ಹಾಗೂ ಕನ್ನಡದ ಪ್ರದೇಶಗಳು ಸಂಪತ್ಸಮೃದ್ಧವಾಗಲು ಅವಕಾಶ ದೊರೆತಂತೆ ವಿಂಧ್ಯಾ ಪರ್ವತದ ತಪ್ಪಲಿನಿಂದ ಹರಿದುಬರುವ ಈ ನದಿಗೆ ಕಟ್ಟಿದ ಕಕ್ರಪಾರಾ ಅಣೆಕಟ್ಟು ಗುಜರಾಥದ ಶ್ರೇಯಸ್ಸನ್ನುಂಟುಮಾಡುತ್ತದೆ. ಸದ್ಯಕ್ಕೆ ಈ ಅಣೆಕಟ್ಟಿನ ಮೊದಲನೇ ಹಂತವಷ್ಟೆ ಮುಗಿದಿರುತ್ತದೆ ಈ ಪ್ರಥಮ ಘಟ್ಟದಲ್ಲಿ ಸೂರತ ಜಿಲ್ಲಾ ಪ್ರದೇಶದಲ್ಲಿ ನೀರು ೪೦ ಮೈಲು ಉದ್ದದವರೆಗೆ ಕಾಲುವೆಗಳ ಮೂಲಕ ಹರಿದು ಸುಮಾರು ಐವತ್ತು ಸಾವಿರ ಎಕ್ರೆ ಜಮೀನಿಗೆ ನೀರನ್ನು ಒದಗಿಸುತ್ತದೆ. ಈ ಯೋಜನೆಯ ಕೆಲಸವು ಸಂಪೂರ್ಣ ಮುಗಿದಾಗ, ೭೮೦ಮೈಲು ಉದ್ದದಷ್ಟು ಕಾಲುವೆ ಏರ್ಪಡುವುದು. ಇವುಗಳಲ್ಲಿ ಹರಿಯುವ ನೀರು ಗುಜರಾಥದ ೫,೬೩೦೦೦ಎಕ್ರೆ ಭೂಮಿಯನ್ನು ತಂಪಾಗಿಸಿ, ವ್ಯವಸಾಯಾಭಿವೃದ್ಧಿಗೆ ನೆರವಾಗುವುದು. ಆಗ ಇಡೀ ಗುಜರಾಥದಲ್ಲಿ ಈ ಕಾಲುವೆ ವ್ಯವಸ್ಥೆಯು ಅತ್ಯಂತ ದೊಡ್ಡದೆನಿಸುವುದು.

— ೨ —

ಈ ಯೋಜನೆಯಂತೆ ಪ್ರಾಮುಖ್ಯವಾದ ಅಣೆಕಟ್ಟನ್ನು ತಾಪಿನದಿಗೆ ಅಡ್ಡವಾಗಿ ಕಟ್ಟಿರುವರು. ಇದಲ್ಲದೆ ರಾಸಿಯಾ ಕಲ್ಲಿನ ಕಟ್ಟೆ ಮತ್ತು ಪ್ರಾಮುಖ್ಯವಾದ ಅಣೆಕಟ್ಟಿನಿಂದ ತುಸು ದೂರದಲ್ಲಿ ತಾಪಿಯ ಉಪನದಿಗಳಾದ ಪೋತೀಚೇರ್ ಮತ್ತು ನಾಸೀಕೇಂ'ಗಳಿಗೆ ಒಂದು ವಿಶಾಲವಾದ ಜಲಾಶಯ ಕಕ್ರಪಾರ ಯೋಜನೆಯಂತೆ ಏರ್ಪಡುತ್ತದೆ. ಪ್ರಾಮುಖ್ಯವಾದ ಜಲಾಶಯವು ೨೦೩೪ ಅಡಿ ಉದ್ದ ಹಾಗೂ ೪೫ ಅಡಿ ಆಳವಿದೆ. ಈ ಜಲಾಶಯವನ್ನು ಕೆಂಪು ಸಿಮೆಂಟಿನಿಂದ ರಚಿಸಿರುವರು ಈ ಜಲಾಶಯದ ಎಡಗಡೆ ಕಾಲುವೆಗೆ ಮೂರು ಸಾವಿರ ಕ್ಯೂಸೆಕು ಹಾಗೂ ಬಲಗಡೆ ಕಾಲುವೆಗೆ ೧ಸಾವಿರ ಕ್ಯೂಸೆಕು ನೀರು ೫೦ ಅಡಿ ಎತ್ತರದ ರೆಗ್ಯೂಲೇಟರುಗಳ ಮೂಲಕ ದೊರೆಯುವಷ್ಟು ಜಲಾಶಯದಲ್ಲಿ ನೀರು ಶೇಖರಗೊಳ್ಳಬಲ್ಲುದು ತಾಪಿ ನದಿಯು ನೆರೆ ನೀರಿನಿಂದ ಉಕ್ಕಿ ಹರಿದು ಬಂದಾಗಲೆಲ್ಲ ಈ ಜಲಾಶಯದ ಕೆಳಗಿನ ಅಸ್ತಿಭಾರದ ಮೇಲೆ ಸುಮಾರು ೨೮ ಅಡಿಗಳಗಳ ವರೆಗೆ ನೀರು ನಿಂತೀತೆಂದು ಎಣಿಸಿರುವರು. ಈ ನೆರೆಯ ರಭಸ ಬಹಳ ಹೆಚ್ಚಾಗಿರುವುದರಿಂದ ಇದನ್ನು ಯಶಸ್ವಿಯಾಗಿ ತಡೆಯಬಲ್ಲ ರೀತಿಯಲ್ಲಿಯೇ ಅಣೆಕಟ್ಟನ್ನು ರಚಿಸಲಾಗಿದೆ. ಈ ಮಾದರಿಯನ್ನು ಉಪಯೋಗಿಸಿದುದರಿಂದ ಅತಿ ಹೆಚ್ಚು ನೀರನ್ನು ಶೇಖರಿಸಿಟ್ಟು, ಉಪಯೋಗಕ್ಕೆ ಗುರಿಪಡಿಸಲು ಅನುಕೂಲವಾಗಿದೆಯಲ್ಲದೆ, ಅತ್ಯಂತ ವೇಗದಿಂದ ಹರಿಯುವ ನೀರಿನ ಸೆಳೆತವನ್ನು ತಡೆಯಲು ಅನುವಾಗುವಂತೆ ಭದ್ರವಾದ ತಳಪಾಯವೂ ಏರ್ಪಟ್ಟಿದೆ.

— ೩ —

ಕಕ್ರಪಾರಾ ಯೋಜನೆಗೆ ಸುಮಾರು ೨೦ ಲಕ್ಷ ಘನ ಅಡಿ ಕಲ್ಲು ಮತ್ತು ೧೬೨೦೦೦ ಘನ ಅಡಿ ಸಿಮೆಂಟು ಉಪಯೋಗಿಸಲಾಯಿತು ಇದಕ್ಕೆ ಉಪಯೋಗಿಸಿದ ಎಲ್ಲ ವಸ್ತುಗಳ ನಿಯಂತ್ರಣವನ್ನೂ ಸ್ವತಂತ್ರವಾಗಿ ಏರ್ಪಟ್ಟ ಪ್ರಯೋಗಶಾಲೆಯ ವಶಕ್ಕೆ ಕೊಟ್ಟಿದ್ದರು. ಪರಮಾವಧಿ ಪ್ರಮಾಣದಲ್ಲಿ ಕೆಲಸ ನಡೆಯುತ್ತಿದ್ದಾಗ ಸುಮಾರು ೩೦೦೦ ಮಂದಿ ಕೆಲಸಗಾರರು ಹಾಗೂ ೧೫೦ ಕಲ್ಲುಕುಟ್ಟಿಗರು ಈ ಯೋಜನೆಯ ಪೂರೈಕೆಗೆ ದುಡಿದರು. ತಾಪಿಯ ಉಪನದಿಗಳ ನೀರು ವ್ಯರ್ಥವಾಗದಂತೆ ಮತ್ತು ಮುಖ್ಯ ಜಲಾಶಯದಲ್ಲಿ ನೀರು ಯಾವಾಗಲೂ ಸಾಕಷ್ಟು ಶೇಖರಗೊಂಡಿರುವಂತೆ ನೋಡಿಕೊಳ್ಳಲು ಪೋತೀಚೇರ್ ಅಣೆಕಟ್ಟನ್ನು ರಚಿಸಿದರು ಈ ಅಣೆಕಟ್ಟು ತಾಪಿ ನದಿಯ ನೀರು ಹಿಂದಕ್ಕೆ ಸರಿಯುವುದನ್ನೂ ನಿಯಂತ್ರಿಸುತ್ತದೆ ೬೦ ಮೈಲು ಉದ್ದದ ಎಡಭಾಗದ ಕಾಲುವೆಗೆ ಯೋಗ್ಯರೀತಿಯಲ್ಲಿ ನೀರು ಪೂರೈಸಲ್ಪಡುವುದಕ್ಕೂ ಇದು ಉಪಯುಕ್ತವೆನಿಸಿದೆ. ಈ ಅಣೆಕಟ್ಟು ೨೭೦ ಅಡಿಯಷ್ಟು ಉದ್ದನಾಗಿಯೂ ೪೭ ಅಡಿ ಆಳವೂ ಇರುತ್ತದೆ. ಇಲ್ಲಿರುವ ಸಮತೋಲದ ಜಲಾಶಯ ಸುಮಾರು ನಾಲ್ಕು ಚದರ ಮೈಲುಗಳಷ್ಟು ವಿಸ್ತಾರವಾಗಿದೆ.

— ೪ —

ಮೊದಲೇ ಹೇಳಿದಂತೆ ಈ ವರ್ಷ ಕಕ್ರಪಾರಾ ಅಣೆಕಟ್ಟಿನ ಪ್ರಥಮ ಘಟ್ಟವಷ್ಟೇ ಮುಗಿದಿರುತ್ತದೆ. ತತ್ಪರಿಣಾಮವಾಗಿ ೫೦ ಸಾವಿರ ಎಕ್ರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಒದಗುವಂತೆ ೪೦ ಮೈಲುಉದ್ದದ ಕಾಲುವೆಯಲ್ಲಿ ನೀರು ಹರಿಯುತ್ತದೆ. ಯೋಜನೆ ಸಂಪೂರ್ಣ ಮುಗಿದಾಗ ೨೩೮ ಮೈಲು ಉದ್ದದ ಬಲಭಾಗದ ಕಾಲುವೆ ವ್ಯವಸ್ಥೆಯಿಂದ ೧೫೭೦೦೦ ಎಕ್ರೆ ಹಾಗೂ ೫೨೦ ಮೈಲು ದೀರ್ಘವಾದ ಎಡಗಡೆಯ ಕಾಲುವೆಯಿಂದ ೪೧೧೦೦೦ ಎಕ್ರೆ ಭೂಮಿ ನೀರುಣ್ಣುತ್ತದೆ. ಇವರಲ್ಲಿ ೫೦ ಸಾವಿರ ಎಕ್ರೆ ಜಮೀನಿಗೆ ವರ್ಷದ ಹನ್ನೆರಡೂ ತಿಂಗಳು ನೀರು ದೊರೆಯುತ್ತದೆ. ಉಳಿದ ಪ್ರದೇಶಕ್ಕೆ ಚಳಿಗಾಲದ ಬೆಳೆ ಬೆಳೆಯಲು ಅನುಕೂಲವಾಗುವಂತೆ ಹೊಸತಾಗಿ ನೀರಾವರಿ ಸೌಕರ್ಯ ದೊರೆಯುತ್ತದೆ. ಕಾಲುವೆ ನೀರಿನ ಪೂರೈಕೆಯಿಂದ ಒಟ್ಟಾರೆ ೧೬೦೦೦೦ ಟನ್ನುಗಳಷ್ಟು ಆಹಾರಧಾನ್ಯಗಳೂ ೬೬೦೦೦ ಟನ್ನುಗಳಷ್ಟು ಹತ್ತಿಯೂ ಅಧಿಕ ಉತ್ಪಾದನೆ ಹೊಂದುವದೆಂದು ತಿಳಿದಿದೆ. ಸೂರತ್ ಜಿಲ್ಲೆಯ ಈ ಪ್ರದೇಶವು ವ್ಯವಸಾಯಾಭಿವೃದ್ಧಿಗೆ ಅತ್ಯಂತ ಯೋಗ್ಯವಾಗಿರುತ್ತದೆನ್ನುವ ಸಂಗತಿಯು ಇಲ್ಲಿ ನಡೆದ ಮಣ್ಣಿನ ಪರಿಶೋಧನೆಯಿಂದ ದೃಢಪಟ್ಟಿರುತ್ತದೆ. ಹೆಚ್ಚಾಗಿ ಇಲ್ಲಿ ಕಪ್ಪು ಮಣ್ಣು ಕಾಣಿಸುತ್ತದೆ. ಇದರಲ್ಲಿ ಗೊಬ್ಬರದ ಅಂಶಗಳು ಯಥೇಷ್ಟ, ಇದರಿಂದೂ ಕಾಲ್ಸಿಯಂ ಕಾರ್ಬೋನೇಟ್ ಎಂಬ ರಾಸಾಯನಿಕ ದ್ರವ್ಯವೂ ಹೇರಳವಾಗಿದೆಯೆಂದೂ ಗೊತ್ತಾಗಿದೆ. ಕಾಲುವೆಯ ಪಶ್ಚಿಮ ಭಾಗದ ಪ್ರದೇಶದಲ್ಲಿ ಮಣ್ಣು ಕಪ್ಪು ಕೆಂಪು ಮಿಶ್ರಿತವಾಗಿದೆಯೆಂದು ಮಣ್ಣಿನ ಸರ್ವೆ ತಿಳಿಸುತ್ತದೆ ಹೀಗಿರುವುದರಿಂದ ಸಾಕಷ್ಟು ಹೆಚ್ಚು ನೀರನ್ನು ಪೂರೈಸಿದ ಪಕ್ಷದಲ್ಲಿ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕೆ ಇಲ್ಲಿಯ ನೆಲ ---- ಯೋಜನ ಕಾರಿಯಾಗಿದೆ. ಮುಖ್ಯವಾಗಿ ಭತ್ತ ಗೋಧಿ, ಕಬ್ಬು ಮತ್ತು ಹೊಗೆಸೊಪ್ಪನ್ನೂ ಸಾಮಾನ್ಯವಾಗಿ ಹತ್ತಿಯನ್ನೂ ಸೂರತ್ ಜಿಲ್ಲೆಯ ಈ ಕಾಲುವೆ ಪ್ರದೇಶದಲ್ಲಿ ಬೆಳೆಯಬಹುದು ಈ ರೀತಿ ಭಾರತವನ್ನು ಉನ್ನತ ಸ್ಥಿತಿಗೆ ಏರಿಸುವ ಜನತಾ ಸರಕಾರದ ಪ್ರಯತ್ನಗಳು ಒಂದೊಂದಾಗಿ ರೂಪುಗೊಳ್ಳುತ್ತಿರುವುದನ್ನು ಕಂಡು ರಾಷ್ಟ್ರನಿಷ್ಠರಾದ ನಾಗರಿಕರಿಗೆ ಹೆಮ್ಮೆ ಎನಿಸುವುದು ನಿಶ್ಚಯ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಮಧುನಿಗಿಂತಲು ಮಧುರವಾದ ಕಥಾ ಸಂಗ್ರಹ.

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಪಡಿಯಚ್ಚುಗಳಿವೆ.

„ಮಧುವನ"ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. „ನವಿಲುಗರಿ" „ಕಾಮನ ಬಿಲ್ಲು" ಎಂಬ ಸಂಗ್ರಹಗಳು ಹೊರಟರೂ ಅಲ್ಲಿ ಕಾಣಬಾರದ ಹೆಸರುಗಳ ಕೆಲವು „ಮಧುವನ"ದಲ್ಲಿ ನಮಗೆ ಪರಿಚಿತವಾಗಿ ಸಿಕ್ಕುತ್ತವೆ. „ಮಧುವನ"ದ ಸಂಪಾದಕರ ಕೆಲಸವು ಸಣ್ಣದಲ್ಲ. ದತ್ತು ಎಮ್ಮೆ ಹಾಲು ಕರೆದರೂ ಅದನ್ನು ಹೆಪ್ಪು ಹಾಕುವ ಹೊಣೆಯು ಅನವರವಾಗಿದೆ. ಅದನ್ನು ಎಲ್ಲರೂ ಒಪ್ಪುವಂತೆ ಕೊಡಿಸಿದ್ದಾರೆ. ಲೇಖಕ, ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಒರೆದ ವಿಮರ್ಶಾತ್ಮಕ ಟಿಪ್ಪಣಿಗಳು ಇವೆಲ್ಲ ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಬೆಲೆಯನ್ನು ಹೆಚ್ಚಿಸಿವೆ. ಕಲೆಯ ದೃಷ್ಟಿಯಿಂದ [illegible] ಕಥಾಸಂಗ್ರಹವಾಗಿದೆ.

— ವಿ. ಕೃ. ಗೋಕಾಕ.

ಬಿಳಿ ಕಾಗದ ಆಕರ್ಷಕ [illegible]. ಬೆಲೆ ರೂ ೨—೦—೦.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತವೆ.

ZANDU ಝಂಡೂ ಫಾರ್ಮಸಿಯ ಮನೆಮದ್ದುಗಳನ್ನೇ ಸದಾ ಉಪಯೋಗಿಸಿರಿ.

ಝಂಡೂ ಬ್ರಾಹ್ಮೀ ಹೇರ್ ಆಯಿಲ್ Zandu Brahmi Hair Oil — ಮೆದುಳಿಗೆ ತಂಪು- ಮನಸ್ಸಿಗೆ ಉಲ್ಲಾಸವೀಯುವುದು.
1 ಪೌಂಡಿಗೆ ರೂ. 3-8-0 ಕಾಲು ರಾತ್ಲಿಗೆ ರೂ. 1·

ಝಂಡೂ ಸರಸಪರಿಲ್ಲಾ Zandu Sarasaparilla — ರಕ್ತವನ್ನು ಶುದ್ಧಗೊಳಿಸಲು ಹೆಸರುವಾಸಿಯಾದುದು. ಚರ್ಮರೋಗಗಳನ್ನು ಗುಣಪಡಿಸಬಲ್ಲುದು. 4 ಔನ್ಸ್ ಬಾಟ್ಲಿ 1ರ ರೂ. 1-5-0

Zandu Zuvi Drops ಝಂಡೂ ಜ್ವುವಿ ಡ್ರೋಪ್ಸ್ — ಮಕ್ಕಳ ಪ್ರಕೃತಿ ಸಂರಕ್ಷಣೆಗೆ ಅವಶ್ಯವಾಗಿರುವ ಆಹಾರ ಸತ್ವ.
10 ಸಿ. ಸಿ. ಸೀಸೆಯ ಬೆಲೆ- ರೂ. 2-12-0

ದಕ್ಷಿಣಕನ್ನಡದಲ್ಲಿ ನಮ್ಮ ಸ್ಟಾಕಿಸ್ಟರು:—
ಮಂಗಳೂರು: ಶಾ ಕಂಪೆನಿ, ಹಂಪನಕಟ್ಟೆ.
ಉಡುಪಿ: ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್.
ಇಂಟರ್ನ್ಯಾಷನಲ್ ಲಿಮಿಟೆಡ್.
ಕಾರ್ಕಳ: ವಿ. ವಿ. ಶೆಣೈ ಮತ್ತು ಕಂಪೆನಿ.
ಪುತ್ತೂರು: ಪೈ ಫಾರ್ಮಸಿ.
ತಿರುವಾಂಕೂರು ಮತ್ತು ಕೊಚ್ಚಿ ಏಜಂಟರು:
ಧಿರಾಜ್‌ಲಾಲ್ ಬ್ರದರ್ಸ್, ನ್ಯೂ ರೋಡು, ಮಟ್ಟಂಚೇರಿ, ಕೊಚ್ಚಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನೆರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.
ಬೆಲೆ ರೂ. 5—6—0
ನವಭಾರತ ಬುಕ್ ಡಿಪ್ಪೊ, ಉಡುಪಿ
ನವಯುಗ ಪ್ರೆಸ್, ಉಡುಪಿ.

ಆಂಧ್ರ ರಾಜ್ಯ ವಿಧೇಯಕದ ಮೇಲೆ ತೀವ್ರ ಚರ್ಚೆ

ಬಳ್ಳಾರಿಯ ಪ್ರಶ್ನೆಯನ್ನು ಮರಳಿ ಎತ್ತಲಾಗದೆಂದು ಮೈಸೂರಿ. ಮುಖ್ಯಮಂತ್ರಿಗಳ ಬಿನ್ನಹ

ಶಾಸನ ಸಭಾಧಿವೇಶನ

ಮದ್ರಾಸು ಶಾಸನ ಸಭೆಯು ಆಂಧ್ರ ರಾಜ್ಯ ವಿಧೇಯಕವನ್ನು ಪರಿಶೀಲಿಸುವುದಕ್ಕೋಸ್ಕರ ದಿನಾಂಕ ೧೪ರಂದು ಸಭೆಸೇರಿ ತನ್ನ ಕೆಲಸವನ್ನು ಮುಂದುವರಿಸುತ್ತಿದೆ. ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು. ಶಾಸನಸಭೆಯು ಮುಂದೆ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವ ಸೂಚನೆ ಮಂಡಿಸಿ, ಆಂಧ್ರರ ಬಹುದಿನಗಳ ಆಕಾಂಕ್ಷೆಯು ನೆರವೇರುತ್ತಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿದರು ಇಂದಿನವರೆಗೆ ಸಹೋದರರೀತಿ ಒಂದುಗೂಡಿ ಬಾಳಿದವರು ಬೇರೆಯಾಗುತ್ತಿರುವ ಪರಿಸ್ಥಿತಿಯಲ್ಲಿ ನಾವೆಲ್ಲರೂ ವೈಮನಸ್ಯವನ್ನು ಮರೆತು ಸಹಕರ್ಷ ಆಗಲಬೇಕೆಂದು ರಾಜಾಜಿಯವರು ಕೇಳಿಕೊಂಡರು. ಸಭೆಯು ಆಂಧ್ರರಾಜ್ಯ ವಿಧೇಯಕವನ್ನು ಒಡನೆಯೇ ಚರ್ಚೆಗೆ ತೆಗೆದುಕೊಂಡಿತು. ಸುಮಾರು ೨೮೦ ತಿದ್ದುಪಡಿಗಳನ್ನು ಸದಸ್ಯರು ಸೂಚಿಸಿರುವರೆಂದು, ಶಾಸನ ಸಭಾಧ್ಯಕ್ಷ ಶ್ರೀ. ಶಿವಷಣ್ಮುಗಂ ಪಿಳ್ಳೆಯವರು ಪ್ರಕಟಪಡಿಸಿದರು. ಈ ತಿದ್ದುಪಡಿಗಳ ಆಶಯವು ಆಂಧ್ರ ರಾಜ್ಯ ರಚನೆಗೆ ವಿರೋಧವನ್ನುಂಟುಮಾಡುವುದಿಲ್ಲ - ಸಾಮಾನ್ಯವಾಗಿ ಎಲ್ಲ ಸದಸ್ಯರೂ ಹೊಸ ರಾಜ್ಯವನ್ನು ನಿರ್ಮಿಸುತ್ತಿರುವುದನ್ನು ಸ್ವಾಗತಿಸಿರುವರು. ಒಳ್ಳೆಯದಕ್ಕೆಯೇ ಇರಲಿ, ಕೆಟ್ಟದೇ ಆಗಲಿ-ಆಂಧ್ರರ ಪ್ರಯತ್ನಗಳು ಮೂರ್ತಿಭವಿಸುತ್ತಿರುವುದನ್ನು ಕಂಡು ತೃಪ್ತಿದಾಯಕವಾದ ಅಭಿಪ್ರಾಯವೇ ವ್ಯಕ್ತಗೊಳಿಸಲಾಯಿತು. ಈ ತಿದ್ದುಪಡಿಗಳು ಮಸೂದೆಯ ಸ್ವರೂಪವನ್ನು ಕಿಂಚಿತ್ ಪರಿವರ್ತಿಸಲು ನೋಡುತ್ತಿವೆ ಎನ್ನಬಹುದು -ಉದಾಹರಣೆಗೆ ತಮಿಳುನಾಡು, ಮೈಸೂರು. ಹೈದರಾಬಾದು, ಮಧ್ಯಪ್ರದೇಶ ಹಾಗೂ ಒಡಿಸಾಗಳಲ್ಲಿರುವ ತೆಲುಗು ಪ್ರದೇಶಗಳನ್ನು ಆಂಧ್ರರಾಜ್ಯದಲ್ಲಿ ಸೇರಿಸಬೇಕೆಂದು ಬಂದು ತಿದ್ದುಪಡಿ ಹೇಳುತ್ತದೆ. ಆಂಧ್ರ ರಾಜ್ಯ ನಿರ್ಮಾಣ ಪ್ರಶ್ನೆಯ ಹಿನ್ನೆಲೆಯನ್ನು ವಿವೇಚಿಸಿದಲ್ಲಿ- ಇದು ಸಮಂಜಸವಾದ ತಿದ್ದುಪಡಿಯಲ್ಲವೆಂಬುದು ಸ್ಪಷ್ಟಗೊಳ್ಳುತ್ತದೆ. ಪ್ರಧಾನಿ ನೆಹರೂರವರು ನಿರ್ವಿವಾದ ಮದ್ರಾಸು ರಾಜ್ಯದ ತೆಲುಗು ಪ್ರದೇಶಗಳಿಂದ ಆಂಧ್ರ ರಾಜ್ಯವನ್ನು ನಿರ್ಮಿಸಲು ಭಾರತ ಸರಕಾರ ನಿರ್ಧರಿಸಿರುವುದೆಂದು ಈ ಮುಂಚೆ ಹೇಳಿದ್ದರು, ಮತ್ತು ಸದ್ಯದ ಮಸೂದೆ ಪ್ರಧಾನಿಗಳ ಈ ಹೇಳಿಕೆಯನ್ನು ಕಾರ್ಯರೂಪಕ್ಕೆ ಇಳಿಸುವುದಕ್ಕಾಗಿಯೇ ಇರುತ್ತದೆ.

ಬಳ್ಳಾರಿಯ ಪ್ರಶ್ನೆ

ಇದರಂತೆ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಬೇರೆ ತಿದ್ದುಪಡಿಗಳಿಗೂ ವಿಧೇಯಕದಲ್ಲಿ ಸ್ಥಾನವಿರುವುದಿಲ್ಲ. ಇವುಗಳು ರಾಜ್ಯಗಳ ಪುನಃ ರಚನೆಯ ವಿಷಯಕ್ಕೆ ಸಂಬಂಧಿಸಿರುವುದರಿಂದ, ಈ ವಿಧೇಯಕದ ಕಕ್ಷೆಯಲ್ಲಿ ಬರಲಾರವೆಂದು ರಾಜಾಜಿಯವರು ಸ್ಪಷ್ಟೀಕರಣವನ್ನು ಕೊಟ್ಟರು.

ಶ್ರೀ ಪ್ರಕಾಶಮರು ಬಳ್ಳಾರಿಯು ಆಂಧ್ರ ರಾಜ್ಯದಲ್ಲಿ ಸೇರ್ಪಡೆ ಹೊಂದಬೇಕೆಂದು ತಿದ್ದುಪಡಿ ಮಂಡಿಸಿದರೆ – ಬಳ್ಳಾರಿಯ ಕನ್ನಡ ಪ್ರತಿನಿಧಿ ಶ್ರೀ ಇಜಾರಿ ಶಿರಸಪ್ಪನವರ ಇಡೀ ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಸೇರಿಸಬೇಕೆಂದು ಸೂಚಿಸಿದರು. ಈ ಪ್ರಶ್ನೆಯನ್ನು ನಾವು ವಿವೇಕಶೀಲರಂತೆ ನೋಡಬೇಕೇ ಹೊರತು ವಿಕಾರವಶರಾಗಿ ಯಾವುದೊಂದೂ ನಿರ್ಣಯವನ್ನು ಕೈಗೊಳ್ಳಬಾರದೆಂದು ನೆನಪಿನಲ್ಲಿಟ್ಟುಕೊಳ್ಳಬೇಕು ಈ ದೃಷ್ಟಿಯಿಂದ ನೋಡಿದರೆ ಬಳ್ಳಾರಿಯ ಪ್ರಶ್ನೆಯನ್ನು ಇನ್ನೂ ಇನ್ನೂ ಕೆದಕುವುದು ಆಂಧ್ರರಿಗಷ್ಟೇ ಅಲ್ಲ. ಕನ್ನಡಿಗರಿಗೂ ಭೂಷಣವಲ್ಲ. ಭಾರತ ಸರಕಾರವು ನಿಷ್ಪಕ್ಷಪಾತವಾದ ನಿರ್ಣಯವನ್ನು ಕೊಡಬಲ್ಲ ಹೈಕೋರ್ಟು ನ್ಯಾಯಾಧೀಶರೊರ್ವರಿಂದ ಬಳ್ಳಾರಿಯ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲನೆಗೆ ಗುರಿಮಾಡಿಸಿದೆ; ಮತ್ತು ಈ ನ್ಯಾಯಮೂರ್ತಿಗಳ ಮುಂದೆ ಕನ್ನಡಿಗರೂ ತೆಲುಗರೂ ತಮ್ಮ ಪಕ್ಷವನ್ನು ಮಂಡಿಸಲು ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಟ್ಟಿದೆ. ಸಂಬಂಧಿಸಿದ ಎಲ್ಲ ಸಂಗತಿಗಳ ಪರಿಶೀಲನೆಯ ಬಳಿಕ ನ್ಯಾಯಮೂರ್ತಿ ಮಿಶ್ರಾರು ಬಳ್ಳಾರಿ ತಾಲೂಕನ್ನು ಮೈಸೂರಿಗೆ ಸೇರ್ಪಡೆಮಾಡಬೇಕೆಂದು ತೀರ್ಪು ಹೇಳಿರುವರು. ಇದನ್ನು ಇಕ್ಕಡೆಯವರು ಒಪ್ಪಿಕೊಂಡು, ಸ್ನೇಹ ಹಾಗೂ ಸೌಹಾರ್ದತೆಯನ್ನು ತೋರಿಸುವುದೇ ಸಭ್ಯ ನಡವಳಿಕೆಯಲ್ಲದೆ ತಮ್ಮ ಇಷ್ಟಾರ್ಥ ನೆರವೇರಲಿಲ್ಲವೆಂದು ವಾದ ಮುಂದುವರಿಸುವುದು ಚಂದವಲ್ಲ. ಮೈಸೂರು ಶಾಸನಸಭೆಯು ಮುಂದೆ ಆಂಧ್ರ ರಾಜ್ಯ ವಿಧೇಯಕವು ಚರ್ಚೆಗೆ ಬಂದಕಾಲದಲ್ಲಿ, ಮುಖ್ಯಮಂತ್ರಿ ಶ್ರೀ. ಹನುಮಂತಯ್ಯನವರು ಈ ಮಾತನ್ನು ನಿರ್ಭೀತಿಯಿಂದ ಆಡಿತೋರಿಸಿರುವುದು ಒಳ್ಳೆಯದಾಯಿತು. ಬಳ್ಳಾರಿಯಲ್ಲಿ ಸರಕಾರೀ ಲೆಕ್ಕ ಪತ್ರಗಳು ತೆಲುಗಿನಲ್ಲಿಯೇ ಇಡಲ್ಪಟ್ಟಿರುತ್ತವೆ ಎಂಬ ಕಾರಣವನ್ನು ಮುಂದೆಮಾಡಿ ಶ್ರೀ. ಪ್ರಕಾಶಮರು ಬಳ್ಳಾರಿಯ ಮೇಲೆ ಆಂಧ್ರರಿಗಿರುವ ಹಕ್ಕನ್ನು ಸ್ಥಾಪಿಸಲೆತ್ನಿಸಿದರು. ಇದಕ್ಕೆ ಕನ್ನಡದ ಪ್ರತಿನಿಧಿಗಳು ಸಮರ್ಪಕವಾದ ಉತ್ತರ ಕೊಟ್ಟರು. ಸರಕಾರೀ ಲೆಕ್ಕಪತ್ರದ ಭಾಷೆಯೊಂದೇ ನಿರ್ಣಾಯಕ ಸಂಗತಿಯಾಗುವ ಪಕ್ಷದಲ್ಲಿ ಇಂಗ್ಲಿಷಿನಲ್ಲಿ ಲೆಕ್ಕಪತ್ರವಿಡುವ ಮದ್ರಾಸು ರಾಜ್ಯವು ಎಂಗ್ಲೆಂಡಿನೊಂದಿಗೆ ಕೂಡಬೇಕಾದೀತೆಂದವರು ವಾದಕ್ಕೆ ಪ್ರತಿವಾದ ಕೊಟ್ಟರು.

ಕರ್ನಾಟಕ ಏಕೀಕರಣ

ನೆಹರೂರವರ ಗಡಿಸಮಿತಿಯನ್ನು ನೇಮಿಸುವ ಆಶ್ವಾಸನವನ್ನು ಕೊಟ್ಟಿರುವುದರಿಂದ ಬಳ್ಳಾರಿಯ ಪ್ರಶ್ನೆಯನ್ನು ಆದರ ಮುಂದೆ ಪುನಃ ಎತ್ತಬೇಕೆನ್ನುವ ದೃಢ ನಿರ್ಧಾರವನ್ನು ಆಂಧ್ರರು ಮಾಡಿರುವಂತಿದೆ. ಆದರೆ ನಮಗೆ ತೋರುವುದೇನೆಂದರೆ ಬಳ್ಳಾರಿಯ ಪ್ರಶ್ನೆಯನ್ನು ಇನ್ನೊಮ್ಮೆ ವಿಚಾರಿಸುವ ಗೊಡವೆಗೇ ಭಾರತ ಸರಕಾರ ಹೋಗಬಾರದು. ಗಡಿನಿರ್ಣಯ ಸಮಿತಿಯು ಮಾಡುವ ತೀರ್ಮಾನಗಳು ಎಲ್ಲರಿಗೂ ಮಾನ್ಯವಾಗಬೇಕು. ರಾಜಾಜಿ ಹೇಳಿದಂತೆ ಈ ಸಮಿತಿ ತಪ್ಪು ನಿರ್ಣಯವನ್ನೇ ಕೊಟ್ಟಿತೆಂದರೂ ಅದನ್ನು ನಿಷ್ಪೃಹತೆಯಿಂದ ನಾವೆಲ್ಲರೂ ಸ್ವೀಕರಿಸಬೇಕು. ಗಡಿ ಪ್ರದೇಶದ ಜನರಿಗೆ ಅನ್ಯಾಯವಾಗುವ ಪ್ರಶ್ನೆ ಇಲ್ಲಿರುವುದಿಲ್ಲ. ಸಾಮಾನ್ಯವಾಗಿ ಇಲ್ಲಿಯ ಜನರಿಗೆ ಯಾವ ರಾಜ್ಯ ಸರಕಾರ ತಮ್ಮ ಯೋಗಕ್ಷೇಮ ವಿಚಾರಿಸಿದರೂ ಒಂದೇ ಎಂಬಂತಿದೆ. ರಾಜಕೀಯ ದುರುದ್ದೇಶಗಳನ್ನು ಮುಂದಿಟ್ಟುಕೊಂಡು ನಾವು ಈ ವಿಷಯದಲ್ಲಿ ಅನಾವಶ್ಯಕ ಕಚ್ಚಾಟಗಳನ್ನು ತೊಡಗಬಾರದು. ಇನ್ನು ಆಂಧ್ರರಾಜ್ಯ ನಿರ್ಮಾಣದ ಸಂಗತಿಗಿಂತಲೂ ಅತ್ಯಾವಶ್ಯಕವೆಂದು ಧರ್ ಸಮಿತಿಯೇ ಹೇಳಿದ್ದ ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ವಿಚಾರಿಸುವುದಾದರೆ- ಮೈಸೂರಿನೊಡನೆ ಬಳ್ಳಾರಿ ಜಿಲ್ಲೆಯ ಬಹ್ವಂಶ ಸಮಾವೇಶಗೊಳ್ಳುತ್ತಿರುವುದು ಏಕೀಕರಣದ ಶುಭ ಸೂಚನೆ ಎನ್ನುವ ಅಭಿಪ್ರಾಯವನ್ನು ಮೈಸೂರಿನ ಶಾಸನ ಸಭಾ ಸದಸ್ಯರು ವ್ಯಕ್ತಗೊಳಿಸಿರುವರು. ಮದ್ರಾಸು ಶಾಸನ ಸಭೆಯ ಕನ್ನಡ ಪ್ರತಿನಿಧಿಗಳೂ ಭಾರತ ಸರಕಾರವು ಕರ್ನಾಟಕ ರಾಜ್ಯ ರಚನೆಯನ್ನು ಬೇಗನೇ ವಿಚಾರಿಸುವುದೆಂದು ಆಶಿಸಿರುವರು. ದಕ್ಷಿಣ ಕನ್ನಡದ ಶ್ರೀ ಕೊಳ್ಳೆಬೈಲರಂತೂ ಆಂಧ್ರ ರಾಜ್ಯ ವಿಧೇಯಕಕ್ಕೆ ಒಂದು ತಿದ್ದುಪಡಿ ಮಂಡಿಸಿ, ಮದ್ರಾಸು ರಾಜ್ಯದಲ್ಲಿ ಉಳಿಯುವ ಕನ್ನಡ ಪ್ರದೇಶಗಳನ್ನೆಲ್ಲ ಮೈಸೂರಿನೊಡನೆ ಸೇರಿಸಬೇಕೆಂದರು. ಈ ತಿದ್ದುಪಡಿಯು ಸದಾಶಯ ಪೂರ್ಣವಾಗಿದ್ದರೂ ಆಂಧ್ರ ರಾಜ್ಯ ವಿಧೇಯಕ ದಕ್ಷತೆಯಲ್ಲಿ ಬರುವುದಿಲ್ಲ: ಆದಕಾರಣವೇ ಇರಬೇಕು, ಮತದಾನ ನಡೆದಾಗ ಈ ತಿದ್ದುಪಡಿ ಬಿದ್ದುಹೋಯಿತು. ಇದೇನೇ ಇರಲಿ, ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ಆಂಧ್ರ ರಾಜ್ಯ ನಿರ್ಮಾಣದ ಒಟ್ಟಿಗೇ ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಭಾರತ ಸರಕಾರವನ್ನು ಒತ್ತಾಯಿಸುವುದು ನಮ್ಮ ಕರ್ತವ್ಯ.

ಅನಾವಶ್ಯಕ ಉಪದ್ರ

ಆಂಧ್ರ ರಾಜ್ಯ ವಿಧೇಯಕದ ಸಂಬಂಧದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಸ್ವತಂತ್ರ ಅಭಿಪ್ರಾಯವನ್ನು ವ್ಯಕ್ತಗೊಳಿಸುವ ಅವಕಾಶ ಮಾಡಿಕೊಟ್ಟಿದ್ದರು. ಮಂತ್ರಿ ಮಂಡಳದ ಸದಸ್ಯರೂ ಇದಕ್ಕೆ ಅಪವಾದವಾಗಿರಲಿಲ್ಲ. ರಾಯಲ ಸೀಮಾ ಅಭಿವೃದ್ಧಿ ಮಂಡಳಿಗೆ ಶ್ರೀ. ಸಂಜೀವರೆಡ್ಡಿಯವರನ್ನು ಸೇರಿಸಿಕೊಂಡ ಬಗ್ಗೆ ಕಮ್ಯೂನಿಸ್ಟ ಸದಸ್ಯರು ಸ್ಪಷ್ಟೀಕರಣ ಕೇಳಿದಾಗ, ರಾಜಾಜಿಯವರು ಶ್ರೀಮಾನ್ ರೆಡ್ಡಿಯವರು ನೂತನ ಆಂಧ್ರದ ಮುಖ್ಯಮಂತ್ರಿಗಳಾಗುವ ಸಂಭವ ಬಹಳ ಹೆಚ್ಚಿದೆ ಎಂಬುದರಿಂದ ಹಾಗೆ ಮಾಡಲಾಯಿತೆಂದರು. ಆಂಧ್ರರು ರಾಜಧಾನಿಯಾಗಿ ಚುನಾಯಿಸಿದ ಕರ್ನೂಲು ನಗರದ ಅಭಿವೃದ್ಧಿಗಾಗಿ ಕೇಂದ್ರ ಸರಕಾರವು ೪೦ ಲಕ್ಷ ರೂಪಾಯಿಗಳನ್ನು ಕೊಡಮಾಡಿರುತ್ತದೆ; ಈ ಹಣವನ್ನು ಯಾವ ರೀತಿ ಉಪಯೋಗಿಸಬೇಕೆಂಬುದನ್ನು ವಿಶೇಷಾಧಿಕಾರಿಗಳು ನಿರ್ಣಯಿಸುವರು ಕೇಂದ್ರ ಸರಕಾರವು ಪೂರ್ವ ಪಂಜಾಬದ ಗವರ್ನರ ಶ್ರೀ ಚಂದೂಲಾಲ ತ್ರಿವೇದಿಯವರನ್ನು ಆಂಧ್ರ ರಾಜ್ಯ ನಿರ್ಮಾಣದ ಸಂಗತಿಯಲ್ಲಿ ಅವಶ್ಯವಿರುವ ವ್ಯವಸ್ಥೆಗಳನ್ನು ಮಾಡಲು ವಿಶೇಷಾಧಿಕಾರಿಯಾಗಿ ನೇಮಿಸಿರುವುದು. ಶ್ರೀ ತ್ರಿವೇದಿಯವರು ಹಿಂದೆ ಒಡಿಸಾದ ಗವರ್ನರರಾಗಿಯೂ ಕೆಲಸ ಮಾಡಿದ್ದರು ನೂತನ ರಾಜ್ಯಕ್ಕೆ ಇವರ ಅನುಭವದಿಂದ ತುಂಬ ಪ್ರಯೋಜನ ದೊರಕುವುದೆಂದು ನಿರೀಕ್ಷಿಸಿ, ಈ ನೇಮಕ ಮಾಡಲಾಗಿದೆ. ಪ್ರಾಯಶಃ ಅಕ್ಟೋಬರ ೧ನೇ ದಿನಾಂಕ ಆಂಧ್ರ ರಾಜ್ಯ ಅಸ್ತಿತ್ವಕ್ಕೆ ಬಂದಾಗ, ತ್ರಿವೇದಿಯವರು ಅದರ ಗವರ್ನರರಾಗುವರು. ಆಂಧ್ರ ರಾಜ್ಯವು ಅವರ್ಗದ ರಾಜ್ಯವೆಂದು ವಿಧೇಯಕದಲ್ಲಿ ವರ್ಣಿಸಲ್ಪಟ್ಟಿದೆ. ಆದರೆ ಮೇಲ್ಮನೆಯನ್ನು ಮಾತ್ರ ಈ ರಾಜ್ಯ ಪಡೆದಿಲ್ಲ. ಈಚೆಗೆ ಪರಿಸೀಮನಾ ಆಯೋಗದವರು ತಮ್ಮ ಕೊನೆಯ ಶಿಫಾರಸುಗಳನ್ನು ಮಾಡಿದ್ದು ಅದರಂತೆ ಆಂಧ್ರ ರಾಜ್ಯದ ಶಾಸನ ಸಭಾ ಸದಸ್ಯರ ಸಂಖ್ಯೆ ೧೯೬ ಆಗುವುದು. ಇದ. ಆಂಧ್ರರನ್ನು ತೃಪ್ತಿಪಡಿಸುವಂತಿದೆ. ಹೀಗೆ ಮದ್ರಾಸು ರಾಜ್ಯವು ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದಾಗ, ಕೆಲವು

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ಕಾಶ್ಮೀರದ ಕಗ್ಗಂಟು ಬಿಡಿಸಲ್ಪಡುವ ಸಂಭವ

ಉಭಯ ರಾಷ್ಟ್ರಗಳ ತಂಟೆಯ ಮೂಲವನ್ನು ನಿವಾರಿಸಲು ಮಹಮ್ಮದಾಲಿಯವರ ಉತ್ಸಾಹ

ಉಪದ್ರವಗಳನ್ನು ಇದಿರಿಸಬೇಕಾಗಿ ಬಂದುದು ಸರಕಾರದ ದುರ್ದೈವ. ತಮಿಳು ನಾಡಿನಲ್ಲಿ ಏನಾದರೊಂದು ಉಪಟಳ ಕೊಡುವುದನ್ನೆ ಉದ್ದೇಶವಾಗಿಟ್ಟುಕೊಂಡಿರುವ ದ್ರಾವಿಡ ಪ್ರಗತಿಕ ಮಂಡಳವೆಂಬ ಸಂಸ್ಥೆಯು ಈ ಬಾರಿ ರಾಜಾಜಿಯವರು ಹೊಸತಾಗಿ ಜ್ಯಾರಿಗೆ ತಂದ ಪ್ರಾಥಮಿಕ ಶಿಕ್ಷಣ ಪದ್ಧತಿಯ ವಿರುದ್ಧ ಆಕ್ರೋಶವೆಬ್ಬಿಸಿ ಗಲಭೆ ಮಾಡಿತು. ಶಾಸನ ಸಭೆಯು ಈ ಶಿಕ್ಷಣ ಪದ್ಧತಿಯ ಯೋಗ್ಯತೆಯನ್ನು ವಿಮರ್ಶಿಸುವುದು ನಿರ್ಧಾರವಾಗಿದ್ದರೂ—ಈ ಮಂಡಳದವರು ಪುಂಡುತನ ನಡೆಸಿ, ಜನತೆಗೆ ಪೀಡೆ ಕೊಡುತ್ತಿರುವುದು ಶೋಚನೀಯ. ಇವರ ಉಪದ್ರ ಎಲ್ಲಿ ವರೆಗೆ ಬಂದು ಮುಟ್ಟಿತೆಂದರೆ ತೂತುಕುಡಿ ಹಾಗೂ ಡಾಲ್ಮಿಯಾ ನಗರಗಳಲ್ಲಿ ರೈಲು ಬಂಡಿಗಳನ್ನು ತಡೆಗಟ್ಟಿ, ಮತ್ತು ಇತರ ರೀತಿಗಳಲ್ಲಿ ಹಲ್ಲೆ ಮಾಡಿ, ಲಾಠೀ ಚಾರ್ಜು ಮತ್ತು ಗೋಳೀಬಾರಿಗೂ ಅವಕಾಶ ಮಾಡಿಕೊಟ್ಟರು. ಜನಸಂದಣಿಯ ಮೇಲೆ ಅನಿವಾರ್ಯವಾಗಿ ಗುಂಡು ಹಾರಿಸಬೇಕಾದ ಪ್ರಮೇಯ ಬಂದುದರಿಂದ- ನಾಲ್ಕೈದು ಮಂದಿ ಪ್ರಾಣಕ್ಕೆರವಾದರು. ಹತ್ತಿಪ್ಪತ್ತು ಮಂದಿ ಗಾಯಗೊಂಡರು. ಸರಕಾರವು ಈ ಗೋಳೀಬಾರಿನ ವಿಚಾರಣೆ ನಡೆಸಲು ಅಧಿಕಾರಿಗಳನ್ನು ನೇಮಿಸಿದೆ

ಕಲ್ಕತ್ತದಲ್ಲಿ ದುಷ್ಕೃತ್ಯ

ದಕ್ಷಿಣದಲ್ಲಿ ನಡೆದ ಈ ದುರಂತದೊಟ್ಟಿಗೆ ಪಶ್ಚಿಮ ಬಂಗಾಳದ ರಾಜಧಾನಿ ಕಲ್ಕತ್ತೆಯಲ್ಲಿ ಇನ್ನೊಂದು ಗೊಂದಲವೂ ನಡೆಯಿತು. ಕಲ್ಕತ್ತೆಯಲ್ಲಿ ಓಡಾಡುವ ಟ್ರ್ಯಾಮುಗಳ ದರವನ್ನು ಎರಡನೇ ವರ್ಗಕ್ಕೆ ಕಾಲಾಣೆಯಂತೆ ಏರಿಸಿದುದರಿಂದ, ಜನರು ಅಸಂತುಷ್ಟರಾದರು; ಮತ್ತು ತಮ್ಮ ಅಸಮಾಧಾನವನ್ನು ಗಲಭೆ ಹಾಗೂ ದೊಂಬಿಗಳ ಮೂಲಕ ವ್ಯಕ್ತಗೊಳಿಸಲು ನೋಡಿದರು. ಟ್ರ್ಯಾಮು ಬಂಡಿಗಳಿರಲಿ, ಸಾಮಾನ್ಯ ವಾಹನ ಸಂಚಾರಗಳ ಓಡಾಟಕ್ಕೂ ಇದು ವ್ಯತ್ಯಯವನ್ನುಂಟುಮಾಡಿತು. ಸಾರ್ವಜನಿಕ ಹರತಾಳಗಳು ಆಚರಿಸಲ್ಪಟ್ಟವು ಸಭೆ ಮೆರವಣಿಗೆಗಳು ಪರಿಸ್ಥಿತಿಯನ್ನು ಕೆಡಿಸುತ್ತಿರುವುದನ್ನು ಕಂಡು ಸರಕಾರವು ಅವುಗಳನ್ನು ಪ್ರತಿಬಂಧಿಸಿತು. ಇದನ್ನು ಮುರಿದವರ ಮೇಲೆ ಲಾಠೀ ಚಾರ್ಜು ಮಾಡಿದ್ದಲ್ಲದೆ—ಗುಂಡು ಹಾರಿಸುವವರೆಗೂ ಪರಿಸ್ಥಿತಿ ಕೆಟ್ಟು ಹೋಯಿತು. ಸರಕಾರದ ಒಪ್ಪಿಗೆಯನು ಪಡೆದುಕೊಂಡೇ ಟ್ರ್ಯಾಮು ಕಂಪೆನಿಯು ದರಗಳಲ್ಲಿ ಏರಿಕೆ ಜ್ಯಾರಿಗೆ ತಂದುದರಿಂದ ಎಲ್ಲರೂ ಸರಕಾರದ ಈ ಕ್ರಮವನ್ನು ನಿಷೇಧಿಸುವಂತಾಯಿತು. ಪರಿಸ್ಥಿತಿಯನ್ನು ಶಾಂತಗೊಳಿಸಲು ಸರಕಾರ ಮನಃಪೂರ್ವಕ ಪ್ರಯತ್ನಿಸಿದರೂ— ಜನರಿಗೆ ಕಿರುಕುಳಗಳು ತಪ್ಪಲಿಲ್ಲ. ಕೊನೆಗೆ ಸರಕಾರವು ಟ್ರ್ಯಾಮುದರಗಳನ್ನು ಏರಿಸಿದುದರ ನ್ಯಾಯಾನ್ಯಾಯ ವಿಮರ್ಶೆ ಮಾಡುವುದಕ್ಕೋಸ್ಕರ ಒಂದು ನ್ಯಾಯ ಮಂಡಳಕ್ಕೆ ಈ ವಿಷಯವನ್ನು ಒಪ್ಪಿಸಿಕೊಡುವಂತೆ ಟ್ರ್ಯಾಮು ಕಂಪೆನಿಯನ್ನು ಪ್ರೇರಿಸಿತು. ಟ್ರ್ಯಾಮು ಕಂಪೆನಿಯು ಇದಕ್ಕೆ ಒಪ್ಪಿದೆ; ಮತ್ತು ಏರಿಸಿದ ಟ್ರ್ಯಾಮು ದರವನ್ನು ಸದ್ಯಕ್ಕೆ ಜ್ಯಾರಿ ಮಾಡದೆ, ತಡೆ ಹಿಡಿದಿದೆ. ಸಾರ್ವಜನಿಕರಿಗೆ ತೊಂದರೆ ತಾಪತ್ರಯಗಳು ದರವನ್ನು ಏರಿಸಿದುದರಿಂದ ಆಗುವುದೆಂದುಕೊಂಡ, ಉದ್ವೇಶಕ್ಕೆ ಒಳಗಾಗಿ ಹಿಂಸಾಚಾರ ಹಾಗೂ ಗೊಂದಲಗಳನ್ನು ನಡೆಸುವದು ನಮಗೆ ಸರಿ ಕಾಣುವುದಿಲ್ಲ. ಈ ಪಟ್ಟಿಗೆ ಬಂಗಾಳಿಗಳಂಥ ಸ್ಫೂರ್ತಿಯುತ ಜನರಾಗಲೀ, ಭಾರತದ ಬೇರೆ ಭಾಗಗಳವರಾಗಲೀ ಹಿಂಸಾಚಾರವನ್ನು ಕೈಗೊಳ್ಳುವುದು ಗರ್ಹಣೀಯವಾಗಿದೆ. ಭಾರತವು ಶಾಂತತೆಗಾಗಿ ಹೋರಾಡುವ ರಾಷ್ಟ್ರವೆಂದು ಲೋಕವೇ ನಮ್ಮನ್ನು ಆಶಾಪೂರ್ಣ ದೃಷ್ಟಿಯಿಂದ ನಿರೀಕ್ಷಿಸುತ್ತಿರುವಾಗ-ನಾವು ಗೃಹಸೌಖ್ಯವನ್ನು ಕೆಡಿಸುವ ಈ ಗೊಂದಲ-ಗಲಭೆಗಳಲ್ಲಿ ಮನಸ್ಸು ಹಾಕಲಾಗದು. ಜನತೆಗೆ ಬಂದೊದಗುವ ಕಷ್ಟಗಳ ನಿವಾರಣೆಗೆ ನ್ಯಾಯಬದ್ಧವಾದ ಮಾರ್ಗವು ಸ್ವತಂತ್ರ ಭಾರತದಲ್ಲಿ ಯಾವ ಕಾಲಕ್ಕೂ ತೆರೆದಿರುತ್ತದೆ. ತನ್ಮೂಲಕ ಜನತೆ ತನ್ನ ಆಶೋತ್ತರಗಳನ್ನು ಈಡೇರಿಸಿಕೊಳ್ಳಬೇಕೇ ಹೊರತು- ಶಾಂತ ವಾತಾವರಣವನ್ನು ಭಂಗಿಸುವ ದುಷ್ಟ ಕೃತ್ಯಗಳಿಗೆ ಕೈಹಾಕಬಾರದು.

ನೆಹರೂರ ಹಿತವಾದ

ಈ ಮಾತನು ಅಲ್ಲಹಾಬಾದು ಹಾಗೂ ಲಖನೋಗಳಲ್ಲಿ ಪ್ರಧಾನಿ ನೆಹರೂಗಳು ಮಾಡಿದ ಭಾಷಣದಲ್ಲಿ ಅವಶ್ಯವಾಗಿ ಪ್ರಸ್ತಾಪಿಸಿದ್ದರು. ಭಾರತದ ಘನತೆಯನ್ನು ಕೆಡಿಸುವ ಮತ್ತು ಆದರ ಗೌರವವನ್ನು ಹಾಳುಮಾಡುವ ಇಂಥ ಕೆಲಸವನ್ನು ನಾವು ಮಾಡಬಾರದೆಂದು ನೆಹರೂ ವಿನಂತಿಸಿದರು. ನೆಹರೂರವರು ಸಾರ್ವಜನಿಕರನ್ನೂ ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಮಾತನಾಡಿದಾಗ, ಭವ್ಯ ಭಾರತವನ್ನು ಸ್ವಂತ ಪರಿಶ್ರಮದಿಂದ ನಾವು ಕಟ್ಟಬೇಕಾಗಿದೆ ಎಂಬುದನ್ನು ಒತ್ತಿಯೊತ್ತಿ ಹೇಳಿದರು. ಭಾರತವು ಸ್ವಾತಂತ್ರ್ಯೋತ್ತರದ ಈ ಐದಾರು ವರ್ಷಗಳಲ್ಲಿ ಏನೊಂದೂ ಪ್ರಗತಿಯನ್ನು ಮಾಡಿಲ್ಲವೆಂದೂ ಆದೇ ರಶಿಯಾ—ಚೀನಾಗಳು ಅದ್ಭುತವನ್ನೇ ಸಾಧಿಸಿವೆಯೆಂದೂ ದೂರಿಕೊಳ್ಳುವುದು ನಮ್ಮಲ್ಲಿ ಅನೇಕ ಪಕ್ಷ ಪಂಗಡಗಳ ಹವ್ಯಾಸವಾಗಿರುತ್ತದೆ. ಈ ದೃಷ್ಟಿಕೋಣವು ತಪ್ಪೆಂಬುದನ್ನು ವಿವೇಕಶೀಲರು ಎತ್ತಿ ಹೇಳುತ್ತಾರೆ. ಭಾರತವು ಸಾಧಿಸಿದ ಪ್ರಗತಿಯನ್ನು ಅಲಕ್ಷಿಸಿ, ಇನ್ನು ಮಾಡಬೇಕಾಗಿರುವ ಕೆಲಸವನ್ನಷ್ಟೆ ಎಣಿಕೆ ಹಾಕುವುದು ಪ್ರಾಮಾಣಿಕ ಟೀಕೆಯಾಗಲಾರದು. ರಶಿಯಾ-ಚೀನಾಗಳ ಇಂದಿನ ಸಮೃದ್ಧಸ್ಥಿತಿಗೆ ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳ ಅವಿಶ್ರಾಂತ ಪರಿಶ್ರಮ ಕಾರಣೀಭೂತವಾಗಿದೆ ಎಂಬುದನ್ನು ಗಮನಿಸಬೇಕು. ಆಗ ನಮಗೆ ಇನ್ನು ಮುಂದಿನ ಹತ್ತಿಪ್ಪತ್ತು ವರ್ಷಗಳ ಕಾಲಾವಧಿಯಲ್ಲಿ ನಾವೂ ಅಷ್ಟೇ ಪ್ರಗತಿಯನ್ನು ಹೊಂದಬಲ್ಲೆವೆನ್ನುವ ವಿಶ್ವಾಸ ಮೂಡಬಲ್ಲುದು. ಈ ಆತ್ಮವಿಶ್ವಾಸವೊಡನೆ ನಾವು ಶಾರೀರಿಕ ಹಾಗೂ ಮಾನಸಿಕ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡು, ಕಾರ್ಯತತ್ಪರರಾದರೆ, ನವಭಾರತದ ನಿರ್ಮಾಣದಲ್ಲಿ ದಿನ ದಿನಕ್ಕೂ ನಾವು ಹೊಸ ಹೆಜ್ಜೆಯನ್ನು ಮುಂದಿಡುತ್ತಾ ಸಾಗಬಲ್ಲೆವು. ನೆಹರೂರವರು ಜನತೆಗೆ ಉತ್ಸಾಹದನ್ನೆ ಹೆಚ್ಚಿಸಲು, ಗುಣಶೀಲಗಳನ್ನು ಸಂವರ್ಧಿಸಿಕೊಳ್ಳಲು ಪರಿಶ್ರಮ ನಿರತರಾಗಲು ಬಿನ್ನವಿಸಿದರು. ವಿದ್ಯಾರ್ಥಿಗಳು ತಮ್ಮ ಬುದ್ಧಿ ಶಕ್ತಿಯನ್ನು ಚೆನ್ನಾಗಿ ಉಪಯೋಗಿಸಿ ರಾಷ್ಟ್ರಕ್ಕೆ ಕಲ್ಯಾಣಕಾರಿಯಾದ ಕೆಲಸಗಳನ್ನು ಮಾಡಬೇಕೆಂದು ಹೇಳಿದರು. ನೆಹರೂರ ಈ ಮಾತುಗಳು ಹೊಸತೇನಲ್ಲ ನಮ್ಮ ದೂರು ಹಾಗೂ ಗೊಣಗಾಟಗಳು ಹೇಗೆ ಹೇಳಿ ಹೇಳಿ ಹಳಸಿ ಹೋಗಿವೆಯೋ ನೆಹರೂರ ಉಪದೇಶ ವಾಕ್ಯಗಳೂ ಈ ಹಿಂದೆ ಹಲವು ಬಾರಿ ಕೇಳಿ ಬಂದವುಗಳೇ ನಿಜ. ಆದರೆ ನಮ್ಮ ಕಷ್ಟಗಳ ನಿವಾರಣೆಗೆ ಮತ್ತು ಪರಿಸ್ಥಿತಿಯ ಸುಧಾರಣೆಗೆ ನೆಹರೂವಿರಲಿ ಬೇರೆ ಯಾರೇ ಇರಲಿ ಇವಕ್ಕಿಂತ ಭಿನ್ನವಾದ ಹಾಗೂ ಸುಲಭವಾದ ಮಾರ್ಗವನ್ನು ತೋರಿಸಿ ಕೊಡಲಾರರು.

ಕಾಶ್ಮೀರ ಪ್ರಶ್ನೆಯ ಇತ್ಯರ್ಥ

ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ನೆಹರೂರವರು ಕಾಶ್ಮೀರ ಪ್ರಶ್ನೆಯ ಕುರಿತಾಗಿಯೂ ಕೆಲವು ವಿಷಯಗಳನ್ನು ಹೇಳಿದರು. ಮುಖ್ಯತಃ ವಿದೇಶೀಯರು ಈ ಸಂಗತಿಯಲ್ಲಿ ಪ್ರವೇಶಿಸದಿದ್ದರೆ, ಭಾರತ ಪಾಕಿಸ್ತಾನಗಳು ತಮ್ಮ ತಮ್ಮಲ್ಲಿಯೇ ಗೌರವಯುತವಾದ ಒಂದು ಇತ್ಯರ್ಥಕ್ಕೆ ಬರಬಲ್ಲವೆಂದು ಅವರು ಹೇಳಿದರು. ನಮಗೆಲ್ಲರಿಗೂ ತಿಳಿದಿರುವಂತೆ ಪಾಕಿಸ್ತಾನದ ಹಿಂದಿನ ನಿಲುಮೆಯ ಬೆಂಗಡೆಯಲ್ಲಿ ವಿದೇಶೀಯರ ಕೈವಾಡವಿದ್ದಿತು. ಆದರೆ ಇದು ಪಾಕಿಸ್ತಾನದ--ಹಾಗೂ ಭಾರತದ ಒಳ್ಳಿತಿಗಾಗಿ ಮಾತ್ರ ಇರಲಿಲ್ಲವೆಂಬುದು ನಾಜಿಮುದ್ದೀನರ ಕಾಲದವರೆಗೆ ಪಾಕಿಸ್ತಾನಿಗಳಿಗೆ ತಿಳಿಯಲಿಲ್ಲ. ಮಹಮ್ಮದಾಲಿಯವರು ಈ ರಹಸ್ಯವನ್ನು ಪತ್ತೆಹಚ್ಚಿ--ಭಾರತದ ಪ್ರಧಾನಿಗಳು ಹಿಂದಿನಿಂದಲೂ ನೀಡುತ್ತಾ ಬಂದ ಸ್ನೇಹ ಹಸ್ತಕ್ಕೆ ತಮ್ಮ ಕೈಯನ್ನು ಕೂಡಿಸುವುದಕ್ಕೆ ಮನಗೊಟ್ಟರು. ಇದೇ ೨೫ನೇ ದಿನಾಂಕ ಉಭಯ ರಾಷ್ಟ್ರಗಳ ಪ್ರಧಾನಿಗಳು ಕರಾಚಿಯಲ್ಲಿ ಭೇಟಿಯಾಗುವ ನಿರ್ಣಯವಾಗಿದ್ದು, ಇದರಿಂದ ಭಾರತದಲ್ಲಿನ ಪಾಕಿಸ್ತಾನೀ ಜನತೆಗೂ ತುಂಬ ಸಮಾಧಾನವಾಗಿದೆ. ಮಹಮ್ಮದಾಲಿಯವರು ಪೂರ್ವ ಪಾಕಿಸ್ತಾನಕ್ಕೆ ಮೊನ್ನೆ ತಾನೆ ಭೇಟಿ ಕೊಟ್ಟಾಗ, ಕಾಶ್ಮೀರ ಪ್ರಶ್ನೆಯು ಚಲೋ ರೀತಿಯಲ್ಲಿ ಪರಿಹಾರ ಹೊಂದುವ ತೀವ್ರ ಸಂಭವವಿದೆಯೆಂದಿರುವರು. ಕಳೆದವಾರ [illegible] ಉಭಯ ರಾಷ್ಟ್ರಗಳ ಮಾರ್ಗದರ್ಶನ ಸಮಿತಿಯು ಪ್ರಧಾನಿದ್ವಯರು ವಿಚಾರಿಸಬೇಕಾದ ಸಂಗತಿಗಳ ಪಟ್ಟಿಯನ್ನು ತಯಾರಿಸುವುದರಲ್ಲಿ ಯಶಸ್ಸುಗಳಿಸಿರುತ್ತದೆ. ಭಾರತ — ಪಾಕ ಸಂಬಂಧವನ್ನು ಹದಗೆಡಿಸಿರುವ ಎಲ್ಲ ಸಂಗತಿಗಳೂ ಕಾಶ್ಮೀರ ಪ್ರಶ್ನೆಯಂಥ ರಾಜಕೀಯ ಸಮಸ್ಯೆಯ ಪರಿಹಾರವನ್ನೆ ಅವಲಂಬಿಸಿಕೊಂಡಿವೆಯೆನ್ನುವುದು ಎಲ್ಲರಿಗೂ ಸ್ಪಷ್ಟವಾಗಿರುತ್ತದೆ. ಆರ್ಥಿಕ ಮುಂತಾದ ಸ್ವರೂಪಗಳ ಸಮಸ್ಯೆಯನ್ನು ಬಿಡಿಸುವುದು ಎರಡೂ ಕಡೆಯವರಿಗೂ ಬೇಕಾಗಿದೆ; ಅವಕ್ಕೆ ಮಾರ್ಗ ಕೂಡ ತೆರೆದಿದೆ. ಇಂಥದರಲ್ಲಿಯೂ ಅವು ಕಾರ್ಯಾನ್ವಿತಗೊಳ್ಳದಿರುವುದಕ್ಕೆ ರಾಜಕೀಯ ದೃಷ್ಟಿಯಲ್ಲಿ ಭಿನ್ನತೆ ಇರುವುದೇ ಕಾರಣ. ಆದುದರಿಂದ ಪ್ರಧಾನಿದ್ವಯರ ಈ ಸೌಹಾರ್ದಯುತವಾದ ಭೇಟಿಯು ರಾಜಕೀಯ ವಿವಾದಗಳನ್ನು ತೀರಿಸಲು ಸಮರ್ಥವಾದರೆ ಅದರ ಬೆನ್ನಿಗೆ ಒಂದೂ ಉಳಿಯದಂತೆ ಎಲ್ಲ ಪ್ರಶ್ನೆಗಳು ಬಿಡಿಸಲ್ಪಡುತ್ತವೆ. ಈ ದೃಷ್ಟಿಯಿಂದ ಕಾಶ್ಮೀರದ ಕಗ್ಗಂಟನ್ನು ಬಿಡಿಸುವ ಸಂಭವವು ಹಿಂದಿಗಿಂತ ತೀವ್ರವಾಗಿರುತ್ತದೆಂದು ಮಹಮ್ಮದಾಲಿಯವರು ಹೇಳಿರುವುದು ಪ್ರೋತ್ಸಾಹಕರ.

ಅನೇಕ ಸಂಗ್ರಹಗಳ ಗ್ರಂಥಕರ್ತರೂ ಆದ
ಶ್ರೀ. ಎ. ಎಸ್. ಪಂಚಾಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್.ಎಟ್ ಲಾ, ಎಫ್. ಆರ್. ಎಸ್. ಎಲ್. ಅವರು ಬರೆದ 'Tales of Ind' ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು - ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕತೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅನರ್ಘ್ಯ ಭಂಡಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ

Estd 1906

THE CANARA BANKING CORPORATION LTD.

H O **UDIPI**, (S India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ನವಯುಗ

ಉಡುಪಿ, ಗುರುವಾರ ೨೩-೭-'೫೩

ಸ್ಥಳೀಯ ಅಭಿವೃದ್ಧಿ

ನಮ್ಮೆಲ್ಲರ ಆಶೋತ್ತರಗಳನ್ನು ಕೆಲಮಟ್ಟಿಗಾದರೂ ಪೂರೈಸಬಲ್ಲ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಳೀಯ ಅಭಿವೃದ್ಧಿಯ ಯೋಜನೆಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲವೆನ್ನುವುದು ನಿಜವೇ ಆದರೂ—ಅದರ ಮಹತ್ವವನ್ನು ಯೋಜನಾ ಆಯೋಗ ಕಡೆಗಣಿಸಿರುವುದಿಲ್ಲನೆನ್ನುವುದೂ ಸ್ಪಷ್ಟವಿದೆ. ಸ್ಥಳೀಯ ಅಭಿವೃದ್ಧಿ ಕೆಲಸಗಳನ್ನು ಸ್ವಯಂಪ್ರೇರಣೆಯಿಂದ ಕೈಗೊಳ್ಳುವ ಪ್ರಯತ್ನಗಳಿಗೋಸ್ಕರ ೧೫ ಕೋಟಿ ರೂಪಾಯಿಗಳನ್ನು ಸಹಾಯಧನವಾಗಿ ಕೊಡಲು ಮಾಡಿದ ಏರ್ಪಾಡು ಯೋಜನೆಯು ಈ ಅಂಶವನ್ನು ದುರ್ಲಕ್ಷಿಸಿಲ್ಲವೆಂಬುದಕ್ಕೆ ನಿದರ್ಶನವಾಗಿರುತ್ತದೆ. ಆದರೆ ಈ ಸೌಲಭ್ಯದ ಪ್ರಯೋಜನವನ್ನು ಅಪೇಕ್ಷಿಸಿದಷ್ಟು ಹೆಚ್ಚು ಪ್ರಮಾಣದಲ್ಲಿ ಜನತೆಯು ಪಡೆದಿಲ್ಲವೆಂದು ಯೋಜನಾ ಮಂತ್ರಿ ಶ್ರೀ ನಂದಾರು ಹೇಳುತ್ತಾರೆ. ಪ್ರಾಯಶಃ ಸರಕಾರವು ನೀಡುವ ಧನಸಹಾಯದ ಉದ್ದೇಶ, ಅದನ್ನು ಪಡೆಯುವರೀತಿ ಇತ್ಯಾದಿಗಳ ಸ್ಪಷ್ಟ ಜ್ಞಾನವಿಲ್ಲದಿರುವುದರಿಂದ ಜನತೆ ಏನೂ ಮಾಡದೆ ಕೈಕಟ್ಟಿ ಕುಳಿತಿರಬೇಕೆಂದೆನಿಸುತ್ತದೆ. ಈ ದೃಷ್ಟಿಯಿಂದ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಸರಕಾರ ನೀಡುವ ಸಹಾಯಧನದ ಹಂಚಿಕೆಯ ವಿವರಗಳನ್ನು ಈಗ ವಿದಿತಪಡಿಸಿರುವುದು ಸಮಂಜಸವಾಗಿದೆ. ಸರಕಾರದ ಹೇಳಿಕೆಯಂತೆ ಸ್ಥಳೀಯ ಅಭಿವೃದ್ಧಿ ಕೆಲಸಗಳ ಅರೆವಾಸಿಯಷ್ಟು ವೆಚ್ಚವನ್ನು ಅಲ್ಲಿಯ ಜನರೇ ಹೊರಬೇಕು. ಜನರು ಸಹಾಯಧನವನ್ನು ಕೊಡಬಹುದು, ಸರಕು ಸರಂಜಾಮುಗಳನ್ನು ನೀಡಬಹುದು, ಅಥವಾ ದೈಹಿಕ ಪರಿಶ್ರಮವನ್ನು ದಾನಮಾಡಬಹುದು. ಅಂತೂ ಅರೆವಾಸಿಯಷ್ಟು ವೆಚ್ಚವನ್ನು ಅಲ್ಲಿಯ ಜನರೇ ನೋಡಿಕೊಂಡರೆ, ಉಳಿದ ಅರೆವಾಸಿಯನ್ನು ಸರಕಾರ ಸಹಾಯಧನವೆಂದು ಕೊಡುತ್ತದೆ. ಇಂಥ ನೆರವನ್ನು ಅಪೇಕ್ಷಿಸುವವರು ತಮ್ಮ ಯೋಜನೆಯ ವಿವರಗಳನ್ನು ಯೋಜನಾ ಆಯೋಗಕ್ಕೆ ಕಳಿಸಿಕೊಡಬೇಕು. ಸಾರ್ವಜನಿಕ ಯಾವ ಪಕ್ಷ ಸಂಘಗಳಿಗೂ ಅಂಟಿಕೊಳ್ಳದ ಮತ್ತು ಸ್ಥಳೀಯ ಜನರೇ ಉತ್ಸಾಹದಿಂದ ಕಟ್ಟಿಕೊಂಡು ಮನ್ನಣೆಗಳಿಸಿದ ಭಾರತ ಸೇವಕ ಸಮಾಜದಂಥ ಸಂಘಟನೆಗಳಿಂದ ಬಂದ ಅರ್ಜಿಗಳನ್ನು ಗಮನಿಸಲಾಗುವುದು. ಸರಕಾರವು ಸ್ಥಳೀಯ ಅಭಿವೃದ್ಧಿ ಕೆಲಸಗಳು ದೇಶಾದ್ಯಂತ ನಡೆಯಬೇಕೆಂದು ಅಪೇಕ್ಷಿಸುತ್ತದೆ. ಆದ ಕಾರಣ ತನ್ನ ಕೈಯಲ್ಲಿರುವ ಹಣವನ್ನು ಆದಷ್ಟು ಹೆಚ್ಚು ಅಭಿವೃದ್ಧಿ ಯೋಜನೆಗಳಿಗೆ ಉಪಯೋಗಿಸಿ, ದೇಶದ ಮೂಲೆಮೂಲೆಯ ಜನರಲ್ಲಿ ನೂತನ ಲವಲವಿಕೆ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಉತ್ಸಾಹ ಹುಟ್ಟುವಂತೆ ವಿತರಿಸಲು ನಿರ್ಧರಿಸಿದೆ. ಪ್ರತಿಯೊಂದು ಯೋಜನೆಗೆ ತಾನು ಹತ್ತು ಸಾವಿರ ರೂಪಾಯಿಗಳ ನೆರವು ಕೊಡಬಹುದೆಂದು ಸರಕಾರ ಮಿತಿ ನಿರ್ಣಯಿಸಿದೆ. ಇದರ ಅರ್ಥ ಸ್ಥಳೀಯ ಅಭಿವೃದ್ಧಿ ಯೋಜನೆಗಳು ಒಟ್ಟು ೨೦ ಸಾವಿರ ರೂಪಾಯಿಯೊಳಗೆ ಮುಗಿಯುವಂತಿರಬೇಕು. ಈ ಮಿತಿಯನ್ನು ವಿಚಾರದಂತೆ ವ್ಯವಸ್ಥೆ ಮಾಡಬಹುದಾದ ಅಭಿವೃದ್ಧಿ ಯೋಜನೆಗಳು ಈ ಮಾದರಿಯಲ್ಲಿರಬಹುದು— ಕುಡಿಯುವ ನೀರಿನ ಪೂರೈಕೆಗಾಗಿ ಬಾವಿ ಇತ್ಯಾದಿಗಳನ್ನು ತೋಡುವುದು, ಕೃಷಿಯ ಅಭಿವೃದ್ಧಿಗಾಗಿ ಅವಶ್ಯತವಾದ ಕಾರ್ಯಗಳನ್ನು ಮಾಡುವುದು, ಗ್ರಾಮದ ನೈರ್ಮಲ್ಯ ಹಾಗೂ ಆರೋಗ್ಯ ರಕ್ಷಣೆಗೋಸ್ಕರ ಶಾಶ್ವತ ಉಪಾಯಗಳ ಯೋಜನೆ, ಹಳ್ಳಿಗಳನ್ನು ಜೋಡಿಸುವ ಮಾರ್ಗ ಹಾಗೂ ತೋಡು ನದಿಗಳಿಗೆ ಸಂಕಗಳ ರಚನೆ, ಈಗಾಗಲೇ ಇರುವ ಶಾಲೆ ಅಥವಾ ಆಸ್ಪತ್ರೆಗಳ ಕಟ್ಟಡಗಳ ಜೀರ್ಣೋದ್ಧಾರ ಅಥವಾ ವಿಸ್ತಾರ ಮೊದಲಾದವು. ಕೇವಲ ಸ್ಥೂಲ ರೂಪರೇಖೆಯಾಗಿದ್ದು, ಸ್ಥಳೀಯ ಆವಶ್ಯಕತೆಯನ್ನು ಹೊಂದಿಕೊಂಡು, ಸಾಧ್ಯವಿದ್ದ ಬದಲಾವಣೆಯನ್ನು ಮಾಡಿಕೊಳ್ಳಬಹುದು. ಇಲ್ಲಿ ಮುಖ್ಯ ಏನಾಗಬೇಕೆಂದರೆ—ಜನತೆಗೆ ನೇರವಾದ ಪ್ರಯೋಜನವು ಈ ಅಭಿವೃದ್ಧಿ ಯೋಜನೆಗಳಿಂದ ದೊರಕಬೇಕು, ಮತ್ತು ಒಮ್ಮೆ ಮಾಡಿ ಮುಗಿಸಿದ ಕೆಲಸ ಹಾಳಾಗಿ ಹೋಗದಂತೆ ನೋಡಿಕೊಳ್ಳುವ ವ್ಯವಸ್ಥೆ ಇರಬೇಕು. ಜನಹಿತದ ಯೋಜನೆ ಅಥವಾ ಸರಕಾರದ ಬೇರೆ ಯೋಜನೆಗಳು ಜಾರಿಯಲ್ಲಿರದ ಹಳ್ಳಿ ಗಾಡುಗಳಲ್ಲಿ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಸ್ಥಳೀಯ ಅಭಿವೃದ್ಧಿಯ ಪ್ರಯತ್ನಗಳು ನಡೆದರೆ ಅದನ್ನು ಸರ್ವ ವಿಧದಿಂದಲೂ ಸರಕಾರ ಪ್ರೋತ್ಸಾಹಿಸುವುದು. ಎಲ್ಲ ಕೆಲಸವೂ ಮುಗಿದ ಬಳಿಕ ಸರಕಾರದ ಸಂಪರ್ಕಾಧಿಕಾರಿಯ ಶಿಫಾರಸು ಪತ್ರವನ್ನು ಕಳಿಸಿ ಸಹಾಯ ಧನವನ್ನು ಪಡೆಯಬಹುದು. ನಮ್ಮ ಜನತೆಯು ಉತ್ಸಾಹ ಹಾಗೂ ಶಕ್ತಿ ಸಾಮರ್ಥ್ಯಗಳ ಸದುಪಯೋಗ ಮಾಡಿಕೊಳ್ಳುವ ಈ ಅವಕಾಶವನ್ನು ಲಾಭಪ್ರದವಾಗಿ ಮಾಡಿಕೊಳ್ಳಲು ರಚನಾತ್ಮಕ ಕಾರ್ಯಕರ್ತರೂ ಸ್ಥಳೀಯ ನಾಯಕರೂ ಪ್ರಯತ್ನಿಸಬೇಕೆಂದು ವಿನಂತಿಸುತ್ತೇವೆ.

ಕೊರಿಯಾದಲ್ಲಿ ತನ್ನ ಕರ್ತವ್ಯ ಪೂರೈಸಲು ಭಾರತದ ಪ್ರಾಸ್ತಾವಿಕ ವ್ಯವಸ್ಥೆ

ಕೊರಿಯಾದಲ್ಲಿ ಹೇಗಾದರೂ ಮಾಡಿ ಯುದ್ಧವನ್ನು ನಿಲ್ಲಿಸಿಬಿಡುವ ಬಗ್ಗೆ ಒಪ್ಪಂದ ಮಾಡುವ ಪ್ರಯತ್ನಗಳು ನಡೆಯುತ್ತಿದ್ದರೂ —ಆಶಾದಾಯಕವಾದ ವಾತಾವರಣವೇನೂ ಗೋಚರಿಸುವುದಿಲ್ಲ. ಅಧ್ಯಕ್ಷ ಐಸೆನ್ ಹಾವರರ ಶಾಂತಿ ದೂತ ರಾಬರ್ಟ್‌ಸನ್ನರು ಡಾ. ರ್ಹೀಯವರೊಡನೆ ಸುದೀರ್ಘ ಚರ್ಚೆ ನಡೆಸಿ, ವಾಷಿಂಗಟನ್ನಿಗೆ ಹೋದವರು, ತಮ್ಮ ವರದಿಯಲ್ಲಿ ಹೇಳಿದ ಸಂಗತಿಗಳು ರ್ಹೀಯವರು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಅಡ್ಡಿತರುವಂತೆ ವರ್ತಿಸುವುದಿಲ್ಲವೆಂದು ತಿಳಿಸುತ್ತವೆ. ಕೊರಿಯಾದ ಒಡಂಬಡಿಕೆಯ ಸಂಬಂಧದಲ್ಲಿ ಹಿಂದಿನಿಂದಲೂ ತಮಗಿದ್ದ ಆಕ್ಷೇಪವನ್ನು ಸಿಂಗ್ಮನ್ನ ರ್ಹೀಯವರು ಹಿಂದಗೆದು ಕೊಂಡಿಲ್ಲವೆಂದೂ ಆದರೆ ಶಾಂತಿಯುತವಾದ ಮಾರ್ಗಗಳಿಂದ ಕೊರಿಯಾದ ಏಕೀಕರಣವಾಗಬೇಕೆಂದು ನಡೆಯುವ ಪ್ರಯತ್ನಗಳಲ್ಲಿ ಸಹಕರಿಸಲು ಒಪ್ಪಿರುವರೆಂದೂ ರಾಬರ್ಟ್‌ಸನ್ನರು ಹೇಳಿರುವರು. ಇದರ ಮೇಲಿಂದ ಸಿಂಗ್ಮನ್ನ ರ್ಹೀಯವರು ಕೊರಿಯಾದಲ್ಲಿ ಭಾರತದ ಸೈನ್ಯ ಪ್ರವೇಶಿಸಬಾರದೆನ್ನುವ ಛಲವನ್ನೂ ತಟಸ್ಥ ರಾಷ್ಟ್ರಗಳ ಮಂಡಳದಲ್ಲಿ ಕಮ್ಯೂನಿಷ್ಟ ಹಾಗೂ ಭಾರತದ ಪ್ರತಿನಿಧಿಗಳು ಇರಕೂಡದೆಂಬ ಅಭಿಪ್ರಾಯವನ್ನೂ ಬದಲಿಸಿಲ್ಲವೆನ್ನುವುದು ಧ್ವನಿಸುತ್ತದೆ. ಸಿಂಗ್ಮನ್ನ ರ್ಹೀಯವರ ಈ ಶರ್ತಗಳಿಗೆ ಅಮೇರಿಕವು ಸೈಗುಟ್ಟಿದೆ ಎಂದು ಕಳೆದವಾರ ಬಂದ ವಾರ್ತೆಗಳನ್ನು ಆ ಸರಕಾರವು ವಿಳಂಬವಿಲ್ಲದೆ ನಿರಾಕರಿಸಿದ್ದರೂ ಛಲದಂಕ ಮಲ್ಲರೆಂದು ಖ್ಯಾತಿವೆತ್ತ ಸಿಂಗ್ಮನ್ನ ರ್ಹೀಯವರ ಮುಂದಿನ ವರ್ತನೆಯನ್ನು ನೋಡಬೇಕಷ್ಟೆ—ಸ್ಥಿರವಾಗಿ ನಿಶ್ಚಿತವಾಗಿ ಏನು ಹೇಳಲೂ ಸಾಧ್ಯವಿಲ್ಲ.

ಕಮ್ಯೂನಿಸ್ಟರಿಗೆ ಆಶ್ವಾಸನೆ

ಕಳೆದವಾರವೇ ಸೂಚಿಸಿದಂತೆ—ರ್ಹೀಯವರ ಕೇಳಿಕೆಗಳು ಕಮ್ಯೂನಿಸ್ಟರಿಗೆ ಎಷ್ಟು ಮಾತ್ರಕ್ಕೂ ಒಡಂಬಡಿಕೆಯಾಗದಂಥವೆನ್ನುವುದು ಸ್ಪಷ್ಟವಿದೆ. ಕಮ್ಯೂನಿಸ್ಟರ ಆಕ್ಷೇಪಗಳನ್ನು ಸಮಾಧಾನಕರವಾಗಿ ಬಗೆಹರಿಸಲು ರಾಬರ್ಟ್‌ಸನ್ನ—ರ್ಹೀ ಮಾತುಕತೆಗಳು ನೆರವಾಗಿಲ್ಲವೆಂದೇ ತೋರುತ್ತದೆ. ಇಂಥದರಲ್ಲಿ ಈಗ ಯುದ್ಧವನ್ನು ನಿಲ್ಲಿಸುವುದೂ ಬಿಡುವುದೂ ಕಮ್ಯೂನಿಸ್ಟರ ಮನದೊಲವನ್ನೇ ಹೊಂದಿಕೊಂಡಿದೆಯೆಂದು ಡಲ್ಲೇಸರು ಹೇಳುವುದು ಕಮ್ಯೂನಿಸ್ಟರ ಹೃದಯ ಪರೀಕ್ಷಿಸುವಂಥ ಆಹ್ವಾನವೆನ್ನಬೇಕು. ಈ ಆಹ್ವಾನವನ್ನೂ ಕಮ್ಯೂನಿಸ್ಟರು ಸ್ವೀಕರಿಸುವುದು ಕೊರಿಯಾದ ಸಂಧಾನ ನೆರವೇರುವುದೆಂಬ ಆಶೋದಯವನ್ನುಂಟುಮಾಡಿದೆ. ಕಮ್ಯೂನಿಸ್ಟರು ರಾಷ್ಟ್ರಸಂಘದ ಸಂಪರ್ಕಾಧಿಕಾರಿಗಳಿಗೆ ಕದನ ನಿಲುಗಡೆಯ ಮಾತುಗಳನ್ನು ಮುಂದುವರಿಸಲು ತಮ್ಮ ಸಮ್ಮತಿ ವ್ಯಕ್ತಗೊಳಿಸಿರುವರು. ಸಿಂಗ್ಮನ್ನ ರ್ಹೀಯವರ ನಡವಳಿಕೆಯ ಕುರಿತು ಅವರು ಸ್ಪಷ್ಟೀಕರಣವನ್ನು ಕೇಳಿ—ರಾಷ್ಟ್ರಸಂಘದ ಉತ್ತರಗಳ ಮೇಲೆ ಭರವಸೆ ಇಟ್ಟು ಸಂಧಿ ವಾರ್ತೆಯನ್ನು ಮುಂದುವರಿಸಲು ಅವರು ಅಪೇಕ್ಷಿಸಿರುವರು. ಸಿಂಗ್ಮನ್ನ ರ್ಹೀಯವರ ಸರಕಾರವನ್ನೊಳಗೊಂಡು ರಾಷ್ಟ್ರಸಂಘವು ಯುದ್ಧ ನಿಲ್ಲಿಸುವ ಒಪ್ಪಂದವನ್ನು ಮನ್ನಿಸುತ್ತದೆಂದೂ ಒಂದುವೇಳೆ ರ್ಹೀಯವರು ತಾವೊಬ್ಬರೇ ಯುದ್ಧ ಮುಂದುವರಿಸುವ ದುಃಸಾಹಸ ಮಾಡಿದರೆ—ರಾಷ್ಟ್ರಸಂಘವು ಅವರಿಗೆ ಯಾವುದೇ ಬಗೆಯ ಸೈನ್ಯ ಹಾಗೂ ಸಾಮಗ್ರಿಗಳ ಸಹಾಯ ಮಾಡುವುದಿಲ್ಲವೆಂದೂ ರಾಷ್ಟ್ರಸಂಘ ಕಮ್ಯೂನಿಸ್ಟರಿಗೆ ಆಶ್ವಾಸನೆ ಕೊಟ್ಟಿದೆ.

ಭಾರತದ ಏರ್ಪಾಡು

ಈ ಆಶ್ವಾಸನೆಯು ಸಿಂಗ್ಮನ್ನ ರ್ಹೀಯವರ ಮೇಲೆ ರಾಷ್ಟ್ರಸಂಘದ ನಿಯಂತ್ರಣವಿದೆ ಎನ್ನುವ ಆಭಾಸ ಮಾಡಿಕೊಡುವುದರಿಂದ—ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಮುಂದುವರಿಸಲು ಕಮ್ಯೂನಿಸ್ಟರು ನಿಶ್ಚಯಿಸುವಂತಾಯಿತೆಂದು ಪ್ಯೋಂಗ್‌ಯೋಂಗ್ ರೇಡಿಯೋ ತಿಳಿಸಿದೆ. ಸಿಂಗ್ಮನ್ನ ರ್ಹೀಯವರು ಸ್ವೇಚ್ಛೆಯಿಂದ ಬಿಡುಗಡೆ ಮಾಡಿದ ೨೭ ಸಾವಿರ ಯುದ್ಧ ಕೈದಿಗಳ ವಿಷಯವನ್ನು ಕದನವಿರಾಮ ಒಡಂಬಡಿಕೆಯ ಬಳಿಕ ಸೇರುವ ರಾಜಕೀಯ ಪರಿಷತ್ತಿನಲ್ಲಿ ಎತ್ತುವ ಅಧಿಕಾರವನ್ನು ಕಮ್ಯೂನಿಸ್ಟರು ತಮ್ಮ ವಶದಲ್ಲಿಟ್ಟುಕೊಂಡಿರುವರು. ಹಾಗೆಯೇ ಭಾರತದ ಸೈನ್ಯ ಪ್ರವೇಶಕ್ಕೆ ರ್ಹೀಯವರ ಆಕ್ಷೇಪ ಈಗಲೂ ಇದೆಯೋ ಹೇಗೆನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಅಪೇಕ್ಷಿಸಿರುವರು. ತಟಸ್ಥ ರಾಷ್ಟ್ರ ಮಂಡಳ ಕೆಲಸಮಾಡದಂತೆ ದಕ್ಷಿಣ ಕೊರಿಯಾ ತಡೆದುಕೊಳ್ಳುವುದು ನಿಶ್ಚಿತವೆಂಬಂತೆ ಆ ಸರಕಾರದ ಪತ್ರಾಂತರ ಹೇಳಿಕೆಗಳು ಪ್ರಕಟಗೊಂಡಿವೆ. ಯಾವುದೇ ವಿದೇಶೀ ಸೈನ್ಯ...

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 73/1953.

ವಾದಿ. ಪಾಲಿಸ್ ಬರೇಟೊ.

ಪ್ರತಿವಾದಿಯು ದಿ ಓರಿಯಂಟಲ್ ಸೇವಿಂಗ್ಸ್ ಫಂಡ್. ಪ್ರತಿವಾದಿ. ದಿ. ಓರಿಯಂಟಲ್ ಸೇವಿಂಗ್ಸ್ ಫಂಡ್ ಇದರ ಪಾರ್ಟನರು 1. ಎಚ್. ಶ್ರೀನಿವಾಸ ರಾವ್, ಜನರಲ್ ಮೇನೇಜರ್, ಮೈಸೂರು ಪ್ರೊವಿನ್ಸ್ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ. P O Sagar 2. A ನಾರಾಯಣ ಸೆಟ್ಟಿ, ಕಾಳಪ್ಪ ಸೆಟ್ಟರ ಮಗ ಉಡುಪಿ ಟೌನ್ ಇವರಿಗೆ—

ಪ್ರತಿವಾದಿಯ ಕಂಪೆನಿಯಲ್ಲಿ ವಾದಿಯು ಕೆಲಸ ಮಾಡುವ ಬಗ್ಗೆ ಸದ್ರಿ ಕೆಲಸದ ಭದ್ರತೆ ಬಗ್ಗೆ ವಾದಿಯಿಂದ ರೂಪಾಯಿ 250-0-0ನ್ನು ತಾರೀಕು 12-10-51 ರಲ್ಲಿ ಪಡೆದು ರಶೀದಿ ಕೊಟ್ಟಿರುತ್ತಾರೆ. ಸದ್ರಿ ರೂಪಾಯಿ 250-0-0 ವ ಬಡ್ಡಿ ಸಹಾ ಬರಮಾಡಿಕೊಳ್ಳುವರೆ ವಾದಿಯು ಸದ್ರಿ ದಾವಾ ಹಾಕಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದರೆ ತಾರೀಕು 30—7—1953 ನೇ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗಿಯದೆ.

K. Raghunatha Shenai

Pleader for Plaintiff

Coondpoor 20—7—1953

ಪ್ರವೇಶಕ್ಕೂ ದಕ್ಷಿಣ ಕೊರಿಯಾದ ನೆಲದಲ್ಲಿ ಅವಕಾಶ ಮಾಡಿಕೊಡುವಂತಿಲ್ಲವೆಂದು ಸಿಂಗ್ಮನ್ ರ್ಹೀಯ ನಿಕಟವರ್ತಿಗಳು ಇನ್ನೂ ಹೇಳುತ್ತಿರುವುದರಿಂದ ಈ ಸಂಗತಿಯ ಮೇಲೆ ಅಧಿಕ ಪ್ರಕಾಶ ಬೀಳಬೇಕಾದುದು ಇಂದು ಪರಮಾವಶ್ಯಕವಾಗಿದೆ. ಕೊರಿಯಾದಲ್ಲಿ ಒಡಂಬಡಿಕೆಯಾಗುವುದೇ ನಿಶ್ಚಯವಾದರೆ ತನ್ನ ಸೈನ್ಯ ಪಡೆಯೊಂದನ್ನು ಕೊರಿಯಾಕ್ಕೆ ಕಳಿಸಲು ಭಾರತ ಸರಕಾರ ಈಗ ಎಲ್ಲ ಏರ್ಪಾಡುಗಳನ್ನು ಮಾಡಿದೆ. ಸೈನ್ಯದ ಪ್ರಮಾಣವನ್ನು ಇನ್ನೂ ನಿರ್ಧರಿಸಿರದಿದ್ದರೂ, ಆ ತಂಡದ ದಳಪತಿಯಾಗಿ ಮೇ. ಜ. ತಿಮ್ಮಯ್ಯನವರನ್ನು ನೇಮಕಮಾಡಿದೆ. ಹಾಗೆಯೇ ಪಂಚ ತಟಸ್ಥ ರಾಷ್ಟ್ರ ಮಂಡಳದಲ್ಲಿ ಭಾರತದ ಪ್ರತಿನಿಧಿ ಸ್ಥಾನವನ್ನು ವಿದೇಶಖಾತೆಯ ಕಾರ್ಯದರ್ಶಿ ಶ್ರೀ ಆರ್. ಕೆ. ನಹರೂರವರಿಗೆ ಕೊಡಲಾಗಿದೆ. ಕೊರಿಯಾದಲ್ಲಿ ಯುದ್ಧ ನಿಲ್ಲಿಸುವ ಒಪ್ಪಂದವಾದೊಡನೆಯೇ ಭಾರತ ತನ್ನ ಪಾಲಿನ ಕರ್ತವ್ಯ ಪೂರೈಸಲು ಸಿದ್ಧವಾಗಿ ನಿಂತಿದೆ.

ರಶಿಯಾದಲ್ಲಿ ಗೃಹ ಕಲಹ

ಕಳೆದವಾರ ಲೋಕದ ರಾಜಕಾರಣಿಗಳನ್ನು ವಿಸ್ಮಯಗೊಳಿಸುವ ಘಟನೆಯೊಂದು ರಶಿಯಾದೊಳಗೆ ನಡೆಯಿತು. ಸ್ಟಾಲಿನ್ನರ ಕಾಲದಲ್ಲಿ ಉಕ್ಕಿನ ಮನುಷ್ಯನೆಂದು ಹೆಸರಾದ ಲೆವ್ರೆಂಟಿ ಬೆರಿಯಾರನ್ನು ರಶಿಯಾದ ಈಗಿನ ಮೆಲೆಂಕೋವ ಸರಕಾರವು ಗೃಹಮಂತ್ರಿ ಸ್ಥಾನದಿಂದ ಪದಚ್ಯುತ ಮಾಡಿತು, ಮಾತ್ರವಲ್ಲ ಕಮ್ಯೂನಿಸ್ಟ ಪಕ್ಷವೂ ಬೆರಿಯಾರನ್ನು ಹೊರದಬ್ಬಿತು. ಲೆವ್ರೆಂಟಿ ಬೆರಿಯಾ ರಶಿಯಾದ ಈಗಿನ ಮೂವರು ಪ್ರಭಾರಿಗಳಲ್ಲಿ ಒಬ್ಬರು. ಸ್ಟಾಲಿನ್ನರ ನಿಧನಾನಂತರ ರಶಿಯಾದ ರಾಜಕಾರಣಿಗಳಲ್ಲಿ ದ್ವಿತೀಯ ಸ್ಥಾನ ಪಡೆದವರೆಂದು ಮೆಲೆಂಕೋವರ ಬಾಯಿಂದಲೇ ಹೇಳಿಸಿಕೊಂಡ ಮಹಾನುಭಾವ—ಇಂದು ಇವರು ಸ್ಥಾನ ಭ್ರಷ್ಟರಾದುದಷ್ಟೇ ಅಲ್ಲ—ರಶಿಯಾದ ಪರಿಷ್ಕ್ರ್ಯಾಯಾಲಯದ ಮುಂದೆ ಸೋವಿಯೆಟ ಹಿತಸಂಬಂಧಗಳಿಗೆ ತೊಂದರೆಯುಂಟಾಗುವಂತೆ ಬಂಡವಲವಾದೀ ರಾಷ್ಟ್ರಗಳೊಡನೆ ಸಂಪರ್ಕವಿಟ್ಟುಕೊಂಡು ದೇಶದ್ರೋಹಮಾಡಿದ ಅಪಾದನೆಯ ಮೇಲೆ ವಿಚಾರಣೆಗೆ ಗುರಿಯಾಗಬೇಕಾಗಿ ಬಂದಿದೆ. ರಶಿಯಾದ ಹಿಂದಿನ ಪರಂಪರೆಯನ್ನು ನೋಡಿದರೆ— ಇಲ್ಲಿಗೆ ಬೆರಿಯಾರ ಜೀವನದ ಅಂತ್ಯವಾಯಿತೆಂದೇ ಲೆಕ್ಕ. ರಾಷ್ಟ್ರದ್ರೋಹದ ಆರೋಪ ಹೊರಿಸಿ ಸಾರ್ವಜನಿಕ ವಿಚಾರಣೆಯ ನಾಟಕ ನಡೆಸಿ, ತಮಗೆ ಬೇಡಾದವರನ್ನು ಮುಗಿಸಿ ಬಿಡುವುದು ರಶಿಯಾದಲ್ಲಿ ಸಾಮಾನ್ಯ ಸಂಗತಿ. ಪ್ರಾಯಶಃ ಬೆರಿಯಾರವರಿಗೂ ಮೆಲೆಂಕೋವರಿಗೂ ನಡುವೆ ಮತಭೇದವುಂಟಾಗಿರಬೇಕು— ಒಂದು ರೀತಿಯಲ್ಲಿ ಅಧಿಕಾರ ಲಾಲಸೆಯೇ ಇದಕ್ಕೆ ಹೇತು. ಫಲತಃ ಬೆರಿಯಾರವರ ವರ್ಚಸ್ಸನ್ನು ಮುರಿಯಲು ಇರುವ ಏಕಮೇವ ಮಾರ್ಗವಾದ—ರಾಷ್ಟ್ರದ್ರೋಹದ ಆಪಾದನೆಯನ್ನು ಮೆಲೆಂಕೋವರು ಹೊರಿಸುವಂತಾಯಿತು.

ಶುದ್ಧೀಕರಣದ ಪ್ರಯತ್ನ

ಬೆರಿಯಾರ ಪದಚ್ಯುತಿ ಹಿಂಗಡೆಯಲ್ಲೇ ಸೋವಿಯಟ ರಶಿಯಾವು ತನ್ನ ರಾಜಕಾರಣದಲ್ಲಿ ಶುದ್ಧೀಕರಣ ಮಾಡಲು ತೊಡಗಿದೆ. ಬೆರಿಯಾರ ಸ್ನೇಹಿತರು, ಅವರೊಡನೆ ಸಹಾನುಭೂತಿಯುಳ್ಳವರು ಅಧಿಕಾರ ಸ್ಥಾನದಲ್ಲಿದ್ದರೆ ಸಾಕು ಅವರನ್ನು ಪದಚ್ಯುತರನ್ನಾಗಿ ಮಾಡಲು ಮೆಲೆಂಕೋವರು ಕ್ರಮ ತೆಗೆದುಕೊಂಡಿರುವರು. ಗೃಹ ಮಂತ್ರಿ ಸ್ಥಾನದಲ್ಲಿದ್ದುಕೊಂಡ ಬೆರಿಯಾರಿಗೆ ಸೋವಿಯಟ ರಶಿಯಾದೊಳಗೆ ತುಂಬ ವರ್ಚಸ್ಸು ಹಾಗೂ ನಿಯಂತ್ರಣವಿದ್ದುದು ಸ್ವಾಭಾವಿಕ. ಇವರ ಪ್ರಭಾವವನ್ನು ತಡೆಗಟ್ಟಲು ಅವರ ಮಿತ್ರ ವೃಂದದ ಕೈಗೆ ಸಂಕೋಲೆ ಹಾಕುವುದೊಂದೇ ದಾರಿ. ಪರಿಣಾಮವಾಗಿ ಬೆರಿಯಾರ ತವರೂರೆಂದು ಹೆಸರಾದ ಜಾರ್ಜಿಯಾದಲ್ಲಿ ಅಲ್ಲಿಯ ಗೃಹ ಮಂತ್ರಿ ದೆಕನೋಸ ಮತ್ತು ಕಮ್ಯೂನಿಸ್ಟ ಪಕ್ಷದ ಸದಸ್ಯ ಮಾಮ ಲೋವರನ್ನು ಹೊರದಬ್ಬಲಾಗಿದೆ. ಯುಕ್ರೇನದ ಗೃಹ ಮಂತ್ರಿ ಮೆಶಿಕರನ್ನೂ ಲಿಥೋನಿಯಾದ ನ್ಯಾಯ ಮಂತ್ರಿ ದಿವಾನಯುಸಂಕೋವರನ್ನೂ ತಳ್ಳಲಾಗಿದೆ. ಮಾತ್ರವಲ್ಲ ಕಮ್ಯೂನಿಸ್ಟ ಪಕ್ಷದ ಪ್ರಥಮ ಕಾರ್ಯದರ್ಶಿಗಳಾದ ಅಜರ್ ಬೈಜಾನಿನ ಬೈಲಾಡಿ ಬಾಗಿರೋವರನ್ನೂ ಸ್ಥಾನಭ್ರಷ್ಟರನ್ನಾಗಿ ಮಾಡಲಾಗಿದೆ. ಇವರ ಮೇಲೆ ಕರ್ತವ್ಯ ದಕ್ಷತೆಯಲ್ಲಿ ಲೋಪ ಮಾಡಿದ ಆರೋಪವಿದೆ. ಅಂತೂ ಬೆರಿಯಾರ ಬೆಂಬಲಿಗರನ್ನೆಲ್ಲ ಈ ರೀತಿ ಅಧಿಕಾರದಿಂದ ತೆಗೆದುಹಾಕಿ, ರಾಷ್ಟ್ರದ್ರೋಹದ ನೆಪದಿಂದ ಉಗ್ರವಾಗಿ ದಂಡಿಸಲು ಮೆಲೆಂಕೋವರು ನಿರ್ಧರಿಸಿದಂತಿದೆ. ಎಲ್ಲ ಕಡೆಯೂ ತನ್ನ ಬೆಂಬಲಿಗರನ್ನೆ ಮೆಲೆಂಕೋವರು ಅಧಿಕಾರಸ್ಥಾನಕ್ಕೇರಿಸಲು ನೋಡಿರುವರು

ಉಡುಪಿ

ಕಲಾವೃಂದದ ವಾರ್ಷಿಕೋತ್ಸವ

ವೃ:—ಇದೇ ತಾ 18 ಮತ್ತು 19ರಲ್ಲಿ ಸಂಸ್ಕೃತ ಕಾಲೇಜಿನ ಕಟ್ಟಡದಲ್ಲಿ ವಿಜೃಂಭಣೆಯಿಂದ ಯಶಸ್ವಿಯಾಗಿ ಜರಗಿತು. ಮೊದಲಿನ ದಿನ ಸ್ವಾಮಿ ಆದಿ ದೇವಾನಂದರ ಅಧ್ಯಕ್ಷತೆಯಲ್ಲಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಲ್ ಎಚ್. ಸಂದರ ರಾಯರಿಂದ ಸಮಾರಂಭದ ಉದ್ಘಾಟನೆ ನಡೆಯಿತು. ವರದಿವಾಚನವಾಗಿ ಶ್ರೀ. ಪಿ. ಎಚ್. ಕೃಷ್ಣರಾಯರಿಂದ ಭಾಷಣವಾಯಿತು. ಮರುದಿನ ಶ್ರೀ. ಪಿ. ಎಚ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಎಚ್. ಕೆ. ರಾಮಚಂದ್ರ ಮೂರ್ತಿಯವರಿಂದ ಕವಿತಾವಾಚನ, ಬಹುಮಾನ ವಿತರಣೆ, ಶ್ರೀ ಬಾರ್ಲಿ ಬಾಬು ಮಾಧವ, ಶ್ರೀ ಯು ರಘುನಾಥಾಚಾರ್ಯ, ಎಂ. ಎ, ಇವರುಗಳಿಂದ ಉಪನ್ಯಾಸ ನಡೆಯಿತು. ಎರಡೂ ದಿನ ರಾತ್ರಿ ವಿನೋದ ಕಾಲಕ್ಷೇಪವಿತ್ತು.

ಸೆಂಟ್ರಲ್ ವಾರ್ಡ್ ತೆರಿಗೆದಾರರ ಸಭೆಯು—ಈಚೆಗೆ ಡಾ| ಕೆ. ಎನ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಸೆಂಟ್ರಲ್ ವಾರ್ಡಿನ ಟೌನ್ ಪ್ಲಾನಿಂಗ್ ಯೋಜನೆಯ ಸ್ಥಳಗಳ ಪರಿಮಾಣವನ್ನು ಜಾಸ್ತಿ ದರದಲ್ಲಿ ಲೆಕ್ಕ ಹಾಕುವುದನ್ನು ಕಡಿಮೆ ಮಾಡಿ ಅದೇ ದಾಮಾಸೆಯಲ್ಲಿ ಟೇಕ್ಸ ಕಡಿಮೆಯಾಗುವಂತೆ ಯತ್ನಿಸಲು ಶ್ರೀಗಳಾದ ಪಿ. ವಿ. ಆಚಾರ್, ಎ. ತ್ರಿವಿಕ್ರಮ ನಾಯಕ್ ಯು. ಕೇಶವ ಪ್ರಭು ಮತ್ತು ಡಾ| ಕೆ ಎನ್. ಸುವರ್ಣರು ಮುನಿಸಿಪಲ್ ಕಮಿಶನರರನ್ನು ಭೇಟಿಯಾಗಬೇಕೆಂದಾಯಿತು.

ಭಾಷಣ—ಮದ್ರಾಸು ರೆವಿನ್ಯೂ ಬೋರ್ಡಿನ ಮೆಂಬರ್ ಶ್ರೀ ಬಿ. ಎಸ್. ಕುದ್ಮುಲ್ ಇದೇ ತಾ 17ರಲ್ಲಿ ಎಮ್. ಜಿ. ಎಮ್. ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣವಿತ್ತು ಕಾಲೇಜಿನ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸ್ವಾಗತ ಭಾಷಣ ಮಾಡಿದರು.

ಡಾ| ಮಾಧವ ಪೈಗಳಿಗೆ ಸತ್ಕಾರ—ಉಡುಪಿಯ ಸಹಕಾರಿ ಸಂಘಗಳು ಇದೇ ತಾ 18ರಲ್ಲು ಸಂಜೆ ಕೆನರಾ ಬೇಂಕಿಂಗ್ ಕೋರ್ಪರೇಶನಿನ ಮಾಳಿಗೆಯಲ್ಲಿ ಡಾ| ಟಿ. ಮಾಧವ ಪೈಗಳಿಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದ ಸಾಹಸಕ್ಕಾಗಿ ಚಹಾ ಸತ್ಕಾರ ಮತ್ತು ಮಾನಪತ್ರವಿತ್ತು ಗೌರವಿಸಿದವು. ಶ್ರೀ ಎಮ್. ವಾಮನ ಭಟ್ಟರು ಪುಷ್ಪ ಮಾಲಿಕೆಯನ್ನು ಅರ್ಪಿಸಿದರು. ಶ್ರೀ ಎ ಲಕ್ಷ್ಮೀನಾರಾಯಣ ರಾಯರು ಮಾನಪತ್ರವ ನ್ನರ್ಪಿಸಿದರು. ಡಾ ಎಸ್. ಆರ್. ಪೈ, ಪಂಡಿತ ಟಿ ಎನ್. ಕೇಳು ನಂಬಿಯಾರ್ ಮತ್ತು ಶ್ರೀ ಯು. ರಾಮ ರಾಯರು ಡಾ| ಮಾಧವ ಪೈಗಳ ಚಾತುರ್ಯವನ್ನು ಕೊಂಡಾಡಿ ಮಾತನಾಡಿದರು. ಸಹಕಾರಿಗಳು ತನಗಿತ್ತ ಗೌರವಕ್ಕಾಗಿ ಅಭಿನಂದಿಸಿ ಸಹಕಾರಿ ಕಕ್ಷದ ಮೇಲೆ ಯಾವ ಕಷ್ಟಸಾಧ್ಯ ಕೆಲಸವನ್ನೂ ಪೂರೈಸಬಹುದೆಂದರು. ಶ್ರೀ ಕೆ. ಗುರುರಾಜ ರಾಯರು ಧನ್ಯವಾದಗಳನ್ನರ್ಪಿಸಿದರು.

ವಿವಾಹ ಸಮಾರಂಭಗಳು

ಉಡುಪಿಯ ವಕೀಲ್ ಶ್ರೀ ಕೆ. ಜೆ. ಬಲ್ಲಾಳರ ಪುತ್ರಿ ಚಿ| ಸೌ| ಶಾರದಳನ್ನು ದೆಬ್ಬೇಲಿ ದಿ| ಕೃಷ್ಣಯ್ಯ ಹೆಗ್ಗೆರ ಪುತ್ರ ಶ್ರೀ H.T. ಮಹೀನಪ್ಪ ಹೆಗ್ಡೆ, Bsc (Ag) ಅವರೂ ಶ್ರೀ ಭಕ್ಕೂರು ಸಂಕಪ್ಪ ಸೆಟ್ಟರ ಪುತ್ರಿ ಚಿ| ಸೌ ಉಮಾವತಿ ಯಾನೆ ಸಜನಿಯನ್ನು ದಿ| ತಿಮ್ಮೋಡಿ ಬಾಪ ಮಂಜಯ್ಯ ಸೆಟ್ಟರ ಪುತ್ರ ಡಾ| ಸಂಜೀವ ನಾಥರೂ ಗರಡಿ ನಂದ್ಯಪ್ಪ ಸೆಟ್ರ ಪುತ್ರಿ ಚಿ| ಸೌ| ಪ್ರೇಮಲತಾಳನ್ನು ಶ್ರೀ ಹಲ್ಯಾಲು ಶಿವರಾಮ ಕೇಮೇಗಾರರ ಪುತ್ರ ಶ್ರೀ ಭಾಸ್ಕರ ಶೆಟ್ಟರೂ ಇದೇ ತಾ 16ರಲ್ಲು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಶ್ರೀ ಜಾರ್ಕಳ ನಾಗಣ್ಣ ಹೆಗ್ಡೆಯವರ ನಿಧನ

ಜಿಲ್ಲೆಯ ಅಗ್ರ ಮಹನೀಯರಲ್ಲೊಬ್ಬರೂ ಬಂಟರ ಯಾನೆ ನಾಡವರ ಸಮಾಜದ ಮುಂದಾಳುಗಳಲ್ಲೊಬ್ಬರೂ ಆದ ಶ್ರೀ ಜಾರ್ಕಳ ನಾಗಣ್ಣ ಹೆಗ್ಡೆಯವರು ಇತ್ತೀಚೆಗೆ ಅಸ್ವಸ್ಥರಾಗಿದ್ದು ಇದೇ ತಾ. 20ರಲ್ಲಿ ತಮ್ಮ ೭೬ನೇ ವಯಸ್ಸಿನಲ್ಲಿ ಬೈಲೂರು ಸ್ವಗೃಹದಲ್ಲಿ ನಿಧನಹೊಂದಿರುವರೆಂಬ ವಿಷಾದಕರ ವಾರ್ತೆ ಬಂದಿದೆ. ಇವರು ಹಿಂದೆ ಸ್ವಲ್ಪ ಸಮಯ ಮದ್ರಾಸು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದರು. ಕಾರ್ಕಳ ತಾಲೂಕು ಬೋರ್ಡಿನ ಮೆಂಬರರಾಗಿ, ನೀರೆಬೈಲೂರು ಸಹಕಾರ ಸಂಘದ ಅಧ್ಯಕ್ಷರಾಗಿ, ಗಾಂಧಿ ಸ್ಮಾರಕ ಸಂಘದ ಪೋಷಕರಾಗಿ ಸಾರ್ವಜನಿಕ ಸೇವೆ [illegible] ಅನುಭವ, ಸೇವಾಕಾಂಕ್ಷೆ, ಕರ್ತೃತ್ವ ಶಕ್ತಿಗಳಿಂದ ಶ್ರೀಯುತರು ಜನಪ್ರಿಯತೆ ಗಳಿಸಿದ್ದರು. ಮೃತರ ದುಃಖಿ ಕುಟುಂಬ, ಬಂಧು, ಬಳಗದೊಂದಿಗೆ ನಮ್ಮ ಸಹಾನುಭೂತಿಯನ್ನು ವ್ಯಕ್ತ ಪಡಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ಇರಲಿ

ಉಡುಪಿ ಡಿ. ಮು. ಕೋರ್ಟಿನಲ್ಲಿ
ಸ್ಮಾಲ ನಂಬ್ರ 323/1953.
ದಿ. ಉಡುಪಿ ಬೇಂಕ್ ಲಿಮಿಟೆಡ್ ಉಡುಪಿ ಕಡೆಯಿಂದ ಮೇನೇಜಿಂಗ್ ಡೈರೆಕ್ಟರ್ ಯು. ವಾಸುದೇವ ಪ್ರಭು — ವಾದಿ.
ಮತ್ತು
ಎನ್. ದಾಸಪ್ಪ ಕೂಡಾ — ಪ್ರತಿವಾದಿಯು.
ಇವರೊಳಗೆ
3ನೇ ಪ್ರತಿವಾದಿ—ತಿಂಮಪ್ಪಯ್ಯ ನಾಯಕ—ಶ್ರೀನಿವಾಸ ನಾಯಕರ ಮಗ, ಉಡುಪಿ ತಾಲೂಕು ಮತ್ತೂರು ಗ್ರಾಮ ಇವರಿಗೆ
ಪ್ರತಿವಾದಿಗಳು ವಾದಿ ಬೇಂಕಿಗೆ ತಾರೀಕು 4-2-1952ರಲ್ಲಿ ರುಪಾಯಿ 50-0-0ಕ್ಕೆ ಬರೆದುಕೊಟ್ಟ ಪ್ರೊಮಿಸರಿ ನೋಟಿನ ಅಸಲು, ಬಡ್ಡಿ ರಜಿಸ್ಟ್ರಿ ನೋಟೀಸುಗಳ ಖರ್ಚು ಕೂಡಾ ರುಪಾಯಿ 66-2-0ಕ್ಕೆ ವಾದಿಯು ಪ್ರತಿವಾದಿಗಳ ಮೇಲೆ ಮಾಡಿದ ಸದಿ ವ್ಯಾಜ್ಯವು ತಾರೀಕು 3-8-1953ಕ್ಕೆ ಪ್ರಥಮ ತನಿಖೆ ಬಗ್ಗೆ ಇಡಲ್ಪಟ್ಟಿರುವುದರಿಂದ ಆ ದಿವಸ ಬೆಳಿಗ್ಗೆ 11 ಘಂಟೆಗೆ ಸದ್ರಿ 3ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸತಕ್ಕದ್ದು, 3ನೇ ಪ್ರತಿವಾದಿಯು ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸಲಾಗಿದೆ.
M. Damodar Kamath
Advocate for Plaintiff
Udipi, Date 21—7—1953.

ಪ್ರದರ್ಶಿಸುತ್ತಿರುವ ಚಿತ್ರ.
ಖೂಬ್ ಸೂರತ್ (ಹಿಂದಿ)
ಸುರಯ್ಯಾ, ನಾಸೀರ್ ಖಾನ್, ಯಾಕೂಬ್,
ಹಸನ್‌ಬಾನು, ಬೀಮಾ ಅದ್ವಾನಿ,
ಮುಂದಿನ ಬದಲಾವಣೆ—
ಆನ್ ಸೂ
ಕಾಮಿನಿಕೌಸಲ್ಯ, ಶೇಖರ್, ಪ್ರಾನ್, ನವಾಬ್, ಅಮೀರ್‌ಬಾನು ಕರ್ನಾಟಕಿ
26-7-53ರಿಂದ ಪ್ರತಿ 10 ಘಂಟೆಗೆ ಎರಡು ಪ್ರದರ್ಶನ ನಡೆವು
ಆಲ್ ಎಬ್ಬೈಬ್ ಇನ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಆಗೋಸ್ತು 15
ಸ್ವಾತಂತ್ರ್ಯ ದಿನೋತ್ಸವ!
ಈ ಮಹಾದಿನದ ಆಚರಣೆಯ ನೆನಪಿಗಾಗಿ ನಾವು ಎಂದಿನಂತೆ
ನವಯುಗದ ಸ್ವಾತಂತ್ರ್ಯ ದಿನೋತ್ಸವ
ಸಂಚಿಕೆಯನ್ನು ವಿಶಿಷ್ಟತರದಲ್ಲಿ (ತಾ. 13—8—53ಕ್ಕೆ) ಹೊರಡಿಸಬೇಕೆಂದಿದ್ದೇವೆ. ಜಾಹಿರಾತುದಾರರು ತಮ್ಮ ಜಾಹೀರಾತುಗಳನ್ನಿತ್ತು ನೆರವಾಗಬೇಕಾಗಿ ವಿಜ್ಞಾಪನೆ.
ಮೆನೇಜರ್,
ನವಯುಗ, ಉಡುಪಿ.

ದಿವಂಗತ ಕಿಲ್ಲೆಯವರ ಚರಮೋಕ್ತಿ

ನನ್ನೊಡನಿದ್ದು ಇಹಲೋಕವನ್ನು ತ್ಯಜಿಸಿ ಪರಲೋಕವಾಸಿಯಾದ ದಿ॥ ನಾರಾಯಣ ಶೆಟ್ಟಿ ಕಿಲ್ಲೆಯವರು ಇಸವಿ 1916ರಿಂದ ಇಲ್ಲಿಯವರೆಗೂ ನನ್ನ ಸನಿಹಾಟೀನ ಮಿತ್ರರು. ಇವರ ಜೀವನವು ಕ್ರಾಂತಿಮಯವಾದದ್ದು. ರಾಜಕೀಯದ, ಪಕ್ಷ—ಪ್ರತಿಪಕ್ಷಗಳ ಹೋರಾಟದ, ತೆಗಳಿಕೆ, ಹೊಗಳಿಕೆಗಳ ಮಧ್ಯದಿಂದಲೇ ಚೇತರಿಸಿ ತಲೆಯೆತ್ತಿದ್ದು, ಕರ್ಣಾಟಕದಲ್ಲಿ ಕಾಂಗ್ರೆಸಿನ ವಿಜಯ ಪತಾಕೆಯನ್ನು ಮೇಲಕ್ಕೆತ್ತಲು ಕಾರಣಭೂತರಾದ ಪ್ರಸಿದ್ಧ ಯೋಧರಲ್ಲಿ ಇವರೊಬ್ಬರು. ಅಂತರಂಗದ ಆತ್ಮಶಕ್ತಿಯನ್ನು ಬಹಿರಂಗದ ವಕ್ತೃತ್ವದ ವಿಶಿಷ್ಟ ಕಲೆಯಾಗಿ ಕಾಣಿಸಿದವರಲ್ಲಿ ಇವರೇ ಮುಖ್ಯಸ್ಥರು. ಈ ಕಲೆಗನುಸಾರವಾದ ಧಾರಣಾಶಕ್ತಿಯು ಇವರ ಪ್ರಕೃತಿಯೇ ಆಗಿತ್ತು. ನಮ್ಮ ಜಿಲ್ಲೆಗೆ ಆಗಮಿಸಿದ ಮಹಾ ಮಹಾ ವ್ಯಕ್ತಿಗಳ ಮಹತ್ವದ ಇಂಗ್ಲಿಷ್ ಭಾಷಣಗಳನ್ನು—ಅಸವತ್ತಾದ, ತುಳು, ಕನ್ನಡ ಭಾಷೆಗಳಿಗೆ ಪರಿವರ್ತಿಸಿ ಹೇಳಿದ ಭಾಷಾಂತರ ಕರ್ತರಲ್ಲಿ ಇವರೇ ಕವಿಕನಿಷ್ಠರು. ಯಕ್ಷಗಾನ ರಂಗದ ಅರ್ಥಗಾರರಲ್ಲಿ ದಿವಂಗತರು ಸುಪ್ರಸಿದ್ಧರು. ಇಸವಿ 1920ರಿಂದ 1951ರವರೆಗೆ ದ. ಕ. ಜಿಲ್ಲೆಯಲ್ಲಾದ ಹಲವು ಯಕ್ಷಗಾನ ಕೂಟಗಳಲ್ಲಿ ನಾವು ನಾಯಕ-ಪ್ರತಿನಾಯಕರ ಪಾತ್ರಗಳನ್ನು ವಹಿಸಿಕೊಂಡು ಮಾತನಾಡಿದ್ದೇವೆ. ಅವುಗಳಲ್ಲಿ ಮುಖ್ಯವಾಗಿ "ಕರ್ಣ—ಅರ್ಜುನ" "ಭೀಷ್ಮ—ಅರ್ಜುನ" ವಾಲಿ—ರಾಮ. ವಾಲಿ—ಸುಗ್ರೀವ" "ಕೌರವ—ಕೃಷ್ಣ" "ಸುಧನ್ವ—ಅರ್ಜುನ" ಇವುಗಳನ್ನು ನಾಯಕ, ಪ್ರತಿನಾಯಕರಾಗಿ ಒಂದು ಸಲ ಮಾತನಾಡಿದರೆ, ಮನದೊಂದು ಸಲ ಬದಲಾವಣೆಗೊಳಿಸಿ ಪ್ರತಿನಾಯಕ ನಾಯಕರಾಗಿ ಮಾತನಾಡಿದ್ದೇವೆ. ಯಕ್ಷಗಾನ ಕೂಟಗಳಲ್ಲಿ ನಮ್ಮೊಳಗೆ ಘರ್ಷಣೆಗಳುಂಟಾಗಿ ಖಂಡನ ಮಂಡನಗಳು ನಡೆಯುತ್ತಿತ್ತು. ಅದರಿಂದಾಗಿ ನಮ್ಮೊಳಗಿನ ಸಾತ್ವಿಕ ಪ್ರೇಮಕ್ಕೆ ಭಂಗವುಂಟಾಗಲಿಲ್ಲ—ಮುಂದಿನ ಯಕ್ಷಗಾನ ರಂಗಕ್ಕೆ ದಿ। ಕಿಲ್ಲೆಯವರಂತಹ ಅಸಾಧಾರಣ ವಾಗ್ಮಿಯೊಬ್ಬನು ದೊರೆತರೆ ಯಕ್ಷಗಾನ ಕಲಾ ಸರಸ್ವತಿಯ ಮುಂಭಾಗದ ಅರಿವ ಮಣಿ ದೀಪವು ಇನ್ನೊಮ್ಮೆ ಬೆಳಗುವದು. ದಿ। ಕಿಲ್ಲೆಯವರನ್ನು ಕಾಣಲಿಕ್ಕಾಗಿ ಕಳೆದ ಎಪ್ರಿಲು, ಮೇ ತಿಂಗಳಲ್ಲಿ ಡಾ। ಯಂ. ವಿ. ಶೆಟ್ಟಿರ ಆಸ್ಪತ್ರೆಗೆ 3-4ಸಲ ಹೋಗಿದ್ದೆ. ಆಗ್ಗೆ ನನ್ನೊಡನವರು ನಗುಮೊಗದಿಂದ ಪ್ರಸನ್ನಚಿತ್ತರಾಗಿ ಮಾತನಾಡಿದ್ದರೂ ನನಗೆ ನಿರಾಶೆಯೇ ಹುಟ್ಟಿತ್ತು. ನಮ್ಮ ಜಿಲ್ಲೆಯ ಕರ್ತೃತ್ವಶಾಲಿಯಾದ ಇಂಥಾ ವ್ಯಕ್ತಿಯು ಕಣ್ಮರೆಯಾದದ್ದು ಕಾಂಗ್ರೆಸಿಗೂ, ಕನ್ನಡ ಸಾಹಿತ್ಯ ಕಲೆಗೂ, ಯಕ್ಷಗಾನಕ್ಕೂ ಅಪಾರವಾದ ನಷ್ಟವಿದೆ. ದಿವಂಗತರ ಬಂಧುಗಳ ದುಃಖದಲ್ಲಿ ನಾವೂ ಸಹಭಾಗಿಗಳಾಗಿರುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯೊದಗಲಿ.

ಕಂದ॥ ಬಲ್ಲಿದ ಬಾಸೆಯ ಕಲೆಗಂ।
ಕಿಲ್ಲೆಯೆ ಸಿಂಹಾಸನವೆನೆ ಮೊದಲಿ
ಗನೆಂದಿರ್ದಯ್॥
ಒಳ್ಪತನೆಗಡೆ ಕಾಲು।
ಸಲ್ಲದ ರುಚಿಯಿಂದೊಯ್ದನೆ
ಹಾಸವೆ ನಿನ್ನಂ॥

—ಕೆ. ಪಿ. ವೆಂಕಪ್ಪ ಶೆಟ್ಟಿ.

ಪಾಣಾಜೆ 11-7-53.

ದುಃಖಸೂಚಕ ಸಭೆ—ಇದೇ ತಾ. 15ರಲ್ಲು ಸಂಜೆ ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ದಿವಂಗತ ಶ್ರೀ. ಎಸ್. ಎಸ್. ಕಿಲ್ಲೆಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲು ಸಾರ್ವಜನಿಕ ಸಭೆಯು ಶ್ರೀ. ಕೆ. ಸದಾನಂದ ಹೆಗ್ಡೆ, ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಅಧ್ಯಕ್ಷರು ಕೆಲವು ಮುಖ್ಯ ಸಂತಾಪ ಸೂಚಕ ತಂತಿಗಳನ್ನು ಓದಿ ಹೇಳಿ ಇನ್ನೂ ಅನೇಕ ಪತ್ರಗಳೂ ಬಂದಿವೆಯಾಗಿ ತಿಳಿಸಿದರು. ಬಳಿಕ ಸಂತಾಪ ಸೂಚಕ ನಿರ್ಣಯವಾಯಿತು.

ಮಂಗಳೂರು

ಮದ್ರಾಸಿನ ಹೊಸ ವಿದ್ಯಾಯೋಜನೆಯ ಕುರಿತು ಭಾಷಣ—ಇದೇ ತಾ 17ರಲ್ಲು ಸಂಜೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಭವನದಲ್ಲಿ ಸೇರಿದ ಉಪಾಧ್ಯಾಯ ಉಪಾಧ್ಯಾಯಿನಿಯರ ಸಭೆಯಲ್ಲಿ ಮದ್ರಾಸು ಸರಕಾರದ ವಿದ್ಯಾ ಸಲಹೆಗಾರರಾದ ಶ್ರೀ ಜಿ. ರಾಮಚಂದ್ರನ್ ಅವರು ಮದ್ರಾಸಿನ ಹೊಸ ವಿದ್ಯಾಯೋಜನೆಯನ್ನು ವಿವರಿಸಿ ಭಾಷಣ ಮಾಡಿದರು. ಶ್ರೀ ಕೆ. ಸದಾನಂದ ಹೆಗ್ಡೆ ಎಮ್. ಪಿ. ಅವರು ಅಧ್ಯಕ್ಷತೆ ವಹಿಸಿದರು.

ಶ್ರೀ ರಾಮ ಚಂದ್ರನ್‌ರವರು ದ. ಕ. ಜಿಲ್ಲೆಯನ್ನು ಪ್ರಶಂಸಿಸಿ ಕಾರ್ಕಳದಲ್ಲಿ ಈ ದಿನ ಅಧ್ಯಾಪಕರ ಮುಂದೆ ಭಾಷಣ ಮಾಡಿ ಈ ಹೊಸ ಯೋಜನೆಯನ್ನು ವಿವರಿಸಿರುವುದಾಗಿಯೂ, ಸಭಾಂತ್ಯದಲ್ಲಿ ಎಲ್ಲರೂ ಈ ಯೋಜನೆಗೆ ಒಮ್ಮತದ ಬೆಂಬಲ ಕೊಟ್ಟಿರುವುದಾಗಿಯೂ ತಿಳಿಸಿ 'ಈ ಯೋಜನೆಯು ಒಳ್ಳೆಯದೆಂದು ಅಭಿಪ್ರಾಯ ಪಡುವವರು ಅದನ್ನು ಯಶಸ್ವಿಯಾಗುವಂತೆ ಪ್ರಯತ್ನಿಸಬೇಕು. ಅದಕ್ಕೆ ವಿರೋಧ ಅಭಿಪ್ರಾಯವುಳ್ಳವರು ತಮ್ಮ ಅಭಿಪ್ರಾಯವನ್ನು ನಿರ್ಭೀತಿಯಿಂದ ತಿಳಿಸಬೇಕು' ಎಂದು ಮೊದಲಾಗಿ ಕೇಳಿಕೊಂಡರು.

"ಮಕ್ಕಳ ಜೀವನವು ಎಲ್ಲರ ಜೀವನಕ್ಕೂ ಸಂಬಂಧಿಸಿದ್ದಾಗಿದೆ. ನಮ್ಮಲ್ಲಿ ಬಹುಕಾಲದಿಂದಲೂ ಪ್ರಾಥಮಿಕ ವಿದ್ಯಾಭ್ಯಾಸವಿತ್ತು. ಮದ್ರಾಸಿನ ವಿದ್ಯಾಕ್ರಮವು ಅತಿ ಉತ್ತಮವೆಂದು ಹೆಸರುಗೊಂಡಿದೆ. ಈಗ ರಾಜಾಜಿಯವರು ಒಂದು ಹೊಸ ಯೋಜನೆ ತಂದಿದ್ದಾರೆ. ಎಲ್ಲೆಲ್ಲಿಯೂ ಜನರು ಈ ಹೊಸ ಯೋಜನೆ ಕುರಿತು ಮಾತಾಡುತ್ತಾರೆ. ಟೀಕಿಸುತ್ತಾರೆ ಈ ಯೋಜನೆಯನ್ನು ಜಾಗರೂಕತೆಯಿಂದ ನಾವು ತಿಳಿಯಬೇಕು. ಬಹಳ ಕಾಲದಿಂದಲೂ ಪ್ರಾಥಮಿಕ ವಿದ್ಯಾಭ್ಯಾಸವು ನಡೆದು ಕೊಂಡುಬಂದಿದೆ. ಅದು ತೃಪ್ತಿಕರವೆಂದೂ ಗಣಿಸಲ್ಪಟ್ಟಿದೆ.

ಮದ್ರಾಸಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಹದಿನೈದು ಕೋಟಿ ರೂಪಾಯಿ ಖರ್ಚಾಗುತ್ತಿದೆ. ಈ ಹಣದಲ್ಲಿ ಒಂಭತ್ತು ಕೋಟಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ವ್ಯಯಿಸಲಾಗುತ್ತಿದೆ. ಇದಿಪಕ್ಕದಲ್ಲಿ 38,000 ಪ್ರಾಥಮಿಕ ಶಾಲೆಗಳಿದ್ದು ಸಾಧಾರಣ 1,80,000 ಪ್ರಾಥಮಿಕ ಶಾಲಾ ಅಧ್ಯಾಪಕರಿದ್ದಾರೆ. ಇಷ್ಟಾದರೂ 50% ಮಂದಿ ಶಾಲೆಗೆ ಹೋಗುವ ಪ್ರಾಯದ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಹೆಚ್ಚು ಹಣ ವ್ಯಯಿಸಿ ಶಾಲೆಗಳನ್ನು ಹೆಚ್ಚಿಸಲು ಹಣದ ಅಭಾವ. ಎಲ್ಲಾ ಮಕ್ಕಳಿಗೂ ವಿದ್ಯೆಯನ್ನು ಕೊಡುವುದು ನಮ್ಮ ಕರ್ತವ್ಯ. ಈ ವಿಷಯವನ್ನು ನಾವು ಆಲೋಚಿಸಬೇಕು. ಎರಡನೆಯದಾಗಿ ಮೊದಲನೆಯ ಕ್ಲಾಸಿಗೆ ಸೇರಿದ ಪ್ರತಿ ಎಂಟು ಮಕ್ಕಳಲ್ಲಿ ಐದನೇ ಕ್ಲಾಸಿಗೆ ಬರುವವರು ಬರೀ ಮೂರು ಮಂದಿ. ಈ ರೀತಿ ವಿದ್ಯೆಯು ಕೊಟ್ಟದ್ದು ನಿಷ್ಪ್ರಯೋಜನವಾಗುತ್ತದೆ. ಮೂರನೆಯದಾಗಿ ಸಾಧಾರಣ ಸೇಕಡಾ ಎಂಭತ್ತರಷ್ಟು ಶಾಲೆಗಳಲ್ಲಿ ಒಬ್ಬ ಉಪಾಧ್ಯಾಯನು ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಕಲಿಸಬೇಕಾಗಿ ಬರುವುದು. ನಾಲ್ಕನೆಯದಾಗಿ ಬರೆ ಪುಸ್ತಕದ ವಿದ್ಯೆಯಿಂದ ಪ್ರಯೋಜನವಾಗದು. ಕೈಗಳೂ ಮೆದುಳೂ ಒಟ್ಟಾಗಿ ಕೆಲಸಮಾಡಬೇಕು. ಪಾಶ್ಚಾತ್ಯ ದೇಶಗಳಲ್ಲಿ ಈ ರೀತಿ ವಿದ್ಯೆ ಕೊಡುತ್ತಿದ್ದಾರೆ. ಐದನೆಯದಾಗಿ ಹಳ್ಳಿಗಳಲ್ಲಿ ಹೆಚ್ಚು ವಿದ್ಯೆ ಕೊಡುವುದೆಂದರೆ ವಿದ್ಯಾರ್ಥಿಗಳನ್ನು ಹಳ್ಳಿಯ ಜೀವನದಿಂದ ಬೇರ್ಪಡಿಸಿದಂತಾಗುವುದು. ಇದನ್ನು ನೋಡಿಯೇ ಗಾಂಧಿಜಿಯವರು ಕೈಗಾರಿಕೆಯ ಮೂಲಕ ವಿದ್ಯಾಭ್ಯಾಸ ಕೊಡುವುದಕ್ಕೆ ಬುನಾದಿ ಶಿಕ್ಷಣವನ್ನು ಆರಂಭಮಾಡಿದರು.

ರಾಜಾಜಿಯವರ ಯೋಜನೆಯಲ್ಲಿ ಮಕ್ಕಳನ್ನು ಮೂರು ಗಂಟೆಗಳಿಗಿಂತ ಹೆಚ್ಚು ಕ್ಲಾಸುಗಳಲ್ಲಿ ಇರಿಸಕೂಡದು. ಇದರಲ್ಲಿಯೂ ಮಧ್ಯೆ ಇಪ್ಪತ್ತು ನಿಮಿಷಗಳ ಬಿಡುವನ್ನೂ ಕೊಡಲಾಗುವುದು. ಈ ಮೂರು ಗಂಟೆಗಳಲ್ಲಿ ನಾಲ್ಕು ಪೀರಿಯಡುಗಳಿವೆ. ಬೆಳಿಗ್ಗೆ ಮೂರು, ಅಪರಾಹ್ನ ಮೂರು—ಹೀಗೆ ದಿನದಲ್ಲಿ ಎರಡು ಸರ್ತಿ ಕ್ಲಾಸುಗಳು ನಡೆಯುವವು (ಉಪಾಧ್ಯಾಯರು ತಮಗೆ ಅನುಕೂಲವಾಗುವ ರೀತಿಯಲ್ಲಿ ಸಮಯವನ್ನು ಸರಿಪಡಿಸಿ ಕೊಳ್ಳಬಹುದು.) ಹೀಗೆ ಮಾಡುವುದರಿಂದ ಈಗ ವಿದ್ಯೆ ಪಡೆಯುವ ಮಕ್ಕಳ ಸಂಖ್ಯೆಗಿಂತ ಇಮ್ಮಡಿ ಸಂಖ್ಯೆಗೆ ವಿದ್ಯೆ ಕೊಡಬಹುದು. ಇದರಲ್ಲಿ ತಾತ್ವಿಕ ವಿಚಾರವೂ ಇದೆ. ಹಳ್ಳಿಗಳ ಹಿನ್ನೆಲೆಯನ್ನು ಮರೆಯಕೂಡದು. ಹಳ್ಳಿಗಳ ಕೈಗಾರಿಕೆಗಳು, ಹಳ್ಳಿ ಜನಜೀವನ ಇವನ್ನು ಮರೆಯದಂತೆ ಮಕ್ಕಳನ್ನು ತರಬೇತುಗೊಳಿಸಬೇಕು. ಮಕ್ಕಳಿಗೆ ಹಳ್ಳಿಯ ಜನರ ವೃತ್ತಿಗಳಲ್ಲಿ ಗೌರವವುಂಟಾಗುವಂತೆ ಮಾಡಬೇಕು. ಅದಕ್ಕಾಗಿ ಅವರ ಮನೆಯವರ ವೃತ್ತಿಯನ್ನು ಕಲಿಯಲು ಅವರಿಗೆ ಅವಕಾಶ ಕಲ್ಪಿಸಿ ಕೊಡಬೇಕು. ಒಂದು ವೇಳೆ ಹೆಚ್ಚು ವೃತ್ತಿಗಳು ಹಳ್ಳಿಯಲ್ಲಿಲ್ಲದೆ ಹೋದರೆ ಮಕ್ಕಳನ್ನು ಪಂಗಡಗಳಾಗಿ ಮಾಡಿ ಒಂದೊಂದು ಕಸಬನ್ನು ನೋಡಿ, ಪ್ರಶ್ನೆ ಕೇಳಿ ತಿಳಿದುಕೊಳ್ಳುವಂತೆ ಮಾಡಬಹುದು. ಈ ರೀತಿಯಿಂದ ಹೆಚ್ಚಿನ ಉಪಯೋಗವಿದೆ. ಅಧ್ಯಾಪಕರಿಗೆ ಸ್ವಲ್ಪ ಶ್ರಮ ಜಾಸ್ತಿಯಾಗುವುದು. ದೇಶದ ಹಿತದೃಷ್ಟಿಯಿಂದ ಈ ತ್ಯಾಗವನ್ನು ಅವರು ಸಂತೋಷದಲ್ಲಿ ಮಾಡಬೇಕು' ಎಂದು ಹೇಳಿದರು. ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ 'ಪ್ರತಿ ಸಮಸ್ಯೆಯೂ ಬಗೆಹರಿಸಲ್ಪಡುತ್ತದೆ. ರಾಜಾಜಿಯವರು ಒಳ್ಳೆಯದನ್ನೇ ದೇಶಕ್ಕೆ ಕೊಟ್ಟಿದ್ದಾರೆ ನಮ್ಮಲ್ಲಿ ಪ್ರತಿ ಸಮಧಾರಣೆಗೂ ಜಾತೀಯ ಬಣ್ಣವನ್ನೂ ಬಳಿಯುವುದು ಶೋಚನೀಯ. ಈ ಯೋಜನೆಗೆ ಬೆಂಬಲ ಕೊಡುವುದು ಅವಶ್ಯಕ'ವೆಂದು ಹೇಳಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಬೆಳ್ಳಾರೆ—ಸ್ಥಳೀಯ ಹೈಸ್ಕೂಲಿನಲ್ಲಿ ವನಮಹೋತ್ಸವವು ತಾ 9ರಲ್ಲು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಎನ್. ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಮಾರಪ್ಪ ಸೆಟ್ಟಿ, ಕೆ. ನಾರಾಯಣ ರಾವ್ ಪಟೇಲ್ ನಾರಾಯಣ ಶೇಕ ಮೊದಲಾದವರು ಭಾಷಣ ಮಾಡಿದರು. ಸಭಾರಂಭದ ಪೂರ್ವದಲ್ಲಿ ಡಾ। ಶ್ಯಾಮ ಪ್ರಸಾದ ಮುಖರ್ಜಿ ಮತ್ತು ಶ್ರೀ ಎಸ್. ಎಸ್. ಕಿಲ್ಲೆಯವರ ನಿಧನದ ಕುರಿತು ದುಃಖ ಸೂಚಕ ನಿರ್ಣಯಗಳಾದುವು.

ಕೊಳ್ಕೆಬೈಲು:— ಇಲ್ಲಿಯ ನಡುಮನೆಯ ಯಜಮಾನ ಶ್ರೀ ಗಿರಿಯಪ್ಪ ಸೆಟ್ಟಿರು ಇದೇ ತಾ 16 ರಲ್ಲು ಬೆಳಿಗ್ಗೆ ಹೃದಯ ಸ್ತಂಭನದಿಂದಾಗಿ ತಮ್ಮ 60 ನೆ ವಯಸ್ಸಿನಲ್ಲಿ ವಿಧಿವಶರಾದರು. ಮೃತರ ದುಃಖೀ ಕುಟುಂಬದೊಡನೆ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು.

ಚೇರ್ಕಾಡಿ:— ಸ್ಥಳೀಯ ಆರ್. ಕೆ. ಪಾಟ್ಕರ್ ಶಾರದಾ ಹಾ। ಎ। ಶಾಲಾವಠಾರದಲ್ಲಿ ಇದೇ ತಾ 12 ರಲ್ಲು ಸಸಿ ನೆಡುವ ದಿನಾಚರಣೆಯು ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಜರಗಿತು.

ಶಿರ್ವ:— ಇದೇ ತಾ 17 ರಲ್ಲು ಶಿರ್ವ ಪಂಚಾಯತ ಬೋರ್ಡಿನ ಸಭೆಯು ಶ್ರೀ ಎಸ್. ಅಣ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ, ಈ ಕೇಂದ್ರದಲ್ಲಿ ಅಗ್ಗ ದರದ ಅಕ್ಕಿ ಡಿಪ್ಪೋವನ್ನು ತೆರೆಯುವಂತೆ ಸಂಬಂಧ ಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಕಾಸರಗೋಡು:— ಪಂಚಾಯತ ಬೋರ್ಡಿನ ಚುನಾವಣೆಯು ತಾ 15 ರಲ್ಲು ಜರಗಿ ಶ್ರೀ ಎಸ್. ಲಕ್ಷ್ಮಣ ರಾಯರು ಅಧ್ಯಕ್ಷರಾಗಿ ಬಹುಮತಗಳಿಂದ ಆರಿಸಲ್ಪಟ್ಟರು.

ಕುಂಬಳೆ—ಸ್ಥಳೀಯ ಪಂಚಾಯತ ಬೋರ್ಡಿನ ಸ್ಪೆಶಲ್ ಸಭೆಯು ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ತಾ 10ರಲ್ಲು ಸೇರಿ ಊರಲ್ಲಿ ರಕ್ತಾತಿಸಾರ ರೋಗವು ಹಬ್ಬುತ್ತಿರುವುದನ್ನು ತಡೆಗಟ್ಟುವರೆ ಔಷಧೋಪಚಾರಗಳಿಗಾಗಿ ರೂಪಾಯಿ 400 ಸಂಕ್ಷನ್ ಮಾಡಲಾಯಿತು

ಕಾರ್ಕಳ—ಮದ್ರಾಸು ಎಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗೆ ಕಾರ್ಕಳ ಕ್ಷೇತ್ರದಿಂದ ಮತದಾನ ಮಾಡುವವರ ಪಟ್ಟಿಯು ಇದೇ ತಾ 6ರಲ್ಲು ಪ್ರಕಟವಾಗಿದೆ ಹೆಸರುಗಳ ಕುರಿತು ಲೋಪ ದೋಷಗಳಲ್ಲಿ ಸಂಬಂಧ ಪಟ್ಟವರು ಇದೇ ತಾ 2 ರೊಳಗಾಗಿ ಕಾರ್ಕಳ ತಹಶಿಲ್ದಾರರಿಗೆ ಬರೆದುಕೊಳ್ಳುವುದು.

ಉದ್ಯಾವರ—ಸ್ಥಳೀಯ ಸೈಂಟ್ ಕ್ಸೇವಿಯರ್ ಹಾ। ಎ। ಶಾಲೆಯಲ್ಲಿ ಇದೇ ತಾ 4ರಲ್ಲು ವನಮಹೋತ್ಸವವು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಭಾಸ್ಕರ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ತಹಶಿಲ್ದಾರ್ ಶ್ರೀ ಕೆ ಲಿಂಗಪ್ಪಯ್ಯ, ಶ್ರೀ ಯು. ಪಿ. ಮೋಸ್ತ ಮೊದಲಾದವರು ಸಾಲೋಚಿತ ಮಾತುಗಳನಾಡಿದರು. ಶ್ರೀ ಸಿಲ್ವೆಸ್ಟರ್ ನೊರೋಞಾರು ಧನ್ಯವಾದಗಳನ್ನರ್ಪಿಸಿದರು

ವಿಶಾಜಾರು—ಸರಕಾರದ ಹುಕುಮೆರೆಗೆ ಎಡಪದವು ಬೋರ್ಡ್ ಎಲಿಮೆಂಟರಿ ಶಾಲೆಯು ಹಾ। ಎ। ಶಾಲೆಯಾಗಿ ಮಾರ್ಪಟ್ಟು ಅದರ ಪ್ರಾರಂಭೋತ್ಸವವು ಇದೇ ತಾ 12ರಲ್ಲು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಆರ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ರಾಮರಾವ್ ಮೊದಲಾದವರು ಮಾತನಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಮ್. ಕೆ. ಸಿದ್ದು ಧನ್ಯವಾದಗಳನರ್ಪಿಸಿದರು.

ಬೇಳೂರು:— ಕುಂದಾಪುರ ಟಾಕಿನ ಕೊನೆಯ ಗ್ರಾಮವಾದ ಬೇಳೂರು ಚವಳ್ಳಿ ಹೊಳೆಗೆ ಸರಕಾರದ ಅಡಿಯ ಹಾಕಿಸಲಾದ ಸೇತುವೆ ಕೆಲಸವು ಈಗ ಸಂಪೂರ್ಣವಾಗಿದ್ದು ಜನ ಸಂಚಾರಕ್ಕೆ ಅನುಕೂಲವಾಗಿದೆ.

ಮಣಿಪಾಲ—ಹರಿಜನ ವಿದ್ಯಾರ್ಥಿನಿಲಯದ ಆಡಳಿತ ಮಂಡಳಿಯ ಸಭೆಯು ತಾ [illegible]ಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಹರಿಜನ ಸೇವಕ ಶ್ರೀ ಎಸ್. ಎಸ್. ಕಿಲ್ಲೆಯವರ ನಿಧನಕ್ಕೆ ದುಃಖ ಸೂಚಕ ನಿರ್ಣಯವಾಯಿತಲ್ಲದೆ ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಲಾಯಿತು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹೆವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಹಿರಿಯರ ಆಶೀರ್ವಾದ

[೧ನೇ ಪುಟದಿಂದ]

ಇದನ್ನು ಸಹ ಹಿರಿಯರ ಸೊಂಕೇ ಬೇಡವೆನ್ನುವ ಮಟ್ಟಿಗೆ ತಾತ್ಸಾರ ತೋರಲು ಸರಿಯಾದ ಕಾರಣವೆಂದು ಪರಿಗಣಿಸಲಾಗದು. ಒಂದು ದೃಷ್ಟಿಯಿಂದ ನೋಡಿದರೆ-ಇಂಥ ದುರಾದೃಷ್ಟವಂತರು, ತಮ್ಮ ಹಿರಿಯರನ್ನು ಉಳಿದ ಹುಡುಗ-ಹುಡುಗಿಯರಿಗಿಂತಲೂ ಹೆಚ್ಚು ವಾತ್ಸಲ್ಯ ಹಾಗೂ ಸ್ನೇಹದಿಂದ ನಡೆಸಿಕೊಳ್ಳುವುದವಶ್ಯ. ನಮ್ಮ ತಿರಸ್ಕಾರ ಪೂರ್ಣ ನಡವಳಿಕೆಯು ಹಿರಿಯರಿಗೆ ಪ್ರಬಲಾ ಘಾತವಾಗಿ ಪರಿಣಮಿಸಿ, ಅವರ ನರಕ ಸದೃಶವಾದ ಬದುಕನ್ನು ಇನ್ನೂ ಕೆಟ್ಟ ಸ್ಥಿತಿಗೆ ಇಳಿಸೀತು. ತನ್ನ ಮಕ್ಕಳೇ ತನ್ನನ್ನು ಅವಾಚ್ಯ ಶಬ್ದಗಳಿಂದ ಬೈದು-ಭಂಗಿಸ ವರೆನ್ನುನ, ಅವಹೇಳನೆಮಾಡಿ ತಪಿಸುವರೆನ್ನುವ ಭಾವನಾ ಮಾತ್ರದಿಂದ, ಮೊದಲೇ ಜರ್ಜರಿತವಾದ ಅವರ ಅಂತಃಕರಣ ಮಮ್ಮಲ ಮರುಗಿ ಕೊಂಡೀತು, ಅವರ ತಲೆ ಸಿಡಿದು, ಹುಚ್ಚರಂತಾದರೂ ಆಶ್ಚರ್ಯವಿಲ್ಲ ಇಂಥ ಪ್ರಸಂಗದಲ್ಲಿ ತಂದೆ ತಾಯಿಗಳನ್ನು ಮಕ್ಕಳು ತುಂಬ ಪ್ರೀತಿ ವಿಶ್ವಾಸಗಳಿಂದ ಗೌರವಾದರಗಳಿಂದ ನೋಡಿಕೊಳ್ಳುವುದು ಅವರ ಬದುಕಿನ ಗತಿ ವಿಧಿಯನ್ನು ಬದಲಾಯಿಸುವುದಕ್ಕೆ ಸಹಕಾರಿಯಾಗುತ್ತದೆ. ಇಡೀ ಸಮಾಜವೇ ತನ್ನನ್ನು ಅವಹೇಳನೆ ಮಾಡುತಿದ್ದರೂ ತನ್ನ ಮಕ್ಕಳು ತನ್ನನ್ನು ಗೌರವ ಹಾಗೂ ಸ್ನೇಹದಿಂದ ಕಾಣುತ್ತಿರುವುದನ್ನು ಕಂಡ ಆ ಪಾಪಿಗಳು ತಮ್ಮಂತೆ ತಮ್ಮ ಕಂದಮ್ಮಗಳೂ ನರಕ ಜೀವನವನ್ನು ಅನುಭವಿಸಲಾಗದೆಂದು ಬಯಸಿ, ಸ್ವಂತ ಬಾಳ್ವೆಯನ್ನು ತಿದ್ದಲು ಪ್ರಯತ್ನಿಸುವ ಸಂಭವವಿದೆ

ಕೆಲವೊಮ್ಮೆ ನಾವು ಗುರುಹಿರಿಯರ ಬಾಹ್ಯ ವರ್ತನೆಯ ಮೇಲಿಂದ ಅವರ ಕುರಿತಾದ ಗೌರವ ಹಾಗೂ ಸದ್ಭಾವನೆಯನ್ನು ತ್ಯಜಿಸಿ ಬಿಡುವುದುಂಟು ಉದಾಹರಣೆಗೆ "ನೀನು ಉಣದಿದ್ದರೆ ಉಪವಾಸ ಬಿದ್ದು ಸಾಯಿ, ನನಗೇನು" ಎಂದೊಬ್ಬಳು ಮಾತೆ ಹರಮಾರಿ ಮಗುವಿನ ಮನನೋಯಿಸುವ ಒದಲು ಸಿಡಿಮಿಡಿಗೊಳ್ಳಬಹುದು. ಆದರೆ ಅದೇ ಮಗು ತಲೆ ಸಿಡಿತವೆಂದು ಗೋಳಾಡಿದರೆ, ಜ್ವರಬಂದು ಹಾಸಿಗೆ ಹಿಡಿದರೆ- ಆಗ ಮಾತೃಹೃದಯ ಎಷ್ಟರ ಮಟ್ಟಿಗೆ ಜಾಗೃತಗೊಳ್ಳುವುದೆಂದೂ ಆಕೆಯ ಸ್ನೇಹಪೂರ್ಣ ದೃಷ್ಟಿ ಎಂಥ ಬಿಗಿಯಾದ ಕಾವಲನ್ನು ಮಗುವಿನ ಮೇಲಿಡುತ್ತದೆಂದೂ ಸ್ಪಷ್ಟವಾಗಿ ತಿಳಿಯುತ್ತದೆ. ಬಾಬರನು ಹುಮಾಯೂನನಿಗೆ ಪ್ರೀತಿಯ ತಂದೆಯಾಗಿದ್ದನು-ಆದರೆ ಮಗನ ಪಾಲಿಗೆ ನಿಜಕ್ಕೂ ಕಟುಕನಂತೆ ಕಂಡು ಬಂದ ತಂದೆ ಕೂಡ ತನ್ನ ಪುತ್ರನ ಶ್ರೇಯೋಕಾಂಕ್ಷಿಯಾಗಿ ಎಂಥ ಬಲಿದಾನವನ್ನೂ ಮಾಡಬಲ್ಲನೆಂಬುದು ಸತ್ಯ. ತನಗೆ ತಿನ್ನಲು ಕೂಳಿಲ್ಲದಿದ್ದರೂ ತನ್ನ ಮಕ್ಕಳಿಗೆ ಗಂಜಿಯುಣ್ಣಿಸುವ, ಮತ್ತು ತಾನು ಅರೆ ಬತ್ತಲೆಯಾಗಿ ತಿರುಗಿದರೂ ಮಗುವಿಗೆ ಬೆಚ್ಚನಾದ ಹಾಸಿಗೆ ಹಾಸಿ ಕೊಡುವ ತಾಯಿಯ ವಾತ್ಸಲ್ಯವನ್ನು ನಾವು ತುಚ್ಛೀಕರಿಸುವುದು ಸಲ್ಲದು.

ಮಕ್ಕಳನ್ನು ಅನ್ಯಾಯವಾಗಿ ನಡೆಸಿಕೊಳ್ಳುವ ತಂದೆ ತಾಯಿಗಳು ಇಲ್ಲವೆಂದು ಹೇಳಲಾರೆವು ಆದರೆ ನುಯ್ಯಿಗೆ ನುಯ್ಯಿಯೆಂಬಂತೆ ನಾವು ಸಹ ಹಿರಿಯರನ್ನು ತುಚ್ಛೀಕರಿಸುವುದು ಹಿತಪ್ರದವಲ್ಲ. ತಮ್ಮ ಮಕ್ಕಳಿಂದ ಒಳ್ಳೆಯ ಮಾತನ್ನು ಕೇಳಬೇಕೆಂದು ಯಾವ ತಂದೆ ತಾಯಿಗಳು ಬಯಸುವುದಿಲ್ಲ? "ಅಮ್ಮಾ" ಎಂದೆನ್ನುವ ಒಂದು ಮುದ್ದಿನ ಮಾತು ಕೇಳುವ ಹಂಬಲದಿಂದಲೇ ಗೃಹಿಣಿಯರು ನೋಂಪಿಯನ್ನು ನೋಂತರೆನ್ನುವುದಕ್ಕೆ ಯಥೇಷ್ಟ ಉದಾಹರಣೆ ಸಿಗುತ್ತದೆ. ಈಗಿನ ಹುಡುಗ ಹುಡುಗಿಯರಿಗೆ ಅತ್ಯಂತ ಪ್ರಿಯಜನರೆನಿಸಿದ ಸಿನೆಮಾ ತಾರೆಯರೂ ಇದಕ್ಕೆ ಅಪವಾದವಲ್ಲ ದಕ್ಷಿಣದ ಸುಪ್ರಸಿದ್ಧ ಸಿನೆಮಾ ನಟಿ ವಸುಂಧರಾದೇವಿ ಅಕಸ್ಮಾತ್ತಾಗಿ ಒಂದು ಗೌರವ ಕೂಟದಲ್ಲಿ ತನ್ನ ಮಗಳು ವೈಜಯಂತೀಮಾಲೆಯನ್ನು ಮುಂದಿನ ಸಾಲಿನಲ್ಲಿ ನೋಡಿದಾಗ, ಅವಳ ಕರುಳು ನೊಂದ ಬಗೆಯನ್ನು ಎಣಿಸಲು ಬಾರದು. ಎಷ್ಟೋ ವರ್ಷಗಳಿಂದ ಹತ್ತಿಕ್ಕಿದ ಬಯಕೆ ಬಂಧನವನ್ನು ಕಡಿದೊಗೆದು, ಮಗಳ ಬಳಿ ಓಡಿ ಹೋಗಿ, ಅಪ್ಪಿ ಮುದ್ದಿಟ್ಟುಕೊಳ್ಳೋಣವೆನ್ನುವಂತೆ ವಸುಂಧರೆಯನ್ನು ಪ್ರೇರಿಸಿತು. ಆದರೆ ಶಿಷ್ಟಾಚಾರವೊಂದಿದ್ದುದಲ್ಲ—ಅದರ ಪ್ರಭಾವದಿಂದ ಆಕೆ ಮೂಕ ಪ್ರೇಕ್ಷಕಳಾಗಿಯೇ ಉಳಿದಳು ಈ ಘಟನೆ ತಾನು ಜೀವಮಾನದಲ್ಲಿ ಮರೆಯುವಂಥದಲ್ಲವೆಂದು ವ ಎಂದರೆ ಹೇಳುತ್ತಾಳೆ. ನಮ್ಮ ಮುಖ್ಯೋಪಾಧ್ಯಾಯರ ಕೋಳಿಕೆಯನ್ನು ಇನ್ನೊಂದು ಉದಾಹರಣೆಯಾಗಿ ಕೊಡಬಹುದು—"ಮೂರು ಕಾಸಿನ ನಾಯಿ." ಎಂದವರು ಹುಡುಗರನ್ನು ಭರ್ತ್ಸನೆ ಮಾಡುತಿದ್ದಂತೆ, ಅವರ ಹೃದಯಾಂತರಾಳದಲ್ಲಿ ಸ್ನೇಹದ ಬುಗ್ಗೆ ಚಿಮ್ಮಿ ಹರಿಯುತ್ತದೆ; ಬೀಸಿ ಹೊಡೆಯಲೆಂದು ಕೈಯಲ್ಲಿ ಎತ್ತಿದ್ದ ಬೆತ್ತ ತಾನಾಗಿಯೇ ಕೆಳಗಿಳಿಯುತ್ತದೆ. ಮುಂದೊಂದು ದಿನ ಅವರು ನಿವೃತ್ತಿಗೊಂಡಾಗ, ಈ ಮಾತನ್ನು ಅತ್ಯೀಯ ಶಿಷ್ಯನೊಬ್ಬ ಆಡಿ ತೋರಿಸಿದ. ಆಗ ವಾತ್ಸಲ್ಯ ತುಂಬಿದ ಆ ಗುರುಹೃದಯ ಮಮ್ಮಲ ಮರುಗಿತು.

ಕೇವಲ ಗೊಡ್ಡು ತರ್ಕಗಳ ಮೂಲಕ ಜನರಲ್ಲಿ ವಿಸ್ಮಯವನ್ನು ಹುಟ್ಟಿಸಿ, ತಮ್ಮ ಕಡೆಗೆ ಆಕರ್ಷಿಸಿಕೊಳ್ಳುವ ಕಲೆಯನ್ನು ಈ ಶತಮಾನದ ಲೇಖಕನೇಕರು ಉಪಯೋಗಿಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ- ಈ ಜನರು ಅಂದಿನ ರೂಢಿ ನಿಯಮಗಳನ್ನು ಅಂಧಶ್ರದ್ಧೆ ಹಾಗೂ ಅಪ್ರಾಗತಿಕವೆಂದು ತಿರಸ್ಕರಿಸಿ, ಹುಡುಗ ಹುಡುಗಿಯರ ಪ್ರೀತಿ ಸಂಪಾದಿಸಲು ನೋಡುವರು. ಪಾಶ್ಚಾತ್ಯ ವಿಚಾರಕರಲ್ಲಿ ಹೆಸರಾದ ದಿವಂಗತ ಜೋಡರಂಥ ಪ್ರತಿಭಾಶಾಲಿ ಲೇಖಕರೂ ತರುಣರನ್ನು ತಪ್ಪು ಮಾರ್ಗಕ್ಕೆ ಎಳೆಯುತಿದ್ದರು. ತಮಗೆ ಮಾಡಲಿಕ್ಕೆ ಏನೂ ಕೆಲಸವಿಲ್ಲವೆಂದು ಹುಡುಗರಿಗೆ ಬುದ್ಧಿ ಹೇಳುವುದಕ್ಕೆ ಹಿರಿಯರು ಹೋಗುವರೆಂದೂ ತಾವು ಮಾಡಿ ಮುಗಿಸಿದುದನ್ನು ಹುಡುಗರು ಮಾತ್ರ ಮಾಡಲಾಗದೆಂದು ಹಿರಿಯರು ಆಕ್ಷೇಪಿಸುವರೆಂದೂ ಜೋಡರ ಆರೋಪ ಅವರ ತೀಕ್ಷ್ಣವಾದ ವಾಗ್ಸರಣಿ ಈಗಿನ ಯುವಕ-ಯುವತಿಯರ ತಲೆಯನ್ನು ನಿಜಕ್ಕೂ ತಿರುಗಿಸಿ ಬಿಡಬಲ್ಲುದು. ಆದರೆ ಹಿರಿಯರ ನಿಂದೆ ಮತ್ತು ಶಾಪಗಳಿಗೊಳಗಾದ ಯಾವ ವ್ಯಕ್ತಿಯೂ ಜೀವನದಲ್ಲಿ ಮಹತ್ವವಾದುದನ್ನು ಪಡೆದಿಲ್ಲವೆಂದು ಇತಿಹಾಸ ಸಾಕ್ಷಿ ಹೇಳುತ್ತದೆ. ಬದಲು ತೀರಾ ವಿರೋಧಾಭಾಸವೆಂದು ಕಂಡರೂ ಹಿರಿಯರ ಆಶೀರ್ವಾದವನ್ನು ಶಿರೋಧಾರ್ಯಮಾಡಿ, ಅವರ ಬಯಕೆಯಂತೆ ನಡೆದವರ ಕಲ್ಯಾಣವಾಗುತ್ತದೆಂದು ಪ್ರಾಚೀನ ಪರಂಪರೆ ತಿಳಿಸುತ್ತದೆ. ರಾಮನನ್ನು ಕೈಕೇಯಿಯು ವನವಾಸಕ್ಕೆ ಅಟ್ಟಿದುದರಿಂದಲೇ ರಾಮಚಂದ್ರನ ಮಹಿಮೆ ಜಗತ್ತಿಗೆ ತಿಳಿದು ಬಂದಿತು. ಕೌರವನ ವಿರುದ್ಧ ಕ್ಷಣ ಕ್ಷಣಕ್ಕೂ ಸಿಡಿದೇಳುತಿದ್ದ ಭೀಮಾರ್ಜುನರು ಧರ್ಮರಾಯನ ಹಿರಿತನದ ಮಾರ್ಗದರ್ಶನವನ್ನು ಒಪ್ಪಿದುದರಿಂದಲೇ—ಲೋಕೋತ್ತರವಾದ ಕೀರ್ತಿ ಹಾಗೂ ವಿಜಯವನ್ನು ಹೊಂದಿದರು.

ಹಿರಿಯರ ಮಾತು ಮೀರಿ ನಡೆಯುವುದೆಂದರೆ, ಅಭಿಮಾನ ಧನವನ್ನು ಕಳೆದುಕೊಂಡಂತೆಯೇ. ಸ್ವಾಭಿಮಾನವೇ ಮನುಷ್ಯನಲ್ಲಿರುವ ಅಮೂಲ್ಯ ವಸ್ತು ವ್ಯಕ್ತಿತ್ವ ಮನೆ ಕುಟುಂಬ, ವಾತಾವರಣ ಮತ್ತು ಸಮಾಜಕ್ಕೆ ಉನ್ನತ ಸ್ಥಾನದ ರುತ್ತದೆ. ವ್ಯಕ್ತಿತ್ವ ತೀರಾ ಅಲ್ಪವಾದರೂ ಸಾಕು—ಸಮಾಜದ ತನ್ನ ಸ್ಥಾನವನ್ನು ಮನುಷ್ಯ ಭದ್ರ ಮಾಡಿ ಕೊಳ್ಳುವನು. ಮನೆಯವರಿಂದ ತಿರಸ್ಕೃತನಾದವನನ್ನು ಸಮಾಜವೂ ಗೌರವದಿಂದ ನೋಡುವುದಿಲ್ಲ. ತಂದೆ ತಾಯಿಗಳಿಗೆ ಅವಿಧೇಯನಾದವನ ಮೇಲೆ ದೇವರ ಕೃಪೆಯೂ ಇರಲಾರದು. ಗುರುಹಿರಿಯರ ವಚನ ಮೀರಿದವನು ಬೇರೆ ಯಾರ ಮಾತು ಕೇಳಿಯಾನು? ಆದುದರಿಂದ ಹಿರಿಯರ ಆಶೀರ್ವಾದವನ್ನು ನಾವು ಸಂಕುಚಿತ ದೃಷ್ಟಿಯಿಂದ ನೋಡಬಾರದು. ಅದು ಪರಮಾವಶ್ಯಕವಾದ, ಸರ್ವ ಶಕ್ತಿ ಸಂಪನ್ನವಾದವರ ಪ್ರಸಾದವೆಂದೇ ಗ್ರಹಿಸಬೇಕು. ಮನುಷ್ಯ ತನ್ನ ನೆಲೆಯನ್ನು ಹುಡುಕುತ್ತಾ ಸಾಗುವಾಗ ಅವನಿಗೆ ಯೋಗ್ಯ ಮಾರ್ಗದರ್ಶನ ನೀಡುವ ಹಾಗೂ ಅವನಲ್ಲಿ ಶಕ್ತಿಸಾಮರ್ಥ್ಯಗಳನ್ನೂ ಸಹನೆ ತಾಳ್ಮೆಯನ್ನೂ ಸಕಲ ಸದ್ಗುಣವನ್ನೂ ತುಂಬುವ ಏಕಮಾತ್ರ ವಸ್ತು— ಹಿರಿಯರ ಆಶೀರ್ವಾದ. ಹಿರಿಯರ ತಪ್ಪು ನಡೆಗಳ ಹಾಗೂ ಅನ್ಯಾಯದ ನಿಣಾಯಕರಾಗಿ ನಾವು ವರ್ತಿಸುವುದಾದರೆ, ಶೂನ್ಯದಲ್ಲಿ ವಿಹರಿಸಿದಂತೆಯೇ ಕೇವಲ ಭ್ರಮೆ. ಸಮಾಜದ ಸ್ವಾಸ್ಥ್ಯ, ಗೃಹ ಸೌಖ್ಯ ಹಾಗೂ ಅನೇಕ ಶ್ರೇಯಸ್ಸನ್ನು ಬಯಸುವವರೆಲ್ಲರೂ ಹಿರಿಯರ ಆಶೀರ್ವಾದವೆನ್ನುವ ಅಭೇದ್ಯ ರಕ್ಷಾ ಕವಚವನ್ನು ಧರಿಸುವುದಕ್ಕೆ ಹಿಂಜರಿಯಬಾರದು. ಹಿರಿಯರ ವಿರುದ್ಧ ಬಂಡೆದ್ದ ಮನಸ್ಸು, ತನ್ನ ಉದ್ಧಟತನಕ್ಕೆ ಒಂದಲ್ಲ ಒಂದು ದಿನ ಪಶ್ಚಾತ್ತಾಪಪಡಲೇ ಬೇಕಾಗುವುದು--ಇದು ನಿಸರ್ಗ ನಿಯಮ. ಆಗಿನ ಪಶ್ಚಾತ್ತಾಪಾಗ್ನಿ ವ್ಯಕ್ತಿತ್ವವನ್ನೇ ನಶಿಸಿಬಿಡುವುದರಿಂದ--ಬದುಕು ಅಂದಗೆಡುತ್ತದೆ. ಅಂಥ ಪ್ರಸಂಗಕ್ಕೆ ಅವಕಾಶ ಕೊಡದೆ ಸುಖರೂಪದಿಂದ ಬಾಳಿ ಬದುಕುವುದಕ್ಕೆ ... ಯತ್ನಿಸುವುದರಲ್ಲಿಯೇ ನಮ್ಮ ಶ್ರೇ... ರೆ...ವ ತಪ್ಪು ಮಾಡದಿರೋಣ!

— ಹಿಂತಕ್ಷತ್॥

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರಸಾಯನ.



ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟ್. (ಮಂಗಳೂರು)
ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮರಾವ್, ಕಿಂಜಬೆಟ್ಟು, ಉಡುಪಿ.

ಬೇಕಾಗಿದ್ದಾರೆ.

ಮೂರು ಸೆಕೆಂಡ್ರಿ ಗ್ರೇಡ್ ತರಬೇತಾದ ಉಪಾಧ್ಯಾಯರು.

ಮಾಹಿತಿಗೆ ವಿಚಾರಿಸಿ:—
ಮೆನೇಜರ್,
ಆದಿಉಡುಪಿ ಹಾ। ಎ। ಶಾಲೆ,
ಉಡುಪಿ.

(ಅರ್ಜಿಯ ನಕಲೊಂದನ್ನು ಉಡುಪಿ ಉತ್ತರ ಶ್ರೇಣಿಯ ವಿದ್ಯಾಧಿಕಾರಿಗಳಿಗೂ ಕಳಿಸುವುದು.)

ಆಧುನಿಕ ನಾಗರಿಕತೆಗೊಂದು ಸವಾಲು

[೨ನೇ ಪುಟದಿಂದ]

ವೇ ವ್ಯಯಿಸಿದರು. ಜಪಾನು ದೇಶದ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಿಸುವ ಸಂಕಲ್ಪ ಕೈಗೊಂಡರು. ಅದಕ್ಕಾಗಿ ಅವರೇನು ಬಲಿದಾನ ಮಾಡಿದರೋ ಅದರ ಬೆಲೆಯನ್ನು ಗೊತ್ತುಪಡಿಸುವುದು ಇತಿಹಾಸಕ್ಕೆಯೇ ಸಾಧ್ಯ.

❖

ಒಬ್ಬ ಸಫಲ ಲೇಖಕ ಹಾಗೂ ಕಾದಂಬರೀಕಾರನೆಂದು ಕಗಾವಾ ತನ್ನ ಜೀವನದ ಕಳೆದ ೪೦ ವರ್ಷಗಳಲ್ಲಿ ಸಾಕಷ್ಟು ಅಧಿಕ ಸಂಪತ್ತನ್ನು ಗಳಿಸಿರುವರು ಆದರೆ ತನ್ನ ಸ್ವಂತದ ಸುಖ ಅಥವಾ ಅನುಕೂಲತೆಗಳಿಗೋಸ್ಕರ ಅವರೊಂದು ಕವಡೆಯನ್ನೂ ವೆಚ್ಚ ಮಾಡಿಲ್ಲ.

ಟೋಕಿಯೋ ನಗರದ ಹೊರಗೆ ಒಂದು ಚಿಕ್ಕ ಸ್ಥಳದಲ್ಲಿ ಅವರು ತನ್ನ ಕೈಯಿಂದಲೇ ಹಳೆಯ ಮರದ ದಿಮ್ಮಿ ಮತ್ತಿತರ ಅಗ್ಗದ ವಸ್ತುಗಳಿಂದ ಒಂದು ವಾಸ್ತುಗೃಹವನ್ನು ರಚಿಸಿಕೊಂಡಿದ್ದಾರೆ. ಇಲ್ಲಿಯೇ ಅವರು ತನ್ನ ಕೌಟುಂಬಿಕರೊಡನೆ ನೆಲೆಸಿದ್ದು, ಜೀವನಯಾಪನೆಗಾಗಿ ತಿಂಗಳಿಗೆ ನೂರು ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಜೀವನನಿರ್ವಾಹದ ಸಂಬಂಧದಲ್ಲಿ ಅವರ ವಿಚಾರವು ಗಾಂಧೀಜಿಯಂತೆ ಆಧ್ಯಾತ್ಮಪರವಾಗಿದೆ—"ಪ್ರತಿಯೊಬ್ಬ ವ್ಯಕ್ತಿಯೂ ತನ್ನೆಲ್ಲ ಕೆಲಸವನ್ನು ಸ್ವಂತ ಮಾಡಿಕೊಳ್ಳುವಷ್ಟು-ಇನ್ನೊಬ್ಬನನ್ನು ಎಷ್ಟೇ ಅಲ್ಪಾಂಶಕ್ಕಾಗಲೀ ಅವಲಂಬಿಸದಷ್ಟು—ಸರಳತೆಯಿಂದ ಬದುಕಬೇಕು. ತಮ್ಮ ಕೈಯಿಂದಲೇ ಕಟ್ಟಿದ ಮನೆಯಲ್ಲಿ ಇರುವ, ತಮ್ಮ ಕೈಯಿಂದಲೇ ಬೆಳೆಸಿದ ತರಕಾರಿ ಉಣ್ಣುವ ಮತ್ತು ತಮ್ಮ ಕೈಯಿಂದಲೇ ನೇದ ಬಟ್ಟೆಯನ್ನು ಉಡುವ ಜನಮಾತ್ರ ಸ್ವಾತಂತ್ರ್ಯದ ನಿಜಾನುಭವವನ್ನು ಪಡೆಯಲು ಶಕ್ತರು." ಕಗಾವಾರ ಈ ಸ್ವಾವಲಂಬನ ಸೂತ್ರ ಎಂಥ ಸೋಮಾರಿಯನ್ನೂ ಹೊಡೆದೆಬ್ಬಿಸುವಂತಿದೆ. ಈ ಭಾವನೆಯು ಕಗಾವಾರಲ್ಲಿ ಅವರ ಬಾಲ್ಯದ ದಿನಗಳೇ ರೂಪಿಸಿದವೆನ್ನಬಹುದು. ಈಗ ೬೫ವಯಸ್ಸು ಅವರಿಗೆ. ಜಪಾನಿನ ಕೋಬೆ ದ್ವೀಪದಲ್ಲಿ ಅವರು ಜನಿಸಿದರು. ಅವರ ತಂದೆಗೆ ಧಾರಾಳ ಸಂಪತ್ತಿದ್ದಿತು. ಆದರೆ ವಿಶಾಲವಾದ ವಿಶ್ವಗೃಹದಲ್ಲಿ ಸ್ವತಃ ಕಗಾವಾರಿಗೆ ಏನೇನೂ ಸುಖ ದೊರೆಯಲಿಲ್ಲ. ಇನ್ನೂ ನಾಲ್ಕುವರ್ಷದವರಿದ್ದಾಗ ತಂದೆ ಮರಣ ಹೊಂದಿದರು. ಆನಂತರ ಇವರು ತಮ್ಮ ಸಹೋದರಿಯೊಂದಿಗೆ ಮಲತಾಯಿಯ ಬಳಿಗೆ ಹೋದರು. ಅಲ್ಲಿ ಇವರನ್ನು ಬಹಳ ನಿರ್ದಯತೆಯಿಂದ ನಡೆಸಿಕೊಂಡರು. ಒಂದು ಸಣ್ಣ ತಪ್ಪು ಘಟಿಸಿದರೂ-ಅದಕ್ಕೆ ಬಿಸಿಮಾಡಿದ ಲೋಹದಿಂದ ಬರೆ ಹಚ್ಚುತಿದ್ದರು! ಈ ವಿಪತ್ತುಗಳು ಕಗಾವಾರ ಬಾಲ್ಯ ದಿನಗಳಲ್ಲಿ ಇನ್ನೂ ಹೆಚ್ಚಿಕೊಂಡವು. ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲದೆ, ಅವರ ಜೀವನ ಮುಗಿಯುವಂತೆಯೇ ಆಯಿತು. ಆದರೆ ಸುದೈವದಿಂದ ಕೆಲವು ಅಮೇರಿಕನ್ ಪಾದ್ರಿಗಳ ಸಂಪರ್ಕ ಕಗಾವಾರಿಗೆ ಆಗಲು, ಮುಂದೆ ಅವರ ಜೀವನ ಗತಿಯೇ ಮಾರ್ಪಾಟು ಹೊಂದಿತು. ಈ ಪಾದ್ರಿಗಳ ದೆಸೆಯಿಂದ ಕಗಾವಾರ ಮಾನಸಿಕ ಭಾವನೆಗಳು ಪರಿಪಕ್ವಗೊಂಡವು. ಪಾದ್ರಿಗಳು ಅವರನ್ನು ಒಬ್ಬ ವಿದೇಶೀಯನೆಂದು ತಿಳಿಯದೆ, ತಮ್ಮ ಪರಿವಾರದಲ್ಲಿಯೇ ಒಬ್ಬನೆಂದು ಭಾವಿಸಿದರು.

❖

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಜಪಾನಿನಲ್ಲಿ ಸೈನಿಕ ಶಕ್ತಿಯು ಸಂಘಟಿತಗೊಂಡಿತ್ತು. ಹಾಗೆಂದು ನೈತಿಕ ಶಕ್ತಿ ಮಾತ್ರ ಪೂರ್ಣ ಛಿನ್ನ ವಿಚ್ಛಿನ್ನವಾಗಿತ್ತು. ಜಪಾನಿನ ನಾಲ್ಕು ದೊಡ್ಡ ನಗರಗಳಾದ ಟೋಕಿಯೋ, ನಾಗಸಾಕೀ ಹಿರೋಶಿಮಾ ಮತ್ತು ಕೋಬೆಗಳು ದುರಾಚಾರದ ಕೇಂದ್ರ ಸ್ಥಾನಗಳಾಗಿದ್ದವು. ಸಣ್ಣ ಪಟ್ಟಣಗಳಲ್ಲಿ ಸಹ ಸಾಕಷ್ಟು ಜೂಜು ದ್ಯೂತಗೃಹಗಳೂ ಮಾದಕ ಪೇಯಗಳ ಅಂಗಡಿಗಳೂ ಇದ್ದುವು. ಜನತೆಯಲ್ಲಿ ಅಧಿಕಾಂಶ ಕಾರಖಾನೆಗಳಲ್ಲಿ ಅತಿ ಕಡಿಮೆ ಕೂಲಿಯ ಮೇಲೆ ಕೆಲಸ ಮಾಡುತಿದ್ದರು. ಯೋಗ್ಯ ಶಿಕ್ಷಣ ಹಾಗೂ ಪುಸ್ತಕಾಲಯ, ವ್ಯವಸಾಯ ಶಾಲೆ, ಉದ್ಯಾನವನ ಮುಂತಾದ ಏನೊಂದೂ ಸೌಲಭ್ಯಗಳಿರಲಿಲ್ಲ ದೇಶದಲ್ಲಿ ನರಕಸದೃಶವಾದ ಪರಿಸ್ಥಿತಿಯೇ ಇತ್ತೆನ್ನಬಹುದು. ಜಪಾನು ಪೂರ್ವದೇಶದ ನರಕವೆಂದು ಪಾಶ್ಚಾತ್ಯರು ಕರೆಯುತಿದ್ದರು. ಈ ನಾಚಿಕೆಗೇಡು ಪರಿಸ್ಥಿತಿಯನ್ನು ಕಗಾವಾ ಒಬ್ಬ ಸುಧಾರಕನ ದೃಷ್ಟಿಯಿಂದ ನೋಡಿದರು. ಮತ್ತು ಕೂಲಿಕಾರರ ಸಾರ್ವಾಂಗಿಕ ಏಳಿಗೆಯೇ ಜಪಾನು ದೇಶದ ಉದ್ಧಾರ ಮಾರ್ಗವೆಂದು ನಿರ್ಣಯಿಸಿದರು. ಅವರ ನೇತೃತ್ವದಲ್ಲಿ ಕೂಲಿಕಾರರು ಸರ್ವಪ್ರಥಮವಾಗಿ ಹರತಾಳವನ್ನು ಆಚರಿಸಿ, ಜನಬೆಂಬಲವನ್ನು ಪಡೆದರು. ಸರಕಾರವು ಕೂಲಿಕಾರರ ಬೇಡಿಕೆಯನ್ನು ಮನ್ನಿಸುವುದು ಅನಿವಾರ್ಯವಾಯಿತು ಈ ಆಂದೋಲನದಲ್ಲಿ ಕಗಾವಾರನ್ನು ಪೋಲೀಸರು ಎಷ್ಟರಮಟ್ಟಿಗೆ ಬಡಿದರೆಂದರೆ, ಕಠಿಣ ಪರಿಶ್ರಮವನ್ನು ಇನ್ನು ಮುಂದೆ ಅವರಿಗೆ ಮಾಡುವುದೇ ಅಸಾಧ್ಯವಾಯಿತು. ಕಗಾವಾರು ಜಪಾನಿನಲ್ಲಿ ದುರ್ಗಂಧಮಯವಾದ ನಿವಾಸಗಳೇ ಇಲ್ಲದಂತೆ ಮಾಡಿದರು. "ಮನುಷ್ಯನಾದವನಿಗೆ ಸ್ವಚ್ಛ ಹಾಗೂ ಗಾಳಿ ಬೆಳಕು ಓಡುವ ಮನೆ, ನಿಯಮಿತ ಉದ್ಯೋಗ ಹಾಗೂ ಯೋಗ್ಯ ವೇತನ —ಈ ಮೂಲ ಭೂತ ಅಧಿಕಾರಕ್ಕೋಸ್ಕರ ಸರಕಾರವನ್ನು ಕೇಳುವ ಅಧಿಕಾರವಿದೆ. ಈ ಆವಶ್ಯಕತೆಗಳನ್ನು ಪೂರೈಸಲು ಅಶಕ್ಯವಾದ ಸರಕಾರವನ್ನು ಸ್ವಶಕ್ತಿಯಿಂದ ದೂರ ಮಾಡಲು ಜನತೆಗೆ ಹಕ್ಕುಂಟು-" ಹೀಗೆ ಕಗಾವಾ ಹೇಳುತಿದ್ದಂತೆ, ದುರ್ಗಂಧಮಯವಾದ ವಸತಿಗಳನ್ನೆಲ್ಲ ನಿರ್ಮೂಲ ಮಾಡಿದರು. ಇದರೊಡನೆ ದ್ಯೂತ ಗೃಹಗಳೂ ಮದ್ಯದಂಗಡಿಗಳೂ ಕಾಣೆಯಾದವು. ಸಮಾಜೋದ್ಧಾರಕ್ಕಾಗಿ ತನ್ನ ಜೀವನವನ್ನೆ ಅರ್ಪಿಸಿದ ಮಹಾನುಭಾವ ಕಗಾವಾ ಎಂಬುದನ್ನು ಒಂದು ಉದಾಹರಣೆಯಿಂದ ಸ್ಪಷ್ಟೀಕರಿಸಬಹುದು:—ಕೆಲವರ್ಷಗಳ ಹಿಂದೆ ಟೋಕಿಯೋದ ಮೇಯರರು ದೊಡ್ಡ ಸಂಬಳದ ಮೇಲೆ ಸಮಾಜ ಸೇವೆಯನ್ನು ಮಾಡಲಿಕ್ಕೋಸ್ಕರ ಕಗಾವಾರನ್ನು ಕೇಳಿಕೊಂಡರು. ಆಗ ಕಗಾವಾ ಬಹಳ ಸರಲತೆಯಿಂದ "ನಾನು ಜನತೆಯ ಪ್ರತಿಯೊಂದೂ ಸೇವೆಯನ್ನು ನಿಃಶುಲ್ಕ ಮಾಡುತ್ತೇನೆ. ಸೇವೆಯೇ ನನ್ನ ಏಕಮೇವ ಧ್ಯೇಯವಾಗಿರುತ್ತದೆ" ಎಂದು ಹೇಳಿದರು.

❖

ಜಪಾನಿನ ಜನತೆಯ ಹೃದಯದಲ್ಲಿ ಸಮ್ಮಾನನೀಯ ಲೇಖಕನೆಂಬ ಗೌರವಸ್ಥಾನ ಕಗಾವಾರಿಗೆ ಲಭಿಸಿರುತ್ತದೆ. ಅವರ ಪುಸ್ತಕಗಳ ೨೫ ಲಕ್ಷ ಪ್ರತಿಗಳು ಇಷ್ಟರೊಳಗೆ ಮಾರಿ ಹೋಗಿವೆ. ಈ ಅಸಾಧಾರಣ ಸಫಲತೆಯ ಕಾರಣ ವಿಷ್ಟೆ: ಅವರು ಏನೇ ಬರೆಯಲಿ, ಹಾರ್ದಿಕ ಭಾವನೆಯಿಂದ ಬರೆಯುತ್ತಾರೆ; ಲೋಕ ಕಲ್ಯಾಣವನ್ನು ಸಂವರ್ಧಿಸುವ ಉಚ್ಚ ಉದ್ದೇಶವನ್ನಿಟ್ಟುಕೊಂಡೇ ಬರೆಯುತ್ತಾರೆ. ತನ್ನ ಭಾಷಣಗಳ ಸಂಗ್ರಹವೊಂದರ ಭೂಮಿಕೆಯಲ್ಲಿ ಅವರು ಹೀಗೆ ನಿವೇದಿಸಿಕೊಂಡಿರುವರು—"ನಾನೊಬ್ಬ ಲೇಖಕ ಹೌದು; ಆದರೆ ಗ್ರಂಥರಚನೆಯೊಂದೇ ನನ್ನ ಜೀವನದ ಉದ್ದೇಶವಲ್ಲ ನಾನೋರ್ವ ಸೈನಿಕ. ಸರ್ವಸಾಧಾರಣ ಜನತೆಯ ಅಂತಃಕರಣವನ್ನು ಜಾಗೃತಗೊಳಿಸುವುದಕ್ಕೋಸ್ಕರ ಆಂದೋಲನ ನಡೆಸುವುದೇ ನನ್ನ ಕೆಲಸ. ನನ್ನ ಗ್ರಂಥಗಳಲ್ಲಿ ನನ್ನ ಅಂತರಾತ್ಮನೇ ಅಳುತ್ತದೆ. ಆ ರೋದನವನ್ನು ಕೇಳುವವರೇ ನಿಜವಾಗಿಯೂ ನನ್ನ ಪ್ರಶಂಸಕರು." ಹೀಗೆನ್ನುವ ಕಗಾವಾರ ಜೀವನ ತರುಣ ವರ್ಗಕ್ಕೆಯೇ ಆದರ್ಶಪ್ರಾಯವಾದುದು. ಕೇವಲ ಹೃಷ್ಟಪುಷ್ಟ ಶರೀರದ ತರುಣರಿಗಷ್ಟೆ ಅಲ್ಲ—ಶಾರೀರಿಕ ವ್ಯಾಧಿ ಅಥವಾ ಅಸ್ವಸ್ಥತೆಯ ಕಾರಣದಿಂದ ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡೆವೆನ್ನುವ ಜನಕ್ಕೂ ಕಗಾವಾರ ಜೀವನವೊಂದು ಮಾದರಿಯಾಗಬಲ್ಲುದು. ಈಗ ಎಪ್ಪತ್ತರ ಗಡಿ ಸಮೀಪಿಸುತ್ತಿರುವ ಈ ಮುದುಕ ಕಳೆದ ೩೦ ವರ್ಷಗಳಿಂದ ಕಣ್ಣುಗಳಿಂದ ಚೆನ್ನಾಗಿ ನೋಡಲಾರದವರಾಗಿದ್ದಾರೆ. ಅವರ ಪುಪ್ಪುಸಗಳೂ ಅನೇಕ ದಿನಗಳಿಂದ ದುರ್ಬಲಗೊಂಡಿವೆ. ತೀವ್ರ ರಕ್ತದ ಒತ್ತಡದಿಂದ ಅವರ ಹೃದಯ ಗತಿ ಯಾವ ಕ್ಷಣಕ್ಕೂ ನಿಂತುಹೋದೀತು. ಹೀಗಿದ್ದರೂ ನಿಜವಾದ ಮಾನವ ಹಿತೈಷಿಯಂತೆ ಸಂತ ಕಗಾವಾ ಜಪಾನೀ ಜನತೆಯ ಸೇವೆಯಲ್ಲಿ ಸದಾ ಮಗ್ನರಾಗಿರುವರು. ತನ್ನನ್ನು ದೇವರು ಮನುಷ್ಯನ ಸೇವೆಗಾಗಿಯೇ ಕಳಿಸಿರುವನೆಂದು ಕಗಾವಾ ದೃಢವಾಗಿ ನಂಬುತ್ತಾರೆ. ಆದುದರಿಂದಲೇ ತನ್ನ ತೀವ್ರ ಜೀವನ ಗತಿಯನ್ನು ಕುರಿತು ಆಕ್ಷೇಪವೆತ್ತುವ ಮಿತ್ರರೊಡನೆ ಅವರು ಹೀಗೆನ್ನುತ್ತಾರೆ—"ಈ ಓಟದ ಕೊನೆಯ ಹಂತದ ವರೆಗೂ ನಾನು ನಡೆದು ಸಾಗುವೆನು. ಮೃತ್ಯುವಿಗಿಂತ ಮುಂಚೆಯೇ ಹೆದರಿ, ನಿಷ್ಕ್ರಿಯರಾಗಿ ಕೂಡುವುದು ಮಾನವ ಧರ್ಮವಲ್ಲ. ಪ್ರವಾಹವನ್ನು ಬಿಟ್ಟು ಬದಿಗೆ ಸರಿದೆವೆಂದರೆ, ಪ್ರಗತಿ ಪಥದಿಂದಲೂ ದೂರವಿದ್ದಂತೆ. ಪ್ರಗತಿ ಇದ್ದಲ್ಲಿಯೇ ಜೀವನದ ಸಾರ್ಥಕ್ಯವೂ ಇದೆ. ಜಡ ಜೀವನವು ಕೇವಲ ಶವ ಜೀವನ" ನೋವಾರಿಗಳಾದ ನಮಗೆ ಇದು ಅಮರ ಸಂದೇಶವೇ ನಿಜ.

(ನವನೀತ)

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs
PREMIUM INCOME ,,	...	15 ,,
LIFE FUND ,,	...	54½ ,,
ASSETS ,,	...	60½ ,,
BUSINESS IN FORCE Nearly		3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons with good connection. *Please apply to:*

G. R. Wallia, *Branch Manager,*
Diamond Building, Hampankatta, MANGALORE, S. K.

ಬಾಳಿನ ಬೆಡಗು

ವಿದ್ಯೆ ಕಲಿತ ಯುವಕನೋರ್ವನು ವರಿಸಿದ ಹಳ್ಳಿಯ ಮುಗ್ಧೆಯೋರ್ವಳ ಆದರ್ಶ ಪ್ರೇಮವನ್ನು ಅರಿಯದೆ, ಅವಳನ್ನು ತ್ಯಜಿಸಿ ಓದು ಕಲಿತ ಬೆಡಗಿನ ಹೆಣ್ಣಿನ ನಟನೆಗೆ ಮರುಳಾಗಿ, ಹಾಳಾಗಿ, ಸ್ವಾಮಿಯೋರ್ವರ ಅನುಗ್ರಹದಿಂದ ಮತ್ತೆ ಮಿಲನವಾಗುವ ಕಥಾವಸ್ತುವನ್ನೊಳಗೊಂಡ

ಶ್ರೀ. ಯು. ನಾರಾಯಣ ಭಟ್ಟರು ಬರೆದ ಸರಸ—ಸುಂದರ ಕಾದಂಬರಿ.

ಬೆಲೆ: ರೂ. 1—4—0 ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.



ಬರೇ ರೂ-5 ಕ್ಕೆ 15 ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ.

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ಮರಣ—ಆ ಮೇಲೆ?

ಯ. ನಾ. ಉಡುಪ, ವಿದ್ವಾನ್, ಬರೋಡ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮರಣಾ ನಂತರವೂ ಆತ್ಮವಿದೆಯೆಂಬುದು ಮಹಾಪುರುಷರ ಮರಣಾ ನಂತರದಿಂದ ಸ್ಪಷ್ಟವಾಗುವುದು. ಶ್ರೀ ರಾಮಕೃಷ್ಣ ಪರಮಹಂಸರು ಮಹಾಸಮಾಧಿಗೊಂಡ ಮೇಲೆ ಅವರ ಶಿಷ್ಯೆ ಶಾರದಾ ಮಣಿಯು ಗೋಳಿಡುತ್ತಾ ವಿಧವೆಯಾದೆನೆಂದು ಬಳೆಗಳನ್ನೊಡೆಯ ಹೋಗುವಾಗ, ವೃಂದಾವನದಲ್ಲಿ ಪತಿವಿಯೋಗವನ್ನು ಸ್ಮರಿಸಿ ಅಳುವಾಗ, ರೈಲಿನ ಪ್ರಯಾಣದ ವೇಳೆಯಲ್ಲಿ ಪರಮಹಂಸರು ದೃಷ್ಟಿಗೆ ಕಾಣಿಸಿಕೊಂಡು—ನಾನು ಈ ಕೋಣೆಯಿಂದ ಆ ಕೋಣೆಗೆ ವರ್ಗಾಯಿಸಲ್ಪಟ್ಟಿದ್ದೇನಷ್ಟೆ ಅದಕ್ಕೇಕೆ ಚಿಂತೆ?— ಎಂದು ಸಮಾಧಾನ ಪಡಿಸಿದರೆಂದು ಶ್ರೀ ಶಾರದಾ ಮಣಿಯವರ ಚರಿತ್ರೆಯೇ ಹೇಳುವುದು. ಇದರಿಂದ ಆಧ್ಯಾತ್ಮಿಕ ಜೀವಿಯಾದವನು ಮರಣಾ ನಂತರವೂ—ತನ್ನ ಭೌತಿಕ ದೇಹವನ್ನು ಕಳೆದುಕೊಂಡ ನೇಲೂ—ಮನಸ್ಸಿದ್ದರೆ ಪ್ರಾಪಂಚಿಕರೊಡನೆ ವ್ಯವಹಾರ ನಡೆಸಲು ಸಾಧ್ಯವೆಂದಾಯಿತು. ಈ ಶಕ್ತಿಯು ಎಲ್ಲಾ ಆತ್ಮಗಳಿಗೆ ಬಾರದೆಂಬುದು ಸತ್ಯ, ಆದರೆ ಮರಣಾ ನಂತರವೂ ಆತ್ಮದ ಅಸ್ತಿತ್ವವಿದೆಯೆಂದು ಸಾಧಿಸಬಹುದು.

ಆತ್ಮನ ಉತ್ಪತ್ತಿ ಮತ್ತು ಕೊನೆಯ ಸ್ಥಿತಿಯ ಕುರಿತು ಮುಂಡಕೋಪನಿಷತ್ತು ಹೀಗೆ ಹೇಳುವುದು.

ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ
ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ
ಪ್ರಜಾಯಂತೇ ತತ್ರ ಚೈವಾಪಿಯಂತಿ॥

ಮುಂಡಕೋಪನಿಷತ್ತು ಮುಂ. ೨ ಖಂ. ೧

"ಪ್ರಕಾಶಮಾನವಾಗಿರುವ ಪಾವಕನಿಂದ ಬೆಂಕಿ ಕಿಡಿಗಳು ಸಹಸ್ರ ಸಹಸ್ರಗಳಾಗಿ ಸಾಕಾರವಾಗಿಯೇ ಹಾರಿ ಹಾರಿ ಬರುವಂತೆ, ಎಲೈ ಪ್ರಿಯನೇ, ಅಕ್ಷರನಾದ ಪರಮಾತ್ಮನಿಂದ ಬಗೆಬಗೆಯ ಪ್ರಾಣಿವರ್ಗಗಳು ಉದ್ಭವಿಸಿ ಅವನಲ್ಲೇ ಕೊನೆಗೆ ಲಯವನ್ನು ಹೊಂದುವವು"

ಆತ್ಮನು ದೇಹದಿಂದ ದೇಹಕ್ಕೆ ಸಂಚರಿಸುವನೆಂಬುದರ ಕುರಿತು ಭಗವದ್ಗೀತೆ ಹೀಗನ್ನುತ್ತಿದೆ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ
ನ್ಯನ್ಯಾನಿ ಸಂಯಾತಿ ನವಾನಿ ದೇಹೀ॥

ಭ. ಗೀ. ಅ ೨ ಶ್ಲೋ. ೨೨

"ಮನುಷ್ಯನು ಜೀರ್ಣ ವಸ್ತ್ರವನ್ನು ಬಿಸುಟು ಹೇಗೆ ಹೊಸ ವಸ್ತ್ರಗಳನ್ನು ಧರಿಸುವನೊ ಹಾಗೆಯೇ ದೇಹಧಾರಿಯಾದ ಜೀವಾತ್ಮನೂ ಜೀರ್ಣದೇಹಗಳನ್ನು ಬಿಟ್ಟು ನವೀನ ಶರೀರಗಳನ್ನು ಪ್ರವೇಶಿಸುವನು.

ತದ್ಯಥಾ ಪೇಶಸ್ಕಾರೀ ಪೇಶಸೋ ಮಾತ್ರಾಮುಪಾದಾಯ, ಅನ್ಯನ್ನವತರಂ ಕಲ್ಯಾಣತರಂ ರೂಪಂ ತನುತೇ॥
ಏವಮೇವಾಯಮಾತ್ಮೇದಂ ಶರೀರಂ ನಿಹತ್ಯಾಽವಿದ್ಯಾಂ
ಗಮಯಿತ್ವಾ ಅನ್ಯನ್ನವತರಂ ಕಲ್ಯಾಣತರಂ ರೂಪಂ ಕುರುತೇ ।

ಬೃಹ. ಉಪ. ಅ. ೬ ಬ್ರಾ. ೪ ಮ. ೪

"ಅಕ್ಕಸಾಲಿಗನು ಚಿನ್ನದ ತುಂಡಿನಿಂದ ಹೊಸತಾಗಿಯೂ ಸುಂದರವಾಗಿಯೂ ಇರುವ ಒಡವೆಯನ್ನು ಮಾಡುವಂತೆ ಆತ್ಮನೂ ಈ ಶರೀರವನ್ನು ಬಿಸುಟು ಅವಿದ್ಯೆಯನ್ನೋಡಿಸಿ ಹೊಸದಾಗಿಯೂ ಸುಂದರವಾಗಿಯೂ ಇರುವ ರೂಪವನ್ನು ಮಾಡಿಕೊಳ್ಳುವನಾಗುತ್ತಾನೆ" ಆತ್ಮನಿಗೆ ಪುನಃ ಪುನಃ ಜನ್ಮಗಳಿವೆ.

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।

ಭ. ಗೀ. ಅ. ೨ ಶ್ಲೋ. ೨೭ ॥

"ಹುಟ್ಟಿದವನಿಗೆ ಸಾವಿದ್ದೇ ಇದೆ, ಸತ್ತವನಿಗೆ ಜನನವು ಇದ್ದೇ ಇದೆ"

ಶ್ಲೋ | ಚಿತಾ ದೇಹಂ ಪ್ರಭೃತಿಚ ಪ್ರೇತತ್ವ ಮುಪಜಾಯತೇ ।

ಗರುಡ ಪುರಾಣ. ಅ. ೫. ೩೬ ॥

"ಚಿತೆಯಲ್ಲಿ ದೇಹವೆಲ್ಲಾ ಸುಟ್ಟು ಹೋದ ಮೇಲೆ ಪ್ರೇತತ್ವ ಬರುವುದು" ಮನುಷ್ಯನು ಮರಣ ಕಾಲದ ಮೊದಲು ಅವನ ಅಂಗೋಪಾಂಗಗಳೆಲ್ಲಾ ತೀರಾ ಶಕ್ತಿಗುಂದುತ್ತವೆ; ಕಣ್ಣು ಕುಳಿಸೇರುತ್ತದೆ; ಹಲ್ಲು ಸಡಿಲಿಯಾಗುತ್ತದೆ. ಅವನ ಶ್ವಾಸೋಚ್ಛ್ವಾಸಗಳಲ್ಲಿ ಉಚ್ಛ್ವಾಸದ ಉದ್ದವೇ ಹೆಚ್ಚಿದ್ದು ವಿಲಕ್ಷಣವಾಗಿ ಎತ್ತದೆ. ಈ ತೆರನ ಉಸಿರಾಟವಾರಂಭವಾದ ಮೇಲೆ ಮನುಷ್ಯನು ಸಾಮಾನ್ಯವಾಗಿ ಒಂದೆರಡು ತಾಸಿನಲ್ಲೇ ತನ್ನ ಇಹಲೋಕದ ಯಾತ್ರೆ ಮುಗಿಸಿ ಬಿಡುವನು. ಮರಣದ ಪೂರ್ವ ಶ್ವಾಸೋಚ್ಛ್ವಾಸ ನಿಂತು ಹೋಗುವುದು; ಕೀಲ ಕಣ್ಣು ಗೊಂಬೆಯು ಒಂದು ಪಕ್ಕಕ್ಕೆ ಒಲಿಯುವುದು; ನಾಲಗೆಯು ಒಳಸರಿಯುವುದು; ದೇಹವೆಲ್ಲಾ ಮರಗಟ್ಟುತ್ತಾ ಬಂದು ತಣ್ಣಗಾಗುವುದು. ಆಗಲೇ ಮನುಷ್ಯನು 'ಶವ' ಅಥವಾ 'ಹೆಣ'ವಾದ. ಈ ಸ್ಥಿತಿಯಲ್ಲಿ ಮಾನವನ ಮೋರೆಯು ಭಯವನ್ನುಂಟುಮಾಡುವುದರಿಂದ ಸಮಗ್ರ ಶರೀರವನ್ನೇ ಬಿಳಿಯ ವಸ್ತ್ರದಿಂದ ಮುಚ್ಚುತ್ತಾರೆ. ಇನ್ನವನಿಗೆ ಪ್ರಪಂಚದ ಋಣ ಒಮ್ಮೆಗೆ ಹಿಂಗಿದಂತಾಯಿತು. ಅವನ ಹಿಂದಿನ ಯೌವ್ವನದ ಮದ, ಗರ್ವ, ವಿನೋದಗಳೆಲ್ಲಿ? ಇಂದಿನ ಸ್ಮಶಾನ ಯಾತ್ರೆಗೆ ಸಿದ್ಧವಾದ ನಿಷ್ಪ್ರಯೋಜನ ವಿಕರಾಳ ದೇಹವೆಲ್ಲಿ?

ಮರಣಾ ನಂತರ ಮೃತನ ಕುಟುಂಬದವರು ಅವನ ಸುತ್ತು ಮುತ್ತು ಗೋಳಿಡುವಾಗ ಅವನ ಆತ್ಮಕ್ಕೆ ಕಂಡಿತವಾಗಿ ಇದು ತಿಳಿಯುವುದೆಂದು ಹೇಳುವವರಿಲ್ಲ. ಆದರೆ ಕೆಲವರೆನ್ನುವ—ಆತ್ಮನಿಗೆ ಚರ್ಮಚಕ್ಷುವಿಲ್ಲದಿದ್ದರೂ ನೋಡ ಬಲ್ಲನು,—ಅಂತೆಯೇ ಎಲ್ಲಾ ಕ್ರಿಯೆಗಳನ್ನು ಮಾಡಬಲ್ಲನೆನ್ನುವ ಪಕ್ಷದವರ ಅಭಿಪ್ರಾಯವೇ ಸತ್ಯವೆಂದು ತೋರುತ್ತದೆ. ಆತ್ಮನು ದೇಹಂಗಿ ಹೋದ ಮೇಲೆ ಪಂಚೇಂದ್ರಿಯಗಳೇನೂ ಕೆಲಸ ಮಾಡಲಾರವು. ಅಥವಾ ಆತ್ಮನಿಗೆ ಇಂದ್ರಿಯಗಳ ಕೆಲಸ ನಾಡಲು ಅವುಗಳ ಅಗತ್ಯವಿಲ್ಲವೇ ಇಲ್ಲ.

ಮರಣ ಸಂಭವಿಸುವಾಗ ಜೀವನು ಪ್ರಾಣಮಯ ಕೋಶದ ಮೂಲಕವಾಗಿ ಸೂಕ್ಷ್ಮ ಶರೀರವನ್ನು ಸ್ಥೂಲ ಶರೀರದಿಂದ ಪ್ರತ್ಯೇಕ ಮಾಡಿ ಸೆಳೆದು ಬಿಡುವನು. ಇದೇ ಮರಣದ ಮೊದಲಿನ ಕೆಲಸ. ಆಗ ಆ ಶರೀರವನ್ನು ಒಟ್ಟಾಗಿ ಹಿಡಿದಿದ್ದ ಪ್ರಾಣವು ಹೊರಕ್ಕೆಳೆಯಲ್ಪಡುವುದರಿಂದ ಸ್ಥೂಲ ಶರೀರವು ಶವವಾಗುವುದು. ದೃಶ್ಯ ಶರೀರವನ್ನು ತೊರೆದು ಬಿಟ್ಟವನ ಜೀವನಿಗೆ ಪ್ರೇತನೆಂದು ಹೆಸರು, ಆಗ ಶವದಲ್ಲಿರುವ ಅಣು ಕೋಶಗಳಲ್ಲಿ (cells) ಬೇಕಾದಷ್ಟು ಜೀವವಿದ್ದು, ದೇಹವನ್ನಾಳುವ ಪ್ರಾಣವು ಅದನ್ನು ತ್ಯಜಿಸಲು ಅವುಗಳೆಲ್ಲಾ ಛಿನ್ನ ಭಿನ್ನವಾಗಿ ಒಡೆದು ತಮ್ಮ ತಮ್ಮ ಪರಮಾಣುಗಳನ್ನು ಹೊಂದುವುವು. ಆಗ ಸೂಕ್ಷ್ಮ ಶರೀರದಲ್ಲಿದ್ದ ಜೀವನು ಬಹು ಬೇಗನೆ ಪ್ರಾಣಮಯ ಕೋಶವನ್ನು ತ್ಯಜಿಸಿ ಬಿಡುವನು. ಅವನು ಆಗ ಮನೋಮಯ ಕೋಶದ ಸಾಂದ್ರತರ ಭಾಗವನ್ನು ತನ್ನ ಹೊರಗಣ ಹೊದಿಕೆಯಾಗಿಟ್ಟುಕೊಂಡಿರುವನು. ಈ ಸ್ಥಿತಿಯಲ್ಲೇ ಅವನು ಪ್ರೇತನೆಂದು ಕರೆಯಲ್ಪಟ್ಟು ಪ್ರೇತ ಲೋಕ ವಾಸಿಯಾಗುವನು. ಅವನು ಸಾತ್ವಿಕನಾಗಿದ್ದ ಪಕ್ಷದಲ್ಲಿ ಆ ಪ್ರೇತ ಲೋಕದಲ್ಲಿ ಸುಖವಾಗಿ ಕಾಲ ಕಳೆಯುವನು; ತಾಮಸ ಸ್ವಭಾವದವನಾಗಿದ್ದರೆ ಐಹಿಕ ಸುಖಗಳ ಬಯಕೆಯಿಂದ ಸಂಕಟಪಡುತ್ತಿರುವನು. ಅವನ ಕಾಮವು ಕ್ಷಯಿಸಿ ಹೋಗುವಷ್ಟು ಕಾಲದ ವರೆಗೆ ಅಲ್ಲಿ ಯಾತನೆ ಅನುಭವಿಸುತ್ತಿರುವನು ಆ ಮೇಲೆ ಅವನ ಮನೋಮಯಕೋಶದ ಸಾಂದ್ರತೆಯ ಕವಚವು ಅವನನ್ನು ಬಿಡುವುದು. ಹೀಗಾದ ಮೇಲೆ ಅವನು ಪಿತೃವಾಗಿ ಪಿತೃಲೋಕಕ್ಕೆ ತೆರಳುವನು, ಅಲ್ಲಿ ಸ್ವರ್ಗವಾಸಕ್ಕೆ ಯೋಗ್ಯವಾದ ಅಶುಚಿ ಭಾಗಗಳನ್ನೆಲ್ಲಾ ತೊಳೆದುಕೊಂಡು ನಿರ್ಮಲವಾದ ಮನೋಮಯ ಕೋಶದೊಂದಿಗೆ ಸ್ವರ್ಗಕ್ಕೆ ಹೋಗಿ ತಾನು ಸಂಪಾದಿಸಿಕೊಂಡು ಬಂದಿದ್ದ ಭೋಗಗಳನ್ನೆಲ್ಲಾ ಅಲ್ಲಿ ಭೋಗಿಸುವನು.

ಈ ಅವಧಿಯನ್ನು ಸ್ವರ್ಗದಲ್ಲಿ ಕಳೆದೊಡನೆ ನಿರ್ಮಲವಾದ ಮನೋಮಯ ಕೋಶವು ಲಯವಾಗಲು, ಜೀವನು ವಿಜ್ಞಾನಮಯ ಕೋಶದೊಡನೆ ಮಹರ್ಲೋಕಕ್ಕೆ ತೆರಳುವನು. ಇಲ್ಲೇ ಜೀವನು ಬೇಗನೆ ತನ್ನ ಭೂಲೋಕದ ಪ್ರಯಾಣಕ್ಕೆ ಹೊಸ ವಾಹನವನ್ನು ರಚಿಸಿಕೊಳ್ಳುವುದಕ್ಕಾಗಿ ತನ್ನ ಶಕ್ತಿಯನ್ನು ಪ್ರಯೋಗಿಸುವನು. ಭೂಲೋಕದಲ್ಲಿ ತಾನು ಒದುಕುವುದಕ್ಕಾಗಿ ಒಂದು ನವೀನ ಮನೋಮಯ ಕೋಶವೊಂದನ್ನು ನಿರ್ಮಿಸಿಕೊಳ್ಳುವನು, ಆಗ ಅವನ ಕರ್ಮಕ್ಕನುಗುಣವಾಗಿ ದೇವತೆಗಳು ಅವನಿಗೆ ತಕ್ಕ ಪ್ರಾಣಮಯ ಕೋಶವನ್ನೂ, ಅನ್ನಮಯ ಕೋಶವನ್ನೂ ಜೋಡಿ ಕೊಡುವವರಾಗುತ್ತಾರೆ. ಅನಂತರ ಪುನಃ ಅವನು ಭೂಮಿಯಲ್ಲಿ ಜನ್ಮತೆತ್ತುವನು.

ಕೆಲವರು ಜೀವನು ತನ್ನ ಪುಣ್ಯ ಪಾಪಗಳ ಫಲವನ್ನು ಅನುಭವಿಸಲು ಮೋಡವನ್ನು ಸೇರಿ ಮಳೆಯಲ್ಲಿ ಭೂಮಿಯನ್ನು ಹೊಂದಿ ಆಹಾರ ವಸ್ತುಗಳಲ್ಲಿ ಸೇರಿಕೊಂಡು, ಅವನ್ನು ತಿಂದ ಪ್ರಾಣಿಗಳ ಶರೀರದ ಮೂಲಕ ಗರ್ಭವಾಸ ಹೊಂದಿ—ಅಥವಾ ಬೇರೆ ರೀತಿಯಿಂದ ಜನ್ಮವೆತ್ತುತ್ತಾನೆಂದು ಹೇಳುತ್ತಾರೆ.

ಮರಣವಾದ ಮೇಲೆ ಸ್ಥೂಲ ಶರೀರಾಂಶಗಳು ಬೇಗನೆ ಪಂಚಭೂತಗಳಲ್ಲಿ ಲಯವಾಗಲೆಂದು ಅನ್ನಮಯ ಕೋಶವಾದ ಶರೀರವನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗಿ ಸುಟ್ಟುಬಿಡುವರು. ಆ ಮೇಲೆ ಮಾಡಿದನೆಯ ದಿನವಷ್ಟೆ ಆ ಬೂದಿಯನ್ನು ಸಂಗ್ರಹಿಸಿ ಪವಿತ್ರ ನದಿಯ ಸಿಕ್ಕದಿದ್ದಲ್ಲಿ ಹರಿಯುವ ನೀರಿನಲ್ಲಾದರೂ ತೇಲಿಬಿಡುವರು. ಶರೀರ ದಹನ ಕಾಲದಲ್ಲಿ ಉಚ್ಚರಿಸುವ ಕೆಲವು ಮಂತ್ರಗಳ ಪ್ರಭಾವದಿಂದ ಅನ್ನಮಯ ಕೋಶದ ಅನಂತರ ಜೀವನಿಗೆ ಪ್ರಾಪ್ತವಾದ ಪ್ರಾಣಮಯ ಕೋಶವೂ ಬೇಗನೆ ಸಡಿಲವಾಗಿ ಒಡೆದು ಹೋಗುವುದು. ಸ್ಥೂಲ ಶರೀರವನ್ನು ಸುಡುವ ಕ್ರಮವು ಒಳ್ಳೆಯದು. ಇದರಿಂದ ಶರೀರ ಬಿಟ್ಟ ಜೀವನಿಗೂ ಒಳ್ಳೆಯದಾಗುವುದು ಸ್ಥೂಲ ಶರೀರವು ನಾಶವಾಗದೆ ಶವವಾಗಿ ಇರುವಷ್ಟು ಕಾಲ ಪ್ರಾಣಮಯ ಕೋಶವು ಅದರ ಸಮೀಪದಲ್ಲೇ ಸುಳಿದಾಡಿಕೊಂಡಿರುವುದು. ಇದು ಪ್ರೇತನಿಗೆ ಅಹಿತವಾದ ವಿಚಾರ.

ಮಂತ್ರದಿಂದ ಹುಟ್ಟುವ ಪರಿಸ್ಪಂದನಗಳ ಪ್ರಭಾವದಿಂದಲೂ, ಉತ್ತರಕ್ರಿಯೆಯಲ್ಲಿ ಉಪಯೋಗಿಸುವ ಕೆಲವು ಪದಾರ್ಥಗಳ ಶಕ್ತಿಯಿಂದಲೂ ದೇಹದ ದಹನಾನಂತರ ಮಾಡುವ ಶ್ರಾದ್ಧ ಕರ್ಮಗಳು ಮನೋಮಯ ಕೋಶದ ಭಾಗಗಳನ್ನು ಬೇರೊಂದು ರೀತಿಯಲ್ಲಿ ಸೇರಿಸುವುವು [illegible] ಮುಂದೆ ಸಪಿಂಡೀಕರಣ ಕರ್ಮವಾದ ಮೇಲೆ ಜೀವನು ಪ್ರೇತಲೋಕದಿಂದ ಪಿತೃಲೋಕಕ್ಕೆ ಹೋಗಲು ಸುಲಭವಾಗುವುದು ಜೀವನು ಸ್ವರ್ಗಲೋಕಕ್ಕೆ ತೆರಳಿದ ಮೇಲೆ ಶ್ರಾದ್ಧ ಕರ್ಮದ ಅಗತ್ಯವು ಅವನಿಗೆ ಅವಶ್ಯಕವಾಗಿರುವುದಿಲ್ಲ.

ಅಥತ್ರಯೋ ವಾವ ಲೋಕಾಃ—
ಮನುಷ್ಯ ಲೋಕಃ ಪಿತೃಲೋಕೋ ದೇವಲೋಕ ಇತಿ ॥

(ಬೃಹದಾರಣ್ಯಕೋಪನಿಷತ್ತು ಅ. ೩ ಬ್ರಾ. ೫ ಮ. ೧೬)

'ನಿಜವಾಗಿಯೂ ಮನುಷ್ಯಲೋಕ, ಪಿತೃಲೋಕ ಮತ್ತು ದೇವಲೋಕಗಳಿರುವುವು."

ದೃಶ್ಯಲೋಕವಾಸ, ಮರಣ, ಅದೃಶ್ಯಲೋಕವಾಸ, ಪುನರ್ಜನ್ಮ—ಇವುಗಳು ಜೀವನಿಗೆ ತಿರುತಿರುಗಿ ಆಗುತ್ತಲೇ ಇದ್ದು, ಕೊನೆಗೆ ಅವನಿಗೆ ಈ ನಾನಾ ಪರ್ಯಟನದಿಂದ ಬೇರೆ ಹುಟ್ಟು ಊರ್ಧ್ವಲೋಕಗಳ ಯಾತ್ರೆಗೂ ಸಾಕ್ಷಾತ್ಕಾರಾನುಭವಗಳಿಗೂ, ವಿಶಾಲತರದ ಬಾಳಿಗೂ ಆಸೆಪಡುವನು. ಮುಂದೆ ಅವನು ಧ್ಯಾನವಿಷ್ಠನೂ, [illegible] ಆಸ್ಪದವಾಗಿ ಸಹಾಯ ನೀಡುವುದರಲ್ಲೂ ಸಮರ್ಥನಾಗುತ್ತಾನೆ ಮುಂದೆ ಅವನು ಪರಾರ್ಥಕ್ಕಾಗಿಯೇ ಬಾಳುವನು ಈ ಜೀವನವೇ ಅವನಿಗೆ ಬ್ರಹ್ಮಸಾಯುಜ್ಯ ಪದವಿ ಹೊಂದಲು ದಾರಿಯಾಗುವುದು.

ದಿ ವಿಜಯ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	ರೂ. 20,10,000
ತೆತ್ತ ಪಾಲು ಭಂಡವಾಳ	,, 6,77,860
ಕ್ಷೇಮ ನಿಧಿ	,, 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½°/. ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಎಂತಹ ತಿನಸು, ಇವುಗಳ ರುಚಿ ಬಿಡಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ವಾರದ ಒಳಿತು ಕೆಡುಕುಗಳು

ತಾ. ೨೩—೭—೫೩ರಿಂದ ತಾ. ೨೯—೭—೫೩ರ ವರೆಗೆ.

ಮೇಷ—ನಿಮ್ಮ ಕರ್ತೃತ್ವ ಶಕ್ತಿಯು ಹಿಂದಿನಂತಿಲ್ಲವಾದರೂ ಪ್ರಯತ್ನಕ್ಕೆ ತಕ್ಕ ಫಲಪ್ರಾಪ್ತಿಯಿರುವದು. ಪ್ರಬಲರಾದ ವಿರೋಧಿಗಳನ್ನು ಪರಾಭವಗೊಳಿಸುವ ಆತ್ಮಶಕ್ತಿ ನಿಮ್ಮಲ್ಲಿದೆ. ಗುರುಹಿರಿಯರ ಬಂಧು ಮಿತ್ರರ ನೆರವಿನಿಂದಾಗಿ ಹಿಡಿದ ಕಾರ್ಯದಲ್ಲಿ ವಿಜಯಿಗಳಾಗುವಿರಿ. ಆದರೆ ರಾಜಕೀಯ ರಂಗದಲ್ಲಿ ನಿಮ್ಮ ಸಂಕಲ್ಪವು ಸಿದ್ಧಿಸದು. ದುರ್ಜನರ ಸಹಯೋಗದಿಂದಾಗಿ ನಷ್ಟ ಕಷ್ಟ ಅಪವಾದಗಳಿಗೆ ಗುರಿಯಾದೀರಿ. ವಾರಾಂತ್ಯದ 4 ದಿನಗಳು ಇತರ ದಿನಗಳಿಗಿಂತ ಪ್ರಶಸ್ತವಿವೆ.

ವೃಷಭ—ತನು ಮನೋ ರೋಗಗಳಿಂದ ಮುಕ್ತರಾಗಿ ಸುಖನೆಮ್ಮದಿಯನ್ನು ಕಾಣುವ ಸುಯೋಗವೀಗ ಬಂದಿದೆ. ನಿಮ್ಮ ಪ್ರಯತ್ನವು ಸಂಪೂರ್ಣ ಫಲಕಾರಿಯಾಗಲಿದೆ. ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ನಿಮ್ಮಂತೆ ಫಲ ಲಾಭವಾಗುವದು. ನಷ್ಟವಾದ ವಸ್ತು ಒಡವೆಗಳೂ ಪುನಃ ಕೈಸೇರಲಿವೆ. ಕೊಂಚ ಗೃಹತಾಪತ್ರಯಗಳ ಪೀಡೆಗೆ ಸಿಲುಕುವಿರಾದರೂ ಸ್ವಂತ ಉಪಭೋಗಕ್ಕಾವ ಕೊರತೆಗಳೂ ಇರವು. ತಾ. 23. 28. 29. ಈ ದಿನಗಳು ಅತೀವ ಉತ್ತಮವಿರುವವು.

ಮಿಥುನ—ಪ್ರಯತ್ನ ಪಟ್ಟು ದುಡಿಯುವಿರಿ. ಆದರೆ ಪರಿಶ್ರಮವು ನೀರಿನಲ್ಲಿ ಮಾಡಿದ ಹೋಮದಂತಾಗುವದು. ಖರ್ಚು ಆದಾಯಕ್ಕಿಂತ ಇಮ್ಮಡಿಯಾಗುವುದರಿಂದ ಆರ್ಥಿಕ ದುರವಸ್ಥೆಯಿಂದ ಮುಕ್ತರಾಗಲಾರಿರಿ. ಪಿತ್ತೋಷ್ಣ ದೋಷದಿಂದ ಆರೋಗ್ಯವು ಕೆಟ್ಟೀತು. ಮಾನಸಿಕ ದೌರ್ಬಲ್ಯದಿಂದಾಗಿ ಆಪ್ತೇಷ್ಟರೊಳಗೂ ಅವಿಶ್ವಾಸ ಹುಟ್ಟು ಸಂಭವವಿದೆ. ಪ್ರವಾಸವು ನಷ್ಟ ಕಷ್ಟಗಳಿಗೆ ಗುರಿಮಾಡೀತು. ತಾ. 23, 24 25 ಇದ್ದುದರಲ್ಲಿ ಸ್ವಲ್ಪ ಉತ್ತಮವಿವೆ.

ಕರ್ಕಾಟ—ಆರೋಗ್ಯ ವಿಚಾರದಲ್ಲಿ ಕೊಂಚ ಜಾಗರೂಕರಾಗಿರಿ. ಉಷ್ಣಪ್ರಕೋಪ ಪಿತ್ತಾಧಿಕ್ಯದಿಂದ ಆಗಾಗ ಪೀಡೆಯುಂಟಾಗಲಿದೆ. ವಿನಾ ಕಾರಣ ವಾಕ್ಕಲಹಕ್ಕೆ ಗುರಿಯಾಗುವಿರಿ. ಸುಖಲಾಭಪತಿಯ ಬಲದಿಂದಾಗಿ ನೀವು ದಿನಗಳನ್ನು ಸುಗಮವಾಗಿ ಕಳೆವಿರಿ. ಕೈಯಲ್ಲಿ ನಾಲ್ಕು ಕಾಸೂ ಓಡಾಡಲಿದೆ. ಸದ್ಯ ವಿರೋಧಿಗಳ ಕಾಟದಿಂದ ಮುಕ್ತರಾಗುವಿರಿ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು ತಾ. 24 25. 26. 27 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಸಿಂಹ—ಕಾಲವು ಅತೀವ ಕಠಿಣಾವಸ್ಥೆಗೆ ಬಂದಿದೆ. ನಿಮ್ಮ ಮೇಲೆ ಎಳ್ಳಷ್ಟು ದೈವಬಲವಿಲ್ಲದ ಕಾರಣ ನೀವೆಂಥಾ ಸಾಹಸಿಗರಿರಲಿ ನಿಮ್ಮ ಸಾಹಸವೆಲ್ಲವೂ ನಿಷ್ಪ್ರಯೋಜನಗಳಾಗುವವು, ಹಿರಿಯ ಕಿರಿಯರೊಡನೆ ಕಲಹವಾದೀತು. ಆಪದ್ಧನವೂ ಕೂಡ ಉಳಿಯಲೊಲ್ಲದು. ಹಲವಾರು ಮುಖದಿಂದ ಖರ್ಚುಗಳು ಪ್ರಾಪ್ತವಾಗಿ ಹೆರವರ ಕೂಡ ಸಾಲ ಕಡಗಳನ್ನು ಮಾಡಿಸುವದು. ಅಂತೂ ಈ ವಾರವನ್ನು ಅತೀವ ಕಷ್ಟದಿಂದ ಕಳೆಯಬೇಕಾಗುವದು. ವಾರಾಂತ್ಯದ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ಕನ್ಯಾ—ಜನ್ಮಗತ ಶನೈಶ್ಚರನೊಬ್ಬನನ್ನುಳಿದು ಮಿಕ್ಕ ಎಲ್ಲಾ ಗ್ರಹರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಈ ವಾರದಲ್ಲಿ ಯಾವ ತರದ ಕುಂದುಕೊರತೆಗಳೂ ತಾಪತ್ರಯಗಳೂ ಉಂಟಾಗಲಾರವು. ನಿಮ್ಮ ಸಂಕಲ್ಪಗಳು ಏನೊಂದೂ ವಿಘ್ನ ವಿಡಂಬನಗಳಿಲ್ಲದೆ ಅನಾಯಾಸದಿಂದ ಬೇಗನೆ ಕಾರ್ಯರೂಪಕ್ಕೆ ಬರಲಿವೆ. ಸಾಮಾಜಿಕ ರಾಜಕೀಯಾದಿ ಸಕಲಕ್ಷೇತ್ರಗಳಲ್ಲೂ ವಿಜಯಿಗಳಾಗಿ ಮೆರೆವಿರಿ. ತಾ. 27. 28. 29. ಅತ್ಯುತ್ತಮವಿವೆ.

ತುಲಾ—ಅಷ್ಟಮಸ್ಥ ಬೃಹಸ್ಪತಿಯೂ ವ್ಯಯಗತ ಶನೈಶ್ಚರನೂ ನಿಮ್ಮ ತನುಮನಗಳಿಗೆ ಈ ಹೊತ್ತು ಸುಖಶಾಂತಿಯನ್ನೀಯರಾದರೂ ಇಂದಿನ ಗ್ರಹಸ್ಥಾನ ರೀತ್ಯಾ ನಿಮ್ಮ ಹಲವಾರು ತಾಪತ್ರಯಗಳು ದೂರವಾಗಲಿವೆ. ಉದ್ಯೋಗ ವ್ಯಾಪಾರಾದಿಗಳಲ್ಲಿ ಪ್ರಗತಿಯುಂಟಾಗುವದು. ಆರ್ಥಿಕ ಬಿಕ್ಕಟ್ಟು ದೂರವಾಗಲಿದೆ. ಹಿಡಿದ ಕಾರ್ಯಗಳು ನಿಮ್ಮಂತೆ ಕೊನೆಗೊಳ್ಳುವವು. ಶ್ರಮಜೀವಿಗಳಿಗೀ ವಾರವು ಅಷ್ಟೊಂದು ಪ್ರಶಸ್ತವಲ್ಲ ತಾ. 24. 25. ಇದ್ದುದರಲ್ಲಿ ಉತ್ತಮವಾಗಿವೆ.

ವೃಶ್ಚಿಕ—ಅನೇಕ ಗ್ರಹಗಳು ವಿಮುಖರಾಗಿದ್ದರೂ ನಿಮ್ಮ ಧನಪತಿಯಾದ ಗುರುವು ನಿಮ್ಮ ಮೇಲೆ ಪೂರ್ಣಾನುಗ್ರಹವನ್ನಿಟ್ಟ ಕಾರಣ ಹೆಚ್ಚಿನ ನಿಮ್ಮ ಬಯಕೆಗಳು ಈಡೇರುವವು. ಉಪಾಯದಿಂದ ಕಾರ್ಯಸಾಧಿಸುವಿರಿ. ಉತ್ಪತ್ತಿಯು ಖರ್ಚಿಗೆ ಸಾಕಷ್ಟಿರುವುದರಿಂದ ಹಣದ ಕೊರತೆಯಾಗದು. ಸೇವಕ ವರ್ಗದವರಿಗೂ ಲೇಖಕ ಜನರಿಗೂ ಈ ಕಾಲವು ಒಳ್ಳೇ ಪ್ರಗತಿದಾಯಿಯಾಗಿದೆ. ತಾ. 23. 26. 27. ಅನುಕೂಲ ದಿನಗಳು.

ಧನು—ಕಾಲಯಾಪನೆಯು ಅತೀವ ಕಷ್ಟವೆನಿಸುವದು. ಯಾವ ಕಡೆಗೆ ನೋಡಿದರೂ ನಿರಾಶೆಯ ಕಾರ್ಗತ್ತಲೆಯೇ ಕಣ್ಣು ಮುಂದೆ ಬಂದು ನಿಲ್ಲುವದು. ಶತ್ರು ಜನರು ಪ್ರತೀಕಾರಾಸಕ್ತರಾಗಿ ಹಲವಾರು ತರದ ಉಪಟಳವನ್ನೀಯುವರು. ಗುರುಹಿರಿಯರೊಡನೆ ಮನಸ್ತಾಪ ಬಂಧುವರ್ಗದವರೊಡನೆ ಕಲಹ ಗೃಹಕೃತ್ಯದಲ್ಲಿನ ಅವ್ಯವಸ್ಥೆ ಇತ್ಯಾದಿಗಳಿಂದ ನಿತ್ಯ ದುಃಖಿತರಾದ ನಿಮಗೆ ತಾ. 24. 25. 28. 29. ಈ ದಿನಗಳು ಕೊಂಚ ಸುಖದಾಯಿಗಳಾದಾವು.

ಮಕರ—ಒಂದೊಮ್ಮೆಗೆ ನಿಮಗೆ ಕಷ್ಟ ಕಟ್ಟ ಕಡೆಗೆ ಬಿಟ್ಟಂತಾದೀತು ಆದರೂ ಬೆದರಬೇಕಾಗಿಲ್ಲ. ಸುರಾಸುರ ಗುರುಗಳೀರ್ವರು ನಿಮ್ಮ ಮೇಲೆ ಕೃಪಾದೃಷ್ಟಿ ಬೀರಿರುವುದರಿಂದ ಎಂಥ ವಿಪತ್ತೇ ಬರಲಿ ಉಪಾಯದಿಂದ ಪಾರಾಗುವಿರಿ. ಗೃಹತಾಪತ್ರಯಗಳಿಂದಾಗಿ ಕೊಂಚ ಮನಸ್ಸಿಗೆ ನೆಮ್ಮದಿಯಿರದು. ವಿಜಾತೀಯರೊಡನೆ ಕಲಹವಾಗಲಿದೆ. ಸಾರ್ವಜನಿಕ ಕಾರ್ಯದಲ್ಲಿ ವಿಜಯಿಗಳಾದೀರಿ. ತಾ. 23. 26. 27. ಈ ದಿನಗಳು ಇದ್ದುದರಲ್ಲಿ ಉತ್ಕೃಷ್ಟವಾಗುವವು.

ಕುಂಭ—ನಿಮ್ಮ ದುಃಖದ ದಿನಗಳು ದೂರವಾದವು. ಪ್ರತಿಯೊಂದು ಕಾರ್ಯಕಲಾಪಗಳೂ ನಿಮ್ಮಿಚ್ಛೆಯಂತೆ ಪೂರ್ಣವಾಗುವವು. ಉದ್ಯೋಗ ವ್ಯಾಪಾರ ನೌಕರಿ ಮುಂತಾದವುಗಳಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ಫಲಲಾಭವಿದೆ. ಶತ್ರುಜನರು ಹೇಳ ಹೆಸರಿಲ್ಲದಂತಾಗುವರು. ಆದರೆ ಬಂಧುವರ್ಗದವರೊಡನೆ ಕಾರಣಾಂತರದಿಂದ ಕಲಹವಾಗಲಿದೆ. ವಾತಪ್ರಕೋಪದಿಂದ ಆರೋಗ್ಯ ಕೆಟ್ಟೀತು ತಾ. 26 27. ಹೊರತಾಗಿ ಮಿಕ್ಕ ದಿನಗಳು ಉತ್ತಮವಿವೆ.

ಮೀನ—ನಿಮ್ಮ ದುಃಖದ ದಿನಗಳು ಇನ್ನೂ ಮುಗಿದಿಲ್ಲ. "ಗಂಡಸ್ಯೋಪರಿ ಪಿಟಕಃ ಸಂವೃತ್ತಃ" ಗುಳ್ಳೆಯ ಮೇಲೆ ಬೊಕ್ಕೆ ಎದ್ದಂತೆ ಮತ್ತೂ ಮತ್ತೂ ಅನಿಷ್ಟ ಅಶುಭಗಳೇ ಹೆಚ್ಚುತ್ತಿವೆ. ಆಪ್ತೇಷ್ಟ ಬಂಧುವರ್ಗವು ಕೂಡ ಸದ್ಯ ನಿಮ್ಮ ಸಹಾಯ ಬರಲೊಲ್ಲದು. ತಂದೆ ಮಕ್ಕಳೊಳಗೂ ಗಂಡ ಹೆಂಡಿರೊಳಗೂ ಕಲಹವಾಗುವ ಪರಿಸ್ಥಿತಿ ಬರಲಿದೆ. ಹಣದ ಬಿಕ್ಕಟ್ಟು ಅಸಹ್ಯವೆನಿಸೀತು. ಅಂತೂ ಕಷ್ಟ ಪರಂಪರೆಗಳಲ್ಲಿ ಸಿಲುಕಿದ ನಿಮಗೆ ತಾ. 24 25. 26 27. ಕೊಂಚ ಆಶಾದಾಯಿಗಳಾಗಿವೆ.

ಉಡುಪಿ ಡಿ. ಮು ಕೋರ್ಟಿನಲ್ಲಿ.

ಕ್ರಮನಂಬ್ರ 265/1953

ಉಡುಪಿ ಶ್ರೀ ಶೀರೂರು ಮಠದ ಶ್ರೀ ವಿಠಲದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳು —ವಾದಿಯು.

ವ.

1 ಗಿರಿಯ ಹೆಂಗ್ಸು, ಎರ್ಕ್ಕರ್ ಪ್ರೇಮ ಹೆಂಗ್ಸಿನ ಮಗಳು. 2 ಅಂಬು ಯಾನೆ ಮೋನಪ್ಪ ಮೊಯ್ಲಿ, 1 ನೇ ಪ್ರತಿವಾದಿಯ ಮಗ ಪಂಗಳಾಯ ತಾಲ್ಲೂಕು ಇಡ್ಯ ಗ್ರಾಮದ ಬೊಳ್ಪುಜೆಯಲ್ಲಿರುವವರು —ಪ್ರತಿವಾದಿಯು.

ಇವರೊಳಗೆ

ಸದ್ರಿ ಪ್ರತಿವಾದಿಗೆ,

ವಾದಿಯ ಮಠದೊಳಗೆ ಪ್ರತಿವಾದಿಯು ಚಾಲಗೇಣಿಗೆ ಅನುಭವಿಸಿ ಬರುತ್ತಿದ್ದ ಆಸ್ತಿಗಳ ಬಾಬ್ತು ವಾದಿಯ ಮಠಕ್ಕೆ ಪ್ರತಿವಾದಿಯಿಂದ ಬರತಕ್ಕ ಕಳೆದ ಸಂದಿನ ಸಂದರ್ಭದ ಗೇಣಿಬಾಕಿ ಬಡ್ಡಿ ಕಡಿತಾ ಖ್ಯಾದು ರೂ. 612-10-3ಕ್ಕೆ ವಾದಿಯು ಮಾಡಿರುವ ಈ ದಾವೆಯು ತಾರೀಕು 31-7-1953ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ವಿ. ಟಿ. ಉತ್ತರಕೆ. ಪ್ರತಿವಾದಿಯು ಸದ್ರಿ ತಾ 31-7-53ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಉತ್ತರ ಹಾಜರು ಮಾಡಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯನ್ನು ಆವರ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ತಿಳಿಸಲಾಗುತ್ತದೆ.

V. R. Kidyur,
Advocate for Plaintiff.

ಉಡುಪಿ. ತಾ. 16 ಜುಲೈ, 1953.

ಭರ್ತ್ರ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ**. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ್—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ, ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.** ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.**(South India)

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8/-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.US.(N.J.)
CALCUTTA. 40

ಸ್ಟಾಕಿಸ್ಟರು: ಕಮಾಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Reg. No.
M 3618

LICENCE No. 31
Licensed to Post without Prepayment

ನವಯುಗ

30-7-1953

Vol 32
No. 47

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೪೭

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ 5-12-0
6 ತಿಂಗಳಿಗೆ 3-0-0
ಬಿಡಿ ಪ್ರತಿಗೆ 0-2-0

ಅಂತರಂಗ
ಪುಸ್ತಕ ಪತ್ರಿಕೆಯ
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ.

ಮಧುಪರ್ಕ

ವೃದ್ಧಾಪ್ಯದ ದೆಸೆಯಿಂದ ಹಾಸಿಗೆ ಹಿಡಿದಿದ್ದ ಆ ಮುದುಕ ಮಗನನ್ನೂ ಸೊಸೆಯನ್ನೂ ಒಂದು ಮೆದುವಾದ ಹಾಸಿಗೆ ಹಾಗೂ ಹೊಟ್ಟೆ ತುಂಬ ಅನ್ನಕ್ಕಾಗಿ ಕಾಡಿ ಬೇಡಿ ಸೋತು ಹೋದ. ಅವನ ಕರಕರೆಯನ್ನು ತಾಳಲಾರದೆಯೋ ಎಂಬಂತೆ ಇನ್ನೂ ಯೌವನದಲ್ಲಿದ್ದ ಮಗ ಮುದುಕನಿಗೊಂದು ಹರಕು ಹಾಸಿಗೆಯನ್ನು ಮುರುಕು ಮಂಚವನ್ನೂ ಕೊಟ್ಟ. ತಾವು ಪೇಟೆಯಿಂದ ರಸಭರಿತ ಹಣ್ಣುಹಂಪಲುಗಳನ್ನು ತಂದಾಗ, ಎಲ್ಲಿಯೋ ಒಂದು ಚೂರು ಈ ಮುದುಕನ ಮುಂದೆ ದಂಪತಿಗಳು ಬಿಸಾಡುತ್ತಿದ್ದರು. ಸ್ವಾದಿಷ್ಟವಾದ ಭೋಜನ ಉಣ್ಣುವಾಗ, ಮುದುಕನಿಗೆ ತಂಗಳನ್ನು ನೀಡುತ್ತಿದ್ದರು.

ಒಂದು ದಿನ ಇವರೀರ್ವರೂ ಪೇಟೆ ತಿರುಗಾಡಿ ಮನೆಗೆ ಬಂದು ಪುಟ್ಟ ಮಗು ರಾಮೂನನ್ನು ಬಳಿ ಕರೆದರು. ರಾಮೂ ಆಟವಾಡುತ್ತಿದ್ದ; ಬಟ್ಟೆಯ ಚಿಂದಿಯಿಂದ ಒಂದು ಹಾಸಿಗೆ ಮಾಡಿದ್ದ. ಬಂದವನೇ "ಅಪ್ಪಾ, ನಾನು ನಿಮ್ಮಷ್ಟು ದೊಡ್ಡವನಾದ ಮೇಲೆ, ನಿಮಗೆ ಮಲಗಲು ಅಜ್ಜನಿಗೆ ಕೊಟ್ಟಂಥ ಹರಕು ಹಾಸಿಗೆ ಮತ್ತು ಮುರುಕು ಮಂಚ ಕೊಡುತ್ತೇನೆ. ನಾನು ನಿಮ್ಮ ಆ ದೊಡ್ಡ ಮೆದುವಾದ ಹಾಸಿಗೆಯಲ್ಲಿ ಪಲ್ಲಂಗದ ಮೇಲೆ ಮಲಗುತ್ತೇನೆ. ಪೇಟೆಯಿಂದ ಮನೆಗೆ ಬಂದವನು ರುಚಿಕರವಾದ ತಿನಿಸನ್ನು ಕೋಣೆಯಲ್ಲಿ ಬೇರೆಯೇ ತಿನ್ನುತ್ತೇನೆ. ನೀವು ಬೇಕೆಂದು ಕೇಳಿದರೆ ಅಜ್ಜನಿಗೆ ಮಾಡಿದಲ್ಲಿ ಹಾಗೆ ಒಂದೆರಡು ತುಂಡು ಮಾತ್ರ ನಿಮ್ಮ ಕಡೆ ಬಿಸಾಡುತ್ತೇನೆ. ದೊಡ್ಡವನಾದ ಮೇಲೆ ಹಾಗೆಯೇ ಮಾಡಬೇಕಲ್ಲವೇನಪ್ಪಾ?"

ಪುಟ್ಟಮಗನ ಮಾತುಕೇಳಿ ದಂಪತಿಗಳು ಅವಾಕ್ಕಾದರು. ಮಗು ತಮ್ಮ ಅನುಕರಣವನ್ನೆ ನಿಶ್ಚಯವಾಗಿ ಮಾಡುತ್ತಿದೆ ಎಂದವರಿಗೆ ಒಡನೆಯೆ ಹೊಳೆಯಿತು. "ಹೌದು, ನಾವೂ ಒಂದು ದಿನ ಮುದುಕರಾಗುವವರು" ಎಂದವರ ಮನಸ್ಸು ನುಡಿಯಿತು. ತಮ್ಮ ಕೆಟ್ಟ ವರ್ತನೆಯನ್ನು ಆಕ್ಷಣದಿಂದಲೇ ನಿಲ್ಲಿಸಿಬಿಟ್ಟರು.

ಕಿರಿಯರ ಗುಣಶೀಲ

ಓರ್ವ ವಾಚಕರು "ಫಿಲ್ಮ್ ಫೇರ್" ಎಂಬ ಸಿನೆಮಾ ವಿಷಯದ ಪತ್ರಿಕೆಯ ಸಂಪಾದಕರಿಗೆ "ರಾಜಕಪೂರನ ತಮ್ಮ ಶಮ್ಮಿ ಕಪೂರನು ನರ್ಗೀಸಳೊಡನೆ ಅಭಿನಯಿಸಿದರೆ, ರಾಜ ಏನು ಹೇಳಿಯಾನು?" ಎಂದು ಪ್ರಶ್ನಿಸಿದ್ದಕ್ಕೆ ಉತ್ತರವಾಗಿ ಸಂಪಾದಕರು "ಭಲೆ, ನೀನು ಅಣ್ಣನ ಹೆಜ್ಜೆಯನ್ನೇ ಯಶಸ್ವಿಯಾಗಿ ಅನುಕರಣ ಮಾಡುತ್ತೀಯಾ" ಹೀಗೆ ರಾಜಕಪೂರ ನುಡಿದಾನೆಂದು ಹೇಳಿರುವರು. ಈ ವಿಷಯ ನಮಗೆ ಮಹತ್ವದ್ದಲ್ಲವೆಂದು ಇಟ್ಟುಕೊಂಡರೂ—ಒಂದು ಸಂಗತಿಯನ್ನಿಲ್ಲಿ ಅವಶ್ಯ ಗಮನಿಸಬೇಕು ರಾಜಕಪೂರ- ನರ್ಗೀಸಳೊಡನೆ ನಟಿಸುವ ದಾಕ್ಷ್ಯವಮಾಡಿದನೆಂದು ಶಮ್ಮಿ ಕಪೂರನೊಡನೆ ಕೋಪಿಸಲು ಸಾಧ್ಯವಿಲ್ಲ. ಏಕೆಂದರೆ ನಟಿ ನರ್ಗೀಸಳೊಡನೆ ರಾಜಕಪೂರನೊಬ್ಬನೇ ಅಭಿನಯಿಸಬೇಕೆಂದೇನು? ಶಮ್ಮಿ ಕಪೂರನೂ ಒಬ್ಬ ನಟನಾದುದರಿಂದ ನರ್ಗೀಸಳೊಡನೆ ಅವನು ಅಭಿನಯಿಸುವ ಸಂದರ್ಭ ಬಂದರೆ, ಅದಕ್ಕೋಸ್ಕರ ರಾಜಕಪೂರ ಸಿಟ್ಟಾಗುವಂತಿಲ್ಲ. ಶಮ್ಮಿ ಕಪೂರ ತನ್ನ ಅಣ್ಣನಷ್ಟೇ ಕೌಶಲ್ಯ ಹಾಗೂ ಚಾತುರ್ಯದಿಂದ ಮುದ್ದು ನರ್ಗೀಸಳೊಡನೆ ನಟಿಸಿದರೆ, ಅದೂ ಅವನ ತಪ್ಪೆನ್ನಲಾಗದು. ಅಣ್ಣನನ್ನು ಅವನು ಅನುಕರಣ ಮಾಡಿದರೆ, ಅದರಲ್ಲಿ ದೋಷ ಏನೇನೂ ಇಲ್ಲ "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ—" ಎಂಬ ಗಾದೆಯನ್ನು ಈ ಘಟನೆ ನೆನಪಿಗೆ ತಂದುಕೊಟ್ಟೀತು, ಅಷ್ಟೆ!

ಕಿರಿಯರ ಗುಣ ಶೀಲಗಳ ಮೇಲೆ ಹಿರಿಯರ ವರ್ತನೆಯ ಪ್ರಭಾವ ಹೇಗೆ ಬೀಳುತ್ತದೆಂಬುದನ್ನು ಸ್ಪಷ್ಟೀಕರಿಸುವ ಉದ್ದೇಶದಿಂದ ಮೇಲಿನ ನಿದರ್ಶನವನ್ನು ತೆಗೆದುಕೊಂಡೆವು. ಮನುಷ್ಯನಾದವನಿಗೆ ತನ್ನ ಮನೆಯ ಮೇಲಿರುವ ಮಮತೆ ಮತ್ತು ವಾತ್ಸಲ್ಯ ಬೆಕ್ಕನ್ನು ಬಿಟ್ಟರೆ ಉಳಿದೆಲ್ಲ ಪ್ರಾಣಿಗಳಿಗಿಂತಲೂ ಹೆಚ್ಚಿನ್ನಬೇಕು. "ಮನೆ ಮನೆ ನನ್ನಮನೆ ಬೇರೆ ಎಲ್ಲಿ ಸುಮ್ಮನೆ" ಎಂದು ಭಾವಾತ್ಮಕ ಕವಿತೆಯನ್ನು ಅವನು ಹಾಡುತ್ತಿರುವುದೇ ಇದಕ್ಕೆ ಸಾಕ್ಷಿ. ಈ ಲೋಕದಲ್ಲಿ ಮನೆಗೆ ಸಮಾನವಾದುದು ಬೇರೇನೂ ಇಲ್ಲನೆಂಬ ಈ ಕವಿವಾಕ್ಯಕ್ಕೆ ಒಬ್ಬ ವಿಡಂಬನಕಾರರು "ಅಯ್ಯೋ ದೇವರೇ!" ಎಂಬುದನ್ನು ಕೂಡಿಸಿ ಮನೆ ಸ್ವರ್ಗದ ನೆನಪನ್ನು ತಂದು ಕೊಟ್ಟಂತೆ ನರಕ ಯಾತನೆಯ ಕುಂಡವಾಗಿಯೂ ಮಾರ್ಪಡಬಹುದೆಂದು ಸೂಚಿಸಿರುವರು. ನಾವು ಸಣ್ಣವರನ್ನು ನಡೆಸಿಕೊಳ್ಳುತ್ತಿರುವ ಬಗೆಯನ್ನು ನೋಡಿದರೆ, ಹೊಗಸನು: "ಒಲಿದರೆ ನಾರಿ, ಮುನಿದರೆ ಮಾರಿ" ಎನ್ನುವಂತೆಯೇ ಮನೆಯೂ ಸ್ವರ್ಗ ಅಥವಾ ಸ್ಮಶಾನ ಸದೃಶವಾಗಬಲ್ಲುದೆಂಬುದು ಸ್ಪಷ್ಟವಾಗುತ್ತವೆ.

ಪುಟ್ಟ ಮಗುವಿನ ಕ್ರಂದನ ಹಾಗೂ ನಗುವಿನ ಕಲಕಲ ನಿನಾದ ಮನೆಯೊಳಗೆ ಕೇಳಿಸುತ್ತಿದ್ದರೆ ಮಾತ್ರ—ನಿಜವಾಗಿಯೂ ಮನೆಯೊಂದು ಲೋಕವಾಗಬಲ್ಲುದು. ಇದರ ಮುಂದೆ ಬ್ರಹ್ಮಾಂಡವನ್ನೂ ಧಿಕ್ಕರಿಸಬಹುದು ಸಣ್ಣವರು ಮನೆ ಮಾರಕವಾಗಬಹುದು; ಅಥವಾ ಮನೆಯಲ್ಲಿ ರತ್ನ ದೀಪವನ್ನು ಬೆಳಗಿಸುವ, ರಾಷ್ಟ್ರವನ್ನು ಮುನ್ನಡೆಸುವ, ವಿಶ್ವಕ್ಕೆ ಜ್ಯೋತಿ ನೀಡಬಲ್ಲ ಮಹಾನುಭಾವರೂ ಆಗಬಹುದು. ಇದಕ್ಕೆಲ್ಲ ಬಾಲ್ಯದಲ್ಲಿ ಅವರು ಬೆಳೆದು ಬದುಕಿದ ವಾತಾವರಣವೇ ಕಾರಣವೆಂದು ಹಿಂದಿನ ಹಾಗೂ ಇಂದಿನ ಶಾಸ್ತ್ರಜ್ಞರುಗಳೂ ಮನೋವೈಜ್ಞಾನಿಕರೂ ನಿಸ್ಸಂದಿಗ್ಧ ಮಾತುಗಳಿಂದ ಒಪ್ಪಿರುವರು. ಆದುದರಿಂದ ನಮ್ಮ ಹುಡುಗ-ಹುಡುಗಿಯರು ಒಳ್ಳೆಯವರಾಗಬೇಕು, ಸತ್ಪ್ರಜೆಗಳಾಗಬೇಕು ಎಂದು ಬಯಸುವ ಹೆತ್ತ ತಾಯಿ-ತಂದೆಯರ, ಮತ್ತು ಮನೆ ಹಾಗೂ ಹೊರಗಡೆಯ ಹಿರಿಯರ ಕರ್ತವ್ಯವೇನೆಂಬುದನ್ನು ವಿವೇಚಿಸುವುದಗತ್ಯ.

ನಮಗೆ ಪೂರ್ವಜನ್ಮದ ವಾಸನೆಗಳ ಮೇಲೆ ವಿಶ್ವಾಸವಿರಬೇಕೆಂದೇನು ನಿಯಮವಿಲ್ಲ. ಆದರೆ ಈ ಜನ್ಮ ಹಾಗೂ ಜನ್ಮಕ್ಕೆ ಮೊದಲಿನ ನವಮಾಸಗಳ ಗರ್ಭವಾಸವನ್ನು ನಾವೆಲ್ಲರೂ ಯಥಾರ್ಥವಾದುದೆಂದೂ ಸತ್ಯ ಸಂಗತಿಯೆಂದೂ ಒಪ್ಪಬೇಕಾಗುತ್ತದೆ. ಮಕ್ಕಳ ಬೆಳವಿಯ ರಹಸ್ಯವನ್ನು ಚೆನ್ನಾಗಿ ಹೃದಯಂಗಮ ಮಾಡಿಕೊಂಡವರ ಮಾತಿನ ಮೇಲಿಂದ—ಗರ್ಭಾವಸ್ಥೆಯಿಂದಲೇ ಮಗುವಿನ ಮೇಲೆ ತಾಯಿ ತಂದೆಯರ ಗುಣ ನಡತೆಗಳ ಪ್ರಭಾವ ಬೀಳುತ್ತದೆಂದು ತಿಳಿದಿದೆ. ಮಹಾಭಾರತದ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ಶ್ರೀ ಕೃಷ್ಣನು ತನ್ನ ತಂಗಿ ಸುಭದ್ರೆಯ ಮುಂದೆ ಚಕ್ರವ್ಯೂಹ ಕೋಟೆಯನ್ನು ಭೇದಿಸುವ ವಿಚಾರವನ್ನು ಹೇಳುತ್ತಿದ್ದಾಗ, ಸುಭದ್ರೆಯ ಸಂಗಡವೇ ಆಕೆಯ ಗರ್ಭದಲ್ಲಿದ್ದ ಅಭಿಮನ್ಯುವೂ ಈ ವೃತ್ತಾಂತವನ್ನು ಕಿವಿಗೊಟ್ಟು ಕೇಳುತ್ತಿದ್ದನು; ಮತ್ತು ಈ ರಹಸ್ಯವನ್ನು ಮಾತೆಯ ಉದರದಿಂದ ಹೊರಬಂದ ಹದಿನೆಂಟು ವರ್ಷಗಳ ವರೆಗೂ ನೆನಪಿನಲ್ಲಿಟ್ಟುಕೊಂಡಿದ್ದನು. ಇದೊಂದು ಕಟ್ಟು ಕಥೆ; ಇದರಲ್ಲಿ ತಿರುಳಿಲ್ಲ ಎಂಬುದಾಗಿ ನಾವು ತಿರಸ್ಕಾರ ತೋರಿಸಬಾರದು. ಇಂದಿನ ಮನೋವೈಜ್ಞಾನಿಕರೂ ಇಂಥ ಸಂಗತಿಯು ಸಾಧ್ಯವಿದೆಯೆಂದೊಪ್ಪುವರು. ಕನಿಷ್ಠ ಪಕ್ಷ ಮಾತಾಪಿತೃಗಳ ಗುಣ ನಡತೆ ಶೀಲ ಸ್ವಭಾವಗಳ ಅಂಕುರವು ಗರ್ಭಾವಸ್ಥೆಯೇ ಮಗುವಿನ ಭಾವ ಪ್ರಪಂಚದಲ್ಲಿ ನೆಲೆಯೂರುವುದೆಂದು ಅವರು ಕಂಡುಕೊಂಡಿರುವರು. ಆದ ಕಾರಣ ಮಕ್ಕಳ ಶ್ರೇಯಸ್ಸನ್ನು ಬಯಸುವ ತಂದೆ ತಾಯಿಗಳು ಸ್ವತಃ ತಮ್ಮ ಚಾರಿತ್ರ್ಯದ ಮಟ್ಟವನ್ನು ಉನ್ನತವಾಗಿಡಲು ಸದಾ ಜಾಗ್ರತೆ ವಹಿಸಬೇಕು.

ಮಗುವಿನ ಜನನಾನಂತರ ಅದು ಬಾಹ್ಯ ವಾತಾವರಣದ ಸಂಪರ್ಕವನ್ನು ಮಾಡಿಕೊಳ್ಳುವುದಕ್ಕೆ ಮುಂಚೆ, ತನ್ನ ನಿಕಟವರ್ತಿಗಳಾದ ಮಾತಾಪಿತರ ಮತ್ತು ಮನೆಯ ಬಂಧುಗಳ ಪರಿಚಯವನ್ನು ಮಾಡಿಕೊಳ್ಳುತ್ತದೆ ಮಕ್ಕಳು ಅನುಕರಣದ ಮೂಲಕವೇ ಜಗತ್ತಿನೊಡನೆ ಸಂಪರ್ಕ ಮತ್ತು ಯೋಗ್ಯ ಸಾಮಂಜಸ್ಯವನ್ನು ಸ್ಥಾಪಿಸಿಕೊಳ್ಳುವರೆಂಬುದು ಸ್ವತಃ ಸಿದ್ಧ. ತನ್ನ ತಂದೆ ತಾಯಿಗಳು ನಗಿಸಿದರೆ, ಮಗುವೂ ನಗುವುದು ತಂದೆ ತಾಯಿಗಳು ಒಂದು ವಸ್ತುವನ್ನು ಕೈಗೆ ತೆಗೆದುಕೊಂಡರೆ ತಾನೂ ಅದನ್ನು ಕೈಗೆತ್ತಿಕೊಳ್ಳುವುದು ಮುಟ್ಟಿ ಪರೀಕ್ಷಿಸುವುದು. [illegible] ಬೆಳೆದು ಬಂದಂತೆಲ್ಲ ಮಕ್ಕಳ ಈ ಅನುಕರಣ ಶಕ್ತಿಯೂ ವೃದ್ಧಿಹೊಂದುತ್ತದೆ. ತಾವು ಮಾಡುತ್ತಿರುವುದು ಒಳ್ಳೆಯದೋ ಕೆಟ್ಟದೋ ಆವಶ್ಯಕವೋ ಅನಾವಶ್ಯಕವೋ ಎಂಬಿತ್ಯಾದಿ ವಿಚಾರಗಳು ಅವುಗಳ ಮನಸ್ಸಿಗೆ ಬರುವುದಿಲ್ಲ. ಹಿರಿಯರ ನಡೆ

(೧೧ ನೇ ಪುಟನೋಡಿರಿ)

ANNOUNCEMENT

NAVAYUGA SPECIAL NUMBER

On 13—8—1953

COMMEMORATING INDIAN INDEPENDANCE DAY

fullest opportunity for Advertisers
on small investments.

Advt Manager,
NAVAYUGA, UDIPI.

ಒಂದು ತೆನೆಯ ಬದಲು ಎರಡು ತೆನೆ

ಮಿತವಾದ ಸಾಧನ ಹಾಗೂ ಅನುಕೂಲತೆಗಳೊಂದಿಗೆ ಬೆಳೆಯುವ ಬಗೆ

ನಮ್ಮ ದೇಶದಲ್ಲಿಯಷ್ಟೇ ಅಲ್ಲ-ಪ್ರತಿಯೊಂದೂ ನಾಡಿನಲ್ಲಿ ಕೃಷಿಗೆ ಮಹತ್ವದ ಸ್ಥಾನವಿದೆ. ಮನುಷ್ಯನು ಬದುಕಿ ಬಾಳಲು ಅತ್ಯಾವಶ್ಯಕವೆನಿಸಿದ, ಅವನ ಜೀವನಾಧಾರವಾದ ಆಹಾರ ಧಾನ್ಯಗಳು ಭೂಮಿಯಿಂದಲೇ ಉತ್ಪಾದನವಾಗಬೇಕು. ಆದ ಕಾರಣವೇ ಕೃಷಿಯು ಲೋಕವಾತಾವರಣದಲ್ಲಾಗುತ್ತಿರುವ ಸ್ಥಿತ್ಯಂತರಗಳನ್ನು ಯಶಸ್ವಿಯಾಗಿ ಇದಿರಿಸಿಕೊಂಡು, ಇಂದಿನ ವರೆಗೂ ಚಟುವಟಿಕೆಯಿಂದ ತಲೆ ಎತ್ತಿಕೊಂಡು ನಿಂತಿದೆ. ಹೀಗಿರುವುದರಿಂದ ಭಾರತದ ಪಂಚವಾರ್ಷಿಕ ಯೋಜನೆಯು ಕೃಷಿ ವಿಷಯಕ್ಕೆಯೇ ಪ್ರಾಧಾನ್ಯವನ್ನು ಕೊಟ್ಟುದರಲ್ಲಿ ಆಶ್ಚರ್ಯ ಕಾಣುವುದಿಲ್ಲ. ಭಾರತವು ಆಹಾರ ಧಾನ್ಯಗಳಲ್ಲಿಯಷ್ಟೇ ಅಲ್ಲ-ಹತ್ತಿ, ಸೆಣಬು, ಎಣ್ಣೆ, ಬೀಜಗಳು ಮುಂತಾದ ಇತರ ಕೃಷಿ ಸಂಬಂಧದ ಉತ್ಪತ್ತಿಗಳ ಸುಟ್ಟಿಗೂ ಕೊರತೆಯ ದೇಶವೆಂಬುದನ್ನು ಗಮನಿಸಿದರೆ-ಯೋಜನಾ ಆಯೋಗ ಕೃಷಿಗೆ ಕೊಟ್ಟ ಪ್ರಾಶಸ್ತ್ಯವನ್ನು ನಾವೆಲ್ಲರೂ ಸಮರ್ಥಿಸಬೇಕಾಗುವುದು. ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದಂತೆ, ಉತ್ಪಾದನಾ ಮಟ್ಟವು ೧೯೫೧—೫೬ರ ಅವಧಿಯಲ್ಲಿ ಈ ಕೆಳಗಿನಂತೆ ಏರುವುದವಶ್ಯ:—೪೭ ಲಕ್ಷ ಟನ್ನು ಅಕ್ಕಿ, ೨೦ ಲಕ್ಷ ಟನ್ನು ಗೋಧಿ, ೧೬ ಲಕ್ಷ ಟನ್ನುಗಳಷ್ಟು ಕಡಲೆ ಇತ್ಯಾದಿ ಬೇಳೆ ದ್ವಿದಳ ಧಾನ್ಯಗಳು, ೧೨ ಲಕ್ಷ ಗಂಟು ಹತ್ತಿ, ೨೦ ಲಕ್ಷ ಗಂಟು ಸೆಣಬು, ೭ ಲಕ್ಷ ಟನ್ನುಗಳಷ್ಟು ಕಬ್ಬು ಮತ್ತು ೪ ಲಕ್ಷ ಟನ್ನುಗಳಷ್ಟು ಎಣ್ಣೆ ಬೀಜಗಳು. ಈ ಅಂದಾಜಿನನ್ವಯ ಆಹಾರ ಧಾನ್ಯಗಳು ೧೪%, ಹತ್ತಿ ೪೨%, ಸೆಣಬು ೬೩%, ಕಬ್ಬು ೧೨% ಮತ್ತು ಎಣ್ಣೆ ಬೀಜಗಳು ೮% ಹೆಚ್ಚಬೇಕಾಗುವುದು.

❖

ಆಹಾರ ಧಾನ್ಯಗಳೇ ಆಗಲಿ, ಬೇರೆ ಕೃಷಿ ಸಂಬಂಧದ ಉತ್ಪಾದನೆಯಾಗಲೀ ಇಷ್ಟು ಹಚ್ಚಿನ ಪ್ರಮಾಣದಲ್ಲಿ ಫಲವನ್ನು ಕೊಡಬೇಕಾದರೆ, ಕೃಷಿಗೆ ಒಳಪಡುವ ಭೂಮಿಯೂ ಆ ದಾಮಾಶಯದಲ್ಲಿ ವಿಸ್ತಾರಗೊಳ್ಳಬೇಕೆಂದು ತೋರಬಹುದು. ಇದು ತಪ್ಪೆಂದು ಹೇಳಲಾಗುವುದಿಲ್ಲ. ಯೋಜನಾ ಆಯೋಗವು ಈ ಉಪಾಯವು ಪರಿಮಿತವಾಗಿದೆ, ಎಂದು ತಿಳಿದಿದ್ದರೂ, ಅದನ್ನು ಅವಲಂಬಿಸಲು ಮುಂದಾಗಿರುತ್ತದೆ. ಪಡು ಹಾಗೂ ಬೀಳು ಭೂಮಿಯನ್ನು ಸಾಗುವಳಿಗೆ ತರುವುದು, ನೀರಾವರಿಯ ಸೌಲಭ್ಯಗಳನ್ನು ಒದಗಿಸಿಕೊಂಡು ಅಧಿಕ ಬೆಳೆ ಬೆಳೆಯುವುದು, ಮುಂತಾದ ರೀತಿಗಳಿಂದ ಸುಮಾರು ೧೦೪ ಲಕ್ಷ ಎಕ್ರೆ ಜಮೀನನ್ನು ಅಧಿಕ ಕೃಷಿ ಕ್ಷೇತ್ರವಾಗಿ ಪರಿವರ್ತಿಸಬಹುದೆಂದು ಯೋಜನಾ ಆಯೋಗ ಎಣಿಸಿದೆ. ಯೋಜನೆಯ ಅವಧಿಯಲ್ಲಿ ಅಧಿಕ ಉತ್ಪಾದನೆಗೊಳ್ಳಬೇಕೆಂದು ಹೇಳಿರುವ ೭೬ ಲಕ್ಷ ಟನ್ನು ಆಹಾರ ಧಾನ್ಯವನ್ನು ಈ ಕೆಳಗಿನ ರೀತಿಯಿಂದ ಪಡೆಯಬಹುದೆಂದು ಅದು ಸೂಚಿಸಿದೆ.

ದೊಡ್ಡ ನೀರಾವರಿ ಯೋಜನೆಗಳಿಂದ ೨೦·೧ ಲಕ್ಷ ಟನ್ನು, ಸಾಮಾನ್ಯ ನೀರಾವರಿ ಕ್ರಮಗಳಿಂದ ೨೬·೮ ಲಕ್ಷ ಟನ್ನು, ಪಡು ಹಾಗೂ ಬೀಳು ಭೂಮಿಯ ಸಾಗುವಳಿಯಿಂದ ೧೫·೧ ಲಕ್ಷ ಟನ್ನು, ಫಲವರ್ಧಕ ಹಾಗೂ ಗೊಬ್ಬರಗಳಿಂದ ೧೧·೫ ಲಕ್ಷ ಟನ್ನು, ಸುಧಾರಿತ ಬೀಜಗಳಿಂದ ೫·೬ ಲಕ್ಷ ಟನ್ನು ಮತ್ತು ಜನಪದ ಅಭಿವೃದ್ಧಿ ಯೋಜನಾ ಕ್ಷೇತ್ರಗಳಲ್ಲಿ ನಡೆಯುವ ತೀವ್ರ ಪ್ರಚಾರದ ಪರಿಣಾಮವಾಗಿ ೫ ಲಕ್ಷ ಟನ್ನು ಹೀಗೆ ಒಟ್ಟು ಬೆಳೆಯಬಹುದಾದ ೮೧ ಲಕ್ಷದಲ್ಲಿ ೫ ಲಕ್ಷದಷ್ಟು ರೊಕ್ಕದ ಪೈರಿನ ಕಡೆಗೆ ವಾಲುವುದೆಂದಿಟ್ಟುಕೊಂಡರೆ ೭೬ ಲಕ್ಷ ಟನ್ನು ಹೆಚ್ಚುವಳಿಗೆ ಅಭ್ಯಂತರವೇನೂ ಇಲ್ಲ. ಹೀಗೆ ನಾವು ಕಾಗದದಲ್ಲಿ ಲೆಕ್ಕ ಹಾಕುವುದು ಕಷ್ಟ ಸಂಗತಿಯಲ್ಲ. ನಿಜವಾಗಿಯೂ ಯೋಜನಾ ಆಯೋಗ ಅಪೇಕ್ಷಿಸಿದಂತೆ ಹೆಚ್ಚುವಳಿಯನ್ನು ಸಾಧಿಸುವುದೇ ಕಷ್ಟಸಾಧ್ಯವಾದ ಕೆಲಸ. ನಮ್ಮ ದೇಶದಲ್ಲಿ ಎಕರೆಯೊಂದರ ಉತ್ಪಾದನೆ ಪ್ರಪಂಚದ ಇತರ ರಾಷ್ಟ್ರಗಳ ಸರಾಸರಿಗಿಂತ ಬಹಳ ಕಡಿಮೆ ಇರುವುದೆಂದು ಎಲ್ಲರೂ ಬಲ್ಲರು. ಕೆನಡಾದಲ್ಲಿ ಪ್ರತಿ ಎಕ್ರೆಗೆ ೧೦೨೫ ರಾತಲು, ಫ್ರಾನ್ಸಿನಲ್ಲಿ ೧೫೯೧ ರಾತಲು ಮತ್ತು ಅಮೇರಿಕಾದಲ್ಲಿ ೯೯೩ ರಾತಲು ಗೋಧಿ ಬೆಳೆಯುವಾಗ ಭಾರತದಲ್ಲಿ ೫೬೬ ರಾತಲು ಮಾತ್ರ ಬೆಳೆಯುತ್ತದೆ. ಇದರಂತೆ ಚೀನಾದಲ್ಲಿ ಎಕ್ರೆಗೆ ೨೨೬೭ ರಾತಲು ಹಾಗೂ ಜಪಾನಿನಲ್ಲಿ ೩೫೭೮ ರಾತಲು ಅಕ್ಕಿ ಬೆಳೆಯುವಾಗ ಭಾರತದಲ್ಲಿ ಬೆಳೆಯುವುದು ಕೇವಲ ೭೧೪ ರಾತಲು ಮಾತ್ರ. ಈ ರೀತಿ ಉತ್ಪಾದನಾ ಮಟ್ಟವು ಅತ್ಯಂತ ಕೆಳಗಿರುತ್ತಾ ನಾವು ಆಹಾರ ಹಾಗೂ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದು ದೊಡ್ಡ ಸಮಸ್ಯೆ.

❖

ಸರಕಾರವನ್ನು ಮಾತ್ರವಲ್ಲ-ಜನಸಾಮಾನ್ಯರನ್ನೂ ದಿಗ್ಭ್ರಾಂತವನ್ನಾಗಿ ಮಾಡುವ ಸಂಗತಿ ಇದೆಂಬುದು ತೀರಾ ಸ್ಪಷ್ಟವಿದೆ: ನಮ್ಮ ಮದ್ರಾಸು ರಾಜ್ಯವನ್ನೇ ತೆಗೆದುಕೊಳ್ಳೋಣ— ೧೯೨೦-೨೧ನೇ ವರ್ಷದಲ್ಲಿ ೪೨೩ ಲಕ್ಷ ಜನರಿದ್ದರೆ, ಮೂವತ್ತು ವರ್ಷಗಳಲ್ಲಿ, ಅಂದರೆ, ೧೯೫೦—೫೧ನೇ ವರ್ಷ ಇಲ್ಲಿಯ ಜನಸಂಖ್ಯೆ ೫೭೦೧ ಲಕ್ಷವನ್ನು ಮುಟ್ಟಿತು. ಆದರೆ ವಾರ್ಷಿಕ ಆಹಾರಧಾನ್ಯಗಳ ಉತ್ಪಾದನೆ ಈ ಪ್ರಮಾಣದಲ್ಲಿ ಏರಿಕೊಳ್ಳಲಿಲ್ಲ ಮೊದಲಿಗಿಂತಲೂ ನಿಕೃಷ್ಟ ಸ್ಥಿತಿಯನ್ನೇ ಅದು ಮುಟ್ಟಿತು. ಈ ಅವಧಿಯಲ್ಲಿ ೮೨ ಲಕ್ಷ ಟನ್ನುಗಳಷ್ಟು ಬೆಳೆಯುತ್ತಿದ್ದ ಆಹಾರ ಧಾನ್ಯ ೫೮ ಲಕ್ಷ ಟನ್ನುಗಳಿಗೆ ಇಳಿಯಿತು. ಒಟ್ಟು ಜನರಲ್ಲಿ ನೂರಕ್ಕೆ ೮೬ ಪ್ರಾಯಸ್ಥರೆಂದು ಲೆಕ್ಕಹಾಕಿದರೆ, ಕಳೆದ ಮೂವತ್ತು ವರ್ಷಗಳಲ್ಲಿ ಪ್ರತಿಯೊಬ್ಬ ವಯಸ್ಕನಿಗೆ ಸಿಗುವ ಆಹಾರದ ಪ್ರಮಾಣವು ೧·೩೨ ರಾತಲಿನಿಂದ ೦·೭೨ ರಾತಲಿಗೆ ಇಳಿದಿರುತ್ತದೆ. ಹೀಗೆ ಆಹಾರದ ಕೊರತೆಯಿಂದ ಶಕ್ತಿಯು ಹ್ರಾಸವಾಗುತ್ತಿರುವಾಗ ಅತ್ತ ಪೋಷಕಾಂಶಗಳ ನ್ಯೂನತೆಯೂ ತುಂಬ ಹೆಚ್ಚಿಕೊಂಡಿದೆ. ಬೇರೆ ದೇಶಗಳ ಜನರು ತಿನ್ನುವಂತೆ ನಮ್ಮವರು ಹಾಲು ತುಪ್ಪ, ಬೆಣ್ಣೆ, ಮೊಟ್ಟೆ, ತರಕಾರಿ, ಮೀನು, ಮಾಂಸ ಮುಂತಾದುವುಗಳನ್ನು ಹೆಚ್ಚಾಗಿ ಸೇವಿಸುವುದಿಲ್ಲ. ಇವುಗಳ ಉತ್ಪಾದನೆಯನ್ನು ಹೆಚ್ಚಿಸಲು ಇರುವ ಅವಕಾಶ ಕಡಿಮೆ; ಸಾಹಸದಿಂದ ಪ್ರಯತ್ನ ಮಾಡಿದರೂ ಆಹಾರ ಧಾನ್ಯದ ಉತ್ಪಾದನೆಯ ಮೇಲೆ ದುಷ್ಪರಿಣಾಮವುಂಟಾಗುವುದೆಂಬ ಭಯ ತಪ್ಪದು. ನಮ್ಮ ರಾಜ್ಯದಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ ಕೃಷಿಗೊಳಪಟ್ಟ ಭೂಮಿಯು ೩೫೦—೩೬೦ ಲಕ್ಷ ಎಕ್ರೆಗಳ ಪರಿಮಿತಿಯೊಳಗೆಯೇ ಇದ್ದಿತು. ಆದರೆ ಜನಸಂಖ್ಯೆ ಮಾತ್ರ ನೂರಕ್ಕೆ ನಲುವತ್ತರಷ್ಟು ಹೆಚ್ಚಿಕೊಂಡಿತು. ಸಾಗುವಳಿಗೆ ಯೋಗ್ಯವಾಗಿ ಮಾರ್ಪಡಿಸಬಲ್ಲ ಭೂಮಿಯ ಕೊರತೆ ಇತ್ತೆಂಬುದಕ್ಕಾಗಿ ಕೃಷಿಗೊಳಪಟ್ಟ ಜಮೀನು ವಿಸ್ತಾರಗೊಳ್ಳದೆ ಇದ್ದುದಲ್ಲ. ಸುಮಾರು ೬೮ ಲಕ್ಷ ಎಕ್ರೆ ಸಾಗುವಳಿಗೆ ಯೋಗ್ಯವಾದ ಪಡಭೂಮಿ ಇದೆ. ೧೦೩ ಲಕ್ಷ ಎಕ್ರೆ ಬೀಳು ಭೂಮಿ ಇದೆ. ಸುಲಭದಲ್ಲಿ ಕೃಷಿ ಮಾಡಬಲ್ಲ ಎಲ್ಲ ಪ್ರದೇಶವೂ ಸಾಗುವಳಿಗೆ ಒಳಪಟ್ಟಿರುತ್ತದೆನ್ನುವುದು ನಿಶ್ಚಯವಾದರೂ-ಸಾಗುವಳಿಯನ್ನು ವಿಸ್ತರಿಸುವುದಕ್ಕೆ ಅನುಕೂಲವಾದ ಪ್ರದೇಶ ಧಾರಾಳವಾಗಿರುತ್ತದೆನ್ನುವುದೂ ಅಷ್ಟೇ ನಿಜ. ಆದರೆ ನಾವು ಆ ಕಡೆ ಮನಸ್ಸು ಕೊಟ್ಟಂತೆ ಕಾಣುವುದಿಲ್ಲ

❖

ನಮ್ಮ ದೇಶದ ಕನಿಷ್ಠ ಹುಟ್ಟುವಳಿಗೆ ಕಾರಣವನ್ನು ಹೇಳುವಾಗ, ಭೂಮಿಯ ಫಲವತ್ತತೆಯು ದಿನದಿನಕ್ಕೂ ಕಡಿಮೆಯಾಗುತ್ತಾ ನಡೆದಿದೆ ಎಂಬುದನ್ನು ಸರ್ವ ಪ್ರಥಮವಾಗಿ ಸೂಚಿಸುವುದವಶ್ಯ. ಮದ್ರಾಸು ರಾಜ್ಯದಲ್ಲಿ ಒಂದು ಟನ್ನು ಆಹಾರ ಧಾನ್ಯವನ್ನು ಬೆಳೆಯಲು ೧೯೩೫, ೧೯೪೦, ೧೯೪೫, ಮತ್ತು ೧೯೫೦ನೇ ವರ್ಷಗಳಲ್ಲಿ ಅನುಕ್ರಮವಾಗಿ ೧·೪೨೦ ಎಕ್ರೆ, ೧·೪೪೫ ಎಕ್ರೆ ೧·೪೮೫ ಎಕ್ರೆ ಮತ್ತು ೧·೬೧೯ ಎಕ್ರೆ ಭೂಮಿಯ ಉಪಯೋಗ ಅವಶ್ಯವೆನಿಸಿತು. ಈ ರೀತಿ ಭೂಮಿಯ ಫಲವತ್ತತೆ ಕುಂದುತ್ತಾ ಸಾಗಲು ಕಾರಣವೇನೆಂಬುದನ್ನು ನಾವು ಕಂಡುಕೊಂಡು, ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು. ಮದ್ರಾಸು ರಾಜ್ಯದಲ್ಲಿ ಉಷ್ಣವಲಯದ ಇತರ ಪ್ರದೇಶಗಳಂತೆ ಸೂರ್ಯತಾಪದಿಂದ ನೈಟ್ರೋಜನ್ ಎನ್ನುವ ಸಸ್ಯಾಹಾರವು ಮಾಯವಾಗುವುದು ಮುಖ್ಯ ಸಮಸ್ಯೆಯಾಗಿರುತ್ತದೆ. ರಾಜ್ಯದಲ್ಲಿ ಬೆಳೆಯುವ ಭತ್ತ, ಕಬ್ಬು ಮತ್ತು ಹತ್ತಿಯ ಫಸಲುಗಳು ವರ್ಷಕ್ಕೆ ೨·೯೮ ಲಕ್ಷ ಟನ್ನುಗಳಷ್ಟು ನೈಟ್ರೋಜನ್ ಉಪಯೋಗಿಸುವಾಗ,

(೧೧ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ನಿಜಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ. ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ. ೧೪

ರುಚಿನೋಡಿದರೆ ಬಿಡದ ತೆಂಗಿನಕಾಯಿ

ರಾಷ್ಟ್ರಜೀವನದಲ್ಲಿ ಕಲ್ಪವೃಕ್ಷದ ಸ್ಥಾನ ಮಹತ್ವ

ಭಾರತೀಯರು ಕಲ್ಪ ವೃಕ್ಷವೆಂದು ಅಕ್ಕರೆಯಿಂದ ಕರೆಯುವ ತೆಂಗು ನಮ್ಮ ನಿತ್ಯೋಪಯೋಗದಲ್ಲಿಯಷ್ಟೇ ಅಲ್ಲ- ರಾಷ್ಟ್ರದ ಆರ್ಥಿಕ ಕ್ಷೇತ್ರದಲ್ಲಿಯೂ ಒಂದು ಮಹತ್ವದ ಸ್ಥಾನವನ್ನು ಗಳಿಸಿರುತ್ತದೆ. ತೆಂಗಿನ ತವರೂರೆಂದು ನಮ್ಮ ಪಡುಕರಾವಳಿಯನ್ನು ಹೇಳುವುದುಂಟು. ಇದು ನಿಜ. ಅರಬ್ಬೀ ಸಮುದ್ರಕ್ಕೂ ಪಶ್ಚಿಮ ಘಟ್ಟಕ್ಕೂ ನಡುವಿನ ಪ್ರದೇಶದಲ್ಲಿ ಕೊಂಕಣದಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮಲಬಾರು ಮತ್ತು ತಿರುಕೊಚ್ಚಿಗಳನ್ನೊಳಗೊಂಡು ಕನ್ಯಾಕುಮಾರಿ ಭೂಶಿರದವರೆಗೆ ಎಲ್ಲಿ ನೋಡಿದರಲ್ಲಿ ತೆಂಗಿನ ಮರಗಳನ್ನು ನಾವು ಕಾಣುತ್ತೇವೆ. ಇಲ್ಲಿಯಲ್ಲದೆ ಮದ್ರಾಸು ರಾಜ್ಯದ ತಂಜಾವೂರು, ಗೋದಾವರಿ ಮತ್ತು ವಿಶಾಖಪಟ್ಟಣ ಜಿಲ್ಲೆಗಳಲ್ಲೂ, ಮೈಸೂರಿನ ತಿಪಟೂರು ಹಾಗೂ ಅರಸೀಕೆರೆ ತಾಲೂಕುಗಳಲ್ಲೂ ಒರಿಸಾ ಮತ್ತು ಬಂಗಾಳ ರಾಜ್ಯಗಳಲ್ಲೂ ತೆಂಗಿನ ಬೆಳೆಯಾಗುತ್ತದೆ. ಸಾಮಾನ್ಯವಾಗಿ ಕರಾವಳಿ ಪ್ರದೇಶದಲ್ಲಿಯೇ ತೆಂಗು ಬೆಳೆಯುವುದಾದರೂ ಮೈಸೂರಿನಂಥ ಒಳನಾಡಿನಲ್ಲಿ ಸಹ ಒಳ್ಳೆಯ ಆಳವಾದ ಮಣ್ಣು, ಮತ್ತು ಮಣ್ಣಿನಲ್ಲಿ ತುಂಬ ತೇವವಿದ್ದೆಡೆಗಳಲ್ಲಿ ತೆಂಗು ಪುಷ್ಕಳವಾಗಿ ಬೆಳೆಯುತ್ತದೆ

❖

ತೆಂಗಿನ ಬೆಳೆಯನ್ನು ಸದಾಕಾಲ ನಾವು ಪಡೆಯುತ್ತೇವೆ. ಬೇರೆ ಎಲ್ಲ ಮರಗಿಡಗಳು ಹೂಬಿಟ್ಟು ಹಣ್ಣು ಕೊಡುವುದಕ್ಕೆ ಕಾಲನಿಯಮವುಂಟು. ತೆಂಗಿನ ವಿಷಯ ಹಾಗಲ್ಲ-ವರ್ಷದ ಹನ್ನೆರಡೂ ತಿಂಗಳು ತೆಂಗಿನ ಮರ ನಮಗೆ ಕಾಯಿಗಳನ್ನು ನೀಡುತ್ತದೆ. ಸುಮಾರು ೮೦ ವರ್ಷಗಳನ್ನು ದೀರ್ಘಕಾಲ ತೆಂಗು ಫಲವನ್ನು ಕೊಡುತ್ತಾ ಇರುತ್ತದೆ. ಹೀಗಿರುವುದರಿಂದ ತೆಂಗಿನ ತೋಟದ ಒಡೆಯನು ತನ್ನ ಪರಿಶ್ರಮಕ್ಕೆ ದೀರ್ಘ ಕಾಲದವರೆಗೂ ಯೋಗ್ಯ ಪರಿಹಾರವನ್ನು ಪಡೆಯುವನು. ಹೆಚ್ಚು ಕಡಿಮೆ ತಿಂಗಳು ತಿಂಗಳಿಗೂ ಸಾಮಾನ್ಯರಿಗೆ ಸಂಬಳ ದೊರೆತಂತೆ- ತೆಂಗಿನ ತೋಟದವನಿಗೆ ಈ ಪರಿಹಾರ ಸಿಗುತ್ತದೆ. ತೆಂಗಿನ ಮರವು ನೋಡಲು ಭವ್ಯ: ತೆಂಗಿನ ಮರದ ತುದಿಯಲ್ಲಿ ವಿಶಾಲವಾಗಿ ಹರಡಿದ ಮಡಲುಗಳ ಮರೆಯಲ್ಲಿ ಬೆಳವಣಿಗೆಯ ವಿವಿಧಾವಸ್ಥೆಗಳಲ್ಲಿರುವ ತೆಂಗಿನ ಕಾಯಿಯ ಗೊನೆಗಳನ್ನು ಕಾಣುತ್ತೇವೆ. ತೆಂಗಿನ ಸಸಿಯನ್ನು ಅದು ಕೊಡುವ ಕಾಯಿಗಾಗಿಯೇ ಮುಖ್ಯವಾಗಿ ಬೆಳೆಸುವರಾದರೂ -ತೆಂಗಿನ ಮರದ ಯಾವದೇ ಭಾಗವನ್ನೂ ನಿರುಪಯುಕ್ತವೆಂದು ಬಿಸಾಡುವುದಿಲ್ಲ. ನಮ್ಮ ಅಡುಗೆಯಲ್ಲಿ ತೆಂಗಿನಕಾಯಿಯ ತಿರುಳನ್ನು ರುಚಿ ಹೆಚ್ಚಿಸುವುದಕ್ಕೋಸ್ಕರ ಧಾರಾಳವಾಗಿ ಉಪಯೋಗಿಸುತ್ತೇವೆ. ಸಾಬೂನು ಮತ್ತಿತರ ಸುಗಂಧ ದ್ರವ್ಯಗಳ ತಯಾರಿಕೆಗೆ ತೆಂಗಿನ ಎಣ್ಣೆಯು ಅಗತ್ಯವಿದೆ. ತೆಂಗಿನಕಾಯಿಯನ್ನು ಒಡೆದು, ಅದರ ತಿರುಳನ್ನು ಒಣಗಿಸಿ ಮಾಡಿದ ಕೊಬ್ಬರಿಯಿಂದ ಈ ಎಣ್ಣೆಯನ್ನು ಪಡೆಯುತ್ತೇವೆ. ತೆಂಗು ಇನ್ನೂ ಎಳೆಯದಾಗಿರುವಾಗ, ಅದರೊಳಗಿನ ತಂಪಾದ ಪಾನೀಯವು ಬಾಯಾರಿ ಬಳಲಿದವನ ಚೇತನವನ್ನು ಊರ್ಜಿತಗೊಳಿಸುವುದು; ನವ್ಯೋತ್ಸಾಹವನ್ನು ಅವನಲ್ಲಿ ತುಂಬುವುದು. ಕುಡಿಯಲು ಸೀಯಾಳವನ್ನು ಕೊಡುವುದು ಪಡುಕರಾವಳಿಯಲ್ಲಿ ಒಂದು ಮರ್ಯಾದೆ. ತೆಂಗಿನ ಕರಟವು ಅಂಗಿಗಳ ಗುಬ್ಬಿ ಮುಂತಾದುವನ್ನೂ ಮಾಡಲು ಉಪಯೋಗಿಸಲ್ಪಡುತ್ತದೆ. ತೆಂಗಿನ ಸಿಪ್ಪೆಯನ್ನು ಹುರಿಹಗ್ಗ ಹಾಗೂ ತತ್ಸಂಬಂಧಿ ವಸ್ತುಗಳ ತಯಾರಿಕೆಗೆ ಯಥೇಷ್ಟವಾಗಿ ಬಳಸುವರು. ಮಲಬಾರು ತಿರುಕೊಚ್ಚಿಗಳಲ್ಲಿ ಹುರಿಹಗ್ಗ ಪ್ರಾಮುಖ್ಯವಾದ ಉದ್ಯೋಗವಾಗಿ ಬೆಳೆದಿರುತ್ತದೆ. ತೆಂಗಿನ ಮಡಲ ಗಳು ಮನೆಯ ಮಾಡು ಕಟ್ಟಲೂ ತಟ್ಟಿ ಮುಂತಾದವುಗಳನ್ನು ರಚಿಸಲೂ ಉಪಯೋಗಿಸಲ್ಪಡುತ್ತವೆ. ತೆಂಗಿನ ಮರದ ದಿಂಡು ಹಳ್ಳಿಗಳ ತೋಡುಗಳಿಗೆ ಸೇತುವೆಯಾಗಬಲ್ಲುದು; ಮನೆಯ ಮಾಡಿಗೆ ಪಕ್ಕಾಸಿಯಾಗಬಲ್ಲುದು. ನಾವು ತಿರಸ್ಕಾರದಿಂದ ನೋಡಬಹುದಾದರೂ, ನಿತ್ಯೋಪಯೋಗದ ಅತ್ಯಂತ ಅವಶ್ಯಕವೆನಿಸಿದ ಹಿಡಿಸೂಡಿಯನ್ನು ಕಲ್ಪ ವೃಕ್ಷದ ಪ್ರಸಾದವಾಗಿಯೇ ಪಡೆಯುತ್ತೇವೆ.

❖

ಮೇಲಿನ ವಿವರಣೆಯನ್ನು ಓದಿದ ಬಳಿಕ ತೆಂಗಿನ ಮರವೆಷ್ಟು ಪ್ರಯೋಜನಕಾರಿಯಾದ ವೃಕ್ಷ ಮನುಷ್ಯನ ಪಾಲಿಗೆ ಬೇರೊಂದಿಲ್ಲವೆಂದು ಮನವರಿಕೆಯಾದೀತು. ಆದರೆ ಈ ಮರವು ಭೂಮಿಯ ಎಲ್ಲ ಕಡೆಯಲ್ಲಿಯೂ ಬೆಳೆಯುವುದಿಲ್ಲ. ಸಾಮಾನ್ಯವಾಗಿ ಭೂಮಧ್ಯರೇಖೆಯ ಉತ್ತರ ಹಾಗೂ ದಕ್ಷಿಣಗಳಲ್ಲಿ ೨೨ ಡಿಗ್ರಿ ಅಕ್ಷಾಂಶ ರೇಖೆಯ ನಡುವಿನ ಉಷ್ಣವಲಯದಷ್ಟು ತೆಂಗಿನ ಬೆಳೆಯು ಸಾಗಿರುತ್ತದೆ. ಈ ಉಷ್ಣ ಪ್ರದೇಶದಲ್ಲಿ ಸುಮಾರು ೩೦೦೦ ಅಡಿ ಎತ್ತರದ ವರೆಗೂ ತೆಂಗು ಬೆಳೆಯಬಲ್ಲದು. ವಿಶೇಷವಾಗಿ ವಾತಾವರಣದಲ್ಲಿ ತೇವ ತುಂಬಿರುವ, ಮಳೆಗಾಲವು ಬೀಸುತ್ತಿರುವ ಮತ್ತು ಯಥೇಷ್ಟ ನೀರಿನ ಪೂರೈಕೆಯಿರುವ ಕಡಲು ಹಾಗೂ ನದೀತೀರಗಳು ತೆಂಗಿನ ಬೆಳವಣಿಗೆಗೆ ಅತ್ಯುಪಯುಕ್ತವೆನಿಸಿವೆ. ಅಂಕೆಸಂಖ್ಯೆಗಳ ನೇರವಾಗಿ ಹೇಳುವುದಾದರೆ ಲೋಕದಲ್ಲಿ ೮೦ ಲಕ್ಷ ಎಕ್ರೆ ಜಾಗದಲ್ಲಿ ತೆಂಗಿನ ಬೆಳೆಯಾಗುತ್ತದೆ; ಮತ್ತು ವರ್ಷಕ್ಕೆ ೧೦೦೦೦ ಕೋಟಿ ತೆಂಗಿನ ಕಾಯಿಯ ಉತ್ಪಾದನೆಯಾಗುತ್ತದೆ. ಪ್ರಾಮುಖ್ಯತೆಯ ಅನುಕ್ರಮದಲ್ಲಿ ಜಗತ್ತಿನಲ್ಲಿ ತೆಂಗು ಬೆಳೆಯುವ ಪ್ರದೇಶಗಳು ಇವು-ಶಾಂತ ಸಾಗರದಲ್ಲಿರುವ ಫಿಲಿಪ್ಪೈನ್ಸ್ ದ್ವೀಪ ಸಮುದಾಯ, ಪೂರ್ವ ಹಿಂದೀ ದ್ವೀಪ ಸಮುದಾಯ ಭಾರತ ಮತ್ತು ಸಿಂಹಳ. ಭಾರತದಲ್ಲಿ ೧೫ ಲಕ್ಷ ಎಕ್ರೆ ಪ್ರದೇಶದಲ್ಲಿ ತೆಂಗು ಬೆಳೆಯುವುದು; ನಮ್ಮ ವಾರ್ಷಿಕ ಉತ್ಪನ್ನವು ೩೪೦ ಕೋಟಿ ತೆಂಗಿನ ಕಾಯಿಗಳು ತೆಂಗಿನ ಬೆಳೆಯು ಮಣ್ಣಿನ ಗುಣ ಹಾಗೂ ವಾತಾವರಣವನ್ನು ಹೊಂದಿಕೊಂಡಿರುವುದರಿಂದ ತೋಟಗಳನ್ನು ರಚಿಸುವಾಗ, ತುಂಬ ಜಾಗ್ರತೆಯನ್ನು ತೆಗೆದುಕೊಳ್ಳುವುದಗತ್ಯ. ಸ್ವಾಭಾವಿಕವಾಗಿ ತೆಂಗಿನ ಮರವು ವಾತಾವರಣ ಹಾಗೂ ನೆಲದಲ್ಲಿರುವ ಭಿನ್ನ ಪರಿಸ್ಥಿತಿಯನ್ನು ಉಪೇಕ್ಷೆಯಿಂದ ಕಂಡು ಹೇಗಾದರೊಂದು ರೀತಿಯಲ್ಲಿ ಬೆಳೆದು ನಿಲ್ಲುತ್ತದಾದರೂ- ಉತ್ತಮ ಪ್ರತಿಫಲವನ್ನು ಅಪೇಕ್ಷಿಸುವವರೆಲ್ಲರೂ ಅದರ ಯೋಗ್ಯ ಕೃಷಿ ಪದ್ಧತಿಯನ್ನು ಚೆನ್ನಾಗಿ ತಿಳಿದಿರಬೇಕು. ಮುಖ್ಯವಾಗಿ ಮಿದುಮಣ್ಣು, ತುಂಬ ನೀರಿನ ಪೂರೈಕೆ ಹಾಗೂ ಗಾಳಿ ಬೆಳಕಿನ ಅವಕಾಶ ಬೇಕು.

❖

ತೆಂಗಿನ ಮರಗಳಲ್ಲಿ ಮುಖ್ಯವಾಗಿ ಎರಡು ಜಾತಿಗಳಿವೆ ಒಂದನೆಯದು ದೀರ್ಘವಾಗಿ ಬೆಳೆದರೆ ಇನ್ನೊಂದು ವಾಮನಮೂರ್ತಿಯಂತಿರುತ್ತದೆ. ಯಥೇಷ್ಟ ತೆಂಗಿನ ಕಾಯಿಯನ್ನೂ ಉತ್ತಮ ವರ್ಗದ ಕೊಬ್ಬರಿಯನ್ನೂ ತುಂಬ ತೆಂಗಿನ ಸಿಪ್ಪೆಯನ್ನೂ ಕೊಡುವ ಮರ ದೀರ್ಘ ಜಾತಿಗೆ ಸೇರಿದೆ. ಇದು ನೆಟ್ಟು ಬೆಳೆಸಿದ ೧೦ ವರ್ಷಗಳಲ್ಲಿ ಫಲಕೊಡತೊಡಗಿ, ೧೫ನೇ ವರ್ಷದಿಂದ ಧಾರಾಳವಾಗಿ ತನ್ನ ಜೀವಮಾನದ ಕೊನೆಯ ಗಳಿಗೆಯವರೆಗೆ ತೆಂಗಿನ ಕಾಯಿಯನ್ನು ಕೊಡುತ್ತಾ ಹೋಗುತ್ತದೆ ವಾಮನಮೂರ್ತಿಯಂತಿರುವ ಇನ್ನೊಂದು ಜಾತಿಯದು ನಾಲ್ಕು ವರ್ಷಗಳಲ್ಲಿಯೇ ಫಲ ಕೊಡಬಲ್ಲದಾದರೂ, ಅದನ್ನು ಬೆಳೆಸಲು ತುಂಬ ಸಮಾಧಾನಕರವಾದ ಪರಿಸ್ಥಿತಿಯು ಅಗತ್ಯ. ಬೇಗನೇ ಫಲ ದೊರಕಬೇಕೆನ್ನುವ ಅತಿ ಸಾಮಾನ್ಯವಾಗಿ ನಮ್ಮೆಲ್ಲರದಿದ್ದರೂ- ಅದಕ್ಕೆ ಮಾಡಬೇಕಾದ ಕೆಲಸದ ಆಳತೆಯಿಂದ, ತಡವಾಗಿಯಾದರೂ ಸುಲಭದಲ್ಲಿ ಫಲ ಕೈಗೆ ಸಿಗಬಲ್ಲ ದೀರ್ಘ ಜಾತಿಯ ತೆಂಗನ್ನು ಬೆಳೆಸುವುದು ವಾಡಿಕೆಯಾಗಿರುತ್ತದೆ. ಈ ಎರಡೂ ಜಾತಿಯ ತೆಂಗಿನ ಸಸಿಗಳನ್ನು ನಮ್ಮ ಜಿಲ್ಲೆಯ ಕಾಸರಗೋಡಿನಲ್ಲಿರುವ ಕೇಂದ್ರ ತೆಂಗಿನ ಸಂಶೋಧನಾಲಯ ಹಾಗೂ ನೀಲೇಶ್ವರದ ವ್ಯವಸಾಯ ಸಂಶೋಧನಾ ಕೇಂದ್ರದಿಂದ ಪಡೆಯಬಹುದು. ಸಸಿಗಳನ್ನು ನೆಲದ ಸುಮಾರು ೩—೪ ಅಡಿ ಹೊಂಡ ತೋಡಿ, ಒಳ್ಳೆಯ ಗೊಬ್ಬರವನ್ನು ಹಾಕಿ ಅದರಲ್ಲಿ ನೆಡುವುದು ಕ್ರಮ. ಎರಡು ಸಸಿಗಳ ನಡುವಿನ ಅಂತರ ೨೫-೩೦ ಅಡಿಯಷ್ಟಾದರೂ ಇರಬೇಕು. ಮಳೆಗಾಲ ತೊಡಗುವುದಕ್ಕೆ ಸ್ವಲ್ಪ ಮುಂಚೆ ನೆಡುವುದು ಒಳಿತು. ಹೀಗೆ ಹೊಸತಾಗಿ ನೆಟ್ಟ ಸಸಿಗಳ ಆರೈಕೆಯನ್ನು ಒಂದೆರಡು ವರ್ಷಕಾಲ ಜತನದಿಂದ ಮಾಡಬೇಕು. ನೀರಿನ ಪೂರೈಕೆಯನ್ನು ಮಾಡುವುದಲ್ಲದೆ, ನೆರಳನ್ನೂ ಒದಗಿಸಬೇಕು. ಕೀಟ ಹಾಗೂ ರೋಗಗಳಿಂದ ಮತ್ತು ದನಕರುಗಳಿಂದ ತೆಂಗಿನ ಸಸಿಗಳನ್ನು ರಕ್ಷಿಸುವುದು ಅತ್ಯಂತ ಮಹತ್ವದ ಸಂಗತಿ. ಹುಲುಸಾದ ಬೆಳೆಯು ದೊರಕುವಂತೆ ನೈಟ್ರೇಟು, ಫಾಸ್ಫೇಟು ಮತ್ತು ಪೊಟಾಶುಗಳನ್ನು ಕೊಡಬಲ್ಲ ಫಲವರ್ಧಕ ಹಾಗೂ ಧಾತುಜನ್ಯ ಗೊಬ್ಬರಗಳನ್ನು ಹಾಕಬೇಕು. ಬೂದಿ, ಮೀನು ಗೊಬ್ಬರಗಳನ್ನು ಕಂಪೋಸ್ಟು, ಹಿಂಡಿಗಳು, ಎಲುಬು ಹುಡಿ ಇತ್ಯಾದಿ ತೆಂಗಿನ ಪುಷ್ಟಿಗೆ ಪೋಷಕಾಂಶಗಳನ್ನು ಒದಗಿಸುತ್ತವೆ.

❖

ತೆಂಗಿನ ಕಾಯಿಯು ೧೫ ದಿನದಿಂದ ೬೦ ದಿನಗಳಲ್ಲಿ ಕೊಯ್ಲಿಗೆ ತಯಾರಾಗುತ್ತದೆ. ಈ ನಡುವೆ ಕರುವಾಯಿಯೇ ಮುಂತಾದವುಗಳ ಕೀಟ ಬಾಧೆಯನ್ನು ಯಶಸ್ವಿಯಾಗಿ ತಡೆಯಲು ಪ್ರಯತ್ನ ಮಾಡುವುದು ಅವಶ್ಯಕ. ಸಾಮಾನ್ಯವಾಗಿ ಸ್ವಚ್ಛತೆಯನ್ನು [illegible] ಆರೋಗ್ಯ ರಕ್ಷಣೆಯನ್ನು ಮಾಡಬಹುದು. ತೆಂಗಿನ ಗರಿಗಳಿಗೆ ಕೂಡಾ ರೋಗ ತಗಲುವುದುಂಟು. ಇದನ್ನು ಹೊಸ ಆಧುನಿಕ ಸಂಶೋಧನೆಗಳು ಹೇಳುವ ಉಪಾಯಗಳಿಂದ ನಾವು ತಡೆಗಟ್ಟಬೇಕು. ಈ ರೀತಿ ಕತ್ಸವಟ್ಟು ಪ್ರಯತ್ನಪಟ್ಟರೆ, ತೆಂಗಿನ ಬೆಳೆಯಿಂದ ಭಾರತವು ತುಂಬ ಪ್ರಯೋಜನಹೊಂದಬಲ್ಲುದು. ತೆಂಗಿನ ವ್ಯವಸಾಯದ ಕಡೆಗೆ ಕೇಂದ್ರ ಸರಕಾರದ ಗಮನವು ಈಗ್ಗೆ ಕೆಲವರ್ಷಗಳಿಂದ ಹರಿಸಲ್ಪಡುತ್ತಿದೆ. ವಿದೇಶಗಳ ಸ್ಪರ್ಧೆಯ ಕಾರಣದಿಂದ ನಮ್ಮ ತೆಂಗಿನ ವ್ಯವಸಾಯವು ಚೇತರಿಸಿಕೊಳ್ಳದಂತಾದಾಗ, ಸರಕಾರವು ಯೋಗ್ಯ ರಕ್ಷಣೆಯನ್ನು ಕೊಡುವ ಅಗತ್ಯವನ್ನು ಮನಗಂಡಿತು. ೧೯೪೫ರಲ್ಲಿ ಕಾಯಿದೆ ಮೂಲಕ ಕೇಂದ್ರ ತೆಂಗಿನ ಸಂಶೋಧನಾ ಮಂಡಳಿಯನ್ನು ಏರ್ಪಡಿಸಿತು. ತೆಂಗಿನ ಬೆಳೆಯ ವ್ಯವಸಾಯಾತ್ಮಕ, ಔದ್ಯಮಿಕ ಹಾಗೂ ಆರ್ಥಿಕ ಅಂಗಗಳನ್ನು ಪರಿಶೀಲಿಸಿ, ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಈ ಮಂಡಳಿಯ ಉದ್ದೇಶ. ಈ ಮಂಡಳಿಯು ರಾಜ್ಯ ಸರಕಾರಗಳ ಸಹಕಾರವನ್ನು ಪಡೆದು ತೆಂಗಿನ ವ್ಯವಸಾಯದ ಅಭಿವೃದ್ಧಿಗೋಸ್ಕರ ಎಲ್ಲ ಕ್ಷೇತ್ರದಲ್ಲೂ ಪ್ರಯತ್ನವನ್ನು ನಡೆಸುತ್ತಿದೆ.

DO YOU KNOW ....

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 — H. O: UDIPI, S. India.

ಕರಾಚಿಯಲ್ಲಿ ಪ್ರಧಾನಿದ್ವಯರ ಸಮ್ಮೇಳನ

ಭೀತಿ ಸಂಶಯಗಳಿಲ್ಲದ ಸೌಹಾರ್ದಯುತ ವಾತಾವರಣದಲ್ಲಿ ನೆಹರೂ ಮುಹಮ್ಮದಾಲಿ ಮಾತುಕತೆ

ಶುಭ ಸಮಾಗಮ

ಕಳೆದ ವಾರವೇ ಸೂಚಿಸಿದಂತೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸ್ನೇಹಮಯವಾದ ಸಂಬಂಧ ಸ್ಥಾಪನೆಗೊಳ್ಳುವ ಯೋಗ್ಯ ಅವಕಾಶವು ಇದೀಗ ಒದಗಿ ಬಂದಿರುತ್ತದೆ. ಕೆಲವು ದಿನಗಳ ಹಿಂದೆ ನಿರ್ಧರಿಸಿದಂತೆ ಪ್ರಧಾನಿ ನೆಹರೂರವರು ದಿನಾಂಕ ೨೫ನೇ ಶನಿವಾರ ಹೊಸ ದಿಲ್ಲಿಯಿಂದ ಕರಾಚಿಗೆ ವಿಮಾನದಲ್ಲಿ ಹೋಗಿ, ಪಾಕಿಸ್ತಾನೀ ಪ್ರಧಾನಿ ಮುಹಮ್ಮದಾಲಿಯವರನ್ನು ಕಂಡು ಮಾತುಕತೆಗಳನ್ನು ನಡೆಸಿದರು. ವಿಮಾನ ನಿಲ್ದಾಣದಲ್ಲಿ ನೆಹರೂರವರು ಪರಸ್ಪರ ತಂಟೆಗಳನ್ನು ಬಗೆಹರಿಸುವ ಈ ಪ್ರಯತ್ನವು ನಿಶ್ಚಯವಾಗಿಯೂ ಫಲಪ್ರದವಾಗುವುದೆಂಬ ಆಸೆಯನ್ನು ತಾನು ಇಟ್ಟುಕೊಂಡಿರುವುದಾಗಿ ಹೇಳಿದರು. ನೆಹರೂರ ಸದಾಶಯವು ಯಥಾರ್ಥವಾಗಿದ್ದಿತೆಂದು ಕರಾಚಿಯಲ್ಲಿ ನಡೆದ ಘಟನೆಗಳು ಪ್ರಕಟಪಡಿಸುತ್ತವೆ. ಮೂರು ವರ್ಷಗಳಿಗೆ ಮುಂಚೆ ನೆಹರೂರವರು ಆಗಿನ ಪಾಕಿಸ್ತಾನೀ ಪ್ರಧಾನಿ ಲಿಯಾಕತ ಅಲಿಖಾನರನ್ನು ಭೇಟಿಯಾಗಲು ಕರಾಚಿಗೆ ಹೋಗಿದ್ದರು. ನೆಹರೂರವರಿಗೆ ಅಂದು ಭವ್ಯ ಸ್ವಾಗತದ ಏರ್ಪಾಡು ಮಾಡಲಾಗಿತ್ತು. ಆದರೆ ಈ ಬಾರಿಯ ಸಂದರ್ಶನ ಆಗಿನ ಭೇಟಿಗಿಂತಲೂ ಮಹತ್ವಪೂರ್ಣವಾಗಿರುತ್ತದೆ. ಪಾಕಿಸ್ತಾನೀ ಜನತೆಯೂ ಸರಕಾರೀ ಸೂತ್ರ ವಹಿಸಿಕೊಂಡ ನಾಯಕರೂ ನೆಹರೂರವರಿಗೆ ಮೈತ್ರಿಯ ವಾತಾವರಣದಲ್ಲಿ ಅಭೂತಪೂರ್ವವಾದ, ಗೌರವಯುತವಾದ ಸ್ವಾಗತವನ್ನು ಕೊಟ್ಟಿರುವರು. ನೆಹರೂರವರು ಭಾರತ ವಿಭಜನೆಯ ಮೊದಲು ಜನನಾಯಕರಾಗಿದ್ದುಕೊಂಡು ಪಾಕಿಸ್ತಾನದ ಈ ವಿಭಾಗದ ಜನಸಾಮಾನ್ಯರೊಡನೆ ಇಟ್ಟುಕೊಂಡಿದ್ದ ಸಂಪರ್ಕವನ್ನು ಅಲ್ಲಿಯ ಜನತೆ ಇನ್ನೂ ಮರೆತಿಲ್ಲವೆನ್ನುವುದು ಈ ಸ್ವಾಗತದಿಂದ ಸ್ಪಷ್ಟವಾಗುತ್ತದೆ. ನೆಹರೂರವರು ಎಲ್ಲೆಲ್ಲಿಯೂ ಜಯಘೋಷಗಳನ್ನು ಕೇಳಿದರು; ಸ್ನೇಹ ಮತ್ತು ಸೌಹಾರ್ದದ ಭಾವನೆಯನ್ನು ಕಂಡು ಪುಲಕಿತರಾದರು. ಪ್ರೀತಿಭೋಜನಗಳೂ ಸತ್ಕಾರ ಕೂಟಗಳೂ ಜರಗಿದವು; ಎಲ್ಲ ಪಾಕಿಸ್ತಾನೀ ಅಧಿಕಾರಿ ವರ್ಗ, ಮಂತ್ರಿ ಮಂಡಳದ ಸದಸ್ಯರು, ಹಾಗೂ ನಾಗರಿಕ ಮಹನೀಯರು ನೆಹರೂರವರನ್ನು ತುಂಬ ಗೆಳೆತನದಿಂದ ನಡೆಸಿಕೊಂಡರು. ಇದನ್ನೆಲ್ಲ ನೋಡಿದರೆ, ಪಾಕಿಸ್ತಾನೀ ಜನತೆಯು ಪ್ರಧಾನಿದ್ವಯರ ಈ ಭೇಟಿಯ ಫಲಿತಾಂಶವನ್ನು ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿದೆ ಎಂದು ಹೇಳಬೇಕಾಗುವುದು.

ಅನುಕೂಲ ವಾತಾವರಣ

ಪತ್ರಿಕಾ ವರದಿಗಳಿಂದ ತಿಳಿದು ಬರುವಂತೆ ಬೀದಿಯಲ್ಲಿ ನಡೆದು ಹೋಗುವ ಕೂಲಿಯೊಬ್ಬನನ್ನು ಕೇಳಿದರೆ, ಈ ಬಾರಿಯ ಪ್ರಧಾನಿಗಳ ಭೇಟಿಯಿಂದ ಉಭಯ ರಾಷ್ಟ್ರಗಳ ಕಲ್ಯಾಣ ನಿಶ್ಚಯಕ್ಕೂ ನೆರವೇರುವ ಭರವಸೆ ಇದೆ ಎಂಬ ಉತ್ತರ ಅವನಿಂದ ಬರುತ್ತದೆ. ಪಾಕಿಸ್ತಾನೀ ಪತ್ರಿಕೆಗಳು ಸಾಮಾನ್ಯವಾಗಿ ದುರುದ್ದೇಶಪೂರಿತವಾದ ಅಪಪ್ರಚಾರವನ್ನು ಈ ಹಿಂದೆ ಮಾಡುತ್ತಿದ್ದರೆ–ಈಗ ಪ್ರಧಾನಿಗಳ ಸಮಾಗಮದಿಂದ ಲಾಭವೇ ಆಗುವುದೆಂಬುದನ್ನು ಮನಗಾಣುತ್ತಿವೆ. ಡಾನದಂಥ ಪತ್ರಿಕೆಯೂ ಈ ಭೇಟಿಯನ್ನು ಮಹತ್ವಪೂರ್ಣವೆಂದು ಹೇಳಿದೆ. ಪಾಕಿಸ್ತಾನದಲ್ಲಿ ಶಾಂತ ಹಾಗೂ ಸೌಹಾರ್ದಪೂರ್ಣ ವಾತಾವರಣವುಂಟಾಗುವುದಕ್ಕೆ ಪತ್ರಿಕೆಗಳ ಸೌಮ್ಯ ಧೋರಣವೂ ಒಂದು ಕಾರಣ. ಇಷ್ಟು ಒಳ್ಳೆಯ ಪರಿಸ್ಥಿತಿ ಭಾರತ ವಿಭಜನೆಯಾದ ಬಳಿಕದ ಈ ಐದಾರು ವರ್ಷಗಳಲ್ಲಿ ಹಿಂದೆ ಎಂದೂ ಇರಲಿಲ್ಲ. ನೆಹರೂರವರು ಸೋಮವಾರ ದಿನ ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುವಾಗ ಈ ಅಂಶವನ್ನು ಸ್ಪಷ್ಟಗೊಳಿಸಿದರು. ಪಾಕಿಸ್ತಾನ ಮತ್ತು ಭಾರತಗಳ ನಡುವೆ ಇದ್ದ ಪರಸ್ಪರ ಭೀತಿ ಮತ್ತು ಸಂಶಯದ ವಾತಾವರಣವು ಈಗ ಬಹಳಮಟ್ಟಿಗೆ ಮಾಯವಾಗಿರುತ್ತದೆಂದು ನೆಹರೂ ಹೇಳಿದರು. ಮೊದಲಿನ ಕಲುಷಿತ ವಾತಾವರಣವು ಈಗ ಇಲ್ಲದಿರುವುದರಿಂದ ಮಾತುಕತೆಗಳು ಪ್ರಗತಿಹೊಂದುವುದಕ್ಕೆ ತುಂಬ ನೆರವಾಗಿರುತ್ತವೆ. ನೆಹರೂರವರು ತಮಗಿತ್ತ ಸ್ವಾಗತವನ್ನು ಕಂಡು ಮನಕರಗಿದವರಾಗಿದ್ದಾರೆ. ಪಾಕಿಸ್ತಾನೀ ಜನತೆಯ ಸ್ನೇಹ ಸೌಜನ್ಯಕ್ಕೆ ಪ್ರತಿಯಾಗಿ ಭಾರತವೂ ಒಳ್ಳೆಯ ರೀತಿಯಿಂದ ನಡೆದುಕೊಳ್ಳುವ ಭರವಸೆ ಕೊಟ್ಟಿದ್ದಾರೆ. ಭಾರತವು ಪಾಕಿಸ್ತಾನದ ಸ್ವಾತಂತ್ರ್ಯವನ್ನು ಸಹಿಸುವುದಿಲ್ಲವೆನ್ನುವ ಅಪಪ್ರಚಾರದಲ್ಲಿ ಏನೇನೂ ತಿರುಳಿಲ್ಲವೆಂದು ಹೇಳಿ ಪಾಕಿಸ್ತಾನದ ಸಾರ್ವಭೌಮಾಧಿಕಾರವನ್ನು ಭಾರತ ಗೌರವಿಸುವುದೆಂದಿದ್ದಾರೆ. ಈ ಸ್ನೇಹದ ಮಾತುಗಳೇ ಭಾರತ-ಪಾಕ ತಂಟೆಗಳ ಪರಿಹಾರದಲ್ಲಿ ಮುಕ್ಕಾಲು ಮೂರು ವೀಸ ಪಾಲು ಪ್ರಗತಿಸಾಧಿಸಬಲ್ಲುವು. ನಿಜ ಹೇಳಬೇಕೆಂದರೆ ಸಮಸ್ಯೆಗಳ ಜಟಿಲತೆಗಿಂತಲೂ–ಪರಸ್ಪರ ವೈಷಮ್ಯ ಭಾವನೆ ಇದ್ದುದರಿಂದಲೇ ಭಾರತ ಪಾಕ ಸಂಬಂಧ ಹದಗೆಟ್ಟಿತು. ಸಾಂಸ್ಕೃತಿಕ, ಚಾರಿತ್ರಿಕ, ಆರ್ಥಿಕ ಹಾಗೂ ಭೌಗೋಲಿಕ ಸಂಬಂಧ ಹಾಗೂ ಸೌಮ್ಯವನ್ನು ಪಡೆದುಕೊಂಡಿರುವ ಭಾರತ-ಪಾಕ ರಾಷ್ಟ್ರಗಳು ಸ್ನೇಹದಿಂದ ವರ್ತಿಸಬೇಕಾದುದು ಅತ್ಯಾವಶ್ಯಕ. ಗೆಳೆತನದ ಈ ಬೆಸುಗೆಯೇ ದೊಡ್ಡ ದೊಡ್ಡ ವಿಷಯಗಳಲ್ಲಿ ಸರಕಾರೀ ಮಟ್ಟದಿಂದ ಮಾಡಬಹುದಾದ ನಿರ್ಣಯಗಳಿಗಿಂತಲೂ ಹೆಚ್ಚು ಮಹತ್ವದ ಸಂಗತಿ ಎಂದು ನೆಹರೂರ ಅಭಿಪ್ರಾಯ.

ಚರ್ಚೆಯ ವಿಷಯಗಳು

ಈ ಅಭಿಪ್ರಾಯವನ್ನು ಪಾಕಿಸ್ತಾನೀ ಪ್ರಧಾನಿ ಮುಹಮ್ಮದಾಲಿಯವರೂ ಒಪ್ಪುವರೆಂದು ಭಾವಿಸುತ್ತಾರೆ. ಲಾಹೋರು ವಸ್ತುಸಂಗ್ರಹಾಲಯದಲ್ಲಿದ್ದ ಜೇಕೊಬ್ ಇಪ್‌ಸ್ಟೀನರೆಂಬ ಪ್ರಸಿದ್ಧ ಕಲಾವಿದರು ರಚಿಸಿದ ನೆಹರೂರ ಮೂರ್ತಿಯೊಂದನ್ನು ಭಾರತಕ್ಕೆ ಮರಳಿ ಕೊಡಲು ಪಾಕಿಸ್ತಾನದ ಹಿಂದಿನ ಸರಕಾರ ನಿರಾಕರಿಸಿದ್ದಿತು. ಆದರೆ ಮೊನ್ನೆ ನೆಹರೂರ ಗೌರವಾರ್ಥ ಏರ್ಪಡಿಸಿದ ಒಂದು ಸತ್ಕಾರ ಕೂಟದಲ್ಲಿ ಮುಹಮ್ಮದಾಲಿಯವರು ಈ ಪ್ರತಿಮೆಯನ್ನು ನೆಹರೂರಿಗೆ ಒಪ್ಪಿಸಿದರು. ಪ್ರಧಾನಿದ್ವಯರ ಭೇಟಿಯ ಸ್ಮಾರಕಾರ್ಥವಾಗಿ ಎಂಬಂತೆ, ಭಾರತ-ಪಾಕಗಳ ಸಂಬಂಧವನ್ನು ಮುಚ್ಚಿದ್ದ ಮಾರ್ಗಗಳನ್ನು ಕೆಲವೆಡೆ ತೆರೆದಿಡಲಾಯಿತು. ಪರಸ್ಪರ ವ್ಯಾಪಾರ ವಹಿವಾಟಿಗೂ, ಜನರು ನಿರಾತಂಕವಾಗಿ ಬಂದು ಹೋಗುವುದಕ್ಕೂ ಇದ್ದ ಈ ಅಡ್ಡಿಗಳು ದೂರಗೊಂಡುದರಿಂದ, ಇಕ್ಕಡೆಯ ಜನತೆಗೂ ಹೊಸತಾಗಿ ಆಶ್ವಾಸನೆ ದೊರೆತಂತಾಯಿತು. ಹೀಗೆ ಎಲ್ಲೆಡೆಯಲ್ಲೂ ಅನುಕೂಲಪರಿಸ್ಥಿತಿಯೇ ದೃಷ್ಟಿಗೋಚರವಾಗುತ್ತಿದ್ದುದರಿಂದ ಪ್ರಧಾನಿಗಳಿಗೆ ಮಾತುಕತೆಗಳನ್ನು ಸಂಪೂರ್ಣ ಆತ್ಮವಿಶ್ವಾಸದೊಂದಿಗೆ ತೊಡಗುವ ಸೌಭಾಗ್ಯ ಪ್ರಾಪ್ತವಾಯಿತು. ಭೇಟಿಯು ಪಾಕಿಸ್ತಾನೀ ಗವರ್ನರ ಜನರಲ್ಲ ಗುಲಾಮ ಮುಹಮ್ಮದರ ನಿವಾಸದಲ್ಲಿಯೇ ಜರಗಿತು. ಭಾರತ ಪಾಕದ ಹದಗೆಟ್ಟ ಸಂಬಂಧವು ಮರಳಿ ಚೇತರಿಸುವುದಕ್ಕೆ ಕಾರಣೀಭೂತರಾದ ಮಹನೀಯರು ಪಾಕಿಸ್ತಾನೀ ಗವರ್ನರ ಜನರಲ್ಲರೆಂಬುದನ್ನು ನಾವಿಲ್ಲಿ ನೆನೆಯುವುದೊಳಿತು- ಬಹಿರಂಗವಾಗಿ ಮುಹಮ್ಮದಾಲಿಯವರು ಸ್ನೇಹ ವರ್ತನೆಯನ್ನು ತೋರ್ಪಡಿಸುತ್ತಿರುವುದಕ್ಕೆ ಗವರ್ನರ ಜನರಲ್ಲ ಗುಲಾಮ ಮುಹಮ್ಮದರ ಪ್ರೋತ್ಸಾಹ, ಪ್ರಚೋದನೆಗಳೇ ಕಾರಣವೆಂದು ಹೇಳಬಹುದು. ಉಭಯ ರಾಷ್ಟ್ರಗಳ ಭವಿಷ್ಯ ನಿರ್ಣಯದಲ್ಲಿ ಈಗಿನ ಮಾತುಕತೆಗಳು ಮಹತ್ವದ ಪಾತ್ರ ವಹಿಸುವುದರಿಂದ ಗವರ್ನರ ಜನರಲ್ಲರು ಅತ್ಯಂತ ಆಸ್ಥೆಯನ್ನು ತೋರಿಸುತ್ತಿರುವರು. ಮೊದಲಿನೆರಡು ದಿನಗಳು ನೆಹರೂ-ಮುಹಮ್ಮದಾಲಿಯವರಷ್ಟೇ ಮಾತುಕತೆ ನಡೆಸಿದರೂ, ಕೊನೆಯ ದಿನ ಗವರ್ನರ ಜನರಲ್ಲರೂ ಇದರಲ್ಲಿ ಭಾಗ ವಹಿಸುವ ಸಂಭವವುಂಟೆಂದು ಎಲ್ಲರೂ ನಂಬಿದ್ದರು. ಪ್ರಾರಂಭದಲ್ಲಿ ಕಾಲುವೆ ನೀರಿನ ತಂಟೆಯನ್ನೂ ಬಂಗಾಳದ ಪ್ರಶ್ನೆಯನ್ನೂ ವಿಚಾರಕ್ಕೆ ತೆಗೆದುಕೊಂಡರು. ಕಾಲುವೆ ನೀರಿನ ಸಂಬಂಧದ, ಉಭಯರಾಷ್ಟ್ರಗಳ ತಜ್ಞರೂ ವಿಶ್ವಬೇಂಕಿನ ಸಮ್ಮುಖದಲ್ಲಿ ತಂತಮ್ಮ ಪಕ್ಷಗಳನ್ನು ಮಂಡಿಸಿರುವರು. ಆದಕಾರಣ ಅದನ್ನು ಮರಳಿ ಇಲ್ಲಿ ಎತ್ತಿಕೊಳ್ಳುವ ಆವಶ್ಯಕತೆ ಇಲ್ಲವೆಂದೂ ವಿಶ್ವ ಬೇಂಕಿನ ಕಡೆಯಿಂದ ನಡೆ

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12 8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲಪ್ರಾಪ್ತಿಯಾಗುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ವಿವೇಕಿಗಳು............

ತಾವು ಚಿಕ್ಕಂದಿನಲ್ಲಿ ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸುತ್ತ ಕುಳಿತುಕೊಳ್ಳುವುದಿಲ್ಲ. ತಮಗೆ ಬಿಡುವಿದ್ದಾಗ '**ಸುಲಭದಲ್ಲಿ ಇಂಗ್ಲಿಷ್**' ಎಂಬ ಇಂಗ್ಲಿಷ್ ಸ್ವಯಂಬೋಧಿನಿಯ ಸಹಾಯದಿಂದ ಸಾಕಷ್ಟು ಇಂಗ್ಲಿಷ್ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಅಲ್ಪಾವಧಿಯಲ್ಲಿಯೇ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಳ್ಳಬಹುದು. ಬೆಲೆ ರೂ. 1-8-0 ಮಾತ್ರ. ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ, ಇವರಿಗೆ ಬರೆಯಿರಿ.

ಆಂಧ್ರ ವಿಧೇಯಕಕ್ಕೆ ಮುಖ್ಯ ತಿದ್ದುಪಡಿಗಳು

ಹನ್ನೆರಡು ದಿನಗಳ ತುರುಸಿನ ಚರ್ಚೆಯಲ್ಲಿ ಆಂಧ್ರರು ಪಡೆಯುತ್ತಿರುವ ಯಶಸ್ಸು

ಯುವ ಪಂಚಾಯತಿಕೆಯ ಫಲಿತಾಂಶವನ್ನು ನಿರೀಕ್ಷಿಸುವುದೇ ಒಳಿತೆಂದೂ ಅಭಿಪ್ರಾಯ ವ್ಯಕ್ತಗೊಳಿಸಲ್ಪಟ್ಟಿತು. ಹಾಗೆಯೇ ಬಂಗಾಳದಲ್ಲಿ ಈಗೆರಡು ಮೂರು ತಿಂಗಳುಗಳಿಂದ ಅಲ್ಪ ಸಂಖ್ಯಾಕರ ಪ್ರಶ್ನೆಯು ಮೊದಲಿನಂತೆ ಗಂಭೀರವಾಗಿರುವುದಿಲ್ಲವೆಂದೂ ಪ್ರಧಾನಿಗಳು ನಿರ್ಣಯಿಸಿದರು.

ಸಾಧನೆಯ ಮಾನದಂಡ

ಆದುದರಿಂದ ಗಂಭೀರ ಪ್ರಶ್ನೆಗಳೆಂದು ಹೇಳಬಹುದಾದ ನಿರಾಶ್ರಿತರ ಆಸ್ತಿಯ ತಂಟೆ ಹಾಗೂ ಕಾಶ್ಮೀರದ ಬಿಕ್ಕಟ್ಟುಗಳ ಕಡೆಗೆ ಉಭಯ ಪ್ರಧಾನಿಗಳೂ ಮನಸ್ಸುಗೊಟ್ಟರು. ನಿರಾಶ್ರಿತರ ಸಮಸ್ಯೆಯ ಸಂಬಂಧದಲ್ಲಿ ಪಾಕಿಸ್ತಾನವು ಅತ್ಯಂತ ಮಹತ್ವದ ಸೂಚನೆಯೊಂದನ್ನು ಮಾಡಿದ ಪರಿಣಾಮವಾಗಿಯೇ ಎಂಬಂತೆ ನೆಹರೂರವರು ಭಾರತದ ಪುನರ್ನಿವೇಶನ ಶಾಖೆಯ ಅಧಿಕಾರಿ ವರ್ಗದವರನ್ನು ಕರಾಚಿಗೆ ತುರ್ತಾಗಿ ಕರೆಸಿಕೊಂಡರು. ಸಾಮಾನ್ಯವಾಗಿ ರಾಜಕೀಯ ಮತಭೇದಗಳನ್ನು ನಿವಾರಿಸಿ ಪರಸ್ಪರ ಸಮ್ಮತವಾದ ಧೋರಣೆಯೊಂದನ್ನು ರೂಪಿಸುವುದೇ ಪ್ರಧಾನಿದ್ವಯರ ಭೇಟಿಯ ಉದ್ದೇಶವಾಗಿರುವುದರಿಂದ-ಸರಕಾರೀ ಅಧಿಕಾರಿಗಳೇ ಹಿಂದಿನಿಂದ ವಿವರಗಳನ್ನು ಪರಸ್ಪರ ಚರ್ಚಿಸಿ ನಿರ್ಣಯಿಸುವರು. ನಿರಾಶ್ರಿತರ ಆಸ್ತಿ ಪಾಸ್ತಿಯ ವಿಷಯದಲ್ಲೂ ಹೀಗೆಯೇ ನಡೆಯುವ ನಿರೀಕ್ಷೆಇದೆ ಕಾಶ್ಮೀರ ಸಂಗತಿಯಲ್ಲಿ ಮತ್ತೈಕ್ಯವಾಗುವುದು ಸ್ವಲ್ಪ ಕಷ್ಟಸಾಧ್ಯವೆಂದು ನಾವೆಲ್ಲರೂ ತಿಳಿಯಬಹುದು. ಈ ವಿಷಯದಲ್ಲಿ ಪ್ರಧಾನಿಗಳು ಏನು ಚರ್ಚಿಸಿದರೆಂದು ನಾವೀಗಲೇ ಹೇಳಲಾರೆವು. ನೆಹರೂರವರು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುವಾಗ, ಮಾತುಕತೆಯ ವಿವರಗಳನ್ನು ಈಗಲೇ ಹೇಳುವಂತಿಲ್ಲವೆಂದುದನ್ನು ಇಲ್ಲಿ ಉಲ್ಲೇಖಿಸಬಹುದು. ಆದರೂ ಹಾಳ್ಮೈದು ವರ್ಷಗಳಿಂದ ಸಂಯುಕ್ತ ರಾಷ್ಟ್ರಸಂಘವು ಕಾಶ್ಮೀರ ಪ್ರಶ್ನೆಯನ್ನು ಬಿಡಿಸಲಾರದೆ, ಅಯಶಸ್ಸು ಹೊಂದಿರುವುದರಿಂದ—ಈಗ ಉಭಯ ರಾಷ್ಟ್ರಗಳು ಪರಸ್ಪರ ವಿಚಾರ ವಿನಿಮಯ ಹಾಗೂ ಸದಭಿಪ್ರಾಯದಿಂದ ಒಂದು ಸಮರ್ಪಕ ನಿರ್ಣಯಕ್ಕೆ ಬರಬೇಕೆಂದು ಒಪ್ಪಲಾಗಿದೆ. ಕರಾಚಿಯ ಈ ಮಾತುಕತೆಗೇ ಕೊನೆಯಿಲ್ಲ—ಮುಂದಿನ ತಿಂಗಳ ಪ್ರಾರಂಭದಲ್ಲಿ ಮಹಮ್ಮದಾಲಿಯವರು ಹೊಸದಿಲ್ಲಿಗೆ ಆಗಮಿಸಿ ನೆಹ್ರೂರೊಡನೆ ಚರ್ಚೆಯನ್ನು ಮುಂದುವರಿಸಲಿರುವರು ಆದುದರಿಂದ ಕಾಶ್ಮೀರು ಪ್ರಶ್ನೆಯು ಅಷ್ಟಿ ಇನ್ನಷ್ಟು ಕೂಲಂಕಷವಾಗಿ ವಿಚಾರವಿನಿಮಯಕ್ಕೆ ಒಳಗಾಗಲಿದೆ. ಅಂತೂ ಈಗಿನ ಮಾತುಕತೆಗಳ ತತ್ವ ಹೀಗಿದೆ—೧ ಈ ಹಿಂದೆ ಎಂದೂ ಇರದ ಸೌಹಾರ್ದ ವಾತಾವರಣ, ಈಗ ಕಂಡುಬಂದಿರುವುದರಿಂದ ಭಾರತ-ಪಾಕ ತಂಟೆಗಳ ಪರಿಹಾರಕ್ಕೆ ಇದುವೇ ಅನುಕೂಲ ಸಂದರ್ಭ; ೨ ಎಲ್ಲ ವಿಷಯಗಳಲ್ಲಿಯೂ ಒಮ್ಮತವೇರ್ಪಟ್ಟು ಅವೆಲ್ಲವೂ ಒಮ್ಮೆಯೇ ಬಿಡಿಸಲ್ಪಡದಿದ್ದರೂ ಚಿಂತೆ ಇಲ್ಲ; ೩.ಲಭ್ಯದಲ್ಲಿ ಬಗೆಹರಿಯಬಲ್ಲ ಸಮಸ್ಯೆಗಳು ಪರಿಹರಿಸಲ್ಪಟ್ಟರೆ ಮುಂದಿನ ಪ್ರಗತಿಗೆ ಅದು ಉತ್ತೇಜನ ಕೊಡಬಲ್ಲುದು. ಈ ದೃಷ್ಟಿಯಿಂದ ಪ್ರಧಾನಿದ್ವಯರ ಪ್ರಸ್ತುತದ ಭೇಟಿ ತನ್ನ ಉದ್ದೇಶಸಾಧನೆಯಲ್ಲಿ ಯಶಸ್ಸು ಗಳಿಸಿರುತ್ತದೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಈ ಮಾನದಂಡದಿಂದ ಸಾಧನೆಯನ್ನು ಅಳೆದರೆ, ಭಾರತೀಯರು ಸಂತೋಷಪಡೊಂದುವುದರಲ್ಲಿ ಸಂದೆಯವಿಲ್ಲ.

ಸುದ್ದಿಗಾರರ ಮೇಲೆ ಹಲ್ಲೆ

ನಮ್ಮ ಪತ್ರಿಕೆಗಳು ನೆಹರೂ-ಅಲಿ ಭೇಟಿಯನ್ನು ತುಂಬ ಸಮಾಧಾನಕರವಾದ ಘಟನೆ ಎಂದು ವರ್ಣಿಸುತ್ತಿದ್ದಂತೆಯೇ—ಇನ್ನೊಂದು ವಿಶಿಷ್ಟ ಘಟನೆಯನ್ನು ಅತ್ಯುಗ್ರವಾಗಿ ಖಂಡಿಸಿರುತ್ತವೆ. ಕಲ್ಕತ್ತೆಯಲ್ಲಿ ಟ್ರಾಮು ದರಗಳನ್ನು ಏರಿಸಿದುದರ ನಿಷೇಧಾರ್ಥವಾಗಿ ಅಕ್ರಮ ಸಭೆಯೊಂದು ದಿನಾಂಕ ೩ ರಂದು ಜರುಗಿತು. ಈ ಸಭೆಯ ಸತ್ಯ ವರದಿಯನ್ನು ಸಂಗ್ರಹಿಸುವ ಉದ್ದೇಶದಿಂದ ಪತ್ರಿಕೋದ್ಯೋಗಿಗಳು ಅಲ್ಲಿಗೆ ಹೋಗಿ, ೧೫೦ ಗಜಗಳಷ್ಟು ದೂರದಿಂದ ಕಾರ್ಯಕಲಾಪಗಳನ್ನು ನಿರೀಕ್ಷಿಸುತಿದ್ದರು. ಅಕ್ರಮ ಸಭೆಯನ್ನು ಚದರಿಸಲು ಪೋಲೀಸರು ಪ್ರಯತ್ನಿಸುವಾಗ, ಈ ಸುದ್ದಿಗಾರರ ಮೇಲೆಯೂ ಅನ್ಯಾಯವಾಗಿ ಹಲ್ಲೆ ಮಾಡಿದರು. ಅವರ ಕೈಯಲ್ಲಿದ್ದ ಚಿತ್ರಗ್ರಾಹಕಗಳನ್ನು ಹಾಳುಗೆಡವಿದ್ದಲ್ಲದೆ, ಲಾಠೀಚಾರ್ಜನ್ನೂ ಪೋಲೀಸರು ನಡೆಸಿದರು. ಒಬ್ಬಿಬ್ಬರನ್ನು ಸೆರೆ ಹಿಡಿದರು. ತಾವು ಪತ್ರಿಕೋದ್ಯೋಗಿಗಳೆಂದೂ, ತಮ್ಮ ಕಾರ್ಯ ನಿರ್ವಹಿಸುವುದಕ್ಕೋಸ್ಕರ ಬಂದಿರುವರೆಂದೂ ಏನೇನೂ ತಪ್ಪಿಲ್ಲವೆಂದೂ ಈ ಸುದ್ದಿಗಾರರು ಸ್ಪಷ್ಟೀಕರಿಸಿದ ಮೇಲೂ ಪೋಲೀಸರು ಯೋಗ್ಯ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ಪೋಲೀಸು ಕಮಿಶನರ ಕಡೆಗೆ ದೂರು ತೆಗೆದುಕೊಂಡು ಹೋದಾಗ, ಅಕ್ರಮವಾಗಿ ಸೇರಿದವರನ್ನೆಲ್ಲ ಚದರಿಸಲು ಪೋಲೀಸರಿಗೆ ಅಧಿಕಾರವಿದೆಯೆಂದೂ ಸುದ್ದಿಗಾರರನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಳ್ಳುವುದು ಆ ಪ್ರಸಂಗದಲ್ಲಿ ಸ್ಥಿತಿವಶಾತ್ ಅಶಕ್ಯವಾಯಿತೆಂದೂ ಹೇಳಿದರು. ಪೋಲೀಸರ ಈ ಅನುಚಿತ ವರ್ತನೆಯ ವಿರುದ್ಧ ಕಲ್ಕತ್ತೆ ಮತ್ತು ಪಶ್ಚಿಮ ಬಂಗಾಳದಲ್ಲಿಯಷ್ಟೇ ಅಲ್ಲ—ಅಖಿಲ ಭಾರತದಲ್ಲಿ ಆಕ್ರೋಶವೆದ್ದಿದೆ. ಪತ್ರಿಕೋದ್ಯೋಗಿಗಳ ಸಂಘಗಳು ದೇಶದ ಮೂಲೆಮೂಲೆಯಿಂದಲೂ ಪೋಲೀಸರ ಈ ಅತ್ಯಾಚಾರವನ್ನು ಖಂಡಿಸಿ, ನಿಷ್ಪಕ್ಷಪಾತ ವಿಚಾರಣೆ ನಡೆದು, ತಪ್ಪಿತಸ್ಥರನ್ನು ಕಠಿಣವಾಗಿ ಶಿಕ್ಷಿಸಬೇಕೆಂದು ಕೇಳಿವೆ. ಕಲ್ಕತ್ತೆಯ ವೃತ್ತಪತ್ರಿಕೆಗಳು ಸರಕಾರೀ ಸುದ್ದಿಗಳನ್ನು ಪ್ರಕಟಿಸಬಾರದೆಂದು ಹೇಳಿಕೆ ದಿನಾಂಕ ೫ರಂದು ಪ್ರಕಟಣೆಯನ್ನೆ ನಿಲ್ಲಿಸಿ ಪ್ರತಿಭಟನೆಯನ್ನು ವ್ಯಕ್ತಗೊಳಿಸಬೇಕೆಂದು ಹೇಳಿವೆ. ಸರಕಾರವು ಪೋಲೀಸರ ಕೈಯಿಂದ ಆದ ಈ ಅನಾಹುತಕ್ಕೆ ಮೊದಲಿಗೆ ಸ್ಥಿರವಾಗಿರುವುದರಿಂದಲೂ ಕಾರ್ಯನಿರತ ಪತ್ರಿಕೋದ್ಯೋಗಿಗಳ ಮೇಲೆ ಈ ರೀತಿ ಆಕ್ರಮಣ ಮಾಡುವುದು ಸರ್ವಥಾ ಹೇಯವೆಂಬುದರಿಂದಲೂ ಘಟನೆಯ ವಿಚಾರವೆ ನಡೆಸಲು ನಿವೃತ್ತ ಹೈಕೋರ್ಟು ನ್ಯಾಯಾಧೀಶರೊಬ್ಬರನ್ನು ನೇಮಿಸಿದೆ. ಕಾರ್ಯನಿರತ ಪತ್ರಿಕೋದ್ಯೋಗಿಗಳಿಗೆ ಕೆಲವು ವಿಶೇಷ ಸೌಲಭ್ಯ ಮತ್ತು ಸೌಕರ್ಯಗಳ ದೊರೆಯುವಂತಾಗುವ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕ.

ಖಂಡನೀಯ ವರ್ತನೆ

[illegible]



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO.
Watch & Clock Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್ ಸ್ಪೆಷಲಿಸ್ಟ್ಸ್,
ಮದ್ರಾಸು 3.

ಅಗೋಸ್ತು 15
ಭಾರತ ಸ್ವಾತಂತ್ರ್ಯ ದಿನೋತ್ಸವ!
ಈ ಪರ್ವ ದಿನದ ಆಚರಣೆಯ ನೆನಪಿಗಾಗಿ
ನವಯುಗದ
ಸ್ವಾತಂತ್ರ್ಯ ದಿನೋತ್ಸವ ಸಂಚಿಕೆಯು ವಿಶಿಷ್ಟ ರೀತಿಯಲ್ಲಿ
ತಾ. 13—8—53ಕ್ಕೆ ಪ್ರಕಟವಾಗುವುದು.
ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು
ನೆರವಾಗ ಬೇಕಾಗಿ ವಿನಂತಿ.
ಮೆನೇಜರ್, ನವಯುಗ, ಉಡುಪಿ.

Estd: 1906
THE CANARA BANKING CORPORATION LTD.
H. O.: UDIPI, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)

ನವಯುಗ
ಉಡುಪಿ, ಗುರುವಾರ ೩೦-೭-'೫೩

ಸ್ವದೇಶೀ ವ್ರತ

ಆಚಾರ್ಯ ವಿನೋಬಾ ಭಾವೆಯವರು ಮೊನ್ನೆ ಒಂದು ಪ್ರಾರ್ಥನೋತ್ತರ ಸಭೆಯಲ್ಲಿ ಭಾಷಣ ಮಾಡುವಾಗ ಯಂತ್ರಗಳ ಮೇಲೆ ಅವಾಸ್ತವ ಪ್ರೇಮವನ್ನಿಟ್ಟು ಪಂಚವಾರ್ಷಿಕ ಯೋಜನೆಯಲ್ಲಿ ನಿರೂಪಿಸಿದ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಿ, ಔದ್ಯೋಗೀಕರಣವನ್ನು ಸಾಧಿಸಲೆತ್ನಿಸುವುದು ಸದೋಷ ದೃಷ್ಟಿಕೋನದ ದ್ಯೋತಕವಾಗಿದೆ; ಎಲ್ಲರಿಗೂ ಉದ್ಯೋಗ ಕಲ್ಪಿಸಿಕೊಡುವುದು ಖಾದಿ ಮತ್ತು ಗ್ರಾಮೋದ್ಯೋಗಗಳಿಂದಲೇ ಸಾಧ್ಯ ಎಂದಿರುವರು. ಪಂಚವಾರ್ಷಿಕ ಯೋಜನೆಯು ಕಾರ್ಯಾಚರಣೆಗೆ ಇಳಿದು ಸುಮಾರು ಎರಡೂವರೆ ವರ್ಷಗಳು ಸಂದು ಹೋದವು. ಯೋಜನೆಯನ್ನು ಟೀಕಿಸುವವರು ಹೇಳುತ್ತಿರುವಂತೆ, ಜನರಿಗೆ ಪಂಚವಾರ್ಷಿಕ ಯೋಜನೆಯ ಹೆಸರು ಕಿವಿಗೆ ಬೀಳುವುದರೊಳಗಾಗಿಯೇ ಅರೆವಾಸಿ ಸಮಯ ಮುಗಿದು ಹೋಗಿದೆ. ಆದರೆ ಈ ಯೋಜನೆಗಳ ನಿಜವಾದ ಪರಿಚಯವಾಗಲೀ, ಅವುಗಳು ರಾಷ್ಟ್ರದ ಮೂಲಭೂತ ಸಮಸ್ಯೆಗಳನ್ನು ಎಷ್ಟರ ಮಟ್ಟಿಗೆ ಪರಿಹರಿಸಬಲ್ಲುವೆಂಬುದರ ಕಲ್ಪನೆಯಾಗಲೀ ಸಾಕಷ್ಟು ಉಂಟಾಗಿರುವುದಿಲ್ಲ. ಮೊದಲನೇ ಪಂಚವಾರ್ಷಿಕ ಯೋಜನೆಯು ನಮ್ಮ ದೇಶದ ಸ್ಥಿತಿಯನ್ನು ನೇಕಡಾ ೧೦ರಷ್ಟು ಸುಧಾರಿಸುವುದಿಲ್ಲವೆಂದೂ ಇಂಥ ಹತ್ತು ಹದಿನೈದು ಪಂಚವಾರ್ಷಿಕ ಯೋಜನೆಗಳು ಒಂದರ ಹಿಂದೊಂದು ನಡೆದಾಗಲೇ ನಿಜವಾದ ಅಭಿವೃದ್ಧಿಯು ಅನುಭವಕ್ಕೆ ಬರುವುದೆಂದೂ ತಜ್ಞರ ಅಭಿಪ್ರಾಯ. ಆದುದರಿಂದ ನಮ್ಮ ಈಗಿನ ಸ್ಥಿತಿಯಲ್ಲಿ ಏನೊಂದೂ ಬದಲಾವಣೆಯಾದಂತೆ ಕಂಡು ಬಾರದಿದ್ದರೆ, ಅದರಲ್ಲಿ ಅಸ್ವಾಭಾವಿಕವಾದುದೂ ಆಶ್ಚರ್ಯವನ್ನುಂಟು ಮಾಡುವಂಥದೂ ಏನು ಇರುವುದಿಲ್ಲ. ಎಲ್ಲರಿಗೂ ತಿಳಿದಿರುವಂತೆ ನಿರುದ್ಯೋಗದ ಸಮಸ್ಯೆಯು ರಾಷ್ಟ್ರೀಯ ಸ್ವರೂಪದ ವ್ಯಾಧಿಯಾಗಿದ್ದು, ಎಲ್ಲರಿಗೂ ಉದ್ಯೋಗ ಕಲ್ಪಿಸಿಕೊಡುವುದು ಸರಕಾರದ ಕರ್ತವ್ಯವಾಗಿರುತ್ತದೆ. ನಮ್ಮ ರಾಷ್ಟ್ರೀಯ ಯೋಜನೆಯ ಮುಖ್ಯೋದ್ದೇಶ ಇದಾಗಿರಬೇಕೆಂಬುದು ನಿರ್ವಿವಾದ. ಆದ ಕಾರಣ, ನಮ್ಮ ಯೋಜನಾಕರ್ತರು ಈ ಸಮಸ್ಯೆಯನ್ನು ಗಂಭೀರವಾಗಿ ಪುನರಾಲೋಚಿಸಿ, ಯೋಜನೆಯನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ಅನೇಕ ಧುರೀಣರ ಅಭಿಪ್ರಾಯವಿದೆ. ಈ ದೃಷ್ಟಿಯಿಂದ ವಿನೋಬಾಭಾವೆಯವರು ಸೂಚಿಸುವ ಗಾಂಧೀ ಮಾರ್ಗವು ಎಷ್ಟರ ಮಟ್ಟಿಗೆ ದೇಶಕ್ಕೆ ಒಳ್ಳೆಯದನ್ನುಂಟು ಮಾಡಬಲ್ಲುದೆಂದು ನಾವು ವಿಚಾರಿಸುವುದೊಳಿತು. ಖಾದಿ ಮತ್ತು ಗ್ರಾಮೋದ್ಯೋಗಗಳು ನಮ್ಮ ಹಳ್ಳಿಯ ಜೀವನವನ್ನು ಪುನರ್ಘಟಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆಂದು ಯೋಜನಾ ಆಯೋಗ ಒಪ್ಪಿಕೊಂಡಿದ್ದರೂ ಅದನ್ನು ಗಂಭೀರವಾಗಿ ಪರ್ಯಾಲೋಚಿಸಿರುವುದಿಲ್ಲ. ಯಾಂತ್ರಿಕ ನೆರವನ್ನು ಪಡೆದು ದೇಶದಲ್ಲಿ ಔದ್ಯೋಗೀಕರಣವನ್ನು ಸ್ಥಾಪಿಸಬಹುದೆನ್ನುವ ಅಭಿಪ್ರಾಯವನ್ನು ನಾವು ಬದಲಿಸದೆ ಹೋದರೆ ನಮ್ಮ ಯೋಜನೆಗಳು ಅಪೇಕ್ಷಿತ ರೀತಿಯಲ್ಲಿ ಸತ್ಪರಿಣಾಮವನ್ನುಂಟು ಮಾಡಲಾರವೆಂದು ಅಪ್ಪಟ ಗಾಂಧೀವಾದಿಗಳು ಎಚ್ಚರಿಸುತ್ತಲೇ ಇದ್ದಾರೆ. ಆದರೆ ಯಾಂತ್ರೀಕರಣದ ಮೋಹವನ್ನು ತೊರೆಯಲಾರದ ವರ್ಗವೊಂದು ನಮ್ಮ ದೇಶದಲ್ಲಿದೆ ಎಂಬುದನ್ನು ಅವಶ್ಯ ಗಮನಿಸಬೇಕು. ಗಿರಣಿಗಳನ್ನು ನಡೆಸುವ ಒಡೆಯರು ಖಾದಿ ಮುಂತಾದುವುಗಳ ಬೆಳವಣಿಗೆಯಾಗುವುದನ್ನು ಸಹಿಸುವುದಿಲ್ಲ. ನಿಜಹೇಳಬೇಕೆಂದರೆ, ಜವುಳಿ ಉದ್ಯೋಗವನ್ನು ಪರಿಶೀಲಿಸಲು ನೇಮಕಗೊಂಡ ಕಾನುಂಗೊ ಕಮಿಟಿಗೆ ಹಿಂದೀ ವಣಿಕ್ ಸಂಘಗಳ ಮಹಾ ಮಂಡಳವು ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸುವವರ ಸಂಖ್ಯೆ ಹೆಚ್ಚಾಗದಂತೆ, ಮತ್ತು ವ್ಯವಸ್ಥಿತ ರೂಪದಲ್ಲಿ ಅದು ಕಡಿಮೆಯಾಗುತ್ತಾ ಬರುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದೆ. ಈ ಸೂಚನೆಯು ತಿಳಿಗೇಡಿತನದ ಪರಮಾವಧಿಯೆಂದೇ ತೋರುವುದು. ಕೇಂದ್ರ ಸರಕಾರದ ಕೂಲಿಕಾರ ಮಂತ್ರಿ ಶ್ರೀ ಗಿರಿಯವರು ಮೊನ್ನೆತಾನೆ ಉದ್ಯೋಗದಲ್ಲಿ ನಿರತರಾದ ಜನರನ್ನು ಒಡೆಯರು ತೆಗೆದುಹಾಕಲಾಗದೆಂದು ಆಗ್ರಹಪೂರ್ವಕ ವಿನಂತಿಸಿಕೊಂಡಿರುವುದನ್ನೂ ವಣಿಕ್ ಸಂಘದ ಸಲಹೆಯನ್ನೂ ಒಟ್ಟಿಗೆ ವಿಮರ್ಶಿಸಿದರೆ ದೃಷ್ಟಿಭೇದವು ಅತ್ಯಂತ ಸ್ಪಷ್ಟವಾಗುತ್ತದೆ. ಜವುಳಿಯಾಗಲೀ ಬೇರಾವುದೇ ಉದ್ದಿಮೆಯಾಗಲೀ—ನಮ್ಮ ಜನರ ಸಂಕಟವನ್ನು ಹೆಚ್ಚಿಸದೆ ಅಭಿವೃದ್ಧಿಯನ್ನು ಸಾಧಿಸುವಂತೆ ಪುನರ್ಘಟಿಸಲ್ಪಡಬೇಕಲ್ಲದೆ, ತೊಂದರೆಗಳನ್ನು ಎಷ್ಟು ಮಾತ್ರಕ್ಕೂ ಹೆಚ್ಚಿಸಕೂಡದು. ಔದ್ಯೋಗೀಕರಣವನ್ನು ಶೀಘ್ರದಲ್ಲಿಯೇ ಸಾಧಿಸಬೇಕೆನ್ನುವ ಚಪಲ ನಮ್ಮಲ್ಲಿ ಇಂದು ಪ್ರಬಲವಾಗಿರುವುದರಿಂದ ಈ ಎಚ್ಚರಿಕೆಯ ಮಾತನ್ನು ಒತ್ತಿಯೊತ್ತಿ ಹೇಳಬೇಕಾಗಿದೆ. ಗಾಂಧಿಜೀಯವರು ಸ್ವದೇಶೀವ್ರತವನ್ನು ಕೈಗೊಳ್ಳಲೆಂದು ಹಿಂದೆ ಹೇಳಿರುವುದು ಇಂದಿಗೂ ನಮಗೆ ಬಂಧನಕಾರಿಯಾಗಿರುತ್ತದೆ. ನಮ್ಮ ಆರ್ಥಿಕ ವ್ಯವಸ್ಥೆಯನ್ನು ಪುನರ್ಘಟಿಸಲು ಪ್ರಯತ್ನಿಸುವಾಗ ಗಾಂಧೀ ಮಾರ್ಗವನ್ನು ಸದಾ ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ವಿನೋಬಾರು ಸೂಚಿಸಿರುವರು. ಯೋಜನಾ ಆಯೋಗ ಹಾಗೂ ಸರಕಾರದಲ್ಲಿರುವ ನಮ್ಮ ಧುರೀಣರು ಈ ಮಾರ್ಗಾವಲಂಬನ ಮಾಡುವುದಕ್ಕೆ ಇರುವ ಆತಂಕಗಳೇನೆಂಬುದನ್ನು ಪ್ರಕಟಪಡಿಸಿದರೆ ಒಳಿತು. ಮೂಲಭೂತ ಮತಭೇದವಿರುವ ಎರಡು ವಿಚಾರ ಧಾರೆಗಳ ನಡುವೆ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಸಿಲುಕಿಕೊಂಡು ಹೊಯ್ದಾಡುತ್ತಿರುವುದರಿಂದ, ನಾವೆಲ್ಲರು ನಿರ್ದಿಷ್ಟ ಧೋರಣವನ್ನು ಆಶ್ರಯಿಸುವುದು ಅತ್ಯಾವಶ್ಯಕ. ನಮ್ಮ ಅಭಿಪ್ರಾಯದಂತೆ ಸ್ವದೇಶೀ ವ್ರತವನ್ನು ಅನುಷ್ಠಿಸುವುದು ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ವಿಚಾರ ಮಾಡಿದಂತೆಲ್ಲ ಶ್ರೇಯಸ್ಕರವೆಂದು ಖಚಿತಗೊಳ್ಳುವುದು.

—————

ಕೊರಿಯದಲ್ಲಿ ಯುದ್ಧವಿರಾಮ ಒಪ್ಪಂದ

ಮೂರು ವರ್ಷಗಳ ಕದನ ಇದೀಗ ಕೊನೆಗೊಂಡಿತು.

ಕೊರಿಯದ ಸಂಬಂಧದಲ್ಲಿ ನಾವು ಈ ವಾರ ಹರ್ಷಪ್ರದ ವಾರ್ತೆಯನ್ನು ಕೇಳುತ್ತೇವೆ. ೧೯೫೦ನೇ ಜೂನು ತಿಂಗಳಿನಿಂದ ಮೂರು ವರ್ಷಗಳಿಗಿಂತಲೂ ಹೆಚ್ಚು ದೀರ್ಘ ಕಾಲ ನಡೆಯುತಿದ್ದ ಕೊರಿಯದ ಕಾಳಗವು ಯುದ್ಧ ವಿರಾಮ ಒಪ್ಪಂದಕ್ಕೆ ಸಹಿಬಿದ್ದುದರ ಪರಿಣಾಮವಾಗಿ ಇದೀಗ ನಿಂತಿರುವುದು. ಮೊನ್ನೆ ಸೋಮವಾರ ದಿನ ಭಾರತೀಯ ವೇಳೆಗೆ ಸರಿಯಾಗಿ ಮುಂಜಾನೆ ೬-೩೦ಕ್ಕೆ ಪಾನ್ ಮುಂಜಾಮದಲ್ಲಿ ವಿಶೇಷವಾಗಿ ನಿರ್ಮಿಸಲಾದ ಶಾಂತಿ ಸದನದಲ್ಲಿ ಕೊರಿಯಾದ ಯುದ್ಧ ವಿರಾಮ ಒಪ್ಪಂದಕ್ಕೆ ರಾಜಿಸಂಧಾನಿಕೆದಾರರು ಸಹಿಮಾಡಿದರು. ಆ ಬಳಿಕ ಹನ್ನೆರಡು ತಾಸಿನೊಳಗೆ, ಎಂದರೆ, ಅಂದು ಸಂಜೆಯಾಗುವಷ್ಟರಲ್ಲಿ ಎರಡೂ ಪಕ್ಷದ ವರಿಷ್ಠ ಸೇನಾಧಿಪತಿಗಳು ಯುದ್ಧ ಮಾಡುವುದನ್ನು ಒಡನೆಯೇ ನಿಲ್ಲಿಸಿ ಬಿಡಬೇಕೆಂದು ಆದೇಶ ಹೊರಡಿಸಿದರು. ಒಪ್ಪಂದಕ್ಕೆ ಅನುಗುಣವಾಗಿ ಈಗ ಇಕ್ಕಡೆಯ ಸೈನ್ಯಗಳೂ ತಂತಮ್ಮ ಅಧಿಕಾರ ವಲಯದೊಳಗೆ ಹಿಂದೆ ಸರಿದು ಎರಡೂವರೆ ಮೈಲು ಅಗಲದ ನಿಃಸೈನೀಕೃತ ಪ್ರದೇಶವನ್ನು ನಿರ್ಮಿಸಬೇಕಾಗುವುದು: ಇಂಥ ತಟಸ್ಥ ಪ್ರದೇಶವನ್ನು ಮಾಡುವುದಕ್ಕೋಸ್ಕರ ಸೈನ್ಯಗಳು ಈಗ ನಿಧಾನವಾಗಿ ಹಿಂದೆ ಸರಿಯುತ್ತಿರುವುವೆಂದು ಕೇಳುತ್ತೇವೆ.

ಸಂಶಯದ ವಾತಾವರಣ

ಈಗ ನಡೆದ ಒಪ್ಪಂದವನ್ನು ಇದಕ್ಕೂ ಮುಂಚೆಯೇ ಯಶಸ್ವಿಯಾಗಿ ಮಾಡಿಕೊಳ್ಳಬಹುದಿತ್ತಾದರೂ--ದಕ್ಷಿಣ ಕೊರಿಯಾದ ಅಧ್ಯಕ್ಷ ಸಿಂಗ್ಮನ್ನರ್ಹೀಯವರ ಆಕ್ಷೇಪವು ದೊಡ್ಡ ಆತಂಕವಾಗಿ ಪರಿಣಮಿಸಿತು. ಒಂದು ವರ್ಷಕ್ಕಿಂತಲೂ ಹೆಚ್ಚು ದೀರ್ಘ ಕಾಲ ಯುದ್ಧವಿರಾಮ ಒಪ್ಪಂದದ ಮಾತುಕತೆಗಳು ನಡೆದಾಗ—ಒಂದು ಮತಭೇದ ಮುಗಿಯಿತೆನ್ನುವಷ್ಟರಲ್ಲಿ ಇನ್ನೊಂದು ತೊಂದರೆ ಕಾಣಿಸಿಕೊಳ್ಳುತಿತ್ತು. ಅನೇಕವೇಳೆ ಸಂಧಾನದ ಮಾತುಕತೆಗಳನ್ನು ಮುಂದುವರಿಸುವುದೇ ಅಸಾಧ್ಯವೆಂದು ಭಾಸವಾಗುತಿತ್ತು. ಕೊನೆಗೊಮ್ಮೆ ಒಪ್ಪಂದದ ಎಲ್ಲ ವಿವಾದಗಳೂ ಬಗೆಹರಿದ ಯುದ್ಧ ನಿಲ್ಲಿಸಲು ಪ್ರಶಸ್ತವಾದ ವಾತಾವರಣ ತಳೆದಾಗ– ಸಿಂಗ್ಮನ್ನ ರ್ಹೀಯವರು ದೊಡ್ಡ ಅಡ್ಡ ಬಂಡೆಯನ್ನು ತಂದಿಟ್ಟರು. ರಾಬರ್ಟ್ಸನ್ನರ ದೌತ್ಯದ ಪರಿಣಾಮವಾಗಿ ಸಿಂಗ್ಮನ್ನ ರ್ಹೀಯವರ ಮನವೊಲಿಸುವುದರಲ್ಲಿ ಸಾಮಾನ್ಯ ಯಶ ಪ್ರಾಪ್ತಿಯಾದರೂ ಈ ಮುದುಕನ ಮೇಲೆ ನಿಃಸಂದಿಗ್ಧ ಭರವಸೆಯನ್ನು ಯಾರೊಬ್ಬರೂ ಇಡುವಂತಿಲ್ಲ. ಕಳೆದ ವಾರ ಯುದ್ಧ ವಿರಾಮ ಒಪ್ಪಂದಕ್ಕೆ ರವಿವಾರ ಅಥವಾ ಸೋಮವಾರ ಸಹಿ ಬೀಳುವ ಸಂಭವವಿದೆಯೆಂದು ವಾರ್ತೆ ಬಂದಾಗಲೇ, ಸಿಂಗ್ಮನ್ನರ್ಹೀಯವರು ವಿರೋಧದ ಧೋರಣವನ್ನೇನು ಬಿಟ್ಟುಕೊಟ್ಟಿಲ್ಲವೆನ್ನುವ ಸುದ್ದಿಯೂ ಬಂದಿದ್ದಿತು. ಆದುದರಿಂದ ಯುದ್ಧ ವಿರಾಮ ಒಪ್ಪಂದವಾದರೂ ಸಿಂಗ್ಮನ್ನ ರ್ಹೀಯವರು ಅದನ್ನು ಒಳ್ಳೆಯ ರೀತಿಯಿಂದ ಪಾಲಿಸಗೊಡುವರೇ ಎಂಬ ಸಂಶಯ ಸ್ವಾಭಾವಿಕವಾಗಿಯೇ ಉಂಟಾಯಿತು.

ರ್ಹೀಯವರ ಪ್ರಕಟಣೆ

ಸಿಂಗ್ಮನ್ನ ರ್ಹೀಯವರು ಅಮೇರಿಕಾವು ದಕ್ಷಿಣ ಕೊರಿಯಾವಿಗೆ ಕೊಟ್ಟ ಆಶ್ವಾಸನೆಗಳನ್ನು ನಡೆಸಿಕೊಡುತ್ತಿಲ್ಲವೆಂದೂ ಒಪ್ಪಂದದ ಬಳಿಕ ನಡೆಯುವ ಮಾತುಕತೆಗಳು ನಿಷ್ಫಲವಾದರೆ ಯುದ್ಧ ಮುಂದುವರಿಸಲು ಒಪ್ಪಿಕೊಂಡಿಲ್ಲವೆಂದೂ ದೂರಿಕೊಂಡಿದ್ದಾರೆ. ಹಾಗೆಯೇ ಒಪ್ಪಂದದ ಬಳಿಕ ಕೈದಿಗಳ ಕಾವಲಿಗೋಸ್ಕರ ಬರಲಿರುವ ಭಾರತೀಯ ಅಥವಾ ಯಾವುದೇ ವಿದೇಶೀ ಸೈನ್ಯಕ್ಕೆ ದಕ್ಷಿಣ ಕೊರಿಯಾದ ನೆಲದ ಮೇಲೆ ಕಾಲೂರಲು ಅಸ್ಪದ ಕೊಡಲಾಗದೆಂದೂ ಹೇಳಿದ್ದಾರೆ. ಇದನ್ನು ಆತಂಕವೊಡ್ಡುವ ಪ್ರವೃತ್ತಿಯೆಂದೇ ಎಲ್ಲ ರಾಜಕೀಯ ಧುರೀಣರೂ ತರ್ಕಿಸಿ, ಯುದ್ಧ ವಿರಾಮ ಒಪ್ಪಂದವು ಯಶಸ್ವಿಯಾಗುವುದೇ ಇಲ್ಲವೇ ಎಂದು ಸಂಶಯಿತರಾಗಿರುವರು. ಮೊನ್ನೆ ತಾನೆ ಒಪ್ಪಂದಕ್ಕೆ ಸಹಿ ಬಿದ್ದ ಗಳಿಗೆಯಲ್ಲಿ ಸಿಂಗ್ಮನ್ನ ರ್ಹೀಯವರು ಒಂದು ಪ್ರಕಟಣೆ ಹೊರಡಿಸಿ, ಒಂದು ನಿಶ್ಚಿತ ಅವಧಿಯೊಳಗೆ ರಾಜಕೀಯ ಪರಿಷತ್ತು ಕೊರಿಯಾದ ಸಮಸ್ಯೆಯನ್ನು ಬಗೆಹರಿಸುವವರೆಗೆ ಶಾಂತಿ ಪ್ರಯತ್ನಗಳಿಗೆ ಆತಂಕ ಒಡ್ಡಲಾಗದೆಂದು ತಾನು ನಿರ್ಧರಿಸಿರುವುದಾಗಿ ತಿಳಿಸಿರುವರು. ಅಮೇರಿಕಾದೊಡನೆ ಸಂರಕ್ಷಣಾ ಒಪ್ಪಂದವನ್ನು ಮಾಡಿಕೊಂಡಿರುವುದಾಗಿಯೂ ಉತ್ತರದ ಬಾಂಧವರನ್ನು ಸ್ವತಂತ್ರಗೊಳಿಸಿ ಕೊರಿಯಾ ಏಕೀಕರಣವನ್ನು ಸಾಧಿಸುವುದೇ ತಮ್ಮ ಧ್ಯೇಯವೆಂದೂ ಘೋಷಿಸಿರುವರು. ರ್ಹೀಯವರ ಈ ಹೇಳಿಕೆಯು ಪ್ರಕೃತ ಯುದ್ಧ ವಿರಾಮಕ್ಕೆ ಅನುಕೂಲವೆಂದು ಕಂಡರೂ, ಶಾಶ್ವತವಾಗಿ ಯುದ್ಧ ನಿಂತುಹೋಗುವುದೆಂಬ ಭರವಸೆಯನ್ನು ಕೊಡುವುದಿಲ್ಲ. ರ್ಹೀಯವರ

ಮನಸ್ಸನ್ನು ಚೆನ್ನಾಗಿ ತಿಳಿದಿರಬೇಕಾದ ಅಮೇರಿಕಾದ ವಿದೇಶಾಂಗ ಸಚಿವ ಡಲ್ಲೆಸರು, ಕೊರಿಯದ ಯುದ್ಧ ವಿರಾಮವು ತಾತ್ಕಾಲಿಕ ಸ್ವರೂಪದ್ದೆಂದು ಹೇಳಿರುವುದನ್ನು ಗಮನಿಸಿದರೆ-ಒಪ್ಪಂದದ ಯಶಸ್ಸಿನ ಬಗ್ಗೆ ಸಂದೇಹ ಇನ್ನಷ್ಟು ಬಲವಾಗುವುದು.

ಭಾರತದ ಹೊಣೆ

ವಿದೇಶೀಯರ ಸೈನ್ಯವನ್ನು ದಕ್ಷಿಣ ಕೊರಿಯಾದಲ್ಲಿ ಪ್ರವೇಶಿಸಗೊಡಲು ಸಿಂಗ್ಮನ್ ರ್ಹೀಯವರು ಸಿದ್ಧವಿಲ್ಲದಿರುವುದು ಒಪ್ಪಂದದ ತತ್ವಕ್ಕೆ ಅನುಗುಣವಾಗಿರುವುದಿಲ್ಲ. ಕೊರಿಯಾದಲ್ಲಿ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳಲು ಕಳಿಸಲ್ಪಡುವ ಸೈನ್ಯವು ಎರಡೂವರೆ ಮೈಲು ಅಗಲದ ತಟಸ್ಥ ಪ್ರದೇಶದಲ್ಲಿ ಠಳವೂರುವುದು. ಸುಮಾರು ೨೦ ಸಾವಿರ ಯುದ್ಧ ಕೈದಿಗಳು ಹಾಗೂ ೫ ಸಾವಿರ ಭಾರತೀಯ ಸೈನಿಕರ ವಸತಿಗೋಸ್ಕರ ಏರ್ಪಾಡುಗಳನ್ನು ಮಾಡಲು ಇಂಜೀನಿಯರರು ಈಗಾಗಲೇ ಕೆಲಸ ತೊಡಗಿರುವರು. ತಟಸ್ಥ ರಾಷ್ಟ್ರ ಮಂಡಳದಲ್ಲಿ ಭಾಗ ವಹಿಸಬೇಕಾದ ಪೋಲೆಂಡ್, ಝೆಕೊಸ್ಲೊವಾಕಿಯಾ, ಸ್ವಿಜರ್‌ಲೇಂಡ್, ಸ್ವೀಡನ್ ದೇಶಗಳ ಪ್ರತಿನಿಧಿಗಳು ಈಗಾಗಲೇ ಕೊರಿಯಾಕ್ಕೆ ಬಂದಿರುವರು. ಭಾರತವು ಆಗೋಸ್ತು ೪ನೇ ದಿನಾಂಕ ಶ್ರೀ. ಆರ್. ಕೆ. ನೆಹರೂರವರ ನೇತೃತ್ವದಲ್ಲಿ ಒಂದು ಪ್ರತಿನಿಧಿ ಮಂಡಳವನ್ನು ಮುಂಗಡವಾಗಿ ಕಳಿಸಿ, ಕೊರಿಯಾದಲ್ಲಿ ಭಾರತ ಸೈನ್ಯ ನಿಲ್ಲುವುದಕ್ಕೆ ಅನುಕೂಲ ಪರಿಸ್ಥಿತಿ ಇದೆಯೋ, ಮತ್ತು ಭಾರತವು ಗೌರವಯುತವಾಗಿ ತನ್ನ ಕರ್ತವ್ಯವನ್ನು ಅಲ್ಲಿ ನೆರವೇರಿಸಬಲ್ಲುದೇ ಎಂಬಿತ್ಯಾದಿಯಾದ ಸಂಗತಿಗಳನ್ನು ಪರಿಶೀಲಿಸುವುದು. ಉಭಯ ಪಕ್ಷದ ವರಿಷ್ಠಾಧಿಕಾರಿಗಳೊಡನೆ ಮಾತುಕತೆ ನಡೆಸಿ, ಭಾರತವು ತನ್ನ ಮುಂದಿನ ಕರ್ತವ್ಯಕ್ಕೆ ಹೆಗಲುಕೊಡುವುದು. ಸೈನಿಕರನ್ನು ಕಳಿಸಲು ಎರಡು ಹಡಗುಗಳನ್ನು ಈಗಾಗಲೇ ಗೊತ್ತುಮಾಡಿರುವುದು. ಲೋಕಶಾಂತಿಯ ಸದುದ್ದೇಶದಿಂದ ಈ ಪ್ರಯತ್ನ ನಡೆಯುತ್ತಿರುವುದರಿಂದ, ಭಾರತವು ತನ್ನ ಸಂಪೂರ್ಣ ಸಹಾನುಭೂತಿಯನ್ನೂ ಸಹಕಾರವನ್ನೂ ತೋರಿಸುವುದು ಅದರ ಉಜ್ವಲ ಪರಂಪರೆಗೆ ಅನುಗುಣವಾಗಿಯೇ ಇದೆ. ನೆಹರೂ ಆದಿಯಾಗಿ ಅನೇಕ ರಾಷ್ಟ್ರಗಳ ನಾಯಕರು ಯುದ್ಧವಿರಾಮ ಒಪ್ಪಂದವಾದುದಕ್ಕೆ ಸಂತೋಷ ವ್ಯಕ್ತಗೊಳಿಸಿರುವುದಲ್ಲದೆ, ಮುಂದಿನ ರಾಜಕೀಯ ಪರಿಷತ್ತಿಗೆ ಯಾವ್ಯಾವ ರಾಷ್ಟ್ರಗಳನ್ನು ಕರೆಯಬೇಕೆನ್ನುವುದನ್ನು ನಿಷ್ಕರ್ಷಿಸಲು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಆಗೋಸ್ತು ೧೭ನೇ ತಾರೀಕಿಗೆ ಸೇರಲಿದೆ. ಈ ರಾಜಕೀಯ ಪರಿಷತ್ತು ನ್ಯೂಯಾರ್ಕಿನಲ್ಲಿ ಸೇರದೆ- ಜಿನೀವಾ ಅಥವಾ ಬೇರೆ ಯಾವುದಾದರೂ ಪೌರ್ವಾತ್ಯ ರಾಷ್ಟ್ರದಲ್ಲಿ ಸೇರುವ ಸಂಭವವೇ ಹೆಚ್ಚೆಂದು ಲೆಸ್ಟರ್ ಪಿಯರ್ಸನ್ನರು ಹೇಳಿರುವರು. ಈ ರಾಜಕೀಯ ಪರಿಷತ್ತು ತನ್ನ ಉದ್ದೇಶ ಸಾಧನೆಯಲ್ಲಿ ರ್ಹೀಯವರು ನಿರ್ಧರಿಸಿದ ಅಲ್ಪಾವಧಿಯೊಳಗೆ ಸಫಲವಾಗುವ ಭರವಸೆ ಏನೇನೂ ಇಲ್ಲ. ಆದುದರಿಂದ ದಕ್ಷಿಣ ಕೊರಿಯಾ ಸರಕಾರದ ಮೇಲೆ ಅಮೇರಿಕಾದ ಬಿಗಿಯಾದ ಹತೋಟಿ ಇಲ್ಲದಿದ್ದರೆ, ಈಗ ನಿಲ್ಲಿಸಲ್ಪಟ್ಟ ಯುದ್ಧವು ಕೆಲವೇ ತಿಂಗಳುಗಳಲ್ಲಿ ಮರಳಿ ತೊಡಗಲಿದೆಯಿದೆ ಆದರೂ ಇಕ್ಕಡೆಯವರೂ ಯುದ್ಧದಿಂದ ತಮಗಾದ ಲಾಭ ನಷ್ಟದ ಲೆಕ್ಕಹಾಕಿಕೊಳ್ಳಲು ಈ ಬಿಡು ಸಮಯವನ್ನು ಉಪಯೋಗಿಸುವರೆಂದೂ, ತತ್ಪರಿಣಾಮವಾಗಿ ಯುದ್ಧ ಪ್ರವೃತ್ತಿಯನ್ನೆ ತೊರೆದಾರೆಂದೂ ಹಾರೈಸೋಣ.

(೫ನೇ ಪುಟದಿಂದ)

ವರೆಂಬುದನ್ನು ನಾವು ಮರೆಯಲಾಗದು. ಉದಾಹರಣೆಗೆ ತಮಿಳುನಾಡಿನ ಕಾಂಗ್ರೆಸು ಹೊಸ ಶಿಕ್ಷಣಾ ಪದ್ಧತಿಯನ್ನು ಸ್ವಾಗತಿಸಿರುತ್ತದೆ. ಎಷ್ಟೇ ಒಳ್ಳೆಯ ಉದ್ದೇಶಕ್ಕಾದರೂ ಗಲಭೆಗೊಂದಲ ಪುಂಡುತನ ಗೂಂಡಾಗಿರಿಗಳ ಮಾರ್ಗವನ್ನು ಅವಲಂಬಿಸುವುದು ಎಷ್ಟು ಮಾತ್ರಕ್ಕೂ ಸತ್ಪ್ರಭಾವವನ್ನು ಉಂಟುಮಾಡದು. ಧ್ಯೇಯದಂತೆ ಸಾಧನಾಮಾರ್ಗವೂ ಉಚ್ಚವಾಗೂ ಉದಾತ್ತವಾಗಿರಬೇಕು.

ಆಂಧ್ರ ವಿಧೇಯಕದ ಸ್ವೀಕಾರ

ಮದ್ರಾಸು ಶಾಸನ ಸಭೆ ೬ ಆಂಧ್ರ ರಾಜ್ಯ ವಿಧೇಯಕದ ಚರ್ಚೆಯನ್ನು ೧೨ ದಿನಗಳ ಬಳಿಕ ಮುಗಿಸಿರುತ್ತದೆ ಈ ಮಸೂದೆಗೆ ಅನೇಕ ಮಹತ್ವದ ತಿದ್ದುಪಡಿಗಳನ್ನು ಶಾಸನ ಸಭೆಯು ಚರ್ಚಿಸಿ, ಅಂಗೀಕರಿಸಿರುತ್ತದೆ; ಮತ್ತು ಇದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರಕಾರವು ಮಸೂದೆಯ ಅಂತಿಮ ಕರಡನ್ನು ಸಿದ್ಧಗೊಳಿಸಬೇಕೆಂದು ಸೂಚಿಸುವ ನಿರ್ಣಯ ಮಾಡಿರುತ್ತದೆ. ಮುಖ್ಯವಾದ ತಿದ್ದುಪಡಿ ಅಥವಾ ಸೂಚನೆಗಳು ಹೀಗಿರುತ್ತವೆ- ಅಂಧ್ರ ರಾಜ್ಯಕ್ಕೂ ಮೈಸೂರು, ಮದ್ರಾಸು, ಹೈದರಾಬಾದು, ಒಡಿಸಾಗಳಿಗೂ ಇರುವ ಗಡಿನಿರ್ಣಯವನ್ನು ಮಾಡಬೇಕು. ಇದು ಅಸಮಂಜಸವಾದ ನಿಲುಮೆಯೆಂಬುದನ್ನು ನಾವೆಲ್ಲರೂ ಸ್ಪಷ್ಟವಾಗಿ ಬಲ್ಲೆವು. ಸೀಮಾ ವಿವಾದವನ್ನು ತೀರಿಸಲು ಗಡಿ ನಿರ್ಣಯ ಬೇಕು; ಹಾಗಾದರೂ ಅದರ ಕರ್ತವ್ಯದ ಇತಿಮಿತಿಯನ್ನು ಆಂಧ್ರರು ಬೇಡಿದಷ್ಟು ವ್ಯಾಪಕ ಮಾಡುವ ಅಗತ್ಯವಿರುವುದಿಲ್ಲ. ಮುಖ್ಯವಾಗಿ ಒಮ್ಮೆ ನಿರ್ಣಯಿಸಿ ಬಿಟ್ಟ ಬಳ್ಳಾರಿಯಂಥ ಪ್ರಶ್ನೆಯನ್ನೂ ಎಂದೋ ನಿರ್ಣಯವಾಗಿ ಹೋಗಿರುವ ಮದ್ರಾಸು ರಾಜ್ಯದ ಮೈಸೂರು ಹೈದರಾಬಾದು, ಒಡಿಸಾ ಸೀಮೆಗಳ ಸಂಗತಿಯನ್ನೂ ಪುನರ್ವಿಮರ್ಶಿಸುವುದು ಪ್ರಸ್ತುತ ಅನಗತ್ಯ. ಬಳ್ಳಾರಿ ತಾಲೂಕಿನ ವಿಷಯದಲ್ಲಿ ನಿಷ್ಪಕ್ಷಪಾತ ನಿರ್ಣಯವನ್ನು ಕೊಟ್ಟ ನ್ಯಾಯಮೂರ್ತಿಗಳ ತೀರ್ಮಾನವನ್ನು ವಿರೋಧಿಸಿದ ಆಂಧ್ರರು, ಮದ್ರಾಸು ರಾಜ್ಯದ ಬಸ್ತಿ ಮತ್ತು ಕಾಲಗಳನ್ನು ತಟಸ್ಥ ಮಂಡಳಕ್ಕೊಪ್ಪಿಸಬೇಕೆಂದೂ, ಅದರ ನಿರ್ಣಯಕ್ಕೆ ತಾವೆಲ್ಲರೂ ಬದ್ಧರಾಗಬೇಕೆಂದೂ ವಿಶಿಷ್ಟ ಬೇಡಿಕೆಯನ್ನಿಟ್ಟಿರುವರು. ಈ ತಿದ್ದುಪಡಿಯನ್ನು ಸರಕಾರವು ವಿರೋಧಿಸಿದರೂ - ರಾಜಗೋಪಾಲಾಚಾರಿಯವರು ಇಂಥ ಕ್ರಮವು ಸುಲಭದಲ್ಲಿ ನೆರವೇರಲಾರದೆಂದು ಮತ್ತು ಆಂಧ್ರ ರಾಜ್ಯ ರಚನೆಯ ಪ್ರಶ್ನೆಯನ್ನೆ ಇದು ಹಿಂಪಡೀತೆಂದು ಹೇಳಿದರೂ-ಶಾಸನಸಭೆಯು ಅದನ್ನು ಸ್ವೀಕರಿಸಿದೆ. ಆಂಧ್ರರಾಜ್ಯದ ರಾಜಧಾನಿಯಾಗಿ ಕರ್ನೂಲಿನ ಆಯ್ಕೆ ನಡೆದುದನ್ನು ಬದಲಿಸಲು ಕಮ್ಯೂನಿಸ್ಟ ಸದಸ್ಯರು ಪ್ರಯತ್ನಿಸಿದರೂ ಒಂದು ಮತ ಕಡಿಮೆ ದೊರೆತುದರಿಂದ ಅವರ ತಿದ್ದುಪಡಿ ಬಿದ್ದು ಹೋಯಿತು. ಇದರಂತೆ ಆಂಧ್ರದ ಹೈಕೋರ್ಟನ್ನು ಎಲ್ಲಿ ನೆಲೆಗೊಳಿಸಬೇಕೆನ್ನುವ ಸಂಗತಿಯು ಶಾಸನಸಭೆಯೇ ನಿರ್ಣಯಮಾಡಬಲ್ಲುದೆಂಬ ತಿದ್ದುಪಡಿಗೆ ಪರವಾಗಿಯೂ ವಿರೋಧವಾಗಿಯೂ ಸಮ ಮತಗಳು ಬಂದುದರಿಂದ, ಶಾಸನ ಸಭಾಧ್ಯಕ್ಷರು ತಮ್ಮ ಹಕ್ಕಿನ ಮತವನ್ನು ನೀಡಬೇಕಾಯಿತು. ಪಾರ್ಲಿಮೆಂಟರಿ ವ್ಯವಹಾರ ಪದ್ಧತಿಯಂತೆ ಇಂಥ ಸಂದರ್ಭಗಳಲ್ಲಿ ಮೂಲ ಗೊತ್ತುವಳಿಯನ್ನು ಎತ್ತಿ ಹಿಡಿಯುವುದೇ ತನ್ನ ಕರ್ತವ್ಯವೆಂದು ಶಾಸನ ಸಭಾಧ್ಯಕ್ಷರು ಹೇಳಿ ತಿದ್ದುಪಡಿ ಬಿದ್ದು ಹೋಗುವಂತೆ ಮಾಡಿದರು. ಆಂಧ್ರ ರಾಜ್ಯ ನಿರ್ಮಾಣದ ಬಳಿಕ ಮದ್ರಾಸಿಗೆ ಮೇಲ್ಮನೆ ಇರಬಾರದೆನ್ನುವ ತಿದ್ದುಪಡಿಯನ್ನು ಘಟನಾತ್ಮಕವಾದ ರೀತಿಯಲ್ಲಿ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕಾದ ಬೇರೆ ಮಾರ್ಗವಿದೆ ಎಂಬುದಕ್ಕಾಗಿ ತಿರಸ್ಕರಿಸಲಾಯಿತು. ಅದರೆ ಮದ್ರಾಸಿನ ಈಗಿನ ಮೇಲ್ಮನೆಯಲ್ಲಿ ಆಂಧ್ರ ರಾಜ್ಯಕ್ಕೂ ಮೇಲ್ಮನೆ ಇರಬೇಕೆಂದು ಗೊತ್ತುವಳಿ ತರಲ್ಪಟ್ಟಿದೆ

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು— ಇದೇ ತಾ 25 ರಲ್ಲು ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ಸೆಕೆಂಡರಿ ಎಲಿಮೆಂಟರಿ ಶಾಲೆಗೆ ಕುರ್ಚಿ ಮೇಜು ವಗೈರೆಗಳಿಗೆ ರೂ. 2025-0-0 ಖರ್ಚು ಮಾಡಬಹುದೆಂದಾಯಿತು. ಮುನಿಸಿಪಲ್ ನಾರ್ತ್ ಎಲಿಮೆಂಟರಿ ಶಾಲೆಯನ್ನು ಹಾಯಿಸ್ಕೂಲನ್ನಾಗಿ ಮಾಡಬೇಕೆನ್ನುವ ಶ್ರೀ ಕೆ. ದೇವೇಂದ್ರ ಶಾನುಭೋಗರ ನಿರ್ಣಯದ ಪರಿಶೀಲನೆಯು ೬ ತಿಂಗಳು ಮುಂದೆ ಹಾಕಲ್ಪಟ್ಟಿತು. ಸೋದೆ ನ ಕಪರಸ್ತೆ ಮತ್ತು ಭಂಡಾರ್ಕೇರಿ ಕಿರು ರಸ್ತೆ ಮಾಡಲು ಡಾ| ಎಸ್. ಆರ್. ಪೈಗಳು ತನ್ನ ಮೂಲಗೇಣಿ ಹಕ್ಕಿನ ಕಿಂಚಿತ್ ಸ್ಥಳವನ್ನು ದಾನಮಾಡುತ್ತೇನಾಗಿ ಬರೆದ ಪತ್ರವನ್ನು ಓದಿ ಆ ಬಗ್ಗೆ ಅವರನ್ನು ಅಭಿನಂದಿಸಲಾಯಿತು.

ವಿಚಿತ್ರ ಶಿಶುಜನನ—ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಇದೇ 27ರಲ್ಲು ರಾತ್ರಿ ೭ ವರ್ಷ ಹೆಂಗಸು ಒಂದೇ ದೇಹವಿದ್ದು ಎರಡು ತಲೆ, ನಾಲ್ಕು ಕಾಲು, ನಾಲ್ಕು ಕೈಗಳುಳ್ಳ ಮಗುವನ್ನು ಹಡೆದಳು. ಮಗುವು ಹುಟ್ಟಿದ್ದೇ ಸತ್ತು ಹೋಗಿದ್ದು ಅದನ್ನು ಡಾಕ್ಟರರು ಹೊರಗೆ ತೆಗೆದರು. ಮಗುವಿನ ತಾಯಿಯೂ ಸ್ವಸ್ಥವಾಗಿರುವಳು. ತಾ 28ರಲ್ಲು ಜನರು ಗುಂಪು, ಗುಂಪಾಗಿ ಬಂದು ಈ ವಿಚಿತ್ರ ಮಗುವಿನ ಶವವನ್ನು ನೋಡಿಹೋದರು.

ಗೌ| ಸಾರಸ್ವತ ಬ್ರಾಹ್ಮಣ ಸಮಾಜದಲ್ಲಿ ಡಾ| ಪೈಗಳಿಗೆ ಮಾನ ಪತ್ರ— ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದ ಡಾ| ಟಿ. ಮಾಧವ ಪೈಗಳಿಗೆ ಇದೇ ತಾ 25ರಲ್ಲು ಸ್ಥಳೀಯ ಶ್ರೀ ವೆಂಕಟೇಶ ದೇವಸ್ಥಾನದಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಕಡೆಯಿಂದ ಮಾನಪತ್ರ ಅರ್ಪಿಸುವ ಸಮಾರಂಭವು ಸಮಾಜದ ಪ್ರೆಸಿಡೆಂಟ್ ಶ್ರೀ ನಾರಾಯಣಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಮಾಜದ ಸೆಕ್ರಿಟರಿಗಳಾದ ಶ್ರೀ ವಾಮನ ಭಟ್ಟರು ಮಾನಪತ್ರವನ್ನೋದಿದರು. ಶ್ರೀ ಗಳಾದ ಯು. ಶುಕ್ಲಾಚಾರ್ಯ, ಕೊಟ್ಟಿಕಾರ್ ಪದ್ಮನಾಭಪೈ, ಡಾ| ಪಿ. ಆರ್. ನಾಯಕ್, ಯು. ಕೇಶವ ಕಾಮತ್, ಕೆ. ಶಿವರಾಯ ಬಾಳಿಗ ಮತ್ತು ವಾಸುದೇವ ಜೋಗಿಷ್ಟ ಶಾನುಭೋಗರು ಸಂದರ್ಭೋಚಿತ ಭಾಷಣ ವಿತ್ತರು. ಮಾನಪತ್ರಕ್ಕೆ ಯಥೋಚಿತ ಉತ್ತರವನ್ನು ಡಾ| ಪೈಗಳು ಕೊಟ್ಟ ಬಳಿಕ ಡಾ| ಕುಂದಾಪುರಾರಾಮ ಪೈಗಳು ಧನ್ಯವಾದಗಳನ್ನರ್ಪಿಸಿದರು. ಆ ಮೇಲೆ ಶ್ರೀ ದೇವರ ಸಮಕ್ಷಮ ಮಾನ್ಯ ಅತಿಥಿಯ ಶ್ರೇಯ ಪ್ರಾರ್ಥನೆಯಾಗಿ ಪ್ರಸಾದ ಕೊಡಲಾಯಿತು. ಪಂಚಗಜ್ಜಾಯ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಶ್ರೀ. ಟಿ. ಮೋಹನದಾಸ್ ಮಾದಮಪೈಯವರು ಕೊಲ್ಹಾಪುರ ಲೋಕಾ ಕಾಲೇಜಿನಲ್ಲಿ L.L.B. ಯಲ್ಲಿ ಪ್ರಥಮ ತರಗತಿಯಲ್ಲಿ ಪಾಸಾಗಿರುವುದಲ್ಲದೆ ಮುಂಬಯಿ ಯುನಿವರ್ಸಿಟಿಯಲ್ಲಿ ಪ್ರಥಮ ಬಂದಿರುವರೆಂಬುದು ಅಭಿನಂದನೀಯ.

ಕರ್ನಾಟಕ ಸಂಘ ಮದ್ರಾಸು— ಇದೇ ತಾ 26ನೇ ಸಂಜೆ ಸರ್. ಎಂ. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲು ಭವನದಲ್ಲಿ ಶ್ರೀ ಎಂ. ಮಾಧವಪ್ಪ ಭಟ್ಟರ ಅಧ್ಯಕ್ಷತೆಯಲ್ಲಿ ಸಂಘದ ತಿಂಗಳ ಕಾರ್ಯಕ್ರಮವು ಜರಗಿತು.

ಆ ದಿನ ಭಾಷಣಕಾರರಾದ ಉಡುಪಿಯ ಶ್ರೀ ಟಿ ಎ ಪೈ. ಎಂ. ಎಲ್ ಎ. ಇವರು ಮದ್ರಾಸು ಸರಕಾರದ ಪ್ರಾಥಮಿಕ ಶಿಕ್ಷಣದ ಆಧುನಿಕ ಯೋಜನೆಯ ಕುರಿತು ಮಾತನಾಡುತ್ತಾ ಅದರ ಮಹತ್ವ ಹಾಗೂ ಉದ್ದೇಶಗಳನ್ನು ಸಭಿಕರಿಗೆ ಮನವರಿಕೆಯಾಗುವಂತೆ ವಿವರಿಸಿದರು. ಶ್ರೀ ಎಂ. ವಿ ನಾರಾಯಣ ರಾವ್ ಅವರು ಹಲವು ಕೀರ್ತನಗಳನ್ನು ಸುಂದರವಾದ ಹಿಮ್ಮೇಳದೊಂದಿಗೆ ಸುಶ್ರಾವ್ಯವಾಗಿ ಹಾಡಿದರು. ಡಾ. ಎಂ ಆರ್ ಪೈ ಅವರು ಧನ್ಯವಾದ ಸಮರ್ಪಣೆಯೊಂದಿಗೆ ಅಂದಿನ ಸಭೆಯು ಮುಕ್ತಾಯವಾಯಿತು.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ

ಕನ್ನಡ ಪ್ರತಿಗೆ 0-8-0

ಇಂಗ್ಲಿಷ್ ಪ್ರತಿಗೆ 0-8-0

ನವಯುಗ ಪ್ರೆಸ್, ಉಡುಪಿ.

ನಡೆಯುವ ಚಿತ್ರ

ಪರ್ ಬಾತ್

ಪ್ರೇಮ್‌ನಾಥ್, ನೂತನ್, ಶೋಭನಾ ಸಮರ್ಥ್, ಉಲ್ಲಾಸ್, ಕೆ. ಎನ್. ಸಿಂಗ್,

2—೮—53. ಬೆಳಿಗ್ಗೆ 10ಘಂಟೆಗೆ

ಇಂಗ್ಲೀಷ್ ಚಿತ್ರ

ಸ್ನೇಕ್ ಪಿಟ್.

ಮಂಗಳೂರು

ಕಾಲೇಜು ಯೂನಿಯನ್ ಉದ್ಘಾಟನೆ—ಸೈಂಟ್ ಎಲೋಸಿಯಸ್ ಕಾಲೇಜು ಯೂನಿಯನ್ ಉದ್ಘಾಟನಾ ಸಮಾರಂಭವು ಕಳೆದ ತಾ 18ರಲ್ಲಿ ಮುನಿಸಿಪಲ್ ಚೆರ್‌ಮನ್ ಶ್ರೀ ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು.

ಸರ್ವಋತು ಬಂದರ—ಪೂನದ ಸಂಶೋಧನ ಸಂಸ್ಥೆಯ ಡೈರೆಕ್ಟರರಾದ ಶ್ರೀ ಜೋಗ್ಲೇಕರರು ಇದೇ ತಾ 22ರಲ್ಲಿ ಮಂಗಳೂರಿಗೆ ಆಗಮಿಸಿ ಮಂಗಳೂರಿನ ಬಂದರವನ್ನು ಸರ್ವಋತುಗಳಿಗೂ ಅನುಕೂಲವಾಗುವಂತಹ ಬಂದರವನ್ನಾಗಿ ಮಾರ್ಪಡಿಸಲು ಸಾಧ್ಯವಿದೆಯೋ ಎಂಬುದನ್ನು ಪರಿಶೀಲಿಸಿದರು. ಸ್ಥಳೀಯ ಪೋರ್ಟ್ ಅಧಿಕಾರರೊಡನೆಯೂ ವಿಚಾರ ನಡೆಸಿದರು. ಪೂನದ ಸಂಶೋಧನ ಕ್ಷೇತ್ರದಲ್ಲಿ ಮಂಗಳೂರು ಬಂದರದ ಮಾದರಿಯೊಂದನ್ನಿಟ್ಟುಕೊಂಡು ಪರಿಶೀಲನೆ ನಡೆಸಲಾಗುತ್ತಿದೆಯಂತೆ.

ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಸಭೆಯೊಂದು— ಈಚೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿ ಮೂಲ್ಕಿ, ಕುಂಬಳೆ ಮತ್ತು ಇತರ ಅಭಿವೃದ್ಧಿ ಕೇಂದ್ರಗಳ ಚಟುವಟಿಕೆಗಳನ್ನು ಪರಿಶೀಲಿಸಿತು. ಜಪಾನಿ ಪದ್ಧತಿಯ ಬೇಸಾಯ ಕ್ರಮವನ್ನೂ ಈ ಕ್ಷೇತ್ರದ ಕೆಲವೆಡೆಗಳಲ್ಲಿ ಪ್ರಾರಂಭಿಸಲಾಗಿದೆ.

ಪ್ರಾಂತಿಕ ಶಿಕ್ಷಣ ಸಮ್ಮೇಳನದ ಆಯ-ವ್ಯಯ— ಕಳೆದ ಮೇ ತಿಂಗಳಲ್ಲಿ ಮಂಗಳೂರಲ್ಲಿ ಜರಗಿದ ಪ್ರಾಂತಿಕ ಶಿಕ್ಷಣ ಸಮ್ಮೇಳನದ ಸ್ವಾಗತ ಸಮಿತಿ ಸಭೆಯು ತಾ 19ರಲ್ಲಿ ಕೆನರಾ ಹೈಸ್ಕೂಲು ಪರಾವರದಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಶೆಣೈಯವರು ಸಮ್ಮೇಳನದ ವರದಿಯನ್ನೂ ಲೆಖ್ಖಪತ್ರವನ್ನೂ ಸಭೆಯ ಮುಂದಿಟ್ಟರು. ಸಮ್ಮೇಳನಕ್ಕಾಗಿ ಸದಸ್ಯರಿಂದ ವಂತಿಗೆ, ಸಹಾಯ, ಊಟದ ಟಿಕೇಟುಗಳಿಂದ ರೂಪಾಯಿ 8317-6-0 ಒಟ್ಟು ಜಮೆಯಾಗಿತ್ತು. ರೂ 8131-5-10 ಖರ್ಚಾಗಿ ಉಳಿದ ರೂಪಾಯಿ 186-0-2ನ್ನು ಜಿಲ್ಲಾ ಅಧ್ಯಾಪಕ ಸಂಘಕ್ಕೆ ಕೊಡುವ ನಿರ್ಣಯವಾಯಿತು.

ದ. ಕ. ಜಿಲ್ಲಾ ಬೋರ್ಡಿನ—ಆಡಳಿತೆ ನೋಡುವುದಕ್ಕಾಗಿ ಈ ಹಿಂದೆ ಕಾರ್ಯದರ್ಶಿಗಳಾಗಿದ್ದ ಶ್ರೀ ಎಮ್. ಸುಂದರರಾಯರೇ ಕಲೆಕ್ಟರರ ವೈಯಕ್ತಿಕ ಸಹಾಯಕರಾಗಿ ನೇಮಕಗೊಂಡು ಈಗಾಗಲೇ ಚಾರ್ಜ್ ವಹಿಸಿರುವರು.

ಮುನಿಸಿಪಲ್ ಕೌನ್ಸಿಲು ಬೈಠಕ್—ಇದೇ ತಾ 25ರಲ್ಲಿ ಚೇರ್‌ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಸಭೆಯು ಹೊರಿಸಬಹುದಾದ ಅತಿ ಹೆಚ್ಚಿನ ತೆರಿಗೆದರ-ಶೇಕಡ 9ನ್ನು ಮಂಗಳೂರು ನಗರ ಸಭೆಯು ಹೊರಿಸಿರುವುದರಿಂದಲೂ ನಗರದಲ್ಲಿ ಫೈಲೇರಿಯಾ ರೋಗವು ಹೆಚ್ಚುತ್ತಿರುವುದರಿಂದಲೂ ಮಂಗಳೂರಿನ ಬಂದರ ಮತ್ತು ಬಜಾರಿನ ವಿಭಾಗದಲ್ಲಿ ಭೂಗತ ಚರಂಡಿ ವ್ಯವಸ್ಥೆ ಮಾಡಲು ಸರಕಾರವು ಒಂಭತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂಬ ನಿರ್ಣಯವಾಯಿತು. ನಗರ ಸಭೆಯಲ್ಲಿ ಸೊಳ್ಳೆ ವಿನಾಶಕಾರ್ಯಕ್ಕಾಗಿ ತಾತ್ಕಾಲಿಕವಾಗಿ ನೇಮಕಗೊಂಡಿರುವ ಲೆಬೊರೆಟರಿ ಮತ್ತು ಫೀಲ್ಡ್ ಅಸಿಸ್ಟಾಂಟರಿಗೆ ತಿಂಗಳಿಗೆ ರೂಪಾಯಿ 4ರಂತೆ ಸ್ಪೆಶಲ್ ಭತ್ತೆ ಮಂಜೂರಾಯಿತು. ಮೋಹನ್ನು ದಾಸ್ತಾನು ಇಡಲು ಮತ್ತು ಮಾರಲು ನಗರ ಸಭೆಯು ಹೊರಿಸುತ್ತಿರುವ ತೆರಿಗೆಯನ್ನು ಕಡಿಮೆ ಮಾಡಬೇಕೆಂಬ ಮರದವ್ಯಾಪಾರಿಗಳ ಕೋರಿಕೆಯು ತಿರಸ್ಕರಿಸಲ್ಪಟ್ಟಿತು. ದಿಕ್ಕಿಲ್ಲದ ನಾಯಿಗಳನ್ನು ಹಿಡಿದು ಕೊಲ್ಲಲು ಎರಡು ನೂರು ರೂಪಾಯಿ ಮಂಜೂರಾಯಿತು. ಅಧ್ಯಕ್ಷರ ಸಲಹೆಯಂತೆ ಶ್ರೀ ಬಿ. ಆರ್. ಕರ್ಕೇರರನ್ನು ಪಬ್ಲಿಕ್ ಹೆಲ್ತ್ ಸಮಿತಿಗೂ ಉಪಾಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ ರೈಗಳನ್ನು ಪಬ್ಲಿಕ್ ಹೆಲ್ತ್ ಹಾಗೂ ಲೈಟಿಂಗ್ ಕಮಿಟಿಗಳಿಗೂ ಆರಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆ—ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ನಿಶ್ಚಯಿಸುವರೆ ಇದೇ ತಾ 27ರಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸರ್ಕಲ್ ಕಾಂಗ್ರೆಸ್ ಅಧ್ಯಕ್ಷರ ಕಾಂಗ್ರೆಸ್ ಕೆಲಸಗಾರರ ಹಾಗೂ ಪುರಜನರ ಸಭೆಯು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಸೇರಿತು. ವಿವಿಧ ಸ್ಪರ್ಧೆಗಳು, ಸೂತ್ರಯಜ್ಞ, ಧ್ವಜಾವಳಿಗಳ ವ್ಯವಸ್ಥೆ, ನಿಧಿ ಸಂಗ್ರಹ ಮೊದಲಾದ ಕಾರ್ಯಗಳಿಗಾಗಿ ಬೇರೆ ಬೇರೆ ಸಮಿತಿಗಳ ರಚನೆಯಾಯಿತು.

ದ. ಕ. ನಿ. ಭಾರತೀಯ ವೈದ್ಯ ಸಂಘದ ಕ್ರಿಯಾ ಸಮಿತಿಯವರು ತಾ. 16ರಲ್ಲಿ ರೆವಿನ್ಯೂ ಬೋರ್ಡ್ ಮೆಂಬರ್ ಶ್ರೀ ವಿ. ಎನ್. ಕುಡುವರನ್ನು ಕಂಡು, ವೈದ್ಯರಿಗೆ ಸಕಾಲದಲ್ಲಿ ಲೈಸೆನ್ಸು ಕೊಡದೆಯೂ ಅಸ ಪಾರಿಷ್ಟಗಳನ್ನು ಲೈಸೆನ್ಸು ಬರುವ ತನಕ ಉಪಯೋಗಿಸಕೂಡದೆಂದು ಆತಂಕಿಸುವುದು, ಲೈಸೆನ್ಸಿನಲ್ಲಿಲ್ಲದ ಶರ್ತಗಳನ್ನು ವೈದ್ಯರ ಮೇಲೆ ಹೇರಿಸುವುದು, ವೃದ್ಯಾಭ್ಯಾಸಕ್ಕೆ ಅವಶ್ಯವಿರುವ ಅಫೀಮು ಭಂಗಿಗಳು ಆಯುರ್ವೇದ ಸಿಗದಂತೆ ಮಾಡುವುದು ಮೊದಲಾದ ಪೊಹಿಬಿಶನಿನವರ ಉಪದ್ರಗಳನ್ನು ತಿಳಿಸಿದರು. ಶ್ರೀ. ಕುಡುವರು ಅಂತಹ ದೂರುಗಳು ಇನ್ನು ಬಾರದಂತೆ ಕೆಳದಾಕರಿಗೆ ಎಚ್ಚರಿಸಬೇಕಾಗಿಯೂ ಲೈಸೆನ್ಸು ವಿಳಂಬಿಸಿ ಉಪದ್ರವ ಕೊಟ್ಟುದಕ್ಕಾಗಿ ಒಬ್ಬ ಇನ್ಸ್‌ಪೆಕ್ಟರರನ್ನು ಕೂಡಲೇ ವರ್ಗಾಯಿಸಬೇಕಾಗಿಯೂ ಜಿಲ್ಲಾ ಅಧಿಕಾರರಿಗೆ ಹುಕುಂ ಕೊಟ್ಟುದಲ್ಲದೆ ಮಂತ್ರಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಇತರ ವಿಷಯಗಳಿಗೆ ತಕ್ಕ ವ್ಯವಸ್ಥೆ ಮಾಡುವರೆಂಗಿ ಭರವಸೆ ಯಿತ್ತರು.

ಕುಂದಾಪುರ—ತಾ 18 ರಂದು ಜರಗಿದ ಸ್ಥಳೀಯ ಮೋಟರ್ ಪಂಚಾಯತ ಬೋರ್ಡಿನ ಚುನಾವಣೆಯಲ್ಲಿ ಪ್ರಜಾಸೋಶಲಿಸ್ಟ್ ಪಾರ್ಟಿಯವರು ಸೋತು ಸ್ವತಂತ್ರರೇ ಈ ಕೆಳಗಿನ ವಾರ್ಡುಗಳಿಂದ ಆರಿಸಿ ಬಂದಿರುವರು: ಶ್ರೀಗಳಾದ ಏನ್. ಎಸ್. ಪರಮೇಶ್ವರಯ್ಯ (ಪಡೇರ ಹೋಬಳಿ ಪೂರ್ವ) ಕೃಷ್ಣಯ್ಯ ಸೇರಿಗಾರ (ಪಡೇರ ಹೋಬಳಿ ಪಶ್ಚಿಮ), ಟಿ. ಸೋನ್ಸ್ (ಖಾರ್ವಿ ಕೇರಿ), ಕೆ. ಗಣಪತಿ ಶೇಟ್ (ಫೋರ್ಟ್), ತೆರೇಸ ಮಂಜುನಾಥಯ್ಯ (ಚರ್ಚ್ ವಾರ್ಡ್), ಅಧ್ಯಕ್ಷಸ್ಥಾನಕ್ಕೆ ಈ ಮೊದಲೇ ಶ್ರೀ ಕೆ. ವೆಂಕಪ್ಪ ಸೆಟ್ಟರು ಆರಿಸಲ್ಪಟ್ಟಿರುವರು.

ಶಿರ್ವ—ಸ್ಥಳೀಯ ಹಿಂದೂ ಹೈಸ್ಕೂಲಿನ ವಿದ್ಯಾರ್ಥಿ ಸರಕಾರದ ಮುಖ್ಯಮಂತ್ರಿಯಾಗಿ ಶ್ರೀ ವಿಶ್ವನಾಥ ಹೆಗ್ಡೆಯವರು ಬಹುಮತದಿಂದ ಆರಿಸಲ್ಪಟ್ಟಿರುವರು.

ಉಳ್ತೂರು—ತಾ. 16-7-53ರಲ್ಲಿ ಕುಂದಾಪುರ ರೇಂಜಿನ ಪರೀಕ್ಷಾಧಿಕಾರಿಗಳಾದ ಶ್ರೀ. ಪಿ. ಕೃಷ್ಣರಾಯರು ಉಳ್ತೂರು ಶ್ರೀ ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯ ಪ್ರವೇಶ ಕಾರ್ಯಕ್ರಮವನ್ನು ನೆರವೇರಿಸಿದರು. ಅ ದಿನ ಧ್ವಜವಂದನೆ, ಶಾಲಾಮಕ್ಕಳ ಮೆರವಣಿಗೆ, ರಾತ್ರಿ ಯಕ್ಷಗಾನ ಕಲಾಭಿಮಾನಿಗಳಿಂದ ತಾಳಮದ್ದಳೆ ಕೂಟವು ನೆರವೇರಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಬೈಲೂರು—ಇಲ್ಲಿಯ ಅಗ್ರಗಣ್ಯ ಮಹನೀಯರಾದ ಶ್ರೀ ಜೆ. ನಾಗಣ್ಣ ಹೆಗ್ಡೆಯವರು ತಾ. 20-7-53ರಲ್ಲಿ ಸ್ವರ್ಗಸ್ಥರಾದ ವಿಷಾದಕರ ಸುದ್ದಿ ಕೇಳುತ್ತಲೇ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಬಳಗದವರಿಗೆ ಸಂತಾಪಸೂಚಕ ಠರಾವನ್ನು ಕಳುಹಿಸುವರೆ ಅಂದು ಸಾಯಂಕಾಲ 6 ಗಂಟೆಗೆ ಬೈಲೂರು ಗಾಂಧಿ ಸ್ಮಾರಕ ಸಂಘದ ಆವಸರದ ಸಭೆಯು ಡಾ. ಎ. ಕೆ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಪುತ್ತೂರು— ಇಲ್ಲಿಯ ಪೊಪ್ಯುಲರ್ ನ್ಯೂಸ್ ಎಂಡ್ ಸಪ್ಲೈ ಏಜನ್ಸಿಯ ಮಾಲಕರೂ ಸ್ಥಳೀಯ ಆಧ್ಯ ಸಂಘೀಯದಲ್ಲೊಬ್ಬರೂ ಆದ ಶ್ರೀ ಎಮ್. ಎಸ್. ಮಯ್ಯನವರು ಕೆಲವೇ ದಿವಗಳ ಅಸೌಖ್ಯದಿಂದ ಇದೇ ತಾ. 25ನೆ ಅಪರಾಹ್ನ ಸುಮಾರು ಐವತ್ತನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂಬುದನ್ನು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಮೃತರು ಹಿಂದೆ ಬೆಳ್ತಂಗಡಿ ಪಂಚಾಯತ ಬೋರ್ಡಿನ ಅಧ್ಯಕ್ಷರಾಗಿದ್ದು ಜನಸೇವೆ ಮಾಡಿದ್ದರು. ಇವರು ಚತುರರೂ ಸಾಹಸಿಗಳೂ ಆಗಿದ್ದರು. ಮೃತರ ಆತ್ಮಕ್ಕೆ ಶಾಂತಿ ದೊರಕಲಿ!

ಕಂಬನಿ

ಶ್ರೀಯುತ ಜಾರ್ಕಳ ನಾಗಣ್ಣ ಹೆಗಡೇರು ದೈವಾಧೀನರಾದರು ಎಂಬುದನ್ನು ಕೇಳಿದೊಡನೆ ಆಘಾತವಾಯ್ತು. ದಿವಂಗತರು ಬಹಳ ಉದಾರಿಯೂ, ಸರಳ ಸ್ವಭಾವದವರೂ, ನಿಗರ್ವಿಯೂ ಆಗಿದ್ದರು. ಈ ಜಿಲ್ಲೆಯಲ್ಲಿ ರೂಪ ಸೌಂದರ್ಯಕ್ಕೆ ಹೆಸರಾಗಿರುವ ಶ್ರೀ ಹೆಗ್ಡೆಯವರಂಥ ಘನರೂಪವಂತರು ಸಿಕ್ಕುವುದು ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ದಿವಂಗತರು ಮದ್ರಾಸ್ ನ್ಯಾಯವಿಧಾಯಕ ಸಭೆ, ಜಿಲ್ಲಾಬೋರ್ಡ್, ತಾಲೂಕು ಬೋರ್ಡ್, ಜಿಲ್ಲಾ ಟೆಂಪಲ್ ಕಮಿಟಿ ಮತ್ತಿನ್ನಿತರ ಅನೇಕ ಸಂಸ್ಥೆಗಳಲ್ಲಿ ಮೆಂಬರರಾಗಿ ಜನತಾ ಸೇವೆ ಮಾಡಿದ್ದರು. ಅವರ ನಿಧನವು ಊರಿಗೆ ಮಾತ್ರವಲ್ಲದೆ ಇಡೀ ಜಿಲ್ಲೆಗೇ ದೊಡ್ಡ ನಷ್ಟವಾಗಿದೆ. ಅವರ ಆತ್ಮಕ್ಕೆ ಶ್ರೀ ಪರಮಾತ್ಮನು ಶಾಂತಿಯನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

Inserted by his relative,
K. Sadashiva Hegde, manager
marigudi, Kaup.

ಮರವಂತೆ—ಸ್ಥಳೀಯ ಮಹಾರಾಜ ಸ್ವಾಮಿ ವರಾಹ ದೇವಸ್ಥಾನದಲ್ಲಿ ತಾ. 9-8-53ನೇ ಆದಿತ್ಯವಾರ ಕರ್ಕಾಟಕ ಅಮಾವಾಸ್ಯೆ ಸಮಾರಂಭವು ಜರಗುವುದು ಭಕ್ತವೃಂದವು ಭಾಗವಹಿಸಬೇಕಾಗಿ ದೇವಳ ಮೊಕ್ತೇಸರರ ವಿನಂತಿಯಿದೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 217/53

ವಿಟ್ಠಲ ಶೆಟ್ಟಿ ವಾದಿ.
ಶೀನಪ್ಪ ಶೆಟ್ಟಿ ಸಹಾ ಪ್ರತಿವಾದಿಗಳು.

ಸದ್ರಿ ವಾದಿ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ–

ಪ್ರತಿವಾದಿಗಳು 1. ಶೀನಪ್ಪ ಶೆಟ್ಟಿ 2. ಲಚ್ಚಮ್ಮ ಶೆಡ್ತಿ–ನಿಂಗಮ್ಮ ಶೆಡ್ತಿಯರ ಮಕ್ಕಳು.

ಕುಂದಾಪುರ ತಾಲೂಕು ಬೆಳ್ವಾಲ ಗ್ರಾಮದ ಹರಮಣ್ಣನಲ್ಲಿರುವವರು. ವಾದಿಗೆ ಪ್ರತಿವಾದಿಗಳು ತಾ. 30-3-1950 ರಲ್ಲಿ ಬರ್ಸಿಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 116-6-6 ಬರಮಾಡಿಕೊಳ್ಳುವರೆ ಮಾಡಿದ ದಾವೆಯು ತಾ. 19-8-53ಕ್ಕೆ ಇಬ್ಬರು ತನ್ಖಿಗೆ ಯಿಡಲಾಗಿಯದೆ ಆ ಕುರಿತು ನಿಮ್ಮದೇನಾದ್ರು ಉಜುರಿದರೆ ಯಿದ್ದ್ರೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

M. Anthaya Shetty
Advocate for Plaintiff
Kundapur, Date 27—7—1953.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 31/53. R. I. A. 413/53

A. ಪದ್ಮನಾಭ ಶೆಣೈ, ವಾದಿ ಅರ್ಜಿದಾರ,
ಮತ್ತು
ವೆಂಕಟಕೃಷ್ಣಾಚಾರ್ಯ ಕೂಡಾ—ಪ್ರತಿವಾದಿಗಳು—ಯದ್ರಿರು.

ಇವರೊಳಗೆ–

1ನೇ ಯದ್ರಿ ವೆಂಕಟಕೃಷ್ಣಾಚಾರ್ಯ-ರಾಮಚಂದ್ರಾಚಾರ್ಯರ ಮಗ,

2ನೇ ಪದ್ಮಾವತಿ ಅಮ್ಮ-1ನೇ ಯದ್ರಿ ಹೆಂಡ್ತಿ,

3. ರಾಮಚಂದ್ರಾಚಾರ್ಯ-1ನೇ ಯದ್ರಿ ಮಗ,

ಉಡುಪಿ ತಾಲೂಕು ಕಡೆಕಾರು ಗ್ರಾಮದ ಕಿನ್ನಿಮೂಲ್ಕಿ ಇವರಿಗೆ ತಿಳಿಸುವದೇನಂದರೆ–

ಮೇಲ್ಕಂಡ ವ್ಯಾಜದಲ್ಲಿ ತಾ. 30-3-53ರ ಕೊಡೋಣಾದ ಪ್ರಿಲಿಮಿನ್ನರಿ ದಿಕ್ರಿ ವಿಧಿಯಂತೆ ಫೈನಲ್ ದಿಕ್ರಿ ಕೊಡ್ಸಬೇಕಾಗಿ ಅರ್ಜಿದಾರನು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 17-8-53ಕ್ಕೆ ಯಿಟ್ಟಿದೆ. ಸದ್ರಿ ಯದ್ರಿರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಆ ದಿವ್ಸ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

N. V. Kamath
Advocate for Petitioner
ಉಡುಪಿ ತಾ. 28—7—1953.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹಠತಪ್ಪಿ ಋತುಸ್ರಾವವಾಗುವುದು, ಹೊಟ್ಟೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣವೊಂದಬಹುದು. ಯಾವ ಬಾಧಕವೂ ಇಲ್ಲ. ಸಾನಿ ದಾರು ಮುಂದೆಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. 8/–[ವಿ. ಪಿ. ಹಸ್ನೆರದಾಣೆ ಪ್ರತ್ಯೇಕ]

Mrs. P. DEVEE, P.DS.(N.Y.)
CALCUTTA. 40
ಸ್ಟಾಕಿಸ್ಟರು: ಪಣಕರಂಪನಿ, ಮಂಗಳೂರು.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷ್ನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. 5—6—0

ನವಭಾರತ ಬುಕ್ ಡಿಪೋ, ಉಡುಪಿ
ನವಯುಗ ಪ್ರೆಸ್, ಉಡುಪಿ.

ಸ್ವೀಕಾರ—ವಿಮರ್ಶೆ

ದಿವ್ಯ ಜೀವನ (ಧರ್ಮ ಸಮನ್ವಯ ಗ್ರಂಥ)—

ಬರೆದವರು: ಮಾರನಾಡು ವರ್ಧಮಾನ ಹೆಗ್ಗಡೆ ಪ್ರಕಾಶಕರು: ಶ್ರೀ ವಿಶ್ವ ಜೈನ ಮಿಶನ್ ಶಾಖೆ, ಧರ್ಮಸ್ಥಳ. ಬೆಲೆ: ಒಂದೂವರೆ ರೂಪಾಯಿ.

ಶ್ರೀ ಮಹಾವೀರ ಗ್ರಂಥಮಾಲೆಯ ೬೦ ಭತ್ತನೆಯ ಪುಷ್ಪವಾಗಿ ದಿವ್ಯ ಜೀವನವೆನ್ನುವ ಈ ಗ್ರಂಥವು ಪ್ರಕಟಗೊಂಡಿದೆ. ಈ ವರ್ಷದ ಆದಿಯಲ್ಲಿ ಶ್ರವಣ ಬೆಳಗೊಳದಲ್ಲಿ ನೆರವೇರಿದ ಗೋಮಟೇಶ್ವರನ ಮಸ್ತಕಾಭಿಷೇಕದ ಸಂದರ್ಭದಲ್ಲಿ ಈ ಗ್ರಂಥವನ್ನು ಪ್ರಕಟಿಸಿ ಶ್ರೀಮಾನ್ ಹೆಗ್ಗಡೆಯವರು ಧರ್ಮ ಪ್ರಚಾರದ ಕೆಲಸಕ್ಕೆ ನೆರವಾದರು. ಇಂದು ನಿಜವಾದ ಧರ್ಮದ ತಿರುಳನ್ನು ತಿಳಿದುಕೊಳ್ಳದೆ, ಬಾಹ್ಯ ಸ್ವರೂಪದಲ್ಲಿ ಇವ ಭಿನ್ನತೆಯನ್ನೇ ಧರ್ಮವೆಂದು ತಿಳಿದು ಮೋಸ ಹೋಗುವ ಜನರು ಅನೇಕ ಅವರಿಗೆ ಎಲ್ಲ ಧರ್ಮಗಳ ಮರ್ಮವೇನೆಂಬುದನ್ನು ತಿಳಿಯಾದ ಭಾಷೆಯಲ್ಲಿ ಸುರಸವಾದ ರೀತಿಯಲ್ಲಿ ಮನಗಾಣಿಸಿಕೊಡುವ ಪ್ರಯತ್ನಗಳು ನಡೆಯದ ಹೊರತು, ಧಾರ್ಮಿಕ ಜಾಗೃತಿಯಾಗುವುದು ಕಷ್ಟ ಸಾಧ್ಯ. ಈ ಪುಸ್ತಕದಲ್ಲಿ ಪತ್ಯ ಧರ್ಮದ ಸ್ವರೂಪವೇನೆಂಬುದನ್ನು ಮಹಾತ್ಮಾ ಗಾಂಧಿ, ಅರವಿಂದ ಯೋಗಿ, ರಾಮಕೃಷ್ಣ ಪರಮಹಂಸ, ಡಾ. ರಾಧಾಕೃಷ್ಣನ್ ಮುಂತಾದವರ ಮಾತುಗಳಿಂದ ತಿಳಿಯಪಡಿಸಲು ಲೇಖಕರು ಪ್ರಯತ್ನಿಸಿರುವರು. ಮಾನವೀಯ ಭಾವನೆಯನ್ನು ಬೆಳೆಸಿಕೊಂಡು, ಅಧ್ಯಾತ್ಮಿಕ ಶ್ರೇಯಸ್ಸನ್ನು ಪಡೆಯುವುದೇ ಎಲ್ಲ ಧರ್ಮಗಳ ಸದುದ್ದೇಶವಾಗಿರುತ್ತದೆಂದು ಈ ಗ್ರಂಥಪಠಣದಿಂದ ನಮಗೆಲ್ಲರಿಗೂ ವೇದ್ಯವಾಗುತ್ತದೆ. ಸಾಮಾಜಿಕ ಸುವ್ಯವಸ್ಥೆಯನ್ನು ನೆಲೆಗೊಳಿಸಿ, ದಿವ್ಯ ಜೀವನವನ್ನು ನಾವೆಲ್ಲರೂ ಕೈಗೊಳ್ಳುವಂತೆ ಮಾಡುವ ಧರ್ಮವನ್ನು ಸಮ್ಯಕ್ ದೃಷ್ಟಿಯಿಂದ ವಿಚಾರ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನಿಸಬೇಕು. ಆ ಧನದಲ್ಲಿ ಈ ಪುಸ್ತಕ ನಮಗೆ ಪ್ರಯೋಜನ ನೀಡಬಲ್ಲುದು.

ವಾಲಂಟಿಯರ್ ಕ್ಯಾಂಪು—

ಬರೆದವರು: ಹಿ. ರಾಮರಾಯ ಮಲ್ಯ. ಪ್ರಕಾಶಕರು: ಶಾರದಾ ಛಾಪಖಾನೆ, ದಿ ಮಂಗಳೂರು ಟ್ರೇಡಿಂಗ್ ಅಸೋಸಿಯೇಶನ್, ಲಿಮಿಟೆಡ್, ಮಂಗಳೂರು. ಬೆಲೆ: ಒಂದೂವರೆ ರೂಪಾಯಿ

ಶ್ರೀ ಮಲ್ಯರು ನಮ್ಮ ಜಿಲ್ಲೆಯ ರಚನಾತ್ಮಕ ಕಾರ್ಯಕರ್ತರಲ್ಲಿ ಅತ್ಯಂತ ಹೆಸರು ಪಡೆದವರು. ಕಾಂಗ್ರೆಸಿನಲ್ಲಿ ಅತಿಶಯ ಭಕ್ತಿಶ್ರದ್ಧೆಗಳನ್ನು ಇಟ್ಟುಗೊಂಡು ಖಾದಿ-ಗ್ರಾಮೋದ್ಯೋಗಗಳ ಉನ್ನತಿಗಾಗಿ ಪರಿಶ್ರಮ ವಹಿಸಿ ಮಾಡಿದವರು. ಉತ್ತಮ ವರ್ಗದ ಪತ್ರಿಕೋದ್ಯಮಿಗಳೆಂದೂ ಮಲ್ಯರು ಹೆಸರುಗೊಂಡಿರುವರು. ವಾಲಂಟಿಯರ್ ಕ್ಯಾಂಪು ಎಂಬ ತಮ್ಮ ಈ ಪುಸ್ತಕದಲ್ಲಿ ಶ್ರೀ ಮಲ್ಯರು ತಮ್ಮದೇ ಜೀವನವನ್ನು ಚಿತ್ರಿಸಲು ಪ್ರಯತ್ನಿಸಿರುತ್ತಿದೆ. ಇಲ್ಲಿ ಹೆಸರು ಮಾತ್ರ ಬೇರೆಯಾಗಿದೆಯಲ್ಲದೆ—ಉಳಿದೆಲ್ಲ ವಿವರಣೆಗಳೂ ಮಲ್ಯರ ಜೀವನದ ಘಟನೆಗಳೊಡನೆ ಸಾಮ್ಯ ಪಡೆಯುತ್ತವೆ. ಮಲ್ಯರು ಕಾಂಗ್ರೆಸ್ ಸ್ವಯಂಸೇವಕರಾಗಿ ದುಡಿದ ಬಗೆಯನ್ನು ಈ ಪುಸ್ತಕದ ಉತ್ತರಾರ್ಧ ನಿರೂಪಿಸಿದರೆ, ಪ್ರಥಮ ಭಾಗದಲ್ಲಿ ಅವರ ಬಾಲ್ಯ ಜೀವನದ ಹೊಳಪು ಹೃದಯಂಗಮವಾಗಿ ಮೂಡಿರುವುದನ್ನು ಕಾಣುತ್ತೇವೆ. ಈ ಶತಮಾನದ ಆದಿಯಲ್ಲಿ ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಜನಜೀವನದ ರೀತಿನೀತಿ ಹೇಗಿತ್ತೆಂಬುದನ್ನು ಈ ಪ್ರಥಮ ಭಾಗ ಚೆನ್ನಾಗಿ ಪರಿಚಯಿಸುತ್ತದೆ. ಒಬ್ಬ ಸ್ವಯಂಸೇವಕನ ಅನುಭವ ಹಾಗೂ ಸಾಧನೆಯನ್ನು ಚಿತ್ರಿಸುವ ಈ ಪುಸ್ತಕ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಸಾಹಿತ್ಯಕ್ಕೆ ಹೊಸತೊಂದು ಕಾಣಿಕೆಯಾಗಿದೆ. ಶೈಲಿ ಮತ್ತು ಭಾಷಾವೃಷ್ಟಿಯಿಂದ ಉಲ್ಲೇಖ್ಯ ಹಾಗೂ ಮಾಧುರ್ಯವನ್ನು ಈ ಗ್ರಂಥ ಪಡೆದಿಲ್ಲವೆಂದು ತೋರಿದರೂ—ಪ್ರಾಮಾಣಿಕವಾದ ಪ್ರಯತ್ನಗಳಲ್ಲಿ ನಿರತನಾದ ರಾಷ್ಟ್ರೀಯ ಮನೋವೃತ್ತಿಯ ನಾಗರಿಕನ ದಿನಚರಿಯ ಪುಟಗಳ ಸಂಕಲನವಿದೆಂದು ತಿಳಿದು ಸಂತೋಷದಿಂದ ಓದಬಹುದು; ಮತ್ತು ಸ್ಫೂರ್ತಿಯನ್ನೂ ಉತ್ಸಾಹವನ್ನೂ ಪಡೆಯಬಹುದು.

ಕಿಲ್ಲೆಯವರ ನಿಧನಕ್ಕಾಗಿ ಬೊಂಬಾಯಿ ಕಾಂಗ್ರೆಸ್ ಕಮಿಟಿಯ ಸಂತಾಪ—ಮುಂಬಯಿ "ಎ" ವಾರ್ಡ್ (ಕೋಟೆ) ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸರ್ವ ಕಾರ್ಯಕರ್ತರ ಒಂದು ಸಭೆಯನ್ನು ತಾ. 19-7-53ನೇ ರವಿವಾರ ಮುಂಬಯಿ ಸರಕಾರದ ಆರೋಗ್ಯ ಖಾತೆಯ ಉಪಮಂತ್ರಿ ಮಾನ್ಯ ದಿ. ಡಿ. ಜಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಸದ್ರಿ ಸಭೆಯಲ್ಲಿ ಕರ್ನಾಟಕದ (ಮುಖ್ಯವಾಗಿ ದಕ್ಷಿಣಕನ್ನಡ ಜಿಲ್ಲೆಯ) ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳು, ಸಾಹಿತಿ ಮತ್ತು ಸಮಾಜ ಸೇವಕರಾಗಿದ್ದ ದಿವಂಗತ ಶ್ರೀ ನಾರಾಯಣ ಯಸ್. ಕಿಲ್ಲೆಯವರ ಅಕಾಲ ನಿಧನದ ಕುರಿತು ಸಂತಾಪವನ್ನು ಪ್ರಕಟಿಸಲಾಯಿತು. ಶ್ರೀ ಕಿಲ್ಲೆಯವರ ಹತ್ತಿರ ಸಂಪರ್ಕವಲ್ಲಿದ್ದ ಮಾನ್ಯ ಬಿ. ಡಿ. ಜಟ್ಟಿಯವರು, ದಿವಂಗತರು ದೇಶಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನೂ, ಸಮಾಜದಿಂದ ಪಡೆದ ಅಪರಿಮಿತ ಪ್ರೇಮವನ್ನೂ ವಿವರಿಸಿ ಕೊಂಡಾಡಿದರು

ಅಲ್ಲದೆ ಬಿ. ಪಿ. ಸಿ. ಸಿ. ಯ ಸದಸ್ಯರಾದ ಶ್ರೀ ಗೋಪಾಲ ಆರ್. ಕೋಟ್ಯಾನ್, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿರುವ ಶ್ರೀ ಶ್ಯಾಮ ಸೆಟ್ಟಿ, ಬೋರಿಬಂದರ್ ತಾಲೂಕ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಕೆ. ಪರೇರಾ, ಶ್ರೀ ದಾಬ ಸೆಟ್ಟಿ ಮತ್ತು ಇನ್ನಿತರ ಕೆಲವು ಮಹನೀಯರು ಶ್ರೀ ಕಿಲ್ಲೆಯವರ ಸರಳ ಜೀವನವನ್ನು ಹೊಗಳಿ, ದಿವಂಗತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸಿಕೊಂಡರು ಎಂದು "ಎ" ವಾರ್ಡ್ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಯಸ್ ಆರ್. ಸೆಟ್ಟರು ಬರೆಯುತ್ತಾರೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 27/1953.

1. ಇಂದಿರಾ ಯಾನೆ ಮಹಾಲಕ್ಷ್ಮಿ ಅಮ್ಮ
2. ಜನಾರ್ದನ ಮ್ಯಾನರ ರಕ್ಷಕಳು ತಾಯಿ 1ನೇ ಅರ್ಜಿದಾರಳು— ಅರ್ಜಿದಾರರು

ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದ್ರೆ—

1ನೇ ಅರ್ಜಿದಾರಳ ಗಂಡ ವ 2ನೇ ಅರ್ಜಿದಾರನ ತಂದೆ ತಾ. 28-11-52ರಲ್ಲು ಶಿವಳ್ಳಿ ಗ್ರಾಮದಲ್ಲಿ ಮೃತಪಟ್ಟ ಬಾಬು ಯಾನೆ ಕೇಶವ ಭಟ್ಟರಿಗೆ New guardian of India Assurance ಕಂಪೆನಿಯಿಂದ ಬರತಕ್ಕ ನಂಬ್ರ 7293ನೇ ಪೊಲಿಸಿಯ ಬಾಬ್ತು ಬಹಾಕ್ಯವೇಜು ಮತ್ತು ಉಡ್ಪಿ ಕರ್ನಾಟಕ ಬೇಂಕಿನಿಂದ ಕಾಯಂ ಠೇವಣಾತಿ ನಂಬ್ರ 146/52ನೇ ಡಿಪೋಜಿಟು ರಶೀದಿ ಮೇರೆಗೆ ಬಹಾ ರೂ.200-0-0ಸಹ ವಸೂಲು ಮಾಡುವರೇ 1ನೇ ಅರ್ಜಿದಾರಳ ಹೆಸರನಲ್ಲಿ ಸೆಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 12-8-53ಕ್ಕೆ ತನ್ನಿ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ ಎಂಬ ಸಂಗ್ತಿ ಈ ಮೂಲಕ ಯಾವತ್ತೂ ಜನರಿಗೆ ತಿಳಿಸಲಾಗಿಯದೆ.

P. N. Krishnamoorthy Rao
Advocate for Pititioners.

Udipi: Dated 24—7—53.



ಒರೇ ರೂ-5 ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ. ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ದಿ ವಿಜಯ ಬ್ಯೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	ರೂ. 20,00,000
ಕೆತ್ತ ಪಾಲು ಭಂಡವಾಳ	„ 8,77,860
ಕ್ಷೇಮ ನಿಧಿ	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

— - ಗರ್ಭಸ್ರಾವ! - —

ಅನೇಕ ಹೆಂಗಳೆಯರು ನಾಲ್ಕಾರು ಸಲ ಗರ್ಭಸ್ರಾವದಿಂದ ಒಳಲಿ, ಮಕ್ಕಳಿಲ್ಲದೆ ಕೊರಗುತ್ತಿದ್ದಾರೆ. ನಮ್ಮ ಚಿಕಿತ್ಸೆಯಿಂದ ಅಂತಹ ನೂರಾರು ಸ್ತ್ರೀಯರು ಗುಣಹೊಂದಿ ಮುದ್ದಾದ ಮಕ್ಕಳನ್ನು ಪಡೆದಿದ್ದಾರೆ. ಎರಡು ತಿಂಗಳು ಔಷಧ ಸೇವಿಸಬೇಕಾಗುತ್ತದೆ. ಒಂದು ತಿಂಗಳಿಗೆ ಅಂಚೆವೆಚ್ಚ ಸೇರಿ ಹತ್ತು ರೂಪಾಯಿಯಾಗುವುದು. ವಿ. ಪಿ. ಕಳಿಸಲಾರೆವು. ಪಣ ಪೂರ್ಣ ಮುಂಗಡವಾಗಿ ಕಳಿಸಿ.

ತಾರಾನಾಥ ಆಯುರ್ವೇದ ಮಂದಿರ,
ಹಂಪನಕಟ್ಟೆ, ಮಂಗಳೂರು.

ಉಡ್ಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಡ್ರೆಸ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇನ್ನುಳಿದ ರುಚಿ ರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ದಕ್ಷಿಣಕನ್ನಡ ಸಬ್ ಕೋರ್ಟು

S. C. ON. 119/1952

ಈ ಕ್ರಮ ಅಮ್ಲಜ್ಯಾರಿ ನಂ. 940/,952.

ವಾದಿ—ತ್ರಾಸಿ ಗೋವಿಂದರಾಯ ಶ್ಯಾನುಭಾಗ—ಅರ್ಜಿದಾರ,

ಪ್ರತಿವಾದಿ— ಅಂಪಾರು ರಾಮಣ್ಣ ಹೆಗ್ಗಡೆ —ಎದ್ರಿ.

ಪ್ರತಿವಾದಿ.ಎದ್ರಿ ಅಂಪಾರು ರಾಮಣ್ಣ ಹೆಗ್ಗಡೆ ವ್ಯಾಪಾರಿ ಯವರಿಗೆ—

ಮೇಲೆ ಹೇಳೋದಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದ ವಾದಿ ಅರ್ಜಿದಾರನು ಜಪ್ತಾಗಿರುವ [illegible] ಅರ್ಜಿಮಾಡಿದ್ದಾನೆ ಅದ ದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1953ನೇ ಯಿಸವಿ ಆಗೋಸ್ತು ತಾರೀಕು 11ಕ್ಕೆ ನಿಶ್ಚಯಿಸುವದಾಗಿಯದೆಂತ್ಲ ನಿಮಗೆ ಯಿದರಿಂದ ತಿಳಿಸೋಣಾಗುತ್ತದೆ

R. E. A. 476/1953ನೇ ಅರ್ಜಿಮೇಲಿಂದ ಕೋರ್ಟು ಹುಕುಂ ಪ್ರಕಾರ ತಾ. 26-7-1953 ಕುಂದಾಪುರ.

K. Narayana Kamath,
ವಾದಿಯ ಕಡೆ ಎಡ್ವೊಕೇಟ್.

ಟೆಂಡರು

ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಿಂದ ಈ ಮೂಲಕ ತಿಳಿಯಪಡಿಸುವದೇನೆಂದರೆ.

ಸದ್ರಿ ಭಂಡಾರದ ದಕ್ಷಿಣ ಪಾರ್ಶ್ವದ ಕಟ್ಟಡ ಸಾಮಾನುಗಳ ದುರಸ್ತಿಯನ್ನು ವಹಿಸಿಕೊಳ್ಳುವರೆ ತಾ. 19 8-53ನೇ ಬುಧವಾರ ಹಗಲು ಗಂಟೆ 3ಕ್ಕೆ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಕರೆಯಲಾಗುತ್ತದೆ. ಕಾಯತಕ್ಕವರು ಹಾಜರಾಗಿ ಟೆಂಡರ್ ಕೊಡತಕ್ಕದ್ದು. ಇತರ ಶರ್ತುಗಳನ್ನು ಆಫೀಸಿನಿಂದ ತಿಳಿಯತಕ್ಕದ್ದು.

ಮಂದಾರ್ತಿ,] Sd. N. R. Bolar,
24-7-53] Executive officer.

ಕಿರಿಯರ ಗುಣಶೀಲ

(೧ನೇ ಪುಟದಿಂದ)

ನುಡಿಗಳನ್ನು ಮಕ್ಕಳು ಆದರ್ಶವಾಗಿ, ಮಾದರಿಯಾಗಿ ತಮ್ಮ ಮುಂದಿಟ್ಟುಕೊಂಡಿರುವರು. ಐದುವರ್ಷದ ಹುಡುಗನೊಬ್ಬ ಬಗ್ಗಿಕೊಂಡು ತಲೆಬಾಚುತಿದ್ದ. ಕನ್ನಡಿ ಅವನಿಗಿಂತ ಎರಡು ಅಡಿ ಮೇಲೆ ಗೋಡೆಯಲ್ಲಿತ್ತು. ಆದರೂ ಹುಡುಗ ಹಾಗೆ ಬಗ್ಗುತಿದ್ದುದರ ಅರ್ಥವಾಗುತ್ತಿರಲಿಲ್ಲ. ಮುಂದೊಂದುದಿನ ತಂದೆಯು ಆ ಕನ್ನಡಿಯ ಮುಂದೆ ನಿಂತು ಬಗ್ಗಿಕೊಂಡು ತಲೆ ಬಾಚುತ್ತಿರುವುದು ಕಣ್ಣಿಗೆ ಬೀಳಲು ಮಗುವಿನ ವರ್ತನೆಯ ರಹಸ್ಯೋದ್ಘಾಟನವಾಯಿತು ತಂದೆ ಎತ್ತರವಾದ ನಿಲುವುಳ್ಳವರಾಗಿದ್ದರು. ಕನ್ನಡಿಯ ಸ್ಥಾನವು ಅವರ ಮುಖದ ನೇರಕ್ಕಿಂತ ಕೆಳಗಿದ್ದಿತು. ಆದುದರಿಂದ ಕ್ರಾಪು ಬಾಚಲು ಅವರು ಬಗ್ಗುತಿದ್ದರು. ತಂದೆ ಬಗ್ಗುತ್ತಿರುವುದನ್ನಷ್ಟೇ ನೋಡುತಿದ್ದ (ಆದರೆ ಏಕಾಗಿ ಬಗ್ಗುವರೆಂಬುದನ್ನು ತಿಳಿಯದ) ಮಗನೂ ತಂದೆಯನ್ನು ಅನುಕರಿಸುತಿದ್ದ.

ಇನ್ನೊಬ್ಬ ತಂದೆಗೆ ತನ್ನ ಒಡವೆ ವಸ್ತುಗಳನ್ನು ಬೇರೆ ಯಾರೊಬ್ಬರಿಗೂ ಕೊಡುವುದೆಂದರೆ ಸೇರುತ್ತಿರಲಿಲ್ಲ. ಆದ ಕಾರಣ ತನ್ನನ್ನು ಯಾರುಏನು ವಸ್ತುವಿಗಾಗಿ ಕೇಳಿದರೂ "ಅದಿಲ್ಲವಲ್ಲ—ಓ ಆ ಮನೆಯವರು ಈಗ ತಾನೆ ತೆಗೆದುಕೊಂಡು ಹೋದರು" ಎಂದು ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ಹೀಗೆ ಮಿಥ್ಯೆ ನುಡಿಯುವಾಗ ತನ್ನ ಸುತ್ತಲೂ ಮಕ್ಕಳು ಕುಳಿತಿರುವರೆಂದೂ ಇದನ್ನು ಅವು ಕಿವಿಗೊಟ್ಟು ಕೇಳುತ್ತಿರುವವೆಂದೂ ಅವನು ಗಮನಿಸುತ್ತಿರಲಿಲ್ಲ. ತನ್ನ ಒಡವೆ ತನ್ನಲ್ಲಿಯೇ ಉಳಿದರೆ ಸಾಕು ಎಂಬುದವನ ಮನೋಭಾವನೆ. ಅವರೊಂದು ದಿನ ಮೋಜಿನ ಘಟನೆ ಸಂಭವಿಸಿತು. ನೆರೆಯವರೋರ್ವರು ಈ ಮಹಾಶಯನ ಮನೆಗೆ ಬಂದು ಕಾಲುದೀಪ ಕೇಳಿದರು. ಮನೆಯ ಹುಡುಗ ಆ ಕೂಡಲೇ ಹೊರಬಂದು "ಅಹೋ-ಈಗ ತಾನೇ ರಾಮರಾಯರ ಮನೆಯವರು ಬಂದು ತೆಗೆದುಕೊಂಡು ಹೋದರು' ಎಂದು ಹೇಳಿದ. ಅದಕ್ಕೆ ಬಂದವರು "ಮಗೂ, ನಾನೇ ರಾಮರಾಯ; ಮತ್ತು ನೋಡು, ಆ ಮೂಲೆಯಲ್ಲಿಯೇ ನಿಮ್ಮ ಕಾಲುದೀಪವಿದೆ. ಏಕೆ ಹೀಗೆ ಸುಳ್ಳಾಡುತ್ತೀಯಾ' ಎಂದರು. ಹುಡುಗ ತುಂಬ ನಾಚಿಕೊಂಡ. ಅವನ ಅಭಿಮಾನವೂ ನೊಂದುಕೊಂಡಿತು. ಇದಕ್ಕೆ ಹುಡುಗನು ಜವಾಬ್ದಾರನೆಂದು ನಾವು ತಿಳಿಯೋಣವೇ ಅದು ಸರಿಯಲ್ಲ—ಅವನ ತಂದೆಯು ಸುಳ್ಳಾಡುತ್ತಿರುವುದರಿಂದಲೇ ಹುಡುಗನೂ ಹೇಳುವುದನ್ನು ಕಲಿತುಕೊಂಡ. ತಂದೆ ಸುಳ್ಳಾಡುತಿದ್ದುದರ ರಹಸ್ಯವನ್ನು ತಿಳಿದುಕೊಳ್ಳುವಷ್ಟು ಅವನು ಪ್ರಬುದ್ಧನಾಗಿರಲಿಲ್ಲ. ಆದಕಾರಣ, ತಂದೆ ತಾಯಿಗಳು ಅಪ್ಪಿ ತಪ್ಪಿಯಾದರೂ ಮಕ್ಕಳಮುಂದೆ ಅನುಚಿತ ರೀತಿಯ ನಡೆದುಕೊಳ್ಳಕೂಡದು. ಮಕ್ಕಳ ಚಾರಿತ್ರ್ಯದ ಮೇಲೆ ದುಷ್ಪರಿಣಾಮವನ್ನುಂಟುಮಾಡುವ ಯಾವುದೇ ಕೆಲಸವನ್ನಾಗಲೀ ಮಾಡಬಾರದು

ದಿಲೀಪಕುಮಾರನ ತಮ್ಮ ನಾಸೀರಖಾನನೊಡನೆ ಲಿಪ್ಟನ್ ಕಂಪೆನಿಯ ಪ್ರತಿನಿಧಿ "ಚಿಕ್ಕಂದಿನಲ್ಲಿ ನೀವೂ ದಿಲೀಪಕುಮಾರರೂ ಒಟ್ಟಿಗೆ ಸಿಗರೇಟು ಸೇದಿದಿರಂತೆ, ನಿಜವೆ?" ಎಂದು ಕೇಳಿದರು ಅದಕ್ಕೆ ನಾಜಿರಖಾನ "ಹೌದು" ಎಂದು ಹೇಳಿದ. ಒಡನೆಯೇ 'ಆದರೆ ನನಗೆ ಸಿಗರೇಟು ಸೇದುವ ಇಚ್ಛೆ ಎಳ್ಳಷ್ಟೂ ಇರಲಿಲ್ಲ. ದಿಲೀಪಕುಮಾರನು ಸಿಗರೇಟು ಸೇದಿದುದನ್ನು ಮನೆಯವರಿಗೆ ಹೇಳಬಾರದು ಎಂಬುದಕ್ಕೋಸ್ಕರ ನನಗೆ ಸಿಗರೇಟು ಸೇದಲು ಕೊಟ್ಟ. ಈ ಲಂಚದ ಮಹಿಮೆಯಿಂದ ಅವನ ಗೌಪ್ಯಭಂಗವಾಗಲಿಲ್ಲ" ಎಂದೂ ಕೂಡಿಸಿದ. ಚಿಕ್ಕಮಕ್ಕಳನ್ನು ದೊಡ್ಡವರು ಹಾಳುಮಾಡುತ್ತಿರುವ ರೀತಿಯೇ ಹೀಗೆ. ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಒಟ್ಟಿಗೆ ಇದ್ದಾಗಲೆಲ್ಲ ಈ ರೀತಿ ಆಮಿಷ ತೋರಿ ಕಿರಿಯರನ್ನು ಒಲಿಸಲು ನೋಡುವುದುಂಟು. ಇಂದು ಸರಿಯಲ್ಲ. ಯಥಾರ್ಥವನ್ನು ಮುಚ್ಚಿ, ಸುಳ್ಳನ್ನು ಮೆಚ್ಚಬೇಕೆಂದು ಕಿರಿಯರಿಗೆ ಸೂಚಿಸುವುದು ಅವರನ್ನು ಚರಿತ ಭ್ರಷ್ಟರನ್ನಾಗಿಯೇ ಮಾಡುವುದು. ಬದಲು ನಿಜವಾದುದನ್ನು ಸ್ಪಷ್ಟಗೊಳಿಸಿ, ಮಕ್ಕಳ ಮನಸ್ಸನ್ನು ಉದಾತ್ತೀಕರಿಸಲು ನೋಡಿದರೆ ಅದರಿಂದ ಪ್ರಯೋಜನವುಂಟು. ಧ್ರುವನ ಕತೆಯನ್ನು ಯಾರು ತಿಳಿದಿಲ್ಲ ಸುನೀತಿಯನ್ನು ಸುರುಚಿಯ ಮೇಲಿನ ಪ್ರೀತಿ ವಾತ್ಸಲ್ಯದಿಂದ ಹೊರಗೆ ಬೇರೆಯೇ ಮನೆಯಲ್ಲಿ ಅರಸ ಉತ್ತಾನಪಾದರಾಯನು ಇಟ್ಟನ ಗತಿ ಲೋಕಕ್ಕೆಯೇ ತಿಳಿದಿತ್ತು ಬಾಲಕ ಧ್ರುವನಿಗೆ ಮಾತ್ರ ಇದು ಗೊತ್ತಿರಲಿಲ್ಲ ಒಂದು ದಿನ ನಿಜಕ್ಕೂ ಅದು ತಿಳಿದು ಬಂದಾಗ ತಾಯಿ ಅವನನ್ನು "ದೇವರ ಒಲುಮೆ ಪಡೆದು ಬಾ ಮಗೂ" ಎಂದು ಹೇಳಿ ಯೋಗ್ಯ ಮಾರ್ಗದರ್ಶನ ಮಾಡಿದಳು ಮಕ್ಕಳಿಗೆ ನಾವು ನಿಜವಾದುದನ್ನು ತಿಳಿಸಬೇಕು; ಮತ್ತು ಆ ನಿಜವು ಕೆಟ್ಟದಿದ್ದರೂ, ಅದನ್ನು ಒಳ್ಳೆಯದಾಗಿ ಪರಿವರ್ತಿಸಲು ಬರುವುದೆಂದು ಸ್ಪಷ್ಟಗೊಳಿಸಬೇಕು.

ಒಬ್ಬ ಹುಡುಗನನ್ನು ಮನೆಗೆ ಬಂದ ಅತಿಥಿಗಳು "ನಿನ್ನ ಹೆಸರೇನಪ್ಪಾ" ಎಂದು ಕೇಳಿದರು. "ನನ್ನ ಹೆಸರು ರಾಮು ಬೇಡ" ಎಂದು ಹುಡುಗ ಥಟ್ಟನೆ ಉತ್ತರಿಸಿದನು. ಅತಿಥಿಗಳಿಗೆ ಅರ್ಥವಾಗಲಿಲ್ಲ. ರಾಮುವೆಂದರೆ ಅವರಿಗೆ ತಿಳಿಯಿತು. ಆದರೆ "ಬೇಡ"ವೆಂದರೇನೆಂದು ಗೊತ್ತೇ ಆಗಲಿಲ್ಲ, ಅಂದು ಸಂಜೆ ರಾಮು ದನದ ಕರುವಿನ ಕೊರಳಿಗೆ ಕಟ್ಟಿದ್ದ ಗಂಟೆಯನ್ನು ಮುಟ್ಟಲು ಹೋದಾಗ ಮಗುವಿನ ತಾಯಿ "ರಾಮು ಬೇಡ-ಇಲ್ಲಿ ಬಾ, ಅಲ್ಲಿಗೇಕೆ ಹೋಗುತ್ತೀ' ಎಂದು ಕರೆದಳು ರಾಮು ಏನೇ ಕೆಲಸಮಾಡಲಿ, ಅದನ್ನು 'ಬೇಡ ಎಂದು ಹೇಳುವುದು ತಾಯಿಗೆ ಅಭ್ಯಾಸವಾಗಿತ್ತು. ಹಾಗೆಯೇ ತನ್ನನ್ನು ಯಾವಾಗಲೇ ಕರೆಯಲಿ "ರಾಮು ಬೇಡ" ಎಂದೇ ತಾಯಿ ಸಂಬೋಧಿಸುತಿದ್ದುದರಿಂದ ತನ್ನ ಹೆಸರೇ ಹಾಗಿರಬೇಕೆಂದು ರಾಮು ತಿಳಿದುಕೊಂಡ. ಇಂಥ ನ್ಯೂನಾತಿರೇಕಗಳಿಂದ ಹುಡುಗರ ಗುಣಶೀಲಗಳನ್ನು ರಕ್ಷಿಸಿಕೊಳ್ಳುವುದಕ್ಕೆ ತಾಯಿ ತಂದೆಯರು ತುಂಬ ಪ್ರಯತ್ನವನ್ನು ಮಾಡಬೇಕಾದುದು ಮಗುವಿನ ಶ್ರೇಯಸ್ಸಿನ ದೃಷ್ಟಿಯಿಂದ ಅಗತ್ಯ

ಮನೆಯಲ್ಲಿ ತಂದೆ ತಾಯಿಗಳು ಒಮ್ಮೊಮ್ಮೆ ಸದಾ ಜಗಳಾಡುತ್ತಿರುವುದುಂಟು—ಹುಡುಗರು ತಮ್ಮಲ್ಲಿ ಏನಾದರೂ ನಾಲ್ಕು ಮಾತಾಡಿಕೊಂಡರೆ ಆಗ ಇವರಿಬ್ಬರೂ ಬಂದು ಹೊಡೆದು ಪೀಡಿಸುವುದುಂಟು. "ಏನು, ಜಗಳಮಾಡುತ್ತೀಯಾ?" ಎಂದವರು ಗದರಿಸುವಾಗ, ಹುಡುಗರಿಗೆ ತಾವೇನು ತಪ್ಪುಮಾಡಿದೆವೆಂದು ತಿಳಿಯುವುದಿಲ್ಲ. ತಂದೆತಾಯಿಗಳು ಜಗಳಾಡಬಲ್ಲ ಅಧಿಕಾರವನ್ನು ಯಾವ ರೀತಿ ಪಡೆದರೆಂದು ಹುಡುಗರು ತಿಳಿಯದೆ ದಿಗ್ಭ್ರಾಂತರಾಗುವರು. ಈ ಕಾರಣಕ್ಕಾಗಿಯೇ ಹಿರಿಯರಾದವರು,ಕಿರಿಯರ ಮುಂದೆ ಒಳ್ಳೆಯ ಆದರ್ಶವನ್ನೇ ಇಡಬೇಕು. ಹಾಗೆ ಮಾಡದೆ, ಅಧಿಕಾರ ಬಲದಿಂದ ಹುಡುಗರ ಗುಣಶೀಲಗಳನ್ನು ತಿದ್ದುವೆವೆಂದೂ, ಅವರ ನಡವಳಿಕೆಯ ಮೇಲೆ ನಿಯಂತ್ರಣವಿಡುವೆವೆಂದೂ ಭಾವಿಸುವವರು ತಮ್ಮ ಉದ್ದೇಶದಲ್ಲಿ ಕೃತಕೃತ್ಯರಾಗಲಾರರು. 'ನೀವು ಮಾಡುವುದು ಸರಿ, ನಾನು ಮಾತ್ರ ಮಾಡುವುದು ತಪ್ಪೋ?" ಎಂದ. ಹುಡುಗರು ಪ್ರತಿಭಟಿಸುವಾಗ, ಅವರಿಗೆ ಸಮಾಧಾನ ಮಾಡಲಾರದೆ, ತಂದೆತಾಯಿಗಳು ನೊಂದುಕೊಳ್ಳುವ ಪ್ರಸಂಗ ಬರುತ್ತದೆ. "ಮಕ್ಕಳೇ ಬೀಡಿ ಸಿಗರೇಟು ಸೇದಬಾರದು' ಎನ್ನುವ ಅಧ್ಯಾಪಕ, "ಮಗೂ, ಆ ಅಂಗಡಿಯಿಂದ ವಿಲ್ಸ್ ಸಿಗರೇಟು ತಾ, ಈ ಅಂಗಡಿಯಿಂದ ಬೇಡಾ ತಂದುಕೊಡು" ಎಂದು ವಿದ್ಯಾರ್ಥಿಗೆ ಹೇಳಿದರೆ, ಅವನ ಪಾಠ ಏನು ಒಳ್ಳೆಯ ಪರಿಣಾಮವನ್ನು ಮಾಡಬಹುದು? ಕಿರಿಯರಿಂದ ವಿಧೇಯತೆಯನ್ನೂ ಪ್ರೀತಿವಾತ್ಸಲ್ಯಗಳನ್ನೂ ಸದ್ಗುಣ ಸದಾಚಾರಗಳನ್ನೂ ನ್ಯಾಯ ವರ್ತನೆಯನ್ನೂ ಅಪೇಕ್ಷಿಸುವ ಹಿರಿಯರು ಸರ್ವಪ್ರಥಮವಾಗಿ ತಮ್ಮನ್ನೇ ತಿದ್ದಿಕೊಳ್ಳಲು ನೋಡಬೇಕು. ಒಂದು ವೇಳೆ ಇದು ತೀರ ಕಷ್ಟಸಾಧ್ಯವೆಂದಾದರೆ—ಕನಿಷ್ಠ ಪಕ್ಷ ತಮ್ಮ ಕೆಟ್ಟ ಕೆಲಸಗಳು ಮಕ್ಕಳ ಅನುಭವಕ್ಕೆ ಬಾರದಂತೆ ನೋಡಿಕೊಳ್ಳುವುದಕ್ಕಾದರೂ ಮನಸ್ಸು ಕೊಡಬೇಕು ಅನ್ಯಥಾ ಕಿರಿಯರು ತೀರಾ ಹಾಳಾದರು ಎಂಬುದಾಗಿ ಹಿರಿಯರು ಬೈದು ಬೊಬ್ಬಿರಿಯುವುದು ಅರ್ಥಶೂನ್ಯವಾಗುವುದು. ಎಲ್ಲರ ಸಹಾನುಭೂತಿ ಅಂಥ ತಾಯಿ ತಂದೆಗಳಿಗಿದ್ದರೂ—ಅವರಿಂದ ಮಕ್ಕಳನ್ನು ಸುಧಾರಿಸುವ ಕೆಲಸ ನೆರವೇರಲಾರದು.

—ಓಂತತ್ಸತ್||

(೧೧ನೇ ಪುಟದಿಂದ)

ಜನ ಬಿತ್ತನೆಯ ಹಾಗೂ ಕೊಯ್ಲಿನ ಕಾಲ, ಆರೈಕೆ, ರೋಗ ರುಜಿನಗಳಿಂದ ರಕ್ಷಣೆ ಇವುಗಳಲ್ಲಿ ಸಂಶೋಧನೆ, ಬೆಳೆಗಳ ಪರ್ಯಾಯದ ಯಶಸ್ವೀ ಯೋಜನೆ ದೇಶೀಯ ಹಾಗೂ ವಿದೇಶೀ ಸಾಧನ ಸಲಕರಣೆಗಳ ಸಾಮಂಜಸ್ಯ-- ಮುಂತಾದ ವಿಷಯಗಳನ್ನು ಭಾರತದ ಕೇಂದ್ರ ಕೃಷಿ ಸಂಶೋಧನಾ ಮಂಡಳವು ಸದ್ಯ ವಿಚಾರಿಸುತ್ತದೆ. ಈ ಸಂಶೋಧನೆ ಹಾಗೂ ಜ್ಞಾನವನ್ನು ಹಳ್ಳಿಯ ಮೂಲೆಮೂಲೆಗಳಿಗೆ ಬಿತ್ತರಿಸಬೇಕೆನ್ನುವ ಉದ್ದೇಶದಿಂದ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಸರಕಾರ ಕೈಗೊಂಡಿದೆ ಇದರಲ್ಲಿ ಆಯಾ ಪ್ರದೇಶದ ಜನರೂ ಸರಕಾರೀ ಅಧಿಕಾರಿಗಳೂ ಒಂದುಗೂಡಿ, ಕೆಲಸ ಮಾಡುವರು. ಈ ರೀತಿ ಸಹಕಾರೀ ಪ್ರಯತ್ನದಿಂದ ಭವ್ಯ ಭಾರತವನ್ನು ಕಟ್ಟುವುದೇ ಪಂಚವಾರ್ಷಿಕ ಯೋಜನೆಯ ಸದುದ್ದೇಶ. (ಅಸ್ಸ್)

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1931. ಪ್ರಧಾನ ಕಚೇರಿ: ಮದ್ರಾಸು.

66½ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, **15** ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಂ ಉತ್ಪತ್ತಿ, **45**½ ಲಕ್ಷಕ್ಕೂ ಮಿಕ್ಕಿದ ಜೀವವಿಮಾ ನಿಧಿ. **10**¾ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ **3** ಕೋಟಿಯಷ್ಟು ಊರ್ಜಿತದಲ್ಲಿರುವ ಪಹಿವಾಟು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರೀವಣಾತಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.

ಉತ್ಸಾಹಿ, ಜನಾನುರಣೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ.—

ಜಿ. ಆರ್ ಪಾಲ್ಕ, ಬ್ರಾಂಚ್ ಮೆನೇಜರ್,

ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ]

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ ಭಾರತ.

ಫೋನು ನಂಬ್ರ 66

ವಿವಾಹ ಸಮಾರಂಭಗಳು

ಸಾಂತೂರು ಹೊಸ ಮನೆ ಜಯರಾಮ ಸೆಟ್ರು ಉಣಸೆ ಬಾವ ವೆಂಕಪ್ಪ ಶೆಟ್ರ ದ್ವಿತೀಯ ಪುತ್ರಿ ಟಿ. ಬಿ. ಸರೋಜಿನಿಯನ್ನೂ ಉಣಸೆ ಬಾವ ವೆಂಕಪ್ಪ ಸೆಟ್ರ ಪ್ರಥಮ ಪುತ್ರ ಟಿ. ಸಂಜೀವ ಸೆಟ್ಟರು ಸಾಂತೂರು ಹೊಸ ಮನೆ ಜಯರಾಮ ಸೆಟ್ಟರ ಸಹೋದರಿ ಶ್ರೀ. ವಸಂತಿಯನ್ನೂ ತಾ. 12 7-53ರಲ್ಲಿ ಮಂಗಳೂರಿನ ಬಲ್ಮಠ ಡೋನ್ ಬಾಸ್ಕೋ ಹಾಲಿನಲ್ಲಿ ವಿವಾಹವಾದರು.

ಒಂದು ತೆನೆಯ ಬದಲು ಎರಡು ತೆನೆ

(೨ನೇ ಪುಟದಿಂದ)

ಬೇಸಾಯಗಾರರು ಹಸುರೆಲೆ, ಧಾತುಜನ್ಯ ಗೊಬ್ಬರ, ಕಂಪೋಸ್ಟು ಫಲವರ್ಧಕಗಳು, ಹಿಂಡಿ ಮುಂತಾದವುಗಳ ಮೂಲಕ ಭೂಮಿಗೆ ನೀಡುತ್ತಿರುವ ನೈಟ್ರೋಜನು ೩.೬೦ ಲಕ್ಷ ಟನ್ನು ಮಾತ್ರ. ಹೀಗೆ ಸೂರ್ಯನೊಂದು ಕಡೆ ಭೂಮಿಯ ಫಲವತ್ತತೆಯನ್ನು ಕಡಿಮೆ ಮಾಡುತ್ತಿರುವಾಗ, ಮನುಷ್ಯನು ತನ್ನ ಆಲಸ್ಯದ ಪರಿಣಾಮವಾಗಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತಾನೆ. ಸಸ್ಯಗಳಿಗೆ ಅತ್ಯಂತ ಉಪಯುಕ್ತವೆನಿಸಿದ ಸೆಗಣಿ, ಗಂಜಳ ಮುಂತಾದುವುಗಳ ಉಪಯೋಗವು ಯೋಗ್ಯ ರೀತಿಯಲ್ಲಾಗುತ್ತದೆನ್ನುವುದೂ ಸಂಶಯ. ಕಟ್ಟಿಗೆಯ ಬದಲು ಸೆಗಣಿಯನ್ನು ಉರುವಲಾಗಿ ಉಪಯೋಗಿಸುವಷ್ಟು ನಮ್ಮಲ್ಲಿ ಮೌಢ್ಯ ಮನೆಮಾಡಿಕೊಂಡಿರುವುದರಿಂದ ಹೀಗೆನ್ನಬೇಕಾಗಿದೆ. ಸರಕಾರದವರು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳುವುದಕ್ಕೂ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದಕ್ಕೂ ಉದ್ದೇಶಿಸಿ ಫಲವರ್ಧಕಗಳನ್ನು ರೈತರಿಗೆ ಪೂರೈಸುವ ಕೆಲಸವನ್ನು ಕೈಗೊಂಡಿರುವರು. ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಅಮೋನಿಯಂ ಸಲ್ಫೇಟಿನ್ನುವ ಫಲವರ್ಧಕದ ಬೆಲೆಯನ್ನು ಇಳಿಸುವುದಕ್ಕೋಸ್ಕರ ೩೫೨ ಲಕ್ಷ ರೂಪಾಯಿಗಳ ಅಲ್ಪಾವಧಿಯ ಸಾಲ ಕೊಟ್ಟಿದೆ. ಇದರ ಪರಿಣಾಮವಾಗಿ ಈಗ ಒಂದು ಟನ್ನು ಅಮೋನಿಯಂ ಸಲ್ಫೇಟಿನ ಬೆಲೆಯು ೩೬೫ ರೂಪಾಯಿಯಿಂದ ೨೯೦ ರೂಪಾಯಿಗೆ ಇಳಿದಿದೆ. ಸಾಮಾನ್ಯವಾಗಿ ಒಂದು ಟನ್ನು ಫಲವರ್ಧಕದ ಉಪಯೋಗದಿಂದ ಎರಡು ಟನ್ನುಗಳಷ್ಟು ಫಸಲು ಹೆಚ್ಚಿಕೊಳ್ಳುತ್ತದೆ. ನಮ್ಮ ದೇಶದ ಸಿಂಧ್ರಿಯಲ್ಲಿರುವ ಗೊಬ್ಬರದ ಕಾರಖಾನೆ ಈಗಾಗಲೇ ಉತ್ಪಾದನೆಯನ್ನು ಆರಂಭಿಸಿರುವುದರಿಂದ, ಎಲ್ಲ ರೈತರೂ ಈ ಹಾಗೂ ಇತರ ಫಲವರ್ಧಕಗಳ ಉಪಯೋಗವನ್ನು ಧಾರಾಳವಾಗಿ ಪಡೆಯಬಲ್ಲರು.

❖

ಪ್ರತಿಯೊಬ್ಬ ರೈತನಿಗೂ ಯೋಗ್ಯ ನೀರಾವರಿ ಅನುಕೂಲತೆಗಳಿದ್ದರೆ, ಹೆಚ್ಚು ಬೆಳೆಯನ್ನು ಬೆಳೆಸಬಹುದೆಂದು ತಿಳಿದೇ ಇದೆ. ನಮ್ಮ ಸರಕಾರವು ಒಂದು ತೆನೆಬರುವ ಜಾಗದಲ್ಲಿ ಎರಡು ತೆನೆ ಫಲಕೊಡುವಂತೆ ಪ್ರಯತ್ನ ಮಾಡಬೇಕೆಂದು ರೈತರನ್ನು ಕೇಳಿಕೊಳ್ಳುತ್ತದೆ. ಇದರ ಅರ್ಥ ಒಂದು ಬೆಳೆ ಬರುವಲ್ಲಿ, ನೀರಾವರಿಯ ಮೂಲಕ ಎರಡನೆಯ ಬೆಳೆಯನ್ನು ಬೆಳೆಯಬೇಕೆಂಬುದೇ ನಿಜ ಈ ಕಾರಣಕ್ಕಾಗಿಯೇ ಪಂಚವಾರ್ಷಿಕ ಯೋಜನೆಯು ನೀರಾವರಿಯ ಉದ್ದೇಶಕ್ಕೆ ಹೆಚ್ಚಿನ ಮಹತ್ವವನ್ನು ಪೂರೈಸಿರುತ್ತದೆ. ನಮ್ಮ ದೇಶದಲ್ಲಿ ಮಳೆಗಾಳಿಗಳನ್ನು ಹೊಂದಿಕೊಂಡೇ ಬೇಸಾಯ ನಡೆಯುವುದು ವಾಡಿಕೆಯಾಗಿದೆ. ಆದರೆ ಬೇರೆ ದೇಶಗಳು ನೀರಾವರಿಯ ಲಾಭಪ್ರದ ಯೋಜನೆಗಳ ಮುಖಾಂತರ ಉತ್ಪಾದನೆಯನ್ನು ಇಮ್ಮಡಿ, ಮುಮ್ಮಡಿ ಮಾಡಲು ಸಮರ್ಥವಾಗಿವೆ. ಈಗ ಸರಕಾರವು ನೀರಾವರಿ ಅನುಕೂಲತೆಗಳನ್ನು ಹೆಚ್ಚಿಸಲು ಪ್ರಯತ್ನಶೀಲವಾಗಿರುವುದರಿಂದ ಈ ಸಂದರ್ಭದ ಸಂಪೂರ್ಣ ಪ್ರಯೋಜನವನ್ನು ರೈತರು ಪಡೆಯಬಲ್ಲರು. ಸರಕಾರವು ಮದ್ರಾಸು, ಉತ್ತರ ಪ್ರದೇಶ, ಪಂಜಾಬು ಗಳಲ್ಲಿ ಹಳೆಯ ಬಾವಿಗಳ ದುರಸ್ತಿ, ಮತ್ತು ಹೊಸ ಬಾವಿಗಳ ತೋಡುವಿಕೆಯನ್ನು ದಕ್ಷಿಣ ಭಾರತದಲ್ಲಿ ವಿಶಾಲವಾದ ಕೆರೆಗಳ ಜೀರ್ಣೋದ್ಧಾರ ಹಾಗೂ ಹೊಸ ಸರೋವರಗಳ ರಚನೆಯನ್ನೂ ಉತ್ತರ ಪ್ರದೇಶ ಬಿಹಾರ, ಮದ್ರಾಸು ಮುಂತಾದವುಗಳಲ್ಲಿ ಹರಿಯುವ ನದಿ ಮತ್ತು ಕಾಲುವೆಗಳಿಗೆ ಪಂಪುಗಳ ಜೋಡಿಸುವಿಕೆಯನ್ನೂ ಒಡಿಸಾ, ಉತ್ತರ ಪ್ರದೇಶ ಮುಂತಾದ ರಾಜ್ಯಗಳ ಹಳೆ ಅಣೆಕಟ್ಟುಗಳ ರಿಪೇರಿಯನ್ನೂ ಕೈಗೊಂಡು ಸಣ್ಣ ನೀರಾವರಿಯ ಅನುಕೂಲತೆ ಹೆಚ್ಚಿಸಲು ನೋಡುತ್ತಿದೆ. ಭಾರತದಲ್ಲಿ ೭೫೦ ಲಕ್ಷ ಎಕ್ರೆ ಭೂಮಿಯು ಭತ್ತದ ಬೆಳೆಯನ್ನೊಳಗೊಂಡಿದೆ. ಇದರಲ್ಲಿ ೨೫೦ ಲಕ್ಷ ಎಕ್ರೆ ಭೂಮಿಗೆ ನೀರಾವರಿ ಅನುಕೂಲತೆಯಿದೆ. ಮದ್ರಾಸು ರಾಜ್ಯದಲ್ಲಿ ವ್ಯವಸಾಯಕ್ಕೊಳಪಟ್ಟ ೩೯೮ ಲಕ್ಷ ಎಕ್ರೆ ಭೂಮಿಯಲ್ಲಿ ೧೦೪ ಲಕ್ಷ ಎಕ್ರೆಗೆ ನೀರಾವರಿಯ ಸೌಲಭ್ಯವಿದೆ (ಬಾವಿಗಳಿಂದ ೧೫ ಲಕ್ಷ ಎಕ್ರೆ, ಸರಕಾರೀ ಕಾಲುವೆಗಳಿಂದ ೪೬ ಲಕ್ಷ ಎಕ್ರೆ ಮತ್ತು ಉಳಿದ ಅಂಶ ಕೆರೆ ಮತ್ತಿತರ ಸಾಧನಗಳಿಂದ ನೀರುಣ್ಣುತ್ತದೆ.) ಹೀಗೆ ಸುಮಾರು ೨೭೦ ಲಕ್ಷ ಎಕ್ರೆ ಭೂಮಿಯು ಕೇವಲ ಮೊಸೂನು ಮಳೆಯನ್ನು ಹೊಂದಿಕೊಂಡಿದೆ, ರಾಜ್ಯದಲ್ಲಿ ಎಲ್ಲ ನಮೂನೆಯ ಕೃಷಿಗೆ ಉಪಯೋಗಿಸಲ್ಪಡುವ ೩೫೫ ಲಕ್ಷ ಎಕ್ರೆ ಭೂಮಿಯಲ್ಲಿ ೪೧ ಲಕ್ಷ ಎಕ್ರೆಯಲ್ಲಷ್ಟೆ ಒಂದಕ್ಕಿಂತ ಹೆಚ್ಚು ಬೆಳೆಯನ್ನು ಮಾಡುವರು ಉಳಿದೆಲ್ಲ ಜಮೀನು ವರ್ಷದಲ್ಲಿ ಕನಿಷ್ಠ ಪಕ್ಷ ಆರು ತಿಂಗಳಾದರೂ ಬೀಳುಬಿದ್ದಿರುತ್ತದೆ. ಹೀಗೆ ವ್ಯವಸಾಯಕ್ಕೆ ಉಪಯುಕ್ತವಾದ ನೆಲವು ಬೀಳು ಬಿದ್ದಿರುವುದನ್ನು ನಾವು ನೋಡುತ್ತಾ ಕುಳಿತಿರುವುದು ಸಮವೇ? ನಿಶ್ಚಯವಾಗಿಯೂ ಅಲ್ಲ- ಹೊಸತಾಗಿ ನಾವು ವ್ಯವಸಾಯ ಯೋಗ್ಯ ಭೂಮಿಯನ್ನು ಮಾಡಿಕೊಳ್ಳಲು ಪ್ರಯತ್ನಪಡುವುದಕ್ಕಿಂತಲೂ ವರ್ಷದ ಆರು ತಿಂಗಳು ತಿಂಗಳು ಪಡುಬೀಳುವ ಭೂಮಿಯನ್ನು ಸದುಪಯೋಗಕ್ಕೆ ಗುರಿಮಾಡುವುದೇ ನಮ್ಮ ಆದ್ಯ ಕರ್ತವ್ಯ.

❖

ಉತ್ತಮ ಬೀಜ, ಫಲವತ್ತಾದ ಗೊಬ್ಬರ, ಯಥೇಷ್ಟ ನೀರಿನ ಪೂರೈಕೆ, ಯೋಗ್ಯ ವ್ಯವಸಾಯ ಪದ್ಧತಿ ಇವುಗಳ ಮೂಲಕವೇ ನಾವು ಅಧಿಕ ಉತ್ಪಾದನೆಯನ್ನು ಸಾಧಿಸಬಲ್ಲೆವು. ನಮ್ಮ ರೈತರು ಬಡವರಾಗಿರುವುದರಿಂದ ಈ ಎಲ್ಲ ಅನುಕೂಲತೆಗಳನ್ನು ಪಡೆಯುವ ಸಾಮರ್ಥ್ಯ ಅವರಿಗಿಲ್ಲವೆನ್ನುವ ಒಂದು ಪಂಗಡ ಸಮ್ಮತವುಂಟು. ಇವರಿಗೆ ನಮ್ಮ ಮನುಷ್ಯಶಕ್ತಿ ಅಪಾರವಾಗಿದೆ ಎಂಬುದು ತಿಳಿದೇ ಇಲ್ಲವೆಂದು ತೋರುತ್ತದೆ. ರೈತರು ಭೂಮಿ ತಾಯಿಯ ಮಕ್ಕಳಾದುದರಿಂದ, ಭೂಮಾತೆಯ ಆಶೀರ್ವಾದವನ್ನವರು ಮೊದಲಾಗಿ ಪಡೆಯಬೇಕು. ಭೂಮಿಯ ತೃಷೆಯನ್ನು ತೃಪ್ತಿಪಡಿಸುವ ರೀತಿ, ಮೈಬೆವರಿಳಿಸಿ ದುಡಿಯಲು ಅವರು ಲೇಶಮಾತ್ರವೂ ಸಂಕೋಚ ಪಡದೆ, ಉತ್ಸಾಹದಿಂದ ಮುಂಬರಬೇಕು. ಎಕ್ರೆಯೊಂದರ ಉತ್ಪಾದನೆಯನ್ನು ಹೆಚ್ಚಿಸಲು ಸಮರ್ಥರಾದಾಗಲೇ ನಮ್ಮ ಜೀವನ ಮಟ್ಟವನ್ನೂ ಎತ್ತರಿಸುವ ಧೈರ್ಯವಾಗಬಲ್ಲುದು. ನಮ್ಮ ದೇಶದ ಈಗಿನ ಕೃಷಿ ಪದ್ಧತಿಯಂತೆ ಭೂಮಿಯನ್ನು ಹಾಳು ಮಾಡುವುದ, ನೀರನ್ನು ಬಳಸಿಕೊಳ್ಳದೆ ಬಿಡುವುದು, ಗೊಬ್ಬರಗಳನ್ನು ಉಪೇಕ್ಷಿಸುವುದು, ಸಮಯ, ಜನಶಕ್ತಿ, ಹಣ ಹಾಗೂ ಜಾನುವಾರುಗಳನ್ನು ಚೆನ್ನಾಗಿ ಉಪಯೋಗಿಸದೆ ವ್ಯರ್ಥ ಹೋಗಗೊಡುವುದು ಮುಖ್ಯ ದೋಷವೆಂದು ತಜ್ಞರ ಅಭಿಪ್ರಾಯ. ಮೇಲಿನ ಪ್ರತಿಯೊಂದೂ ಅಂಶವನ್ನೂ ನಾವು ಗಮನಿಸಿಕೊಂಡು, ನಮ್ಮ ಕೃಷಿ ಕ್ರಮದಲ್ಲಿ ಸುಧಾರಣೆಯನ್ನು ಮಾಡಲು ಪ್ರಯತ್ನಿಸುವ ಕಾಲ ಈಗ ಸನ್ನಿಹಿತವಾಗಿರುತ್ತದೆ. ಮದ್ರಾಸು ರಾಜ್ಯವನ್ನು ಕುರಿತು ಹೇಳುವುದಾದರೆ, ಗೊಬ್ಬರದ ಪೂರೈಕೆಯನ್ನು ಹೆಚ್ಚಿಸುವುದೂ ಬೇಸಗೆಯಲ್ಲಿ ಬೀಳುಬಿದ್ದಿರುವ ಭೂಮಿಯ ಸದುಪಯೋಗ ಮಾಡುವುದೂ ಮುಖ್ಯವಾದ ಕೆಲಸ. ನಮ್ಮ ಸರಕಾರದ ಕೃಷಿ ಇಲಾಖೆಯು ಈ ವಿಷಯವನ್ನು ಪರ್ಯಾಲೋಚಿಸುತ್ತಿದೆ. ಹಸುರೆಲೆ ಗೊಬ್ಬರವನ್ನು ಹೆಚ್ಚು ಹೆಚ್ಚು ಕ್ಷೇತ್ರಗಳಲ್ಲಿ ಬಳಸುವಂತೆ ಕೃಷಿ ಇಲಾಖೆಯು ಪ್ರೋತ್ಸಾಹ ನೀಡುತ್ತಿದೆಯಲ್ಲದೆ ಅಲ್ಪಾವಧಿಯಲ್ಲಿ ಬೆಳೆಯಬಲ್ಲ ಹತ್ತಿ, ನೆಲಗಡಲೆ ಮುಂತಾದ ರೊಕ್ಕದ ಪೈರಿನ ನಮೂನೆಯನ್ನೂ ಅದು ಸಂಶೋಧಿಸಿದೆ. ಕೆರೆ ಕಾಲುವೆ ಬಾವಿಗಳಿಂದ ನೀರೆತ್ತಲು ಪಂಪು ಸೆಟ್ಟುಗಳನ್ನು ಅದು ರೈತರಿಗೆ ಒದಗಿಸಿಕೊಡುತ್ತದೆ. ಇಂಥ ಪ್ರತಿಯೊಂದು ತಾಸಿನ ಬೆಲೆ ಸುಮಾರು ೨೫೦ ರೂಪಾಯಿಗಳು ಮಾತ್ರ. ಒಂದು ಪಂಪು ಸೆಟ್ಟು ೧೦ ಎಕ್ರೆ ಭೂಮಿಗೆ ನೀರುಣಿಸಬಲ್ಲುದು. ಈಚೆಗೆ ಭಾರತದಲ್ಲಿಯೂ ಪ್ರಯೋಗಾತ್ಮಕವಾಗಿ ಕೈಗೊಂಡ ಜಾಪಾನೀ ಪದ್ಧತಿಯ ಭತ್ತದ ಕೃಷಿಯಲ್ಲಿ ನೀರಾವರಿಗೆ ಮಹತ್ವದ ಸ್ಥಾನವುಂಟು. ಮಾತ್ರವಲ್ಲ ಸುಧಾರಿತ ಬೀಜಗಳಿಗೆ ಅಷ್ಟೇ ಪ್ರಾಮುಖ್ಯ ಕೊಡಲ್ಪಡುತ್ತದೆ. ಸುಧಾರಿತ ಬೀಜಗಳ ಉಪಯೋಗದಿಂದ ಉತ್ಪಾದನೆಯನ್ನು ಪ್ರತಿಶತ ೧೦--೧೫ರಷ್ಟು ಹೆಚ್ಚಿಸಬಹುದೆಂದು ತಿಳಿದಿದೆ. ಜಪಾನೀಯರು ಒಳ್ಳೆಯ ಗೊಬ್ಬರ, ಸುಧಾರಿತ ಬೀಜ, ಯಥೇಷ್ಟ ನೀರಿನ ಪೂರೈಕೆ ಮುಂತಾದವುಗಳಿಂದ ತಮ್ಮ ಉತ್ಪಾದನೆಯನ್ನು ಇಮ್ಮಡಿ ಮಾಡಿರುವರು.

ಹಸುರೆಲೆ ಗೊಬ್ಬರಗಳನ್ನು ಒದಗಿಸುವುದಕ್ಕೆ ಇತ್ತೀಚಿಗಿನ ಸಂಶೋಧನೆಗಳು ಸುಲಭ ಉಪಾಯಗಳನ್ನು ತೋರಿಸಿಕೊಟ್ಟಿವೆ ಮದ್ರಾಸು ರಾಜ್ಯದಲ್ಲಿ ಗ್ಲಿರಿಸೀಡಿಯಾ ಹಾಗೂ ಸೆಸ್ಬೇನಿಯಾ ಗಿಡಗಳು ಈಗ ತುಂಬ ಪ್ರಚಾರದಲ್ಲಿವೆ. ಭತ್ತದ ಬೆಳೆಗೆ ಏನೇನೂ ಹಾನಿ ಯುಂಟುಮಾಡದೆ ಅದರ ಒಟ್ಟಿಗೆಯೇ ಈ ಹಸುರೆಲೆಯ ಸಸ್ಯವೂ ಬೆಳೆಯುವುದರಿಂದ ಸಮಸ್ಯೆಯನ್ನು ಇದು ಅತ್ಯಂತ ಸುಲಭದಲ್ಲಿ ಪರಿಹರಿಸುತ್ತದೆ. ಒಂದು ಕಾಲು ರಾತಲು ಬೀಜವನ್ನು ಬಿತ್ತಿದರೆ, ಒಂದು ಎಕ್ರೆ ಭೂಮಿಗೆ ಸಾಲುವಷ್ಟು ಹಸುರೆಲೆ ಗೊಬ್ಬರವಾಗುವುದಲ್ಲದೆ, ಆರುವತ್ತು ರಾತಲು ಬೀಜವೂ ದೊರೆಯುತ್ತದೆ. ಒಂದು ಎಕ್ರೆ ಭೂಮಿಯಲ್ಲಿ ಜನವರಿ ತಿಂಗಳಿಗೆ ಈ ಬೀಜವನ್ನು ಬಿತ್ತಿದರೆ ಜೂಲೈಯಲ್ಲಿ ಭತ್ತ ಬೆಳೆಯುವ ಕಾಲಕ್ಕೆ ಹತ್ತು ಎಕ್ರೆಗೆ ಸಾಲುವ ಹಸುರೆಲೆ ಗೊಬ್ಬರವನ್ನು ಕೊಡುತ್ತದೆ. ನೀರಾವರಿಗೆ ಯೋಗ್ಯ ಅನುಕೂಲತೆ ಇರುವೆಡೆಯಲ್ಲೆಲ್ಲಾ ಈ ಹಸುರೆಲೆ ಗೊಬ್ಬರಗಳು ರೈತರ ಪ್ರೀತಿ ಸಂಪಾದಿಸುತ್ತವೆ. ಈ ಮಾದರಿಯ ಸಂಶೋಧನೆಗಳನ್ನು ನಡೆಸುವುದಕ್ಕಾಗಿ ಸರಕಾರವು ಪ್ರತ್ಯೇಕ ಕೇಂದ್ರವೊಂದನ್ನು ಸ್ಥಾಪಿಸಿರುತ್ತದೆ. ದುರ್ದೈವದಿಂದ ಈ ಸಂಸ್ಥೆಯು ನೂತನ ಸಂಶೋಧನೆಗಳನ್ನು ಜನಸಾಮಾನ್ಯಕ್ಕೆ ಮುಟ್ಟಿಸಿ ಮನವರಿಕೆ ಮಾಡಿಸಿ ಕೊಡುವ ಕೆಲಸ ಬಹಳ ಹಿಂದುಳಿದಿದೆ. ಜಪಾನಿನಲ್ಲಿ ಸಂಶೋಧನೆಗಳ ಪರಿಣಾಮವನ್ನ ಹಳ್ಳಿಹಳ್ಳಿಗಳಲ್ಲೂ ಇರುವ ಶಾಖೆಗಳ ಮೂಲಕ ರೈತರಿಗೆ ತಿಳಿಸಿ ಕೊಡುವುದೊಂದು ರೂಢಿಯಾಗಿಬಿಟ್ಟಿದೆ. ನಮ್ಮ ದೇಶದಲ್ಲೂ ಇಂಥ ಕೇಂದ್ರಗಳು ವಿಸ್ತಾರಹೊಂದಿ, ಜನತಾ ಸಂಪರ್ಕವನ್ನು ಸ್ಥಾಪಿಸಿಕೊಳ್ಳಬೇಕು. ಒಂದೇ ಬೇರೆ ಫಲವರ್ಧಕಗಳ ಉಪಯೋಗದ ವಿಧಾನ, ಬೇರೆ ಬೇರೆ ಬೆಳೆಗಳನ್ನು ಅನ್ವಯಿಸಿ ವಿವಿಧ ಪರಿಸ್ಥಿತಿಗಳಲ್ಲಿ ಫಲವರ್ಧಕಗಳೂ ಗೊಬ್ಬರಗಳೂ ನೀಡುವ ಪ್ರಯೋ

(೧೨ ನೇ ಪುಟನೋಡಿರಿ.)

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ಶೋಧ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಪ್ರವರಸಾಯನ.



ಹೆಚ್ಚಿನ ಸೂಚಿತಿಗೆ – ಡಾ। ಯಂ ಸಿ ಶಾಸ್ತ್ರೀ, ಎಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾಕಿಸ್ಟರು:– ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೩೦—೭—೫೩ರಿಂದ ತಾ. ೫—೮—೫೩ರ ವರೆಗೆ.

ಮೇಷ—ದೈವವು ಸಾಕಷ್ಟು ಬಲಶಾಲಿಯಾಗಿರುವುದು. ನಿಮ್ಮ ಗೃಹತಾಪತ್ರಯಗಳೆಲ್ಲವೂ ಮಾಯವಾಗಿ ಸಂಸಾರ ಸುಖವನ್ನು ಅನುಭವಿಸುವಿರಿ. ಶತ್ರು ಜನರನ್ನು ಪರಾಭವಗೊಳಿಸುವಿರಾದರೂ ಕೆಲವೊಮ್ಮೆ ಅವರಿಂದ ಮಾನಚ್ಯುತಿಗೆ ಕಾರಣನಾದೀತು. ಉದರ ಶೂಲೆ ಜ್ವರಾದಿಗಳು ಕಾಣಬಹುದು. ಆರ್ಥಿಕ ವ್ಯಾಪಾರ ಉದ್ಯೋಗ ವ್ಯವಹಾರಾದಿಗಳಲ್ಲಿ ಏನೊಂದೂ ಕೊರತೆಯಿರದು. ತಾ. 1-2, 5. ಈ ದಿನಗಳು ಉತ್ತಮವಿವೆ.

ವೃಷಭ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯಲ್ಲಿ ಅಷ್ಟೊಂದು ವ್ಯತ್ಯಾಸವಾಗುವ ಸಂಭವವಿಲ್ಲ. ಕರ್ಮಠರಾದ ನಿಮ್ಮ ಪ್ರತಿಯೊಂದು ಕಾರ್ಯಕಲಾಪಗಳೂ ನಿಮ್ಮ ಅಪೇಕ್ಷೆಯಂತೆ ಕೊನೆ ಹೊಂದುವವು. ವಿದ್ಯೋಪಜೀವಿಗಳಿಗೆ ಸ್ವಲ್ಪ ತಪ್ಪಿತನಾದೀತು. ರಾಜಕೀಯ ವಿಭಾಗದಲ್ಲಿ ನಿಮ್ಮಂತೆ ಕಾರ್ಯನಿರ್ವಹಿಸುವವರು ಗೃಹತಾಪತ್ರಯಗಳು ಕೊಂಚ ಹೆಚ್ಚಲಿವೆ. ತಾ. 30, 31, 3 4, ಈ ದಿನಗಳಲ್ಲಿ ಸುಖಲಾಭಗಳಿವೆ.

ಮಿಥುನ—ಮಾನಸಿಕ ದೌರ್ಬಲ್ಯವು ನಿಮ್ಮಲ್ಲಿ ಅತಿಯಾಗಿರುವುದರಿಂದ ಯಾವೊಂದು ಕಾರ್ಯವನ್ನೂ ಕೊನೆ ಹೊಂದಿಸುವ ಶಕ್ತಿ ಸಾಮರ್ಥ್ಯಗಳು ನಿಮಗಿರಲಾರವು. ನಿಮ್ಮ ಶ್ರಮಕ್ಕೆ ತಕ್ಕುದಲ್ಲವಾದರೂ ಖರ್ಚಿಗೆ ತಕ್ಕಷ್ಟು ಧನಾಗಮವಾಗಲಿದೆ. ಆಪ್ತ ಜನರಲ್ಲಿ ಅವಿಶ್ವಾಸ ಹುಟ್ಟೀತು. ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯ ಕೆಡಲಿದೆ. ತಾ. 3. 4. ಹೊರತಾಗಿ ಉಳಿದ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳೊದಗಲಾರವು.

ಕರ್ಕಟಿ—ಸುಖದುಃಖ ಲಾಭಾಲಾಭಗಳು ನಿಮಗೀ ವಾರದಲ್ಲಿ ಸರಿಸಮದಲ್ಲಿ ನಿಲ್ಲಲಿವೆ ಉದ್ಯೋಗ ವ್ಯಾಪಾರಾದಿಗಳಲ್ಲಿ ಒಳ್ಳೆ ಫಲವಿರುವದು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಆದರೆ ಆರೋಗ್ಯ ವಿಚಾರದಲ್ಲಿ ಕೊಂಚಜಾಗರೂಕತೆ ವಹಿಸಿರಿ. ಶ್ಲೇಷ್ಮ ದೋಷದಿಂದಲೂ ವಿಶೇಷತಃ ಶಿತೋಷ್ಣಗಳಾಧಿಕ್ಯದಿಂದಲೂ ಆರೋಗ್ಯ ಕೆಡುವದು ಸನ್ಮಿತ್ರರ ಬೆಂಬಲದಿಂದಾಗಿ ತಾ. 1ರಿಂದ 4ರ ವರೇಗಿನ ದಿನಗಳು ಸುಖದಾಯಿಗಳಾಗಲಿವೆ.

ಸಿಂಹ—ನಿಮ್ಮ ಪರಿಸ್ಥಿತಿಯಿಂದು ಕೊಂಚ ಸುಧಾರಿಸೀತು. ಹಲವು ಹರಟೆಗಳಿಂದ ಮುಕ್ತರಾಗಿ ಸ್ವಲ್ಪ ನೆಮ್ಮದಿಯಿಂದ ಕಾಲಕಳೆವಿರಿ. ಆದರೂ ಆರ್ಥಿಕ ಬಿಕ್ಕಟ್ಟು, ವಿರೋಧಿಗಳ ಉಪಟಳಗಳು ಕಡಿಮೆಯಾಗಲಾರವು. ಅನಿರೀಕ್ಷಿತವಾಗಿ ಪ್ರಾಪ್ತವಾಗತಕ್ಕ ಪ್ರವಾಸದಿಂದಾಗಿ ಕಷ್ಟ ನಷ್ಟಾದಿಗಳುಂಟಾಗುವವು. ಅಂತೂ ತನುಮನಗಳಿಗೆ ಸುಖನೆಮ್ಮದಿಗಳಿಲ್ಲವೆಂದರೆ ತಪ್ಪಾಗದು ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಕ್ಷೇಮಕಾರಿಗಳಿವೆ.

ಕನ್ಯಾ—ಈ ವಾರದಲ್ಲಿ ನಿಮ್ಮ ವ್ಯವಹಾರದಲ್ಲಿ ಮಾತಿಗೆ ಮಾತು ಬೆಳೆದು ಕಲಹ ನಿಷ್ಠುರಗಳುಂಟಾಗುವ ಸಂಭವವಿದೆ. ಆದ್ದರಿಂದ ಆದಷ್ಟು ಮಿತಭಾಷಿಗಳಾಗಿರುವದೊಳಿತು. ನಿಮ್ಮ ಕಾರ್ಯಕಲಾಪಗಳ ವಿಚಾರವಾಗಿ ನೀವೇನೂ ಚಿಂತಿಸಬೇಕಾಗಿಲ್ಲ. ಎಲ್ಲವೂ ನಿಮ್ಮ ಬಯಕೆಯಂತೆ ಕೊನೆಗೊಳ್ಳುವವು, ಆತ್ಮೀಯರ ವಿಯೋಗ ದುಃಖಕ್ಕವಕಾಶವಿದೆ. ತಾ. 30. 31, 5 ಈ ದಿನಗಳು ಸುಖಲಾಭ ವಿಜಯದಾಯಿಗಳಾಗಿವೆ.

ತುಲಾ—ಈಗೀಗ ಸುಧಾರಿಸುವಿರಿ. ನಿಮ್ಮ ಭಾಗ್ಯ ಕರ್ಮಗಳಲ್ಲಿನ ಗ್ರಹರ ಬಲದಿಂದಾಗಿ ಪ್ರತಿಯೊಂದು ಉತ್ಸವಗಳೂ ನಿರಾತಂಕವಾಗಿ ಮುಂದರಿವವಲ್ಲದೆ ನಿರೀಕ್ಷಿಸಿ ಫಲವನ್ನು ಕೊಡಲಿವೆ. ಅತಿ ಏವ ನಿಮ್ಮ ಹೆಚ್ಚಿನ ತಾಪತ್ರಯಗಳು ದೂರವಾಗುವವು. ಆದರೂ ವ್ಯಯಗತನಾದ ಶನಿಯು ದೆಸೆಯಿಂದಾಗಿ ಕೆಲವೊಂದು ಅನರ್ಥಗಳು ಅನಿರೀಕ್ಷಿತವಾಗಿ ಸಂಭವಿಸಲಿವೆ. ಕಫ ಪ್ರಕೋಪದಿಂದ ಆರೋಗ್ಯಕ್ಕೂ ಧಕ್ಕೆಯುಂಟಾದೀತು. ವಾರಾದಿಯ 4 ದಿನಗಳು ಕ್ಷೇಮಕರ.

ವೃಶ್ಚಿಕ—ಧನಸುಖ ಸಪ್ತಮ ಪತಿಗಳ ಅನುಗ್ರಹವು ನಿಮಗಿಂದು ಲಭಿಸಿದ ಕಾರಣ ಹಣದ ಅಭಾವವು ಉಂಟಾಗದು. ಸುಖಕ್ಕೆ ಕೊರತೆಯಾಗದು. ನೌಕರಿ ವ್ಯಾಪಾರ ಮೊದಲಾದ ಉದ್ಯೋಗಗಳಲ್ಲಿ ಪರಿಶ್ರಮಕ್ಕೆ ತಕ್ಕುದಾದ ಫಲಲಾಭವಿದೆ. ಸೇವಕ ವರ್ಗದವರಿಗೂ ಈ ಕಾಲವು ಅನುಕೂಲವಾಗಿಯೇ ಇರುವದು. ಧಾತುಕ್ಷಯದಿಂದಾಗಿ ದೇಹದಲ್ಲಿ ದೌರ್ಬಲ್ಯ ಹೆಚ್ಚೀತು. ಹಣದ ನಿಮಿತ್ತ ಕಲಹವಾಗಲಿದೆ. ತಾ. 1ರಿಂದ 4ರ ವರೆಗಿನ ದಿನಗಳು ಸುಖದಾಯಿಗಳಿವೆ.

ಧನು—ಅದೃಷ್ಟವು ತೀರ ಹೀನ ಸ್ಥಿತಿಗೆ ಬಂದಿದೆ, ಯಾವ ಉದ್ಯೋಗದಲ್ಲೂ ಜಯದ ಚಿಹ್ನೆಗಳಿರಲಾರವು. ದೇಹಾರೋಗ್ಯವು ಕೆಡುವುದಲ್ಲದೆ ಶತ್ರುಜನರಿಂದಾಗಿ ಪೀಡೆಯೂ ಮಾನಸಿಕರೋಗವೂ ಅಧಿಕವಾಗಲಿವೆ. ಸ್ತ್ರೀಜನರಿಂದಾಗಿ ಅನಿಷ್ಟ, ಅಪವಾದ ಕಷ್ಟನಷ್ಟಾದಿಗಳ ಯೋಗವಿದೆ. ಗೃಹ ತಾಪತ್ರಯಗಳಧಿಕವಾಗುವವು. ಸತಿಪತಿಗಳೊಳು ನಿತ್ಯ ಜಗಳವಾದೀತು. ವಾರಾಂತ್ಯದ 3 ದಿನಗಳು ಅಷ್ಟೊಂದು ಅದಿಷ್ಟಕಾರಿಗಳಾಗಿ ಪರಿಣಮಿಸವು.

ಮಕರ—ದಿನೇ ದಿನೇ ನಿಮ್ಮ ಅದೃಷ್ಟವು ಹೀನ ದೆಸೆಯನ್ನೈದುತ್ತಾ ಬಂದು ಇಂದೀಗ ಅತೀವ ದುರ್ಬಲವಾಗಿದೆ. ಅಪ್ತೇಷ್ಟರ ಸಹಕಾರವು ನಿಮಗೆ ಲಭಿಸದು. ವ್ಯಾಪಾರ ವ್ಯವಹಾರ ನೌಕರಿ ಉದ್ಯೋಗಗಳಲ್ಲಿ ನಿರಾಶೆಯೇ ಮುಂದಾಗಿ ಕಾಣಲಿದೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆವುದು ಕಷ್ಟವೆನಿಸೀತು. ಆದರೂ ಗುರ್ವನು ಗ್ರಹವೊಂದು ನಿಮಗಿರುವುದರಿಂದ ಅಪಾಯಗಳನ್ನು ಉಪಾಯದಿಂದ ಪಾರುಗಾಣುವಿರಿ ತಾ. 30, 31, 5 ಇದ್ದುದರಲ್ಲಿ ಉತ್ತಮ.

ಕುಂಭ—ನಿಮ್ಮ ಬಯಕೆಯಿಂದ ಸಫಲವಾಗುವದು. ಎಂತಹ ಪ್ರಬಲರಾದ ಇದಿರಾಳಿಗಳನ್ನೂ ಧೈರ್ಯದಿಂದ ಇದಿರಿಸಿ ಪರಾಭವಗೊಳಿಸುವ ಆತ್ಮಶಕ್ತಿಯು ನಿಮಗೆ ಲಭಿಸಲಿದೆ. ವ್ಯಾಪಾರ ವ್ಯವಹಾರ ನೌಕರಿ ಮುಂತಾದ ಭಾಗಗಳಲ್ಲಿ ನಿರೀಕ್ಷೆಗಿಂತ ಅಧಿಕ ಫಲ ಹೊಂದುವಿರಿ. ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವ ನಿಮಗೆ ತಾ. 1, 2 ಅತೀವ ಅನುಕೂಲದ ದಿನಗಳಾಗಿವೆ.

ಮೀನ—ವಾತ ಪ್ರಕೋಪದಿಂದ ಅಂಗಪ್ರತ್ಯಂಗಗಳಲ್ಲಿ ನೋವು ತಲೆದೋರವುದು. ಸ್ಥಾನಚಲನೆ ಕಾರ್ಯಭಂಗ ಮಾನಸ್ತಾಪಾದಿಗಳಿಗವಕಾಶವಿದೆ. ಹೆಂಡತಿ ಮಕ್ಕಳ ಆರೋಗ್ಯ ಕೆಡುವದು. ವಿದ್ಯೋಪಜೀವಿವರ್ಗಕ್ಕೆ ಕಾಲವು ಅತೀವ ದುಃಖದಾಯಿಯಾಗಿ ಪರಿಣಮಿಸಲಿದೆ. ಆಕಸ್ಮಿಕ ಪರ್ಯಟನ ಮಾತುಮಾತಿಗೆ ಕಲಹ ಮುಂತಾದವುಗಳಿಂದ ದುಃಖಿತರಾದ ನಿಮಗೆ ತಾ. 30,31, 3, 4 ಸಂಪತ್ಸುಖದಾಯಿಯಾಗಿ ಪರಿಣಮಿಸಬಹುದು.

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ.** ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ|| **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ, ಕೂಡಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.**
ಜವಾಬಿಗಾಗಿ 2 ಆಣೆ ಸ್ಟ್ಯಾಂಪು ಕಳಿಸಿರಿ, ತಯಾರಕರು:—

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷ ಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 218/1953.

ಪುಟ್ಟಮ್ಮ ಸೆಟ್ಟಿ ಕೂಡಾ ವಾದಿ:
ಮುತ್ತಕ್ಕ ಸೆಟ್ಟಿ ಕೂಡಾ ಪ್ರತಿವಾದಿ.

ಈ ದಾವೆಯ 2ನೇ ಪ್ರತಿವಾದಿ ಬೊಗ್ಗ ಸೆಟ್ಟಿ ಲಿಂಗಿ ಸೆಟ್ಟಿ ಮಗ (3) ಸಾದು ಸೆಟ್ಟಿ ಗಾಳ್ಲಿ ಸೆಟ್ಟಿ ಮಗ (4) ಬಾಬಯ್ಯ ಸೆಟ್ಟಿ 1ನೆ ಪ್ರತಿವಾದಿ ಮುತ್ತಕ್ಕ ಸೆಟ್ಟಿ ಮಗ ಕಾರ್ಕಳ ತಾಲೂಕು ಹೆಬ್ರಿ ಗ್ರಾಮದ ಬಡಾಳಬೆಟ್ಟು ಕಂಬಳ ಗದ್ದೆ ಮನೆಯಲ್ಲಿರುವವರು- ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ-

ಪ್ರತಿವಾದಿರ ಕುಟುಂಬದ ಸ್ವಾಧೀನದಲ್ಲಿರುವ ಹೆಬ್ರಿ ಗ್ರಾಮದ S. No 76/1-2 ಮತ್ತು 78/1ನೇ ಸ್ಥಳಗಳ ಅಂಶಗಳ ಮತ್ತು ಅವುಗಳಲ್ಲಿರುವ ಮನೆ ಕಟ್ಟೋಣದ ಸಹಾ ಸ್ವಾಧೀನತೆ ವ ಹುಟ್ಟುವಳಿ ಕೂಡಾ ಕೇಳಿ ವಾದಿ ಹೂಡಿದ ಸದ್ರಿ ದಾವೆಯು ತಾರೀಕು 10-8-1953ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ದಾವೆಯಲ್ಲಿ ನಿಮಗೇನಾದರೂ ಉದಾಹರಿಸುವುದಿದ್ದರೆ ನೀವು ಸದ್ರಿ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು; ತಪ್ಪಿದರೆ ಸದ್ರಿ ಸಂಬ್ರವು ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿರುತ್ತದೆ.

K. Mahabala Hegde
ವಾದಿರ ವಕೀಲ್

ಕಾರ್ಕಳ: ತಾ. 23-7-53

Edited, Printed & Published By K. H. Shetty at the Navayuga Press, Udipi, S. India

Reg. No. M 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನ್ನಡ

ವಾ। ಚಂದಾ	5-12-0
6 ತಿಂಗಳಿಗೆ	3-0-0
ಬಿಡಿ ಪ್ರತಿಗೆ	0-2-0

ನವಯುಗ

6-8-1953

Vol 32 No 48 NAVAYUGA WEEKLY POST BOX NO 22 UDIPI ವರ್ಷ ೩೨ ವಾರ ೪೮

ಅಂತರಂಗ
ಶಿಕ್ಷಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

- ಮಧುಪರ್ಕ -

ಪ್ಲೇಟೋ ಸುಪ್ರಸಿದ್ಧ ಗ್ರೀಕ್ ದಾರ್ಶನಿಕ. ಅವರೊಡನೆ ಒಂದು ದಿನ ಮಾತನಾಡುತ್ತಿದ್ದಂತೆ ಮಿತ್ರರೊಬ್ಬರು ಪ್ರಶ್ನಿಸಿದರು—

"ನಿಮ್ಮ ಬಳಿಗೆ ಲೋಕದ ಮಹಾ ಮಹಾ ವಿದ್ವಾಂಸರೂ ಏನಾದರೊಂದು ಸಂಗತಿಯನ್ನು ಕಲಿಯಲು ಅಪೇಕ್ಷಿಸಿ ಬರುತ್ತಾರೆ. ನೀವು ಘನ ವಿದ್ವಾಂಸರೆಂದೂ ಮಹಾ ದಾರ್ಶನಿಕರೆಂದೂ ಅವರ ಅಭಿಪ್ರಾಯ. ಹೀಗಿರುತ್ತಾ, ನನಗೊಂದು ಸಂಗತಿ ತಿಳಿಯುವುದಿಲ್ಲ- ಬೇರೆಯವರಿಂದ ಏನಾದರೊಂದು ವಿಷಯ ಕಲಿತುಕೊಳ್ಳಲು ಒಳ್ಳೆಯ ಉತ್ಸಾಹ ಮತ್ತು ಅಪೇಕ್ಷೆಯನ್ನು ತೋರಿಸುತ್ತಾ, ನೀವು ಸದಾ ಸಿದ್ಧರಾಗಿರುವಿರಲ್ಲಾ! ಹೀಗೆ ಇತರರಿಂದ ಕಲಿಯುವ ಈ ಪದ್ಧತಿಯನ್ನು ಎಂದಿನ ವರೆಗೆ ಮುಂದರಿಸುವಿರಿ?"

"ಇನ್ನೊಬ್ಬರಿಂದ ಏನಾದರೊಂದು ವಿಷಯವನ್ನು ಕಲಿತುಕೊಳ್ಳುವುದು ನಾಚಿಕೆ ಎನ್ನುವ ಭಾವನೆಯುಂಟಾಗದಿರುವ ವರೆಗೆ—" ಎಂಬುದಾಗಿ ಪ್ಲೇಟೋ ಇದಕ್ಕೆ ಉತ್ತರವಿತ್ತರು.

ಕಲಿಯಲು ಅಪೇಕ್ಷಿಸುವಾತನಿಗೆ ಕಲಿತು ಮುಗಿಯುವುದಿಲ್ಲ!

ಕಲಿತು ಮುಗಿಯದು

ಅಮೇರಿಕನ್ ತಜ್ಞರು ವಿಮಾ ಪ್ರತಿನಿಧಿಗಳಿಗೆ ತರಬೇತಿ ಕೊಡುವಾಗ ಒಂದು ಸಂಗತಿಯನ್ನು ಒತ್ತಿಯೊತ್ತಿ ಸ್ಪಷ್ಟಗೊಳಿಸುವರು— ಈ ಲೋಕದಲ್ಲಿ ಯಾರೊಬ್ಬರಿಗೂ ಬೇಡಾದವನು ಯಾರೂ ಇಲ್ಲವೆಂಬುದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಈ ತಜ್ಞರ ಉಪದೇಶ. ವಿಮೆ ಇಳಿಸುವುದು ಸ್ವಹಿತ ಪರಹಿತಗಳೆರಡನ್ನೂ ಏಕಕಾಲದಲ್ಲಿ ಸಾಧಿಸುವ ಉಪಾಯವೆಂದೂ ಒಂದು ವೇಳೆ ಸ್ವಹಿತದ ಕಡೆಗೆ ಸಾಮಾನ್ಯ ನಾಗರಿಕರು ಮನಸ್ಸು ಕೊಡದಿದ್ದರೂ ಪರಹಿತದಿಂದುಂಟಾಗುವ ಶ್ರೇಯಸ್ಸನ್ನು ಅಗತ್ಯ ಲಕ್ಷಿಸುವರೆಂದೂ ಈ ತಜ್ಞರು ತಿಳಿದುಕೊಂಡಂತಿದೆ. ಹಾಗೆಯೇ ಒಬ್ಬರಿಲ್ಲದಿದ್ದರೆ ಇನ್ನೊಬ್ಬರ ಕುರಿತು ನಮ್ಮಲ್ಲಿ ಪ್ರತಿಯೊಬ್ಬರೂ ಆಸ್ಥೆ ಮತ್ತು ಕುತೂಹಲವನ್ನು ತೋರಿಸಿಯೇ ತೋರಿಸುತ್ತೇವೆಂದು ಅವರ ಎಣಿಕೆ ಇರಬಹುದು. ಇದೇ ಮಾತನ್ನು ಪ್ರಕೃತ ವಿಷಯಕ್ಕೆ ಅನ್ವಯಿಸಿ ಹೇಳುವುದಾದಲ್ಲಿ- ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿಯೊಬ್ಬನಿಂದಲೂ ಒಂದಲ್ಲ ಒಂದು ವಿಷಯವನ್ನು ಕಲಿತುಕೊಳ್ಳಲು ಸಾಧ್ಯವುಂಟು. ನಮ್ಮ ಅಭಿರುಚಿಯ ಪೂರಕವಾದ ಜ್ಞಾನವನ್ನು ನಾವು ಇನ್ನೊಬ್ಬನಲ್ಲಿ ಕಂಡುಕೊಳ್ಳಬಹುದು. ಅಥವಾ ನಮಗೆ ಏನೇನೂ ತಿಳಿದಿರದ ವಿಷಯದ ಜ್ಞಾನವೇ ಅವನಲ್ಲಿರುವುದನ್ನು ನಾವು ಕಂಡುಕೊಳ್ಳಬಹುದು. ಇದು ಹೇಗಿದ್ದರೂ ಇತರರೊಡನೆ ನಾವು ಮಾಡಿಕೊಳ್ಳುವ ಸಂಪರ್ಕದ ಪರಿಣಾಮವಾಗಿ ನಮ್ಮ ತಿಳುವಳಿಕೆಯನ್ನು ಬಹಳಷ್ಟು ಹೆಚ್ಚಿಸಿಕೊಳ್ಳಲು ಸಾಧ್ಯವಿದೆ ಎಂಬುದರಲ್ಲಿ ಪ್ರತಿವಾತಿಲ್ಲ.

ಆದರೆ, ಸಾಮಾನ್ಯವಾಗಿ ನಾವು ಜನರಲ್ಲಿ ಕಾಣುವುದೇನನ್ನು? ತಾನೇ ತಿಳಿದವನೆಂಬ, ಸರ್ವಜ್ಞನೆಂಬ ಹೆಮ್ಮೆ! ಬೇರೆಯವರಿಗಿಂತ ತನ್ನ ಜ್ಞಾನ ಸಂಪತ್ತು, ಅನುಭವ ಇತ್ಯಾದಿಗಳು ಮೇಲ್ಮಟ್ಟದವು ಎನ್ನುವ ಅಭಿಮಾನ, ಅಲ್ಲ, ಅಹಂಕಾರ! ಇಂಥವರು ಬೇರೆಯವರ ಅವಗುಣಗಳನ್ನು ಶಪಿಸುವುದು ಮತ್ತು ತೆಗಳುವುದಂತೂ ತೀರ ಸಹಜ. ಅದನ್ನು ತಪ್ಪೆಂದು ಹೇಳುವುದು ಬೇಡ. ಆದರೆ ಅದರೊಂದಿಗೆ ಇನ್ನೊಂದು ಅಪರಾಧವನ್ನು ಅವರು ಮಾಡುವರು—ಇತರರಲ್ಲಿರುವ ಒಳ್ಳೆಯ ಗುಣಗಳನ್ನು, ಉತ್ತಮ ಸಂಸ್ಕಾರವನ್ನು ಇವರು ಗ್ರಹಿಸದೆ ತಿರಸ್ಕಾರವನ್ನು ತೋರಿಸುತ್ತಾರೆ. ಇದು ಎಷ್ಟರಮಟ್ಟಿಗೆ ಕೆಟ್ಟದನ್ನುಂಟುಮಾಡುವುದೆಂದರೆ, ವ್ಯಕ್ತಿತ್ವದ ವಿಕಸನ ಮಾರ್ಗವನ್ನೇ ಈ ಪ್ರವೃತ್ತಿ ಪರೋಕ್ಷವಾಗಿ ನಿರ್ಬಂಧಿಸುತ್ತದೆ. ನಮ್ಮ ಜ್ಞಾನ, ಅನುಭವಗಳ ಭಂಡಾರವು ತುಂಬಿಕೊಂಡುದು ಬೇರೆ ಜನರೊಡನಾದ ಒಡನಾಟ ಮತ್ತು ಇತರರ ಕೂಡೆ ನಡೆಸಿದ ಸಂಪರ್ಕ ಹಾಗೂ ಸಾಧನೆಗಳ ಪರಿಣಾಮವೆಂಬುದನ್ನು ಈ ಮದಭರಿತರು ಮನಗಾಣುವುದು ಅತ್ಯಂತ ಆವಶ್ಯ. ಆಗ ಮಹಾ ಪರ್ವತವೆಂದು ತಿಳಿದುಕೊಂಡ ತಮ್ಮ ಜ್ಞಾನ, ಅನುಭವಾದಿಗಳು ಮಹಾಸಾಗರದ ಒಂದು ಬಿಂದು ಮಾತ್ರವೆಂಬ ಸತ್ಯದ ಅರಿವಾಗಬಲ್ಲುದು; ಮತ್ತು ಹೆಚ್ಚು ಹೆಚ್ಚು ತಿಳುವಳಿಕೆಯನ್ನು ಮಾಡಿಕೊಳ್ಳಲು ಪ್ರೇರಣೆಯನ್ನು ಅದು ಒದಗಿಸಬಲ್ಲುದು.

ಸ್ವಾಮಿ ಅಭೇದಾನಂದರು ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯ-ತಮ್ಮ ಅಸಾಧಾರಣ ಮೇಧಾಶಕ್ತಿಗಾಗಿ ಇವರು ತುಂಬ ಹೆಸರ್ಗೊಂಡಿರುವರು ತಮ್ಮದೊಂದು ಅಮೂಲ್ಯ ಬರಹದಲ್ಲಿ ಇವರು ವ್ಯಕ್ತಗೊಳಿಸಿದ ಅಭಿಪ್ರಾಯ ಮನೋಜ್ಞವಾಗಿದೆ- ಇಚ್ಛಾಶಕ್ತಿಯ ಪ್ರಾಬಲ್ಯದಿಂದಲೇ ನಮ್ಮೆಲ್ಲ ಕ್ರಿಯೆಗಳು ನಡೆಯುತ್ತವೆಂದು ಸ್ವಾಮೀಜಿ ಹೇಳುತ್ತಾರೆ. ಉದಾಹರಣೆಗೆ, ನಮಗೆ ನೋಡಬೇಕೆನ್ನುವ ಇಚ್ಛೆಯುಂಟಾದುದರಿಂದ ಕಣ್ಣುಗಳ ರಚನೆಯಾಯಿತೆಂದೂ ಕೇಳಬೇಕೆನ್ನುವ ಅಭಿಲಾಷೆಯುಂಟಾದುದರಿಂದ ಕಿವಿಗಳು ಬಂದುವೆಂದೂ ನಡೆಯುವ ಬಯಕೆಯ ಪರಿಣಾಮವಾಗಿ ಗಟ್ಟಿಮುಟ್ಟಾದ ಕಾಲುಗಳು ಕಾಣಿಸಿಕೊಂಡವೆಂದೂ ಸೃಷ್ಟಿ ಕ್ರಮದಲ್ಲಾದ ವಿಕಾಸಕ್ಕೆ ಇವರು ಅರ್ಥಹೇಳುತ್ತಾರೆ. ಹಾಗೆಯೇ ನಮಗೆ ಬೇರೊಬ್ಬನಿಂದ ಕಲಿಯುವ ಅಪೇಕ್ಷೆ ನಿಜವಾಗಿಯೂ ಇರುವ ಪಕ್ಷದಲ್ಲಿ-ನಾವು ಏನಾದರೊಂದು ಒಳ್ಳೆಯ ಸಂಗತಿಯನ್ನು ಅವನಲ್ಲಿ ಕಾಣುವುದು ಸಾಧ್ಯ. ಆದರೆ ಮೊದಲೇ ಹೇಳಿದಂತೆ ಈ ಇಚ್ಛೆ 'ನಿಜ' ವಾದುದಾಗಿರಬೇಕು: ಉಪೇಕ್ಷೆ ಮತ್ತು ಅನಾದರದ ಸ್ಥಾನದಲ್ಲಿ ಉತ್ಸುಕತೆ ಮತ್ತು ಶ್ರದ್ಧೆಗಳು ನಮ್ಮಲ್ಲಿರಬೇಕು. ಎಂದರೆ ನಾವು ಎಂಥವನಲ್ಲಿಯೂ ಉತ್ತಮಾಂಶಗಳನ್ನು ಕಂಡು ಗ್ರಹಿಸಬಲ್ಲೆವು. ನಮ್ಮ ಸಾಹಿತಿಗಳು ಅನುಭವ ಬಲವನ್ನು ವಿಸ್ತರಿಸಬೇಕೆಂದು ವಿಮರ್ಶಕರ ಪ್ರಾಮಾಣಿಕ ಅಭಿಪ್ರಾಯವಿರುತ್ತದೆ. ತತ್ಪರಿಣಾಮವಾಗಿ ಪ್ರತಿಯೊಂದು ಪಾತ್ರದಲ್ಲೂ ಜೀವಕಳೆಯನ್ನು ತುಂಬಲು ಸಾಧ್ಯವೆಂದೂ ಅನ್ಯಥಾ ಸಾಹಿತ್ಯ ಸೃಷ್ಟಿಯು ಚೈತನ್ಯ ಹೀನವಾಗುವುದೆಂದೂ ಅವರ ಹೇಳಿಕೆ. ಸಾಹಿತಿಯು ತನ್ನ ಸುತ್ತಣ ಪ್ರಪಂಚವನ್ನು ಅತ್ಯಂತ ನಿಕಟದಿಂದ, ಕುತೂಹಲ ಹಾಗೂ ಶ್ರದ್ಧೆಯಿಂದ ನಿರೀಕ್ಷಿಸಿದರೆ—ಆಗ ಬಹುಜನರ ನಡವಳಿಕೆಯ ಸೂಕ್ಷ್ಮಚಿತ್ರವನ್ನು ಕಾಣಬಲ್ಲನು. ಅಷ್ಟೇ ಜನರ ಮನದೊಳಗಿನ ಹಾಗೂ ಅವರ ಚಟುವಟಿಕೆಗಳ ಸ್ಪಷ್ಟ ಪರಿಚಯವನ್ನು ಮಾಡಿಕೊಳ್ಳಬಲ್ಲನು. ಈ ಅತ್ಯಮೂಲ್ಯ ಶಕ್ತಿಯನ್ನು ಪಡೆದವನಿಂದಲೇ ಬಹುಮುಖವಾದ ಬಹುಜನಪ್ರಿಯವಾದ ವಾಸ್ತವವಾದ ಅಮರ ಸಾಹಿತ್ಯ ಸೃಷ್ಟಿಯು ಸಾಧ್ಯ.

ನಾವು ಬೇರೆಯವರಿಂದ ಕಲಿಯುವ ರೀತಿ ಸರ್ವಸಾಧಾರಣವಾಗಿ ಹೀಗಿರುತ್ತದೆ. ಇದನ್ನು ಸ್ವಾಧ್ಯಯನವೆಂದು ಕರೆದರೂ ತಪ್ಪಿಲ್ಲ. ಇದರಲ್ಲಿ ಸಿದ್ಧಿಯನ್ನು ಪಡೆದುಕೊಳ್ಳಲು ನಮ್ಮಲ್ಲಿ ಉನ್ನತಮಟ್ಟದ ಸಂಸ್ಕಾರವಿರಬೇಕಾದುದು ಅಗತ್ಯ. ಮೊನ್ನೆ ಮೊನ್ನೆ ಉಡುಪಿಯ ಸುಪ್ರಸಿದ್ಧ ವಕೀಲರೊಬ್ಬರು ಇಂಗ್ಲೆಂಡು ಹಾಗೂ ಪಶ್ಚಿಮ ಯುರೋಪಿನ ಪ್ರವಾಸವನ್ನು ಮಾಡಿ ಬಂದರು. ಕೆಲವು ದಿನಗಳ ಮುಂಚೆ ಕರ್ನಾಟಕದ ಸಾಹಿತಿಯೊಬ್ಬರು ಅದೇ ರೀತಿ ಪರ್ಯಟನವ ಮಾಡಿಬಂದರು. ಇಬ್ಬರೂ ತಂತಮ್ಮ ಅನುಭವಗಳನ್ನು ವಿವರಿಸಿ ಭಾಷಣವ ಮಾಡಿದಾಗ— ಅವರ ದೃಷ್ಟಿಭೇದ ಸ್ವಯಂವ್ಯಕ್ತಗೊಂಡಿತು. ಅವರವರ ಅಭಿರುಚಿ ಹಾಗೂ ತಿಳುವಳಿಕೆಯ ಮಟ್ಟವನ್ನು ಹೊಂದಿ [illegible] ಅವರ ಅನುಭವದಲ್ಲೂ ತಾರತಮ್ಯವನ್ನು ಶ್ರೋತೃವೃಂದ ಕಂಡಿತು. ಸಾವಿರಾರು ರೂಪಾಯಿಗಳ ವೆಚ್ಚದಿಂದ ಅವರಲ್ಲಿ ಒಬ್ಬೊಬ್ಬರೂ ಒಂದೊಂದು ನಿಜಚಿತ್ರದ ಅಂಶವನ್ನು ಮಾತ್ರ ತಿಳಿದುಕೊಂಡರೆ ನಾವು ಅವರ ಭಾಷಣಾದಿಗಳ ಮೂಲಕ ಇಬ್ಬರ ಅನುಭವವನ್ನೂ ಗ್ರಹಿಸಿಕೊಂಡು ಅಷ್ಟರಮಟ್ಟಿಗೆ ಜ್ಞಾನ ವರ್ಧಿಸಿಕೊಂಡೆವು. ಸ್ವಾಧ್ಯಾಯ ಮತ್ತು ಪ್ರಪಂಚದೊಡನೆ ಸೇರಿಕೊಂಡು ಕಲಿಯುವುದರಲ್ಲಿರುವ ಭೇದವಿದೇ. ಒಂದನೆಯದು ಹೆಚ್ಚಾಗಿ ಏಕಮುಖಾಭಿರುಚಿಯನ್ನು ನಿರ್ದೇಶಿಸುತ್ತವೆ; ಎರಡನೆಯ ಮಾರ್ಗ ಬಹುಮುಖಜ್ಞಾನವನ್ನು ತಂದುಕೊಡುತ್ತದೆ. ಇವೆರಡರ ಸುಂದರ ಸಮನ್ವಯದಿಂದ ನಾವು ಪ್ರತಿಭಾನ್ವಿತ ವ್ಯಕ್ತಿತ್ವವನ್ನು ಪಡೆದುಕೊಳ್ಳಲು ಸಾಧ್ಯ.

ಲೋಕದ ಬೇರೆ ಜನರೊಡನೆ ಸಂಪರ್ಕವಿಟ್ಟುಕೊಳ್ಳುವುದರಿಂದ ನಮಗೆ ಹೊಳೆಯದ ಅನೇಕಾನೇಕ ಸಂಗತಿಗಳು ಮನವರಿಕೆಯಾಗುತ್ತವೆ; ಸುಪ್ತ ಸಂಶಯಗಳಿಗೆ ಸಮಾಧಾನ ದೊರೆಯುತ್ತದೆ; ನಮ್ಮದೊಂದು ವಿಶ್ವಾಸ ಇನ್ನಷ್ಟು ದೃಢಗೊಳ್ಳುತ್ತದೆ. ದೃಷ್ಟಿ ವೈಶಾಲ್ಯದೊಡನೆ

(೧೦ನೇ ಪುಟ ನೋಡಿರಿ)

ಅಗೋಸ್ತು 15

ಭಾರತ ಸ್ವಾತಂತ್ರ್ಯ ದಿನೋತ್ಸವ!
ಈ ಪರ್ವ ದಿನದ ಆಚರಣೆಯ ನೆನಪಿಗಾಗಿ

ನವಯುಗದ
ಸ್ವಾತಂತ್ರ್ಯ ದಿನೋತ್ಸವ ಸಂಚಿಕೆಯು ವಿಶಿಷ್ಟ ತರದಲ್ಲಿ
ತಾ. 13-8-53ಕ್ಕೆ ಪ್ರಕಟವಾಗುವುದು.

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನಿತ್ತು
ನೇರವಾಗ ಬೇಕಾಗಿ ವಿನಂತಿ.

ಮೆನೇಜರ್, ನವಯುಗ, ಉಡುಪಿ

ವಿದೇಶೀ ವಿನಿಮಯ ಗಳಿಸುವ ಗೇರುಬೀಜ

ನಮ್ಮ ನಿತ್ಯೋಪಯೋಗದಲ್ಲಿ ಯಥೇಷ್ಟ ಬಳಸಿಕೊಳ್ಳಬಲ್ಲ ಅತ್ಯುಪಯುಕ್ತ ವಸ್ತು.

ಶ್ರೀಮಾನ್ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಓದಿದವರಿಗೆ ಕೋಟದ ಸುತ್ತು ಮುತ್ತಲೂ ಹೇರಳವಾಗಿ ಗೋವೆ ಬೀಜದ ಮರಗಳಿರುವ ಸಂಗತಿ ನೆನಪಿನಲ್ಲಿದ್ದೀತು. ಪುಟ್ಟ ಮಗು ರಾಮನಿಗೆ "ತೊಡು"ವಾದರೆ ತಿನ್ನಲಿಕ್ಕೆಂದು ಗೋವೆ ಹಣ್ಣಿನ ಹಪ್ಪಳವನ್ನು ತಾಯಿ ನಾಗವೇಣಿ ಮತ್ತು ಅಜ್ಜಿ ಸರಸೋತಿ ಮಾಡಿಟ್ಟುಕೊಳ್ಳುವುದುಂಟು. ಗೆಣಸು ಅಥವಾ ಹಲಸಿನ ಹಪ್ಪಳವನ್ನು ಮಾಡುವಷ್ಟು ಇವರಿಗೆ ಅನುಕೂಲವಿಲ್ಲ-ಹಾಗಾಗಿ ಅಗ್ಗದ ಗೋವೆ ಹಣ್ಣಿನ ಹಪ್ಪಳವನ್ನೇ ರಾಮನಿಗೆ ತಿನ್ನಲು ಕೊಟ್ಟು ಅವರು ತೃಪ್ತಿಯನ್ನೂ ಸಮಾಧಾನವನ್ನೂ ತಂದುಕೊಳ್ಳಬೇಕಾಗುತ್ತದೆ. ಗೋವೆ ಹಣ್ಣು (ಗೇರು ಹಣ್ಣು) ಹೀಗೆ ಹಪ್ಪಳ ಮಾಡಿಡಲಿಕ್ಕಷ್ಟೇ ಅಲ್ಲ- ಕಾಯಿಪಲ್ಲೆಯಾಗಿಯೂ ಉಪಯೋಗಿಸಲ್ಪಡುತ್ತದೆ. ಮಾವಿನ ಕಾಯಿ, ಹೆಬ್ಬಲಸು ಮುಂತಾದುವನ್ನು ನೀರಿನಲ್ಲಿ ಹಾಕಿಟ್ಟುಕೊಂಡು, ಮಳೆಗಾಲದಲ್ಲಿ ಉಪಯೋಗಿಸುವಂತೆ ಗೇರುಹಣ್ಣನ್ನೂ ನಾವು ಬಳಸುತ್ತೇವೆ. ಮಾವಿನ ಹಣ್ಣಿನಷ್ಟು ರುಚಿ ಮತ್ತು ಜನಪ್ರಿಯತೆಯನ್ನು ಪಡೆಯದಿದ್ದರೂ ಗೇರು ಹಣ್ಣನ್ನು ತಿಂದು ಸಂತೋಷಪಡುವ ಹುಡುಗ-ಹುಡುಗಿಯರೇನು ಕಡಿಮೆ ಇಲ್ಲ. ಗೇರು ಹಣ್ಣು ಸ್ವಲ್ಪ ಒಗರಾಗಿರುತ್ತದೆ, ಆದುದರಿಂದ ಮಾವಿನಂತೆ, ಸ್ವಾದಿಷ್ಟವಾಗಿರುವುದಿಲ್ಲ. ಗೇರು ಹಣ್ಣಿನಲ್ಲಿ ರಾಸಾಯನಿಕ ದ್ರವ್ಯವಿದೆ ಎಂದು ತಿಳಿದು ಬಂದಿದೆ. ಇವನ್ನು ಭಟ್ಟಿ ಇಳಿಸಿ ತಯಾರಿಸಿದ ರಸವನ್ನು ವಾಂತಿಭೇದಿಯು ಅತಿಯಾಗಿ ಮುಂದುವರಿದ ಅವಸ್ಥೆಯಲ್ಲಿ ಕೊಟ್ಟರೆ, ಅದು ಮೂತ್ರಾಶಯದ ಮೇಲೆ ಆರೋಗ್ಯಕರವಾದ ಪರಿಣಾಮವನ್ನುಂಟುಮಾಡುವುದು. ಸ್ಪೈನ್, ಪೋರ್ಚುಗಲ್ ಮುಂತಾದ ದೇಶಗಳಿಂದ ಮದ್ದಿಗೋಸ್ಕರ ತರಿಸುವ ಮದ್ಯಕ್ಕಿಂತಲೂ ಗೇರು ಹಣ್ಣಿನ ಮದ್ಯವು ತು-ಬ ಪ್ರಯೋಜನಕಾರಿಯಾಗಿ ಕಂಡುಬಂದಿದೆ.

❖

ನಮಗೆ ತೀರ ಸಾಮಾನ್ಯವಾದ ಗೇರು ಹಣ್ಣು ಇಷ್ಟೆಲ್ಲ ರೀತಿಯಲ್ಲಿ ಉಪಯೋಗಕ್ಕೆ ಬರುತ್ತಿರುವುದನ್ನು ಕಂಡು ಬಹುಶಃ ಆಶ್ಚರ್ಯವೇ ಉಂಟಾದೀತು. ಇದಕ್ಕಿಂತಲೂ ಮಹತ್ವದ ಸಂಗತಿ ಬೇರೊಂದಿದೆ— ಗೇರು ಬೀಜವು ನಮ್ಮ ದೇಶದಲ್ಲಿ ಡಾಲರು ಸಂಪಾದಿಸಿ ಕೊಡುವ ಪ್ರಧಾನ ಸ್ರೋತಗಳಲ್ಲೊಂದೆಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ ಗೇರು ಮಂಪನ್ನು ಉಪೇಕ್ಷೆಯಿಂದ ನೋಡುವ ಕಾಲ ಈಗ ಕಳೆದುಹೋಗಿ-ಸಾಬು, ಮೆಣಸಿನ ಕಾಳುಗಳಂತೆಯೇ ಗೇರುಬೀಜದ ವ್ಯವಸಾಯ ಅಥವಾ ಕೈಗಾರಿಕೆಗೆ ಮಹತ್ವವನ್ನು ಕೊಡಬೇಕಾಗುವುದು. ಬೇರೆ ಉದ್ದಿಮೆಗಳೊಡನೆ ತುಲನೆಮಾಡಿದರೆ ಗೇರು ಬೀಜದ ಉದ್ಯೋಗವು ಇನ್ನೂ ಸಣ್ಣ ಕೈಗಾರಿಕೆಯಾಗಿ ಉಳಿದಿದೆ. ಆದರೆ ಇಷ್ಟು ಅಲ್ಪಾವಧಿಯಲ್ಲಿ ಗೇರುಬೀಜದ ಉದ್ಯೋಗವು ಗಳಿಸಿದ ಸ್ಥಾನ ಮಹತ್ವ ಅನ್ಯಾದೃಶವಾದುದು. ದುಷ್ಕರವಾದ ವಿದೇಶ ವಿನಿಮಯವನ್ನು ಸಂಪಾದಿಸಿಕೊಡುವಲ್ಲಿ ಗೇರುಬೀಜಕ್ಕೆ ಮೂರನೆಯ ಸ್ಥಾನವುಂಟು. ಹೀಗಿದ್ದರೂ ಈ ಉದ್ದಿಮೆಯ ಸಂಬಂಧದಲ್ಲಿ ಯಾವುದೇ ರೀತಿಯ ಮಾಹಿತಿಯನ್ನು ಕೂಡಿಸುವ ಪ್ರಯತ್ನಗಳು ನಡೆದೇ ಇರಲಿಲ್ಲ. ಆದರೆ ಮೊನ್ನೆ ಮೊನ್ನೆ ಯುನೈಟೆಡ್ ಕಮರ್ಶಿಯಲ್ ಬೇಂಕಿನ ಸಂಖ್ಯಾಶಾಸ್ತ್ರ ವಿಭಾಗದವರು ಈ ವಿಷಯದಲ್ಲಿ ಆಸ್ಥೆವಹಿಸಿ ಅತ್ಯಂತ ಉಪಯುಕ್ತವಾದ ಕೆಲವು ಸಂಗತಿಗಳನ್ನು ಸಂಗ್ರಹಿಸಿ, ಪ್ರಕಟಿಸಿರುವರು. ಅದಕ್ಕನುಸಾರವಾಗಿ, ಗೇರು ಮರವು ನಮ್ಮ ದೇಶಕ್ಕೆ ಸುಮಾರು ೪೦೦ ವರ್ಷಗಳಷ್ಟು ಹಿಂದೆ ಪೋರ್ಚುಗೀಜ ಮಿಶನರಿಗಳ ಮೂಲಕ ಬಂದಿತು. ಅದ ಕಾರಣವೇ ಗೋವೆ ಮರವೆಂದು ನಮ್ಮ ಜಿಲ್ಲೆಯಲ್ಲಿ ಗೇರು ಕರೆಯಲ್ಪಡುತ್ತಿದೆ. ಮುಖ್ಯವಾಗಿ ಮಧ್ಯ ಅಮೇರಿಕಾ, ಪಶ್ಚಿಮ ಹಿಂದೀ ದ್ವೀಪಗಳು, ದಕ್ಷಿಣ ಅಮೇರಿಕಾದ ಬ್ರೆಜೀಲುಗಳಲ್ಲಿ ಗೇರು ಮರವು ಬೆಳೆಯುತ್ತದೆ. ಈಗಲಂತೂ ಭಾರತ, ಇಂಡೋಚೀಣಾ, ಮಲಯಾ, ಫಿಲಿಪ್ಪೈನ್ಸ್ ದ್ವೀಪ ಸಮುದಾಯ, ಮಡಗಾಸ್ಕರ್, ಪೋರ್ಚುಗೀಸ ಹಾಗೂ ಬ್ರಿಟಿಷ್ ಪೂರ್ವ ಆಫ್ರಿಕಾಗಳಲ್ಲಿ ಗೇರು ಮರವು ವಿಶೇಷವಾಗಿ ಬೆಳೆಯುತ್ತಿದೆ.

❖

ನಮ್ಮ ದೇಶದಲ್ಲಿ ಉತ್ಪಾದಿತವಾಗುವ ಗೇರುಬೀಜದಲ್ಲಿ೭೦% ಪಶ್ಚಿಮ ಕರಾವಳಿಯ ಪ್ರದೇಶದಲ್ಲಿಯೇ ಬೆಳೆಯುತ್ತದೆ. ಮುಂಬಯಿಂದ ತೊಡಗಿ, ಕನ್ಯಾಕುಮಾರಿಯವರೆಗೂ ನಾವು ಗೇರು ಮರಗಳನ್ನು ಕಾಣಬಲ್ಲೆವು. "ಎರಡು ಧ್ರುವ" ಎಂಬ ಕಾದಂಬರಿಯಲ್ಲಿ ಮಹಾರಾಷ್ಟ್ರದಲ್ಲಿ ಗೋಡಂಬಿ(ಗೇರು)ಒಡೆಯುವ ಯಂತ್ರದ ಸೃಷ್ಟಿಮಾಡುವ ಪ್ರಸಂಗದ ವರ್ಣನೆಯನ್ನು ಕಾಣುತ್ತೇವೆ. ಆದರೆ ರತ್ನಗಿರಿ ಮುಂತಾದ ಮಹಾರಾಷ್ಟ್ರ ಪ್ರದೇಶಕ್ಕಿಂತಲೂ- ದಕ್ಷಿಣ ಕನ್ನಡ, ಮಲಬಾರು ಮತ್ತು ತಿರುಕೊಚ್ಚಿಗಳೇ ಗೇರು ಬೀಜದ ಕೈಗಾರಿಕೆಗೆ ಹೆಸರಾಗಿವೆ. ಪಡು ಕಡಲ ತೀರವನ್ನು ಬಿಟ್ಟರೆ, ವಿಂಧ್ಯ ಪರ್ವತಾವಳಿಯ ದಕ್ಷಿಣಕ್ಕೆ ಪೂರ್ವ ಪಶ್ಚಿಮ ತೀರದಲ್ಲಿ ಗೇರು ಮರವು ಬೆಳೆಯುತ್ತದೆ. ಫೆಬ್ರುವರಿ ತಿಂಗಳಿಂದ ಮೇ ಅಥವಾ ಜೂನ್ ತಿಂಗಳ ವರೆಗೆ ಗೇರು ಬೀಜ ಸಂಗ್ರಹಿಸುವುದು ಕ್ರಮ. ಚೆನ್ನಾಗಿ ಬೆಳೆದ ಗೇರು ಮರವು ಒಂದು ನೂರು ರಾತಲು ಗೇರುಬೀಜವನ್ನು ವರ್ಷವೊಂದಕ್ಕೆ ನೀಡಬಲ್ಲುದು. ಆದರೆ ಸರ್ವಸಾಧಾರಣವಾಗಿ ಪಶ್ಚಿಮ ತೀರದಲ್ಲಿ ಪ್ರತಿಯೊಂದು ಮರದ ಸರಾಸರಿ ಉತ್ಪಾದನೆ ೨೦ ರಾತಲು; ಮದ್ರಾಸಿನ ಪೂರ್ವ ಜಿಲ್ಲೆಗಳಲ್ಲಿ ೩೦ ರಾತಲು; ಹಾಗೂ ಒಡಿಸಾದಲ್ಲಿ ೪೦ ರಾತಲು. ಗೇರುಬೀಜವು ರುಚಿಕರವಾದ ಆಹಾರ ವಸ್ತುವೆಂದು ಸಿದ್ಧಗೊಂಡಿದೆ, ಬಾದಾಮಿ ಮತ್ತು ಗೇರು ಬೀಜದ ಪೋಷಕಾಂಶಗಳ ತುಲನೆ ಮಾಡಿದರೆ ಇದು ಸ್ಪಷ್ಟವಾಗುತ್ತದೆ-

	ಗೇರುಬೀಜ	ಬಾದಾಮಿ
	%	%
ನೀರು	೧೬	೬
ಸಾರಜನಕ	೧೮	೨೪
ಕೊಬ್ಬು	೫೭.೪	೫೪
ಅಂಗಾರ	೫.೩	೧೦
ನಾರು	೦.೯	೩
ಬೂದಿ	೨.೪	೩
ಆಹಾರಾಂಶ	೧೯೪	೨೦೫
ಪೋಷಕಾಂಶ	೭.೬೩	೫.೫೯

ಇವನ್ನು ನೋಡಿದರೆ, ಗೇರುಬೀಜವನ್ನು ಮೆಣಸು ಸೇರಿಸಿದ ಹಿಟ್ಟಿನಲ್ಲಿ ಕಲಸುವುದೂ ಸಕ್ಕರೆಯ ಕೋಟನ್ನು ಹಾಕುವುದೂ ಅಗತ್ಯವಿಲ್ಲ-ಹೀಗೆಯೇ ಬಾಯಿ ಚಪ್ಪರಿಸಿಕೊಂಡು ನಾವು ಗೇರುಬೀಜವನ್ನು ತಿನ್ನಬಲ್ಲೆವೆಂದು ಸ್ಪಷ್ಟವಾಗುವುದು. ನಿಜ ಹೇಳಬೇಕೆಂದರೆ, ಬಾದಾಮಿಗಿಂತಲೂ ಹೆಚ್ಚಾಗಿ ಪಾಶ್ಚಾತ್ಯರು, ಈಗ ಗೇರು ಬೀಜವನ್ನು ತಮ್ಮ ಊಟ—ತಿನಿಸುಗಳಲ್ಲಿ ಉಪಯೋಗಿಸುತ್ತಿರುವರು. ಗೇರು ಬೀಜವನ್ನು ಸಾಮಾನ್ಯ ಪ್ರಮಾಣದಲ್ಲಿ ತಿಂದರೆ, ಅದು ಜೀರ್ಣವಾಗುವುದಲ್ಲದೆ, ಯೋಗ್ಯ ಬೆಳವಣಿಗೆಯನ್ನೂ ಮಾಡುವುದು. "ಅ" ವರ್ಗದ ಜೀವಾತು ಇದರಲ್ಲಿ ಯಥೇಷ್ಟವಾಗಿದೆ. ಆದರೆ ನಮ್ಮ ಜನರು ಮಾತ್ರ ಗೇರುಬೀಜವನ್ನು ಉಪಯೋಗಿಸಿಕೊಳ್ಳದೆ-ವಿದೇಶಗಳಿಗೆ ನಿರ್ಯಾತ ಮಾಡುವುದರಲ್ಲಿಯೇ ಕ್ಷೇಮ ಕಂಡಿದ್ದಾರೆ. ಈ ಉದ್ದೇಶದಿಂದ ಗೇರು ಬೀಜವನ್ನು ಒಡೆದು ಅದರೊಳಗಿನ ತಿನ್ನುವ ತಿರುಳನ್ನು ತೆಗೆಯಲು ಕಾರ್ಖಾನೆಗಳನೇಕ ಸ್ಥಾಪನೆ ಗೊಂಡಿವೆ. ಭಾರತದಲ್ಲಿ ಒಟ್ಟು ೧೬೪ ಕಾರ್ಖಾನೆಗಳಿವೆಯೆಂದೂ ಅವುಗಳಲ್ಲಿ ೧೦೦ ತಿರುಕೊಚ್ಚಿಯ ಕ್ವಿಲೋನು ನಗರದ ಆಸುಪಾಸಿನಲ್ಲಿಯೇ ಇವೆಯೆಂದೂ ತಿಳಿದುಬಂದಿದೆ. ಉಳಿದವುಗಳು ಮಂಗಳೂರು, ತಂಜಾವೂರು ಮುಂತಾದ ಕೇಂದ್ರಗಳಲ್ಲಿವೆ. ಈ ಎಲ್ಲ ಕಾರ್ಖಾನೆಗಳಿಗೆ ಬೇಕಾಗುವಷ್ಟು ಗೇರು ಬೀಜವು ಪ್ರಾಯಶಃ ನಮ್ಮ ದೇಶದಲ್ಲಿ ಬೆಳೆಯುವುದಿಲ್ಲ. ಆದುದರಿಂದ ವರ್ಷ ವರ್ಷವೂ ಪೂರ್ವ ಆಫ್ರಿಕಾ ಮುಂತಾದೆಡೆಗಳಿಂದ ಗೇರುಬೀಜವನ್ನು ನಮ್ಮ ಕಾರ್ಖಾನೆಗಳು ಆಮದು ಮಾಡಿಕೊಳ್ಳುತ್ತವೆ. ಗೇರುಬೀಜಗಳ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನವೂ ನಡೆದಿಲ್ಲವೆನ್ನುವುದಕ್ಕೆ ಆಯಾತದಪ್ರಮಾಣ ಹೆಚ್ಚುತ್ತಾ ಹೋಗುವುದೇ ಸಾಕ್ಷಿ. ೧೯೩೯ರಲ್ಲಿ ಭಾರತವು ೩೭೦೦೦ ಟನ್ನು ಗೇರು ಬೀಜವನ್ನು ಆಯಾತ ಮಾಡಿಕೊಂಡಿದ್ದರೆ, ೧೯೫೨ರಲ್ಲಿ ಈ ಪ್ರಮಾಣ ೫೫೦೦೦ ಟನ್ನುಗಳಿಗೇರಿದೆ.

❖

ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯದಿರುವುದಕ್ಕೆ ಸಬಲ

(೧೧ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತದ ಭೌಗೋಲಿಕ ಹಿರಿಮೆ

ಜಗತ್ತಿನಲ್ಲಿ ಪ್ರಾಬಲ್ಯಕ್ಕೆ ಬರಲು ತಕ್ಕುದೆನಿಸಿದ ವೈಶಿಷ್ಟ್ಯ

ಭಾರತವನ್ನು ದೂರಪ್ರಾಚ್ಯದಲ್ಲಿ ಪ್ರಜಾಪ್ರಭುತ್ವದ ಭದ್ರಕೋಟೆ ಎಂಬುದಾಗಿ ಪ್ರಶಂಸಿಸುವವರನ್ನು ನಾವಿಂದು ಕಾಣುತ್ತೇವೆ. ಮುಖ್ಯವಾಗಿ ಈ ಪ್ರಶಂಸಕರು ಅಮೇರಿಕನ್ ಅಥವಾ ಬ್ರಿಟಿಷ್ ಸಂದರ್ಶಕರಾಗಿದ್ದಾರೆ. ಪ್ರಜಾಪ್ರಭುತ್ವ ರಾಜ್ಯಪದ್ಧತಿಯಲ್ಲಿ ಎಷ್ಟು ಶ್ರದ್ಧೆ ಇದೆಯೋ ಅಷ್ಟೇ ತಿರಸ್ಕಾರ ಕಮ್ಯೂನಿಸ್ಟ್ ಆಳ್ವಿಕೆಯ ಮೇಲೆ ಇವರಿಗಿದೆ. ಆದುದರಿಂದ ದೂರ ಪ್ರಾಚ್ಯದಲ್ಲಿ ಚೀಣಾ, ಇಂಡೋಚೀಣಾಗಳಲ್ಲಿ ಪ್ರಾಬಲ್ಯಕ್ಕೆ ಬರುತ್ತಿರುವ ಕಮ್ಯೂನಿಸಮನ್ನು ಹತ್ತಿಕ್ಕಲು ಭಾರತದಲ್ಲಿ ಇನ್ನೂ ನೆಲೆಯೂರುತ್ತಿರುವ ಪ್ರಜಾಪ್ರಭುತ್ವದ ಶಕ್ತಿಯನ್ನು ಉಪಯೋಗಿಸಬಹುದೆಂದು ಅಮೇರಿಕನ್ನರು ಎಣಿಸಿರುತ್ತಿದೆ. ಭಾರತವನ್ನು ಭದ್ರಕೋಟೆಗೆ ಹೋಲಿಸಿ ಈ ಜನರು ಪ್ರಶಂಸಾ ವಾಕ್ಯಗಳನ್ನು ಉಚ್ಚರಿಸುವಾಗ-ಅದರಲ್ಲಿ ಸ್ವಾರ್ಥಭಾವನೆಯೂ ಅಂತರ್ಗತವಾಗಿದೆ ಎಂಬುದನ್ನು ನಾವು ಗ್ರಹಿಸಬಹುದು. ಆದರೆ ಒಂದು ಮಾತು ಮಾತ್ರ ಸತ್ಯ—ಭಾರತವು ಭೌಗೋಲಿಕ ಸ್ಥಾನ ಮಹತ್ವವನ್ನು ಪಡೆದಿರುವುದರಿಂದ, ನಮ್ಮ ಚಟುವಟಿಕೆಗಳ ಪರಿಣಾಮವು ಸಾಕಷ್ಟು ಹೆಚ್ಚಾಗಿ, ಪ್ರಪಂಚದ ರಾಜಕಾರಣದ ಮೇಲೂ ಇತರ ಸಂಗತಿಗಳ ಮೇಲೂ ಆಗುತ್ತದೆ. ಇಂದು ಒಂದು ದೇಶದ ಸ್ಥಾನಮಾನವನ್ನು ಗೊತ್ತುಮಾಡುವಾಗ ರಾಜಕೀಯದ ಅಳತೆಗೋಲನ್ನು ಉಪಯೋಗಿಸಿಕೊಳ್ಳುವುದು ವಾಡಿಕೆಯಾಗಿದೆ--ಈ ಮಾನ ದಂಡದಿಂದ ಅಳೆದರೆ ಭಾರತವು ಜಗತ್ತಿನಲ್ಲಿ ದೊಡ್ಡ ಸ್ಥಾನವನ್ನು ಪಡೆಯುವುದು ಕಷ್ಟಸಾಧ್ಯವೆಂದು ತೋರುತ್ತದೆ. ರಶಿಯಾ—ಅಮೇರಿಕೆಗಳಿಗೇ ಆ ಮರ್ಯಾದೆ ಸಲ್ಲಬೇಕು. ಆದರೆ, ಒಂದು ದೇಶದ ರಾಜಕೀಯ ಪ್ರಗತಿ ಹಾಗೂ ಪ್ರಾಬಲ್ಯಕ್ಕೆ ಪೋಷಕವಾದ ಇತರ ಹತ್ತು ಹಲವು ಸಂಗತಿಗಳು ಇವೆಯೆಂದೂ, ಅವುಗಳನ್ನು ಲೆಕ್ಕ ತೆಗೆದುಕೊಂಡರೆ ಭಾರತದ ಸ್ಥಾನಮಾನ ತುಂಬ ಮಹತ್ವದ್ದೆಂದೂ ಮನವರಿಕೆಯಾಗಬಲ್ಲುದು.

❁

ಪ್ರಪಂಚದಲ್ಲಿ ರಾಷ್ಟ್ರದ ಸ್ಥಾನಮಾನವನ್ನು ನಿರ್ಧರಿಸುವಾಗ ರಾಜಕೀಯ ದೃಷ್ಟಿಯೊಂದನ್ನಲ್ಲದೆ-ಆ ರಾಜಕೀಯ ಪ್ರಾಬಲ್ಯವನ್ನು ಸಂಪಾದಿಸಿಕೊಟ್ಟ ಇತರ ಅಂಶಗಳು-ಮುಖ್ಯತಃ ಪ್ರಾಕೃತಿಕ ಸ್ವರೂಪ ನೈಸರ್ಗಿಕ ಸಂಪತ್ತು, ಆರ್ಥಿಕ ಸಾಮರ್ಥ್ಯ, ಜನಬಲ ಇತ್ಯಾದಿ - ಗಣನೆಗೆ ತೆಗೆದುಕೊಳ್ಳಲ್ಪಡಬೇಕಾಗುವುದು. ಜಗತ್ತಿನಲ್ಲಿ ಯಾವ ದೇಶವೂ ತನ್ನ ಪ್ರಾಕೃತಿಕ ಸಂಪತ್ತಿನ ಸದುಪಯೋಗ ಮಾಡಿಕೊಳ್ಳದೆ ಪ್ರಗತಿಯನ್ನು ಸಾಧಿಸಿರುವುದಿಲ್ಲ. ಅಮೇರಿಕಾ ದೇಶದ ಇಂದಿನ ಐಶ್ವರ್ಯಕ್ಕೆ ಅಲ್ಲಿರುವ ಪ್ರಾಕೃತಿಕ ಸಂಪತ್ತನ್ನು ಉಪಯೋಗಿಸಿಕೊಂಡುದೇ ಕಾರಣ. ಅದರಂತೆ ಭೌಗೋಲಿಕ ಅಂಶಗಳೂ ಒಂದು ರಾಷ್ಟ್ರದ ಸ್ಥಾನ ಮಹತ್ವವನ್ನು ನಿರ್ಧರಿಸಬಲ್ಲುವು. ಸಂಯೋಜ

ಕಾಲುವೆ ಪ್ರದೇಶವು ಪ್ರಾಮುಖ್ಯತೆಯನ್ನು ಪಡೆದುದು ತನ್ನ ಭೌಗೋಲಿಕ ಸ್ಥಾನ ಮಹತ್ವದಿಂದಲೇ ಎನ್ನುವುದು ಸುಸ್ಪಷ್ಟವಿದೆ. ಇದರಂತೆ ಇತರ ರಾಷ್ಟ್ರಗಳೊಡನೆ ಸಂಪರ್ಕವಿಟ್ಟುಕೊಂಡು ವ್ಯವಹರಿಸಲು ಸುಲಭವಾಗಬೇಕು; ಅದೇ ಸಮಯಕ್ಕೆ ಸ್ವಂತದ ಭದ್ರತೆ, ರಕ್ಷಣೆ, ಸಾಮಾಜಿಕ ಅಭಿವೃದ್ಧಿಗೆ ಪೋಷಕವಾದ ಅನುಕೂಲತೆಗಳು ಉತ್ಸಾಹಪ್ರದವಾದ ವಾತಾವರಣ ಭೂವೈಶಾಲ್ಯ, ಜನ ಹಾಗೂ ಪ್ರಾಣಿ ಸಂಪತ್ತು ಇವೆಲ್ಲ ದೊರೆಯುವಂತಿರಬೇಕು- ಎಂದರೆ ರಾಷ್ಟ್ರ ಅಭಿವೃದ್ಧಿಗೆ ಬಂದು, ಜಗತ್ತಿನಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಳ್ಳುವುದು. ಬ್ರಿಟಿಷ್ ದ್ವೀಪಗಳು ರಾಜಕೀಯ ಗೌರವವನ್ನು ಈ ಎಲ್ಲ ಅನುಕೂಲತೆಗಳ ಬಲದಿಂದಲೇ ಸಂಪಾದಿಸಿದುವು. ದ್ವೀಪ ಸಮುದಾಯವಾಗಿದ್ದುಕೊಂಡುದರಿಂದ ವ್ಯಾಪಾರಕ್ಕೆ ಯೋಗ್ಯವಾದ ಕರಾವಳಿ ದೊರೆತಂತೆ, ವಿದೇಶೀ ಆಕ್ರಮಣದ ಸಂಭವವೂ ಕಡಿಮೆಯಾಯಿತು. ಹತ್ತಿರದಲ್ಲೇ ಯುರೋಪಿನ ವಿಶಾಲ ಭೂಭಾಗವಿದ್ದುದರಿಂದ ವ್ಯಾಪಾರ ವ್ಯವಹಾರಗಳನ್ನು ಬೆಳೆಸಿಕೊಳ್ಳಲು ತುಂಬ ಅನುಕೂಲವಾಯಿತು. ದೇಶ ರಕ್ಷಣೆಗಾಗಿ ನೌಕಾಬಲವನ್ನು ಕಟ್ಟಿಕೊಂಡವರು, ಅದನ್ನೇ ವ್ಯಾಪಾರೋನ್ನತಿಗಾಗಿಯೂ ಸಾಮ್ರಾಜ್ಯ ವಿಸ್ತರಣೆಗಾಗಿಯೂ ಮುಂದೆ ಉಪಯೋಗಿಸಿಕೊಂಡರು. ಪರಿಣಾಮವಾಗಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಕಟ್ಟಿದರು.

❁

ಹೀಗೆ ದೇಶದ ಸ್ಥಾನ ಮಹತ್ವವನ್ನು ನಿರ್ಧರಿಸುವ ಸಂಗತಿಗಳ ಮೇಲಿಂದ ಭಾರತವನ್ನು ನೋಡಿದರೆ—ಪ್ರಪಂಚದಲ್ಲಿ ಅದಕ್ಕೊಂದು ವಿಶಿಷ್ಟ ಸ್ಥಾನವಿರುವುದನ್ನು ಕಾಣುತ್ತೇವೆ. ಏಶಿಯಾದ ನೈಋತ್ಯ ಭಾಗದಲ್ಲಿರುವ ಮರುಭೂಮಿ ಪ್ರದೇಶದ ರಾಷ್ಟ್ರ ಹಾಗೂ ಆಗ್ನೇಯದ ಭತ್ತದ ಗದ್ದೆಗಳಿಂದ ತುಂಬಿದ ರಾಷ್ಟ್ರಗಳ ನಡುವೆ ಭಾರತವು ಎರಡೂ ಮಾದರಿಯ ಹವಾಮಾನವನ್ನು ಪಡೆದ ರಾಷ್ಟ್ರವಾಗಿ ನಿಂತಿರುತ್ತದೆ. ಭಾರತದ ಕರಾವಳಿ ಪ್ರದೇಶವು ವಿಶಾಲವಾಗಿರುತ್ತದೆ. ೩೫೦೦ ಮೈಲು ಉದ್ದದ ಈ ಕರಾವಳಿ ಪ್ರದೇಶ ರಾಷ್ಟ್ರದ ವ್ಯಾಪಾರಾಭಿವೃದ್ಧಿಗೆ ತುಂಬ ಅನುಕೂಲವಾಗಿರುತ್ತದೆ. ಒಳನಾಡಿನಲ್ಲಿ ನದೀ ಮಾರ್ಗಗಳು ಪ್ರಚಲಿತವಾಗಿದ್ದಂತೆ, ಹೊರ ನಾಡಿನೊಡನೆ ವ್ಯಾಪಾರವನ್ನು ಮಾಡಿಕೊಳ್ಳಲು ಈ ಕಡಲು ತುಂಬ ಉಪಯುಕ್ತವೆನಿಸಿದೆ. ಯುರೋಪು ಖಂಡದ ಹಾಗೂ ದೂರ ಪೂರ್ವದ ರಾಷ್ಟ್ರಗಳ ನಡುವೆ ಹಿಂದಿನ ಕಾಲದಿಂದಲೂ ವ್ಯಾಪಾರ ಸಂಪರ್ಕವಿದ್ದಿತು. ಭಾರತವು ಇವುಗಳ ನಡುವೆ ಬರುವುದರಿಂದ ಸ್ವಾಭಾವಿಕವಾಗಿಯೇ ಪೂರ್ವ ಪಶ್ಚಿಮ ರಾಷ್ಟ್ರಗಳ ಸಂಪರ್ಕವನ್ನು ಮಾಡಿಕೊಳ್ಳಲು ಅದಕ್ಕೆ ಅನುಕೂಲವಾಯಿತು. ಅರಬ್ಬೀ ಸಮುದ್ರದ ಕರಾವಳಿ ಪ್ರದೇಶವು ಪ್ರಾಚೀನ ಕಾಲದಿಂದಲೂ ಭೂಮಧ್ಯ ಸಮುದ್ರ, ಕೆಂಪು ಸಮುದ್ರಗಳ ಮೂಲಕ ಗ್ರೀಕ್ ಹಾಗೂ ರೋಮನ್ ಸಾಮ್ರಾಜ್ಯದೊಡನೆ ಮತ್ತು ಬೇರೆ ಯುರೋಪಿಯನ್ ರಾಷ್ಟ್ರಗಳೊಡನೆ ವ್ಯಾಪಾರ ನಡೆಸುತಿತ್ತು. ಇಂದಿಗೂ ಮುಂಬಯಿಯು ಅತಿದೊಡ್ಡ ವ್ಯಾಪಾರೀ ಕೇಂದ್ರವಾಗಿರುತ್ತದೆ; ಮತ್ತು ಪಡುಕರಾವಳಿಯ ಉದ್ದಕ್ಕೂ ಅನೇಕ ರೇವುಗಳು ಇರುತ್ತವೆ. ಪೂರ್ವ ಕರಾವಳಿಯ ಬಂದರುಗಳ ಮೂಲಕ ವ್ಯಾಪಾರವನ್ನು ಬರ್ಮಾ ಮಲಯಾ, ಪೂರ್ವ ಹಿಂದೀ ದ್ವೀಪಗಳು, ಚೀನಾ, ಜಪಾನು ಮುಂತಾದ ದೇಶಗಳಿಗೆ ವಿಸ್ತರಿಸಲು ಅನುಕೂಲವಾಗಿದೆ. ವ್ಯಾಪಾರದೊಡನೆ ಭಾರತೀಯ ಸಂಸ್ಕೃತಿಯೂ ಪೂರ್ವದಲ್ಲಿ ವ್ಯಾಪಿಸಿಕೊಂಡುದಕ್ಕೆ ನಿದರ್ಶನಗಳುಂಟು. ಆಧುನಿಕ ಕಾಲದಲ್ಲಿ ವಿಮಾನಗಳ ಹಾರಾಟವು ಹೆಚ್ಚಿಕೊಂಡಿರುವಾಗ ಕೂಡ ಭಾರತವು ಪ್ರಮುಖ್ಯತೆಯನ್ನು ಪಡೆದಿರುತ್ತದೆ. ಇದಲ್ಲದೆ ರಾಜಕೀಯ ದೃಷ್ಟಿಯಿಂದ ಈಗ ಅಧಿಕ ಮಹತ್ವವನ್ನು ಪಡೆದಿರುವ ಪಾಕಿಸ್ತಾನ, ಬರ್ಮಾ, ಚೀನಾ, ಟಿಬೇಟು, ಸಿಂಕಿಯಾಂಗ ಮುಂತಾದವುಗಳ ನಡುವೆ ಭಾರತವಿರುವುದರಿಂದ, ಸ್ವಾಭಾವಿಕವಾಗಿಯೇ ಅದರ ಸ್ಥಾನ ಮಹತ್ವ ಹೆಚ್ಚಿಕೊಂಡಿದೆ. ಯುರೋಪಿಗೂ ದೂರ ಪ್ರಾಚ್ಯದ ಏಶಿಯನ್ ರಾಷ್ಟ್ರಗಳಿಗೂ ನಡುವೆ ಹಿಂದೂ ಮಹಾಸಾಗರದಲ್ಲಿ ವಿಸ್ತಾರವಾಗಿ ಭಾರತವು ಚಾಚಿಕೊಂಡಿರುವುದರಿಂದ ಅದು ಆಯಕಟ್ಟಿನ ಸ್ಥಳವೆಂದು ಪರಿಗಣಿಸಲ್ಪಡುವುದು ಸ್ವಾಭಾವಿಕ. ದ್ವಿತೀಯ ಮಹಾಯುದ್ಧದಲ್ಲಿ ಸಿಂಗಾಪುರದ ಪತನವಾದ ಬಳಿಕ ಭಾರತದ ನೆಲವನ್ನೆ ಮಿತ್ರ ರಾಷ್ಟ್ರಗಳ ಅಪಾರ ಸೇನೆ ಆಶ್ರಯಿಸಬೇಕಾಗಿ ಬಂದಿತು.

❁

ಈ ಆಯಕಟ್ಟಿನ ಸ್ಥಾನದ ಜೊತೆಗೆ ಭಾರತದ ಭೂವೈಶಾಲ್ಯವೂ ರಾಜಕೀಯ ಪ್ರಾಬಲ್ಯವನ್ನು ತಂದುಕೊಡಬಲ್ಲ ಒಂದು ಅಂಶವೆನ್ನಬಹುದು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ... ಒಪ್ಪಿಸುವುದಾದಲ್ಲಿ- ಬೆಲ್ಜಿಯಂ ಹಾಲೆಂಡ, ಡೆನ್ಮಾರ್ಕ ಗಳಂಥ ಚಿಕ್ಕ ಪುಟ್ಟ ರಾಷ್ಟ್ರಗಳು ಕೆಲವೇ ದಿನಗಳೊಳಗೆ ಹಿಟ್ಲರನ ಪದಾಘಾತಕ್ಕೆ ಮಣಿದವು. ಇವು ಎಷ್ಟು ಹೆಚ್ಚು ಸಿದ್ಧತೆ ಮಾಡಿಕೊಂಡರೂ ಪ್ರಬಲ ಶಕ್ತಿಯ ವಿರುದ್ಧ ಹೋರಾಡಲು ಸಮರ್ಥವಾಗಲಿಲ್ಲ. ಈಗ ಭಾರತದಲ್ಲಿ ಸ್ವಂತಂತ್ರ ಸಂಸ್ಥಾನಗಳೆಲ್ಲ ಮಾಯವಾಗಿ, ಒಂದೇ ರಾಷ್ಟ್ರಧ್ವಜದಡಿಯಲ್ಲಿ ಭಾರತೀಯರು ಸೇರಿರುವರು. ಇದು ಒಗ್ಗಟ್ಟಿನ ದ್ಯೋತಕವಾಗಿದ್ದು, ಎಂಥ ಆಕ್ರಮಣವನ್ನೂ ನಾವು ಯಶಸ್ವಿಯಾಗಿ ಎದುರಿಸಿ ಹೋರಾಡಬಲ್ಲೆವು. ಈ ರಾಷ್ಟ್ರದಲ್ಲಿ ಅಸಮಾನ ಭೂಭಾಗಕ್ಕೂ ಭಾರತದ ಉಳಿದ ಪ್ರದೇಶಕ್ಕೂ ಕೇವಲ ೮೦ ಮೈಲು ಉದ್ದದ ಗಡಿ ಪ್ರದೇಶವಿದೆ. ಇದನ್ನು ಪೂರ್ವ ಪಾಕಿಸ್ತಾನೀ ಚಟುವಟಿಕೆಗಳಿಂದ ರಕ್ಷಿಸಿಕೊಂಡು ಬರುವುದು ಒಂದು ದೊಡ್ಡ ಜೋಕೆಗಾರಿಕೆ. ಇದರಂತೆ ಕರಾವಳೀ ಪ್ರದೇಶದಲ್ಲಿರುವ ನಾಲ್ಕಾರು ವಿದೇಶೀ ಉಪನಿವೇಶಗಳು ಯುದ್ಧ ರಾಜ್ಯಗಳಾಗದಂತೆ ಮುಂಜಾಗರೂಕತೆಯನ್ನು ವಹಿಸುವುದೂ ಭಾರತ ಸರಕಾರದ ಜವಾಬ್ದಾರಿ. ಇಷ್ಟು ಮಾಡಿಕೊಂಡರೆ, ಮೂರುದಿಕ್ಕಿನಿಂದಾವೃತವಾದ ಕಡಲು ಹಾಗೂ ಉತ್ತರದಲ್ಲಿ ತಲೆಯೆತ್ತಿ ನಿಂತಿರುವ ಹಿಮಾಲಯ ಪರ್ವತ ಶ್ರೇಣಿಯ ನಡುವೆ ಭಾರತೀಯರು ನಿಶ್ಚಿಂತೆಯ ನಿದ್ದೆ ಮಾಡಬಹುದು. ಉತ್ತರದ ಹಿಮಾಲಯವು ಇತರ ರಾಷ್ಟ್ರಗಳ ಧಾಳಿಯಿಂದ ಭಾರತವನ್ನು ರಕ್ಷಿಸಲು ನೆರವಾದಂತೆ, ... ತಡೆದಿರುತ್ತದೆ. ಅದರೆ, ಅದರೊಂದಿಗೆ ಇನ್ನೊಂದು ಹಾನಿಯನ್ನೂ ಮಾಡಿದೆ. ಮಧ್ಯ ಏಶಿಯಾದ ರಾಷ್ಟ್ರಗಳೊಡನೆ ಭಾರತವು ವ್ಯಾಪಾರ ಸಂಪರ್ಕವನ್ನು ಇಟ್ಟುಕೊಳ್ಳದಂತೆ ಹಿಮಾಲಯವು ತಡೆದಿದೆ. ಟಿಬೇಟನಂಥ ನೆರೆ ಹೊರೆಯ ರಾಜ್ಯದೊಡನೆ ವ್ಯಾಪಾರ ನಿರ್ವಹಿಸುವುದಕ್ಕೂ ದುರ್ಗಮವಾದ ಒಂದೆರಡು ಕಣಿವೆ ಮಾರ್ಗಗಳನ್ನು ನಾವು ಆಶ್ರಯಿಸಬೇಕಷ್ಟೆ!

(೯ನೇ ಪುಟ ನೋಡಿರಿ)

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.



ಮದ್ರಾಸಿನ ಪ್ರಾಥಮಿಕ ಶಿಕ್ಷಣದ ಯೋಜನೆ

ಕೆಳಮನೆಯ ಸಿಫಾರಸಿನಿಂದ ಉದ್ಭವಿಸಿದ ಘಟನಾತ್ಮಕ ಪ್ರಶ್ನೆಗಳಿಗೆ ರಾಜಾಜಿಯ ಸ್ಪಷ್ಟೀಕರಣ

ಬೀಳ್ಕೊಡುವ ಸಂಭ್ರಮ

ಮದ್ರಾಸುರಾಜ್ಯದ ನಮಗೆ ಕಳೆದ ವಾರವು ತುಂಬ ಮಹತ್ವಪೂರ್ಣವಾಗಿ ಗೋಚರಿಸುತ್ತದೆ. ಆಂಧ್ರ ವಿಧೇಯಕವು ಸ್ವೀಕಾರಗೊಂಡುದಲ್ಲದೆ, ಆಂಧ್ರ ಸದಸ್ಯರನ್ನು ಬೀಳ್ಕೊಡುವ ಸಂಭ್ರಮವೂ ಕಳೆದ ವಾರ ನೆರವೇರಿತು. ಆಂಧ್ರರು ಬಹು ದಿನಗಳ ತಮ್ಮ ಮನೋಭೀಷ್ಟವು ನೆರವೇರುತ್ತಿರುವುದಕ್ಕೆ ಸ್ವಾಭಾವಿಕವಾಗಿಯೇ ಹರ್ಷಗೊಂಡಿರುವರು. ಆದರೆ ಮದ್ರಾಸು ರಾಜ್ಯದ ಮಟ್ಟಿಗೆ ಆಂಧ್ರ ಸದಸ್ಯರ ಅಗಲುವಿಕೆಯು ಖೇದಜನಕವೆಂದು ಹೇಳಬೇಕಾಗುವುದು. ಇದುವರೆಗೆ ತುಂಬಿಕೊಂಡಿದ್ದ ಗೃಹವು ಕೆಲವಂಶ ಶೂನ್ಯವಾದಂತೆ ತೋರುವುದು. ಹತ್ತಾರು ಕೊಠಡಿಗಳಿದ್ದ ಮನೆಯಲ್ಲಿ ನಾಲ್ಕಾರು ಕೊಠಡಿಗಳಿಗೆ ಬೀಗಮುದ್ರೆ ಹಾಕಿದಂತೆ ಮದ್ರಾಸು ಶಾಸನ ಸಭೆಯು ಇನ್ನು ಮುಂದೆ ತೋರಬಹುದು. ಕುಟುಂಬದ ಜನರಿಗೆ ಆತ್ಮೀಯರ ವಿಯೋಗ ದುಃಖವಾಗುವಂತೆ, ಮದ್ರಾಸು ಶಾಸನ ಸಭೆಯು ಆಂಧ್ರ ಸದಸ್ಯರ ಅಗಲುವಿಕೆಯಿಂದ ವಿಷಾದಿಸುತ್ತದೆ. ಮುಖ್ಯಮಂತ್ರಿ ರಾಜಾಜಿಯವರು ಈ ಸಂದರ್ಭವನ್ನು ಕಾಳಿದಾಸ ಮಹಾಕವಿಯ ಶಾಕುಂತಳ ನಾಟಕದ ಸನ್ನಿವೇಶವೊಂದಕ್ಕೆ ಹೋಲಿಸಿದರು. ದುಷ್ಯಂತನಲ್ಲಿಗೆ ಹೊರಟುಹೋಗಲು ನಿಂತ ಶಕುಂತಲೆಯನ್ನು ಕಣ್ವ ಮಹರ್ಷಿಗಳು ಬೀಳ್ಕೊಡುತ್ತಿರುವ ದೃಶ್ಯ ತನ್ನ ದೃಷ್ಟಿಪಟಲದ ಮುಂದೆ ನಿಂತಿದೆ ಎಂದವರು ತನ್ನ ಮನದ ಭಾರವನ್ನು ವರ್ಣಿಸಿದರು. ಪ್ರಾಯಬಂದ ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ತಂದೆ ತಾಯಿಗಳಿಗೆ ಸಂತೋಷವೂ ಖೇದವೂ ಏಕಕಾಲದಲ್ಲಿ ಉಂಟಾಗುವಂತೆ, ಮದ್ರಾಸು ಶಾಸನ ಸಭೆಯ ಧುರೀಣ ಶ್ರೀ ರಾಜಾಜಿಯವರಿಗೆನಿಸಿತು. ಆದರೆ ಹೊಸ ರಾಜ್ಯವು ಆಂಧ್ರರ ಆಶೋತ್ತರಗಳ ಪರಿಣಾಮವಾಗಿ ರೂಪುಗೊಂಡಿದೆ; ಮತ್ತು, ಆಂಧ್ರರು ತಮ್ಮ ಸ್ವಂತ ಮನೆಯಲ್ಲಿರುವುದೇ ಚಂದವೆಂಬುದರಿಂದ ಈ ಅಗಲುವಿಕೆಯ ವಿಷಾದ ರೇಖೆಯನ್ನು ಆನಂದದ ಹೊನಲು ಅಳಿಸಿ ಬಿಡಬಲ್ಲುದು. ಆಂಧ್ರ ಸದಸ್ಯರೂ ಉಳಿದವರೂ ಪರಸ್ಪರರನ್ನು ಬೀಳ್ಕೊಡುವ ಭಾಷಣಗಳನ್ನು ಮಾಡಿ ಇದು ವರೆಗಿನ ಮನಸ್ತಾಪ ಹಾಗೂ ಭಿನ್ನಾಭಿಪ್ರಾಯಗಳೇನಿದ್ದರೂ ಅವೆಲ್ಲವನ್ನೂ ಮರೆತು ಸೌಹಾರ್ದ ಭಾವನೆಗೆ ಇಂಬುಕೊಡಬೇಕೆಂದು ವಿನಂತಿಸಿದರು

ಪ್ರಚಂಡ ವಿರೋಧ

ನಿಜವಾಗಿಯೂ ಆಂಧ್ರವಿಧೇಯಕದ ಚರ್ಚೆಯ ಕಾಲ್ದಲ್ಲಿ ತಂತಮ್ಮ ಹಿತಸಂಬಂಧಗಳನ್ನು ರಕ್ಷಿಸಿಕೊಳ್ಳುವ ಆತುರದಲ್ಲಿ ಆಂಧ್ರೇತರ ಸದಸ್ಯರೊಳಗೆ ತೀವ್ರ ಭಿನ್ನಾಭಿಪ್ರಾಯಗಳಿದ್ದುದು ವ್ಯಕ್ತಗೊಳ್ಳುತಿತ್ತು. ಕೆಲವು ವಿಶಿಷ್ಟ ಪ್ರಸಂಗಗಳಲ್ಲಿ ಆಂಧ್ರದ ಸದಸ್ಯರೊಳಗೆಯೇ ಮತಭೇದ ಒಡೆದು ಕಾಣುತಿತ್ತು. ಆಂಧ್ರ ವಿಧೇಯಕದ ಬಳಿಕ ಕೆಲವು ಸರಕಾರೀ ಮಸೂದೆಗಳ ಮೇಲೆ ಚರ್ಚೆ ನಡೆದು, ಅವುಗಳು ಸ್ವೀಕಾರಗೊಂಡವು. ಮಂಗಳೂರಿಗೊಂದು ಬಂದರ ಸಮಿತಿಯನ್ನು ನೇಮಿಸುವ ಮಸೂದೆ ಇವುಗಳಲ್ಲೊಂದು. ಆ ಬಳಿಕ, ಶಾಸನಸಭಾ ಸದಸ್ಯರ ಪ್ರಾರ್ಥನೆಯಂತೆ, ಸರಕಾರವು ಈ ವರ್ಷ ಜ್ಯಾರಿಗೆ ತಂದಿರುವ ಪ್ರಾಥಮಿಕ ವಿದ್ಯಾಭ್ಯಾಸದ ಹೊಸ ಯೋಜನೆಯು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಈ ಚರ್ಚೆಯ ಪರಿಣಾಮ ಎಷ್ಟು ಗಂಭೀರವಾಯಿತೆಂದರೆ ರಾಜಾಜಿಯ ಮಂತ್ರಿ ಮಂಡಳ ರಾಜೀನಾಮೆ ಕೊಡಬೇಕೆಂದು ವಿರೋಧಿ ಗುಂಪು ಕೇಳುವ ಪರಿಸ್ಥಿತಿ ನಿರ್ಮಾಣಗೊಂಡಿತು. ಕಮ್ಯೂನಿಸ್ಟ ಸದಸ್ಯರೊಬ್ಬರು, ಹೊಸ ವಿದ್ಯಾಭ್ಯಾಸದ ಯೋಜನೆಯನ್ನೇ ಹಿಂತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಕಿರಿಯ ಶಾಸನಸಭೆಯಲ್ಲಿ ತಂದರು. ಇದಕ್ಕೆ ಪರವಾಗಿಯೂ ವಿರುದ್ಧವಾಗಿಯೂ ಸಮಮತಗಳು ಬಿದ್ದುದರಿಂದ, ಸಭಾಧ್ಯಕ್ಷರು ತಮ್ಮ ನಿರ್ಣಯಕ ಮತವನ್ನು ವಿರುದ್ಧವಾಗಿ ಕೊಟ್ಟು, ಪೂರ್ವಸ್ಥಿತಿಯನ್ನೇ ಮುಂದುವರಿಯಲು ಬಿಡುವುದು ತಮ್ಮ ಧರ್ಮವೆಂದು ಹೇಳಿದರು. ಹೀಗೆ ಕಮ್ಯೂನಿಸ್ಟರ ಸೂಚನೆ ತಿರಸ್ಕೃತವಾದ ಮೇಲೆ, ಪ್ರಜಾ ಸೋಶಲಿಸ್ಟ ಪಕ್ಷದ ಶ್ರೀ ಟಿ. ವಿಶ್ವನಾಥಮ್ಮರು ಇನ್ನೊಂದು ಸೂಚನೆಯನ್ನು ತಂದು, ತಜ್ಞರ ಸಮಿತಿಯೊಂದು ಈ ಹೊಸಪದ್ಧತಿಯನ್ನು ಅಭ್ಯಸಿಸಿ ತನ್ನ ಶಿಫಾರಸುಗಳನ್ನು ತಿಳಿಸುವ ವರೆಗೆ, ಈ ಯೋಜನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಂಡರು. ಈ ಸೂಚನೆಯ ಮೇಲೆ ಬಿರುಸಾದ ಚರ್ಚೆಯು ನಡೆಯಿತು. ಪ್ರಾಥಮಿಕ ವಿದ್ಯಾಭ್ಯಾಸದ ತಳಹದಿಯನ್ನೇ ಇದು ಬುಡಮೇಲು ಮಾಡುವುದೆಂದು ಸರಕಾರದ ಮೇಲೆ ಆರೋಪ ಹೊರಿಸಲಾಯಿತಲ್ಲದೆ–ಪ್ರಾಚೀನ ಕಾಲದ ವರ್ಣಾಶ್ರಮ ಧರ್ಮದ ಪರಂಪರೆಯನ್ನೇ ಈ ಪದ್ಧತಿಯು ಎತ್ತಿ ಹಿಡಿದು, ಹಿಂದುಳಿದವರ ಪ್ರಗತಿಗೆ ಅಡ್ಡಗಾಲು ಕೊಡುತ್ತಿದೆ ಎಂದೂ ಸಾರಲಾಯಿತು. ಸರಕಾರವು ಏನೊಂದೂ ಪೂರ್ವ ಪರಿಶೀಲನೆಯಿಲ್ಲದೆ ಪವಿತ್ರವಾದ ವಿದ್ಯಾಭ್ಯಾಸ ಪದ್ಧತಿಯನ್ನು ಮನಬಂದಂತೆ ತಿದ್ದುಪಡಿ ಮಾಡಿತೆಂದು ಆದನ್ನು ದೂರಲಾಯಿತು.

ಯೋಜನೆಯ ಲಾಭ

ಈ ಪ್ರಚಂಡ ವಿರೋಧದಲ್ಲಿ ತಿರುಳಿಲ್ಲವೆಂದೂ, ಹೊಸ ಯೋಜನೆಯು ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ವೈಶಿಷ್ಟ್ಯಗಳಿಗೋಸ್ಕರ ಪ್ರಶಂಸಾರ್ಹವಾಗಿದೆಯೆಂದೂ ಮುಖ್ಯ ಮಂತ್ರಿ ರಾಜಗೋಪಾಲಾಚಾರಿ ಹಾಗೂ ವಿದ್ಯಾಮಂತ್ರಿ ಶ್ರೀ ಎಂ. ವಿ. ಕೃಷ್ಣರಾಯರು ವಿವರಿಸಿದರೂ ಅವರಿಂದ ವಿರೋಧವು ಬಲಗುಂದಲಿಲ್ಲ. ರಾಜಾಜಿಯವರ ಅಭಿಪ್ರಾಯದಂತೆ, ಈ ಶಿಕ್ಷಣ ಪದ್ಧತಿಯು ಯಾವುದೇ ದುರುದ್ದೇಶಪೂರಿತವಾಗಿಲ್ಲ ಬದಲು ಬಡಜನರ ಹಿತಸಾಧನೆಯನ್ನು ಹಾಗೂ ರಾಷ್ಟ್ರಕಲ್ಯಾಣದ ಉದ್ದೇಶವನ್ನು ಮುಂದಿಟ್ಟುಕೊಂಡಿದೆ. ಮಕ್ಕಳು ತಮ್ಮ ಬಡ ಹೆತ್ತ ತಾಯಿತಂದೆಗಳ ಕೆಲಸದಲ್ಲಿ ನೆರವಾಗುವಂತೆ, ಅವಕಾಶ ಒದಗಿಸಿದರೆ, ಇದರಿಂದ ಅವರಿಗೆ ತುಂಬ ಸಂತೋಷವಾಗುತ್ತದೆ. ಶಾಲೆಯಲ್ಲಿ ಕಲಿಸುವ ವಿದ್ಯೆಯ ಮಟ್ಟವೇ ಹಾಳಾಯಿತೆಂದು ಹೇಳುವುದು ಸರಿಯಲ್ಲ. ಶಾಲಾ ಸಮಯವನ್ನು ಐದು ತಾಸಿನಿಂದ ಮೂರು ತಾಸಿಗೆ ಇಳಿಸಿದ್ದರೂ–ಮಕ್ಕಳು ಪಡೆಯಬೇಕಾದ ವಿದ್ಯೆಯಲ್ಲಿ ಮುಖ್ಯವಾದುದನ್ನು ಈ ಅಲ್ಪಾವಧಿಯಲ್ಲಿಯೇ ಕೊಡಲಾಗುವುದು. ಆದುದರಿಂದ ಐದು ವರ್ಷಗಳ ಅವಧಿಯಲ್ಲಿ ಶಾಲೆ ಕಲಿತು ಹೊರಬೀಳುವ ಮಕ್ಕಳು ಈಗ ಪಾಸಾಗಿ ಹೊರಬರುವ ಮಕ್ಕಳಷ್ಟೆ ಅಕ್ಷರ ವಿದ್ಯೆಯಲ್ಲಿ ಯೋಗ್ಯತೆ ಪಡೆಯುವರು. ಒಂದು ರೀತಿ ನೋಡಿದರೆ—ಈಗಿನ ಹುಡುಗರಿಗಿಂತಲೂ ಮುಂದಿನ ಹುಡುಗರ ಯೋಗ್ಯತೆ ಹೆಚ್ಚು. ಅವರಿಗೆ ತಮ್ಮ ಕೌಟುಂಬಿಕ ವೃತ್ತಿ-ವ್ಯವಸಾಯದ ಪರಿಚಯವು ಸಾಕಷ್ಟು ಹೆಚ್ಚಾಗಿರುತ್ತದೆ. ಈಗಿನ ಮಕ್ಕಳಿಗೆ ಕುಟುಂಬದ ವೃತ್ತಿ-ಉದ್ಯೋಗಗಳ ಸಂಪರ್ಕವನ್ನು ಮಾಡಿಕೊಳ್ಳಲು ಅವಕಾಶ ಕಡಿಮೆ. ಒಂದರಿಂದ ಮೂರನೇ ತರಗತಿಯ ವರೆಗಿನ ಮಕ್ಕಳು ಬಿಡುಸಮಯದಲ್ಲಿ ತಂದೆ-ತಾಯಿಗಳಿಗೆ ಕೆಲಸದಲ್ಲಿ ಸಹಾಯಮಾಡಲು ಅಸಮರ್ಥರೆಂದು ತೋರಿದರೂ—ಅವರ ವೃತ್ತಿ ಉದ್ಯೋಗಗಳಲ್ಲಿ ಈ ಮಕ್ಕಳು ಯೋಗ್ಯ ಆಸಕ್ತಿಯನ್ನು ವಹಿಸಬಲ್ಲರು. ನಾಲ್ಕು ಮತ್ತು ಐದನೇ ವರ್ಗದ ಮಕ್ಕಳು ತಂದೆ ತಾಯಿಗಳ ಕೆಲಸದಲ್ಲಿ ಸಹಕಾರವನ್ನು ನೀಡಬಲ್ಲರು. ಹೀಗೆ ಶಾಲೆಯ ಹೊರಗೆ ಮನೆ ಅಥವಾ ಹೊಲದಲ್ಲ ಈ ಮಕ್ಕಳು ಗಳಿಸುವ ಜ್ಞಾನ ಹಾಗೂ ತಿಳುವಳಿಕೆಯು ಅವರ ಮುಂದಿನ ಜೀವನದಲ್ಲಿ ಯೋಗ್ಯ ಪರಿಣಾಮವನ್ನುಂಟುಮಾಡಬಲ್ಲುದು. ಈ ವಿಷಯದಲ್ಲಿ ಮಕ್ಕಳ ಯೋಗ್ಯತಾ ಪರೀಕ್ಷೆಯನ್ನು ಸರಕಾರ ನಡೆಸುವುದಿಲ್ಲ– ಒಂದು ವರ್ಗದಿಂದ ಮೇಲಿನ ವರ್ಗಕ್ಕೆ ತೇರ್ಗಡೆ ಮಾಡುವಾಗ ಶಾಲೆಯ ಹೊರಗೆ ಈ ಮಕ್ಕಳು ಏನು ಮಾಡಿರುವರೆಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ರಾಜೀನಾಮೆಯ ಬೇಡಿಕೆ

ಆದುದರಿಂದ ಈ ಮಕ್ಕಳು ಹೊಸ ಯೋಜನೆಯಂತೆ ವೃತ್ತಿ ಹಾಗೂ ಉ

70 ವರುಷಗಳಿಂದ ಜಗಜ್ಜನಿತವಾದುದು

ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಆಗ್ ಮಿಕ್ಸರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.

Sole Manufacturer: **DR. H. L. BATLIWALLA SONS & CO. LTD.,**
Batliwalla Building, Portuguese Church Street,
Tele. Add: "CAWASHABAD" Dadar, BOMBAY 28.

ರಿ. ನಂಬ್ರ 1905. ಅಗೋಸ್ತು 15ರ ಕೊಡುಗೆ. ತಂತಿ: ರಿಪಬ್ಲಿಕ್

ಭಾರೀ ಬಹುಮಾನಗಳು

ಒಂದು ಬಹುಮಾನವನ್ನು ಪಡೆಯಬೇಕು.

ಎಲ್ಲಾ ಬಹುಮಾನಗಳಿಗೂ ಗ್ಯಾರಂಟಿಯಿದೆ.

ಸರ್ವಸನು ಉತ್ತರಕ್ಕೆ ರೂ. 4000. ಪ್ರಥಮ ಎರಡು ಸಾಲುಗಳ ಸರಿಯಾದ ಉತ್ತರಕ್ಕೆ ರೂ. 1000. ಪ್ರಥಮ ಒಂದು ಸಾಲಿನ ಸರಿಯಾದ ಉತ್ತರಕ್ಕೆ ರೂ. 100. ಸುರುವಿನ ಎರಡು ಸರಿಯಾದ ಅಂಕೆಗಳ ಉತ್ತರಕ್ಕೆ ರೂ. 15.

ಚೌಕದಲ್ಲಿ ಕೊಟ್ಟ ಕಣಗಳಲ್ಲಿ ಜುಮ್ಲಾ 42 ಬರುವಂತೆ 3ರಿಂದ 18ರ ವರೆಗಿನ ಅಂಕೆಗಳನ್ನು ತುಂಬಿಸಿರಿ. ಉದ್ದಕ್ಕೂ, ಅಗಲಕ್ಕೂ ಮೂಲೆ ಮೂಲೆಗೂ ಇರುವ ಅಂಕೆಗಳನ್ನು ಕೂಡಿಸಿದರೆ ಮೊತ್ತವು 42 ಬರಬೇಕು. ಒಂದು ಅಂಕೆಯನ್ನು ಒಂದೇ ಸಲ ಉಪಯೋಗಿಸತಕ್ಕದ್ದು.

ಉತ್ತರ ಕಳುಹಿಸುವ ಕೊನೆಯ ದಿನ ತಾ. 20-8-53.

ಫಲಿತಾಂಶ ಪ್ರಕಟಣ ದಿನ ತಾ. 29-8-53.

ಕಳೆದ ಒಗಟಿನ ಉತ್ತರ ಜುಮ್ಲಾ 38

4	8	11	15
17	13	2	6
3	7	16	12
14	10	9	5

ಪ್ರವೇಶಧನ:- ಒಂದು ಉತ್ತರಕ್ಕೆ ರೂ. 1 ಅಥವಾ 8 ಉತ್ತರಗಳ ಒಂದೊಂದು ಸೆಟ್ಟಿಗೆ ರೂ. 6 ಮಾತ್ರ.

ನಿಯಮಗಳು:_ಮೇಲಣ ರೀತಿಯಲ್ಲಿಯ ಪ್ರವೇಶಧನದೊಂದಿಗೆ ನಿಮ್ಮ ಉತ್ತರಗಳನ್ನು ಖಾಲಿ ಕಾಗದದಲ್ಲಿ ಬರೆದು ಮನಿಯಾರ್ಡರ್ ಮೂಲಕ ಇಲ್ಲವೆ ಪೋಸ್ಟಲ್ ಆರ್ಡರ್ ಅಥವಾ ಬೇಂಕು ಡ್ರಾಫ್ಟು ಸಮೇತ ಕಳುಹಿಸತಕ್ಕದು. ಮೀರತ್ತಿನ ಸುಪ್ರಸಿದ್ಧ ಬೇಂಕೊಂದರಲ್ಲಿ ಮೊಹರು ಮಾಡಿಟ್ಟ ಉತ್ತರಕ್ಕೆ ಸರಿಹೋಲುವಂತಹ ಉತ್ತರಗಳೇ ಸಿಂಧುವಾಗತಕ್ಕದು. ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಿರಿ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ. ಫಲಿತಾಂಶಕ್ಕಾಗಿ ಸ್ವವಿಳಾಸ ಬರೆದ ಟಪ್ಪಾಲು ಕವರನ್ನು ಕಳುಹಿಸಬೇಕು. ಮೆನೇಜರರ ತೀರ್ಮಾನವು ನ್ಯಾಯಬದ್ಧವೂ ಸಿಂಧುವೂ ಆಗಿರುವುದು.

ಉತ್ತರ ಮತ್ತು ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ:-

LIBERTY CONCERNS Read (U. N.) P. B. 86, Sadar, MEERUT (U. P.)

ಭಾರತದಲ್ಲಿ ವಿಮಾನೋದ್ಯಾಣದ ರಾಷ್ಟ್ರೀಕರಣ

ಪ್ರಧಾನಿ ನೆಹರೂರಿಂದ ಗಗನ ಸಂಚಾರವನ್ನು ಜನಪ್ರಿಯಗೊಳಿಸುವ ಹಿಂದಿನ ಪ್ರಯತ್ನಗಳ ಪ್ರಶಂಸೆ

ದ್ಯೋಗ ಶಿಕ್ಷಣದಲ್ಲಿ ಪಾರಂಗತರಾಗಲಾರರೆಂಬ ಭಯವು ಮಕ್ಕಳ ಅಕ್ಷರ ವಿದ್ಯಾಭ್ಯಾಸಕ್ಕೆ ಬಾಧಕ ವಿರುವುದಿಲ್ಲ. ಇದಲ್ಲದೆ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲೂ ವಿದ್ಯಾ ಪದ್ಧತಿಯಲ್ಲಿ ಈಗ ಪ್ರಚಲಿತವಿರುವ ಕೆಲವೊಂದು ವ್ಯತಿರೇಕಗಳನ್ನು ನಿವಾರಿಸಲೂ ಈ ಯೋಜನೆ ಉದ್ದೇಶಿಸಿದೆ. ತಜ್ಞರ ಅಭಿಪ್ರಾಯವನ್ನು ತಿಳಿದುಕೊಳ್ಳುವ ಇಚ್ಛೆ ಸರಕಾರಕ್ಕೂ ಇದೆ- ಸಕಾಲದಲ್ಲಿ ತಜ್ಞರ ಸಮಿತಿಯೊಂದನ್ನು ನೇಮಿಸಿ, ಈ ಯೋಜನೆಯಲ್ಲಿರುವ ಲೋಪದೋಷಗಳ ನಿವಾರಣೆಗೆ ಪ್ರಯತ್ನಿಸಲಾಗುವುದು. ಆದರೆ, ಈಗ ಇನ್ನೂ ಪ್ರಾಯೋಗಿಕಾವಸ್ಥೆಯಲ್ಲಿರುವ ಹೊಸ ವಿದ್ಯಾಭ್ಯಾಸ ಕ್ರಮವನ್ನು ಟೀಕಿಸುವುದು ಮಾತ್ರ ಸರಿಯಲ್ಲ—ಎಂದು ಮುಂತಾದರೀತಿ ರಾಜಾಜಿಯವರು ದೀರ್ಘ ಸ್ಪಷ್ಟೀಕರಣವನ್ನು ಕೊಟ್ಟರು. ಆ ಬಳಿಕ ನಡೆದ ಮತದಾನದಲ್ಲಿ ಸರಕಾರದ ನಿಲುಮೆಯ ಪರವಾಗಿ ೧೩೮ ಮತಗಳೂ ವಿಶ್ವನಾಥಮ್ಮರ ಸೂಚನೆಯ ಪರವಾಗಿ ೧೩೯ ಮತಗಳು ದೊರೆತುದರಿಂದ ಸರಕಾರಕ್ಕೆ ಸೋಲು ಸಂಭವಿಸಿತು. ರಾಜಾಜಿಯವರು ಈ ಸೋಲು ಸರಕಾರದ ಧೋರಣೆಯ ಮೇಲೆ ಪರಿಣಾಮವನ್ನುಂಟು ಮಾಡುವಂಥದಲ್ಲವೆಂದೂ, ಕೇವಲ ಸೂಚನೆ ಮಾತ್ರವೆಂದೂ ವಸ್ತುಸ್ಥಿತಿಯನ್ನು ಸ್ಪಷ್ಟಪಡಿಸಿದರು. ವಿರೋಧಿ ಗುಂಪಿನವರು ಹೊಸ ಯೋಜನೆಯ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸರಕಾರವು ಗಮನಿಸುತ್ತಿದೆಯೆಂದೂ, ಆದರೆ ಯೋಜನೆಯನ್ನು ಬಿಟ್ಟುಗೊಡುವುದಕ್ಕೆ ಸರಕಾರ ಸಿದ್ಧವಿಲ್ಲವೆಂದೂ ರಾಜಾಜಿ ಆ ಮೇಲೆ ಹೇಳಿದ್ದಾರೆ. ವಿರೋಧೀ ಗುಂಪಿನ ಸದಸ್ಯರು ಈ ಸೂಚನೆಯನ್ನು ಸರಕಾರವು ಅಂಗೀಕರಿಸಬೇಕೆಂದು ಕೇಳಿದರಲ್ಲದೆ-ಸರಕಾರವು ಸೋತು ಹೋದುದರಿಂದ ಮಂತ್ರಿಮಂಡಳವು ರಾಜೀನಾಮೆ ಕೊಡಬೇಕಾಗುವುದೆಂಬ ಘಟನಾತ್ಮಕ ಪ್ರಶ್ನೆಯನ್ನೆತ್ತಿದರು. ಸಭಾಧ್ಯಕ್ಷರು ಇಂಥ ಸಂದರ್ಭದಲ್ಲಿ ಅಧಿಕಾರದಲ್ಲಿ ಉಳಿಯಬೇಕೋ ಬೇಡವೋ ಎಂಬುದನ್ನು ಸರಕಾರವೇ ನಿರ್ಣಯಿಸಬೇಕೆಂದೂ, ಒಂದು ವೇಳೆ ಈಗಿನ ಸರಕಾರವನ್ನು ಪದಚ್ಯುತ ಮಾಡುವುದೇ ವಿರೋಧೀ ಗುಂಪಿನ ಧ್ಯೇಯವಾಗಿದ್ದರೆ- ಅದಕ್ಕೆ ಅವಿಶ್ವಾಸ ಗೊತ್ತುವಳಿಯನ್ನು ತರುವ ಕ್ರಮ ಕೈಕೊಳ್ಳಬೇಕೆಂದೂ ಹೇಳಿದರು. ಕಿರಿಯ ಶಾಸನ ಸಭೆಯಲ್ಲಿ ಘಟಿಸಿದ ಈ ಪ್ರಸಂಗವು ಹಿರಿಯ ಶಾಸನ ಸಭೆಯ ಮುಂದೆ ಎತ್ತಲ್ಪಟ್ಟಾಗ, ರಾಜಾಜಿಯವರು ಘಟನಾತ್ಮಕ ಅಂಶಗಳನ್ನೆಲ್ಲ ಸ್ಪಷ್ಟವಾಗಿ ವಿವರಿಸಿ—ಸರಕಾರದ ನಿಲುಮೆಯು ದೋಷ ದೂರವಾಗಿದೆ ಎಂದು ಹೇಳಿದರು. ವಿರೋಧೀ ಗುಂಪಿನವರು ಅವಿಶ್ವಾಸ ಗೊತ್ತುವಳಿಯನ್ನೇನು ತರಲಿಲ್ಲ—ಸಾಮಾನ್ಯವಾದ ಒಂದು ಸೂಚನೆಯನ್ನು ಸಭೆಯ ಮುಂದೆ ಇಟ್ಟರು. ಸಭೆಯಲ್ಲಿ ಅದು ಮಾನ್ಯವಾಯಿತೆಂದಮಾತ್ರಕ್ಕೆ ಸರಕಾರ ರಾಜೀನಾಮೆ ಕೊಡಬೇಕೆನ್ನಲಾಗದು. ಮೇಲಾಗಿ ಪ್ರಾಥಮಿಕ ಶಿಕ್ಷಣದಂಥ ವಿಷಯವನ್ನು ವ್ಯವಸ್ಥಿತಗೊಳಿಸುವುದು ಶಾಸನ ಸಭೆಯ ಕರ್ತವ್ಯವಲ್ಲ — ವಿದ್ಯಾಭ್ಯಾಸದ ರೀತಿ ನೀತಿಗಳನು ಗೊತ್ತುಪಡಿಸುವುದು ಸರಕಾರದ ಜವಾಬ್ದಾರಿ. ಶಾಸನ ಸಭೆಯ ಯಾವುದೇ ಕಾನೂನಿಗೊಳಪಟ್ಟು ಸರಕಾರದ ವಿದ್ಯಾಭ್ಯಾಸ ಧೋರಣೆಯು ರೂಪಿಸಲ್ಪಡುವುದಿಲ್ಲ--ಆದುದರಿಂದ ಶಾಸನ ಸಭೆಯ ನಿರ್ಣಯವು ಸರಕಾರಕ್ಕೆ ಬಾಧಕಕಾರಿಯಲ್ಲ. ಜನತೆಯಲ್ಲಿ ಹೊಸ ಯೋಜನೆಯ ಬಗ್ಗೆ ಇರುವ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಶಾಸನ ಸಭೆಯು ಮಂಜೂರು ಮಾಡಿದ ಸೂಚನೆ ಸಹಕಾರಿಯಾದೀತು. ಸರಕಾರ ಅದನ್ನು ಗಮನಿಸಿದೆ ಎಂದು ಹೇಳಿದರು.

ನಿರುದ್ಯೋಗದ ಸಮಸ್ಯೆ

ಮದ್ರಾಸು ಸರಕಾರದ ಹೊಸ ವಿದ್ಯಾಭ್ಯಾಸದ ಯೋಜನೆಗೆ ಡಾ. ಝುಕೀರ ಹುಸೇನರಂಥ ಮೂಲ ಶಿಕ್ಷಣ ತಜ್ಞರ ಪ್ರಶಂಸೆ ದೊರೆತಿದೆಯಲ್ಲದೆ, ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಅನುಭವವುಳ್ಳವರೂ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀಮನ್ನಾರಾಯಣ ಅಗ್ರವಾಲರು ತಮ್ಮ ಹೃತ್ಪೂರ್ವಕ ಬೆಂಬಲವನ್ನಿದಕ್ಕೆ ಕೊಟ್ಟಿರುವರು. ಅವರ ಅಭಿಪ್ರಾಯದಂತೆ, ಕೇವಲ ಹಳ್ಳಿಯ ಪ್ರಾಥಮಿಕ ಶಾಲೆಗಳಿಗಷ್ಟೇ ಅಲ್ಲ ಪಟ್ಟಣಗಳಿಗೂ ಮಾಧ್ಯಮಿಕ ಹಾಗೂ ಹೈಸ್ಕೂಲು ವರ್ಗಗಳಿಗೂ ಈ ಪದ್ಧತಿಯನ್ನು ವಿಸ್ತರಿಸಬೇಕು. ಗಾಂಧೀಜಿ ಪ್ರತಿಪಾದಿಸುತ್ತಿದ್ದ ಮೂಲ ಶಿಕ್ಷಣ ಪದ್ಧತಿಗೂ ಇದುವರೆಗೆ ಪ್ರಚಲಿತವಿದ್ದ ಅಕ್ಷರಾಭ್ಯಾಸದ ವಿದ್ಯೆಗೂ ಸಂಕ ಹಾಕಿ, ಜೋಡಿಸಿ ಕೆ[illegible]ವನ್ನು ಶ್ರೀ ರಾಜಾಜಿ ಮಾಡಿರುವರು. ಘಟನೆಯ ಪ್ರಕಾರ ರಾಜ್ಯವು ಮೂಲ ಶಿಕ್ಷಣ, ಗ್ರಾಮೋದ್ಯೋಗ ಮುಂತಾದವುಗಳ ಕಡೆಗೆ ಹೆಚ್ಚು ಲಕ್ಷ್ಯವನ್ನು ಪೂರೈಸಬೇಕಾಗುವುದು. ಆದ ಕಾರಣ ಮದ್ರಾಸು ಸರಕಾರದ ಪ್ರಕೃತದ ಯೋಜನೆ ಯಶಸ್ವಿಯಾದರೆ ಬೇರೆ ರಾಜ್ಯಗಳೂ ಈ ಕ್ರಮವನ್ನು ಅನುಸರಿಸುವ ಸಂಭವವಿದೆ. ಈ ಕಾರಣಕ್ಕಾಗಿಯೇ ರಾಜಾಜಿಯವರು, ತಮ್ಮ ಯೋಜನೆಯು ಕಾರ್ಯಾನ್ವಿತಗೊಳ್ಳಲು ಕಾಲಾವಕಾಶವನ್ನು ಕೊಡಬೇಕೆಂದೂ ಆ ಬಳಿಕ ಅದರ ಗುಣದೋಷಗಳನ್ನು ತಜ್ಞರ ಸಮಿತಿಯ ಮೂಲಕ ತಿಳಿದುಕೊಳ್ಳಲಿಕ್ಕಾಗಬಹುದೆಂದೂ ಹೇಳಿದರು. ಆದರೆ ಹೊಸತೆಂದರೆ ಹೆದರುವ ನಮ್ಮ ಪ್ರವೃತ್ತಿಯು ಕಾರಣವಾದ ಈ ಯೋಜನೆಯ ನಿಜೋದ್ದೇಶವನ್ನು ಮನಗಾಣುವಲ್ಲಿ ನಮ್ಮಲ್ಲಿ ಹಲವರಿಗೆ ಸಂದೇಹ ಬರುತ್ತದೆ. ದೇಶದ ನಾನಾ ಸಂಕಟದ ಸಮಸ್ಯೆಗಳಿಗೆ ಹೊಸ ಯೋಜನೆಯು ಒಂದು ಪರಿಹಾರ ಮಾರ್ಗವಾಗಿದೆ ಎಂಬ ಸಂಗತಿಯನ್ನು ನಾವು ಮರೆತೇ ಬಿಡುತ್ತೇವೆ. ಮುಖ್ಯವಾಗಿ ನಿರುದ್ಯೋಗ ಸಮಸ್ಯೆಯನ್ನು ಈ ಪದ್ಧತಿ ಕಾಲಾಂತರದಲ್ಲಿ ಪರಿಹರಿಸಬಲ್ಲುದು. ಪಂಚವಾರ್ಷಿಕ ಯೋಜನೆಯನ್ನು ಈ ದೃಷ್ಟಿಯಿಂದ ಪುನರ್ಘಟಿಸಬೇಕೆಂದು ಈಗ ಬೇಡಿಕೆ ಹೆಚ್ಚುತ್ತಿರುವಾಗ- ಹೊಸ ಸುಧಾರಣೆಗಳನ್ನು ಅವುಗಳ ನಿಜವಾದ ಯೋಗ್ಯತೆಯ ಮೇಲಿಂದ ಅಳೆದು ಪ್ರೋತ್ಸಾಹಿಸುವುದು ನಮ್ಮ ಹೊಣೆಗಾರಿಕೆಯಾಗುತ್ತದೆ. ಯೋಜನಾ ಆಯೋಗವು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಬದಲಾವಣೆಯನ್ನು ಸೂಚಿಸಿಲ್ಲವಾದರೂ-ನಿರುದ್ಯೋಗ ಸಮಸ್ಯೆಯನ್ನು ಬಿಡಿಸಲು ಹನ್ನೊಂದು ಅಂಶಗಳ ಉಪಾಯವನ್ನು ಕಂಡು ಹಿಡಿದಿದೆ. ಯೋಜನೆಯು ಮುಂದಿನ ಅವಧಿಯಲ್ಲಿ ಸುಶಿಕ್ಷಿತ ನಿರುದ್ಯೋಗಿಗಳಿಗೆ ಯೋಗ್ಯ ತರಬೇತಿಯನ್ನು ಕೊಡುವುದು ಈ ಉಪಾಯಗಳಲ್ಲಿ ಮುಖ್ಯವಾದುದೆಂದು ತೋರುತ್ತದೆ.

ಅನ್ನದ ಪ್ರಶ್ನೆ

ಜನರ ವಿದ್ಯೆ ಮತ್ತು ಸಂಸ್ಕಾರಗಳು ರಾಷ್ಟ್ರಜೀವನದ ಅಭ್ಯುತ್ಥಾನಕ್ಕೆ ನೆರವಾಗಬಲ್ಲುವು. ನಿಜ ಕರ್ತವ್ಯದ ಪರಿಜ್ಞಾನವಿಲ್ಲದೆ ಹೋದರೆ ದೇಶವು ಪ್ರಗತಿಯನ್ನು ಪಡೆಯಲಾರದು. ನಮ್ಮನ್ನಿಂದು ಕಾಡುತ್ತಿರುವ ಪ್ರಶ್ನೆಗಳಲ್ಲಿ ಆಹಾರದ ಅಭಾವವು ಬಹಳ ದೊಡ್ಡದು. ಆಹಾರದ ಉತ್ಪಾದನೆಯನ್ನು ಹೆಚ್ಚಿಸಲು ಭಾರತವು ನಾನಾ ರೀತಿಯಿಂದ ಪ್ರಯತ್ನಿಸುತ್ತದೆ. ಮುಂದುವರಿದ ಬೇರೆ ದೇಶಗಳೂ ಈ ದಿಸೆಯಲ್ಲಿ ಸಾಕಷ್ಟು ಪ್ರಗತಿಯನ್ನು ಪಡೆದಿವೆ. ಆದರೆ ಹೆಚ್ಚಿಕೊಂಡ ಉತ್ಪಾದನೆಗೂ ಮಿಕ್ಕಿ ಜನಸಂಖ್ಯೆಯು ಅಧಿಕಗೊಂಡುದರಿಂದ, ಸಮಸ್ಯೆ ಮೊದಲಿಗಿಂತಲೂ ಗಡಚೆನಿಸಿದೆ. ಬೆಂಗಳೂರಿನಲ್ಲಿ ಕಳೆದ ವಾರ ಸೇರಿದ ಆಹಾರ ಪರಿಷತ್ತು ಹಸಿವು ಮತ್ತು ದಾರಿದ್ರ್ಯಾವಸ್ಥೆಯನ್ನು ಹೊಡೆದೋಡಿಸುವುದೇ ನಮ್ಮೆಲ್ಲರ ಉದ್ದೇಶವಾಗಬೇಕೆಂದು ಹೇಳಿದೆ. ಭಾರತದ ಕೃಷಿ ಮಂತ್ರಿ ಡಾ. ಪಂಜಾಬರಾವ ದೇಶಮುಖರು ಏಶಿಯಾದ ರಾಷ್ಟ್ರಗಳು ತಮ್ಮ ರಫ್ತು ವ್ಯಾಪಾರವನ್ನು ಕಡಿಮೆ ಮಾಡುತ್ತಿವೆಯೆಂದೂ ಇದನ್ನು ಅಭ್ಯಸಿಸುವುದು ಅವಶ್ಯವೆಂದೂ ಹೇಳಿದರು. ಭಾರತವೇ ಮುಂತಾದ ದೇಶಗಳು ದೂರದ ಪ್ರಾಚ್ಯದಿಂದ ಭತ್ತವನ್ನು ತರಿಸಿಕೊಳ್ಳುವ ಬದಲು ಈಗೀಗ ಪಾಶ್ಚಾತ್ಯ ದೇಶಗಳಿಂದ ಗೋಧಿಯನ್ನೇ ಕೊಂಡುಕೊಳ್ಳುತ್ತಿವೆ. ಬರ್ಮಾ, ಥೈಲೆಂಡು ಮುಂತಾದ ಭತ್ತ ಬೆಳೆಯುವ ಮತ್ತು ಉಳಿತಾಯದ ಪ್ರದೇಶಗಳು ನಿರ್ಯಾತ ಮಾಡುವ ಭತ್ತದ ಬೆಲೆಯನ್ನು ಮನಬಂದಂತೆ ಏರಿಸುವುದು ಇದಕ್ಕೆ ಕಾರಣ. ಮೊ[illegible] ಯುದ್ಧದೊಡನೆ ಅಕ್ಕಿಯ ವ್ಯಾಪಾರ ಮಾಡಬೇಕೆಂದು ಭಾರತ ಪ್ರಯತ್ನಿಸಿದಾಗ- ಆ ಅಕ್ಕಿಯ ಕ್ರಯ ಕೊಡಲು ಪೂರೈಸದೆ ಆ ಯೋಜನೆಯನ್ನೆ ಬಿಟ್ಟುಗೊಡಬೇಕಾಯಿತು. ರಾಷ್ಟ್ರಗಳು ಪರಸ್ಪರ ಸಹಕಾರವನ್ನು ತೋರಿಸದಿದ್ದರೆ, ಲೋಕದ ಸಮಸ್ಯೆಗಳು ಹೆಚ್ಚುತ್ತಿರುವುದೆಂಬುದಕ್ಕೆ ಇದೊಂದು ನಿದರ್ಶನ. ಆಹಾರ ಬೆಳೆಯುವ ವಿಜ್ಞಾನದ ಸಂಶೋಧನೆಗಳನ್ನು ಧಾರಾಳವಾಗಿ ಬಳಸುವಂತೆ

(೬ನೇ ಪುಟ ನೋಡಿರಿ)



ಮಿತ ದರದಲ್ಲಿ
ಅಲಾರ್ಮ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.

ವಿವರಗಳಿಗೆ ಬರೆಯಿರಿ:

MUBARAK & CO.
Watch & Clock
Specialists,
MADRAS 3.

ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್,
ಮದ್ರಾಸು 3.

PLACE YOUR LIFE ASSURANCE WITH A COMPANY OF YOUR OWN — — —

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives. At whatever stage We welcome your association with the POPULAR.

The Popular Insurance Co. Ltd.
"Popular Buildings", MANGALORE-1.

WANTED

One Higher Grade Trained Teacher for Gulvadi Sowkoor Aided Ele School. Apply to the Manager, submitting copy to the Deputy Inspector of Schools, Coondapur Range.

S. Mahabala Shetty,
Manager.
Gulvadi, 3—8—'53.

Estd: 1906
THE CANARA BANKING CORPORATION LTD.
H. O.: **UDIPI**, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ

ಉಡುಪಿ, ಗುರುವಾರ ೬-೮-'೫೩

ಘಾತಕ ನಿರ್ಣಯ

ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಎಂಬುದಾಗಿ ಈಚೆಗೆ ಜನನಕ್ಕೆ ಬಂದ ಸಂಘಟನೆಯೊಂದು ಜೂಲೈ ತಿಂಗಳ ೨೬ನೇ ದಿನಾಂಕ ಹುಬ್ಬಳ್ಳಿಯಲ್ಲಿ ತನ್ನ ಕ್ರಿಯಾ ಸಮಿತಿಯ ಸಭೆ ಸೇರಿಸಿ ಮಾಡಿದ ನಿರ್ಣಯವು ತೀರ ಅಕಾಲಿಕವೂ ಅವಸರದ್ದೂ ಘಾತಕವೂ ಆಗಿರುತ್ತದೆಂದು ಹೇಳಬೇಕಾಗುವುದು. ಈ ಕ್ರಿಯಾ ಸಮಿತಿಯು ಇದೇ ಆಗೋಸ್ಟು ೯ನೇ ದಿನಾಂಕ ಸತ್ಯಾಗ್ರಹವನ್ನು ಕೈಗೊಳ್ಳಬೇಕೆಂದೂ ಹೊಸದಿಲ್ಲಿಗೆ ಒಂದು ಶಿಷ್ಟ ಮಂಡಳವನ್ನು ಕಳುಹಿಸಿ ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಒತ್ತಾಯ ಹೇರಬೇಕೆಂದೂ ನಿರ್ಣಯಿಸಿ, ; ಕನ್ನಡಿಗರ ಭಾವಭಕ್ತಿಗಳನ್ನು ವ್ಯರ್ಥವಾಗಿ ಉದ್ರೇಕಿಸುವ ದುಡುಕನ್ನು ಮಾಡಿರುತ್ತದೆ. ಕರ್ನಾಟಕ ರಾಜ್ಯ ನಿರ್ಮಾಣದ ಉದ್ದೇಶದಿಂದ ಸತ್ಯಾಗ್ರಹ ನಡೆಸಬೇಕೆಂದೂ ಸ್ವಾತಂತ್ರ್ಯ ದಿನವಾದ ಆಗೋಸ್ತು ೧೫ನೇ ತಾರೀಕಿಗೆ ಕರೀ ನಿಶಾನೆಯನ್ನು ಹಿಡಿಯಬೇಕೆಂದೂ ಕನ್ನಡಿಗರನ್ನು ಕೇಳಿಕೊಳ್ಳುವ ಉದ್ಧಟತನವನ್ನು ಕ್ರಿಯಾ ಸಮಿತಿಯು ಪ್ರದರ್ಶಿಸಿ ಕನ್ನಡಿಗರ ತಿರಸ್ಕಾರವನ್ನೇ ಪಡೆಯುತ್ತೆನ್ನಬೇಕಾಗುವುದು. ಕನ್ನಡ ರಾಜ್ಯವನ್ನು ನಿರ್ಮಿಸಬೇಕೆನ್ನುವ ಉದ್ದೇಶ ಸಾಧನೆಗೆ ಈ ತೆರನಾದ ವಾಮಮಾರ್ಗದ ಅವಲಂಬನೆಯನ್ನು ನಾವು ಮಾಡಿಕೊಳ್ಳುವುದು ಆತ್ಮ ಘಾತಕ ಪ್ರವೃತ್ತಿಯೇ ನಿಜ. ಸತ್ಯಾಗ್ರಹವಾಗಲೀ ಬೇರೆ ಯಾವುದೇ ರೀತಿಯ ಚಳವಳವಾಗಲೀ ಈಗ ಅನಿವಾರ್ಯವಾಗಿಲ್ಲ- ಕೇಂದ್ರ ಸರಕಾರವು ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಒಪ್ಪಿಕೊಂಡಿದೆಯೆಂದೂ ಒಂದೊಂದೇಯಾಗಿ ಭಾಷಾ ಪ್ರಾಂತಗಳನ್ನು ರಚಿಸಲು ಅದು ಹವಣಿಸಿದೆಯೆಂದೂ ಈಗಾಗಲೇ ಸ್ಪಷ್ಟವಾಗಿರುತ್ತದೆ. ಸಂಸತ್ತಿನ ಪ ಎಂದೆ ಆಂಧ್ರ ರಾಜ್ಯ ನಿರ್ಮಾಣದ ವಿಧೇಯಕವು ಇಷ್ಟರಲ್ಲೇ ಬರಲಿರುವುದಲ್ಲದೆ, ಆಂಧ್ರದ ಬೆನ್ನಿಗೆ ಕರ್ನಾಟಕ ರಾಜ್ಯ ನಿರ್ಮಾಣ ಪ್ರಶ್ನೆಯನ್ನು ವಿಚಾರಿಸಲಾಗುವುದೆಂಬ ಭರವಸೆಯೂ ಧುರೀಣರಿಂದ ದೊರೆತಿರುವುದು. ನಿಶ್ಚಲವಾದ ಆಶ್ವಾಸನೆಗಳನ್ನು ಕನ್ನಡಿಗರು ಪಡೆದುಕೊಂಡ ಬಳಿಕವೂ—ಭಾವೋದ್ರಿಕ್ತರಂತೆ, ವಿಕಾರವಶರಾಗಿ ಅನವಶ್ಯಕ ಗೊತ್ತುವಳಿಗಳನ್ನು ಮಾಡುವುದೆಂದರೆ, ವಿವೇಕದ ದಿವಾಳಿ ತೆಗೆದಂತೆಯೇ ಸ್ಸೆ. ಕನ್ನಡಿಗರು ಪ್ರಾಂತರಚನೆಯ ವಿಷಯವನ್ನು ಲಘುವಾಗಿ ಎಣಿಸಬಾರದು; ಇದು ಗಂಭೀರವಾದ ವಿಷಯ-- ಮತ್ತು ನಾವೆಷ್ಟು ಮಟ್ಟಿಗೆ ಜಾಗರೂಕತೆಯನ್ನು ವಹಿಸಿದರೂ ಕಡಮೆಯೆಂದು ತೋರುವ ಮಹತ್ವದ ಪ್ರಶ್ನೆ. ಆಂಧ್ರ ರಾಜ್ಯದ ವಿಷಯದಲ್ಲಿ ಎಷ್ಟು ಗೊಂದಲ-ಗಲಭೆಗಳು ನಡೆಯಲಿಲ್ಲ? ಗಡಿ ನಿರ್ಣಯವೇ ಮುಂತಾದ ಮಹತ್ವದ ಸಂಗತಿಗಳನ್ನು ಸರ್ವಸಮ್ಮತ ರೀತಿಯಲ್ಲಿ ಬಗೆಹರಿಸಲು ಇನ್ನೆಷ್ಟು ಸಮಯ ಕಳೆಯಬೇಕೋ ತಿಳಿಯದು! ಆಂಧ್ರ ರಾಜ್ಯದ ನಿರ್ಮಾಣ ಪ್ರಶ್ನೆಯು ಸಂಯುಕ್ತ ಕರ್ನಾಟಕ ಪ್ರಾಂತರಚನೆಯ ಕೆಲಸಕ್ಕಿಂತ ತುಂಬ ಸುಲಭವೂ ಸರಳವೂ ಆಗಿದ್ದಿತು ತಮಿಳು ನಾಡಿಗೂ, ಕರ್ನಾಟಕಕ್ಕೂ ಇರುವ ಗಡಿ ಪ್ರಶ್ನೆಯೊಂದು ಇತ್ಯರ್ಥವಾದರೆ ಸಾಕೆನ್ನುವಷ್ಟು ಸುಲಭದಲ್ಲಿ ಆ ಪ್ರಶ್ನೆ ತೋರುತಿತ್ತು. ಆದರೆ ಬಳ್ಳಾರಿಯ ಸಂಬಂಧದಲ್ಲಿ ನಡೆದ ಚಳುವಳಿ ಹಾಗೂ ಅನುಚಿತ ಗಲಭೆ ಗೊಂದಲಗಳನ್ನು ನೆನೆದರೆ—ಭಾಷಾ ಪ್ರಾಂತರಚನೆಯ ಪ್ರಶ್ನೆ ಸುಲಭ ಹಾಗೂ ಸರಳವಲ್ಲವೆಂದೂ ಎಷ್ಟು ತಾಳ್ಮೆವಹಿಸಿ ಹೆಜ್ಜೆಯನ್ನು ನಿಧಾನವಾಗಿಟ್ಟರೂ ಸಾಲದೆಂದೂ ಮನವರಿಕೆಯಾಗುತ್ತದೆ. ಆಂಧ್ರ ರಾಜ್ಯ ವಿಧೇಯಕದ ಚರ್ಚೆಯ ಕಾಲಕ್ಕೆ ಆಂಧ್ರ ಸದಸ್ಯರಲ್ಲಿಯೇ ಕೆಲವು ಮಹತ್ವದ ವಿಷಯಗಳ ಬಗ್ಗೆ ತೀವ್ರ ಮತಭೇದವಿದ್ದುದು ಎದ್ದು ತೋರುತಿತ್ತು. ಕರ್ನಾಟಕ ಪ್ರಾಂತರಚನೆಯಾಗಬೇಕೆನ್ನುವವರು ಸಂಬಂಧಿಸಿದ ಪ್ರಶ್ನೆಗಳಲ್ಲಿ ಐಕಮತ್ಯವನ್ನು ಸ್ಥಾಪಿಸಿಕೊಂಡಿರುವರೇ? ಮೈಸೂರಿನೊಡನೆಯೇ ಕನ್ನಡದ ಬೇರೆ ಪ್ರದೇಶಗಳು ವಿಲೀನ ಹೊಂದಬೇಕೆನ್ನುವ ಸಾಮಾನ್ಯ ನಿರ್ಣಯಕ್ಕೆ ಬಂದಂತೆ ಕಂಡರೂ—ಏಕೀಕರಣದ ವಿಷಯದಲ್ಲಿ ಮೈಸೂರಿನ ಪ್ರಾಮಾಣಿಕವಾದ ಅಭಿಪ್ರಾಯವೇನೆಂಬುದು ಇನ್ನೂ ಸಂದೇಹಾವಸ್ಥೆಯಲ್ಲಿದೆ. ಮಾನ್ಯ ಹನುಮಂತಯ್ಯನವರು ವೈಯಕ್ತಿಕವಾಗಿ ಏಕೀಕರಣಕ್ಕೆ ಪ್ರಚಂಡ ಸಹಾನುಭೂತಿ ಕೊಟ್ಟರೂ ಸರಕಾರದ ಪರವಾಗಿ ಮಾತನಾಡುವಾಗ ಸಾವಧಾನದಿಂದ ಮುನ್ನಡೆಯಬೇಕೆಂದು ಹೇಳುತ್ತಾರೆ. ಕನ್ನಡಿಗರು ಸರ್ವ ಪ್ರಥಮವಾಗಿ ತಮ್ಮಲ್ಲಿಯೇ ಐಕಮತ್ಯವನ್ನು ಸ್ಥಾಪಿಸಿಕೊಳ್ಳುವುದು ಇಂದಿನ ಆವಶ್ಯಕತೆಯಲ್ಲದೆ- ಗಡಿಸಂಬಂಧದಲ್ಲೂ ನೆರೆಹೊರೆಯವರೊಡನೆ ಒಮ್ಮತಕ್ಕೆ ಬರಬೇಕಾಗುವುದು. ಕರ್ನಾಟಕ ಪ್ರದೇಶವು ಐದಾರು ರಾಜ್ಯಗಳಲ್ಲಿ ಹಂಚಿಹೋಗಿದೆಯಾಗಿ, ಮಲೆಯಾಳ, ತಮಿಳು, ತೆಲುಗು, ಮಹಾರಾಷ್ಟ್ರ ಮುಂತಾದ ನೆರೆಯ ಭಾಷಿಕರೊಡನೆ ಗಡಿಸಂಬಂಧದಲ್ಲಿ ಕಚ್ಚಾಟವನ್ನು ಕೈಗೊಳ್ಳುವ ದುರ್ದೈವ ಕನ್ನಡಿಗರ ಪಾಲಿಗೆ ಬಂದೀತು. ಇಂಥ ದೆಲ್ಲ ತೊಂದರೆಗಳು ನಮ್ಮನ್ನು ಕಾಡುತ್ತಿರುವಾಗ ೯ನೇ ತಾರೀಕಿಗೆ ಸತ್ಯಾಗ್ರಹ ಮಾಡೋಣವೆಂದು ಕರ್ನಾಟಕ ಏಕೀಕರಣ ಪರಿಷತ್ತು ಹೇಳುವುದು ಅರ್ಥಶೂನ್ಯವೆನಿಸುತ್ತದೆ. ಕನ್ನಡಿಗರು ಇಂಥ ಗೊತ್ತುವಳಿಗಳ ಮಾಯಾ ಮೋಡಿಗೆ ಬಲಿ ಬೀಳಲಾಗದೆಂದೂ ವಿವೇಕ ಶೀಲರಾಗಿ ಸಹನೆಯನ್ನು ತೋರಿಸುತ್ತಾ, ಏಕೀಕರಣದ ವಿಷಯದಲ್ಲಿ ಜಾಗರೂಕತೆಯಿಂದಲೂ ದಕ್ಷತೆಯಿಂದಲೂ ಮುನ್ನಡೆಯಬೇಕೆಂದೂ ಸೂಚಿಸುತ್ತೇವೆ.

ಕೊರಿಯಾದಲ್ಲಿ ಮುಂದಿನ ಹೆಜ್ಜೆ

ನೆಹರೂ ಸಲಹೆಗೆ ರಾಜಕಾರಣಿಗಳ ಬೆಂಬಲ

ಯುದ್ಧವಿರಾಮ ಒಪ್ಪಂದದ ಪರಿಣಾಮವಾಗಿ ಜೂಲೈ ೨೭ನೇ ದಿನಾಂಕ ನಿಲ್ಲಿಸಲ್ಪಟ್ಟಿರುವ ಕೊರಿಯಾದ ಕದನವು ಶಾಶ್ವತ ಶಾಂತಿಯ ಲಕ್ಷಣವಲ್ಲವೆಂದೂ ತಾತ್ಕಾಲಿಕ ವಿರಾಮವನ್ನಷ್ಟೆ ಉಂಟುಮಾಡುವುದೆಂದೂ ಸಂಶಯ ಪ್ರಕಟಿಸಿದವರುಂಟು. ಈ ರೀತಿ ಸಂದೇಹ ಪಡುವುದಕ್ಕೆ ಡಾ. ಸಿಂಗ್ಮನ್ನ ರ್ಹೀಯವರ ಹೇಳಿಕೆಗಳೇ ಆಧಾರವಾಗಿದ್ದವು. ರ್ಹೀಯವರು ನಿಶ್ಚಿತವಾದ ಯಾವ ನಿಲುಮೆಯನ್ನೂ ವ್ಯಕ್ತಗೊಳಿಸಧೆ, ಈಗೊಂದು ರೀತಿ ಮಾತನಾಡಿದರೆ, ಮರುಗಳಿಗೆಗೆ ಬೇರೆಯೇ ಸ್ವರ ಹೊರಡಿಸಿ ಎಲ್ಲರನ್ನೂ ಪೆಚ್ಚುಮಾಡುತ್ತಾ ಬಂದಿರುವರು. ಇಂಥವರ ಯಾವ ಮಾತಿನ ಮೇಲೆಯೂ ಪ್ರಾಮಾಣಿಕವಾದ ವಿಶ್ವಾಸವನ್ನಿಟ್ಟು, ಶಾಂತಿಸಾಧನೆಯ ಪ್ರಯತ್ನಗಳನ್ನು ಮುಂದುವರಿಸುವಂತಿಲ್ಲ. ಯುದ್ಧ ವಿರಾಮ ಒಪ್ಪಂದಕ್ಕೆ ಸಹಿ ಹಾಕುವುದಕ್ಕೋಸ್ಕರ ರ್ಹೀಯವರ ಮನವೊಲಿಸಲು ಅಮೇರಿಕಾ ರಾಬರ್ಟಸನ್ನರಿಗೆ ದೌತ್ಯವಹಿಸಿಕೊಡಬೇಕಾಯಿತು. ರ್ಹೀಯವರು ತಮಗೆ ರಾಬರ್ಟಸನ್ನರು ಕೆಲವು ವಾಗ್ದಾನಗಳನ್ನು ನೀಡಿರುವರೆಂದೂ ಅದಕ್ಕೆ ಬಂಧನಕಾರಿಯಾಗಲು ಅಮೇರಿಕಾ ತಪ್ಪಿದರೆ, ತಾವೇ ಏಕಾಕಿಯಾಗಿ ಯುದ್ಧ ನಡೆಸುವುದು ನಿಶ್ಚಯವೆಂದೂ ಈಗಲೂ ಬಹಿರಂಗವಾಗಿ ಹೇಳುತ್ತಾರೆ. ರಾಬರ್ಟಸನ್ನರು ಕೊಟ್ಟ ಆಶ್ವಾಸನೆಗಳು ನಿಜವೋ ಸುಳ್ಳೋ ಎಂಬ ಬಗ್ಗೆ ಅಮೇರಿಕಾದ ಸರಕಾರ ಮೌನವಾಗಿರುವುದು ಆಶ್ಚರ್ಯವನ್ನುಂಟುಮಾಡುವಂತಿದೆ. ಬಹುಶಃ ರ್ಹೀಯವರು ಅಸಹ್ಯ ಆತಂಕವನ್ನೊಡ್ಡುವ ಪರಿಸ್ಥಿತಿ ಮುಂದೊಂದುದಿನ ಉದ್ಭವಿಸಿದಾಗ, ಅಮೇರಿಕಾ ರಾಬರ್ಟಸನ್ನರ ಮೂಲಕ ರ್ಹೀಯವರಿಗೆ ಕೊಟ್ಟ ಆಶ್ವಾಸನೆಗಳ ಸ್ವರೂಪ ಪ್ರಕಟಗೊಂಡೀತು. ಅದೇನೇ ಇರಲಿ ಸಿಂಗ್ಮನ್ನ ರ್ಹೀಯವರು ಅಮೇರಿಕಾದ ಕೂಡೆ ಕಣ್ಣು ಮುಚ್ಚಾಲೆಯಾಡುತ್ತಿರುವರೆಂಬುದು ನಿರ್ವಿವಾದ.

ಡಲ್ಲೇಸರ ಔದ್ಧತ್ಯ

ಸಿಂಗ್ಮನ್ನ ರ್ಹೀಯವರ ಉಪಟಳವೊಂದೇ ಎಲ್ಲ ಶಾಂತಿ ಪ್ರಿಯರ ಎದೆಗಡಿಸಲು ಸಾಕಾಗಿರುವಾಗ, ಅಮೇರಿಕವೂ ರಾಷ್ಟ್ರ ಸಂಘದೊಡನೆ ಆ ಮಾತಿಗೆ ಜಾಗತಿಕ ರಾಷ್ಟ್ರಗಳೊಡನೆ ಕಣ್ಣು ಮುಚ್ಚಾಲೆಯಾಡುವ ಚಪಲವನ್ನು ತೋರಿಸಿದೆ ಇದು ತುಂಬ ದುರ್ದೈವದ ಸಂಗತಿ. ಯುದ್ಧವಿರಾಮ ಒಪ್ಪಂದದ ಶರ್ತಗಳಿಗನುಸಾರವಾಗಿ, ೯೦ ದಿನಗಳಲ್ಲಿ ಉಚ್ಚ ಮಟ್ಟದ ರಾಜಕೀಯ ಸಮಿತಿಯೊಂದು ಸೇರಬೇಕಾಗಿದೆ. ಈ ರಾಜಕೀಯ ಪರಿಷತ್ತಿನಲ್ಲಿ ಉಭಯ ಪಕ್ಷಗಳ ಪ್ರತಿನಿಧಿಗಳಿರಬೇಕೆಂದೂ, ಕೊರಿಯದಲ್ಲಿರುವ ಎಲ್ಲ ವಿದೇಶೀ ಸೈನ್ಯಗಳನ್ನು ಹಿಂತೆಗೆದುಕೊಳ್ಳುವ ಮತ್ತು ಕೊರಿಯಾದ ರಾಜಕೀಯ ಸಮಸ್ಯೆಯನ್ನು ಬಿಡಿಸುವ ಇತ್ಯಾದಿ ಸಂಗತಿಗಳನ್ನು ಈ ರಾಜಕೀಯ ಪರಿಷತ್ತು ಇತ್ಯರ್ಥ ಮಾಡಬೇಕೆಂದೂ ಒಪ್ಪಂದದಲ್ಲಿ ಕಾಣಿಸಲಾಗಿದೆ. ಸಿಂಗ್ಮನ್ನ ರ್ಹೀಯವರ ಹೇಳಿಕೆಯಂತೆ, ಕೊರಿಯಾದ ಏಕೀಕರಣವನ್ನು ೯೦ ದಿನಗಳೊಳಗೆ ಸಾಧಿಸಲು ಈ ರಾಜಕೀಯ ಸಮಿತಿಗೆ ಸಾಧ್ಯವಾಗದಿದ್ದರೆ, ದಕ್ಷಿಣ ಕೊರಿಯಾ ಈ ಪರಿಷತ್ತಿನಿಂದ ಹೊರಬಿದ್ದು ಏಕಾಕಿಯಾಗಿ ಯುದ್ಧ ಮುಂದುವರಿಸುತ್ತದೆ. ಇಂಥ ಸಂದರ್ಭದಲ್ಲಿ ಅಮೇರಿಕಾ ತಮ್ಮನ್ನು ಅನುಸರಿಸುವುದೆಂದೂ, ತಮಗೆ ಬೇಕಾದೆಲ್ಲ ರೀತಿಯ ಸಹಾಯವನ್ನು ಕೊಡುವುದೆಂದೂ ರ್ಹೀಯವರ ಅಂಬೋಣವಿದೆ. ಈ ಬಹಿರಂಗ ಹೇಳಿಕೆಯನ್ನು ಖಂಡಿಸುವ ಗೋಜಿಗೆ ಅಮೇರಿಕಾ ಹೋಗಿರುವುದಿಲ್ಲ. ಬದಲಾಗಿ ಅಮೇರಿಕದ ವಿದೇಶಾಂಗ ಸಚಿವ ಜಾನ್ ಫಾಸ್ಟರ್ ಡಲ್ಲೇಸರು ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ, ತಾವು ಮುಂದಿಡುವ ಕೆಲವು ಶರ್ತಗಳಂತೆ ರಾಜಕೀಯ ಪರಿಷತ್ತು ಕಾರ್ಯ ತತ್ಪರವಾಗದಿದ್ದರೆ, ಅಮೇರಿಕಾ ಅದನ್ನು ಬಹಿಷ್ಕರಿಸಿ, ತನ್ನದೇ ಮಾರ್ಗ ಹಿಡಿಯುವುದೆಂದು ಹೇಳಿರುವರು. ಇದು ಅಪ್ರತ್ಯಕ್ಷವಾಗಿ ಸಿಂಗ್ಮನ್ನ ರ್ಹೀಯವರನ್ನು ಬೆಂಬಲಿಸಿದಂತೆಯೇ ಆಗುತ್ತದೆ.

ಕೇವಲ ತಿಳಿಗೇಡಿತನ

ಡಲ್ಲೇಸರ ಹೇಳಿಕೆ, ಸಿಂಗ್ಮನ್ನ ರ್ಹೀಯವರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಕ್ಕಿಂತಲೂ ಮಹತ್ವ ಪೂರ್ಣವಾಗಿದೆ- ಮತ್ತು ರಾಜಕೀಯ ಪರಿಷತ್ತು ತನ್ನ ಉದ್ದೇಶ ಸಾಧನೆಯಲ್ಲಿ ಅಯಶಸ್ವಿಯಾಗುವುದೆಂಬ ಸಂಗತಿಯನ್ನು ಸ್ಪಷ್ಟವಾಗಿನಿರ್ದೇಶಿಸುತ್ತದೆ. ಈ ರೀತಿ ರಾಜಕೀಯ ಪರಿಷತ್ತು ಅಸಫಲಗೊಂಡರೆ, ಕೊರಿಯಾದಲ್ಲಿ ಯುದ್ಧ ವಿರಾಮ ಒಪ್ಪಂದವಾದುದರಿಂದ ಏನೊಂದು ಪ್ರಯೋಜನ ದೊರೆಯದೆ ಹೋಗುವುದು, ಮತ್ತು ಯುದ್ಧ ಅನಿವಾರ್ಯವೆಂಬಂತೆ ಮುಂದುವರಿಯುವುದು. ಡಲ್ಲೇಸರ ಹೇಳಿಕೆಯಿಂದ ಬ್ರಿಟನ ಮುಂತಾದ ಮಿತ್ರ ರಾಷ್ಟ್ರಗಳು ತುಂಬ ಅಸಂತುಷ್ಟವಾಗಿರುತ್ತವೆ. ಅಮೇರಿಕಾವು ತಾನು ಮುನ್ನೀಡುವ ಶರ್ತಗಳಿಗೆಯೇ ರಾಜಕೀಯ ಪರಿಷತ್ತು ಸಮ್ಮತಿಸಬೇಕೆಂದು ಒತ್ತಾಯಿಸುವುದು ಸರಿಯಲ್ಲವೆಂದು ಹಿರಿಯ ಮುತ್ಸದ್ದಿಗಳ ಅಭಿಪ್ರಾಯವಿರುತ್ತದೆ; ಮತ್ತು ಈ ಅಭಿಪ್ರಾಯಕ್ಕೆ ನ್ಯಾಯದ ಬಲವುಂಟು ಡಲ್ಲೇಸರು ರಾಜಕೀಯ ಪರಿಷತ್ತೆಂದರೆ ಅಮೇರಿಕಾದ ಅಭಿಪ್ರಾಯಕ್ಕೆ ಮನ್ನಣೆಯ ಮುದ್ರೆಯೊತ್ತುವ ಯಂತ್ರವೆಂದು ಎಣಿಸಿರುವಂತಿದೆ. ಈ ತಿಳಿಗೇಡಿತನವನ್ನು ಯಾರೊಬ್ಬರೂ ಮೆಚ್ಚುವಂ

ತಿಲ್ಲ—ರಾಜಕೀಯ ಪರಿಷತ್ತಿನಲ್ಲಿ ಅಮೇರಿಕಾದ ಪ್ರತಿನಿಧಿಗೆ ಸ್ಥಾನವಿರುವುದು ನ್ಯಾಯವಾದರೂ ಅಲ್ಲಿ ಬೇರೆ ರಾಷ್ಟ್ರಗಳ ಪ್ರತಿನಿಧಿಗಳೂ ಇರುತ್ತಾರೆ. ಸಂಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಇದೇ ೧೭ನೇ ದಿನಾಂಕ ಸೇರಲಿದ್ದು ಅಲ್ಲಿ ಯಾವ್ಯಾವ ರಾಷ್ಟ್ರಗಳ ಪ್ರತಿನಿಧಿಗಳಿರಬೇಕೆಂದು ನಿರ್ಧರಿಸುವ ಸಂಭವವುಂಟು. ಹೀಗೆ ಸಂಯುಕ್ತರಾಷ್ಟ್ರಗಳ ಸಂಘದ ಪ್ರತಿನಿಧಿಗಳಲ್ಲಿಒಬ್ಬನಾಗಿ ಅಮೇರಿಕಾದ ಪ್ರತಿನಿಧಿ ಇರುವನೇ ಹೊರತು ಅಮೇರಿಕಾದ ಅಭಿಪ್ರಾಯವೇ ಸಂಯುಕ್ತ ರಾಷ್ಟ್ರ ಸಂಘದ ಅಭಿಪ್ರಾಯವಾಗಬೇಕೆಂದೂ, ಅದನ್ನೇ ಒಪ್ಪಂದದ ಇನ್ನೊಂದು ಪಕ್ಷ (ಕಮ್ಯೂನಿಸ್ಟ ಚೀನಾ, ಉತ್ತರ ಕೊರಿಯಾ) ಅಂಗೀಕರಿಸಬೇಕೆಂದೂ ಡಲ್ಲೇಸರು ಕೇಳುತ್ತಿರುವುದು ತಿಳಿಗೇಡಿತನ.

ಅಸಮಂಜಸ ಧೋರಣೆ

ಅಮೇರಿಕಾದ ಈ ಅಸಮಂಜಸ ಧೋರಣೆಯನ್ನು ಉಗ್ರವಾಗಿ ಖಂಡಿಸಲು ಬ್ರಿಟನು ಹಿಂಜರಿದಿಲ್ಲ- ಅನಿಲ್ಲೂ ಕೂಲಿಕಾರ ಪಕ್ಷದ ಧುರೀಣರು ಡಲ್ಲೇಸರ ಈ ಹೇಳಿಕೆಯನ್ನು ತೀಕ್ಷ್ಣ ಮಾತುಗಳಲ್ಲಿ ಪ್ರತಿಭಟಿಸಿರುವರು. ಬ್ರಿಟನು ಜಾಗತಿಕ ರಾಜಕಾರಣದಲ್ಲಿ ತುಂಬ ಅನುಭವಸಂಪನ್ನವಾದ ರಾಷ್ಟ್ರ- ಅಮೇರಿಕಾದ ವಿದೇಶಾಂಗ ವ್ಯವಹಾರವು ಈಚೆಗೆ, ಎಂದರೆ, ದ್ವಿತೀಯ ಮಹಾಯುದ್ಧದ ಬಳಿಕ ಪ್ರಾಬಲ್ಯಕ್ಕೆ ಬಂದಿರುತ್ತದೆ- ಆದುದರಿಂದ ವಿದೇಶಗಳೊಡನೆ ಎಂದು ಯಾವ ಧೋರಣೆಯನ್ನು ಅನುಸರಿಸಿದರೆ ಲಾಭವುಂಟೆಂದು ಬ್ರಿಟಿಷರಿಗೆ ತಿಳಿದಿರುವಷ್ಟು ಅಮೇರಿಕನ್ ಪ್ರಭೃತಿಗಳಿಗೆ ಗೊತ್ತಿಲ್ಲ. ಅಮೇರಿಕದ ಪರಮ ಮಿತ್ರ ರಾಷ್ಟ್ರವಾದ ಬ್ರಿಟನು ಕಮ್ಯೂನಿಸ್ಟ ಚೀನಾವಿಗೆ ಮನ್ನಣೆ ಕೊಟ್ಟಿದನ್ನು ಇದಕ್ಕೆ ನಿದರ್ಶನವಾಗಿ ತೋರಿಸಬಹುದು. ಡಲ್ಲೇಸರು ರಾಜಕೀಯ ಪರಿಷತ್ತಿನ ಮುಂದೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕಮ್ಯೂನಿಸ್ಟ ಚೀನಾಕ್ಕೆ ಪ್ರಾತಿನಿಧ್ಯ ನೀಡುವ ಪ್ರಶ್ನೆ ಬಂದೇ ಬರುವುದೆಂದು ಹೆದರಿ ಕೊಂಡಂತಿದೆ ಈ ವಿಷಯದಲ್ಲಿ ಅಮೇರಿಕಾದ ಅಭಿಪ್ರಾಯಕ್ಕೆ ಬೇರೆ ರಾಷ್ಟ್ರಗಳು ಸಮ್ಮತಿಸವುದಿಲ್ಲ ಕಮ್ಯೂನಿಸ್ಟ ಚೀನಾವನ್ನು ಸಂಯುಕ್ತ ರಾಷ್ಟ್ರ ಸಂಘದಿಂದ ಹೊರಗುಳಿಸಬೇಕೆಂಬುದಕ್ಕಾಗಿಯೇ ರಾಜಕೀಯ ಪರಿಷತ್ತಿನ ಮುಂದೆ ತಮ್ಮ ಶರ್ತಗಳನ್ನು ಇಡಬೇಕೆಂದು ಡಲ್ಲೇಸರು ಎಣಿಸಿರಬೇಕು. ಆದರೆ ಇದಕ್ಕೆ ನ್ಯಾಯವಿಲ್ಲ. ಮಿತ್ರರಾಷ್ಟ್ರಗಳಿಗಿಂತ ಕೊರಿಯಾದಲ್ಲಿ ಅಮೇರಿಕದ ಹೊಣೆಯೇ ಹೆಚ್ಚೆಂಬುದನ್ನು ಅಲ್ಲಗಳೆಯಲು ಬಾರದಾದರೂ, ಪ್ರತಿ ಪಕ್ಷದ ಕಮ್ಯೂನಿಸ್ಟರೊಡನೆ ಮಾತುಕತೆ ನಡೆಸುವಾಗ ಅಮೇರಿಕಾ ತನ್ನದೇ ಹಟವನ್ನು ಸಾಧಿಸಲೆತ್ನಿಸುವುದು ಅಪಯಶಸ್ಸಿಗೆ ಕಾರಣವಾಗುತ್ತದೆಯೋ ಹೊರತು ಉತ್ತಮ ಫಲವನ್ನುಂಟುಮಾಡದು.

ನೆಹರೂರ ಸಲಹೆ ಮಾತು

ರಾಜಕೀಯ ಪರಿಷತ್ತು ಯಶಸ್ಸುಗೊಳ್ಳುವಂತೆ ನಡೆಯಬೇಕಾದ ಪೂರ್ವಭಾವಿ ಸಿದ್ಧತೆಗಳು ಹೇಗಿರಬೇಕೆಂಬ ಬಗ್ಗೆ ಭಾರತದ ಪ್ರಧಾನಿ ನೆಹರೂ ಹೇಳಿದ ಮಾತುಗಳು, ಡಲ್ಲೇಸರ ಕಿಡಿಗೇಡಿತನವನ್ನೂ ರಾಜಕೀಯ ಮುತ್ಸದ್ದಿತನವನ್ನೂ ದರ್ಶಿಸುತ್ತವೆ. ನೆಹರೂರ ಅಭಿಪ್ರಾಯದಂತೆ ರಾಜಕೀಯ ಪರಿಷತ್ತು ಒಂದು ಮಹಾ ಚರ್ಚಾಕೂಟವಾಗದೆ. ಚಕ್ರ ಗೋಷ್ಠಿಯ ರೂಪದಲ್ಲಿರಬೇಕು; ಎಂದರೆ ಕೊರಿಯಾ ಪ್ರಶ್ನೆಗೆ ಪ್ರತ್ಯಕ್ಷ ಸಂಬಂಧವಿದ್ದ ಮಹತ್ವದ ರಾಷ್ಟ್ರಗಳಿಗೆ ಮಾತ್ರ ಇದರಲ್ಲಿ ಪ್ರವೇಶ ದೊರೆಯಬೇಕೆನ್ನಬಹುದು. ಹಾಗೆಯೇ ಕೊರಿಯಾದ ಪ್ರಶ್ನೆಯನ್ನು ಈ ಪರಿಷತ್ತು ಮೊದಲು ವಿಚಾರಿಸಬೇಕು; ಎಂದರೆ, ಚೀನಾದ ಪ್ರಾತಿನಿಧ್ಯ ಪ್ರಶ್ನೆ ಮುಂತಾದುವನ್ನು ತಂದು ಪರಿಷತ್ತು ಆರಂಭದಲ್ಲಿಯೇ ಅಯಶಸ್ವಿಯಾಗಲು ಎಡೆಕೊಡಬಾರದು. ಈ ರಾಜಕೀಯ ಪರಿಷತ್ತು ಸೇರುವುದಕ್ಕಿಂತ ಮುಂಚೆ, ಪ್ರಧಾನ ರಾಷ್ಟ್ರಗಳು ತಂತಮ್ಮಲ್ಲಿಯೇ ಅನೌಪಚಾರಿಕ ಮಾತುಕತೆಗಳನ್ನು ನಡೆಸಿ ಕೊರಿಯಾದ ಪ್ರಶ್ನೆಗೆ ಸರ್ವಸಮ್ಮತವಾದ ಒಂದು ಪರಿಹಾರವನ್ನು ಕಂಡುಕೊಂಡರೆ ಒಳಿತು. ಆಗ ರಾಜಕೀಯ ಪರಿಷತ್ತು ಒಮ್ಮತಕ್ಕೆ ಬಂದ ಸಂಗತಿಗಳಲ್ಲಿ ಉತ್ತಮ ಪ್ರಗತಿಯನ್ನು ತೋರಿಸಲು ಎಡೆಯಾಗುತ್ತದೆ. ನೆಹರೂ ಹೇಳಿಕೆಯಂತೆ, ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಸೇರುವ ಮೊದಲೇ ಈ ಅನೌಪಚಾರಿಕ ಮಾತುಕತೆಗಳು ನಡೆದು, ಸಾಮಾನ್ಯ ಸಿದ್ಧಾಂತವೊಂದು ರೂಪಿಸಲ್ಪಡಬೇಕು. ಒಂದು ಕಡೆ ಅಮೇರಿಕಾ, ಬ್ರಿಟನ್‌ಗಳಂಥ ಪಾಶ್ಚಾತ್ಯ ರಾಷ್ಟ್ರಗಳೂ ಇನ್ನೊಂದು ಕಡೆ ರಶಿಯಾ, ಚೀಣಾಗಳಂಥ ಕಮ್ಯೂನಿಸ್ಟ ರಾಷ್ಟ್ರಗಳೂ ಈ ಅನೌಪಚಾರಿಕ ಮಾತುಕತೆಯನ್ನು ತೊಡಗಿ ಕೊರಿಯಾ ಸಮಸ್ಯೆಗೊಂದು ಗೌರವಯುತ ಪರಿಹಾರ ಮಾರ್ಗದ ಸ್ಥೂಲ ರೂಪರೇಷೆಯನ್ನು, ನಿರ್ಣಯಿಸಿದರೆ—ಮುಂದಿನ ಕಷ್ಟ ಮತ್ತು ಬಿಕ್ಕಟ್ಟುಗಳು ತಪ್ಪುತ್ತವೆ. ಈ ಅಭಿಪ್ರಾಯಕ್ಕೆ ಸಂಯುಕ್ತ ರಾಷ್ಟ್ರ ಸಂಘದ ವಲಯಗಳಲ್ಲಿ ತುಂಬ ಬೆಂಬಲ ದೊರೆತಿರುವುದು.

ಚಂದಾದಾರಲ್ಲಿ—

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ನವಯುಗದ 32ನೇ ವರ್ಷವು ಕೊನೆಗೊಂಡು ಸಪ್ಟೆಂಬರದಿಂದ ೩3ನೇ ವರ್ಷಾರಂಭವಾಗುವುದು. ಈ ಸಂದರ್ಭದಲ್ಲಿ ಚಂದಾಹಣ ಬಾಕಿ ಮಾಡಿಕೊಂಡವರೂ ತಮ್ಮ ತಮ್ಮ ಚಂದಾಹಣವನ್ನು ದಯಮಾಡಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಕೇಳಿಕೊಳ್ಳುತ್ತೇನೆ.

— ಮೆನೇಜರ್.

ತಿಂಗಳಿಗೆ ರೂಪಾಯಿ 2,0ರಿಂದ ರೂ 500 ಸಂಪಾದಿಸಿರಿ

ನಮ್ಮಲ್ಲಿ ದೊರೆಯುವ ಹೊಸ ನಮೂನೆಯ ಬಟ್ಟೆಗಳು, ಸಿಲ್ಕ್ ಸೀರೆಗಳು, ನಯ ಕೋಮಲ ಬ್ಲೇಂಕೆಟ್ಟುಗಳನ್ನು ಬಿಡು ಸಮಯದಲ್ಲಿ ಮಾರಾಟಮಾಡಲು ಉದಾರ ಶರ್ತಗಳಿಂದ ಏಜಂಟರು ಬೇಕಾಗಿದ್ದಾರೆ. ಉತ್ಸಾಹಿಗಳೆಲ್ಲರಿಗೂ ಸುವರ್ಣಸಂಧಿ. ಸ್ಯಾಂಪಲುಗಳಿಗೂ ಶರ್ತಗಳಿಗೂ ಎಂಟಾಣೆ ಟಪ್ಪಾಲು ಚೀಟುಗಳೊಂದಿಗೆ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಾಗಲೀ ಹಿಂದಿಯಲ್ಲಾಗಲೀ ಮಾಡಿರಿ.

International Industrial Corporation (India)
New Market Karol Bagh,
New Delhi.

ಉಡುಪಿ

ಡ್ಯಾರೆಕ್ಟರ್ ಒಫ್ ಮೆಡಿಕಲ್ ಸರ್ವಿಸಸ್‌ರವರ ಆಗಮನ—ಇತ್ತೀಚೆಗೆ ಸ್ಥಾಪಿತವಾಗಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಹೇಗೆ ಸಹಾಯ ಮಾಡಬಹುದು ಎಂಬುದನ್ನು ಪರಿಶೀಲಿಸುವುದಕ್ಕಾಗಿ ಮದ್ರಾಸಿನ ಡಾ|| ರಮಣ ಮೆನನ್, ಡ್ಯಾರೆಕ್ಟರ್ ಒಫ್ ಮೆಡಿಕಲ್ ಸರ್ವಿಸಸ್, ಇವರು ತಾ 30ರಲ್ಲಿ ಇಲ್ಲಿಗೆ ಆಗಮಿಸಿದರು. ಆರಂಭದ ಕ್ರಿಶ್ಚಿಯನ್ ಸರಕಾರಿ ಆಸ್ಪತ್ರೆಯನ್ನೂ ಬಾಸೆಲ್ ಮಿಶನ್ ಹೆಂಗಸರ ಆಸ್ಪತ್ರೆಯನ್ನೂ ಸಂದರ್ಶಿಸಿದರು. ಸಂಜೆ ಎಮ್. ಜಿ. ಎಮ್. ಕಾಲೇಜಿಗೆ ಭೇಟಿಯಿತ್ತರು. ಡಾ|| ಮೆನನ್ ಅವರು ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿದಾಗ ಪ್ರಿನ್ಸಿಪಾಲ್ ಕೆಪ್ಟನ್ ಸ್ವಾಂಗೇರರಾಯರು ಸ್ವಾಗತವಿತ್ತರು. ಡಾ|| ಟಿ. ಎಮ್. ಎ. ಪೈಗಳು ಕಾಲೇಜಿಗೆ ಬೇಕಾಗುವ ಸಕಲ ವೈದ್ಯಕೀಯ ಸಲಕರಣೆಗಳನ್ನು ಒದಗಿಸಿಕೊಡುವಂತೆ ವಿನಂತಿಸಿದರು.

ಡಾ|| ಮೆನನ್‌ರವರು ಉತ್ತರಿಸುತ್ತಾ, ಆರಂಭದಲ್ಲಿಯೇ ಇಂತಹ ಸುಸಜ್ಜಿತ ಕಾಲೇಜು ಸ್ಥಾಪಿಸಲು ಸಾಧ್ಯವಾಗುವಂತೆ ಮಾಡಿದ ಕಾಲೇಜು ಸ್ಥಾಪಕರನ್ನು ಅಭಿನಂದಿಸಿದರು. ಸರಕಾರವೇ ಸ್ಥಾಪಿಸಿದ ವಿಶಾಖಾ ಮೆಡಿಕಲ್ ಕಾಲೇಜು ಒಂದು ಶೆಡ್ಡಿನಲ್ಲಿ ವಿಶೇಷ ಉಪಕರಣಗಳಿಲ್ಲದೆ ಆರಂಭವಾಯಿತೆಂದೂ ಇಲ್ಲಿ ಕಟ್ಟಿದ ಸಲಕರಣೆಗಳಿರುವುದು ಸ್ಥಾಪಕರ ದಕ್ಷತೆಯ ದ್ಯೋತಕವೆಂದೂ ಇಲ್ಲಿಯ ವಿದ್ಯಾರ್ಥಿಗಳು ಸುದೈವಿಗಳೆಂದೂ ದೇಶದಲ್ಲಿ ವಿದ್ಯೆ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ದಕ್ಷಿಣ ಕನ್ನಡಿಗರು ಎಲ್ಲೆಲ್ಲಿಯೂ ಪ್ರಸಿದ್ಧರಿದ್ದು ಇಲ್ಲಿಯ ಪ್ರೊಫೆಸರರು ದಕ್ಷಿಣ ಕನ್ನಡಿಗರೇ ಆಗಿರ ಬೇಕು ದಕ್ಷತೆಯ ಕೆಲಸದಿಂದೂ ಅಭಿಪ್ರಾಯ ಪಟ್ಟರು ಅದೇ ರಾತ್ರಿ ಸ್ವಾಂಗಳರವರಲ್ಲಿಯ ಸಿ. ಪಿ. ಸಿ. ಆಫೀಸಿನಲ್ಲಿ ಕೆನರಾ ಚೇಂಬರ್ ಒಫ್ ಕೋಮರ್ಸ್ಸಿನ ಅಧ್ಯಕ್ಷ ಶ್ರೀ ಉಪೇಂದ್ರನಾಥ ರಾಯರು ಅತಿಥಿಗಳಿಗೂ ನಗರದ ಕೆಲ ಉಚ್ಛ ಮಾನನೀಯರಿಗೂ ಔತಣವಿತ್ತು ಸತ್ಕರಿಸಿದರು.

ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು

ವಿಸೋಸಿಯೇಶನುಗಳ ಚುನಾವಣೆ ಫಲಿತಾಂಶ: ಕಾಲೇಜು ಯೂನಿಯನ್:- ಶ್ರೀ ಎಚ್. ಸುಂದರ ರಾವ್, ಪ್ರಿನ್ಸಿಪಾಲ್ (ಗವರ್ನರ್); ಶ್ರೀಗಳಾದ ಕೆ. ಎಸ್. ಹರಿದಾಸ್ ಭಟ್ ಇಕೊನೋಮಿಕ್ಸ್ ಲೆಕ್ಚರರ್ ಮತ್ತು ಎಚ್. ಕೆ. ಲಿಂಗಪ್ಪ ಮೂರ್ತಿ, ಇಂಗ್ಲಿಷ್ ಲೆಕ್ಚರರ್ (ಡೆಪ್ಯುಟಿ ಗವರ್ನರ್ಸ್) ಶ್ರೀ ರಾಮಮೋಹನ ಪದ್ಮ (ಪ್ರೆಸಿಡೆಂಟ್) ಶ್ರೀಗಳಾದ ರಘುರಾಮ ಎನ್. ಪೈ ಮತ್ತು ಕೆ. ಭೋಜ ಸೆಟ್ಟಿ (ಕಾರ್ಯದರ್ಶಿಗಳು). ಭಾಷಾ ಸಮಿತಿ: ಶ್ರೀಗಳಾದ ಪಿ ನಾರಾಯಣ ಅಯ್ಯಂಗಾರ್, ಕನ್ನಡ ಲೆಕ್ಚರರ್ ಮತ್ತು ಎಮ್. ಕೆ. ಜಿ. ಹನ್ನೇರರ್, ಹಿಂದೀ ಲೆಕ್ಚರರ್ (ಉಪಾಧ್ಯಕ್ಷರು) ಶ್ರೀಗಳಾದ ಎಮ್. ಚಕ್ರಪಾಣಿ ಉಡುಪ ಮತ್ತು ಕೆ. ರಘುನಾಥ ಸೆಟ್ಟಿ (ಕಾರ್ಯದರ್ಶಿಗಳು). ಎತ್ಲೆಟಿಕ್ ಸಮಿತಿ:- ಶ್ರೀ ಡಿ. ಎನ್. ಸೋಮಸುಂದರ್, ಫಿಜಿಕಲ್ ಡ್ಯಾರೆಕ್ಟರ್ (ಉಪಾಧ್ಯಕ್ಷ) ಶ್ರೀ ಕೆ. ರಾಮ ಮತ್ತು ಮಿಸ್ ಎಮ್. ಎಲ್ ಕುಸುಮ (ಕಾರ್ಯದರ್ಶಿಗಳು). ಕಾಲೇಜು ಸ್ಪೋರ್ಟ್ಸ್:- ಶ್ರೀ ಜಿ. ವೆಂಕಟರಮಣಾಚಾರ್ಯ, ಮೆಥೆಮೆಟಿಕ್ಸ್ ಲೆಕ್ಚರರ್ ಮತ್ತು ಮಿಸ್. ಯು. ಎಸ್. ವಾಲಿನಿ, ಇಕೊನೊಮಿಕ್ಸ್ ಲೆಕ್ಚರರ್ (ಉಪಾಧ್ಯಕ್ಷರು) ಶ್ರೀ ಕೆ. ಶಿವರಾಮ ಭಟ್ ಮತ್ತು ಕುಮಾರಿ ಸಿ. ವತ್ಸಲಾ (ಕಾರ್ಯದರ್ಶಿಯರು). ಸಾಯಿನ್ಸ್ ಸಂಘ:- ಶ್ರೀ ಯು. ಲಕ್ಷ್ಮೀನಾರಾಯಣಾಚಾರ್ಯ, ಫಿಜಿಕ್ಸ್ ಲೆಕ್ಚರರ್ (ಉಪಾಧ್ಯಕ್ಷ), ಶ್ರೀ ವಿ. ಆರ್. ಪಿ ರವರ್ (ಕಾರ್ಯದರ್ಶಿ). ಇಕೊನೊಮಿಕ್ಸ್ ಮತ್ತು ಹಿಸ್ಟರಿ ಸಂಘ:- ಶ್ರೀ ವಿ. ರಾಘವೇಂದ್ರರಾವ್ ಇಕೊನೋಮಿಕ್ಸ್ ಸೀನಿಯರ್ ಲೆಕ್ಚರರ್ (ಉಪಾಧ್ಯಕ್ಷ), ಶ್ರೀಗಳಾದ ಆಳ್ವ, ಡಬ್ಲ್ಯು. ಜಿ. ಮತ್ತು ಫೆರ್ನಾಂಡೀಸ್ ಜೊಸೆಫ್ (ಕಾರ್ಯದರ್ಶಿಗಳು).

ಮದರಾಸು ವಿಶ್ವವಿದ್ಯಾನಿಲಯದ ಎಕೆಡೆಮಿಕ್ ಕೌನ್ಸಿಲಿಗೆ— ಕಾಲೇಜಿನ ಪ್ರಾಧ್ಯಾಪಕರ ಪತಿಯಿಂದ ಅರ್ಥ ಶಾಸ್ತ್ರ ಇತಿಹಾಸಗಳ ಪ್ರಾಧ್ಯಾಪಕರಾದ ಶ್ರೀ|| ಕು. ಶಿ. ಹರಿದಾಸ ಭಟ್ಟ ಎಂ. ಎ. ಹಾಗೂ ಭೌತ ವಿಜ್ಞಾನದ ಆಚಾರ್ಯರಾದ ಶ್ರೀ|| ಯು. ಎಲ್. ಆಚಾರ್ಯ ಎಂ. ಎ; ಎಲ್. ಟಿ ಯವರು ಸರ್ವಾನುಮತದಿಂದ ಆರಿಸಿ ಬಂದಿದ್ದಾರೆ.

ಅಂಜುಮಾನ್ ಹಾಸ್ಟೆಲ್ ಉದ್ಘಾಟನೆ—ಇದೇ ತಾ 2ರಲ್ಲು ಸ್ಥಳೀಯ ಅಂಜುಮಾನ್ ಸಂಸ್ಥೆಯ ಆಡಳಿತ ಸಭೆಯು ವಕೀಲ್ ಉಸ್ಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಮುಸ್ಲಿಂ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಅಂಜುಮಾನ್ ಹಾಸ್ಟೆಲ್ ಉದ್ಘಾಟನಾ ಸಮಾರಂಭ ನಡೆಯಿತು. ಹಾಸ್ಟೆಲಿಗೆ ಪ್ರವೇಶ ಬಯಸುವವರು ಮ್ಯುನಿಸಿಪಲ್ ಕೌನ್ಸಿಲರೂ ಹಾಸ್ಟೆಲಿನ ವಾರ್ಡನರೂ ಆದ ಶ್ರೀ ಯು. ಎಸ್. ಇಸ್ಮಾಯಿಲ್, ಅವರನ್ನು ವಿಚಾರಿಸಬಹುದು. ಈ ವರೆಗೆ ಮುಸ್ಲಿಂ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಅಭಾವವಿದ್ದುದು ಪರಿಹಾರವಾದಂತಾಯಿತು.

ವಿದ್ಯಾ ಮಂತ್ರಿಗಳ ಕಾರ್ಯಕ್ರಮ—ಮದ್ರಾಸು ಸರಕಾರದ ವಿದ್ಯಾಮಂತ್ರಿ ಡಾ| ಎಮ್. ವಿ. ಕೃಷ್ಣರಾಯರು ಇದೇ ತಾ 1ರಲ್ಲಿ ಉಡುಪಿಗೆ ಆಗಮಿಸಲಿದ್ದು ಪೂರ್ವಾಹ್ನ ಸಾರ್ವಜನಿಕ ಸಮ್ಮೆಳನಕ್ಕೆ ಟ್ರೈನಿಂಗ್ ಕಾಲೇಜು ಹ್ಯಾಸಲ್ಲಿ ಕಲ್ಪಿಸಿದ ಉದ್ಘಾಟನೆ, ಶ್ರೀ ಕೃಷ್ಣ ಮಠ ಸಂದರ್ಶನ ಮುಗಿಸಿ ಅಪರಾಹ್ನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಭಾಷಣ, ಮಣಿಪಾಲ ಹಿಂದೂ ಹ್ಯಾಸ್ಕೂಲಿನಲ್ಲಿ ಎಂಜಿನಿಯರಿಂಗ್ ಶಿಕ್ಷಣ ಶಾಖೆಯ ಉದ್ಘಾಟನೆ, ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಲ್ಯಾಬ್ರರಿ ಮತ್ತು ಕಾಲೇಜು ಯೂನಿಯನ್ ಉದ್ಘಾಟನೆ ಮೊದಲಾದ ಕಾರ್ಯಕ್ರಮಗಳನ್ನು ನೆರವೇರಿಸಲಿರುವರೆಂದು ತಿಳಿದು ಬರುತ್ತದೆ.

ನಗರದೊಳಗೆ ಸಿಟಿಬಸ್ ಚಲಾವಣೆಯಾಗಬೇಕಾದ ಅವಶ್ಯಕತೆ—ಸಿಟಿಬಸ್ ನಿಲ್ದಾಣವು ನಗರದ ಒಂದು ಮೂಲೆಯಲ್ಲಿದ್ದು ಬೇರೆ ಬೇರೆ ಹ್ಯಾಸ್ಕೂಲು, ಕಾಲೇಜು, ಆಫೀಸುಗಳಿಗೆ ಹೋಗುವ ವಿದ್ಯಾರ್ಥಿ ಮತ್ತು ಇತರ ಪ್ರಯಾಣಿಕರಿಗೆ ಬಹಳ ಅನಾನುಕೂಲ... ಸಿಟಿ ಬಸ್ಸುಗಳನ್ನು ಮಂಗಳೂರಿನಂತೆ ನಗರದೊಳಗೂ ಓಡಾಡಿಸುವ ವ್ಯವಸ್ಥೆ ಮಾಡುವುದು ಅತ್ಯವಶ್ಯವಿದೆ ಈ ಕುರಿತು ಸಂಬಂಧಪಟ್ಟವರು ಆಲೋಚಿಸಬೇಕಾಗಿಯೂ ಬಸ್ಸಿನವರೇ ಈ ಮುಖ್ಯ ಅಭಾವವನ್ನು ನಿವಾರಿಸಬೇಕಾಗಿಯೂ ಪ್ರಯಾಣಿಕರೆಲ್ಲರು ಬರೆಯುತ್ತಾರೆ.

ಸರ್ಕಸ್—ಇಲ್ಲಿ ಸಿಟಿಬಸ್ ಸ್ಟೆಂಡಿನ ಬಳಿ ಒಂದು ಸರ್ಕಸ್ಸು ಕಂಪೆನಿಯು ಬಂದಿರುವುದೆಂದೂ ಈಗಾಗಲೇ ಆರೋಗ್ಯ ಖಾತೆಯವರು ತಕ್ಕ ಕಾರ್ಯಕ್ರಮ ಕೈಕೊಂಡಿರುವರೆಂದೂ ತಿಳಿದು ಬರುತ್ತದೆ.

ಸ್ವೀಕಾರ

ಪ್ರಕಾಶಿನಿ—(ಸಾಂಸ್ಕೃತಿಕ ಮಾಸಪತ್ರಿಕೆ) ಶ್ರೀ ಕೃಷ್ಣಾಪುರ ಮಠ, ಸುರತ್ಕಲ್, ಸಂಪಾದಕರು— ಶ್ರೀ. ಟಿ ಶ್ರೀಪತಿ, ಬಿ. ಎ. ವಾ|| ಚಂದಾ ರೂ 3|— ಬಿಡಿ ಪ್ರತಿ 0-4-0

ಪಾನೋರ್ನಿಯಂ ಬೋಧನ ಕ್ರಮ—(ಕನ್ನಡ ಸಂಗೀತ ಪುಸ್ತಕ) ಗ್ರಂಥಕರ್ತ- ಶ್ರೀ ವಿ ರಾಮಪ್ಪ, ಪ್ರಕಾಶಕರು— ಕೆ ಭೋಜರಾವ್ ಮತ್ತು ಕಂಪನಿ, ಮಂಗಳೂರು ಬೆಲೆ ರೂ 2-0-0

ಕ್ಷಯ ರೋಗ ಮತ್ತು ದರ ನಿವಾರಣೆ—ಲೇಖಕರು. ಡಾ|| ವಿ. ಆರ್. ಭಟ್, ಪ್ರಕಾಶಕರು ಚಿತ್ರಾ ಪ್ರಕಾಶನ ಮಂದಿರ, ಪೆಂಟ್ ಲೇಂಡ್ ಪೇಟೆ, ಮಂಗಳೂರು 3, ಬೆಲೆ 2-4-0

ಮಂಗಳೂರು

ಪೇರಿಸರ ಮರಣದಂಡನೆ ಕಾಯಂ— ಪೆರ್ಮುದೆ ಕೊಲೆ ಪ್ರಕರಣದಲ್ಲಿ ಆಪಾದನೆ ಗೊಳಗಾಗಿದ್ದ ಪೇರಿಸರ ಮರಣ ದಂಡನೆಯನ್ನು ಮದ್ರಾಸು ಹೈ ಕೋರ್ಟು ಖಾಯಂ ಮಾಡಿದೆ.

ಸೈಂಟ್ ಎಲೋಸಿಯಸ್ ಕಾಲೇಜಿನ ಸಮಾಜ ಸೇವಾಸಂಘದ ಸ್ವಯಂಸೇವಕರು ಕಳೆದ ತಾ 19ರಲ್ಲು ಕಾಪೂರಿನ ಹರಿಜನ ವಸತಿಯಲ್ಲಿ ವಿವಿಧ ಫಲ ವೃಕ್ಷಗಳನ್ನು ನೆಟ್ಟರು. ತಾ 24ರಲ್ಲು ಈ ಸಂಘದ ಉದ್ಘಾಟನೆಯನ್ನು ಕಾಲೇಜಿನ ರೆ। ಫಾ। ರೆಕ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಸದಾನಂದ ಹೆಗ್ಡೆಯವರ ಭಾಷಣವಾಯಿತು. ಈ ಸಂಘದ ಸ್ವಯಂ ಸೇವಕರು ತಾ 27ರಲ್ಲು ಬಾವಟ ಗುಡ್ಡೆಯಲ್ಲೂ ಹಲವು ಸಸಿಗಳನ್ನು ನಟ್ಟರು.

ವರ್ಗಾವರ್ಗಿ—ಜಿಲ್ಲಾ ಪಂಚಾಯತ ಆಫೀಸರ್ ಶ್ರೀ ಕೆ. ಶೀನ ಸೆಟ್ಟಿರಿಗೆ ಮಲಬಾರಿಗೆ ವರ್ಗವಾಗಿದ್ದು ಅಲ್ಲಿಂದ ಶ್ರೀ ಎ. ಕೆ. ರಾಘವನ್ ಅವರು ಜಿಲ್ಲೆಯ ಪಂಚಾಯತ ಆಫೀಸರರಾಗಿ ನೇಮಕ ಹೊಂದಿರುವರು.

ಪೋರ್ಟು ಟ್ರಸ್ಟ್— ಮಂಗಳೂರನ್ನು ಸರ್ವಕಾಲೀನ ಬಂದರವನ್ನಾಗಿ ಮಾಡುವ ಸಂಬಂಧ ಒಂದು ಪೋರ್ಟು ಟ್ರಸ್ಟ್ ರಚಿಸಲು ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಮಸೂದೆ ಮಂಜೂರಾಗಿದೆ.

ಆರೋಗ್ಯ ದಿನಾಚರಣೆ— 1953ನೆ ವಿಶ್ವ ಆರೋಗ್ಯ ದಿನಾಚರಣೆಯು ತಾ 25ರಲ್ಲು ಕಂಪಕಪಳ್ಳಿ ಮುನಿಸಿಪಲ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ಬಿ. ದೇವದಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜೆ. ಎಮ್. ಅಂಚನರು 'ಆರೋಗ್ಯವೇ ಭಾಗ್ಯ' ಎಂಬ ವಿಷಯದ ಕುರಿತು ಭಾಷಣ ಮಾಡಿದರು.

ವಿದಾಯ ಸತ್ಕಾರ—ಸ್ಥಳೀಯ ಬಿ. ಇ. ಎಮ್. ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಎಸ್. ಎ. ಫರ್ನಾಂಡೊರವರಿಗೆ ಶಾಲೆಯ ಹಳೇ ವಿದ್ಯಾರ್ಥಿ ಸಂಘದ ಕಾರ್ಯಕಾರೀ ಸಮಿತಿಯವರು ಈಚೆಗೆ ಒಂದು ವಿದಾಯಕೂಟವನ್ನು ಡಾ। ಬಿ. ಆರ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಿದ್ದರು. ಶ್ರೀ ಫರ್ನಾಂಡೊರವರು ಕಳೆದ ಜೂನ್ ತಿಂಗಳಲ್ಲಿ ನಿವೃತ್ತರಾಗಿದ್ದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 308/1953.

ತಂಗಿ ಶೆಡ್ತಿ ಕೂಡಾ ವಾದಿರು.

ಮತ್ತು

ಬೊಗ್ರ ಶೆಟ್ಟಿ ಕೂಡಾ ಪ್ರತಿವಾದಿರು

ಇವರೊಳಗೆ–

3ನೇ ಪ್ರತಿವಾದಿ:–

ಅಕ್ಕಿ ಶೆಡ್ತಿ—1ನೇ ವಾದಿ ತಂಗಿ ಶೆಡ್ತಿಯ ಮಗಳು– ಮಂಗಳೂರು ತಾಲೂಕು ಇನ್ನ ಗ್ರಾಮದಲ್ಲಿರುವವಳು– ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ–

ದಾವಾ A ಶೆಡ್ಯೂಲು ಆಸ್ತಿಯನ್ನು ಈಗಿನ ಅಳಿಯಸಂತಾನ ಕಟ್ಟಿನ ಪ್ರಕಾರ ಸರ್ವೆರನ ಸಮ ಧರಿಸಿ ಮೂರು ವಿಭಾಗ ಮಾಡಿ ಆ ಪೈಕಿ ಒಂದು ಹಿಸೆಯನ್ನು ಹುಟ್ಟುವಳಿ ಸಮೇತ ತಮಗೆ ಕೊಡಿಸಬೇಕೆಂತ ವಗೈರೆ ನಿವೃತ್ತಿಗಳು ಕೇಳಿ ವಾದಿರು ಮಾಡಿದ ಮೇಲ್ಕಂಡ ದಾವೆಯು ತಾರೀಕು 14-8-53ಕ್ಕೆ ಇಟ್ಟಿರುತ್ತದೆ. ಆ ಕುರಿತು ಉತ್ತರಿಸುವಂಥಾದ್ದಿದ್ದರೆ ಆ ದಿವಸ ಸದ್ರಿ ಕೋರ್ಟು ಮುಂದೆ ಪೂರ್ವಾಹ್ನ 10 ಘಂಟೆಗೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವದು.

K. Ramakrishna Rao
Vakil for plaintiffs.

ಉಡುಪಿ, ತಾ. 3-8-1953.

ಕೇಂದ್ರ ಮೈದಾನಿನಲ್ಲಿ ಧ್ವಜಾರೋಹಣ— ಇದೇ ತಾ 15ರಂದು ಬೆಳಿಗ್ಗೆ 7½ ಗಂಟೆಗೆ ಕೇಂದ್ರ ಮೈದಾನಿನಲ್ಲಿ ಸ್ವತಂತ್ರ ದಿನೋತ್ಸವದ ಸಲುವಾಗಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಮ್ ಚೆಟ್ಟಿಯಾರರು ಧ್ವಜಾರೋಹಣ ಮಾಡುವರು. ಪೋಲೀಸುದಳದವರು ಗೌರವ ರಕ್ಷಣೆಯನ್ನು ಅರ್ಪಿಸುವರು.

ಸರ್ವ ಪಕ್ಷಗಳ ಸಭೆ— ಇದೇ ತಾ 2ರಲ್ಲು ಸಂಜೆ ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ಮಂಗಳೂರಿನ ಎಲ್ಲಾ ರಾಜಕೀಯ ಪಕ್ಷಗಳ ಸಭೆಯು ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಆರ್. ಕಾರಂತರು ಸಭೆಯ ಉದ್ದೇಶಗಳನ್ನು ವಿವರಿಸಿ ಪ್ರತ್ಯೇಕ ಕರ್ನಾಟಕ ಪ್ರಾಂತವನ್ನು ರಚಿಸುವ ವಿಚಾರದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಎಂಬಿತ್ಯಾದಿ ವಿಷಯಗಳನ್ನು ವಿವರಿಸಿ, ಹುಬ್ಬಳ್ಳಿಯಲ್ಲಿ ಕೆಲವರು ಸತ್ಯಾಗ್ರಹವನ್ನು ಇದೇ ತಾ 5ರಂದು ನಡೆಸುವ ಆಲೋಚನೆ ಮಾಡಿದುದು ಅನುಚಿತವೆಂದೂ ಬೇಕಿ ಮುಂದಿನ ಕಾರ್ಯಭಾರ ನಡೆಸಲು ಒಂದು ಕಮಿಟಿಯನ್ನು ರಚಿಸುವ ಆವಶ್ಯಕತೆಯನ್ನು ತಿಳಿಸಿದರು. ಶ್ರೀ ಎನ್. ಎಸ್. ಸುವರ್ಣರು ಮಾತನಾಡುತ್ತಾ ಏಕೀಕರಣದ ಆವಶ್ಯಕತೆಯ ವಿಷಯದಲ್ಲಿ ಎರಡು ಅಭಿಪ್ರಾಯ ವಿಲ್ಲವೆಂದೂ ಕಾಂಗ್ರೆಸ್ ಪಕ್ಷದವನಾಗಿ ಕಾಂಗ್ರೆಸಿನ ಅಭಿಪ್ರಾಯ ತಿಳಿಯದೆ ಕಮಿಟಿಯಲ್ಲಿ ತಾನು ಇರುವುದಕ್ಕೆ ಅಸಾಧ್ಯವೆಂದೂ ತಿಳಿಸಿದರು. ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ತಮ್ಮ ಭಾಷಣದಲ್ಲಿ ಸರಕಾರಕ್ಕೆ ಬೇಕಾಗುವ ಎಲ್ಲಾ ವಿವರಗಳನ್ನು ತಾವು ಕೊಡುವುದಕ್ಕೆ ಸಿದ್ಧರೆಂದೂ, ಆದರೆ ಸರಕಾರವು ಮಾತ್ರ ಮನಸ್ಸು ಮಾಡಬೇಕೆಂದೂ, ಯಾವುದಾದರೂ ಒಂದು ವಿಧದ ಚಳುವಳಿಇಲ್ಲದೆ ಕರ್ನಾಟಕ ಪ್ರಾಂತವನ್ನು ರಚಿಸುವುದು ಅಸಂಭವನೆಂದೂ ಸೂಚಿಸಿದರು. ಶ್ರೀಗಳಾದ ಬಿ. ಮೋಹನರಾವ್, ಡಾ। ಶರ್ಮ, ಕೆ. ಎಸ್. ಎನ್. ಅಡಿಗ, ಕೆ ಕೆ. ಸೆಟ್ಟಿ, ಎಸ್. ಜಿ. ಸಾಲಿನ್ಸ್, ಜಿ ಕೆ. ಭಟ್, ಡಾ। ಸೀತಾರಾಮ ರಾವ್ ಮೊದಲಾದವರು ಮಾತನಾಡಿದರು. ಡಾ। ನಾಗಪ್ಪ ಆಳ್ವರು ಪ್ರಾಂತರಚನೆಯ ಬಗ್ಗೆ ಕಾರ್ಯಕ್ರಮ ಕೈಕೊಳ್ಳುವ ವಿಷಯದಲ್ಲಿ ತಂದ ಒಂದು ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು. ಶ್ರೀಗಳಾದ ಕೆ. ಬಿ ಜಿನರಾಜ ಹೆಗ್ಡೆ ಮತ್ತು ಬಿ. ಎಸ್. ಭಾಸ್ಕರ ರೈಗಳು ಕನ್ವೀನರರಾಗಿರುವ ಒಂದು ಕಮಿಟಿಯ ರಚನೆಯಾಯಿತು. ಅಧ್ಯಕ್ಷರ ಸಮಯೋಚಿತ ಭಾಷಣ, ಶ್ರೀ ಕೆ. ಆರ್. ಕಾರಂತರಿಂದ ವಂದನಾರ್ಪಣೆಗಳಾಗಿ ಸಭಾಂತ್ಯವಾಯಿತು.

ಕುರುಕಾಲು—ಕಳೆದ ಬೇಸಿಗೆಯಲ್ಲಿ ಬೆಂಕಿಯ ಅನಾಹುತದಿಂದ ಮನೆಯನ್ನು ಕಳೆದುಕೊಂಡ ಇಲ್ಲಿಯ ನಿವಾಸಿಕರಾದ ಜನಾಬ ಅಜೀಜ್ ಸಾಹೇಬರಿಗೆ ಪಟೇಲ್ ಶ್ರೀ ಕೆ. ವಾಸು ಶೆಟ್ಟರ ಪ್ರೋತ್ಸಾಹದಿಂದ ಸ್ಥಳೀಯರಾಗೂ ನೆರೆ ಗ್ರಾಮಸ್ಥರಿಂದ ಸಂಗ್ರಹಿಸಲಾದ ರೂ. 560-6-8ನ್ನು ಪಂಚಾಯತ ಬೋರ್ಡ ಪ್ರೆಸಿಡೆಂಟ್ ಶ್ರೀ ಕೆ. ಪಿ. ನರಸಿಂಹಾಚಾರ್ಯರ ಹಸ್ತದಿಂದ ಸಹಾಯ ಧನವಾಗಿ ಕೊಡಲಾಯಿತು.

ಬಜ್ಪೆ—ಇಲ್ಲಿಂದ ಎರಡು ಮೈಲು ದೂರದಲ್ಲಿ ತಾ 31ರಂದು ಮಧ್ಯಾಹ್ನ ಗುಡ್ಡವೊಂದು ಬಿರುಕು ಬಿಟ್ಟು ಒಂದು ಭಾಗವು ಜರಿದು ಒಂದು ಮನೆಯ ಮೇಲೆ ಬಿದ್ದ ಸುದ್ದಿ ತಿಳಿದೊಡನೆ ರಿಸರ್ವ ಪೋಲೀಸ್ ಮತ್ತು ಫಾಯರ್ ಸರ್ವಿಸಿನವರು ದುರಂತದ ಸ್ಥಳಕ್ಕೆ ಹೋಗಿ ನಾಲ್ಕರು ಹೆಂಗಸರ ಮತ್ತು ನಾಲ್ವರು ಮಕ್ಕಳ ಮೃತದೇಹಗಳನ್ನು ಶೋಧಿಸಲು ಪ್ರಯತ್ನಿಸಿದರು. ಆದರೆ 25 ವರ್ಷ ಪ್ರಾಯದ ಹೆಂಗಸೊಬ್ಬಳ ಕಳೇಬರವನ್ನು ಮಾತ್ರ ಮಣ್ಣಿನಡಿಯಿಂದ ಹೊರಗೆ ತೆಗೆಯಲಾಯಿತು. ಉಳಿದವರು ಮಣ್ಣಿನಲ್ಲಿ ಬಹಳ ಆಳದಲ್ಲಿ ಹೂತುಹೋಗಿರಬಹುದೆಂದು ಹೇಳಲಾಗಿದೆ.

ಹೊಸಮಠ—ಇಲ್ಲಿಯ ಕಡವಿನಲ್ಲಿ ತಾನು ತಾ. 28.7.53ರಲ್ಲಿ ದಾಟುವುದಕ್ಕೆ ರೂಪಾಯಿ ಒಂದರಂತೆ ವಸೂಲ್ಮಾಡಿದರೆಂದೂ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡಿಸಬೇಕೆಂದೂ ಪ್ರಯಾಣಿಕರೊಬ್ಬರು ಬರೆಯುತ್ತಾರೆ.

ಕುಂಬಳೆ—ಮದ್ರಾಸಿನ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಶ್ರೀ ರಮಾಣಮೂರ್ತಿಯವರು ತಾ 31ರಂದು ಮಧ್ಯಾಹ್ನ ಇಲ್ಲಿಗೆ ಆಗಮಿಸಿದಾಗ ಅವರನ್ನು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಮೊದಲಾದವರು ಸ್ವಾಗತವಿತ್ತರು. ಶ್ರೀ ಮೂರ್ತಿಯವರು ಮೊಗ್ರಾಲ್, ಆರಿಕ್ಕಾಡಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದರು. ಇಲ್ಲಿ ಒಂದು ಆಸ್ಪತ್ರೆಯಾಗಬೇಕೆಂದು ಪಂಚಾಯತ ಬೋರ್ಡಿನ ಕಡೆಯಿಂದ ಮನವಿ ಒಪ್ಪಿಸಲಾಯಿತು. ಮೆಡಿಕಲ್ ಸ್ಟಾಫಿನವರು ಉಪ್ಪಳ ಹೊರಕಡೆಗೆ ತುತ್ತಾದವರಿಗೆ ಮದ್ದು ಕೊಡುತ್ತಿರುವರು.

ಪುತ್ತೂರು— ಮಲೆನಾಡಿನ ಹಳ್ಳಿಯಾದ ಬೆಳ್ಳಾರೆಯಲ್ಲಿ ಗ್ರಾಮಸ್ಥರ ಸಹಾನುಭೂತಿ ಪ್ರೋತ್ಸಾಹದಿಂದ ಸ್ಥಾಪಿತವಾದ ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲೆಯ ಆರಂಭೋತ್ಸವ ತಾ. 30ರಂದು ಶ್ರೀ ಬಿ. ಐತಪ್ಪ ರೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಸುಬ್ರಾಯನವರು ಶಾಲಾ ಉದ್ಘಾಟನೆಯನ್ನು ಮಾಡಿದರು.

(೫ನೇ ಪುಟದಿಂದ)

ಪ್ರಕೃತಿ ದತ್ತವಾದ ಐಶ್ವರ್ಯವನ್ನು ಯೋಗ್ಯ ಪದ್ಧತಿಯಲ್ಲಿ ಹಂಚಿಕೊಳ್ಳುವುದಕ್ಕೂ ನಾವು ಪ್ರಯತ್ನಿಸಿದರೆ, ಮಾನವತೆಯ ಉದ್ಧಾರವಾದೀತು.

ಆಕಾಶ ಯಾನ

ಭಾರತ ಸರಕಾರವು ಕೆಲವು ಸಮಯದ ಹಿಂದೆ ನಮ್ಮ ದೇಶದ ವಿಮಾನ ಸಾರಿಗೆ ಕಂಪೆನಿಗಳನ್ನೆಲ್ಲ ರಾಷ್ಟ್ರೀಕರಿಸಬೇಕೆಂದು ನಿರ್ಧರಿಸಿತ್ತಷ್ಟೆ. ಈ ನಿರ್ಣಯಕ್ಕನುಸಾರವಾಗಿ ಇದೇ ಆಗೋಸ್ತು ೧ನೇ ದಿನಾಂಕದಿಂದ, ಎಲ್ಲ ಕಂಪೆನಿಗಳೂ ರಾಷ್ಟ್ರೀಕರಣಗೊಂಡವು. ಸರಕಾರವು ದೇಶದ ಒಳಗಿನ ವಿಮಾನ ಸಾರಿಗೆಯ ವ್ಯವಸ್ಥೆ ನೋಡಿಕೊಳ್ಳಲು "ಇಂಡಿಯನ್ ಏರ್ ಲೈನ್ಸ್ ಕೊರ್ಪೊರೇಶನ್" ಎಂಬುದನ್ನೂ ಬೇರೆ ದೇಶಗಳೊಡನೆ ವಿಮಾನ ಸಾರಿಗೆಯನ್ನು ಏರ್ಪಡಿಸಲು "ಏರ್ ಇಂಡಿಯಾ ಇಂಟರ್ ನೇಶನಲ್" ಎಂಬುದನ್ನೂ ನೇಮಿಸಿದೆ. ಇದಲ್ಲದೆ ಸರಕಾರಕ್ಕೆ ವಿಮಾನ ಸಾರಿಗೆಯ ವಿಷಯದಲ್ಲಿ ಸಲಹೆ ಮಾಡಲು ಒಂದು ಸಮಿತಿಯನ್ನೂ ನೇಮಿಸಿದೆ. ರಾಷ್ಟ್ರೀಕರಣದಿಂದ ಅನೇಕ ಮುಖವಾದ ಲಾಭಗಳಿವೆ ಎಂದು ಈ ಸಾರಿಗೆಯ ಉದ್ಘಾಟನಾ ಕಾರ್ಯವನ್ನು ನಡೆಸಿದಾಗಲೂ, ರಾಷ್ಟ್ರೀಕರಣ ಮಸೂದೆಯ ಚರ್ಚೆಯ ಕಾಲದಲ್ಲೂ ಸರಕಾರ ವಿದಿತ ಪಡಿಸಿದೆ. ವಿಮಾನ ಸಾರಿಗೆಯನ್ನು ಟಾಟಾರಂಥವರು ನಮ್ಮ ದೇಶದಲ್ಲಿ ಪ್ರಾರಂಭಿಸಿ ಅದನ್ನು ಜನಪ್ರಿಯಗೊಳಿಸಿದರೆಂದು ನೆಹರೂ ಪ್ರಶಂಸಿಸಿದ್ದಾರೆ. ರಾಜಾಜಿಯವರೂ ವಿಮಾನೋಡ್ಡಾಣದ ಸುಖವನ್ನು ಹೊಗಳಿರುವರು. ಟಾಟಾರ ಪ್ರಯತ್ನದ ಬಳಿಕ ಹುಟ್ಟಿಕೊಂಡ ಏಳೆಂಟು ಕಂಪೆನಿಗಳು ಪರಿಮಿತವಾದ ರೀತಿಯಲ್ಲಿ ವಿಮಾನೋಡ್ಡಾಣದ ಬೆಳವಣಿಗೆಯನ್ನು ಸಾಧಿಸುವಲ್ಲಿ ನೆರವಾದವು. ಆದರೆ ಜೀರ್ಣವಾದ ವಿಮಾನಗಳ ಸ್ಥಾನದಲ್ಲಿ ಹೊಸತನ್ನು ತೆಗೆದುಕೊಳ್ಳಲೂ, ವಿಮಾನ ಸಾರಿಗೆಯ ದರಗಳನ್ನು ಕನಿಷ್ಠ ಮಟ್ಟದಲ್ಲಿಡಲೂ ಇವುಗಳಿಗೆ ಈಚೆಗೆ ತುಂಬ ಕಷ್ಟವೆಂದು ತೋರಿತು. ಸರಕಾರವೇ ವಿಮಾನ ಸಾರಿಗೆಯ ಹೊಣೆಯನ್ನು ತನ್ನ ಮೇಲೆ ಈಗ ತೆಗೆದುಕೊಂಡಿದೆ–ಇದರ ಪರಿಣಾಮವಾಗಿ ವಿಮಾನಗಳ ಸಾರಿಗೆ ತೀವ್ರ ಅಭಿವೃದ್ಧಿಯನ್ನು ಹೊಂದುವ ನಿರೀಕ್ಷೆ ಇದೆ. ರಾಷ್ಟ್ರೀಕರಣದಿಂದ ಕೆಲಸಗಾರರು ಕಡಿಮೆ ಸಾಧ್ಯದರೂ ಸರಕಾರವು ಈಗ ತಜ್ಞರನ್ನೆಲ್ಲ ಇಟ್ಟುಕೊಂಡಿರುತ್ತದೆ ಇವರಲ್ಲಿ ಕೆಲವರನ್ನು ವಿದೇಶಗಳಿಗೆ ಹೆಚ್ಚಿನ ತರಬೇತಿಗಾಗಿ ಕಳಿಸಿಕೊಟ್ಟರೆ, ಅವರಿಂದ ಮುಂದಕ್ಕೆ ಪ್ರಯೋಜನ ಪಡೆಯಬಹುದು. ಹಾಗೆಯೇ ವಿಮಾನೋಡ್ಡಾಣದ ಆವರ್ತಿಯನ್ನು ಹೆಚ್ಚಿಸಲು ರಾಷ್ಟ್ರೀಕರಣದಿಂದ ಸಹಾಯವಾದೀತೆಂದೂ ಹೇಳಬಹುದು. ಏಕೆಂದರೆ, ಕಾಯ್ದಿಟ್ಟುಕೊಳ್ಳಬೇಕಾದ ವಿಮಾನಗಳ ಸಂಖ್ಯೆ ಮೊದಲಿನಷ್ಟು ಹೆಚ್ಚಾಗುವುದಿಲ್ಲ.

ಪುತ್ತೂರು. ಡಿ. ಮುನ್ಸಿಫ ಕೋರ್ಟಿನಲ್ಲಿ

O. S. 210/1953

ನೆಟ್ಲ ಸದಾಶಿವಯ್ಯ—ವಾದಿ.

ಮೊಕಟ್ರಮಣಯ್ಯ—ಮುಂಡಾಜೆ ಶಂಕರನಾರಾಯಣ ಯಾನೆ ಅಣ್ಣಯ್ಯನವರ ಮಗ—ಕುಟುಂಬದ ಯಜಮಾನ ಗೋಳ್ತಮಜಲು ಗ್ರಾಮದ ನೆಟ್ಲ ಮಠದ ಮುಂಡಾಜೆ. ಹಾಲಿ ಬೋಳಂತೂರು ಗ್ರಾಮದ ಕೊಕ್ಕಪುಣಿ ಗೋಳಿಯಿಂದ ಭಟ್ರಲ್ಲಿರುವದು—.—ಪ್ರತಿವಾದಿ

ವಾದಿಗೆ ಪ್ರತಿವಾದಿಯಿಂದ ಬರ ಡಿ ಮಾಪ್ರೋನೋಟಿನ ಅಸಲು ರೂ. ಅಸ್ಸಲು ಬಡ್ಡಿಯಿಂದ ರೂ 633-5-6ರ ವಸೂಲಿಗೆ ವಾದಿಯು ದಾವೆ ಮಾಡಿ ಅದರ ನೋಟೀಸಿನ ತನ್ನ ವ್ಯಾದೆ-ತಾ 25-8-1953ಕ್ಕೆ ಇಟ್ಟಿರುವದರಿಂದಲೂ, ಪ್ರತಿವಾದಿಯ ಸ್ಥಿರಾಸ್ತಿಯು ಕೂಡಾ ಡಿಕ್ರಿಗೆ ಮುಂಚೆ ಜಪ್ತಾಗಬೇಕಾಗಿ R. I. A 932/53ನೇಗ ಅರ್ಜಿ ಬರಕೊಂಡಿರುವದರಿಂದಲೂ ಇವುಗಳ ಕುರಿತು ಪ್ರತಿವಾದಿಯು ಯೇನಾದರೂ ಆಕ್ಷೇಪ ಹೇಳುವದಿದ್ದರೆ ಈ ಕೋರ್ಟು ಮುಂದೆ ಈವ್ಯಾದೆಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಬರಹ ಮೂಲಕ ಕೇಳಿಕೊಳ್ಳತಕ್ಕದು. ತಪ್ಪಿದರೆ ಆತನನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ತನ್ನ ಯಿಂದ ತೀರ್ಮಾನಿಸಲಾದೀತು ಎಂತ ಈ ಕೋರ್ಟಿನವರ ಹುಕುಂ ಮೇರೆಗೆ ಈ ನೋಟೀಸು ಮಾಡಿಸಿಯದೆ.

B. Ramachandra Rao.
M. A. B. L.
Pleader for Plaintiff

ಪುತ್ತೂರು, ದ ಕ. ತಾ 3 8-53

ತಾರೀಕು 6—8—1953ರಿಂದ

ಕೆದಾರ್ ಚಿತ್ರ

ದಿವಾನಾ

ಸೂರಯ್ಯ, ಸುರೇಶ್, ಸುಮಿತ್ರ

ಅನಂತರ:—

ರೇಶಮ್

(ಸೂರಯ್ಯ, ಜಯರಾಜ್)

ಬರವುದು:— ಯಾತ್ರಿಕ್, ಎಕ್-ಥಾ-ಲಡ್ಕಾ, ಪರ್ದೇಸ್, ಸ್ವಪ್ನ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಭಾರತದ ಭೌಗೋಲಿಕ ಹಿರಿಮೆ

(೩ನೇ ಪುಟದಿಂದ)

ಚೀನಾದೊಡನೆ ನಿಕಟ ಸಂಪರ್ಕವನ್ನು ಬೆಳೆಸಿಕೊಳ್ಳಲೂ ಹಿಮಾಲಯವೊಂದು ಆತಂಕ. ಆದರೆ ಈ ನಷ್ಟದ ಕಳ್ಳುಪಾಲು ಲಾಭವನ್ನು ಹಿಮಾಲಯ ನಮಗೆ ಒದಗಿಸಿಕೊಟ್ಟಿರುವುದನ್ನು ಗಮನಿಸಿದರೆ ನಾವು ಅದಕ್ಕೆ ಧನ್ಯವಾದ ಅರ್ಪಿಸಬೇಕು.

❖

ಭಾರತದ ಹವಾಮಾನವು ಒಳ್ಳೆಯ ಪೀಳಿಗೆಯ ಜನರನ್ನು ಸೃಷ್ಟಿಗೆ ತುಂಬ ಅನುಕೂಲವೆನಿಸಿದೆ. ದಕ್ಷಿಣದಲ್ಲಿ ಉಷ್ಣ ಪ್ರಭಾವ ಹೆಚ್ಚೆಂದು ಕಂಡುಬಂದರೂ ಉತ್ತರದಲ್ಲಿ ಸಮಶೀತೋಷ್ಣ ವಲಯವಿದ್ದು, ಅಲ್ಲಿಯ ಜನರು ದೃಢಕಾಯರೂ ಉತ್ಸಾಹಿಗಳೂ ಆಗಿ ಕಂಡು ಬರುವರು. ದಕ್ಷಿಣದ ಜನರು ಕಷ್ಟಸಹಿಷ್ಣುಗಳಾಗಿರುವರು. ಈ ಜನಸಂಖ್ಯೆಯು ಹವಾಮಾನದ ಇನ್ನೊಂದು ಪ್ರತ್ಯಕ್ಷ ಪರಿಣಾಮವಾದ ಮಳೆಯನ್ನು ಹೊಂದಿಕೊಂಡು ದೇಶದಲ್ಲಿ ಚದರಿಕೊಂಡಿದೆ. ಮಳೆಯನ್ನೂ ಜನರ ಸಾಂಪತ್ತಿಕ ಸ್ಥಿತಿಯನ್ನೂ ಹೊಂದಿಕೊಂಡು ಕೃಷಿ ಪದ್ಧತಿಯ ಯೋಗ್ಯತೆಯನ್ನು ಅಳೆಯಬಹುದು. ಈ ದೃಷ್ಟಿಯಿಂದ ಭಾರತವು ಇನ್ನೂ ಬಹಳ ಹಿಂದುಳಿದಿರುವುದು ಗೊತ್ತಾಗುತ್ತದೆ. ಭಾರತದಲ್ಲಿ ನೀರಾವರಿ ಹಾಗೂ ಜಲವಿದ್ಯುಚ್ಛಕ್ತಿಗಳಿಗೋಸ್ಕರ ಉಪಯೋಗಿಸಬಲ್ಲ ಜಲಧಾರೆಯು ಅಪಾರವಾಗಿದ್ದರೂ ಅವರ ಸಮುಚಿತ ಪ್ರಯೋಜನವನ್ನು ಪಡೆದುಕೊಂಡಂತೆ ಕಾಣುವುದಿಲ್ಲ. ನಾವು ವರ್ಷಕ್ಕೆ ೪ ಕೋಟಿ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಪಡೆಯುವುದು ಶಾಧ್ಯವಾದರೂ—ಈಗ ಉಪಯೋಗಿಸಲ್ಪಡುವುದು ಕೇವಲ ಅರ್ಧ ಕೋಟಿ ಕಿಲೋವಾಟು. ಈ ಸುಪ್ತ ಸಂಪತ್ತನ್ನು ನಾವು ಯಥೇಷ್ಟ ಬಳಸಿಕೊಳ್ಳಲು ಭರದಿಂದ ಪ್ರಯತ್ನಿಸಿದರೆ—ಪ್ರಬಲ ರಾಷ್ಟ್ರವನ್ನು ಕಟ್ಟುವ ನಮ್ಮ ಹಂಬಲಕ್ಕೆಗೂಡುವದು. ನಿಸರ್ಗದತ್ತವಾದ ಬೇರೆ ಹಲವು ವರಪ್ರಸಾದಗಳೂ ಇರುತ್ತವೆ. ನಮ್ಮ ಖನಿಜ ಸಂಪತ್ತು ಇವುಗಳಲ್ಲಿ ಪ್ರಾಮುಖ್ಯವಾದುದು. ನಮ್ಮಲ್ಲಿ ದೊರೆಯುವಷ್ಟು ಅಭ್ರಕ ಮತ್ತು ಇಲ್ಮಾಯಿಟ ಬೇರೆಲ್ಲಿಯೂ ಸಿಗುವುದಿಲ್ಲ. ಲೋಹ ಮಂಡೂರವೂ ಧಾರಾಳವಾಗಿ ಸಿಗುತ್ತದೆ. ಕಬ್ಬಿಣದ ಅದುರು ಭಾರತದಲ್ಲಿ ಹೇರಳವಾಗಿದೆ. ಕಲ್ಲಿದ್ದಲಿನ ಸಂಗ್ರಹ ಸ್ವಲ್ಪ ಕಡಿಮೆ ಎಂದು ಕಂಡು ಬಂದರೂ ಇನ್ನು ನೂರು ವರ್ಷಗಳ ವರೆಗೆ ನಮಗೆ ಚಿಂತಿಸುವ ಅಗತ್ಯವಿಲ್ಲ. ಈ ನಡುವೆ ಜಲ ವಿದ್ಯುಚ್ಛಕ್ತಿಯ ಉಪಯೋಗ ಹೆಚ್ಚಿಸಿಕೊಂಡ ಪಕ್ಷದಲ್ಲಿ—ಕಲ್ಲಿದ್ದಲಿನ ಕೊರತೆ ತೀವ್ರವಾಗಲಾರದು.

❖

ಮೇಲೆ ವಿವರಿಸಿದ್ದರ ಮೇಲಿಂದ ನಮ್ಮ ಸಾಧನ ಸಂಪತ್ತುಗಳ ಸ್ಥೂಲ ಅಂದಾಜನ್ನು ಮಾಡಿಕೊಳ್ಳಲು ಸಾಧ್ಯವುಂಟು. ಭಾರತವು ಮುಖ್ಯವಾಗಿ ಕೃಷಿ ಪ್ರಧಾನವಾದ ದೇಶ. ನಮಗೆ ಹೇರಳ ನಿಸರ್ಗದತ್ತ ಸಂಪತ್ತು ಇದೆ. ಹತ್ತಿ, ಕಬ್ಬು, ಅರಗು, ಚರ್ಮ, ಚಾ ಮುಂತಾದ ಉದ್ದಿಮೆಗಳು ಈಗಾಗಲೇ ಸಾಕಷ್ಟು ವಿಕಾಸ ಹೊಂದಿವೆ. ಬೇರೆ ಉದ್ದಿಮೆಗಳ ವಿಸ್ತಾರಣೆ ಮತ್ತು ಅಭಿವೃದ್ಧಿಗೂ ನಮ್ಮ ದೇಶದಲ್ಲಿ ತುಂಬ ಅವಕಾಶವುಂಟು. ಆದರೆ ಹಲವು ತೊಂದರೆಗಳನ್ನು ನಾವೀ ಸಂದರ್ಭದಲ್ಲಿ ಇದಿರಿಸಬೇಕಾಗುವುದು—ಬಂಡವಳಿನ ಕೊರತೆ ತಂತ್ರಜ್ಞರ ಅಭಾವ, ಯಂತ್ರೋಪಕರಣಗಳು ದೊರೆಯದಿರುವುದು, ಮುಂತಾದ ವಿಘ್ನಗಳನ್ನು ನಾವು ಮೊದಲು ನಿವಾರಿಸಿಕೊಳ್ಳಬೇಕಾಗುವುದು. ಭಾರತವೀಗ ಸಮತೂಕದ ಆರ್ಥಿಕ ಪದ್ಧತಿಯನ್ನು ಅನುಸರಿಸುತ್ತಿದೆ. ಕೃಷಿ, ಉತ್ಪಾದನೆ, ಉದ್ಯೋಗ, ಗಣಿಗಳು, ಸಾರಿಗೆ ಸೌಕರ್ಯಗಳು ಮುಂತಾದುವೆಲ್ಲ ಜೊತೆಯಾಗಿಯೇ ಬೆಳೆಯುವ ವಿಕಾಸ ಹೊಂದುವುದು ಈ ಕ್ರಮದ ವೈಶಿಷ್ಟ್ಯ. ನಾವೆಲ್ಲರೂ ಪರಸ್ಪರ ಪೂರಕಾಂಶಗಳಾಗಿರುವುದರಿಂದ ದೇಶದ ರಾಜಕೀಯ ಬಲದ ಸಂಘಟನೆಯನ್ನೂ ಇವು ಏಕತ್ರ ಸಾಧಿಸಬಲ್ಲುವು. ಇಂಥ ಸಾಧನೆಯು ನಿಜವಾದ ಅನುಭವವಾಗಬೇಕಾದರೆ ಭಾರತೀಯರಾದ ನಾವೆಲ್ಲರೂ ನಮ್ಮ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು; ದಾರಿದ್ರ್ಯವನ್ನು ಹೋಗಲಾಡಿಸಲು ಅಜ್ಞಾನವನ್ನೂ ಆಲಸ್ಯವನ್ನೂ ದೂರೀಕರಿಸಲು ನಾವು ಪರಮಾವಧಿ ಪ್ರಯತ್ನವನ್ನು ಮಾಡಬೇಕಾಗುವುದು. ಜನಶಕ್ತಿಯ ಬಲದಿಂದ ನಾವು ಲೋಕದ ಎದುರಲ್ಲಿ ಒಬ್ಬರಾಗಬಲ್ಲೆವು. ನಮ್ಮಲ್ಲಿ ಜಾತಿ ಮತ ಭೇದಗಳು ಕಂಡುಬಂದರೂ—ಸುಸ್ಥಿರವಾದ ನಮ್ಮೆಲ್ಲರನ್ನೂ ಏಕತ್ರ ಬಂಧಿಸಿರುವ ಸಂಸ್ಕೃತಿಯೊಂದಿದೆ. ಭಾರತದ ಬಲವೇ ಈ ಸಂಸ್ಕೃತಿಯಲ್ಲಿದೆ ಎಂದು ಬಲ್ಲವರ ಅಭಿಪ್ರಾಯ. ನಮಗೆ ಕೆಲವು ದಶಕಗಳ ಅವಕಾಶ ದೊರೆತ ಪಕ್ಷದಲ್ಲಿ—ಮತ್ತು ಅಂತರರಾಷ್ಟ್ರೀಯ ಸಹಕಾರ ಸಿಕ್ಕಿದಲ್ಲಿ ಪುನರುಜ್ಜೀವನ ಕಾರ್ಯವನ್ನು ಯಶಸ್ವಿಗೊಳಿಸಬಲ್ಲೆವೆಂದು ತೋರುತ್ತದೆ. ಆಗ ತನ್ನ ಸ್ಥಾನಬಲದಿಂದ ಭಾರತ ಆಗ್ನೇಯ ಏಶಿಯಾದಲ್ಲಷ್ಟೇ ಅಲ್ಲ—ಜಗತ್ತಿನಲ್ಲಿಯೇ ಮಹಾರಾಷ್ಟ್ರವಾಗಿ ಮೆರೆಯಬಲ್ಲದು

— —

ದಿ ಕಥೊಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು, ನಮ್ಮ ಬ್ಯಾಂಕಿನಲ್ಲಿ ಚಿನ್ನದ ನಗಗಳ ಆಧಾರದ ಮೇಲೆ ಪಡೆದ ಸಾಲವನ್ನು ಕ್ಲಿಪ್ತ ಮ್ಯಾದೆಗೆ ಪಾವತಿ ಮಾಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ನಗಗಳನ್ನು ಇದೇ ಆಗೋಸ್ತು ತಿಂಗಳ ತಾರೀಖು 13ನೇ ಗುರುವಾರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ಸಾಲಪಡೆದ ತಾರೀಖು	ಅಡವಿಟ್ಟವರ ಹೆಸರು ಮತ್ತು ವಿಳಾಸ	ಸಾಲದಲ್ಲಿ ಬಾಕಿಯಿರುವ ಮೊಬಲಗು ತಾ. 30-6-53ರ ವರೆಗಿನ ಬಡ್ಡಿ ಸಮೇತ		
27/212 21-3-1953	A. ಮಹಾಬಲ ಸೆಟ್ಟಿ, ಚಿಕ್ಕಮ್ಮ ಸೆಡ್ತಿಯವರ ಮಗ, ಆನಗಳ್ಳಿ, ಕುಂದಾಪುರ.	35	13	0
27/227 30-3-19 3	ಜನ್ನ ಸೇರಿಗಾರ, ಮಂಜುನಾಥ ಸೇರಿಗಾರರ ಮಗ, ಕೋಡಿ, ಕುಂದಾಪುರ.	67	3	0
27/431 30—5—51	ಶೀನಪ್ಪ ಸೆಟ್ಟಿ, ನಾದಿಯಪ್ಪ ಸೆಟ್ರ ಅಳಿಯ ಹೇರಿಕುದ್ರು ಗ್ರಾಮ, ಬಾನಕುದ್ರು ಆನಗಳ್ಳಿ.	51	15	0
27/481 9—6—51	ರಾಮ ಹಾಂಡಾ, ಗಣಪ ಹಾಂಡಾರ ಮಗ, ಕಾವಂರಾಡಿ ಗ್ರಾಮ, ಕುಂದಾಪುರ.	44	8	0
27/503 15—6—51	A. ಮಹಾಬಲ ಸೆಟ್ಟಿ, ಸುಬ್ಬಣ್ಣಸೆಟ್ಟಿ ಅಳಿಯ, ಬಾಳಂಬಡಿ ಮನೆ, ಆನಗಳ್ಳಿ, ಕುಂದಾಪುರ.	24	4	0
27/1061 15—10—51	ಕಲ್ಲಾಡಿಕಲ್ ಹಸನಬ್ಬ, ಇಬ್ರಾಹಿಮರ ಮಗ, ಮೀನು ವ್ಯಾಪಾರಿ, ಕೋಡಿ, ಕುಂದಾಪುರ.	134	4	0
27/945 19—9—51	ಕಲ್ಲಾಡಿಕಲ್ ಹಸನಬ್ಬ, ಇಬ್ರಾಹಿಮರ ಮಗ, ಮೀನು ವ್ಯಾಪಾರಿ, ಕೋಡಿ, ಕುಂದಾಪುರ.	510	3	0
28/11 5—1—53	ಕೆ. ಸುಂದರರಾಮ ಸೇಟ್, ಅನಂತ ಸೇಟ್ರ ಮಗ, ಅಕ್ಕಸಾಲಿಗ, ಕುಂದಾಪುರ ಕಸಬಾ, ಕುಂದಾಪುರ.	99	6	0
28/74 21—1—53	ಮಿಂಗೆಲ್ ಕರ್ವಾಲೊ, ದಿಯೊಗ ಕರ್ವಾಲರ ಮಗ, ಕಲ್ಲುಗುಡ್ಡೆ, ಚಿಕ್ಕನಸಾಲು ರೋಡ್, ಕುಂದಾಪುರ.	30	4	0
28/28 10—1—53	ಶೀನಪ್ಪ ಸೆಟ್ಟಿ, ವೆಂಕಪ್ಪ ಸೆಟ್ಟಿ ಅಳಿಯ, ಗುಲ್ವಾಡಿ ಗ್ರಾಮ, ಕುದ್ರುಮನೆ, ಕಂಡ್ಲೂರು ಪೋಸ್ಟ್.	141	14	0
27 546 28—6—51	ಕುಂಜಾಲೋಜಿ ನಾರಾಯಣ ತಂಡೇಲ, ಗಣೇಶ ತಂಡೇಲರ ಮಗ, ಮೀನುವ್ಯಾಪಾರಿ, ಗಂಗೊಳ್ಳಿ.	604	9	0

The Catholic Bank, Ltd., Coondapoor, 1—8—1953 — **I. Menezes**, *Agent.*

WANTED

One Trained teacher of Higher Grade, on a temporary post, pay according to Government scale plus dearness allowance.

Apply to

MANAGER,

Aided Elementary School. Hesikudru

Post Anagalli, (Coondapur Tq S.K)

N. B: Copy of the application must be submitted to the Dy. Inspector of Schools, Coondapur Range, Coondapur (S. K.)

In the Court of the District Munciff of Mangalore

O. S. 146/1953.

Guddappa Bhandari......Plff.

Manjanna Shetty & others Defts

To,

3rd Deft Sundari Bai,

daughter of Appa Hengsu,

Pattu... [illegible]

The above named plaintiff has filed the above suit for recovery of Rs 718—4—0 being the mesne profits due, and that the said suit is posted to 20—8—1953 for your appearence You are hereby informed to appear on the said date failing which the suit will be decided exparte.

K. Balakrishna Rao

Advocate for Plff.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd., Moolky, S. K.

— - ಗರ್ಭಸ್ರಾವ! - —

ಅನೇಕ ಹೆಂಗಳೆಯರು ನಾಲ್ಕಾರು ಸಲ ಗರ್ಭಸ್ರಾವದಿಂದ ಬಳಲಿ, ಮಕ್ಕಳಿಲ್ಲದೆ ಕೊರಗುತ್ತಿದ್ದಾರೆ. ನಮ್ಮ ಚಿಕಿತ್ಸೆಯಿಂದ ಅಂತಹ ನೂರಾರು ಸ್ತ್ರೀಯರು ಗುಣಹೊಂದಿ ಮುದ್ದಾದ ಮಕ್ಕಳನ್ನು ಪಡೆದಿದ್ದಾರೆ. ಎರಡು ತಿಂಗಳು ಔಷಧ ಸೇವಿಸಬೇಕಾಗುತ್ತದೆ. ಒಂದು ತಿಂಗಳಿಗೆ ಅಂಚೆವೆಚ್ಚ ಸೇರಿ ಹತ್ತು ರೂಪಾಯಿ ಆಗುವುದು. ವಿ. ಪಿ. ಕಳಿಸಲಾರೆವು. ಹಣ ಪೂರ್ಣ ಮುಂಗಡವಾಗಿ ಕಳಿಸಿ.

ತಾರಾನಾಥ ಆಯುರ್ವೇದ ಮಂದಿರ,

ಹಂಪನಕಟ್ಟೆ, ಮಂಗಳೂರು.

ಕಲಿತು ಮುಗಿಯದು

(೧ನೇ ಪುಟದಿಂದ)

ಸಾಮಂಜಸ್ಯ ಸ್ಥಾಪನೆಯ ಸಾಮರ್ಥ್ಯವೂ ಸಾಧಿಸಲ್ಪಡುವುದು. ಈ ಉದ್ದೇಶವನ್ನು ನಾವು ಮನಗಂಡರೆ, ಸಾಮಾನ್ಯನಾದ ಹುಡುಗನಿಂದಲೂ ಒಳ್ಳೆಯ ಪಾಠವನ್ನು ಕಲಿಯಬಹುದು.-- ಶ್ರೀಮಂತರ ಹುಡುಗ ಮನೆ ಬಾಗಿಲಿನ ಬಳಿ 'ಅಮ್ಮಾ, ಭಿಕ್ಷೆ ನೀಡಿರಮ್ಮಾ' ಎಂದು ದೈನ್ಯದಿಂದ ಪ್ರಾರ್ಥಿಸುವ ಅನಾಥ ಹುಡುಗಿಯನ್ನು ಕಂಡು, ತನ್ನ ತಾಯಿಗೆ ಭಿಕ್ಷೆ ನೀಡುವಂತೆ ಸಲಹೆ ಮಾಡುತ್ತಾನೆ. ಇಲ್ಲಿ ಸಮಾನತೆಯ ಪಾಠವನ್ನೂ ದೀನದುಃಖಿಗಳ ಸೇವೆ ಹಾಗೂ ಸಹಾಯದ ಆದರ್ಶವನ್ನೂ ದೊಡ್ಡವರು ಹೃದಯಂಗಮ ಮಾಡಿಕೊಳ್ಳಬಹುದು. ಅದರಂತೆ ರಾಮಾಯಣದಲ್ಲಿ ಬರುವ ಅಳಿಲಸೇವೆ, ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟ ಮುಂಗುಸಿಯ ನೀತಿಕತೆಗಳು ನಮ್ಮ ತಿಳುವಳಿಕೆಯ ಮಟ್ಟವನ್ನು ಎತ್ತರಿಸಬಲ್ಲುವು. ಮನುಷ್ಯ ಮಾತ್ರದವರಿಂದಷ್ಟೇ ಅಲ್ಲ- ಪಶುಪಕ್ಷಿಗಳ ಸಂಪರ್ಕದಿಂದಲೂ ನಾವು ಒಳ್ಳೆಯತನವನ್ನು ಕಲಿತುಕೊಳ್ಳಬಲ್ಲೆವೆಂಬುದಕ್ಕೆ ಇದು ನಿದರ್ಶನ.

ವಿಜ್ಞಾನದಲ್ಲಿ ಅತ್ಯಂತ ಮಹತ್ವದ ಸಿದ್ಧಾಂತವೆಂದು ಪರಿಗಣಿಸಲ್ಪಟ್ಟಿರುವ ಗುರುತ್ವಾಕರ್ಷಣ ಶಕ್ತಿಯ ರಹಸ್ಯವನ್ನು ನ್ಯೂಟನ್ನನು ಕಂಡುಕೊಂಡ ರೀತಿ ತೀರಾ ಸಾಮಾನ್ಯ. ಮರದಿಂದ ಕೆಳಕ್ಕೆ ಬೀಳುತ್ತಿರುವ ಸೇಬು ಹಣ್ಣನ್ನು ಅವನು ನೋಡಿದ. ಆಗ ಅವನಲ್ಲಿ ಸುಪ್ತವಾಗಿದ್ದ ಸಂಸ್ಕಾರ ಮತ್ತು ಜ್ಞಾನ ತೃಷೆಯು ಹೀಗೆ ಹಣ್ಣು ಕೆಳಗೆ ಬೀಳುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸಲು ಹಚ್ಚಿತು. ಹಣ್ಣುಗಳು ಕೆಳಗೆ ಬೀಳುತ್ತಿರುವುದು ಅದೇ ಮೊದಲನೇ ಸಲವಲ್ಲ. ಅಥವಾ ಅದನ್ನು ಒಬ್ಬ ಮನುಷ್ಯ ನೋಡಿದುದೂ ಅದು ಪ್ರಥಮಾವರ್ತಿಯಲ್ಲ. ಹಾಗೆಂದು ಗುರುತ್ವಶಕ್ತಿಯ ಸಿದ್ಧಾಂತವನ್ನು ಕಂಡುಕೊಂಡುದು ಮಾತ್ರ ಅದೇ ಮೊದಲು. ನಮ್ಮ ಸುತ್ತಣ ಪ್ರಪಂಚವನ್ನು ನಿಜವಾದ ಆಸ್ಥೆಯಿಂದ ನಿರೀಕ್ಷಿಸುತ್ತಿದ್ದರೆ ಇಂಥ ಅನೇಕ ಚಮತ್ಕಾರಗಳನ್ನು ಕಲಿಯಲು ಸಾಧ್ಯವುಂಟು. ಕೇವಲ ವೈಜ್ಞಾನಿಕ ಸ್ವರೂಪದ ಫಲವನ್ನಷ್ಟೆ ಅಲ್ಲ- ಆಧ್ಯಾತ್ಮಿಕ ಶ್ರೇಯಸ್ಸನ್ನೂ ಇಂಥ ನಿರೀಕ್ಷಣೆ ನಮಗೆ ನೀಡಬಹುದು. ಭಗವಾನ್ ಬುದ್ಧನ ಉದಾಹರಣೆಯನ್ನೇ ತೆಗೆದುಕೊಳ್ಳೋಣ! ರಾಜಕುಮಾರನಾದ ಬುದ್ಧ ಮುದುಕನನ್ನು, ರೋಗಿಯನ್ನು, ಹೆಣವನ್ನು ಹಾಗೆಯೇ ಸನ್ಯಾಸಿಯನ್ನು ನೋಡಿದ- ಪರಿಣಾಮವಾಗಿ ಅವನಿಗೆ ಭೌತಿಕ ಜೀವನದ ಮೇಲೆ ಜುಗುಪ್ಸೆ ಬಂತು, ಆಧ್ಯಾತ್ಮಿಕ ಜ್ಯೋತಿಯೆಡೆಗೆ ಮನಸ್ಸು ಒಲಿಯಿತು. ಅವನು ಜ್ಞಾನವಂತನೆನಿಸಿ ಕೋಟ್ಯಾಂತರ ಜನರಿಗೆ ಬೆಳಕು ದೋರುವ ಮಹಾನುಭಾವನಾದ.

ನಮಗೆ ಲಭ್ಯವಿರುವ ಎಲ್ಲ ಸಾಧನ ಹಾಗೂ ಸಲಕರಣೆಗಳಿಂದ ನಾವು ಉತ್ತಮ ವಿಷಯಗಳನ್ನು ತಿಳಿಯಬಲ್ಲೆವು. ಮಹಾತ್ಮಾ "ಗಾಂಧೀಜಿಯವರ ಜೀವನದ ಮೇಲೆ ಅತ್ಯದ್ಭುತ ಪರಿಣಾಮವನ್ನುಂಟು ಮಾಡಿದ ಸಂಗತಿ ರಸ್ಕಿನ್ ಮಹಾಶಯನು ಬರೆದ "ಆ ಕೊನೆಯವನ ವರೆಗೂ" ಎಂಬ ಪುಸ್ತಕ. ಪ್ರಚಲಿತ ಆರ್ಥಿಕ ಸಿದ್ಧಾಂತದ ನೆಲಗಟ್ಟನ್ನೇ ಈ ಗ್ರಂಥ ಅಲುಗಾಡಿಸಿತು — ಗಾಂಧೀಜಿಯ ವಿಚಾರ ಸರಣಿ ಹಾಗೂ ಸರ್ವೋದಯ ಸಿದ್ಧಾಂತವು ಬಹಳ ಮಟ್ಟಿಗೆ ರಸ್ಕಿನ್ನನ ಪುಸ್ತಕದಿಂದಲೇ ಪ್ರೇರಣೆ ಪಡೆದಿದೆ. ನಮ್ಮಲ್ಲಿ ಹೆಚ್ಚಿನವರು ಪಾಂಡಿತ್ಯವನ್ನು ಪಡೆದು ಬುದ್ಧಿವಂತರೆಂಬ ಮನ್ನಣೆಗಳಿಸುವುದಾದರೂ- ಅವರು ಓದಿದ ಪುಸ್ತಕಗಳ ಬಲದಿಂದಲೆಂದು ಹೇಳಬಹುದು. ಹೀಗೆ ಮತ್ತು ಬೇರೆ ನೂರಾರು ಮಾರ್ಗಗಳಿಂದ ನಾವು ನಮ್ಮ ಜೀವನವನ್ನು ತುಂಬು ಜೀವನವನ್ನಾಗಿ, ರಸಭರಿತವನ್ನಾಗಿ ಮಾಡಬಲ್ಲೆವು. ನಾವು ಪ್ರತಿಯೊಂದೂ ಸಂಗತಿಯಲ್ಲಿ ಪಾರಂಗತರಾಗಬೇಕೆಂದು ಅಪೇಕ್ಷಿಸುವುದು ಸರಿಯಾಗಲಿಕ್ಕಿಲ್ಲ- ಏಕೆಂದರೆ ಅರವತ್ತನಾಲ್ಕು ವಿದ್ಯೆಗಳನ್ನು ಕಲಿಯಲಿಕ್ಕೆ ನಾವು ತೊಡಗಿದರೆ- ನಮ್ಮ ಆಯುಸ್ಸು ಸಾಲದೆ ಹೋದೀತು ಆದರೆ, ಇವುಗಳಲ್ಲಿ ಸಾಧ್ಯವಿದ್ದಷ್ಟು ಹೆಚ್ಚು ವಿದ್ಯೆಗಳ ಸ್ಥೂಲ ಪರಿಚಯವನ್ನು ನಾವು ಲಭ್ಯವಿರುವ ಸಾಧನಾ ಮಾರ್ಗಗಳಿಂದ ಸಾಧ್ಯವಿದ್ದಷ್ಟು ಅಲ್ಪಾವಧಿಯಲ್ಲಿ ಮಾಡಿಕೊಳ್ಳಬಲ್ಲೆವು. ನಮ್ಮ ಸಂಸ್ಕಾರ ಮತ್ತು ಗ್ರಹಣ ಶಕ್ತಿಗಳನ್ನು ಹೊಂದಿಕೊಂಡು ನಾವು ಉನ್ನತ ಜ್ಞಾನ ಸಂಪಾದಿಸುತ್ತೇವೆ. ಎಂಥ ದಡ್ಡನೇ ಆದರೂ ಪ್ರಾಮಾಣಿಕವಾದ ಅಭಿಲಾಷೆಯನ್ನು ವ್ಯಕ್ತಪಡಿಸಿ ಪ್ರಯತ್ನಗೈದರೆ, ಅವನಿಗೆ ಯಶಸ್ಸು ದೊರೆತೇ ದೊರೆಯುವುದು."ಉಗುಳಿ ಉಗುಳಿ ರೋಗ- ಬೊಗಳಿ ಬೊಗಳಿ ರಾಗ"ಎನ್ನುತ್ತೇವಲ್ಲ-ಹಾಗೆ. ಈ ವಿಷಯದಲ್ಲಿ ಯಾರೂ ಹತಾಶರಾಗುವುದು ಬೇಡ; ಅದರಂತೆ ತಾನು ಸರ್ವಜ್ಞನೆಂಬ ಹೆಮ್ಮೆಯನ್ನೂ ವಿದ್ವಾಂಸರು ತೋರಿಸಬಾರದು.

—ಓಂತತ್ಸತ್

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿಕೊಂಡಿರುವರಿಂದ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ತಾ. 14—8—53ನೇ ಶುಕ್ರವಾರ ಅಪರಾಹ್ನ ಘಂಟೆ 3-30ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ.	ಹೆಸರು ಮತ್ತು ವಿಳಾಸ	ಮೊಬಲಗು.		
737/50	ಬಿ. ನಾರಾಯಣ ಸೆಟ್ಟಿ, ಕೊಲ್ಲಮ್ಮ ಸೆಡ್ತೀರ ಮಗ ಕಳ್ತೂರು ಗ್ರಾಮ ಪೋಸ್ಟು ಹೆಬ್ರಿ.	96	0	0
255/52	ಎಚ್. ಶಿವರಾಮ ಸೆಟ್ಟಿ, ಅನಂತ ಸೆಟ್ರ ಅಳಿಯ ಹರಾಡಿ ಗ್ರಾಮ ಪೋಸ್ಟು ಸಾಲಿಕೇರಿ.	168	11	0
169/52	ನರ್ಸಿ ಮಡಿವಾಳ್ತಿ, ದಾರು ಹೆಂಗ್ಸಿನ ಮಗಳು ಕುಮ್ರಗೋಡು ಗ್ರಾಮ ಪೋಸ್ಟು ಬ್ರಹ್ಮಾವರ.	136	0	0
495/53	ಬಿ. ಶಂಕರ ಹೆಗ್ಡೆ, ಅಂತಯ್ಯ ಹೆಗ್ಡೇರ ಅಳಿಯ ಹಂದಾಡಿ ಹಳ್ಳುಮನೆ ಪೋಸ್ಟು ಬ್ರಹ್ಮಾವರ.	77	9	0
8/9-50	ಸೀನ ಸೆಟ್ಟಿ, ಜಿ. ಗಿರಿಯಮ್ಮ ಸೆಡ್ತೀರ ಮಗ ವಾರಂಬಳ್ಳಿ ಗ್ರಾಮದ ಗುಡೆಬೆಟ್ಟು ಪೋಸ್ಟು ಬ್ರಹ್ಮಾವರ.	146	2	0
179/50	—Do—	88	11	0
708/51	—Do—	91	4	0
369/51	ಹಿರಿಯಣ್ಣ ಸೆಟ್ಟಿ, ಅಂತಯ್ಯ ಸೆಟ್ರ ಅಳಿಯ ಕಾಡೂರ್ ಗ್ರಾಮ ಪೋಸ್ಟು ಕೊಕ್ಕರ್ಣೆ.	250	8	0
490/52	—Do—	88	11	0
421/52	ಪಾವುಲ್ ಲುದ್ರಿಕ್ಸ್, ಯಾಂತ್ರಾಲ್ ಲುದ್ರಿಕ್ಸರ ಮಗ ಬೈಕಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	22	6	0

Brahmavar.
Dated. 30-7-1953

K. BHUJANGA HEGDE
Agent

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

1946ನೇ ಯಿಸ್ವಿಯ ಸ್ಮಾಲ ನಂಬ್ರ 141 1953ನೇ ಯಿಸ್ವಿಯ ಅಮ್ಲಜಾರಿ ನಂಬ್ರ 59

ಡಿಕ್ರಿ ಮೇಲ ಚೀಟುದಾರ ಚೇಪರಿ ನ್ಯಾರಾಯಣ ನಾಯರ್ ಅರ್ಜಿದಾರ

ಮತ್ತು

ಪ್ರತಿವಾದಿ, ಪೇರಯಿಲ್ ಕಾಂಞಾಂಬು ನಾಯರ್ ಕುಂಞಾಂಬು ನಾಯರರ ಅಳಿಯ ಪ ಉಜ್ಜರಿ ಅಮ್ಮುವ ಮಗ ಪ ಮುಲ್ಲಚೇರಿ ರಾಮುನ್ನಿ ನಾಯರ್ರ ಮಗ, ಕಾಸರಗೋಡು ತಾಲೂಕು ಪೆರಂಬಳ ಗ್ರಾಮದ ಬೈಲಂಗಡಿಯಲ್ಲಿ ಯಿರುವವ—ರೆಸ್ಪಾಂಡೆಂಟ್ ರೆಸ್ಪಾಂಡೆಂಟಗೆ ತಿಳಿಸುವದೇನೆಂದರೆ:-

S. C.1946ನೇ ಯಿ.ಸ್ವಿ ನಂಬ್ರ 141ನೇ ವ್ಯಾಜ್ಯದ ಡಿಕ್ರಿಯು ತನಗೆ ಎಸ್ಸಾಯಿನ್ ಮೆಂಟ ಮೂಲಕ ವರ್ಗ ಮಾಡೋಣಾಗಿಯದೆ ಎಂಬ ಸಬಬಿನ ಮೇಲೆ ಸದ್ರಿ ಡಿಕ್ರಿಯ ಅಮ್ಲಜಾರಿ ಬಗ್ಗೆ ಅರ್ಜಿದಾರನು ಯೀ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಆದುದರಿಂದ ಸದ್ರಿ ಅಮ್ಲಜಾರಿಯಲ್ಲಿ ನಿಮ್ಮನು ಸಿವಿಲ್ ಕೈದಿಗೆ ಯಾಕೆ ಕಳುಹಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1953ನೇ ಯಿಸ್ವಿ ಆಗೋಸ್ಟು ತಿಂಗಳು ತಾರೀಕು 7ರಲ್ಲು ಯೀ ಕೋರ್ಟಿನ ಮುಂದೆ ಹಾಜರಾಗಬೇಕೆಂತ ನಿಮಗೆ ನೋಟೀಸು ಕೊಡೋಣಾಗುತ್ತದೆ.

K. P. Anantha Rao
Advocate for Petitioner
ಕಾಸರಗೋಡು ತಾ 29-7-1953

ಬೇಕಾಗಿದ್ದಾರೆ

ತಿಂಗಳೊಂದರ ಧಾರಾಳ ಸಂಬಳದಲ್ಲಿ ಕೆಲಸಮಾಡಲು ಇನ್ಸ್ಪೆಕ್ಟರರು ಬೇಕಾಗಿದ್ದಾರೆ. ಕೂಡಲೇ ಬರೆಯಿರಿ:-

ಕ್ರಿಸೆಂಟ್ ಇನ್ಶ್ಯೂರೆನ್ಸ್ ಕಂ, ಲಿ,.
ಮಂಗಳೂರು—3.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ವಿದೇಶೀ ವಿನಿಮಯ ಗಳಿಸುವ ಗೇರುಬೀಜ

(೧ನೇ ಪುಟದಿಂದ)

ಕಾರಣಗಳಿವೆ- ಮೊನ್ನೆ ಮೊನ್ನೆಯ ವರೆಗೆ ಗೇರು ಬೀಜದ ಕೈಗಾರಿಕೆಯನ್ನು ಉಪೇಕ್ಷೆಯಿಂದಲೇ ನೋಡಲಾಗುತಿತ್ತು. ದೇಶದ ಇಂದಿನ ಸಂಕ್ರಾಂತಿ ಸಮಯದಲ್ಲಿ ನೋಡಲು ವಾಮನಮೂರ್ತಿಯಂತಿರುವ ಈ ಉದ್ದಿಮೆ ಎಷ್ಟರ ಮಟ್ಟಿಗೆ ಉಪಕಾರ ಮಾಡಬಲ್ಲುದೆಂಬ ಕಲ್ಪನೆ ಯಾರಿಗೂ ಇರಲಿಲ್ಲ. ಸರಕಾರದ ಗಮನವೂ ಈ ಕಡೆಗೆ ಸಾಕಷ್ಟು ವಿಶೇಷವಾಗಿ ಹರಿದಿಲ್ಲ. ವಿದೇಶೀ ಪೇಟೆಯು ದೊರಿತ ಕಳೆದೆರಡು ದಶಕಗಳಿಂದಲೇ ನಮ್ಮ ಕೆಲವು ಮಹನೀಯರ ಗಮನ ಈ ಕೈಗಾರಿಕೆಯತ್ತ ಹರಿಯಿತು. ಆದರೆ ಇದರ ವ್ಯವಸಾಯವನ್ನು ಅಭಿವೃದ್ಧಿಪಡಿಸುವವರಿಗೆ ಮಾತ್ರ ಏನೇನೂ ಉತ್ಸಾಹಕವುಂಟಾಗಲಿಲ್ಲ— ಮೊದಲನೆಯದಾಗಿ, ನಮ್ಮ ದೇಶದ ರೈತರೆಲ್ಲ ಬಡವರು ಗೇರುಮರವು ಚೆನ್ನಾಗಿ ಫಲಕೊಡಬೇಕಾದರೆ ನಾಲ್ಕಾರುವರ್ಷಗಳ ವರೆಗೆ ಕಾಯಬೇಕಾಗುವುದು. ಈ ಮರಗಳನ್ನು ಬೆಳಿಸಲು ಉಪಯೋಗಿಸಿದ ಹಣಕ್ಕೆ ಇಷ್ಟು ತಡವಾಗಿ ಪ್ರತಿಫಲಬರುವುದರಿಂದ ಯಾರೊಬ್ಬರೂ ಅದನ್ನು ಗಮನಿಸುವುದಿಲ್ಲ. ತಿರುಕೊಚ್ಚಿ ರಾಜ್ಯದಲ್ಲಿ ಗೇರುಮರವನ್ನು ಬೆಳೆಯಲು ಅನುಕೂಲವಾದ ಪ್ರದೇಶ ಹೇರಳವಾಗಿದೆಯಂತೆ. ಆದರೆ ರೈತರಿಗೆ ಯೋಗ್ಯ ಅನುಕೂಲತೆ ಮತ್ತು ಸಹಾಯಗಳನ್ನು ಒದಗಿಸುವ ಪ್ರಶ್ನೆಯನ್ನು ಮೊದಲು ಬಗೆಹರಿಸಬೇಕು. ಇನ್ನು ಎರಡನೆಯದಾಗಿ—ಗೇರುಬೀಜದ ಸಂಗ್ರಹಕ್ರಮವು ಇನ್ನೂ ಪುರಾತನ ರೀತಿಯಲ್ಲಿದೆ. ಮಧ್ಯಸ್ಥರ ಚಟುವಟಿಕೆಯೇ ಇಲ್ಲಿ ದೃಷ್ಟಿಗೋಚರವಾಗುತ್ತದೆ. ಇವರು ರೈತರಿಂದ ಅತ್ಯಂತ ಕಡಿಮೆ ಹಣಕ್ಕೆ ಗೇರುಬೀಜವನ್ನು ಕೊಂಡು, ಪೇಟೆಯ ವ್ಯಾಪಾರಿಗಳಿಗೆ ಹೇರಳ ಲಾಭದ ಮೇಲೆ ಮಾರುತ್ತಾರೆ. ಈ ವ್ಯಾಪಾರಿಗಳು ವಿದೇಶದಲ್ಲಿ ಮುಖ್ಯವಾಗಿ ಅಮೇರಿಕಾದಲ್ಲಿ ಗೇರುಬೀಜದ ಬೆಲೆ ಹೇಗಿರುವುದೆಂಬುದನ್ನು ನೋಡಿ, ತಮಗೆ ಸಾಕಷ್ಟು ಲಾಭಾಂಶವನ್ನಿಟ್ಟು ಇಲ್ಲಿಯ ಬೆಲೆ ನಿರ್ಧರಿಸುತ್ತಾರೆ. ಅಂತೂ ಗೇರುಬೀಜವನ್ನು ಬೆಳೆಸುವ ರೈತರು ಮತ್ತು ಈ ಉದ್ಯೋಗದಲ್ಲಿ ತೊಡಗಿದ ವ್ಯಾಪಾರಿಗಳ ನಡುವೆ ನೇರ ಸಂಪರ್ಕವಿರುವುದಿಲ್ಲ. ರೈತರ ಉತ್ಸಾಹ ಹೆಚ್ಚದಿರುವುದಕ್ಕೆ ಪ್ರಾಯಶಃ ಇದೂ ಒಂದು ಕಾರಣ.

❖

ಒಂದು ಚೀಲದಲ್ಲಿರುವ ೧೭೮ರಾತಲು ಗೇರು ಬೀಜವನ್ನು ಒಡೆದರೆ,೩೭ ರಾತಲು ಸ್ವಾದಿಷ್ಟವಾದ ತಿರುಳು (ಅದೇ ನಿಜವಾದ ಗೇರು ಬೀಜ) ದೊರೆಯುತ್ತದೆ. ನಮ್ಮ ದೇಶದಲ್ಲಿ ವಿದೇಶದಿಂದ ಆಯಾತ ಮಾಡುವ ಗೇರು ಬೀಜವಲ್ಲದೆ, ಇಲ್ಲಿಯೇ ಬೆಳೆಯುವ ೪೦-೪೫ ಸಾವಿರ ಟನ್ನು ಗೇರು ಬೀಜವನ್ನೂ ಅವರ ತಿರುಳಿಗೋಸ್ಕರ ಒಡೆಯುತ್ತಾರೆ. ಮೊದಲೇ ಹೇಳಿದಂತೆ, ಗೇರು ಬೀಜದ ಉದ್ದಿಮೆಯು ಕಳೆದ ಎರಡು ದಶಕಗಳಲ್ಲಿ ಅಭಿವೃದ್ಧಿಯನ್ನು ಹೊಂದಿತು. ೧೯೨೦ರಲ್ಲಿ ನಮ್ಮ ನಿರ್ಯಾತ ವ್ಯಾಪಾರ ೫೦ ಟನ್ನುಗಳಷ್ಟೂ ಇರಲಿಲ್ಲ. ಆದರೆ ೧೯೫೩ರಲ್ಲಿ ಇದು ೨೬,೧೯೭ ಟನ್ನುಗಳನ್ನು ಮುಟ್ಟಿದೆ; ಮತ್ತು ೧೯.೩೬ ಕೋಟಿ ರೂಪಾಯಿಗಳನ್ನು ಸಂಪಾದಿಸಿದೆ. ಯುದ್ಧಕ್ಕೆ ಮುಂಚೆ ವರ್ಷಕ್ಕೆ ೧೨೫ ಕೋಟಿ ರೂಪಾಯಿ ಬೆಲೆಯ ೧೩ ಸಾವಿರ ಟನ್ನುಗಳಷ್ಟು ಗೇರು ಬೀಜ ರಫ್ತಾಗುತಿತ್ತು. ಅನಂತರದ ಈ ಅವಧಿಯಲ್ಲಿ ನಿರ್ಯಾತದ ಪ್ರಮಾಣವೂ ಅದು ಸಂಪಾದಿಸಿದ ಹಣದ ಮೊತ್ತವೂ ಸಾಕಷ್ಟು ದೊಡ್ಡದಾಗಿರುತ್ತದೆ. ಸಾಮಾನ್ಯವಾಗಿ ನಮ್ಮ ನಿರ್ಯಾತದಲ್ಲಿ ಶೇಕಡಾ ೮೦ ಅಮೇರಿಕಾಕ್ಕೂ ಶೇಕಡಾ ೧೪ ಬ್ರಿಟನಿಗೂ ಹೋಗುತ್ತದೆ. ಗೇರುಮರದಿಂದ ಬೇರೆ ಉಪಯುಕ್ತ ದ್ರವ್ಯಗಳೂ ದೊರೆಯುತ್ತವೆ-ಗೇರುಬೀಜದ ಓಡಿನಿಂದ ದಪ್ಪನಾದ, ಕಪ್ಪು ಬಣ್ಣದ ಎಣ್ಣೆಯನ್ನು ತೆಗೆಯುತ್ತಾರೆ. ಇದನ್ನು ಬಿಳಿ ಇರುವೆಗಳ ಕಾಟವನ್ನು ದೂರೀಕರಿಸಲೂ ಬಳೆಗಳನ್ನು ಹದಗೊಳಿಸಲೂ ಪಶ್ಚಿಮ ಕರಾವಳಿಯಲ್ಲಿ ವಿಶೇಷವಾಗಿ ಉಪಯೋಗಿಸುವರು. ಡಾ। ಹಾಕ್ನೀಯೆಂಬವರ ಸಂಶೋಧನೆಯ ಪರಿಣಾಮವಾಗಿ ಈ ಎಣ್ಣೆಯಿಂದ ಸಾಮಾನ್ಯ ವಾರ್ನಿಶುಗಳು ಕೊರೆಯುವುದನ್ನು ಸಿಲ್ಲಿಸಲಾಗದ ಸ್ಥಳಗಳಲ್ಲಿ ಯೋಗ್ಯರೀತಿಯಲ್ಲಿ ಬಳಸಬಹುದಾದ ಪೈಂಟು ಇತ್ಯಾದಿಯನ್ನು ತಯಾರಿಸಲು ಸಾಧ್ಯವಾಗಿದೆ. ಈ ಎಣ್ಣೆಯನ್ನು ನಿರ್ಯಾತ ಮಾಡುವರು. ೧೯೫೦ರಲ್ಲಿ ರಫ್ತು ಮಾಡಿದ ಎಣ್ಣೆಯ ಬೆಲೆ ೬೦ ಲಕ್ಷರೂಪಾಯಿಗಳು ಈ ಎಣ್ಣೆಯನ್ನು ವಿವಿಧ ಕೈಗಾರಿಕೋದ್ಯಮಗಳಲ್ಲಿ ಬಳಸುತ್ತಿರುವುದರಿಂದ, ಉಜ್ವಲ ಭವಿಷ್ಯವನ್ನಿದು ಪಡೆದಿದೆ ಎನ್ನಲಡ್ಡಿಯಿಲ್ಲ.

❖

ಇಷ್ಟು ಮಾತ್ರವಲ್ಲದೆ ಗೇರುಮರ ಬೇರೆ ಹಲವು ಮಾನವೋಪಯೋಗಿ ದ್ರವ್ಯಗಳನ್ನು ಕೊಡುತ್ತದೆ. ಗೇರು ಮರದ ಎಲೆಯನ್ನು ಹಳ್ಳಿಗಳಲ್ಲಿ ಹಲ್ಲು ಉಜ್ಜುವುದಕ್ಕೋಸ್ಕರ ಧಾರಾಳವಾಗಿ ಉಪಯೋಗಿಸುವರು. ಮಾವಿನ ಎಲೆಗಿಂತಲೂ ಗೇರು ಎಲೆ ಹಲ್ಲುಜ್ಜುವುದಕ್ಕೆ ತುಂಬ ಒಳ್ಳೆಯದು ಇದರಲ್ಲಿ ಒಂದು ತೆರನಾದ ಅಂಟು ರಸವು ಹೊರಸೂಸುತ್ತದೆ-ಹಲ್ಲಿನ ವಸಡುಗಳನ್ನು ಆರೋಗ್ಯಕರವಾಗಿಡಲು ಇದು ಅತ್ಯುಪಯುಕ್ತವಾಗಿದೆ ಗೇರು ಎಲೆಯಿಂದ ಹಲ್ಲುಜ್ಜುವವರು ೭೦-೮೦ ವರ್ಷದ ಮುದುಕರಾದಾಗಲೂ, ಗಟ್ಟಿಮುಟ್ಟಾದ ಹಲ್ಲುಗಳನ್ನು ಪಡೆದಿರುತ್ತಾರೆ. ಗೇರು ಮರದ ತೊಗಟೆಯಿಂದ ಗೋಂದು ದೊರೆಯುತ್ತದೆ. ಪುಸ್ತಕಗಳಿಗೆ ಕಟ್ಟು ಹಾಕುವಲ್ಲಿ ಈ ಅಂಟಿನ ಉಪಯೋಗ ಬಹಳ ಹೆಚ್ಚು. ಯಾವುದೇ ತರದ ಕೀಟಗಳ ಹಾವಳಿಯಿಂದ ಪುಸ್ತಕವನ್ನು ರಕ್ಷಿಸಬಲ್ಲ ಶಕ್ತಿ ವಿಶೇಷ ಈ ಅಂಟಿಗುಂಟು. ಗೇರು ಮರದ ದಿಮ್ಮಿಯನ್ನು ನಾವು ಉರುವಲಿಗಾಗಿ ಉಪಯೋಗಿಸಬಲ್ಲೆವು. ಸಾಮಾನ್ಯವಾಗಿ ಹಸಿ ಹಂಚನ್ನು ಬೆಂಕಿಯಲ್ಲಿ ಕಾಯಿಸುವಾಗ, ಅಗ್ಗಿಷ್ಟಿಕೆಗೆ ಗೇರು ಮರದ ಉರುವಲನ್ನು ಹಾಕುತ್ತಾರೆ. ಇದು ಹಂಚಿಗೆ ವಿಶಿಷ್ಟವಾದ ಚೊಕಲೇಟಿನ ಬಣ್ಣವನ್ನು ಕೊಡುತ್ತದೆ. ನಮಗೆ ಎಲ್ಲ ಬಗೆಯಿಂದಲೂ ಉಪಯೋಗಕರವಾದ ಗೇರು ಮರವನ್ನು ನಾವು ಗೌರವದಿಂದ ನೋಡಿ, ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಿದರೆ- ತುಂಬ ಲಾಭವನ್ನು ಪಡೆಯಬಲ್ಲೆವು. ನಾವು ಗೇರು ಬೀಜಗಳ ಮಟ್ಟಿಗೆ ಸ್ವಾವಲಂಬಿಗಳಾಗುವಂತೆ ಉತ್ಪಾದನೆಯನ್ನು ಹೆಚ್ಚಿಸುವ ಸಾಧ್ಯಾಸಾಧ್ಯತೆಗಳನ್ನು ತಿಳಿದುಕೊಳ್ಳಬೇಕು. ಅಗತ್ಯ ಬಿದ್ದರೆ ಕಾಯಿದೆ ಬಲವನ್ನು ಪ್ರಯೋಗಿಸಿಯಾದರೂ, ಗೇರು ವ್ಯವಸಾಯದ ರಕ್ಷಣೆಯನ್ನು ಮಾಡಬೇಕು. ಕಾರ್ಖಾನೆಗಳನ್ನು ಸುಧಾರಿಸಿ, ಅವುಗಳಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಸ್ಥಾಪಿಸಬೇಕು ಸಾಧ್ಯವಿದ್ದಷ್ಟೂ ಹೆಚ್ಚು ಠೇಕೆ ಸಂಘಗಳನ್ನು ಕೂಡಿಸಿ, ಈ ಉದ್ದಿಮೆಯ ಅಭಿವೃದ್ಧಿಯನ್ನು ಲಕ್ಷ್ಯಗೊಟ್ಟು ವಿಮರ್ಶಿಸಬೇಕು. ಸಾಧ್ಯವಾದರೆ ವಿದೇಶಗಳಿಗೆ ...ಮಿಂದ ನಿರ್ಯಾತ ಮಾಡುವುದಕ್ಕಿಂತಲೂ, ನಮ್ಮ ಆಹಾರದಲ್ಲಿಯೇ ಹೆಚ್ಚು ಗೇರು ಬೀಜವನ್ನು ಉಪಯೋಗಿಸಲು ನೋಡಬೇಕು.

(ಆಧಾರದಿಂದ)

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS	Exceeds	...	66½ Lakhs
PREMIUM INCOME	„	...	15 „
LIFE FUND	„	...	54¾ „
ASSETS	„	...	60¾ „
BUSINESS IN FORCE	Nearly		3 Crores

A Policy in this Progressive Life Office is good investment: its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia, *Branch Manager*, Diamond Building, Hampankatta, MANGALORE, S. K.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	„ 8,77,860
ಕ್ಷೇಮ ನಿಧಿ	. .	„ 1,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು.

ಮೂರು ವರ್ಷ ಅವಧಿಯ ವಿ... ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟಅನೋಘವಾದವು ಧುರಪ್ರವಂಸಾಯನ



ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:- ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.



ಎಲ್ಲಾ ಕಡೆ ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತಾ

ವಾರದ ಒಳಿತು ಕೆಡುಕುಗಳು

ತಾ. ೭—೮—೫೩ರಿಂದ ತಾ. ೧೩—೮—೫೩ರ ವರೆಗೆ.

ಮೇಷ—ಅದೃಷ್ಟವು ಚೆನ್ನಾಗಿದ್ದ ಈ ಕಾಲದಲ್ಲಿ ನೀವು ಮಾಡಬೇಕಾದ ಕೆಲಸಗಳನ್ನು ಪೂರೈಸಿರಿ. ರಾತ್ರಿ ಹಗಲುಗಳಂತೆ ಪರಿವರ್ತನೆ ಹೊಂದುತ್ತಿರುವ ದೈವವು ಸದ್ಯದಲ್ಲೇ ಪ್ರತಿಕೂಲ ಸ್ಥಿತಿಗೆ ಬರಲಿದೆ. ಇಂದು ನಿಮ್ಮ ಅಂತಃಶತ್ರುಗಳು ಅಧಿಕವಾಗುತ್ತಲಿರುವರು. ಆದರೂ ನಿಮ್ಮ ಭಾಗ್ಯ ಕರ್ಮಪತಿಗಳ ಅನುಗ್ರಹದಿಂದಾಗಿ ಬಯಕೆಯು ನಿರ್ವಿಘ್ನದಿಂದ ನೆರವೇರುವದು, ದೇಹದಲ್ಲಿ ಉಷ್ಣ ಪ್ರಕೋಪದಿಂದ ತಾಪಜ್ವರಾದಿಗಳುಂಟಾಗುವ ಸಂಭವವಿದೆ. ವ್ಯಾಪಾರವ್ಯವಹಾರ ನೌಕರಿ ಮೊದಲಾದವುಗಳಲ್ಲಿ ಫಲಾಪ್ತಿಯು ಉತ್ತಮವಿರುವದು. ವಾರಾದಿಯ 2 ದಿನಗಳು ವಿಜಯಸುಖ ಧನಲಾಭಕಾರಿಗಳಾಗಿವೆ.

ವೃಷಭ—ಕಷ್ಟಪಟ್ಟರೆ ಇಷ್ಟ ಸಿಕ್ಕೀತೆಂಬ ಗಾದೆಯಂತೆ ಸೀಪೀವಾರದಲ್ಲಿ ಶ್ರಮವಹಿಸಿ ಕಾರ್ಯ ಸಾಧಿಸಿದರೆ ಬಯಕೆಯುಂಟು ಫಲಸಿಗುವುದರಲ್ಲಿ ಸಂದೇಹವಿಲ್ಲ. ರಾಜಕೀಯ ಕ್ಷೇತ್ರದಲ್ಲಿನ ನಿಮ್ಮ ಕಾರ್ಯಗಳು ಸಫಲಗಳಾಗುವವು. ವ್ಯಾಪಾರದಲ್ಲಿ ಉತ್ತಮ ಪ್ರಯೋಜನ ಹೊಂದುವಿರಿ. ಆದರೆ ವಿದ್ಯೋದ್ಯೋಗಿಗಳಿಗೂ ಸೇವಕ ಜನತೆಗೂ ಈ ಕಾಲವು ಅಷ್ಟೊಂದು ಹಿತಕರವಾಗಿ ಪರಿಣಮಿಸದು. ನಿಮ್ಮ ಮಕ್ಕಳ ಆರೋಗ್ಯಕ್ಕೆ ಹಾನಿಯಿದೆ. ಪರ್ಯಟನದಲ್ಲಿ ಕಷ್ಟನಷ್ಟಗಳು ಹೆಚ್ಚುವ ಸಂಭವವಿದೆ. ತಾ. 8, 9, ಮಾತ್ರ ಉಳಿದ ದಿನಗಳಿಗಿಂತ ಉತ್ತಮವಿರುವದು.

ಮಿಥುನ—ನಿಮ್ಮ ದುಡಿಮೆಯ ಹಣವು ನಿಮ್ಮ ಪ್ರಯೋಜನಕ್ಕೆ ಸಿಗಲಾರದು. ವ್ಯರ್ಥ ಖರ್ಚುಗಳು ಸುತ್ತಲಿಂದಲೂ ಪ್ರಾಪ್ತವಾಗಲಿವೆ. ಅನಿರೀಕ್ಷಿತವಾಗಿ ಪ್ರವಾಸಗಂಟುಬೀಳಲಿವೆ. ಏಕಸ್ಮಿಮಿತ್ತ ನಾನಾ ತರದ ಕಷ್ಟನಷ್ಟಗಳೊದಗುವವು. ಶತ್ರು ವರ್ಗದವರಿಂದಾಗಿ ನಿಮ್ಮ ಆರ್ಥಿಕ ಭಾಗಕ್ಕೆ ತುಂಬಾ ಹಾನಿಯಿದೆ. ಮನಸ್ಸು ಚಂಚಲವಾಗಿದ್ದು ಕಾರ್ಯಾಕಾರ್ಯ ವಿವೇಕ ಶಕ್ತಿಯು ನಷ್ಟವಾಗುವದು. ಅರ್ಧಾಂಗಿಯ ಆರೋಗ್ಯವು ಕೆಡಲಿದೆ. ಗುರುಹಿರಿಯರ ಆಗ್ರಹಕ್ಕೆ ಗುರಿಯಾದ ನಿಮಗೆ ತಾ. 8. 9 ರಲ್ಲಿ ಧನಮಾನಗಳಿಗೆ ಹಾನಿಯೂ ಕಾರ್ಯಕ್ಕೆ ವಿಘ್ನಗಳೂ ಪ್ರಾಪ್ತವಾದವು.

ಕರ್ಕಟಿ - ನಿಮ್ಮ ಜನ್ಮ ರಾಶಿಯಲ್ಲಿ ನೀಚನಾದ ಅಂಗಾರಕನು ಕುಳಿತಿರುವುದರಿಂದ ಈ ಕಾಲದಲ್ಲಿ ನೀವು ವಿಶೇಷ ಜಾಗರೂಕರಿರತಕ್ಕದ್ದು. ಅನಿರೀಕ್ಷಿತ ಅಪಘಾತಗಳು ಪ್ರಾಪ್ತವಾದವು. ಶತ್ರು ಜನರಿಂದ ತುಂಬಾ ಭಯವಿದೆ. ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುವದು. ಸಮಾಜದಲ್ಲಿ ಸ್ಥಾನಮಾನಾದಿಗಳು ಲಭಿಸುವವು. ಪಶು, ಭೃತ್ಯ, ಧನ, ಧಾನ್ಯಾದಿಗೃಹೋಪಕರಣಗಳು ಸಂಪತ್ತುಣ್ಣನಿರುವುದರಿಂದ ಕಾಲಯಾಪನೆಯು ಸುಗಮವಾಗಿ ಸಾಗುವದು. ಕೆಲವೊಮ್ಮೆ ಪಾಕ್ಕಲಹವಾಗುವ ಸಂಭವವಿದೆ. ತಾ. 8, 9ರಲ್ಲಿ ಗೃಹಸುಖ ಧನಮಾನಗಳು ಲಭಿಸುವವು.

ಸಿಂಹ—ಸದ್ಯ ನಿಮಗೆ ಅನುಕೂಲ ರಾಗಿರುವವರೆಂದರೆ ಶುಕ್ರಾಚಾರ್ಯರೊಬ್ಬರೇ ಆದರಲ್ಲೂ ವ್ಯಯದಲ್ಲಿ ಗುರುಶತ್ರುವೂ ಧನಸ್ಥಾನದಲ್ಲಿ ಶನೈಶ್ವರನೂ ಕುಳಿತಿರುವುದರಿಂದ ಈ ವಾರದಲ್ಲಿ ಇಲ್ಲಸಲ್ಲದ ಖರ್ಚುಗಳು ಹೆಚ್ಚುವುದಲ್ಲದೆ ಶ್ರಮಕ್ಕೆ ತಕ್ಕ ಫಲವೂ ಸಿಗಲಾರದು. ಆಪದ್ಧನವು ಕೂಡ ವ್ಯಯವಾಗುವ ಸಂಭವವಿದೆ. ಪಿತ್ತಪ್ರಕೋಪದಿಂದ ಅನಾರೋಗ್ಯವೂ ತಾಪ ಜ್ವರಾದಿಗಳೂ ಕಾಣಿಸಿಕೊಳ್ಳಲಿವೆ. ತಾ. 6- 7- 10. 11, 12. ಈ ದಿನಗಳಲ್ಲಿ ಹೆಚ್ಚಿನ ಕಷ್ಟಾನಿಷ್ಟಗಳನ್ನು ಹೊಂದಬಹುದು.

ಕನ್ಯಾ—ಇಂದಿನ ಗ್ರಹಮಾನವು ನಿಮ್ಮ ಭಾಗಕ್ಕೆ ತುಂಬಾ ಅನುಕೂಲವಾಗಿರುವುದು. ಇಂತಹ ಸುಸಮಯವು ಸದ್ಯ ನಿಮಗೆ ಇನ್ನು ಲಭಿಸಲಾರದು. ಆದ ಕಾರಣ ನಿಮ್ಮ ಸಂಕಲ್ಪಗಳನ್ನು ನೀವಿಂದೇ ಕಾರ್ಯರೂಪಕ್ಕೆ ತರಲೆತ್ನಿಸಿರಿ. ಅನಾಯಾಸದಿಂದಲೂ ನಿರ್ವಿಘ್ನದಿಂದಲೂ ಕಾರ್ಯವು ಕೈಗೂಡಲಿದೆ. ಹಿಂದಿನ ಸಾಲ ಕಡ ಮೊದಲಾದವುಗಳಿಂದ ಮುಕ್ತರಾಗಿ ಕೈಯಲ್ಲೂ ಸಾಕಷ್ಟು ಧನ ಸಂಗ್ರಹವಾಗುವದು. ಜನತೆಯಿಂದ ಸ್ಥಾನಮಾನಗಳನ್ನು ಪಡೆವಿರಿ. ವಾರಾಂತ್ಯದ 3ದಿನಗಳು ಖರ್ಚು ಅಧಿಕವಾದೀತು.

ತುಲಾ—ಶ್ರಮಕ್ಕೆ ತಕ್ಕ ಫಲವೆಂಬಂತೆ ಈ ವಾರದಲ್ಲಿ ನಿಮ್ಮ ಕೆಲಸಕ್ಕೆ ತಕ್ಕುದಾದ ಫಲವು ಲಭಿಸಲಿದೆ. ಆದ ಕಾರಣ ದಿನಯಾಪನೆಯು ಕಷ್ಟಸಾಧ್ಯವೆನಿಸದು. ರಾಜಕೀಯ ಸಾರ್ವಜನಿಕ ರಂಗಗಳಲ್ಲಿ ಇಚ್ಛೆಯಂತೆ ಫಲಪ್ರಾಪ್ತಿಯಿದೆ ಆರ್ಥಿಕ ಮುಗ್ಗಟ್ಟು ದೂರವಾಗುವದು. ಆದರೆ ಅಷ್ಟಮಗನಾದ ಗುರು ಮತ್ತು ವ್ಯಯದಲ್ಲಿದ್ದ ಶನೈಶ್ವರ ಇವರೀರ್ವರು ನಿಮ್ಮ ತನುಮನಗಳಿಗೆ ಸುಖ ನೆಮ್ಮದಿಯನ್ನೀಯಲಾರರು. ಒಂದಿಲ್ಲೊಂದು ತೆರನಾದ ಚಿಂತೆಯು ನಿಮ್ಮ ಬೆಂಬಿಡದು. ವಾರಾಂತ್ಯದ 5ದಿನಗಳು ಇಷ್ಟ ಪ್ರದಗಳಿವೆ.

ವೃಶ್ಚಿಕ—ಸುಖದುಃಖ ಲಾಭನಷ್ಟಗಳು ನಿಮಗೀಕಾಲದಲ್ಲಿ ಸರಿಸಮಾನಗಳಾಗಿವೆ. ಧನ ಪತಿಗಳಾದ ಸುರ ಗುರುಗಳು ಕೇಂದ್ರದಲ್ಲಿರುವುದರಿಂದಲೂ ಸಖ ಪತಿಯಾದ ಶನೈಶ್ವರನು ಲಾಭಗನಾಗಿರುವುದರಿಂದಲೂ ನಿಮಗೀವಾರದಲ್ಲಿ ಧನಸುಖಗಳಿಗೇನೂ ಕೊರತೆ ಬಾರದು. ಹಿಡಿದ ಕಾರ್ಯದಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ. ನಿಮ್ಮ ವಾಕ್ಚಾತುರ್ಯದಿಂದಾಗಿ ಜನತೆಯ ಬೆಂಬಲವನ್ನು ಪಡೆವಿರಿ. ನೀಚ ಜನರಿಂದ ವಿಶೇಷತಃ ಧನಲಾಭವಾಗಲಿದೆ ವಾರಾಂತ್ಯದ 3ದಿನಗಳು ಸುಖವಾಯಿಗಳಿವೆ

ಧನು—ಕರ್ಮಪತಿಯಾದ ಬುಧನೊಬ್ಬನನ್ನು ಬಿಟ್ಟರೆ ಮಿಕ್ಕೆಲ್ಲಾ ಗ್ರಹರೂ ಸದ್ಯ ನಿಮ್ಮಮೇಲೆ ಮುನಿದಿರುವರು. ಆತನ ನಿಮ್ಮ ಸಂಕಲ್ಪಗಳಿಂದ ಕಾರ್ಯರೂಪಕ್ಕೆ ಬರಲಾರವು ಯಾವ ಕೆಲಸಕ್ಕೆ ಕೈಹಾಕಿದರೂ ವಿಘ್ನಗಳು ಮುಂದಾಗಿ ಉಪಸ್ಥಿತವಾಗುವವು. ದೇಹಾಲಸ್ಯ ಮನೋರೋಗಗಳಿಂದ ಬಳಲಿ ಬೆಂಡಾದ ನಿಮಗೆ ಆರ್ಥಿಕ ದುರವಸ್ಥೆ ಶತ್ರುಪೀಡೆ ಸ್ತ್ರೀಯರಿಂದಾಗಿ ಸಂಭವಿಸತಕ್ಕ ಅನಿಷ್ಟ ಅಪವಾದಗಳು ಮೇಲಿಂದ ಮೇಲೆ ಪ್ರಾಪ್ತವಾಗಿ ತಲೆಯೆತ್ತಿ ತಿರುಗದಂತೆ ಮಾಡುವವು. ವಾರಾದಿಯ 2 ದಿನಗಳು ಇದ್ದುದರಲ್ಲಿ ಸ್ವಲ್ಪ ಲೇಸು.

ಮಕರ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೆವೊಂದಿರಲಿ ಎಂಬ ದೃಢಮನಸ್ಸಿನಿಂದ ನೀವು ನಿಮ್ಮ ಕರ್ತವ್ಯವನ್ನು ಮಾಡಿರಿ. ಇತರ ಎಲ್ಲಾ ಗ್ರಹರೂ ಪ್ರತಿಕೂಲರಾದರೂ ಬೃಹಸ್ಪತ್ಯಾಚಾರ್ಯರ ಪೂರ್ಣದೃಷ್ಟಿರೂಪವಾದ ಅನುಗ್ರಹವು ನಿಮಗೆ ವಜ್ರಕವಚದಂತಿದೆ. ಆರಂಭದಲ್ಲಿ ಕಷ್ಟನಷ್ಟಗಳು ಕಾಣಿಸಿದರೂ ಅಂತ್ಯದಲ್ಲಿ ನಿಮ್ಮ ಮನಸ್ಸಿಗೆ ನೆಮ್ಮದಿ ಲಭಿಸಲಿದೆ. ಶ್ರಮಜೀವಿಗಳಿಗೂ ವ್ಯಾಪಾರೀ ವರ್ಗಕ್ಕೂ ಈ ವಾರವು ಅಷ್ಟೊಂದು ಹಿತಕರವಲ್ಲ. ವಾರಾದಿಯ 4 ದಿನಗಳು ಉಳಿದ ದಿನಗಳಿಗಿಂತ ಪ್ರಶಸ್ತವಿವೆ.

ಕುಂಭ—ನಿಮ್ಮ ಅದೃಷ್ಟವಿಂದು ಉತ್ತಮವಿರುವದು. ಉದ್ಯೋಗದಲ್ಲಿ ದಿನೇದಿನೇ ಪ್ರಗತಿಹೊಂದುವಿರಿ. ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ನೀವು ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾಗಿ ಫಲವು ಲಭಿಸುವದು. ನಾಯಕ ಕಾರ್ಯಗಳಲ್ಲೂ ಕೋರ್ಟು ಕಛೇರಿಗಳಲ್ಲಿನ ವ್ಯವಹಾರಗಳಲ್ಲೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವದು. ಆದರೆ ಬಂಧುವರ್ಗದವರಿಂದಾಗಿ ಮನಸ್ತಾಪ ಕಲಹಾದಿಗಳು ಹೆಚ್ಚಲಿವೆ. ಆತ್ಮೀಯರ ವಿರಹ ವೇದನೆಗೆ ಸಿಲುಕಲಿವಿರಿ. ವಾರಾಂತ್ಯದ 5 ದಿನಗಳು ಅನುಕೂಲವಾಗಿರುವವು.

ಮೀನ—ದೈವವು ಅತೀವ ಪ್ರತಿಕೂಲವಸ್ಥೆಗೆ ಬಂದಿದೆ. ನೀವೇನೇ ಮಾಡಿದರೂ ಎಷ್ಟು ದುಡಿದರೂ ನಿಮ್ಮ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತೆ ವಿಫಲವಾಗುವದು. ಇಂತಹ ಕಷ್ಟಕಾಲದಲ್ಲಿ ಬಾಧೆಗಳಾಗಲಿ ವಿಘ್ನಗಳಾಗಲಿ ನಿಮಗೆ ತಿಳಿದಾಗಲೊಲ್ಲದು ಅಪೇಕ್ಷೆ ನಿಮ್ಮ ಕೈಹಿಡಿದಾಕೆ ಮತ್ತು ಪಡೆದ ಮಕ್ಕಳೂ ಇಂದು ವಿರೋಧವಾಗಿವರ್ತಿಸುವರೆಂದು ಮೇಲೆ ಹೇಳಬೇಕಾದೇನು. ಅಂತೂ ಸ್ವಪ್ನದಲ್ಲೂ ನಿಮಗೆ ಸುಖಸಿಲ್ಲೆಂದರೆ ತಪ್ಪಾಗದು. ವಾರಾಂತ್ಯದ 3 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳಿಗೆಡೆಯುಂಟಾದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 202/53. O. S. 460/51.

ರಾಮದಾಸ ಮಂಜ- ಅರ್ಜಿದಾರ.

I. ಪರಮೇಶ್ವರ ಅಡಿಗ ಕೂಡಾ- ಎದ್ರಿಗಾ.

ಉಡುಪಿ ತಾಲ್ಲೂಕು ಕಾವಡಿ ಗ್ರಾಮದ ಹವಾಲಿಗಿರುವ ಹುತ್ತಕ್ಕೆ ಹೆಗ್ಗಡ್ತಿಯ ಮಗಳು ರುಕ್ಮಿಣಿ ಸೆಡ್ತಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:-

ಅರ್ಜಿದಾರನು 1ನೇ ಎದ್ರಿಯ ಹಿಸೆ ಹಕ್ಕಿನ ಸ್ಥಳಗಳನ್ನು ಕೋರ್ಟು ಮುಖಾಂತ್ರ ನಿಲಾಮು ಮಾಡ್ಸಿ ತನ್ನ ಡಿಕ್ರಿಯ ಆವೇಜನ್ನು ಪಡೆಯುವ ಬಗ್ಗೆ ಸದ್ರಿ ಅರ್ಜಿ ದಾಖಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ 20-8-53 ಕ್ಕೆ ತನಿಖೆಗೆ ಇದೆ. ನಿಮ್ಮದೇನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿವಸ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಲ್ಲಿ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವುದು. ತಿಳಿದಿರಲಿ.

ಹುಕುಂ ಪ್ರಕಾರ

H. Laxminarayanayya,

Advocate for petitioner.

Coondapur, 29-7-53.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪಡತಪ್ಪಿ ಋತುಸ್ರಾವವಾಗುವುದು, ಪತ್ತೋಬೆಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8/-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ಪದ್ಮಾ ಕಂಪೆನಿ, ಮಂಗಳೂರು.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ಬಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಸೇರೂರಿರುವ ಬಹಿಷ್ಠೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ವಂಗಿ ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, ಬಂಜೆತನ ವನ್ನುಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಉಷ್ಣತೆಯನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ, ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ.

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

Edited, Printed & Published By K. H. Shetty at the Navayuga Press, Udipi, S. India

ಸ್ವಾತಂತ್ರ್ಯದಿನೋತ್ಸವ ಸಂಚಿಕೆ

1953

ನವಯುಗ

ಶುಭಾಶಯಗಳು

ಭಾರತವು ಸ್ವಾತಂತ್ರ್ಯವನ್ನು ಪಡೆದ ಆರನೇ ವರ್ಷದ ಶುಭದಿನದಲ್ಲಿ ನಮ್ಮೆಲ್ಲ ಗ್ರಾಹಕರಿಗೂ, ಸ್ನೇಹಿತರಿಗೂ, ಹಿತೈಷಿಗಳಿಗೂ ನಮ್ಮ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತೇವಲ್ಲದೆ ಮುಂದೆಯೂ ಅವರೆಲ್ಲರ ಸೇವೆಗೆ ಬದ್ಧಕಂಕಣರಾಗಿರುವುದು ನಮ್ಮ ಪ್ರಾಮಾಣಿಕ ಕಾಂಕ್ಷೆಯೆಂದು ಆಶ್ವಾಸನೆ ನೀಡುತ್ತೇವೆ. ಈ ಸುದಿನದ ಪರ್ವಕಾಲದಲ್ಲಿ ನಮ್ಮ ಮಹಾ ಪ್ರಧಾನ ಮಂತ್ರಿಗಳು ಹೇಳಿದ ಕೆಲವು ಮಾತುಗಳನ್ನು ಅವರೆಲ್ಲರ ಅವಗಾಹನೆಗೆ ತರಲಪೇಕ್ಷಿಸುತ್ತೇವೆ.

"ಉಳಿತಾಯ ಯೋಜನೆಯನ್ನು ಜನತೆಯು ಹೆಚ್ಚುಹೆಚ್ಚಾಗಿ ಪ್ರೋತ್ಸಾಹಿಸುವುದು ಅತ್ಯಂತ ಅಗತ್ಯವಿದೆ. ಸಾಧ್ಯವಿದ್ದಷ್ಟು ಹೆಚ್ಚು ಉಳಿಸಿಕೊಳ್ಳುವುದರಿಂದ ನಾವು ನಮಗೂ ರಾಷ್ಟ್ರಕ್ಕೂ ಸಹಾಯ ಮಾಡಿದಂತಾಗುತ್ತದೆ."

ದಿ ಕೆನರಾ ಇಂಡಸ್ಟ್ರಿ [illegible]
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ

THE CANARA INDUSTRIAL &
BANKING SYNDICATE LTD.,

Estd: 1925] H. O: **UDIPI**, S. I.



ಬೆಲೆ 0-4-0

ಸಾವಿರದಲ್ಲಿ ಒಂದು—

ಮಕ್ಕಳು ಸಡಗರದಿಂದ ಮೋಟಾರು ಕಾರನ್ನು ಏರಿ ಕುಳಿತರು. ಆಗ ಡ್ರೈವರ ತಂದೆಯ ಬಳಿಗೆ ಬಂದು ಹೇಳಿದ—"ಇಂಜಿನಿನ ಆ ಭಾಗ ತುಸು ಕೆಟ್ಟಿದೆ. ಶೀಘ್ರ ಅಪಾಯದ ಸಂಭವವಿಲ್ಲದಿದ್ದರೂ ಸುರಕ್ಷಿತವೆನ್ನಲಾರೆ. ಹಾಗೆಂದು, ಈಗಲೇ ಸರಿಪಡಿಸದಿದ್ದರೂ, ಸದ್ಯಕ್ಕೆ ತೊಂದರೆಯಾಗದು."

ತಂದೆ ಹುಬ್ಬು ಗಂಟಿಕ್ಕಿ "ಛೆ, ಛೆ, ಅದೆಲ್ಲ ಕೂಡದು. ಕಾರಿನಲ್ಲಿ ಪ್ರಯಾಣಿಸುವವರು ನನ್ನ ಮಕ್ಕಳು. ಅವರಿಗೆ ಅಪಾಯ ಉಂಟಾಗುವ ಸಂಭವ ಸಾವಿರದಲ್ಲಿ ಒಂದಿದ್ದರೂ ನಾನು ಕಾರನ್ನು ಮುಂದೆ ಹೋಗಗೊಡಲಾರೆ. ರಿಪೇರಿ ಈಗಲೇ ಆಗಲಿ—ಪ್ರಯಾಣ ಬೇಕಾದರೆ ಮುಂದರಿಸೋಣ" ಎಂದರು.

—ಸದ್ಯ ನಿಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಏರ್ಪಡಿಸಲು ನೀವಿದ್ದೀರಿ. ಆದರೆ ಭವಿಷ್ಯವಲ್ಲಿ ಆ ಬಗ್ಗೆ ನೀವಿಲ್ಲದಿರುವ ಒಂದು ಸಂಭವವೂ— ಬಹುಶಃ ಸಾವಿರದಲ್ಲಿ ಒಂದು— ಇರಬಹುದು. ಇಂದೇ ವಿಮೆ ಇಳಿಸಿ, ಆ ಅಪ್ರಿಯ ಸಂಭವದ ದುಷ್ಪರಿಣಾಮವನ್ನು ದೂರೀಕರಿಸಿರಿ.

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಿಂದಲೂ ಎಲ್ಲ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

THE CANARA MUTUAL
ASSURANCE COMPANY, LTD.
Head Office: UDIPI, S. India.] [Estd: 1935.

ಟೈಪ್ ರೀಕಾಸ್ಟಿಂಗ್ ಚಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿರಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ
ಮೈಸೂರು ಟೈಪ್ ಫೌಂಡ್ರಿಯಲ್ಲಿ
ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್
ಮಾಡಿಸುವುದರಿಂದ ವಿಶೇಷ ಉಳಿತಾಯವಾಗತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.

ಒಂದು ಸಾವಿರ ಪೌಂಡು ಮತ್ತು ಹೆಚ್ಚಿಗೆ—ಪೌಂಡಿಗೆ ಹತ್ತಾಣೆ.
ಐದುನೂರು ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ ಹನ್ನೆರಡಾಣೆ.

ಸೇಲ್ಸ್ ಟೇಕ್ಸ್, ಪ್ಯಾಕಿಂಗ್ ಮತ್ತು ಫಾರ್ವಾರ್ಡಿಂಗ್ ಚಾರ್ಜು ಮುಫತ್ತು.

ಇಂದೇ ವಿವರಗಳಿಗೆ ಬರೆಯಿರಿ:
ಮೆನೇಜರ್

ಮೈಸೂರು ಟೈಪ್ ಫೌಂಡ್ರಿ
ಬೆಂಗಳೂರು-2.

The Mysore Type Foundry,
LETTER FOUNDERS,
GANDHI NAGAR, BANGALORE-2.

TYPES & MACHINERY

FOR THE PRINTING
& ALLIED TRADES



ROTARY
CUTTING MACHINE
18" size Rs. 800/-
24" " Rs. 1100/-

Can be had of

NORTON & COMPANY,

1-16, BAKER THIRUVENGADA MUDALI ST.,
CHOOLAI, MADRAS, 7.

Phone: 3001 'Grams: CLEANTYPES

Write today for our Free Catalogue.

Sri Ramakrishna Theatre Limited,

UDIPI.

ದಿನ ದುಡಿದು ದಣಿವಾರಿಸಿ ವಿನೋದ ಪಡೆಯಲು
ಹೊಸ ಹೊಸ ಚಿತ್ರಗಳ ಪ್ರದರ್ಶನ—

ಅನುದಿನದ ವ್ಯಾಪಾರ ವ್ಯವಹಾರಗಳ ಪ್ರಚಾರ
ಕ್ಕಾಗಿ ಸ್ಲೈಡು ಪ್ರದರ್ಶನ—

ಮೋಟಾರು, ರೇಡಿಯೋ ಇತ್ಯಾದಿ ಸಲಕರಣೆಗಳ
ಬೆಟರಿ ಚಾರ್ಜಿಂಗ್ ಅನುಕೂಲತೆ—

ಸಾವಿರಾರು ಮಂದಿ ಕೇಳಲನುಕೂಲವಾಗುವ
ಭಾಷಣ ಉಪನ್ಯಾಸಗಳ ಧ್ವನಿವರ್ಧನೆಗೆ ಬೇ
ಕಾದ (ಲೌಡ್‌ಸ್ಪೀಕರ್) ಧ್ವನಿವರ್ಧಕ ಯಂತ್ರ-

ಇಷ್ಟು ಮಾತ್ರವಲ್ಲದೆ ನಿಮ್ಮ ಕಾಮಧೇನುವಾದ
ದನಗಳ ಪೀಳಿಗೆಯ ಅಭಿವೃದ್ಧಿಗಾಗಿ ಸಿಂಧಿ
ಬೀಜದೆತ್ತುವಿನ ಉಪಯೋಗ—

ಇವನ್ನೆಲ್ಲಾ ಪಡೆಯಲು

ಶ್ರೀ ರಾಮಕೃಷ್ಣ ಥಿಯೇಟರ್ ಲಿ.

ಉಡುಪಿ.

ದಿ ಮಹಾರಾಷ್ಟ್ರ ಏಪೆಕ್ಸ್ ಬೇಂಕ್ ಲಿ.

ಉಡುಪಿ, ದ. ಭಾರತ.

ಶಾಖೆಗಳು: ಕೊಲ್ಹಾಪುರ; ಸಾಂಗಲಿ; ಕರ್ಹಾಡ; ರಬಕವಿ.

ಸ್ವಾತಂತ್ರ್ಯೋತ್ಸವದ ಶುಭಾಶಂಸೆಗಳು.

ಆರ್ಥಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯದಷ್ಟೆ ಮುಖ್ಯವಾಗಿದೆ; ಸರ್ವರ ಒಕ್ಕಟ್ಟಿನ ದುಡಿತದ ಫಲವಾಗಿ ರಾಜಕೀಯ ಸ್ವಾತಂತ್ರ್ಯ ಹಾಗೆಯೇ ಸರ್ವರ ಉಳಿತಾಯದ ಫಲವಾಗಿ ಆರ್ಥಿಕ ಸ್ವಾತಂತ್ರ್ಯ ಸಾಧಿಸೋಣ.

ಇದಕ್ಕೆ ನಮ್ಮ ಅನೇಕ ಠೇವಣಾತಿಯ ಯೋಜನೆಗಳ ಸದುಪಯೋಗವನ್ನು ಪಡೆಯಿರಿ. ನಮ್ಮ ಸಂಪೂರ್ಣ ಸಹಕಾರವುಂಟು.

ಉಪೇಂದ್ರ ಅನಂತ ಪೈ
ಮೇನೇಜಿಂಗ್ ಡೈರೆಕ್ಟರ್.

CALCUTTA INSURANCE LTD.,

ಕಲ್ಕತ್ತಾ ಇನ್ಶೂರೆನ್ಸ್ ಲಿಮಿಟೆಡ್

ಸ್ಥಾಪನೆ 1923. ಪ್ರಧಾನ ಕಚೇರಿ ಕಲ್ಕತ್ತಾ

ಜೀವ, ಬೆಂಕಿ, ನೌಕಾ, ಮೋಟಾರ್, ಅಪಘಾತ ಮೊದಲಾದ
ಎಲ್ಲಾ ತರದ ವಿಮಾ ಮಾಡುವ ಪ್ರಗತಿಪರ ಪ್ರಮುಖ
ಇನ್ಶೂರೆನ್ಸ್ ಕಂಪೆನಿಗಳಲ್ಲಿ ಒಂದು.

ಕಂಪೆನಿಯ ಮೂಲವು ಒಂದು ಕೋಟಿಗೂ ಮಿಕ್ಕಿದೆ.

ಒಂದು ಸಾವಿರದ ಪೊಲಿಸಿಗೆ ವರ್ಷಕ್ಕೆ ರೂ. ೨೦ರಂತೆ
ಬೋನಸ್ ಹಂಚಲಾಗಿದೆ.

ಮದ್ರಾಸು, ತ್ರಿವಾಂಕೂರು—ಕೊಚ್ಚಿನ್ ಮತ್ತು ಮೈಸೂರು ಸ್ಟೇಟುಗಳಲ್ಲಿ ಕೆಲಸ ಮಾಡಲು ಉತ್ಸಾಹೀ ಹಾಗೂ ಪ್ರಭಾವಶಾಲಿ ಏಜಂಟರು ಬೇಕಾಗಿದ್ದಾರೆ. ದಯಮಾಡಿ ಕೂಡಲೇ ಬರೆಯಿರಿ.

ಎ. ಶ್ರೀನಿವಾಸ ರಾವ್,
ಮೇನೇಜರ್.
5, ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು—1

ನೇಶನಲ್ ಬ್ರಾಹ್ಮಿತೈಲ

ಮೆದುಳು ಮತ್ತು ಕೂದಲು
ಬೆಳವಣಿಗೆಗೆ
ಹೆಸರುವಾಸಿಯಾದುದು

ಎಮ್. ಎಮ್. ಪ್ರೊಡಕ್ಟ್ಸ್
ಕಂಪೆನಿ

ರುಬಿ ಮೆನ್ಶನ್, ಫೋರ್ಟ್,
ಮುಂಬಯಿ



ದಿ ವಿಜಯ ಬೇಂಕ್

ಲಿಮಿಟೆಡ್.

ಸ್ಥಾಪನೆ:-1931 ಹೆಡ್ ಆಫೀಸು:-ಮಂಗಳೂರು.

ತಾ. **30—6—1957**ರಲ್ಲು

ಮೂಲಧನ ರೂ.	ರೂ 20,00,000
ಚಂದಾ ಎತ್ತಿದ ಭಂಡವಾಳ	ರೂ. 15,00,000
ಕೊಟ್ಟ ಭಂಡವಾಳ	ರೂ. 9,04,000
ಕ್ಷೇಮ ನಿಧಿ	ರೂ. 1,83,000
ಜುಮ್ಲಾ ವಹಿವಾಟು	ರೂ. 60,50,000

ಠೇವಣಾತಿಗಳನ್ನು ಆಕರ್ಷಕ ಬಡ್ಡಿ ದರದಲ್ಲಿ
ಸ್ವೀಕರಿಸಲಾಗುವುದಲ್ಲದೆ, ಸಾಲ ಸವಲತ್ತುಗಳಿಗೆ
ಬೇಕಾದ ಅನುಕೂಲತೆಗಳನ್ನು
ಒದಗಿಸುವುದು

ಕೆ. ಸುಂದರರಾಮ ಶೆಟ್ಟಿ, ಬಿ. ಎ., ಬಿ. ಎಲ್.,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು

ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ

ಧಾರ್ಮಿಕ ಗ್ರಂಥಗಳಿಗೆ ತವರುಮನೆಯೆಂದು
ಅರ್ಧಶತಮಾನದ ಖ್ಯಾತಿಯಿದೆ!

- ಕನ್ನಡ ಯಕ್ಷಗಾನ ಪ್ರಸಂಗಗಳು
- ಸಂಸ್ಕೃತ ಪುಸ್ತಕಗಳು
- ಸ್ತೋತ್ರ ಪುಸ್ತಕಗಳು
- ಹೆಂಗುಸರ ಹಾಡಿನ ಪುಸ್ತಕಗಳು
- ಹಿಂದೀ ಪುಸ್ತಕಗಳು
- ಇನ್ನೂ ಅನೇಕ ವಿಷಯಗಳ ಪುಸ್ತಕಗಳು.

ಒಡೆಯರು: ಪಾವಂಜೆ ಗುರುರಾವ್ ಅಂಡ್ ಸನ್ಸ್,
ಅಂಚೆ ಪೆಟ್ಟಿಗೆ ೧೩, ಉಡುಪಿ.

ದಿ ಸದರ್ನ್ ಇಂಡಿಯಾ ಎಪೆಕ್ಸ್ ಬೇಂಕ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: **ಉಡುಪಿ, ದ. ಭಾರತ.**

ಶಾಖೆಗಳು: ತಲಚೇರಿ, ಬಡಗಾರ, ಕೋಜಿಕೋಡೆ, ಪಾಲ್ಘಾಟು ಮತ್ತು ಸರ್ವತ್ರ ಪ್ರಾತಿನಿಧ್ಯವಿದೆ.

ಬೇಂಕು ಎಲ್ಲಾ ತರದ ಠೇವಣಾತಿಗಳನ್ನು ಆಕರ್ಷಕ ದರದಲ್ಲಿ ಸ್ವೀಕರಿಸುತ್ತದೆ. ಮತ್ತು ಸಮಗ್ರ ದಕ್ಷಿಣ ಹಿಂದುಸ್ಥಾನದಲ್ಲಿ ಕ್ಷಿಪ್ರತೆಯಿಂದಲೂ, ದಕ್ಷತೆಯಿಂದಲೂ, ಕಲೆಕ್ಷನ್ ಮಾಡಿಕೊಡುವ ವ್ಯವಸ್ಥೆಯನ್ನಿಟ್ಟುಕೊಂಡಿದೆ.

ಕೆ. ಕೆ. ಶೈ, ಬಿ. ಕೋಮ್, (Bom.)
ಮೆನೇಜಿಂಗ್ ಡೈರೆಕ್ಟರ್.

THE SOUTHERN INDIA APEX BANK LTD.
Head Office: UDIPI, S. INDIA.

ತಂತಿ: ಲಕ್ಷ್ಮಿ ನಿವಾಸ್. ಟೆಲಿಫೋನ್: 82 & 95

ಮಂಗಳೂರನ್ನು ಸಂದರ್ಶಿಸಿದಾಗ ನೆನಪಿರಲಿ!

"ಜಯಕೆಫೆ-ಲಕ್ಷ್ಮಿನಿವಾಸ್"

ಅತ್ಯಾಧುನಿಕವಾದ ಸಕಲ ಸೌಕರ್ಯಗಳಿಂದೊಡಗೂಡಿದ ಬೋರ್ಡಿಂಗ್ ಲಾಡ್ಜಿಂಗ್—ಊಟ ಮತ್ತು ವಸತಿಗೃಹ.

ಜನತಾಸೇವೆಯೇ ನಮ್ಮ ಮುಖ್ಯ ಗುರಿ.

For entirely modernisede and self contained rooms:-

JAYA CAFE—LAXMI NIVAS

K. S. Rao Road, MANGALORE. (S. K.)

H. O. COIMBATORE. Prop. N. V. BHAT.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives. At whatever stage We welcome your association with the POPULAR.

THE POPULAR INSURANCE Company Limited.

"POPULAR BUILDINGS", MANGALORE-1.

ಸಮವಿಲ್ಲದ ಸೌಂದರ್ಯಕ್ಕೆ

ಮೈಸೂರು ಸರ್ಕಾರದ ಕ್ರೆಪ್-ಡಿ-ಚೈನ್ ಸೀರೆಗಳು

ಘನತೆ ಮತ್ತು ಸಮೃತೆಯ ಸಮಾಜಕ್ಕೆ ರಹದಾರಿ.

[ಶೇಕಡ 100 ಭಾಗ ಮೈಸೂರು ಶಿಲ್ಕ್]

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು.

ಮಹಾನುಭಾವರ ಮನನೀಯ ವಿಚಾರಗಳು

"ಗ್ರಾಮ ಸ್ವರಾಜ್ಯದ ನನ್ನ ಕಲ್ಪನೆಯು ಹೀಗಿದೆ-ಅದು ಸಂಪೂರ್ಣ ಪ್ರಜಾಪ್ರಭುತ್ವ ಪದ್ಧತಿಯುಳ್ಳಿರಬೇಕು. ತನ್ನ ಮಹತ್ವದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಬಗ್ಗೆ ನೆರೆಹೊರೆಯ ಊರುಗಳನ್ನು ಕೂಡಾ ಅವಲಂಬಿಸುವ ಪ್ರಸಂಗವಿರಬಾರದು. ತನ್ನ ಊರವರ ಬಗ್ಗೆ ಅವಶ್ಯವಿರುವಷ್ಟು ಧಾನ್ಯ ಮತ್ತು ಬಟ್ಟೆಯ ಬಗ್ಗೆ ಹತ್ತಿ ಊರಲ್ಲೇ ಬೆಳೆಸಬೇಕು; ದನಗಳಿಗೆ ಮೇಯಲಿಕ್ಕೂ, ಜನರ ವಿಶ್ರಾಂತಿ, ಆಟ ನೋಟಗಳಿಗೆ ಅವಶ್ಯವಿರುವಷ್ಟು ಮೈದಾನವು ಊರಲ್ಲಿಯೇ ಇರಬೇಕು. ಪ್ರತಿಯೊಂದು ಊರಲ್ಲಿ ಒಂದೊಂದು ನಾಟಕ ಶಾಲೆ, ಪಾಠಶಾಲೆ, ಮತ್ತು ಸಭಾ ಭವನವಿರಬೇಕು. ಜನರಿಗೆ ಸ್ವಚ್ಛ ನೀರಿನ ಪೂರೈಕೆಯಾಗಬೇಕು. ಮೂಲಶಿಕ್ಷಣದ ಪೂರ್ಣ ಅಭ್ಯಾಸ ಕ್ರಮವು ಅನಿವಾರ್ಯವಾಗಿರಬೇಕು. ಸಾಧ್ಯವಿರುವ ಮಟ್ಟಿಗೆ ಊರಿನ ಎಲ್ಲ ಕೆಲಸಗಳು ಸಹಕಾರದಿಂದ ನಡೆಯಬೇಕು. ಈ ಗ್ರಾಮ ಸಮಾಜದಲ್ಲಿ ಜಾತಿ ಮತ, ಅಸ್ಪೃಶ್ಯತೆ ಮುಂತಾದ ಪರಂಪರಾಗತ ಭೇದಗಳಿರಕೂಡದು. ಊರ ರಕ್ಷಣೆಯ ಬಗ್ಗೆ ಗ್ರಾಮ ಸೈನ್ಯವಿರಬೇಕು. ಊರ ಆಡಳಿತೆಗೋಸ್ಕರ ಒಂದು ಪಂಚಾಯತು ಇರಬೇಕು. ನಿರ್ದಿಷ್ಟ ಯೋಗ್ಯತೆಯುಳ್ಳ ಊರ ಪ್ರೌಢ ಸ್ತ್ರೀ ಪುರುಷರೆಲ್ಲರಿಗೂ ಮತಾಧಿಕಾರ ಇರಬೇಕು."

ಮೇಲಿನ ಮಾತುಗಳನ್ನು ಮಹಾತ್ಮಾಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಸಂಬಂಧದಲ್ಲಿ ಹೇಳುತ್ತಿದ್ದರು. ಸ್ವಾತಂತ್ರ್ಯ ಸಂಪಾದನೆಯ ಕೆಲಸವನ್ನು ಪೂರೈಸಿದ ಬಳಿಕ ಕಾಂಗ್ರೆಸ್ ಪಕ್ಷವು ಮೇಲಿನ ಆದರ್ಶ ಸಮಾಜವನ್ನು ರೂಪಿಸಲು ಬದ್ಧಕಂಕಣವಾದ ಸರ್ವೋದಯ ಸಂಘವಾಗಿ ದುಡಿಯಬೇಕೆನ್ನುವುದು ಗಾಂಧೀಜಿಯವರ ಆಶಯವಾಗಿದ್ದಿತು. ಸ್ವರಾಜ್ಯವು ಸುರಾಜ್ಯವಾಗುವುದಕ್ಕೆ ವಿಧಾಯಕ ಕಾರ್ಯಕರ್ತರ ಅವಿರತವಾದದುಡಿಮೆಅತ್ಯಗತ್ಯವೆಂದು ಗಾಂಧೀಜಿ ಕಂಡುಕೊಂಡಿದ್ದರು. ಇಂದು ಗಾಂಧೀಜಿ ಇಲ್ಲದಿದ್ದರೂ—ಸಂತ ವಿನೋಬಾ ಭಾವೆಯವರಂತಹ ಪುಣ್ಯ ಜೀವಿಗಳು ಈ ಆದರ್ಶವನ್ನು ಸಾಧಿಸಲು, ಜನತೆಯಲ್ಲಿ ಪ್ರಚುರ ಪಡಿಸಲು ಊರಿಂದೂರಿಗೆ ತಿರುಗಾಡುತ್ತಿದ್ದಾರೆ.

"ಸ್ವರಾಜ್ಯ ಸಿಕ್ಕ ನಂತರವೂ ನಮ್ಮ ಪರಿಸ್ಥಿತಿ ಸುಧಾರಿಸಿಲ್ಲವಲ್ಲ ಎಂದು ಕೆಲವರು ಕೇಳುತ್ತಾರೆ. ಸ್ವರಾಜ್ಯ ಸಿಕ್ಕ ನಂತರ ನೀವು ಎಷ್ಟು ದುರ್ಗುಣಗಳನ್ನು ಬಿಟ್ಟುಗೊಟ್ಟಿರಿ? ಸೋಮಾರಿತನ ಬಿಟ್ಟಿರಾ? ಬೀಡಿ ಸೇದುವುದು ಬಿಟ್ಟಿರಾ? ಇವೆಲ್ಲ ದುರ್ಗುಣಗಳು ಮೊದಲಿನಂತೆಯೇ ಇರುವುದಾದರೆ, ಲಂಡನದ ಸರಕಾರ ಹೊಸದಿಲ್ಲಿಗೆ ಬಂದ ಮಾತ್ರಕ್ಕೆ ಏನಾಯಿತು? ಎಂದು ನಾನವರನ್ನು ಪ್ರಶ್ನಿಸುತ್ತೇನೆ. ಪ್ರತಿ ಮನೆಗೂ ಬೆಳಕು ಬಂದಾಗಲೇ ನಾವು ಸೂರ್ಯೋದಯವಾಯಿತು ಎನ್ನುತ್ತೇವೆ. ಹಾಗೆಯೇ ಊರೂರಿಗೂ ಸ್ವರಾಜ್ಯ ಬಂದರೆ ಮಾತ್ರ ನಿಜವಾದ ಸ್ವರಾಜ್ಯ ದೊರೆಯಿತು. ಈಗ ಏನೂ ಆಗಿಲ್ಲ ಎನ್ನುವವರಿಗೆ ಒಂದು ವಿಷಯ ತಿಳಿದಿರಬೇಕು—ನಮ್ಮ ದೇಶದಲ್ಲಿ ಬೇಕಾದದ್ದು ಮಾಡುವ ಅಥವಾ ಬಿಡುವ ಅಧಿಕಾರ ನಮ್ಮ ಕೈಗೆ ಬಂದಿದೆ. ಚುನಾವಣೆಗಳು ನಡೆದುದನ್ನು ಕಂಡಿದ್ದೀರಿ. ಅದರಲ್ಲಿ ಪ್ರತಿಯೊಬ್ಬ ಪ್ರೌಢ ಸ್ತ್ರೀ ಪುರುಷನಿಗೂ ಮತ ನೀಡುವ ಅಧಿಕಾರ ದೊರಕಿತ್ತು—ಇದರ ಪೂರ್ಣ ಉಪಯೋಗ ಪಡೆಯಬೇಕಾದರೆ ಊರಲ್ಲಿಯ ಪ್ರತಿಯೊಬ್ಬನಿಗೂ ಸ್ವರಾಜ್ಯದ ಶಿಕ್ಷಣ ಕೊಡಬೇಕು. ಪ್ರತಿಯೊಂದು ಊರಲ್ಲಿ ಎಲ್ಲ ಉದ್ಯೋಗ, ಶಿಕ್ಷಣ, ಸಂರಕ್ಷಣೆ, ಉತ್ಪಾದನೆ, ಕೃಷಿಕೈಗಾರಿಕೆ, ಆರೋಗ್ಯ, ನೈರ್ಮಲ್ಯ ರಕ್ಷಣೆ ಎಲ್ಲವನ್ನೂ ಊರವರು ಮಾಡಬೇಕು."

ವಿನೋಬಾಜೀಯವರು ಸಾಮಾನ್ಯವಾಗಿ ಮೇಲಿನಂತೆ ಜನತೆಗೆ ಉಪದೇಶಿಸುವರು. ಅವರು ಸ್ವರಾಜ್ಯ ಸಂಪಾದನೆಯ ಬಳಿಕ ನಮ್ಮ ಶಕ್ತಿ ಉತ್ಸಾಹಗಳು ಕುಂದಿಹೋಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದುಂಟು- "ಸ್ವರಾಜ್ಯ ಸಂಪಾದನೆಯ ಚಳುವಳಿಯಲ್ಲಿ ಜನರಿಗೆ ತ್ಯಾಗ ಮಾಡಬೇಕೆಂಬ ಅವಲವಿಕೆ ಇದ್ದಿತು. ಆದರೆ ಈಗ ಆ ಭಾವನೆ ತೋರುವುದಿಲ್ಲ. ಏಕೆಂದರೆ ಆಗಿನ ಚಳುವಳಿಯಲ್ಲಿ ಜನರು ಕ್ಷಣಿಕ ಉದ್ವೇಗದ ಭರಕ್ಕೆ ಸರ್ವಸ್ವವನ್ನು ತ್ಯಾಗಮಾಡಿದರು. ಆದರೆ ಸ್ವರಾಜ್ಯ ಪ್ರಾಪ್ತಿಯ ಬಳಿಕ ಇಂಥ ಆವೇಶಮಯ ತ್ಯಾಗಕ್ಕೆ ಅವಕಾಶವಿಲ್ಲ. ಅಂಥಾ ವಾತಾವರಣವನ್ನು ಹುಟ್ಟಿಸಲಿಕ್ಕೆ ಈಗಿನ ಪರಿಸ್ಥಿತಿ ಅನುಕೂಲವಿಲ್ಲೆಂದು ಇದರ ಅರ್ಥವಲ್ಲ- ಇಂದು ಕ್ಷಣಿಕ ತ್ಯಾಗವು ನಡೆಯಲಾರದೆಂಬುದೇ ನನ್ನ ಅಭಿಪ್ರಾಯ. ಆಳವಾಗಿ ನಾವು ವಿಚಾರಿಸಿ, ನಮ್ಮ ಜೀವಮಾನದ ಗತಿವಿಧಿಯನ್ನು ನಿರ್ಣಯಿಸಬೇಕಾಗಿದೆ. ಅಂದಿನ ತ್ಯಾಗಕ್ಕಿಂತ ಇಂದಿನ ಕೆಲಸಕ್ಕೆ ಹೆಚ್ಚು ಗಟ್ಟಿ ಮುಟ್ಟಾದ ತಾತ್ವಿಕ ನೆಲೆಗಟ್ಟು ಅಗತ್ಯವಿದೆ. ಇಂದು ದೃಢನಿಶ್ಚಯದ, ವಿವೇಕಪೂರ್ಣರಾದ, ನೈಷ್ಠಿಕ ತ್ಯಾಗಿಗಳ ಅವಶ್ಯಕತೆ ತುಂಬಾ ಇದೆ. ಆದರೆ ಒಂದು ಮಾತು ನಿಜ-ಸ್ವರಾಜ್ಯ ಪ್ರಾಪ್ತಿಯಬಳಿಕ ನಮ್ಮ ಮುಂದೆ ಜನಸೇವೆಗಿಂತಲೂ ಆಕರ್ಷಕವಾದ ಎಷ್ಟೋ ಪ್ರಲೋಭನಗಳು ಬಂದಿವೆ-ಸರಕಾರೀ ನೌಕರಿ, ವ್ಯಾಪಾರ, ಸೈನಿಕಸೇವೆ, ಶಿಕ್ಷಕವೃತ್ತಿ ಯಾವತ್ತೂ ಕೆಲಸಗಳನ್ನು ಸೇವೆಯ ಸಾಧನಗಳೆಂದು ತಿಳಿಯಲು ಆತಂಕವಿಲ್ಲ. ಸ್ವರಾಜ್ಯ ಸಿಕ್ಕಿದ್ದರಿಂದ ಸ್ವಾರ್ಥದ ಈ ಕೆಲಸಗಳನ್ನೂ ಪರಾರ್ಥಕ್ಕೆ ಅನುಕೂಲಿಸುವಂತೆ ಮಾಡಬಲ್ಲೆವು. ಇದಕ್ಕೆ ಯೋಗ್ಯ ರೀತಿಯನ್ನು ಅನುಸರಿಸಬೇಕು. ಆದರೆ, ನನ್ನ ಅಭಿಪ್ರಾಯದಂತೆ, ಜನಸೇವೆಯ ವ್ರತವನ್ನು ನವ ಯುವಕರು ಅಧಿಕ ಉತ್ಸಾಹದಿಂದ ಕೈಗೊಳ್ಳಬೇಕು."

ಏನು, ನಿಜವಾಗಿಯೂ ಜನತೆಗೆ ತ್ಯಾಗ ಮಾಡಬೇಕೆಂಬ ಭಾವನೆ ಇಲ್ಲವೆ? ನಾವೆಲ್ಲರೂ ಪರರ ಹಿತವನ್ನು ಲಕ್ಷಿಸದ, ರಾಷ್ಟ್ರದ ಅಭ್ಯುದಯವನ್ನು ಅಪೇಕ್ಷಿಸದ ಸ್ವಾರ್ಥಿಗಳೇ ಆಗಿರುವೆವೆ? ವಿನೋಬಾ ಇದನ್ನು ಒಪ್ಪುವುದಿಲ್ಲ. "ಜಗತ್ತು ಸ್ವಾರ್ಥಿಯಲ್ಲ-ಜನತೆಯೂ ಸ್ವಾರ್ಥಿಯಲ್ಲ. ನಾನು ಊರು ಊರು, ಮನೆ ಮನೆಗಳನ್ನು ತಿರುಗಿ ನೋಡಿದ್ದೇನೆ: ಜನರು ತಮ್ಮ ಕುಟುಂಬದ ಹಿತಾರ್ಥವಾಗಿ ಅಪರಿಮಿತ ತ್ಯಾಗವನ್ನು ಮಾಡಲಿಕ್ಕೆ ಸದಾ ಸಿದ್ಧರಿದ್ದಾರೆ. ತಮ್ಮ ಕುಟುಂಬದ ಶ್ರೇಯಸ್ಸಿಗಾಗಿ ಅವರು ಕಷ್ಟಪಟ್ಟು ಕೆಲಸಮಾಡುತ್ತಾರೆ; ತಮ್ಮ ಮಕ್ಕಳ ಹಿತಕ್ಕೋಸ್ಕರ ಅಪಾರ ತ್ಯಾಗವನ್ನು ಮಾಡುತ್ತಾರೆ. ಹೀಗಿರುತ್ತಾ ಜನರನ್ನು ಸ್ವಾರ್ಥಿಗಳೆಂದು ಜರೆದರೆ, ನಮಗೆ ಸರಿಯಾಗಿ ವಿಚಾರ ಮಾಡಲಿಕ್ಕೆ ಬರುವುದಿಲ್ಲೆನ್ನಬೇಕಾಗುವುದು. ನಮ್ಮ ಸಮಾಜದಲ್ಲಿ ಮನೆ ಮನೆಯಲ್ಲೂ ತ್ಯಾಗದ ಭಾವನೆ ಇದೆ. ಮತ್ತದು ಬೆಳೆಯುತ್ತಿದೆ. ಆದರೆ ಈ ತ್ಯಾಗ ಭಾವವು ಮನೆಯ ನಾಲ್ಕು ಗೋಡೆಗಳಿಗೇ ಸೀಮಿತವಾಗಿದೆ ಎಂಬುದು ನನ್ನ ಆಕ್ಷೇಪ. ಇದನ್ನು ನಾವು ವ್ಯಾಪಕಗೊಳಿಸಬೇಕು. ಈ ಜ್ಞಾನ ಯುಗದಲ್ಲಿ ನಾವು ಒಂದು ಕುಟುಂಬವನ್ನು ಮಾತ್ರ ನೋಡಿಕೊಂಡಿದ್ದರೆ ನಡೆಯದು-ಇಡೀ ಊರನ್ನು ದೇಶವನ್ನು ಪ್ರಪಂಚವನ್ನು ಕೆಲವೊಂದು ಸಂಗತಿಗಳಲ್ಲಿ ಒಂದು ಕುಟುಂಬವೆಂದು ಗ್ರಹಿಸಬೇಕಾಗುವುದು. ಆಗ ಮಾತ್ರ ನಾವು ಚೆನ್ನಾಗಿ ಸುಖದಲ್ಲಿ ಬದುಕಬಹುದು. ಈ ವಿಚಾರಗಳನ್ನು ಜನತೆಯು ತಿಳಿದುಕೊಂಡರೆ ಮಹಾ ಮಹಾ ತ್ಯಾಗವನ್ನು ಅದು ಮಾಡಬಲ್ಲುದು."

ಶ್ರೀ ಜಯಪ್ರಕಾಶ ನಾರಾಯಣರು ಈಗ ರಚನಾತ್ಮಕ ಕಾರ್ಯಗಳಲ್ಲಿ ತುಂಬ ಶ್ರದ್ಧೆಯಿಂದ ದುಡಿಯಲು ಸಂಕಲ್ಪ ಕೈಗೊಂಡಿರುವರು. ಈ ಸಮಾಜವಾದಿ ಧುರೀಣರು ದೇಶದ ನವ ತರುಣರಿಗೆ ನೆಹರೂರಷ್ಟೇ ಪ್ರಿಯ ವ್ಯಕ್ತಿ. ಅವರು ವಿಧಾಯಕ ಕಾರ್ಯಕರ್ತರ ಕರ್ತವ್ಯಗಳ ಕುರಿತು ಹೀಗೆ ಹೇಳುತ್ತಾರೆ-

"ನಮ್ಮ ಧ್ಯೇಯ ಮತ್ತು ಧೋರಣೆಯ ಪ್ರತಿಬಿಂಬವು ನಮ್ಮ ನಿತ್ಯ ಜೀವನದಲ್ಲಿ ತೋರಬೇಕು. ಕಾಯಿದೆ ಆಗುವ ನಿರೀಕ್ಷಣೆ ಮಾಡುತ್ತಾ ನಾವು ಕುಳಿತುಕೊಳ್ಳದೆ ನಾಳೆ ಯಾವ ತರದ ಕಾಯಿದೆ ಆಗಬೇಕೆಂಬುದರ ದಿಗ್ದರ್ಶನವನ್ನು ಕಾರ್ಯಕರ್ತರು ತಮ್ಮ ಇಂದಿನ ವ್ಯವಹಾರದ ಮೂಲಕ ತೋರ್ಪಡಿಸಬೇಕು. ಇಂದು ನಮ್ಮ ದೇಶದಲ್ಲಿ ಆತ್ಮ ವಿಶ್ವಾಸವು ಹಾರಿಹೋದಂತೆ ಕಾಣುತ್ತದೆ. ಪ್ರತಿಯೊಂದು ಕೆಲಸವನ್ನೂ ಸರಕಾರವೇ ಮಾಡಬೇಕು ಅಥವಾ

(೨೩ನೇ ಪುಟ ನೋಡಿರಿ)

ನವಯುಗ
ಸ್ವಾತಂತ್ರ್ಯದಿನೋತ್ಸವ ಸಂಚಿಕೆ
13—8—1953

NAVAYUGA
Independence
Day Special 1953



ಓ ಯುಗಪುರುಷ!

ಓ ಯುಗಪುರುಷ! ನೀನು ದಿನರಾತ್ರಿ ದುಡಿದು, ಚಿಂತೆ ಚಿಂತನೆಗಳಿಂದ ಅನುದಿನವೂ ಪರಿತಪಿಸಿ, ತಪಸ್ಸೈದು ಸತ್ಯ, ಪ್ರೇಮ, ಅಹಿಂಸೆಗಳ ಮುಳ್ಳು ಕಿರೀಟವನ್ನು ಧರಿಸಿ, ತ್ಯಾಗದ ಶಿಲುಬೆಗೇರಿ ಸಗ್ಗದಿಂದ ಇಳೆಗೆ ಎಳೆತಂದ ಪುಣ್ಯದ ಫಲವನ್ನು ನಾವಿಂದು ಹಂಚಿಕೊಳ್ಳುತ್ತಿದ್ದೇವೆ

ಈ ಪುಣ್ಯದಿನದಂದು—ನಿನ್ನ ಹೆತ್ತಬ್ಬೆ ಭಾರತಿಯು ತನ್ನ ಬಿಡುಗಡೆಯ ದಿನದುತ್ಸವದಲ್ಲಿ ಸ್ಮರಿಸಿರುವ ಈ ಸ್ವರ್ಣದಿನದಂದು ನೀನು ನಮ್ಮ ನಡುವೆ ಇಲ್ಲ—ಲಕ್ಷ ಲಕ್ಷ ಜನತುಂಬಿದ ಬಂಡಿಯನೆಳೆವ ಇಂಜಿನೇ ಕಳಚಿದಂತೆ, ಉದ್ಯೋತ ಭವನದ ಆಧಾರವೇ ತಪ್ಪಿದಂತೆ ಉತ್ಸವಕ್ಕೆಂದು ಜನ ಕಿಕ್ಕಿರಿದ ದೇಗುಲದ ಗರ್ಭಗುಡಿಯಲಿ ಮೂಲ ವಿಗ್ರಹವೇ ಇಲ್ಲದಂತೆ!

ನಿನ್ನ ಹೃದಯದ ಮೃದು ಮಧುರ ಗೀತಾವಳಿ ಮಂದಗಾಳಿಯ ಮೇಲೆ ತೇಲಿಬರುವ ಮಂಜುಳ ವೀಣಾನಾದದಂತೆ ತೇಲಿಬಂದು ತಿಳಿಸುತಿದೆ ಸ್ವಧರ್ಮವೇ ಸದ್ಧರ್ಮವೆಂದು

ಮೋಹ ಬಂಧವ ಬಿಡಿಸಿ, ಕರ್ಮರಂಗದಿ ನಿಲಿಸಿ ಪ್ರೇಮ ಅಹಿಂಸೆಗಳ ಬಿಲ್ಲು ಬಾಣಗಳನಿತ್ತು ಫಲದಾಸೆಯನು ತೂರದ ಜೋಡು ಬೀಳ್ವನ್ನೆಗಂ' ಎನುತ ಬೆನ್ನುತಟ್ಟಿ ಮುನ್ನುಗ್ಗಿಸುತಿಹುದು [illegible] ಒಗೆ ವೀರನಿಗ ಸಲ್ಲ ಹೊಲ್ಲ" ಎಂದು ಎದೆದುಂಬಿಸೆ ಹಾಡು.

ಓ ತಂದೆಯೇ! ನಿನ್ನ ಬಾ[illegible] ಜೀ[illegible] [illegible] ಜಗವನೆಲ್ಲ ಬೆಳಗಿಸುತಿಹುದೆಂದು.

ನೀನಂದು ಪೂರದ ದಿವಸಲಿಯಲಿ ಸುರಿಸಿದ ನಿನ್ನದೆಯ ರಕ್ತದ ರಭಸಿಗೇರಿ ಜಗಕೆಲ್ಲ ಅಮೃತ ವರ್ಷವ ಸುರಿಸುತಿಹುದಿಂದು

ಆ ಅಮೃತವರ್ಷದಿಂದ ತಣ್ಣಪಡೆದ ಎತ್ತೆತ್ತ ಎದೆಯ ಬಯಲಲಿ ಚಿಗುರಿದುತಿವೆ ಸತ್ಯ, ಪ್ರೇಮ ಅಹಿಂಸೆಗಳ ಕಲ್ಪತರು!

ಚಿತ್ತ ಈ ಗಿಡಕೆ ನಿತ್ಯ ನೀರುಣಿಸಲಿ ನಿನ್ನ ನಸುನಗೆ ಜ್ಯೋತಿ ಆ ಪರಿವೇಯಲಿ ನಿನ್ನ ಬಾಳ ಹೋರಾಟದ ಸತ್ವ ಬೇಕಾಗಲಿ ನಿನ್ನ ಅಮಲ ಜ್ಞಾನದ ಹಂಬು ಗಾಳಿಯಾಗಲಿ ನಿನ್ನ ಸಾಗರ ಸದೃಶ ಹೃದಯದ ಒಲವು ಇಂದೆಮ್ಮ ಹೃದಯದ ಗಿಡಬಲಿತು, ಬೆಳೆದು, ಮರವಾಗಿ ಪುಷ್ಪ ಹಣ್ಣು, ಫಲಭಾರದಿಂದ ಬಾಗಿ, ಜನಕೋಟಿಯನು ತಣಿಸಲಿ!

ಓ ಪ್ರಭುವೇ! ನಾವು ಪಾದಿತಪ್ಪಬಹುದು—ಏಕೆಂದರೆ ನಾವು ಅಲ್ಪಾತ್ಮರು ಆದರೆ ನಿನ್ನ ಪ್ರೇಮಕ್ಕೆ ಒರಬಾರದು—ಏಕೆಂದರ ನೀನು ಮಹಾತ್ಮ! ನಾವು ಪತಿತರಾಗಬಹುದು ಆದರ ಕಾರುಣ್ಯಕ್ಕೆ ಪತನ ಉಂಟೇನು? ನಿನ್ನ ಕರುಣೆಯ ಕೈ ಸದಾ ಸಮ್ಮುಖವಿರಲಿ ನಿನ್ನ ಪುಂಜೀಕೃತ ಪದ[illegible] ನಿತ್ಯ ನಮ್ಮಲ್ಲಿ ಉತ್ಸಾಹದುಂಬುತ್ತಿರಲಿ ನಿನ್ನ ಪ್ರೇಮ ಕಾರುಣ್ಯಗಳ ನೆರವಿಂದ ನಾವು ತುಂಗ, ಉತ್ತುಂಗ ಪರ್ವತಶ್ರೇಣಿಗಳನ್ನು ಕಳೆದು ಹಿಮಗಿರಿಯ ಕಂದರದಲ್ಲಿ ತಲೆದೋರುತ್ತಿರುವ ಬೆಳ್ಳಿಗಡ್ಡೆಗಳ ಸಾಲಿನ ಸನಿಯಕ್ಕೆ ಸಾಗುವಂತಾಗಲಿ! ನಿರಂತರವಾದ ಸ್ಪೂರ್ತಿಯಿಂದ ಆ ಸ್ಮೃತಿ ನವ್ಯವಾಗಲಿ ಆ ಮೂಲಕ ನಮ್ಮ ಬಿಡುಗಡೆಯಿಂದು ಬೆಳೆಯಲಿ, ಲೋಕಕ್ಕೆ ಕಳೆ ಕೂಡಲಿ

ಇದೋ ನಿನ್ನ ಪಾದಪದ್ಮಗಳಲ್ಲಿ ನಮ್ಮ ಭಕ್ತಿ ಕುಸುಮಾಂಜಲಿ!

— [illegible] ಲಕ್ಷ್ಮೀನಾರಾಯಣ ಭಟ್ಟ

ಐಕ್ಯಗಾನ

—ಕಯ್ಯಾರ ಕಿಞ್ಞಣ್ಣ ರೈ.

೧

ಐಕ್ಯವೊಂದೇ ಮಂತ್ರ
ಐಕ್ಯದಿಂದೆ ಸ್ವತಂತ್ರ
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ!
'ಭಾರತದಿ ಮಮ ಜನ್ಮ
ಸ್ವಾತಂತ್ರ್ಯವೇ ಧರ್ಮ'
-ಒಕ್ಕೊರಲಿನುದ್ಘೋಷ ಕೇಳುತಿರಲಿ!

೨

ಹೊಲೆಯರೇ ಬ್ರಾಹ್ಮಣರೆ,
ಮುಸ್ಲಿಮರೆ ಕ್ರಿಸ್ತನರೆ,
ಎಲ್ಲರೂ ನಮ್ಮವರೆ ಎದೆಯರಳಲಿ!
'ರಾಷ್ಟ್ರವೊಂದೇ ಜೀವ'
ಎಂದು ಸಾರಿರಿ ಯಾವ
ರಕ್ಕಸರು ಇದಿರಿಲ್ಲ ನಾವ್ ಕದುಗಲಿ!

೩

ಅರೆಹೊಟ್ಟೆಯುಂಡ ನಾವ್,
ಬರಿ ಚಿಂದಿ ತೊಟ್ಟ ನಾವ್,
ಸುಲಿಗೆಗೊಳಗಾದ ನಾವ್ ಎಲ್ಲರೊಂದೇ!
ಆಳು ಹೋಳಾಗಿರಲು,
ಬಾಳು ಗೋಳಾಗಿರಲು,
ಮೇಲು ಕೀಳೇನುಂಟು? ಎಲ್ಲರೊಂದೇ!

೪

ಭಾರತಿಯ ಬಸುರಿಂದ
ಜಾರಿಬಿದ್ದೆವೆ? ಬಂದ
ಭೂರಿ ಬವಣೆಗಳನ್ನು ನೆನೆಯಿರೊಮ್ಮೆ!
ನೆನೆ ನೆನೆದು ದಿನದಿನವು
ಮಿಡಿದುಡಿದು ಜನಜನವು
ಭಾರತದ ಸ್ವಾತಂತ್ರ್ಯ ಮೆರೆಸಿ ಹೆಮ್ಮೆ!

೫

ಅಜ್ಞಾನ ಪಂಕದಲಿ
ಅದ್ದಿರುವ ಜನರಲ್ಲಿ
ಮತಭೇದ ಬರಲುಂಟೆ? ಎಲ್ಲರೊಂದೇ!
ಪಕ್ಷವೇ? ಪಂಥವೇ?
ಜಾತಿಯೇ? ನೀತಿಯೇ?
ಮೌಢ್ಯ ಮುರಿಯುವ ಬನ್ನಿ,
ಎಲ್ಲರೊಂದೇ!

೬

ಸ್ವಾತಂತ್ರ್ಯ ಪಡೆದಿಹೆವು,
ತಲೆಯೆತ್ತಿ ನಡೆಯುವೆವು,
ವಜ್ರದೇಹಿಗಳಾವು, ಬನ್ನಿರೆಲ್ಲ!
ಸ್ವಾತಂತ್ರ್ಯವೇ ಪಕ್ಷ,
ಸ್ವಾತಂತ್ರ್ಯವೇ ಪಂಥ,
ಸ್ವಾತಂತ್ರ್ಯವೇ ಜಾತಿ ಎನ್ನಿರೆಲ್ಲ!

೭

ಭಾರತದ ಬಿಡುಗಡೆಗೆ
ಹೋರಾಡಿರುವ ನಮಗೆ
ಯಾರ ಭಯ? ನಾವಿಂದು
ಮುಂದಾಗಿರೆ!
ತೇಲುವೆವೊ, ಮುಳುಗುವೆವೊ,
ಏಳುವೆವೊ, ಬೀಳುವೆವೊ,
ಎಲ್ಲರೂ ಒಮ್ಮೆಗೇ ಒಂದಾಗಿರೆ!

೮

ಐಕ್ಯದಮೃತದ ರಸಕೆ
ಜೀವಜೀವದ ಬೆಸುಗೆ
ಕೂಡಿಬರೆ ಭೀಮಬಲ ನಮ್ಮೊಳುಂಟು!
ಹದಿನಾಲ್ಕು ಲೋಕವನು,
ಸಪ್ತ ಸಾಗರವನ್ನು,
ಗೆಲ್ವುದಾಂಟುವ ಶಕ್ತಿ- ವೇಗವುಂಟು!

೯

ತಿಳಿನೀರ ಸವಿ ಸಣ್ಣ,
ಗಂಧ ಮಂದಾನಿಲನ
ನೀಡುವಳು ನಮಗೆಲ್ಲ ಪುಣ್ಯಧರಣಿ!
ಮಂದಸ್ಮಿತೆಯು ಮಧುರ
ಬಾಷಿಣಿಯು, ಭೂಷಣೆಯು,
ಸಸ್ಯಶ್ಯಾಮಲೆ ದೇವಿ
ನಮ್ಮ ಜನನಿ!

೧೦

ಚೆನ್ನ ಬೆಳ್ದಿಂಗಳಿಂ
ಪುಲಕಿತ ನಿಶಾಮಯಿಯೊ,
ಸ್ವರ್ಣಗರ್ಭೆಯೆ, ತಾಯೆ!
ನಮ್ಮ ತಾಯೆ!

ಅರಳ್ದ ಹೂಗೊಂಚಲಿಂ,
ಚೆಲುವ ದ್ರುಮದಲಗಳಿಂ.
ಸುಖದಾತೆ, ವರದಾತೆ, ನಮ್ಮ ತಾಯೆ!

೧೧

ಈ ತಾಯ ಮಕ್ಕಳು,
ಬೇರೆ ಬೇರಾಗಲು,
ನಾವಾನೆವೊಕ್ಕಲು ಕೇಳಿರೆಲ್ಲ.
"ಇಡು ಹಜ್ಜೆ-ನಡೆ ಮುಂದೆ,
ಪಡೆ ಪ್ರೇಮಬಲದಿಂದೆ,
ಐಕ್ಯಭಾರತ ಜನದೆ" ಬಾಳಿರೆಲ್ಲ!

೧೨

ಜಾತಿ ಕುಲ ಮತ ಕರ್ಮ,
ಕಟ್ಟಳೆ ಕುಹಕ ಧರ್ಮ,
ಕಟ್ಟಿಕೂಡಿಸಿ ಕಿಚ್ಚು ಕೊಟ್ಟು ಸುಡಿರಿ!
ಸೋದರತೆ, ಮಾನವತೆ,
ಸತ್ಯ ಶಾಂತತೆ ಸಮತೆ,
ಅಸ್ತಿವಾರದಿ ಜನತೆ ಕಟ್ಟಬಿಡಿರಿ!

* * * * *

ಐಕ್ಯವೊಂದೇ ಮಂತ್ರ,
ಐಕ್ಯದಿಂದೆ ಸ್ವತಂತ್ರ,
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ!
'ಭಾರತದಿ ಮಮಜನ್ಮ
ಸ್ವಾತಂತ್ರ್ಯವೇ ಧರ್ಮ'
ಒಕ್ಕೊರಲಿನುದ್ಘೋಷ, ಕೇಳುತಿರಲಿ!

[ಈ ಕವನವು ಇದೇ ಆಗೋಸ್ತು 15ರಂದು ಸಂಜೆ 6-15ರಿಂದ 6-30ರ ವರೆಗೆ ಮೈಸೂರು ಆಕಾಶವಾಣಿ ಕೇಂದ್ರದಿಂದ ಹಾಡಲ್ಪಡುವುದು]

ಅಭಿಸಾರ

(ದೇವರನ್ನು ಉದ್ದೇಶಿಸಿ ನುಡಿದ ಮಾತು)

ಇರುಳ ಮುನ್ನ
ಮೆಂತು ನಿನ್ನ
ಸಾರೆ ಮನೆಯಿನಿಳಿಯುವೆ!
ಎಂದು ಮನೆಯ
ಕೆಲಸದಿನೆಯು[1]
ಬಳಸಿ ಹೊತ್ತು ಕಳೆಯುವೆ.
ಎದೆಯ ಹಿಳ್ಳ
ನಿರಿವ ಸಿಳ್ಳ
ಕೇಳಿ ಗಿಳಿಯು ಮೂರುವೆ—
'ತಾಳನಲ್ಲ!'[2]
ಎಂದು ಚಲ್ಲ[3]
ಕಣ್ಣ ನಿನಗೆ ಬೀರುವೆ.
ಕೆಲಸದಿ [4]ತೆರ
ಪಿಲ್ಲದೆ, ತೆರ
ಳಿಲ್ಲದೆ ರವಿ, ಹೇಸುವೆ;
ಎನ್ನನಕಟ
ಇಂತು ನಿಕಟ
ಕಾವ ನಿನ್ನ ಕಾಸುವೆ[5]
ಇನೆಯ, ಕಾದ
ಡನಿವೆ [6]ಕಾದ
ಲಿನಿದಮದೆನೆ ತಡೆವೆನೆಂ
ದೆಣಿಸಬೇಡ—
ಸುಳಿವ ಬೇಡ
ರಂಬಿಗಿಂಬುಗೊಡುವೆನೆ?
[4]ಬಿಡುವು ದೊರೆಯ
ದೆಂತುಟೆರೆಯು[1]
ನಿನ್ನಡಿಗಭಿಸರಿಸುವೆ[7]?
ತಡಕೆ ಕೆರಳಿ
ನಡೆಯೆ, ಮರಳಿ
ನಿನ್ನನೆಂತು ಬರಿಸುವೆ?
ಎಂದು ಹಗಲೆ
ಮನೆಯಿನಗಲೆ
ಸೇರಲಿನೆಯ ನಿನ್ನನು,
ಮನೆಯ ಮಂದಿ
ಮರಳಿ ಹೊಂದಿ
ಕೊಳುವುದುಂಟೆ ನನ್ನನು?
ಬಳ್ಳಿನೆಲೆಯ
ಹೇವ ತೊರೆಯ
ದೆಸಗೆ ನಿನ್ನನೆನ್ನನಂ,
ಅಕಟ ಜೀವ
ದನಿತೆ ಹೇವ—
ಕರೆದು ಕೊಳಲಿ ಚುನ್ನನಂ[8]?
ತೊರೆಯಲಂಜ
ದೇನುಮಂ, ಜ
ನಾಪವಾದ ಗಾಸಿಯುಂ
ನಳುಕಿ ತೊನೆಯ[9]
ಲಿಂತುಟಿನೆಯ
ಶಂಕಿಸದಿರು ದಾಸಿಯುಂ
ಇನೆಯನಡಿಗೆ
ಮನೆಯ ಕಡೆಗೆ
ಪ್ರಣಯ ವಿನಯ ತುಯ್ಯಲು,[10]
ಪ್ರಣಯವೂದೆ,
ವಿನಯಮೋದೆ,
ತಿದಿಯೊ ಎದೆಯ ಸುಯ್ಯಲು[11]!
ಅನವರೆಯ
ಕಣ್ಣ ಮರೆಯ
ದೃಷ್ಟಿಯೆಂತು ಲಕ್ಷ್ಯದಿ,[12]
ಅಂತು ಮನೆಯ
ಸೆರೆಯೊಳಿನೆಯ
ನಿನ್ನ ತಳೆವೆ ವಕ್ಷದಿ.
ಇದುಗೊ ಬೇಸ
ರಿಸಿದ ನೇಸ
ರಾರಿ, ಬಾನ ಸಜ್ಜೆಯು[13]
ಇರುಳು ತೆರೆಯ
ಬಿಚ್ಚಿತೆರೆಯ
ನೀಗಿ ಹೊದೆದ ಲಜ್ಜೆಯ.
ಇನಿಸೆ ತಾಳು,
ಸೂಡರ ಬಾಳು
ಬೇಗನೆ ಕೊನೆವರಿವುದೆ,
ಕದವ ತೆರೆವೆ,
ಹೊರಟು ಬರುವೆ—
ಇರುಳು [14]ಬೇರೆ [15]ಹರೆವುದೆ?

—ಗೋವಿಂದ ಪೈ.

೧ ಇನೆಯ, ಎರೆಯ=ಪ್ರಿಯ. ೨ ತಾಳನಲ್ಲ=ತಾಳನು+ಅಲ್ಲ' (ಗಿಳಿಯ ಪರವಾಗಿ), ತಾಳ+ನಲ್ಲ (ಪ್ರಿಯನ ಪರವಾಗಿ). ೩ ಚಲ್ಲ=ಉಲ್ಲಾಸ ೪ ತೆರಪು, ಬಿಡುವು=ಅವಕಾಶ. ೫ ಕಾಸು=ಕಾಯುವಂತೆ ಮಾಡು. ೬ ಕಾದಲ್=ಪ್ರೇಮ. ೭ ಅಭಿಸರಿಸು=ಪ್ರಿಯನ ಬಳಿಗೆ ಸಾರು ೮ ಚುನ್ನ=ನಿಂದೆ. ೯ ತೊನೆ=ಹೀಗೊ ಹಾಗೊ ಎಂದು ಮನಸ್ಸಿನಲ್ಲಿ ಆಂದೋಲಿಸು ೧೦ ತುಯ್ಯು=ಸೆಳೆ ೧೧ ಸುಯ್ಯಲು=ನಿಟ್ಟುಸಿರು ೧೨ ಲಕ್ಷ್ಯ=ಗುರಿ ೧೩ ಬಾನ=ಆಕಾಶದ (ಆಕಾಶವೆಂಬ), ಸಜ್ಜೆ=ಶಯ್ಯಾಗೃಹ. ೧೪ ಬೇರ್ಪ್ಪೆ=ಅನ್ಯಥಾ. ೧೫ ಹರೆ=ಬೆಳಗಾಗು, ಮುಂಜಾನೆಯಾಗು.

ಹಿಂದುಳಿದ ರಾಜ್ಯದಲ್ಲಿ ವಿರುದ್ಧಪಕ್ಷದ ಧೋರಣೆ

(ಹಿ. ರಾಮರಾಯ ಮಲ್ಯ)

ಪ್ರಜಾಸತ್ತಾತ್ಮಕ ರಾಜ್ಯಭಾರ ಪದ್ಧತಿಯಲ್ಲಿ ಸರಕಾರದ ಆಡಳಿತೆ ನಡೆಸುವ ರಾಜಕೀಯ ಪಕ್ಷಕ್ಕೆ ವಿರುದ್ಧ ಪಕ್ಷವೊಂದು ಅಗತ್ಯವೆಂದು ತಿಳಿಯಲಾಗುತ್ತದೆ. ಸರಕಾರ ನಡೆಸುವ ಮಂತ್ರಿಗಳಿಗೆ ಸರಕಾರೀ ವೇತನ ಸಲ್ಲುವಂತೆ ವಿರುದ್ಧ ಪಕ್ಷದ ನಾಯಕರಿಗೆ ಕೂಡಾ ಸರಕಾರೀ ವೇತನ ಸಲ್ಲಿಸುವ ಪದ್ಧತಿ ಕೆಲವು ರಾಜ್ಯಗಳಲ್ಲಿ ಪ್ರಚಾರದಲ್ಲಿದೆ. ಸಾರ್ವಜನಿಕ ಪ್ರಶ್ನೆಗಳನ್ನು ಒಂದೇ ದೃಷ್ಟಿಯಿಂದ ಪರಿಶೀಲಿಸುವುದಕ್ಕಿಂತ ಭಿನ್ನ ದೃಷ್ಟಿಯಿಂದ ಕೂಡಾ ಪರಿಶೀಲನಕ್ಕೊಳಪಡಿಸುವುದು ಉಪಯುಕ್ತವೆಂಬುದು ಇದರ ಅಭಿಪ್ರಾಯವಿರುತ್ತದೆ. ಆರ್ಥಿಕ ದೃಷ್ಟಿಯಿಂದ ಮೇಲ್ಪಟ್ಟದಲ್ಲಿರುವ ರಾಷ್ಟ್ರಗಳಲ್ಲಿ ರಾಷ್ಟ್ರಕ್ಕೆ ಗಂಡಾಂತರ ಬಂದ ಸಂದರ್ಭಗಳಲ್ಲಿ ವಿನಾ ಉಳಿದೆಲ್ಲ ಪ್ರಶ್ನೆಗಳಲ್ಲಿ ವಿರುದ್ಧ ಪಕ್ಷದವರು ಸರಕಾರವನ್ನು ವಿರೋಧಿಸಿ ಪ್ರಜಾ ಜನರನ್ನು ತಮ್ಮ ಪಕ್ಷದತ್ತ ಒಲಿಸಿಕೊಳ್ಳಲು ಯತ್ನಿಸುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಅಲ್ಲಿಯ ವಿರುದ್ಧ ಪಕ್ಷಗಳಂತೆಯೇ ನಮ್ಮಲ್ಲಿಯೂ ವಿರುದ್ಧ ಪಕ್ಷಗಳು ವರ್ತಿಸಿದರೆ ಅನಾಹುತಕ್ಕೆ ಕಾರಣವಾಗುವ ಸಂಭವವುಂಟೆಂಬುದನ್ನು ನಾವು ತಿಳಿದುಕೊಳ್ಳುವುದು ಅಗತ್ಯ.

ನಮ್ಮ ದೇಶ ಆರ್ಥಿಕ ದೃಷ್ಟಿಯಿಂದ ಬಹಳ ಕೆಳಮಟ್ಟದಲ್ಲಿರುವ ದೇಶ. ಆರ್ಥಿಕ ಪ್ರಗತಿಯನ್ನು ನಾವು ಅತ್ಯಂತ ತೀವ್ರ ಗತಿಯಿಂದ ಸಾಧಿಸಬೇಕಾಗಿದೆ. ಈ ಕಾರ್ಯದಲ್ಲಿ ನಾವು ಯಶಸ್ವಿಯಾಗುವುದಿಲ್ಲವಾದರೆ ದೇಶವು ಯಾವುದಾದರೊಂದು ಬಗೆಯ ಸರ್ವಾಧಿಕಾರೀ ಪದ್ಧತಿಗೆ ಬಲಿ ಬೀಳುವುದು ಖಂಡಿತ. ಪ್ರಜಾಸತ್ತಾತ್ಮಕ ಪದ್ಧತಿಯೇ ಇಲ್ಲಿ ನಷ್ಟವಾದೀತು. ಈ ಮಾತುಗಳ ಸತ್ಯಾಂಶವನ್ನು ನಾವು ಮನಗಂಡರೆ ಸರಕಾರೀ ಪಕ್ಷದವರು ಆರ್ಥಿಕ ಉನ್ನತಿಗಾಗಿ ನಡೆಸುವ ಅನೇಕ ನ್ಯಾಯುವಾದ ಕಾರ್ಯಕ್ರಮಗಳಲ್ಲಿ ವಿರುದ್ಧ ಪಕ್ಷದವರು ಪೂರ್ಣ ಸಹಕರಿಸಿ ದುಡಿಯುವುದೇ ಅವರ ಧರ್ಮವಾಗುತ್ತದೆ.

ತಾವು ಸರಕಾರಕ್ಕೆ ವಿರುದ್ಧ ಪಕ್ಷದವರೆಂದು ತಿಳಿದು ಸರಕಾರವು ಮುಂದೆ ತರಬಹುದಾದ ಪ್ರತಿಯೊಂದು ಕಾರ್ಯಕ್ರಮಕ್ಕೂ ವಿರೋಧ ಕಟ್ಟಿಕೊಳ್ಳುತ್ತಾ ಹೋದರೆ ದೇಶದ ಪ್ರಗತಿಯನ್ನೇ ಅಡ್ಡಗಟ್ಟಿದಂತಾಗುವುದು. ಈಗ ಸರಕಾರ ನಡೆಸುವ ಪಕ್ಷ ವಿರುದ್ಧ ಪಕ್ಷವಾಗುವ ಸಂದರ್ಭ ಬಂದಲ್ಲಿ ಅವರೂ ಇದೇ ರೀತಿ ಎಲ್ಲ ಕಾರ್ಯಕ್ರಮಗಳಿಗೆ ವಿರೋಧ ಮಾಡುತ್ತ ಹೋದರೆ ಪ್ರಗತಿ ಹೇಗೆ ಸಾಧ್ಯವಾದೀತು?

ಈ ಧೋರಣೆಯಿಂದ ಪ್ರಜಾಸತ್ತಾತ್ಮಕ ಪದ್ಧತಿ ಈ ರಾಜ್ಯಕ್ಕೆ ಪ್ರಯೋಜನವೇ ಇಲ್ಲವೆಂಬ ಭಾವನೆ ಜನರಲ್ಲಿ ಬೆಳೆಸುವಂತೆ ಮಾತ್ರವಾದೀತು. ಆದುದರಿಂದ ಹಿಂದುಳಿದ ರಾಜ್ಯವಾದ ನಮ್ಮ ದೇಶದಲ್ಲಿ ವಿರುದ್ಧ ಪಕ್ಷದವರು ಪೂರ್ಣ ಭಿನ್ನಾಭಿಪ್ರಾಯವಿದ್ದ ಪ್ರಶ್ನೆಗಳಲ್ಲಿ ಸರಕಾರದೊಡನೆ ಹೋರಾಡುತ್ತಿರುವಾಗಲೇ ಸಹಕರಿಸಲು ಸಾಧ್ಯವಿರುವ ಕಾರ್ಯಕ್ರಮಗಳನ್ನು ಆದಷ್ಟು ಹೆಚ್ಚು ಹುಡುಕಿ ತೆಗೆದು ಸರಕಾರಕ್ಕೆ ಇವುಗಳಲ್ಲಿ ತಮ್ಮ ಪೂರ್ಣ ಸಹಕಾರ ಕೊಡುವುದು ನಮ್ಮಲ್ಲಿಯ ವಿರುದ್ಧ ಪಕ್ಷದ ಧರ್ಮವೆಂದು ತಿಳಿಯಬೇಕು.

ಪ್ರಜಾ ಸೋಶಿಯಲಿಸ್ಟ ಪಕ್ಷದ ವಿಚಾರವಂತ ನಾಯಕ ಶ್ರೀ ಅಶೋಕ ಮೆಹತಾರವರು ಆ ಪಕ್ಷದ ಇತ್ತೀಚೆಗಿನ ಬೇತುಲ ಪರಿಷತ್ತಿನಲ್ಲಿ ಇದನ್ನೇ ಪ್ರತಿಪಾದಿಸಿ ವಿವರಿಸಿದರು. ಆ ಪಕ್ಷದ ಕೆಲಸಗಾರರು ಇವರ ಈ ಅಭಿಪ್ರಾಯಗಳ ಕಡೆಗೆ ಲಕ್ಷ್ಯ ಕೊಡಬೇಕಾಗಿದೆ.

ಜನಸಂಘ ಮತ್ತು ಕಮ್ಯೂನಿಸ್ಟ ಪಕ್ಷಗಳು ಈ ಕುರಿತು ಯಾವ ರೀತಿ ಅಭಿಪ್ರಾಯ ಪದುತ್ತಿಸಿಯೋ ಹೇಳಬರುವುದಿಲ್ಲ. ಬಂಡವಲಗಾರರ ಸರ್ವಾಧಿಕಾರೀ ಪದ್ಧತಿಯಾದ ಹಿಟ್ಲರ್‌ಕ್ರಮದ ಪದ್ಧತಿಯೇ ಜನಸಂಘದ ಧ್ಯೇಯವೆಂದು ಹೇಳುವವರಿದ್ದಾರೆ. ಇತರ ದೇಶಗಳಲ್ಲಿಯ ಅನುಭವದಿಂದ ಹೇಳುವುದಾದರೆ ಕಮ್ಯೂನಿಸ್ಟರು ನಮ್ಮ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ವಿಶ್ವಾಸವುಳ್ಳವರಲ್ಲವೆನ್ನಲು ಅಡ್ಡಿಯಿಲ್ಲ. ಅವರದು ರಶ್ಯನ್ ಮಾದರಿಯ ಕೆಲಸಗಾರರ ಸರ್ವಾಧಿಕಾರೀ ಪದ್ಧತಿಯನ್ನುತ್ತಾರೆ. ಈ ಪಕ್ಷಗಳ ಈ ಬಗೆಯ ವರ್ಣನೆಯಲ್ಲಿ ಸತ್ಯಾಂಶವಿದ್ದರೆ ಇವು ಪ್ರಜಾ ಪ್ರಭುತ್ವ ಪದ್ಧತಿಯ ಯಾವ ಸರಕಾರಕ್ಕೂ ಯಾವ ಸಹಕಾರವನ್ನೂ ಕೊಡುವಂತಿಲ್ಲ. ಪ್ರಜಾಸತ್ತಾತ್ಮಕ ರೀತಿಯ ಸರಕಾರಗಳಿಂದ ಯಾವ ಪ್ರಗತಿ ಸಾಧಿಸುವುದೂ ಅಸಾಧ್ಯವೆಂದು ತೋರಿಸುವುದೇ ಈ ಸಂಘಟನೆಗಳ ಗುರಿಯಾಗುತ್ತದೆ.

ನಮ್ಮ ದೇಶದಲ್ಲಿ ಕಮ್ಯೂನಿಸ್ಟರು ಜೋರಿನಿಂದ ಹಿಡಿದು ಬಾರದೆಂದೇನೂ ಇಲ್ಲ. ಪ್ರಜಾ ಜನರ ವೋಟಿನಿಂದಲೇ ಆರಿಸಲ್ಪಟ್ಟು, ಅಧಿಕಾರಕ್ಕೆ ಬರುವ ಸಾಹಸ ಅವರು ಈ ದೇಶದಲ್ಲಿ ಕೈಕೊಳ್ಳಲು ನಿರ್ಧರಿಸಿದರೆ ಅದು ನಿಜವಾಗಿಯೂ ಸ್ವಾಗತಾರ್ಹ ವಿಷಯವೇ ಆಗುವುದು.

ಜನಸಂಘದ ವಿಚಾರವಾಗಿ ಮೇಲೆ ಮಾಡಿದ ವರ್ಣನೆಯಲ್ಲಿ ಹೆಚ್ಚಿನ ಸತ್ಯಾಂಶವಿದೆಯೆಂಬುದಕ್ಕೆ ಸದ್ಯಕ್ಕಂತೂ ಯಾವ ಆಧಾರಗಳೂ ಕಂಡುಬರುವುದಿಲ್ಲವೆನ್ನಲೇಬೇಕು. ಇದರ ಸ್ಥಾಪಕರು ಪೂರ್ಣ ಪಾರ್ಲಿಮೆಂಟರೀ ಪದ್ಧತಿಯಲ್ಲಿ ವಿಶ್ವಾಸ ಇಟ್ಟವರು. ಅಗತ್ಯವಿದ್ದಾಗ ಸರಕಾರಕ್ಕೆ ಎಲ್ಲ ಸಹಕಾರ ಕೊಡಲು ಸಿದ್ಧರಾಗಿದ್ದವರು. ಈ ಪಕ್ಷದ ಕೆಲಸಗಾರರ ಧೋರಣೆ ಮಾತ್ರ ಸ್ಪಷ್ಟಗೊಳ್ಳಬೇಕಾಗಿದೆ. ಇದರಲ್ಲಿಯ ಹೆಚ್ಚಿನ ಕೆಲಸಗಾರರು ಆರ್. ಎಸ್. ಎಸ್. ಗುಂಪಿನವರೆಂಬುದರಿಂದ ಮೇಲಿನ ಅಪವಾದಕ್ಕೆ ಕಾರಣವಾಗಿರಬಹುದು.

ಮುಖ್ಯ ವಿಚಾರವೆಂದರೆ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಒಂದು ಪಕ್ಷಕ್ಕೆ ವಿಶ್ವಾಸವುಂಟೋ ಇಲ್ಲವೋ ಎಂಬುದನ್ನು ನಮ್ಮಲ್ಲಿ ಪರೀಕ್ಷೆ ಮಾಡಲು ದಾರಿಯೆಂದರೆ ಜನಜೀವನದ ಮಟ್ಟವನ್ನು ಏರಿಸಲು ಸರಕಾರೀ ಪಕ್ಷವು ಕೈಕೊಳ್ಳುವ ನ್ಯಾಯವಾದ ಕಾರ್ಯಗಳಲ್ಲಿ ಈ ವಿರುದ್ಧ ಪಕ್ಷಗಳು ಎಷ್ಟು ಸಹಕಾರ ಕೊಡುತ್ತಿವೆಯೆಂದು ಪರೀಕ್ಷೆ ಮಾಡಿ ನೋಡಿದರೆ ಗೊತ್ತಾಗುತ್ತದೆನ್ನಬಹುದು.

ಅಹಿಂಸಾ ರೀತಿ

ನೀರನಿತ್ತವಂಗೆ, ನ್ಯಸಾನ್ನ ಉಣಿಸಯ್ಯಾ।
ಶಿರವ ಬಾಗಿಸಂಗೆ, ಸಾಷ್ಟಾಂಗ ವಂದಿಸಯ್ಯಾ।
ಗುಣ ಒಂದ ತೋರ್ಪವಂಗೆ, ಪದಗುಣದ ... ।
ಅಪಕಾರ ಗೈವವಂಗೆ, ಉಪಕಾರ ಮರಳಿಸಯ್ಯಾ।
ತನ್ನ ಪೀಡಿಪಂಗೆ, ತನು ತೊರೆದು ಕರುಣಿಸಯ್ಯಾ।
ಧರ್ಮ ವಿಚಾರಿಪಂಗೆ, ಇದು ಧರ್ಮ ಮರ್ಮವಯ್ಯಾ।

ಗಾಂಧಿಯವರ ಪ್ರಿಯ ಗೀತೆ.

(ಗುಜರಾಥಿ "ಪಾಣಿ ಆಪಣೆ ಪಾಯ್" ಎಂಬ ಗೀತೆಯ ಅನುವಾದ.)

ಹೊಸ ಮಾದರಿಯ



ಉಷಾ

'ಹೇಂಡ್' ಮತ್ತು 'ಟೈಲರ್ಸ್' ಹೊಲಿಯುವ ಯಂತ್ರಗಳನ್ನೇ ಎಲ್ಲರೂ ಕೇಳುತ್ತಾರೆ

ಏಕೆಂದರೆ

ಈ ಯಂತ್ರಗಳು ಬಹಳ ಉತ್ತಮವಾಗಿವೆ.

ಅಧಿಕೃತ ಮಾರಾಟಗಾರರು

ದಿ ಇಂಡಿಯನ್ ಒಟೋಮೋಬೈಲ್ಸ್,

ಬಸ್‌ಸ್ಟೇಂಡಿನ ಬಳಿ, ಉಡುಪಿ.

ಇಲ್ಲಿ ಎಲ್ಲಾ ತರದ ಸ್ಪೇರ್ ಪಾರ್ಟುಗಳು ದೊರೆಯುತ್ತವೆ.
ಎಲ್ಲಾ ತರದ ರಿಪೇರಿಗಳನ್ನೂ ಇವರು ಮಾಡಿಕೊಡುತ್ತಾರೆ.
ಪ್ರತ್ಯಕ್ಷವಾಗಿ ಕಾಣಬಿಚ್ಛಿಸುವವರು ಇವರ 'ಶೋ ರೂಮ್'ಗೆ ಭೇಟಿ ಕೊಡಬಹುದು.

ಬೇಕಾಗಿದ್ದಾರೆ

ತಿಂಗಳೊಂದರ ಧಾರಾಳ ಸಂಬಳದಲ್ಲಿ ಕೆಲಸಮಾಡಲು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಕೂಡಲೇ ಬರೆಯಿರಿ:–

ಕ್ರಿಸೆಂಟ್ ಇನ್ಸೂರೆನ್ಸ್ ಕಂ, ಲಿ.

ಮಂಗಳೂರು—3.



ಬರೇ ರೂ-5ಕ್ಕೆ
15ಜ್ಯುವೆಲಿನ
ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ.

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ಯುತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ವತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮಂದಿಗೆ ಮಾತ್ರ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶಲ್ ..., ಅಧಿಕಾಧಿಕ ಸ್ಪೆಶಲ್ ರೂ. ೪ [ವಿ. ಪಿ. ವಚ್ಚೆರವಾಣಿ ಪ್ರತ್ಯೇಕ]

Mrs. P. DEVEE, F.P.S. (N.J.)
CALCUTTA. 40

ಸ್ಟಾಕಿಸ್ಟರು: ಶರಾಕಂಪನಿ, ಮಂಗಳೂರು.

ಜನತೆಯ ಅಂತಃಕರಣ

ರಾಷ್ಟ್ರಪತಿ ರಾಜೇಂದ್ರ ಪ್ರಸಾದ

ರಾಷ್ಟ್ರಪತಿಯಾಗುವುದಕ್ಕೆ ಮುಂಚೆಯೂ ರಾಜೇಂದ್ರ ಪ್ರಸಾದರು ಪಾಟ್ನಾ ನಗರದಲ್ಲಿ ಎಲ್ಲರಿಗೂ ಪರಿಚಿತರಾದ ವ್ಯಕ್ತಿ. ಇಲ್ಲಿ ಅವರು ಬಂದರೆ ಅಸಂಖ್ಯ ಸ್ನೇಹಿತರ ದರ್ಶನವಾಗುವುದು ಸ್ವಾಭಾವಿಕ. ಒಂದು ಸಲ ರಾಜಕಾರ್ಯದ ಮೇಲೆ ಅವರು ಪಾಟ್ನಾಕ್ಕೆ ಆಗಮಿಸುವರೆಂಬ ವಾರ್ತೆ ಬಂತು. ರಾಜೇಂದ್ರ ಬಾಬೂವನ್ನು ತಮ್ಮ ಮನೆಗೆ ಕರೆದು ತರಬೇಕೆಂದು ಅವರ ಹಳೆಯ ಸಾಮಾನ್ಯ ಮಿತ್ರರೊಬ್ಬರಿಗೆ ಇಚ್ಛೆಯುಂಟಾಗಿ, ಅವರೊಂದು ವ್ಯಕ್ತಿಗತ ಪತ್ರ ಬರೆದರು. ಆದರೆ ಅದಕ್ಕೆ ಉತ್ತರವೇ ಬರಲಿಲ್ಲ. ಪ್ರಸಾದರು ನಿಶ್ಚಿತ ದಿನಕ್ಕೆ ಸರಿಯಾಗಿ ಪಾಟ್ನಾಕ್ಕೆ ಆಗಮಿಸಿದರು. ಎಲ್ಲಿಯಾದರೂ ಸಭೆಯಲ್ಲಿ ರಾಷ್ಟ್ರಪತಿಗಳ ಸಂದರ್ಶನ ಪಡೆಯೋಣವೆಂದು ಆ ಮಿತ್ರರು ನಿರಾಶೆಯಲ್ಲಿ ಆಶೆ ತಂದುಕೊಂಡರು. ಸಂಜೆ ನಾಲ್ಕರ ಸುಮಾರಿಗೆ ಸಭೆಗೆ ಹೋಗುವೆನೆಂದು ಅವರು ನಿರ್ಧರಿಸಿ ಮಧ್ಯಾಹ್ನದ ಊಟ ಮುಗಿಸಿದರು. ಎರಡು ಘಂಟೆಯ ಸುಮಾರಿಗೆ ಅವರ ಮನೆಯ ಮುಂದೆ ಮೋಟಾರು ಕಾರೊಂದು ಬಂದು ನಿಂತಿತು. ಬಂದವರು ಯಾರೆಂದು ನೋಡುತ್ತಾರೆ—ತನ್ನ ಹೃದಯದ ಉದ್ವೇಗವನ್ನು ಗ್ರಹಿಸಿ ಸಾಕ್ಷಾತ್ಕಾರಗೊಂಡಂತೆ, ಸ್ವತಃ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸ್ನೇಹದ ನಗೆಯೊಂದಿಗೆ ಕೈಮುಗಿಯುತ್ತಿದ್ದಾರೆ! ಮಿತ್ರರ ಸಂತೋಷಾತಿರೇಕಕ್ಕೆ ಇತಿಮಿತಿಯಿರಲಿಲ್ಲ.

ರಾಜೇಂದ್ರ ಪ್ರಸಾದರ ವ್ಯಕ್ತಿತ್ವ ಎಷ್ಟು ನಿರಾಡಂಬರವಾದುದು, ಮತ್ತು ಅದೆಷ್ಟು ಸರಳವಾದುದು ಎಂಬುದಕ್ಕೆ ಮೇಲಿನ ಘಟನೆಯೊಂದು ನಿದರ್ಶನ. ತಮ್ಮ ಕಣ್ಣ ಮುಂದೆ ಹಾಯ್ದು ಹೋದ ಯಾರೊಬ್ಬರನ್ನೂ ಅವರು ತಿರಸ್ಕಾರದಿಂದ, ಉಪೇಕ್ಷೆಯಿಂದ ನೋಡಿರುವುದಿಲ್ಲ. ಯಾರನ್ನೂ ಅಸಂತುಷ್ಟರನ್ನಾಗಿ ಮಾಡಲು ಅವರ ದಾಕ್ಷಿಣ್ಯಪರ ಮನಸ್ಸು ಕೇಳುವುದಿಲ್ಲ. ಒಮ್ಮೆ ಹೇಗೋ ಏನೋ ಜ್ಯೋತಿಷಿಯೊಬ್ಬ ರಾಷ್ಟ್ರಪತಿ ಭವನವನ್ನು ಪ್ರವೇಶಿಸಿ, ಪ್ರಸಾದರ ಮುಂದೆ ಬಂದು ನಿಂತ. ನೂರಾರು ಅಗತ್ಯದ ಕೆಲಸ ಬಿದ್ದುಕೊಂಡಿದ್ದರೂ, ರಾಜೇಂದ್ರ ಬಾಬು ಈ ಜೋಯಿಸರೊಡನೆ ಮಾತಿಗೆ ಕುಳಿತರು. ಆ ಜೋಯಿಸ ತಾಸುಗಟ್ಟಳೆ ಪಂಚಾಂಗ ಹೊಡೆದ. ಆದರೂ ರಾಷ್ಟ್ರಪತಿಗಳಿಗೆ ಅವನನ್ನು ಹೋಗಿರೆಂದು ಹೇಳಲು ಮನಸ್ಸು ಬಾರದು. ಕೊನೆಗೆ ಅವರ ಕಾರ್ಯದರ್ಶಿ ಹೊರಗೆ ಕಾರ್ಯಕ್ರಮಕ್ಕೆ ಹೋಗುವ ವೇಳೆಯಾಯಿತು ಎಂದು ಎಚ್ಚರಿಸಿದಾಗ ಸಂಕೋಚಮೂರ್ತಿ ರಾಜೇಂದ್ರ ಪ್ರಸಾದ ಜೋಯಿಸರನ್ನು ಬೀಳ್ಕೊಟ್ಟರು.

ಗಾಂಧೀಜಿಯ ದೃಢತೆಯು ಸರ್ದಾರ ಪಟೇಲರಿಗೆ, ದಾರ್ಶನಿಕ ದೃಷ್ಟಿ ನೆಹರೂಗೆ, ವಾಕ್ಚಾತುರ್ಯ ರಾಜಾಜಿಗೆ ದೊರೆತಂತೆ—ಅವರ ಸಹೃದಯತೆ, ಸರಳತೆ ಮತ್ತು ನಯವಿದರ ನಡವಳಿಕೆಗಳು ರಾಜೇಂದ್ರ ಪ್ರಸಾದರ ಪಾಲಿಗೆ ಬಂದವು. ಈ ಗುಣ ವಿಶೇಷಗಳಿಂದಲೇ ಅವರು ಬಿಹಾರದ ಗಾಂಧೀ ಎಂಬ ಅಭಿದಾನವನ್ನು ದೇಶ ಸೇವೆಯಲ್ಲಿ ನಿರತರಾದ ಪ್ರಾರಂಭದಲ್ಲಿಯೇ ಪಡೆದರು.

ರಾಷ್ಟ್ರಪತಿ ಪ್ರಸಾದರು ಉಬ್ಬಸದ ಪುರಾತನ ರೋಗಿ—ಅವರ ಕೃಷ ಶರೀರದ ಮೇಲೆ ಜ್ವರದ ಆತಿಕ್ರಮ ನಡೆಯುವುದುಂಟು. ಹಿಂದೊಂದು ದಿನ ಪ್ರಸಾದರು ಹೀಗೆ ಜ್ವರಪೀಡಿತರಾಗಿ ಉಬ್ಬಸದಿಂದ ಅಸ್ವಸ್ಥಗೊಂಡು ಹಾಸಿಗೆ ಹಿಡಿದಾಗ, ಬಿಹಾರದ ಭೂಕಂಪದ ಅನಾಹುತ ಕೇಳಿಸಿತು. ಒಡನೆಯೇ ಅವರ ಸೇವಾ ಬುದ್ಧಿ ಜಾಗೃತಗೊಂಡು, ಅನಾರೋಗ್ಯವನ್ನು ಲೆಕ್ಕಿಸದೆ, ದುಃಖಿತ ಹಾಗೂ ಪೀಡಿತ ಜನತೆಗೆ ಸಾಂತ್ವನಪರ ಸಂದೇಶವನ್ನು ನೀಡುತ್ತಾ ಸೇವೆ ಕೈಗೊಳ್ಳಲು ಮುಂದಾಯಿತು.

"ಸ್ವತಂತ್ರ ಭಾರತದ ರಾಷ್ಟ್ರಪತಿಯಾಗಿ ಹಳ್ಳಿಯ ರೈತನನ್ನು ಆರಿಸಬೇಕು" ಎಂದು ಗಾಂಧೀಜಿ ಹೇಳುತ್ತಿದ್ದರು. ರಾಜೇಂದ್ರ ಪ್ರಸಾದರು ವಿದ್ವಾಂಸರೆಂದು ಖ್ಯಾತನಾಮರಾಗಿದ್ದಾರೆ—ಆದರೆ ಅವರಲ್ಲಿ ರೈತನ ಹೃದಯ ಹುದುಗಿಕೊಂಡಿದೆ. ಜನತೆಯೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು, ಅವರ ಮನಸ್ಸು ಮತ್ತು ಹೃದಯವನ್ನು ಒಲಿಸಿಕೊಳ್ಳಬಲ್ಲ ಅದ್ಭುತ ಸಾಮರ್ಥ್ಯವನ್ನು ರಾಜೇಂದ್ರ ಪ್ರಸಾದರು ತಮ್ಮ ಸರಳತೆಯ ಕಾರಣದಿಂದ ಪಡೆದುಕೊಂಡಿರುವರು.

ಆದರೆ ಅಷ್ಟೇ ಗಂಭೀರ ವರ್ತನೆಯನ್ನಿಡಲೂ ರಾಜೇಂದ್ರ ಪ್ರಸಾದರು ಹಿಂಜರಿಯುವುದಿಲ್ಲ. ಸಾರ್ವಭೌಮಾಧಿಕಾರ ಸಂಪನ್ನವಾದ ಸ್ವತಂತ್ರ ರಾಷ್ಟ್ರ ಭಾರತದ ಸರ್ವೋನ್ನತ ಅಧಿಕಾರಿ ಸ್ಥಾನದಲ್ಲಿರುವ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು, ತಮ್ಮ ಸ್ಥಾನ ಗೌರವವನ್ನು ಅತ್ಯಂತ ದಕ್ಷತೆ ಹಾಗೂ ವಿಚಕ್ಷಣತೆಯಿಂದ ಕಾಪಾಡಿಕೊಂಡು ಬಂದಿದ್ದಾರೆ. ಹೋಗಿ ಮೋದಿಯಂಥ ಜನರ ಬಾಯಿಂದ ದೇಶದ ಗೌರವ ಘನತೆಗಳಿಗೆ ತಿಲಾಂಶವೂ ವ್ಯತ್ಯಯವುಂಟಾಗದಂತೆ ರಾಷ್ಟ್ರಪತಿಯ ಕರ್ತವ್ಯಗಳನ್ನು ಸುಂದರವಾಗಿ ನಿರ್ವಹಿಸಬಲ್ಲ ಮಹಾವ್ಯಕ್ತಿ ಎಂದು ಪ್ರಸಾದ ಪ್ರಶಂಸೆ ಪಡೆದಿರುವರು. ವಕಾಲತು ಪ್ರಾರಂಭಿಸಿದ ಆರಂಭದಲ್ಲಿಯೇ ಚಿತ್ತರಂಜನದಾಸ, ಮೋತಿಲಾಲ ನೆಹರೂ, ತೇಜಬಹದ್ದೂರ ಸಪ್ರು ಮುಂತಾದವರಷ್ಟೇ ಪ್ರತಿಭಾನ್ವಿತ ವಕೀಲರೆಂದು ರಾಜೇಂದ್ರ ಪ್ರಸಾದರು ಹೆಸರುಗೊಂಡರು. ಆ ಮೇಲೆ ಗಾಂಧೀಜಿಯ ಸಂಪರ್ಕವಾಗಲು, ದೇಶ ಸೇವೆಯೇ ಅವರ ಜೀವನವಾಗಿ ಪರಿಣಮಿಸಿತು. ಈ ರಾಷ್ಟ್ರನಿಷ್ಠೆಯ ದೀಕ್ಷೆಯನ್ನು ರಾಜೇಂದ್ರ ಪ್ರಸಾದರು ಇತರ ರಾಷ್ಟ್ರಗಳ ಆದರ್ಶ ಪ್ರಭಾವದಿಂದ ಪಡೆಯದೆ, ಹೃದಯದ ಕರೆಯಂತೆ ಸ್ವೀಕರಿಸಿದರು. ಅವರ ಸಂಸ್ಕಾರ ಮತ್ತು ನಡೆನುಡಿಗಳು ಸ್ವದೇಶೀವ್ರತ ನಿಷ್ಠರಿಗೆ ಆದರ್ಶವಾಗಿವೆ.

ಜನನಾಯಕ ನೆಹರೂ

"ಪ್ರಜಾಪ್ರಭುತ್ವದಲ್ಲಿ ಜವಾಹರ... ಲರಂಥ ವ್ಯಕ್ತಿಗಳು ಅಪಾಯಕರ. ... ರು ತಮ್ಮನ್ನು ಪ್ರಜಾಪ್ರಭುತ್ವವಾದಿ... ದೂ ಸಮಾಜವಾದಿಯೆಂದೂ ಕರೆದು... ಳ್ಳುತ್ತಾರೆ. ಆದರೆ ಸ್ವಲ್ಪ ಅಡ್ಡ ದ... ಹಿಡಿದು ಅವರು ಸರ್ವಾಧಿಕಾರಿಯಾಗಿ... ದಲಾಗಬಹುದು—" ಈ ಮಾತನ್ನು ಬ... ದವರು ಯಾರು? ಭಾರತದ ಮಹಾಪ್ರ... ನಿ ಮತ್ತು ಭಾರತದ ಪ್ರಥಮ ಪ್ರಜೆ... ದ ನೆಹರೂರವರೇ ನಮ್ಮ ದೇಶದ ನಾ... ಕರಾಗಿರಲು ತಮಗಿರುವ ಅರ್ಹತೆಗಳ... ಪ್ರಶ್ನಿಸಿ ಅನಾಮಿಕರಾಗಿ ಬರೆದು ಪ್ರ... ಸಿದ ಒಂದು ಲೇಖನದಲ್ಲಿ ಮೇಲಿನ... ಬರೆದಿದ್ದರು.

ನೆಹರೂ ನಿಸ್ಸಂದೇಹವಾಗಿಯೂ ನಿರ್ಮಲವಾದ ಅಂತಃಕರಣವುಳ್ಳವರೆಂಬುದಕ್ಕೆ ಇದು ನಿದರ್ಶನ. ಅವರದು ಸ್ಪ... ವಾದ ಸ್ವಭಾವ. ತಮ್ಮ ಜೀವಮಾ... ಹದಿಮೂರು ವರ್ಷಗಳಿಗಿಂತಲೂ ಹೆ... ಸಮಯವನ್ನವರು ಸೆರೆಮನೆಯಲ್ಲಿ ಕಳೆದಿರುವರು. ಅಹಿಂಸಾತ್ಮಕ ಹೋರಾಟದಲ್ಲಿ ಗೆದ್ದು ಉಳಿದ ಮಹನೀಯರಲ್ಲಿ ನೆಹರೂ ಅಗ್ರಗಣ್ಯರು. ಆದರೆ ಅದಕ್ಕಿಂತಲೂ ವಿಷಮವಾದ, ಮಹತ್ತರವಾದ ಸಾಹಸದ ಹೋರಾಟವನ್ನು—ಕಳವಳಗೊಂಡ, ತಿಳುವಳಿಕೆ ಸಾಲದ ತನ್ನ ನಾಡಿನ ಜನರನ್ನು ಒಂದಾಗಿಸಿ ಅವರಿಂದ ಸ್ವತಂತ್ರವಾದ ರಾಷ್ಟ್ರವನ್ನು ಕಟ್ಟುವ ಹೋರಾಟವನ್ನು—ಇದೀಗ ನೆಹರೂ ಕೈಗೊಂಡಿರುವರು. ಇವರ ಫಲಿತಾಂಶ ಸಂಪೂರ್ಣ ಜನ್ಮೋದ್ಧಾರದ ಸಾಧನೆಯ ಮೇಲೆಯೇ ನಿಂತಂತೆ ನೆಹರೂ ಈ ಹೋರಾಟದಲ್ಲಿ ದಿನಕ್ಕೆ ಹತ್ತೊಂಭತ್ತು ತಾಸು, ವಾರದ ಏಳೂದಿನ ಅವಿರತ ಶ್ರಮಗೈಯುತ್ತಿದ್ದಾರೆ.

ಜಯಿಸಿದ ಧುರೀಣರು

ಪ್ರಜಾಪ್ರಭುತ್ವದ ಪ್ರಥಮ ಪಾಠಗಳಿಂದ ತನ್ನ ಜನರನ್ನು ಪುರಿದುಂಬಿಸುತ್ತಾ ತಿಳಿಯ ಹೇಳುತ್ತಾ ನೆಹರೂ ಭಾರತವನ್ನೆಲ್ಲ–ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಬೊಂಬಾಯಿಯಿಂದ ಬಂಗಾಳ-ಅಸಾಮುಗಳವರೆಗೆ–ತಿರುಗಾಡುತ್ತಾರೆ. ಭಾರತದ ಸಂಚಾರ ಮಾರ್ಗದ ಅಸೌಕರ್ಯಗಳಿಂದ ಅಸಂತುಷ್ಟರಾದ ಅವರು ಕವಲು ದಾರಿಗಳಲ್ಲಿ ತಮ್ಮ ಕಾರಿನಿಂದ ನೆಗೆದು, ಗುಂಪು ಕೂಡುವ ರಿಕ್ಷಾ, ಎತ್ತಿನ ಬಂಡಿ, ಕಾರುಗಳಿಗೆ ಸ್ವತಃ ತಾವೇ ಮುಂದಾಗುತ್ತಾರೆ ಈ ಸಾಹಸದ ಮನೋಭಾವವೇ ಅವರ ದೈಹಿಕ ದಾರ್ಢ್ಯವನ್ನು ಕಾಪಾಡಿಕೊಂಡು ಬಂದಿದೆ ತಮ್ಮ ಎದುರು ನಿಂತು ನಿಂದಿಸುವ ಮತಿಗೆಟ್ಟ ಜನಜಾಗುಳಿಯ ನಡುವೆ ಅವರು ಧೈರ್ಯದಿಂದ ನಡೆದು ಹೋಗುತ್ತಾರೆ.

ಭಾರತೀಯರ ಮೇಲೆ ಹಿಂದೆ ಗಾಂಧೀಜಿ ಬೀರುತಿದ್ದ ಮಾಂತ್ರಿಕನ ಪ್ರಭಾವವನ್ನು ಬೀರಬಲ್ಲ ಶಕ್ತಿ ಇಂದು ನೆಹರೂಒಬ್ಬರಿಗಿದೆ ತನ್ನರಾಜಕೀಯ ಅನುಯಾಯಿಗಳ ಶಕ್ತಿ ಸಾಮರ್ಥ್ಯಗಳನ್ನು ಅಳೆಯುವುದರಲ್ಲಿ ಗಾಂಧೀಜಿ ನಿಸ್ಸೀಮರಾಗಿದ್ದರು. ಅವರು ಭಾರತದ ರಾಜಕೀಯ ಕ್ಷೇತ್ರದಲ್ಲಿ ನೆಹರೂರವರನ್ನು ತಮ್ಮ ಉತ್ತರಾಧಿಕಾರಿಯಾಗಿ ಹೆಸರಿಸಿದರು ಗಾಂಧೀಜಿಯವರ ವ್ಯಕ್ತಿತ್ವದ ಮೇಲೆ ಅಪಾರ ಅಭಿಮಾನ, ಆದರೆ ಅವರ ಧಾರ್ಮಿಕ ರೀತಿ ನೀತಿಗಳ ಕುರಿತಾದ ಸಂಶಯದ ನಡುವೆ ನೆಹರೂ ತೂಗಾಡಿದ ಗಳಿಗೆಯುಂಟು ನೆಹರೂ ರಾಜಕೀಯ ಸುಧಾರಕರು, ಮಾರ್ಕ್ಸ್ ಪದ್ಧತಿಯ ಸಾಮ್ಯವಾದವನ್ನು ಬಲ್ಲವರು, ಮತ ಧರ್ಮಗಳ ಬಗ್ಗೆ ಉದಾಸೀನರಾಗಿದ್ದು, ಭಾರತದ ರಾಜಕೀಯ ಚಟುವಟಿಕೆಯನ್ನು ಪಾಶ್ಚಿಮಾತ್ಯ ಪ್ರಗತಿಯೊಡನೆ ತೂಗುವ ಆಸೆ ತುಂಬಿದವರು ಸುಧಾರಕ ನೆಹರೂ ಮತ್ತು ಧಾರ್ಮಿಕ ಋಷಿ ಗಾಂಧೀಜಿ ಕೇವಲ ಕೆಲವು ವಿಚಾರಗಳಲ್ಲಿ ಒಂದಾದರು ಆವರಿಬ್ಬರ ಆಶಯದಲ್ಲಿಯೂ ಅತಿ ಮುಖ್ಯವಾದುದು ಭಾರತೀಯ ಸ್ವಾತಂತ್ರ್ಯ.

ನಮ್ಮದು ತೊಂದರೆ ತಾಪತ್ರಯಗಳಿಂದ ತುಂಬಿದ ದೇಶ–ಆದರೆ ನಮ್ಮಲ್ಲಿ ಯಾರೊಬ್ಬರೂ ಜವಾಹರಲಾಲ ನೆಹರೂ ತೆಗೆದುಕೊಂಡಿರುವಷ್ಟು ತೊಂದರೆಗೆ ಹೆಗಲೊಡ್ಡಿಲ್ಲ. ಆ ಹೊಣೆಯನ್ನು ಬಯಸಿಲ್ಲ. ಹೊಸ ದಿಲ್ಲಿಯಲ್ಲಿ ನೆಹರೂ ಭವ್ಯ ಭವನದಲ್ಲಿ ಸಾದಾ ಜೀವನ ನಡೆಸುತ್ತಾರೆ ಚಿಕ್ಕ ಮಂಚದ ಮೇಲೆ ಮಲಗುತ್ತಾರೆ. ಅಡಿಗೆ ಯಾಪರೀತಿ ಸಿದ್ಧವಾಗಿದೆ, ಹೇಗಿದೆ ಎಂಬುದನ್ನು ಗಮನಿಸದೆ ಉಣ್ಣುತ್ತಾರೆ ನಮ್ಮ ದೇಶದಲ್ಲಿ ಕೊರತೆಯಾಗಿರುವ ವಿಮಾನ ಮುಂತಾದ ಯಂತ್ರಗಳನ್ನೂ ಚಿಕ್ಕ ಮಕ್ಕಳ ಆಟ ವಿನೋದಗಳನ್ನೂ ನೆಹರೂ ತುಂಬ ಮೆಚ್ಚಿಕೊಳ್ಳುತ್ತಾರೆ, ಪ್ರೀತಿಸುತ್ತಾರೆ

ಸ್ವಾತಂತ್ರ್ಯ ಚಳುವಳಿಯ ಮೂರ್ತಸ್ವರೂಪತನದಿಂದ ಆಡಳಿತದ ಮುಖ್ಯಸ್ಥರಾಗಿ ಬದಲಾದ ನೆಹರೂ ದಿನದ ರಾಜಕೀಯ ಬಗೆಗೆ ದೃಷ್ಟಿ ಪರಿವರ್ತಿಸಿಕೊಂಡಂತಿದೆ–ತುಂಬ ಮಿತಿಮೀರಿದ ಅವರ ಬರೆಹಗಳ ಬರವಣಿಗೂ ಭಾರತದ ಉದ್ಧಾರಕ್ಕೆ ಇಂದವರು ಯೋಚಿಸುತ್ತಿರುವ ವಿಚಾರಕ್ಕೂ ಅಂತರವನ್ನು ನಾವು ಕಾಣಬಹುದು. ಇದನ್ನು ಪ್ರಗತಿಪರವೆನ್ನುವ ರಾಜಕೀಯ ಗುಂಪಿನವರು ಜರೆದು, ನೆಹರೂ ಪ್ರಗತಿಬಾಹಿರರೆಂದು ದೂರುವುದುಂಟು. ಆದರೆ ತಾವು ಕಡು ಸಮಾಜವಾದಿಗಳೆಂದು ನೆಹರೂ ಸ್ಪಷ್ಟವಾಗಿ, ಆತ್ಮ ವಿಶ್ವಾಸದಿಂದ ಹೇಳುತ್ತಾರೆ.

ತಾವು ಸರ್ವಾಧಿಕಾರಿಯಾಗಬಹುದೆಂದು ನೆಹರೂ ಹೇಳಿಕೊಂಡಿರುವುದು ನಿಜವಾದೀತು–ಜನಸಾಮಾನ್ಯರೆಲ್ಲರೂ ಅವರನ್ನು ಮುತ್ತಿಗೆ ಹಾಕುತ್ತಾರೆ. ಅವರೆಲ್ಲಿ ಹೋದರೂ ಪೈಲುಗಟ್ಟಲೆ ಜನ ನೆರೆದಿರುತ್ತಾರೆ ಈ ಜನ ಜಾತ್ರೆ ನೆಹರೂ ಮೇಲೆ ಜನತೆಗಿರುವ ಅಭಿಮಾನದ ದ್ಯೋತಕ. ಅವರಲ್ಲಡಗಿರುವ ಗಾಂಭೀರ್ಯ, ಹೊರ ಸೂಸುವ ವಿದ್ವತ್ತು, ಸೂಕ್ಷ್ಮವಾಗಿ ಮಿಡಿಯುವ ಆತ್ಮಾಭಿಮಾನ ಇವು ಅವರ ಚುರುಕು ಸ್ವಭಾವದಲ್ಲಿ ಗೋಚರಿಸುತ್ತವೆ ಆಡಳಿತದ ಬಗ್ಗೆ ಅವರಿಗಿರುವ ದಕ್ಷತೆ ಹಾಗೂ ಭಾರತೀಯರ ಮನಸ್ಸನ್ನು ಅಳುವುದರಲ್ಲಿ ಅವರು ಪಡೆಯುತ್ತಿರುವ ಸಂತೋಷ ಇವೂ ಅದಕ್ಕೆ ಸಾಕ್ಷಿ.

ನೆಹರೂ ಶಕ್ತಿಯುತವಾಗುತ್ತಿದ್ದ.., ಎಚ್ಚರವಾಗುತ್ತಿರುವ, ಏಷಿಯಾದ ಬಹು ಮುಖ್ಯ ಧುರೀಣ ಮತ್ತು ವಿಶ್ವದ ಪ್ರಬುದ್ಧ ರಾಜನೀತಿ ವಿಶಾರದ ಅವರ ಆಗಿನ ನಡೆನುಡಿ ಮತ್ತು ನಿಷ್ಕಪಟ ವ್ಯಕ್ತಿತ್ವ ಇವುಗಳನ್ನು ನೋಡಿದರೆ, ರಾಜಕಾರಣಿಗಿಂತಲೂ ವಿದ್ವಾಂಸರೆಂದು ಅವರನ್ನು ಗೌರವಿಸಬಹುದು ತೆಳ್ಳನೆಯ ನಂಬರವಾದ ಅವರ ಮುಖ ತೇಜಸ್ಸನ್ನು ತುಂಬಿಕೊಂಡು ನಗೆಯನ್ನು ಸೂಸುತ್ತಾ ಸ್ಫೂರ್ತಿ ಪಡೆಯುವ ಒಂದು ಮನಸ್ಸನ್ನು ನಮಗೆ ತೋರಿಸುತ್ತದೆ. ಅವರ ಎರಡು ಶಕ್ತಿಯುತವಾದ ವಿಚಾರಗಳಲ್ಲಿ ಮೊದಲನೆಯದು ಪ್ರಾಮಾಣಿಕತೆ, ಮತ್ತು ಎರಡನೆಯದು ಭಾರತೀಯರ ಜೀವಾಳವೆನಿಸಿದ ನೈತಿಕ ಆದರ್ಶ

ಭಾರತ ಜವಾಹರಲಾಲ ನೆಹರೂರನ್ನು ಅಧಿಕಾರ ಪಕ್ಷದ ನಂಬಿಗಸ್ತವೆಂದು ಹಿಂಬಾಲಿಸುವುದಿಲ್ಲ — ಮಹಾತ್ಮಾ ಗಾಂಧೀಜಿಯ ಸೇವಾ ತ್ಯಾಗಗಳ ಆದರ್ಶ ಪರಿಪಾಲಕರೆಂದು ತಿಳಿದು [illegible], [illegible] ನೀಡುತ್ತಿದೆ.

❀

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ

ರಾಜನೀತಿ ವಿಶಾರದ ರಾಜಾಜಿ

"ಪ್ರಾರಂಭದಲ್ಲಿಯೇ ವಿಶೇಷ ತೃಪ್ತಿಯನ್ನು ತೋರಿಸಿ. ದೊಡ್ಡ ಬೇಡಿಕೆಯನ್ನು ಮುಂದಿಟ್ಟು ನಿರಾಶರಾಗುವುದಕ್ಕಿಂತ ಸಣ್ಣ ಬೇಡಿಕೆಯನ್ನು ಮುಂದಿಟ್ಟು, ಅದು ಸಫಲವಾದ ಬಳಿಕ ಸಂದರ್ಭ ನೋಡಿ ದೊಡ್ಡ ಸಂಗತಿಗಳನ್ನು ಕರಗತ ಮಾಡಿಕೊಳ್ಳುವುದು ಯೋಗ್ಯ'– ಈ ಮಾತನ್ನು ರಾಜಕೀಯ ಕ್ಷೇತ್ರದ ಚಾಣಕ್ಯನೆಂದು ಕರೆಯುವ ಮದ್ರಾಸಿನ ಮುಖ್ಯಮಂತ್ರಿ ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ಚೆನ್ನಾಗಿ ಅನ್ವಯಿಸಬಲ್ಲವು. ಹಿಂದೆ ಕ್ರಿಪ್ಸ್ ಮಂಡಳವು ಭಾರತಕ್ಕೆ ಬಂದು, ನಮ್ಮ ಧುರೀಣರೊಂದಿಗೆ ವಾರ್ತಾಲಾಪ ನಡೆಸಿ, ಅಸಫಲಗೊಂಡು ಬ್ರಿಟನಿಗೆ ಹೋದಾಗ "ನನ್ನ ಉದ್ದೇಶ ಸಂಪೂರ್ಣ ಯಶಸ್ವಿಯಾಗಲಿಲ್ಲ–ಮಾತುಕತೆಗಳ ನಡುವೆ [illegible] ರಾಜನೀತಿ ವಿಶಾರದರನ್ನು ಕಂಡು ಅವರೊಡನೆ ವಿಚಾರ ವಿನಿಮಯ ಮಾಡುವ ಸೌಭಾಗ್ಯ ದೊರೆಯಿತು' ಎಂದವರು ಹೇಳಿದರು.

ಸತ್ಯವಾದ [illegible] ಒರೆಗಲ್ಲಿಗೆ ಹಚ್ಚಿ ನೋಡಿದರೆ [illegible] ಹೊಳಪು ವಿಜ್ಞಾನ[illegible] [illegible]ಗುವುದು. ಒಕ್ಸ್‌ಫರ್ಡ್ [illegible] ಶಬ್ದಗಳಲ್ಲಿ 'ರಾಜನೀತಿಯು ಪರಿಷ್ಕೃತ [illegible] ಕಲೆ" ಎಂದ[illegible] ಆದರೆ ರಾಜಾಜಿಯ [illegible] ವಸ್ತುತಃ [illegible] ಚಾತುರ್ಯದ [illegible] ಎಷ್ಟರ ಮಟ್ಟಿಗೆ [illegible] ಎಂದರೆ, ಅದನ್ನು ತೋರುವಷ್ಟು ಅವರ ತೇಜಸ್ಸು ಹೆಚ್ಚುತ್ತದೆ

ದಕ್ಷಿಣ ಭಾರತವು ಅನೇಕ [illegible] ಪುರುಷರಿಗೆ ಜನ್ಮವಿತ್ತಿದೆ–ಆದರೆ ಎಲ್ಲರಿಗಿಂತಲೂ ರಾಜಾಜಿಯ ವ್ಯಕ್ತಿತ್ವದ ಮಹತ್ವ ಹಿರಿದು. ಆರ್ಯ ಹಾಗೂ ದ್ರಾವಿಡ ಸಂಸ್ಕೃತಿಯ ಸಮ್ಮಿಲನದಿಂದ ಹುಟ್ಟಿಕೊಂಡ ಮೇಧಾವಿತನ, ವಿದ್ಯೆ ಹಾಗೂ ಸಂಕಲ್ಪ ಶಕ್ತಿ ರಾಜಾಜಿಯಲ್ಲಿ ಮೂರ್ತಿಸ್ವರೂಪ ಧರಿಸಿದೆ, ಮತ್ತು ಅವರ ಪ್ರತಿಯೊಂದು ಕಾರ್ಯದಲ್ಲಿ, ಮಾತಿನಲ್ಲಿ ವ್ಯಕ್ತಗೊಳ್ಳುತ್ತಿದೆ.

ರಾಜಾಜಿಯ [illegible] ನಗಳಲ್ಲಿ ಸ್ವಾರ್ಜಿತವಾದವುಗಳು ವಕೀಲಿ ವೃತ್ತಿ [illegible] [illegible] ಪಡೆಯುತ್ತಿದ್ದಾಗಲೇ [illegible] ಗಾಂಧೀಜಿಯವರ ಸಂಪರ್ಕವಾಯಿತು. "ಹಿಂದೂ' ಪತ್ರಿಕೆಯ ಸಂಪಾದಕ ಕಸ್ತೂರಿ ರಂಗ ಅಯ್ಯಂಗಾರರು ರಾಜಾಜಿಗೆ ಈ ಸೌಭಾಗ್ಯ ಒದಗಿಸಿಕೊಟ್ಟರು. ಈ ಸಂಪರ್ಕವು ಅಂತ್ಯಕಾಲದವರೆಗೂ ದೃಢವಾಗಿ ಉಳಿಯಿತು.

ಜೀವನವನ್ನು ರಾಜಾಜಿ ಒಂದು ವಿಶಿಷ್ಟ ದೃಷ್ಟಿಯಿಂದ ನೋಡಿ,ಅದರ ಮೌಲ್ಯ ಮಾಪನಮಾಡಿದ್ದಾರೆ.ತಮ್ಮೊಬ್ಬರಿಗೆ ಪ್ರಿಯವಾದ ಒಂದು ತತ್ವವನ್ನು ಅವರು ಕಂಡುಕೊಂಡಿದ್ದಾರೆ–ಅದರ ವಿರುದ್ಧ ಲೋಕದ ಜನ ಏನು ಆಕ್ಷೇಪವೆತ್ತಿದರೂ ಅವರು ಕಿವಿಗೊಡುವುದಿಲ್ಲ ಹಿಂದೊಮ್ಮೆ ಕಾಂಗ್ರೆಸಿನ ವಿರುದ್ಧ ಬಂಡೆದ್ದ ವಿದ್ರೋಹವೆಂಬ ಗಂಭೀರ ಆಪಾದನೆಗೆ ಅವರು ಬಲಿಯಾಗಿದ್ದರು [illegible] ಅವರನ್ನು ನಿಂದಿಸಿ[illegible]. ಮಹಾತ್ಮಾ ಗಾಂಧೀಜಿಯವರು ಕೂಡ [illegible] ತಿರಸ್ಕಾರ ತೋರಿದರು [illegible] ರಾಜಗೋಪಾಲಾಚಾರಿಗೆ [illegible] [illegible], ಇರಲಿಲ್ಲ

[illegible] ವ್ಯಕ್ತಿಗಳಂತೆ ರಾಜಾಜಿಯಲ್ಲಿಯೂ "ಅಹಂ'ಕಾರ ಮನೆಮಾಡಿದೆ–ಆದರೆ ಇದು ಸಾತ್ವಿಕವಾಗಿದೆ [illegible] ರಲ್ಲಿ [illegible] ಮದ್ರಾಸಿನಲ್ಲಿ ಮಂತ್ರಿಮಂಡಲ ರಚಿಸಿದಾಗ ಇಂಗ್ಲೀಷ್ ಅಧಿಕಾರಿಗಳು ಇವರನ್ನು ಉಪೇಕ್ಷೆಯಿಂದ ನೋಡುತ್ತಿದ್ದರು. ಆದರೆ ಒಂದೆರಡು ದಿನಗಳಲ್ಲಿ ಅಧಿಕಾರಿಗೆ ತನ್ನ ತಪ್ಪು ತಿದ್ದಬೇಕಾಗಿ ಬಂತು

[illegible] ನೋಡುವರೋ ಅಷ್ಟೇ [illegible] [illegible] ಗುಣ—ಹಿಂದುಮುಂದಿನ ಸಂಗತಿಗಳ ಯಥಾರ್ಥ ಜ್ಞಾನದ ಬಲ ರಾಜಾಜಿಯ ವೃತ್ತ ವ್ಯಕ್ತಿತ್ವಕ್ಕೆ ಒಪ್ಪವಿಟ್ಟಿದೆ. ಅವರ ಹೃದಯ ತುಂಬ ವಾತ್ಸಲ್ಯದಿಂದ ತುಂಬಿದೆ. ತಾವು ಗವರ್ನರ ಜನರಲರಾಗಿದ್ದಾಗ ಪೇದೆಯೊಬ್ಬನನ್ನು ಕಾರ್ಯದರ್ಶಿಯು "ಏ, ಪೇದೆ–"ಎಂದು ಕರೆದುದನ್ನು ರಾಜಾಜಿ ಕೇಳಿದರು. ಒಡನೆಯೇ "ಅವನ ಹೆಸರು ಹೇಳಿ ಕರೆಯಬೇಕು" ಎಂದು ಎಚ್ಚರ ನುಡಿದರು. ಮದ್ರಾಸ ಶಾಸನ ಸಭೆಯ ಕಮ್ಯೂನಿಸ್ಟ ಸದಸ್ಯರನ್ನು ಉದ್ದೇಶಿಸಿ ಮೊನ್ನೆ ತಾನೆ ಅವರು ಹೇಳಿದ ಮಾತು ತುಂಬ ಮನೋಜ್ಞವಾಗಿದೆ–"ಕಮ್ಯೂನಿಸ್ಟ ಸದಸ್ಯರ ಸ್ಫೂರ್ತಿ ಮತ್ತು ಉತ್ಸಾಹ ನೋಡಿ ಸಂತೋಷ ಉಕ್ಕೇರುತ್ತದೆ ಅವರ [illegible], ತುಂಟ [illegible] [illegible] ಹುಡುಗರ ನೆನಪೆಯೇ ಆಗುತ್ತದೆ."

(ಇನ್ನೇ ಮುಟ ನೋಡಿರಿ)

ಜಿಲ್ಲೆಯ ಅಪ್ರತಿಮ

ಲೇ —ಕಯ್ಯಾರ ಕಿಞ್ಞಣ್ಣ ರೈ

"ಪರೋಪಕಾರಾಯ ವಚಾಂಸಿಯಸ್ಯ ವಂದ್ಯ ಸ್ತ್ರಿಲೋಕೀ ತಿಲಕಸ್ಸ ಏವ"

೧

ಎಲ್ಲಿ ಸುನೀಲ ವಿಶಾಲ ಸಾಗರವು ತರಂಗ ತರಂಗಗಳ ನರ್ತನೋನ್ಮಾದದಿಂದ ಗಂಭೀರವಾಗಿ ಅಹರ್ನಿಶಿ ಘೋಷಿಸುತ್ತಿರುವುದೋ, ಎಲ್ಲಿ ನೇತ್ರಾವತಿ ಪಯಸ್ವಿನಿಗಳು ಉನ್ನತ ಪರ್ವತ ಶ್ರೇಣಿಯಿಂದಿಳಿದು ಹರಿದು ನೆಲವನ್ನು ಹಚ್ಚನೆ ಹಸುರು ಮಾಡಿ ಕಡಲನ್ನು ಕೂಡುವವೋ, ಎಲ್ಲಿ ಕಂಗಿನ ತೆಂಗಿನ ತೋಟಗಳು ಕಡಲಿನ ಶೀತಲವಾದ ಗಾಳಿಯ ಬೀಸುವಿಕೆಗೆ ನಿತ್ಯವೂ ತಲೆದೂಗಿಸುತ್ತಿರುವವೋ, ಅಲ್ಲಿ—ಆ ತುಳುನಾಡಿನ ದಿವ್ಯ ಸೃಷ್ಟಿಯಲ್ಲಿ, ಸಾಂಸಾರಿಕ ಸಾಂಪತ್ತಿಕ ಸೌಕರ್ಯಗಳು ಎಷ್ಟು ಪ್ರತಿಕೂಲವಾಗಿದ್ದರೂ, ರತ್ನಾಕರ ಪಾರ್ತಿಸುಬ್ಬ, ಮುದ್ದಣರಂತಹ ವರಕವಿಗಳ ಪರಂಪರೆ ಬೆಳೆದು ಬಂದು, ತಮ್ಮ ಅನುಪಮವಾದ ಕೃತಿಗಳಿಂದ ನಾಡನುಡಿಗಳಿಗೆ ಮಹತ್ತಾದ ಕಾಣಿಕೆ ಸಲ್ಲಿಸಿದರೆಂಬುದನ್ನು ಕನ್ನಡ ನಾಡು ಎಂದಿಗೂ ಮರೆಯುವಂತಿಲ್ಲ. ರಾಷ್ಟ್ರದ ರಾಜಕೀಯದ ಜಂಝಾವಾತದ ಸುಳಿಯಲ್ಲಿ ಸಿಲುಕಿದ್ದರೂ, ಪಕ್ಷ ಪ್ರತಿಪಕ್ಷಗಳ ವಾದವಿವಾದಗಳ ಸ್ಪರ್ಧೆಯಲ್ಲಿ ಸೇರಿಕೊಂಡಿದ್ದರೂ, ತಮ್ಮ ಆಯುರ್ಭಾಗದ ಅಮೂಲ್ಯಾಂಶವನ್ನು ಮಾತೃಭೂಮಿಯ ಸ್ವಾತಂತ್ರ್ಯ ಸಂಪಾದನೆಯ ಸಂಗ್ರಾಮದಲ್ಲಿ ಸವೆದಿದ್ದರೂ, ದಿನಹಗಲು ಸಂಚಾರ ಸಂವಾದ ಭಾಷಣ ಘೋಷಣೆಗಳಲ್ಲಿ ಕಳೆದಿದ್ದರೂ ಶ್ರೀ ನಾರಾಯಣ ಕಿಲ್ಲೆಯವರು ಅದೇ ತುಳುನಾಡಿನಲ್ಲಿ ಹುಟ್ಟಿ, ರತ್ನಾಕರ ಪಾರ್ತಿಸುಬ್ಬ ಮುದ್ದಣರ ಪರಂಪರೆಗೆ ಸಂದು ತಮ್ಮ ಕಾವ್ಯಮಯ ವಾಣಿಯಿಂದ ನಾಡುನುಡಿಗಳಿಗೆ ಅನುಪಮ ಸೇವೆ ಸಲ್ಲಿಸಿದರೆಂಬುವನ್ನು ನಾವು ನೆನೆಯತಕ್ಕುದಾಗಿದೆ

ಶ್ರೀ ಕಿಲ್ಲೆಯವರ ಕಾವ್ಯಮಯ ವಾಣಿಯನ್ನು, ಪುರಾಣ ಪ್ರವಚನದಲ್ಲಿಯೋ, ಯಕ್ಷಗಾನ ಅರ್ಥ ವಿವರಣೆಯಲ್ಲಿಯೋ, ರಾಜಕೀಯ ವೇದಿಕೆಯಲ್ಲಿಯೋ, ಧಾರ್ಮಿಕ ಸಾಮಾಜಿಕ ಸಾಂಸ್ಕೃತಿಕ ಸಮ್ಮೇಳನಗಳಲ್ಲಿಯೋ ಜಿಲ್ಲೆಯ ಆದ್ಯಂತ ಪಂಡಿತ ಪಾಮರರನ್ನದೆ ಆ ಬಾಲವೃದ್ಧರು ಮಹಿಳೆಯರೂ ಮಹನೀಯರೂ ಎಲ್ಲರೂ ಕೇಳಿಬಲ್ಲರು. ಕೇಳಿದವರು ಆನಂದ ಪರವಶರಾಗಿ ತಲೆದೂಗಿಸಿದವರು. ಅಂತಹ ಆಕರ್ಷಕ ವ್ಯಕ್ತಿತ್ವ, ಅಂತಹ ಕಂಠಶ್ರೀ, ಅಂತಹ ವಚೋವಿಲಾಸ ಶ್ರೀ ಕಿಲ್ಲೆಯವರಿಗೊಬ್ಬರಿಗಲ್ಲದೆ ಅವರ ಸಮಕಾಲೀನರಲ್ಲಿ ಕಿಲ್ಲೆಯವರಿಗೊಬ್ಬರಿಗಲ್ಲದೆ ಇನ್ನೊಬ್ಬರಿಗಿರಲಿಲ್ಲವೆಂದು ಹೊಗಳಿಕೆಯನ್ನು ಅವರು ಹೊಂದಿದವರು. ರಾಜಕೀಯ ಧುರೀಣರೆಂದೂ, ಯಕ್ಷಗಾನ ಪಟುಗಳೆಂದೂ, ಅಪ್ರತಿಮ ವಾಗ್ಮಿಯೆಂದೂ ಅವರ ಪರಿಚಯ ಹೆಚ್ಚಾಗಿ ಎಲ್ಲರಿಗೂ ಇದ್ದೇ ಇದೆ. ಆದರೆ ಅವರು ನಮ್ಮ ಜಿಲ್ಲೆಯ ಕವಿಗಳಲ್ಲಿ ಒಬ್ಬರೆಂದು, ತುಳು ಕನ್ನಡ ಉಭಯ ಭಾಷೆಗಳಲ್ಲಿಯೂ ಕವಿತಾ ಸಾಮರ್ಥ್ಯವನ್ನು ಪಡೆದ ಸರಸ್ವತಿಯವರ ಪುತ್ರರೆಂದು ಕೆಲವೇ ಜನರು ಮಾತ್ರ ತಿಳಿದಿರಬಹುದು. ಅವರ ಬಹುಮುಖ ಕಾರ್ಯಕ್ಷೇತ್ರಗಳಲ್ಲಿನ ಇಂತಹ ಅಪೂರ್ವ ವಿಷಯದ ಕುರಿತು, ನನ್ನ ಅವರ ಸಹವಾಸ ಪರಿಚಯಗಳ ನೆನಪಿನಿಂದ, ನನಗೆ ಇಂದು ಉಪಲಬ್ಧವಾದ ಅವರ ಕೆಲವು ಕೃತಿಗಳ ಆಧಾರದಿಂದ ಯಥಾಮತಿ ನಾನು ಬರೆಯುತ್ತಿದ್ದೇನೆ. ಶ್ರೀ ಕಿಲ್ಲೆಯವರ ಕೀರ್ತಿ ಪರ್ವತದ ಶಿಖರ ನಾನು ಮಣ್ಣಿನ ಬುಟ್ಟಿ ಹೊರುತ್ತೇನೆ.

೨

ಶ್ರೀ ಕಿಲ್ಲೆಯವರು ಲೇಖನ ಭಾಷಣಗಳೆರಡರಲ್ಲಿಯೂ, ತುಳು ಕನ್ನಡೋಭಯ ಭಾಷೆಗಳ ಸವ್ಯಸಾಚಿ. ಅಂತೆಯೇ ಅವರ ಕಾವ್ಯರಸಗಂಗೆ ಉಭಯ ಭಾಷೆಗಳ ದಡ ಮುಟ್ಟಿ ಹರಿದಿದೆ. ಅವರ ಕನ್ನಡ ಕವಿತೆಗಳು ಹೆಚ್ಚಾಗಿ ಅಚ್ಚಾಗದೆ ಉಳಿದಿವೆ; ತುಳು ಕವಿತೆಗಳು ಹಲವು ಅಚ್ಚಾಗಿ ಪ್ರತಿಗಳು ಮುಗಿದಿವೆ. ಅಂತೂ ಇಂದಿಗೆ ಅವರ ಕವಿತೆಗಳ ಸಂಗ್ರಹವನ್ನು ಕಾಣುವುದು ಕಷ್ಟಸಾಧ್ಯವೇ ಆಗಿದೆ. ಜೀವಮಾನದ ಹೆಚ್ಚಿನ ಭಾಗವನ್ನು ರಾಜಕೀಯ ಕ್ಷೇತ್ರದಲ್ಲಿಯೇ ಕಳೆದ ಅವರಿಗೆ ಸಾಹಿತ್ಯ ಕೃತಿಗಳ ಕಡೆಗೆ, ಅವುಗಳ ಪ್ರಕಟಣೆ ಪ್ರಚಾರಗಳ ಕಡೆಗೆ ಗಮನ ಕೊಡಲಾಗದೆ ಇದ್ದುದೇ ಇದಕ್ಕೆ ಮುಖ್ಯಕಾರಣವೆಂದರೂ ಸಲ್ಲುವುದು. ಜೀವಿತ ಕಾಲದಲ್ಲಿ ಕವಿಯಾಗಿ ಖ್ಯಾತಿಗೆ ಬರುವ ಯೋಗ, ದೌರ್ಭಾಗ್ಯದಿಂದ, ನಮ್ಮ ಜಿಲ್ಲೆಯ ಹಲವು ಕವಿಗಳಿಗೆ ಇಲ್ಲದೆ ಆದುದು ಸಹಜವಾದ ತನ್ನ ಮಣ್ಣಿನ ಗುಣವೆಂದರೂ ಅದು ಸಲ್ಲುವುದು. ಅಂತೂ ಅವರ ಜೀವನಾನಂತರವಾದರೂ, ಅವರ ಕೃತಿಗಳನ್ನು ಜೀವಂತವಾಗಿ ಉಳಿಸಿದರೆ ತುಳು ಕನ್ನಡ ಉಭಯ ಭಾಷೆಗಳ ಸಾಹಿತ್ಯ ಸಂಪತ್ತು ಅವುಗಳಿಂದ ವಿಪುಲವಾಗುವುದೆಂಬುದರಲ್ಲಿ ಏನೂ ಸಂಶಯವಿಲ್ಲ

ಶ್ರೀ ಕಿಲ್ಲೆಯವರ ಹೆಚ್ಚಿನ ಕವಿತೆಗಳು ಉಭಯ ಭಾಷೆಯವೂ—1932—33ರ ಸಾಲಿನಲ್ಲಿ ಬರೆದವುಗಳು. ಮಾತೃಭೂಮಿಯ ಬಿಡುಗಡೆಯ ಮಹಾ ಸಂಗ್ರಾಮದಲ್ಲಿ ವೀರ ಯೋಧನಾಗಿ ಸೆರೆಮನೆಯ ಕತ್ತಲೆಯ ಕೋಣೆಗೆ ವಿದೇಶೀ ಪ್ರಭುತ್ವದಿಂದ ತಳ್ಳಲ್ಪಟ್ಟಲ್ಲಿ ಬರೆದವುಗಳು. ಶ್ರೀ ಕಿಲ್ಲೆಯವರೇ ತಾನು ಕವಿತೆ ಬರೆದ ಸಂದರ್ಭ ಸನ್ನಿವೇಶಗಳ ಕುರಿತು ಹೀಗೆ ಬರೆದಿದ್ದಾರೆ

"ಬಾಪು ಮರಣ ಪರ್ಯಂತ ಉಪವಾಸ ಕೈಕೊಂಡಿದ್ದರೆಂದು ತಿಳಿಯಿತು, ಅವರು ಇಟ್ಟ ಹೆಜ್ಜೆ ಹಿಂದೆ ಸರಿಯುವವರಲ್ಲ. ಅಂದ ಬಳಿಕ ಅವರ ಜೀವನವು ಇದರಲ್ಲಿಯೇ ಕೊನೆಗೊಳ್ಳುವುದೆ? ಭಾರತವು ದುರ್ದೈವಿಯಾಗುವುದೆ? ಮುಂದೆ ನಮ್ಮ ಗತಿಯೇನು? ಹೀಗೆ ಬ ವಿಚಾರಗಳು ನಾನಾ ಪ್ರಕಾರವಾಗಿ ನನ್ನನ್ನು ಬಾಧಿಸುತ್ತಿತ್ತು. ಎಲ್ಲರಿಗೂ (ಸೆರೆಮನೆಯಲ್ಲಿ) ಅತ್ಯಂತ ವ್ಯಾಕುಲವಾಯಿತು. ಮರುದಿನ ನಾವೆಲ್ಲರೂ ಉಪವಾಸವನ್ನಾಚರಿಸಿದೆವು. ಸಾಯಂಕಾಲ ಪ್ರಾರ್ಥನೆ ನಡೆದಿತ್ತು. ಆ ದಿನ ತಮಿಳು ಮಿತ್ರರೊಬ್ಬರು ಬಾಪುವಿನ ಕುರಿತು ಕಟ್ಟಿದ ಪದ್ಯವೊಂದನ್ನು ಓದಿದರು. ನನ್ನ ಮನಸ್ಸಿನಲ್ಲಿ ಮೂಡಿದ್ದ ವಿಚಾರಗಳನ್ನು ನಾನು ಕೂಡಾ ಬರೆದಿದ್ದೆನಾದುದರಿಂದ ಅದನ್ನು ನಾನೂ ಓದಿದೆನು. ತಾ 21ರಲ್ಲಿ [1932ರ ಸಪ್ಟಂಬರ] ಬಾಪು ಉಪವಾಸವನ್ನು ತೊರೆದರು. ಅವರು ಬದುಕಿದರು. ಹಿಂದೂ ಧರ್ಮವನ್ನೂ ಬದುಕಿಸಿದರು. ಹಿಂದೂಸ್ಥಾನವೂ ಉಳಿಯಿತು. ನಾವೂ ಬದುಕುವಂತಾಯ್ತು. ನಾನು ಪದ್ಯ ಕಟ್ಟುವುದು ಅಲ್ಲಿಗೇ ನಿಂತುಹೋಯಿತು

"ಕೆಲದಿನಗಳಲ್ಲಿ ನಾನು ಕೋಣೆಯಿಂದ ಹೊರತಿರುಗುತ್ತಿರುವಾಗ ಒಂದು ಸಣ್ಣ ಅಳಿಲ ಮರಿ ಮರದಿಂದ ಬಿದ್ದಂತಾಯಿತು. ನಾನು ಹೋಗಿ ನೋಡಿದೆ. ನನಗೆ ಹೇಗಾದರೂ ಅದನ್ನು ಬದುಕಿಸಬೇಕೆಂಬ ಇಚ್ಛೆಯಾಯಿತು. ಬಹಳ ಪ್ರಯಾಸದಿಂದ ಅದಕ್ಕೆ ಸ್ಮೃತಿ ಬರುವಂತೆ ಮಾಡಿದೆ. ಆ ಮೇಲೆ ಸಾಮಾನ್ಯ ಇಪ್ಪತ್ತು ದಿನಗಳ ವರೆಗೆ ಅದು ನನ್ನ ಜೊತೆಯಲ್ಲಿತ್ತು. ನಾನು ಅದನ್ನು ಅತ್ಯಂತ ಪ್ರೀತಿಯಿಂದ ಸಾಕಿದೆನು. ಆದರೆ ಒಂದು ದಿನ ಹೊರಗೆ ಹೋದ ಅಳಿಲು ಹಿಂತಿರುಗಲೇ ಇಲ್ಲ. ಅಂದು ನನಗೆ ಬಹಳ ದುಃಖವಾಯಿತು. ರಾತ್ರಿ ನಿದ್ದೆ ಹತ್ತಲಿಲ್ಲ. ಮರುದಿನ ನನ್ನ ಮನಸ್ಸಿನ ಬೇಸರದ ಹೊರೆಯಾಗಿ ಅದನ್ನು ಕಡಿಮೆ ಮಾಡಲು ಯತ್ನಿಸಿದೆನು. ಹಾಗಾಗಿ ಹೊರಟ ಬಗೆ ಬಗೆ

Malkan Pharmaceuticals Ltd.,

UDIPI, S. K.

ಮಾಲ್ಕನ್

ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,

ಉಡುಪಿ.

30 ವರುಷಗಳಿಗೂ ಮಿಕ್ಕಿದ ಅನುಭವ ಉಳ್ಳ ಆಯುರ್ವೇದ ವೈದ್ಯರ ಮೇಲ್ವಿಚಾರದಲ್ಲಿ, ಶಾಸ್ತ್ರೀಯವಾಗಿ ಎಲ್ಲಾ ಆಯುರ್ವೇದೀಯ ಔಷಧಿಗಳು ತಯಾರಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು

T. N. KELU NAMBIAR,

LXLCUTIVL DIRLCTOR,

Managing Agents Co.

ಸ್ವಾತಂತ್ರ್ಯಯೋಧ—ಕಿಲ್ಲೆ

ಕಾಂಗ್ರೆಸ ಭಕ್ತನ ಕವಿ ಹೃದಯ

ಯ ಭಾವನೆಗಳಿಂದ ಕೆಲವು ಪದ್ಯಗಳನ್ನು ಬರೆದೆನು."

ಒಂದು ಕಡೆ ಮಾತೃಭೂಮಿಯ ಬಿಗಿದ ಬಂಧನವನ್ನು ಪರಿಹರಿಸಬೇಕೆಂಬ ಉತ್ಕಟವಾದ ಹೃದಯಾಂತರಾಳದ ವೇದನೆ; ಅದಕ್ಕಾಗಿ ಸೆರೆಮನೆಯ ಸಂಕಷ್ಟಗಳ ಸಂವೇದನೆ. ಅದರ ಮೇಲೆ ಗಾಂಧಿಜಿ ಮರಣ ಪರ್ಯಂತದ ಉಪವಾಸ ಕೈಕೊಂಡರೆಂಬ ಘೋರ ವಾರ್ತೆಯ ಶ್ರವಣದಿಂದಾಗಿ ಉಂಟಾದ ವ್ಯಾಕುಲ; ಹೀಗೆ ಎದೆಯನ್ನು ಕುದಿಸತಕ್ಕ ಸಾವಿರ ನೋವುಗಳ ಅನುಭವದ ಆಳದಿಂದ ಕವಿತೆಯ ಅವತಾರವಾಯಿತು. ಇನ್ನೊಮ್ಮೆ ಅಖಿಲ ಮರಿಯ ಮೇಲಿನ ಮರುಕವೇ, ಪ್ರಾಣಿಕೋಟಿಯ ಮೇಲಿನ ದಯಾಭಾವವೇ ಕವಿತೆಯಾಗಿ ಹರಿಯಿತು. ಇದು ಎಂತಹ ಸನ್ನಿವೇಶವನ್ನು ತಂದೊಡ್ಡಿದೆ. ಉದಾತ್ತ ಹೃದಯಿಗಳಿಗೆ ಉಂಟಾದ ನೋವಿನ ಕರುಣ ಕಥೆಯೇ ಕಾವ್ಯವೇನು? ಆದಿಕವಿ ವಾಲ್ಮೀಕಿಗೂ ಕವಿತಾವತಾರವಾದದು ಇಂತಹುದೇ ಸನ್ನಿವೇಶದಲ್ಲಿ ತಾನೆ! ಕ್ರೂರ ವ್ಯಾಧನ ನಿರ್ದಯ ಬಾಣಘಾತದಿಂದ ಕ್ರೌಂಚ ಪಕ್ಷಿಗಳ ಮೋಹನವು ಮುರಿದಾಗ, ಮಡಿದು ಬಿದ್ದ ಗಂಡು ಹಕ್ಕಿಯನ್ನು ಕಂಡು ಹೆಣ್ಣು ಹಕ್ಕಿ ಕರುಣಾಕ್ರಂದನ ಮಾಡುತ್ತಿರಲು, ಅದನ್ನು ಕೇಳಿ ಎದೆಗರಗಿದ ವಾಲ್ಮೀಕಿಯ ಶೋಕವೇ ಶ್ಲೋಕರೂಪವಾಯಿತು ಅದೇ ಮುಂದೆ ರಾಮಾಯಣದ ಮಹಾ ಕಾವ್ಯ ಸೃಷ್ಟಿಗೆ ಸಹಾಯಕವಾಯಿತು. ಅಂತೆಯೇ ಶ್ರೀ ಕಿಲ್ಲೆಯವರ ಜೀವನಾನುಭವದ ಶೋಕ ಸಂದರ್ಭವು ಕವಿತೆಗೆ ಕಾರಣವಾಯಿತೆಂಬುದದು ನಾವು ಗಮನಿಸತಕ್ಕ ವಿಷಯವಾಗಿದೆ.

೩.

ಶ್ರೀ ಕಿಲ್ಲೆಯವರು ಬರೆದ ಅಪ್ರಕಟಿತ ಕನ್ನಡ ಕವನಗಳಲ್ಲಿ ಭಾವಗೀತೆಗಳು ಹಲವು; ರಾಷ್ಟ್ರಗೀತೆಗಳು ಕೆಲವು; ಕಥನ ಕವನಗಳೂ ಇವೆ. ಭಾವಗೀತೆಗಳು ಹೆಚ್ಚಾಗಿ ತಾತ್ವಿಕವಾಗಿ ಭಕ್ತಿಪರವಾದವುಗಳು. ವೀರಕ್ಕಿಂತ ಶಾಂತರಸ ಅಧಿಕ. ಸೂರ್ಯರಶ್ಮಿಗಿಂತ ಶೀತಲ ಚಂದ್ರಕಿರಣವೇ ವಿಪುಲ. ರಾಷ್ಟ್ರಗೀತೆಗಳಲ್ಲಿಯೂ ಗಾಂಧೀಜಿಯವರ ಮೇಲಿನ ಭಕ್ತಿ, ತಾಯ್ನಾಡಿನ ಪ್ರೀತಿಗಳನ್ನು ವ್ಯಕ್ತಪಡಿಸುವಂತಹವು. ರಾಷ್ಟ್ರಗೀತೆಗಳಲ್ಲಿ ವೀರರಸ ಇಲ್ಲವೆ ಇಲ್ಲ. ಅದರಲ್ಲಿಯೂ ಆರ್ಭಟೆಗಿಂತ ಆಳ ಹೆಚ್ಚು. ಅವರ ಕವನಗಳೆಲ್ಲದರ ಸವಿಯನ್ನು ತಿಳಿಸಲು ಪ್ರಕೃತ ಅನುಕೂಲವೂ ಇಲ್ಲ; ಜ ಅಭಿಪ್ರಾಯವೂ ಇಲ್ಲ. ಆದರೆ, ಕೆಲವನ್ನು ಮಾತ್ರ ಮುಂದೆ ದಿಗ್ದರ್ಶನವಾಗಿ ತಿಳಿಸುತ್ತೇನೆ. 'ಮುರಲಿ' ಎಂಬೊಂದು ಪದ್ಯದ ಪ್ರಾರಂಭದ ಪಂಕ್ತಿ ಹೀಗಿದೆ:

"ಹಾಡುಗಳೆ ಹರಿದಿರುವರಸಗಂಗೆ ಈ ನೆಲವು
ನೋಡಲಿದೆ ನರ್ತಿಸುವ ಜನಮಾನ ಕುಲತ್ರ"

ದೇವರ ಸೃಷ್ಟಿಯಾದ ಲೋಕವೆಲ್ಲವೂ ಸುಂದರವಾದುದರಿಂದ ಹಾಡಿನ ಹೊನಲು ಹರಿದಿರುವರಸಗಂಗೆಯಾಗಿದೆ; ಅದರೆ ಲೋಕನಾಟಕ ಪಾತ್ರಧಾರಿಯಾದ ಮಾನವನ ಬಾಳ್ವೆಯೆಂಬುದು ನೀರಲ್ಲಿ ನರ್ತಿಸುವ ಮೀನಿನಂತೆ. ಎಂದು ಬೆಸ್ತನು ಬಲೆ ಬೀಸಿ ಮೇಲಕ್ಕೆ ಸೆಳೆದನೋ ಅಂದಿಗೆ ಮುಗಿಯಿತು ಮೀನಿನ ನರ್ತನ, ನಿಶ್ಯಕ್ತವಾಗಿ, ನಿಸ್ಸಹಾಯಕವಾಗಿ, ನಿಶ್ಚೇತನವಾಗಿ ಮೀನು ಬಿದ್ದುಕೊಂಡಿರಬೇಕು. ಕಿಲ್ಲೆಯವರ ಕವಿತೆಗಳಲ್ಲಿ ಇಂತಹ ದೈವಿಕ ದೃಷ್ಟಿ; ತಾತ್ವಿಕ ಭಾವನೆಗಳು ಅಲ್ಲಲ್ಲಿ ವಿಪುಲವಾಗಿ ಕಾಣಬರುವವು.

"ತನುವು ಗೋಕುಲವೆನ್ನ ಪರಿವಮನ ಕಾಳಿಂದಿ
ದನಪಿಂಡು ತೋರು ಇಂದ್ರಿಯ ಕೂಟ ನಜದಿ
ನೀ ಗಿದೋ ಹೃದಯ ವೃಂದಾವನವು ತೆರೆದಿಯದು
ಕುಣಿಕುಣಿದು ಬಂದಿಲ್ಲಿ ನೆಲೆಯಾಗು ಒಲಿದು"

ಈ ಸುಂದರ ರೂಪಕವು ಮೇಲಿನ ಮಾತನ್ನೇ ಪುಷ್ಟೀಕರಿಸುತ್ತದೆ. ಗೋಕುಲದಲ್ಲಿ ಕಾಳಿಂದಿಯ ದಡದಲ್ಲಿ, ದನ ಹಿಂಡುಗಳನ್ನು ಮೇಯಿಸುತ್ತಾ ವೃಂದಾವನ ವಿಹಾರಿಯಾಗಿ ಹರಿಯಿರುವನೆಂದು ಪುರಾಣಗಳು ಸಾರುತ್ತವೆ. ಅಂತಹವನು ಭಕ್ತನ ಹೃದಯದಲ್ಲಿ ಏಕೆ ನೆಲೆನಿಲ್ಲಲಾರನು? ಅದಕ್ಕೆ ಅನುಕೂಲವಾದ ಸನ್ನಿವೇಶ ಸಂದರ್ಭಗಳನ್ನು ಕವಿಗಳು ಎಂತಹ ಸುಂದರ ರೂಪಕದಿಂದ ಇಲ್ಲಿ ಕಲ್ಪಿಸಿದ್ದಾರೆ! ಪುರಾಣದ ಕಥೆಗಳಿಗೆ ಇಂತಹ ತಾತ್ವಿಕ ನೀತಿಯನ್ನು ಜೋಡಿಸಿ ಸರಿಗೂಡಿಸುವ ಅನುಪಮ ವಿಚಾರಶಕ್ತಿ ಶ್ರೀ ಕಿಲ್ಲೆಯವರಲ್ಲಿ ಅಸಾಧಾರಣವಾಗಿತ್ತು. ಯಕ್ಷಗಾನ ರಂಗದಲ್ಲಿನ ಅವರ ಯಶಸ್ವಿತೆಗೆ ಇದು ಹೆಚ್ಚಿನ ಸಹಾಯಕವಾಯಿತೆಂದರೂ ಸಲ್ಲುವುದು.

"ಕೋಗಿಲೆ"ಯ ಕುರಿತು ಬರೆದೊಂದು ಕವಿತೆಯಲ್ಲಿ ಹೀಗೆಂದಿದ್ದಾರೆ:

"ಕತ್ತಲೆಯ ನೆಲೆಯಿಂದ ಬೆಳಕು ಹೊರ ಹೊರಡುತಿದೆ,
ಹೊತ್ತ ದುಃಖದ ಸುಖದ ನೆತ್ತಿ ತೋರುತಿದೆ;
ಚಿತ್ತದುದ್ದದಿ ನೋಡೆ ಬಣ್ಣ ಭೇದಗಳಿಲ್ಲ
ಸತ್ತಿರಕೆ ಬಾರೆಂದು ಕೂಗುತಿದೆಯಲ್ಲ"

ಇಲ್ಲಿನ ವಿರೋಧಾಭಾಸವೇ ಜೀವನದ ನಿಜತತ್ವವಲ್ಲವೆ? ಲೋಕದಲ್ಲಿ ಕಪ್ಪೆಂಬುದು ಸುಖದ ಮುನ್ಸೂಚನೆ; ಚಿತ್ತಶುದ್ಧಿಯುಳ್ಳವನು ಬಣ್ಣ ಭೇದಗಳನ್ನು ಮಾಡಲಾರನು ಕೋಗಿಲೆಯು ಕಪ್ಪಾದರೂ ಅದರ ಚಂದಕ್ಕೆ, ಕಲಕಂಠದ ಸವಿಗೆ ಏನು ಕೊರತೆಯಿರುವುದು? ಗಾಂಧೀಜಿಯ ಪವಿತ್ರಾದೇಶದಂತೆ ತನ್ನ ಜೀವಮಾನದ ಹಲಗಾಲವನ್ನು ಹರಿಜನಸೇವೆಯಲ್ಲಿ ಸವೆದ ಶ್ರೀ ಕಿಲ್ಲೆಯವರಂತಹ ಜೀವನತತ್ವ ಆಡಕವಾಗಿದ್ದರೆ ಆಶ್ಚರ್ಯವೇನೂ ಇರಲಾರದು.

ಕೋಗಿಲೆ ಯಾರನ್ನು ಕೂಗಿ ಕರೆಯುತ್ತಿದೆಯೆಂದು ಪ್ರಶ್ನಿಸುತ್ತಾ.

"ಆಕಾಶಬಿಲ್ಲ ಒಡಿದೆತ್ತಿ ಬಲಕೋದುವನೆ?
ದಾಕೆಂದು ಬಿಂಬದಲಿ ತುಂಬಿ ನಗುತಿಪನೆ?
ಲೋಕವಿದನೋಡುವನೆ ನಯನತಾರೆಗಳಿಂದ?
ನೋಕುವನೆ ನಮ್ಮನ್ನು ರವಿ ಕರಗಳಿಂದ?"

ಹಾಡುವ ಹಕ್ಕಿ ಕೋಗಿಲೆ ಬಣ್ಣದಲ್ಲಿ ಕಪ್ಪಾಗಿದ್ದರೂ ಕಂಠ ಕೋಮಲವಸ್ತು. ಅಂತಹ ಕೋಮಲ ಕಂಠದಿಂದ ಹಾಡುವುದಾದರೂ ಯಾರ ಕುರಿತು? ಎಂತಹ ಭವ್ಯ ದಿವ್ಯ ವಸ್ತುವಿನ ಕುರಿತು ಭಕ್ತನು [illegible] ತ ಬಣ್ಣದವನೇ ಇರಲಿ, ಅವನ ಹೃದಯ ನಿರ್ಮಲ [illegible] ಅವನು ಸ್ಮರಿಸುವುದು ಪರಮಾತ್ಮನನ್ನೇ ಅಲ್ಲವೆ?

ಗೋಪೀ ವಿಲಾಸ ರೂಪದ ಇನ್ನೊಂದು ಕವಿತೆಯಂತಿದೆ:

"ಅಂಬರವೆ ಮಿಂದು ಬಹುಮುದಿಯಾಗಿ ಬಂದಿಳಿದು,
ಚುಂಬಿಸುತ ಧರೆಯನ್ನು ಹಿಡಿದಪ್ಪಿಕೊಂಡು,
ತುಂಬಿರಲು ಹಿಮಕರನು ಬಿಳುಪಾಗೆ ನೀ ಕರೆದು
ನಂಬಿಸಿದೆ ನಮ್ಮನೀ ಗಿರಿಯನೇರಿಸಿದೆ"

ಚಂದ್ರನುದಿಸಿ ಬಂದಾಗ, ಆಗಸವು ಸಹಜವಾಗಿ ಶುಭ್ರವಾಗಿರುವುದು. ಅಂತಹ ಶುಭ್ರ ಆಕಾಶವನ್ನು ವರ್ಣಿಸುವಾಗ, ಅಂಬರವೆ ಮಿಂದು ಮುದಿಯಾಗಿರುವುದೆಂದು ವರ್ಣಿಸಿರುವುದು ಸುಂದರವಾಗಿದೆ. ಬೆಳದಿಂಗಳ ಹಾಲು ಭೂಮಿಯ ಮೇಲೆಯೂ ಸಹಜವಾಗಿ ಚೆಲ್ಲಿರಬೇಕು; ಹಾಗೆಯೇ ಮಿಂದು ಮುದಿಯಾಗಿ ಬಂದ ಅಂಬರವು ಧರೆಯನ್ನು ಅಪ್ಪಿ[illegible] ಚುಂಬಿಸಿಕೊಂಡಿತು! ಗೋಪಿಯರ ಪ್ರಣಯ ವಿಲಾಸವನ್ನು ನಿರ್ಮಲವಾಗಿ ವರ್ಣಿಸಲು ಇಲ್ಲಿನ ಶಬ್ದಗಳು, ಶಬ್ದಗಳ ಧ್ವನಿಗಳು

(೧೩ನೇ ಪುಟ ನೋಡಿರಿ)

ವಂದನಾರ್ಪಣೆ

ನನ್ನ ಪ್ರಿಯ ಪತಿಯವರ ನಿಧನದ ಕುರಿತು ಹಲವು ಮಂದಿ ನನ್ನ ಬಂಧು ಭಗಿನಿಯರೂ, ಹಲವು ಸಂಘ ಸಂಸ್ಥೆಗಳವರೂ, ಪತಿಯವರ ಅನೇಕ ಮಂದಿ ಮಿತ್ರರೂ, ಸಹ ವ್ಯವಸಾಯಿಗಳೂ, ಹಿತ ಚಿಂತಕರೂ, ಮೆಚ್ಚಿಗೆಯವರೂ, ಹಾರ್ದಿಕ ದುಃಖ ಸೂಚಿಸಿ ಮತ್ತು ನನ್ನ ದಾರುಣ ದುಃಖದಲ್ಲಿ ತುಂಬಾ ಸಹಾನುಭೂತಿ ತೋರಿಸಿ, ನನಗೆ ಪತ್ರಗಳನ್ನು ಬರೆದಿರುತ್ತಾರೆ. ಅವರಿಗೆ ವೈಯುಕ್ತಿಕವಾಗಿ ಪತ್ರ ಬರೆಯುವರೆ ನನ್ನಿಂದ ಸಾಧ್ಯವಾಗಿರುವುದಿಲ್ಲೆನ್ನಲು ವಿಷಾದಿಸುತ್ತೇನೆ.

ಈ ಪತ್ರಗಳಲ್ಲಿ ತೋರಿಸಲ್ಪಟ್ಟಿರುವ ಅಂತಃಕರಣ ಪೂರ್ವಕವಾದ ಸಹಾನುಭೂತಿಯು ನನ್ನ ದುಃಖದ ತೀವ್ರತೆಯನ್ನು ಕಡಿಮೆ ಮಾಡಲು ನೆರವಾಗಿದೆ. ಪತಿಯ ಅಗಲುವಿಕೆಯ ಅಸಹನೀಯ ಸಂತಾಪವನ್ನು ಸಹನೀಯವಾಗಿ ಮಾಡಿದೆ. ಅದಕ್ಕಾಗಿ ನನಗೆ ಪತ್ರ ಬರೆದವರೆಲ್ಲರಿಗೂ, ಎಲ್ಲಾ ಸಂಘ ಸಂಸ್ಥೆಗಳಿಗೂ ಈ ಮೂಲಕ ನನ್ನ ಹೃತ್ಪೂರ್ವಕ ವಂದನೆಯನ್ನರ್ಪಿಸುತ್ತೇನೆ.

ಮಂಗ್ಳೂರು.
4—8—53

ಇಂದಿರಾ ಯನ್. ಯಸ್. ಕಿಲ್ಲೆ.

THE BOMBAY LIFE ASSURANCE Co., Ltd.

(Established: **1903**.

Applications are invited from ambitious persons for the Post of an Organiser or Inspector of Agencies in the District of South Kanara and Coorg State on attractive salary basis. Applicants should state previous experience and premium Income guarantee. Excellent Prospects for really capable and influential persons.

APPLY TO:

KOCHIKAR BROTHERS, LTD.,

CHIEF AGENTS, BOMBAY LIFE BUILDING,

POST BOX No. 1, UDIPI, S. KANARA.

ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಮದ್ರಾಸು

ಲೇ:— ಶ್ರೀ ಟಿ. ಎ. ಪೈ, ಬಿ. ಕೊಂ., ಎಮ್. ಎಲ್. ಎ.

ಮದ್ರಾಸು ಸರಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ತಂದ ಬದಲಾವಣೆ ಒಮ್ಮೆಯಾದರೂ ಜನರು ತಮ್ಮ ಕಣ್ಣುತೆರೆದು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ತಪ್ಪು ಒಪ್ಪುಗಳೇನಿವೆ ಎಂಬುದನ್ನು ಗಮನಿಸುವ ಒಂದು ಸಂದರ್ಭವನ್ನಾದರೂ ಉಂಟುಮಾಡಿತು. ಪ್ರಾಕೃತಿಕ ನಿಯಮದಂತೆ ಈ ಹಸುಗೂಸನ್ನು ಪ್ರಪಂಚಕ್ಕೆ ತರಲು ಪ್ರಸವವೇದನೆ ಇಲ್ಲದಿರಲಿಲ್ಲ; ಹುಟ್ಟಿದ ಕೂಸು ಇನ್ನೆಂತಹ ಅಪಸ್ಮಾರಗಳಿಗೆ ತುತ್ತಾಗಬಹುದೊ ಹೇಳಬರುವಂತಿಲ್ಲ.

ಈಸ್ಟ್ ಇಂಡಿಯಾ ಕಂಪೆನಿಯವರು ಹಿಂದುಸ್ಥಾನದ ಆಡಳಿತೆಯನ್ನು ವಹಿಸಿಕೊಳ್ಳುವ ಮುಂಚೆ ದೇಶದಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಅಕ್ಷರ ಶಿಕ್ಷಣದ ಪದ್ಧತಿ ಒಂದೊಂದು ರೀತಿಯಲ್ಲಿ ನೆಲೆಗೊಂಡಿತ್ತು. ಆಧುನಿಕ ದೃಷ್ಟಿಕೋನದಲ್ಲಿ ಆ ಪದ್ಧತಿ ತೃಪ್ತಿಕರವೆಂದು ಕೆಲವರು ಒಪ್ಪದಿದ್ದರೂ ಅಂತಹ ಪದ್ಧತಿಯಿಂದಲೆ ಅಕ್ಷರತೆಯ ಮಟ್ಟಿಗೆ ಪ್ರಪಂಚದ ಇತರ ದೇಶಗಳೆದುರು ಭರತಖಂಡ ಸಾಮ್ಯತೆ ಪಡೆದಿತ್ತು. ಆ ಪದ್ಧತಿಯು ನಿರ್ನಾಮವಾದ ಬಳಿಕ ಅಷ್ಟೇ ವ್ಯಾಪ್ತಿಯುಳ್ಳ ಪ್ರಾಥಮಿಕ ಶಿಕ್ಷಣ ಪದ್ಧತಿ ಬವಲಿಗೆ ಬಾರದಿದ್ದುದರಿಂದ, ದೇಶದಲ್ಲಿ ನಿರಕ್ಷರಕುಕ್ಷತೆ ಇಷ್ಟೊಂದು ಶೋಚನೀಯ ಸ್ಥಿತಿಯನ್ನೇರುವಂತಾಯಿತು. 150 ವರುಷಗಳ ಬ್ರಿಟಿಷರ ಆಳ್ವಿಕೆ. ಅದರ ನಂತರ ಸ್ವಾತಂತ್ರ್ಯ ದೊರೆತು 6 ವರುಷಗಳಾದುವು. ಆದರೆ ಇಂದು ಅಕ್ಷರ ಬಲ್ಲವರು ನೂರಕ್ಕೆ 16 ಮಂದಿಗಿಂತ ಹೆಚ್ಚಾಗಲಿಲ್ಲ.

ಆಧುನಿಕ ವಿದ್ಯಾಭ್ಯಾಸದ ಚರಿತ್ರೆಯ ಆದಿಯಲ್ಲಿ ಮನ್ರೊ, ಎಲಿಫಿನ್‌ಸ್ಟನ್ ಹಾಗೂ ಆಡಮರು ಅಂದಿನ ದೇಶೀಯ ಕ್ರಮವನ್ನೇ ಸುಧಾರಿಸಿ ವಿಸ್ತರಿಸುವುದರಿಂದ ಜನತೆಯ ನಿರಕ್ಷರಕುಕ್ಷತೆಯನ್ನು ದೂರ ಮಾಡಲು ಇದೊಂದು ಉಜ್ವಲ ಸಾಧನೆಯಾಗಬಹುದೆಂದು ಸೂಚಿಸಿದ್ದರು. 1854ರ ಸರಕಾರದ ಪತ್ರಗಳಲ್ಲೂ, 82ರ ಇಂಡಿಯನ್ ಎಜ್ಯುಕೇಶನ್ ಕಮಿಶನ್‌ನ ನಿರ್ಣಯದಲ್ಲೂ ಅದೇ ಸಲಹೆಯಿತ್ತು. ಆದರೆ ಅಂದಿನ ಇಂಡಿಯಾ ಸರಕಾರವು ಜನತೆಯ ವಿದ್ಯಾಭ್ಯಾಸದ ಪ್ರಶ್ನೆಯನ್ನು ಸಂಪೂರ್ಣವಾಗಿ ಅಲಕ್ಷಿಸಿತು. ಇಂದು ಕೆಲವರು ನಂಬುವಂತೆ ಕೆಲವೇ ಜನ ಸುಶಿಕ್ಷಿತ ವಿದ್ಯಾವಂತರ ಲಾಭವಾದರೆ ಸಾಕು, ಇತರರ ಪಾಡು ತನ್ನಷ್ಟಕ್ಕೆ ಸುಧಾರಣೆಗೊಳ್ಳುವುದು ಎಂಬುದನ್ನೇ ಆ ಸರಕಾರವೂ ಒಪ್ಪಿಕೊಂಡಿತು. ಈಗಲೂ ಅನೇಕ ವಿದ್ಯಾವಂತರು ಒಂದೇ ತಮ್ಮ ಇಚ್ಛೆಗೆ ಮೆಚ್ಚುವ ಶಿಕ್ಷಣ ಪದ್ಧತಿಯಿಂದ ವಿದ್ಯಾವಿಹೀನರಿಗೆ ಅಕ್ಷರಾಭ್ಯಾಸವಾಗಬೇಕು, ಇಲ್ಲವಾದರೆ ಈ ದುರಾದೃಷ್ಟ ಸಹೋದರರಿಗೆ ವಿದ್ಯಾಭ್ಯಾಸ ಬೇಡವೇ ಬೇಡವೆಂಬ ರೀತಿಯ ಧೋರಣೆಯನ್ನಿಟ್ಟುಕೊಂಡಿರುವರು. ಇದು ಶುದ್ಧ ನಾಚಿಕೆಗೇಡು. 1859ರಲ್ಲಿ ಸರಕಾರ ವಿದ್ಯಾ ಇಲಾಖೆಯನ್ನು ಸ್ಥಾಪಿಸಿದ ಬಳಿಕ ಪರಿಸ್ಥಿತಿ ಇನ್ನಷ್ಟು ವಿಷಮಕ್ಕೇರಿತು. ಯಾಕೆಂದರೆ ವಿದ್ಯಾ ಅಧಿಕಾರಿಗಳು ವಿದ್ಯಾ ಪಾಂಡಿತ್ಯ ಸಾಧನೆಯ ಮೇಲೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರು.

ಸಾರ್ವತ್ರಿಕವಾಗಿ ಜನತೆಗೆ ವಿದ್ಯಾ ಪ್ರಯೋಜನವನ್ನು ಕಲ್ಪಿಸಿ ಕೊಡಬೇಕಾದುದರ ಮಹತ್ವವನ್ನು ನಾಡಿನ ಅಪ್ರತಿಮ ರಾಜಕಾರಣಿ ಗೋಖಲೆಯಂತಹವರು ಮನಗಂಡಿದ್ದರು. ಇಂಡಿಯಾ ಸರಕಾರವೂ ಈ ಪ್ರಶ್ನೆಯನ್ನು ಬೇಕೆಂದೇ ಅಲಕ್ಷಿಸುತ್ತಿದೆ ಎಂಬುದನ್ನೂ ಅವರು ತಿಳಿದಿದ್ದರು. ಅಖಿಲ ಭಾರತದ ಪ್ರಾಥಮಿಕ ಶಿಕ್ಷಣಕ್ಕೆ ಈಸ್ಟ್ ಇಂಡಿಯಾ ಕಂಪೆನಿಯವರು 1½ ಲಕ್ಷ ರೂಪಾಯಿ ಮಾತ್ರ ತೆಗೆದಿಟ್ಟಿದ್ದರು. ಇದರಿಂದ 1912ರಲ್ಲಿ ಗೋಖಲೆಯವರು ಕೇಂದ್ರ ಶಾಸನ ಸಭೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಕುರಿತು ಒಂದು ಮಸೂದೆಯನ್ನು ಮಂಡಿಸಿದಾಗ, ಸರಕಾರ ಅದನ್ನು ತೀವ್ರವಾಗಿ ಪ್ರತಿಭಟಿಸಿತು. ಆದರೆ ಗೋಖಲೆಯವರು ಅಂದು "ಮಹಾಶಯರೆ ನಮ್ಮ ಈ ಪ್ರಯತ್ನಕ್ಕೆ ಯಾವ ಗತಿಯೇ ಕಾದಿರಲಿ. ಒಂದು ಮಾತ್ರ ಸತ್ಯ. ನಾವು ಮಾಡತಕ್ಕ ಪ್ರಯತ್ನ ಮಾಡಿರುವೆವು ಎಂಬ ಸಮಾಧಾನ ನಮಗಿರಬೇಕು. ನಮ್ಮ ಕರ್ತವ್ಯದ ಕರೆ ಸ್ಪಷ್ಟವಾಗಿರುವಾಗ ಪ್ರಯತ್ನಪಡದಿರುವುದಕ್ಕಿಂತ ಮಾಡಿ ಸೋಲುವುದು ಉತ್ತಮ" ಎಂದಿದ್ದರು: ಸಮಯಸಂದಂತೆ ಪ್ರಾಥಮಿಕ ವಿದ್ಯಾಭ್ಯಾಸವು ಸ್ಥಾನಿಕ ಸರಕಾರಗಳ ಜವಾಬ್ದಾರಿ ಎಂಬ ವಿದ್ಯಾ ಧೋರಣೆಯನ್ನೂ ಸರಕಾರ ಒಪ್ಪಿಕೊಳ್ಳುವಂತಾಯಿತು ಆದರೆ ಇಂಡಿಯಾ ಸರಕಾರವು ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಲಕ್ಷಿಸಿದರೂ ನಮ್ಮ ದೇಶೀಯರ ಅಂಕೆಯಲ್ಲಿರುವ ಸ್ಥಾನಿಕ ಸರಕಾರಗಳಿಂದಾದರೂ ಈ ಕೆಲಸ ಯಶಸ್ವಿಯಾಗಿ ನಡೆಯಬಹುದು ಎಂಬ ತಪ್ಪಭಿಪ್ರಾಯ ಗೋಖಲೆಯವರಲ್ಲಿತ್ತು ಎಂದು ಭಾಸವಾಗುವುದು.

ಈ ರೀತಿ ವಿದ್ಯಾಭ್ಯಾಸ ಕ್ರಮವು ಮುಂದುವರಿಯುತ್ತಲೇ ಇತ್ತು. ಈ ಕ್ರಮದಲ್ಲಿ ವಿಶ್ವ ವಿದ್ಯಾಲಯ ಮತ್ತು ಪಾಂಡಿತ್ಯ ಸಾಧನೆಗೇನೆ ಹೆಚ್ಚಿನ ಪ್ರಾಶಸ್ತ್ಯ ಕೊಡಲ್ಪಟ್ಟುದರಿಂದ ಪ್ರಾಯಕ್ಕೆ ಬಂದಿದ್ದ ನಿರಕ್ಷರ ಕುಕ್ಷಿಗಳನ್ನು ವಯಸ್ಕರ ಶಿಕ್ಷಣದಂತಹ ನಾನಾ ರೀತಿಯ ಶೋಧಕ ಪದ್ಧತಿಗಳಿಗೆ ಗುರಿಯಾಗುತ್ತಿದ್ದು ಅಲಕ್ಷಿಸಲ್ಪಡುವಂತಾಯಿತು. ಇಂದು ಘಟನೆಗನುಗುಣವಾಗಿ ಪ್ರಾಯಕ್ಕೆ ಬಂದವರಿಗೆ ಮತದಾನದ ಹಕ್ಕನ್ನಿತ್ತು ತನ್ಮೂಲಕ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯುತ್ತಿದ್ದರೆ, ಅದು ಜನ್ಮಸಿದ್ಧವಾಗಿ ನಮ್ಮ ಹಳ್ಳಿಗಳಲ್ಲಿರುವ ಪ್ರಾಕೃತಿಕ ಸದ್ಬುದ್ಧಿಯೇ ಕಾರಣವಲ್ಲದೆ ಅವರಲ್ಲಿರಬೇಕಾದ ವಿದ್ಯೆಯ ಉಪಯೋಗದಿಂದಲ್ಲ.

ವಿದ್ಯೆಯು ಯಾರೊಬ್ಬರ ವಿಶಿಷ್ಟ ಹಕ್ಕಾಗಿರಕೂಡದು. ಸ್ವದೇಶಿ ಸರಕಾರದೆದುರು ಇರುವ ಅತೀ ದೊಡ್ಡ ಸಮಸ್ಯೆ ಎಂದರೆ ಪ್ರತಿಯೊಬ್ಬ ದೇಶೀಯನೂ ಓದು ಬರಹ ತಿಳಿಯುವಂತೆ ಮಾಡುವುದು. ಈ ಸಮಸ್ಯೆಗೆ ಸಾಕಷ್ಟು ಮಹತ್ವ ಸರಕಾರ ಕೊಟ್ಟಿರುವುದೆ, ಇಲ್ಲವೆ ಎಂಬ ಮಾತು ಬೇರೆ. ಹತ್ತು ವರುಷಗಳೊಳಗೆ 6ರಿಂದ 14 ವರುಷ ಪ್ರಾಯದ ಎಲ್ಲಾ ಮಕ್ಕಳಿಗೂ ದೇಶದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ದೊರಕಿಸಿ ಕೊಡಬೇಕೆಂದು ಘಟನೆಯ 42ನೇ ಕಲಮ್ಮಿನಲ್ಲಿ ಸ್ವೀಕಾರವಾಗಿರುವುದು. ಇಷ್ಟರೊಳಗೆ ಮೂರು ವರುಷಗಳು ದಾಟಿದುವು. ಆದರೆ ಹಿಂದೆ ಇದ್ದಲ್ಲಿಯೇ ನಾವು ಇಂದೂ ಇರುವೆವು. ಸರಕಾರ ತನ್ನ ಪ್ರಥಮ ಜವಾಬ್ದಾರಿಯಾಗಿ ತೆಗೆದುಕೊಂಡಿರುವ ಪ್ರಾಥಮಿಕ ವಿದ್ಯಾಭ್ಯಾಸ ಘಟನೆಯ ನಿಯಮದಂತೆ ನೆರವೇರಬೇಕಾದರೆ ಅಖಿಲ ಭಾರತದಲ್ಲಿ ವರ್ಷಕ್ಕೆ ಸುಮಾರು 800 ಕೋಟಿ ರೂಪಾಯಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿರುವುದು. ತರಬೇತಿಗೊಂಡಿರುವ 27 ಲಕ್ಷ ಜನ ಅಧ್ಯಾಪಕರು ಬೇಕಾಗುವರು. ಈಗ ಇರುವ ಅಧ್ಯಾಪಕರ ಸಂಖ್ಯೆ ಬರೇ 7 ಲಕ್ಷ. ಬೇಕಾಗುವ ಕಟ್ಟಡ ಸೌಕರ್ಯಗಳನ್ನು ಪೂರೈಸಲು ಸುಮಾರು 270 ಕೋಟಿ ರೂಪಾಯಿ ತಗಲಬಹುದು. ಆದರೆ ನಮ್ಮ ಎಲ್ಲಾ ಪ್ರಾಂತೀಯ ಸರಕಾರಗಳ ಮತ್ತು ಕೇಂದ್ರ ಸರಕಾರದ ವಾರ್ಷಿಕ ಆದಾಯ ಬರೇ 860 ಕೋಟಿ ರೂಪಾಯಿಯಾಗಿರುವಾಗ ಈ ಸಮಸ್ಯೆಯ ಗಾತ್ರವನ್ನು ನಾವು ಕಂಡುಕೊಳ್ಳಬಹುದು.

ಆದರೆ ನಾವು ಕಾಯ ಬಲ್ಲೆವೆ? ಈ ಎಲ್ಲಾ ಅಧ್ಯಾಪಕರು ಸಿದ್ಧರಾಗುವ ತನಕ ಕಟ್ಟಡಗಳು ಸಜ್ಜಾಗುವ ತನಕ, ಸರಕಾರದ ಆರ್ಥಿಕ ಸ್ಥಿತಿ ಈ ಹೊರೆಯನ್ನು ಹೊರುವ ಶಕ್ತಿಯನ್ನು ಪಡೆಯುವ ತನಕ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸ ವಿಸ್ತರಣೆಯ ಕಾರ್ಯವನ್ನು ತಡೆಹಿಡಿಯಬೇಕೆ? ಕೂಡದು. ಈ ಸಮಸ್ಯೆಯ ನಿವಾರಣೆಗೆ ಪೂರ್ವಾಚಾರಕ್ಕೆ ವಿರುದ್ಧವಿರಬಹುದಾದರೂ ಧೈರ್ಯದಿಂದ ಬಗೆಹರಿಸುವ ಮಾರ್ಗವನ್ನವಲಂಬಿಸದಿದ್ದರೆ ಸಮಸ್ಯೆಯ ಪರಿಧಿಯನ್ನೂ ನಾವು ಸದ್ಯ ಮುಟ್ಟಲಾರೆವು.

ಸರಕಾರದ ಆರ್ಥಿಕ ದುಸ್ಥಿತಿ, ಸಮಸ್ಯೆಯ ಗಾತ್ರಸೂತ್ರದ ಪರಿಶೀಲನೆಯಲ್ಲಿ, ಪ್ರಾಥಮಿಕ ವಿದ್ಯಾಭ್ಯಾಸ ಯಾವ ರೀತಿಯಲ್ಲಾದರೂ ಆದಷ್ಟು ಬೇಗ ಜನತೆಗೆ ದೊರೆಯುವಂತೆ ಮಾಡಬೇಕೆ, ಅಥವಾ ಶಿಕ್ಷಣ ಮಟ್ಟ, ಕಟ್ಟುನಿಟ್ಟೆಂಬ ದೃಷ್ಟಿಯಿಂದ ನಮ್ಮ ಆರ್ಥಿಕ ಆಸರೆಯನ್ನು ವ್ಯಯಿಸತೊಡಗಬೇಕೆ ಎಂಬುದು ಮುಖ್ಯ ಪ್ರಶ್ನೆ. ಇಂದಿನ ಕ್ರಮದಲ್ಲಾದರೆ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಂದೆ ದೂಡಿದಂತೆಯೇ ಸರಿ. ಆದರೆ ಸಮಸ್ಯೆಯ ಈ ಎರಡೂ ವಿಭಾಗವನ್ನು ನಾವು ಸಮತೂಕದಲ್ಲಿ ವಿವೇಚಿಸಬೇಕು. ಗೋಖಲೆಯವರು ಅಂದಂತೆ "ವಿದ್ಯೆಯ ಲಕ್ಷಣ ಸಂಪತ್ತು ನಿರಕ್ಷರತೆ ನಾಶವಾದ ಮೇಲೆ ಮಾತ್ರ ಗಮನಾರ್ಹವಾದುದು" ಎಂಬುದೇ ನಮಗೀಗ ಉತ್ತಮ ಮಾರ್ಗದರ್ಶನವಾಗಬಹುದು. ವಿದ್ಯೆಯು ಸಾರ್ವತ್ರಿಕವಾಗಿರದಿದ್ದರೆ ವಿದ್ಯಾ ಪದ್ಧತಿ ತೃಪ್ತಿಕರವೆನ್ನಲಾಗುವುದಿಲ್ಲ. ಅತೀ ಕ್ಷಿಪ್ರದಲ್ಲಿ ಸಾರ್ವತ್ರಿಕ ಅಕ್ಷರಜ್ಞಾನ ಉಂಟಾಗಲು ಸಾಧ್ಯವಿರುವಲ್ಲಿ ಅದನ್ನು ರಾಷ್ಟ್ರ ಏಕಾಗ್ರತೆಯಿಂದ ಗಮನಿಸಬೇಕು. ಈ ಉದ್ದೇಶದಿಂದಲೆ ಮದ್ರಾಸು ಸರಕಾರ ಈ ಹೊಸ ಯೋಜನೆಯನ್ನು ತಂದಿತು. ಆದರೆ ಅದಕ್ಕೆದಿರು ವಿರೋಧ ಪ್ರದರ್ಶನ ತೀರ ಅಜ್ಞಾನ ಮತ್ತು ಅಸೂಯೆಯಿಂದ ತುಂಬಿರುವುದು.

ಇಂಗ್ಲಾಂಡಿನಲ್ಲೂ 1870ರಲ್ಲಿ ಕಡ್ಡಾಯ ಶಿಕ್ಷಣವನ್ನು ಸರಕಾರ ಮುಂದಿಟ್ಟೊಡನೆ ಅಲ್ಲಿಯೂ ಅದಕ್ಕೆ ತೀವ್ರ ವಿರೋಧವಿತ್ತು ಎಂಬುದನ್ನು ಕೇಳಿ ಓದುಗರಿಗೆ ಆಶ್ಚರ್ಯವಾಗಬಹುದು. ಇದರಲ್ಲಿ ತಮ್ಮ ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿರುವುದೆಂದೂ ಅವರು ವಾದಿಸಿದ್ದರು. ಇಲ್ಲಿಯೂ ಅನೇಕರ ಅಭಿಪ್ರಾಯ ಅದೇ ರೀತಿ ಇದ್ದರೆ ನಾವು ಆಶ್ಚರ್ಯ ಪಡಬೇಕಾಗಿಲ್ಲ.

ಮದ್ರಾಸು ಸರಕಾರವು ವಿದ್ಯಾಖಾತೆಯ ಮೇಲೆ ವರುಷ ವರುಷ ತನ್ನ ಆದಾಯದಲ್ಲಿ ರೂಪಾಯಿಗೆ 3½ ಆಣೆಯಷ್ಟು ಖರ್ಚು ಮಾಡುತ್ತಿದೆ. ಹೀಗೆ ವ್ಯಯ ಮಾಡುತ್ತಿರುವ 1[illegible] ಕೋಟಿ ರೂಪಾಯಿಯಲ್ಲಿ 7¼ ಕೋಟಿ ರೂಪಾಯಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ತಗಲುತ್ತಿದೆ. ಇಷ್ಟು ಖರ್ಚು ಮಾಡಿಯೂ ನಮ್ಮ ಪ್ರಾಂತದಲ್ಲಿ ಈಗ ಇರುವುದು ಬರೇ ೪೮,000

ಹೋಮ್ ಸಿನೆಮಾ ಪ್ರೊಜೆಕ್ಟರ್



ಸಿನೆಮಾ ಮಂದಿರಗಳಲ್ಲಿ ನೋಡುವಂತಹ ಮಾದರಿಯಲ್ಲಿ 35 ಎಮ್. ಎಮ್. ಫಿಲ್ಮುಗಳು, ಸ್ಲೈಡುಗಳು ಇತ್ಯಾದಿ, ಚಲಿಸುವ, ನೃತ್ಯ ಮಾಡುವುದನ್ನು ನಿಮ್ಮ ಮನೆಯಲ್ಲೇ ನೋಡಬಹುದು. ಸಾಮಾನ್ಯ ಚಾರ್ಜುಗಳು ಇಲ್ಲವೆ ಇಲೆಕ್ಟ್ರಿಕ್ ಬಲ್ಬು (AC DC)ಗಳ ಸಹಾಯದಿಂದಲೇ ನಡೆಸಬಹುದು. ಹತ್ತು ಅಡಿ ಉದ್ದದ ಫಿಲ್ಮ್ ಪುಕ್ಕಟೆ. ಪ್ರೊಜೆಕ್ಟರ್ ಕ್ರಯ ರೂ. 10/- ವಿ. ಪಿ. ಪಿ. ಚಾರ್ಜು ರೂ. 3/- ಪ್ರತ್ಯೇಕ. ಹೆಚ್ಚಿಗೆ ಫಿಲ್ಮುಗಳು ಬೇಕಾದರೆ ಗಜಕ್ಕೆ 0-1-0 ಪ್ರತ್ಯೇಕ ತೆರಬೇಕು.

ಇಲೆಕ್ಟ್ರಿಕ್ ಮತ್ತು ರೇಡಿಯೊ ಗಾಯಿಡ್. ಬರೇ ರೂ. 15-ಕ್ಕೆ ರೇಡಿಯೋ ತಯಾರಿಸುವುದನ್ನೂ, ಇಲೆಕ್ಟ್ರಿಕ್ ವಯರಿಂಗ್ ಮತ್ತು ರಿಪೇರಿ ಕೆಲಸವನ್ನೂ ಕಲಿತು ತಿಂಗಳಿಗೆ ರೂ. 200/ ಸಂಪಾದಿಸಿರಿ. ಬೆಲೆ ರೂ. 1/ ವಿ. ಪಿ. ಚಾರ್ಜು ರೂ. 1/ ಪ್ರತ್ಯೇಕ.

ಇಂಗ್ಲಿಷ್ ರಾಗದ ರಾಗಮಾಲೆಗಳು (ಫಿಲ್ಮಿ-ಬಸುರಿ). ಹಿತ್ತಾಳೆಯಿಂದ ತಯಾರಿಸಲ್ಪಟ್ಟು ಇಂಪಾದ ಸ್ವರವನ್ನು ಕೊಡುತ್ತವೆ. ಬೆಲೆ ರೂ. 4/- ವಿ. ಪಿ. ಖರ್ಚು ರೂ. 1-4-0 ಪ್ರತ್ಯೇಕ.

HINDUSTAN TRADERS & PUBLISHERS LTD.,
SARAI-BALA, **ALIGARH** (U. P.)

ಸರಕಾರ ತಂದ ಬದಲಾವಣೆ ಅನಿವಾರ್ಯ

ಪ್ರಾಥಮಿಕ ಶಾಲೆಗಳು ಶಾಲೆಗೆ ಹೋಗುವ ಪ್ರಾಯದ ೮೦ಲಕ್ಷ ಮಕ್ಕಳಲ್ಲಿ ಈಗ ಬರೇ ನೂರರಲ್ಲಿ 48 ಮಕ್ಕಳಿಗೆ ಶಿಕ್ಷಣ ಸೌಕರ್ಯ ದೊರೆಯುತ್ತಿದೆ ಈ ಮಕ್ಕಳಲ್ಲೂ ಸೇಕಡಾ 31 ರಷ್ಟು ಮಕ್ಕಳು ಮಾತ್ರ ಪ್ರಾಥಮಿಕ ಶಿಕ್ಷಣ ಸಂಪೂರ್ಣ ಪಡೆಯುತ್ತಿವೆ ಉಳಿದ ಮಕ್ಕಳು 1ನೆಯ ತರಗತಿಯೊಳಗೆ ಶಾಲೆ ಬಿಟ್ಟು ಬಿಡುತ್ತವೆ 1946–17ನೇ ಇಸವಿಯಲ್ಲಿ ಒಂದನೇ ತರಗತಿಗೆ ಸೇರಿದ 12,22,775 ಮಕ್ಕಳಲ್ಲಿ, 1950–51ರಲ್ಲಿ ಐದನೆಯ ದರ್ಜೆಗೆ ಬಂದ ಮಕ್ಕಳು ಒರೇ 1,61,688 ನಾಡಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ಕೊಡುವ ವ್ಯವಸ್ಥೆ ನಮ್ಮಲ್ಲಿ ಇಲ್ಲ ಮಾತ್ರವಲ್ಲ, ಸುಮಾರು ೪ ಅಂಶದ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ೪ ನೇ ವರ್ಜಗ ಬರುವ ಮುಂಚೆಯೇ ಬಿಟ್ಟುಬಿಡುತ್ತಿರುವವು ಶಿಕ್ಷಣ ಸೌಕರ್ಯ ಇಲ್ಲದ ಈ 40 ಲಕ್ಷ ಮಕ್ಕಳು ನಿರಕ್ಷರ ಕುಕ್ಷಿಗಳಾಗಿ ಬೆಳೆಯಲು ನಾವು ಬಿಡಬೇಕೆ? ಅನಂತರ ಅವರಿಗಾಗಿ ವಯಸ್ಕರ ಶಿಕ್ಷಣವೆಂಬ ರೀತಿಯಲ್ಲಿ ಖರ್ಚುಮಾಡಬೇಕೆ? ಇಂದಿನ ಅಕ್ಷರ ಜ್ಞಾನವಿಲ್ಲದ ಚಿಕ್ಕ ಮಗು ನಾಳೆಯ ನಿರಕ್ಷರ ಕುಕ್ಷಿ ಯುವಕ

ಆದರೆ ಇಂಡಿಯಾ ಮಾತ್ರ ಈ ಸಮಸ್ಯೆಗೊಳಗಾಗಿರುವುದಲ್ಲ ರಶಿಯಾ, ಫಿಲಿಪೈನ್ಸ್, ಹಾಗೂ ಕಡ್ಡಾಯ ಶಿಕ್ಷಣವನ್ನು ತಂದ ಬೊಂಬಾಯಿಯಂತಹ ಕಡೆಗಳಲ್ಲೂ ದೊಡ್ಡ ದರ್ಜೆಗಳು, ಸಮಯ ವಿಭಾಗ ಶಿಕ್ಷಣ ಅಥವಾ 'ಶಿಫ್ಟ್' ಪದ್ಧತಿಯನ್ನು ಅನುಸರಿಸುತ್ತಿರುವರು ಈಗ ಇರುವ ಸೌಕರ್ಯದಲ್ಲಿ ಒಂದು ಕ್ಲಾಸಿನಲ್ಲಿ 40 ಮಕ್ಕಳ ಬದಲಿಗೆ 80 ಮಕ್ಕಳಿಗೆ ಕಲಿಸುವ ಜವಾಬ್ದಾರಿಯನ್ನು ಅಧ್ಯಾಪಕರು ವಹಿಸುವಲ್ಲಿ ಈಗಿಂತ ದ್ವಿಗುಣಿತವಾಗಿ ಮಕ್ಕಳಿಗೆ ಶಿಕ್ಷಣ ಕೊಡಲು ಸಾಧ್ಯವಿದೆ ಪ್ರಾಥಮಿಕ ಶಿಕ್ಷಣದ ಸಮಸ್ಯೆಯನ್ನು ಬಿಡಿಸುವುದಕ್ಕಾಗಿ ಇಂಗ್ಲಾಂಡಿನಲ್ಲಿ 80 ಮಕ್ಕಳಿಗೊಬ್ಬೊಬ್ಬರು ಅಧ್ಯಾಪಕರಿರುತ್ತಿದ್ದರು ಜರ್ಮನಿ, ಜಪಾನಿನಲ್ಲಿ 60 ಮಕ್ಕಳಿಗೊಬ್ಬರಂತೆ ಅಧ್ಯಾಪಕರು ಶಿಕ್ಷಣ ಕೊಡುತ್ತಿದ್ದರು ಆದರೆ ಇಂತಹ ಪದ್ಧತಿಯಿಂದ ಉಪಾಧ್ಯಾಯರಿಗೆ ವ್ಯಕ್ತಿಕಲ್ಲಿಶಿಸ್ತು ನಿಯಮ ಅಥವಾ ವೈಯುಕ್ತಿಕ ಗಮನಕೊಡಲು ಸಾಧ್ಯವಾಗಲಾರದುದರಿಂದ ಶಿಕ್ಷಣ ಮಟ್ಟ ಅದವಾ ಅದರ ಪ್ರತಿಫಲ ಯೋಗ್ಯವಾಗಲಾರದು ಆದರೆ ಅಂತಹ ಪದ್ಧತಿಯನ್ನು ಇಲ್ಲಿ ಜ್ಯಾರಿಗೆ ತಂದಿದ್ದರೆ ಪ್ರಾಯಶಃ ಹೆಚ್ಚಾಗಿ ಯಾರೂ ವಿರೋಧಿಸುತ್ತಿರಲಿಲ್ಲ

ಮದ್ರಾಸು ಸರಕಾರದ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆಯು ಪ್ರತಿಪಾದಿಸುವ ತತ್ವವೇನು? ನಮ್ಮ ಆರ್ಥಿಕ ಸ್ಥಿತಿ ಮಿತವಾದುದು, ಬೇಕಾಗುವ ಕಟ್ಟಡಗಳನ್ನು ರಾತ್ರಿ ಬೆಳಗಿನೊಳಗೆ ಮಾಡಿ ಮುಗಿಸಲು ಸಾಧ್ಯವಿಲ್ಲ, ಎಷ್ಟು ಸಂಕ್ಷಿಪ್ತ ಪದ್ಧತಿಯನ್ನಿಟ್ಟರೂ ಬೇಕಾದಷ್ಟು ಜನ ತರಬೇತಿ ಹೊಂದಿದ ಅಧ್ಯಾಪಕರನ್ನು ಹೊಂದುವುದು ಸುಲಭವಲ್ಲ, ಎಂಬುದನ್ನು ಮದ್ರಾಸು ಸರಕಾರ ಮನಗಂಡಿರುವುದು ಆದರೆ ಯಾವುದೇ ಸರಕಾರವಿರಲಿ, ಯಾವ ಪಕ್ಷವೇ ಅದನ್ನು ವಹಿಸಿಕೊಳ್ಳಲಿ, ಪ್ರಾಥಮಿಕ ಶಿಕ್ಷಣವನ್ನು ಘಟನಾತ್ಮಕವಾಗಿ ವಿಸ್ತರಿಸುವ ಜವಾಬ್ದಾರಿಯನ್ನು ಆ ಸರಕಾರ ತಪ್ಪಿಸಿಕೊಳ್ಳುವಂತಿಲ್ಲವೆಂಬುವದನ್ನೂ ಮದ್ರಾಸು ಸರಕಾರ ತಿಳಿದಿರುವುದು ಆದುದರಿಂದ ಇದ್ದ ಸೌಕರ್ಯದಲ್ಲಿ, "ಶಿಫ್ಟ್ ಪದ್ಧತಿಯನ್ನನುಸರಿಸಿ, ಹಿಂದೆ ರೂಢಿಯಲ್ಲಿದ್ದ ಅತೀ ಅಗತ್ಯವಿರುವ 3 ಘಂಟೆಗಳ ಕಾಲದ ಶಿಕ್ಷಣ ಮಾತ್ರ ಮಕ್ಕಳಿಗೆ ಕೊಡುವ ವ್ಯವಸ್ಥೆ ಮಾಡಿ, ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣದ ಪ್ರಯೋಜನವನ್ನು ಮದ್ರಾಸು ಸರಕಾರ ಕಲ್ಪಿಸಿಕೊಡಬಯಸಿತು ಅಷ್ಟೆ

ಆದರೆ ಇದರಿಂದ ಇಡೀ ಸಮಸ್ಯೆ ಬಗೆಹರಿಸಿದಂತಾಗುವುದಿಲ್ಲ ನಮ್ಮ ದೇಶದಲ್ಲಿ ಅನೇಕರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಬಯಸುತ್ತಿರುವವು. ಆದರೆ ಇದರ ಅರ್ಥವೇನು? ಶಾಲೆಇಲ್ಲದ ಕಡೆಗಳಲ್ಲಿ ಶಾಲೆಬೇಕೆಂಬ ತಾತ್ಪರ್ಯ ಇದಾದರ, ನನ್ನ ಆಕ್ಷೇಪವಿಲ್ಲ ಆದರೆ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಲು ಹೆತ್ತವರನ್ನು ಒತ್ತಾಯಿಸುವ ಕಾನೂನು ಅವರು ಬಯಸುವುದಾದರ ಅವರಿಗೆ ಬೇಕಾದ ಆರ್ಥಿಕ ಪರಿಸ್ಥಿತಿಯ ಅರಿವು ಇರುವುದಿಲ್ಲವೆಂದು ನಾನು ಹೇಳಬಲ್ಲೆ ಕಡ್ಡಾಯ ಶಿಕ್ಷಣವನ್ನು ಇಂಡಿಯಾದಲ್ಲಿ ಪ್ರಥಮ ಜ್ಯಾರಿಗೆ ತಂದುದು ಬರೋಡ ಪ್ರಾಂತದಲ್ಲಿ ಹೆತ್ತವರು ಮಕ್ಕಳನ್ನು ಶಾಲೆಗೆ ಕಳುಹಿಸದಾಗ ಅಧಿಕಾರಿಗಳು ಅವರನ್ನು ತಕ್ಸೀರಿಗೆ ಗುರಿಪಡಿಸಿದರು, ದಂಡನೆ ವಿಧಿಸಿದರು ಆದರೆ ವಿಧಿಸಿದ ದಂಡನೆ ತೆರಲಾರದವರೇ ಅವರಲ್ಲಿ ಅಧಿಕ ಸಂಖ್ಯಾತರಾಗಿದ್ದುದರಿಂದ ಜುಲ್ಮಾನೆ ಹಣವನ್ನು ಮಾಫಿಮಾಡಬೇಕಾದ ಪರಿಸ್ಥಿತಿ ಒದಗಿತು ಮೂರುದಲ್ಲಿರುವ ಬಡತನವನ್ನು ಪರಿಗಣಿಸದೆ ಕಡ್ಡಾಯ ಶಿಕ್ಷಣಕ್ಕೆ ಉದ್ಯುಕ್ತರಾಗುವುದು ಹಾಸ್ಯಾಸ್ಪದವಾದ ವಿಚಾರ

ನಮ್ಮ ಹಳ್ಳಿಯಲ್ಲಿ ಹೆತ್ತವರು ಮಕ್ಕಳನ್ನು ಏಕೆ ಶಾಲೆಗೆ ಕಳುಹಿಸುವುದಿಲ್ಲ ಅವರ ಕಷ್ಟವೇನು?

ಮೊದಲನೆಯದಾಗಿ ಚಿಕ್ಕ ಮಕ್ಕಳು ಸಂಸಾರದಲ್ಲಿ ಹಣಕಾಸಿನ ಲಾಭವನ್ನುಂಟುಮಾಡುವುವು ಅವರ ಚಿಕ್ಕ ಪುಟ್ಟ ಕೆಲಸಗಳಿಂದ ಹೆತ್ತವರಿಗೆ ಪ್ರಯೋಜನವಿದೆ ಆದುದರಿಂದ ಈ ಮಕ್ಕಳನ್ನು ಶಾಲೆಗೆ ಕಳುಹಿಸಲು ಹೆತ್ತವರು ಇಷ್ಟಪಡುವುದಿಲ್ಲ ಇದಕ್ಕೋಸ್ಕರ ಮಕ್ಕಳು ಶಾಲೆಗೆ ಬರುವಂತೆ ಮಾಡಲು ಹೆತ್ತವರಿಗೆ ತಕ್ಕ ಪರಿಹಾರವನ್ನು ಕೊಡಬೇಕೆಂಬ ಸೂಚನೆಯೂ ಇದೆ ವುದು, ಅದವಾ ಅವರು ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದರೆ ಮಕ್ಕಳು ಕೇವಲ ಕೆಲವೇ ಘಂಟೆಗಳ ಕಾಲ ಶಾಲೆಯಲ್ಲಿರಬೇಕಾದುದು ಎಂಬ ಆಶ್ವಾಸನೆ ಅವರಿಗೆ ದೊರೆಯಬೇಕು

ಎರಡನೆಯದಾಗಿ ಬಡ ಬಡವರಾದವರು ಮಕ್ಕಳನ್ನು ಶಾಲೆಗೆ ಕಳುಹಿಸಲು ತಕ್ಕುದಾದ ಬಟ್ಟೆಬರೆ, ಪಠ್ಯಪುಸ್ತಕವೇ ಮೊದಲಾದ ಸಲಕರಣೆಗಳನ್ನು ಒದಗಿಸಿಕೊಡಲು ಅಶಕ್ತರು

ಈ ಮೂಲಭೂತ ಸಮಸ್ಯೆಯನ್ನು ಪರಿಹರಿಸದೆ ಕಡ್ಡಾಯ ಶಿಕ್ಷಣ ಯಶಸ್ವಿಯಾಗುವಂತಿಲ್ಲ ಶಾಲೆಗೆ ಸರಿಯಾಗಿ ಜೀವನ ಪ್ರಶಸ್ತವಾಗುವುದಿಲ್ಲ, ಜೀವನಕ್ಕೆ ಸರಿಯಾಗಿ ಶಾಲೆ ವ್ಯವಸ್ಥಿತಗೊಳಿಸಲ್ಪಡುವುದಿಲ್ಲ ಫಲಿತಾಂಶ ಶಿಕ್ಷಣ ಪದ್ಧತಿ ನಮ್ಮ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ತಿದ್ದಲ್ಪಡದಿರುವಲ್ಲಿ, ಜನತೆಗೆ ಯಾವ ತರದ ವಿದ್ಯಾಲಾಭವೂ ದೊರೆಯುವಂತಿಲ್ಲ

'ಶಿಫ್ಟ್' ಪದ್ಧತಿಯ ಶಿಕ್ಷಣವನ್ನು Unescoದವರು ಇಂಡಿಯಾದ ಪ್ರಾಥಮಿಕ ಶಿಕ್ಷಣ ಸಮಸ್ಯೆಯ ಕುರಿತು ಹೊರಗೆಡಹಿದ ಗ್ರಂಥದಲ್ಲಿಯೂ ಸೂಚಿಸಿರುವರು. ಈ ಸೂಚನೆಯನ್ನು Unescoದವರು ಮಾಡಿರುವರೆಂದು ನಮ್ಮ ಜನರು ತಿಳಿದಿದ್ದರೆ ಪ್ರಾಯಶಃ ಮದ್ರಾಸು ಸರಕಾರದ ಯೋಜನೆಗೆ ಇಷ್ಟೊಂದು ವಿರೋಧ ಬರುತ್ತಿದ್ದಿಲ್ಲ ಸಮಸ್ಯೆಯ ಮೂಲವನ್ನು ಜನರು ತಿಳಿಯದಿದ್ದುದರಿಂದಲೇ ಇಲ್ಲದ ... ಯನ್ನು ಈ ಯೋಜನೆಯಲ್ಲಿ ವಿರೋಧಿಗಳು ಕಾಣತೊಡಗಿದ್ದಾರೆ ವಿದ್ಯಾಧಿಕಾರಿಗಳ ಸಮ್ಮೇಳನದಲ್ಲಿ ರಾಜಾಜಿ ಹೇ

(೧೫ನೇ ಪುಟ ನೋಡಿರಿ)

ನವಯುಗದಲ್ಲಿ
ಕೊಡುವ ಜಾಹೀರಾತು
ವ್ಯಾಪಾರ ಪ್ರಗತಿಗೆ ಮೂಲ.

"ನವೋದಯ"
ಕನ್ನಡ ವಾಚನಮಾಲೆ
ಒಂದರಿಂದ ಐದನೆಯ ಪುಸ್ತಕಗಳು ಈಗಾಗಲೇ ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿವೆ,
ಬರೆದವರು ಕಯ್ಯಾರ ಕಿಞ್ಞಣ್ಣ ರೈ
ಪ್ರಕಾಶಕರ
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿ,
ಶಾರದಾ ಕಾರ್ಯಾಲಯ, ರಥಬೀದಿ ಮಂಗಳೂರು ೧

ಹುಬ್ಬಳ್ಳಿಯಲ್ಲಿ—
ಉತ್ತಮ ಉಪಾಹಾರ ಮಂದಿರಗಳು
ಶ್ರೀ ಕೃಷ್ಣ ಕೆಫೆ
(ಗವಿ ಪೇಟ)
ಶಾರದಾ ಭುವನ
(ಕಮರಿ ಪೇಟ)
ಸಂದರ್ಶಿಸಿ ಸಂತೃಪ್ತರಾಗಿರಿ.
ಟಿ ಎಸ್ ಶೆಟ್ಟಿ, ಪ್ರೊಪ್ರೈಟರ್

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬಗೆ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು ಸಾಮಾನ್ಯ ದರದಲ್ಲಿ ಯೂ ಚಿಲ್ಲರೆಯಾಗಿಯೂ ಸಿಗುತ್ತವೆ
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ

... ಕೋರ್ಟಿನಲ್ಲಿ
S C 426/1953
ಆನಂದ ಶೆಟ್ಟಿ— ವಾದಿ
ಮತ್ತು
ಐಯ್ಯ ಯಾನೆ ಒರಿಯಪ್ಪ ಶೆಟ್ಟಿ—
ಪ್ರತಿವಾದಿ
ಇವರೊಳಗೆ
ಸದ್ರಿ ಪ್ರತಿವಾದಿ —ಐಯ್ಯ ಯಾನೆ ಒರಿಯಣ್ಣ ಶೆಟ್ಟಿ, ಮಲ್ಲಿ ಯಾನೆ ನಾಗಿ ಶೆಡ್ತಿರ ಮಗ, ಉಡ್ಪಿ ತಾಲೂಕು ಪುತ್ತೂರು ಗ್ರಾಮ ದೆರಬೈಲ ಇವರಿಗೆ—
ಸಂಪ್ರ ವಾದಿಗೆ ತಾರೀಕು 14-9 1952 ರಲ್ಲು ರೂಪಾಯಿ 100 0 0ಕ್ಕೆ ಬರೆಕೊಟ್ಟ ದಿವಾಂದು ನೋಟಿನ ಅಸಲು ಬಡ್ಡಿ ಆದೇಶ ನ್ನು ಬರಮಾಡಿಕೊಳ್ಳುವರೆ ವಾಕ್ಲು ಮಾಡಿದ ಮೋಕದ್ದಮೆಯು ತಾ 25-8 1953 ಕ್ಕೆ ಇಟ್ಟಿರುತ್ತದೆ ಉಜ್ರಪಡಿಸುವುದಾದಿದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡತಕ್ಕ ... ಇಲ್ಲವಾದಲ್ಲಿ ... ವಾದ ವಿಚಾರಿಸಿ ನಿರ್ಣಯಿಸಲ ಪಡುವದು
K Ramakrishna Rao,
Vakil for Plaintiff
Udipi Date 10—8—1953

ಆರು ವರ್ಷಗಳ ಸಾಧನೆಯ ವಿವರ

ಪ್ರಾರಂಭಿಕ ಪ್ರಯತ್ನಗಳೆಲ್ಲವೂ ಫಲಪ್ರದ

ಸ್ವಾತಂತ್ರ್ಯದ ಇನ್ನೊಂದು ವರ್ಷವೂ ಕಳೆಯಿತು- ಸರಿಯಾಗಿ ಆರು ವರ್ಷಗಳ ಪೂರ್ವದಲ್ಲಿ ಭಾರತದ ೧೨ ಲಕ್ಷ ಚದರ ಮೈಲು ವಿಸ್ತೀರ್ಣದ ಭೂಭಾಗದ ಮೇಲಿನ ತಮ್ಮ ಸಾರ್ವಭೌಮಾಧಿಕಾರವನ್ನು ಬಿಟ್ಟುಗೊಟ್ಟು, ಬ್ರಿಟಿಷರು ಹಿಂದೆರಳಿದಾಗ—ಭಾರತೀಯರಾದ ನಾವು ಅಹಿಂಸಾತ್ಮಕ ಸತ್ಯಾಗ್ರಹದ ಸತ್ಪರಿಣಾಮವಿದೆಂದು ಬಣ್ಣಿಸಿದೆವು; ಅದೇ ಪಶ್ಚಿಮದ ಹಾಗೂ ಪೂರ್ವದ ರಾಷ್ಟ್ರಗಳು ಗಾಂಧೀಜಿಯ ಅದ್ಭುತ ಪವಾಡವೆಂದು ಇದನ್ನು ಕರೆದವು. ಬೇರೆ ದೇಶಗಳ ದೃಷ್ಟಿಯಲ್ಲಿ ಭಾರತವು ಚಮತ್ಕಾರಗಳ ಭೂಮಿ ಭಾರತದ ಮೇಲೆ ದಂಡೆತ್ತಿಕೊಂಡು ಬಂದಿದ್ದ ಎಲ್ಲರೂ ಇಲ್ಲಿಯ ವೈಚಿತ್ರ್ಯಗಳನ್ನು ಕುರಿತಾದ ಸುದ್ದಿಗಳಿಂದ ಆಕರ್ಷಿತರಾಗಿ ಬಂದವರೇ. ಅಂಥವರೆಲ್ಲರಿಗೂ ಅಸ್ತ್ರಶಸ್ತ್ರಗಳಿಲ್ಲದೆ—ಅಹಿಂಸೆಯೇ ಸಾಧನವಾಗಿರುವ ಶಾಂತ ಚಳುವಳಿಯ ಪರಿಣಾಮವಾಗಿ ಬ್ರಿಟಿಷರು ಭಾರತದಿಂದ ಕಾಲ್ತೆಗೆದು ಹೋದರೆಂಬ ವಾರ್ತೆ ಆಶ್ಚರ್ಯಜನಕವಾಯಿತು. ಆದರೆ ಈ ಘಟನೆ ನಡೆದ ಬಳಿಕ ಆರು ವರ್ಷಗಳಲ್ಲಿ ಇನ್ನೂ ಚಮತ್ಕಾರದ ಅನೇಕ ಕೆಲಸಗಳು ನಡೆದುವು—ಭಾರತವು ಮಹಾ ಪ್ರಗತಿಯನ್ನು ಸಾಧಿಸಿದೆ ಎಂದೆನ್ನುವವರೆಲ್ಲರೂ ಪ್ರಪಂಚದ ರಾಜಕೀಯ ಕ್ಷೇತ್ರದಲ್ಲಿ ಅಸಾಮಾನ್ಯವಾದ ಅತ್ಯದ್ಭುತವಾದ ಯಶಸ್ಸೆಂದು ಇದನ್ನು ಕೊಂಡಾಡುತ್ತಾರೆ ಆದರೆ ಅದೇ ಸಮಯಕ್ಕೆ ದೇಶದೊಳಗಿರುವ ಕೆಲವು ವಿರೋಧಿ ಗುಂಪುಗಳು ಸ್ವಾತಂತ್ರ್ಯಾನುಭವದ ಇಷ್ಟು ಕಾಲದಲ್ಲಿ ನಾವು ನಿರ್ದಿಷ್ಟವಾದ ದಿಸೆಯಲ್ಲಿ ದೃಢವಾದ ಒಂದೂ ಹೆಜ್ಜೆಯನ್ನಿಡಲು ಅಸಮರ್ಥರಾದುದೇ ಆಶ್ಚರ್ಯವೆಂದೂ ಭಾರತೀಯ ಜನತೆಗೆ ಸ್ವರಾಜ್ಯ ಮತ್ತು ದಾಸ್ಯಗಳಲ್ಲಿನ ಭೇದ ಇನ್ನೂ ವರೆಗೆ ತಿಳಿಯದಿರುವುದೇ ಆಚ್ಚರಿಯೆಂದೂ ದೂರುತ್ತವೆ.

ಈ ಎರಡೂ ಪಕ್ಷಗಳ ದೃಷ್ಟಿಯಲ್ಲಿ ಕಳೆದ ಆರು ವರ್ಷಗಳ ಅವಧಿಯು ಮಹತ್ವಪೂರ್ಣವಾದುದೆಂಬ ಸಂಗತಿ ಮಾತ್ರ ಸ್ಪಷ್ಟಗೊಳ್ಳುತ್ತದೆ. ರಾಷ್ಟ್ರದ ಆಯುರ್ಮಾನವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಆರುವರ್ಷಗಳ ಕಾಲಾವಧಿ ಅತ್ಯಲ್ಪ; ಮತ್ತು ಅಷ್ಟರೊಳಗೆನೇ ನಾವು ಸಾಧಿಸಿದ ಮಹಾ ಕಾರ್ಯಗಳು ಭಾರತದ ರಾಜಕೀಯ ಸರಿಯಾದ ಮಾರ್ಗದಲ್ಲಿ ಸಾಗುತ್ತಿರುವುದಕ್ಕೆ ನಿದರ್ಶನ; ಸ್ವಾತಂತ್ರ್ಯ ದೃಢವಾಗಿ ಬೇರೂರುತ್ತಿರುವುದಕ್ಕೆ ಸಾಕ್ಷಿ. ಇನ್ನು ವಿರೋಧೀ ಗುಂಪಿನವರ ದೃಷ್ಟಿಯಿಂದ ವಿಚಾರಿಸಿದರೆ—ಸ್ವಾತಂತ್ರ್ಯ ದೊರೆತ ಪ್ರಾರಂಭದ ಆರು ವರ್ಷಗಳು ಮಗುವಿನ ಬಾಲ್ಯ ಕಾಲದಂತೆ. ಮುಂದಿನ ಜೀವಮಾನದ ಮೇಲೆ ಈ ಅವಧಿಯಲ್ಲಿ ದೊರೆತ ಸಂಸ್ಕಾರ ಮತ್ತು ಅನುಭವಗಳ ಮಹತ್ವ ಬಹಳ. ನಾವು ಯಾವುದೇ ಪ್ರಗತಿಶೀಲ ಕಾರ್ಯಕ್ರಮವನ್ನು ಕೈಗೊಂಡಿಲ್ಲ-ಚೀನಾ ಮತ್ತಿತರ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದ ಪ್ರಾರಂಭದಲ್ಲಿಯೇ ಸಾಧಿಸಿದ ಅಂಶಗಳ ಅಂಚನ್ನೂ ನಾವು ಮುಟ್ಟಲಿಲ್ಲವಲ್ಲ.

ಹೀಗೆ ತೋರಿಕೆಗೆ ಭಿನ್ನ ಭಿನ್ನ ವಾದಗಳು ಕಂಡು ಬಂದರೂ- ಭಾರತವು ಕಳೆದ ಆರು ವರ್ಷಗಳ ಸ್ವಾತಂತ್ರ್ಯ ಕಾಲದಲ್ಲಿ ಮಹತ್ವದ ಯಶಸ್ಸನ್ನು ಕೈಗೂಡಿಸಿದೆ ಎನ್ನುವ ಸಂಗತಿಯೇ ಹೆಚ್ಚು ಸ್ಪಷ್ಟಗೊಳ್ಳುತ್ತದೆ. ಸ್ವಾತಂತ್ರ್ಯವೇ ಸರ್ವಸ್ವವೆಂದು ಒಂದೊಮ್ಮೆ ಕೂಗಾಡುತಿದ್ದ ಜನಕ್ಕೆ –ಇಂದು ಪರಿಶ್ರಮವೇ ಎಲ್ಲವೂ ಎಂಬ ಪಲ್ಲವಿಯನ್ನು ಕಲಿಸಬೇಕಾಗಿದೆ. ದುಡಿಮೆಯೇ ದೇವರು ಎನ್ನುವ ಸಿದ್ಧಾಂತವನ್ನು ತಿಳಿಸಿ ಹೇಳಬೇಕಾಗದೆ. ಸ್ವಾತಂತ್ರ್ಯದಿಂದ ಬೇರೆ ದೇಶಗಳ ಪ್ರಗತಿಯ ಸೆರಗನ್ನು ಹಿಡಿದು ಸಾಗಲೂ ಭಾರತೀಯರಿಗೆ ಸಾಧ್ಯವಾಗಲಿಲ್ಲ ಎನ್ನುವವರ ವಾದ, ಸಾಧನೆಯ ಒರೆಗಲ್ಲಿಗೆ ಹಚ್ಚಿದರೆ, ಬೆಟ್ಟು ಚಿನ್ನವೆಂದು ಸ್ಪಷ್ಟಗೊಳ್ಳುತ್ತದೆ ಒಂದು ಮಗುವಿನ ದೃಷ್ಟಿಯಲ್ಲಿ ಅದರ ಭಾವೀ ಜೀವನದ ಮೇಲೆ ಇನ್ನೂ ಒಳ್ಳೆಯ ಪ್ರಭಾವವನ್ನು ಬೀರಬಲ್ಲ ಸಾವಿರಾರು ಸೌಕರ್ಯ ಮತ್ತು ಅನುಕೂಲತೆಗಳು ತನಗೆ ದೊರೆಯುವುದು ಅಗತ್ಯವೆಂದು ಇದ್ದೀತು ಆದರೆ ಮಕ್ಕಳನ್ನು ಸಾಕಿ ಸಲಹಿದ ಬೇರೆ ಹಿರಿಯರ ಅನುಭವದ ಮೇಲಿಂದ ಈ ಮಗುವಿನ ಹೆತ್ತವರು ಮಗುವಿನ ವಿಕಾಸಕ್ಕೆ ಒದಗಿಸಿದ ಸೌಲಭ್ಯಗಳು ತುಂಬ ಸಮಾಧಾನಕರವೆಂದು ಕಂಡರೆ- ನಾವು ಮಗುವಿನ ದೂರಿಗಿಂತಲೂ ಅನುಭವಿಕರ ಮಾತಿಗೆ ಅಧಿಕ ಬೆಲೆ ಕೊಡಬೇಕಾಗುವುದು.

ಆದುದರಿಂದ ಸ್ವಾತಂತ್ರ್ಯದ ಇಷ್ಟು ಸಮಯದಲ್ಲಿ ನಾವು ಸಾಧಿಸಿರುವುದು ಕಡಮೆಯು ಎಂಬ ಅತೃಪ್ತಿ ಬೇಡವೆಂದು ಹೇಳುತ್ತೇವೆ; ಅದರ ಬದಲು ಇಂದಿನ ವರೆಗಿನ ಮಹಾ ಸಾಧನೆಗಳನ್ನು ಕೈಗೂಡಿಸಿದೆವಲ್ಲಾ ಎಂಬ ಅಭಿಮಾನ ನಮಗಿರಬೇಕು. ಈ ಆತ್ಮ ವಿಶ್ವಾಸವೇ ನಮ್ಮನ್ನು ಅಭ್ಯುದಯದ ಒಂದೊಂದೇ ಮೆಟ್ಟಲನ್ನು ಏರಿಸಿ, ಸಮೃದ್ಧಿಯ ಶಿಖರವನ್ನು ಮುಟ್ಟಿಸಬಲ್ಲುದು. ದುರಭಿಮಾನವು ಸಲ್ಲದಾದರೂ-ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸಗಳು ವ್ಯಕ್ತಿಗಾಗಲೀ ರಾಷ್ಟ್ರಕ್ಕಾಗಲೀ ಶ್ರೇಯಸ್ಸನ್ನೇ ಮಾಡುತ್ತವೆ. ಭಾರತೀಯರಾದ ನಾವು ಸ್ವರಾಜ್ಯದ ಆರು ವರ್ಷಗಳ ಅನುಭವ "ಕಹಿ" ಎಂದು ತಿಳಿದುಕೊಳ್ಳದೆ - ಅವ್ಯಾಯ ಮಾನವಲ್ಲದಿದ್ದರೂ ಸಹನೀಯವೆಂದು ಭಾವಿಸೋಣ.

ಸ್ಥೂಲ ವಿಮರ್ಶೆಗೆ ನಮ್ಮ ಸಾಧನೆಗಳನ್ನು ಗುರಿಪಡಿಸಿದರೆ— ಪಂಚವಾರ್ಷಿಕ ಯೋಜನೆ ಭಾರತದ ಭವಿಷ್ಯ ನಿರ್ಮಾಣ ಕಾರ್ಯದಲ್ಲಿ ಒಂದು ಮೈಲುಕಲ್ಲಿನಂತಿದೆ. ಇನ್ನೂ ಐದಾರು-ಹತ್ತು ಹದಿನೈದು ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗಿ ಕೈಗೂಡದ ಹೊರತು ನಮ್ಮ ಜೀವನ ಮಟ್ಟವು ಅಮೇರಿಕಾದ ಅಂತಸ್ತನ್ನು ಮುಟ್ಟುವುದು ಸಾಧ್ಯವಿಲ್ಲವಾದರೂ—ಆ ಆಶೆಯನ್ನಿಟ್ಟುಕೊಂಡು ರಚಿಸುವ ಭವನದ ಬುನಾದಿಯಂತೆ ಈ ಪ್ರಥಮ ಯೋಜನೆ ಇದೆ. ಇದನ್ನು ನಾವು ಸಾಧಿಸಿಕೊಂಡರೆ, ಈಗಿನ ಯೋಜನೆಯ ಯಾಶಸ್ಸಿಗಳ ಮೇಲೆಯೇ ಭಾರತದ ನವನಿರ್ಮಾಣ ಕಾರ್ಯವು ಅವಲಂಬಿಸಿರುವುದು ಚೆನ್ನಾಗಿ ವ್ಯಕ್ತಗೊಳ್ಳುತ್ತದೆ. ಯೋಜನೆಯ ಎರಡೂವರೆ ವರ್ಷಗಳ ಅವಧಿ ಈಗಾಗಲೇ ಮುಗಿದಿರುತ್ತದೆ— ಯೋಜನಾ ಆಯೋಗದ ವರದಿಯ ಮೇಲಿಂದ ಹೇಳುವುದಾದರೆ ದೀರ್ಘಾವಧಿಯ ಯೋಜನೆಗಳಲ್ಲಿ ಉಳುಮೆಯ ಕೆಲಸವು ಈಗ ಮುಗಿದಿರುತ್ತದೆ, ಮತ್ತು ಅವುಗಳ ಪೂರ್ಣ ಪ್ರಯೋಜನವು ನಿರ್ಧರಿಸಿದಂತೆ ಯೋಜನೆ ಸಂಪೂರ್ಣ ಮುಗಿದಾಗಲೇ ನಮಗೆ ದೊರೆಯಬಲ್ಲುದು. ಇವುಗಳಲ್ಲಿ ನದೀ ಯೋಜನೆಗಳು ಬರುತ್ತವೆ ಅಣೆಕಟ್ಟು ಮತ್ತು ವಿದ್ಯುದುತ್ಪಾದನಾ ಕೇಂದ್ರಗಳನ್ನು ರಚಿಸುವ ಪ್ರಯತ್ನವು ಭರದಿಂದ ನಡೆದಿದೆ—ಈಗಾಗಲೇ ಪ್ರಥಮ ಘಟ್ಟವು ಮುಗಿದು, ದ್ವಿತೀಯಾಧ್ಯಾಯ ತೊಡಗಿರುವುದು. ಈ ವರ್ಷದ ಸಾಧನೆಗಳಲ್ಲಿ ತುಂಗಭದ್ರಾ ಅಣೆಕಟ್ಟು, ಕಕ್ರಪಾರಾ ಅಣೆಕಟ್ಟು, ತಿಲೈಯಾ ಅಣೆಕಟ್ಟು ಮುಂತಾದವುಗಳಿವೆ. ದಾಮೋದರ ನದೀ ಕಣಿವೆಯಲ್ಲಿ ಬೊಕಾರೋ ವಿದ್ಯುದುತ್ಪಾದನಾ ಕೇಂದ್ರ ಇತ್ಯಾದಿಗಳು ತಲೆ ಎತ್ತಿಕೊಂಡಿವೆ.

ಅಭಿವೃದ್ಧಿಯು ಚೆನ್ನಾಗಿ ದೃಷ್ಟಿಗೋಚರವಾಗುವುದು ಉಳಿದ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲೆಂದು ಹೇಳಬಹುದು.—ಯೋಜನಾ ಆಯೋಗ ಹಾಗೂ ರಿಜರ್ವ ಬೇಂಕಿನ ವರದಿಗಳು ಭಾರತದಲ್ಲಿ ಉತ್ಪಾದನೆಯು ಹೆಚ್ಚಿಕೊಂಡಿದೆ ಎಂಬುದನ್ನು ಸ್ಪಷ್ಟವಾದ ಅಂಕೆಸಂಖ್ಯೆಗಳ ಮೂಲಕ ಪ್ರಕಟಪಡಿಸಿರುತ್ತವೆ. ಸಕ್ಕರೆ, ಸಣಬು, ಹತ್ತಿ ಮುಂತಾದವುಗಳಲ್ಲಿ ಉತ್ಪಾದನೆಯು ಹೆಚ್ಚಿಕೊಂಡಿದೆ. ವ್ಯವಸಾಯಕ್ಕೆ ಒಳಪಟ್ಟ ಪ್ರದೇಶದ ಪ್ರಮಾಣವೂ ಅಧಿಕವಾಗಿದೆ. ಆಹಾರ ಧಾನ್ಯಗಳ ಉತ್ಪಾದನೆಯು ಗಣನೀಯ ಪ್ರಗತಿಯನ್ನು ಸಾಧಿಸಿರುತ್ತದೆ ಗೋಧಿಗಿಂತಲೂ ಅಕ್ಕಿಯು ಅಧಿಕ ಬೆಳೆದಿರುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಜವುಳಿ, ಸಿಮೆಂಟು, ಉಕ್ಕು ಮತ್ತು ಕಬ್ಬಿಣ ಮುಂತಾದ ಆವಶ್ಯಕ ವಸ್ತುಗಳಲ್ಲಿ ಮಾತ್ರವಲ್ಲ—ಬೇರೆ ನೂರಾರು ನಮೂನೆಯ ಕೈಗಾರಿಕೆಗಳಲ್ಲೂ ಅಧಿಕ ಉತ್ಪಾದನೆಯಾದುದು ಕಂಡುಬರುತ್ತದೆ. ಸರಕಾರದ ಕೈಗಾರಿಕಾ ನೀತಿಯು ಅನೇಕ ಹೊಸ ಹೊಸ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಟ್ಟಿರುತ್ತದೆ. ವಿದೇಶೀ ಪ್ರಯತ್ನಗಳಿಗಿಂತಲೂ ದೇಶೀಯ ಸಾಹಸಗಳು ಸ್ಪೃಹಣೀಯವಾಗಿವೆ. ಸರಕಾರವೇ ಸ್ವತಃ ಕೆಲವು ಉದ್ದಿಮೆಗಳ ಸ್ಥಾಪನೆ ಮಾಡಿ ರಾಷ್ಟ್ರಾಭ್ಯುದಯದಲ್ಲಿ ಸಹಯೋಗ ನೀಡಿರುತ್ತದೆ ರಾಷ್ಟ್ರೀಯ ಪ್ರಯೋಗ ಶಾಲೆಗಳನ್ನು ದೇಶದಲ್ಲಿ ವ್ಯವಸ್ಥಿತ ರೀತಿಯಲ್ಲಿ ನೆಲೆಗೊಳಿಸುವ ಕೆಲಸವು ಕಳೆದ ವರ್ಷ ಸಂಪೂರ್ಣವಾಗಿ ಮುಗಿದಿರುತ್ತದೆ—ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿಯ

(೧೪ನೇ ಪುಟ ನೋಡಿರಿ)

SUKHA NIVAS

An up-to-date & Premier Boarding & Lodging House

UDIPI.

ಸುಖನಿವಾಸ

ಹೆಸರೇ ಸೂಚಿಸುವಂತೆ ಸುಖಕರ ಉಪಹಾರ, ಭೋಜನ ಹಾಗೂ ಉಡುಪಿಯ ಅತಿ ಪುರಾತನ ವಸತಿಗೃಹ.

1932ರಲ್ಲಿ ಸ್ಥಾಪಿಸಲ್ಪಟ್ಟು ಇದೀಗ 21 ವರುಷಗಳಿಂದ ಅವಿರತವಾಗಿ ಜನತಾಸೇವೆಯನ್ನು ಮಾಡುತ್ತ ಬಂದಿರುವುದು. ಈ ಸೇವೆಯಿಂದಾಗಿಯೇ 'ಸುಖನಿವಾಸ'ವೆಂಬ ಅಚ್ಚು ಮೆಚ್ಚಿನ ಹೆಸರು ಎಳೆ ಬಾಲಕರ ಮೊದಲ್ಗೊಂಡು ವಯೋವೃದ್ಧರಿಗೂ ತಿಳಿದೇ ಇದೆ.

ಸುಖನಿವಾಸ

ನಿಮ್ಮನ್ನು ಸದಾ ಸ್ವಾಗತಿಸುತ್ತಿರುವುದು.

ಕೋರ್ಟು ರಸ್ತೆ,	ಸ್ಥಾಪನೆ:	ಕೊಡಿಯಾಲಬೈಲು
ಉಡುಪಿ.	1932	ಮಂಗಳೂರು.

ಪಡ ಭೂಮಿಯ ಸಾಗುವಳಿ

ಕೇಂದ್ರ ಟ್ರಾಕ್ಟರು ಸಂಘದ ಯಶಸ್ಸು

ಭೂಮಿಯನ್ನು ಉತ್ತು ಬಿತ್ತುವುದಕ್ಕೆ ಈಚೆಗೆ ಟ್ರಾಕ್ಟರುಗಳನ್ನು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿರುವರೆಂದು ಕೇಳುತ್ತೇವೆ. ನಮ್ಮ ದೇಶದಲ್ಲಿ ಟ್ರಾಕ್ಟರುಗಳನ್ನು ಬಳಸಿಕೊಂಡರೆ, ಎತ್ತು-ಕೋಣಗಳು ನಿರುಪಯೋಗಿಯಾಗುವವೆಂಬ ಒಂದೆ, ಸಮಸ್ಯೆಯನ್ನು ಬಿಡಿಸಲು ಹೋಗಿ ಬೇರೆ ಹಲವು ಸಮಸ್ಯೆಗಳನ್ನು ಆಹ್ವಾನಿಸಿದಂತಾಗುವುದೆಂದೂ ಆಕ್ಷೇಪ ನೀಡುವವರುಂಟು. ಆದರೆ ಭಾರತ ಸರಕಾರದ ಕೃಷಿ ಇಲಾಖೆಯ ಅಧೀನವಿರುವ ಕೇಂದ್ರ ಟ್ರಾಕ್ಟರು ಸಂಘವು "ಎತ್ತುಗಳ ವಿರುದ್ಧ ಟ್ರಾಕ್ಟರುಗಳ ವಿದ್ರೋಹ" ಎಂಬ ಪ್ರಶ್ನೆಯನ್ನೆ ಸ್ಪರ್ಶಿಸುವುದಿಲ್ಲ. ಇದರ ಕಾರಣವು ಸರಳವಾಗಿದೆ. ಈ ಸಂಘವು ಟ್ರಾಕ್ಟರುಗಳ ಮೂಲಕ ಇದುವರೆಗೆ ಸಾಗುವಳಿಗೆ ಯೋಗ್ಯವಾಗಿ ಪರಿವರ್ತಿಸಿದ ಸುಮಾರು ಹತ್ತು ಲಕ್ಷ ಎಕ್ರೆ ಬಂಜರು ಭೂಮಿಯನ್ನು ಭಾರತದ ಪ್ರಾಚೀನ ಪರಂಪರೆಗನುಸಾರವಾಗಿ ಕೆಲಸ ಮಾಡುವ ಎತ್ತು-ನೇಗಿಲುಗಳಿಂದ ಕದಗೊಳಿಸುವುದು ಸಾಧ್ಯವಿರಲಿಲ್ಲ.

ಪಡಭೂಮಿಯ ಮೇಲೆ ದಟ್ಟನಾದ ಬೀಣಿಹುಲ್ಲು ಬೆಳೆದಿರುತ್ತದೆ; ಮತ್ತು ಹೀಗೆ ಹುಲ್ಲುಬೆಳೆದು ನಿರುಪಯುಕ್ತವಾದ ಪ್ರದೇಶವು ವರ್ಷವರ್ಷಕ್ಕೂ ವ್ಯಾಪಕಗೊಳ್ಳುತ್ತಾ ಹೋಗುತ್ತದೆ. ಕೇಂದ್ರ ಟ್ರಾಕ್ಟರು ಸಂಘವು ದಕ್ಷತೆಯಿಂದ ಕೆಲಸಮಾಡಿ ಈ ಪಿಡುಗನ್ನು ತಡೆಯುತ್ತಿದೆ.

ಏಳು ವರ್ಷಗಳ ಅವಧಿಯಲ್ಲಿ ಭೋಪಾಳ ಮಧ್ಯ ಪ್ರದೇಶ, ಮಧ್ಯ ಭಾರತ ಮತ್ತು ಉತ್ತರ ಪ್ರದೇಶಗಳಲ್ಲಿ ಮೂವತ್ತು ಲಕ್ಷ ಎಕ್ರೆ ಪಡ ಭೂಮಿಯನ್ನು ಸಾಗುವಳಿಗೆ ಯೋಗ್ಯ ಮಾಡಬೇಕೆಂಬುದೇ ಈ ಸಂಘವು ೧೯೪೭-೪೮ರಲ್ಲಿ ಸೈನ್ಯಖಾತೆಯಿಂದ ೧೮೨ ಟ್ರಾಕ್ಟರುಗಳನ್ನು ತೆಗೆದುಕೊಂಡುದರ ಉದ್ದೇಶ. ನಾಲ್ಕು ವರ್ಷ ಕಾಲ ಈ ಸಲಕರಣೆಯನ್ನು ಉಪಯೋಗಿಸಿ ಕೆಲಸ ನಡೆಯಿತು. ಆದರೆ ೧೯೫೦-೫೧ರ ಸುಮಾರಿಗೆ ಹಳೆಯ ಟ್ರಾಕ್ಟರುಗಳಲ್ಲಿ ಹೆಚ್ಚಿನವು ನಿರುಪಯುಕ್ತವೆನಿಸಿದುವು. ಆಗ ಹಳೆಯವುಗಳೊಟ್ಟಿಗೆ ಕೆಲಸಮಾಡಲು ೧೫೦ ಹೊಸ ಟ್ರಾಕ್ಟರುಗಳನ್ನು ಸರಕಾರ ಖರೀದಿ ಮಾಡಿತು. ೧೯೫೦-೫೧ನೇ ಸಾಲಿನಲ್ಲಿ ಇನ್ನೂ ೭೦ ಟ್ರಾಕ್ಟರುಗಳನ್ನು ಕೊಂಡು ಕೊಂಡು, ಸಂಘದ ಟ್ರಾಕ್ಟರು ಬಲವನ್ನು ೨೪೦ಕ್ಕೆ ಏರಿಸಿದರು.

ಕಳೆದ ಆರು ವರ್ಷಗಳಲ್ಲಿ ತನ್ನ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ಈ ಸಂಘ ನಿರ್ವಹಿಸಿದ-ದರಿಂದಲೇ- ಇಂದು ಅಂಡಮಾನು ದ್ವೀಪಗಳಲ್ಲಿ ಕಾಡುಗಳನ್ನು ಸವರಿ, ಭೂಮಿಯನ್ನು ಸಾಗುಮಾಡುವ ವಿಷಯದಲ್ಲಿ ಸಲಹೆ ನೀಡಲು ಒಬ್ಬ ಇಂಜೀನೀಯರರನ್ನು ಆಮಂತ್ರಿಸುವಂತಾಯಿತು. ಈ ರೀತಿಯ ಆಮಂತ್ರಣಗಳನ್ನು ಸಂಘ ಆವಾಗಲೂ ಬೇರೆ ಬೇರೆ ಕಡೆಯಿಂದ ಪಡೆಯುತ್ತಿದೆ.

೨೪೦ ಟ್ರಾಕ್ಟರುಗಳಲ್ಲಿ ೩೦ ಗಾಡಿಗಳನ್ನು ಸವರಲು ಉಪಯೋಗಿಸಲ್ಪಡುತ್ತವೆ ಈ ಮಾದರಿಯ ೧೫ ಟ್ರಾಕ್ಟರುಗಳ ಒಂದು ಗುಂಪು ದಿನವೊಂದಕ್ಕೆ ೪೦ ಎಕ್ರೆ ಬೀಳುಭೂಮಿಯನ್ನು ಹದಗೊಳಿಸಬಲ್ಲುದು. ಇದು ವರೆಗೆ ೩,೭೦೦೦ ಎಕ್ರೆ ಕಾಡು ನಾಡಾಗಿ ಪರಿವರ್ತನೆ ಹೊಂದಿದೆ. ಲೋಕದಲ್ಲಿಯೇ ಕಾಡುಗಳನ್ನು ಸವರುವ ಟ್ರಾಕ್ಟರು ಗುಂಪುಗಳಲ್ಲಿ ನಮ್ಮ ದೇಶದ ಗುಂಪು ದೊಡ್ಡದು ಇವರ ಯಂತ್ರೋಪಕರಣಗಳಿಗೆ ಏಳೂವರೆ ಕೋಟಿ ರೂಪಾಯಿ ತಗಲಿದೆಯಾದ —ವರ್ಷವರ್ಷವೂ ಅದನ್ನು ಸುಸ್ಥಿತಿಯಲ್ಲಿಡುವುದಕ್ಕೋಸ್ಕರ ಎರಡೂವರೆ ಕೋಟಿ ರೂಪಾಯಿ ವೆಚ್ಚವಾಗುವುದು.

ಕೇಂದ್ರ ಸಂಘವು ಹದಮಾಡಿದ ಭೂಮಿಯಲ್ಲಿ ಹೆಚ್ಚಿನವು ಈಗ ಸಾಗುವಳಿಯಲ್ಲಿವೆ. ಭೋಪಾಳದಲ್ಲಿ ಪ್ರಥಮ ವರ್ಷದ ಟ್ರಾಕ್ಟರು ಕೆಲಸವು ಮುಗಿದ ಬಳಿಕ, ಅಲ್ಲಿ ಗೋಧಿಯ ಫಸಲು ಮೂರು-ನಾಲ್ಕು ಪಟ್ಟು ಅಧಿಕಹೊಂದಿತು. ನಮ್ಮ ದೇಶದ ನೇಗಿಲು-ಎತ್ತುಗಳಿಂದ ಸಾಧ್ಯವೇ ಇಲ್ಲದ ರೀತಿ ಟ್ರಾಕ್ಟರುಗಳು ಅತ್ಯಂತ ಆಳವಾಗಿ ಹೂಳುತ್ತಿರುವುದೇ ಇದಕ್ಕೆ ಕಾರಣ ಸಾಮಾನ್ಯವಾಗಿ ೧೪ ಅಂಗುಲ ಆಳವಾಗಿ ಟ್ರಾಕ್ಟರುಗಳು ಹೂಳುತ್ತವೆ; ಆದರೆ ಅಗತ್ಯ ಬಿದ್ದಲ್ಲಿ ೨೮ ಅಂಗುಲಗಳಷ್ಟು ಆಳ ನೆಲವನ್ನು ಮಗುಚಿ ಹಾಕಲು ಟ್ರಾಕ್ಟರುಗಳಿಗೆ ಸಾಧ್ಯವುಂಟು. ಇದಕ್ಕೆ ಉಪಯೋಗಿಸುವ ಒಂದು ಟ್ರಾಕ್ಟರು ತಾಸಿಗೆ ಎಂಟು ಕೊಯ್ಲಿನಷ್ಟು ಪ್ರದೇಶವನ್ನು ಹದನು ಮಾಡಬಲ್ಲುದು.

ಈ ಯಂತ್ರಗಳ ಕೆಲಸದ ಆಯುಮಾನ ಹತ್ತು ಸಾವಿರ ತಾಸುಗಳು. ಈಗಾಗಲೇ ೭೦೦೦ ತಾಸುಗಳು ಸಂದುಹೋಗಿವೆ ಕೇಂದ್ರ ಸಂಘವು "ಲಾಭವೂ ಇಲ್ಲ-ನಷ್ಟವೂ ಇಲ್ಲ" ಎಂಬ ತಳಹದಿಯ ಮೇಲೆ ಕೆಲಸ ಮಾಡುತ್ತಿರುವುದರಿಂದ, ಒಂದು ಎಕ್ರೆ ಭೂಮಿಯ ಮೇಲೆ ಟ್ರಾಕ್ಟರು ಓಡಿಸಲು ೭೦ ರೂಪಾಯಿ ವೆಚ್ಚಬರುತ್ತದೆ. ರಾಜ್ಯ ಸರಕಾರವು ಈ ಹಣವನ್ನು ಕೇಂದ್ರಸಂಘಕ್ಕೆ ಇದು ಕಂತುಗಳಲ್ಲಿ ಪಾವತಿಮಾಡುವುದು; ಮತ್ತು ರಾಜ್ಯ ಸರಕಾರಕ್ಕೆ ರೈತರು ಇದೇ ರೀತಿ ಮರು ಪಾವತಿ ಮಾಡುವರು.

ಈ ಸಂಘದ ಚಟುವಟಿಕೆಯ ಪರಿಣಾಮವಾಗಿ ವರ್ಷಕ್ಕೆ ಎರಡೂವರೆ ಲಕ್ಷ ಎಕ್ರೆ ಭೂಮಿಯು ಹೊಸ ಕೃಷಿ ಕ್ಷೇತ್ರವಾಗಿ ಪರಿವರ್ತನೆಹೊಂದುತ್ತಿದೆ. ಸುಮಾರು ೫ ಲಕ್ಷ ಟನ್ನು ಆಹಾರ ಧಾನ್ಯಗಳು ಹೆಚ್ಚು ಬೆಳೆಯುವಂತಾಗಿವೆ. ಇವಲ್ಲದೆ ಹಾಗೆಯೇ ಬಿಡುತ್ತಿದ್ದರೆ ದಿನ ದಿನಕ್ಕೂ ವ್ಯಾಪಕವಾಗಿ ಹಬ್ಬುಬರುವಾಗಿದ್ದ ಬೀಣಿ ಹುಲ್ಲಿನ ಬೆಳವಣಿಗೆ ತಡೆಯಲ್ಪಟ್ಟಿದೆ.

(೧೨ D ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ.

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ.

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ.

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

NAVAYUGA

WIDELY CIRCULATED KANNADA WEEKLY,

UDIPI, S. INDIA.

Founder: Sri. A. B. SHETTY,

Minister for Public Health, Government of Madras.

ನವಯುಗ

ಅತ್ಯಧಿಕ ಪ್ರಸಾರವುಳ್ಳ ವಾರಪತ್ರಿಕೆ.

ಸ್ಥಾಪಕರು— ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ ಶೆಟ್ಟರು.

ಸಂಪಾದಕ— ಕೆ. ಹೊನ್ನಯ್ಯ ಶೆಟ್ಟಿ.

ವರ್ಷ ೩೨] ಉಡುಪಿ 13-8-53 [ವಾರ ೪೯

ಸಹನೆ ಇರಲಿ!

ಸ್ವತಂತ್ರ ಭಾರತವು ತನ್ನ ಇನ್ನೊಂದು ವರ್ಷದ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ತಯಾರಿಸಿ, ವಿಮರ್ಶಿಸುವ ದಿನವಿಂದು ಪ್ರಾಪ್ತವಾಗಿದೆ-ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದಆಚರಿಸುವಾಗ, ನಾವು ಆತ್ಮ ವಿಮರ್ಶೆಯನ್ನೂ ಮಾಡಿಕೊಳ್ಳಬೇಕೆಂದು ಈ ದಿನ ಸೂಚಿಸುತ್ತದೆ. ಆರು ವರ್ಷಗಳ ಸ್ವರಾಜ್ಯ ಕಾಲದಲ್ಲಿ ಜನತೆ ಏನು ಸುಖಕಂಡಿದೆ? ಮತ್ತು ಈ ಅವಧಿಯಲ್ಲಿ ಜನತೆನೊಂದ ಬಗೆಯಾದರೂ ಯಾವುದು? ಎಂಬುದನ್ನು ಗೊತ್ತುಹಚ್ಚಿ, ನಮ್ಮ ಪ್ರಗತಿಯ ಮೊತ್ತವನ್ನು ಕಂಡು ಹಿಡಿಯುವುದು ಇಂದಿನ ಕೆಲಸ. ಇದನ್ನು ರಾಷ್ಟ್ರದಪ್ರತಿಯೊಬ್ಬನಾಗರಿಕನೂ ಒಬ್ಬೊಬ್ಬನಾಗಿ ಮಾಡಲು ಸಾಧ್ಯ- ಸರಕಾರವು ಜನತೆಯ ಚುನಾಯಿತ ಪ್ರತಿನಿಧಿಯಾಗಿ ಕೆಲಸಮಾಡುವ ಕಾರ್ಯಾಂಗವಾಗಿರುವುದರಿಂದ, ಸರಕಾರ ಒಂದು ಕೆಲಸ ಮಾಡಲಿಲ್ಲವಾದರೆ, ಅಥವಾ ಮಾಡಿದ ಕೆಲಸ ಸರಿಯಿಲ್ಲವಾದರೆ, ಅದರ ಹೊಣೆಗಾರಿಕೆ ಕೆಲ ಮಟ್ಟಿಗೆ ಜನತೆಗೆನೇ ಸೇರಿದೆ. ದೇವರ ದಯೆಯಿಂದ ಸದ್ಯ ನಮ್ಮ ಸರಕಾರದ ಸೂತ್ರವನ್ನು ಅತ್ಯಂತ ದಕ್ಷರಾದ ಆಡಳಿತಗಾರರು ಕೈಯಲ್ಲಿ ತೆಗೆದುಕೊಂಡಿರುವರು. ಆಂತರಿಕ ಸುವ್ಯವಸ್ಥೆಯನ್ನೂ ವಿದೇಶಗಳೊಡನೆ ಸ್ನೇಹ ಸಂಪರ್ಕವನ್ನೂ ನಮ್ಮ ದೇಶವು ಈ ಅಲ್ಪಾವಧಿಯಲ್ಲಿ ಸ್ಥಾಪಿಸಿಕೊಂಡಿದೆ. ಇದು ನಮ್ಮ ಮಹಾ ಸಾಧನೆಗಳಲ್ಲೊಂದು. ಹಾಗೆಯೇ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವ ಕಾರ್ಯಕ್ರಮಗಳನ್ನು ಸರಕಾರವು ಜನತೆಯ ಪ್ರತಿನಿಧಿಯಾಗಿ ಕೈಗೊಂಡಿರುತ್ತದೆ. ಈ ಕಾರ್ಯಕ್ರಮಗಳು ಯಶಸ್ವಿಗೊಳ್ಳುವಂತೆ ಜನತೆಯು ಸಂಪೂರ್ಣ ಸಹಕಾರ ನೀಡಬೇಕಾದುದು ಕರ್ತವ್ಯ. ಪಂಚವಾರ್ಷಿಕ ಯೋಜನೆಯಲ್ಲಿ ಸಹ ಖಾಸಗೀ ಕ್ಷೇತ್ರಗಳು ಸಾಧಿಸಬೇಕಾದ ಪ್ರಗತಿಯ ಅಂಶ ಬಹಳ ಉಂಟು. ಸರಕಾರವು ಈ ಪ್ರಗತಿ ಸಾಧನೆಗೆ ಪೋಷಕವಾದ ನೀತಿಯನ್ನು ಅನುಸರಿಸಿ, ಉದ್ದೇಶ ನೆರವೇರುವುದಕ್ಕೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಬಹುದೇ ಹೊರತು — ಕಾರ್ಯದಲ್ಲಿ ಈ ಹೆಚ್ಚಳವನ್ನು ಕೈಗೂಡಿಸಲಾರದು. ಇದನ್ನು ಖಾಸಗಿ ಉದ್ದಿಮೆದಾರರು ಮಾಡಬೇಕು. ಹಾಗೆಯೇ ಕೃಷಿ ಮಂಡಳದ ಅಭಿವೃದ್ಧಿಯನ್ನು ಸಾಧಿಸುವುದು ವ್ಯವಸಾಯ ನಿರತರಾದ ನಾಗರಿಕರ ಕರ್ತವ್ಯ-- ಸರಕಾರ ಕೆಲಮಟ್ಟಿಗೆ ಸೌಕರ್ಯಗಳನ್ನು ಒದಗಿಸಬಹುದು, ಅಷ್ಟೆ. ಇದೆಲ್ಲವನ್ನು ನೋಡಿದರೆ- ರಾಷ್ಟ್ರೀಯ ಪುನರ್ರಚನೆಯ ವಿಷಯದಲ್ಲಿ ಸರಕಾರದ ಹೊಣೆಗಾರಿಕೆಗಿಂತಲೂ ಜನತೆಯ ಉತ್ತರದಾಯಿತ್ವವೇ ಅಧಿಕವೆಂದು ಗೊತ್ತಾಗುವುದು. ಸ್ವಾತಂತ್ರ್ಯದೊಡನೆ ಹುಟ್ಟಿಕೊಂಡ ಈ ಕರ್ತವ್ಯಭಾರವನ್ನು ಅಸಹನೀಯವಾಗಿ ಭಾವಿಸದೆ, ಸಂತೋಷದಿಂದ ಅದಕ್ಕೆ ಹೆಗಲುಗೊಡುವ ವಿಶಾಲವಾದ ಮನಸ್ಸು ನಮ್ಮದಾಗಬೇಕು. ನಮ್ಮದೆನ್ನುವುದು ಏನಾದರೂ ಇರಬೇಕಾಗಿದ್ದರೆ, ಅದನ್ನು ಸಂಪಾದಿಸಲೂ ಕಾಯ್ದುಕೊಳ್ಳಲೂ ಸಾಕಷ್ಟು ಕಷ್ಟ ಪಡಲೇ ಬೇಕಲ್ಲವೆ? ಸ್ವಾತಂತ್ರ್ಯದ ಮಾತೂ ಅಷ್ಟೇ! ಈ ಭಾವನೆಯು ನಮಗೆ ಸುಖಪ್ರದವೆಂದು ಮೊದಮೊದಲು ಗೋಚರಿಸಲಿಕ್ಕಿಲ್ಲ-೧೫೦ ವರ್ಷಗಳ ದೀರ್ಘಾವಧಿಯಲ್ಲಿ ದಾಸ್ಯದ ವಾತಾವರಣದಲ್ಲಿ ನಮ್ಮ ಪೀಳಿಗೆ ಬೆಳೆದು ಬಂದಿರುವುದರಿಂದ, ಬದಲಾದ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವುದು ಬಹಳ ತ್ರಾಸದಾಯಕವಾಗಿ ಪರಿಣಮಿಸಿದೆ. ಬಹುಶಃ ನಮ್ಮ ಪೀಳಿಗೆಯು ಮುಗಿದು ಹೊಸ ಪೀಳಿಗೆಯ ಕಾಲ ತೊಡಗುವಾಗ ಭಾರತೀಯರು ತಮ್ಮ ಹಿರಿಯರ ಸ್ವಾತಂತ್ರ್ಯ ಹೋರಾಟವನ್ನು ಭಕ್ತಿ ಹಾಗೂ ಶ್ರದ್ಧೆಯಿಂದ ಕಾಣುವರೇನೋ! ನಮ್ಮ ಹಿರಿಯರು ಹಾಗೂ ಸಮಕಾಲೀನರಾದ ಧುರೀಣರು ರಾಷ್ಟ್ರಕ್ಕಾಗಿ ಮಾಡಿದ ತ್ಯಾಗ ಹಾಗೂ ನಡೆಸಿದ ಆಂದೋಲನದ ಮಹತ್ವವನ್ನು ಮುಂದಿನ ಜನಾಂಗ ಯಥಾರ್ಥ ದೃಷ್ಟಿಯಿಂದ ಗ್ರಹಿಸಿಕೊಂಡೀತು. ಅವರ ಮನೋಭೂಮಿಕೆಯಲ್ಲಿ ನಮಗೂ ಉನ್ನತ ಸ್ಥಾನ ದೊರೆಯುವಂತಾಗಬೇಕಾದರೆ--ಇಂದಿನ ವಿಷಮ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯಲು ನಾವು ಸಂಕಲ್ಪಬದ್ಧರಾಗಬೇಕು. ಸೌಭಾಗ್ಯದಿಂದ ನಮ್ಮ ರಾಷ್ಟ್ರ ನೌಕೆಯನ್ನು ಈ ಬಿರುಗಾಳಿಯ ನಡುವೆಯೂ ಸುರಕ್ಷಿತವಾಗಿ ಕೊಂಡೊಯ್ಯಬಲ್ಲ ಧುರೀಣರು ನಮಗೆ ದೊರೆತಿದ್ದಾರೆ-ಅವರ ಮಾರ್ಗದರ್ಶನದ ಮೇಲೆ ಸಂಪೂರ್ಣ ಭರವಸೆ ಇಟ್ಟು ನಾವು ಭುಜಕ್ಕೆ ಭುಜಕೊಟ್ಟು ನಡೆದರೆ, ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ರಾಜಗೋಪಾಲಾಚಾರಿಯವರು ಹೇಳಿದಂತೆ "ದೇವರ ದಯೆಯಿಂದ ನಮಗೆ ಸ್ವಾತಂತ್ರ್ಯ ದೊರೆಯಿತು; ಈ ಸ್ವಾತಂತ್ರ್ಯದ ಭಾರವನ್ನು ಹೊರಲು ನೆಹರೂರಂಥ ಧುರೀಣರೂ ದೊರೆತರು" ನೆಹರೂ ಕಾಂಗ್ರೆಸಿಗರೆಂದಲ್ಲ- ಜನನಾಯಕರೆಂದು ಭಾವಿಸಿ ಅವರ ನೆರಳನ್ನು ಅನುಸರಿಸೋಣ! ಮುಂದಿನ ವರ್ಷಗಳಲ್ಲಿ ನಮ್ಮ ಕಷ್ಟಪರಂಪರೆಗಳು ಕಡಿಮೆಯಾಗಿ, ಸುಖಾನುಭವವು ಹೆಚ್ಚಲೆಂದು ಆಶಿಸೋಣ!

ಭಾರತೀಯರು

ಸ್ವತಂತ್ರ ಭಾರತವನ್ನು ಇದಿರಿಸಿರುವ ಕೆಲವು ಪ್ರಾಮುಖ್ಯ ಸಮಸ್ಯೆಗಳ ವಿಚಾರವನ್ನು ಈ ಬರೆಹದಲ್ಲಿ ಮಾಡಬೇಕೆಂದು ತೋರಿದೆ - ನಾವು ಸಾಧಿಸಿರುವ ಕೆಲಸವು ಜಗತ್ತಿನ ಬೇರೆ ರಾಷ್ಟ್ರಗಳು ಇಷ್ಟು ಕಡಿಮೆ ಅವಧಿಯಲ್ಲಿ ಕೈಗೂಡಿಸಿದ ಸಂಗತಿಗಳಿಗಿಂತ ಹೆಚ್ಚಾಗಿದ್ದರೂ – ನಾವಿನ್ನೂ ಕೆಲವೊಂದು ಸಮಸ್ಯೆಗಳ ಅಂಚನ್ನು ಮುಟ್ಟಿಲ್ಲವೆಂಬ ಮಾತೂ ಅಷ್ಟೇ ನಿಜ. ಆದರೆ ಇಷ್ಟರಿಂದಲೇ ನಾವು ಹತಾಶರಾಗಬಾರದು; ನಮ್ಮಲ್ಲಿರುವ ಕುಂದುಕೊರತೆಗಳ ಪೂರ್ಣ ಜ್ಞಾನ ನಮ್ಮ ಆತ್ಮವಿಶ್ವಾಸವನ್ನು ಹಾರಿಸಿಬಿಡಬಾರದು. ಬದಲಿಗೆ ಪೂರ್ಣಬೋಧೆಯ ಪರಿಣಾಮವಾಗಿ ನಮ್ಮ ಮನಸ್ಸು ಮತ್ತು ಹೃದಯಗಳು ದೃಢವಾಗಬೇಕು. ಲೋಪದೋಷಗಳ ಪರಿಹಾರವನ್ನು ಕೈಗೊಳ್ಳಲು ಪ್ರೇರೇಪಣೆಯನ್ನು ಕೊಡಬೇಕು. ಈ ದೃಷ್ಟಿಯನ್ನಿಟ್ಟುಕೊಂಡೇ- ಸ್ವತಂತ್ರ ಭಾರತದ ಹಾಗೂ ದೇಶದ ನಾಗರಿಕರ ಮುಂದಿರುವ ಸಮಸ್ಯೆಗಳನ್ನು ವಿವೇಚಿಸೋಣ.

❖

ಭಾರತದಲ್ಲಿ ಕೋಮುವಾರು ಭಾವನೆ ಬಲಿಯುತ್ತಿದೆಯೆಂದು ಕೆಲವರು ಹೇಳುವುದುಂಟು ಜಾತೀಯವಾದಿಗಳಾದ ಕೆಲವರು ಧುರೀಣರು ರಾಷ್ಟ್ರೀಯ ಸರಕಾರಕ್ಕೆ ಪೇಚನ್ನುಂಟುಮಾಡುವ ಅನಪೇಕ್ಷಿತ ಕೃತ್ಯಗಳಲ್ಲಿ ತೊಡಗಿದ ಉದಾಹರಣೆ ಇದೆ- ಮುಖ್ಯವಾಗಿ ಹಿಂದೂ ಮಹಾ ಸಭೆ, ಜನಸಂಘ, ರಾಮರಾಜ್ಯ ಪರಿಷತ್ತು ಇತ್ಯಾದಿ ಪಕ್ಷಗಳು ಭಾರತದಲ್ಲಿ ಜಾತೀಯಭಾವನೆಯು ಉಕ್ಕೇರುವಂತೆ ಪ್ರಚಾರ ನಡೆಸುತ್ತವೆ. ಹಿಂದು ಮತ್ತು ಮುಸ್ಲಿಂ ದ್ವಿರಾಷ್ಟ್ರ ತತ್ವದಿಂದಲೇ ಭಾರತವು ಇಬ್ಭಾಗವಾಗಿ ತುಂಡಾಗಬೇಕಾಯಿತೆಂಬುವನ್ನು ಈ ಚಳುವಳಿಗಾರರು ಮರೆಯುತ್ತಾರೆ-ಅಖಂಡ ಭಾರತದ ಘೋಷಣೆಮಾಡುತ್ತ ಈ ಪಕ್ಷಗಳು ತಮ್ಮ ಚಟುವಟಿಕೆ ನಡೆಸುತ್ತಿರುವುದರಿಂದ ಭಾರತ-ಪಾಕಿಸ್ತಾನದ ರಾಜಕೀಯ ಸಂಬಂಧದಮೇಲೆ ದುಷ್ಪರಿಣಾಮವುಂಟಾಗಲು ಅವಕಾಶ ದೊರೆತಿದೆ. ಸುದೈವದಿಂದ ಭಾರತದಲ್ಲಿ ಹೆಚ್ಚಿನ ಪ್ರಜೆಗಳು ಜಾತೀಯವಾದಿತ್ವದ ಟೊಳ್ಳುತನವನ್ನು ಈಗಾಗಲೇ ಮನಗಂಡಿರುವರು. ಆದ ಕಾರಣ ಈ ಪಕ್ಷಗಳಿಗೆ ಬೆಂಬಲ ಸಿಗುತ್ತಿಲ್ಲ. ಭಾರತ ಸರಕಾರವಾದರೂ ಜಾತೀಯ ಭಾವನೆಯ ಪ್ರಶ್ನೆಯೇ ಏಳದಂತೆ, ತನ್ನ ಧೋರಣೆಯನ್ನು ಇಟ್ಟುಕೊಂಡಿದೆ. ಹೀಗಿದ್ದರೂ ಪರ—ಜಾತೀಯ ವಾದಿಗಳ ಉಪಟಳವು ರಾಷ್ಟ್ರದ ಶಾಂತಿ ಮತ್ತು ಭದ್ರತೆಗೆ ಗಂಡಾಂತರವನ್ನು ತರುವಷ್ಟು ಪ್ರಭಾವಿಯಾಗಿದೆ. ಜಮ್ಮೂದ ಪ್ರಜಾಪರಿಷತ್ತಿನ ಚಳುವಳಿಗೆ ಭಾರತದ ಜಾತೀಯ ವಾದಿಗಳು ನೀಡಿದ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರೋತ್ಸಾಹವೂ ನಿರಾಶ್ರಿತರ ಕಷ್ಟಗಳ ಸಂಬಂಧದಲ್ಲಿ ಈ ಜನರು ತೋರಿಸಿದ ಉದ್ವೇಗ ಮತ್ತು ಎಬ್ಬಿಸಿದ ಆಕ್ರೋಶಗಳೂ ಭಾರತ ಸರಕಾರದ ನಿಲುಮೆಯ ಮೇಲೆ ಜನತೆಗಿದ್ದ ಭರವಸೆಯನ್ನು ಕಡಿಮೆ ಮಾಡುವಂತಿದ್ದವು. ಹೀಗೆ ಜನತೆಯನ್ನು ಸರಿಯಾದ ಮಾರ್ಗದಿಂದ ಪರಾವೃತ್ತಗೊಳಿಸುವ ಇಂಥ ಚಟುವಟಿಕೆಗಳು ನಿರ್ನಾಮವಾಗಬೇಕೆಂದು ಎಲ್ಲ ವಿವೇಕಿಗಳ ಅಭಿಪ್ರಾಯವಿರುತ್ತದೆ. ಭಾರತೀಯರಾದ ನಾವೆಲ್ಲರೂ ಸಂಕುಚಿತವಾದ ಕೋಮುವಾರು ಭಾವನೆಗೆ ಬಲಿ ಬೀಳದೆ, ರಾಷ್ಟ್ರೀಯ ಪ್ರವೃತ್ತಿಯನ್ನು ವರ್ಧಿಸಿಕೊಳ್ಳಲು ಸಂಕಲ್ಪಿಸಬೇಕು.

❖

ಹಿಂದೂ ಮತ್ತು ಮುಸ್ಲಿಮರೇ ಇತ್ಯಾದಿಯಾದ ಬೇರೆ ಮತದವರ ನಡುವೆ ವೈಷಮ್ಯದ ಬೀಜವನ್ನು ಬಿತ್ತುವ ಜಾತೀಯವಾದಿಗಳು ತಂತಮ್ಮ ಮತದೊಳಗಿರುವ ಭೇದಭಾವವನ್ನು ದೂರೀಕರಿಸಲು ಪ್ರಯತ್ನಿಸಿದರೆ, ಅವರ ಬುದ್ಧಿಶಕ್ತಿಗಳ ಸದುಪಯೋಗವಾದೀತು. ಉದಾಹರಣೆಗೆ ಹಿಂದೂಗಳಲ್ಲಿ ಸ್ಪೃಶ್ಯಾಸ್ಪೃಶ್ಯತೆಯೆಂಬ ಭೇದವು ಬಹಳ ಕಾಲದಿಂದ ರೂಢಿಯಲ್ಲಿ ಬಂದಿದೆ. ಮಾನವತೆಯ ಮೇಲೆ ವರ್ಣಭೇದವು ಯಾವ ರೀತಿ ರಾಕ್ಷಸ ಪರಿಣಾಮವನ್ನುಂಟುಮಾಡಿದೆಯೋ-ಅದೇ ರೀತಿ ಈ ಜಾತಿಭೇದವೂ ಗಂಡಾಂತರಪ್ರಾಯವಾಗಿದೆ. ಅಸ್ಪೃಶ್ಯತೆಯನ್ನು ಹಿಂದೂ ಸಮಾಜದ ಕಳಂಕವೆಂದು ಮಹಾತ್ಮಾ ಗಾಂಧೀಯವರು ಕರೆದಿದ್ದರು. ಅಸ್ಪೃಶ್ಯರೆಂದು, ಹೀನ ಜಾತಿಯವರೆಂದು ನಾವು ಕಡೆಗಣಿಸಿ ಬಿಟ್ಟಿರುವ ಪ್ರಜಾಕೋಟಿಯು ಅಪಾರವಾಗಿದೆ-ದೇಶದಲ್ಲಿ ಒಂದು ಮೂರಾಂಶ ಜನತೆಯು ಹೀಗೆ ದುರ್ಲಕ್ಷಿಸಲ್ಪಟ್ಟಿರುವುದರಿಂದ ನಾವು ಏನು ಪ್ರಗತಿಯನ್ನು ಸಾಧಿಸಿದರೂ, ಅದನ್ನು ಪರಿಪೂರ್ಣವೆಂದು ಹೇಳಲುಬಾರದು. ಸಮಾಜದಲ್ಲಿ ಹಿಂದುಳಿದವರನ್ನು ಮುಂದೆ ತಂದು ಅವರನ್ನು ಕೂಡಿಕೊಂಡು ನಡೆದರೆ ಮಾತ್ರ ಭಾರತದ ಸಾರ್ವಾಂಗಿಕ ಏಳಿಗೆಯು ಸಾಧ್ಯ. ಸರಕಾರದವರು ಈ ದಿಸೆಯಲ್ಲಿ ಕಾಯಿದೆ ಮೂಲಕ ಯೋಗ್ಯ ಕ್ರಮಗಳನ್ನು ಕೈಗೊಂಡಿರುವರು. ಜಾತಿಭೇದವನ್ನು ಮನ್ನಿಸಬಾರದೆಂದೂ ಇದು ವರೆಗೆ ಹಿಂದೂಡಲ್ಪಟ್ಟ ವರ್ಗಗಳಿಗೆ ಮುಂದೆ ಬರಲು ಹೆಚ್ಚು ಹೆಚ್ಚು ಅವಕಾಶವನ್ನು ಕಲ್ಪಿಸಿಕೊಡಬೇಕೆಂದೂ ಸರಕಾರವು ಕಾಯಿದೆ ಮಾಡಿದೆ. ಇದರ ಸತ್ಪ್ರಯೋಜನವುಂಟಾಗುವಂತೆ, ಹಿಂದುಳಿದ ವರ್ಗಗಳಲ್ಲಿ ಆತ್ಮವಿಶ್ವಾಸವನ್ನೂ ಸ್ವಾಭಿಮಾನವನ್ನೂ ಸಮಾಜ ಸುಧಾರಕರು ಹುಟ್ಟಿಸಬೇಕು. ಭಾರತದಲ್ಲಿ ಜಾತಿಭೇದವು ಸಾವಿರಾರು ವರ್ಷದಿಂದ

ಬಿಡಿಸಬೇಕಾದ ಕೆಲವು ತೊಡಕುಗಳು

ಸ್ವಾತಂತ್ರ್ಯದ ಸಂಪೂರ್ಣ ಸಿದ್ಧಿಗೆ ಅವಶ್ಯಕವಾದ ಕ್ರಮ

ರೂಢಿಗೆ ಬಂದಿರುವುದರಿಂದ ಕೆಲವೇ ದಶಕಗಳ ಪರಿಮಿತಿಯೊಳಗೆ ಈ ಕಲಂಕವನ್ನು ದೂರೀಕರಿಸುವುದು ಕಷ್ಟಸಾಧ್ಯ. ಆದರೂ ನಮ್ಮ ಮನಸ್ಸನ್ನು ಹಿಂದುಳಿದವರ ಕಡೆಗಿನ ಸಹಾನುಭೂತಿಯ ವಿಚಾರದಿಂದ ತುಂಬಿದರೆ, ಮತ್ತು ಮಾನವ ಸಹಜವಾದ ಸಹೃದಯತೆಯಿಂದ ಹರಿಜನರೇ ಮುಂತಾದ ವರ್ಗಗಳನ್ನು ನೋಡಲು ಪ್ರಯತ್ನಿಸಿದರೆ, ಒಂದೆರಡು ಪೀಳಿಗೆಗಳ ಬಳಿಕವಾದರೂ ಭಾರತವು ಜಾತೀಯತೆಯ ವಿಷ ವಾತಾವರಣದಿಂದ ಮುಕ್ತಿ ಹೊಂದೀತು.

❁

ಇಂಥ ಉತ್ತಮ ಸಂಗತಿಗಳನ್ನು ದೇಶದ ಜನರಿಗೆ ತಿಳಿಯಪಡಿಸಲು ಹಲವಾರು ಮಾರ್ಗಗಳು ಇರುತ್ತವೆ- ಶ್ರೇಷ್ಠರಾದವರು ಕನಿಷ್ಠರಿಗೆ ಹಾಕಿಕೊಡುವ ಆದರ್ಶ ಇವುಗಳಲ್ಲಿ ಪ್ರಬಲವಾದುದು. ಮಹಾತ್ಮ ಗಾಂಧೀಜಿಯಂಥ ಪ್ರತಿಭಾ ಸಂಪನ್ನ ವ್ಯಕ್ತಿಗಳು ಹರಿಜನೋದ್ಧಾರದ ವಿಷಯಕ್ಕೆ ಮಹತ್ವ ಕೊಡದಿರುತಿದ್ದರೆ, ಪ್ರಾಯಶಃ ಕಾಂಗ್ರೆಸು ಪಕ್ಷವಾಗಲೀ ಭಾರತದ ಅಧಿಕಾಂಶ ಜನತೆಯಾಗಲೀ ಈ ಕುರಿತು ಗಮನ ಕೊಡುತ್ತಿರಲಿಲ್ಲವೋ ಏನೋ! ಹರಿಜನ ಸೇವಕರಾಗಿ ಗಾಂಧೀಜಿಯವರು ದುಡಿದುದರಿಂದ ಜನತೆಯು ಅವರ ಮಾರ್ಗದರ್ಶನವನ್ನು ಅಂಗೀಕರಿಸಿ, ಅದರಂತೆ ನಡೆಯ ತೊಡಗಿತು. ಗಾಂಧೀಜಿಯವರು ತಮ್ಮ ಭಾಷಣಗಳ ಮೂಲಕ ಬರಹಗಳ ಮೂಲಕ ಮತ್ತು ಆಚರಣೆಯ ಮೂಲಕ ಪವಿತ್ರವಾದ, ಮಾನವೀಯವಾದ ಭಾವನೆಯನ್ನು ಜನರು ಅರಿತುಕೊಳ್ಳುವಂತೆ ಮಾಡಿದರು. ಆದರೆ ಕೋಣನ ಮುಂದೆ ವೀಣೆ ಬಾರಿಸಿದರೆ ಹೇಗೆ ನಿಷ್ಪ್ರಯೋಜಕವಾಗುತ್ತದೆಯೋ- ಸಾಕಷ್ಟು ಸಂಸ್ಕಾರವಿಲ್ಲದ ಜಡ ಮನಸ್ಸಿಗೆ ಎಷ್ಟು ಬೋಧೆ ನೀಡಿದರೂ ವ್ಯರ್ಥ. ಶಿಕ್ಷಣವನ್ನು ಬುದ್ಧಿ ವಿಕಾಸದ ಸಾಧನವೆಂದು ನಾವು ನಂಬಿದ್ದೇವೆ—ಈ ಶಿಕ್ಷಣವು ಬಾಲ್ಯ ಕಾಲದಲ್ಲಿ ಪ್ರಭಾವ ಬೀರಿದಷ್ಟು, ದೊಡ್ಡವರಾದ ಮೇಲೆ ನಮಗೆ ಹಿಡಿಸುವುದಿಲ್ಲ ಜಾತೀಯ ಭಾವನೆಯನ್ನು ದೂರೀಕರಿಸಿರೆಂಬ ಉಪದೇಶವಾಗಲೀ, ದುಡಿದು ಬದುಕಿರೆನ್ನುವ ಹಿತಬೋಧೆಯಾಗಲೀ ಮಕ್ಕಳಿರುವಾಗ ದೊರೆತರೆ ಮಾತ್ರ ಫಲಪ್ರದವಾಗುವ ಭರವಸೆ ಇದೆ. ಈ ದೃಷ್ಟಿಯಿಂದ ನಮ್ಮ ಶೈಕ್ಷಣಿಕ ಪದ್ಧತಿಯನ್ನು ಪುನರ್ವ್ಯವಸ್ಥೆಗೆ ಒಳಪಡಿಸುವುದು ಯೋಗ್ಯ. ಸ್ವತಂತ್ರ ಭಾರತ ಇನ್ನೂ ವರೆಗೆ ಈ ವಿಷಯದಲ್ಲಿ ಹೆಜ್ಜೆ ಮುಂದಿಟ್ಟ ಸೂಚನೆ ಇಲ್ಲ— ಆದರೆ ಇನ್ನೂ ಹೆಚ್ಚುಕಾಲ ವಿಳಂಬ ಮಾಡುವುದು ಸರಿಯಲ್ಲ. ನಮ್ಮ ವಿದ್ಯಾಭ್ಯಾಸದ ಕ್ರಮವನ್ನು ದೇಶದ ನೂತನ ಆದರ್ಶಕ್ಕೆ ಅನುಗುಣವಾದ ರೀತಿಯಲ್ಲಿ ಸಂಘಟಿಸುವುದು ಅತ್ಯಂತ ಜರೂರಿದೆ. ಶಿಕ್ಷಣದ ವಿಸ್ತಾರಕ್ಕಾಗಿ ಮತ್ತು ಪುನರ್ಘಟನೆಗಾಗಿ ವೆಚ್ಚವಾಗುವ ಹಣವು ಪರೋಕ್ಷವಾಗಿ ದೇಶಕ್ಕೆ ಅತ್ಯಧಿಕ ಸತ್ಫಲವನ್ನು ನೀಡಬಲ್ಲುದು.

❁

ಈ ಮಾತನ್ನು ವಿಶದೀಕರಿಸುವುದು ಒಳ್ಳೆಯದು-ಭಾರತವು ಸ್ವತಂತ್ರವಾದರೂ ನಮ್ಮಲ್ಲಿ ಭ್ರಷ್ಟಾಚಾರ, ಲಂಚಗುಳಿತನ, ಕಳ್ಳಪೇಟೆ ಮುಂತಾದ ನೈತಿಕ ಪತನದ ದುಶ್ಚಿಹ್ನೆಗಳು ದಿನೇ ದಿನಕ್ಕೂ ಹೆಚ್ಚಾಗಿ ದೃಷ್ಟಿಗೋಚರವಾಗುತ್ತಿವೆ ಎಂದು ದೂರು ಕೇಳುತ್ತೇನೆ. ಇದರಂತೆ ವಿಧ್ವಂಸಕ ಕೃತ್ಯಗಳಿಗೆ ಪ್ರಚೋದನೆಯನ್ನುಂಟು ಮಾಡುವ ಕೆಲಸಗಳೂ ನಡೆಯುತ್ತಿವೆ. ನಮ್ಮ ಜೀವನ ಮಟ್ಟವು ಜಗತ್ತಿನಲ್ಲಿಯೇ ನಿಕೃಷ್ಟವಾಗಿದೆ. ಸಾಮಾನ್ಯ ಜನರು ಅನೇಕ ಬಗೆಯ ಪ್ರಲೋಭನೆಗಳಿಂದ ಆಕೃಷ್ಟರಾಗಿ ನೈತಿಕ ವರ್ಚಸ್ಸನ್ನು ಕಳೆದುಕೊಳ್ಳುವರು. ಈ ಕ್ಷಣಿಕ ಮೋಹವನ್ನು ನಿಗ್ರಹಿಸುವ ಮನೋದಾರ್ಢ್ಯ ಅವರಲ್ಲಿರುವುದಿಲ್ಲ. ತಮ್ಮ ವ್ಯಕ್ತಿತ್ವವನ್ನು ಕೆಡಿಸಿಕೊಳ್ಳದೆ, ಸರಿಯಾದ ರೀತಿಯಲ್ಲಿ ಶ್ರೇಯಸ್ಸನ್ನು ಪಡೆಯಲು ಮಾರ್ಗವಿರುತ್ತದೆಂಬುದನ್ನು ಅವರಿಗೆ ಚೆನ್ನಾಗಿ ಮನಗಾಣಿಕೆ ಮಾಡಿಕೊಡುವ ಪ್ರಯತ್ನ ನಡೆದಿಲ್ಲ. ಶಿಕ್ಷಣವೊಂದೇ ಗುರುತರವಾದ ಈ ಹೊಣೆಯನ್ನು ಹೊರಬಲ್ಲುದು. ಇದಲ್ಲದೆ ತಮ್ಮ ಉದ್ದೇಶ ಸಾಧನೆಗಾಗಿ ಹಿಂಸಾಚಾರ ಮತ್ತು ವಿಧ್ವಂಸಕ ಕೃತ್ಯಗಳನ್ನು ಅವಲಂಬಿಸುವ ಜನರಿದ್ದಾರೆ—ಇವರು ತಮ್ಮ ಆ ಕೃತ್ಯಗಳಿಂದ ಬೇರೆ ಜನರಿಗಾಗುವ ತೊಂದರೆ ತಾಪತ್ರಯಗಳನ್ನು ಮತ್ತು ರಾಷ್ಟ್ರ ಇದಿರಿಸಬೇಕಾಗಿ ಬರುವ ಗಂಡಾಂತರಗಳನ್ನು ಗಮನಿಸುವುದಿಲ್ಲ. ಜನರು ಸುಲಭದ ಪ್ರಚಾರಕ್ಕೆ ಮತ್ತು ಉದ್ವೇಗಕ್ಕೆ ಬಲಿಬೀಳುವುದೇ ಇಂಥ ಹೇಯ ವರ್ತನೆಗೆ ಹೇತು. ಜನರಲ್ಲಿ ಯೋಗ್ಯ ಸಂಸ್ಕಾರವನ್ನು ಉಂಟುಮಾಡಬಲ್ಲ ಶಿಕ್ಷಣವೊಂದೇ ನಮ್ಮನ್ನು ಇವುಗಳಿಂದ ರಕ್ಷಿಸಬಲ್ಲುದು.

❁

ಈಚೆಗೆ ನೆರೆಯ ರಾಜಕೀಯ ಕ್ಷೇತ್ರದಲ್ಲಿ ನಡೆದಿರುವ ಕೆಲವು ಪಕ್ಷಗಳ ವಿಧ್ವಂಸಕ ಕೃತ್ಯಗಳು [illegible] ಸ್ವತಂತ್ರ ಭಾರತದ ಶಾಂತಿ ಸುವ್ಯವಸ್ಥೆಗಳಿಗೆ ಆತಂಕವುಂಟುಮಾಡುವ ನಿದರ್ಶನಗಳಿವೆ. ಜನರನ್ನು ತಪ್ಪು ದಾರಿಗೆಳೆಯುವ ಪ್ರಯತ್ನಗಳನ್ನು ಜವಾಬ್ದಾರಿತನದ ಹೊಣೆಹೊತ್ತಿರುವ ಸರಕಾರವು ದಮನಿಸುವುದು ಕರ್ತವ್ಯವೇ ಸರಿ. ಕಲ್ಕತ್ತದ ಟ್ರಾಮು ಸಾರಿಗೆಯ ಪ್ರಸಂಗ, ದಕ್ಷಿಣದ ಬಳ್ಳಾರಿ, ತಿರುತ್ತಣಿ ಪ್ರದೇಶಗಳಲ್ಲಿ ಆಂಧ್ರ ರಾಜ್ಯದ ಕುರಿತಾದ ಗೊಂದಲ ಇವು ಈ ವರ್ಷದ ಘಟನೆಗಳಲ್ಲಿ ಉಲ್ಲೇಖನೀಯವಾದವುಗಳು. ವಿಧ್ವಂಸಕ ಕ್ರಮಗಳನ್ನು ಪ್ರತ್ಯಕ್ಷ ಹಾನಿಯನ್ನುಂಟುಮಾಡದಿದ್ದರೂ ಜನರ ಮನೋಭೂಮಿಯ ಮೇಲೆ ಅನುಚಿತ ಪರಿಣಾಮವನ್ನುಂಟು ಮಾಡುವ ಕೆಲವು ಚಟುವಟಿಕೆಗಳೂ ಕಳೆದ ವರ್ಷ ಜರಗಿರುವುವು. ಇವುಗಳಲ್ಲಿ ಸತ್ಯಾಗ್ರಹ, ಉಪವಾಸದಂಥ ಕ್ರಮಗಳು ಮುಖ್ಯವೆನ್ನಬೇಕು. ಗಾಂಧೀಜಿಯವರು ಸ್ವಾತಂತ್ರ್ಯಾಂದೋಲನದ ಕಾಲದಲ್ಲಿ ಜನತೆಗೆ ಸತ್ಯಕ್ಕೋಸ್ಕರ ಆಗ್ರಹಪಡಬೇಕೆಂದೂ ಆತ್ಮಶುದ್ಧಿಗಾಗಿ ಉಪವಾಸ ಗೈಯಬೇಕೆಂದೂ ಉಪದೇಶಿಸಿದ್ದರು. ಅಹಿಂಸಾತ್ಮಕವಾದ ಈ ಅಜೇಯ ಅಸ್ತ್ರಗಳನ್ನು ಸ್ವತಂತ್ರ ಭಾರತದ ಜನತಾ ಸರಕಾರದ ಮೇಲೆಯೇ- ಸಮಯವಲ್ಲದ ಸಮಯದಲ್ಲಿ, ವಿಧಿಯಲ್ಲದ ವಿಧಿಯಲ್ಲಿ ಕೆಲವು ಮುಖಂಡರೂ ಇನ್ನು ಕೆಲವು ಅವರ ಅನುಯಾಯಿ ಶಿಷ್ಯರೂ ಪ್ರಯೋಗಿಸಿದರು. ಆಂಧ್ರರ ದೃಷ್ಟಿಯಲ್ಲಿ ಮಹಾಮಹಿಮನೆಂದು ಪರಿಗಣಿಸಲ್ಪಟ್ಟ ಪೊಟ್ಟಿ ಶ್ರೀ ರಾಮುಲು ಇಂಥವರಲ್ಲಿ ಒಬ್ಬರು. ಇವರಿಗೆ ಮೇಲ್ಪಂಕ್ತಿ ಹಾಕಿಕೊಟ್ಟ ಮಹಾನುಭಾವ ಸ್ವಾಮಿ ಸೀತಾರಾಮ; ಮೊನ್ನೆ ಮೊನ್ನೆ ಇವರ ಮಾರ್ಗಾನುಸರಣ ಮಾಡಿದ ಶಂಕರ ಕಾಮಿ ರೆಡ್ಡಿ. ಇವರೆಲ್ಲರ ಉದ್ದೇಶ ಆಂಧ್ರ ರಾಜ್ಯ ನಿರ್ಮಾಣ. ತೆಲುಗರಿಗಿಂತ ಕನ್ನಡಿಗರೇನು ಕಡಮೆ ಎಂಬಂತೆ—ಕೆಲವರು ಕರ್ನಾಟಕ ರಾಜ್ಯಕ್ಕೋಸ್ಕರ ಉಪವಾಸ ಮಾಡಿ, ಸತ್ಯಾಗ್ರಹದ ಬೆದರಿಕೆ ಹಾಕಿದರು. ಸರಕಾರದ ಸಮಾ[illegible] ನಿಲುವೆಯನ್ನು ಸ್ವಾರ್ಥಸಾಧನೆಗೋಸ್ಕರ ಪಲ್ಲಟಿಸುವ ಚತುರೋಪಾಯವೇ ಈ ಒತ್ತಾಯವೆಂಬ ಸಂಗತಿ ಸ್ವಯಂಸಿದ್ಧ- ಇದು ಪ್ರಜಾಪ್ರಭುತ್ವ ಪದ್ಧತಿಗೆ ಅಸಂಗತವಾದುದೆಂದು ತಿಳಿದು ನಾವೆಲ್ಲರೂ ಈ ಪ್ರವೃತ್ತಿಯ ಉಚ್ಚಾಟನೆಗೆ ಸೊಂಟಕಟ್ಟಬೇಕು.

❁

ಸ್ವತಂತ್ರ ಭಾರತದ ಮುಂದೆ ಇದಕ್ಕಿಂತಲೂ ಜಟಿಲವಾದ ಪ್ರಶ್ನೆಗಳು ಪರಿಹಾರ ಮಾರ್ಗದ ಪ್ರತೀಕ್ಷೆಯಲ್ಲಿವೆ —ನಿರುದ್ಯೋಗದ ಸಮಸ್ಯೆ ಇವುಗಳಲ್ಲಿ ಪ್ರಬಲವಾದದೆಂದು ಎಲ್ಲ ಪಕ್ಷಗಳೂ ಒಪ್ಪುತ್ತವೆ. ಆದರೆ ನಿರುದ್ಯೋಗದ ನಿವಾರಣೆಯು ಭಾಷಣದಿಂದ, ಲೇಖನದಿಂದ, ಸಭೆ ಮೆರವಣಿಗೆಗಳಿಂದ ಪರಿಹರಿಸಲ್ಪಡುವಂಥದಲ್ಲ-- ಇದಕ್ಕೆ ತೀರ ಭಿನ್ನವಾದ ಉಪಾಯವೇ ಬೇಕು. ನೈಸರ್ಗಿಕ, ಸಾಂಪತ್ತಿಕ, ದೈಹಿಕ ಹಾಗೂ ಬೌದ್ಧಿಕ ಸಾಧನ ಸ್ರೋತಗಳನ್ನೆಲ್ಲ ಒಂದುಗೂಡಿಸಿ, ನಾವು ನಿರುದ್ಯೋಗದ ಸಮಸ್ಯೆಯ ವಿರುದ್ಧ ಯುದ್ಧ ಮಾಡಬೇಕಾಗಿದೆ. ಪಂಚವಾರ್ಷಿಕ ಯೋಜನೆಯು ನಮಗೆ ಹೊಸ ಹೊಸ ಅವಕಾಶಗಳನ್ನು ಮಾಡಿಕೊಟ್ಟರೂ—ನಿರುದ್ಯೋಗದ ಪ[illegible]ಸ್ಥೆಯನ್ನು ಪರಿಹರಿಸುವಲ್ಲಿ ಏನೇನೂ ಯಶಸ್ಸು ಗಳಿಸಿರುವುದಿಲ್ಲವೆಂದು ಈಚೆ[illegible] ವಿರೋಧೀ ಗುಂಪುಗಳು ಹೇಳುತ್ತಿದ್ದ ಮಾತನ್ನು ಈಗ ಕಾಂಗ್ರೆಸು ಮತ್ತು ಯೋಜನಾ ಆಯೋಗ ಒಪ್ಪಿಕೊಂಡಂತಿದೆ. ನಿರುದ್ಯೋಗದ ನಿರ್ಮೂಲನಕ್ಕೆ ಸರಕಾರ ಮತ್ತು ಜನತೆ- ಇಬ್ಬರೂ ಕೂಡಿ ಒಂದು ಕಾರ್ಯಕ್ರಮವನ್ನು ಅನುಸರಿಸಬೇಕಾಗುವುದು. ಹೊಸ ಅವಕಾಶಗಳುಂಟಾಗುವಂತೆ ಅನುಕೂಲತೆಯನ್ನು ಸರಕಾರ ಒದಗಿಸಿ ಕೊಟ್ಟರೆ, ಜನತೆ [illegible] ಸೌಲಭ್ಯದ ಪೂರ್ಣ ಪ್ರಯೋಜನ ಪಡೆಯಲು ಉತ್ಸುಕರಾಗಬೇಕು; ಮತ್ತು ಸ್ವಯಂಪ್ರೇರಣೆಯಿಂದ ಈ ಅನುಕೂಲತೆಯ ವ್ಯಾಪ್ತಿ ಹೆಚ್ಚಿಸಲು ನೋಡಬೇಕು. [illegible] ದಾರಂಭಕ್ಕೆ ಸರಕಾರವು ಖಾದಿ ಮತ್ತು ಗ್ರಾಮೋದ್ಯೋಗಗಳ ಸರಕುಗಳ ಸಂರಕ್ಷಣೆಯನ್ನು [illegible] ಜನರು ಸ್ವದೇಶೀವ್ರತ ನಿಷ್ಠೆಯನ್ನು ತೋರುವಲ್ಲಿ ಹಿಂದುಳಿಯಬಾರದು. ರೈತ[illegible] ವಂತು ನಷ್ಟಗಳನ್ನು ಸರಕಾರ ಒದಗಿಸಲು ಮುಂದಾದರೆ, ನಾವು ಸೋಮಾರಿಗಳಂತೆ ಕುಳಿತುಕೊಳ್ಳಬಾರದು. ವಿ[illegible]ಜ್ಞಕ್ತಿ ಪೂರ್ತಿಕೆಗೆ ಸರಕಾರ ಪ್ರಯತ್ನಿಸಿದರೆ, ನಾವು ನಮ್ಮ ಹಣವನ್ನು ಬೇಗನು[illegible] ಯೊಳಗೆಯೇ ಭದ್ರವಾಗಿಟ್ಟು ಕಾರ್ಯ[illegible] ಕೆಡಿಸಿಬಿಡಬಾರದು.—ಜೈಹಿಂದ್

ಸ್ವವಿಷಯ.

ನಾವು ಮೊದಲು ೨೪ ಪುಟಗಳನ್ನು ಕೊಡುವುದೆಂದಿದ್ದರೂ ೩೨ ಪುಟಗಳನ್ನು ಕೊಟ್ಟಿದ್ದೇವೆ. ಈ ಸಂಚಿಕೆಯನ್ನು ಹೊರಡಿಸಲು [illegible] ಕರಾದ ಲೇಖಕ ವರ್ಗಕ್ಕೂ ಎಂದಿನಂತೆ [illegible] ಮ್ಮ ಮೇಲಿನ ಅಭಿಮಾನದಿಂದ ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿದ ಮಹಾನುಭಾವ ಬಳಗಕ್ಕೂ ಸಕಾಲದಲ್ಲಿ ಸಂಚಿಕೆ ಪ್ರಕಟವಾಗುವಂತೆ ದುಡಿದ ಮುದ್ರಣಾಲಯದ ಕೆಲಸಗಾರ ಬಂಧುಗಳಿಗೂ ನಾವು ಕೃತಜ್ಞರು.

ಜನತಾ ರೇಡಿಯೋ ಹೌಸ್,
ಗೋಖಲೆ ರೋಡ್ (ನೋರ್ಥ್)
ದಾದಾರ್, ಮುಂಬಯಿ- 28
ಇವರ ಶಾಖೆಯೊಂದು
ತಾ 1—8—1953ರಲ್ಲು
ಜನತಾ ರೇಡಿಯೋ ಎಂಡ್ ಇಲೆಕ್ಟ್ರಿಕ್ ಹೌಸ್
ಎಂಬ ಹೆಸರಿನಿಂದ ವರ್ಲಿಯಲ್ಲಿ
ಬೆಂಗಾಲ್‌ಕೆಮಿಕಲ್ಸ್ ಎದುರುಗಡೆ
ತೆರೆಯಲ್ಪಟ್ಟಿದೆ.
ಮಹಾ ಜನರ ಪ್ರೋತ್ಸಾಹವನ್ನು
ನಿರೀಕ್ಷಿಸಲಾಗಿದೆ.
ಬನ್ನಂಪಳ್ಳಿ ಶಿವರಾಮ ಹೆಗ್ಡೆ
ಪ್ರೊಪ್ರೈಟರ್.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

ಸ್ಮಾಲ್ ಕೋಸ್ ವ್ಯಾಜ್ಯ 331/195[illegible]

ಕೆ. ಮಾಧವ ಪ್ರಭು —ವಾದಿ

ಮತ್ತು

ಕೆ. ಮಹಾಬಲಯ್ಯ —ಪ್ರತಿವಾದಿ

ಇವರೊಳಗೆ.

ಕೆ. ಮಹಾಬಲಯ್ಯ, ಬಾಲಯ್ಯ ಸೇರಿಗಾರರ ಮಗ. ಉಡುಪಿ ತಾಲೂಕು ನಂ[illegible] ೮೩ನೆ ಕಳ್ತೂರು ಗ್ರಾಮದಲ್ಲಿರುವ [illegible] ತಿವಾದಿ.

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ವಾದಿಯು ಪ್ರತಿವಾದಿ ಮೇಲೆ ಡಿಮಾಂಡ್ ನೋಟಿನ ವಸೂಲಿ ಬಗ್ಗೆ ದಾಖಲು ಮಾಡಿದ ವ್ಯಾಜ್ಯವು ಪ್ರತಿವಾದಿಗೆ ಅಪೈರ್ ನೋಟೀಸಿನ ಬಗ್ಗೆ 25-8-1953ಕ್ಕೆ ಇಡೋಣಾಗಿದೆ. ಆ ಕುರಿತು ಪ್ರತಿವಾದಿಯು ಉಪಾಧ್ಯ[illegible] ಇಲ್ಲವೆ ಸದ್ರಿ ತನಖಿ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದು ತಪ್ಪಿದರೆ [illegible] ಪ್ರತಿವಾದಿಯ ಗೈರುಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

K. Varadaraya Pa
Advocate for Plaintif
ಉಡುಪಿ ತಾ. 11-8-1953

ಪಡ ಭೂಮಿಯ ಸಾಗುವಳಿ

(೧೨ನೇ ೩ ಪುಟದಿಂದ)

ಕೇಂದ್ರ ಸಂಘವು ಸಾಮಾನ್ಯತಃ ಕೆಲವು ಶರ್ತಗಳು ಪೂರೈಸಲ್ಪಟ್ಟರೆ ಮಾತ್ರ, ಕೆಲಸದ ಹೊಣೆ ಹೊರುತ್ತದೆ ಸಾಗುವಳಿಗೆ ಯೋಗ್ಯ ಮಾಡಿದ ಭೂಮಿಯನ್ನು ಮುಂದೆ ಚೆನ್ನಾಗಿ ಸಾಗು ಮಾಡಲು ರಾಜ್ಯ ಸರಕಾರ ಯಾವ ವ್ಯವಸ್ಥೆಗಳನ್ನು ಮಾಡಿದೆ? ಅಂಥ ಭೂಮಿಗೆ ನೀರಾವರಿಯ ಅನುಕೂಲತೆಗಳು ಇವೆಯೋ? ಅಲ್ಲಿ ಯೋಗ್ಯ ಒಕ್ಕಲಿಗರನ್ನು ನೆಲೆಗೊಳಿಸಲಾಗುವುದೋ? ಅಂಥ ಪ್ರದೇಶಗಳು ವಿಶಾಲವಾಗಿವೆಯೊ? ಇವೆಲ್ಲವನ್ನೂ ಸಂಘ ಮೊದಲಿಗೆ ಪರಿಶೀಲಿಸುತ್ತದೆ.

ಟ್ರಾಕ್ಟರುಗಳ ಗುಂಪು ೧೦ ತಾಸುಗಳ ವರೆಗೆ ಬಿಡದೆ ಕೆಲಸ ಮಾಡುತ್ತವೆ. ರಾತ್ರಿ ಹೊತ್ತು ಮುಂಭಾಗದಲ್ಲಿ ದೀಪ ಕಟ್ಟಿಕೊಂಡು ಅವು ಕೆಲಸ ಮಾಡುವುದು ಒಂದು ಸಾಮಾನ್ಯ ವೈಶಿಷ್ಟ್ಯ.

ಉತ್ತರ ಪ್ರದೇಶದ ತರಾಯಿ ಪ್ರದೇಶದಲ್ಲಿ ಕಾಡ ಗಳನ್ನು ಸವರಿದುದು ಕೇಂದ್ರ ಟ್ರಾಕ್ಟರು ಸಂಘದ ಒಂದು ಮಹಾ ಸಾಹಸದ ಕೆಲಸವಾಗಿ ಪರಿಗಣಿಸಲ್ಪಟ್ಟಿದೆ. ಇಲ್ಲಿ ಕೆಲಸ ಮಾಡಿದ ಯಂತ್ರಗಳು ಮರಗಳನ್ನು ಉರುಳಿಸಿದುವು; ಬೇರುಗಳನ್ನು ಕಿತ್ತೆಸೆದುವು, ಏರು ತಗ್ಗುಗಳನ್ನು ಸಮ ಮಾಡಿ, ನೆಲವನ್ನು ಉತ್ತವು--ಎಲ್ಲವೂ ಒಂದರ ಹಿಂದೊಂದರಂತೆ ನಡೆಯಿತು. ಈ ಭೂಮಿ ಒಡನೆಯೇ ಸಾಗುವಳಿಗೆ ಯೋಗ್ಯವಾಯಿತು.

ಹೀಗೆ ಹೊಸ ನೋಟವನ್ನು ನೀಡಲಾದ ತರಾಯಿ ಪ್ರದೇಶದಲ್ಲಿ ೩೭ ಸಾವಿರ ಕಾಡುಗಳು ಮಾಯಗೊಂಡು ೬೧ ಸಾವಿರ ಎಕ್ರೆ ಪ್ರದೇಶ ಸಾಗುವಳಿಗೆ ತರಲ್ಪಟ್ಟಿದೆ.

ಅಕ್ಟೋಬರ ೧ರಿಂದ ಜೂನ್ ೧ನೇ ತಾರೀಕಿನ ವರೆಗೆ ಸಾಮಾನ್ಯವಾಗಿ ಟ್ರಾಕ್ಟರುಗಳು ಕೆಲಸಮಾಡುತ್ತಿವೆ ಕೆಲಸವಿಲ್ಲದ ಸಮಯದಲ್ಲಿ ಈ ಯಂತ್ರಚಾಲಕರನ್ನು ಟ್ರಾಕ್ಟರುಗಳ ದುರಸ್ತಿ ಹಾಗೂ ಇನ್ನೊಂದು ವರ್ಷಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ಹಚ್ಚುವರು. ಕೆಲವೊಮ್ಮೆ ವಿದೇಶಗಳಿಂದ ಅಗತ್ಯದ ಬಿಡಿಭಾಗಗಳನ್ನು ತರಿಸುವುದೂ ಉಂಟು. ಎರಡು ಕಾರಖಾನೆಗಳು (ಒಂದು ಢೆಲ್ಲಿಯಲ್ಲಿ, ಇನ್ನೊಂದು ಭೋಪಾಳದ ಬೈರಗಢದಲ್ಲಿ) ರಿಪೇರಿಗೆ ಅಗತ್ಯವಿರುವ ಹೆಚ್ಚಿನ ಬಿಡಿ ಭಾಗಗಳನ್ನು ತಯಾರಿಸುತ್ತವೆ.

ಕೇವಲ ಕಾಡುಗಳನ್ನು ಕಡಿದು, ಪಡ ಭೂಮಿಯನ್ನು ಸಾಗುವಳಿಗೆ ಯೋಗ್ಯ ಮಾಡುವಷ್ಟಕ್ಕೆ-ಸಂಘದ ಚಟುವಟಿಕೆ ಸೀಮಿತವಾಗಿಲ್ಲ. ಹಳ್ಳಿಯ ನಾಗರಿಕರಿಂದು ಪ್ರಯೋಜನಹೊಂದಬಹುದಾದ ಬೇರೆ ಉಪಯುಕ್ತ ಕೆಲಸದಲ್ಲೂ ಟ್ರಾಕ್ಟರುಗಳು ನೆರವಾಗುತ್ತವೆ

ಸುಮಾರು ೫೦೦೦ ಮೈಲು ಉದ್ದದ ಸಂಪರ್ಕ ಮಾರ್ಗಗಳನ್ನು ರಚಿಸಲು ಟ್ರಾಕ್ಟರು ಸಂಘ ಸಹಾಯ ಮಾಡಿದೆ ಎತ್ತರವಾದ ದಿನ್ನೆಗಳು, ನೀರಾವರಿಗೆ ಯೋಗ್ಯವಾದ ಹೊಂಡಗಳು, ಮತ್ತು ಹಳ್ಳಿಯ ಕೆರೆಗಳು ಇವನ್ನು ನಿರ್ಮಿಸುವುದ ಕ್ಕೋಸ್ಕರ ಸಾವಿರಾರು ತಾಸು ಟ್ರಾಕ್ಟರುಗಳು ಕೆಲಸ ಮಾಡಿವೆ. ಈ ಕೆರೆಗಳಲ್ಲಿ ಸಂಗ್ರಹಿತವಾದ ನೀರು ಕೃಷಿ ಹಾಗೂ ಜಾನುವಾರುಗಳೆರಡರ ಉಪಯೋಗಕ್ಕೆ ಬರುತ್ತದೆ.

೧೫ ಟ್ರಾಕ್ಟರುಗಳ ಒಂದೊಂದು ಗುಂಪಾಗಿ ಇಡೀ ಸಮೂಹವನ್ನು ವಿಂಗಡಿಸಿರುವರು. ಕೆಲಸ ನಡೆಯುವಾಗ ಪ್ರತಿಯೊಂದೂ ಗುಂಪು ದಿನವೊಂದಕ್ಕೆ ಎರಡು ಸಾವಿರ ಗೆಲನು ಡೀಸೆಲ್ ಎಣ್ಣೆಯನ್ನು ಉಪಯೋಗಿಸುತ್ತದೆ. ಒಬ್ಬ ಸಹಾಯಕ ಇಂಜೀನಿಯರನ ಅಧೀನ ಎರಡು ಗುಂಪುಗಳಿವೆ ಇಲ್ಲಿ ಕೆಲಸ ಮಾಡುವವರಲ್ಲಿ ಹೆಚ್ಚಿನವರು ಸೈನ್ಯದ ಹಳೆಯ ನೌಕರರು; ಮತ್ತು ನಿರಾಶ್ರಿತರು. ಟ್ರಾಕ್ಟರುಗಳನ್ನು ನಡೆಸುವ ಕೆಲಸ ಬಹಳ ರಗಳೆ ಹಾಗೂ ತ್ರಾಸದಾಯಕವಾಗಿದೆ—ಬೇಸಿಗೆಯಲ್ಲಿ ಟ್ರಾಕ್ಟರಿನ ಮೇಲೆ ೧೨೦ ಡಿಗ್ರಿಗಿಂತಲೂ ಹೆಚ್ಚು ತಾಪಮಾನವಿರುತ್ತದೆ. ಆದರೂ ಇವುಗಳನ್ನು ಕೆಲಸಕ್ಕೆ ಹಚ್ಚುವವರ ಕಾರ್ಯಕ್ಷಮತೆ ಲೋಕದ ಬೇರಾವುದೇ ಪ್ರದೇಶದ ದಕ್ಷತೆಗೆ ಕಡಿಮೆ ಇಲ್ಲ

ಬಂಜರು ಭೂಮಿಯ ಮೇಲೆ ಟ್ರಾಕ್ಟರು ಭೂತವು "ಚಗ್‌ಚಗ್" ಎಂಬ ಧ್ವನಿ ಮಾಡುತ್ತಾ ಸಂಚರಿಸುತ್ತಿದ್ದಂತೆ-ಭೂಮಿಯು ಹಸನಾಗಿ ಸಾಗುವಳಿಗೆ ಯೋಗ್ಯವಾಗುತ್ತದೆ; ಆಗ ದೇಶವು ಅನ್ನ ಸ್ವಾವಲಂಬನವನ್ನು ಸಾಧಿಸುವ ಮಹಾ ಪ್ರಯತ್ನದಲ್ಲಿ ದಿನದಿನಕ್ಕೂ ಯಶಸ್ಸು ಗಳಿಸಿ ದೃಢವಾಗಿ ಮುನ್ನಡೆದಂತೆ ತೋರುತ್ತದೆ.



ಜನಪ್ರಿಯವಾದ UL BEEDIES ಬೀಡಿಗಳನ್ನೇ ಸೇದಿ ಆನಂದಿಸಿರಿ.

NEW KARNATAK OPTICAL Co.,
OPTHALMIC OPTICIANS,
Fairy Manor, Gunbow Street, FORT, BOMBAY.
ಒಳ್ಳೇ ತರದ ಕನ್ನಡಕಗಳು, ನೂತನ ಫ್ರೇಮುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ನ್ಯೂ ಕರ್ನಾಟಕ ಒಪ್ಟಿಕಲ್ ಕಂಪೆನಿ
ಕದೇಕಾರ್ ಕೃಷ್ಣ ಯನ್. ಶೆಟ್ಟಿ,
ಒಡೆಯರು.

೧೯೨೧ರಿಂದ
ನಾಡ, ನುಡಿಯ ಸೇವೆ ಸಲ್ಲಿಸುತ್ತಿರುವ
'ನವಯುಗ'ದ
೩೩ನೇ ವರ್ಷವು
ಇದೇ ಸಪ್ಟಂಬರದಿಂದ ಪ್ರಾರಂಭ.
ನಮ್ಮ ಚಂದಾದಾರರು ಇದನ್ನು ಗಮನಿಸುವಂತೆ ವಿನಂತಿ.

ದಿ ಜನರಲ್ ಇನ್‌ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪೊರೇಶನ್ ಲಿ.
ಉಡುಪಿ, ದ. ಭಾರತ.
ಎಸ್‌ಬೆಸ್ಟೋಸ್ ಸಿಮೆಂಟ್ ತಯಾರಿಕೆಗಳ ಮತ್ತು ರೆಮಿಂಗ್ಟನ್ ತಯಾರಿಕೆಗಳ ಅಧಿಕೃತ ವ್ಯಾಪಾರಿಗಳು.
ವಿಶೇಷ ಆಕರ್ಷಕ ನಮೂನೆಯಲ್ಲಿ ಬಾಳಿಕೆ ಬರುವ ಮತ್ತು ಜನಾದರಣೀಯವಾದ ಸೀರೆಗಳನ್ನು ತಯಾರಿಸುವ 'ಮಣಿಪಾಲ ಟೆಕ್ಸ್‌ಟೈಲ್ಸ್'ನ ವ್ಯಾಪಾರಿಗಳು.
THE GENERAL INVESTMENT & COMMERCIAL CORPORATION LIMITED.
UDIPI, S. INDIA.

TELE {phone 86491. gram -"NUTRIMENTS", Bombay. Post Box No. 979, Bombay 1.
SHETTYS PHARMACEUTICALS & BIOLOGICALS LTD.
369 Sheik Memon Street, BOMBAY, 2.
LABORATORIES.
101-103, Bhagat Singh Road, Vile Parle (West) BOMBAY 24.
IN THE APPROVED LIST OF GOVERNMENT OF INDIA.

ಕಸ್ತೂರ್ಬಾ ಮೆಡಿಕಲ್ ಕಾಲೇಜು

ಡಾ| ಟಿ. ಮಾಧವ ಪೈ.

ಈಚೆಗೆ ಮಣಿಪಾಳದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶ, ಅಲ್ಲಿ ನೀಡಲಾಗುವ ಶಿಕ್ಷಣದ ಮಟ್ಟ ಇತ್ಯಾದಿ ಸಂಗತಿಗಳನ್ನು ಕುರಿತು ಜಿಲ್ಲೆಯ ಎಂ. ಎಲ್. ಎ. ಗಳಲ್ಲೊಬ್ಬರಾದ ಶ್ರೀ ಎನ್. ಎಸ್. ಸುವರ್ಣರು ಕೆಲವು ಆಕ್ಷೇಪಗಳನ್ನು ಎತ್ತಿದ್ದರು. ಈ ತಕರಾರುಗಳಿಗೆ ಕಾಲೇಜನ್ನು ಸ್ಥಾಪಿಸಿದ ದಿ ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ನಿನ ರಿಜಿಸ್ಟ್ರಾರರಾದ ಡಾ. ಟಿ ಮಾಧವ ಪೈಗಳು ಸಮರ್ಪಕವಾದ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ ಡಾ. ಪೈಗಳ ಉತ್ತರದ ಒಕ್ಕಣೆ ಹೀಗಿದೆ—

"ಪ್ರಿಯ ಶ್ರೀ ಸುವರ್ಣರೇ,

ವಿಷಯ.— ಕಸ್ತೂರ್ಬಾ ಮೆಡಿಕಲ್ ಕಾಲೇಜು— ನಿಮ್ಮ ಕಾಗದ.

ತಾವು ನನ್ನ ಉತ್ತರಕ್ಕಾಗಿ ಕಾಯುವಷ್ಟು ಸಹೃದಯತೆಯನ್ನು ತೋರಿಸದೆ ಪತ್ರಿಕೆಗಳೆಡೆಗೆ ಧಾವಿಸಿದುದಕ್ಕಾಗಿ ಖೇದ ಪಡುತ್ತೇನೆ. ತಾವು ತಮ್ಮ ಪತ್ರದ ಪ್ರತಿಗಳನ್ನು ಯಾರಿಗೆಲ್ಲ ಕಳುಹಿಸಿರುವಿರೆಂದು ತಿಳಿಸಿದ್ದರೆ ಅವರೆಲ್ಲರಿಗೆ ನನ್ನ ಈ ಪತ್ರದ ಪ್ರತಿಗಳನ್ನು ಕಳುಹಿಸಿ ಆ ಮೂಲಕ ಅಭಿಪ್ರಾಯ ಭೇದಗಳನ್ನು ನಿವೃತ್ತಿಪಡಿಸಿಕೊಳ್ಳುವುದಕ್ಕೆ ಯೋಗ್ಯವಾಗುತ್ತಿತ್ತು. ನಾನು ತಮ್ಮೊಡನೆ ಪತ್ರವ್ಯವಹಾರವನ್ನು ಬೆಳೆಯಿಸಿ ವಾದಪ್ರತಿವಾದಕ್ಕೆ ಅವಕಾಶಕೊಡಲು ಇಷ್ಟಪಡನೆ ತಮ್ಮ ಪತ್ರದಲ್ಲಿ ಎತ್ತಿದ ವಿಚಾರಗಳಿಗೆ ಸಂಕ್ಷಿಪ್ತವಾಗಿ ಪ್ರತ್ಯುತ್ತರವೀಯಲು ಅನುಮತಿ ಕೊಡಿರಿ.

1. ನೀವು ಪತ್ರಿಕೆಗಳಲ್ಲಿ ಪ್ರಸಿದ್ಧಿಯನ್ನು ಪಡೆಯದಿರುವುದಕ್ಕೆ ನಾನು ಹೇಗೆ ಹೊಣೆ?

2. ಕಾಲೇಜಿಗೆ ಜಾತಿ, ಮತ ಮತ್ತು ಭಾಷೆಯ ತಳಹದಿಗಳ ಮೇಲೆ ಪ್ರವೇಶವನ್ನು ಕೊಡಲಾಗುವುದಿಲ್ಲ, ಮತ್ತು ಕೊಡಲು ಸಾಧ್ಯವೂ ಇಲ್ಲ.

3. ಇಂಡಿಯನ್ ಮೆಡಿಕಲ್ ಕೌನ್ಸಿಲಿನವರು ವೈದ್ಯಕೀಯ ಕಲಾ ಶಾಲೆಗಳಲ್ಲಿ ಅತ್ಯುಚ್ಚ ಮಟ್ಟವನ್ನು ನಿರೀಕ್ಷಿಸುವುದರಿಂದ ಕಾಲೇಜಿನ ಕಟ್ಟಡ ಮತ್ತು ಇತರ ಸಲಕರಣೆಗಳಿಗಾಗಿ ಸಾಧಾರಣ ಮೂವತ್ತು ಲಕ್ಷ ರೂಪಾಯಿಗಳ ಆವಶ್ಯಕತೆಯಿದೆ ಮತ್ತು ಇದನ್ನು ಸಂಗ್ರಹಿಸುವುದಕ್ಕಾಗಿ ವಿದ್ಯಾರ್ಥಿಗಳ ಹೆತ್ತವರಲ್ಲಿ ಸಮಾನ ರೀತಿಯಾಗಿ ಸಹಕಾರದ ತಳಹದಿಯಲ್ಲಿ, ಕಾಲೇಜು ಹತ್ತು ವರ್ಷಗಳಲ್ಲಾದರೂ ಸ್ವಯಂಪೂರ್ಣತೆಯನ್ನು ಹೊಂದುವುದಕ್ಕೋಸ್ಕರ ವಂತಿಗೆ ಕೇಳಿದೆ ಇತರ ಮೂಲ ಖರ್ಚುಗಳನ್ನುಳಿದು ಪ್ರತಿಯೊಬ್ಬ ವೈದ್ಯಕೀಯ ವಿದ್ಯಾರ್ಥಿಗೆ ವಿದ್ಯೆಕೊಡಲು ಐದುಸಾವಿರ ರೂಪಾಯಿಗಳಷ್ಟು ಖರ್ಚು ತಮ್ಮ ಕಾಲೇಜುಗಳಲ್ಲಿ ಸರಕಾರಕ್ಕೇ ತಗಲುತ್ತದೆ. ಆದುದರಿಂದ ತಾವು ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಬಗ್ಗೆ ಯಾದರೂ ತಮ್ಮ ಪ್ರಭಾವವನ್ನು ಉಪಯೋಗಿಸಿ ಸರಕಾರವು ಈ ಖರ್ಚನ್ನಾದರೂ ಸಹಾಯಧನವಾಗಿ ಕೊಡಿಸುವಂತೆ ಮಾಡಿದರೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಡಳಿತ ಮಂಡಲಿಗೆ ಅಂತಹ ವಿದ್ಯಾರ್ಥಿಗಳ ಮಟ್ಟಿಗೆ ಈಗಿನ ನಿಬಂಧನೆಗಳನ್ನು ಸಡಿಲುಗೊಳಿಸಲು ಅನುಕೂಲಿಸಬಹುದು

4. ಕಾಲೇಜಿಗಾಗಿ ಅತ್ಯುತ್ತಮ ಆವಶ್ಯಕ ಸಲಕರಣೆಗಳನ್ನು ಪಡೆದಿದ್ದೇವೆ, ಹಾಗೂ ಉತ್ತಮ ಅರ್ಹರಾದ ಬೋಧಕರನ್ನು ನೇಮಿಸಿದ್ದೇವೆ ಈ ವಿಚಾರದಲ್ಲಿ ವೈದ್ಯ ವಿದ್ಯೆಯ ಮೇಲೆ ಅಧಿಕಾರಯುಕ್ತವಾಗಿ ಮಾತಾಡಬಲ್ಲವರು ಹಾಗೂ ಡೈರೆಕ್ಟರ್ ಒಫ್ ಮೆಡಿಕಲ್ ಸರ್ವಿಸಸ್ ಅವರು ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಿರುತ್ತಾರೆ.

5. ಈ ಕಾಲೇಜಿನ ವಿದ್ಯಾರ್ಥಿಗಳ ಜ್ಞಾನದ ಮಟ್ಟವು ತೀರ ಕೆಳಗಿನ ತರಗತಿಯದಾಗಿರಬಹುದೆಂಬ ತಮ್ಮ ಅನುಮಾನವು ಬುಡವಿಲ್ಲದಾಗಿದೆ. ಮಾತ್ರವಲ್ಲ, ಹಾಗೆನ್ನುವುದು ಹಿಂದುಳಿದ ವರ್ಗಗಳ ಹಲವರನ್ನೊಳಗೊಂಡ ವಿದ್ಯಾರ್ಥಿ ಸಮೂಹಕ್ಕೇ ಇದು ಅವಮಾನಕರವಾಗಿದೆ. ಅವರಲ್ಲಿ ಹಲವರು ಪದವೀಧರರು. ಕೆಲವರು ಎರಡೆರಡು ಪದವಿಗಳನ್ನು ಹೊಂದಿದವರು.

6. ಪರೀಕ್ಷೆಗಳು ವಿಶ್ವವಿದ್ಯಾನಿಲಯದವರಿಂದ ನಡೆಯಿಸಲ್ಪಡುತ್ತವೆ ಮತ್ತು ಅದರ ಉಚ್ಚ ಮಟ್ಟದ ಹೊಣೆಗಾರಿ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ರದ್ದು.

7. ವೈದ್ಯಕೀಯ ಪದವೀಧರರನ್ನು ನಿರ್ಬಂಧ ಪಡಿಸಿದರೆ ಮಾತ್ರ ಅವರು ಹಳ್ಳಿಗಳಲ್ಲಿ ಹೋಗಿ ನೆಲೆಸಿಯಾರು. ಸರಕಾರಿ ಕಾಲೇಜುಗಳಲ್ಲಿ, ಸರಕಾರವು ಸರಾಸರಿ ಐದುಸಾವಿರ ರೂಪಾಯಿಗಳನ್ನು ವ್ಯಯಿಸಿ ತರಬೇತಿ ಕೊಡುವ ವಿದ್ಯಾರ್ಥಿಗಳನ್ನು ಕೂಡಾ ಅವರು ಹಳ್ಳಿಗಳಲ್ಲಿ ಹೋಗಿ ನೆಲೆಸುವಂತೆ ಮಾಡುವುದಕ್ಕೆ ಸರಕಾರವು ಅಸಮರ್ಥವಾಗಿದೆ. ಇದಕ್ಕೆ ವಿದ್ಯಾರ್ಥಿಗಳಿಂದ ತಮ್ಮ ಪದವಿಯನ್ನು ಹೊಂದಿದ ಮೇಲೆ ಕನಿಷ್ಟಪಕ್ಷ ಮೂರು ವರ್ಷಗಳಾದರೂ ಹಳ್ಳಿಗಳಲ್ಲಿ ನೆಲೆಸುವಂತೆ ಒಪ್ಪಿಗೆಯ ಪತ್ರವನ್ನು ಅವರಿಗೆ ಕಾಲೇಜಿಗೆ ಪ್ರವೇಶಕೊಡುವ ಮೊದಲೇ ನಿರ್ಬಂಧಿಸಿ ತೆಗೆದುಕೊಳ್ಳುವುದು ಒಂದೇ ದಾರಿಯಾಗಿದೆ.

ಕಸ್ತೂರ್ಬಾ ಮೆಡಿಕಲ್ ಕಾಲೇಜು ಜಿಲ್ಲೆಯ ಸೊತ್ತು. ಆದುದರಿಂದ ಮುಂದಿನ ಪೀಳಿಗೆಯ ಹಿತಚಿಂತನೆಗಾಗಿ ಅದನ್ನು ರೂಪಿಸಲು ನಿಮಗೆ ಮತ್ತು ಎಲ್ಲ ನ್ಯಾಯ ದೃಷ್ಟಿಯ ವಿಚಾರವಂತರಿಗೆ ವಿನ್ನವಿಸಿಕೊಳ್ಳುತ್ತೇನೆ

ತಾವು ನನ್ನ ಒಪ್ಪಿಗೆಯಿಲ್ಲದೆ ತಮ್ಮ ಪತ್ರವನ್ನು ಪ್ರಕಟಿಸಿರುವುದರಿಂದ ನಾನು ಇದನ್ನು ಪತ್ರಿಕೆಗಳಿಗೆ ಪ್ರಕಟಣೆಗಾಗಿ ಕಳುಹಿಸಬೇಕಾಯಿತು.

ತಮ್ಮವನೇ,
ಟಿ. ಎಮ್. ಎ. ಪೈ.

7—8—1953.

— ೦ —

ಭೂಮಿ ದಾನ

ಭೂಮಿದಾನವ ಮಾಡುವಾ
ರಾಮರಾಜ್ಯ ನೋಡುವಾ ||ಪಲ್ಲ||
ದುಡಿಮೆಯ ಬೆಲೆಯು ಹಿಗ್ಗಲಿ
ಹಣದ ಬೆಲೆಯು ಕುಗ್ಗಲಿ ||
ಭೂಮಿತಾಯಿ ಸೇವಕ
ಭೂಮಿಗೊಡೆಯನಾಗಲಿ || ೧ ||

ಗಾಳಿ ಬೆಂಕಿ ಆಗಸ
ನೀರು ಅಂತೆ ಭೂಮಿಯು ||
ದೇವ್ರ ಸೃಷ್ಟಿ ಕಾಣಿರೋ
ಎಲ್ಲ ಹಂಚಿಕೊಳ್ಳಿರೋ || ೨ ||

ಒಂಟಿ ಬಾಯ ಮಾಡಿದ
ಜೋಡಿ ಕೈಯ ನೀಡಿದ
ಇದರ ಅರ್ಥವೇನಿದು?
ದುಡಿಮೆ ಹೆಚ್ಚು ಗೈವುದು || ೩ ||

ಅವರು ಇವರು ಎನ್ನದೇ
ಸರ್ವಸೇವೆ ನಮ್ಮದೇ
ಬಡವನಂತೆ ಬಲ್ಲಿದ
ಸುಖದಿ ಬಾಳ ನೂಕಲಿ || ೪ ||

ವಿಷಮತೆಯ ಕ್ರಾಂತಿಯು
ಬೇಡ ರಕ್ತಕ್ರಾಂತಿಯು
ಅಹಿಂಸೆ ಪ್ರೇಮ ಶಾಂತಿಯು
ಬೇಕು ನಮಗೆ ಕಾಂತಿಯು ||೫||

ಜಡತೆ ನೀಗಿ ಏಳುವಾ
ಜನತೆಗಾಗಿ ಸಾಗುವಾ
ಭೂಮಿ ಸೇರ್ಮದಾರಿಗೆ
ಗೋಪಾಲ ಕಂದಗೆ ||೬||

ಸಾಧುಸಂತ ಜನರನು
ಒಂದು ಮಾಳ್ಪ ನಾಡನು
ಎಲ್ಲ ಕೆಲಸ ತೊರೆಯಿರಿ
ನನ್ನಿಯಿಂದ ಬನ್ನಿರಿ ||೭||

ಹಳ್ಳಿಯಿಂದ ಭಾರತ
ದಿಲ್ಲಿಯಿಂದ ಅಲ್ಲವು
ಹಳ್ಳಿ ಕಸುಬ ಮಾಡುವ
ದಿಲ್ಲಿ ಹೊಲಸ ತೊರೆಯುವ ||೮||

ಅನ್ನ ದೇವ್ರ ಪೂಜೆಯು
ಇಂದು ನಮ್ಮ ಹಾದಿಯ
ರಾಜಕೀ ಸ್ವತಂತ್ರವು
ಬರಿಯ ಟೊಳ್ಳು ತಂತ್ರವು || ೯ ||

ಅರ್ಥ ಸಮತೆ ರಾಜ್ಯವು
ಬೇಕು ನಮಗೆ ಭೋಜ್ಯವು
ವಿನೋಬ ಭಾವೆ ಆರ್ಯರು
ಗಾಂಧಿ ತತ್ವ ಕಾರ್ಯರು || ೧೦ ||

ಯಜ್ಞ ದಾನ ತಪವನು
ನೇಮದಿಂದ ಮಾಳ್ಪರು
ಕಾಲುನಡಿಗೆ ಯಾತ್ರೆಯ
ಕೊಂಡರವರು ಜಾತ್ರೆಯ ||೧೧||

ಹತ್ತು ಲಕ್ಷ ಎಕರೆಯು
...ದು ಅವರ ಸಿದ್ಧಿಯು
ಕೋಟಿ ಕೋಟಿ ಬೇಡಿವೆ
ನಮ್ಮ ಸೇವೆ ಕಾದಿದೆ || ೧೨ ||

— ಆರ್ಯಯರ್

ಹೆಸರಿನಲ್ಲೇನಿದೆ?

ಪಾದ್ರಿ "ಕ್ರೈಸ್ತ" ಪದೆಯುತ್ತಾನೆ
ವಕೀಲ "ಫೀಸು" ತೆಗೆದುಕೊಳ್ಳುತ್ತಾನೆ
ವೈದ್ಯರು "ಬಿಲ್ಲು" ಕಳುಹಿಸುತ್ತಾನೆ
ವ್ಯಾಪಾರಿ "ಲಾಭ" ಗಳಿಸುತ್ತಾನೆ
ಪಾಲುದಾರರು "ಡಿವಿಡೆಂಡು" ಪಡೆಯುತ್ತಾರೆ
ನಗರದಾರ "ಗೇಟ್" ವಸೂಲು ಮಾಡುತ್ತಾನೆ
ರಾಜರುಗಳಿಗೆ "ಗ್ರಾಂಟು" ಕೊಡುತ್ತಾರೆ
ದರೋಡೆಗಾರ "ಕೊಳ್ಳೆ" ಹೊಡೆಯುತ್ತಾನೆ
ಮಕ್ಕಳ ಕಳ್ಳ "ಪರಿಹಾರದ್ರವ್ಯ" ಕೇಳುತ್ತಾನೆ
ಹೆಸರಿನಲ್ಲೇನಿದೆ? ಎಲ್ಲವೂ ಒಂದೇ

ಕೆಲವರು ಕಾನೂನು ಪ್ರಕಾರ ಕೆಲವರು ಕ್ರೂರ ಟೀಕೆಯಿಂದ ಪಡೆಯುತ್ತಾರೆ

ತೆರಿಗೆಗಾರನ ದೇಹದಿಂದ ಮಾತ್ರ ಪ್ರತಿಯೊಂದು ಬಗೆಯ ಸಂಪತ್ತು ಹುಟ್ಟುತ್ತದೆ

(ಪಿ. ಟಿ ಎಂಡರ್ಸನ್ ಇವರು 1914ರ ಇಂಟರ್ನ್ಯಾಷನಲ್ ಪರ್ಸನಲ್ ಇದರಲ್ಲಿ ಬರೆದುದರನ್ನು ಹರಿಜನದಿಂದ ಉದ್ಧೃತ)

ಉಡುಪಿ ಡಿ ಮು. ಕೋರ್ಟಿನಲ್ಲಿ
S. C. No. 290/53.

ಕೆ. ಜಗನ್ನಾಥ ... ವಾದಿ
ಮತ್ತು
ಪಣ್ಣಿ ಹಾಂಡ ಕೂಡ ಪ್ರತಿವಾದಿರ
ಇವರೊಳಗೆ—

2ನೇ ಪ್ರತಿವಾದಿ, ಬೂದ ಹಾಂಡ—ದುರ್ಗಾ ಹಾಂಡ್ತಿ ಮಗ, ತೀರ್ಥಹಳ್ಳಿ ತಾಲೂಕು ಥರ್ಡಹಳ್ಳಿ ಕಸ್ಬಾ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಪ್ರತಿವಾದಿರು ವಾದಿಗೆ ತಾ. 4—5—... ರಲ್ಲಿ ಬರೆಕೊಟ್ಟ ಡಿಮಾಂಡ್ ನೋಟು ಮೇಗೆ ಬಹಾ ಬ್ಯಾಜು ವಸೂಲಿ ಬಗ್ಗೆ ವಾದಿ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ 29—8—53ಕ್ಕೆ ಸದ್ರಿ ಪ್ರತಿವಾದಿಯ ನೋಟೀಸು ಬಗ್ಗೆ ಇಟ್ಟಿದೆ. ಪ್ರತಿವಾದಿಯು ತನ್ನ ಉದಾಹರಣೆಯಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಬೆಳಿಗ್ಗೆ ಗಂಟೆ 11 ಹಾಜರಾಗಿ ಜಾಹಿರು ಮಾಡಿಕೊಳ್ಳತಕ್ಕದ್ದು ಎಂಬುದು ಈ ಮೂಲಕ ತಿಳಿಸಲಾಗಿದೆ.

K. J. Ballal
Pleader for Plaintiff
Camp Udipi Dated 10—8—53

ಆರುವರ್ಷಗಳ ಸಾಧನೆಯ ವಿವರ

(೧೨ನೇ ಪುಟದಿಂದ)

ನ್ನು ಸಾಧಿಸಲು ಈ ಸಂಶೋಧನಾಲಯಗಳು ನೆರವು ನೀಡುವ ಭರವಸೆ ಇದೆ.

ಅಧಿಕ ಆಹಾರ ಉತ್ಪಾದನಾ ಚಳುವಳಿಯು ವ್ಯರ್ಥವಾಗಿಲ್ಲ; ಅದರಂತೆಯೇ ವನಮಹೋತ್ಸವವೂ ನಿಷ್ಪ್ರಯೋಜಕವಾಗಿಲ್ಲ--ಈಚೆಗೆ ಜಪಾನೀ ಪದ್ಧತಿಯಲ್ಲಿ ಭತ್ತದ ವ್ಯವಸಾಯವನ್ನು ಮಾಡುವ ಕ್ರಮವನ್ನು ಪ್ರಚಾರಕ್ಕೆ ತರಲಾಗಿದೆ. ಇದು ನಮ್ಮ ರೈತರಿಗೆ ಒಂದು ಹೊಸ ಪಾಠವನ್ನು ಕಲಿಸುವ ನಿರೀಕ್ಷೆ ಇದೆ--ಪರಿಮಿತವಾದ ಕ್ಷೇತ್ರದಲ್ಲಿಯೇ ಅತ್ಯಧಿಕ ಫಲವನ್ನು ಪಡೆಯುವ ಬಗೆ ಹೇಗೆಂಬುದನ್ನು ಈ ಪದ್ಧತಿ ನಿದರ್ಶಿಸುತ್ತದೆ. ನಮ್ಮ ರೈತರ ಬಳಿಗೆ ವೈಜ್ಞಾನಿಕ ಅನುಭವವನ್ನು ಕೊಂಡೊಯ್ಯುವ ಪ್ರಯತ್ನಗಳು ನಡೆಯುತ್ತಿದ್ದಂತೆಯೇ—ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಒಕ್ಕಲುತನವನ್ನು ಕಾಯಿದೆ ರೀತ್ಯಾ ಸುಧಾರಿಸುವ ಪ್ರಯತ್ನಗಳನ್ನು ರಾಜ್ಯ ಸರಕಾರಗಳು ಮಾಡಿರುತ್ತವೆ. ಮದ್ರಾಸಿನಲ್ಲಿ ತಂಜಾವೂರಿನಲ್ಲಿ ಧನಿ—ಒಕ್ಕಲುಗಳ ಮನಸ್ತಾಪಕ್ಕೆ ತಡೆಯೊಡ್ಡಲು ಒಕ್ಕಲುಹಿತ ಮಸೂದೆಯನ್ನು ಜ್ಯಾರಿಗೆ ತಂದಿರುವರಲ್ಲದೆ, ಇಡೀ ರಾಜ್ಯಕ್ಕೆ ಅನ್ವಯಿಸುವ ರೀತಿಯಲ್ಲಿ ಅದನ್ನು ವ್ಯಾಪಕಗೊಳಿಸುವ ವಿಚಾರವಿದೆ. ಇದರಂತೆ ಬೇರೆ ರಾಜ್ಯ ಸರಕಾರಗಳೂ "ಉಳುವವನೇ ಹೊಲದೊಡೆಯ" ಎಂಬುದಾಗಿ ಕಾಂಗ್ರೆಸು ಹಿಂದೆ ಕೊಟ್ಟ ಭರವಸೆಯ ಮಾತುಗಳನ್ನು ಪೂರೈಸಲು ಕಾಯಿದೆ ಮಾಡಿವೆ ಅಥವಾ ಮಾಡುವ ಎತ್ತುಗಡೆಯಲ್ಲಿವೆ.

ಕೈಗಾರಿಕಾ ಕ್ಷೇತ್ರದಲ್ಲಿ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸಿ ಆಯಾತವನ್ನು ಕಡಿಮೆ ಮಾಡುವ ಧೋರಣೆಯು ಸಾಧಾರಣ ಯಶಸ್ಸನ್ನು ಪಡೆಯಿತೆಂದು ಗೊತ್ತಾಗುತ್ತದೆ. ನಮ್ಮ ಆಯಾತಗಳಲ್ಲಿ ಆಹಾರ ಧಾನ್ಯದ ಪ್ರಮಾಣವೇ ಅತಿ ಹೆಚ್ಚಾಗಿದ್ದು– ಕಳೆದ ವರ್ಷ ಆಹಾರ ಧಾನ್ಯಗಳ ದಾಸ್ತಾನು ದೇಶದೊಳಗೆ ಸಾಕಷ್ಟು ಇದ್ದಿತು. ತತ್ಪರಿಣಾಮವಾಗಿ ಆಹಾರದ ಆಮದು ಕಡಿಮೆಯಾಯಿತು. ಬೇರೆ ದೇಶಗಳ ಅನುಭವದೊಡನೆ ಹೋಲಿಸಿ ನೋಡಿದರೆ, ನಮ್ಮ ದೇಶದ ಆಯಾತ ನಿರ್ಯಾತ ಅನುಭವವು ಸಮಾಧಾನಕರವಾಗಿಯೇ ಇದೆ. ನಿರ್ಯಾತ ವ್ಯಾಪಾರವನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಸರಕಾರವು ಸುಂಕ ರಿಯಾಯತಿಯನ್ನು ಮಾಡಿದಂತೆ, ಆಯಾತ ಭರವನ್ನೂ ಇಳಿಸಲು ಸ್ವದೇಶೀ ವ್ರತದ ಪ್ರಚಾರವನ್ನು ಮಂತ್ರಿಗಳು ಕೈಗೊಂಡರು. ಅಮೇರಿಕಾ ಮತ್ತು ಬ್ರಿಟನುಗಳಲ್ಲಿ ಜನರ ಜೀವನ ವೆಚ್ಚ ಸೂಚಿಯು ಏರುವಾಗ ಭಾರತದಲ್ಲಿ ಅದು ಹೆಚ್ಚು ಕಡಿಮೆ ಸ್ಥಿರವಾಗಿ ನಿಂತಿರುವುದು—ನಮ್ಮ ಸರಕಾರದ ಆರ್ಥಿಕ ಧೋರಣೆಯ ವಿಜಯವೆನ್ನಬೇಕು.

ನಾವು ಬಡವರಾದ್ದರಿಂದ ಧನಿಕರ ಕರುಣೆ ಮತ್ತು ದಯೆಯನ್ನು ಕೆಲಮಟ್ಟಿಗೆ ಅವಲಂಬಿಸಿದರೆ ಅದರಲ್ಲಿ, ಅಪವಿತ್ರವಾದುದೇನೂ ಇರಲಿಕ್ಕಿಲ್ಲ. ಅಲ್ಲದೆ ಹಿಂದೊಂದು ಕಾಲದಲ್ಲಿ "ವಸುಧೈವ ಕುಟುಂಬಕಮ್" (ಲೋಕವೇ ಒಂದು ಕುಟುಂಬ) ಎಂಬುದಾಗಿ ಸಾರಿದ ಭಾರತೀಯರು, ತಮ್ಮ ದುರ್ದೆಸೆಯ ಈ ದಿನಗಳಲ್ಲಿ ಅಮೇರಿಕಾದಂಥ ಶ್ರೀಮಂತ ರಾಷ್ಟ್ರ ನೀಡುವ ಶರ್ತವಿಲ್ಲದ ನೆರವಿಗೆ ಕೈಯೊಡ್ಡಿದರೆ ಆಕ್ಷೇಪ ಬೇಡ. ಅಮೇರಿಕಾದ ಸರಕಾರವು ಸಮಾಜ ವಿಕಾಸ ಕೇಂದ್ರಗಳನ್ನು ನಡೆಸಿಕೊಂಡು ಹೋಗಲು ಧನ ಸಹಾಯ ಮಾಡಿದೆಯಲ್ಲದೆ ಬೇರೆ ರೀತಿಯಿಂದಲೂ ಹಣ ಕೊಟ್ಟಿದೆ. ಹಾಗೆಯೇ ರಾಷ್ಟ್ರಕೂಟದ ದೇಶಗಳು ರಚಿಸಿದ ಕೊಲಂಬೋ ಯೋಜನೆಯಂತೆಯೂ ಬ್ರಿಟನಿನೊಡನೆ ಇರುವ ಸ್ಟರ್ಲಿಂಗ್ ಶಿಲ್ಕಿನಿಂದಲೂ ನಾವು ಹಣವನ್ನು ಪಡೆದುಕೊಂಡಿದ್ದೇವೆ. ಎಷ್ಟಾದರೂ ಪಂಚವಾರ್ಷಿಕ ಯೋಜನೆಗೆ ಬೇಕಾದ ಹಣ ದೊರೆಯದ ಅದು ಕೊರತೆಯನ್ನು ತೋರಿಸುತ್ತದೆ. ಕೇಂದ್ರ ಸರಕಾರವೂ ಹತ್ತು ರಾಜ್ಯ ಸರಕಾರಗಳೂ ಈ ವರ್ಷ ನೂರು ಕೋಟಿಗೂ ಮಿಕ್ಕಿ ಹಣವನ್ನು ಸಾಲ ಪಡೆದಿವೆ. ಜನತೆಯು ಪ್ರಜಾಪ್ರಭುತ್ವದ ಸ್ಫೂರ್ತಿ ಮತ್ತು ಸಿದ್ಧಾಂತಕ್ಕನುಸಾರವಾಗಿ, ಈ ಸಾಲ ಅಲ್ಪಾವಧಿಯಲ್ಲಿಯೇ ತುಂಬುವಂತೆ ನೆರವಾದುದು ಸರಕಾರದ ಮೇಲೆ, ಅದು ಕೈಗೊಂಡಿರುವ ಕಲ್ಯಾಣಕಾರಿ ಯೋಜನೆಗಳ ಮೇಲೆ ನಮಗಿರುವ ವಿಶ್ವಾಸದ ದ್ಯೋತಕ.

ಸಾರಿಗೆ ಸಂಪರ್ಕದ ವಿಚಾರದಲ್ಲೂ ನಾವು ತುಂಬ ಮುಂದುವರಿದಿದ್ದೇವೆ. ವಿಶಾಖಪಟ್ಟಣದಲ್ಲಿ ಹಡಗು ಕಟ್ಟುವ ಕಾರಖಾನೆ, ಬೆಂಗಳೂರಿನ ವಿಮಾನ ಕಾರಖಾನೆ, ಚಿತ್ತರಂಜನದ ರೈಲ್ವೆ ಕಾರಖಾನೆಗಳು ದಿನೇ ದಿನೇ ಉತ್ತಮ ಸ್ಥಿತಿಗೆ ಬರುತ್ತಿವೆ. ವಿಮಾನೋದ್ಯಮವನ್ನು ರಾಷ್ಟ್ರೀಕರಿಸಿದುದು ಈ ವರ್ಷದ ಒಂದು ಮಹಾ ಸಾಧನೆ. ಹಾಗೆಯೇ ಹಳ್ಳಿ ಹಳ್ಳಿಗೂ ಟಪ್ಪಾಲು ಸಂಪರ್ಕವನ್ನು ವ್ಯಾಪಕಗೊಳಿಸಲು ಪ್ರಯತ್ನ ನಡೆದು ಇದುವರೆಗಿದ್ದ ಕೊರತೆಗಳು ಒಂದೊಂದೇ ದೂರಾಗುತ್ತಿವೆ. ಮಾರ್ಗಗಳಿಗೆ ತಾರು ಹಾಕುವ, ಹೊಸತಾಗಿ ಮಾರ್ಗಗಳನ್ನು ರಚಿಸುವ ಪ್ರಯತ್ನವೂ ಹಿಂದುಳಿದಿಲ್ಲ. ಶೈಕ್ಷಣಿಕ ಕ್ಷೇತ್ರದಲ್ಲಿ ಮದ್ರಾಸು ಸರಕಾರವು ಕ್ರಾಂತಿಕಾರ ಪ್ರಯೋಗವೊಂದನ್ನು ತೊಡಗಿದ್ದರೆ—ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸುವ ಅನುಕರಣೀಯ ಸಾಹಸವನ್ನು ಮುಂಬಯಿ ಮಾಡಿರುತ್ತದೆ. ಪಾನ ಪ್ರತಿಬಂಧವನ್ನು ಇವೆರಡೂ ರಾಜ್ಯಗಳು ಜ್ಯಾರಿಯಲ್ಲಿ ತಂದು ಘಟನೆಯ ಪ್ರಾಮುಖ್ಯ ಆದೇಶಗಳಲ್ಲೊಂದನ್ನು ಪರಿಪಾಲಿಸಿವೆ.

ದಕ್ಷಿಣ ಭಾರತದಲ್ಲಿ ಜನತೆಯು ಭಾಷಾನುಗುಣವಾದ ಪ್ರಾಂತ್ಯಗಳನ್ನು ನಿರ್ಮಿಸಬೇಕೆಂದು ಕೇಳುತ್ತಿದ್ದುದಕ್ಕೆ ಕಳೆದ ವರ್ಷ ಸರಕಾರವು ಸಾಕಷ್ಟು ಮಹತ್ವ ಕೊಟ್ಟಿದೆ. ಈ ದಿಸೆಯಲ್ಲಿ ಪ್ರಾರಂಭಿಕ ಹೆಜ್ಜೆಯಾಗಿ ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನದು ಕೈಗೆತ್ತಿಕೊಂಡಿದೆ; ಮತ್ತು ಸದ್ಯದಲ್ಲಿಯೇ ಬೇರೆ ಭಾಷಾ ರಾಜ್ಯಗಳ ಸಂಗತಿಯನ್ನು ವಿಮರ್ಶಿಸಿ ಒಂದು ಸಮಂಜಸವಾದ ನಿರ್ಧಾರಕ್ಕೆ ಬರಲು ಅನುಕೂಲವಾಗುವಂತೆ ಉಚ್ಚಮಟ್ಟದ ಆಯೋಗವೊಂದನ್ನು ನೇಮಿಸಲಿರುವುದಾಗಿ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇದು ವರೆಗೆ ನಿರಾಶ್ರಿತರ ಪ್ರಶ್ನೆ, ಅಲ್ಪಸಂಖ್ಯಾಕರ ಪ್ರಶ್ನೆ, ಆರು ನೂರಕ್ಕೂ ಮಿಕ್ಕಿದ ದೇಶೀಯ ಸಂಸ್ಥಾನಗಳ ಪ್ರಶ್ನೆ ಇತ್ಯಾದಿಗಳನ್ನು ಸರಕಾರ ಬಿಡಿಸಬೇಕಾಗಿ ಬಂದುದರಿಂದ, ಭಾಷಾ ರಾಜ್ಯದ ಪ್ರಶ್ನೆ ಹಿಂದೆಯೇ ಉಳಿಯಿತು. ಈಗ ಈ ವಿಷಯವನ್ನು ಚೆನ್ನಾಗಿ ವಿಮರ್ಶಿಸಲು ಸರಕಾರ ಮುಂದಾದುದು ಸಂತೋಷ.

ಆಂತರಿಕ ಪುನರ್ಘಟನೆಯಂತೆ ವಿದೇಶಗಳೊಡನೆಯೂ ಸರಕಾರ ಯೋಗ್ಯ ಮೈತ್ರಿಯನ್ನು ಸ್ಥಾಪಿಸಿಕೊಂಡಿದೆ. ಮತ್ತು ನೆಹರೂರ ವ್ಯಕ್ತಿತ್ವದ ಪ್ರಭಾವದಿಂದಲೋ ಎಂಬಂತೆ, ಭಾರತವು ಅಂತಾರಾಷ್ಟ್ರೀಯ ರಂಗದಲ್ಲಿ ಅತ್ಯಂತ ವರ್ಚಸ್ವಿಯಾದ ದೇಶವಾಗಿ ಪರಿಗಣಿಸಲ್ಪಟ್ಟಿದೆ. ಭಾರತಕ್ಕೆ ಕಾಶ್ಮೀರ ಮುಂತಾದ ತನ್ನದೇ ಪ್ರಶ್ನೆಗಳು ಇದ್ದರೂ—ಲೋಕ ಶಾಂತಿಯನ್ನು ರಕ್ಷಿಸುವ ಸದ್ಭಾವನೆಯಿಂದ ಪ್ರೇರಿತವಾದ ನಮ್ಮ ಸರಕಾರವು, ತನ್ನ ಧೋರಣೆಗೆ ಅನುಗುಣವಾದ ಹಾಗೂ ಭಾರತದ ಘನತೆಗೆ ತಕ್ಕುದಾದ ಎಲ್ಲ ರೀತಿಯ ಮಹತ್ಕಾರ್ಯಗಳನ್ನೂ ಹೊಣೆಯನ್ನು ಹೊತ್ತಿದೆ. ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರಾಗಿಯೂ ಸರ್ ಬೆನೆಗಲ್ ನರಸಿಂಗರಾಯರು ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿಯೂ ಭಾರತದ ಶೋಭೆ ಹೆಚ್ಚಿಸಿರುವರು. ನೆಹರೂರವರ ಮುತ್ಸದ್ದಿತನದ ಪ್ರಭಾವದಿಂದ ಮೂರು ವರ್ಷಗಳಿಂದ ನಡೆಯುತ್ತಿದ್ದ ಕೊರಿಯಾದ ಕಾಳಗ ಈಗ ತಾನೆ ನಿಂತು, ಶಾಂತಿಯ ಅರುಣೋದಯಕ್ಕೆ ಎಡೆಮಾಡಿಕೊಟ್ಟಿದೆ. ಭಾರತಕ್ಕೆ ಹೊರಲಾರದ ಹೊರೆ ಎಂಬಂತಿದ್ದರೂ—ಕೊರಿಯಾದ ಕದನ ವಿರಾಮವನ್ನು ಯಶಸ್ವಿಗೊಳಿಸುವಲ್ಲಿ ಅದರ ಮೇಲೆ ಮಹತ್ವದ ಜವಾಬ್ದಾರಿ ಬಿದ್ದಿದೆ. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ರಾಷ್ಟ್ರಗಳ ನಡುವೆ ಸಂಕ ನಿರ್ಮಿಸುವ ಮಹಾ ಸಾಹಸವನ್ನು ಭಾರತ ಸರಕಾರವೊಂದೇ ಕೈಗೊಳ್ಳಬಲ್ಲದೆಂದು ಎರಡೂ ಪಕ್ಷದವರು ಗಟ್ಟಿ ನಂಬಿದ್ದಾರೆ. ಸ್ವತಂತ್ರ ಭಾರತವು ಅಲ್ಪಾವಧಿಯಲ್ಲಿ ಇಷ್ಟು ಉನ್ನತವಾದ ಸ್ಥಾನಮಾನವನ್ನು ಪಡೆಯಲು ಸಮರ್ಥವಾದುದಕ್ಕೆ ನಾವೆಲ್ಲರೂ ಹೆಮ್ಮೆ ಪಟ್ಟುಕೊಳ್ಳಬಹುದು

ಕಳೆದ ವರ್ಷ ನೆರೆಯ ರಾಷ್ಟ್ರವಾದ ಪಾಕಿಸ್ತಾನ ಮೈತ್ರಿಯ ಭಾವನೆಯನ್ನು ತೋರಿ, ಭಾರತಕ್ಕೆ ಸ್ನೇಹ ಹಸ್ತವನ್ನು ಮುನ್ನೀಡಿತು. ಪಾಕಿಸ್ತಾನದ ಪ್ರಧಾನಿಯಾಗಿದ್ದ ಲಿಯಾಕತ ಅಲಿಖಾನರು ಹಿಂದೊಮ್ಮೆ ಮುಷ್ಟಿಯನ್ನೆತ್ತಿ ಕಾಳಗದ ಘರ್ಜನೆ ಕೊಟ್ಟುದು ಇನ್ನೂ ನಮಗೆ ನೆನಪಿದೆ. ಅಂದಿನ ಆವೇಶಕ್ಕೂ ಇಂದಿನ ಶಾಂತ ನಡೆನುಡಿಗೂ ಅಜಗಜಾಂತರವಿದೆ. ಭಾರತವು ದುಡುಕದೆ ಸಹನೆಯನ್ನು ತೋರುತ್ತಾ ಬಂದುದನ್ನು ಹಿಂದೆ ದೂರಿದವರಿದ್ದರೂ ಇಂದು ಈ ಸಹನೆಯು ಸತ್ಫಲವನ್ನು ನೀಡುತ್ತಿರುವುದನ್ನು ಕಂಡರೆ ಸರಕಾರದ ನಿಲುಮೆಯೇ ಸರಿ ಎಂದು ವ್ಯಕ್ತಗೊಳ್ಳುವುದು. ಉಭಯ ರಾಷ್ಟ್ರಗಳ ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯ ಮೇಲೆ ಪರಿಣಾಮ ಮಾಡಬಲ್ಲ ರೀತಿಯಲ್ಲಿ ಈಗ ಸಂಧಾನದ ಮಾತುಕತೆಗಳು ತೊಡಗಿವೆ. ಇವುಗಳು ಸಫಲಗೊಳ್ಳುವ ಪೂರ್ಣ ವಿಶ್ವಾಸವೂ ಇದೆ. ಕಾಶ್ಮೀರದಂಥ ಪ್ರಶ್ನೆಯು ಅಂತಾರಾಷ್ಟ್ರೀಯ ಪಗಡೆಯಾಟದಲ್ಲಿ ಭಾರತಕ್ಕೆ ಸೋಲುಂಟಾಗುವ ರೀತಿಯಲ್ಲಿ ಬಿಗಡಾಯಿಸುತ್ತಿದ್ದರೂ—ಸತ್ಯಕ್ಕೆ ಜಯ ಲಭ್ಯವೆಂಬ ಮಾತಿನ ಮೇಲೆ ಪೂರ್ಣ ವಿಶ್ವಾಸವಿಟ್ಟು ನಡೆದರೆ, ನಮಗೆ ಯಶಃಪ್ರಾಪ್ತಿಯಾಗಿಯೇ ತೀರುವುದು. ಒಟ್ಟಿನಲ್ಲಿ ಕಳೆದ ಆರು ವರ್ಷಗಳ ಕಾಲ ಆರ್ಥಿಕ ಸ್ವಾತಂತ್ರ್ಯದ ಬುನಾದಿಯನ್ನು ಹಾಕುವ ಪ್ರಯತ್ನ ನಡೆದಿದೆಯಲ್ಲದೆ—ಅಂತರಾಷ್ಟ್ರೀಯರಂಗದಲ್ಲಿ ಭಾರತ ಖ್ಯಾತಿಯನ್ನೂ ಪಡೆದಿದೆ. ಮುಂದಿನ ಸ್ವಾತಂತ್ರ್ಯೋತ್ಸವದ ಸಮಯ ನಮ್ಮ ಪರಿಸ್ಥಿತಿಯು ಈಗಿನದಕ್ಕಿಂತ ತುಂಬಾ ಊರ್ಜಿತಗೊಂಡು ಸುಧಾರಿಸುವ ಭರವಸೆಯನ್ನು ಇದು ವರೆಗಿನ ಪ್ರಗತಿ ನೀಡುತ್ತದೆ.

ಉಡುಪಿಗೆ ಬಂದಾಗ ಅತ್ಯಾಧುನಿಕವಾದ ಯುವತಿ ಯುವಕರಿಗೆ
ಮೆಚ್ಚುಗೆಯಾಗುವ ಕೈಗಡಿಯಾರಗಳು ಎಲ್ಲ ಸಿಗುತ್ತವೆ ಗೊತ್ತೇ?

ಶ್ರೀ ಕೃಷ್ಣಾ ವಾಚ್ ವರ್ಕ್ಸ್,
ಸಂತೆಕಟ್ಟೆ, ಉಡುಪಿ.

ಅತೀ ಅಗ್ಗ ದರದಲ್ಲಿ ಗ್ರಾಮಫೋನ್ ಸಾಮಗ್ರಿಗಳು
ಮತ್ತು ಕನ್ನಡಕಗಳು ದೊರೆಯುತ್ತವಲ್ಲದೆ ಗ್ಯಾರಂಟಿ
ಯಾಗಿ ರಿಪೇರಿ ವಗೈರೆಗಳನ್ನು ಶೀಘ್ರದಲ್ಲಿ
ಮಾಡಿಕೊಡಲಾಗುವುದು.

SRI KRISHNA WATCH WORKS,
UDIPI.

SR
FAMOUS for QUALITY
BEEDIES
ಎಸ್ಸಾರ್. ಬೀಡಿ.
ಅತ್ಯುತ್ತಮ ಬೀಡಿಗಳಿಗೆ
ಪ್ರಖ್ಯಾತಿಪಟ್ಟದ್ದು
ಇದಕ್ಕೆ ಗಿರಾಕಿಗಳು ದಿನೇ ದಿನೇ ಹೆಚ್ಚುತ್ತಿದ್ದಾರೆ.
S.R. Beedi Works

ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಮದ್ರಾಸು ಸರಕಾರ ತಂದ ಬದಲಾವಣೆ ಅನಿವಾರ್ಯ—

(೧೧ನೇ ಪುಟದಿಂದ)

ಳಿದ ಮಾತನ್ನು ಮನಸ್ಸಿಗೆ ತೆಗೆದುಕೊಂಡಿದ್ದರೆ ಇಂದು ಈ ರೀತಿಯ ತರ್ಕ ನಡೆಯುತ್ತಿರಲಿಲ್ಲ. "ಬೇರೇನೂ ಸಾಧ್ಯವಿಲ್ಲದಿದ್ದರೂ, ಶಾಲೆಯ ಶಿಕ್ಷಣ ಸಮಯವನ್ನು ಕಡಿಮೆ ಮಾಡಲು ನೀವು ಒಪ್ಪಿಕೊಂಡರೆ ನಾನು ತೃಪ್ತನು. ಬದಲಾವಣೆಯ ಸಾತ್ವಿಕ ಪ್ರಯೋಜನವನ್ನು ಕಲ್ಪಿಸಿಕೊಡಲು ನಾವುಮುಂದೆಯೂ ಕಷ್ಟಬಿಡಬೇಕು. ಆದರೆ ಇಂತಹ ವಿಶಾಲ ದೇಶದಲ್ಲಿ ಎಲ್ಲಾ ಪೂರ್ವ ಸಿದ್ಧತೆಯಿಂದ ಕಾರ್ಯ ಪ್ರಾರಂಭಿಸಲು ಸಾಧ್ಯವಿಲ್ಲ."ವೆಂದ ಅವರ ಮಾತು ಮರೆಯುವಂತಹದಲ್ಲ.

ವಿದ್ಯೆಯು ಪ್ರಯೋಜನಕಾರಿಯಾಗಬೇಕಾದರೆ, ಅದು ಮೆದುಳಿನ ತರಬೇತಿ ಮಾತ್ರ ಬಯಸಿದರೆ ಸಾಲದು. ಹೃದಯ ಮತ್ತು ಕೈಗಳ ತರಬೇತಿಯೂ ಆಗಬೇಕು. ಆದರೆ ನಮ್ಮ ವಿದ್ಯಾಭ್ಯಾಸ ಕ್ರಮ ಮೊದಲನೆಯನ್ನು ಮಾತ್ರ ಲಕ್ಷಿಸಿ, ಉಳಿದೆರಡು ವಿಷಯಗಳನ್ನು ಅಲಕ್ಷಿಸುತ್ತಿದೆ. ಜಪಾನಿನ ವಿದ್ಯಾಭ್ಯಾಸ ಕ್ರಮದಲ್ಲಿ ಗಣಿತ, ರಸಾಯನ ಶಾಸ್ತ್ರ ಮತ್ತು ಸಂಗೀತದೊಂದಿಗೆ ಹೊಲಿಗೆ, ಬಡಗಿಯ ಕೆಲಸ, ಹೂದೋಟವೇ ಮೊದಲಾದ ಔದ್ಯೋಗಿಕ ಶಿಕ್ಷಣವನ್ನು ಕೊಡುತ್ತಿರುವರು. ಇದರಿಂದ ಮಕ್ಕಳು ಮುಂದೆ ಬಡಗಿಯಾಗಬೇಕು, ಹೊಲಿಗೆಯವನಾಗಬೇಕೆಂಬ ಅರ್ಥವಲ್ಲ. ಪ್ರಪಂಚದ ಪರಿಚಯ ಸಾಧನವನ್ನಾಗಿ ಈ ಎಲ್ಲಾ ವಿಚಾರಗಳನ್ನು ಚಿಕ್ಕ ಮಕ್ಕಳ ಗಮನಕ್ಕೆ ತರುತ್ತಿರುವರು. ತನ್ನ ಭವಿಷ್ಯದ ಉದ್ಯೋಗವನ್ನು ಹೈಸ್ಕೂಲು ಶಿಕ್ಷಣದ ಸಮಯ ಮಾತ್ರ ವಿದ್ಯಾರ್ಥಿ ನಿರ್ಣಯಿಸಿಕೊಳ್ಳುತ್ತಾನೆ- ಅದಕ್ಕೆ ತಕ್ಕ ಎಲ್ಲಾ ಅನುಕೂಲತೆಗಳನ್ನೂ ಅಲ್ಲಿ ಕಲ್ಪಿಸಿ ಕೊಡುತ್ತಿರುವರು. ಮದ್ರಾಸು ಸರಕಾರದ ಹೊಸ ಯೋಜನೆಯ ಧ್ಯೇಯವು ಬೇರೆಯಲ್ಲ. ಈ ಹೊಸ ಯೋಜನೆಯ ದೆಸೆಯಿಂದ ಬುನಾದಿ ಶಿಕ್ಷಣದಲ್ಲಿ ವಿಶ್ವಾಸವಿಲ್ಲದವರೂ ಇಂದು ಅದರ ಪ್ರತಿಪಾದಕರಾಗಿರುವರು; ಬುನಾದಿ ಶಿಕ್ಷಣ ಕ್ರಮದಂತೆ ವೃತ್ತಿಯನ್ನು ಕಲಿಯುವುದು ಒಳ್ಳೆಯದೆಂದು ಅವರ ಅಭಿಪ್ರಾಯವಾದರೆ, ಪ್ರಾಥಮಿಕ ವಿದ್ಯಾಭ್ಯಾಸದ ಹೊಸ ಯೋಜನೆಯನ್ನು ಅವರು ವಿರೋಧಿಸುವುದೇಕೆಂದು ಅರ್ಥವಾಗುವುದಿಲ್ಲ. ವೃತ್ತಿಯಲ್ಲಿ ತರಬೇತಿ ಹೊಂದಿದ ಕೆಲವರು ಮಾತ್ರ ಮಕ್ಕಳಿಗೆ ವೃತ್ತಿ ಕಲಿಸಲು ಯೋಗ್ಯತೆಯುಳ್ಳವರೆಂಬುದನ್ನು ಒಪ್ಪಲಾರರು. ಹಳ್ಳಿಯಲ್ಲಿರುವ ವೃತ್ತಿಗಳನ್ನು ಕಂಡುಕೊಂಡೇ ಮಗು ಜ್ಞಾನವನ್ನು ಅನುಭವ ಪಡೆಯುವುದು ಒಳ್ಳೆಯದು. ಬೇಡವಾದುದನ್ನು ಕಲಿಯಬೇಕೆಂಬ ಒತ್ತಾಯ ಬೇಕಿಲ್ಲ. ಯೋಗ್ಯ ರೀತಿಯ ಪ್ರಚಾರ ಪರಿಶ್ರಮದಿಂದ ಹೊಸ ಯೋಜನೆ ಜಾತಿವೃತ್ತಿ ಎಂಬ ವ್ಯತ್ಯಾಸವನ್ನೆ ನಿರ್ನಾಮ ಮಾಡಬಲ್ಲದು. ಜಾತಿಯ ಪದ್ಧತಿಯನ್ನು ಹೋಗಲಾಡಿಸಬೇಕೆಂದು ಪ್ರತಿಯೊಬ್ಬನೂ ಬಾಯಿ ಉಪಚಾರ ಮಾಡುತ್ತಿರುವನು. ಆದರೆ ಹಿಂದುಳಿದ ಜಾತಿಯೆಂಬ ಕೂಗನ್ನೆಬ್ಬಿಸಿ ಅವರ ಬೆನ್ನಿನ ಮೇಲೆ ಕೆಲವರು ವಿದ್ಯಾವಂತರೂ, ಸ್ಥಾನಮಾನ ಪಡೆದವರೂ ಸವಾರಿ ಮಾಡುತ್ತಿರುವರು ಈ ಜಾತೀಯತೆ ಶಾಶ್ವತವಾಗಿ ನಿಲ್ಲುವಂತೆ ಮಾಡುತ್ತಿರುವರು. ವಿದ್ಯೆಯು ಎಲ್ಲರ ಸೊತ್ತೆಂದು ಇವರೇಕೆ ಒಪ್ಪುವುದಿಲ್ಲ ತಮ್ಮ ಧುರೀಣತ್ವ ಹೋಗಬಹುದೆಂಬ ಭಯ ಅವರಿಗಿದೆಯೇ! ಈ ಹೊಸ ಸಂಯೋಜನೆಯಿಂದ ಬಡಗಿಯು ಬಡಗಿಯಾಗಿಯೇ ಉಳಿಯಬೇಕೆಂದು ನಮ್ಮ ಬಯಕೆಯಲ್ಲ. ನಮಗೆ ಓದುಬರಹಬಲ್ಲ ಬಡಗಿಬೇಕು ಎಂಬುದಷ್ಟೆ.

ಈಗ ಜ್ಯಾರಿಗೆ ತಂದ ಪದ್ಧತಿ ಕೊನೆಯ ಮಾತಲ್ಲ. ಅನೇಕ ಸುಧಾರಣೆಗಳಾಗಬೇಕು. ಮುಖ್ಯವಾಗಿ:—

(1) ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತೆಯಲ್ಲಿರುವ ಪ್ರಾಥಮಿಕ ಶಾಲೆಗಳನ್ನು ಆಯಾಯ ಪಂಚಾಯತ ಬೋರ್ಡುಗಳಿಗೆ ಒಪ್ಪಿಸಿಕೊಡಬಹುದು. ಇದರಿಂದ ಹಳ್ಳಿಗರಿಗೆ ತಮ್ಮ ತಮ್ಮ ಶಾಲೆಗಳಲ್ಲಿ ಸಹಭಾಗಿಗಳಾಗಲು ಸಾಧ್ಯವಾಗುವುದಲ್ಲದೆ ಪೆಚ್ಚಾಗಿ ಅತೃಪ್ತಿಕರ ರೀತಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ನಿರ್ವಹಿಸುತ್ತಿರುವ ಡಿಸ್ಟ್ರಿಕ್ಟ್ ಬೋರ್ಡುಗಳ ಹಣಕಾಸಿನ ಜವಾಬ್ದಾರಿಯನ್ನೂ ಕಡಿಮೆಮಾಡುವುದು. ಅಧ್ಯಾಪಕರ ವರ್ಗಾವರ್ಗಿಯೂ ಕಡಿಮೆಯಾಗುವುದು. ಪಂಚಾಯತ ಬೋರ್ಡು ಅಧ್ಯಕ್ಷರೂ, ಸದಸ್ಯರೂ ಹಳ್ಳಿಗರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಒತ್ತಾಯಿಸಲು ಸಾಧ್ಯವಾಗುವುದು. ಅಕ್ಷರತೆ ವರ್ಧಿಸಲು ಹಳ್ಳಿಹಳ್ಳಿಗಳೊಳಗೆ ಪರಸ್ಪರ ಸ್ಪರ್ಧೆ ಬರುವುದು. ಈಗ ಇರುವ ಖಾಸಗಿ ಶಾಲೆಗಳು ಹಾಗೆಯೇ ಮುಂದುವರಿಯುವುದಾದರೂ, ಪಂಚಾಯತ ಬೋರ್ಡು ಆ ಶಾಲೆಗಳನ್ನು ಹಳ್ಳಿಗಳ ಒಮಕಿನಲ್ಲೊಂದೇದು ತಿಳಿದು ಸಹಕರಿಸುವದು.

(2) ಹಳ್ಳಿಗಳಲ್ಲಿ ಶಾಲೆಗಳಿಲ್ಲದ ಕಡೆಗಳಲ್ಲಿ ಹಳ್ಳಿಗರೇ ಶಾಲೆಗಳನ್ನು ತೊಡಗುವಂತೆ ಉತ್ತೇಜನಕೊಟ್ಟು ಸವಲತ್ತು ನೀಡಬಹುದು.

(3) ಶಾಲೆಗೆ ಹೋಗುವ ಪ್ರಾಯದ ಮಕ್ಕಳಲ್ಲಿ ನೇಕಡಾ 75ಕ್ಕೂ ಮಿಕ್ಕಿರುವ ಕಡೆಗಳಲ್ಲಿ ಕಡ್ಡಾಯ ಶಿಕ್ಷಣವನ್ನು ತೊಡಗಬಹುದು.

(4) ಶಾಲೀಯಿಕ ಕ್ರಮದ ಫಲ ಪಟ್ಟಣದ ಮಕ್ಕಳಿಗೂ ದೊರೆಯಬೇಕಾದುದು ಆಗತ್ಯವಾದುದರಿಂದ ಯೋಜನೆಯನ್ನು ಪಟ್ಟಣಗಳಿಗೂ ಹೊಂದಿಸಬೇಕು.

(5) ಈ ಬದಲಾವಣೆಯನ್ನು ಹಾಯರ ಎಲಿಮೆಂಟರಿ ಶಾಲೆಗಳಿಗೂ ಅನ್ವಯಿಸಬೇಕಲ್ಲದೆ ಅಲ್ಲಲ್ಲಿ ರಾತ್ರಿ ಹೈಸ್ಕೂಲುಗಳನ್ನು ತೆರೆಯಲು ಪ್ರೋತ್ಸಾಹ ಕೊಡಬೇಕು. ಇದರಿಂದ ಉದ್ಯೋಗಿಗಳ ಮಕ್ಕಳು ಹಗಲು ತಮ್ಮ ಕೆಲಸ ಮುಗಿಸಿ ರಾತ್ರಿಶಾಲೆಯ ಪ್ರಯೋಜನವನ್ನು ಪಡೆಯಲು ಅನುಕೂಲವಾಗುವುದು. ಈಗ ಇರುವ 150) ಹೈಸ್ಕೂಲುಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಬೇಕು.

(6) ಶಾಲೆಯ ಅಧ್ಯಾಪಕರಿಗೆ ಸಂಬಳದೊಂದಿಗೆ ಐದು ರೂಪಾಯಿಯ ಭತ್ತೆ ಕೊಡಬೇಕು. ಇದರಿಂದ ವರುಷಕ್ಕೆ ಸುಮಾರು 75 ಲಕ್ಷ ರೂಪಾಯಿ ಸರಕಾರಕ್ಕೆ ಹೆಚ್ಚಿಗೆ ತಗಲಬಹುದು. ಆದರೆ ಪ್ರತಿಯೊಂದು ಮಗುವೂ ಶಾಲೆಗೆ ಬಂದು 5 ನೆಯ ಕ್ಲಾಸಿನ ತನಕ ಕಲಿತು ಅಕ್ಷರಾಭ್ಯಾಸ ಮಾಡಿಕೊಂಡರೆ ಅಧ್ಯಾಪಕರಿಗೆ ಯುಕ್ತ ಬಹುಮಾನ ಅಥವಾ ಬೋನಸ್ ಕೊಡುವಲ್ಲಿ, ಈ ಕರ್ಚು ಅನಾವಶ್ಯಯವಾಗಲಾರದು.

(7) ವಿದ್ಯಾಭಿವೃದ್ಧಿಯ ಕೆಲಸಕ್ಕಾಗಿ ಸರಕಾರ ಇನ್ನೊಂದು ಸಾಲವೆತ್ತಬಹುದು. ಈ ಸಾಲ 5, 10, ಅಥವಾ 20 ರೂಪಾಯಿಯ ಬೋನಿನ ರೂಪದಲ್ಲಿದ್ದರೆ, ಅಲ್ಲಿ ಎತ್ತಿದ ಸಾಲ ಆಯಾಯ ಜಾಗದಲ್ಲೇ ವ್ಯಯಿಸಲ್ಪಡುವುದೆಂಬ ಆಶ್ವಾಸನೆ ಇರುವಲ್ಲಿ ಸಾರ್ವಜನಿಕರು ಅಂತಹ ಬೋಂಡುಗಳನ್ನು ಕೊಂಡುಕೊಂಡು ಸಹಕರಿಸದಿರರು.

ಈ ಮೇಲಿನ ಸೂಚನೆಗಳನ್ನು ನಾನು ರಾಜಾಜಿಯವರಿಗೆ ಕೊಟ್ಟಿರುತ್ತೇನೆ. ಕೂಡಲೆ ಅಲ್ಲದಿದ್ದರೂ ಸಮಯಾನು ಸಮಯ ಈ ಸೂಚನೆಗಳು ಮಾನ್ಯವಾಗದಿರವು.

ಕಷ್ಟ ಮತ್ತು ಅಪಮಾನದ ನೆರಳಿನಿಂದ ದೇಶದ ವಾತಾವರಣ ಕರಾಳವಾಗುತ್ತಿರುವುದು. ಈ ಕಷ್ಟ ಮತ್ತು ಅಪಮಾನಗಳನ್ನು ವಿವೇಕದ ಬೆಳಕಿನಲ್ಲಿ ನಾವು ನೋಡುತ್ತಿರುವೆವು. ಆದರೆ ವಿಶ್ವಾಸ ಮತ್ತು ದೃಢತೆ ಇವುಗಳನ್ನು ಲಕ್ಷಿಸುವುದಿಲ್ಲ. ವಿಶ್ವಾಸದೊಂದಿಗೆ ಉತ್ಸಾಹವಿದ್ದರೆ ಎಂತಹ ತಡೆಗಳನ್ನೂ ದಾಟಬಹುದು. ಆದರೆ ಉತ್ಸಾಹ ಅಥವಾ ಕರ್ತೃತ್ವ ದುರ್ಬಲವಾದರೆ ಈ ತಡೆಗಳು ಭೂತಾಕಾರ ತಾಳುವವು. ದೃಢವಿಶ್ವಾಸ ಮತ್ತು ಉತ್ಸಾಹದಿಂದ ಈ ಹೊಸ ಯೋಜನೆಯನ್ನು ಯಶಸ್ಗೊಳಿಸುವ ವಿವೇಕ ನಮಗೆ ಬರಲಿ.

ಸಫಲ ಸೇವಕನಾಗಿರುವುದರಿಂದಲೇ ದೇವನು ದೇವನಾಗಿರುತ್ತಾನೆ.

೦೦ -೦- ೦೦

ವಿಕಾಸವೇ ಜೀವನ, ಸಂಕೋಚವೇ ನಾಶ. ಪ್ರೇಮವೇ ಪ್ರಾಣ, ದ್ವೇಷವೇ ಮರಣ

೦೦ ೦೦೦ ೦೦

ಸಂತೃಪ್ತಿಯು ನೈಸರ್ಗಿಕ ಸಂಪತ್ತಾಗಿರುವುದರಿಂದ ಅದನ್ನು ಹೊಂದಿದವನೇ ಕುಬೇರನು.

೦೦ ೦೦೦ ೦೦೦

ಭೂಮಿ ನಿನ್ನದಲ್ಲ. ದೇಹ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಅದು ಜಗಕ್ಕೆಕ್ಕದ ವಿಧಿ. ನಿನ್ನೊಡನೆ ಎಂಬರೆ ಜ್ಞಾನರತ್ನ.

೦೦ ೦೦೦ ೦೦

ಉಡುಪಿಯ ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿನ ಚೆಯರ್‌ಮ್ಯಾನರೂ ಹಲವಾರು ಸಂಘ ಸಂಸ್ಥೆಗಳ ಮೂಲಕ ಸಾರ್ವಜನಿಕ ಸೇವೆ ಸಲ್ಲಿಸುತ್ತಿರುವವರೂ ಆದ ಜನಪ್ರಿಯ

ಡಾ। ಯು. ಸುಂದರರಾಮ ಪೈ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಶಾಂತಚಿತ್ತರಾಗಿ ಸತತ ದುಡಿಯುತ್ತಿರುವ ಕೋರ್ಪರೇಶನ್ ಬ್ಯಾಂಕಿನ ಜನರಲ್ ಮೆನೇಜರರಾದ

ಶ್ರೀ ವಿ. ಆರ್. ಕಾಮತ್,

ಬಿ. ಎ. ಎಲ್. ಎಲ್. ಬಿ.

(೯ನೇ ಪುಟದಿಂದ)

ಎಷ್ಟು ಅನುಕೂಲವಾಗಿವೆ.

ಮೇಲಿಂದ ಮೇಲೆ ಓದುವಾಗ ಲೌಕಿಕ ಸಾಮಾನ್ಯ ವಿಷಯವೆಂದು ತೋರಿ, ಆಳವಾಗಿ ವಿಚಾರಿಸಿದಲ್ಲಿ ವಿಶೇಷವಾದ ತತ್ವವನ್ನು ತಿಳಿಸುವಂತಹ ನಿಗೂಢಾರ್ಥ ವ್ಯಂಜಕಗಳಾದ ಕೆಲವು ಉತ್ತಮ ಪದ್ಯಗಳನ್ನು ಶ್ರೀ ಕಿಲ್ಲೆಯವರು ಬರೆದಿರುತ್ತಾರೆ. ಅದರಲ್ಲಿ ಒಂದು ಹೀಗಿದೆ:

"ನೀಕುಡಿವ ಪಾತ್ರೆಯಲಿ ತುಂಬಿರುವ ಜೀವರಸ
ನಾಕ ಸುಖವೆನಗದುವೆ ಕುಡಿವೆ ನಾನದನೆ
ಸಾಕಾಯ್ತು ಬಗೆ ಬಗೆಯ ಬೆರಗು ಬಿನ್ನಾಣಗಳು
ಬೇಕಿಲ್ಲ ನಾವೊಂದು ಗೂಡುವುದೆ ಸುಖವು!"

ಬಹಿರಂಗಾರ್ಥವು— ಕೇವಲ ಇಂದಿನ ಸುಖವನ್ನು ಅನುಭವಿಸಿ ಬಿಡಬೇಕೆಂಬ ಚಾರ್ವಾಕ ನೀತಿಯಿರುವಂತೆ ಕಂಡುಬರುತ್ತದೆ. ಆದರೆ ಇಲ್ಲಿ ಕುಡಿವ ಪಾತ್ರೆಯಲ್ಲಿ ಜೀವರಸವನ್ನು ತುಂಬಿ ಭಕ್ತಿಯ ಅಮೃತವನ್ನು ಕುಡಿಯುವುದಾಗಿದೆ; ಒಂದುಗೂಡುವುದು ಜೀವಾತ್ಮ ಪರಮಾತ್ಮರ ಐಕ್ಯ, ಅದೇ ಮುಕ್ತಿ! ಇದಕ್ಕೆ ಲೌಕಿಕ ಸುಖದ ಅರ್ಥವೇ ಅಲ್ಲ. ಕೆಳಗೆ ಕೊಟ್ಟಿರುವ ಅವರ ಇನ್ನೊಂದು ಪದ್ಯವು ಮೇಲಿನ ವಿವರಣೆಯನ್ನೇ ಸ್ಪಷ್ಟಪಡಿಸುತ್ತದೆ.

"ವೈರಾಗ್ಯಮಂದಿರದಿ ಭಕ್ತಿ ಸತಿಯಾಗಿರಲು
ವೀರ ಪುರುಷನೆ ಜ್ಞಾನ, ಕರ್ಮ ರಂಗದೊಳು
ಸೇರಿ ಕುಡಿಯಲು ಸುಖದಿ ಸಾಗುವುದು ಸಂಸಾರ
ಸಾರತರ ಮೋಕ್ಷವದು ಜೀವನಾಧಾರ"

ಉಮ್ಮರ್ ಖಯ್ಯಮ್ ಪ್ರಪಂಚಕ್ಕೆ ಯಾವೊಂದು ನೂತನವೂ ಮಹತ್ವಪೂರ್ಣವೂ ಆದ ವೇದಾಂತವನ್ನು ದಯಪಾಲಿಸಿದನೋ, ಅಂತಹ ರೀತಿಯನ್ನು ಮೇಲಿನ ಪದ್ಯಗಳು ವ್ಯಕ್ತ ಪಡಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ.

ಮನುಷ್ಯನು ಜೀವಿತ ಕಾಲದಲ್ಲಿ ಹಿಂದುಮುಂದಿನ ಆಗುಹೋಗುಗಳ ವಿಚಾರವಿಲ್ಲದ ಪ್ರಾಪಂಚಿಕ ಗೊಂದಲದಲ್ಲಿ ಹೇಗೆ ಬಿದ್ದು ಹೋಗುತ್ತಿದ್ದಾನೆಂಬುದನ್ನು ಕೆಳಗಿನ ಪದ್ಯವು ವಿವರಿಸುತ್ತದೆ:

"ಮುಂದೆ ಸಾಗಲು ದೋಣಿಯಿಲ್ಲ ನದಿ ಹರಿಯುತಿದೆ
ಹಿಂದೆ ಹಾರಲು ಕಣಿವೆ ಹಾರಲಡಿಯಿಲ್ಲ"

ಮುಂದೆ ಹರಿವ ನದಿಯಿದೆ; ಹಿಂದೆ ಅಗಾಧ ಕಣಿವೆ ಇದೆ; ನದಿದಾಟಲು ದೋಣಿಯೂ ಇಲ್ಲ; ಕಣಿವೆಗೆ ಬಿದ್ದರೆ ಬದುಕುವುದೂ ಇಲ್ಲ; ಇಷ್ಟಿದ್ದರೂ ಈ ಮಧ್ಯದಲ್ಲಿ ಸಿಕ್ಕಿ ಬಿದ್ದಿದ್ದರೂ ನಾವು ಇಲ್ಲಿಯೂ ನಮ್ಮ ನಮ್ಮೊಳಗೆ ಜಗಳಾಡುತ್ತಿದ್ದೇವೆ. ನಮ್ಮ ಗತಿಯೇನಾಗಬೇಕು? ಒಂದೇ ಕಾಲುಜಾರಿ ನೀರಲ್ಲಿ ಮುಳುಗಿ ಸಾಯುವುದು ಇಲ್ಲವೇ ಕಣಿವೆ ಆಳಕ್ಕೆ ಬಿದ್ದು ನುಚ್ಚುನೂರಾಗುವುದು. ಇನ್ನೇನು ತಾನೇ ಆಗುವುದು? ರಾಗದ್ವೇಷಗಳಿಂದ ಕೂಡಿದ ಮಾನವರು ಮುಕ್ತಿಯನ್ನು ಹೊಂದಲು ಸಮರ್ಥರಾಗದೆ ಪುನಃ ಸಂಸಾರದಲ್ಲಿಯೇ ನರಳುತ್ತಿರುವುದು ಅವರ ವಿಧಿಯಲ್ಲವೇ?

ಜೀವನದ ನಿಸ್ಸಾರತೆ, ಪ್ರಾಪಂಚಿಕ ಸುಖದ ಕುರಿತು ವೈರಾಗ್ಯ ಅವರ ಕವಿತೆಗಳಲ್ಲಿ ಹೆಚ್ಚಾಗಿ ಒಡಮೂಡಿವೆ.

"ಕಾಲಶರಧಿಯ ನಿಂದು ಮುಳುಗುತಿರಬೆನ್ನೆ ಹಿಡಿ
ದಾಳಿಗನು ನೇರಿಸಿದ ನಿಸ್ಸೆಣಿಯಾ ತೆರೆಯ

ಜಿಲ್ಲೆಯ ಅಪ್ರತಿಮ ಸ್ವಾತಂತ್ರ್ಯಯೋಧ—ಕಿಲ್ಲೆ

ಮೇಲೇರಿ ಕುಣಿಯುತಿಹೆ ನಿಂದು ತೆರೆತೆರೆಯಲ್ಲಿ
ನಾಳೆ ಬಹತೆರೆಯಾಗಿ ತೇಲಿ ಹೋಗುತಿಹೆ"

ಎಲ್ಲಿ ಹೋದರೂ ಜನರು ಬಿಡದೆ ಹಿಂಬಾಲಿಸುವರು; ಬಲ್ಲಿದನೆಂದು ಹೊಗಳುವರು; ಕೂಡಿ ಬಳಿವಿಡಿದು ಸುತ್ತುಗಟ್ಟುವರು ವಿಧವಿಧದ ಸೊಲ್ಲುಗಳನ್ನೆತ್ತುವರು. ಆದರೆ ಕವಿ ಕಿಲ್ಲೆಯವರಿಗೆ ಮಾತೇ ಬರಲೊಲ್ಲದಂತೆ:

'ಅರಿಯದಿರೆ ನಾಚಿಕೆಯು ತಲೆ ದೋರುತಿಹುದೆನಗೆ
ಸರಿಯಾದ ಮಾತುಗಳು ಬಾರದಿರೆ ಹೆದರಿ,
ಶಿರವೆತ್ತಿ ನೋಡಲಾರೆನು ಭೂಮಿ ತಿರುಗುತಿದೆ
ತಿರುಗುವೆನು ನಾನದರ ಚಕ್ರವನೆ ಹಿಡಿದು"

ಮಾತು ಅರಿಯದಿರಲು ನಾಚಿಕೆಯಾಯಿತು; ಮಾತುಬಾರದಿರೆ ಹೆದರಿಕೆಯೂ ಅಯಿತು, ತಲೆಯೆತ್ತಿ ನೋಡುವುದೂ ಆಗಲಿಲ್ಲ. ಭೂಮಿಯೇ ಚಕ್ರದಂತೆ ತಿರುಗಿದಂತಾಯಿತು; ಆ ಭ್ರಮಣೆಯ ಚಕ್ರದ ಕೈ ಹಿಡಿದು ತಾನೂ ಅದರಲ್ಲಿ ತಿರುಗಿದನು!

ಕೀರ್ತಿ ಶನಿಯ ಕುರಿತು ಇದು ಎಂತಹ ವಿಡಂಬನೆ! ಅಖಿಲ ಕರ್ಣಾಟಕದಲ್ಲಿಯೇ ಅಪ್ರತಿಮ ವಾಗ್ಮಿವರನೆಂದು ವಿಖ್ಯಾತಿಗಳಿಸಿದ ಶ್ರೀ ಕಿಲ್ಲೆಯವರಿಗೆ ಜನರು ತನ್ನನ್ನು ಮಾತುಗಾರನೆಂದು ಹೊಗಳಿ ಹಿಂಬಾಲಿಸಿದಾಗ ಎಂತಹ ದಿಗಿಲು' ಇದು ಎಂತಹ ವಿನಯ! ಸಾರ್ವಜನಿಕ ಸೇವೆ ಮಾಡುವವನಿಗೆ ಇದು ಭೂಷಣವಲ್ಲವೆ?

೪

ಶ್ರೀ ಕಿಲ್ಲೆಯವರು ಭಾವಗೀತೆಗಳನ್ನು ಭಕ್ತಿ ಗೀತೆಗಳನ್ನು ಬರೆದಷ್ಟು ರಾಷ್ಟ್ರಗೀತೆಗಳನ್ನು ಬರೆದಿಲ್ಲ. ರಾಷ್ಟ್ರಸೇವೆಯಲ್ಲಿಯೇ ಹೆಚ್ಚಿನ ಆಯುಷ್ಯ ಕಳೆದಿದ್ದರೂ, ಅವರ ಅಂತರಂಗದ ಒಲವು ಯಾವ ಕಡೆಗೆ ಹರಿಯುತ್ತಿತ್ತೆಂಬುದನ್ನು ನಾವಿದರಿಂದ ಅರಿತುಕೊಳ್ಳಬಹುದು.

'ಗುರುದೇವ ಗಾಂಧೀ' ಎಂಬೊಂದು ಕವನದಲ್ಲಿ, ಭಾರತದ ಸ್ವಾತಂತ್ರ್ಯ ಧ್ವಜವನ್ನು ಎತ್ತಿ ಹಿಡಿದ ಗಾಂಧೀಜಿಯ ಅದ್ಭುತ ಆತ್ಮಬಲವನ್ನು ಇಂತು ವರ್ಣಿಸಿದ್ದಾರೆ.

"ಸರಳ ನಡತೆಯೆ ಕೋಟೆ, ಪ್ರೇಮದಿ
ಹರಿವ ನದಿಯೇ ಕಂದಕವು, ಗೋ
ಪುರ ಮನೋಬಲ, ಬಲವೆ ಸ್ನೇಹವದಾಗಿ ಮೇಲಾಗಿ
ನಿರುಪಮದ ಸ್ವಾತಂತ್ರ್ಯ ಧ್ವಜವ
ನ್ನಿರಿಸಿ ಹಾರಿಸಿ ಜೀವದಂಡದಿ
ಪೊರೆಯೆ ಶಾಂತಿಯ ಕವಚ ಸತ್ಯದ ಕತ್ತಿಯನು ಹಿಡಿದ"

ಹಿಂದೆ ಪ್ರಸ್ತಾಪಿಸಿದ ಅವರ ಕವಿತೆಯ ಕಾರಣವಾದ ಅಳಿಲ ಮರಿಯರ ಕುರಿತು ಬರೆದ ದೀರ್ಘ ಕವನದಲ್ಲಿ ಕೆಲ ಪಂಕ್ತಿ ಇಂತಿರುವುದು.

"... . ಕಿಚಿಕಿಚಿಯಾಡುತಿಲ್ಲ
ತೆಳ್ಳಗಿನ ಹೊಸ ಪುಷ್ಪದೆಸಳುಗಳ ತಳ್ಳಿ
ಇಲ್ಲಪಲ್ಲಿಂದಿಳಿದು ನೆಗೆವೆ ನೆಲದಲ್ಲಿ
ಹಿಂಗಾಲುಗಳ ನೂರಿ ಕುಳಿತಲ್ಲಿ ಜಿಗಿದು
ಮುಂಗಾಲುಗಳನ್ನೆತ್ತಿ ಕಾಯ್ಗಳಂ ಹಿಡಿದು
ಭಂಗಿಸುತ ಹಲ್ಲುಗಳ ಚೂಪಿಂದ ತಿಂದು
ಕಂಗೊಳಿಪೆ......"

ಸ್ವಭಾವೋಕ್ತಿಯು ಎಷ್ಟು ಸುಂದರವಾಗಿ ಬಂದಿರುವುದೆಂಬುದನ್ನು ಮೇಲಿನ ಪದ್ಯದಲ್ಲಿ ನಾವು ನೋಡಬಹುದು.

ಸ್ವಾತಂತ್ರ್ಯಕ್ಕಾಗಿ ಹೋರಾಡುವ ವೀರಯೋಧನು, ಸಾವಿಗೆ ಅಂಜಲಾಗದೆಂದು ಹೇಳುವಲ್ಲಿ ಜೀವನದ ಮಹಾತತ್ವವೊಂದನ್ನು ಶ್ರೀ ಕಿಲ್ಲೆಯವರು ಹೀಗೆ ಹೇಳಿದ್ದಾರೆ:

"ಕಾಯವಿದುಸ್ಥಿರವಲ್ಲ ಸೆಂತಾಪದಿಂದು ಬಿದ್ದು
ಮಾಯವಾಗದೆ ಬಳಿಕ ಬೆಂಕಿಯಲಿ ಬೆಂದು
ಬೇಯದಿಹ ನೋಯದಿಹ ಜೀವಾತ್ಮ ಬೇರಿರಲು
ಸಾಯನವ ಸಾವಿಗಂಜಲದೇಕೆ ತಾನು"

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಯುದ್ಧಸನ್ನದ್ಧನಾದ ಅರ್ಜುನನಿಗೆ ಇದೇ ತತ್ವವನ್ನಷ್ಟೆ ಬೋಧಿಸಿದ್ದು? ಭಾರತದ ಸ್ವಾತಂತ್ರ್ಯಯೋಧರ ಮುಂದೆಯೂ ಅದೇ ಆದರ್ಶ ಇದ್ದುದು ಸಮಂಜಸವೇ ಆಗಿದೆ.

ಇಂತು ಶ್ರೀ ಕಿಲ್ಲೆಯವರು ಕನ್ನಡದಲ್ಲಿ ಹಲವು ಅಪೂರ್ವ ಕವಿತೆಗಳನ್ನು ಬರೆದಿದ್ದಾರೆ; ಇಂದಿನ ಕನ್ನಡ ಸಾಹಿತ್ಯ ಯಾವುದೇ ಉತ್ತಮ ಕವಿತೆಗಳಿಗೆ ಸರಿತೂಕದ ಹಲವು ಪದ್ಯಗಳನ್ನು ಪೋಣಿಸಿರುತ್ತಾರೆ. ಅವೆಲ್ಲವೂ ಹೆಚ್ಚಾಗಿ ಅಪ್ರಕಟಿತವಾಗಿಯೇ ಉಳಿದಿವೆ. ನೆಲದಡಿಯಲ್ಲಿರುವ ನಿಧಿಯಾಗಿವೆ.

೫

ಶ್ರೀ ಕಿಲ್ಲೆಯವರು ತುಳುಕನ್ನಡೋಭಯ ಭಾಷೆಗಳಲ್ಲಿಯೂ ಸಮ್ರ ಸಾಟಿಯೆಂದು ಹಿಂದೆಯೇ ಹೇಳಿದ್ದೇನೆ. ನನಗೆ ಇವೆರಡು ಭಾಷೆಗಳ ಅನುಭವವಿರುವ ಮಟ್ಟಿಗೆ ಅವರ ಕನ್ನದ ಕವಿತೆಗಳಿಗಿಂತಲೂ ತುಳು ಕವಿತೆಗಳೂ, ಕನ್ನಡ ಭಾಷಣಗಳಿಗಿಂತ ತುಳು ಭಾಷಣಗಳೂ ಶ್ರೇಷ್ಠ ತರದವುಗಳೆಂದು ಹೇಳಬಯಸುತ್ತೇನೆ. ತುಳು ಭಾಷೆಯಲ್ಲಿ ಅವರಿಗೆ ಅಷ್ಟಾಗಿ ಇರತಕ್ಕ ಹಿಡಿತದ ಸಹಜ ಕಾರಣವನ್ನು ಅವರದೇ ಮಾತಿನಲ್ಲಿ ನಾವು ಅರ್ಥಮಾಡಿಕೊಳ್ಳಬಹುದಾಗಿದೆ; ಅವರು ಹೀಗೆ ಬರೆದಿದ್ದಾರೆ:

ತುಳುಕಟ್ಟ್‌ನೀತಿಲೆನ್ ಬುಡ್‌ಪಾವ್ ತೆರಿಪಾವು
ತುಳು ಬಾಲೆ ದುಂಬೊತುದು ಜಾಡಂದೆ ಬರ್ಪಿ
ಬಲ ಬೂರಂದೆ ಬಲಪುನಪಗ
ತುಳುಕವಲ್ ನಾವೊಂದು ದೆಕ್ಕಿತರೆ ತೋಜುನಗ
ತುಳುಮಣ್ಣ್‌ಡಾಪಿ ಫಲ ತಿನ್ಪಿನಿನಮಗೆಯಾನ್

ಹೀಗೆ ತುಳುನಾಡಿನ ಮಣ್ಣಿನ ಮಗನೆಂದು ಹೇಳಿಕೊಂಡ ಅವರ ಮಾತು, ತುಳು ಕೃತಿಗಳಲ್ಲಿ ಅಕ್ಷರಶಃ ಸತ್ಯವಾಗಿದೆ.

ಕವಿ ಹೇಗಿರಬೇಕು? ಕವಿತೆ ಎಂತು ಹೊರ ಚಿಮ್ಮುವುದೆಂಬುದನ್ನು ಹೇಳುವ ಸಂದರ್ಭದಲ್ಲಿ ಅವರ ತುಳು ಭಾಷಾ ಶೈಲಿಯ ಸುಂದರ ರೂಪವನ್ನು ನಾವು ನೋಡಲು ಅವರದೇ ಒಂದು ವಾಕ್ಯವನ್ನು ಉದಾಹರಿಸುತ್ತೇನೆ,

"ಯೇರೆ ಮನಸ್ ಪದೊಕ್ ಬತ್ತ್‌ಡ್, ಹೃದಯ ಮಂದಿರೊಡ್ದು ಗಾನಕಲೆ ತಾನಾವ್ ಓದದ್ ಪರತೊಮುಂಡಾ, ನನಯೇರ್, ಆ ಗಾನ ಕಲೆನ್ ಒಲಿಪಾಂಪೆರೆ ಬೋಡಾಯಿನ ಸಂಪ್ರದಾಯ ಪಂಜಿ ಬಾಸಿದ ಕೋಡಿ ಕೊಲ್ಪುಲೆನ್ ಪತ್‌ದ್ ಆ ಸಾಮ್ರಾಜ್ಯನೇ ಸೂರೆ ಮಲ್ಪುವೆನಾ, ಬೊಕ್ಕ ಯೇರೆ ಹೃದಯ ನನೊಂಜಿ, ಮನಸ್ ಒಂಜಾದ್, ಚಿತ್ತಿನ ಭಾವ ಬಾಯಿತಾನಗ, ಸತ್ತ್‌ದ್ ಕೈಕ್ ಬನ್ನಗ ನುದಾವ್, ಲೋಕದ ಕಣ್ಣ್‌ಗ್ ನಾಲ ರಂಗ್‌ನ್ ತೋಜೊಮುಂಡಾ, ಅತ್ತಂದೆ, ಪಿರಿ ನಿಜ ಗುಣ್ಪೆನೇ ನುಡಿಪಾವ್ ನಲಿತ್ತೊಂದು

ಸಮಾಚಾರ
ಹೊಸ ವಾರಪತ್ರಿಕೆ
ಕೊಡಿಯಾಲ, ಮಂಗಳೂರು 3
ಸಂಪಾದಕ— ಹಿ. ರಾ. ಮಲ್ಯ
ಬಿಡಿಸಂಚಿಕೆ, 0—1—6
ವಾರ್ಷಿಕ ರೂ. 5—0—0
ಪ್ರತಿ ಶುಕ್ರವಾರ ಹೊರಡುವುದು
ತಾ. 14—8—53ಕ್ಕೆ ಪ್ರಾರಂಭ.

ಜನಸಾಮಾನ್ಯರ ಭವಿಷ್ಯದ ಭದ್ರತೆಗಾಗಿ
ಬದ್ಧಸಿದ್ಧವಾಗಿರುವ ಜನತಾಸಂಸ್ಥೆ—
ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ, ದ ಕನ್ನಡ.
ವಿಮಾ ನಿಯಮಗಳಿಗೂ ಏಜನ್ಸಿ ಶರ್ತಗಳಿಗೂ ಬರೆಯಿರಿ:
THE NEW KARNATAKA
Provident Insurance Co., Ltd.,
HEAD OFFICE: UDIPI, S. KANARA.

ನಾಲ್ ಮೂರಿಲೆಡ್ ದಿಂಜೊನುನ ಕವಿತೆ ತನ
ಯೋಗ್ಯತೆನ್ ತಾನೇ ಭೋಗಿತೊನುಂಡಾ,
ಅಯನ್ ಮಾತ್ರ ಕವೀಂದ್ರ್ ಪನೊಲಿ"

ಪದಪುಂಜಗಳು ಪಯಸ್ವಿನಿಯಂತೆ ಹರಿವ ನಿರ್ಮಲವಾದ ಓಟವನ್ನು ಈ ವಾಕ್ಯಗಳಲ್ಲಿ ನಾವು ನೋಡಬಹುದು. ಅವರ ಗದ್ಯ ಶೈಲಿ ಬಾಣನ ಓಜೋಮಯ ಶೈಲಿ.

ಶ್ರೀ ಕಿಲ್ಲೆಯವರ ತುಳು ಪದ್ಯಗಳು ಹೆಚ್ಚಾಗಿ "ಕಾನಿಗೆ' ಎಂಬ ಅವರ ಪುಸ್ತಕದಲ್ಲಿ ಪ್ರಕಟವಾಗಿದೆ. ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರೂ, ತುಳುನಾಡು ಚಳವಳದ ಪುರಸ್ಕರ್ತರೂ, ಅವರ ಸಹ ಕಾರ್ಯಕರ್ತರೂ ಆದ ಶ್ರೀ ಎಸ್. ಯು. ಪಣಿಯಾಡಿಯವರು ತಮ್ಮ ತುಳುವಸಾಹಿತ್ಯಮಾಲೆಯ ಐದನೆಯ ಪುಸ್ತಕವಾಗಿ ಅದನ್ನು 1932ರ ಸಾಲಿನಲ್ಲಿಯೇ ಪ್ರಕಾಶಪಡಿಸಿದ್ದಾರೆ. ಆ ಗ್ರಂಥವನ್ನು ಶ್ರೀ ಕಿಲ್ಲೆಯವರು ತನ್ನ ಸಾಕು ತಾಯಿ ಶ್ರೀಮತಿ ದೇವಕಿ ಶೆಡ್ತಿಯವರಿಗೆ ಅರ್ಪಿಸಿದ್ದಾರೆ. ತುಳುನಾಡಿನ ಕುರಿತಾಗಿಯೂ, ಪ್ರಕೃತಿ ವರ್ಣನಾತ್ಮಕವಾಗಿಯೂ, ಭಾವಗೀತೆಗಳಾಗಿಯೂ, ರಾಷ್ಟ್ರಗೀತೆಗಳಾಗಿಯೂ ಒಟ್ಟು ಆ ಪುಸ್ತಕದಲ್ಲಿ ಮೂಹತ್ತು ಕವನಗಳಿವೆ. ವಾರ್ಧಿಕ, ಭಾಮಿನಿ, ಚೌಪದಿ, ತ್ರಿಪದಿ, ದ್ವಿಪದಿ ಹೀಗೆ ವಿವಿಧ ಛಂದಸ್ಸುಗಳನ್ನು ಅಳವಡಿಸಿಕೊಂಡು, ವಿವಿಧ ರಾಗ ತಾಳಮಯವಾಗಿ, ಭಾಷಾ ಸೌಂದರ್ಯ ನಾದಮಾಧುರ್ಯಗಳಿಂದ ಸೊಗಸಾಗಿ ಅವೆಲ್ಲವೂ ಅತ್ಯಂತ ಸುಂದರವಾಗಿರುತ್ತವೆ. ಪ್ರಕಟಿತ ಕೃತಿಯಾದುದರಿಂದ ಅದರ ಹೆಚ್ಚಿನ ವಿವರಣೆಮಾಡದೆ, ಅದರಲ್ಲಿನ ಕೆಲವೇ ಸುಂದರವಾದ ಪಂಕ್ತಿಗಳನ್ನು ಇಲ್ಲಿ ಉದಾಹರಿಸಲು ಇಚ್ಛಿಸುತ್ತೇನೆ.

ತುಳು ಭಾಷೆಯಲ್ಲಿ ತಾನು ಬರೆಯಲು ತೊಡಗಿದುದರ ಕುರಿತು ಶ್ರೀ ಕಿಲ್ಲೆಯವರು ತಮ್ಮ 'ಕಾನಿಗೆ'ಯ ಪ್ರಾರಂಭದಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ಕಿಂದಿ ನಿರಿಪೋಡೆ; ಪಿಂದಿ ಸುದು
ಬಡವಾನು
ಡಂದಿ ಎನಬಾಸೆ ತುಳು ಬಾಸೆಡ್; ಎನ ನಾಡ
ಚಂದಸಿರಿ ಬರೆಪೆ ನನ ಮೊರೆಪೊನಡ್ ತುಳು
ಸರವು ಬರವಾದ್‌ತೊನ್ ತೆರಿಪ್"

ಪ್ರಹ್ಲಾದನು ವಿಷ್ಣುವಿನೊಡನೆ ಮೊರೆಯಿಟ್ಟಾಗ ನರಸಿಂಹಾವತಾರದ ಉಗ್ರತೆಯ ವರ್ಣನೆಯು ವಾರ್ಧಿಕ ಷಟ್ಪದಿ ಪದ್ಯವು ಜೈಮಿನಿ ಹರಿಶ್ಚಂದ್ರ ಕಾವ್ಯಗಳಿಗೆ ಸರಿಗಟ್ಟುವಂತಿದೆ.

"ಅರಮನೆದ ಆ ಮಲ್ಲಕಮ್ಮಸೇ ಗದ್ದೊಂದು
ಪೊರಡೊಂದು ಭೂಮಿಯೇ ಪುಡಪೊಂದು
ಬಾಸೊನೇ
ದರಿಯೊಂದು ತಡಿಲಾಡ್ ಮಿಂಚಿಯೇ
ತಾಸಾದ್ ಕಡಲತೆರೆ ಗದಿಕತ್ತ್‌ದ್
ಒರಮಾತಪರೋ ಸುಪಾಮೋರು ಬೂರೊಂದು
ಪೊರಲು ಗೇಂದದ ರಾಸಿರಾಸಿಡೇ ನಲಿತೊಂದ
ತರೆದೆರ್ತ್ ದುಂಬೊತುಪು ರಕ್ಕಸನ್ ಜಕ್ಕೆಲ್
ಡ್ ದಕ್ಕೊಂದು ಕೆರ್ಪ ಕಡೆತ"

ಉಗ್ರನರಸಿಂಹ ವರ್ಣನೆ ಅನುಗುಣವಾದ ಮಹೋನ್ನತ ಭಾಷಾ ಶೈಲಿಯನ್ನು ಇಲ್ಲಿ ಕಾಣಬಹುದಾಗಿದೆ.

ಶಿಶುವಿನ ಸುಂದರದರಹಸಿತ, ಕಿಂಕಿಣಿ ಕ್ವಣಿತದಿಂದ ಕೂಡಿದ ಕುಣಿತಗಳೇ ಮೊದಲಾದವುಗಳು ಇಂತು ಅಲಂಕಾರಮಯವಾಗಿ ಹೇಳಿದ್ದಾರೆ.

"ಅರಲಿದ ತುಂಬೆದ ಪೂಸಿನ್ನ ತೆಲಿಕೆ
ಪುದೊಟುಪ್ಪು ಸಂಪಾಯಿ ಗೆಂಡದ ನಲಿಕೆ
ಇರೆಮುಡೆ ನೀರಲ್ಲಿ ಎಸಲ್‌ದ ಬಲಕೆ
ತರೆದೆರ್ತಿ ಕೇದಾಯಿ ರಂಗ್‌ದ ತೋಕೆ"

ವಿಸ್ತಾರದಲ್ಲಿಯೂ ವಿಷಯದಲ್ಲಿಯೂ, ಕವಿತಾ ಸೌಂದರ್ಯ, ಭಾಷಾಮಾಧುರ್ಯಗಳಲ್ಲಿ ಇವರಲ್ಲಿನ ಮುಂಡಲಕಾನಿಗೆ ಎಂಬ ಪದ್ಯವೂ ಸರ್ವೋತ್ಕೃಷ್ಟವಾಗಿದೆ. ತುಳುನಾಡಿನ ಐತಿಹಾಸಿಕ ಹಾಗೂ ಪ್ರಾಕೃತಿಕ ರಮ್ಯ ಚಿತ್ರಣವೊಂದು ಅದರಲ್ಲಿ ನಮ್ಮ ಕಣ್ಣ ಮುಂದೆ ಕಟ್ಟಿದಂತಾಗುತ್ತದೆ.

ತಿಗರ್‌ದ್ ಬುದುಪಿನ ಪುದಿಪುದ ಕಂಜಿಲೆ
ಬೀರೊಡು ಬಲಿಪುನ ಜನ ಓಟದ,
ಬಲ-ತತ್ತ್‌ದ್ ಬೂರೊಂದ ನೆಲವೆಟ್ಟ್‌ದ
ಬೇನೆ-ತಾಗ್‌ದ್ ಜಾರುನ ಮೆಯ್ಯುರ್ಪದ
ನೋವುಲ ತೆರಿಯುಂದ್, ಪಲಯಿದ್ ನಲಿ
ತೊಂದು
ಎರ್ಪಿನ್ ರಾಪಾವುಜಾಡೆರೆ ಬಲಕಾರ್‌ದ"

ಯಾವ ಫೋಟೋಗ್ರಫಿ ಈ ಚಿತ್ರವನ್ನು ಇದಕ್ಕಿಂತ ಚೆನ್ನಾಗಿ ಕೊಡಬಲ್ಲುದು?

ತುಳುನಾಡಿನ ವೀರರನ್ನು ವರ್ಣಿಸುವ ಕವಿತೆಗೆ ಸಂಚಯುವರ ಹುತ್ತರಿ ಹಾಡಿನ ಛಂದೋಗತಿಯನ್ನು ಅಳವಡಿಸಿಕೊಂಡಿದ್ದಾರೆ. ಅದರಲ್ಲಿನ ಒಂದು ಪದ್ಯ ಇಂತಿದೆ:

"ಏರ್ ಏರ್‌ದ್ ಗುಡ್ಡೆ ತರೆ ತರೆ ಏರ್ದ
ದರ್ತೆರ್ ದುನ್ನೊಡು
ಭಾರಿ ಬಯ್ಲ್‌ನ್ ದರ್ತೆರಾ, ನನ ಏರ್ ತಿಗ
ರೆದ ಧೈರ್ಯೊಡು
ಸೇರಿ ತೆರೆತೆರೆ ನೀರ ನಡುಪೊಡು ಸಾರಪುತ್ತೆರ
ಕೊಟೊಡು
ಏರ್ ಬೀಸ್ಲ್‌ದ್ ಕೋಲುಪಿದ್ಯೆನ್ ಏರ ಪತ್ತೆರ
ಬಂಕೊಡು

ಏರ ಬಂಟೆರೆ ಆಕುಲು,
ಏರ ಏರೆರೆ ಆಕುಲು,
ಭಾರಿ ಬಿರುವೆರೆ ಆಕುಲು"

ಶ್ರೀ ನಾರಾಯಣ ಕಿಲ್ಲೆಯವರು ಎಂತು ವಾಗ್ವೈಭವರೋ ಅಂತು ಕವಿಶ್ರೇಷ್ಠರೂ ಆಗಿದ್ದರೆಂಬುದಕ್ಕೆ ಇವಿಷ್ಟು ನಿದರ್ಶನಗಳು ಸಾಕು. ಸರಸ್ವತಿ ಅವರ ನಾಲಿಗೆಯಲ್ಲಿ ನಿಂತು ನರ್ತನ ಮಾಡಿದಂತೆ, ಲೇಖನಿಯ ಮೂಲಕವೂ ಕಾವ್ಯತೀರ್ಥ ಹರಿಸಿದ್ದಾರೆ. ಅಂತೂ ಇಂದು ಅಂತಹ ಓರ್ವ ಸರಸ್ವತಿಯವರ ಪುತ್ರನನ್ನು ನಾವು ಕಳೆದುಕೊಂಡೆವು. ಅವರೆ, ಅವರು ನಮಗಾಗಿ, ನಾಡಿಗಾಗಿ ಬಿಟ್ಟುಹೋದ ಸರಸ್ವತಿಯ ವರಪ್ರಸಾದವನ್ನು, ಅವರ ಸಾಹಿತ್ಯ ಸಂಪತ್ತನ್ನು ನಾವು ಉಳಿಸಿಕೊಳ್ಳಬೇಕು. ನಾಡುನುಡಿಗಳಿಗಾಗಿ ಮೂವತ್ತು ವರ್ಷಗಳ ದೀರ್ಘ ತಪಸ್ಸಿನಿಂದ ವಿಶ್ರಾಂತಿಯಿಲ್ಲದೆ, ವಿಶ್ರಾಂತಿ ಬಯಸದೆ ಅವರು ಮಾಡಿದ ಅಸಾಧಾರಣ ಸೇವೆ ನಮಗೂ, ನಮ್ಮ ನಾಡಿನ ಮಕ್ಕಳಿಗೂ ಮಾರ್ಗದರ್ಶಕವಾದ ಧ್ರುವ ತಾರೆಯಾಗಿದೆ.

ತುಳುನಾಡಿನ ಮುಂದಿನ ಜನಾಂಗ ರತ್ನಾಕರವರ್ಣಿ ಮುದ್ದಣ ಪಾರ್ತಿಸುಬ್ಬರ ಸಾಲಿನಲ್ಲಿ ಶ್ರೀ ನಾರಾಯಣ ಕಿಲ್ಲೆಯ ಪುಣ್ಯ ನಾಮವನ್ನು ಸ್ಮರಿಸುವಂತಾಗಲಿ!

In the Court of the Subordinate Judge of South Kanara

O S No. 12/1947-

Between:

B. Koragappa Alias Venkappa Rai etc. Plaintiffs.

And

B. Ramanna Rai and others Deffendants.

NOTICE

To:

93rd Defendant: Muthakke, daughter of Rukmini, residing with Mr. V. R. Thimmappa Punja, Coffee Planter, Chappekadu Estate, Mercara (Coorg.)

109th Defendant: Shivarama, son of Muthakke, residing with Muthanna Rai in Bollya of Kulavoor village, Mangalore Taluk.

PLEASE take notice that the Plaintiffs have filed the above suit against you, for the reliefs claimed in the plaint, and now the aforesaid suit stands posted to 20—8—1953 for hearing. Should you fail to appear on that day either in person or by pleader, the suit will be decided in your absence.

(By order of the court)

Sd. G. Somasheker Rao,
B. A. B. L.,
Vakil for Plaintiffs.

Mangalore, Dated 5—8—1953.

ಸುಮಾರು 20 ವರ್ಷಗಳ ಅನುಭವ

ಅತ್ಯಾಧುನಿಕ ರೀತಿಯ ನಾಜೂಕಾದ ಚಿನ್ನ ಬೆಳ್ಳಿಯ ಆಭರಣಗಳು!
ಗ್ರಾಹಕರಿಗೆ ತೃಪ್ತಿಯಾಗುವ ಮಾದರಿಯಲ್ಲಿ ಒಡವೆಗಳನ್ನು
ನಾಜೂಕಾಗಿ ತಯಾರಿಸಿಯೂ ಕೊಡಲಾಗುವುದು.

ಎನ್. ಜಿ. ಗೋಪಾಲಕೃಷ್ಣ ಶೇಟ್,
ಜ್ಯುವೆಲ್ಲರ್, ನವಯುಗ ಪ್ರೆಸ್ಸಿನ ಎದುರು, ಸಂತೆಕಟ್ಟೆ, ಉಡುಪಿ.

N. G. GOPALKRISHNA SHET,
Jeweller, Opposite Navayuga Press, SANTHEKATTE, UDIPI.

ಸಂಜ್ಞಾರ್ಥ ತತ್ವಕೋಶ

ಶಾಸ್ತ್ರ ಪುರಾಣ ಕಾವ್ಯ ನಾಟಕಾದಿ ಗ್ರಂಥಗಳಲ್ಲಿದಕವಾದ ನಾನಾ ತತ್ವ ಸಂಜ್ಞಾರ್ಥಗಳನ್ನು ವರ್ಣ ಸಂಖ್ಯಾನುಕ್ರಮವಾಗಿ ಕ್ರೋಢೀಕರಿಸಲಾಗಿದೆ. ಉದಾ:- ತ್ರಿಜಗ, ಚತುರ್ಯುಗ, ಪಂಚಭೂತ, ಷಡ್ಗುಣ ಇತ್ಯಾದಿ ಸಾವಿರಾರು ವಿಷಯಗಳಿವೆ. ಕನ್ನಡಿಗರಿಗೆ ಕೈಗನ್ನಡಿಯಂತಿರುವುದು.

ಬೆಲೆ- (ಉತ್ತಮ ಕಾಗದ) ೧ ೮ ೦. ಸಾದಾ ಪ್ರತಿ ೧—೪—೦.

ಡಿ. ವಿ. ಹೊಳ್ಳ, ವಿದ್ವಾನ್.
ಕುಂದಾಪುರ, (S K)

ಚ್ಯವನಪ್ರಾಶ್ಯ

(ಬಂಗಾರ ಮಿಶ್ರಿತ) ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಮ್ಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂಪಾಯಿ 5—೯—0.
½ ಪೌಂಡು ರೂ 3—0—0.

ಅಶೋಕಾರಿಷ್ಟ ಮತ್ತು ಮಾತ್ರೆ

ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ, ಋತುಸ್ರಾವವು ಜಾಸ್ತಿಯಾಗಿಯೂ ಕಡಿಮೆಯಾಗಿಯೂ ಹೋಗುವುದು, ಬಿಳಿ ಸೆರಗು, ಸಂತಾನ ಹೀನತೆ, ರಕ್ತಹೀನತೆ ಮುಂತಾದ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು.
ಬಾಟ್ಲಿ 1ರ ರೂ. 3—೦—0.

ಯಂ. ಗಣಪಯ್ಯ & ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ. ನಂಬ್ರ ೯. ಮಂಗಳೂರು.

ಔಷಧಿ ಸಿಗುವ ಸ್ಥಳ:— ಎ ೯. ಪತಿ ನ್ಯೂಸ್. ಕಸ್ತೂರಿ ಏಜೆಂಟ್. ಕಾಸರಗೋಡು; ಪ್ರೊಸ್ಪರಿಟಿ ಸ್ಟೋರ್ಸ್, 191, ನವಾಬಜಾರ ರೋಡ, ಪರೇಲ; ಸ್ಟೈ ಫಾರ್ಮಸಿ, ಪುತ್ತೂರು; ಶ್ರೀಧರ ಭಟ್ ಬ್ರದರ್ಸ್, ಪುತ್ತೂರು; ಶೆಣೈ ಮೆಡಿಕಲ್ ಸಪ್ಲೈಯರ್ಸ್, ಬಿಣಿಯದ್ಕ, ಕೆ. ವೆಂಕಟೇಶ ನಾಯ್ಕ ಗುರುವಾಯನ ಕೆರೆ.

ಉಡುಪಿ ಡಿ. ಮು ಕೋರ್ಟಿನಲ್ಲಿ

ಸ್ಮಾಲ ನಂಬ್ರ 312/1953

ಮಂಜುನಾಥ ನಾಯ್ಕ— ವಾದಿ.

ಮತ್ತು

1. ಅಕ್ಕಣ ಹೆಗಡ್ತಿ, 2. ನಾರಾಯಣ ಹೆಗ್ಡೆ, 1ನೇಯವಳ ಮಗ, ಚೇರ್ಕಾಡಿ ಗ್ರಾಮ— ಪ್ರತಿವಾದಿರು.

ಪ್ರ [illegible] 8 ೯-1950 ರಲ್ಲಿ ರೂಪಾಯಿ 50-‥0ಕ್ಕೆ ಬರೆಕೊಟ್ಟ ದಿನಾಂಕದ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 59-6-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು 2ನೆ ಪ್ರತಿವಾದಿಗೆ ನೋಟೀಸು ಜಾರಿಸುವ ಬಗ್ಗೆ ತಾರೀಕು 19-8-1953ಕ್ಕೆ ಬಿಟ್ಟಿದೆ. 2ನೆ ಪ್ರತಿವಾದಿಗೆ ಆಕ್ಷೇಪವಿರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟು ಮುಂದೆ ಖರವಾಗ್ಯೆ ಹಾಜ್ರಾಗಿ ಪ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸುವದಾಗಿಯದೆ.

K. Laxminarayana Aithal
Vakil for Plaintiff.

ಉಡುಪಿ, ತಾ. 8—8—1953.

ಭದ್ರತೆ ಮುಖ್ಯ

ನವಯುಗದಲ್ಲಿ
ಪ್ರಚಾರಮಾಡಲ್ಪಟ್ಟ
ಸಾಮಾನುಗಳೇ
ಜನ ವಿಶ್ವಾಸದವು.

◎ ಜಯಭೇರಿ ◎

೧.

ಮೊಳಗಿತು ಜಯಭೇರಿ!
ದಿಗ್ದಂತಿಗಳೆದೆನಡುಗಿಸಿ
ಭೂವ್ಯೋಮವನಾವರಿಸಿ
ಸಹ್ಯಾಚಲದಂಚಲದಲಿ
ಸುಖ ಶಾಂತಿಯ ಸಪ್ಪಳಿಸಿ
ಕಾಳ್ಗಣಿವೆಗಳಂತರದಲಿ
ಕಲ್ಲೋಲದ ಹೊಳೆಹರಿಸಿ
ಗಿರಿವರಗಳ ಕಿವಿದೆರೆಯಲಿ
ಬಿರುಗಾಳಿಯ ನೆಚ್ಚರಿಸಿ
ಮಹಾದೇವನ ಮಂದಿರದಲಿ
ತಾಂಡವದ ಭ್ರಮೆಗೊಳಿಸಿ
ಪಾತಾಳದ ಪೀಳಿಗೆಯಲಿ
ಭಯಕಂಪನವನು ಬೆಳಸಿ
ಮೊಳಗಿತು ಜಯ ಭೇರಿ!

೨.

ಭಾಪುರೆ! ಜಯವನಿತೆಯ ಮುಂ
ದಲೆ ವಿಡಿದೆಳೆ ತಂದವರು
ನಾವಿನ ನಮಸಮಕ್ಷೆಯಲಿ
ಕಾದಿದ ಕಲಿಭಟರವರು!
ಹೊಸ ಪುರುಷಿನ ಹುಮ್ಮನಸಿನ
ಮೆಚ್ಚುಗೆಯಲಿ ಮಿಂದಿಹರು
ಗೆಲುವಿಕೆಯಲಿ ತಮ್ಮನೆ ತಾವ್
ಕೊಂಡಾಡುತ ಬಂದಿಹರು!
ಕೆಂಬಣ್ಣದ ಮೋಳೇರಿದೆ
ಮುಗಿಲಿಟ್ಟಿದ ತುದಿ ತನಕ
ಕಣ್ಣುಗುರಿಸಿ ತಡವರಿಸಿದೆ
ಕಟ್ಟಾಳ್ಗಳ ಕೀರ್ತಿ ಮುಖ!
ಜಯ ಘೋಷದ ನಿರ್ಘೋಷಕೆ
ಕೆಳಗುದುರಿತು ನಕ್ಷತ್ರ
ಪುರಸತಿಯರ ಹೂ ಮಳೆಯಲಿ
ಸಿರಿ ಸುರಿಯಿತು ಸರ್ವತ್ರ!
ಕಣ್ಣಿದ್ದೂ ಕಾಣದ ಕಿವಿ
ಕಿವುಡೆನಿಸುವ ಕಲ್ಪಾಂತ
ಕರಣಂಗಳ ಘರ್ಷಣೆಯಲಿ
ಒದ ಜಗತಿಯ ಜೀವಂತ
ಆರಿಸಲ್ಲದ ವಾಸನೆಯಲಿ
ಸಂಧಿದೆ ಜನ ಸಂದೋಹ
ಮರಭೂಮಿಯ ಗಾಳಿಯ ತೆರ
ಹರಿ ಹರಿದಿವೆ ಪ್ರವಾಹ!
ಸೋಜ್ವಳಗದ ಕಗ್ಗತ್ತಲೆ
ತಲೆ ಮರೆಸಿತು ಹೌಹಾರಿ
ಸಾಲ್ವೊಡರಿನ ಸಂಭ್ರಮದಲಿ
ಹಗಲಾಯಿತು ಹಮ್ಮಾರಿ
ಅಳ್ಳೆದೆಯರ ಕಣ್ಣೊನೆಯಲಿ
ಕಾತರ್ಯದ ಕನೆಯುರಿ
ವೀರರ್ಗಳ ಸಾಫಲ್ಯಕೆ
ಗುಡುಗುಡಿಸಿತು ಜಯ ಭೇರಿ!

೩.

ಮರುಗಿದೆ ಮಗು ನೋಡಾಕಡೆ
ಮಗು ಮರುಗಿದೆ ಒಳ್ಬೆದರಿ!
ಕಣ್ಣೆರೆದಿದೆ ಕಾತರಿಸಿದೆ
ಬಿಚ್ಚಿದೆಯಲಿ ಒಡವೇದಿದೆ
ಎಣ್ದೆಸೆಯಲಿ ಕಣ್ಹಾಯಿಸಿ
ಕೆಂಬಸಿಗೆಳ ಮಳೆಗರೆದಿದೆ
ನಿದು ಸೇವೆಯ ಬಿಗುಗೊರಳಲಿ
ಸಡಸಡುಗುವ ಚೆಂಡುಟಿಯಲಿ
ಸುರಿಸಿಂಬಳ ಬಾಯ್ ಜೊಲ್ಲಿನ
ಸಂಯೋಗದ ಹೊನ ಮಟ್ಟು!
ಕಿರುಗೂಡಿನ ಗೂಢಾರದ
ಮುಚ್ಚಳದಲಿ ಮೈ ಮುದುರಿಸಿ
ಕರೆಕರೆದಿಹ ಹಕ್ಕಿಯ ತೆರ
ಮಗು ಮರುಗಿದೆ ಬಾಯ್ಬಿಟ್ಟು!

೪.

ಇದು ನಾದ ಬ್ರಹ್ಮನ ನವ
ರೂಪದ ಸಾಕ್ಷಾತ್ಕಾರ
ಇದು ಭಾವ ಬ್ರಹ್ಮಾಂಡದ
ಚೈತನ್ಯದ ಚೇತ್ಕಾರ!
ಇದು ಸುಂದರ ಸಾಹಿತ್ಯದ
ರಸಗಂಗೆಯ ಸತ್ಕಾರ
ಇದು ಮಂತ್ರ ಮಹತ್ಕಾರದ
ಪ್ರಥಮೋದ್ಗಮದೋಂಕಾರ !
ಇದು ವಿಶ್ವದ ವಿನ್ಯಾಸಕೆ
ವಿಧಿ ತೊಡಗಿದ ಹೊಸ ಜೇನೆ
ತುಮುಲೆಣಿಕೆಯ ತತ್ವಂಗಳ
ಕಡೆದ ಮೃತದ ಸಿರಿಸೋನೆ!
ಜನಜಂಗುಳಿ ನಾವೆಳೆಯಲಿ
ಇದು ಕೇಳದ ಕಲ್ಯಾಣ
ಹುಮ್ಮನಸಿನ ಹೆಜ್ಜಳದಲಿ
ಇದು ಕಾಣದ ಪರಿಮಾಣ
ಮಗು ಮರುಗಿದೆ ಬಳ್ಬೆದರಿ!
ಸುತ್ತಲು ಕಂಡೆಣ್ದೆಸೆಯಲಿ
ಕಿವಿಯಾನಿಸಿ ರಣಜೇವಿ
ಎತ್ತಿದ ಕಾಲ್ ಮುಂದೈಸದೆ
ಹಿನ್ನಡೆದನು ದಿಗ್ವಿಜಯಿ
ಮಗು ಮರುಗಿದೆ, ನೆಗಬಿದ ತೋ-
ಳ್ಕರೆಯಲಿ ಬಳಿಸಾರಿ
ಒಗ ತುಂಬಿದ ಭಾವನೆಯಲಿ
ಸಿಂದನು ಮೊಣ ಕಾಲೂರಿ
ಒಜ್ಜಿರೆಗಳ ಹೊಯ್ದಾಟದ
ಸೊಮ್ಮಿಗೆ ತಡೆಯಿಡದ ಮರಿ
ಅಚ್ಚರಿಯಲಿ ಬೆಚ್ಚಿತು ಕೈ
ಹಿಡಿದಂತುಟು ವಿಜಯಸಿರಿ-
ಸದ್ದಡಗಿತು ಜಯಭೇರಿ!

– ಯಸ್. ವೆಂಕಟರಾಜ.

ಸ್ವಾತಂತ್ರ್ಯೋತ್ಸವದ ಕಾಣಿಕೆ!

ಆಗಸ್ಟ ೧೫ರಿಂದ ಸಪ್ಟೆಂಬರ್ ೧೫ರ ವರೆಗೆ ಮಾತ್ರ!

೧೧ ರೂ. ಕಳಿಸಿದರೆ ೧೫ ರೂ, ಪುಸ್ತಕ ನಿಮ್ಮ ಬಾಗಿಲಿಗೆ!

ಕಥೆ, ಕಾದಂಬರಿ, ಚರಿತ್ರೆ, ನಾಟಕ, ಕಾಮವಿಜ್ಞಾನ ಇತ್ಯಾದಿ ಸಾಹಿತ್ಯ

ಕನ್ನಡ ಪುಸ್ತಕ ಪ್ರೇಮಿಗಳಿಗೂ, ಶಾಲೆ-ಕಾಲೇಜು-ಗ್ರಾಮಪಂಚಾಯಿತಿ

ವಾಚನಾಲಯದವರಿಗೂ ಪುಸ್ತಕ ಕೊಳ್ಳಲು ಸುವರ್ಣ ಸಂಧಿ!

ಪುಸ್ತಕಗಳ ವಿವರ ಹಾಗೂ ಬಾಕಿ ನಿಯಮಗಳಿಗೆ ಪತ್ರ ಬರೆಯಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ನೈತಿಕ ಪುನರುತ್ಥಾನ

ಸ್ವಾತಂತ್ರ್ಯ ಪಡೆದು ಸರ್ವತೋಮುಖವಾದ ಅಭಿವೃದ್ಧಿ ಯೋಜನೆಗಳಲ್ಲಿ ನಾವು ತೊಡಗಿರುವೆವು. ಸಂಪತ್ಸಮೃದ್ಧಿಯನ್ನು ಮಾಡಿಕೊಳ್ಳುವ ನಮ್ಮ ಪ್ರಯತ್ನಗಳಲ್ಲಿ ಪ್ರಾಮಾಣಿಕತೆಯೇ ಮುಂತಾದ ಸದ್ಗುಣಗಳ ಅಭಾವ ಕಂಡು ಬಂದರೆ ಅದರಿಂದ ಕೇಡುಂಟು. ಪ್ರಜಾಪ್ರಭುತ್ವದ ಯಶಸ್ಸಿಗೆ ನಾಗರಿಕರ ನೈತಿಕ ಮಟ್ಟ ಏರುವುದೂ ಒಂದು ಅಗತ್ಯವೆಂಬುದನ್ನು ಮರೆಯಲಾಗದು.

ಡಾ! ಪಿ. ಎ. ಅಡ್ಯಂತಾಯ

ಪ್ರೆಸಿಡೆಂಟ್, ಟೌನ್ ಮುನ್ಸಿಪಲ್ ಕೌನ್ಸಿಲ್, ಮೂಡುಗೆರೆ.

ಸ್ವಾತಂತ್ರ್ಯವನ್ನು ಪಡೆದ ನಂತರ ನಮ್ಮ ದೇಶದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಲು ನಾವು ಪ್ರಯತ್ನಿಸುತ್ತಿದ್ದೇವೆ. ಪ್ರಾಮುಖ್ಯವಾಗಿ ಆಹಾರದ ಮಟ್ಟಿಗೆ ಅನ್ಯ ದೇಶಗಳ ಕಡೆಗೆ ಕೈಚಾಚದೆ ನಮ್ಮ ರಾಷ್ಟ್ರಕ್ಕೆ ಸಾಕಾಗುವಷ್ಟು ದವಸಧಾನ್ಯಗಳನ್ನು ಬೆಳೆಸಲಾಗುವಂತೆ ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡು, ಈಗಾಗಲೇ ಹಲವು ಮಹತ್ತರವಾದ ಅಣೆಕಟ್ಟುಗಳನ್ನು ಕಟ್ಟುವ ಕೆಲಸವನ್ನೂ ನಿರ್ವಹಿಸುತ್ತಿದ್ದೇವೆ. ಇದರೊಂದಿಗೆ ಅನೇಕ ಕೈಗಾರಿಕೆಗಳೂ ನಮ್ಮಲ್ಲಿ ಅಭಿವೃದ್ಧಿಗೊಳ್ಳಲಿವೆ. ಎಲ್ಲ ರೀತಿಯಿಂದಲೂ ನಾವು ಸ್ವತಂತ್ರರಾಗಿ, ಜನರಲ್ಲಿ ಸುಖ ಸಂಪತ್ತು ಬೆಳೆದು ಜನರ ಜೀವನದ ಮಟ್ಟವು ಏರಲಾಗುವದೆಂಬ ಭರವಸೆ ನಮ್ಮ ಮುಂದಿದೆ. ಆದರೆ ಇದರೊಂದಿಗೆ ನಮ್ಮ ಜನಸಾಮಾನ್ಯರ ನೈತಿಕ ಮಟ್ಟವೂ ಏರಬೇಕಾಗಿದೆ. ನಮ್ಮ ದೇಶವು ಬುದ್ಧ, ಶಂಕರಾಚಾರ್ಯ, ಚೈತನ್ಯ, ರಾಮಕೃಷ್ಣ ಪರಮಹಂಸ, ಗಾಂಧಿ, ನೆಹರುಗಳೇ ಮೊದಲಾದ ಅನೇಕ ಜಗದ್ವಿಖ್ಯಾತ ವಿಭೂತಿ ಪುರುಷರ ತವರೂರೆಂಬುದಾಗಿ ನಾವು ಹೆಮ್ಮೆ ಪಡಬಹುದಾದರೂ, ನಮ್ಮ ಜನಸಾಮಾನ್ಯರ ನೈತಿಕ ಮಟ್ಟವು ತೀರಾ ಕೆಳಗಿದೆಯೆಂದು ನಾವು ಬೇಸರಪೂರ್ವಕ ಒಪ್ಪಿಕೊಳ್ಳಬೇಕಾಗಿದೆ. ಮೊಗಲಾಯಿಂದ ಹಿಡಿದು ಬ್ರಿಟಿಷರ ಆಳ್ವಿಕೆಯ ಅಂತ್ಯದ ತನಕ ಅನೇಕ ಶತಮಾನಗಳಿಂದ ಒಂದಲ್ಲೊಂದು ರೀತಿಯ ರಾಜಕೀಯ, ಆರ್ಥಿಕ, ನೈತಿಕ ಪಾರತಂತ್ರ್ಯದಿಂದಿದ್ದ ನಾವು ನಮ್ಮ ಪೂರ್ವಜರ ಸದ್ಗುಣಗಳನ್ನು ತೀರಾ ಕಳಕೊಂಡಿರುತ್ತೇವೆ. ನಮ್ಮ ದೇಶದ ಸರ್ವಸಾಮಾನ್ಯ ಜನರನ್ನೂ ಬ್ರಿಟನ್, ಅಮೇರಿಕ, ಫ್ರಾನ್ಸ್ ಮೊದಲಾದ ಪಾಶ್ಚಾತ್ಯ ದೇಶಗಳ ಜನರನ್ನೂ ಹೋಲಿಸಿ ನೋಡಿದರೆ ಎಷ್ಟೋ ಹೆಚ್ಚುಕಡಿಮೆ ಕಾಣುತ್ತದೆ. ನಮ್ಮಲ್ಲಿ ಎಲ್ಲಿ ನೋಡಿದರೂ ಅಸೂಯೆ, ವಂಚನೆ, ಸೈಗಳ್ಳತನ, ಡಂಭಾಚಾರ, ಲಂಚಗುಳಿತನಗಳು ಕಂಡುಬರುತ್ತವೆ. ಪ್ರಾಮಾಣಿಕತೆಯೆಂಬುದು ಅಪರೂಪವೆಂದರೇನೆ ಸರಿ. ವ್ಯಾಪಾರದಲ್ಲಾಗಲಿ, ವಹಿವಾಟಿನಲ್ಲಾಗಲಿ, ನ್ಯಾಯವೆಂಬುದು ಕಂಡುಬರುವುದಿಲ್ಲ. ಹೇಗಾದರೂ ವಂಚಿಸಿ ಹಣ ಸಂಗ್ರಹಿಸೋಣವೆಂಬ ಇರಾದೆಯಲ್ಲದೆ ಬೇರೆ ಉದ್ದೇಶ ಕಾಣುವುದಿಲ್ಲ. ಹಾಗೆಂದು ಇಂಗ್ಲೆಂಡದಲ್ಲಿ ಬ್ರಿಟಿಷರ ಪ್ರಾಮಾಣಿಕತೆಯನ್ನು ಯಾರಾದರೂ ಮೆಚ್ಚಬೇಕು. ಅಲ್ಲಿ ಯಾವುದಾದರೊಂದು ಬಟ್ಟೆಯ, ಜೀನಸಿನ ಅಥವಾ ಇನ್ನಿತರ ಅಂಗಡಿಗಳಿಗೆ ಹೋದರೆ ಅಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ಹೆಂಗಸರು ಕುರುಡನಿಗಾದರೂ ಕೂಡಾ ಒಂದಿಷ್ಟೂ ವಂಚನೆಯಿಲ್ಲದೆ, ನಿಶ್ಚಿತ ದರದಿಂದ ಅಚ್ಚುಕಟ್ಟಾದ ಮಾಲನ್ನು ಕೊಡುತ್ತಾರೆ. ಯಾವ ಅಂಗಡಿಗೆ ಹೋದರೂ ಅದೇ ದರ, ಅದೇ ತೂಕ. ಸಾಮಾನ್ಯ ಟ್ಯಾಕ್ಸಿವಾಲನಾದರೂ ಕೂಡಾ ತುಂಬ ಪ್ರಾಮಾಣಿಕತೆಯಿಂದ ನಡೆಯುತ್ತಾನೆ. ಯಾರನ್ನು ಕೇಳಿದರೂ ಎಲ್ಲಿ ಹೋದರೂ ಅವನಿಗೆ ನ್ಯಾಯವಾಗಿ ಎಷ್ಟು ಸಲ್ಲತಕ್ಕದ್ದೋ ಅದಕ್ಕಿಂತ ಹೆಚ್ಚಾಗಿ ಇಸುಕೊಳ್ಳುವುದಿಲ್ಲ. ನಮ್ಮಲ್ಲಾದರೆ ಸಂದರ್ಭಬಂದಾಗ ಒಂದಕ್ಕೆ ನಾಲ್ಕರಷ್ಟು ಬಾಡಿಗೆ ತೆಕೊಳ್ಳಲೂ ನಮ್ಮವರು ಹಿಂಜರಿಯುವುದಿಲ್ಲ. ನಮ್ಮಲ್ಲಿ ಕೆಲವಣಿಜರು ಮಾಡುವ ದಗೆ, ವಂಚನೆಗಳೆಷ್ಟು? ಒಳ್ಳೇ ಮಾಲೆಂದು ಏನೇನೋ ಮಿಶ್ರಣಮಾಡಿ ಜನರಿಗೆ ಮಾರಿಬಿಟ್ಟು ಒಳ್ಳೇ ಮಾಲಿನ ಕ್ರಯವನ್ನೇ ತೆಕ್ಕೊಂಡು ಬಿಡುತ್ತಾರೆ. ಯೋಗ್ಯದರಕ್ಕೆ ತಕ್ಕುದಾದ ಮಾಲನ್ನು ಕೊಟ್ಟು ವ್ಯಾಪಾರದ ಮರ್ಯಾದೆಯನ್ನು ಕಾಯಬೇಕೆಂಬ ಭಾವನೆ ನಮ್ಮಲ್ಲಿಲ್ಲ. ಇದು ಅಗತ್ಯವಾಗಿ ಬರಬೇಕಾಗಿದೆ. ಇದೇ ರೀತಿ ಇನ್ನೂ ಅನೇಕ ರೀತಿಯ ಸದ್ಭಾವನೆಗಳು ನಮ್ಮಲ್ಲಿ ಉಂಟಾಗಬೇಕು.

ಇದಲ್ಲದೆ ನಮ್ಮಲ್ಲಿ ಆಲಸ್ಯತನವೂ ಹೆಚ್ಚಾಗಿದೆ. ಸರಕಾರವನ್ನೂ, ಅಧಿಕಾರಿಗಳನ್ನೂ ಟೀಕೆ ಮಾಡುವುದರಲ್ಲೇ ನಾವು ಕಾಲ ಕಳೆಯುತ್ತೇವೆ. ಸರಕಾರವೇ ಎಲ್ಲವನ್ನೂ ಮಾಡಬೇಕೆಂಬ ಹಂಬಲವುಳ್ಳವರೂ ನಾವಾಗಿದ್ದೇವೆ. ಎಲ್ಲವರ ಸಹಕಾರದಿಂದ ನಮ್ಮ ಹಳ್ಳಿಗಾಗಲಿ, ಸಮಾಜಕ್ಕಾಗಲಿ ಬೇಕಾದ ಅನುಕೂಲತೆಗಳನ್ನು ನಾವೇ ಮಾಡಿಕೊಳ್ಳಲು ಯತ್ನಿಸುವುದಿಲ್ಲ. ನಮಗೆ ಬೇಕಾದ ರಸ್ತೆ, ಬಾವಿ, ಸಣ್ಣಪುಟ್ಟ ಅಣೆಕಟ್ಟು, ಶಾಲೆ, ಆಸ್ಪತ್ರೆ ಮೊದಲಾದವುಗಳನ್ನು ಅನೇಕ ವೇಳೆ ನಾವೇ ಸಹಕರಿಸಿಕೊಂಡು ಮಾಡಿಕೊಳ್ಳಲು ಸಾಧ್ಯವಿದೆ. ಕೆಲವೆಡೆ ಮಾಡಿಯೂ ಇದ್ದಾರೆ. ಇತ್ತೀಚೆಗೆ ಮದ್ರಾಸಿನ ಇಂಜಿನೀಯರಿಂಗ್ ಕಾಲೇಜಿನ ಹಲವು ವಿದ್ಯಾರ್ಥಿಗಳು ಸೇರಿ ಪಕ್ಕದಲ್ಲೇ ಹರಿಯುತ್ತಿದ್ದ ನದಿಗೆ ಕೆಲವೇ ದಿನಗಳಲ್ಲಿ ಒಂದು ಅಣೆಕಟ್ಟನ್ನು ತಾವೇ ಶ್ರಮಪಟ್ಟು ಕಟ್ಟಿ ಅನೇಕ ವರ್ಷಗಳಿಂದ ಆ ಪ್ರದೇಶದಲ್ಲಿನ ಬಾವಿಗಳಲ್ಲಿ ಉಂಟಾಗುತ್ತಿದ್ದ ನೀರಿನ ಅಭಾವವನ್ನು ತಪ್ಪಿಸಿರುವುದು ಒಂದು ಶ್ಲಾಘನೀಯವಾದ ಉದಾಹರಣೆಯಾಗಿದೆ. ಇದೇ ಕೆಲಸವನ್ನು ಸರಕಾರದಿಂದ ಮಾಡಿಸುವುದಾದರೆ ಸುಮಾರು 12 ಸಾವಿರ ರೂಪಾಯಿಗಳು ತಗಲಬಹುದಾಗಿತ್ತೆಂದು ತಿಳಿದು ಬರುತ್ತದೆ. ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಜನರು ಈ ಮನೋವೃತ್ತಿಯುಳ್ಳವರಾದರೆ ಎಷ್ಟು ಹಿತವಾದೀತು? ಅಮೇರಿಕದ ಟೆನೆಸ್ಸಿ ಕಣಿವೆ ಎಂಬ ಜಗತ್ಪ್ರಸಿದ್ಧ ಅಣೆಕಟ್ಟಿನ ಕೆಲಸವು ಆ ಊರಿನವರ ಪ್ರಯತ್ನದಿಂದಲೇ ನೆರವೇರಿಸಲ್ಪಟ್ಟು ಅವರೇ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ.

ನಮ್ಮಲ್ಲಿನ ಪಂಚಾಯತ ಬೋರ್ಡು, ಡಿಸ್ಟ್ರಿಕ್ಟ್ ಬೋರ್ಡು, ಸಹಕಾರ ಸಂಘ, ಮುನಿಸಿಪಾಲಿಟಿಗಳಂಥಾ ಸ್ಥಳೀಕ ಸಂಸ್ಥೆಗಳು ಸಹಾ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಎಷ್ಟೋ ಜನಹಿತ ಕಾರ್ಯಗಳನ್ನು ಮಾಡಬಹುದು. ಆದರೆ ಅಲ್ಲಿ ಸ್ವಾರ್ಥ ಬುದ್ಧಿ, ಅಧಿಕಾರ ಲಾಲಸೆ, ಜಾತಿವಾತ್ಸಲ್ಯಗಳು ಮಾತ್ರ ಬರಲಾಗದು. ಊರಿನ, ಸಮಾಜದ ಹಾಗೂ ದೇಶದ ಹಿತ ದೃಷ್ಟಿಯಿಂದ ಕೆಲಸಮಾಡುವವರು ಇಂಥಾ ಸಂಸ್ಥೆಗಳಲ್ಲಿ ಪ್ರವೇಶಿಸಿ ಅವನ್ನು ಶ್ರೇಯಸ್ಕರವಾಗಿ ನಡೆಸಿಕೊಂಡು ಬರಬೇಕು. ಆಗತಾನೇ ನಾವುಗಳಿಸಿದ ಸ್ವರಾಜ್ಯವು ಸುರಾಜ್ಯವಾಗುವುದು.



ಕರ್ಮಯೋಗವೇ ಮಾನವ ಜೀವನದ ಆದರ್ಶ

ಭಾರತೀಯರಿಗೆ ಯೋಗಿ ಅರವಿಂದರ ಸಂದೇಶ

ಲೇಖಕರು: ವೈದ್ಯಗುರು ಎಂ. ಆರ್. ಭಟ್.

15ನೇ ಆಗೋಸ್ತು ದೇಶದ ಸ್ವತಂತ್ರತೆಯ ಪುಣ್ಯ ಸ್ಮಾರಕವಾಗಿದೆ; ಈ ದಿನ ನಾವು ಸ್ವತಂತ್ರತೆಯ ಸಂಘರ್ಷ ಹಾಗೂ ಇದರ ಪ್ರಾಪ್ತಿಯನ್ನು ಸ್ಮರಿಸಿ, ಆನಂದಪಡುತ್ತೇವೆ, ಹಾಗೆಯೇ ಇದರ ನಂತರ ಗತಿಶೀಲರಾಗಿ ಮುಂದೆ ಸಾಗಲು, ಸ್ವಧಪ್ರತಿಜ್ಞೆ ಮಾಡುತ್ತೇವೆ. ಈ ದಿನವೇ ಶ್ರೀ ಅರವಿಂದರ ಪವಿತ್ರ ಜನ್ಮ ದಿನವಾಗಿದೆ. ಇದೇ ದಿನ 1872 ರಲ್ಲಿ ಶ್ರೀ ಅರವಿಂದರು ಜನಿಸಿದರು; ಸ್ವಾತಂತ್ರ್ಯದ ದೇಶವ್ಯಾಪೀ ತಥ್ಯ ಮತ್ತು ಶ್ರೀ ಅರವಿಂದರ ವೈಯಕ್ತಿಕ ಜನ್ಮಗಳೊಳಗೆ ವಾಸ್ತವವಾಗಿ ಗಂಭೀರ ಸಂಬಂಧವಿದೆ; ಮೊತ್ತಮೊದಲು ಶ್ರೀ ಅರವಿಂದರು ಭಾರತೀಯ ಲೋಕ-ಚೇತನೆಯಲ್ಲಿ ದೇಶಭಕ್ತ ಹಾಗೂ ರಾಷ್ಟ್ರನೇತರಾಗಿಯೇ ಅವತರಿತರಾದರು; ಶ್ರೀ ಅರವಿಂದರು ದೀರ್ಘ ಪ್ರವಾಸದನಂತರ ಶಿಕ್ಷಣವನ್ನು ಮುಗಿಸಿ, ಭಾರತಕ್ಕೆ ಮುಟ್ಟಿದೊಡನೆ, ದೇಶದ ಸ್ವಾತಂತ್ರ್ಯವೇ ಅವರ ಮನೋಬುದ್ಧಿಗಳ ಏಕಮಾತ್ರ ವಿಚಾರವಾಗಿತ್ತು. ಶೀಘ್ರವೇ ಅವರ 'New Lamps for Olu' (ಪುರಾಣ ಆದರ್ಶಗಳ ಸ್ಥಾನದಲ್ಲಿ ನೂತನ ಆದರ್ಶಗಳು) ಎಂಬ ಲೇಖನಗಳ 1894ರಲ್ಲಿ ಪ್ರಬಲ ರೀತಿಯಿಂದ ಪ್ರಕಾಶಿತವಾದವು. ಇವುಗಳಲ್ಲಿ ಅವರು, ಆ ಸಮಯದ ಬಲಪಕ್ಷದ ನೀತಿಯನ್ನು ಬಲವಾಗಿ ಖಂಡಿಸಿದರು; ಮಾತ್ರವಲ್ಲ, ಅದರ ಬದಲಾಗಿ ಸ್ಪಷ್ಟ ಹಾಗೂ ಸ್ವತಂತ್ರ ಶಬ್ದಗಳಲ್ಲಿ ಒಂದು ಸ್ವತಂತ್ರ ಮತ್ತು ಸ್ವಾವಲಂಬೀ ನೀತಿಯನ್ನು ಮಂಡಿಸಿ ಘೋಷಿಸಿದರು. ಗತಶತಮಾನದ ಅಂತಿಮ ದಶಕದಲ್ಲಿ ಬರೆದ ಅವರ ಲೇಖನಗಳು ಇಂದಿಗೂ ಓಜಸ್ವೀ ಅನುಭವಗಳಾಗಿ ಕಾಣಿಸುತ್ತವೆ. ಅಂದಿನ ದಾಸ್ಯದ ವಾತಾವರಣದಲ್ಲಿ ನಿರ್ಭೀತ ಸತ್ಯಭಾಷಣ ಮತ್ತು ನಿಜ ಅಧಿಕಾರಿಗಳ ಸಮರ್ಥನ ಹಾಗೂ ಅವರ ಲೇಖನಗಳು ಪರಮ ತೇಜ ಮತ್ತು ಓಜಸ್ಸಿನ ವಸ್ತುಗಳಾಗಿವೆ. ಸ್ವದೇಶೀ ಆಂದೋಲನ ಕಾಲದಲ್ಲಿ, ಅರವಿಂದರು ಸರ್ವಪ್ರಸಿದ್ಧ ಪತ್ರ "ವಂದೇ ಮಾತರಂ" ನ ಸಂಪಾದಕರಾಗಿ ಪ್ರತಿನಿತ್ಯವೂ ದೇಶದ ಮನ ಮತ್ತು ಪ್ರಾಣದಲ್ಲಿ ದೇಶಭಕ್ತಿಭಾವನವನ್ನು ತುಂಬಿಸುತ್ತ, ಪೂರ್ಣ ಸ್ವಾತಂತ್ರ್ಯವೇ ನಮ್ಮ ಧ್ಯೇಯವಾಗ ಬೇಕಾಗಿದೆಯೆಂದು ಘೋಷಿಸಿದರು, ನ್ಯೂನ ಸ್ವಾತಂತ್ರ್ಯವನ್ನು ನಾವು ಸ್ವೀಕರಿಸಲಾರೆವು ಎಂದು ಹೇಳುತ್ತ ಹೋದರು. ಶಕ್ತಿಯುಕ್ತ ಹಾಗೂ ಗೌರವ ಪೂರ್ಣ ಸ್ವಾತಂತ್ರ್ಯವೇ ನಮ್ಮ ಗಮ್ಯ. ಈ ಧ್ವನಿ ಹಾಗೂ ಭಾವವು "ವಂದೇ ಮಾತರಂ" ದೈನಿಕ ಪತ್ರದ ಪುಟ ಪುಟದ ಮೇಲೆ ಅಂಕಿತವಾಗಿತ್ತು. ಅವರ ಆ ಪತ್ರದ ಪುಟಗಳ ದೇಶಭಕ್ತಿ ಮತ್ತು ಸ್ವಾತಂತ್ರ್ಯ ಪ್ರೇಮದ ಶಿಕ್ಷಣವು ಗಾಂಧೀಯುಗದ ಅನೇಕಾನೇಕ ದೇಶ ಸೇವಕರಿಗೆ ಜನ್ಮ ನೀಡಿತು. ಇಂದಿನ ಹಿರಿಯ ವೃದ್ಧ ರಾಷ್ಟ್ರ ನಾಯಕರು, ಅಂದು ಯುವಕರಾಗಿದ್ದರು. "ವಂದೇ ಮಾತರಂ" ಪತ್ರದಿಂದ ದೀಕ್ಷೆಯನ್ನು ಪಡೆದವರು ಸಹೃದಯತೆಯಿಂದ ಮತ್ತು ಕೃತಜ್ಞತೆಯಿಂದ "ವಂದೇ ಮಾತರಂ" ಪತ್ರ ಮತ್ತು ಅದರ ಲೇಖನಗಳ ಸ್ಮರಣೆ ಮಾಡುತ್ತಿರುತ್ತಾರೆ.

ಅರವಿಂದರು ಬರೋಡ ರಾಜ್ಯದ ಉಪಾಧ್ಯಾಯ ಮತ್ತು ಶಿಕ್ಷಕರಾಗಿದ್ದರೂ, ಆಧ್ಯಾತ್ಮಿಕ ಜಿಜ್ಞಾಸುಗಳಾಗಿ ಸ್ವಲ್ಪ ಕಾಲದ ನಂತರ ಮೆರೆದರು. ಅರವಿಂದರು ತಮ್ಮ ಸಾಧನೆಯು ಕಾರ್ಯಕ್ಷೇತ್ರದ ಒಂದು ಅಧ್ಯಾಯವನ್ನು ಸ್ಥಾಪಿಸಿದರು. ಮಾನವ ಜೀವನವು ಒಂದು ಸಾರ್ವಭೌಮ ವಿಕಾಸದ ಅಂಗವಾಗಿದೆಯೆಂದು ತಮ್ಮ ದೀರ್ಘಕಾಲೀನ ವ್ಯಕ್ತಿಗತ ಸಾಧನೆಯಿಂದ ಅರಿತರು. 1912ರಲ್ಲಿ ಸ್ವಾತಂತ್ರ್ಯ ಆಂದೋಲನ ಮತ್ತು ಅದರ ದಮನದಿಂದ, ಘೋರ ನಿರಾಶೆಯು ಉಂಟಾದಾಗ, "ನನಗೆ ದೇಶದ ಸ್ವಾತಂತ್ರ್ಯದ ಕುರಿತು ಚಿಂತೆಯಿಲ್ಲ. ಸ್ವಾತಂತ್ರ್ಯ ಲಭಿಸಿದ ನಂತರ, ನಾವು ಅದರ ಉಪಯೋಗ ಹೇಗೆ ಮಾಡುವೆವು? ಎಂಬುದರ ಕುರಿತು ನನಗೆ ಚಿಂತೆಯಿದೆ" ಎಂದು ಅರವಿಂದರು ಗಂಭೀರವಾಗಿ ನುಡಿದರು.

15ನೇ ಆಗೋಸ್ತು ನಮ್ಮ ಸ್ವಾತಂತ್ರ್ಯ ದಿನ ಹಾಗೂ ಅರವಿಂದರ ಜನ್ಮದಿನ ಇಂದು ಮೇಲಿನ ವಾಕ್ಯದ ... ಉಪಯುಕ್ತ ಕಾಲ ... ಸ್ವಾತಂತ್ರ್ಯದ ಉಚಿತ ಉಪಯೋಗ ಮಾಡಬೇಕಾಗಿದೆ ... ಮಾಡಲ್ಪಟ್ಟಿದೆಯೋ? ಅಥವಾ ... ಆಥವಾ ... ಹಾಗೂ ರಾಷ್ಟ್ರ ರೂಪದಲ್ಲಿಯೇ? ಇಷ್ಟರ ವರೆಗೆ ... ಉಚಿತ ಕಾರ್ಯವು ... ಹಾಗಾದರೆ ಅದು ... ಮನುಷ್ಯನ ... ತನ್ನ ... ದೇಶದ ... ಮಾನಸಿಕ ಪ್ರಯೋಗ ... ಮಾಡಿದ್ದೇವೆ. ಅವುಗಳು ... ಮಾತ್ರ ಆಗಿವೆ. ಮನುಷ್ಯನ ... ತನೆಯ ನಿರ್ಮಾಣ, ಅವನ ಅಂತರ್ಜೋತಿಯ ನಿರ್ಮಾಣವಾಗಿ, ದೇಶಾಭ್ಯುದಯದ ಕಾರ್ಯದ ... ಅವನ ... ಕಾರ್ಯ ... ಪ್ರೀತಿ, ... ಮಾಡುವುದು ... ಅವನ ... ಧಾರಣೆಯ ... ಉತ್ತಮಗೊಳಿಸಿ, ಜಾಗೃತವಾಗಬೇಕಾಗಿದೆ, ಅವನ ಭಾವನೆಗಳು ಸೂಕ್ಷ್ಮ ಹಾಗೂ ಯಥಾರ್ಥವಾಗಬೇಕಾಗಿದೆ; ಇದರಿಂದ, ರಾಷ್ಟ್ರದ ಭವಿಷ್ಯವು ಉಜ್ವಲವಾದೀತು.

ದೇಶದ ಆಂತರಿಕ ವಿಕಾಸಕ್ಕೋಸ್ಕರ, ವ್ಯಾಪಕ ಹಾಗೂ ತೀವ್ರ ಇಚ್ಛೆ, ಜನರಲ್ಲಿ ಉಂಟುಮಾಡಬೇಕಾಗಿದೆ; ಅದು ಜನಜೀವನ ನಿರ್ಮಾಣದ ಪ್ರೇರಣೆಯರೂಪದಲ್ಲಿ ಕಾಣಿಸಬೇಕು. ಬಹಿರ್ಮುಖ ಜೀವನಕ್ಕೋಸ್ಕರ ಬಾಹ್ಯ ವಸ್ತುಗಳು ಪ್ರಥಮ ಹಾಗೂ ಅಂತಿಮ ಸತ್ಯವಾಗಿವೆ. ಅವುಗಳ ಮೇಲೆ, ಮನುಷ್ಯರ ಸುಖದುಃಖಗಳು, ಅವರ ಅಸ್ತಿತ್ವವು ಸಹ ಹೊಂದಿಕೊಂಡಿವೆ. ಮಾನವಜೀವನವನ್ನು ವಿಕಸಿತ, ಉನ್ನತ ಮತ್ತು ಸುಘಟಿತವಾಗಿರುವುದೇ ವಾಸ್ತವಿಕ ನಿರ್ಮಾಣವಾಗಿದೆ, ನಮ್ಮ ನಿರ್ಮಾಣಕಾರ್ಯಗಳಲ್ಲಿ, ನಮ್ಮ ಶಿಕ್ಷಣದಲ್ಲಿ, ನಮ್ಮ ಸಾಹಿತ್ಯ ಮುಂತಾದವುಗಳಲ್ಲಿ ನಮ್ಮ ಇಚ್ಛೆಯು ಪ್ರಬಲವಾಗಿ ಜಾಗೃತವಾದಾಗ, ನಮಗೆ ಈ ದೃಷ್ಟಿಯು ಒದಗುವುದು; ಇದರಿಂದ, ಮನೋವೈಜ್ಞಾನಿಕ ಬಲದ ಆಧಾರ ಮೂರ್ತ ಪ್ರೇರಣೆಯು ಪ್ರಾಪ್ತವಾಗುವುದು. ಇದಕ್ಕೆ ಸಹಾಯಕವಾಗುವ ವಾತಾವರಣ ಸೃಜಿಸಬೇಕಾಗಿದೆ. "ಕರ್ಮಯೋಗವನ್ನು ಮಾನವಜೀವನದ ಆದರ್ಶವನ್ನಾಗಿ ಮಾಡುವುದು ಪ್ರಯೋಜನಕಾರಿಯಾಗಿದೆ; ಅದರಿಂದ ಭಾರತದ ಅಭ್ಯುದಯವಾಗುವುದು"— ಎಂದು ಶ್ರೀ ಅರವಿಂದರು ಸಾರಿರುವರು. "ಯೋಗಃ ಕರ್ಮಸು ಕೌಶಲಮ್"— ಭಾರತೀಯರ ಪ್ರಯತ್ನಕಾರ್ಯವು ವಿಕಸಿತವಾಗ ಬೇಕಾಗಿದೆ ಇದೆಲ್ಲಾ ನಮ್ಮ ವಿವೇಕ ಹಾಗೂ ಸಾಧನೆಯ ಮೇಲೆ ಹೊಂದಿದೆ.

ಬೇಕಾಗಿದ್ದಾರೆ

ನಮ್ಮ ಬೋಳಕೋಡಿ ಎಲಿ. ಶಾಲೆಯಲ್ಲಿ ಒಬ್ಬ ಹಾ। ತರಬೇತಿ ಹೊಂದಿದ ಅಧ್ಯಾಪಕನು ಬೇಕಾಗಿರುವುದರಿಂದ, ಸೇರಲಿಚ್ಛಿಸುವವರು ತಮ್ಮ ಅರ್ಜಿಗಳಲ್ಲಿ ಒಂದನ್ನು ಶ್ರೀ. ಕಾರ್ಕಳ ರೇಂಜ್, ಡಿಸ್ಟ್ರಿಕ್ಟ್, ಇನ್ಸ್‌ಪೆಕ್ಟರರಿಗೂ ಇನ್ನೊಂದನ್ನು ಈ ಕೆಳಗಿನ ವಿಳಾಸಕ್ಕೂ ಕೂಡಲೇ ಬರಕೊಳ್ಳಬೇಕಾಗಿ ವಿಳಿಸೋಣಾಗಿದೆ.

ಬಿ. ಪದ್ಮನಾಭ ಭಟ್ಟ,
ಶಾಲಾ ಆಡಳಿತೆದಾರ.

ಬೋಳಕೊಡಿ, ಎಯ್. ಎಲಿ. ಶಾಲೆ,
ಕಡಂದಲೆ, ತಾ. 6–8–1953.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C .79/53.

M. ನರಸಿಂಹ ಭಂಡಾರಿ— ವಾದಿ.
V. .K ಕೆಂಚರಾಯ ಶೆಟ್ಟಿ-ಪ್ರತಿವಾದಿ
V. K. ಕೆಂಚರಾಯ ಶೆಟ್ಟಿ, ಮಡಿಕೇರಿ ಪೇಟೆಯ ಮಹಾದೇವ ಪೇಟೆಯಲ್ಲಿ-ಇವರಿಗೆ ತಿಳಿಸುವುದೇನೆಂದರೆ.

ವಾದಿಯು ಲೇವಾದೇವಿ ಬಾಬ್ತು ನಿಮ್ಮಿಂದ ಬರತಕ್ಕ ಹಣದ ವಸೂಲಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾ 17-8-53ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಾಜ್ರಾಗಿ ಉದಹರಿಸಿಕೊಳ್ಳ ತಕ್ಕದ್ದು. ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

B. Chidananda Rao.
Pleader for Plaintiff.

ಪುತ್ತೂರು ತಾ 4-8-53.

(೭ನೇ ಪುಟದಿಂದ)

ಜೀವನದಲ್ಲಿ ಸಾಮಂಜಸ್ಯ ಸ್ಥಾಪಿಸಲು ರಾಜಾಜಿ ತುಂಬ ಜಾಗ್ರತೆ ವಹಿಸ್ತಾರೆ. ಅವರು ಪರಿವರ್ತನಶೀಲತೆಯ ವಿರುದ್ಧವಿದ್ದಾರೆಂದು ಹೇಳುವಂತಿಲ್ಲ-ಹಾಗೆಯೇ ಸಾಂಪ್ರದಾಯಿಕತೆಯಲ್ಲಿ ಮುಳುಗಿದ ಅಂಧರೆಂದೂ ಕರೆಯಲು ಬಾರದು. ಒಂದೇ ಸಮಯಕ್ಕೆ ಅವರು ಹಿರಿಯ ಮುತ್ಸದ್ದಿಗಳೂ ಕಿರಿಯ ಪ್ರಗತಿ ಶೀಲರೂ ಆಗಿ ತೋರುತ್ತಾರೆ.

ಈ ಸರ್ವಾಂಗೀಣ ಪ್ರತಿಭೆಯನ್ನು ನೆಹರೂರವರು ... ರಾಜಾಜಿಗೆ ಪ್ರಶಂಸೆ ಬೇಂದಿಲ್ಲ--ಆವರೂ ಅವರ ಒಗೆಗಿರುವ ಗೌರವ ಭಾವನೆ ಈ ಮಾತುಗಳಿಂದ ಸ್ಪಷ್ಟಗೊಳ್ಳುತ್ತದೆ-"ಚಾತುರ್ಯದೊಡನೆ ಮಾಧುರ್ಯ, ಬುದ್ಧಿ ಒಬ್ಬೊಡನೆ ವಿವೇಕದ ಕಡಿವಾಣ, ವೈವಿಧ್ಯದೊಡನೆ ಶ್ರೇಷ್ಠತ್ವ, ಸರಳತೆಯೊಂದಿಗೆ ಮಹಾನತೆಯನ್ನು ಮಿಶ್ರಣಗೈದಂತೆ-ರಾಜಾಜಿಯ ವ್ಯಕ್ತಿ ವೈಶಿಷ್ಟ್ಯವಿದೆ ಅಭಿನವ ಶಂಕರಾಚಾರ್ಯ ಅಥವಾ ಗೌತಮ ಬುದ್ಧನಂತೆ ರಾಜಾಜಿಯನ್ನು ಕಂಡರೆ ಮನಸ್ಸು ಭಕ್ತಿಯಿಂದ ಕೈಮುಗಿಸುತ್ತದೆ."

❖

(ಸಂಕಲಿತ)

ಬಾಲಚಂದ್ರ

ಶೈಕ್ಷಣಿಕ ಮಾಸಪತ್ರಿಕೆ
ವಾರ್ಷಿಕ ಚಂದಾ ರೂ. 3–0–0
ಬೈಂಡುಮಾಡಿದ ಹಳೆ ಸಂಪುಟಗಳು ದೊರೆಯುತ್ತವೆ.
ವಿಚಾರಿಸಿ
ಬಾಲಚಂದ್ರ ಆಫೀಸು, ಉಡುಪಿ.
ಅಥವಾ
ನವಯುಗ ಪ್ರೆಸ್, ಉಡುಪಿ.

ಸ್ವಾತಂತ್ರ್ಯರಕ್ಷಣೆಯೂ ಗರ್ಭನಿರೋಧವೂ

ಲೇ—ಡಾ॥ ಎಂ. ಗೋಪಾಲಕೃಷ್ಣ ರಾವ್, "ಕಲಿಯುಗ" ಸಂಪಾದಕರು.

ಎಲ್ಲರೂ ಕೃಷಿಗೆ ತೊಡಗಿದರೆ ಆಹಾರವು ಹೆಚ್ಚುವುದು ಎಂದು ಕೆಲವು ಜಾಣರು ವಾದಿಸುವರು. ಸ್ವಲ್ಪ ಯೋಚನೆ ನೋಡಿದರೆ ಅವಾದವು ಎಷ್ಟು ಪೂರ್ಣತೆನದ್ದಾಗಿದೆಯೆಂದು ಗೊತ್ತಾಗುವುದು. ಏಕೆಂದರೆ ಈಗಾಗಲೇ ನೂರಕ್ಕೆ ೭೦ ಜನರು ಹೊಲಗಳನ್ನೇ ಅವಲಂಬಿಸಿರುವುದರಿಂದ ಹೊಲಗಳೂ ಸಾಲದಂತಾಗಿವೆ, ಬೇರೆ ಉದ್ಯೋಗಗಳೂ ಬೆಳೆಯದಂತಾಗಿವೆಯೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಹೀಗಿರುವಾಗ ಇನ್ನೂ ಹೆಚ್ಚು ಜನರು ಕೃಷಿಯನ್ನು ಮಾಡಲು ಅವಕಾಶವೆಲ್ಲಿದೆ? ಎಲ್ಲರೂ ಕೃಷಿಗೆ ತೊಡಗಿದರೆ ದೇಶದಲ್ಲಿ ಉದ್ಯೋಗ ಕೈಗಾರಿಕೆಗಳನ್ನು ಬೆಳೆಸುವವರಾರು? ತದ್ವಿರುದ್ಧ ಹೆಚ್ಚು ಜನರು ಉದ್ಯೋಗ ಕಾರಖಾನೆಗಳ ಕಡೆಗೇ ತಿರುಗಿದರೆ, ಈಗ ದುಡಿಯುತ್ತಿರುವ ಕೂಲಿಕಾರರಿಗೆ ಕೆಲಸವಿಲ್ಲದಿರುವಾಗ ಹೊಸಬರನ್ನು ತೆಗೆದು ಕೊಳ್ಳುವುದು ಹೇಗೆ?

ಹೆಚ್ಚು ಕಾರಖಾನೆಗಳನ್ನು ತೆರೆಯಬೇಕು, ಹೆಚ್ಚು ಯಂತ್ರಗಳನ್ನು ತರಿಸಬೇಕು, ಎಂದು ಉಪದೇಶಿಸುವವರಿದ್ದಾರೆ. ಆದರೆ ಆಹಾರಧಾನ್ಯಗಳಿಗೇ ಸರಕಾರವು ಸಾಲಮಾಡಬೇಕಾಗಿರುವಾಗ ಯಂತ್ರಗಳಿಗೆ ದುಡ್ಡೆಲ್ಲಿಂದ? ಹೆಚ್ಚು ಕಾರಖಾನೆಗಳಿಂದ ಸಿದ್ಧವಾದ ಸಾಮಾಗ್ರಿಗಳು ಹೆಚ್ಚಾದರೆ ಕೊಳ್ಳುವವರಾರು? ಸಾಮಗ್ರಿಗಳಿಗೆ ಬೆಲೆ ಕಡಿಮೆ ಮಾಡಬೇಕಾದರೆ ಕೂಲಿಯ ದರವನ್ನು ಕಡಿಮೆ ಮಾಡಬೇಕಾಗುವುದು. ಕಡಿಮೆ ಕೂಲಿಯವನಿಗೆ ಹತ್ತಾರು ಮಕ್ಕಳಾದರೆ ಅವನ್ನು ಪೋಷಿಸುವುದೆಂತು? ಆಗ ರಶಿಯದಲ್ಲಿಯಂತೆ ಮೊಲೆ ಕುಡಿಯುವ ಕೂಸನ್ನು ದಾದಿಯ (ನರ್ಸಿನ) ಕೈಗೆ ಒಪ್ಪಿಸಿ ಹೆಂಗಳೆಯರೂ ಕಾರಖಾನೆಗಳಲ್ಲಿಯೂ, ಗದ್ದೆಗಳಲ್ಲಿಯೂ ದುಡಿಯಲು ಇಳಿಯಬೇಕಾಗುವುದು. ಒಬ್ಬ ದಾದಿಯ ಕೈಗೆ ಹಲವು ಮಕ್ಕಳನ್ನು ಒಪ್ಪಿಸಿದರೆ ಆ ಮಕ್ಕಳ ಆರೈಕೆಯಾದರೂ ಹೇಗಾದೀತು? ಆಗಲಾದರೂ ಸಾಕಲು ಅನಾನುಕೂಲವಾಗುವಷ್ಟು ಸಂಖ್ಯೆಯಲ್ಲಿ ಮಕ್ಕಳನ್ನಾದರೂ ಏಕೆ ಹಡೆಯಬೇಕು ಎಂದು ಕೇಳಬಹುದೇ?

ಗರ್ಭನಿರೋಧದ ವಿರೋಧಿಗಳ ಲೆಕ್ಕದಂತೆ ದೇಶದಲ್ಲಿ ಆಹಾರವೂ ಜೀವನ ಸಾಮಾಗ್ರಿಗಳೂ ಇಪ್ಪತ್ತು ವರ್ಷಗಳ ನಂತರ ಸಮೃದ್ಧವಾಗುವವೆಂದು ತಿಳಿಯುವ. ಆದರೆ ಆ ಇಪ್ಪತ್ತು ವರ್ಷಗಳ ವರೆಗೆ ಬಡವರಿಗೆ ಆಹಾರವನ್ನು ಯಾರು ಕೊಡುವರು? ಇದ್ದ ಹೊಟ್ಟೆಗಳೇ ಉಪವಾಸವಿರುವಾಗ ಹೊಸ ಹೊಟ್ಟೆಗಳನ್ನೇಕೆ ಹುಟ್ಟಿಸಬೇಕು? ಅಲ್ಲದೆ ಆ ಇಪ್ಪತ್ತು ವರ್ಷಗಳಲ್ಲಿ ದೇಶದ ಜನಸಂಖ್ಯೆಯು ಮನಃ ೫ ಕೋಟಿ ಹೆಚ್ಚುತ್ತ ಹೋಗುವುದಲ್ಲವೇ? ಜಗತ್ತಿನಲ್ಲಿಯ ಒಟ್ಟು ಆಹಾರವು, ಜಗತ್ತಿನಲ್ಲಿಯ ಒಟ್ಟು ಜನಸಂಖ್ಯೆಗೆ ಬೇಕಾದುದಕ್ಕಿಂತ ಹೆಚ್ಚಾಗಿದೆ; ಅಮೆರಿಕೆಯಲ್ಲಿ ಆಹಾರಧಾನ್ಯವನ್ನು ಉರವಲವಾಗಿ ಉಪಯೋಗಿಸುತ್ತಾರೆ ಎಂಬ ಸಂಗತಿಯು ನಿಜವಾದರೂ ಆ ಹೆಚ್ಚಿನ ಆಹಾರವು ಈ ಕ್ಷಣಕ್ಕೆ ಬಡವರ ಬಾಯಿಗೆ ಬರುವುದು ಹೇಗೆ? ಕೊಲೆ, ಸುಲಿಗೆಗಳಿಂದ ಅದನ್ನು ಸಂಪಾದಿಸಬೇಕೇ? ಭವಿಷ್ಯದಲ್ಲಿ ಪ್ರತಿ ಮನುಷ್ಯನಿಗೂ ಸಾಕಷ್ಟು ಆಹಾರ ಸಿಗುವಂತಾದರೆ ಆಗ ಹೆಚ್ಚು ಮಕ್ಕಳನ್ನು ಹುಟ್ಟಿಸಲು ಗರ್ಭನಿರೋಧದ ಪ್ರತಿಪಾದಕರು ಆಕ್ಷೇಪಿಸಲಾರರು. ಅವರು ಗರ್ಭನಿರೋಧವನ್ನು ದೇಶಕ್ಕೆ ಹಿತಕರವಾದ ತಾತ್ಕಾಲಿಕ ಆಪದ್ಧರ್ಮವೆಂದು ಬೋಧಿಸುತ್ತಿರುವರೇ ಹೊರತು ಅದೊಂದು ತ್ರಿಕಾಲಾಬಾಧಿತ ಧರ್ಮ ಕರ್ಮವೆಂದಲ್ಲ.

ಪಂಚವಾರ್ಷಿಕ ಯೋಜನೆಯ ಸಿದ್ಧಿಗೆ ಜನತೆಯು ಸಂಬಳದ ಆಸೆಯಿಲ್ಲದೆ ಸ್ವಯಂಸ್ಫೂರ್ತಿಯಿಂದ ಸಹಕರಿಸಬೇಕೆಂದು ನೇತಾರರುಗಳು ಉಪದೇಶಿಸುತ್ತಿದ್ದಾರೆ. ಆದರೆ ಮಕ್ಕಳ ಭಾರದಿಂದ ಬಗ್ಗಿದ ಕೈಗಳು ಪಂಚವಾರ್ಷಿಕ ಯೋಜನೆಗೆ ಹೇಗೆ ನೆರವು ನೀಡಬಲ್ಲವು ಅಲ್ಲದೆ ಆಯೋಜನೆಗಳಿಂದ ಯಾಂತ್ರಿಕ ಕಾರಖಾನೆಗಳು ಬೆಳೆದು ಈ ೨-೩ ವರ್ಷಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಬೆಳೆದಿದೆಯೆಂಬುದನ್ನು ನೇತಾರರುಗಳೇ ಒಪ್ಪಿದ್ದಾರೆ. ಆ ನಿರುದ್ಯೋಗಿಗಳಿಗೇ ಹೊಟ್ಟೆಗಿಲ್ಲದಿರುವಾಗ ಅವರೂ ಮಕ್ಕಳನ್ನು ಹುಟ್ಟಿಸಲಾರಂಭಿಸಬೇಕೇ?

ಶ್ರೀಮಂತರಿಗೆ ಮಕ್ಕಳು ಕಡಿಮೆ; ಆದ್ದರಿಂದ ಗರ್ಭನಿರೋಧದಿಂದ ಮಕ್ಕಳನ್ನು ನಿಯಂತ್ರಿಸದೆ ಶ್ರೀಮಂತಿಕೆ ಹೆಚ್ಚು ಮಾಡಿದರೆ ಮಕ್ಕಳು ತಾನೇ ಕಡಿಮೆಯಾಗುವವು ಎಂದು ಕೆಲವು "ಒಂದೂವರೆ ಜಾಣರು" ಸಲಹೆ ಕೊಡುತ್ತಿದ್ದಾರೆ. ಅವರು ಶ್ರೀಮಂತಿಕೆ ಬೆಳೆಯುವವರೆಗೆ ಮಕ್ಕಳ ಬಾಯಿಗೇನು ಮಣ್ಣು ಹಾಕಬೇಕೇ? ಎಂಬ ಪ್ರಶ್ನೆಗೆ ಉತ್ತರಕೊಡುವುದಿಲ್ಲ. ಅಲ್ಲದೆ ಶ್ರೀಮಂತರೆಲ್ಲರಿಗೂ ಮಕ್ಕಳು ಕಡಿಮೆಯಾಗಿರುವವೇ? ಲಕ್ಷಾಪತಿ ಎಕ್ರೆ ಆಸ್ತಿಯ ಶ್ರೀಮಂತರು ಹತ್ತಾರು ಮಕ್ಕಳನ್ನು ಹೆತ್ತು ಅವರನ್ನು ಭಿಕ್ಷಾಧೀಶರನ್ನಾಗಿ ಮಾಡಿ ಹೋದ ಉದಾಹರಣೆಗಳು ಕಡಿಮೆಯಾಗಿವೆಯೇ? ಕೆಲವು ಸಿರಿವಂತರಿಗೆ ಮಕ್ಕಳು ಆಗದಿರುವುದು ಅವರ ಶ್ರೀಮಂತಿಕೆಯು ಕಾರಣದಿಂದಲ್ಲ. ಆದರೆ ಶ್ರೀಮಂತಿಕೆಯ ಜೀವನದಲ್ಲಿ ದುಡಿಮೆ, ವ್ಯಾಯಾಮಗಳು ಕಡಿಮೆ; ವ್ಯಸನ, ವಿಲಾಸ, ವ್ಯಾಧಿಗಳು ಹೆಚ್ಚು; ತತ್ಪರಿಣಾಮವಾಗಿ ಮಕ್ಕಳು ಕಡಿಮೆಯಾಗುವವು. ಶ್ರೀಮಂತಿಕೆಯಿದ್ದರೂ ವ್ಯಸನಗಳಿಗೆ ಆಸ್ಪದ ಕೊಡದೆ ಕಾಯಕಷ್ಟ ಮಾಡುವ ದಂಪತಿಗಳಿಗೆ ಡಜನಗಟ್ಟಲೆ ಮಕ್ಕಳಾಗಿರುವ ಸಾವಿರಾರು ಉದಾಹರಣೆಗಳಿವೆ. ಶ್ರೀಮಂತಿಕೆಯಿಂದ ಸಂತತಿ ನಿಯಂತ್ರಣ ಮಾಡಲು ಹೇಳುವವರು ವ್ಯಸನ, ವಿಲಾಸ, ವ್ಯಾಧಿಗಳು ಹೆಚ್ಚಲೆಂದೂ ಉಪದೇಶಮಾಡುವರೋ?

ಸಾರಾಂಶವೇನೆಂದರೆ ಸಾಮಾಜಿಕ ಸುಖಕ್ಕಾಗಿ, ದೇಶದ ಹಿತಕ್ಕಾಗಿ ಮತ್ತು ರಾಷ್ಟ್ರೀಯ ಆರ್ಥಿಕ ಸುಸ್ಥಿತಿಗಾಗಿ ಗರ್ಭನಿರೋಧವನ್ನು ಉಪದೇಶಿಸುವವರು ಮಕ್ಕಳ ವೈರಿಗಳಲ್ಲ. ಮಕ್ಕಳೆಂದರೆ ಕುಟುಂಬ ಮತ್ತು ಸಮಾಜ ವೃಕ್ಷದ ನಗುವ ಕುಸುಮಗಳೆಂದೂ ರಾಷ್ಟ್ರದ ಸ್ವಾತಂತ್ರ್ಯರಕ್ಷಣೆಯ ಧೀರ ದುರ್ಗಗಳೆಂದೂ ಅವರು ಕೂಡಾ ಒಪ್ಪುತ್ತಾರೆ. ಆದರೆ ಈಗ ಇರುವ ಮಕ್ಕಳ ಆಳುವನ್ನು ಹೆಚ್ಚಿಸಲು, ಅವರ ಆಹಾರವನ್ನು ಕಸಿದುಕೊಂಡು ಕಸುವನ್ನು ಕುಗ್ಗಿಸಲು ಹೊಸಮಕ್ಕಳು ಬೇಗ ಬೇಗ ಹುಟ್ಟದಿರಲಿ, ಎಂದಿಷ್ಟೇ ಅವರ ಧ್ಯೇಯವಾಗಿದೆ. ಅವರು ಕೂಡ ಒಂದು ಕುಟುಂಬಕ್ಕೆ ಕನಿಷ್ಠ ಮೂರು ನಾಲ್ಕು ಮಕ್ಕಳಾದರೂ ಬೇಕು, ಮಕ್ಕಳಿಂದಲೆ ದಂಪತಿಗಳಿಗೆ ಕ್ಷಣಕಾಲ ಜೀವನ ಯಾತ್ರೆಯ ಪ್ರಯಾಸವನ್ನು ಮರೆತು ಆನಂದಿಸಲು ಅನುಕೂಲವಾಗುವುದು, ಎಂದು ಅಭಿಪ್ರಾಯಪಡುತ್ತಾರೆ. ಆದರಿಂದ ನೇತಾರರು, ರಾಜಾಜಿಗಳಂತಹ ವರ್ಚಸ್ವಿಗಳು ಕಾಟಾಚಾರಕ್ಕಲ್ಲದೆ ಸ್ವಪ್ರೇರಕವಾಗಿ ಗರ್ಭನಿರೋಧದ ಸಮಂಜಸವಾದ ಧ್ಯೇಯವನ್ನು ಮನವರಿಕೆ ಮಾಡಿಕೊಳ್ಳಲಿ.

'ಸ್ವಾತಂತ್ರ್ಯ ರಕ್ಷಣೆ' ಎಂಬ ಶಬ್ದವನ್ನು ಉಚ್ಚರಿಸಿದೊಡನೆ ಯಾರಿಗಾದರೂ ಸೈನ್ಯ, ಮದ್ದು ಗುಂಡುಗಳ ನೆನಪು ಬರುವುದು ಸಹಜ. ಮತ್ತೆ ಆಧುನಿಕ ಹಿಂಸಾಮಯ ಅಂತರ್ರಾಷ್ಟ್ರೀಯ ವಾತಾವರಣದಲ್ಲಿ ಅಸ್ತ್ರಗಳಿಲ್ಲದೆ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದೂ ಅಸಾಧ್ಯವೆಂಬುದನ್ನು ಒಪ್ಪಲೇ ಬೇಕು. ಆದರೆ ಆ ಎಲ್ಲ ಸಾಧನಗಳ, ಬರಿಯ ಸಂಖ್ಯಾಬಲ ಅಥವಾ ಪರಿಮಾಣದ ಬಲವಿದ್ದರೆ ಸಾಲದು. ಆಟಂ ಬಾಂಬುಗಳ ಉದಯವಾದಾಗಿನಿಂದ ಸಂಖ್ಯಾ ಬಲಕ್ಕಿಂತ ಸತ್ವ ಬಲಕ್ಕೆ ಹೆಚ್ಚು ಮಹತ್ವ ಬಂದಿದೆ. ಸಾವಿರಾರು ಬಾಂಬುಗಳು ಮತ್ತು ಲಕ್ಷಾವಧಿ ಸೈನ್ಯಕ್ಕಿಂತ ಒಂದು ಆಟಂ ಬಾಂಬಿಗೆ ಶಕ್ತಿ ಹೆಚ್ಚಿದೆ. ಮತ್ತೆ ಅಂತಹ ಭೀಕರ ಸ್ಫೋಟಕಗಳನ್ನು ಸಿದ್ಧಗೊಳಿಸಲು ಅಪಾರವಾದ ಸಂಪತ್ತು ಬೇಕು. ಅರ್ಥಾತ್ ಅಂತಹ ಮಾರಕಾಸ್ತ್ರಗಳನ್ನು ತಯಾರಿಸಲು ದೇಶವು ಸಮರ್ಥವಾಗಬೇಕಾದರೆ—ಭಾರತದಂತಹ ಬಡ ದೇಶವು—ತನ್ನ ಜನತೆಯ ಜೀವನ ಧಾರಣದ ವೆಚ್ಚವನ್ನು ಕಡಿಮೆ ಮಾಡಬೇಕಾಗುವುದು. ಅದು ಅನಾಗರಿಕ ಪ್ರವೃತ್ತಿಯಾಯಿತು.

ಸ್ವಾತಂತ್ರ್ಯ ರಕ್ಷಣೆಯ ಬೇರೊಂದು ಸಭ್ಯವಾದ ಮಾರ್ಗವೆಂದರೆ ದೇಶವು ಸ್ವಾವಲಂಬಿಯಾಗುವುದು. ಸ್ವಾವಲಂಬನವೆಂದರೆ ನಮ್ಮ ಜನತೆಯ ಆಹಾರ, ಜೀವನ ಸಾಮಾಗ್ರಿಗಳನ್ನೆಲ್ಲ ನಮ್ಮಲ್ಲಿಯೆ ಉತ್ಪಾದಿಸುವುದು. ಅವುಗಳು ಸಾಕಷ್ಟು ಉತ್ಪನ್ನವಾಗುವ ವರೆಗೆ ಜನಸಂಖ್ಯೆಯು ಬೆಳೆಯದಂತೆ ನಿಯಂತ್ರಿಸುವುದು ಅಗತ್ಯ. ಈಗ ಇರುವ ಜನತೆಗೇ ಸಮೃದ್ಧ ಆಹಾರ ಜೀವನ ಸಾಮಗ್ರಿಗಳನ್ನು ಒದಗಿಸಲು ಎಷ್ಟು ಪಂಚವಾರ್ಷಿಕ ಯೋಜನೆಗಳು ಬೇಕಾಗುವುವೋ! ಅದಕ್ಕೆ ಹೊಸ ಸಂತತಿಯ ಭಾರವೂ ಬಿದ್ದರೆ? ಮತ್ತೆ ದುರ್ವ್ಯಸನದಿಂದ ಪಕ್ವನೆರಣನೋಘಗಳು ಮುಸುಕಿದರೆ? ಆದ್ದರಿಂದ ಸ್ವಾತಂತ್ರ್ಯ ರಕ್ಷಣೆಯಲ್ಲಿ ಗರ್ಭ ನಿರೋಧಕ್ಕೂ ಮಹತ್ವದ ಸ್ಥಾನವಿದೆಯೆಂದಾಯಿತಲ್ಲವೇ?

"ಭಾರತದ ಜನಸಂಖ್ಯೆ ಹೆಚ್ಚಿಲ್ಲ; ನಮಗೆ ಗರ್ಭ ನಿರೋಧದ (ಕುಟುಂಬ ಯೋಜನೆಯ) ಅಗತ್ಯವಿಲ್ಲ" ಎಂದು ಕೆಲವು ಮಹನೀಯರು ಯಾವುದೋ ಒಂದು ಸುಮುಹೂರ್ತದಲ್ಲಿ ತಮ್ಮ ಮತವನ್ನು ಕಟ್ಟಿಕೊಂಡಿದ್ದಾರೆ. ಪರಿಸ್ಥಿತಿಯ ಒತ್ತಡದಿಂದ ಆ ಮಹನೀಯರು ಒಂದೊಂದು ಸಲ ಮಕ್ಕಳ ಸಂಖ್ಯೆ ಮಿತಿ ಮೀರಬಾರದು ಎಂಬುವನ್ನು ಒಪ್ಪಿದರೂ ಗರ್ಭ ನಿರೋಧದ ಬಗ್ಗೆ ತಮ್ಮ ವಿರುದ್ಧಾಭಿಪ್ರಾಯವನ್ನು ಸಂದರ್ಭಸಿಕ್ಕಾಗಲೆಲ್ಲ ಉಚ್ಚರಿಸದೆ ಬಿಡರು. ಅಂತಹ ಮಹನೀಯರಲ್ಲಿ ಪಂಡಿತ ನೆಹರು, ವಿನೋಬಾ ಭಾವೆಗಳಂತಹರು ಕೂಡ ಇದ್ದುದೆಂಬುದು ಭಾರತದ ದುರ್ದೈವವಾಗಿದೆ.

"ಹೆಚ್ಚು ಆಹಾರ, ಜೀವನ ಸಾಮಾಗ್ರಿಗಳನ್ನು ಹುಟ್ಟಿಸಿದರೆ ಜನ ಸಂಖ್ಯೆ ಎಷ್ಟು ಬೆಳೆದರೂ ಯಾರೂ ಉಪವಾಸ, ಬಡತನಗಳಿಗೆ ಬಲಿಯಾಗಲಾರರು" ಎಂಬುದು ಆ ಮಹನೀಯರ ವಾದ. ಎಂದರೆ ಹಾಗೆ ಹೆಚ್ಚಾಗಿ ಬೆಳೆದ ಆಹಾರವನ್ನೂ ಜೀವನ ಸಾಮಾಗ್ರಿಗಳನ್ನೂ ಜನರಲ್ಲಿ ಉಚಿತವಾಗಿ ಹಂಚಲಾಗುವುದೇ? ಅಥವಾ ಅವನ್ನು ಕೊಂಡುಕೊಳ್ಳಲು ಹಣವನ್ನು ಸರಕಾರವು ಜನರಿಗೆ ಉಚಿತವಾಗಿ ಕೊಡುವುದೇ? ಈಗ ದೇಶದಲ್ಲಿ ಅವಶ್ಯಕ್ಕಿಂತ ಹೆಚ್ಚು ಸಕ್ಕರೆ, ಆಹಾರ ಸಾಮಾಗ್ರಿಗಳಿದ್ದರೂ ಅವುಗಳ ಬೆಲೆ ಏರುತ್ತಲೇ ಇದೆ. ಲಕ್ಷಾವಧಿ ಟನ್ ಆಹಾರಧಾನ್ಯಗಳು ಅಲ್ಲಲ್ಲಿ ಕೆಟ್ಟು, ಕೊಳೆತು ಹಾಳಾಗುತ್ತಿದ್ದರೂ ಗರ್ಭನಿರೋಧದ ವಿರೋಧಕರಾರೂ ಅವನ್ನು ಉಚಿತವಾಗಿ ಅಥವಾ ಕಡಿಮೆ ಬೆಲೆಗೆ ಹಂಚುವ ಏರ್ಪಾಡು ಮಾಡಿಲ್ಲ.

ಕೆಲವು ಸರಕಾರಿ ಅಧಿಕಾರಿಗಳಿಗಂತೂ ಬೆಲೆಗಳು ಏರಿದುದೇ ಕಣ್ಣಿಗೆ ಕಾಣುವುದಿಲ್ಲ. ಕೇಂದ್ರ ಆಹಾರ ಖಾತೆಯ ಉಪ ಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಮದ್ರಾಸಿನ ಪತ್ರಿಕಾ ಪರಿಷತ್ತಿನಲ್ಲಿ "ಆಹಾರ ಧಾನ್ಯದ ದರಗಳು ರೇಶನ್ ಅಂಗಡಿಗಳಲ್ಲಿಗಿಂತ ಮುಕ್ತ ಪೇಟೆಯಲ್ಲಿ ಕಡಿಮೆಯಾಗಿವೆ" ಎಂದು ಧೈರ್ಯವಾಗಿ ಹೇಳಿಬಿಟ್ಟರು. ಈ ಮಾತು ಎಷ್ಟು ಅಸತ್ಯ ಪೂರ್ಣವಾದುದೆಂಬುದು, ಎಷ್ಟು ಗಳಿಸಿದರೂ ಒಪ್ಪೊತ್ತಿನ ಆಹಾರ ಧಾನ್ಯಕ್ಕೆ ಸಾಲದೆ ನರಳುತ್ತಿರುವ ಬಡವರಿಗೆ ಗೊತ್ತು. ಈಗ ಇರುವ ಜನಸಂಖ್ಯೆಗೇ ಇಷ್ಟು ತೊಂದರೆಯಾದರೆ ವರ್ಷಕ್ಕೆ ೫೦ ಲಕ್ಷದಂತೆ ಜನಸಂಖ್ಯೆ ಬೆಳೆದರೆ ಗತಿಯೇನು?

ದಿವ್ಯೌಷಧಗಳು

ತಾರಾನಾಥ ರಸೌಷಧಿ ವರ್ಕ್ಸ್ ಲಿಮಿಟೆಡ್,

ಚಿಕ್ಕಮಗಳೂರು

ಇವರ ಔಷಧಗಳನ್ನೇ ಉಪಯೋಗಿಸಿರಿ.

ದಶಮೂಲಾರಿಷ್ಟ	ಚ್ಯವನಪ್ರಾಶ
ಕುಟಜಾರಿಷ್ಟ	ಕುಮಾರಿ ಆಸವ
ಚಂದ್ರಪ್ರಭಾ	ದ್ರಾಕ್ಷಾರಿಷ್ಟ
ಗುಲಕಂದ	ಅಶೋಕಾರಿಷ್ಟ
ಪ್ರವಾಳ ಭಸ್ಮ ಚ. ಪು.	ಬಾಣಂತೀ ಕಷಾಯ

ಮುಂತಾಗಿ ಯಾವ ಔಷಧ ಬೇಕಾದರೂ ನಮ್ಮ ಸಂಸ್ಥೆಯನ್ನು ಮರೆಯಬೇಡಿರಿ ಆಸವಾರಿಷ್ಟ, ಕಷಾಯ, ರಸ, ಭಸ್ಮ, ಲೇಹ, ತೈಲಗಳೆಲ್ಲವನ್ನು ಶಾಸ್ತ್ರೀಯವಾಗಿ ಪ್ರಭಾವಿಯಾಗಿ ಮಾಡುವ ಅಚ್ಚ ಕನ್ನಡಿಗರ ರಸಶಾಲೆಯಿದು. ಇದಕ್ಕೆ ದಿವಂಗತ ಪಂಡಿತ ತಾರಾನಾಥಜಿಯವರ ಆಶೀರ್ವಾದವಿದೆ; ಇಲ್ಲಿಯೆ ಹದಿನೈದು ಮೈಲಿನಲ್ಲಿರುವ ಬಾಬಾಬುಡನ ಗಿರಿಯ ತೇಜಸ್ವಿಯಾದ ವನಸ್ಪತಿಗಳ ಆಧಾರವಿದೆ.

The Taranath Rasoushadhi Works Ltd.

CHICKMAGALUR (MYSORE).

ಏಜನ್ಸಿಗಳು

ಆದವಾನಿ (ಬಳ್ಳಾರಿ): ಮೆ|| ಓಸ್ವಾಲ್ ಕೊಟೇಜ್ ಇಂಡಸ್ಟ್ರೀಸ್.

ಧಾರವಾಡ: ತಾರಾನಾಥ ಆಯುರ್ವೇದ ಮಂದಿರ, ಧಾರವಾಡ.

ಮಂಗಳೂರು ಜಿಲ್ಲೆ: ಶಾಂತಿ ಔಷಧಾಲಯ, ಮಾರ್ಕೆಟ್ ರೋಡ್.

ಕೊಪ್ಪ: ನೇಶನಲ್ ಸ್ಟೋರ್ಸ್, ಕೊಪ್ಪ.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. 5—6—0

ನವಭಾರತ ಬುಕ್ ಡಿಪೋ, ಉಡುಪಿ

ನವಯುಗ ಪ್ರೆಸ್, ಉಡುಪಿ.

ಸರ್ವೋದಯ

ಪೂಜ್ಯ ಬಾಪೂಜಿಯವರು ತಾನು ಜೀವಿಸಿದಷ್ಟು ಸಮಯ, ಜನತೆಯ ಉದ್ಧಾರಕ್ಕೋಸ್ಕರ ಹೆಣಗಾಡಿದರು. ಇಡೀ ಲೋಕವೇ ಸುಖ ಮತ್ತು ಶಾಂತಿಯ ರಾಜ್ಯವಾಗಬೇಕೆಂದು ಅವರ ಅಭಿಲಾಷೆಯಾಗಿತ್ತು. ಉದ್ಧಾರಹೊಂದಲಾರದಂಥ ಪತಿತನಾಗಲೀ, ದುಷ್ಟನಾಗಲೀ, ನೀಚನಾಗಲೀ ಒಬ್ಬನೂ ಇಲ್ಲವೆಂದು ಗಾಂಧೀಜೀಯವರ ನಂಬಿಕೆಯಾಗಿತ್ತು. ಇದೇ ಮೂಲ ಸಿದ್ಧಾಂತದಿಂದ ಇವರು ಸರ್ವೋದಯದ ಕಲ್ಪನೆ ಮಾಡಿದ್ದರು.

ಬಾಪೂಜಿಯವರು ಸತ್ಯ ಮತ್ತು ಅಹಿಂಸೆಯ ಗುರುಗಳಾಗಿದ್ದರು. ಈ ಮೂಲ ತತ್ವಗಳಿಂದ ಅವರು ಜಗತ್ತಿಗೆ ಎಂಥಾ ಮಹತ್ಕಾರ್ಯವನ್ನೂ ಸತ್ಯ ಮತ್ತು ಅಹಿಂಸೆಯ ಮೂಲಕ ಮಾಡಬಹುದೆಂದು ತೋರಿಸಿಕೊಟ್ಟರು. ಈ ಮಾತು ವಿಶ್ವವಿದಿತವಾಗಿದೆ. ಅವರ ಪ್ರತಿಯೊಂದು ಕೆಲಸವೂ ಈ ಮಾತಿನ ಸಾಕ್ಷಿಯಾಗಿದೆ. ಸತ್ಯ ಮತ್ತು ಅಹಿಂಸೆಯ ಮೂಲಕ ಸಂಸಾರದಲ್ಲಿ ಭ್ರಾತೃಪ್ರೇಮ, ಪರಸ್ಪರ ಪ್ರೇಮ,ಶಾಂತಿ ಮತ್ತು ಸಹಾನುಭೂತಿಯುಕ್ತ ಐಕ್ಯದ ಭಾವನೆಯು ಉಂಟಾಗಬಲ್ಲುದು ಎಂಬುದು ಅವರ ದೃಢ ವಿಶ್ವಾಸವಾಗಿತ್ತು.

ಬಾಪುವಿನ ಕೊಲೆಯಾದ ನಂತರ ಸೇವಾಗ್ರಾಮದಲ್ಲಿ ಎಲ್ಲಾ ರಾಷ್ಟ್ರೀಯ ಕಾರ್ಯಕರ್ತರು ಕೂಡಿದರು. ಮುಖ್ಯವಾಗಿ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ ಕಾರ್ಯಕರ್ತರ ಒಂದು ಸಮ್ಮೇಳನವಾಯಿತು. ಆ ಸಮ್ಮೇಳನದಲ್ಲಿ ದೇಶದ ಮೂಲೆ-ಮೂಲೆಯಿಂದಲೂ ರಚನಾತ್ಮಕ ಕಾರ್ಯಗಳನ್ನು ಕೈಗೊಂಡಿದ್ದ ಎಲ್ಲಾ ಪ್ರಮುಖ ವ್ಯಕ್ತಿಗಳು ಬಂದು ಭಾಗವಹಿಸಿದರು. ವಿಚಾರವಿನಿಮಯವಾದ ನಂತರ ಎಲ್ಲರೂ ಕೂಡಿ, ಬಾಪೂವಿನ ಮನೋಭಾವನೆಗಳನ್ನು ಕ್ರಿಯಾತ್ಮಕ ರೂಪದಲ್ಲಿ ಕೊಡಬಲ್ಲ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಹೆಸರು 'ಸರ್ವೋದಯ ಸಮಾಜ'.

ಸತ್ಯ ಮತ್ತು ಅಹಿಂಸೆಯನ್ನು ಆಧಾರವಾಗಿಟ್ಟುಕೊಂಡು ಜಾತಿ, ಮತ, ಪಂಕ್ತಿಭೇದವಿಲ್ಲದೆ, ಸಂಪೂರ್ಣ ವ್ಯಕ್ತಿಗತ ಮತ್ತು ಸಾಮೂಹಿಕ ವಿಕಾಸಕ್ಕೆ ಎಡೆಯಾಗುವ ಸಮಾಜವನ್ನು ನಿರ್ಮಿಸುವುದೇ ಸರ್ವೋದಯದ ಸಾರತತ್ವ.

ಈ ಆದರ್ಶದ ಸಾಧನೆಗೋಸ್ಕರ ಕೆಳಗೆ ಬರೆದಿರುವ ಕೆಲಸಗಳನ್ನು ಮಾಡುವುದು ಆವಶ್ಯವೆಂದು ಒಪ್ಪಲ್ಪಟ್ಟಿದೆ:-

ಖಾದೀ ಪ್ರಚಾರ, ಗ್ರಾಮೋದ್ಧಾರ, ಮದ್ಯನಿಷೇಧ, ಜಾತಿಭೇದವನ್ನು ನಿವಾರಿಸುವುದು, ಹರಿಜನೋದ್ಧಾರ, ಜಾತಿ ಸಂಬಂಧವಾದ ಜಗಳಗಳನ್ನು ನಿಲ್ಲಿಸುವುದು, ಮೂಲ ಶಿಕ್ಷಣವನ್ನು ಕೊಡುವುದು, ಕೃಷಿ-ಬೇಸಾಯ ಉನ್ನತಿ ಹೊಂದುವಂತೆ ಮಾಡುವುದು, ಸ್ತ್ರೀ ಪುರುಷರಿಗೆ ಪ್ರತಿಯೊಂದು ಕಾರ್ಯದಲ್ಲಿಯೂ ಸಮಾನ ಅಧಿಕಾರವನ್ನು ಕೊಡುವುದು, ಪ್ರಾಂತೀಯ ಸಂಕುಚಿತ ಭಾವನೆಗಳನ್ನು ತೊಲಗಿಸುವುದು, ರೋಗಿಗಳ ಸೇವೆ ಮಾಡುವುದು, ಗೋರಕ್ಷಣೆ, ವಿದ್ಯಾರ್ಥಿಗಳ ಸಂಘಟನೆ, ಬಡವರ ಸಹಾಯ ಮಾಡುವುದು- ಇತ್ಯಾದಿ ಮುಖ್ಯವಾದ ಕೆಲಸಗಳು ಸರ್ವೋದಯ ಸಮಾಜದ ಧ್ಯೇಯ. ನಾವು ಪ್ರತಿಯೊಂದು ಕೆಲಸಮಾಡುವಾಗ, ನಮ್ಮ ಕೆಲಸದಿಂದ ಇತರರಿಗೆ ಕಷ್ಟ ಯಾ ದುಃಖವಾಗಬಾರದು; ಆದರೆ ನಮ್ಮ ಕೆಲಸದಿಂದ ನಮಗೂ, ಬೇರೆಯವರಿಗೂ ಉಪಕಾರವಾಗಬೇಕು. ಎಂಬ ಮನಸ್ಸಿನಿಂದ ಕೆಲಸವನ್ನು ಮಾಡಬೇಕು. ಇದೇ 'ಸರ್ವೋದಯ'ದ ಅರ್ಥವಾಗಿದೆ.

ಈ 'ಸರ್ವೋದಯ ಸಮಾಜ'ದ ಪ್ರಥಮ ವಾರ್ಷಿಕ ಸಮ್ಮೇಲನವು ನಡೆದಾಗ, ಕೆಲವು ಕಾರ್ಯಕರ್ತರು ಕೂಡಿ, "ಸರ್ವ ಸೇವಾ ಸಂಘ"ವನ್ನು ಸ್ಥಾಪಿಸಿದರು. ಸರ್ವೋದಯ ಸಮಾಜ ಮತ್ತು ಸರ್ವ ಸೇವಾ ಸಂಘ ಈ ಎರಡೂ ಒಂದರೊಡನೆ ಇನ್ನೊಂದು ಸಂಬಂಧವಿಟ್ಟುಕೊಂಡಿವೆ. ಇವುಗಳ ಸಂಬಂಧದ ವಿಷಯವಾಗಿ ಜನರು ವಿನೋಬಾಜೀಯವರೊಡನೆ ಕೇಳಲು, ಅವರು "ಸರ್ವೋದಯ ಸಮಾಜ ಒಂದು ಅಪಾರವಾದ ಸಾಗರ. ಸರ್ವ ಸೇವಾ ಸಂಘ ಆ ಸಾಗರದ ನೀರಿನಲ್ಲಿರುವ ಉಪ್ಪು. ಒಂದು ಸಮಾನ ಭಾವನೆಯನ್ನು ಇಡುವಂಥಾ ಸಮಾಜವಾಗಿದೆ; ಇನ್ನೊಂದು ಸಹಕಾರಿ ಸಂಘವಾಗಿದೆ. ಸರ್ವೋದಯ ಸಮಾಜವು ಲೋಕ ಕಲ್ಯಾಣದ ಭಾವನೆಯಿಂದ ಪ್ರಭಾವಿತವಾಗುತ್ತದಾದರೆ, ಸರ್ವಸೇವಾ ಸಂಘ ಆ ಭಾವನೆಯನ್ನು ಕಾರ್ಯರೂಪದಲ್ಲಿ ತರುವ ಸೇವಕರ ಸಂಸ್ಥೆಯಾಗಿದೆ" ಎಂದು ಹೇಳಿದರು.

ಎಲ್ಲರಿಗಿಂತ ಹಿಂದುಳಿದ, ಪೀಡಿತ ಹಾಗೂ ಶೋಷಿತ ವರ್ಗಗಳ ಉದ್ಧಾರ ಮಾಡುವುದು ಮತ್ತು ನೀತಿಯನ್ನು ಅಡಿಗಲ್ಲನ್ನಾಗಿಟ್ಟುಕೊಂಡು ಮನುಷ್ಯ ಜೀವನವನ್ನು ಸಾಗಿಸುವಂತೆ ಮಾಡುವುದು ಸರ್ವೋದಯದ ಮೂಲಕಾರ್ಯವಾಗಿದೆ. ಅಹಿಂಸೆಯು ಸರ್ವೋದಯದ ಪ್ರಾಣವಾಗಿದೆ ಮತ್ತು ಸತ್ಯ ಅದರ ಶಕ್ತಿಯಾಗಿದೆ. ಅದರ ರಾಜನೀತಿಯ ಆದರ್ಶವು ಸರ್ವರಿಗೂ ರಾಜ್ಯದಲ್ಲಿ ಹಕ್ಕನ್ನು ಸಿಗುವಂತೆ ಮಾಡುವುದು. ಇಡೀ ಲೋಕವನ್ನು ಒಂದು ಕುಟುಂಬವಂತೆ ಮಾಡುವುದೇ ಅದರ ಆದರ್ಶ ಹಾಗೂ ಧ್ಯೇಯವಾಗಿದೆ.

ಭಾರತದ ಸಂಸ್ಕೃತಿ ಸರ್ವ ಧರ್ಮಸಮನ್ವಯದಿಂದ ವಿಕಸಿತವಾದ ಒಂದು ಸಂಸ್ಕೃತಿಯಾಗಿದೆ. ಸಾಂಪ್ರದಾಯಿಕತೆ ಈ ಸಮನ್ವಯ ಭಾವನೆಯನ್ನು ನಾಶಮಾಡಿಬಿಟ್ಟಿದೆ. ಇದರಿಂದಲೇ ಈ ತರದ ಒಂದು ಸಂಸ್ಥೆಯ ಆವಶ್ಯಕತೆ ಬಿತ್ತು. ಸರ್ವೋದಯದ ತತ್ವಜ್ಞಾನವು ಸಮನ್ವಯಾತ್ಮಕವಾಗಿದೆ. ಆದಕಾರಣ ಸಾಂಪ್ರದಾಯಿಕತೆ ಮಾಡಿದ ನಷ್ಟವನ್ನು ಸರ್ವೋದಯದ ಮೂಲಕ ತುಂಬಿಸಿಕೊಳ್ಳಬಲ್ಲೆವು. ಇದೇ ಸರ್ವೋದಯ ಭಾವನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚನಾತ್ಮಕ ಕಾರ್ಯಗಳ ಯೋಜನೆ ಆಗಿದೆ.

ಮಾನವ ಜೀವನವನ್ನು ಶಾಂತಿಯುತ ಮಾಡಬೇಕೆನ್ನುವ ಎಲ್ಲಾ ಮಹಾ ವ್ಯಕ್ತಿಗಳ ಸಂದೇಶವು ಇದೇ ಆಗಿದೆ. ನೀವು ಮಹಾತ್ಮ 'ರಸ್ಕಿನ್' ನ ಹೆಸರು ಕೇಳಿರಬಹುದು. "ಆ ಕೊನೆಯವನವರೆಗೂ" (Unto the last) ಎಂಬ ತಮ್ಮ ಪುಸ್ತಕದಲ್ಲಿ ಅವರು ಇದೇ ಸರ್ವೋದಯದ ಕಲ್ಪನೆಯನ್ನು ಎಲ್ಲಾ ಸಂಸಾರದ ಏಕಮಾತ್ರ ಧರ್ಮದ ರೂಪದಲ್ಲಿ ಚಿತ್ರಿಸಿದ್ದಾರೆ. ಹೀಗೆ ಎಲ್ಲರ ಕಲ್ಯಾಣ ಬಯಕೆ ಎಲ್ಲಾ ಧರ್ಮಗಳಲ್ಲಿ, ಎಲ್ಲಾ ದೇಶಗಳಲ್ಲಿ ಇದೆ. ಮನುಷ್ಯನು ಸ್ವಾರ್ಥಪರನಾಗಿ ಜೀವನದ ಶಾಂತಿ ಪೂರ್ವಕ ಅಧ್ಯಯನ ಮಾಡುವುದಿಲ್ಲವೆಂಬುದೇ ತಪ್ಪು.

ಇಂದು ಲೋಕದ ಎಲ್ಲಾ ಜನರು ಪ್ರಕಾಶಕ್ಕೋಸ್ಕರ ಭಾರತದ ಕಡೆಗೆ ನೋಡುತ್ತಿದ್ದಾರೆ. ಗೊಂದಲ ಜಗಳಗಳಿಂದ ಲೋಕಕ್ಕೆ ಕೂಡಾ ಜುಗುಪ್ಸೆ ಬಂದಿದೆ. ಶಾಂತಿ, ಪ್ರೇಮ ಮತ್ತು ಸುಖಕ್ಕೋಸ್ಕರ ಜನರು ಅಲ್ಲಿ— ಇಲ್ಲಿ ತಿರುಗಾಡುತ್ತಲಿದ್ದಾರೆ. ಹಿಂಸೆಯಿಂದ ಲೋಕಕ್ಕೆ ಪೀಡೆ ಬಂದಿದೆ. ಈಗ ಅದು ಅಹಿಂಸೆಯ ಚರಣದಲ್ಲಿ ಬರಲು ಇಚ್ಛಿಸುತ್ತದೆ.

ಭಾರತದ ಪ್ರಾಚೀನ ಪರಂಪರೆಯ ಜೀವಿತ ಉದಾಹರಣೆ ಸತ್ಯ ಮತ್ತು ಅಹಿಂಸೆಯನ್ನು ಲೋಕದ ಮುಂದಿಟ್ಟಿದೆ. ಯಾವಾಗ ಇಡೀ ಲೋಕವು ಈ ಆದರ್ಶವನ್ನು ತನ್ನದಾಗಿ ಮಾಡಿಕೊಳ್ಳಲು ಇಚ್ಛಿಸುತ್ತದೋ, ಆಗ ನಾವು ನಮ್ಮ ದೇಶದವರನ್ನು ಯಾಕೆ ಕತ್ತಲೆಯಲ್ಲಿ ಇರಲು ಬಿಡಬೇಕು? ನಮ್ಮ ಸಂಸ್ಕೃತಿ ಪ್ರಾಚೀನ; ಆದರೆ ನಮ್ಮ ವಿಚಾರ ಬಹಳ ಮಹತ್ತಾದುದು.

ಬಾಪೂಜಿಯವರು ಭಾರತದಲ್ಲಿ ಹುಟ್ಟಿದರು; ಆದರೆ ಅವರು ಕೇವಲ ಭಾರತವಾಸಿಯಾಗಿಯೇ ಉಳಿಯಲಿಲ್ಲ. ಅವರು ತನ್ನ ಜೀವನದಲ್ಲಿ ಯಾವ ಸೇವೆ ಮಾಡಿದ್ದಾರೋ, ಅದು ಸರ್ವೋದಯ ರೀತಿಯ ಸೇವೆಯೇ ಆಗಿತ್ತು. ಅವರ ಅನುಸರಣೆಯೇ ಸರ್ವೋದಯದ ಆದರ್ಶವಾಗಿದೆ. ಗಾಂಧೀಜಿಯವರ ಚರಣ ಚಿಹ್ನೆ ಗುರುತಿಸಿ, ಎಲ್ಲಾ ಜನರು ಕಾರ್ಯ ಮಾಡಿದರೆ, ಉನ್ನತವಾದ ನವಸಮಾಜ ಅವಶ್ಯವಾಗಿ ನಿರ್ಮಾಣವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಈ ಸರ್ವೋದಯ ವಿಚಾರದ ಮೂಲಕ ಬಾಪೂಜಿಯವರು ಮಾನವನಿಗೋಸ್ಕರ ಒಂದು ಹೊಸ ಸಂಸ್ಕೃತಿ, ಒಂದು ಹೊಸ ಸಭ್ಯತೆಯ ಪವಿತ್ರವಾದ ಸಂದೇಶವನ್ನು ಕೊಟ್ಟರು. ಅದು ಸತ್ಯ ಮತ್ತು ಅಹಿಂಸೆಯ ಮೇಲೆ ಆಧಾರಿತವಾಗಿದೆ.

ಆದುದರಿಂದ ನಾವು ಈ ಸರ್ವೋದಯ ಕಾರ್ಯಕ್ರಮಗಳನ್ನು ನಮ್ಮದೆಂದು ಮಾಡಿಕೊಳ್ಳಬೇಕು; ಮತ್ತು ಸರ್ವೋದಯದ ಈ ಸುಂದರ ಕಲ್ಪನೆಯನ್ನು ಕಾರ್ಯರೂಪಕ್ಕೆ ತರುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ನಾವು ನಮ್ಮ ಕರ್ತವ್ಯವನ್ನು ಪಾಲಿಸಿದೆವೆಂದಾಯಿತು. ಕಾರ್ಯದ ಮುಖಾಂತರವೇ ನಾವು ಆ ಕಲ್ಪನೆಯ ಸುಂದರ ಸ್ವರ್ಗ-ರಾಜ್ಯವನ್ನು ಮಾನವನ ಈ ಲೋಕದಲ್ಲಿ ಇಳಿಸಬಲ್ಲೆವು.

—ಎಸ್. ನಾರಾಯಣ ಬಲ್ಲಾಳ, ಉಡುಪಿ.
(ಹಿಂದೀ ಲೇಖನವೊಂದರ ಆಧಾರದ ಮೇಲೆ)

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

70 ವರುಷಗಳಿಂದ ಜಗಜ್ಜನಿತವಾದುದು

ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಅಗ್ ಮಿಕ್ಸ್ಚರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.

Sole Manufacturer: DR. H. L. BATLIWALLA SONS & CO. LTD.,
Batliwalla Building, Portuguese Church Street,
Tele. Add. "CAWASHABAD" Dadar, BOMBAY 28.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ, ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಘೃತ ವರಸಾಯನ



ಹೆಚ್ಚಿನ ಮಾಹಿತಿಗೆ— ಡಾ| ಯಂ ಸಿ ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು — ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೧೩—೮—೫೩ರಿಂದ ತಾ ೧೯—೮—೫೩ರ ವರೆಗೆ.

ಮೇಷ—ನಿಮ್ಮ ಅದೃಷ್ಟವಿಂದು ಸಾಕಷ್ಟು ಉತ್ತಮವಾಗಿಯೇ ಇರುವದು. ನಿಮ್ಮ ಉದ್ಯೋಗದಲ್ಲಿ ನಿರೀಕ್ಷಿಸಿದ ಫಲವು ಲಭಿಸುವದು. ಬಂಧು ಮಿತ್ರರ ನೆರವಿನಿಂದಾಗಿ ಹಲವಾರು ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗುವಿರಿ. ಪತ್ರ ನಾರ ಧನಲಾಭ ಗೃಹಸುಖಾದಿಗಳು ಲಭಿಸಲಿವೆ ದುರ್ಜನರ ಸಹವಾಸದಿಂದ ಅಪವಾದಕ್ಕೆ ಗುರಿಯಾಗುವ ಸಂಭವವಿದೆ. ಆಪ್ತ ಜನರ ವಿಯೋಗ ದುಃಖವು ಪ್ರಾಪ್ತವಾದೀತು. ವಾರಾದಿಯ ೫ ದಿನಗಳು ನಿಮ್ಮ ಬಯಕೆಯನ್ನು ಈಡೇರಿಸುವದರಲ್ಲಿ ಸಮರ್ಥಗಳಾಗಿವೆ.

ವೃಷಭ—ಹಿಂದಿನಂತಿರದೀವಾರವು ಆದಾಯವು ಕಡಿಮೆಯಾಗುವದಲ್ಲದೆ ಖರ್ಚು ಹೆಚ್ಚಲಿದೆ. ಸೇವಕ ಜನರೊಳು ಮಕ್ಕಳೊಳು ಕಲಹವಾದೀತು ದೇಹಾರೋಗ್ಯವು ಕೆಡಲಿದೆ. ನಿಮ್ಮಲ್ಲಿನ ಧೈರ್ಯವು ಲೋಪವಾಗುವುದರಿಂದ ಯಾವುದು ಹೊಸ ಕಾರ್ಯದಲ್ಲೂ ಪ್ರವೃತ್ತರಾಗಲಾರಿರಿ ವಾಕ್ಕಲಹ ಸ್ಥಾನಚ್ಯುತಿ ಮುಂತಾದ ದುಷ್ಘಟನೆಗಳು ಸಂಭವಿಸುವವು. ವಿದ್ಯೋದ್ಯೋಗಿಗಳಿಗೆ ಮೇಲಿಂದ ಮೇಲೆ ಕಷ್ಟ ನಷ್ಟಗಳು ಒದಗಲಿವೆ. ಅಂತೂ ದಿನಯಾಪನೆಯು ಅತೀವ ಕಷ್ಟವಾಗಿ ಪರಿಣಮಿಸೀತು. ವಾರಾಂತ್ಯದ ೬ ದಿನಗಳು ಕಿಂಚಿದುತ್ತಮವಿವೆ.

ಮಿಥುನ—ಕಾಲವು ಅನುಕೂಲ ಸ್ಥಿತಿಗೆ ಬರುತ್ತಲಿದೆ. ಪ್ರಯತ್ನಕ್ಕೆ ತಕ್ಕ ಫಲ ಲಭಿಸುವದು. ಖರ್ಚು ವೆಚ್ಚಗಳಿಗೆ ಸಾಲುವಷ್ಟು ಧನವನ್ನು ಸ್ವಯಂ ದುಡಿಯುವಿರಿ. ಆತ್ಮೀಯರ ವಿಯೋಗವುಂಟಾದೀತು. ಕಡಿವಾಣವಿಲ್ಲದ ಕುದುರೆಯಂತಿರುವ ನಿಮ್ಮ ಮನಸ್ಸು ಚಿಕ್ಕಾಬಟ್ಟೆ ವಿಹರಿಸುವದು. ಅಧಿಕಾರಿ ವರ್ಗದವರಿಂದ ಪೀಡೆ ಸಂಭವಿಸಲಿದೆ. ಪಿತ್ತೋದ್ರೇಕ ವಿಕಾರದಿಂದ ಆರೋಗ್ಯವು ಕೆಡುವ ಸಂಭವವಿದೆ. ವಾರಾಂತ್ಯದ ೨ ದಿನಗಳನ್ನು ಬಿಟ್ಟರೆ ಉಳಿದ ದಿನಗಳು ಅನಿಷ್ಟದಾಯಿಗಳೇ ಇರುವವು.

ಕರ್ಕಾಟಕ—ಇಂದು ನಿಮ್ಮ ಧನಪತಿಯು ಸ್ವಸ್ಥಾನವನ್ನು ಸೇರಿರುವದರಿಂದ ಆರ್ಥಿಕ ಭಾಗದಲ್ಲಿ ಕೊಂಚ ಅಭಿವೃದ್ಧಿ ಹೊಂದಲಿರುವಿರಿ ಅಲ್ಲದೆ ಬೇರೆ ಏನೂ ಹೆಚ್ಚಿನ ಒದಗಾಣಿಕೆ ಕಾಣಸದು ನಿಮಗೀವಾರದಲ್ಲಿ ಬಾಲ್ಯ ಮಿತ್ರರ ನೆರವಿನಿಂದಾಗಿ ಕೆಲವೊಂದು ಕಾರ್ಯಗಳು ಫಲಿಸುವವು ಪ್ರಬಲರಾದ ಶತ್ರುಗಳನ್ನೂ ಈ ಕಾಲದಲ್ಲಿ ಸಂಧಿಸಗೊಳಿಸುವಿರಿ. ಜನತೆಯ ಬೆಂಬಲವೂ ಸಾಕಷ್ಟಿರುವುದರಿಂದ ದಿನಯಾಪನೆಯು ಸುಗಮವಾಗುವದು ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ವಸ್ತು ಒಡವೆಗಳು ಅನಾಯಾಸದಿಂದ ಲಭಿಸುವವು ವಾರಾದಿಯ ೨ ದಿನಗಳು ನಿಮಗನುಕೂಲವಾಗಿರುವವು.

ಸಿಂಹ—ದುರ್ವಿಧಿಯು ನಿಮ್ಮನ್ನಿಂದು ಬಲವಾಗಿ ಪೀಡಿಸುತ್ತಿರುವುದು. ಕಾರ್ಯಾರಂಭಕ್ಕೆ ಮುಂಚಿತವಾಗಿಯೇ ವಿಘ್ನಗಳುಪಸ್ಥಿತವಾಗುವವು. ಉದ್ಯೋಗದಲ್ಲಿ ನಿರಾಶೆಯು ಕಾಣಸುವದು. ಆದಾಯಕ್ಕಿಂತ ದ್ವಿಗುಣ ವ್ಯಯವಾಗುವುದರಿಂದ ಚಿಕ್ಕ ಚಿಕ್ಕವರ ಕೂಡೆ ಸಾಲ ಕಡ ಮಾಡಬೇಕಾಗಿ ಬರಲಿದೆ. ವಾಕ್ಸಂಬಂಧವಾದ ಕಲಹವು ಅನಿವಾರ್ಯವಾಗುವದು. ಆದರೆ ವ್ಯಾಪಾರೀ ವಿಭಾಗದಲ್ಲಿ ಹೆಚ್ಚಿನ ತೊದಕು ತೊಂದರೆಗಳುಂಟಾಗಲಾರವು. ತಾ. ೧೫, ೧೬, ೧೭ ಈ ೩ ದಿನಗಳು ಉಳಿದ ದಿನಗಳಿಗಿಂತ ಉತ್ತಮವಾಗಿ ಫಲಿಸುವವು.

ಕನ್ಯಾ—ಹಿಂದಿನ ವಾರದಂತಿರದು ನಿಮಗೀ ಕಾಲವು. ನೀವೆಷ್ಟೇ ದುಡಿದರೂ ದಿನಾವಸಾನದಲ್ಲಿ ಬರಿಗೈಯಾಗಲಿವೆ ಆದರೂ ಹಣದ ಬಿಕ್ಕಟ್ಟುಂಟಾಗುವದಿಲ್ಲವು. ನಾಡು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯು ನಿಮಗೀ ವಾರದಲ್ಲಿ ನಿಜವಲ್ಲವೆಂದು ತೋರೀತು. ವಾತ ಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ ವ್ಯಾಪಾರಿಗಳಿಗೆ ಆಕಸ್ಮಿಕ ನಷ್ಟವೊದಗುವದು. ತಾ. ೧೩, ೧೪, ೧೮, ೧೯ ಈ ದಿನಗಳಲ್ಲಿ ಹೆಚ್ಚಿನ ನಿಮ್ಮ ಸಂಕಲ್ಪಗಳು ಸಿದ್ಧಿಸುವವು

ತುಲಾ—"ಉದ್ಯೋಗಂ ಪುರುಷಲಕ್ಷಣಂ" ಎಂಬ ಗಾದೆಯಂತೆ ನೀವು ನಿಮ್ಮ ಕರ್ತವ್ಯದಲ್ಲಿ ಮಗ್ನರಾಗಿರಿ. ತಾನಾಗಿಯೇ ಅದರ ಫಲವು ಲಭಿಸದಿರದು ನಿಮ್ಮ ಕೇವಲ ಸಾಹಸದಿಂದಲೇ ಕಾರ್ಯ ಸಿದ್ಧಿಸಬೇಕೇ ವಿನಹಾ ಬೇರೆವರ ಸಹಾಯವು ನಿಮಗೆ ಲಭಿಸದು. ಗುರುಹಿರಿಯರ ಆಗ್ರಹಕ್ಕೆ ತುತ್ತಾದ ನಿಮಗೆ ಮೇಲಿಂದ ಮೇಲೆ ಶೋಕಾನರ್ಥಗಳು ಪ್ರಾಪ್ತವಾಗಲಿವೆ ರಾಜಕೀಯ ರಂಗದಲ್ಲೂ ವ್ಯಾಪಾರೀ ವಿಭಾಗದಲ್ಲೂ ಒಳ್ಳೆ ಫಲಪ್ರಾಪ್ತಿಯಿದೆ. ತಾ. ೧೫ ೧೬. ೧೭. ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಭೋಗಲಾಭ ವಿಜಯಗಳಿವೆ.

ವೃಶ್ಚಿಕ—ಇಂದು ನಿಮ್ಮ ದೈವವು ಉತ್ತಮವಿರುವದು ಅನಾಯಾಸದಿಂದ ಕಾರ್ಯ ಸಾಧನೆಯಾಗುವದು. ಬಂಧುಮಿತ್ರರು ಜನತೆಯೂ ಕೂಡ ನಿಮಗೆ ಸದಾ ನೆರವಾಗುತ್ತಿರುವರು. ನೀವು ಕೈಗೊಂಡ ಕಾರ್ಯಗಳಲ್ಲಿ ನಿಮ್ಮ ನಿರೀಕ್ಷೆಗಿಂತಲೂ ಹೆಚ್ಚಾದ ಫಲವು ಲಭಿಸುವದು. ನಿಮ್ಮ ಸ್ಥಾನಮಾನಗಳು ಇನ್ನಷ್ಟು ಹೆಚ್ಚುವವು. ಬೇಕಾದ ಸುಖಭೋಗಗಳನ್ನು ಅನುಭವಿಸುವಿರಿ. ನಿಮ್ಮ ಆರೋಗ್ಯದ ಮಟ್ಟಿಗೆ ಸ್ವಲ್ಪ ಜಾಗ್ರತೆ ವಹಿಸಿರಿ. ತಾ. 15. 16. 17 ರಲ್ಲಿ ಆಲಸ್ಯ ಅಶಿಸ್ತ್ಯಾದಿಗಳು ಕಾಣುವವು.

ಧನು—ನಿಮ್ಮ ಕಷ್ಟ ಕಾಲವು ಮುಗಿತ್ತಾ ಬರುತ್ತಲಿದೆ. ಇನ್ನು ಕೆಲವೇ ದಿನಗಳಲ್ಲಿ ನೀವು ನಿಮ್ಮ ಸುಖ ಸ್ವಪ್ನಗಳನ್ನು ಕಾರ್ಯತಃ ನೋಡಲಿರುವಿರಿ. ಇಂದು ನಿಮ್ಮ ಆರ್ಥಿಕ ಭಾಗಕ್ಕೆ ಬಲವಾದ ಆಘಾತವುಂಟಾಗಿದೆ. ಜನತೆಗೆ ಮುಖತೋರಲು ನಾಚುವಿರಿ ಶತ್ರುಗಳಿಂತೂ ಪ್ರತೀಕಾರ ಕ್ರಿಯೆಯಲ್ಲಿ ಮಗ್ನರಾಗಿರುವರು. ತನ್ನಿಮಿತ್ತ ನಿಮ್ಮ ಧನಮಾನಗಳಿಗೆ ವಿಶೇಷಧಕ್ಕೆ ತಗಲುವದು. ಹಣದ ನಿಮಿತ್ತ ಕಲಹವು ಕೂಡ ಸಂಭವಿಸಲಿದೆ. ವಾರಾಂತ್ಯದ ೨ ದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳು ಉತ್ತಮವಿವೆ.

ಮಕರ—ಹೊನ್ನು ಒಡೆದರೂ ಮಣ್ಣಾಗುವಂತಹ ದುಷ್ಕಾಲವಿಂದು ನಿಮಗೆ ಪ್ರಾಪ್ತವಾಗಿರುವದು. ಮನೆಯವರಲ್ಲೇ ಪರಸ್ಪರ ಕಲಹ ಕಚ್ಚಾಟಗಳಾಗುವವು ತತ್ರಾಪಿ ಅರ್ಧಾಂಗಿಯೂ ಕಲಹ ಪ್ರಿಯೆ ಎಂಬ ಹೆಸರನ್ನು ಪಡೆಯಲಿರುವಳು ವಾತ ಕಫ ದೋಷದಿಂದಾಗಿ ಆರೋಗ್ಯ ಕೆಡುವದು ವ್ಯಾಪಾರ ವ್ಯವಹಾರ ನೌಕರಿ ತೋರಲಾರವು. ಇವುಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲವು ಕಾಣಸದು. ಆದರೂ ಗುರುವಿನ ಪೂರ್ಣ ದೃಷ್ಟಿ ನಿಮಗಿದ್ದ ಪ್ರಯುಕ್ತ ವಾರಾಂತ್ಯದ ೫ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಸವು.

ಕುಂಭ—ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವಿಂದು ಲಭಿಸಲಿದೆ. ಯಾವ ಕಾರ್ಯವೂ ಕೂಡ ನಿಮ್ಮ ಭಾಗಕ್ಕೆ ಅಸಾಧ್ಯವೆನಿಸಲಾರದು. ವ್ಯಾಪಾರಾದಿಗಳಲ್ಲಿ ಒಳ್ಳೆಯ ಫಲವಿದೆ. ಪ್ರವಾಸಕ್ಕೀಕಾಲವು ಉಚಿತವಲ್ಲ. ಆತ್ಮೀಯರೊಡನೆ ಮನಸ್ತಾಪ ಹುಟ್ಟಿ ಜಗಳದಲ್ಲಿ ಪರ್ಯವಸಾನವಾದೀತು. ವಾತ ದೋಷದಿಂದಾಗಿ ಅಂಗಾಂಗಗಳಲ್ಲಿ ನೋವು ಕಾಣಿಸಬಹುದು ಸತ್ಕಾರ್ಯಗಳ ಸಲುವಾಗಿ ಹೆಚ್ಚಿನ ಧನವನ್ನು ವ್ಯಯಿಸುವಿರಿ. ವಾರಾಂತ್ಯದ ೨ ದಿನಗಳು ಇದ್ದುದರಲ್ಲಿ ಉತ್ತಮವಿವೆ.

ಮೀನ—ಈ ವಾರವು ಹಿಂದಿನ ದಿನಗಳಷ್ಟು ಕಷ್ಟವಾಗಿ ಕಾಣಿಸದು. ಉದ್ಯಮಶೀಲರಿಗೆ ದಿನಯಾಪನೆಗೆ ತಕ್ಕಷ್ಟು ಧನ ಲಭಿಸುವದು. ವ್ಯಾಪಾರದಲ್ಲಿ ಫಲವು ಉತ್ತಮವಿದೆ. ವೃದ್ಧ ಜನರೂ ತಮ್ಮ ಬಯಕೆಯನ್ನು ಸಾಧಿಸಿಕೊಳ್ಳುವರು. ಹೆಂಡತಿ ಮತ್ತು ಮಕ್ಕಳ ಆರೋಗ್ಯ ಕೆಡಲಿದೆ. ಗೃಹಕಲಹವು ದಿನೇ ದಿನೇ ಹೆಚ್ಚುವದು. ಪ್ರವಾಸವು ಸುಖದಾಯಿಯಾಗಿ ಪರಿಣಮಿಸಲಿದೆ. ಸನ್ಮಿತ್ರರ ಬೆಂಬಲಯುಕ್ತರಾದ ನಿಮಗೆ ವಾರಾದಿಯ ೨ ದಿನಗಳು ಉಳಿದ ದಿನಗಳಿಗಿಂತ ಉತ್ತಮವಿರುವವು.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ವಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ – 2 ಔಷಧಗಳ 1 ಸೆಟ್ 6 ರೂ ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ, ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ, ವಿ ಪಿ. ಇಲ್ಲ, **ಕ್ಯಾಟಲಾಗ್ ಉಚಿತ.**

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ, ತಯಾರಕರು:-

A ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸಿಂಹ ವಿಲಾಸ ಛತ್ರದ ಹಿಂಭಾಗ)

ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು** (South India)

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.



ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾಪ್ರತಿ 1—8—0 ಉತ್ತಮ 2—0—0

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಘಾಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ, ಮೊದಿವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಮಳು ಕಟ್ಟಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮುಂಬಾಯಿ ಮದ್ರಾಸು ಮುಂಬಾಯಿ ಮತ್ತು ಕಲ್ಕತ್ತ

(೨ನೇ ಪುಟದಿಂದ ನೋಡಿರಿ)
ಸರಕಾರದ ಕಡೆಯಿಂದಲೇ ಮಾಡಿಸಬೇಕು ಎಂಬ ಮನೋವೃತ್ತಿ ಬಲಿಯುತ್ತಿದೆ. ಯಾರಾದರೊಬ್ಬರು ಆತ್ಮ ಪ್ರೇರಣೆಯಿಂದ ಸಣ್ಣ ಪುಟ್ಟ ಕೆಲಸಗಳನ್ನು ತೊಡಗಿಸಿದರೆ ಇದರ ಉಪಯೋಗವೇನು? ಇಷ್ಟರಿಂದ ಏನು ಲಾಭ? ಎಂಬ ಆಕ್ಷೇಪ ಕೇಳುತ್ತೇವೆ. ಇದೇ ದೃಷ್ಟಿಯಿಂದ ನಾವು ಭವಿಷ್ಯದ ಕಡೆಗೆ ನೋಡಿದರೆ, ಅದು ನಿಜವಾಗಿಯೂ ಕಾಗರ್ತ್ತಲೆಯದಾಗುವುದು. ಇದನ್ನು ಪರಿವರ್ತಿಸಲಿಕ್ಕೇ ಬೇಕು. ಜನರಲ್ಲಿ ಪರಸ್ಪರರಿಗೆ ಸಹಕಾರ ನೀಡುವ, ಊರ ಸಲುವಾಗಿ, ಸಮಾಜದ ಸಲುವಾಗಿ ಪರಿಶ್ರಮ ಮಾಡುವ ಭಾವನೆ ಮತ್ತು ಉತ್ಸಾಹವಿದ್ದರೆ ಮಾತ್ರ ಯಾವುದೇ ಹೊರಗಿನ ಸಹಾಯ—ಪ್ರೇರಣೆಗಳಿಲ್ಲದೆ ಇಡೀ ದೇಶದ ತುಂಬ ವಿಕಾಸ ಕೇಂದ್ರಗಳು ಕಾಣಿಸಿಕೊಂಡಾವು."

ಸರಕಾರವು ಈ ಹಾಗೂ ನೇಲಿನ ಉಳಿದೆಲ್ಲ ಸಂಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ದೇಶದ ಜನಜೀವನದಲ್ಲಿ ಹೊಸ ಅಧ್ಯಾಯವನ್ನು ತೆರೆಯುವ ಕಾರ್ಯಕ್ರಮಗಳನ್ನು ತೊಡಗಿರುತ್ತದೆ. ಆದರೆ ಇವೆಲ್ಲವನ್ನೂ ಕಾರ್ಯಾನ್ವಿತಗೊಳಿಸಲು ಜವಾಹರಲಾಲ ನೆಹರೂರೇ ಕೆಲಸಮಾಡಬೇಕೆಂದು ಹೇಳುವುದು ಸರಿಯಾಗದು. ಒಬ್ಬ ನೆಹರೂ ಅವರ ಕರ್ತವ್ಯವನ್ನು ಮಾತ್ರ ದಕ್ಷತೆಯಿಂದ ನಿರ್ವಹಿಸಬಲ್ಲರು- ಅವರು ಜಾದೂಗಾರರಲ್ಲ; ಸಾಮಾನ್ಯ ಮನುಷ್ಯ. ಆದ ಕಾರಣ ನಮ್ಮ ಮನೋಬಯಕೆಯಂತೆ ಎಲ್ಲವೂ ನಡೆದಿಲ್ಲವಾದರೆ ಅದಕ್ಕೋಸ್ಕರ ನೆಹರೂರನ್ನು ಬೈಯುವುದು ಬೇಡ. ಜಯಪ್ರಕಾಶ ನಾರಾಯಣರೂ ಇದನ್ನು ಅನುಮೋದಿಸುತ್ತಾರೆ—"ಈ ಬಗ್ಗೆ ನಾವು ಅಧಿಕಾರಿಗಳ ಮೇಲೆಯೇ ದೋಷ ಹೊರಿಸಿ, ವ್ಯರ್ಥ ಟೀಕೆ ಮಾಡುವುದಕ್ಕಿಂತ, ಅಧಿಕಾರದ ಹೊರಗಿರುವ ಜನರನ್ನು ಟೀಕಿಸಬೇಕಾಗುವುದು. ವಿಧಾಯಕ ಕೆಲಸಕ್ಕೆ ಇತಿಮಿತಿ ಎಂಬುದಿಲ್ಲ. ನೀವು ಕೆಲಸಕ್ಕೆ ತೊಡಗಿದರೆ ಕಾಂಗ್ರೆಸ್ಸೇ ಅಧಿಕಾರದಲ್ಲಿರಲಿ, ಪ್ರಜಾ ಸಮಾಜವಾದೀ ಪಕ್ಷವೇ ಅಧಿಕಾರಕ್ಕೆ ಬರಲಿ, ಇಲ್ಲವೇ ಕಮ್ಯೂನಿಸ್ಟರ ಕೈಗೆ ರಾಜ್ಯಸೂತ್ರ ದೊರೆಯಲಿ- ದೇಶದ ಭವಿಷ್ಯ ನಿರ್ಮಾಣ ಮಾಡುವ ಕೆಲಸ ನಿಮ್ಮ ಕೈಯಲ್ಲಿಯೇ ಉಳಿಯುತ್ತದೆ."

ಗಿಡಗಳಿಗೆ ನೂರು ಕಾಯಿಗಳು ಆಗುತ್ತವೆ. ಅವುಗಳಿಗೆ ನೀರು ಹಾಕಿ ಪೋಷಿಸಿದರೆ ಯಥೇಷ್ಟ ಫಲಗಳನ್ನು ನಮಗೆ ನೀಡುತ್ತವೆ. ನೀರು ಹಾಕದಿದ್ದರೆ, ಯೋಗ್ಯ ಆರೈಕೆ ಮಾಡದಿದ್ದರೆ ಅವುಗಳು ದುಃಖಿಸಿಕೊಳ್ಳುವುವು. ಆದರೂ ತಮ್ಮಲ್ಲಿ ಶಕ್ತಿ ಇರುವಷ್ಟು ಹಣ್ಣುಗಳನ್ನು ಅವು ಕೊಟ್ಟೇ ತೀರುವುವು. ಸರಕಾರದ ಸಂಗತಿಯಲ್ಲೂ ನಾವೀ ಮಾತನ್ನು ಹೇಳಬಹುದು. ಅದರೊಡನೆ ಸಹಕರಿಸಿ, ಯೋಗ್ಯ ಉದ್ದೇಶಗಳನ್ನು ಪ್ರೋತ್ಸಾಹಿಸಿದರೆ, ಸರಕಾರದ ಜನಹಿತ ಯೋಜನೆಗಳ ಪರಮಾವಧಿ ಪ್ರಯೋಜನವನ್ನು ಹೊಂದಬಲ್ಲೆವು. ಗಾಂಧೀಜಿಯ ಗ್ರಾಮ ಸ್ವರಾಜ್ಯದ ಸಾಮಾನ್ಯ ರೂಪ ರೇಖೆಗಳನ್ನು ಪ್ರಾರಂಭದಲ್ಲಿಯೇ ಕೊಡಲಾಗಿದೆ—ಈ ರೀತಿ ಸಮಾಜದಲ್ಲಿ ಕ್ರಾಂತಿಕಾರ ಪರಿವರ್ತನೆಯನ್ನು ಸಾಧಿಸಲು ಸಮಾಜ ವಿಕಾಸ ಕೇಂದ್ರಗಳು ದೇಶದ ಅದ್ಯಂತ ತೆರೆಯಲ್ಪಟ್ಟಿವೆ. "ಕತ್ತಲೆಯ ನಿಂದೆ ಮಾಡುತ್ತಾ ಕುಳಿತರೆ ಬೆಳಕಾದೀತೇ?" ಎಂದು ವಿನೋಬಾ ಕೇಳುತ್ತಾರೆ. ಸರಕಾರದ ನಿಂದೆ ಹೇಯವಾದ ಅಭ್ಯಾಸವೇ ಹೊರತು ಅಲಂಕಾರವಲ್ಲ. ಸಮಾಜದಲ್ಲಿ ಕ್ರಾಂತಿಯಾಗಬೇಕೆನ್ನುವುದರಲ್ಲಿ ಯಾರದೂ ಪ್ರತಿಭಾತವಿಲ್ಲ. ಆದರೆ ಆ ಕ್ರಾಂತಿ ಸಂಭವಿಸಬೇಕಾದರೆ, ಮೊದಲು ಆ ಕುರಿತು ಜನತೆಯ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಬೇಕಾಗುವುದು. ಅದರಲ್ಲಿ ಹೊಸ ವಿಚಾರಗಳನ್ನು ಚೆನ್ನಾಗಿ ಮೂಡಿಸಬೇಕಾಗುವುದು. ವರ್ತಮಾನ ಪತ್ರಗಳಿಂದ ಮಾತ್ರವೇ ಈ ಕೆಲಸ ನಡೆಯದು—"ಭಾವನೆಯನ್ನು ಹಿಡಿಯಬೇಕಾದರೆ ಅಂತಃಕರಣಕ್ಕೆ ಕೈಹಾಕಬೇಕು" ಎಂಬುದಾಗಿ ವಿನೋಬಾ ಹೇಳುತ್ತಾರೆ. ಆಂದರೆ ಮಾತ್ರ ಬುದ್ಧಿಗೆ ಸರಿಕಂಡುದನ್ನು ಕೃತಿಯಲ್ಲಿ ಇಳಿಸಲು ಸಾಧ್ಯವುಂಟು.

"ನಮ್ಮ ದೇಶದಲ್ಲಿ ಕ್ರಾಂತಿಯುಂಟಾಗಬೇಕು. ಅದು ಎಂಥ ಕ್ರಾಂತಿ? ಅಲ್ಲೋಲ ಕಲ್ಲೋಲವನ್ನುಂಟುಮಾಡುವ, ತಲೆ ತರಿ ಕತ್ತರಿಸುವ, ಕ್ರಾಂತಿಯಲ್ಲ. ದೇಶದ ಬಡತನವನ್ನು ನಿರ್ಮೂಲ ಮಾಡುವ ಸತತ ಪ್ರಯತ್ನ ನಡೆಯಬೇಕು, ಅದೇ ಇಲ್ಲಿ ನಡೆಯಬೇಕಾಗಿರುವ ಕ್ರಾಂತಿ. ನಿಃಸ್ವಾರ್ಥತೆಯಿಂದ ಜನಸೇವೆ ಮಾಡಬೇಕೆಂದು ಗಾಂಧೀಜಿ ಹೇಳುತ್ತಿದ್ದರು. ದೇಶದ ಬಡತನವನ್ನು ನಿರ್ಮೂಲ ಮಾಡಲು ಮತ್ತು ದೇಶವನ್ನು ಉದ್ಧಾರ ಮಾಡಲು ಒಂದು ಅವಕಾಶವನ್ನು ಸ್ವಾತಂತ್ರ್ಯ ನಮಗೆ ತಂದುಕೊಟ್ಟಿದೆ. ಈ ಸಂದರ್ಭದ ಸದುಪಯೋಗಪಡಿಸಿಕೊಂಡು ನಾವು ಆಸಕ್ತಿಯಿಂದ ದುಡಿಯೋಣ. ಅದಿಲ್ಲ, ಇದಿಲ್ಲ- ಅದನ್ನು ಮಾಡಿಸಿ ಕೊಡಿ, ಇದನ್ನು ಕೊಡಿ ಎಂಬ ಮನವಿ ಈಗ ಬೇಡ. ಮರವಣಿಗೆ ಉತ್ಸವಗಳೂ ಅಗತ್ಯವಿಲ್ಲ—ಮೈಬೆವರಿಳಿಸಿ ದುಡಿಯುವುದೇ ಈಗ ಬೇಕು. ನಾವು ಮಣ್ಣಿನ ಮಕ್ಕಳು: ನಮ್ಮ ತಾಯಿಯಾದ ಮಣ್ಣಿನ ಸೇವೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಭೂಮಾತೆಯ ಸಂಪತ್ತನ್ನು ಹೆಚ್ಚಿಸುವುದೇ ನಮ್ಮ ಧ್ಯೇಯ. ಅದಕ್ಕಾಗಿ ದುಡಿಯಬೇಕು. ಪ್ರಧಾನಿ ಜವಾಹರಲಾಲ ನೆಹರೂ ಆಸೇತು ಹಿಮಾಚಲ ಪರ್ಯಂತ ಪರ್ಯಟನೆ ಮಾಡುವಾಗ ಜನತೆಗೆ ಈ ಸಂದೇಶವನ್ನು ಕೊಡುತ್ತಾ ಹೋಗುತ್ತಾರೆ. ಸ್ವರಾಜ್ಯವನ್ನು ಸುರಾಜ್ಯ ಮಾಡಲು—ರಾಮರಾಜ್ಯ ಮಾಡಲು ತೆರೆದಿರುವ ಮಾರ್ಗ ಇದೊಂದೇ ಎಂದವರು ಬೋಧಿಸುತ್ತಾರೆ. ಸ್ವಾತಂತ್ರ್ಯ ದಿನೋತ್ಸವದ ಈ ಸಂದರ್ಭದಲ್ಲಿ ನಾವು ಶಾಂತ ಮನಸ್ಸಿನಿಂದ ಹಿರಿಯರ ಮಾತುಗಳನ್ನು ಮನನ ಮಾಡಬೇಕು. ತತ್ಪರಿಣಾಮವಾಗಿ ಕೆಟ್ಟ ಭಾವನೆಗಳು ಮಾಯವಾಗಿ ಸದ್ಭಾವನೆಗಳು ಮೂಡಿಕೊಳ್ಳುತ್ತವೆ; ಒಳ್ಳೆಯ ವಿಚಾರಗಳೇ ಮನುಷ್ಯನ ಕೈಯಿಂದ ಉತ್ತಮೋತ್ತಮ ಕಾರ್ಯಗಳನ್ನು ನೆರವೇರಿಸುತ್ತವೆ.

—ಕುಮಾರಸ್ವಾಮಿ.

ಉಡ್ಪಿ ಡಿ. ಮು ಕೋರ್ಟಿನಲ್ಲಿ

O. S. No. 344/1953.

ವೈ. ವಿ. ವಾಸುದೇವಯ್ಯ— ವಾದಿ.

ಮತ್ತು

ವೈ. ವಿ. ಜನಾರ್ಧನಯ್ಯ ಕೂಡಾ—

ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ:-

ವೈ. ವಿ. ಜನಾರ್ಧನಯ್ಯ- ವೆಂಕಟ್ರಮಣಯ್ಯನವರ ಮಗ, ಉಡ್ಪಿ ತಾಲ್ಲೂಕು ತೆಂಕ ಗ್ರಾಮದ ವಿಸಾಮಿಳು- ಇವರಿಗೆ ಈ ಮೂಲಕ ತಿಳಿಸುವುದೇನಂದರೆ:-

ವಾದಿಯು ಹಿಸೆ ವಗೈರೆ ಕೇಳಿ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 27-8-1953ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿದೆ. ಅದ್ರಲ್ಲಿ ನಿಮಗೆ ಉದಾಹರಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ. 27-8-1953ನೇ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya,
Vakil for Plaintiff.

ಉಡ್ಪಿ, ತಾ. 8-8-53.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 431/1953.

ಪಿ. ಯಸ್. ಭೀಮರಾವ್ ವಾದಿ

ಮತ್ತು

ಅಜೀಜ್ ಅಹಮ್ಮದ್ ಸಾಹೇಬ, ಅಬ್ದುಲ್ ರಜಾಕ್ ಸಾಹೇಬರ ಮಗ. ಉಡ್ಪಿ ಕ್ರಿಶ್ಚಿಯನ್ ಸ್ಟ್ರೀಟ ಬಳಿ. —ಪ್ರತಿವಾದಿ

ವಾದಿಗೆ ಪ್ರತಿವಾದಿಯು ತಾರೀಕು 23—7—1950ರಲ್ಲಿ ರೂಪಾಯಿ 66-0-0 ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಬಾಕಿ ಅಸಲು ಬಡ್ಡಿ ರಿಜಿಸ್ಟ್ರಿ ನೋಟ್ಸಿನ ಖರ್ಚು ಕೂಡಾ 65—0—0ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 28—8—1953ಕ್ಕೆ ತನಿಖೆಗೆ ಇಟ್ಟಿದೆ. ಪ್ರತಿವಾದಿಗೆ ಆಕ್ಷೇಪಿಸುವುದಕ್ಕೆ ಸದ್ರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಕರದಾಸ್ತು ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದೆಂಬ ಸಂಗತಿ ಈ ಮೂಲಕ ತಿಳಿಸಿಯದೆ.

K. Laxminarayana Aithal
Vakil for Plaintiff

ಉಡ್ಪಿ. ತಾರೀಕು. 10—8—1953.

ಸರ್ವವಿಧದ ಸರಸ ಸಾಹಿತ್ಯ!

ವಾಚನಾಲಯಗಳಿಗೆ ಮಾತ್ರ!

ಎರಡಾಣೆಯಿಂದ ಹಿಡಿದು ಎರಡು ರೂಪಾಯಿ ಬೆಲೆ ವರೆಗಿನ ಸುಮಾರು 30 ರೂಪಾಯಿ ಕ್ರಯದ 100 ಉತ್ತಮ ಪುಸ್ತಕಗಳನ್ನು ವಾಚನಾಲಯಗಳಿಗೆ ಬರೇ ರೂ 20/-ಕ್ಕೆ ಕೊಡಲಾಗುವುದು. ಈ ರಿಯಾಯಿತಿಯು ಸ್ವಾತಂತ್ರ್ಯೋತ್ಸವದ ನಿಮಿತ್ತ ಆಗೋಸ್ತು 15ರಿಂದ ಒಂದು ತಿಂಗಳ ವರೆಗೆ ಮಾತ್ರ ದೊರಕುವುದು.

ಅಂತರಂಗ ಕಾರ್ಯಾಲಯ, ಉಡುಪಿ.

ಏಜಂಟರು:— Navabharat Book Depot Udipi.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿದೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

For Protection and Provision Consult

The New Guardian of India Life Insurance Co., Ltd.

Estd] Head office: MADRAS [1934

NEW BUSINESS Exceeds	...	66½ Lakhs
PREMIUM INCOME ,,	..	15 ,,
LIFE FUND ,,	...	54¾ ,,
ASSETS ,,	..	60¼ ,,
BUSINESS IN FORCE Nearly		3 Crores

A Policy in this Progressive Life Office is good investment: its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia, *Branch Manager,*
Diamond Building, Hampankatta, MANGALORE, S. K.

ಉಡ್ಪಿಗೆ ಹೋಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಸ್ಟ್ರೀಟ್, ಉಡುಪಿ

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಪೈರಿಂಗ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್

ಉಡುಪಿಯಲ್ಲಿ ಹೆಸರಾಂತ ಆದರ್ಶ ಶಿವಳ್ಳಿ ಬ್ರಾಹ್ಮಣರ ಊಟ-ವಸತಿ ಉಪಹಾರಗೃಹ ಯಾವುದು?

ನ್ಯೂ ರೋಯಲ್ ಕೆಫೆ

ಸಂತೆಕಟ್ಟೆ, ಉಡುಪಿ.

ಎಂದು ನಿಸ್ಸಂಕೋಚವಾಗಿ ಹೇಳಬಹುದು— ಮನೆಯಲ್ಲಿದ್ದಂತೆ ಭಾಸವಾಗುವಂತಹ ಮನಃಪ್ರಸನ್ನ ವ್ಯವಸ್ಥೆ. ಪ್ರತಿಯೊಂದು ವಿಚಾರದಲ್ಲಿ ನಿಮ್ಮನ್ನು ತೃಪ್ತಿಗೊಳಿಸುವ ಪ್ರಾಮಾಣಿಕತೆ—ಸುಚಿರುಚಿಗಳ ಸೈಪುಣ್ಯತೆ. ಅಲ್ಲದೆ ಊರಿನ ಕೇಂದ್ರಸ್ಥಾನದಲ್ಲಿದ್ದು ದೇವಸ್ಥಾನ, ಸಿನೆಮಾ. ಬಸ್ಸು ಸ್ಟೇಂಡುಗಳಿಗೆಲ್ಲಾ ತೀರಾ ಸಮೀಪದಲ್ಲಿದೆ.

ಎಚ್. ನರಸಿಂಹ ಭಟ್. ಪ್ರೊಪ್ರೈಟರ್.

NEO ROYAL CAFE

SANTHEKATTE, UDIPI.

ಶಾಸನಗಳಲ್ಲಿ ಮಿಂಚಿದ ಕೆಲವು ವೀರ ಕನ್ನಡಿಗರು.

ಯಂ. ನಾ. ಉಡುಪ, ವಿದ್ವಾನ್, ಐರೋಡಿ.

ಜಿನಧರ್ಮಾವಾಸಮಾದತ್ತು ಮುಳಿವಿನಯ
ದಾಗಾರ ಮಾದತ್ತು ಪದ್ಮಾ
ಸನನಿರ್ಮಾಸದ್ಮಮಾದತ್ತು ಶಿ ವಿಶದ ಯಶೋ
ಧಾಮಮಾದತ್ತು ವಿದ್ಯಾ॥
ಧನ ಜನ್ಮಸ್ಥಾನ ಮಾದತ್ತು ಸಮುತರಳ ಗಂಭೀರ
ಸದೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆ
ಗುಂ ಚಾರುಕರ್ನಾಟಕ ದೇಶಂ॥
(ಸೊರಬದ ಶಾಸನ)

ಕರ್ನಾಟಕದ ಇತಿಹಾಸದಲ್ಲಿ ಪುಲಕೇಶಿ, ನೃಪತುಂಗ, ಕೃಷ್ಣ, ವಿಕ್ರಮ ಮತ್ತು ಕೃಷ್ಣದೇವರಾಯ ಮೊದಲಾದ ರಾಜವರೇಣ್ಯರು ಸದಾ ಜ್ವಲಿಸುವ ಮಾರ್ತಾಂಡ ಮೂರ್ತಿಗಳಾಗಿದ್ದರೆ, ಬನ್ನುಸಾಂತ, ಕುವರ ಲಕ್ಷ್ಮ ಮೊದಲಾದ ನಾಡಿನ ಚೂಡಾಮಣಿಗಳು ನಿಶಾದೇವಿಯ ಕಣ್ಣಿನಂತೆ ಸದಾ ಮಿನುಗುವ ಸ್ಥಿರತಾರೆಗಳು! ಶಾಸನಗಳು ಅವರ ಯಶಸ್ಸನ್ನು ವೀರರಸ ತರಂಗಿಣಿಯಾದ ಅನೊಂದು ಬಗೆಯ ಶೈಲಿಯಿಂದ ಹಾಡಿರುವುದನ್ನು ಕಂಡರೆ ಅಂದಿನ ಕರ್ನಾಟಕ ಪ್ರಪಂಚಕ್ಕೇ ಅವರಲ್ಲಿದ್ದ ಭಕ್ತಿ ಎಷ್ಟು? ಅವರ ಗುಣಗಾನದಿಂದ ಅವರಿಗಾದ ಸಂತೃಪ್ತಿಯಾದರೂ ಅದೆಷ್ಟು! ಪುಣ್ಯನಾಮವನ್ನು ಆಚಂದ್ರಾರ್ಕವಾಗಿ ನೆಲೆನಿಲ್ಲಿಸುವುದರಲ್ಲಿ ನಮ್ಮ ಹಿರಿಯರು ಕೈಗೊಂಡ ಶ್ರಮದ ಸಂಖ್ಯೆಯಾದರೂ ಅದೆಷ್ಟು? ಶಾಸನಗಳಲ್ಲಿ ಅವರ ವೀರ ರಸವು ರೋಮಾಂಚನಕಾರಿಯಾಗುವಂತೆ ಆ ಕಾಲದ ಕವಿಗಳು ವಹಿಸಿದ ಶ್ರಮಗಳಾದರೂ ಅದೆಷ್ಟು? ಇವೆಲ್ಲಾ ನಮ್ಮ ನಾಡ ಶಾಸನಗಳನ್ನು ಓದುವವರ ಮನಸ್ಸಿನಲ್ಲಿ ಹೊಳೆಯದಿರವು. ಆ ಕವಿಗಳು ಕಿರಿದರಲ್ಲಿ ಹಿರಿದರ್ಥವನ್ನು ಪೋಣಿಸಬಲ್ಲ ಧನ್ಯವಿಧಾತರು! ಅವರು ಆ ವೀರಕನ್ನಡಿಗರ ಸಾರೋದ್ಧಾರವಾದ ಇತಿಹಾಸವನ್ನು ಕೊಡದಿದ್ದರೂ ಅವರ ಚಕಮಕಿಸುವ ಜೀವನದ ತುಂಡುಗಳಿಂದಲೇ ನಮ್ಮ ಹೃದಯದಲ್ಲಿ ಪೌರುಷದ ಕಿಡಿಗೆದರುತ್ತಿದ್ದಾರೆ. ಆ ಪುಣ್ಯ ಪುರುಷರ ನಾಮವೊಂದೇ ಈ ಯುಗದಲ್ಲಿ ನಮಗೆ ತಾರಕ ಮಂತ್ರವಾಗಬಲ್ಲುದಾದುದರಿಂದ ಆ ಹೆಸರುಗಳನ್ನು ಕಡೆಗಣಿಸುವಂತಿಲ್ಲ. ಅದಕ್ಕಾಗಿ ನಮ್ಮ ವೀರಕನ್ನಡಿಗರ ತುಂಬು ಜೀವನಕ್ಕಾಗಿ ವಾಚಕರು ಆಸೆಪಡದೆ ಅವರ ಸಾಹಸ ಮತ್ತು ಮರಣ ಲೀಲೆಯ ತುಣುಕುಗಳನ್ನೇ ಓದಿ ವಿಹಂಗಮಾವಲೋಕನದಲ್ಲೇ ಸದ್ಯ ತೃಪ್ತಿ ಪಡಬೇಕಾಗಿ ವಿನಂತಿ ಇದೆ. ಇದರಲ್ಲಿ ಪ್ರಾಚೀನ ಕಾಲದ ಕನ್ನಡಿಗರ ಹೆಸರಿನ ಮಾದರಿಯೂ ಸ್ಫುಟವಾಗಿ ಅವರಿಗೆ ಪ್ರತಿಯೊಂದರಲ್ಲೂ ಇದ್ದ 'ತಮ್ಮ ತನವು' ವಾಚಕರಿಗೆ ತಾನಾಗಿಯೇ ಸ್ಪಷ್ಟವಾಗದಿರದು.

ಶಾಸನಗಳಲ್ಲಿ ಮಿನುಗುವ ಹೆಚ್ಚು ಮಂದಿಗಳಲ್ಲಿ ದೇವಾಲಯಕ್ಕೊ, ವಿದ್ಯಾಸಂಸ್ಥೆಗೊ ದತ್ತಿ ಬಿಟ್ಟವರ ಸಂಖ್ಯೆಯೇ ವಿಶಾಲವಾದುದು. ಸಾಮಾನ್ಯವಾಗಿ ಶಾಸನಗಳನ್ನೆಲ್ಲಾ ದಾನಪತ್ರಗಳೆನ್ನಬಹುದು. ಅಂದಿನ ಸಿರಿವಂತರಾದ ಕನ್ನಡಿಗರು ಕಲಾಪೋಷಕರಾಗಿದ್ದರು. ಅವರ ಕಲಾನುರಕ್ತಿಯಲ್ಲಿ ಧರ್ಮದ ಕಳೆಜೇರಿಕೆಯಾಗಿತ್ತು. ಅವರು ಕಲಾಭಿವೃದ್ಧಿಯೊಂದಿಗೆ ತಮ್ಮ ನಿಸ್ವಾರ್ಥಬುದ್ಧಿಯನ್ನೂ ನಮ್ಮ ಮುಂದೆ ನಿಚ್ಚಳವಾಗಿ ಮಡಗಿ ಹೋಗಿದ್ದಾರೆ. ಅಂದಿನ ಆರ್ಯಾವರ್ತದಲ್ಲಿ ತ್ಯಾಗರಾಜ ಕರ್ಣನೊಬ್ಬನಿದ್ದರೆ ಅಂದಿನ ಕನ್ನಡ ನಾಡಿನ ಹಳ್ಳಿಹಳ್ಳಿಗಳಲ್ಲಿ ನೂರಾರು ತ್ಯಾಗರಾಜ ಕರ್ಣರಿದ್ದರೆಂಬುವನ್ನು ಪ್ರಾಚೀನ ಶಿಲ್ಪಮಂದಿರಗಳೇ ಸ್ಪಷ್ಟಪಡಿಸುತ್ತಿವೆ. ಈ ಮಹನೀಯರ ಕುರಿತಾಗಿ ಈ ಬರಹದಲ್ಲಿ ಏನೇನೂ ಹೇಳಿಲ್ಲ. ಇವರಲ್ಲಿ ಎರಡನೆಯ ವರ್ಗದವರು ವೀರಗಲ್ಲುಗಳಲ್ಲಿ ಮಿನುಗುತ್ತಿರುವರು. ಇವರು ನಾಡಹಿತಕ್ಕಾಗಿ- ನಾಡವರ ಕ್ಷೇಮಕ್ಕಾಗಿ- ಧಮನಿಯಿಂದ ಬೀದಿಗೆ ಗಟ್ಟಿ ರಕ್ತವನ್ನು ಸುರುವಿ ನಗುನಗುತ್ತಾ ವೀರಸ್ವರ್ಗವನ್ನು ಸೂರೆಗೊಂಡರು! ಇವರ ಯಶೋಗಾನವನ್ನೇ ಇಂದು ನಾವು ಹಲವು ವೀರಗಲ್ಲುಗಳಲ್ಲಿ ಕಾಣಬಹುದು. ಇನ್ನು ಹಲವು ವೀರಗಲ್ಲುಗಳಲ್ಲಿ ಶಿಲ್ಪಿಯು ವೀರನೊಬ್ಬನ ಚಿತ್ರವನ್ನು ಮಾತ್ರ ಚಿತ್ರಿಸಿದ್ದು, ಇಂದು ಜಟ್ಟಿಗನ ಕಲ್ಲೆಂದು ಅವು ಕರೆಯಲ್ಪಡುತ್ತಿವೆ. ಈ ವೀರಗಲ್ಲುಗಳ ಕುರಿತು ಇಂದು ನಾವು ಏನೂ ಹೇಳುವಂತಿಲ್ಲವಾದರೂ ಅವರು ಕೇವಲ ನಮ್ಮ ಹಿರಿಯರಿಗಾಗಿ ಆತ್ಮ ಬಲಿಯನ್ನಿತ್ತ ಪರೆಂಬುದನ್ನು ಮರೆಯುವಂತಿಲ್ಲ. ಅವರಿಗಾಗಿ ನಾವು ಮುದಾಶ್ರುವನ್ನೋ ಆನಂದಾಶ್ರುವನ್ನೋ ಸುರಿಸಿ ತೃಪ್ತಿಪಡಬೇಕಾಗಿದೆ. ಅವರ ಹೆಸರು ಈಗ ಕಾಲಗರ್ಭದಲ್ಲಿ ಹುದುಗಿದ್ದರೂ ಕನ್ನಡನಾಡಿರುವವರೆಗೆ ಅವು ಮಡಿಯುವಂತಿಲ್ಲ; ಮುಗ್ಗುವಂತಿಲ್ಲ. ಅವರಲ್ಲಿ ಕೆಲವರ ಪೌರುಷಗಳನ್ನು ಜನಪದಸಾಹಿತ್ಯಗಳು ವರ್ಣಿಸುತ್ತಿವೆ. ಅವರೆಲ್ಲಾ ನಮ್ಮ ಕನ್ನಡಿಗರೇ! ನಮ್ಮ ಹಿರಿಯರೇ! ಕನ್ನಡ ನಾಡಿನಲ್ಲಿ ಪ್ರಚಂಡಾಭಿಮಾನವುಳ್ಳವರೇ! ಇವರನ್ನು ಯಾರು ಮರೆತಾರು?

ಇವರಲ್ಲಿ ಮೂರನೆಯ ವರ್ಗದವರನ್ನು ಗರುಡರೆಂದು ಕರೆಯುವ ವಾಡಿಕೆ. ಇವರ ಸ್ವಾಮಿಭಕ್ತಿಯು ಸೀಮಾತೀತವಾದುದು. ಇವರಿಗೆ ಸ್ವಾಮಿಗಾಗಿ ಮಡಿಯುವುದೆಂದರೆ ವಿವಾಹದ ದಿನ ತರುಣ ವರನಿಗೆ ನೂತನ ವಧುವಿನೊಡನೆ ಮಂಟಪದಲ್ಲಿ ಕುಳಿತಷ್ಟು ಸಂಭ್ರಮ! ಇಂಥಾ ಸ್ವಾಮಿಭಕ್ತಿಯ ನೆರವಿನಿಂದಲೇ ಆಗಿನವರು ಕಾವೇರಿಯಿಂದ ಗೋದಾವರಿಯವರೆಗೆ ರಾಜ್ಯ ಕಟ್ಟಿದ್ದರು! ಪಂಪನು ಹೇಳಿದಂತೆ ಗಂಗಾವಾರ್ಧಿಯಲ್ಲಿ ಆತ್ಮತರಂಗವನ್ನು ಮಿಸಿಸಿದರು! ಸಾರಾಂಶ- ಕಾಲಚಕ್ರವು ಅಂದು ಕರ್ನಾಟಕಕ್ಕೆ ಅನುಕೂಲವಾಗಿತ್ತು. ಅದಕ್ಕೆ ಅವರ ನಿಸ್ವಾರ್ಥ ಬುದ್ಧಿಯೇ ಕಾರಣ. ಈಗ ಕನ್ನಡಿಗರಿಗೆ ಕಾಲವು ಪ್ರತಿಕೂಲವಾದಂತೆ ಕಾಣುತ್ತಿದ್ದರೂ ಅದು ಬರೇ ನಟನೆ ಮಾತ್ರವಲ್ಲದೆ ಎಂದೆಂದಿಗೂ ನಿಲ್ಲುವಂತಹ ಚಿತ್ರವಲ್ಲ. ಕನ್ನಡಿಗರ ಹಿರಿಯರು ಯಾವ ಮಟ್ಟದವರು? ಅವರ ಹೃದಯದ ರಕ್ತದ ಒಂದೊಂದು ಬಿಂದುವಿನಲ್ಲೂ ಯಾವ ಪರಿಮಾಣದ ಶಕ್ತಿ ಹುದುಗಿತ್ತು?- ಇವೆಲ್ಲಾ ವರ್ತಮಾನ ಯುಗದವರ ಕಣ್ಣ ಮುಂದೆ ಬರುವ ವರೆಗೆ ಮಾತ್ರ ನಮ್ಮವರು ಈ ಕಪಟ ನಾಟಕದ ಸೂತ್ರಧಾರಿಗಳಾಗಿದ್ದಾರು, ಅಷ್ಟೆ.

ಈ ಬರಹವು ಕೊನೆಯ ಎರಡು ವರ್ಗದವರ ವಿಚಾರವಾಗಿ ಮಾತ್ರ ನಾಲ್ಕು ಮಾತುಗಳನ್ನು ಹೇಳಲು ಯತ್ನಿಸುತ್ತಿದೆ. ಆ ಮಹನೀಯರ ಬಾಳ್ವೆಯ ವಿವರವು ಇಂದು ಕಾಲದ ಕ್ರೌರ್ಯದಿಂದ ಧೂಳೀಧೂಸರಿತವಾದಂತೆ ಕಂಡುಬಂದರೂ, ಅದು ನಮ್ಮ ಹಿತಕ್ಕಾಗಿಯೇ. ಕನ್ನಡಿಗರು ಉತ್ತಮಾದರ್ಶಗಳನ್ನು ಮರೆತಾಗ ಅವರ ಮುಂದೆ ಆ ವೀರ ರತ್ನಗಳನ್ನು ಚಮಕಿಸಲು ಅವನು ಅವರ ಇತಿಹಾಸಗಳನ್ನು ಗೋಪ್ಯವಾಗಿಟ್ಟಿದ್ದಾನಷ್ಟೆ! ಅವನಿಗಾಗಿಯೇ ಕಾಲನಿಗೆ ಅನಂತ ನಮಸ್ಕಾರಗಳಿರಲಿ!

೧. ಬನ್ನುಸಾಂತ- (ಕ್ರಿ. ಶ. ೧೧೦೭) ಚಾಲುಕ್ಯ ರಾಜನಾದ ಭೂಲೋಕ ಮಲ್ಲನ ಆಳಿಕೆಯಲ್ಲಿ ಕದಂಬ ತೈಲಪನಿಗೂ ಪೆರ್ಮಾಡಿ ಸಾಂತರನಿಗೂ ಯುದ್ಧವಾಯಿತು. ಕದಂಬ ತೈಲಪನ ಪಕ್ಷದಿಂದ ಬನ್ನುಸಾಂತನು ಹೋರಾಡಿದನು. ಇವನು ಕಡಿತಲೆ ಮತ್ತು ಪಲಗೆಯ ಪ್ರಯೋಗದಲ್ಲಿ ಪ್ರವೀಣನಿದ್ದನು. ಇವನು ಯುದ್ಧರಂಗದಲ್ಲಿ ಸಾಂತರನ ಸೇನೆಯನ್ನು ಕಡಿಖಂಡಮಾಡಿ, ರಣಭೂಮಿಯನ್ನು ಹೆಣಮಯಮಾಡಿ, ಒಬ್ಬನೇ ವಿಸ್ತಾರವಾದ ಶತ್ರುಸೇನೆಯನ್ನು ಹಿಂದಕ್ಕಟ್ಟಿ ರಣರಂಗ ಶೂದ್ರಕನೆನ್ನಿಸಿದ ಈ ವೀರನು ಯುದ್ಧಭೂಮಿಯಲ್ಲೊರಗಿದನು.

೨. ಕಲಿರಾಯ-(ಕ್ರಿ. ಶ. ೧೧೨೪) ಇವನು ಮಾಚಗೌಂಡನ ಮಗನು; ಕಾಳಗವುಂಡನ ತಮ್ಮ. ಇವನೂ ರಣರಂಗ ಶೂದ್ರಕನಾದುದರಿಂದಲೇ ಕಲಿರಾಯನೆಂಬುದು ಇವನಿಗೆ ಅನ್ವರ್ಥನಾಮವಾಗಿತ್ತು. ಹೊಯ್ಸಳ ರಾಜನಾದ ವಿಷ್ಣುವರ್ಧನನು ಹಾನುಗಲ್ಲು ಕೋಟೆಯನ್ನು ಮುತ್ತಿ ಕಾದುವಾಗ ಇವನು ದೊರೆಯಪ್ಪಣೆಯಂತೆ ಕಲಿತುರಗ ವೀರಭಟರನ್ನು ಧುರದಲ್ಲಿ ಕೊಂದು ತಾನೂ ವೀರಸ್ವರ್ಗವನ್ನು ಹೊಂದಲು ಸುರಗಣಿಕೆಯರು ಬಂದು ಪುಷ್ಪಕ ವಿಮಾನದಲ್ಲಿ ಅವನನ್ನು ಕರೆದೊಯ್ದರು.

೩. ಕನ್ನೆಯ- (ಕ್ರಿ. ಶ. ೧೧೫೭) ಇವನು ಚಾಳುಕ್ಯ ರಾಜನಾದ ತ್ರೈಲೋಕ್ಯಮಲ್ಲನ ಸೇನಾಪತಿಗಳಲ್ಲೊಬ್ಬನಾಗಿ ಕಾತಿಕವಳ್ಳಿಯ ತುರುಗೋಳಿಯಲ್ಲಿ ಹೋರಾಡಿದನು. ಇವನು ಶತ್ರುವೀರರನ್ನು ಕೊಂದುದಲ್ಲದೆ ಅವರ ಹೆಣಗಳನ್ನು ತನ್ನ ಆಯುಧಗಳಿಂದ ಚುಚ್ಚಿ ಎತ್ತಲು ಭೂತಕೋಟಿಯು ಅವನ ಯಶಸ್ಸನ್ನು ಹಾಡಿತು. ಆಗ ಅರಿಬಲವೆಲ್ಲಾ ಕೂಡಿ ಯುದ್ಧ ಭೂಮಿಯನ್ನು ಕಡೆಯುವುದನ್ನಾಗಿ ಮಾಡಲು ಕನ್ನೆಯನು ಕಡೆ ಹಂಜರದಲ್ಲಿ ಮರೆದೊರಗಿದನು.

೪. ಹೆಗ್ಗಿಗ-(ಕ್ರಿ. ಶ. ೧೧೭೭) ಇವನು ಕಲಚೂರ್ಯರಾಜನಾದ ರಾಯ ಮುರಾರಿ ಸೋವಿದೇವನ ಆಳಿಕೆಯಲ್ಲಿ ಬಾಳಿ ಅಳಿದವನು; ಪರೋಪಕಾರಿ; ಧರ್ಮಿಷ್ಠ. ಸಜ್ಜನರನ್ನು ಕಳ್ಳರು ಮುತ್ತಿ ಹಿಂಸಿಸುವುದನ್ನು ಕಂಡು, ತಾನು ಏಕಾಂಗಿಯಾದರೂ ಅಳುಕದೆ ಕೂರ್ಗಣೆ ಮತ್ತು ಸುರಿಗೆಯನ್ನು ಹಿಡಿದು ಅವರ ವಿಸ್ತಾರವಾದ ಪಡೆಯೊಡನೆ ಕಾದಿ ಅವರಲ್ಲಿ ಹಲವರನ್ನು ನೆಲಕ್ಕುರುಳಿಸಿ ಶತ್ರುಸೇನೆಯ 'ಭಳಿರೆ, ಎನ್ನುತ್ತಿರಲು ಭೂತಲಶಾಯಿಯಾದನು.

೫. ಚಟ್ಟನಾಯಕ- (ಕ್ರಿ. ಶ. ೧೧೮೭) ಇವನು ಸಿಂಗರಾಜನಾದ ಮಲ್ಲಿದೇವರಸನ ಅಜ್ಞೆಯಂತೆ ಗೋಧನವನ್ನೊಯ್ಯುವ ದುಸ್ತರ ಕೈಯಿಂದ ಅವನ್ನು ಬಿಡಿಸಿ ಆ ಘೋರ ಸಂಗ್ರಾಮದಲ್ಲಿ ತಾನು ಸ್ವರ್ಗಸ್ಥನಾದನು. ಇವನು ಮರಣ ಕಾಲದಲ್ಲಿನ್ನೂ ಚಿಕ್ಕವನು. ಇವನ ತಂದೆ ಮುಲ್ಲಹೆಗ್ಗಡೆ. ಇವನ ಯುದ್ಧದ ಮಾದರಿ ಹೀಗಿದೆ-

ವೃ॥ ಕಂಡಪೋಳಿಂಡೆಯಾಡಿ ಬಿಸುನೆತ್ತರೊ
ಳೋಕುಳಿಯಾಡಿ ಪೆರ್ಚಿಮಾ
ರ್ಕೊಂಡೊಡನೆಚ್ಚ ಪೂಣಿಗರ ಪಂದಲೆಯಿಂ
ಪೊಡೆಸೆಂಡನಾಡಿದೊ॥
ಳಂಡವಿಪಂ ದಲೆಂದು ಪೊಸ ಮುತ್ತಿನ ಸೇಸೆ
ಯನಿಕ್ಕಿ ಕೂಡೆ ಕೈ
ಕೊಂಡೊಡನೊಯ್ದು ರಜ್ಜರಸಿಯರ್ ಕಲಿ ಚ
ಟ್ಟನನಾಜಿರಂಗದೊಳ್ ॥
(ಹೊನ್ನಾಳಿ ಶಾಸನ)

೬. ಕಲ್ಲೆಯನಾಯಕ- (ಕ್ರಿ. ಶ. ೧೧೯೩) ಇವನು ಸಿಂದರಾಜನಾದ ಮಲ್ಲಿದೇವರಸನ ಅಂಗರಕ್ಷಕ. ಇವನು ಒಡೆಯನ ಆಜ್ಞೆಯಂತೆ ರಟ್ಟೆ ಹಳ್ಳಿಯ ಸೇನೆಯೊಡನೆ ಹೋರಾಡಿ ಜಯವಂತೆ ಅವರನ್ನು ಒಕ್ಕಲಿಕ್ಕಿ ತಾನೂ ಯುದ್ಧ ಭೂಮಿಯಲ್ಲೊರಗಿದನು. ಇವನನ್ನು ಅಪ್ಸರೆಯರು ಮಹೋತ್ಸವದಿಂದ ಇದಿರ್ಗೊಂಡರಂತೆ!

೭. ಗಟ್ಟಿಯ್ಯ- (ಕ್ರಿ. ಶ. ೧೧೯೬) ಇವನೂ ಸಿಂದರಾಜನಾದ ಮಲ್ಲಿ ದೇವನ ಅಂಗರಕ್ಷಕ. ಉಮಾಬಾಯಿಯ ಕುಂದುರೆ ಸವಾರರು ದನಗಳನ್ನು ಸೆರೆ ಹಿಡಿದೊಯ್ಯುವಾಗ ಗಟ್ಟಿಯ್ಯನು ಅವರೊಡನೆ ಹೋರಾಡಿ ದನಗಳನ್ನು ಮರಳಿಸಿದನು. ಇವನು ಮಲ್ಲರಸ ಮತ್ತು ಅವನ ರಾಣಿ ಬೊಪ್ಪ ದೇವಿಯ ಆಜ್ಞಾಪಿಸಿದಂತೆ ಪಟ್ಟಣವನ್ನು ಮುತ್ತಿದ ಸೇನೆಯನ್ನು ಹೊಡೆದು ಶ್ರೀರಂಗ, ಗೋವಿಂದ ಎನ್ನುತ್ತಾ, ಜನರೆಲ್ಲಾ "ಭಾಪು" ಎಂದು ಬಣ್ಣಿಸುತ್ತಿರಲು ವೀರಸ್ವರ್ಗವನ್ನು ಸೇರಿದನು. ಇವನು ಮಲ್ಲೆಯ ನಾಯಕನ ಪ್ರೀತಿಯಕುಮಾರ.

೮. ಮೈಲನಾಯಕ- (ಕ್ರಿ. ಶ. ೧೧೯೬) ಇವನೂ ಗಟ್ಟಿಯ್ಯನೊಡನೆ ಉಮಾಬಾಯಿಯ ಪಾಳೆಯಲ್ಲಿ ಕಾದಿ ಸತ್ತನು. ಇವನು ಕೇಶವ ನಾಯಕನ ಮಗನು.

೯. ಕೇರಮಲ್ಲ- (ಕ್ರಿ. ಶ. ೧೨೦೦) ಇವನು ಹೊಯ್ಸಳರ ಎರಡನೆಯ ಬಲ್ಲಾಳನ ಆಳಿಕೆಯಲ್ಲಿ ನಡೆದ ಗೋಗ್ರಹಣದಲ್ಲಿ ಕಾದಿ, ತುರುವನು ಬಿಡಿಸಿ ಮೃತಿ ಹೊಂದಿದನು:

೧೦. ಬಿನವ (ಕ್ರಿ. ಶ. ೧೨೦೪) ಇವನು ಕಾದಂಬ ಚಕ್ರವರ್ತಿ ಮಲ್ಲಿ ದೇವರಸನ ಆಳಿಕೆಯಲ್ಲಿ ಕಳ್ಳರೊಡನೆ "ನಾಗಂಗಳ ಕಂಡ ಗರುಡನಂತೆ" ಅಂಕಿಸಿದು ಅಮರಪದವಿಯನ್ನು ಪಡೆದನು.

ಬಮ್ಮ- (ಕ್ರಿ. ಶ ೧೨೨೧) ಇವನಿಗೆ ನಿಟ್ಟೂರ ಮಾಚಿ ಗೌಂಡನ ಬಮ್ಮನೆಂದು ಹೆಸರು, ಇವನು ಹೊಯ್ಸಳರ ಎರಡನೆಯ ನಾರಸಿಂಹನ ಸೇನಾಪತಿಯು. ಇವನು ಮಾರ್ಮಲೆಕ್ಕ ವಜ್ರ ದೇವನ ಸೇನೆಯನ್ನು ಒಕ್ಕಲಿಕ್ಕಿ ಶತ್ರುಗಳನ್ನು ಕುರಿದರಿದರಿದು ಕೊನೆಗೆ ತಾನು ವೀರ ಸ್ವರ್ಗವನ್ನು ಹೊಂದಿದನು.

೧೨ ಐಜುಗ---(ಕ್ರಿ. ಶ ೧೨೪೪)ಇವನು ಸಿಂದ ರಾಜನಾದ ವೀರ ದೇವರಸನ ಆಳಿಕೆಯಲ್ಲಿ ಲಕ್ಷ್ಮಣ ಪಾಳನ ದಾಳಿಯಲ್ಲಿ ಅವನನ್ನು ಪ್ರತಿಭಟಿಸಿ ಕೊನೆಗೆ ಮರಣ ಪಟ್ಟನು. ಇವನು ಅಡ್ಡಾಡಿದ ಯುದ್ಧರಂಗವು-ಹೀಗಿತ್ತು-

ಕಂದ॥ ಪರೆದ ಕರುಳ್ಮಿಡುಳುಗಳಿಂ। ನೊರೆನೆತ್ತರ ಪೊನಲ್ಗಳಿಂದ ಕಂಡದ ಕೆಸರಿಂ॥ ಸಿರ ಮುರುಳ್ವ ಮುಂಡದಿಂಬಿಂ ।ಕರಮಾಯ್ತಂದೈಜ ಜನಿದ ಸಂಗರ ರಂಗಂ॥೧॥

೧೩ ಐಚಣ--- (ಕ್ರಿ. ಶ. ೧೨೫೭) ಇವನು ಸಂದರಾಜನೊಡನೆ ಕಟ್ಟಾರಿಯಿಂದ ಶೀರ ಶತ್ರು ಸಂಹಾರ ಮಾಡುವೆನೆಂದು ಭಾಷೆಕೊಟ್ಟು, ವೈರಿ ಮೋಹರವನ್ನು ಮಾರಿಯಂತಿರೆ ಕೆಯಟ್ಟಿ ಕೊನೆಗೆ ರಣಧೀರನಾದ ಅವನ ಮೇಲೆ ಹೂ ಮಳೆ ಸುರಿಯುತ್ತಿರಲು ಸ್ವರ್ಗಕ್ಕೆ ಸಂದನು.

೧೪ ಗುಜ್ಜ- (ಕ್ರಿ. ಶ ೧೨೬೦) ಇವನು ಹೊಯ್ಸಳರ ಮೂರನೆಯ ನಾರಸಿಂಹನ ಸಾಮಂತನು, ಇವನು ಅರಗಿರಿ ವಜ್ರ, ಸಿಕಗರ ಗಂಡ, ಅರಿತುದ ಕರಿಹರಿಯಾಗಿ ಕಾದಿ ಸ್ವರ್ಗಸ್ಥನಾದನು.

೧೫. ಅಂಕೆಯ ನಾಯಕ- (ಕ್ರಿ. ಶ ೧೨೬೬) ಇವನು ಚಿಕ್ಕ ಕೇಶವ ದಂಡನಾಯಕನ ಮಗನು, ಇವನು ಹೊಯ್ಸಳ ಮೂರನೆಯ ನರಸಿಂಹನ ಆಳುವಿಕೆಯಲ್ಲಿದ್ದನು. ಇವನು ಸೇವುಣ ರಾಮದೇವನ ದಳಪತಿ ಸಾಳುವ ತಿಕ್ಕಮನ ಸೇನೆಯೊಡನೆ ಹೋರಾಡಿ ಅವನನ್ನೋಡಿಸಿ ತಾನು ಯುದ್ಧ ರಂಗದಲ್ಲಿ ಮಲಗಿದನು.

ಇವರೆಲ್ಲಾ ವೀರಗಲ್ಲುಗಳಲ್ಲಿ ವಿರಾಜಿಸುತ್ತಿರುವವರು. ಇವರಂತೆ ಸ್ವಾಮಿ ಕಾರ್ಯಕ್ಕಾಗಿ ತಲೆ ತೆತ್ತವರ ಕಥೆಯೂ ರೋಮಾಂಚನ ಕಾರಿಯಾಗಿದೆ.

೧. ಕುವರ ಲಕ್ಷ್ಮ- (ಕ್ರಿ. ಶ ೧೨೨೦) ಇವನು ಗರುಡರ ವರ್ಗಕ್ಕೆ ಸೇರಿದವನು. ಇವನ ಪತ್ನಿ ಮಹಾ ಪತಿವ್ರತೆಯಾದ ಸುಗ್ಗಲದೇವಿ. ಇವನನ್ನು ಹೊಯ್ಸಳರ ಎರಡನೆಯ ಬಲ್ಲಾಳನು ಅತ್ಯಂತ ಪ್ರೀತಿಯಿಂದ ಸಾಕಿದನು,

ಕಂದ॥ ಅರಮನೆ ಕೆಂಟ್ಟಿಲ್ ನೆಗಳ್ದಾ। ದರಮದು ಬಾಯಿಣ್ಣೆ ವಾಸಿಯರ್ ತನ್ನಂತೆ॥ ಪುರಮನೆ ಬಲ್ಲಾಳನೃಪಂ । ಪೊರೆವ ಮಗಂ ಕುವರ ಲಕ್ಷ್ಮ ದಂಡಾಧೀಶಂ ॥ ೧ ॥ ಗುರುವುಂ ನೃಪನ ಮಲಮಾಳ್ವೆನೆ! ಪರತ್ರೆ ಗಂಡನಗಿ ಪತ್ರೈಗಂ ಪರಸೋರ್ವಂ॥ ಗುರುವಿಲ್ಲ ನೃಪ ಮಲ್ಲನೆ!ಧರೆಗೆಸೆದೊಂ ಕುವರ ಲಕ್ಷ್ಮ ದಂಡಾಧೀಶಂ॥ ೨॥

ಇವನು ಬಲ್ಲಾಳನ ಮಂತ್ರಿ ಮತ್ತು ದಂಡನಾಥನಾಗಿದ್ದು, ರಾಜನು ಸಾಯಲು ಗರುಡರ ಪದ್ಧತಿಯಂತೆ ತಾನು, ತನ್ನ ಮತ್ತು ತನ್ನ ಕೈಗೆಳಗಿದ್ದ ಸಾವಿರ ಜನವೀರರೊಡನೆ ಮೃತಿ ಹೊಂದಿದನು. ಇಂಥಾ ಆತ್ಮ ಯಜ್ಞವು ಜಗತ್ತಿನಲ್ಲೇ ಅತಿ ವಿರಳ!

೨. ಸಿಂಗೆಯನಾಯಕ- (ಕ್ರಿ. ಶ. ೧೨೯೧) ಇವನು ಹೊಯ್ಸಳರ ಮೂರನೆಯ ನರಸಿಂಹನ ಸಾಮಂತನೂ, ಗರುಡವರ್ಗದವನೂ ಆಗಿದ್ದು ರಾಜನ ಮರಣಾನಂತರ ಸ್ವಾಮಿಯೊಂದಿಗೆ ತಾನೂ ತನ್ನ ಹೆಂಡತಿ ಮತ್ತು ಸೇವಕಿಯರೊಡನೆ ಸತ್ತನು

ವೀರಗಲ್ಲುಗಳಲ್ಲಿ ಮಿಂಚಿದವರ ಹೆಸರೂ, ಅವರಲ್ಲಿದ್ದ ಪರಸ್ಪರ ಹಿತೈಕ ದೃಷ್ಟಿಯೂ, ಗರುಡವರ್ಗದವರ ಸ್ವಾಮಿಭಕ್ತಿಯೊಂದಿಗೆ ಸಮರಸವಾಗಿ ಕನ್ನಡಿಗರ ಸಪ್ಪೆ ಬೀಳುತ್ತಾ ಬಂದ ಅವರ ತುಸು ಕಾವನ್ನು ಕೊಟ್ಟು ಏಕೀಕರಣದಂಥಾ ಮಹಾ ಕಾರ್ಯಕ್ಕೆ ನೆರವಾಗಲಿ! ಅವರ ಜನ್ಮ ಜನ್ಮಾಂತರದ ಪುಣ್ಯಾವಾಸನೆಯು ನಮ್ಮವರ ನೀಚಸ್ವಾರ್ಥ, ಒಕ್ಕೂಟದಲ್ಲಿ ಅಲಸಿಕೆ ಮೊದಲಾದ ದುರ್ಗುಣಗಳನ್ನು ತೊಳೆದು ನಾಡು ನುಡಿಯಲ್ಲಿ ಅತಿಶಯ ಪ್ರೀತಿ, ವಿಶಾಲ ಹೃದಯವನ್ನು ಅತ್ಯಾಸಕ್ತಿಯನ್ನು ನೆಲೆಗೊಳಿಸಿದಲ್ಲಿ ನಾವು ಧನ್ಯರಲ್ಲದೆ ಮತ್ತೇನು? ಅಳಿವುದು ಕಾಯ, ಉಳಿವುದು ಕೀರ್ತಿಯಲ್ಲವೇ?

BHUVANENDRA PRODUCTS LIMITED,

KATAPADI, S. K.

ಸ್ವತಂತ್ರ ಭಾರತದ ಪ್ರಗತಿಗೆ ಪ್ರತಿಭಾವಂತ, ಆರೋಗ್ಯವಂತ,
ಚೈತನ್ಯಮೂರ್ತಿಗಳು ಬೇಕು.

"ಭುವನೇಂದ್ರ" ಚ್ಯವನಪ್ರಾಶ್ಯ:– ನರಗಳ ದೌರ್ಬಲ್ಯ, ಹೃದ್ರೋಗ, ಸ್ವರಭಂಗ ಇತ್ಯಾದಿ ಪೀಡೆಗಳನ್ನು ಗುಣಪಡಿಸುವ, ಆಬಾಲವೃದ್ಧರಿಗೆ ಸೇವಿಸಲು ಅನುಕೂಲವಾದ ಶಕ್ತಿವರ್ಧಕ ರಸಾಯನ

"ಭುವನೇಂದ್ರ" ಬ್ರಾಹ್ಮೀ ತೈಲ:– ಕಣ್ಣಿಗೆ ತಂಪು, ಮೆದುಳಿಗೆ ಶಕ್ತಿ ತನ್ಮೂಲಕ ಮಾನಸಿಕ ಚೇತನವನ್ನು ಹೆಚ್ಚಿಸುವ ಉತ್ತಮ ತೈಲ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ಸಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕ
ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು
ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ
ಎಲ್ಲಾ ಕಡೆಯಲ್ಲಿಯೂ ದೊರಯುತ್ತದೆ
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 3—8—0 ಸಣ್ಣ ಬಾಟ್ಲಿಗೆ ರು 2—0 0

ಶ್ರೀ ರಾಮತೀರ್ಥ ಯೋಗಾಶ್ರಮ, ದಾದರ್ (ಸೆಂಟ್ರಲ ರೈಲ್ವೆ) ಮುಂಬಯಿ, 14.

SRI RAMATHIRTHA YOGASHRAMA,

DADAR (Central Rly) **BOMBAY 14.**

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಕೈಗನ್ನಡಿ

ಕನ್ನಡದಲ್ಲಿ ಭಗವದ್ಗೀತೆಯ ಸಮೂಲ ಶ್ಲೋಕ
ಮತ್ತು ಅನುವಾದ.

ಬೆಲೆ 0—12—0

ನವಯುಗ ಪ್ರೆಸ್, ಉಡುಪಿ.
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಯುಕ್ತ ಪುಸ್ತಕ ವ್ಯಾಪಾರಿಗಳಲ್ಲಿ [illegible]

Regd. No. M. 3618
LICENCE NO. 31
Licensed to Post without Prepayment

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್

ಲಿಮಿಟೆಡ್.

ಸ್ಥಾಪನೆ: 1906

ಪ್ರಧಾನ ಕಾರ್ಯಾಲಯ: ಉಡುಪಿ. (ದ. ಭಾರತ)



ಕೊಡಗು ಸಂಸ್ಥಾನದ ಚೀಫ್ ಕಮಿಷನರ್
ಲೆ. ಕರ್ನಲ್ ಬಿ. ಎಸ್. ಬೇಡಿ, ಐ. ಪಿ. ಎಸ್. ಇವರಿಂದ
ಮಡಿಕೇರಿಯಲ್ಲಿ ತಾರೀಕು 16-5-1953ರಲ್ಲು ಬಹಳ ವಿಜೃಂಭಣೆಯಿಂದ
ತೆರೆಯಲ್ಪಟ್ಟ ಬೇಂಕಿನ ಸ್ವಂತ ಕಟ್ಟಡ.

ಅಗೋಸ್ತು 15

ನಮ್ಮ ದೇಶವು ಸ್ವಾತಂತ್ರ್ಯವನ್ನು
ಸಂಪಾದಿಸಿದ ಈ ಶುಭದಿನದಲ್ಲಿ ನಮ್ಮ ಜನರು
ಚಿಕ್ಕ ಚಿಕ್ಕ ಉಳಿತಾಯಗಳ ಮಹತ್ವವನ್ನು
ಮನಗಂಡು, ಇಂದೇ ಚಿಕ್ಕ ಉಳಿತಾಯದ
ಖಾತೆಯೊಂದನ್ನು
"ಕೊರ್ಪೊರೇಶನ್" ಬೇಂಕಿನಲ್ಲಿ
ತೆರೆಯಲೆಂದೇ ನಮ್ಮ ಆಶಯ!

ಮದ್ರಾಸು, ಮೈಸೂರು, ಮುಂಬಾಯಿ
ಕೊಡಗು ಮತ್ತು ತಿರು-ಕೊಚ್ಚಿ
ಸಂಸ್ಥಾನಗಳಲ್ಲಿ ಒಟ್ಟು
35 ಶಾಖೆಗಳಿದ್ದು
ಸಮಗ್ರ ಭಾರತದಲ್ಲಿ
ಇತರ ಏಜನ್ಸಿಗಳೂ ಇದ್ದು
ಸಕಲ ತರದ
ಬೇಂಕಿಂಗ್ ವ್ಯವಹಾರಗಳನ್ನು
ಕೈಕೊಳ್ಳಲಾಗುವುದು.

ಠೆ
ಪ್ಪು
ಲ್ಟ್
ಬೇ
ಂ
ಕು



ಕೊಡಗು ಸಂಸ್ಥಾನದ ಗೃಹ ಮಂತ್ರಿಗಳಾದ
ಮಾನ್ಯ ಶ್ರೀ ಕೆ. ಮಲ್ಲಪ್ಪ, ಬಿ. ಎ., ಬಿ. ಎಲ್., ಇವರಿಂದ
ಮಡಿಕೇರಿಯಲ್ಲಿ ತಾರೀಕು 16-5-1953ರಲ್ಲು ಬಹಳ ವಿಜೃಂಭಣೆ
ಯಿಂದ ತೆರೆಯಲ್ಪಟ್ಟ ಬೇಂಕಿನ "ಸೇಫ್ ಡಿಪೋಜಿಟ್ ವೋಲ್ಟ್"

The Canara Banking Corporation Ltd.

Estd: 1906] [H. O. **UDIPI** (S. INDIA).

Reg. No.
M 3618

LICENCE No. 31
Licensed to Post without Prepayment

ನವಯುಗ

20-8-1953

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನಡ

ವಾ। ಚಂದಾ	5-12-0
6 ತಿಂಗಳಿಗೆ	3--0-0
ಬಿಡಿ ಪ್ರತಿಗೆ	0--2-0

Vol 32
No 50

NAVAYUGA WEEKLY POST BOX NO 22 UDIPI

ವರ್ಷ ೩೨
ವಾರ ೫೦

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

ಮಧುಪರ್ಕ

ಕಾರ್ಲೈಲ್ ತಮ್ಮ ಕಾಲದ [illegible] ಒಬ್ಬರು. ಅವರು ಮಿತಭಾಷಿಗಳಾಗಿದ್ದರು. ಎಷ್ಟು ಕಡಿಮೆ ಮಾತನಾಡುತ್ತಿದ್ದರೆಂದರೆ [illegible] ತಿದ್ದರು—ಒಂದು [illegible] ಕೇಳಿದರು—

"ಇವತ್ತಿನ ಪ್ರಾರ್ಥನಾ ಸಭೆಯಲ್ಲಿ [illegible] ಉಪದೇಶವನ್ನು [illegible]?"

"ಹೂಂ" ಎಂದಿಷ್ಟೇ ಉತ್ತರ ಬಂತು.

"ಅವರ ಮೂಲ ಪ್ರವಚನ [illegible] ದೀರ್ಘವಾದ, [illegible] ಉತ್ತರ [illegible] ಅವರಿಗೆ ಕಾರ್ಲೈಲರು ಸ್ವಭಾವಕ್ಕೆ [illegible] ಸಂಕ್ಷಿಪ್ತ ಉತ್ತರವನ್ನೇ ಕೊಟ್ಟರು. "ಪಾಪ!"

"ಅವರು ನಿಜ [illegible] ವಿಸ್ತಾರವಾಗಿ ವರ್ಣಿಸಿ ಹೇಳಿ."

"ಅವರು ಅವರ [illegible]—" [illegible] ಬಾರದ ಸಂಕ್ಷಿಪ್ತ ಉತ್ತರ [illegible].

ಅಪರಾಜಿತ

"ಗಂಟೆಗೆ ಒಂದೇ ಸ್ವರ!" ಎಂದು ನಾವು ಹಿಡಿದ ಹಟವನ್ನು ಬಿಡದ, ತಿಳಿಸಿ ಹೇಳಿದರೂ ಅರ್ಥಮಾಡಿಕೊಳ್ಳದ, ಮನವೊಲಿಸಲು ಪ್ರಯತ್ನಿಸಿದರೂ ಅದಕ್ಕೆ ಸೋಲದ ಜನರನ್ನು ಕಂಡರೆ ಹೇಳುವುದುಂಟು-ನಮ್ಮಲ್ಲಿ ಅನೇಕರಿಗೆ ಬೇರೆಯವರ ಮನಸ್ಸನ್ನು ಸಂತೋಷಪಡಿಸಬೇಕೆನ್ನುವ ಇಚ್ಛೆಯೇ ಇದ್ದಂತಿರುವುದಿಲ್ಲ. ನಮ್ಮ ಮನಸ್ಸಿಗೆ ಯಾವುದು ಒಳ್ಳೆಯದೆಂದು ಕಂಡಿತೋ, ಯಾವುದರಿಂದ ಹಿತವುಂಟೆಂದು ತೋರಿತೋ ಅದರಂತೆಯೇ ನಡೆದುಕೊಳ್ಳುವುದು ಅಭ್ಯಾಸ ಅಥವಾ ಸ್ವಭಾವವೇ ಆಗಿ ಪರಿಣಮಿಸಿರುತ್ತದೆ ಇಂಥವರ ನಡೆ ನುಡಿ, ಆಚಾರ ವಿಚಾರಗಳೆಲ್ಲವೂ ಸಾಮಾನ್ಯ ಜನರ ಅಪೇಕ್ಷೆಗಿಂತ ತೀರ ಭಿನ್ನಸ್ವರೂಪದ್ದಾಗಿರುತ್ತದೆ. ಮಾತಿನ ಮೋಡಿಯಾಗಲೀ, ವಿಚಾರ ಧಾರೆಯಾಗಲೀ, ಪ್ರತಿಯೊಂದು ತನ್ನದೇ ವೈಶಿಷ್ಟ್ಯದಿಂದ ಕೂಡಿರುತ್ತದೆ-ಸಾಮಾನ್ಯ ಜನಕ್ಕೆ ಇವರು ಹೇಳುವುದೇನೆಂಬುದೇ ತಿಳಿಯಲಿಕ್ಕಿಲ್ಲ.-ಅಥವಾ ಮಾಡುವ ಕೆಲಸವೂ ಮನವರಿಕೆಯಾಗಲಿಕ್ಕಿಲ್ಲ. ಹಾಗೆಂದು ಸಾಮಾನ್ಯ ಜನರಲ್ಲಿ ಉಂಟಾಗುವ ಪ್ರತಿಕ್ರಿಯೆಯ ಬಗ್ಗೆ ಈ ಮಹಾನುಭಾವರಿಗೆ ಗಮನವೇ ಇರುವುದಿಲ್ಲ'.

ಅಮೇರಿಕೆಯ ಸ್ವತಂತ್ರ ವಿಚಾರಕರಲ್ಲಿ ಪ್ರಸಿದ್ಧನಾದ ಥೋರೋ ಈಜಿಪ್ತ ದೇಶಗಳಲ್ಲಿ ಕಂಡು ಬರುವ ಪಿರಾಮಿಡು (ಭವ್ಯವಾದ ರಾಜರ ಗೋರಿ)ಗಳ ಸಂಬಂಧದಲ್ಲಿ ಹೇಳಿರುವ ಮಾತುಗಳು ತುಂಬ ಮನೋಜ್ಞವಾಗಿವೆ— "ಈ ಪಿರಾಮಿಡವು ಈಜಿಪ್ತ ರಾಷ್ಟ್ರದ ಅವನತಿಗೆ ಸಾಕ್ಷಿಯಾಗಿರುತ್ತದೆ. ನನಗೆ ಅವುಗಳ ಭವ್ಯ ಹಾಗೂ ಸೌಂದರ್ಯದ ವಿಷಯ ಏನೊಂದೂ ಮನಸ್ಸಿಗೆ ಬರುವುದಿಲ್ಲ ಆದರೆ ಒಬ್ಬಾನೊಬ್ಬ ಮಹತ್ವಾಕಾಂಕ್ಷಿಯಾದ ಶುಂಭನ ಸಲುವಾಗಿ ಸಾವಿರಾರು ಜನರು ತಮ್ಮ ಇಡೀ ಆಯುಷ್ಯ ಮುಡಿಯುವಷ್ಟು ಅವನತ ಸ್ಥಿತಿಯನ್ನು ಹೇಗೆ ಮುಟ್ಟಿದರು ಎಂಬುದೇ ವಿಚಾರಣೀಯ ಅಂಶವಾಗಿರತ್ತದೆ. ಇಷ್ಟೊಂದು ಜನಪ್ರಮುಖ ಮೇಲೆ ಆರಂ ಜನ ಸಮಾಧಿಯನ್ನು ಕಟ್ಟುವ ಬದಲು, ಬಳಿಯಲ್ಲಿ ಹರಿಯುವ ನ್ಯಾಲ ನದಿಯಲ್ಲಿ ಅವನ ಹೆಣವನ್ನು ಮುಳುಗಿಸಬಹುದಿತ್ತು. ಅಥವಾ ನರಿನಾಯಿಗಳಿಗೆ ತಿನ್ನಲು ಕೊಟ್ಟಿದ್ದರೆ ಅದು ಹೆಚ್ಚು ಬುದ್ಧಿವಂತಿಕೆಯಾಗುತಿತ್ತು. ಮನುಷ್ಯತ್ವದ ದೃಷ್ಟಿಯಿಂದ ಅದೇ ಮೇಲಾಗುತಿತ್ತು" ಥೋರರ ಈ ಉದ್ಗಾರಕ್ಕೂ ಜಗತ್ತಿನ ಏಳು ಆಶ್ಚರ್ಯಗಳಲ್ಲಿ ಒಂದೆಂ [illegible] ಪ್ರಿಯತೆಗೂ ಎಷ್ಟು ವ್ಯತ್ಯಾಸವನ್ನು ಕಾಣುತ್ತೇವೆ! ಥೋರರು ರಾಷ್ಟ್ರದ ಅವನತಿಯ ದ್ಯೋತಕವೆಂದು ಹೀನೈಸಿ ಮಾತನಾಡುವಾಗ. ಸಾಮಾನ್ಯ ಜನರು ಪಿರಾಮಿಡುಗಳು ಈಜಿಪ್ತಿಯನರ [illegible] ಸಂಸ್ಕೃತಿಯ ಪ್ರತೀಕವೆಂದು ಕೊಂಡಾಡು ತ್ತಾರೆ ಯಾರದು ಸರಿ? ಮತ್ತು ಯಾರದು ತಪ್ಪು?

ಇಂಗ್ಲೆಂಡಿನ ಪ್ರಸಿದ್ಧ ಬರೆಹಗಾರ ಮಾರ್ಕ್ ಟ್ವೇನರು ಸೈತಾನನ ಸಂಗತಿಯಲ್ಲಿ ಏನು ಹೇಳುತ್ತಾರೆಂದು ನೋಡಿರಿ- "ಸೈತಾನನನ್ನು ನಾನು ಯಾವುದೇ ವಿಶೇಷ ದೃಷ್ಟಿಯಿಂದ ನೋಡುವುದಿಲ್ಲ. ನನಗೆ ಅವನನ್ನು ಕಂಡು ಈರ್ಷ್ಯೆಯೂ ಉತ್ಪನ್ನವಾಗುವುದಿಲ್ಲ" ಎಲ್ಲ ಧರ್ಮಗ್ರಂಥಗಳಲ್ಲಿಯೂ ಈ ಸೈತಾನನ ಕುರೂಪದ ವರ್ಣನೆ ಇರುವುದನ್ನು ಅಶುಭ ಉಲ್ಲೇಖವಿರುವುದನ್ನು ಕಂಡು ನನಗೆ ತುಂಬ ಖೇದವಾಗುತ್ತದೆ. ಸೈತಾನನ ಕುರಿತು ನನ್ನಲ್ಲಿ ದಯೆಯುಂಟಾಗುತ್ತದೆ ವಾಸ್ತವವಾಗಿ, ನಾವು ಸೈತಾನನೊಡನೆ ಅನ್ಯಾಯವನ್ನೇ ಮಾಡಿಕೊಂಡು ಬಂದಿದ್ದೇವೆ ಅನೇಕ ಶತಮಾನಗಳಿಂದ ಈ ಸೈತಾನನು ಮಾನವ ಜಾತಿಯಲ್ಲಿ ಮುಖ್ಯವಾಗಿ [illegible] ಜನರನ್ನು ತನ್ನ ಕೆಲಸ ಕಾರ್ಯಗಳ ಪರಿಣಾಮವಾಗಿ ವಿಚಾರಮಾಡಲು ಹಚ್ಚಿರುವನು. ಲೋಕದ ಜನರಲ್ಲಿ ಕೆಟ್ಟದರ ವಿರುದ್ಧ ಜುಗುಪ್ಸೆಯನ್ನೂ ಒಳ್ಳೆಯದರ ಕುರಿತು ವಾತ್ಸಲ್ಯವನ್ನೂ ಹಬ್ಬಿಸಿರುವನು ಹೀಗೆ ಸಮಾಜದ ಒಳಿತಿಗೋಸ್ಕರ ಸೈತಾನನು ನೀಡಿದ ಸೇವೆಯ ಮಹತ್ವವನ್ನೆ ಜನರು ತಿಳಿದುಕೊಳ್ಳವೆ, ಅವನನ್ನು ದೂರುತ್ತಿರುವರಲ್ಲಾ! ಅವನ ಕಾರ್ಯಕ್ಷಮತೆಯ ಲೇಶ ಮಾತ್ರ ಪ್ರಶಂಸೆಯನ್ನೂ ಮಾಡದೆ ಹೀನೈಸುವರಲ್ಲಾ! ನನಗೆಲ್ಲಿಯಾದರೂ ಸೈತಾನನು ನೋಡಲು ದೊರಕಿದರೆ. ನನ್ನ ಜೀವನದಲ್ಲಿಯೇ ಅತ್ಯಂತ ಮಹತ್ವದ ಸನ್ನಿವೇಶ ಆದಾಗುವುದು'

"ಊರಿಗೊಂದು [illegible] ಪೋರನಿಗೊಂದು ದಾರಿ" ಎಂಬಂತೆ ಪ್ರಸಿದ್ಧ ವಿಚಾರಕರು ಎಲ್ಲರೂ ತುಳಿಯುತ್ತಿರುವ ಮಾರ್ಗವನ್ನು ಬಿಟ್ಟು ತಮ್ಮದೇ ಒಂದೊಂದು ಹೊಸ ದಾರಿಯಲ್ಲಿ ನಡೆಯುತ್ತಿರುವುದನ್ನು ಕಾಣುತ್ತೇವೆ. ಮೇಲೆ ಉದ್ಧೃತವಾದ ವಾಕ್ಯಾಂಶಗಳು ಈ ಮಾತನ್ನು ಸ್ಪಷ್ಟೀಕರಿಸುತ್ತವೆ. ಪ್ರತಿಯೊಬ್ಬನಿಗೂ [illegible] ಬಿಟ್ಟು, ಸ್ವಂತ ವೈಶಿಷ್ಟ್ಯವಿರುವ ಭಿನ್ನ ಪ್ರಕೃತಿ ಇದ ಎಂಬುದನ್ನು ವಿಜ್ಞಾನ ಹೇಳುತ್ತಾ ಬಂದಿದ್ದರೂ— ಪರಂಪರಾಗತವಾದ ಬಂಧನವನ್ನು ಹರಿದೊಗೆಯುವಷ್ಟು ಸಾಮರ್ಥ್ಯ ಎಲ್ಲಿಯೂ ಪಡೆದಿಲ್ಲವೆಂದೂ ಅದು ಹೇಳುತ್ತದೆ. ಆದರೆ ನಮ್ಮ ಭಿನ್ನ ಪ್ರಕೃತಿಯನ್ನು ವ್ಯಕ್ತೀಕರಿಸುವುದಕ್ಕೆ ನಾವು ಪ್ರಯತ್ನಿಸುವುದನ್ನಿಯೇ [illegible] ಎಂದು ಎಲ್ಲ [illegible] ಅಭಿಪ್ರಾಯ ಇನ್ನೊಬ್ಬರೊಂದಿಗೆ ಹೊಂದಿಕೊಳ್ಳಲು, ಲೋಕದ ರೀತಿನೀತಿಯೊಂದಿಗೆ ಸಮಾಪಿಸ್ಥರಾಗಲು ನಾವು ಪ್ರಯತ್ನಿಸಿದಷ್ಟು, ತನ್ನ ತನವನ್ನು ನಾವು ಕಳೆದುಕೊಳ್ಳುತ್ತೇವೆ. ಅಪರಾಜಿತರೆಂಬ ಗೌರವ

(೧೦ನೇ ಪುಟ ನೋಡಿರಿ)

ಇತ್ತೀಚೆಗೆ ಕೇಂಬ್ರಿಜ ಯುನಿವರ್ಸಿಟಿಯು Doctor of Laws ಪದವಿ [illegible]

ಮೊನ್ನೆ ಆಗೋಸ್ಟು ೧೫ನೇ ದಿನಾಂಕ ಭಾರತದಾದ್ಯಂತ ಸ್ವಾತಂತ್ರ್ಯೋತ್ಸವದ ಆರನೇ ವರ್ಷಂತಿಯು ಅತ್ಯಂತ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಈ ಆರು ವರ್ಷಗಳು ನಮಗೆ ಕಷ್ಟ ಪರಂಪರೆಗಳನ್ನು ತಂದೊಡ್ಡಿದುವು; ನಮಗೆ ರಣಾಹ್ವಾನವನ್ನು ಕೊಟ್ಟವು. ಪ್ರಾಕೃತಿಕ ಸ್ವರೂಪದ ಸಮಸ್ಯೆಗಳೂ ಮನುಷ್ಯ ನಿರ್ಮಿತವಾದ ಪ್ರಶ್ನೆಗಳೂ ಭಾರತದ ಪ್ರಗತಿಯನ್ನು ಸಾಕಷ್ಟು ತಡೆದು ಹಿಡಿದುವು. ಈ ಕಷ್ಟ ಹಾಗೂ ಕಠಿಣ ಪ್ರಸಂಗಗಳಲ್ಲಿಯೇ ಒಂದು ರಾಷ್ಟ್ರದ ಶಕ್ತಿಸಾಮರ್ಥ್ಯ ಮತ್ತು ಸಾಹಸ ಶೀಲತೆಯು ವ್ಯಕ್ತಗೊಳ್ಳುತ್ತದೆ-ಮತ್ತು ಭಾರತೀಯರಾದ ನಾವೆಲ್ಲರೂ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದೇವೆ. ಆರು ವರ್ಷಗಳ ಸಾಧನೆಯ ವಿವರವನ್ನು ನಮ್ಮ ಸ್ವಾತಂತ್ರ್ಯೋತ್ಸವ ಸಂಚಿಕೆಯಲ್ಲಿ ಓದಿದವರು, ಎಲ್ಲ ರೀತಿಯಿಂದಲೂ ಸ್ವತಂತ್ರವಾದ ರಾಷ್ಟ್ರವನ್ನು ಕಟ್ಟುವುದರಲ್ಲಿ ನಾವು ತೃಪ್ತಿಕರವಾದ ಮುನ್ನಡೆ ತೋರಿಸಿದ್ದೇವೆಂದು ಕಾಣಬಲ್ಲರು; ಈ ಬಗ್ಗೆ ಭಾರತೀಯರೆಲ್ಲರೂ ಅಭಿಮಾನ ಹೊಂದಬೇಕು.

❖

ಮದ್ರಾಸು ರಾಜ್ಯದ ಮಟ್ಟಿಗೆ ಹೇಳುವುದಾದರೆ, ಸ್ವಾತಂತ್ರ್ಯದ ಆರನೇ ವರ್ಷ (೧೯೫೨-೫೩) ತುಂಬ ಮಹತ್ವದಿಂದ ಕೂಡಿದೆ. ಕೆಲವು ಮೂಲಭೂತ ಸ್ವರೂಪದ ಧೋರಣೆಗಳನ್ನು ಸರಕಾರವು ಈ ಅವಧಿಯಲ್ಲಿ ಅಂಗೀಕರಿಸಿರುತ್ತದೆ; ಮತ್ತು ಕಾಲಾನುಕಾಲದಲ್ಲಿ ಈ ಧೋರಣೆಯಲ್ಲಿ ಕ್ರಾಂತಿಯುಂಟಾಗುವ ಭರ ಪರಿಣಾಮದಿಂದ ರಾಷ್ಟ್ರ ಜೀವನವನ್ನೆ ಇದೆ ಒಂದು ಸಾಮಾನ್ಯ ಉದಾಹರಣೆಯಾಗಿ ಸರಕಾರ ಎತ್ತುವ ಸಾಲವನ್ನೆ ತೋರಿಸಬಹುದು. ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಗಳಾಗಿ ಮದ್ರಾಸು ರಾಜ್ಯದ ಅಧಿಕಾರ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡ ಬಳಿಕ ಎರಡುಸಲ ಸಾಲವನ್ನು ಎತ್ತಿದರು ಎರಡು ಬಾರಿಯೂ ಸ್ವಂತ ಹಿತದೃಷ್ಟಿಯುಳ್ಳ ಸಂಘಸಂಸ್ಥೆಗಳನ್ನು ಬಿಟ್ಟುಳಿದ ವಿಸ್ತಾರವಾದ ಕ್ಷೇತ್ರದಿಂದ ಸಾಲ ತುಂಬಬಲ್ಲುದೆಂದು ಅವರು ಹೇಳುತಿದ್ದರು. ಹಳ್ಳಿಯ ಪ್ರಜೆಗಳೇ ಸಾಲದ ಎಲ್ಲ ಹಣವನ್ನೂ ತುಂಬುವುದು ಸಾಧ್ಯವೆಂದೂ ತನ್ಮೂಲಕ ಸರಕಾರವು ಪ್ರಜೆಗಳ ನಿಕಟವರ್ತಿಯಾಗಿ ಕೆಲಸ ಮಾಡಲು ಅನುಕೂಲವಾಗುವುದೆಂದೂ ರಾಜಾಜಿ ಹೇಳಿದ ಮಾತು ಅಕ್ಷರಶಃ ಸತ್ಯವಾಗಿದೆ. ಈ ವರ್ಷದ ಐದುಕೋಟಿಗಳ ರೂಪಾಯಿಗಳ ಸಾಲಕ್ಕೆ ಹತ್ತು ಕೋಟಿ ರೂಪಾಯಿಗಳು ಕೂಡಿಬಂದುದನ್ನು ನೋಡಿದರೆ ಮದ್ರಾಸು ರಾಜ್ಯದ ಸರಕಾರದ ಮೇಲೆ, ಅದಕ್ಕಿಂತಲೂ ಹೆಚ್ಚಾಗಿ ರಾಜಾಜಿಯ ಧುರೀಣತ್ವದ ಮೇಲೆ ಜನತೆಗಿರುವ ವಿಶ್ವಾಸ ಅಚಲವಾದುದೆಂದು ಸ್ಪಷ್ಟಗೊಳ್ಳುತ್ತದೆ. ಸರಕಾರದ ಕಾರ್ಯಕ್ಷಮತೆ ಹಾಗೂ ಸ್ವಾತಂತ್ರ್ಯದ ಸಿದ್ಧಿಯ ಮಾನದಂಡವಾಗಿ ಈ ಉದಾಹರಣೆಯನ್ನು ತೆಗೆದುಕೊಂಡುದಲ್ಲ- ರಾಜಾಜಿಯ ಧುರೀಣತ್ವದ ಮೇಲೆ ಜನತೆಗೆ ಇರುವ ಭಕ್ತಿ ಮತ್ತು ಶ್ರದ್ಧೆ ಎಷ್ಟೆಂಬುದಕ್ಕಾಗಿ ಮೇಲಿನ ಪ್ರಸ್ತಾಪ ಮಾಡಿದೆ.

❖

ಮದ್ರಾಸು ರಾಜ್ಯದ ಮುನ್ನಡೆಯ ಚಿತ್ರ

ಯೋಗ್ಯ ಧುರೀಣತ್ವವೇ ರಾಷ್ಟ್ರ ಪುನಃ ನಿರ್ಮಾಣದ ಅಡಿಗಲ್ಲೆಂಬುದನ್ನು ಒಪ್ಪಿದರೆ, ರಾಜಾಜಿಯ ಜನಪ್ರಿಯತೆ ರಾಜ್ಯದಲ್ಲಿ ಅನೇಕ ಕ್ರಾಂತಿಕಾರ ಪ್ರಯೋಗಗಳಿಗೆ ಎಡೆ ಮಾಡಿಕೊಟ್ಟದೆ ಎನ್ನಲಡ್ಡಿಯಿಲ್ಲ- ಪ್ರಜಾಪ್ರಭುತ್ವ ಜ್ಯಾರಿಗೆ ಬಂದ ಬಳಿಕವೂ ಒಬ್ಬ ಮನುಷ್ಯನ ಮೇಲೆಯೇ ಎಲ್ಲ ಹೊಣೆಗಾರಿಕೆ ಮತ್ತು ವಿಶ್ವಾಸವನ್ನು ಇಡುವ ಪದ್ಧತಿ ಅವಸಾನವನ್ನು ಹೊಂದಿಲ್ಲ- ಸರಕಾರೀ ಪಕ್ಷದ ನಾಯಕನ ಮೇಲೆಯೇ ಇಡೀ ರಾಷ್ಟ್ರದ ಪ್ರಜೆಗಳ ಶ್ರೇಯೋಕಾಂಕ್ಷಿಯಾಗಿ ದುಡಿಯುವ ಭಾರ ಬೀಳುತ್ತದೆ. ಅರ್ಥಾತ್ ಒಬ್ಬ ನೆಹರೂ ಅಥವಾ ಒಬ್ಬ ರಾಜಾಜಿ ಅಭಿಷಿಕ್ತ ರಾಜನಂತೆ ಕೆಲಸ ಮಾಡಬೇಕಾಗುತ್ತದೆ. ಪ್ರಜಾಪ್ರಭುತ್ವದ ಆಧುನಿಕ ವಾತಾವರಣದಲ್ಲೂ ಪ್ರಾಚೀನವಾದ ಈ ನೀತಿ ಮಾಯವಾಗಿರುವುದಿಲ್ಲ. ರಾಮನ ಮುಂದಾಳುತನ ಒಳ್ಳೆಯದನ್ನು ತಂದಂತೆ, ಹಾಗೂ ರಾವಣನ ಧುರೀಣತ್ವ ಸರ್ವ ನಾಶಕ್ಕೆ ಕಾರಣವಾದಂತೆ, ರಾಷ್ಟ್ರದ ಅಭ್ಯುತ್ಥಾನ ಪತನಗಳ ಜವಾಬ್ದಾರಿಯನ್ನು ನಾವು ಒಬ್ಬನ ಮೇಲೆ ಈಗಲೂ ಹೊರಿಸಿದ್ದೇವೆ. ರಾಜಗೋಪಾಲಾಚಾರಿ ಈ ಹೊಣೆಗೆ ಹೆಗಲು ಕೊಟ್ಟಂದಿನಿಂದ, ಮದ್ರಾಸು ರಾಜ್ಯ ತೃಪ್ತಿಕರವಾದ ಪ್ರಗತಿಯನ್ನು ತೋರಿಸಿತು. ಅವರು ಅಧಿಕಾರವನ್ನು ಸ್ವೀಕರಿಸಿದಾಗ ರಾಯಲ ಸೀಮೆಯಲ್ಲಿ ಬರಗಾಲ ತಾಂಡವವಾಡುತಿತ್ತು. ಮಳೆಯು ಬಂದು ಅಲ್ಲಿಯ ಸ್ಥಿತಿ ಸ್ವಲ್ಪ ಸುಧಾರಿಸಿತೆನ್ನುವಾಗ, ದಕ್ಷಿಣದಲ್ಲಿ ತಂಜಾವೂರು ಮತ್ತು ತಿರುಚಿರಪಳ್ಳಿ ಜಿಲ್ಲೆಗಳು ಬಿರುಗಾಳಿಯ ಅನಾಹುತಕ್ಕೆ ಗುರಿಯಾದವು ಭತ್ತ, ಕಬ್ಬು, ತೆಂಗಿನ ತೋಟಗಳು ಇತ್ಯಾದಿ ಹಾನಿಯನ್ನು ಅನುಭವಿಸಿದುವು. ಮೊದಲೇ ಭೀಕರವಾಗಿದ್ದ ಆಹಾರದ ಪ್ರಶ್ನೆಯನ್ನು ಇದು ಹದಗೆಡಿಸಿತು. ಸರಕಾರವು ಈ ಗಂಭೀರ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಮಾಡಿತು ಯಜಮಾನರನ್ನು ಕಳೆದುಕೊಂಡ ಕುಟುಂಬಗಳಿಗೆ ಪರಿಹಾರವನ್ನು ಸರಕಾರ ನೀಡಿತು. ಎಂಟು ಲಕ್ಷ ರೂಪಾಯಿಗಳಷ್ಟು ಭೂಕಂದಾಯದಲ್ಲಿ ರಿಯಾಯತಿ ಮಾಡಿತು. ಈ ಜಿಲ್ಲೆಗಳಲ್ಲಿ ನೆರವಿನ ಕಾರ್ಯಕ್ಕೋಸ್ಕರ ಸುಮಾರು ೧೮ ಲಕ್ಷ ರೂಪಾಯಿಗಳು ಈ ವರೆಗೆ ವೆಚ್ಚವಾಗಿವೆ, ಬಿರುಗಾಳಿ ಪೀಡಿತರಿಗೆ ಸಹಾಯ ನೀಡಲು ಸಾರ್ವಜನಿಕರಿಂದ ವಂತಿಗೆಯು ಕೂಡಿಸಲ್ಪಟ್ಟು, ಆರು ಲಕ್ಷ ಹಣ ಸೇರಿತು.

❖

ರಾಯಲ ಸೀಮೆಯಲ್ಲಿ ಮಳೆ ಬಂದುದರಿಂದ ಪರಿಸ್ಥಿತಿ ಸುಧಾರಿಸಿದರೂ ಕೊಯಂಬುತ್ತೂರು, ಸೇಲಂ, ಉತ್ತರ ಮತ್ತು ದಕ್ಷಿಣ ಅರ್ಕಾಟು, ಚಂಗಲ್ಪೇಟೆ ಇತ್ಯಾದಿ ಜಿಲ್ಲೆಗಳಲ್ಲಿ ಬರಗಾಲ ಕಾಣಿಸಿಕೊಂಡಿತು. ಇದು ವರೆಗೆ ಕೃಷಿಯನ್ನು ಅವಲಂಬಿಸಿಕೊಂಡಿದ್ದ ರೈತರು ಈಗ ಕೆಲಸ ಕಳಕೊಂಡರು. ಸರಕಾರವು ಇಂಥವರನ್ನು ಯೋಗ್ಯ ಕೆಲಸಗಳಿಗೆ ಹಚ್ಚಲು ತುಂಬ ಪ್ರಯತ್ನ ಮಾಡಿತು. ನೀರಾವರಿಗೆ ಉಪಯೋಗಿಸಲ್ಪಡುವ ಕೆರೆಕುಂಟೆಗಳ ದುರಸ್ತಿಕೆಲಸದಲ್ಲಿ ಇವರನ್ನು ನೇಮಿಸಿದರು ನಾಲ್ಕೂವರೆ ಲಕ್ಷ ಜನರಿಗೆ ಈ ಮಾದರಿಯ ಕೆಲಸಗಳನ್ನು ಸರಕಾರ ಕೂಡಿಸಿತಲ್ಲದೆ, ಪ್ರತಿ ದಿನಕ್ಕೆ ೬೬ ಸಾವಿರ ರೂಪಾಯಿಗಳನ್ನು ಕೂಲಿ ಕೊಡಲು ಖರ್ಚು ಮಾಡಿತು. ನಾಲ್ಕು ಲಕ್ಷ ಮುದುಕರು, ಗರ್ಭಿಣಿ ಹೆಂಗಸರು, ಚಿಕ್ಕ ಮಕ್ಕಳು ಹಾಗೂ ಅಂಗ ವಿಹೀನರಿಗೆ ಸರಕಾರವು ೭೫೬ ಗಂಜಿ ಕೇಂದ್ರಗಳಲ್ಲಿ ಧರ್ಮಾರ್ಥ ಊಟದ ಏರ್ಪಾಡು ಮಾಡಿತು. ಬರಗಾಲ ಪರಿಹಾರ ಕಾರ್ಯಗಳಿಗೋಸ್ಕರ ಸಾರ್ವಜನಿಕರಿಂದ ವಂತಿಗೆಯನ್ನು ಕೇಳಿದಲ್ಲಿ, ಸುಮಾರು ಹತ್ತುಲಕ್ಷ ರೂಪಾಯಿಗಳು ದೊರೆತವು. ಹಾಗೆಂದು ಸರಕಾರ ಮಾಡಿದ ವೆಚ್ಚವು ಒಟ್ಟಾರೆ ಹತ್ತು ಕೋಟಿ ರೂಪಾಯಿಗಳು! ಹೀಗೆ ಪ್ರಕೃತಿಯು ಮುನಿದು, ಆಹಾರದ ಪರಿಸ್ಥಿತಿಯು ಉಗ್ರವಾಗುತಿದ್ದುದನ್ನು ಕಂಡು ರಾಜಾಜಿಯವರು ಉತ್ಪಾದನೆಯನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುವ ಅತ್ಯಂತ ಧೈರ್ಯದ ನೈತಿಕ ಹೆಜ್ಜೆಯನ್ನು ಮುಂದಿಟ್ಟರು. ಅದುವರೆಗೆ ಜ್ಯಾರಿಯಲ್ಲಿದ್ದ ಆಹಾರ ನಿಯಂತ್ರಣ ಹಾಗೂ ಹಸುಗೆ ಪದ್ಧತಿಯು ಜನರ ಮನಸ್ಸಿನಲ್ಲಿ ಅನಪೇಕ್ಷಿತವಾದ ಕೀಳು ಭಾವನೆಗಳನ್ನು ಪ್ರಚೋದಿಸಿರುವುದೆಂದು ರಾಜಾಜಿಯ ಸೂಕ್ಷ್ಮ ಮತಿಗೆ ಹೊಳೆಯಿತು. ಆಹಾರ ನಿಯಂತ್ರಣವು ರೈತರನ್ನು ಉದಾಸೀನರಾಗಿ ಮಾಡಿದೆಯೆಂದೂ ಅಧಿಕ ಉತ್ಪಾದನೆಯನ್ನು ಕೈಗೊಳ್ಳುವುದಕ್ಕೆ ಉತ್ತೇಜನ ನೀಡುತ್ತಿಲ್ಲವೆಂದೂ ರಾಜಾಜಿ ಸ್ಪಷ್ಟವಾಗಿ ಮನಗಂಡರು. ತತ್ಪರಿಣಾಮವಾಗಿ ಜೂನು ತಿಂಗಳಲ್ಲಿ ಎಲ್ಲ ಆಹಾರ ಧಾನ್ಯಗಳ ವಿನಿಯಂತ್ರಣವನ್ನು ರಾಜಾಜಿ ಸಾರಿದರು; ಮತ್ತು ಕ್ರಮಬದ್ಧ ಹಸುಗೆ ಪದ್ಧತಿಯನ್ನು ರದ್ದುಗೊಳಿಸಿದರು. ನೀಲಗಿರಿ, ಮಲಬಾರು ಮತ್ತು ದಕ್ಷಿಣ ಕನ್ನಡದ ಹೊಸದುರ್ಗದ ಉಪತಾಲೂಕುಗಳು ಮಾತ್ರ ಕೊರತೆಯ ಪ್ರದೇಶಗಳೆಂದು ನಿರ್ಣಯಿಸಿ, ಅಲ್ಲಿಯಷ್ಟೆ ನಿಯಂತ್ರಣ ಪದ್ಧತಿಯನ್ನು ಇಟ್ಟರು.

❖

ಹೀಗೆ ಸಾಮಾನ್ಯ ಜನರಿಗೆ ಅಕ್ಕಿ ಮುಂತಾದ ಆಹಾರಧ್ಯಾನ್ಯಗಳಿಗೋಸ್ಕರ ಕಳ್ಳ ಪೇಟೆಯನ್ನು ಆಶ್ರಯಿಸುವ ಕಟ್ಟಿಹವ್ಯಾಸ ಉಳಿಯದಂತಾಯಿತು. ಬಹಿರಂಗ ಪೇಟೆಯಲ್ಲಿ ದರಗಳು ಒಡನೆಯೇ ಇಳಿಮುಖವಾದವು. ಈಗ ಬೆಲೆಗಳು ಹೆಚ್ಚಿಂದು ಕಂಡು ಬಂದರೂ ಕಳ್ಳ ಪೇಟೆಯ ಕಾಲಕ್ಕಿಂತ ಪರಿಸ್ಥಿತಿಯು ಈಗ ತುಂಬ ಊರ್ಜಿತಗೊಂಡಿದೆ; ಮತ್ತು ಅನೈತಿಕ ವ್ಯವಹಾರಗಳ ಪ್ರಾಬಲ್ಯ ಸ್ವಲ್ಪವೂ ಉಳಿದಿಲ್ಲ. ರೈತರಿಗೆ ನಿಯಂತ್ರಣಗಳ ಉಪದ್ರವಿಲ್ಲವಾದುದರಿಂದ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ನಾಲ್ಕು ಕಾಸು

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ-೧೪

ಸ್ವಾತಂತ್ರ್ಯದ ಆರನೇ ವರ್ಷದಲ್ಲಿ ಕೈಗೂಡಿಸಿದ ಪ್ರಗತಿ

ಸಂಪಾದಿಸಲು ಈಗಿನ ಕಾಲವು ಪ್ರಶಸ್ತ. ಹೀಗೆ ಅಪ್ರತ್ಯಕ್ಷ ಪ್ರೋತ್ಸಾಹ ದೊರೆತುದಲ್ಲದೆ, ಅಧಿಕ ಆಹಾರದ ಬೆಳುವಳಿಯ ಮೇಲೆ ಪ್ರತ್ಯಕ್ಷ ಪರಿಣಾಮವನ್ನುಂಟು ಮಾಡುವ ಕೆಲಸಗಳೂ ಕಳೆದ ವರ್ಷ ಸಾಧಾರಣ ಯಶಸ್ಸು ತಂದಿವೆ. ತುಂಗಭದ್ರಾ ಅಣೆಕಟ್ಟಿನ ಪ್ರಾರಂಭಿಕ ಘಟ್ಟವು ಈಗ ಮುಗಿದಿರುತ್ತದೆ. ಸುಮಾರು ೫ ಲಕ್ಷ ಎಕ್ರೆ ಪ್ರದೇಶಕ್ಕೆ ಈ ಯೋಜನೆ ನೀರುಣಿಸುತ್ತದೆ. ಕೆಳಭವಾನಿ ಸಾಗರ ಯೋಜನೆಯೂ ನೀರಾವರಿ ಅನುಕೂಲತೆಯನ್ನು ಒದಗಿಸಿರುವುದು. ಟ್ರಾಕ್ಟರು ಮುಂತಾದವುಗಳಿಂದ ೫೮ ಸಾವಿರ ಎಕ್ರೆ ಪಡ ಭೂಮಿಯನ್ನು ಮದ್ರಾಸು ರಾಜ್ಯದಲ್ಲಿ ಸಾಗುವಳಿಗೆ ಯೋಗ್ಯವಾಗಿ ಮಾಡಿರುವರು. ನೆಲ್ಲೂರು, ಸೇಲಂ, ರಾಮನಾಥಪುರಂ ಜಿಲ್ಲೆಗಳಲ್ಲಿ ಈ ಕೆಲಸ ತುಂಬ ಪ್ರಗತಿಯನ್ನು ಹೊಂದಿರುತ್ತದೆ. ಅಧಿಕ ಆಹಾರ ಬೆಳೆಯಲು ನಿಯಂತ್ರಣಗಳೊಂದೇ ಆತಂಕವಾಗಿರಲಿಲ್ಲ— ಮೂಲಭೂತವಾದ ಧನಿ-ಒಕ್ಕಲುಗಳ ಸಂಬಂಧ ವ್ಯವಸ್ಥೆಯು ಚೆನ್ನಾಗಿ ಆಗಬೇಕಾದುದು ಪ್ರಥಮಾವಶ್ಯಕತೆ. ಕಳೆದ ಆಗೋಸ್ತು ತಿಂಗಳಲ್ಲಿ ಸರಕಾರವು ಗವರ್ನರರ ಸುಗ್ರೀವಾಜ್ಞೆಯ ಮೂಲಕ ತಂಜಾವೂರಿನ ಧನಿ-ಒಕ್ಕಲುಗಳ ಮನಸ್ತಾಪವನ್ನು ಪರಿಹರಿಸಿ, ಉತ್ತಮ ಸಂಬಂಧವನ್ನು ಏರ್ಪಡಿಸುವ ಪ್ರಯತ್ನ ಕೈಗೊಂಡಿತು. ಹಿಂದಿನಿಂದ ಶಾಸನ ಸಭೆಯ ಒಪ್ಪಿಗೆಯೂ ಅದಕ್ಕೆ ದೊರೆಯಿತು. ರೈತರ ಪರಿಸ್ಥಿತಿಯು ಈ ಮಸೂದೆಯಿಂದ ಉತ್ತಮಗೊಂಡುದನ್ನು ಕಂಡ ಎಲ್ಲರೂ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಇದನ್ನು ವಿಸ್ತರಿಸಬೇಕೆಂದು ಕೇಳುತ್ತಿದ್ದಾರೆ. ಸದ್ಯ ತಂಜಾವೂರು ಜಿಲ್ಲೆಗೆ ಒತ್ತಿನ ಚಿದಂಬರ ತಾಲೂಕಿಗೂ ಈ ಮಸೂದೆಯನ್ನು ಜಾರಿ ಮಾಡಿದ್ದಾರೆ.

❖

ಕೃಷಿಗೆ ನೇತ್ರನಂತೆ ಇರುವುದು ನೀರು. ಕೆರೆ ಕಾಲುವೆಗಳು, ಬಾವಿಗಳು ಮುಂತಾದುವುಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಕ್ಕೆ ತರುವ ಪ್ರಯತ್ನಗಳು ಕಳೆದ ಆರು ವರ್ಷಗಳಲ್ಲಿ ಎಡೆಬಿಡದೆ ನಡೆದಿವೆ. ಆರ್ಥಿಕ ಪರಿಸ್ಥಿತಿಯು ಚಿಂತಾಜನಕವಿದ್ದುದರಿಂದ ಸರಕಾರವು ಹೊಸ ನೀರಾವರಿ ಯೋಜನೆಗಳನ್ನು ಪ್ರಾರಂಭಿಸುವುದಕ್ಕಿಂತ, ಈ ಮೊದಲೇ ತೊಡಗಿದ ಕೆಲಸಗಳನ್ನು ಮುಗಿಸುವುದರಲ್ಲಿ ಮಗ್ನವಾಯಿತು. ಕೇಂದ್ರ ಸರಕಾರವು ಅತಿರಿಕ್ತ ಸಾಲವನ್ನು ಮಂಜೂರು ಮಾಡಿದುದರಿಂದ ತುಂಗಭದ್ರಾ, ಹಾಗೂ ಭವಾನಿ ಸಾಗರದ ಯೋಜನೆಗಳು ಪೂರ್ವನಿಶ್ಚಿತ ವಿಧಾನದಂತೆ ಕೆಲಸಮಾಡಿದುವು. ಮಲಂಪುಝ ಯೋಜನೆಯನ್ನೂ ಯೋಗ್ಯ ರೀತಿಯಲ್ಲಿ ಸರಕಾರವು ನಿರ್ವಹಿಸಿತು. ಆರ್ಥಿಕ ದುರವಸ್ಥೆಯು ನೀರಾವರಿಯಂತೆ ವಿದ್ಯುಚ್ಛಕ್ತಿ ಯೋಜನೆಗಳ ಮೇಲೂ ಪ್ರಭಾವ ಬೀರಿತು. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ವಿಸ್ತರಿಸುವ ಕೆಲಸವನ್ನು ಸ್ಥಗಿತಗೊಳಿಸುವುದು ಅನಿವಾರ್ಯವಾಯಿತು ಆದರೂ ವಿದ್ಯುದುತ್ಪಾದನಾ ಕೇಂದ್ರಗಳನ್ನು ಹೊಸತಾಗಿ ಸ್ಥಾಪಿಸುವ ಪ್ರಯತ್ನಗಳಿಗೆ ಆತಂಕವಾಗಲಿಲ್ಲ — ಪೈಕಾರಾ ಯೋಜನೆಯಂತೆ ೨೭ ಸಾವಿರ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸುವ ಮೊಯಾರ ಕೇಂದ್ರವು ತಲೆ ಎತ್ತಿದೆ. ಮಚಕುಂದ ಜಲ ವಿದ್ಯುಚ್ಛಕ್ತಿ ಕೇಂದ್ರ ನಿರ್ಮಾಣದ ಕೆಲಸವು ತೃಪ್ತಿಕರವಾಗಿ ಮುನ್ನಡೆದಿದೆ. ಇದುವರೆಗೆ ೨೧೭ ಲಕ್ಷ ರೂಪಾಯಿಗಳು ಇಲ್ಲಿ ವ್ಯಯವಾಗಿವೆ. ಮುಂದಿನ ವರ್ಷ ಈ ಕೇಂದ್ರ ವಿದ್ಯುತ್ತನ್ನು ಉತ್ಪಾದಿಸುವ ನಿರೀಕ್ಷೆ ಇದೆ. ಕೃಷಿ ಮತ್ತು ಕೈಗಾರಿಕೆಗಳೆರಡಕ್ಕೂ ವಿದ್ಯುಚ್ಛಕ್ತಿಯು ಅತ್ಯಾವಶ್ಯಕವೆನಿಸಿದೆ. ಇದರ ಅಭಾವವನ್ನು ರಾಜ್ಯವು ಪದೇಪದೇ ಅನುಭವಿಸುತ್ತಿರುವುದರಿಂದ ಪ್ರಗತಿ ಕುಂಠಿತವಾಗಿದೆಯೋ ಎಂಬ ಆಭಾಸವಾಗುತ್ತದೆ. ಆದರೆ ವಿದ್ಯುಚ್ಛಕ್ತಿಯಷ್ಟೇ ಉಪಯುಕ್ತವಾದ ಇನ್ನೊಂದು ಅಮೂಲ್ಯ ವಸ್ತುವನ್ನು ಈಗ ತಾನೇ ಕಂಡು ಹಿಡಿದಿರುವರು. ಅದೇ ಕಂದು ಕಲ್ಲಿದ್ದಲು. ದಕ್ಷಿಣ ಆರ್ಕಾಟು ಜಿಲ್ಲೆಯಲ್ಲಿ ಈ ಮಾರ್ಚಿ ತಿಂಗಳಿಂದ ಕಂದು ಕಲ್ಲಿದ್ದಲನ್ನು ಅಗೆಯುವ ಕೆಲಸ ಪ್ರಾರಂಭವಾಗಿರುತ್ತದೆ. ಸುಮಾರು ೧೦೦ ಚದರ ಮೈಲು ವಿಸ್ತಾರ ಪ್ರದೇಶದಲ್ಲಿ ೨೦೦ ಕೋಟಿ ಟನ್ನುಗಳಷ್ಟು ಕಂದು ಕಲ್ಲಿದ್ದಲಿನ ನಿಕ್ಷೇಪವಿದೆ. ಈ ಯೋಜನೆಗೆ ೭೦ ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ. ಕೇಂದ್ರ ಸರಕಾರವು ೧೫ ಲಕ್ಷ ರೂಪಾಯಿ ಬೆಲೆಯ ಯಂತ್ರೋಪಕರಣಗಳನ್ನು ಒದಗಿಸಿದೆ. ಹೀಗೆ ಅಗೆದ ಕಂದು ಕಲ್ಲಿದ್ದಲಿನ ಬೆಲೆಯು ಒಂದು ಟನ್ನಿಗೆ ೩೦ ರೂಪಾಯಿಗಳಿಗಿಂತ ಕಡಿಮೆಯಾದರೆ (ಬಂಗಾಳದಿಂದ ಬರುವ ಕಲ್ಲಿದ್ದಲಿನ ಬೆಲೆ ಅಷ್ಟಾಗುತ್ತದೆ) ದಕ್ಷಿಣದಲ್ಲಿ ಕೈಗಾರಿಕೆಗಳು ಭರದಿಂದ ವೃದ್ಧಿ ಹೊಂದಲು ಉತ್ತೇಜನ ದೊರೆಯುವ ಭರವಸೆ ಇದೆ. ಗಾಜು, ಸಿಮೆಂಟು, ಇಟ್ಟಿಗೆ ಮತ್ತು ಹಂಚು, ನೈಟ್ರೇಟು, ಡ್ರ್ಯಾಲರುಗಳು ಇತ್ಯಾದಿ ಉದ್ಯಮಗಳಲ್ಲಿ ಕಂದು ಕಲ್ಲಿದ್ದಲು ಯಥೇಷ್ಟ ಬಳಸಲ್ಪಡುತ್ತದೆ. ವಿದ್ಯುಚ್ಛಕ್ತಿಯ ಅಭಾವದಿಂದ ಉಂಟಾದ ಸಂಕಟವು ಕಂದು ಕಲ್ಲಿದ್ದಲಿನ ಸಮುಚಿತ ಉಪಯೋಗದಿಂದ ದೂರಗೊಳ್ಳುವುದು ನಿಶ್ಚಯ.

❖

ಕೈಗಾರಿಕೆಯು ಬೇರೆ ಕ್ಷೇತ್ರಗಳಲ್ಲಿ ಸರಕಾರದ ಸಾಧನೆ ಮಹತ್ವಪೂರ್ಣವಾಗಿರುತ್ತದೆ. ಮಹೋದ್ಯಮಗಳೂ ಗೃಹೋದ್ಯಮಗಳೂ ಚೆನ್ನಾಗಿಯೇ ಪ್ರಾದುರ್ಭಾವಕ್ಕೆ ಬರುತ್ತಿವೆ. ಮೋಟಾರು ಕಾರುಗಳ ಐದು ಕಾರ್ಖಾನೆಗಳಲ್ಲಿ ೩ ಮದ್ರಾಸಿನಲ್ಲಿವೆ. ಭಾರತದಲ್ಲಿ ತಯಾರಾಗುವ ೧೩ ಸಾವಿರ ಸೈಕಲುಗಳಲ್ಲಿ ೩೦೦೦ ಸೈಕಲನ್ನು ತಯಾರಿಸುವ ಒಂದು ಕಾರ್ಖಾನೆಯು ಮದ್ರಾಸಿನಲ್ಲಿರುತ್ತದೆ. ಈ ಹಾಗೂ ಬೇರೆ ಉದ್ಯಮಗಳಲ್ಲಿ ನಿರತರಾದ ಕೂಲಿಕಾರರ ಯೋಗಕ್ಷೇಮವನ್ನು ಸರಕಾರ ಚೆನ್ನಾಗಿ ನೋಡಿಕೊಳ್ಳುತ್ತದೆ. ತಂಟೆ ಮತ್ತು ವಿವಾದಗಳನ್ನು ಕೂಲಿಕಾರರೂ ಒಡೆಯರೂ ಪರಸ್ಪರ ಸಂಧಾನ ಮತ್ತು ಮಧ್ಯಸ್ಥಿಕೆಯಿಂದ ಬಿಡಿಸಬೇಕೆಂಬುದೇ ಸರಕಾರದ ಅಭಿಪ್ರಾಯ. ಇವುಗಳು ವ್ಯರ್ಥವೆಂದು ಸಿದ್ಧಗೊಂಡಾಗಲೆಲ್ಲ ತಂಟೆ ತಕರಾರುಗಳನ್ನು ವಿಚಾರಿಸಿ ತೀರ್ಮಾನಿಸಲು ನಾಲ್ಕು ಔದ್ಯೋಗಿಕ ತಂಟೆಗಳ ನ್ಯಾಯಮಂಡಳಿಗಳು ರಾಜ್ಯದಲ್ಲಿವೆ. ಕಳೆದ ವರ್ಷ ಸರಕಾರದ ಕೂಲಿಕಾರ ಇಲಾಖೆಯು ೭೮೬೮ ತಂಟೆಗಳನ್ನು ವಿಚಾರಿಸಿತು. ಇವುಗಳಲ್ಲಿ ಕೆಲಸದಿಂದ ತೆಗೆದು ಹಾಕಿದವರನ್ನು ಮರಳಿ ಸೇರಿಸಬೇಕೆಂಬ ಐ [illegible] ತಂಟೆಗಳೂ ಕೂಲಿ ಹೆಚ್ಚಿಸಬೇಕೆನ್ನುವ ೧೬೦೩ ತಂಟೆಗಳೂ ಬೋನಸಿಗೆ ಸಂಬಂಧಿಸಿದ ೬೭೨ ತಂಟೆಗಳೂ ಇದ್ದುವು. ಸರಕಾರವು ಮದ್ರಾಸು ಕೋರ್ಪೋರೇಶನು ವಿಭಾಗದಲ್ಲಿ ನಡೆಸುವ ಮೋಟಾರು ಸಾರಿಗೆಯು ಕೆಲಸಗಾರರಿಗೆ ಕೆಲವು ಅನುಕೂಲತೆಗಳನ್ನು ಒದಗಿಸಿರುತ್ತದೆ. ಹಾಗೆಯೇ ನೇಕಾರರ ಕಷ್ಟಗಳನ್ನು ದೂರೀಕರಿಸಲು ಮದ್ರಾಸು ಸರಕಾರವೂ ರಾಜಾಜಿಯವರೂ ತುಂಬ ಪ್ರಯತ್ನಪಟ್ಟಿರುವರು. ರಾಜ್ಯದ ಪ್ರತಿ ೧೩ ಜನರಲ್ಲಿ ಒಬ್ಬನು ನೇಕಾರನಾಗಿರುವನು. ಸುಮಾರು ೩೫ ಲಕ್ಷ ಜನರು ನೇಯ್ಗೆಯ ಉದ್ಯೋಗವನ್ನೇ ಅವಲಂಬಿಸಿರುವರು. ಈಚೆಗೆ ನೂಲಿನ ಪೂರೈಕೆಯಲ್ಲಿ ಕೊರತೆಯುಂಟಾದುದೇ ಇತ್ಯಾದಿ ಕಾರಣಗಳಿಂದ ಕೈಮಗ್ಗಗಳಲ್ಲಿ ಬಟ್ಟೆನೆಯಕ್ಕೆ ಬೇಕಾದಷ್ಟು ಕೆಲಸವಿಲ್ಲವಾಯಿತು. ಸರಕಾರವು ನೇಕಾರರಿಗೆ ನೂಲು ಕೊಂಡುಕೊಳ್ಳಲು ಸಾಲವನ್ನು ನೀಡುವ ಯೋಜನೆ ಮಾಡಿತಲ್ಲದೆ, ನೇಯ್ದ ಕೈಮಗ್ಗಗಳ ಬಟ್ಟೆಯನ್ನು ಪೇಟೆಯಲ್ಲಿ ಮಾರಾಟಮಾಡುವ ಹೊಸ ಪ್ರಯತ್ನಕ್ಕೂ ಕೈಹಾಕಿತು. ಇದಲ್ಲದೆ ಕೇಂದ್ರ ಸರಕಾರವನ್ನು ನೇಕಾರರ ಕಷ್ಟ ಪರಿಹಾರಕ್ಕೋಸ್ಕರ ಕ್ರಮ ಕೈಗೊಳ್ಳಲು ಒತ್ತಾಯಿಸಿತು. ಪರಿಣಾಮವಾಗಿ ಬಣ್ಣದ ಸೀರೆ ಮತ್ತು ಅಂಚಿನ ಧೋತರಗಳ ಗುತ್ತಿಗೆಯು ಕೈಮಗ್ಗಗಳಿಗೆ ದೊರೆಯುವಂತಾಗಿದೆ. ಗಿರಣಿಗಳ ಯಶಸ್ವಿ ಪ್ರತಿಸ್ಪರ್ಧೆಯಿಂದ ಚೇತರಿಸಲಾರದ ಕೈಮಗ್ಗಗಳಿಗೆ, ಮತ್ತು ನೇಕಾರರಿಗೆ ಈ ರೀತಿ ಸಂರಕ್ಷಣೆ ದೊರೆತಿದೆ.

❖

ರಾಜಾಜಿಯವರು ಸ್ವಯಂ ಪ್ರೇರಣೆಯಿಂದ ಮಾಡಿದ ಕ್ರಾಂತಿಕಾರ ಪ್ರಯೋಗ ಶೈಕ್ಷಣಿಕ ಕ್ಷೇತ್ರದಲ್ಲಿ ಜಾರಿಗೆ ಬಂದಿರುತ್ತದೆ. ಈ [illegible] ಲ್ಲಿರುವ ೩೫ ಸಾವಿರ ಪ್ರಾಥಮಿಕ ಶಾಲೆಗಳು ವಿದ್ಯಾರ್ಥಿ ಜೀವನದಲ್ಲಿ ಮಹತ್ವದ ಮಾರ್ಪಾಟುಗಳನ್ನು ಮಾಡುವ ಉದ್ಯಮದಲ್ಲಿ ನಿರತವಾಗಿವೆ. ಈಗಿನ ಶಿಕ್ಷಣ ಪದ್ಧತಿಯ ಪರಿಣಾಮವಾಗಿ, ದೈಹಿಕ ಶ್ರಮದ ಕುರಿತು ಜುಗುಪ್ಸೆಯೂ ಕೃಷಿಕೈಗಾರಿಕೆಗಳಲ್ಲಿ ಅನಭಿಜ್ಞತೆಯೂ ವಿದ್ಯಾರ್ಥಿಗಳಲ್ಲಿ ಮೂಡುತ್ತಿದೆ. ರಾಜಾಜಿಯ ಹೊಸ ಪದ್ಧತಿಯಿಂದ ಅಕ್ಷರ ವಿದ್ಯಾಭ್ಯಾಸದೊಂದಿಗೆ-ವಿದ್ಯಾರ್ಥಿಗಳಿಗೆ ಜೀವನೋಪಯೋಗಕ್ಕೆ ಹೇಳಿಸಿದ ಕೃಷಿ ಕೈಗಾರಿಕೆಗಳ ಜ್ಞಾನವೂ ಆಗುತ್ತದೆ. ಈ ಹೊಸ ಪದ್ಧತಿಯು ಅಕ್ಷರ ವಿದ್ಯಾಭ್ಯಾಸವನ್ನು ನೀಡುವ ಕ್ರಮದಲ್ಲಿದ್ದ ಕೆಲವು ದೋಷಗಳನ್ನೂ ದೂರೀಕರಿಸುವುದು; ಮಾತ್ರವಲ್ಲ ಭಾರತದ ರಾಜ್ಯಾಂಗ ಘಟನೆಯಲ್ಲಿ ನಿರ್ದೇಶಿಸಿದಂತೆ ಸಾರ್ವತ್ರಿಕ ಶಿಕ್ಷಣವನ್ನು ಜಾರಿಗೆ ತರಲಿಕ್ಕೂ ಅನುಕೂಲ ಒದಗಿಸುವುದು. ಬಡವರು ಆರ್ಥಿಕ ಹಾಗೂ ಇತರ ಕಾರಣಗಳಿಗಾಗಿ ಹುಡುಗ-ಹುಡುಗಿಯರನ್ನು ಶಾಲೆಗೆ ಅಕ್ಷರಾಭ್ಯಾಸಕ್ಕೋಸ್ಕರ ಕಳಿಸುವುದೇ ಅಸಾಧ್ಯವೆಂದಿರುವಾಗ, ಈ ಹೊಸ ಪದ್ಧತಿಯು ಅವರ ತೊಂದರೆ

(೧೦ನೇ ಪುಟ ನೋಡಿರಿ)

DO YOU KNOW..................

That your money in a Savings Account in your Bank, while available to you at any time, is helping in Nation-building enterprises, in producing more food, more electricity, more clothes etc., etc.,? By saving and Banking your money you are helping to make India Strong and Prosperous.

THE CANARA INDUSTRIAL & BNKING SYNDICTE LTD.,

Estd: 1925 H. O: UDIPI, S. India

70 ವರುಷಗಳಿಂದ ಜಗತ್ಪ್ರಸಿದ್ಧವಾದುದು

ಮಲೇರಿಯಾ, ಇನ್‌ಫ್ಲುಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಅಗ್ ಮಿಕ್ಸರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.

ಉತ್ಪಾದನಾಧಿಕಾರಿಗಳು:

ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,

ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಜ್ ಚರ್ಚ್ ಸ್ಟ್ರೀಟ್,

Tele. Add: "CAWASHABAD" ದಾದರ್, ಬೊಂಬಾಯಿ 28.

ಕಾಶ್ಮೀರದಲ್ಲಿ ಶೇಕ್ ಅಬ್ದುಲ್ಲಾರ ಪದಚ್ಯುತಿ

ರಾಜ್ಯದ ಆಂತರಿಕ ವ್ಯವಹಾರದಲ್ಲಿ ಮಹತ್ವಪೂರ್ಣವಾದ ಪ್ರಕರಣ

ಸೋವಿಯೆಟ್ ಸರಕಾರದಲ್ಲಿ ಗೃಹ ಮಂತ್ರಿಯಾಗಿದ್ದ ಲಾವ್ರೆಂಟಿ ಬೆರಿಯಾರನ್ನು ಮುಖ್ಯ ಮಂತ್ರಿ ಮೆಲೆಂಕೋವರು ಪದಚ್ಯುತಗೊಳಿಸಿದರೆಂಬ ವಾರ್ತೆ ಕೆಲವು ದಿನಗಳಿಗೆ ಮುಂಚೆ ತೀಕ್ಷ್ಣ ಅಂತಾರಾಷ್ಟ್ರೀಯ ಪ್ರತಿಕ್ರಿಯೆಗಳನ್ನೂ ರಶಿಯಾದ ಒಳಗಿನ ಘಟನೆಗಳ ಬಗ್ಗೆ ಪರಸ್ಪರ ವಿರುದ್ಧವಾದ ಊಹಾಪೋಹಗಳನ್ನೂ ಉಂಟುಮಾಡಿತು. ಮೊನ್ನೆ ಮೊನ್ನೆಯವರೆಗೆ ರಶಿಯಾದಲ್ಲಿ ಮೆಲೆಂಕೋವರಿಗೆ ಎರಡನೆಯ ಸ್ಥಾನದಲ್ಲಿದ್ದ ಬೆರಿಯಾರು ಒಮ್ಮಿಂದೊಮ್ಮೆ ಪದಚ್ಯುತರಾದ ಹಿನ್ನಲೆ ಯಾರಿಗೂ ಅರ್ಥವಾಗುವಂತಿರಲಿಲ್ಲ - ಇದೇ ಮಾತನ್ನು ಕಳೆದ ವಾರ ಕಾಶ್ಮೀರದಲ್ಲಿ ಸಂಭವಿಸಿದ ಘಟನೆಗಳಿಗೂ ಚೆನ್ನಾಗಿ ಅನ್ವಯಿಸಬಹುದು. ಈಗಾಗಲೇ ಜನಜನಿತವಾಗಿರುವಂತೆ ತಾ. ೯ರಂದು ಕಾಶ್ಮೀರದಲ್ಲಿ ಸದರ್-ಇ-ರಿಯಾಸತರಾದ ಶ್ರೀ ಕರಣಸಿಂಗರು ಮುಖ್ಯ ಮಂತ್ರಿ ಸ್ಥಾನದಿಂದ ಶೇಕ ಅಬ್ದುಲ್ಲಾರನ್ನು ಪದಚ್ಯುತಮಾಡಿ, ಬಕ್ಷಿ ಗುಲಾಂ ಮಹಮ್ಮದರನ್ನು ಹೊಸ ಮಂತ್ರಿಮಂಡಳ ರಚಿಸಲು ವಿನಂತಿಸಿದರು. ಕಾಶ್ಮೀರದ ಈ ಹೊಸ ಸರಕಾರವು ಶೇಕ ಅಬ್ದುಲ್ಲಾ ಮತ್ತು ಅವರ ಮಂತ್ರಿ ಮಂಡಳದಲ್ಲಿದ್ದ ಅಫಜಲ ಬೇಗರೆಂಬವರನ್ನು ಒಡನೆಯೇ ಬಂಧನದಲ್ಲಿ ಇಟ್ಟಿತು. ಹೀಗೆ ಮೊನ್ನೆಯವರೆಗೆ ಕಾಶ್ಮೀರ ಕೇಸರಿ ಎಂದು ಕೀರ್ತಿಹೊಂದಿದ ಶೇಕ ಅಬ್ದುಲ್ಲಾ ಇಲಿಯಂತೆ ಬೋನಿನೊಳಗೆ ಬಿದ್ದರು. ತಮ್ಮ ಜೀವಮಾನದ ಬಹ್ವಂಶವನ್ನು ಕಾಶ್ಮೀರ ಜನತೆಯ ಉದ್ಧಾರಕ್ಕೋಸ್ಕರ ಹೋರಾಡುವುದರಲ್ಲಿ ಕೈಗೊಂಡ, ಒಂದು ರೀತಿಯಲ್ಲಿ ಕಾಶ್ಮೀರದ ಅನಭಿಷಿಕ್ತ ರಾಜನೆಂದೇ ಕರೆಯಬಹುದಾಗಿದ್ದ ಶೇಕ ಅಬ್ದುಲ್ಲಾ ರಾಜಕೀಯ ಆಕಾಶದಲ್ಲಿ ಚಿರ ಬೆಳಗುವ ತಾರೆಯಾಗುತ್ತಿದ್ದರು- ಆದರೆ ಇಂದಿನ ಅವರ ಅಧಃಪತನವನ್ನು ನೋಡಿದರೆ, ಎಲ್ಲ ಬಣ್ಣವನ್ನೂ ಮಸಿ ನುಂಗಿತೆಂದೇ ಹೇಳಬೇಕು. ನೆಹರೂ ಹೇಳಿದಂತೆ, ಈ ಘಟನೆ ಅತ್ಯಂತ ಅಪ್ರಿಯವಾದದ್ದು. ಶೇಕ ಅಬ್ದುಲ್ಲಾ ಜನತೆಯ ವಿಶ್ವಾಸವನ್ನು ಕಳೆದುಕೊಂಡು ಒಳಸಂಚುಗಾರರಾಗುವರೆಂದು ಕನಸು ಮನಸಿನಲ್ಲಿಯೂ ನೆಹರೂ ಎಣಿಸಿದ್ದಿಲ್ಲ— ಈ ಘಟನೆಗಳ ಪರಿಣಾಮವಾಗಿ ಪ್ರಧಾನಿ ನೆಹರೂ ಚಿತ್ತಸ್ವಾಸ್ಥ್ಯವನ್ನು ಕೆಲ ದಿನ ಕಳೆದುಕೊಂಡರು.

ನಡೆದುದೇನು?

ಸದರ್—ಇ ರಿಯಾಸತರು ಹೊರಡಿಸಿದ ಆಜ್ಞೆ, ಹಾಗೂ ಮುಖ್ಯ ಮಂತ್ರಿಯ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದ ಬಳಿಕ ಬಕ್ಷಿ ಗುಲಾಂ ಮಹಮ್ಮದರು ಮಾಡಿದ ಆಕಾಶವಾಣಿ ಭಾಷಣಗಳನ್ನು ನೋಡಿದರೆ ಶೇಕ್ ಅಬ್ದುಲ್ಲಾ ಇಂದಿನ ದುರ್ಗತಿಯನ್ನು ಹೊಂದಲು ಕಾರಣವೇನೆಂದು ಸ್ಪಷ್ಟವಾಗುತ್ತದೆ- ಮಂತ್ರಿ ಮಂಡಳವು ಸಂಯುಕ್ತ ಹೊಣೆಗಾರಿಕೆಯಿಂದ ಕೆಲಸ ಮಾಡಲು ಅಸಮರ್ಥವಾಗಿದೆಯೆಂದೂ ಜನತೆಯ ಸಹಾನುಭೂತಿಯನ್ನು ಮಂತ್ರಿಮಂಡಳವು ಸಂಪೂರ್ಣ ಕಳೆದುಕೊಂಡಿದೆಯೆಂದೂ ಸದರ್-ಇ-ರಿಯಾಸತರು ಹೇಳುತ್ತಾರೆ. ಬಕ್ಷಿ ಗುಲಾಂ ಮಹಮ್ಮದರು ಇದನ್ನೆ ಸ್ಪಷ್ಟ ಮಾತುಗಳಲ್ಲಿ ವಿವರಿಸಿದ್ದಾರೆ ಮುಖ್ಯಮಂತ್ರಿ ಸ್ಥಾನದಲ್ಲಿ ಶೇಕ ಅಬ್ದುಲ್ಲಾರು ಸದಾ ತಮ್ಮ ಸರ್ವಾಧಿಕಾರವನ್ನೆ ನಡೆಸುತಿದ್ದರು. ಇದರಿಂದಾಗಿ ಮಂತ್ರಿಮಂಡಳದ ಸದಸ್ಯರಿಗೆ ತಮ್ಮ ಕೆಲಸಗಳನ್ನು ಚೆನ್ನಾಗಿ ದಕ್ಷತೆಯಿಂದ ಹಾಗೂ ಯೋಗ್ಯ ರೀತಿಯಲ್ಲಿ ನಿರ್ವಹಿಸುವುದು ಅಸಾಧ್ಯವೆನಿಸಿದೆ. ಸರಕಾರದಲ್ಲಿ ಲಂಚಗುಳಿತನ, ಸ್ವಜನ ಪಕ್ಷಪಾತ ಮುಂತಾದ ಕೆಟ್ಟ ಪ್ರವೃತ್ತಿಗಳು ಪ್ರಾಬಲ್ಯಕ್ಕೆ ಬಂದಿವೆ ತತ್ಪರಿಣಾಮವಾಗಿ ಜನರಲ್ಲಿ ಅಸಮಾಧಾನವು ಚೆನ್ನಾಗಿ ವ್ಯಕ್ತಗೊಳ್ಳುತ್ತಿದೆ. ಆರ್ಥಿಕ ಸಂಕಟವನ್ನು ಯಶಸ್ವಿಯಾಗಿ ಇದಿರಿಸಲು ಶೇಕ ಅಬ್ದುಲ್ಲಾ ಮನಸ್ಸು ಮಾಡದೆ ಕಾಶ್ಮೀರವನ್ನು ಪ್ರತಿಗಾಮೀಶಕ್ತಿಗಳ ಪ್ರಭಾವಕ್ಕೆ ಒಳಮಾಡುವ ಚಾಪಲ್ಯ ತೋರಿಸಿದ್ದಾರೆ. ಇದು ರಾಷ್ಟ್ರೈಕ್ಯಕ್ಕೆನೇ ಗಂಡಾಂತರ ಪ್ರಾಯ. ಹಾಗೆಯೇ ಕಳೆದ ಜೂಲೈ ತಿಂಗಳಲ್ಲಿ ಭಾರತದೊಡನೆ ಮಾಡಿಕೊಂಡ ಒಪ್ಪಂದದ ಕಾರ್ಯಾಚರಣೆಯನ್ನು ಬೇಕೆಂದೇ ಮುಂದೆ ಹಾಕುತಿದ್ದಾರೆ- ಇತ್ಯಾದಿ ಗಂಭೀರ ಆರೋಪಗಳನ್ನು ಶೇಕ ಅಬ್ದುಲ್ಲಾ ಇದಿರಿಸಬೇಕಾಗಿದೆ. ಇವುಗಳಲ್ಲಿ ಯಾವುದೂ ನಿರಾಧಾರವಾಗಿಲ್ಲವೆಂದು ಹಿಂದಿನಿಂದ ಪ್ರಕಟವಾದ ಸಂಗತಿಗಳು ಹೇಳುತ್ತವೆ. ಶೇಕ ಅಬ್ದುಲ್ಲರನ್ನು ಪದಚ್ಯುತ ಮಾಡಿದ ಘಟನೆಯು ಕಾಶ್ಮೀರದ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದ ಸಂಗತಿಯೆಂದೂ ಆದುದರಿಂದ ಭಾರತ ಸರಕಾರವು ಇದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲೆಂದೂ ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದರೆ ಕಾಶ್ಮೀರ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಸುಟಿದು ನೆಗೆಯುವ ಚೆಂಡಿನಂತಿದೆ. ಕಾರಣ, ಅಂತಾರಾಷ್ಟ್ರೀಯ ಪ್ರತಿಕ್ರಿಯೆಗಳಿಗೆ ಇಲ್ಲಿ ಹೆಚ್ಚಿನ ಮಹತ್ವವುಂಟು.

ಪಾಕಿಸ್ತಾನದಲ್ಲಿ ಆಕ್ರೋಶ

ಶೇಕ ಅಬ್ದುಲ್ಲಾರ ಪದಚ್ಯುತಿಯಿಂದ ನಿಜವಾಗಿ ಸಂತೋಷ ಪಡಬೇಕಾದವರು --ಪಾಕಿಸ್ತಾನಿಗಳೆಂದು ತೋರಬಹುದು: ಆದರೆ ಹಾಗಿಲ್ಲದಿರುವುದೇ ಆಶ್ಚರ್ಯ! ಪಾಕಿಸ್ತಾನವು ಶೇಕ ಅಬ್ದುಲ್ಲಾರ ಬಂಧನದ ಬಗ್ಗೆ ತೋರಿದ ಸಹಾನುಭೂತಿ ಮತ್ತು ಕಾತರಗಳು ಸ್ವತಃ ಪಾಕಿಸ್ತಾನೀ ಧುರೀಣರಲ್ಲಿ ಯಾರಿಗೂ ಸಂದಿರಲಿಲ್ಲ. ಕೆಲವೇ ತಿಂಗಳುಗಳಿಗೆ ಹಿಂದೆ ನಾಜಿಮುದ್ದೀನರನ್ನು ಗವರ್ನರ ಜನರಲ್ಲರು ತಮ್ಮ ಘಟನಾತ್ಮಕ ಅಧಿಕಾರದಿಂದ ಕಿತ್ತುಹಾಕಿದ್ದಕ್ಕೆ ಯಾವುದೇ ತೆರನಾದ ಅಸಂತೋಷವನ್ನು ತೋರಿಸದ ಪಾಕಿಸ್ತಾನಿಗಳು, ಶೇಕ ಅಬ್ದುಲ್ಲರನ್ನು ಕರಣಸಿಂಗರು ತಮ್ಮ ಅಧಿಕಾರ ಬಲದಿಂದ ನಿವೃತ್ತಿಪಡಿಸಿದ್ದಕ್ಕೆ ಬಹಳ ಆಕ್ರೋಶ ಗೈದಿರುವುದು ವಿಡಂಬನೆಯಲ್ಲದೆ ಮೇರೇನು? ಇದರಂತೆ, ಹಿಂದೆ ಪಾಕಿಸ್ತಾನಿಗಳು ಆಕ್ರಮವಾಗಿ ಕಾಶ್ಮೀರದೊಳಕ್ಕೆ ನುಗ್ಗಿ ಶ್ರೀನಗರದ ಹೆಬ್ಬಾಗಿಲವರೆಗೆ ಬಂದಾಗ, ಇದೇ ಶೇಕ ಅಬ್ದುಲ್ಲಾರು ಭಾರತ ಸರಕಾರದ ಮೊರೆ ಹೋಗಿ, ಘಟನಾತ್ಮಕವಾಗಿ ಭಾರತದೊಡನೆ ಕಾಶ್ಮೀರವನ್ನು ಸೇರ್ಪಡಿಸಿ, ಪಾಕಿಸ್ತಾನಿಗಳನ್ನು ಹೊರಗಟ್ಟಲು ಸೊಂಟ ಕಟ್ಟಿದ್ದರು. ಪಾಕಿಸ್ತಾನಿಗಳು ಶೇಕ ಅಬ್ದುಲ್ಲಾರಿಗೆ ಈಗ ಬಂದೊದಗಿದ ದುರ್ಗತಿಯನ್ನು ಕಂಡು ಸಂತೋಷಪಡಬೇಕಾದುದು ಸ್ವಾಭಾವಿಕ— ಆದರೆ ಹಾಗಾಗಿಲ್ಲ ಬದಲು ಅವರು ದುಃಖಪೀಡಿತರು ಎಷ್ಟರ ಮಟ್ಟಿಗೆ ಕಾಶ್ಮೀರದ ಈ ಅಪ್ರಿಯ ಘಟನೆ ಪಾಕಿಸ್ತಾನೀ ಸರಕಾರದ ಮೇಲೆ ಆಘಾತ ಮಾಡಿದೆಯೆಂದರೆ, ೧೪ನೇ ದಿನಾಂಕ ಅತ್ಯಂತ ವಿಜೃಂಭಣೆಯಿಂದ ನಡೆಸಬೇಕಾಗಿದ್ದ ಸ್ವಾತಂತ್ರ್ಯ ದಿನೋತ್ಸವದ ಎಲ್ಲ ಸಂಭ್ರಮಗಳನ್ನೂ ನಿಲ್ಲಿಸಿಬಿಡಲಾಯಿತು! ಕಾಶ್ಮೀರದ ಘಟನೆ ವಿಮರ್ಶಿಸಲು ಐದಾರು ಸಲ ಮಂತ್ರಿಮಂಡಳದ ಸಭೆ ಸೇರಿತು; ಪರಿಣಾಮವಾಗಿ ಮುಂದಿನ ತಿಂಗಳ ಆದಿಭಾಗದಲ್ಲಿ ನೆಹರೂರನ್ನು ಭೇಟಿಯಾಗಲು ಹೊಸ ದೆಹಲಿಗೆ ಆಗಮಿಸಬೇಕಾಗಿದ್ದ ಪಾಕ್ ಪ್ರಧಾನಿ ಮಹಮ್ಮದಾಲಿಯವರು ಮೊನ್ನೆ ಆದಿತ್ಯವಾರ (ತಾ. ೧೬) ದಿನ ಚಿತ್ತೈಸಿದ್ದಾರೆ. ನಾಲ್ಕು ದಿನಗಳ ಕಾಲ ಭಾರತದಲ್ಲಿದ್ದು ನೆಹರೂರೊಡನೆ ವಿಚಾರ ವಿನಿಮಯ ಮಾಡುತಿದ್ದಾರೆ.

ಹಿನ್ನೆಲೆಯ ಪ್ರಕರಣ

ಈ ಮಾತುಕತೆಗಳ ಪರಿಣಾಮ ಯಾವುದೇ ಆಗಲಿ— ಶೇಕ ಅಬ್ದುಲ್ಲಾರ ಕಪಟ ಕಾರಸ್ಥಾನವನ್ನು ದೃಷ್ಟಿಯಲ್ಲಿಟ್ಟುಕೊಂಡರೆ "ಆದದ್ದೆಲ್ಲ ಒಳಿತೇ ಆಯಿತು" ಎನ್ನುವ ದಾಸರ ಪದ ನೆನಪಾಗುತ್ತದೆ. ನೆಹರೂ ಅತ್ಯಂತ ವಿಶ್ವಾಸದಿಂದ ಕಾಣುತಿದ್ದ ಶೇಕ ಅಬ್ದುಲ್ಲಾ, ಪ್ರಾರಂಭದಿಂದಲೂ ಸ್ವೇಚ್ಛಾ ವಿಹಾರಿ: ಹಟಮಾರಿ ಮಗುವಿನಂತಿದ್ದ ಅವರನ್ನು ಸಂತೈಸಲೆಂಬಂತೆ, ನೆಹರೂ ಸಹೃದಯತೆಯಿಂದ ವರ್ತಿಸುತಿದ್ದರು. ಕಳೆದ ವರ್ಷ ಒಪ್ಪಂದ ಮಾಡಿಕೊಳ್ಳುವಾಗ ಭಾರತ ಪಾರ್ಲಿಮೆಂಟಿನಲ್ಲಿ ಕಾಶ್ಮೀರದ ಸ್ಥಾನಮಾನಗಳ ಬಗೆ ಅತ್ಯಂತ ತುರುಸಿನ ಚರ್ಚೆ ನಡೆಯಿತಾದರೂ — ನೆಹರೂರವರು ಗೆದ್ದರು ಕಾಶ್ಮೀರದ ವಿಶಿಷ್ಟ ಪರಿಸ್ಥಿತಿಯ ಕಾರಣದಿಂದ ಅದಕ್ಕೆ ಬೇರೆಯೇ ಸ್ಥಾನಮಾನಗಳನ್ನು ಕೊಡುವುದವಶ್ಯವೆಂಬ ನೆಹರೂ ವಾದಕ್ಕೆ ಸಾಮಾನ್ಯವಾಗಿ ಎಲ್ಲರು ಒಪ್ಪಿದರು. ಇದರಲ್ಲಿ ಅನುಚಿತವಾದುದೇನೂ ಇರಲಿಲ್ಲ ಆದರೆ ಅಂತಾರಾಷ್ಟ್ರೀಯ ಹಿತ ಸಂಬಂಧಿಗಳ ಕೈವಾಡವಿದ್ದ ಕ್ಷೇತ್ರ ಕಾಶ್ಮೀರವೆಂಬುದರಿಂದ ಅಲ್ಲಿಯ ಆಗುಹೋಗುಗಳನ್ನು ಉಪೇಕ್ಷೆಯಿಂದ ಭಾರತ ಸರಕಾರ ನೋಡಬಾರದೆಂಬ ಸಂಗತಿಯನ್ನು ಇನ್ನಾದರೂ ಜ್ಞಾಪಕದಲ್ಲಿಡಬೇಕು. ಶೇಕ ಅಬ್ದುಲ್ಲಾರು ಈಚೆಗೆ ಕೆಲವು ತಿಂಗಳುಗಳಿಂದ ಮುಖ್ಯವಾಗಿ ಮೇ ತಿಂಗಳಲ್ಲಿ ವಿದೇಶೀ ರಾಜಕಾರಣಿಗಳು ಕಾಶ್ಮೀರಕೊಕ್ಕನ್ನು ಸಂದರ್ಶಿಸಿದಂದಿನಿಂದ ತಮ್ಮ ನಿಲುವೆಯನ್ನು ಬದಲಾಯಿಸಿದಂತೆ ಕಾಣುತಿತ್ತು. ಹಿಂದೊಮ್ಮೆ ಅವರು ರಣವೀರ ಸಿಂಗಪುರದಲ್ಲಿ ಮಾಡಿದ ಭಾಷಣದಿಂ

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ.ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭಾರತದಾದ್ಯಂತ ಸ್ವಾತಂತ್ರ್ಯೋತ್ಸವದ ಸಂಭ್ರಮ

ಶಾಂತಿಯ ಕೈವಾರಿಯಾಗಿದ್ದುಕೊಂಡು ರಾಷ್ಟ್ರೋನ್ನತಿಗೆ ಶ್ರಮಿಸುವ ಸಂಕಲ್ಪ

ದೆ ಸಾಮಾನ್ಯ ಜನರಿರಲಿ ಸ್ವತಃ ನೆಹರೂ ಕೂಡ ಅಸಂತುಷ್ಟರಾದಾಗ, ಶೇಕ ಅಬ್ದುಲ್ಲಾ ಪತ್ರಿಕಾ ವರದಿಗಳು ಅಸತ್ಯಪೂರ್ಣವಾದವುಗಳೆಂದು ಆರೋಪಿಸಿದ್ದರು. ಭಾರತದೊಡನೆ ಸೇರುವ ಯಾ ಬಿಡುವ ಅಧಿಕಾರವು ಕಾಶ್ಮೀರ ಜನತೆಗೆ ಸೇರಿದ್ದೆಂದು ಈಗಲೂ ನೆಹರು ಹೇಳುತ್ತಾರೆ. ಆದರೆ ಶೇಕ ಅಬ್ದುಲ್ಲಾ ಈಚೆಗೆ "ಸ್ವತಂತ್ರ ಕಾಶ್ಮೀರ" ಎಂಬ ಪಲ್ಲವಿ ಹಾಡಲು ತೊಡಗಿದ್ದರು, ತಮ್ಮ ಈ ಕನಸನ್ನು ನನಸಾಗಿಸಲು ಅವರು ವಿದೇಶೀಯರ ಮನದೊಲುಮೆ ಸಂಪಾದಿಸಲು ಪ್ರಯತ್ನಿಸುತಿದ್ದರು. ಇದರಲ್ಲಿ ಅಮೇರಿಕಾ ಹಾಗೂ ಪಾಕಿಸ್ತಾನದ ಕೈವಾಡವಿದೆ ಎಂದು ಸುದ್ದಿ. ಇತ್ತ ಆರ್ಥಿಕ ಸಂಕಟದಿಂದ ಸಂತ್ರಸ್ತವಾದ ಕಾಶ್ಮೀರ ಜನತೆಗೆ ಶೇಕ ಅಬ್ದುಲ್ಲಾರ ಧೋರಣೆ ಮೆಚ್ಚುಗೆಯಾಗಲಿಲ್ಲ: ಜಮ್ಮುವಿನ ವಿಶಿಷ್ಟ ಪರಿಸ್ಥಿತಿಯನ್ನು ವಿಮರ್ಶಿಸಿ ವಜೀರ ಸಮಿತಿ ಮಾಡಿದ ವರದಿ ಶೇಕ ಅಬ್ದುಲ್ಲಾರ ಮನಸ್ಸಿಗೆ ಬರಲಿಲ್ಲವೋ ಏನೋ– ಅತ್ಯಂತ ಅವಶ್ಯವಾದ ಸುಧಾರಣೆಗಳಾಗಬೇಕಿದ್ದರೂ ಆಗಲಿಲ್ಲ. ಜನರ ಆರ್ಥಿಕ ಸಂಕಟಗಳು ಹೀಗೆ ಹೆಚ್ಚಾದಂತೆ, ಶೇಕ ಅಬ್ದುಲ್ಲಾರು ಮೃತಪ್ರಾಯವಾದ ಜಾತೀಯತೆಗೆ ಪುನಃ ಪ್ರಾಣ ನೀಡುವ ಚಪಲ ತೋರಿದರು. ಭಾರತದ ಕೋಮುವಾರು ಭಾವನೆಯನ್ನು ಹೀನೈಸುತಿದ್ದಂತೆ, ಕಾಶ್ಮೀರದ ಮುಸ್ಲಿಂ ಬಾಂಧವರಲ್ಲಿ ಜಾತೀಯತೆಯನ್ನು ಪ್ರಚೋದಿಸಿದರು. ಪರಿಣಾಮವಾಗಿ— ಈ ದುರ್ಗತಿ ಬಂದೊದಗಿತು.

ಆಸ್ತಿಕರ ಮಸೂದೆ

ಭಾರತದ ಪಾರ್ಲಿಮೆಂಟಿನ ಅಧಿವೇಶನವು ಈಗ ಹೊಸದೆಹಲಿಯಲ್ಲಿ ಜರಗುತ್ತಿದೆ. ಈ ಅಧಿವೇಶನದ ಮುಂದೆ ಮಹತ್ವದ ಮಸೂದೆಗಳೆಂದು ಹೇಳಬಹುದಾದ ಆಸ್ತಿಕರ ವಿಧೇಯಕವೂ ಆಂಧ್ರ ರಾಜ್ಯ ವಿಧೇಯಕವೂ ಚರ್ಚೆಗೆ ಬಂದಿವೆ: ಪರಿಶೀಲಕ ಸಮಿತಿಯು ಆಸ್ತಿಕರ ಮಸೂದೆಗೆ ಮಾಡಿದ ತಿದ್ದುಪಡಿಗಳಲ್ಲದೆ ಅರ್ಥಸಚಿವರು ಸರಕಾರದ ಕಡೆಯಿಂದ ಇನ್ನೂ ಕೆಲವು ಸಾಮಾನ್ಯ ತಿದ್ದುಪಡಿಗಳನ್ನು ಮಾಡಲಿದ್ದಾರೆ. ಆದರೆ ಇವೆಲ್ಲವುಗಳಿಂದ ಆಸ್ತಿಕರ ಮಸೂದೆಯು ಯಾವುದೇ ಪರಿಣಾಮಕಾರೀ ಬದಲಾವಣೆಗೆ ಗುರಿಯಾಗುವದಿಲ್ಲೆಂಬುದನ್ನು ನಾವು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಲೋಕಸಭೆಯು ಈ ವಿಧೇಯಕದ ಸಾಮಾನ್ಯ ಚರ್ಚೆಯನ್ನು ಮಾಡಿ, ಅರ್ಥ ಸಚಿವರಾದ ಶ್ರೀ ದೇಶಮುಖರ ಉತ್ತರವನ್ನು ಕೇಳಿಕೊಂಡಿತು. ಈ ಚರ್ಚೆಯಿಂದ ವ್ಯಕ್ತಗೊಂಡ ಅಂಶಗಳು ಮುಖ್ಯವಾಗಿ ಈ ರೀತಿ ಇವೆ–ಆಸ್ತಿಕರದಿಂದ ಮುಕ್ತಮಾಡಿದ ಆಸ್ತಿಯ ಮಿತಿಯನ್ನು ಇನ್ನೂ ಹೆಚ್ಚಿಸುವುದು ಅಗತ್ಯ. ಹಾಗೆಯೇ ಜನಸಾಮಾನ್ಯರಿಗೆ ಈ ಕರದ ಅಂತರಂಗ ಬಹಿರಂಗಗಳೆಲ್ಲವೂ ಚೆನ್ನಾಗಿ ಮನವರಿಕೆಯಾಗುವಂತೆ ಭಾಷೆಯನ್ನು ಸರಳ ಹಾಗೂ ಸುಲಭ ಮಾಡುವುದವಶ್ಯ. ಕರದ ಪ್ರಮಾಣವನ್ನು ವರ್ಷವರ್ಷವೂ ನಿರ್ಧರಿಸುವ ಬದಲು ಪ್ರಾರಂಭದಲ್ಲಿಯೇ ಒಂದು ನಿರ್ದಿಷ್ಟ ಅವಧಿಯ ವರೆಗೆ ಕರದ ಪ್ರಮಾಣವನ್ನು ನಿರ್ಧರಿಸುವುದೊಳ್ಳೆಯದು. ಸಾಮಾನ್ಯವಾಗಿ ಸದಸ್ಯರು ಆಸ್ತಿ ಕರದ ಉತ್ತಮ ಉದ್ದೇಶವನ್ನು ಸ್ವಾಗತಿಸಿ ಮಾತನಾಡಿದರೂ- ಭಾರತದಲ್ಲಿ ಈ ಕರದ ಅಗತ್ಯವಿದೆಯೇ? ಒಂದು ವೇಳೆ ಇದ್ದ ಪಕ್ಷದಲ್ಲೂ ಕರಭಾರ ವಿಚಾರಣಾ ಆಯೋಗದ ವರದಿ ಬರುವ ವರೆಗೆ ಈ ವಿಧೇಯಕದ ಕಾರ್ಯಾಚರಣೆಯನ್ನು ತಡೆಹಿಡಿಯಲು ಸಾಧ್ಯವಿಲ್ಲವೆ? ಎಂದು ಪ್ರಶ್ನಿಸುವವರು ಇದ್ದಾರೆ. ಕಮ್ಯೂನಿಸ್ಟ ಸದಸ್ಯರಂತೂ ಇದು ಧನಿಕ ಹಾಗೂ ಬಡವರ ನಡುವೆ ಇರುವ ಅಂತರವನ್ನು ಕಾಲಾನುಕಾಲದಲ್ಲಿ ಕಡಿಮೆ ಮಾಡುವುದೆಂದೂ ಬಂಡವಲ ಒಂದೆಡೆ ಕೂಡಿ ಬೀಳುವುದನ್ನು ತಡೆಯುವುದೆಂದೂ ಒಪ್ಪಲು ಸಿದ್ಧರಿಲ್ಲ. ಈ ಆಕ್ಷೇಪಗಳು ಏನೇ ಇದ್ದರೂ ಆಸ್ತಿಕರವನ್ನು ನಮ್ಮ ದೇಶದಲ್ಲಿ ಜ್ಯಾರಿಗೆ ತರುವುದನ್ನು ತಡೆ ಹಿಡಿಯಲು ಇವು ಸಬಲ ಕಾರಣಗಳಾಗಲಿಕ್ಕಿಲ್ಲ. ಸರಕಾರವಂತೂ ಹಣದ ತಗಾದೆಯಿಂದ ಬಹಳ ತೊಂದರೆಗೆ ಸಿಲುಕಿರುವುದರಿಂದ, ಈ ವಿಧೇಯಕವನ್ನು ತಡೆಹಿಡಿಯುವ ಇರಾದೆಯನ್ನು ಇಟ್ಟುಕೊಂಡಿಲ್ಲ. ಆದರೆ ಸಾಮಾನ್ಯವಾದ ಕೆಲವು ಅನುಕೂಲತೆಗಳನ್ನು ಮಾಡಿಕೊಡುವುದಕ್ಕೆ ಅದು ಆಕ್ಷೇಪಿಸಬಾರದೆಂದು ನಮಗೆ ತೋರುತ್ತದೆ. ಕರಮುಕ್ತ ಆಸ್ತಿಯ ಪ್ರಮಾಣವನ್ನು ಇನ್ನೂ ಏರಿಸಬಹುದು; ಮತ್ತು ಜೀವ ವಿಮೆಯೇ ಮುಂತಾದ ಸಂಗತಿಗಳಲ್ಲಿ ತೋರಿಸಿದ ವಿನಾಯಿತಿಯನ್ನು ಇನ್ನೂ ಹೆಚ್ಚಿಸುವುದು ಯೋಗ್ಯ.

ಸೈನಿಕ ಶಿಕ್ಷಣದ ಯೋಜನೆ

ಲೋಕಸಭೆಯ ಮುಂದೆ ಸದಸ್ಯರೊಬ್ಬರು ಕಡ್ಡಾಯದ ಸೈನಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡುವ ಆವಶ್ಯಕತೆಯನ್ನು ಪ್ರಸ್ತಾಪಿಸಿ ಖಾಸಗಿ ಮಸೂದೆಯೊಂದನ್ನು ತಂದರು. ವಿದ್ಯಾರ್ಥಿಗಳೇ ಭಾವೀ ಜನಾಂಗವಾಗಿರುವುದರಿಂದ ಅವರಲ್ಲಿ ಕಷ್ಟ ಸಹಿಷ್ಣುತೆಯನ್ನು ಹೆಚ್ಚಿಸಲಿಕ್ಕೂ ಶಿಸ್ತು ಮತ್ತು ಸಂಯಮವನ್ನು ಜ್ಯಾರಿಗೆ ತರಲಿಕ್ಕೂ ಈ ರೀತಿಯ ವ್ಯವಸ್ಥೆ ಯೋಗ್ಯವಾದುವೆಂದು ಸದಸ್ಯರು ಅಭಿಪ್ರಾಯಪಟ್ಟರು. ಚರ್ಚೆಗೆ ಉತ್ತರ ಕೊಡುತ್ತಾ ಸಂರಕ್ಷಣಾ ಖಾತೆಯ ಮಂತ್ರಿಗಳಾದ ತ್ಯಾಗಿಯವರು ಸರಕಾರವು ಈ ಮಸೂದೆಯ ಉದ್ದೇಶವನ್ನು ಮಾನ್ಯ ಮಾಡಿದೆಯೆಂದೂ ಆದರೆ ಎಲ್ಲ ವಿದ್ಯಾರ್ಥಿಗಳಿಗೆ ಶಸ್ತ್ರಾಸ್ತ್ರಗಳ ಪರಿಜ್ಞಾನ ಮಾಡಿಕೊಟ್ಟು ಸೈನಿಕ ತರಬೇತಿಯನ್ನು ಕೊಡುವುದು ಸದ್ಯ ಕೈಗೂಡಲಾರದ ಹಂಬಲವೆಂದೂ ಹೇಳಿದರು. ಇದಕ್ಕೆ ಬೇಕಾದ ಸಾಧನ ಸಲಕರಣೆಗಳನ್ನು ಒದಗಿಸಿಕೊಳ್ಳಲು ೧೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೇಕಾದೀತು- ಮತ್ತು ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಇದು ನೆರವೇರುವ ಸಂಗತಿಯಲ್ಲ. ಆದರೆ ಮಾನ್ಯ ಮಂತ್ರಿಗಳು ತಮ್ಮ ಸ್ವಂತದ ಯೋಜನೆಯೊಂದನ್ನು ಈ ಮಸೂದೆಯ ಸ್ಥಾನದಲ್ಲಿ ಪ್ರಕಟಪಡಿಸಿದರು. ಇದರನ್ವಯ ಶಸ್ತ್ರಾಸ್ತ್ರಗಳ ಉಪಯೋಗದ ಬಗ್ಗೆ ತರುಣರಿಗೆ ತರಬೇತಿಯು ದೊರೆಯದಿದ್ದರೂ ಸೈನಿಕರಿಗೆ ಅಗತ್ಯವಾಗಿ ಬೇಕಾದ ಬೇರೆ ರೀತಿಯ ಸೌಲಭ್ಯಗಳು ಸಿಗುತ್ತವೆ. ಈ ಹೊಸ ಯೋಜನೆಯಂತೆ ೧೮ ರಿಂದ ೪೦ ವರ್ಷ ಪ್ರಾಯದ ಭಾರತೀಯರಿಗೆ ಸೈನ್ಯ ಶಿಕ್ಷಣವನ್ನು ಪರಿಮಿತವಾದ ಕ್ರಮದಲ್ಲಿ ಪಡೆಯಲು ಸಾಧ್ಯವುಂಟು. ಕವಾಯತು, ಪ್ರಾಥಮಿಕ ರಣಾಂಗಣ ಸ್ವಾಸ್ಥ್ಯ, ಶಾರೀರಿಕ ಶಿಕ್ಷಣ, ಬಂದೂಕು ಹಾರಿಸುವುದು, ರಣರಂಗದ ಚಲನವಲನಗಳ ಪರಿಜ್ಞಾನ, ಪ್ರಥಮ ಚಿಕಿತ್ಸೆ ಮತ್ತು ಸಾರ್ವಜನಿಕ ಆರೋಗ್ಯ ಮುಂತಾದುವುಗಳಲ್ಲಿ ಶಿಕ್ಷಣ ಕೊಡಲಾಗುವುದು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸೈನಿಕ ಶಿಕ್ಷಣವನ್ನು ಜ್ಯಾರಿಗೆ ತರುವುದಕ್ಕಿಂತ ಈ ರೀತಿ ಸ್ವಯಂಪ್ರೇರಣೆಯಿಂದ ಸೈನಿಕ ಶಿಕ್ಷಣವನ್ನು ಸ್ವೀಕರಿಸಲು ಯುವಕರನ್ನು ಹುರಿದುಂಬಿಸುವ ಪ್ರಯತ್ನವು ಸ್ತುತ್ಯವಾಗಿದೆ. ಭಾರತೀಯರು ತಮ್ಮ ದೇಶದ ಸಂರಕ್ಷಣೆಗೋಸ್ಕರ ತಮ್ಮ ಯುವಕರ ಶಕ್ತಿಸಾಮರ್ಥ್ಯಗಳನ್ನು ಅವಲಂಬಿಸುವ ಕಾಲವು ರಾಷ್ಟ್ರದ ಸ್ವಾತಂತ್ರ್ಯದ ಮೂಲಕ ಒದಗಿರುತ್ತದೆ; ಈ ದೃಷ್ಟಿಯಿಂದ ನಮ್ಮ ಯುವ ಜನಾಂಗದ ಮೇಲೆ ಮಹತ್ವದ ಹೊಣೆಗಾರಿಕೆ ಬಿದ್ದಿರುತ್ತದೆ. ಆದರೆ ಸರಕಾರದ ಯೋಗ್ಯ ಸಹಕಾರವಿಲ್ಲದ ಪಕ್ಷದಲ್ಲಿ ಯುವಕರ ಆಶೋತ್ತರಗಳು ಪೂರ್ಣವಾಗುವುದು ಸಾಧ್ಯವಿಲ್ಲ. ಈ ಕೊರತೆಯನ್ನು ಸಂರಕ್ಷಣಾ ಮಂತ್ರಿಗಳ ಪ್ರಕೃತದ ಯೋಜನೆ ದೂರೀಕರಿಸುತ್ತದೆ. ಅಹಿಂಸಾ ಪ್ರಿಯವಾದ ರಾಷ್ಟ್ರ ಭಾರತವಾದರೂ ಸ್ವಂತ ರಕ್ಷಣೆಯ ದೃಷ್ಟಿಯಿಂದ ಬಲ ಸಂಪಾದಿಸಿಕೊಳ್ಳುವುದು ಸಮಂಜಸವಾದ ನಿಲುವೆಯೇ ನಿಜ.

ಸ್ವಾತಂತ್ರ್ಯ ದಿನೋತ್ಸವ

ಆಗೋಸ್ಟು ೧೫ರಂದು ಭಾರತದ ಆದ್ಯಂತ ಸ್ವಾತಂತ್ರ್ಯೋತ್ಸವವು ಎಂದಿನಂತೆ ಸಂಭ್ರಮದಿಂದ ಆಚರಿಸಲ್ಪಟ್ಟಿತು. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಜನಾಂಗಕ್ಕೆ ಸಂದೇಶವನ್ನು ಕೊಡುವುದರ ಮೂಲಕ ಮಾನವ ಜನಾಂಗದ ಶ್ರೇಯಸ್ಸಿಗಾಗಿ ದುಡಿಯಲು ಮತ್ತು ಆಂತರಿಕ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವುದಕೋಸ್ಕರ ಪರಿಶ್ರಮ ಮಾಡಲು ವಿನಂತಿಸಿದರು. ಸ್ವತಂತ್ರ ಭಾರತವು ಎಲ್ಲ ಸಮಸ್ಯೆಗಳನ್ನು ಶಾಂತಿಯುತವಾದ ಮಾರ್ಗಗಳಿಂದಲೇ ಪರಿಹರಿಸಲು ಇಚ್ಛಿಸುತ್ತದೆಂಬ ಸಂಗತಿಯನ್ನು ರಾಷ್ಟ್ರಾಧ್ಯಕ್ಷರು ದೃಢವಾಗಿ ಸಾರಿದರು. ಪ್ರಧಾನಿ ನೆಹರೂರವರು ಸ್ವಾತಂತ್ರ್ಯ ದಿನದಂದು ಪ್ರಾತಃಕಾಲ ದಿಲ್ಲಿಯ ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯಲ್ಲಿ ಧ್ವಜಾರೋಹಣ ಕಾರ್ಯವನ್ನು ನೆರವೇರಿಸಿದರು. ಈ ಸಮಯ ನೆರೆದ ಐದು ಲಕ್ಷಕ್ಕಿಂತಲೂ ಹೆಚ್ಚಿನ ಜನ ಸಮುದಾಯವನ್ನು ಉದ್ದೇಶಿಸಿ ನೆಹರೂರವರು ಭಾಷಣ ಮಾಡಿದರು. ಸ್ವತಂತ್ರ ಭಾರತವನ್ನು ಕಟ್ಟುವ [illegible] ನಮ್ಮ ಮಕ್ಕಳು ಮೊಮ್ಮಕ್ಕಳು ಅಭಿಮಾನದಿಂದ ಸ್ಮರಿಸುವಂತೆ ನಾವು ಕೆಲಸ ಮಾಡಬೇಕೆಂದು ಅವರು ತಮ್ಮ ಭಾಷಣದ ಅಂತ್ಯದಲ್ಲಿ ಹೇಳಿದರು. ಭಾರತವು ಶಾಂತಿಯ ಧೋರಣವನ್ನು ಪುರಸ್ಕರಿಸುವುದೆಂದು ಅವರು ಪುನರುಚ್ಚರಿಸಿದರು. ಕೊರಿಯಾದಲ್ಲಿ ಭಾರತದ ಸೈನ್ಯವು ಶಾಂತಿಯ [illegible] ಹೋಗುವುದೆಂದು ಅವರು ಸ್ಪಷ್ಟೀಕರಿಸಿದರು. ಪಾಕಿಸ್ತಾನದೊಡನೆ ಸೌಹಾರ್ದಯುತ ಸಂಬಂಧ ಸ್ಥಾಪಿಸಬೇಕೆಂದು ಅವರು ಹಾರೈಸಿದರು. ಈಚೆಗೆ ಕಾಶ್ಮೀರದಲ್ಲಿ ನಡೆದ ಘಟನೆಗಳು ಅಲ್ಲಿಯ ಆಂತರಿಕ ವಿಷಯಗಳೆಂದೂ ಅವುಗಳಿಂದಾಗಿ ಭಾರತೀಯರು ಕಳವಳಗೊಳ್ಳಬೇಕಾಗಿಲ್ಲವೆಂದೂ ನೆಹರೂ ನುಡಿದರು. ಬೇರೆ ಬೇರೆ ರಾಜ್ಯದ ಮುಖ್ಯ ಮಂತ್ರಿಗಳು ಸ್ವಾತಂತ್ರ್ಯ ದಿನದಂದು ಜನತೆಯನ್ನುದ್ದೇಶಿಸಿ ನೀಡಿದ ಸಂದೇಶದಲ್ಲಿ ಸ್ವಾತಂತ್ರ್ಯ ದೊರೆತ ಈ ಆರು ವರ್ಷಗಳ ಅವಧಿಯಲ್ಲಿ ನಾವು ಸಾಧಿಸಿದ ಕೆಲಸಗಳ ಬಗ್ಗೆ ಅಭಿಮಾನವನ್ನು ಹೊಂದಬೇಕೆಂದೂ ಘಟನಾತ್ಮಕವಾದ ಮಾರ್ಗದಲ್ಲಿ ಸಾರ್ವಾಂಗೀಣ ಉನ್ನತಿಯನ್ನು ಸಾಧಿಸಿಕೊಳ್ಳಲು ಅವಿರತ ದುಡಿಯಬೇಕೆಂದೂ ಪ್ರಾರ್ಥಿಸಿಕೊಂಡರು. ಮೇಲಿಂದ ಮೇಲೆ ನೆ[illegible]ಗೆ ಸಂದೇಶಗಳಾಗಲೀ ಭಾಷಣಾದಿಗಳಾಗಲೀ ಯಾವುದೇ ಹೊಸ ಭರವಸೆಯನ್ನು ಕೊಡದಿರಬಹುದು. ಆದರೆ ಸ್ವತಂತ್ರ ರಾಷ್ಟ್ರವಾದ ಭಾರತದ ಪುನರುದ್ಧಾರದ ಮಾರ್ಗ ಇದಲ್ಲದೆ ಬೇರಿಲ್ಲವೆಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು ಕೆಲಸಮಾಡುವುದೇ ನಮ್ಮ ಕರ್ತವ್ಯ.

ಭಕ್ತ ಪೂರಣ್

ವಸಂತ ಪಾತ್ರಗಳು:

ನಿರುಪಾರೊಯ್, ಮನಮಾಲಾ, ಸಾಹುಮೋದಕ್, ಸಪ್ರು,
ಲಲಿತಾ ಪವಾರ್ ಮತ್ತು ನೂರಾರು ಇತರರು.

ತಾ. 18–8–53 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

Estd: 1906

THE CANARA BANKING CORPORATION LTD.

H. O.: **UDIPI**, (S. India)

ಬೇಂಕಿಂಗ್ ಕ್ಷೇತ್ರದಲ್ಲಿ ಹಳೆಯದಾಗಿ, ವ್ಯವಹಾರದಲ್ಲಿ ಅತ್ಯಾಧುನಿಕ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ನಿರಾಡಂಬರವಾಗಿ ದಿನೇ ದಿನೇ ವೃದ್ಧಿಯಾಗುತ್ತಲಿರುವ ಬೇಂಕಿಂಗ್ ಸಂಸ್ಥೆ

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನವಯುಗ

ಉಡುಪಿ, ಗುರುವಾರ ೨೦-೮-'೫೩

ತಪ್ಪು ಕಲ್ಪನೆ

ಪ್ರಶ್ನೋತ್ತರ ಕಾಲದಲ್ಲಿ ಲೋಕಸಭೆಯ ಮುಂದೆ ಆಹಾರ ಶಾಖೆಯ ಉಪಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಭಾರತೀಯರು ಸಮಾಧಾನದ ಉಸಿರೆಳೆಯಬಹುದಾದ ಒಂದು ಪ್ರಾಮುಖ್ಯ ಸಂಗತಿಯನ್ನು ಪ್ರಕಟಿಸಿದರು— ಭಾರತವು ಅಕ್ಕಿಯ ಮಟ್ಟಿಗೆ ಈಗಾಗಲೇ ಸ್ವಾವಲಂಬಿಯಾಗಿರುವುದೆಂದು ಅವರು ಹೇಳಿದರು. ಈ ಸಂಗತಿಯನ್ನು ಸ್ಪಷ್ಟಗೊಳಿಸುತ್ತಾ ಅವರು ಸರಕಾರದೊಡನೆ ಅಕ್ಕಿಯ ದಾಸ್ತಾನು ತೃಪ್ತಿಕರವಾಗಿದೆ ಎಂದು ತಿಳಿಸಿದರು. ಬರ್ಮಾದಿಂದ ಈ ವರ್ಷ ಟನ್ನಿಗೆ ೬೦ ಪವನುಗಳ ಬೆಲೆಯನ್ನು ಕೊಟ್ಟು ಒಂದೂವರೆ ಲಕ್ಷ ಟನ್ನು ಅಕ್ಕಿಯನ್ನು ಆಯಾತ ಮಾಡಿಕೊಳ್ಳಲಾಗಿದೆಯೆಂದೂ ಅವರು ಅದೇ ಸಮಯದಲ್ಲಿ ನುಡಿದರು. ಇದು ಸ್ವಾವಲಂಬನಕ್ಕೆ ಪೋಷಕವಾದುದೆ? ಎಂಬ ಸಂದೇಹ ಸ್ವಾಭಾವಿಕವಾಗಿಯೇ ಬರುತ್ತದೆ. ಆಹಾರ ಮಂತ್ರಿಗಳಾದ ಮಾನ್ಯ ಕಿದ್ವಾಯಿಯವರು ಬರ್ಮಾ ದೇಶದಿಂದ ನಮಗೆ ಈ ವರ್ಷ ಬೇಕೆಂದಾಗ ಒಟ್ಟು ಐದು ಲಕ್ಷ ಟನ್ನುಗಳಷ್ಟು ಅಕ್ಕಿ ದೊರೆಯಬಹುದೆಂದೂ ಆದರೆ ಸರಕಾರದ ಸಂಗ್ರಹವು ತೃಪ್ತಿಕರವಾಗಿರುವುದರಿಂದ ಇನ್ನು ಆಯಾತವನ್ನು ಮಾಡಿಕೊಳ್ಳುವ ಇರಾದೆ ಇಲ್ಲವೆಂದೂ ಹೇಳಿದರು. ಸರಕಾರವು ಈ ವರ್ಷ ೧೧ ಲಕ್ಷ ಟನ್ನುಗಳಷ್ಟು ಅಕ್ಕಿಯ ಎತ್ತುವಳಿಯನ್ನು ಪೂರೈಸಿದೆಯೆಂದೂ ಸದ್ಯದ ತೃಪ್ತಿಕರವಾದ ಸಂಗ್ರಹವನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯಗಳಲ್ಲಿ ರೇಶನು ಅಂಗಡಿ ಮುಂತಾದುವುಗಳ ಮೂಲಕ ಕೊಡಲಾಗುತ್ತಿದ್ದ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸಲಾಗಿದೆಯೆಂದೂ ಕಿದ್ವಾಯಿಯವರು ತಿಳಿಸಿದರು. ಸರಕಾರದೊಡನೆ ಅಕ್ಕಿಯ ಸಂಗ್ರಹವು ಸಾಕಷ್ಟು ಇದೆ ಎಂಬುದು ಸಮಾಧಾನಕರವಾದ ವಿಷಯ ಹೌದಾದರೂ— ಇಷ್ಟರಿಂದಲೇ ನಾವು ಸ್ವಾವಲಂಬಿಗಳಾಗಿದ್ದೇವೆ ಎಂದು ಹೇಳಿಕೊಳ್ಳುವುದು ಸರಿಯಾಗಲಾರದು. ನಮ್ಮ ಆಹಾರ ಧಾನ್ಯದ ಆಯಾತ ಪ್ರಮಾಣವು ವರ್ಷದಿಂದ ವರ್ಷಕ್ಕೆ ತಗ್ಗುತ್ತಾ ನಡೆದಿರುವುದೇನೋ ನಿಜ. ೧೯೫೧ನೇ ವರ್ಷದಲ್ಲಿ ೪೭ ಲಕ್ಷ ಟನ್ನು, ೧೯೫೨ನೇ ವರ್ಷದಲ್ಲಿ ೩೯ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯ ಆಯಾತ ಮಾಡಿಕೊಂಡ ನಮ್ಮ ಸರಕಾರವು ಈ ವರ್ಷ ೨೫ ಲಕ್ಷ ಟನ್ನುಗಳ ಪರಮಾವಧಿ ಮಿತಿಯನ್ನು ಅಂದಾಜಿನಲ್ಲಿಟ್ಟುಕೊಂಡಿದೆ. ಇದು ದೇಶದೊಳಗಿನ ಆಹಾರಧಾನ್ಯಗಳ ಸ್ಥಿತಿಯು ಉತ್ತಮವಾಗುತ್ತಾ ನಡೆದಿರುವುದಕ್ಕೆ ನಿದರ್ಶನವೆಂದು ಹೇಳಬಹುದು. ಕಿದ್ವಾಯಿಯವರು ಈ ವರ್ಷದ ಬೆಳೆಯ ಅಂದಾಜು ಅಂಕೆಸಂಖ್ಯೆಗಳನ್ನೂ ಲೋಕ ಸಭೆಯ ಮುಂದೆ ಪ್ರಕಟಿಸಿದರು. ಅವುಗಳು ಕಳೆದ ವರ್ಷದ ಅಂದಾಜಿಗಿಂತ ಹೆಚ್ಚಾಗಿರುತ್ತವೆ. ದೇಶದಲ್ಲಿ ನೀರಾವರಿಯ ಅನುಕೂಲತೆಗಳು ಹೆಚ್ಚಿಕೊಂಡಿರುವುದು ಮತ್ತು ಸಾಗುವಳಿಯೋಗ್ಯವಾದ ಭೂಮಿಯು ವಿಸ್ತಾರ ಹೊಂದುತ್ತಾ ನಡೆದಿರುವುದು ಈ ಹೆಚ್ಚುವಳಿಗೆ ಕಾರಣವಾಗಬಹುದು. ಆದರೆ ಬರ್ಮಾದಿಂದ ಅಕ್ಕಿಯನ್ನು ಇನ್ನೂ ನಾವು ತರಿಸುತ್ತಿರುವಾಗ, ಸ್ವಾವಲಂಬನದ ಅಂಚನ್ನು ನಾವು ಈಗಾಗಲೇ ಮುಟ್ಟಿದ್ದೇವೆಂದು ಸರಕಾರದ ಹೊಣೆಗಾರ ಸ್ಥಾನದಲ್ಲಿರುವ ವ್ಯಕ್ತಿ ಸಾರುವುದು ಜನರಲ್ಲಿ ತಪ್ಪು ಕಲ್ಪನೆಯನ್ನುಂಟುಮಾಡದಿರದು. ಕಿದ್ವಾಯಿಯವರು ರೇಶನು ಮೂಲಕ ಜನರಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸಿರುವರೆಂದಮೇಲೆ ಸರಕಾರೀ ಸಂಗ್ರಹವು ದಿನೇ ದಿನೇ ಕರಗುತ್ತಾ ಬರುವುದು ನಿಶ್ಚಯ. ಆಗ ಸಂಗ್ರಹವು ತೃಪ್ತಿಕರವಾಗಿದೆ ಎನ್ನುವ ಸಮಾಧಾನವೂ ಉಳಿಯುವುದಿಲ್ಲ. ರೇಶನು ಮೂಲಕ ನಿಶ್ಚಿತ ಪ್ರಮಾಣದಲ್ಲಿ ಅಕ್ಕಿ ದೊರೆಯುವ ಪ್ರದೇಶಗಳು ಈಗ ಬಹಳ ಮಿತವಾಗಿವೆ- ದೇಶದ ವಿಶಾಲವಾದ ಪ್ರದೇಶದಲ್ಲಿ ಬಹಿರಂಗ ಪೇಟೆಯ ವ್ಯವಹಾರ ನಡೆಯುತ್ತಿದೆ. ನಿಜವಾಗಿಯೂ ನಮ್ಮ ಅಕ್ಕಿಯ ಕೊರತೆ ದೂರಾಗಿದ್ದರೆ, ಬಹಿರಂಗ ಪೇಟೆಯ ಬೆಲೆ ಈಗಿನ ಮಟ್ಟವನ್ನು ಮುಟ್ಟುತ್ತಿರಲಿಲ್ಲ. ಸರಕಾರ ಹಂಚುವ ಅಕ್ಕಿಯ ಬೆಲೆಯ ಒಂದೂವರೆ-ಯಾ--ಎಂದೂ ಮುಕ್ಕಾಲು ಪಾಲಷ್ಟು ಬಹಿರಂಗ ಪೇಟೆಯ ದರವಾಗಿರುವಾಗ ಸಾಮಾನ್ಯ ಜನರಿಗೆ ಅಕ್ಕಿಯ ಮಟ್ಟಿಗೆ ಸ್ವಾವಲಂಬಿಗಳಾಗಿದ್ದೇವೆ ಎನ್ನುವ ಭರವಸೆ ಸೊಗಸೆನಿಸಲಾರದು. ಯುದ್ಧಕ್ಕೆ ಮುಂಚೆ ಭಾರತಕ್ಕೆ ಒಂದು ಲಕ್ಷ ಟನ್ನುಗಳಷ್ಟು ಅಕ್ಕಿಯ ಕೊರತೆ ಇದ್ದಿತು. ಈಗ ಅದು ದೂರಾಗಿರುವುದು ನಿಜವೆಂಬುದಕ್ಕೆ ದಾಖಲೆಗಳು ಇಲ್ಲ. ಬದಲು ವರ್ಷ ವರ್ಷವೂ ಭಾರತದಲ್ಲಿ ಪ್ರಜಾಜನನ ಪ್ರಮಾಣವು ಏರುತ್ತಿದೆ ಎಂದೂ ಅದೇ ಕಾಲಕ್ಕೆ ಕಳೆದ ಮೂವತ್ತು ನಾಲ್ವತ್ತು ವರ್ಷಗಳಿಂದ ನಮ್ಮ ಎಕ್ರೆಯೊಂದರ ಉತ್ಪಾದನೆ ಕುಸಿಯುತ್ತಾ ನಡೆದಿದೆಯೆಂದೂ ಅಂಕೆಸಂಖ್ಯೆಗಳು ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಹೀಗಿರುವುದರಿಂದ ಸರಕಾರ ಜನತೆಯಲ್ಲಿ ಸುಳ್ಳು ಭರವಸೆಯನ್ನು ಹುಟ್ಟಿಸಲು ನೋಡಬಾರದು -ಮತ್ತು ಜನತೆ ಸಹ ಸರಕಾರದ ಹೇಳಿಕೆಗಳ ಬಲವೊಂದರಿಂದಲೇ ಮೈಮರೆಯಬಾರದು. ನಮ್ಮ ಸಾಧನೆಗಳನ್ನು ವಸ್ತುಸ್ಥಿತಿಯ ಒರೆಗಲ್ಲಿಗೆ ಹಚ್ಚಿನೋಡಿ ಮೌಲ್ಯ ನಿರ್ಧರಿಸುವ ಪ್ರಜ್ಞೆ ನಮಗಿರಬೇಕು.

ಇರಾಣದ ಶಹಾರ ಪಲಾಯನ!

ರಾಜ್ಯಕ್ರಾಂತಿಯ ವಿಫಲ ಪ್ರಯತ್ನ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಇನ್ನೂ ಯಾವುದೇ ಇತ್ಯರ್ಥಕ್ಕೆ ಬಾರದ ಸಮಸ್ಯೆಗಳು ಹಲವಾರು ಇದ್ದಂತೆಯೇ ಇದೀಗ ಹೊಸತೊಂದು ಪ್ರಕರಣ ನಡೆದ ಸುದ್ದಿ ಬಂದಿದೆ— ಮುಸಾದಿಕರ ಪ್ರಧಾನಿತ್ವದ ವಿರುದ್ಧ ಇರಾಣದ ಶಹಾರು ದಂಗೆ ನಡೆಸಿದರೆಂದೂ ಅದು ವಿಫಲಗೊಳ್ಳಲು ಭಯಭೀತರಾಗಿ ತಮ್ಮ ರಾಣಿ ಹಾಗೂ ಆಪ್ತ ಕಾರ್ಯದರ್ಶಿಯನ್ನು ಕೂಡಿಕೊಂಡು ಅಲ್ಲಿಂದ ಪಲಾಯನ ಮಾಡಿರುವರೆಂದೂ ಈ ವಾರ್ತೆ ತಿಳಿಸುತ್ತದೆ. ಈಚೆಗೆ ಮುಸಾದಿಕರು ತಮ್ಮ ಕೈಯಲ್ಲಿಯೇ ಸರ್ವಾಧಿಕಾರವನ್ನು ತೆಗೆದುಕೊಳ್ಳುವ ಉದ್ದೇಶದಿಂದ ಪರ್ಶಿಯಾದ ಮಜಲೀಸನ್ನು ಬರ್ಖಾಸ್ತುಗೊಳಿಸುವ ಬಗ್ಗೆ ಜನಮತ ಗಣನೆಯನ್ನು ನಡೆಸಿದ್ದರು. ಪರಿಣಾಮವಾಗಿ ಮುಸಾದಿಕರ ನಿಲುವಿಗೆ ಬೆಂಬಲ ದೊರೆಯಿತು. ಆದರೆ ಮಜಲೀಸನ್ನು ರದ್ದುಗೊಳಿಸುವ ಕ್ರಮವೇ ಮುಂತಾದ ಮುಸಾದಿಕರ ಈಚೆಗಿನ ಧೋರಣೆಯನ್ನು ಶಹಾರು ಮೆಚ್ಚಲಿಲ್ಲ. ಅವರು ಮುಸಾದಿಕರನ್ನು ಮತ್ತು ಅವರ ಅನುಯಾಯಿಗಳನ್ನು ಸರಕಾರದಿಂದ ತಳ್ಳಿ ಹಾಕಲು ಗುಪ್ತ ರೀತಿಯಿಂದ ಪ್ರಯತ್ನಿಸಿದರು. ಶಹಾರು ಮುಸಾದಿಕರ ಸ್ಥಾನದಲ್ಲಿ ಜನರಲ್ ಜಹೇದಿಯವರನ್ನು ಪ್ರಧಾನಿ ಪಟ್ಟಕ್ಕೆ ಏರಿಸುವ ಫರ್ಮಾನನ್ನು ಹೊರಡಿಸಿದ್ದಾರೆಂದೂ ಮುಸಾದಿಕರು ಘಟನಾತ್ಮಕವಲ್ಲದ ಹೆಜ್ಜೆಯನ್ನನುಸರಿಸಿದ್ದರಿಂದ ಅವರನ್ನು ತಳ್ಳಿ ಹಾಕುವ ಆಜ್ಞೆ ಕೊಟ್ಟಿದ್ದಾರೆಂದೂ ತಿಳಿದುಬರುತ್ತದೆ. ಶಹಾರ ಅಂಗರಕ್ಷಕರು ದಂಗೆ ಏಳುವ ಪ್ರಯತ್ನ ನಡೆಸಿದಾಗ, ಮುಸಾದಿಕರ ಸರಕಾರವು ತಕ್ಷಣ ಅದನ್ನು ಬಗ್ಗುಬಡಿಯಿತು. ಇದರಿಂದ ತನ್ನ ಭವಿಷ್ಯದ ಬಗ್ಗೆ ಭೀತರಾದ ಶಹಾರು ಮೊದಲು ಬಗದಾದಿಗೆ ಪಲಾಯನ ಮಾಡಿದರು. ಬಗದಾದದಿಂದ ಅವರು ವಿಮಾನ ಮೂಲಕ ಹೊರಟಿದ್ದು, ಎಲ್ಲಿ ಮುಟ್ಟುವರೆಂದು ತಿಳಿದಿಲ್ಲ. ಈ ಪ್ರಕರಣದಿಂದ ಏಳುವ ಮುಖ್ಯ ಪ್ರಶ್ನೆಯೆಂದರೆ--ಇರಾಣವು ಈಜಿಪ್ತದ ಮಾರ್ಗವನ್ನನುಸರಿಸಿ, ಗಣರಾಜ್ಯವಾಗಿ ಮಾರ್ಪಡುವುದೇ ಎಂಬುದಾಗಿದೆ. ರಾಜಕೀಯ ವಲಯಗಳ ಊಹಾಪೋಹವು ಇದಕ್ಕೆ ತುಂಬ ಪುಷ್ಟಿಕೊಡುತ್ತಿವೆ. ಶಹಾರು ರಾಜ್ಯತ್ಯಾಗ ಮಾಡಿಲ್ಲವೆಂದು ಹೇಳಲಾಗುತ್ತಿದ್ದರೂ--ಇರಾಣದ ಜನತೆಯ ಪ್ರೀತಿ ಸಂಪಾದಿಸಿದ ಮುಸಾದಿಕರು ನಗೀಬರ ಆದರ್ಶವನ್ನು ಅನುಸರಿಸಿ ಅರಸೊತ್ತಿಗೆಯನ್ನೇ ರದ್ದುಗೊಳಿಸುವ ಕ್ರಮ ಕೈಗೊಳ್ಳಬಹುದು. ಪರಿಣಾಮವಾಗಿ ಮೊದಲೇ ಜರ್ಜರಿತವಾದ ಇರಾಣದ ಆಂತರಿಕ ವ್ಯವಹಾರವು ಇನ್ನಷ್ಟು ಹಾಳಾಗುವ ಸಂಶಯವಿದೆ.

ಡಲ್ಲೇಸರ ಮೈತ್ರಿ ಒಪ್ಪಂದ

ಹಲವು ದಿನದ ರೋಗವೆನಿಸಿದ ಕೊರಿಯಾದಲ್ಲಿ ಯುದ್ಧವಿರಾಮ ಒಪ್ಪಂದವು ಕಾರ್ಯಾಚರಣೆಗೆ ಬಂದಿದ್ದರೂ ಯುದ್ಧ ಮುಂದುವರಿಯುವ ಮಾತುಕತೆಗಳು ನಿಂತಿರುವುದಿಲ್ಲ! ಯುದ್ಧ ಕೈದಿಗಳನ್ನು ಬಿಡುಗಡೆ ಮಾಡುವ ಕೆಲಸವು ನಡೆದಿದೆ-ಆದರೆ ಇಕ್ಕಡೆಯವರು ಸಹ ಪರಸ್ಪರರು ಪ್ರಾಮಾಣಿಕ ರೀತಿಯಲ್ಲಿ ನಡೆದುಕೊಂಡು ಯುದ್ಧ ಕೈದಿಗಳನ್ನು ಬಿಡುಗಡೆಮಾಡುತ್ತಿಲ್ಲವಾಗಿ ದೂರಿಕೊಳ್ಳುತ್ತಾರೆ. ಚೀನೀ ಕೈದಿಗಳಲ್ಲಿ ಹಲವಾರು ಮಂದಿಯನ್ನು ಬಿಡುಗಡೆ ಮಾಡಲು ರಾಷ್ಟ್ರಸಂಘದ ಸೇನಾಧಿಪತ್ಯ ಮನಸ್ಸು ಮಾಡಿಲ್ಲವೆಂದು ಕಮ್ಯೂನಿಸ್ಟರು ಆರೋಪಿಸಿದರೆ ಅಮೇರಿಕನ್ ಕೈದಿಗಳಲ್ಲಿ ಎಲ್ಲರನ್ನೂ ಕಮ್ಯೂನಿಸ್ಟರು ತಂದೊಪ್ಪಿಸುತ್ತಿಲ್ಲವೆಂದು ರಾಷ್ಟ್ರಸಂಘ ಹೇಳುತ್ತದೆ. ಈ ಅವಿಶ್ವಾಸ ಮತ್ತು ಆಕ್ರೋಶದ ವಾತಾವರಣಕ್ಕೆ ಒಪ್ಪವಿಡುವಂತೆ ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸರು ದಕ್ಷಿಣ ಕೊರಿಯಾದ ಅಧ್ಯಕ್ಷ ಡಾ. ಸಿಂಗ್ಮನ್ನರ್ಹೀಯವರನ್ನು ಮೊನ್ನೆ ತಾನೆ ಕಂಡು ಒಂದು ಒಪ್ಪಂದಮಾಡಿಕೊಂಡಿದ್ದಾರೆ. ಇದು ಪರಸ್ಪರ ಸಂರಕ್ಷಣಾ ಒಪ್ಪಂದವೆಂದು ಕರೆಯಲಾದರೂ ನಿಜವಾಗಿ ಮಿಲಿಟರಿ ಕಾರ್ಯಾಚರಣೆಯ ಶ್ರೀಗಣೇಶವೇ ಆಗಿದೆ. ಈ ಕರಾರಿನ ಪರಿಣಾಮವಾಗಿ ದಕ್ಷಿಣ ಕೊರಿಯಾದಲ್ಲಿ ಅಮೇರಿಕೆಗೆ ಯುದ್ಧ ಠಾಣ್ಯಗಳನ್ನು ಸ್ಥಾಪಿಸುವ ಅವಕಾಶ ದೊರೆತಿದೆ. ಈಗಿನ ವಾತಾವರಣದಲ್ಲಿ ಇಂಥ ಒಪ್ಪಂದವನ್ನು ಕೈಗೊಳ್ಳುವ ಅಗತ್ಯ ಇದ್ದಿರಲಿಲ್ಲ. ಇದನ್ನು ಕಂಡು ಸುಮ್ಮನುಳಿಯುವವರು ಕಮ್ಯೂನಿಸ್ಟರೆಂದು ನಾವು ತಿಳಿಯುವುದೂ ಸರಿಯಲ್ಲ—ಪ್ರಾಯಶಃ ಕಮ್ಯೂನಿಸ್ಟರು ರಶಿಯಾದೊಡನೆ ಈ ಬಗೆಯ ಸಂಧಿಯನ್ನು ಮಾಡಿಕೊಳ್ಳಲು ಮುಂದಾಗಬಹುದು. ಆಗ ಉತ್ತರ ಮತ್ತು ದಕ್ಷಿಣ ಕೊರಿಯಾಗಳು ಪ್ರಬಲ ಶಕ್ತಿಗಳ ಸೈನ್ಯ ಠಾಣ್ಯಗಳಾಗಿ ರೂಪಾಂತರ ಹೊಂದುವುವು. ಕೊರಿಯಾದ ನೆಲದಿಂದ ಎಲ್ಲ ವಿದೇಶೀ ಸೈನ್ಯಗಳೂ ಕಾಲ್ತೆಗೆಯಬೇಕೆಂದೂ ಕೊರಿಯಾದ ಏಕೀಕರಣವಾಗಬೇಕೆಂದೂ ಅಪೇಕ್ಷಿಸುತ್ತಿರುವ ಸಿಂಗ್ಮನ್ನರ್ಹೀಯವರ ಉದ್ದೇಶಕ್ಕೆ ಡಲ್ಲೇಸ-ರ್ಹೀ ಒಪ್ಪಂದ ತೀರ ವ್ಯತಿರಿಕ್ತವಾಗಿದೆ.

ರಾಜಕೀಯ ಸಮ್ಮೇಳನ

ಆದರೂ ಒಪ್ಪಂದ ನಡೆಯಿತು! ಆದೇಕೆ ಎಂಬುದು ವಿಚಾರಣೀಯವಾದ ಅಂಶ: ಸಂಯುಕ್ತ ರಾಷ್ಟ್ರ ಸಂಘದ ಕಡೆಯಿಂದ ಪ್ರತ್ಯಕ್ಷವಾಗಿ ಸೈನ್ಯ ಕೊಟ್ಟು ಸಹಕರಿಸಿದ ರಾಷ್ಟ್ರಗಳು ಕಮ್ಯೂನಿಸ್ಟರಿಗೆ ಒಂದು ಸಂದೇಶವನ್ನು ಕಳುಹಿಸಿ ಯುದ್ಧ ವಿರಾಮ ಒಪ್ಪಂದವನ್ನು ಅವರು ಭಂಗಿಸಿದ ಪಕ್ಷದಲ್ಲಿ ಮಿತ್ರ ರಾಷ್ಟ್ರಗಳೆಲ್ಲವೂ ಮರಳಿ ಯುದ್ಧ ಮಾಡುತ್ತವೆಂದೂ ಅಂಥ ಯುದ್ಧವು ಕೊರಿಯಾಕ್ಕೆ ಮಾತ್ರ ಪರಿಮಿತಗೊಳ್ಳದೆ ಚೀನಾದೊಳಗೆ ನುಗ್ಗಿಕೊಂಡೀತೆಂದೂ ಎಚ್ಚರಿಸಿದ್ದಾರೆ. ಹಾಗಿದ್ದರೆ-ಶಾಂತಿಯಿಂದ ಸಮಸ್ಯೆಯನ್ನು ಬಗೆಹರಿಸುವ ಇರಾದೆಯೇ ಇಲ್ಲವೆಂದಾಯಿತು. ಡಲ್ಲೇಸರು ಸಿಂಗ್ಮನ್ನರ್ಹೀಯವರೊಡನೆ ಒಪ್ಪಂದ ಮಾಡಿದ ಬಳಿಕ ಹೇಳಿದ ಮಾತುಗಳು ಇದನ್ನೇ ಧ್ವನಿಸುತ್ತವೆ. ಯುದ್ಧ ವಿರಾಮ ಒಪ್ಪಂದವಾಗಿ ಮೂರು ತಿಂಗಳಲ್ಲಿ ರಾಜಕೀಯ ಸಮ್ಮೇಳನದಲ್ಲಿ ಸಮುಚಿತವಾದ ಒಡಂಬಡಿಕೆಯಾಗದಿ

ದ್ದರೆ, ಅಮೇರಿಕಾ ಸಭಾತ್ಯಾಗ ಮಾಡುವುದೆಂದು ಅವರು ಇನ್ನೊಮ್ಮೆ ಸಾರಿದ್ದಾರೆ ಅಮೇರಿಕಾ ಸಿಂಗ್ಮನ್ರಿಯವರಷ್ಟೇ ಹಟಮಾರಿತನವನ್ನು ಈಗ ತೋರಿಸ ಹತ್ತಿರುವುದಕ್ಕೆ ಇಂಥ ಉದ್ಗಾರಗಳು ನಿದರ್ಶನ. ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಈಗ ತಾನೆ ಸೇರಿದ್ದು, ಅದರ ಮುಂದೆ ಕೊರಿಯಾ ರಾಜಕೀಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸುವ ಪ್ರಶ್ನೆ ಇರುತ್ತದೆ. ಇದರಲ್ಲಿ ಯಾ ವ್ಯಾವ ರಾಷ್ಟ್ರಗಳಿರಬೇಕೆಂಬ ಕುರಿತು ತೀವ್ರ ಭಿನ್ನಾಭಿಪ್ರಾಯವು ಮಹಾ ರಾಷ್ಟ್ರಗಳಲ್ಲಿ ಕಂಡು ಬರುತ್ತದೆ. ರಶಿಯಾವನ್ನು ಕಮ್ಯೂನಿಸ್ಟರ ಕಡೆಯವರು ಸೂಚಿಸಿದರೆ ತಮ್ಮ ಆಕ್ಷೇಪವಿಲ್ಲೆಂದೂ ಭಾರತವು ರಾಷ್ಟ್ರಸಂಘದ ಕಡೆಯಿಂದ ಪ್ರಾತಿನಿಧ್ಯ ಪಡೆಯುವುದಕ್ಕೆ ಯಾವುದೇ ಆತಂಕ ವಿರಲಾರದೆಂದೂ ಮೊನ್ನೆ ತಾನೆ ಅಮೇರಿಕದ ಪ್ರತಿನಿಧಿ ರಾಜರು ಹೇಳಿದ್ದರು ಆದರೆ ಎರಡು ದಿನಗಳಲ್ಲಿ ಅವರು ಮಾತುಬದಲಿಸಿದರು. ಭಾರತಕ್ಕೆ ಈ ರಾಜಕೀಯ ಪರಿಷತ್ತಿನಲ್ಲಿ ಸ್ಥಾನಕೊಡುವುದೇ ಸಲ್ಲದೆಂದು ಅವರವಾದ. ಭಾರತವು ಕೊರಿಯಾದಲ್ಲಿ ಸೈನ್ಯ ಕಳುಹಿಸಿ ಯುದ್ಧ ಮಾಡಿಲ್ಲ. ಅಲ್ಲದೆ ಯುದ್ಧಕೈದಿಗಳ ವಿನಿಮಯವನ್ನು ಮಾಡುವ ತಟಸ್ಥ ರಾಷ್ಟ್ರಗಳ ಸಮಿತಿಯ ನಿಷ್ಪಕ್ಷಪಾತ ಅಧ್ಯಕ್ಷಸ್ಥಾನವು ಅದಕ್ಕೆ ಸೇರಿದೆ. ಈಗ ರಾಜಕೀಯ ಸಮ್ಮೇಳನದಲ್ಲಿ ಅದಕ್ಕೆ ಪ್ರಾತಿನಿಧ್ಯ ಕೊಟ್ಟರೆ, ಭಾರತವು ತಾನೆ "ವಾದಿ, ಪ್ರತಿವಾದಿ, ಜ್ಯೂರಿ ಹಾಗೂ ಜಡ್ಜ" ಎಂಬಂತಾಗುವುದೆಂದು ಲಾಜರ ಅಭಿಪ್ರಾಯ.

ಶಾಂತಿಸೇನೆ ಹೊರಟಿತು!

ಭಾರತಕ್ಕೆ ರಾಜಕೀಯ ಸಮ್ಮೇಳನದಲ್ಲಿ ಸ್ಥಾನ ಪಡೆಯುವ ಅಭಿಲಾಷೆ ಇಲ್ಲವೆಂದೂ ಆದರೂ ಶಾಂತಿ ಪ್ರಯತ್ನಗಳನ್ನು ಸಫಲಗೊಳಿಸಲು ತನ್ನ ಉಪಸ್ಥಿತಿಯು ಆಗತ್ಯವೆಂದು ಸಂಬಂಧಿಸಿದ ಮಹಾರಾಷ್ಟ್ರಗಳು ತಿಳಿದ ಪಕ್ಷದಲ್ಲಿ ಭಾರತ ಈ ಹೊಣೆಯನ್ನು ಸ್ವೀಕರಿಸಲು ಹಿಂಜರಿಯದೆಂದೂ ನೆಹರೂರವರು ಪಾರ್ಲಿಮೆಂಟಿನ ಮುಂದೆ ಹೇಳಿದ್ದಾರೆ. ಭಾರತಕ್ಕೆ ಪ್ರಾತಿನಿಧ್ಯ ಕೊಡುವ ಪ್ರಶ್ನೆಯಲ್ಲಿ ಅಮೇರಿಕದ ನಿಲುವಿಗೆ ತೀರ ವಿರುದ್ಧವಾದ ಅಭಿಪ್ರಾಯವನ್ನು ಬ್ರಿಟನು, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲಾಂಡಗಳಂಥ ರಾಷ್ಟ್ರಕೂಟದ ಸದಸ್ಯ ರಾಷ್ಟ್ರಗಳು ವ್ಯಕ್ತಗೊಳಿಸಿವೆ. ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಇವು ಒಂದು ಗೊತ್ತುವಳಿಯನ್ನು ತಂದು, ಕೊರಿಯಾದ ಶಾಂತಿಗೆ ನೆರವಾದವರಲ್ಲಿ ಪ್ರಾಮುಖ್ಯವಾದ ರಾಷ್ಟ್ರವೆಂಬುದಕ್ಕಾಗಿಯೂ ಏಶಿಯಾದ ರಾಜಕಾರಣದ ಬಗ್ಗೆ ಅತ್ಯಂತ ಆಸ್ಥೆಯುಳ್ಳ ಮತ್ತು ಅಧಿಕಾರ ಸಂಪನ್ನವಾದ ದೇಶವೆಂಬುದಕ್ಕಾಗಿಯೂ ಭಾರತಕ್ಕೆ ಪ್ರಾತಿನಿಧ್ಯ ದೊರಕತಕ್ಕದ್ದೆಂದು ಅವು ಕೇಳಲಿವೆ. ರಶಿಯಾವನ್ನು ರಾಜಕೀಯ ಪರಿಷತ್ತಿನಲ್ಲಿ ಸೇರಿಸಿಕೊಳ್ಳಬೇಕೆಂಬ ಪಾಶ್ಚಾತ್ಯ ರಾಷ್ಟ್ರಗಳ ಇಚ್ಛೆಯನ್ನು ಅಮೇರಿಕಾ ಮನ್ನಿಸುವುದೆಂದು ತಿಳಿದಿದೆ. ರಾಷ್ಟ್ರಸಂಘದ ಸಾಮಾನ್ಯ ಸಭೆಯು ಏನೇ ನಿರ್ಣಯಿಸಲಿ-ಭಾರತವು ಕೊರಿಯಾದ ಶಾಂತಿಗೋಸ್ಕರ ತನ್ನಿಂದ ಶಕ್ಯವಿದ್ದ ಎಲ್ಲ ನೆರವನ್ನು ಕೊಡುವುದೆಂಬಲ್ಲಿ ಸಂದೇಹವಿಲ್ಲ. ಕೆಲವು ದಿನಗಳಿಗೆ ಮುಂಚೆ ಕೊರಿಯಾದ ಸ್ಥಿತಿಗತಿಯನ್ನು ಪರಿಶೀಲಿಸಲು ವಿದೇಶ ಶಾಖೆಯ ಕಾರ್ಯದರ್ಶಿ ಶ್ರೀ. ಆರ್. ಕೆ. ನೆಹರೂರ ಧುರೀಣತ್ವದಲ್ಲಿ ಕಳಿಸಿದ್ದ ಮಂಡಳವು ಈಗ ತಾನೆ ದಿಲ್ಲಿಗೆ ಮರಳಿ ಬಂದಿದೆ. ಅದರ ಹೇಳಿಕೆಯಂತೆ ಭಾರತವು ಗೌರವಯುತವಾಗಿ ತನ್ನ ಕರ್ತವ್ಯ ನಿರ್ವಹಿಸುವುದಕ್ಕೆ ಅನುಕೂಲವಾಗಿ ಇಕ್ಕಡೆಯ ಸೇನಾಧಿಪತ್ಯಗಳೂ ಸಹಕರಿಸುವ ಭರವಸೆ ಇದೆ. ಯುದ್ಧ ಕೈದಿಗಳ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಭಾರತವು ಕಳಿಸಲಿರುವ ಸೈನ್ಯದ ಮೊದಲನೆ ತಂಡವು ಮಂಗಳವಾರ ದಿನ ಮದ್ರಾಸು ರೇವಿನಿಂದ ಜಲದುರ್ಗ ಹಡಗದ ಮೇಲಿಂದ ಹೊರಟಿದೆ. ಇದು ಸಪ್ಟಂಬರ ಎರಡನೇ ವಾರ ಕೊರಿಯಾವನ್ನು ಮುಟ್ಟುವ ನಿರೀಕ್ಷೆ ಇದೆ. ಬುಧವಾರ ದಿನ ಹೊರಟ ಇನ್ನೊಂದು ಹಡಗವು ಅದಕ್ಕೂ ಮುಂಚಿತವಾಗಿ ಕೊರಿಯಾವನ್ನು ಸೇರುವುದು. ಸಪ್ಟಂಬರ ತಿಂಗಳ ಪ್ರಾರಂಭದಲ್ಲಿ ಭಾರತದ ಹಿರಿಯ ಸೈನ್ಯಾಧಿಕಾರಿಗಳು ಕೊರಿಯಾಕ್ಕೆ ತೆರಳುವರು. "ಹಿಂದಿನ ಕಾಲದಲ್ಲಿ ಯುದ್ಧಮಾಡುವುದಕ್ಕೋಸ್ಕರ ವಿದೇಶಗಳಿಗೆ ಸೈನ್ಯಗಳು ಕಳುಹಿಸಲ್ಪಡುತ್ತಿದ್ದವು. ಆದರೆ ಭಾರತವು ಈಗ ಶಾಂತಿಯ ಸಂರಕ್ಷಣೆಗೋಸ್ಕರ ತನ್ನ ಸೈನ್ಯವನ್ನು ಕಳುಹಿಸುತ್ತಿದೆ. ಇತಿಹಾಸದಲ್ಲಿಯೇ ಮಹತ್ವದ ಘಟನೆ ಇದು. ಈ ಗೌರವಕ್ಕೆ ತಕ್ಕುದಾದ ರೀತಿಯಲ್ಲಿ ... ಯಿಂದ ಭಾರತೀಯ ಸೈನ್ಯ ಕೆಲಸಮಾಡುವುದೆಂದು ಆಶಿಸುತ್ತೇನೆ" ಎಂಬುದಾಗಿ ಮದ್ರಾಸಿನ ಗವರ್ನರರು ಸೈನ್ಯದ ಪ್ರಥಮ ದಳವನ್ನು ಬೀಳ್ಕೊಡುವಾಗ ಹಾರೈಸಿ, ಹರಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 416/1953

ಲಕ್ಷ್ಮೀನಾರಾಯಣ ಭಟ್ಟ. ವಾದಿ

ಮತ್ತು

ಬಿ. ಕೆ. ರಾಮ ಭಟ್ಟ. ಕೃಷ್ಣ ಭಟ್ರ ಮಗ. ಉಡುಪಿ ತಾಲ್ಲೂಕ ಹಿರೇ ಬೆಟ್ಟು ಗ್ರಾಮದ ಬಾಳ್ಕಟ್ಟು ಮಟದಲ್ಲಿರುವವರು. ಪ್ರತಿವಾದಿ.

ಇವರೆದುರಿಗೆ

ಸದ್ರಿ ಪ್ರತಿವಾದೀಗೆ.

ವಾದೀಗೆ ಪ್ರತಿವಾದಿಯು ತಾ 18-7-1950 ರಲ್ಲಿ ರೂ 500/-ಕ್ಕೆ ಬರ್ಸಿಕೊಟ್ಟ ದಿಮಾಂಡು ನೋಟಿನ ಅಸಲು ಬಡ್ಡಿ ಕರ್ಚು ರೂಪಾಯಿ 582-4-4ಕ್ಕೆ ವಾದಿಯು ಮಾಡಿರುವ ಈ ದಾವೆಯು ತಾರೀಕು 28-8-1953ಕ್ಕೆ ಪ್ರತಿವಾದೀಗೆ ನೋಟೀಸು ಬಗ್ಗೆ ಮುಟ್ಟೀರುತ್ತದೆ. ಸದ್ರಿ ತಾರೀಕು 28-8-1953ನೇ ದಿವಸ ಬೆಳಿಗ್ಗೆ ಹತ್ತು ಗಂಟೇಗೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯು ಸ್ವತಹ ವ ವಕೀಲ ಮುಖಾಂತ್ರ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದ್ರೆ ಈ ದಾವೆಯನ್ನು ಆತನ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ತಿಳಿಯಲಾಗುತ್ತದೆ.

V. R. Kidiyur

Advocate for Plaintiff

ಉಡುಪಿ ತಾ 13 8-1953

ಉಡುಪಿ

ಅಂಜುಮಾನ್ ಕ್ಲಬ್ಬಿನಲ್ಲಿ ವೈದ್ಯರಿಗೆ ಮಾನಪತ್ರ ಸತ್ಕಾರ— ಸಾರ್ವಜನಿಕ ಸೇವೆಯನ್ನು ಸಲ್ಲಿಸುತ್ತಿರುವ ಡಾ। ಮಾಧವ ಪೈಗಳನ್ನೂ ಶ್ರೀ ಟಿ. ಎ. ಪೈ ಎಂ. ಎಲ್. ಎ. ಇವರನ್ನೂ ಗೌರವಿಸಲು ಉಡುಪಿ ಅಂಜುಮಾನ್ ಕ್ಲಬ್ಬಿನವರು ಇದೇ ತಾ. 7ನೇ ಸಂಜೆ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಸಮಾರಂಭದ ಅಧ್ಯಕ್ಷಸ್ಥಾನವನ್ನು ಸ್ಥಳೀಯ ದಿ। ಮುನ್ಸಿಫ್ ಜನಾಬ್ ಅಬ್ದುರ್ ರಹೀಂ ಅಹಮ್ಮದ್, ಅವರು ವಹಿಸಿದ್ದರು. ಬಾಬಿ ಸಯ್ಯದ್ ಇಸೂಫರಿಂದ ಪ್ರಾರ್ಥನೆಯಾದ ಬಳಿಕ ಜನಾಬ್ ರಫಿ ಉದ್ದಿನ್ ಸಾಹೇಬರು ಸ್ವಾಗತ ಅತಿಥಿಗಳಿಬ್ಬರಿಗೂ ಅಧ್ಯಕ್ಷರಿಗೂ ಹೂ ಮಾಲೆಗಳನ್ನಿತ್ತರು. ಕ್ಲಬ್ಬಿನ ಪರವಾಗಿ ವಕೀಲ್ ಶ್ರೀ ಪಿ. ವಿ. ಆಚಾರ್ಯರು ಮಾನಪತ್ರಗಳನ್ನೋದಿ ವೈದ್ಯರಿಗೆ ಅರ್ಪಿಸಿದರು. ಡಾ। ಎಸ್ ಆರ್. ಪೈ. ಪಂಡಿತ ಟಿ. ಎಸ್. ಕೇಶವನಂಬಿಯಾರ್, ಪಿ. ವಿ. ಆಚಾರ್, ಜನಾಬ್ ಎಮ್. ಬಿ. ಉಸ್ಮಾನ್, ಆರ್. ಆರ್ ಕುಂಜತ್ತೂರು ಮತ್ತು ಎ. ಜೆ. ಅಲ್ಸೆಯವರು ಪೂಜ್ಯ ಅತಿಥಿಗಳಿಬ್ಬರ ಜನಹಿತ ಕಾರ್ಯ ಪ್ರಶಂಸಿಸಿ ಮಾತನಾಡಿದರು. ಅತಿಥಿಗಳ ಉತ್ತರ, ಅಧ್ಯಕ್ಷರ ಮುಕ್ತಾಯ ಭಾಷಣ, ವಂದನಾರ್ಪಣೆಗಳಾದುವು.

ಶ್ರೀ ಕೃಷ್ಣಮಠದಲ್ಲಿ ಅಭಿನಂದನಪತ್ರ:— ಪರ್ಯಾಯ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರು ಇದೇ ತಾ. ೯ರಂದು ಸಂಜೆ ಡಾ। ಟಿ. ಮಾಧವ ಪೈಗಳಿಗೆ ಅಭಿನಂದನ ಪತ್ರಿಕೆಯನ್ನು ಅನುಗ್ರಹಿಸಿದರು ಶ್ರೀ ಭಂಡಾರಕೇರಿ ಮಠದ ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು. ಡಾ। ಪೈಗಳವರು ಸದುತ್ತರವಿತ್ತರು.

ಕಾಲೇಜು ಯೂನಿಯನ್ ಉದ್ಘಾಟನೆ- ಸ್ಥಳೀಯ ಎಮ್. ಜಿ. ಎಮ್. ಕಾಲೇಜು ಯೂನಿಯನ್ ಉದ್ಘಾಟನಾ ಸಮಾರಂಭವು ಇದೇ ತಾ. 14ರಲ್ಲಿ ಮಂಗಳೂರು ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ ಸೂರ್ಯನಾರಾಯಣ ಅಡಿಗರಿಂದ ನೆರವೇರಿಸಲ್ಪಟ್ಟಿತು ಶ್ರೀ. ಟಿ. ರಾಮ ಪೈ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು.

ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸ್ವಾಗತ ಅತಿಥಿಯ ಪರಿಚಯ ಮಾತ ಗಳನ್ನಾಡಿದರು. ಶ್ರೀ ರಘುರಾಮ ಎನ್. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಸ್ವಾತಂತ್ರ್ಯ ದಿನಾಚರಣೆಯು ತಾ. 15ರಂದು ಬೆಳಿಗ್ಗೆ ಅಜ್ಜರಕಾಡು ಮೈದಾನಿನಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಡಾ। ಪಿ ವಾಸುದೇವರಿಂದ ಧ್ವಜಾರೋಹಣದೊಡನೆ ನಡೆಯಿತು. ಸ್ಥಳೀಯ ಶಾಲಾ ಕಾಲೇಜುಗಳಲ್ಲೂ ಧ್ವಜವಂದನೆಗಳಾದುವು. ಶ್ರೀ ಎಚ್. ಸುಂದರರಾಯರು ಎಮ್. ಜಿ. ಎಮ್ ಕಾಲೇಜಿನಲ್ಲಿ ಭಾಷಣವಿತ್ತರು. ಅದೇ ಸಮಯ ಮೂರನೆಯ ಕಾಲೇಜು ಬಿಲ್ಡಿಂಗನ್ನು ಡಾ। ಮಾಧವ ಪೈಗಳಿಗೆ ಅರ್ಪಿಸಿದರು. ವಿದ್ಯಾರ್ಥಿಗಳ ಪರವಾಗಿ ಮಿಸ್ ಕಮಲಾ ಪೈಯವರು ಮಾತನಾಡಿದರು. ಗಾಯನವೇ ಮೊದಲಾದ ಕಾರ್ಯಕ್ರಮಗಳು ಇದ್ದುವು.

ಯೂತ್ ಕಾಂಗ್ರೆಸಿನಲ್ಲಿ ಡಾ। ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎಚ್. ಸುಂದರ ರಾಯರು ಭಾಷಣವನ್ನಿತ್ತರು. ಶ್ರೀ ಪಿ. ಶ್ರೀಪತಿ ಆಚಾರ್ಯರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎ ಜೆ. ಅಲ್ಸೆಯವರು ಧನ್ಯವಾದವನ್ನರ್ಪಿಸಿದರು. ಆರಂಭದಲ್ಲಿ ಶ್ರೀ ಸುಂದರರಾಯರ ಸಂಗೀತ ಕಚೇರಿ ಇತ್ತು.

ಆಫೀಸರ್ಸ್ ಕ್ಲಬ್ಬಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು— ತಾ 15ರಲ್ಲಿ ಸಂಜೆ ಕ್ಲಬ್ ಕಟ್ಟಡದಲ್ಲಿ ಜರಗಿತು ಅಧ್ಯಕ್ಷ ಶ್ರೀ ಅಬ್ದುರ್ ರಹೀಂ ಅಹಮ್ಮದರು ಸ್ವಾತಂತ್ರ್ಯ ಲಭಿಸಿದ ಪೂರ್ವೋತ್ತರ ವಿಷಯಗಳನ್ನೂ ಕಾಂಗ್ರೆಸ್ ಸರಕಾರವು ಸಾಧಿಸಿದ ಕಾರ್ಯಗಳನ್ನೂ ವಿವರಿಸಿ ಎಲ್ಲರೂ ಸ್ವಾತಂತ್ರ್ಯ ರಕ್ಷಣೆ ಬಗ್ಗೆ ದುಡಿಯಬೇಕೆಂದು ಭಾಷಣಮಾಡಿದರು. ಕಾರ್ಯದರ್ಶಿ ಎಸ್. ಜಿ. ಕೆ. ಕಣ್ವರವರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಉಪಾಹಾರ ಸತ್ಕಾರವಿತ್ತು.

ಕಿದಿಯೂರು— ಎಯ್ಡೆಡ್ ಹಾ। ಎ। ಶಾಲೆಯಲ್ಲಿ ಸ್ವಾತಂತ್ರ್ಯ ದಿನೋತ್ಸವವು ಶ್ರೀ ಕೆ. ಪದ್ಮನಾಭ ಭಟ್ B. A. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜಾರೋಹಣದ ಬಳಿಕ ಶ್ರೀಗಳಾದ ಎಲ್. ಫೆರ್ನಾಂಡಿಸ್, ಜಿ. ಕೆ. ಪದ್ಮನಾಭ ಭಟ್, ವೆಂಕಟಗಿರಿ, ಎಚ್. ಕೆ. ಮಾಧವ ಭಟ್ ಇವರು ಭಾಷಣ ಮಾಡಿದರು. ಮೆನೇಜರ್ ಶ್ರೀ ಎ. ನಾರಾಯಣ ತಂತ್ರಿಗಳವರಿಂದ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು. ಶ್ರೀ ಎ. ಎಸ್. ವೆಂಕಟರಮಣ ತಂತ್ರಿಗಳು ಧನ್ಯವಾದ ಅರ್ಪಿಸಿದರು.

'ನವಯುಗ'ದ

೩೩ನೇ ವರ್ಷವು

ಇದೇ ಸಪ್ಟಂಬರದಿಂದ ಪ್ರಾರಂಭ.

ನಮ್ಮ ಚಂದಾದಾರರು ಇದನ್ನು ಗಮನಿಸುವಂತೆ ವಿನಂತಿ.

ಚಂದಾಹಣ ಬಾಕಿ ಇರುವವರು ಅದನ್ನು ಈಗಲಾದರೂ ಕಳುಹಿಸಿಕೊಟ್ಟರೆ ತುಂಬ ಉಪಕಾರ.

ವಿ. ಪಿ. ಮಾಡಿದರೆ ೦—೯—೦ ಹೆಚ್ಚಿಗೆ ಖರ್ಚು ಬರುವುದರಿಂದ ಎಲ್ಲರೂ ಮನಿಯಾರ್ಡರು ಮಾಡುವಂತೆ ಸೂಚಿಸುತ್ತೇವೆ.

—ಪ್ರಕಟಣೆ—

ಉಡುಪಿ ತಾಲ್ಲೂಕ ಪೆರ್ಡೂರು ಗ್ರಾಮದ ಕ್ರೊತ್ತಾರಲ್ಲಿರುವ ಕೊರಗ ಯಾನೆ ಅಕ್ಕಂಮ ಸೆಟ್ಟಿ ರ ಮಗ ದೂವಣ್ಣ ಶೆಟ್ಟಿಯು ಸರ್ವ ಜನರಿಗೆ ತಿಳಿಸುವದೇನೆಂದ್ರೆ— ನಂನ ತಂಗಿ ಸುಬ್ಬಮ್ಮ ಸೆಡ್ತಿಯು ಈಗ ಕೆಲವು ಸಮಯದಿಂದ ಬುದ್ಧಿ ಸ್ವಸ್ಥತೆಯಿಲ್ಲದವಳಾಗಿದ್ದು ಅವಳನ್ನು ಎಂಟು ದಿವಸದ ಕೆಳಗೆ ನಮ್ಮ ಪಿತೃ ಕುಟುಂಬದ ಸುಬ್ಬಣ್ಣ ಶೆಟ್ರ-ಆಳಿಯ ಮಹಾಬಲ ಶೆಟ್ಟಿಯು ಅವಳಿಂದ ಅಕ್ರಮ ಲಾಭಹೊಂದುವ ದುರಾಶೆಯಿಂದ ತನ್ನ ಮನೆಗೆ ಕರೆದುಕೊಂಡು ಹೋಗಿ ದುರಗೊಡಿಸಿದ್ದಾನೆ. ಸದ್ರಿ ಸುಬ್ಬಮ್ಮ ಸೆಡ್ತಿಯು ಯಾವ ರೀತಿಯೂ ನನ್ನ ಸಂರಕ್ಷಣೆಯಲ್ಲಿದ್ದುದರಿಂದ ಅವಳಿಗೆ ಸಾಲಗಳೇನೂ ಇರುವದಿಲ್ಲ. ಇನ್ನು ಮುಂದೆ ಸಾಲಮಾಡುವ—ಆವಶ್ಯಕತೆಯೂ ಇರುವದಿಲ್ಲ. ಅವಳ ಈಗಿನ ಸ್ಥಿತಿಯಲ್ಲಿ ಯಾವತರದ ಬರಹಮೂಲಕ ವ್ಯವಹಾರ ಮಾಡುವದೆ ಶಕ್ಯವೂ ಇಲ್ಲ. ಆದುದರಿಂದ ಸದ್ರಿ ಸುಬ್ಬಮ್ಮ ಸೆಡ್ತಿಯಿಂದ ಯಾವ ತರದಿಂದಲಾದರೂ ವಸ್ತುಸ್ಥಿತಿ ವಗೈರೆ ಬರಹ ಮೂಲಕದ ವ್ಯವಹಾರ ನಡೆಸಿದ್ದಲ್ಲಿ ಅವುಗಳು ಊರ್ಜಿತವಲ್ಲ ಎಂಬ ಸಂಗ್ತಿಯನ್ನು ಸರ್ವಜನರಿಗೆ ಈ ಮೂಲಕ ತಿಳಿಸುತ್ತೇನೆ.

ದೂವಣ್ಣ ಶೆಟ್ಟಿ ರುಜು.

ಪೆರ್ಡೂರು, 19 8-1953

ಶಿರ್ವ- ಇತ್ತೀಚೆಗೆ ಶಿರ್ವ ಪಂಚಾಯತ್ ಬೋರ್ಡಿನ ಸಭೆಯು, ಶ್ರೀ ಯಸ್. ಅಂಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಕೂಡಿ, ಶಿರ್ವ ಭೂತಬೆಟ್ಟು ದೇವಸ್ಥಾನದ ರಸ್ತೆಗೆ ಜಲ್ಲಿ ಮಣ್ಣು ಹಾಕುವ, ಶಿರ್ವ ಮಟ್ಟಾರು ನೆಕ್ಕರೆ ಕಂಬಳತೋಡಿಗೆ ಒಂದು ಸಂಕ ಕಟ್ಟಿಸುವ, ಮಂಚಕಲ್ಲು ಪೇಟೆಯಲ್ಲಿ ಒಂದು ಬಸ್‌ಸ್ಟೆಂಡ್ ನಿರ್ಮಿಸುವ, ಶಿರ್ವ ಲೋಕಲ್ ಫಂಡ್ ಆಸ್ಪತ್ರೆಗೆ ಒಂದು ಪೋಸ್ಟ್ ಮಾರ್ಟೆಮ್ ಶೆಡ್, ಕಟ್ಟಿಸುವಂತೆ ಸಂಬಂಧ ಪಟ್ಟವರನ್ನು ಕೇಳಿಕೊಳ್ಳುವ ಮತ್ತು ಜಾನುವಾರು ದೊಡ್ಡಿಯೊಂದನ್ನು ನಿರ್ಮಿಸುವಂತೆ ಬಿಡಕೊಳ್ಳುವ ಮೊದಲಾದ ನಿರ್ಣಯಗಳಾದವು.

ಓಂದೂ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ನೆರವೇರಿತು. ಡಾ। ಯು. ಎಸ್. ನಾಯ್ಕರು, M.B., B. S., ರಾಷ್ಟ್ರ ಧ್ವಜಾರೋಹಣ ಮಾಡಿದರು. ಕಾಲೋಚಿತ ಭಾಷಣಗಳು, ತಿಂಡಿಹಂಚೋಣಗಳೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಕಟ್ಟಿಂಗೆರೆ:—ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿವಿದ್ಯಾ ವರ್ಧಕ ಸಂಘದ ವತಿಯಿಂದ ಈ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯು ತಾ 13-8-53 ರಂದು ತೆರೆಯಲ್ಪಟ್ಟಿತು. ಈ ಪ್ರಾರಂಭೋತ್ಸವದ ಅಧ್ಯಕ್ಷಸ್ಥಾನವನ್ನು ಶ್ರೀ ಅನಂತಕೃಷ್ಣ ಹೆಬ್ಬಾರರು ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಪಿ ಲಾಮದಾಸ ನಾಯಕ್ ಬಿ. ಎ; ಎಲ್.ಟಿ ಯವರು ಸಂಘದ ವಿವಿಧ ಚಟುವಟಿಕೆಗಳನ್ನು ಸಂಕ್ಷೇಪವಾಗಿ ವಿವರಿಸಿ, ಸ್ವಾಗತ ಭಾಷಣವನ್ನು ಮಾಡಿದರು. ಶ್ರೀಗಳಾದ ಕೆ. ಆರ್, ಶೆಣೈ ಮತ್ತು ಎಸ್. ಪಿ. ದೇವು ಶೆಟ್ಟರು ಶಾಲೆಯ ಏಳಿಗೆ ಬಗ್ಗೆ ಊರವರ ಸಹಕಾರ, ಪ್ರೋತ್ಸಾಹಗಳ ಆವಶ್ಯಕತೆಯನ್ನೂ ಪ್ರಾಥಮಿಕ ವಿದ್ಯಾಭ್ಯಾಸದ ನೂತನಯೋಜನೆಯನ್ನೂ ವಿವರಿಸಿದರು ಅಧ್ಯಕ್ಷರೂ ಸಂಘದಚಟುವಟಿಕೆಗಳನ್ನು ಶ್ಲಾಘಿಸಿ, ಶಾಲೆ ಹಾಗೂ ಊರವರ ಸಹಕಾರದ ಆಶ್ವಾಸನೆಯು ನಿತ್ತರು. ಶ್ರೀ ಕೆ. ಆರ್. ಶೆಣೈಯವರಿಂದ ಧನ್ಯವಾದ ಸಮರ್ಪಣೆ ಯಾಗಿ ರಾಷ್ಟ್ರಗೀತದೊಂದಿಗೆ ಸಮಾರಂಭವು ಕೊನೆಗೊಂಡಿತು. ಬಳಿಕ ನೆರೆದವರಿಗೆಲ್ಲಾ ತಿಂಡಿ ಹಂಚಲಾಯಿತು.

ಈ ಸಂಘದ ಅಧೀನತೆಯಲ್ಲಿ ಪ್ರಕೃತ ಒಂದು ಹೈಸ್ಕೂಲು ಒಂದು ಹಾಯರ್ ಎಲಿಮೆಂಟರಿ ಶಾಲೆ, ಏಳು ಪ್ರಾಥಮಿಕ ಶಾಲೆಗಳು ಮತ್ತು ಒಂದು ಸಾರ್ವಜನಿಕ ಪುಸ್ತಕ ಭಂಡಾರವು ಇದ್ದು ವಿದ್ಯಾ ಪ್ರಪಂಚದಲ್ಲಿ ಈ ಸಂಘವು ತೋರಿಸುತ್ತಿರುವ ಚಟುವಟಿಕೆಗಳು ಶ್ಲಾಘನೀಯವಾಗಿವೆ.

ಕುಂಬಳೆ—ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಇದೇ ತಾ 15ರಲ್ಲಿ ಸ್ಥಳೀಯ ಸರಕಾರಿ ಆಫೀಸುಗಳಲ್ಲೂ ಶಾಲೆಗಳಲ್ಲೂ ರಾಷ್ಟ್ರಧ್ವಜಗಳನ್ನೇರಿಸಲಾಯಿತು.

ಕಾಸರಗೋಡು—ಇಲ್ಲಿಯ ಇಸ್ಲಾಮಿಯಾ ಕ್ಲಬ್ಬಿನ ಉದ್ಘಾಟನೆಯನ್ನು ಇದೇ ತಾ। 10ರಲ್ಲು ಜನಾಬ್ ಎಚ್. ಎಟ್. ಚಮನ್ನಾಡರು ನೆರವೇರಿಸಿದರು.

ಸುರತ್ಕಲ್—ಮುಕ್ಕ ಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ಗದ ಕಂ ಹಾ। ಪ್ರಾ। ಶಾಲಾ ಮಕ್ಕಳ ಮತ್ತು ಅಧ್ಯಾಪಕರ ಒಡನಾಟದಿಂದ ಸ್ವಾತಂತ್ರ್ಯ ದಿನಾಚರಣೆಯು ತಾ 15ರಂದು ಧ್ವಜವಂದನೆ ಮ

ಬೊಂಬಾಯಿಯ ಬಂಟರಯಾನೆ ನಾಡವರ ಸಂಘದ—ಆಡಳಿತ ಮಂಡಳಿಯ ಸಭೆಯು ಈಚೆಗೆ ಜರಗಿದಾಗ ದ. ಕ. ಜಿಲ್ಲೆಯ ಶ್ರೀ ಎನ್. ಎಸ್. ಕಿಲ್ಲೆ ಮತ್ತು ಶ್ರೀ. ಜೆ. ಸಂಗಣ್ಣ ಹೆಗ್ಡೆಯವರ ಅಕಾಲ ನಿಧನಗಳ ಸಂತಾಪ ಸೂಚಿಸಿ ದಿವಂಗತರಿಬ್ಬರ ಕುಟುಂಬಗಳಿಗುಂಟಾದ ಅಪಾರ ಶೋಕದಲ್ಲಿ ಸಹಸಂತಾಪವನ್ನು ವ್ಯಕ್ತಪಡಿಸಿ ದಿವಂಗತರ ಆತ್ಮಗಳಿಗೆ ಶಾಂತಿಯನ್ನು ಕೋರುವ ಗೊತ್ತುವಳಿಗಳನ್ನು ಸ್ವೀಕರಿಸಿತು.

ಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ತೆಣ್ಣೀರುಪಂತ:—ಇಲ್ಲಿಯ ಪುಸ್ತಕ ಭಂಡಾರದ ಉದ್ಘಾಟನಾ ಸಮಾರಂಭವು ಇದೇ ತಾ 7ರಲ್ಲು ಸ್ಥಳೀಯ ವಯಸ್ಕರ ಶಿಕ್ಷಣ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಧರ್ಣಪ್ಪನವರಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಾಬುಸೆಟ್ಟಿ, ಚಂದಪ್ಪ ಪೂಜಾರಿ, ಇಬ್ರಾಹಿಮ್ ಬ್ಯಾರಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ನಡೂರು:—ಇದೇ ತಾ 15ರಲ್ಲು ಸ್ವಾತಂತ್ರ್ಯ ದಿನಾಚರಣೆಯು ಧ್ವಜವಂದನೆ, ಮೆರವಣಿಗೆ, ದೇವಸ್ಥಾನದಲ್ಲಿ ವಿಶೇಷಪೂಜೆ, ಮಕ್ಕಳಿಗೆ ತಿಂಡಿ ಹಂಚೋಣ, ಬಡವರಿಗೆ ದಾನಧರ್ಮ ಶ್ರೀ ಬಿ. ಕುಶಲ ಸೆಟ್ಟರಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಮುಂತಾದ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಕೊಡ್ಲಾಡಿ—ಕುಂದಾಪುರ ತಾಲೂಕು ಕೊಡ್ಲಾಡಿ ಗ್ರಾಮದಲ್ಲಿ ಕೆಲವು ಸಮಯದಿಂದ ಕುಂಬಾ ಉಪದ್ರ ಕೊಡುತ್ತಿದ್ದ ಹುಲಿಯನ್ನು ತಾಲೂಕು ತಹಶಿಲ್ದಾರ್ ಮಂಜೇಗಾರ್ ಮತ್ತು ಶ್ರೀಗಳಾದ ಎ ವೀರಾ ಸೆಟ್ಟಿ ಕೃಷ್ಣಪ್ಪ ಸಟ್ಟಿ, ಕೃಷ್ಣ ಭಂಡಾರಿ ಕೊಡುವಿಕೆಯಿಂದ ಇದೇ ತಾ 10ರಲ್ಲು ಆಜ್ರಿ ಗ್ರಾಮದ ಶ್ರೀ ಶೇಷ ಸೆಟ್ಟರು ಗುಂಡಿಕ್ಕಿಕೊಂದಿರುತ್ತಾರೆ.

ಎಕ್ಕಾರು—ಪಂಚಾಯತ ಬೋರ್ಡು ಆಶ್ರಯದಲ್ಲಿ ಬೆಳಿಗ್ಗೆ ಪೆರ್ಮುದೆ ಮತ್ತು ಎಕ್ಕಾರು ಶಾಲಾ ಮಕ್ಕಳ ಮೆರವಣಿಗೆ, ಧ್ವಜವಂದನೆ, ಮಕ್ಕಳಿಗೆ ತಿಂಡಿ ಹಂಚೋಣ, ಸಂಜೆ ಸಾರ್ವಜನಿಕ ಸಭೆ, ಭಾಷಣ ವಯಸ್ಕರ ಶಿಕ್ಷಣ ಶಾಲಾ ಉದ್ಘಾಟನೆ ಇತ್ಯಾದಿ ಕಾರ್ಯಕ್ರಮಗಳು ವಿಲೇಜ್ ಗೈಡ್ ಶ್ರೀ ದೇರಣ್ಣ ರೈ ಮತ್ತು ಸೋಶಿಯಲ್ ಆರ್ಗನೈಜರ್ ಶ್ರೀಮತಿ ಸುಲೋಚನಾ ಬಾಯಿಯವರ ಸಮಕ್ಷಮ ನಡೆದವು.

ಮಣಿಪಾಲ— ಇಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸ್ವಾತಂತ್ರ್ಯೋತ್ಸವ ಡಾ॥ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು, ಪ್ರಿನ್ಸಿಪಲ್ ಮಂಗೇಶ ರಾಯರ ಭಾಷಣದ ನಂತರ ಅಧ್ಯಕ್ಷರು ದೇಶದ ಮುಂದಿರುವ ಸಮಸ್ಯೆಗಳ ಕುರಿತು ಬೋಧಪ್ರದ ಭಾಷಣ ಮಾಡಿದರು.

ಅದೇ ಸಮಯ ಮಣಿಪಾಲ ಹೈಸ್ಕೂಲಿನಲ್ಲಿ ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಸಮಾರಂಭ ನೆರವೇರಿತು. ಶ್ರೀ ಪುಂಡಲೀಕ ಶೆಣೈ, ಶ್ರೀ ನೆಲ್ಲಿ ಮತ್ತು ಅಧ್ಯಕ್ಷರು ಪಂಚವಾರ್ಷಿಕ ಯೋಜನೆಯೂ, ಅದರಲ್ಲಿ ವಿಧ್ಯಾರ್ಥಿಗಳ ಹೊಣೆಗಾರಿಕೆಯೂ ಎಂಬ ವಿಷಯ ವಿಧ್ಯಾರ್ಥಿಗಳಿಗೆ ಬೋಧಿಸಿದರು.

ಪುತ್ತೂರು- ಸ್ವಾತಂತ್ರ್ಯ ದಿನಾಚರಣೆಯು ಡಿಪ್ಟಿ ಕಲೆಕ್ಟರ್ ಶ್ರೀ ಬಿ. ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಎಂ. ಸದಾಶಿವ ರಾವ್, ಮೊದಲಾದವರ ಭಾಷಣಗಳಾದ ಮೇಲೆ ಅಧ್ಯಕ್ಷರು ಬಡಬಗ್ಗರಿಗೆ ಅಕ್ಕಿ ಮತ್ತು ವಸ್ತ್ರ ಹಂಚಿದರು.

ಕಾರ್ಕಳ- ಸ್ವಾತಂತ್ರ್ಯ ದಿನಾಚರಣೆಯು ಶಾಲೆ, ಹೈಸ್ಕೂಲ್‌ಗಳಲ್ಲೂ ಸಂಘ ಸಂಸ್ಥೆಗಳಲ್ಲೂ ವಿಧಿಪ್ರಕಾರ ನೆರವೇರಿತು.

ಸಮಾಜಹಿತ ಯೋಜನೆಯ ಸಹಾಯದಿಂದ ರಚಿಸಲ್ಪಡಲಿರುವ ಮಿಯ್ಯಾರು ಬೋ. ಹಾ. ಶಾಲೆಯ ಹೊಸ ಕಟ್ಟಡದ ಅಸ್ತಿವಾರವು ತಾ. 15ರಲ್ಲಿ ಶ್ರೀ ಆರ್, ಹರಿ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಿ. ವೆಂಕಟೇಶ ಭಟ್, ದೇವೇಂದ್ರ, ರೆ॥ ಫಾ॥ ಎಂ. ಜೆ. ಪಿರೇರ, ಎಂ ಎಸ್. ಅಧಿಕಾರಿ, ಕೆ. ಶ್ರೀನಿವಾಸ ಶೆಣೈ, ಶ್ರೀನಿವಾಸ ಕಾಮತ್ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರು ಸಾರ್ವಜನಿಕರ ಸಹಕಾರವನ್ನು ಕೋರಿ ಭಾಷಣವಿತ್ತರು.

ಮಿಂಚಾರು.—ಎಡಪದವು ಬೋರ್ಡು ಹಾ। ಪ್ರಾ। ಶಾಲೆಯಲ್ಲಿ ಬೆಳಿಗ್ಗೆ ಶ್ರೀ ಅನಂದ ಅಳ್ವರ ಅಧ್ಯಕ್ಷತೆಯಲ್ಲಿ ಧ್ವಜವಂದನೆಯಾಯಿತು. ಸಂಜೆ ವಯಸ್ಕರ ಶಾಲಾ ವತಿಯಿಂದ ಭಾರತ ವಾಚನಾದಿ ಕಾರ್ಯಕ್ರಮಗಳಾದುವು

ಇನ್ನ—ಸಭೆ, ಮೆರವಣಿಗೆ, ಶ್ರೀ ವೈಕುಂಠ ಶ್ಯಾನುಭೋಗರಿಂದ ಧ್ವಜಾರೋಹಣ, ಭಾಷಣಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯೋತ್ಸವ ಜರಗಿತು.

ಮಂಗಳೂರಲ್ಲಿ ಕಿಲ್ಲೆಯವರ ಸ್ಮಾರಕ ಯೋಜನಾ ಸಭೆ—

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳೂ ಕಾಂಗ್ರೆಸ್ ಮತ್ತು ಹರಿಜನ ಸೇವಕರೂ ಆಗಿದ್ದ ದಿ। ಎನ್. ಎಸ್. ಕಿಲ್ಲೆಯವರ ಯೋಗ್ಯಸ್ಮಾರಕವೊಂದನ್ನು ಹೇಗೆ ಕಾರ್ಯಾಚರಣೆಗೆ ತರಬಹುದೆಂಬುದನ್ನು ವಿಚಾರಿಸುವುದಕ್ಕಾಗಿ ದಿವಂಗತರ ಹಿತೈಷಿಗಳ ಹಾಗೂ ಮೆಚ್ಚಿನವರ ಸಭೆಯೊಂದು ತಾ 13ರಲ್ಲಿ ಕೋರ್ಪರೇಶನ್ ಬ್ಯಾಂಕ್ ಕಟ್ಟಡದಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ನೆರವೇರಿ, ಜಿಲ್ಲೆಯ ಅಭ್ಯುದಯ ಮಾರ್ಗಗಳಾಗಿ, ಕಾಂಗ್ರೆಸ್ ಪ್ರಚಾರ, ಹರಿಜನಕಾರ್ಯ ಯಕ್ಷಗಾನಕಲೆಗೆ ಕಿಲ್ಲೆಯವರು ಸಲ್ಲಿಸಿದ ಅದ್ವಿತೀಯ ಸೇವೆಗಾಗಿ ಅವರಿಗೊಂದು ಯೋಗ್ಯ ಸ್ಮಾರಕವನ್ನು ಸ್ಥಾಪಿಸಬೇಕೆಂದಾಯಿತು.

ಕಿಲ್ಲೆಯವರ ಧರ್ಮಪತ್ನಿಗೆ ನಿಧಿಯೊಂದನ್ನು ಕೊಡಬೇಕೆಂಬ, ಸೂಟರ್ ಪೇಟೆಯ ಹರಿಜನ ವೆಲ್‌ಫೇರ್ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾರ್ಪಡಿಸಲು ಅನುಕೂಲವಾಗುವಂತೆ ಅದರ ಕಟ್ಟಡವನ್ನು ವಿಸ್ತರಿಸಬೇಕೆಂಬ, ಯಕ್ಷಗಾನ ಕಲಾಮಂದಿರವೊಂದನ್ನು ರಚಿಸಬೇಕೆಂಬ, ಮತು ಪಾಕ್ಸ್ಪರ್ಧೆಗಾಗಿ ರೋಲಿಂಗ್ ಕಪ್ಪೊಂದನ್ನು ಕಿಲ್ಲೆಯವರ ಹೆಸರಲ್ಲಿ ಕೊಡಬೇಕೆಂಬ ಬಗ್ಗೆ ಸೂಚನೆಗಳಾದುವು. ಕೊನೆಗೆ ಡಾ। ಯು. ಪಿ. ಮಲ್ಯ ಮತ್ತು ಎಡ್ವಕೇಟ್ ಕೆ. ಬಾಲಕೃಷ್ಣ ರಾಯರು ಸ್ಥಾಪಕರಾಗುಳ್ಳ 54 ಜನರ ಕಮಿಟಿಯೊಂದು ನಿಧಿಸಂಗ್ರಹ ಮತ್ತು ಸ್ಮಾರಕ ವಿಧಾನವನ್ನು ನಿರ್ಧರಿಸುವುದಕ್ಕಾಗಿ ರಚಿಸಲ್ಪಟ್ಟಿತು.

For Protection and Provision Consult

The New Guardian of India Life Insurance Co., Ltd.

Estd} Head office: **MADRAS** [1934

NEW BUSINESS Exceeds ... 66½ Lakhs.
PREMIUM INCOME „ ... 15 „
LIFE FUND „ ... 54¾ „
ASSETS „ ... 60¼ „
BUSINESS IN FORCE Nearly 3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia, *Branch Manager,*
Diamond Building, Hampankatta, MANGALORE, S. K.

ಹೋಮ್ ಸಿನೆಮಾ ಪ್ರೊಜೆಕ್ಟರ್



ಸಿನೆಮಾ ಮಂದಿರಗಳಲ್ಲಿ ನೋಡುವಂತಹ ಮಾದರಿಯಲ್ಲಿ 35 ಎಮ್. ಎಮ್. ಫಿಲ್ಮುಗಳು, ಸ್ಲೈಡುಗಳು ಇತ್ಯಾದಿ, ಚಲಿಸುವ, ನೃತ್ಯ ಮಾಡುವುದನ್ನು ನಿಮ್ಮ ಮನೆಯಲ್ಲೇ ನೋಡಬಹುದು. ಸಾಮಾನ್ಯ ಚಾರ್ಜುಗಳು ಇಲ್ಲದ ಇಲೆಕ್ಟ್ರಿಕ್ ಬಲ್ಬು (AC-DC) ಗಳ ಸಹಾಯದಿಂದಲೇ ನಡೆಸಬಹುದು. ಹತ್ತು ಅಡಿ ಉದ್ದದ ಫಿಲ್ಮ್ ಪುಕ್ಕಟೆ. ಪ್ರೊಜೆಕ್ಟರ್ ಕ್ರಯ ರೂ. 10/- ವಿ. ಪಿ. ಪಿ. ಚಾರ್ಜು ರೂ. 3/- ಪ್ರತ್ಯೇಕ. ಹೆಚ್ಚಿಗೆ ಫಿಲ್ಮುಗಳು ಬೇಕಾದರೆ ಗಜಕ್ಕೆ 0-1-0 ಪ್ರತ್ಯೇಕ ತೆರಬೇಕು.

ಇಲೆಕ್ಟ್ರಿಕ್ ಮತ್ತು ರೇಡಿಯೊ ಗಾಯಿಡ್. ಬರೇ ರೂ. 15/-ಕ್ಕೆ ರೇಡಿಯೋ ತಯಾರಿಸುವುದನ್ನೂ, ಇಲೆಕ್ಟ್ರಿಕ್ ವಯರಿಂಗ್ ಮತ್ತು ರಿಪೇರಿ ಕೆಲಸವನ್ನೂ ಕಲಿತು ತಿಂಗಳಿಗೆ ರೂ. 200/ ಸಂಪಾದಿಸಿರಿ. ಬೆಲೆ ರೂ. 1/ ವಿ. ಪಿ. ಚಾರ್ಜು ರೂ. 1/ ಪ್ರತ್ಯೇಕ.

ಇಂಗ್ಲಿಷ್ ರಾಗದ ರಾಗಮಾಲೆಗಳು (ಫ್ಲಿಟ್-ಬಸುರಿ). ಹಿತ್ತಾಳೆಯಿಂದ ತಯಾರಿಸಲ್ಪಟ್ಟು ಇಂಪಾದ ಸ್ವರವನ್ನು ಕೊಡುತ್ತವೆ. ಬೆಲೆ ರೂ. ೬/- ವಿ. ಪಿ. ಖರ್ಚು ರೂ. 1-4-0 ಪ್ರತ್ಯೇಕ.

HINDUSTAN TRADERS & PUBLISHERS LTD.,
SARAI-BALA, ALIGARH (U. P.)

ಸ್ವಾತಂತ್ರ್ಯೋತ್ಸವದ ಕಾಣಿಕೆ!

ಆಗಸ್ಟ್ ೧೫ರಿಂದ ಸಪ್ಟೆಂಬರ್ ೧೫ರ ವರೆಗೆ ಮಾತ್ರ!

೧೦ ರೂ. ಕಳಿಸಿದರೆ ೧೫ ರೂ. ಪುಸ್ತಕ ನಿಮ್ಮ ಬಾಗಿಲಿಗೆ!

ಕಥೆ, ಕಾದಂಬರಿ, ಚರಿತ್ರೆ, ನಾಟಕ, ಕಾಮವಿಜ್ಞಾನ ಇತ್ಯಾದಿ ಸಾಹಿತ್ಯ ಕನ್ನಡ ಪುಸ್ತಕ ಪ್ರೇಮಿಗಳಿಗೂ, ಶಾಲೆ-ಕಾಲೇಜು-ಗ್ರಾಮಪಂಚಾಯಿತಿ ವಾಚನಾಲಯದವರಿಗೂ ಪುಸ್ತಕ ಕೊಳ್ಳಲು ಸುವರ್ಣ ಸಂಧಿ!

ಪುಸ್ತಕಗಳ ವಿವರ ಹಾಗೂ ಬಾಕಿ ನಿಯಮಗಳಿಗೆ ಪತ್ರ ಬರೆಯಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಮಂಗಳೂರು

ಮುನಿಸಿಪಲ್ ಕೌನ್ಸಿಲಿನ ಸಭೆಯು—ಇದೇ ತಾ 13ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ ನಗರದ ನೀರಿನ ಸರಬರಾಯಿಯ ವಿಚಾರದಲ್ಲಿ ಅರ್ಥಿಕ ಸಮಿತಿಯು ಮಂಜೂರು ಮಾಡಿದ ನಿರ್ಣಯವನ್ನು ಚರ್ಚಿಸಿ ಮಂಜೂರು ಮಾಡಿತು. ನಗರ ಸಭೆಯು ನೀರಿನ ಸರಬರಾಯಿಗಾಗಿ ಸೇಕಡಾ 4½ ದರದ ಬಡ್ಡಿಯಲ್ಲಿ 17½ ಲಕ್ಷ ಸಾರ್ವಜನಿಕ ಸಾಲ ಪಡೆಯುವುದು. ಈ ಸಾಲವನ್ನು ಮೂರು ಕಂತುಗಳಿಂದ ಮರುಪಾವತಿ ಮಾಡಲಾಗುವುದು. ಮೊದಲ ಐದು ವರ್ಷದೊಳಗೆ ಐದು ಲಕ್ಷ, ಅನಂತರದ ಐದು ವರುಷಗಳಲ್ಲಿ ಐದು ಲಕ್ಷ ಮತ್ತು ಅನಂತರದ ಐದು ವರ್ಷಗಳಲ್ಲಿ ಏಳೂವರೆ ಲಕ್ಷ ರೂಪಾಯಿಯಂತೆ 15 ವರ್ಷಗಳಲ್ಲಿ ಈ ಸಾಲ ಸಂದಾಯವಾಗುವುದು.

ನಗರ ಸಭೆಯ 1952–53ನೇ ವರದಿಯ ಮುಖ್ಯಾಂಶಗಳು:—ನಗರ ಸಭೆಯ ಕ್ಷೇತ್ರವು 7·975 ಚದರ ಮೈಲು ವಿಸ್ತೀರ್ಣವುಳ್ಳದ್ದಾಗಿದೆ. ಜನಸಂಖ್ಯೆಯು 1,17,095 ಆಗಿದೆ. ನಗರವು 34 ವಾರ್ಡುಗಳಾಗಿ ವಿಭಜಿಸಲಾಗಿದೆ.

ವರದಿ ವರುಷದಲ್ಲಿ 28 ಸಭೆಗಳು ಜರಗಿದ್ದವು. ನಗರದಲ್ಲಿರುವ ಮಾರ್ಗದ ಉದ್ದವು 52 ಮೈಲು 4 ಫರ್ಲಾಂಗು 528 ಅಡಿ. ರಸ್ತೆಗಳಿಗಾಗಿ ಒಟ್ಟು ರೂಪಾಯಿ 1,53,217 ವೆಚ್ಚವಾಗಿತ್ತು. ವರ್ಷಾಂತ್ಯದಲ್ಲಿ 1515 ವಿದ್ಯುದ್ದೀಪಗಳಿದ್ದುವು. ಸೀಮೆಎಣ್ಣೆ ದೀಪಗಳು 556. ವಿದ್ಯುದ್ದೀಪವೊಂದಕ್ಕೆ ರೂ 39 ಮತ್ತು ಸೀಮೆಎಣ್ಣೆ ದೀಪವೊಂದಕ್ಕೆ ರೂ23 ವೆಚ್ಚವಾಗಿದೆ.

ನಗರ ಸಭೆಯ ಅಂಕಿತದಲ್ಲಿ 22 ಪ್ರಾಥಮಿಕ ಶಾಲೆಗಳಿದ್ದು ಆ ಪೈಕಿ 4 ಹಾ. ಎ. ಶಾಲೆಗಳು. ಈ ಶಾಲೆಗಳಲ್ಲಿ ಒಟ್ಟು 3245 ಬಾಲಕರೂ 2580 ಬಾಲಿಕೆಯರೂ ಶಿಕ್ಷಣಹೊಂದಿದ್ದಾರೆ. ಶಿಕ್ಷಣದ ಬಾಬ್ತು ಒಟ್ಟು ರೂ 1,73,998 ಉತ್ಪತ್ತಿ ನಗರ ಸಭೆಯ ಕೈಕೆಳಗೆ ನಾಲ್ಕು ಆಯುರ್ವೇದ ಡಿಸ್ಪೆನ್ಸರಿಗಳು ಮತ್ತು ಒಂದು ಯುನಾನಿ ಡಿಸ್ಪೆನ್ಸರಿಗಳಿವೆ. ಇವುಗಳಿಗಾಗಿ ರೂ 30,815 ವೆಚ್ಚವಾಗಿದೆ. ಐದು ಶಿಶು ಸಂಗೋಪನಾ ಮಂದಿರಗಳನ್ನು ನಗರ ಸಭೆಯು ನಡೆಸುತ್ತಿರುವುದು. ವರದಿ ವರ್ಷದಲ್ಲಿ 4267 ಜನನ ಮತ್ತು 1950 ಮರಣಗಳಾಗಿವೆ. ನಗರ ಸಭೆಯ ಕೈಕೆಳಗೆ ಒಟ್ಟು ಹನ್ನೊಂದು ಸಂತೆಗಳಿವೆ. ಇವುಗಳಿಂದ ರೂ 93,492 ಉತ್ಪತ್ತಿಯಾಗಿ ರೂ 3978 ವೆಚ್ಚವಾಗಿದೆ. ಬಸ್ಸು ಸ್ಟೇಂಡಿನಿಂದ ರೂ 21,423 ಉತ್ಪತ್ತಿಯಾಗಿ ಅದರ ರಕ್ಷಣೆಗಾಗಿ ರೂ 3540 ವೆಚ್ಚವಾಗಿದೆ.

19ನೆ ವಾರ್ಡ್ ನಿವಾಸಿಕರ ಸಂಘದ ಮಹಾಸಭೆಯು:—ಇದೇ ತಾ 9ರಂದು ಶ್ರೀ ಎಮ್. ಸುಂದರರಾವ್, ಸ್ಪೆಶಲ್ ಆಫೀಸರ್ ಜಿಲ್ಲಾ ಬೋರ್ಡು, ಅವರ ಅಧ್ಯಕ್ಷತೆಯಲ್ಲಿ ಜರಗಿ ಲೆಕ್ಕಪತ್ರಗಳ ಪರಿಶೀಲನೆಯಾಗಿ ಮುಂದಿನ ವರ್ಷದ ಕಾರ್ಯ ಸಮಿತಿಯನ್ನು ಆರಿಸಲಾಯಿತು.

ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ವಾರ್ಷಿಕೋತ್ಸವವು—ಇದೇ ತಾ 13ರಲ್ಲು ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಲ್. ಆಚಾರ್ಯರು ಸ್ವಾಗತ ಭಾಷಣ ಮಾಡಿದರು. ಉಪಹಾರ, ಸಂಗೀತಗಳಾದ ನಂತರ ಕೆಲಸಗಾರರ ಹಕ್ಕು ಬಾಧ್ಯತೆಗಳು ಸರಕಾರದ ಸಹಕಾರ ಇತ್ಯಾದಿಗಳ ಕೇಳಿಕೆಯ ನಿರ್ಣಯವಾಯಿತು. ಸಭಿಕರ ಭಾಷಣದಲ್ಲಿ ಸಂಘವನ್ನು ಐಕ್ಯದಿಂದ ಬೆಳೆಸಬೇಕೆಂದು ಕೇಳಿಕೊಳ್ಳಲಾಯಿತು.

ಸ್ವಾತಂತ್ರ್ಯ ದಿನೋತ್ಸವವು—ತಾ 15ರಂದು ಬೆಳಗ್ಗೆ ಜಿಲ್ಲಾ ಕಲೆಕ್ಟರರ ಧ್ವಜವಂದನೆಯಿಂದ ಪ್ರಾರಂಭವಾಯಿತು. ನಗರದ ಶಾಲಾ ಕಾಲೇಜುಗಳಲ್ಲೂ ಧ್ವಜವಂದನೆಗಳಾದುವು. ಆರ್ಯ ಸಮಾಜ ಮಂದಿರದಲ್ಲಿ ಧ್ವಜವಂದನೆಯು ಇನ್ ಕಮ್ ಟೇಕ್ಸ್ ಆಫೀಸರ್ ಶ್ರೀ ರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅನಾಥಾಶ್ರಮದಲ್ಲಿರುವ ಮಕ್ಕಳಿಗೆಲ್ಲಾ ಶ್ರೀ ಗಿರಿಧರಲಾಲ್ ದೇವಿದಾಸ ಚೌಪ್ರನಾರು ವಸ್ತ್ರಗಳನ್ನು ಹಂಚಿದರು. ಗವರ್ನಮೆಂಟ್ ಕಾಲೇಜಿನಲ್ಲಿ ಮಿಸ್ ಸೀತಮ್ಮಾಳ್‌ರವರಿಂದಲೂ, ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಶ್ರೀ ಸಿ. ಆರ್. ಪಾಂಡರಿಂದಲೂ ಧ್ವಜಾರೋಹಣ ಮಾಡಲ್ಪಟ್ಟಿತು. ಸೈಂಟ್ ಎಲೋಸಿಯಸ್ ಕಾಲೇಜಿನ ಸಮಾಜ ಸೇವಾ ಸಂಘದವರು ಏರ್ಪಡಿಸಿದ ಬಡವರಿಗೆ ಅನ್ನದಾನದ ಸಮಾರಂಭವನ್ನು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಕರಿಯಪ್ಪನವರು ಉದ್ಘಾಟಿಸಿದರು. ಸುಮಾರು ಎರಡು ಸಾವಿರ ಮಂದಿ ಬಡವರಿಗೆ ಊಟಕೊಡಲಾಯಿತು.

ಸಂಜೆ ಕೇಂದ್ರ ಮೈದಾನಿನಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಕುಸ್ತಿ, ಶಕ್ತಿ ಪ್ರದರ್ಶನ, ಕಸರತ್ತು ಇತ್ಯಾದಿ ಹಲವು ಕಾರ್ಯಕ್ರಮಗಳು ಜರಗಿದವು. ಬಳಿಕ ಸಾರ್ವಜನಿಕ ಸಭೆಯು ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಇತ್ತೀಚೆಗೆ ಉದ್ಯಾವರದಲ್ಲಿ ನಡೆದ ದಂಗಲ್‌ದಲ್ಲಿ ಕಪ್ಪ ಕ್ಯಾಡಾದ ಶ್ರೀ ಪೂವ ಪೂಜಾರಿ, ಕೋಟ ಪೂಜಾರಿ, ದೋಗ್ರ ಪೂಜಾರಿ, ಅವರಿಗೆ ಕ್ರಮವಾಗಿ ರೂ 90 60 ಮತ್ತು 50 ಸಹಾಯಧನ ಕೊಡಲಾದು ಕಲ್ಲಿಗೆ ವಸ್ತ್ರ ಇತ್ಯಾದಿ ಗಿರಿಹಾರವನ್ನು ಕೊಡಲಾಯಿತು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು. ನಂತರ ಶ್ರೀಗಳಾದ ಕೆ. ಆರ್. ಆಚಾರ್, ಎಲ್. ಸಿ. ಪಾಯ್ಸ್, ಸೂರ್ಯ ನಾರಾಯಣ ರಾಯರು, ಭಾಷಣವಿತ್ತರು. ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ, ಸ್ವತಂತ್ರದ ಸಂಕಷ್ಟ ನಿವಾರಣೆ ಹಿಸಿದ ಪಾತ್ರವು ಅಪಾರವಾದುದೆಂದೂ ಜನರೆ ಬೇಳಿವದೆ ಅಧಿಕಾರವನ್ನು ಬಿಟ್ಟು ಕೊಡಲು ಕಾಂಗ್ರೆಸ್ ಸಿದ್ಧವಿದೆ ಎಂದೂ ಹೇಳಿದರು. ಶ್ರೀ ಎಮ್ ಲಕ್ಷ್ಮಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದ ಮೇಲೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಬಿ ಆರ್. ಕರ್ಕೇರರು, ಕರ್ನಾಟಕ ಪ್ರಾಂತ ನಿರ್ಮಾಣದ ಕುರಿತು ಕೆ. ಪಿ. ಸಿ ಸಿ ಯವರು ಮಾಡಿದ ನಿರ್ಣಯವನ್ನು ವಿವರಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಅಖಂಡ ಭಾರತ ದಿನಾಚರಣೆಯು — ತಾ 15ರಲ್ಲು ಭಾರತೀಯ ಜನಸಂಘದ ಕಾರ್ಯಾಲಯದಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ ಜರಗಿತು, ಭಾರತವು ಅಖಂಡವಾಗಿರಬೇಕೆಂದು ಹಲವರು ಭಾಷಣ ಮಾಡಿದರು.

ನಿರುದ್ಯೋಗ ನಿರೋಧ ದಿನಾಚರಣೆಯು — ತಾ 15ರಲ್ಲು ಕಮ್ಯುನಿಸ್ಟ್ ಪಾರ್ಟಿ ಮತ್ತು ಜಿಲ್ಲಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ನೇತೃತ್ವದಲ್ಲಿ ಜರಗಿತು. ಶ್ರೀ ಎ. ಶಾಂತಾರಾಮ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ವಿ. ಕಕ್ಕಿಲ್ಲಾಯ, ಎಮ್. ಪಿ. ಮೊದಲಾದವರ ಭಾಷಣಗಳಾದುವು.

ಪ್ರಸೂತಿಕಾ ಗೃಹದ ಉದ್ಘಾಟನೆ—ತಾ 15ರಲ್ಲು ಬೆಳಗ್ಗೆ ಮುನ್ಸಿಪಲ್ ಚೆಯರ್‌ಮೆನ್ ಶ್ರೀ ಕೆ. ಎಸ್. ಅಡಿಗರು ಜಪ್ಪಿನಮೊಗರಿನಲ್ಲಿ ಹೊಸತೊಂದು ಮುನಿಸಿಪಲ್ ಪ್ರಸೂತಿಕಾ ಗೃಹವನ್ನು ಉದ್ಘಾಟಿಸಿದರು. ಮುನಿಸಿಪಲ್ ಸದಸ್ಯರು ಶ್ರೀಗಳಾದ ವಾಮನ ನಾಕ್, ಎಸ್. ಗೋಪಾಲ ಸಾಲಿನ್ಸ್ ಮತ್ತು ಡಾ. ಯು. ಪಿ. ಮಲ್ಯರು ಭಾಷಣವಿತ್ತರು. ಮುನಿಸಿಪಲ್ ಕಮಿಶನರ್ ಶ್ರೀ ಚಾರ್ಲ್ಸ್ ರಿಚರ್ಡ್ಸ್‌ರವರು ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಪ್ರಾಂತ ರಚನಾ ದಿನವು—ಜಿಲ್ಲೆಯ ಸರ್ವ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಕರ್ನಾಟಕ ಪ್ರಾಂತ ರಚನಾ ಸಮಿತಿಯ ಆಶ್ರಯದಲ್ಲಿ ಇದೇ ತಾ. 16ರಲ್ಲು ದ. ಕ. ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ ಕೆ. ಕೆ. ಶೆಟ್ಟರು, ಈ ದಿನ [illegible] ಅವಶ್ಯಕತೆಯನ್ನು [illegible] ಸಿದ್ಧರಾಗಬೇಕೆಂದು ಹೇಳಿದರು. ಮಂಗಳೂರು ನಗರ ಸಭಾಧ್ಯಕ್ಷ ಶ್ರೀ. ಕೆ. ಎಸ್. ಅಡಿಗರು ಮಾತನಾಡುತ್ತಾ ಕರ್ನಾಟಕ ಪ್ರಾಂತರಚನೆಯ ಅವಶ್ಯಕತೆಯ ವಿಚಾರದಲ್ಲಿ ಕನ್ನಡಿಗರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಈ ವಿಷಯಕ್ಕಾಗಿ [illegible] ಹುಟ್ಟಿದ ಸಮಿತಿ ಅಗತ್ಯವಿಲ್ಲ. [illegible] ಎಂದು ಹೇಳಿದರು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಕೆ. ಬಿ. ಜಿನರಾಜ ಹೆಗ್ಡೆ, ರಂಗರಾವ್, [illegible] ಮೊದಲಾದವರು [illegible] ಮಾತನಾಡಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಪಕ್ಷಭೇದ್ಯವದಂತೆ ಅಜ್ಞೆ ಬರಬೇಕು: [illegible] ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು [illegible] ಪಕ್ಷದ [illegible] ಸರ್ಕಲ್ ಕಾಂಗ್ರೆಸ್ ಕಮಿಟಿಗಳ [illegible] ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು 1. ಇವರಿಗೆ ಎಲ್ಲಾ ವಿವರಗಳೊಡನೆ ಕೂಡಲೇ ಬರೆದು ಕಳುಹಿಸಬೇಕಾಗಿ ಪ್ರಧಾನ ಕಾರ್ಯದರ್ಶಿ ಶ್ರೀ. ಬಿ. ಆರ್. ಕರ್ಕೇರರು ವಿನಂತಿ[illegible]ರೆ.

ಬೇಕಾಗಿದ್ದಾರೆ.

ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ಶಾಲೆಗೆ ಯೋಗ್ಯ ಹಾಯರ್ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ. ಇಷ್ಟವುಳ್ಳವರು ಈ ತಿಂಗಳಾಂತ್ಯದೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಕಳಿಸುವುದಲ್ಲದೆ ಅದರ ನಕಲನ್ನು ಉಡುಪಿ ಸರ್ಕಲ್ ರೇಂಜ್ ಇನ್ಸ್‌ಪೆಕ್ಟರಿಗೂ ಕಳಿಸುವುದು.

ಕೆ. ವಿಶ್ವೇಶ್ವರ ರಾವ್,
ಮೆನೇಜರ್, ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ಶಾಲೆ, ಎಲ್ಲೂರು ಪೋಸ್ಟ್.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ವಿವೇಕಿಗಳು............

ತಾವು ಚಿಕ್ಕಂದಿನಲ್ಲಿ ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸುತ್ತ ಕುಳಿತುಕೊಳ್ಳುವುದಿಲ್ಲ. ತಮಗೆ ಬಿಡುವಿದ್ದಾಗ 'ಸುಲಭದಲ್ಲಿ ಇಂಗ್ಲಿಷ್' ಎಂಬ ಆಂಗ್ಲ ಸ್ವಯಂಬೋಧಿನಿಯ ಸಹಾಯದಿಂದ ಸಾಕಷ್ಟು ಇಂಗ್ಲಿಷ್ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಅಲ್ಪಾವಧಿಯಲ್ಲಿಯೇ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಳ್ಳಬಹುದು. ಬೆಲೆ ರೂ. 1-8-0 ಮಾತ್ರ. ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ, ಇವರಿಗೆ ಬರೆಯಿರಿ.

ಉಡುಪಿಗೆ ಹೋಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಸ್ಟೋರೇಜ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿ ತಿನಸು, ಇವುಗಳ ರುಚಿ ರುಚಿ ಹೇಳಬೇಕೆ

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ. ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ಅಪರಾಜಿತ

(೧ನೇ ಪುಟದಿಂದ)

ಶಿಖರವು ಕುಸಿದು ನಾವು ಲೋಕ ನೀತಿಗೆ ಶಿರಬಾಗಿ ನಮಿಸುವ ಅಲ್ಪರಾಗುತ್ತೇವೆ.

ಕೆಲ ದಿನಗಳ ಹಿಂದೆ ರೈಲ್ವೆ ಬೋರ್ಡಿನವರು ವ್ಯಾಪಾರಿಗಳಿಗೆ ತಮ್ಮ ಸಾಮಾನು ಸರಂಜಾಮುಗಳನ್ನು ಕೊಂಡೊಯ್ಯಲು ಸ್ವಂತ ವಾಗೀನುಗಳನ್ನು ಇಟ್ಟುಕೊಳ್ಳಲು ಪ್ರಯತ್ನ ಮಾಡಿರೆಂದು ಉಪದೇಶಿಸಲು ಹೊರಟರು. ವ್ಯಾಪಾರಿಗಳು ರೈಲ್ವೆಯವರ ವಾಗೀನುಗಳನ್ನೆ ನಂಬಿ ಕುಳಿತರೆ, ಸರಕಿನ ಸಾಗಾಟಗಳಲ್ಲಿ ವಿಳಂಬವು ಅನಿವಾರ್ಯವಾದುದೆಂದೂ ಇದನ್ನು ಹೋಗಲಾಡಿಸಲು ಪ್ರತಿಯೊಬ್ಬ ವ್ಯಾಪಾರಿಯೂ ತನ್ನ ಸ್ವಂತ ವಾಗೀನುಗಳನ್ನು ಇಟ್ಟುಕೊಳ್ಳುವುದು ಒಳ್ಳೆಯದೆಂದೂ ರೈಲ್ವೆ ಬೋರ್ಡಿನ ಅಭಿಪ್ರಾಯ. ಇದು ಉತ್ತಮ ಸಲಹೆ. ಎಲ್ಲರ ಸಾಲಿನಲ್ಲಿ ನಾವೂ "ಕ್ಯೂ" ನಿಂತುಕೊಂಡು ಸರದಿಕಾಯುತ್ತಾ ಕುಳಿತಿರುವ ಬದಲು, ಸ್ವಂತ ವಾಗೀನುಗಳನ್ನು ನಮಗೆ ಬೇಕೆಂದಾಗ ಓಡಾಡಿಸುವುದು ತುಂಬ ಹಿತಕರ. ಅಮೇರಿಕಾದಲ್ಲಿ ಪ್ರತಿಯೊಂದು ಮನೆಗೂ ಒಂದು ಮೋಟಾರುಕಾರು ಎಂಬ ಸ್ವಪ್ನ ಹೋಗಿ—ಈಗ ಪ್ರತಿಯೊಬ್ಬನಿಗೂ ಒಂದೊಂದು ಕಾರು ಎಂಬುದು ರೂಢಿಯಾಗಿರುತ್ತದೆ. ಕೇವಲ ಸುಖ—ಸೌಕರ್ಯಗಳಿಗೆ ಮಾತ್ರವಲ್ಲ ಮನುಷ್ಯನ ಬೇರೆ ಚಟುವಟಿಕೆಗಳಿಗೂ "ನಿಮ್ಮ ಸ್ವಂತ—" ಎಂಬ ಆದರ್ಶವನ್ನು ಅನ್ವಯಿಸುವುದು ಒಳ್ಳೆಯದೆಂದು "ಹಿಂದೂ" ಪತ್ರಿಕೆಯ ಓದುಗರೊಬ್ಬರು ಅಭಿಪ್ರಾಯಪಡುತ್ತಾರೆ. ಅವರು ಹೇಳುವಂತೆ, "ನಾವು ಕಳೆದುಕೊಳ್ಳುತ್ತಿರುವ ಕೆಲವು ಸಂಗತಿಗಳಲ್ಲಿ ಅತ್ಯಂತ ಮುಖ್ಯವಾದುದೊಂದನ್ನು ನಮ್ಮ ಸ್ವಂತದ್ದಾಗಿ ಮಾಡಿಕೊಳ್ಳುವುದು ಅತ್ಯಾವಶ್ಯಕ. ಮನಸ್ಸು ನಮ್ಮದಾಗಿರುವಂತೆ ನೋಡಿಕೊಳ್ಳುವುದೇ ಇಂದಿನ ಸಮಸ್ಯೆ. ಜನ ಸಮ್ಮರ್ದದ ವಾರ್ತಾಲಾಪಗಳುಪ್ರಾಬಲ್ಯಕ್ಕೆಬಂದ ಈ ದಿನಗಳಲ್ಲಿಮನಸ್ಸಿನ ತನ್ನತನದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ಚಾರ್ಲ್ಸ ಮೋರ್ಗಾನೆಂಬವರು ತಮ್ಮ ಮನಸ್ಸಿನ ಸ್ವಾತಂತ್ರ್ಯವೆಂಬ ಬರಹದಲ್ಲಿ ಸ್ವಾರಸ್ಯವಾಗಿ ಚರ್ಚಿಸಿದ್ದಾರೆ. ನಮ್ಮ ಮನಸ್ಸಿನಂತೆ, ನಮ್ಮ ಸಮಯವನ್ನೂ ಸ್ವಂತ ಇಚ್ಛೆಯಂತೆ ಉಪಯೋಗಿಸಲು ನಾವಿಂದು ಕಲಿಯಬೇಕು. ನಮ್ಮ ಸಮಯದಲ್ಲಿ ಹೆಚ್ಚಿನದನ್ನು ನಾವಿಂದು ಬೇರೆಯವರಿಗೋಸ್ಕರ, ಅವರ ಆದೇಶದಂತೆ ಉಪಯೋಗಿಸಿಕೊಳ್ಳುತ್ತೇವೆ. ಬೇರೆ ಯಾರದೋ ವಿಚಾರವನ್ನು ನಾವು ಪುಸ್ತಕಗಳಲ್ಲಿ ಓದುತ್ತೇವೆ. ಸಮಸ್ಯೆಗೆ ಬೇರೆ ಯಾರದೋ ಪರಿಹಾರ ಮಾರ್ಗವನ್ನು ನಾವು ಮೆಚ್ಚುತ್ತೇವೆ. ಬೇರೆಯಾರೋ ಮಂಡಿಸಿದ ಮನೋರಂಜನೆಯಿಂದ ಸಂತೋಷಪಡುತ್ತೇವೆ. ನಮಗೆ ಸ್ವಂತ ಬುದ್ಧಿಬಲವನ್ನು ಉಪಯೋಗಿಸಲೂ ಬಿಡುವಿಲ್ಲವೆಂಬಂತೆ ನಾವು ವರ್ತಿಸುತ್ತೇವೆ. ಬೇಡ, ಸೋಮಾರಿಯಾಗಿರಲಿಕ್ಕೂ ನಾವು ಸ್ವತಂತ್ರರಿಲ್ಲವೂ ಏನೋ! ಬರ್ಟ್ರಂಡ್ ರಸ್ಸೆಲರು "ಸೋಮಾರಿತನದ ಪ್ರಶಂಸೆ" ಎಂಬದೊಂದು ಪ್ರಬಂಧದಲ್ಲಿ ಸೋಮಾರಿತನದ ಕುರಿತು ರೂಢ ಮೂಲವಾದ ಜಿಗುಪ್ಸೆಯನ್ನು ತಮ್ಮದೇ ದೃಷ್ಟಿಕೋಣದಿಂದ ನೋಡಿದ್ದಾರೆ. ಇದರಂತೆ ಆಧ್ಯಾತ್ಮ ವಿಚಾರದಲ್ಲಿ ಮುಂದರಿದ ಭಾರತ ಹಾಗೂ ಭೌತಿಕ ಸಂಗತಿಗಳಲ್ಲಿ ಅದ್ಭುತ ಸಂಶೋಧನೆ ಮಾಡಿದ ಇಂಗ್ಲೆಂಡು ಅಮೇರಿಕಾಗಳು ಬೇರೆಯವರ ವಿಚಾರಗಳನ್ನು ಮನನ ಮಾಡಿಕೊಳ್ಳಲು, ಬೇರೆಯವರು ಕಂಡುಹಿಡಿದ ಸತ್ಯವನ್ನು ಕಣ್ಣು ಮುಚ್ಚಿ ನಂಬಿ ಕುಳಿತುಕೊಳ್ಳಲು, ಒಳ್ಳೆ ಬುದ್ಧಿವಂತರಾದ ಬರೆಹಗಾರರ ವಾಗ್ಜಾಲದಲ್ಲಿ ಬಲಿಬೀಳಲು ಸರ್ವಸನ್ನಾಹ ನಡೆಸಿದಂತಿದೆ. ಈ ದಾಸ್ಯವನ್ನು ದೂರೀಕರಿಸಿ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನವನ್ನು ಪ್ರದರ್ಶಿಸುವುದಕ್ಕೆ ಯೋಗ್ಯ ಕಾಲ ಈಗ ಸನ್ನಿಹಿತವಾಗಿರುತ್ತದೆ."

ತನ್ನತನದ ಆವಶ್ಯಕತೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬಹಳ ಹೆಚ್ಚಿದೆ–ವ್ಯಕ್ತಿಯು ಸಮಾಜದ ಧುರೀಣರ ಮಾತುಗಳ ಮೋಡಿಗೆ ಬಲಿಯಾಗಿ ಸ್ವಂತ ವಿಚಾರ ಶಕ್ತಿಯನ್ನೆ ಕಳೆದುಕೊಂಡ ಪಕ್ಷದಲ್ಲಿ, ಪ್ರಜಾಪ್ರಭುತ್ವ ಸರ್ವಾಧಿಕಾರಿತ್ವವೆಂದು ಬದಲಾವಣೆ ಹೊಂದಲೆಡೆ ಇದೆ. ನಾವು ಆಲಸ್ಯಭರಿತರಾಗಿ, ನಮ್ಮ ಹಾಗೂ ಸಮಾಜದ ಮತ್ತು ರಾಷ್ಟ್ರದ ಹಿತಚಿಂತನೆಯನ್ನು ಸ್ವಂತ ಬುದ್ಧಿಯಿಂದ ಮಾಡದೆ, ಬೇರೆಯವರ ಅನುಕರಣದಲ್ಲಿ ತೃಪ್ತಿಪಟ್ಟುಕೊಂಡರೆ ಪರಿಣಾಮವು ಗಂಡಾಂತರವನ್ನು ತರಬಹುದು. ಈಗ ಯಾವ ಸಂಗತಿಯನ್ನೆ ಆಗಲಿ, ನಮ್ಮ ವಿಚಾರದ ಒರೆಗಲ್ಲಿಗೆ ಹಚ್ಚಿ ಅದರ ಯಥಾರ್ಥತೆಯನ್ನು ಮನವರಿಕೆ ಮಾಡಿಕೊಳ್ಳದೆ ಕಣ್ಣು ಮುಚ್ಚಿ ಸ್ವೀಕರಿಸುವ ಪ್ರವೃತ್ತಿ ಒಳ್ಳೆಯದಲ್ಲ ಮಾನಸಿಕ ದಾಸ್ಯವನ್ನು ನೀಗಿ, ಅಪರಾಜಿತರಾಗಿ ಮೆರೆಯುವುದರಲ್ಲಿಯೇ ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿದ ನಾಗರಿಕರ ಶ್ರೇಯಸ್ಸು ಸಮಾವೇಶಗೊಂಡಿದೆ.

—ಓಂತತ್ಸತ್॥

(೪ನೇ ಪುಟದಿಂದ).

ಗಳು ಕೆಲಮಟ್ಟಿಗೆ ಪರಿಗಣಿಸಿ, ಅಕ್ಷರಾಭ್ಯಾಸಕ್ಕೆ ಉತ್ತೇಜನ ನೀಡುತ್ತದೆ. ಹಳ್ಳಿಯ ಜನರಿಗೆ ದೈಹಿಕ ಶ್ರಮ ಹಾಗೂ ಸಾರ್ವಜನಿಕ ಸಹಕಾರದ ಪಾಠವನ್ನು ಶಾಶ್ವತವಾಗಿ ಮನವರಿಕೆ ಮಾಡಿಸಲು ಈ ಕ್ರಮ ನೆರವಾದರೆ, ಅಲ್ಲಲ್ಲಿ ಜ್ಯಾರಿಗೆ ತಂದಿರುವ ಸಮಾಜ ವಿಕಾಸ ಕೇಂದ್ರಗಳು ನವಚೈತನ್ಯವನ್ನೂ ಸ್ಫೂರ್ತಿಯನ್ನೂ ಉಂಟುಮಾಡಲು ಯೋಗ್ಯವಾಗಿರುತ್ತವೆ. ಕಳೆದ ಅಕ್ಟೋಬರ ತಿಂಗಳಲ್ಲಿ ಐದು ಸಮಾಜ ವಿಕಾಸ ಕೇಂದ್ರಗಳು ರಾಜ್ಯದಲ್ಲಿ ಪ್ರಾರಂಭವಾಗಿವೆ. ಇಲ್ಲಿಯ ಕೆಲಸ ಸಮಾಧಾನಕರವಾಗಿರುತ್ತದೆಂದು ಪ್ರಗತಿಯ ವರದಿಗಳಿಂದ ತಿಳಿಯಬಹುದು. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯಂತೆ, ಹಿಂದುಳಿದ ವರ್ಗಗಳ ಶ್ರೇಯಸ್ಸನ್ನೂ ಸರಕಾರವು ಗಮನಿಸಿರುತ್ತದೆ. ಬಹುಮುಖವಾದ ಹರಿಜನ ಕಲ್ಯಾಣ ಯೋಜನೆಗಳು ವಿಕಾಸಹೊಂದಿವೆ.-ಇವುಗಳಿಗಾಗಿ ಸರಕಾರ ೧೨೪ ಲಕ್ಷ ರೂಪಾಯಿಗಳ ವೆಚ್ಚ ಮಾಡಿದೆ. ಇನ್ನು ಕೊನೆಯದಾಗಿ-ಪಂಚವಾರ್ಷಿಕ ಯೋಜನೆ: ೨೦೬೯ ಕೋಟಿ ರೂಪಾಯಿಗಳ ಈ ಮಹಾ ಯೋಜನೆಯಲ್ಲಿ ಮದ್ರಾಸು ಸರಕಾರವು ೧೪೧ ಕೋಟಿ ರೂಪಾಯಿ ವ್ಯಯಿಸಬೇಕಾಗುವುದು. ಸಾಮಾನ್ಯತಃ ಈ ಮೊದಲೇ ಕೈಗೊಂಡ ಕೆಲಸಗಳನ್ನು ಪೂರ್ತಿಗೊಳಿಸುವಂತೆ ಮದ್ರಾಸು ರಾಜ್ಯದ ಪಂಚವಾರ್ಷಿಕ ಯೋಜನೆ ಇರುತ್ತದೆ. ಇದರಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳು ಕೃಷಿ ಸಂಬಂಧವಾದ ನೀರಾವರಿ ಕೆಲಸಕ್ಕೆ ವ್ಯಯವಾಗುತ್ತವೆ. ಅನೇಕಾನೇಕ ಜನಹಿತದ ಯೋಜನೆಗಳು ಬಾಕಿ ಉಳಿದಿದ್ದರೂ ಸಾಧಿಸಿದ ಕೆಲಸವು ಸಾಮಾನ್ಯವಾದುದಲ್ಲ–ಈ ಆತ್ಮ ವಿಶ್ವಾಸ ಮತ್ತು ಅಭಿಮಾನವೇ ನಮ್ಮಿಂದ ಇನ್ನೂ ದೊಡ್ಡ ಕೆಲಸಗಳನ್ನು ಮಾಡಿಸಲಿ!

(ಸಂಕಲಿತ)

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡವಾಳ	. .	„ 8,77,860
ಕ್ಷೇಮ ನಿಧಿ	. .	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಧೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BNKA, Limited.

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಶ್ವಾಸ ಯಗಳು, ಬಾತುಕೊಳ್ಳುವುದು ಚೇಳುವಿಷಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ.



ಹುಳುಕು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:–ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರಪ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ತಿಂಗಳಿಗೆ ರೂಪಾಯಿ 200ರಿಂದ ರೂ 500 ಸಂಪಾದಿಸಿರಿ

ನಮ್ಮಲ್ಲಿ ದೊರೆಯುವ ಹೊಸ ನಮೂನೆಯ ಬಟ್ಟೆಗಳು, ಸಿಲ್ಕ್ ಸೀರೆಗಳು, ನಯ ಕೋಮಲ ಬ್ಲೇಂಕೆಟ್ಟುಗಳನ್ನು ಬಿಡು ಸಮಯದಲ್ಲಿ ಮಾರಾಟಮಾಡಲು ಉದಾರ ಶರ್ತಗಳಿಂದ ಏಜಂಟರು ಬೇಕಾಗಿದ್ದಾರೆ. ಉತ್ಸಾಹಿಗಳಿಗೆಲ್ಲರಿಗೂ ಸುವರ್ಣಸಂಧಿ. ಉಚಿತ ಸ್ಯಾಂಪಲ್ಲುಗಳಿಗೂ ಶರ್ತಗಳಿಗೂ ಮಾಹಿತಿ ಪತ್ರಕ್ಕೂ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಾಗಲೀ ಹಿಂದೀಯಲ್ಲಾಗಲೀ ಮಾಡಿರಿ.

International Industrial Corporation (India)
New Market, Karol Bagh,
NEW DELHI.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಸ್ವೀಕಾರ—ವಿಮರ್ಶೆ

ಸಂಜ್ಞಾರ್ಥ ತತ್ವಕೋಶ:—

ಲೇಖಕರು ಮತ್ತು ಪ್ರಕಾಶಕರು:— ಶ್ರೀ. ಡಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ. ಪುಟಗಳು ೮೪. ಬೆಲೆ ರೂ. 1-4-0

ಕನ್ನಡ ಸಾಹಿತ್ಯ ಅಭ್ಯಾಸಿಗಳಿಗೆ ಅತ್ಯಂತ ಅವಶ್ಯಕವಾಗಿರುವ ಒಂದು ಅಭಾವವನ್ನು ಶ್ರೀ. ಹೊಳ್ಳರು, ಈ ಸಂಜ್ಞಾರ್ಥ ತತ್ವಕೋಶವನ್ನು ಬರೆದು ಪ್ರಕಟಿಸಿ ಪೂರೈಸಿದ್ದಾರೆ. ಇದುವರೆಗೆ ಸಂಜ್ಞಾರ್ಥಗಳನ್ನು ಕನ್ನಡಸಾಹಿತ್ಯ ಅಭ್ಯಾಸ ಮಾಡುವವರಿಗೆ ತಿಳಿದು ಕೊಳ್ಳಲು ಪ್ರಯಾಸ ವಾಗುತ್ತಿರುವುದು ಎಲ್ಲರೂ ಬಲ್ಲ ಸಂಗತಿಯೇ ಆಗಿದೆ. ಲಿಂಗಾಯತ, ಜಿನಧರ್ಮ ಮೊದಲಾದವುಗಳಿಗೆ ಸಂಬಂಧಿಸಿದಹಾಗೂ ವೈದಿಕ ಸಾಹಿತ್ಯ, ಪುರಾಣಗಳೇ ಮೊದಲಾದವುಗಳಲ್ಲಿಯೂ ಕಾವ್ಯ ನಾಟಕಾದಿಗಳಲ್ಲಿಯೂ, ಬರುವ ಹಲವು ಸಂಕೇತಗಳನು ಪ್ರಯತ್ನಪೂರ್ವಕ ಇಲ್ಲಿ ಶ್ರೀ ಹೊಳ್ಳರು ಸಂಗ್ರಹಿಸಿ ಕೊಟ್ಟಿರುತ್ತಾರೆ. ಒಂದರಿಂದ ಅರುವತ್ತನಾಲ್ಕರವರೆಗೆ ಇರುವ ಹಲವು ಸಂಜ್ಞಾರ್ಥಗಳ ವಿವರಗಳು ಇದರಲ್ಲಿವೆ.

ಇದು ಮೊದಲು ಇಂತಹ ಒಂದು ಪೂರ್ಣ ಗ್ರಂಥ ಕನ್ನಡದಲ್ಲಿ ಇರಲಿಲ್ಲ. ನಾನಾರ್ಥ ಶಬ್ದಾವಳಿ ಎಂಬ ರೆವರೆಂಡ್ ಕಿಟ್ಟೆಲ್ ರು ಪ್ರಕಟಿಸಿದ ಕೋಶವೊಂದರಲ್ಲಿಯೂ, ಆಮೇಲೆ 'ಆನಂದ ನಿಘಂಟು' ಎಂದು ಶಾರದಾ ಪ್ರೆಸ್ಸಿನವರು ಪ್ರಕಟಿಸಿದ ಇನ್ನೊಂದು ಕೋಶದಲ್ಲಿಯೂ ಕೆಲವು ಸಂಜ್ಞಾರ್ಥಗಳ ಪಟ್ಟಿ ಪರಿಶಿಷ್ಟವಾಗಿ ಕೊಡಲಾಗಿತ್ತು. 'ಕಿಟ್ಟೆಲ್ ನಿಘಂಟು'ನಲ್ಲಿ ಅಲ್ಲಲ್ಲಿ ಕೆಲವು ಅಡಕವಾಗಿದೆ. ಪುರಾಣನಾಮ ಚೂಡಾಮಣಿಯಲ್ಲಿ ಕೆಲವನ್ನು ಉಟಹರಿಸಲಾಗಿದೆ. ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿ ಬರೆದ ಕೆಲವು ಗ್ರಂಥಗಳಲ್ಲಿಯೂ, ಜೈನ ಧರ್ಮ ಪರಿಭಾಷಾ, ಜೈನ ಧರ್ಮ ಮುಂತಾದ ಗ್ರಂಥಗಳಲ್ಲಿಯೂ ಕೆಲವು ಇರುತ್ತವೆ. ಆದರೂ, ಇವಾವುವೂ ಸಂಪೂರ್ಣವಲ್ಲ, ಕಷ್ಟ ಸಂಗ್ರಹ್ಯವೂ ಆಗಿವೆ. ಅಂಥಾ ಮಹತ್ವದ ಒಂದು ಕಾರ್ಯವನ್ನು ಕೈಗೊಂಡು ಈ ಗ್ರಂಥವನ್ನು ಸಂಗ್ರಹಿಸಿ ಪ್ರಕಟಿಸಿದ ಶ್ರೀ ಹೊಳ್ಳರನ್ನು ನಾವು ಅಭಿನಂದಿಸಬೇಕಾಗಿದೆ.

ಶ್ರೀ ಡಿ. ವಿ. ಹೊಳ್ಳರು ಕನ್ನಡದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು ಯಕ್ಷಗಾನ ಗ್ರಂಥಕರ್ತರೂ, ಕವಿಗಳೂ ಆಗಿದ್ದಾರೆ. ಅವರ ಈ ಪ್ರಯತ್ನಕ್ಕೆ ಕನ್ನಡಿಗರು ಯೋಗ್ಯ ಪ್ರೋತ್ಸಾಹವಿತ್ತಲ್ಲಿ ಶ್ರೀ ಹೊಳ್ಳರಿಂದ ನಾವು ಹೆಚ್ಚಿನ ಸಾಹಿತ್ಯ ಸೇವೆಯನ್ನು ಹಾರೈಸಬಹುದಾಗಿದೆ. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅತ್ಯಂತ ಅವಶ್ಯವಾದೊಂದು ಕೋಶವಾದುದರಿಂದ ಎಲ್ಲರೂ ಇದನ್ನು ಸಂಗ್ರಹಿಸಿ ಪ್ರಯೋಜನ ಪಡೆಯುವರೆಂದು ನಾವು ಹಾರೈಯುತ್ತೇವೆ.

ಈ ಗ್ರಂಥಕ್ಕೆ ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಾದ ಶ್ರೀ ಗೋವಿಂದ ಪೈಗಳು ಮುನ್ನುಡಿ ಬರೆದು ಇದನ್ನು ಕೊಂಡಾಡಿದ್ದಾರೆಂದ ಮೇಲೆ ಗ್ರಂಥದ ಉಪಯುಕ್ತತೆಯ ಕುರಿತು ನಾವು ಹೆಚ್ಚೇನೂ ಹೇಳಬೇಕಾಗಿಲ್ಲ.

ಕಯ್ಯಾರ

ಜೇನು(ಕವಿತಾ ಸಂಗ್ರಹ)—

ಲೇಖಕರು ಮತ್ತು ಪ್ರಕಾಶಕರು–ಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳವರು, ಮುರಬ. ಶ್ರೀ ಜಗದ್ಗುರು. ವಿಶ್ವಾರಾಧ್ಯ ಸೇವಾಶ್ರಮದ ಸಂಸ್ಥಾಪಕರು, ಬೈಲಪದ್ಗಿರಿ. ಬೆಲೆ. ಎಂಟಾಣೆ.

"ಅರ್ಥಸಂಕ್ಷೇಪದಿಂದ ಭಾಷಾ ಸೌಂದರ್ಯವನ್ನು, ಅಲಂಕಾರಗಳಿಂದ ಅರ್ಥ ಚಮತ್ಕೃತಿಯನ್ನು, ಅನುಪ್ರಾಸದಿಂದ ಧ್ವನಿರಮಣೀಯತೆಯನ್ನು ಮತ್ತು ವೃತ್ತ ರಚನೆಯಿಂದ ಗಾನಮಾಧುರ್ಯವನ್ನು ಕಾವ್ಯದಲ್ಲಿ ಏಕಕಾಲಕ್ಕೆ ಸಂಪಾದಿಸಲು ಬರುತ್ತದೆ. ಕವನರಸಾಸ್ವಾದನದಿಂದ ರಸಜ್ಞರೂ ಅರ್ಥ ಚಮತ್ಕಾರದಿಂದ ವ್ಯುತ್ಪನ್ನರು ಧ್ವನಿಯ ಇಂಪಿನಿಂದ ಸಾಮಾನ್ಯರೂ ಸಂತೋಷಭರಿತರಾಗುವರು. ಅನುಪಮೂಲವಾದ ಅತ್ಮನಿಂದ ಹುಟ್ಟಿದ ಕವಿತೆಗಳು ತಮ್ಮನ್ನು ಪಠಿಸುವರಿಗೂ ಕೇಳುವವರಿಗೂ ಆನಂದವನ್ನು ಹುಟ್ಟಿಸುವುದು ಸಹಜವಲ್ಲವೆ? ಆದ ಕಾರಣ ಕಾವ್ಯಾನಂದವನ್ನು ಕಾಂತಾನಂದಕ್ಕಿಂತಲೂ ಹಿರಿದೆಂದು ಹೇಳುವುದು ಅರ್ಥಪೂರ್ಣವಾಗಿದೆ' ಎಂದು ಶ್ರೀ ಮಹಾಸ್ವಾಮಿಗಳವರು ಈ ಕವಿತಾ ಸಂಗ್ರಹಕ್ಕೆ ಬರೆದ ಪ್ರಸ್ತಾವನೆಯಲ್ಲಿ ಹೇಳಿರುವರು. ಆದರೆ ಆ ಬಳಿಕದ ಪುಟಗಳನ್ನು ತಿರುವಿ ನೋಡಿದರೆ–ಸ್ವಾಮಿಗಳವರ ಗದ್ಯ ಶೈಲಿಯಲ್ಲಿರುವ ಲಾಲಿತ್ಯ, ಓಜಸ್ಸು ಹಾಗೂ ಮಾಧುರ್ಯಗಳ ಲವಲೇಶವೂ ಅವರು ಬರೆದ ಕವನಗಳಲ್ಲಿ ಮೂಡಿಬಂದಿಲ್ಲವೆಂದು ವಿಷಾದಿಸಬೇಕಾಗುವುದು. ಇವುಗಳಲ್ಲಿ ರಸಾನುಭವವನ್ನುಂಟುಮಾಡುವ ಪದ್ಯವಾಗಲೀ, ಅನುಭವವಾಗಲೀ ನಮಗೆ ಕಾಣಲಿಲ್ಲ. ಕಂದ, ಭಾಮಿನಿ ಷಟ್ಪದಿಯಂಥ ಮಾತ್ರಾ ವೃತ್ತಗಳಲ್ಲಿ ಮತ್ತು ಚಂಪಕಮಾಲೆಯಂಥ ಅಕ್ಷರ ವೃತ್ತದಲ್ಲಿ ರಚಿಸಿದ ಪದ್ಯಗಳನ್ನು ಛಂದಸ್ಸಿನ ಒರೆಗಲ್ಲಿಗೆ ತಿಕ್ಕಿದರೆ, ಅವುಗಳು ದೋಷಪೂರ್ಣವಾಗಿರುವುದನ್ನು ಕಾಣಬಹುದು. ಹೊಸಗನ್ನಡದ ಶೈಲಿಯಂತೆ ಬರೆದ ಕವನಗಳಿಗೂ ಈ ಮಾತು ಅನ್ವಯಿಸುವುದು. ಯಾವುದರಲ್ಲಿಯೂ ರಸಭಿಜ್ಞರ ಹೃದಯತಂತುವನ್ನು ಮಿಡಿಯಬಲ್ಲ ಶಕ್ತಿಯಿಲ್ಲ ಎಲ್ಲವೂ ಸಪ್ಪೆಯಾಗಿರುತ್ತವೆ. ಲೇಖಕರು ಕವನಗಳನ್ನು ಬರೆಯುವ ತೀವ್ರಾಸಕ್ತಿಯನ್ನು ಹೊಂದಿರುವರೆಂಬುದಕ್ಕೆ ಈ ಗ್ರಂಥ ನಿದರ್ಶನವಾದೀತು ಹೊರತು–ಕಾವ್ಯಾಭ್ಯಾಸಿಗಳ ಅಭಿರುಚಿಯನ್ನು ಈ ಕವನ ಸಂಗ್ರಹ ಪೋಷಿಸುವುದಿಲ್ಲ. ಹೀಗಿದ್ದರೂ ಸ್ವಾಮಿಗಳಲ್ಲಿ ಕವಿಹೃದಯವಿದೆ ಎಂಬುದಕ್ಕೆ ಕೆಲವು ಸಾಲುಗಳನ್ನು ಉದಾಹರಿಸಬಹುದು,

"ಮುಂದುವರಿವುದೆ ಬಾಳು
ಹಿಂದುಮರೆವುದೆ ಕೀಳು
ಹೋರುವುದೆ ಚೈತನ್ಯ
ಹೋರದಿರೆ ಜಡಶೂನ್ಯ–"

೦೦ ೦೦

"ಗೌರಂ ಗಂಗಾಸಲಿಲಮು.
ಗೌರಂ ಜಮುನಾ ಜಲಂ ಬೆರೆಯಲಾರಾಗಳ್
ನೀರೆಯ ಜಡೆಯೊಳು ತೊಡರಿರೆ
ತೋರುವ ಮಲ್ಲಿಗೆಯ ಮಾಲೆಯಂತಿರ್ಪಂತೆ
ಸೊಗಯಿಂ"

೦೦ ೦೦

"ಬಳಸುವ ಭಾವದಲ್ಲಿ ಬಳಸುವ ರೀತಿಯಲ್ಲಿ ಹೇಯ ಶ್ರೇಯವಿರುವುದಲ್ಲದೆ ಭೌತಿಕದಲ್ಲಿ ಉಂಟೇ!"

ಕೈ ಇನ್ನೂ ಪಳಗಿದಾಗ, ಕವಿ ಹೃದಯ ಪರಿಪಕ್ವವಾಗ ಶ್ರೀ ಸ್ವಾಮಿಗಳವರಿಂದ ಉತ್ತಮ ವರ್ಗದ ಕವನಗಳನ್ನು ಅಪೇಕ್ಷಿಸುವಂತ ಕಾಡಿನಲ್ಲಿ ಸಿಕ್ಕ ಸಿಕ್ಕ ಹೂಗಳನ್ನು ಕಿತ್ತು ತಂದು ಮನಬಂದಂತೆ ಕಟ್ಟಿರುವ ಹೂವಿನ ಹಾರ ಎಂಬುದಾಗಿ ಕರೆಯಲ್ಪಟ್ಟಂತೆ–ಈ ಸಂಗ್ರಹ ಉಂಟು.

ಕ್ಷಯರೋಗ ಮತ್ತು ಅದರ ನಿವಾರಣೆ—

ಲೇಖಕರು ಡಾ। ವಿ. ಆರ್ ಭಟ್, ಎಂ. ಬಿ. ಬಿ. ಯಸ್, ಟಿ. ಡಿ. ಡಿ. (ಎಂ) -ಪ್ರಕಾಶಕರು—ಚಿತ್ರಾ ಪ್ರಕಾಶನ ಮಂದಿರ, ಪೆಂಟ್ ಲೆಂಡ್ ಪೇಟೆ-ಮಂಗಳೂರು-3- ಬೆಲೆ ರೂ. ೩ ೪-೦.

ಲೇಖಕರು ಮುನ್ನುಡಿಯಲ್ಲಿ ಹೇಳಿರುವಂತೆ ಕ್ಷಯರೋಗದ ವಿಷಯಕ ಅಜ್ಞಾನವು ಹಲವು ಮಂದಿ ಸುಶಿಕ್ಷಿತರಲ್ಲಿಯೂ ಇದೆ ಎಂದರೆ ಅದೊಂದು ಅತಿಶಯೋಕ್ತಿಯಲ್ಲ. ಈ ಅಜ್ಞಾನದೊಂದಿಗೆ ಹಲವು ತಪ್ಪು ಅಭಿಪ್ರಾಯಗಳೂ ಜನರಲ್ಲಿವೆ ಈ ತಪ್ಪಭಿಪ್ರಾಯಗಳನ್ನು ತಿದ್ದಿ ಅಜ್ಞಾನವನ್ನು ಹೋಗಲಾಡಿಸಿ ರೋಗದ ಯಥಾರ್ಥ ಸಂಗತಿಯನ್ನು ಜನರಿಗೆ ತಿಳಿಯುವಂತೆ ಮಾಡುವುದೇ ಈ ಪುಸ್ತಕದ ಉದ್ದೇಶ

ಆಂಗ್ಲ ಭಾಷೆಯಲ್ಲಿ ಕ್ಷಯ ರೋಗದ ವಿಷಯವಾಗಿ ಹಲವು ಚಿಕ್ಕ ದೊಡ್ಡ ಪುಸ್ತಕಗಳಿದ್ದರೂ ಕನ್ನಡದಲ್ಲಿ ಅವು ಅಪೂರ್ವ. ಕ್ಷಯರೋಗದ ಕಾರಣ- ಅದು ಬೆಳೆಯುವ ರೀತಿ ಅದರ ನಿದಾನ- ಅದರ ಚಿಕಿತ್ಸೆ ಮತ್ತು ತ ಎಪಾಯದ ಕಾರ್ಯಕ್ರಮ–ಅದು ಬಾರದ ಹಾಗೆ ಮಾಡುವ ವಿಧಾನಗಳು ಇತ್ಯಾದಿ ವಿಷಯಗಳನ್ನು ಸಚಿತ್ರವಾಗಿ ಸಂಕ್ಷೇಪವಾಗಿ ಪುಸ್ತಕದಲ್ಲಿ ವಿವರಿಸಲಾಗಿದೆ.

ಈ ಪುಸ್ತಕಕ್ಕೆ ಆರೋಗ್ಯ ಸಚಿವರಾದ ಶ್ರೀ ಎ. ಬಿ. ಶೆಟ್ಟರು ಮುನ್ನುಡಿಯನ್ನು ಬರೆದಿದ್ದು ಅದರಲ್ಲಿ ಲೇಖಕರ ಧ್ಯೇಯವನ್ನು ಕೊಂಡಾಡಿದ್ದಾರೆ.

ಒಂದೂ ದೇಶದಲ್ಲಿ ಕ್ಷಯರೋಗ ನಿವಾರಣಾ ಕಾರ್ಯಕ್ಕಾಗಿ ತಮ್ಮ ಅನರ್ಘ ಜೀವನವನ್ನೇ ಧಾರೆಯೆರೆದ ಡಾ। ಕ್ರಿಸ್ಟನ್ ಫ್ರಿಡೊರ್-ಮೊಲ್ಲರ್-ಇವರ ಚಿತ್ರವನ್ನೂ ಸಂಕ್ಷಿಪ್ತ ಪರಿಚಯವನ್ನೂ ಈ ಪುಸ್ತಕದ ಆರಂಭದಲ್ಲಿ ಕೊಡಲಾಗಿದೆ. ಇದು ಪುಸ್ತಕದ ಶೋಭೆಯನ್ನು ಹೆಚ್ಚಿಸಿದೆ.

ಈ ಪುಸ್ತಕದ ಅಭ್ಯಾಸವು ಮಾಡದು ಶೀಘ್ರ ಕ್ಷಯರೋಗ ಅಸ್ವತ್ರೆಯ ಸಹಾಯಾರ್ಥವಾಗಿ ಕೊಡಲ್ಪಡುವುದೆಂಬುದು ಸ್ತುತ್ಯ

ಈ ಪುಸ್ತಕದಿಂದ ಕ್ಷಯರೋಗಿಗಳೂ ಅವರ ಸಂಬಂಧಿಕರೂ ಮತ್ತು ಇತರರೂ ಪ್ರಯೋಜನ ಹೊಂದಬಹುದಾಗಿದೆ. ಲೇಖಕರ ಪ್ರಯತ್ನವು ಸಫಲವಾಗಲೆಂದೂ ಅವರು ಇದೇ ರೀತಿ ಜನರ ಜ್ಞಾನಾಭಿವೃದ್ಧಿಗೆ ಯೋಗ್ಯವಾದ ಪುಸ್ತಕಗಳನ್ನು ಪ್ರಕಟಿಸುತ್ತಿರಲೆಂದೂ ಹಾರೈಸುತ್ತೇನೆ.

ಹಾರ್ಮೋನಿಯಂ ಬೋಧನ ಕ್ರಮ—ಗ್ರಂಥಕರ್ತ ಶ್ರೀ ಎ ರಾಮಪ್ಪ- ಪ್ರಕಾಶಕರು-ಕೆ. ಭೋಜರಾವ್ ಮತ್ತು ಕಂಪೆನಿ, ಕೊಡಿಯಾಲ ಬೈಲು. ಮಂಗಳೂರು-೩. ಬೆಲೆ ರೂ. ೨-೦ ೦

ಹೆಸರೇ ಸೂಚಿಸುವಂತೆ ಇದು ಹಾರ್ಮೋನಿಯಂ ಬೋಧನ ಕ್ರಮದ ವಿವರಣೆಯಾಗಿದೆ. ಇದು ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣವೆಂದ ಮೇಲೆ ಈ ಕನ್ನಡ ಸಂಗೀತ ಪುಸ್ತಕವು ಎಷ್ಟೊಂದು ಜನಪ್ರಿಯವಾಗಿದೆಂಬುದಕ್ಕೆ ಬೇರೆ ನಿದರ್ಶನ ಬೇಡ. ಇದರಲ್ಲಿ ಸಂಗೀತಾಭ್ಯಾಸಿಗಳಿಗೆ, ಮುಖ್ಯವಾಗಿ ಹೊಸ ಮಕ್ಕಳಿಗೆ ಸಂಗೀತ ಪಾಠಕ್ಕೆ ಯೋಗ್ಯವಾದ ವಿಷಯಗಳು ಕೂಡಿದ್ದು ಪುಸ್ತಕವು ಒಂದು ಸಂಗೀತ ಕೈಪಿಡಿ [illegible] ಬಹುದು.

ಮುಖ್ಯವಾಗಿ ಇದರಲ್ಲಿ ನಾದೋತ್ಪತ್ತಿ, ಸ್ವರೋತ್ಪತ್ತಿ, ಸ್ವರ ಭೇದಗಳು, ತಾಳಗಳ ವಿವರ, ರಾಗ ಪ್ರಕರಣ, ಗಮಕಗಳು, ಸ್ವರಾವಳಿ, ಅಲಂಕಾರಗಳು, ಗೀತೆ, ಸ್ವರಜತಿ, ವರ್ಣ, ಮೊದಲಾದ ಆವಶ್ಯಕ ವಿಷಯಗಳಿರುವುದರಿಂದ ಈ ಪುಸ್ತಕವು ಅಭ್ಯಾಸಿಗಳಿಗೆ ವಿಶೇಷ ಪ್ರಯೋಜನಕಾರಿಯಾಗುವುದರಲ್ಲಿ ಅನುಮಾನವಿಲ್ಲ.

ಆಕರ್ಷಕ ರಿಯಾಯಿತಿ!
ಸಪ್ಟಂಬರ 15ರ ತನಕ ಮಾತ್ರ
10 ರೂಪಾಯಿ ಪುಸ್ತಕಗಳನ್ನು ತೆಗೆದು
ಕೊಳ್ಳುವವರಿಗೆ 15 ರೂಪಾಯಿ ಬೆಲೆಯ ಪುಸ್ತಕಗಳು

೧	ಸ್ವತಂತ್ರ ಜೀವನೋಪಾಯ (ನಾಟಕ)	ಬೆಲೆ	೦	೪	೦
೨	ಸಂಶಯ ಪಿಶಾಚಿ (ನಾಟಕ)	,,	೦	೧೨	೦
೩	ನಾಡಕತೆಗಳು (ಕಥಾಸಂಕಲನ)	,,	೦	೩	೦
೪	ಕುರಲವ (ನವ ಪೌರಾಣಿಕ ನಾಟಕ)	,,	೦	೮	೦
೫	ಕಾವ್ಯ ಸಾಮ್ರಾಜ್ಯ (ಕವಿತಾ ಸಂಕಲನ)	,,	೧	೮	೦
೬	ಮಧುವನ (೨೫ ಕಥೆಗಳ ಸಂಗ್ರಹ)	,,	೩	೦	೦
೭	ಮುಂದಿನ ದೇವರು (ಪ್ರಬಂಧ)	,,	೦	೪	೦
೮	ವ್ಯಭಿಚಾರಿಣಿ ಯಾರು? (ನಾಟಕ)	,,	೧	೪	೦
೯	ಹೆಂಡ್ತಿ ಗಂಡನಾದರೆ? (ಪ್ರಹಸನ)	,,	೦	೪	೦
೧೦	ಪುರುಷವಧು! (ಪ್ರಹಸನ)	,,	೦	೪	೦
೧೧	ಸನ್ಯಾಸಿಯ ಸಂಸಾರದಲ್ಲಿ (ಕಾದಂಬರಿ)	,,	೦	೧೨	೦
೧೨	ಸಂಧ್ಯಾದೀಪ (ಕಥಾಸಂಗ್ರಹ)	,,	೧	೦	೦
೧೩	ದೇಶಭಕ್ತ (ರಾಜಕೀಯ ನಾಟಕ)	,,	೧	೪	೦
೧೪	ಪ್ರೇಮವಿಜಯ (ನಾಟಕ)	,,	೧	೦	೦
೧೫	ರಂಗಭೂಮಿ (ನಾಟಕ)	,,	೦	೧೦	೦
೧೬	ಸೇವಾಪಥ (ನಾಟಕ)	,,	೦	೮	೦
೧೭	ನಾರೀಹೃದಯ (ಸ್ತ್ರೀಯರ ಕಥೆಗಳು)	,,	೧	೮	೦
೧೮	ಭಾರತೀಯ ಕಥೆಗಳು (ಕಥೆಗಳು)	,,	೧	೧೨	೦
೧೯	ಪ್ರಕಾರ (ಸಾಮಾಜಿಕ ನಾಟಕ)	,,	೨	೮	೦
೨೦	ಮೂರು ಪ್ರಹಸನಗಳು (ವಿನೋದ ನಾಟಕಗಳು)	,,	೧	೪	೦
೨೧	ನಗಸೋಟಿಗಳು (ವಿನೋದ ಕತೆಗಳು)	,,	೧	೪	೦
೨೨	ಅನ್ನದೇವರು ಮತ್ತು ಇತರ ಕತೆಗಳು	,,	೧	೦	೦
೨೩	ಭಾರತದಲ್ಲಿ ಜಾತಿ ಭೇದ	,,	೧	೦	೦
೨೪	ವಿಷ್ಣುವಿನ ದಶಾವತಾರಗಳು	,,	೦	೧೨	೦
೨೫	ಆಕಾಶಗಂಗೆ (೨೦ ಕಥೆಗಳ ಸಂಗ್ರಹ)	,,	೨	೮	೦
೨೬	ಸ್ವಾತಂತ್ರ್ಯವೀರ ಸಾವರ್ಕರರು	,,	೧	೪	೦
೨೭	ಜೀವನ ಸಂಗ್ರಾಮ (ಸಾಮಾಜಿಕ ನಾಟಕ)	,,	೧	೮	೦
೨೮	ಕಂಬ (೧೦ ಕತೆಗಳು)	,,	೧	೪	೦
೨೯	ಕವಿತಾಕಾಮಿನಿ (ಕವನಸಂಗ್ರಹ)	,,	೨	೦	೦
೩೦	ಸ್ವರಾಜ್ಯ ವಿಜಯ (ನವೀನ ಪ್ರಸಂಗ)	,,	೦	೫	೦
೩೧	ಸಪ್ತಸಾಗರ (ಏಳು ಕಥೆಗಳು)	,,	೦	೧೨	೦
೩೨	ಜನೋದ್ಧಾರ (ಕಾದಂಬರಿ)	,,	೧	೮	೦
೩೩	ಬಾಳಿನ ಬೆಡಗು (ಕಾದಂಬರಿ)	,,	೧	೪	೦

ವಿಚಾರಿಸಿರಿ:— ನವಯುಗ ಆಫೀಸು ಉಡುಪಿ

ವಾರದ ಒಳಿತು ಕೆಡುಕುಗಳು

ತಾ. ೨೦—೮—೫೩ರಿಂದ ತಾ. ೨೬—೮—೫೩ರ ವರೆಗೆ.

ಮೇಷ—ನಿಸರ್ಗತಃ ಶುಭರಾದ ಬುಧ, ಗುರು ಶುಕ್ರರ ಅನುಗ್ರಹವು ನಿಮ್ಮ ಮೇಲಿರುವುದರಿಂದ ಸತ್ಕಾರ್ಯ ಸದಾಚಾರ ಸದುದ್ಯೋಗ ಪ್ರವೃತ್ತನಾದ ಜನವೃಂದಕ್ಕೆ ಈ ವಾರವು ಶುಭಫಲದಾಯಿಯಾಗಲಿದೆ. ದೇಹಾರೋಗ್ಯ ಮನಶ್ಶಾಂತಿ ಆರ್ಥಿಕ ಸಂಪತ್ತು ಚೆನ್ನಾಗಿರುವುದು. ನಿಮ್ಮ ಉದ್ಯಮಕ್ಕೆ ಶತ್ರುಜನರಿಂದ ವಿಘ್ನ ವಿಡಂಬರಗಳು ಪ್ರಾಪ್ತವಾಗಲಿವೆ. ಆಪ್ತೇಷ್ಟರ ವಿಯೋಗವುಂಟಾಗುವ ಸಂಭವವಿದೆ. ಕೆಲವೊಮ್ಮೆ ಅನಪೇಕ್ಷಿತ ಪ್ರವಾಸವು ಗಂಟುಬೀಳಲಿದೆ. ನಿಪ್ರ್ಯಪಜೀವಿ ವರ್ಗಕ್ಕೆ ಈ ಕಾಲವು ಉತ್ತಮವಾಗಿರುವುದು. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಅಭಿಲಾಷೆಗಳು ಈಡೇರಲಿವೆ.

ವೃಷಭ – ನಿಮ್ಮ ಸಾಂಸಾರಿಕ ತಾಪತ್ರಯಗಳೆಲ್ಲವೂ ನಿವೃತವಾಗಿ, ನಿಶ್ಚಿಂತೆಯಿಂದ ಕಾಲಯಾಪನೆ ಮಾಡುವಿರಿ ಕೈಗೊಂಡ ಪ್ರತಿಯೊಂದು ಕಾರ್ಯಗಳೂ ನಿರೀಕ್ಷೆಗಿಂತ ಹೆಚ್ಚಿನ ಫಲವನ್ನೀಯುವವು. ನಿಮ್ಮ ಕರ್ತವ್ಯದಕ್ಷತೆಯನ್ನು ನೋಡಿದ ಶತ್ರುವೃಂದವು ನಿಮ್ಮ ಸಮೀಪ ಸುಳಿಯಲೊಲ್ಲದು. ಹಿರಿಯರಿಂದ ಧನಪ್ರಾಪ್ತಿಯ ಯೋಗವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನೌಕರಿವರ್ಗಕ್ಕೂ ಈ ಕಾಲವು ಉತ್ತಮವೆನಿಸದು. ವಿನಾಕಾರಣ ಕಲಹ ಸ್ಥಾನ ಚಲನೆ ಮೊದಲಾದ ಅನಿಷ್ಟಗಳು ಕಂಡುಬರಲಿವೆ, ವಾರಾಂತ್ಯದ 2 ದಿನಗಳಲ್ಲಿ ಬಯಸಿದಂತೆ ಕಾರ್ಯಸಿದ್ಧಿಯೂ ಮನಸ್ಸಿಗೆ ನೆಮ್ಮದಿಯೂ ಲಭಿಸಲಿದೆ.

ಮಿಥುನ— ಕಳೆದ ದಿನಗಳಿಗಿಂತ ಈ ವಾರವು ನಿಮಗೆಷ್ಟೋ ಹಿತಕರವೆನಿಸುವದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ನಾಣ್ಣುಡಿಯಂತೆ ನಿಮ್ಮ ಪರಿಶ್ರಮಕ್ಕೆ ಉತ್ತಮವಾದ ಫಲವು ಲಭಿಸುವದು. ಕೈಗಾರಿಕೆ ನೌಕರಿ ಲೇಖನ ವ್ಯಾಪಾರ ವೈದ್ಯ ಮೊದಲಾದ ವೃತ್ತಿಗಳಲ್ಲಿ ಒಳ್ಳೆಯ ಕೀರ್ತಿ ಮತ್ತು ಲಾಭವಾಗಲಿದೆ. ಆದರೆ ಗೃಹಕಾಪತ್ರಯಗಳು ಕೊಂಚ ನಿಮ್ಮನ್ನು ಬಾಧಿಸಲಿವೆ. ಆರೋಗ್ಯವು ಕೆಟ್ಟಿಗಿರಲಾರದು. ಪರ್ಯಟನವು ಕಷ್ಟನಷ್ಟದಾಯಿಯಾಗಿ ಪರಿಣಮಿಸೀತು. ವಾರಾದಿಯ 2 ದಿನಗಳು ಇಷ್ಟಪ್ರದಗಳಿವೆ.

ಕರ್ಕಟ—ನಿಮ್ಮ ಜೀವನ ಮಾರ್ಗವು ದಿನಗಳೆದಂತೆ ಕಂಟಕ ಮಯವಾಗುತ್ತಾ ಬರುತ್ತದೆ. ನನೆದಂತೆ ಕಾರ್ಯಗಳು ನೇರವೇರವು ಆತ್ಮೀಯರ ಸಹಕಾರವು ಲಭಿಸದು. ಶತ್ರುಗಳ ಉಪಟಳವು ಹೆಚ್ಚುವದು. ಮನೋಧೈರ್ಯವು ಮಾಯವಾಗುವದಲ್ಲದೆ ಪರರೊಡನೆ ನಿಷ್ಕಾರಣವಾಗಿ ಜಗಳಾಡುವಿರಿ. ಆದಾಯಕ್ಕಿಂತ ದ್ವಿಗುಣವ್ಯಯವಾಗಲಿರುವುದರಿಂದ ತುಂಬಾ ಸಾಲ ಕಡಗಳಿಗೆ ಸಿಲುಕಿ ತಾಪತ್ರಯಕ್ಕೆ ಗುರಿಯಾಗಲಿರುವಿರಿ. ವಾರಾದಿಯ 4 ದಿನಗಳಲ್ಲಿ ಮೇಲೆ ಹೇಳಿದ ಅನಿಷ್ಟಗಳು ಹೆಚ್ಚಾಗಿ ಕಾಣಿಸುವು

ಸಿಂಹ – ನಿಮ್ಮ ಪರಿಸ್ಥಿತಿಯಿಂದು ಮುಂಚಿಗಿಂತ ಆದೆಷ್ಟೋ ಸುಧಾರಿಸಲಿದೆ. ನಿಮ್ಮ ಉಪಚಯಸ್ಥಾನಕ್ಕೆ ಉಚ್ಚನಾದ ಶನಿಯು ಸೇರುವುದರಿಂದ ಅದೆಂತಹ ದುಷ್ಕರವಾದ ಕಾರ್ಯವಾದರೂ ಇಂದು ಸುಲಭವೆನಿಸುವದು. ಉದ್ಯೋಗ ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಪ್ರಗತಿಯನ್ನೈದುವಿರಿ. ಆದರೂ ಇಲ್ಲ ಸಲ್ಲದ ಖರ್ಚುಗಳಿಗೆ ನೀವು ತವರುಮನೆಯಾಗಿರುವುದರಿಂದ ಕಷ್ಟಪಟ್ಟು ದುಡಿದುದೆಲ್ಲವೂ ದಿನಾಂತ್ಯದಲ್ಲಿ ಇಲ್ಲದಾಗುವುದು. ಸನ್ಮಿತ್ರರ ಬೆಂಬಲದಿಂದ ಕೂಡಿದ ನಿಮಗೆ ವಾರಾಂತ್ಯದ 5 ದಿನಗಳು ಸುಖಕರಗಳಿವೆ

ಕನ್ಯಾ — ಗ್ರಹಮಾನವು ಸಾಕಷ್ಟು ಉತ್ತಮವಿರುವುದು. ನಿಮ್ಮ ಭಾಗ್ಯ ಲಾಭಗಳಲ್ಲಿ ಗ್ರಹಚತುಷ್ಟಯದ ಸಮ್ಮಿಲನವಾಗುವುದರಿಂದ ಧನ ಧಾನ್ಯಗಳ ಸಂಪತ್ತು ವೃದ್ಧಿಗೊಳ್ಳಲಿದೆ. ಸಮಾಜದಲ್ಲಿ ಸ್ಥಾನಮಾನಗಳೂ ರಾಜಕೀಯ ಕ್ಷೇತ್ರದಲ್ಲಿ ವಿಜಯವೂ ಲಭಿಸುವದು. ಆದರೆ ಅರ್ಥಸ್ಥಾನಗತನಾದ ಶನಿಯು ನಿಮ್ಮನ್ನು ಸದಾರಿಕ್ತಹಸ್ತರನ್ನಾಗಿ ಮಾಡಲು ಬದ್ಧಕಂಕಣನಿರುವನು. ವಾತ ಪ್ರಕೋಪದಿಂದಾಗಿ ಆರೋಗ್ಯವೂ ಕೆಡಲಿದೆ. ತಾ 25, 26 ಇದ್ದುದರಲ್ಲಿ ಉತ್ತಮವಿರೆ.

ತುಲಾ:—ಇಂದಿನ ದಿನಗಳು ಸ್ವಲ್ಪ ಬಿಕ್ಕಟ್ಟಿನವುಗಳಾಗಿ ಪರಿಣಮಿಸಲಿವೆ, ಜನ್ಮಗತ ಶನಿಯೂ ಅಷ್ಟಮಸ್ಥ ಬೃಹಸ್ಪತಿಯೂ ನಿಮ್ಮ ಆರೋಗ್ಯವನ್ನು ಕೆಡಿಸಲಿರುವರು. ಆಪತ್ತಿಗೆಂದು ಸಂಗ್ರಹಿಸಿಟ್ಟ ಧನವು ಉಳಿಯಲೊಲ್ಲದು ವ್ಯರ್ಥ ಪರ್ಯಟನವು ಪ್ರಾಪ್ತವಾಗುವದು. ಆಪ್ತಜನ ವಿಯೋಗದಿಂದ ದುಃಖಭಾಗಿಗಳಾಗುವಿರಿ. ಆದರೆ ಭಾಗ್ಯ ಲಾಭಪರು ಸುಕ್ಷೇತ್ರವನ್ನು ಹೊಂದಿರುವುದರಿಂದ ನಿಮಗಿಂದು ಆರ್ಥಿಕ ಬಿಕ್ಕಟ್ಟು ಕಾಣಿಸದು. ಹಿಡಿದ ಕಾರ್ಯವು ಕೊನೆಗೊಂದಲಿದೆ. ವಾರಾದಿಯ 2 ದಿನಗಳು ಇಚ್ಛಾಪೂರಕಗಳಾಗಿವೆ.

ವೃಶ್ಚಿಕ—ಸುದಿನಗಳು ಸಂದುಹೋದವು. ಸದ್ಯ ನಿಮ್ಮ ದೈವವು ದಿನೇ ದಿನೇ ಹ್ರಾಸವಾಗುತ್ತಾ ಬರಲಿದೆ. ಇಂದಿದ್ದ ಸುಖ ಸೌಕರ್ಯಗಳು ನಾಳೆಗೆ ಇರಲಾರವು. ದೇಹ ಪೀಡೆ ಮನೋ ರೋಗಗಳು ಹೆಚ್ಚಲಿವೆ. ಧನದ ನಿಮಿತ್ತ ಕಲಹ ನಿಷ್ಠುರಗಳಾಗುವವು. ಶೋಕಾನರ್ಥಗಳ ಪರಂಪರೆಗಳು ಒಂದರ ಹಿಂದೊಂದರಂತೆ ಬರಲಿವೆ. ಆದರೂ "ಉದ್ಯೋಗಂ ಪುರುಷ ಲಕ್ಷಣಂ" ಎಂಬಂತೆ ಉದಾಸೀನರಾಗದೆ ಕರ್ಮ ಪ್ರವೃತ್ತರಾಗಿರಿ. ದೈವವು ನಿಮ್ಮ ಆಶಾ ಕಾಂಕ್ಷೆಗಳನ್ನು ಇಂದಲ್ಲವಾದರೆ ನಾಳೆಯಾದರೂ ಕೊನೆ ಹೊಂದಿಸೀತು. ತಾ. 22, 23 ಮಾತ್ರ ಅನುಕೂಲ.

ಧನು—ನಿಮ್ಮ ಭಾಗ್ಯದ ಕದವೀಗ ತೆರೆಯಲಾರಂಭಿಸಿದೆ. ಬಹುಮುಟ್ಟಿನ ತಾಪತ್ರಯಗಳು ದಿನದಿಂದ ದಿನಕ್ಕೆ ಮಾಯವಾಗುತ್ತಲಿವೆ, ಶತ್ರು ಜನ ಬಾಧೆಯಿಂದಲೂ ಧನದ ಬಿಕ್ಕಟ್ಟಿನಿಂದಲೂ ಮುಕ್ತರಾಗುವಿರಿ. ನೌಕರಿ ವ್ಯಾಪಾರಾದಿ ವ್ಯವಹಾರಗಳಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ. ಆದರೂ ಅಷ್ಟಮಸ್ಥ ನೀಚ ಅಂಗಾರಕನು ಧನಮಾನಗಳಿಗೆ ಹಾನಿಯನ್ನುಂಟುಮಾಡಲಿರುವನು. ಶಸ್ತ್ರಾದಿಗಳಿಂದ ಶರೀರದಲ್ಲಿ ಗಾಯಾದಿಗಳುಂಟಾದಾವು. ತಾ. 20, 21, 25. 26 ಈ ದಿನಗಳಲ್ಲಿ ಭೋಗಲಾಭ ವಿಜಯಗಳು ಲಭಿಸುವವು.

ಮಕರ—ದೈವವು ತೀರಾ ವಿಮುಖವಾಗಿರುವುದರಿಂದ ನಿಮ್ಮ ಪಂಶ್ರಮವು ಅರಣ್ಯರೋಧನದಂತೆ ವಿಫಲವಾಗುವದು. ಮನೆಯಲ್ಲಿ ಅವ್ಯವಸ್ಥೆಯಿಂದಾಗಿ ಗೃಹ ಕಲಹವು ಹೆಚ್ಚಲಿದೆ, ಸ್ತ್ರೀಯರಿಂದಾಗಿ ವಿಶೇಷ ಅನಿಷ್ಟ ಅಪವಾದ ಖರ್ಚುಗಳು ಪ್ರಾಪ್ತವಾಗುವವು. ವಿಜಾತಿಯವರೊಡನೆ ಕಲಹವಾಗುವದು ಆರ್ಥಿಕ ಮುಗ್ಗಟ್ಟಿನಿಂದಾಗಿ ದಿನಯಾಪನೆಯು ಅತೀವ ಕಷ್ಟವಾಗಿ ಪರಿಣಮಿಸೀತು, ತಾ. 22, 23 ಈ ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಆಪ್ತ ಮಿತ್ರರ ನೆರವು ಕಾರ್ಯಸಿದ್ಧಿಗಳು ಲಭಿಸುವವು.

ಕುಂಭ—ಇತ್ತೀಚೆಗೆ ಕೆಲವು ದಿನಗಳಿಂದ ನಿಮ್ಮ ದೈವವು ಕೃಷ್ಣಪಕ್ಷದ ಚಂದ್ರನಂತೆ ಹ್ರಾಸವಾಗುತ್ತಾ ಬರುತ್ತಿದೆ. ಸುಖಭಾಗ್ಯಪತಿಯಾದ ಶುಕ್ರನೂ ಧನಲಾಭಾಧಿಪನಾದ ಗುರುವೂ ವಿಶೇಷತಃ ಪ್ರತಿಕೂಲರಿದ್ದಕಾರಣ ದೈಹಿಕ ಸುಖ ಮಾನಸಿಕ ಶಾಂತಿ ಆರ್ಥಿಕ ಸಂಪತ್ತು ಇವುಗಳಿಗೆ ವಿಶೇಷ ಧಕ್ಕೆಯಿದೆ. ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟ ಕಾಣಿಸೀತು ಶ್ರಮ ಜೀವಿಗಳಿಂದ ಸೇವಕ ವರ್ಗಕ್ಕೂ ಕೃಷಿಕ ಜನತೆಗೂ ಈ ವಾರವು ಅನಿಷ್ಟದಾಯಿಯಾಗದು. ತಾ 20, 21, 25, 26 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

ಮೀನ—ಕಳೆದ ದಿನಗಳಿಗಿಂತ ಈ ವಾರವು ನಿಮಗೆ ಎಷ್ಟೋ ಉತ್ತಮವಾಗಿ ಕಾಣಿಸಲಿದೆ. ವಿಶೇಷತಃ ನಿಮ್ಮ ಸಂಪದ್ಭಾಗದಲ್ಲಿ ಪ್ರಗತಿಯು ಕಾಣಿಸುವದು. ರಾಜಕೀಯ ಕ್ಷೇತ್ರದಲ್ಲಿನ ನಿಮ್ಮ ಕಾರ್ಯಕಲಾಪಗಳು ನಿಮ್ಮಂತೆ ಕೊನೆಗೊಳ್ಳುವವು. ಸಾಂಸಾರಿಕ ತಾಪತ್ರಯಗಳಿಂದ ಅಪ್ರಿಯರಾದ ನಿಮಗೆ ಆಪ್ತೇಷ್ಟರ ವಿರಹಯೋಗವಿದೆ, ಆಕಸ್ಮಿಕ ಪರ್ಯಟನದಿಂದಾಗಿ ದೇಹಾರೋಗ್ಯವು ಕೆಡಲಿರುವುದು. ವಾರಾದಿಯ 4 ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಶಕ್ತವಾಗಿರುವವು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. NO. 34/1953

1. ಸಿದ್ದಿಲು ಲಕ್ಷ್ಮಿ ಅಮ್ಮ, ಕೃಷ್ಣ ಭಟ್ಟರ ವಿಧವೆ, 2. ಈಶ್ವರ ಭಟ್ಟ, 3. ಶಿವರಾಮ ಭಟ್ಟ, ಕೃಷ್ಣ ಭಟ್ಟರ ಮಕ್ಕಳು, ಪುತ್ತೂರು ತಾಲ್ಲೂಕು ಅಲೆಟ್ಟಿ ಗ್ರಾಮದಲ್ಲಿರುವವರು —ಅರ್ಜಿದಾರರು.

ಮತ್ತು

ಸಿದ್ದಿಲು ಕೇಶವ ಭಟ್ಟ, ಈಶ್ವರ ಭಟ್ಟರ ಮಗ, ಪುತ್ತೂರು ತಾಲ್ಲೂಕು ಅಲೆಟ್ಟಿ ಗ್ರಾಮದಲ್ಲಿರುವವರು —ಎದುರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ

1ನೇ ಅರ್ಜಿದಾರಳ ಮಗ ಹಾಗೂ 2, 3ನೇ ಅರ್ಜಿದಾರರ ಖಾಸಾ ಅವಿಭಕ್ತ ಸಹೋದರ, ಮೃತ ಗೋಪಾಲಕೃಷ್ಣ ಭಟ್ಟರ ಬಾಬ್ತು, ಬೊಂಬೆ ವಾರ್ಡನ್ ಇನ್‌ಶ್ಯೂರೆನ್ಸ್ ಕಂಪೆನಿಯ ಪೋಲಿಸಿ ನಂಬ್ರ 35083ನೇಗೆ ಇರುವ ರೂಪಾಯಿ 5000-0-0 ದ ಸಾಲ್ಯ ಪೋಸ್ಟಾಫೀಸಿನ ನಂಬ್ರ 24708ನೇ ಸೇವಿಂಗ್ಸ್ ಬ್ಯಾಂಕು ಎಕೌಂಟಿನಲ್ಲಿರುವ ರೂ 3100-0-0 ನ್ನು ಕೂಡಾ ಪಡಕೊಳ್ಳುವರೆ 2ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಸದ್ರಿ ಅರ್ಜಿದಾರರು ಮೇಲಿನ ಅರ್ಜಿ ದಾಖಲ್ಲು ಮಾಡಿರುತ್ತಾರೆ ಸದ್ರಿ ಅರ್ಜಿಯು ತಾ. 25-8-1953ಕ್ಕೆ ವ್ಯಾದೆಯಿರುತ್ತದೆಂತಲೂ, ಹಾಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವರೆ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ ಕೋರ್ಟು ಮುಖಾಂತರ ಪ್ರಕಾರ ಈ ಮೂಲಕ ತಿಳಿಯಪಡಿಸಲಾಗಿಯದೆ.

(Sd.) **P. Krishna Bhat,**
Vakil for Petrs.

Puttur, Date 7—8—1953

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—: ವಿಳಾಸ:—

ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಟೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ**. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಟೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಆತ್ಮುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ: ರೂ. 3/ ; ಸ್ಪೆಶಲ್ ರೂ. 5/— ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹಸ್ತೆರವಾಣಿ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA, 40

ಸ್ಟಾಕಿಸ್ಟರು: ರಹಾಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ ಕನ್ನ

ವಾ। ಚಂದಾ 5-12-0
6 ತಿಂಗಳಿಗೆ 3--0-0
ಬಿಡಿ ಪ್ರತಿಗೆ 0--2-0

Reg. No.
M 3618

LICENCE No. 31
Licensed to Post without Prepayment

ನವಯುಗ

27-8-1953

Vol 32
No 51

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೫೧

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತವೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

—ಮಧುಪರ್ಕ—

ಪ್ರಧಾನಿ ನೆಹರೂರವರು ಮೊನ್ನೆ ಜೂನು ತಿಂಗಳಲ್ಲಿ ರಾಣಿ ಎಲಿಜಾಬೆಥ್‌ರ ಕಿರೀಟ ಧಾರಣೋತ್ಸವಕ್ಕೆ ಹೋದವರು ಹಿಂದೆ ಬರುವಾಗ ಸ್ವಿಜರ್ಲೆಂಡಿನಲ್ಲಿ ಕೆಲವು ದಿನ ವಿಶ್ರಾಂತಿಯನ್ನು ಪಡೆದುಕೊಂಡರು. ಅಲ್ಲಿ ಅವರ ಭೇಟಿಯು ಸುಪ್ರಸಿದ್ಧ ಹಾಸ್ಯನಟ ಚಾರ್ಲಿ ಚಾಪ್ಲಿನನೊಡನೆ ಆಯಿತು. ಪತ್ರಿಕೆಗಳು ಮುಗಿದನಂತರ ಚಾರ್ಲಿ ಚಾಪ್ಲಿನನು ನೆಹರೂರನ್ನು ಕುರಿತು "ನಮ್ಮೊಡನೆ ಭೇಟಿಯಾಗುವ ಪ್ರತಿಯೊಬ್ಬರೂ ಒಂದು ವಿಶಿಷ್ಟ ಮಾತನ್ನು ಕೇಳುತ್ತಾರೆ ನೀವು ಅದನ್ನು ಕೇಳದಿದ್ದುದು ತುಂಬ ಸಂತೋಷದ ಸಂಗತಿ" ಎಂದರು.

"ಅದೇನು ಮಾತು?" ಎಂದು ನೆಹರೂ ಕೇಳಿದರು.

"ಸಾಮಾನ್ಯವಾಗಿ ನನ್ನನ್ನು ಕಂಡು ಮಾತನಾಡಿದ ಜನರು ಕೊನೆಯಲ್ಲಿ 'ನೀವು ನಾವೆಣಿಸಿದಷ್ಟು ವಿನೋದ ಪಡುವವರಲ್ಲವೆಂದು ತೋರುತ್ತದೆ' ಎನ್ನುತ್ತಾರೆ."

"ಇದಕ್ಕೆ ನೀವೇನು ಹೇಳುತ್ತೀರಿ?"

"ಬೇರೇನು ಹೇಳಲಿ? 'ಎಲ್ಲ ಸದಾ ಇರಬೇಕಾದಷ್ಟು ವಿನೋದಪಡುವವರಾಗಿರುವುದಿಲ್ಲ' ಎಂದುಬಿಡುತ್ತೇನೆ!"

ಸಂದರ್ಶಕರು ಶಿಷ್ಟಾಚಾರದ ಎಲ್ಲೆ ಮೀರಬಹುದಾದರೆ ಚಾರ್ಲಿ ಚಾಪ್ಲಿನನಿಗೇನು ಆ ಅಧಿಕಾರವಿಲ್ಲವೆ?

ಅಧಿಕಾರದ ಮೀಮಾಂಸೆ

ಒಬ್ಬನ ಪ್ರಶ್ನೆಯೇ ಅವನ ಉತ್ತರವಾಗಿಯೂ ಪರಿಣಮಿಸುವ ಪ್ರಸಂಗ ಜೀವನದಲ್ಲಿ ಅನೇಕ ವೇಳೆ ಬರುತ್ತದೆ. ಶರತ್‌ಬಾಬುಗಳ "ದೇವದಾಸ" ಕಾದಂಬರಿಯಲ್ಲಿ ಕಥಾನಾಯಕ ದೇವದಾಸ ತನ್ನ ಪ್ರೇಯಸಿ ಪಾರ್ವತಿಯು ದುಷ್ಟತನ ತೋರಿಸಿದಳೆಂದು ಹೊಡೆಯುತ್ತಾನೆ. ಬಿಸಿ ತಣಿದ ಮೇಲೆ ಪಾರ್ವತಿ, "ನೀನೇಕೆ ಹಾಗೆ ಮಾಡಿದಿ?" ಎಂದು ದೇವದಾಸನನ್ನು ಕೇಳುವಾಗ ಅವನು ಕೂಡ "ಪಾರೂ, ನೀನೇಕೆ ಹಾಗೆ ಮೊಂಡುತನ ತೋರಿಸಿದಿ?" ಎಂದು ಕೇಳುತ್ತಾನೆ. ಇದರ ಅರ್ಥ ಏನಾಯಿತೆಂದರೆ, ಬೇರೊಬ್ಬರು ನಮಗೆ ಏನಾದರೊಂದು ಮಾಡಿದರೆ, ಅದಕ್ಕೆ ಮೂಲಕಾರಣವಾಗಿ ನಾವು ಸಹ ಏನೋ ಕೆಲಸ ಮಾಡಿರಬೇಕು. "ಕಾರಣವಿಲ್ಲದೆ ಕಾರ್ಯವಿಲ್ಲ" ಎನ್ನುತ್ತಾರಲ್ಲ- ಹಾಗೆ ಪರಿಣಾಮವನ್ನು ಇದಿರಿಸುವುದು ನಮ್ಮ ಮನಸ್ಸಿಗೆ ಖರುವುದಿಲ್ಲವಾದರೆ ಆ ಕಾರ್ಯವನ್ನೂ ಮತ್ತದಕ್ಕೆ ಕಾರಣವಾಗಬಹುದಾದ ಸಂಗತಿಯನ್ನೂ ಮೂಲೋತ್ಪಾಟನೆ ಮಾಡಿಬಿಡಬೇಕು. ಅದು ಸಾಧ್ಯವಿಲ್ಲದೆ-ನಾನು ಇದನ್ನು ಮಾಡಿಯೇ ಸಿದ್ಧವೆಂದಾದರೆ ಅದರಿಂದ ಬಂದುದನ್ನು ಅನುಭವಿಸಲೂ ಸಿದ್ಧ ಎಂಬ ಎದೆಗಾರಿಕೆ ಇರಬೇಕು. ಅನ್ಯಥಾ ನಮ್ಮ ದರ್ಪನಡೆಯಲಾರದು; ಅದು ದಮನಿಸಲ್ಪಡುವುದು.

ರಾಜಕೀಯಕ್ಕೆ ಇದನ್ನು ಅನ್ವಯಿಸುವುದರಲ್ಲಿ "ಕಾಯಿದೆ ಭಂಗ" ಅಥವಾ "ಸತ್ಯಾಗ್ರಹ" ಎಂದು ನಾವು ಕರೆಯುವ ಪ್ರಸಂಗಗಳು ನಮ್ಮ ಎದೆಗಾರಿಕೆಯನ್ನು ಪರೀಕ್ಷಿಸಲಿಕ್ಕೆಂದೇ ಹುಟ್ಟಿಕೊಳ್ಳುತ್ತವೆ; ಅಥವಾ ಅವುಗಳಲ್ಲಿ ತೊಡಗಿದವರು ತಮ್ಮ ಛಲದ ಪರೀಕ್ಷೆಯೇ ಇದೆಂಬುದನ್ನು ತಿಳಿದಿರಬೇಕಾಗುತ್ತದೆ. ಭಾರತವು ಬ್ರಿಟಿಷರ ದಾಸ್ಯದಲ್ಲಿ ಕೊಳೆಯುತ್ತಿದ್ದಾಗ "ಸತ್ಯಾಗ್ರಹ"ದ ಮೂಲಕ "ಕಾಯಿದೇ ಭಂಗ"ವನ್ನು ಮಾಡಿದ ನಾವು ಅದನ್ನೊಂದು ಅಧಿಕಾರವೆಂದೇ ತಿಳಿಯುತ್ತಿದ್ದೆವು. ಇದಕ್ಕೆ ಕಾರಣವೂ ಇತ್ತು; ಆಗ ಸರಕಾರವು ರಚಿಸಿದ ಕಾಯಿದೆ ಕಾನೂನುಗಳಲ್ಲಿ ಭಾರತೀಯರ ಕೈವಾಡ ಲವಲೇಶವೂ ಇದ್ದಿರಲಿಲ್ಲ. ಆಳರಸರು ತಮಗೆ ಸರಿಕಂಡಂತೆ ರಚಿಸಿದ ಕಾಯಿದೆಗಳು ಭಾರತೀಯರ ಒಲವಿನ ವಿರುದ್ಧವಾಗಿ ಕಂಡಾಗಲೆಲ್ಲ, ಅವುಗಳನ್ನು ಸತ್ಯಾಗ್ರಹದ ಮೂಲಕ ಭಂಗಿಸುವುದು ಮತ್ತು ಕಾಯಿದೆಯ ಕಾರ್ಯಾಚರಣೆಯೊಂದಿಗೆ ಅಸಹಕಾರ ಮಾಡುವುದು ನಮ್ಮ ಕರ್ತವ್ಯವೆಂದೂ ಇದಕ್ಕೆ ನೈತಿಕ ಬಲವಿದೆಯೆಂದೂ ನಾವೆಲ್ಲರೂ ಭಾವಿಸಿದ್ದೆವು.

ಆದರೆ ಈಗ ಕಾಲವು ಮೊದಲಿನಂತಿಲ್ಲ-ಭಾರತವು ಸ್ವತಂತ್ರವಾಗಿದೆಯಷ್ಟೆ, ನಾವೇ ರಾಜ್ಯಾಂಗ ಘಟನೆಯೊಂದನ್ನು ರೂಪಿಸಿ, ಅಂಗೀಕರಿಸಿದ್ದೇವೆ, ತಜ್ಞರ ಅಭಿಪ್ರಾಯದಂತೆ ಮೂಲಭೂತವಾದ ಸಂಗತಿಗಳಿಗೆ ವಿರೋಧ ಬಾರದಂತೆ ನಮ್ಮ ಘಟನೆಯನ್ನು ತಿದ್ದುಪಡಿ ಮಾಡಲು ಸುಗಮವಾದ ಮಾರ್ಗವಿರುತ್ತದೆ. ಹೀಗಿರುತ್ತಾ ನಾವು ಕಾಯಿದೆಭಂಗ ಅಥವಾ ಸತ್ಯಾಗ್ರಹವನ್ನು ಕೈಗೊಳ್ಳುವುದು ಯೋಗ್ಯವೇ, ಮತ್ತದಕ್ಕೆ ಈಗ ನೈತಿಕ ಬಲವಿರುತ್ತದೆಯೆ? ಎಂಬುದನ್ನು ವಿಚಾರಿಸುವುದೊಳಿತು.

ಈ ವಿಮರ್ಶೆಯನ್ನು ಮಾಡುವಾಗ, ಮೊದಲಿಗೆ ಕಂಡುಬರುವ ಸಂಗತಿಗಳು ಹೀಗಿವೆ: ವ್ಯಕ್ತಿಯೊಬ್ಬನಿದ್ದಾನೆ. ಅವನಿರುವ ಸಮಾಜವೊಂದಿದೆ. ಮತ್ತು ವ್ಯಕ್ತಿ ಹಾಗೂ ಸಮಾಜ ಇವೆರಡರ ಯೋಗಕ್ಷೇಮವು ಹಾಗೂ ಶಾಂತಿಕಲ್ಯಾಣದ ಹೊಣೆಯನ್ನು ಹೊತ್ತ ಸರಕಾರವೊಂದು ... ಕಾರ್ಯಾಂಗವಿದೆ. ಸತ್ಯಾಗ್ರಹಿಗಳಾದವರು ಕಾಯಿದೆ ಭಂಗವನ್ನು ಮಾತ್ರ ... ಸಾಮಾಜಿಕ ಹಿತವನ್ನು ಸಹ ... ಎಂದು ಸಂಶಯದ ... ಸತ್ಯಾಗ್ರಹವೆಂಬ ... ಯೋಗ್ಯತೆಯನ್ನು ಅಳೆಯಬೇಕು.

ಸರಕಾರ ಹಾಗೂ ಸಮಾಜದ ಕಾರ್ಯವಿಧಾನಗಳಲ್ಲಿ ಪರಸ್ಪರ ಪೂರಕವಾಗಿದ್ದರೂ ಅವುಗಳ ಕಾರ್ಯಕ್ಷೇತ್ರದಲ್ಲಿ ಭಿನ್ನತೆ ಸ್ವಾಭಾವಿಕವಾಗಿಯೇ ಇರುತ್ತದೆ. ಸಮಾಜದ ನೀತಿನಿಯಮಗಳು ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತವೆ. ಆದರೆ ಸರಕಾರದ ಕಾನೂನು ಮತ್ತು ಕಾಯಿದೆಗಳಿಗೆ ನಿಶ್ಚಿತ ಅರ್ಥವಿದೆ. ಸಮಾಜದ ರೂಢಿ ಮತ್ತು ಸಂಪ್ರದಾಯಗಳಿಗೆ ಅಪವಾದವಿದ್ದೇ ಇರುತ್ತದೆ. ಆದರೆ ಕಾಯಿದೆ ಕಾನೂನು ಯಾರಲ್ಲಿಯೂ ಭೇದ ಭಾವವನ್ನು ಎಣಿಸುವುದಿಲ್ಲ. ಆದುದರಿಂದ ಸ್ವಯಂ ಪ್ರೇರಣೆಯಿಂದ ನಡೆಯಲು ಸಾಕಾಗಬಹುದಾದ ಸಂಗತಿಗಳನ್ನು ಸಮಾಜದ ಪಕ್ಷಕ್ಕೆ ಹಾಗಲ್ಲದೆ ಕಡ್ಡಾಯ ಮತ್ತು ಶಿಸ್ತಿನಿಂದ ನಡೆಯಬೇಕಾದ ಸಂಗತಿಗಳನ್ನು ಸರಕಾರದ ಕಡೆಗೂ ಒಪ್ಪಿಸಿ ಕೊಡಲು ನಾಗರಿಕತೆ ನಿರ್ಧರಿಸಿದಂತೆ ತೋರುತ್ತದೆ. ಪರಿಣಾಮವಾಗಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಸಮಾಜದ ಸ್ವಾಮಿತ್ವವನ್ನೂ ಶಾಂತಿ ಹಾಗೂ ಭದ್ರತೆಯ ಬಗ್ಗೆ ಸರಕಾರದ ಸಾರ್ವಭೌಮಾಧಿಕಾರವನ್ನೂ ನಾವು ಮನ್ನಿಸುತ್ತೇವೆ.

ಇಂಥ ಪರಿಸ್ಥಿತಿಯಲ್ಲಿ ವ್ಯಕ್ತಿಯ ಸ್ಥಾನವೇನು? ಅವನು ಸತ್ಯಾಗ್ರಹಿಯಾಗಿ ... ಸತ್ಯಾಗ್ರಹಿಯೆನ್ನುವ ಅಧಿಕಾರದಿಂದ ತನಗೆ ಸರಿಕಂಡ ವಿಚಾರವನ್ನು ಪ್ರಚಾರ ಮಾಡಲು ಅವನಿಗೆ ತಡೆ ಇದೆಯೆ? ಇದ್ದರೆ ಅದು ಸರಿಯೆ? ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಬರುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವೆ ಸಂಘರ್ಷವನ್ನು ಈ ಅಧಿಕಾರದ ಪ್ರಶ್ನೆ ಉಂಟುಮಾಡುವುದರಿಂದ, ಸರಕಾರ ಶಾಂತಿಗೆ ಭಂಗವಾಗುವ ಮೊದಲು ಒನ್ನರಿತು ಹಸ್ತಕ್ಷೇಪ ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ಪ್ರಚಲಿತ ಸಾಮಾಜಿಕ ಹಿತ ಮತ್ತು ಸಂಪ್ರದಾಯಗಳಿಗೆ ವ್ಯಕ್ತಿಯ ಅಭಿಪ್ರಾಯ ಮತ್ತು ಪ್ರಚಾರಗಳು ಅಹಿತಕರವೆಂದು ಸರಕಾರ ತೀರ್ಮಾನಿಸಿದರೆ - ರೂಢಿಯಲ್ಲಿರುವ ಕಾಯಿದೆಯಂತೆ ವ್ಯಕ್ತಿಯನ್ನದು ಶಿಕ್ಷಿಸಿಯೇ ತೀರುತ್ತದೆ. ಸ್ವತಂತ್ರವಾದ ಸರಕಾರವಿರುವಾಗ ಅದರಲ್ಲೂ ಚುನಾವಣೆಯ ಮೂಲಕ ಸಾರ್ವಜನಿಕರ ಬೆಂಬಲವನ್ನು ಪಡೆದುಕೊಂಡು ಅಧಿಕಾರದಲ್ಲಿ ಉಳಿದ ಸರಕಾರವಿರುವಾಗ ವ್ಯಕ್ತಿ ಸಾಮಾಜಿಕ ಹಿತಕ್ಕೆ ತಲೆ ಬಾಗುವುದು; ಮತ್ತು ಪರಿಣಾಮದಲ್ಲಿ ಸರಕಾರದ ಕಾಯಿದೆಯನ್ನು ಮನ್ನಿಸುವುದು ಕರ್ತವ್ಯವಾಗುತ್ತದೆ.

[ಮುಂದಿನ ಪುಟ ನೋಡಿರಿ]

ಶ್ರೀ ನೆಹರೂರವರು ಬಿ. ಬಿ. ಸಿ. ಟೆಲಿವಿಜನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು.

ಕಳೆದ ಜೂನ್ ೨೦, ೧೯೫೩ರಂದು ಬಿ. ಬಿ. ಸಿ. ಪತ್ರಿಕಾ ಪರಿಷತ್ತಿನಲ್ಲಿ ಭಾರತದ ಪ್ರಧಾನ ಮಂತ್ರಿ ನೆಹರೂರವರು ಪತ್ರಿಕಾ ವರದಿಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡುತ್ತಿರುವ ನೋಟ.

ವಾರದ ಒಳಿತು ಕೆಡುಕುಗಳು

ತಾ. ೨೦—೮—೫೩ರಿಂದ ತಾ. ೨೬—೮—೫೩ರ ವರೆಗೆ.

ಮೇಷ—ನಿಸರ್ಗತಃ ಶುಭರಾದ ಬುಧ, ಗುರು ಶುಕ್ರರ ಅನುಗ್ರಹವು ನಿಮ್ಮ ಮೇಲಿರುವುದರಿಂದ ಸತ್ಕಾರ್ಯ ಸದಾಚಾರ ಸದುದ್ಯೋಗ ಪ್ರವೃತ್ತವಾದ ಜನವೃಂದಕ್ಕೆ ಈ ವಾರವು ಶುಭಫಲದಾಯಿಯಾಗಲಿದೆ. ದೇಹಾರೋಗ್ಯ ಮನಶ್ಶಾಂತಿ ಆರ್ಥಿಕ ಸಂಪತ್ತು ಚೆನ್ನಾಗಿರುವುವು. ನಿಮ್ಮ ಉದ್ಯಮಕ್ಕೆ ಶತ್ರುಜನರಿಂದ ವಿಘ್ನ ವಿಪತ್ತುಗಳು ಪ್ರಾಪ್ತವಾಗಲಿವೆ. ಆಪ್ತೇಷ್ಟರ ವಿಯೋಗವುಂಟಾಗುವ ಸಂಭವವಿದೆ. ಕೆಲವೊಮ್ಮೆ ಅನಿರೀಕ್ಷಿತ ಪ್ರವಾಸವು ಗಂಟುಬೀಳಲಿದೆ. ವಿದ್ಯೋಪಜೀವೀ ವರ್ಗಕ್ಕೆ ಈ ಕಾಲವು ಉತ್ತಮವಾಗಿರುವುದು. ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಆಶಾಕಾಂಕ್ಷೆಗಳು ಈಡೇರಲಿವೆ.

ವೃಷಭ—ನಿಮ್ಮ ಸಾಂಸಾರಿಕ ತಾಪತ್ರಯಗಳೆಲ್ಲವೂ ನಿವೃತ್ತವಾಗಿ, ನಿಶ್ಚಿಂತೆಯಿಂದ ಕಾಲಯಾಪನೆ ಮಾಡುವಿರಿ. ಕೈಗೊಂಡ ಪ್ರತಿಯೊಂದು ಕಾರ್ಯಗಳೂ ನಿರೀಕ್ಷೆಗಿಂತ ಹೆಚ್ಚಿನ ಫಲವನ್ನೀಯುವವು. ನಿಮ್ಮ ಕರ್ತವ್ಯದಕ್ಷತೆಯನ್ನು ನೋಡಿದ ಶತ್ರುವೃಂದವು ನಿಮ್ಮ ಸನಿಹಕ್ಕೆ ಸುಳಿಯಲೊಲ್ಲದು. ಹಿರಿಯರಿಂದ ಧನಪ್ರಾಪ್ತಿಯ ಯೋಗವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನೌಕರವರ್ಗಕ್ಕೂ ಈ ಕಾಲವು ಉತ್ತಮವೆನಿಸದು. ವಿನಾಕಾರಣ ಕಲಸ್ಥಾನ ಚಲನೆ ಮೊದಲಾದ ಅನಿಷ್ಟಗಳು ಕಂಡುಬರಲಿವೆ. ವಾರಾಂತ್ಯದ 2 ದಿನಗಳಲ್ಲಿ ಬಯಸಿದಂತೆ ಕಾರ್ಯಸಿದ್ಧಿಯೂ ಮನಸ್ಸಿಗೆ ನೆಮ್ಮದಿಯೂ ಲಭಿಸಲಿವೆ.

ಮಿಥುನ—ಕಳೆದ ದಿನಗಳಿಗಿಂತ ಈ ವಾರವು ನಿಮಗೆಷ್ಟೋ ಹಿತಕರವೆನಿಸುವದು. ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ನಾಣ್ಣುಡಿಯಂತೆ ನಿಮ್ಮ ಪರಿಶ್ರಮಕ್ಕೆ ಉತ್ತಮವಾದ ಫಲವು ಲಭಿಸುವದು. ಕೃಷಿಕಾರಿಕೆ ನೌಕರಿ ಲೇಖನ ವ್ಯಾಪಾರ ವ್ಯವಹಾರ ಮೊದಲಾದ ವೃತ್ತಿಗಳಲ್ಲಿ ಒಳ್ಳೆಯ ಕೀರ್ತಿ ಮತ್ತು ಲಾಭವಾಗಲಿದೆ. ಆದರೆ ಗ್ರಹತಾಪತ್ರಯಗಳು ಕೊಂಚ ನಿಮ್ಮನ್ನು ಬಾಧಿಸಲಿವೆ. ಆರೋಗ್ಯವು ನೆಟ್ಟಗಿರಲಾರದು. ಪರ್ಯಟನವು ಕಷ್ಟನಷ್ಟದಾಯಿಯಾಗಿ ಪರಿಣಮಿಸೀತು. ವಾರಾದಿಯ 2 ದಿನಗಳು ಇಷ್ಟಪ್ರದಗಳಿವೆ.

ಕರ್ಕಟ—ನಿಮ್ಮ ಜೀವನ ಮಾರ್ಗವು ದಿನಗಳೆದಂತೆ ಕಂಟಕಮಯವಾಗುತ್ತಾ ಬರುತ್ತದೆ. ನನೆದಂತೆ ಕಾರ್ಯಗಳು ನೆರವೇರವು. ಆತ್ಮೀಯರ ಸಹಕಾರವು ಲಭಿಸದು. ಶತ್ರುಗಳ ಉಪಟಳವು ಹೆಚ್ಚುವದು. ಮನೋಧೈರ್ಯವು ಮಾಯವಾಗುವದಲ್ಲದೆ ಪಲವರೊಡನೆ ನಿಷ್ಕಾರಣವಾಗಿ ಜಗಳಾಡುವಿರಿ. ಆದಾಯಕ್ಕಿಂತ ದ್ವಿಗುಣ ವ್ಯಯವಾಗಲಿರುವುದರಿಂದ ತುಂಬಾ ಸಾಲ ಕಡಗಳಿಗೆ ಸಿಲುಕಿ ಆಪತ್ತಿಯಕ್ಕೆ ಗುರಿಯಾಗಲಿರುವಿರಿ. ವಾರಾದಿಯ 4 ದಿನಗಳಲ್ಲಿ ಮೇಲೆ ಹೇಳಿದ ಅನಿಷ್ಟಗಳು ಹೆಚ್ಚಾಗಿ ಕಾಣಿಸುವುವು.

ಸಿಂಹ—ನಿಮ್ಮ ಪರಿಸ್ಥಿತಿಯಿಂದು ಮುಂಚೆಗಿಂತ ಅದೆಷ್ಟೋ ಸುಧಾರಿಸಲಿದೆ. ನಿಮ್ಮ ಉಪಜಯಸ್ಥಾನಕ್ಕೆ ಉಚ್ಚನಾದ ಶನಿಯು ಸೇರುವುದರಿಂದ ಅದೆಂತಹ ದುಷ್ಕರವಾದ ಕಾರ್ಯವಾದರೂ ಇಂದು ಸುಲಭವೆನಿಸುವದು. ಉದ್ಯೋಗ ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಪ್ರಗತಿಯನ್ನೈದುವಿರಿ. ಆದರೂ ಇಲ್ಲ ಸಲ್ಲದ ಖರ್ಚುಗಳಿಗೆ ನೀವು ತವರುಮನೆಯಾಗಿರುವುದರಿಂದ ಕಷ್ಟಪಟ್ಟು ದುಡಿದುದೆಲ್ಲವೂ ದಿನಾಂತ್ಯದಲ್ಲಿ ಇಲ್ಲದಾಗುವುದು. ಸನ್ಮಿತ್ರರ ಬೆಂಬಲದಿಂದ ಕೂಡಿದ ನಿಮಗೆ ವಾರಾಂತ್ಯದ 5 ದಿನಗಳು ಸುಖಕರಗಳಿವೆ.

ಕನ್ಯಾ—ಗ್ರಹಮಾನವು ಸಾಕಷ್ಟು ಉತ್ತಮವಿರುವುದು. ನಿಮ್ಮ ಭಾಗ್ಯ ಲಾಭಗಳಲ್ಲಿ ಗ್ರಹಚತುಷ್ಟಯದ ಸಮ್ಮಿಲನವಾಗುವುದರಿಂದ ಧನ ಧಾನ್ಯಗಳ ಸಂಪತ್ತು ವೃದ್ಧಿಗೊಳ್ಳಲಿದೆ. ಸಮಾಜದಲ್ಲಿ ಸ್ಥಾನಮಾನಗಳೂ ರಾಜಕೀಯ ಕ್ಷೇತ್ರದಲ್ಲಿ ವಿಜಯವೂ ಲಭಿಸುವದು. ಆದರೆ ಅರ್ಥಸ್ಥಾನಗತನಾದ ಶನಿಯು ನಿಮ್ಮನ್ನು ಸದಾರಿಕ್ತಹಸ್ತರನ್ನಾಗಿ ಮಾಡಲು ಬದ್ಧಕಂಕಣನಿರುವನು. ನಾನಾ ಪ್ರಕೋಪದಿಂದಾಗಿ ಆರೋಗ್ಯವೂ ಕೆಡಲಿದೆ. ತಾ 25, 26 ಇವೆರಡರಲ್ಲಿ ಉತ್ತಮವಿವೆ.

ತುಲಾ.—ಇಂದಿನ ದಿನಗಳು ಸ್ವಲ್ಪ ಬಿಕ್ಕಟ್ಟಿನವುಗಳಾಗಿ ಪರಿಣಮಿಸಲಿವೆ. ಜನ್ಮಗತ ಶನಿಯೂ ಅಷ್ಟಮಸ್ಥ ಬೃಹಸ್ಪತಿಯೂ ನಿಮ್ಮ ಆರೋಗ್ಯವನ್ನು ಕೆಡಿಸಲಿರುವರು. ಆಪತ್ತಿಗೆಂದು ಸಂಗ್ರಹಿಸಿಟ್ಟ ಧನವು ಉಳಿಯಗೊಲ್ಲದು. ವ್ಯರ್ಥ ಪರ್ಯಟನವು ಪ್ರಾಪ್ತವಾಗುವದು. ಆಪ್ತಜನ ವಿಯೋಗದಿಂದ ದುಃಖಭಾಗಿಗಳಾಗುವಿರಿ. ಆದರೆ ಭಾಗ್ಯ ಲಾಭಗಳು ಸುಕ್ಷೇತ್ರವನ್ನು ಹೊಂದಿರುವುದರಿಂದ ನಿಮಗಿಂದು ಆರ್ಥಿಕ ಬಿಕ್ಕಟ್ಟು ಕಾಣಿಸದು. ಹಿಡಿದ ಕಾರ್ಯವು ಕೊನೆಗೊಂಡಲಿದೆ. ವಾರಾದಿಯ 2 ದಿನಗಳು ಇಚ್ಛಾಪೂರಕಗಳಾಗಿವೆ.

ವೃಶ್ಚಿಕ—ಸುದಿನಗಳು ಸಂದುಹೋದವು. ಸದ್ಯ ನಿಮ್ಮ ದೈವವು ದಿನೇ ದಿನೇ ಹ್ರಾಸವಾಗುತ್ತಾ ಬರಲಿದೆ. ಇಂದಿದ್ದ ಸುಖ ಸೌಕರ್ಯಗಳು ನಾಳೆಗೆ ಇರಲಾರವು. ದೇಹಪೀಡೆ ಮನೋರೋಗಗಳು ಹೆಚ್ಚಲಿವೆ. ಧನದ ನಿಮಿತ್ತ ಕಲಹ ನಿಷ್ಠುರಗಳಾಗುವವು, ಶೋಕಾನರ್ಥಗಳ ಪರಂಪರೆಗಳು ಒಂದರ ಹಿಂದೊಂದರಂತೆ ಬರಲಿವೆ. ಆದರೂ "ಉದ್ಯೋಗಂ ಪುರುಷ ಲಕ್ಷಣಂ" ಎಂಬಂತೆ ಉದಾಸೀನರಾಗದೆ ಕರ್ಮ ಪ್ರವೃತ್ತರಾಗಿರಿ. ದೈವವು ನಿಮ್ಮ ಆಶಾ ಕಾಂಕ್ಷೆಗಳನ್ನು ಇಂದಲ್ಲವಾದರೆ ನಾಳೆಯಾದರೂ ಕೊನೆ ಹೊಂದಿಸೀತು. ತಾ. 22, 23 ಮಾತ್ರ ಅನುಕೂಲ.

ಧನು—ನಿಮ್ಮ ಭಾಗ್ಯದ ಕದವೀಗ ತೆರೆಯಲಾರಂಭಿಸಿದೆ. ಬಹುಮುಟ್ಟಿನ ತಾಪತ್ರಯಗಳು ದಿನದಿಂದ ದಿನಕ್ಕೆ ಮಾಯವಾಗುತ್ತಲಿವೆ. ಶತ್ರು ಜನರ ಬಾಧೆಯಿಂದಲೂ ಧನದ ಬಿಕ್ಕಟ್ಟಿನಿಂದಲೂ ಮುಕ್ತರಾಗುವಿರಿ. ನೌಕರಿ ವ್ಯಾಪಾರಾದಿ ವ್ಯವಹಾರಗಳಲ್ಲಿ ನಿರೀಕ್ಷೆಗಿಂತ ಅಧಿಕವಾದ ಫಲ ಲಭಿಸಲಿದೆ. ಆದರೂ ಅಷ್ಟಮಸ್ಥ ನೀಚ ಅಂಗಾರಕನು ಧನ ಮಾನಗಳಿಗೆ ಹಾನಿಯನ್ನುಂಟುಮಾಡಲಿರುವನು. ಶಸ್ತ್ರಾದಿಗಳಿಂದ ಶರೀರದಲ್ಲಿ ಗಾಯಾದಿಗಳುಂಟಾದಾವು. ತಾ. 20, 21, 25, 26 ಈ ದಿನಗಳಲ್ಲಿ ಭೋಗಲಾಭ ವಿಜಯಗಳು ಲಭಿಸುವವು.

ಮಕರ—ದೈವವು ತೀರಾ ವಿಮುಖವಾಗಿರುವುದರಿಂದ ನಿಮ್ಮ ಪಂಥವು ಅರಣ್ಯರೋದನದಂತೆ ವಿಫಲವಾಗುವದು. ಮನೆಯಲ್ಲಿ ಅವ್ಯವಸ್ಥೆಯಿಂದಾಗಿ ಗೃಹಕಲಹವು ಹೆಚ್ಚಲಿದೆ. ಸ್ತ್ರೀಯರಿಂದಾಗಿ ವಿಶೇಷ ಅನಿಷ್ಟ ಅಪವಾದ ಖರ್ಚುಗಳು ಪ್ರಾಪ್ತವಾಗುವವು. ವಿಜಾತಿಯವರೊಡನೆ ಕಲಹವಾಗುವದು. ಆರ್ಥಿಕ ಮುಗ್ಗಟ್ಟಿನಿಂದಾಗಿ ದಿನಯಾಪನೆಯು ಅತೀವ ಕಷ್ಟವಾಗಿ ಪರಿಣಮಿಸೀತು. ತಾ. 22, 23 ಈ ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಆಪ್ತ ಮಿತ್ರರ ನೆರವು ಕಾರ್ಯಸಿದ್ಧಿಗಳು ಲಭಿಸುವವು.

ಕುಂಭ—ಇತ್ತೀಚೆಗೆ ಕೆಲವು ದಿನಗಳಿಂದ ನಿಮ್ಮ ದೈವವು ಕೃಷ್ಣಪಕ್ಷದ ಚಂದ್ರನಂತೆ ಹ್ರಾಸವಾಗುತ್ತಾ ಬರುತ್ತಿದೆ. ಸುಖಭಾಗ್ಯಪತಿಯಾದ ಶುಕ್ರನೂ ಧನಲಾಭಾಧಿಪನಾದ ಗುರುವೂ ವಿಶೇಷತಃ ಪ್ರತಿಕೂಲರಿದ್ದಕಾರಣ ದೈಹಿಕ ಸುಖ ಮಾನಸಿಕ ಶಾಂತಿ ಆರ್ಥಿಕ ಸಂಪತ್ತು ಇವುಗಳಿಗೆ ವಿಶೇಷ ಧಕ್ಕೆಯಿದೆ. ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟ ಕಾಣಿಸೀತು. ಶ್ರಮಜೀವಿಗಳಿಂದ ಸೇವಕ ವರ್ಗಕ್ಕೂ ಕೃಷಿಕ ಜನತೆಗೂ ಈ ವಾರವು ಅನಿಷ್ಟದಾಯಿಯಾಗದು. ತಾ 20, 21, 25, 26 ಈ ದಿನಗಳು ಉಳಿದ ದಿನಗಳಿಗಿಂತ ಉತ್ತಮ.

ಮೀನ—ಕಳೆದ ದಿನಗಳಿಗಿಂತ ಈ ವಾರವು ನಿಮಗೆ ಎಷ್ಟೋ ಉತ್ತಮವಾಗಿ ಕಾಣಿಸಲಿದೆ. ವಿಶೇಷತಃ ನಿಮ್ಮ ಸಂಪದ್ಭಾಗದಲ್ಲಿ ಪ್ರಗತಿಯು ಕಾಣಿಸುವದು. ರಾಜಕೀಯ ಕ್ಷೇತ್ರದಲ್ಲಿನ ನಿಮ್ಮ ಕಾರ್ಯಕಲಾಪಗಳು ನಿಮ್ಮಂತೆ ಕೊನೆಗೊಳ್ಳುವವು. ಸಾಂಸಾರಿಕ ತಾಪತ್ರಯಗಳಿಂದ ಆವೃತರಾದ ನಿಮಗೆ ಆಪ್ತೇಷ್ಟರ ವಿಂದಯೋಗವಿದೆ. ಆಕಸ್ಮಿಕ ಪರ್ಯಟನದಿಂದಾಗಿ ದೇಹಾರೋಗ್ಯವು ಕೆಡಲಿರುವುದು. ವಾರಾದಿಯ 4 ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಶಕ್ತವಾಗಿರುವವು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. NO. 31/1953

1. ನಿಡ್ಲೆ ಲಕ್ಷ್ಮಿ ಅಮ್ಮ ಕೃಷ್ಣ ಭಟ್ಟರ ವಿಧವೆ, 2. ಈಶ್ವರ ಭಟ್ಟ, 3. ಶಿವರಾಮ ಭಟ್ಟ, ಕೃಷ್ಣ ಭಟ್ಟರ ಮಕ್ಕಳು, ಪುತ್ತೂರು ತಾಲ್ಲೂಕು ಆಲೆಟ್ಟಿ ಗ್ರಾಮದಲ್ಲಿರುವವರು —ಅರ್ಜಿದಾರರು.

ಮತ್ತು

ನಿಡ್ಲೆ ಕೇಶವ ಭಟ್ಟ, ಈಶ್ವರ ಭಟ್ಟರ ಮಗ, ಪುತ್ತೂರು ತಾಲ್ಲೂಕು ಆಲೆಟ್ಟಿ ಗ್ರಾಮದಲ್ಲಿರುವವರು —ಎದುರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ,

1ನೇ ಅರ್ಜಿದಾರಳ ಮಗನ 2, 3ನೇ ಅರ್ಜಿದಾರರ ಖಾಸಾ ಅವಿಭಕ್ತ ಸಹೋದರ, ಮೃತ ಗೋಪಾಲಕೃಷ್ಣ ಭಟ್ಟರ ಬಾಬ್ತು ಬೊಂಬೆ ಮ್ಯೂಚುವಲ್ ಇನ್‌ಶ್ಯೂರೆನ್ಸ್ ಕಂಪೆನಿಯ ಪೋಲಿಸಿ ನಂಬ್ರ 35083ನೇಗೆ ಇರುವ ರೂಪಾಯಿ 5000-0-0 ಮ ಸಾಳ ಪೋಸ್ಟಾಫೀಸಿನ ನಂಬ್ರ 74708ನೇ ಸೇವಿಂಗ್ಸ್ ಬೇಂಕು ಎಕೌಂಟಿನಲ್ಲಿರುವ ರೂ 3100-0-0 ನ್ನು ಕೂಡಾ ಪಡಕೊಳ್ಳುವರೆ 2ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಸದ್ರಿ ಅರ್ಜಿದಾರರು ಮೇಲಿನ ಅರ್ಜಿ ದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿಯು ತಾ. 25-8-1953ಕ್ಕೆ ವಿಚಾರಣೆಯಿರುತ್ತದೆಂತಲೂ, ಹಾಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವರೆ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ತಿಳಿಯಪಡಿಸೋಣಾಗಿದೆ.

(Sd.) **P. Krishna Bhat,**
Vakil for Petrs.

Puttur, Date 7—8—1953

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ**ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಆತ್ಮುಷ್ಣವನ್ನು ಸಮಧಾತುವಾಗಿ ಮಾಡಿ ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ.— 2 ಔಷಧಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಶೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು**.(South India)

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣತೋರುವುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ: ರೂ. 3/ ; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಪಾರ್ಸೆಲ್ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA 40

ಸ್ಟಾಕಿಸ್ಟರು: ಕಪಾ ಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Reg. No.
M 3618

LICENCE No. 31
Licensed to Post without Prepayment

ನವಯುಗ
ಆರೋಗ್ಯ ಮಂತ್ರಿ
ಶ್ರೀ. ಎ. ಬಿ. ಶೆಟ್ಟರಿಂದ
ಸ್ಥಾಪಿತವಾದ ವಾರಪತ್ರಿಕೆ,
ಉಡುಪಿ, ದ. ಕನರ

ವಾ। ಚಂದಾ 5-12-0
6 ತಿಂಗಳಿಗೆ 3--0-0
ಬಿಡಿ ಪ್ರತಿಗೆ 0--2-0

ನವಯುಗ

27-8-1953

Vol 32
No 51

NAVAYUGA WEEKLY POST BOX NO. 22 UDIPI

ವರ್ಷ ೩೨
ವಾರ ೫೧

ಅಂತರಂಗ
ಪುಸ್ತಕ ಪತ್ರಿಕೆಯು
ಉಪಯುಕ್ತವಾದ
90 ಪುಸ್ತಕಗಳು
ರೂ. 24ಕ್ಕೆ ಸಿಗುತ್ತದೆ.
ವಿವರಕ್ಕೆ ಬರೆಯಿರಿ:
ಮೆನೇಜರ್,
ಅಂತರಂಗ, ಉಡುಪಿ

—ಮಧುಪರ್ಕ—

ಪ್ರಧಾನಿ ನೆಹರೂರವರು, ಮೊನ್ನೆ ಜೂನು ತಿಂಗಳಲ್ಲಿ ರಾಣಿ ಎಲಿಜಾಬೆಥಳ ಕಿರೀಟ ಧಾರಣೋತ್ಸವಕ್ಕೆ ಹೋದವರು ಹಿಂದೆ ಬರುವಾಗ ಸ್ವಿಜರ್ಲೆಂಡಿನಲ್ಲಿ ಕೆಲವು ದಿನ ವಿಶ್ರಾಂತಿಯನ್ನು ಪಡೆದುಕೊಂಡರು. ಅಲ್ಲಿ ಅವರ ಭೇಟಿಯು ಸುಪ್ರಸಿದ್ಧ ಹಾಸ್ಯನಟ ಚಾರ್ಲಿ ಚಾಪ್ಲಿನನೊಡನೆ ಆಯಿತು. ಮಾತುಕತೆಗಳು ಮುಗಿದನಂತರ ಚಾರ್ಲಿ ಚಾಪ್ಲಿನನು ನೆಹರೂರನ್ನು ಕುರಿತು "ನನ್ನೊಡನೆ ಭೇಟಿಯಾಗುವ ಪ್ರತಿಯೊಬ್ಬರೂ ಒಂದು ವಿಶಿಷ್ಟ ಮಾತನ್ನು ಕೇಳುತ್ತಾರೆ ನೀವು ಅದನ್ನು ಕೇಳದಿದ್ದುದು ಬಹು ಸಂತೋಷದ ಸಂಗತಿ" ಎಂದರು

"ಅದೇನು ಮಾತು?" ಎಂದು ನೆಹರೂ ಕೇಳಿದರು.

"ಸಾಮಾನ್ಯವಾಗಿ ನನ್ನನ್ನು ಕಂಡು ಮಾತನಾಡಿದ ಜನರು ಕೊನೆಯಲ್ಲಿ 'ನೀವು ನಾಗರಿಕದಷ್ಟು ವಿನೋದ ಪಡುವಿರಲ್ಲವೆಂದು ತೋರುತ್ತದೆ' ಎನ್ನುತ್ತಾರೆ"

'ಇದಕ್ಕೆ ನೀವೇನು ಹೇಳುತ್ತೀರಿ?"

"ಬೇರೇನು ಹೇಳಲಿ? 'ಹಿಪ್ನಾಟಿಸಂ ಇರಬೇಕಾದಷ್ಟು ಸಿನೇಮಾನಟರುಗಳಿಗೆ' ಕಾಣುವುದಿಲ್ಲ' ಎಂದುಬಿಡುತ್ತೇನೆ!"

ಸಂಪಾದಕರು ಶಿಷ್ಟಾಚಾರದ ಎಲ್ಲೆ ಮೀರಬಹುದಾದರೆ ಚಾರ್ಲಿ ಚಾಪ್ಲಿನನಿಗೇನು ಅಧಿಕಾರವಿಲ್ಲವೆ?

ಅಧಿಕಾರದ ಮೀಮಾಂಸೆ

ಒಬ್ಬನ ಪ್ರಶ್ನೆಯೇ ಅವನ ಉತ್ತರವಾಗಿಯೂ ಪರಿಣಮಿಸುವ ಪ್ರಸಂಗ ಜೀವನದಲ್ಲಿ ಅನೇಕ ವೇಳೆ ಬರುತ್ತದೆ. ಶರತ್‌ಬಾಬುಗಳ "ದೇವದಾಸ" ಕಾದಂಬರಿಯಲ್ಲಿ ಕಥಾನಾಯಕ ದೇವದಾಸ ತನ್ನ ಪ್ರೇಯಸಿ ಪಾರ್ವತಿಯು ದುಷ್ಟತನ ತೋರಿಸಿದಳೆಂದು ಹೊಡೆಯುತ್ತಾನೆ. ಬಿಸಿ ತಣಿದ ಮೇಲೆ ಪಾರ್ವತಿ, "ನೀನೇಕೆ ಹಾಗೆ ಮಾಡಿದಿ?" ಎಂದು ದೇವದಾಸನನ್ನು ಕೇಳುವಾಗ ಅವನು ಕೂಡ "ಪಾರೂ, ನೀನೇಕೆ ಹಾಗೆ ಮೊಂಡುತನ ತೋರಿಸಿದಿ?" ಎಂದು ಕೇಳುತ್ತಾನೆ. ಇದರ ಅರ್ಥ ಏನಾಯಿತೆಂದರೆ, ಬೇರೊಬ್ಬರು ನಮಗೆ ಏನಾದರೊಂದು ಮಾಡಿದರೆ, ಅದಕ್ಕೆ ಮೂಲಕಾರಣವಾಗಿ ನಾವು ಸಹ ಏನೋ ಕೆಲಸ ಮಾಡಿರಬೇಕು. "ಕಾರಣವಿಲ್ಲದೆ ಕಾರ್ಯವಿಲ್ಲ" ಎನ್ನುತ್ತಾರಲ್ಲ- ಹಾಗೆ ಪರಿಣಾಮವನ್ನು ಇದಿರಿಸುವುದು ನಮ್ಮ ಮನಸ್ಸಿಗೆ ಬರುವುದಿಲ್ಲವಾದರೆ ಆ ಕಾರ್ಯವನ್ನೂ ಮತ್ತದಕ್ಕೆ ಕಾರಣವಾಗಬಹುದಾದ ಸಂಗತಿಯನ್ನೂ ಮೂಲೋತ್ಪಾಟನೆ ಮಾಡಿಬಿಡಬೇಕು. ಅದು ಸಾಧ್ಯವಿಲ್ಲದೆ-ನಾನು ಇದನ್ನು ಮಾಡಿಯೇ ಸಿದ್ಧವೆಂದಾದರೆ ಅದರಿಂದ ಬಂದುದನ್ನು ಅನುಭವಿಸಲೂ ಸಿದ್ಧ ಎಂಬ ಎದೆಗಾರಿಕೆ ಇರಬೇಕು. ಅನ್ಯಥಾ ನಮ್ಮ ದರ್ಪನಡೆಯಲಾರದು; ಅದು ದಮನಿಸಲ್ಪಡುವುದು.

ರಾಜಕೀಯಕ್ಕೆ ಇದನ್ನು ಅನ್ವಯಿಸುವುದರಲ್ಲಿ "ಕಾಯಿದೆ ಭಂಗ" ಅಥವಾ "ಸತ್ಯಾಗ್ರಹ" ಎಂದು ನಾವು ಕರೆಯುವ ಪ್ರಸಂಗಗಳು ನಮ್ಮ ಎದೆಗಾರಿಕೆಯನ್ನು ಪರೀಕ್ಷಿಸಲಿಕ್ಕೆಂದೇ ಹುಟ್ಟಿಕೊಳ್ಳುತ್ತವೆ; ಅಥವಾ ಅವುಗಳಲ್ಲಿ ತೊಡಗಿದವರು ತಮ್ಮ ಫಲದ ಪರೀಕ್ಷೆಯೇ ಇದೆಂಬುದನ್ನು ತಿಳಿದಿರಬೇಕಾಗುತ್ತದೆ. ಭಾರತವು ಬ್ರಿಟಿಷರ ದಾಸ್ಯದಲ್ಲಿ ಕೊಳೆಯುತಿದ್ದಾಗ "ಸತ್ಯಾಗ್ರಹ"ದ ಮೂಲಕ "ಕಾಯಿದೇ ಭಂಗ"ವನ್ನು ಮಾಡಿದ ನಾವು ಅದನ್ನೊಂದು ಅಧಿಕಾರವೆಂದೇ ತಿಳಿಯುತಿದ್ದೆವು. ಇದಕ್ಕೆ ಕಾರಣವೂ ಇತ್ತು; ಆಗ ಸರಕಾರವು ರಚಿಸಿದ ಕಾಯಿದೆ ಕಾನೂನುಗಳಲ್ಲಿ ಭಾರತೀಯರ ಕೈವಾಡ ಲವಲೇಶವೂ ಇದ್ದಿರಲಿಲ್ಲ. ಆಳರಸರು ತಮಗೆ ಸರಿಕಂಡಂತೆ ರಚಿಸಿದ ಕಾಯಿದೆಗಳು ಭಾರತೀಯರ ಒಲವಿನ ವಿರುದ್ಧವಾಗಿ ಕಂಡಾಗಲೆಲ್ಲ, ಅವುಗಳನ್ನು ಸತ್ಯಾಗ್ರಹದ ಮೂಲಕ ಭಂಗಿಸುವುದು ಮತ್ತು ಕಾಯಿದೆಯ ಕಾರ್ಯಾಚರಣೆಯೊಂದಿಗೆ ಅಸಹಕಾರ ಮಾಡುವುದು ನಮ್ಮ ಕರ್ತವ್ಯವೆಂದೂ ಇದಕ್ಕೆ ನೈತಿಕ ಬಲವಿದೆಯೆಂದೂ ನಾವೆಲ್ಲರೂ ಭಾವಿಸಿದ್ದೆವು.

ಆದರೆ ಈಗ ಕಾಲವು ಮೊದಲಿನಂತಿಲ್ಲ- ಭಾರತವು ಸ್ವತಂತ್ರವಾಗಿದೆಯಲ್ಲದೆ, ನಾವೇ ರಾಜ್ಯಾಂಗ ಘಟನೆಯೊಂದನ್ನು ರೂಪಿಸಿ, ಅಂಗೀಕರಿಸಿದ್ದೇವೆ, ತಜ್ಞರ ಅಭಿಪ್ರಾಯದಂತೆ ಮೂಲಭೂತವಾದ ಸಂಗತಿಗಳಿಗೆ ವಿರೋಧ ಬಾರದಂತೆ ನಮ್ಮ ಘಟನೆಯನ್ನು ತಿದ್ದುಪಡಿ ಮಾಡಲು ಸುಗಮವಾದ ಮಾರ್ಗವಿರುತ್ತದೆ. ಹೀಗಿರುತ್ತಾ ನಾವು ಕಾಯಿದೇಭಂಗ ಅಥವಾ ಸತ್ಯಾಗ್ರಹವನ್ನು ಕೈಗೊಳ್ಳುವುದು ಯೋಗ್ಯವೇ? ಮತ್ತದಕ್ಕೆ ಈಗ ನೈತಿಕ ಬೆಲೆ ಇರುತ್ತದೆಯೆ? ಎಂಬುದನ್ನು ವಿಚಾರಿಸುವುದೊಳಿತು.

ಈ ವಿಮರ್ಶೆಯನ್ನು ಮಾಡುವಾಗ, ಮೊದಲಿಗೆ ಕಂಡುಬರುವ ಸಂಗತಿಗಳು ಹೀಗಿವೆ ವ್ಯಕ್ತಿಯೊಬ್ಬನಿದ್ದಾನೆ, ಅವನಿರುವ ಸಮಾಜವೊಂದಿದೆ; ಮತ್ತು ವ್ಯಕ್ತಿ ಹಾಗೂ ಸಮಾಜ ಇವೆರಡರ ಯೋಗಕ್ಷೇಮ ಹಾಗೂ ಶಾಂತಿಕಲ್ಯಾಣದ ಹೊಣೆಯನ್ನು ಹೊತ್ತ ಸರಕಾರವೆಂಬ ಮೂರನೆಯದೊಂದು ಕಾರ್ಯಾಂಗವಿದೆ. ಸತ್ಯಾಗ್ರಹಿಯಾದವನು ಕಾಯಿದೆ ಭಂಗವನ್ನು ಮಾತ್ರ ಮಾಡುವುದೇ? ಅಥವಾ - ದೇಶವಿಗೆ ಸಾಮಾಜಿಕ ಹಿತವನ್ನು ಸಹ ಕೆಡಿಸುತ್ತಾನೆಯೇ? ಎಂಬ ಸಂದೇಹದ ಸಮಾಧಾನದ ಮೇಲೆ ಸತ್ಯಾಗ್ರಹವೆಂಬ ಉಗ್ರಕ್ರಮದ ಯೋಗ್ಯತೆಯನ್ನು ಅಳೆಯಬೇಕು

ಸರಕಾರ ಹಾಗೂ ಸಮಾಜದ ಕಾರ್ಯ ವಿಧಾನಗಳಲ್ಲಿ ಪರಸ್ಪರ ಪೂರಕವಾಗಿದ್ದರೂ ಅವುಗಳ ಕಾರ್ಯ ಕ್ಷೇತ್ರದಲ್ಲಿ ಭಿನ್ನತೆ ಸ್ವಾಭಾವಿಕವಾಗಿಯೇ ಇರುತ್ತದೆ. ಸಮಾಜದ ನೀತಿನಿಯಮಗಳು ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತವೆ. ಆದರೆ ಸರಕಾರದ ಕಾನೂನು ಮತ್ತು ಕಾಯಿದೆಗಳಿಗೆ ನಿಶ್ಚಿತ ಅರ್ಥವಿದೆ. ಸಮಾಜದ ರೂಢಿ ಮತ್ತು ಸಂಪ್ರದಾಯಗಳಿಗೆ ಅಪವಾದವಿದ್ದೇ ಇರುತ್ತದೆ ಆದರೆ ಕಾಯಿದೆ ಕಾನೂನು ಯಾರಲ್ಲಿಯೂ ಭೇದ ಭಾವವನ್ನು ಎಣಿಸುವುದಿಲ್ಲ ಆದುದರಿಂದ ಸ್ವಯಂ ಪ್ರೇರಣೆಯಿಂದ ನಡೆದರೂ ಸಾಕಾಗಬಹುದಾದ ಸಂಗತಿಗಳನ್ನು ಸಮಾಜದ ಪರಕ್ಕೂ ಹಾಗಲ್ಲದೆ ಕಡ್ಡಾಯ ಮತ್ತು ಶಿಸ್ತಿನಿಂದ ನಡೆಸಲೇ ಬೇಕಾದ ಸಂಗತಿಗಳನ್ನು ಸರಕಾರದ ಕಡೆಗೂ ಒಪ್ಪಿಸಿ ಕೊಡಲು ನಾಗರಿಕತೆ ನಿರ್ಧರಿಸಿದಂತೆ ತೋರುತ್ತದೆ. ಪರಿಣಾಮವಾಗಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಸಮಾಜದ ಸ್ವಾಮಿತ್ವವನ್ನೂ ಶಾಂತಿ ಹಾಗೂ ಭದ್ರತೆಯ ಬಗ್ಗೆ ಸರಕಾರದ ಸಾರ್ವಭೌಮಾಧಿಕಾರವನ್ನೂ ನಾವು ಮನ್ನಿಸುತ್ತೇವೆ.

ಇಂಥ ಪರಿಸ್ಥಿತಿಯಲ್ಲಿ ವ್ಯಕ್ತಿಯ ಸ್ಥಾನವೇನು? ಅವನು ಸತ್ಯಾಗ್ರಹಿಯಾಗಿ ಕೆಲಸ [illegible] ಮತ್ತು ಸತ್ಯಾಗ್ರಹಿಯೆನ್ನುವ ಅಧಿಕಾರದಿಂದ ತನಗೆ ಸರಿಕಂಡ ವಿಚಾರವನ್ನು ಪ್ರಚಾರ ಮಾಡಲು ಅವನಿಗೆ ಹಕ್ಕಿದೆಯೆ? ಇದ್ದರೆ ಅದು ಸರಿಯೆ? ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಬರುತ್ತದೆ. ವ್ಯಕ್ತಿ ಮತ್ತು ಸಮಾಜದ ನಡುವೆ ಸಂಘರ್ಷವನ್ನು ಈ ಅಧಿಕಾರದ ಪ್ರಶ್ನೆ ಉಂಟುಮಾಡುವುದರಿಂದ, ಸರಕಾರ ಶಾಂತಿಗೆ ಭಂಗವಾಗುವ ಹೊಲಬನ್ನರಿತು ಹಸ್ತಕ್ಷೇಪ ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ಪ್ರಚಲಿತ ಸಾಮಾಜಿಕ ಹಿತ ಮತ್ತು ಸಂಪ್ರದಾಯಗಳಿಗೆ ವ್ಯಕ್ತಿಯ ಅಭಿಪ್ರಾಯ ಮತ್ತು ಪ್ರಚಾರಗಳು ಅಹಿತಕರವೆಂದು ಸರಕಾರ ತೀರ್ಮಾನಿಸಿದರೆ - ರೂಢಿಯಲ್ಲಿರುವ ಕಾಯಿದೆಯಂತೆ ವ್ಯಕ್ತಿಯನ್ನದು ಶಿಕ್ಷಿಸಿಯೇ ತೀರುತ್ತದೆ. ಸ್ವತಂತ್ರವಾದ ಸರಕಾರವಿರುವಾಗ ಅದರಲ್ಲೂ ಚುನಾವಣೆಯ ಮೂಲಕ ಸಾರ್ವಜನಿಕರ ಬೆಂಬಲವನ್ನು ಪಡೆದುಕೊಂಡು ಅಧಿಕಾರದಲ್ಲಿ ಉಳಿದ ಸರಕಾರವಿರುವಾಗ ವ್ಯಕ್ತಿ ಸಾಮಾಜಿಕ ಹಿತಕ್ಕೆ ತಲೆ ಬಾಗುವುದು; ಮತ್ತು ಪರಿಣಾಮದಲ್ಲಿ ಸರಕಾರದ ಕಾಯಿದೆಯನ್ನು ಮನ್ನಿಸುವುದು ಕರ್ತವ್ಯವಾಗುತ್ತದೆ.

[೧೦ನೇ ಪುಟ ನೋಡಿರಿ]

ಶ್ರೀ. ನೆಹರೂರವರು ಬಿ. ಬಿ. ಸಿ. ಟೆಲಿವಿಜನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು.

ಕಳೆದ ಜೂನ್ ತಾ. 14ರಂದು ನಡೆದ ಬಿ. ಬಿ. ಸಿ. ಪತ್ರಿಕಾ ಪರಿಷತ್ತಿನಲ್ಲಿ ಭಾರತದ ಮಹಾಪ್ರಧಾನಿ ಪಂಡಿತ ನೆಹರೂರವರು, ಪ್ರತಿಕಾ ಸುದ್ದಿಗಾರರು ಕೇಳಿದ ಪ್ರಶ್ನೆಗಳಿಗೆ ಉತ್ತರಕೊಡುತ್ತಿರುವ ನೋಟ.

ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆ

ಪಂಚವಾರ್ಷಿಕ ಯೋಜನೆಯ ಕುರಿತು ಹೇಳುವಾಗ ಸರಕಾರೀ ಹಾಗೂ ಖಾಸಗೀ ಕ್ಷೇತ್ರಗಳನ್ನು ಇದು ಒಳಗೊಂಡಿದೆಯೆಂದು ಯಾವಾಗಲೂ ನಾವು ಕೇಳುತ್ತೇವೆ. ಆದರೆ ಮೂರನೆಯದಾದ ಇನ್ನೊಂದು ಕ್ಷೇತ್ರವನ್ನೂ ಈ ಯೋಜನೆ ಒಳಗೊಂಡಿರುತ್ತದೆ; ಮತ್ತು ಅಷ್ಟಾಗಿ ಜನರಲ್ಲಿ ಪ್ರಚಾರಗೊಂಡಿರದಿದ್ದರೂ ಈ ಕ್ಷೇತ್ರದಲ್ಲಿ ಕಂಡು ಬರುವ ಚಟುವಟಿಕೆಯೇ ಪಂಚವಾರ್ಷಿಕ ಯೋಜನೆಯ ಯಶಸ್ಸನ್ನು ನಿರ್ಧರಿಸಬಲ್ಲುದು. ಸ್ವಯಂಪ್ರೇರಣೆಯಿಂದ ಸಾರ್ವಜನಿಕರು ಸರಕಾರದೊಡನೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ನೆರವಾಗಬಲ್ಲ ವಿಧಾನವೇ ಈ ಮೂರನೇ ಕ್ಷೇತ್ರದ ತಿರುಳೆನ್ನಬಹುದು.

ಪ್ರಜಾಪ್ರಭುತ್ವ ಪದ್ಧತಿಯಂತೆ ಸಿದ್ಧಪಡಿಸಿದ ಯೋಜನೆಯ ಸರ್ವಸ್ವವೂ ಸಾರ್ವಜನಿಕ ಸಹಕಾರವನ್ನೇ ಒಲವಾಗಿ ಅವಲಂಬಿಸಿರುತ್ತದೆ. ಈ ಯೋಜನೆಯು ಭಾರತೀಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತಗೊಳಿಸಲು ನೋಡುವುದರಿಂದ, ಸರಕಾರದ ಪ್ರಯತ್ನಕ್ಕೆ ಸಾರ್ವಜನಿಕರು ನೀಡುವ ಸಹಕಾರವೇ ಯೋಜನೆಯ ಸಿದ್ಧಿಯನ್ನು ನಿರ್ಧರಿಸುವ ಮಾನದಂಡವಾಗುತ್ತದೆ. ಈ ಸಹಕಾರವು ಸಾಮಾನ್ಯ ರೀತಿ ಹಾಗೂ ನಿಶ್ಚಿತ ಸ್ವರೂಪವುಳ್ಳದ್ದೆಂದು ಎರಡು ವಿಧವಾಗಿರಬಹುದು. ಸಾಮಾನ್ಯ ರೀತಿಯ ಸಹಕಾರವೆಂದರೆ, ಜನರಲ್ಲಿ ಪಂಚವಾರ್ಷಿಕ ಯೋಜನೆಯ ಬಗೆ ಅಭಿರುಚಿ ಮತ್ತು ಆಸ್ಥೆಗಳು ಹುಟ್ಟಿಕೊಳ್ಳುವಂತೆ ತಿಳಿದವರು ಪ್ರಯತ್ನಿಸುವುದು; ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಸಂಪನ್ನವಾಗುವ ಈ ಯೋಜನೆಯ ಮಾಹಾತ್ಮ್ಯವನ್ನು ಹಳ್ಳಿಯ ಬೋರೇಗೌಡನವರೆಗೂ ತಿಳಿಯ ಹೇಳುವುದು; ಮತ್ತು ಬಂಡವಾಳ ಶೇಖರಣೆಗೆ ಅನುಕೂಲವಾಗುವಂತೆ ಸಾರ್ವಜನಿಕರು ತಮ್ಮ ಅನಾವಶ್ಯಕವಾದ ಖರ್ಚುವೆಚ್ಚಗಳನ್ನು ನಿಲ್ಲಿಸಿ, ಉಳಿತಾಯವನ್ನು ಹೆಚ್ಚಿಸುವುದು–ಇತ್ಯಾದಿಯಾಗಿರುತ್ತದೆ. ಹೀಗೆ ನಮ್ಮ ರಾಷ್ಟ್ರದ ಪುನಃ ನಿರ್ಮಾಣ ಕಾರ್ಯಕ್ಕೋಸ್ಕರ ತ್ಯಾಗವನ್ನು ಮಾಡಲು ಜನತೆಯನ್ನು ಪ್ರೋತ್ಸಾಹಿಸುವುದು ತೀರ ಸಾಮಾನ್ಯ- ಆದರೆ ಅತ್ಯಂತ ಮಹತ್ವದ— ವಿಷಯ.

❦

ಇದಲ್ಲದೆ ಸಾರ್ವಜನಿಕರು ನಿಶ್ಚಿತ ರೂಪದಲ್ಲಿ ಸಹಕಾರವನ್ನು ಕೊಡಬಲ್ಲ ಕಾರ್ಯ ವಿಧಾನವನ್ನೂ ಪಂಚ ವಾರ್ಷಿಕ ಯೋಜನೆಯು ಒಳಗೊಂಡಿರುತ್ತದೆ. ಸ್ವಯಂ ಪ್ರೇರಣೆಯಿಂದ ಸಾರ್ವಜನಿಕರು ಈ ಕಾರ್ಯಗಳಲ್ಲಿ ಭಾಗ ವಹಿಸುವುದರಿಂದ ಯೋಜನೆಗೆ ತಗಲುವ ವೆಚ್ಚವನ್ನು ಇಳಿಸಬಹುದಾಗಿದೆ; ಮತ್ತು ಉಳಿದ ಜನರ ಮುಂದೆ ಒಂದು ಉತ್ತಮ ಆದರ್ಶವನ್ನು ಇಡಬಹುದಾಗಿದೆ. ಸ್ಥೂಲವಾಗಿ ನಿಶ್ಚಿತ ರೂಪದ ಕಾರ್ಯ ವಿಧಾನಗಳು ಹೀಗಿವೆ–

ಸಾರ್ವಜನಿಕರ ಸಹಕಾರ ಪಡೆಯಲು ಒದಗಿಸಲಾದ ಅನುಕೂಲತೆಗಳು.

(೧) ಜನಪದ ಅಭಿವೃದ್ಧಿ ಕೇಂದ್ರಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ.

(೨) ಸ್ಥಳೀಯ ಅಭಿವೃದ್ಧಿ ಕೆಲಸಗಳು

(೩) ಸ್ವಯಂಪ್ರೇರಿತ ಸಂಘಸಂಸ್ಥೆಗಳಿಂದ ಯೋಗ್ಯ ಕೆಲಸ ಕೈಗೂಡುವಂತೆ ಅವುಗಳನ್ನು ಪ್ರೋತ್ಸಾಹಿಸುವುದು.

(೪) ತರುಣ ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸುವಂತೆ ನೋಡಿಕೊಳ್ಳುವುದು;

(೫) ವಿಶೇಷ ರೂಪದಲ್ಲಿ ಮಹಿಳೆಯರು ನೀಡಬಹುದಾದ ಸಹಾಯ.

ಮೇಲಿನ ಐದೂ ಬಗೆಯ ಸಾರ್ವಜನಿಕ ಸಹಕಾರಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವಂತೆ ಯೋಜನಾ ಆಯೋಗವು ತಕ್ಕ ವ್ಯವಸ್ಥೆಯನ್ನು ಮಾಡಿರುತ್ತದೆ. ಜನಪದ ಅಭಿವೃದ್ಧಿ ಕೇಂದ್ರ ಹಾಗೂ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ಕೋಸ್ಕರ ೧೦೧ ಕೋಟಿ ರೂಪಾಯಿಗಳನ್ನೂ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೋಸ್ಕರ ೧೫ ಕೋಟಿ ರೂಪಾಯಿಗಳನ್ನೂ ಸ್ವಯಂಪ್ರೇರಿತ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ೪ ಕೋಟಿ ರೂಪಾಯಿಗಳನ್ನೂ ವಿದ್ಯಾರ್ಥಿ ಹಾಗೂ ತರುಣರ ಸಹಕಾರವನ್ನು ಗಳಿಸಲು ಒಂದು ಕೋಟಿ ರೂಪಾಯಿಯನ್ನೂ ಯೋಜನಾ ಆಯೋಗ ಸಹಾಯ ಧನವಾಗಿ ಕೊಡಲು ನಿಗದಿ ಮಾಡಿರುತ್ತದೆ ಈ ಎಲ್ಲ ಕೆಲಸಗಳಲ್ಲೂ ಮಹಿಳೆಯರ ಸಾಮಾನ್ಯ ಸಹಕಾರವನ್ನು ಸ್ವಾಗತಿಸುವರಲ್ಲದೆ ಈಚೆಗೆ ಯೋಜನೆಯ ಆರ್ಥಿಕ ಭಾರವನ್ನು ಹಗುರಗೊಳಿಸುವುದಕ್ಕೋಸ್ಕರ ಉಳಿತಾಯ ಪ್ರವೃತ್ತಿಗೆ ಮಹಿಳೆಯರು ಪ್ರಚೋದನೆ ಕೊಡಬೇಕೆಂದು ಚಳುವಳಿ ತೊಡಗಿರುತ್ತದೆ

❦

ಉಪರೋಕ್ತ ಕಾರ್ಯವಿಧಾನಗಳೆಲ್ಲವೂ ಈಗ ನಾಂಗವಾಗಿ ನಡೆಯುತ್ತಿವೆ. ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವಿಸ್ತಾರಣೆ ಮತ್ತು ಜನಪದ ಅಭಿವೃದ್ಧಿ ಯೋಜನೆಯನ್ವಯ ೧೨೦೦ ಗುಂಪುಗಳಲ್ಲಿ ಹಂಚಿದ ಒಂದು ಲಕ್ಷ ಇಪ್ಪತ್ತು ಸಾವಿರ ಹಳ್ಳಿಗಳು ಹೊಸ ಸ್ವರೂಪ ಧಾರಣ ಮಾಡಲಿವೆ. ಅಖಿಲ ಭಾರತದ ಜನಸಂಖ್ಯೆಯ ನಾಲ್ಕರಲ್ಲಿ ಒಂದಂಶ ಜನರು ಈ ಅವಧಿಯಲ್ಲಿ ಹೊಸ ಬದುಕಿನ ಪರಿಮಳವನ್ನು ಆಘ್ರಾಣಿಸುವರು!

ಜನಪದ ಅಭಿವೃದ್ಧಿ ಯೋಜನೆಗಳನ್ನು ಕಳೆದ ವರ್ಷ ಅಕ್ಟೋಬರ ಮಾಸದ ಎರಡನೇ ದಿನಾಂಕ ಮಹಾತ್ಮಾ ಗಾಂಧೀಯವರ ಪುಣ್ಯ ಸ್ಮೃತಿಯೊಂದಿಗೆ ಪ್ರಾರಂಭಿಸಲಾಯಿತು. ಮೊದಲಿಗೆ ೫೫ ಕೇಂದ್ರಗಳನ್ನೂ ಹಿಂದಿನಿಂದ ಮರಳಿ ೫೪ ಕೇಂದ್ರಗಳನ್ನೂ ಈ ಯೋಜನೆಗೆ ಗುರಿಪಡಿಸಿದರು. ಹೀಗಾಗಿ ೨೪೦೦೦ ಹಳ್ಳಿಗಳ ಎರಡು ಕೋಟಿ ಜನತೆಯು ಹೊಸ ಯೋಜನೆಯ ಲಾಭವನ್ನು ಪಡೆಯುವಂತಾಯಿತು. ಇದಲ್ಲದೆ ಈ ವರ್ಷ ಅಕ್ಟೋಬರ ಎರಡನೇ ದಿನಾಂಕ ೨೦೦ ಕೇಂದ್ರಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯಂತೆ ಕೆಲಸಮಾಡಲು ಯೋಜನಾ ಆಯೋಗ ನಿರ್ಧರಿಸಿರುತ್ತದೆ. ಸುಮಾರು ೨೦ ಸಾವಿರ ಹಳ್ಳಿಗಳ ೧೩೨ ಲಕ್ಷ ಜನರಿಗೆ ಇದರಿಂದ ಪ್ರಯೋಜನ ದೊರೆಯುವ ಅಂದಾಜಿದೆ. ಹೀಗೆ ಮುಂದಿನ ಅಕ್ಟೋಬರದೊಳಗಾಗಿ ೪೪ ಸಾವಿರ ಹಳ್ಳಿಗಳ ೩೩೦ ಲಕ್ಷ ಜನರಿಗೆ ಹೊಸ ವಾತಾವರಣದ, ಹೊಸ ಬೆಳಕಿನ ದರ್ಶನವಾಗಲಿದೆ.

ಆದರೆ ನಮ್ಮ ದೇಶದಲ್ಲಿ ಐದೂವರೆ ಲಕ್ಷ ಹಳ್ಳಿಗಳು ಇವೆಯೆಂದೂ ಈ ಹಳ್ಳಿಗಳಲ್ಲಿ ೨೭ ಕೋಟಿ ಜನ ರೈತರು ಹಾಗೂ ಬೇರೆ ಪ್ರಜೆಗಳು ನೆಲಸಿದ್ದಾರೆಂದೂ ಸ್ಮರಿಸಿದರೆ ನಾವು ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಹಾಗೆಂದು ಜನತೆಯಲ್ಲಿ ನವ್ಯಸ್ಫೂರ್ತಿಯನ್ನೂ ಚಟುವಟಿಕೆಯನ್ನೂ ಉಂಟುಮಾಡುವ ನಮ್ಮ ಪ್ರಾರಂಭಿಕ ಪ್ರಯತ್ನಗಳು ಯಶಸ್ಸನ್ನು ಸಂಪಾದಿಸುತ್ತಿರುವುದಕ್ಕೆ ಮತ್ತು ಸರಿಯಾದ ದಾರಿಯಲ್ಲಿ ನಾವು ಮುನ್ನಡೆಯುತ್ತಿರುವುದಕ್ಕೆ ಅಭಿಮಾನ ಹೊಂದಲಡ್ಡಿಯಿಲ್ಲ.

❦

ಜನಪದ ಅಭಿವೃದ್ಧಿ ಕೇಂದ್ರಗಳಲ್ಲಿ ಹೆಚ್ಚು ಕಡಿಮೆ ಹತ್ತು ತಿಂಗಳ ಕೆಲಸವು ಈಗ ನಡೆದಿರುತ್ತದೆ. ಇವುಗಳಲ್ಲಿ ಕಂಡು ಬಂದ ಪ್ರಗತಿಯ ಲೆಕ್ಕದಿಂದ, ಜನರು ಸರಕಾರದೊಡನೆ ಸಹಕರಿಸಲು ಸಿದ್ಧರಿದ್ದಾರೆಂಬ ಸಂಗತಿ ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಕೆಲವೆಡೆಯಂತೂ ಸರಕಾರವು ನಿರೀಕ್ಷಿಸಿದುದಕ್ಕಿಂತಲೂ ಅಧಿಕ ಸಹಕಾರವನ್ನು ಆ ಕೇಂದ್ರಗಳ ಜನರು ಕೊಟ್ಟಿರುವರೆಂದು ತಿಳಿದಿದೆ. ಜನರು ತಂತಮ್ಮ ಪ್ರದೇಶಗಳಲ್ಲಿ ನೆರವೇರುವ ಅಭಿವೃದ್ಧಿ ಯೋಜನೆಗಳನ್ನು ಪರಕೀಯ ದೃಷ್ಟಿಯಿಂದ ನೋಡದೆ ಸ್ವಂತ ಮನೆಯನ್ನು ಕಟ್ಟಿಕೊಳ್ಳುವವರಂತೆಯೇ ಅಭಿಮಾನದಿಂದ ನೋಡುತಿದ್ದಾರೆ. ಇದು ಸರಕಾರಕ್ಕೆ ಸಹ ಸ್ಫೂರ್ತಿಯನ್ನುಂಟುಮಾಡಿದೆ. ಅನೇಕ ಕೇಂದ್ರಗಳಲ್ಲಿ ಜನರು ಸ್ವಯಂ ಪ್ರೇರಣೆಯಿಂದ ಪಂಚಾಯತುಗಳನ್ನು ರಚಿಸಿಕೊಂಡು ಅಥವಾ ಅಭಿವೃದ್ಧಿ ಯೋಜನೆಗಳ ಬಗ್ಗೆ ತಕ್ಕ ಕಾರ್ಯಕ್ರಮವನ್ನು ನಿರ್ಧರಿಸಲು ಸಮಿತಿಗಳನ್ನು ರಚಿಸಿಕೊಂಡು ಸರಕಾರದ ಹಣ ಪೋಲಾಗದಂತೆ ನೋಡಿಕೊಂಡಿರುವರು. ಹಳ್ಳಿಯ ಜನತೆಯ ಪ್ರಯತ್ನಗಳಲ್ಲಿ ಅಭಿವೃದ್ಧಿ ಕೇಂದ್ರದ ಸರಕಾರೀ ಅಧಿಕಾರಿಗಳು ಅಗತ್ಯವಿರುವ ಎಲ್ಲಾ ತರದ ಮಾಹಿತಿ ಮತ್ತು ಸಲಹೆಯನ್ನು ಕೊಡುತಿದ್ದಾರೆ. ಇದರಿಂದ ಹಳ್ಳಿಯ ಜನರ ಆಸೆ ಆಕಾಂಕ್ಷೆಗಳಿಗೆ ಸುಸಂಬದ್ಧ

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ. ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಾದ ವ್ಯವಹಾರ ಯೋಗ್ಯವಾದ ಮಾತನ್ನು ಕೊಡಲು ಸಾಧ್ಯವಾಯಿತು. ಲಕ್ಷಾಂತರ ಸ್ವಯಂಸೇವಕರು ಉತ್ಸಾಹದಿಂದ ಮಾರ್ಗರಚನೆಗೈದಿರುವರು; ಕೆರೆ ಕಾಲುವೆಗಳನ್ನು ತೋಡಿರುವರು; ಶಾಲೆಗಳನ್ನು ಕಟ್ಟಿರುವರು; ಆಸ್ಪತ್ರೆಗಳ ದುರಸ್ತಿ ಹಾಗೂ ಆರೋಗ್ಯರಕ್ಷಣೆಗೆ ಪೋಷಕವಾಗಬಲ್ಲ ಬೇರೆ ಕೆಲಸಗಳಲ್ಲಿ ನಿರತರಾಗಿರುವರು; ಹೊಲ ಸಾಗುವಳಿಗೆ ಸಹ ಕೈಯಿಕ್ಕಿರುವರು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮಲೇರಿಯಾ ಮುಂತಾದ ರುಜಿನದ ಹಾವಳಿಯನ್ನು ಪ್ರತಿಬಂಧಿಸಲೂ ಜನರು ಸಾಹಸ ಮಾಡಿರುವರು. ಹೀಗೆ ಸ್ವಂತ ಕಲ್ಯಾಣಕಾಂಕ್ಷಿಗಳಾಗಿ ಹಳ್ಳಿಯ ಜನರು ತೋರಿಸಿದ ಚೈತನ್ಯ ಹಾಗೂ ಲವಲವಿಕೆ ಎಲ್ಲರನ್ನೂ ಚಕಿತಗೊಳಿಸಿವೆ; ಮತ್ತು ಇದುವರೆಗೆ ಮೂಕ ಪ್ರೇಕ್ಷಕರಾಗಿ ಉಳಿದಿದ್ದ ನೆರೆಹೊರೆಯ ಹಳ್ಳಿಗರಲ್ಲಿ ಕಾರ್ಯೋತ್ಸಾಹವನ್ನು ಹೊಡೆದೆಬ್ಬಿಸಿದೆ.

ಪ್ರಧಾನಿ ನೆಹರೂರವರು ಸಮಾಜದ ಸಾರ್ವಾಂಗಿಕ ಹಿತವನ್ನು ಧ್ಯೇಯವಾಗಿಟ್ಟುಕೊಂಡಿರುವ ಈ ಕೇಂದ್ರಗಳ ಉದ್ಘಾಟನೆಯನ್ನು ಮಾಡುವಾಗ ಈ ಯೋಜನೆಗಳ ಪರಿಣಾಮ ಮಹತ್ವವನ್ನು ಕುರಿತು ಹೇಳಿದ ಮಾತುಗಳು ಅಕ್ಷರಶಃ ಸತ್ಯವಾಗಿವೆ—"ಈ ಕೇಂದ್ರಗಳ ಚಟುವಟಿಕೆಯಿಂದ ನಾವು ಭೌತಿಕ ಸುಖಸೌಕರ್ಯಗಳನ್ನು ಮಾತ್ರ ಪಡೆಯುವುದಲ್ಲ. ಇದಕ್ಕೂ ಮಿಗಿಲಾದ ಲಾಭವನ್ನೂ ಗಳಿಸುತ್ತೇವೆ. ಏಕೆಂದರೆ ಇವುಗಳು ವ್ಯಕ್ತಿಯನ್ನು ಸಮಷ್ಟಿಯ ಹಿತಕ್ಕೋಸ್ಕರ ಪರಿಶ್ರಮಗೈಯಲು ಪ್ರೇರಿಸುತ್ತವೆ; ಮತ್ತು ಈ ಯೋಜನೆಗಳಲ್ಲಿ ನಿರತನಾದವನು ಕೇವಲ ತನ್ನ ಹಳ್ಳಿಯ ಉದ್ಧಾರಕರ್ತನಾಗುವುದಷ್ಟೇ ಅಲ್ಲ ಇಡೀ ಸಮಾಜಕ್ಕೆ ಆದರ್ಶಪ್ರಾಯನಾಗುತ್ತಾನೆ." ಆದಿಭೌತಿಕ ಸ್ವರೂಪದ ಪರಿಣಾಮಕ್ಕಿಂತಲೂ ಮಾನಸಿಕವಾದ ಮತ್ತು ಆಧ್ಯಾತ್ಮ ಸ್ವರೂಪದ ಪ್ರಭಾವವನ್ನು ನಾವಿಲ್ಲಿ ಅವಶ್ಯ ಗಮನಿಸಬೇಕು. ಸಮಾಜ ವಿಕಾಸ ಯೋಜನೆಗಳ ಮೂಲಭೂತ ಧ್ಯೇಯವೇ ಇದಾಗಿರುವುದರಿಂದ ಸಾರ್ವಜನಿಕರು ಈ ಯೋಜನೆಯೊಡನೆ ಸಹಕರಿಸುವುದರಲ್ಲಿ ಹಿಂದುಳಿಯಬಾರದು. ನಮ್ಮ ಧ್ಯೇಯವು ಇನ್ನೂ ದೂರವಿದೆ, ನಿಜ. ಆದರೆ ಸ್ವತಂತ್ರಭಾರತದ ಪ್ರಜೆಗಳು ಈ ಯೋಜನೆಯ ಕಲ್ಪನೆಯನ್ನು ಚೆನ್ನಾಗಿಯೇ ಗ್ರಹಿಸಿಕೊಂಡಿರುವುದನ್ನು ಕಂಡರೆ ನಮ್ಮದು ಶುಭಾರಂಭವೆನ್ನಬೇಕು.

ಈ ಯೋಜನೆಗಳಿಂದ—ಮುಖ್ಯವಾಗಿ ರಾಷ್ಟ್ರೀಯ ವಿಸ್ತರಣಾ ಕಾರ್ಯದಿಂದ—ಕೈಗೂಡುವ ಬೇರೊಂದು ಪ್ರಾಮುಖ್ಯ ಸಂಗತಿಯೆಂದರೆ—ಸಾವಿರಾರು ಮಂದಿಗೆ ಇವುಗಳಿಂದ ಉದ್ಯೋಗ ದೊರೆಯುತ್ತದೆ. ನುರಿತ ಹಾಗೂ ಸಾಮಾನ್ಯ ಜ್ಞಾನವುಳ್ಳ ಸುಮಾರು ೮೩ ಸಾವಿರ ಕೆಲಸಗಾರರು ಸರಕಾರಕ್ಕೆ ಯೋಜನೆಯನ್ನು ಪ್ರಚಾರ ಮಾಡಲೂ, ಕಾರ್ಯರೂಪಕ್ಕೆ ಇಳಿಸಲೂ ಬೇಕಾಗಬಹುದು. ಇದರ ಇಮ್ಮಡಿಯಷ್ಟು ಸಾಮಾನ್ಯ ಕೆಲಸಗಾರರ ಆವಶ್ಯಕತೆಯುಂಟು. ಹೀಗೆ ಪ್ರತ್ಯಕ್ಷವಾಗಿ ಉದ್ಯೋಗ ಶೀಲತೆಯನ್ನು ಯೋಜನೆಯು ಪ್ರೋತ್ಸಾಹಿಸುವುದಲ್ಲದೆ—ಯೋಜನೆಯು ಕಾರ್ಯರೂಪಕ್ಕೆ ಇಳಿಯುವ ಪ್ರದೇಶಗಳಲ್ಲೆಲ್ಲಾ ನಿರುದ್ಯೋಗಿಗಳನ್ನು ಅಥವಾ ಪೂರ್ಣೋದ್ಯೋಗವಿಲ್ಲದವರನ್ನು ದುಡಿತಕ್ಕೆ ಹಚ್ಚಲಿಕ್ಕೂ ಇದು ಉದ್ದೇಶಿಸಿದೆ. ಉದ್ಯೋಗದ ಅನುಕೂಲತೆಗಳನ್ನು ಹೆಚ್ಚಿಸಿಕೊಡುವುದೇ ನಿರುದ್ಯೋಗ ನಿವಾರಣೆಯ ಉಪಾಯವೆಂದು ಎಲ್ಲರಿಗೂ ಗೊತ್ತಿದೆ

ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಯೋಜನಾ ಆಯೋಗ ಉದ್ದೇಶಿಸಿದುದರಿಂದ ಸ್ವಲ್ಪಮಟ್ಟಿನ ಉತ್ಸಾಹವಿದ್ದ ಪ್ರತಿಯೊಂದೂ ಹಳ್ಳಿಯೂ ತನ್ನಿಂದ ತಾನೆ ಒಂದು ಅಭಿವೃದ್ಧಿ ಕೇಂದ್ರವಾಗುವ ಸೌಲಭ್ಯ ದೊರೆತಿದೆ. ಪಂಚವಾರ್ಷಿಕ ಯೋಜನೆಯ ಕುರಿತು ಜನಸಾಮಾನ್ಯರಲ್ಲಿ ಉತ್ಸಾಹವನ್ನು ಉಂಟುಮಾಡುವುದಕ್ಕೂ ಸ್ಥಳೀಯ ಸಾಧನ ಸಲಕರಣೆಗಳ ಪೂರ್ಣ ಪ್ರಯೋಜನವನ್ನು ಪಡೆಯುವುದಕ್ಕೂ ಈ ಕಾರ್ಯವಿಧಾನ ನೆರವಾಗುವ ಭರವಸೆಯುಂಟು. ಸುಮಾರು ೨೦ ಸಾವಿರ ರೂಪಾಯಿಯೊಳಗಿನೇ ಮುಗಿಯುವ ಮತ್ತು ಹಳ್ಳಿಯ ಜೀವನವನ್ನು ಸುಧಾರಿಸುವ ಯೋಜನೆಗಳನ್ನು ಅಲ್ಲಿಯ ಜನರು ತಕ್ಕ ವಿವರಗಳೊಂದಿಗೆ ಒಪ್ಪಿಸಿದರೆ, ಅದನ್ನು ಸರಕಾರವೂ ಯೋಜನಾ ಆಯೋಗವೂ ಪರಿಶೀಲಿಸಿ, ಯೋಗ್ಯ ಕಂಡವುಗಳಿಗೆ ಹತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಸಹಾಯಧನ ಕೊಡುವುದು. ಈಗಾಗಲೇ ಯೋಜನಾ ಆಯೋಗ ಹಾಗೂ ರಾಜ್ಯ ಸರಕಾರಗಳ ಬಳಿಗೆ ನೂರಾರು ಸ್ಥಳೀಯ ಅಭಿವೃದ್ಧಿ ಯೋಜನೆಗಳು ಬಂದಿರುತ್ತವೆ. ಸ್ವಯಂಪ್ರೇರಿತ ಸಂಘಸಂಸ್ಥೆಗಳೂ ಜನರೇ ರಚಿಸಿಕೊಂಡ ಸಮಿತಿಗಳೂ ಈ ಯೋಜನೆಗಳನ್ನು ಮಂಡಿಸಿದ್ದು, ಅವುಗಳಲ್ಲಿ ಹೆಚ್ಚಿನವು ಕಾರ್ಯಾನ್ವಿತಗೊಳ್ಳುತ್ತಲಿವೆ. ಯೋಜನಾ ಆಯೋಗವು ಸರ್ವಪ್ರಥಮವಾಗಿ ಪುರಸ್ಕರಿಸಿದ ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು ಪ್ರಜಾ ಸಮಾಜವಾದೀ ಪಕ್ಷದ ಧುರೀಣ ಶ್ರೀ. ಅಶೋಕ ಮೆಹತಾ ಮಂಡಿಸಿದ್ದರು. ಮುಂಬಯಿ ರಾಜ್ಯದ ಠಾಣಾ ಜಿಲ್ಲೆಯ ಮೂರು ಹಳ್ಳಿಗಳ ಅಭಿವೃದ್ಧಿಗೆ ಇದು ಸಂಬಂಧಿಸಿರುತ್ತದೆ.

ತರುಣರೂ ವಿದ್ಯಾರ್ಥಿಗಳೂ ಸಹಕರಿಸಬಹುದಾದ ಕಾರ್ಯವಿಧಾನವೂ ಈ ಬೇಸಿಗೆಯಿಂದ ಯೋಗ್ಯ ರೀತಿಯಲ್ಲಿ ನಿರ್ವಹಿಸಲ್ಪಡುತ್ತಿದೆ. ಶಾಲೆಗೆ ರಜೆ ಇದ್ದ ಅವಧಿಗಳಲ್ಲಿ ವಿದ್ಯಾರ್ಥಿಗಳು ಅನೇಕ ಗುಂಪುಗಳಾಗಿ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳನ್ನು ಸಂದರ್ಶಿಸಿ, ಅಲ್ಲಿ ಕೆಲಸಮಾಡಿದರು. ಕೆಲವು ಶಾಲಾ ಕಾಲೇಜುಗಳು ತಂತಮ್ಮಲ್ಲಿಯೇ ಸಮಾಜ ಕಾರ್ಯವನ್ನು ಧ್ಯೇಯವಾಗಿಟ್ಟುಕೊಂಡ ಸಮಿತಿಗಳನ್ನು ರಚಿಸಿಕೊಂಡು, ಆಸುಪಾಸಿನ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳತ್ತ ಮನಸ್ಸು ಹಾಕುತ್ತಿವೆ. ವಿದ್ಯಾರ್ಥಿಗಳು ಜನಹಿತಯೋಜನೆಗಳಲ್ಲಿ ಭಾಗವಹಿಸುವ ಬಗ್ಗೆ ಒಂದು ನಿಶ್ಚಿತ ಕಾರ್ಯಕ್ರಮವನ್ನೂ ಸಿದ್ಧಗೊಳಿಸಲಾಗಿದೆ. ಇದರಂತೆ ವಿದ್ಯಾರ್ಥಿಗಳು ಒಂದು ಕೇಂದ್ರದಲ್ಲಿ ಕನಿಷ್ಟ ಪಕ್ಷ ೧೫ ದಿನಗಳ ಕೆಲಸವನ್ನಾದರೂ ಮಾಡಬೇಕು. ಅವರವರ ಶಾಲಾಧಿಕಾರಿಗಳ ಸಲಹೆಯಂತೆ ಜನಪದ ಅಭಿವೃದ್ಧಿ ಕೇಂದ್ರದ ಅಧಿಕಾರಿಗಳು ವಿದ್ಯಾರ್ಥಿಗಳ ಕೆಲಸದ ವಿಧಾನವನ್ನು ಗೊತ್ತುಮಾಡುತ್ತಾರೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಉಳಕೊಳ್ಳಲಿಕ್ಕೂ ಸಂಚಾರಕ್ಕೂ ಯೋಗ್ಯ ಸೌಕರ್ಯಗಳನ್ನು ಕೇಂದ್ರದ ಅಧಿಕಾರಿಗಳೇ ಒದಗಿಸಿ ಕೊಡುವರು. ಈ ಹುಡುಗ-ಹುಡುಗಿಯರ ಊಟ ಉಪಚಾರಕ್ಕೋಸ್ಕರ ಸಹಾಯ ಧನವನ್ನು ಕೊಡಲು ಅನುಕೂಲವುಂಟೋ ಹೇಗೆಂದು ಭಾರತ ಸರಕಾರ ವಿಚಾರಿಸುತ್ತಿದೆ.

ಮಹಿಳೆಯರು ಮೇಲೆ ವಿವರಿಸಿದ ಪ್ರತಿಯೊಂದೂ ಅಭಿವೃದ್ಧಿ ಕಾರ್ಯಗಳಲ್ಲಿ ನೆರವಾಗಬಹುದು. ಇದಲ್ಲದೆ ಸ್ತ್ರೀಯರು ಅತ್ಯಂತ ದಕ್ಷತೆಯಿಂದ ನಿರ್ವಹಿಸಬಹುದಾದ ಬೇರೊಂದು ಕಾರ್ಯಕ್ರಮವೂ ಇದೆ. ಉಳಿತಾಯದ ಚಳುವಳಿಯೇ ಈ ಕಾರ್ಯಕ್ರಮ. ಪ್ರಾಯೋಗಿಕ ರೂಪದಲ್ಲಿ ಈ ವರ್ಷದ ಮಾರ್ಚ ಮಾಸದಲ್ಲಿ ಒಂದು ಉಳಿತಾಯದ ವಾರವನ್ನು ಆಚರಿಸಲಾಯಿತು. ಸುಶಿಕ್ಷಿತ ಮಹಿಳೆಯರು ಈ ಸಪ್ತಾಹದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಪರಿಣಾಮವಾಗಿ ಸುಮಾರು ೮೦ ಲಕ್ಷ ರೂಪಾಯಿಗಳ ಸಂಗ್ರಹವಾಯಿತು. ಈ ಪ್ರಗತಿಯಿಂದ ಉತ್ತೇಜಿತಗೊಂಡು, ಸರಕಾರವು ಒಂದು ನಿಶ್ಚಿತ ಯೋಜನೆಯನ್ನು ತಯಾರಿಸಿ, ಮಹಿಳೆಯಲ್ಲಿ ಉಳಿತಾಯ ಪ್ರವೃತ್ತಿಯನ್ನು ಪೋಷಿಸುವ ಬಗ್ಗೆ ಚಳುವಳಿ ಆರಂಭಿಸಲು ನೋಡಿದೆ. ಸುಮಾರು ಒಂದು ನೂರು ಮಹಿಳಾ ಸಂಘ ಸಂಸ್ಥೆಗಳು ಸರಕಾರದೊಂದಿಗೆ ಸಹಕರಿಸಿ, ಸ್ತ್ರೀಯರಲ್ಲಿ ಕರ್ಚು ಕಡಿಮೆಮಾಡಿ, ಹಣವನ್ನು ಉಳಿಸಿ, ಸರಕಾರದ ಜನಹಿತ ಯೋಜನೆಗಳಿಗೆ ಬಂಡವಾಳ ಕೂಡಿಸುವ ವಿಚಾರವನ್ನು ಪ್ರಚಾರಮಾಡುತ್ತಿವೆ. ಗೃಹಕೃತ್ಯದ ಕೆಲಸಗಳನ್ನು ನಿರ್ವಹಿಸುವ ಹೆಂಗಸರಿಗೆ ಮನೆತನದ ಕರ್ಚನ್ನು ಹೇಗೆ ಕಡಿಮೆಮಾಡಬಹುದೆಂದು ತಿಳಿದಿರುತ್ತದೆ. ರಾಷ್ಟ್ರದ ಈಗಿನ ದುರವಸ್ಥೆಯನ್ನು ಪರಿಹರಿಸುವುದಕ್ಕೋಸ್ಕರ ಅಡಿಗೆ ಮನೆಯೊಳಗಿಂದಲೇ ಗೃಹಿಣಿಯು ನೆರವಾಗಬಲ್ಲ ರೀತಿ ಇದೆಂಬುದರಿಂದ—ಈ ಚಳುವಳಿಯು ವೈಶಿಷ್ಟ್ಯಪೂರ್ಣವಾಗಿರುತ್ತದೆ.

ಇನ್ನು ಕೊನೆಯದಾಗಿ ಭಾರತ ಸರಕಾರದವರ ಸಾಮಾಜಿಕ ಕಲ್ಯಾಣ ಮಂಡಳಿಯನ್ನು ಈಚೆಗೆ ರಚಿಸಿರುವರು. ಸ್ವಯಂಪ್ರೇರಣೆಯಿಂದ ಸಾಮಾಜಿಕ ಹಿತದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡುವ ಸಂಘಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವ ಮತ್ತು ಅವುಗಳ ಚಟುವಟಿಕೆಯನ್ನು ಪಂಚವಾರ್ಷಿಕ ಯೋಜನೆಯ ಉದ್ದೇಶ ಸಾಧನೆಗೋಸ್ಕರ ಪರಿಷ್ಕರಿಸಿ ಅಳವಡಿಸಿಕೊಳ್ಳುವ ಹೊಣೆಗಾರಿಕೆಯನ್ನು ಈ ಮಂಡಳಿ ಹೊತ್ತಿದೆ. ಯೋಜನಾ ಆಯೋಗ ನಾಲ್ಕು ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಈ ಕೆಲಸಕ್ಕೋಸ್ಕರ ನಿಗದಿ ಮಾಡಿರುವುದರಿಂದ ಈಗ ಹೇಗೋ ಹೇಗೋ ಕೆಲಸ ಸಾಗಿಸಿಕೊಂಡು ಹೋಗುವ ಸ್ವಯಂಸೇವಕರ ಸಾರ್ವಜನಿಕ ಹಿತದ ಸಂಘಸಂಸ್ಥೆಗಳು ಚೇತರಿಸಿಕೊಂಡು, ತಮ್ಮ ಧ್ಯೇಯ ಸಾಧನೆಯಲ್ಲಿ ಮುನ್ನಡಿ ಇಡುವಂತಾಯಿತು. ಹೀಗೆ ಪಂಚಮುಖವಾದ, ಏಕೆ, ಬಹುಮುಖವೆಂದೇ ಹೇಳಬಹುದಾದ ಸೇವಾಕಾರ್ಯಗಳ ಮೂಲಕ ಜನತೆಯು ಸರಕಾರದೊಂದಿಗೆ ಸದಾ ಸಹಕರಿಸಿಕೊಂಡು ಹೋದರೆ ಪಂಚವಾರ್ಷಿಕ ಯೋಜನೆಯ ಉದ್ದೇಶ ಈಡೇರುವುದಷ್ಟೇ ಅಲ್ಲ ಭಾರತೀಯರ ದೈನ್ಯಾವಸ್ಥೆಯೂ ದೂರಗೊಂಡು ರಾಷ್ಟ್ರವು ಸಂಪತ್ಸಮೃದ್ಧವಾಗಬಲ್ಲುದು. ಪ್ರತಿಯೊಬ್ಬ ರಾಷ್ಟ್ರ[illegible] ಸಾಧನೆಗೋಸ್ಕರ ಕರ್ತವ್ಯ ಭಾವನೆಯಿಂದ, ಸ್ವಯಂಪ್ರೇರಣೆಯಿಂದ ಪರಿಶ್ರಮ ಮಾಡುವನೆಂದು ಆಶಿಸೋಣ!

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಮದ್ರಾಸು ಇವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಸ್ಕೂಲುಗಳೂ ಇದಕ್ಕೆ ಚಂದಾದಾರರಾಗಬಹುದಾಗಿದೆ.

ಉತ್ತಮ ತರದ ಬ್ಯಾಂಕಿಂಗ್ ವ್ಯವಹಾರ

ನೀವು ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದರೆ ನಿಮಗದು ಅನೇಕ ವಿಧಗಳಿಂದ ಅನುಕೂಲವಾಗುವುದನ್ನು ಮನಗಾಣುವಿರಿ. [illegible]

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ 1925 | ಮುಖ್ಯ ಕಚೇರಿ: ಉಡುಪಿ, ದ. ಭಾರತ.

THE CANARA INDUSTRIAL &
BANKING SYNDICTE LTD.,
Estd: 1925 H. O: UDIPI, S. India.

ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆ

ಪಂಚವಾರ್ಷಿಕ ಯೋಜನೆಯ ಕುರಿತು ಹೇಳುವಾಗ ಸರಕಾರೀ ಹಾಗೂ ಖಾಸಗೀ ಕ್ಷೇತ್ರಗಳನ್ನು ಇದು ಒಳಗೊಂಡಿದೆಯೆಂದು ಯಾವಾಗಲೂ ನಾವು ಕೇಳುತ್ತೇವೆ. ಆದರೆ ಮೂರನೆಯದಾದ ಇನ್ನೊಂದು ಕ್ಷೇತ್ರವನ್ನೂ ಈ ಯೋಜನೆ ಒಳಗೊಂಡಿರುತ್ತದೆ; ಮತ್ತು ಅಷ್ಟಾಗಿ ಜನರಲ್ಲಿ ಪ್ರಚಾರಗೊಂಡಿರದಿದ್ದರೂ ಈ ಕ್ಷೇತ್ರದಲ್ಲಿ ಕಂಡು ಬರುವ ಚಟುವಟಿಕೆಯೇ ಪಂಚವಾರ್ಷಿಕ ಯೋಜನೆಯ ಯಶಸ್ಸನ್ನು ನಿರ್ಧರಿಸಬಲ್ಲುದು. ಸ್ವಯಂಪ್ರೇರಣೆಯಿಂದ ಸಾರ್ವಜನಿಕರು ಸರಕಾರದೊಡನೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ನೆರವಾಗಬಲ್ಲ ವಿಧಾನವೇ ಈ ಮೂರನೇ ಕ್ಷೇತ್ರದ ವಿವರಣೆಯೆನ್ನಬಹುದು.

ಪ್ರಜಾಪ್ರಭುತ್ವ ಪದ್ಧತಿಯಂತೆ ಸಿದ್ಧಪಡಿಸಿದ ಯೋಜನೆಯು ಸರ್ವಸ್ವವೂ ಸಾರ್ವಜನಿಕ ಸಹಕಾರವನ್ನೇ ಒಲವಾಗಿ ಅವಲಂಬಿಸಿರುತ್ತದೆ. ಈ ಯೋಜನೆಯು ನಾಡಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತಗೊಳಿಸಲು ನೋಡುವುದರಿಂದ, ಸರಕಾರದ ಪ್ರಯತ್ನಕ್ಕೆ ಸಾರ್ವಜನಿಕರು ನೀಡುವ ಸಹಕಾರವೇ ಯೋಜನೆಯ ಸಿದ್ಧಿಯನ್ನು ನಿರ್ಧರಿಸುವ ಮಾನದಂಡವಾಗುತ್ತದೆ. ಈ ಸಹಕಾರವು ಸಾಮಾನ್ಯ ರೀತಿ ಹಾಗೂ ನಿಶ್ಚಿತ ಸ್ವರೂಪವುಳ್ಳದ್ದೆಂದು ಎರಡು ವಿಧವಾಗಿರಬಹುದು. ಸಾಮಾನ್ಯ ರೀತಿಯ ಸಹಕಾರವೆಂದರೆ, ಜನರಲ್ಲಿ ಪಂಚವಾರ್ಷಿಕ ಯೋಜನೆಯ ಬಗ್ಗೆ ಅಭಿರುಚಿ ಮತ್ತು ಆಸಕ್ತಿಗಳು ಹುಟ್ಟಿಕೊಳ್ಳುವಂತೆ ಎಳೆದವರು ಪ್ರಯತ್ನಿಸುವುದು, ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಸಂಪನ್ನವಾಗುವ ಈ ಯೋಜನೆಯ ಮಾಹಾತ್ಮ್ಯವನ್ನು ಹಳ್ಳಿಯ ಬೋರೇಗೌಡನವರೆಗೂ ತಿಳಿಸಬೇಕಾದ್ದು; ಮತ್ತು ಒಂದಪಾರ ಠೇವಣಿಗೆ ಅನುಕೂಲವಾಗುವಂತೆ ಸಾರ್ವಜನಿಕರು ತಮ್ಮ ಅನಾವಶ್ಯಕವಾದ ಖರ್ಚುವೆಚ್ಚಗಳನ್ನು ನಿಲ್ಲಿಸಿ, ಉಳಿತಾಯವನ್ನು ಹೆಚ್ಚಿಸುವುದು—ಇತ್ಯಾದಿಯಾಗಿರುತ್ತದೆ. ಹೀಗೆ ನಮ್ಮ ರಾಷ್ಟ್ರದ ಪುನರ್ನಿರ್ಮಾಣ ಕಾರ್ಯಕ್ಕೋಸ್ಕರ ತ್ಯಾಗವನ್ನು ಮಾಡಲು ಜನತೆಯನ್ನು ಪ್ರೋತ್ಸಾಹಿಸುವುದು ತೀರ ಸಾಮಾನ್ಯ— ಆದರೆ ಅತ್ಯಂತ ಮಹತ್ವದ— ವಿಷಯ

❖

ಇದಲ್ಲದೆ ಸಾರ್ವಜನಿಕರು ನಿಶ್ಚಿತ ರೂಪದಲ್ಲಿ ಸಹಕಾರವನ್ನು ಕೊಡಬಲ್ಲ ಕಾರ್ಯವಿಧಾನವನ್ನೂ ಪಂಚವಾರ್ಷಿಕ ಯೋಜನೆಯು ಒಳಗೊಂಡಿರುತ್ತದೆ. ಸ್ವಯಂಪ್ರೇರಣೆಯಿಂದ ಸಾರ್ವಜನಿಕರು ಈ ಕಾರ್ಯಗಳಲ್ಲಿ ಭಾಗ ವಹಿಸುವುದರಿಂದ ಯೋಜನೆಗೆ ತಗಲುವ ವೆಚ್ಚವನ್ನು ಇಳಿಸಬಹುದಾಗಿದೆ, ಮತ್ತು ಉಳಿದ ಜನರ ಮುಂದೆ ಒಂದು ಉತ್ತಮ ಆದರ್ಶವನ್ನು ಇಡಬಹುದಾಗಿದೆ. ಸ್ಥೂಲವಾಗಿ ನಿಶ್ಚಿತ ರೂಪದ ಕಾರ್ಯವಿಧಾನಗಳು ಹೀಗಿವೆ:-

ಸಾರ್ವಜನಿಕರ ಸಹಕಾರ ಪಡೆಯಲು ಒದಗಿಸಲಾದ ಅನುಕೂಲತೆಗಳು.

(೧) ಜನಪದ ಅಭಿವೃದ್ಧಿ ಕೇಂದ್ರಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ.

(೨) ಸ್ಥಳೀಯ ಅಭಿವೃದ್ಧಿ ಕೆಲಸಗಳು

(೩) ಸ್ವಯಂಪ್ರೇರಿತ ಸಂಘಸಂಸ್ಥೆಗಳಿಂದ ಯೋಗ್ಯ ಕೆಲಸ ಕೈಗೂಡುವಂತೆ ಅವುಗಳನ್ನು ಪ್ರೋತ್ಸಾಹಿಸುವುದು.

(೪) ತರುಣ ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸುವಂತೆ ನೋಡಿಕೊಳ್ಳುವುದು;

(೫) ವಿಶೇಷ ರೂಪದಲ್ಲಿ ಮಹಿಳೆಯರು ನೀಡಬಹುದಾದ ಸಹಾಯ.

ಮೇಲಿನ ಐದೂ ಬಗೆಯ ಸಾರ್ವಜನಿಕ ಸಹಕಾರಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವಂತೆ ಯೋಜನಾ ಆಯೋಗವು ತಕ್ಕ ವ್ಯವಸ್ಥೆಯನ್ನು ಮಾಡಿರುತ್ತದೆ. ಜನಪದ ಅಭಿವೃದ್ಧಿ ಕೇಂದ್ರ ಹಾಗೂ ರಾಷ್ಟ್ರೀಯ ವಿಸ್ತರಣ ಕಾರ್ಯಕ್ಕೋಸ್ಕರ ೯೦ ಕೋಟಿ ರೂಪಾಯಿಗಳನ್ನು, ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೋಸ್ಕರ ೧೫ ಕೋಟಿ ರೂಪಾಯಿಗಳನ್ನೂ ಸ್ವಯಂಪ್ರೇರಿತ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ೪ ಕೋಟಿ ರೂಪಾಯಿಗಳನ್ನು, ವಿದ್ಯಾರ್ಥಿ ಹಾಗೂ ತರುಣರ ಸಹಕಾರವನ್ನು ಗಳಿಸಲು ಒಂದು ಕೋಟಿ ರೂಪಾಯಿಯನ್ನೂ ಯೋಜನಾ ಆಯೋಗ ಸಹಾಯ ಧನವಾಗಿ ಕೊಡಲು ನಿಗದಿ ಮಾಡಿರುತ್ತದೆ. ಈ ಎಲ್ಲ ಕೆಲಸಗಳಲ್ಲೂ ಮಹಿಳೆಯರ ಸಾಮಾನ್ಯ ಸಹಕಾರವನ್ನು ಸ್ವಾಗತಿಸುವದಲ್ಲದೆ ಈಚೆಗೆ ಯೋಜನೆಯ ಆರ್ಥಿಕ ಭಾರವನ್ನು ಹಗುರಗೊಳಿಸುವುದಕ್ಕೋಸ್ಕರ ಉಳಿತಾಯ ಪ್ರವೃತ್ತಿಗೆ ಮಹಿಳೆಯರು ಪ್ರಚೋದನೆ ಕೊಡಬೇಕೆಂದು ಚಳುವಳಿ ತೊಡಗಿರುತ್ತದೆ

❖

ಉಪರೋಕ್ತ ಕಾರ್ಯವಿಧಾನಗಳೆಲ್ಲವೂ ಈಗ ಚೆನ್ನಾಗಿ ನಡೆಯುತ್ತಿವೆ. ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವಿಸ್ತಾರಣೆ ಮತ್ತು ಜನಪದ ಅಭಿವೃದ್ಧಿ ಯೋಜನೆಯನ್ನವು ೧೨೦೦ ಗುಂಪುಗಳಲ್ಲಿ ಹಂಚಿದ ಒಂದು ಲಕ್ಷ ಇಪ್ಪತ್ತು ಸಾವಿರ ಹಳ್ಳಿಗಳ ಹೊಸ ಸ್ವರೂಪ ಧಾರಣ ಮಾಡಲಿವೆ. ಅಖಿಲ ಭಾರತದ ಜನಸಂಖ್ಯೆಯ ನಾಲ್ಕರಲ್ಲಿ ಒಂದಂಶ ಜನರು ಈ ಅವಧಿಯಲ್ಲಿ ಹೊಸ ಬದುಕಿನ ಪರಿಮಳವನ್ನು ಆಘ್ರಾಣಿಸುವರು!

ಜನಪದ ಅಭಿವೃದ್ಧಿ ಯೋಜನೆಗಳನ್ನು ಕಳೆದ ವರ್ಷ ಅಕ್ಟೋಬರ ಮಾಸದ ಎರಡನೇ ದಿನಾಂಕ ಮಹಾತ್ಮಾ ಗಾಂಧೀಯವರ ಪುಣ್ಯ ಸ್ಮೃತಿಯೊಂದಿಗೆ ಪ್ರಾರಂಭಿಸಲಾಯಿತು. ಮೊದಲಿಗೆ ೫೫ ಕೇಂದ್ರಗಳನ್ನೂ ಹಿಂದಿನಿಂದ ಮರಳಿ ೧೫ ಕೇಂದ್ರಗಳನ್ನೂ ಈ ಯೋಜನೆಗೆ ಗುರಿಪಡಿಸಿದರು. ಹೀಗಾಗಿ ೨೪೦೦೦ ಹಳ್ಳಿಗಳ ಎರಡು ಕೋಟಿ ಜನತೆಯು ಹೊಸ ಯೋಜನೆಯ ಲಾಭವನ್ನು ಪಡೆಯುವಂತಾಯಿತು. ಇದಲ್ಲದೆ ಈ ವರ್ಷ ಅಕ್ಟೋಬರ ಎರಡನೇ ದಿನಾಂಕ ೨೦೦ ಕೇಂದ್ರಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯಂತೆ ಕೆಲಸ ಮಾಡಲು ಯೋಜನಾ ಆಯೋಗ ನಿರ್ಧರಿಸಿರುತ್ತದೆ. ಸುಮಾರು ೨೦ ಸಾವಿರ ಹಳ್ಳಿಗಳ ೧೩ ಲಕ್ಷ ಜನರಿಗೆ ಇದರಿಂದ ಪ್ರಯೋಜನ ದೊರೆಯುವ ಅಂದಾಜಿದೆ ಹೀಗೆ ಮುಂದಿನ ಅಕ್ಟೋಬರದೊಳಗಾಗಿ ೪೪ ಸಾವಿರ ಹಳ್ಳಿಗಳ ೩೩೦ ಲಕ್ಷ ಜನರಿಗೆ ಹೊಸ ವಾತಾವರಣವು, ಹೊಸ ಬೆಳಕಿನ ದರ್ಶನವಾಗಲಿದೆ.

ಆದರೆ ನಮ್ಮ ದೇಶದಲ್ಲಿ ಐದೂವರೆ ಲಕ್ಷ ಹಳ್ಳಿಗಳು ಇವೆಯೆಂದೂ ಈ ಹಳ್ಳಿಗಳಲ್ಲಿ ೨೯ ಕೋಟಿ ಜನ ರೈತರು ಹಾಗೂ ಬೇರೆ ಪ್ರಜೆಗಳು ನೆಲಸಿದ್ದಾರೆಂದೂ ಸ್ಮರಿಸಿದರೆ ನಾವು ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಹಾಗೆಂದು ಜನತೆಯಲ್ಲಿ ನವಸ್ಫೂರ್ತಿಯನ್ನೂ ಚಟುವಟಿಕೆಯನ್ನೂ ಉಂಟುಮಾಡುವ ನಮ್ಮ ಪ್ರಾರಂಭಿಕ ಪ್ರಯತ್ನಗಳು ಯಶಸ್ಸನ್ನು ಸಂಪಾದಿಸುತ್ತಿರುವುದಕ್ಕೆ ಮತ್ತು ಸರಿಯಾದ ದಾರಿಯಲ್ಲಿ ನಾವು ಮುನ್ನಡೆಯುತ್ತಿರುವುದಕ್ಕೆ ಅಭಿಮಾನ ಹೊಂದಬಹುದಾಗಿದೆ.

❖

ಜನಪದ ಅಭಿವೃದ್ಧಿ ಕೇಂದ್ರಗಳಲ್ಲಿ ಹೆಚ್ಚು ಕಡಿಮೆ ಹತ್ತು ತಿಂಗಳ ಕೆಲಸವು ಈಗ ನಡೆದಿರುತ್ತದೆ. ಇವುಗಳಲ್ಲಿ ಕಂಡು ಬಂದ ಪ್ರಗತಿಯ ಲೆಕ್ಕದಿಂದ, ಜನರು ಸರಕಾರದೊಡನೆ ಸಹಕರಿಸಲು ಸಿದ್ಧರಿದ್ದಾರೆಂಬ ಸಂಗತಿ ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಕೆಲವೆಡೆಯಂತೂ ಸರಕಾರವು ನಿರೀಕ್ಷಿಸಿದುದಕ್ಕಿಂತಲೂ ಅಧಿಕ ಸಹಕಾರವನ್ನು ಆ ಕೇಂದ್ರಗಳ ಜನರು ಕೊಟ್ಟಿರುವರೆಂದು ತಿಳಿದಿದೆ. ಜನರು ತಂತಮ್ಮ ಪ್ರದೇಶಗಳಲ್ಲಿ ನೆರವೇರುವ ಅಭಿವೃದ್ಧಿ ಯೋಜನೆಗಳನ್ನು ಪರಕೀಯ ದೃಷ್ಟಿಯಿಂದ ನೋಡದೆ ಸ್ವಂತ ಮನೆಯನ್ನು ಕಟ್ಟಿಕೊಳ್ಳುವವರಂತೆಯೇ ಅಭಿಮಾನದಿಂದ ನೋಡುತ್ತಿದ್ದಾರೆ. ಇದು ಸರಕಾರಕ್ಕೆ ಸಹ ಸ್ಫೂರ್ತಿಯನ್ನುಂಟುಮಾಡಿದೆ. ಅನೇಕ ಕೇಂದ್ರಗಳಲ್ಲಿ ಜನರು ಸ್ವಯಂಪ್ರೇರಣೆಯಿಂದ ಪಂಚಾಯತುಗಳನ್ನು ರಚಿಸಿಕೊಂಡು ಅಥವಾ ಅಭಿವೃದ್ಧಿ ಯೋಜನೆಗಳ ಬಗ್ಗೆ ತಕ್ಕ ಕಾರ್ಯಕ್ರಮವನ್ನು ನಿರ್ಧರಿಸಲು ಸಮಿತಿಗಳನ್ನು ರಚಿಸಿಕೊಂಡು ಸರಕಾರದ ಹಣ ಪೋಲಾಗದಂತೆ ನೋಡಿಕೊಂಡಿರುವರು. ಹಳ್ಳಿಯ ಜನತೆಯ ಪ್ರಯತ್ನಗಳಲ್ಲಿ ಅಭಿವೃದ್ಧಿ ಕೇಂದ್ರದ ಸರಕಾರೀ ಅಧಿಕಾರಿಗಳು ಅಗತ್ಯವಿರುವ ಎಲ್ಲಾ ತರದ ಮಾಹಿತಿ ಮತ್ತು ಸಲಹೆಯನ್ನು ಕೊಡುತ್ತಿದ್ದಾರೆ. ಇದರಿಂದ ಹಳ್ಳಿಯ ಜನರ ಆಶೆ ಆಕಾಂಕ್ಷೆಗಳಿಗೆ ಸುಸಂಬದ್ಧ

The Canara Mutual Assurance Co., LTD.

Estd 1935] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ಎಸ್ಟಿಮೇಟ್ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಈಗಲೇ ತೆಗೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ. ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ. ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಪೆಶಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಾದ ವ್ಯವಹಾರ ಯೋಗ್ಯವಾದ ಮಾತನ್ನು ಕೊಡಲು ಸಾಧ್ಯವಾಯಿತು. ೮ ಲಕ್ಷಾಂತರ ಸ್ವಯಂಸೇವಕರು ಉತ್ಸಾಹದಿಂದ ಮಾರ್ಗರಚನೆಗೈದಿರುವರು; ಕೆರೆ ಕಾಲುವೆಗಳನ್ನು ತೋಡಿರುವರು, ಶಾಲೆಗಳನ್ನು ಕಟ್ಟಿರುವರು; ಆಸ್ಪತ್ರೆಗಳ ದುರಸ್ತಿ ಹಾಗೂ ಆರೋಗ್ಯರಕ್ಷಣೆಗೆ ಪೋಷಕವಾಗಬಲ್ಲ ಬೇರೆ ಕೆಲಸಗಳಲ್ಲಿ ನಿರತರಾಗಿರುವರು; ಹೊಲ ಸಾಗುವಳಿಗೆ ಸಹಾಯಕ್ಕಿರುವರು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮಲೇರಿಯಾ ಮುಂತಾದ ರುಜಿನದ ದಾಳಿಯನ್ನು ಪ್ರತಿಬಂಧಿಸಲೂ ಜನರು ಸಾಹಸ ಮಾಡಿರುವರು. ಹೀಗೆ ಸ್ವಂತ ಕಲ್ಯಾಣಕಾಂಕ್ಷಿಗಳಾಗಿ ಹಳ್ಳಿಯ ಜನರು ತೋರಿಸಿದ ಚೈತನ್ಯ ಹಾಗೂ ಲವಲವಿಕೆ ಎಲ್ಲರನ್ನೂ ಚಕಿತಗೊಳಿಸಿವೆ; ಮತ್ತು ಇದು ವರೆಗೆ ಮೂಕ ಪ್ರೇಕ್ಷಕರಾಗಿ ಉಳಿದಿದ್ದ ನೆರೆಹೊರೆಯ ಹಳ್ಳಿಗರೆಲ್ಲ ಕಾರ್ಯೋತ್ಸಾಹವನ್ನು ಹೊಡೆದೆಬ್ಬಿಸಿವೆ

❖

ಪ್ರಧಾನಿ ನೆಹರೂರವರು ಸಮಾಜದ ಸಾರ್ವಾಂಗಿಕ ಹಿತವನ್ನು ಧ್ಯೇಯವಾಗಿಟ್ಟುಕೊಂಡಿರುವ ಈ ಕೇಂದ್ರಗಳ ಉದ್ಘಾಟನೆಯನ್ನು ಮಾಡುವಾಗ ಈ ಯೋಜನೆಗಳ ಪರಿಣಾಮ ಮುಖ್ಯವನ್ನು ಕುರಿತು ಹೇಳಿದ ಮಾತುಗಳು ಅಕ್ಷರಶಃ ಸತ್ಯವಾಗಿವೆ— ಈ ಕೇಂದ್ರಗಳ ಚಟುವಟಿಕೆಯಿಂದ ನಾವು ಭೌತಿಕ ಸುಖಸೌಕರ್ಯಗಳನ್ನು ಮಾತ್ರ ಪಡೆಯುವುದಲ್ಲ. ಇದಕ್ಕೂ ಮಿಗಿಲಾದ ಲಾಭವನ್ನೂ ಗಳಿಸುತ್ತೇವೆ. ಏಕೆಂದರೆ ಇವುಗಳು ವ್ಯಕ್ತಿಯನ್ನು ಸಮಷ್ಟಿಯ ಹಿತಕ್ಕೋಸ್ಕರ ಪರಿಶ್ರಮ ಗೈಯಲು ಪ್ರೇರಿಸುತ್ತವೆ; ಮತ್ತು ಈ ಯೋಜನೆಗಳಲ್ಲಿ ನಿರತನಾದವನು ಕೇವಲ ತನ್ನ ಹಳ್ಳಿಯ ಉದ್ಧಾರಕರ್ತನಾಗುವುದಷ್ಟೇ ಅಲ್ಲ ಇಡೀ ಸಮಾಜಕ್ಕೆ ಆದರ್ಶಪ್ರಾಯನಾಗುತ್ತಾನೆ." ಈ ಭೌತಿಕ ಸ್ವರೂಪದ ಪರಿಣಾಮಕ್ಕಿಂತಲೂ ಮಾನಸಿಕವಾದ ಮತ್ತು ಆಧ್ಯಾತ್ಮಸ್ವರೂಪದ ಪ್ರಭಾವವನ್ನು ಇಲ್ಲಿ ವಿಶೇಷ ಗಮನಿಸಬೇಕು. ಸಮಾಜ ವಿಕಾಸ ಯೋಜನೆಗಳ ಮೂಲಭೂತ ಧ್ಯೇಯವೇ ಇದಾಗಿರುವುದರಿಂದ ಸಾರ್ವಜನಿಕರು ಈ ಯೋಜನೆಯೊಡನೆ ಸಹಕರಿಸುವುದರಲ್ಲಿ ಹಿಂದುಳಿಯಬಾರದು ನಮ್ಮ ಧ್ಯೇಯವು ಇನ್ನೂ ದೂರವಿದೆ, ನಿಜ. ಆದರೆ ಸ್ವತಂತ್ರ ಭಾರತದ ಪ್ರಜೆಗಳು ಈ ಯೋಜನೆಯ ಕಲ್ಪನೆಯನ್ನು ಚೆನ್ನಾಗಿಯೇ ಗ್ರಹಿಸಿಕೊಂಡಿರುವುದನ್ನು ಕಂಡರೆ ನಮ್ಮದು ಶುಭಾರಂಭವೆನ್ನಬೇಕು.

ಈ ಯೋಜನೆಗಳಿಂದ—ಮುಖ್ಯವಾಗಿ ರಾಷ್ಟ್ರೀಯ ವಿಸ್ತರಣಾ ಕಾರ್ಯದಿಂದ—ಕೈಗೂಡುವ ಬೇರೊಂದು ಪ್ರಾಮುಖ್ಯ ಸಂಗತಿಯೆಂದರೆ—ಸಾವಿರಾರು ಮಂದಿಗೆ ಇವುಗಳಿಂದ ಉದ್ಯೋಗ ದೊರೆಯುತ್ತದೆ. ನುರಿತ ಹಾಗೂ ಸಾಮಾನ್ಯ ಜ್ಞಾನವುಳ್ಳ ಸುಮಾರು ೮೦ ಸಾವಿರ ಕೆಲಸಗಾರರು ಸರಕಾರಕ್ಕೆ ಯೋಜನೆಯೊಂದನ್ನು [illegible] ಮಾಡಲಾಗಿ, ಕಾರ್ಯರೂಪಕ್ಕೆ ಇಳಿಸಲು ಬೇಕಾಗಬಹುದು. ಇದರ ಇಮ್ಮಡಿಯಷ್ಟು ಸಾಮಾನ್ಯ ಕೆಲಸಗಾರರ ಆವಶ್ಯಕತೆಯುಂಟು. ಹೀಗೆ ಪ್ರತ್ಯಕ್ಷವಾಗಿ ಉದ್ಯೋಗ ಲಭಿಸುವುದನ್ನು ಯೋಜನೆಯು ಪ್ರೋತ್ಸಾಹಿಸುವುದಲ್ಲದೆ—ಯೋಜನೆಯು ಕಾರ್ಯರೂಪಕ್ಕೆ ಇಳಿಯುವ ಪ್ರದೇಶಗಳಲ್ಲೆಲ್ಲ ನಿರುದ್ಯೋಗಿಗಳನ್ನು ಅಥವಾ ಪೂರ್ಣೋದ್ಯೋಗವಿಲ್ಲದವರನ್ನು ದುಡಿತಕ್ಕೆ ಹಚ್ಚಲಿಕ್ಕೆ ಇದು ಉದ್ದೇಶಿಸಿದೆ. ಉದ್ಯೋಗದ ಅನುಕೂಲತೆಗಳನ್ನು ಹೆಚ್ಚಿಸಿಕೊಡುವುದೇ ನಿರುದ್ಯೋಗ ನಿವಾರಣೆಯ ಉಪಾಯವೆಂಬುದು ಎಲ್ಲರಿಗೂ ಗೊತ್ತಿದೆ.

❖

ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಯೋಜನಾ ಆಯೋಗ ಉದ್ದೇಶಿಸಿದುದರಿಂದ ಸ್ವಲ್ಪ ಮಟ್ಟಿನ ಉತ್ಸಾಹವಿದ್ದ ಪ್ರತಿಯೊಂದೂ ಹಳ್ಳಿಯೂ ತನ್ನಿಂದ ತಾನೆ ಒಂದು ಅಭಿವೃದ್ಧಿ ಕೇಂದ್ರವಾಗುವ ಸೌಲಭ್ಯ ದೊರೆತಿವೆ. ಸಾರ್ವಜನಿಕ ಯೋಜನೆಯ ಕುರಿತು ಜನಸಾಮಾನ್ಯರಲ್ಲಿ ಉತ್ಸಾಹವನ್ನು ಉಂಟುಮಾಡುವುದಕ್ಕೆ ಸ್ಥಳೀಯ ೨ ವರ್ಷ ಸಂಕಲ್ಪಗಳ ಪೂರ್ಣ ಪ್ರಯೋಜನವನ್ನು ಪಡೆಯುವುದಕ್ಕೆ ಈ ಕಾರ್ಯವಿಧಾನ ನೆರವಾಗುವ ಭರವಸೆಯುಂಟು. ೧೫ ಸಾವಿರ ರೂಪಾಯಿಯೊಳಗೇ ಮುಗಿಯುವ ಮತ್ತು ಹಳ್ಳಿಯ ಜೀವನವನ್ನು ಸುಧಾರಿಸುವ ಯೋಜನೆಗಳನ್ನು ಅಲ್ಲಿಯ ಜನರು ತಕ್ಕ ವಿವರಗಳೊಂದಿಗೆ ಒಪ್ಪಿಸಿದರೆ, ಅದನ್ನು ಸರಕಾರವೂ ಯೋಜನಾ ಆಯೋಗವೂ ಪರಿಶೀಲಿಸಿ, ಯೋಗ್ಯ ಕಂಡವುಗಳಿಗೆ ಹತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಸಹಾಯಧನ ಕೊಡುವುದು. ಈಗಾಗಲೇ ಯೋಜನಾ ಆಯೋಗ ಹಾಗೂ ರಾಜ್ಯ ಸರಕಾರಗಳ ಬಳಿಗೆ ನೂರಾರು ಸ್ಥಳೀಯ ಅಭಿವೃದ್ಧಿ ಯೋಜನೆಗಳು ಬಂದಿರುತ್ತವೆ. ಸ್ವಯಂಪ್ರೇರಿತ ಸಂಘಸಂಸ್ಥೆಗಳೂ [illegible] ಸಮಿತಿಗಳೂ ಈ ಯೋಜನೆಗಳನ್ನು ಮುಂದಿಟ್ಟಿದ್ದು [illegible]. ಯೋಜನಾ ಆಯೋಗವು ಸರ್ವ ಪ್ರಯತ್ನ [illegible] ತನ್ನ [illegible] ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು [illegible] ಸಿದ್ಧರು [illegible] ಇದು ಸಂಬಂಧಿಸಿರುತ್ತದೆ.

ತರುಣರೂ ವಿದ್ಯಾರ್ಥಿಗಳೂ ಸಮಾಜ [illegible] ಈ ಯೋಜನೆಯಿಂದ [illegible] ರೀತಿಯನ್ನು ನಿರ್ದೇಶಿಸಲ್ಪಡುತ್ತಿದೆ. ಶಾಲೆಗೆ ರಜೆ ಇದ್ದ ಅವಧಿಗಳಲ್ಲಿ ವಿದ್ಯಾರ್ಥಿಗಳು ಅನೇಕ ಗುಂಪುಗಳಾಗಿ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳನ್ನು ಸಂದರ್ಶಿಸಿ, ಅಲ್ಲಿ ಕೆಲಸಮಾಡಿದರು. [illegible] ಕಾಲೇಜುಗಳು [illegible] ಶಾಸನವನ್ನು ಧ್ಯೇಯವನ್ನಾಗಿಟ್ಟುಕೊಂಡ ಸಮಿತಿಗಳನ್ನು ರಚಿಸಿಕೊಂಡು, [illegible] ಹಳ್ಳಿಗಳ ಅಭಿವೃದ್ಧಿ ಕಾರ್ಯಗಳಿಗೆ ತಕ್ಕ ಮನಸ್ಸು ಮಾಡುತ್ತಿವೆ. ವಿದ್ಯಾರ್ಥಿಗಳು ಜನಹಿತಯೋಜನೆಗಳಲ್ಲಿ ಭಾಗವಹಿಸುವ ಬಗ್ಗೆ ಒಂದು ನಿಶ್ಚಿತ ಕಾರ್ಯಕ್ರಮವನ್ನು ಸಿದ್ಧಗೊಳಿಸಲಾಗಿದೆ. ಇದರಂತೆ ವಿದ್ಯಾರ್ಥಿಗಳು ಒಂದು ಕೇಂದ್ರದಲ್ಲಿ ಕನಿಷ್ಠ ಪಕ್ಷ ೧೫ ದಿನಗಳ ಕೆಲಸವನ್ನಾದರೂ ಮಾಡಬೇಕು. [illegible] ಅಧಿಕಾರಿಗಳ ಸಲಹೆಯಂತೆ ಜನಪದ ಅಭಿವೃದ್ಧಿ ಕೇಂದ್ರದ ಅಧಿಕಾರಿಗಳು ವಿದ್ಯಾರ್ಥಿಗಳ ಕೆಲಸದ ವಿಧಾನವನ್ನು ಗೊತ್ತು ಮಾಡುತ್ತಾರೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಊಟಕೊಳ್ಳಲಿಕ್ಕೂ ಸಂಚಾರಕ್ಕೂ ಯೋಗ್ಯ ಸೌಕರ್ಯಗಳನ್ನು ಕೇಂದ್ರದ ಅಧಿಕಾರಿಗಳೇ ಒದಗಿಸಿ ಕೊಡುವರು. ಈ ರಂಗದಲ್ಲಿ [illegible] ಕೆಲಸಕ್ಕೋಸ್ಕರ ಸಹಾಯಧನವನ್ನು ಕೊಡಲು ಅನುಕೂಲವುಂಟಾಗಬೇಕೆಂದು ಭಾರತ ಸರಕಾರ ವಿಚಾರಿಸುತ್ತಿದೆ.

❖

[illegible] ಮೇಲೆ ವಿವರಿಸಿದ ಪ್ರತಿಯೊಂದೂ ಅಭಿವೃದ್ಧಿ ಕಾರ್ಯಗಳಲ್ಲಿ ನೆರವಾಗಬಲ್ಲವು. ಇದಲ್ಲದೆ ಸ್ತ್ರೀಯರು ಅತ್ಯಂತ ದಕ್ಷತೆಯಿಂದ [illegible]

[illegible] ಹಳ್ಳಿ ಕಚೇರಿ ಕಡಿಮೆ ಮಾಡಿ, ಹಣವನ್ನು ಉಳಿಸಿ, ಸರಕಾರದ ಜನಹಿತ ಯೋಜನೆಗಳಿಗೆ ಬಂಡವಾಳ ಕೂಡಿಸುವ ವಿಚಾರವನ್ನು ಪ್ರಚಾರಮಾಡುತ್ತಿವೆ. [illegible]

ಇನ್ನು [illegible] ಭಾರತದ [illegible] ಸಾಮಾಜಿಕ ಕಲ್ಯಾಣ ಮಂಡಳಿಯನ್ನು [illegible]. ಸ್ವಯಂಪ್ರೇರಕರಿಂದ [illegible] ಮಾರ್ಗದರ್ಶನ [illegible] ಚಟುವಟಿಕೆ [illegible]

ಉದ್ಯಮ ಪಡೆದ ಬ್ಯಾಂಕಿಂಗ್ ಸ್ಥಾಪನೆ

[illegible]

ಸ್ಥಾಪಿತ ೧೯೨೫ [illegible]

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India

ನವಯುಗವು

[illegible]



ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆ

ಪಂಚವಾರ್ಷಿಕ ಯೋಜನೆಯ ಕುರಿತು ಹೇಳುವಾಗ ಸರಕಾರೀ ಹಾಗೂ ಖಾಸಗೀ ಕ್ಷೇತ್ರಗಳನ್ನು ಇದು ಒಳಗೊಂಡಿದೆಯೆಂದು ಯಾವಾಗಲೂ ನಾವು ಕೇಳುತ್ತೇವೆ. ಆದರೆ ಮೂರನೆಯದಾದ ಇನ್ನೊಂದು ಕ್ಷೇತ್ರವನ್ನೂ ಈ ಯೋಜನೆ ಒಳಗೊಂಡಿರುತ್ತದೆ; ಮತ್ತು ಅಷ್ಟಾಗಿ ಜನರಲ್ಲಿ ಪ್ರಚಾರಗೊಂಡಿರದಿದ್ದರೂ ಈ ಕ್ಷೇತ್ರದಲ್ಲಿ ಕಂಡು ಬರುವ ಚಟುವಟಿಕೆಯೇ ಪಂಚವಾರ್ಷಿಕ ಯೋಜನೆಯ ಯಶಸ್ಸನ್ನು ನಿರ್ಧರಿಸಬಲ್ಲುದು. ಸ್ವಯಂಪ್ರೇರಣೆಯಿಂದ ಸಾರ್ವಜನಿಕರು ಸರಕಾರದೊಡನೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ನೆರವಾಗಬಲ್ಲ ವಿಧಾನವೇ ಈ ಮೂರನೇ ಕ್ಷೇತ್ರದ ತಿರುಳೆನ್ನಬಹುದು.

ಪ್ರಜಾಪ್ರಭುತ್ವ ಪದ್ಧತಿಯಂತೆ ಸಿದ್ಧಪಡಿಸಿದ ಯೋಜನೆಯ ಸರ್ವಸ್ವವೂ ಸಾರ್ವಜನಿಕ ಸಹಕಾರವನ್ನೆ ಬಲವಾಗಿ ಅವಲಂಬಿಸಿರುತ್ತದೆ. ಈ ಯೋಜನೆಯು ಭಾರತೀಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತಗೊಳಿಸಲು ನೋಡುವುದರಿಂದ, ಸರಕಾರದ ಪ್ರಯತ್ನಕ್ಕೆ ಸಾರ್ವಜನಿಕರು ನೀಡುವ ಸಹಕಾರವೇ ಯೋಜನೆಯ ಸಿದ್ಧಿಯನ್ನು ನಿರ್ಧರಿಸುವ ಮಾನದಂಡವಾಗುತ್ತದೆ. ಈ ಸಹಕಾರವು ಸಾಮಾನ್ಯ ರೀತಿ ಹಾಗೂ ನಿಶ್ಚಿತ ಸ್ವರೂಪವುಳ್ಳದ್ದೆಂದು ಎರಡು ವಿಧವಾಗಿರಬಹುದು. ಸಾಮಾನ್ಯ ರೀತಿಯ ಸಹಕಾರವೆಂದರೆ, ಜನರಲ್ಲಿ ಪಂಚವಾರ್ಷಿಕ ಯೋಜನೆಯ ಬಗೆ ಅಭಿರುಚಿ ಮತ್ತು ಆಸ್ಥೆಗಳು ಹುಟ್ಟಿಕೊಳ್ಳುವಂತೆ ತಿಳಿದವರು ಪ್ರಯತ್ನಿಸುವುದು; ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಸಂಪನ್ನವಾಗುವ ಈ ಯೋಜನೆಯ ಮಾಹಾತ್ಮ್ಯವನ್ನು ಹಳ್ಳಿಯ ಬೋರೇಗೌಡನವರೆಗೂ ತಿಳಿಯ ಹೇಳುವುದು; ಮತ್ತು ಬಂಡವಾಳ ಶೇಖರಣೆಗೆ ಅನುಕೂಲವಾಗುವಂತೆ ಸಾರ್ವಜನಿಕರು ತಮ್ಮ ಅನಾವಶ್ಯಕವಾದ ಖರ್ಚುವೆಚ್ಚಗಳನ್ನು ನಿಲ್ಲಿಸಿ, ಉಳಿತಾಯವನ್ನು ಹೆಚ್ಚಿಸುವುದು–ಇತ್ಯಾದಿಯಾಗಿರುತ್ತದೆ. ಹೀಗೆ ನಮ್ಮ ರಾಷ್ಟ್ರದ ಪುನಃ ನಿರ್ಮಾಣ ಕಾರ್ಯಕ್ಕೋಸ್ಕರ ತ್ಯಾಗವನ್ನು ಮಾಡಲು ಜನತೆಯನ್ನು ಪ್ರೋತ್ಸಾಹಿಸುವುದು ತೀರ ಸಾಮಾನ್ಯ– ಆದರೆ ಅತ್ಯಂತ ಮಹತ್ವದ— ವಿಷಯ.

❖

ಇದಲ್ಲದೆ ಸಾರ್ವಜನಿಕರು ನಿಶ್ಚಿತ ರೂಪದಲ್ಲಿ ಸಹಕಾರವನ್ನು ಕೊಡಬಲ್ಲ ಕಾರ್ಯ ವಿಧಾನವನ್ನೂ ಪಂಚ ವಾರ್ಷಿಕ ಯೋಜನೆಯು ಒಳಗೊಂಡಿರುತ್ತದೆ- ಸ್ವಯಂ ಪ್ರೇರಣೆಯಿಂದ ಸಾರ್ವಜನಿಕರು ಈ ಕಾರ್ಯಗಳಲ್ಲಿ ಭಾಗ ವಹಿಸುವುದರಿಂದ ಯೋಜನೆಗೆ ತಗಲುವ ವೆಚ್ಚವನ್ನು ಇಳಿಸಬಹುದಾಗಿದೆ; ಮತ್ತು ಉಳಿದ ಜನರ ಮುಂದೆ ಒಂದು ಉತ್ತಮ ಆದರ್ಶವನ್ನು ಇಡಬಹುದಾಗಿದೆ. ಸ್ಥೂಲವಾಗಿ ನಿಶ್ಚಿತ ರೂಪದ ಕಾರ್ಯ ವಿಧಾನಗಳು ಹೀಗಿವೆ–

ಸಾರ್ವಜನಿಕರ ಸಹಕಾರ ಪಡೆಯಲು ಒದಗಿಸಲಾದ ಅನುಕೂಲತೆಗಳು.

(೧) ಜನಪದ ಅಭಿವೃದ್ಧಿ ಕೇಂದ್ರಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ.

(೨) ಸ್ಥಳೀಯ ಅಭಿವೃದ್ಧಿ ಕೆಲಸಗಳು

(೩) ಸ್ವಯಂಪ್ರೇರಿತ ಸಂಘಸಂಸ್ಥೆಗಳಿಂದ ಯೋಗ್ಯ ಕೆಲಸ ಕೈಗೂಡುವಂತೆ ಅವುಗಳನ್ನು ಪ್ರೋತ್ಸಾಹಿಸುವುದು.

(೪) ತರುಣ ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸುವಂತೆ ನೋಡಿಕೊಳ್ಳುವುದು;

(೫) ವಿಶೇಷ ರೂಪದಲ್ಲಿ ಮಹಿಳೆಯರು ನೀಡಬಹುದಾದ ಸಹಾಯ.

ಮೇಲಿನ ಐದೂ ಬಗೆಯ ಸಾರ್ವಜನಿಕ ಸಹಕಾರಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವಂತೆ ಯೋಜನಾ ಆಯೋಗವು ತಕ್ಕ ವ್ಯವಸ್ಥೆಯನ್ನು ಮಾಡಿರುತ್ತದೆ. ಜನಪದ ಅಭಿವೃದ್ಧಿ ಕೇಂದ್ರ ಹಾಗೂ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ಕೋಸ್ಕರ ೧೧೧ ಕೋಟಿ ರೂಪಾಯಿಗಳನ್ನೂ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೋಸ್ಕರ ೧೫ ಕೋಟಿ ರೂಪಾಯಿಗಳನ್ನೂ ಸ್ವಯಂಪ್ರೇರಿತ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ೪ ಕೋಟಿ ರೂಪಾಯಿಗಳನ್ನೂ ವಿದ್ಯಾರ್ಥಿ ಹಾಗೂ ತರುಣರ ಸಹಕಾರವನ್ನು ಗಳಿಸಲು ಒಂದು ಕೋಟಿ ರೂಪಾಯಿಯನ್ನೂ ಯೋಜನಾ ಆಯೋಗ ಸಹಾಯ ಧನವಾಗಿ ಕೊಡಲು ನಿಗದಿ ಮಾಡಿರುತ್ತದೆ ಈ ಎಲ್ಲ ಕೆಲಸಗಳಲ್ಲೂ ಮಹಿಳೆಯರ ಸಾಮಾನ್ಯ ಸಹಕಾರವನ್ನು ಸ್ವಾಗತಿಸುವರಲ್ಲದೆ ಈಚೆಗೆ ಯೋಜನೆಯ ಆರ್ಥಿಕ ಭಾರವನ್ನು ಹಗುರಗೊಳಿಸುವುದಕ್ಕೋಸ್ಕರ ಉಳಿತಾಯ ಪ್ರವೃತ್ತಿಗೆ ಮಹಿಳೆಯರು ಪ್ರಚೋದನೆ ಕೊಡಬೇಕೆಂದು ಚಳುವಳಿ ತೊಡಗಿರುತ್ತದೆ

❖

ಉಪರೋಕ್ತ ಕಾರ್ಯವಿಧಾನಗಳೆಲ್ಲವೂ ಈಗ ಸಾಂಗವಾಗಿ ನಡೆಯುತ್ತಿವೆ. ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವಿಸ್ತಾರಣೆ ಮತ್ತು ಜನಪದ ಅಭಿವೃದ್ಧಿ ಯೋಜನೆಯನ್ವಯ ೧೨೦೦ ಗುಂಪುಗಳಲ್ಲಿ ಹಂಚಿದ ಒಂದು ಲಕ್ಷ ಇಪ್ಪತ್ತು ಸಾವಿರ ಹಳ್ಳಿಗಳು ಹೊಸ ಸ್ವರೂಪ ಧಾರಣ ಮಾಡಲಿವೆ. ಅಖಿಲ ಭಾರತದ ಜನಸಂಖ್ಯೆಯ ನಾಲ್ಕರಲ್ಲಿ ಒಂದಂಶ ಜನರು ಈ ಅವಧಿಯಲ್ಲಿ ಹೊಸ ಬದುಕಿನ ಪರಿಮಳವನ್ನು ಆಘ್ರಾಣಿಸುವರು!

ಜನಪದ ಅಭಿವೃದ್ಧಿ ಯೋಜನೆಗಳನ್ನು ಕಳೆದ ವರ್ಷ ಅಕ್ಟೋಬರ ಮಾಸದ ಎರಡನೇ ದಿನಾಂಕ ಮಹಾತ್ಮಾ ಗಾಂಧೀಯವರ ಪುಣ್ಯ ಸ್ಮೃತಿಯೊಂದಿಗೆ ಪ್ರಾರಂಭಿಸಲಾಯಿತು. ಮೊದಲಿಗೆ ೫೫ ಕೇಂದ್ರಗಳನ್ನೂ ಹಿಂದಿನಿಂದ ಮರಳಿ ೫೫ ಕೇಂದ್ರಗಳನ್ನೂ ಈ ಯೋಜನೆಗೆ ಗುರಿಪಡಿಸಿದರು. ಹೀಗಾಗಿ ೨೫೦೦೦ ಹಳ್ಳಿಗಳ ಎರಡು ಕೋಟಿ ಜನತೆಯು ಹೊಸ ಯೋಜನೆಯ ಲಾಭವನ್ನು ಪಡೆಯುವಂತಾಯಿತು. ಇದಲ್ಲದೆ ಈ ವರ್ಷ ಅಕ್ಟೋಬರ ಎರಡನೇ ದಿನಾಂಕ ೨೦೦ ಕೇಂದ್ರಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯಂತೆ ಕೆಲಸಮಾಡಲು ಯೋಜನಾ ಆಯೋಗ ನಿರ್ಧರಿಸಿರುತ್ತದೆ. ಸುಮಾರು ೨೦ ಸಾವಿರ ಹಳ್ಳಿಗಳ ೧೩೨ ಲಕ್ಷ ಜನರಿಗೆ ಇದರಿಂದ ಪ್ರಯೋಜನ ದೊರೆಯುವ ಅಂದಾಜಿದೆ. ಹೀಗೆ ಮುಂದಿನ ಅಕ್ಟೋಬರದೊಳಗಾಗಿ ೪೪ ಸಾವಿರ ಹಳ್ಳಿಗಳ ೩೩೦ ಲಕ್ಷ ಜನರಿಗೆ ಹೊಸ ವಾತಾವರಣದ, ಹೊಸ ಬೆಳಕಿನ ದರ್ಶನವಾಗಲಿದೆ.

ಆದರೆ ನಮ್ಮ ದೇಶದಲ್ಲಿ ಐದೂವರೆ ಲಕ್ಷ ಹಳ್ಳಿಗಳು ಇವೆಯೆಂದೂ ಈ ಹಳ್ಳಿಗಳಲ್ಲಿ ೨೭ ಕೋಟಿ ಜನ ರೈತರು ಹಾಗೂ ಬೇರೆ ಪ್ರಜೆಗಳು ನೆಲಸಿದ್ದಾರೆಂದೂ ಸ್ಮರಿಸಿದರೆ ನಾವು ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಹಾಗೆಂದು ಜನತೆಯಲ್ಲಿ ನವ್ಯಸ್ಫೂರ್ತಿಯನ್ನೂ ಚಟುವಟಿಕೆಯನ್ನೂ ಉಂಟುಮಾಡುವ ನಮ್ಮ ಪ್ರಾರಂಭಿಕ ಪ್ರಯತ್ನಗಳು ಯಶಸ್ಸನ್ನು ಸಂಪಾದಿಸುತ್ತಿರುವುದಕ್ಕೆ ಮತ್ತು ಸರಿಯಾದ ದಾರಿಯಲ್ಲಿ ನಾವು ಮುನ್ನಡೆಯುತ್ತಿರುವುದಕ್ಕೆ ಅಭಿಮಾನ ಹೊಂದಲಡ್ಡಿಯಿಲ್ಲ.

❖

ಜನಪದ ಅಭಿವೃದ್ಧಿ ಕೇಂದ್ರಗಳಲ್ಲಿ ಹೆಚ್ಚು ಕಡಿಮೆ ಹತ್ತು ತಿಂಗಳ ಕೆಲಸವು ಈಗ ನಡೆದಿರುತ್ತದೆ. ಇವುಗಳಲ್ಲಿ ಕಂಡು ಬಂದ ಪ್ರಗತಿಯ ಲೆಕ್ಕದಿಂದ, ಜನರು ಸರಕಾರದೊಡನೆ ಸಹಕರಿಸಲು ಸಿದ್ಧರಿದ್ದಾರೆಂಬ ಸಂಗತಿ ಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಕೆಲವೆಡೆಯಂತೂ ಸರಕಾರವು ನಿರೀಕ್ಷಿಸಿದುದಕ್ಕಿಂತಲೂ ಅಧಿಕ ಸಹಕಾರವನ್ನು ಆ ಕೇಂದ್ರಗಳ ಜನರು ಕೊಟ್ಟಿರುವರೆಂದು ತಿಳಿದಿದೆ. ಜನರು ತಂತಮ್ಮ ಪ್ರದೇಶಗಳಲ್ಲಿ ನೆರವೇರುವ ಅಭಿವೃದ್ಧಿ ಯೋಜನೆಗಳನ್ನು ಪರಕೀಯ ದೃಷ್ಟಿಯಿಂದ ನೋಡದೆ ಸ್ವಂತ ಮನೆಯನ್ನು ಕಟ್ಟಿಕೊಳ್ಳುವವರಂತೆಯೇ ಅಭಿಮಾನದಿಂದ ನೋಡುತಿದ್ದಾರೆ. ಇದು ಸರಕಾರಕ್ಕೆ ಸಹ ಸ್ಫೂರ್ತಿಯನ್ನುಂಟುಮಾಡಿದೆ. ಅನೇಕ ಕೇಂದ್ರಗಳಲ್ಲಿ ಜನರು ಸ್ವಯಂ ಪ್ರೇರಣೆಯಿಂದ ಪಂಚಾಯತುಗಳನ್ನು ರಚಿಸಿಕೊಂಡು ಅಥವಾ ಅಭಿವೃದ್ಧಿ ಯೋಜನೆಗಳ ಬಗ್ಗೆ ತಕ್ಕ ಕಾರ್ಯಕ್ರಮವನ್ನು ನಿರ್ಧರಿಸಲು ಸಮಿತಿಗಳನ್ನು ರಚಿಸಿಕೊಂಡು ಸರಕಾರದ ಹಣ ಪೋಲಾಗದಂತೆ ನೋಡಿಕೊಂಡಿರುವರು. ಹಳ್ಳಿಯ ಜನತೆಯ ಪ್ರಯತ್ನಗಳಲ್ಲಿ ಅಭಿವೃದ್ಧಿ ಕೇಂದ್ರದ ಸರಕಾರೀ ಅಧಿಕಾರಿಗಳು ಅಗತ್ಯವಿರುವ ಎಲ್ಲಾ ತರದ ಮಾಹಿತಿ ಮತ್ತು ಸಲಹೆಯನ್ನು ಕೊಡುತಿದ್ದಾರೆ. ಇದರಿಂದ ಹಳ್ಳಿಯ ಜನರ ಆಶೆ ಆಕಾಂಕ್ಷೆಗಳಿಗೆ ಸುಸಂಬದ್ಧ

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಾದ ವ್ಯವಹಾರ ಯೋಗ್ಯವಾದ ಮಾತನ್ನು ಕೊಡಲು ಸಾಧ್ಯವಾಯಿತು. ಲಕ್ಷಾಂತರ ಸ್ವಯಂಸೇವಕರು ಉತ್ಸಾಹದಿಂದ ಮಾರ್ಗರಚನೆಗೈದಿರುವರು; ಕೆರೆ ಕಾಲುವೆಗಳನ್ನು ತೋಡಿರುವರು; ಶಾಲೆಗಳನ್ನು ಕಟ್ಟಿರುವರು; ಆಸ್ಪತ್ರೆಗಳ ದುರಸ್ತಿ ಹಾಗೂ ಆರೋಗ್ಯರಕ್ಷಣೆಗೆ ಪೋಷಕವಾಗಬಲ್ಲ ಬೇರೆ ಕೆಲಸಗಳಲ್ಲಿ ನಿರತರಾಗಿರುವರು; ಹೊಲ ಸಾಗುವಳಿಗೆ ಸಹ ಕೈಯಿಕ್ಕಿರುವರು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮಲೇರಿಯಾ ಮುಂತಾದ ರುಜಿನದ ಹಾವಳಿಯನ್ನು ಪ್ರತಿಬಂಧಿಸಲೂ ಜನರು ಸಾಹಸ ಮಾಡಿರುವರು. ಹೀಗೆ ಸ್ವಂತ ಕಲ್ಯಾಣಕಾಂಕ್ಷಿಗಳಾಗಿ ಹಳ್ಳಿಯ ಜನರು ತೋರಿಸಿದ ಚೈತನ್ಯ ಹಾಗೂ ಲವಲವಿಕೆ ಎಲ್ಲರನ್ನೂ ಚಕಿತಗೊಳಿಸಿದೆ; ಮತ್ತು ಇದು ವರೆಗೆ ಮೂಕ ಪ್ರೇಕ್ಷಕರಾಗಿ ಉಳಿದಿದ್ದ ನೆರೆಹೊರೆಯ ಹಳ್ಳಿಗರೆಲ್ಲ ಕಾರ್ಯೋತ್ಸಾಹವನ್ನು ಹೊಡೆದೆಬ್ಬಿಸಿದೆ.

❖

ಪ್ರಧಾನಿ ನೆಹರೂರವರು ಸಮಾಜದ ಸಾರ್ವಜನಿಕ ಹಿತವನ್ನು ಧ್ಯೇಯವಾಗಿಟ್ಟುಕೊಂಡಿರುವ ಈ ಕೇಂದ್ರಗಳ ಉದ್ಘಾಟನೆಯನ್ನು ಮಾಡುವಾಗ ಈ ಯೋಜನೆಗಳ ಪರಿಣಾಮ ಮಹತ್ವವನ್ನು ಕುರಿತು ಹೇಳಿದ ಮಾತುಗಳು ಅಕ್ಷರಶಃ ಸತ್ಯವಾಗಿವೆ—"ಈ ಕೇಂದ್ರಗಳ ಚಟುವಟಿಕೆಯಿಂದ ನಾವು ಭೌತಿಕ ಸುಖಸೌಕರ್ಯಗಳನ್ನು ಮಾತ್ರ ಪಡೆಯುವುದಲ್ಲ- ಇದಕ್ಕೂ ಮಿಗಿಲಾದ ಲಾಭವನ್ನೂ ಗಳಿಸುತ್ತೇವೆ. ಏಕೆಂದರೆ ಇವುಗಳು ವ್ಯಕ್ತಿಯನ್ನು ಸಮಷ್ಟಿಯ ಹಿತಕ್ಕೋಸ್ಕರ ಪರಿಶ್ರಮ ಗೈಯಲು ಪ್ರೇರಿಸುತ್ತವೆ; ಮತ್ತು ಈ ಯೋಜನೆಗಳಲ್ಲಿ ನಿರತನಾದವನು ಕೇವಲ ತನ್ನ ಹಳ್ಳಿಯ ಉದ್ಧಾರಕರ್ತನಾಗುವುದಷ್ಟೇ ಅಲ್ಲ ಇಡೀ ಸಮಾಜಕ್ಕೆ ಆದರ್ಶಪ್ರಾಯನಾಗುತ್ತಾನೆ." ಆದಿಭೌತಿಕ ಸ್ವರೂಪದ ಪರಿಣಾಮಕ್ಕಿಂತಲೂ ಮಾನಸಿಕವಾದ ಮತ್ತು ಅಧ್ಯಾತ್ಮ ಸ್ವರೂಪದ ಪ್ರಭಾವವನ್ನು ನಾವಿಲ್ಲಿ ಅವಶ್ಯ ಗಮನಿಸಬೇಕು. ಸಮಾಜ ವಿಕಾಸ ಯೋಜನೆಗಳ ಮೂಲಭೂತ ಧ್ಯೇಯವೇ ಇದಾಗಿರುವುದರಿಂದ ಸಾರ್ವಜನಿಕರು ಈ ಯೋಜನೆಯೊಡನೆ ಸಹಕರಿಸುವುದರಲ್ಲಿ ಹಿಂದುಳಿಯಬಾರದು. ನಮ್ಮ ಧ್ಯೇಯವು ಇನ್ನೂ ದೂರವಿದೆ, ನಿಜ. ಆದರೆ ಸ್ವತಂತ್ರಭಾರತದ ಪ್ರಜೆಗಳು ಈ ಯೋಜನೆಯ ಕಲ್ಪನೆಯನ್ನು ಚೆನ್ನಾಗಿಯೇ ಗ್ರಹಿಸಿಕೊಂಡಿರುವುದನ್ನು ಕಂಡರೆ ನಮ್ಮದು ಶುಭಾರಂಭವೆನ್ನಬೇಕು.

ಈ ಯೋಜನೆಗಳಿಂದ-ಮುಖ್ಯವಾಗಿ ರಾಷ್ಟ್ರೀಯ ವಿಸ್ತರಣಾ ಕಾರ್ಯದಿಂದ-ಕೈಗೂಡುವ ಬೇರೊಂದು ಪ್ರಾಮುಖ್ಯ ಸಂಗತಿಯೆಂದರೆ -ಸಾವಿರಾರು ಮಂದಿಗೆ ಇವುಗಳಿಂದ ಉದ್ಯೋಗ ದೊರೆಯುತ್ತದೆ. ನುರಿತ ಹಾಗೂ ಸಾಮಾನ್ಯ ಜ್ಞಾನವುಳ್ಳ ಸುಮಾರು ೮೩ ಸಾವಿರ ಕೆಲಸಗಾರರು ಸರಕಾರಕ್ಕೆ ಯೋಜನೆಯನ್ನು ಪ್ರಚಾರ ಮಾಡಲೂ, ಕಾರ್ಯರೂಪಕ್ಕೆ ಇಳಿಸಲೂ ಬೇಕಾಗಬಹುದು. ಇದರ ಇಮ್ಮಡಿಯಷ್ಟು ಸಾಮಾನ್ಯ ಕೆಲಸಗಾರರ ಅವಶ್ಯಕತೆಯುಂಟು. ಹೀಗೆ ಪ್ರತ್ಯಕ್ಷವಾಗಿ ಉದ್ಯೋಗ ಶೀಲತೆಯನ್ನು ಯೋಜನೆಯು ಪ್ರೋತ್ಸಾಹಿಸುವುದಲ್ಲದೆ-ಯೋಜನೆಯು ಕಾರ್ಯರೂಪಕ್ಕೆ ಇಳಿಯುವ ಪ್ರದೇಶಗಳೆಲ್ಲಲ್ಲಾ ನಿರುದ್ಯೋಗಿಗಳನ್ನು ಅಥವಾ ಪೂರ್ಣೋದ್ಯೋಗವಿಲ್ಲದವರನ್ನು ದುಡಿತಕ್ಕೆ ಹಚ್ಚಲಿಕ್ಕೂ ಇದು ಉದ್ದೇಶಿಸಿದೆ. ಉದ್ಯೋಗದ ಅನುಕೂಲತೆಗಳನ್ನು ಹೆಚ್ಚಿಸಿಕೊಡುವುದೇ ನಿರುದ್ಯೋಗ ನಿವಾರಣೆಯ ಉಪಾಯವೆಂದು ಎಲ್ಲರಿಗೂ ಗೊತ್ತಿದೆ.

❖

ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಯೋಜನಾ ಆಯೋಗ ಉದ್ದೇಶಿಸಿದುದರಿಂದ ಸ್ವಲ್ಪ ಮಟ್ಟಿನ ಉತ್ಸಾಹವಿದ್ದ ಪ್ರತಿಯೊಂದೂ ಹಳ್ಳಿಯೂ ತನ್ನಿಂದ ತಾನೆ ಒಂದು ಅಭಿವೃದ್ಧಿ ಕೇಂದ್ರವಾಗುವ ಸೌಲಭ್ಯ ದೊರೆತಿದೆ. ಪಂಚವಾರ್ಷಿಕ ಯೋಜನೆಯ ಕುರಿತು ಜನಸಾಮಾನ್ಯರಲ್ಲಿ ಉತ್ಸಾಹವನ್ನು ಉಂಟುಮಾಡುವುದಕ್ಕೂ ಸ್ಥಳೀಯ ಸಾಧನ ಸಲಕರಣೆಗಳ ಪೂರ್ಣ ಪ್ರಯೋಜನವನ್ನು ಪಡೆಯುವುದಕ್ಕೂ ಈ ಕಾರ್ಯವಿಧಾನ ನೆರವಾಗುವ ಭರವಸೆಯುಂಟು. ಸುಮಾರು ೨೦ ಸಾವಿರ ರೂಪಾಯಿಯೊಳಗೆನೇ ಮುಗಿಯುವ ಮತ್ತು ಹಳ್ಳಿಯ ಜೀವನವನ್ನು ಸುಧಾರಿಸುವ ಯೋಜನೆಗಳನ್ನು ಅಲ್ಲಿಯ ಜನರು ತಕ್ಕ ವಿವರಗಳೊಂದಿಗೆ ಒಪ್ಪಿಸಿದರೆ, ಅದನ್ನು ಸರಕಾರವೂ ಯೋಜನಾ ಆಯೋಗವೂ ಪರಿಶೀಲಿಸಿ, ಯೋಗ್ಯ ಕಂಡವುಗಳಿಗೆ ಹತ್ತು ಸಾವಿರ ರೂಪಾಯಿಗಳಿಗೆ ಮೀರದಷ್ಟು ಸಹಾಯಧನ ಕೊಡುವುದು. ಈಗಾಗಲೇ ಯೋಜನಾ ಆಯೋಗ ಹಾಗೂ ರಾಜ್ಯ ಸರಕಾರಗಳ ಬಳಿಗೆ ನೂರಾರು ಸ್ಥಳೀಯ ಅಭಿವೃದ್ಧಿ ಯೋಜನೆಗಳು ಬಂದಿರುತ್ತವೆ. ಸ್ವಯಂಪ್ರೇರಿತ ಸಂಘಸಂಸ್ಥೆಗಳೂ ಜನರೇ ರಚಿಸಿಕೊಂಡ ಸಮಿತಿಗಳೂ ಈ ಯೋಜನೆಗಳನ್ನು ಮಂಡಿಸಿದ್ದು, ಅವುಗಳಲ್ಲಿ ಹೆಚ್ಚಿನವು ಕಾರ್ಯಾನ್ವಿತಗೊಳ್ಳುತ್ತಿವೆ. ಯೋಜನಾ ಆಯೋಗವು ಸರ್ವಪ್ರಥಮವಾಗಿ ಪುರಸ್ಕರಿಸಿದ ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು ಪ್ರಜಾ ಸಮಾಜವಾದೀ ಪಕ್ಷದ ಧುರೀಣರಾದ ಶ್ರೀ. ಅಶೋಕ ಮೆಹತಾ ಮಂಡಿಸಿದ್ದರು. ಮುಂಬಯಿ ರಾಜ್ಯದ ಠಾಣ ಜಿಲ್ಲೆಯ ಮೂರು ಹಳ್ಳಿಗಳ ಅಭಿವೃದ್ಧಿಗೆ ಇದು ಸಂಬಂಧಿಸಿರುತ್ತದೆ.

ತರುಣರೂ ವಿದ್ಯಾರ್ಥಿಗಳೂ ಸಹಕರಿಸಬಹುದಾದ ಕಾರ್ಯವಿಧಾನವೂ ಈ ಬೇಸಿಗೆಯಿಂದ ಯೋಗ್ಯ ರೀತಿಯಲ್ಲಿ ನಿರ್ವಹಿಸಲ್ಪಡುತ್ತಿದೆ. ಶಾಲೆಗೆ ರಜೆ ಇದ್ದ ಅವಧಿಗಳಲ್ಲಿ ವಿದ್ಯಾರ್ಥಿಗಳು ಅನೇಕ ಗುಂಪುಗಳಾಗಿ ಜನಪದ ಅಭಿವೃದ್ಧಿ ಯೋಜನಾ ಕೇಂದ್ರಗಳನ್ನು ಸಂದರ್ಶಿಸಿ, ಅಲ್ಲಿ ಕೆಲಸಮಾಡಿದರು. ಕೆಲವು ಶಾಲಾ ಕಾಲೇಜುಗಳು ತಂತಮ್ಮಲ್ಲಿಯೇ ಸಮಾಜ ವಿಕಾಸವನ್ನು ಧ್ಯೇಯವಾಗಿಟ್ಟುಕೊಂಡ ಸಮಿತಿಗಳನ್ನು ರಚಿಸಿಕೊಂಡು, ಆಸುಪಾಸಿನ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳತ್ತ ಮನಸ್ಸು ಹಾಕುತ್ತಿವೆ. ವಿದ್ಯಾರ್ಥಿಗಳು ಜನಹಿತಯೋಜನೆಗಳಲ್ಲಿ ಭಾಗವಹಿಸುವ ಬಗ್ಗೆ ಒಂದು ನಿಶ್ಚಿತ ಕಾರ್ಯಕ್ರಮವನ್ನೂ ಸಿದ್ಧಗೊಳಿಸಲಾಗಿದೆ, ಇದರಂತೆ ವಿದ್ಯಾರ್ಥಿಗಳು ಒಂದು ಕೇಂದ್ರದಲ್ಲಿ ಕನಿಷ್ಟ ಪಕ್ಷ ೧೫ ದಿನಗಳ ಕೆಲಸವನ್ನಾದರೂ ಮಾಡಬೇಕು. ಅವರವರ ಶಾಲಾಧಿಕಾರಿಗಳ ಸಲಹೆಯಂತೆ ಜನಪದ ಅಭಿವೃದ್ಧಿ ಕೇಂದ್ರದ ಅಧಿಕಾರಿಗಳು ವಿದ್ಯಾರ್ಥಿಗಳ ಕೆಲಸದ ವಿಧಾನವನ್ನು ಗೊತ್ತು ಮಾಡುತ್ತಾರೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಉಳಕೊಳ್ಳಲಿಕ್ಕೂ ಸಂಚಾರಕ್ಕೂ ಯೋಗ್ಯ ಸೌಕರ್ಯಗಳನ್ನು ಕೇಂದ್ರದ ಅಧಿಕಾರಿಗಳೇ ಒದಗಿಸಿ ಕೊಡುವರು. ಈ ಹುಡುಗ-ಹುಡುಗಿಯರ ಊಟ ಉಪಚಾರಕ್ಕೋಸ್ಕರ ಸಹಾಯ ಧನವನ್ನು ಕೊಡಲು ಅನುಕೂಲವುಂಟೋ ಹೇಗೆಂದು ಭಾರತ ಸರಕಾರ ವಿಚಾರಿಸುತ್ತಿದೆ.

❖

ಮಹಿಳೆಯರು ಮೇಲೆ ವಿವರಿಸಿದ ಪ್ರತಿಯೊಂದೂ ಅಭಿವೃದ್ಧಿ ಕಾರ್ಯಗಳಲ್ಲಿ ನೆರವಾಗಬಹುದು. ಇದಲ್ಲದೆ ಸ್ತ್ರೀಯರು ಅತ್ಯಂತ ದಕ್ಷತೆಯಿಂದ ನಿರ್ವಹಿಸಬಹುದಾದ ಬೇರೊಂದು ಕಾರ್ಯಕ್ರಮವೂ ಇದೆ. ಉಳಿತಾಯದ ಚಳುವಳಿಯೇ ಈ ಕಾರ್ಯಕ್ರಮ. ಪ್ರಾಯೋಗಿಕ ರೂಪದಲ್ಲಿ ಈ ವರ್ಷದ ಮಾರ್ಚ ಮಾಸದಲ್ಲಿ ಒಂದು ಉಳಿತಾಯದ ವಾರವನ್ನು ಆಚರಿಸಲಾಯಿತು. ಸುಶಿಕ್ಷಿತ ಮಹಿಳೆಯರು ಈ ಸಪ್ತಾಹದಲ್ಲಿ ಉತ್ಸಾಹದಿಂದ ಭಾಗವಹಿಸಿದರು ಪರಿಣಾಮವಾಗಿ ಸುಮಾರು ೪೨ ಲಕ್ಷ ರೂಪಾಯಿಗಳ ಸಂಗ್ರಹವಾಯಿತು. ಈ ಪ್ರಗತಿಯಿಂದ ಉತ್ತೇಜಿತಗೊಂಡು, ಸರಕಾರವು ಒಂದು ನಿಶ್ಚಿತ ಯೋಜನೆಯನ್ನು ತಯಾರಿಸಿ, ಮಹಿಳೆಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಪೋಷಿಸುವ ಬಗ್ಗೆ ಚಳುವಳಿ ಆರಂಭಿಸಲು ನೋಡಿದೆ. ಸುಮಾರು ಒಂದು ನೂರು ಮಹಿಳಾ ಸಂಘಸಂಸ್ಥೆಗಳು ಸರಕಾರದೊಂದಿಗೆ ಸಹಕರಿಸಿ, ಸ್ತ್ರೀಯರಲ್ಲಿ ಕರ್ಚು ಕಡಿಮೆಮಾಡಿ, ಹಣವನ್ನು ಉಳಿಸಿ, ಸರಕಾರದ ಜನಹಿತ ಯೋಜನೆಗಳಿಗೆ ಬಂಡವಾಳ ಕೂಡಿಸುವ ವಿಚಾರವನ್ನು ಪ್ರಚಾರಮಾಡುತ್ತಿವೆ. ಗೃಹಕೃತ್ಯದ ಕೆಲಸಗಳನ್ನು ನಿರ್ವಹಿಸುವ ಹೆಂಗಸರಿಗೆ ಮನೆತನದ ಕರ್ಚನ್ನು ಹೇಗೆ ಕಡಿಮೆಮಾಡಬಹುದೆಂದು ತಿಳಿದಿರುತ್ತದೆ. ರಾಷ್ಟ್ರದ ಈಗಿನ ದುರವಸ್ಥೆಯನ್ನು ಪರಿಹರಿಸುವುದಕ್ಕೋಸ್ಕರ ಅಡಿಗೆ ಮನೆಯೊಳಗಿಂದಲೇ ಗೃಹಿಣಿಯು ನೆರವಾಗಬಲ್ಲ ರೀತಿ ಇದೆಂಬುದರಿಂದ- ಈ ಚಳುವಳಿಯು ವೈಶಿಷ್ಟ್ಯಪೂರ್ಣವಾಗಿರುತ್ತದೆ.

ಇನ್ನು ಕೊನೆಯದಾಗಿ ಭಾರತ ಸರಕಾರದವರ ಸಾಮಾಜಿಕ ಕಲ್ಯಾಣ ಮಂಡಳಿಯೊಂದನ್ನು ಈಚೆಗೆ ರಚಿಸಿರುವರು. ಸ್ವಯಂಪ್ರೇರಣೆಯಿಂದ ಸಾಮಾಜಿಕ ಹಿತ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡುವ ಸಂಘಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವ ಮತ್ತು ಅವುಗಳ ಚಟುವಟಿಕೆಯನ್ನು ಪಂಚವಾರ್ಷಿಕ ಯೋಜನೆಯ ಉದ್ದೇಶ ಸಾಧನೆಗೋಸ್ಕರ ಪರಿಷ್ಕರಿಸಿ ಅಳವಡಿಸಿಕೊಳ್ಳುವ ಹೊಣೆಗಾರಿಕೆಯನ್ನು ಈ ಮಂಡಳಿಯು ಹೊತ್ತಿದೆ. ಯೋಜನಾ ಆಯೋಗ ನಾಲ್ಕು ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತವನ್ನು ಈ ಕೆಲಸಕ್ಕೋಸ್ಕರ ನಿಗದಿ ಮಾಡಿರುವುದರಿಂದ ಈಗ ಹೇಗೋ ಹೇಗೋ ಕೆಲಸ ಸಾಗಿಸಿಕೊಂಡು ಹೋಗುವ ಸ್ವಯಂಸೇವಕರ ಸಾರ್ವಜನಿಕ ಹಿತದ ಸಂಘಸಂಸ್ಥೆಗಳು ಚೇತರಿಸಿಕೊಂಡು, ತಮ್ಮ ಧ್ಯೇಯ ಸಾಧನೆಯಲ್ಲಿ ಮುನ್ನಡೆ ಇಡುವಂತಾದೀತು. ಹೀಗೆ ಪಂಚಮುಖವಾದ, ಏಕೆ, ಬಹುಮುಖವೆಂದೇ ಹೇಳಬಹುದಾದ ಸೇವಾಕಾರ್ಯಗಳ ಮೂಲಕ ಜನತೆಯು ಸರಕಾರದೊಂದಿಗೆ ಸದಾ ಸಹಕರಿಸಿಕೊಂಡು ಹೋದರೆ ಪಂಚವಾರ್ಷಿಕ ಯೋಜನೆಯ ಉದ್ದೇಶ ಈಡೇರುವುದಷ್ಟೇ ಅಲ್ಲ ಭಾರತೀಯರ ದೈನ್ಯಾವಸ್ಥೆಯೂ ದೂರಗೊಂಡು ರಾಷ್ಟ್ರವು ಸಂಪತ್ಸಮೃದ್ಧವಾಗಬಲ್ಲದು. ಪ್ರತಿಯೊಬ್ಬ [illegible] ಸಾಧನೆಗೋಸ್ಕರ ಕರ್ತವ್ಯ ಭಾವನೆಯಿಂದ, ಸ್ವಯಂಪ್ರೇರಣೆಯಿಂದ ಪರಿಶ್ರಮ ಮಾಡುವನೆಂದು ಆಶಿಸೋಣ!

ನವಯುಗವು

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ಉತ್ತಮ ತರದ ಬ್ಯಾಂಕಿಂಗ್ ವ್ಯವಹಾರ

ನೀವು ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದರೆ ನಿಮಗದು ಅನೇಕ ವಿಧಗಳಿಂದ ಅನುಕೂಲವಾಗಬಹುದನ್ನು ಮನಗಾಣುವಿರಿ. ನೀವು ಲೇವಾದೇವಿಯನ್ನು ಚೆಕ್ ಮೂಲಕ ನಡೆಸುವ ಸೌಕರ್ಯವಿದೆ. ನಮ್ಮ ಸಿಬಂದಿಯು ಎಷ್ಟೊಂದು ಕ್ಷಿಪ್ರ ಮತ್ತು ಕ್ಲಪ್ತವಾಗಿದೆಯೆಂದರೆ ನೀವು ಒಂದರೆಡು ನಿಮಿಷಗಳಲ್ಲಿಯೇ ನಿಮ್ಮ ಹಣ ಕೊಡಬಹುದು ಯಾ ಚೆಕ್ ಮೂಲಕ ಪಡೆಯಬಹುದು. ಬಡ್ಡಿಯ ದರವಾದರೂ ನಿಮ್ಮ ಉಳಿತಾಯ ವೃದ್ಧಿಯಾಗಲು ಆಕರ್ಷಕವಾಗಿಯೇ ಇರುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಛೇರಿ: ಉಡುಪಿ ದ. ಭಾರತ.

THE CANARA INDUSTRIAL &
BANKING SYNDICTE LTD.,
Estd: 1925 H. O: UDIPI, S. India.

ಬಳ್ಳಾರಿಯ ಪ್ರಶ್ನೆಯನ್ನು ಪುನಃ ಎತ್ತುವಂತಿಲ್ಲ

ಅಲ್ಲಿ ಆಂಧ್ರರ ಬಹುಮತ ಇಲ್ಲವೆಂದು ಗೃಹಮಂತ್ರಿಗಳ ಸ್ಪಷ್ಟ ಅಭಿಪ್ರಾಯ

ಭಾಷಾರಾಜ್ಯದ ತತ್ವ

ಲೋಕಸಭೆಯ ಮುಂದೆ ಆಂಧ್ರ ರಾಜ್ಯ ನಿರ್ಮಾಣದ ವಿಧೇಯಕವು ಚರ್ಚೆಗೆ ಬಂದಿರುವುದನ್ನೇ ಇಷ್ಟರಲ್ಲೇ ಮಸೂದೆಯ ಕಲಮುವಾರು ಚರ್ಚೆ ಮುಗಿದು. ಅದು ಸ್ವೀಕಾರಗೊಂಡು, ರಾಜ್ಯ ಪರಿಷತ್ತಿನಲ್ಲಿ ಮಂಡಿಸಲ್ಪಡುವ ನಿರೀಕ್ಷೆ ಇದೆ. ಲೋಕ ಸಭೆಯಲ್ಲಿ ವಿಧೇಯಕದ ಕುರಿತು ಸಾಮಾನ್ಯ ಚರ್ಚೆಯು ನಡೆದಾಗ ದೇಶವನ್ನು ಭಾಷಾನುಗುಣ ರಾಜ್ಯಗಳಾಗಿ ಪುನರ್ಘಟಿಸುವ ತತ್ವದ ಪರವಾಗಿಯೂ ವಿರುದ್ಧವಾಗಿಯೂ ಸ್ವಾರಸ್ಯಪೂರ್ಣವಾದ ಭಾಷಣಗಳು ಕೇಳಿಬಂದವು. ಹಿಂದೆ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿಯೂ ಕೆಲವು ಕಾಲ ಅದರ ಅಧ್ಯಕ್ಷರಾಗಿಯೂ ಕೆಲಸ ಮಾಡಿದ ಈಗಿನ ಪ್ರಜಾ ಸಮಾಜವಾದೀ ಪಕ್ಷದ ಧುರೀಣ ಆಚಾರ್ಯ ಕೃಪಲಾನಿಯವರು ಭಾಷಾವಾರು ಪ್ರಾಂತರಚನೆಗಳ ತತ್ವವನ್ನೇ ಅತ್ಯುಗ್ರ ಮಾತುಗಳಲ್ಲಿ ಖಂಡಿಸಿದರು "ಭಾಷಾವಾರು ಪ್ರಾಂತದ ಭೂತವನ್ನು ಕಾಂಗ್ರೆಸಿಗರು ಯಾವುದೋ ಒಂದು ಕೆಟ್ಟ ಗಳಿಗೆಯಲ್ಲಿ ಎಬ್ಬಿಸಿದರು. ಈಗ ಭಾರತದ ಮೂಲಭೂತವಾದ ಐಕ್ಯಕ್ಕೆ ಭಂಗ ಬಾರದಂತೆ ಅದನ್ನು ತೃಪ್ತಿಪಡಿಸುವುದು ಅವಶ್ಯವೆನಿಸಿದೆ. ಜನರಿಗೆಲ್ಲ ಭಾಷಾವಾದದ ಉನ್ಮಾದ ಹಿಡಿದಿದೆ. ಇವರಿಗೆ ತಮ್ಮದೊಂದೇ ಭಾಷಾರಾಜ್ಯ ಕಣ್ಣಿಗೆ ಗೋಚರಿಸುತ್ತದೆ. ಆದರೆ ನಾಡಿನ ಪ್ರಗತಿಯಾಗಬೇಕಾದರೆ ಇಂಥ ಉನ್ಮಾದ ಮತ್ತು ಉದ್ವೇಗಗಳು ಪ್ರಯೋಜನಕ್ಕೆ ಬಾರವು". ಎಂದು ಕೃಪಲಾನಿಯರು ಹೇಳಿದರು. ಅವರು ಆಂಧ್ರರಾಜ್ಯ ವಿಧೇಯಕವನ್ನು ಸ್ವಾಗತಿಸಿದರೂ ಭಾಷಾವಾರು ಪ್ರಾಂತರಚನೆ ತತ್ವವನ್ನು ಸಂಪೂರ್ಣ ಖಂಡಿಸಿದರು. ಇದರಂತೆ ಇನ್ನೊಬ್ಬ ಸದಸ್ಯರು "ಭಾಷಾವಾರು ತತ್ವದಂತೆ ಪುನರ್ಘಟಿಸಿದ ರಾಜ್ಯಗಳಲ್ಲಿ ಆಂಧ್ರವೇ ಮೊದಲನೆಯದೂ ಕೊನೆಯದೂ ಆಗಲಿ" ಎಂದು ಹಾರೈಸಿದರು. ಕೃಪಲಾನಿಯವರ ಭಾಷಣಕ್ಕೆ ಕೇಂದ್ರ ಸರಕಾರದಲ್ಲಿ ಈ ಮುಂಚೆ ಮಂತ್ರಿಗಳಾಗಿದ್ದ ಶ್ರೀ ಎನ್. ವಿ. ಗಾಡಗೀಳರು ನೇರಾದ ಉತ್ತರವನ್ನು ಕೊಟ್ಟರು. ಭಾಷಾ ರಾಜ್ಯಗಳ ನಿರ್ಮಾಣ ತತ್ವವನ್ನು ಅವರು ಬಲವಾಗಿ ಪ್ರತಿಪಾದಿಸಿದರಲ್ಲದೆ, ಹೈದರಬಾದು ರಾಜ್ಯವನ್ನು ಒಡೆಯಲು ಚಳುವಳಿಯನ್ನು ಕೈಗೊಳ್ಳಬೇಕೆಂದೂ—ಅನ್ಯಥಾ ಭಾಷಾವಾರು ರಾಜ್ಯದ ಪ್ರಶ್ನೆಗೆ ಕಳೆ ಕೂಡುವುದಿಲ್ಲವೆಂದೂ ಹೇಳಿದರು.

ಕನ್ನಡಿಗರ ಒತ್ತಾಯ

ಇನ್ನೊಬ್ಬ ಸದಸ್ಯ ಹರೀಂದ್ರನಾಥ ಚಟರ್ಜಿಯವರು "ಭಾಷಾವಾರು ರಾಜ್ಯಗಳ ರಚನೆಯಿಂದ ದೇಶದ ವಿಭಜನೆಯಾಗುವುದೆಂದು ಆಕ್ಷೇಪಿಸುವುದಕ್ಕೆ ಅರ್ಥವಿಲ್ಲ. ಈ ವಿಭಜನೆಯು ವ್ಯರ್ಥವಾಗಿ ನಡೆಯದೆ-ಮುಂದೆ ಶತಮಾನಗಳವರೆಗೆ ಬಾಳಬಲ್ಲ ಐಕ್ಯವನ್ನೂ ಪ್ರಗತಿಯನ್ನೂ ಸಾಧಿಸುವುದಕ್ಕೋಸ್ಕರವಾಗಿಯೇ ಈಗಿನ ಪುನರ್ಘಟನೆ ನಡೆಯುತ್ತದೆ. ಸರಕಾರದ ಅನುಗ್ರಹದಿಂದ ಆಂಧ್ರ ರಾಜ್ಯದ ರಚನೆಯಾಗಿರುವುದಿಲ್ಲ-ಸರಕಾರದ ಕೈಯಿಂದ ಅದನ್ನು ಒತ್ತಾಯದಿಂದ ಕಿತ್ತುತೆಗೆದುಕೊಳ್ಳಲಾಗಿದೆ. ಬೇರೆ ಪ್ರಾಂತಗಳನ್ನು ದಯಪಾಲಿಸದಿದ್ದರೆ, ಆಗ ಅವನ್ನು ಸಹ ಸರಕಾರದ ಕೈಯಿಂದ ಕಸಿದುಕೊಳ್ಳಬೇಕಾಗುವುದು" ಎಂದು ತಿಳಿಸಿದರು. ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಲೋಕಸಭೆಯ ಕನ್ನಡ ಸದಸ್ಯರು ಮಾತನಾಡಿದರು. ತೆಲುಗರು ಬಳ್ಳಾರಿ ತಾಲೂಕಿನ ಪ್ರಶ್ನೆಯನ್ನು ಇನ್ನುಮುಂದೆ ಪ್ರಸ್ತಾಪಿಸಲೇ ಕೂಡದೆಂದು ಅವರು ಹೇಳಿದರು. ಈ ಮಾತನ್ನು ಉಪಗೃಹ ಮಂತ್ರಿಗಳಾದ ಶ್ರೀ. ಬಿ. ಎನ್. ದಾತಾರರು ಸಮರ್ಥಿಸಿದರು. ಆಂಧ್ರದ ವಿಷಯದಲ್ಲಿ ಕೇಂದ್ರವು ಮಲತಾಯಿಯ ವರ್ತನೆಯನ್ನು ಇಟ್ಟುಕೊಂಡಿಲ್ಲವೆಂದೂ ಅದು ಭದ್ರವಾದ ತಳಹದಿಯ ಮೇಲೆ ನಿಲ್ಲುವಂತೆ ಸಕಲಾನುಕೂಲತೆಗಳನ್ನು ಒದಗಿಸಲಾಗುವುದೆಂದೂ ಅವರು ಭರವಸೆ ನೀಡಿದರು. "ಆಂಧ್ರರಾಜ್ಯ ನಿರ್ಮಾಣದ ಪ್ರಶ್ನೆಯಲ್ಲಿ ನಾವು ಆಸ್ಥೆ ವಹಿಸಿದ್ದೇವೆ. ಏಕೆಂದರೆ ಇತರ ಭಾಷಾರಾಜ್ಯಗಳ ನಿರ್ಮಾಣಕ್ಕೆ ಇದು ಸಹಾಯಕವಾಗಿದೆ" ಎಂದವರು ತಮ್ಮ ಹಾಗೂ ಸರಕಾರದ ಪರವಾಗಿ ಹೇಳಿದರು. ಮಾತ್ರವಲ್ಲ "ಬಳ್ಳಾರಿ ಪ್ರಶ್ನೆಯನ್ನು ಪುನಃ ಕೆದಕಲು ಆಂಧ್ರರು ಪ್ರಯತ್ನಿಸಬಾರದು. ಸರಕಾರದ ನಿರ್ಣಯಗಳಿಗೆ ಕೊನೆಯೆಂಬುದಿರಬೇಕು. ಬಳ್ಳಾರಿ ಪ್ರದೇಶವೆಲ್ಲ ಕನ್ನಡದ್ದಾಗಿದೆ; ಅಲ್ಲದೆ ಬಳ್ಳಾರಿಯು ಈ ಮುಂಚೆ ಮೈಸೂರಿಗೇ ಸೇರಿದ್ದಿತು" ಎಂದು ದಾತಾರರು ಸ್ಪಷ್ಟೀಕರಿಸಿದರು. ಚರ್ಚೆಗೆ ಉತ್ತರ ಕೊಡುತ್ತಾ ಗೃಹಮಂತ್ರಿ ಡಾ। ಕಟಜೂ ಮಾತನಾಡುವಾಗ "ನ್ಯಾಯಮೂರ್ತಿ ಮಿಶ್ರಾರು ತಮ್ಮ ವರದಿಯಲ್ಲಿ ಬಳ್ಳಾರಿಯಲ್ಲಿ ಸಾರ್ವತ್ರಿಕ ಮತಗಣನೆಯನ್ನು ನಡೆಸಲು ಹೇಳಿಲ್ಲ" ಎಂದು ನುಡಿದರು. "ಬಳ್ಳಾರಿ ತಾಲೂಕಿನಲ್ಲಿ ೯೧೦೦೦ ಕನ್ನಡಿಗರು ಮತ್ತು ೫೫೬೦ ತೆಲುಗರಿರುವರೆಂದು ಈಚಿನ ಜನಗಣನೆ ಹೇಳುತ್ತದೆ. ತೆಲುಗು ಮಾತನಾಡುವವರು ಆ ತಾಲೂಕಿನ ನಿಜವಾದ ನಿವಾಸಿಗಳಲ್ಲಿ ಉದಾಹರಣೆಗೆ ಬಳ್ಳಾರಿ ಸೆರೆಮನೆಯಲ್ಲಿ ನಾಲ್ಕು ಸಾವಿರ ಕೈದಿಗಳು (ನಗು) ಮತ್ತು ದುಡಿಮೆಗಾಗಿ ಬಂದ ಬೇರೆ ಜನರು ಇದ್ದಾರೆ. ಉರ್ದು ಮಾತನಾಡುವ ೩೦೦೦೦ ಮುಸಲ್ಮಾನರು ಬೇರೆ ಇದ್ದಾರೆ- ಮುಸಲ್ಮಾನರೆಲ್ಲರೂ ಆಂಧ್ರ ಪಕ್ಷಪಾತಿಗಳೆಂದು ಇಟ್ಟುಕೊಂಡರೂ ಬಳ್ಳಾರಿಯು ಕನ್ನಡ ಪ್ರದೇಶವೆಂದು ಸ್ವಯಂ ವ್ಯಕ್ತವಾಗುತ್ತದೆ" ಎಂದು ಕಟಜೂ ಆಂಧ್ರರು ಬಳ್ಳಾರಿಯ ಮೇಲೆ ತಮಗೆ ಹಕ್ಕಿದೆಯೆನ್ನುವುದನ್ನು ನಿರಾಕರಿಸಿದರು.

ಬೋಧಪ್ರದಭಾಷಣ

ಕಟಜೂರವರ ಭಾಷಣವು ತುಂಬ ಬೋಧಪ್ರದವಾಗಿದ್ದಿತು "ಭಾಷಾವಾರ ಪ್ರಾಂತರಚನೆಯ ತತ್ವದ ಬಗ್ಗೆ ಚರ್ಚೆ ನಡೆದಾಗ ಕೆಲವು ಸದಸ್ಯರು ಸ್ವರ್ಗವನ್ನೂ ಸಕಲ ಕಲ್ಯಾಣವನ್ನೂ ಕೇವಲ ಭಾಷಾರಾಜ್ಯಗಳ ನಿರ್ಮಾಣವೊಂದರಿಂದಲೇ ಪಡೆಯಬಹುದೆಂಬಂತೆ ಮಾತನಾಡಿದರು. ಭಾಷಾ ಪ್ರಾಂತಗಳಾದರೆ ಆರ್ಥಿಕವೇ ಮುಂತಾದ ಬೇರೆ ಪ್ರಶ್ನೆಗಳು ತಂತಾನೆ ಪರಿಹರಿಸಲ್ಪಡುವುವೆಂದು ಅವರು ಭಾವಿಸಿರಬೇಕು. ಆದರೆ ಹಾಗಿರುವುದಿಲ್ಲ--ಮಧ್ಯ ಭಾರತ, ರಾಜಸ್ಥಾನ, ಸೌರಾಷ್ಟ್ರ ಇತ್ಯಾದಿ ರಾಜ್ಯಗಳಲ್ಲಿ ಭಾಷೆಯ ಬಗ್ಗೆ ಏನೊಂದೂ ತೊಂದರೆಯಿಲ್ಲ. ಆದರೂ ಜನರು ಕಷ್ಟ ನಷ್ಟಗಳಿಂದ ತತ್ತರಿಸಿ ಹೋಗಿರುವರು. ತಲೆತಲಾಂತರಗಳಿಂದ ಅವರು ಒಂದೇ ಭಾಷೆಯ ಚೌಕಟ್ಟಿನಲ್ಲಿದ್ದಂತೆ,-ದಾರುಣ ಕಷ್ಟಗಳಿಗೂ ತುತ್ತಾಗಿದ್ದಾರೆ. ಸದಸ್ಯರು ರಾಷ್ಟ್ರದ ಐಕ್ಯತೆಯನ್ನು ಕಾಯ್ದುಕೊಳ್ಳಲು ಪ್ರಯತ್ನಿಸುವುದನ್ನು ನೋಡಿ ನನಗೆ ಸಂತೋಷವಾಗಿದೆ- ಭಾಷೆಯನ್ನು ಒತ್ತಿ ಹೇಳುವ ಜನರು ದೇಶದಾದ್ಯಂತವೂ ಎಲ್ಲ ಕಡೆ ರಾಷ್ಟ್ರ ಭಾಷೆಯ ಪ್ರಚಾರವಾಗಬೇಕೆಂದೂ ಹೇಳಿದ್ದಾರೆ. ಬಂದ ಕೆಲವು ಆಂಧ್ರ ಸದಸ್ಯರು ರಾಯಲಸೀಮೆಯ ಜನರನ್ನು ದುರ್ಲಕ್ಷಿಸಲಾಗದೆಂದು ಆಶ್ವಾಸನ ಕೊಡುವುದವಶ್ಯವೆಂದೂ ಅದಕ್ಕೋಸ್ಕರ ವಿಧೇಯಕದಲ್ಲಿ ವಿಶೇಷ ಕಲಮುಗಳಿರಬೇಕೆಂದೂ ಸೂಚಿಸಿರುವರು. ಆಂಧ್ರರಾಜ್ಯ ನಿರ್ಮಾಣಮಾತ್ರದಿಂದಲೇ ಸಮಸ್ಯೆಗಳ ನಿವಾರಣೆಯಾಗಲಿಲ್ಲವೆಂಬುದಕ್ಕೆ ಇದೊಂದು ನಿದರ್ಶನ. ಹೊಸ ಭಾಷಾನುಗುಣ ರಾಜ್ಯರಚನೆ ಸುಲಭವಲ್ಲ- ರಾಜಧಾನಿ ಹೈಕೋರ್ಟು ಮುಂತಾದವುಗಳಂತೆ ಪ್ರತಿಯೊಂದು ಸಣ್ಣಪುಟ್ಟ ಪ್ರಶ್ನೆಯ ಬಗ್ಗೆಯೂ ಮತಭೇದವೆದ್ದು ಹೊಯ್‌ಕೈಯ್‌ಯಾಗುವುದು ಭಾಷಾಸಂಬಂಧದ ಕಡೆಗೆ ಮಾತ್ರ ಲಕ್ಷ್ಯ ಪೂರೈಸುವುದು ಸರಿಯಲ್ಲ– ಈಗ ನಮಗೆ ಸ್ವಾತಂತ್ರ್ಯ ಬಂದಿರುತ್ತವೆ. ಈ ಜ್ಯೋತಿಯನ್ನು ಮನೆಮನೆಗೂ ಮುಟ್ಟಿಸಬೇಕಾಗಿದೆ; ಜನತೆಯ ಜೀವನ ಮಟ್ಟವನ್ನು ಏರಿಸಬೇಕಾಗಿದೆ. ಹೀಗಿರುತ್ತಾ ಇನ್ನೂ ಕೆಲವೇ ದಿನಗಳಲ್ಲಿ ಗಡಿ ನಿರ್ಣಯಕ ಸಮಿತಿಯನ್ನು ಏರ್ಪಡಿಸಿದರೆ, ಅದು ಅಸ್ತಿತ್ವದಲ್ಲಿರುವ ಎರಡು ಮೂರು ವರ್ಷ ಕಾಲ ದೇಶದಲ್ಲಿ ಗೊಂದಲಮಯ ವಾತಾವರಣವೇ ಉಳಿಯುವುವುದು ನಿಶ್ಚಯ. ಆಗ ಪಂಚವಾರ್ಷಿಕ ಯೋಜನೆ, ಸಮಾಜ ವಿಕಾಸಕಾರ್ಯ ಮುಂತಾದವುಗಳನ್ನು ಎಲ್ಲರೂ ಮರೆತುಬಿಟ್ಟು ಭಾಷಾಸಂಬಂಧದ ತಂತಮ್ಮ ಹಕ್ಕುಗಳನ್ನು ಸ್ಥಾಪಿಸಬಹುದು ಕಚ್ಚಾಡುವುದರಲ್ಲಿ ತೃಪ್ತಿಕಾಣುವರು. ಗೋದಾವರಿ ನದಿಗೆ ಮಹಾಪೂರ ಬರಲಿ-ಕೋಸಿ ನದಿಯ ನೆರೆ ಉಕ್ಕೇರಲಿ- ಅದನ್ನು ವಿಚಾರಿಸಲು ಜನರಿಗೆ ಆಸ್ಥೆ ಇರುವುದಿಲ್ಲ. ಕರ್ನಾಟಕ ರಾಜ್ಯದ ಬಗ್ಗೆಯೂ ಬೇಡಿಕೆ ಬಂದಿದೆ-ಸತ್ಯಾಗ್ರಹ ಮುಂತಾದ ಬೆದರಿಕೆಯನ್ನೂ ತೋರಿಸಲಾಗಿದೆ. ಈ ಪ್ರಶ್ನೆಯನ್ನು ವಿಚಾರಿಸಲು ಪರಿಪೂರ್ಣಾಧಿಕಾರ ಸಂಪನ್ನರಾದ ಆಯೋಗ ನೇಮಕಗೊಂಡಾಗ ಹೊರಗಿರ ಜನರೆಲ್ಲರೂ ವಿಚಾರಪರರಾಗದೆ ವರ್ತಿಸೋಣ. ಉಪವಾಸ, ಆಮರಣ ಉಪ

ಶ್ರೀಕೃಷ್ಣಾರ್ಜುನರ ಮಾತುಗಾರಿಕೆಯ ಮರುಳನ್ನು ತಿಳಿಯದೆ ಶ್ರೀಕೃಷ್ಣಾಷ್ಟಮಿಯನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಿದರೇನು?

— ಬಲ್ಲಿರಾ? —

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" —ವರಾಹಪುರಾಣ.

'ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತ ಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." —ಮಹಾತ್ಮಾ ಗಾಂಧಿ.

"ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು." —ವಾರೆನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೂ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯು ಎಲ್ಲೆಲ್ಲಿಯೂ ಮಾರಾಟಕ್ಕೆ ಸಿಗುತ್ತದೆ. ಬೆಲೆ 0—12—0.

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮ. ಆ.—ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ಪ್ರಧಾನಿದ್ವಯರ ಮಹತ್ವಪೂರ್ಣ ಪ್ರಕಟಣೆ

ಎಪ್ರಿಲ್ ೧೯೫೪ರೊಳಗೆ ಕಾಶ್ಮೀರದಲ್ಲಿ ಮತಗಣನಾಧಿಕಾರಿಯ ನೇಮಕ

ವಾಸ, ಕಾಯಿದೇ ಭಂಗ, ಸತ್ಯಾಗ್ರಹಗಳಿಗೆ ಲೇಶ ಮಾತ್ರವೂ ಅವಕಾಶ ಕೊಡದೆ, ಪ್ರತಿಯೊಬ್ಬನೂ ಶಾಂತ ಚಿತ್ತದಿಂದ ತನ್ನ ಪಕ್ಷವನ್ನು ಆಯೋಗದ ಮುಂದೆ ಮಂಡಿಸಲಿ! ಈ ಆಯೋಗದಲ್ಲಿ ಜನತೆಯು ವಿಶ್ವಾಸ ಹುಟ್ಟುವಂತೆ ಪ್ರಯತ್ನಿಸಲಿ! ಇದರಂತೆ ನ್ಯಾಯಾಧೀಶರ ನೇಮಕವಾದಾಗ ಅವರಿಗೆ ಹೂಮಾಲೆ ಹಾಕಿ ಸತ್ಕರಿಸಿ, ಅವರ ನಿಷ್ಪಕ್ಷಪಾತ ನಿರ್ಣಯವು ತಮಗೆ ಅನುಕೂಲವಿಲ್ಲೆಂದು ತಿಳಿದಾಗ ಅವರನ್ನು ನಿಂದಿಸುವ ಮತ್ತು ನಿರ್ಣಯವನ್ನು ಖಂಡಿಸು ಪರಿಪಾಠವನ್ನು ಬಿಟ್ಟುಗೊಡೋಣ! ಅದಕ್ಕಾಗಿ ಚಳುವಳಿ ನಡೆಸದೆ, ಸಾವಧಾನದಿಂದ ಮುಂದರಿಯೋಣ!"

ಗೋದಾವರಿಗೆ ಮಹಾಪೂರ

ಸರಕಾರವು ಭಾಷಾರಾಜ್ಯಗಳನೀತಿಯನ್ನು ವಿರೋಧಿಸುವುದಿಲ್ಲೆಂದು ಇದರಿಂದ ವ್ಯಕ್ತವಾದಂತೆ ಹಿಂಸಾಚಾರಗಳನ್ನು ಈ ಉದ್ದೇಶಕ್ಕೋಸ್ಕರ ನಡೆಸಬಾರದೆಂದೂ ಸ್ಪಷ್ಟಗೊಳ್ಳುತ್ತದೆ. ಕಟಜೂ ಸ್ಪಷ್ಟಗೊಳಿಸಿದಂತೆ ಭಾಷಾರಾಜ್ಯಗಳ ಪ್ರಶ್ನೆಗಿಂತಲೂ ಗಹನವೂ ಗಂಭೀರವೂ ಆದ ಘಟನೆಗಳನ್ನು ದೇಶವು ಇದಿರಿಸಬೇಕಾಗಿದೆ. ಪಂಚವಾರ್ಷಿಕ ಯೋಜನೆ ಅಂಥದೊಂದು ರಣಾಹ್ವಾನ. ಅದನ್ನು ಬಿಟ್ಟುಗೊಟ್ಟರೂ, ನಮ್ಮ ದೇಶದಲ್ಲಿ ವಿಪತ್ತುಗಳಿಗೆ ಅಂತ್ಯವೆಂಬುದಿಲ್ಲ. ಕಳೆದ ವರ್ಷ ರಾಯಲ ಸೀಮೆಯಲ್ಲಿ ಅನಾವೃಷ್ಟಿಯ ಹಾವಳಿ ನಡೆದರೆ, ಇದೀಗ ಗೋದಾವರಿ ಮತ್ತು ಕಾವೇರಿ ನದಿಗಳಿಗೆ ಮಹಾಪೂರವು ಬಂದು ಅಪಾರ ಹಾನಿಯುಂಟಾಯಿತೆಂದು ಕೇಳುತ್ತೇವೆ. ಕಾವೇರಿ ನದಿಯಲ್ಲಿ ನೀರಿನ ಮಟ್ಟವು ನದಿಯ ಪಾತ್ರವನ್ನು ಮೀರಿದಂತೆ ಕಾಣಲಿಲ್ಲ. ಆದರೆ ಗೋದಾವರೀ ನದಿಯಲ್ಲಿ ನೀರು ಎರಡೂ ದಡಗಳ ಮೇಲೆ ೧೦-೧೫ ಅಡಿ ಎತ್ತರದಷ್ಟು ನಿಂತು, ಏಳೆಂಟು ದಿನಗಳ ವರೆಗೂ ಇಳಿಯದೆ ಉಳಿಯಿತು. ಪೂರ್ವ ಮತ್ತು ಪಶ್ಚಿಮ ಗೋದಾವರಿಯ ಕಾಕಿನಾಡ, ರಾಮಚಂದ್ರಪುರಂ ತಾಲೂಕುಗಳು, ರಾಜಮಹೇಂದ್ರಿ ನಗರವನ್ನೊಳಗೊಂಡು ಆ ತಾಲೂಕಿನ ಳಂಗ್ರಾಮಗಳು, ಭದ್ರಾಚಲಂ ಪೊಲವಾರಂ, ಕೊಣನಾರಂ ತಾಲೂಕಿನ ಕೆಲವು ಭಾಗ, ಅಮಲಪುರಂ, ಕೋತಪೇಟೆ ಮತ್ತು ರಾಜೋಲ ತಾಲೂಕುಗಳು ನೆರೆಹಾವಳಿಗೆ ತುತ್ತಾಗಿವೆ. ನದೀ ದ್ರೋಣದಲ್ಲಿ ಸುಮಾರು ೧೦೦೦ ಚದರ ಮೈಲು ವಿಸ್ತೀರ್ಣದಲ್ಲಿ ನೆರೆಯು ವ್ಯಾಪಿಸಿ, ಜನರೆಲ್ಲರನ್ನೂ ಮನೆ ಮಾರುಗಳಿಂದ ದೂರವಿರಿಸಿತಲ್ಲದೆ, ಜಾನುವಾರುಗಳನ್ನೆಲ್ಲ ಕೊಚ್ಚಿಕೊಂಡು ಹೋಯಿತು. ನೆರೆಯಿಂದ ಸತ್ತವರ ಸಂಖ್ಯೆಯು ಅಷ್ಟಾಗಿಲ್ಲದಿದ್ದರೂ, ಕೃಷಿಗೆ ಅಗತ್ಯವಿರುವ ಜಾನುವಾರುಗಳು ಸಾವಿರ ಸಂಖ್ಯೆಯಲ್ಲಿ ನಷ್ಟಹೊಂದಿವೆ. ಮನೆಗಳು ಕುಸಿದು, ನಗರಗಳೆಲ್ಲ ನಾಶವಾಗಿವೆ. ರಾಜ ಮಹೇಂದ್ರಿ ನಗರವೊಂದನ್ನೆ ದೃಷ್ಟಾಂತವಾಗಿಹಿಡಿದರೆ, ಏಳು ಸಾವಿರ ಮನೆಗಳು ನೆರೆಯಿಂದ ಆವೃತವಾಗಿದ್ದು ಅವುಗಳಲ್ಲಿ ಒಂದು ಸಾವಿರ ಬಿದ್ದುಹೋಗಿವೆ; ಮತ್ತೆ ಎರಡು ಸಾವಿರ ಮನೆಗಳು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿವೆ. ಉಳಿದವುಗಳಿಗೆ ಆದ ಪೆಟ್ಟು ಸಾಮಾನ್ಯವೇನಲ್ಲ- ರಾಜ ಮಹೇಂದ್ರಿಯಂಥ ಪಟ್ಟಣದ ಗತಿಯೇ ಹೀಗಾಯಿತೆಂದರೆ, ಹಳ್ಳಿಗಳಲ್ಲಿ ಪರಿಸ್ಥಿತಿ ಎಷ್ಟು ಶೋಚನೀಯನೆಂದುಊಹಿಸಬೇಕು ಮಾತ್ರ. ನದಿಯ ಇಕ್ಕೆಲಗಳಲ್ಲಿಯೂ ಭತ್ತದಪೈರು ಹಾಳಾಗಿಹೋಗಿದೆ. ದೇವರದಯೆಯಿದ್ದರೆ ಅಲ್ಪಾವಧಿಯಲ್ಲಿಯೇ ಫಸಲುಕೊಡುವ ಬೀಜ ಬಿತ್ತಲು ಇನ್ನೂ ಅವಕಾಶವಿದೆ ಎಂದು ಮಂತ್ರಿ ನಾಗಣ್ಣ ಗೌಡರು ಹೇಳಿದ್ದಾರೆ.

ನೆರವು ದೊರೆತಷ್ಟು ಸಾಲದು

ನೆರೆಯಿಂದ ನಿರಾಶ್ರಿತರಾದ ಸಾವಿರಾರು ಜನರಿಗೆ ಅನ್ನ ಹಾಗೂ ವಸತಿಯನ್ನು ತ್ವರಿತದಲ್ಲಿಯೇ ಒದಗಿಸಿಕೊಡುವುದು ಮಹಾ ಸಮಸ್ಯೆಯಾಗಿ ಪರಿಣಮಿಸಿದೆ. ಅಕ್ಕಿಯ ಪೂರೈಕೆಯಲ್ಲಿ ಲವಲೇಶವೂ ವಿಳಂಬವಾಗಬಾರದೆಂದು ಸರಕಾರವೂ ಸಾರ್ವಜನಿಕರು ಸ್ವಯಂಪ್ರೇರಣೆಯಿಂದ ರಚಿಸಿಕೊಂಡ ಸಮಿತಿಗಳೂ ಪ್ರಯತ್ನಪಡುತ್ತಿವೆ. ಜನರಿಗೆ ಬಂದೊದಗಿದ ಈ ವಿಪತ್ತಿನ ಕಾಲದಲ್ಲಿ ಕೆಲವು ಲಾಭ ಭಡಕ ವ್ಯಾಪಾರಿಗಳು ಅಕ್ಕಿ ಮುಂತಾದ ಧಾನ್ಯಗಳ ಬೆಲೆಯನ್ನು ಮಿತಿಮೀರಿ ಏರಿಸುವ ಚಪಲ ತೋರಿಸಿದರೆಂದು ತಿಳಿದಿದೆ- ಈ ಪ್ರವೃತ್ತಿ ಪಶುಗಳಿಗೂ ಬಾರದು: ಎಂದಮೇಲೆ ಮನುಷ್ಯನಾದವನಿಗೆ ಅದು ಲಾಂಛನಾಸ್ಪದ! ಜನರು ಎಷ್ಟು ಕಷ್ಟಕ್ಕೆ ಈಡಾಗಿರುವರೆಂದರೆ, ನಿತ್ಯೋಪಯೋಗಕ್ಕೆ ಅತ್ಯಂತ ಅವಶ್ಯವಿರುವ ಉಪ್ಪಿನ ಕೊರತೆಯೂ ನೆರೆ ತುಂಬಿದ ಪ್ರದೇಶಗಳಲ್ಲಿ ಕಾಣಿಸಿಕೊಂಡಿತು. ಲಾರಿಗಳಲ್ಲಿ, ರೈಲುಗಳಲ್ಲಿ ಆಹಾರ ತುಂಬಿದ ಚೀಲಗಳು ಬರುತ್ತಿವೆಯಲ್ಲದೆ- ಸೈನ್ಯ ಶಾಖೆಯ ಸೌಜನ್ಯದಿಂದ ವಿಮಾನ ಮೂಲಕ ನೆರೆ ಪೀಡಿತರಿಗೆ ಚಪಾತಿ, ಬಿಸ್ಕೀಟು, ಅನ್ನ ಮುಂತಾದುವನ್ನು ಪೂರೈಸಲಾಗುತ್ತಿದೆ ಶಾಲಾ ಕಾಲೇಜುಗಳಲ್ಲಿಯೂ ಸಾರ್ವಜನಿಕ ಭವನಗಳಲ್ಲಿಯೂ ನೆರೆಪೀಡಿತರಿಗೆ ಉಳಕೊಳ್ಳಲು ಏರ್ಪಾಡು ಮಾಡಿರುವರು. ನೆರೆಯು ಈಗ ನಿಧಾನವಾಗಿ ಇಳಿಯುವ ಸುದ್ದಿ ಬಂದಿದ್ದರೂ- ಈ ನೆರೆಯ ಅನಾಹುತದಿಂದ ಚೇತರಿಸಿಕೊಳ್ಳುವುದು ಸುಲಭದಲ್ಲಿ ಸಾಧ್ಯವಿಲ್ಲ ಆದ ನಷ್ಟದ ಅಂದಾಜನ್ನು ಮಾಡಿಕೊಳ್ಳಲೂ ಈಗ ಸಾಧ್ಯವಿಲ್ಲ. ಆಂಧ್ರ ಪ್ರದೇಶದ ಜನರಿಗೆ ಬಂದೊದಗಿದ ಈ ದುರಂತವು ಭಾವೀ ಆಂಧ್ರ ರಾಜ್ಯಕ್ಕೆ ಒಂದು ಎಚ್ಚರಿಕೆಯಂತಿದ್ದರೆ- ಸರಕಾರದ ಮೇಲೆ ಅಮಿತ ಹೊಣೆಗಾರಿಕೆಯನ್ನೂ ಅದು ಹೇರಿರುತ್ತದೆ. ನದಿಯ ನೀರು ಉಕ್ಕಿ ಹರಿದುದರಿಂದ ದಂಡೆಗಳು ಒಡೆದು ಹೋಗಿವೆ; ಕಾಲುವೆ ಮತ್ತು ಸೇತುವೆಗಳು ಧಕ್ಕೆಗೊಂಡಿವೆ. ಸರಕಾರವು ನೆರೆಯಿಂದ ಇವುಗಳನ್ನು ರಕ್ಷಿಸಲು ಯೋಗ್ಯ ಕ್ರಮ ಕೈಗೊಳ್ಳುವುದಕ್ಕೋಸ್ಕರ ಇಂಜಿನಿಯರರ ತಂಡವನ್ನು ಕಳುಹಿಸಿದೆ. ಸಾರಿಗೆ ಸಂಪರ್ಕಗಳೂ ರೈಲು ಪ್ರಯಾಣವೂ ಸ್ಥಗಿತಗೊಂಡಂತೆ ಈ ಪ್ರದೇಶದಲ್ಲಿ ಕಾಣುತ್ತದೆ. ಮದ್ರಾಸು ಸರಕಾರದ ಮಂತ್ರಿಗಳು ಹಾಗೂ ಆಂಧ್ರ ಪ್ರದೇಶದ ರಾಜಕೀಯ ಧುರೀಣರು ನೆರೆ ಪ್ರದೇಶದಲ್ಲಿ ಸುತ್ತಾಡಿಕೊಂಡು ಬಂದು, ಸಹಾಯದ ಅಗತ್ಯ ಬಹಳವಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ನೆರೆ ಪೀಡಿತರಿಗೆ ಸಾಂತ್ವನಪರ ಸಂದೇಶ ಕಳಿಸಿರುವರಲ್ಲದೆ, ತಮ್ಮ ಸಹಾನುಭೂತಿಯ ದ್ಯೋತಕವಾಗಿ ಒಂದು ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ಸಾರ್ವಜನಿಕರ ಸಹಕಾರವನ್ನು ಗೋದಾವರಿ ನೆರೆಯ ದುರ್ದೈವಿ ಬಾಂಧವರು ಬಹಳವಾಗಿ ನಿರೀಕ್ಷಿಸುತಿದ್ದಾರೆ. ಕಾಲೆರಾ ಮುಂತಾದ ರೋಗಗಳು ಅಲ್ಲಿ ಕಾಣಿಸಿವೆಯೆಂದೂ, ಸರಕಾರೀ ಹಾಗೂ ಖಾಸಗೀ ವೈದ್ಯರು ಅದನ್ನು ನಿಯಂತ್ರಿಸಲು ಸಾಹಸಮಾಡುತ್ತಿರುವರೆಂದೂ ಕೇಳುತ್ತೇವೆ.

ಪ್ರಧಾನಿ ದ್ವಯರ ಒಪ್ಪಂದ

ದಕ್ಷಿಣದ ಈ ದುಃಖ ವಾರ್ತೆಯೊಂದಿಗೆ ಉತ್ತರದ ಹೊಸ ಧಿಲ್ಲಿಯಿಂದ ಸಂತೋಷ ಜನಕ ಸುದ್ದಿ ಪ್ರಸಾರಗೊಂಡಿದೆ; ಪಾಕಿಸ್ತಾನದ ಪ್ರಧಾನಿ ಮಹಮ್ಮದಾಲಿಯವರು ಕಳೆದ ವಾರ ಹೊಸ ಧಿಲ್ಲಿಗೆ ಆಕಸ್ಮಿತ್ತಾಗಿ ಆಗಮಿಸಿ, ಪ್ರಧಾನಿ ನೆಹರೂರನ್ನು ಭೇಟಿಯಾಗಿ ಕಾಶ್ಮೀರ ಪ್ರಶ್ನೆಯನ್ನು ಚರ್ಚಿಸಿದರು. ೨೦ನೇ ದಿನಾಂಕದವರೆಗೆ ನಾಲ್ಕು ದಿನಗಳ ಕಾಲ ಪ್ರಧಾನಿದ್ವಯರೊಳಗೆ ಮಾತುಕತೆಗಳು ನಡೆದಬಳಿಕ, ಸಾಮಾನ್ಯತಃ ಸಮಾಧಾನಕರವಾದ ಸಂಯುಕ್ತ ಪ್ರಕಟಣೆಯೊಂದು ಹೊರಬಿದ್ದಿದೆ. ಈ ಪ್ರಕಟಣೆಯಂತೆ, ಕಾಶ್ಮೀರದ ಭವಿತವ್ಯವನ್ನು ನಿರ್ಧರಿಸುವ ಪ್ರಶ್ನೆಯು ಅಲ್ಲಿಯ ಜನರಿಗೆನೇ ಸೇರಿದೆ ಎಂಬ ತತ್ವವನ್ನು ಇಬ್ಬರು ಪ್ರಧಾನಿಗಳೂ ಮನ್ನಿಸಿರುತ್ತಾರೆ; ಮತ್ತು ಜನರ ಇಚ್ಛೆ ಏನಿದೆ ಎಂಬುದನ್ನು ತಿಳಿದುಕೊಳ್ಳಲು ಶಾಂತ ವಾತಾವರಣದಲ್ಲಿ ನಿರಾತಂಕವಾಗಿ ನಡೆಯುವ ಸಾರ್ವತ್ರಿಕ ಮತಗಣನೆಯೇ ಸಾಧನವೆಂದೂ ಒಪ್ಪಿರುತ್ತಾರೆ. ಆದರೆ ಪ್ರಕಟಣೆಯ ಮಹತ್ವ ಇವುಗಳಲ್ಲಿರದೆ- ಇನ್ನೊಂದು ಮುಖ್ಯ ಅಂಶದಲ್ಲಿದೆ ಪ್ರಧಾನಿದ್ವಯರು ೧೯೫೪ನೇ ಇಸವಿಯ ಎಪ್ರಿಲು ತಿಂಗಳೊಳಗೆ ಜನಮತ ಗಣನೆಯನ್ನು ನಡೆಸುವ ಅಧಿಕಾರಿಯನ್ನು ನೇಮಿಸಬೇಕೆಂದು ನಿರ್ಧರಿಸಿರುವರು; ಮತ್ತು ಈ ಅವಧಿಯೊಳಗೆನೇ ಪೂರ್ವಭಾವಿಯಾಗಿ ನಿರ್ಧಾರವಾಗಬೇಕಿರುವ ಬೇರೆ ಸಂಗತಿಗಳ ಕುರಿತು ಪರಸ್ಪರರಲ್ಲಿ ಉಭಯ ಸಮ್ಮತವಾದ ತಿಳುವಳಿಕೆಯನ್ನುಂಟುಮಾಡಲು ಅನುಕೂಲಿಸುವಂತೆ ಮಿಲಿಟರಿ ಮತ್ತು ಇತರ ತಜ್ಞರ ಸಮಿತಿಯ ರಚನೆಯಾಗಬೇಕೆಂದು ಹೇಳಿರುವರು. ಜನಮತ ಗಣನೆಯ ಅಧಿಕಾರಿಯನ್ನು ಕಾಶ್ಮೀರ ಸರಕಾರವೇ ನೇಮಿಸ ತಕ್ಕುದೆಂದೂ ಈ ಅಧಿಕಾರಿಯು ರಾಜ್ಯದ ಪರಿಸ್ಥಿತಿಯನ್ನು ಸಂಪೂರ್ಣ ಪರಿಶೀಲಿಸಿ ಇಡೀ ಜಮ್ಮು ಮತ್ತು ಕಾಶ್ಮೀರದಲ್ಲಿ ಜನಮತ ಗಣನೆಯನ್ನು ನಡೆಸಲು ತನಗೆ ಯೋಗ್ಯ ಕಂಡ ಶಿಫಾರಸುಗಳನ್ನು ಮಾಡಬೇಕೆಂದೂ ಇದೆ. ಕರಾಚಿಯಲ್ಲಿ ನಿಲ್ಲಿಸಿದ್ದ ಮಾತು ಕತೆಗಳ

(ಆರನೇ ಪುಟ ನೋಡಿರಿ)

BUY A POLICY TODAY FROM THE
INDIAN MUTUAL LIFE ASSOCIATION LTD.,
10 MOUNT ROAD, MADRAS-2.
AND BUILD THE INSTITUTION.
—A FEW FACTS AND FIGURES ABOUT THE INDIAN MUTUAL—
* THE FIRST MUTUAL CONCERN OF OUR PROVINCE.
* BUSINESS IN FORCE NEARLY FOUR CRORES.
* LOWEST PREMIUM; HIGHEST BONUS.
* SURPLUS IN ALL VALUATIONS FROM THE START.
IDEAL CONCERN FROM ALL POINTS OF VIEW!
Applications for Agencies and Special Agencies throughout SOUTH KANARA and COORG are invited.
Apply to:- V. K. K. Nair, Organising Officer, "Indian Mutual", KASARAGOD.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO.
Watch & Clock Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್ ಸ್ಪೆಶಲಿಸ್ಟ್ಸ್,
ಮದ್ರಾಸು 3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಬಳ್ಳಾರಿ ಜಿಲ್ಲೆಯ ಈ ಕೆಳಗಣ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳು
ಸದ್ಯದಲ್ಲಿಯೇ ತೆರೆಯಲಿವೆ:
(1) ಬಳ್ಳಾರಿ; (2) ರಾಯದುರ್ಗ ಮತ್ತು (3) ಕೊಟ್ಟೂರು.
ಈಗಾಗಲೇ ಬ್ಯಾಂಕಿಗೆ ೩೬ ಶಾಖೆಗಳಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುರಕ್ಷಿತತೆ ಮತ್ತು ಭದ್ರತೆಗಳಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ.
ಒಟ್ಟು ಚಲಾವಣೆ ಭಂಡವಾಳ 3½ ಕೋಟಿ ರೂಪ್ಯಾಗಳಿಗೂ ಮಿಕ್ಕಿದೆ.
THE CANARA BANKING CORPORATION LTD.,
Estd. 1906] [H. O. UDIPI (S. India)

ನವಯುಗ
ಉಡುಪಿ, ಗುರುವಾರ ೨೭-೮-'೫೩

ಶುಭಾರಂಭ

ಭಾರತದ ಸರ್ವಾಂಗೀಣ ಅಭಿವೃದ್ಧಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳಿಗೆ ಯೋಗ್ಯ ಗ್ರಾಮ ಸೇವಕರನ್ನು ತರಬೇತಿಗೊಳಿಸಲು ಒಂದು ಯೋಜನೆ ಸಿದ್ಧಗೊಂಡಿರುತ್ತದೆ. ಪರದಾಸ್ಯದಿಂದ ಜಡತ್ವ ಗಳಿಸಿಕೊಂಡಿರುವ ಭಾರತೀಯ ಪ್ರಜೆಗಳಲ್ಲಿ ಸ್ಫೂರ್ತಿ ಮತ್ತು ಉತ್ಸಾಹಗಳನ್ನು ತುಂಬಲು ಸಹಸ್ರಾರು ಸಂಖ್ಯೆಯಲ್ಲಿ ಗ್ರಾಮಸೇವಕರು ತರಬೇತಿ ಹೊಂದುವುದು ಅತ್ಯಂತ ಅಗತ್ಯವಿದೆ. ಭಾರತ ಸೇವಕ ಸಮಾಜ, ಗಾಂಧೀ ಸ್ಮಾರಕ ಸಂಸ್ಥೆಗಳು ಜನರಲ್ಲಿ ಜಾಗ್ರತಿಯನ್ನುಂಟುಮಾಡಲು ತುಂಬ ಪ್ರಯತ್ನ ಮಾಡುತ್ತಿರುವುದನ್ನು ಕಾಣುತ್ತೇವೆ. ಇವುಗಳ ಜೊತೆಗೆ ಸರಕಾರದ ಕಡೆಯಿಂದ ತರಬೇತಿ ಹೊಂದಿದ ಗ್ರಾಮ ಸೇವಕರು ಹಳ್ಳಿ ಹಳ್ಳಿಗಳಿಗೆ ಹೋಗಿ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಮರ್ಥರಾದರೆ—ಅದನ್ನು ಪ್ರಗತಿಯ ಶುಭಾರಂಭವೆಂದು ಕರೆಯಲಡ್ಡಿಯಿಲ್ಲ. ಈಗ ಸಿದ್ಧಪಡಿಸಿರುವ ಯೋಜನೆಯಂತೆ ಇನ್ನುಮುಂದಿನ ಮೂರು ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ವಿಸ್ತರಣಾಕಾರ್ಯಕ್ಕೋಸ್ಕರ ೧೩೦೦೦ ಗ್ರಾಮ ಸೇವಕರನ್ನು ತರಬೇತಿ ಮಾಡಲಾಗುವುದು. ಜನಪದ ಅಭಿವೃದ್ಧಿಯೋಜನೆಗಳನ್ನು ಕಳೆದ ವರ್ಷ ಆರಂಭಿಸಿದಾಗ, ಇಂಥ ಗ್ರಾಮ ಸೇವಕರ ಕೊರತೆ ಕಂಡುಬಂತು. ಯೋಜನೆಯ ಉದ್ದೇಶ ಹಾಗೂ ಸಾಧನಾ ಕ್ರಮಗಳನ್ನು ಜನರಲ್ಲಿ ಪ್ರಚುರ ಪಡಿಸಲು ಗ್ರಾಮ ಸೇವಕರು ಇಲ್ಲವಾದರೆ- ಅಂಥ ಯೋಜನೆಗೆ ಸಾರ್ವಜನಿಕ ಸಹಕಾರವನ್ನು ಪಡೆಯುವುದು ಕಷ್ಟಸಾಧ್ಯ. ಆದರೆ ಈಗ ಪರಿಸ್ಥಿತಿ ಊರ್ಜಿತಗೊಂಡಿದೆಯೆಂದೂ ೧೫೦೦ ಗ್ರಾಮ ಸೇವಕರು ತರಬೇತಿ ಪಡೆದು, ಸಮಾಜ ವಿಕಾಸ ಕಾರ್ಯಗಳಲ್ಲಿ ನೆರವಾಗುತ್ತಿರುವರೆಂದೂ ತಿಳಿದಿದೆ. ಗ್ರಾಮ ಸೇವಕರ ತರಬೇತಿಯು ೧೨ ತಿಂಗಳುಗಳ ಅವಧಿಯನ್ನೊಳಗೊಂಡಿರುತ್ತದೆ; ಹೀಗೆ ತರಬೇತಿ ಹೊಂದಿದ ಜನಕ್ಕೆ ಯೋಜನಾ ಆಯೋಗದ ಕಡೆಯಿಂದ ಯೋಗ್ಯ ಉದ್ಯೋಗ ದೊರೆಯುತ್ತದೆ. ದೇಶದಲ್ಲಿ ನಿರುದ್ಯೋಗ ಹೆಚ್ಚಿಕೊಂಡಿರುವಾಗ, ಸುಶಿಕ್ಷಿತ ಜನರು ಈ ಅವಕಾಶದ ಸದುಪಯೋಗ ಮಾಡಿಕೊಂಡರೆ ಭವಿಷ್ಯತ್ತಿನಲ್ಲಿ ತುಂಬ ಪ್ರಯೋಜನ ದೊರೆಯುವ ಭರವಸೆಯುಂಟು. ಇನ್ನೊಂದು ಲಾಭ ಮಾತ್ರವಲ್ಲದೆ- ಹಿತಾವಹವಾದ ಬೇರೆ ಸಂಗತಿಗಳೂ ಇವೆ. ಪಾರ್ಲಿಮೆಂಟ ಸದಸ್ಯರಾದ ಶ್ರೀ. ಎಸ್. ಎನ್. ಮಿಶ್ರಾರವರು ಬರೆದೊಂದು ಲೇಖದಲ್ಲಿ ಹಳ್ಳಿಗಾಡಿನ ಜನರಲ್ಲಿ ೯೫% ಜನಕ್ಕೆ ಪಂಚವಾರ್ಷಿಕ ಯೋಜನೆಯೆಂದರೇನೆಂದೇ ತಿಳಿದಿಲ್ಲವೆಂದು ತಾವು ನಡೆಸಿದ ಪ್ರಯೋಗಾನುಭವದ ಮೇಲಿಂದ ಹೇಳಿರುವರು. ಉಳಿದ ಐದು ಮಂದಿಯಲ್ಲೂ ಯೋಜನೆಯ ಕುರಿತು ಸಾಮಾನ್ಯ ತಿಳುವಳಿಕೆ ಇರಲಿಲ್ಲ. ಇದು ಪ್ರತಿಯೊಂದು ಹಳ್ಳಿಗೂ ಚೆನ್ನಾಗಿಯೇ ಅನ್ವಯಿಸುತ್ತದೆ. ಯೋಜನೆಯ ಮೂಲೋದ್ದೇಶ ಮತ್ತು ಕಾರ್ಯಕ್ರಮಗಳ ವಿವರದ ಅನುಭವವನ್ನು ಹಳ್ಳಿಯ ಜನಕ್ಕೆ ಒದಗಿಸಿ ಕೊಡುವ ಪ್ರಯತ್ನ ಏನೇನೂ ನಡೆದಂತಿಲ್ಲ. ಇದು ಚೆನ್ನಾಗಿ ನೆರವೇರದೆ, ಪಂಚವಾರ್ಷಿಕ ಯೋಜನೆಗೆ ಸಾರ್ವಜನಿಕ ಸಹಕಾರದ ಭರವಸೆ ದೊರೆಯುವಂತಿದೆಯೆ? ನಮ್ಮ ಮಂತ್ರಿಗಳೂ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕರ್ತರೂ ಪತ್ರಿಕೆಗಳೂ ಯೋಜನೆಯ ಮಹಿಮಾವರ್ಣನೆಯನ್ನು ಬಿಡದೆ ಮಾಡುತ್ತಿದ್ದಂತೆಯೇ- ಈ ಪರಿಣಾಮ! ಎಂದಮೇಲೆ ಪ್ರಚಾರ ಕಾರ್ಯವನ್ನು ಎಷ್ಟರಮಟ್ಟಿಗೆ ಬಲಗೊಳಿಸಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಗ್ರಾಮಸೇವಕರ ತರಬೇತಿಯು ಪ್ರಚಾರ ಕಾರ್ಯದಕಡೆಗೆ ಗಮನವಿಟ್ಟಂತೆಯೇ ಯೋಜನೆ ಕಾರ್ಯಾನ್ವಿತಗೊಳ್ಳುವಂತೆ ಕೂಡ ನೆರವಾಗುತ್ತದೆ. ಇಬ್ಬಗೆಯ ಪ್ರಯೋಜನ ದೊರೆಯುವ ಈ ಸಾಹಸ ಉತ್ತಮ ಪ್ರತಿಫಲವನ್ನು ನೀಡಲೆಂದು ಆಶಿಸುತ್ತೇವೆ.

ನಿವೇದನೆ

ನಮ್ಮ ಈ ಸಂಚಿಕೆಯೊಂದಿಗೆ "ನವಯುಗ" ತನ್ನ ಮೂವತ್ತೆರಡು ವರ್ಷಗಳ ಸೇವೆಯನ್ನು ಸಲ್ಲಿಸಿದಂತಾಗುತ್ತದೆ. ಈ ದೀರ್ಘಾವಧಿಯಲ್ಲಿ ನವಯುಗವು ರಾಷ್ಟ್ರ ಜೀವನವನ್ನು ಪುನರ್ಘಟಿಸುವುದಕ್ಕೆ ತನ್ನಿಂದ ಶಕ್ಯವಿದ್ದಷ್ಟೂ ಪ್ರಯತ್ನಮಾಡಿ, ಕಷ್ಟನಷ್ಟಗಳನ್ನು ಲೆಕ್ಕಿಸದೆ, ಮುನ್ನಡೆದಿರುತ್ತದೆ. ಪತ್ರಿಕೆಯ ಮಟ್ಟವನ್ನು ಮತ್ತು ಸ್ಥಾನಮಾನವನ್ನು ಕನ್ನಡಿಗರೆಲ್ಲರೂ ಮೆಚ್ಚಿಕೊಂಡಿದ್ದಾರೆಂದು ನಮಗೆ ಭರವಸೆಯುಂಟು. ಈ ಮೆಚ್ಚುಗೆ ನಮ್ಮ ಉತ್ಸಾಹವನ್ನು ಉಕ್ಕೇರಿಸುತ್ತದೆ; ಆದರೆ ಅದರೊಂದಿಗೆ ದುಃಖದ ಒಂದು ಸಂಗತಿಯನ್ನೂ ನಿವೇದಿಸಬೇಕೆಂದು ತೋರುತ್ತದೆ- ಪತ್ರಿಕೆ ಬೆಳೆದುಬರಬೇಕಾದರೆ ಅದರ ಆರ್ಥಿಕ ಬುನಾದಿ ಭದ್ರವಾಗಿರಬೇಕು. ಕನ್ನಡದ ಜನರ ಓದುವ ಅಭಿರುಚಿ ಈಗ ತುಂಬಾ ಹೆಚ್ಚಿಕೊಂಡಿದ್ದರೂ, ನಮ್ಮ ಪತ್ರಿಕೆ ಆರ್ಥಿಕ ಸಂಕಟದಿಂದ ಮುಕ್ತವಾಗಿರುವುದಿಲ್ಲ. ಓದುವ ಜನರು ದುಡ್ಡುಕೊಟ್ಟು ಪತ್ರಿಕೆ ಕೊಂಡು ಓದುವ ದಿನ ಎಂದು ಬರುತ್ತದೋ ಎಂದು ಪತ್ರಿಕಾಕರ್ತರು ಚಾತಕ ಪಕ್ಷಿಯಂತೆ ಕಾಯಲು ಕನ್ನಡಿಗರು ಬಿಡಬಾರದು. ಅವರು ಪತ್ರಿಕೆಯ ಚಂದಾದಾರರಾಗಬೇಕು; ಮತ್ತು ಚಂದಾದಾರರಾದವರು ತಮ್ಮ ಚಂದಾವನ್ನು ಬಾಕಿ ಇಡದೆ ಕ್ಲಪ್ತರೀತಿಯಲ್ಲಿ ಪಾವತಿ ಮಾಡಬೇಕು. ಇದು ಪತ್ರಿಕೆಯ ಬಲವನ್ನು ಸಂವರ್ಧಿಸುವುದಲ್ಲದೆ—ಕನ್ನಡ ಜನರ ಬಲವನ್ನೂ ತಿಳಿಸಿ ಹೇಳುತ್ತದೆ. ಈ ಆದರ್ಶವಿಟ್ಟುಕೊಂಡು ನೀವೂ—ನಾವೂ ಕರ್ತವ್ಯನಿರತರಾಗೋಣ!

'ನವಯುಗ'ಕ್ಕೆ ಯಾವತ್ತೂ ವಿಧದಿಂದ ನೆರವಾಗುತ್ತಿರುವ ಸರ್ವರಿಗೂ ಈ ಸಂದರ್ಭದಲ್ಲಿ ನಮ್ಮ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಸಾಮ್ರಾಜ್ಯವಾದೀ ಫ್ರೆಂಚರ ತಂತ್ರ
ಮೊರೊಕ್ಕೋದಲ್ಲಿ ಸುಲ್ತಾನರ ಪದಚ್ಯುತಿ

ಆಫ್ರಿಕಾದ ಉತ್ತರ ಪ್ರದೇಶದಲ್ಲಿ ಭೂಮಧ್ಯ ಸಮುದ್ರ ತೀರದಲ್ಲಿರುವ, ಫ್ರೆಂಚ ಸಾಮ್ರಾಜ್ಯಶಾಹಿಗೆ ಒಳಪಟ್ಟ, ಮೊರೊಕ್ಕೋದಿಂದ ಈಗ ವಿಷಾದಕರ ವಾರ್ತೆಯೊಂದು ಬಂದಿರುತ್ತದೆ. ಮೊರೊಕ್ಕೋದ ಪ್ರಶ್ನೆಯು ಕಳೆದ ಒಂದೂವರೆ ವರ್ಷದಿಂದ ರಾಜಕೀಯ ಕ್ಷೇತ್ರದಲ್ಲಿ ತುಂಬ ಮಹತ್ವ ಪಡೆದಿದ್ದಿತು. ಆದರೆ ಇಂದಿನ ಘಟನೆಗಳಿಗೆ ಅದಕ್ಕೂ ದೀರ್ಘಕಾಲದ ಹಿನ್ನಲೆಯುಂಟು. ಫ್ರೆಂಚ ಸಾಮ್ರಾಜ್ಯಶಾಹಿ ಪ್ರಭುತ್ವದ ವಿರುದ್ಧ ಮೊರೊಕ್ಕೋದಲ್ಲಿ ರಾಷ್ಟ್ರೀಯ ಚಳುವಳಿಯು ಪ್ರಾಬಲ್ಯಕ್ಕೆ ಬರುತ್ತಿದ್ದಂತೆಯೇ, ಫ್ರೆಂಚ ಸರಕಾರ ಅದನ್ನು ದಮನಿಸಲು ಭೇದೋಪಾಯವನ್ನು ಕೈಗೊಳ್ಳುತ್ತಿತ್ತು. ಈಗ ಫ್ರೆಂಚರ ದಮನ ನೀತಿಯು ಪರಾಕಾಷ್ಠೆಗೆ ಮುಟ್ಟಿದೆ; ಮತ್ತು ಪರಿಣಾಮವಾಗಿ ಮೊರೊಕ್ಕೋದ ಸುಲ್ತಾನರಾದ ಸಿದಿ ಮುಹಮ್ಮದ್ ಬೆನ್ ಯುಸೂಫರನ್ನು ಪದಚ್ಯುತಮಾಡಿ, ಕೊರ್ಸಿಕಾ ದ್ವೀಪದಲ್ಲಿ ದಿಗ್ಬಂಧನದಲ್ಲಿ ಇಟ್ಟಿರುವರು. ಫ್ರೆಂಚರು ತಮ್ಮ ಕ್ರಮಕ್ಕೆ ಸಮಾಧಾನ ಕೊಡುತ್ತಾ ದೇಶದೊಳಗೆ ಆಂತರಿಕ ಗಲಭೆಗೊಂದಲಗಳು ತಲೆದೋರಿದುದರಿಂದ ಮತ್ತು ಸುಲ್ತಾನರ ವಿರುದ್ಧ ಜನರ ಆಕ್ರೋಶ ಹೆಚ್ಚಿದ್ದರಿಂದ, ಸಿದಿ ಮುಹಮ್ಮದರನ್ನು ಸ್ಥಾನ ಭ್ರಷ್ಟಮಾಡುವ ಆಗತ್ಯಬಿತ್ತೆಂದು ಹೇಳಿರುವರು.

ಸ್ವಾತಂತ್ರ್ಯದ ಅಪೇಕ್ಷೆ

ಆದರೆ ವಸ್ತುಸ್ಥಿತಿಯ ಪರಿಜ್ಞಾನ ಸ್ವಲ್ಪ ಮಾತ್ರ ಇದ್ದರೂ ಸಾಕು- ಫ್ರೆಂಚ ಸಾಮ್ರಾಜ್ಯಶಾಹಿಯು ಮೊರೊಕ್ಕೋದಲ್ಲಿ ಪ್ರಜೆಗಳ ಸ್ವಾಭಾವಿಕ ಆಕಾಂಕ್ಷೆಯನ್ನು—ರಾಷ್ಟ್ರೀಯ ಚಳುವಳಿಯನ್ನು—ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲು ಯೋಚಿಸಿ, ಕೈಗೊಂಡ ಕ್ರಮವಿದೆಂದು ತಿಳಿಯಬಹುದು. ಯಾದವೀ ಯುದ್ಧವಾಗುವ ಭಯ ಇಂದು ನಿನ್ನೆಯದಲ್ಲ- ಫ್ರೆಂಚ ಸಾಮ್ರಾಜ್ಯಶಾಹಿತ್ವಕ್ಕೂ ರಾಷ್ಟ್ರೀಯ ಮನೋವೃತ್ತಿಗೂ ತಾಳ ಮೇಳ ಎಂದಿಗೂ ಕೂಡಿಬರುವಂತಿರಲಿಲ್ಲ. ರಾಷ್ಟ್ರೀಯ ಚಳುವಳಿಯನ್ನೆ ಫ್ರೆಂಚಸರಕಾರ "ಯಾದವೀಕಲಹ"ದ ಬೀಜ ರೂಪದಲ್ಲಿ ಕಂಡಿರಬಹುದೆಂದು ತರ್ಕಿಸಲು ಆಧಾರವಿದೆ. ಈ ಚಳುವಳಿಯನ್ನು ಕೈಗೊಂಡು ಸ್ವತಂತ್ರ ಪ್ರಜೆಗಳಾಗ ಬಯಸುತ್ತಿದ್ದ "ಇಸ್ತಿಕಲಾಲ್" ದೇಶಪ್ರೇಮಿಗಳಿಗೆ ಮೊರೊಕ್ಕೋದ ಪದಚ್ಯುತ ಸುಲ್ತಾನರ ಸಂಪೂರ್ಣ ಸಹಾನುಭೂತಿಯೂ ಬೆಂಬಲವೂ ಇದ್ದಿತು; ಮತ್ತು ಈಗ ಸಹ ಕೊರ್ಸಿಕಾ ನಡುಗುಡ್ಡೆಯಲ್ಲಿ ದಿಗ್ಬಂಧನದಲ್ಲಿ ಇದ್ದಂತೆಯೇ ಈ ರಾಷ್ಟ್ರೀಯ ವೀರರ ಶೌರ್ಯ ಸಾಹಸಗಳನ್ನು ಹುರಿದುಂಬಿಸುವ ವರ್ಚಸ್ಸು ಸುಲ್ತಾನರಲ್ಲಿದೆ. ಫ್ರೆಂಚರು ದಿನದಿನಕ್ಕೂ ಪ್ರಬಲಗೊಳ್ಳುತ್ತಿರುವ ರಾಷ್ಟ್ರೀಯ ಚಳುವಳಿಯನ್ನು ದಮನ ಮಾಡಲು ಕೆಲವು ಸಾಮಾನ್ಯ ಸುಧಾರಣೆಗಳನ್ನು ನೀಡಲು ಮುಂಬಂದಿದ್ದರು. ಆದರೆ ಸುಲ್ತಾನರಿಗೆ ಇದು ಏನೇನೂ ತೃಪ್ತಿಕರವಿಲ್ಲ. ಜನರ ಸ್ವತಂತ್ರ ಮನೋಭಾವಕ್ಕೆ ಪೋಷಕವಲ್ಲದ ಫ್ರೆಂಚ ರಾಜಕಾರಣವನ್ನು ಸುಲ್ತಾನರು ಎಂದೂ ಒಪ್ಪುತ್ತಿರಲಿಲ್ಲ.

ದೂರೊಯ್ಯುವ ಸಿದ್ಧತೆ

ಫ್ರೆಂಚರಿಗೆ ಮೊರೊಕ್ಕೋದಲ್ಲಿ ತಾವು ಮುಂದಿಟ್ಟ ಪ್ರತಿಯೊಂದೂ ಪತ್ರಕ್ಕೆ ತುಟಿಪಿಟಕ್ಕೆನ್ನದೆ ಸಹಿ ಹಾಕುವ ಸುಲ್ತಾನನೊಬ್ಬನಿದ್ದರೆ ಸಾಕೆಂದು ತೋರಿದೆ- ಆದರೆ ಫ್ರೆಂಚ ರೆಸಿಡೆಂಟ ಜನರಲ್ಲನ ತಾಳಕ್ಕೆ ತಕ್ಕಂತೆ ಕುಣಿಯಲು ಸಿದಿಮುಹಮ್ಮದ ಸುಲ್ತಾನರು ಕೇಳುತ್ತಿರಲಿಲ್ಲ. ಇದರಿಂದ ಸಿಟ್ಟಿಗೆದ್ದ ಫ್ರೆಂಚರು ಮೊರೊಕ್ಕೋದಲ್ಲಿ ಸ್ವಾತಂತ್ರ್ಯಪ್ರಿಯ ರಾಷ್ಟ್ರೀಯ ಚಳುವಳಿಗಾರರ ವಿರುದ್ಧ ಬರ್ಬರ ಜನಾಂಗದವರನ್ನು ಎತ್ತಿಕಟ್ಟಿದರಲ್ಲದೆ, ತಾವೇ ಪ್ರಚೋದಿಸಿದ ಈ ವಿರೋಧವನ್ನು ಯಾದವೀ ಕಲಹದ ದೃಷ್ಟಿಕ್ಕೆಯೆಂದು ಡಂಗುರ ಸಾರಿದರು. ಮೊರೊಕ್ಕೋದಲ್ಲಿ ಸುಲ್ತಾನನು ರಾಜಕೀಯ ವರಿಷ್ಠನಾಗಿರುವಂತೆ ಧಾರ್ಮಿಕ ದೃಷ್ಟಿಯಿಂದಲೂ ಉನ್ನತ ಸ್ಥಾನವನ್ನು ಪಡೆದಿದ್ದಾನೆ. ಮೊರೊಕ್ಕೋದ ಜನರಲ್ಲಿಯೇ ಬರ್ಬರ ಜಾತಿಯವರನ್ನು ಧಾರ್ಮಿಕಭಾವನೆಯಿಂದ ಉದ್ರೇಕಗೊಳಿಸಿ ಫ್ರೆಂಚರು ತಮ್ಮ ಈಗಿನ ಆಟವನ್ನು ಹೂಡಿದ್ದಾರೆ. ಮತ್ತು ಪಾಶಾಗಳಲ್ಲಿ ಒಬ್ಬನನ್ನೆ ತಮ್ಮ ಕೈಗೊಂಬೆ ಸುಲ್ತಾನನನ್ನಾಗಿ ನೇಮಿಸಿದ್ದಾರೆ. ಇವನನ್ನು ಜನತೆ ಒಪ್ಪುವಂತಿಲ್ಲ; ಜನತೆ ಮಾತ್ರವಲ್ಲ, ಲೋಕದ ಯಾವುದೇ ಪ್ರಜಾಪ್ರಭುತ್ವವಾದಿ ಜನಾಂಗ ಒಪ್ಪುವುದು ಸಾಧ್ಯವಿಲ್ಲ. ಫ್ರೆಂಚರು ಮೊರೊಕ್ಕೋದಲ್ಲಿ ನಡೆಸಿದ ವರ್ತನೆಯು ಅರಬ -ಏಶಿಯಾ ರಾಷ್ಟ್ರಗಳನ್ನು ಇನ್ನಷ್ಟು ಕೆರಳಿಸಿದೆ—ಮತ್ತು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಈ ಪ್ರಶ್ನೆಯನ್ನು ಈ ಸಲ ಎತ್ತಿಯೇ ತೀರುವ ದೃಢ ಸಂಕಲ್ಪವನ್ನು ಪ್ರಕಟ ಮಾಡಿರುತ್ತವೆ. ಆದರೆ ಫ್ರೆಂಚ ಸರಕಾರ ಈ ವಿಷಯವು ತನ್ನ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದ ಸಂಗತಿಯೆಂದು ಹೇಳಿಬಿಟ್ಟು, ಬಾಲ ಮುದುರಿ ಜಾರಿಕೊಳ್ಳುವ ಸಂಭವವಿದೆ; ಮತ್ತು ಈ ಹೊಂಚಿನಲ್ಲಿ ಬ್ರಿಟನು ಇತ್ಯಾದಿ ಬೇರೆ

ಸಾಮ್ರಾಜ್ಯ ಶಾಹಿ ಸ್ನೇಹಿತರು ಫ್ರೆಂಚರನ್ನು ಎತ್ತಿಗಟ್ಟುವುದರಲ್ಲಿ ಸಂದೇಹವಿಲ್ಲ. ಆದರೆ ಅರಬ ಜನರು ಸ್ವಾತಂತ್ರ್ಯಕ್ಕೋಸ್ಕರ ಜೀವದ ಪಣತೊಟ್ಟು ಕಾದಲು ಸನ್ನದ್ಧರಾಗಿರುವರೆಂಬುದನ್ನು ಯಾರೂ ಮರೆಯಬಾರದು.

ಮುಸಾದಿಕರ ಬಂಧನ

ರಾಣಿ ಸೊರಾಯಾಳನ್ನು ಕೂಡಿಕೊಂಡು ಇರಾಣದ ಶಹಾರು ಪಲಾಯನಮಾಡಿದುದೂ, ಅವರ ಪಲಾಯನದ ಬೆನ್ನಿಗೇ ಟೆಹರಾನದಲ್ಲಿ ರಾಜನ ಅಂಗ ರಕ್ಷಕರು ಮುಸಾದಿಕರ ಸರಕಾರವನ್ನು ಉರುಳಿಸಲು ದಂಗೆ ಎದ್ದುದೂ ಕಳೆದ ವಾರದ ರೋಮಾಂಚಕ ಸಂಗತಿಯಾಗಿದ್ದಿತು. ಈ ದಂಗೆಯನ್ನು ಮುಸಾದಿಕರು ಕ್ಷಣಮಾತ್ರದಲ್ಲೇ ಅಣಗಿಸಿ ಬಿಟ್ಟರು. ಮತ್ತು ತಮ್ಮ ಸ್ಥಾನ ಭದ್ರತೆಗೋಸ್ಕರ ಅಗತ್ಯದ ಕಾರ್ಯಕ್ರಮಗಳನ್ನೂ ಅವರು ಕೈಗೊಂಡರು. ಶಹಾರು ಈ ಗೊಂದಲದಿಂದ ದೂರವಿರ ಬಯಸಿ ಎಲ್ಲಿಗೆಂದು ಗೊತ್ತುಗುರಿ ಇಲ್ಲದೆ ಪಲಾಯನ ಗೈದುದನ್ನೂ ರಾಜನಿಷ್ಠರು ಮಾಡಿದ ಕ್ರಾಂತಿ ವಿಫಲಗೊಂಡುದನ್ನೂ ಕಂಡು, ಇರಾಣದಲ್ಲಿ ಈ ಜಿಪ್ತದಂತೆ ಗಣರಾಜ್ಯದ ವ್ಯವಸ್ಥೆಯಾಗುವುದೇ ಎಂದು ತೋರಿದ್ದಿತು. ಆದರೆ ಘಟನೆಗಳುಬಹಳ ಬೇಗನೇ ರೂಪ ಬದಲಿಸಿವೆ. ಮತ್ತು ಈಗ ಇರಾಣದಲ್ಲಿ ರಾಜನಿಷ್ಠರ ಕೈ ಮೇಲಾಗಿ ಮುಸಾದಿಕರು ಬಂಧನಗೃಹದಲ್ಲಿದ್ದಾರೆ. ಓಡಿ ಹೋದ ಶಹಾರು ತಮ್ಮ ಪ್ರಜೆಗಳ ಆಹ್ವಾನವನ್ನು ಸ್ವೀಕರಿಸಿ, ಮರಳಿ ಟೆಹರಾನಿಗೆ ಚಿತ್ತೈಸಿದ್ದಾರೆ. ಸೊರಾಯಾ ರಾಣಿ ಮಾತ್ರ ಅಸ್ವಾಸ್ಥ್ಯದ ದೆಸೆಯಿಂದ ಬರಲಾಗದೆ ರೋಮಿನಲ್ಲಿಯೇ ಉಳಿದಿರುವಳು. ಶಹಾರು ಪ್ರಧಾನಿಯೆಂದು ನೇಮಿಸಿದ ಜನರಲ್ ಜಹೇದಿಯವರು ಮುಸಾದಿಕರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಹಿರಂಗ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಸಾರಿದ್ದಾರೆ.

ಮುಂದೆ ಹೇಗೆ?

ಜನರಲ್ ಜಹೇದಿಯವರು ಇಷ್ಟರಲ್ಲಿಯೇ ಟೆಹರಾನದ ಪರಿಸ್ಥಿತಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರುವರು. ಜನತೆಯನ್ನು ಉದ್ದೇಶಿಸಿ ಅವರು ಮಾಡಿದ ಪ್ರಸಾರ ಭಾಷಣದಲ್ಲಿ ಪ್ರಜಾಜನರ ಪರಿಸ್ಥಿತಿಯನ್ನು ಸುಧಾರಿಸುವ ಕೆಲವು ಭರವಸೆಗಳನ್ನು ಕೊಟ್ಟಿರುವರು. ಇದು ಜನರಿಗೆ ಆಕರ್ಷಕವಾಗಿ ಕಂಡುಬಂದು, ಜಹೇದಿ ಸರಕಾರವನ್ನು ಬೆಂಬಲಿಸಬಹುದು. ಇರಾಣದ ಗುಡ್ಡನಾಡು ಪ್ರದೇಶಗಳಲ್ಲಿ ಶಹಾರಿಗೆ ಬಹಳ ಬೆಂಬಲವಿದೆ; ರಾಣಿ ಸೊರಾಯ ಈ ಗುಡ್ಡಗಾಡು ಗುಂಪುಗಳಲ್ಲಿ ಒಂದಕ್ಕೆ ಸೇರಿರುವಳೆಂಬುದೇ ಇದರ ಕಾರಣ. ಶಹಾರ ಅಂಗ ರಕ್ಷಕರ ದಂಗೆ ವಿಫಲಗೊಂಡು, ಮುಸಾದಿಕರು ಜನರಲ್ ಜಹೇದಿಯವರನ್ನು ಹಿಡಿದು ಕೊಟ್ಟವರಿಗೆ ದೊಡ್ಡ ಮೊತ್ತದ ಬಹುಮಾನ ಸಾರಿದ ಗಳಿಗೆಯಲ್ಲಿ—ಜಹೇದಿಯವರು ಈ ಗುಡ್ಡಗಾಡು ಜನರ ಕೃಪೆಯನ್ನು ಬಯಸಿ, ಅಲ್ಲಿ ತಲೆಮರೆಸಿಕೊಂಡಿದ್ದರು ಹೀಗಿದ್ದರೂ—ಮುಸಾದಿಕರು ಇರಾಣದ ಜನತೆಯ ಹೃದಯವನ್ನು ಮೊನ್ನೆ ಮೊನ್ನೆಯವರೆಗೂ ಸಂಪೂರ್ಣ ತನ್ನ ಕಡೆಗೆ ಆಕೃಷ್ಟ ಮಾಡಿದ್ದರೆಂದೂ ಎಣ್ಣೆ ಕಂಪೆನಿಗಳ ರಾಷ್ಟ್ರೀಕರಣದಂಥ ಗಂಭೀರ ಹೆಜ್ಜೆಯನ್ನಿಡುವಾಗ, ರಾಷ್ಟ್ರಕ್ಕೆ ರಾಷ್ಟ್ರವೇ ಅವರನ್ನು ಬೆಂಬಲಿಸಿತೆಂದೂ ಗಮನಿಸಿದರೆ ಇರಾಣದ ಪರಿಸ್ಥಿತಿ ಹೀಗೆಯೇ ಉಳಿಯುವುದೆಂದು ಹೇಳಲಾರೆವು. ಘಟನಾತ್ಮಕವಾಗಿ ಶಹಾರು ಬೇರೊಬ್ಬ ಪ್ರಧಾನಿಯನ್ನು ನೇಮಿಸುವುದು ಸರಿಯಾದರೂ ಜನರಲ್ ಜಹೇದಿಯವರಂಥ ವಿದೇಶೀ ಸರಕಾರದ ಕೈಗೊಂಬೆ ಪ್ರಧಾನಿಯಿಂದ ಇರಾಣೀ ಜನತೆ ಲಾಭಪಡೆಯುವುದು ಸಂಶಯ.

ಪ್ರಾತಿನಿಧ್ಯದ ಪ್ರಶ್ನೆ

ಕೊರಿಯಾದ ಕುರಿತು ಸೇರುವ ರಾಜಕೀಯ ಪರಿಷತ್ತಿನಲ್ಲಿ ಪ್ರಾತಿನಿಧ್ಯಕೊಡಬೇಕಾದ ರಾಷ್ಟ್ರಗಳ ಪಟ್ಟಿಯನ್ನು ತಯಾರು ಮಾಡುವ ಕೆಲಸ ಇನ್ನೂ ಬಾಕಿ ಇದೆ. ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯ ಮುಂದೆ ಈ ವಿಷಯವು ಚರ್ಚೆಗೆ ಬಂದಿರುತ್ತದೆ; ಮತ್ತು ಪ್ರಾಯಶಃ ಈ ವಾರಾಂತ್ಯದೊಳಗೆ ನಿರ್ಣಯವಾಗುವ ನಿರೀಕ್ಷೆ ಇದೆ. ರಾಜಕೀಯ ಸಮಿತಿಯ ಮುಂದೆ ರಶಿಯಾದ ಗೊತ್ತುವಳಿಯೊಂದು ಇದೆ. ಇದರಲ್ಲಿ ಹನ್ನೊಂದು ರಾಷ್ಟ್ರಗಳು ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸಬೇಕೆಂದೂ ಭಾರತವೂ ಅವುಗಳಲ್ಲಿ ಒಂದಾಗಿರಬೇಕೆಂದೂ ಹೇಳಲಾಗಿದೆ. ರಾಷ್ಟ್ರ ಕೂಟದ ಸದಸ್ಯ ರಾಷ್ಟ್ರಗಳಲ್ಲಿ ಕೆಲವು ಗೊತ್ತುವಳಿಯೊಂದನ್ನು ಮಂಡಿಸಿ, ಭಾರತಕ್ಕೆ ಪ್ರಾತಿನಿಧ್ಯ ದೊರೆಯಬೇಕೆಂದು ಪ್ರತ್ಯೇಕವಾಗಿ ಕೇಳಿಕೊಂಡಿವೆ. ರಾಜಕೀಯ ಸಮಿತಿಯ ಮುಂದೆ ಇದುವರೆಗೆ ಮಾಡಲಾದ ಭಾಷಣಗಳ ನೋಟದಿಂದ ಹೇಳುವುದಾದರೆ-ಭಾರತಕ್ಕೆ ಪ್ರಾತಿನಿಧ್ಯ ಕೊಡುವುದನ್ನು ಹೆಚ್ಚಿನ ರಾಷ್ಟ್ರಗಳು ಅಪೇಕ್ಷಿಸುತ್ತವೆ. ಆದರೆ ಅಮೇರಿಕಾ ಈ ಸೂಚನೆಯನ್ನು ಖಂಡತುಂಡ ಮಾತುಗಳಿಂದ ವಿರೋಧಿಸಿದೆ. ದಕ್ಷಿಣ ಕೊರಿಯಾದ ಪ್ರತಿನಿಧಿ ಸಹ ಭಾರತಕ್ಕೆ ಪ್ರಾತಿನಿಧ್ಯ ಕೊಡಲೇಬಾರದೆಂದು ಆಗ್ರಹಪಟ್ಟಿದ್ದಾನೆ. ಅಮೇರಿಕಾ ಹಾಗೂ ದಕ್ಷಿಣ ಕೊರಿಯಾಗಳಲ್ಲಿ ಯಾರ ಬಾಲವನ್ನು ಯಾರು ಹಿಡಿದುಕೊಂಡಿರುವರೆಂಬುದೇ ತಿಳಿಯದಂತಿದೆ. ಅಮೇರಿಕವನ್ನು ದಕ್ಷಿಣ ಕೊರಿಯಾವೂ ದಕ್ಷಿಣ ಕೊರಿಯಾವನ್ನು ಅಮೇರಿಕಾವೂ ಎತ್ತಿ ಹಿಡಿಯುವುದು ಚೋದ್ಯವಾಗಿ ಪರಿಣಮಿಸಿದೆ.

ಅಮೇರಿಕಾದ ಹಟ

ಅಮೇರಿಕಾ ತನ್ನ ಹಟ ಸಾಧನೆಗೆ ಪ್ರಧಾನಿ ನೆಹರೂರವರು ಹೇಳಿದ ಒಂದು ಮಾತನ್ನು ಉಪಯೋಗಿಸಿಕೊಂಡಿದೆ. ನೆಹರೂ ಪಾರ್ಲಿಮೆಂಟಿನ ಮುಂದೆ ಹೇಳಿಕೆ ಕೊಡುವಾಗ "ಪ್ರಮುಖ ಪಕ್ಷಗಳು" ರಾಜಕೀಯ ಪರಿಷತ್ತಿನಲ್ಲಿ ಭಾರತ ಭಾಗವಹಿಸುವುದನ್ನು ಇಚ್ಛಿಸುವುದಿಲ್ಲವಾದರೆ, ಭಾರತಕ್ಕೆ ಆ ಪ್ರಾತಿನಿಧ್ಯದ ಅಪೇಕ್ಷೆ ಇಲ್ಲವೆ.ದೂ ಹಾಗೆಂದು – ಶಾಂತಿಗೋಸ್ಕರ ಭಾರತದ ಮೇಲೆ ಪ್ರಾತಿನಿಧ್ಯ ಸ್ವರೂಪದಯಾ ಇತರ ವಿಧವಾದ ಯಾವುದೇ ಹೊಣೆಗಾರಿಕೆಯನ್ನು ಹೇರಿದರೂ ಅದನ್ನು ಚೊಕ್ಕ ರೀತಿಯಲ್ಲಿ ನಿರ್ವಹಿಸಲು ಭಾರತ ಬದ್ಧವಾಗಿದೆಯೆಂದೂ ನುಡಿದಿದ್ದರು. ಪ್ರಮುಖ ಪಕ್ಷಗಳೆಂದರೆ ತಾನೂ ಒಂದೆಂದು ಅಮೇರಿಕಾ ತಿಳಿದುಕೊಂಡಿದ್ದಿತು; ಆದರೆ ಭಾರತದ ಪ್ರತಿನಿಧಿ ಶ್ರೀ ಕೃಷ್ಣ ಮೆನೊನ್ನರು ಈ ಭ್ರಮೆಯನ್ನು ನಿರಸನಗೊಳಿಸಿದರು: ಸಂಯುಕ್ತರಾಷ್ಟ್ರ ಸಂಘ ಹಾಗೂ ಕಮ್ಯೂನಿಸ್ಟ ಪಕ್ಷಗಳೇ ಪ್ರಮುಖ ಪಕ್ಷಗಳೆಂದು ಅವರು ಸ್ಪಷ್ಟಗೊಳಿಸಿದರು. ಆದುದರಿಂದ ತನ್ನ ಇಷ್ಟ—ಅನಿಷ್ಟಗಳನ್ನು ಕೊಂಡಿಕೊಂಡು ಭಾರತದ ಪ್ರಾತಿನಿಧ್ಯ ಪ್ರಶ್ನೆ ಇತ್ಯರ್ಥವಾಗುವುದಿಲ್ಲೆಂದು ಅಮೇರಿಕಾ ಈಗ ಮನಗಂಡಿದೆ. ರಾಜಕೀಯ ಸಮಿತಿಯಲ್ಲಿ ತನಗೆ ಬಹುಮತ ದೊರೆಯದಿದ್ದರೂ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ತನ್ನ ಜೀತ ಬೇಯ.ಒಹುದೆಂದು ಅಮೇರಿಕಾ ಬಲವಾಗಿ ನಂಬಿದೆ. ಸಾಮಾನ್ಯ ಸಭೆಯಲ್ಲಿ ನಿರ್ಣಯದ ಅಂಗೀಕಾರಕ್ಕೆ ಮೂರರಲ್ಲಿ ಎರಡರ ಬಹುಮತದ ಅಗತ್ಯ ಬೀಳುವುದರಿಂದ ದಕ್ಷಿಣ ಅಮೇರಿಕಾದ ರಾಷ್ಟ್ರಗಳ ಮನದೊಲವನ್ನು ಸಂಪಾದಿಸಿ ಭಾರತದ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ನಿರ್ಣಯ ಬಿದ್ದುಹೋಗುವಂತೆ ಮಾಡಲು ಅಮೇರಿಕಾ ಹವಣಿಸಿದೆ.

ಪ್ರಕಟಣೆ

ಉಡುಪಿ ತಾಲೂಕು ಪೆರ್ಡೂರು ಗ್ರಾಮದ ಕೊತ್ವಾಲ್ದಲ್ಲಿರುವ ಸುಬ್ಬಣ್ಣ ಸೆಟ್ರ ಅಳಿಯ, ಮಹಾಬಲ ಸೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವುದೇನೆಂದ್ರೆ—ತಾ. 20—8—1953ನೇ ನವಯುಗದ ಸಂಚಿಕೆಯಲ್ಲಿ ಸದ್ರಿ ಪೆರ್ಡೂರು ಗ್ರಾಮದ ಕೊತ್ವಾಲ್ದಲ್ಲಿರುವ ಅಕ್ಕಮ್ಮ ಸಡ್ತೀರ ಮಗ ದೂಮಣ್ಣ ಸೆಟ್ರು ಒಂದು ಪ್ರಕಟಣೆ ಕೊಟ್ಟದ್ದಾರಾಗಿ ಕಂಡು ಬರುತ್ತದೆ. ಸದ್ರಿ ಪ್ರಕಟಣೆಯಲ್ಲಿ ಹೇಳುವ ಅವರ ತಂಗಿ ಪುಟ್ಟಮ್ಮ ಸೆಡ್ತಿಯನ್ನು ನಾನು ನನ್ನ ಮನೆಗೆ ಕರಕೊಂಡು ಬಂದದ್ದೂ ಇಲ್ಲ–ವ ನನ್ನ ಮನೆಯಲ್ಲಿ ಇರಗೊಡಿಸಿದ್ದೂ ಇಲ್ಲ–ವ ಹಾಗೆ ಮಾಡಲು ನನಗೆ ಯಾವ ಅಗತ್ಯವೂ ಇಲ್ಲ. ಸದ್ರಿ ಪ್ರಕಟಣೆಯನ್ನು ದೂಮಣ್ಣ ಸೆಟ್ರು ಏನೋ ಒಂದು ಕೆಟ್ಟ ಇರಾದೆಯಿಂದ ವ. ತನ್ನ ಸ್ವಂತ ಪ್ರಯೋಜನಕ್ಕಾಗಿ ಮಾಡಿದ್ದಾಗಿರಬೇಕು. ಸದ್ರಿ ಪುಟ್ಟಮ್ಮ ಸೆಡ್ತಿಯಿಂದ ಯಾರಾದರೂ ಯಾವತರದ ವ್ಯವಹಾರಗಳನ್ನು ಮಾಡಿದರೂ ನನಗೆಯೂ ನಮ್ಮ ಕುಟುಂಬಕ್ಕೆ ಯಾವ ಬಂಧನವೂ ಮತ್ತು ಬಾಧ್ಯತೆಯೂ ಇಲ್ಲ! ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತೇನೆ

ಕೊತ್ವಾಲ್ ಮಹಾಬಲ ಸೆಟ್ಟಿ ರುಜು

ತಾ 25—8—53

ತಾರೀಕು 25—8—53ರಿಂದ

ಪರದೇಶ್

ಮಧುಬಾಲಾ, ರೆಹಮಾನ್, ಕರನ್ ದಿವಾನ್ ಮೊದಲಾದವರು.

ಬರುವ ಚಿತ್ರ. ಸೌಧಾಗರ್ (ರೆಹಮಾ, ನಾಸೀರ್ ಖಾನ್)

ಅನಂತರು, ಮುಖದ್ದಾರ್, ರಾಮ್ ವಿವಾಹ, ಚಮ್ ಚಮಾ ಚಮ್, ಆಸ್ಮಾನ್ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರಿಸ್, ಲಿ. ಉಡುಪಿ.

ಉಡುಪಿ

ಉದ್ಘಾಟನಾ ಸಮಾರಂಭ:—ಸ್ಥಳೀಯ ಎಮ್. ಜಿ ಎಮ್. ಕಾಲೇಜಿನ ಅರ್ಥ ಶಾಸ್ತ್ರ ಮತ್ತು ಚರಿತ್ರೆ ಸಂಘದ ಉದ್ಘಾಟನಾ ಸಮಾರಂಭವನ್ನು ಇದೇ ತಾ 20ರಲ್ಲಿ ಬೊಂಬಾಯಿ ಕೋರ್ಪರೇಶನ್ ಕಮಿಶನರ ಶ್ರೀ ಪಿ. ಆರ್. ನಾಯ್ಕರು ನೆರವೇರಿಸಿದರು. ಪ್ರಿನ್ಸಿಪಾಲ್ ಕುಂದರ ರಾಯರು ಅಧ್ಯಕ್ಷತೆಯನ್ನು ವಹಿಸಿದರು. ಶ್ರೀ ಪಿ. ರಾಘವೇಂದ್ರ ರಾಯರು ಸ್ವಾಗತ ಭಾಷಣ ಮಾಡಿದರು.

ಚಹಾ ಸತ್ಕಾರ:—ಉಡುಪಿ ಮುನಿಸಿಪಲ್ ಕೌನ್ಸಿಲಿನವರು ಇದೇ ತಾ 21ರಲ್ಲು ಬೆಳಿಗ್ಗೆ ಬೊಂಬಾಯಿ ಕೋರ್ಪರೇಶನ್ ಕಮಿಶನರ್ ಶ್ರೀ ಪಿ. ಆರ್. ನಾಯ್ಕರಿಗೆ ಚಹಾ ಸತ್ಕಾರ ಮಾಡಿದರು. ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರು ಸ್ವಾಗತಿಸಿ ಹೂಮಾಲೆಯನ್ನಿತ್ತರು. ಮಾನ್ಯ ಅತಿಥಿಯು ತನಗಿತ್ತ ಸತ್ಕಾರಕ್ಕಾಗಿ ಆಭಾರ ಸೂಚಿಸಿದರು. ಡಾ! ಕೆ ಎಲ್. ಐತಾಳರು ಧನ್ಯವಾದಗಳನ್ನರ್ಪಿಸಿದರು.

ಸಪ್ತಾಹ ಮಂಗಲ—ಸ್ಥಳೀಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಇದೇ ತಾ 15ರಲ್ಲಿ ಪ್ರಾರಂಭವಾದ ಭಜನ ಸಪ್ತಾಹವು ತಾ 22ರಲ್ಲಿ ಮಂಗಲಾಚರಣೆ, ಸಂತರ್ಪಣೆಗಳಿಂದ ವೈಭವ ಪೂರ್ಣವಾಗಿ ಮುಕ್ತಾಯ ಹೊಂದಿತು.

'ಓಂ' ಆಚರಣೆ ಮತ್ತು ಡಾ! ಪೈಗಳಿಗೆ ಮಾನಪತ್ರ ಸಮರ್ಪಣೆ:—ಇದೇ ತಾ 21ನೆ ಸಂಜೆ ಸ್ಥಳೀಯ ಕೇರಳ ಸಮಾಜ ದವರು ತಮ್ಮ ನಾಡ ಹಬ್ಬವಾದ 'ಓಣಂ' ಹಬ್ಬವನ್ನು ಡಾ! ಎ! ರಾಮಚಂದ್ರ ಶ್ರೀ ಮುಕುಂದ ಕಾಮತ್‌ರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಆಚರಿಸಿದರು. ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾದ ಡಾ! ಟಿ. ಎಮ್. ಎ. ಪೈಗಳಿಗೆ ಮಾನಪತ್ರವಿತ್ತು ಸತ್ಕರಿಸಲಾಯಿತು. ಉಪಾಧ್ಯಾಯರಾದ ಶ್ರೀ ಗೋಪಾಲ ಮೆನನ್ ಸ್ವಾಗತ, ಶ್ರೀ ಗೋವಿಂದನ್ ನಾಯರ್, ಕೆ. ಪಿ. ದೇವದಾಸ್ ಇವರು 'ಓಣಂ' ಹಬ್ಬದ ಮಹತ್ವದ ಕುರಿತು ಭಾಷಣ ಮಾಡಿದರು. ಶ್ರೀ. ಕೆ. ಕೆ. ಪಿಳ್ಳೆಯವರು ಮಾನಪತ್ರವನ್ನು ಓದಿ ಡಾ! ಪೈಗಳಿಗೆ ಅರ್ಪಿಸಿದರು. ಡಾ! ಪೈಗಳು ಸಂದರ್ಭೋಚಿತ ಭಾಷಣ ಮಾಡಿದ ಮೇಲೆ ಶ್ರೀ. ಟಿ ಎ. ವಾಸುದೇವನ್‌ರವರು 'ಓಣಂ' ಪಾಟುಗಳನ್ನಿತ್ತರು. ಕೊನೆಗೆ ಕೋಲಾಟ, ನರ್ತನ, ಮೊದಲಾದ ವಿವಿಧ ವಿನೋದಾವಳಿ, ಶ್ರೀ ಟಿ. ಎನ್. ಕೇಳು ನಂಬಿಯಾರರಿಂದ ಧನ್ಯವಾದಾರ್ಪಣೆಯಾಯಿತು.

ಅಂಗವಿಹೀನರಿಗಾಗಿ ಕೆಲಸ ಮಾಡಲು ಅಶಕ್ತರಾದ ಅನಾಥ ಮಕ್ಕಳಿಗೆ ತಾಜ ಮಹಲ್ ಹೋಟೆಲಿನ ಒಡೆಯರು ಇದೇ ತಾ 22ರಿಂದ ಬರುವ ತಾ 15ರ ವರೆಗಿನ ಶನಿವಾರ ದಿವಸಗಳಲ್ಲಿ ಬೆಳಿಗ್ಗೆ 8ರಿಂದ 10ರ ವರೆಗೆ ಧರ್ಮಾರ್ಥ ಗಂಜಿ ಊಟ ಕೊಡುವರು.

ನಿಧನ—ಉಡುಪಿಯ ಗೌಡ ಸಾರಸ್ವತ ಸಮಾಜದ ಹಿರಿಯ ಧಾರ್ಮಿಕ ವ್ಯಕ್ತಿಗಳೂ, ಬಹುಜನ ಪ್ರೀತರೂ ಆದ ಶ್ರೀ ಮೂಡ್ಕಿ ಸಂತ ಕೇಶವ ಕಾಮತರು ಇತ್ತೀಚೆಗೆ ಅಸ್ವಸ್ಥರಾಗಿದ್ದು, ತಮ್ಮ 69ನೇ ವಯಸ್ಸಿನಲ್ಲಿ ತಾ 18-8-53ರಂದು ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ.

ಕುಂದಾಪುರ.—ತಾ 18ರಲ್ಲಿ ಸ್ಥಳೀಯ ಆಶ್ರಮವಾಸೀಯರು ಉಡುಪಿಯ ಡಾ! ಟಿ. ಮಾಧವ ಪೈಗಳಿಗೆ ಉಪಹಾರವಿತ್ತು ಸತ್ಕರಿಸಿದರು. ವಕೀಲ ಶ್ರೀ ರಘುನಾಥ ಶೆಟ್ಟಿಯವರು ಸ್ವಾಗತ ಭಾಷಣಮಾಡಿ ಡಾ! ಪೈಗಳ ಜನಸೇವಾ ಕಾರ್ಯಗಳನ್ನು ಪ್ರಶಂಸಿಂದರು. ಡಾ! ಪೈಗಳು ಉತ್ತರ ಕೊಟ್ಟು ಆಭಾರ ಸೂಚಿಸಿದರು. ಗಂಗೊಳ್ಳಿಯಲ್ಲಿ ತಾ.17ರಲ್ಲಿ-V ಸ್ಪೋರ್ಟ್ಸ್ ಕ್ಲಬ್‌ನವರು ಡಾ! ಮಾಧವ ಪೈಗಳಿಗೆ ಮಾನಪತ್ರ ಕೊಟ್ಟು ಗೌರವಿಸಿದರು. ಪೈ.ಗಳು ಕಾಲೇಜನ್ನು ಸ್ಥಾಪಿಸಿ ಅವರು ವಿದ್ಯಾಕ್ಷೇತ್ರದಲ್ಲಿ ಮಾಡಿದ ಕ್ರಾಂತಿಯನ್ನು ಕೊಂಡಾಡಿದರು. ಡಾ! ಪೈಗಳು ವಿದ್ಯಾಭ್ಯಾಸ ಕ್ಷೇತ್ರದ ಸರಕಾರದ ಬದಲಾವಣೆಯನ್ನು ವಿವರಿಸಿ ಪ್ರಾಥಮಿಕ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಆಗಿ ಬೇಕಾದ ಅಗತ್ಯಗಳನ್ನು ಹೇಳಿದರು.

ಸ್ವಾತಂತ್ರ್ಯೋತ್ಸವ ಆಚರಣೆಗಳು.

ಕಡಬದಲ್ಲಿ— ದಿನಾಂಕ 15ರಲ್ಲು ಶ್ರೀ ಕೆ. ವಿ. ಸುಬ್ಬರಾಯರು ರಾಷ್ಟ್ರ ಧ್ವಜವನ್ನು ಹಾರಿಸುತ್ತಾ ಗಾಂಧಿಜೀಯವರ ತತ್ವಗಳನ್ನೆತ್ತಿ ಮಾತನಾಡಿದರು.

ಕೈಲಾರು—ಪಂಚಾಯತ ಬೋರ್ಡು ಅಧ್ಯಕ್ಷರಾದ ಶ್ರೀ ಬಿ. ಕಾಳಪ್ಪ ಸೆಟ್ಟರ ನೇತೃತ್ವದಲ್ಲಿ ಮೆರವಣಿಗೆ, ಶ್ರೀ ಎನ್. ಎಸ್. ಹೆಗ್ಡೆಯವರಿಂದ ಧ್ವಜಾರೋಹಣ, ಸಭೆ, ಭಾಷಣಗಳಾದುವು.

ಸಾಂತೂರು—ಪಂಚಾಯತಬೋರ್ಡಿನವರೂ ಊರವರೂ ಶಾಲಾ ಉಪಾಧ್ಯಾಯ, ವಿದ್ಯಾರ್ಥಿಯರೂ ಸೇರಿ ಮೆರವಣಿಗೆಯಿಂದ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬಂದು ಪ್ರಾರ್ಥನೆ ನಡೆಸಿದರು. ಡಾ। ಯು. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಎಸ್. ಸಂಜೀವ ಸೆಟ್ಟರ ಭಾಷಣವಾಯಿತು.

ಮುದರಂಗಡಿಯ— ಭಾರತ ವಾಚನಾಲಯ ಸಮಿತಿಯ ನೇತೃತ್ವದಲ್ಲಿ ಶ್ರೀ ಬಾಬು ಸೆಟ್ರರ ಧ್ವಜವಂದನೆಯಾಗಿ ಮೆರವಣಿಗೆ ಸಭೆಗಳಾದುವು.

ಬೆಳುವಾ— ರೂರಲ್ ಆಸ್ಪತ್ರೆಯ ಎದುರು ಧ್ವಜವಂದನೆ, ಸಭೆ ಜರಗಿದ ಬಳಿಕ ಸಾರ್ವಜನಿಕ ಪ್ರಯೋಜನಕ್ಕಾಗಿ ಹೊಸತಾಗಿ ನಿರ್ಮಿಸಿದ ಹೊಸ ರಸ್ತೆಯನ್ನು ಡಾ। ಶೇಷರಾಯರು ತೆರೆದರು.

ಪಲಿಮಾರು:—ಶಾಲಾಮಕ್ಕಳ ಮೆರವಣಿಗೆ, ಶ್ರೀ ಕೆ. ಸೀತಾರಾಮಅಡಿಗರಿಂದ ಧ್ವಜವಂದನೆ, ಶ್ರೀ ಕೆ. ವೆಂಕಟ್ರಾಯ ಪೈ ಮೊದಲಾದವರ ಭಾಷಣ.

ಬೈರಂಜೆ:—ಶ್ರೀ ಶಾರದಾ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ. ವಿಟಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಮೆರವಣಿಗೆ, ಮಕ್ಕಳಿಗೆ ತಿಂಡಿ ಹಂಚೋಣ. ಕುರುಕಾಲು ಪಂಚಾಯತ ಬೋರ್ಡಿನ ಅಧ್ಯಕ್ಷರಾದ ಪಟೇಲರು ... ಭಾತಕೇರಿ, ಶ್ರೀ ಕೆ. ಗಣಪಯ್ಯ ಸೆಟ್ಟರಿಂದ ಧ್ವಜವಂದನೆ, ಮಕ್ಕಳಿಗೆ ತಿಂಡಿಹಂಚೋಣ, ಸಂಜೆ ಮುನಿಸಿಪಲ್ ಕೌನ್ಸಿಲರ್ ಶ್ರೀ ಬಿ. ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯದಿನಾಚರಣೆಯು ನಡೆಯಿತು.

ಹಳೆಯಂಗಡಿ— ಸಮಾಜ ವಿಕಾಸ ಯೋಜನೆಯ ಆಶ್ರಯದಲ್ಲಿ ಕೈಕೊಂಡ ಹಳೆಯಂಗಡಿ—ಕೊಳುವೈಲು ಸೇತುವೆಯ ಶಂಕುಸ್ಥಾಪನೆ ಕಾರ್ಯವು ಶ್ರೀ ವೆಂಕಟ್ರಯರಾಮಭಾಗರಿಂದ ನೆರವೇರಿಸಲ್ಪಟ್ಟಿತು.

ಜಿಲ್ಲಾಯಿ:—ಮೂಡಬಿದ್ರೆ ಜೈನ ಹೈಸ್ಕೂಲಿನ ಸಮಾಜ ಸೇವಾ ಸಮಿತಿಯ 30 ಮಂದಿ ವಿಧ್ಯಾರ್ಥಿಗಳು ತನ್ನ ಅಧ್ಯಾಪಕರೊಡನೆ ಸ್ವಾತಂತ್ರ್ಯ ದಿನಾಚರಣೆಯಂದು ಕೆಸರು ಗದ್ದೆಯಿಂದ ಗೂರ್ನಾಡಿಗೆ ಹೋಗಲು ಅನುಕೂಲವಾಗುವಂತೆ ಒಂದು ಹೊಸರಸ್ತೆಯ ಕೆಲಸ ಆರಂಭಿಸಿದರು.

ಪುತ್ತೂರು:—ಈ ತಾಲೂಕಿನ ನಿಡ್ಪಳ್ಳಿ ಗ್ರಾಮದ ಪ್ಯಾಲ ಕೋಟೆಯಂಬಲ್ಲಿ ತಾ 13ರಲ್ಲು ಒಂದು ಕನ್ನಡಿಹಾವನ್ನು ಗುಂಡಿಕ್ಕಿ ಕೊಲ್ಲಲಾಯಿತು. ಸದರಿ ಕನ್ನಡಿಹಾವು ಹಲವು ವರುಷಗಳಿಂದಲೂ ಅಲ್ಲಿಯೇ ವಾಸಿಸಿಕೊಂಡಿದ್ದು ಅಧಿಕರಿಗೂ, ಇತರ ಪ್ರಾಣಿವರ್ಗಗಳಿಗೂ ತ್ರಾಸ ಕೊಡುತಿತ್ತು. ಈ ಕನ್ನಡಿಹಾವು ಸಾಧಾರಣ ಎರಡು ಮಾರು ಉದ್ದವೂ, ತಾಳೆ ಮರದಷ್ಟು ತೋರವೂ ಇತ್ತು.

ಪೈವಳಿಕೆ ಪಂಚಾಯತ ಬೋರ್ಡು:—ಅಧ್ಯಕ್ಷರ ಚುನಾವಣೆಯನ್ನು ರದ್ದು ಪಡಿಸಬೇಕಾಗಿ ಕಾಸರಗೋಡು ಡಿ। ಮು। ಕೋರ್ಟಿನಲ್ಲಿ ಕನ ಕುಡೆಲ್ ವೆಂಕಟ್ರಮಣ ಭಟ್ಟರು ದಾಖಲುಮಾಡಿದ ಅರ್ಜಿ ವ್ಯವಹರಣೆಯ ತನಿಕೆ ನಡೆದು ಅಧ್ಯಕ್ಷ ಸ್ಥಾನಕ್ಕೆ ಕುರಿಯ ಗಣಪತಿಭಟ್ಟರ ಚುನಾವಣೆಯು ಅದದ್ದು ಸರಿಯೆಂಬ ತೀರ್ಮಾನವಾಗಿ ಅರ್ಜಿಯನ್ನು ತೆಗೆದು ಹಾಕಿರುತ್ತಾರೆ.

ಕುಂಬಳೆ—ಉಷ್ಣ ಹೊರಕಡೆ ರೋಗವು ಇನ್ನೂ ಹತೋಟಿಗೆ ಬಂದಿಲ್ಲವಾಗಿ ವರದಿಯಾಗಿದೆ. ಜಿಲ್ಲಾ ಹೆಲ್ತ್ ಆಫೀಸರ್ ಶ್ರೀ ರಾಮಚಂದ್ರ ಪೈಗಳವರು ತಾ. 17ರಲ್ಲಿ ಆ ಸುಪಾಸಿನ ಗ್ರಾಮಗಳನ್ನು ಸಂದರ್ಶಿಸಿದರು.

ಅಡ್ಯನಡ್ಕ:—ದ. ಕ. ಜಿಲ್ಲಾ ರೂರಲ್ ವೆಲ್‌ಫೇರ್ ಸಮಿತಿಯ59ನೇ ಸಭೆಯು ತಾ 17ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಅಡ್ಯನಡ್ಕ ಶಾಲೆಯಲ್ಲಿ ಜರಗಿತು. ಸಭೆಗೆ ರೂರಲ್ ವೆಲ್‌ಫೇರ್ ಆಫೀಸರರು, ಜಿಲ್ಲೆಯ ವಿದ್ಯಾಧಿಕಾರಿಗಳು, ಎಗ್ರಿಕಲ್ಚರಲ್ ಆಫೀಸರ್, ಡ್ಯಾಪೇಟಿಜನರ್ ಇಂಜಿನಿಯರ್ ಮೊದಲಾದವರು ಬಂದಿದ್ದರು. ಕಳೆದ ತಿಂಗಳಲ್ಲಿ ವಿವಿಧ ಇಲಾಖೆಗಳಿಂದ ನಡೆದ ಕಾರ್ಯಕಲಾಪಗಳ ಪರಿಶೀಲನೆ ಯಾಯಿತು.

ಅಡ್ಯನಡ್ಕದ ಆಸುಪಾಸಿನ ಕೇಪು, ಪುಣಚಾ ಎಣ್ಮಕಜೆ, ಮೂಡಿಲ, ಪೆರುವಾಯಿ ಮೊದಲಾದ ಗ್ರಾಮಗಳ ಪರವಾಗಿ ಮನವಿಯೊಂದನ್ನು ಜಿಲ್ಲಾ ಕಲೆಕ್ಟರರಿಗೆ ಶ್ರೀ ಟಿ. ವೆಂಕಟೇಶ ಪೈಗಳು ಒಪ್ಪಿಸಿದರು. ಮನವಿಯಲ್ಲಿ ಸೂಚಿಸಲಾದ ಶಿಕ್ಷಣ ಸೌಕರ್ಯ, ಡಿಸ್ಪೆನ್ಸರಿ ನಿರ್ಮಾಣ ರವಿಶ್ಯಾಕಾಡುಗಳ ರಕ್ಷಣೆ ಮೊದಲಾದ ವಿಷಯಗಳ ಕುರಿತು ತಕ್ಕ ನಿರ್ಣಯ ಮಾಡುವುದಾಗಿ ಕಲೆಕ್ಟರರು ಆಶ್ವಾಸನೆಯಿತ್ತರು.

(೫ನೇ ಪುಟದಿಂದ)

ನ್ನು ಢಿಲ್ಲಿಯಲ್ಲಿ ಮುಂದರಿಸಲಾಯಿತೆಂದೂ ನಿರಾಶ್ರಿತರ ಸಮಸ್ಯೆ, ಪೂರ್ವ ಪಾಕಿಸ್ತಾನದ ನಡುಗುಡ್ಡೆ ಪ್ರದೇಶಗಳು ಮುಂತಾದವುಗಳ ಕುರಿತು ಹೆಚ್ಚಿನ ತಿಳುವಳಿಕೆಯಾಯಿತೆಂದೂ ಪ್ರಕಟಣೆ ಹೇಳುತ್ತದೆ. ಮಾತುಕತೆಗಳು ಕುಂಬಸೌಹಾರ್ದಯುತವಾದ ವಾತಾವರಣದಲ್ಲಿ ನಡೆದುವೆಂದೂ, ಉಭಯ ರಾಷ್ಟ್ರಗಳ ಸಂಬಂಧವನ್ನು ಬಲಪಡಿಸುವ ಕಾರ್ಯದಲ್ಲಿ ಒಂದು ಹೆಜ್ಜೆ ಮುಂದಿಡಲಾದುದಕ್ಕೆ ಸಂತೋಷವೆನಿಸಿದೆಯೆಂದೂ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

"ಕಾಶ್ಮೀರದ ಚಂದ್ರಮ"

ಈ ಒಡಂಬಡಿಕೆಯಲ್ಲಿ ಕಾಲ ಮಿತಿಯನ್ನು ಹಾಕಿರುವುದು ಉಭಯ ರಾಷ್ಟ್ರಗಳ ಜನರಿಗೆ ಸಮಾಧಾನ ತರುವಂತಿದ್ದರೂ ಅಷ್ಟರೊಳಗೆ ಪೂರ್ವಭಾವಿಯಾಗಿ ನಿರ್ಧಾರಕ್ಕೆ ಬರಬೇಕಾದ ಸಮಸ್ಯೆಗಳು ಇತ್ಯರ್ಥಗೊಳ್ಳುವ ಭರವಸೆ ಕಡಿಮೆ ಇದೆ. ಮುಖ್ಯವಾಗಿ, ಯುದ್ಧ ವಿರಾಮ ರೇಖೆಯ ಇಕ್ಕೆಲಗಳಲ್ಲಿ ನಿಲ್ಲಿಸಬೇಕಾಗಿರುವ ಸೈನ್ಯ ಪ್ರಮಾಣದ ಬಗ್ಗೆ ಒಮ್ಮತಕ್ಕೆ ಬರುವುದು ಅತ್ಯಂತ ಅಗತ್ಯವಿದೆ. ಸಂಯುಕ್ತರಾಷ್ಟ್ರ ಸಂಘದ ಮಧ್ಯಸ್ಥಿಕೆಗಾರರು ಪದೇ ಪದೇ ಪ್ರಯತ್ನಿಸಿ ವಿಫಲವಾದ ಅಂಶವಿದೆಂಬುದನ್ನು ಗಮನಿಸುವುದೊಳಿತು. ಗೃಹಾಮರು ರಾಷ್ಟ್ರ ಸಂಘಕ್ಕೆ ಕೊನೆಯದಾಗಿ ಒಪ್ಪಿಸಿದ ವರದಿಯಲ್ಲಿ ಭಾರತ—ಪಾಕಿಸ್ತಾನಗಳೇ ನೇರಾಗಿ ಮಾತುಕತೆಯಿಂದ ಈ ಬಿಕ್ಕಟ್ಟನ್ನು ಬಗೆಹರಿಸಲೆಂದು ಹೇಳಿದ್ದರು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಈಗಿನಒಡಂಬಡಿಕೆಯ ಮಹತ್ವಗೋಚರವಾಗುತ್ತದೆ; ಮತ್ತು ಇದನ್ನು ಮನಗಂಡೇ ಸಂಯುಕ್ತ ರಾಷ್ಟ್ರ ಸಂಘದ ವರ್ತುಲದಲ್ಲಿಯೂ ಅಮೇರಿಕಾ ಮುಂತಾದೆಡೆಯೂ ಪ್ರಧಾನಿದ್ವಯರ ಪ್ರಕಟಣೆಯ ಬಗ್ಗೆ ಉತ್ತಮ ಪ್ರತಿಕ್ರಿಯೆಗಳು ಉಂಟಾಗಿವೆ. ಪರಿಸ್ಥಿತಿಯು ಹೀಗೆ ಪ್ರಭಾವ ಜನಕವಾಗಿದ್ದರೂ ಎಪ್ರೀಲು ತಿಂಗಳ ಅವಧಿಯನ್ನು ಮುಂದುವರಿಸಬೇಕಾದ ಪ್ರಮೇಯಒದಗಬಹುದೆಂದು ತರ್ಕಿಸಲಡ್ಡಿಯಿಲ್ಲ ಇದು ನಿಜವಾದರೆ, ಪಾಕಿಸ್ತಾನದಲ್ಲಿ ಜನರು ಮತ್ತೊಮ್ಮೆ ತಾಳ್ಮೆಗೆಟ್ಟು 'ಜೇಹಾದ್'ದ ಕೂಗೆಬ್ಬಿಸುತ್ತಾ ಭಾರತ ವಿರೋಧ ಆಕ್ರೋಶಮಾಡಲು ಹಿಂದು ಮುಂದು ನೋಡಲಿಕ್ಕಿಲ್ಲ. ಪಾಕ ಪ್ರಧಾನಿಗಳು ಭಾರತಕ್ಕೆ ಆಗಮಿಸುವ ವೇಳೆಯಲ್ಲಿ ಕಾಶ್ಮೀರದ ಆಂತರಿಕ ಪ್ರಶ್ನೆಯೊಂದನ್ನು ನೆಪವಾಗಿಟ್ಟುಕೊಂಡು ಪಾಕಿಸ್ತಾನದ ಜನತಾಧುರೀಣರು 'ಧರ್ಮಯುದ್ಧ'ದ ಹುಯಿಲೆಬ್ಬಿಸುತ್ತಿದ್ದರು. ಅದೇಕಾಲಕ್ಕೆ ನೆಹರೂರವರು ರಾಷ್ಟ್ರಾಧ್ಯಕ್ಷರ ಗ್ಯಾಲರಿಯಲ್ಲಿದ್ದ ಮಹಮ್ಮದಾಲಿ, ಜಾಫರುಲ್ಲಾಖಾನ ಇವರನ್ನು ಉದ್ದೇಶಿಸಿ, ಲೋಕಸಭೆಯ ಮುಂದೆ ಭಾಷಣ ಮಾಡುತ್ತಾ "ಉಭಯ ರಾಷ್ಟ್ರಗಳ ಸಂಬಂಧವನ್ನು ದುರ್ದೈವದಿಂದ ಕಹಿ ಮಾಡಿರುವ ಪ್ರತಿಯೊಂದೂ ಸಮಸ್ಯೆಯನ್ನು ಶಾಂತಿಯುತ ಮಾರ್ಗದಿಂದ ಬಗೆಹರಿಸಲು ಅತ್ಯಂತ ಆತುರರಾಗಿದ್ದೇವೆಂದು ಆಶ್ವಾಸನ ನೀಡುತ್ತೇನೆ" ಎಂದು ಹರ್ಷೋದ್ಗಾರಗಳ ನಡುವೆ ಸಾರಿದರು "ಇವುಗಳಿಗಲ್ಲ ಕೆಲವು ತೊಂದರೆಗಳಿದ್ದರೂ ಶಾಂತಿ ಮತ್ತು ಸಂಧಾನದ ಮಾರ್ಗದ ಅನುಸರಣೆಯಿಂದ ಯಶಸ್ಸು ದೊರೆತೇ ತೀರುವ ವಿಶ್ವಾಸವಿದೆ" ಎಂದೂ ನೆಹರೂ ತಿಳಿಸಿದರು. ಹೀಗೆ ಶಾಂತಿಯ ಭರವಸೆ ಕೊಟ್ಟ ಬಳಿಕವೂ ಪಾಕಿಸ್ತಾನದಲ್ಲಿ ಉದ್ವೇಗಕಾರಕ ಪ್ರತಿಕ್ರಿಯೆಗಳೂ ಘಟನೆಗಳೂ ಜರಗುತ್ತಿರುವುದು ಶೋಚನೀಯ. ಪ್ರಧಾನಿ ದ್ವಯರ ಸಂಯುಕ್ತ ಪ್ರಕಟಣೆಯಲ್ಲಿ ಜನರು ಭಾವನಾವಶರಾಗಿ ವಿಕಟ ವರ್ತನೆಗಳಿಗೆ ಬಲಿ ಬೀಳಬಾರದೆಂದು ವಿನಂತಿಸಲಾಗಿದೆ. ಆದರೆ ಪಾಕಿಸ್ತಾನೀ ಜನತೆಯನ್ನು ಸಂತೈಸಲು ಪಾಕ ಪ್ರಧಾನಿಗಳಿಗೆ ಸಾಧ್ಯವಾಗುವುದು ಹೇಗೋ! ಸ್ವತಃ ಮಹಮ್ಮದಾಲಿಯವರೇ "ಕಾಶ್ಮೀರವನ್ನು ಭಾರತದಕ್ಕೆಯಿಂದ ದಾನ ರೂಪದಲ್ಲಿ ಪಡೆಯಲು ಇಚ್ಛಿಸುತ್ತೇನೆ" ಎಂದು ಪತ್ರಿಕಾ ಗೋಷ್ಠಿಯ ಮುಂದೆ ಬಾಯಿಬಿಚ್ಚಿ ಹೇಳಿರುವುದನ್ನು ಕಂಡರೆ, ಅವರು ನೆಹರೂರೊಡನೆ ಮಾತುಕತೆ ನಡೆಸಿದ ತಳಹದಿಯೇ ಬುಡ ಮೇಲಾಗುತ್ತದೆ! ಒಬ್ಬ ಸುದ್ದಿಗಾರ ಹೇಳಿದಂತೆ ಮಹಮ್ಮದಾಲಿಯವರು ಚಂದ್ರಮನನ್ನು ಕೈಯಲ್ಲಿ ಹಿಡಿಯ ಬಯಸುತ್ತಾರೆ; ಆದರೆ ಆ ಹಂಬಲ ಒಳ್ಳೆಯದಲ್ಲ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O P No 7/52 R I A 770/1953

1 ಪಿ. ತುಳಸಿ ಬಾ 2 ನೋಹನ 3 ಬಾಲಕೃಷ್ಣ ಮ್ಯಾನರು ಅರ್ಜಿದಾರರು

ಗಾರ್ಡಿಯನ ತಾ 1ನೆ ಅರ್ಜಿದಾರಳು

ಯವರೊಳಗೆ

ನೋಲ್ಟಂಡ ವ್ಯವಹರಣೆಯ 1ನೆ ಅರ್ಜಿದಾರಳ ಗಂಡ, 2—3ನೆ ಅರ್ಜಿದಾರರ ತಂದೆ Capt. ಪಿ ರಾಮಚಂದ್ರ ರಾಯರು Sun Life Assurance of Canada ಕಂಪೆನಿಯಲ್ಲಿ Policy no 3318 286 ನೆಗೆ ರೂಪಾಯಿ 1000—0—0ಕ್ಕೆ ಮಾಡಿದ ಯಿನಸೂರೆನ್ಸ ಬಾಬ್ತು ರೂಪಾಯಿ 1032—0—0 ಪಡೆಯುವರೆ ಸದ್ರಿ ಪಿ. ರಾಮಚಂದ್ರ ರಾಯರು ಮೃತ ಪಟ್ಟು ಅವರಿಗೆ ಅರ್ಜಿದಾರರು ವಾರ್ಸುದಾರರಾಗಿ ಸದ್ರಿ ಹೈಪೆಯ ತಮಗೆ ಸಿಕ್ಕುವಂತೆ ಅರ್ಜಿದಾರರ ಕಡೆಯಿಂದ 1ನೆ ಅರ್ಜಿದಾರಳ ಹೆಸ್ರಿಗೆ ಸಕ್ಸಸನ್ ಸರ್ಟಿಫಿಕೇಟು ಕೊಡಿಸುವಂತೆ ಕೊಟ್ಟ ಅರ್ಜಿಯು ತಾರೀಕು 18—9—53ಕ್ಕೆ ತನ್ಖಿಗೆ ಯಿಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವರು ಆ ದಿನ ಹಗಲು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಡ್ಯಾಫೀಯು ಮಾಡಿ ಕೊಳ್ಳತಕ್ಕದ್ದು

P. Padamanabha Rao

Vrkil for Petitioners

Dated 24—8—53 Udipi

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S C. no 92/1953

ದಯಾನಂದ ಬಾಳಿಗ ವಾದಿ.

ಮತ್ತು

1 ವೈದಿನೆ ಬ್ಯಾರಿ. 2 ಹುಸೈನ್ ಬ್ಯಾರಿ ಪ್ರತಿವಾದಿಗಳು

2ನೇ ಪ್ರತಿವಾದಿ-ಹೂಸೈನ್ ಬ್ಯಾರಿ, ದೇಲಂಪ ಹಮ್ಮದೆ ಬ್ಯಾರಿಗಳ ಮಗ ಮಂಗಳೂರು ತಾಲ್ಲೂ ತೆಂಕ ಕಜೆಕಾರು ಗ್ರಾಮದಲ್ಲಿ, ಪೋಸ್ಟು ಮಂಜಳ ಕಟ್ಟೆ, ಇವರಿಗೆ

ವೈದಿನೆ ಬ್ಯಾರಿ ವ ನೀವು ಕೂಡಾ ಸದ್ರಿ ವಾದಿಗೆ ರೂ 170-0-0ಕ್ಕೆ ತಾ 23 5-1950ರಲ್ಲು ಬರಕೊಟ್ಟ ಡಿಮ್ಯಾಂಡ್ ನೋಟಿನ-ಅಸಲು ಬಡ್ಡಿ ಹಣಗಳ ವಸೂಲಿ ಬಗ್ಗೆ ನಿಮ್ಮ ಮೇಲೆ ಕೊಡಿಕೊ ಮಾಡಿದ ಮೇಲಿನ ದಾವೆಯು ತಾ 3-9-1953ಕ್ಕೆ ವಾಯಿದೆ ಯಿರುತ್ತದೆ. ನಿಮಗೇನಾದರೂ ಆಕ್ಷೇಪಣೆಯಿದ್ದರೆ, ಆ ದಿನ್ನ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದಂತಲೂ, ತಪ್ಪಿದರೆ ನಿಮ್ಮನ್ನು ಹಿಂದಾ ಮಾಡಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದೆಂತಲೂ, ಕೋರ್ಟಿನಪ್ಪಂ ಪ್ರಕಾರ ನಿಮಗೆ ಈ ಸಮನ್ಸು ತಿಳಿಸೋಣಾಗಿದೆ.

(Sd) P. Krishna Bhat.

Vakil for Pltf,

Puthur Date 22—8—53

ಕಳ್ಳಪೇಟೆಯ ಅದ್ಭುತಗಳು! ಅಕಲ್ಪಿತ ಘಟನೆಗಳು!!

ಶವಗಳ ಸಾಗಾಟ

ಕಳ್ಳಪೇಟೆಯ ಮಾಯೆಯನ್ನು ಬೆರಗುಗೊಳಿಸುವ ರೀತಿಯಲ್ಲಿ

ಚಿತ್ರಿಸುವ ವಿಚಿತ್ರ ಕಾದಂಬರಿ.

ಬರೆದವರು:- ಸುಬ್ರಾಯ್ ಕೃಷ್ಣ ಹೆಗಡೆ, ಕಾನಗೋಡು, ಸಿರ್ಸಿ.

ಬ್ಲಾಕ್ ಮಾರ್ಕೆಟ್‌ವಾಲರ ವಿಸ್ಮಯ, ವಿಚಿತ್ರ

ಕೃತಿಗಳನ್ನು ಈ ಕೃತಿಯಲ್ಲಿ ಮನಗಾಣುವಿರಿ.

ಓದಲೇ ಬೇಕಾದ, ಓದಿ ಮೋದಗೊಳ್ಳಲೇ ಬೇಕಾದ ನವೀನ ಕಾದಂಬರಿ·

ಬೆಲೆ 0—12—0.

ವಿವರವಾದ ಕೆಟಲಾಗಿಗೆ ಬರೆಯಿರಿ:-] [ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಾತ್ರಿ ಚಿನ್ನದ ನೆಕ್‌ಲೇಸ್, ತರಹೆವಾರು ಚೈನುಗಳು, ಬೆಂಡೋಲೆ,

ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು

ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಮಂಗಳೂರು

ಭೂದಾನ ಯಜ್ಞಕ್ಕೆ ಸಹಾಯ ನೀಡಿರಿ— ಪೂಜ್ಯ ಆಚಾರ್ಯ ವಿನೋಬಾ ಭಾವೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಭೂದಾನ ಯಜ್ಞ ಚಳವಳಿಯು ಅದೊಂದು ರೀತಿಯ ಸತ್ಯಾಗ್ರಹ ಚಳವಳಿಯೇ ಆಗಿದ್ದು ಜನತೆಗೆ ಧರ್ಮದ ಒಂದು ಹೊಸ ಸಂದೇಶವನ್ನು ಸಾರುತ್ತಿದೆ. ಭೂಮಿ ಇಲ್ಲದ ಶ್ರಮಜೀವಿಗಳಿಗೆ ಭೂಮಿಯನ್ನು ದಾನವಾಗಿ ಕೊಡುವುದು ನಿಜವಾದ ಶ್ರೇಷ್ಠ ಧರ್ಮವಾಗಿದೆ. ಆದುದರಿಂದ ಭೂ ಮಾಲಿಕರೆಲ್ಲರೂ ಸಾಧ್ಯವಿದ್ದಷ್ಟು ಭೂಮಿಯನ್ನು ಈ ಭೂದಾನ ಯಜ್ಞ ಸಮಿತಿಗೆ ಕೊಟ್ಟು ಪುಣ್ಯಭಾಗಿಗಳಾಗಬೇಕಾಗಿ ವಿನಂತಿಯಿದೆ. ಈ ಸಂಬಂಧ ಪತ್ರವ್ಯವಹಾರವನ್ನು ಕಾರ್ಯದರ್ಶಿ, ದ. ಕ. ಜಿಲ್ಲಾ ಭೂದಾನಯಜ್ಞ ಸಮಿತಿ C/o ಖಾದಿ ಭಂಡಾರ, ರಥಬೀದಿ, ಮಂಗಳೂರು 1. ಅಥವಾ ಕಾರ್ಯದರ್ಶಿ, ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು 1. ಇವರೊಡನೆ ನಡೆಸಬಹುದು.

ಕೆನರಾ ಚೇಂಬರ್ ಆಫ್ ಕೋಮರ್ಸಿನಲ್ಲಿ ಶ್ರೀ ವ್ಯಾಸರಾವ್:— ಮದ್ರಾಸಿನ ಸೆಂಟ್ರಲ್ ಎಕ್ಸಾಯಿಜ್ ಡೆಪ್ಯುಟಿ ಕಲೆಕ್ಟರ್ ಶ್ರೀ ವ್ಯಾಸರಾಯರು ಮಂಗಳೂರಿನ ಸೆಂಟ್ರಲ್ ಎಕ್ಸಾಯಿಜ್ ಸುಪರಿಂಟೆಂಡಂಟರಾದ ಶ್ರೀ ಇ. ವಿ. ಮಹಮ್ಮದ್, ಅವರೊಂದಿಗೆ ಇದೇ ತಾ 20ರಲ್ಲಿ ಸಂಜೆ ಕೆನರಾ ಚೇಂಬರ್ ಆಫ್ ಕೊಮರ್ಸಿಗೆ ಭೇಟಿಯಿತ್ತು ಸ್ಥಳೀಯ ಚಾಮಾರಾಟದ ಲೈಸನ್ಸ್ ಪಡೆದ ವ್ಯಾಪಾರಿ ಗಳನ್ನು ಕಂಡಾಗ ವ್ಯಾಪಾರಿಗಳು ಅವರೊಡನೆ ಕಳೆದ ಏಪ್ರಿಲ್ ತಿಂಗಳ ತಾ 15ರಿಂದ ಸೆಂಟ್ರಲ್ ಎಕ್ಸಾಯಿಜ್ ರೂಲನ್ನು ಚಾಮಾರಕ್ಕೆ ಜಾರಿಮಾಡಿದ್ದರಿಂದ ತಮಗಾಗುವ ಕೆಲವು ಸಂಕಷ್ಟಗಳನ್ನು ಕುರಿತು ಚರ್ಚಿಸಿದರು.

ಡೆಪ್ಯುಟಿ ಕಲೆಕ್ಟರಿಗೆ ಅರ್ಪಿಸಿದ ಮೆಮೊರಾಂಡಮಿನಲ್ಲಿ ಚಾ ವ್ಯಾಪಾರಕ್ಕೆ ಜಾರಿಮಾಡಲಿರುವ ಗೇಟ್‌ಪಾಸ್ ನಿಯಮಗಳನ್ನು ರದ್ದುಗೊಳಿಸುವ ಆವಶ್ಯಕತೆ ಮೊದಲಾದುವುಗಳ ವಿಷಯ ಹೇಳಲಾಗಿತ್ತು. ಸೆಂಟ್ರಲ್ ಎಕ್ಸಾಯಿಜ್ ರೂಲನ್ನು ಸುವ್ಯವಸ್ಥಿತವಾಗಿ ಕಾರ್ಯರಂಗಕ್ಕೆ ತರುವುದಕ್ಕೆ ತಮ್ಮ ಸಹಕಾರ ನೀಡುವೆವೆಂದು ವ್ಯಾಪಾರಿಗಳ ಪರವಾಗಿ ಶ್ರೀ ಸುಜೀರ್ ನಾರಾಯಣ ನಾಯ್ಕರು ಭರವಸೆಯಿತ್ತರು. ಡೆಪ್ಯುಟಿ ಕಲೆಕ್ಟರರು ತಮ್ಮ ಉತ್ತರದಲ್ಲಿ ಚಾ ವ್ಯಾಪಾರದ ಲೈಸೆನ್ಸುದಾರರಿಗೆ ಸಾಧ್ಯವಿದ್ದಷ್ಟು ಅನುಕೂಲತೆಗಳನ್ನು ಒದಗಿಸಿಕೊಡಲಾಗುವುದೆಂದೂ ಗೇಟ್ ಪಾಸ್ ನಿಯಮವನ್ನು ವ್ಯಾಪಾರಿಗಳಿಗೆ ಅದಷ್ಟು ತೊಂದರೆ ಕಡಿಮೆಯಾಗುವ ರೀತಿಯಲ್ಲಿ ಜ್ಯಾರಿ ಮಾಡಲಾಗುವುದೆಂದೂ ಮೊದಲಾಗಿ ತಿಳಿಸಿದರು. ಚೇಂಬರಿನ ಗೌರವಕಾರ್ಯದರ್ಶಿ ಶ್ರೀ ಯು. ಸುಬ್ರಾಯ ಮಲ್ಯರು ಧನ್ಯವಾದಗಳನ್ನರ್ಪಿಸಿದರು.

ಕೆಂಟೋನ್‌ಮೆಂಟ್ ವಾರ್ಡಿನ ನಿವಾಸಿಗಳ ಸಂಘದ ವಾರ್ಷಿಕ ಸಭೆಯು ಇದೇ ತಾ. 16ರಲ್ಲಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಲ್. ಸಿ. ಪಾಯಸ್, ಕೆ. ಆರ್. ಆಚಾರ್, ಬಿ. ಅಪ್ಪಯ್ಯ, ಕೆ. ವೆಂಕಪ್ಪಯ್ಯ, ಎಚ್. ಧೀಮಂತ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡುತ್ತಾ, ಇಂಥ ಸಂಘಗಳ ಕರ್ತವ್ಯವನ್ನು ವಿವರಿಸಿ, ಇವು ಯಾವುದೇ ಒಂದು ರಾಜಕೀಯ ಪಕ್ಷದ ಅಂಗವಾಗಿರಬಾರದು ಎಂದು ಹೇಳಿದರು. ಸಂಘದ ಅಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರು ಧನ್ಯವಾದಗಳನ್ನರ್ಪಿಸಿದರು.

ಹೊಸ ವ್ಯಾಯಾಮ ಶಾಲೆ— ಬೋಳಾರ ಮುಳಿಹಿತ್ಲುನಲ್ಲಿ 'ಶ್ರೀ ಅಶೋಕ ವ್ಯಾಯಾಮ ಶಾಲೆ'ಯ ಉದ್ಘಾಟನೆಯು ಶ್ರೀ. ಎಮ್. ರಮಾನಾಥ ರಾಯರ ನೇತೃತ್ವದಲ್ಲಿ ಇದೇ ತಾ. 16ರಲ್ಲಿ ಜರಗಿತು. ಪ್ರೊ॥ ಎ. ಕ. ಸಾಲಿಯಾನ್ ಮತ್ತು ಶ್ರೀ. ಬಿ. ರಾಮಚಂದ್ರ ಆಳ್ವರು ಭಾಷಣಮಾಡಿದರು.

ಡಿ॥ ಎಸ್. ಎಸ್. ಕಿಲ್ಲೆಯವರ ಸ್ಮಾರಕ ಸಭೆಯು ತಾ. 17ರಲ್ಲಿ ಜರಗಿ ಡಾ॥ ಯು. ಪಿ. ಮಲ್ಯ (ಅಧ್ಯಕ್ಷ) ಶ್ರೀ. ಕೆ. ಸದಾನಂದ ಹೆಗ್ಡೆ, ಎಮ್. ಪಿ. (ಉಪಾಧ್ಯಕ್ಷ) ಶ್ರೀ. ಕೆ. ಬಾಲಕೃಷ್ಣ ರಾವ್ (ಕಾರ್ಯದರ್ಶಿ) ಮತ್ತು ಶ್ರೀ. ಮಾಲೆಲ ಶ್ರೀನಿವಾಸ ನಾಯಕ (ಕೋಶಾಧಿಕಾರಿ)ಗಳಾಗಿ ಆರಿಸಲ್ಪಟ್ಟರು. ಬೇಗನೆ ಸ್ಮಾರಕ ಗ್ರಂಥವೊಂದನ್ನು ಪ್ರಕಟಿಸಬೇಕೆಂದು ನಿರ್ಣಯಿಸಲಾಯಿತಲ್ಲದೆ ವಿದ್ಯಾರ್ಥಿವೇತನವೇ ಮೊದಲಾದ ಇತರ ಉದ್ದೇಶಪೂರ್ತಿಗಾಗಿ ಹಣ ಸಂಗ್ರಹಿಸಬೇಕೆಂದಾಯಿತು. ಸಭೆಯಲ್ಲಿ ಸುಮಾರು 700 ರೂ. ವಾಗ್ದಾನವಾಯಿತು.

ಸಂಗೀತೋತ್ಸವ— ತಾ 23ರಲ್ಲಿ ಆನಂದ ಸಂಗೀತ ವಿದ್ಯಾಲಯದ ವಾರ್ಷಿಕ ಸಂಗೀತ ಮಹೋತ್ಸವವು ಶ್ರೀ. ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ, ವಾದ್ಯ ವಾದನ, ಶ್ರೀಗಳಾದ ಎ. ಸಿ. ಮಥ್ಯಾ, ಆರ್. ಬಿ. ವಿಶ್ವನಾಥನ್, ಡಾ॥ ಕೆ. ನಾಗಪ್ಪ ಆಳ್ವ, ಕೆ. ಆರ್. ಆಚಾರ್, ಬಿ. ಆರ್. ಕರ್ಕೇರ, ಎಸ್. ನಾರಾಯಣ ಭಟ್, ಡಾ॥ ದೇವದಾಸ ಆದ್ಯಂತಾಯ ಮೊದಲಾದವರ ಭಾಷಣ, ಸಂಚಾಲಕ ಶ್ರೀ. ಆನಂದ ರಾವ್ ಮತ್ತು ವಿದ್ಯಾರ್ಥಿಗಳ ಸಂಗೀತಗಳಾದುವು.

'ಓಣಂ' ಆಚರಣೆ— ತಾ 23ರಲ್ಲಿ ಗವರ್ನಮೆಂಟ್ ಕಾಲೇಜಿನ ಮಲಯಾಳ ಸಂಘದ ಆಶ್ರಯದಲ್ಲಿ ಮಲಯಾಳ ನಾಡಹಬ್ಬವಾದ ಓಣಂ ಡಾ॥ ಭಾಸ್ಕರ ಮೆನೋನರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಅವಗಾಹನೆ ಬಗ್ಗೆ-

ನಮ್ಮ ಆಡಳಿತೆಗೆ ಸಂಬಂಧಪಟ್ಟ ನಮ್ಮ ದ. ಕ. ಜಿಲ್ಲೆಯ ಉಡುಪಿ ತಾಲೂಕಿನ ಪುತ್ತಿಗೆ ಹೊಳೆಗೆ ಒಂದು ಸಂಕ ಕಟ್ಟಲಿಕ್ಕೆ ಪ್ರಾರಂಭವಾಗಿ ಈ ಹೊತ್ತಿಗೆ ಮೂರು ವರ್ಷಗಳಾದುವು. ಯಾರೋ ಅಪೆಕ್ಸ್ ಪುಣ್ಯಾತ್ಮ ಅಸಿಸ್ಟಂಟ್ ಇಂಜಿನಿಯರರ ದೆಸೆಯಿಂದಾಗಿ ಕೆಲಸವು ಸಾಧ್ಯವಿದ್ದಷ್ಟು ಹಿಂದೆ ಬಿದ್ದಿತ್ತು ಎಂಬುದಾಗಿ ವರ್ತಮಾನ. ಅಂತೂ ಮೂರನೇ ವರ್ಷದಲ್ಲಿ ಸಂಕದ ಕೆಲಸ ಮುಗಿಯುತ್ತಾ ಬರುವಾಗ್ಗೆ ಆದಕ್ಕೊಪ್ಪಿದ ರಸ್ತೆಯ ಕೆಲಸ ಮಾಡುವರೆ ಸಂಬಂಧಪಟ್ಟ ವರ್ಗದಾರರು ಆಕ್ಷೇಪಿಸುವರು. ರಸ್ತೆ ಹೋಗುವ ದಾರಿಯಲ್ಲಿರುವ ಮನೆಗಳಿಗೆ ಬೆಲೆ ನಿರ್ಣಯವಾಗಲಿಲ್ಲವೆಂದೂ ಆಕ್ಷೇಪ ಸಂಬಂಧಪಟ್ಟ ವರ್ಗದಾರರು ಎರಡೂವರೆ ವರ್ಷಗಳ ಹಿಂದೆಯೇ ಸಂಕ ಕಟ್ಟುವರೆ ಭೂಮಿಯನ್ನು ಒಪ್ಪಿಸಿಕೊಟ್ಟಿದ್ದರೂ ಈ ವರೆಗೂ ರಿವಿನ್ಯೂ ಇಲಾಖೆಯವರು ಭೂಮಿಯನ್ನು ಸ್ವಾಧೀನ ಮಾಡುವ Acquisition) ಕೆಲಸ ಸಂಪೂರ್ಣವಾಗಿ ಮಾಡಲಿಲ್ಲವಂತೆ. ಅಂತೂ ಆರು ಲಕ್ಷ ರೂಪಾಯಿಗಳನ್ನು ಗವರ್ನ್‌ಮೆಂಟಿನವರು ಖರ್ಚುಮಾಡಿಯೂ ಸಂಕ ಆಗಿಯೂ ಜನಗಳಿಗೆ ಪ್ರಯೋಜನವಿಲ್ಲದಂತಾಗಿದೆ. ಭೂಮಿಯನ್ನು ಸ್ವಾಧೀನಪಡಿಸುವ (Land acquisition) ಕೆಲಸವು ಜಾಗ್ರತೆಯಾಗಿ ಇನ್ನು ಒಂದು ಮಾಸದಲ್ಲಿ ಮಳೆಯ ರಸ್ತೆ ಕೆಲಸವು ನಿಲ್ಲುತ್ತದೆ. ಮತ್ತೆ ಕೆಲಸವು ಮಳೆ ಬರುವಾಗಲೇ (ಅಂದರೆ ಈಗಲೇ) ಆಗಬೇಕಾಗಿದೆ. ಇಲ್ಲವಾದರೆ ಈ ವರ್ಷವೂ ಸಂಕ ತೆರೆಯುವ ಸಂದರ್ಭ ಸಿಗಲಾರದು. ಇನ್ನು ಮುಂದಾದರೂ ಮಾನ್ಯ ಕಲೆಕ್ಟರರು ಕೂಡಲೇ ಗಮನ ತೆಗೆದುಕೊಳ್ಳಬೇಕಾಗಿ ವಿನಂತಿ.

ಗ್ರಾಮಸ್ಥರೊಬ್ಬ.

ಸನ್ಯಾಸಿ ಉಡುಪಿ ಮತ್ತು [illegible] — [illegible] ಪ್ರಸಕ್ತ ವರ್ಷದಲ್ಲಿ [illegible] Acquisition' ಕೆಲಸ [illegible] 1954ನೇ [illegible] ಸಂಕ ತೆರೆಯುವ ಸಂದರ್ಭ [illegible] K. D. O. ರ [illegible] ಮಾಡಬೇಕಾಗಿ ವಿನಂತಿ.

[illegible] ಅಪೇಕ್ಷೆ.

ಒಬ್ಬ [illegible].

ಮೈಸೂರು ಮೊದಸರ್ ಕೆಫೆಯಲ್ಲಿ ಸತ್ಕಾರ ಕೂಟ— ಮೊದಸರ್ ಕೆಫೆಯ ಮಾಲಿಕರಾದ ಶ್ರೀ. ಕೆ. ಸೀತಾರಾಮರಾಯರು ಇತ್ತೀಚೆಗೆ ಮೈಸೂರು ಬೇಂಕಿನ ಜನರಲ್ ಮೆನೇಜರ್ ಮತ್ತು ಡೈರೆಕ್ಟರರಿಗೆ ಒಂದು ಭೋಜನ ಕೂಟವನ್ನೇರ್ಪಡಿಸಿ ಗೌರವಿಸಿದರು. ಈ ಸಮಾರಂಭಕ್ಕೆ ಮದ್ರಾಸಿನ ಅನ್ಯರನೇಕರು ಆಮಂತ್ರಿಸಲ್ಪಟ್ಟಿದ್ದರು. ಭೋಜನಾನಂತರ ಶ್ರೀ. ಕೆ. ಸೀತಾರಾಮರಾಯರು ಅಂದಿನ ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಬೇಂಕಿನ ಪರವಾಗಿ ಆದರ ಜನರಲ್ ಮೆನೇಜರ್ ಶ್ರೀ. ನಾರಾಯಣ ಶೆಟ್ಟಿಯವರು ಶ್ರೀ. ಸೀತಾರಾಮರಾಯರನ್ನು ವಂದಿಸಿದರು.

ಬೇಂಕಿನ ಮೆನೇಜರ್ ಮತ್ತು ಡೈರೆಕ್ಟರುಗಳಲ್ಲದೆ ಮದ್ರಾಸಿನ ಮಂತ್ರಿ ಮೊದಲಾದ ಶ್ರೀಗಳಾದ ಎ. ಬಿ. ಶೆಟ್ಟಿ, ಸುಬ್ರಹ್ಮಣ್ಯಂ ವೆಂಕಟಸ್ವಾಮಿ ನಾಯುಡು; ಡಾ॥ ಯು. ಕೃಷ್ಣರಾವ್, ಮಿ॥ ಎಸ್. ವಿ ಕೃಷ್ಣರಾವ್, ಡಾ॥ ಆರ್. ನಾಗಣ್ಣ ಗೌಡ, ಪಟ್ಟಾಭಿ ರಾಮರಾವ್, ರಂಗ ರೆಡ್ಡಿ ಮತ್ತು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಮಹನೀಯ ಶ್ರೀ ಪಿ. ವಿ. ರಾಜಮನ್ನಾರ್ ಮತ್ತಿತರ ಹಲವು ಗಣ್ಯರು ಆಗಮಿಸಿದ್ದರು.

ಆಕರ್ಷಕ ರಿಯಾಯಿತಿ!

ಸಪ್ಟೆಂಬರ 15ರ ತನಕ ಮಾತ್ರ!

10ರೂಪಾಯಿ ಪುಸ್ತಕಗಳನ್ನು ತೆಗೆದುಕೊಳ್ಳುವವರಿಗೆ

15 ರೂಪಾಯಿ ಬೆಲೆಯ ಪುಸ್ತಕಗಳು

೧	ಸ್ವತಂತ್ರ ಜೀವನೋಪಾಯ (ನಾಟಕ)	ಬೆಲೆ	೦	೪	೦
೨	ಸಂಶಯ ಪಿಶಾಚಿ (ನಾಟಕ)	,,	೦	೧೦	೦
೩	ನಾಡಕತೆಗಳು (ಕಥಾಸಂಕಲನ)	,,	೦	೩	೦
೪	ಕುಶಲವ (ನವ ಪೌರಾಣಿಕ ನಾಟಕ)	,,	೦	೮	೦
೫	ಕಾವ್ಯ ಸಾಮ್ರಾಜ್ಯ (ಕವಿತಾ ಸಂಕಲನ)	,,	೧	೮	೦
೬	ಮಧುವನ (೨೫ ಕಥೆಗಳ ಸಂಗ್ರಹ)	,,	೩	೦	೦
೭	ಮುಂದಿನ ದೇವರು (ಪ್ರಬಂಧ)	,,	೦	೪	೦
೮	ವ್ಯಭಿಚಾರಿಣಿ ಯಾರು? (ನಾಟಕ)	,,	೧	೪	೦
೯	ಹೆಂಡ್ತಿ ಗಂಡನಾದರೆ? (ಪ್ರಹಸನ)	,,	೦	೪	೦
೧೦	ಪುರುಷವಧು! (ಪ್ರಹಸನ)	,,	೦	೪	೦
೧೧	ಸನ್ಯಾಸಿಯ ಸೋಗಿನಲ್ಲಿ (ಕಾದಂಬರಿ)	,,	೦	೧೨	೦
೧೨	ನಂದಾದೀಪ (ಕಥಾಸಂಗ್ರಹ)	,,	೧	೦	೦
೧೩	ದೇಶಭಕ್ತ (ರಾಜಕೀಯ ನಾಟಕ)	,,	೧	೪	೦
೧೪	ಪ್ರೇಮವಿಜಯ (ನಾಟಕ)	,,	೧	೦	೦
೧೫	ರಂಗಭೂಮಿ (ನಾಟಕ)	,,	೦	೧೦	೦
೧೬	ಸೇವಾಪಥ (ನಾಟಕ)	,,	೦	೮	೦
೧೭	ನಾರೀಹೃದಯ (ಸ್ತ್ರೀಯರ ಕಥೆಗಳು)	,,	೧	೮	೦
೧೮	ಭಾರತೀಯ ಕಥೆಗಳು (ಕತೆಗಳು)	,,	೧	೧೨	೦
೧೯	ಪ್ರಕಾಶ (ಸಾಮಾಜಿಕ ನಾಟಕ)	,,	೨	೮	೦
೨೦	ಮೂರು ಪ್ರಹಸನಗಳು (ವಿನೋದ ನಾಟಕಗಳು)	,,	೧	೪	೦
೨೧	ನಗೆಸೋಟೆಗಳು (ವಿನೋದ ಕತೆಗಳು)	,,	೧	೪	೦
೨೨	ಅನ್ನದೇವರು ಮತ್ತು ಇತರ ಕತೆಗಳು	,,	೧	೦	೦
೨೩	ಭಾರತದಲ್ಲಿ ಜಾತಿ ಭೇದ	,,	೧	೦	೦
೨೪	ಪಿಶ್ಶಾಪಿನ ಪರಾಪರಾಧಗಳು	,,	೦	೧೨	೦
೨೫	ಆಕಾಶಗಂಗೆ (೨೦ ಕಥೆಗಳ ಸಂಗ್ರಹ)	,,	೨	೮	೦
೨೬	ಸ್ವಾತಂತ್ರ್ಯವೀರ ಸಾವರ್ಕರರು	,,	೧	೪	೦
೨೭	ಜೀವನ ಸಂಗ್ರಾಮ (ಸಾಮಾಜಿಕ ನಾಟಕ)	,,	೧	೮	೦
೨೮	ಕದಂಬ (೨೨ ಕತೆಗಳು)	,,	೧	೪	೦
೨೯	ಕವಿತಾಕಾಮಿನಿ (೨೫ ಕವನಸಂಗ್ರಹ)	,,	೨	೮	೦
೩೦	ಸ್ವರಾಜ್ಯ ವಿಜಯ (ಸಂಗೀತ ನಾಟಕ)	,,	೦	೮	೦
೩೧	ಸಪ್ತಸಾಗರ (೭ ಕಥೆಗಳು)	,,	೦	೧೨	೦
೩೨	ಜಮೀನ್ದಾರ (ಕಾದಂಬರಿ)	,,	೧	೮	೦
೩೩	ಬಾಳಿನ ಬೆಡಗು (ಕಾದಂಬರಿ)	,,	೧	೪	೦

ವಿಳಾಸ:— ನವಯುಗ ಆಫೀಸು ಉಡುಪಿ

WANTED

Applications are invited for the Post of Secondary & Higher Grade Trained Teachers to serve in any of the following schools:

Hindu Hr. Ele. School, Shirva;
Kuthyar V. D. Ele. School;
Kodu Durgambika Ele. School & Sri Sharada Ele. School.

Male teachers with Scouting qualification should apply to the undersigned with a copy to the Deputy Inspector of Schools. South Range, Udipi.

(Sd.) K. Muddu Shetty,
Correspondent.

Shirva, 22—8—'53.

ಅಧಿಕಾರದ ಮೀಮಾಂಸೆ

[೧ನೇ ಪುಟದಿಂದ]

ಆದರೆ ಇಲ್ಲಿಯೊಂದು ಸಂದೇಹವೇಳುತ್ತದೆ? ಪ್ರತಿಯೊಬ್ಬನ ಅಭಿಪ್ರಾಯವೂ ಒಂದೇ ರೀತಿಯಲ್ಲಿರುವುದೆ? ಮತ್ತು ಸರಕಾರ ಸರ್ವಸಮ್ಮತಿಯಂತೆ ನಡೆದುಕೊಳ್ಳುತ್ತದೆಯೆ? ಪಕ್ಷಪಂಗಡಗಳ ಜೊಕಟ್ಟಿನಲ್ಲಿ ವಿಕಾಸ ಹೊಂದುತ್ತಿರುವ ಆಧುನಿಕ ರಾಜಕಾರಣದಲ್ಲಿ ಯಾವುದೇ ಸರಕಾರವಿರಲಿ, ಅದು ಸರ್ವ ಜನಾಭಿಪ್ರಾಯದ ದ್ಯೋತಕವಾಗಿರುವುದಿಲ್ಲ; ಆದರೆ ಬಹುಜನ ಮನ್ನಣೆಯನ್ನದು ಪಡೆದಿರುವುದೆಂಬ ಸಂಗತಿ ಸತ್ಯ. ಸಮಾಜದ ಬಹುಜನ ಯಾವುದನ್ನು ಸಾಮಾನ್ಯವಾಗಿ ಸರಿಯೆಂದು ಅಂಗೀಕರಿಸುವರೋ ಅದಕ್ಕೆ ಕಾಯಿದೆಯ ಮುದ್ರೆಯನ್ನೊತ್ತಿ ನಿಶ್ಚಿತ ನಿಯಮದ ರೂಪವನ್ನು ಕೊಡುವುದು ಸರಕಾರದ ಕೆಲಸ. ಇಂಥದರಲ್ಲಿ ಬಹುಜನರ ಅಭಿಪ್ರಾಯದಿಂದ ಭಿನ್ನ ವಿಶ್ವಾಸವನ್ನು ಹೊಂದಿರುವ ಉಳಿದ ಜನರ ಕೆಲಸವೇನು? ಅಥವಾ ಮತಭೇದ ತಳೆದಿರುವ ಒಬ್ಬ ವ್ಯಕ್ತಿಯ ಅಭಿಪ್ರಾಯಕ್ಕೆ ಏನು ಬೆಲೆ? ಅವನು ತನ್ನ ವಿಶ್ವಾಸವನ್ನು ದಮನಿಸಿ, ರೂಢಿಯ ಕಾಯಿದೆಗೆ ತಲೆ ಬಗ್ಗಿಸುವುದನ್ನು ಸಮಾಜದ ದೊಡ್ಡದೊಂದು ಘಟಕ ಮತ್ತು ಅದರ ಬೆಂಬಲ ಪಡೆದ ಸರಕಾರ ಅಪೇಕ್ಷಿಸಬಹುದು. ಆದರೆ ಇದು ವ್ಯಕ್ತಿಯ ಆತ್ಮಕ್ಕೆ ಸಮಾಧಾನ ಕೊಡುತ್ತದೆಯೆ? ಆತ್ಮ ವಿಶ್ವಾಸವಿಲ್ಲದ, ಆತ್ಮದ್ರೋಹಕರವಾದ ವರ್ತನೆಗೆ ನೈತಿಕ ಬಲವಿರುತ್ತದೆಯೆ? ಇಲ್ಲ-ಹಾಗಾದರೆ ವ್ಯಕ್ತಿ ತನ್ನ ಆದರ್ಶವನ್ನು ತಾನೇ ತಂದುಕೊಳ್ಳಕೂಡದೆಂದಾದರೆ, ತನ್ನ ವಿಶ್ವಾಸವನ್ನು ಪ್ರತಿಪಾದಿಸಲು ಬದ್ಧಕಂಕಣನಾಗಬೇಕಾಗುವುದು. ಮತ್ತು ತತ್ಪರಿಣಾಮವಾಗಿ ಬಂದೊದಗುವ ದುರಂತಗಳೆಲ್ಲಕ್ಕೂ ತಲೆಯೊಡ್ಡಬೇಕಾಗುವುದು

ಮಹಾತ್ಮಾ ಗಾಂಧೀಯವರು ಸತ್ಯದ ಪ್ರತಿಪಾದನೆಗೋಸ್ಕರ ಆಗ್ರಹಪಡಬೇಕೆಂದು ಹೇಳಿದುದು ನ್ಯಾಯದೃಷ್ಟಿಯನ್ನಿಟ್ಟುಕೊಂಡು: ಈ ಅಂಶವನ್ನು ಸಹ ಇಲ್ಲಿ ಸ್ಮರಿಸಬೇಕು. ನಾವು ಸ್ವಂತ ವಿಶ್ವಾಸವನ್ನು ಉಳಿದವರಲ್ಲಿ ಸಹ ಪ್ರಚುರಪಡಿಸಲು ನೋಡಬಹುದು,-ಆದರೆ ಅದಕ್ಕೆ ನ್ಯಾಯದ ಬಲವಿರಬೇಕಾದುದು ಅಗತ್ಯ. ಈ ನ್ಯಾಯದ ತಕ್ಕಡಿ ಹೇಗೆ ತೂಗುತ್ತದೆ? ಎಂಬುದನ್ನು ವಿಚಾರಿಸುವುದಕ್ಕೆ ಸಮಾಜದಲ್ಲಿ ಸಂಪ್ರದಾಯ ರೂಢವಾಗುವ ಬಗೆಯನ್ನೂ ಅಲ್ಲಿ ವಿಚಾರ ಕ್ರಾಂತಿಯಾಗುವ ವಿಧಾನವನ್ನೂ ಸ್ಥೂಲ ರೂಪದಲ್ಲಿ ಗ್ರಹಿಸಬೇಕು-ಎಲ್ಲ ನಮೂನೆಯ ಕ್ರಾಂತಿಯೂ ಮೊದಲು ಯಾರಾದರೊಬ್ಬ ವ್ಯಕ್ತಿಯ ವಿಚಾರದಿಂದಲೇ ಜನನಕ್ಕೆ ಬರುತ್ತದೆ ಎಂದಿಟ್ಟುಕೊಂಡರೆ ಸರಕಾರ ಕಾಯಿದೆ ಮತ್ತು ಸಾಮಾಜಿಕ ಸಂಪ್ರದಾಯಗಳಿಗಿಂತಲೂ ವ್ಯಕ್ತಿಯ ಮನಸ್ಸು ದೊಡ್ಡದೆಂದು ಒಮ್ಮೆಲೇ ಹೇಳಿಬಿಡಬಲ್ಲೆವು ಆದರೆ ಈ ದೊಡ್ಡತನ ಇರುಳುಕಳೆಯುವುದರೊಳಗೆ ಕರಗತವಾಗುವುದಿಲ್ಲ. ವ್ಯಕ್ತಿ ತನ್ನ ವಿಚಾರಗಳನ್ನು ಪ್ರಚುರಪಡಿಸುವಾಗ ರೂಢಮೂಲವಾದ ಸಂಪ್ರದಾಯ ಬಂಧನವನ್ನು ಹರಿದೊಗೆಯಬೇಕಾಗುತ್ತದೆ; ಮತ್ತು ಆಗ ಬಹು ಜನರ ಸಮಾಜವೂ ಸರಕಾರವೂ ಕೂಡಿಯೇ ಅವನನ್ನು ಚಿತ್ರಹಿಂಸೆಗೆಗುರಿಮಾಡುತ್ತವೆ-ವಿಚಾರಕ್ರಾಂತಿಯನ್ನು ಹುಟ್ಟಿಸಲು ನೋಡಿದ ವ್ಯಕ್ತಿಯೇ ವೈಚಾರಿಕ ಭ್ರಾಂತಿಯ ಕೊಳ್ಳಿಯಾಗುವುದೂ ಅಪರೂಪವಲ್ಲ. ತನ್ನ ಅಭಿಪ್ರಾಯಕ್ಕೆ ಅನುಮೋದನೆಯುಳ್ಳ ಜನರ ಗುಂಪನ್ನು ವಿಸ್ತರಿಸಿಕೊಂಡು ಅವನು ಕೆಲಸ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಬಹುಜನರ ಮನಸ್ಸಿನಲ್ಲಿ ವಿಚಾರಪರಿವರ್ತನೆಯನ್ನುಂಟುಮಾಡಲು ಅವನು ಶಕ್ತನಾಗುವುದಿಲ್ಲವೋ-ಅಲ್ಲಿಯವರೆಗೆ ಅವನ ಸತ್ಯಾಗ್ರಹ ಫಲಿಸುವುದಿಲ್ಲ, ಮತ್ತು ಸತ್ಯಾಗ್ರಹ ಫಲಿಸದೆ, ಅಂತ್ಯಗೊಂಡರೆ, ಅದು ಸಮಾಜದಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿ ನಡುನೀರಿನಲ್ಲಿ ಕೈಬಿಟ್ಟಂತೆ ಆಗುತ್ತದೆ. ಇದು ವ್ಯಕ್ತಿ ಸಮಾಜಕ್ಕೆ ಮಾಡುವ ಮಹಾಪರಾಧಗಳಲ್ಲೊಂದು. ದುರ್ಬಲವ್ಯಕ್ತಿಯ ಸತ್ಯಾಗ್ರಹ ಅವನಿಗೆ ಮಾತ್ರವಲ್ಲ ಅವನನ್ನು ನಂಬಿದ ಯಾರಿಗೂ ಶ್ರೇಯಸ್ಸು ತರುವುದಿಲ್ಲ.

ಇವನ್ನೆ ನ್ಯಾಯ ದೃಷ್ಟಿಯೆಂದು ಕರೆಯಬಹುದು ಅಭಿಪ್ರಾಯ ಭೇದವಿರುವುದು ತಪ್ಪಲ್ಲ. ಆದರೆ ತನ್ನ ಮತವೇ ಸತ್ಯವೆಂದು ತಪ್ಪಾಗಿ ತಿಳಿದು ಅದಕ್ಕೋಸ್ಕರ ಆಗ್ರಹ ಪಡುವುದು ಮಾತ್ರ ಸರಿಯಲ್ಲ. ಸತ್ಯಾಗ್ರಹವನ್ನು ಅವಲಂಬಿಸುವ ಜನರು ವ್ಯಕ್ತಿಗತವಾದ ಅಧಿಕಾರದಮಾತನ್ನು ಗ್ರಹಿಸಿಕೊಂಡಂತೆ, ಅದು ತನ್ನ ವ್ಯಕ್ತಿತ್ವದ ಮೇಲೆ ಹೇರುವ ಹೊರೆಯನ್ನೂ ಲಕ್ಷಿಸುವುದು ಅಗತ್ಯ. ತಾನು ನಡೆಸುವ ಈ ಚಳುವಳಿಯು ಸಾಮಾಜಿಕ ಹಿತವನ್ನು ನಿಜಕ್ಕೂ ಸಾಧಿಸುವುದೇ ಎಂಬ ಬಗ್ಗೆ ದೃಢವಾದ ನಿಶ್ಚಯ ಇರಬೇಕಾಗುತ್ತದೆ. ಅರ್ಧದಾರಿಯಲ್ಲೇ ಬಿಟ್ಟುಕೊಡುವ ದುರ್ಬಲ ಹೆಜ್ಜೆ ತನ್ನದಾಗಬಹುದೆಂಬ ಶಂಕೆಯುಳ್ಳ ಜನರು ಎಂದಿಗೂ ಈ ಸಾಹಸಕ್ಕೆ ಇಳಿಯ ಕೂಡದು. ಇಳಿದರೆ, ಸಾಮಾಜಿಕ ಶಾಂತಿಯನ್ನು ಕೆಡಿಸಿದ ತುಂಟನೆಂದು ಸರಕಾರವಲ್ಲ – ಕ್ರೋಧಾವಿಷ್ಟವಾದ ಜನತೆಯೇ ಅವನನ್ನು ಹರಿದು ತಿನ್ನುವುದು. ವ್ಯಕ್ತಿ ಮಾಡಿದುದು ಸರಿಯೆಂದಾದರೆ ಆಗ ಸಮಾಜದ ವರ್ತನೆಯೂ ಸರಿ ಎಂಬ ನಿರ್ಣಯವಾಗುವುದು.

ಭಾರತದ ಇಂದಿನ ಸ್ಥಿತಿಯಲ್ಲಿ ಇಂಥ ಕ್ರಾಂತಿಕರ ವಿಚಾರಗಳು ಜನರಿಗೆ ರುಚಿಸುತ್ತವೆಯೆ? ಯಾವುದೇ ಉದ್ದೇಶದಿಂದ ನಾವು ಸತ್ಯಾಗ್ರಹವನ್ನು ಮಾಡಲೀ, ಅಥವಾ ಅದೇ ಸ್ವರೂಪದ ಸಂಪುಮುಷ್ಕರಗಳಲ್ಲಿ ತೊಡಗಲೀ ಇಷ್ಟ ಸಿದ್ಧಿಯನ್ನು ಮಾಡಿಕೊಳ್ಳಲು ಅಂಥ ಕ್ರಮ ನೆರವಾಗುತ್ತದೆಯೆ? ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ, ಶಾಂತವಾದ, ಸಂಯಮ ಶೀಲವಾದ, ಸಹನೆಯಿಂದ ತುಂಬಿದ ಗುಣಶೀಲಗಳಿರುವ ರಾಷ್ಟ್ರ ಮತ್ತು ಅಲ್ಲಿಯ ಜನತೆ ಹಿಂಸಾತ್ಮಕವಾದ ಕ್ರಾಂತಿಗಳಿಗೆ ಎಡೆಕೊಟ್ಟಿಲ್ಲ ಮಾತ್ರವಲ್ಲ-ರೂಢಮೂಲವಾದ ಬದಲಾವಣೆಗೂ ಅವಕಾಶ ನೀಡಿರುವುದಿಲ್ಲ. ಆದಕಾರಣವೇ ಭಾರತದಲ್ಲಿ ಇಂದಿಗೂ ಜಾತಿಭೇದಗಳು ಇವೆ, ದಾನಧರ್ಮಗಳ ಆದರ್ಶವಿದೆ, ಶಾಂತ ಹಾಗೂ ವಿವೇಕಶೀಲ ಮನೋಭಾವವಿದೆ. ಓದುಬರೆಹವನ್ನು ಏನೇನೂ ತಿಳಿದಿರದಿದ್ದರೂ ಆಧುನಿಕ ವೈಜ್ಞಾನಿಕ ಪ್ರಗತಿಯ ಗಂಧಗಾಳಿಯ ಸೋಂಕು ತಗಲದಿದ್ದರೂ ಭಾರತದ ರೈತ ಅಜ್ಞಾನಿಯಾಗಿಲ್ಲ—ಅವನ ಬುದ್ಧಿಯ ಮಟ್ಟ ಉನ್ನತವಾಗಿಯೇ ಇದೆ. ಯಾವುದನ್ನೆ ಆಗಲಿ ವಿಕಾರವಶನಾಗಿ, ಉದ್ವೇಗಕ್ಕೊಳಪಟ್ಟು ಸ್ವೀಕರಿಸುವುದಕ್ಕೆ ಅವನು ಸಮ್ಮತಿಸುತ್ತದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹಿಂಸಾತ್ಮಕ ಪ್ರಚೋದನೆಗಳ ಕುರಿತು ತೀವ್ರ ಜುಗುಪ್ಸೆಯುಟ್ಟುವುದು ತೀರಾ ಸ್ವಾಭಾವಿಕ—ಅಷ್ಟೇ ಅಲ್ಲ. ಅಹಿಂಸಾತ್ಮಕವಾದ ಕ್ರಾಂತಿಯನ್ನುಂಟುಮಾಡಬೇಕಾದರೂ ಮಹಾತ್ಮಾಗಾಂಧೀಯಂಥ ಪವಾಡ ಪುರುಷರಿಗೆಯೇ ಸಾಧ್ಯ. ಎಂದಮೇಲೆ ಸಾಮಾನ್ಯ ಜನರು ಅಧಿಕಾರದ ಪ್ರಶ್ನೆಯನ್ನೆತ್ತಿಕೊಂಡು ಆಕ್ರೋಶಗೈಯುವುದು ಚಂದಕಾಣುವುದಿಲ್ಲ. ಎಲ್ಲವೂ ಮಿತಿಯೊಳಗಿರುವುದೇ ಯೋಗ್ಯ.

—ಹಿಂತಸ್ಸತ್||

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲ್ಯಾಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
ಸ್ಥಾಪನೆ: 1934. ಪ್ರಧಾನ ಕಚೇರಿ: ಮದ್ರಾಸು.
66⅓ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45⅓ ಲಕ್ಷಕ್ಕೂ ಮಿಕ್ಕಿದ ಜೀವನಿಧಿ, 10⅓ ಲಕ್ಷಕ್ಕೂ ಮಿಕ್ಕಿದ ಮೂಲಗಳು. ಸಾಧಾರಣ 3 ಕೋಟಿಯಷ್ಟು ಊರ್ಜಿತದಲ್ಲಿರುವ ವಹಿವಾಟು.
ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ರಕ್ಷಣೆ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ.
ಉತ್ಸಾಹಿ, ಜನಾನುರಣಿಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:-
ಜಿ. ಆರ್ ನಾಲ್ಕ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು [ದ. ಕ.]

ಹೋಮ್ ಸಿನೆಮಾ ಪ್ರೊಜೆಕ್ಟರ್

ಸಿನೆಮಾ ಮಂದಿರಗಳಲ್ಲಿ ನೋಡುವಂತಹ ಮಾದರಿಯಲ್ಲಿ 35 ಎಮ್. ಎಮ್. ಫಿಲ್ಮುಗಳು, ಸ್ಲೈಡುಗಳು ಇತ್ಯಾದಿ, ಚಲಿಸುವ, ನೃತ್ಯ ಮಾಡುವುದನ್ನು ನಿಮ್ಮ ಮನೆಯಲ್ಲೇ ನೋಡಬಹುದು. ಸಾಮಾನ್ಯ ಚಾರ್ಜುಗಳು ಇಲ್ಲದೆ ಇಲೆಕ್ಟ್ರಿಕ್ ಬಲ್ಬು (AC DC) ಗಳ ಸಹಾಯದಿಂದಲೇ ನಡೆಸಬಹುದು. ಪತ್ತೆ ಅದಿ ಉದ್ದದ ಫಿಲ್ಮು ಪುಕ್ಕಟೆ. ಪ್ರೊಜೆಕ್ಟರ್ ಕ್ರಯ ರೂ. 10/- ವಿ. ಪಿ. ಪಿ. ಚಾರ್ಜು ರೂ. 3/- ಪ್ರತ್ಯೇಕ. ಹೆಚ್ಚಿಗೆ ಫಿಲ್ಮುಗಳು ಬೇಕಾದರೆ ಗಜಕ್ಕೆ 0-4-0 ಪ್ರತ್ಯೇಕ ತೆರಬೇಕು.
ಇಲೆಕ್ಟ್ರಿಕ್ ಮತ್ತು ರೇಡಿಯೊ ಗಾಯಿಡ್. ಬರೀ ರೂ. 15/-ಕ್ಕೆ ರೇಡಿಯೋ ತಯಾರಿಸುವುದನ್ನೂ, ಇಲೆಕ್ಟ್ರಿಕ್ ವಯರಿಂಗ್ ಮತ್ತು ರಿಪೇರಿ ಕೆಲಸವನ್ನೂ ಕಲಿತು ತಿಂಗಳಿಗೆ ರೂ. 200/ ಸಂಪಾದಿಸಿರಿ. ಬೆಲೆ ರೂ. 1/ ವಿ.ಪಿ. ಚಾರ್ಜು ರೂ. 1/ ಪ್ರತ್ಯೇಕ.
ಇಂಗ್ಲಿಷ್ ರಾಗದ ರಾಗಮಾಲೆಗಳು (ಫ್ಲಿಟ್-ಬಸುರಿ). ಹಿತ್ತಾಳೆಯಿಂದ ತಯಾರಿಸಲ್ಪಟ್ಟು ಇಂಪಾದ ಸ್ವರವನ್ನು ಕೊಡುತ್ತವೆ. ಬೆಲೆ ರೂ. 1/- ವಿ. ಪಿ. ಚಾರ್ಜು ರೂ. 1-1-0 ಪ್ರತ್ಯೇಕ.
HINDUSTAN TRADERS & PUBLISHERS LTD.,
SARAI - BALA, ALIGARH (U. P.)

ತಿಂಗಳಿಗೆ ರೂಪಾಯಿ 200ರಿಂದ ರೂ 500 ಸಂಪಾದಿಸಿರಿ
ನಮ್ಮಲ್ಲಿ ದೊರೆಯುವ ಹೊಸ ನಮೂನೆಯ ಬಟ್ಟೆಗಳು, ಸಿಲ್ಕ್ ಸೀರೆಗಳು, ನಯರೋಮದ ಬ್ಲೇಂಕೆಟ್ಟುಗಳನ್ನು ಬಿಡು ಸಮಯದಲ್ಲಿ ಮಾರಾಟಮಾಡಲು ಉದಾರ ಶರ್ತಗಳಿಂದ ಏಜಂಟರು ಬೇಕಾಗಿದ್ದಾರೆ. ಉತ್ಸಾಹಿಗಳೆಲ್ಲರಿಗೂ ಸುವರ್ಣಸಂಧಿ. ಉಚಿತ ಸ್ಯಾಂಪಲ್ಸುಗಳಿಗೂ ಶರ್ತಗಳಿಗೂ ಪೂರ್ತಿ ಪತ್ರಕ್ಕೂ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಾಗಲೀ ಹಿಂದೀಯಲ್ಲಾಗಲೀ ಮಾಡಿರಿ.
International Industrial Corporation (India)
New Market, Karol Bagh,
NEW DELHI

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! — ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರ ವ್ಯವಹಾರ ವಿಹಾರಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂದಿ ತಿನಸು, ಇವುಗಳ ರುಚಿ ಶುಚಿ ಹೇಳಬೇಕೆ
ಪ್ರೊಪ್ರೈಟರ್.— ಕೆ. ವೆಂಕಟ್ರಮಣ ಭಟ್

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಬೆಲ್ಮಂಚೆ ವ್ಯಾಸಾಚಾರ್ಯರ
ರಥಬೀದಿ ಉಡುಪಿ.

ಸ್ವೀಕಾರ—ವಿಮರ್ಶೆ

ಶ್ರೀ ಮಧ್ವಾಧಿರಾಜ ಗುರುವರೇಣ್ಯರ ಋಜುತ್ವ ಮಂಡನವು—ಉಡುಪಿ ಶ್ರೀ ಶೀರೂರು ಮಠದ ಶ್ರೀಮಲ್ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಬರೆದು ತರ್ಕಕೇಸರಿ ಪಡಮುನ್ನೂರು ನಾರಾಯಣಾಚಾರ್ಯರಿಂದ ಪ್ರಕಾಶಿಸಲ್ಪಟ್ಟ ಸಣ್ಣ ಪುಸ್ತಕವಿದು. ಕ್ರೌನ್ ೧/೮ ಆಕಾರದ 32 ಪುಟ. ಭಕ್ತರ ಜ್ಞಾನೋದಯವೆ ಬೆಲೆ.

ಉಡುಪಿಯ ಸೋದೆ ಮಠವನ್ನು ಆಳಿ ಪ್ರಸಿದ್ಧರಾದ ಶ್ರೀವಾದಿರಾಜ ಸ್ವಾಮಿಗಳ ಹೆಸರು ಭಾವುಕರಾದ ಮಾಧ್ವರಿಗೆಲ್ಲ ಪರಿಚಯವೂ ಪ್ರಿಯವೂ ಪೂಜ್ಯವೂ ಆಗಿದೆ. ಉಡುಪಿಯ ಧಾರ್ಮಿಕ ಜೀವನಕ್ಕೆ ಹೊಸ ಕಳೆಯನ್ನು ತುಂಬಿದ ಪವಿತ್ರ ಚರಿತ್ರರಾದ ಈ ಸ್ವಾಮಿಗಳು ಭಾವಿ ಸಮೀರರೆಂದು ನಂಬಿಕೆಯುಂಟು. ಈ ವಿಚಾರವನ್ನು ಯುಕ್ತಿಯುಕ್ತವಾಗಿಯೂ ಪ್ರಮಾಣ ಬದ್ಧವಾಗಿಯೂ ಈ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ. ಧರ್ಮ ಜಾಗ್ರತಿಗೆ ಸಾಧಕವಾದೀ ಕಿರುಹೊತ್ತಿಗೆಯನ್ನು ಪ್ರಕಟಿಸಿ ಶ್ರೀಗಳವರೂ, ಶ್ರೀ ನಾರಾಯಣಾಚಾರ್ಯರೂ ಅಭಿನಂದನೆಗೆ ಪಾತ್ರರಾಗಿದ್ದಾರೆ.

—ಭಾವುಕ.

ಶ್ರೀ ಗುರುರಾಜ ಸ್ತೋತ್ರ—ಬರೆದವರು ಹಾಗೂ ಪ್ರಕಾಶಕರು ಶ್ರೀ ಹುಲಿಮನೆ ಕೆ. ಸೀತಾರಾಮ ಶಾಸ್ತ್ರಿ, 1/16 ನೇ ಕ್ರೌನ್ ಆಕಾರದ 24 ಪುಟಗಳು ಬೆಲೆ. 0–4–0

೧೦೮ ಪದ್ಯಗಳಿಂದ ಕೂಡಿದ ಶ್ರೀ ಗುರು ರಾಘವೇಂದ್ರ ಸ್ತೋತ್ರದ ಕಿರುಹೊತ್ತಿಗೆಯಿದು, ಕನ್ನಡದ ಹೆಣ್ಣು ಮಕ್ಕಳೂ ಹುಡುಗರೂ ಹಾಡಲು ಅನುಕೂಲವಾಗುವ ಸುಲಭ ಶೈಲಿಯಲ್ಲಿ ಬರೆಯಲ್ಪಟ್ಟಿದೆ.

ವಿಜ್ಞಾನ ಜ್ಯೋತಿಷ— (ಕನ್ನಡ ಶಾಸ್ತ್ರೀಯ ಜೋತಿಷ ಮಾಸಪತ್ರಿಕೆ) ಸಂಪಾದಕ ಮತ್ತು ಪ್ರಕಾಶಕರು ಶ್ರೀ. ಬಿ. ಎಸ್. ಮಹದೇವ ರಾವ್, ಬಿ. ಎ. ಗಣೇಶ ವಿಲಾಸ, ಸಂಪಿಗೆ ರಸ್ತೆ, ಮಲ್ಲೇಶ್ವರಂ ಸರ್ಕ್ಲ್, ಬೆಂಗಳೂರು 3. ವಾರ್ಷಿಕ ಚಂದಾ ರೂ. 6–0–0 ಬಿಡಿ ಪ್ರತಿ 0–8–0

ಇದೇ ಫೆಬ್ರವರಿಯಲ್ಲಿ ಪ್ರಾರಂಭವಾದ ನೂತನ ಜ್ಯೋತಿಷ ಮಾಸಪತ್ರಿಕೆ ಭಾರತೀಯರ ದೃಷ್ಟಿಯಿಂದ ಜ್ಯೋತಿಷ್ಯಕ್ಕೆ ತುಂಬ ಪ್ರಾಮುಖ್ಯತೆ ಇದೆ. ಜ್ಯೋತಿಶ್ಶಾಸ್ತ್ರವು ಭಾರತೀಯ ಮುಖ್ಯ ಶಾಸ್ತ್ರಗಳಲ್ಲೊಂದಾಗಿದೆ. ಖಗೋಳ ಶಾಸ್ತ್ರದಲ್ಲೂ ಫಲ ಜ್ಯೋತಿಷದಲ್ಲೂ ಒಂದಾನೊಂದು ಕಾಲದಲ್ಲಿ ಅಗ್ರ ಸ್ಥಾನದಲ್ಲಿದ್ದರು. ಭಾರತೀಯ ರಾಜಕೀಯ ಪ್ರಾಬಲ್ಯವಿದ್ದವೇಳೆ ಇದಕ್ಕೆ ಪ್ರಾಮುಖ್ಯತೆಯೂ ರಾಜ ಪ್ರೋತ್ಸಾಹವೂ ಇತ್ತು. ಕಾಲ ಬದಲಾದಂತೆ, ಸಾಧಾರಣ ಹೇಳಿದಂತೆ ಈ ಶಾಸ್ತ್ರವು ಹಿಂದೆ ಬಿದ್ದಿರುವ ಇಂತಹ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಜ್ಯೋತಿಶ್ಶಾಸ್ತ್ರದ ಸಾಮಾನ್ಯ ತತ್ವಗಳನ್ನೆಲ್ಲ ಪರಿಚಯ ಮಾಡಿಕೊಡುವ ಉದ್ದೇಶದಿಂದ ಈ ಪತ್ರಿಕೆ ಹೊರಟಿದೆ. ಜ್ಯೋತಿಷ್ಯ ಸ್ವಲ್ಪನಾದರೂ ಅಭಿರುಚಿಯುಳ್ಳವರು ಇದನ್ನು ಸ್ವಾಗತಿಸಿ, ಪ್ರೋತ್ಸಾಹಿಸಬೇಕು. ಪ್ರಚಾರ ದೃಷ್ಟಿಯಿಂದ ಇದರ ಚಂದಾ ಕಡಿಮೆ ಮಾಡುವುದು ಯೋಗ್ಯವೆಂದು ಸೂಚಿಸಬಯಸುತ್ತೇವೆ

Ornamental h for Garden Ponds a Home Aquariums- by ailoor Laxminarayana I B A. Published by Ho Aquariums, Mangalore 3. S. Kanara. Price: As

ಮನೆಗಳಲ್ಲಿಯೂ ಮನೆಯ ಮುಂದಿನ ಉದ್ಯಾನದ ಕೊಳಗಳಲ್ಲಿಯ ಅಲಂಕಾರಿಕ ಮತ್ಸ್ಯಗಳನ್ನು ಸಾಕಿ, ಅವುಗಳನ್ನು ಮನೋರಂಜನೆಯನ್ನೂ ಶಿಕ್ಷಣವನ್ನೂ ಪಡೆಯುವ ಹವ್ಯಾಸ ಅನೇಕರಿಗೆ ಇರಬಹುದು. ಸಾಕುವುದೇ ಮುಂತಾದ, ಈ ಅಲಂಕಾರಿಕ ಮೀನುಗಳ ಸಾಕಣೆಯೂ ಮನಸ್ಸಿಗೆ ಸಂತೋಷ ಕೊಡಬಲ್ಲುದು. ಶ್ರೈಲೂರು ಲಕ್ಷ್ಮೀನಾರಾಯಣರಾಯರು ಈ ಹಿಂದೆ ಜೇನಿನ ವ್ಯವಸಾಯ ಎಂಬ ಪುಸ್ತಕ ಬರೆದು ಜೇನು ಸಾಕಣೆಯ ಕುರಿತು ಕನ್ನಡಿಗರಿಗೆ ಮಾಹಿತಿಯನ್ನು ಒದಗಿಸಿದ್ದಾರೆ. ಗೃಹಮತ್ಸ್ಯ ವ್ಯವಸಾಯದ ಕುರಿತಾದ ಪ್ರಕೃತ ಪುಸ್ತಕ ಆಂಗ್ಲ ಭಾಷೆಯಲ್ಲಿದ್ದರೂ, ಸರಳವಾದ ವಾಕ್ಯಗಳಲ್ಲಿ ಬರೆಯಲ್ಪಟ್ಟಿರುವುದರಿಂದ, ಇಂಗ್ಲೀಷಿನ ಸಾಮಾನ್ಯ ಜ್ಞಾನವಿದ್ದವರೂ ಓದಿ ಅರ್ಥಮಾಡಿಕೊಳ್ಳಬಲ್ಲರು. ಪುಸ್ತಕದಲ್ಲಿ ಅಲಂಕಾರಿಕ ಮತ್ಸ್ಯಗಳ ಬೇರೆ ಬೇರೆ ಜಾತಿ, ಅವುಗಳನ್ನು ಸಾಕುವ ಕ್ರಮ, ನೀರಿನ ಕೊಳಗಳನ್ನು ರಚಿಸುವ ವಿಧಾನ, ಜಲಸಸ್ಯಗಳನ್ನು ಪೋಷಿಸುವ ಬಗೆ ಮತ್ಸ್ಯಗಳ ಆಹಾರ, ಅವುಗಳನ್ನು ರೋಗ ರುಜಿನಗಳಿಂದ ರಕ್ಷಿಸುವ ರೀತಿ ಮುಂತಾದುವುಗಳನ್ನು ವಿವರಿಸಿರುವರು. ಕೆಲವು ಜಾತಿಯ ಮೀನುಗಳ ಚಿತ್ರವನ್ನು ಪುಸ್ತಕ ಒಳಗೊಂಡಿದೆ.

ಪುಣ್ಯ ಸ್ಮೃತಿ—(ಲಘು ಕಥಾಸಂಗ್ರಹ) ವಿವಿಧ ಲೇಖಕಿಯರಿಂದ. ಪ್ರಕಾಶಕರು: ವೀಣಾಪ್ರಕಟಣಾಲಯ, ಶಿರ್ವ, ದ. ಕನ್ನಡ ಬೆಲೆ: ರೂ ೧–೪–೦.

"ವೀಣಾ" ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಶಂಕರನಾರಾಯಣರಾಯರು ತಮ್ಮ ಪತ್ನಿ ಸುಗುಣದೇವಿಯವರ ಸ್ಮಾರಕವಾಗಿ ಈ ಕಥಾಸಂಗ್ರಹವನ್ನು ಪ್ರಕಟಪಡಿಸಿರುವರು. ಇಲ್ಲಿರುವ ಹನ್ನೆರಡು ಕತೆಗಳನ್ನು ಮಹಿಳೆಯರೇ ಬರೆದಿರುವುದು ಒಂದು ವೈಶಿಷ್ಟ್ಯ. ಪ್ರಾರಂಭದಲ್ಲಿ ಲಲಿತಾ ಎಸ್ ರಾಯರು ದಿವಂಗತ ಸೌ. ಸುಗುಣಾ ದೇವಿಯವರ ಜೀವನ ವೃತ್ತಾಂತವನ್ನು ಒಂದು ಪರಿಚಯ ಲೇಖನದ ಮೂಲಕ ನಮಗೆ ಮಾಡಿಕೊಡುತ್ತಾರೆ ಗೃಹಲಕ್ಷ್ಮಿಯಾಗಿ ಸುಗುಣಾ ದೇವಿಯವರು ಬಾಳಿದರೆಂದೂ ಸತಿಯ ಶ್ರೇಯೋಕಾಂಕ್ಷೆಗಳಾಗಿ ಬಾಳ್ವೆ ನಡೆಸಿದರೆಂದೂ ಈ ಪರಿಚಯದಿಂದ ತಿಳಿದು ಬರುತ್ತದೆ. ಆದರ್ಶ ಗೃಹಿಣಿಯ ಸ್ಮಾರಕಾರ್ಥವಾಗಿ ಪ್ರಕಾಶಕ್ಕೆ ಬಂದ ಈ ಪುಸ್ತಕ ಉತ್ತಮ ಕಥಾಸಂಗ್ರಹಗಳಲ್ಲಿ ಒಂದಾಗಬೇಕಿತ್ತು-ಆದರೆ ನಮ್ಮ ನಾಡಿನಲ್ಲಿ ಸ್ತ್ರೀ ಬರೆಹಗಾರರೆ ಕಡಿಮೆ ಎಂಬುದರಿಂದಲೋ ಏನೋ, ಇಲ್ಲಿ ಪ್ರಯತ್ನ ಪಟ್ಟು ಸಂಗ್ರಹಿಸಿದ ಕತೆಗಳಲ್ಲಿ ಉತ್ತಮ ದರ್ಜೆಗೆ ಸೇರಿದವುಗಳು ಯಾವುವೂ ಇಲ್ಲ. ಹಿಂದೀಯಿಂದ ಭಾರತೀ ಸುರೆಯವರು ಅನುವಾದಿಸಿದ ವಿಸರ್ಜನ್ನವನ್ನು ಬಿಟ್ಟರೆ, ಆರ್. ಕಲ್ಯಾಣಮ್ಮನವರ "ಏನು ಸಂಬಂಧ!" ಗೌರಾದೇವಿ ಇಂಚಲಿ ಮಠದ "ಪತಿತೋದ್ಧಾರ" ಇವು ಚೆನ್ನಾಗಿವೆ. ಎನ್ನಬಹುದು ಶಂಕುತಲಾ ದೇವಿಗಾರಿಯ "ಅಮೃತ" ಕಲಂಬಳ್ಳಿ ಸರೋಜದೇವಿಯವರ "ಪ್ರತೀಕ್ಷೆ" ಮತ್ತು "ನೊಂದ ಜೀವ" ಆನಂದಿ ಸದಾಶಿವರಾಯರ "ಆಹಿನ ಮೇರೆಡಿಯಲ್ಲಿ" ಇವು ಸಾಧಾರಣ ಚೆನ್ನಾಗಿವೆ. ಸಂಪಾದಕರು. ಲೇಖಕಿಯರ ಕರೆಯ ಮಾಡಿಕೊಡುವಾಗ ಪ್ರತಿಯೊಂದೂ ಕತೆಯಲ್ಲಿ ಉತ್ತಮ ವೈಶಿಷ್ಟ್ಯವನ್ನು ಕಂಡಿದ್ದರೂ- ಒಟ್ಟಿನಲ್ಲಿ ಯಾವ ಕಥೆಯೂ ಹೃದಯಸ್ಪರ್ಶಿಯಾಗಿಲ್ಲವೆಂದು ತೋರುತ್ತದೆ. ಆದರೂ ಕನ್ನಡದ ಹೆಣ್ಣು ಮಕ್ಕಳು ತೋರುತ್ತಿರುವ ಸಾಹಿತ್ಯ ಪ್ರೇಮಕ್ಕೆ ಈ ಕಥಾ ಸಂಕಲನ ಸಾಕ್ಷಿ ಎಂಬಷ್ಟು ಸಮಾಗಿರುವುದು ಯೋಗ್ಯ.

ಪುರಂದರದಾಸರ ಕೀರ್ತನೆಗಳು— ಪ್ರಕಾಶಕರು ಉಪಾಧ್ಯಾಯ ಪ್ರಕಟಣಾಲಯ, ಚಿಕ್ಕಪೇಟೆ, ಬೆಂಗಳೂರು ೩. ಬೆಲೆ. ೫ರಾಣೆ.

ಇದರಲ್ಲಿ ಪುರಂದರ ದಾಸರು ಹಾಡಿದ ೩೦ ಕೀರ್ತನೆಗಳು ಇವೆ ಆಯ್ಕೆಯು ಸಾಮಾನ್ಯ.

ಶ್ರೀ ಧರ್ಮಸ್ಥಳ ಕ್ಷೇತ್ರ ಭಜನ ಮಂಜರಿ—ಬರಹಗಾರರ ತಿಮ್ಮಣ್ಣ, ವಿಷ್ಣು ಭಟ್ಟ, ಭಟ್ಟ, ಕಡಕೋಳ ಪೋಸ್ಟ್, ಬೆಳ್ತಂಗಡಿ ತಾಲೂಕ, ದ. ಕನ್ನಡ ಜಿಲ್ಲೆ. ಬೆಲೆ ಒಂಭತ್ತಾಣೆ.

ತಿರುಮಲ ದಾಸರೆಂಬ ಈ ಮಹನೀಯರು ಉದರ ನಿಮಿತ್ತವಾಗಿ ಈ ಭಜನಮಂಜರಿಯನ್ನು ಬರೆದರೆಂದೂ, ಧರ್ಮಸ್ಥಳದ ಮಂಜುನಾಥ ಸ್ವಾಮಿಯೇ ಅವರಿಗೆ ಪ್ರೇರಣೆ ಕೊಟ್ಟನೆಂದೂ 'ವಿಜ್ಞಾಪನೆ' ತಿಳಿಸುತ್ತದೆ ಅದರಲ್ಲಿ ಹೇಳಿದ ಇನ್ನೊಂದು ಮಾತೂ ಸತ್ಯ—"ನಾ ಸೇವಿಸಿ ಕವಿತ್ವದಲ್ಲಿ ಗಣ ಯತಿ ಪ್ರಾಸಾದಿಗಳನ್ನು ಅರಿತವನೂ ಅಲ್ಲ." ಹಾಗಿರುವುದರಿಂದ ಅವರ ಈ ಭಜನ ಮಂಜರಿ ಅಪ್ರಬುದ್ಧ ಮನಸ್ಸಿನ ಅಪಕ್ವ ವಿಚಾರಗಳ ಒಂದು ಕಂತೆ. ಎಲ್ಲ ಕೀರ್ತನೆಗಳೂ ಮಂಜುನಾಥ ದೇವರನ್ನು ಉದ್ದೇಶಿಸಿವೆ-ಆದರೆ ಅವುಗಳು ಯಾವ ಆಕರ್ಷಣೆಯನ್ನು ಪಡೆದಿಲ್ಲ, ಯಾವುದೂ ಸುಸಂಬದ್ಧ ವಿಚಾರ ಅಥವಾ ಕಲ್ಪನೆಯನ್ನೊಳಗೊಂಡಿಲ್ಲ. ಅಸ್ತಿಕ ಮಹಾಶಯರು ಒಳ್ಳೆಯತನವನ್ನು ಅಧಿಕ ಪ್ರಯೋಜನ ದೃಷ್ಟಿಯ ಸೂರೆಗೊಳ್ಳಲು ಈ ಪುಸ್ತಕ ಒಂದು ನೆಪವಾದೀತೇ ಹೊರತು—ಬೇರೇನೂ ಪ್ರಯೋಜನ ಕಾಣುವುದಿಲ್ಲ. ಪುಸ್ತಕಕ್ಕೆ ಇಟ್ಟ ಒಂಭತ್ತಾಣೆ ಬೆಲೆಯೇ ಇದನ್ನು ಸ್ಪಷ್ಟೀಕರಿಸುತ್ತದೆ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No 2/1953.

R. I. A. 753/1953.

1. ಉಸ್ತಾದ ಅಂಮದ ಸಾಹೇಬ-ಮ್ಯಾದಿನ ಸಾಹೇಬನ ಮಗ 2. ಜೀಬಿ ಆಶಾ-1 ನೆ ಯದ್ರಿ ಹೆಂಡ್ತಿ 3. ಜುಲೇಖಾಬಿ. ಅಬ್ದುಲ್ ರಹಿಮಾನ್ ಸಾಹೇಬರ ಮಗ- 4. ಮಹಂಮದ ಜಫರುಲ್ಲಾ-(ಮ್ಯಾನರ್-)-3 ನೆ ಅರ್ಜಿದಾರಳ ಮಗ— ಗಾರ್ಡಿಯನ 3 ನೇ ಅರ್ಜಿದಾರಳು— ಉಡುಪಿ ತಾಲೂಕು – ಕೊಡವೂರು ಗ್ರಾಮದ ಅರ್ಜಿದಾರರು ಮಲ್ಪೆ

ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನೆಂದ್ರೆ

I–2 ನೆ ಅರ್ಜಿದಾರರ ಮಗ--3 ನೆ ಅರ್ಜಿದಾರಳ ಗಂಡ--4ನೆ ಅರ್ಜಿದಾರನ ತಂದೆ--ಮೃತ ಬಿ. ಅಬ್ದುಲ್ ರಹಿಮಾನ ಸಾಹೇಬರ ಬಾಬ್ತು ದಿ. ಗಾರ್ಡಿಯಂಸ್ ಓಫ್ ಯುಂಡಿಯಾ ಲೈಫ್ ಇನ್ಶೂರೆನ್ಸ್ ಕಂಪ್ನಿ ಮದ್ರಾಸು-- ಮಾಡಿದ ಇನ್ಶೂರೆನ್ಸು ಹಣವನ್ನು ಪಡೆಯುವರೆ—ತಾವು ವಾರ್ಸುದಾರರೆಂತಲೂ, ಆ ಕಾರಣ 1 ನೆ ಅರ್ಜಿದಾರನ ಹೆಸರಿಗೆ Extended ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 9-9-1953ಕ್ಕೆ ಇಡಲಾಗಿದೆ. ಆಕ್ಷೇಪ ಹೇಳತಕ್ಕವರು-ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು.

N. V. Kamath

Advocate for Petitioners

ಉಡುಪಿ 20-8 1953

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: **ಮಂಗಳೂರು.**

ಮೂಲಧನ	. .	ರೂ. 20,00,000
ತೆತ್ತ ಪಾಲು ಭಂಡಾ.	. .	,, 8,77,860
ಕ್ಷೇಮ ನಿಧಿ	. .	,, 1,80,000

ಠಾಯಂ ಠೇವಣಾತಿ ತಿಂಗಳಿನಿಂದ 24 ತಿಂಗಳಿನ ವ್ಯಾವೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸುವೆವು.

ಮೂರು ವರ್ಷ ಅವಧಿಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಬಹುದು.

ಜಿಲ್ಲೆಯ ಎಲ್ಲಾ ಪೇಟೆಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ

ಕೆ. ಸುಂದರರಾಮ ಶೆಟ್ಟಿ,
ಬಿ ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJA BANK, Limited.

'ಗೋಪಾಲಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:–ವೈದ್ಯಭೂಷಣ ಯಂ. ವಿ. ಶಾಸ್ತ್ರೀ,

ಇವರ

ಜೀವಾತು

ಎಂಬ

ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರ ರಸಾಯನ.

ಪಟ್ಟಣ ಮಾಹಿತಿಗರು ಸಿ. ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲ್ಬೈಲ್. (ಮಂಗಳೂರು)
ಸ್ಟಾಕಿಸ್ಟರು:–ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.



ಬರೇ ರೂ-5ಕ್ಕೆ

15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ. ಬೇಗನೆ ಬರೆಯಿರಿ.

American Swiss Watch Suppliers.
Putlighar (N. C) Amritsar.

ವಾರದ ಒಳಿತು ಕೆಡುಕುಗಳು

ತಾ. ೨೭—೮—೫೩ರಿಂದ ತಾ. ೩—೯—೫೩ರ ವರೆಗೆ.

ಮೇಷ—ದಿನೇ ದಿನೇ ಹ್ರಾಸವಾಗುತ್ತಿರುವ ನಿಮ್ಮ ಅದೃಷ್ಟವು ನಿಮ್ಮನ್ನು ಗೃಹ ತಾಪತ್ರಯಗಳಿಗೂ ವಿರೋಧಿಗಳ ಕಾರಸ್ಥಾನಕ್ಕೂ ಗುರಿಮಾಡಲಿದೆ. ತಂದೆ ಮಕ್ಕಳೊಳಗೂ ಗಂಡ ಹೆಂಡಿರೊಳಗೂ ಮತ ಭೇದದಿಂದಾಗಿ ಉಂಟಾದ ಮನಸ್ತಾಪವು ಜಗಳ ರೂಪದಲ್ಲಿ ಪರ್ಯವಸಾನ ಹೊಂದೀತು. ಇಚ್ಛೆಯಂತೆ ಕಾರ್ಯವು ನೆರವೇರದು. ವೃಥಾ ಪರ್ಯಟನವು ಹೆಚ್ಚುವುದು. ಆದರೂ ಭಾಗ್ಯಪನ ಅನುಗ್ರಹದಿಂದಾಗಿ ಆರ್ಥಿಕ ಭಾಗಕ್ಕೆ ತೊಂದರೆ ಕಾಣಿಸದು. ತಾ. 29. 30. 2. ಈ ದಿನಗಳು ಭೋಗವಿಜಯ ಕಾರಿಗಳಾಗಿವೆ.

ವೃಷಭ—ಸದ್ಯ ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮವಿರುವುದರಿಂದ ನೀವಾವ ಕಾರ್ಯವನ್ನು ಕೈಗೊಂಡರೂ ಅದನ್ನು ಎಷ್ಟೆ ವಿಘ್ನಗಳು ಬಂದರೂ ಎದುರಿಸಿ ಕೊನೆಗಾಣಿಸುವ ಧೈರ್ಯ ಸಾಹಸ ಸಂಪನ್ನರಾಗಿರುವಿರಿ. ನಿಮ್ಮ ಪ್ರಯತ್ನಕ್ಕೂ ಮಿಗಿಲಾದ ಫಲ ಲಾಭವಾಗಲಿದೆ. ಬಂಧುಮಿತ್ರರ ಸಹಾಯ ಸಂಪನ್ನರಾದ ನಿಮಗೆ ಸಮಾಜದಲ್ಲಿ ಸ್ಥಾನಮಾನವೂ ರಾಜಕೀಯದಲ್ಲಿ ವಿಜಯವೂ ಲಭಿಸುವದು. ನಿರುದ್ಯೋಗದಿಂದ ಕಾಲ ಕಳೆವ ಪ್ರಸಂಗವೆಂದೂ ಬರಲಾರದು. ತಾ, 29, 30 ಈ ದಿನಗಳಲ್ಲಿ ಅತಿವ್ಯಯ ದೇಹಾಲಸ್ಯ ನಿಷ್ಕಾರಣ ಕಲಹಗಳಾಗುವವು.

ಮಿಥುನ—ಇಲ್ಲಸಲ್ಲದ ಖರ್ಚುಗಳು ನಿಮಗಿಂದು ಪ್ರಾಪ್ತವಾಗುವವು. ಅಧಿಕಾರಿವರ್ಗದವರಿಂದ ಮೇಲಿಂದ ಮೇಲೆ ಕೀಡೆಗಳು ಬರಲಿವೆ. ಪಿತ್ತೋದ್ರೇಕ ವಿಕಾರದಿಂದಾಗಿ ಆರೋಗ್ಯವು ಕೆಡಲಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಪಶು ವರ್ಗದಲ್ಲಿ ಆಕಸ್ಮಿಕ ನಷ್ಟಗಳೊದಗಬಹುದು. ಆದರೂ ಆದಾಯವು ತೃಪ್ತಿಕರವಿರುವುದರಿಂದ ಆರ್ಥಿಕ ಬಿಕ್ಕಟ್ಟು ಕಾಣಿಸಲಾರದು. ಪ್ರಯಾಣದಲ್ಲಿ ನಾನಾ ಕಷ್ಟನಷ್ಟಗಳೊದಗುವ ಸಂಭವವಿದೆ. ವಾರಾದಿಯ 4 ದಿನಗಳಲ್ಲಿ ಶುಕ್ರಾಚಾರ್ಯರ ಅನುಗ್ರಹದಿಂದಾಗಿ ಇಷ್ಟಪ್ರಾಪ್ತಿ ಲಾಭ ಸುಖಸಂತೋಷಗಳು ಲಭಿಸುವವು.

ಕರ್ಕಟ—ಧನಪತಿಯು ಸ್ವಸ್ಥಾನಗತನಿರುವುದರಿಂದ ಸುಖಲಾಭ ಪತಿಯಾದ ಶುಕ್ರನು ಜನ್ಮಗತನಾಗಿರುವುದರಿಂದಲೂ ಈ ವಾರದಲ್ಲಿ ನಿಮ್ಮ ಆರ್ಥಿಕ ಭಾಗವು ಸಾಕಷ್ಟು ಸುಧಾರಣೆಯಾದೀತು. ದಿನನಿತ್ಯದ ಖರ್ಚುವೆಚ್ಚಗಳ ಸಲುವಾಗಿ ಪರರ ಮುಖ ನೋಡುವ ಪ್ರಸಂಗ ಬರಲಾರದು. ಆದರೆ ಸುಖಸ್ಥಾನದಲ್ಲಿ ಶನ್ಯುಚ್ಚನಾಗಿರುವುದರಿಂದ ಆಪ್ತ ಜನರ ವಿರಹ ದುಃಖಕ್ಕೊಳಗಾಗುವಿರಿ. ಗಾಳಿಗೆದುರಾಗಿಟ್ಟ ದೀಪದಂತೆ ಮನಸ್ಸು ಅತೀವ ಚಂಚಲವಾದೀತು. ತಾ, 29, 30, 31, 1 ಈ ನಾಲ್ಕು ದಿನಗಳು ನಿಮ್ಮ ಬಯಕೆಯನ್ನು ಈಡೇರಿಸಲು ಸಮರ್ಥವಿವೆ.

ಸಿಂಹ—ಇಂದಿನ ನಿಮ್ಮ ಭವಿತವ್ಯವು ಸಾಕಷ್ಟು ಉತ್ತಮವಿರುವದು. ಲಾಭ ಸ್ಥಾನಕ್ಕೆ ಬೃಹಸ್ಪತಿಯು ಸದ್ಯದಲ್ಲೇ ಪ್ರವೇಶಿಸಲಿರುವನು ತೃತೀಯದಲ್ಲಿರಕ್ಕ ಉಚ್ಚ ಶನಿಯು ನಿಮ್ಮ ಸಂಕಲ್ಪಗಳನ್ನ ಕಾರ್ಯರೂಪಕ್ಕೆ ತರಲು ಬೇಕಾದ ಶಕ್ತಿ ಧೈರ್ಯ ಸಾಹಸಗಳನ್ನೀಯುವನು. ಹೆಚ್ಚಿನ ನಿಮ್ಮ ಕಾರ್ಯಗಳು ಇಚ್ಛೆಯಂತೆ ನೆ ವೇರಲಿವೆ ಆದರೆ ವ್ಯಯಸ್ಥ ನೀಚ ಕುಜನು ದೇಹಾಲಸ್ಯ ಸ್ತ್ರೀ ಕಲಹ ಅನಿರೀಕ್ಷಿತ ವ್ಯಯಗಳನ್ನು ತಂದೊಡ್ಡಲಿರುವನು ವಾರಾಂತ್ಯದ 3 ದಿನಗಳಲ್ಲಿ ಮಿತ್ರ ಸಮಾಗಮ ಲಾಭ ಸಂತಸಗಳನ್ನು ಪಡೆವಿರಿ.

ಕನ್ಯಾ—ದೈವವಿಂದು ಪ್ರತಿಕೂಲವಾಗುತ್ತಾ ಬರುತ್ತಿದೆ. ಹಿಂದಿನಂತೆ ನಿಮ್ಮ ದಿನಗಳು ಸುಖಮಯವಾಗಿ ಕಳೆಯಲಾರವು. ಜನತೆಯ ಬೆಂಬಲವು ಸಾಕಷ್ಟಿರದು. ಶತ್ರುಜನರಿಂದ ಪರಾಭವವುಂಟಾಗುವದಲ್ಲದೆ ಹೆಚ್ಚಿನ ನಷ್ಟವು ಪ್ರಾಪ್ತವಾಗಲಿದೆ. ಸೇವಕ ಜನತೆಗೂ ನೌಕರಿ ವರ್ಗಕ್ಕೂ ಕಾಲವು ಪ್ರತಿಕೂಲವಿದೆ. ಆದರೂ ಲಾಭಸ್ಥಾನಗತರಾದ ಕುಜ ಶುಕ್ರರಿಂದಾಗಿ ತಾ, 27, 28, 2 ಈ ದಿನಗಳಲ್ಲಿ ಗೃಹಸುಖ ಧನಲಾಭ ಸ್ಥಾನ ಮಾನಗಳೂ ಲಭಿಸುವವು.

ತುಲಾ—ನಿಮ್ಮ ಕಾರ್ಯಕಲಾಪಗಳು ಏನೊಂದೂ ವಿಘ್ನಾದಿಗಳಿಲ್ಲದೆ ಕೊನೆಗೊಂಡಲಿವೆ. ಉದ್ಯೋಗದಲ್ಲಿ ನಿಮ್ಮ ಪ್ರಯತ್ನಕ್ಕೆ ಮೀರಿದ ಫಲವು ಲಭಿಸುವದು. ರಾಜಕೀಯ ಸಾಮಾಜಿಕ ಕ್ಷೇತ್ರದಲ್ಲಿ ನಿಮ್ಮ ಪ್ರತಿಯೊಂದು ವ್ಯವಹಾರವು ಕೀರ್ತಿ ಲಾಭಗಳಿಗೆ ಕಾರಣವಾಗುವವು. ಮಿತಭಾಷಿಯಾಗಿದ್ದರೂ ಸದ್ಯ ವಾಕ್ಕಲಹವು ಅನಿವಾರ್ಯವಿದೆ. ದೇಹಾರೋಗ್ಯ ವಿಚಾರದಲ್ಲಿ ವಾತ ಪ್ರಕೋಪದಿಂದ ಕಷ್ಟವನ್ನನುಭವಿಸಲಿರುವಿರಿ. ವ್ಯಾಪಾರೀ ಜನತೆಗೆ ನಷ್ಟವುಂಟಾದೀತು. ವಾರಾದಿಯ 4 ದಿನಗಳಲ್ಲಿ ನಿಮ್ಮ ಆಶಾ ಆಕಾಂಕ್ಷೆಗಳು ಪೂರ್ಣವಾಗಲಿವೆ.

ವೃಶ್ಚಿಕ—ಇತರ ಗ್ರಹಬಲವು ಸಾಕಷ್ಟು ಉತ್ತಮವಿದ್ದರೂ ಇಂದು ನಿಮ್ಮ ಏಳೂವರೆ ಶನಿಯು ಬಹಳ ಪೀಡಿಸಲಾರಂಭಿಸಿರುವನು. ಧನಪತಿಯಾದ ಗುರುವೂ ಅಷ್ಟಮಕ್ಕೆ ಸದ್ಯದಲ್ಲೇ ಪ್ರವೇಶಿಸುವನು ಆದಕಾರಣ ನಿಮ್ಮ ಆರ್ಥಿಕ ಭಾಗಕ್ಕೆ ಬಲವಾದ ಪೆಟ್ಟು ಬೀಳಲಿದೆ. ತನುಪತಿಯು ನೀಚನಾಗಿದ್ದು ಪ್ರಯುಕ್ತ ಅನಾರೋಗ್ಯದ ನಿಮಿತ್ತ ಬಹು ಹುಟ್ಟಿನ ಧನವ್ಯಯವಾದೀತು. ವಿದ್ಯೋಪಜೀವಿ ಜನತೆಗೆ ಈ ವಾರವು ಅತ್ಯಂದು ಅನಿಷ್ಟಕಾರಿಯಾಗಿ ಪರಿಣಮಿಸದು. ತಾ, 29, 30 31, 1, ಈ ದಿನಗಳು ನಿಮಗನುಕೂಲಗಳಾಗಿವೆ.

ಧನು—ಬಹ ಕಾಲದ ನಿಮ್ಮ ಶೋಕತಾಪಗಳಿಂದು ಮಾಯವಾಗುವವು. ದೇಹಸುಖಪತಿಯ ಅನುಗ್ರಹವು ನಿಮಗೀಗ ಲಭಿಸಿರುವುದರಿಂದ ಆರೋಗ್ಯ ಮನಶ್ಶಾಂತಿಗಳನ್ನು ಪಡೆವಿರಿ. ನೀಚ ಜನರಿಂದಲೂ ಸ್ತ್ರೀವರ್ಗದಿಂದಲೂ ವಿಶೇಷ ಧನಲಭಿಸುವ ಯೋಗವಿದೆ. ಜನತೆಯ ಬೆಂಬಲವನ್ನು ಪಡೆದ ನೀವು ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಆದರೆ ಗೃಹ ತಾಪತ್ರಯಗಳು ಒಮ್ಮೊಮ್ಮೆ ನಿಮ್ಮನ್ನು ಅತಿಕರ್ತನ್ಯತಾ ಮೂಢರನ್ನಾಗಿ ಮಾಡಲಿವೆ. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸಲಿವೆ.

ಮಕರ— ಹಿಂದಿನ ಧೈರ್ಯ ಸ್ಥೈರ್ಯಗಳು ಇಂದು ನಿಮ್ಮಲ್ಲಿ ಕಾಣಲಾರವು. ಹೆದರಿದ ಹುಲ್ಲೆಯಂತಿದ್ದು ನಿಮ್ಮ ಮನಸ್ಸಿಗೆ ಮುಂದೇನು ಮಾಡಬೇಕೆಂಬ ದೇ ಹೊಳೆಯಲಾರದು. ಕೀರ್ತಿಗೆ ಕಳಂಕ ಬರಲಿದೆ. ವಿಶೇಷತಃ ನಿಮ್ಮ ಅರ್ಧಾಂಗಿಯ ಆರೋಗ್ಯವು ಕೆಟ್ಟು ಹೆಚ್ಚಿನ ಧನ ಸಾಹಕ್ಕೆ ಗುರಿಪಡಿಸುವದು. ಗುರುಹಿರಿಯರೊಡನೆ ಮನಸ್ತಾಪ ಕಲಹಗಳುಂಟಾಗಲಿವೆ. ಆದರೂ ಆಗಸ್ಮಿಕವಾಗಿ ಧನಪ್ರಾಪ್ತಿಯಾಗುವ ಸಂಯೋಗವೊಂದಿದೆ. ಶ್ರಮಜೀವಿಗಳಿಗೂ ವ್ಯಾಪಾರೀ ವರ್ಗಕ್ಕೂ ಈ ವಾರವು ಅತೀವ ಹಾನಿಕಾರಿಯಾಗಿದೆ. ತಾ, 27, 28. 2 ಈ ದಿನಗಳು ಅಷ್ಟೊಂದು ಹಾನಿಕಾರಿಗಳಾಗವು.

ಕುಂಭ—"ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಷು ಕದಾಚನ" ಎಂಬ ಗೀತಾ ವಾಕ್ಯವನ್ನು ನೀವೀಗ ಅನುಸರಿಸಬೇಕಾಗಿರುವದು, ಹೆಚ್ಚಿನ ಗ್ರಹರು ಇಂದು ವಿಮುಖರಿರುವುದರಿಂದ ನಿಮ್ಮ ಪರಿಶ್ರಮವು ಸಾರ್ಥಕವಾಗಲಾರದು, ಆದರೂ ಉದ್ಯಮವು ಮನುಜನ ಕರ್ತವ್ಯವೆಂದು ನೀವೀಗ ಕಾರ್ಯ ಮಾಡಬೇಕಾಗಿದೆ ಇಂತಹ ಸಂದಿಗ್ಧ ಸಮಯದಲ್ಲಿ ನಿಮಗಾವ ಬಂಧು ಮಿತ್ರರ ಸಹಕಾರವೂ ಲಭಿಸಲೊಲ್ಲದು, ಆದರೂ ತಾ, 29, 30 ಈ ದಿನಗಳಲ್ಲಿ ಆಶೆಯು ಕೊಂಚ ಫಲಿಸುವ ಲಕ್ಷಣವಿದೆ.

ಮೀನ—ನಿಮ್ಮ ಭವಿಷ್ಯವಿಂದು ಸಾಕಷ್ಟು ಉತ್ತಮವಿರುವುದು. ನಿಮ್ಮ ಕಾರ್ಯಕಲಾಪಗಳು ಶ್ರಮೋಚಿತವಾದ ಫಲವನ್ನೀಯುವವು. ನೌಕರಿ ವ್ಯಾಪಾರಾದಿಗಳಲ್ಲಿ ಪ್ರಗತಿಯುಂಟಾಗುವದು. ಜನರ ಸಹಕಾರವು ಚೆನ್ನಾಗಿರುವುದರಿಂದ ಶತ್ರು ಜನರ ಭಯವು ನಿಮಗಿರದು. ಗೃಹತಾಪತ್ರಯಗಳು ಸ್ವಲ್ಪ ಹೆಚ್ಚುವವು. ಆಪ್ತಜನರ ವಿರಹ ದುಃಖಕ್ಕೊಳಗಾಗುವಿರಿ. ಕಫ ದೋಷದಿಂದ ಆರೋಗ್ಯ ಕೆಡಲಿದೆ. ತಾ, 27. 28. 31 1 ಈ ದಿನಗಳು ಇದ್ದುದರಲ್ಲಿ ಉತ್ತಮವಿವೆ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ-

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ.** ತಿಳಿಯಿರಿ.

94 ವರ್ಷ ಖ್ಯಾತಿಪಡೆದ ವಂ॥ ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಆಶ್ಮುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ ಪಿ. ಇಲ್ಲ. ಕ್ಯಾಟಲಾಗ್ ಉಚಿತ.

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ. (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಅಮೃತಾಂಜನ

ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ಎದೆ ನೋವುಗಳಿಗೂ ಗಾಯಗಳು, ಬಾತುಕೊಳ್ಳುವುದು ಜೇಳುವಿಷಮುಂತಾದುವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧಿ.

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್

ಮದರಾಸು ಬೊಂಬಾಯಿ ಮತ್ತು ಕಲ್ಕತ್ತ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. 8 -[ವಿ. ಪಿ. ಖರ್ಚು ರವಾನೆ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ಶಾಮಾಕಂಪೆನಿ, ಮಂಗಳೂರು.

Printed & Published By K. H. Shetty at the Navayuga Press, Udipi, S. India

ಸ ಪ ಯ ಗ

1) 3- 9- 1953 - 12
2) 10- 9- 1953 - 12
3) 17- 9- 1953 - 12
4) 24- 9- 1953 - 12
5) 1- 10- 1953 - 12
6) 8- 10- 1953 - 12
7) 15- 10- 1953 - 12
8) 22- 10 - 1953 - 12
9) 29- 10 - 1953 - 12
10) 5- 11- 1953 - 12
11) 12- 11- 1953 - 12
12) 19- 11- 1953 - 12
13) 26- 11- 1953 - 12
14) 3- 12- 1953 - 12
15) 10- 12- 1953 - 12
16) 17- 12- 1953 - 12
17) 24- 12- 1953 - 12

204 P. T. O.

ನವಯುಗ

Vol. 33 No. 1 3-9-1953

ತೋರುವುದು ಹೀಗೆ—

"ಸರಿಯಾದ ಕೆಲಸವು ಉತ್ತಮ ಪರಿಣಾಮವನ್ನು ಉಂಟು ಮಾಡಿಯೇ ತೀರುವುದು" ಎನ್ನುವ ಸೂತ್ರ ವಾಕ್ಯವನ್ನು ನೆಹರೂ ಪದೇ ಪದೇ ಪುನರುಚ್ಚರಿಸುತ್ತಾರೆ. ಈ ಮಾತನ್ನು ನಂಬಿ ಅದರ ಮೇಲೆ ಭರವಸೆ ಇಟ್ಟು, ನಡೆದುದರಿಂದ ಪೇರಿ ಯಾರಾದರಾಗಿದ್ದರೆ ಸೋತು, ಬೇಸರಗೊಂಡು ಚೋಲು ಮೋರೆಯಿಂದ ಹಿಂತಿರುಗುತ್ತಿದ್ದಲ್ಲಿ, ಪ್ರಧಾನಿ ನೆಹರೂ ಉಲ್ಲಾಸಚಿತ್ತರಾಗಿ ಕಷ್ಟವನ್ನು ಲೆಕ್ಕಿಸದೆ ಪ್ರಯತ್ನ ಮುಂದುವರಿಸಿದರು. ಮೊನ್ನೆ ಅಗೋಸ್ತು ಒಂದನೇ ದಿನಾಂಕ ವಿಮಾನ ಕಂಪೆನಿಗಳ ರಾಷ್ಟ್ರೀಕರಣವಾಯಿತಷ್ಟೆ! ಇದರ ದ್ಯೋತಕವಾಗಿ ಡಿಲ್ಲಿಯಲ್ಲಿ ವಿಮಾನವೊಂದರ ಮೇಲೆ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರನ್ನು ಮೂಡಿಸುವ ಕಾರ್ಯಕ್ರಮವಿತ್ತು. ವಿದ್ಯುಚ್ಛಕ್ತಿಯಿಂದ ನಡೆಯುವ ಉಪಕರಣದ ಗುಂಡಿಯೊಂದನ್ನು ಒತ್ತುವುದರಿಂದ ಈ ಕೆಲಸ ನೆರವೇರುವಂತೆ ವ್ಯವಸ್ಥೆ ಮಾಡಿದ್ದರು. ಆದರೆ ಏಕೋ, ಉಪಕರಣ ಸರಿಯಾಗಿ ಕೆಲಸ ಮಾಡಲಿಲ್ಲ; ಹಾಗೆಂದು ನೆಹರೂರವರು ಪ್ರಯತ್ನ ಬಿಡದೆ ಮತ್ತೂ ಮತ್ತೂ ಗುಂಡಿಯನ್ನು ಒತ್ತಿದರು. ಆಗಲೂ ಕೆಲಸವಾಗಲಿಲ್ಲ—ಸುತ್ತ ನೆರೆದ ಹತ್ತುಸಾವಿರ ಜನರು ಮಿಕಿ ಮಿಕಿ ಕಣ್ಣುಬಿಟ್ಟು ಈ ಚೋದ್ಯ ನೋಡುತ್ತಿದ್ದರು. ನೆಹರೂ ತಾಳ್ಮೆಗುಂದಲಿಲ್ಲ—ಪ್ರಸನ್ನ ಚಿತ್ತದಿಂದಲೇ ಗುಂಡಿಯನ್ನು ಒತ್ತುತ್ತಾ ಹೋದರು. ಕೊನೆಗೊಮ್ಮೆ ಮೂರು ನಿಮಿಷಗಳ ತರುವಾಯ ನಿಧಾನವಾಗಿ ಬಿಳಿ ಪರದೆಯು ಸರಿಯುತ್ತಾ ಹೋಗಿ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರು ಗೋಚರಿಸಿತು! ತುಂಬಿದ ಜನಜಂಗುಳಿ ಹರ್ಷೋದ್ಗಾರಗೈದಿತು.

ನೆಹರೂ ಮಾಡಿದುದಿಷ್ಟೆ—ತನ್ನ ಕಲಸವಾದ ಗುಂಡಿಯೊತ್ತುವುದನ್ನು ನಿಲ್ಲಿಸದೆ, ಪ್ರಯತ್ನ ಮುಂದುವರಿಸಿದರು. ಪರಿಣಾಮ ಸ್ವಲ್ಪ ತಡವಾಗಿಯಾದರೂ ಉತ್ತಮವೆಂದು ಸಿದ್ಧಗೊಂಡಿತು. ನೀವು—ನಾವು ಮಾಡುವ ಕೆಲಸಗಳು ಸರಿಯಾದ ರೀತಿಯಲ್ಲಿದ್ದರೆ, ಇಂದಲ್ಲ ನಾಳೆ-ಆದರ ಸತ್ಫಲ ದೊರೆತೇ ತೀರುತ್ತದೆ.

❖

ಆದರೆ ನಾವಿಂದು ಕಾಣುವುದೇನು? ಕೆಲಸ ಮಾಡುವವರೇ ಇಲ್ಲ--ಯಾರಾದರೂ ಮಾಡುತ್ತಿದ್ದರೆ ಅವರಲ್ಲಿ ವಿಶ್ವಾಸವಿಡುವ ಔದಾರ್ಯವೂ ಇಲ್ಲ. ಸರಕಾರವಾಗಲೀ ವ್ಯಕ್ತಿಯಾಗಲೀ ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡಲು ಪರಸ್ಪರ ವಿಶ್ವಾಸವು ಮುಖ್ಯ ಸಾಧನ. ಅದರ ಕೊರತೆ ಕಾಣಿಸಿದರೆ, ಭಯ ತಪ್ಪಿದ್ದಲ್ಲ. ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ ಮೊರಾರಜೀ ದೇಸಾಯಿಯವರು ಬೆಂಗಳೂರಿಗೆ ದಿನಾಂಕ ೨೧ರಂದು ಆಗಮಿಸಿದಾಗ "ನನ್ನ ಪಕ್ಷದ ಜನರಲ್ಲಿ ನೂರಕ್ಕೆ ಹತ್ತು ಮಂದಿಯಾದರೂ ಸರಿಯೇ, ನನ್ನ ಪ್ರಾಮಾಣಿಕತೆಯಲ್ಲಿ ತಮಗೆ ವಿಶ್ವಾಸವಿಲ್ಲೆಂದು ಹೇಳಿದರೆ ನಾನು ಮಾಯವಾಗುವುದೇ ನಿಜ. ನನ್ನ ಕುರಿತು ಅವಿಶ್ವಾಸದ ಠರಾವೊಂದನ್ನು ಪ್ರತ್ಯೇಕವಾಗಿ ತರುವುದು ಬೇಡ" ಎಂದರು.

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಮೇಲೆ ಅವಿಶ್ವಾಸದ ಠರಾವೊಂದನ್ನು ಮಂಡಿಸಲು ತಮಗೆ ಅಪ್ಪಣೆ ಕೊಡಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷರೂ ಇನ್ನು ಕೆಲವರೂ ಜವಾಹರಲಾಲ ನೆಹರೂರನ್ನು ಕೇಳಲು ದಿಲ್ಲಿಗೆ ಹೋಗಿದ್ದರು. ನೆಹರೂ ಏನು ಹೇಳಿದರೆಂದು ಖಚಿತವಾಗಿ ತಿಳಿದಿಲ್ಲ—ಹಾಗೆಂದು, ಪಕ್ಷದ ಬಲವನ್ನು ತಗ್ಗಿಸುವ ಈ ಮತಭೇದ ಮತ್ತು ಒಡಕುಗಳ ನಿವಾರಣೆಗೆ ಎಲ್ಲ ಕಾಂಗ್ರೆಸ ಸದಸ್ಯರೂ ಪ್ರಯತ್ನಿಸಬೇಕೆಂದು ಅವರು ಸೂಚಿಸಿದಂತಾಗಿ ತಿಳಿಯುತ್ತದೆ. ಕಾಂಗ್ರೆಸಿಗರು ಪಕ್ಷದ ಸಾಮರ್ಥ್ಯವನ್ನು ಹೆಚ್ಚಿಸುವ ರಚನಾತ್ಮಕ ಕಾರ್ಯದಲ್ಲಿ ಆಸಕ್ತಿವಹಿಸುವ ಬದಲು ಒಡಕನ್ನುಂಟು ಮಾಡಿ, ಅವಿಶ್ವಾಸದ ಗೊತ್ತುವಳಿಯಂಥ ಕ್ರಮವನ್ನು ಕೈಗೊಳ್ಳಲು ಉತ್ಸುಕರಾಗುವುದು ನೆಹರೂರಿಗಷ್ಟೇ ಅಲ್ಲ- ಪಕ್ಷ ನಿಷ್ಠೆಯುಳ್ಳ ಯಾರಿಗೂ ಸರಿಬಾರದು. ಭಿನ್ನಾಭಿಪ್ರಾಯಗಳನ್ನು ತಂತಮ್ಮಲ್ಲಿಯೇ ಪರಿಹರಿಸಿಕೊಳ್ಳಲು ನೋಡುವುದು ಚಂದ ಹೊರತು ಶಾಸನ ಸಭೆಯಲ್ಲಿ ನಾಟಕೀಯ ಕಾರ್ಯಕ್ರಮ ಹಿತಕರವಲ್ಲ.

❖

ಭೋಪಾಳದಲ್ಲಿ ಶಾಸನ ಸಭಾ ಸದಸ್ಯೆಯೊಬ್ಬಳಿಗೆ ಗೌರವದಿಂದ ವಂದನೆ ಸಲ್ಲಿಸಲು ನಿರಾಕರಿಸಿದ್ದಕ್ಕಾಗಿ ಪೋಲೀಸನೊಬ್ಬನನ್ನು ದಿನಾಂಕ ೮ ರಂದು ಕೆಲಸದಿಂದ ತೆಗೆದು ಹಾಕಿದರು. ತನ್ನ ವರ್ತನೆಯ ಬಗ್ಗೆ ವಿವರಣೆ ಕೊಡುತ್ತಾ "ಹೆಂಗಸನ್ನು ಗೌರವಿಸುವುದು ಪುರುಷನಾದವನ ಪ್ರತಿಷ್ಠೆಗೆ ಕುಂದು" ಎಂದು ಆ ಪೋಲೀಸ ಸಿಪಾಯಿ ಹೇಳಿದ.

"ಮಾತೃದೇವೋಭವ" ಎಂಬ ಆರ್ಯ ವಾಕ್ಯದ ಸ್ಮರಣೆ ಇರುತ್ತಿದ್ದರೆ, ಹೆಂಗಸು ಮಹಾ ಮಹಿಮಳೆಂಬ ಸಂಗತಿ ಆ ಸಿಪಾಯಿಗೆ ಮನವರಿಕೆಯಾಗುತ್ತಿತ್ತೊ ಏನೋ! ನಮ್ಮ ಸಮಾಜದ ದೌರ್ಬಲ್ಯಗಳಲ್ಲಿ ಸ್ತ್ರೀಯ ಶಕ್ತಿಸಾಮರ್ಥ್ಯಗಳನ್ನು ಕಡೆಗಣಿಸುವ ಪುರುಷನ ಮನೋವೃತ್ತಿಯೂ ಒಂದು.



ಉಡುಪಿಯ ಶ್ರೀಕೃಷ್ಣ

ಶ್ರೀಕೃಷ್ಣ ದೇವಸ್ಥಾನದಲ್ಲಿ ಕೃಷ್ಣಾಷ್ಟಮಿಯ ಮರುದಿನ 'ವಿಟ್ಲಪಿಂಡಿ' ಮಹೋತ್ಸವದ ನೋಟವೊಂದು.

ಇದು ಬೇಗನೇ ಸಮರ್ಪಕ ಪರಿವರ್ತನೆಯನ್ನು ಹೊಂದದಿದ್ದಲ್ಲಿ—ಭಾರತದ ಸ್ವಾತಂತ್ರ್ಯಕ್ಕೆ, ಪ್ರಬುದ್ಧ ಮತದಾನ ಪದ್ಧತಿಗೆ--ನ್ಯಾಯ ಸಲ್ಲುವ ಭರವಸೆ ಕಡಿಮೆ.

❖

ಗಂಡಸಿನ ಅನಾದರವನ್ನು ತುಟಿಪಿಟಿಕ್ಕೆನ್ನದೆ ಸಹಿಸುತ್ತಾ ಕೂಡುವ ಜಡತೆಯನ್ನು ಎಲ್ಲ ಮಹಿಳೆಯರೂ ತೋರಿಸುವುದಿಲ್ಲ. ಪಾರ್ಲಿಮೆಂಟ ಸದಸ್ಯೆಯರಾದ ಕುಮಾರಿ ಮಾಸ್ಕರೇನ್ಹಸರು ದಿನಾಂಕ ೧೮ರಂದು ಲೋಕಸಭೆಯಲ್ಲಿ ಆಂಧ್ರ ವಿಧೇಯಕದ ಚರ್ಚೆ ನಡೆದ ಕಾಲಕ್ಕೆ ಒಂದು ವಿಧಿಬಿಂದುವನ್ನು ಎತ್ತಿ "ಈ ಭಾಷಾನುಗುಣ ರಾಜ್ಯಗಳು ಕೇವಲ ಪುರುಷರಿಗೆ ಮಾತ್ರ ಇವೆಯೇ? ಸ್ತ್ರೀಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅವಕಾಶವೇ ಇಲ್ಲವೇ" ಎಂದು ಕೇಳಿದರು. ಆಗ ಅಧ್ಯಕ್ಷಸ್ಥಾನದಲ್ಲಿದ್ದ ಪಂಡಿತ ಠಾಕೂರದಾಸ ಭಾರ್ಗವರು ಇದರ ಬಗ್ಗೆ ಯಾವುದೇ ನಿರ್ಣಯವನ್ನು ಕೊಡದೆ, ಬೇರೊಬ್ಬ ಸದಸ್ಯರಿಗೆ ಮಾತನಾಡಲು ಹೇಳಿದರು. ಅಧಿವೇಶನದ ಕೊನೆಯಲ್ಲಿ ಅಧ್ಯಕ್ಷರು ಕುಮಾರಿ ಮಾಸ್ಕರೇನ್ಹರಿಗೆ ಮಾತನಾಡಲು ಅವಕಾಶ ನೀಡಿದರು.

❖

ಯೋಜನಾ ಆಯೋಗದ ಮಹಿಳಾ ಸದಸ್ಯೆ ಶ್ರೀಮತಿ ದುರ್ಗಾಬಾಯಿ ದೇಶಮುಖರು ಮುಂಬಯಿಯಲ್ಲಿ ದಿನಾಂಕ ೨೧ರಂದು ಮಹಿಳಾ ಸಭೆಯೊಂದರಲ್ಲಿ ಮಾತನಾಡುತ್ತಾ "ಸಾರ್ವಜನಿಕ ಆರೋಗ್ಯ, ನೈರ್ಮಲ್ಯರಕ್ಷಣೆ, ಮಕ್ಕಳ ಶಿಕ್ಷಣ ಮುಂತಾದವುಗಳ ಬಗ್ಗೆ ಪುರುಷರು ಏಕೆ ತಲೆಕೆಡಿಸಿಕೊಳ್ಳಬೇಕು?" ಎಂದು ಪ್ರಶ್ನಿಸಿದರು. "ಪುರುಷ ರಾಜಕಾರಣಿ"ಗಳ ಮೇಲೆ ಅವರು ಎಲ್ಲ ದಿಕ್ಕಿನಿಂದಲೂ ಪ್ರಹಾರಗೈಯುತ್ತಾ ರಾಷ್ಟ್ರೀಯ ಪುನಃನಿರ್ಮಾಣ ಕಾರ್ಯದಲ್ಲಿ ಮಹಿಳೆಯು ನಿರ್ವಹಿಸಬಲ್ಲ ಚಟುವಟಿಕೆಗಳ ಕಲ್ಪನೆಯೇ ಅವರಿಗಿಲ್ಲವೆಂದವರು ಆರೋಪಿಸಿದರು. ಸಾರ್ವಜನಿಕ ರಂಗದಲ್ಲೂ ನಗರಸಭೆ, ಶಾಸನ ಸಭೆಗಳಲ್ಲೂ ಸ್ತ್ರೀಯರು ಪ್ರಾಮುಖ್ಯ ಪಾತ್ರವನ್ನು ವಹಿಸಬಲ್ಲರೆಂದು ಅವರು ಆತ್ಮವಿಶ್ವಾಸದಿಂದ ಸಾರಿದರು. "ಸಬಲ ಜಾತಿಯೆಂದು ಗಣಿಸಲಾದ ಪುರುಷವರ್ಗವು ಉದ್ಯಮ, ನೀರಾವರಿ, ವಿದ್ಯುಚ್ಛಕ್ತಿ ಮುಂತಾದವುಗಳ ಬಗ್ಗೆ ಮಾತ್ರ ವಿಚಾರಿಸಿದರೆ ಸಾಕು" ಎಂದವರು ಉಪದೇಶಿಸಿದರು.

ಈ ಮಾತುಗಳನ್ನು ಕೇಳಿದ ಮೇಲೂ 'ಸ್ತ್ರೀ ಸ್ವಾತಂತ್ರ್ಯ ಮರ್ಯಾದೆ' ಎನ್ನುವ

[೯ನೇ ಪುಟ ನೋಡಿರಿ]

18)	7- 1- 1954-	12
19)	14- 1- 1954 -	12
20)	21- 1- 1954-	12
21)	4- 2- 1954 -	12
22)	11- 2- 1954 -	12
23)	18- 2- 1954 -	12
24)	25- 2- 1954 -	12
25)	4 - 3- 1954 -	12
26)	11- 3- 1954 -	12
27)	18 - 3- 1954 -	12
28)	25- 3- 1954	12
29)	1- 4- 1954	12
30)	8- 4- 1954	12
31)	15 - 4- 1954	12
32)	22 - 4- 1954	12
33)	29- 4- 1954	12
34)	6- 5- 1954	12
35)	13- 5- 1954.	12
		216

ನವಯುಗ

Vol. 33 No. 1 3-9-1953

ತೋರುವುದು ಹೀಗೆ—

"ಸರಿಯಾದ ಕೆಲಸವು ಉತ್ತಮ ಪರಿಣಾಮವನ್ನು ಉಂಟು ಮಾಡಿಯೇ ತೀರುವುದು" ಎನ್ನುವ ಸೂತ್ರ ವಾಕ್ಯವನ್ನು ನೆಹರೂ ಪದೇ ಪದೇ ಪುನರುಚ್ಚರಿಸುತ್ತಾರೆ. ಈ ಮಾತನ್ನು ನಂಬಿ ಅದರ ಮೇಲೆ ಭರವಸೆ ಇಟ್ಟು ನಡೆದುದರಿಂದ ಬೇರೆ ಯಾರಾದರಾಗಿದ್ದರೆ ಸೋತು, ಬೇಸರಗೊಂಡು ಜೋಲು ಮೋರೆಯಿಂದ ಹಿಂತಿರುಗುತಿದ್ದಲ್ಲಿ, ಪ್ರಧಾನಿ ನೆಹರೂ ಉಲ್ಲಾಸಚಿತ್ತರಾಗಿ ಕಷ್ಟವನ್ನು ಲೆಕ್ಕಿಸದೆ ಪ್ರಯತ್ನ ಮುಂದುವರಿಸಿದರು. ಮೊನ್ನೆ ಆಗೊಸ್ತ ಒಂದನೇ ದಿನಾಂಕ ವಿಮಾನ ಕಂಪೆನಿಗಳ ರಾಷ್ಟ್ರೀಕರಣವಾಯಿತಷ್ಟೆ! ಇದರ ದ್ಯೋತಕವಾಗಿ ಢಿಲ್ಲಿಯಲ್ಲಿ ವಿಮಾನವೊಂದರ ಮೇಲೆ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರನ್ನು ಮೂಡಿಸುವ ಕಾರ್ಯಕ್ರಮವಿತ್ತು. ವಿದ್ಯುಚ್ಛಕ್ತಿಯಿಂದ ನಡೆಯುವ ಉಪಕರಣದ ಗುಂಡಿಯೊಂದನ್ನು ಒತ್ತುವುದರಿಂದ ಈ ಕೆಲಸ ನೆರವೇರುವಂತೆ ವ್ಯವಸ್ಥೆ ಮಾಡಿದ್ದರು. ಆದರೆ ಏಕೋ, ಉಪಕರಣ ಸರಿಯಾಗಿ ಕೆಲಸ ಮಾಡಲಿಲ್ಲ; ಹಾಗೆಂದು ನೆಹರೂರವರು ಪ್ರಯತ್ನ ಬಿಡದೆ ಮತ್ತೂ ಮತ್ತೂ ಗುಂಡಿಯನ್ನು ಒತ್ತಿದರು. ಆಗಲೂ ಕೆಲಸವಾಗಲಿಲ್ಲ—ಸುತ್ತ ನೆರೆದ ಹತ್ತುಸಾವಿರ ಜನರು ಮಿಕಿ ಮಿಕಿ ಕಣ್ಣುಬಿಟ್ಟು ಈ ಚೋದ್ಯ ನೋಡುತಿದ್ದರು. ನೆಹರೂ ತಾಳ್ಮೆಗುಂದಲಿಲ್ಲ—ಪ್ರಸನ್ನ ಚಿತ್ತದಿಂದಲೇ ಗುಂಡಿಯನ್ನು ಒತ್ತುತ್ತಾ ಹೋದರು. ಕೊನೆಗೊಮ್ಮೆ ಮೂರು ನಿಮಿಷಗಳ ತರುವಾಯ ನಿಧಾನವಾಗಿ ಬಿಳಿ ಪರದೆಯು ಸರಿಯುತ್ತಾ ಹೋಗಿ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರು ಗೋಚರಿಸಿತು! ತುಂಬಿದ ಜನಜಂಗುಳಿ ಹರ್ಷೋದ್ಗಾರಗೈದಿತು.

ನೆಹರೂ ಮಾಡಿದುದಿಷ್ಟೆ—ತನ್ನ ಕೆಲಸವಾದ ಗುಂಡಿಯೊತ್ತುವುದನ್ನು ನಿಲ್ಲಿಸದೆ, ಪ್ರಯತ್ನ ಮುಂದುವರಿಸಿದರು. ಪರಿಣಾಮ ಸ್ವಲ್ಪ ತಡವಾಗಿಯಾದರೂ ಉತ್ತಮವೆಂದು ಸಿದ್ಧಗೊಂಡಿತು. ನೀವು—ನಾವು ಮಾಡುವ ಕೆಲಸಗಳು ಸರಿಯಾದ ರೀತಿಯಲ್ಲಿದ್ದರೆ, ಇಂದಲ್ಲ ನಾಳೆ—ಅದರ ಸತ್ಫಲ ದೊರೆತೇ ತೀರುತ್ತದೆ.

❖

ಆದರೆ ನಾವಿಂದು ಕಾಣುವುದೇನು? ಕೆಲಸ ಮಾಡುವವರೇ ಇಲ್ಲ—ಯಾರಾದರೂ ಮಾಡುತಿದ್ದರೆ ಅವರಲ್ಲಿ ವಿಶ್ವಾಸವಿಡುವ ಔದಾರ್ಯವೂ ಇಲ್ಲ. ಸರಕಾರವಾಗಲೀ ವ್ಯಕ್ತಿಯಾಗಲೀ ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಪರಸ್ಪರ ವಿಶ್ವಾಸವು ಮುಖ್ಯ ಸಾಧನ. ಇದರ ಕೊರತೆ ಕಾಣಿಸಿದರೆ, ಭಯ ತಪ್ಪಿದ್ದಲ್ಲ. ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ ಮೊರಾರಜೀ ದೇಸಾಯರು ಬೆಂಗಳೂರಿಗೆ ದಿನಾಂಕ ೩೧ರಂದು ಆಗಮಿಸಿದಾಗ "ನನ್ನ ಪಕ್ಷದ ಜನರಲ್ಲಿ ನೂರಕ್ಕೆ ಹತ್ತು ಮಂದಿಯಾದರೂ ಸರಿಯೇ, ನನ್ನ ಪ್ರಾಮಾಣಿಕತೆಯಲ್ಲಿ ತಮಗೆ ವಿಶ್ವಾಸವಿಲ್ಲೆಂದು ಹೇಳಿದರೆ ನಾನು ರಾಜೀನಾಮೆ ಕೊಡುವುದಾಗಿ ನಿಜವಾಗಿಯೂ ... ನನ್ನ ಕುರಿತು ಅವಿಶ್ವಾಸದ ಠರಾವೊಂದನ್ನು ಪ್ರತ್ಯೇಕವಾಗಿ ತರುವುದು ಬೇಡ" ಎಂದರು.

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಮೇಲೆ ಅವಿಶ್ವಾಸದ ಠರಾವೊಂದನ್ನು ಮಂಡಿಸಲು ತಮಗೆ ಅಪ್ಪಣೆ ಕೊಡಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷರೂ ಇನ್ನು ಕೆಲವರೂ ಜವಾಹರಲಾಲ ನೆಹರೂರನ್ನು ಕೇಳಲು ಡಿಲ್ಲಿಗೆ ಹೋಗಿದ್ದರು. ನೆಹರೂ ಏನು ಹೇಳಿದರೆಂದು ಖಚಿತವಾಗಿ ತಿಳಿದಿಲ್ಲ—ಹಾಗೆಂದು, ಪಕ್ಷದ ಬಲವನ್ನು ತಗ್ಗಿಸುವ ಈ ಮತಭೇದ ಮತ್ತು ಒಡಕುಗಳ ನಿವಾರಣೆಗೆ ಎಲ್ಲ ಕಾಂಗ್ರೆಸ ಸದಸ್ಯರೂ ಪ್ರಯತ್ನಿಸಬೇಕೆಂದು ಅವರು ಸೂಚಿಸಿದರಾಗಿ ತಿಳಿಯುತ್ತದೆ. ಕಾಂಗ್ರೆಸಿಗರು ಪಕ್ಷದ ಸಾಮರ್ಥ್ಯವನ್ನು ಹೆಚ್ಚಿಸುವ ರಚನಾತ್ಮಕ ಕಾರ್ಯದಲ್ಲಿ ಆಸ್ಥೆವಹಿಸುವ ಬದಲು ಒಡಕನ್ನುಂಟು ಮಾಡಿ, ಅವಿಶ್ವಾಸದ ಗೊತ್ತುವಳಿಯಂಥ ಕ್ರಮವನ್ನು ಕೈಗೊಳ್ಳಲು ಉತ್ಸುಕರಾಗುವುದು ನೆಹರೂರಿಗಷ್ಟೇ ಅಲ್ಲ ಪಕ್ಷ ನಿಷ್ಠೆಯುಳ್ಳ ಯಾರಿಗೂ ಸರಿಬಾರದು. ಭಿನ್ನಾಭಿಪ್ರಾಯಗಳನ್ನು ತಂತಮ್ಮಲ್ಲಿಯೇ ಪರಿಹರಿಸಿಕೊಳ್ಳಲು ನೋಡುವುದು ಬಿಟ್ಟು, ಹೊರತು ಶಾಸನ ಸಭೆಯಲ್ಲಿ ನಾಟಕೀಯ ಕಾರ್ಯಕ್ರಮ ಹಿತಕರವಲ್ಲ.

❖

ಭೋಪಾಳದಲ್ಲಿ ಶಾಸನ ಸಭಾ ಸದಸ್ಯೆಯೊಬ್ಬಳಿಗೆ ಗೌರವದಿಂದ ವಂದನೆ ಸಲ್ಲಿಸಲು ನಿರಾಕರಿಸಿದ್ದಕ್ಕಾಗಿ ಪೋಲೀಸನೊಬ್ಬನನ್ನು ದಿನಾಂಕ ೪ ರಂದು ಕೆಲಸದಿಂದ ತೆಗೆದು ಹಾಕಿದರು. ತನ್ನ ವರ್ತನೆಯ ಬಗ್ಗೆ ವಿವರಣೆ ಕೊಡುತ್ತಾ "ಹೆಂಗಸನ್ನು ಗೌರವಿಸುವುದು ಪುರುಷನಾದವನ ಪ್ರತಿಷ್ಠೆಗೆ ಕುಂದು" ಎಂದು ಆ ಪೋಲೀಸ ಸಿಪಾಯಿ ಹೇಳಿದ.

"ಮಾತೃದೇವೋಭವ 'ಎಂಬ ಆರ್ಷ ವಾಕ್ಯದ ಸ್ಮರಣೆ ಇರುತಿದ್ದರೆ, ಹೆಂಗಸು ಮಹಾ ಮಹಿಮಳೆಂಬ ಸಂಗತಿ ಆ ಸಿಪಾಯಿಗೆ ಮನವರಿಕೆಯಾಗುತಿತ್ತೊ ಏನೋ! ನಮ್ಮ ಸಮಾಜದ ದೌರ್ಬಲ್ಯಗಳಲ್ಲಿ ಸ್ತ್ರೀಯ ಶಕ್ತಿಸಾಮರ್ಥ್ಯಗಳನ್ನು ಕಡೆಗಣಿಸುವ ಪುರುಷನ ... ಪ್ರವೃತ್ತಿಯೂ ಒಂದು. ಇದು ಬೇಗನೇ ಸಮರ್ಪಕ ಪರಿವರ್ತನೆಯನ್ನು ಹೊಂದದಿದ್ದಲ್ಲಿ—ಭಾರತದ ಸ್ವಾತಂತ್ರ್ಯಕ್ಕೆ, ಪ್ರಬುದ್ಧ ಮತದಾನ ಪದ್ಧತಿಗೆ—ನ್ಯಾಯ ಸಲ್ಲುವ! ಭರವಸೆ ಕಡಿಮೆ.

❖

ಗಂಡಸಿನ ಅನಾದರವನ್ನು ಚುಟಿಪಿಟಕ್ಕೆನ್ನದೆ ಸಹಿಸುತ್ತಾ ಕೂಡುವ ಜಡತೆಯನ್ನು ಎಲ್ಲ ಮಹಿಳೆಯರೂ ತೋರಿಸುವುದಿಲ್ಲ. ಪಾರ್ಲಿಮೆಂಟ ಸದಸ್ಯೆಯರಾದ ಆ್ಯನಿ ಮಾಸ್ಕರೇನ್ಹರು ದಿನಾಂಕ ೩೧ರಂದು ಲೋಕಸಭೆಯಲ್ಲಿ ಆಂಧ್ರ ವಿಧೇಯಕದ ಚರ್ಚೆ ನಡೆದ ಕಾಲಕ್ಕೆ ಒಂದು ವಿಧಿಬಿಂದುವನ್ನು ಎತ್ತಿ "ಈ ಭಾಷಾನುಗುಣ ರಾಜ್ಯಗಳು ಕೇವಲ ಪುರುಷರಿಗೆ ಮಾತ್ರ ಇವೆಯೆ? ಸ್ತ್ರೀಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅವಕಾಶವೇ ಇಲ್ಲವೆ?" ಎಂದು ಕೇಳಿದರು. ಆಗ ಅಧ್ಯಕ್ಷಸ್ಥಾನದಲ್ಲಿದ್ದ ಪಂಡಿತ ಠಾಕೂರದಾಸ ಭಾರ್ಗವರು ಇದರ ಬಗ್ಗೆ ಯಾವುದೇ ನಿರ್ಣಯವನ್ನು ಕೊಡದೆ, ಬೇರೊಬ್ಬ ಸದಸ್ಯರಿಗೆ ಮಾತನಾಡಲು ಹೇಳಿದರು. ಅಧಿವೇಶನದ ಕೊನೆಯಲ್ಲಿ ಅಧ್ಯಕ್ಷರು ಕುಮಾರಿ ಮಾಸ್ಕರೇನ್ಹರಿಗೆ ಮಾತನಾಡಲು ಅವಕಾಶ ನೀಡಿದರು.

❖

ಯೋಜನಾ ಆಯೋಗದ ಮಹಿಳಾ ಸದಸ್ಯೆ ಶ್ರೀಮತಿ ದುರ್ಗಾಬಾಯಿ ದೇಶಮುಖರು ಮುಂಬಯಿಯಲ್ಲಿ ದಿನಾಂಕ ೩೦ರಂದು ಮಹಿಳಾ ಸಭೆಯೊಂದರಲ್ಲಿ ಮಾತನಾಡುತ್ತಾ "ಸಾರ್ವಜನಿಕ ಆರೋಗ್ಯ, ಶೈಮರ್ಲ್ಯರಕ್ಷಣೆ, ಮಕ್ಕಳ ಶಿಕ್ಷಣ ಮುಂತಾದವುಗಳ ಬಗ್ಗೆ ಮಹಿಳೆಯರು ತಲೆಕೆಡಿಸಿಕೊಳ್ಳಬೇಕು?" ಎಂದು ಪ್ರಶ್ನಿಸಿದರು. "ಪುರುಷ ರಾಜಕಾರಣಿ"ಗಳ ಮೇಲೆ ಅವರು ಎಲ್ಲ ದಿಕ್ಕಿನಿಂದಲೂ ಪ್ರಹಾರಗೈಯುತ್ತಾ ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯದಲ್ಲಿ ಮಹಿಳೆಯು ನಿರ್ವಹಿಸಬಲ್ಲ ಚಟುವಟಿಕೆಗಳ ಕಲ್ಪನೆಯೇ ಅವರಿಗಿಲ್ಲವೆಂದವರು ಆರೋಪಿಸಿದರು. ಸಾರ್ವಜನಿಕ ರಂಗದಲ್ಲೂ ನಗರಸಭೆ, ಶಾಸನ ಸಭೆಗಳಲ್ಲೂ ಸ್ತ್ರೀಯರು ಪ್ರಾಮುಖ್ಯ ಪಾತ್ರವನ್ನು ವಹಿಸಬಲ್ಲರೆಂದು ಅವರು ಆತ್ಮವಿಶ್ವಾಸದಿಂದ ಸಾರಿದರು. "ಸಬಲ ಜಾತಿಯೆಂದು ಗಣಿಸಲಾದ ಪುರುಷವರ್ಗವು ಉದ್ಯಮ, ನೀರಾವರಿ, ವಿದ್ಯುಚ್ಛಕ್ತಿ ಮುಂತಾದವುಗಳ ಬಗ್ಗೆ ಮಾತ್ರ ವಿಚಾರಿಸಿದರೆ ಸಾಕು" ಎಂದವರು ಉಪದೇಶಿಸಿದರು.

ಈ ಮಾತುಗಳನ್ನು ಕೇಳಿದ ಮೇಲೆ "ನಷ್ಟೀ ಸ್ವಾತಂತ್ರ್ಯ ಮರ್ಹತಿ" ಎನ್ನುವ

(ಕೊನೇ ಪುಟ ನೋಡಿರಿ)



ಉಡುಪಿಯ ಶ್ರೀಕೃಷ್ಣ

ಶ್ರೀಕೃಷ್ಣ ಜನ್ಮದಿನವಾದ ಕೃಷ್ಣಾಷ್ಟಮಿಯ ಮೊಸರು ಕುಡಿಕೆ ಮಹೋತ್ಸವದ ನೋಟವೊಂದು.

36)	20-5-1954 -	12
37)	27-5-1954 -	12
38)	3-6-1954 -	12
39)	10-6-1954 -	12
40)	17-6-1954 -	12
41)	24-6-1954 -	12
42)	1-7-1954 -	12
43)	8-7-1954 -	12
44)	15-7-1954 -	12
45)	22-7-1954 -	12
46)	29-7-1954 -	12
47)	5-8-1954 -	12
48)	12-8-1954 -	32
49)	19-8-1954 -	12
50)	26-8-1954 -	12
		200

1) 204
2) 216
3) 200

620

ನವಯುಗ

Vol 33 No. 1 3-9-1953

ತೋರುವುದು ಹೀಗೆ—

"ಸರಿಯಾದ ಕೆಲಸವು ಉತ್ತಮ ಪರಿಣಾಮವನ್ನು ಉಂಟು ಮಾಡಿಯೇ ತೀರುವುದು" ಎನ್ನುವ ಸೂತ್ರ ವಾಕ್ಯವನ್ನು ನೆಹರೂ ಪದೇ ಪದೇ ಪುನರುಚ್ಚರಿಸುತ್ತಾರೆ. ಈ ಮಾತನ್ನು ನಂಬಿ ಅದರ ಮೇಲೆ ಭರವಸೆ ಇಟ್ಟು ನಡೆದುದರಿಂದ ಬೇರೆ ಯಾರಾದರಾಗಿದ್ದರೆ ಸೋತು, ಬೇಸರಗೊಂಡು ಜೋಲು ಮೋರೆಯಿಂದ ಹಿಂತಿರುಗುತಿದ್ದಲ್ಲಿ. ಪ್ರಧಾನಿ ನೆಹರೂ ಉಲ್ಲಾಸಚಿತ್ತರಾಗಿ ಕಷ್ಟವನ್ನು ಲೆಕ್ಕಿಸದೆ ಪ್ರಯತ್ನ ಮುಂದುವರಿಸಿದರು. ಮೊನ್ನೆ ಆಗೊಸ್ತು ಒಂದನೇ ದಿನಾಂಕ ವಿಮಾನ ಕಂಪೆನಿಗಳ ರಾಷ್ಟ್ರೀಕರಣವಾಯಿತಷ್ಟೆ! ಇದರ ದ್ಯೋತಕವಾಗಿ ಢಿಲ್ಲಿಯಲ್ಲಿ ವಿಮಾನವೊಂದರ ಮೇಲೆ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರನ್ನು ಮೂಡಿಸುವ ಕಾರ್ಯಕ್ರಮವಿತ್ತು. ವಿದ್ಯುಚ್ಛಕ್ತಿಯಿಂದ ನಡೆಯುವ ಉಪಕರಣದ ಗುಂಡಿಯೊಂದನ್ನು ಒತ್ತುವುದರಿಂದ ಈ ಕೆಲಸ ನೆರವೇರುವಂತೆ ವ್ಯವಸ್ಥೆ ಮಾಡಿದ್ದರು ಆದರೆ ಏಕೋ, ಉಪಕರಣ ಸರಿಯಾಗಿ ಕೆಲಸ ಮಾಡಲಿಲ್ಲ: ಹಾಗೆಂದು ನೆಹರೂರವರು ಪ್ರಯತ್ನ ಬಿಡದೆ ಮತ್ತೂ ಮತ್ತೂ ಗುಂಡಿಯನ್ನು ಒತ್ತಿದರು. ಆಗಲೂ ಕೆಲಸವಾಗಲಿಲ್ಲ- ಸುತ್ತ ನೆರೆದ ಹತ್ತು ಸಾವಿರ ಜನರು ಮಿಕಿ ಮಿಕಿ ಕಣ್ಣುಬಿಟ್ಟು ಈ ಚೋದ್ಯ ನೋಡುತಿದ್ದರು. ನೆಹರೂ ತಾಳ್ಮೆಗುಂದಲಿಲ್ಲ— ಪ್ರಸನ್ನ ಚಿತ್ತದಿಂದಲೇ ಗುಂಡಿಯನ್ನು ಒತ್ತುತ್ತಾ ಹೋದರು ಕೊನೆಗೊಮ್ಮೆ ಮೂರು ನಿಮಿಷಗಳ ತರುವಾಯ ನಿಧಾನವಾಗಿ ಬಿಳಿ ಪರದೆಯು ಸರಿಯುತ್ತಾ ಹೋಗಿ "ಇಂಡಿಯನ್ ಏರ್ ಲೈನ್ಸ್" ಎಂಬ ಹೆಸರು ಗೋಚರಿಸಿತು! ತುಂಬಿದ ಜನಜಂಗುಳಿ ಹರ್ಷೋದ್ಗಾರಗೈದಿತು

ನೆಹರೂ ಮಾಡಿದುದಿಷ್ಟೆ-ತನ್ನ ಕೆಲಸವಾದ ಗುಂಡಿಯೊತ್ತುವುದನ್ನು ನಿಲ್ಲಿಸದೆ, ಪ್ರಯತ್ನ ಮುಂದುವರಿಸಿದರು ಪರಿಣಾಮ ಸ್ವಲ್ಪ ತಡವಾಗಿಯಾದರೂ ಉತ್ತಮವೆಂದು ಸಿದ್ಧಗೊಂಡಿತು ನೀವು— ನಾವು ಮಾಡುವ ಕೆಲಸಗಳು ಸರಿಯಾದ ರೀತಿಯಲ್ಲಿದ್ದರೆ, ಇಂದಲ್ಲ ನಾಳೆ-ಅದರ ಸತ್ಫಲ ದೊರೆತೇ ತೀರುತ್ತದೆ.

ಆದರೆ ನಾವಿಂದು ಕಾಣುವುದೇನು? ಕೆಲಸ ಮಾಡುವವರೇ ಇಲ್ಲ--ಯಾರಾದರೂ ಮಾಡುತಿದ್ದರೆ ಅವರಲ್ಲಿ ವಿಶ್ವಾಸವಿಡುವ ಔದಾರ್ಯವೂ ಇಲ್ಲ ಸರಕಾರವಾಗಲೀ ವ್ಯಕ್ತಿಯಾಗಲೀ ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡಲು ಪರಸ್ಪರ ವಿಶ್ವಾಸವು ಮುಖ್ಯ ಸಾಧನ. ಅದರ ಕೊರತೆ ಕಾಣಿಸಿದರೆ, ಭಯ ತಪ್ಪಿದ್ದಲ್ಲ. ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ ಮೊರಾರಜೀ ದೇಸಾಯಿಯವರು ಬೆಂಗಳೂರಿಗೆ ದಿನಾಂಕ ೨೧ರಂದು ಆಗಮಿಸಿದಾಗ "ನನ್ನ ಪಕ್ಷದ ಜನರಲ್ಲಿ ನೂರಕ್ಕೆ ಹತ್ತು ಮಂದಿಯಾದರೂ ಸರಿಯೇ, ನನ್ನ ಪ್ರಾಮಾಣಿಕತೆಯಲ್ಲಿ ತಮಗೆ ವಿಶ್ವಾಸವಿಲ್ಲೆಂದು ಹೇಳಿದರೆ ನಾನು ಮಾಯವಾಗುವುದೇ ನಿಜ. ನನ್ನ ಕುರಿತು ಅವಿಶ್ವಾಸದ ಠರಾವೊಂದನ್ನು ಪ್ರತ್ಯೇಕವಾಗಿ ತರುವುದು ಬೇಡ" ಎಂದರು

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಮೇಲೆ ಅವಿಶ್ವಾಸದ ಠರಾವೊಂದನ್ನು ಮಂಡಿಸಲು ತಮಗೆ ಅಪ್ಪಣೆ ಕೊಡಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ ಸಮಿತಿಯ ಅಧ್ಯಕ್ಷರೂ ಇನ್ನು ಕೆಲವರೂ ಜವಾಹರಲಾಲ ನೆಹರೂರನ್ನು ಕೇಳಲು ಡಿಲ್ಲಿಗೆ ಹೋಗಿದ್ದರು. ನೆಹರೂ ಏನು ಹೇಳಿದರೆಂದು ಖಚಿತವಾಗಿ ತಿಳಿದಿಲ್ಲ—ಹಾಗೆಂದು, ಪಕ್ಷದ ಬಲವನ್ನು ತಗ್ಗಿಸುವ ಈ ಮತಭೇದ ಮತ್ತು ಒಡಕುಗಳ ನಿವಾರಣೆಗ ಎಲ್ಲ ಕಾಂಗ್ರೆಸ ಸದಸ್ಯರೂ ಪ್ರಯತ್ನಿಸಬೇಕೆಂದು ಅವರು ಸೂಚಿಸಿದರಾಗಿ ತಿಳಿಯುತ್ತದೆ ಕಾಂಗ್ರೆಸಿಗರು ಪಕ್ಷದ ಸಾಮರ್ಥ್ಯವನ್ನು ಹೆಚ್ಚಿಸುವ ರಚನಾತ್ಮಕ ಕಾರ್ಯದಲ್ಲಿ ಆಸ್ಥೆವಹಿಸುವ ಬದಲು ಒಡಕನ್ನುಂಟು ಮಾಡಿ, ಅವಿಶ್ವಾಸದ ಗೊತ್ತುವಳಿಯಂಥ ಕ್ರಮವನ್ನು ಕೈಗೊಳ್ಳಲು ಉತ್ಸುಕರಾಗುವುದು ನೆಹರೂರಿಗಷ್ಟೇ ಅಲ್ಲ ಪಕ್ಷ ನಿಷ್ಠೆಯುಳ್ಳ ಯಾರಿಗೂ ಸರಿಬಾರದು. ಭಿನ್ನಾಭಿಪ್ರಾಯಗಳನ್ನು ತಂತಮ್ಮಲ್ಲಿಯೇ ಪರಿಹರಿಸಿಕೊಳ್ಳಲು ನೋಡುವುದು ಚಂದ ಹೊರತು ಶಾಸನ ಸಭೆಯಲ್ಲಿ ನಾಟಕೀಯ ಕಾರ್ಯಕ್ರಮ ಹಿತಕರವಲ್ಲ.

ಭೋಪಾಳದಲ್ಲಿ ಶಾಸನ ಸಭಾ ಸದಸ್ಯೆಯೊಬ್ಬಳಿಗೆ ಗೌರವದಿಂದ ವಂದನೆ ಸಲ್ಲಿಸಲು ನಿರಾಕರಿಸಿದ್ದಕ್ಕಾಗಿ ಪೋಲೀಸನೊಬ್ಬನನ್ನು ದಿನಾಂಕ ೭ರಂದು ಕೆಲಸದಿಂದ ತೆಗೆದು ಹಾಕಿದರು. ತನ್ನ ವರ್ತನೆಯ ಬಗ್ಗೆ ವಿವರಣೆ ಕೊಡುತ್ತಾ "ಹೆಂಗಸನ್ನು ಗೌರವಿಸುವುದು ಪುರುಷನಾದವನ ಪ್ರತಿಷ್ಠೆಗೆ ಕುಂದು" ಎಂದು ಆ ಪೋಲೀಸ ಸಿಪಾಯಿ ಹೇಳಿದ.

"ಮಾತೃದೇವೋಭವ" ಎಂಬ ಆರ್ಯ ವಾಕ್ಯದ ಸ್ಮರಣೆ ಇರುತಿದ್ದರೆ, ಹೆಂಗಸು ಮಹಾ ಮಹಿಮಳೆಂಬ ಸಂಗತಿ ಆ ಸಿಪಾಯಿಗೆ ಮನವರಿಕೆಯಾಗುತಿತ್ತೊ ಏನೋ! ನಮ್ಮ ಸಮಾಜದ ದೌರ್ಬಲ್ಯಗಳಲ್ಲಿ ಸ್ತ್ರೀಯ ಶಕ್ತಿಸಾಮರ್ಥ್ಯಗಳನ್ನು ಕಡೆಗಣಿಸುವ ಪುರುಷನ ಮನೋವೃತ್ತಿಯೂ ಒಂದು. ಇದು ಬೇಗನೇ ಸಮರ್ಪಕ ಪರಿವರ್ತನೆಯನ್ನು ಹೊಂದದಿದ್ದಲ್ಲಿ-ಭಾರತದ ಸ್ವಾತಂತ್ರ್ಯಕ್ಕೆ, ಪ್ರಬುದ್ಧ ಮತದಾನ ಪದ್ಧತಿಗೆ--ನ್ಯಾಯ ಸಲ್ಲುವ ಭರವಸೆ ಕಡಿಮೆ.

ಗಂಡಸಿನ ಅನಾದರವನ್ನು ತುಟಿಪಿಟಿಕ್ಕೆನ್ನದೆ ಸಹಿಸುತ್ತಾ ಕೂಡುವ ಜಡತೆಯನ್ನು ಎಲ್ಲ ಮಹಿಳೆಯರೂ ತೋರಿಸುವುದಿಲ್ಲ. ಪಾರ್ಲಿಮೆಂಟ ಸದಸ್ಯೆಯರಾದ ಆ್ಯನಿ ಮಾಸ್ಕರೇನ್ನರು ದಿನಾಂಕ ೧೮ರಂದು ಲೋಕಸಭೆಯಲ್ಲಿ ಆಂಧ್ರ ವಿಧೇಯಕದ ಚರ್ಚೆ ನಡೆದ ಕಾಲಕ್ಕೆ ಒಂದು ವಿಧಿಬಿಂದುವನ್ನು ಎತ್ತಿ "ಈ ಭಾಷಾನುಗುಣ ರಾಜ್ಯಗಳು ಕೇವಲ ಪುರುಷರಿಗೆ ಮಾತ್ರ ಇವೆಯೆ? ಸ್ತ್ರೀಯರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅವಕಾಶವೇ ಇಲ್ಲವೆ" ಎಂದು ಕೇಳಿದರು ಆಗ ಅಧ್ಯಕ್ಷಸ್ಥಾನದಲ್ಲಿದ್ದ ಪಂಡಿತ ಠಾಕೂರನಾಥ ಭಾರ್ಗವರು ಇದರ ಬಗ್ಗೆ ಯಾವುದೇ ನಿರ್ಣಯವನ್ನು ಕೊಡದೆ, ಬೇರೊಬ್ಬ ಸದಸ್ಯರಿಗೆ ಮಾತನಾಡಲು ಹೇಳಿದರು. ಅಧಿವೇಶನದ ಕೊನೆಯಲ್ಲಿ ಅಧ್ಯಕ್ಷರು ಕುಮಾರಿ ಮಾಸ್ಕರೇನ್ನರಿಗೆ ಮಾತನಾಡಲು ಅವಕಾಶ ನೀಡಿದರು.

ಯೋಜನಾ ಆಯೋಗದ ಮಹಿಳಾ ಸದಸ್ಯೆ ಶ್ರೀಮತಿ ದುರ್ಗಾಬಾಯಿ ದೇಶಮುಖರು ಮುಂಬಯಿಯಲ್ಲಿ ದಿನಾಂಕ ೨೧ರಂದು ಮಹಿಳಾ ಸಭೆಯೊಂದರಲ್ಲಿ ಮಾತನಾಡುತ್ತಾ "ಸಾರ್ವಜನಿಕ ಆರೋಗ್ಯ, ನೈರ್ಮಲ್ಯರಕ್ಷಣೆ, ಮಕ್ಕಳ ಶಿಕ್ಷಣ ಮುಂತಾದವುಗಳ ಬಗ್ಗೆ ಪುರುಷರು ಏಕೆ ತಲೆಕೆಡಿಸಿಕೊಳ್ಳಬೇಕು?" ಎಂದು ಪ್ರಶ್ನಿಸಿದರು "ಪುರುಷ ರಾಜಕಾರಣಿ"ಗಳ ಮೇಲೆ ಅವರು ಎಲ್ಲ ದಿಕ್ಕಿನಿಂದಲೂ ಪ್ರಹಾರಗೈಯುತ್ತಾ, ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯದಲ್ಲಿ ಮಹಿಳೆಯು ನಿರ್ವಹಿಸಬಲ್ಲ ಚಟುವಟಿಕೆಗಳ ಕಲ್ಪನೆಯೇ ಅವರಿಗಿಲ್ಲವೆಂದವರು ಆರೋಪಿಸಿದರು. ಸಾರ್ವಜನಿಕ ರಂಗದಲ್ಲೂ ನಗರಸಭೆ, ಶಾಸನ ಸಭೆಗಳಲ್ಲೂ ಸ್ತ್ರೀಯರು ಪ್ರಾಮುಖ್ಯಪಾತ್ರವನ್ನು ವಹಿಸಬಲ್ಲರೆಂದು ಅವರು ಆತ್ಮವಿಶ್ವಾಸದಿಂದ ನಾರಿದರು. "ಸಬಲ ಜಾತಿಯೆಂದು ಗಣಿಸಲಾದ ಪುರುಷವರ್ಗವು ಉದ್ಯಮ, ನೀರಾವರಿ, ವಿದ್ಯುಚ್ಛಕ್ತಿ ಮುಂತಾದವುಗಳ ಬಗ್ಗೆ ಮಾತ್ರ ವಿಚಾರಿಸಿದರೆ ಸಾಕು" ಎಂದವರು ಉಪದೇಶಿಸಿದರು.

ಈ ಮಾತುಗಳನ್ನು ಕೇಳಿದ ಮೇಲೂ "ಸ್ತ್ರೀ ಸ್ವಾತಂತ್ರ್ಯ ಮೂರ್ತಿ" ಎನ್ನುವ

[೯ನೇ ಪುಟ ನೋಡಿರಿ]



ಉಡುಪಿಯ ಶ್ರೀಕೃಷ್ಣ

ಶ್ರೀಕೃಷ್ಣ ದೇವಸ್ಥಾನದಲ್ಲಿ ಕೃಷ್ಣಾಷ್ಟಮಿಯ ಮರುದಿನ 'ವಿಟ್ಲಪಿಂಡಿ' ಮಹೋತ್ಸವದ ನೋಟವೊಂದು.

ಭಾರತದಲ್ಲಿ ಸಕ್ಕರೆಯ ಉದ್ದಿಮೆ

ಪ್ರಗತಿಯ ಸಂತೋಷಪ್ರದ ಚಿತ್ರ

ನಮ್ಮ ದೇಶದ ಉದ್ದಿಮೆಗಳ ಸ್ಥಾನಗಳನ್ನು ನಿರ್ಧರಿಸುವಾಗ ಸಕ್ಕರೆಯು ಜವುಳಿಯ ಉದ್ದಿಮೆಗೆ ಎರಡನೆಯ ಸ್ಥಾನದಲ್ಲಿ ಬರುತ್ತದೆ. ಸುಮಾರು ಎರಡು ಕೋಟಿ ಸಾಮಾನ್ಯ ರೈತರು ೩೫೦ ಕೋಟಿ ರೂಪಾಯಿ ಬೆಲೆಯ ೫ ಕೋಟಿ ಟನ್ನು ಕಬ್ಬನ್ನು ವರ್ಷ ವರ್ಷವೂ ಭಾರತದಲ್ಲಿ ಬೆಳೆಯುತ್ತಾರೆ. ಕಬ್ಬು ಬೆಳೆಯುವ ಕ್ಷೇತ್ರವು ೫೦ ಲಕ್ಷ ಎಕ್ರೆಯಷ್ಟಿರುತ್ತದೆ. ಇಲ್ಲಿ ಬೆಳೆದ ಕಬ್ಬಿನಿಂದ ೧೨ ಲಕ್ಷ ಟನ್ನು ಸಕ್ಕರೆ ಮತ್ತು ೩೫ ಲಕ್ಷ ಟನ್ನು ಬೆಲ್ಲವು ಸಿದ್ಧವಾಗುತ್ತದೆ. ೨೫ ವರ್ಷಗಳಿಗೆ ಮುಂಚೆ ತನ್ನ ಆವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ಭಾರತವು ವಿದೇಶದಿಂದ ಆಯಾತವಾಗುವ ಸಕ್ಕರೆಯನ್ನು ಆಶ್ರಯಿಸಿದ್ದಿತು. ಆದರೆ ಈಗ್ಗಿನ ಪರಿಸ್ಥಿತಿಯು ತದ್ವಿರುದ್ಧವಾಗಿರುತ್ತದೆ-ಸಕ್ಕರೆಯ ಮಟ್ಟಿಗೆ ನಾವು ಸ್ವಾವಲಂಬಿಗಳಾಗಿದ್ದೇವೆಂದು ಅಂಕೆ ಸಂಖ್ಯೆಗಳು ಹೇಳುತ್ತವೆ. ಈ ಅಲ್ಪಾವಧಿಯಲ್ಲಿ ೧೫೮ ಸಕ್ಕರೆಯ ಕಾರ್ಖಾನೆಗಳು ತಲೆ ಎತ್ತಿಕೊಂಡು, ನಮ್ಮ ಆವಶ್ಯಕತೆಗಳನ್ನು ಪೂರೈಸುತ್ತಿರುವುದು ಸಂತೋಷದ ಸಂಗತಿ.

ಬಹುಕಾಲದ ಉಪಯೋಗ

ನಮ್ಮ ದೇಶಕ್ಕೆ ಸಕ್ಕರೆಯು ಹೊಸತಾಗ ವಸ್ತುವಲ್ಲ– ವೇದಕಾಲದಿಂದಲೂ ನಮ್ಮಲ್ಲಿ ಸಕ್ಕರೆಯು ನಿತ್ಯೋಪಯೋಗದಲ್ಲಿ ಬಳಸಲ್ಪಡುತಿತ್ತು. ವೇದಗಳಲ್ಲಿ ಕಬ್ಬನ್ನು ಬೆಳೆಯುತ್ತಿರುವ ಉಲ್ಲೇಖ ಸ್ಪಷ್ಟ ಮಾತುಗಳಲ್ಲಿ ಇರುತ್ತದೆ. ಹೀಗೆ ಕ್ರಿಸ್ತ ಪೂರ್ವ ೫ ಸಾವಿರ ವರ್ಷಗಳ. ಹಿಂದಿನಿಂದಲೂ ಕಬ್ಬು ಬೆಳೆಯುತಿದ್ದ ಭಾರತೀಯರು ಈ ಆಧುನಿಕ ಕಾಲದಲ್ಲೂ ಪ್ರಾಚೀನ ಪದ್ಧತಿಯನ್ನು ಬಿಟ್ಟು ಸುಧಾರಿತ ಕ್ರಮವನ್ನು ಅನುಸರಿಸಿಲ್ಲ. ಹತ್ತೊಂಬತ್ತನೇ ಶತಮಾನದ ಪೂರ್ವ ಕಾಲದಲ್ಲಿ ನಮ್ಮ ದೇಶದಲ್ಲಿ ಕಬ್ಬಿನ ಬೆಳೆಯು ಉತ್ತಮ ಸ್ಥಿತಿಯನ್ನು ಹೊಂದಿತ್ತಾದರೂ ಆ ಕಾಲದಲ್ಲಿ ಆಡಳಿತೆ ನಡೆಸುತಿದ್ದ ಬ್ರಿಟಿಷ್ ಸರಕಾರದ ವಾಣಿಜ್ಯ ನೀತಿಯ ಪರಿಣಾಮವೆಂಬಂತೆ, ಸಕ್ಕರೆಯ ಉದ್ದಿಮೆ ಪೆಟ್ಟುತಿಂದು, ಕುಸಿಯಿತು. ಪೂರ್ಣ ಸತ್ತುಹೋಗದಿದ್ದರೂ ಅದರಲ್ಲಿ ಜೀವಕಳೆ ಉಳಿದಂತೆ ಕಾಣಲಿಲ್ಲ.

ಈ ಶತಮಾನದಾದಿಯಲ್ಲಿ ಸಕ್ಕರೆಯ ಉದ್ದಿಮೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದುವು. ಆದರೆ ಪರದೇಶಗಳ ತೀವ್ರ ಸ್ಪರ್ಧೆಯನ್ನು ಇದಿರಿಸಿಕೊಂಡು ಬಾಳುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ಬ್ರಿಟಿಷ್ ಸರಕಾರದ ಅನುದಾರ ಧೋರಣೆಯು ಸಕ್ಕರೆ ಉದ್ದಿಮೆಯ ಪುನರುಜ್ಜೀವನಕ್ಕೆ ಎಳ್ಳಷ್ಟೂ ಅನುಕೂಲವಾಗಿರಲಿಲ್ಲ. ಆದರೂ ಕೊನೆಗೊಮ್ಮೆ ಸರಕಾರವು ಪ್ರಜಾ ಜನರ ಒಕ್ಕೊರಲಿನ ಬಿನ್ನಹಕ್ಕೆ ಮನ್ನಣೆ ಕೊಡಬೇಕಾಯಿತು. ೧೯೩೨ರಲ್ಲಿ ಕೇಂದ್ರ ಶಾಸನ ಸಭೆಯು ಒಂದು ಕಾಯಿದೆ ಪಾಸು ಮಾಡಿ ಪರದೇಶಗಳ ಸ್ಪರ್ಧೆಯಿಂದ ನಮ್ಮ ದೇಶೀಯ ಸಕ್ಕರೆ ಉದ್ದಿಮೆಗೆ ಸಂರಕ್ಷಣೆಯನ್ನು ಕೊಡಲು ನಿರ್ಧರಿಸಿತು.

ಆಶ್ಚರ್ಯಕರ ಪ್ರಗತಿ

ಯೋಗ್ಯ ಸಂರಕ್ಷಣೆ ದೊರೆತುದರಿಂದ ಭಾರತದಲ್ಲಿ ಸಕ್ಕರೆ ಉತ್ಪಾದನೆಯು ತುಂಬ ಹೆಚ್ಚಿಕೊಂಡಿತು- ಮಾತ್ರವಲ್ಲ ವಿದೇಶೀಯರು ಬೆರಳುಕಚ್ಚುವ ರೀತಿಯಲ್ಲಿ ಅದು ಪ್ರವರ್ಧಮಾನಸ್ಥಿತಿಗೆ ಬಂದಿತು ೧೯೩೨ರಲ್ಲಿ ಸರಕಾರವು ಈ ಉದ್ದಿಮೆಗೆ ಸಂರಕ್ಷಣೆ ಕೊಟ್ಟಾಗ ದೇಶದಲ್ಲಿ ಕೇವಲ ೩೨ ಸಣ್ಣ ಮಟ್ಟಿನ ಕಾರ್ಖಾನೆಗಳು ಇದ್ದವು. ಈಗ ಅವುಗಳ ಸಂಖ್ಯೆ ೧೫೮ಕ್ಕೆ ಏರಿರುತ್ತದೆ. ೧೯೩೨ರಲ್ಲಿ ಒಂದು ಲಕ್ಷ ಟನ್ನು ಸಕ್ಕರೆ ಮಾತ್ರ ಉತ್ಪಾದನೆಯೊಂದುತಿದ್ದರೆ ಈಗ ೧೦-೧೨ ಲಕ್ಷ ಟನ್ನುಗಳಷ್ಟು ಉತ್ಪಾದನೆ ಬೆಳೆದಿರುತ್ತದೆ. ಈ ಹಿಂದೆ ಭಾರತದಿಂದ ಹರಿದುಹೋಗುತಿದ್ದ ಹದಿನೈದು ಕೋಟಿ ರೂಪಾಯಿಗಳ ಹಣದ ಹೊಳೆ ಈಗ ನಿಂತಿರುತ್ತದೆ. ಮೊದಲು ಕಬ್ಬು ಬೆಳೆಯುವ ಕ್ಷೇತ್ರ ೨೯ ಲಕ್ಷ ಎಕ್ರೆಯಾಗಿತ್ತು; ಈಗ ೫೦ ಲಕ್ಷ ಎಕ್ರೆ ಪ್ರದೇಶವನ್ನು ಅದು ಆವರಿಸಿರುತ್ತದೆ. ಎಕ್ರೆಯೊಂದರ ಉತ್ಪಾದನಾ ಸಾಮರ್ಥ್ಯವು ೧೨.೩ ಟನ್ನುಗಳಿಂದ ೧೫.೭ ಟನ್ನುಗಳಿಗೆ ಹೆಚ್ಚಿರುತ್ತದೆ. ಈ ಉದ್ದಿಮೆಯಿಂದ ಜೀವನ ನಿರ್ವಹಿಸುವ ಜನರ ಪ್ರಮಾಣ ಕೂಡ ಭರದಿಂದ ಅಧಿಕಗೊಂಡಿದೆ. ಕಬ್ಬು ಬೆಳೆಯುವ ಎರಡು ಕೋಟಿ ರೈತರೂ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸಮಾಡುವ ೧೫೦೦೦೦ ಕೂಲಿಕಾರರು ಮತ್ತು ೩೫೦೦ ಪದವೀಧರರೂ ಸಾವಿರಾರು ಸಾರಿಗೆ ಕೆಲಸಗಾರರೂ ಸಕ್ಕರೆಯ ವ್ಯಾಪಾರವನ್ನು ಮಾಡುವ ಎಷ್ಟೋ ಮಂದಿ ಅಂಗಡಿಕಾರರೂ ಈ ಉದ್ದಿಮೆಯನ್ನು ಅವಲಂಬಿಸಿಕೊಂಡಿದ್ದಾರೆ.

ಯೋಜನೆಯ ರೂಪರೇಷೆ

ಮೇಲೆ ವಿವರಿಸಿದ ಚಿತ್ರದಿಂದ ನಾವು ಸಂತುಷ್ಟರಾಗೋಣವೆ? ಎಂದರೆ– ಅದು ಸರಿಯಲ್ಲ. ಭಾರತದಲ್ಲಿ ಜನಸಂಖ್ಯೆಯು ದಿನದಿನಕ್ಕೂ ಹೆಚ್ಚುತ್ತಾ ನಡೆದಿದೆ-ಇದಲ್ಲದೆ ಭಾರತೀಯರು ತಮ್ಮ ನಿತ್ಯ ಜೀವನದಲ್ಲಿ ಬಳಸಿಕೊಳ್ಳುವ ಸಕ್ಕರೆಯ ಪ್ರಮಾಣ ಅತ್ಯಲ್ಪವಾಗಿರುತ್ತದೆ. ಇದನ್ನು ಹೆಚ್ಚಿಸಿಕೊಳ್ಳುವುದು ಆರೋಗ್ಯ ದೃಷ್ಟಿಯಿಂದ ಆಗತ್ಯ ಹಾಗಿರುವುದರಿಂದ ಸಕ್ಕರೆಯ ಉತ್ಪಾದನಾ ಪ್ರಮಾಣವನ್ನು ಎರಡೆರಡು ಕಾರಣಗಳಿಗೋಸ್ಕರ ನಾವು ಹೆಚ್ಚಿಸಿಕೊಳ್ಳಬೇಕಾದುದು ಆಗತ್ಯ. ಪಂಚವಾರ್ಷಿಕ ಯೋಜನೆಯು ಇದನ್ನು ಗಮನಿಸಿ ಯೋಗ್ಯ ವಿಕಾಸ ರೇಷೆಯನ್ನು ಹಾಕಿರುತ್ತದೆ. ೧೯೫೫-೫೬ ಈ ಅವಧಿಯಲ್ಲಿ ಭಾರತದ ಉತ್ಪಾದನಾ ಮಟ್ಟವು ೧೫ ಲಕ್ಷ ಟನ್ನುಗಳನ್ನು ಮುಟ್ಟಬೇಕೆಂದು ಯೋಜಿಸಲಾಗಿದೆ. ನಮ್ಮಲ್ಲಿರುವ ಸಕ್ಕರೆ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯದ ಪರಮಾವಧಿ ಮಿತಿಯನ್ನು ೧೫೪೦೦೦೦ ಟನ್ನುಗಳೆಂದು ಲೆಕ್ಕಕ್ಕೆ ಹಿಡಿದು ಈ ಗುರಿಯನ್ನು ನಿರ್ಧರಿಸಿರುವರು. ಆದರೆ ಈಚೆಗೆ ಪ್ರಕಟಗೊಂಡ ಅಂಕೆಸಂಖ್ಯೆಗಳ ಮೇಲಿಂದ ಯೋಜನಾ ಆಯೋಗ ನಿರ್ಧರಿಸಿದ ಮಿತಿಯನ್ನು ನಾವು ಈಗಾಗಲೇ ಮುಟ್ಟಿದೆವೆಂದು ತಿಳಿಯುತ್ತದೆ. ೧೯೫೧ ೫೨ನೇ ವರ್ಷದಲ್ಲಿ ೧೪೯೨೦೦೦ ಟನ್ನುಗಳಷ್ಟು ಸಕ್ಕರೆಯು ಭಾರತದಲ್ಲಿ ಉತ್ಪಾದನೆಗೊಂಡಿತು! ಆದರೆ ಈ ವಿಶಿಷ್ಟ ವರ್ಷದಲ್ಲಿ ಸಕ್ಕರೆಯ ಉತ್ಪಾದನೆ ಇಷ್ಟು ಹೆಚ್ಚಿಕೊಳ್ಳಲಿಕ್ಕೆ ಬೇರೆ ಕಾರಣಗಳು ಇದ್ದವೆಂದೂ ಈ ಅನುಕೂಲ ಪರಿಸ್ಥಿತಿಯು ಇನ್ನು ಮುಂದೆಯೂ ದೊರೆಯುತ್ತದೆನ್ನುವ ಭರವಸೆ ಇಲ್ಲವೆಂದೂ ತರ್ಕಿಸಲಾಗಿದೆ. ಮುಖ್ಯವಾಗಿ ಆಕರ್ಷ ಬೆಲ್ಲದ ಬೆಲೆ ತೀರಾ ಇಳಿಮುಖವಾಯಿತು; ಆದುದರಿಂದ ಬೆಳೆದ ಕಬ್ಬನ್ನೆಲ್ಲ ರೈತರು ಸಕ್ಕರೆ ಕಾರ್ಖಾನೆಗಳಿಗೆ ಕೊಟ್ಟರು. ಸಕ್ಕರೆಯ ಬೆಲೆಯು ಚೆನ್ನಾಗಿದ್ದಿತು. ಸರಕಾರದ ಮುಕ್ತ ಪೇಟೆಯ ನೀತಿಯೂ ಸಕ್ಕರೆಯ ಉತ್ಪಾದನೆಯ ಮೇಲೆ ಉತ್ತಮ ಪ್ರಭಾವವನ್ನು ಬೀರಿತು. ಸರಕಾರವು ಸಾರಿಗೆ ಸೌಕರ್ಯಗಳನ್ನು ಒದಗಿಸಿತಲ್ಲದೆ ಔದ್ಯಮಿಕ ಆರ್ಥಿಕ ಮಂಡಳವು ಈ ಉದ್ದಿಮೆಗೆ ಹಣಕಾಸಿನ ನೆರವನ್ನು ನೀಡಿತು. ಇವೆಲ್ಲ ಒಳ್ಳೆಯ ಕಾರಣಗಳು ಇನ್ನು ಮುಂದೆಯೂ ದೊರೆಯಲಾರವು.

ಸುಧಾರಣೆಯ ಮಾರ್ಗ

ಸಕ್ಕರೆಯ ಉತ್ಪಾದನೆ ಹೆಚ್ಚಿಕೊಳ್ಳುವಾಗ ಬೆಲ್ಲದ ಉತ್ಪಾದನೆ ತಗ್ಗಿಕೊಂಡರೆ ಪ್ರಯೋಜನವಿಲ್ಲ. ಆದುದರಿಂದ ಇವೆರಡಕ್ಕೂ ಕಬ್ಬಿನ ಪೂರೈಕೆ ಯೋಗ್ಯ ರೀತಿಯಲ್ಲಾಗುವಂತೆ ಕಬ್ಬನ್ನು ಹೆಚ್ಚಾಗಿ ಉತ್ಪಾದಿಸುವುದವಶ್ಯ ಹೊಸತಾಗಿ ಕಬ್ಬು ಬೆಳೆಯುವ ಪ್ರದೇಶಗಳಿಗೆ ಹೆಚ್ಚಾಗಿ ಕೆಲಸವಿಲ್ಲದ ಸಕ್ಕರೆಯ ಕಾರ್ಖಾನೆಗಳನ್ನು ಸ್ಥಾನಾಂತರಿಸಿದರೆ ಆಗದೆ? ಎಂಬುದಾಗಿ ಪಂಚವಾರ್ಷಿಕ ಯೋಜನೆಯ ಪ್ರತಿಪಾದರು ವಿಚಾರಿಸುತಿದ್ದಾರೆ. ಸಾಕಷ್ಟು ಕಬ್ಬಿನ ಪೂರೈಕೆಯಾದ ಪಕ್ಷದಲ್ಲಿ ಈಗ ಸುಗ್ಗಿಯ ಕಾಲ ಕೇವಲ ೧೦೦ ದಿನಗಳು ಮಾತ್ರ ನಡೆಯುವ ಕಬ್ಬಿನ ಕಾರ್ಖಾನೆಗಳು ೧೨೦ ದಿನ ಕೆಲಸಮಾಡಬಲ್ಲವು.

ಆದರೆ ಸಕ್ಕರೆಯ ಪೂರೈಕೆ ಹೆಚ್ಚಬೇಕೆನ್ನುವುದಕ್ಕೋಸ್ಕರ ಕಬ್ಬಿನ ಉತ್ಪಾದನಾ ಪ್ರದೇಶವನ್ನು ವಿಸ್ತರಿಸುವಾಗ-ಭತ್ತದ ಗದ್ದೆಗಳು ಮಾಯವಾಗುವ ಭಯವಿದೆ. ಇದು ತೀರ ಘಾತಕವಾದ ಪ್ರಗತಿಯಾಗುತ್ತದೆ. ಕಬ್ಬಿನ ಉತ್ಪಾದನೆಯನ್ನು ಈಗಿನದಕ್ಕಿಂತಲೂ ಕಡಿಮೆ ಕ್ಷೇತ್ರದ ಮಿತಿಯೊಳಗೆ ಹೆಚ್ಚಿಸುವುದು ಸಾಧ್ಯವಿದೆ-ಮತ್ತು ನಮ್ಮ ರೈತರು ಈ ಮಾರ್ಗವನ್ನೆ ಅನುಸರಿಸಬೇಕು. ಭಾರತದಲ್ಲಿ ಕಬ್ಬಿನ ಬೆಳೆಗೆ ಸಂಬಂಧಿಸಿದ ಸಮಸ್ಯೆಗಳು ಎರಡು— ಒಂದನೇಯದು, ಇಲ್ಲಿ ಎಕ್ರೆಯೊಂದರ ಕಬ್ಬಿನ ಬೆಳೆ ಬೇರೆ ದೇಶಗಳಿಗಿಂತ ಕಡಿಮೆ. ಎರಡನೇಯದು ಹೀಗೆಬೆಳೆದ ಕಬ್ಬಿನಲ್ಲೂ ಶರ್ಕರಾಂಶವೂ ಕಡಿಮೆ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಎಕ್ರೆಯೊಂದರ ಕಬ್ಬಿನ ಬೆಳೆ ಕಡಿಮೆಯೆಂದೂ ದಕ್ಷಿಣ ಭಾರತದಲ್ಲಿ ಕಬ್ಬಿನಲ್ಲಿ ಶರ್ಕರಾಂಶ ಕಡಿಮೆಯೆಂದೂ ತಿಳಿಯುತ್ತೇವೆ. ಈಗ ಎಕ್ರೆಯೊಂದಕ್ಕೆ ೧೪ ಟನ್ನು

[೧೧ನೇ ಪುಟ ನೋಡಿರಿ]

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

★ ಅರಣ್ಯದಲ್ಲಿ ಲಕ್ಷ್ಮಿಯ ಒಕ್ಕಲು ★

ಪಶ್ಚಿಮಘಟ್ಟದ ತಪ್ಪಲಿನಲ್ಲಿ ತೋಟಗಳ ಸಮೃದ್ಧಿ

ಭಾರತದ ಗುಡ್ಡ ಹಾಗೂ ಪರ್ವತ ಪ್ರದೇಶದ ತಪ್ಪಲಿನಲ್ಲಿ ಚಾ, ಕಾಫಿ, ರಬ್ಬರು ಮುಂತಾದ ಅಮೂಲ್ಯ ವಸ್ತುಗಳ ತೋಟವನ್ನು ಕಾಣುತ್ತೇವೆ. ಇವು ನಮ್ಮ ನಿತ್ಯೋಪಯೋಗಕ್ಕೆ ಅವಶ್ಯವೆನಿಸಿದ ಸಾಮಗ್ರಿಯನ್ನು ಪೂರೈಸುತ್ತವಲ್ಲದೆ— ವಿದೇಶಗಳೊಡನೆ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸುವುದಕ್ಕೂ ನೆರವಾಗಿವೆ. ನಮ್ಮ ದೇಶದಲ್ಲಿ ಇಂದು ತೋರುವ ವಿಶಾಲವಾದ ಚಾ ಕಾಫಿ-ರಬ್ಬರು ಮುಂತಾದ ತೋಟಗಳು ಈಗ್ಗೆ ಒಂದು ಶತಮಾನಕ್ಕೆ ಮುಂಚೆ ಇದ್ದಿರಲಿಲ್ಲ. ಭಾರತದಲ್ಲಿ ವ್ಯಂಜನಗಳು ಹೇರಳವಾಗಿ ಉತ್ಪನ್ನವಾಗುತ್ತಿದ್ದವು; ಮತ್ತು ಈ ಕಾರಣದಿಂದಲೇ ವಿದೇಶೀಯರು ಇಲ್ಲಿಗೆ ಆಕೃಷ್ಟರಾಗಿ ಬಂದರು. ಡಚ್ಚ ಹಾಗೂ ಪೋರ್ಚುಗೀಜ ವ್ಯಾಪಾರಿಗಳು ನಮ್ಮ ಸಂಬಾರಜಿನಸು ಹಾಗೂ ಚಾ–ಕಾಫಿ ಇತ್ಯಾದಿಗಳನ್ನು ಮಾರಾಟ ಮಾಡುವುದರಲ್ಲಿಯೇ ತೃಪ್ತಿಹೊಂದಿದರು. ವಿಶಾಲವಾದ ತೋಟಗಳನ್ನು ನಿರ್ಮಿಸಿ, ಕಷ್ಟದಿಂದ ಕೃಷಿಮಾಡಿ, ಈ ವಸ್ತುಗಳ ವ್ಯಾಪಾರ ಕೈಗೊಳ್ಳಲು ಪ್ರಯತ್ನಮಾಡಿದವರು ಬ್ರಿಟಿಶರೆಂದು ಹೇಳಬಹುದು. ವಸಾಹತು ರಾಜ್ಯವಾದ ಭಾರತದಲ್ಲಿ ಬ್ರಿಟಿಷರು ಕಾಫಿ ಮುಂತಾದುವನ್ನು ವಿಸ್ತಾರವಾದ ಪ್ರಮಾಣದಲ್ಲಿ ಬೆಳೆಯಲು ಪ್ರಯತ್ನಿಸಿದರು. ೧೯ನೇ ಶತಮಾನದ ನಡುಗಾಲದಲ್ಲಿ ತೊಡಗಿದ ಈ ಸಾಹಸ ಇಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಮೇಲೆ ವರ್ಚಸ್ಸನ್ನು ಬೀರುವಷ್ಟು ಪ್ರಭಾವಿಯಾಗಿರುತ್ತದೆ.

ಸಾಹಸ ಕಾರ್ಯ

ಇಂದು ಸುಂದರವಾದ ತೋಟಗಳು ತಲೆಎತ್ತಿರುವ ದಕ್ಷಿಣ ಭಾರತದ ವೈನಾಡು, ಅನ್ನಾಮಲೆ, ದೇವಿಕುಲಂ, ನೆಲ್ಲಿಯಂಪತಿ, ಕೊಡಗು ಹಾಗೂ ಮೈಸೂರಿನ ಮಲೆನಾಡು ಪ್ರದೇಶಗಳು ಅರಣ್ಯಭರಿತವಾಗಿದ್ದುವು; ವನ್ಯ ಜಂತುಗಳು ನಿರ್ಭಯದಿಂದ ತಿರುಗಾಡುತ್ತಿದ್ದುವು; ಮಲೇರಿಯಾದ ಹಾವಳಿಯಿಂದಾಗಿ ಮನುಷ್ಯವಾಸವೇ ಅಸಾಧ್ಯವೆಂದು ಪರಿಗಣಿಸಲ್ಪಟ್ಟಿತ್ತು. ಇಂಥದರಲ್ಲಿ ತೋಟಗಳನ್ನು ಮಾಡುವುದೆಂದರೆ ಎಷ್ಟು ಶ್ರಮ ಅಗತ್ಯಬಿದ್ದಿರಬಹುದೆಂದು ಊಹಿಸಬೇಕು ಮಾತ್ರ. ಹಿಂಸ್ರ ಪಶುಗಳನ್ನು ಅರಣ್ಯದಲ್ಲಿ ಹಿಂದಕ್ಕೆ ಅಟ್ಟಿಕೊಂಡು ಹೋಗಿ, ಕಾಡುಗಳನ್ನು ಕಡಿದು, ಸಾರಿಗೆ ಸೌಕರ್ಯಗಳನ್ನು ಏರ್ಪಡಿಸಿ, ಮಲೇರಿಯಾದ ತೊಂದರೆಯನ್ನು ನಿಯಂತ್ರಿಸಿ, ಕೆಲಸಗಾರರಿಗೆ ಆರೋಗ್ಯದಿಂದ ಬದುಕಲು ಮನೆ ಇತ್ಯಾದಿಗಳನ್ನು ರಚಿಸಿ, ನಿಸರ್ಗದ ಮಡಿಲಲ್ಲಿ ರೊಕ್ಕದ ಪೈರನ್ನು ಬೆಳೆವ ಧೀರರು ಸುಖನಿದ್ರಾವಶರಾದದ್ದಿಲ್ಲ. ಈ ಶೌರ್ಯಕ್ಕೆ ಕಾಲಾನುಕಾಲದಲ್ಲಿ ಯೋಗ್ಯ ಬಹುಮಾನ ದೊರೆತರೂ ಆರಂಭಶೂರತ್ವಕ್ಕೆ ಹೆಸರಾದ ಭಾರತದಲ್ಲಿ ಪ್ರಯತ್ನಗಳ ಯಶಸ್ಸಿನ ಬಗ್ಗೆ ಸಂಶಯವಿದ್ದೇ ಇದ್ದಿತು.

ಆದರೆ ಬ್ರಿಟಿಷರು ಪ್ರಾರಂಭಿಸಿದ ಈ ಸಾಹಸ ಸತ್ಫಲವನ್ನು ನೀಡಿಯೇ ನೀಡಿತು; ವರ್ಷವಿಡೀ ಫಸಲುನೀಡುವ ಕೃಷಿವರ್ಗಕ್ಕೆ ಈ ತೋಟಗಾರಿಕೆ ಸೇರಿದರೂ- ಮಹೋದ್ಯಮದಂತೆ ಕೇಂದ್ರೀಕೃತ ಆಡಳಿತೆ ಹಾಗೂ ಸಾವಿರಾರು ಕೂಲಿಕಾರರ ಯೋಗಕ್ಷೇಮದ ಚಿಂತೆ ಈ ವಿಶಾಲವಾದ ತೋಟದ ಮಾಲಿಕರ ಹೊಣೆಯಲ್ಲಿದೆ. ಮೊದಲು ವ್ಯಕ್ತಿಗತವಾಗಿ ಚಾ ಕಾಫಿಗಳನ್ನು ಅಲ್ಪಪ್ರಮಾಣದಲ್ಲಿ ಬೆಳೆಯುತ್ತಿದ್ದರೆ, ಇಂದು ಒಬ್ಬ ಕಾಫಿ ತೋಟದ ಒಡೆಯನ ವಶದಲ್ಲಿ ಸಹಸ್ರಾರು ಎಕ್ರೆ ಪ್ರದೇಶವಿರುತ್ತದೆ. ಸಾಮೂಹಿಕ ಕೃಷಿ ಪದ್ಧತಿಗೆ ಗುಡ್ಡಗಾಡು ತಪ್ಪಲಿನ ಈ ತೋಟಗಳು ಅಪ್ರತ್ಯಕ್ಷವಾಗಿ ಪ್ರೋತ್ಸಾಹನೀಡುತ್ತವೆ ಎಂದರೂ ಸಲ್ಲುವುದು.

ಸಾಮೂಹಿಕ ದುಡಿಮೆ

ಸರಕಾರವು ಇದನ್ನೊಂದು ಕೈಗಾರಿಕೆಯಾಗಿಯೇ ಗ್ರಹಿಸಿರುತ್ತದೆ. ಕೆಲವು ಸಮಯಕ್ಕೆ ಮುಂಚೆ ಸರಕಾರವು ಈ ತೋಟಗಳಿಗೆ ಕನಿಷ್ಠ ಕೂಲಿಯ ಕಾಯಿದೆಯನ್ನು ಅನ್ವಯಿಸಿದಾಗ ಚಿಕ್ಕಪುಟ್ಟ ಹಿಡುವಳಿಯುಳ್ಳ ತೋಟಗಾರರು ಇದನ್ನು ಪ್ರತಿಭಟಿಸಿದರು. ದೊಡ್ಡ ದೊಡ್ಡ ತೋಟಗಳ ಒಡೆಯರು ಮಾತ್ರ ಆಧುನಿಕ ಗೃಹ ಸೌಕರ್ಯ, ವೈದ್ಯಕೀಯ ಸಹಾಯ, ಶಿಕ್ಷಣ ಮತ್ತಿತರ ಅನುಕೂಲತೆಗಳನ್ನು ಒದಗಿಸಲು ಸಮರ್ಥರಾಗಿದ್ದಾರೆಯೇ ಹೊರತು, ಚಿಕ್ಕ ತೋಟಗಾರರಿಗೆ ಇವನ್ನು ನೀಡುವುದು ಸಾಧ್ಯವಾಗಿಲ್ಲ. ಅದರಂತೆ, ಕಾಫಿ- ಚಾ ರಬ್ಬರು ಈ ಮೂರೂ ಬೆಳೆಗಳಲ್ಲಿ ವ್ಯಕ್ತಿಯೊಬ್ಬನೇ ತನ್ನ ಮಟ್ಟಿಗೆ ಮಾಡಿಕೊಂಡ ತೋಟದಲ್ಲಿ ಎಕ್ರೆಯೊಂದರ ಉತ್ಪಾದನಾ ಪ್ರಮಾಣವು ವಿಶಾಲವಾದ ತೋಟದ ಉತ್ಪಾದನೆಗಿಂತ ಕಡಿಮೆಯಾಗುತ್ತದೆ. ಪರಿಣಾಮವಾಗಿ ಸಣ್ಣ ತೋಟಗಾರರ ಉತ್ಪಾದನಾ ವೆಚ್ಚವು ಮಿತಿಮೀರಿರುತ್ತದೆ. ಇದನ್ನು ತಡೆಗಟ್ಟಲು ಇವರೆಲ್ಲರೂ ಒಟ್ಟಿಗೆ ಪರಸ್ಪರ ಸಹಾಯಕ ರೀತಿಯಿಂದ ಕೃಷಿ ಮಾಡಲು ಉದ್ದೇಶಿಸಿ, ಸಂಘಗಳನ್ನು ರಚಿಸಿಕೊಂಡು, ಅವುಗಳ ಆಶ್ರಯದಲ್ಲಿ ಸಾಮೂಹಿಕಹಿತವನ್ನುಂಟುಮಾಡುವ ವಿಶಾಲ ತೋಟಗಳನ್ನು ಕ್ರಮೇಣ ರಚಿಸುತ್ತಿರುವರು.

ತೋಟಗಾರಿಕೆಯಲ್ಲಿ ಇನ್ನೊಂದು ಮುಖ್ಯ ಸಂಗತಿ ಇದೆ- ಭಾರತದಲ್ಲಿ ಜನಸಂಖ್ಯೆ ವಿಪರೀತ ಹೆಚ್ಚೆಂದು ದೂರುವ ದಿನದಿನ ಇದು ಆದರೆ ಈ ಜನಸಂಖ್ಯೆ ಹಳ್ಳಿ ಹಾಗೂ ಪೇಟೆಗಳಲ್ಲಿ ಕಂಡು ಬರುತ್ತದೆಯೇ ಹೊರತು ಚಾ—ಕಾಫಿ ತೋಟಗಳಿರುವ ಗುಡ್ಡದ ತಪ್ಪಲಿನಲ್ಲಿ ಜನವಸತಿ ಇರುವುದಿಲ್ಲ. ತೋಟಗಳನ್ನು ಇನ್ನೂ ವಿಸ್ತಾರವಾಗಿ ನಾವು ಕೃಷಿಮಾಡಬಲ್ಲೆವಾದರೆ- ನಾಡಿನ ಬೇರೆಡೆಯ ಜನಸಂಖ್ಯೆಯ ಒತ್ತಡವನ್ನು ಕೆಲಮಟ್ಟಿಗೆ ಕಡಿಮೆಮಾಡಲು ಸಾಧ್ಯ. ಈಗ ಘಟ್ಟದ ತೋಟಗಳಿಗೆ ಕೂಲಿಯಾಳುಗಳನ್ನು ವರ್ಷವರ್ಷವೂ ಬಯಲು ನಾಡಿನಿಂದ ದಳ್ಳಾಳಿಗಳು ಕಳುಹಿಸಿಕೊಡುತ್ತಿದ್ದಾರೆ. ನಮ್ಮ ಜಿಲ್ಲೆಯಿಂದ ವರ್ಷಂಪ್ರತಿ ಘಟ್ಟಕ್ಕೆ ಹೋಗುವ ಜನರು ಸಾವಿರ ಸಂಖ್ಯೆಯಲ್ಲಿರಬಹುದು. ಆದರೆ, ದುರ್ದೈವದಿಂದ ಅಲ್ಲಿ ಹೋದವರು ಯಾರೂ ಹಿಂದೆ ಬರದೆ ಉಳಿಯುವುದಿಲ್ಲ: ಮಾತ್ರವಲ್ಲ ಸಾಬೀತಿನಿಂದ ಹಿಂದೆ ಬರುವುದೂ ಇಲ್ಲ. ಜ್ವರದ ಗಡ್ಡೆಯಿಂದ ಹೊಟ್ಟೆ ಉಬ್ಬಿಸಿಕೊಂಡೇ ಅವರು ಮರಳುತ್ತಾರೆ.

ಆರ್ಥಿಕ ಪ್ರಯೋಜನ

ಆರ್ಥಿಕ ದೃಷ್ಟಿಯಿಂದ ತೋಟಗಳ ವೈಶಿಷ್ಟ್ಯವನ್ನು ವಿಚಾರಿಸಿದರೆ–ನಮ್ಮ ಉದ್ದಿಮೆಗಳು ಬೆಳೆಯುವುದಕ್ಕೆ ಇವು ನೆರವು ನೀಡಿವೆ. ರಬ್ಬರಿನ ಉತ್ಪಾದನೆ ನಮ್ಮ ದೇಶದಲ್ಲಿ ಹೊರಗೆ ಹರಿಯುತ್ತಿದ್ದ ಕೋಟ್ಯಂತರ ರೂಪಾಯಿಗಳ ಹೊಳೆಯನ್ನು ತಡೆಗಟ್ಟಿರುತ್ತದೆ. ಚಾ ಮತ್ತು ಕಾಫಿಗಳ ನಮ್ಮ ಪ್ರಿಯವಾದ ಪಾನೀಯವೆಂದು ಬೇರೆ ಹೇಳಬೇಕೆ? ಭಾರತದ ಕೃಷಿಯ ಉತ್ಪತ್ತಿಗಿಂತ ಚಾ ಕಾಫಿಗಳ ಹೆಚ್ಚು ವಿದೇಶೀ ವಿನಿಮಯವನ್ನು ಸಂಪಾದಿಸುತ್ತವೆ. ಉದಾಹರಣೆಗೆ, ಭಾರತದ ಒಂದು ರಾತಲು ಚಾದ ಬದಲು ರಶಿಯಾದಿಂದ ೧೦ ರಾತಲು ಗೋಧಿ ದೊರೆಯಿತು. ಒಂದು ಎಕ್ರೆ ಚಾ ತೋಟದ ಉತ್ಪಾದನೆಯು ದುಡ್ಡಿನ ದೃಷ್ಟಿಯಿಂದ ಐದು ಎಕ್ರೆ ಪ್ರದೇಶದ ಭತ್ತದ ಬೆಳೆ, ಅಥವಾ ಮೂರೂವರೆ ಎಕ್ರೆ ಪ್ರದೇಶದ ಗೋಧಿಯ ಫಸಲು ಅಥವಾ ಎರಡೂವರೆ ಎಕ್ರೆ ಕಬ್ಬಿನ ತೋಟದ ಉತ್ಪಾದನೆಗೆ ಸರಿಯಾಗಿದೆ.

ಈ ತೋಟಗಳನ್ನು ರಚಿಸಲೂ ಅಭಿವೃದ್ಧಿಪಡಿಸಲೂ ಯಾಂತ್ರಿಕ ಸಲಕರಣೆಗಳ ಅಗತ್ಯವಿಲ್ಲ. ಆದುದರಿಂದ ಚಾ-ಕಾಫೀ-ರಬ್ಬರು ಮುಂತಾದ ತೋಟಗಳೆಂದರೆ–ವಿದೇಶದಿಂದ ಭಾರೀ ಯಂತ್ರೋಪಕರಣಗಳನ್ನು ತಂದು ಮಾಡಿ ಕಟ್ಟಿಕೊಳ್ಳಬೇಕಾದ ಕೈಗಾರಿಕೆಯೆಂದೇನು ಅರ್ಥವಾಗುವುದಿಲ್ಲ. ಇಷ್ಟರ ಮಟ್ಟಿಗೆ ತೋಟಗಳನ್ನು ವ್ಯಾಪಕಗೊಳಿಸಲು ತುಂಬ ಅವಕಾಶವುಂಟು. ತೋಟಗಳಲ್ಲಿ ಕೆಲಸ ಮಾಡಲು ಜನರು ದೊರೆಯುವ ಒಂದು ಕಾಲವಿತ್ತು. ಆದರೆ ಇಂದು ತೋಟಗಳೇ ನಿರುದ್ಯೋಗಿಗಳಿಗೊಂದು ಆಶ್ರಯ ಸ್ಥಾನವಾಗಿ ಮಾರ್ಪಟ್ಟಿವೆ. ಚಾ ಕೈಗಾರಿಕೆಯೊಂದರಲ್ಲಿಯೇ ೮೫೦೦೦೦ ಜನರು ತೋಟಗಳಲ್ಲಿ ಕೆಲಸ ಮಾಡುತ್ತಿದ್ದು ಬೇರೆ ೧೦ ಲಕ್ಷ ಜನರಾದರೂ ಚಾದ ವ್ಯಾಪಾರ ವಹಿವಾಟು ಇತ್ಯಾದಿಗಳಲ್ಲಿ ತೊಡಗಬಹುದೆಂದು ಅಂದಾಜು. ಕಾಫಿಯ ತೋಟಗಳಲ್ಲಿ ೧೮೦೦೦೦ ಜನರು ಹಾಗೂ ರಬ್ಬರು ತೋಟಗಳಲ್ಲಿ ೫೫೦೦೦ ಜನರು ಇದ್ದಾರೆ. ಇವರೆಲ್ಲರಿಗೂ ತೋಟಗಾರಿಕೆಯೇ ಜೀವನಾಧಾರ.

ಸಮೃದ್ಧಿಗೆ ಆಸ್ಪದ

ನಮ್ಮಲ್ಲಿ ಸಾಮಾನ್ಯರ ತಿಳುವಳಿಕೆಯಂತೆ ಈ ತೋಟಗಳೆಲ್ಲ ಬ್ರಿಟಿಷ ಅಥವಾ ಯುರೋಪ್ಯರ ಪ್ರಾಬಲ್ಯವೇ ಹೆಚ್ಚು. ಆದರೆ ಈ ಅಭಿಪ್ರಾಯ ತಪ್ಪು.

(೯ನೇ ಪುಟ ನೋಡಿರಿ)

ಆಭಾರ ಸೂಚನೆ

ನನ್ನ ಪ್ರಿಯ ಪತಿಯವರ ನಿಧನದ ಕುರಿತು ಹಲವಾರು ಬಂಧು ಭಗಿನಿಯರೂ, ಹಲವು ಸಂಘ, ಸಂಸ್ಥೆಗಳವರೂ, ಪತಿಯವರ ಅನೇಕ ಮಂದಿ ಮಿತ್ರರೂ, ಹಿತಚಿಂತಕರೂ, ಮೆಚ್ಚಿಗೆಯವರೂ ಹಾರ್ದಿಕ ದುಃಖ ಸೂಚಿಸಿ, ನನ್ನ ಮತ್ತು ನನ್ನ ಮಕ್ಕಳ ಅಪಾರ ದುಃಖದಲ್ಲಿ ತುಂಬಾ ಸಹಾನುಭೂತಿ ತೋರಿಸಿ ನಮಗೆ ಪತ್ರಗಳನ್ನು ಬರೆದಿರುತ್ತಾರೆ.

ಅವರಿಗೆ ಬೇರೆ ಬೇರೆ ಪತ್ರ ಬರೆಯುವದು ನಮ್ಮಿಂದ ಸಾಧ್ಯವಾಗುವುದಿಲ್ಲೆನ್ನಲು ವಿಷಾದಿಸುತ್ತೇವೆ. ಆದಕಾರಣ ನಮಗೆ ಪತ್ರ ಬರೆದ ಬಂಧುಭಗಿನಿಯರಿಗೂ, ಸಂಘಸಂಸ್ಥೆಗಳಿಗೂ, ಹಿತಚಿಂತಕರಿಗೂ ಈ ಮೂಲಕ ನಮ್ಮ ಹೃದಯ ಪೂರ್ವಕವಾದ ವಂದನೆಯನ್ನರ್ಪಿಸುತ್ತೇವೆ.

ರುಕ್ಮಿಣಿ ಜೆ. ಎಸ್. ಹೆಗ್ಡೆ,
ಬೈಲೂರು 25-8-53

ಉತ್ತಮ ತರದ ಬ್ಯಾಂಕಿಂಗ್ ವ್ಯವಹಾರ

ನೀವು ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದರೆ ನಿಮಗದು ಅನೇಕ ವಿಧಗಳಿಂದ ಅನುಕೂಲವಾದುದೆಂಬುದನ್ನು ಮನಗಾಣುವಿರಿ. ನೀವು ಲೇವಾದೇವಿಯನ್ನು ಚೆಕ್ ಮೂಲಕ ನಡೆಸುವ ಸೌಕರ್ಯವಿದೆ. ನಮ್ಮ ಸಿಬ್ಬಂದಿಯು ಎಷ್ಟೊಂದು ಕ್ಷಿಪ್ರ ಮತ್ತು ಕ್ಲಪ್ತವಾಗಿದೆಯೆಂದರೆ ನೀವು ಬಂದೊಡನೆ ನಿಮಿಷಗಳಲ್ಲಿಯೇ ನಿಮ್ಮ ಹಣ ಕೊಡಬಹುದು ಯಾ ಚೆಕ್ ಮೂಲಕ ಪಡೆಯಬಹುದು. ಬಡ್ಡಿಯ ದರವಾದರೂ ನಿಮ್ಮ ಉಳಿತಾಯ ವೃದ್ಧಿಯಾಗಲು ಅನುಕೂಲವಾಗುವಂತೆ ಆಕರ್ಷಕವಾಗಿಯೇ ಇರುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ 1925] [ಪ್ರಧಾನ ಕಚೇರಿ: ಉಡುಪಿ ದ. ಭಾರತ.

THE CANARA INDUSTRIAL & BANKING SYNDICTE LTD.,
Estd: 1925 H O. UDIPI, S India.

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು:-
ಡಾ। ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಸ್ ಚರ್ಚ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ 28.

ಲೋಕಸಭೆಯಲ್ಲಿ ಆಂಧ್ರ ವಿಧೇಯಕದ ಸ್ವೀಕಾರ

ಆಂಧ್ರದ ಬೆನ್ನಿಗೆ ಕನ್ನಡರಾಜ್ಯ ನಿರ್ಮಾಣ ಪ್ರಶ್ನೆಯ ಇತ್ಯರ್ಥ

ಮಹಾಪೂರದ ಪರಿಣಾಮ

ಮದ್ರಾಸಿನಲ್ಲಿರುವ ನಮ್ಮೆಲ್ಲರ ಲಕ್ಷ್ಯವನ್ನು ಸೆಳೆಯತಕ್ಕ ಅಂಶ ಈಗ ಗೋದಾವರೀ ನದಿಗೆ ಬಂದ ಮಹಾಪೂರ ಹಾಗೂ ಅದರ ಹಾವಳಿಯಿಂದ ಜನರನ್ನು ರಕ್ಷಿಸಲು ಮದ್ರಾಸು ಸರಕಾರವು ಕೈಗೊಂಡ ಕಾರ್ಯಕ್ರಮಗಳೆನ್ನಬೇಕು. ಪೂರ್ವ ಹಾಗೂ ಪಶ್ಚಿಮ ಗೋದಾವರಿಯ ಸಾವಿರಾರು ಮೈಲು ಪ್ರದೇಶದಲ್ಲಿ ನೆರೆಹಾವಳಿಯು ಅನಿರೀಕ್ಷಿತವಾಗಿ ದುಷ್ಪರಿಣಾಮವನ್ನುಂಟುಮಾಡಿರುತ್ತದೆ; ಸರಕಾರವೂ ಸ್ಥಳೀಯ ಜನರೂ ಕಷ್ಟಕ್ಕೆ ತುತ್ತಾದವರಿಗೆ ಯೋಗ್ಯ ರೀತಿಯಲ್ಲಿ ಸಹಾಯ ಸಲ್ಲಿಸುವುದರಲ್ಲಿ ಹಿಂದುಳಿದಿಲ್ಲ. ಮದ್ರಾಸು ಸರಕಾರವು ಈ ವಿಷಯದಲ್ಲಿ ತೋರಿದ ಆಸ್ಥೆ ಮತ್ತು ಶೀಘ್ರದಲ್ಲಿಯೇ ಯೋಜಿಸಿದ ಪರಿಹಾರೋಪಾಯಗಳು ರಾಜ್ಯ ಪರಿಷತ್ತಿನಲ್ಲಿ ಗೃಹಮಂತ್ರಿ ಶ್ರೀ ದಾತಾರರಿಂದ ಪ್ರಶಂಸಾ ವಾಕ್ಯಗಳನ್ನು ಸಂಪಾದಿಸಿದುವು. ದಾತಾರರು ರಾಜ್ಯಪರಿಷತ್ತಿಗೆ ಒದಗಿಸಿದ ಹೇಳಿಕೆಯಂತೆ ಮಹಾಪೂರದಿಂದ ೨೬ ಜನರು ಮರಣ ಪಟ್ಟರು, ಅದರಲ್ಲಿ ೧೮ ಮಂದಿ ದೋಣಿಯೊಂದು ಮುಗುಚಿ ಬಿದ್ದುದರಿಂದ ನೀರುಪಾಲಾದವರು. ರೈಲ್ವೆ ಹಾಗೂ ಇತರ ಮಾರ್ಗಗಳು ವಿಪರೀತ ಹಾನಿಯನ್ನು ಅನುಭವಿಸಿವೆ. ದಂಡೆಗಳು ಒಡೆದು ಬಿರುಕು ಕಾಣಿಸಿಕೊಂಡಿವೆ. ಅಣೆಕಟ್ಟುಗಳಿಗೂ ಹಾನಿಯುಂಟಾಗಿದೆ. ಬೆಳೆಯೆಲ್ಲವೂ ಕೊಚ್ಚಿಕೊಂಡು ಹೋಗಿರುತ್ತದೆ. ಸಂತ್ರಸ್ತ ಜನಕ್ಕೆ ಅನ್ನ, ಬಟ್ಟೆ ಮತ್ತು ವಸತಿ ಸೌಕರ್ಯಗಳನ್ನು ಒದವಿಸಲೂ ಹೊಸತಾಗಿ ಕುಟುಂಬಗಳ ನಿವೇಶನ ಸ್ಥಾಪಿಸಿಕೊಳ್ಳಲೂ ಮದ್ರಾಸು ಸರಕಾರವು ಅಪರಿಮಿತ ಉತ್ಸಾಹದಿಂದ ತನ್ನೆಲ್ಲ ಸಾಧನ ಸ್ರೋತಗಳನ್ನು ಕ್ರೋಢೀಕರಿಸಿ ನೆರವೀಯುತ್ತಿದೆ. ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಯಾರಿಗೂ ತಿಳಿಯದಂತೆ ಗುಪ್ತ ಪ್ರಯಾಣ ಕೈಗೊಂಡು, ರಾಜರು ಮಹೇಂದ್ರಿ ಹಾಗೂ ಇನ್ನಿತರ ನೆರೆ ಪ್ರದೇಶಗಳ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಬಂದಿದ್ದಾರೆ.

ಪರಿಹಾರೋಪಾಯಗಳು

ಕಂದಾಯ ಮಂಡಳದ ಸದಸ್ಯರಲ್ಲಿ ಒಬ್ಬರಾದ ಶ್ರೀ ಸತ್ಯನಾಥನ್ನರು ಈ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಪರಿಹಾರ ಕಾರ್ಯಗಳ ಕುರಿತು ಸರಕಾರಕ್ಕೆ ಒಂದು ವರದಿಯನ್ನು ಸಾದರಪಡಿಸಿದ್ದು ಇದೀಗ ಸರಕಾರವು ಅದನ್ನು ಅಂಗೀಕರಿಸಿದ ವಾರ್ತೆ ಬಂದಿರುತ್ತದೆ. ಈ ಪರಿಹಾರ ಕಾರ್ಯಗಳು ಸಂತ್ರಸ್ತ ಜನರಿಗೆ ಇಂದಿನ ಅಗತ್ಯವೆನಿಸಿದ ಅನ್ನ, ಬಟ್ಟೆ ಮತ್ತಿತರ ಅನುಕೂಲತೆಗಳನ್ನು ಉದಾರ ಬುದ್ಧಿಯಿಂದ ಒದಗಿಸಿಕೊಡಲು ಉದ್ದೇಶಿಸಿದೆ. ಕೃಷಿ ನಿರತರಾದ ರೈತರೆಲ್ಲರೂ ಈಗ ನಿರ್ಗತಿಕಾವಸ್ಥೆಯಲ್ಲಿರುವುದರಿಂದ ಅವರು ಮರಳಿ ತಮ್ಮ ತಮ್ಮ ಭೂಮಿಯನ್ನು ಉತ್ತು ಬೆಳೆಯಲಾಗುವಂತೆ ಸರಕಾರ ಯೋಗ್ಯ ಉಪಾಯಗಳನ್ನು ಕೈಗೊಂಡಿರುತ್ತದೆ ಅನಾಥರಿಗೆ ಅನ್ನವನ್ನು ಧರ್ಮಾರ್ಥವಾಗಿ ಹಂಚಲು ಏರ್ಪಾಡು ನಡೆದಿದೆಯಲ್ಲದೆ –ಬಡಬಗ್ಗರಿಗೆ ಸರಕಾರದ ಕಡೆಯಿಂದ ಮಿತಬೆಲೆಯ ಅಂಗಡಿಗಳು ದವಸಧಾನ್ಯಗಳನ್ನು ಪೂರೈಸುತ್ತವೆ- ತಮ್ಮ ಗುಡಿಸಲು ಮನೆಗಳನ್ನು ಕಳೆದುಕೊಂಡ ಹಳ್ಳಿಗರಿಗೆ ಮರಳಿ ಮನೆಕಟ್ಟಿಕೊಳ್ಳಲು ಪ್ರತಿಯೊಬ್ಬನಿಗೆ ರೂ. ೩೦ ಸಹಾಯಧನವನ್ನು ಕೊಡಲಾಗುವುದು; ಮಾತ್ರವಲ್ಲ, ತಾಳೆ ಮರಗಳನ್ನು ಧರ್ಮಾರ್ಥವಾಗಿ ನೀಡಲಾಗುವುದು. ಮಧ್ಯಮ ವರ್ಗದ ಜನರಲ್ಲಿ ಗೃಹವಿಹೀನರಾದ ಪ್ರತಿಯೊಬ್ಬನಿಗೂ ಒಂದು ಸಾವಿರ ರೂಪಾಯಿಯಷ್ಟು ಸಾಲವನ್ನು ಸರಕಾರ ಕೊಡುತ್ತದೆ ಹೀಗೆ ಗೃಹ ನಿರ್ಮಾಣ ಕಾರ್ಯಕ್ಕೋಸ್ಕರ ಸರಕಾರ ಮಾಡುವ ವ್ಯಯ ಎರಡು ಕೋಟಿ ರೂಪಾಯಿಗಳಾಗಬಹುದು. ರೈತರಿಗೆ ಕೃಷಿಯೇ ಜೀವನಾಧಾರವಾದುದರಿಂದಲೂ ಈ ನೆರೆಯಿಂದ ಎಲ್ಲ ಬೆಳೆಯೂ ನಾಶವಾಗುವ ತೋರಿಕೆ ಕಂಡುಬಂದುದರಿಂದಲೂ ಸರಕಾರವು ಕಂದಾಯ ಮಾಫಿಯನ್ನು ಸಾರಿರುತ್ತದೆ. ಆಂಧ್ರ ದೇಶದ ಕಣಜವೆಂದು ಹೆಸರಾದ ಗೋದಾವರಿಯಲ್ಲಿ ಈ ವರ್ಷ ಆಹಾರ ಪರಿಸ್ಥಿತಿಯು ಅತ್ಯುಗ್ರ ಪರಿಸ್ಥಿತಿಯನ್ನು ಮುಟ್ಟುವ ಭಯವಿದೆ. ಇದನ್ನು ಪರಿಹರಿಸುವ ಉದ್ದೇಶದಿಂದ ಸರಕಾರವು ರೈತರಿಗೆ ಮರಳಿ ಬೆಳೆ ಮಾಡಲು ಎಲ್ಲರೀತಿಯಿಂದ ನೆರವೀಯಲು ಧಾವಿಸಿ ಬಂದಿದೆ. ರೈತರಿಗೆ ಭೂಮಿಯನ್ನು ಸಾಗುಮಾಡಲಿಕ್ಕೆ ಅವಶ್ಯಕವಾದ ಉಪಕರಣ ಮತ್ತು ಜಾನುವಾರುಗಳನ್ನು ಕೊಳ್ಳಲು ಸರಕಾರವು ಸಹಾಯ ನೀಡುವುದಲ್ಲದೆ ಬೀಜ, ಗೊಬ್ಬರ ಇತ್ಯಾದಿಗಳನ್ನು ಸರಕಾರದ ಕೃಷಿ ಇಲಾಖೆಯಿಂದ ಪೂರೈಸಲು ನಿರ್ಧರಿಸಿದೆ. ಶಾಲಾ ಅಧ್ಯಾಪಕರಿಗೂ ನಾನ್ ಗಜೆಟೆಡ್ ಸರಕಾರೀ ನೌಕರರಿಗೂ ಎರಡು ತಿಂಗಳ ಸಂಬಳವನ್ನು ಮುಂಗಡ ರೂಪದಲ್ಲಿ ಕೊಟ್ಟು ಅದನ್ನು ೨೪ ಕಂತುಗಳಲ್ಲಿ ಮರಳಿ ಪಡೆಯಲಾಗುವುದು.

ದೇಶಬಾಂಧವರ ನೆರವು

ಈ ಹಾಗೂ ಇನ್ನಿತರ ಪರಿಹಾರ ಕಾರ್ಯಗಳಿಗೆ ೧೧ ಕೋಟಿ ರೂಪಾಯಿ ವೆಚ್ಚ ಬರುವ ನಿರೀಕ್ಷೆ ಇದೆ. ಮದ್ರಾಸು ಸರಕಾರದ ಆರ್ಥಿಕ ಪರಿಸ್ಥಿತಿಯು ತೀರಾ ಡೋಲಾಯಮಾನವಾಗಿರುವಾಗ ಪ್ರಕೃತಿಯ ವಿಕೋಪ ಅದನ್ನು ಇನ್ನಷ್ಟು ಹದಗೆಡಿಸಿರುತ್ತದೆ. ಪ್ರಧಾನಿ ನೆಹರೂರವರು ಸಂತ್ರಸ್ತ ಜನರಿಗೆ ಅಭಯ ವಚನವನ್ನು ಕೊಟ್ಟು ಎಲ್ಲ ಬಗೆಯಿಂದ ನೆರವಾಗುವ ಭರವಸೆ ನೀಡಿದ್ದಾರೆ. ಮದ್ರಾಸು ಸರಕಾರವು ವಿಶೇಷ ಅಧಿಕಾರಿಗಳನ್ನು ನೇಮಿಸಿ, ಜನರ ಸಂಕಷ್ಟಗಳು ತ್ವರಿತದಲ್ಲಿಯೇ ದೂರಾಗುವಂತೆ ಕ್ರಮ ಕೈಗೊಂಡಿದೆ. ಆದರೆ ಪರಿಹಾರ ಕಾರ್ಯಗಳಿಗೆ ಹಣದ ಅಭಾವ ತುಂಬ ಉಂಟು ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯು ಈ ಸಲ ಸಂಪೂರ್ಣ ಕರಗಿಹೋಗಿರುವಂತೆ ಭಾಸವಾಗುತ್ತದೆ. ಭಾರತದ ಉಳಿದ ಪ್ರದೇಶದಲ್ಲಿ ಸೌಖ್ಯದಿಂದಿರುವ ನಾಗರಿಕರೆಲ್ಲರೂ ಗೋದಾವರಿಯ ದುರ್ದೈವಿ ಬಂಧುಗಳಿಗೆ ಶಕ್ಯವಿದ್ದ ಎಲ್ಲ ರೀತಿಯಿಂದ ಸಹಾಯ ನೀಡುವ ಔದಾರ್ಯ ಅತ್ಯಗತ್ಯವಾಗಿ ತೋರಬೇಕು. ಸಂತ್ರಸ್ತ ಜನರು ಹತೋತ್ಸಾಹರಾಗದೆ, ಚೈತನ್ಯಗುಂದದೆ ತಮ್ಮ ನಿತ್ಯದ ಕೆಲಸಗಳಲ್ಲಿ ಮಗ್ನರಾಗುವಂತೆ ಅಧಿಕಾರೇತರ ವರ್ಗದವರೂ ನೋಡಿಕೊಳ್ಳಬೇಕು. ಸರಕಾರದೊಂದಿಗೆ ಈ ಜನರು ಸಹಕರಿಸಿ ದುಡಿದರೆ, ತಮ್ಮ ದುರಾದೃಷ್ಟ ಪೀಡಿತ ಬಾಂಧವರ ಗೋಳು ಪರಿಹರಿಸುವುದರಲ್ಲಿ ಸಾಕಷ್ಟು ಪ್ರಗತಿಯನ್ನು ಮಾಡಬಲ್ಲರು. ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಹಳ್ಳಿಗಾಡಿನ ಜನರು ಈ ವಿಪತ್ತನ್ನು ಅತ್ಯಂತ ಧೈರ್ಯದಿಂದ ಇದಿರಿಸಿರುವುದಕ್ಕೆ ತಮ್ಮ ಹಾರ್ದಿಕ ಕೃತಜ್ಞತೆಯನ್ನು ವ್ಯಕ್ತಗೊಳಿಸಿರುವರು. ಕೈಮೀರಿದ ದುಃಖದ ಗಳಿಗೆಯಲ್ಲೂ ಧೈರ್ಯಗುಂದದೆ ಸಾಹಸದಿಂದ ಪರಿಸ್ಥಿತಿಯ ವಿರುದ್ಧ ಹೋರಾಡುವುದು ಮಹಾಗುಣವೆಂಬುದರಲ್ಲಿ ಸಂಶಯವಿಲ್ಲ. ಈ ಗುಣದ ಬಲದಿಂದಲೇ ದುಃಖವನ್ನು ಜೀರ್ಣಿಸಿಕೊಳ್ಳಲು ಸಾಧ್ಯ.

ಆಂಧ್ರ ವಿಧೇಯಕರ ಸ್ವೀಕಾರ

ಲೋಕ ಸಭೆಯು ಆಂಧ್ರ ರಾಜ್ಯ ನಿರ್ಮಾಣ ವಿಧೇಯಕವನ್ನು ಅಂಗೀಕರಿಸಿರುತ್ತದೆ; ವಿಧೇಯಕವು ರಾಜ್ಯ ಪರಿಷತ್ತಿನ ಮುಂದೆ ಬಂದಿದ್ದು ಕೆಲವೇ ದಿನಗಳಲ್ಲಿ ಅಲ್ಲಿಯೂ ಸ್ವೀಕಾರಗೊಳ್ಳುವ ಭರವಸೆ ಇದೆ. ಈಗ ಅಂಗೀಕರಿಸಲ್ಪಟ್ಟಿರುವ ಆಂಧ್ರ ವಿಧೇಯಕವು ಮದ್ರಾಸು ರಾಜ್ಯದ ಶಾಸನ ಸಭೆಯು ಸೂಚಿಸಿದ ಮಹತ್ವದ ಕೆಲವು ತಿದ್ದುಪಡಿಗಳನ್ನು ಒಳಗೊಂಡಿರುವುದಿಲ್ಲ. ತೆಲುಗರು ಸಂಶಯ ಬುದ್ಧಿಯಿಂದ ಪ್ರೇರಿತರಾಗಿಯೇ ಎಂಬಂತೆ ಮುಂಡಿಸಿದ ಸಾಲಸೊತ್ತುಗಳ ಸಂಗತಿಯನ್ನು ತೀರ್ಮಾನಿಸಲು ಪರಿಸ್ಕ ನ್ಯಾಯಾಲಯದ ನ್ಯಾಯಾಧೀಶರ ನೇಮಕವಾಗಬೇಕೆನ್ನುವ ತಿದ್ದುಪಡಿಯು ಲೋಕ ಸಭೆಯಲ್ಲಿ ನಿರಾಕೃತವಾಯಿತು. ಇದಕ್ಕೆ ಮುಂಚೆ ಆಂಧ್ರ ರಾಜ್ಯಕ್ಕೂ ಮೈಸೂರು, ಮದ್ರಾಸು, ಒಡಿಸಾ, ಹೈದರಾಬಾದು, ಮಧ್ಯಪ್ರದೇಶ ಮುಂತಾದುವಕ್ಕೂ ಇರುವ ಗಡಿಯನ್ನು ನಿರ್ಧರಿಸಲು ಸಮಿತಿ ನೇಮಿಸಬೇಕೆಂಬ ಆಂಧ್ರರ ವಾದವೂ ಮೂಲೆಗುಂಪಾಯಿತು. ತುಂಗಭದ್ರಾ ಅಣೆಕಟ್ಟಿನ ಸಂಬಂಧದಲ್ಲಿ ಮೈಸೂರು ಮತ್ತು ಆಂಧ್ರ ಸದಸ್ಯರೊಳಗೆ ತಿಕ್ಕಾಟ ನಡೆದರೂ ಕೇಂದ್ರದ ಹಂಚಿಕೆಯನ್ನೆ ಸಭೆಯು ಅಂಗೀಕರಿಸಿತು. ಅಂತೂ ಪರಿಣಾಮದಲ್ಲಿ—ಆಂಧ್ರ ರಾಜ್ಯವು ಎಲ್ಲ ಭಾರತೀಯರ ಶುಭಾಶೀರ್ವಾದದೊಂದಿಗೆ ಇದೇ ಅಕ್ಟೋಬರ ದಿನಾಂಕ ಒಂದರಂದು ಅಸ್ತಿತ್ವಕ್ಕೆ ಬರುತ್ತದೆ. ಲೋಕಸಭೆಯಲ್ಲಿ ಪರಸ್ಪರ ಅಭಿನಂದನಾಪರ ಭಾಷಣಗಳು ನಡೆಯುವಲ್ಲದೆ-ಆಂಧ್ರದ ಬೆನ್ನಿಗೆ ಬೇರೆ ಭಾಷಾ ರಾಜ್ಯಗಳ ಸ್ಥಾಪನೆಯಾಗುವ ಆವಶ್ಯಕತೆಯನ್ನೂ ಸದಸ್ಯರು ಮನಗಾಣಿಸಿಕೊಟ್ಟರು- ಆಂಧ್ರ ರಾಜ್ಯವು ಸರ್ವೋದಯ ತತ್ವವನ್ನು ಪಾಲಿಸುವುದರಲ್ಲಿ ಆದರ್ಶ ಸ್ಥಾಪಿಸಲೆಂದು ಶ್ರೀ ಆಗರ್ವಾಲಾ ಹೇಳಿದರಲ್ಲದೆ, ಆದಾಯದ ಮೋಹದಿಂದ ಪಾನ ಪ್ರತಿಬಂಧವನ್ನು ಹೊಸ ರಾಜ್ಯವು ಕಿತ್ತೊಗೆಯತಕ್ಕದ್ದಲ್ಲವೆಂದೂ ನುಡಿದರು. ಗೃಹಮಂತ್ರಿ ಕಟಜೂರನ್ನು "ಆಂಧ್ರ ರಾಜ್ಯದ ಶಿಲ್ಪಿ" ಎಂದೊಬ್ಬ ಸದಸ್ಯರು ಪ್ರಶಂಸಿದರು. ಆಂಧ್ರ ರಾಜ್ಯ ನಿರ್ಮಾಣಕ್ಕೆ ಆತಂಕ ವ್ಯಕ್ತಪಡಿಸಿ ವಿರೋಧ ಮತ ಕೊಟ್ಟವರು ಒಬ್ಬರು- ಫ್ರ್ಯಾಂಕ್ ಆ್ಯಂಥನಿಯವರಿಗೆ ಭಾಷಾ ರಾಜ್ಯಗಳ ನಿರ್ಮಾಣ ತತ್ವವೇ ಮನವರಿಕೆಯಾಗಲಿಲ್ಲ; ಮತ್ತು ದೇಶದ ಐಕ್ಯಕ್ಕೆ ಅದು ಗಂಡಾಂತರಪ್ರಾಯವೆಂಬ ಅವರ ಸಂಶಯ ಪರಿಹಾರ ಹೊಂದಲಿಲ್ಲ. ಆದರೆ ಸಾಮಾನ್ಯತಃ ಆಂಧ್ರರಾಜ್ಯಕ್ಕೆ ಜನ್ಮದಾನವಾಯಿತೆಂದೂ ಕನ್ನಡ ರಾಜ್ಯ ನಿರ್ಮಾಣ ಪ್ರಶ್ನೆಯು ಈಗ ಗರ್ಭಾವಸ್ಥೆಯಲ್ಲಿದೆಯೆಂದೂ ಅಭಿಪ್ರಾಯ ಲೋಕಸಭಾ ವಲಯದಲ್ಲಿದ್ದಿತು. ದೇಶವನ್ನು ಭಾಷಾನುಗುಣ ರಾಜ್ಯಗಳಾಗಿ ಪುನರ್ಘಟಿಸುವುದನ್ನು ತಡೆಯಲು ಬಾರದೆಂದೂ ಸದಸ್ಯರು ಮನಗಂಡಿದ್ದರು.

ಆಸ್ತಿ ಕರದ ಪ್ರಮಾಣ

ಪ್ರಕೃತ ಆಸ್ತಿ ಕರ ವಿಧೇಯಕದ ಚರ್ಚೆಯನ್ನು ಲೋಕ ಸಭೆಯು ಮಾಡುತ್ತಿದೆ. ಈ ಚರ್ಚೆ ನಡೆಯುವುದಕ್ಕೆ ಮುಂಚಿತವಾಗಿಯೇ ಅರ್ಥಸಚಿವ ಶ್ರೀ ದೇಶಮುಖರು ಆಸ್ತಿಗಳ ಮೇಲೆ ಹೇರಿಸುವ ಕರದ ಪ್ರಮಾಣವನ್ನು ಲೋಕಸಭಾ ಸದಸ್ಯರಿಗೆ ತಿಳಿಯಪಡಿಸಿದರು. ಅದರಂತೆ, ಕರಮುಕ್ತ ಆಸ್ತಿಯ ಪ್ರಮಾಣವನ್ನು ಬಿ

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ನಿರೀಕ್ಷೆಗಿಂತ ಭಿನ್ನವಾದ ಆಸ್ತಿಕರ ಪ್ರಮಾಣ

ಪ್ರತಿಶತ ೫ರಿಂದ ೪೦ರ ಮಿತಿ ತಗ್ಗಬೇಕಾದ ಅಗತ್ಯ

ಟ್ಟು ಬೇರೆ ಆಸ್ತಿಯ ಬೆಲೆಯಲ್ಲಿ ಪ್ರತಿಶತ ೫ರಿಂದ ೪೦ರ ವರೆಗೆ ಆಸ್ತಿ ಕರವನ್ನು ಹೇರಲಾಗುವುದು. ಮಿತಾಕ್ಷರ, ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನ ಪದ್ಧತಿಯ ಆಸ್ತಿಯ ಮೇಲೆ ಮೊದಲಿನ ರೂ. ೫೦೦೦೦ ಬೆಲೆಗೆ ಕರದಿಂದ ಮುಕ್ತಿ ದೊರೆಯುತ್ತದೆ. ಬೇರೆ ವಾರಸಾಪದ್ಧತಿಯ ಆಸ್ತಿಯ ಮೇಲೆ ಮೊದಲಿನ ರೂ. ೭೫೦೦೦ ಬೆಲೆ ಕರ ಮುಕ್ತವಾಗಿರುತ್ತದೆ. ಕೃಷಿಗೆ ಒಳಪಟ್ಟಿರುವ ಭೂಮಿಯ ಬೆಲೆ ಎರಡುಲಕ್ಷ ರೂಪಾಯಿಯನ್ನು ಮೀರದಿದ್ದರೆ ಅದರ ಮೇಲಿನ ಕರಭಾರದಲ್ಲಿ ೫೦ಅಂಶ ರಿಯಾಯಿತಿ ದೊರೆಯುವುದು. ಭಾರತವು ವ್ಯವಸಾಯ ಪ್ರಧಾನ ದೇಶವಾದುದೆಂಬ ಕಾರಣಕ್ಕಾಗಿಯೂ ವ್ಯವಸಾಯೋತ್ಪನ್ನವನ್ನು ಪ್ರೋತ್ಸಾಹಿಸಬೇಕೆನ್ನುವ ನೀತಿಯಿಂದಲೂ ಈ ರಿಯಾಯಿತಿಯನ್ನು ನೀಡಿರುವರೆಂದು ಹೇಳಬಹುದು. ಹಾಗೆಯೇ ಭಂಡವಾಳ ಶೇಖರಣೆಗೆ ಅನುಕೂಲವಾಗುವಂತೆ ವ್ಯಕ್ತಿಗತ ಆಸ್ತಿಯ ಕರಮುಕ್ತ ಪ್ರಮಾಣವನ್ನು ರೂ. ೭೫೦೦೦ ವೆಂದು ಸರಕಾರ ನಿರ್ಧರಿಸಿದಂತೆ ಕಾಣುತ್ತದೆ. ಈ ಮಿತಿಯು ಬಹಳ ಕಡಿಮೆಯಾಯಿತೆಂದು ಎಲ್ಲ ಜನರೂ ಹೇಳುತ್ತಿದ್ದಾರೆ. ಕನಿಷ್ಠ ಪಕ್ಷ ಒಂದೂವರೆ ಅಥವಾ ಒಂದು ಲಕ್ಷ ರೂಪಾಯಿಗಾದರೂ ಇದನ್ನು ಏರಿಸಬೇಕೆಂದು ಹೇಳಲಾಗುತ್ತಿದೆ. ಚರ್ಚೆಯ ಕಾಲದಲ್ಲಿ ಈ ಅಂಶವನ್ನು ಪರಿಶೀಲಿಸುವ ಭರವಸೆ ತಾಳಬಹುದು. ದೇಶಮುಖರ ಹೇಳಿಕೆಯಿಂದ ಉದ್ಭೂತವಾದ ದೊಡ್ಡ ಪ್ರಶ್ನೆಯೆಂದರೆ— ಭಾರತದಂಥ ಬಡದೇಶದಲ್ಲಿ ಪ್ರತಿಶತ ೫ರಿಂದ ೪೦ರಷ್ಟು ಹೆಚ್ಚು ಪ್ರಮಾಣದಲ್ಲಿ ಆಸ್ತಿಕರವನ್ನು ಹೇರುವುದು ಸರಿಯಾದ ಕ್ರಮವಾಗುತ್ತದೆಯೆ? ಎಂಬುದೆನ್ನಬಹುದು. ಆಸ್ತಿಕರವನ್ನು ಹೇರುವ ಬೇರೆ ದೇಶಗಳ ಉದಾಹರಣೆಯನ್ನು ತೆಗೆದುಕೊಂಡರೆ ದೇಶಮುಖರು ಅಪೇಕ್ಷಿಸುವ ಮೊತ್ತ ಬಹಳ ಹೆಚ್ಚಾಯಿತೆಂದು ತೋರುತ್ತದೆ. ಬ್ರಿಟನು ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಗರಿಷ್ಠ ಮಿತಿಯು ಪ್ರತಿಶತ ೮೦ರಷ್ಟು ಹೆಚ್ಚಿದ್ದರೂ ಎಷ್ಟೋ ವರ್ಷಗಳ ಪ್ರಯೋಗದ ಪರಿಣಾಮವಾಗಿ ಅದನ್ನು ನಿರ್ಧರಿಸಲಾಯಿತು. ಪ್ರಾರಂಭದಲ್ಲಿ ಶೇಕಡಾ ೧೦ರಷ್ಟು ಕಡಿಮೆಯಾಗಿಯೇ ಆಸ್ತಿ ಕರದ ಪರಮ ಪ್ರಮಾಣವನ್ನು ಗೊತ್ತುಪಡಿಸಿದ್ದರು. ಮಲಯಾ ಮುಂತಾದ ಪೌರ್ವಾತ್ಯದೇಶಗಳಲ್ಲಿ ಆಸ್ತಿ ಕರದ ಮಿತಿಯು ಬಹಳ ಕೆಳಗಿದೆ. ಭಾರತದ ಸ್ಥಿತಿಯು ಪಾಶ್ಚಾತ್ಯ ರಾಷ್ಟ್ರಗಳ ವಾತಾವರಣಕ್ಕಿಂತ ಭಿನ್ನವಾಗಿದೆಯೆಂಬುದರಿಂದ, ಮತ್ತು ಇದೀಗ ತಾನೆ ಆಸ್ತಿ ಕರದಂಥ ಅಪರಿಚಿತ ಕ್ರಮವೊಂದನ್ನು ನಾವು ತೆಗೆದುಕೊಳ್ಳುತ್ತಿರುವೆವೆಂಬುದರಿಂದ ಸಾವಧಾನವಾಗಿ ಈ ವಿಷಯದಲ್ಲಿ ಮುಂಬರಿಯುವುದು ಒಳಿತು. ಲೋಕಸಭಾ ಸದಸ್ಯರ ಬಹುಮತದ ಅಭಿಪ್ರಾಯ ದೇಶಮುಖರಿಗೆ ಅನುಕೂಲವಾಗಿರಲಿಕ್ಕಿಲ್ಲೆಂದು ಹೇಳಲು ಆಧಾರವುಂಟು.

ಶಿಕ್ಷಣ ತಜ್ಞರ ಕರ್ತವ್ಯ

ಮದ್ರಾಸು ಸರಕಾರವು ಪ್ರಾಥಮಿಕ ಶಿಕ್ಷಣ ಪದ್ಧತಿಯ ಹೊಸ ಸ್ವರೂಪವನ್ನು ವಿಮರ್ಶಿಸಿ ಅದರ ಬಗ್ಗೆ ಯೋಗ್ಯ ಸೂಚನೆಗಳನ್ನು ಮಾಡಲು ನಾಲ್ಕು ಮಂದಿ ಶಿಕ್ಷಣ ತಜ್ಞರ ಒಂದು ಮಂಡಳವನ್ನು ನೇಮಿಸಿರುತ್ತದೆ. ಕಳೆದ ವರ್ಷದ ವರೆಗಿದ್ದ ಪ್ರಾಥಮಿಕ ಶಿಕ್ಷಣದ ಪದ್ಧತಿಯ ಗುಣದೋಷಗಳ ವಿಮರ್ಶೆಯನ್ನೂ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಿಸುವ ವಿಧಾನವನ್ನೂ ಈ ಮಂಡಳ ಮಾಡುವುದಲ್ಲದೆ, ನೂತನ ವಿದ್ಯಾಭ್ಯಾಸ ಕ್ರಮದ ಕೂಲಂಕಷ ಪರಿಶೀಲನೆಯನ್ನು ಮಾಡಿ, ತನ್ನ ಧ್ಯೇಯ ಸಾಧನೆಯಲ್ಲಿ ಅದು ಹೊಂದಿದ ಪ್ರಗತಿಯನ್ನು ಅಳೆದು ಸರಕಾರಕ್ಕೆ ಸಲಹೆಗಳನ್ನು ಮಂಡಳ ನೀಡುವುದು. ಮಂಡಳದ ಮೊದಲನೇ ಸಭೆಯು ಅಗೋಸ್ತು ೩೧ನೇ ತಾರೀಕಿಗೆ ಸೇರಿ, ಸುಮಾರು ಒಂದು ತಿಂಗಳ ಅವಧಿಯಲ್ಲಿ ತನ್ನ ಸಿಫಾರಸುಗಳನ್ನು ಮಾಡಲು ಅದು ಸಮರ್ಥವಾದೀತು. ಸರಕಾರವು ಶಿಕ್ಷಣ ಪದ್ಧತಿಯ ಸಂಧಾರಿತ ಕ್ರಮವನ್ನು ಬಿಟ್ಟುಗೊಡಲು ಉದ್ದೇಶಿಸಿಲ್ಲವೆಂದೂ ಯೋಗ್ಯ ಸಲಹೆಗಳನ್ನು ಮಾತ್ರ ಅಂಗೀಕರಿಸಲಾಗುವುದೆಂದೂ ರಾಜಾಜಿಯವರು ಶಾಸನ ಸಭೆಯಲ್ಲಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು. ನೂತನ ವಿದ್ಯಾಭ್ಯಾಸ ಕ್ರಮದ ಪರಿಣಾಮವನ್ನು ದೀರ್ಘಕಾಲೀನ ಪ್ರಯೋಗದ ಫಲವಾಗಿಯೇ ಚೊಕ್ಕ ರೀತಿಯಲ್ಲಿ ನಿರ್ಣಯಿಸಬಹುದಲ್ಲದೆ—ಎರಡು ಮೂರು ತಿಂಗಳುಗಳ ಮಿತಿಯೊಳಗೆ ಸರಿಯಾದ ಅಂದಾಜನ್ನು ಮಾಡಿಕೊಳ್ಳುವುದು ಜನಸಾಮಾನ್ಯರಿಗೆ ಕಷ್ಟದ ಕೆಲಸ. ಅದರೆ ಮಂಡಳದ ಸದಸ್ಯರು ಶಿಕ್ಷಣ ತಜ್ಞರಿರುವುದರಿಂದ ಅವರ ಸೂಕ್ಷ್ಮ ಮತಿಗೆ ಹೊಸ ಪದ್ಧತಿಯ ಯೋಗ್ಯತೆ ಮತ್ತು ಅದರ ಕಾರ್ಯಾಚರಣೆಯಲ್ಲಿರುವ ಲೋಪ ದೋಷಗಳ ಅರಿವು ಆಗಲಿರುವುದೆಂಬ ಭರವಸೆ ಇದೆ. ಈ ಮಂಡಳದ ಕಾರ್ಯದಲ್ಲಿ ಆಸ್ಥೆಯುಳ್ಳ ಎಲ್ಲ ಜನರೂ ಸಹಕರಿಸಿ, ತಮ್ಮ ನಿಲುಮೆಯನ್ನು ಸ್ಪಷ್ಟೀಕರಿಸುವುದು ರಾಜ್ಯದ ಭವಿಷ್ಯತ್ತಿನ ಹಿತದೃಷ್ಟಿಯಿಂದ ಕ್ಷೇಮಪ್ರದವಾಗಿರುತ್ತದೆ

ಸುಶಿಕ್ಷಿತರ ಉದ್ಯೋಗ ಪ್ರಶ್ನೆ

ದೇಶದಲ್ಲಿ ನಿರುದ್ಯೋಗಿಗಳ ಸಮಸ್ಯೆಯು ಭೀಕರವಾಗುತ್ತಾ ಬಂದಿರುವುದರಿಂದ—ಕೇಂದ್ರ ಸರಕಾರವು ಈ ವಿಷಯದಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲು ಮನಸ್ಸು ಮಾಡಿರುತ್ತದೆ. ಸುಶಿಕ್ಷಿತ ಜನರು ಉದ್ಯೋಗವಿಲ್ಲದೆ ಅಲೆಯುತ್ತಿರುವುದನ್ನು ತಪ್ಪಿಸಲು ಅದೊಂದು ಯೋಜನೆಯನ್ನು ತಯಾರಿಸಿದೆ. ಇದರನ್ವಯ ಮುಂದಿನ ಎರಡು ವರ್ಷಗಳಲ್ಲಿ ಸುಮಾರ ಒಂದು ಲಕ್ಷ ಜನ ಶಿಕ್ಷಿತರನ್ನು ಶಾಲೆಗಳಲ್ಲಿ ಕೆಲಸಕ್ಕೆ ನೇಮಿಸಿ, ಅವರಿಂದ ಗ್ರಾಮಾಭ್ಯುದಯ ಕಾರ್ಯದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲಾಗುವುದು. ಈಗ ಕೇವಲ ಒಬ್ಬನೇ ಶಿಕ್ಷಕನಿರುವ ಶಾಲೆಗಳಲ್ಲಿ ಸುಶಿಕ್ಷಿತ ನಿರುದ್ಯೋಗಿಗಳನ್ನು ಹೆಚ್ಚಾಗಿ ಶಿಕ್ಷಕ ಸ್ಥಾನಕ್ಕೆ ನೇಮಿಸಿ, ದೇಶದ ಬದಲಿಸಿದ ವಾತಾವರಣಕ್ಕೆ ಒಪ್ಪುವಂತೆ ಹಳ್ಳಿಗಳಲ್ಲಿ ನವ್ಯಸ್ಫೂರ್ತಿಯನ್ನೂ ಉತ್ಸಾಹವನ್ನೂ ಹುಟ್ಟಿಸಲು ನೋಡಲಾಗುವುದು. ಈ ಪ್ರಯತ್ನ ದೊಡ್ಡ ಹೆಜ್ಜೆ ಹೊಂದಿದರೂ ಕಾರ್ಯರೂಪದಲ್ಲಿ ಅದು ಇಳಿಯುವಲ್ಲಿ ತೊಂದರೆಗಳಿವೆ ಎಂಬುದನ್ನು ದುರ್ಲಕ್ಷಿಸಲಾಗದು. ಗ್ರಾಮಸೇವಕರ ತರಬೇತಿಯ ಯೋಗ್ಯತೆಗೆ ಶಿಕ್ಷಕರ ತರಬೇತಿಯೂ ಅಗತ್ಯವೆಂಬಲ್ಲಿ ಪ್ರತಿವಾದವಿಲ್ಲ. ಹಾಗೆಂದು ಎಲ್ಲ ಸುಶಿಕ್ಷಿತ ನಿರುದ್ಯೋಗಿಗಳಿಗೂ ಶಿಕ್ಷಕ ವೃತ್ತಿಯಲ್ಲಿ ಪ್ರಾಮಾಣಿಕವಾದ ಆಸ್ಥೆ ಇರುವುದೆಂದು ಹೇಳಲಾಗದು. ಶಿಕ್ಷಕ ವೃತ್ತಿಗಿಂತಲೂ ಹೆಚ್ಚು ಉಪಯುಕ್ತವಾದ ತಾಂತ್ರಿಕ ಅಥವಾ ರಾಷ್ಟ್ರನಿರ್ಮಾಣಕಾರ್ಯಗಳಲ್ಲಿ ಅವರನ್ನು ಸೇರಿಸಿಕೊಳ್ಳಲು ಪ್ರಯತ್ನ ನಡೆದರೆ ಅದರಿಂದ ಹಿತವಿದೆ. ಇದೇನೇ ಇರಲಿ—ಸರಕಾರ ತನಗೆ ತೋರಿದ ರೀತಿಯಲ್ಲಿ ಯೋಗ್ಯ ನಿಲುಮೆಯನ್ನು ಅನುಸರಿಸಿಕೊಂಡು ಹೋಗುತ್ತಿದೆ. ಅಷ್ಟು ಮಟ್ಟಿಗೆ ನಮಗೆಲ್ಲರಿಗೂ ಸಮಾಧಾನವಿರಬೇಕು. ಇಂಥದರಲ್ಲಿ—ಈಗಾಗಲೇ ಕೆಲಸ ನಿರತರಾದವರು ಸಂಪು ಮುಷ್ಕರಗಳೆಂದು ಹಾನಿಕಾರಕ ಚಟುವಟಿಕೆಗಳಲ್ಲಿ ಪ್ರವೃತ್ತರಾಗುವುದು ಗರ್ಹಣೀಯ. ಈಚೆಗೆ ಬರ್ನಪುರದ ಉಕ್ಕಿನ ಕಾರ್ಖಾನೆ ತನ್ನ ಕೆಲಸವನ್ನು ನಿಲ್ಲಿಸಿ ಬಿಟ್ಟಿದೆ. ಪರಿಣಾಮವಾಗಿ ಉತ್ಪಾದನೆಯು ಸ್ಥಗಿತಗೊಂಡುದಲ್ಲದೆ ೧೫೦೦೦ ಕೆಲಸಗಾರರು ಉದ್ಯೋಗಹೀನರಾದರು. ಕೆಲಸಗಾರರು ಸಂಪು ಮುಷ್ಕರಗಳಿಗೊಂದಲಿಕ್ಕೆ ಕೈಯಿಕ್ಕಿರುದರಿಂದ ಈ ದುರಂತವನ್ನು ಅವರೂ ದೇಶವೂ ಇದಿರಿಸಬೇಕಾಯಿತು. ಇಂಥ ಕಷ್ಟ ಪರಿಸ್ಥಿತಿಯಲ್ಲೂ ತಮ್ಮ ತಪ್ಪನ್ನು ಕೆಲಸಗಾರರು ತಿಳಿದುಕೊಳ್ಳದ ತಿಡಿಗೇಡಿಗಳ ಪ್ರಚೋದನೆಯಂತೆ ಹಠ ಸಾಧಿಸಿಕೊಳ್ಳಲೆತ್ನಿಸುವುದು ರಾಷ್ಟ್ರಾಭ್ಯುದಯಕ್ಕೆ ಪೋಷಕವಾದ ಮನೋಭಾವನೆಯಲ್ಲ. ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಪ್ರಯತ್ನಗಳು ಭರದಿಂದ ನಡೆಯಬೇಕಾದ ಈ ಕಾಲದಲ್ಲಿ ಇದ್ದ ಕಾರ್ಖಾನೆಗಳಿಗೆ ಹೊರಗೀಲಿ ಹಾಕುವ ಪ್ರಮೇಯ ಬಂದೊದಗುದುದು ನಿಜಕ್ಕೂ ದುರ್ದೈವ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

[illegible]/1951

ವಾದಿ— ಸುಬ್ರಾಯ ಭಟ್ಟ [illegible] ತಾಳೆ ಮಗ, ಉಡುಪಿ ತಾಲೂಕು ಗುಂಡಿಬೈಲು ಗ್ರಾಮದಲ್ಲಿರುವವ.

ಪ್ರತಿವಾದಿ – ಬಾಬು [illegible] ಅಲ್ಲಿ [illegible] ಹೇಬರ ಮಗ.

ಉಡುಪಿ ತಾಲೂಕ ಗುಂಡಿಬೈಲು ಗ್ರಾಮದಲ್ಲಿರುವ ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ

ನೀವು ತಾರೀಕು 12—5—1950 ರಲ್ಲಿ ರೂಪಾಯಿ 75 0 0ಕ್ಕೆ ವಾದಿಗೆ ಬರೆಕೊಟ್ಟ ಡಿಮಾಂಡು ನೋಟು, ಪ ತಾರೀಕು 17—1 1952ರಲ್ಲಿ ವಾದಿಯಿಂದ ಕೈಗಡ ಪಡೆದ ರೂಪಾಯಿ 25—0—0 ಇವುಗಳ ಅಸಲು ಬಡ್ಡಿ ಕೂಡಾ ರೂಪಾಯಿ 114—8—9ರ ವಸೂಲಿ ಬಗ್ಗೆ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾರೀಕು 14-9-1953ಕ್ಕೆ ತನಿಖೆಗೆ ಇಟ್ಟಿರುತ್ತದೆ. ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಹಾಜರಾಗಿ ಉತ್ತರ [illegible] ದಾಖಲು ಮಾಡತಕ್ಕದ್ದು. ತಪ್ಪಿದರೆ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನ ಮಾಡಲಾಗುವುದು.

B. Mahabala Holla
Advocate for Plaintiff

Coondapoor Dt. [illegible]-8-53



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಮ್‌ಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO
Watch & Clock
Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸು
ಮದ್ರಾಸು ೩.

ಲಕ್ಷಾಂತರ ಜನರು ಗುಣಹೊಂದಿದ್ದಾರೆ
ಸರ್ ಜೀವನ್ ಶಿಲಾಜಿತ್‌ಲೇಹ
ಶಿಲಾಜಿತ ಹಿಮಾಲಯದ [illegible]
[illegible]
ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.
[illegible]

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಬಳ್ಳಾರಿ ಜಿಲ್ಲೆಯ ಈ ಕೆಳಗಣ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳು
ಸದ್ಯದಲ್ಲಿಯೇ ತೆರೆಯಲಿವೆ:
(1) ಬಳ್ಳಾರಿ; (2) ರಾಯದುರ್ಗ ಮತ್ತು (3) ಕೊಟ್ಟೂರು.
ಈಗಾಗಲೇ ಬ್ಯಾಂಕಿಗೆ ೩೫ ಶಾಖೆಗಳಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುರಕ್ಷಿತತೆ ಮತ್ತು ಭದ್ರತೆಗಳಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ.
ಒಟ್ಟು ಚಲಾವಣೆ ಭಂಡವಾಳ 3¼ ಕೋಟಿ ರೂಪಾಯಿಗಳಿಗೂ ಮಿಕ್ಕಿದೆ.
THE CANARA BANKING CORPORATION LTD.,
Estd: 1906] [H. O: UDIPI (S. India)

ನವಯುಗ
ಉಡುಪಿ, ಗುರುವಾರ ೩-೯-'೫೩

ಮಾಧ್ಯಮಿಕ ಶಿಕ್ಷಣ

ಭಾರತ ಸರಕಾರದವರು ಕೆಲ ಸಮಯದ ಮುಂಚೆ ಮಾಧ್ಯಮಿಕ ಶಿಕ್ಷಣದ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸಲಹೆ ಸೂಚನೆಗಳನ್ನೊಳಗೊಂಡ ವರದಿಯನ್ನು ಒಪ್ಪಿಸಲು ನೇಮಿಸಿದ ಆಯೋಗದ ಸಿಫಾರಸುಗಳು ಈಗ ತಾನೆ ಪ್ರಕಟಪಡಿಸಲ್ಪಟ್ಟಿವೆ. ಅನೇಕ ದೃಷ್ಟಿಯಿಂದ ಈ ವರದಿಯಲ್ಲಿ ಸ್ವಾಗತಾರ್ಹ ಅಂಶಗಳು ಕಂಡುಬರುತ್ತವೆ. ಶಿಕ್ಷಣದ ಉದ್ದೇಶ ಮತ್ತು ಸಾಧನಾ ಮಾರ್ಗಗಳಲ್ಲಿ ಮೂಲಭೂತ ಪರಿವರ್ತನೆಯಾಗಬೇಕೆನ್ನುವ ತತ್ವವನ್ನು ಆಯೋಗವು ಮನ್ನಿಸಿದೆ. ಮಾತ್ರವಲ್ಲ-ಶಿಕ್ಷಣದ ಮಟ್ಟವನ್ನು ಉನ್ನತವಾಗಿಟ್ಟುಕೊಳ್ಳಲು ರಾಜ್ಯ ಸರಕಾರಗಳಿಗಿಂತಲೂ ಹೆಚ್ಚು ಆಸ್ಥೆ, ಉತ್ಸಾಹಗಳನ್ನು ಕೇಂದ್ರ ಸರಕಾರವು ತೋರಿಸಿ, ಪ್ರೋತ್ಸಾಹ ಕೊಡಬೇಕೆಂದು ಅದು ಒತ್ತಾಯಿಸಿದೆ. ಹಣಾಭಾವದ ಪ್ರಶ್ನೆಯು ಶೈಕ್ಷಣಿಕ ಸುಧಾರಣೆಯ ಆವಶ್ಯಕತೆಯನ್ನು ಎಂದಿನಿಂದಲೂ ಹಿಂದೂಡುತ್ತಾ ಬಂದಿರುವದೆಂದು ನಾವೆಲ್ಲರೂ ತಿಳಿದಿದ್ದೇವೆ. ಆದರೆ ಆಯೋಗವು ಶಿಕ್ಷಣದ ಪುನರ್ಘಟನೆಗೋಸ್ಕರ ಹಣದ ಮುಖ ನೋಡತಕ್ಕದ್ದಲ್ಲವೆಂಬ ತತ್ವವನ್ನು ಪುರಸ್ಕರಿಸಿರುವಂತೆ ತೋರುತ್ತದೆ-ಹಣವನ್ನು ಪಡೆಯುವ ಬಗೆಗಳ ಕುರಿತಾಗಿ ಅದು ಅತ್ಯಮೂಲ್ಯವಾದ ಸಲಹೆಗಳನ್ನು ಮಾಡಿರುತ್ತದೆ. ಶಿಕ್ಷಣವು ನಾಗರಿಕರ ಶೀಲ ಚಾರಿತ್ರ್ಯಗಳನ್ನು ವಿಕಾಸಗೊಳಿಸಲೂ ದೃಢವಾಗಿಸಲೂ ಅತ್ಯುತ್ತಮವಾದ ಸಾಧನವಾಗಬೇಕೆಂದೂ ಇದನ್ನು ಸಾಧಿಸಲು ಅತ್ಯಂತ ದಕ್ಷರಾದ ಶಿಕ್ಷಕವರ್ಗವಿರಬೇಕಾಗಿದೆಯೆಂದೂ ಆಯೋಗವು ಹೇಳಿರುತ್ತದೆ. ಪ್ರಕೃತ ದಯನೀಯ ಪರಿಸ್ಥಿತಿಯಲ್ಲಿ ಬಿದ್ದಿರುವ ಶಿಕ್ಷಕ ವರ್ಗದ ಜೀವನವನ್ನು ಸುಖ ಸೌಕರ್ಯಗಳಿಂದ ಸಮೃದ್ಧಮಾಡದಿದ್ದರೆ- ಶೈಕ್ಷಣಿಕ ಕ್ಷೇತ್ರದಲ್ಲಿ ಯಾವ ಸುಧಾರಣೆಯೂ ಅಪೇಕ್ಷಿತ ಫಲವನ್ನುಂಟುಮಾಡುವುದು ಶಕ್ಯವಿಲ್ಲ. ಶಿಕ್ಷಕರ ವೇತನ ಪ್ರಮಾಣವನ್ನು ಹೆಚ್ಚಿಸಿ, ಪ್ರಾವಿಡೆಂಟ ಫಂಡ್, ಜೀವವಿಮೆ, ಅವರ ಮಕ್ಕಳಿಗೆ ನಿಃಶುಲ್ಕ ವಿದ್ಯಾಭ್ಯಾಸ, ನಿವೃತ್ತಿ ವೇತನ ಮುಂತಾದ ಅನುಕೂಲತೆಗಳನ್ನು ಒದಗಿಸಿ ಕೊಡುವುದಕ್ಕೆ ಸರಕಾರ ಪ್ರಯತ್ನಿಸಬೇಕೆಂದು ಆಯೋಗ ತುಂಬ ಒತ್ತಾಯದಿಂದ ಹೇಳಿರುತ್ತದೆ. ಇದು ಬಿಟ್ಟರೆ, ಶಿಕ್ಷಣದಲ್ಲಿ ತಾಂತ್ರಿಕ ತರಬೇತಿ ಹಾಗೂ ವೃತ್ತಿ ನೈಪುಣ್ಯಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶವಿರಬೇಕೆಂದು ಮಾಡಿದ ಸೂಚನೆಯು ಅತ್ಯಂತ ಮಹತ್ವದ್ದೆನ್ನಬಹುದು. ಮಾಧ್ಯಮಿಕ ಶಿಕ್ಷಣವು ಸಾಮಾನ್ಯತಃ ವಿದ್ಯಾರ್ಥಿಯೊಬ್ಬನ ಪೂರ್ಣ ವಿದ್ಯಾಭ್ಯಾಸವೇ ಆಗಿರುತ್ತದೆ. ಈ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಮುಂದೆ ಸ್ವತಂತ್ರ ಜೀವನವನ್ನು ಯಶಸ್ವಿಯಾಗಿ ಪ್ರಾರಂಭಿಸಲು ಅನುಕೂಲವಾಗುವಂತೆ ಮಾಧ್ಯಮಿಕ ಶಿಕ್ಷಣದ ಸ್ವರೂಪವಿರಬೇಕಾದುದು ಅಗತ್ಯ. ಆಯೋಗವು ಇದನ್ನು ಸಮರ್ಥಿಸಿದೆ. ನಿರುದ್ಯೋಗ ಮುಂತಾದ ಪಿಡುಗುಗಳಿಗೆ ವಿದ್ಯಾರ್ಥಿಗಳು ಬಲಿಯಾಗದಂತೆ, ವಿವಿಧ ಉದ್ಯೋಗಗಳಲ್ಲಿ ಅವರನ್ನು ತರಬೇತಿಗೊಳಿಸಬೇಕೆಂದು ಆಯೋಗ ಹೇಳಿರುತ್ತದೆ. ನಮ್ಮ ರಾಜ್ಯ ಘಟನೆಯಂತೆ ೧೪ ವರ್ಷ ಪ್ರಾಯದೊಳಗಿನ ಎಲ್ಲರಿಗೂ ಧರ್ಮಾರ್ಥ ಶಿಕ್ಷಣವನ್ನು ನೀಡುವ ಕಾಲ ಬಂದಾಗ -- ಮಾಧ್ಯಮಿಕ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳ ಪ್ರಮಾಣ ಬಹಳ ಹೆಚ್ಚಿಕೊಳ್ಳುವುದೆಂದೂ ಇವರೆಲ್ಲರ ಭಿನ್ನ ಭಿನ್ನ ಅಭಿರುಚಿಗಳಿಗೊಪ್ಪುವಂತೆ ವೃತ್ತಿ ಶಿಕ್ಷಣದಲ್ಲಿ ವೈವಿಧ್ಯವಿರಬೇಕೆಂದೂ ಆಯೋಗ ಸೂಚಿಸಿದೆ. ವಿದ್ಯಾರ್ಥಿಗಳು ಪಾಲಕರ ಉದ್ಯೋಗ ಮತ್ತು ವೃತ್ತಿಗಳಲ್ಲಿ ಆಸಕ್ತಿವಹಿಸಿ, ಸಾಧ್ಯವಾದರೆ ಅವುಗಳನ್ನೆ ಅನುಸರಿಸಲು ಅನುಕೂಲವಾಗುವಂತೆ ಶಾಲಾ ಸಮಯವನ್ನು ಗೊತ್ತುಪಡಿಸಬೇಕೆಂದು ಆಯೋಗ ಹೇಳಿರುವುದು ಗಮನೀಯ ಸಂಗತಿ. ಶಾಲಾ ದಿನಗಳು ಕನಿಷ್ಠ ಪಕ್ಷ ೨೦೦ ಆಗಿರಬೇಕೆಂದೂ ೪೫ ನಿಮಿಷ ಅವಧಿಯ ೩೫ ಪೀರಿಯಡುಗಳು ಪ್ರತಿವಾರ ನಡೆಯಬೇಕೆಂದೂ ಆಯೋಗ ಸೂಚಿಸಿದೆ. ಮಾಧ್ಯಮಿಕ ಶಿಕ್ಷಣವು ಏಳು ವರ್ಷಗಳ ಅವಧಿಯನ್ನೊಳಗೊಂಡಿರಬೇಕೆಂದೂ ಈ ಸಮಯದಲ್ಲಿ ಪ್ರಾದೇಶಿಕ ಭಾಷೆಯಲ್ಲಿಯೇ ಬೋಧನೆ ಕೊಡಬೇಕೆಂದೂ ಆಯೋಗ ಸಲಹೆಮಾಡಿದೆ. ಇದರ ಜೊತೆಗೆ ರಾಷ್ಟ್ರಭಾಷೆ ಮತ್ತು ಒಂದು ವಿದೇಶೀ ಭಾಷೆಯನ್ನು ಕಲಿತುಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕೆಂದು ಅದು ಹೇಳಿದೆ. ವಿದ್ಯಾರ್ಥಿಗಳ ಮುಂದಿನ ಜೀವನದ ಯಶೋಕಾಮನೆಯಿಂದ ಈ ಸೂಚನೆ ಮಾಡಲ್ಪಟ್ಟಿದ್ದರೂ-ಭಾಷಾ ಗೊಂದಲಕ್ಕೆ ವಿದ್ಯಾರ್ಥಿಗಳು ಬೀಳಲಾರರೆ ಎಂಬ ಸಂದೇಹ ಇಲ್ಲಿ ತಲೆದೋರುತ್ತದೆ. ರಾಷ್ಟ್ರಭಾಷೆಯನ್ನು ಕಲಿಯುವ ಹೆಚ್ಚಿನ ಹೊರೆಯೊಂದು ದಕ್ಷಿಣ ಭಾರತಕ್ಕೆ ರಾಜ್ಯಘಟನೆಯಂತೆ ಬಂದಿರುತ್ತದೆ. ಇದನ್ನು ಆಕ್ಷೇಪಿಸುವುದಕ್ಕೆ ಈಗ ಸಾಧ್ಯವಿಲ್ಲ--ಇದಲ್ಲದೆ, ಬೇರೆ ಕೆಲವು ಸಲಹೆಗಳು ಕಾರ್ಯಾಚರಣೆಗೆ ಬರುವುದಕ್ಕೆ ಅಡಚಣೆಗಳು ತೋರುತ್ತವೆ. ಅತ್ಯಮೂಲ್ಯ ಸಲಹೆಗಳನ್ನು ಸಹ ಹಣದ ದೃಷ್ಟಿಯಿಂದ ಮೂಲೆಗೊತ್ತಿಬಿಡಬೇಕಾದ ಪ್ರಮೇಯ ನಮ್ಮ ಸರಕಾರಕ್ಕೆ ಬರುತ್ತಿರುವುದರಿಂದ ಈ ಮಾತನ್ನು ಹೇಳಬೇಕಾಗಿದೆ ಮಾಧ್ಯಮಿಕ ಶಿಕ್ಷಣವನ್ನು ಇನ್ನೂ ಒಂದು ವರ್ಷ ಹೆಚ್ಚಿಸುವುದರಿಂದ ಶಿಕ್ಷಣ ಸಂಸ್ಥೆಗಳು ಇನ್ನೂ ಬೆಳೆದುಕೊಳ್ಳಬೇಕಾಗುತ್ತದೆ; ವೃತ್ತಿಪರ ಶಿಕ್ಷಣ ತಾಂತ್ರಿಕ ತರಬೇತಿ ಇವುಗಳನ್ನು ವಿವಿಧ ಅಭಿರುಚಿಯ ಹುಡುಗರಿಗೆ ಒದಗಿಸಿ ಕೊಡುವುದು ಸಾಮಾನ್ಯ ಕೆಲಸವಲ್ಲ. ಇದಕ್ಕೆ ಬೇಕಾದ ಸಾಧನ ಸಲಕರಣೆಗಳು ಸುಲಭದಲ್ಲಿ ಪ್ರಾಪ್ತವಾಗಲಾರವು. ಈ ಹಾಗೂ ಇದೇ ನಮೂನೆಯ ಬೇರೆ ಕಷ್ಟಗಳು ಇವೆಯೆಂದ ಮಾತ್ರಕ್ಕೆ ಮಾಧ್ಯಮಿಕ ಶಿಕ್ಷಣದ ಪುನರ್ಘಟನಾ ಪ್ರಯತ್ನವನ್ನು ಉಪೇಕ್ಷಿಸಬೇಕೆಂದು ಹೇಳುವುದು ತರವಲ್ಲ—ಆಯೋಗದ ಸಲಹೆ ಸೂಚನೆಗಳು ವ್ಯಾಪಕವಾಗಿರುತ್ತವೆ; ಅವುಗಳಲ್ಲಿ ಪ್ರಯೋಜನಕಾರಿಯಾದ ಸುಲಭ ಸೂಚನೆಗಳನ್ನು ತ್ವರಿತದಲ್ಲಿಯೇ ಕಾರ್ಯಾನ್ವಿತಗೊಳಿಸಿ, ಸ್ವಲ್ಪ ಕಠಿಣವಾದವುಗಳನ್ನು ಹಿಂದಿನಿಂದ ಜ್ಯಾಂಗೆ ತರಬಹುದು. ಕೇಂದ್ರಸರಕಾರವು ಮಾಧ್ಯಮಿಕ ಶಿಕ್ಷಣದ ಮಹತ್ವವನ್ನು ಚೆನ್ನಾಗಿ ಮನವರಿಕೆಮಾಡಿಕೊಂಡು, ರಾಷ್ಟ್ರದ ಇಂದಿನ ಆವಶ್ಯಕತೆಗೊಪ್ಪುವ ರೀತಿಯಲ್ಲಿ ಆಯೋಗದ ಸಲಹೆಗಳನ್ನು ಮನ್ನಿಸಲೆಂದು ಹಾರೈಸುತ್ತೇವೆ

ಭಾರತದ ಹೆಸರು ಹಿಂದೆಗೆಯಲಾಯಿತು

ಕೊರಿಯಾದ ಶಾಂತಿ ಬಯಲಾಸೆಯೆ?

ಕೊರಿಯಾದ ಸಂಬಂಧದಲ್ಲಿ ಸೇರಲಿರುವ ರಾಜಕೀಯ ಪರಿಷತ್ತಿನಲ್ಲಿ ಭಾರತಕ್ಕೂ ಒಂದು ಸ್ಥಾನ ಕೊಡಬೇಕೆನ್ನುವ ಸೂಚನೆ ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯಲ್ಲಿ ಬಹುಮತದಿಂದ ಮಾನ್ಯ ಮಾಡಲ್ಪಟ್ಟಿತು. ಆದರೆ ರಾಷ್ಟ್ರಸಂಘದ ಸಾಮಾನ್ಯ ಸಭೆಯ ಮುಂದೆ ಇದು ಚರ್ಚೆಗೆ ಬಂದಾಗ, ಭಾರತದ ಪ್ರತಿನಿಧಿ ಶ್ರೀಮಾನ್ ಕೃಷ್ಣ ಮೆನೊನ್ನರು ಈ ಸೂಚನೆಯ ಬಗ್ಗೆ ಆಗ್ರಹ ಪಡಬಾರದಾಗಿಯೂ ಅದನ್ನು ಹಿಂದೆಗೆದುಕೊಳ್ಳಬೇಕೆಂದೂ ವಿನಂತಿ ಮಾಡಿದರು. ಕೊರಿಯಾ ಪ್ರಶ್ನೆಯನ್ನು ಬಗೆಹರಿಸುವ ಪ್ರಯತ್ನದಲ್ಲಿ ರಾಷ್ಟ್ರಸಂಘದೊಳಗೆಯೇ ಭಿನ್ನಾಭಿಪ್ರಾಯವುಂಟಾಗಲು ಅವಕಾಶ ಕೊಡಬಾರದೆಂಬ ಸದುದ್ದೇಶವೇ ಮೆನೊನ್ನರನ್ನು ಈ ರೀತಿ ವಿನಂತಿಸಲು ಪ್ರೇರಿಸಿತು. ಪರಿಣಾಮದಲ್ಲಿ ಅವರ ಪ್ರಾರ್ಥನೆಯನ್ನು ಸಾಮಾನ್ಯ ಸಭೆಯು ಪ್ರಚಂಡ ಹರ್ಷೋದ್ಗಾರದೊಂದಿಗೆ ಸ್ವಾಗತಿಸಿತಲ್ಲದೆ—ಭಾರತದ ದೂರದರ್ಶಿತ್ವವನ್ನೂ ನಿರಹಂಕಾರ ಪ್ರವೃತ್ತಿಯನ್ನೂ ಎಲ್ಲ ಸದಸ್ಯರೂ ಮೆಚ್ಚಿಕೊಂಡರು. ಮುಖ್ಯತಃ ಅಮೇರಿಕಾ ಮತ್ತು ಬ್ರಿಟನುಗಳಿಗೆ ಭಾರತ ತೋರಿಸಿದ ಉದಾರ ಬುದ್ಧಿಯಿಂದ ತುಂಬ ಸಂತೋಷವಾಯಿತು.

ಸ್ವಾಭಿಮಾನ ರಕ್ಷಣೆ

ರಾಜಕೀಯ ಸಮಿತಿಯ ಮುಂದೆ ಚರ್ಚೆ ನಡೆದ ಕಾಲಕ್ಕೆ ಭಾರತಕ್ಕೆ ಕೊರಿಯಾದ ಪರಿಷತ್ತಿನಲ್ಲಿ ಸ್ಥಾನಕೊಡಬೇಕೆನ್ನುವ ರಾಷ್ಟ್ರಕೂಟದ ಸದಸ್ಯರ ಸೂಚನೆಗೆ ೨೭ ಅನುಕೂಲ ಹಾಗೂ ೨೧ ಪ್ರತಿಕೂಲ ಮತಗಳು ದೊರೆತವು. ಆದರೆ ಸಾಮಾನ್ಯ ಸಭೆಯಲ್ಲಿ ಈ ಸೂಚನೆ ಮಾನ್ಯವಾಗಬೇಕಿದ್ದರೆ ಎರಡು ಮೂರಾಂಶ ಬಹುಮತದ ಅಗತ್ಯವಿತ್ತು. ಅಮೇರಿಕಾ ಪ್ರಚಂಡ ವಿರೋಧ ಹಾಗೂ ದಕ್ಷಿಣ ಕೊರಿಯಾದ ಪ್ರತಿನಿಧಿಗಳ ಭೀಭತ್ಸ ಭಾಷಣದ ಮೇಲಿಂದ ಸಾಮಾನ್ಯ ಸಭೆಯಲ್ಲಿ ಮತದಾನ ನಡೆಯುತಿದ್ದ ಪಕ್ಷದಲ್ಲಿ-ಭಾರತಕ್ಕೆ ಸ್ಥಾನ ಕೊಡಬೇಕೆನ್ನುವ ಸೂಚನೆ ಪರಾಭವ ಹೊಂದುವುದು ನಿಶ್ಚಿತವಾಗಿತ್ತು. ಅಮೇರಿಕಾ ದಕ್ಷಿಣ ಅಮೇರಿಕದ ರಾಷ್ಟ್ರಗಳ ಮನದೊಲವನ್ನು ಸಂಪಾದಿಸಲು ಪ್ರಯತ್ನಿಸಿದ ಉದ್ದೇಶವಾದರೂ—ಸಾಮಾನ್ಯ ಸಭೆಯಲ್ಲಿ ಭಾರತಕ್ಕೆ ಪ್ರಾತಿನಿಧ್ಯ ಕೊಡುವ ಪ್ರಶ್ನೆ ಹಿಂದೇಟು ಹೊಡೆಯಬೇಕೆಂಬುದೇ ಆಗಿತ್ತು. ಇಂಥ ಪರಿಸ್ಥಿತಿಯಲ್ಲಿ ಮತದಾನಕ್ಕೆ ಅವಕಾಶ ನೀಡುತಿದ್ದರೆ-ಭಾರತದ ಮುಖಭಂಗವಾಗುವ ಭಯ ಮಾತ್ರವಲ್ಲ, ಸಂಯುಕ್ತ ರಾಷ್ಟ್ರ ಸಂಘದ ಧ್ಯೇಯ ಧೋರಣೆಗಳಲ್ಲಿಯೇ ಒಡಕು ತಲೆದೋರುವ ದುಸ್ಥಿತಿ ಇದ್ದಿತು. ಭಾರತಕ್ಕೆ ಪ್ರಾತಿನಿಧ್ಯ ಕೊಡಬಾರದೆಂದು ಸಾಮಾನ್ಯ ಸಭೆ ನಿರ್ಣಯಿಸಿ, ಲೋಕಕ್ಕೆ ಭಾರತದ ಅನರ್ಹತೆಯನ್ನು ಸಾರಿ ಹೇಳುವ ಬದಲು ಭಾರತವೇ ಈ ಸೂಚನೆಯನ್ನು ವಾಪಾಸು ತೆಗೆದುಕೊಂಡುದು ಸ್ವಾಭಿಮಾನ ರಕ್ಷಣೆಗೂ, ರಾಷ್ಟ್ರಸಂಘದ ಹಿತಕ್ಕೂ ಕೃಷ್ಣಮೆನೊನ್ನರು ಮಾಡಿದ ಪ್ರಯತ್ನವೆನ್ನಲಡ್ಡಿಯಿಲ್ಲ.

ಇದರ ಪರಿಣಾಮವೇನು?

ಈ ಪ್ರಯತ್ನ ಯಶಸ್ಸುಪಡೆದುದರಿಂದ ಇನ್ನುಮುಂದೆ ದಕ್ಷಿಣ ಕೊರಿಯಾದ ರ್‍ಹೀ ಸರಕಾರ ಹಾಗೂ ಅದನ್ನು ಮಿತಿಮೀರಿ ಬೆಂಬಲಿಸುವ ಅಮೇರಿಕಾ ಭಾರತ ಹಸ್ತಕ್ಷೇಪ ಮಾಡುವ ಭಯವಿಲ್ಲದೆ ರಾಜಕೀಯ ಪರಿಷತ್ತನ್ನು ತಮಗೆ ಸರಿಕಂಡಂತೆ ನಡೆಸಬಹುದು. ಯುದ್ಧಾಸಕ್ತ ರಾಷ್ಟ್ರಗಳಿಗೆ ಪ್ರಾತಿನಿಧ್ಯವಿರಬೇಕೆಂದು ಸಾಮಾನ್ಯ ಸಭೆಯು ಈಗ ಗೊತ್ತುವಳಿ ಸ್ವೀಕರಿಸಿದೆ. ಕಮ್ಯೂನಿಸ್ಟರ ಕಡೆಯಿಂದ ರಶಿಯಾ ಮಾತು ತೆಯಲ್ಲಿ ಭಾಗವಹಿಸಬಹುದೆಂದೂ ಅದು ಹೇಳಿದೆ. ಅದರ ಜೊತೆಗೆ ರಾಷ್ಟ್ರಸಂಘದ ನಿರ್ಣಯ ಮುಂತಾದವುಗಳನ್ನು ಇದಿರುಪಕ್ಷದವರಿಗೆ ರಾಷ್ಟ್ರಸಂಘದ ಮಹಾ ಕಾರ್ಯದರ್ಶಿಗಳು ತಿಳಿಸುತ್ತಿರಬೇಕೆನ್ನುವ ಭಾರತದ ಸೂಚನೆಯನ್ನೂ ಅದು ಮನ್ನಿಸಿದೆ. ಅಕ್ಟೋಬರದೊಳಗೆ ರಾಜಕೀಯ ಪರಿಷತ್ತನ್ನು ನಡೆಸಲು ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಅಮೇರಿಕೆಯ ವಶಕ್ಕೆ ಅದು

ಒಪ್ಪಿಸಿಕೊಟ್ಟಿದೆ. ಕೊನೆಯ ಗಳಿಗೆಯಲ್ಲಿ ಭಾರತವು ಮುತ್ಸದ್ದಿತನದಿಂದ ವರ್ತಿಸಿದುದರಿಂದ ಪಾಶ್ಚಾತ್ಯ ಮಹಾ ರಾಷ್ಟ್ರಗಳಾದ ಬ್ರಿಟನು ಅಮೇರಿಕಗಳೆರಡೂ ಮಹತ್ವದ ಮತಭೇದದಿಂದ ಉದ್ಭೂತವಾಗಬಹುದಾದ ತಾಪತ್ರಯಗಳಿಂದ ಮುಕ್ತಿಹೊಂದಲು ಅವಕಾಶವಾಯಿತು. ರಾಷ್ಟ್ರ ಸಂಘದ ಗೌರವ ರಕ್ಷಣೆಯೂ ಆಯಿತು. ಆದರೆ ಕೊರಿಯಾದ ರಾಜಕೀಯ ಪರಿಷತ್ತಿಗೆ ಯಶಸ್ಸು ಲಭಿಸುವುದೆ? ಈ ಬಗ್ಗೆ ಎಲ್ಲರಿಗೂ ಸಂಶಯವಿದೆ. ಭಾರತದಂಥ ನಿಷ್ಪಕ್ಷಪಾತ ದೃಷ್ಟಿಯ ತಟಸ್ಥ ರಾಷ್ಟ್ರಕ್ಕೆ ಪ್ರಾತಿನಿಧ್ಯವಿಲ್ಲದ ಕೊರಿಯಾ ರಾಜಕೀಯ ಸಮ್ಮೇಳನ ಪರಿಣಾಮದಲ್ಲಿ ವಿಫಲಹೊಂದಿಯೇ ಸಿದ್ಧವೆಂದೂ ಇದು ಡಾ| ಸಿಂಗ್ಮನ್ರ್ಹೀಯವರಿಗೆ ಅಮೇರಿಕದ ಬಲ ಸಹಿತ ಯುದ್ಧ ಮುಂದುವರಿಸಲು ಸಬಲ ಕಾರಣವಾದೀತೆಂದೂ ಎಲ್ಲರೂ ಭಯಪಟ್ಟಿದ್ದಾರೆ.

ಪರಿಷತ್ತು ನಿಷ್ಪ್ರಯೋಜಕ?

ಇದರಲ್ಲಿ ಸತ್ಯಾಂಶವಿದೆ–ರ್ಹೀಯವರು ಬಹಿರಂಗವಾಗಿ ತಮ್ಮ ಯುದ್ಧೋತ್ಸಾಹ ಪ್ರದರ್ಶಿಸುವುದನ್ನು ಈಗಲೂ ನಿಲ್ಲಿಸಿರುವುದಿಲ್ಲ. ಅಮೇರಿಕಾ ದಕ್ಷಿಣ ಕೊರಿಯಾವಿಗೆ "ನೀನು ಮಾಡಬೇಕಾದ ಕೆಲಸವನ್ನೆಲ್ಲ ನಾನೇ ಮಾಡಿ ಪೂರೈಸುತ್ತೇನೆ" ಎಂದು ಕಿವಿಯಲ್ಲಿ ಪಿಸು ನುಡಿದಂತೆ ವರ್ತಿಸುತ್ತದೆ, ಭಾರತದ ವಿರುದ್ಧ ಶಿಷ್ಟಾಚಾರದ ಎಲ್ಲೆ ಮೀರಿ ರಾಜಕೀಯ ಸಮಿತಿಯ ಮುಂದೆ ದಕ್ಷಿಣ ಕೊರಿಯಾದ ಪ್ರತಿನಿಧಿ ಅಸಂಬದ್ಧ ಆರೋಪಗಳನ್ನು ಹೊರಿಸಿ, ಪ್ರಲಾಪಿಸುತ್ತಿದ್ದಾಗ ಅಮೇರಿಕಾ ಚಕಾರ ಶಬ್ದವೆತ್ತದೆ, ಆತ್ಮಾನಂದದಲ್ಲಿ ಲೀನಗೊಂಡಿತು. ಪ್ರಾಯಶಃ ತನ್ನ ನಾಲಿಗೆಯೇ ಈ ಮುಕ್ತಾಫಲಗಳನ್ನು ನೀಡುತ್ತಿದ್ದಂತೆ ಅಮೇರಿಕಾ ಭಾವಿಸಿರಬೇಕು. ಇದೇನೇ ಇದ್ದರೂ–ಕೊರಿಯಾದ ಶಾಂತಿ ಬಯಸುವ ಜನರ ಅಭಿಪ್ರಾಯದಂತೆ, ಪರಸ್ಪರ ವಿರುದ್ಧ ದಿಸೆಯಲ್ಲಿ ನಡೆಯುವ, ಪ್ರತಿಸ್ಪರ್ಧಿ ಧ್ಯೇಯ ಧೋರಣೆಗಳಿರುವ ಪಕ್ಷಗಳಲ್ಲಿ ಸೌಹಾರ್ದಯುತ ಭಾವನೆಯನ್ನುಂಟುಮಾಡಿ ಶಾಂತಿಗೆ ಪೋಷಕವಾದ ವಾತಾವರಣವೇರ್ಪಡುವಂತೆ, ನೋಡಿಕೊಳ್ಳಲು ಭಾರತಕ್ಕೆ ಸ್ಥಾನವಿಲ್ಲದೆ ಹೋದುದು ದುರ್ದೈವ. ಭಾರತದಂಥ ರಾಷ್ಟ್ರಕ್ಕೆ ಪ್ರಾತಿನಿಧ್ಯವಿಲ್ಲದ ಈ ರಾಜಕೀಯ ಪರಿಷತ್ತು ಪರಸ್ಪರ ಆರೋಪ ಪ್ರತ್ಯಾರೋಪ ಹಾಗೂ ಬಿರುನುಡಿಗಳ ಅದಲು ಬದಲಿನಲ್ಲಿಯೇ ಅಂತ್ಯಗೊಂಡು ತನ್ನ ಉದ್ದೇಶ ಸಾಧನೆಯಲ್ಲಿ ಹಿಂದುಳಿಯುವ ಭಯವಿದೆ. ರಶಿಯಾದ ಪ್ರತಿನಿಧಿ ವಿಶಿನ್ಸ್ಕಿಯವರು ಕಮ್ಯೂನಿಸ್ಟರನ್ನು ರಾಷ್ಟ್ರ ಸಂಘದ ಕಡೆಯಿಂದ ಅಮೇರಿಕಾ ನೀಡುವ ಶರ್ತಗಳಿಂದ ಸಂತೈಸಲು ಸಾಧ್ಯವಿಲ್ಲೆಂದೂ ಇಲ್ಲಿ ಸೋತ ಹಾಗೂ ಗೆದ್ದ ಪಕ್ಷಗಳೆಂಬ ಭಾವನೆಗೆ ಅವಕಾಶವಿರದೆ ಗೌರವಯುತ ಒಡಂಬಡಿಕೆಯಾಗುವ ಪ್ರಶ್ನೆ ಇರುತ್ತದೆಂದೂ ಎಚ್ಚರಿಕೆಯ ಮಾತನ್ನು ಹೇಳಿರುವರು. ಅಮೇರಿಕಾ ತನ್ನ ಅಭಿಪ್ರಾಯವೇ ರಾಷ್ಟ್ರ ಸಂಘದ ಅಭಿಪ್ರಾಯವೆಂದೂ ಅದಕ್ಕೆ ಕಮ್ಯೂನಿಸ್ಟರು ತಲೆ ತಗ್ಗಿಸಲೇಬೇಕೆಂದೂ ಆಗ್ರಹ ಮಾಡಿದಲ್ಲಿ–ಪರಿಷತ್ತು ವ್ಯರ್ಥಹೊಂದುವುದೇ ನಿಜ. ಇಂಥ ಗಂಡಾಂತರ ನಿವಾರಣೆಗೆ ಪ್ರಯತ್ನಿಸುವ ಯೋಗ್ಯತೆ, ಚೈತನ್ಯ, ಅಧಿಕಾರ ಹಾಗೂ ಅನುಭವಬಲ ಭಾರತಕ್ಕೆ ಇತ್ತು-ಆದರೆ ಅದರ ಪ್ರಯೋಜನ ಪಡೆಯುವ ಔದಾರ್ಯ ಅಮೇರಿಕಾ ತೋರಿಸಲಿಲ್ಲ.

ಅನುದಾರ ವರ್ತನೆ

ಅಮೇರಿಕಾದ ವರ್ತನೆಯಷ್ಟೇ ಆಶ್ಚರ್ಯಜನಕ ವರ್ತನೆಯನ್ನು ಪಾಕಿಸ್ತಾನ ತೋರಿಸಿರುತ್ತದೆ. ರಾಜಕೀಯ ಸಮಿತಿಯ ಮುಂದೆ ಭಾರತದ ಪ್ರಾತಿನಿಧ್ಯ ಪ್ರಶ್ನೆ ಬಂದಾಗ ಅಮೇರಿಕಾವನ್ನು ಬೆಂಬಲಿಸಿ, ಸೂಚನೆಯ ವಿರುದ್ಧ ಮತಕೊಟ್ಟ ರಾಷ್ಟ್ರಗಳಲ್ಲಿ ಪಾಕಿಸ್ತಾನವೂ ಒಂದು ಏಶಿಯಾದ ಜನಾಂಗಗಳಲ್ಲಿ ಪಾಕಿಸ್ತಾನವೊಂದೇ ಭಾರತದ ಪ್ರಾತಿನಿಧ್ಯವನ್ನು ವಿರೋಧಿಸಿದ ರಾಷ್ಟ್ರ. ಈಚೆಗೆ ಭಾರತ ಹಾಗೂ ಪಾಕ ಪ್ರಧಾನಿಗಳ ನಡುವೆ ಆದ ಸೌಹಾರ್ದಯುತ ಭೇಟಿ ಹಾಗೂ ಬೆಳೆದುಬಂದ ಬಾಂಧವ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಪಾಕಿಸ್ತಾನದ ವರ್ತನೆಗೆ ಯಾವುದೇ ಸಮಾಧಾನ ತೋರುವುದಿಲ್ಲ. ಮೇಲಾಗಿ ಭಾರತಕ್ಕೆ ಪ್ರಾತಿನಿಧ್ಯ ಕೊಡುವ ಪ್ರಶ್ನೆಯನ್ನು ರಾಷ್ಟ್ರಕೂಟದ ಕೆಲವು ಸದಸ್ಯರೇ ತಂದರೆಂದೂ ಪಾಕಿಸ್ತಾನವೂ ರಾಷ್ಟ್ರಕೂಟದ ರಾಷ್ಟ್ರವೆಂದೂ ಸ್ಮರಿಸಿದರೆ ಈ ವರ್ತನೆ ಇನ್ನಷ್ಟು ಗೊಂದಲಕ್ಕೆ ಕಾರಣವಾಗುತ್ತದೆ. ದಕ್ಷಿಣ ಆಫ್ರಿಕಾದಂಥ ಭಾರತ ದ್ವೇಷಿ ಸರಕಾರ ಕೂಡ ರಾಷ್ಟ್ರಕೂಟದ ಗೌರವ ಮರ್ಯಾದೆಯನ್ನು ಉಳಿಸಿಕೊಳ್ಳಲೆಂಬಂತೆ ಮತದಾನದಲ್ಲಿ ಭಾಗವಹಿಸದೆ ಕುಳಿತುಕೊಂಡಿತು. ಪಾಕಿಸ್ತಾನವು ಈ ಸೌಜನ್ಯವನ್ನು ಸಹ ತೋರಿಸಲಿಲ್ಲ- ಇದು ಅಮೇರಿಕಾದ ಪ್ರಭಾವ ಬಲವೆಂದೇ ವ್ಯಕ್ತವಾಗುತ್ತದೆ. ಮಹಮ್ಮದಾಲಿಯವರು ಮಾತ್ರ ಸೌಜನ್ಯ ತೋರಿಸಲು ಉತ್ಸುಕರಾಗಿರುವರಲ್ಲದೆ ಪಾಕಿಸ್ತಾನೀ ಸರಕಾರಕ್ಕೆ ಇದು ಚಂದ ಕಾಣುವುದಿಲ್ಲೆಂಬುದಕ್ಕೆ, ಮಂತ್ರಿ ಮಂಡಳದಲ್ಲಿ ಭಿನ್ನಾಭಿಪ್ರಾಯ ತಲೆದೋರಿರುವುದೆಂಬ ವರದಿ ನಿದರ್ಶನ. ಇದನ್ನು ಪಾಕಿಸ್ತಾನೀ ಗವರ್ನರ ಜನರಲ್ಲರು ನಿರಾಕರಿಸಿದ್ದಾರೆ–ಆದರೆ ಭಾರತದೊಡನೆ ಸ್ನೇಹ ಧೋರಣೆ ಬೆಳೆಸುವ ಪ್ರವೃತ್ತಿಯ ಚಾಲನೆಗೆ ಪಾಕಿಸ್ತಾನದಲ್ಲಿ ಸಾಕಷ್ಟು ಪ್ರಶಸ್ತಿದೊರೆತಿಲ್ಲ. ಇದರಬದಲು ಅಪನಂಬಿಕೆಯ ಅಪಸ್ವರವೇ ಕೇಳಿಬರುತ್ತಿದೆ. ಕಾಶ್ಮೀರ ಸಂಬಂಧದ ಈಚಿನ ಒಡಂಬಡಿಕೆ ಪಾಕಿಸ್ತಾನದ ಪತ್ರಿಕೆಗಳಿಗೂ ಕಾಶ್ಮೀರೀಯರ ವರ್ಗಕ್ಕೂ ಬೇಸರವನ್ನುಂಟುಮಾಡಿದೆ ನೆಹರೂರ ಬಲೆಯೊಳಗೆನೇ ಮಹಮ್ಮದಾಲಿ ಬಿದ್ದರೆನ್ನುವಷ್ಟರ ಮಟ್ಟಿಗೆ ಪಾಕಿಸ್ತಾನದಲ್ಲಿ ಜುಗುಪ್ಸೆ ಮೂಡಿದೆ. ಇತ್ತ ಪಾಕ್ ಪ್ರಧಾನರು ನೆಹರೂರಿಗೆ ಪತ್ರ ಬರೆದೂ ಮನವಿಯನ್ನು ಕಳಿಸಿಯೂ ಕಾಶ್ಮೀರದ ಒಡಂಬಡಿಕೆ ಹಾಗೂ ಪ್ರಧಾನಿದ್ವಯರ ಮುಂದಿನ ಭೇಟಿಯ ಕುರಿತು ತಮ್ಮ ಸರಕಾರದ ನಿಲುವು ಸ್ಪಷ್ಟೀಕರಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ನೋಟೀಸು

ಕಾರ್ಕಳ ತಾಲೂಕು ಕಡಿಬೆಟ್ಟು ಗ್ರಾಮದ ಗುಡ್ಡೆಬೆಟ್ಟಿನಲ್ಲಿರುವ–ದುಗ್ಗಪ್ಪ ಹೆಗ್ಡೆರ ಅಳಿಯ—ಕಂಬಾರ B. ತೇಜಪ್ಪ ಶೆಟ್ಟಿಯು ಈ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದ್ರೆ—

"ಜಗಜೀವನ ರ್ರ್ಯಾಸ್ ಎಂಡ್ ಸೊ ಮಿಲ್ಸ್" ಎಂಬ ಹೆಸರಿನಿಂದ ನಾನು ಮ–ನನ್ನ ಭಾವನೆಂಟ ಕೆ. ಅಂತಯ್ಯ ಹೆಗ್ಡೆರು ಸಹಾ ಪಾಲುಗಾರಿಕೆಯಿಂದ ಒಂದು ಫರ್ಮನ್ನು ಸ್ಥಾಪಿಸಿ ಕೊಳ್ಳರ್ಕೆಯಲ್ಲಿ ಈ ವರೆಗೆ ವಹಿವಾಟುಗಳನ್ನು ನಡ್ಸಿ ಬರುತ್ತಿದ್ದೆವು. ಸದ್ರಿ ಪಾಲುಗಾರಿಕೆಯನ್ನು ಅಂತ್ಯಪಡ್ಸಿ- ಮತ್ತು ಸದ್ರಿ ಫರ್ಮಿನಲ್ಲಿಯೂ–ಅದಕ್ಕೆ ಸಂಬಂಧ್ಸಿದ ಸ್ಥಿರಾಸ್ತಿ-ಚರಸ್ವತ್ತುಗಳೂ, ಇಂಜಿನ್-ಮಿಷನರಿಗಳು-ಚರಸೊತ್ತುಗಳು ಮುಂತಾದವುಗಳಲ್ಲಿಯೂ ಸದ್ರಿ ಅಂತಯ್ಯ ಹೆಗ್ಡೆರಿಗೆ ಇರುವ ಸಮಸ್ತ ಹಕ್ಕುಗಳನ್ನು ಸಂಪೂರ್ಣವಾಗಿ ನನಗೇನೇ ಬಿಟ್ಟುಕೊಟ್ಟು ಆ ಕುರಿತು ಈ ದಿವ್ಸ ರಿಜಿಸ್ಟ್ರಿ ನಿರಿ ಪಾಲು ಅಗಲುವಿಕೆಯ ಪತ್ರವನ್ನು ಮಾಡಿಕೊಂಡಿರುವದ್ರಿಂದ ಸದ್ರಿ ಫರ್ಮಿಗೂ ಅದಕ್ಕೆ ಸಂಬಂಧಿಸಿದ ಸಮಸ್ತ ಸ್ಥಿರಚರ ಸೊತ್ತುಗಳಿಗೂ ಈಗ ನಾನೊಬ್ಬನೇ ಹಕ್ಕುದಾರನೆಂತಲೂ–ಅವುಗಳ್ಯಾವದ್ರಲ್ಲಿಯೂ ಸದ್ರಿ ಅಂತಯ್ಯ ಹೆಗ್ಡೆರಿಗೆ ಯಾವ ತರದ ಎಷ್ಟನ್ನಾದರೂ ಹಕ್ಕಿಲ್ಲವೆಂತಲೂ- ಸದ್ರಿ ಫರ್ಮಿನ ಸಂಬಂಧವಾಗಿ ಯಾವುದೇ ತರದ ವ್ಯವಹಾರಗಳನ್ನು ಪಗೈವೆ ಯಾರೂ ಸದ್ರಿ ಅಂತಯ್ಯ ಹೆಗ್ಡೆರ ಕೂಡೆ ನಡಿಸಕೂಡದೆಂತಲೂ–ಇದಕ್ಕೆ ವಿರೋಧವಾಗಿ ಯಾವುದೇ ತರ್ಹ ವ್ಯವಹಾರಗಳನ್ನು ಸದ್ರಿ ಫರ್ಮಿನ ಸಂಬಂಧವಾಗಿ ಸದ್ರಿ ಅಂತಯ್ಯ ಹೆಗ್ಡೆರ ಕೂಡೆ ನಡ್ಸಿದಲ್ಲಿ ಅವುಗಳು ನನ್ನ ಮೇಲಾಗಲೀ ಸದ್ರಿ ಫರ್ಮಿನ ಮೇಲಾಗಲೀ ಸಿಂಧುವಾಗತಕ್ಕದ್ದಲ್ಲವೆಂತಲೂ ಈ ಮೂಲಕ ತಿಳಿಯಪಡಿಸುತ್ತೇನೆ.

B. Thejappa Shetty.

ಬ್ರಹ್ಮಾವರ, ತಾ. 28-8-1953.

ಉಡುಪಿ

ಭಾಷಾ ಸಂಘದ ಉದ್ಘಾಟನೆ— ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಭಾಷಾ ಸಂಘವನ್ನು ಕಳೆದ ತಾ 28ರಲ್ಲಿ ಶ್ರೀ ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್, ಅವರು ಉದ್ಘಾಟಿಸಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ನಾರಾಯಣ ಐಯ್ಯಂಗಾರರು ಅತಿಥಿಯ ಪರಿಚಯ ಮಾಡಿಕೊಟ್ಟರು. ಶ್ರೀ ಚಕ್ರಪಾಣಿ ಉಡುಪರು ಧನ್ಯವಾದಗಳನ್ನರ್ಪಿಸಿದರು.

ಕೌನ್ಸಿಲು ಸಭೆ: ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಭೆಯು ಕಳೆದ ತಾ. 29ರಂದು ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಂಕಾರಿ ಅರ್ಜಿಗಳನ್ನು ರಿಕಾರ್ಡು ಮಾಡಿದ ತರುವಾಯ ಕೌನ್ಸಿಲಿನ 1952-53ನೇ ವರ್ಷದ ವರದಿಯು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಹೊಸ ಸಿಟಿ ಬಸ್ ಸರ್ವಿಸುಗಳು— ಕಳೆದ ತಾ 28 ರಂದು ಇಲ್ಲಿಂದ ಅಲೆವೂರಿಗೆ ಹೊಸತಾಗಿ ಆರಂಭವಾಗಿದ್ದ ಮಂಜುನಾಥ ಮೋಟರ್ಸಿನವರ ಸಿಟಿ ಸರ್ವಿಸನ್ನು ಶ್ರೀ. ಟಿ. ಎ. ಪೈ. ಎಂ.ಎಲ್.ಎ.ಗಳು ಅಲೆವೂರಲ್ಲಿ ಉದ್ಘಾಟಿಸಿದರು. ಶ್ರೀಗಳಾದ ಎನ್. ಎಸ್. ಪರ್ಕಳ, ಡಾ| ಎಸ್. ಆರ್. ಪೈ ಮೊದಲಾದವರ ಭಾಷಣಗಳಿದ್ದವು

ತಾ 1 ರಂದು ಇಲ್ಲಿಂದ ಕೆಮ್ಮಣ್ಣಿಗೆ ಪ್ರಾರಂಭವಾಗುವ ಮಂಜುನಾಥ ಮೋಟರ್ ಸರ್ವಿಸಿನವರ ಮತ್ತು ಕೆನರಾ ರೋಡ್ ವೇಸಿನವರ ಸಿಟಿಸರ್ವಿಸುಗಳ ಪ್ರಾರಂಭೋತ್ಸವವು ಕೆಮ್ಮಣ್ಣಿನಲ್ಲಿ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ರೆ| ಫಾ. ವಿಲ್ಲಿಯಂ ಡಿ. ಸೋಜರ ಪ್ರಾಸ್ತಾವಿಕ ಮಾತುಗಳಾದ ಮೇಲೆ ಪಂ. ಬೋ. ಅಧ್ಯಕ್ಷ ಶ್ರೀ ಉಡುಪರು ಸ್ವಾಗತಿಸಿದರು. ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಡಾ| ಮಾಧವ ಪೈ, ಎ. ಜೆ. ಆಳ್ವ ಮೊದಲಾದವರು ಭಾಷಣ ಮಾಡಿದರು.

ರೇಡಿಯೋದಾನ— ಕಳೆದ ತಾ 29 ರಲ್ಲಿ ಡಾ| ಕೆ. ಎಲ್. ಪಾತಾಳರ ಮುಂದಾಳುತ್ವದಲ್ಲಿ ಸಾರ್ವಜನಿಕ ವಂತಿಗೆಯಿಂದ ಪಡೆಯಲಾದ ರೇಡಿಯೋವೊಂದನ್ನು ಫಯರ್ ಸ್ಟೇಶನಿಗೆ ದಾನ ಕೊಡುವ ಸಮಾರಂಭವು ಡಾ| ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ಟೇಶನ್ ಆಫೀಸರ್ ಶ್ರೀ. ರಂಗರಾಯರು ಸ್ವಾಗತಿಸಿದ ಮೇಲೆ ಶ್ರೀ. ಟಿ. ಎ. ಪೈಗಳು ಸ್ವಿಚ್ ಆನ್ ಕಾರ್ಯಕ್ರಮ ನೆರವೇರಿಸಿದರು. ಭಾಷಣಗಳಾದ ಮೇಲೆ ಶ್ರೀ. ಪಿ. ಸಿ. ಜೋನ್ ಧನ್ಯವಾದಗಳನ್ನಿತ್ತರು

ದಯಮಾಡಿ ನಿಮ್ಮ ಚಂದಾಹಣ ಕಳಿಸಿರಿ

ಜನಾಬ್ ಎಚ್. ಎಸ್. ಹುಸೇನ್ ಸಾಹೇಬರ ನಿಧನ— ಕಾರ್ಕಳದ ಜನಪ್ರಿಯ ವಕೀಲರೂ ಸಾರ್ವಜನಿಕ ಸೇವಾಸಕ್ತರೂ ಮಾಜಿ ಶಾಸನ ಸಭಾ ಸದಸ್ಯರೂ ಆಗಿದ್ದ ವಕೀಲ್ ಹುಸೇನ್ ಸಾಹೇಬರು ಕಳೆದ ತಾ. 28ರಂದು ನಿಧನಗೊಂಡರೆಂಬುದು ಅತ್ಯಂತ ವಿಷಾದಕರವಿದೆ. ಶ್ರೀಯುತರು ಕೆಲ ಸಮಯದಿಂದ [illegible]ರಾಗಿದ್ದು ಮದ್ರಾಸಿನಲ್ಲಿ ಚಿಕಿತ್ಸೆ [illegible] ನಯಶೀಲರೂ ಗೌರವಸ್ಥ ಕುಟುಂಬಕ್ಕೆ ಸೇರಿದವರೂ ಆಗಿದ್ದರು. ಇವರ ನಿಧನದಿಂದ ದಕ್ಷಿಣ ಕನ್ನಡಕ್ಕೆ ಆಘಾತ ನಷ್ಟವಿದೆ

ಶ್ರೀ. ಕೋಚಣ್ಣ ಭಂಡಾರಿಯವರ ನಿಧನ— ಜಿಲ್ಲೆಯ ವಿಧಾಯಕ ಕಾರ್ಯಕರ್ತರೊಬ್ಬರಾಗಿ, ಅಸ್ಸಾಮಿನಲ್ಲಿ ದಲಿತ ವರ್ಗಗಳ ಹಾಗೂ ಗುಡ್ಡಗಾಡು ಜನರ ಅಭಿವೃದ್ಧಿಯ ಪ್ರಾದೇಶಿಕ ಕಮಿಶನರಾಗಿದ್ದ ಶ್ರೀ. ಕೆ. ಕೋಚಣ್ಣ ಭಂಡಾರಿಯವರು ಕಳೆದ ತಾ 25ರಲ್ಲಿ 46ನೇ ವಯಸ್ಸಿನಲ್ಲಿ ಅಸ್ಸಾಮಿನಲ್ಲಿ ಆಕಸ್ಮಿಕ ನಿಧನ ಗೊಂಡರೆಂಬುದು ಶೋಚನೀಯವಿದೆ. ಕಾಲೇಜ್ ವಿದ್ಯಾಭ್ಯಾಸ ಮುಗಿಸಿ ಭಂಡಾರಿಗಳು ರಾಷ್ಟ್ರೀಯ ಚಳವಳಿಕ್ಕೆ ಸೇರಿ ಎರಡು ಸಾರಿ ಜೈಲುವಾಸವನ್ನು ಅನುಭವಿಸಿದ್ದರು ಹಿಂದೆ ಕೆಲಕಾಲ ದ. ಕ. ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿದ್ದರು ಹಿಂದೀ ಪ್ರಚಾರ, ಹರಿಜನ ಸೇವೆಯಲ್ಲಿಯೂ ವಿಶೇಷ ಪಾತ್ರ ವಹಿಸಿದ್ದರು. ಹಿಂದೆ ಥಕ್ಕರ್ ಬಾಪಾರವರು ನಮ್ಮ ಜಿಲ್ಲೆಗೆ ಬಂದಾಗ ಶ್ರೀ ಭಂಡಾರಿಗಳ ಸೇವೆಯನ್ನು ಮೆಚ್ಚಿ ಅ… ಅಸ್ಸಾಮಿನ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿ ನೇಮಿಸಿದ್ದರಿಂದ ಅವರು ಜಿಲ್ಲೆಯನ್ನು ಬಿಡಬೇಕಾಗಿತ್ತು ಮೃತರು ಜನಸೇವಾತತ್ಪರರೂ, ಸರಳ ಸ್ವಭಾವದವರೂ ಆಗಿದ್ದರು.

ನಡಿಯುವ ಚಿತ್ರ:

"ರಾಮ ವಿವಾಹ"

ಪ್ರೇಮ ಅದೀಬ್ ಶೋಭನಾ ಸಮರ್ಥ್, ಯಶೋಧರಾ ಕಟ್ಜು, ಶ್ಯಾಮಾ, ಮೊದಲಾದವರು.

ಮುಂದಿನ ಬದಲಾವಣೆ; ರೆಹನಾ, ಕಿಶೋರ್, ಪ್ರಾನ್, ಶಕುಂತಲಾ, ಮಿರ್ಜಾ ಮುಶಾರಫ್, ಮುಮುತಾಜ್ ಆಲಿ, ನಟಿಸಿದ "ಚಮನ್ ಚಮನಾ ಚಮನ್"

6-9-53 A. M. CHEAPER BY THE DOZEN.

ಮಂಗಳೂರು

ನಗರ ಸಭೆಯ ಸಭೆಯು:— ಕಳೆದ ತಾ 29ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ ಡಾ। ಎಂ. ಸಿ. ಶಾಸ್ತ್ರಿಗಳೇ ಮೊದಲಾದವರು ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು. ಅಪ್ಪೀಲುಗಳಲ್ಲಿ ಕೆಲವನ್ನು ಮುಂದಿ ಬಗ್ಗೆ ಉಪಸಮಿತಿಗೊಪ್ಪಿಸಲಾಯಿತು. ಬಿಲ್ ಮಾಡಿ ರಾತ್ರಿ ಸ ರಾರೀ ಹುಕುಂಗಳ ವಿಚಾರ್ಯಾಗಿ, ಜಪ್ಪು ಹೆಂಗೆ ಸಿಂಟಲಿಗೆ ಆಹಾರ ಮ ದ್ದುಗೆ ರೂ. 500 ಮಂಜೂರು ಮಾಡಲಾಯಿತು ಕುದ್ರೋಳಿ ಪ್ಲೇಗ್ ಕೇಂದ್ರವನ್ನು ರದ್ದು, ವಿಚಾರ ಕೇಂದ್ರವಾಗಿ ಮಾರ್ಪಡಿಸ ಬೇಕೆಂಬ ಕಮಿಶನರ ಸೂಚನೆಯನ್ನು ಕಲೆಕ್ಟರರಿಗೆ ಬರೆಕೊಳ್ಳ ಬೇಕೆಂದಾಯಿತು. ಮುನ್ಸಿಪಲು ಇಂಜಿನಿಯರಿಗೆ ಸರಕಾರ ನ್ಮ ತಿ ಸಿದರೆ ಕಾರು ಪಡಕೊಳ್ಳುವರೆ ರೂ 2400 ಮುಂಗಡ ಸಾಲ ಕೊಡಬಹುದೆಂದಾಯಿತು ರೈಲ್ವೆ ರಸ್ತೆಯನ್ನು 40 ಅಡಿ ಅಗಲಗೊಳಿಸಿ ಕಾಲ್ವಾರಿ ಹಾಕಿಸುವಂತೆ ರೈಲ್ವೆ ಅಧಿಕಾರಿಗಳನ್ನು ಕೇಳಿಕೊಳ್ಳ ಬೇಕೆಂದಾಯಿತು. ಅಪಾಯಕರವಾದ ಬಿಕರ್ನ ಕಟ್ಟೆಯ ಆ ಕೀ ಮ"ವೊಂದನ್ನು ಕಡಿದು ಹೊಸ ಗಿಡವನ್ನು ನೆಡಬೇಕೆಂದಾಯಿತು ಬಸ್‌ಸ್ಟಾಂಡಿನ ಬಚ್ಚಲು ಮನೆಗೆ ಶಂಪು ಸೆಟ್ಟಿಗೆ ರೂ 750 ಮಂಜೂರಾಯಿತು, ಸಸ್ಯ ವ್ಯಾಪಾರಿಗಳಿಗೆ ಲೈಸನ್ಸು ರದ್ದುಗೊಳಿಸಬೇಕೆಂಬ ಸರ್ಕಾರಿ ಸೂಚನೆ ಮೇಲೆ ಪಬ್ಲಿಕ್ ಹೆಲ್ತ್ ಕಮಿಟಿಯು ಲೈಸನ್ಸು ಆಗಲೇ ಬೇಕೆಂಬ ಶಿಫಾರಸನ್ನೊಪ್ಪಿ ಸರಕಾರಕ್ಕೆ ಬರೆಕೊಳ್ಳ ಬೇಕೆಂದಾಯಿತು ಶ್ರೀ ಬಿ ಆರ್. ಕರ್ಕೇರರ ಸೂಚನೆಯಂತೆ ಹಳೆ ಕೆಂಟ್ ರಸ್ತೆಯಿಂದ ಅತ್ತಾವರ ರಸ್ತೆ ಕೂಡುವ ಓಣಿಯನ್ನು ನಗರ ಸಗೆಯುವರು ವಶಕೊಂಡು ಸಾರ್ವಜನಿಕೋಪಯೋಗಿ ರಸ್ತೆ ಮಾಡಬೇಕೆಂಬ ಟೌನ್ ಪ್ಲಾನಿಂಗ್ ಕಮಿಟಿಯ ನಿರ್ಣಯದಂತೆ ಮಂಜೂರು ಮಾಡಲಾಯಿತು.

ಜನ್ಮ ದಿನಾಚರಣೆ— ಬ್ರಹ್ಮ ಶ್ರೀ. ನಾರಾಯಣ ಗುರು ಸ್ವಾಮಿಯ ಜನ್ಮ ದಿನಾಚರಣೆಯು ಕಳೆದ ತಾ 25ರಲ್ಲು ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಜರಗಿತು. ಶ್ರೀಗಳಾದ ಜೋನ್ ಸ್ಪ್ರೇಯರ್ಸ್ ಮತ್ತು ಎಚ್ ಎಸ್. ಸುವರ್ಣ, ಎಸ್. ಎಲ್. ಎ ಅವರು ಅನುಕ್ರಮವಾಗಿ ಇಂಗ್ಲಿಷಿನಲ್ಲಿಯೂ ತಮಿಳುವಿನಲ್ಲಿಯೂ ಭಾಷಣವಿತ್ತರು,

ಕಠಿಣ ಸಜೆ— ಹಂಪನಕಟ್ಟೆಯ ಸಿಟಿ ಬಸ್ ಸ್ಟಾಂಡಿನಲ್ಲಿ ಪ್ರಯಾಣಿಕರೊಬ್ಬರ ಕಿಸೆ ಕಡಿಯಲು ಹೊರಟು ಸಿಕ್ಕಿಬಿದ್ದ ಬಾಬು ಯಾನೆ ಭೈರ ಎಂಬ ಮಂಜೇಶ್ವರದ ಬಡಾಜೆಯವನಾದ ಹರಿಜನ ಸಳೆ ಅಪರಾಧಿಗೆ ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಶ್ರೀ ಕರಿಯಪ್ಪನವರು ಒಂದು ವರ್ಷ ಕಠಿನ ಸಜೆವಿಧಿಸಿದರು.

ಡಿಪ್ಲೊಮಾ ಕೋರ್ಸ್:- ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ಸಮಾಜ ಸೇವೆಯ ಡಿಪ್ಲೊಮಾ ಕೋರ್ಸಿನ ಉದ್ಘಾಟನಾ ಸಮಾರಂಭವು ಈಚೆಗೆ ಜರಗಿತು. ಈ ಕೋರ್ಸಿಗೆ ಕಾಲೇಜಿನ ವಿದ್ಯಾರ್ಥಿಗಳು ಮಾತ್ರ ಸೇರಲು ಸಾಧ್ಯವಿದೆ. ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಸೇಕಡಾ 80ರಷ್ಟು ಹಾಜರಿ ಬೇಕು ಮತ್ತು ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡಬೇಕು. ಕೋರ್ಸಿನ ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ರೆ। ಫಾ। ಜೇಕ್ಸ್ ಅವರು ಅದಷ್ಟು ಹೆಚ್ಚು ಮಂದಿ ವಿದ್ಯಾರ್ಥಿಗಳು ಈ ಕೋರ್ಸಿಗೆ ಸೇರಿ ದೇಶಸೇವೆ ಮಾಡುವಂತಾಗಲೆಂದರು

ವಂಚನೆಯ ಆರೋಪ— "ದಿ ಹೆಲ್ಪಿಂಗ್ ಡಿಪಾರ್ಟ್‌ಮೆಂಟ್ ಒಫ್ ಇಂಡಿಯಾ" ಎಂಬ ಹೆಸರಿನ ಬೊಂಬಾಯಿಯ ಸಂಘಂಶವಳವನ್ನು ವಸೂಲು ಮಾಡಿದುದಕ್ಕಾಗಿ ಆನುಗಂಡೆ ಗ್ರಾಮದ ಪಿ ಎಲ್. ಫೆರ್ನಾಂಡೀಸ್ ಎಂಬವನನ್ನು ದಸ್ತಗಿರಿ ಮಾಡಲಾಗಿದೆ ಎಂದು ತಿಳಿದುಬರುತ್ತದೆ ಈತನು ತಾನು "ಹೆಲ್ಪಿಂಗ್ ಡಿಪಾರ್ಟ್‌ಮೆಂಟ್ ಒಫ್ ಇಂಡಿಯಾ" ಕಂಪೆನಿಯ ಏಜಂಟನೆಂದು ಹೇಳಿ ಪಾಲು ವಂತಿಗೆಯನ್ನು ಸಂಗ್ರಹಿಸಿ ಅದನ್ನು ಕಂಪೆನಿಗೆ ಕಳುಹಿಸಲಿಲ್ಲವೆಂದೂ, ಅಲ್ಲದೆ ಕಂಪೆನಿಯಲ್ಲಿ ಕೆಲಸ ಕೊಡಿಸುವ ಆಶ್ವಾಸನೆ ಕೊಟ್ಟಂತೆ ಭದ್ರತೆಗೆಂದು ಕೆಲವರಿಂದ ಹಣ ತೆಗೆದುಕೊಂಡಿರುವನೆಂದೂ ಆತನ ಮೇಲೆ ಆರೋಪವಿದೆ, "ಹೆಲ್ಪಿಂಗ್ ಡಿಪಾರ್ಟ್‌ಮೆಂಟ್ ಒಫ್ ಇಂಡಿಯಾ" ಕಂಪೆನಿಯು ಮೋಸದ್ದೆಂದೂ ಹೇಳಲಾಗಿದೆ. ಈ ಕುರಿತು ಹೆಚ್ಚಿನ ತಪಾಸಣೆಯನ್ನು ಪೋಲೀಸರು ನಡೆಸುತ್ತಿರುವರು

ಗುರುದಕ್ಷಿಣಾ ಸಮಾರಂಭ:— ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಗಳೂರು ಶಾಖೆಯು ಗುರುದಕ್ಷಿಣಾ ಸಮಾರಂಭವು ಕಳೆದ ತಾ 23ರಲ್ಲಿ, ಶ್ರೀ ಕೆ. ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬೆಂಗಳೂರಿನ ಶ್ರೀ ಬಿ. ಎಸ್ ಎಸ್, ಮುಖ್ಯರು ಸಂಘದ ಧ್ಯೇಯ, ಧೋರಣೆಗಳನ್ನು ವಿವರಿಸಿ ಭಾಷಣವಿತ್ತರು

ಕುಂದಾಪುರ – ಮೋಸದ ಆರೋಪ, ಬಂಧನ— ಕುಂದಾಪುರ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡಿನ ಸಾಧಾರಣ 2,15,000 ರೂಪಾಯಿಗಳ ಒಳಸಂಚು, ಸುಳ್ಳು ಲೆಕ್ಕಪತ್ರಗಳು, ವಿಶ್ವಾಸಘಾತುಕಗೊಳಿಸಿದ ಆರೋಪಕ್ಕಾಗಿ ಬ್ಯಾಂಕಿನ ಮಾಜಿ ಅಧ್ಯಕ್ಷ ಶ್ರೀ ಕೆ. ವಾಮನ ಶೆಣೈ, ಮಾಜಿ ಮೆನೇಜಿಂಗ್ ಡೈರೆಕ್ಟರ್ ಕೆ. ವಿಟ್ಠಲದಾಸ ಶೆಣೈ, ಶ್ರೀಗಳಾದ ಕೆ. ಮಂಜುನಾಥ ಶೆಣೈ, ಯು ರಾಮಚಂದ್ರ ಭಟ್, ವಿ. ಮರ್ಸಪ್ಪ ನಾಯ್ಕ, ಟಿ. ವಾಸುದೇವ ನಾಯ್ಕ, ಮತ್ತು ಕೆ. ಅನಂತ ಕಾಮತ್ ಇವರನ್ನು ತಾ 25 8 53ರಲ್ಲಿ ಮದ್ರಾಸು ಸಿ. ಐ. ಡಿ. ಇನ್ಸ್‌ಪೆಕ್ಟರ್ ಶ್ರೀ ಎಂ. ಎಸ್. ಮಣಿಸ್ವಾಮಿಯವರು ಬಂಧಿಸಿರುವರೆಂದೂ, ಈ ಕುರಿತು ಕುಂದಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ಚಾರ್ಜು ಶೀಟು ದಾಖಲಾಗಿದೆಯೆಂದೂ, ಇದರ ವಿಚಾರಣೆಗಾಗಿ ಪ್ರತ್ಯೇಕ ಕೋರ್ಟೊಂದು ನೇಮಕವಾಗಲಿದೆ ಎಂದೂ ತಿಳಿದು ಬರುತ್ತದೆ. ಬ್ಯಾಂಕು ಲಿಕ್ವಿಡೇಶನಿನಲ್ಲಿರುವುದಾಗಿಯೂ ತಿಳಿದು ಬರುತ್ತದೆ.

ಸುಳ್ಯ– ಉಬರಡ್ಕ ಮಿತ್ತೂರು ಗ್ರಾಮದ ಅಮಾಯಿಯಲ್ಲಿ ಗ್ರಾಮಾಭಿವೃದ್ಧಿ ಅಧೀಕರ ಶ್ರೀ ಕೆ ಎಮ್. ಬಾಬು ಸೆಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ 24ರಲ್ಲು ಸಾರ್ವಜನಿಕ ಸಭೆಯೊಂದು ಜರಗಿತು. ಉಬರಡ್ಕ ಮತ್ತು ಸುಳ್ಯ ಗ್ರಾಮಸ್ಥರು ಸಲ್ಲಿಸಿದ ಒಂದು ಮನವಿಯಲ್ಲಿ, ಸುಳ್ಯ-ಕಂದಡ್ಕ ರಸ್ತೆಯ ರಚನೆಯಾಗಬೇಕೆಂದೂ, ಉಬರಡ್ಕ ಮಿತ್ತೂರು ಗ್ರಾಮಕ್ಕೆಂದು ಪಂಚಾಯತು ಬೋರ್ಡು ಸ್ಥಾಪನೆಯಾಗಬೇಕೆಂದೂ ಕೇಳಿಕೊಳ್ಳಲಾಗಿತ್ತು. ಸುಳ್ಯ-ಕಂದಡ್ಕ ರಸ್ತೆಯ ರಚನೆ ಬಗ್ಗೆ ಒಂದು ಸಮಿತಿಯು ನೇಮಕವಾಯಿತು. ಸ್ಥಳೀಯ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಎಮ್. ಸುಬ್ಬರಾಯರು ಈ ಫಿರ್ಕದ ಜನರಿಗೆ ಸಿಕ್ಕಬೇಕಾದ ಕೆಲವು ಸೌಕರ್ಯಗಳನ್ನು ವಿವರಿಸಿದರು.

ಕೋಟೇಶ್ವರ:— ಇಲ್ಲಿಯ ಆಸುಪಾಸು ಪ್ರದೇಶಗಳಲ್ಲಿ ಜಾನುವಾರು ರೋಗಹರಡಿ ಕೆಲವು ದನಕರುಗಳು ಆರೋಗಕ್ಕೆ ಬಲಿಯಾಗಿವೆ ಎಂದು ಹೇಳಲಾಗಿದೆ.

ಬೆಳ್ಪಾರೆ:— ಹೆಚ್ಚಿನ ಶಿಕ್ಷಣಕ್ಕಾಗಿ ಜಪಾನಿಗೆ ತೆರಳಲಿರುವ ಶ್ರೀ ಬಿ. ಬಿ. ಸೆಟ್ಟರನ್ನು ಬೀಳ್ಕೊಡುವ ಸಮಾರಂಭಗಳು ಇತ್ತೀಚೆಗೆ ಬೆಳ್ಪಾರೆ ಹೈಸ್ಕೂಲು ಮತ್ತು ಹಾ। ಪ್ರಾ। ಶಾಲೆಗಳಲ್ಲಿ ನಡೆದವು.

ಮುಂಬರುವ ಜಿಲ್ಲಾ ಬೋರ್ಡು ಚುನಾವಣೆ:— ಯಲ್ಲಿ ಜಿಲ್ಲಾ ಪ್ರ. ಸೋ. ಪಕ್ಷವು ಸ್ಪರ್ಧಿಸ ಬೇಕೆಂದು ಕಳೆದ ತಾ 29ರಲ್ಲಿ ಅಧ್ಯಕ್ಷ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದ ತಾತ್ಕಾಲಿಕ ಸಭೆಯಲ್ಲಿ ನಿರ್ಣಯಿಸಲಾಗಿದೆ. ಆವಶ್ಯ ಕಾರ್ಯಕ್ರಮ ರೂಪಿಸಲು ಶ್ರೀ ಡಿ। ಮೋಹನ ರಾಯರ ವ್ಯವಸ್ಥಾಪಕರಾಗುಳ್ಳ ಉಪಸಮಿತಿಯೊಂದರ ರಚನೆಯಾಗಿದೆ.

— - ಗರ್ಭಸ್ರಾವ! - —

ಅನೇಕ ಹೆಂಗಳೆಯರು ನಾಲ್ಕಾರು ಸಲ ಗರ್ಭಸ್ರಾವದಿಂದ ಒಳಲಿ, ಮಕ್ಕಳಿಲ್ಲದೆ ಕೊರಗುತ್ತಿದ್ದಾರೆ. ನಮ್ಮ ಚಿಕಿತ್ಸೆಯಿಂದ ಅಂತಹ ನೂರಾರು ಸ್ತ್ರೀಯರು ಗುಣಹೊಂದಿ ಮುದ್ದಾದ ಮಕ್ಕಳನ್ನು ಪಡೆದಿದ್ದಾರೆ. ಎರಡು ತಿಂಗಳು ಔಷಧ ಸೇವಿಸಬೇಕಾಗುತ್ತದೆ. ಒಂದು ತಿಂಗಳಿಗೆ ಅಂಚೆವೆಚ್ಚ ಸೇರಿ ಹತ್ತು ರೂಪಾಯಿಯಾಗುವುದು ವಿ ಪಿ ಕಳಿಸಲಾರೆವು. ಹಣ ಪೂರ್ಣ ಮುಂಗಡವಾಗಿ ಕಳಿಸಿರಿ.

ತಾರಾನಾಥ ಆಯುರ್ವೇದ ಮಂದಿರ,
ಹಂಪನಕಟ್ಟೆ, ಮಂಗಳೂರು

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-
ಜೀವಾವಧಿ ಪೊಲಿಸಿಗಳ ಮೇಲೆ ರೂ 12-8 } ವರ್ಷ ಒಂದರ ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂದ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay

ಓದಲೇ ಬೇಕಾದ ಪುಸ್ತಕಗಳು

ಹೆಂಗುಸರ ಕತೆಗಳು
ಬೆಲೆ ರೂ. ೨—೦—೦

ಪಂಚಕಜ್ಜಾಯ
ಬೆಲೆ ರೂ. ೧—೮—೦

ಅವಿಲು
ಬೆಲೆ ರೂ. ೨ ೦ ೦

ಉಡುಗೊರೆ ಕೊಡಲು ಅನುಕೂಲವಾಗುವಂತೆ ಗಟ್ಟಿ ಮುಟ್ಟಾದ ರಟ್ಟಿನ ರಕ್ಷಾ ಕವಚವುಳ್ಳ ಪುಸ್ತಕಗಳು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಂದಾಪುರ ಪಂಚಾಯತ ಬೋರ್ಡು ಕೋರ್ಟಿನಲ್ಲಿ

C S No 69/1953

ಕೆ. ನಾರಾಯಣ ಭಂಡಾರಕಾರ್ ವಾದಿ.

ಜೋನ್ ಲೊಬೊ, ನಂಬ್ರ 39ನೇ ಪೋಲಿಸು ಕೊನಿಸ್ಟೇಬಲ್ -ಪ್ರತಿವಾದಿ.

ಕುಂದಾಪುರ ಕೆ. ನಾರಾಯಣ ಭಂಡಾರಕಾರ್ ವಾದಿಯಾಗಿ, ಪ್ರತಿವಾದಿ ಜೋನ್ ಲೊಬರ ಮೇಲೆ ದೇವಾಜೇವಿ ಬಾಬ್ತು ಬರತಕ್ಕ ಬಾಕಿ ರೂ. 8 9 6ನ್ನು ಬರಮಾಡಿಕೊಳ್ಳುರ ಪ್ರತಿವಾದಿಯ ಮೇಲೆ ಸದ್ರಿ ಕೋರ್ಟಿನಲ್ಲಿ ಹೋಲ್ಟಂದ ದಾವಾ ದಾಖಲುಮಾಡಿಯದೆ, ಸದ್ರಿ ದಾವೆಯು ತಾ 16 9 1953ನೇ ತಾರೀಕಿನ ಮಧ್ಯಾಹ್ನ 2½ ಗಂಟೆಗೆ ತನಿಗೆ ಇಡೋಣಾಗಿಯದೆ ಆದ್ದರಿಂದ ಸದ್ರಿ ತಾರೀಖಿನ ದಿವಸ ಪ್ರತಿವಾದಿಯು ಹಾಜರಾಗಿ ತನ್ನ ಉವಾರಣೆಯನ್ನು ಹಾಜರುಪಡಿಸತಕ್ಕದ್ದು ತಪ್ಪಿದ್ರೆ ಪ್ರತಿವಾದಿಯ ಉಜ್ರು ಶಿವಾಯಿ ತನ್ನಯಿಂದ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸೋಣಾಗಿಯದೆ.

ತಾರೀಕು ೨೦ 8 53 }
ಕುಂದಾಪುರ } ವಾದಿಯ ಕಡೆ.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅಚ್ಚಿನಲ್ಲಿ ಮುಕ್ತಾಯವಾದುದು
ಬೆಲೆ: 1—6—0
ಉತ್ತಮ ಪ್ರತಿ ರೂ. 2—0—0
ನವಭಾರತ ಪುಸ್ತಕ ಭಂಡಾರ, ಉಡುಪಿ

ತೋರುವುದು ಹೀಗೆ—

[೧ನೇ ಪುಟದಿಂದ]

ಪುರಾತನ ಸಂಪ್ರದಾಯದಲ್ಲಿಯೇ ಶ್ರೀಯನ್ನು ಕಾಣುತ್ತಿರಬಲ್ಲೆನೆ?

'ಪತ್ನಿಯು ಪತಿಯ ಅರ್ಧಾಂಗಿ; ಆಕೆ ಆತನ ಪಕ್ಕದಲ್ಲಿ ಯಾವಾಗಲೂ ಇರಬೇಕು. ನಾನೂ ನನ್ನ ಗಂಡನ ಜೊತೆಗೆ ಸೆರೆಮನೆಗೆ ಬರುತ್ತೇನೆ" ಎಂಬುದಾಗಿ ೧೮ ವರ್ಷಪ್ರಾಯದ ನಾಗೇಶ್ವರಮ್ಮ ಎಂಬಾಕೆ ಹಟಹಿಡಿದಳೆಂದು ಚೆಂಗಲದ ಸುದ್ದಿ ಹೇಳುತ್ತದೆ. ಜೇತ ಟನ್ನೊಡು ಎಂಬ ೮ ವರ್ಷದ ಯುವಕನು ಈ ಕನ್ಯೆಯನ್ನು ಆಕೆಯ ಮಾತಾಪಿತರ ಮನೋಗತಕ್ಕೆ ವಿರುದ್ಧವಾಗಿ ಅಪಹರಿಸಿಕೊಂಡು ಹೋದನೆಂಬ ಅಪರಾಧಕ್ಕಾಗಿ ಸೆರೆಹಿಡಿಯಲ್ಪಟ್ಟಾಗ, ನಾಗೇಶ್ವರಮ್ಮ ಈ ರೀತಿ ಹಟ ಮಾಡಿದಳು. "ನನ್ನ ಇಷ್ಟದ ಪ್ರಕಾರವೇ ನಾನು ಆತನ ಜೊತೆಯಲ್ಲಿ ಹೋಗಿದ್ದೆನು ಅವನು ನನ್ನನ್ನು ಅಪಹರಿಸಿಲ್ಲ ನಾನು ಆತನನ್ನು ಮದುವೆಯಾಗಿದ್ದೇನೆ" ಎಂದಳವಳು.

ಈ ಶ್ರದ್ಧೆ ಪ್ರತಿಯೊಂದೂ ಕ್ಷೇತ್ರದಲ್ಲಿ ಸ್ತ್ರೀಜ ಪ್ರೇಮದ ರೂಪದಲ್ಲಿ ವ್ಯಾಪಿಸಿದರೆ, ಧುರೀಣರ ಮೇಲೆ ಬಿದ್ದ ಭಾರ ಎಷ್ಟೋ ಮಟ್ಟಿಗೆ ತಗ್ಗುವ ಭರವಸೆ ಇದೆ ಗಾಂಧೀಜಿಯೊಮ್ಮೆ "ನನಗೆ ಜೈಲಿಗೆ ಕಳಿಸುವ ಸಾಮರ್ಥ್ಯ ಮಾತ್ರ ಇದೆ; ಅಲ್ಲಿಂದ ಬಿಡಿಸುವುದಲ್ಲ" ಎಂಬುದಾಗಿ ಸತ್ಯಾಗ್ರಹ ಕಾಲದಲ್ಲಿ ಜೈಲಿಗೆ ಹೋದವನೊಬ್ಬನ ಕುರಿತು ಹೇಳಿದ್ದರು. ಪುರುಷನೊಡನೆ ಸೆರೆಮನೆ ಸೇರಬಯಸಿದ ಈ ಆಧುನಿಕ ಸೀತೆಯು ಆದರ್ಶವನ್ನಿಟ್ಟುಕೊಂಡು, ಮಹಿಳಾಮಣಿಯರು ರಚನಾತ್ಮಕ ಕೆಲಸಗಳಲ್ಲಿ ಪುರುಷರ ಹೆಗಲಿಗೆ ಹೆಗಲುಗೊಟ್ಟು ದುಡಿದರೆ, ಆದರಿಂದ ಹಿತವುಂಟು.

ನಮ್ಮ ಮುಂದೆ ದುಡಿಮಣ್ಣಾವ ಬಾಳ್ವೆಯ ಧ್ಯೇಯವಿರಬೇಕಾದದ್ದು ನ್ಯಾಯ. ಆದರೆ ನಾವೋ-ಸೋಮಾರಿಗಳಾಗಿ ಕಾಲತಳ್ಳಲು ಬಯಸುತ್ತೇವೆ. ಆದರೆ ಈ ಕೆಳಗಿನ ವಾರ್ತೆ ನಮ್ಮ ಅಂತಃಕರಣಕ್ಕೆ ಆಹ್ವಾನ ಕೊಡುವಂತಿದೆ- ತಿರುನೆಲ್ವೇಲಿಯ ಮಾಜಿಸ್ಟ್ರೇಟರ ಮುಂದೆ ೫೫ ವರ್ಷ ಪ್ರಾಯದ ಒಬ್ಬ ಹೆಂಗಸನ್ನು ಚಿನ್ನದ ಸರಕದ್ದಳೆಂಬ ಆರೋಪಕ್ಕಾಗಿ ವಿಚಾರಣೆಗೆ ಗುರಿಪಡಿಸಿದರು. ಅವಳು ಅಪರಾಧವನ್ನು ನಿರಾಕರಿಸಿದಳು, ಆದರೆ ಶಿಕ್ಷೆಯಿಂದ ಪಾರಾಗಲಿಲ್ಲ. ನ್ಯಾಯಾಧೀಶರು ಅವಳ ಮುದಿ ಪ್ರಾಯವನ್ನು ಗಮನಿಸಿ ಆರುತಿಂಗಳ ಸಾದಾ ಶಿಕ್ಷೆ ಕೊಡುತ್ತಿದ್ದರು. ಆಗ ಮುದುಕಿಯು "ನನಗೆ ಸಶ್ರಮ ಶಿಕ್ಷೆಯನ್ನೆ ಕೊಡಬೇಕು. ರಟ್ಟೆ ಮುರಿದು ಕೆಲಸಮಾಡದಿದ್ದರೆ ನನ್ನ ಆರೋಗ್ಯ ಕೆಟ್ಟುಹೋಗುವುದು" ಎಂದು ಹೇಳಿದಳು. ಮೆಜಿಸ್ಟ್ರೇಟರು ಅವಳ ಪ್ರಾರ್ಥನೆಯನ್ನು ಮನ್ನಿಸಿದರು.

ಸೆರೆಮನೆಯೊಳಗೆ ಕೂಡ ಕಷ್ಟಪಟ್ಟು ಕೆಲಸಮಾಡಬೇಕೆಂದು ಆ ಪ್ರಾಯಸಂದ ಮುದುಕಿಗೆ ತೋರಿತು. ಏನಿಲ್ಲದಿದ್ದರೆ ಸ್ವಂತ ಆರೋಗ್ಯಕ್ಕಾಗಿಯಾದರೂ ಹಾಗೆ ಮಾಡೋಣವೆಂದವಳು ಭಾವಿಸಿದಳು. ಎಂದಮೇಲೆ ರಾಷ್ಟ್ರವನ್ನು ಮರಳಿ ಕಟ್ಟುವ ದೃಢ ಪ್ರತಿಜ್ಞೆಯಿಂದ ನಾಗರಿಕರೆಲ್ಲರೂ ಶ್ರಮಪೂರ್ವಕ ದುಡಿಯಬೇಕೆಂದು ಪ್ರತ್ಯೇಕ ಹೇಳುವುದು ಅನಗತ್ಯ ಸ್ವಂತ ಹಾಗೂ ರಾಷ್ಟ್ರೀಯ ಲಾಭವನ್ನು ಸಂಪಾದಿಸಿಕೊಡುವ ದುಡಿಮೆಯೇ ದೇವರು: ಬೆವರು ಸುರಿಸುವುದೇ ಸಾಧನೆ!

—ಕಾರ್ತಿಕೇಯ.

ಅರಣ್ಯದಲ್ಲಿ ಲಕ್ಷ್ಮಿಯು ಒಕ್ಕಲು

[೩ನೇ ಪುಟದಿಂದ]

ನಿಜ ಹೇಳಬೇಕೆಂದರೆ ದಕ್ಷಿಣ ಭಾರತದ ತೋಟಗಳಲ್ಲಿ ಶೇಕಡಾ ೭೩ ಭಾರತೀಯರಿಗೆನೇ ಸೇರಿರುತ್ತವೆ. ಇದು ಸಂಸಾರಿ ಪ್ರಮಾಣ-ಕಾಫಿ ತೋಟಗಳಲ್ಲಿ ೮೭%, ಬರು ತೋಟಗಳಲ್ಲಿ ೮೦%, ಚಾ ತೋಟಗಳಲ್ಲಿ ೩೮% ಭಾರತೀಯರ ಒಡೆಯರ ವಶದಲ್ಲಿರುತ್ತವೆ.

ಸರಕಾರವು ಈ ತೋಟಗಳ ಕುರಿತು ಕೈಗೊಂಡ ಕಾಯಿದೆ ಕ್ರಮಗಳೂ ತೋಟಗಳ ಪರವಾಗಿ ವಹಿಸಿಕೊಂಡ ಧೋರಣೆಯೂ ತೋಟಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹಕರವಾಗಿಲ್ಲೆಂದೂ ಅನೇಕ ಲೋಪದೋಷಗಳಿಂದ ಕೂಡಿದೆಯೆಂದೂ ತೋಟಗಳ ಒಡೆಯರ ಅಭಿಪ್ರಾಯ. ಸರಕಾರದ ಕೇಂದ್ರಮಂಡಳದಲ್ಲಿ ತೋಟಗಳ ಸ್ಥಿತಿಗತಿ, ಅವುಗಳ ಆರ್ಥಿಕ ಸಮಸ್ಯೆಗಳು ಮುಂತಾದವುಗಳ ಸಂಪೂರ್ಣ ಪರಿಜ್ಞಾನವಿರುವ ಜನರ ಅಭಾವವಿದೆಯೆಂದೂ ಸ್ವತಃ ತೋಟಗಾರರಿಗೆ ಕೇಂದ್ರ ಮಂಡಳದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಸುಯೋಗ್ಯ ಮಾರ್ಗವಿಲ್ಲೆಂದೂ ಅವರ ದೂರು. ಅತ್ಯುತ್ತಮ ಸ್ಥಿತಿಯಲ್ಲಿದ್ದ ತೋಟಗಾರಿಕೆಯು ಇಂದು ತನ್ನ ಮಟ್ಟದಿಂದ ಕುಸಿದು ಕೆಳಬೀಳುತ್ತಿರುವುದಕ್ಕೆ ಸರಕಾರದ ಅನುದಾರ ವರ್ತನೆಯೇ ಕಾರಣವೆಂದು ಅವರ ಆಕ್ಷೇಪ.

ಇದನ್ನು ಯೋಗ್ಯ ರೀತಿಯಿಂದ ಪರಿಶೀಲಿಸಿ ಸಮರ್ಪಕ ನಿರ್ಣಯಕ್ಕೆ ಬರುವುದು ಒಳಿತು. ಏಕೆಂದರೆ, ಭಾರತದಲ್ಲಿ ಸುಲಭದಲ್ಲಿ ಹೆಚ್ಚು ಪ್ರತಿಫಲ ದೊರೆಯುವಂತೆ ವಿಸ್ತರಿಸಬಹುದಾದ ಕೃಷಿ ಅಥವಾ ಉದ್ಯಮಗಳಲ್ಲಿ ಚಾ-ಕಾಫಿ ರಬ್ಬರು ಮುಂತಾದ ತೋಟಿಗಳು ಸರ್ವ ಪ್ರಥಮ ಸ್ಥಾನಕ್ಕೆ ಬರುತ್ತವೆ. ಮೈಸೂರು ಪ್ರದೇಶದ ಮಲೆನಾಡು, ಕೊಡಗು ಹಾಗೂ ಮಲಬಾರುಗಳ ಗಟ್ಟ ಪ್ರದೇಶದಲ್ಲಿ ಇನ್ನೂ ಒಂದು ಲಕ್ಷ ಎಕ್ರೆ ಜಾಗದಲ್ಲಿ ಸುಲಭದಲ್ಲಿಯೇ ಕಾಫಿಯನ್ನು ಬೆಳೆಯ ಬಹುದೆಂದು ತಿಳಿದಿದೆ. ಇದ್ದುದೆ ಹಳೆಯ ತೋಟಗಳಲ್ಲಿ ಹೊಸತಾಗಿ ಗಿಡಗಳನ್ನು ನೆಟ್ಟು ಉತ್ಪಾದನೆಯನ್ನು ಹೆಚ್ಚಿಸುವ ಕಾಲ ಈಗ ಸನ್ನಿಹಿತವಾಗಿದೆ. ಚಾ ತೋಟ ವಿಸ್ತರಿಸಿದ ಪ್ರತಿಯೊಂದು ಎಕ್ರೆ ೧/೨ ಜನಕ್ಕೆ ಕೆಲಸ ಕೊಡುತ್ತದಲ್ಲದೆ ವರ್ಷಕ್ಕೆ ೫೦೦ ರೂಪಾಯಿಗಳಷ್ಟು ಆದಾಯವನ್ನೂ ಸರಕಾರಕ್ಕೆ ತರುತ್ತದೆ. ರಬ್ಬರು ಉದ್ಯಮದಲ್ಲಿ ೭೫ ಸಾವಿರ ಎಕ್ರೆ ಪ್ರದೇಶದಲ್ಲಿ ಮರಳಿ ಹೊಸ ಸಸಿಗಳನ್ನು ಈ ಕೂಡಲೇ ನೆಡಬೇಕಾದ ಪರಿಸ್ಥಿತಿ ಇದೆ. ಇದು ಕೈಗೂಡಿದಲ್ಲಿ ಭಾರತದ ರಬ್ಬರು ಉತ್ಪಾದನೆಯು ಇಮ್ಮಡಿಯಾಗುತ್ತದೆ. ಈ ವಿಸ್ತರಣಗಳೆಲ್ಲ ನೆಂಪೇಂವರ ಸಾವಿರಾರು ಜನರಿಗೆ ಕೆಲಸ, ಸಾವಿರಾರು ರೂಪಾಯಿಗಳ ಆದಾಯ ಮತ್ತು ಸಾವಿರ ಸಂಖ್ಯೆಯಲ್ಲಿ ಮನೆ, ಆಸ್ಪತ್ರೆ, ಶಾಲೆ ಮುಂತಾದವು ತಲೆ ಎತ್ತುತ್ತವೆ.

ಕಾಸರಗೋಡಿನ ಸರಕಾರಿ ಗಾಜು ಕಾರ್ಖಾನೆಯ ತರುಣೋತ್ಸಾಹಿ ಸುಪರಿಂಟೆಂಟರಾದ

ಡಾ. ಬಿ. ಬಿ. ಶೆಟ್ಟಿ ರು.

ಇವರು ಹೆಚ್ಚಿನ ಶಿಕ್ಷಣ ಪಡೆಯುವ ಸಲುವಾಗಿ ಅದೇ ತಾ ೧೮ರಂದು ಕಲ್ಕತ್ತದಿಂದ ಜಪಾನಿಗೆ ತೆರಳಲಿರುವರು. ಜಪಾನಿನಲ್ಲಿ ಅವರು ಒಂದೆರಡುವರ್ಷ ಕಾಲವಿದ್ದು ಗಾಜು ಮುತ್ತಿನ ಕೈಗಾರಿಕೆಯಲ್ಲಿ ವಿಶೇಷ ಶಿಕ್ಷಣ ಪಡೆಯಲಿರುವರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

For Protection and Provision Consult

The New Guardian of India Life Insurance Co., Ltd.

Estd] Head office: **MADRAS** [1934

NEW BUSINESS Exceeds	...	66½ Lakhs.
PREMIUM INCOME	,, ...	15 ,,
LIFE FUND	,, ...	54¾ ,,
ASSETS	,, ...	60 ,,
BUSINESS IN FORCE	Nearly	3 Crores.

A Policy in this Progressive Life Office is good investment; its Agency is valuable business connection.

Applications for Representation are invited from energetic influential persons, with good connection. *Please apply to:*

G. R. Wallia. *Branch Manager,*
Diamond Building, Hampankatta, MANGALORE, S. K.



ಹೋಮ್ ಸಿನೆಮಾ ಪ್ರೊಜೆಕ್ಟರ್

ಸಿನೆಮಾ ಮಂದಿರಗಳಲ್ಲಿ ನೋಡುವಂತಹ ಮಾದರಿಯಲ್ಲಿ 35 ಎಮ್. ಎಮ್. ಫಿಲ್ಮುಗಳು, ಸ್ಲೈಡುಗಳು ಇತ್ಯಾದಿ, ಚಲಿಸುವ, ನೃತ್ಯ ಮಾಡುವುದನ್ನು ನಿಮ್ಮ ಮನೆಯಲ್ಲೇ ನೋಡಬಹುದು ಸಾಮಾನ್ಯ ಬಾಜಾರಗಳು ಇಲ್ಲದೆ ಇಲೆಕ್ಟ್ರಿಕ್ ಬಲ್ಬು (AC DC) ಗಳ ಸಹಾಯದಿಂದಲೇ ನಡೆಸಬಹುದು ಮತ್ತು ಆ ಉದ್ದದ ಫಿಲ್ಮು ಪ್ಯಾಕೆಟ. ಪ್ರೊಜೆಕ್ಟರ್ ಕ್ರಯ ರೂ. 10 ವಿ. ಪಿ. ಪಿ. ಚಾರ್ಜು ರೂ. ೩/- ಪ್ರತ್ಯೇಕ ಹೆಚ್ಚಿಗೆ ಫಿಲ್ಮುಗಳು ಬೇಕಾದರೆ ಗಜಕ್ಕೆ 0 1 0 ಪ್ರತ್ಯೇಕ ತೆರಬೇಕು.

ಇಲೆಕ್ಟ್ರಿಕ್ ಮತ್ತು ರೇಡಿಯೊ ಗಾಯಿಡ್. ಮನೆ ... 1 ... ರೇಡಿಯೋ ತಯಾರಿಸುವುದನ್ನೂ, ಇಲೆಕ್ಟ್ರಿಕ್ ಮತ್ತು ರಿಪೇರಿ ಕೆಲಸವನ್ನೂ ಕಲಿತು ತಿಂಗಳಿಗೆ ರೂ. 400/ ಸಂಪಾದಿಸಿರಿ. ಬೆಲೆ ರೂ 4 ವಿ. ಪಿ. ಚಾರ್ಜು ರೂ 1 ಪ್ರತ್ಯೇಕ.

ಇಂಗ್ಲಿಷ್ ರಾಗದ ರಾಗಮಾಲೆಗಳು (ಫಿಲ್ಮಿ-ಮಸುರಿ) ... ತಯಾರಿಸಲ್ಪಟ್ಟ ... ವಿ. ಪಿ. ಚಾರ್ಜು ರೂ. 1 1 0 ಪ್ರತ್ಯೇಕ.

HINDUSTAN TRADERS & PUBLISHERS LTD.,
SARAI-BALA, **ALIGARH** (U. P.)

ಮಂಗಳೂರಿನಿಂದ ಹೊರಡುವ ಮತ್ತು ಮಂಗಳೂರಿಗೆ ಬರುವ

ರೈಲ್ವೆ ಸಮಯಗಳು

ಮಂಗಳೂರಿನಿಂದ—

ಕಣ್ಣಾನೂರು ಪಸೆಂಜರ್	ಬೆ.	೨ 10
ಮಂಗಳೂರು ಎಕ್ಸ್‌ಪ್ರೆಸ್	ಬೆ.	೨ 00
ಕೊಯಮುತ್ತೂರು ಪೆಸೆಂಜರ	ಮ.	12-10
ಕಣ್ಣಾನೂರು ಪೆಸೆಂಜರ್	ಸಂ	4 10
ತಿರುಚನಾಪಳ್ಳಿ ಜನತಾ.	ಸಂ	೬ 00

ಮಂಗಳೂರಿಗೆ –

ತಿರುಚಿನಾಪಳ್ಳಿ ಜನತಾ	ಬೆ.	೨ 55
ಕಣ್ಣಾನೂರು ಪೆಸೆಂಜರ್	ಮ	12 00
ಕಲ್ಲಿಕೋಟೆ ಪಸೆಂಜರ್	ಮ	3 00
ಮಂಗಳೂರು ಎಕ್ಸ್‌ಪ್ರೆಸ್	ಸಂ	೬ 20
ಕೊಯಮುತ್ತೂರು ಪಸೆಂಜರ್	ರಾ.	10 40

ಸ್ವೀಕಾರ—ವಿಮರ್ಶೆ

ಬಾಳಿನ ಬೆಡಗು—

ಬರೆದವರು: ಯು. ನಾರಾಯಣ ಭಟ್ಟ. ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ. ಬೆಲೆ: ರೂ ೧-೪-೦.

ಹಳ್ಳಿಯ ಹುಡುಗಿ ಮನೋರಮೆಯನ್ನು ಮದ್ರಾಸಿನಲ್ಲಿ ಎಂ. ಎ. ಕಲಿಯುತ್ತಿದ್ದ ಮನೋಹರನು ಮದುವೆಯಾದನು. ಮದುವೆಯ ಮೊದಲಲ್ಲಿ ತನ್ನ ಇನಿಯಳ ಪ್ರೇಮಸುಧೆಯನ್ನು ಸೂರೆಗೊಂಡು ತೃಪ್ತನಾದನು. ಮರಳಿ ಕಾಲೇಜು ಸೇರುವ ಗಳಿಗೆಯುದ್ದ ಮೊದಲಿಂದಲೂ ಸಂಗಾತಿಯಾಗಿದ್ದ ಸುನಂದೆ ಎಂಬ ಕಾಲೇಜು ವಿದ್ಯಾರ್ಥಿನಿಯ ಪ್ರೇಮಪಾಶಕ್ಕೆ ಬಿದ್ದು ಮನೋರಮೆಯನ್ನು ತಿರಸ್ಕರಿಸುವನು. ಮನೋರಮೆಯ ಒಡೆದ ಸಂಸಾರವನ್ನು ಒಂದುಗೂಡಿಸಲು ರಮಾನಂದನೆಂಬ ಸಹೃದಯ ಸ್ನೇಹಿತನು ಪ್ರಯತ್ನಿಸಿದುದರ ಪರಿಣಾಮವಾಗಿ- ಮನೋಹರನಿಗೆ ಸುನಂದೆಯ ನಡವಳಿಕೆ ಜುಗುಪ್ಸೆ ತಂದಿತಲ್ಲದೆ, ಅವನನ್ನು ಬೆಂಗಳೂರಿನ ವರೆಗೆ ತಂದೊಯ್ದಿತು. ಅಲ್ಲಿ ಶ್ರೀಧರ ಸ್ವಾಮಿಗಳ ಶಿಷ್ಯನಾಗಿ ಮನೋಹರ ತನ್ನ ದುರ್ದಿನಗಳ ನೆನಪನ್ನು ಮರೆಯುವನು. ಸ್ವಾಮಿಗಳವರು ಮುಂದೊಂದು ದಿನ ಮನೋರಮೆಯ ಊರಿಗೆ ಚಿತ್ತೈಸಿದಾಗ, ಅವರ ಕೃಪಾ ಪ್ರಸಾದದಿಂದ ಮನೋರಮೆಗೆ ತನ್ನ ಮನೋಹರನ ದರ್ಶನ ಲಾಭವಾಗುತ್ತದೆ. ಮುಂದೆ ದಂಪತಿಗಳು ಶಾಂತೀಶ್ರಮವೆಂಬ ಸೇವಾಕೇಂದ್ರದ ಅಧ್ಯಕ್ಷರುಗಳಾಗುತ್ತಾರೆ. ಸುನಂದೆ ತನ್ನ ವೃತ್ತಿ ಚಾಂಚಲ್ಯದ ಚಪಲ ಎಂಬಂತೆ ಸಿನೇಮಾ ದಿಗ್ದರ್ಶಕ ಕಮಲೇಶನನ್ನು ತೃಪ್ತಿಪಡಿಸುತಿದ್ದು, ಕೊನೆಗೆ ಗುಪ್ತ ರೋಗಕ್ಕೆ ಬಲಿಯಾಗುವಳು. ಅದನ್ನು ಗುಣಪಡಿಸಲು ಮನೋರಮೆ- ಮನೋಹರರ ಶಾಂತಾಶ್ರಮಕ್ಕೆ ಚಿತ್ತೈಸುವಳು. ರೋಗ ಮುಕ್ತೆಯಾದ ಬಳಿಕ ಅಲ್ಲಿಯೇ ಮಂದಿರದ ಪೂಜಾರಿಣಿಯಾಗಿ ಬಾಳುವಳು—ಇದಿಷ್ಟು ಕತೆ.

ಸ್ವಾರಸ್ಯವಾದ ಈ ಕಥಾವಸ್ತುವನ್ನು ಶ್ರೀ ಭಟ್ಟರು ಸಾಕಷ್ಟು ಚೆನ್ನಾಗಿಯೇ ಬಂದು ನೀಳ್ಗತೆಯ ರೂಪದಲ್ಲಿ ಚಿತ್ರಿಸಿರುವರು. ನೈಜ ಪ್ರೇಮದ ಮಹತ್ವವನ್ನು ಈ ಕತೆ ದಿಗ್ದರ್ಶಿಸುತ್ತದೆ; ಹಾಗೆಯೇ ಆಧುನಿಕ ವಾತಾವರಣದಲ್ಲಿ ಅನುಕೂಲವಿದ್ದ ಗೃಹಸ್ಥರು ಸಾಧಿಸಬಹುದಾದ ರಚನಾತ್ಮಕ ಕಾರ್ಯಕ್ರಮಗಳ ಆದರ್ಶವನ್ನೂ ಮುಂದಿಡುತ್ತದೆ. ಈ ಆದರ್ಶ ಸ್ವಕಪೋಲ ಕಲ್ಪಿತವಲ್ಲವೆಂಬುದನ್ನು ಸಪ್ರಮಾಣಪೂರ್ವಕ ಸಿದ್ಧಪಡಿಸುವಷ್ಟು ವಿಸ್ತೃತವಾದ ಪಾತ್ರ ಚಿತ್ರಣ ಹಾಗೂ ಪೋಷಣೆ ಕಂಡುಬರುವುದಿಲ್ಲವೆಂಬ ದೋಷವೊಂದು ಉಳಿದಿದೆ. ಕೆಲವೆಡೆ ಲೇಖಕರೇ ಸಮಾಜದ ನೀತಿ-ಸಂಪ್ರದಾಯಗಳ ಬಗ್ಗೆ ತನ್ನ ಅಸಂಯತ ಅಭಿಪ್ರಾಯವನ್ನು ಅನಾವಶ್ಯಕವಾಗಿಯೇ ವ್ಯಕ್ತಗೊಳಿಸಿದ್ದಾರೆ. ಈ ಲೋಪದೋಷಗಳು ಕ್ರಮೇಣ ಸುಧಾರಿಸುವ ಭರವಸೆ ಇರುವುದರಿಂದ—ಈ ಪುಸ್ತಕ ಎಲ್ಲರೂ ಓದಿ ಮೆಚ್ಚುವಂತಿದೆ ಎನ್ನಬಹುದು.

ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ವಾರ್ಷಿಕಾಂಕ, ೧೯೫೩—

ದಿನದಿಂದ ದಿನಕ್ಕೆ ಪುರೋಗತಿಯನ್ನೈದುತ್ತಿರುವ ಉಡುಪಿಯ ಈ ಕಲಾ ಶಾಲೆತನ್ನ ವಾರ್ಷಿಕಾಂಕದಲ್ಲಿ ಅಮೂಲ್ಯವಾದ ಬರಹಗಳನ್ನು ಸಂಗ್ರಹಿಸಿ, ಪ್ರಕಟಿಸಿರುತ್ತದೆ. ಕಾಲೇಜಿನ ವಾರ್ಷಿಕ ವರದಿ, ಅತಿಥಿಗಳಾಗಿ ಬಂದವರ ಪರಿಚಯ ಹಾಗೂ ಇತರ ಚಟುವಟಿಕೆಗಳ ವಿವರದೊಂದಿಗೆ ಪ್ರಾಧ್ಯಾಪಕ ಹಾಗೂ ವಿದ್ಯಾರ್ಥಿ ವೃಂದದಿಂದ ಬಹುಮುಖ ಅಭಿರುಚಿಗೆ ಒಪ್ಪುವ ಲೇಖನಗಳನ್ನು ಜೋಡಿಸಿರುವುದು ಉತ್ತಮ ಕೆಲಸವೆನ್ನಬೇಕು. ಇಂಗ್ಲೀಷ್ ವಿಭಾಗದಲ್ಲಿ ಜೀವನ, ಸಾಹಿತ್ಯ ಕಲೆ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ ಮುಂತಾದ ವಿಷಯಗಳ ಕುರಿತು ಸುಂದರವೂ ವಿಮರ್ಶಾತ್ಮಕವೂ ಆದ ಬರಹಗಳನ್ನು ಪ್ರಾಧ್ಯಾಪಕ ವೃಂದದ ಸದಸ್ಯರು ಬರೆದಿರುವರು. ಪ್ರಿನ್ಸಿಪಾಲ್ ಸುಂದರ ರಾವ್, ಕು. ಶಿ. ಹರಿದಾಸ ಭಟ್ಟ, ಕೆ. ಬಿ. ರಾಮಕೃಷ್ಣ ರಾವ್, ಎಚ್. ಜಾಸ್ಕರ ಭಟ್ ಇವರ ಇಂಗ್ಲೀಷ್ ಲೇಖನಗಳು ಅತ್ಯಂತ ಸ್ವಾರಸ್ಯವಾಗಿವೆ. ವಿದ್ಯಾರ್ಥಿಗಳ ಬರಹವೂ ಚೆನ್ನಾಗಿದೆ ಮಾತ್ರವಲ್ಲ. ಇನ್ನೂ ಹೆಚ್ಚು ಅವಕಾಶವನ್ನವರಿಗೆ ಕೊಡಬೇಕಾಗಿತ್ತೆಂದು ತೋರುತ್ತದೆ. ಇಂಗ್ಲೀಷಲ್ಲದೆ, ಕನ್ನಡ ಸಂಸ್ಕೃತ ಮತ್ತು ಹಿಂದೀ ವಿಭಾಗಗಳೂ ಇವೆ. ಕನ್ನಡ ವಿಭಾಗವು ಇಂಗ್ಲೀಷು ವಿಭಾಗದಷ್ಟೇ ಸತ್ವಯುತವೂ ಸ್ವಾರಸ್ಯಪೂರ್ಣವೂ ಆಗಿ ಎತ್ತದೆ. ಶ್ರೀಗಳಾದ ಲಕ್ಷ್ಮೀನಾರಾಯಣಾಚಾರ್ಯ ಹಾಗೂ ಆರ್. ಎಸ್. ಮಾಧವ ರಾವುರು ವೈಜ್ಞಾನಿಕ ವಿಷಯದ ಮೇಲೆ ಸರಳವಾದ ಆದರೆ ತುಂಬ ಸುಂದರವಾದ ಬರಹಗಳನ್ನು ನೀಡಿದ್ದಾರೆ. ಶ್ರೀ ಕು. ಶಿ. ಹರಿದಾಸ ಭಟ್ಟರು "ದಾಸೊಪ್ಪವಸ್ಯ ಅಲೌಕಿಕ ಸೃಷ್ಟಿ" ಎಂಬ ಬರಹ ಮೇಲ್ಮಟ್ಟದ ಸಾಹಿತ್ಯ ವಿಮರ್ಶೆ. ವಿದ್ಯಾರ್ಥಿ ಬಳಗದವರಿಂದ ಬರೆಯಲ್ಪಟ್ಟ ಲೇಖನಗಳನ್ನೂ ಕವಿತೆಗಳನ್ನೂ ನೋಡಿದರೆ ಕನ್ನಡದಲ್ಲಿ ಸಮರ್ಥವಾದ ಲೇಖಕ ವರ್ಗ ಸಿದ್ಧವಾಗುತ್ತಿದೆಯೋ ಪ್ರಕಾಶಕ್ಕೆ ಬರುವ ಚಿಹ್ನೆ ಕಾಣುತ್ತದೆ. ಶ್ರೀಗಳು ದಾ. ಸು. ವೈಲಾಯ ಹಾಗೂ ಶೇಷಗಿರಿ ಪ್ರಭು ಇವರ ಬರೆಹಗಳು, ಅದಕ್ಕೂ ಹೆಚ್ಚಾಗಿ ಕವಿತೆಗಳು ಹೃದಯವನ್ನು ಸೂರೆಗೊಳ್ಳುತ್ತವೆ. ಓದುವ ಸಾಹಿತ್ಯದ ಅಂತಸ್ತನ್ನು ಮುದ್ರಣ ಹಾಗೂ ಚಿತ್ರಗಳು ಕಾಯ್ದುಕೊಂಡಿವೆ.

ಮಿಲಾಗ್ರಿಸ್ ಹೈಸ್ಕೂಲಿನ ವಾರ್ಷಿಕಾಂಕ, ೧೯೫೩—

ಕಲ್ಯಾಣಪುರದಲ್ಲಿ ಹಲವಾರು ವರ್ಷಗಳಿಂದ ಮೇಲ್ಮಟ್ಟದ ಹೈಸ್ಕೂಲು ಶಿಕ್ಷಣವನ್ನು ಕೊಡುತ್ತಾ ಬಂದಿರುವ ಮಿಲಾಗ್ರಿಸ್ ಹೈಸ್ಕೂಲು ತನ್ನ ಈ ಸಲದ ವಾರ್ಷಿಕಾಂಕದಲ್ಲೂ ಮೊದಲಿನ ವೈಶಿಷ್ಟ್ಯಗಳನ್ನು ಉಳಿಸಿಕೊಂಡಿರುತ್ತದೆ. ಸಂಚಿಕೆಯು ಸಚಿತ್ರವೂ ಚೆನ್ನಾದ ಬರಹಗಳಿಂದ ಕೂಡಿರುವುದೂ ಆಗಿದೆ. ಇಂಗ್ಲೀಷು, ಕನ್ನಡ ಹಾಗೂ ಹಿಂದೀ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಬರೆದ ಚೊಕ್ಕ ಹಾಗೂ ಚಿಕ್ಕ ಲೇಖನಗಳನ್ನು ಕೆಲವು ಕವಿತೆಗಳನ್ನು ಮತ್ತು ಕತೆಗಳನ್ನು ವಾರ್ಷಿಕಾಂಕದಲ್ಲಿ ಕಾಣುತ್ತೇವೆ. ಕಿರಿಯರ ಸಾಹಿತ್ಯ ಸೇವೆಗೆ ಶ್ರೇಯಸ್ಸನ್ನು ಹಾರೈಸುವ ಎಲ್ಲರಿಗೂ ಇದು ಸಮಾಧಾನಕರ. ವಿಷಯ ವೈವಿಧ್ಯಕ್ಕಿಂತಲೂ ಹೆಚ್ಚಾಗಿ ಶಾಲಾ ಚಟುವಟಿಕೆಗಳ ಪರಿಚಯವನ್ನು ಮಾಡಿಕೊಡಲು ನೋಡಿರುವುದು ಸ್ತುತ್ಯ.

ಸಮಾಚಾರ (ನವೀನ ವಾರಪತ್ರಿಕೆ)

ಮಂಗಳೂರು. ಸಂಪಾದಕರು-ಹಿ. ರಾಮರಾಯ ಮಲ್ಯ. ವಾ। ಚಂದಾ ರೂ. 5-0-0, ಬಿಡಿ ಸಂಚಿಕೆ 0-1-0

ಇದೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ, ಹಿರಿಯ ಮತ್ತು ನುರಿತ ಕಾಂಗ್ರೆಸ್ ಕೆಲಸಗಾರರಾದ ಶ್ರೀ. ಹಿರಿಯಡ್ಕ ರಾಮರಾಯ ಮಲ್ಯರ ಸಂಪಾದಕತ್ವದಲ್ಲಿ ಸ್ವಾತಂತ್ರ್ಯದ ಸಂದರ್ಭ ಹೇಳಲು ಪ್ರಾರಂಭವಾದ ನವೀನ ಸಮಾಚಾರಕ್ಕೆ ಸುಸ್ವಾಗತ.

ಸ್ವಾತಂತ್ರ್ಯ ವಿಶೇಷ ಸಂಚಿಕೆಗಳು:

ನವಭಾರತ ದಿನ ದಿನಪತ್ರಿಕೆ, ಮಂಗಳೂರು, ಕೊಡಗು ವಾರಪತ್ರಿಕೆ, ಮಡಿಕೇರಿ, ಪ್ರಭಾತ ವಾರಪತ್ರಿಕೆ, ಮಂಗಳೂರು ಪ್ರಜಾಮತ ವಾರಪತ್ರಿಕೆ, ಬೆಂಗಳೂರು ಚಿತ್ರಗುಪ್ತ ವಾರಪತ್ರಿಕೆ, ಬೆಂಗಳೂರು. ರಾಷ್ಟ್ರಬಂಧು ವಾರಪತ್ರಿಕೆ, ಮಂಗಳೂರು ವಿಕಾಸ ಮಾಸಪತ್ರಿಕೆ, ಹುಬ್ಬಳ್ಳಿ. ಎಲ್ಲಾ ಸಂಚಿಕೆಗಳೂ ಉತ್ತಮವಾಗಿವೆ.

ಶ್ರೀಕೃಷ್ಣಾರ್ಜುನರ ಮಾತುಗಾರಿಕೆಯ ಹುರುಳನ್ನು ತಿಳಿಯದೆ ಶ್ರೀಕೃಷ್ಣಾಷ್ಟಮಿಯನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಿದರೇನು?

— ಬಲ್ಲಿರಾ? —

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" —ವರಾಹಪುರಾಣ.

"ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

"ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." —ಮಹಾತ್ಮಾ ಗಾಂಧಿ.

"ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು." —ವಾರೆನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯು ಎಲ್ಲೆಲ್ಲಿಯೂ ಮಾರಾಟಕ್ಕೆ ಸಿಗುತ್ತದೆ. ಬೆಲೆ 0—12—0.

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿ. ಪೀ.—ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇನೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಕಳ್ಳಪೇಟೆಯ ಅದ್ಭುತಗಳು! ಅಕಲ್ಪಿತ ಘಟನೆಗಳು!!

ಶವಗಳ ಸಾಗಾಟ

ಕಳ್ಳಪೇಟೆಯ ಮಾಯೆಯನ್ನು ಬೆರಗುಗೊಳಿಸುವ ರೀತಿಯಲ್ಲಿ ಚಿತ್ರಿಸುವ ವಿಚಿತ್ರ ಕಾದಂಬರಿ.

ಬರೆದವರು:- ಸುಬ್ರಾಯ ಕೃಷ್ಣ ಹೆಗಡೆ, ಕಾನಗೋಡು, ಶಿರ್ಸಿ.

ಬ್ಲಾಕ್ ಮಾರ್ಕೆಟ್‌ವಾಲರ ವಿಸ್ಮಯ, ವಿಚಿತ್ರ ಕೃತಿಗಳನ್ನು ಈ ಕೃತಿಯಲ್ಲಿ ಮನಗಾಣುವಿರಿ.

ಓದಲೇ ಬೇಕಾದ, ಓದಿ ಮೋದಗೊಳ್ಳಲೇ ಬೇಕಾದ ನವೀನ ಕಾದಂಬರಿ. ಬೆಲೆ 0—12—0.

ವಿವರವಾದ ಕೆಟಲಾಗಿಗೆ ಬರೆಯಿರಿ:-] [ನವಭಾರತ ಪುಸ್ತಕ ಭಂಡಾರ, ಉಡುಪಿ.

ತಿಂಗಳಿಗೆ ರೂಪಾಯಿ 200ರಿಂದ ರೂ 500 ಸಂಪಾದಿಸಿರಿ

ನಮ್ಮಲ್ಲಿ ದೊರೆಯುವ ಹೊಸ ನಮೂನೆಯ ಬಟ್ಟೆಗಳು, ಸಿಲ್ಕ್ ಸೀರೆಗಳು, ನಯ ರೋಮದ ಬ್ಲೇಂಕೆಟ್ಟುಗಳನ್ನು ಬಿಡಿ ಸಮಯದಲ್ಲಿ ಮಾರಾಟಮಾಡಲು ಉದಾರ ಶರ್ತಗಳಿಂದ ಏಜಂಟರು ಬೇಕಾಗಿದ್ದಾರೆ. ಉತ್ಸಾಹಿಗಳೆಲ್ಲರಿಗೂ ಸುವರ್ಣಸಂಧಿ. ಉಚಿತ ಸ್ಯಾಂಪಲ್ಸುಗಳಿಗೂ ಶರ್ತಗಳಿಗೂ ಮಾಹಿತಿ ಪತ್ರಕ್ಕೂ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಾಗಲೀ ಹಿಂದೀಯಲ್ಲಾಗಲೀ ಮಾಡಿರಿ.

International Industrial Corporation (India)
New Market. Karol Bagh,
NEW DELHI.



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು.

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ.

ಬೇಗನೆ ಬರೆಯಿರಿ:

American Swiss Watch Suppliers.
Putlighar (N. U.) Amritsar.

ಅಂದು ಭಾನುವಾರ. ಮಧ್ಯಾಹ್ನ ಹನ್ನೆರಡು ಗಂಟೆ. ನನ್ನ ಔಷಧಾಲಯದ ಕೆಲಸ ಮುಗಿಸಿಕೊಂಡು ಮನೆಗೆ ಹೋಗಲು ಸಿದ್ಧನಾಗಿ ಕೂತಿದ್ದೆ. ಹೊರಗೆ ಧಾರಾಕಾರವಾಗಿ ಮಳೆ ಹುಯ್ಯುತಿತ್ತು.

ಆಗ ಸುಮಾರು ಮೂವತ್ತು ವರ್ಷದ ಯುವಕನೊಬ್ಬನನ್ನು ಹಿಡಿದು ಅವನ ತಾಯಿಯೂ ಹೆಂಡತಿಯೂ ಒಳಗೆ ಬಂದರು. ಯುವಕನು ತೀರ ಸೋತವನಂತೆ ಬೆಂಚಿನ ಮೇಲೆ ನರಳುತ್ತ ಒರಗಿದನು. ಏನು ಬೇಕಿತ್ತಮ್ಮ, ಎಂದು ಹೆಂಗಸು ಮಕ್ಕಳನ್ನು ನಾನು ಕೇಳಿದೆ. ಹೆಂಡತಿಯು ಅಳಲಾರಂಭಿಸಿದಳು. ಮುದುಕಿಯು ಮಗನ ಬೇನೆಯನ್ನು ತುಂಬ ಕಾತರದಿಂದ ಹೀಗೆ ವರ್ಣಿಸಿದಳು: ಡಾಕ್ಟರೇ ಹೇಗಾದರೂ ಮಾಡಿ ಈ ನನ್ನ ಒಬ್ಬನೇ ಮಗನನ್ನು ಉಳಿಸಿರಿ. ನಿಮಗೆ ಪುಣ್ಯ ಬರುತ್ತದೆ. ನಾಲ್ಕಾರು ದಿನಗಳಾದವು ಅಷ್ಟೆ ಅವನು ಕಾಯಿಲೆಯಾಗಿ. ಮೊದಲು ಮೈ ಬಿಸಿಯಾಯಿತು. ಕೆಮ್ಮು ಮೊದಲಿನಿಂದಲೆ ಇತ್ತು. ಈಗ ಎರಡು ದಿನಗಳಿಂದ ಜ್ವರ ವಿಶೇಷವಿಲ್ಲ. ಆದರೆ ಕೆಮ್ಮು ಒಮ್ಮೆಲೆ ಹೆಚ್ಚಾಗಿದೆ. ಕಫ ಹೋಗುವುದಕ್ಕಂತೂ ಲೆಕ್ಕವೇ ಇಲ್ಲ. ಇವತ್ತು ಬೆಳಿಗ್ಗೆ ಕೆಮ್ಮಿನ ಜೊತೆಗೆ ಎರಡು ಸಲ ಅರ್ಧ ಕುಡ್ತೆಯಷ್ಟು ರಕ್ತ ಕಾರಿ ಹೋಯಿತು. ಜ್ವರಬಂದ ಎರಡನೆ ಮೂರನೆ ದಿನ ಹತ್ತು ಹತ್ತು ರೂಪಾಯಿಗಳ ಎರಡು ಇಂಜೆಕ್ಷನ್ ಮಾಡಿದರು. ಏನೂ ಸಮಾಧಾನವಿಲ್ಲ. ಡಾಕ್ಟರೇ! ರಕ್ತವಾಂತಿಯಾದಾಗಿನಿಂದ ಉಬ್ಬಸ ಬಂದಂತಾಗಿ ಗಾಬರಿ ಮಾಡುತಿದ್ದಾನೆ. ಎಲ್ಲೋ ನಿಮ್ಮ ಹೆಸರು ಕೇಳಿದರು. ದಮ್ಮಯ್ಯ ನಿಮ್ಮ ಮಗನೆಂದೇ ತಿಳಿದು ಅವನನ್ನು ಬದುಕಿಸಬೇಕು....

ನಾನು ಆ ಮೂವರನ್ನು ಒಂದೆ-ಸಲ ಸ್ಥೂಲವಾಗಿ ಪರಿಶೀಲಿಸಿದೆ. ಬಟ್ಟೆಬರೆಗಳಿಂದ ಮಧ್ಯಮ ವರ್ಗದ ಬಡವರೆಂದು ತೋರಿತು. ಕೂಡಲೇ ರೋಗಿಯನ್ನು ಪರೀಕ್ಷಿಸಲು ಮೊದಲು ಮಾಡಿದೆ. ಮೊಟ್ಟಮೊದಲು ಅವನ ನಾಡಿಯನ್ನೂ ಹೃದಯವನ್ನೂ ಪರೀಕ್ಷಿಸಿದೆ. ನನಗೆ ಒಮ್ಮೆಲೆ ಆಘಾತವಾದಂತಾಯಿತು. ರೋಗಿಯ ಹೃದಯದ ಒಳ ಬಾಗಿಲುಗಳು ಸಡಿಲುಗೊಂಡಿದ್ದುವು. ನಾಡಿಯು ತುಂಬ ತುಂಬ ಬೇಕೋ ಬೇಡವೋ, ಎಂದು ಮಂದವಾಗಿ ಚಲಿಸುತ್ತಿತ್ತು. ಪುಪ್ಪುಸಗಳನ್ನು ನಿರಾಸೆಯಿಂದ ಒಮ್ಮೆ ಪರೀಕ್ಷಿಸಿಬಿಟ್ಟೆ. ಮುಕ್ಕಾಲು ಭಾಗವೆಲ್ಲ ನಿಶ್ಶಬ್ದವಾಗಿ ಕಾಲು ಭಾಗದಲ್ಲಿ ಮಾತ್ರ ತೀರ ಅಸ್ಪಷ್ಟವಾದ ಉಸಿರು ಕೇಳುತ್ತಿತ್ತು. ನಾನು ಆಶ್ಚರ್ಯದಿಂದ 'ಏನಮ್ಮ ಕಾಯಿಲೆಯಾಗಿ ನಾಲ್ಕಾರೇ ದಿನವಾಯಿತ್ತೇ?' ಎಂದು ಕೇಳಿದ್ದಕ್ಕೆ ಆ ದುರ್ದೈವಿ ತಾಯಿಯಿಂದ ನಿಶ್ಚಿತ ಸ್ವರದಲ್ಲಿ ಹೌದೆಂದು ಉತ್ತರ ಬಂತು.

ಅರ್ಥಾತ್ ನಾನು ಆ ರೋಗಿಗೆ ಔಷಧವನ್ನೇನೂ ಕೊಡಲಿಲ್ಲ. ಅವನ ಬಾಳು ಇನ್ನು ಕೆಲವು ಗಂಟೆಗಳಿಗಾಗಿ ಮಾತ್ರ ಕಾದಿತ್ತು. ಆ ಹೆಂಗಸರಿಗೆ ಏನೇನೋ ಸಮಾಧಾನ ಹೇಳಿ, ಆದರೂ ಶೀಘ್ರ ಗಂಡಾಂತರದ ಸೂಚನೆಯನ್ನೂ ಅಸ್ಪಷ್ಟವಾಗಿ ಕೊಟ್ಟು ಕಳಿಸಬೇಕಾದರೆ ಅವರ ಗೋಳಾಟದಿಂದ ನನ್ನ ಕಂಣುಗಳಲ್ಲಿ ನೀರಾಡಿತು. ಮರುದಿನವೇ ಆ ಹತಭಾಗ್ಯೆಯರ ಏಕೈಕ ಆಧಾರವಾದ ಯುವಕನು ತೀರಿಕೊಂಡ ಸುದ್ದಿಯೂ ಬಂತು!

ಮೇಲಿನ ಸಂಗತಿಯನ್ನು ಒಂದು ಕಥೆಯೆಂದು ನಾನು ಬರೆಯಲಿಲ್ಲ. ನನ್ನ ಪ್ರತ್ಯಕ್ಷ ಅನುಭವದ ನಿಜ ಸಂಗತಿಯನ್ನೆ ವರ್ಣಿಸಿದ್ದೇನೆ. ಆದರೆ ನಮ್ಮ ಸಮಾಜದಲ್ಲಿ ಇಂತಹ ಸಂಗತಿಗಳು ಅಪರೂಪವಲ್ಲ, ಎಂಬುದನ್ನು ತಿಳಿಸಿ ಎಚ್ಚರಿಸಲಿಕ್ಕಾಗಿಯೇ ಈ ಲೇಖನವನ್ನು ಬರೆಯುತ್ತಿದ್ದೇನೆ. ರೋಗಿಯ ಅಜ್ಞಾನದಿಂದಲೋ ಬಡತನದಿಂದಲೋ ಎಷ್ಟೋ ಸಲ ಕೈಮೀರಿದ ಮೇಲೆ ವೈದ್ಯರ ಬಳಿಗೆ ಹೋಗುವವರ ಸಂಖ್ಯೆ ನಮ್ಮಲ್ಲಿ ಸಹಸ್ರಾವಧಿಯಿದೆ. ಮತ್ತೆ ಇಂತಹ ಅಂತ್ಯಾವಸ್ಥೆಯಲ್ಲಿ ಚಿಕಿತ್ಸೆ ಮಾಡುವ ಬಗ್ಗೆ ವೈದ್ಯರನ್ನು ಆಯುರ್ವೇದವನ್ನೂ ನಿಂದಿಸುವವರೂ ಬೇಕಾದಷ್ಟು [illegible]

ಕೈಮೀರಿದ ರೋಗಿಗಳು

ಡಾ। ಎಸ್. ಗೋಪಾಲಕೃಷ್ಣರಾವ್, 'ಕಲಿಯುಗ, ಸಂಪಾದಕರು.

ಇದರಲ್ಲಿ ಒಂದು ನಿರುಪಾಯದ ಸಂಗತಿಯೆಂದರೆ ಮೇಲೆ ಉದಾಹರಿಸಿದ ಯುವಕನಂತೆ ಕೆಲವು ಸಲ ರೋಗವು ಗುಪ್ತಗಾಮಿಯಾಗಿಯೆ ಬೆಳೆಯುತ್ತದೆ. ಹೊರಗೆ ಉಪದ್ರವಗಳಾವವೂ ತೋರುವುದಿಲ್ಲ. ವ್ಯಕ್ತಿಯು ನಿತ್ಯ ವ್ಯವಸಾಯದಲ್ಲಿ ದುಡಿಯುತ್ತಲೇ ಇರುತ್ತಾನೆ. ಕೊನೆಗೆ ಕಡೆ ಬಂದಾಗಲೆ, ಒಳಗೆ ಎಲ್ಲವನ್ನೂ ಎಡೆಬಿಡದೆ ವ್ಯಾಪಿಸಿದ ವ್ಯಾಧಿಯು ಒಮ್ಮೆಲೆ ತನ್ನ ಗಂಡಾಂತರ-ಚಿಹ್ನೆಗಳನ್ನು ತೋರಗೊಡುತ್ತದೆ. ಕೈಮೀರಿ ಹೋಗಿರುತ್ತದೆ. ಎಂತಹ ಕುಶಲನಾದ ಧನ್ವಂತರಿಗೂ ಏನನ್ನೂ ಮಾಡಲು ಸಾಧ್ಯವಾಗಿರುವುದಿಲ್ಲ.

ಆದರೆ ಹಾಗೆ ಅಜ್ಞಾತವಾಗಿ ಬೆಳೆದ ಬೇನೆಗಳಿಗಿಂತ ರೋಗಿಗಳ ತಿಳಿಗೇಡಿತನದಿಂದ ಸಕಲದಲ್ಲಿ ಸದುಪಚಾರ ಪಥ್ಯಪಾನಗಳನ್ನು ಅಲಕ್ಷಿಸುವುದರಿಂದ ಬಲಗೊಳ್ಳುವ ಬೇನೆಗಳೆ ಹೆಚ್ಚು. ಆ ಅಲಕ್ಷ್ಯಕ್ಕೆ 'ನನ್ನೇನು ಮಾಡುತ್ತದೆ. ಈ ಚಿಲ್ಲರೆ ಬೇನೆ?' ಎಂಬ ನಿಶ್ಚಿಂತೆಯಿಂದ ಗರ್ವವು ಕಾರಣವಾಗಿರಬಹುದು. 'ನಾಳೆ ನಾಳೆ,' ಎಂದು ವೈದ್ಯರನ್ನು ಕಾಣುವ ದಿನವನ್ನು ಮುಂದೂಡುವ ಆಲಸ್ಯ ಸ್ವಭಾವವೂ ಕಾರಣವಾಗಿರಬಹುದು. 'ಇದ್ದ ಗಳಿಕೆ ಕುಟುಂಬದ ಹೊಟ್ಟೆಗೇ ಸಾಲದು, ಇನ್ನು ವೈದ್ಯರಿಗೆಲ್ಲಿಂದ ಕೊಡಲಿ?' ಎಂಬ ದಾರುಣ ದಾರಿದ್ರ್ಯವೂ ಕಾರಣವಾಗಿರಬಹುದು. ಮತ್ತು ನಿರಂತರವಾಗಿ ಒಳಗೇ ಕುದಿಯುವ ಜ್ವರ, ಯಾವ ಮದ್ದಿಗೂ ಮಣಿಯದ ಸೂಸುಕೆಮ್ಮು, ಎಡೆಬಿಡದೆ ಕಾಡುತ್ತಿರುವ ತಲೆನೋವು. ಕುಸುಕ್ರಮವಾದರೂ ತೇಕುವುದು, ಯಾವಾಗಲೂ ದಣಿದಂತೆನಿಸುವುದು, ಮುಂತಾದವುಗಳಲ್ಲಿ ಒಂದೊಂದೇ ಪೀಡೆಯು ವಾರಗಟ್ಟಲೆ ತಿಂಗಳುಗಟ್ಟಲೆ ತೊಂದರೆಪಡಿಸುತ್ತಿದ್ದಾಗ ಅದರ ಹಿನ್ನೆಲೆಯಲ್ಲಿ ಯಾವುದೇ ಭೀಕರ ವ್ಯಾಧಿಯು ನೆಲೆಯೂರುತ್ತಿದೆ, ಎಂಬ ಅರಿವು ಬಹುತರರಿಗೆ ಇಲ್ಲದಿರುವುದೂ ಒಂದು ಕಾರಣವಾಗಿರಬಹುದು.

ಇದೆಲ್ಲಕ್ಕಿಂತ ನಾಚಿಕೆಗೇಡಾದ ಕಾರಣವೆಂದರೆ ಡಾಕ್ಟರರು ರೋಗಿಯು ಬಯಸುವ ತತ್ಕಾಲಿಕ ಸುಖಕ್ಕಾಗಿ ಚುಚ್ಚುಮದ್ದುಗಳಿಂದ ರೋಗ ಲಕ್ಷಣಗಳನ್ನಷ್ಟೆ ದೇಹಗರ್ಭದಲ್ಲಿ ಒತ್ತಿಡುವುದೂ ರೋಗ ಮೂಲವನ್ನು ಕೊನೆಯವರೆಗೂ ಅಲಕ್ಷಿಸುವುದೂ ಆಗಿದೆ. ದಣಿದ ನರತಂತುಗಳಿಗೆ ಪೋಷಣೆಯನ್ನು ಕೊಡದೆ ತಲೆನೋವಿಗೆ ಬರಿಯ ಆಸ್ಪಿರಿನ್, ಕ್ಯಾಫೀನ್ ಗಳಂತಹ ಮಾದಕಗಳನ್ನು ಕೊಡುತ್ತ ಹೋದರೆ ಕೊನೆಗೆ ಅದು ಅಸಾಧ್ಯ ರಕ್ತಭಾರ(ಬ್ಲಡ್ ಪ್ರೆಶರ್)ದ ರೋಗವೆಂದರೆ ಆಶ್ಚರ್ಯವೇನು? ನಿರಂತರವಾದ ಸೂಸುಗೆಮ್ಮಿನ ಮರೆಯಲ್ಲಿ, ಕೊಳೆಯುತ್ತಿರುವ ಶ್ವಾಸಕೋಶಗಳನ್ನು ಗಮನಿಸದೆ ಬರಿಯ 'ಎಕ್ಸ್‌ಪೆಕ್ಟೊರಂಟ್ಸ್' (ಕಫನಿಸ್ಸಾರಕ)ಗಳನ್ನಾಗಲಿ ಗಂಟಲಿಗೆ ತಾತ್ಕಾಲಿಕ ಶಮನಕ್ಕೆಂದು 'ಪಿಲ್ಸ್'ಗಳನ್ನು ಚೀಪಿಸಿದರಾಗಲಿ, ಕೊನೆಗೊಮ್ಮೆ ಅದು ಅಡಗಿಕೊಂಡಿದ್ದ ಕ್ಷಯವೆಂದು ಬಯಲಿಗೆ ಬಂದು ಬಡರೋಗಿಯು ಹರಣ ಹಾರಿದರೆ ಆಶ್ಚರ್ಯವೇನು?

ಹಾಗಾದರೆ ಇದಕ್ಕುಪಾಯವೇನು? ಚೈನಾ ದೇಶದಲ್ಲಿ ಪುರಾತನ ಕಾಲದಿಂದ ನಡೆದು ಬಂದ ಒಂದು ವಾಡಿಕೆಯಿದೆ, ಅದನ್ನನುಸರಿಸಿ ಅಲ್ಲಿ ಪ್ರತಿಯೊಂದು ಮನೆಯವರೂ ತಮ್ಮ ತಮ್ಮ ವೈದ್ಯರಿಗೆ ಸ್ವಾಸ್ಥ್ಯವೇತನವೆಂದು ವಾರ್ಷಿಕ ವಂತಿಗೆಯನ್ನು ಕೊಡುವರು, ಮನೆಯವರೆಲ್ಲ ಆರೋಗ್ಯವಾಗಿರುವವರೆಗೆ ವೈದ್ಯರಿಗೆ ಅದು ಸಿಕ್ಕುವುದು. ಯಾರಿಗಾದರೂ ಕಾಯಿಲೆಯಾಗಿಬಿಟ್ಟರೆ ಆ ಮನೆಯ ವಂತಿಗೆಯು ತಡೆಯಲ್ಪಡುವುದು. ಆದ್ದರಿಂದ ತನ್ನ ಕ್ಷೇತ್ರದಲ್ಲಿಯ ಜನರ ಆರೋಗ್ಯವು ಭದ್ರವಾಗಿ ಉಳಿಯುವಂತೆ ಪ್ರತಿಯೊಬ್ಬ ವೈದ್ಯನೂ ಪ್ರಯತ್ನ ಮಾಡುವನು. ಕಾಲಕಾಲಕ್ಕೆ ಮನೆಮನೆಗೆ ಸಂದರ್ಶನವಿತ್ತು ಎಲ್ಲ ವ್ಯಕ್ತಿಗಳ ಆರೋಗ್ಯ ಪರೀಕ್ಷೆ ಮಾಡುವನು. ಯಾರಿಗಾದರೂ ದೇಹದಲ್ಲಿ ಸೂಕ್ಷ್ಮವಾಗಿ ಯಾವುದಾದರೂ ರೋಗವು ಚಿಗುರುವುದು ಕಂಡುಬಂದರೆ ಒಡನೆ ಅದನ್ನು ನಿರ್ಮೂಲಗೊಳಿಸುವ ಚಿಕಿತ್ಸಾ ಸೂಚನೆಗಳನ್ನು ಕೊಡುವನು.

ಚೈನಾದೇಶದ ಆ ವಾಡಿಕೆಯನ್ನು ಭಾರತದವರೂ ಎತ್ತಿಕೊಳ್ಳುವುದರಿಂದ ಎಷ್ಟು ಒಳ್ಳೆಯದಾಗುವುದು, ಆಗ ರೋಗಿಯ ಸಾಂಪತ್ತಿಕ ಸ್ಥಿತಿಯು ಹೇಗೆಯೆ ಇರಲಿ, ರೋಗವು ಯಾವುದೇ ಆಗಿರಲಿ, ರೋಗವು ಯಾವುದೇ ಆಗಿರಲಿ ಒಂದು ಮದ್ದನ್ನು ಚುಚ್ಚಿ ಹತ್ತು ರೂಪಾಯಿಗಳನ್ನು ಕಿತ್ತುಕೊಂಡು ತನ್ನ ಕರ್ತವ್ಯವು ಮುಗಿಯಿತೆಂದು ತಿಳಿಯುವ ಡಾಕ್ಟರರ ಸಂಖ್ಯೆ ಕಡಿಮೆಯಾಗುವುದು. ದುರ್ದೈವದಿಂದ ಅಂತಹ ಧನಪಿಪಾಸು ವೈದ್ಯ ಡಾಕ್ಟರರ ಸಂಖ್ಯೆ ಇತ್ತೀಚೆ ಭೀಕರವಾಗಿ ಬೆಳೆಯುತ್ತಿದೆ.

ಈ ಪರಿಸ್ಥಿತಿಯು ಹೋಗಬೇಕು. ಆರೋಗ್ಯ ಪರೀಕ್ಷಕರೆಂಬ ಒಂದು ವೈದ್ಯರ ತಂಡವನ್ನೆ ಸರಕಾರವು ನಿಯಮಿಸಬೇಕು. ಅವರಿಗೆ ಕೆಲವು ಕಾರ್ಯಕ್ಷೇತ್ರಗಳನ್ನು ವಿಂಗಡಿಸಿಕೊಟ್ಟು ಆ ಕ್ಷೇತ್ರದಲ್ಲಿಯ ಎಲ್ಲ ವ್ಯಕ್ತಿಗಳ ಆರೋಗ್ಯವನ್ನು ಆಗಾಗ್ಗೆ ಪರೀಕ್ಷಿಸಿ ಅವಶ್ಯವೆನಿಸಿದಾಗ ರೋಗ ನಿರೋಧಕ ಕ್ರಮಗಳನ್ನು ಕೈಕೊಳ್ಳುವ ಹೊಣೆಯನ್ನು ವಹಿಸಿ ಕೊಡಬೇಕು. ಜನರು ಕೂಡ ರೋಗಿಗಳಾಗಿರುವುದು ಒಂದು ಘೋರವಾದ ಕುಟುಂಬ ದ್ರೋಹ, ರಾಷ್ಟ್ರದ್ರೋಹ, ದೇವದ್ರೋಹದ ಪಾಪವೆಂಬ ಭಾವನೆಯನ್ನಿಟ್ಟುಕೊಳ್ಳಬೇಕು. ಕಾಲ ಕಾಲಕ್ಕೆ ಪ್ರಕೃತಿ ಪರೀಕ್ಷೆ ಮಾಡಿಸಿ ಕೊಳ್ಳಬೇಕು. ಯಾವುದೇ ಬೇನೆಯ ಸಸಿಯನ್ನು ಎಳತಿನಲ್ಲಿ ಚಿವುಟಿ ಒಗೆಯುವ ಪ್ರತಿಜ್ಞೆ ಮಾಡಬೇಕು. ಹಾಗಾದರೆ ಕೈಮೀರಿದ ರೋಗಿಗಳು ಕುಟುಂಬದವರನ್ನು ಕೈಬಿಟ್ಟು ಅನಾಥರನ್ನಾಗಿಸಿ ಕಾಲವಶರಾಗುವುದು ತಪ್ಪುವುದು.

[೨ನೇ ಪುಟದಿಂದ]

ಗಳು ಮಾತ್ರ ನಮ್ಮ ದೇಶದಲ್ಲಿ ಕಬ್ಬು ಬೆಳೆಯುತ್ತವೆಂದೂ ಇವನ್ನು ಸುಲಭದಲ್ಲಿಯೇ ಇಮ್ಮಡಿ ಮಾಡಲು ಸಾಧ್ಯವೆಂದೂ ಸಂಶೋಧಕರ ಅಭಿಪ್ರಾಯ. [illegible] ತಿಸುವಳಿಕೆ ಹೆಚ್ಚಿದರೆ, ಉತ್ಪಾದನೆಯನ್ನು ಇಮ್ಮಡಿ ಮಾಡಬಹುದು. ಇದಲ್ಲದೆ ಭಾರತದಲ್ಲಿ ಕಬ್ಬಿನ ಬೆಲೆಯು ತುಂಬ ಹೆಚ್ಚಿರುತ್ತದೆ. ಆದಕಾರಣ ಎಕ್ರೆಗೆ ೧೦ ಟನ್ನು ಕಬ್ಬು ಬೆಳೆದರೂ ಸಾಕು, ರೈತನಿಗೆ ತೃಪ್ತಿಯಾಗುತ್ತದೆ. ಇನ್ನೊಂದು ಮುಖ್ಯ ದೋಷ-ನಮ್ಮಲ್ಲಿ ಗುಣಕ್ಕೆ ಬೆಲೆ ಇಲ್ಲದಿರುವುದು. ನಾವು ಕಬ್ಬಿನ ಮೂಟೆಯ ತೂಕ ನೋಡುತ್ತೇವೆಯೇ ಹೊರತು ಅದರ ಗುಣವನ್ನಲ್ಲ. ದಪ್ಪ ಜಾತಿಯ ಕಬ್ಬಿನಲ್ಲಿ ಶರ್ಕರಾಂಶ ಬಹಳ ಕಡಿಮೆ ಆದರೆ ಇದಕ್ಕೂ ಶ್ರೇಷ್ಠ ಜಾತಿಯ ಕಬ್ಬಿಗೂ ಬೆಲೆಯಲ್ಲಿ ವ್ಯತ್ಯಾಸವಿರುವುದಿಲ್ಲ. ದಪ್ಪ ಕಬ್ಬು ಬೆಳೆಯುವ ಬಯಕೆಯಿಂದ ರೈತನು ಕೃತಕ ಗೊಬ್ಬರಗಳನ್ನು ಉಪಯೋಗಿಸಿ, ಅಧಿಕ ಹಣವನ್ನು ಪಡೆಯುವುದುಂಟು. ಈಗಿನ ಪದ್ಧತಿಯನ್ನು ಪರಿಷ್ಕರಿಸಿ, ಸಿಪ್ಪೆ ತುಂಬಿದ ಕಬ್ಬಿನ ಬದಲು, ಸಕ್ಕರೆ ಉತ್ಪಾದಿಸುವ ಕಬ್ಬಿಗೆ ಮಾನ್ಯತೆ ಕೊಡುವುದವಶ್ಯ. ಇದರಿಂದ ಸಕ್ಕರೆಯ ಉತ್ಪಾದನೆ ತನ್ನಿಂದ ತಾನೆ ಹೆಚ್ಚಿಕೊಂಡು, ನಮ್ಮೆಲ್ಲರ ಬಾಯಿ ಸಿಹಿಯಾಗುತ್ತದೆ.

ದಿ ವಿಜಯ ಬೇಂಕ್, ಲಿಮಿಟೆಡ್

ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	. .	ರೂ. 20,10,000
ತೆತ್ತ ಪಾಲು ಭಂಡವಾಳ	. .	„ 8,77,860
ಕ್ಷೇಮ ನಿಧಿ	. .	„ 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 21 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ

ಇವರ
ನವಜೀವಾತು
ಎಂಬ
ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರಪ್ರವರಸಾಯನ.

ಪೆಟ್ಟಿನ ಮಾಲಿಕರು— ಡಾ। ಯಂ. ಸಿ. ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಶಾಖೆ:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೩—೯—೫೩ರಿಂದ ತಾ. ೯—೯—೫೩ರ ವರೆಗೆ.

ಮೇಷ—ಧನಪತಿಯಾದ ಶುಕ್ರನೊಬ್ಬನನ್ನುಳಿದು ಮಿಕ್ಕೆಲ್ಲಾ ಗ್ರಹರೂ ಇಂದು ನಿಮಗೆ ಪ್ರತಿಕೂಲರಾಗಿರುವುದರಿಂದ ಯಾವ ಭಾಗದಲ್ಲಿ ನೋಡಿದರೂ ನಿರಾಶೆಯೇ ನಿಮಗೆ ಮುಂದಾಗಿ ತೋಳೆಯುಲಿವೆ. ಗೃಹತಾಪತ್ರಯಗಳಿಂದಾಗಿ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿ ಕಾಣಿಸುವದು, ಉಷ್ಣ ಪ್ರಕೋಪದಿಂದ ನಿಮ್ಮ ಆರೋಗ್ಯವು ಕೆಡುವ ಸಂಭವವಿದೆ. ಶತ್ರು ಜನರಿಂದ ಹಲವಾರು ತರದ ಪೀಡೆಗಳುಂಟಾಗುವವು. ಸ್ಥಾನ ಚಲನೆಯ ಯೋಗವಿದೆ. ವಾರದ ಆದ್ಯಂತ ದಿನಗಳು ಇದ್ದುದರಲ್ಲಿ ಕ್ಷೇಮಕರವಿದೆ.

ವೃಷಭ—ಇಂದಿನ ನಿಮ್ಮ ಅದೃಷ್ಟವು ಬಹ್ವಂಶ ಉತ್ತಮವಾಗಿರುವದು. ಅನೇಕ ಕಾಲದಿಂದ ಸಂಗ್ರಹಿಸಿಟ್ಟಿದ್ದ ನಿಮ್ಮ ಸಂಕಲ್ಪಗಳಿಂದು ಕಾರ್ಯರೂಪಕ್ಕೆ ಬರಲಿವೆ. ಜನತೆಯ ಸಹಕಾರ ಬಂಧು ಮಿತ್ರರ ಬೆಂಬಲ ಇವುಗಳಿಂದಾಗಿ ಸರ್ವತ್ರ ನೀವು ವಿಜಯಿಗಳಾಗಲಿರುವಿರಿ. ಕೆಲವೊಮ್ಮೆ ದುರ್ಜನರ ಸಹವಾಸದಿಂದಾಗಿ ಜನಾಪವಾದ ಕಷ್ಟ ನಷ್ಟಗಳಿಗೆ ಗುರಿಯಾಗುವ ಯೋಗವಿದೆ. ಕೋರ್ಟು ಕಛೇರಿಗಳಲ್ಲಿ ನಷ್ಟ ವ್ಯವಹಾರಕ್ಕೀಕಾಲವು ಉಚಿತವಲ್ಲವು ತಾ 4, 5, 6 ಅತ್ಯುತ್ತಮ ದಿನಗಳಾಗಿವೆ.

ಮಿಥುನ—ಅಪ್ರತಿಮ ಸಾಹಸಿಗಳಾದ ನಿಮ್ಮ ಕಾರ್ಯಕಲಾಪಗಳಿಂದು ಬಹುಮಟ್ಟಿಗೆ ಸಫಲಗಳಾಗುವವು ನಿಮ್ಮ ಕರ್ತವ್ಯ ದಕ್ಷತೆಯನ್ನು ಕಂಡ ವಿಪಕ್ಷೀಯರು ನಿಮ್ಮ ಸವಿಾಪ ಸೋಂಕಲಾರರು, ನೀಚ ಜನರಿಂದ ಧನಲಾಭವಾಗಲಿದೆ. ಮಾತ್ರವಲ್ಲ ನಿರುದ್ಯೋಗಿಗಳು ಕೂಡ ಇಂದು ಸದುದ್ಯಮದಲ್ಲಿ ಕಾಲ ಕಳೆವರು. ಕೋರ್ಟು ಕಛೇರಿಗಳಲ್ಲಿನ ಕಾರ್ಯಗಳಲ್ಲಿ ವಿಜಯಶ್ರೀಯು ನಿಮ್ಮ ಭಾಗಕ್ಕೆ ಕಟ್ಟಿಟ್ಟ ಗಂಟನಂತಿರುವುದು. ಆದರೆ ಗೃಹತಾಪತ್ರಯ ಸ್ಥಾನ ಚಲನೆ ಬಂಧು ವರ್ಗದವರ ವಿರಹದಿಂದ ಸಂತಪ್ತರಾದ ನಿಮಗೆ ತಾ, 3, 7, 8 ಸ್ವಲ್ಪ ಉತ್ತಮವಿರುವುದು.

ಕರ್ಕಟ—ಈ ವಾರದಲ್ಲಿ ನಿಮಗೆ ಆಯಕ್ಕಿಂತ ಅಧಿಕ ವ್ಯಯವಾಗುವ ಯೋಗವಿದೆ. ನಿಮ್ಮ ಭಾಗ್ಯಪತಿಯಾದ ಬೃಹಸ್ಪತಿಯು ಇಂದು ವ್ಯಯಸ್ಥಾನಕ್ಕೆ ಬಂದಿರುವುದರಿಂದ ನಿಮ್ಮ ದುಡಿಮೆಯ ಬಹ್ವಂಶವು ಸತ್ಕಾರ್ಯಗಳ ಸಲುವಾಗಿ ವಿನಿಯೋಗವಾಗಲಿದೆ, ಚಂಚಲವಾದ ನಿಮ್ಮ ಮನಸ್ಸು ಆಪ್ತ ಜನರಲ್ಲೂ ಅವಿಶ್ವಾಸವನ್ನು ಹುಟ್ಟಿಸುವದು. ಕಫ ವಾತಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ. ಶ್ರಮಜೀವಿಗಳಿಗೀವಾರವು ಶ್ರೇಯಸ್ಕರವಲ್ಲವು. ತಾ, 4, 5, 6, 9 ಈ 4 ದಿನಗಳು ಇದ್ದುದರಲ್ಲಿ ಉತ್ತಮ.

ಸಿಂಹ—ನಿಮ್ಮ ಜನ್ಮ ರಾಶಿಯಲ್ಲಿದ್ದ ರವಿ ಕುಜ ಬುಧರನ್ನು ಹೊರತಾಗಿ ಮಿಕ್ಕೆಲ್ಲಾ ಅನುಗ್ರಹವೂ ನಿಮ್ಮ ಮೇಲಿರುವುದರಿಂದ ಈ ವಾರವು ನಿಮ್ಮ ಸ್ವಂತ ಆರೋಗ್ಯದ ಮಟ್ಟಿಗೆ ಅಷ್ಟೊಂದು ಉತ್ತಮವಿರಲಾರದು. ಧೈರ್ಯ ಸಾಹಸ ಯುಕ್ತಿ ಪ್ರಯುಕ್ತಿಗಳಿಂದ ಕಾರ್ಯಸಾಧನೆ ಮಾಡುವಿರಿ. ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವು ಲಭಿಸಲಿದೆ. ಜನತೆಯ ಬೆಂಬಲವು ಚೆನ್ನಾಗಿರುವುದರಿಂದ ತಾ, 3, 7, 8 ಈ ದಿನಗಳಲ್ಲಿ ವಿಜಯವನ್ನು ಪಡೆವಿರಿ.

ಕನ್ಯಾ—ನಿಮ್ಮ ದುರ್ದೈವವಿಂದು ಬಲವಾಗಿ ಕಾಡುತ್ತಿರುವುದು. ದಿನವಿಡೀ ಶ್ರಮವಹಿಸಿದರೂ ದಿನಾಂತ್ಯದಲ್ಲಿ ಕೈಬರಿದಾಗುವದು. ನಿಮ್ಮ ವ್ಯಯಸ್ಥಾನದಲ್ಲಿ ಗ್ರಹಸ್ಥಿಯರ ಸಮಾಗಮವಾಗಿರುವುದರಿಂದ ನಾನಾ ತೆರನಾದ ಖರ್ಚುಗಳು ಪ್ರಾಪ್ತವಾಗುವವು. ರಾಜಕೀಯ ರಂಗದಲ್ಲಿ ಪ್ರತಿಪಕ್ಷಗಳಿಂದ ಪರಾಭವ ಹೊಂದುವಿರಿ. ಹಿಂದಿನ ಸ್ಥಾನಮಾನಗಳು ಇಂದು ಕಾಣಿಸಲಾರವು. ತಾ. 7, 8 ಹೊರತಾಗಿ ಉಳಿದ ದಿನಗಳಲ್ಲಿ ಹೆಚ್ಚಿನ ಅನಿಷ್ಟವುಂಟಾಗದು.

ತುಲಾ—ಇಂದೀಗ ನಿಮ್ಮ ಭಾಗ್ಯೋದಯವಾಗಿರುವುದು ನಿಮ್ಮ ಲಾಭಸ್ಥಾನದಲ್ಲಿ ಧನಭಾಗ್ಯಲಾಭ ಪತಿಗಳು ಕೂಡಿರುವುದರಿಂದ ಹಿಂದಿನ ಕಾಲಕಡೆಗಳಿಂದ ಪಾರಾಗುವುದಲ್ಲದೆ ಕೈಯಲ್ಲಿ ಬೇಕಷ್ಟು ಧನವನ್ನೂ ಸಂಗ್ರಹಿಸಿಟ್ಟುಕೊಳ್ಳುವಿರಿ. ಪ್ರತಿಯೊಂದು ಯೋಗ್ಯ ವ್ಯವಹಾರಗಳಲ್ಲೂ ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲಪ್ರಾಪ್ತಿಯಾಗುವದು ಆರೋಗ್ಯದ ಮಟ್ಟಿಗೆ ಸ್ವಲ್ಪ ನಿಗಾ ತೆಗೆದುಕೊಳ್ಳಿರಿ. ಮಿತ ಭಾಷಿಗೂ ಕೆಲವು ಕಲಹವು ಅನಿವಾರ್ಯವಾದೀತು. ವಾರದ ಆದ್ಯಂತ ದಿನಗಳು ಬಿಟ್ಟು ಮಿಕ್ಕ ದಿನಗಳು ಅತ್ಯುತ್ತಮವಿವೆ.

ವೃಶ್ಚಿಕ—ಸುಖಕಷ್ಟ ಲಾಭನಷ್ಟಗಳು ನಿಮಗೀವಾರದಲ್ಲಿ ಸರಿಯಾಗಿ ಫಲಿಸಲಿವೆ. ವ್ಯಾಪಾರ ಮತ್ತು ನೌಕರಿ ವೃತ್ತಿ ವಿಭಾಗಗಳಲ್ಲಿ ನಿರ್ದಿಷ್ಟ ತಕ್ಕ ಫಲವಿದೆ. ಶ್ರಮಜೀವಿವರ್ಗಕ್ಕೆ ಈ ವಾರವು ಅಷ್ಟೊಂದು ಹಿತವಲ್ಲ. ಅನಿರೀಕ್ಷಿತವಾಗಿ ಪ್ರಾಪ್ತವಾಗುವ ತಕ್ಕ ಪ್ರವಾಸವು ಮನ ನಷ್ಟಕಷ್ಟಗಳಿಗೂ ಅನಾರೋಗ್ಯಕ್ಕೂ ನಿಮ್ಮನ್ನು ಗುರಿಮಾಡೀತು ಮತ್ತು ವ್ಯಯಗತ ಶನೈಶ್ಚರನು ನಾನಾ ತೆರನಾದ ಲೋಕಾನರ್ಥಗಳನ್ನು ತಂದೊಡ್ಡಲಿರುವನು. ಅವರೂ ವಾರಾಂತ್ಯದ 3 ದಿನಗಳಲ್ಲಿ ನೀವು ಹೆಚ್ಚಿನ ಕಷ್ಟವನ್ನು ಕಾಣಲಾರಿರಿ.

ಧನು—ಕಷ್ಟದ ದಿನಗಳು ದೂರವಾದವು. ನಿಮ್ಮ ಬಯಕೆಗಳಿಂದು ಅನಾಯಾಸದಿಂದ ಸಿದ್ಧಿಸಲಿವೆ. ನಿಮ್ಮ ವಾಕ್ಚಾತುರ್ಯಕ್ಕೆ ಬೆರಗಾದ ಜನತೆಯು ಸದಾ ನಿಮ್ಮ ಹಿತಚಿಂತನೆಯನ್ನಿರುವುದು. ಪಡುವತ್ತಾಗಿ ಗೃಹೋಪಕರಣಗಳು ಅನ್ಯೂನವಾಗಿರುವುದರಿಂದ ದಿನಯಾಪನೆಯು ಸುಖಮಯವಾದೀತು. ನಿಮ್ಮ ಲಾಭ ಸ್ಥಾನಕ್ಕಿಂದು ಉಚ್ಚ ಶನಿಯ ಸಮಾಗಮವಾದ್ದರಿಂದ ನಾನಾ ವಿಧದಿಂದ ಧನ ಲಭಿಸಲಿದೆ. ಗುರ್ವನುಗ್ರಹಯುಕ್ತರಾದ ನಿಮಗೆ ತಾ. 3. 9. ಈ ಎರಡು ಅತ್ಯುತ್ತಮವಾಗಿ ಫಲಿಸುವವು.

ಮಕರ—ಇಂದೀಗ ದೈವವು ತೀರಾ ವಿಮುಖನಾಗಿರುವುದರಿಂದ ಇಲ್ಲಸಲ್ಲದ ತಾಪತ್ರಯಗಳಿಗೆ ನೀವು ತವರು ಮನೆಯಾಗುವಿರಿ. ನಿಮ್ಮ ತನುವಿಗೆ ಸುಖವಿರದು. ಮನೋರೋಗವಧಿಕವಾಗುವದು. ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಸ್ತ್ರೀಯರಿಂದಾಗಿ ಪೀಡೆ ಅನಿಷ್ಟ ತನ್ನಿಮಿತ್ತ ಅಪವಾದಾದಿಗಳ ಭಯವೂ ಇವೆ. ಕಡಿವಾಣವಿಲ್ಲದ ಕುದುರೆಯಂತಿರುವ ನಿಮ್ಮ ಮನಸ್ಸು ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯಲಿರುವುದು. ವಾರಾದಿಯ 4 ದಿನಗಳಲ್ಲಿ ಹೆಚ್ಚಿನ ಗಂಡಾಂತರಗಳು ಕಾಣಿಸಲಾರವು.

ಕುಂಭ—ನಿಮ್ಮ ಧನ ಲಾಭ ಪತಿಯಾದ ಬೃಹಸ್ಪತಿಯು ತ್ರಿಕೋಣಗತನಾಗಿ ನಿಮ್ಮ ಮನೆಯನ್ನು ನೋಡುತ್ತಿರುವನಾದರೂ ಮಿಕ್ಕ ಎಲ್ಲಾ ಗ್ರಹರೂ ವಿಮುಖರಾಗಿರುವುದರಿಂದ ಹಲವಾರು ಕಷ್ಟ ಪರಂಪರೆಗಳಿಗೆ ನಿಮ್ಮನ್ನು ಸಿಲುಕಿಸಲಿರುವರು. ಗಂಡ ಹೆಂಡಿರೊಳು ಕಲಹವಾದೀತು. ಹೆಚ್ಚಿನ ಕಾಲವನ್ನು ಪ್ರವಾಸದಲ್ಲಿ ಕಳೆಯ ಬೇಕಾಗುವದು. ಆದರೂ ಗುರ್ವನುಗ್ರಹದಿಂದ ನಿಮ್ಮ ಆರ್ಥಿಕ ಭಾಗಕ್ಕೇನೂ ಹಾನಿ ಬರದು. ಅನುದಿನದ ಖರ್ಚು ವೆಚ್ಚಗಳಿಗಾಗಿ ಪರವಶ್ಯನಾಗಬೇಕಾಗಿಲ್ಲ. ತಾ. 4ರಿಂದ 8ರ ವರೆಗಿನ ದಿನಗಳು ಅನುಕೂಲವಿವೆ.

ಮೀನ—ನಿಮ್ಮ ಆಶಾಕಾಂಕ್ಷೆಗಳಿಂದು ಫಲಿಸಲಿವೆ ನಿಮ್ಮ ಪರಿಶ್ರಮವು ಎಳ್ಳಷ್ಟೂ ವ್ಯರ್ಥವಾಗಲಾರದು. ಸಂಪದ್ಭಾಗ್ಯವು ವೃದ್ಧಿಗೊಳ್ಳುವದು. ವಿಪಕ್ಷೀಯರು ದೈನ್ಯೋಕ್ತಿಗೆ ಬರಲಾರರು. ಕೋರ್ಟು ಕಛೇರಿಗಳಲ್ಲಿನ ಕಾರ್ಯ ಕಲಾಪಗಳು ನಿಮ್ಮಿಚ್ಛೆಯಂತೆಯೇ ಸಿದ್ಧಿಸಲಿವೆ. ನೌಕರಿ ವ್ಯಾಪಾರ ವ್ಯವಹಾರ ಮೊದಲಾದ ಉದ್ಯಮಗಳಲ್ಲಿ ಸಾಕಷ್ಟು ಪ್ರಗತಿ ಹೊಂದುವಿರಿ. ಆಪ್ತ ಜನರ ವಿಯೋಗದಿಂದ ದುಃಖ ಭಾಗಿಗಳಾದ ನಿಮಗೆ ವಾರಾಂತ್ಯದ 3ದಿನಗಳು ನೆಮ್ಮದಿಯನ್ನೀಯುವವು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 34/1953

1. M. ಶೇಷಗಿರಿ ರಾವ್-ಸಂಜೀವಿ ಬ್ಯಾಮಗ,

2. M ಸತ್ಯಬಾಯಿ-ಸಂಜೀವಿ ಬಾಯಿಯ ತಾಯಿ ಉಡುಪಿ ಕಸಬಾ-ಅರ್ಜಿದಾರ್ರು

1ನೇ ಅರ್ಜಿದಾರನ ತಾಯಿ ಮತ್ತು 2ನೇ ಅರ್ಜಿದಾರಳ ಮಗಳು-ತಾ. 16-11-1951 ರಲ್ಲಿ ಮೃತ ಪಟ್ಟ M. ಸಂಜೀವಿ ಬಾಯಿಯು ದಿ. ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪಡೆದ ನಂಬ್ರ 43409ನೇ ಪೋಲಿಸಿಯ ಬಾಬ್ತು ಸದರಿ ಕಂಪೆನಿಯಿಂದ ಬರತಕ್ಕ ರುಪಾಯಿ 863-0-0 ನ್ನು ವಸೂಲು ಪಡಿಯುವರೆ ತಾವು ಹಕ್ಕುದಾರರೆಂತಲೂ, ಆ ಕುರಿತು 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಸಹಾ ಸದರಿ ಅರ್ಜಿದಾರ್ರು ಬರಕೊಂಡ ಮೇಲ್ಕಂಡ ಅರ್ಜಿಯು ತಾ. 18-9-1953 ಕ್ಕೆ ತನಖಿಗೆ ಇಡೋಣಾಗಿಯದೆ- ಈ ವಿಷಯದಲ್ಲಿ ಯಾರಾದ್ರು, ಆಕ್ಷೇಪಿಸುವವರು ಇರುವ ಸಂಗತಿಯಲ್ಲಿ ಅವರು ಸದರಿ ತಾರೀಕಿನ ದಿವಸ ಬೆಳಿಗ್ಗೆ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದೆಂತ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸೋಣಾಗಿಯದೆ.

M. Damoder Kamath
Advocate for Petitioners
ಉಡುಪಿ: ತಾ. 26-8-1953.

ಭರ್ತ ಕಂಟ್ರೋಲು

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಗರ್ಭದಲ್ಲಿ ಬೆಳೆಯದಿರುವ ಬಹಿಷ್ಠೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ಪಡಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಪ್ರ್ಯಾಕ್ಟೀಸ್ ಪಡೆದ ಪಂII ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭ ಪತನವನ್ನೂ ನಿವಾರಿಸಿ, ಬಂಜೆತನ ವನ್ನು ಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅಶಕ್ತತೆಯನ್ನು ಸಹ ಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ಸಡಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟು ಸೇವಿಸಿರಿ.

ವಿಶೇಷ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ. 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನಿ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಋತುಸ್ರಾವ ನಿಂತಿತು

"ಕನಕಾ" ಗುಳಿಗೆಗಳನ್ನು ಉಪಯೋಗಿಸಿದರೆ ಋತುಸ್ರಾವವಾಗುವುದು, ಹೆರೋದಿಗೆ ಒಳ್ಳೆಯದು. ಈ ಔಷಧ ಸೇವಿಸಿದುದರಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾಧಾರಣ ಮುಟ್ಟಿಗೆ ಶಕ್ತಿ ಗುಣವಾಗಿದೆ- ಬೆಲೆ: ರೂ. 3/ ಸ್ಪೆಶಲ್ ರೂ. 5/ ಅಂಚೆ ವೆಚ್ಚ ರೂ. ೧. ವಿ. ಪಿ. ಮನ್ನೆಚ್ಚರಿಕೆ ಪ್ರತ್ಯೇಕ]

Mrs. P. DEVEE, L.D.S.(N.J.)
CALCUTTA. 40

ಸ್ಟಾಕಿಸ್ಟರು: ಪಿಹಾ ಕಂಪೆನಿ, ಮಂಗಳೂರು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

Edited, Printed & Published By K. H. Shetty at the Navayuga Press, Udipi, S. India

Regd No M. 3618

Licence No 31
Licensed to Post Without Prepayment.

ನವಯುಗ

Vol. 33 No. 2 10-9-1953 ವರ್ಷ ೩೩ ವಾರ ೨

ಈಗಿನ ಕಾಲ ಗುಣ

ದ್ವಿತೀಯ ಮಹಾಯುದ್ಧಾನಂತರ ಜಪಾನಿನ ಚಕ್ರವರ್ತಿ ಹೀರೊ ಹಿಟ್ಟೊ, ಒಬ್ಬ ವಿಡಂಬನಕಾರರು ವರ್ಣಿಸಿದಂತೆ ಪ್ರಾಯಶಃ ಜೀರೊ ಹಿಟ್ಟೊ (ಎಂದರೆ, ಹಿಟ್ಟಿಗೂ ಸೊನ್ನೆ) ಆದರು! ಕನಿಷ್ಠ ಪಕ್ಷ ಅಮೇರಿಕಾದ ಶಾಸನವನ್ನು ಅತಿಕ್ರಮಿಸದೆ ತಲೆಬಾಗುವ ಪ್ರವೃತ್ತಿಯನ್ನು ಅವರು ತೋರಿಸಬೇಕಾಗಿ ಬಂತು. ಇಂಥದರಲ್ಲಿ ಸೂರ್ಯನ ಪ್ರತ್ಯಕ್ಷ ಅವತಾರೀ ಪುರುಷನೆಂಬ ಅವರ ಗೌರವ ಮಣ್ಣುಮುಕ್ಕಿತು. ಮಂತ್ರಿ ಪರಿವಾರದವರಿಗೂ ದರ್ಶನ ದುರ್ಲಭನಾದ ಚಕ್ರವರ್ತಿ ಬೀದಿಯಲ್ಲಿ ಜನಸಾಮಾನ್ಯರ ನಡುವೆ ಏಕಾಂಗಿಯಾಗಿ ತಿರುಗಾಡಲೂ ಆಗ ನಾಚಲಿಲ್ಲ.--ಈ ಹೃದಯ ಪರಿವರ್ತನೆಯಷ್ಟೇ ರೋಮಾಂಚಕ ಸುದ್ದಿ ಕಾಲಿಂಪಾಂಗದಿಂದ ಈಗ ಬಂದಿದೆ. ಟಿಬೇಟಿನ ಸರ್ವೋಚ್ಚ ಆಧ್ಯಾತ್ಮಿಕ ಹಾಗೂ ಶಾಸನಾಧಿಕಾರ ಸಂಪನ್ನ ಧರ್ಮಗುರು ದಲಾಯಿ ಲಾಮಾರು ಒಂದು ಘೋಷಣೆ ಹೊರಡಿಸಿ, ಟಿಬೇಟಿನ ಯಾವನೇ ಪ್ರಜೆಯಾದರೂ ತನ್ನನ್ನು ಕಂಡು ಭೇಟಿಯಾಗಬಹುದೆಂದು ಹೇಳಿದ್ದಾರೆ. ದಲಾಯಿ ಲಾಮಾರನ್ನು ಈಶ್ವರನ ಅವತಾರವೆಂದು ತಿಳಿದು ಪೂಜಿಸುತ್ತಿದ್ದರು. ಮಹಾ ಮಹಾ ಸರದಾರರೂ ದಲಾಯಿ ಲಾಮಾರ ಮುಂದೆ ಮುಖ ತೋರಿಸುತ್ತಿರಲಿಲ್ಲ. ಹಿಂದಿನ ನೀತಿ ಸಂಪ್ರದಾಯದಂತೆ ಯಾರಾದರೂ ಕೆಲವೇ ಸೌಭಾಗ್ಯಶಾಲಿಗಳಿಗೆ ದಲಾಯಿ ಲಾಮಾರನ್ನು ಕಾಣಲು ಅವಕಾಶ ನೀಡುತಿದ್ದರು. ಹಾಗೆ ಭೇಟಿಯಾದವರು ಕೂಡ ಲಾಮಾರ ಮುಂದೆ ಬಾಯಿ ಮುಚ್ಚಿಕೊಂಡು ನಿಂತೇ ಇರುತಿದ್ದರು. ಅಷ್ಟು ಗೌರವ ಘನತೆಯುಳ್ಳ ಪೂಜ್ಯವ್ಯಕ್ತಿಯ ಹೃದಯದಲ್ಲೂ ಈಗ ಕಾಲ ಮಹಿಮೆ ಹಿಂಬಂತೆ ಹೃದಯ ಪರಿವರ್ತನೆಯಾಗಿದೆ- ಇನ್ನೂ ಇಪ್ಪತ್ತು ವಯಸ್ಸಿನ ದಲಾಯಿಲಾಮಾ ಜನರ ನಿಕಟ ಸಂಪರ್ಕ ಸ್ಥಾಪಿಸಿಕೊಳ್ಳುವ ಉತ್ಸುಕತೆಯಿಂದ ಈಗ ರೆಡ ಮೋಟಾರು ಕಾರಿನಲ್ಲಿ ಮಾರ್ಗದ ಮೇಲೆ ತಿರುಗಾಡುವುದನ್ನು ಕಾಣುತ್ತೇವೆ.

❖

ಕಾಲಗತಿಯಂತೆ ಇವೆಲ್ಲವೂ ನಡೆಯುವುವೆಂದು ಬೇರೆ ಹೇಳಬೇಕೆ? ಪ್ರಧಾನಿ ನೆಹರೂರನ್ನು 'ಪಂಡಿತ' ರೆಂಬ ಅಭಿಧಾನದಿಂದ ಸಂಬೋಧಿಸುವ ವಾಡಿಕೆ ಕೆಲವೇ ವರ್ಷಗಳ ಹಿಂದಿನ ವರೆಗಿದ್ದಿತು. ಅವರು ತನ್ನನ್ನೀಗ ಬೇರೆ ನಾಗರಿಕರನ್ನು ಕರೆಯುವಂತೆ ಸಾಮಾನ್ಯವಾದ "ಶ್ರೀ" ಕಾರದಿಂದಲೇ ಸಂಬೋಧಿಸಿರೆಂದು ಜನತೆಯನ್ನು ಕೇಳಿದ್ದಾರೆ. ತಮ್ಮ ಬಿರುದು ಬಾವಲಿಗಳನ್ನೆಲ್ಲ ಬಿಸುಟು, ಜನತಾ ಜನಾರ್ದನನ ಪಾದಾರವಿಂದದಲ್ಲಿ ಸೇರುವ ಇಚ್ಛೆಯೇ ಪ್ರತಿಯೊಬ್ಬ ಮೇಧಾವಿಯಲ್ಲೂ ಈಗ ವ್ಯಕ್ತಗೊಳ್ಳುತ್ತದೆ. ಮೊನ್ನೆ ಮೊನ್ನೆ ಹೈದರಾಬಾದಿನ ಲೋಕೋಪಯೋಗಿ ಹಾಗೂ ಸಾರ್ವಜನಿಕ ಆರೋಗ್ಯ ಖಾತೆಯ ಮಂತ್ರಿ ನವಾಬ ಮೆಹದಿನವಾಜರು "ನನ್ನನ್ನು ನೀವು ನವಾಬನೆಂದು ಕರೆಯಬೇಡಿರಿ" ಎಂಬುದಾಗಿ ಜನತೆಯನ್ನು ಕೇಳಿಕೊಂಡರು. ಜನತೆಯ ಸೇವೆಮಾಡುವ ಪ್ರಥಮ ಅವಕಾಶ ಹೈದರಾಬಾದ ಮುನಿಸಿಪಲ್ ಕಾರ್ಪೋರೇಶನ್ನಿನ ಸಂಪರ್ಕದಿಂದ ಹದಿನಾಲ್ಕು ವರ್ಷಗಳ ಕೆಳಗೆ ದೊರೆತಾಗಲೇ ತಾನು ನವಾಬನೆಂಬ ಬಿರುದನ್ನು ತ್ಯಜಿಸಿರುವುದಾಗಿ ಅವರು ಹೇಳಿದರು. ಗಾಂಧೀಜಿಯವರು ಜನಸಾಮಾನ್ಯರೊಡನೆ ಮಿಳಿತರಾಗುವ ಉದ್ದೇಶದಿಂದ, ಅವರಿಗಿಲ್ಲದ ಸೌಭಾಗ್ಯ ತನಗೇಕೆಂದು ಹೇಳಿ, 'ಅರಬತ್ತಲೆ ಫಕೀರನ' ಅವತಾರವನ್ನು ಧರಿಸಿದ ಕತೆ ನಮಗೆ ತಿಳಿದಿದೆ. ಪ್ರಾಯಶಃ ನಮ್ಮ ಸಂಸತ್ತಿನ ಸದಸ್ಯರಿಗೂ ತೀರಾ ಸಾಮಾನ್ಯರಂತೆ ಬದುಕುವ ಬಯಕೆ ಇರಬೇಕು-ಇಲ್ಲವಾದರೆ, ಮೊನ್ನೆ ಪಾರ್ಲಿಮೆಂಟ ಸದಸ್ಯರು ಆಗಸ್ಯವೆ? ಎಂಬ ಪ್ರಶ್ನೆ ಉದ್ಭೂತವಾಗುತ್ತಿರಲಿಲ್ಲ. ರೈಲ್ವೆ ಖಾತೆಯ ಉಪಮಂತ್ರಿ ಅಳಗೇಶನ್ನರು ರಾಜ್ಯಪರಿಷತ್ತಿನಲ್ಲಿ ರೈಲ್ವೆ ನೌಕರರಲ್ಲಿ ಅತ್ಯಾವಶ್ಯಕ ಹಾಗೂ ಸಾಧಾರಣ ಅಗತ್ಯದವರೆಂಬ ವರ್ಗೀಕರಣ ಮಾಡಿ ಮೊದಲನೇ ತರಗತಿಯವರಿಗೆ ಯಾವ ಕಾಲಕ್ಕೂ ವಸತಿ ಗೃಹಗಳನ್ನು ಒದಗಿಸಲಾಗುವುದೆಂದು ಹೇಳುತಿದ್ದರು. ಆಗ ಸಭಾಪತಿ ರಾಧಾಕೃಷ್ಣನ್ನರು ಮೇಲಿನಂತೆ ಪ್ರಶ್ನಿಸಿದರು. ಉತ್ತರದಲ್ಲಿ ಸಂಸತ್ತಿನ ಸದಸ್ಯರು ಅತ್ಯಾವಶ್ಯಕ ವರ್ಗಕ್ಕೇ ಸೇರಿದವರೆಂದು ನಗೆಗಡಲ ನಡುವೆ ಅಳಗೇಶನ್ನರು ನುಡಿದರು.

❖

ಮೊನ್ನೆ ಮೊನ್ನೆಯ ವರೆಗೆ ಜನರನ್ನು ಆಕರ್ಷಿಸಿ ತುಂಬಾ ಹಣ ಸಂಪಾದನೆ ಮಾಡಿ ಅದನ್ನು ಯಾವುದಾದರೊಂದು ಧರ್ಮೋದ್ದೇಶಕ್ಕೋಸ್ಕರ ದಾನ ಮಾಡಲು ಸಿನೆಮಾ ನಟ ನಟಿಯರ ಕ್ರಿಕೆಟ ಪಂದ್ಯಾಟವನ್ನು ಏರ್ಪಡಿಸುವುದು ಉತ್ತಮ ಫಲದ ಭರವಸೆಕೊಡುವ ಪದ್ಧತಿಯಾಗಿದ್ದಿತು. ಸಾಮಾನ್ಯವಾಗಿ ತೆರೆಯ ಮೇಲೆಯೇ ಬೆಳಕಿಗೆ ಬರುವ ದಾರಿಯಲ್ಲೊಂದೂ ಕಾಣಲು ಸಿಗದ ಸಿನಿಮಾ ತಾರೆಯರು ಕ್ರಿಕೆಟ್ ಆಟದ ಗಂಧಗಾಳಿ ಇಲ್ಲದಿದ್ದರೂ ಬ್ಯಾಟು ಬೀಸಿ ಚೆಂಡು ಹೊಡೆಯುವ ಕೌತುಕ ನೋಡುವ ಆಸೆಯುಳ್ಳವರಿಗೆ ಇದು ಅಪೂರ್ವ ಸಂದರ್ಭ. ಆಗ ಟಿಕೇಟುಗಳ ಬೆಲೆಯು ಲಕ್ಷ್ಯವಿಲ್ಲದೆ ಸ್ಟೇಡಿಯಮಿನೊಳಕ್ಕೆ ನುಗ್ಗುವ ಹುಮ್ಮಸ್ಸೇ ಹುಮ್ಮಸ್ಸು. ಈ ಕಾಲ ಗುಣವನ್ನು ಹೊಂದಿಕೊಂಡೇ ಇರಬೇಕು-ಸಂಸತ್ತಿನ ಸದಸ್ಯರು ಸೆಪ್ಟೆಂಬರ ೨೦ನೇ ದಿನಾಂಕ ದಿಲ್ಲಿಯ ರಾಷ್ಟ್ರೀಯ ಸ್ಟೇಡಿಯಮಿನಲ್ಲಿ ತಾವೂ ಒಂದು ಕ್ರಿಕೆಟ ಪಂದ್ಯವನ್ನು ಆಡಲು ನಿರ್ಧರಿಸಿದ್ದಾರೆ. ರಾಜ್ಯ ಪರಿಷತ್ತಿನ ಸಭಾಪತಿ ಡಾ. ರಾಧಾಕೃಷ್ಣನ್ ಹಾಗೂ ಲೋಕ ಸಭೆಯ ಧುರೀಣ ಪ್ರಧಾನಿ ನೆಹರೂರವರು ತಂತಮ್ಮ ಪಕ್ಷದ ನಾಯಕತ್ವ ವಹಿಸುತ್ತಾರೆ. ನೆಹರೂರವರು ಬ್ಯಾಟನ್ನು ಕೈಯಲ್ಲಿ ಎತ್ತಿ ೪೦ ವರ್ಷಗಳು ಸಂದಿವೆ. ಬಾಬೂ ಪುರುಷೋತ್ತಮ ದಾಸಟಂಡನ್ನರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಅಲಹಾಬಾದ ವಿಶ್ವವಿದ್ಯಾಲಯದ ಕ್ರಿಕೆಟ್ ಟೀಮಿನ ನಾಯಕರಾಗಿದ್ದರು. ಆ ಮೇಲೆ ಅವರು ಕ್ರಿಕೆಟ್ ಆಡಿದ್ದಾರೊ ಗೊತ್ತಿಲ್ಲ. ಇಂಥ ಹಿಂದಿನ ಹುರಿಯಾಳುಗಳು ಈ ವಾರ್ಧಕ್ಯದಲ್ಲಿ ಚೆಂಡಿನಾಟ ಆಡುವುದನ್ನು ಕಾಣುವುದೇ ಒಂದು ಮೋಜು. ಸಂಸತ್ತಿನ ಸದಸ್ಯರು ಉತ್ತಮ ಕ್ರಿಕೆಟ್ ಆಟಗಾರರೆಂದು ಹೆಸರಾದ ರಕ್ಷಣ ಖಾತೆಯ ಉಪ ಮಂತ್ರಿ ಸರದಾರ ಸುರಜಿತ ಸಿಂಘ ಮಜೀತಿಯಾರಿಂದ ಕ್ರಿಕೆಟದ ಅ ಆ ಇ ಈ ಕಲಿಯುವ ಹುಮ್ಮಸ್ಸು ತೋರಿಸಿದ್ದಾರೆ ಕೆ. ಡಿ. ಮಾಳವೀಯಾ ಜಿ. ಕೆ ಬೋಸನ್ನೆ ದುಂಗಾಪುರದ ಮಹಾರಾಜ, ತುಳಸೀದಾಸ ಕಿಲಾಚಂದ, ಶಾನವಾಜ, ಅಮರಸಿಂಗ ಇನ್ನೂ ಬೇರೆ ಜನರು ಕ್ರಿಕೆಟದಲ್ಲಿ ತುಂಬ ಆಸಕ್ತಿ ತೋರಿಸುತ್ತಿದ್ದಾರೆ. ರಾಜಕೀಯದಲ್ಲಿ ಚೆಂಡೆಸೆಯುವ ಕಲೆಯಲ್ಲಿ ನಿಷ್ಣಾತರಾದ ಸಂಸತ್ ಸದಸ್ಯರು ಪ್ರತ್ಯಕ್ಷ ಕ್ರೀಡಾರಂಗಕ್ಕಿಳಿದಾಗ ವರ್ತಿಸುವ ಬಗೆ ಕಾಣಲು ಯಾರಿಗೆ ಮನಸ್ಸಾಗಲಿಕ್ಕಿಲ್ಲ-ಆಗ ತಾವಷ್ಟು ಮಹಾ ಪ್ರಮಾಣರು ಪರಿಹಾರ ನಿಧಿ [illegible] ರ ಹಣ ಕೊಡಲಿಷ್ಟೇನೆಂಬ ಕಲ್ಪನೆ ಯಾರ [illegible] ಯಲ್ಲಿ ಹೊಳೆಯಲಿಕ್ಕಿಲ್ಲ. ನೆರೆ ಪೀಡಿತರಿಗೆ ನೆರವಾಗುವ ಬಯಕೆಗಿಂತಲೂ ರಾಜಕಾರಣಗಳ ಕೈಚಳಕ ನೋಡುವ ಚಾಪಲ್ಯವೇ ಅಧಿಕವಾದೀತು.

❖

ಕಾಲಗತಿ ಬದಲಾಗಿರುವುದು ನಿಜವೊ ಜನಕ್ಕೆ ಇನ್ನೊಂದು ಸ್ವರೂಪವಾದ ನಿದರ್ಶನ ಕೊಡಬಹುದು—ಮೊನ್ನೆ ವಿಜಾಪುರ ಜಿಲ್ಲಾ [illegible] ಹಳ್ಳಿಯೊಂದರಲ್ಲಿ ಗ್ರಾಮದ ಜನರು ಜಯಘೋಷ ಮಾಡುತಿದ್ದರು. ಇದರ ಪರಿಣಾಮವಾಗಿ [illegible] ಮೇಲು ಗಾಡಿಯು ನಿರ್ಬಂಧವಾಗಿಯೇ [illegible] ನಿರ್ಮಾಣವನ್ನು ಮುಟ್ಟಿತು. ಕೇಡುಬಾಳ ದಾಟಿದೊಡನೆಯೇ ಜಯ ಜಯಕಾರದ ಶಬ್ದ ಕೇಳಿ ಒರಟು ಇಂಜಿನ ಡ್ರೈವರನು ಪ್ರಾಯಶಃ [illegible] ಮುಂದಣ ವಿಧ್ವಂಸ ಕೃತ್ಯಕ್ಕೆ ಪ್ರೇರಿತರಾ

[ನೇ ಪುಟ ನೋಡಿರಿ]



[illegible]

ಕಾಶ್ಮೀರ ಸಂಸ್ಥಾನದ ಸಂದಿಗ್ಧ ಭವಿಷ್ಯ

ಮತೀಯ ಭಾವನೆಗಿಂತಲೂ ಆರ್ಥಿಕ ಧೋರಣೆಯೇ ನಿರ್ಣಾಯಕ ಸಂಗತಿ

ಶೇಖ ಅಬ್ದುಲ್ಲಾರ ಪದಚ್ಯುತಿಯ ಬಳಿಕ ಕಾಶ್ಮೀರ ಪ್ರಶ್ನೆ ಹೊಂದಿದ ಬೆಳವಣಿಗೆಯ ಕುರಿತು ಭಾರತ ಪಾಕಿಸ್ತಾನಗಳಲ್ಲಿಯಷ್ಟೇಯಲ್ಲ--ಲೋಕದ ಎಲ್ಲ ರಾಷ್ಟ್ರಗಳಲ್ಲಿಯೂ ಹೆಚ್ಚಿನ ಆಸ್ಥೆ ಉತ್ಪನ್ನ ಹೊಂದಿವೆ. ಕಾಶ್ಮೀರ ಕಣಿವೆಯ ಅನಭಿಷಿಕ್ತ ಸಮ್ರಾಟನೆನಿಸಿದ್ದ ಶೇಖ ಅಬ್ದುಲ್ಲಾ ಸ್ಥಾನಭ್ರಷ್ಟರಾಗುವಷ್ಟರ ಮಟ್ಟಿಗೆ ಅಲ್ಲಿಯ ಅಂತರಿಕ ಪರಿಸ್ಥಿತಿ ಹೇಗೆ ಅಧಃಪತನವನ್ನು ಹೊಂದಿತೆಂಬ ಬಗ್ಗೆ ಯಾರಿಗಾದರೂ ಆಶ್ಚರ್ಯವಾಗಬೇಕು! ಕಾಶ್ಮೀರದ ಅಪ್ರತಿಮ ಸ್ವಾತಂತ್ರ್ಯ ಯೋಧನಾಗಿ ಶೇಖ ಅಬ್ದುಲ್ಲಾ ರಾಷ್ಟ್ರೀಯ ಪರಿಷತ್ತನ್ನು ಸುಸಂಘಟಿತ ಪಕ್ಷವಾಗಿ ರೂಪಿಸಿದ ಬಗ್ಗೆ, ಹಾಗೂ ಕಳೆದ ಐದಾರು ವರ್ಷಗಳಲ್ಲಿ ಕಾಶ್ಮೀರದ ಸರಕಾರೀ ನೌಕೆಯನ್ನು ತುಂಬ ದಕ್ಷತೆಯಿಂದ ಹಾಗೂ ಮುತ್ಸದ್ದಿತನದಿಂದ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದ ರೀತಿ ನೀತಿಗಳನ್ನು ನೋಡಿದರೆ ಪರಿಸ್ಥಿತಿ ಹೀಗೆ ಹಿಂದೇಟು ಹೊಡೆದು ಬಿದ್ದ ನೋಡಲಾದುದಕ್ಕೆ ತೃಪ್ತಿಕರವಾದ ಸಮಾಧಾನ ದೊರೆಯುವುದಿಲ್ಲ. ಆದರೆ ಇದೇ ಮೇ ತಿಂಗಳ ಬಳಿಕ ಕಾಶ್ಮೀರೀ ಪ್ರಧಾನಿ ಶೇಖ ಅಬ್ದುಲ್ಲರ ಧೋರಣೆಯಲ್ಲಿ ಹಿಂದೆಂದೂ ಕಾಣದ ಬದಲಾವಣೆ ಗೋಚರಿಸಿತೆಂದೂ ವಿದೇಶೀಯರ ಕೈವಾಡ ಇದರಲ್ಲಿ ಅತ್ಯಗತ್ಯವಾಗಿ ಇದ್ದಿತೆಂದೂ ಊಹಾಪೋಹಗಳು ನಡೆದಿವೆ. ಕಾಶ್ಮೀರ ಪರಿಸ್ಥಿತಿಯ ಪೂರ್ಣ ಸ್ವರೂಪದ ಗಂಭೀರ ಅಧ್ಯಯನಮಾಡಿದಲ್ಲಿ ಈ ಆರೋಪ ಹಾಗೂ ಅಪವಾದನೆಗಳಿಗಿಂತಲೂ-ಕಾಶ್ಮೀರದ ಆರ್ಥಿಕ ಸಂಕಟಗಳೇ ಶೇಖ ಅಬ್ದುಲ್ಲಾರ ಪದಚ್ಯುತಿಗೆ ಕಾರಣವಾದವೆಂದೂ ರಾಜಕೀಯಕ್ಕೂ ಹೆಚ್ಚಾಗಿ ಜನಸಾಮಾನ್ಯರ ದುರವಸ್ಥೆಯೇ ಕಾಶ್ಮೀರ ಸರಕಾರ ಇದಿರಿಸಬೇಕಾದ ಸಂಗತಿಯೆಂದೂ ಮನವರಿಕೆಯಾಗುತ್ತದೆ.

ಮತೀಯ ಭಾವನೆ

ಕಾಶ್ಮೀರ ಪಾಕಿಸ್ತಾನದೊಡನೆ ಸೇರಿಕೊಳ್ಳುವುದೆ ಹೇಗೆ ಎಂಬ ಪ್ರಶ್ನೆಯನ್ನು ಈ ಸಮಸ್ಯೆಯ ಪ್ರಾರಂಭದಿಂದಲೂ ಕೇಳುತ್ತಾ ಬಂದಿದ್ದೇವೆ. ಈ ವಿಷಯದಲ್ಲಿ ಜಾತಿಮತದ ಭಾವನೆಯು ಕಾಶ್ಮೀರಿಗಳನ್ನು ಉತ್ತೇಜಿತರನ್ನಾಗಿ, ವಿಕಾರವಶರನ್ನಾಗಿ ಮಾಡಬಹುದೇ ಹೇಗೆಂಬ ಬಗ್ಗೆ ಆಸ್ಥೆ ತೋರಿಸುವುದುಂಟು. ಶೇಖ ಅಬ್ದುಲ್ಲಾ ತನ್ನ ಆರು ವರ್ಷಗಳ ಅವಧಿಯ ಆಡಳಿತ ಕಾಲದಲ್ಲಿ ಬಲವಾಗಿ ಬಂಧಿಸಿದ್ದ ಜಾತೀಯ ಭಾವನೆಯನ್ನು ಈ ಮೇ ತಿಂಗಳ ಬಳಿಕ ಪೋಷಿಸಲು ನೋಡಿದನೆಂದೂ ಕೇಳುತ್ತೇವೆ. ಹೆಚ್ಚಿನ ವಿದೇಶೀಯರು ಬಹು ಸಂಖ್ಯಾಕ ಮುಸ್ಲಿಮರುಳ್ಳ ಕಾಶ್ಮೀರವು ಪಾಕಿಸ್ತಾನದೊಡನೆಯೇ ಸೇರ್ಪಡೆ ಹೊಂದುವುದು ಸ್ವಾಭಾವಿಕವೆಂದು ತಿಳಿದಂತಿದೆ. ಆದರೆ ಕಾಶ್ಮೀರದ ಸೇರ್ಪಡೆಗೆ ಮತೀಯ ಕಾರಣವು ಸಾಲದಾಗಿಲ್ಲ-ಶೇಖ ಅಬ್ದುಲ್ಲಾ ಸಹ ಕಾಶ್ಮೀರ ಜನತೆಯ ಅಭಿಪ್ರಾಯವನ್ನು ವ್ಯಕ್ತಮಾಡುವಾಗ ಏಕಮತದ ಭಾವನೆಯು ಒಗ್ಗಟ್ಟನ್ನು ಉಂಟುಮಾಡಿಲ್ಲವೆಂದು ಹೇಳಿದ್ದರು. ಮುಸ್ಲಿಂ ರಾಷ್ಟ್ರಗಳ ಒಕ್ಕೂಟ ರಚನೆಯ ಪ್ರಶ್ನೆಯನ್ನು ಇಂದಿಗೂ ಉಪೇಕ್ಷೆಯಿಂದ ನೋಡುವ ಮುಸ್ಲಿಂ ಧುರೀಣರು ಬೇರೆ ಬೇರೆ ರಾಷ್ಟ್ರಗಳಲ್ಲಿದ್ದಾರೆ. ಪಾಕಿಸ್ತಾನವು ಮುಸ್ಲಿಂ ರಾಷ್ಟ್ರವೆಂಬುದಕ್ಕಾಗಿ ಕಾಶ್ಮೀರ ಅದನ್ನು ಸೇರುವುದರಿಂದ ಲಾಭ ಉಂಟಾಗುವ ಭರವಸೆ ಇಲ್ಲ- ಸಹ ಧರ್ಮೀಯರನ್ನು ಪಾಕಿಸ್ತಾನದವರು ಚಲೋದಾಗಿ ನಡೆಸಿಕೊಳ್ಳುವರೆಂಬುದಕ್ಕೆ ಸಾಕಷ್ಟು ಉತ್ತಮ ಸಾಧನ ನಿದರ್ಶನವಿಲ್ಲ. ಉದಾಹರಣೆಗೆ ತನ್ನ ನೆರೆಯ ರಾಷ್ಟ್ರವಾದ ಅಫಘಾನಿಸ್ತಾನದೊಡನೆ ಪಾಕಿಸ್ತಾನವು ದ್ವೇಷವನ್ನು ಕಟ್ಟಿಕೊಂಡಿದೆ. ಆದರೆ ಭಾರತದ ಸಂಗತಿ ಹೀಗಿರುವುದಿಲ್ಲ. ಭಾರತದಲ್ಲಿ ಈಗಲೂ ನಾಲ್ಕೈದು ಕೋಟಿ ಮುಸ್ಲಿಂ ಬಾಂಧವರು ಇದ್ದಾರೆ-ಮತ್ತು ಅವರೆಲ್ಲರೂ ಬೇರೆ ನಾಗರಿಕರಷ್ಟೇ ಘಟನಾತ್ಮಕ ಹಕ್ಕು ಬಾಧ್ಯತೆಗಳನ್ನೂ ಸುಖಸೌಕರ್ಯಗಳನ್ನೂ ಅನುಭವಿಸುತ್ತಿದ್ದಾರೆ. ಆದುದರಿಂದ ಕಾಶ್ಮೀರವು ಭಾರತದೊಡನೆ ಸೇರ್ಪಡೆಹೊಂದಿದರೆ ಅದಕ್ಕೆ ಮತೀಯ ದೃಷ್ಟಿಯಿಂದಲೂ ಹೆಚ್ಚು ಲಾಭ ದೊರೆಯುವ ಸಂಭವವಿದೆ ಹಾಗೆಂದು ಪಾಕಿಸ್ತಾನ ಹಾಗೂ ಬೇರೆ ರಾಷ್ಟ್ರಗಳ ಜನರು ಶೇಖ ಅಬ್ದುಲ್ಲಾರು ತಮ್ಮ ಆಡಳಿತಾವಧಿಯ ಕೊನೆಯ ಭಾಗದಲ್ಲಿ ಭಾರತದ ಕಡೆಗೆ ಕಟು ಧೋರಣೆಯನ್ನು ಅನುಸರಿಸುವ ಲಕ್ಷಣ ತೋರಿಸಿದಂತೆಲ್ಲ- ಪಾಕಿಸ್ತಾನದೊಡನೆ ಸೇರ್ಪಡೆ ಹೊಂದಲು ಅವರು ಬಯಸುತ್ತಿದ್ದಾರೆಂದು ತಪ್ಪಾಗಿ ಗ್ರಹಿಸಿಕೊಂಡಂತೆ ತೋರುತ್ತದೆ. ಈ ಕಾರಣಕ್ಕಾಗಿಯೇ ಪ್ರಾಯಶಃ ಶೇಖ ಅಬ್ದುಲ್ಲಾರ ಬಂಧನದ ಕುರಿತು ಪಾಕಿಸ್ತಾನದಲ್ಲಿ ಅತ್ಯಂತ ಕ್ಷೋಭೆ ಉಂಟಾಯಿತು.

ನಾಯಕ ಪೂಜೆ

ಹಾಗೆಂದು ನಿಜ ಪರಿಸ್ಥಿತಿ ಹೀಗಿರಲಿಲ್ಲ-ಭಾರತದ ಧೋರಣೆಯ ವಿಮರ್ಶೆಯನ್ನು ಶೇಖ ಅಬ್ದುಲ್ಲಾ ಮಾಡುವಾಗ, ಸ್ವತಂತ್ರ ಕಾಶ್ಮೀರ ಕೊಳ್ಳವನ್ನು ಕಟ್ಟಿಕೊಳ್ಳುವ ಹಗಲುಗನಸು ಕಾಣುತ್ತಿದ್ದರೇ ಹೊರತು, ಪಾಕಿಸ್ತಾನದೊಂದಿಗೆ ಸೇರುವ ಮನಸ್ಸು ಅವರಿಗಿರಲಿಲ್ಲ. ಆದರೆ ತಮ್ಮ ಕನಸು ನನಸಾಗುವುದಕ್ಕೆ ಮತೀಯ ಭಾವನೆಯಿಂದ ಉಪಯೋಗವಾಗುವಂತಿದ್ದರೆ ಅದನ್ನು ಬಳಸಿಕೊಳ್ಳುವುದರಲ್ಲಿ ಅನುಚಿತವಾದುದೇನನ್ನೂ ಅವರು ಪ್ರಾಯಶಃ ನೋಡಲಿಲ್ಲ. ತನ್ನನ್ನು ಮೊದಲಿಂದಲೂ ಆದರಿಸಿಕೊಂಡು ಬಂದು ಅನುಸರಿಸುತ್ತಿದ್ದ ಕಾಶ್ಮೀರ ಕೊಳ್ಳದ ಜನತೆ ಇಂಥ ಉಪಕ್ರಮದಲ್ಲೂ ತನಗೆ ನೆರವಾಗುವುದೆಂದು ಅವರು ಕಟ್ಟಿಕೊಂಡಿದ್ದರು ಕಾಶ್ಮೀರದ ಪ್ರಶ್ನೆಯ ಅಧ್ಯಯನಮಾಡುವಾಗ ಗಮನಿಸಬೇಕಾದ ಮುಖ್ಯ ಸಂಗತಿಗಳಲ್ಲಿ ಇದೂ ಒಂದು—ಶೇಖ ಅಬ್ದುಲ್ಲಾರಂಥ ಅಪ್ರತಿಮ ನಾಯಕನನ್ನು ಜನತೆ ಕಣ್ಣು ಮುಚ್ಚಿ ಅವರಿಟ್ಟ ಹೆಜ್ಜೆಯ ಯೋಗ್ಯಾಯೋಗ್ಯತೆಯ ಅರಿವಿಲ್ಲದೆ ಹಿಂಬಾಲಿಸುವುದೇ? ಹೌದೆಂದು ತಿಳಿದುಕೊಂಡ ಹೆಚ್ಚಿನ ಜನಕ್ಕೆ ಕಾಶ್ಮೀರದ ಜನತೆಯ ವರ್ತನೆ ಆಘಾತವನ್ನೇ ಉಂಟು ಮಾಡಿದೆ. ಅಬ್ದುಲ್ಲಾರ ವ್ಯಕ್ತಿತ್ವದ ವರ್ಚಸ್ಸು ಕಾಶ್ಮೀರ ಜನತೆಯನ್ನು ಮಾನಸಿಕ ದೌರ್ಬಲ್ಯಕ್ಕೆ ಕೊಳ್ಳೆಯಾಗಿ ಮಾಡಲಿಲ್ಲ-ಮತ್ತು ಈಗ ಕೂಡ ಕಾಶ್ಮೀರದ ಜನ ತಮ್ಮ ನಾಯಕರ ಹೆಜ್ಜೆಯನ್ನು ವಿಚಾರ-ವಿವೇಕಗಳಿಲ್ಲದೆ ಅಂಧಶ್ರದ್ಧೆಯಿಂದ ಅನುಸರಿಸುತ್ತಾ ಸಾಗುವುದೆಂದು ಹೇಳಲಾರೆವು. ಧುರೀಣರ ಬಗ್ಗೆ ಪೂಜ್ಯ ಭಾವನೆ ಇದ್ದಂತೆಯೇ ಕಾಶ್ಮೀರದ ಜನತೆ ಯೋಗ್ಯ ಸರಕಾರವನ್ನೂ ಸಮರ್ಪಕ ಧೋರಣೆಯನ್ನೂ ಬಯಸುತ್ತದೆ. ಶೇಖ ಅಬ್ದುಲ್ಲಾರು ಕೈಗೊಂಡ ಸುಧಾರಣೆ ಹಾಗೂ ಕ್ರಾಂತಿಕಾರಿ ಕ್ರಮಗಳಲ್ಲಿ ಕಂಡುಬಂದ ಲೋಪದೋಷಗಳ ನಿವಾರಣೆಯಾಗದಿದ್ದುದೇ ಜನತೆಯ ಜುಗುಪ್ಸೆಯನ್ನು ಶೇಖ ಅಬ್ದುಲ್ಲಾರಿಗೆ ಸಂಪಾದಿಸಿ ಕೊಟ್ಟಿತು. ರಾಷ್ಟ್ರೀಯ ಪರಿಷತ್ತು ಹಾಗೂ ಮಂತ್ರಿ ಮಂಡಳದ ಬೇರೆ ಸದಸ್ಯರು ಮತೀಯ ಭಾವನೆಯನ್ನು ಪ್ರಚೋದಿಸುವ ಪ್ರಯತ್ನಗಳಿಗೆ ಸಂಪೂರ್ಣ ಇದಿರಾಗಿದ್ದರು; ಮಾತ್ರವಲ್ಲ ಆರ್ಥಿಕ ದುರವಸ್ಥೆಯನ್ನು ಸರಿಪಡಿಸಿ ಜನತೆಯ ಸಂಕೋಚವನ್ನು ಬಯಸುವವರಾಗಿದ್ದರು. ಆದುದರಿಂದ ಕಂದಾಯ ಮಂತ್ರಿ ಮಿರ್ಜಾ ಅಫಜಲ ಬೇಗರು ಶೇಖ ಅಬ್ದುಲ್ಲರನ್ನು ಮತೀಯ ಭಾವನೆಯ ಕಡೆಗೆ ಒಲಿಸಿಕೊಳ್ಳಲು ಒಳಗಿಂದೊಳಗೆ ಪ್ರಯತ್ನಿಸಿದಂತೆಲ್ಲ ಮಂತ್ರಿ ಮಂಡಳದಲ್ಲಿ ಒಡಕು ಅನಿವಾರ್ಯವಾಗಿ ತಲೆದೋರಿತು.

ಆರ್ಥಿಕ ಧೋರಣೆ

ವಿದೇಶೀಯರ ಹಸ್ತಕ್ಷೇಪದ ಸಂಗತಿ ಸಹ ಕಾಶ್ಮೀರದ ಮಟ್ಟಿಗೆ ಮಹತ್ವಪೂರ್ಣವಾದುದಲ್ಲ. ವಿದೇಶೀಯರೆಂದರೆ ಅಮೇರಿಕನರೆಂದು ನಾವು ಸಾಮಾನ್ಯತಃ ತಿಳಿದುಕೊಂಡಿದ್ದೇವೆ ಅಮೇರಿಕಾದಲ್ಲಿ ಡೆಮೊಕ್ರಾಟಿಕ್ ಪಕ್ಷದಿಂದ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿ ಸೋತಿದ್ದ ಅಡ್ಲಾಯ್ ಸ್ಟೀವನ್ಸನ್ನರು ಮೇ ತಿಂಗಳಲ್ಲಿ ಕಾಶ್ಮೀರ ಕೊಳ್ಳವನ್ನು ಪ್ರವೇಶಿಸಿದುದರ ಪರಿಣಾಮವಾಗಿಯೇ ಶೇಖ ಅಬ್ದುಲ್ಲಾರ ತಲೆತಿರುಗಿತೆಂದು ಹೆಚ್ಚಿನವರ ಆರೋಪ. ಆದರೆ ಸ್ಟೀವನ್ಸನ್ನರೇ ಅನಂತರ ಹೇಳಿದಂತೆ, ಸರಕಾರದ ಯಾವುದೇ ಧೋರಣೆಯ ಮೇಲೂ ಪ್ರಭಾವಬೀರಲಾರದ ಪರಿಸ್ಥಿತಿಯಲ್ಲಿರುವ ಸ್ಟೀವನ್ಸನ್ನರಿಂದ ಶೇಖ ಅಬ್ದುಲ್ಲಾರಿಗೆ ಪ್ರಯೋಜನವಾದೀತೆನ್ನುವುದು ಕೇವಲ ಕಲ್ಪನೆ. ಸ್ವತಂತ್ರ ಕಾಶ್ಮೀರದ ಪ್ರಶ್ನೆ ಇರಲಿ-ಭಾರತ ಪಾಕಿಸ್ತಾನಗಳಲ್ಲಿ ಯಾವುದಾದರೊಂದು ದೇಶದೊಂದಿಗೆ ಸಮಾವೇಶಗೊಳ್ಳುವ ಸಂಗತಿಯಲ್ಲಿಯೇ ಆಗಲಿ, ಆರ್ಥಿಕ ಧೋರಣೆಯೇ ಕಾಶ್ಮೀರದ ಮೇಲೆ ವರ್ಚಸ್ಸನ್ನು ಬೀರ

(೧೧ನೇ ಪುಟ ನೋಡಿರಿ)

The Canara Mutual Assurance Co., LTD.
Estd. 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು, ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.
ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

★ ತೆಂಗಿನ ನಾರಿನ ಉಪಯೋಗ ★

ಹತ್ತುಲಕ್ಷ ಜನಕ್ಕೆ ಅನ್ನಕೊಡುವ ಗೃಹೋದ್ಯಮ

ನಮ್ಮ ದೇಶದಲ್ಲಿ ತೆಂಗಿನ ನಾರಿನ ಉಪಯೋಗವು ಪ್ರಾಮುಖ್ಯವಾದೊಂದು ಗುಡಿ ಕೈಗಾರಿಕೆಯ ರೂಪದಲ್ಲಿ ಒಂದು ಶತಮಾನದಿಂದ ಈಚೆಗೆ ಬೆಳೆದುಬಂದಿದೆ. ಹಾಗೆಂದು ತಾಂತ್ರಿಕ ರೀತಿಯ ಅಭಿವೃದ್ಧಿಯು ಏನೇನೂ ನಡೆದಿರುವುದಿಲ್ಲ ಪುರಾತನ ಸಂಪ್ರದಾಯದಂತೆಯೇ ಈ ಕೈಗಾರಿಕೆಯ ಎಲ್ಲ ಕಾರ್ಯಭಾಗಗಳೂ ನೆರವೇರುತ್ತಿವೆ. ಈ ಕೈಗಾರಿಕೆ ಈಗ ಉತ್ಕಟ ಪರಿಸ್ಥಿತಿಯನ್ನು ಇದಿರಿಸುತ್ತಿದೆಯೆಂದೂ ಇದನ್ನೇ ಹೊಂದಿಕೊಂಡ ಸಾವಿರಾರು ಜನರು ತಮಗೆ ಅನುಕೂಲವಾದ ಬೇರೆ ಯಾವುದೊಂದು ಉದ್ಯೋಗವನ್ನೂ ಕೈಗೊಳ್ಳಲಾರದವರಾಗಿ ಕಷ್ಟಕ್ಕೆ ಬಲಿಯಾಗಿರುವರೆಂದೂ ಕೇಳುತ್ತೇವೆ ಪಡುಕರಾವಳಿಯಲ್ಲಿ, ಮುಖ್ಯತಃ ತಿರುಕೊಚ್ಚಿಯಲ್ಲಿ, ತೆಂಗಿನ ನಾರಿನ ಉಪಯೋಗವು ಜನತೆಯ ಆರ್ಥಿಕ ಬಲದ ಮೇಲೆ ಮಹತ್ವದ ಪರಿಣಾಮವನ್ನುಂಟುಮಾಡುತ್ತದೆ. ಸುಮಾರು ೧೦ ಲಕ್ಷ ಜನರು ಈ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಒಂದೊಮ್ಮೆ ೧೯೩೯–೪೦ರ ಸುಮಾರಿಗೆ ಈ ಕೈಗಾರಿಕೆ ಕುಸಿಯಲು ತೊಡಗಿತು. ಮತ್ತೆ ಚೇತರಿಸಿಕೊಂಡರೂ ೧೯೪೮–೪೯ರಲ್ಲಿ ಇನ್ನೊಮ್ಮೆ ಈ ಸಂಕಟಕ್ಕೆ ಉದ್ದಿಮೆ ಗುರಿಯಾಯಿತು. ಪರಿಣಾಮದಲ್ಲಿ ನಿರ್ಯಾತವಾಗುವ ನಾರಿನ ಹಾಗೂ ನಾರಿನ ವಸ್ತುಗಳ ಬೆಲೆಯು ಅರ್ಧಕ್ಕಿಂತಲೂ ಹೆಚ್ಚು ಇಳಿಯಿತು. ನಿರ್ಯಾತ ವ್ಯಾಪಾರಕ್ಕೆ ಆಶ್ರಯವಾಗಿದ್ದ ವಿದೇಶೀ ಪೇಟೆಗಳಲ್ಲಿ ಹಲವು ನಮ್ಮ ಕೈ ಬಿಟ್ಟವು.

ಪ್ರಮುಖ ಗೃಹೋದ್ಯಮ

ಕರಾವಳಿಯ ಪ್ರತಿಯೊಂದೂ ಜಿಲ್ಲೆ ಹುರಿ ಹಗ್ಗದ ಕೈಗಾರಿಕೆಗೆ ಪ್ರಸಿದ್ಧವಾಗಿದೆ. ತಿರುಕೊಚ್ಚಿಯ ಕಯಂಕುಲಂ, ಆಲೆಪ್ಪಿ, ಶೆರ್ತಲ್ಲಿ, ನರಕ್ಕಲ್ ಮುಂತಾದ ಪುರಗಳಲ್ಲಿ ಈ ಉದ್ಯೋಗದ ಪ್ರಾಬಲ್ಯವನ್ನು ಕಾಣುತ್ತೇವೆ. ವಿದೇಶೀ ವಿನಿಮಯವನ್ನು ಇದು ಗಳಿಸಿಕೊಡುವ ಕಾರಣಕ್ಕಾಗಿಯೇ ಸರಕಾರಕ್ಕೂ ಈ ಕೈಗಾರಿಕೆಯ ಮೇಲೆ ಪ್ರೀತಿ ಹುಟ್ಟಿದೆ. ಕೈಯಿಂದಲೇ ಹುರಿಹಗ್ಗವನ್ನು ನೇಯುವ ಕೆಲಸ ನೆರವೇರುತ್ತದೆ–ಅವುಗಳು ತಯಾರಾದ ಸ್ಥಳಗಳ ಹೆಸರಿನಲ್ಲಿ ಆ ವಸ್ತುಗಳ ಗುಣವನ್ನು ಅಳೆಯುವುದು ವಾಡಿಕೆ. ಹೀಗಾಗಿ ಅಂಜೆಗೊ, ಅರತೊರಿ, ಅಷ್ಟಾಮುಡಿ, ಅಲಪ್ಪದನ್, ವೈಕೊಮ್, ಅಲೂರ ಮುಂತಾದ ಜಾತಿಗಳು ವಿದೇಶದಲ್ಲಿ ಹೆಸರುಗಳಿಸಿವೆ. ವಸ್ತುಗಳ ಬೆಲೆಯು ಅದರ ಸೌಂದರ್ಯವನ್ನು, ನಾರಿನ ತಾಳಿಕೆಯನ್ನು ಕುರಿಯ ಸಾಮರ್ಥ್ಯ ಹಾಗೂ ಹುರಿದ ರೀತಿಯನ್ನು ಹೊಂದಿಕೊಂಡಿದೆ.

ಭಾರತದಲ್ಲಿ ಬೆಳೆಯುವ ತೆಂಗಿನಲ್ಲಿ ನೂರಕ್ಕೆ ೮೨ ತಿರುಕೊಚ್ಚಿಯ ಉತ್ಪಾದನೆಯಾಗಿರುತ್ತದೆ ಆದರೆ ಹುರಿಹಗ್ಗದ ಕೈಗಾರಿಕೆಯ ಮಟ್ಟಿಗೆ ಈ ಪ್ರಮಾಣವು ನೂರಕ್ಕೆ ೮೫. ಭಾರತದಲ್ಲಿ ಸಾಮಾನ್ಯತಃ ವರ್ಷಕ್ಕೆ ೯೭೦೦೦ ಟನ್ನುಗಳಷ್ಟು ಹುರಿ ಹಗ್ಗದ ವಸ್ತುಗಳು ಸಿದ್ಧವಾಗುತ್ತವೆಂದು ತಿಳಿದಿದೆ. ಇವುಗಳಲ್ಲಿ ತಿರುಕೊಚ್ಚಿಯಿಂದ ವಿದೇಶಗಳಿಗೆ ನಿರ್ಯಾತ ಹೊಂದುವ ವಸ್ತುಗಳ ಪ್ರಮಾಣ ೭೫೦೦೦ ಟನ್ನು. ಉಳಿದುದನ್ನು ಭಾರತದ ಬೇರೆಡೆಗೆ ರೈಲು ಮೂಲಕ ಕಳಿಸಿ ಕೊಡುತ್ತಾರೆ; ಅಥವಾ ರಾಜ್ಯದೊಳಗೆಯೇ ಉಪಯೋಗಿಸಲ್ಪಡುತ್ತದೆ.

ತಗ್ಗಿದ ನಿರ್ಯಾತ ವ್ಯಾಪಾರ

ಕಳೆದೆರಡು ದಶಕಗಳಲ್ಲಿ ವಿದೇಶಗಳ ನಿರ್ಯಾತ ವ್ಯಾಪಾರ ಪ್ರೋತ್ಸಾಹದಾಯಕವಾಗಿ ಕಂಡು ಬಂದಿದ್ದರೂ—ಬೆಲೆಯ ಕುಸಿಯುವಿಕೆಯೊಂದೇ ಆತಂಕವಾಗಿ ಪರಿಣಮಿಸಿವೆ. ತೆಂಗಿನ ನಾರಿನ ಕೈಗಾರಿಕೆಯಲ್ಲಿ ತೆಂಗಿನ ಸಿಪ್ಪೆಯನ್ನು ಸಂಗ್ರಹಿಸುವುದು ಒಂದು ದೊಡ್ಡ ಕೆಲಸ; ಮತ್ತದನ್ನು ಕೊಳೆಯಿಸಿ ನಾರನ್ನು ತೆಗೆಯುವುದು ಇನ್ನೂ ಕಷ್ಟದ ಕೆಲಸ. ಇವುಗಳಿಗೋಸ್ಕರವೇ ಹೆಚ್ಚು ವೆಚ್ಚ ಮಾಡುವ ಪ್ರಮೇಯ ಬಂದೊದಗುತ್ತದೆ. ನಾರಿಗೆ ಸೌಕರ್ಯಗಳ ಅನುಕೂಲತೆ ಹೆಚ್ಚಿಕೊಂಡರೆ ಹಳ್ಳಿಯ ಮೂಲೆಯಿಂದಲೂ ತೆಂಗಿನ ಸಿಪ್ಪೆಯನ್ನು ಸುಲಭದಲ್ಲಿ ಸಂಗ್ರಹಿಸಬಹುದು. ಹಾಗೆಯೇ ಸುಲಭದಲ್ಲಿ ನಾರನ್ನು ತೆಗೆಯುವ ಯಾಂತ್ರಿಕ ಸಲಕರಣೆ ಇದ್ದರೆ ಉತ್ಪಾದನಾ ವೆಚ್ಚವು ತಗ್ಗಿಕೊಂಡು ಕೈಬಿಟ್ಟ ವಿದೇಶೀ ಪೇಟೆಗಳು ಮರಳಿ ದೊರೆತಾವು. ಆದರೆ ಇದರಿಂದ ನಮ್ಮ ಸಾವಿರಾರು ಜನಕ್ಕೆ ಕೆಲಸ ಹೋಗುವ ಭಯವಿದೆ. ಹೆಂಗಸರೂ ಮಕ್ಕಳೂ ಮನೆಯಲ್ಲಿ ಕುಳಿತು ಮಾಡುವ ಈ ಕೆಲಸ ಯಂತ್ರಗಳ ಅಧೀನವಾದರೆ— ಇವರೆಲ್ಲರೂ ಪೂರ್ಣ ನಿರುದ್ಯೋಗಿಗಳಾಗುವರು.

ತಿರುಕೊಚ್ಚಿಯಲ್ಲಿ ೩೦% ತೆಂಗಿನ ನಾರು ಚಾಪೆ ಹಾಗೂ ಅದಕ್ಕೆ ಸಂಬಂಧಿಸಿದ ಬೇರೆ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತದೆ. ಉಳಿದ ನಾರನ್ನು ವಿದೇಶಗಳಿಗೆ ರಫ್ತು ಮಾಡುವ ಪರಿಪಾಠ ಬೆಳೆದು ಬಂದಿದೆ. ಬೆಲ್ಜಿಯಂ, ಹೊಲ್ಲಂಡ ಮತ್ತು ಆಸ್ಟ್ರೇಲಿಯಾಗಳು ತಮ್ಮಲ್ಲಿಯ ಜನಕ್ಕೆ ಉದ್ಯೋಗ ಕಲ್ಪಿಸುವ ಉದ್ದೇಶದಲ್ಲಿ ೫-೧೦ರಷ್ಟು ಬೇಕಾದಷ್ಟು ನಾರನ್ನು ಆಮದುಮಾಡಿಕೊಳ್ಳುತ್ತವೆ. ಇಂಗ್ಲೆಂಡು, ಅಮೇರಿಕಾ, ನ್ಯೂಜೀಲೇಂಡು ಇವುಗಳೂ ನಮ್ಮ ನಾರನ್ನು ತರಿಸುತ್ತವೆ. ದಕ್ಷಿಣ ಯುರೋಪು, ಸೋವಿಯೆಟ್ ಮುಂತಾದವುಗಳು ನಮ್ಮ ನಾರನ್ನು ಆಮದುಮಾಡಿಕೊಳ್ಳುತಿದ್ದರೂ ತಮ್ಮ ಆರ್ಥಿಕ ದುರವಸ್ಥೆಯ ಕಾರಣದಿಂದೆಂಬಂತೆ, ಈಗ ಆಮದನ್ನು ನಿಲ್ಲಿಸಿವೆ.

ಪ್ರಚಾರದ ಆವಶ್ಯಕತೆ

ನಾರಿನ ಚಾಪೆ ಮುಂತಾದವುಗಳು ನೆಲವನ್ನು ಮುಚ್ಚುವ ಸಾಧನಗಳಾದುದರಿಂದ ಈ ಉದ್ದೇಶದಿಂದ ತಯಾರಾಗುವ ಬೇರೆ ವಸ್ತುಗಳ ಬೆಲೆ ಹಾಗೂ ಬಾಳಿಕೆಯೊಂದಿಗೆ ಸ್ವಾಭಾವಿಕವಾಗಿಯೇ ಸ್ಪರ್ಧಿಸಬೇಕಾಗುತ್ತದೆ. ನಮ್ಮ ನಾರಿನ ಕೈಗಾರಿಕೆಯು ಸುಮಾರು ನಾಲ್ಕುಕೋಟಿ ರೂಪಾಯಿ ಬೆಲೆಬಾಳುವ ೭೫೦೦೦ ಟನ್ನುಗಳಷ್ಟು ಸರಕನ್ನು ನಿರ್ಯಾತಮಾಡುತಿದ್ದರೂ ಜಾಗತಿಕ ಪೇಟೆಯಲ್ಲಿ ಈ ಕೈಗಾರಿಕೆ ಸಣ್ಣದೆಂದೇ ಪರಿಗಣಿಸಲ್ಪಟ್ಟಿದೆ. ಹೀಗಾಗಿ ವಿದೇಶಗಳಲ್ಲಿ ಮುಖ್ಯತಃ ಯುರೋಪಿನಲ್ಲಿ ಉಣ್ಣೆಯ ವಸ್ತುಗಳ ಬೆಲೆ ತಗ್ಗಿಕೊಂಡಂತೆ-ಹುರಿಹಗ್ಗದ ಸಿದ್ಧ ವಸ್ತುಗಳ ಬೆಲೆ ಸಹ ಅನಿವಾರ್ಯವಾಗಿ ಕುಸಿಯುತ್ತದೆ. ಉಣ್ಣೆಯಂಥ ದೊಡ್ಡ ಕೈಗಾರಿಕೆಯೊಂದಿಗೆ ನಮ್ಮ ಹುರಿಹಗ್ಗದ ಉದ್ದಿಮೆ ಪೈಪೋಟಿ ಮಾಡಲಾರದೆ ಮೂಲೆಗುಂಪಾಗುವ ಭಯ ಇಂದು ಎಂದಿಗಿಂತಲೂ ಹೆಚ್ಚಿಕೊಂಡಿದೆ. ವಿದೇಶೀ ಪೇಟೆಗಳು ಉಣ್ಣೆಯ ವಸ್ತುಗಳ ಹೆಚ್ಚಳ ಹಾಗೂ ಅಗ್ಗ ಬೆಲೆಯಿಂದ ಒಂದೊಂದೇ ಆಗಿ ನಮ್ಮ ಕೈಬಿಡುತ್ತಿರುವುದರಿಂದ ಯೋಗ್ಯ ಪ್ರಚಾರದ ಮೂಲಕ ನಮ್ಮ ಪೇಟೆಯನ್ನು ವಿಸ್ತರಿಸುವ ಆಗತ್ಯವಿದೆ. ಭಾರತದೊಳಗೆಯೇ ಹುರಿಹಗ್ಗದ ಸಿದ್ಧ ಸರಕುಗಳ ಬೇಡಿಕೆ ಹೆಚ್ಚಿಕೊಳ್ಳುವ ಭರವಸೆ ಈಗ ಕಾಣುತ್ತಿಲ್ಲ— ಏಕೆಂದರೆ ನೂರಕ್ಕೆ ಮೂರರಷ್ಟು ಮಾತ್ರ ಭಾರತದ ಉಪಯೋಗ– ನಾವೆಲ್ಲರೂ ಬಡವರಾದ ಕಾರಣ ವಿಲಾಸೋಪಭೋಗದ ವಸ್ತುವೆಂದು ಸಿದ್ಧಗೊಂಡು ಕಾಲೊರಸು, ಚಾಪೆ ಮುಂತಾದವುಗಳನ್ನು ಹೆಚ್ಚಾಗಿ ಬಳಸುವ ಸ್ಥಿತಿಯಲ್ಲಿಲ್ಲ. ಸಾಧ್ಯವಾದರೆ, ಸರಕಾರವು ತನ್ನ ಕರ್ತೃ ವೆಚ್ಚದಿಂದ ಕಟ್ಟಿಸುವ ಮನೆ ಹಾಗೂ ಭವನಗಳಿಗೆ ಹುರಿಹಗ್ಗದ ಚಾಪೆ ಮುಂತಾದುವುಗಳನ್ನು ಕೊಂಡುಕೊಳ್ಳಬಹುದು. ಸರಕಾರ ಇದನ್ನು ಆಲೋಚಿಸಬೇಕು. ನಾರಿನ ಮಂಡಳಿಯೊಂದು ಈಗಾಗಲೇ ಸ್ಥಾಪನೆಗೊಂಡಿರುವುದರಿಂದ ಸರಕಾರ ಯೋಗ್ಯ ಮಾರ್ಗದರ್ಶನವನ್ನು ಪಡೆಯುವ ಆಶೆ ಇದೆ.

ಉತ್ತಮ ತರದ ಬ್ಯಾಂಕಿಂಗ್ ವ್ಯವಹಾರ

ನೀವು ಸೇವಿಂಗ್ಸ್ ಬ್ಯಾಂಕ್ ಖಾತೆಯೊಂದನ್ನು ತೆರೆದರೆ ನಿಮಗದು ಅನೇಕ ವಿಧಗಳಿಂದ ಅನುಕೂಲವಾದುದೆಂಬುದನ್ನು ಮನಗಾಣುವಿರಿ. ನೀವು ಲೇವಾದೇವಿಯನ್ನು ಚೆಕ್ ಮೂಲಕ ನಡೆಸುವ ಸೌಕರ್ಯವಿದೆ. ನಮ್ಮ ಸಿಬ್ಬಂದಿಯು ಎಷ್ಟೊಂದು ಕ್ಷಿಪ್ರ ಮತ್ತು ಕ್ಲುಪ್ತವಾಗಿದೆಯೆಂದರೆ ನೀವು ಒಪ್ಪಿಸಿದ ನಿಮಿಷಗಳಲ್ಲಿಯೇ ನಿಮ್ಮ ಹಣ ಕೊಡಬಹುದು ಯಾ ಚೆಕ್ ಮೂಲಕ ಪಡೆಯಬಹುದು. ಬಡ್ಡಿಯ ದರವಾದರೂ ನಿಮ್ಮ ಉಳಿಕೆಯು ವೃದ್ಧಿಯಾಗಲು ಅನುಕೂಲವಾಗುವಂತೆ ಆಕರ್ಷಕವಾಗಿಯೇ ಇರುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

In the Court of the Subordinate Judge of South Kanara.

R. I. A. No. 1612/1953 in O. S. No 52/1953
(IInd Additional Court)

Between:

The District Church Council of the United Basel Mission represented by its President Rev. K. R. Karunakar ... Petitioner (Plaintiff)

and

A. M. Jeremiah (since dead) and others ... Respondents (Defendants)

NOTICE

To,

R—2 Mrs. Trephine Jasmine Jeremiah Widow of A. M. Jeremiah.

R—3 Albert Jeremiah son of A. M. Jeremiah

Both are residing at Kankanady, Mangalore town.

Please take notice that the Petitioner above-named has applied to this Court that you may be impleaded as D fendants 3 and 5 and as legal representatives of the deceased 1st Defendant A. M. Jeremiah in the above suit and now the said application stands posted to 18—9—1953 for hearing. Should you fail to appear on that day either in person or by pleader the case will be decided in your absence.

(By order of the Court)

Mangalore, Date 3—9—1953 (Sd.) Sri. G. Somasheker Rao.
Vakil for Petitioner.

ದಯಮಾಡಿ ನಿಮ್ಮ ಚಂದಾಹಣ ಕಳಿಸಿರಿ

ಮೈಸೂರು ಕಾಂಗ್ರೆಸ್ಸಿನಲ್ಲಿ ವೈಮನಸ್ಯದ ದುಶ್ಚಿಹ್ನೆ

ಮಂತ್ರಿಮಂಡಳದೊಡನಿದ್ದ ಭಿನ್ನಾಭಿಪ್ರಾಯವನ್ನು ಪಕ್ಷದ ಚೌಕಟ್ಟಿನಲ್ಲಿ ಇತ್ಯರ್ಥಿಸುವುದವಶ್ಯ

ಎರಡು ಆಯೋಗ ಬೇಕು

ಕಳೆದವಾರ ಲೋಕಸಭೆಯು ಅಂಗೀಕರಿಸಿದ ಆಂಧ್ರ ರಾಜ್ಯ ವಿಧೇಯಕವನ್ನು ರಾಜ್ಯ ಪರಿಷತ್ತು ಈಗ ಪರಿಶೀಲನೆಗೆ ತೆಗೆದುಕೊಂಡಿದೆ. ಆಂಧ್ರರಾಜ್ಯ ನಿರ್ಮಾಣದ ಆವಶ್ಯಕತೆಯನ್ನು ಕುರಿತಾದ ಭಾಷಣಗಳು ಯಥಾಪ್ರಕಾರ ಇಲ್ಲಿಯೂ ನಡೆದವು. ಉಪಗೃಹ ಸಚಿವರಾದ ಶ್ರೀ ದಾತಾರರಿಂದ ಆಂಧ್ರದ ಪ್ರಯೋಗ ಯಶಸ್ವಿಯಾದರೆ-ಅದು ಯಶಸ್ವಿಯಾಗಿಯೇ ತೀರುವುದು—ಉಳಿದ ಭಾಷಾರಾಜ್ಯಗಳ ರಚನೆಯೂ ಯಶಸ್ವಿಯಾಗುವುದೆಂದು ತಿಳಿಯಲು ಯಾವ ತೊಂದರೆಯೂ ಇಲ್ಲವೆಂಬ ಆಶ್ವಾಸನೆ ದೊರೆತಿದೆ. ಆಂಧ್ರದ ಪ್ರಶ್ನೆಯು ಒಂದು ರಾಜ್ಯವನ್ನು ಮಾತ್ರ ವಿಭಜಿಸುವದಾಗಿದ್ದು ಸುಲಭರೂಪದಲ್ಲಿ ಬಗೆಹರಿಸಲು ಬಂತು. ಆದರೆ ದಕ್ಷಿಣದ ಬೇರೆ ರಾಜ್ಯಗಳು, ಮುಖ್ಯತಃ ಕರ್ನಾಟಕ ಭಾಷಾ ರಾಜ್ಯದ ಬಗ್ಗೆ ಈ ಅನುಕೂಲತೆ ಇಲ್ಲ. ನೆರೆಹೊರೆಯ ಬೇರೆ ಭಾಷಾವಾದಿಗಳೊಡನೆ ಏಕಮನವಾಗಿಯೇ ಒಂದು ತಿಳುವಳಿಕೆಗೆ ಬರುವ ಆಗತ್ಯ ಇಲ್ಲಿದೆ. ಭಾರತ ಸರಕಾರ ನೇಮಿಸಲಿರುವ ಉಚ್ಚಾಧಿಕಾರ ಸಂಪನ್ನವಾದ ಆಯೋಗವು ಈ ವಿಷಯಗಳಲ್ಲಿ ಯೋಗ್ಯ ಪರಿಶೀಲನೆಗಳನ್ನು ನಡೆಸಿ, ನಮ್ಮೆಲ್ಲರ ಮನೋಭೀಷ್ಟವನ್ನು ವಿಧಾಯಕ ರೀತಿಯಲ್ಲಿ ಪೂರೈಸುವ ಪ್ರಯತ್ನ ಮಾಡೀತೆಂದು ಭರವಸೆ ಇದೆ. ದಕ್ಷಿಣದಲ್ಲಿ ಭಾಷಾ ರಾಜ್ಯಗಳ ಸಮಸ್ಯೆಯು ಉತ್ತರದ ಪರಿಸ್ಥಿತಿಗಿಂತ ತೀರ ಭಿನ್ನವಾಗಿರುವುದರಿಂದ ಭಾರತ ಸರಕಾರವು ಎರಡು ಆಯೋಗಗಳನ್ನು ನೇಮಿಸಬೇಕೆಂದು ದಕ್ಷಿಣ ಕನ್ನಡದ ಪ್ರತಿನಿಧಿಗಳಾದ ಶ್ರೀ ಕೆ. ಸದಾನಂದ ಹೆಗ್ಗಡೆಯವರು ಒಂದು ಮಹತ್ವದ ಸೂಚನೆಯನ್ನು ಮಾಡಿರುವರು. ಭಾಷಾ ರಾಜ್ಯಗಳ ಕುರಿತು ಉತ್ತರ ಭಾರತದಲ್ಲಿ ಉಪೇಕ್ಷೆಯೇ ಕಾಣುತ್ತಿದೆ. ಆದರೆ ದಕ್ಷಿಣದಲ್ಲಿ ಅದರ ಬಗ್ಗೆ ತುಂಬ ಉತ್ಸಾಹವುಂಟು. ಆಂಧ್ರದ ಪ್ರಯೋಗವನ್ನು ಯಶಸ್ವಿಯಾಗಿಸಬೇಕೆಂದು ಆಂಧ್ರ ಸದಸ್ಯರಿಗೆ ಮಾತ್ರವಲ್ಲ- ದಕ್ಷಿಣದ ಬೇರೆ ಭಾಷಾ ವಾದಿಗಳೂ ನೋಡುತ್ತಿದ್ದಾರೆ. ದಾಕ್ಷಿಣಾತ್ಯರ ಮನೋಭೂಮಿಕೆಯನ್ನು ಶೀಘ್ರದಲ್ಲಿಯೇ ಮನವರಿಕೆ ಮಾಡಿಕೊಳ್ಳಲು ಅನುವಾಗುವಂತೆ ಪ್ರತ್ಯೇಕ ಸಮಿತಿಯನ್ನು ನೇಮಿಸುವುದು ಒಳಿತೇ ಆಗಿದೆ. ಈ ವಿಷಯದಲ್ಲಿ ಉದಾಸೀನ ಹಾಗೂ ವಿಳಂಬಗಳು ದಕ್ಷಿಣದಲ್ಲಿ ಸರಕಾರದ ಮಟ್ಟಿಗೆ ವಿಪರೀತ ಪರಿಣಾಮ ಮಾಡುವ ಭಯವಿದೆ. ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆಯಲ್ಲಿ ಏಕೀಕರಣದ ಪ್ರಶ್ನೆಯು ಜನರ ಮನಸ್ಸನ್ನು ಎಷ್ಟು ಉದ್ರೇಕಗೊಳಿಸಿದೆಯೆಂದರೆ—ಅಲ್ಲಿಂದ ಮುಂಬಯಿ ಶಾಸನ ಸಭೆಗೆ ನಡೆದ ಉಪಚುನಾವಣೆಗಳಲ್ಲಿ ಏಕೀಕರಣ ವಾದಿಗಳ ಮುಂದೆ ಕಾಂಗ್ರೆಸು ಸೋಲು ಪಡೆಯಿತು. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗುವ ಆಗತ್ಯ ಕಂಡು ಇಷ್ಟು ದಿವಸ ಭಾಷಾಗೊಂದಲದಿಂದ ದೂರವಿದ್ದುಕೊಂಡುದೇನೋ ಸರಿ- ಆದರೆ ಕಾಂಗ್ರೆಸದ ಬಲವು ಭಾಷಾ ರಾಜ್ಯದ ಪ್ರಶ್ನೆಯಿಂದ ಕುಸಿದು ಹೋಗಲು ಅವಕಾಶ ನೀಡಬಾರದು.

ಉತ್ಸಾಹದ ಪ್ರಯತ್ನ

ಮುಂಬಯಿಯ ಶಾಸನ ಸಭೆಯ ಕರ್ನಾಟಕ ಪ್ರದೇಶದ ಕಾಂಗ್ರೆಸು ಪ್ರತಿನಿಧಿಗಳು ಪ್ರಧಾನಿ ನೆಹರೂರವರಿಗೆ ಇಷ್ಟರಲ್ಲಿಯೇ ಒಂದು ಮನವಿಯನ್ನು ಅರ್ಪಿಸಿ ಕರ್ನಾಟಕ ಏಕೀಕರಣದ ಸಂಗತಿಯಲ್ಲಿ ಇತ್ತೀಚೆಗೆ ನಡೆದ ಘಟನೆಗಳನ್ನು ಅವರಿಗೆ ವಿದಿತಪಡಿಸುವರೆಂದು ಕೇಳುತ್ತೇವೆ. ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತೆಂಬ ಈಚಿನ ಸಂಘಟನೆಯೊಂದು ಏಕೀಕರಣದ ಮಾರ್ಗದಲ್ಲಿ ಆತಂಕಗಳನ್ನು ತಂದೊಡ್ಡುತಿರುವುದಾಗಿಯೂ ವಿಧ್ವಂಸಕ ಕೃತ್ಯಗಳಿಂದ ಪ್ರಾಂತರಚನೆ ಸಾಧ್ಯವಾಗಲಾರದೆಂದೂ ಈ ಸದಸ್ಯರ ಅಭಿಪ್ರಾಯ. ಭಾರತ ಸರಕಾರವು ಕರ್ನಾಟಕ ರಾಜ್ಯ ನಿರ್ಮಾಣದ ಬಗ್ಗೆ ಬೇಗನೇ ಒಂದು ಘೋಷಣೆಯನ್ನು ಹೊರಡಿಸುವ ಆವಶ್ಯಕತೆಯನ್ನು ಈ ಸದಸ್ಯರು ನೆಹರೂರಿಗೆ ತಿಳಿಸಿ ಹೇಳುವರು. ಪ್ರದೇಶ ಕಾಂಗ್ರೆಸ ಸಮಿತಿಯು ಅಕ್ಟೋಬರ ೩ನೇ ದಿನಾಂಕದೊಳಗೆ ಭಾರತ ಸರಕಾರದಿಂದ ಅಪೇಕ್ಷಿತ ರೀತಿಯ ಭರವಸೆ ದೊರೆಯದಿದ್ದರೆ ಶಾಸನಸಭಾ ಸದಸ್ಯರೆಲ್ಲ ರಾಜೀನಾಮೆ ಕೊಡಬೇಕೆಂದು ಹಿಂದೆ ನಿರ್ಣಯಿಸಿರುವುದನ್ನು ನೆಹರೂರ ಲಕ್ಷ್ಯಕ್ಕೆ ತರಲು ಪ್ರಯತ್ನ ನಡೆದಿದೆ. ಭಾಷಾರಾಜ್ಯಗಳ ರಚನೆಯ ಕುರಿತು ಕಾಂಗ್ರೆಸು ಭರವಸೆಗಳನ್ನು ಕೊಟ್ಟು ಜನತೆಯಲ್ಲಿ ಸಂಪಾದಿಸಿದ ಪ್ರೀತಿಯು ಉದ್ದೇಶವು ಕಾರ್ಯರೂಪಕ್ಕೆ ಬರುವ ಕ್ಷಣದಲ್ಲಿ ಮಾಯಗೊಳ್ಳುವುದಕ್ಕೆ ಬಿಡಬಾರದೆಂದೂ "ಕಾಂಗ್ರೆಸ ಉಳುಮೆ ಕೆಲಸಮಾಡಿದ ವಿಷಯದಲ್ಲಿ ಅ. ಕ. ಏ. ಪರಿಷತ್ತಿನಂಥ ಸಂಘಟನೆ ಮೂಗು ಚಾಚಿ, ಕೀರ್ತಿ ಪಡೆಯಲು ಬಿಡಬಾರದೆಂದೂ ಕೆಲವರ ಆಶಯವಿದ್ದಂತಿದೆ. ಕರ್ನಾಟಕದ ಪ್ರಶ್ನೆಯು ಬಿಡಿಸಲ್ಪಡಬೇಕೆಂಬ ಬಗ್ಗೆ ಉತ್ತರ ಕರ್ನಾಟಕದಲ್ಲಿ ಎಂದಿಲ್ಲದ ಔತ್ಸುಕ್ಯ ಕಂಡು ಬಂದರೆ-ಆಂಧ್ರದಲ್ಲಿ ಹೊಸ ರಾಜ್ಯವನ್ನು ಸುವ್ಯವಸ್ಥಿತವಾದ ನೆಲಗಟ್ಟಿನ ಮೇಲೆ ಸ್ಥಾಪಿಸುವ ಪ್ರಯತ್ನಗಳು ನಡೆದಿವೆ. ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂದ ಪ್ರಾರಂಭದಿಂದಲೇ ಗವರ್ನರರ ಆಡಳಿತ ತೊಡಗುವ ಪ್ರಮೇಯ ಬಾರದಂತೆ ಎಲ್ಲ ಆಂಧ್ರರೂ ಒಗ್ಗಟ್ಟಿನಿಂದ ಪರಸ್ಪರ ಸಹಕರಿಸಿ ಶ್ರಮಿಸಲು ಕಟಿಬದ್ಧರಾದಂತೆ ತೋರುತ್ತದೆ. ಕಮ್ಯೂನಿಷ್ಟರನ್ನು ಬಿಟ್ಟು ಬೇರೆಲ್ಲ ಪಕ್ಷಸಂಗಡಗಳು ಜನಪ್ರಿಯವಾದ ಹಾಗೂ ಸಮರ್ಥವಾದ ಸರಕಾರದ ರಚನೆಯ ಪ್ರಯತ್ನದಲ್ಲಿ ಮಗ್ನವಾಗಿರುತ್ತವೆ. ಆಂಧ್ರ ಧುರೀಣರಲ್ಲಿ ಪ್ರಮುಖರಾದ ಶ್ರೀ ಸಂಜೀವ ರೆಡ್ಡಿಯವರು ಈಗ ತಾನೆ ಶಾಸನ ಸಭೆಗೆ ಉಪಚುನಾವಣೆಯಲ್ಲಿ ಆರಿಸಿಬಂದಿದ್ದಾರೆ. ಕಾಂಗ್ರೆಸ ಪಕ್ಷದ ನಾಯಕ ಪಟ್ಟವೂ ದಲೇ ಅವರ ಹೆಗಲೇರಿರುತ್ತದೆ. ಇನ್ನೊಬ್ಬ ನಾಯಕರಾದ ಶ್ರೀ ಪ್ರಕಾಶಮರು ಪತ್ರಿಕೆಗಳಿಗೊಂದು ಹೇಳಿಕೆ ಕೊಟ್ಟು, ಮುಖ್ಯ ಮಂತ್ರಿಯಾಗಿ ಹೊಣೆ ಹೊರಲು ಯೋಗ್ಯತೆಯುಳ್ಳವರನ್ನು ಆಂಧ್ರ ಶಾಸನ ಸಭಾ ಸದಸ್ಯರು ದಕ್ಷತೆಯಿಂದ ಕಂಡು ಹಿಡಿಯುವ ಆಗತ್ಯವನ್ನು ಬಿಂಬಿಸಿದ್ದಾರೆ. ಇವರಿಬ್ಬರೂ ದೆಹಲಿಗೆ ತೆರಳಿದ್ದು--ನೆಹರೂ, ಕಟಜೂ ಮುಂತಾದವರೊಡನೆ ಸಮಾಲೋಚನೆ ನಡೆಸುವರೆಂದು ತಿಳಿದಿದೆ. ಪ್ರಜಾ ಸಮಾಜವಾದೀ ಪಕ್ಷದ ಸಹಕಾರದ ಸಂಗತಿಯಲ್ಲಿ ಆಂಧ್ರ ಕಾಂಗ್ರೆಸು ನಡೆದುಕೊಳ್ಳಬೇಕಾದ ರೀತಿಯ ಕುರಿತು ಸಂಜೀವ ರೆಡ್ಡಿಯವರು ವಿಶೇಷ ಮಾತುಕತೆಯನ್ನು ಕೈಗೊಳ್ಳುವ ನಿರೀಕ್ಷೆ ಇದೆ.

ಮೈಸೂರಿನ ಕಾಂಗ್ರೆಸ್ ಪಕ್ಷ

ಆಂಧ್ರದಲ್ಲಿ ಎಲ್ಲ ಪಕ್ಷ ಸಂಗಡಗಳೂ ಪರಸ್ಪರ ಸಹಕರಿಸಿ, ಒಟ್ಟಿಗೆ ದುಡಿಯಲು ಸಂಕಲ್ಪಿಸಿದಂತೆ ಭಾಸವಾಗುವಾಗ-ಮೈಸೂರಿನಲ್ಲಿ ಕಾಂಗ್ರೆಸ ಪಕ್ಷದೊಳಗೆಯೇ ಭಿನ್ನಾಭಿಪ್ರಾಯತಲೆದೋರಿ ಮುಖ್ಯಮಂತ್ರಿ ಹನುಮಂತಯ್ಯನವರ ಹಾಗೂ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ವೀರಣ್ಣ ಗೌಡರ ನಡುವೆ ಪುನಃ ಕ್ಲೇಶ ಉದ್ಭವಿಸಿರುವುದು ಶೋಚನೀಯ. ಶ್ರೀ ವೀರಣ್ಣ ಗೌಡರು ತಮ್ಮ ಕೆಲವು ಅನುಯಾಯಿಗಳೊಂದಿಗೆ ನೆಹರೂರನ್ನು ಕಂಡು, ಹನುಮಂತಯ್ಯನವರ ಸಂಬಂಧದಲ್ಲಿ ತಮ್ಮ 'ಪ್ರತಿಕ್ರಿಯೆಗಳನ್ನು ತಿಳಿಸಿದರೆಂದೂ ನೆಹರೂರವರು ಎಲ್ಲವನ್ನೂ ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳಲು ನೋಡಬೇಕೆಂದು ಹೇಳಿದರಾಗಿಯೂ ತಿಳಿಯುತ್ತದೆ. ಹನುಮಂತಯ್ಯನವರು ಬೆಂಗಳೂರಿನಲ್ಲಿ ತನ್ನನ್ನು ಮುಖ್ಯ ಮಂತ್ರಿ ಪದವಿಯಿಂದ ಉರುಳಿಸುವ ಹವಣಿಕೆಯಲ್ಲಿ ವೀರಣ್ಣ ಗೌಡರು ತೊಡಗಿರುವರೆಂದು ಬಹಿರಂಗವಾಗಿಯೇ ಸಾರಿದ ಮೇಲೆ ಪರಿಸ್ಥಿತಿಯು ಇನ್ನಷ್ಟು ಕೆಟ್ಟಿತು. ವೀರಣ್ಣ ಗೌಡರು ಹನುಮಂತಯ್ಯನವರ ಮೇಲೆ ದುರಾಡಳಿತದ ಗಂಭೀರ ಆರೋಪವನ್ನು ಹೊರಿಸಿದರಲ್ಲದೆ, ಅವರನ್ನು ಕಾಂಗ್ರೆಸ್ ಪಕ್ಷದ ನಾಯಕನಾಗಿ ಆರಿಸಿರುವುದಕ್ಕೆ ವ್ಯಸನ ಸೂಚಿಸಿದರು. ವೀರಣ್ಣ ಗೌಡರ ಆಪಾದನೆಗಳಲ್ಲಿ ಹುರುಳಿದೆಯೇ ಇಲ್ಲವೇ ಎಂಬ ವಿಷಯದ ಪರ್ಯಾಲೋಚನೆಗಿಂತಲೂ- ಬಹಿರಂಗ

ರೂ. 75,000

ರಿ. ನಂಬ್ರ 2791
ಟೆಲಿಗ್ರಾಂ: ಸ್ವರ್ಣಭೂಮಿ

ಎಲ್ಲಾ ಸರ್ವಸಮ 15 ಉತ್ತರಗಳಿಗೆ ಹಂಚಲಾಗುವುದು.

ಎಲ್ಲಾ ಬಹುಮಾನಗಳಿಗೂ ಗ್ಯಾರಂಟಿ ಇದೆ.

ಸರ್ವಸಮವಾದ ಪ್ರತಿಯೊಂದು ಉತ್ತರಕ್ಕೆ ರೂ. 5000. ಸುರುವಿನ ಎರಡು ಸಾಲುಗಳ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 1000. ಸುರುವಿನ ಸಾಲಿನ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 50. ಎ. ಬಿ. ಅಥವಾ ಎ. ಸಿ. ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 20.

a.b			
c			

ಜುಮ್ಲಾ ಮೊತ್ತವು 66 ಬರುವಂತೆ ಅಡ್ಡ ನೀಟ ಮತ್ತು ಮೂಲೆಯಿಂದ ಮೂಲೆಗೆ ಚೌಕದಲ್ಲಿಯ ಕೆಣಗಳನ್ನು 10ರಿಂದ 24ರ ತನಕ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆಯೇ ಉಪಯೋಗಿಸತಕ್ಕದು.

ಉತ್ತರ ಸ್ವೀಕರಿಸುವ ಕೊನೆಯ ದಿನ 19-9-53.

ಫಲಿತಾಂಶ ಪ್ರಕಟಣೆ: 30-9-53.

ಕಳೆದ ಬಾರಿಯ ಉತ್ತರ

16	18	25	11
15	21	22	12
19	17	10	24
20	14	13	23

ಜುಮ್ಲಾ 70

ಪ್ರವೇಶಧನ: ಒಂದು ಪ್ರವೇಶಕ್ಕೆ ರೂ. 1; 4ಕ್ಕೆ ರೂ. 3. 8 ಪ್ರವೇಶಗಳ ಪ್ರತಿ ಸೆಟ್ಟಿಗೆ ರೂ. 5. ಪ್ರವೇಶಧನವನ್ನು ಮನಿಯಾರ್ಡರ್, ಪೋಸ್ಟಲ್ ಆರ್ಡರ್ ಅಥವಾ ಬೇಂಕು ಡ್ರಾಫ್ಟುಗಳ ಮೂಲಕ ಕಳುಹಿಸತಕ್ಕದು. ಡೆಲ್ಲಿಯ ಸುಪ್ರಸಿದ್ಧ ಬೇಂಕೊಂದರಲ್ಲಿ ಮೊದಲು ಮಾಡಿಟ್ಟ ಉತ್ತರಕ್ಕೆ ಸರಿಹೋಲುವಂತಹುಗಳೇ ಸಿಂಧುವೆನಿಸಲ್ಪಡುವುವು. ಇಂಗ್ಲಿಷ್ ಅಂಕೆಗಳನ್ನೇ ಉಪಯೋಗಿಸಿರಿ. ಸರ್ವಸಮ ಉತ್ತರಗಳ ದಾಖಲೆಯ ಮೇಲೆ ರೂ. 75,000ದ ಹಂಚೋಣ ಹೊಂದಿರುವುದು. ಆದರೆ ಗ್ಯಾರಂಟಿ ಬಹುಮಾನಗಳನ್ನು ಕಡಿಮೆ ಮಾಡಲಾಗುವುದಿಲ್ಲ. ಉತ್ತರ ಬೇಕಾಗಿದ್ದಲ್ಲಿ ವಿಳಾಸ ಬರೆದ ಅಂಚೆ ಕವರನ್ನು ಕಳುಹಿಸಬೇಕು.

ಸೆಕ್ರೆಟರಿಯವರ ತೀರ್ಮಾನವು ಅಖೈರು ಮತ್ತು ನ್ಯಾಯಬದ್ಧವಾದುದು. ಕೆಳಗಿನ ವಿಳಾಸಕ್ಕೆ ಉತ್ತರವನ್ನು ಕಳುಹಿಸಿರಿ.

Capital Traders (N. U.) Regd.
Ch Chowk, Post Box 1475, DELHI.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಉದ್ಯೋಗ ಹೆಚ್ಚಿಸಲು ಪ್ರಯತ್ನಿಸುವ ಆಶ್ವಾಸನೆ

ನಿರುದ್ಯೋಗದ ಸಮಸ್ಯೆಯನ್ನು ಬಿಡಿಸುವ ಉದ್ದೇಶದಿಂದ ಯೋಜನೆಯನ್ನು ಪುನರ್ಘಟಿಸುವ ಸಂಕಲ್ಪ

ವಾಗಿ ಪಕ್ಷದ ನಾಯಕನನ್ನು ಹೀನೈಸುವುದು ಶಿಸ್ತಿಗೆ ಮತ್ತು ಗೌರವಕ್ಕೆ ತಕ್ಕುದೇ ಎಂಬ ಪ್ರಶ್ನೆ ಮುಖ್ಯ. ವೀರಣ್ಣ ಗೌಡರು ಪಕ್ಷದ ಚೌಕಟ್ಟಿನೊಳಗೆಯೇ ಈ ಮನಸ್ತಾಪವನ್ನು ಬಗೆಹರಿಸಲು ಪ್ರಯತ್ನಿಸುವುದನ್ನು ಬಿಟ್ಟು ಕಾಂಗ್ರೆಸ್ ಪಕ್ಷದ ಶೈಥಿಲ್ಯಕ್ಕೆ ಕಾರಣವಾಗುವ ಉದ್ಧಟ ಮಾರ್ಗದ ಅನುಸರಣೆಗೆ ಮನಗೊಟ್ಟುದು ಕೇವಲ ದುಡುಕುತನ. ಕಾಂಗ್ರೆಸ್ ಸರಕಾರ ದುರಾಡಳಿತೆ ನಡೆಸಿದ್ದರೆ, ವಿರೋಧೀ ಗುಂಪು ಅದರ ಬಗ್ಗೆ ತಕ್ಕ ಕ್ರಮ ಕೈಗೊಳ್ಳದೆ ಬಿಡುವುದಿಲ್ಲ. ಆಡಳಿತೆ ಸುಧಾರಿಸುವ ಇರಾದೆ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಇರುವುದು ನ್ಯಾಯವಾದರೂ-ಗೃಹಚ್ಛಿದ್ರವನ್ನು ಬೈಲಿಗೆಳೆಯುವುದು ಯಾರಿಗೂ ಭೂಷಣವಲ್ಲ. ಹನುಮಂತಯ್ಯನವರು ವಿವೇಕದಿಂದ ವರ್ತಿಸಿ, ತಾನು ಬಹಿರಂಗವಾಗಿ ಆರೋಪ ಪ್ರತ್ಯಾರೋಪಗಳನ್ನು ಮಾಡದೆ, ಪಕ್ಷದ ಮುಂದೆಯೇ ಪರಿಸ್ಥಿತಿಯನ್ನು ಸ್ಪಷ್ಟಗೊಳಿಸುವುದಾಗಿ ಹೇಳಿದರು; ಮತ್ತು ಮೈಸೂರಿನ ಕಾಂಗ್ರೆಸ್ ಪಕ್ಷದ ಸಭೆಯೂ ಎರಡು ದಿನಗಳ ಕಾಲ ನಡೆಯಿತು. ಹನುಮಂತಯ್ಯನವರನ್ನು ಧುರೀಣರನ್ನಾಗಿ ಆರಿಸಿದ ಪ್ರಯುಕ್ತ ದುಃಖವಾಗಿದೆಯೆಂದು ವೀರಣ್ಣ ಗೌಡರು ಹೇಳಿರುವುದರಿಂದ—ಹನುಮಂತಯ್ಯನವರು ಪಕ್ಷದ ವಿಶ್ವಾಸ ಯಾಚನೆಯನ್ನು ಮಾಡಬೇಕೆಂಬ ಸೂಚನೆ ಸಭೆಯ ಮುಂದೆ ಬಂತು. ಆದರೆ ಪಕ್ಷದಲ್ಲಿ ಕೆಲವೊಂದು ವರ್ಗಗಳು ವಿಶ್ವಾಸ ಯಾಚನೆಯಿಂದ ಪಕ್ಷದ ಬಲವು ಹೆಚ್ಚಿ ಒಗ್ಗಟ್ಟು ಉಂಟಾಗುವ ಬದಲು, ವಿಪರೀತ ಪರಿಣಾಮವೇ ಸಂಭವಿಸೀತೆಂದು ಆತಂಕ ವ್ಯಕ್ತಪಡಿಸಿದರು. ಧುರೀಣರು ತಂತಮ್ಮಲ್ಲಿಯೇ ಮಾತುಕತೆ ನಡೆಸಿ, ಮತಭೇದಗಳನ್ನು ನಿವಾರಿಸುವುದು ಅತ್ಯುತ್ತಮ ಉಪಾಯವೆಂಬ ಸಾಮಾನ್ಯವಾದ ಅಭಿಪ್ರಾಯಕ್ಕೆ ಪ್ರಾಯಶಃ ಪುಷ್ಟಿ ದೊರಕಲಿಲ್ಲ. ಹೀಗಾಗಿ ವಿಶ್ವಾಸ ಪ್ರದರ್ಶನದ ಉದ್ದೇಶದಿಂದ ಮತಗಣನೆಯನ್ನು ನಡೆಸುವ ಎತ್ತುಗಡೆ ನಡೆಯಿತು.

ಬಹಿರಂಗ ಆರೋಪ ಬೇಡ

ಆದರೆ ಇಷ್ಟರಲ್ಲಿ ಶ್ರೀ ವೀರಣ್ಣ ಗೌಡರು "ಅವಿಶ್ವಾಸದ ಗೊತ್ತುವಳಿಯನ್ನು ವಾಪಸು ಮಾಡಿಸಿಕೊಳ್ಳಬೇಕೆಂದು ನಾನು ಪ್ರಯತ್ನಿಸಿಲ್ಲವಾಗಿ ಹೇಳಿದ್ದೆ" ಎಂದು ಹೇಳಿದುದರಿಂದ ಸಭೆಯ ನಿರ್ಣಯವು ಒಮ್ಮೆಲೇ ಬದಲಾವಣೆ ಹೊಂದಿತು. ವಿಶ್ವಾಸ ಪ್ರದರ್ಶನಕ್ಕೋಸ್ಕರ ಮತಗಣನೆ ನಡೆಸುವುದವಶ್ಯವೆಂಬ ನಿರ್ಣಯವನ್ನು ಬದಿಗೊತ್ತಿ "ಕಾಂಗ್ರೆಸ್ ಪಕ್ಷದ ಅಥವಾ ಕಾಂಗ್ರೆಸಿನ ಯಾವ ಸದಸ್ಯನೇ ಆಗಲಿ ಮಂತ್ರಿಮಂಡಳವನ್ನು ಅಥವಾ ಕಾಂಗ್ರೆಸ ಸಂಸ್ಥೆಯನ್ನು ಪತ್ರಿಕೆಗಳಲ್ಲಿ ಇಲ್ಲವೆ ಸಾರ್ವಜನಿಕ ಸಭೆಗಳಲ್ಲಿ ಟೀಕಿಸಬಾರದು; ತಮ್ಮಲ್ಲಿ ಮತಭೇದಗಳನ್ನು ಸಂಸ್ಥೆಯಲ್ಲಿಯೆ ಬಗೆಹರಿಸಿಕೊಳ್ಳಬೇಕು' ಎಂಬಾರ್ಥದ ಗೊತ್ತುವಳಿಯನ್ನು ಅಂಗೀಕರಿಸಿತು. ಇದು ಯಥಾ ಯೋಗ್ಯವಾದ ಕ್ರಮ— ಮತ್ತು ಇಂಥ ಶಾಂತ ಕ್ರಮಗಳಿಂದಲೇ ಕಾಂಗ್ರೆಸ ಪಕ್ಷದ ಬಲವು ಹೆಚ್ಚಿಕೊಂಡೀತು. ಇದು ಬಿಟ್ಟು, ಪರಸ್ಪರರು ಮುಖದ ಮೇಲೆ ಕೆಸರು ಚೆಲ್ಲಿಕೊಳ್ಳುವ ಹವ್ಯಾಸಕ್ಕೆ ಬಿದ್ದರೆ ವೈಯಕ್ತಿಕವಾಗಿ ಧುರೀಣರ ವರ್ಚಸ್ಸು ತಗ್ಗುವುದಲ್ಲದೆ, ಕಾಂಗ್ರೆಸ್ ಪಕ್ಷದ ಸಂಘಟನೆಗೆಯೇ ಪ್ರತಿಕೂಲ ಪರಿಣಾಮವುಂಟಾಗುವುದು. ಮೈಸೂರು ಕಾಂಗ್ರೆಸಿನಂತೆ ಮದ್ರಾಸಿನ ರಾಜಕಾರಣದಲ್ಲೂ ಒಡಕು ತಲೆದೋರಿದೆಯೋ ಎಂಬ ಸಂಶಯ ಈಗ ತಾನೆ ಉಂಟಾಗಿದೆ. ಮುಖ್ಯವಾಗಿ ರಾಜಗೋಪಾಲಾಚಾರಿಯವರನ್ನು ಅಧಿಕಾರದಿಂದ ಉರುಳಿಸುವುದಕ್ಕೆ ಕೆಲವು ವಿಶಿಷ್ಟ ವರ್ಗಗಳು ಪ್ರಯತ್ನಿಸುತ್ತಿವೆಯೆಂಬ ಆಭಾಸ ತಲೆದೋರಿದೆ. ಈಚೆಗೆ ಬಂದ ವರದಿಗಳಂತೆ, ಆಂಧ್ರ ರಾಜ್ಯ ನಿರ್ಮಾಣದ ಬಳಿಕ, ಉಳಿದ ಮದ್ರಾಸು ರಾಜ್ಯಕ್ಕೆ, ರಾಜಾಜಿಯ ಧುರೀಣತ್ವದ ಅಗತ್ಯ ಇಲ್ಲವೆಂದು ತಮಿಳುನಾಡಿನ ಕಾಂಗ್ರೆಸು ಪಕ್ಷದ ಅಭಿಪ್ರಾಯವಂತೆ. ಶ್ರೀ ಕಾಮರಾಜ ನಾಡರರು ಮೊದಲಿಂದಲೂ ರಾಜಾಜಿಯ ಧುರೀಣತ್ವವನ್ನು ಮೆಚ್ಚುತ್ತಿರಲಿಲ್ಲವೆಂದೂ, ಆದರೆ ಕಮ್ಯೂನಿಸ್ಟರ ಪ್ರಾಬಲ್ಯವಿದ್ದ ದಿನಗಳಲ್ಲಿ ಮದ್ರಾಸು ರಾಜ್ಯದಲ್ಲಿ ಕಾಂಗ್ರೆಸು ನೆಲೆಯಿಲ್ಲದೆ ಒದ್ದಾಡಿದಾಗ— ರಾಜಾಜಿಯ ಧುರೀಣತ್ವಕ್ಕೆ ಉಪಾಯವಿಲ್ಲದೆ ಶರಣೆಂದರೆಂದೂ ವದಂತಿ. ರಾಜಾಜಿಯವರು ಈ ಸಂಗತಿಯನ್ನು ಪ್ರಾರಂಭದಿಂದಲೂ ತಿಳಿದಿದ್ದರೆಂದೂ— ಈಗ ಇದನ್ನು ಕೊನೆಯದಾಗಿ ನಿರ್ಣಯಿಸಲು ಅನುಕೂಲವಾಗುವಂತೆ, ಉಳಿಕೆಯ ಮದ್ರಾಸು ರಾಜ್ಯದ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಸಭೆಯನ್ನು ಸದ್ಯದಲ್ಲಿಯೇ ಕರೆದಿರುವರೆಂದೂ ತಿಳಿದಿದೆ. ತಮಿಳು ಪ್ರದೇಶ ಕಾಂಗ್ರೆಸ ಸಮಿತಿಯ ಅಭಿಪ್ರಾಯದಂತೆ ಅಕ್ಟೋಬರ ಒಂದನೇ ದಿನಾಂಕದಿಂದಲೇ ಮದ್ರಾಸಿಗೆ ಹೊಸ ಮಂತ್ರಿಮಂಡಳವಾಗಬೇಕು; ಮತ್ತು ಸರಕಾರದ ಹೊಸ ಧುರೀಣರನ್ನು ಈ ಕೂಡಲೇ ಆರಿಸಬೇಕು. ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ ಪರಿಷ್ಕರ ಅಭಿಪ್ರಾಯಕ್ಕೆ, ಮುಖ್ಯತಃ ಪ್ರಧಾನಿ ನೆಹರೂರವರ ಮನೋಗತಕ್ಕೆ ಸ್ವಾಭಾವಿಕವಾಗಿಯೇ ಮಹತ್ವವಿದೆ. ರಾಜಾಜಿಯ ಮೇಲೆ ನಾಯಕತ್ವದ ಹೊರೆ ಹೇರಿದವರು ನೆಹರೂರೇ ಅಲ್ಲವೆ?

ರಾಜಾಜಿಯ ನಾಯಕ ಪೀಠ

ನೆಹರೂರವರು ರಾಜಾಜಿಯನ್ನು ಮದ್ರಾಸದ ರಾಜಕಾರಣದಿಂದ ದೂರವಿರಲು ಆದೇಶ ನೀಡುವಂತಿದೆಯೆ ಎಂಬುದೀಗ ವಿಚಾರಣೀಯ ಅಂಶ—ರಾಜಾಜಿಯ ಧುರೀಣತ್ವದಲ್ಲಿ ಮದ್ರಾಸು ರಾಜ್ಯವು ಅನಿರೀಕ್ಷಿತವಾಗಿ ಬಂದೊದಗಿದ ಮಹಾ ಗಂಡಾಂತರಗಳನ್ನು ಧೈರ್ಯದಿಂದ ಇದಿರಿಸಿ, ಯಶಸ್ವಿಯಾಗಿ ಮುನ್ನಡೆಯುವ ಸಾಮರ್ಥ್ಯವನ್ನು ತೋರಿಸಿದೆ. ಆಂಧ್ರ ರಾಜ್ಯವು ಪ್ರತ್ಯೇಕವಾದ ಬಳಿಕ ಮದ್ರಾಸು ರಾಜ್ಯದ ಉಳಿದ ಪ್ರದೇಶದಲ್ಲಿ ಹೊಸ ಚಟುವಟಿಕೆಯ ವಾತಾವರಣವುಂಟುಮಾಡಲು ರಾಜಗೋಪಾಲಾಚಾರಿಯವರು ಇದ್ದರೆ ಬಹಳ ಪ್ರಯೋಜನವಾಗುತ್ತದೆ. ಮೇಲಾಗಿ ರಾಜಗೋಪಾಲಾಚಾರಿಯವರು ಅನುಭವಿಕರಾದ, ದಕ್ಷತೆಯುಳ್ಳ ಮೇಧಾವಿ ಆಡಳಿತೆಗಾರರು. ಅವರ ಸೇವೆಯನ್ನು ಬೇಡವೆನ್ನುವ ಚಾಪಲ್ಯವನ್ನು ತೋರಿಸುವುದು ಮದ್ರಾಸಿನ ಹಿತದೃಷ್ಟಿಯಿಂದ ಒಳ್ಳೆಯದಲ್ಲ- ಆದ ಕಾರಣ ತಮಿಳು ಪ್ರದೇಶ ಕಾಂಗ್ರೆಸ್ ಪಕ್ಷವು ಸ್ವಾರ್ಥ ದೃಷ್ಟಿಯಿಂದ ವಿಚಾರ ಮಾಡುವುದನ್ನು ಬಿಟ್ಟುಗೊಟ್ಟು ಸಮಗ್ರ ರಾಜ್ಯದ ಕಲ್ಯಾಣ ಮತ್ತು ಮುನ್ನಡೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಲಹೆ ಮಾಡುವುದುತ್ತಮ. ನಾಡಾರರು ಅಧಿಕಾರ ಲಾಲಸೆಯುಳ್ಳವರೆಂದು ಈ ಹಿಂದೆಯೂ ವರದಿಗಳು ಬಂದಿದ್ದವು-ರಾಜಗೋಪಾಲಾಚಾರಿಯವರು ಸರಕಾರದ ವತಿಯಿಂದ ತೆಗೆದುಕೊಂಡ ಕೆಲವು ಕ್ರಮಗಳು, (ಉದಾ: ರಾಜಕೀಯ ಸಂತ್ರಸ್ತರಿಗೆ ಭೂದಾನ ಕೊಡುವುದನ್ನು ನಿಲ್ಲಿಸಿದ್ದು, ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆ ತಂದದ್ದು ಇತ್ಯಾದಿ) ಅವರಿಗೆ ಅಪ್ರಿಯವಾಗಿ ತೋರಿರಲೂ ಸಾಕು-ಆದರೆ ಇವುಗಳು ರಾಜಾಜಿಯ ಧುರೀಣತ್ವವನ್ನು ನಿರಾಕರಿಸುವುದಕ್ಕೆ ಯೋಗ್ಯ ಹಿನ್ನೆಲೆಯಾಗುವುದು ಸಾಧ್ಯವಿಲ್ಲ. ಕಾಂಗ್ರೆಸ ಪಕ್ಷದ ಬಲ ಸಂವರ್ಧನೆಯೂ ಜನತೆಯ ಹಿತವೂ ರಾಜಾಜಿಯ ಧುರೀಣತ್ವದಿಂದ ನೆರವೇರುವುದೇ ಇಲ್ಲವೇ ಎಂಬುದು ಮಹತ್ವದ ವಿಷಯ. ಇಲ್ಲಿ ರಾಜಗೋಪಾಲಾಚಾರಿಯವರ ವರ್ಚಸ್ಸನ್ನು ಸಂದೇಹದಿಂದ ನೋಡುವ ಜನರು ಅಲ್ಪ. ಆದ ಕಾರಣ ಶಾಸನ ಸಭಾ ಸದಸ್ಯರು ವಿವೇಕ ಶೀಲತೆಯನ್ನು ತೋರಿಸುವುದು ಈ ವಿಷಯದಲ್ಲಿ ಎಂದಿಗಿಂತ ಹೆಚ್ಚು ಅಗತ್ಯವೆನಿಸಿದೆ-ಈ ಮಾತುಗಳನ್ನು ಬರೆಯುತ್ತಿದ್ದಂತೆಯೇ ರಾಜಾಜಿಯವರೊಂದು ಪತ್ರಿಕಾ ಪ್ರಕಟಣೆ ಕೊಟ್ಟಿದ್ದಾರೆ— ಅದರಲ್ಲಿ ಅವರು ಮದ್ರಾಸು ಮುಖ್ಯಮಂತ್ರಿತ್ವದ ಪ್ರಶ್ನೆಯು ಪುನರ್ವಿಮರ್ಶೆಯಾಗುವುದಿಲ್ಲವೆಂದು ಸ್ಪಷ್ಟೀಕರಿಸಿದ್ದಾರೆ- "ಶಾಸನ ಸಭಾ ಕಾಂಗ್ರೆಸ್ ಪಕ್ಷದ ಪರಸ್ಪರ ವಿಶೇಷ ಸಭೆ ನಡೆಸುವ ನನ್ನ ನಿರ್ಧಾರವನ್ನು ರದ್ದುಗೊಳಿಸಿದ್ದೇನೆ. ನಾಡರರು ತಮಗೆ ಮುಖ್ಯ ಮಂತ್ರಿತ್ವದ ಆಶೆ ಇಲ್ಲವೆಂದು ಸೂಚಿಸಿದ್ದಾರೆ- ನೆಹರೂರವರಿಗೆ ಈ ವಿಷಯ ತಿಳಿಸಿದಲ್ಲಿ, ಸಭೆ ಜರಗಿಸುವ ಅಗತ್ಯವಿಲ್ಲೆಂದು ಉತ್ತರ ಬಂದಿದೆ." ಎಂದು ರಾಜಾಜಿ ಹೇಳಿಕೆ ಕೊಟ್ಟಿದ್ದಾರೆ.

ಉದ್ಯೋಗ ಹೆಚ್ಚಿಸುವ ಪ್ರಯತ್ನ

ಮದ್ರಾಸಿಗಳ ಮುಂದೆ ಒಮ್ಮೆಲೇ ಬಂದು ನಿಂತ ಸಮಸ್ಯೆಯು ಹೀಗೆ ಸಾಮ್ಯ ರೀತಿಯಲ್ಲಿ ಪರಿಹಾರ ಹೊಂದಿರುವುದು ಸುದೈವ- ಆದರೆ ದೇಶದಲ್ಲಿ ಎಲ್ಲರ ಮುಂದೆಯೂ ತಾಂಡವವಾಡುವ ಸಮಸ್ಯೆಯೊಂದು ಬೇರೆಯೇ ಇದೆ- ನಿರುದ್ಯೋಗದ ಪ್ರಶ್ನೆಯ ಒಳ ಬೇರುಗಳನ್ನೇ ಕೂಲಂಕಷವಾಗಿ ವಿಚಾರಿಸುವ ಪ್ರಮೇಯದ ಕಡೆಗೆ ಈಗ ಎಲ್ಲರೂ ಲಕ್ಷ್ಯ ಪೂರೈಸುತ್ತಿದ್ದಾರೆ. ರಾಜಕೀಯ ಪಕ್ಷಗಳು ಸಭೆ ಜರಗಿಸಿ ನಿರುದ್ಯೋಗ ನಿವಾರಣಾ ದಿನವನ್ನು ಆಚರಿಸುವ ವಿಧಾನವನ್ನು ಕೈಗೊಂಡರೆ, ಸರಕಾರ ಹಾಗೂ ಯೋಜನಾ ಆಯೋಗಗಳು ರಚನಾತ್ಮಕ ರೀತಿಯಲ್ಲಿ ಈ ಸಮಸ್ಯೆಯ ಪರಿಹಾರ ಮಾರ್ಗ ಹುಡುಕುವುದರಲ್ಲಿ ಮಗ್ನವಾಗಿರುತ್ತವೆ. ಪಾರ್ಲಿಮೆಂಟಿನ ಕಾಂಗ್ರೆಸ ಪಕ್ಷದ ಸಭೆಯೊಂದರಲ್ಲಿ ಅರ್ಥ ಸಚಿವರಾದ ದೇಶಮುಖರು ಮಾತನಾಡುವಾಗ ಪಂಚವಾರ್ಷಿಕ ಯೋಜನೆಯನ್ನು ನಿರುದ್ಯೋಗ ಪರಿಹಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವನ್ನು ಪ್ರಕಟಗೊಳಿಸಿದರು. ಕೃಷಿ ಹಾಗೂ ಔದ್ಯಮಿಕ ಕ್ಷೇತ್ರಗಳಲ್ಲಿ ಹೆಚ್ಚೆಚ್ಚು ಉದ್ಯೋಗದ ಅವಕಾಶಗಳು ದೊರೆಯುವಂತೆ ಪ್ರಯತ್ನಿಸುವುದರಲ್ಲಿ ಸರಕಾರ ಈ ಸಮಸ್ಯೆಯ ಪರಿಹಾರವೆಂದು ತಿಳಿದಂತಿದೆ. ಇದು ತಪ್ಪೆಂದು ಹೇಳುವುದಿಲ್ಲ-ಉದ್ಯೋಗದ ಅವಕಾಶಗಳು ಯೋಜನಾ ಬದ್ಧವಾಗಿ ಹೆಚ್ಚಬೇಕಾದರೆ ಸ್ಥಳೀಯ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಆಸ್ಥೆಯಿಂದ ಕೈಗೊಳ್ಳುವುದೂ ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವುದೂ ಸುಲಭ ಹಾಗೂ ಸರಳವಾದ ರೀತಿಯೆಂದು ಹೇಳಬಹುದು. ದೊಡ್ಡ ಅಭಿವೃ

(೬ನೇ ಪುಟ ನೋಡಿ)

ಓದಲೇ ಬೇಕಾದ ಪುಸ್ತಕಗಳು

ಹೆಂಗುಸರ ಕತೆಗಳು
ಬೆಲೆ ರೂ. ೨—೦—೦

ಪಂಚಕಜ್ಜಾಯ
ಬೆಲೆ ರೂ ೧—೮—೦

ಅವಲು
ಬೆಲೆ ರೂ. ೨ ೦ ೦

ಉಡುಗೊರೆ ಕೊಡಲು ಅನುಕೂಲವಾಗುವಂತೆ
ಮುದ್ದಾದ ರಟ್ಟಿನ ರಕ್ಷಾಕವಚವುಳ್ಳ ಪುಸ್ತಕಗಳು
ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)
ಬಳ್ಳಾರಿ ಜಿಲ್ಲೆಯ ಈ ಕೆಳಗಣ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳು ಸದ್ಯದಲ್ಲಿಯೇ ತೆರೆಯಲಿವೆ:
(1) ಬಳ್ಳಾರಿ; (2) ರಾಯದುರ್ಗ ಮತ್ತು (3) ಕೊಟ್ಟೂರು.
ಈಗಾಗಲೇ ಬ್ಯಾಂಕಿಗೆ ೫೬ ಶಾಖೆಗಳಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುರಕ್ಷಿತತೆ ಮತ್ತು ಭದ್ರತೆಗಳಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ.
ಒಟ್ಟು ಚಲಾವಣೆ ಭಂಡವಾಳ 3¼ ಕೋಟಿ ರೂಪಾಯಿಗಳಿಗೂ ಮಿಕ್ಕಿದೆ.
THE CANARA BANKING CORPORATION LTD.,
Estd. 1906] [H. O: UDIPI (S. India)

ನವಯುಗ

ಉಡುಪಿ, ಗುರುವಾರ ೧೦-೯-'೫೩

ಹಿತೋಪದೇಶ

ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಪಾಕಿಸ್ತಾನದೊಳಗೆ ಇಂದು ನಡೆಯುತ್ತಿರುವುದೇನೆಂಬುದನ್ನು ವಿಶೇಷ ಆಸ್ಥೆಯಿಂದ ಪರಿಶೀಲಿಸುವುದು ಸಮಸ್ಯೆಯ ಪರಿಹಾರದಲ್ಲಿ ಉತ್ಸುಕರಾಗಿರುವವರೆಲ್ಲರ ಕರ್ತವ್ಯ -ಕಾಶ್ಮೀರದಲ್ಲಿ ಬಕ್ಷಿ ಗುಲಾಂ ಮಹಮ್ಮದರ ಹೊಸ ಸರಕಾರವು ಜನಪ್ರಿಯವಾದ ಕೆಲವು ಸುಧಾರಣೆಗಳನ್ನು ಇಷ್ಟರಲ್ಲಿಯೇ ಕೈಗೊಂಡು, ಶೇಖ ಅಬ್ದುಲ್ಲಾರ ಆಡಳಿತ ದೋಷವನ್ನು ನಿವೃತ್ತಿಪಡಿಸಲು ಪ್ರಯತ್ನಿಸಿದೆ. ರಾಜ್ಯದಲ್ಲಿ ಕಿಂಡರ್ ಗಾರ್ಟನ್ನಿಂದ ತೊಡಗಿ ಎಂ. ಎ. ವರೆಗಿನ ಶಿಕ್ಷಣವನ್ನು ಉಚಿತವಾಗಿಯೇ ಕೊಡಲು ಸರಕಾರ ನಿರ್ಧರಿಸಿರುವುದು ತುಂಬ ಸಂತೋಷದಾಯಕವಾದ ಸುಧಾರಣೆ. ಶೈಕ್ಷಣಿಕ ಕ್ಷೇತ್ರದಲ್ಲಿ ತೋರಿಸಿದ ಔದಾರ್ಯದಂತೆ ಮೂಲಭೂತ ವಸ್ತುವಾದ ಆಹಾರ ಧಾನ್ಯಗಳ ಸಂಬಂಧದಲ್ಲೂ ಬಕ್ಷಿಯವರ ಸರಕಾರ ಹೊಸ ಧೋರಣೆಯನ್ನು ಸಾರಿದೆ. ಎತ್ತುವಳಿ ಪದ್ಧತಿಯನ್ನು ನಿಲ್ಲಿಸಿ, ಸಂಗ್ರಹವಿರುವ ರೈತರಿಂದ ದುಡ್ಡುಕೊಟ್ಟು ಧಾನ್ಯವನ್ನು ಕೊಳ್ಳುವ ಹೊಸ ಏರ್ಪಾಡು ಜ್ಯಾರಿಗೆ ಬಂದಿದೆ. ಕಾಶ್ಮೀರ ರಾಜ್ಯವು ಆಹಾರದ ಸ್ವಾವಲಂಬನವನ್ನು ಹೊಂದಲು ಅನುಸರಿಸಬೇಕಾದ ಮಾರ್ಗಗಳ ವಿಷಯದಲ್ಲಿ ಸಲಹೆ ಮತ್ತು ಸೂಚನೆಗಳನ್ನು ಮಾಡಲು ಒಂದು ಸಮಿತಿಯ ನೇಮಕವಾಗಿರುತ್ತದೆ. ಹೀಗೆ ಬಕ್ಷಿಯವರ ಹೊಸ ಸರಕಾರವು ದೃಢವಾಗಿ ತಳವೂರುತ್ತಿರುವಾಗ ಪಾಕಿಸ್ತಾನೀ ಜನತೆಯಲ್ಲಿ ಮಾತ್ರ ಕ್ಷೋಭೆ ಹೆಚ್ಚುಗೊಂಡಂತೆ ಭಾಸವಾಗುತ್ತದೆ. ಪಾಕ ಪ್ರಧಾನರಾದ ಮಹಮ್ಮದ ಅಲಿಯವರು ನೆಹರೂರೊಂದಿಗೆ ನಾಲ್ಕು ದಿನಗಳ ಕಾಲ ಮಾತುಕತೆ ನಡೆಸಿ, ಸಂಯುಕ್ತ ಪ್ರಕಟಣೆಯನ್ನು ನೀಡಿದ ಬಳಿಕವೂ, ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನಿಗಳಿಗೆ ಇರುವ ಕೆಲವು ಭ್ರಮೆಗಳಿಂದ ತಾವು ಸ್ವತಃ ಮುಕ್ತರಾಗಿರುವುದಿಲ್ಲ. ನೆಹರೂರೊಡನೆ ಒಪ್ಪಿದುದೊಂದಾದರೆ ಪಾಕಿಸ್ತಾನೀ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡುವುದು ಬೇರೆಯೇ ಎಂಬಂತೆ ತೋರುತ್ತದೆ. ಈಚಿನ ಅವರ ಆಕಾಶವಾಣಿ ಭಾಷಣವು ಇದಕ್ಕೆ ನಿದರ್ಶನ- ಕಾಶ್ಮೀರದಲ್ಲಿ ಸರಕಾರದ ಬದಲಾವಣೆ ನಡೆದಿದೆ, ನಿಜ. ಆದರೆ ಇದರಲ್ಲಿ ಭಾರತದ ಅಥವಾ ಭಾರತೀಯ ಸೈನಿಕರ ಕೈವಾಡ ಏನೇನೂ ಇಲ್ಲ, ಮತ್ತು ಸರಕಾರದ ಬದಲಾವಣೆಯಾಗುವುದು ಕಾಶ್ಮೀರಕ್ಕೆ ಸೇರಿದ ಆಂತರಿಕ ವಿಚಾರವೆಂದು ನೆಹರೂರವರು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು. ಹೊಸ ದೆಹಲಿಯಲ್ಲಿ ಪತ್ರಿಕಾಗೋಷ್ಠಿಯ ಮುಂದೆ ಮಾತನಾಡುತ್ತಾ ನೆಹರೂರ ಈ ಮಾತುಗಳಲ್ಲಿ ತನಗೆ ಪೂರ್ಣ ಭರವಸೆ ಇರುವುದಾಗಿ ಮಹಮ್ಮದಾಲಿಯವರು ಹೇಳಿದ್ದರು. ಆದರೆ ಈಗ ಕರಾಚಿಗೆ ಮರಳಿದ ಮೇಲೆ ಶೇಖ ಅಬ್ದುಲ್ಲಾರು ಪಾಕಿಸ್ತಾನದ ಪರವಾಗಿದ್ದಾರೆಂದು ಕಂಡು, ಭಾರತ ಸರಕಾರವೇ ಒಳಸಂಚಿನಿಂದ ಬಕ್ಷಿಯವರನ್ನು ಪ್ರಧಾನಿ ಪಟ್ಟಕ್ಕೆ ಏರಿಸಿತೆಂದು ಹೇಳುವುದು ಮತ್ತು ಕಾಶ್ಮೀರದಲ್ಲಿ ದಬ್ಬಾಳಿಕೆಯು ನಡೆದಿದೆಯೆಂದೂ ಇದು ಪಾಕಿಸ್ತಾನಕ್ಕೆ ಗಂಡಾಂತರ ಪ್ರಾಯವೆಂದೂ ಸಾರುವುದು ಪಾಕ ಪ್ರಧಾನಿಗಳ ಘನತೆಗೆ ತಕ್ಕುದಲ್ಲ. ಸೈನಿಕರ ರಜೆಯನ್ನೆಲ್ಲ ರದ್ದುಗೊಳಿಸಿರುವುದಾಗಿ ಪಾಕ ಪ್ರಧಾನರು ಘೋಷಿಸಿದುದರಿಂದ, ಕಾಶ್ಮೀರದಲ್ಲಿ ಸೈನ್ಯ ಸಂಗ್ರಹವಾಗುತ್ತಿದೆ ಎನ್ನುವ ಸುಳ್ಳು ಕಲ್ಪನೆಗೆ ಆಸ್ಪದವಾಗಿರುತ್ತದೆ. ಈ ಹಾಗೂ ಇದೇ ನಮೂನೆಯ ಬೇರೆ ಅಪಪ್ರಚಾರಗಳನ್ನು ಹೊಣೆಗಾರ ಸ್ಥಾನದಲ್ಲಿರುವ ಜನರೇ ಕೈಗೊಳ್ಳುವುದಾದರೆ, ಉಭಯ ರಾಷ್ಟ್ರಗಳಲ್ಲಿ ಸೌಹಾರ್ದ ಸಂಬಂಧ ಸ್ಥಾಪಿಸಬೇಕೆನ್ನುವ ಮಾತು ಕೃತಿಯಲ್ಲಿ ಇಳಿಯುವದೆಂತು? ಮಹಮ್ಮದಾಲಿಯವರು ನೆಹರೂರ ರಾಜಕೀಯ ಮೇಧಾವಿತನವನ್ನೂ ಮುತ್ಸದ್ದಿತನವನ್ನೂ ಎರಡು ಮಾತುಗಳಲ್ಲಿ ಹೊಗಳಿದ ಮಾತ್ರಕ್ಕೆ ಭಾರತ ಸರಕಾರ ತೃಪ್ತಿಪಡುವಂತಿಲ್ಲ. ಪಾಕಿಸ್ತಾನದೊಳಗೆ ಕೆಲವು ಪತ್ರಿಕೆಗಳು ಭಾರತದ ವಿರುದ್ಧ ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಮಾಡುತ್ತಿರುವ ಅಪಪ್ರಚಾರಕ್ಕೆ ಇತಿಮಿತಿಯೇ ಇಲ್ಲ. ಜನತೆಯ ಮನಸ್ಸನ್ನು ಹೇಸಿಗೆ ಮಾತುಗಳ ಪ್ರಯೋಗದಿಂದ ಉದ್ರೇಕಿಸುವ ಅನುಚಿತ ಮಾರ್ಗವನ್ನು ಈ ಪತ್ರಿಕೆಗಳು ಹಿಡಿದಿವೆ-ಸಂಯುಕ್ತ ಪ್ರಕಟಣೆಯಲ್ಲಿ ಒಪ್ಪಿದ ತತ್ವವನ್ನು ಇವು ಸಂಪೂರ್ಣ ನಿರಾಕರಿಸುತ್ತವೆ. 'ನೆಹರೂರವರಿಂದ ಪಾಕಿಸ್ತಾನಕ್ಕೆ ನ್ಯಾಯ ದೊರೆಯುವಂತಿಲ್ಲ-ಭಾರತದೊಂದಿಗೆ ಮಾತುಕತೆಗಳನ್ನು ಮುಂದುವರಿಸುವುದು ಕೇವಲ ಅರ್ಥಶೂನ್ಯ ವಿಚಾರ-ಸಂಯುಕ್ತ ರಾಷ್ಟ್ರ ಸಂಘದಲ್ಲೇ ಈ ಪ್ರಶ್ನೆ ಇತ್ಯರ್ಥ ಹೊಂದಲಿ ಪಾಕಿಸ್ತಾನೀ ಸೇನೆಯ ಶಕ್ತಿ ಕುಂದದಿರಲಿ" ಎಂದು ಮುಂತಾಗಿ ಡಾನ ಪತ್ರಿಕೆ ಅಗ್ರಲೇಖದಲ್ಲಿ ಹೇಳಿದೆ. ಸಂಯುಕ್ತ ರಾಷ್ಟ್ರಸಂಘವಿಂದ ಕಾಶ್ಮೀರ ಪ್ರಶ್ನೆಯನ್ನು ಪಾವಾಸುಮಾಡಿದವರೇ ಇಲ್ಲ- ಆದರೆ ಭದ್ರತಾಮಂಡಳದ ಪ್ರಯತ್ನಗಳೆಲ್ಲ ವಿಫಲವಾದುದರಿಂದ ಮತ್ತು ಮಧ್ಯಸ್ಥಿಗಾರರಾದ ಡಾ. ಗ್ರಹಾಮರೇ ಉಭಯ ರಾಷ್ಟ್ರಗಳು ನೇರಾದ ಮಾತುಕತೆಗಳಲ್ಲಿ ತೊಡಗುವುದು ಸಮಸ್ಯೆಯ ಪರಿಹಾರಕ್ಕೆ ಶ್ರೇಯಸ್ಕರವೆಂದುದರಿಂದ, ಈಗಿನ ಪ್ರಯತ್ನಗಳು ಸ್ವಾಗತಾರ್ಹ. ಇದಲ್ಲದೆ ರಾಷ್ಟ್ರಸಂಘದ ಮುಂದಿರುವ ಪ್ರಶ್ನೆಯೊಂದನ್ನು ತಂಟೆಗೆ ಸಂಬಂಧಿಸಿದ ರಾಷ್ಟ್ರಗಳು ಸ್ನೇಹದಿಂದ ಬಿಡಿಸಿಕೊಳ್ಳಲೇ ಬಾರದೆಂದು ನಿಯಮವಿಲ್ಲ. ರಾಷ್ಟ್ರಸಂಘ ಇಂಥ ಪ್ರಯತ್ನಗಳನ್ನು ಅವಶ್ಯ ಸ್ವಾಗತಿಸಿ ಪುರಸ್ಕರಿಸುತ್ತದೆ. ಬಕ್ಷಿಯವರ ಸರಕಾರ ಭಾರತದ ಕೈಗೊಂಬೆಯೆಂದೂ ಆದಕಾರಣ ಅವರ ಅಧಿಕಾರ ನಡೆದಿರುವಾಗ ಕಾಶ್ಮೀರ ಪ್ರದೇಶದಲ್ಲಿ ನಿಷ್ಪಕ್ಷಪಾತ ಮತಗಣನೆ ಅಸಾಧ್ಯವೆಂದೂ ಆರೋಪವಿದೆ- ಇದಕ್ಕೆ ಈ ಮುಂಚೆ ಹಲವಾರು ಬಾರಿ ಸಮಾಧಾನ ಹೇಳಿಯಾಗಿದೆ; ಮತ್ತು ಪಾಕ-ಭಾರತಗಳೆರಡೂ ಒಂದು ತಿಳುವಳಿಕೆಗೆ ಬಂದಿರುತ್ತವೆ. ಮತಗಣನಾಧಿಕಾರಿಯನ್ನು ಕಾಶ್ಮೀರ ಸರಕಾರವೇ ನೇಮಿಸಬೇಕೆಂಬ ತತ್ವಕ್ಕೆ ಮನ್ನಣೆ ದೊರೆತ ಮೇಲೆ ಇನ್ನು ಈ ಪ್ರಸಂಗವನ್ನು ಉದ್ಧಕ್ಕೆಳೆಯುವುದು ನಿರರ್ಥಕ. ಆದರೆ ನೆಹರೂರವರು ರಾಷ್ಟ್ರಸಂಘ ನೇಮಿಸಿದ ಅಡ್ಮಿರಲ್ ನಿಮಿಜ್ಜರ ಬದಲು ಬೇರೊಬ್ಬ ಮತಗಣನಾಧಿಕಾರಿಯ ನೇಮಕವನ್ನು ಅಪೇಕ್ಷಿಸಿದ್ದು ನಿಜ; ಮತ್ತದು ಸ್ವಾಭಾವಿಕ. ಭದ್ರತಾ ಮಂಡಳದ ಪ್ರಯತ್ನ ವಿಫಲಗೊಂಡುದರಿಂದ ಅದರಿಂದ ನೇಮಕ ಹೊಂದಿದ ಮತಗಣನಾಧಿಕಾರಿಯೂ ನಿರುಪಯೋಗಿಯಾಗುವನು. ಭಾರತದ ನಿಲುವೆಯನ್ನು ಅರ್ಥಮಾಡಿಕೊಂಡೋ ಎಂಬಂತೆ, ನಿಮಿಜ್ಜರು ರಾಜಿನಾಮೆ ಕೊಟ್ಟಿರುವ ವಾರ್ತೆಬಂದಿದೆ. ಅಧಿಕೃತ ಸುದ್ದಿ ಇದಲ್ಲ. ಆದರೂ ಪಾಕಿಸ್ತಾನದಲ್ಲಿ ಇದನ್ನು ದುಃಖದಾಯಕ ಸಂಗತಿಯಾಗಿ ಪರಿಗಣಿಸಿದ್ದಾರೆ; ಜಾಫರುಲ್ಲ ಖಾನರು ವಿಶೇಷಖೇದಗೊಂಡಿದ್ದಾರೆ; ಮತ್ತು ಕರಾಚಿ ಟೈಮ್ಸ್ ಪತ್ರಿಕೆ ಅಮೇರಿಕೆಯು ಪಾಕಿಸ್ತಾನವನ್ನು ಬೆನ್ನಿನಲ್ಲಿ ತಿವಿಯಿತೆಂದು ಬೊಬ್ಬೆ ಹಾಕಿದೆ. ಹೀಗೆ ಯಾವ ನ್ಯಾಯವಾದ ಕಾರಣವೂ ಇಲ್ಲದೆ ಉದ್ರೇಕಗೊಳ್ಳುವ ಮತ್ತು ಉದ್ರೇಕಗೊಳಿಸುವ ಪ್ರವೃತ್ತಿ ಪಾಕಿಸ್ತಾನದಲ್ಲಿ ಇರುವಷ್ಟು ಕಾಲ - ಸಮಸ್ಯೆಗಳ ಶಾಂತ ರೀತಿಯ ಪರಿಹಾರ ಬಹಳ ಕಠಿಣವಾಗಿ ಪರಿಣಮಿಸುತ್ತದೆ. ಪಾಕ ಪ್ರಧಾನರು ತಮ್ಮ ಮನಸ್ಸನ್ನು ಗಟ್ಟಿಮಾಡಿಕೊಳ್ಳುವ ಅಗತ್ಯವಿರುವಷ್ಟೇ ಪಾಕಿಸ್ತಾನಿಗಳು ಕ್ಷೋಭೆಗೊಳ್ಳದಂತೆ ಜಾಗ್ರತೆ ವಹಿಸುವುದೂ ಯೋಗ್ಯ; ಅನ್ಯಥಾ ಆಕ್ರೋಶ ಮತ್ತು ಆರ್ಭಟೆಗಳ ಗೌಜಿಯಲ್ಲಿ ನ್ಯಾಯವಾಣಿ ಕೇಳಿಸದೆ ಹೋದೀತು.

ಚಂದಾದಾರರಲ್ಲಿ ವಿನಂತಿ

ಕಳೆದ ಅಗೋಸ್ತಿಗೆ 'ನವಯುಗ'ದ ೩೭ನೇ ವರ್ಷವು ಮುಗಿದು ಇದೇ ಸಪ್ಟೆಂಬರದಿಂದ ೩೮ನೇ ಹೊಸ ವರ್ಷಾರಂಭವಾಗಿರುವುದಷ್ಟೆ! ಈಗಲಾದರೂ ಇನ್ನೂ ಚಂದಾ ಬಾಕಿ ಇರುವ ಮಹನೀಯರು ತಮ್ಮ ಬಾಕಿಯನ್ನು ತ್ವರಿತದಲ್ಲಿ ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ. ಅಂತೆಯೇ ಎಲ್ಲರೂ ಚಾಲ್ತಿ ವರ್ಷದ ಚಂದಾ ಹಣವನ್ನೂ ಮುಂದಾಗಿ ಕಳಿಸಿ ಪ್ರೋತ್ಸಾಹಿಸುವಂತೆ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡಿದರೆ ಒಂಭತ್ತಾಣೆಯಷ್ಟು ಹೆಚ್ಚಿಗೆ ಖರ್ಚು ಬೀಳುವುದರಿಂದ ಸರ್ವರೂ ದಯಮಾಡಿ ಮನಿಯಾರ್ಡರು ಮಾಡುವುದು ವಿಹಿತವೆನ್ನುತ್ತೇವೆ, ಸ್ಪಷ್ಟವಾಗಿ ತಿಳಿಸಿದರೆ ಮಾತ್ರ ವಿ. ಪಿ. ಮಾಡುವೆವು.

ಮೆನೇಜರ್.

TELE-HYPNOTISM

You can influence or hypnotise to anybody by photograph or portrait without his knowledge. Experimented, simple and effective method invented by the GREAT MAGICIAN PROF. R. K. BANERJEE. Ask for free particulars.

MITALI, Agartala (Tripura State).

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 275/1953

ಕಟೀಲ ಮಂಜುನಾಥ ಪೈ ಬ್ರದರ್ಸ—ವಾದಿ.
ಹುಣ್ಸೆಮಕ್ಕಿ ಮಹಾಬಲ ಪ್ರಭು-ಪ್ರತಿವಾದಿ.

ಕುಂದಾಪುರ ತಾಲ್ಲೂಕು ಹೊಂಬಾಡಿ ಮಂಡಾಡಿ ಗ್ರಾಮದ ಹುಣ್ಸೆಮಕ್ಕಿ ಪೇಟೆಯಲ್ಲಿರುವ ಮಂಜುನಾಥ ಪ್ರಭುಗಳ ದತ್ತದ ಮಗ, ಹುಣ್ಸೆಮಕ್ಕಿ ಮಹಾಬಲ ಪ್ರಭುಗಳಿಗೆ.

ನೀವು ವಾದಿಯ ಕುಂದಾಪುರ ವ್ಯಾಪಾರದ ಅಂಗಡಿಯಲ್ಲಿ ವಾದಿ ಕೂಡೆ ನಡಿಸಿರುವ ಲೇವಾದೇವಿ ಬಾಬ್ತು ನಿಮ್ಮ ಮೇಲೆ ಬಾಕಿಯಾಗಿರುವ ಅಸಲು ಬಡ್ಡಿ ಕೂಡಾ ರೂಪಾಯಿ 739-15 8ನ್ನು ನಿಮ್ಮಿಂದ ವಸೂಲುಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ನಿಮ್ಮ ಮೇಲೆ ದಾಖಲು ಮಾಡಿರುವ ದಾವೆಯು ತಾ. 28—9—1953ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ನಿಮ್ಮ ಆಕ್ಷೇಪ ಇದ್ದಲ್ಲಿ ಸದ್ರಿ ತನಿಖೆ ದಿವಸ ಕೋರ್ಟಿನವರು ಕರೆದಾಗ್ಯೆ 11 ಘಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು, ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಫೈಸಲು ಮಾಡಿ ಡಿಕ್ರಿ ಕೊಡುವದಾಗುತ್ತದೆಂದು ನೀವು ತಿಳಿದಿರತಕ್ಕದ್ದು.

R. I. A. 1165/1953ನೇ ಅರ್ಜಿ ಮೇಲಾದ ಕೋರ್ಟಿನ ಹುಕುಂ ಪ್ರಕಾರ.

K. Narayana Kamath,
ವಾದಿಯ ಕಡೆ ಎಡ್ವೊಕೇಟ
ಕುಂದಾಪುರ, ತಾ. 5—9—53

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 399/1953

The Vijaya Tile Works and Kalliampura Saw Mills, Kalliampura, by Vijaya Construction and Commercial Corporation Ltd., by— Managing Agency Shri Krishna Agencies Ltd., by Director in charge & Principal Officer, Sri. A. Bhojaraja Hegde ... *Plaintiff.*

ಮತ್ತು

ಅಬ್ದುಲ್ಲ- ಇಬ್ರಾಹಿಂಬ್ಯಾರಿ ಮಗ- ಕಾಸರಗೋಡು ತಾಲೂಕು ಮುಟ್ಟತೋಡಿ ಗ್ರಾಮದ ಪಯ್ಯಕೋಟೆಯೆಂಬಲ್ಲಿರುವವ . ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ನೀವು ವಾದಿ ಕಂಪೆನಿಗೆ ತಾರೀಕು 27-3-1950ರಲ್ಲಿ ರೂಪಾಯಿ 250/-ಕ್ಕೆ ಬರೆಕೊಟ್ಟ ದಿನಾಂದು ನೋಟಿನ ಅಸ್ಲು ಬಡ್ಡಿ ಐವೇಜಿನಲ್ಲಿ ವಸೂಲು ಕೊಟ್ಟದ್ದು ಕಳೆದು ಬಾಕಿಯಾಗುವ ಐವೇಜನ್ನು ಬರೆಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 19-9-53ಕ್ಕೆ ಇಟ್ಟಿದೆ. ಉದಾಹರಿಸುವಂಥಾದ್ದಿದ್ದರೆ, ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.
Udipi, Dated 9—9—1953.

(೫ನೇ ಪುಟದಿಂದ)

ದ್ಧಿ ಯೋಜನೆಗಳಿಗಿಂತ ಸಣ್ಣ ಅಭಿವೃದ್ಧಿ ಯೋಜನೆಗಳ ಫಲವು ಬೇಗನೇ ಉಣ್ಣಲು ಸಿಗುವುದರಿಂದ ಮತ್ತು ಅಲ್ಲಲ್ಲಿಯ ಸಮಸ್ಯೆಯನ್ನು ಆಯಾ ಕ್ಷೇತ್ರದಲ್ಲಿಯೇ ಬಿಡಿಸಲು ಇದು ಅನುಕೂಲ ರೀತಿಯಾಗಿರುವುದರಿಂದ-ಯೋಜನಾ ಆಯೋಗ ಇದಕ್ಕೆ ಉತ್ತೇಜನ ಕೊಡುವುದು. ಹಿತಪ್ರದವೆಂದು ನಮ್ಮ ಅಭಿಪ್ರಾಯ. ಈಚೆಗೆ ಜಾನಮಥಾಯಿಯವರು ಆರಂಭಗಳ ಒಂದು ಸೂಚನೆಯನ್ನು ನಿರುದ್ಯೋಗದ ಪರಿಹಾರಕ್ಕೋಸ್ಕರ ಮುಂದಿಟ್ಟಿದ್ದರು. ತಾಂತ್ರಿಕ ವಿಜ್ಞಾನದ ಅಭಿವೃದ್ಧಿಗಿರುವ ಅವ್ಕಾಶದ ಅಂದಾಜು ಮಾಡಿಕೊಂಡು ಅದರ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ನೋಡಬೇಕೆನ್ನುವುದು ಅವರು ಮಾಡಿದ ಮಹತ್ವದ ಸೂಚನೆಗಳಲ್ಲಿ ಒಂದು. ಹಾಗೆಯೇ ಕೃಪಲಾನಿಯವರು ಲೋಕ ಸಭೆಯಲ್ಲಿ ನಿರುದ್ಯೋಗ ಸಮಸ್ಯೆಯ ಕುರಿತು ಬಂದ ಖಾಸಗಿ ಮಸೂದೆಯೊಂದನ್ನು ಚರ್ಚಿಸುವಾಗ ಹೇಳಿದ ಕೆಲ ಮಾತುಗಳೂ ಗಮನಾರ್ಹವಾಗಿವೆ—ಸರಕಾರದ ಹೊಣೆ ಮಾತ್ರವಲ್ಲದೆ, ದೇಶದ ಜನತೆಯೂ ನಿರುದ್ಯೋಗ ಸಮಸ್ಯೆಗೆ ಕಾರಣವೆಂದು ಅವರು ಅಪರೋಕ್ಷವಾಗಿ ಸೂಚಿಸುತ್ತಾರೆ. ಸ್ವದೇಶೀ ಭಾವನೆಯನ್ನು ದುರ್ಲಕ್ಷಿಸಿದ್ದೇ ನಿರುದ್ಯೋಗದ ಸಮಸ್ಯೆ ಬೆಳೆದುಕೊಳ್ಳಲು ಮೂಲ ಕಾರಣವೆಂಬ ಕೃಪಲಾನಿಯವರ ಮಾತು ನಮ್ಮೆಲ್ಲರಿಗೂ ಗಂಭೀರವಾದ ಎಚ್ಚರಿಕೆಯನ್ನು ಕೊಡುತ್ತದೆ. ದೇಶದಲ್ಲಿ ಉತ್ಪಾದನವಾಗುವ ವಸ್ತುಗಳಿಗೆ ಸರಕಾರವು ಆಯಾತದ ಅವಕಾಶವನ್ನು ಕೊಡಕೂಡದೆಂದೂ ದೊಡ್ಡ ದೊಡ್ಡ ಕಾರಖಾನೆ ಮುಂತಾದುವುಗಳ ಅಭಿವೃದ್ಧಿಗಿಂತ ಗೃಹೋದ್ಯಮದ ರಕ್ಷಣೆಯೇ ದೇಶದಲ್ಲಿ ಉದ್ಯೋಗ ನೀಡಬಲ್ಲುದೆಂದೂ ಅವರು ಹೇಳಿದ್ದಾರೆ. ಸಮಸ್ಯೆಯ ಗಂಭೀರ ಸ್ವರೂಪದ ಕುರಿತು ಚಿಂತೆ ವ್ಯಕ್ತಪಡಿಸುವವರೆಲ್ಲರೂ ಈ ವಿಷಯದಲ್ಲಿ ಸಹಾನುಭೂತಿಪರವಾದ ವರ್ತನೆಯನ್ನು ಇಟ್ಟು ಆದರ್ಶ ಪ್ರಾಯರಾಗಬೇಕು.

ವ್ಯವಹಾರ್ಯ ಮಾರ್ಗ

ಖಾಸಗಿ ಕ್ಷೇತ್ರಗಳಲ್ಲಿ ಉತ್ಪಾದನಾ ಅವಕಾಶವನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಉದ್ಯೋಗ ಕಲ್ಪಿಸುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರೆ ಒಳ್ಳೆಯದೆಂದು ಹೇಳುವವರಿಗಿಂತಲೂ—ಕಮ್ಯೂನಿಸ್ಟ ಸದಸ್ಯ ಗೋಪಾಲನ್ನರು ಮಂಡಿಸಿದ ಖಾಸಗಿ ಮಸೂದೆಯಲ್ಲಿ ಹೇಳಿದಂತೆ 'ನಿರುದ್ಯೋಗಿಗಳಿಗೆ ಕೆಲವು ಹಣವನ್ನು ಪರಿಹಾರ ರೂಪದಲ್ಲಿ ಕೊಡುವ' ವಿಷಯದಲ್ಲಿ ಆಸ್ಥೆಯನ್ನು ತೋರಿಸುವ ಜನರು ಹೆಚ್ಚು. ನಿರುದ್ಯೋಗಿಗಳಿಗೆ ಪರಿಹಾರ ರೂಪದಲ್ಲಿ ಸಹಾಯಧನ ದೊರೆಯುತ್ತದಾದರೆ-ದೇಶದಲ್ಲಿ ಯಾರಾದರೂ ಏಕೆ ದುಡಿದು ಉಣ್ಣಬೇಕೆಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಬರುತ್ತದೆ. ಸರಕಾರವೇ ಪ್ರತಿಯೊಬ್ಬರಿಗೂ ಉದ್ಯೋಗ ಕಲ್ಪಿಸುವ ಹೊಣೆ ಹೊತ್ತುಕೊಂಡರೆ, ಮತ್ತು ಎಲ್ಲ ಉದ್ಯೋಗ ಹಾಗೂ ವೃತ್ತಿಗಳ ಮೇಲೆ ಸರಕಾರದ ಯಶಸ್ವಿ ನಿಯಂತ್ರಣವಿದ್ದರೆ.(ಕಮ್ಯೂನಿಸ್ಟ ರಾಷ್ಟ್ರಗಳಲ್ಲಿ ಆ ಬಗೆಯ ಹತೋಟಿ ಇದೆ) ಗೋಪಾಲನ್ನರ ಸೂಚನೆ ವ್ಯವಹಾರ್ಯವೆಂದು ತೋರೀತು. ಆದರೆ ಭಿನ್ನ ಆರ್ಥಿಕ ವ್ಯವಸ್ಥೆಯುಳ್ಳ ಮತ್ತು ಸರಕಾರದ ಕಾರ್ಯಕ್ಷೇತ್ರಕ್ಕಿಂತಲೂ ವ್ಯಾಪಕವಾದ ಖಾಸಗಿ ರಂಗವಿರುವ ಭಾರತದಲ್ಲಿ ಗೋಪಾಲನ್ನರ ಸೂಚನೆಗೆ ವ್ಯವಹಾರಿಕ ಬೆಲೆ ಇಲ್ಲವೆಂದೇ ಹೇಳಬೇಕು. ನಿರುದ್ಯೋಗದ ನಗ್ನ ಸ್ವರೂಪವನ್ನು ಅರಿತುಕೊಳ್ಳುವುದಕ್ಕೆ ನೆರವಾಗುವ ಅಂಕೆ ಸಂಖ್ಯೆಗಳು ಸರಕಾರದೊಡನೆಯೂ ಲಭ್ಯವಿಲ್ಲ-ಕೇವಲ ಉದ್ಯೋಗ ವಿನಿಮಯ ಕೇಂದ್ರಗಳ ಅಂಕೆ ಸಂಖ್ಯೆಯೊಂದೇ ಅವಲಂಬಿ ಇದೆ. ಇವು ನಗರದಲ್ಲಿರುವ ಸುಶಿಕ್ಷಿತರ ಅಂದಾಜು ಮಾಡಿಕೊಡಬಹುದೇ ಹೊರತು, ಗ್ರಾಮಾಂತರ ಪ್ರದೇಶಗಳ ಬಗ್ಗೆ ಇದು ಪ್ರಯೋಜನಕಾರಿ ಮಾಹಿತಿ ನೀಡುವುದಿಲ್ಲ. ಯೋಜನಾ ಆಯೋಗವೂ ಕೇಂದ್ರ ಸರಕಾರದ ಹಣಕಾಸಿನ ವಿಭಾಗವೂ ಕೆಲವು ಮಾದರಿ ನಗರಗಳನ್ನು ಪರಿಶೀಲನೆಗೆ ತೆಗೆದುಕೊಂಡು ನಿರುದ್ಯೋಗದ ವಿಷಯದಲ್ಲಿ ಹೆಚ್ಚು ಸಂಗತಿಯನ್ನು ಸಂಗ್ರಹಿಸಲು ನಿಶ್ಚಯ ಮಾಡಿದೆಯೆಂದು ಕೇಳುತ್ತೇವೆ. ಹೀಗೆ ಆಯ್ಕೆ ಹೊಂದಿದ ಪರಿಶೀಲನಾ ಕ್ಷೇತ್ರಗಳಲ್ಲಿ ಮಂಗಳೂರು ನಗರವೂ ಒಂದು- ಈ ಪರಿಶೀಲನೆಗಳ ಯಶಸ್ವಿಯಾದರೆ, ಅವುಗಳ ಮೇಲಿಂದ ನಿರುದ್ಯೋಗ ಸಮಸ್ಯೆಗೆ ವ್ಯವಹಾರ್ಯವಾದ ಪರಿಹಾರ ಮಾರ್ಗ ಕಂಡು ಹಿಡಿಯಲು ಬಂದೀತೆಂದು ಸರಕಾರದ ಆಶೆ. ಈ ಭರವಸೆಯು ಈಡೇರುವಂತಾಗಲೆಂದು ನಿರುದ್ಯೋಗಿಗಳು ಮಾತ್ರವಲ್ಲ - ರಾಷ್ಟ್ರದ ಪ್ರತಿಯೊಬ್ಬ ಹಿತಚಿಂತಕನೂ ಹಾರೈಸುವುದಲ್ಲದೆ, ನಿರುದ್ಯೋಗವೆಂಬ ಅಪ್ರಿಯ ಶಬ್ದ ಪ್ರಯೋಗವೇ ಮಾಯವಾಗುವಂತೆ ಶಕ್ಯವಿದ್ದ ರೀತಿಯಲ್ಲಿ ಸಹಕರಿಸುವ ಪ್ರತಿಜ್ಞೆಯನ್ನು ಕೈಗೊಳ್ಳಲಿ!

ಉಡುಪಿ

ಅಖಿಲಭಾರತ ಉತ್ಪಾದಕರ ಸಂಘ—(A. I. M. O)ದ ಪ್ರತಿನಿಧಿಯಾಗಿ ಜಪಾನಿನಲ್ಲಿಯ ಗುಡಿಕೈಗಾರಿಕೆಯ ಕುರಿತು ಅಭ್ಯಾಸಿಸಲು ಶ್ರೀ ಟಿ. ರಮೇಶ ಯು. ಪೈಗಳು ತಾ 8ನೇ ಬೆಳಗ್ಗೆ ಮುಂಬಯಿಗೆ ತೆರಳಿ, ಅಲ್ಲಿಂದ ತಾ 16ಕ್ಕೆ ಸ್ಟೀಮರು ಹತ್ತಿ ಜಪಾನಿಗೆ ಹೋಗುವರು. ಇವರೊಂದಿಗೆ ಇತರರಲ್ಲಿ ಶ್ರೀಮತಿ ಶಾಂತಿ ಆರ್ ಪೈ ಮತ್ತು ಶ್ರೀಮತಿ ಪ್ರೇಮಾ ಎ. ಪೈ ಅಲ್ಲದೆ ಶ್ರೀ ಮೋಹನದಾಸ ಎಂ ಪೈಗಳೂ ತೆರಳುವರು. ಈ ಸಂದರ್ಭದಲ್ಲಿ ಇವರೆಲ್ಲರನ್ನು ಬೀಳ್ಕೊಡುವ ಮತ್ತು ಶುಭಾಶಯ ನೀಡುವ ಸತ್ಕಾರ ಕೂಟವೊಂದು ಕೆನರಾ ಮ್ಯೂಚುವಲ್ ಕ್ಲಬ್ಬಿನಲ್ಲಿ ತಾ 7ರಲ್ಲಿ ಜರಗಿತು.

ಒಕ್ಕಲು ಹಿತ ಮಸೂದೆ— ಇತ್ತೀಚೆಗೆ ಮದರಾಸಿಗೆ ಹೋಗಿ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಬಂದ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳು ಈ ರೀತಿ ಹೇಳಿಕೆ ಪ್ರಕಟಿಸಿದ್ದಾರೆ. (1) ಆಂಧ್ರವು ಪ್ರತ್ಯೇಕವಾದೊಡನೆ ಸರಕಾರವು ದ. ಕ. ಜಿಲ್ಲೆಯ ಪರವಾಗಿ ಒಕ್ಕಲು ಹಿತ ಮಸೂದೆಯನ್ನು ಜಾರಿಗೆ ತರಲು ಮುಂದಾಗಿ ಕಾರ್ಯ ಕ್ರಮ ಕೈಕೊಳ್ಳುತ್ತದೆ (2) ಜೋಗ್ ವಿದ್ಯುಚ್ಛಕ್ತಿಯ ವಿಷಯದ ಕರಾರಿನ ವಿಷಯಗಳಲ್ಲಿ ಮದರಾಸು, ಮೈಸೂರು ಸರಕಾರಗಳೊಳಗೆ ಒಮ್ಮತವಾಗಿರುವುದರಿಂದ ಇದೇ ಅಕ್ಟೋಬರದಲ್ಲಿ ಕೆಲಸ ಆರಂಭವಾಗುತ್ತದೆಂದು ನಿರೀಕ್ಷಿಸಬಹುದು. (3) ವಿದ್ಯಾ ಹೊಸ ಯೋಜನೆಯಂತೆ ಶಾಲಾ ಸಮಯದಲ್ಲಿ ಪ್ರಯೋಗಿಸುವುದರಿಂದ ಸರಕಾರವು ಸಮಯ ನಿಶ್ಚಯದ ಅಧಿಕಾರವನ್ನು ಶಾಲಾಧಿಕಾರಿಗಳಿಗೇನೇ ಬಿಟ್ಟಿರುತ್ತಾರೆ. ಮತ್ತೂ ಆಕ್ಷೇಪಗಳಿದ್ದರೆ ವಿದ್ಯಾಧಿಕಾರಿಗಳಿಂದ ಮಾಹಿತಿ ಪಡೆಯಬಹುದು.

ಶ್ರೀ ಕೃಷ್ಣ ವಿಟ್ಲಪಿಂಡಿ ಉತ್ಸವದಲ್ಲಿ ಅಪಘಾತ:— ಇದೇ ತಾ 1ರಲ್ಲಿ ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಶ್ರೀ ಕೃಷ್ಣ ಜಯಂತಿ ಸಂಬಂಧವಾದ ವಿಟ್ಲಪಿಂಡಿಲೀಲಾ ವಿನೋದಾವಳಿಗಳು ಸಾಂಗವಾಗಿ ನಡೆದವು. ಅದಿಕೆ ಮುಂದೆ ತಪ್ಪು ಮೇಲಾಟದಲ್ಲಿ ಭಾಗವಹಿಸಿದ ಉಡುಪಿಯ ದೈವಜ್ಞ ಸಮಾಜದ 22ವರ್ಷ ಪ್ರಾಯದ ರಾಮಕೃಷ್ಣ ಎಂಬವನು ಅತಿ ಕೆಳಕ್ಕೆ ಬಿದ್ದನು. ಮುಖಕ್ಕೆ ಗಾಯಗಳಾದುವಲ್ಲದೆ ಮಣಿಗಂಟುಗಳಿಗೆ ಹಾನಿಯುಂಟಾಗಿದೆ. ಸರಕಾರಿ ಆಸ್ಪತ್ರೆಯಲ್ಲಿ ಅವನು ಚಿಕಿತ್ಸೆ ಪಡೆಯುತ್ತಿದ್ದಾನೆ.

ದುಃಖಸೂಚಕ ಸಭೆ— ಸ್ಥಳೀಯ ಕೆನರಾ ಮ್ಯಾಚ್ ಎಲೆಕ್ಟ್ರಿಕ್ ಕಂಪೆನಿಯ ಸತತ ಡೈರೆಕ್ಟರರಾಗಿದ್ದು ಕಳೆದ ತಾ 28ರಲ್ಲಿ ಮದ್ರಾಸಿನಲ್ಲಿ ನಿಧನಹೊಂದಿದ ಕಾರ್ಕಳದ ಜನಪ್ರಿಯ ಜನಾಬ ಎಚ್. ಎಸ್. ಹುಸ್ಸೇನ ಅವರಿಗೆ ಶ್ರದ್ಧಾಂಜಲಿಯನ್ನೀಯುವ ಬಗ್ಗೆ ಕಳೆದ ತಾ 29ರಲ್ಲಿ ಕಂಪೆನಿ ಡೈರೆಕ್ಟರ ಸಭೆಯೂ ಇದೇ ತಾ 2ರಲ್ಲಿ ಡೈರೆಕ್ಟರು ಮತ್ತು ಶಿಬಂಧಿಗಳ ಸಂಯುಕ್ತ ಸಭೆಯೂ ಜರಗಿದುವು. ಜ. ಹುಸ್ಸೇನ್ ಸಾಹೇಬರ ನಿಧನದಿಂದ ತೆರವಾದ ಸ್ಥಳಕ್ಕೆ ಶ್ರೀ. ಪಿ. ಶ್ರೀಪತಿ ಆಚಾರ್ಯ, B. Com. ಇವರನ್ನು ಡೈರೆಕ್ಟರರಾಗಿ ಸೇರಿಸಿಕೊಳ್ಳಲಾಗಿದೆ.

ಸೆಂಟ್ರಲ್ ವಾರ್ಡಿನ ತೆರಿಗೆದಾರರ ಸಭೆಯು ತಾ 5ರಲ್ಲು ಕಾನಾರ್ಡ್ ಕಾರರ ಆಫೀಸಿನಲ್ಲಿ ವಕೀಲ್ ಶ್ರೀ ಸಿ. ವಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಜನಾಬ್ ಎಚ್, ಎಸ್. ಹುಸ್ಸೇನ ಸಾಹೇಬರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯ ಪಾಸಾಯಿತು.

ಕರ್ನಾಟಕಸಂಘದ ಮಹಾಸಭೆಯು ತಾ. 6ರಲ್ಲು ಪರಿಷನ್ಮಾಸದಲ್ಲಿ ಶ್ರೀ. ಪಿ. ಎಸ್. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಲೆಕ್ಕಪತ್ರಗಳ ಪರಿಶೀಲನೆಗಳಾದ ಬಳಿಕ ಶ್ರೀಗಳಾದ ಡಾ| ಕೆ. ಎಲ್ ಐತಾಳ, ಪಿ ಎಸ್ ಅಯ್ಯಂಗಾರ್, ಕೆ. ಎಸ್ ಹರಿದಾಸ ಭಟ್, ಕೆ. ಬಿದಾನ ಉಪಾಧ್ಯಾಯ, ಕೆ. ಶಂಕರನಾರಾಯಣ ಉಪಾಧ್ಯಾಯ, ಕುಮಾರಸ್ವಾಮಿ ಶ್ರೀಪತಿ ಆಚಾರ್, ಮಧ್ವಮುನಿ ರಾವ್ ಶೀನ ಸೆಟ್ಟಿ, ಪುಟ್ಟಣ್ಣ ಸೆಟ್ಟಿ, ಯು. ಪುಂಡಲೀಕ ಶೆಣೈ, ವಿ. ಎನ್. ಆಚಾರ್ಯರೀ ಕಾರ್ಯನಿರ್ವಾಹಕ ಮಂಡಳಿಗೆ ಆರಿಸಲ್ಪಟ್ಟರು. ಡಾ| ಕೆ. ಎಲ್. ಐತಾಳರು ಸಭಿಕರಿಗೆ ಘನ ಉಪಾಹಾರವಿತ್ತರು.

ನಿರುದ್ಯೋಗ ನಿವಾರಣ ಸಭೆಯು ಇದೇ ತಾ 6ನೇ ಸಂಜೆ ಜನಸಂಘದ ನೇತೃತ್ವದಲ್ಲಿ ರಥಬೀದಿಯಲ್ಲಿ ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಅನಂತಕೃಷ್ಣ ರಾವ್, ಪ್ರಭಾಕರ ಭಟ್, ಮೊದಲಾದವರ ಭಾಷಣಗಳಾದವು.

ನಗರ ಸಭೆಯ ಆಡಳಿತ ವರದಿ ಯೆಸರಾರಂಭ— ಮುನಿಸಿಪಲ್ ವ್ಯವಹಾರ ಕ್ಷೇತ್ರದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಜನಸಂಖ್ಯೆಗನುಸಾರವಾಗಿ ಕೌನ್ಸಿಲರುಗಳ ಸಂಖ್ಯೆ ಇಪ್ಪತ್ತಕ್ಕೇರಿಸಲಾಗಿದೆ. ಯಾವ ಸಭೆಯೂ ಕೋರಮಿನ ಅಭಾವದಿಂದ ಮುಂದರಿಸಲ್ಪಡಲಿಲ್ಲ. ನೆಂಬರರ ಹಾಜರಿಯು ತೃಪ್ತಿಕರವಿತ್ತು. ಮುನಿಸಿಪಲ್ ರಸ್ತೆಗಳ ಕುರಿತು ಯಾವ ಅಧಿಕಾರಿಯೂ ಸೂಚನೆಗಳನ್ನು ವ್ಯಕ್ತಪಡಿಸಲಿಲ್ಲ. ಸ್ಥಳಾ ಕ್ರಮಣಗಳನ್ನು ಪತ್ತೆ ಹಚ್ಚಲಾಗಲಿಲ್ಲ. ವರದಿ ವರ್ಷದಲ್ಲಿ ಸಾಂಕ್ರಾಮಿಕ ರೋಗಗಳು ತಲೆದೋರಲಿಲ್ಲ. ನಗರ ಸಭೆಯ ಎಲಿಮೆಂಟರಿ ಶಾಲೆಗಳಲ್ಲಿ ಧರ್ಮಾರ್ಥ ವಿದ್ಯೆ ಕೊಡಲಾಗಿತ್ತು. ಸಂತೆಕಟ್ಟೆ ಮತ್ತು ಕಲ್ಯಾಣ ಸೆಂಟರುಗಳಲ್ಲಿ ಬಡವರ ಚಿಕ್ಕ ಪುಟ್ಟ ಮಕ್ಕಳಿಗೆ ಧರ್ಮಾರ್ಥ ಹಾಲನ್ನು ಕೊಡಲಾಗಿತ್ತು. ಕೆರೆಗೆ ದಮಾಲಿ ಕೆಲಸ ತೃಪ್ತಿಕರವಿತ್ತು. ಹೊಂಡ ಬಾಕಿ ಬಿಟ್ಟ ತೆರಿಗೆ ಏನೇನಿದೆ? ಹಣ್ಣಿನಂಗಡಿ ಸರಿಯಾಗಿ ಏಲಂ ಆಗಿತ್ತು. ವರದಿ ವರುಷದಲ್ಲಿ ಚೇರ್‌ಮನ್, ಕೌನ್ಸಿಲರ್ಸ್, ಕಮಿಷನರ್ ಮತ್ತು ಶಿಬಂದಿಯು ... ಹಿತ ವಿಚಾರಗಳಿಗೆ ಇಷ್ಟವೆನ್ನಲು.....

ಬೊಂಬಾಯಿ — ಇಲ್ಲಿಯ ಬಿಲ್ಲವರ ಎಸೋಸಿಯೇಶನಿನವರು ಕಳೆದ ತಾ 25ರಲ್ಲು ಬ್ರಹ್ಮಶ್ರೀ ನಾರಾಯಣ ಗುರು ದೇವರ 90ನೇ ಜನ್ಮದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಿದರು. ಶ್ರೀ ಬಿ. ಎ. ಮಾಸ್ಟರರು ಶ್ರೀ ಗುರು ದೇವರ ಜೀವನ ಚರಿತ್ರೆಯನ್ನೆತ್ತಿ ಮಾತನಾಡಿದರು. ಗುರು ಸ್ತೋತ್ರ ಪಠಣ ಭಜನೆ ಪ್ರಸಾದ ವಿತರಣಾ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 52/53 O. S. 373/52

ಲಿಮುವೆಲ್ ಕರ್ಕಡ —ಅರ್ಜಿದಾರ.

ಕೆ. ಪುಂಡಲೀಕ ವಾಸುದೇವ ಕಾಮತ್, ಕೋಟೇಶ್ವರ —ಎದ್ರಿ.

ಈ ಮೂಲಕ ಎದ್ರಿಯವರಿಗೆ ತಿಳಿಯಪಡಿಸುವುದೇನಂದ್ರೆ—ಅರ್ಜಿದಾರನು ಎದ್ರಿಯ ಮೂಲಿ ವ ಮೂಲಗೇಣಿ ಹಕ್ಕಿನ ಆಸ್ತಿಗಳ ಮಾರಾಟದಿಂದ ಡಿಕ್ರಿ ಐವೇಜು ಸಮಾಧಾನ ಆಗಬೇಕೆಂತ ಸದ್ರಿ ಅರ್ಜಿ ದಾಖಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 24-9-53 ಕ್ಕೆ ತನಿಖೆಗೆ ಇದೆ. ಆ ದಿವಸ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಲ್ಲಿ ತೀರ್ಮಾನಿಸಲ್ಪಡುವುದು, ತಿಳಿದಿರಲಿ.

H. Laxminarayanayya,
Advocate for Petitioner.

Coondapoor, 7—9—53

ನಡಿಯುವ ಚಿತ್ರ

ಸುನೇರಿ ದಿನ್

ತಾರಾಗಣ.-ರಾಜ್ ಕಪೂರ . ರೆಹನಾ, ನಿಗಾರ್ ಸುಲ್ತಾನಾ, ರೂಪಕಮಲ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

13-9-53ನೇ ಆದಿತ್ಯವಾರದಿಂದ

CHEAPER BY THE DOZEN.

ಚೀಪರ್ ಬೈದಿ ಡಜನ್

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಬಳ್ಳಾರಿ ಜಿಲ್ಲೆಯ ಈ ಕೆಳಗಣ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳು ಸದ್ಯದಲ್ಲಿಯೇ ತೆರೆಯಲಿವೆ:

(1) ಬಳ್ಳಾರಿ; (2) ರಾಯದುರ್ಗ ಮತ್ತು (3) ಕೊಟ್ಟೂರು.

ಈಗಾಗಲೇ ಬ್ಯಾಂಕಿಗೆ 35 ಶಾಖೆಗಳಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುರಕ್ಷಿತತೆ ಮತ್ತು ಭದ್ರತೆಗಳಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ.

ಒಟ್ಟು ಚಲಾವಣೆ ಭಂಡವಾಳ 3½ ಕೋಟಿ ರೂಪಾಯಿಗಳಿಗೂ ಮಿಕ್ಕಿದೆ.

THE CANARA BANKING CORPORATION LTD.,

Estd. 1906] [H. O: UDIPI (S. India)

ನವಯುಗ

ಉಡುಪಿ, ಗುರುವಾರ ೧೦-೯-'೫೩

ಹಿತೋಪದೇಶ

ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಪಾಕಿಸ್ತಾನದೊಳಗೆ ಇಂದು ನಡೆಯುತ್ತಿರುವುದೇನೆಂಬುದನ್ನು ವಿಶೇಷ ಆಸ್ಥೆಯಿಂದ ಪರಿಶೀಲಿಸುವುದು ಸಮಸ್ಯೆಯ ಪರಿಹಾರದಲ್ಲಿ ಉತ್ಸುಕರಾಗಿರುವವರೆಲ್ಲರ ಕರ್ತವ್ಯ -ಕಾಶ್ಮೀರದಲ್ಲಿ ಬಕ್ಷಿ ಗುಲಾಂ ಮಹಮ್ಮದರ ಹೊಸ ಸರಕಾರವು ಜನಪ್ರಿಯವಾದ ಕೆಲವು ಸುಧಾರಣೆಗಳನ್ನು ಇಷ್ಟರಲ್ಲಿಯೇ ಕೈಗೊಂಡು, ಶೇಖ ಅಬ್ದುಲ್ಲರ ಆಡಳಿತ ದೋಷವನ್ನು ನಿವೃತ್ತಿಪಡಿಸಲು ಪ್ರಯತ್ನಿಸಿದೆ. ರಾಜ್ಯದಲ್ಲಿ ಕಿಂಡರ್ ಗಾರ್ಟನ್ನದಿಂದ ತೊಡಗಿ ಎಂ. ಎ. ವರೆಗಿನ ಶಿಕ್ಷಣವನ್ನು ಉಚಿತವಾಗಿಯೇ ಕೊಡಲು ಸರಕಾರ ನಿರ್ಧರಿಸಿರುವುದು ತುಂಬ ಸಂತೋಷದಾಯಕವಾದ ಸುಧಾರಣೆ. ಶೈಕ್ಷಣಿಕ ಕ್ಷೇತ್ರದಲ್ಲಿ ತೋರಿಸಿದ ಔದಾರ್ಯದಂತೆ ಮೂಲಭೂತ ವಸ್ತುವಾದ ಆಹಾರ ಧಾನ್ಯಗಳ ಸಂಬಂಧದಲ್ಲೂ ಬಕ್ಷಿಯವರ ಸರಕಾರ ಹೊಸ ಧೋರಣೆಯನ್ನು ಸಾರಿದೆ. ಎತ್ತುವಳಿ ಪದ್ಧತಿಯನ್ನು ನಿಲ್ಲಿಸಿ, ಸಂಗ್ರಹವಿರುವ ರೈತರಿಂದ ದುಡ್ಡುಕೊಟ್ಟು ಧಾನ್ಯವನ್ನು ಕೊಳ್ಳುವ ಹೊಸ ಏರ್ಪಾಡು ಜ್ಯಾರಿಗೆ ಬಂದಿದೆ. ಕಾಶ್ಮೀರ ರಾಜ್ಯವು ಆಹಾರ ಸ್ವಾವಲಂಬನವನ್ನು ಹೊಂದಲು ಅನುಸರಿಸಬೇಕಾದ ಮಾರ್ಗಗಳ ವಿಷಯದಲ್ಲಿ ಸಲಹೆ ಮತ್ತು ಸೂಚನೆಗಳನ್ನು ಮಾಡಲು ಒಂದು ಸಮಿತಿಯ ನೇಮಕವಾಗಿರುತ್ತದೆ. ಹೀಗೆ ಬಕ್ಷಿಯವರ ಹೊಸ ಸರಕಾರವು ದೃಢವಾಗಿ ತಳವೂರುತ್ತಿರುವಾಗ ಪಾಕಿಸ್ತಾನೀ ಜನತೆಯಲ್ಲಿ ಮಾತ್ರ ಕ್ಷೋಭೆ ಹೆಚ್ಚಿಕೊಂಡಂತೆ ಭಾಸವಾಗುತ್ತವೆ- ಪಾಕ ಪ್ರಧಾನರಾದ ಮಹಮ್ಮದ ಅಲಿಯವರು ನೆಹರೂರೊಂದಿಗೆ ನಾಲ್ಕು ದಿನಗಳ ಕಾಲ ಮಾತುಕತೆ ನಡೆಸಿ, ಸಂಯುಕ್ತ ಪ್ರಕಟಣೆಯನ್ನು ನೀಡಿದ ಬಳಿಕವೂ, ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನಿಗಳಿಗೆ ಇರುವ ಕೆಲವು ಭ್ರಮೆಗಳಿಂದ ತಾವು ಸ್ವತಃ ಮುಕ್ತರಾಗಿರುವುದಿಲ್ಲ. ನೆಹರೂರೊಡನೆ ಒಪ್ಪಿದುದೊಂದಾದರೆ, ಪಾಕಿಸ್ತಾನೀ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡುವುದು ಬೇರೆಯೇ ಎಂಬಂತೆ ತೋರುತ್ತವೆ. ಈಚಿನ ಅವರ ಆಕಾಶವಾಣಿ ಭಾಷಣವು ಇದಕ್ಕೆ ನಿದರ್ಶನ- ಕಾಶ್ಮೀರದಲ್ಲಿ ಸರಕಾರದ ಬದಲಾವಣೆ ನಡೆದಿದೆ, ನಿಜ. ಆದರೆ ಇದರಲ್ಲಿ ಭಾರತದ ಅಥವಾ ಭಾರತೀಯ ಸೈನಿಕರ ಕೈವಾಡ ಏನೇನೂ ಇಲ್ಲ, ಮತ್ತು ಸರಕಾರದ ಬದಲಾವಣೆಯಾಗುವುದು ಕಾಶ್ಮೀರಕ್ಕೆ ಸೇರಿದ ಆಂತರಿಕ ವಿಚಾರವೆಂದು ನೆಹರೂರವರು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು. ಹೊಸ ದೆಹಲಿಯಲ್ಲಿ ಪತ್ರಿಕಾಗೋಷ್ಠಿಯ ಮುಂದೆ ಮಾತನಾಡುತ್ತಾ ನೆಹರೂರ ಈ ಮಾತುಗಳಲ್ಲಿ ತನಗೆ ಪೂರ್ಣ ಭರವಸೆ ಇರುವುದಾಗಿ ಮಹಮ್ಮದಾಲಿಯವರು ಹೇಳಿದ್ದರು. ಆದರೆ ಈಗ ಕರಾಚಿಗೆ ಮರಳಿದ ಮೇಲೆ ಶೇಖ ಅಬ್ದುಲ್ಲಾರು ಪಾಕಿಸ್ತಾನದ ಪರವಾಗಿದ್ದಾರೆಂದು ಕಂಡು, ಭಾರತ ಸರಕಾರವೇ ಒಳಸಂಚಿನಿಂದ ಬಕ್ಷಿಯವರನ್ನು ಪ್ರಧಾನಿ ಪಟ್ಟಕ್ಕೆ ಏರಿಸಿತೆಂದು ಹೇಳುವುದು ಮತ್ತು ಕಾಶ್ಮೀರದಲ್ಲಿ ದಬ್ಬಾಳಿಕೆಯು ನಡೆದಿದೆಯೆಂದೂ ಇದು ಪಾಕಿಸ್ತಾನಕ್ಕೆ ಗಂಡಾಂತರ ಪ್ರಾಯವೆಂದೂ ಸಾರುವುದು ಪಾಕ ಪ್ರಧಾನಿಗಳ ಘನತೆಗೆ ತಕ್ಕುದಲ್ಲ. ಸೈನಿಕರ ರಜೆಯನ್ನೆಲ್ಲ ರದ್ದುಗೊಳಿಸಿರುವುದಾಗಿ ಪಾಕ ಪ್ರಧಾನರು ಘೋಷಿಸಿದುದರಿಂದ, ಕಾಶ್ಮೀರದಲ್ಲಿ ಸೈನ್ಯ ಸಂಗ್ರಹವಾಗುತ್ತಿದೆ ಎನ್ನುವ ಸುಳ್ಳು ಕಲ್ಪನೆಗೆ ಆಸ್ಪದವಾಗಿರುತ್ತದೆ. ಈ ಹಾಗೂ ಇದೇ ನಮೂನೆಯ ಬೇರೆ ಅಪಪ್ರಚಾರಗಳನ್ನು ಹೊಣೆಗಾರ ಸ್ಥಾನದಲ್ಲಿರುವ ಜನರೇ ಕೈಗೊಳ್ಳುವುದಾದರೆ, ಉಭಯ ರಾಷ್ಟ್ರಗಳಲ್ಲಿ ಸೌಹಾರ್ದ ಸಂಬಂಧ ಸ್ಥಾಪಿಸಬೇಕೆನ್ನುವ ಮಾತು ಕೃತಿಯಲ್ಲಿ ಇಳಿಯುವುದೆಂತು? ಮಹಮ್ಮದಾಲಿಯವರು ನೆಹರೂರ ರಾಜಕೀಯ ಮೇಧಾವಿತನವನ್ನೂ ಮುತ್ಸದ್ದಿತನವನ್ನೂ ಎರಡು ಮಾತುಗಳಲ್ಲಿ ಹೊಗಳಿದ ಮಾತ್ರಕ್ಕೆ ಭಾರತ ಸರಕಾರ ತೃಪ್ತಿಪಡುವಂತಿಲ್ಲ. ಪಾಕಿಸ್ತಾನದೊಳಗೆ ಕೆಲವು ಪತ್ರಿಕೆಗಳು ಭಾ ಭಾರತದ ವಿರುದ್ಧ ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಮಾಡುತ್ತಿರುವ ಅಪಪ್ರಚಾರಕ್ಕೆ ಇತಿಮಿತಿಯೇ ಇಲ್ಲ. ಜನತೆಯ ಮನಸ್ಸನ್ನು ಹೇಸಿಗೆ ಮಾತುಗಳ ಪ್ರಯೋಗದಿಂದ ಉದ್ರೇಕಿಸುವ ಅನುಚಿತ ಮಾರ್ಗವನ್ನು ಈ ಪತ್ರಿಕೆಗಳು ಹಿಡಿದಿವೆ-ಸಂಯುಕ್ತ ಪ್ರಕಟಣೆಯಲ್ಲಿ ಒಪ್ಪಿದ ತತ್ವವನ್ನು ಇವು ಸಂಪೂರ್ಣ ನಿರಾಕರಿಸುತ್ತವೆ. 'ನೆಹರೂ'ವರಿಂದ ಪಾಕಿಸ್ತಾನಕ್ಕೆ ನ್ಯಾಯ ದೊರೆಯುವಂತಿಲ್ಲ-ಭಾರತದೊಂದಿಗೆ ಮಾತುಕತೆಗಳನ್ನು ಮುಂದುವರಿಸುವುದು ಕೇವಲ ಅರ್ಥಶೂನ್ಯ ವಿಚಾರ-ಸಂಯುಕ್ತ ರಾಷ್ಟ್ರ ಸಂಘಗಲ್ಲೇ! ಈ ಪ್ರಶ್ನೆ ಇತ್ಯರ್ಥವೊಂದಲಿ-ಪಾಕಿಸ್ತಾನೀ ಸೇನೆಯ ಶಕ್ತಿ ಕುಂದದಿರಲಿ" ಎಂದು ಮುಂತಾಗಿ ಡಾನ ಪತ್ರಿಕೆ ಅಗ್ರಲೇಖದಲ್ಲಿ ಹೇಳಿದೆ. ಸಂಯುಕ್ತ ರಾಷ್ಟ್ರಸಂಘದಿಂದ ಕಾಶ್ಮೀರ ಪ್ರಶ್ನೆಯನ್ನು ವಾಪಾಸುಮಾಡಿದವರೇ ಇಲ್ಲ- ಆದರೆ ಭದ್ರತಾಮಂಡಳದ ಪ್ರಯತ್ನಗಳೆಲ್ಲ ವಿಫಲವಾದುದರಿಂದ ಮತ್ತು ಮಧ್ಯಸ್ಥಿಗಾರರಾದ ಡಾ. ಗ್ರಹಾಮರೇ ಉಭಯ ರಾಷ್ಟ್ರಗಳು ನೇರಾದ ಮಾತುಕತೆಗಳಲ್ಲಿ ತೊಡಗುವುದು ಸಮಸ್ಯೆಯ ಪರಿಹಾರಕ್ಕೆ ಶ್ರೇಯಸ್ಕರವೆಂದುದರಿಂದ, ಈಗಿನ ಪ್ರಯತ್ನಗಳು ಸ್ವಾಗತಾರ್ಹ. ಇದಲ್ಲದೆ ರಾಷ್ಟ್ರಸಂಘದ ಮುಂದಿರುವ ಪ್ರಶ್ನೆಯೊಂದನ್ನು ತಂಟೆಗೆ ಸಂಬಂಧಿಸಿದ ರಾಷ್ಟ್ರಗಳು ಸ್ನೇಹದಿಂದ ಬಿಡಿಸಿಕೊಳ್ಳಲೇಬಾರದೆಂದು ನಿಯಮವಿಲ್ಲ. ರಾಷ್ಟ್ರಸಂಘ ಇಂಥ ಪ್ರಯತ್ನಗಳನ್ನು ಅವಶ್ಯ ಸ್ವಾಗತಿಸಿ ಪುರಸ್ಕರಿಸುತ್ತದೆ. ಬಕ್ಷಿಯವರ ಸರಕಾರ ಭಾರತದ ಕೈಗೊಂಬೆಯೆಂದೂ ಆದಕಾರಣ ಅವರ ಅಧಿಕಾರ ನಡೆದಿರುವಾಗ ಕಾಶ್ಮೀರ ಪ್ರದೇಶದಲ್ಲಿ ನಿಷ್ಪಕ್ಷಪಾತ ಮತಗಣನೆ ಅಸಾಧ್ಯವೆಂದೂ ಆರೋಪವಿದೆ. ಇದಕ್ಕೆ ಈ ಮುಂಚೆ ಹಲವಾರು ಬಾರಿ ಸಮಾಧಾನ ಹೇಳಿಯಾಗಿದೆ; ಮತ್ತು ಪಾಕ-ಭಾರತಗಳೆರಡೂ ಒಂದು ತಿಳುವಳಿಕೆಗೆ ಬಂದಿರುತ್ತವೆ. ಮತಗಣನಾಧಿಕಾರಿಯನ್ನು ಕಾಶ್ಮೀರ ಸರಕಾರವೇ ನೇಮಿಸಬೇಕೆಂಬ ತತ್ವಕ್ಕೆ ಮನ್ನಣೆ ದೊರೆತ ಮೇಲೆ ಇನ್ನು ಈ ಪ್ರಸಂಗವನ್ನು ಉದ್ದಕ್ಕೆಳೆಯುವುದು ನಿರರ್ಥಕ. ಆದರೆ ನೆಹರೂರವರು ರಾಷ್ಟ್ರಸಂಘ ನೇಮಿಸಿದ ಅಡ್ಮಿರಲ್ ನಿಮಿಜ್ಜರ ಬದಲು ಬೇರೊಬ್ಬ ಮತಗಣನಾಧಿಕಾರಿಯ ನೇಮಕವನ್ನು ಅಪೇಕ್ಷಿಸಿದ್ದು ನಿಜ; ಮತ್ತದು ಸ್ವಾಭಾವಿಕ. ಭದ್ರತಾ ಮಂಡಳದ ಪ್ರಯತ್ನ ವಿಫಲಗೊಂಡುದರಿಂದ ಆದರಿಂದ ನೇಮಕ ಹೊಂದಿದ ಮತಗಣನಾಧಿಕಾರಿಯೂ ನಿರುಪಯೋಗಿಯಾಗುವನು. ಭಾರತದ ನಿಲುವೆಯನ್ನು ಅರ್ಥಮಾಡಿಕೊಂಡೋ ಎಂಬಂತೆ, ನಿಮಿಜ್ಜರು ರಾಜಿನಾಮೆ ಕೊಟ್ಟಿರುವ ವಾರ್ತೆಬಂದಿದೆ. ಅಧಿಕೃತ ಪುಷ್ಟಿ ಇದಲ್ಲ. ಆದರೂ ಪಾಕಿಸ್ತಾನದಲ್ಲಿ ಇದನ್ನು ದುಃಖದಾಯಕ ಸಂಗತಿಯಾಗಿ ಪರಿಗಣಿಸಿದ್ದಾರೆ; ಜಾಫರುಲ್ಲಾ ಖಾನರು ವಿಶೇಷಖೇದಗೊಂಡಿದ್ದಾರೆ; ಮತ್ತು ಕರಾಚಿ ಟೈಮ್ಸ್ ಪತ್ರಿಕೆ ಅಮೇರಿಕೆಯು ಪಾಕಿಸ್ತಾನವನ್ನು ಬೆನ್ನಿನಲ್ಲಿ ತಿವಿಯಿತೆಂದು ಬೊಬ್ಬೆ ಹಾಕಿದೆ. ಹೀಗೆ ಯಾವ ನ್ಯಾಯವಾದ ಕಾರಣವೂ ಇಲ್ಲದೆ ಉದ್ರೇಕಗೊಳ್ಳುವ ಮತ್ತು ಉದ್ರೇಕಗೊಳಿಸುವ ಪ್ರವೃತ್ತಿ ಪಾಕಿಸ್ತಾನದಲ್ಲಿ ಇರುವಷ್ಟುಕಾಲ -- ಸಮಸ್ಯೆಗಳ ಶಾಂತ ರೀತಿಯ ಪರಿಹಾರ ಬಹಳ ಕಠಿಣವಾಗಿ ಪರಿಣಮಿಸುತ್ತದೆ. ಪಾಕ ಪ್ರಧಾನರು ತಮ್ಮ ಮನಸ್ಸನ್ನು ಗಟ್ಟಿಮಾಡಿಕೊಳ್ಳುವ ಅಗತ್ಯವಿರುವಷ್ಟೇ ಪಾಕಿಸ್ತಾನಿಗಳು ಕ್ಷೋಭೆಗೊಳ್ಳದಂತೆ ಜಾಗ್ರತೆ ವಹಿಸುವುದೂ ಯೋಗ್ಯ; ಅನ್ಯಥಾ ಆಕ್ರೋಶ ಮತ್ತು ಆರ್ಭಟೆಗಳ ಗೌಜಿಯಲ್ಲಿ ನ್ಯಾಯವಾಣಿ ಕೇಳಿಸದೆ ಹೋದೀತು.

ಚಂದಾದಾರರಲ್ಲಿ ವಿನಂತಿ

ಕಳೆದ ಆಗೋಸ್ತಿಗೆ 'ನವಯುಗ'ದ ೩೭ನೇ ವರ್ಷವು ಮುಗಿದು ಇದೇ ಸಪ್ಟಂಬರದಿಂದ ೩೩ನೇ ಹೊಸ ವರ್ಷಾರಂಭವಾಗಿರುವದಷ್ಟೆ! ಈಗಲಾದರೂ ಇನ್ನೂ ಚಂದಾ ಬಾಕಿ ಇರುವ ಮಹನೀಯರು ತಮ್ಮ ಬಾಕಿಯನ್ನು ತ್ವರಿತದಲ್ಲಿ ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ. ಅಂತೆಯೇ ಎಲ್ಲರೂ ಚಾಲ್ತಿ ವರ್ಷದ ಚಂದಾ ಹಣವನ್ನೂ ಮುಂದಾಗಿ ಕಳಿಸಿ ಪ್ರೋತ್ಸಾಹಿಸುವಂತೆ ಅಪೇಕ್ಷಿಸುತ್ತೇವೆ. ವಿ. ಪಿ. ಮಾಡಿದರೆ ಒಂಭತ್ತಾಣೆಯಷ್ಟು ಹೆಚ್ಚಿಗೆ ಖರ್ಚು ಬೀಳುವುದರಿಂದ ಸರ್ವರೂ ದಯಮಾಡಿ ಮನಿಯಾರ್ಡರು ಮಾಡುವುದು ವಿಹಿತವೆನ್ನುತ್ತೇವೆ, ಸ್ಪಷ್ಟವಾಗಿ ತಿಳಿಸಿದರೆ ಮಾತ್ರ ವಿ. ಪಿ. ಮಾಡುವೆವು.

ಮೆನೇಜರ್.

TELE-HYPNOTISM

You can influence or hypnotise to anybody by photograph or portrait without his knowledge. Experimented, simple and effective method invented by the GREAT MAGICIAN PROF R. K. BANERJEE. Ask for free particulars.

METALI, Agartala (Tripura State).

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 275/1953

ಪಟೇಲ ಮಂಜುನಾಥ ಪೈ ಬ್ರದರ್ಸ್—ವಾದಿ.
ಹುಣ್ಸೆಮಕ್ಕಿ ಮಹಾಬಲ ಪ್ರಭು-ಪ್ರತಿವಾದಿ.

ಕುಂದಾಪುರ ತಾಲ್ಲೂಕು ಹೊಂಬಾಡಿ ಮಂಡಾಡಿ ಗ್ರಾಮದ ಹುಣ್ಸೆಮಕ್ಕಿ ಪೇಟೆಯಲ್ಲಿರುವ ಮಂಜುನಾಥ ಪ್ರಭುಗಳ ದತ್ತದ ಮಗ, ಹುಣ್ಸೆಮಕ್ಕಿ ಮಹಾಬಲ ಪ್ರಭುಗಳಿಗೆ.

ನೀವು ವಾದಿಯ ಕುಂದಾಪುರ ವ್ಯಾಪಾರದ ಅಂಗಡಿಯಲ್ಲಿ ವಾದಿ ಕೂಡೆ ನಡಿಸಿರುವ ಲೇವಾದೇವಿ ಬಾಬ್ತು ನಿಮ್ಮ ಮೇಲೆ ಬಾಕಿಯಾಗಿರುವ ಅಸಲು ಬಡ್ಡಿ ಕೂಡಾ ರೂಪಾಯಿ 739-15 8ನ್ನು ನಿಮ್ಮಿಂದ ಬ ವಸೂಲಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ನಿಮ್ಮ ಮೇಲೆ ದಾಖಲು ಮಾಡಿರುವ ದಾವೆಯು ತಾ. 28—9—1953ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ನಿಮ್ಮ ಆಕ್ಷೇಪ ಇದ್ದಲ್ಲಿ ಸದ್ರಿ ತನ್ನಿ ದಿವಸ ಕೋರ್ಟಿನವರು ಕರದಾಗ್ಗೆ 11 ಘಂಟೆಗೆ ಹಾಜರಾಗಿ ಜ್ಯಾಹೀರಾತು ಕೊಳ್ಳತಕ್ಕದ್ದು, ತಪ್ಪಿದರೆ ನಿಮ್ಮ ಗ್ಯೆರಹಾಜ್ರಿಯಲ್ಲಿ ಫೈಸಲು ಮಾಡಿ ವ ಡಿಕ್ರಿ ಕೊಡುವದಾಗುತ್ತದೆಂದು ನೀವು ತಿಳಿದಿರತಕ್ಕದ್ದು.

R. I. A. 1165/1953ನೇ ಅರ್ಜಿ ಮೇಲಾದ ಕೋರ್ಟು ಹುಕುಂ ಪ್ರಕಾರ.

K. Narayana Kamath,
ವಾದಿಯ ಕಡೆ ಎಡ್ವೊಕೇಟ

ಕುಂದಾಪುರ, ತಾ. 5—9—53

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 399/1953

The Vijaya Tile Works and Kallianpura Saw Mills, Kallianpura, by Vijaya Construction and Commercial Corporation Ltd., by— Managing Agency Shri Krishna Agencies Ltd., by Director in charge & Principal Officer, Sri. A. Bhojaraja Hegde ... *Plaintiff.*

ಮತ್ತು

ಅಬ್ದುಲ್ಲ- ಇಬ್ರಾಹಿಂಬ್ಯಾರಿ ಮಗ- ಕಾಸರಗೋಡು ತಾಲೂಕು ಮುಟ್ಟತೋಡಿ ಗ್ರಾಮದ ಪಯ್ಯಕೋಟಿಯೆಂಬಲ್ಲಿರುವವ .. ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ನೀವು ವಾದಿ ಕಂಪೆನಿಗೆ ತಾರೀಕು 27-6-1950ರಲ್ಲು ರೂಪಾಯಿ 250/-ಕ್ಕೆ ಬರಕೊಟ್ಟ ದಿಮಾಂಡು ನೋಟಿನ ಅಸ್ಲು ಬಡ್ಡಿ ಐವೇಜಿನಲ್ಲಿ ವಸೂಲು ಕೊಟ್ಟದ್ದು ಕಳದು ಬಾಕಿಯಾಗುವ ಐವೇಜನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 18-9-53ಕ್ಕೆ ಇಟ್ಟದೆ. ಉದಾಹರಿಸುವಂಥಾದಿದ್ದರೆ, ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗ್ಯೆರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.

Udipi, Dated 9—9—1953.

(೫ನೇ ಪುಟದಿಂದ)

ದ್ಧಿ ಯೋಜನೆಗಳಿಗಿಂತ ಸಣ್ಣ ಅಭಿವೃದ್ಧಿ ಯೋಜನೆಗಳ ಫಲವು ಬೇಗನೇ ಉಣ್ಣಲು ಸಿಗುವುದರಿಂದ ಮತ್ತು ಅಲ್ಲಲ್ಲಿಯ ಸಮಸ್ಯೆಯನ್ನು ಆಯಾ ಕ್ಷೇತ್ರದಲ್ಲಿಯೇ ಬಿಡಿಸಲು ಇದು ಅನುಕೂಲ ರೀತಿಯಾಗಿರುವುದರಿಂದ-ಯೋಜನಾ ಆಯೋಗ ಇದಕ್ಕೆ ಉತ್ತೇಜನ ಕೊಡುವುದು. ಹಿತಪ್ರದವೆಂದು ನಮ್ಮ ಅಭಿಪ್ರಾಯ. ಈಚೆಗೆ ಜಾನಮಥಾಯರು ಆರಂಭಗಳ ಒಂದು ಸೂಚನೆಯನ್ನು ನಿರುದ್ಯೋಗದ ಪರಿಹಾರಕ್ಕೋಸ್ಕರ ಮುಂದಿಟ್ಟಿದ್ದರು. ತಾಂತ್ರಿಕ ವಿಜ್ಞಾನದ ಅಭಿವೃದ್ಧಿಗಿರುವ ಆಸ್ಪದದ ಅಂದಾಜು ಮಾಡಿಕೊಂಡು ಅದರ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ನೋಡಬೇಕೆನ್ನುವುದು ಅವರು ಮಾಡಿದ ಮಹತ್ವದ ಸೂಚನೆಗಳಲ್ಲಿ ಒಂದು. ಹಾಗೆಯೇ ಕೃಪಲಾನಿಯವರು ಲೋಕ ಸಭೆಯಲ್ಲಿ ನಿರುದ್ಯೋಗ ಸಮಸ್ಯೆಯ ಕುರಿತು ಬಂದ ಖಾಸಗಿ ಮಸೂದೆಯೊಂದನ್ನು ಚರ್ಚಿಸುವಾಗ ಹೇಳಿದ ಕೆಲ ಮಾತುಗಳೂ ಗಮನಾರ್ಹವಾಗಿವೆ—ಸರಕಾರದ ಹೊಣೆ ಮಾತ್ರವಲ್ಲದೆ, ದೇಶದ ಜನತೆಯೂ ನಿರುದ್ಯೋಗ ಸಮಸ್ಯೆಗೆ ಕಾರಣವೆಂದು ಅವರು ಅಪರೋಕ್ಷವಾಗಿ ಸೂಚಿಸುತ್ತಾರೆ. ಸ್ವದೇಶೀ ಭಾವನೆಯನ್ನು ದುರ್ಲಕ್ಷಿಸಿದ್ದೇ ನಿರುದ್ಯೋಗದ ಸಮಸ್ಯೆ ಬೆಳೆದುಕೊಳ್ಳಲು ಮೂಲ ಕಾರಣವೆಂಬ ಕೃಪಲಾನಿಯವರ ಮಾತು ನಮ್ಮೆಲ್ಲರಿಗೂ ಗಂಭೀರವಾದ ಎಚ್ಚರಿಕೆಯನ್ನು ಕೊಡುತ್ತದೆ. ದೇಶದಲ್ಲಿ ಉತ್ಪಾದನವಾಗುವ ವಸ್ತುಗಳಿಗೆ ಸರಕಾರವು ಆಯಾತದ ಅವಕಾಶವನ್ನು ಕೊಡಕೂಡದೆಂದೂ ದೊಡ್ಡ ದೊಡ್ಡ ಕಾರಖಾನೆ ಮುಂತಾದುವುಗಳ ಅಭಿವೃದ್ಧಿಗಿಂತ ಗೃಹೋದ್ಯಮದ ರಕ್ಷಣೆಯೇ ದೇಶದಲ್ಲಿ ಉದ್ಯೋಗ ನೀಡಬಲ್ಲುದೆಂದೂ ಅವರು ಹೇಳಿದ್ದಾರೆ. ಸಮಸ್ಯೆಯ ಗಂಭೀರ ಸ್ವರೂಪದ ಕುರಿತು ಚಿಂತೆ ವ್ಯಕ್ತಪಡಿಸುವವರೆಲ್ಲರೂ ಈ ವಿಷಯದಲ್ಲಿ ಸಹಾನುಭೂತಿಪರವಾದ ವರ್ತನೆಯನ್ನು ಇಟ್ಟು ಆದರ್ಶ ಪ್ರಾಯರಾಗಬೇಕು.

ವ್ಯವಹಾರ್ಯ ಮಾರ್ಗ

ಖಾಸಗಿ ಕ್ಷೇತ್ರಗಳಲ್ಲಿ ಉತ್ಪಾದನಾ ಅವಕಾಶವನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಉದ್ಯೋಗ ಕಲ್ಪಿಸುವುದಕ್ಕೆ ಹೆಚ್ಚು ಪ್ರಾಶಸ್ತ್ಯಕೊಟ್ಟರೆ ಒಳ್ಳೆಯದೆಂದು ಹೇಳುವವರಿಗಿಂತಲೂ—ಕಮ್ಯೂನಿಸ್ಟ ಸದಸ್ಯ ಗೋಪಾಲನ್ನರು ಮಂಡಿಸಿದ ಖಾಸಗಿ ಮಸೂದೆಯಲ್ಲಿ ಹೇಳಿದಂತೆ 'ನಿರುದ್ಯೋಗಿಗಳಿಗೆ ಕೆಲವು ಹಣವನ್ನು ಪರಿಹಾರ ರೂಪದಲ್ಲಿ ಕೊಡುವ' ವಿಷಯದಲ್ಲಿ ಆಸ್ಥೆಯನ್ನು ತೋರಿಸುವ ಜನರು ಹೆಚ್ಚು. ನಿರುದ್ಯೋಗಿಗಳಿಗೆ ಪರಿಹಾರ ರೂಪದಲ್ಲಿ ಸಹಾಯಧನ ದೊರೆಯುತ್ತಬಾದರೆ-ದೇಶದಲ್ಲಿ ಯಾರಾದರೂ ಏಕೆ ದುಡಿದು ತಿನ್ನಬೇಕೆಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಬರುತ್ತದೆ. ಸರಕಾರವೇ ಪ್ರತಿಯೊಬ್ಬರಿಗೂ ಉದ್ಯೋಗ ಕಲ್ಪಿಸುವ ಹೊಣೆ ಹೊತ್ತುಕೊಂಡರೆ, ಮತ್ತು ಎಲ್ಲ ಉದ್ಯೋಗ ಹಾಗೂ ವೃತ್ತಿಗಳ ಮೇಲೆ ಸರಕಾರದ ಯಶಸ್ವಿ ನಿಯಂತ್ರಣವಿದ್ದರೆ,(ಕಮ್ಯೂನಿಸ್ಟ ರಾಷ್ಟ್ರಗಳಲ್ಲಿ ಆ ಬಗೆಯ ಹತೋಟಿ ಇದೆ)ಗೋಪಾಲನ್ನರ ಸೂಚನೆ ವ್ಯವಹಾರ್ಯವೆಂದು ತೋರೀತು. ಆದರೆ ಭಿನ್ನ ಆರ್ಥಿಕ ವ್ಯವಸ್ಥೆಯುಳ್ಳ ಮತ್ತು ಸರಕಾರದ ಕಾರ್ಯಕ್ಷೇತ್ರಕ್ಕಿಂತಲೂ ವ್ಯಾಪಕವಾದ ಖಾಸಗಿ ರಂಗವಿರುವ ಭಾರತದಲ್ಲಿ ಗೋಪಾಲನ್ನರ ಸೂಚನೆಗೆ ವ್ಯವಹಾರಿಕ ಬೆಲೆ ಇಲ್ಲವೆಂದೇ ಹೇಳಬೇಕು. ನಿರುದ್ಯೋಗದ ನಗ್ನ ಸ್ವರೂಪವನ್ನು ಅರಿತುಕೊಳ್ಳುವುದಕ್ಕೆ ನೆರವಾಗುವ ಅಂಕೆ ಸಂಖ್ಯೆಗಳು ಸರಕಾರದೊಡನೆಯೂ ಲಭ್ಯವಿಲ್ಲ-ಕೇವಲ ಉದ್ಯೋಗ ವಿನಿಮಯ ಕೇಂದ್ರಗಳ ಅಂಕೆ ಸಂಖ್ಯೆಯೊಂದೇ ಅವಲಂಬ ಇದೆ. ಇವು ನಗರದಲ್ಲಿರುವ ಸುಶಿಕ್ಷಿತರ ಅಂದಾಜು ಮಾಡಿಕೊಡಬಹುದೇ ಹೊರತು, ಗ್ರಾಮಾಂತರ ಪ್ರದೇಶಗಳ ಬಗ್ಗೆ ಇದು ಪ್ರಯೋಜನಕಾರಿ ಮಾಹಿತಿ ನೀಡುವುದಿಲ್ಲ. ಯೋಜನಾ ಆಯೋಗವೂ ಕೇಂದ್ರ ಸರಕಾರದ ಹಣಕಾಸಿನ ವಿಭಾಗವೂ ಕೆಲವು ಮಾದರಿ ನಗರಗಳನ್ನು ಪರಿಶೀಲನೆಗೆ ತೆಗೆದುಕೊಂಡು ನಿರುದ್ಯೋಗದ ವಿಷಯದಲ್ಲಿ ಹೆಚ್ಚು ಸಂಗತಿಯನ್ನು ಸಂಗ್ರಹಿಸಲು ನಿಶ್ಚಯ ಮಾಡಿವೆಯೆಂದು ಕೇಳುತ್ತೇವೆ. ಹೀಗೆ ಆಯ್ಕೆ ಹೊಂದಿದ ಪರಿಶೀಲನಾ ಕ್ಷೇತ್ರಗಳಲ್ಲಿ ಮಂಗಳೂರು ನಗರವೂ ಒಂದು- ಈ ಪರಿಶೀಲನೆಗಳ ಯಶಸ್ವಿಯಾದರೆ, ಅವುಗಳ ಮೇಲಿಂದ ನಿರುದ್ಯೋಗ ಸಮಸ್ಯೆಗೆ ವ್ಯವಹಾರ್ಯವಾದ ಪರಿಹಾರ ಮಾರ್ಗ ಕಂಡು ಹಿಡಿಯಲು ಬಂದೀತೆಂದು ಸರಕಾರದ ಆಶೆ. ಈ ಭರವಸೆಯು ಈಡೇರುವಂತಾಗಲೆಂದು ನಿರುದ್ಯೋಗಿಗಳು ಮಾತ್ರವಲ್ಲ - ರಾಷ್ಟ್ರದ ಪ್ರತಿಯೊಬ್ಬ ಹಿತಚಿಂತಕನೂ ಹಾರೈಸುವುದಲ್ಲದೆ, ನಿರುದ್ಯೋಗವೆಂಬ ಅಪ್ರಿಯ ಶಬ್ದ ಪ್ರಯೋಗವೇ ಮಾಯವಾಗುವಂತೆ ಶಕ್ಯವಿದ್ದ ರೀತಿಯಲ್ಲಿ ಸಹಕರಿಸುವ ಪ್ರತಿಜ್ಞೆಯನ್ನು ಕೈಗೊಳ್ಳಲಿ!

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 52/53 O. S. 373/52

ಲೆಮುವೆಲ್ ಕರ್ಕಡ —ಅರ್ಜಿದಾರ.

ಕೆ. ಪುಂಡಲೀಕ ವಾಸುದೇವ ಕಾಮತ್, ಕೋಟೇಶ್ವರ —ಎದ್ರಿ.

ಈ ಮೂಲಕ ಎದ್ರಿಯವರಿಗೆ ತಿಳಿಯಪಡಿಸುವುದೇನಂದ್ರೆ—ಅರ್ಜಿದಾರನು ಎದ್ರಿಯ ಮೂಲಿ ವ ಮೂಲಗೇಣಿ ಹಕ್ಕಿನ ಆಸ್ತಿಗಳ ಮಾರಾಟದಿಂದ ಡಿಕ್ರಿ ಐವೇಜು ಸಮಾಧಾನ ಆಗಬೇಕೆಂತ ಸದ್ರಿ ಅರ್ಜಿ ದಾಖಲ್ಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 24-9-53 ಕ್ಕೆ ತನ್ಖಿಗೆ ಇದೆ. ಆ ದಿವ್ಸ 11 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜ್ರಲ್ಲಿ ತೀರ್ಮಾನಿಸಲ್ಪಡುವುದು, ತಿಳಿದಿರಲಿ.

H. Laxminarayanayya,
Advocate for Petitioner.

Coondapoor, 7—9—53

ಉಡುಪಿ

ಅಖಿಲಭಾರತ ಉತ್ಪಾದಕರ ಸಂಘ—(A. I. M. O)ದ ಪ್ರತಿನಿಧಿಯಾಗಿ ಜಪಾನಿನಲ್ಲಿಯ ಗುಡಿಕೈಗಾರಿಕೆಯ ಕುರಿತು ಅಭ್ಯಾಸಿಸಲು ಶ್ರೀ ಟಿ. ಉಪೇಂದ್ರ ಪೈಗಳು ತಾ 8ನೇ ಬೆಳಿಗ್ಗೆ ಮುಂಬಯಿಗೆ ತೆರಳಿ, ಅಲ್ಲಿಂದ ತಾ 16ಕ್ಕೆ ಸ್ಟೀಮರು ಹತ್ತಿ ಜಪಾನಿಗೆ ಹೊರಡುವರು. ಇವರೊಂದಿಗೆ ಇವರ ಪತ್ನಿ ಶ್ರೀಮತಿ ಶಾಂತಿ ಆರ್. ಪೈ ಮತ್ತು ಶ್ರೀಮತಿ ಪ್ರೇಮಾ ಎ. ಪೈ ಅಲ್ಲದೆ ಶ್ರೀ ಮೋಹನದಾಸ ಎಂ. ಪೈಗಳೂ ತೆರಳುವರು. ಈ ಸಂದರ್ಭದಲ್ಲಿ ಇವರೆಲ್ಲರನ್ನು ಬೀಳ್ಕೊಡುವ ಮತ್ತು ಶುಭಾಶಯ ನೀಡುವ ಸತ್ಕಾರ ಕೂಟವೊಂದು ಕೆನರಾ ಮ್ಯೂಚುವಲ್ ಕ್ಲಬ್ಬಿನಲ್ಲಿ ತಾ 7ರಲ್ಲಿ ಜರಗಿತು.

ಒಕ್ಕಲು ಹಿತ ಮಸೂದೆ— ಇತ್ತೀಚೆಗೆ ಮದರಾಸಿಗೆ ಹೋಗಿ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಬಂದ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳು ಈ ರೀತಿ ಹೇಳಿಕೆ ಪ್ರಕಟಿಸಿದ್ದಾರೆ. (1) ಆಂಧ್ರವು ಪ್ರತ್ಯೇಕವಾದೊಡನೆ ಸರಕಾರವು ದ. ಕ. ಜಿಲ್ಲೆಯ ಪರವಾಗಿ ಒಕ್ಕಲು ಹಿತ ಮಸೂದೆಯನ್ನು ಜಾರಿಗೆ ತರಲು ಮುಂದಾಗಿ ಕಾರ್ಯಕ್ರಮ ಕೈಕೊಳ್ಳುತ್ತದೆ. (2) ಜೋಗ್ ವಿದ್ಯುತ್ತಿನ ವಿಷಯದ ಕರಾರಿನ ವಿಷಯಗಳಲ್ಲಿ ಮದರಾಸು, ಮೈಸೂರು ಸರಕಾರಗಳೊಳಗೆ ಒಮ್ಮತವಾಗಿರುವುದರಿಂದ ಇದೇ ಅಕ್ಟೋಬರದಲ್ಲಿ ಕೆಲಸ ಆರಂಭವಾಗುವುದೆಂದು ನಿರೀಕ್ಷಿಸಬಹುದು. (3) ವಿದ್ಯಾ ಹೊಸ ಯೋಜನೆಯಂತೆ ಶಾಲಾ ಸಮಯದಲ್ಲಿ ಪ್ರಯೋಗಿಸುವುದರಿಂದ ಸರಕಾರವು ಸಮಯ ನಿಶ್ಚಯಿಸುವ ಅಧಿಕಾರವನ್ನು ಶಾಲಾಧಿಕಾರಿಗಳಿಗೇನೇ ಬಿಟ್ಟಿರುತ್ತಾರೆ. ಮತ್ತೂ ಆಕ್ಷೇಪಣೆಗಳಿದ್ದರೆ ವಿದ್ಯಾಧಿಕಾರಿಗಳಿಂದ ಮಾಹಿತಿ ಪಡೆಯಬಹುದು.

ಶ್ರೀ ಕೃಷ್ಣ ವಿಟ್ಲಪಿಂಡಿ ಉತ್ಸವದಲ್ಲಿ ಅಪಘಾತ:.. ಇದೇ ತಾ 1ರಲ್ಲಿ ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಶ್ರೀ ಕೃಷ್ಣ ಜಯಂತಿ ಸಂಬಂಧವಾದ ವಿಟ್ಲಪಿಂಡಿ ಲೀಲಾ ವಿನೋದಾವಳಿಗಳು ಸಾಂಗವಾಗಿ ನಡೆದರೂ ಅಡಿಕೆ ಮರದತ್ತುವಮೇಲಾಟದಲ್ಲಿ ಭಾಗವಹಿಸಿದ ಉಪ್ಪುಂದದ ದೈವಜ್ಞ ಸನಾತನದ 21 ವರ್ಷ ಪ್ರಾಯದ ರಾಮಕೃಷ್ಣ ಎಂಬವನು ಅಡಿಕೆಮರವು ಅರ್ಧದಲ್ಲಿ ಮುರಿದು ಕೆಳಕ್ಕೆ ಬಿದ್ದನು. ಮುಖಕ್ಕೆ ಗಾಯಗಳಾಗುವುದಲ್ಲದೆ ಮಣಿಗಂಟುಗಳಿಗೆ ಹಾನಿಯುಂಟಾಗಿದೆ. ಸರಕಾರಿ ಆಸ್ಪತ್ರೆಯಲ್ಲಿ ಅವನ ಚಿಕಿತ್ಸೆ ನಡೆಯುತ್ತಿದೆ.

ದುಃಖಸೂಚಕ ಸಭೆ—ಸ್ಥಳೀಯ ಕೆನರಾ ಮ್ಯೂಚುವಲ್ ಬೆನಿಫಿಟ್ಸ್ ಕಂಪೆನಿಯ ಸತತ ಡೈರೆಕ್ಟರರಾಗಿದ್ದು ಕಳೆದ ತಾ 28ರಲ್ಲಿ ಮದ್ರಾಸಿನಲ್ಲಿ ನಿಧನಹೊಂದಿದ ಕಾರ್ಕಳದ ಜನಪ್ರಿಯ ಜನಾಬ ಎಚ್. ಎಸ್. ಹುಸ್ಸೇನ ಅವರಿಗೆ ಶ್ರದ್ಧಾಂಜಲಿಯನ್ನೀಯುವ ಬಗ್ಗೆ ಕಳೆದ ತಾ 29ರಲ್ಲಿ ಕಂಪೆನಿ ಡೈರೆಕ್ಟರ ಸಭೆಯೂ ಇದೇ ತಾ 2ರಲ್ಲಿ ಡೈರೆಕ್ಟರು ಮತ್ತು ಶಿಬಂಧಿಗಳ ಸಂಯುಕ್ತ ಸಭೆಯೂ ಜರಗಿದುವು. ಜ. ಹುಸ್ಸೇನ್ ಸಾಹೇಬರ ನಿಧನದಿಂದ ತೆರವಾದ ಸ್ಥಳಕ್ಕೆ ಶ್ರೀ ಹಿ. ಶ್ರೀಪತಿ ಆಚಾರ್ಯ, B. Com. ಇವರನ್ನು ಡೈರೆಕ್ಟರರಾಗಿ ಸೇರಿಸಿಕೊಳ್ಳಲಾಗಿದೆ

ಸೆಂಟ್ರಲ್ ವಾರ್ಡಿನ ತೆರಿಗೆದಾರರ ಸಭೆ ಮು. ತಾ 5ರಲ್ಲಿ ಕಾನ್ಟ್ರಾಕ್ಟರರ ಆಫೀಸಿನಲ್ಲಿ ವಕೀಲ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಜನಾಬ್ ಎಚ್. ಎಸ್. ಹುಸ್ಸೇನ ಸಾಹೇಬರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯ ಪಾಸಾಯಿತು.

ಕರ್ನಾಟಕಸಂಘದ ಮಹಾಸಭೆಯು ತಾ. 6ರಲ್ಲಿ ಹರಿನಿವಾಸದಲ್ಲಿ ಶ್ರೀ. ಪಿ. ಎಸ್. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಲೆಕ್ಕಪತ್ರಗಳ ಪರಿಶೀಲನೆಗಳಾದ ಬಳಿಕ ಶ್ರೀಗಳಾದ ಡಾ| ಕೆ. ಎಲ್ ಐತಾಳ, ಪಿ ಎಸ್ ಅಯ್ಯಂಗಾರ್, ಕೆ. ಎಸ್ ಹರಿದಾಸ ಭಟ್, ಕೆ. ಹರಿದಾಸ ಉಪಾಧ್ಯಾಯ, ಕೆ. ರಂಗನಾರಾಯಣ ಉಪಾಧ್ಯಾಯ, ಕುಮಾರಸ್ವಾಮಿ, ಶ್ರೀಪತಿ ಆಚಾರ್, ಮಧ್ವರಾಜ ರಾವ್ ಶೀನ ಸೆಟ್ಟಿ, ಪುಟ್ಟಣ್ಣ ಸೆಟ್ಟಿ, ಯು. ಪುಂಡಲೀಕ ಶೆಣೈ ಬಿ. ಎನ್. ಆಚಾರ್ಯರು ಕಾರ್ಯನಿರ್ವಾಹಕ ಮಂಡಳಿಗೆ ಆರಿಸಲ್ಪಟ್ಟರು. ಡಾ| ಕೆ. ಎಲ್. ಐತಾಳರು ಸಭಿಕರಿಗೆ ಫಲ ಉಪಾಹಾರವಿತ್ತರು.

ನಿರುದ್ಯೋಗ ನಿವಾರಣ ಸಭೆಯು ಇದೇ ತಾ 6ನೇ ಸಂಜೆ ಜನಸಂಘದ ನೇತೃತ್ವದಲ್ಲಿ ರಥಬೀದಿಯಲ್ಲಿ ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಅನಂತಕೃಷ್ಣ ರಾವ್, ಪ್ರಭಾಕರ ಭಟ್, ಮೊದಲಾದವರ ಭಾಷಣಗಳಾದವು.

ನಗರ ಸಭೆಯ ಆಡಳಿತ ವರದಿಯ ಸಾರಾಂಶ— ಮುನಿಸಿಪಲ್ ವ್ಯವಹಾರ ಕ್ಷೇತ್ರದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಜನಸಂಖ್ಯೆಗನುಸಾರವಾಗಿ ಕೌನ್ಸಿಲರುಗಳ ಸಂಖ್ಯೆ ಇಪ್ಪತ್ತಕ್ಕೇರಿಸಲಾಗಿದೆ. ಯಾವ ಸಭೆಯೂ ಕೋರಮಿನ ಅಭಾವದಿಂದ ಮುಂದೂಡಲ್ಪಡಲಿಲ್ಲ. ನೆಂಬರರ ಹಾಜರಿಯು ತೃಪ್ತಿಕರವಿತ್ತು. ಮುನಿಸಿಪಲ್ ರಸ್ತೆಗಳ ಕುರಿತು ಯಾವ ಅಧಿಕಾರಿಯೂ ಸೂಚನೆಗಳನ್ನು ವ್ಯಕ್ತಪಡಿಸಲಿಲ್ಲ. ಸ್ಥಳಾಕ್ರಮಣಗಳನ್ನು ಪತ್ತೆ ಹಚ್ಚಲಾಗಲಿಲ್ಲ. ವರದಿ ವರ್ಷದಲ್ಲಿ ಸಾಂಕ್ರಾಮಿಕ ರೋಗಗಳು ತಲೆದೋರಲಿಲ್ಲ. ನಗರ ಸಭೆಯು ಎಲಿಮೆಂಟರಿ ಶಾಲೆಗಳಲ್ಲಿ ಧರ್ಮಾರ್ಥ ವಿದ್ಯೆ ಕೊಡಲಾಗಿತ್ತು. ಸಂತೆಕಟ್ಟೆ ಮತ್ತು ಕಲ್ಯಾಣ ಸೆಂಟರುಗಳಲ್ಲಿ ಬಡವರ ಚಿಕ್ಕ ಮಕ್ಕಳಿಗೆ ಧರ್ಮಾರ್ಥ ಹಾಲನ್ನೀಯಲಾಗಿತ್ತು. ತೆರಿಗೆ ವಸೂಲಿ ಕೆಲಸ ತೃಪ್ತಿಕರವಿತ್ತು. ಹೊಸ ಬಾಕಿ ಬರತಕ್ಕ ತೆರಿಗೆ ಐವೇಜಿನಲ್ಲಿ ಹೆಚ್ಚಿನಂಶ ಸಕಾಲದಲ್ಲಿಯೇ ಬರುವಂತಾಗಿತ್ತು. ವರದಿ ವರ್ಷದಲ್ಲಿ ಚೇರ್‌ಮನ್, ಕೌನ್ಸಿಲರ್ಸ್, ಕಮಿಶನರ್ ಮತ್ತು ... ಪ್ರೀತಿ ವಿಶ್ವಾಸಗಳಿಂದ ಇದ್ದರೆನ್ನಲಾಗಿದೆ,

---

ಬೊಂಬಾಯಿ — ಇಲ್ಲಿಯ ಬಿಲ್ಲವರ ಎಸೋಸಿಯೇಶನಿನವರು ಕಳೆದ ತಾ 25ರಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ದೇವರ 90ನೇ ಜನ್ಮದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಿದರು. ಶ್ರೀ ಬಿ. ಎ. ಮಾಸ್ಟರರು ಶ್ರೀ ಗುರು ದೇವರ ಜೀವನ ಚರಿತ್ರೆಯನ್ನಿತ್ತು ಮಾತನಾಡಿದರು. ಗುರು ಸ್ತೋತ್ರ ಪಠನೆ ಭಜನೆ ಪ್ರಸಾದ ವಿತರಣಾ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ನಡೆಯುವ ಚಿತ್ರ

ಸುನೇರೀ ದಿನ್

ತಾರಾಗಣ:-ರಾಜ್ ಕಪೂರ, ರೆಹನಾ, ನಿ... ಸುಲ್ತಾನಾ, ರೂಪಕಮಲ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

1?-9-53ನೇ ... 10ಕ್ಕೆ

CHEAPER BY THE DOZEN.

ಚೀಪರ್ ಬೈ ದಿ ಡಜನ್



ಮಂಗಳೂರು

ರೈಲ್ವೆ ಉಪಯೋಗಿಸುವವರ ಸಲಹಾ ಸಮಿತಿ ಸಭೆಯು—ಇದೇ ತಾ 4 ರಲ್ಲಿ ರೀಜನಲ್ ಟ್ರಾಫಿಕ್ ಸುಪರಿಂಟೆಂಡೆಂಟ್ ರಾಯಪುರಂ ಹಾಗೂ ಸಮಿತಿ ಅಧ್ಯಕ್ಷ ಶ್ರೀ ಡಿ. ಬಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಮಂಗಳೂರು ಮಿರೇಜ್‌ಕರರ ಬಂಗ್ಲೆಯಲ್ಲಿ ಸೇರಿತು.

ಮಂಗಳೂರು ರೈಲ್ವೆ ಸ್ಟೇಶನ್ ರಸ್ತೆಗಳಿಗೆ ರಿಪೇರಿ ಮತ್ತು ಅಂಗಣಕ್ಕೆ ಆದಷ್ಟು ಬೇಗ ಹಾಕಿಸುವ ಮಾತ್ರ, ಮಂಗಳೂರಿನಿಂದ ಜಾಲಾರ್ ಪೇಟೆ ವರೆಗೆ ಮೇಲಿನ ವರ್ಗದ ಡಬ್ಬಿಗಳುಳ್ಳ ಒಂದು ರೈಲ್ವೆ ಸರ್ವಿಸನ್ನು ಸುರು ಮಾಡುವ ವಿಷಯ ಸಲಹೆಯೂ ಯಾಲಾಯಿತು ಅಲ್ಲದೆ ಮಂಗಳೂರು ರೈಲ್ವೆ ಸ್ಟೇಶನಿನಲ್ಲಿ ಹೆಂಗಸರಿಗಾಗಿ ಒಂದು ಪ್ರತ್ಯೇಕ ವೈಟಿಂಗ್ ರೂಮು ಮತ್ತು ಟಿಕೇಟು ಕೊಡುವ ಕಿಟಿಕಿಯನ್ನು ತೆರೆಯುವ ವಿಷಯದಲ್ಲಿ ಆಲೋಚನೆ ಮಾಡಬೇಕೆಂದಾಯಿತು. ಇವಲ್ಲದೆ ಪ್ರಯಾಣಿಕರ ಸೌಕರ್ಯಗಳಿಗಾಗಿ ಮಂಗಳೂರು ಮದ್ರಾಸುಗಳ ನಡುವೆ ಹೆಚ್ಚು ಸರ್ವಿಸುಗಳನ್ನು ಮಾಡುವ ವಿಷಯ, ನೀರಿನ ಸೌಕರ್ಯವಿರುವಲ್ಲಿ ಫ್ಲಶ್ ಔಟ್ ಪಾಯಿಖಾನೆಗಳನ್ನು ಮಾಡುವ ಬಗ್ಗೆ ಮತ್ತು ಮಂಗಳೂರು ಕೊಯಮುತ್ತೂರು ಮೊದಲಾದ ಸ್ಟೇಶನುಗಳಲ್ಲಿ ಹೆಚ್ಚು ಸೌಲಭ್ಯಗಳು ದೊರಕಿಸುವ ವಿಷಯ ಮೆಟ್ಟುಪಾಳ್ಯದಿಂದ ಕೊಚ್ಚಿ ಬಂದರದ ವರೆಗೆ ರಾತ್ರಿ ಸರ್ವಿಸು ಓಡಿಸುವ ವಿಷಯ ಇತ್ಯಾದಿ ಚರ್ಚಿಸಲ್ಪಟ್ಟವು. ಮೂವತ್ತೊಂದು ರೈಲ್ವೆ ಸ್ಟೇಶನುಗಳಲ್ಲಿ ವಿದ್ಯುಚ್ಛಕ್ತಿ ಯಂತ್ರದಿಂದ ಕುಡಿಯುವ ತಣ್ಣೀರು ಒದಗಿಸಲು ಏರ್ಪಾಡು ಮಾಡುವ ವಿಷಯ, ಕಣ್ಣಾನೂರ್ ಸ್ಟೇಶನ್ ಅಂಗಣಕ್ಕೆ ಕೊಂಕ್ರೀಟ್ ಹಲಗೆಗಳನ್ನು ಹಾಕುವ ವಿಷಯ ಮೊದಲಾದ ವಿಭಾಗಗಳೂ ಸಭೆಯ ಮುಂದೆ ಇಡಲ್ಪಟ್ಟವು ಸಭಾಂತ್ಯದಲ್ಲಿ ಸ್ಥಳೀಯ ಸದಸ್ಯ ಶ್ರೀ ವಿ. ಎಸ್. ಕುಡ್ವರು ಸದಸ್ಯರಿಗೆ ಆತಿಥ್ಯವನ್ನು ಒದಗಿಸಿದುದಕ್ಕೆ ಶ್ರೀಮತಿ ಅನ್ನಪೂರ್ಣ ರಾಜಾರವರು ಧನ್ಯವಾದಗಳನ್ನರ್ಪಿಸಿದರು.

ಸಂತಾಪ ಸೂಚಕ ಸಭೆ—ಗವರ್ನಮೆಂಟ್ ಕಾಲೇಜು ಯೂನಿಯನ್ ಸೆಕ್ರೆಟರಿ ಶ್ರೀ ಎ. ರತ್ನಾಕರರ ಅಕಾಲ ನಿಧನದ ಬಗ್ಗೆ ವಿಷಾದ ಸೂಚಿಸುವ ಬಗ್ಗೆ ಮಂಗಳೂರು ವಿದ್ಯಾರ್ಥಿ ಯೂನಿಯನ್ ಸಭೆಯು ಇದೇ 3ರಲ್ಲಿ ಶ್ರೀ ಪಿ. ಕೆ. ಶಾಂತಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿ ಸಂತಾಪ ಸೂಚಕ ನಿರ್ಣಯವನ್ನು ಮಂಜೂರುಮಾಡಿತು.

WANTED

A Higher grade Trained Teacher to work temporarily till 30-4-54

Apply to the manager

Aided Higher Elementary school,

KEMMANNU.

ಇಲೆಕ್ಟ್ರಿಕ್ ಎಂಡ್ ರೇಡಿಯೋ ಕ್ಯೆಪಿಡಿ

ರೂ. 15/-ಕ್ಕೆ ರೇಡಿಯೋ ತಯಾರಿಕೆಯನ್ನು ಕಲಿಯಿರಿ. ರೇಡಿಯೋ ರಿಪೇರಿ, ಮನೆಗಳಿಗೆ ವಾಯರಿಂಗ್ ಮಾಡುವ ಇತ್ಯಾದಿ ಇಲೆಕ್ಟ್ರಿಸಿಟಿಗೆ ಸಂಬಂಧದ ಮಾಹಿತಿಯನ್ನು ಪಡೆದು ತಿಂಗಳಿಗೆ ರೂಪಾಯಿ 200/ ಸಂಪಾದಿಸಿರಿ. ಈ ಕ್ಯೆಪಿಡಿಯ ಕ್ರಯ ರೂಪಾಯಿ 4/ ಟೈಲರಿಂಗ್ ಮತ್ತು ವಸ್ತ್ರಗಳನ್ನು ಕಟ್ ಮಾಡುವ ರೀತಿ ವಿಧಾನಗಳಿರುವ ಕ್ಯೆಪಿಡಿಗೆ ರೂ. 3/-ಸುವಾಸನಾ ದ್ರವ್ಯ ತಯಾರಿಕೆಯ ಅನುಭವ ಕ್ಯೆಪಿಡಿಗೆ ರೂ. 3-/- ಕಸೂತಿ ಎಂಬ್ರೋಯಿಡರ್ ಸೂಜೀಸಿಗೆ (ಮನೆಯ ಹೆಣ್ಣುಮಕ್ಕಳಿಗೆ ಪಾರಿತೋಷ) ರೂ. 6/ ಕಸೂತಿ ಚಿತ್ರಗಳಿರುವ ಪುಸ್ತಕಕ್ಕೆ ರೂ. 3/- ವಿ. ಪಿ. ಪಿ. ಖರ್ಚು ರೂ. 0-12-0 ಪ್ರತ್ಯೇಕ.

Hindustan Traders & Publishers Ltd.,

(M. 2) KHURJA (city) E. I. Ry

ನೆರೆಪೀಡಿತ ರೈತರ ಜಾಥಾ—ಕಾವೂರು, ಕೂಳೂರು, ಕೆಂಜಾರು, ಬೋಳೂರು, ಮೂಳೂರು, ಗೋಟಿಕಾರು, ಮನ್ನೂರು, ಪಂಜಿಮೊಗರು, ಮತ್ತು ಮಿತ್ತಮೊಗರು ಗ್ರಾಮಗಳಲ್ಲಿ ಇತ್ತೀಚೆಗೆ ನೆರೆಯಿಂದ ನಷ್ಟಹೊಂದಿದ ರೈತರ ಜಾಥವೊಂದು ಈಚೆಗೆ ದ. ಕ. ಜಿಲ್ಲಾ ರೈತ ಸಂಘದ ನಾಯಕತ್ವದಲ್ಲಿ ಜಿಲ್ಲಾ ಕಲೆಕ್ಟರರನ್ನು ಭೇಟಿಯಾಗಿ, ತಮ್ಮ ಸಂಕಷ್ಟಗಳ ಕುರಿತು ವಿವರಿಸಿರುವುದೆಂದು ತಿಳಿಯಲಾಗಿದೆ.

ಭಾಷಣ—ತಮಿಳು ನಾಡು ಹಿಂದೀ ಪ್ರಚಾರ ಸಮಿತಿಯ ಮಂತ್ರಿಗಳಾದ ಶ್ರೀ ಅವರ್ಧನಂದರು ಇದೇ ತಾ.1ರಲ್ಲಿ ರಾಷ್ಟ್ರಭಾಷೆಯ ಕುರಿತು ಬೋಧಪ್ರದ ಭಾಷಣವಿತ್ತರು. ಅಂದಿನ ಸಭೆಗೆ ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷರಾಗಿದ್ದರು, ಶ್ರೀ ಶ್ರೀಧರ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ವಯಸ್ಕರ ವಿದ್ಯಾ ಸಮಿತಿಯ ಸಭೆಯು ಇದೇ ತಾ. 3ರಲ್ಲಿ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಎಲ್ಲಾ ಮುನಿಸಿಪಲ್ ಶಾಲೆಗಳಲ್ಲಿ ವಯಸ್ಕರ ತಾಬೇತಿ ತರಗತಿಗಳನ್ನು ರಾತ್ರಿ ತೆರೆಯಬೇಕೆಂದು ವಿನಂತಿಸಲಾಯಿತು, ಸರಕಾರಿ ಗ್ರಾಂಟು ಪಡೆಯದ ಶಾಲೆಗಳಿಗೆ ತಿಂಗಳಿಗೆ ರೂ. 5 ರಂತೆ ಗ್ರಾಂಟು ನಿರ್ಧರವಾಯಿತು.

ನಿರುದ್ಯೋಗ ನಿವಾರಣಾ ಸಭೆಯು ಭಾರತೀಯ ಜನಸಂಘದ ಆಶ್ರಯದಲ್ಲಿ ಇದೇ ತಾ. 6ರಲ್ಲಿ ಸಂಜೆ ಕೇಂದ್ರ ಮೈದಾನಿನಲ್ಲಿ ವೈದ್ಯಗಾರ ಎಮ್. ಆರ್. ಥಪ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಕೆ. ನಾರಾಯಣ ಶಾಸ್ತ್ರಿ, ಭಾಸ್ಕರ ರಾವ್, ಮಾಧವಾಚಾರ್ಯರು ನಿರುದ್ಯೋಗ ಸಮಸ್ಯೆಯ ಕುರಿತು ಮಾತನಾಡಿ ಅದರ ಪರಿಹಾರದ ಬಗ್ಗೆ ಸಲಹೆಗಳನ್ನಿತ್ತರು.

ಕಿಲ್ಲೆ ಸ್ಮಾರಕ ಸಮಿತಿ:—ಈ ಸಮಿತಿಯವರು ಮೊದಲಾಗಿ ಕೈಕೊಂಡಿರುವ ಪ್ರಸಿದ್ಧ ಲೇಖಕರನೇಕರು ಬರೆದಿರುವ ದಿವಂಗತರ ಜೀವನದ ಕಾರ್ಯಗಳ ಬೇರೆ ಬೇರೆ ಸ್ವರೂಪಗಳ ಕುರಿತು ಉತ್ತಮ ಲೇಖನ, ಕವನ ಮತ್ತು ಭಾವಚಿತ್ರಗಳನ್ನೊಡಗೊಂಡ ಸರ್ವಾಂಗ ಸುಂದರ ಸ್ಮಾರಕ ಗ್ರಂಥವು ಇದೇ ತಾ. 12ನೇ ಸಂಜೆ ಉದ್ಘಾಟಿಸಲ್ಪಡಲಿರುವುದು. ಅದರ ಬೆಲೆಯು ರೂಪಾಯಿ 1/ ಆಗಿದ್ದು ದಿವಂಗತರ ಹಿತೈಷಿಗಳನೇಕರು ಸುಮಾರು 1200ಕ್ಕೂ ಮಿಕ್ಕಿ ಪ್ರತಿಗಳನ್ನು ಖರೀದಿ ಮಾಡುವ ಜವಾಬ್ದಾರಿಯನ್ನು ವಹಿಸಿರುತ್ತಾರೆ. ಈ ಗ್ರಂಥವನ್ನು ವಿಕ್ರಯಿಸುವುದರಲ್ಲಿ ಜಿಲ್ಲೆಯ ಹಾಗೂ ಇತರ ಕಾಂಗ್ರೆಸ್ ಕೆಲಸಗಾರರೂ ಯಕ್ಷಗಾನ ಪ್ರೇಮಿಗಳೂ ದಿವಂಗತರ ಅಭಿಮಾನಿಗಳೂ ಪ್ರತಿಗಳನ್ನು ಸಮಿತಿಯ ಅಧಿಕಾರಿಗಳಿಂದಾಗಲೀ ವ ಮಂಗಳೂರಿನ ಕೆಸರಿ ಛಾಪಖಾನೆಯಿಂದಾಗಲೀ ಪಡೆಕೊಂಡು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ. ಗ್ರಂಥದ ಹೊರತು ಸ್ಮಾರಕ ನಿಧಿಗೆ ಹಣ ಸಂಗ್ರಹಿಸುವ ಕೆಲಸವೂ ನಡೆಯಬೇಕಾಗಿದೆ. ಅದಕ್ಕೆ ಸಹ ಎಲ್ಲರೂ ಉದಾರ ಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ಸಮಿತಿಯು ವಿನಂತಿಸುತ್ತದೆ.

ಶ್ರೀ ಕೃಷ್ಣ ಜಯಂತಿಯುತ್ಸವವು
ಮಂಗಳೂರಿನ ಶ್ರೀ ಕೃಷ್ಣ ವಿಠಲ ಮಂದಿರದಲ್ಲಿ, ಬಪ್ಪನ ಶ್ರೀ ಕೃಷ್ಣ ವಿದ್ಯೋದಯ ಭಜನಾ ಮಂದಿರದಲ್ಲಿ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ, ಅತ್ತಾವರ ಶ್ರೀ ಅರಸು ಮುಂಡತ್ತಾಯ ದೇವಸ್ಥಾನದಲ್ಲಿ ತಾ. 1 ರಲ್ಲಿ ಸಾಂಗವಾಗಿ ಜರಗಿತು.

ಹೋಟೆಲು ಕೆಲಸಗಾರರ ಸಭೆ
ಕಳೆದ ತಾ. 30ರಲ್ಲಿ ಹಿಂದ್ ಮಜ್ದೂರ್ ಸಭಾ ಕಚೇರಿಯಲ್ಲಿ ರಾತ್ರಿ, ಮಂಗಳೂರು ಹೋಟೆಲ್ ಮಜೂರರ ಸಭೆಯು ಸಂಘದ ಅಧ್ಯಕ್ಷ ಶ್ರೀ ಎಚ್. ಮಹಾಬಲ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ವಿ. ಶ್ರೀನಿವಾಸ ಸೆಟ್ಟಿ ಮೊದಲಾದವರು ಭಾಷಣವಿತ್ತರು. ಕೆಲಸಗಾರರ ವಿವಾದಗಳ ತೀರ್ಮಾನ ಬಗ್ಗೆ ಈ ಜಿಲ್ಲೆಯಲ್ಲಿ ಪ್ರತ್ಯೇಕ ಲೇಬರ್ ಅಫೀಸರರನ್ನು ನೇಮಕ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಗೋ ಸಂರಕ್ಷಣಾ ಸಮಿತಿ ಸಭೆ
ಶ್ರೀ ಎಮ್. ಕೆ ದೇವರಾಜ್, ಅವರಅಧ್ಯಕ್ಷತೆಯಲ್ಲಿ ಸೇರಿ ಸರಕಾರವು ಜಾಹೀರು ಮಾಡಿದ "ಜಾನುವಾರು ಅಕ್ರಮ ಪ್ರವೇಶ ಕಾನೂನಿನ ತಿದ್ದುಪಡಿ ಮಸೂದೆ"ಯನ್ನು ತಮ್ಮ ದ್ವೇಷ ಸಾಧನೆಗೆ ಹಳ್ಳಿಯ ಜನರು ಉಪಯೋಗಿಸುವ ಸಂಭವವಿರುವುದರಿಂದ ಆ ಕಾನೂನನ್ನು ಜ್ಯಾರಿಗೆ ತರಕೂಡದು ಎನ್ನುವ ನಿರ್ಣಯವಾಯಿತು. ಈ ಮೇಯಿಸುವ ಬಾ ಜಾನುವಾರುಗಳು ಮರಣ ಹೊಂದಿದುದರಿಂದ ಅವುಗಳು ತುತ್ತಾಗುವ ರೋಗವೇನೆಂಬುದನ್ನು ಕಂಡುಹಿಡಿದು ಮುಂದೆ ಅದು ಪ್ರಬಲವಾಗದಂತೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಸರಕಾರವನ್ನು ಕೇಳಿ ಕೊಳ್ಳುವ ಇತ್ಯಾದಿ ನಿರ್ಣಯಗಳಾದುವ.

ದೇವಸ್ಥಾನ ಮೊಕ್ತೇಸರರ ಸಭೆಯೊಂದು—ಕೊಯಮುತ್ತೂರು ಹಿಂದೂ ರಿಲೀಜಿಯಸ್ ಮತ್ತು ಚಾರಿಟೇಬಲ್ ಎಂಡೋಮೆಂಟ್ಸನ ಡಿ| ಕಮಿಶನರ್ ಶ್ರೀ ಎನ್. ವೆಂಕಟ್ರಾಮ ಅಯ್ಯರ ಅಧ್ಯಕ್ಷತೆಯಲ್ಲಿ ತಾ 6ರಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳ ಆಶ್ರಯದಲ್ಲಿ ನಡೆಸಲಿರುವ ಹಿಂದೂ ಅನಾಥಾಲಯವನ್ನು ವ್ಯವಸ್ಥಿತವಾಗಿ ನಡೆಸುವ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ಜರಗಿತು. ಅನಾಥಮಕ್ಕಳನ್ನು ಸಾಕಿ ವಿದ್ಯೆಕೊಡುವುದೇ ಆಗಿರದೆ ಅವರನ್ನು ಸಮಾಜ ಸೇವೆಗೆ ಸಿದ್ಧಗೊಳಿಸುವುದೇ ಈ ಯೋಜನೆಯ ಉದ್ದೇಶವೆಂದು ಅಧ್ಯಕ್ಷರು ಹೇಳಿದರು. ಚರ್ಚೆಯಾಗಿ ಅನಾಥಾಲಯವನ್ನು ಸ್ಥಾಪಿಸಬೇಕೆಂದೂ, ಈಗಿರುವ ಕೆಲವು ಅನಾಥಾಲಯಗಳಿಗೆ ಸಹಾಯ ನೀಡಬಹುದೆಂದೂ ತೀರ್ಮಾನಿಸಲಾಯಿತು. ವೆಂಕಟರಮಣ ದೇವಸ್ಥಾನದವರು ಅನಾಥಶ್ರಮಕ್ಕೆ ತಮ್ಮ ಖರ್ಚಿನಿಂದ ಕಟ್ಟಿಸಿ ಕೊಡಲೊಪ್ಪಿದ ಕಟ್ಟಡ ಆಗುವ ವರೆಗೆ ಬಾಡಿಗೆ ಕಟ್ಟಡದಲ್ಲಿ ಅನಾಥಾಲಯ ಆರಂಭಿಸುವುದೆಂದಾಯಿತು, ಮಂಗಳೂರಿನ ಹಿಂದೂ ರಿಲೀಜಿಯಸ್ ಮತ್ತು ಚಾರಿಟೇಬಲ್ ಎಂಡೋಮೆಂಟ್ಸನ ಅ। ಕಮಿಶನರ್ ಶ್ರೀ ಪಿ. ಎನ್, ಮಾಧವ ರಾಯರು ಅಧ್ಯಕ್ಷರಾಗಿಯೂ ಸಹಾಯಧನ ಕೊಡಲು ಸಮ್ಮತಿಸಿದ ದೇವಳದ ಪ್ರತಿನಿಧಿಗಳೂ ಇರುವ ಸಲಹಾ ಸಮಿತಿ ರಚಿತವಾಯಿತು.

ಕಾಫಿಹರಾಜು:— ಇದೇ ತಾ.1ರಲ್ಲಿ ನಡೆದ ಕಾಫಿಹರಾಜಿಗೆ ಯಾರೂ ಸ್ಪರ್ಧಿಸಲಿಲ್ಲವಾದ ಕಾರಣ ನೂರಾಟಕ್ಕೆಂದು ಇಟ್ಟ 21 ಟನ್ ಕಾಫಿಬೀಜಗಳನ್ನು ಸಹಾಯಕ ಕಾಫಿ ಮಾರ್ಕೆಟಿಂಗ್ ಆಫೀಸರರು ಹಿಂತೆಗೆದುಕೊಳ್ಳಬೇಕಾಯಿತು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು

೪೮ ದಿನದ ಲೇಹ್ಯ ರೂ. ೫ ೪-೦, ೨೪ ದಿನದ ಲೇಹ್ಯ ರೂ. ೩ ೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋದಲ್ಲಿ ಕೇಳಿರಿ.

ಕುರುಕಾಲು ಗೋಪಾಲ ಸೆಟ್ಟಿ ವಿದೇಶ ಪ್ರಯಾಣ—ದಿ| ಕುರುಕಾಲು ಅಂತಯ್ಯ ಸೆಟ್ಟಿರ ಪುತ್ರ ಶ್ರೀ ಕೆ. ಗೋಪಾಲ ಸೆಟ್ಟಿ, ಬಿ. ಎ. ಅವರು ಕಳೆದ ತಾ 20ರಲ್ಲಿ ಬಾರ್ ಎಟ್ ಲಾ ಕಲಿಯುವುದಕ್ಕಾಗಿ ಮುಂಬಯಿಯಿಂದ ಸ್ಟೀಮರು ಹತ್ತಿ ಇಂಗ್ಲೆಂಡಿಗೆ ತೆರಳಿರುತ್ತಾರೆ. ಇವರು ಎಸ್. ಎಸ್. ಎಲ್. ಸಿ. ಪಾಸಾಗಿ 1947ರಲ್ಲಿ ಬೊಂಬಾಯಿಗೆ ಹೋಗಿ ಅಲ್ಲಿ ಬಿ. ಇ. ಎಸ್. ಟಿ. ಕಂಪೆನಿಯಲ್ಲಿ ನೌಕರಿ ನಡೆಸುತ್ತಿರುವಾಗಲೇ ಕಾಲೇಜು ವಿದ್ಯಾಭ್ಯಾಸಮಾಡಿ ಬಿ. ಎ ಡಿಗ್ರಿ ಪಡೆದರು. ಶ್ರೀ ಸೆಟ್ಟರು ತಮ್ಮ ಸ್ಥಿರಪ್ರಯತ್ನ, ನಿಃ ತನ್ಮಯ ಆಸಕ್ತಿಸಾಹಸದಿಂದ ಸ್ವಯಂ ಸ್ಥಾನಮಾನಗಳಿಸಿ ಕೊಂಡವರು, ಇವರಿಗೆ ಮುಂಬಯಿಯ ಬಂಟರಯಾನೆ ನಾಡವರ ಸಂಘವೂ ಅನೇಕ ಮಿತ್ರರೂ ಪ್ರೋತ್ಸಾಹಗಳನ್ನಿತ್ತಿರುವುದು ಇವರ ಜನಪ್ರಿಯತೆಗೂ, ದಕ್ಷತೆಗೂ ನಿದರ್ಶನವಾಗಿದೆ.

ಬೇಳಂಜೆ- ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವದ ದಿವಸದಂದು ಆಮಿನ್ನಾ ಮತ ವಯಸ್ಕರಿಗಾಗಿ ಒಂದು ರಾತ್ರಿ ಶಾಲೆಯನ್ನು ಮುಖ್ಯೋಪಾಧ್ಯಾಯ ಶ್ರೀ ಕೆ ನಾರಾಯಣ ಸೆಟ್ಟಿಯವರು ತೆರೆದಿದ್ದು ಈಗಾಗಲೇ 15 ಮಂದಿ ವಯಸ್ಕರು ವಿದ್ಯಾಭ್ಯಾಸ ಹೊಂದುತ್ತಿರುವರು.

ಪ್ರಕಟಣೆ

ಉಡುಪಿ ತಾಲೋಕು ಶಿವಳ್ಳಿ ಗ್ರಾಮದ ಕರಂಬಳ್ಳಿಯಲ್ಲಿರುವ ರಂಗು ಸೇರಿಗಾರ್ತಿಯ ಮಗಳು ಚೀಂಕು ಸೇರಿಗಾರ್ತಿ 1, ಶಾರದಮ್ಮ ಸೇರಿಗಾರ್ತಿಯ ಮಕ್ಕಳು ಅಂತಮ್ಮ ಸೇರಿಗಾರ್ತಿ 1 ನರ್ಸಿ ಸೇರಿಗಾರ್ತಿ 2, ಸೀತು ಸೇರಿಗಾರ್ತಿ 3 ಕೂಡಾ 4ಜನರು ಈ ಮೂಲಕ ಸಮಸ್ತರಿಗೂ ತಿಳಿಸುವುದೇನಂದರೆ

ನಮ್ಮ ಕುಟುಂಬಕ್ಕೆ ಉಡುಪಿ ತಾಲೋಕು ಶಿವಳ್ಳಿಗ್ರಾಮದ ಕರಂಬಳ್ಳಿಯಲ್ಲಿ ಆಸ್ತಿ ಇರುತ್ತದೆ. ಸದ್ರಿ ಆಸ್ತಿಗಳು ನಮ್ಮ ಕುಟುಂಬದ ಮೂಲಿ ಹಕ್ಕಿನದ್ದಾಗಿದ್ದು ನಮ್ಮ ಚಿಕ್ಕತಾಯಿ ರುಕ್ಕು ಸೇರಿಗಾರ್ತಿಯ ಹೆಸರಿನಲ್ಲಿ ಸದ್ರಿ ಆಸ್ತಿಗಳ ಪಟ್ಟೆ ಇರುತ್ತದೆ. ನಾವು, ನಮ್ಮ ಮಕ್ಕಳು ಕುಟುಂಬದ ಮನೆಯಲ್ಲಿ ವಾಸ್ತವ್ಯವಿಟ್ಟುಕೊಂಡು ಬರುವುದಿಲ್ಲ, ನಾವು ಪ್ರತ್ಯೇಕ ವಾಸ್ತವ್ಯವಿಟ್ಟುಕೊಂಡು ಬರುವಂಥಾದ್ದಾಗಿರುತ್ತದೆ. ನಮ್ಮ ಕುಟುಂಬಕ್ಕೆ ಯೇನೂ ಸಾಲ ಇರುವುದಿಲ್ಲ. ನಾ, ಸಾಲ ಮಾಡುವ ಗರಜು ಇದ್ದದ್ದೂ ಇಲ್ಲ, ಇರುವದೂ ಇಲ್ಲ. ಸದ್ರಿ ರುಕ್ಕು ಸೇರಿಗಾರ್ತಿ ವ ಆವಳ ಮಕ್ಕಳು ನಮಗೆ ಮೋಸಗೊಳಿಸಿ ನಮ್ಮನ್ನು ಕಷ್ಟ ನಷ್ಟಗಳಿಗೆ ಗುರಿಪಡಿಸಬೇಕೆಂಬ ಇರಾದೆಯಿಂದ ಯೇನಾದರೂ ಕ್ರಯ ವ ಸ್ವಸ್ಥನ ಸಾಲಗಳನ್ನು ಮಾಡಿದ್ದಿದ್ದರೆ ಅವುಗಳು ನಮ್ಮ ಕುಟುಂಬದ ಆಸ್ತಿಯ ಮೇಲೆ ಬೈಂಡಿಂಗ್ ಆಗತಕ್ಕದ್ದಲ್ಲ. ಅವರಿಗೆ ಯಾರೂ ಸಾಲ ಕೊಡಕೂಡದು. ಇದಕ್ಕೆ ವಿರೋಧವಾಗಿ ಅವರಿಗೆ ಯಾರಾದರೂ ಸಾಲ ಕೊಟ್ಟರೆ ಅಂಥಾ ಸಾಲ ಮಂಜೂರಾಗತಕ್ಕದ್ದಲ್ಲ. ವ, ನಮ್ಮ ಕುಟುಂಬವನ್ನು ಬದ್ಧೀಕರಿಸ ತಕ್ಕದ್ದಲ್ಲ. ಯೆಂಬ ಸಂಗ್ತಿಯನ್ನು ಸಮಸ್ತರಿಗೂ ಈ ಮೂಲಕ ತಿಳಿಸೋದಾಗುತ್ತದೆ.

(1) ಈ ಯಡ ಹೆಬ್ಬೆಟ್ಟಿನ ಗುರ್ತು ಚೀಂಕು ಸೇರಿಗಾರ್ತಿ ರುಜು

(2) ಈ ಯಡ ಹೆಬ್ಬೆಟ್ಟಿನ ಗುರ್ತು ಅಂತಮ್ಮ ಸೇರಿಗಾರ್ತಿ ರುಜು.

(3) ಈ ಯಡ ಹೆಬ್ಬೆಟ್ಟಿನ ಗುರ್ತು ನರ್ಸಿ ಸೇರಿಗಾರ್ತಿ ರುಜು.

(4) ಈ ಯಡ ಹೆಬ್ಬೆಟ್ಟಿನ ಗುರ್ತು ಸೀತು ಸೇರಿಗಾರ್ತಿ ರುಜು. 8-9-53

ನಡುಬೈಲು— ಕಳೆದ ತಾ 31ರಲ್ಲು ಎಣ್ಣೆಕಟೆ ಗ್ರಾಮದ ನಡುಬೈಲು ಕೇಂದ್ರದಲ್ಲಿ ಒಂದು ಹೊಸ ವಯಸ್ಕರ ಶಿಕ್ಷಣ ಶಿಬಿರ ತೆರೆಯುವ ಸಮಾರಂಭವು ಶ್ರೀ ಎನ್. ಚಿಕ್ಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮೂಲ್ಕಿ— ಇದೇ ತಾ 1ರಲ್ಲು ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಬಿ. ಭೋಜರಾಯರು ಚರಂತಿ ಪೇಟೆಯಲ್ಲಿ ಶ್ರೀ ಶಾರ್ದು ಸದಾಶಿವರಾವ್ ವಾಚನಾಲಯವನ್ನು ಉದ್ಘಾಟಿಸಿದರು.

ಇದೇ ತಾ. 3ರಲ್ಲು ಸೇರಿದ ಸ್ಥಳೀಯ ಪಂಚಾಯತಬೋರ್ಡು ಸಭೆಯಲ್ಲಿ ಬಪ್ಪನಾಡು ಗ್ರಾಮದ ಕೊಳಚೆಕಂಬಳದಲ್ಲಿ ಶಾಲುಸೇತುವೆಗೆ ಹಣ ಮಂಜೂರಾದುದಲ್ಲದೆ, ಬಸ್ ನಿಲ್ದಾಣಕ್ಕೆ ಯೋಗ್ಯ ಸ್ಥಳವನ್ನಾರಿಸುವ ಕುರಿತು ಆಲೋಚಿಸಲಾಯಿತು. ಶ್ರೀ ಬಿ. ಭೋಜರಾಯರು ಅಧ್ಯಕ್ಷತೆ ವಹಿಸಿದ್ದರು.

ಹೊಸದುರ್ಗ— ಸ್ಥಳೀಯ ಸೋಶಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ 3ರಲ್ಲು ಕೋಟಚೇರಿಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಎಚ್. ವಾಸುದೇವ, ಅವರ ಭಾಷಣವಾದ ಸೂರತ್ತಿನಲ್ಲಿ ಶ್ರೀ ಅಶೋಕ ಮೆಹತಾರವರನ್ನು ಬಂಧಿಸಿದ್ದಕ್ಕಾಗಿ ನಿಷೇಧ ಸೂಚಿಸಿದರು.

ಹಿರಿಯಡ್ಕ— ಇದೇ ತಾ 1ರಂದು ಆರ್ಯಸಮಾಜದ ಆಶ್ರಯದಲ್ಲಿ ಶ್ರೀ ಎಮ್. ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಜಯಂತಿ ಆಚರಿಸಲಾಯಿತು.

ಪುಣ್ಚಪ್ಪಾಡಿ— ಪಂಚಾಯತಬೋರ್ಡು ಶಾಲೆಯಲ್ಲಿ ಶ್ರೀ ಕೆ. ಸುಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಶ್ರೀಕೃಷ್ಣ ಜನ್ಮದಿನವು ಆಚರಿಸಲ್ಪಟ್ಟಿತು.

ಪುತ್ತಿಗೆ— ಪಟೇಲ್ ಶ್ರೀ ಬಾಲಕೃಷ್ಣ ರೈಗಳ ಅಧ್ಯಕ್ಷತೆಯಲ್ಲಿ ಶ್ರೀಕೃಷ್ಣ ಜಯಂತಿ ಸಮಾರಂಭವು ಜರಗಿ ಶ್ರೀ ದೂಮಣ್ಣನವರಿಂದ ಗೀತಾವಾಚನ ಮೊದಲಾದ ಕಾರ್ಯಕ್ರಮಗಳಾದುವು.

ಕಾಸರಗೋಡು— ಸ್ಥಳೀಯ ತೆಂಗು ಸಂಶೋಧನಾ ಕ್ಷೇತ್ರದಲ್ಲಿ ಕಳೆದ ತಾ 31ರಲ್ಲು ತೆಂಗಿನ ದಿನಾಚರಣೆಯು ಶ್ರೀ ಎಮ್. ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿತು. ತೆಂಗು ಸಂಶೋಧನಾ ಕ್ಷೇತ್ರದ ಡೈರೆಕ್ಟರ್ ಶ್ರೀ ಸಿ. ಎಮ್. ಜೋನ್, ಅವರು ಸ್ವಾಗತ ಮಾತುಗಳನ್ನಾಡಿದರು. ಅಧ್ಯಕ್ಷರು ತೆಂಗಿನ ಸಸಿ ನೆಡುವ ಕಾರ್ಯಕ್ರಮ ಜರಗಿಸಿದನಂತರ ಶ್ರೀಗಳಾದ ಎಮ್. ಎಮ್. ಕೃಷ್ಣಮೂರ್ತಿರವರು ಮಲೆಯಾಳದಲ್ಲೂ, ಎಸ್. ಕೃಷ್ಣ ಭಟ್ಟರು ಕನ್ನಡದಲ್ಲೂ ಭಾಷಣ ಮಾಡಿದರು.

ಮಿಜಾರ— ಮಿಜಾರು ಗ್ರಾಮದ ಒಂಟಿಮಾರು ಎಂಬಲ್ಲಿ ಇತ್ತೀಚೆಗೆ ಶ್ರೀ ವೀರಪ್ಪ ಗೌಡರು ಕಾಡುಹಂದಿಯನ್ನು ಬರ್ಚಿಯಿಂದ ತಿವಿದು ಕೊಂದರು. ಈ ಪ್ರಸಂಗದಲ್ಲಿ ಎಂಟುಮಂದಿಗೆ ಗಾಯಗಳಾಗಿವೆ. ಅವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಕಾಡುಹಂದಿಯು 9½ ಫೀಟು ಉದ್ದ 4 ಫೀಟು ಎತ್ತರವಿತ್ತು.

ಕಾರ್ಕಳ— ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆಗೈದು ಜನಾದರಣೀಯರಾಗಿದ್ದ ಜನಾಬ್ ಎಚ್. ಎಸ್ ಹುಸ್ಸೇನ್ ಅವರು ಮುದ್ರಾಸಿನಲ್ಲಿ ಪರಲೋಕವಾಸಿಗಳಾದ ಬಗ್ಗೆ ಸಂತಾಪ ಸೂಚಕ ಸಭೆಗಳು ಸ್ಥಳೀಯ ಮುನ್ಸಿಪಲ್ ಕೋರ್ಟು, ಪಂಚಾಯತಬೋರ್ಡುಗಳಲ್ಲಿ ಜರಗಿದವು.

ಮುಂಡ್ಕೂರು— ಇಲ್ಲಿಯ ಸಂಕಲ ಎಯಿಡೆಡ್ ಶಾಲೆಯಲ್ಲಿ ಇದೇ ತಾ 1ರಲ್ಲು ಸಮಾಜನಿಹಾರ ಕೇಂದ್ರ ಮತ್ತು ವಯಸ್ಕರ ಶಿಕ್ಷಣವರ್ಗವು ಸೋಶಿಯಲ್ ಆರ್ಗನೈಜರ್ ಕುಮಾರಿ ಎಮ್. ಸ ರೋಚನ ಅವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎನ್. ಎಲ್ಲಪ್ಪ ಸೆಟ್ಟರು ವಹಿಸಿದ್ದರು.

ಕಾಪು— ಸ್ಥಳೀಯ ಬಂಗ್ಲೆ ಮೈದಾನಿನಲ್ಲಿ ಕಟ್ಟಲಿರುವ ರೇಡಿಯೋ ಪೆವಿಲಿಯನಿನ ಮೇಲಿನ ಡೂಮನ್ನು ಶ್ರೀ ಕಾಪು ಬೀಡಿನ ಚಂದ್ರರಾಜ ಸಾಮಂತ ಮುದ್ದ ಹೆಗ್ಗಡೆಯವರು ಕಟ್ಟಿಸಿಕೊಡಲು ಒಪ್ಪಿರುವರಾಗಿ ತಿಳಿದುಬರುತ್ತದೆ.

ಬೊಮ್ಮರಬೆಟ್ಟು ಗ್ರಾಮಸ್ಥರ ಆದರ್ಶ ಕಾರ್ಯಕ್ರಮ

ತಾ 15-8 53ರಲ್ಲಿ ಹಿರಿಯಡಕ ಪಂಚಾಯತು ಬೋರ್ಡಿನ ನೇತೃತ್ವದಲ್ಲಿ ಶ್ರೀ ಕಾಡಬೆಟ್ಟು ಶ್ರೀನಿವಾಸ ನಾಯಕರ ಅಧ್ಯಕ್ಷತೆಯಲ್ಲಿ ಜರಗಿದ ಸ್ವಾತಂತ್ರ್ಯೋತ್ಸವದ ಸಭೆಯಲ್ಲಿ ಗ್ರಾಮಾಭಿವೃದ್ಧಿಯ ರಚನಾತ್ಮಕ ಕಾರ್ಯಕ್ರಮ ಕೈಕೊಳ್ಳಬೇಕಾಗಿ ನಿರ್ಣಯವಾಗಿತ್ತು.

ಬೊಮ್ಮರಬೆಟ್ಟು ಗ್ರಾಮವು ಒಂದು ಮುಖ್ಯ ಭಾಗವಾಗಿದ್ದರೂ ಸಂಪರ್ಕ ಸಾಧನೆ (ಮಾರ್ಗ)ಗಳಿಲ್ಲದೆ ಅತ್ಯಂತ ತೊಂದರೆಗೊಳಗಾಗಿದ್ದ ಕುಯಿಲಾಡಿ, ಸಾಣೆಕಲ್ಲು ಕೆರೆದುಗಳ ಜನರ ಬಹುಕಾಲದ ಅಪೇಕ್ಷಿತವಾದ ಅರು ಮೈಲುದ್ದದ ರಸ್ತೆಯನ್ನು ಗ್ರಾಮಸ್ಥ ಸ್ವಯಂಸೇವಕರ ಸಹಕಾರ ಪಡೆದು, ಈಗಾಗಲೇ ಆರಂಭಿಸಿ, ಉತ್ಸಾಹದಿಂದ ಮುಂದುವರಿಸುತ್ತಿರುವುದು ತುಂಬಾ ಅಭಿನಂದನೀಯ. ಗ್ರಾಮಾಧಿಕಾರಿ, ವ್ಯಾಪಾರಿ, ರೈತ ಮೊದಲಾದವರೆಲ್ಲರೂ ಸಹಕರಿಸುತ್ತಿರುವುದು ಶುಭ ಸೂಚನೆ

ಸ್ವತಂತ್ರ ಭಾರತದ ಪ್ರಜೆಗಳು ತಂತಮ್ಮ ದಿನನಿತ್ಯದ ವ್ಯವಹಾರಗಳಿಗೆ ಆಗತ್ಯವಿರುವ ಚಿಕ್ಕಪುಟ್ಟ ರಸ್ತೆ, ಸಂಕ, ಕಟ್ಟ, ಕಾಲುವೆಗಳಿಗಾಗಿ ಸರಕಾರವನ್ನೇ ಕಾದಿರದೆ ಪರಸ್ಪರ ಸಂಘಟನೆಯಿಂದ ಮುಂದೆಬಂದರೆ ಖರ್ಚಿಲ್ಲದೆ ಎಷ್ಟು ಕಾರ್ಯ ಸಾಧಿಸಬಹುದೆಂಬುದಕ್ಕೆ ಬೊಮ್ಮರಬೆಟ್ಟು ಗ್ರಾಮಸ್ಥರು ಒಂದು ಉತ್ತಮ ಮಾದರಿಯನ್ನು ಒದಗಿಸುತ್ತಿರುವುದು ಪ್ರಶಂಸನೀಯ.

ಬೈದೆಬೆಟ್ಟು—ಸ್ಥಳೀಯ ಶ್ರೀರಾಮಾಂಜನೇಯ ಭಜನಾ ಮಂದಿರದ ವಾರ್ಷಿಕೋತ್ಸವವು ತಾ 29 5ರಂದು [illegible] ನಡೆಯಿತು. [illegible] ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಕೆ. ನಾರಾಯಣ ಸೆಟ್ಟರು [illegible] ಮೇಲೆ ಸಂಗೀತ ಭಾಷಣಗಳಾದವು.

(೧ನೇ ಪುಟದಿಂದ)

ಗಿ ಬಂದಿದ್ದಾರೆಂದು, ಗಾಡಿಯನ್ನು ಒಮ್ಮೆಲೇ ಮಂದ ಗತಿಯಿಂದ ನಡೆಸತೊಡಗಿದನು. ಈಗ ಇಂಥ ವಿಧ್ವಂಸಕ ಕೃತ್ಯಗಳು ಎಣಿಕೆ ಮೀರಿ ಹೆಚ್ಚಿಕೊಂಡಿರುವುದರಿಂದ ಮುಂಜಾಗ್ರತೆ ವಹಿಸುವುದು ಯೋಗ್ಯವೇ ಸರಿ. ಆದರೆ ಮಿರಾಜು ನಿಲ್ದಾಣ ಸೇರಿದ ಮೇಲೆ ಜಯಕಾರ ಮಾಡುತ್ತಿದ್ದವರು ವಿನಾಶಕಾರಿಗಳಲ್ಲವೆಂದೂ ಮೈಲಿಗೆ ರೋಗದಿಂದ ಮುಕ್ತರಾಗಲು ದೇವಿಯ ಪೂಜೆ ಮಾಡುತಿದ್ದ ಗ್ರಾಮಿಣರ ತಾಂಡದ ಮಶಾರ ಆದಾಗಿತ್ತೆಂದೂ ತಿಳಿಯಿತು. ದೇವರ ನಾಮ ಭಜನೆ ಕೂಡ ಈಗ ಭಯೋತ್ಪಾದನೆಯನ್ನುಂಟು ಮಾಡುವುದೆಂದರೆ, ಇದು ಕಲಿಯುಗವೆಂದು ಬೇರೆ ಹೇಳಬೇಕೆ? ಹೊರಗಿದ್ದುದನ್ನು ನೋಡಿ, ನಿಜವೆಂದು ತಿಳಿಯುವುದು ಈಗ ತೀರಾ ಕಷ್ಟವಾಗಿ ಪರಿಣಮಿಸಿದೆ. ರೈಲ್ವೆಯವರೇ ಇನ್ನೊಂದು ಪ್ರಸಂಗವನ್ನು ತೆಗೆದುಕೊಳ್ಳೋಣ [illegible] ಸರಕುಗಳನ್ನು ಸಾಗಿಸಲು ವಾಗಿನ್‌ಗಳ ಕೊರತೆ ಇದೆಯೆಂದು ವರ್ತಕರು ದೂರುವುದರಿಂದ ರೈಲ್ವೆ ಅಧಿಕಾರಿಗಳು ಮಹಾ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಕಳೆದ ತಿಂಗಳು ಉತ್ತರ ರೈಲ್ವೆಯಿಂದ ಬೆಜವಾಡದ ಮೂಲಕ ದಕ್ಷಿಣ ರೈಲ್ವೆಗೆ ಸಾಮಾನು ಸಾಗಿಸಲು ವಾಗಿನು ಬೇಕಾಗಿವೆಯೆಂದು ಒಂದೇ ಸಮನೆ ಬೇಡಿಕೆ ಬಂತು. ೧೯೫ ವಾಗೀನುಗಳು ಅಗತ್ಯ ಬೇಕಾಗಿವೆಯೆಂದು ವರ್ತಕರು ತಿಳಿಸಿದ್ದರು ಉತ್ತರ ರೈಲ್ವೆಯ ಅಧಿಕಾರಿಗಳು ರೈಲ್ವೆ ಮಂಡಳದ ಆದೇಶದಂತೆ ಅಷ್ಟೂ ವಾಗೀನುಗಳನ್ನು ಕಷ್ಟಪಟ್ಟು ಸಂಗ್ರಹಿಸಿ, ವರ್ತಕರಿಗೆ ಉಪಯೋಗಕ್ಕೆಂದು ನೀಡಿದಾಗ, ನೂರಕ್ಕೆ ನಲುವತ್ತೆರಡರಷ್ಟು ವಾಗೀನುಗಳಿಗೆ ಬೇಡಿಕೆಯೇ ಬರಲಿಲ್ಲ. ಎಲ್ಲವೂ ಸುಳ್ಳು ಬೇಡಿಕೆಯನ್ನೇ ಮುಂದಿಟ್ಟಿದ್ದರು. ಈ ಕೊರತೆಯ ಪಿಶಾಚಿಗಳು ಪೂರೈಕೆಯ ದರ್ಶನ ಮಾತ್ರದಿಂದ ತಮ್ಮಷ್ಟಕ್ಕೆ ಮಾಯವಾದವು!

—ಕಾರ್ತಿಕೇಯ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S 337/53

ಕೃಷ್ಣಪ್ಪ ಹೆಬ್ಬಾರ —ವಾದಿ.
ರಾಮೇಶ್ವರ ಹೆಬ್ಬಾರ ಸಹಾ-ಪ್ರತಿವಾದಿಯು.

ಸದ್ರಿ ವಾದಿಯ ಕಡೆಯಿಂದ ಈ ನೋಟೀಸು ಜಾಹೀರು ಮಾಡಿಕೊಳ್ಳುವದೇನೆಂದ್ರೆ

1 ರಾಮೇಶ್ವರ ಹೆಬ್ಬಾರ, 2 ಶಂಕರ ಹೆಬ್ಬಾರ, ಯಿಂಬಾಳಿ ಮಂಜುನಾಥ ಹೆಬ್ಬಾರರ ಮಕ್ಕಳು, ಕುಂದಾಪುರ ತಾಲ್ಲೂಕು ನಾಡ ಗ್ರಾಮದಲ್ಲಿರುವವರು,

ಪ್ರತಿವಾದಿಂದ ವಾದಿಗೆ ಬರತಕ್ಕ ಮುಂವತ್ತರದ ಚಾಲಗೇಣಿ, ಗೇಣಿ ಬಾಕಿಗೂ ನಂದನ ಸಂವತ್ಸರದ ಅದಿ ಆಗಾಯ್ತಿನ ಹುಟ್ಟುವಳಿ ಬಗ್ಗೂ ದಾವಾ ಚಾಲಗೇಣಿ ಆಸ್ತಿ ಸ್ವಾಧೀನತೆ ಬಗ್ಗೂ ಹಾಕಿದ ಮೋಕದ್ದಮೆ ನಾವೆಯು 29 9-53ಕ್ಕೆ ಅಖೈರೆ ತನ್ಕಿಗೆ ಮುಕರ್ರರಾಗಿಯದೆ. ಆ ಕುರಿತು ನಿಮ್ಮದೇ ಖುದ್ದೂ ಜಾಹೀರಾಗಿ ಯಿದ್ರೆ ಸದ್ರಿ ದಿವಸ ಹಗಲು 11 ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ನೋಟೀಸು ಕೊಡಲ್ಪಟ್ಟಿದೆ.

G. Sanjiva Rau,
B.A.LL.B.
Pleader for Pltff
Kundapur, Date 4—9—53

THE CATHOLIC BANK, LIMITED, COONDAPOOR.
ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಚಿನ್ನದ ನಗಗಳ ಆಧಾರದ ಮೇಲೆ ಪಡೆದ ಸಾಲವನ್ನು ಕ್ಲಿಪ್ತ ಮ್ಯಾದೆಗೆ ಪಾವತಿ ಮಾಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ನಗಗಳನ್ನು ಇದೇ ಸಪ್ಟೆಂಬರ ತಿಂಗಳ ತಾರೀಕು 17ನೇ ಗುರುವಾರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಸಾಲದ ನಂಬ್ರ ಮತ್ತು ಸಾಲ ಪಡಕೊಂಡ ತಾರೀಕು	ಅಡವಿಟ್ಟವರ ಹೆಸರು ಮತ್ತು ವಿಳಾಸ:	ತಾರೀಕು 30 6-53ರ ತನಕ ಬಡ್ಡಿ ಕೂಡ್ಸಿ ಸಾಲದಲ್ಲಿ ಬಾಕಿಯಿರುವ ಮೊಬಲಗು— ರೂ.	ಆ.	ಪೈ.
27 513 28 6-51	ಲುವಿಸ್ ಡಿಸೋಜ, ಜಾಕಿಬ್ ಡಿಸೋಜರ ಮಗ, ಆನಗಳ್ಳಿ.	124	5	0
27 637 23-7-51	ವೆಂಕಟ್ರಮಣ ಸೆರೆಗಾರ, ಅಣ್ಣಪ್ಪ ಸೇರೆಗಾರರ ಮಗ, ಉಪ್ಪಿನ ಕುದ್ರು.	33	6	0
27/721 1-8 51	ಶೀನ ಸೆಟ್ಟಿ, ನಾರಾಯ ಸೆಟ್ರ ಅಳಿಯ ಮಲ್ಯಾಡಿ ತೆಕ್ಕಟ್ಟೆ.	66	0	0
27 730 6 8 51	ಸೂರಪ್ಪ ಸೆಟ್ಟಿ, ಮಂಜಪ್ಪ ಸೆಟ್ಟಿಯರ ಮಗ, ಬಾರಂದಡಿ ಮನೆ, ಆನಗಳ್ಳಿ.	63	8	0
27/799 21-8 51	ತಿಮ್ಮಪ್ಪ ಸೆಟ್ಟಿ, ಗೋವಿಂದ ಸೆಟ್ರ ಅಳಿಯ, ಕಾಡಿ ಮನೆ, ತಲ್ಲೂರು.	57	4	0
27/801 22-8 51	ಮರ್ಸ ಫಾರ್ಸಿ, ಸುಬ್ಬು ಫಾರಿಸ ಮಗ, ಕೋಟೇರಿ, ಕಾರ್ಕಕೇರಿ, ಕುಂದಾಪುರ.	15	6	0
29 137 26-2 51	H. ರಾಮಣ್ಣ ಸೆಟ್ಟಿ, ಸುಬ್ಬಕ್ಕ ಸೆಟ್ಟಿಯವರ ಮಗ, ಹಳನಾಡು, ಹಿಲ್ಯಾರಬೆಟ್ಟು, ಕರ್ಕುಂಜೆ ಪೋಸ್ಟ್.	180	11	6
28 179 3 5 52	N. ಕೃಷ್ಣಪ್ಪ ಸೆಟ್ಟಿ, ಅಂತ್ಯ ಸೆಟ್ರ ಅಳಿಯ, ಕರ್ಕುಂಜೆ, P.O. ಕುಂದಾಪುರ.	555	6	0
28 97? 26 8 52	ಮುಬ್ರಾಹಿಮ್ ಸಾಹೇಬ್, ಮೈದಿನ್ ಸಾಹೇಬರ ಮಗ, ಮೂಸ ವ್ಯಾಪಾರಿ, ಕೋಡಿ, ಕುಂದಾಪುರ	110	0	0
27 ?3 26-9 51	ಶೇಕ್ ಉಸ್ಮಾನ್ ಸಾಹೇಬ್, ಫಕೀರ ಸಾಹೇಬರ ಮಗ, ಮದ್ದುಗುಡ್ಡೆ, ಕುಂದಾಪುರ.	20	0	0

The Catholic Bank Limited, Coondapoor, 5 9—1953 } **I. Menezes,** Agent.

ರಕ್ಷಣೆಗೂ ಉಳಿತಾಯ ವ್ಯವಸ್ಥೆಗೂ

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್.

ಸ್ಥಾಪನೆ: 1934. ಪ್ರಧಾನ ಕಛೇರಿ: ಮದ್ರಾಸು.

68¾ ಲಕ್ಷಕ್ಕೂ ಮಿಕ್ಕಿದ ಹೊಸ ವ್ಯವಹಾರ, 15 ಲಕ್ಷಕ್ಕೂ ಮಿಕ್ಕಿದ ಪ್ರೀಮಿಯಮ್ ಉತ್ಪತ್ತಿ, 45½ ಲಕ್ಷಕ್ಕೂ ಮಿಕ್ಕಿದ ಜೀವನಿಮಾ ನಿಧಿ, 10½ ಲಕ್ಷಕ್ಕೂ ಮಿಕ್ಕಿದ ಮೂಲಧನ. ಸಾಧಾರಣ 3 ಕೋಟಿಯನ್ನು ಊರ್ಜಿತದಲ್ಲಿರುವ ಪಾಲಿಸಿಗಳು.

ಪ್ರಗತಿಪರವಾದ ಈ ಕಂಪೆನಿಯಲ್ಲಿ ಒಂದು ಪೋಲಿಸಿ ಇರುವುದು ಉತ್ತಮ ಲೇವದೇವಿ. ಅಂತೆಯೇ ಇದರ ಏಜನ್ಸಿ ಇರುವುದು ಚಲೋ ವ್ಯವಹಾರ ಸಾಧನ

ಉತ್ಸಾಹಿ, ಜನಾನುರಾಗೀಯ, ಸಮರ್ಥ ಸ್ತ್ರೀ ಪುರುಷರಿಂದ ಕಂಪೆನಿ ಪ್ರಾತಿನಿಧ್ಯದ ಬಗ್ಗೆ ಅರ್ಜಿಗಳು ಸ್ವಾಗತಾರ್ಹವು. ದಯಮಾಡಿ ಬರೆಯಿರಿ:

ಜಿ. ಆರ್ ವಾಲ್ಕೆ, ಬ್ರಾಂಚ್ ಮೆನೇಜರ್,
ಡಾಯಮಂಡ್ ಬಿಲ್ಡಿಂಗ್, ಪಂಪವೆಲ್, ಮಂಗಳೂರು [ದ. ಕ.]

ಕಾಶ್ಮೀರ ಸಂಸ್ಥಾನದ ಸಂದಿಗ್ಧ ಭವಿಷ್ಯ

(೨ನೇ ಪುಟದಿಂದ)

ಬಲ್ಲುದು-ಹೊರತು ಮಾತಿನ ಸಹಾನುಭೂತಿಯಲ್ಲ. ಅಮೇರಿಕಾದ ಆರ್ಥಿಕ ನೆರವಿನ ಭರವಸೆಯನ್ನು ಶೇಖ ಅಬ್ದುಲ್ಲಾ ಪಡೆದುಕೊಂಡು, ಸ್ವತಂತ್ರ ಕಾಶ್ಮೀರವನ್ನು ಕಟ್ಟಿಕೊಳ್ಳುವ ಇಚ್ಛೆಯುಳ್ಳವರೆಂದು ಹೇಳುವುದಕ್ಕೆ—ಸ್ಟೀವನ್ಸನ್ನರ ಸಂದರ್ಶನ ತೃಪ್ತಿಕರವಾದ ಸಾಕ್ಷಿಯಾಗಲಾರದು. ಆದರೆ ಭಾರತ ಪಾಕಿಸ್ತಾನಗಳಲ್ಲಿ ಒಂದರೊಂದಿಗೆ ಕಾಶ್ಮೀರ ವಿಲೀನಗೊಳ್ಳುವ ಪಕ್ಷದಲ್ಲಿ, ಆರ್ಥಿಕ ಸಹಾಯಕ್ಕೆ ಮಹತ್ವ ಬರಬಹುದು- ಕಾಶ್ಮೀರದ ಇಂದಿನ ಪರಿಸ್ಥಿತಿಯ ಅಭ್ಯಾಸ ಮಾಡಿದವರು, ಆರ್ಥಿಕ ಸುಧಾರಣೆಗೆ ಭಾರತವಾಗಲೀ ಪಾಕಿಸ್ತಾನವಾಗಲೀ ಸಹಾಯ ಮಾಡಿದರೆ, ನೆರವಿನ ಕೈ ನೀಡಿದವರಿಗೆ ಕಾಶ್ಮೀರ ಒಲಿಯುವುದೆಂದೂ ಬೇರೆ ರಾಜಕೀಯ ಅಥವಾ ಮತೀಯ ವಿಚಾರಗಳು ಗೌಣವೆಂದೂ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಘಟನಾ ಸಮಿತಿಯ ಮುಂದೆ ಭಾಷಣ ಮಾಡುವಾಗ ಶೇಖ ಅಬ್ದುಲ್ಲರೇ "ಜೀವನಾವಶ್ಯಕವಾದ ಪದಾರ್ಥಗಳ ಪೂರೈಕೆಯೇ ನಮ್ಮ ಯಶಸ್ಸನ್ನು ನಿರ್ಧರಿಸುವುದು" ಎಂದು ಹೇಳಿದ್ದರು. ಕಾಶ್ಮೀರ ಸಂಕಾರ ನೇಮಿಸಿದ ವಜೀರ ಸಮಿತಿಯು ಸಹ ಆರ್ಥಿಕ ದುರವಸ್ಥೆಯೇ ಸಾಮಾನ್ಯ ಕಾಶ್ಮೀರಿ ಪ್ರಜೆಯನ್ನು ಚಿಂತೆಗೀಡುಮಾಡಿದೆಯೆಂದು ಸೂಚಿಸುತ್ತದೆ. ಭಾರತವು ಮೊದಲಿಂದಲೂ ಕಾಶ್ಮೀರಕ್ಕೆ ಧನ ಸಹಾಯವೇ ಮುಂತಾದ ನೆರವು ನೀಡುತ್ತಾ ಬಂದಿರುವುದರಿಂದ ಈ ವಿಶ್ವಾಸವನ್ನು ಕಾಶ್ಮೀರಿಗಳು ಮುಂದಕ್ಕೂ ಉಳಿಸಿಕೊಳ್ಳುವುದು ಹಿತಕರವೆನ್ನಲಡ್ಡಿಯಿಲ್ಲ. "ಹಿಂದೂ" ಪತ್ರಿಕೆಯ ಬಾತ್ಮೀದಾರರ ಹೇಳಿಕೆಯಂತೆ ೧೯೪೯ ಜಗರ ನಡುವೆ ಜನಮತಗಣನೆಯು ಕಾಶ್ಮೀರದಲ್ಲಿ ನಡೆಯುತ್ತಿದ್ದರೆ ಈ ಕಾರಣಕ್ಕಾಗಿಯೇ ಭಾರತದೊಡನೆ ಕಾಶ್ಮೀರ ಸೇರ್ಪಡೆಗೊಳ್ಳುವ ಪೂರ್ಣ ಭರವಸೆ ಇದ್ದಿತು.

ಅಬ್ದುಲ್ಲರ ವಿರುದ್ಧ ಆಕ್ಷೇಪ

ಎರಡು ವರ್ಷಕ್ಕೆ ಮುಂಚೆ ಶೇಖ ಅಬ್ದುಲ್ಲಾ ರಾಷ್ಟ್ರೀಯ ಪರಿಷತ್ತಿನ ಮುಂದೆ ಮಾತನಾಡುವಾಗ ಕಾಶ್ಮೀರದ ಹಣಕಾಸಿನ ಸ್ರೋತ ಯಾವುದೆಂದು ವಿವರಿಸಿ ಹೇಳಿದ್ದರು—ಅದರನ್ವಯ, ಯಾತ್ರಿಕರಿಂದ ಒದಗುವ ಆದಾಯ, ಮೋಪಿನ ನಿರ್ಯಾತ, ಹಣ್ಣುಹಂಪಲುಗಳು, ಜಮಖಾನೆ ಇತ್ಯಾದಿಗಳು, ಬೇರೆ ಕಲಾ ವಸ್ತುಗಳು ಮತ್ತು ರೇಶಿಮೆ ಇವೇ ಕಾಶ್ಮೀರಕ್ಕೆ ಹಣವನ್ನು ತರುವ ಮಾರ್ಗಗಳು. ಕಾಶ್ಮೀರ ಪಾಕಿಸ್ತಾನಕ್ಕೆ ಸೇರಿದ ಪಕ್ಷದಲ್ಲಿ ಈ ಪದಾರ್ಥಗಳಿಗೆ ಏನೇನೂ ಪೇಟೆ ದೊರೆಯಲಿಕ್ಕಿಲ್ಲ; ಮತ್ತು ತಾನು ಸ್ವತಃ ಔದ್ಯಮಿಕ ಕ್ಷೇತ್ರದಲ್ಲಿ ಹಿಂದುಳಿದಿರುವುದರಿಂದ ಕಾಶ್ಮೀರದ ಔದ್ಯೋಗೀಕರಣಕ್ಕೋಸ್ಕರ ಪಾಕಿಸ್ತಾನ ಪ್ರಯತ್ನಿಸುವ ಭರವಸೆ ಕಾಣುವುದಿಲ್ಲ. ಈ ಎರಡು ವರ್ಷಗಳಲ್ಲಿ ಕಾಶ್ಮೀರ ಕೊಳ್ಳದ ಪರಿಸ್ಥಿತಿ ಊರ್ಜಿತಗೊಂಡಿಲ್ಲ-ಆದ ಕಾರಣ ಪಾಕಿಸ್ತಾನದೊಂದಿಗೆ ಸೇರಿಕೊಳ್ಳುವುದರಿಂದ ಲಾಭವುಂಟೆಂಬ ವಿಚಾರಕ್ಕೆ ಪುಷ್ಟಿ ಬರುವುದಿಲ್ಲ. ಈಗಾಗಲೇ ತನ್ನ ೮೦ ಕೋಟಿ ರೂಪಾಯಿಗಳ ವಾರ್ಷಿಕಾದಾಯದಲ್ಲಿ ನೂರಕ್ಕೆ ಎಪ್ಪತ್ತರಷ್ಟು ದೊಡ್ಡ ಆದರ್ಶವನ್ನು ಕೇವಲ ಸಂರಕ್ಷಣೆಗೋಸ್ಕರ ಪಾಕಿಸ್ತಾನ ವೆಚ್ಚ ಮಾಡುತ್ತಿದೆ. ಉಳಿದ ಹಣದಲ್ಲಿ ತನ್ನ ಆಂತರಿಕ ಪರಿಸ್ಥಿತಿಯನ್ನು ಸುಧಾರಿಸುವುದೇ ಸಮಸ್ಯೆಯಾಗಿರುವಾಗ ಕಾಶ್ಮೀರೀ ಜನರ ಉದ್ಧಾರ ಮಾರ್ಗವನ್ನು ಯೋಜಿಸಿ ಕ್ರಮ ಕೈಗೊಳ್ಳಲು ಅಲ್ಲಿಯ ಸರಕಾರ ಪ್ರಯತ್ನಿಸುವುದೆಂತು? ಆದರೆ ಭಾರತದ ಸಂಗತಿ ಹೀಗಿರುವುದಿಲ್ಲ? ವಿಶಾಲವಾದ ಭೂ ಭಾಗ ಹಾಗೂ ಪ್ರಚಂಡ ಜನಬಲವುಳ್ಳ ಭಾರತಕ್ಕೆ ಕಾಶ್ಮೀರಕ್ಕೋಸ್ಕರ ನೆರವನ್ನು ನೀಡುವ ಶಕ್ತಿ ಸಾಮರ್ಥ್ಯವಿದೆ—ಮತ್ತು ೧೯೪೭ರಷ್ಟು ಹಿಂದಿನಿಂದಲೇ ನಮ್ಮ ಸರಕಾರ ಕಾಶ್ಮೀರಕ್ಕೆ ಬೇಕೆಂದಾಗ, ಉಚಿತರೀತಿಯ ಸಹಾಯ ಮತ್ತು ಸಲಹೆಗಳನ್ನು ನೀಡಿದೆ. ಆದರೆ ಕಾಶ್ಮೀರಕ್ಕೆ ಆಂತರಿಕ ಆಡಳಿತಾಧಿಕಾರದಲ್ಲಿ ಸ್ವಾತಂತ್ರ್ಯವಿದೆಯೆಂಬ ತತ್ವವನ್ನು ಭಾರತ ಒಪ್ಪಿರುವುದರಿಂದ ತಾನು ನೀಡಿದ ನೆರವು ಹೇಗೆ ವಿನಿಯೋಗಗೊಂಡಿರುವುದೆಂಬುದನ್ನು ಪರಿಶೀಲಿಸುವ ಅವಕಾಶ ಇಲ್ಲದೆ ಹೋಗಿದೆ. ಈ ನಿಯಂತ್ರಣವಿಲ್ಲವಾಗಿ- ಶೇಖ ಅಬ್ದುಲ್ಲಾ ಭಾರತದ ಹಣವನ್ನು ಜನಸಾಮಾನ್ಯಕ್ಕೆ ಉಚಿತವಾದ ರೀತಿಯಲ್ಲಿ ಉಪಯೋಗಿಸಲಿಲ್ಲವೆಂಬ ಪ್ರಬಲಾಕ್ಷೇಪವುಂಟಾಯಿತು. ಜಮೀನುದಾರಿ ನಿರ್ಮೂಲನ ಹಾಗೂ ಭೂಮಿಯ ಪುನಃ ವಿತರಣೆಯಂಥ ಗಂಭೀರಸ್ವರೂಪದ ಕ್ರಾಂತಿಕಾರಿ ಕ್ರಮಗಳು ಕೇವಲ ನಾಲ್ಕೇ ದಿನ ಜನರನ್ನು ಸಂತುಷ್ಟರನ್ನಾಗಿ ಮಾಡಿದವು ಈ ಕ್ರಮಗಳಿಂದ ಉದ್ಭೂತವಾದ ಆರ್ಥಿಕ ಸಂಕಟವನ್ನು ಶೇಖ ಅಬ್ದುಲ್ಲಾ ಪರಿಹರಿಸಲು ನೋಡದೆ ಹೋದುದರಿಂದ, ಆ ಬಳಿಕ ಜನರ ಕಷ್ಟ ಹೆಚ್ಚೇ ಆಯಿತು.

ಬಕ್ಷಿಯವರ ಪ್ರಯತ್ನ

ಪ್ರಕೃತ ಬಕ್ಷಿ ಗುಲಾಂ ಮಹಮ್ಮದರ ಸರಕಾರ ಅಬ್ದುಲ್ಲಾರ ಕೈಯಿಂದಾದ ತಪ್ಪಿಗೆ ಪ್ರಾಯಶ್ಚಿತ್ತ ಸ್ವರೂಪದ ಕೆಲವು ಹೆಜ್ಜೆಗಳನ್ನು ಇಟ್ಟಿರುತ್ತದೆ. ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುವುದರಲ್ಲಿ ಭಾರತ ನೀಡಬಹುದಾದ ತಜ್ಞರ ಸಲಹೆ ಸೂಚನೆಗಳನ್ನು ಸ್ವಾಗತಿಸುವಷ್ಟರ ಮಟ್ಟಿನ ಹೃದಯ ವೈಶಾಲ್ಯ ಬಕ್ಷಿಯವರಿಗಿದೆ. ತಾವು ಪ್ರಧಾನಿಗಳೆಂದು ಅಧಿಕಾರ ವಹಿಸಿದ ಸಮಯದಲ್ಲಿ ಆರ್ಥಿಕ ವ್ಯವಸ್ಥೆಯ ಪುನರ್ಘಟನೆಯನ್ನೇ ಸರಕಾರದ ಧ್ಯೇಯವಾಗಿಟ್ಟುಕೊಂಡಿರುವುದಾಗಿ ಅವರು ಜನತೆಗೆ ಭರವಸೆ ಕೊಟ್ಟಿದ್ದರು. ಭತ್ತದ ಕಡ್ಡಾಯ ಸಂಗ್ರಹದ ಕ್ರಮವನ್ನು ನಿಲ್ಲಿಸಿರುವರಲ್ಲದೆ, ಪರಸ್ಪರ ಸಹಾಯಕ ಸಂಘಗಳಿಗೆ ಉತ್ತೇಜನವನ್ನೂ ಕೊಟ್ಟು ರೈತರಿಗೆ ನೆರವಾಗಿದ್ದಾರೆ. ಆರು ವರ್ಷಗಳ ಕಾಲ ಭಾರತ ನೀಡಿದ ಹಣವು ಶೇಖ ಅಬ್ದುಲ್ಲಾರ ಮುಖಾಂತರ ಕಾಶ್ಮೀರದಲ್ಲಿ ಸಾಮಾನ್ಯ ಜನರ ಉಪಯೋಗಕ್ಕೆ ಬೀಳಲಿಲ್ಲವೆಂಬ ದೂರಿಗೆ ಬಕ್ಷಿಯವರು ಆಸ್ಪದಕೊಡಲಾರರೆಂಬ ವಿಶ್ವಾಸವುಂಟಾಗಿದೆ. ಕಾಶ್ಮೀರದ ಪರಿಸ್ಥಿತಿಯನ್ನು ಸುಧಾರಿಸುವ ಅಭಿವೃದ್ಧಿ ಯೋಜನೆಗಳು ಈಗಾಗಲೇ ಕಾರ್ಯಾನ್ವಿತಗೊಳ್ಳುತ್ತಿವೆ; ಮತ್ತು ಅವುಗಳ ಯಶಸ್ಸಿನ ಮೇಲೆಯೇ ಭಾರತದ ಕಡೆಗೆ ಕಾಶ್ಮೀರೀ ಜನರ ಮನೋಭಾವನೆ ಒಲಿಯುವ ಅಥವಾ ಉದಾಸೀನ ಹೊಂದುವ ಲಕ್ಷಣವಿದೆ. ಕಳೆದ ವರ್ಷ ಹೊಸ ದಿಲ್ಲಿಯಲ್ಲಿ ಮಾಡಿಕೊಂಡ ಒಪ್ಪಂದದಲ್ಲಿ ಅಪೇಕ್ಷಿಸಿದಂತೆ, ಕಾಶ್ಮೀರವು ಆರ್ಥಿಕವಾಗಿಯೂ ಭಾರತದೊಂದಿಗೆ ಸೇರ್ಪಡೆ ಹೊಂದುತಿದ್ದಾರೆ, ಈ ಅಭಿವೃದ್ಧಿ ಯೋಜನೆಗಳ ಯಶಸ್ಸಿನ ಬಗ್ಗೆ ಚಿಂತೆ ಇರುವುದಿಲ್ಲ— ಹಾಗೆಂದ, ಬಕ್ಷಿಯವರು ಭಾರತದೊಡನೆ ಕಾಶ್ಮೀರ ವಿಲೀನಗೊಂಡಿರುವುದೆಂಬ ಭಾವನೆಯಿಂದಲೇ ಈ ಅಭಿವೃದ್ಧಿಯೋಜನೆಗಳನ್ನು ಮುನ್ನೊತ್ತುವ ಆಶ್ವಾಸನೆ ಕೊಟ್ಟಿರುವುದರಿಂದ, ಆರ್ಥಿಕ ಸೇರ್ಪಡೆಯ ಪ್ರಶ್ನೆಯನ್ನು ಈಗ ಎತ್ತಿ ಪ್ರಶ್ನೆಯನ್ನು ಜಟಿಲ ಹಾಗೂ ತೊಡಕಿನದಾಗಿ ಮಾಡುವುದು ಸದ್ಯ ಅನಗತ್ಯ.

ಕಾಶ್ಮೀರದ ಭವಿಷ್ಯ ನಿರ್ಣಯಿಸುವ ಕಾಲದಲ್ಲಿ ಆರ್ಥಿಕ ಸುವ್ಯವಸ್ಥೆಯನ್ನು ಅತ್ಯಗತ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆಂಬುದಕ್ಕೆ ಮೊನ್ನೆ ಪ್ರಧಾನಿದ್ವಯರು ಕೊಟ್ಟ ಸಂಯುಕ್ತ ಹೇಳಿಕೆಯೂ ಸಾಕ್ಷಿ— "ಕಾಶ್ಮೀರದ ಪ್ರಶ್ನೆಯು ಅಲ್ಲಿಯ ಜನರ ಇಚ್ಛೆಯಂತೆ ಅವರ ಉನ್ನತಿಗೆ ಪೋಷಕವಾಗುವಂತೆ ಮತ್ತು ಜನಸಾಮಾನ್ಯರ ಬದುಕಿಗೆ ಅಡಚಣೆಯಾಗದಂತೆ" ನಿರ್ಧರಿಸಲ್ಪಡಬೇಕೆಂದು ಅದು ಹೇಳಿದೆ. ಜನಮತಗಣನೆಯ ಪರಿಣಾಮ ಬಲವೊಂದೇ ಕಾಶ್ಮೀರ ಭವಿಷ್ಯದ ನಿರ್ಣಾಯಕ ಸಂಗತಿಯಲ್ಲವೆಂದೂ ಅವರ ಆರ್ಥಿಕ ಅಡಚಣೆಗಳನ್ನೂ ಗಮನಿಸಬೇಕಾಗುವುದೆಂದೂ ಇದರಿಂದ ಸ್ಪಷ್ಟಗೊಳ್ಳುತ್ತದೆ. ಸಾರ್ವತ್ರಿಕ ಜನಮತ ಗಣನೆಯು ಭಾರತಕ್ಕೆ ವಿರುದ್ಧ ಪರಿಣಾಮವನ್ನು ತಂದರೂ ಕೂಡ ಏಳೆಂಟು ವರ್ಷಗಳ ಕಾಲ ಭಾರತದೊಡನೆ ನಿಕಟ ಸಂಪರ್ಕ ಸ್ಥಾಪಿಸಿಕೊಂಡ ಕಾಶ್ಮೀರದ ಜನತೆಯ ಆರ್ಥಿಕ ಪರಿಸ್ಥಿತಿ ಸ್ವಾಭಾವಿಕವಾಗಿಯೇ ಭಾರತದೊಡನೆ ಕಾಶ್ಮೀರ ಲೀನವಾಗುವುದನ್ನು ಪುಷ್ಟೀಕರಿಸುತ್ತದೆ. ಹೀಗಿರುವಾಗ- ಬಕ್ಷಿ ಸರಕಾರ ಕೈಗೊಳ್ಳುವ ಆರ್ಥಿಕ ಸುಧಾರಣಾ ಯೋಜನೆಗಳು ಕಾಶ್ಮೀರದ ೪ ಲಕ್ಷ ಹಿಂದುಗಳನ್ನು ಬಿಟ್ಟುಳಿದ ೧೪ ಲಕ್ಷ ಮುಸ್ಲಿಮರಲ್ಲಿ ಅರೆವಾಸಿ ಜನಕ್ಕೆ ಮೆಚ್ಚುಗೆಯಾದರೆ ಸಾಕು-ಪಾಕಿಸ್ತಾನ ಕಾಶ್ಮೀರದ ಹಂಬಲವನ್ನೇ ಕೊನೆಯದಾಗಿ ಬಿಡಬೇಕಾಗುವುದು.

(ಆಧಾರದಿಂದ)

ತಿಂಗಳಿಗೆ ರೂಪಾಯಿ 200ರಿಂದ ರೂ 500 ಸಂಪಾದಿಸಿರಿ

ನಮ್ಮಲ್ಲಿ ದೊರೆಯುವ ಹೊಸ ನಮೂನೆಯ ಬಟ್ಟೆಗಳು, ಸಿಲ್ಕ್ ಸೀರೆಗಳು, ಸಮರೋಮದ ಬ್ಲೇಂಕೆಟ್ಟುಗಳನ್ನು ಬಿಡು ಸಮಯದಲ್ಲಿ ಮಾರಾಟಮಾಡಲು ಉದಾರ ದರಗಳಿಂದ ಏಜಂಟರು ಬೇಕಾಗಿದ್ದಾರೆ. ಉತ್ಸಾಹಿಗಳೆಲ್ಲರಿಗೂ ಸುವರ್ಣಸಂಧಿ. ಉಚಿತ ಸ್ಯಾಂಪಲ್ಲುಗಳಿಗೂ ಶರ್ತಗಳಿಗೂ ಮಾಹಿತಿ ಪತ್ರಕ್ಕೂ ಬರೆಯಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲಾಗಲೀ ಹಿಂದೀಯಲ್ಲಾಗಲೀ ಮಾಡಿರಿ.

International Industrial Corporation (India)
New Market, Karol Bagh,
NEW DELHI.

ದಿ ವಿಜಯ ಬೇಂಕ್, ಲಿಮಿಟೆಡ್
ಸ್ಥಾಪನೆ: 1931.] ಪ್ರಧಾನ ಕಛೇರಿ: ಮಂಗಳೂರು.

ಮೂಲಧನ	.	.	ರೂ. 20,00,000
ತೆತ್ತ ಪಾಲು ಭಂಡವಾಳ	.	.	,, 8,77,860
ಕ್ಷೇಮ ನಿಧಿ	.	.	,, 1,80,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ. ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್. ವಕೀಲ್,
ಬೇಂಕಿನ ಆಡಳಿತೆ ಕಮಿಟಿ ಅಧ್ಯಕ್ಷರು.

THE VIJAYA BANK, Limited.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನೆರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.
ಬೆಲೆ ರೂ. 5—6—0
ನವಭಾರತ ಬುಕ್ ಡಿಪೊ, ಉಡು
ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ ಜಿಲ್ಲೆಯ ವಕ್ಲು ಮಸೂದೆ

ನಮ್ಮ ಜಿಲ್ಲೆಯ ಕೊಂಗ್ರೆಸ್ ಪ್ರತಿನಿಧಿಗಳು ಈ ಜಿಲ್ಲೆಗೆ ತರಬೇಕೆಂದು ಉದ್ದೇಶಿಸುವ ಕರಡು ವಕ್ಲು ಮಸೂದೆಯ ಸಾರಾಂಶವು ಈ ಮೊದಲೇ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಜವಾಬ್ದಾರಿ ಸ್ಥಾನದಲ್ಲಿರುವ ಗಣನೀಯ ವ್ಯಕ್ತಿಗಳು ಮಸೂದೆಯಲ್ಲಿ ಈ ಕೆಳಗಿನ ಬದಲಾವಣೆ ಮಾಡಬಹುದೆಂದು ಸೂಚಿಸಿರುತ್ತಾರೆ. ಈ ವಿಷಯದಲ್ಲಿ ಅಭಿಪ್ರಾಯಕೊಡಲು ಇಚ್ಛಿಸುವವರು ದಯವಿಟ್ಟು ಕೂಡಲೆ ನನಗೆ ಬರೆದು ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ. ಮದ್ರಾಸು ಸರಕಾರದವರು ಬೇಗನೆ ಈ ವಿಷಯದಲ್ಲಿ ಕಾರ್ಯಕ್ರಮವನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ ಎಂದು ಜಿಲ್ಲೆಯ ಕಾಂಗ್ರೆಸ್ ಪ್ರತಿನಿಧಿಗಳ ಪರವಾಗಿ ಶ್ರೀ ಯಸ್ ನರಸಪ್ಪಯ್ಯ, B. A. B. L, M. L. C. ಯವರು ಬರೆಯುತ್ತಾರೆ.

ಕರಡು ಮಸೂದೆಯಲ್ಲಿ ಈಗ ಇರುವಂತೆ.

ಕಲಂ ೪.

ಈ ಕಾನೂನು ಆರಂಭವಾಗುವ ಮುಂಚೆ ಅಥವಾ ಅನಂತರ ಇದಕ್ಕೆ ವ್ಯತಿರಿಕ್ತವಾಗಿ ಮಾಡಲ್ಪಟ್ಟ ಕರಾರು ಪಟ್ಟೆಳೆ, ಡಿಕ್ರಿ ಅಥವಾ ಕೋರ್ಟು ಹುಕುಂಗಳು ಇದ್ದಾಗ್ಯೂ 1 4-52 ರಂದು ನ್ಯಾಯಬದ್ಧವಾಗಿ ಸ್ವಾಧೀನತೆಯಲ್ಲಿದ್ದ ಅಥವಾ ಅನಂತರ ನ್ಯಾಯವಾಗಿ ಸ್ವಾಧೀನತೆಯನ್ನು ಪಡೆದು ಈಗ ಗೇಯುವ ವಕ್ಕಲು, ಒಕ್ಕಲಾಗಿ ಭೂಮಿಯ ಸ್ವಾಧೀನತೆಯಿಂದ ಶಾಶ್ವತವಾಗಿ ಅನುಭವಿಸಲು ಅರ್ಹನಾಗುತ್ತಾನೆ.

ಕಲಂ ೫.

1-4-51ರಂದು ಯಾವುದೇ ಭೂಮಿಯ ಸ್ವಾಧೀನತೆಯನ್ನು ಹೊಂದಿದ್ದ ಈ ಕಾನೂನು ಆರಂಭವಾಗುವ ಸಮಯ ಸ್ವಾಧೀನತೆಯನ್ನು ಕಳಕೊಂಡಿದ್ದ ಗೇಯುವ ಒಕ್ಕಲು ಕೋರ್ಟಿಗೆ ಅರ್ಜಿ ಸಲ್ಲಿಸಿ ಆ ಭೂಮಿಯನ್ನು ಇತರ ವಕ್ಕಲು ಅಥವಾ ಒಕ್ಕಲುಗಳಿಗೆ ಗೇಣಿಗೆ ಕೊಟ್ಟಿದ್ದರೂ, ತಾ. 1-4-51ರ ನಂತ್ರ ಸ್ವಾಧೀನತೆಯನ್ನು ಪಡೆದಿರುವ ಅಂಥ ವಕ್ಕಲುಗಳನ್ನೆಬ್ಬಿಸಿ ಆ ಭೂಮಿಯ ಸ್ವಾಧೀನತೆಯನ್ನು ಪಡೆಯಲು ಅರ್ಹನು.

ಕಲಂ ೬.

1) 5ನೇ ಕಲಮಿನಲ್ಲಿ ಹೇಳಿದಂತಲ್ಲದೆ ಅಥವಾ ಈ ಕೆಳಗಿನ ಪ್ರಸಂಗಗಳ ಹೊರತು ಗೇಯುವ ಒಕ್ಕಲನ್ನೆಬ್ಬಿಸಕೂಡದು.

ಸೂಚಿಸೋಣಾದ ಬದಲಾವಣೆ–

ಕಲಂ ೪.

ಈ ಕಾನೂನು ಜ್ಯಾರಿಗೆಬರುವ ಸಮಯದ ಅನಂತ್ರ ಇದಕ್ಕೆ ವ್ಯತಿರಿಕ್ತವಾಗಿ ಮಾಡಲ್ಪಟ್ಟ ಕರಾರು ಪಟ್ಟೆಳೆ, ಡಿಕ್ರಿ ಅಥವಾ ಕೋರ್ಟು ಹುಕುಂ ಗಳೇನಿದ್ದರೂ ಎಡೆಬಿಡದೆ ಮೂರು ಸಂವತ್ಸರಗಳಲ್ಲಿ ನ್ಯಾಯಬದ್ಧವಾಗಿ ಸ್ವಾಧೀನತೆಯಲ್ಲಿರುವ ಗೇಯುವ ವಕ್ಕಲು, ಒಕ್ಕಲಾಗಿ ಭೂಮಿ ಸ್ವಾಧೀನತೆಯಿಂದ ಶಾಶ್ವತವಾಗಿ ಅನುಭವಿಸಲು ಅರ್ಹನಾಗುತ್ತಾನೆ.

1-4-52ರಂದು, ಯಾವುದೇ ಭೂಮಿಯನ್ನು ಎಡೆಬಿಡದೆ ಮೂರು ಸಂವತ್ಸರಗಳಲ್ಲಿ ನ್ಯಾಯಬದ್ಧವಾಗಿ ಸ್ವಾಧೀನತೆಯಲ್ಲಿದ್ದ, ಈ ಕಾನೂನು ಆರಂಭವಾಗುವ ಸಮಯ ಸ್ವಾಧೀನತೆಯನ್ನು ಕಳಕೊಂಡಿದ್ದ ಗೇಯುವ ಒಕ್ಕಲು ಈ ಕಾನೂನು ಜ್ಯಾರಿಗೆಬಂದ ಆರು ತಿಂಗಳುಗಳೊಳಗೆ ಕೋರ್ಟಿಗೆ ಅರ್ಜಿ ಸಲ್ಲಿಸಿ ಆ ಭೂಮಿಯನ್ನು ಇತರ ವಕ್ಕಲು ಅಥವಾ ವಕ್ಕಲುಗಳಿಗೆ ಗೇಣಿಗೆ ಕೊಟ್ಟಿದ್ದರೂ ತಾ. 1-4-52ರ ನಂತ್ರ ಸ್ವಾಧೀನತೆಯನ್ನು ಪಡೆದಿರುವ ಅಂಥ ವಕ್ಕಲುಗಳನ್ನೆಬ್ಬಿಸಿ ಆ ಭೂಮಿಯ ಸ್ವಾಧೀನತೆಯನ್ನು ಪಡೆಯಲು ಅರ್ಹನು.

ಕಲಂ ೬.

1) 5ನೇ ಕಲಮಿನಲ್ಲಿ ಹೇಳಿದಂತಲ್ಲದೆ ಅಥವಾ ಈ ಕೆಳಗಿನ ಪ್ರಸಂಗಗಳ ಹೊರತು, ಈ ಕಾನೂನು ಜ್ಯಾರಿಗೆಬರುವ ಸಮಯದ ಅನಂತ್ರ ಎಡೆಬಿಡದೆ ಮೂರು ಸಂವತ್ಸರಗಳಲ್ಲಿ ಸ್ವಾಧೀನತೆಯಲ್ಲಿದ್ದ ಹಿಡುವಳಿ ಅಥವಾ ಕೃಷಿ ಭೂಮಿಯಿಂದ ಗೇಯುವ ವಕ್ಕಲನ್ನೆಬ್ಬಿಸಕೂಡದು,

ಕಲಂ ೯ರ ಅಂತ್ಯದಲ್ಲಿ ಹೊಸ್ತಾಗಿ ಸೇರಿಸತಕ್ಕದ್ದು:—

(iii) ಮೇಲಿನ ಉಪಕಲಮುಗಳ ಪ್ರಕಾರ ನಿರ್ಣಯಿಸಲ್ಪಟ್ಟ ನ್ಯಾಯವಾದ ಗೇಣಿ ನಿರ್ಣಯದ ತಾರೀಕಿನಿಂದ 12 ವರ್ಷಗಳ ವರೇಗೆ ಯಾವ ತಪ್ಪಿಲ್ಲದೆ ಜ್ಯಾರಿಯಲ್ಲಿರತಕ್ಕದ್ದು | ವರ್ಷಗಳ ಅವಧಿ ನಂತ್ರ, ಸಕಾರಣವಿದ್ದರೆ ಈ ಕಲಮಿನ ದರಗಳನ್ನು ಗಮನಿಸಿ ಭೂ ಮಾಲಿಕನಾಗಲೀ, ವಕ್ಕಲಾಗಲೀ ಮಾಡಿದ ಅರ್ಜಿಯಮೇಲೆ ಕೋರ್ಟಿನವರು ನ್ಯಾಯವಾದ ಗೇಣಿಯನ್ನು ಪುನಃ ನಿರ್ಣಯಿಸಬಹುದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S 456/1953

ದಿ. ಕೆನರಾ ಯಿಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ–ಇದರ ಪರವಾಗಿ ರಿಕವರಿ ಆಫೀಸರ್ ಎಸ್. ಎಸ್. ಭಂಡಾರಿ ವಾದಿ

ಮತ್ತು

ಬಸ್ತಿವಿನ್ಯಾಕ ಪೈ ಕೂಡಾ ಪ್ರತಿವಾದಿರು 2ನೇ ಪ್ರತಿವಾದಿ—ಬಸ್ತಿ ಸದಾನಂದ ಪೈ —ಬಸ್ತಿ ವಿನ್ಯಾಕ ಪೈಗಳ ಮಗ.—ಜೊಂಮಾನ್ಯರ ಬೆಟ್ಟು ಗ್ರಾಮದ ಹಿರಿಯಡಕ

ಇವರಿಗೆ

ವಾದಿ ಬೇಂಕಿಗೆ ಪ್ರತಿವಾದಿರು ತಾ 18-2-1953ರಲ್ಲಿ ರೂಪಾಯಿ 300-0-0ಕ್ಕೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಅಸಲು, ಬಡ್ಡಿ, ರಿಜಿಸ್ಟ್ರಿ ನೋಟೀಸುಗಳ ಖರ್ಚು ಕೂಡಾ ರೂಪಾಯಿ 318-6-0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 23-9-1953ಕ್ಕೆ ಮುಂದೂಡಲಾಗಿಯದೆ -ಆ ದಿವಸ ಬೆಳಗ್ಗೆ 11 ಘಂಟೆಗೆ ಸದರಿ 2ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತ್ರ-ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ದರೆ- 2ನೇ ಪ್ರತಿವಾದಿಯು ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು- 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ-

M. Damodar Kamath

Advocate for Pltf

ಉಡುಪಿ ದ. ಕ. ತಾರೀಕು 3-9-53

ಸ್ವೀಕಾರ—ವಿಮರ್ಶೆ

ಜೀವನ ಲತೆ — (ಕವಿತಾ ಸಂಗ್ರಹ)

ಬರೆದವರು: ಪ್ರೊ. ಹೆ. ಆಚಾರ್ಯ ಪ್ರಕಾಶಕರು: ಕೆ. ವಿ. ರಾವ್, ವಿದ್ಯಾಲಯ. ಸ್ಟೋರ್ಸ್, ಉಜಿರೆ, ದ. ಕ. ಬೆಲೆ: ಎಂಟಾಣೆ.

ಕನ್ನಡದಲ್ಲಿ ಕವಿತೆಗಳ ಸಂಗ್ರಹ ಹಿಂದಿನ ಭರದಿಂದ ಇಂದು ಬೆಳೆಯುತ್ತಿಲ್ಲವೆನ್ನುವುದು ಸತ್ಯ. ಅಂಥದರಲ್ಲಿ ಸೋತಾಗ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಪದಾರ್ಪಣ ಮಾಡುವವರನ್ನು ಪ್ರೋತ್ಸಾಹಿಸಬೇಕಾದ ಅಗತ್ಯವಿದೆ. ಆದರೆ ಈ ಪ್ರೋತ್ಸಾಹ ಯೋಗ್ಯತೆಯನ್ನು ಹೊಂದಿಕೊಂಡಿರಬೇಕು. "ಜೀವನ ಲತೆ"ಯ ಕರ್ತೃಗಳು ಅಂಥ ಪ್ರೋತ್ಸಾಹಕ್ಕೆ ಅರ್ಹರಾಗಿದ್ದಾರೆ. ಅವರ ಈ ಸಂಗ್ರಹದಲ್ಲಿ ಕೆಲವು ಉತ್ತಮವಾಗಿವೆ. "ಗಾಂಧಿ" ಎಂಬ ಕವನ ಇದಕ್ಕೆ ನಿದರ್ಶನ. ಅವರ ಶೈಲಿಯೂ ಸುಲಭ ಗ್ರಾಹ್ಯವಿದ್ದು ಪತ್ತು ಆಕರ್ಷಕವಾಗಿದೆ. "ಮನಸಿನ ಭಾವವ ಪೋಣಿಸುತಿದ್ದ—ಮುತ್ತಿದ ಮಾಡುತ ತೋರಿಸುತಿದ್ದ" ಎಂಬೀ ಎರಡು ಸಾಲುಗಳು ಆಚಾರ್ಯರ ಕವಿತಾ ಪ್ರತಿಭೆಯ ದ್ಯೋತಕ. ಇದೇ ರೀತಿಯ ಭಾವವಿನ್ಯಾಸವನ್ನು "ಅವಳಾರ್?" ಎಂಬ ಕವಿತೆಯ ಕೆಳಗಿನೆರಡು ಸಾಲುಗಳಲ್ಲಿ ಕಾಣಬಹುದು—

"ಮಮತೆಯ ಮಡಿಲಲಿ ಸಮತೆಯ ಹೀರವ ಎಮಗೆಂದೆಂದಿಗು ಕೊಟ್ಟವಳಾರ್?"

"ಮುಗಿಲೊಡನೆ" ಎಂಬ ಕವನದಲ್ಲಿ "ನೀಗಾಂಡ ನಿನ್ನೊಳಗೆ ಜ್ವಾಲೆಮುಖಿಯೆಂತು? ನೀರೊಡನೆ ಪಡಬಸಂ ಕುದಿದೆಂಗಾಹಿಂತು?" ಎಂಬ ಪ್ರಶ್ನೆ ತುಂಬ ಸಂವೇದಕವಾಗಿರುತ್ತದೆ. ಈ ಸಂಗ್ರಹದಲ್ಲಿ ಬೇರೆ ಕೆಲವು ಉಪದೇಶಪರ ಪದ್ಯಗಳೂ ಇವೆ. "ನೀಲವು ಚಿತ್ರಿಪಾದವನ್ನು ಮತ್ತೆ ಕೊಡುವುದೇತಕೆ? ಜಲಧಿ ನೀರಿಯನ್ನು ವಿಾರದಿರುವುದೇತಕೆ"? ಎಂದು ಕೇಳಿದರೆ ಉತ್ತರದಲ್ಲಿ "ಲೋಕದಲ್ಲಿ ನಿಯಮ ಬದ್ಧರಿಲ್ಲ" ಇವೆ ಎಂದೂ ಆದರೆ ಅದನ್ನು ಕಂಡರೂ ಜನ "ಲೋಕದಲ್ಲಿ ಒಳಿತು ಬಾಳ್ವೆ ನಡೆಸಲೊಲ್ಲರು" ಎಂದೂ ತಿಳಿಯುತ್ತದೆ.

"ಮನಸ್ಸಿಗೆ" ಎನ್ನುವ ಬೇರೊಂದು ಕವಿತೆಯ

"ಶರಧಿಯ ಮಾತಿಗೆ ಅರಳದೆ ಮಾನಸ
ಸರಸಿಜ! ಎಂದಿಗು ನಿಲ್ಲದಿರು
ಪರಸತಿಯಾಸೊಡೆ ಸರಸದ ಮಾತಿಗು
ಅರಳಲು ಬಾರದು ಮಾನಸವೆ"

ಎಂಬ ನೀತಿಯ ಸಾಲುಗಳು ನೀತಿಪ್ರದವಾಗಿರುತ್ತವೆ. ಇವಲ್ಲದೆ, ... ಕೆಲವು ಪದ್ಯಗಳು ನೀತಿ ಕಥೆಯನ್ನು ಒಳಗೊಂಡಿವೆ, ಅವುಗಳ ಬರವಣಿಗೆ ಸಾಮಾನ್ಯವೆಂದು ಕಂಡುಬಾರದು. ಇನ್ನು ಕೆಲವು ಕವಿತೆಗಳು ಛಂದೋ ನಿಯಮದಿಂದ ಬಹಳ ದೂರವಿರುವಂತೆಯೂ ತೋರಬಹುದು. ಆದರೆ ಒಟ್ಟಿನಲ್ಲಿ "ಜೀವನಲತೆ" ಎಂಬೀ ಸಂಗ್ರಹ ಕವಿಗಳಾದ ಆಚಾರ್ಯರ ಕೃತಿ ಸಾಮರ್ಥ್ಯವನ್ನು ಚೆನ್ನಾಗಿ ವ್ಯಕ್ತೀಕರಿಸುತ್ತದೆ.

ಚರಖಾ (ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ)–

ಹಸ್ತಲಿಖಿತ ಪತ್ರಿಕೆಗಳ ಮೇಲಾಟದಲ್ಲಿ ಬಂಗಾಳದ ಗವರ್ನರರ ಹಸ್ತದಿಂದ ಪಾರಿತೋಷಕ ಪಡೆದು ಈಗಾಗಲೇ ಎಲ್ಲರ ಆದರಾಸಕ್ತಿಗೊಳಗಾದ "ಚರಖಾ"ದ ಸ್ವಾತಂತ್ರ್ಯೋತ್ಸವ ಸಂಚಿಕೆ, ಮುದ್ರಿತ ಪತ್ರಿಕೆಗಳ ಅಂದ ಚಂದವನ್ನು ನಾಚಿಸಿ, ಆಹ್ವಾನ ನೀಡುವಂತಿದೆ. ಶ್ರೀ ಸತ್ಯೇಂದ್ರ ರೆಡ್ಡಿಯವರ ಕುಶಲ ಕರದಿಂದ ಚಿತ್ರಿಸಲ್ಪಟ್ಟ ಸಿಂಹದ್ವಾರದ ಚಿತ್ರಪಟ್ಟಿನ ಭವ್ಯವೂ ಚಿತ್ತಾಕರ್ಷಕವೂ – ಕಲಾತ್ಮಕವೂ ಆದ ಮುಖಪೃಷ್ಠವೊಂದೇ ಈ ಹಸ್ತಲಿಖಿತ ಪತ್ರಿಕೆಯ ಮೌಲ್ಯವನ್ನು ಸಾರಲು ಸಾಕಾದೀತು. ಅಷ್ಟು ಸುಂದರವೂ ಮನಸ್ಸನ್ನು ಸೆಳೆದು ಹಿಡಿದುಕೊಳ್ಳುವಂಥದೂ ಆದ ಚಿತ್ರಲಿಪಿ! ಈ ಮಾದರಿಯ ಚಿತ್ರ ಸೌಂದರ್ಯದೊಂದಿಗೆ ಒಳಗಿನ ಪುಟಗಳಲ್ಲಿ ಸಂಗ್ರಹಿತವಾದ ಲೇಖನಗಳೂ ಸತ್ವಯುತವಾಗಿವೆ—ಈಗಾಗ ಲೇಖನ ಬರೆದಿರುವ ಶ್ರೀ ಎ. ಜೆ. ಆಳ್ವ, ಎಂ. ವಿ. ಹೆಗ್ಡೆ, ಬನ್ನಂಜೆ ರಾಮಾಚಾರ್ಯ, ಕಯ್ಯಾರ ಕಿಞ್ಞಣ್ಣ ರೈ, ಎಸ್ವಿಲ್ಲಂಥ ಸಮರ್ಥ ಬರೆಹಗಾರರ ಲೇಖನಗಳಲ್ಲದೆ, ನಾರಾಯಣ ಬಲ್ಲಾಳ, ದೇವದಾಸ ನಾಯಕ ಇತ್ಯಾದಿ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿರುವ ಸಾಹಿತ್ಯ ಪ್ರೇಮಿಗಳಿಗೂ ಬರೆಯಲು ಅವಕಾಶ ನೀಡಿದೆ. ಹಸ್ತಪತ್ರಿಕೆಗಳ ಸೌಂದರ್ಯಾಭಿಮಾನಿಗಳಿಗೆ ಚರಖಾವನ್ನು ಜೋಕೆಯ ತೋರಿಸಲು ನಮಗೆಲ್ಲರಿಗೂ ಹೆಮ್ಮೆ. ಸಂಪಾದಕರ ಪ್ರಯತ್ನ ಇನ್ನು ಮುಂದಕ್ಕೂ ಯಶ ಸಂಪಾದಿಸಲೆಂದು ಹಾರೈಕೆ.

In the Court of the District Munsiff of Kaseragod

R. I. A. no 2216 of 1953 in O. S. no 277 of 1953

Between,

P. Kunhi Raman Nair. Plaintiff Petitioner.

and

Edayillam Krishna Nair another ... Defendants. Respondants.

To,

Ist Defendant, Edayillam Krishna Nair, nephew of Edayillam Kunhambu Nair, residing at Perambale Village, Kasaragod Taluk.

The above suit filed by the plaintiff for recovery of rent and possession of the property against the defendants is Posted to 14-9-1953 for notice to the Ist defendant by substituted service If you have got any objections to the suit you may appear before the court and urge your objections failing which the suit will be decided in your absence.

K. P. Anantha Rao

Advocate for Plaintiff.

Kasaragod 3-9-1953

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:–ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನೋಘವಾದ ಮಹಾರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್ ಐ. ಎಂ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕ್ಸರು:– ಡಾ| ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು

"ಕುಮಾರಿ" ಪಿಲ್ಸುಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದುವುದು. ಯಾವ ಬಾಧೆಯೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ: ರೂ. 3/ ; ಸ್ಪೆಶಲ್ ರೂ. 5/– ಎಕ್ಸ್‌ಟ್ರಾ ಸ್ಪೆಶಲ್ ರೂ. ೮ [ವಿ. ಪಿ. ಖರ್ಚು ಬೇರೆ ಪ್ರತ್ಯೇಕ]

Mrs. P. DEVEE, F.O.S. (N.J.)

CALCUTTA. 40

ಸ್ಟಾಕಿಸ್ಟರು: ರಾಮಕಂಪೆನಿ, ಮಂಗಳೂರು.

ವಾರದ ಒಳಿತು ಕೆಡುಕುಗಳು

ತಾ. ೧೦—೯—೫೩ರಿಂದ ತಾ. ೧೬—೯—೫೩ರ ವರೆಗೆ.

ಮೇಷ— ಕೆಲವಟ್ಟಿಗೆ ಈ ವಾರವು ನಿಮಗೆ ಶುಭದಾಯಿಯಾಗಿದೆ. ನಿಮ್ಮ ಗೃಹ ತಾಪತ್ರಯಗಳೀವಾರದಲ್ಲಿ ಕೆಲವಟ್ಟಿಗೆ ನಿವಾರಿತವಾಗಲಿವೆ. ಶತ್ರು ಜನರು ಪರಾಭವ ಹೊಂದುವರು. ಆರ್ಥಿಕ ಪರಿಸ್ಥಿತಿಯೂ ಕೂಡ ಮುಂಚಿಗಿಂತ ಉತ್ತಮವಾಗುವದು. ಆದರೆ ದೇಹಾಲಸ್ಯ ಕಾರ್ಯಹಾನಿ ಗುರುಜನ ವಿರೋಧಾದಿಗಳಿಂದ ಸ್ವಲ್ಪ ಮನಶಾಂತಿಗೆ ಭಂಗವಿದೆ. ವಾರಾದಿಯ 4ದಿನಗಳಲ್ಲಿ ನಿಮ್ಮ ಆಕಾಂಕ್ಷೆಗಳು ಅನಾಯಾಸದಿಂದ ನೆರವೇರಲಿವೆ.

ವೃಷಭ—ನಿಮ್ಮ ಇಷ್ಟಾರ್ಥಗಳು ಅಚಿರದಲ್ಲಿ ಸಿದ್ಧಿಸುವವು. ಹಿಡಿದ ಕಾರ್ಯಗಳಿಗೆ ವಿಘ್ನ ವಿಡಂಬನಗಳೇನೂ ಬರಲಾರವು. ಶತ್ರು ಜನರು ಇದಿರಿಗೆ ಬರಲಾರದೆ ಹಿಂದೆ ನಿಂತು ನಾನಾ ಉಪದ್ರವನ್ನು ಕೊಡಲಿರುವರು. ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದ್ದರೂ ಸಂಸಾರದಲ್ಲಿ ಒಂದಲ್ಲ ಒಂದು ತೆರನಾದ ಚಿಂತಾಶೋಕಗಳು ಪ್ರಾಪ್ತವಾಗುವವು ಸಮಾಜದಲ್ಲಿ ಮಾನ ಮನ್ನಣೆಗಳನ್ನೂ ಪಡೆವಿರಿ. ವ್ಯಾಪಾರಿಗಳಿಗೆ ಒಳ್ಳೆಯ ಅದೃಷ್ಟ ಸಮಯವಿದು. ತಾ. 12. 13 14. 15. ಅತ್ಯುತ್ತಮವಿವೆ.

ಮಿಥುನ—ನಿಮ್ಮ ಅದೃಷ್ಟವಿಂದು ಅತ್ಯುತ್ತಮ ಸ್ಥಿತಿಯಲ್ಲಿದೆ. ದೇಹ ಸುಖಪತಿಯು ಸುಖ ಸ್ಥಾನದಲ್ಲಿ ಉಚ್ಚನಿದ್ದ ಕಾರಣ ನಿಮಗಾವ ತರದ ಚಿಂತೆಗೂ ಅವಕಾಶವಿಲ್ಲವು. ಎಂತಹ ಮಹತ್ಕಾರ್ಯವೇ ಇರಲಿ ಪರರ ಸಹಾಯವಿಲ್ಲದೆ ಸಾಧಿಸಲು ಶಕ್ತರಿರುವಿರಿ. ಒಳ್ಳೆ ಕರ್ಮಕುಶಲರಾದ ನಿಮ್ಮ ಕಣ್ಣಿಗೂ ಕೂಡ ಶತ್ರುಜನರು ಕಾಣಿಸಲಾರರು. ಕೆಲವೊಮ್ಮೆ ಹಿಂದುಮುಂದಿನ ಯೋಚನೆ ಮಾಡದ ದುಡುಕಿ ಜನರ ನಿಂದೆಗೆ ಗುರಿಯಾಗುವ ಪ್ರಸಂಗವಿದೆ. ವಾರಾಂತ್ಯದ 3ದಿನಗಳು ಇಷ್ಟಪ್ರದಗಳಿವೆ.

ಕರ್ಕಟಿ—ಕಾಲವು ಬಹಳ ವಿಪರೀತಾವಸ್ಥೆಗೆ ಬಂದಿರುವದು. ದೇಹಪೀಡೆ ಮನೋರೋಗಗಳು ಸತತ ಬಾಧಿಸಲಿವೆ. ವಿನಾಕಾರಣ ಕಲಹವಾಗುವದು. ಅಧಿಕಾರೀ ವರ್ಗದವರ ಪೀಡೆಗೆ ಗುರಿಯಾಗುವಿರಿ. ದುಡಿಮೆಯ ಮುಟ್ಟುವಿ ಖರ್ಚುಗಳು ಪ್ರಾಪ್ತವಾಗಿ ಸಿಕ್ಕ ಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವ ಪ್ರಸಂಗ ಬರಲಿದೆ. ಗಾಳಿಗಿದಿರಾಗಿಟ್ಟ ದೀಪದಂತಿರುವ ನಿಮ್ಮ ಚಿತ್ತವು ಅಡಾವ ಕಾರ್ಯವನ್ನು ಕೈಗೊಳ್ಳಲೂ ಹಿಂಜರಿಯುದು. ಆದರೂ ತಾ. 10. 11. 16. ಈ ದಿನಗಳು ಇತರ ದಿನಗಳಿಗಿಂತ ವಾಸಿ.

ಸಿಂಹ—ದು:ಖದ ದಿನಗಳು ಕಳೆದವು. ನೀವಿಂದು ಸುಖನೆಮ್ಮದಿಯಿಂದ ಕಾಲಯಾಪನೆ ಮಾಡುವಿರಿ. ನಿಮ್ಮ ಭಾಗ್ಯಪತಿಯು ಲಾಭದಲ್ಲೂ, ಧನ ಲಾಭನನು ಧನಸ್ಥಾನದಲ್ಲಿ ಉಚ್ಚನಾಗಿಯೂ ಉಪಚಯದಲ್ಲಿ ಅನುಕೂಲನಾದ ಶನೈಶ್ವರನು ಉಚ್ಚನಾಗಿಯೂ ಸದಾ ನಿಮ್ಮ ಹಿತೈಷಿಗಳಾಗಿರುವುದರಿಂದ ನಿಮ್ಮ ಆರ್ಥಿಕ ಭಾಗವು ಅತ್ಯುಚ್ಚ ಮಟ್ಟಕ್ಕೆ ಬರಲಿದೆ, ಎಂತಹ ಮಹತ್ಕಾರ್ಯವೂ ಕೂಡ ತೃಣ ಸಮವೆನಿಸುವದು. ಆರೋಗ್ಯದ ವಿಚಾರದಲ್ಲಿ ಕೊಂಚ ಜಾಗ್ರತೆ ವಹಿಸಿರಿ. ತಾ. 12. 13. ಅತ್ಯುತ್ತಮ ದಿನಗಳು,

ಕನ್ಯ—ನಿಮ್ಮ ದುರ್ದಿನಗಳಿನ್ನೂ ದೂರವಾಗಿಲ್ಲವು. ಯಾವ ಕಾರ್ಯದಲ್ಲೂ ಪ್ರಗತಿ ಕಾಣಿಸದು. ಆಪತ್ತಿಗಾಗಿ ಸಂಗ್ರಹಿಸಿಟ್ಟ ಹಣವೂ ಇಂದು ಮಾಯವಾಗಿ ಪರರ ಕೂಡೆ ಸಾಲ ತೆಗೆವಿರಿ. ನಿಮ್ಮ ಧೈರ್ಯಸ್ಥೈರ್ಯಗಳು ಲೋಪವಾಗುವವು ಪಿತ್ತ ಪ್ರಕೋಪದಿಂದಲೂ ನೇತ್ರರೋಗದಿಂದಲೂ ಪೀಡಿತರಾಗುವಿರಿ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಜನನಿಂದೆ ನಷ್ಟ ಶತ್ರುಗಳಿಂದ ಪರಾಭವವನ್ನು ಹೊಂದಲಿರುವಿರಿ. ತಾ. 10. 11. 14. 15. ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು.

ತುಲಾ—ಇಂದಿನ ಗ್ರಹಸ್ಥಿತಿಯು ನಿಮ್ಮ ಭಾಗಕ್ಕೆ ಚೆನ್ನಾಗಿಯೇ ಇರುವದು. ಸಂಪತ್ತುಗವು ದಿನೇ ದಿನೇ ವೃದ್ಧಿಯನ್ನೈದುವದು. ಬಹುಮುಖದಿಂದ ಧನಾಗಮವಾಗುವದಲ್ಲದೆ ಸಮಾಜದಲ್ಲಿ ಸನ್ಮಾನಮಾನಗಳೂ ರಾಜಕೀಯ ರಂಗದಲ್ಲಿ ವಿಜಯವೂ ಲಭಿಸುವದು. ಆರೋಗ್ಯದ ಮಟ್ಟಿಗೆ ಈ ವಾರವು ಅಷ್ಟೊಂದು ಚೆನ್ನಾಗಿಲ್ಲ. ನಿಷ್ಕಾರಣವಾಗಿ ವಾಕ್ಕಲಹವಾಗುವ ಯೋಗವಿದೆ. ತಾ. 12, 13, 16 ಈ ದಿನಗಳಲ್ಲಿ ಭೋಗಲಾಭ ವಿಜಯಾದಿಗಳಂ ಪಡೆವಿರಿ.

ವೃಶ್ಚಿಕ—ಕಳೆದ ವಾರಕ್ಕಿಂತಲೂ ಈ ವಾರವು ಸ್ವಲ್ಪ ಉತ್ತಮವಾಗಿಯೇ ಪರಿಣಮಿಸಲಿದೆ. ನಿಮ್ಮ ಭಾಗಕ್ಕೆ ಗುರುವು ಅಸ್ತಮಕ್ಕೆ ಹೋದರೂ ಕರ್ಮಲಾಭಪತಿಗಳು ಸ್ವಕ್ಷೇತ್ರ ಉಚ್ಚ ಸ್ಥಾನಗತರಾಗಿದ್ದ ಕಾರಣ ನಿಮ್ಮ ಪರಿಶ್ರಮಕ್ಕೂ ಮಿಗಿಲಾದ ಧನಲಾಭವಾದೀತು, ಅನಿರೀಕ್ಷಿತ ಪರ್ಯಟನವು ನಷ್ಟ ಕಷ್ಟಗಳಿಗೀಡುಮಾಡೀತು. ಏಳೂವರೆ ಶನಿಯ ಕಾಟದಿಂದ ಮನಸ್ಸಿಗೆ ನೆಮ್ಮದಿಯಿರದು. ತಾ. 10, 11, 14, 15 ಈ ದಿನಗಳೂ ಅನುಕೂಲವಿವೆ.

ಧನು—ನಿಮ್ಮ ಭವಿತವ್ಯವನ್ನು ವಿಮರ್ಶಿಸುವಾಗ "ದು:ಖಸ್ಯಾನಂತರಂ ಸುಖಂ" ಎಂಬ ವಾಕ್ಯವು ನೆನಪಿಗೆ ಬರುತ್ತಲಿದೆ. ಅನೇಕ ಸಮಯದಿಂದ ನಾನಾತರದ ಕಷ್ಟನಷ್ಟವನ್ನನುಭವಿಸಿದ ನೀವಿಂದು ಸುಖದ ಸೋಪಾನವನ್ನೇರಲು ತೊಡಗಿರುವಿರಿ. ಇಂದು ನಿಮ್ಮ ಕನಸು ಕಾರ್ಯರೂಪಕ್ಕೆ ಬರಲಿದೆ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಿ, ಜನತೆಯ ಬೆಂಬಲ ಸಹಕಾರಗಳಿಂದಾಗಿ ಅದ್ವಿತೀಯ ಸ್ಥಾನಮಾನಗಳನ್ನು ಪಡೆವಿರಿ. ತಾ. 14, 15ಒಳ್ಳೆಯದಲ್ಲ.

ಮಕರ—ಸಕಲ ಗ್ರಹಮಂಡಲವೇ ನಿಮ್ಮ ಭಾಗ್ಯಕ್ಕೆ ಪ್ರತಿಕೂಲವಾಗಿ ನಿಂತಿರುವುದರಿಂದ ನಿಮ್ಮ ಪರಿಶ್ರಮವು ತೃಣಾದಿಗಳಿಲ್ಲದ ಸ್ಥಳದಲ್ಲಿ ಬಿದ್ದ ಅಗ್ನಿಯಂತೆ ವ್ಯರ್ಥವಾಗುವುದು. ಗುರುಹಿರಿಯರ ಆಗ್ರಹಕ್ಕೆ ಗುರಿಯಾಗುವಿರಿ. ಸ್ತ್ರೀ ಜನರ ದೆಸೆಯಿಂದಾಗಿ ಧನಮಾನಗಳಿಗೆ ಧಕ್ಕೆ ತಗಲುವದು, ಸಮಾಜದ ದೂಷಣೆಗೂ ಪಾತ್ರರಾಗುವಿರಿ. ಪ್ರತೀಕಾರಾಸಕ್ತರಾಗಿದ್ದ ವಿರೋಧಿ ಜನರು ಕೃತಕೃತ್ಯರಾಗುವರು ಚಂಚಲವಾದ ನಿಮ್ಮ ಮನಸ್ಸು ಮುಂದೇನು ಮಾಡಬೇಕೆಂದು ತಿಳಿಯದೆ ಉದಾಸೀನವಾಗುವದು. ತಾ 10, 11, 16 ಈ ದಿನಗಳಲ್ಲಿ ಬಲು ಜಾಗರೂಕರಾಗಿರಿ.

ಕುಂಭ:—ವ್ಯಾಪಾರ ವ್ಯವಹಾರಗಳಲ್ಲಿ ನಾನಾ ತರದ ವಿಘ್ನವಿಡಂಬನಗಳು ಪ್ರಾಪ್ತವಾಗಲಿವೆ, ಗೃಹಕೃತ್ಯದಲ್ಲಿ ಒಡಹುಟ್ಟಿದವರೊಳಗೂ ಸತಿಪತಿಗಳಲ್ಲೂ ತಂದೆ ಮಕ್ಕಳಲ್ಲೂ ಮನಸ್ತಾಪ ಕಲಹಗಳುಂಟಾದಾವು. ಆದರೂ ಜನತೆಯ ಬೆಂಬಲವು ಚೆನ್ನಾಗಿರುವುದರಿಂದಲೂ ಆರ್ಥಿಕ ಭಾಗಕ್ಕೆ ಹಾನಿ ತಪ್ಪಿದಿರುವುದರಿಂದಲೂ ದಿನಯಾಪನೆಯು ಕಠಿಣವಾಗಲಾರದು. ಅನಿರೀಕ್ಷಿತ ಪರ್ಯಟನ ಪ್ರಾಪ್ತವಾದೀತು. ವಾರಾಂತ್ಯದ 3 ದಿನಗಳು ಇಷ್ಟು ಪಾಲ್ಗಿ ಉತ್ತಮವೆನಿಸುವವು

ಮೀನ:—ಅಳಿಗಿ ಮುಡಿದರೆ ಅರಸಾಗಿ ಉಣಬಹುದೆಂಬ ಗಾದೆಯಂತೆ ಇಂದಿನ ನಿಮ್ಮ ಪರಿಸ್ಥಿತಿಯಿರುವದು. ನಿಮ್ಮ ಪರಿಶ್ರಮಕ್ಕೆ ತಕ್ಕುದಾದ ಫಲಪ್ರಾಪ್ತಿಯು ಇದ್ದೇ ಇದೆ. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ, ನೌಕರಿವರ್ಗಕ್ಕೂ ವಿದ್ಯಾರ್ಥಿ ಜೀವನತೆಗೂ ಈ ಕಾಲವು ಉತ್ತಮವಾಗಿಲ್ಲವು. ಆತ್ಮೀಯರ ನಿಜ ಸಾಂಸಾರಿಕ ತಾಪತ್ರಯಗಳಿಂದ ದು:ಖಿತರಾದ ನಿಮಗೆ ತಾ. 10. 11. 16ರಲ್ಲಿ ಧನಲಾಭ ಇಷ್ಟಸಿದ್ಧಿ ವಿಜಯಗಳು ಲಭಿಸುವವು.

ವಿವಿಧ ಪಾತ್ರೆಗಳು



ನೂತನತ್ತು ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ

ರಥಬೀದಿ ಉಡುಪಿ.



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ಸಡಿಲಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಆತ್ಯುಷ್ಣವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ಸಡಿಲಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ, ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ, ವಿ. ಪಿ. ಇಲ್ಲ. **ಕ್ಯಾಟಲಾಗ್ ಉಚಿತ.** ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ, ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.**(South India)

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ, ಜಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.



Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No3[illegible]. 17-9-1953 ವರ್ಷ ೩೩ ವಾರ ೩

ಭಾರತದ ರಾಜ್ಯಘಟನೆಯನ್ನು ತಯಾರಿಸಿದ, ಅರ್ವಾಚೀನ ಮನುವೆಂದು ಗೌರವದಿಂದ ಕರೆಯಲ್ಪಡುತಿದ್ದ, ಭಾರತ ಸರಕಾರದ ಹಿಂದಿನ ಕಾಯಿದೆ ಮಂತ್ರಿ ಡಾ ಅಂಬೇಡ್ಕರರು ಮನುವಿನ ಪದವಿಯನ್ನು ತ್ಯಜಿಸಲು ನಿರ್ಧರಿಸಿದುದಷ್ಟೇ ಅಲ್ಲ—ಭಾರತೀಯರೆಲ್ಲರಿಗೂ ಒಂದು ರಣಾಹ್ವಾನವನ್ನು ನೀಡಿದ್ದಾರೆ. ಭಾರತ ರಾಜ್ಯಘಟನೆಯ ಈ ಶಿಲ್ಪಿ ಹೊಸದಿಲ್ಲಿಯಲ್ಲಿ ಸೂತನಾದುಶ್ರಾ ಘಟನೆಯನ್ನು ಅಗ್ನಿಗೊಪ್ಪಿಸಿ ಕೃತಾರ್ಥರಾಗಬೇಕೆಂದು ಹೇಳಿದರು. ಡಾ. ಅಂಬೇಡ್ಕರರು ಆಂಧ್ರರಾಜ್ಯ ವಿಧೇಯಕದ ಕುರಿತು ರಾಜ್ಯಪರಿಷತ್ತಿನಲ್ಲಿ ಭಾಷಣ ಮಾಡುತಿದ್ದರು ಆಗ ಘಟನೆಯ ಅನೇಕ ಕಲಮುಗಳನ್ನು ಅವರು ಕಟುವಾಗಿ ಟೀಕಿಸಿದರು 'ಕೆಲವು ಗೆಳೆಯರು ಭಾರತದ ರಾಜ್ಯಘಟನೆಯನ್ನು ನಾನೇ ಸಿದ್ಧಪಡಿಸಿದೆನೆಂದು ಹೇಳುವುದುಂಟು. ಆದರೆ ಅದನ್ನು ಸುಟ್ಟುಹಾಕುವುದರಲ್ಲಿ ನಾನೇ ಮೊದಲಿಗನಾಗುವೆ! ಅದು ನನಗೆ ಬೇಕಾಗಿಲ್ಲ" ಎಂದವರು ಸಾರಿದರು. ಸದಸ್ಯರು ಘಟನೆಯನ್ನು ರಚಿಸುವಲ್ಲಿ ಅಂಬೇಡ್ಕರರು ವಹಿಸಿದ್ದ ಮಹತ್ವದ ಪಾತ್ರವನ್ನು ಅವರ ನೆನಪಿಗೆ ತಂದುಕೊಟ್ಟಾಗ "ಆಗ ನಾನು ಸ್ವತಂತ್ರನಿರಲಿಲ್ಲ—ನನಗೆ ಮಾಡ ಹೇಳಿದ ಕೆಲಸವನ್ನು ಮಾಡಿದೆನು. ಬಹುಸಂಖ್ಯಾಕರ ಇಷ್ಟದಂತೆ ಮಾತ್ರ ನಾನು ನಡೆದುಕೊಂಡೆನು" ಎಂದವರು ತಮ್ಮ ಈಗಿನ ನಿಲುವೆಯನ್ನು ಸಮರ್ಥಿಸಿಕೊಂಡರು.

❖

ರಾಜ್ಯ ಘಟನೆಯನ್ನು ಸುಟ್ಟು ಹಾಕಬೇಕೆನ್ನುವಷ್ಟರ ಮಟ್ಟಿನ ಧಾರ್ಷ್ಟ್ಯವನ್ನು ತೋರಿಸಿದ್ದಕ್ಕೆ ಡಾ. ಅಂಬೇಡ್ಕರರನ್ನು ಪ್ರಶಂಸಿಸಬಹುದು ಆದರೆ ಇದಕ್ಕೆ ಕೆಲವು ದಿನ ಮುಂಚೆ ಆಚಾರ್ಯ ವಿನೋಬಾ ಭಾವೆಯವರು ಹೇಳಿದೊಂದು ಮಾತನ್ನು ನೆನೆದರೆ, ತನ್ನ ಕಾಲನ್ನು ತಾನೇ ಕಟ್ಟಿಕೊಳ್ಳುವಂಥ ಈ ಕಲಿಯುಗದ ಮನುವಿಗಿಂತಲೂ ಹೆಚ್ಚಿನ ಕೀರ್ತಿ ಭೂದಾನ ಯಜ್ಞದ ಆಂದೋಲನವೆಬ್ಬಿಸಿದ ಆ ಕರ್ಮಠನಿಗೆ ಸಲ್ಲಬೇಕೆಂದು ತೋರುವುದು. ಮನುಷ್ಯನ ಹೃದಯ ಪರಿವರ್ತನೆಯಲ್ಲಿ ಅಚಲ ವಿಶ್ವಾಸವುಳ್ಳ ಭಾವೆಯವರು ಮೊಂಘೀರದಲ್ಲಿ ಪ್ರಾರ್ಥನೋತ್ತರ ಭಾಷಣ ಮಾಡುತ್ತಾ "ಸರಕಾರವು ಕಾಲಾಂತರದಲ್ಲಿ ನಿರ್ನಾಮವಾಗಬೇಕು" ಎಂದು ಹೇಳಿದರು. ಮುಂದುವರಿದು 'ಸರಕಾರವು ನಾಶವಾಗಬೇಕೆಂದು ಹೇಳುವವರು ಹೃದಯ ಪರಿವರ್ತನೆಯನ್ನೂ ಸದ್ಭಾವವನ್ನೂ ನಂಬಬೇಕು ತನ್ನಂತೆ ಪರರನ್ನೂ

ಜಿಪೇ ತಾ 10ರಲಿ ಊಡುಪಿಗೆ ಒಂದು ಮರುದಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಎಂ ಜಿ ಎಂ ಕಾಲೇಜ್, ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮೊದಲಾದವನ್ನು ಸಂದರ್ಶಿಸಿ ಸಂತೃಪ್ತರಾಗಿ ಸಂತೋಷ ವ್ಯಕ್ತಪಡಿಸಿದ
ಮದ್ರಾಸಿನ ಶಿಕ್ಷಣ ಮಂತ್ರಿ
ಡಾ| ಎಂ ವಿ. ಕೃಷ್ಣರಾಯರು.

ಇದೂ ಒಂದು ಚಂದ

ಬಗೆಯಬೇಕು ನೀವು ಹೀಗೆ ತೋರಿಸಿದ ಪ್ರೀತಿ ವಿಶ್ವಾಸಗಳಿಗೆ ಪತ್ರಿಯಾಗಿ ನಿಮಗೂ ಪ್ರೀತಿ ವಿಶ್ವಾಸಗಳು ದೊರಕುವುವು.' ಎಂದರು. ಇಂದು ಜಗತ್ತಿನಲ್ಲಿ ನೂರು ಘರ್ಷಣೆಗಳು ತಲೆಯೆತ್ತಿವೆ ಸರಕಾರವು ರಾಷ್ಟ್ರವಾಗಿ ಇರಬೇಕೆನ್ನುವವರು ಒಂದು ಕಡೆ ಸಾರಿದರೆ, ಸರಕಾರವು ಕಡಿಮೆಯಾಗಬೇಕೆಂದು ಬಯಸುವವರು ಇನ್ನೊಂದು ಪಕ್ಷ. ಮಾರ್ಕ್ಸನ ಪ್ರಕಾರವು ಕೂಡ ಸರಕಾರವು ಕಾಲಾಂತರದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲೆಂದು ಬಯಸುತ್ತದೆ. ಪ್ರಜಾಪ್ರಭುತ್ವವನ್ನು ನಂಬಿದವರು ಮೊದಲಿನಿಂದ ವರ್ಗಕ್ಕೂ ಸರ್ವಾಧಿಕಾರತ್ವವನ್ನು ನಂಬುವ ಕಮ್ಯೂನಿಸ್ಟರು ಮುಂದಿನ ಪರಗತಿಗೂ ಸೇರುತ್ತಾರೆ ಆದರೆ ವಿನೋಬಾಜೀ ಸರಕಾರ ಇಂದಿನಿಂದಲೇ ತನ್ನ ಮಹತ್ವವನ್ನು ಕ್ರಮೇಣ ಕಳೆದುಕೊಂಡು ಕಾಲಾಂತರದಲ್ಲಿ ನಷ್ಟವಾಗಬೇಕೆಂದು ಇಚ್ಛಿಸುತ್ತಾರೆ. ಮಾನವನ ಸದ್ಭಾವನೆಯನ್ನು ಆರಾಧಿಸುವ ಮತ್ತು ಅದನ್ನು ಶ್ರದ್ಧಾಭಕ್ತಿಯಿಂದ ನೋಡುವ ಭಾವೆಯವರಿಗೆ ಈ ಧ್ಯೇಯವನ್ನು ಮುಟ್ಟುವ ಸಂಪೂರ್ಣ ಭರವಸೆ ಇದೆ.

ಹೇಳಿಸಿದ [illegible] ಗಂಭೀರ ವಿಚಾರಗಳಾದವು ಸಾಮಾನ್ಯ ಜನಕ್ಕೆ ಅವುಗಳ ಸಾರವನ್ನು ಮನವರಿಕೆ ಮಾಡಿಕೊಳ್ಳುವ ಇಚ್ಛೆಯಾಗಲಿ ಕ್ಕಿಲ್ಲ — ಅಥವಾ ಅಂಥ ಸಾಮರ್ಥ್ಯ ಇರಲಿಕ್ಕಿಲ್ಲ 'ಆದರೆ ನಮ್ಮ ಪಾರ್ಲಿಮೆಂಟಿನ ಸದಸ್ಯರು ಸದಾಕಾಲ ಇಂಥ ಗಂಭೀರ ಸಂಗತಿಗಳನ್ನು ವಿಚಾರಿಸುತ್ತಿರಬೇಕಾಗುವುದರಿಂದ, ಅವರ ಮನೋವೇದನೆಯ ಪರಿಯನ್ನು ಚೆನ್ನಾಗಿಯೇ ಊಹಿಸಬಹುದು ಐದು ತಾಸುಗಳ ಕಾಲ ಮಾತ್ರ ಸೇರುತಿದ್ದ ಲೋಕಸಭೆಯು ತನ್ನ ಕಾರ್ಯಕಲಾಪಗಳನ್ನು ಏಳು ತಾಸುಗಳ ವರೆಗೆ ನಡೆಯಬೇಕೆಂದು ಸಭಾ ಧುರೀಣರಾದ ನೆಹರೂರವರು ಕೆಲ ದಿನಗಳ ಹಿಂದೆ ಸೂಚಿಸಿದ್ದರು ಮಾನ್ಯ ಸದಸ್ಯರೊಬ್ಬರು ಪರಿಶಿಷ್ಟ ವರ್ಗದವರ ಹಾಗೂ ಪರಿಶಿಷ್ಟ ಗುಡ್ಡಗಾಡು ಜನರ ಕುರಿತು ಒಂದ ವರದಿಗಳನ್ನು ಚರ್ಚಿಸಲು ಒಂದು ದಿನ ಕೊಡಬೇಕೆಂದು ಕೇಳಿಕೊಂಡಾಗ, ನೆಹರೂರಿಂದ ಮೇಲಿನ ಜವಾಬು ದೊರೆಯಿತು. "ಈ ವಿಷಯವು ಮಹತ್ವದ್ದಿದ್ದು ಲೋಕಸಭೆಯು ಇದಕ್ಕೆ ಹೆಚ್ಚು ಸಮಯವನ್ನು ಒದಗಿಸಿದಷ್ಟು ಹೆಚ್ಚಿಗೆ ಬೇರೆ ರಾಷ್ಟ್ರಗಳಲ್ಲಿ ರೂಢಿಯಲ್ಲಿರುವಂತೆ ಇಲ್ಲಿಯೂ ಲೋಕಸಭೆ ೫ ತಾಸುಗಳಿಗೆ ಬದಲು ೭ ತಾಸು ಕಾರ್ಯಕಲಾಪ ನಡೆಸಲು [illegible] ಮಾತ್ರ [illegible] ವಿಷಯಗಳನ್ನೂ ವಿವರವಾಗಿ ಯಥಾವಕಾಶ ಚರ್ಚಿಸಲು ಅನುಕೂಲವಾಗುವುದು" ಎಂದವರು ಹೇಳಿದರು

ಸದಸ್ಯರು ಈ ಸೂಚನೆಯನ್ನು ಸ್ವೇಚ್ಛೆಯಿಂದ ಒಪ್ಪಿಕೊಂಡರೋ ಇಲ್ಲವೋ ಗೊತ್ತಿಲ್ಲ—ಆದರೆ ಚರ್ಚೆಗಳು ಸುದೀರ್ಘ ಸಮಯದ ವರೆಗೆ ನಡೆಯುವುದರಿಂದ ಅವರು ತುಂಬ ಬೇಸರ ನೊಂದುಪರೆಂಬುದಕ್ಕೆ ನಿದರ್ಶನಗಳಿವೆ. ಈ ಬೇಸರ ನೀಗಲು ಸದಸ್ಯರು ತಂತಮ್ಮಲ್ಲಿಯೇ ಪಟ್ಟಾಂಗ ಹೊಡೆದುಕೊಳ್ಳುವುದು ಸಾಮಾನ್ಯ ಮಾತು ಆಗ ಸಭಾಧ್ಯಕ್ಷರು ಸದಸ್ಯರಿಗೆ ಎಚ್ಚರಿಕೆಯ ಮಾತನ್ನು ಹೇಳುವ ಪ್ರಸಂಗ ಒದಗುತ್ತದೆ ಮೊನ್ನೆ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಶ್ರೀ ಅನಂತಶಯನಂ ಅಯ್ಯಂಗಾರರು ಲೋಕ ಸಭಾ ಸದಸ್ಯರು ಹೆಚ್ಚು ಗದ್ದಲ ಮಾಡಿದರೆ, ಸಭೆಯನ್ನು ಇನ್ನೂ ಅರ್ಧ ತಾಸು ಹೆಚ್ಚಿಗೆ [illegible] ವೆ ಸ್ವಯಂತ್ರಕವಾಗಿ ಸದಸ್ಯರ ಸ್ವರವನ್ನು ಹಿಡಿದು 'ದಯಮಾಡಿ ಹೊರ ನಡೆಯಿರಿ' ಎಂದೆನ್ನುವುದಾಗಿ ಗುಡುಗಿದರ. ಅಲ್ಲಿ [illegible] ದಿನದಲ್ಲಿ ಸಭಾಧ್ಯಕ್ಷರು ಹೀಗೆ ಎಚ್ಚರಿಸಿದ್ದು ಮೂರನೆಯ ಸಲವಾಗಿತ್ತು ಕೆಲವು ದಿನಗಳಿಂದ ಇದು ನಿತ್ಯ ಘಟನೆಯಾಗಿಯೇ ಪರಿಣಮಿಸಿತ್ತು ಸಭಾಧ್ಯಕ್ಷರ ಈ ಎಚ್ಚರಿಕೆ ಕೇಳಿ, [illegible] ಸದಸ್ಯರೊಬ್ಬರು ಸ್ಪಷ್ಟವಾಗಿ [illegible] ಕಷ್ಟವನ್ನು ತೋಡಿಕೊಂಡರು. [illegible] ಕರ ವಿಧೇಯಕವನ್ನು ಎಳೆಎಳೆಯಾಗಿ ಚರ್ಚಿಸಿದ್ದು ಮಾತ್ರವಲ್ಲದೆ ಹಿಂದೆ [illegible] ತಲೆ [illegible]. ಆದರೆ ಇಂಥ [illegible] ಸಭಾಧ್ಯಕ್ಷರು ಸ್ವೀಕರಿಸಬೊಲ್ಲರು [illegible]. ಗಟ್ಟಿ ಮಾತನಾಡಿ ಗುಲ್ಲೆಬ್ಬಿಸುವುದರಿಂದ [illegible] ದೊರೆಯುವಂತಿದ್ದರೆ ಅವರು ಹೊರಗ ಹೋಗಿ [illegible] ಕುಳಿತುಕೊಳ್ಳಬಹುದೆಂಬ ಅಭಿಪ್ರಾಯವನ್ನು ತಿಳಿಸಿದರು. ಹೀಗೆಂದ ಕೆಲವು ಕ್ಷಣಗಳವರೆಗೆ [illegible] ಕೇಳಿಸುವಷ್ಟು ಮೌನ ಸಭೆಯಲ್ಲಿ ನೆಲಸಿತು.

❖

ಮಾನ್ಯ ಸದಸ್ಯರಂತೆ ಮಂತ್ರಿಗಳೂ ಪಾರ್ಲಿಮೆಂಟಿನ ಎರಡೂ ಸಭೆಗಳ ಅಧ್ಯಕ್ಷರು ಒಪ್ಪುವ ದಕ್ಷತೆಯನ್ನು ಳಿಸಿಕೊಳ್ಳಬೇಕು. ಕರ್ತವ್ಯಚ್ಯುತಿಗೆ ಅಸ್ಪದ ಕೊಡಬಾರದೆನ್ನುವ ಕಾರಣಗಳಿಗೋಸ್ಕರ ಎಚ್ಚರಿಸುವುದು ಅಪರೂಪವಲ್ಲ-ಊಚಿನ ಘಟನೆಗಳನ್ನೆ ಉದಾಹರಿಸಬಹುದು. ಲೋಕಸಭೆಯಲ್ಲಿ ಶಿಕ್ಷಣ ಮಂತ್ರಿ ಮೌಲಾನಾ [illegible] ಕಲಾಂ ಆಝಾದರ ಪರವಾಗಿ [illegible] ತ್ತರಕೊಡಬೇಕಿದ್ದ [illegible] ಮದ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರು ಪೂರಕ ಪ್ರಶ್ನೆಯ ಉತ್ತರಕ್ಕೋಸ್ಕರ ಟಿಪ್ಪಣಿ ಹುಡುಕಲು ತೊಡಗಿದರು. ಆಗ ಶ್ರೀ ವಿ ಪಿ ನಾಯರರು ಎದ್ದು ಶಿಕ್ಷಣ ಮಂತ್ರಿಗಳಾಗಲಿ. ಅವರ ಖಾತೆಯ ಉಪಮಂತ್ರಿಗಳಾಗಲಿ ಸಭೆಗೆ ಬರಲಿಲ್ಲವೇಕೆಂದು ಕೇಳಿದರು ಆಗ ಸಭಾಧ್ಯಕ್ಷರು "ತಂತಮ್ಮ ಖಾತೆಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಸಭೆಯಲ್ಲಿ ಬಂದಾಗಲೆಲ್ಲ ಮಂತ್ರಿಗಳ ಅನಿವಾರ್ಯ ಪ್ರಸಂಗಗಳನ್ನು ಬಿಟ್ಟು ಸಾಮಾನ್ಯವಾಗಿ ಸಭೆಯಲ್ಲಿ ಉಪಸ್ಥಿತರಿರುವುದು ಅವಶ್ಯ" ಎಂದರು. ಶಿಕ್ಷಣ ಮಂತ್ರಿಗಳ ಪರವಾಗಿ ಶ್ರೀ ಜೈನರು ಉತ್ತರಮರೀತಿಯಲ್ಲಿ ಪ್ರಶ್ನೆಗಳನ್ನು ಉತ್ತರಿಸಿದುದಕ್ಕೆ ಅವರು ಧನ್ಯವಾದವನ್ನು ಕೊಟ್ಟರು "ಆದರೆ ತನಗೆ ಪರಿಚಯವಿಲ್ಲದ ವಿಷಯವೊಂದರಲ್ಲಿ ದಿನ ಬೆಳಗಾಗುವುದರಲ್ಲಿಯೇ ನಿಷ್ಣಾತನಾಗುವುದು ಯಾರಿಗೂ ಸಾಧ್ಯವಿಲ್ಲ ಎಂದು ಸರ್ವೋದ್ಗಾರಗಳ ನಡುವೆ ನುಡಿ

(೧೦ನೇ ಪುಟ ನೋಡಿರಿ)

ಅಲ್ಪವಯಿಗಳ ದುಡಿದುಣ್ಣುವ ಬಾಳ್ವೆ

ತತ್ಕಾಲ ಅಗತ್ಯಕಂಡರೂ ರಾಷ್ಟ್ರಕ್ಕೆ ಹಿತವಲ್ಲ

ನಿರುದ್ಯೋಗದ ಸಮಸ್ಯೆ ಭಾರತದಲ್ಲಿ ಬೃಹದಾಕಾರವಾಗಿ ದಿನದಿನಕ್ಕೂ ಬೆಳೆದು ವಿಷಮ ಪರಿಸ್ಥಿತಿಯನ್ನು ಮುಟ್ಟುತ್ತಿದೆಯಷ್ಟೆ! ನಮ್ಮ ದೇಶದಲ್ಲಿ ಜನಬಲವು ಹೇರಳವಾಗಿದೆ; ಆದರೆ ಅದನ್ನು ಸಮುಚಿತವಾದ ರೀತಿಯಲ್ಲಿ ಉಪಯೋಗಿಸುವ ಅವಕಾಶಗಳು ಸಾಕಷ್ಟು ಇರುವುದಿಲ್ಲ. ಪರಿಣಾಮದಲ್ಲಿ ನಿರುದ್ಯೋಗದ ಭೂತ ಕುಣಿಯಲು ಆಸ್ಪದವುಂಟಾಗಿದೆಯೆಂದು ಹಲವರ ಅಭಿಪ್ರಾಯ. ವಸ್ತುಸ್ಥಿತಿಯ ಈ ಹಿನ್ನೆಲೆಯನ್ನು ಇಟ್ಟುಕೊಂಡು ನೋಡಿದರೆ, ನಮ್ಮಲ್ಲಿ ಒಂದು ಅಭ್ಯಾಸವೇ ಆಗಿ ಹೋಗಿರುವ ಇನ್ನೂ ಬಾಲ್ಯಾವಸ್ಥೆ ದಾಟದ ಹುಡುಗ ಹುಡುಗಿಯರು ಶ್ರಮಪೂರ್ಣವಾದ ಕಾರ್ಯಗಳಲ್ಲಿ ನಿರತರಾಗಿರುವುದು ಆಶ್ಚರ್ಯವನ್ನು ಉಂಟು ಮಾಡುತ್ತಿದೆ. ಎಳೆವಯಸ್ಸಿನ ಬಾಲಕ-ಬಾಲಕಿಯರು ಸಹ ಏನಾದರೊಂದು ಉದ್ಯೋಗವನ್ನು ಅವಲಂಬಿಸಿಕೊಂಡು ತಮ್ಮ ಹೊಟ್ಟೆಪಾಡಿನ ವ್ಯವಸ್ಥೆ ಮಾಡಿಕೊಳ್ಳುತ್ತಿರುವುದೂ ಅದೇ ಸಮಯದಲ್ಲಿ ಹೃಷ್ಟಪುಷ್ಟರಾದ ವಯಸ್ಕ ನಾಗರಿಕರು ಉದ್ಯೋಗವಿಲ್ಲದೆ ಅಲೆಯುತ್ತಿರುವುದೂ ಚೋದ್ಯದ ಪ್ರಸಂಗವು.

ಸಾಮಾಜಿಕ ದುರಂತ

ಏಳೆಂಟು ವರ್ಷ ವಯಸ್ಸಾದ ಮಕ್ಕಳನ್ನು ಸ್ವತಂತ್ರವಾಗಿ ಅಥವಾ ಹಿರಿಯರೊಂದಿಗೆ ಕೂಲಿ ದುಡಿಯುತ್ತಿರುವುದನ್ನು ನಾವು ಎಲ್ಲಿಯೂ ಕಾಣಬಲ್ಲೆವು. ಕಾಯಿದೆ ಕಾನೂನುಗಳು ಬಾಲಕ ಬಾಲಕಿಯರಿಂದ ಶ್ರಮಮಾಡಿಸುವುದನ್ನು ನಿಷೇಧಿಸುವ ಕಡೆಗಳಲ್ಲಿಯೂ ಹುಡುಗ-ಹುಡುಗಿಯರನ್ನು ಅಪರೋಕ್ಷರೀತಿಯಿಂದ ಹಾಗೂ ಗುಟ್ಟಿನಲ್ಲಿ ದುಡಿಸುತ್ತಿರುವುದು ಸಾಮಾನ್ಯವಾದ ಅನುಭವ. ಕೆಲವು ವಿಶಿಷ್ಟ ಕೆಲಸಗಳನ್ನು ಹುಡುಗರೇ ವಯಸ್ಕರಿಗಿಂತ ಹೆಚ್ಚು ಉತ್ಸಾಹ ಹಾಗೂ ಕಾರ್ಯಕ್ಷಮತೆಯೊಂದಿಗೆ ಮಾಡಬಲ್ಲರೆಂಬ ರಹಸ್ಯವನ್ನು ಉತ್ಪಾದಕರು ಕಂಡುಹಿಡಿದಂತಿದೆ. ಈ ಕಾರಣಕ್ಕಾಗಿಯಲ್ಲದಿದ್ದರೂ ಸ್ವಾಭಾವಿಕವಾಗಿಯೇ ಸ್ಫೂರ್ತಿ ಮತ್ತು ಹುಮ್ಮಸ್ಸು ತುಂಬಿರುವ ಹುಡುಗರನ್ನು ವಯಸ್ಕರ ಜೊತೆಗೆ ಕೆಲಸದಲ್ಲಿ ಸ್ಪರ್ಧೆಗೆ ಬಿಡುವುದು ಒಂದು ಚಟವಾಗಿ ಪರಿಣಮಿಸಿದೆ. ವಯಸ್ಕರಿಗೆ ನೀಡುವಷ್ಟು ಕೂಲಿಯನ್ನು ಹುಡುಗ ಕೆಲಸಗಾರರಿಗೆ ಕೊಡದಿರುವಾಗಲೂ ಕೆಲಸದ ಮೊತ್ತದಲ್ಲಿ ಅವರು ಹಿಂದುಳಿಯದಿದ್ದರೆ, ಅವರಿಂದ ದುಡಿಸುವಾತನಿಗೆ ಆರ್ಥಿಕ ಪ್ರಯೋಜನ ದೊರೆಯುತ್ತದೆ. ಕಾರಖಾನೆ ಮುಂತಾದವುಗಳನ್ನು ಬಿಟ್ಟರೆ, ತಮ್ಮ ಸ್ವಂತ ಮನೆಯಲ್ಲಿಯೇ ಮಕ್ಕಳು ಹಿರಿಯರ ಕೆಲಸದಲ್ಲಿ ನೆರವಾಗುತ್ತಾ ಶ್ರಮ ಕೈಗೊಳ್ಳುವುದುಂಟು. ಇಲ್ಲಿ ಕುಟುಂಬದ ಕೆಲಸದ ಭಾರ ತಗ್ಗಿಸುವ ಉದ್ದೇಶವಿದೆ. ಎಷ್ಟೋ ಹುಡುಗರು ಬಡತನದಿಂದ ಪೀಡಿತರಾಗಿ, ಇನ್ನೂ ವಿದ್ಯಾಬುದ್ಧಿಗಳನ್ನು ಕಲಿತುಕೊಂಡು ವಿವೇಕ ಸಂಪಾದಿಸುವುದಕ್ಕೆ ಮುಂಚೆಯೇ ಏನಾದರೊಂದು ನೌಕರಿಯನ್ನು ಹುಡುಕಬೇಕಾಗಿ ಬರುತ್ತದೆ. ನಮ್ಮ ಸಾಮಾಜಿಕ ವ್ಯವಸ್ಥೆಯ ಅಧಃಪತನವೇ ಈ ದುರಂತಕ್ಕೆ ಹೇತು. ಬಡತನದಿಂದ ಜರ್ಜರಿತವಾದ ಈ ಮಕ್ಕಳಿಗೆ ವ್ಯಕ್ತಿತ್ವದ ವಿಕಸನಕ್ಕೆ ಹೇತುವಾಗಬಲ್ಲ ವಿದ್ಯೆ ಮತ್ತು ಸಂಸ್ಕಾರಗಳು ದೊರೆಯದೆ, ಅವರ ಜೀವನವು ಶುಷ್ಕವೂ ಭಯಾನಕವೂ ಕೆಲವೊಮ್ಮೆ ಘಾತಕಮಯವೂ ಆಗಿ ಸಮಾಜದ ಪ್ರಗತಿಗೆ ಪ್ರಬಲವಾದ ಆತಂಕವನ್ನೊಡ್ಡುವುದು. ಬಡತನದ ದಾರುಣ ಯಾತನೆಯನ್ನು ಹುಡುಗರಿಂದ ಶ್ರಮ ತೆಗೆದುಕೊಳ್ಳುವ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು, ನಮ್ಮ ಸಮಾಜದ ಭ್ರಷ್ಟಾಚಾರಗಳಲ್ಲಿ ಅತ್ಯಂತ ಪ್ರಾಮುಖ್ಯವಾದದ್ದು. ಇದನ್ನು ಪ್ರತಿಬಂಧಿಸಲು ಸರಕಾರವು ಸಾಮಾನ್ಯ ಕಾಯಿದೆ ಕ್ರಮಗಳನ್ನು ಜಾರಿಗೆ ತಂದಿದ್ದರೂ-ಅಷ್ಟರಿಂದಲೇ ಕೆಲಸವಾಗುವ ಭರವಸೆ ಇರುವುದಿಲ್ಲ.

ಹೊಟ್ಟೆಯ ಪ್ರಶ್ನೆ

ಮುಂದಿನ ಜನಾಂಗವಾಗಿ ಬೆಳೆದು ಬಾಳುವುದಕ್ಕೆ ಯೋಗ್ಯ ತರಬೇತಿ ದೊರೆಯಬೇಕಾದ ಬಾಲ್ಯ ಕಾಲದಲ್ಲಿ ಶ್ರಮಪೂರ್ಣವಾದ ಕೆಲಸಗಳನ್ನು ಕೈಕೊಂಡು, ಹೊಟ್ಟೆಯ ಪ್ರಶ್ನೆಯನ್ನು ಬಗೆಹರಿಸುವ ಹೊಣೆಗಾರಿಕೆಯತ್ತ ಗಮನ ಹರಿಸಬೇಕಾಗಿ ಬಂದಿರುವುದು ನಮ್ಮ ಹುಡುಗರ ಮಹಾ ದೌರ್ಭಾಗ್ಯ. ನಮ್ಮ ದೇಶದಲ್ಲಿ ಪ್ರತಿಯೊಂದರ ಉತ್ಪನ್ನವು ಬಹಳ ಕಡಿಮೆಯಾಗಿರುವುದರಿಂದ ಮಕ್ಕಳಾದರೆ ಮಕ್ಕಳು, ದುಡಿದು ಸಂಪಾದಿಸುತ್ತವಾದರೆ, ಅದು ಪರಮ ಸೌಭಾಗ್ಯವೆಂದೇ ಹೆತ್ತವರು ತಿಳಿದುಕೊಂಡಿರುವರು. ಆದುದರಿಂದಲೇ ಶಾಲೆಗೆ ಕಳಿಸಿ, ಓದು ಬರೆಹ ಕಲಿಸಿ ಮಕ್ಕಳನ್ನು ಬುದ್ಧಿವಂತರನ್ನಾಗಿ ಜವಾಬ್ದಾರಿತಿಳಿದ ನಾಗರಿಕರನ್ನಾಗಿ ರೂಪಿಸುವ ಬದಲು ಹೊಟ್ಟೆಯ ಪ್ರಶ್ನೆ ಬಿಡಿಸುವ ಸಾಧನವಾಗಿ ಮಕ್ಕಳನ್ನು ಕಾಣುವುದರಲ್ಲಿ ಹೆತ್ತವರು ಸಂತೋಷ ಪಡುವರು. ಈ ಸಂತೋಷದಿಂದ ರಾಷ್ಟ್ರದ ಸಮಷ್ಟಿ ಹಿತಕ್ಕೆ ಗಂಡಾಂತರವುಂಟೆಂದು ಆತಂಕಿಸುವವರು, ಉದರಪೋಷಣೆಯ ಸುಲಭ ಮಾರ್ಗವನ್ನು ತೋರಿಸಿಕೊಡಬೇಕಾಗುವುದು. ಕೃಷಿಯಲ್ಲಾಗಲೀ ಕೈಗಾರಿಕೆಯಲ್ಲಾಗಲೀ, ತೋಟಗಳಲ್ಲಾಗಲೀ, ಗೃಹೋದ್ಯಮಗಳಲ್ಲಾಗಲೀ ಮಕ್ಕಳು ನೀಡುವ ಸಹಕಾರ ಮತ್ತು ಮಾಡುವ ಕೆಲಸಗಳಿಂದ ಕುಟುಂಬದ ಸಂಪಾದನೆ ಹೆಚ್ಚಲು ಸಾಧ್ಯವಾಗುತ್ತದೆ. ಮನೆಯಲ್ಲಿ ಕುಟುಂಬಕ್ಕೆ ಹಿತಕರವಾಗುವ ರೀತಿ ಕಳೆಯುವ ಈ ಸಮಯವನ್ನು ಶಾಲೆಗೆ ಹೋಗಿ ಅಲ್ಲಿ ಬೆಂಚಿನ ಮೇಲೆ ಕುಳಿತುಕೊಳ್ಳಲು ಉಪಯೋಗಿಸಿದರೆ, ಕುಟುಂಬವು ಉಪವಾಸದಿಂದ ಒಳಲುವ ಪ್ರಸಂಗ ಒದಗುತ್ತದೆ. ಕನಿಷ್ಠ ಪಕ್ಷ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ಲೇಟು ಪುಸ್ತಕಾದಿಗಳನ್ನು ಒದಗಿಸುವ ಹೆಚ್ಚಿನ ಖರ್ಚನ್ನಾದರೂ ಬಡ ಹೆತ್ತವರು ವಹಿಸಿಕೊಳ್ಳಬೇಕಾಗುತ್ತದೆ. ಈ ಹೆಚ್ಚಿನ ವೆಚ್ಚವನ್ನು ಹೊತ್ತು ನಿರ್ವಹಿಸುವ ಶಕ್ತಿ ಸಾಮಾನ್ಯವಾಗಿ ನಮ್ಮ ಜನಕ್ಕೆ ಇಲ್ಲ—ತತ್ಕಾಲೀನ ಪರಿಣಾಮವುಂಟುಮಾಡುವ ಈ ಕಷ್ಟದ ಮುಂದೆ, ರಾಷ್ಟ್ರವು ಕಾಲಾನುಕಾಲದಲ್ಲಿ ಈ ಪದ್ಧತಿಯಿಂದೇ ಕೇಡಿಗೆ ಗುರಿಯಾಗುವುದೆನ್ನುವ ಎಚ್ಚರಿಕೆಯನ್ನು ಗಮನಿಸುವವರು ಕಡಿಮೆ. ರಾಷ್ಟ್ರಕ್ಕೆ ಅಂಥ ಹೆದರಿಕೆ ಇದ್ದರೆ-ಅದು ಸ್ವತಃ ಹೆತ್ತವರ ಕಷ್ಟ ಹೆಚ್ಚಾಗದ ರೀತಿಯಲ್ಲಿ, ತನ್ನ ಉದ್ದೇಶ ಸಾಧನೆಯ ಹೆಜ್ಜೆಗಳನ್ನಿಡಬೇಕು. ಮಕ್ಕಳಿಗೆ ಧರ್ಮಾರ್ಥವಾದ ಶಿಕ್ಷಣ ನೀಡುವುದು ಇಂಥದೊಂದು ಕ್ರಮ. ನಮ್ಮ ರಾಜ್ಯಘಟನೆ ಈ ತತ್ವವನ್ನು ಅಂಗೀಕರಿಸಿದೆ; ಆದರೆ ಹಣಾಭಾವದ ಮೂಲಕ ಇದನ್ನು ಜಾರಿಗೆ ತರುವುದು ಇನ್ನೂ ಹಿಂದುಳಿದಿದೆ. ಇದು ಬೇಗನೇ ಜಾರಿಗೆ ಬಂದರೂ ಈಗಿರುವಂತೆ ಇಡೀ ದಿನ ಶಾಲೆಯಲ್ಲಿ ಕುಳಿತು ಪಾಠ ಕಲಿಯಲು ಹುಡುಗರು ಸಮಯ ಉಪಯೋಗಿಸಿದರೆ, ಅಷ್ಟು ಪ್ರಯೋಜನವನ್ನು ಹೆತ್ತವರು ಪಡೆಯಲಿಕ್ಕಿಲ್ಲ. ಆದಕಾರಣ ಮಧ್ಯಂತರದ ಅವಧಿಯಲ್ಲಿ ಮದ್ರಾಸು ಸರಕಾರ ಜಾರಿಗೆ ತಂದಿರುವ ಸುಧಾರಿತ ಪ್ರಾಥಮಿಕ ವಿದ್ಯಾಭ್ಯಾಸದ ಪದ್ಧತಿಯಂಥ ಕ್ರಮವು ತುಂಬ ಪ್ರಯೋಜನಕಾರಿಯಾಗಬಲ್ಲುದು. ಇದರಂತೆ ಅರ್ಧ ದಿನ ಮಾತ್ರ ಶಾಲೆಯಲ್ಲಿ ಶಿಕ್ಷಣ ದೊರೆತು, ಉಳಿದರ್ಧದಿನವನ್ನು ಹೆತ್ತವರೊಂದಿಗೆ ಹುಡುಗ ಹುಡುಗಿಯರು ಕಳೆಯಬಲ್ಲರು. ಇದರಿಂದ ಮನೆಗೆಲಸವಿದೆಯೆಂಬ ಕಾರಣಕ್ಕಾಗಿ ವಿದ್ಯೆ ಸಂಪಾದಿಸುವ ಅವಕಾಶ ಏನೇನೂ ಇಲ್ಲದ ಹುಡುಗರು, ಅರ್ಧ ದಿನವಾದರೂ ಶಾಲೆಗೆ ಬರುವ ಅನುಕೂಲತೆ ದೊರೆತಿದೆ. ಮಾತ್ರವಲ್ಲ, ತಮ್ಮ ಹುಡುಗರು ಶಾಲಾವಿದ್ಯೆಯಿಂದ ತೀರಾ ನಿಷ್ಪ್ರಯೋಜಕರಾಗಿ ಪರಿಣಮಿಸದೆ, ತಮ್ಮ ಕೆಲಸದಲ್ಲಿ ಸಹ ನೆರವಾಗುತ್ತಿರುವರೆಂಬ ಸಮಾಧಾನವೂ ಹೆತ್ತವರ ಪಾಲಿಗಿರುವುದು.

ಕಾನೂನು ಸಾಲದು

ಮೊದಲೇ ಸೂಚಿಸಿದಂತೆ- ಇದು ಮಧ್ಯಂತರದ ಅವಧಿಯಲ್ಲಿ ಕೈಕೊಳ್ಳಲು ಯೋಗ್ಯವಾದ ಕ್ರಮ. ನಮ್ಮ ನಿಜೋದ್ದೇಶವು ಅಲ್ಪ ವಯಿಗಳ ದುಡಿಮೆಯನ್ನು ಪ್ರತಿಬಂಧಿಸುವುದೇ ಆಗಿರುವುದೆಂಬುದನ್ನು ಯಾವ ಕಾಲಕ್ಕೂ ಮರೆಯಲಾಗದು- ರಾಜ್ಯಘಟನೆಯಲ್ಲಿ "ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗ ಹುಡುಗಿಯರನ್ನು ಗಂಡಾಂತರಕಾರಿಯಾದ ಕೆಲಸಗಳಲ್ಲಿ ಕಾರಖಾನೆಯಲ್ಲಾಗಲೀ, ತೋಟಗಳಲ್ಲಾಗಲೀ. ಗನಿಗಳಲ್ಲಾಗಲೀ ಕೆಲಸಕ್ಕೆ ಹಚ್ಚುವುದು ಸಲ್ಲದು" ಎಂದು ಹೇಳಿದೆ. ಮಾತ್ರವಲ್ಲ ಸರಕಾರವು ತನ್ನೆಲ್ಲ ಶಕ್ತಿಸ್ರೋತಗಳನ್ನು ಉಪಯೋಗಿಸಿ, ಆರ್ಥಿಕ ಕಾರಣಗಳಿಗಾಗಿ ಹುಡುಗರು ತಮ್ಮ ವಯಸ್ಸಿಗೆ ಹೇಳಿಸದ ಕೆಲಸಗಳಲ್ಲಿ ಪ್ರವೃತ್ತರಾಗುವುದನ್ನು ತಡೆಗಟ್ಟಲು ಪ್ರಯತ್ನಿಸುವುದೆಂದೂ ಬಾಲ್ಯಾವಸ್ಥೆಯ ದುರುಪಯೋಗವಾಗದಂತೆ ಜಾಗ್ರತೆ ವಹಿಸುವುದೆಂದೂ ನಿರ್ದೇಶಕತತ್ವ ಭರವಸೆಕೊಡುತ್ತದೆ. ಈ ಭರವಸೆ ಕಾರ್ಯರೂಪಕ್ಕೆ ಎಷ್ಟು ಬೇಗನೆ ಇಳಿಯಿ

(೧೨ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯು ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬರುವ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಹೊಸ ಭರವಸೆ ಮೂಡಿದೆ

ಯುವಜನಾಂಗದ ನಿರ್ಮಾಣ ಕಾರ್ಯವೇ ಅದರ ಆಧಾರ

ಚುನಾವಣೆಗಳ ಕಾಲದಲ್ಲಿ ಜನರಿಗೆ ರಾಜಕೀಯ ಪಕ್ಷಗಳ ಬಗೆಗಿದ್ದ ಮಮತೆ ಮತ್ತು ಆಸ್ಥೆಗಳು ಇಂದು ಉಳಿದಂತಿಲ್ಲ— ಅಂದಿನ ಚುನಾವಣಾ ಘೋಷಣೆಯಲ್ಲಿ ಹೇಳಿದುದನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಇಳಿಸಲು ಗೆದ್ದ ಪಕ್ಷಗಳಿಗೆ ಸಾಧ್ಯವಾಗಿದೆ ಎಂಬಮಟ್ಟಿಗೆ ಮಾತ್ರ ಇಂದು ಹಿಂದಿನ ಆತುರ ಉಳಿದಿದೆ. ರಾಜಕಾರಣದ ಚೆಂಡೆಸತಕ್ಕಿಂತಲೂ ಇಂದಿನ ಜನತೆ ರಾಷ್ಟ್ರ ಕಲ್ಯಾಣದ ಕೆಲಸ ನೋಡಲು, ಬಹುಶಃ ಮಾಡಲೂ ಸಹ, ಉತ್ಸುಕವಾಗಿದೆ. ಕಾಂಗ್ರೆಸು ಇಂದು ಸರಕಾರ ನಡೆಸ್ವುವ ಜವಾಬ್ದಾರಿಯನ್ನು ಹೊತ್ತಿರುವುದರಿಂದ, ಸರಕಾರೀ ಮಟ್ಟದಲ್ಲಿ ನಡೆಯುವ ಚಟುವಟಿಕೆಗಳು ಹಾಗೂ ಸರಕಾರ ಅಥವಾ ರಾಷ್ಟ್ರೀಯ ಕಾಂಗ್ರೆಸ್ಸಿನ ವರ್ಚಸ್ಸಿನಿಂದಲೋ ಅಥವಾ ಅವುಗಳ ಧ್ಯೇಯಾದರ್ಶಗಳ ಆಕರ್ಷಣೆಯೋ ಕಾರಣವಾಗಿಯೋ ನೆರವೇರುವ ವಿಧಾಯಕ ಕಾರ್ಯಗಳು ರೂಪುಗೊಳ್ಳುತ್ತಿರುವ ಬಗ್ಗೆಯೇ ಜನರಿಗಿಂದು ಮಾಹಿತಿ ಬೇಕು. ಜನಜೀವನವನ್ನು ಸುಖಮಯವಾಗಿಸಲು ಪ್ರಯತ್ನ ನಡೆಸುವೆವೆಂದು ನೀಡಿದ್ದ ವಿಪರವಾದ ಆಶ್ವಾಸನೆಗಳಲ್ಲಿ ಕಾರ್ಯತಃ ತೋರಿದವುಗಳೆಷ್ಟು ಎಂಬುದನ್ನು ಬರುವ ಚುನಾವಣೆಯೊಳಗೆ ಲೆಕ್ಕಹಾಕಿಟ್ಟುಕೊಂಡು, ಒಂದು ನಿರ್ಣಯಕ್ಕೆ ಬರಲು ಮತದಾರರು ಇಚ್ಛಿಸುವುದು ಅಸ್ವಾಭಾವಿಕವೇನಲ್ಲ.

ಶ್ರಮದಾನ ತತ್ವ

ಈ ದೃಷ್ಟಿಯಿಂದ ನೋಡಿದರೆ—ರಾಷ್ಟ್ರೀಯ ಪುನಾರಚನೆಯ ಪ್ರಯತ್ನಗಳು ಬಹುಮುಖವಾಗಿ ನಡೆಯುತ್ತಿರುವುದು ನಮ್ಮ ಜನಕ್ಕೆ ಆತ್ಮವಿಶ್ವಾಸವನ್ನೂ ಸರಕಾರದ ಚಟುವಟಿಕೆಗಳ ಕುರಿತು ಅಭಿಮಾನವನ್ನೂ ಮೂಡಿಸಬಹುದು. ಆದರೆ ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿದಂತೆ, ಜನತೆಯು ಹಿತಶ್ರೇಯಸ್ಕರ ಸಂಕಾರ ಪ್ರಯತ್ನಿಸುವಾಗಲೆಲ್ಲ ಅಷ್ಟೇ ಪ್ರಮಾಣದಲ್ಲಿ ಏಕೆ, ಅದಕ್ಕೂ ಮಿಗಿಲಾಗಿ ಜನತೆಯಿಂದ ಉದಾರವಾದ ನೆರವೂ ದೊರೆಯುವುದವಶ್ಯ. ನಮ್ಮ ಜನ ಇಂಥ ಸಹಾಯವನ್ನು ನೀಡುವುದರಲ್ಲಿ ಹಿಂದುಳಿದಿಲ್ಲವೆಂಬುದು ಸ್ವತಃ ಸರಕಾರಕ್ಕೂ ಮನವರಿಕೆಯಾಗಿರುತ್ತದೆ. ಮೊನ್ನೆ ತಾನೆ ಪ್ರಕಟಪಡಿಸಿದ ಅಂಕೆ ಸಂಖ್ಯೆಗಳ ಮೇಲಿಂದ ಸರಕಾರವು ಹಾಕಿದಷ್ಟು ಹಣವನ್ನು ಜನತೆಯೂ ನೀಡಿರುವುದೆಂಬುದು ಸಮಾಧಾನಕರ. ಜನರು ಶ್ರಮದಾನದ ಮೂಲಕ ನೀಡಿದ ನೆರವನ್ನು ಹಣಕಾಸಿನ ಮಾನದಂಡದಿಂದ ಅಳೆದರೆ ಅದು ೪೮ ಲಕ್ಷ ರೂಪಾಯಿಗೂ ಹೆಚ್ಚಾಗುತ್ತದೆನ್ನುವುದು ಇನ್ನೂ ಹೆಚ್ಚು ಸಂತೋಷಪ್ರದವಾಗಿರುತ್ತದೆ.

ನಿಜ ಹೇಳಬೇಕೆಂದರೆ ಈ ಶ್ರಮದಾನ ತತ್ವವೇ ಒದಗಿಬಂದ ವಾತಾವರಣಕ್ಕೆ ತುಂಬ ಹೊಂದಿಕೊಳ್ಳುವ ವಿಚಾರವೆನ್ನಬಹುದು. ಶಾಂತಿ ಭದ್ರತೆಗಳ ಹೊಣೆಯಷ್ಟೇ ಇದ್ದ ಹಿಂದಿನ ಪೋಲೀಸು ಸರಕಾರದ ಸ್ಥಾನದಲ್ಲಿ ಜನತೆಯ ಸುಖಶಾಂತಿ ಮತ್ತು ಹಿತಗಳೇ ಧ್ಯೇಯವಾಗುಳ್ಳ ಜನತಾ ಸರಕಾರ ಕೆಲಸ ಮಾಡುವಾಗ ಇಂಥ ಪರಿವರ್ತನೆ ಅನಿವಾರ್ಯವೆಂಬಂತೆ ತನಗೆ ತಾನೇ ರೂಪುಗೊಳ್ಳುವುದು ಇಷ್ಟವಾಗಿರುತ್ತದೆ. ಸರಕಾರದ ಮೇಲಿನ ನಮ್ಮ ಅವಲಂಬನಾ ಪ್ರಮಾಣ ತಗ್ಗುವುದಕ್ಕೆ ಜನತಾ ಚಟುವಟಿಕೆ ಮಹದವಕಾಶವನ್ನು ನೀಡುತ್ತದೆ; ಮತ್ತು ಸಂಘಟಿತ ಮನೋವೃತ್ತಿಯನ್ನೂ ಹತ್ತು ಜನರ ಸುಖಕ್ಕೋಸ್ಕರ ಕೆಲಸ ಮಾಡುವ ಹುಮ್ಮಸ್ಸನ್ನೂ ನಮಗೆ ಇಂದಿನ ವಾತಾವರಣ ಕೊಡುತ್ತದೆ.

ಹೊಸ ವಾತಾವರಣ

ಇದರಿಂದ ಸ್ಫೂರ್ತಿ ಪಡೆದೆಂಬಂತೆ ಇಂದು ಎಲ್ಲೆಲ್ಲಿಯೂ ನಮ್ಮ ಯುವ ಜನಾಂಗ ಜನಹಿತದ ಚಟುವಟಿಕೆಗಳಲ್ಲಿ ಕಾರ್ಯರತವಾಗಿರುವುದನ್ನು ಕಾಣಬಹುದು— ಈಚೆಗೆ ಬಂದ ಸುದ್ದಿಯೊಂದರಂತೆ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹೋಗುವ ರಸ್ತೆಯ ನಿರ್ಮಾಣ ಕಾರ್ಯದಲ್ಲಿ ಕರ್ನಾಟಕ ಕಾಲೇಜ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿ, ಆ ಕೆಲಸ ತುಂಬ ಉತ್ಸಾಹದಿಂದ ಸಾಗುತ್ತಿದೆ. ಈ ವಿದ್ಯಾರ್ಥಿಗಳು ಪ್ರಾರಂಭದ ದಿನ ಪ್ರಿನ್ಸಿಪಾಲ್ ಗೋಕಾಕರ ಹಿರಿತನದಲ್ಲಿ ಗುದ್ದಲಿ ಸಲಿಕೆ ಹಿಡಿದುಕೊಂಡು ಕಾಲೇಜದಿಂದ ವಿಶ್ವವಿದ್ಯಾಲಯ ಕಟ್ಟಡಕ್ಕೆ ಮೆರವಣಿಗೆಯಲ್ಲಿ ಬಂದರು. ಅಲ್ಲಿ ಉಪಕುಲಪತಿಗಳಾದ ಶ್ರೀ ಹುಲಕೋಟಿಯವರ ಹಸ್ತದಿಂದ ರಸ್ತೆ ನಿರ್ಮಾಣ ಕಾರ್ಯದ ಪ್ರಾರಂಭೋತ್ಸವ ನೆರವೇರಿತು. ೩೦೦ ವಿದ್ಯಾರ್ಥಿಗಳು ಹಾಗೂ ೩೦ ಶಿಕ್ಷಕರು ತುಂಬ ಉತ್ಸಾಹದಿಂದ ಕಾರ್ಯ ಪ್ರವೃತ್ತರಾದರು. ಒಂದು ಮೈಲು ಉದ್ದದ ಮಾರ್ಗರಚನೆಯಾಗಬೇಕಿದ್ದು ಅಕ್ಟೋಬರ ೫ನೇ ತಾರೀಕಿನೊಳಗೆ ಕೆಲಸ ಪೂರ್ತಿಯಾಗಿ ಮುಗಿಯುವ ನಿರೀಕ್ಷೆ ಇದೆ. ಈ ಸಲದ ಗದವೀದಾನ ಸಮಾರಂಭದ ಅತಿಥಿಗಳಾಗಿ ಬರುವ ಡಾ. ರಾಧಾಕೃಷ್ಣನ್ನರನ್ನು ಇದೇ ದಾರಿಯಿಂದ ಕರೆದೊಯ್ಯುವ ಇಚ್ಛೆಯೂ ಇದೆ.

ಈ ಒಗೆಯ ಸುದ್ದಿಗಳು ದೇಶದ ಮೂಲೆ ಮೂಲೆಯಿಂದೂ ದಿನಾಲೂ ಹೆಚ್ಚು ಹೆಚ್ಚಾಗಿ ಬರುತ್ತವೆ. ಗ್ರಾಮಸ್ಥರು, ವಿದ್ಯಾರ್ಥಿಗಳು ಅಭಿವೃದ್ಧಿ ಯೋಜನೆಗಳಲ್ಲಿ ಹಾಗೂ ಸ್ವಯಂ ಪ್ರೇರಣೆಯಿಂದ ನೀಡುವ ಶ್ರಮದಾನದಲ್ಲಿ ಆನಂದವನ್ನು ಕಾಣಹತ್ತಿದ್ದಾರೆಂಬುದನ್ನು ಈ ವಾರ್ತೆಗಳು ಪುಷ್ಟೀಕರಿಸುತ್ತವೆ. ನಮ್ಮ ಜಿಲ್ಲೆಯಲ್ಲಿ ಮಂಗ್ಳೂರು ಸ್ಟೆಂಟ್ ಎಲೋಶಿಯಸ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ರಜಾ ಸಮಯದಲ್ಲಿ ಮೂಲ್ಕಿಯ ಸಮೀಪ ಜನಹಿತದ ಚಟುವಟಿಕೆಗಳಲ್ಲಿ ತೊಡಗಿದ್ದರು. ನಮ್ಮ ಉಡುಪಿಯಲ್ಲಿಯೇ ಈಗ ಸಲೀಸಾಗಿ ಸಿಟಿ ಬಸ್ಸು ಓಡಾಡುತ್ತಿರುವ ಚಿಟ್ಪಾಡಿ–ಅಲೆವೂರು ಮಾರ್ಗದ ಹೊಸ ರೂಪವನ್ನು ಅಲ್ಲಿಯ ನಿವಾಸಿಗಳೂ ಯುವಕ ಕಾಂಗ್ರೆಸ್ಸಿನ ಸದಸ್ಯರೂ ಒಟ್ಟಿಗೆ ದುಡಿದು ಕೊಟ್ಟರು. ಸರಕಾರದ ನೆರವಿಗಿಂತಲೂ ಜನತೆಯ ಇಚ್ಛೆಗೇ ಹೆಚ್ಚು ಪ್ರಾಧಾನ್ಯ ಲಭಿಸುವುದರಲ್ಲಿ ಔಚಿತ್ಯವಿದೆ.

ಸಹಕಾರ ಭಾವ

ಸರಕಾರ ತನ್ನ ಬಳಿ ಇರುವ ಸಾಧನ ಸ್ರೋತವನ್ನೆಲ್ಲ ಬಡತನದ ವಿರುದ್ಧ ಸಮರ ಹೂಡುವುದರಲ್ಲಿ ಉಪಯೋಗಿಸಿಕೊಳ್ಳಲು ಹಿಂಜರಿದಂತೆ ಕಾಣುವುದಿಲ್ಲ. ನಿದರ್ಶನ ರೂಪದಲ್ಲಿ "ನೇಶನಲ್ ಕಾಡೆಟ್ ಕೋರ್" ಎಂದು ಕರೆಯುವ ರಣವೀರರ ಸಮುದಾಯ ಕೈಕೊಂಡ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು. ಇಂದು ಎಲ್ಲಿ ನೋಡಿದರಲ್ಲಿ, ಜನರು ಜಾತಿಮತ ಭೇದವನ್ನು ತೊರೆದು ಒಗ್ಗಟ್ಟಿನ ಮಹತ್ವವನ್ನು ಅರಿತು, ಪರಸ್ಪರ ಭುಜಕ್ಕೆ ಭುಜ ಕೊಟ್ಟು ಶಿಸ್ತಿನಿಂದ ಹಾಗೂ ಸಂಯಮದಿಂದ ವಿಧಾಯಕ ಕೆಲಸಗಳಲ್ಲಿ ನಿರತರಾಗಿದ್ದಾರೆ—ಶ್ರಮದಾನವನ್ನು ಗೌರವವೆಂದು ಬಗೆದ ಎಲ್ಲರೂ ಮಾರ್ಗ ರಚನೆ, ಗೃಹನಿರ್ಮಾಣ, ಕಾಲುವೆ ತೋಡುವುದು, ಕೆರೆಯ ಮಣ್ಣೆತ್ತುವುದು, ಅಕ್ಷರಾಭ್ಯಾಸದ ತರಗತಿಗಳನ್ನು ನಡೆಸುವುದು, ಬಡವರಿಗೂ ರೋಗಿಗಳಿಗೂ ವೈದ್ಯಕೀಯ ನೆರವು ಕೊಡುವುದು ಮುಂತಾದವುಗಳಲ್ಲಿ ಉತ್ಸಾಹದರ್ಶಿಸುತ್ತಾರೆ. ಪ್ರಾದೇಶಿಕ ಸೈನ್ಯ ವಿಭಾಗವೂ ಇಂಥದರಲ್ಲಿ ಭಾಗವಹಿಸಿದೆ. ಇದೇ ಮೇ ತಿಂಗಳಲ್ಲಿ ದೆಹಲಿಯ ಸಮೀಪ ಒಂದು ತಿಂಗಳ ಕಾಲ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಶಾಲಾ ಕಾಲೇಜುಗಳಿಂದ ಬಂದ ೩೦೦೦ ವಿದ್ಯಾರ್ಥಿಗಳು ಇವರಲ್ಲಿ ಭಾಗವಹಿಸಿದರು. ಮಣ್ಣು ತುಂಬಿ ಮುಚ್ಚಿಹೋಗುತಿದ್ದ ೪೪ ಮೈಲು ಉದ್ದದ ಕಾಲುವೆಯೊಂದನ್ನು ಅವರು ಜೀರ್ಣೋದ್ಧಾರ ಮಾಡಿದರು. ಪ್ರಧಾನಿ ನೆಹರೂ ಈ ಕೆಲಸವನ್ನು ಪ್ರಶಂಸಿಸುತ್ತಾ ಜನಕ್ಕೆ ಹೊಸ ದೃಷ್ಟಿ ಕೊಡುವಲ್ಲಿ ಇಂಥ ಕೆಲಸಗಳು ಮಹತ್ವಪೂರ್ಣವಾದವೆಂದೂ ಬಡತನದ ವಿರುದ್ಧ ಹೋರಾಡುವ ರಣವೀರರೇ ಸ್ವಯಂಸೇವಕರೆಂದೂ ಹೇಳಿದರು.

ಅದೇ ಸಮಯದಲ್ಲಿ ದಕ್ಷಿಣದ ಘಟಪ್ರಭೆಯಲ್ಲಿ ಮುಂಬಯಿ ಹಾಗೂ ಸೌರಾಷ್ಟ್ರದಿಂದ ಬಂದ ೭೦೦ ವಿದ್ಯಾರ್ಥಿಗಳು ಗ್ರಾಮಾಭ್ಯುದಯ ಕಾರ್ಯದಲ್ಲಿ ನೆರವಿತ್ತು ಎರಡು ಕೋಣೆಗಳಿರುವ ೨೭ ವಸತಿಗೃಹಗಳನ್ನು ನಿರ್ಮಿಸಿದರು. ಮೂರು ಮೈಲು ಉದ್ದದ ರಸ್ತೆ ರಚಿಸಿದರು. ಓದುಬರೆಹ ಕಲಿಸುವ ತರಗತಿಗಳನ್ನು ನಡೆಸಿ, ವೈದ್ಯಕೀಯ ನೆರವು ನೀಡಿದರು. ಎಲ್ಲ ರೀತಿಯ ಶ್ರಮವನ್ನೂ ವಿದ್ಯಾರ್ಥಿಗಳೇ ತೆಗೆದುಕೊಂಡರು.

ಹುಸಿ ಹೋಗದಿರಲಿ

ಜೂನು ಮಾಸದಲ್ಲಿ ಉತ್ತರ ಪ್ರದೇಶದ ಲಾನ್ಸ್ ಡೌನದಲ್ಲಿ ಹಾಗೂ ರಾಂಚಿಯ ಸಮೀಪ ದೀಪತೋಲಿಯಲ್ಲಿ ಇದೇ ಬಗೆಯ ಕೆಲಸ ನಡೆಯಿತು. ಐದು ಸಾವಿರ ಅಡಿ ಎತ್ತರದ ಭೂಭಾಗದಲ್ಲಿ ಎರಡು ಮೈಲು ದೂರದ ಜರಿಖಾಲವನ್ನು ಜೋಡಿಸುವ, ಮೋಟಾರು ಸುಗಮವಾಗಿ ಓಡಬಲ್ಲ, ರಸ್ತೆ ರಚಿಸುವುದು ಲಾನ್ಸ್ ಡೌನದ ಚಟುವಟಿಕೆಯಾಗಿತ್ತು. ಇಲ್ಲಿಯ ಕೆಲಸ ತೀರ ಕಠಿಣ ಸ್ವರೂಪದ್ದಾಗಿದ್ದರೂ, ಉತ್ಸಾಹ ಆತಂಕಗಳನ್ನು ಮೀರಿ ನಿಂತಿತ್ತು. ೪೦೦-೫೦೦ ಮರಗಳನ್ನು ನಿರಾಯಾಸವಾಗಿ ಕಡಿದುರುಳಿಸಿದ್ದಲ್ಲದೆ, ಮಾರ್ಗಕ್ಕೆ ಆಧಾರ ಕೊಡುವಂತೆ ೨೫ ಅಡಿ ಉದ್ದ ಹಾಗೂ ೧೫ ಅಡಿ ಎತ್ತರದ ಗೋಡೆಯೊಂದನ್ನು ಕಟ್ಟಿ ಅದನ್ನು ಜೈನಾದ ಮಹಾಗೋಡೆಗೆ ಹೋಲಿಸಿ ತೃಪ್ತಿ ಪಡೆದರು. ಯುವಕರ ಈ ಚಟುವಟಿಕೆಯ ಪರಿಣಾಮವಾಗಿ ಪಾರಿ ಎಂಬ ಜಿಲ್ಲಾ ಕೇಂದ್ರವು ಲಾನ್ಸಡೌನದ ಜನಕ್ಕೆ ೨೭ ಮೈಲುಗಳಷ್ಟು ಹತ್ತಿರವಾ...

ಬಿಹಾರದ ದೀಪತೋಲಿಯಲ್ಲಿ ೩೦೦ ಕಾಲೇಜು ವಿದ್ಯಾರ್ಥಿಗಳು ಒಂದು ಮೈಲು ಉದ್ದದ ಮೋಟಾರು ಓಡಬಲ್ಲ ಪಕ್ಕಾ ರಸ್ತೆಯನ್ನು ನಿರ್ಮಿಸಿದ್ದಲ್ಲದೆ, ನೆರೆಯ ಹೊಲಗಳಿಗೆ ಚೆನ್ನಾಗಿ ನೀರುಣಿಸಬಲ್ಲ ಕೆರೆಯೊಂದನ್ನು ಮಣ್ಣು ತೆಗೆದು ದುರಸ್ತಿ ಮಾಡಲಾಯಿತು.

ಅಂಬಾಲದ ಸಮೀಪ ರೂಪಾರದಲ್ಲಿ ಪಂಜಾಬ ಹಾಗೂ ಪೆಪ್ಸು ಪ್ರದೇಶಗಳ

(೧೦ನೇ ಪುಟ ನೋಡಿರಿ)

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಬಾಳಿ ಬದುಕಬೇಕಾದರೆ ನಾವು, ನಮ್ಮ ಮಕ್ಕಳು ಮಿತವ್ಯಯದ ಅಭ್ಯಾಸ ಮಾಡಲೇ ಬೇಕು. ಕುಟುಂಬದ ಪ್ರತಿಯೊಬ್ಬನ ಹೆಸರಿನಲ್ಲಿಯೂ ಒಂದೊಂದು ಕ್ಯುಮಿಲೇಟಿವ್ ಠೇವಣಾತಿ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ತನ್ಮೂಲಕ ಸಾಧ್ಯವಿದ್ದಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL & BANKING SYNDICATE LTD.,

Estd: 1925　　H. O UDIPI. S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925]　　[ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಆಂಧ್ರ ರಾಜ್ಯದಲ್ಲಿ ಸಮ್ಮಿಶ್ರ ಮಂತ್ರಿಮಂಡಳವೇ?

ಮುಖ್ಯಮಂತ್ರಿ ಪಟ್ಟಕ್ಕೋಸ್ಕರ ಪ್ರಕಾಶಂ-ಸಂಜೀವರೆಡ್ಡಿಯರಲ್ಲಿ ಸ್ಪರ್ಧೆಯ ಮನೋವೃತ್ತಿ

ಪ್ರಾರಂಭೋತ್ಸವದ ಸಿದ್ಧತೆ

ಆಂಧ್ರರಾಜ್ಯ ಅಸ್ತಿತ್ವಕ್ಕೆ ಬರುವ ದಿನ ಇನ್ನು ಬಹಳ ದೂರವಿಲ್ಲ—ಆದುದರಿಂದ ಪೂರ್ವಭಾವಿಯಾಗಿ ನಡೆಯಬೇಕಿರುವ ಸರ್ವ ರೀತಿಯ ಸಿದ್ಧತೆಗಳೂ ಭರದಿಂದ ಮುಂದೊತ್ತುತ್ತಿವೆ. ಆಂಧ್ರರಾಜ್ಯ ಸರಕಾರದ ಚಿಹ್ನೆಯಾಗಿ "ಪೂರ್ಣ ಕುಂಭ"ವನ್ನು ಸ್ವೀಕರಿಸಿರುವರು. ಹಾಗೆಯೇ ಬೇರೆ ಬೇರೆ ಇಲಾಖೆಗಳ ವರಿಷ್ಠ ಅಧಿಕಾರಿಗಳಾಗಿ ಈಗಿನ ಮದ್ರಾಸು ಸರಕಾರದ ಆಡಳಿತಾಧಿಕಾರಿಗಳಿಂದ ಕೆಲವರನ್ನು ಆರಿಸಿ ತೆಗೆದಿರುವರು. ಆಂಧ್ರರಾಜ್ಯ ನಿರ್ಮಾಣದ ಸಂಗತಿಯಲ್ಲಿ ವಿಶೇಷವಾದ ಕೆಲಸಗಳ ಹೊಣೆ ಹೊರಲು ಬಂದ ಶ್ರೀ ಚಂದೂಲಾಲ ತ್ರಿವೇದಿಯವರು ಸಂಬಂಧಿಸಿದೆಲ್ಲರೊಡನೆ ಮಾತುಕತೆಗಳನ್ನು ನಡೆಸಿ, ಆಂಧ್ರ ರಾಜ್ಯದ ಪ್ರಾರಂಭೋತ್ಸವದ ಕಾರ್ಯಕ್ರಮಗಳ ವಿವರವನ್ನು ಗೊತ್ತುಪಡಿಸಿದ್ದಾರೆ. ಅದರಂತೆ, ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರೂರವರು ಅಕ್ಟೋಬರ ಒಂದನೇ ದಿನಾಂಕ ಮುಂಜಾನೆ ೯ ಗಂಟೆಗೆ ಕರ್ನೂಲದಲ್ಲಿ ಆಂಧ್ರರಾಜ್ಯದ ಪ್ರಾರಂಭೋತ್ಸವವನ್ನು ನೆರವೇರಿಸುವರು. ಕರ್ನೂಲದಲ್ಲಿ ವಿಶೇಷ ಮಂಟಪದ ರಚನೆಯಾಗಲಿದ್ದು, ಅಲ್ಲಿಯೇ ಸಂಭ್ರಮದ ಸಮಾರಂಭವು ನಡೆಯುವುದು. ಇದಕ್ಕೆ ಮುಂಚೆ ಆಂಧ್ರ ರಾಜ್ಯದ ಗವರ್ನರರ ಪ್ರತಿಜ್ಞಾ ವಿಧಿಯು ಮುಂಜಾನೆ ೭ ಗಂಟೆಗೆ ಮದ್ರಾಸು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಪಿ. ವಿ. ರಾಜಮನ್ನಾರರ ಸಮ್ಮುಖದಲ್ಲಿ ನಡೆಯುವುದು. ಅನಂತರ ಮಂತ್ರಿ ಮಂಡಳದ ಸದಸ್ಯರ ಪ್ರತಿಜ್ಞಾ ವಿಧಿಯೂ ಜರಗುವುದು. ಸಂಜೆಗೆ ಗವರ್ನರರು ಬಂದು ಸತ್ಕಾರಕೂಟದ ವ್ಯವಸ್ಥೆ ಮಾಡುವರು. ಪ್ರಧಾನಿ ನೆಹರೂರವರು ಪ್ರಾರಂಭೋತ್ಸವವನ್ನು ನೆರವೇರಿಸಿದ ಬಳಿಕ ಮಂತ್ರಿಗಳು ಹಾಗೂ ಅಧಿಕಾರೇತರರಿಗೆ ಸಂದರ್ಶನವೀಯುವರೆಂದೂ, ಅಂದೇ ಸಂಜೆಗೆ ಹೈದರಾಬಾದಿಗೆ ಪ್ರಯಾಣ ಬೆಳೆಸುವರೆಂದೂ ತಿಳಿದಿದೆ. ಅವರು ೩ನೇ ದಿನಾಂಕ ಮಧುರೆಗೂ ೪ನೇ ದಿನಾಂಕ ಕೊಯಮುತ್ತೂರಿಗೆ ತೆರಳಿ, ಅಲ್ಲಿಂದ ಹೊಸದಿಲ್ಲಿಗೆ ಮರಳುವರು.

ಆಂಧ್ರ ಮಂತ್ರಿಮಂಡಲ

ಈಗಿನ ತಿಳಿವಳಿಕೆಯಂತೆ ಆಂಧ್ರ ರಾಜ್ಯದ ಗವರ್ನರ ಸ್ಥಾನವನ್ನು ಶ್ರೀ ತ್ರಿವೇದಿಯವರಿಗೇ ಕೊಡಲಾಗುವುದೆಂಬ ಭರವಸೆ ಇದೆ. ವಿಭಜನಾ ನಂತರದ ಪಂಜಾಬ ಗವರ್ನರರಾಗಿ ಶ್ರೀ ತ್ರಿವೇದಿಯವರು ವಹಿಸಿದ್ದ ಹೊಣೆಗಾರಿಕೆ ಮದ್ರಾಸಿನಿಂದ ಬೇರೆಯಾಗಿ ರೂಪುಗೊಳ್ಳುವ ಆಂಧ್ರ ರಾಜ್ಯದ ಮೇಲ್ಮೆಗೆ ಅತ್ಯಾವಶ್ಯಕವಾದ ಬಲವಾದೀತು; ಸಮರ್ಥ ಹಾಗೂ ದಕ್ಷ ಆಡಳಿತಗಾರರೆಂದು ತ್ರಿವೇದಿಯವರು ಹೆಸರು ಪಡೆದಿರುವುದರಿಂದ ಉತ್ತಮ ಪರಂಪರೆಯನ್ನು ಹೊಸದಾಗಿ ರೂಢಿಸಿಕೊಳ್ಳಬೇಕಿರುವ ಆಂಧ್ರ ರಾಜ್ಯಕ್ಕೆ ಅವರ ಮಾರ್ಗದರ್ಶನ ಮತ್ತು ಅನುಭವಗಳು ತುಂಬ ಲಾಭದಾಯಕವಾಗಿರುತ್ತವೆ. ಈಯೊಂದು ವಿಷಯದಲ್ಲಿ ಎಲ್ಲರೂ ಸಂತೃಪ್ತಿಯಿಂದ ಇದ್ದ ಹಾಗೆ ತೋರುತ್ತದೆ. ಆದರೆ ಆಂಧ್ರರಾಜ್ಯ ನಿರ್ಮಾಣ ಪ್ರಸಂಗದಲ್ಲಿ ಈಗ ತಲೆ ಎತ್ತಿರುವ ಪ್ರಶ್ನೆ—'ಅಲ್ಲಿಯ ಸರಕಾರ ರಚಿಸುವವರು ಯಾರು? ಮತ್ತು ಮುಖ್ಯಮಂತ್ರಿಯಾಗಿ ಸರಕಾರದ ಹೊಣೆಹೊರುವವರು ಯಾರು' ಎಂಬುದೇ ಆಗಿದೆ. ೧೪೦ ಮಂದಿ ಸದಸ್ಯರಿರುವ ಆಂಧ್ರಶಾಸನ ಸಭೆಯಲ್ಲಿ ಕಾಂಗ್ರೆಸು ಮತ್ತು ಕಮ್ಯೂನಿಸ್ಟ ಪಕ್ಷಗಳನ್ನು ಒಳಗೊಂಡು, ಯಾರಿಗೂ ಬಹುಮತದ ಬೆಂಬಲವಿರುವುದಿಲ್ಲ. ಕಾಂಗ್ರೆಸ ಸದಸ್ಯರ ಸಂಖ್ಯೆಯನ್ನು ಬಿಟ್ಟರೆ, ಅನಂತರ ಕಮ್ಯೂನಿಸ್ಟರದೇ ಪ್ರಾಬಲ್ಯವಿರುತ್ತದೆ. ಇಂಥದರಲ್ಲಿ ಕಾಂಗ್ರೆಸು ಸರಕಾರವನ್ನು ರಚಿಸಿಕೊಳ್ಳುವುದು ಸಾಧ್ಯವಿಲ್ಲವಾದರೆ, ಕಮ್ಯೂನಿಸ್ಟರನ್ನು ಆಶ್ರಯಿಸುವ ಪ್ರಶ್ನೆ ಇದೆ—ಹಾಗೆಂದು ಹೊಸ ರಾಜ್ಯದ ಪ್ರಾರಂಭದಿನದಿಂದಲೇ ಕಮ್ಯೂನಿಸ್ಟರ ಕೈಗೆ ರಾಜ್ಯ ಸೂತ್ರವನ್ನು ಒಪ್ಪಿಸಿಕೊಡುವ ಅವಿವೇಕವನ್ನು ಯಾರೂ ಮಾಡುವಂತಿಲ್ಲ—ಅಲ್ಲದೆ ಕಮ್ಯೂನಿಸ್ಟರಿಗೆ ಸಹ ನಿಚ್ಚಳ ಬಹುಮತವಿಲ್ಲದಿರುವುದು ಸ್ಪಷ್ಟವಾಗಿರುವುದರಿಂದ ಅಂಥ ಕ್ರಮ ಪುರಸ್ಕರಣೀಯವೂ ಅಲ್ಲ. ಹೀಗಾಗಿ ಭಗ್ನವಾದ ಮಂತ್ರಿಮಂಡಳ ರಚನೆಯು ಅಸಾಧ್ಯವೆಂದು ಸಿದ್ಧಗೊಂಡರೆ, ಗವರ್ನರರ ಆಡಳಿತೆಯೇ ಅನಿವಾರ್ಯವಾಗಿ ನಡೆಯಬೇಕಾಗುವುದು. ಪ್ರಜಾಪ್ರಭುತ್ವದ ತತ್ವವನ್ನು ಮನ್ನಿಸಿ, ಅದನ್ನು ರೂಢಿಸಿಕೊಳ್ಳಲು ವ್ಯೆಮಡಿಮಾಡಿಕೊಳ್ಳಲೂ ಸಿದ್ಧರಿರುವ ಆಂಧ್ರ ಧುರೀಣರು ಈ ಅಪ್ರಿಯ ಪ್ರಸಂಗವನ್ನು ನಿವಾರಿಸುವ ಚಿಂತೆಗೆ ಬಿದ್ದಿದ್ದಾರೆ.

ಪ್ರಕಾಶಮರ ವರ್ಚಸ್ಸು

ಪಕ್ಷಪಂಗಡಗಳ ಚೌಕಟ್ಟಿನಿಂದ ಹೊರಗೆ ಸರಿದು, ಆಂಧ್ರರಾಜ್ಯದಲ್ಲಿ ಸುವ್ಯವಸ್ಥಿತವಾದ ಮಂತ್ರಿ ಮಂಡಳದ ರಚನೆಯಾಗಿ, ಯೋಗ್ಯ ರೀತಿಯಲ್ಲಿ ಕಾರ್ಯಭಾರದ ಹೊಣೆ ನಿರ್ವಹಿಸಬಲ್ಲ ಮುಂದಾಳುಗಳಾರೆಂದು ವಿಮರ್ಶಿಸಿದರೆ—ಅಲ್ಲಿ ತೋರುವುದು ಮೂರು ಜನ—ಮೊದಲನೆಯದಾಗಿ ಆಂಧ್ರಕೇಸರಿ ಎಂದು ಹೆಸರಾದ ಶ್ರೀ ಪ್ರಕಾಶಂ. ಎರಡನೆಯವರು ಆಂಧ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿ ಮೂರನೆಯ ಸ್ಥಾನಕ್ಕೆ ಬರಲು ಯೋಗ್ಯತೆಯುಳ್ಳ, ಆದರೆ ಅಂಥ ಆತುರ ತೋರಿಸದ ವ್ಯಕ್ತಿ ಪ್ರೊ. ಎನ್. ಜಿ. ರಂಗಾ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಆಸ್ಥೆಯುಳ್ಳ ಪ್ರಮುಖವಾದ ಮೂರು ಪಕ್ಷಗಳ ಧುರೀಣರು ಮೇಲಿನವರೆಂಬುದು ಎಲ್ಲರಿಗೂ ಗೊತ್ತು. ತಮ್ಮ ಪಕ್ಷದ ಬಲವೊಂದರಿಂದಲೇ ಮುಖ್ಯಮಂತ್ರಿಪಟ್ಟಕ್ಕೇರಿ ಮಂತ್ರಿಮಂಡಳ ರಚಿಸುವ ಸಾಮರ್ಥ್ಯ ಇವರಲ್ಲಿ ಯಾರೊಬ್ಬರಿಗಾಗಿಯಾದರೂ ಇರುತ್ತಿದ್ದರೆ, ಇಂದಿನ ದ್ವಂದ್ವಾತ್ಮಕ ಸಮಸ್ಯೆ ಏಳುತ್ತಲೇ ಇರಲಿಲ್ಲ. ಆದುದರಿಂದ ಇಂದು ಪರಸ್ಪರ ಸಹಕಾರದ ಮಾತನ್ನೆತ್ತಿ ಪಕ್ಷಗಳ ಕಟ್ಟು ನಿಟ್ಟನ್ನು ಬಿಟ್ಟು, ಭಿನ್ನವಾದ ಕ್ರಮವೊಂದನ್ನು ಆಶ್ರಯಿಸಬೇಕಾಗಿ ಒಂದಿರುತ್ತದೆ. ಮದ್ರಾಸಿನ ರಾಜಕಾರಣ ಹೇಗೆಯೇ ಇರಲಿ-ಜನತೆಯ ಮೇಲೆ ರಾಜಾಗೋಪಾಲಾಚಾರಿಯವರ ವರ್ಚಸ್ಸು ಅಕ್ಷುಣ್ಣವಾಗಿರುವಂತೆ, ಆಂಧ್ರರಾಜ್ಯದ ಪ್ರಜೆಗಳ ಮೇಲೆ ಸ್ಥಿರವಾದ ಪ್ರಭಾವವನ್ನು ಬೀರಬಲ್ಲ ವ್ಯಕ್ತಿತ್ವವಿರುವುದು ಶ್ರೀ ಪ್ರಕಾಶಮರಿಗೊಂದು ಹೆಚ್ಚಿನವರ ಅಭಿಪ್ರಾಯ. ಅವರು ೮೪ ವರ್ಷ ವಯಸ್ಸಿನ ವೃದ್ಧರು ನಿಜ-ಹಾಗೆಂದು ಈ ಪ್ರಾಯದಲ್ಲೂ ಅವರ ಉತ್ಸಾಹ ಮತ್ತು ಕಾರ್ಯಕ್ಷಮತೆ ಕಡಿಮೆಯಾಗಿರುವುದಿಲ್ಲ. ಮದ್ರಾಸಿನ ಮುಖ್ಯಮಂತ್ರಿ ಪಟ್ಟವನ್ನು ಪರಿಸ್ಥಿತಿಯ ಒತ್ತಡದಿಂದೆಂಬಂತೆ ಬಿಟ್ಟುಗೊಡಬೇಕಾಗಿ ಬಂದ ಪ್ರಕಾಶಮರು ತನ್ನ ಕ್ರೀಡಾರಂಗವಾಗಿದ್ದ ಆಂಧ್ರ ಪ್ರದೇಶದಲ್ಲಿ ಕೊನೆಗೊಮ್ಮೆ ವರ್ಚಸ್ಸನ್ನು ನೆಲೆಗೊಳಿಸಲು ತುಂಬ ಆತುರರಾಗಿರುವರು. ಆದರೆ ತಾವು ನಾಯಕರಾಗಿರುವ ಪ್ರಜಾ ಸಮಾಜವಾದೀ ಪಕ್ಷದ ಬೆಂಬಲವಿಲ್ಲದ ಶ್ರೀ ಪ್ರಕಾಶಮರು ಕಾಂಗ್ರೆಸಿನೊಡನೆ ಸಹಕರಿಸದೆ ಬೇರೆ ಮಾರ್ಗ ಉಳಿದಂತೆ ತೋರುವುದಿಲ್ಲ. ಹಿಂದೊಮ್ಮೆ ಛಲವಾದಿಯಾಗಿ ಕಾಂಗ್ರೆಸಿನಿಂದ ಹೊರಬಿದ್ದ ಪ್ರಕಾಶಂ, ತನ್ನ ಮುಖ್ಯ ಮಂತ್ರಿತ್ವದ ಇಚ್ಛೆಗೊಂದು ರೂಪುಗೊಡಬೇಕೆಂಬ ಹಂಬಲದಿಂದ-ಅಥವಾ ಆಂಧ್ರದಲ್ಲಿ ಪಕ್ಷ ಸರಕಾರ ನೇಮಕಗೊಳ್ಳಬೇಕೆಂಬ ಆತುರದಿಂದಲೇ ಆದರೂ—ಕಾಂಗ್ರೆಸಿನ ಒಲುಮೆ ಸಂಪಾದಿಸುವುದು ಅನಿವಾರ್ಯವೆನಿಸಿದೆ.

ಯಾರ ಬಲೆಯೊಳಗೆ ಯಾರು?

ಪ್ರಕಾಶಮರ ಮನೋಬಯಕೆಯನ್ನು ಆಂಧ್ರ ಕಾಂಗ್ರೆಸಿನ ಅಧ್ಯಕ್ಷ ಹಾಗೂ ಆಂಧ್ರಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಧುರೀಣ ಶ್ರೀ ಸಂಜೀವ ರೆಡ್ಡಿ ಚೆನ್ನಾಗಿ ಹೃದಯಂಗಮ ಮಾಡಿಕೊಂಡಿರುವರು. ಕಾಂಗ್ರೆಸೊಂದೇ ಸರಕಾರ ರಚಿಸುವ ಸಂಭವ ದೂರಾದುದರಿಂದ, ಪ್ರಜಾ ಸಮಾಜವಾದೀ ಹಾಗೂ ಕೃಷಿಕರ ಲೋಕ ಪಕ್ಷದ ಬೆಂಬಲವನ್ನು ಸಂಜೀವ ರೆಡ್ಡಿ ಅಪೇಕ್ಷಿಸುತ್ತಾರೆ. ಈ ಬೆಂಬಲ ಪಡೆದು ಸಾಧ್ಯವಾದರೆ ಕಾಂಗ್ರೆಸು ಮಂತ್ರಿಮಂಡಳವನ್ನು-ಕನಿಷ್ಟ ಪಕ್ಷ ಕಾಂಗ್ರೆಸ ಸದಸ್ಯನೇ ಮುಖ್ಯ ಮಂತ್ರಿಯಾಗಿರುವ ಸಮ್ಮಿಶ್ರ ಮಂತ್ರಿಮಂಡಳವನ್ನು ರಚಿಸಬಹುದೇ ಹೇಗೆಂಬ ಆಲೋಚನೆಯಲ್ಲಿ ಶ್ರೀ ರೆಡ್ಡಿಯವರು ಬಿದ್ದಿರುವರು. ಪ್ರೊ. ರಂಗಾರ ಕೃಷಿಕರ ಲೋಕ ಪಕ್ಷವು ಈಗ ಕಾಂಗ್ರೆಸಿನ ಸಹ ಸದಸ್ಯತನವನ್ನು ಪಡೆದುಕೊಂಡಿರುವುದರಿಂದ—ಅಷ್ಟು ಮಟ್ಟಿಗೆ ಚಿಂತೆ ದೂರಾಗಿದ್ದರೂ ಪ್ರಜಾ ಸಮಾಜವಾದೀ

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕುದುರಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಉತ್ತಮ ಪುಸ್ತಕಗಳು.

ಅಂತರಂಗದ ಕತೆಗಳು
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ನಗುನಗಿಸುತ್ತಾ ನಿಮ್ಮನ್ನು ಯೋಚನೆಗೀಡುಮಾಡುವ ಉತ್ತಮ ಕಥಾಸಂಗ್ರಹ. ಬೆಲೆ ರೂ.1 4 0

ಪಂಚಕಜ್ಜಾಯ
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ. ಬೆಲೆ ರೂ 1 8 0

ಅನಿಲ
ಸಾಹಿತ್ಯದ ಸರ್ವವಿಭದ ಒಂದೊಂದು ಸ್ಯಾಂಪಲ್. ಬೆಲೆ ರೂ 2 0 0

ಹೆಂಗುಸರ ಕತೆಗಳು
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ. ಬೆಲೆ ರೂ 2 ೮ 0

ನಗೆನೋಟಗಳು
ಶ್ರೀ. ಕೆ. ನಿಟ್ಟೂಲ ಶೆಣ್ಯೆ, ಬಿ.ಎ.,ಎಲ್.ಟಿ.,ಅವರು ಬರೆದ ವಿನೋದ ಚಿತ್ರಗಳ ಸಂಗ್ರಹ. ಬೆಲೆ ರೂ. 1 1 0

ಬಾಳಿನ ಬೆಡಗು
ಶ್ರೀ. ಯು. ನಾರಾಯಣ ಭಟ್ಟರು ಬರೆದ, ಬಾಳಿನ ಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ. ಬೆಲೆ ರೂ. 1 4 0

ನಿಮಗೆ ಬೇಕಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಷನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ
ಮುಂಬಯಿ ಏಜಂಟರು-**ಸ್ಟೂಡೆಂಟ್ಸ್ ಬುಕ್ ಡಿಪೊ, 6 E. ಪಿತಾ ಸ್ಟ್ರೀಟ್, ಫೋರ್ಟ್, ಮುಂಬೈ.**

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE POPULAR INSURANCE CO. LTD.
"POPULAR BUILDINGS" MANGALORE-1

ಅಭಿವೃದ್ಧಿ ಪ್ರಯತ್ನಗಳಿಗೆ ಜನತೆಯ ಮೆಚ್ಚು

ಸರಕಾರದ ವ್ಯಯ ಪ್ರಮಾಣಕ್ಕೆ ಕಡಿಮೆಯಾಗದ ಸಾರ್ವಜನಿಕ ಸಹಕಾರದ ಮೊತ್ತ

ಪಕ್ಷದ ಬೆಂಬಲದ ಆಶ್ವಾಸನೆ ಪೂರ್ಣ ರೂಪದಲ್ಲಿ ದೊರೆತಂತಿಲ್ಲ. ಪ್ರಕಾಶಮರು ಮುಖ್ಯ ಮಂತ್ರಿಗಳಾಗುವರಾದರೆ, ಅಷ್ಟು ಮಟ್ಟಿಗೆ ತಮ್ಮ ಪಕ್ಷದ ನಿಯಮ ನಿರ್ಬಂಧಗಳಿಂದ ಬಿಡುಗಡೆ ಹೊಂದಲು ಅವಕಾಶ ಮಾಡಿಕೊಡುವ ಏರ್ಪಾಡು ನಡೆದಿದೆ. ಆದರೆ ಇದನ್ನು ಸಂಜೀವ ರೆಡ್ಡಿ ಇಚ್ಛಿಸುವುದಿಲ್ಲ. ಅದಕ್ಕೋಸ್ಕರವೇ ಕಾಂಗ್ರೆಸು ಸದಸ್ಯನೇ ಮುಖ್ಯ ಮಂತ್ರಿಯಾಗಬೇಕೆಂದೂ ಪ್ರಕಾಶಮರು ಕಾಂಗ್ರೆಸಿನೊಳಗೆ ಬರುವುದಾದಲ್ಲಿ ಅವರ ಧುರೀಣತ್ವವನ್ನು ಸಂತೋಷದಿಂದ ಸ್ವೀಕರಿಸುವುದಾಗಿಯೂ ಹೇಳುತಿದ್ದಾರೆ. ಆದರೆ ಪ್ರಕಾಶಮರು ಪುನಃ ಕಾಂಗ್ರೆಸ ಸದಸ್ಯರಾಗುವ ಪ್ರಶ್ನೆಯೇ ಇರುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಹಾಗಿದ್ದರೆ ಸಂಜೀವ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿ ಸಮ್ಮಿಶ್ರ ಮಂತ್ರಿ ಮಂಡಳ ರಚಿಸುವ ಆಶೆ ಇಟ್ಟುಕೊಂಡಿರುವರೆಂದೂ ಅದರಲ್ಲಿ ಆಂಧ್ರ ಕೇಸರಿ ಪ್ರಕಾಶಮರಿಗೂ ಸ್ಥಾನ ದೊರೆಯಬಹುದೆಂದೂ ಊಹಿಸಬಹುದು. ಆಂಧ್ರದ ಕೇಸರಿ ಸಂಜೀವ ರೆಡ್ಡಿಯವರ ಬಲೆಗೆ ಬೀಳುವುದು, ಅರ್ಥಾತ ಸಂಜೀವ ರೆಡ್ಡಿಯವರ ನಾಯಕತ್ವದಲ್ಲಿ ಪ್ರಕಾಶಮರು ಹಾಗೂ ಅವರ ಬೆಂಬಲಿಗರು ಕೆಲಸ ಮಾಡುವುದು ಸಂಭಾವ್ಯ ವಿಚಾರವಲ್ಲ. ಇದರಂತೆ ಒಮ್ಮೆ ಪ್ರಕಾಶಮರ ಕೈಗೆ ನಾಯಕತ್ವ ದೊರೆತ ಪಕ್ಷದಲ್ಲಿ ಕಾಂಗ್ರೆಸ್ಸಿನ ವರ್ಚಸ್ಸು ಎಷ್ಟು ಮಾತ್ರಕ್ಕೂ ಆಂಧ್ರ ಪ್ರದೇಶದಲ್ಲಿ ಉಳಿಯಲಾರದೆಂಬುದೂ ಸ್ವತಃ ಸಿದ್ಧ. ಈ ಭಯಗಳೇ ಎರಡೂ ಕಡೆಯವರನ್ನು ಪರಸ್ಪರ ಹೊಂಚಿನೋಡಿ ಬಲೆಬೀಸಲು ಪ್ರೇರಿಸಿವೆ.

ಕಾಲಾಂತರದ ಭಯ

ಪ್ರಕಾಶಮರಿಗೆ ಇದೀಗ ತಮ್ಮ ಪಕ್ಷದ ನಿಯಮ ನಿರ್ಬಂಧಗಳಿಂದ ಮುಕ್ತಿದೊರೆತಿದೆಯಾಗಿ ತಿಳಿಯುತ್ತೇವೆ. ಇದರಿಂದ ಅವರು ಮಂತ್ರಿ ಮಂಡಳವನ್ನು ರಚಿಸಬಲ್ಲರೆಂದು ಹೇಳಬಹುದು. ಆದರೆ ಇಷ್ಟು ಮಾತ್ರದಿಂದ ಸಂಜೀವ ರೆಡ್ಡಿಯಂಥ ಕಾಂಗ್ರೆಸ್ ಪ್ರಭೃತಿಗಳು ತೃಪ್ತರಾಗುವರೇ ಎಂಬುದು ಮಹತ್ವದ ಪ್ರಶ್ನೆ. ಪ್ರಜಾ ಸಮಾಜವಾದೀ ಪಕ್ಷದ ನಿರ್ಬಂಧವನ್ನು ಪ್ರಕಾಶಮರ ಮಟ್ಟಿಗೆ ಸಡಲಿಸುವುದು ನೈತಿಕವಾಗಿ ಸರಿಯಲ್ಲವೆಂದು ಆ ಪಕ್ಷದ ಕಾರ್ಯದರ್ಶಿ ಗೋರೆಯವರು ಪ್ರಕಟಿಸಿದ ಹೇಳಿಕೆಯೊಂದರ ಮೇಲಿಂದ ಅನ್ವಯಿಸಬಹುದು. ಇಷ್ಟರಲ್ಲಿಯೇ ಪ್ರಜಾ ಸಮಾಜವಾದೀ ಹಾಗೂ ಕಾಂಗ್ರೆಸು ಪಕ್ಷಗಳ ಕಾರ್ಯಕಾರಿಣೀ ಸಭೆಗಳು ದಿಲ್ಲಿಯಲ್ಲಿ ಸೇರಲಿವೆ. ಸಮ್ಮಿಶ್ರ ಮಂತ್ರಿ ಮಂಡಳ ರಚಿಸುವ ಪ್ರಶ್ನೆ ಇಲ್ಲಿ ಪ್ರಧಾನ್ಯ ಪಡೆದೇ ತೀರುತ್ತದೆಂದು ಎಲ್ಲರೂ ನಿರೀಕ್ಷಿಸಿದ್ದಾರೆ. ಇಲ್ಲಿ ನಡೆಯುವ ಚರ್ಚೆಯ ಪರಿಣಾಮವಾಗಿ ಆಂಧ್ರದಲ್ಲಿ ಸ್ಥಿರವಾದ ಮತ್ತು ಭದ್ರವಾದ ಮಂತ್ರಿ ಮಂಡಳವೊಂದು ಏರ್ಪಾಡುವಂತಾದರೆ– ಅದರಿಂದ ಎಲ್ಲರಿಗೂ ಶ್ರೇಯಸ್ಸು. ,ಭಾಷಾ ರಾಜ್ಯಗಳ ಕುರಿತು ಆಸ್ಥೆ ವಹಿಸಿ ಚಳುವಳಿ ನಡೆಸುವ ಜನರಿಗೆ ಹೊಸ ಧೈರ್ಯ ಆಂಧ್ರದ ಸ್ಥಿರಸರಕಾರದ ರಚನೆಯಿಂದ ದೊರೆತೀತು. ಹಾಗಲ್ಲದೆ, ಗವರ್ನರರ ಆಡಳಿತೆಯಾಗಲೀ ಅಥವಾ ಪೆಪ್ಸು ರಾಜ್ಯದಲ್ಲಿ ಪ್ರಾರಂಭದಲ್ಲಿದ್ದಂಥ ಹೊಯ್ದಾಡುವ ಮಂತ್ರಿ ಮಂಡಳವಾಗಲೀ ಪ್ರಜಾ ಪ್ರಭುತ್ವದ ಹಿತಕ್ಕೆ ಮತ್ತು ಸ್ವತಃ ಆಂಧ್ರ ರಾಜ್ಯದ ಪ್ರತಿಷ್ಠೆಗೆ ಹೇಳಿಸಿದುದಲ್ಲ. ಹೀಗೆ ಸ್ವಮ್ಮ ಅಕೋತ್ತರಗಳಿದ್ದರೂ ಸಮ್ಮಿಶ್ರ ಮಂತ್ರಿ ಮಂಡಳದ ಪ್ರಶ್ನೆ ಬಂದಾಗಲೆಲ್ಲ, ಅದರಲ್ಲಿ ಒಡಕು ಉಂಟಾಗುವ ಭಯ ಹಾಗು ಸಂಶಯ ನಮ್ಮನ್ನು ಧೃತಿಗೆಡಿಸುತ್ತದೆ. ಪರಿಸ್ಥಿಯ ಒತ್ತಡಕ್ಕೆ ಕಟ್ಟು ಬಿದ್ದು ಮಾಡಿಕೊಂಡ ವ್ಯವಸ್ಥೆ ಕೆಲ ಕಾಲದಲ್ಲಿಯೇ ಮಂತ್ರಿ ಮಂಡಳದಲ್ಲಿ ಭಿನ್ನಾಭಿಪ್ರಾಯಗಳಿಗೂ ಬಿರುಕುಗಳಿಗೂ ಆಸ್ಪದ ನೀಡುವ ಪ್ರಮೇಯವುಂಟು. ಕಾಲಾಂತರದಲ್ಲಿ ಘಟಿಸಬಹುದಾದ ಇಂಥ ಸಂಭವಗಳನ್ನು ದೂರೀಕರಿಸಿ, ಯಶಸ್ವಿಯಾಗಿ ರಾಜ್ಯ ಶಕಟವನ್ನು ಮುನ್ನಡೆಸಬಲ್ಲ ಧುರೀಣರೇ ಮುಖ್ಯ ಮಂತ್ರಿಯಾಗಲೆಂದು ಹಾರೈಸೋಣ.

ವರದಕ್ಷಿಣೆ ಪದ್ಧತಿ

ಲೋಕ ಸಭೆಯಲ್ಲಿಯೂ ರಾಜ್ಯ ಪರಿಷತ್ತಿನಲ್ಲಿಯೂ ಸ್ವೀಕಾರ ಗೊಂಡ ಆಂಧ್ರ ರಾಜ್ಯ ನಿರ್ಮಾಣ ವಿಧೇಯಕಕ್ಕೆ ರಾಷ್ಟ್ರಾಧ್ಯಕ್ಷರು ಸಹಿಹಾಕಿ ಕಾಯಿದೆಯಾಗಿ ಮಾಡಿರುವರು. ಲೋಕ ಸಭೆ ಹಾಗೂ ರಾಜ್ಯ ಪರಿಷತ್ತುಗಳ ಮುಂದೆ ಈಗ ಬೇರೆ ಬೇರೆ ಮಸೂದೆಗಳು ಚರ್ಚೆಗೆ ಬಂದಿವೆ. ಆಸ್ತಿಕರದ ಮಸೂದೆಯ ಚರ್ಚೆಯು ಲೋಕ ಸಭೆಯಲ್ಲಿ ಇನ್ನೂ ಪೂರ್ಣವಾಗಿಲ್ಲ. ಈ ನಡುವೆ ಶ್ರೀಮತಿ ಉಮಾ ನೆಹರೂರವರು ವರದಕ್ಷಿಣೆಯನ್ನು ನಿಷೇಧಿಸಬೇಕೆನ್ನುವ ಒಂದು ಖಾಸಗಿ ಗೊತ್ತುವಳಿಯ ಚರ್ಚೆಯನ್ನು ಸಭೆ ನಡೆಸಿತು. ಈ ವಿಧೇಯಕದ ಸಮರ್ಥನೆ ಮಾಡುತ್ತಾ "ಮಾತಾಪಿತೃಗಳು ಮಗಳಿಗೆ ವಿವಾಹ ಸಮಯದಲ್ಲಿ ಸ್ವಲ್ಪ ಹಣವನ್ನು ಸ್ವಯಂ ಪ್ರೇರಣೆಯಿಂದ ಕೊಡುವುದಕ್ಕೆ ನನ್ನದು ವಿರೋಧವಿಲ್ಲ-- ಆದರೆ ಮದುವೆಯ ವೇಟಿಯಲ್ಲಿ ಮಾತಾಪಿತೃಗಳು ನಡೆಸುವ ವರನ ಕ್ರಯವಿಕ್ರಯಗಳನ್ನು ನಿಲ್ಲಿಸಲೇ ಬೇಕು. ವರದಕ್ಷಿಣೆಯನ್ನು ತೆಗೆದುಕೊಳ್ಳುವ ಕ್ರಮವು ಅಕ್ರಮವೆಂದು ಸಾರಲ್ಪಟ್ಟು, ಅದನ್ನು ಮುರಿದವರನ್ನು ದಂಡಿಸಬೇಕು"ಎಂದು ಶ್ರೀಮತಿ ಉಮಾ ನೆಹರೂ ಹೇಳಿದರು. ಸಮಾಜದ ಇಂದಿನ ಪರಿಸ್ಥಿತಿಯಲ್ಲಿ ವರದಕ್ಷಿಣೆಯ ಪದ್ಧತಿಯಿಂದ ವಿವಾಹೇಚ್ಛುಗಳ ಜೀವನವು ಯಾವ ರೀತಿ ಅಂದಗೆಡುವುದೆಂಬುದನ್ನು ಮಾನ್ಯ ಸದಸ್ಯರಲ್ಲಿ ಹೆಚ್ಚಿನವರು ವರ್ಣಿಸಿ ವಿಧೇಯಕದ ತತ್ವವನ್ನು ಮೆಚ್ಚಿದರು. ಆದರೆ ಸಾಮಾನ್ಯವಾದ ಕಾಯಿದೆಯೊಂದನ್ನು ಅಂಗೀಕರಿಸಿದಷ್ಟಕ್ಕೆ ಸಮಾಜದಲ್ಲಿ ರೂಢಮೂಲವಾದ ಈ ಪದ್ಧತಿಯನ್ನು ನಿಯಂತ್ರಿಸಲು ಮತ್ತು ದೂರೀಕರಿಸಲು ಬಾರದೆಂದೂ ಅವರು ಅಭಿಪ್ರಾಯ ಪಟ್ಟರು. ರೋಹಿಣಿ ಕುಮಾರ ಚೌಧರಿಯವರಂತೂ "ವರದಕ್ಷಿಣೆಯ ಪದ್ಧತಿ ನಿಲ್ಲಬೇಕಾದರೆ, ಹುಡುಗ ಹುಡುಗಿಯರಲ್ಲಿ ಪ್ರೇಮ ಬೆಳೆಯಲು ಅವಕಾಶ ನೀಡಬೇಕು" ಎಂದರು. ಇದಲ್ಲದೆ ನಿರುದ್ಯೋಗದ ಸಮಸ್ಯೆ, ರೋಗಿ ಪುರುಷರ ನಿರ್ಬೀಜೀಕರಣ ಇವುಗಳನ್ನು ಕುರಿತಾದ ಖಾಸಗಿ ಮಸೂದೆಗಳ ಮೇಲೆಯೂ ಅತ್ಯಂತ ಸ್ವಾರಸ್ಯವಾದ ಚರ್ಚೆಗಳು ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿ ನಡೆದವು.

ಪ್ರಗತಿ ಪಥದಲ್ಲಿ

ನಮಗಿಂದು ರಾಜಕಾರಣಕ್ಕಿಂತಲೂ ಹೆಚ್ಚು ಸಾಮಾಜಿಕ ಸೌಕರ್ಯಗಳು ಬೇಕು ಮತ್ತು ಸುಧಾರಣೆಗಳೆಲ್ಲ ಅದಕ್ಕೆ ತಕ್ಕಂತೆ ನಡೆಯಬೇಕೆಂದು ಖಾಸಗಿ ಗೊತ್ತುವಳಿಗಳು ಸೂಚಿಸುತ್ತವೆಂದರೆ ತಪ್ಪಾಗಲಿಕ್ಕಿಲ್ಲ. ಇಂಥ ಪ್ರಯತ್ನಗಳಲ್ಲಿ ಸರಕಾರ ಹಿಂದುಳಿದಿದೆ ಎಂಬ ದೂರಿಗೂ ಆಸ್ಪದವಿಲ್ಲ. ಉದಾಹರಣೆಗಾಗಿ ಸರಕಾರ ಕೈಕೊಂಡ ಎನಕದ ಅಭಿವೃದ್ಧಿ ಯೋಜನೆಗಳ ಪ್ರಗತಿಯ ಕುರಿತು ಈಗ ತಾನೆ ಪ್ರಕಟಗೊಂಡ ಸಂಗತಿಗಳನ್ನು ತೆಗೆದುಕೊಳ್ಳೋಣ-- ಕಳೆದ ಒಂಭತ್ತು ತಿಂಗಳುಗಳ ಅವಧಿಯಲ್ಲಿ ಏನು ಪ್ರಗತಿ ಸಾಧಿಸಿದೆಯೆಂಬುದರ ಸ್ಥೂಲ ಪರಿಚಯ ಈ ವರದಿಯಿಂದ ದೊರೆಯುತ್ತದೆ. ಮುಖ್ಯತಃ ಪ್ರಥಮದ ಆರು ತಿಂಗಳುಗಳಿಗಿಂತಲೂ ಕೊನೆಯ ಮೂರು ತಿಂಗಳುಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕೈಗೂಡಿಸಲಾಯಿತೆಂಬುದು ಗಮನೀಯವಾದ ಅಂಶ. ಜನತಾ ಸಹಕಾರ ಪಡೆಯುವ ಬಗೆ, ಸ್ಥಳೀಯ ಅವಶ್ಯಕತೆಗಳ ಕಲ್ಪನೆ, ಲಭ್ಯವಿರುವ ಸಾಧನ ಸಲಕರಣೆಗಳು ಮುಂತಾದವುಗಳ ಯಥಾ ಯೋಗ್ಯ ಸಮನ್ವಯದಿಂದ ಯೋಜನೆಯ ರೂಪರೇಷೆಯನ್ನು ಹಾಕಿ ಕೊಳ್ಳುವಷ್ಟಕ್ಕೆ ಐದಾರು ತಿಂಗಳುಗಳು ಕಳೆದು ಹೋಗುವುದು ಸ್ವಾಭಾವಿಕವೇ ಆಗಿದೆ. ಈ ಅವಧಿಯಲ್ಲಿ ನಡೆದ ಉಳುಮೆಯ ಕೆಲಸವು ಕ್ಷಿಪ್ರದಲ್ಲಿಯೇ ಫಲ ಕೊಟ್ಟು ತೀರುವುದೆಂದೂ ಜನಸಾಮಾನ್ಯನಲ್ಲಿ ಸ್ಫೂರ್ತಿ ಮತ್ತು ಉತ್ಸಾಹವನ್ನು ಉತ್ತೇಜಿಸಲು ಈ ಯೋಜನೆಗಳು ಸಮರ್ಥವಾಗಿವೆಯೆಂದೂ ವರದಿಯು ಇದರ ಆ[illegible] [illegible]ಸುತ್ತವೆ. ಜನತಾ ಸಹಕಾರವು ಸರಕಾರದಿಂದ ಪಾಲಿನಷ್ಟೇ ಆಗಿದ್ದಿತೆನ್ನುವುದು ನಮ್ಮ ಆತ್ಮ ವಿಶ್ವಾಸವನ್ನು ನಿಶ್ಚಯವಾಗಿಯೂ ಹೆಚ್ಚಿಸುವುದು. ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳಲ್ಲದೆ, ವೈಜ್ಞಾನಿಕ ಕ್ರಮದಾನ ತತ್ವವನ್ನನುಸರಿಸಿ ವಸತಿ ಗೃಹಗಳ ವ್ಯವಸ್ಥೆ ಕಾಲುವೆಗಳು, ಬಾವಿ ಹಾಗೂ ಕೆರೆಗಳ ಜೀರ್ಣೋದ್ಧಾರ ಮಾರ್ಗರಚನೆ ಮುಂತಾದೆಲ್ಲ ಅವಶ್ಯಕ ಸಂಗತಿಗಳ ಕಡೆಗೆ ಜನರು ಹೆಚ್ಚು ಆಸಕ್ತಿ ತೋರಿಸುತ್ತಿರುವರೆನ್ನುವುದು ಸಂತೋಷ; ಮಾತ್ರವಲ್ಲ ಅನುಕರಣೀಯವಾದ ವಿಚಾರ

ಪ್ರಕಟಣೆ

ನನ್ನ ಹೆಸರು ಎಸ್. ಪೇಮರಾಜ ನಾಯಕ್ ಎಂಬುದನ್ನು ಇದೇ ತಾ. ೧-೯-೫೩ ರಿಂದ ಎಸ್. ಪದ್ಮನಾಭ ನಾಯಕ್ ಎಂದು ಬದಲಾಯಿಸಲಾಗಿದೆ ಎಂದು ಈ ಮೂಲಕ ತಿಳಿಯಪಡಿಸುವೆನು.

ಆದುದರಿಂದ ಇನ್ನು ಮುಂದೆ [illegible] ವ್ಯವಹಾರಗಳನ್ನು ಹೊಸ ಹೆಸರಿನಿಂದ ನಡೆಸಬೇಕಾಗಿ ಕೋರುವೆನು.

(ಸಹಿ) ಎಸ್. ಪದ್ಮನಾಭ ನಾಯಕ್,
ಉಡುಪಿ, ೯-೯ ೫೩.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 19 } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂದ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

70 ವರುಷಗಳಿಂದ ಜಗಜ್ಜನಿತವಾದುದು

ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಆಗ್ ಮಿಕ್ಚರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಔಷಧಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.

ಉತ್ಪಾದಕರು:

ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಫೋರ್ಚುಗೀಸ್ ಚರ್ಚ್ ಸ್ಟ್ರೀಟ್,

Tele. Add: "CAWASHABAD" ದಾದರ್, ಬೊಂಬಾಯಿ 28.

NAVAYUGA
Popular Kannada Weekly
Founder:—
Sri A. B. SHETTY,
Minister for Public Health, Govt. of Madas.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ, ಮದ್ರಾಸಿನ ಆರೋಗ್ಯಮಂತ್ರಿ.
ವಾರ್ಷಿಕ ಚಂದಾ: ರೂ. 5-12-0 ಬಿಡಿಪ್ರತಿ: 0-2-0

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಬಳ್ಳಾರಿ ಜಿಲ್ಲೆಯ ಈ ಕೆಳಗಣ ಸ್ಥಳಗಳಲ್ಲಿ ಬ್ಯಾಂಕಿನ ಶಾಖೆಗಳು ಸದ್ಯದಲ್ಲಿಯೇ ತೆರೆಯಲಿವೆ:
(1) ಬಳ್ಳಾರಿ; (2) ರಾಯದುರ್ಗ ಮತ್ತು (3) ಕೊಟ್ಟೂರು.
ಈಗಾಗಲೇ ಬ್ಯಾಂಕಿಗೆ ೩೬ ಶಾಖೆಗಳಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುರಕ್ಷಿತತೆ ಮತ್ತು ಭದ್ರತೆಗಳಿಗೆ ಅಗ್ರಗಣ್ಯ ಸ್ಥಾನ ಪಡೆದಿದೆ.
ಒಟ್ಟು ಚಲಾವಣೆ ಭಂಡವಾಳ 3½ ಕೋಟಿ ರೂಪಾಯಿಗಳಿಗೂ ಮಿಕ್ಕಿದೆ.
THE CANARA BANKING CORPORATION LTD.,
Estd: 1906] [H. O: UDIPI (S India)

ನವಯುಗ

ಉಡುಪಿ, ಗುರುವಾರ ೧೭-೯-'೫೩

ಮಹತ್ವದ ಎಚ್ಚರಿಕೆ

ಕಾಂಗ್ರೆಸ್ ಪಕ್ಷವು ಗಂಭೀರವಾಗಿ ವಿಚಾರಿಸಬೇಕಾದ ಮತ್ತು ರಾಷ್ಟ್ರವು ಆಸ್ಥೆಯಿಂದ ಗಮನಿಸಬೇಕಾದ ಒಂದು ಮುಖ್ಯ ಸಂಗತಿಯನ್ನು ಪ್ರಸ್ತಾಪಿಸುವುದರಲ್ಲಿ ಈಗ ಔಚಿತ್ಯವುಂಟೆಂದು ನಮ್ಮ ಭಾವನೆ—ಕಾಂಗ್ರೆಸದ ಸಂಘಟನೆ ಈಚೆಗೆ ದುರ್ಬಲ ಹೊಂದುತ್ತಿರುವುದೇ ಎಂಬ ಸಂಶಯವನ್ನುಂಟುಮಾಡುವ ರೀತಿಯಲ್ಲಿ ಘಟನೆಗಳು ಗತಿ ಬದಲಾಯಿಸುತ್ತಿರುವುದನ್ನು ಕಂಡು ನಾವು ಈ ಪ್ರಸ್ತಾಪ ಮಾಡುತಿದ್ದೇವೆ. ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಬಲಾಢ್ಯವಾದ ಅಜೇಯವಾದ ಒಗ್ಗಟ್ಟಿನ ಪ್ರತೀಕವಾದ ಏಕಮೇವಾ ದ್ವಿತೀಯವಾದ ಪ್ರಧಾನ ಸಂಸ್ಥೆಯಾಗಿ ಜನಪ್ರಿಯತೆಯನ್ನು ಗಳಿಸಿಕೊಂಡ ರಾಷ್ಟ್ರೀಯ ಕಾಂಗ್ರೆಸ್ಸು ಇಂದು ತನ್ನ ಮೊದಲಿನ ತೇಜಸ್ಸನ್ನು ಮತ್ತು ವರ್ಚಸ್ಸನ್ನು ಉಳಿಸಿಕೊಂಡಿರುವುದೆ ಎಂಬ ಕುರಿತು ಪ್ರಾಮಾಣಿಕವಾದ ಮತಭೇದಗಳು ಜನರಲ್ಲಿವೆ. ಮಹಾ ಚುನಾವಣೆಗಳು ರಾಷ್ಟ್ರಕ್ಕೆ ಕಾಂಗ್ರೆಸಿನ ಮೇಲಿದ್ದ ಅತಿಶಯವಾದ ಪ್ರೇಮ ಮತ್ತು ವಾತ್ಸಲ್ಯಗಳನ್ನು ನಿರ್ದೇಶಿಸುವಂತಿದ್ದರೂ ವಿರೋಧಿ ಗುಂಪುಗಳನ್ನು ಒಟ್ಟಿಗೆ ತೆಗೆದುಕೊಂಡರೆ, ಕಾಂಗ್ರೆಸು ಅರೆವಾಸಿ ಜನರ ಮೆಚ್ಚಿಗೆಯನ್ನು ಕಳೆದು ಕೊಂಡಿತ್ತೆನ್ನುವುದು ಸ್ಪಷ್ಟ. ಹೆಚ್ಚು ಕಡಿಮೆ ಎಲ್ಲ ರಾಜ್ಯಗಳಲ್ಲೂ ಕೇಂದ್ರದಲ್ಲೂ ಕಾಂಗ್ರೆಸ ಮಂತ್ರಿಮಂಡಳವೇ ಸರಕಾರದ ಹೊಣೆ ಹೊತ್ತು ಕೆಲಸ ಮಾಡುತಿದ್ದರೂ—ಈ ಎರಡು ವರ್ಷಗಳ ಅವಧಿಯಲ್ಲಿ ಜನತೆಯ ಮೇಲೆ ತನ್ನ ಆಳ್ವಿಕೆಯ ಕಾರಣದಿಂದ ಒಳ್ಳೆಯ ಪ್ರಭಾವವನ್ನುಂಟುಮಾಡಲು ಅದಕ್ಕೆ ಸಾಧ್ಯವಾದಂತೆ ತೋರುವುದಿಲ್ಲ. ಈಚೆಗಿನ ಉಪಚುನಾವಣೆಗಳಲ್ಲಿ ಕಾಂಗ್ರೆಸು ನಿಲ್ಲಿಸಿದ ಹುರಿಯಾಳುಗಳು ಸೋತು, ವಿರೋಧಿ ಸದಸ್ಯರೇ ಆರಿಸಿ ಬರುತ್ತಿರುವುದು, ಸಂಸ್ಥೆಯ ಚೈತನ್ಯ ನಿಧಾನವಾಗಿ ನಶಿಸುತ್ತಾ ಸಾಗಿರುವುದರ ದುಶ್ಚಿಹ್ನೆ ಎಂದೇ ಎಲ್ಲರೂ ತಿಳಿದುಕೊಂಡಿರುವರು. ಆದರೆ ಸ್ವತಃ ಕಾಂಗ್ರೆಸು ಸಂಸ್ಥೆ ಹಾಗೂ ಧುರೀಣರು ಈ ಮಾತನ್ನು ಮನಗಂಡಿರುವರೆ ಎಂಬೀ ವಿಷಯದಲ್ಲಿ ಸಂಶಯವುಂಟು--ಏಕೆಂದರೆ ಕಾಂಗ್ರೆಸಾಧ್ಯಕ್ಷ ನೆಹರೂರಂಥ ಕೆಲವೇ ನಿಷ್ಕಾಮಂತ ಧುರೀಣರು ಮಾತ್ರ ಈ ಕುರಿತು ವಿಷಾದ ಪೂರ್ಣವಾದ ಕಳಕಳಿಯನ್ನು ವ್ಯಕ್ತಪಡಿಸಿದ್ದು ಕಾಣುತ್ತದೆಯಲ್ಲದೆ, ಕಾಂಗ್ರೆಸದ ಬೇರೆ ಜನರು ಅಧಿಕಾರದಾಹದಿಂದಲೋ ಎಂಬಂತೆ ತಮ್ಮ ಪಕ್ಷದ ಅಚ್ಚುಕಟ್ಟನ್ನು ಕೆಡಿಸಲು ನೋಡುತಿದ್ದಾರೆ. ಕಾಂಗ್ರೆಸಿಗರು ಸೇವಾಪರವಾದ ತಮ್ಮ ಹಿಂದಿನ ಜೀವನಾದರ್ಶವನ್ನು ಮರೆತು ಅಡಳಿತದ ಅಮಲಿನ ದುಷ್ಪ್ರಭಾವಕ್ಕೆ ಬಲಿಯಾದ ನಿದರ್ಶನ ಇದೆನ್ನಬೇಡವೆ? ಪೆಪ್ಸು ರಾಜ್ಯದಲ್ಲಿ ಕಾಂಗ್ರೆಸು ಸರಕಾರ ರಚಿಸಿದರೂ, ವಿರೋಧಿಗಳ ಪ್ರಾಬಲ್ಯದಿಂದ ಅದು ಬಹುದಿನ ಉಳಿಯದೆ, ಉರುಳಿತು. ಮಧ್ಯ ಭಾರತ ಸರಕಾರದ ಮೇಲೆ ವಿರೋಧೀ ಗುಂಪಿನವರು ಅವಿಶ್ವಾಸದ ಗೊತ್ತುವಳಿ ತಂದರು. ಈ ರಠಾವು ಸೋಲುಂಡುದು ನಿಜ—ಆದರೆ ಅಷ್ಟು ಮಾತ್ರದಿಂದಲೇ ಎಲ್ಲವೂ ಸ್ಥಿರಿಯಾಯಿತೆನ್ನಲಾಗದು. ಹೈದರಾಬಾದಿನಲ್ಲಿ ಕಾಂಗ್ರೆಸು ಸದಸ್ಯರಲ್ಲಿಯೇ ಒಳ ಜಗಳವೆದ್ದು, ನೆಹರೂರವರಿಗೆ ದೂರು ಕೊಂಡೊಯ್ದ ಉದಾಹರಣೆ ಇದೆ. ಮೊನ್ನೆ ಮೊನ್ನೆ ಮೈಸೂರಿನಲ್ಲಿ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರೂ ಕಾಂಗ್ರೆಸ ಮುಖ್ಯಮಂತ್ರಿಗಳೂ ವಿರಸದ ಘಟನೆಗೆ ಕಾರಣರಾದರು. ಅತ್ಯಂತ ದಕ್ಷತೆಯಿಂದ ಕೆಲಸ ನಡೆಸುವ ಮದ್ರಾಸಿನ ರಾಜಾಜಿ ಮಂತ್ರಿಮಂಡಳ ಆಂಧ್ರ ರಾಜ್ಯದ ನಿರ್ಮಾಣದ ಬೆನ್ನಿಗೆಯೇ ಬದಲಾಗಬೇಕೆಂದು ತಂತ್ರಗಳು ತಮಿಳು ನಾಡು ಕಾಂಗ್ರೆಸ್ಸಿನ ಪ್ರೇರಣೆ ಪ್ರೋತ್ಸಾಹಗಳಿಂದ ನಡೆಯುತ್ತಿರುವ ವದಂತಿ ಸಂತೋಷಪ್ರದವಾಗಿಲ್ಲ. ರಾಜಾಜಿಯ ಸ್ಥಾನಕ್ಕೆ ಈಗ ಚ್ಯುತಿ ಒದಗಿದ್ದರೂ ಅದು ಭದ್ರ ಪೀಠವಲ್ಲ—ಮತ್ತು ಕಾಂಗ್ರೆಸಿನ ಒಳಗೆಯೇ ವೈಮನಸ್ಸದ ಅಗ್ನಿ ಕುದಿಯುತ್ತಿರುವುದೆಂಬುದನ್ನು ಈಗಿನ ಶಾಂತ ವಾತಾವರಣ ಮುಚ್ಚಿಡುವಂತೆಯೂ ಇಲ್ಲ. ತಿರುಕೊಚ್ಚಿಯ ಮಂತ್ರಿಮಂಡಳ ಉತ್ಕಟ ಪರಿಸ್ಥಿತಿಯನ್ನೆದುರಿಸುತ್ತಿದೆಯಾಗಿ ಈಗ ತಾನೆ ವರದಿ ಬಂದಿದೆ—ತಮಿಳುನಾಡು ಕಾಂಗ್ರೆಸಿನ ನಿರ್ಧಾರವೊಂದನ್ನು ಮುಂದಿಟ್ಟುಕೊಂಡು, ಮಂತ್ರಿಮಂಡಳದಲ್ಲಿ ಆ ಪಕ್ಷದ ಸದಸ್ಯರಾಗಿದ್ದ ಶ್ರೀ ಎ. ಚಿದಂಬರನಾಥ ನಾಡರರು ರಾಜೀನಾಮೆ ಸಲ್ಲಿಸಿದ್ದಾರೆ-ಇನ್ನು ಅಲ್ಲಿ ಕಾಂಗ್ರೆಸಿನ ಕೈ ನಡೆಯುವುದು ಕಷ್ಟ. ಇವೆಲ್ಲ ಏನನ್ನು ತೋರಿಸುತ್ತವೆ? ಕಾಂಗ್ರೆಸಿನಲ್ಲಿ ಮತೈಕ್ಯವಿಲ್ಲೆಂಬುದನ್ನೆ ಅಲ್ಲವೆ? ಇಂಥ ಅಪ್ರಿಯ ಪ್ರಸಂಗಗಳು ಬಹಿರಂಗದಲ್ಲಿ ಚರ್ಚಿಸಲ್ಪಡಬಾರದೆಂದು ಎಲ್ಲವೂ ಪಕ್ಷದ ಚೌಕಟ್ಟಿನಲ್ಲಿಯೇ ಇತ್ಯರ್ಥ ಹೊಂದಬೇಕೆಂದೂ ಕಾಂಗ್ರೆಸದ ಪ್ರಧಾನ ಕಾರ್ಯದರ್ಶಿಗಳು ಪರಿಪತ್ರ ಹೊರಡಿಸಿರುವರು—ಆದರೆ ಒಳ ಜಗಳವೇ ಎಲ್ಲ ಅನರ್ಥಕ್ಕೆ ಹೇತುವೆಂದಿರುವಾಗ, ಬಹಿರಂಗ ಕಲಹ ಬೇಡವೆನ್ನುವ ಉಪದೇಶ ಶಾಶ್ವತ ಪರಿಣಾಮವುಂಟುಮಾಡದು. ಕಾಂಗ್ರೆಸ ವರಿಷ್ಠರು ತಮ್ಮ ಸಂಸ್ಥೆಯಲ್ಲಿ ಮೂಡಿದ ದೌರ್ಬಲ್ಯದ ದುಶ್ಚಿಹ್ನೆಗಳು ನೀಡುವ ಮಹತ್ವದ ಎಚ್ಚರಿಕೆಯನ್ನು ಕಿವಿಗೊಟ್ಟು ಕೇಳಿ, ಕಾಂಗ್ರೆಸದ ಬಲಪಡಿಸಲು ತಕ್ಕುದಾದ ಕ್ರಮ ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿರುತ್ತದೆ.

ಶಾಂತಿ ಮಾರ್ಗದ ಹೊಸ ಆತಂಕ

ರಾಷ್ಟ್ರಸಂಘದ ಗೊತ್ತುವಳಿ ಕಮ್ಯೂನಿಸ್ಟರಿಗೆ ಮಾನ್ಯವಿಲ್ಲ

ಈ ವಾರ ಲೋಕದ ಲಕ್ಷ್ಯವನ್ನು ಆಕರ್ಷಿಸುವ ಘಟನೆ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನವೆಂದೆನ್ನಬೇಕು ಇದೇ ಮಂಗಳವಾರ ದಿನ ಎಂಟನೇ ವಾರ್ಷಿಕಾಧಿವೇಶನವು ಕೂಡಿರುತ್ತದೆ. ಇದರ ಮುಂದೆ ಕೊರಿಯಾ, ಟ್ಯುನೀಸಿಯಾ ಮತ್ತು ಮೊರೊಕ್ಕೊ, ದಕ್ಷಿಣ ಆಫ್ರಿಕೆಯ ವರ್ಣ ದ್ವೇಷದ ಪ್ರಶ್ನೆ ಮುಂತಾದವುಗಳು ಇವೆ. ಭಾರತ--ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾಗಳ ನಡುವೆ ವಿಚಾರ ವಿನಿಮಯ ನಡೆಸಿ, ವರ್ಣಭೇದದ ಧೋರಣೆಯ ಕುರಿತು ವರದಿ ಮಾಡಲು ರಾಷ್ಟ್ರ ಸಂಘ ನೇಮಿಸಿದ್ದ ಸಮಿತಿಯು ತನ್ನ ಕಾರ್ಯದಲ್ಲಿ ವಿಫಲ ಗೊಂಡುದನ್ನು ವರದಿ ಮಾಡಿದೆ ಎಂದು ತಿಳಿಯುತ್ತೇವೆ. ದಕ್ಷಿಣ ಆಫ್ರಿಕಾ ಈ ಸಮಿತಿಯೊಂದಿಗೆ ಸಹಕರಿಸಲಿಕ್ಕೆ ಒಡಂಬಡದಿದ್ದುದರಿಂದ ಇದನ್ನು ಮೊದಲೇ ಊಹಿಸಿದ್ದೆವು. ಟ್ಯೂನೀಸಿಯಾ ಮತ್ತು ಮೊರೊಕ್ಕೋದ ಪ್ರಶ್ನೆಗಳು ಫ್ರಾನ್ಸಿನ ಆಂತರಿಕ ವ್ಯವಹಾರಕ್ಕೆ ಸಂಬಂಧಿಸಿದವುಗಳೆಂದು ಭದ್ರತಾ ಮಂಡಳವು ತೀರ್ಮಾನಿಸಿದ್ದಿತು ಸಾಮಾನ್ಯಾಧಿವೇಶನದಲ್ಲಿ ಇದನ್ನುಮರಳಿ ಪ್ರಸ್ತಾಪಿಸುವುದರಿಂದ ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಲೋಕ ನೋಡುವಂತಾದೀತು-ಹಾಗೆಂದು ಸಾಮಾನ್ಯಾಧಿವೇಶನದಲ್ಲಿ ಅದಕ್ಕೆ ಪರಿಹಾರ ಮಾರ್ಗ ಯೋಜಿಸಲ್ಪಡುವುದು ದೂರದ ಮಾತು. ಇವನ್ನು ಬಿಟ್ಟರೆ ರಾಷ್ಟ್ರ ಸಂಘದ ಈ ಸಭೆ ಕೊರಿಯಾದ ವಿಷಯವನ್ನು ಎತ್ತಿಕೊಳ್ಳುವುದೆಂದು ಹೇಳಬಹುದು. ಅಗೋಸ್ತು ೨೮ರಂದು ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಕೊರಿಯಾ ಯುದ್ಧ ವಿರಾಮದ ಬಳಿಕ ಸೇರಲಿರುವ ರಾಜಕೀಯ ಪರಿಷತ್ತಿನಲ್ಲಿ ತನ್ನ ಪರವಾಗಿ ಯುದ್ಧಾಸಕ್ತ ರಾಷ್ಟ್ರಗಳು ಮಾತ್ರ ಭಾಗವಹಿಸಬೇಕೆಂದೂ ಇದಿರು ಕಡೆಯವರು ಇಚ್ಛಿಸಿದರೆ ರಶಿಯಾ ಅವರ ಪಕ್ಷ ವಹಿಸಲು ಅಡ್ಡಿ ಇಲ್ಲವೆಂದೂ ನಿರ್ಣಯಿಸಿದ್ದಿತು. ಇದನ್ನು ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿ ಡಾ. ಡಾಗ ಹೆಮ್ಮರ ಶೆಲ್ಡರು ಕಮ್ಯೂನಿಸ್ಟ್ ಪಕ್ಷದ ಚೀನಾ ಮತ್ತು ಉತ್ತರ ಕೊರಿಯಾಗಳಿಗೆ ತಿಳಿಸಿದ್ದರು. ಆ ಬಳಿಕ ಯುದ್ಧಾಸಕ್ತ ರಾಷ್ಟ್ರಗಳು ಸಪ್ಟೆಂಬರ ೧ನೇ ದಿನಾಂಕ ಸಭೆ ಸೇರಿ ತಟಸ್ಥ ರಾಷ್ಟ್ರಗಳಲ್ಲೊಂದಾದ ಸ್ವೀಡನ್ನದ ಮೂಲಕ ಕೊರಿಯಾದ ರಾಜಕೀಯ ಪರಿಷತ್ತು ಜಿನೇವಾ, ಸಾನ್ ಫ್ರಾನ್ಸಿಸ್ಕೊ ಅಥವಾ ಹೊನಲುಲುಗಳಲ್ಲಿ ಎಲ್ಲಾದರೊಂದೆಡೆ ಸೇರಬೇಕೆಂದೂ ಅಕ್ಟೋಬರ ೧೫ರಂದು ಪರಿಷತ್ತಿನ ಕಾರ್ಯಾರಂಭವಾಗಬೇಕೆಂದೂ ಕಮ್ಯೂನಿಸ್ಟರಿಗೆ ತಿಳಿಸಿದ್ದುವು.

ಕಮ್ಯೂನಿಸ್ಟರ ತಿರಸ್ಕಾರ

ಆದರೆ ಮೊದಲೇ ಊಹಿಸಿದಂತೆ, ಯುದ್ಧಾಸಕ್ತ ರಾಷ್ಟ್ರಗಳು ಮಾತ್ರ ರಾಷ್ಟ್ರ ಸಂಘದ ಪರವಾಗಿ ಕೊರಿಯಾದ ರಾಜಕೀಯ ಪರಿಷತ್ತಿನಲ್ಲಿ ಭಾಗವಹಿಸುವುದಕ್ಕೆ ಕಮ್ಯೂನಿಸ್ಟರು ಒಪ್ಪದೆ ಆ ನಿರ್ಣಯವನ್ನು ಪುನರಾಲೋಚಿಸಬೇಕಾದ ಪ್ರಸಂಗ ತಂದೊಡ್ಡಿರುವರು. ಚೀನೀ ಪ್ರಧಾನಿ ಚೌ ಎನ್‌ಲಾಯರೂ ಉತ್ತರ ಕೊರಿಯಾದ ಸರಕಾರವೂ ರಾಷ್ಟ್ರ ಸಂಘದ ನಿರ್ಣಯವನ್ನು ಸಂಪೂರ್ಣವಾಗಿ ಸ್ವೀಕಾರ ಮಾಡಲು ಅಸಮ್ಮತಿ ವ್ಯಕ್ತಪಡಿಸಿ ಕೆಲವು ಸಲಹೆಗಳನ್ನು ನೀಡಿರುವುದರಿಂದ, ರಾಷ್ಟ್ರ ಸಂಘದ ಈ ಅಧಿವೇಶನದ ವಾತಾವರಣ ಗಂಭೀರವಾಗಿ ಪರಿಣಮಿಸಿದೆ. ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಗಳಿಗೆ ಚೌಎನ್‌ಲಾಯರು ಕಳಿಸಿದ ಕೇಬಲ್ ಸಂದೇಶದಲ್ಲಿ "ರಾಜಕೀಯ ಪರಿಷತ್ತಿನಲ್ಲಿ ರಾಷ್ಟ್ರ ಸಂಘದ ಕಡೆಯಿಂದ ಯುದ್ಧಾಸಕ್ತ ರಾಷ್ಟ್ರಗಳು ಮಾತ್ರವಲ್ಲದೆ, ರಶಿಯಾ, ಭಾರತ, ಇಂಡೋನೇಶಿಯಾ, ಪಾಕಿಸ್ತಾನ ಮತ್ತು ಬರ್ಮಾಗಳಿಗೆ ಸ್ಥಾನವಿರಬೇಕೆಂದೂ ರಾಜಕೀಯ ಪರಿಷತ್ತು ಒಂದು ಚಕ್ರಗೋಷ್ಠಿಯ ಸ್ವರೂಪವನ್ನುತಳೆದು,ಅದರನಿರ್ಣಯಗಳು ಕೊರಿಯಾ ಯುದ್ಧದಲ್ಲಿ ಭಾಗವಹಿಸಿದ ಎರಡೂ ಪಕ್ಷಗಳಿಗೆ ಬಂಧನಕಾರಿಯಾಗಬೇಕೆಂದೂ ರಾಷ್ಟ್ರಸಂಘದ ಎಂಟನೇ ಸಾಮಾನ್ಯಾಧಿವೇಶನ ಕಾಲದಲ್ಲಿ ಈ ಕುರಿತು ಚರ್ಚೆ ನಡೆಯುವಾಗ ಚೀನೀ ಹಾಗೂ ಉತ್ತರ ಕೊರಿಯಾದ ಪ್ರತಿನಿಧಿಗಳಿಗೆ ಭಾಗವಹಿಸಲು ಅವಕಾಶವಿರಬೇಕೆಂದೂ ರಾಜಕೀಯ ಪರಿಷತ್ತಿನಲ್ಲಿ ಭಾಗ ವಹಿಸಬೇಕಾದ ರಾಷ್ಟ್ರಗಳ ಪ

ಟ್ರಿಯನ್ನು ಮತ್ತು ಪರಿಷತ್ತಿನ ಸ್ವರೂಪವನ್ನು ಪುನರ್ವಿಮರ್ಶಿಸಿ ಅಂಗೀಕರಿಸಿದ ಬಳಿಕವೇ ರಾಜಕೀಯ ಪರಿಷತ್ತು ನಡೆಯಬೇಕಾದ ಸ್ಥಳ ಮತ್ತು ತಾರೀಕುಗಳನ್ನು ನಿರ್ಧರಿಸಬಹುದೆಂದೂ" ತಿಳಿಸಿರುವರು. ರಾಷ್ಟ್ರಸಂಘ ಈಗ ಅಂಗೀಕರಿಸಿರುವ ಗೊತ್ತುವಳಿಯಲ್ಲಿ ಏಷ್ಯಾದ ಯಾವುದೇ ರಾಷ್ಟ್ರಕ್ಕೆ ಪ್ರಾತಿನಿಧ್ಯ ದೊರೆತಿಲ್ಲವೆಂದೂ ಅದರಲ್ಲೂ ಕೊರಿಯಾದ ಶಾಂತಿಗೆ ನೆರವಾದ ಭಾರತದಂಥ ಪ್ರಧಾನ ರಾಷ್ಟ್ರಕ್ಕೆ ಪ್ರಾತಿನಿಧ್ಯವನ್ನು ನಿರಾಕರಿಸಿರುವುದು ಪ್ರಮಾದವೇ ನಿಜವೆಂದೂ ಕಮ್ಯೂನಿಸ್ಟರು ಹೇಳಿರುವದಾಗಿ ತಿಳಿಯುತ್ತದೆ. ಏಶಿಯಾದ ಮಹಾ ಸಮಸ್ಯೆಗಳಲ್ಲೊಂದಾದ ಕೊರಿಯಾದ ಪ್ರಶ್ನೆ ಇತ್ಯರ್ಥ ಹೊಂದುವಾಗ, ಏಶಿಯನ್ ರಾಷ್ಟ್ರಗಳ ಸ್ವರಕ್ಕೆ ಬೆಲೆ ಬರಬೇಕೆಂದು ಕಮ್ಯೂನಿಸ್ಟ ಪಕ್ಷ ಅಪೇಕ್ಷಿಸಿದಂತಿದೆ.

ಅಮೇರಿಕದ ನಕಾರ

ಇದನ್ನು ಅಮೇರಿಕಾ – ಬ್ರಿಟನುಗಳು ಮನ್ನಿಸುತ್ತವೆಯೇ ಇಲ್ಲವೆಂಬುದೇ ಉತ್ತರ. ಅಮೇರಿಕಾದ ವಿದೇಶ ಖಾತೆಯ ಉಪಕಾರ್ಯದರ್ಶಿಗಳು ಕಮ್ಯೂನಿಸ್ಟರ ಸಲಹೆ ಸೂಚನೆಗಳನ್ನು ಮಾನ್ಯ ಮಾಡುವಂತಿಲ್ಲವೆಂದು ಖಂಡತುಂಡವಾಗಿ ಹೇಳಿದ್ದಾರೆ. ತನ್ನ ಪರವಾಗಿ ಯಾರ್ಯಾರು ಭಾಗವಹಿಸಬೇಕೆಂಬುದನ್ನು ಸಂಯುಕ್ತ ರಾಷ್ಟ್ರ ಸಂಘವೇ ನಿರ್ಧರಿಸಬಲ್ಲುದಲ್ಲದೆ ಇದಿರು ಪಕ್ಷವಾದ ಕಮ್ಯೂನಿಸ್ಟ ರಾಷ್ಟ್ರಗಳಲ್ಲವೆಂದವರು ಸ್ಪಷ್ಟ ಮಾತುಗಳಲ್ಲಿ ಹೇಳಿರುವರು; ಮತ್ತು ಚಕ್ರ ಗೋಷ್ಠಿಯ ರೂಪದಲ್ಲಿ ಪರಿಷತ್ತು ಕಾರ್ಯ ನಿರ್ವಹಿಸುವಂತಿಲ್ಲವೆಂಬುದನ್ನೂ ಅವರು ವಿಶದಪಡಿಸಿರುವರು. ಸಾಮಾನ್ಯಾಧಿವೇಶನದಲ್ಲಿ ಈ ಪ್ರಶ್ನೆ ಎತ್ತಲ್ಪಟ್ಟಾಗ, ಅದನ್ನು ಹತ್ತಿಕ್ಕಲಿಕ್ಕೆ ಅಮೇರಿಕಾ ಹಟತೊಟ್ಟಿದೆ; ಮತ್ತು ಈ ಸಲ ಬ್ರಿಟನು ಅದನ್ನು ಬೆಂಬಲಿಸುವ ಲಕ್ಷಣ ಕಂಡುಬರುತ್ತದೆ. ಚರ್ಚೆಯ ಕಾಲದಲ್ಲಿ ಕಮ್ಯೂನಿಸ್ಟ ಪಕ್ಷದ ಪ್ರತಿನಿಧಿಗಳನ್ನು ಉಪಸ್ಥಿತರಿರಲು ಆಮಂತ್ರಿಸುವುದಕ್ಕೂ ಅಮೇರಿಕಾದ ತೀವ್ರ ವಿರೋಧವಿದೆ. ಈ ಚರ್ಚೆಯಲ್ಲಿ ಇದಿರು ಕಡೆಯವರು ಭಾಗವಹಿಸಬೇಕಾದ ಅಗತ್ಯವೇ ಇಲ್ಲವೆಂದದು ಹೇಳುತ್ತದೆ. ಕೊರಿಯಾದ ಪ್ರಶ್ನೆಯ ಚರ್ಚೆಯ ಕಾಲದಲ್ಲಾಗಲೀ ಬೇರೆಯೇ ರೀತಿಯಲ್ಲಾಗಲೀ ಕಮ್ಯೂನಿಸ್ಟ ಚೀನಾಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ಕೊಡುವ ವಿಷಯ ಚರ್ಚೆಗೆ ಬಂದೇ ಬರುವುದು-ಆಗ ಕಳೆದ ವರ್ಷ ಮಾಡಿದಂತೆ ಈ ವಿಷಯವನ್ನು ಇನ್ನು ಒಂದು ವರ್ಷದ ವರೆಗೆ ಹಿಂದೂಡಲು ಅಮೇರಿಕಾ ಸೂಚಿಸುವ ನಿರೀಕ್ಷೆ ಇದೆ; ಮತ್ತು ಕಮ್ಯೂನಿಸ್ಟ ಚೀನಾವನ್ನು ತಾನು ಮನ್ನಿಸಿದ್ದರೂ, ಬ್ರಿಟನು ಪ್ರಕೃತ ವಿಷಯ ಹಿಂದೂಡಲ್ಪಡುವುದೇ ಹಿತವೆಂದು ಹೇಳಿ ಅಮೇರಿಕಾವನ್ನು ಬೆಂಬಲಿಸುವುದು ಅಸಂಭವವಲ್ಲ. ಈ ಗೊಂದಲದ ನಡುವೆ ಸಂಪ್ರದಾಯದಂತೆ ಹೊಸತಾಗಿ ಅಧ್ಯಕ್ಷರೊಬ್ಬರನ್ನು ಆರಿಸಬೇಕು ಭಾರತದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಮತ್ತು ಥೈಲೇಂಡದ ವಿದೇಶ ಸಚಿವ ರಾಜಕುಮಾರ ವಾನ್‌ವೈಥಯಾಕನ್ ಇವರು ಪ್ರತಿಸ್ಪರ್ಧಿಗಳಾಗಿರುವರು. ಅಮೇರಿಕಾ ಬ್ರಿಟನು ಪಾಕಿಸ್ತಾನ ಮುಂತಾದ ಹೆಚ್ಚಿನ ರಾಷ್ಟ್ರಗಳು ವಿಜಯಲಕ್ಷ್ಮೀಯವರ ಉಮೇದ್ವಾರಿಕೆಯನ್ನು ಸಮರ್ಥಿಸುತ್ತವೆ. ಆದರೆ ರಾಜಕುಮಾರರು ದಕ್ಷಿಣ ಅಮೇರಿಕಾದ ೨೦ ರಾಷ್ಟ್ರಗಳ ಬೆಂಬಲವನ್ನು ನಂಬಿ ಕುಳಿತಿರುವರು. ಈಚೆಗಿನ ವರದಿಯಂತೆ ಈ ಬೆಂಬಲ ಅನಿಶ್ಚಿತ ರೀತಿಯದು-ಅಲ್ಲಿಯ ರಾಷ್ಟ್ರಗಳ ಪ್ರತಿನಿಧಿಗಳ ಮನವೊಲಿಸಲು ರಾಜಕುಮಾರರು ಪ್ರಯತ್ನಿಸುತಿದ್ದರೂ. ಆ ರಾಷ್ಟ್ರಗಳ ಸರಕಾರಗಳಲ್ಲಿ ಕೆಲವು ವಿಜಯಲಕ್ಷ್ಮೀಯವರ ಉಮೇದ್ವಾರಿಕೆಯನ್ನು ಅನುಮೋದಿಸಬೇಕೆಂದು ಈಗಾಗಲೇ ತಂತಮ್ಮ ಪ್ರತಿನಿಧಿಗಳಿಗೆ ಸೂಚಿಸಿರುವುದಾಗಿ ತಿಳಿದಿದೆ. ಇದು ನಿಜವಿದ್ದರೆ ವಿಜಯಲಕ್ಷ್ಮೀ ಶ್ರೀಮತಿ ಪಂಡಿತರಿಗೆ ಒಲಿಯುವುದರಲ್ಲಿ ಸಂದೇಹವಿಲ್ಲ.

ಅಡೆನಾರರ ವಿಜಯ

ಪಶ್ಚಿಮ ಜರ್ಮನಿಯೊಂದಕ್ಕೆ ಮಾತ್ರವಲ್ಲ ಜರ್ಮನಿಯ ಏಕೀಕರಣ ಮತ್ತು ಯುರೋಪಿನ ರಾಜಕಾರಣದ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡುವ ಮಹತ್ವದ ಕಾರ್ಯಕ್ರಮವು ಕಳೆದ ವಾರ ಅಮೇರಿಕನ್ ಮಿತ್ರರ ವಶದಲ್ಲಿರುವ ಪಶ್ಚಿಮ ಜರ್ಮನಿ ಪ್ರದೇಶದಲ್ಲಿ ನಡೆಯಿತು-ಚುನಾವಣೆಗಳ ಹೋರಾಟವೇ ಅದು. ಇದರಲ್ಲಿ ಮುಖ್ಯವಾಗಿ ನಾಲ್ಕು ಪ್ರಮುಖ ಪಕ್ಷಗಳು ಭಾಗ ವಹಿಸಿದ್ದುವು. ಅವುಗಳಲ್ಲಿ ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅಡೆನಾರರ ವರ್ಚಸ್ಸಿರುವ ಕ್ರಿಶ್ಚನ್ ಪ್ರಜಾಪ್ರಭುತ್ವ ಪಕ್ಷಕ್ಕೆ ಅತ್ಯಧಿಕ ಬೆಂಬಲ ದೊರೆತಿರುವುದು. ಪಶ್ಚಿಮ ಜರ್ಮನ್ ಪಾರ್ಲಿಮೆಂಟಿನ ೪೮೭ ಸ್ಥಾನಗಳಲ್ಲಿ ೨೪೪ ಸ್ಥಾನಗಳು ಅಡೆನಾರರ ಪಕ್ಷಕ್ಕೆ ದೊರೆತಿದೆ; ಹೀಗೆ ನಿಚ್ಚಳ ಬಹುಮತವನ್ನು ಪಡೆದು ಡಾ. ಅಡೆನಾರರೇ ಪುನಃ ಪ್ರಧಾನಮಂತ್ರಿಗಳಾಗಿ ನೇಮಕಗೊಂಡಿರುವರು. ಇದು ಅಮೇರಿಕಕ್ಕೆ ದೊರೆತ ಭಾರಿ ವಿಜಯವೆಂದೇ ತೀರ್ಮಾನಿಸಬಹುದು-ಕಮ್ಯೂನಿಸ್ಟ ಪಕ್ಷವು ಚುನಾವಣೆಗಳಲ್ಲಿ ಸ್ಪರ್ಧೆ ಹೂಡಿದ್ದರೂ ಅದಕ್ಕೆ ಒಂದೇ ಒಂದು ಮತವೂ ದೊರೆಯದಿರುವುದು ಅರ್ಥಪೂರ್ಣವಾಗಿರುತ್ತದೆ. ಪೂರ್ವ ಜರ್ಮನಿಯ ಪ್ರದೇಶದಲ್ಲಿ ಎಂಟು ವರ್ಷಗಳ ದೀರ್ಘಕಾಲ ಕಮ್ಯೂನಿಸ್ಟರ ಆಳ್ವಿಕೆ ನಡೆದಿದ್ದರೂ ಪಶ್ಚಿಮ ಜರ್ಮನಿಗೆ ಇದರ ಬಿಸಿ ಹತ್ತಿಲ್ಲವೆಂದೂ ರಶಿಯಾದ ಕಡೆಗೆ ಜನರ ಒಲವು ತಿರುಗಿರುವುದಿಲ್ಲೆಂದೂ ಇದು ಸಿದ್ಧಗೊಳಿಸುತ್ತದೆ. ಜರ್ಮನ್ ರಾಷ್ಟ್ರಪಕ್ಷವೆಂಬ ಇನ್ನೊಂದು ಪಕ್ಷ ಕೆಲವೇ ಸ್ಥಾನಗಳನ್ನು ಸಂಪಾದಿಸಿದೆ. ಹಿಂದಿನ ನಾಜೀ ಧೋರಣೆಯ ನೆರಳನ್ನು ಅನುಸರಿಸುವ ಈ ಪಕ್ಷವನ್ನು ಈಗಿನ ಜರ್ಮನ್ ಜನತೆ ಮೆಚ್ಚದಿರುವುದನ್ನು ನಾವು ತಿಳಿದುಕೊಳ್ಳಬಲ್ಲೆವು. ಡಾ. ಅಡೆನಾರರ ಮುಂದೆ ಯಶಸ್ವಿ ಪ್ರತಿಭಟನೆಯನ್ನು ಕೊಟ್ಟದ್ದು ಪ್ರಜಾಸತ್ತಾತ್ಮಕ ಸಮಾಜವಾದೀ ಪಕ್ಷವೆಂದು ಚುನಾವಣೆಗಳ ಫಲಿತಾಂಶ ತಿಳಿಸುತ್ತದೆ. ಈ ಪಕ್ಷದಿಂದ ೧೫೦ ಮಂದಿ ಪಾರ್ಲಿಮೆಂಟಿಗೆ ಆರಿಸಿ ಬಂದಿದ್ದು, ಪ್ರಬಲವಾದ ಪ್ರತಿಪಕ್ಷವಾಗಿ ಇದು ಕೆಲಸಮಾಡಲಿದೆ. ದಿವಂಗತ ಡಾ. ಶುಮೇಕರರ ಅನುಯಾಯಿ ಹೆರ್ ಎರಿಕ್ ಒಲೆನ್ ಹಾವರು ಈ ಪಕ್ಷದ ನಾಯಕ. ಇವರ ಹಾಗೂ ಅಡೆನಾವರ ಧೋರಣೆಯು ಜರ್ಮನರಿಗೆ ಪ್ರಿಯವಾಗಿರುತ್ತದೆ; ಕೇವಲ ಪ್ರಾಶಸ್ತ್ಯಾನುಕ್ರಮದಲ್ಲಿ ಮಾತ್ರ ಅಂತರ ಕಂಡುಬರುತ್ತದೆ. ಅಡೆನಾರರು ಪಶ್ಚಿಮ ಜರ್ಮನಿಯ ಸೈನ್ಯಬಲ ಹೆಚ್ಚಿಸಿ ಆಂಗ್ಲೋ ಅಮೇರಿಕನ್ನರೊಡನೆ ಹೆಜ್ಜೆ ಇಡಬೇಕೆಂದು ಹೇಳುತ್ತಾರೆ. ಜರ್ಮನಿಯ ಏಕೀಕರಣಕ್ಕೆ ಈ ಮಾರ್ಗ ಅನುಸರಿಸುವ ಬದಲು ರಶಿಯಾದೊಡನೆ ಶಾಂತ ರೀತಿಯಲ್ಲಿ ಸಮಸ್ಯೆ ಪರಿಹಾರ ಮಾಡುವ ವ್ಯವಹಾರ್ಯ ಮಾರ್ಗವೊಂದನ್ನು ಹಿಡಿಯಬೇಕೆಂದು ಹೆರ್ ಎರಿಕ್ ಒಲೆನ್ ಹಾವರು ಅಭಿಪ್ರಾಯ ಪಡುತ್ತಾರೆ. ರಶಿಯಾದಲ್ಲಿ ಅಮೇರಿಕಾದ ವಿರುದ್ಧ ಪ್ರಬಲ ಆಕ್ಷೇಪಗಳು ಕಾಣುತ್ತವೆ. ಪಶ್ಚಿಮ ಜರ್ಮನಿಯ ಚುನಾವಣೆಗಳ ಕಾಲದಲ್ಲಿಯೇ ಅಪಸ್ವರವೆತ್ತಿದ್ದ ರಶಿಯಾ, ಚುನಾವಣೆಯ ಫಲಿತಾಂಶ ಅಮೇರಿಕಾದ ಕಡೆಗೆ ಒಲಿದುದನ್ನು ಕಂಡಬಳಿಕ ನೊಂದುಕೊಳ್ಳುವುದು ಸ್ವಾಭಾವಿಕ; ಮತ್ತು ಈ ಸೋಲಿನ ಕಾರಣದಿಂದಲೇ ಅದು ಪೂರ್ವ ಜರ್ಮನಿಯನ್ನು ಸಂಪೂರ್ಣ ಸ್ವತಂತ್ರ ರಾಷ್ಟ್ರವಾಗಿ ಮಾಡುವಂತೆ ನೋಡಿದರೆ, ಜರ್ಮನಿಯ ಏಕೀಕರಣವೆಂಬ ಶಬ್ದಕ್ಕೆ ಅರ್ಥವೇ ಉಳಿಯಲಿಕ್ಕಿಲ್ಲ. ಕನಿಷ್ಠಪಕ್ಷ ಏಕೀಕರಣ ಹಾಗೂ ಶಾಂತಿ ಒಪ್ಪಂದದ ತೀರ್ಮಾನವಾದರೂ ಹಿಂದೆ ಬೀಳುವುದು ನಿಶ್ಚಯ. ಆದರೆ-ಇದು ಮಹತ್ವದ ಮಾತಲ್ಲ–ಆಂಗ್ಲೋ ಅಮೇರಿಕನ್ನರ ಕೈಮೇಲಾದುದೇ ಗಮನೀಯವಾದ ಅಂಶ.

ಚಂದಾದಾರ ಬಂಧುಗಳಲ್ಲಿ ವಿಶೇಷ ವಿಜ್ಞಾಪನೆ.

- ಪದೇ ಪದೇ ನೆನಪಿಸಿಕೊಂಡರೂ ನಮ್ಮ ಕೆಲವು ಚಂದಾದಾರ ಬಂಧುಗಳು ಬಾಕಿಯಾದ ಚಂದಾಹಣವನ್ನು ಇನ್ನೂ ಕಳುಹಿಸದಿರುವುದು ನಮಗೆ ಬೇಸರವಾಗುತ್ತದೆ. ಅಂಥವರು ಇನ್ನಾದರೂ ತಮ್ಮ ಬಾಕಿಯನ್ನು ಆದಷ್ಟು ತ್ವರಿತ ಕಳುಹಿಸಿಕೊಟ್ಟರೆ ತುಂಬ ಉಪಕಾರವಾಗುವುದು.
- ಇದೇ ಅಗೋಸ್ತಿಗೆ ಚಂದಾ ಅವಧಿ ಮುಗಿದವರು ತಮ್ಮ ಚಾಲ್ತಿ ವರ್ಷದ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುವ ಕೃಪೆಮಾಡುವಂತೆಯೂ ಅಪೇಕ್ಷಿಸುತ್ತೇವೆ.
- ಅಂತೂ ಚಂದಾ ಹಣವಾಗಲೀ ಯಾವದೇ ತರದ ಉತ್ತರವಾಗಲೀ ಸಕಾಲದಲ್ಲಿ ಬಾರದಿದ್ದರೆ ನಾವು ಬಾಕಿಗಾಗಿ ಪತ್ರಿಕೆಯನ್ನು ವಿ. ಪಿ. ಮಾಡಿ ಕಳುಹಿಸಬೇಕಾಗುತ್ತದೆ. ಆದರೆ ಅಂತಹ ಪರಿಸ್ಥಿತಿಯನ್ನು ದಯಮಾಡಿ ಒದಗಿಸದಿರಬೇಕಾಗಿ ಕೇಳಿಕೊಳ್ಳುತ್ತೇವೆ. ಚಂದಾಹಣವನ್ನು ಮನಿಆರ್ಡರು ಮೂಲಕ ಕಳುಹಬಹುದು, ಯಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬಹುದು. ಅಲ್ಲದೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಯಾವುದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಕೊಡಬಹುದು. ಇತಿ ತಮ್ಮ ಶ್ರೇಯಾಭಿಲಾಷಿ,

ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ-ಸಂಪಾದಕ.

ವಿ. ಸೂ. ಯಾರಿಗಾದರೂ ಮುಂದೆ ಪತ್ರಿಕೆ ಬೇಡವೆಂದಿದ್ದರೆ, ಬಾಕಿಯನ್ನು ಕಳುಹಿಸಿಕೊಟ್ಟು ಹಾಗೆಯೇ ತಿಳಿಸಿದರೆ ಉಪಕಾರ.

ಉಡುಪಿ

ಹೊಸ ವಾರಪತ್ರಿಕೆ-'ವಿಜಯ' ಎಂಬ ಹೆಸರಿನಿಂದ ಹೊಸ ವಾರ ಪತ್ರಿಕೆಯೊಂದು ಮುಂದಿನ ತಿಂಗಳಿನ 17ರಂದು ಕರ್ನಾಟಕ ಕಮರ್ಶಿಯಲ್ ಕೋಆಪರೇಟಿವ್ ಸಂಸ್ಥೆಯ ನೇತೃತ್ವದಲ್ಲಿ ಹೊರಡಲಿರುವುದೆಂದು ಸಂಬಂಧಪಟ್ಟವರು ಪ್ರಕಟಿಸುತ್ತಾರೆ.

ಮುನಿಸಿಪಲ್ ಕೌನ್ಸಿಲ್ ಸಭೆಯು—ಇದೇ ತಾ 14ರಲ್ಲು ಸಂಜೆ ಚೆರ್ಮನ್ ಶ್ರೀ ಯು ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಆಚಾರ್ಯರು ಸಂತೆ ಮಾರ್ಕೆಟಿನ ಕಂಟ್ರಾಕ್ಟರ [illegible] ಪ್ರಶ್ನೆ [illegible] ರು ಉಪಪ್ರಶ್ನೆಗಳನ್ನು ಶ್ರೀಗಳಾದ ಪಿ. ವಿ. ಆಚಾರ್ ಮತ್ತು ಎಮ್. ವಿ. ಕಾಮತರು ಕೇಳಿದರು. ಚಿನ್ನಮೂರ್ತಿ ಮಸ್ತಿ [illegible] ಶಾಲೆಗೆ ತಾತ್ಕಾಲಿಕವಾಗಿ ಒಬ್ಬ ಹೆಚ್ಚಿನ ಉಪಾಧ್ಯಾಯರ ನೇಮಕ ಸೇಂಕ್ಷನ್ ಮಾಡಲಾಯಿತು. ಸ್ವಾತಂತ್ರ್ಯ ದಿನಾಚರಣೆ ಸಮಿತಿಯು [illegible] ಶ್ರೀ ಗೋಪಾಲ ಕೃಷ್ಣ ಬಲ್ಲಾಳರಿಗೆ [illegible] ಸಂತೆ ಮಾರ್ಕೆಟು, ಮೀನು ಮಾರ್ಕೆಟು, ಮಾಂಸ ಮಾರ್ಕೆಟು ಕಂಟ್ರಾಕ್ಟರು ಕಿಸ್ತು ಹಣವನ್ನು ಪಾವತಿ ಮಾಡದಿದ್ದುದರಿಂದ ಅವರ ಕಂಟ್ರಾಕ್ಟುಗಳನ್ನು ರದ್ದುಗೊಳಿಸಿ ಎಲ್ಲಾ ಮಾರ್ಕೆಟುಗಳನ್ನು ಪುನಃ ಏಲಂ ಮಾಡಬೇಕೆಂದಾಯಿತು.

GOVERNMENT OF MADRAS
Public Works (Information and Publicity) Department.

Relief to the Flood-Stricken in the Godavari districts

APPEAL FOR FUNDS

Sri C. Rajagopalachari, Chief Minister of Madras, has issued the following statement:

The Godavari Flood Relief Fund Committee constituted at the Sheriff's meeting presided over by the Governor [illegible] Wednesday last and have requested [illegible] issue a fresh appeal to the generous public.

As everyone is aware, the people in the two districts of Godavari have suffered much by the recent floods. Relief work is going on. A great deal of assistance has to be organised and given promptly to the unfortunate sufferers. It is only when we give what we happen to possess that the illusion of separateness is to some extent dispelled and the Common bond of humanity is strengthened. The call is VERY URGENT. I appeal for generous contributions. Donations small as well as big may be sent to the "Honorary Treasurer, The Godavari Flood Relief Fund, C/o Imperial Bank of [illegible] Madras-1" or to me. All cheques may kindly be crossed when sent by post

ಉಡುಪಿ

ಉಡುಪಿಯಲ್ಲಿ ವಿದ್ಯಾ ಮಂತ್ರಿಗಳ ಕಾರ್ಯಕಲಾಪ—ಮದ್ರಾಸಿನ ವಿದ್ಯಾಮಂತ್ರಿ ಡಾ| ಎಂ. ವಿ. ಕೃಷ್ಣರಾಯರು ತಾ 10ರಲ್ಲು ಸಂಜೆ ಮಂಗಳೂರಿಗೆ ಬಂದವರು ನೆಟ್ಟಗೆ ಮಣಿಪಾಲಕ್ಕೆ ಬಂದು ರಾತ್ರಿ ಊಟ ಮುಗಿಸಿಕೊಂಡು ಉಡುಪಿಗೆ ಆಗಮಿಸಿದರು. ಉಡುಪಿಯಲ್ಲಿ ಯುವಕ ಕಾಂಗ್ರೆಸಿಗರ ಸಭೆಯಲ್ಲಿ ಭಾಷಣ ಶ್ರೀ ಕೃಷ್ಣ ಮಠ ಸಂದರ್ಶನ ಕಾರ್ಯಕ್ರಮಗಳನ್ನು ರಾತ್ರಿಯೇ ಮುಗಿಸಿದರು.

ಮರುದಿನ (11ರಲ್ಲು)ಬೆಳಿಗ್ಗೆ ಮಲ್ಪೆಗೆ ಹೋಗಿ ಅಲ್ಲಿಯ ಬಂದರವನ್ನು ನೋಡಿದರು. ನಂತರ ಮಣಿಪಾಲಕ್ಕೆ ಪ್ರಯಾಣ ಬೆಳೆಸಿ ಅಲ್ಲಿಯ ಹರಿಜನ ವಿದ್ಯಾರ್ಥಿ ಭವನಕ್ಕೆ ಭೇಟ್ಟಿಯಿತ್ತು ಅಲ್ಲಿಯ ಬೇಡಿಕೆಗಳನ್ನು ಲಾಲಿಸಿದರು. ನಂತರ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಬಂದಾಗ ಪ್ರಿನ್ಸಿಪಾಲ್ ಕೇಪ್ಟನ್ ಮಂಗೇಶರಾವ್ ಮೊದಲಾದವರು ಸ್ವಾಗತಿಸಿ ಕಾಲೇಜನ್ನು ತೋರಿಸಿದರು. ಆ ಮೇಲೆ ಕಾಲೇಜು ವಿದ್ಯಾರ್ಥಿಗಳ ಸಭೆಯಲ್ಲಿ ಕಾಲೇಜು ಸ್ಥಾಪಕರಾದ ಡಾ| ಟಿ. ಎಮ್. ಎ. ಪೈಗಳು ಮಂತ್ರಿಗಳನ್ನು ಸ್ವಾಗತಿಸುತ್ತಾ, ಕಾಲೇಜಿಗೆ ಸರಕಾರದ ದ್ರವ್ಯ ಸಹಾಯವನ್ನಪೇಕ್ಷಿಸಿದರು. ಮಂತ್ರಿಗಳು ಉತ್ತರವೀಯುತ್ತಾ ಡಾ| ಪೈಗಳ ಸಾಹಸದಿಂದ ಸ್ಥಾಪಿತವಾದ ಈ ಕಾಲೇಜನ್ನು ಕಂಡು ತನಗೆ ಬಹು ಸಂತೋಷವಾಯಿತೆಂದು, ಇಂತಹ ಖಾಸಗಿ ಕಾಲೇಜುಗಳು ಇನ್ನೂ ಅಲ್ಲಲ್ಲಿ ಸ್ಥಾಪಿಸಲ್ಪಡಬೇಕೆಂದು ಕೋರಿದರು. ಈ ಕಾಲೇಜಿಗೆ ಸರಕಾರದ ದ್ರವ್ಯ ಸಹಾಯ ಯಥಾವಕಾಶ ಸಿಗುವುದೆಂದು ಸೂಚಿಸಿದರು. ಈ ಕಾಲೇಜು ಅಖಿಲ ಭಾರತ ವ್ಯಾಪೀ ಸಂಸ್ಥೆಯಾಗಿ ಪರಿಣಮಿಸಲೆಂದೂ ಆಶಿಸಿದರು ಪ್ರಿನ್ಸಿಪಾಲರು ವಂದನೆಗಳನ್ನರ್ಪಿಸಿದರು.

ನಂತರ ಮಂತ್ರಿಗಳು ಮಣಿಪಾಲದ ಹಿಂದೂ ಹೈಸ್ಕೂಲನ್ನು ಸಂದರ್ಶಿಸಿ ಅಲ್ಲಿಯ ಎಂಜಿನಿಯರಿಂಗ್ ಶಾಖೆಯನ್ನು ಉದ್ಘಾಟಿಸಿದರು, ಹೆಡ್ಮಾಸ್ತರ್ ಶ್ರೀ ಯು. ಶಾಂಡಲೀಕ ಶೆಣೈಯವರು ಬಿನ್ನವತ್ತಳೆಯೊಂದನ್ನು ಒಪ್ಪಿಸಿದರು. ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್ ನಡೆಯಿಸುವ ನಡೆಯುವ ವಿದ್ಯಾಸಂಸ್ಥೆಗಳ ಚನ್ನದಾತರನ್ನು ಅಭಿನಂದಿಸಿ ಓದುಬರಹದೊಡನೆ ಸ್ವತಂತ್ರ ಜೀವನದ ಆವಶ್ಯಕತೆಯೂ ಇದೆ ಎಂಬುದನ್ನು ಸೂಚಿಸಿ ಈ ಶಾಲೆಯಲ್ಲಿ ಇಂತಹ ಉದ್ಯಮ ಪ್ರಾರಂಭವಾದುದು ಸಂತೋಷವೆಂದರು

ಮಂತ್ರಿಗಳು ನಂತರ ಉಡುಪಿಗೆ ಬಂದು ಸ್ಥಳೀಯ ಸಂಸ್ಕೃತ ಕಾಲೇಜಿಗೆ ಭೇಟಿಯಿತ್ತು ಡಾ| ಯು. ರಾಮರಾಯರ ಭಾವಚಿತ್ರ ಅನಾವರಣವನ್ನು ನೆರವೇರಿಸಿದರು. ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯರು ಸ್ವಾಗತ ಮಾತುಗಳನ್ನಾಡಿದರು. ಹಜಾರ್ಡ್ ಶ್ರೀ ವೇಣಾವ್ನ, ಭಂಡಾರಕೇರಿ ಮತ್ತು ಕಾಣಿಯೂರು ಮಠಾಧೀಶರು ಕೂಡಾ ಶಾಲೋಚಿತ ಮಾತುಗಳನ್ನಾಡಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ, ತನ್ನ ಸಹೋದ್ಯೋಗೀ ಮಂತ್ರಿ ಡಾ| ಯು. ಕೃಷ್ಣರಾಯರು ದಾನವಿತ್ತ ಅವರ ತಂದೆಯವರ ಭಾವಚಿತ್ರವನ್ನು ಅನಾವರಣ ಮಾಡಲು ತುಂಬಾ ಸಂತೋಷವಾಗುತ್ತದೆಂದು ಹೇಳಿದರು ಡಾ| ಯು. ರಾಮರಾಯರು ಸಲ್ಲಿಸಿದ ಸಾರ್ವಜನಿಕ ಸೇವೆಯು ಈ ಭಾವಚಿತ್ರ ಮೂಲಕ ಇಲ್ಲಿಯ ವಿದ್ಯಾರ್ಥಿಗಳೇ ಮೊದಲಾದವರಿಗೆ ಅನುಕರಣೀ ಮಾರ್ಗದರ್ಶನ ಮಾಡಲಿಎಂದು ಆಶಿಸಿದರು. ಈ ಕಾಲೇಜಿಗಿರುವ ಕೆಲವೊಂದು ತೊಂದರೆಗಳನ್ನು ಬಗೆಹರಿಸಲು ತಾನು ಪ್ರಯತ್ನಿಸುವೆನೆಂದು ಹೇಳಿದರು.

ತದನಂತರ ಮಂತ್ರಿಗಳು ಸ್ಥಳೀಯ ಹೆಣ್ಣು ಮಕ್ಕಳ ಟ್ರೈನಿಂಗ್ ಶಾಲೆಯನ್ನು ಸಂದರ್ಶಿಸಿ ಕೆಲವು ನೃತ್ಯವನ್ನು ನೋಡಿದರು. ಶ್ರೀಮತಿ ಎಲ್. ಶೆಣೈ ರಂಧೀಶರು ಬಂದು ಮನವಿಯನ್ನು ಮಂತ್ರಿಗಳಿಗೆ ಒಪ್ಪಿಸಿದರು ಮಂತ್ರಿಗಳು,ಉತ್ತರ ವೀಯುತ್ತಾ ಶಾಲಾ ಕಟ್ಟಡ ವಿಸ್ತರಣಕ್ಕಾಗಿ ಕೇಳಲಾದ ಹಣ ಮುಂದಿನ ಬಜೆಟಿನಲ್ಲಿಯಾದರೂ ಸೇರಿಸಿ ಸಿಕ್ಕುವಂತೆ ಪ್ರಯತ್ನಿಸಲಾಗುವುದೆಂದರು. ಶ್ರೀ ಟಿ. ಎ. ಪೈ ಎಮ್. ಎಲ್. ಎ, ಅವರು ಧನ್ಯವಾದಗಳನ್ನರ್ಪಿಸಿದರು. ಶಾಲಾ ಮಕ್ಕಳ ಕಡೆಯಿಂದ ಚಿಕ್ಕನಿಧಿಯೊಂದು ನೆರೆಪೀಡಿತ ಸಹಾಯ ಫಂಡಿಗೆ ಕೊಡಲಾಯಿತು

ಆ ಮೇಲೆ ಮಂತ್ರಿಗಳು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜನ್ನು ಸಂದರ್ಶಿಸಿದರು ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸ್ವಾಗತಿಸಿದರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಂತ್ರಿಗಳು ಭಾಷಣ ಮಾಡಿ ಭಾಷಾವಾರು ಪ್ರಾಂತ್ಯ ಅಗತ್ಯವೆಂದರು ಎಕೆಡೆಮಿ ಆಫ್. ಜನರಲ್ ಎಜ್ಯುಕೇಶನಲ್ ವಿದ್ಯಾಕ್ಷೇತ್ರದಲ್ಲಿ ಮಾಡುತ್ತಿರುವ ಕೆಲಸವನ್ನು ಪ್ರಶಂಸಿಸಿದರು. ವಿದ್ಯಾರ್ಥಿಗಳು ಗೋದಾವರಿ ರಿಲೀಫ್ ಫಂಡಿಗೆ ಸಂಗ್ರಹಿಸಿಕೊಟ್ಟ ರೂ 150—೦ ನಿಧಿಯನ್ನು ಅಭಾರ ಪೂರ್ವಕ ಸ್ವೀಕರಿಸಿದರು. ಕೊನೆಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ, ಗಳು ಧನ್ಯವಾದಗಳನ್ನಿತ್ತರು. ಮಂತ್ರಿಗಳು ಮಧ್ಯಾಹ್ನದ ಊಟ ತೀರಿಸಿ ಮಂಗಳೂರಿಗೆ ತೆರಳಿದರು.

ಮೂಡುಬಿದ್ರಿ-ಸ್ಥಳೀಯ ಜೈನ್ ಹೈಸ್ಕೂಲಿನ ಸಮಾಜಸೇವಾಸಮಿತಿಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಇದೇ ತಾ6ರಲ್ಲು ಇಲ್ಲಿಂದ ಆರುಮೈಲು ದೂರದ ತೆಂಕಮಿಜಾರು ಗ್ರಾಮದಲ್ಲಿ ಶ್ರಮದಾನ ಕೆಲಸದಲ್ಲಿ ಭಾಗವಹಿಸಿದರು ಈ ಸ್ತುತ್ಯ ಕಾರ್ಯವನ್ನು ಸಮಾಜ ಹಿತ ಯೋಜನಾಧಿಕಾರಿ ಶ್ರೀ ಸೂರ್ಯ ನಾರಾಯಣ ರಾಯರು ಅಭಿನಂದಿಸಿದರು ಶ್ರೀ ಬಾಬು ಗೌಡರು ವಿದ್ಯಾರ್ಥಿಗಳಿಗೆ ಉಪಹಾರ ಕೊಟ್ಟರು ಇದೇ ರೀತಿ ವಿದ್ಯಾರ್ಥಿ ತಮ್ಮ ಅಧ್ಯಾಪಕರೊಡನೆ ಶಾಲೆಯ ಆಟದ ಬಯಲನ್ನು ವಿಸ್ತಾರಗೊಳಿಸಿ ಸಮತಟ್ಟು ಮಾಡುವ ದೇಹ ಪರಿಶ್ರಮದ ಕೆಲಸದಲ್ಲಿ ತೊಡಗಿದ್ದನು ಕಂಡ ಮದ್ರಾಸಿನ ಸಮಾಜ ನಿರ್ಮಾಣಯೋಜನಾ ಡ್ಯಾರೆಕ್ಟರ್ ಶ್ರೀ ಟಿ ಎಸ್ ರಾಮಚಂದ್ರನ್ ಅವರು ಪ್ರಶಂಸಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಚ್. ಸೇವರಾಯರು ಅಭಿನಂದಿಸಿದರು.

ಇನ್ನಾ:—ಪಾದೂರು ಶ್ರೀ ಕೃಷ್ಣಸೆಟ್ಟರು ಇನ್ನಾ ಕಾಂಜರ ಕಟ್ಟೆ ರಸ್ತೆ ಬದಿಯ ತಮ್ಮ ಹಕ್ಕಿನ ಸುಮಾರು 15 ಸೆಂಟ್ಸು ಸ್ಥಳವನ್ನು ಸಾರ್ವಜನಿಕ ಬಾವಿ ಮತ್ತು ಮಾರ್ಕೆಟು ಕಟ್ಟಿಸುವರೆ ಇನ್ನಾ ಪಂಚಾಯತು ಬೋರ್ಡಿಗೆ ದಾನವಿತ್ತಿರುವರು. ಈ ಗ್ರಾಮದಲ್ಲಿ ಸುಮಾರು ಎರಡು ಮೈಲು ಉದ್ದದ ರಸ್ತೆಯನ್ನು ಗ್ರಾಮಸ್ಥರ ಸಹಾಯದಿಂದ ಪಂಚಾಯತ ಬೋರ್ಡ ಪ್ರೆಸಿಡೆಂಟ್, ಪಟೇಲ್ ಶ್ರೀ ಸುಧಾಕರಾಮ ಸೆಟ್ಟಿ ಮತ್ತು ಶ್ಯಾನುಭಾಗ ಶ್ರೀ ಕೃಷ್ಣರಾವ್ ಮೊದಲಾದವರ ನೇತೃತ್ವದಲ್ಲಿ ಮಾಡಲಾಗಿದೆ.

ಕುಂಬಳೆ—ತಾ 9ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ಇಲ್ಲಿಗೆ ಆಗಮಿಸಿ ಮರುದಿನ ಮಾಯಿಪಾಡಿಗೆ ಹೋಗಿ ಅಲ್ಲಿಯ ಗ್ರಾಮೋದ್ಧಾರ ಕಾರ್ಯಗಳನ್ನು ಪರಿಶೀಲಿಸಿದರು

ಕಾರ್ಕಳ—ಸಾಣೂರು ಗ್ರಾಮದ ಚಿಕ್ಕಬೆಟ್ಟು ಗ್ರಾಮದ ಸಾಧಾರಣ ಆರುವರ್ಷ ಪ್ರಾಯದ ಜೈನ ಅಧ್ಯಾಪಕ ಶ್ರೀ ಜಿನ್ನಪ್ಪ ಹೆಗ್ಡೆಯವರನ್ನು ಇದೇ ತಾ 9ರಲ್ಲು ಸಂಜೆ ಯಾರೋ ಗುಂಡಿಟ್ಟು ಕೊಂದಿರುವರೆಂದು ಹೇಳಲಾಗಿದೆ. ಈ ವಿಷಯ ಪೋಲೀಸರಿಗೆ ತಿಳಿದುಬಂದ ಕೂಡಲೇ ಅವರು ಮರುದಿವಸ ಅಲ್ಲಿಗೆ ಹೋಗಿ ಮೃತ ಶರೀರವನ್ನು ಪರೀಕ್ಷೆಗಾಗಿ ಕಾರ್ಕಳ ಸರಕಾರಿ ಆಸ್ಪತ್ರೆಗೆ ಪರೀಕ್ಷೆಗಾಗಿ ತರಲಾಯಿತು. ಮುಂದಿನ ವಿಚಾರಣೆ ನಡೆಯುತ್ತಿದೆ ಎನ್ನಲಾಗಿದೆ

ಮಂಜೇಶ್ವರ -ಮಂಜೇಶ್ವರ ಮತ್ತು ಆಸುಪಾಸಿನ ರೈತರ ಸಭೆಯೊಂದು ತಾ 7ರಲ್ಲು ವೈದ್ಯ ಶ್ರೀ ಎಮ್. ನರಸಿಂಹ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ ಕೃಷ್ಣ ಸೆಟ್ಟಿ, ಡಾ| ಎ, ಸುಬ್ಬರಾವ್ ಮೊದಲಾದವರು ರೈತ ಸಂಘದ ಅವಶ್ಯಕತೆಯ ಮತ್ತು ರೈತರ ಕೋರಿಕೆಗಳ ಕುರಿತು ಮಾತನಾಡಿದರು. ಬಳಿಕ ಈ ರೈತ ಸಂಘಟನೆಗಾಗಿ ಕಮಿಟಿಯೊಂದನ್ನು ರಚಿಸಲಾಯಿತು

ಕುರುಕಾಲು—ಸ್ಥಳೀಯ ಪಂಚಾಯತ ಬೋರ್ಡ್ ಸಭೆಯು ಇದೇ ತಾ 6ರಲ್ಲು ಶ್ರೀ ಕೆ ವಿ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ ಕಾಂಜಾರು-ಬೆಳ್ಳೆ ರಸ್ತೆಯನ್ನು ಮೂಡುದಿಕ್ಕಿನಿಂದ ಆಲೆವೂರು-ಪಳ್ಳಿ ರಸ್ತೆಗೂ, ತೆಂಕುದಿಕ್ಕಿನಿಂದ ಬಂಟಕಲ್ ಶಿರ್ವ ಕಟ್ಪಾಡಿ-ಬೆಳ್ಮಣ್ಣು ರಸ್ತೆಗೂ ಕೂಡಿಸುವಂತೆ ಜಿಲ್ಲಾ ಬೋರ್ಡನ್ನು ಕೇಳಿಕೊಳ್ಳುವ ಕಾಂಜಾರು ಕೇಂದ್ರದಲ್ಲಿ ಒಂದು ರೂರಲ್ ಡಿಸ್ಪೆನ್ಸರಿಯನ್ನೂ, ಪ್ರಸೂತಿಕಾ ಕೇಂದ್ರವನ್ನೂ ತೆರೆಯುವಂತೆ ಜಿಲ್ಲಾ ಬೋರ್ಡನ್ನು ಕೇಳಿಕೊಳ್ಳುವ ನಿರ್ಣಯಗಳಾದುವು. ಸಿಟಿ ಬಸ್ ಸರ್ವೀಸನ್ನು ಪಡುಆಲೆವೂ ರುವರೆಗೂ ಮುಂದರಿಸುವಂತೆ ಆರ್. ಟಿ. ಒ. ಅಧಿಕಾರಿಗಳನ್ನು ಕೇಳಿಕೊಳ್ಳಲಾಯಿತು,

---

The Vijaya Bank, Ltd., Brahmavar.

ದಿ ವಿಜಯಾ ಬೇಂಕ್, ಲಿ., ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸುವರ್ಣಯರುಗಳು ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿಕೊಂಡಿರುವ ರಿಂದ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರೀ ನೋಟೀಸು ಕೊಟ್ಟಲ್ಲಿಯೂ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ತಾ. 25-9-53ನೇ ಶುಕ್ರವಾರ ಅಪರಾಹ್ನ ಘಂಟೆ 3—10ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂದು, ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ.	ಹೆಸರು ಮತ್ತು ವಿಳಾಸ	ಮೊಬಲಗು.		
413/50	ಕೆ. ಸಂಜೀವ ಸೆಟ್ಟಿ, ಸುಬ್ಬಯ್ಯ ಸೆಟ್ರ ಮಗ, ಕುರಾಡಿ ಮೆಟ್ಕಲ್ ಮನೆ P. O. ಕೊಕ್ಕರ್ಣೆ.	362	1	0
1308/50	ಬಿ. ಮಹಾಬಲ ಸೆಟ್ಟಿ, ಗೋಪಾಲ್ ಸೆಟ್ರ ಮಗ, ಹಂದಾಡಿ ಗ್ರಾಮ, P. O ಬ್ರಹ್ಮಾವರ.	32	13	0
788/51	—ಡಿ—	92	0	0
432/51	ಬಿ ಸಖಾರಾಮ ಸೆಟ್ಟಿ, ಬಗ್ರೂರ್ ನಂದ್ಯಪ್ಪ ಸೆಟ್ರ ಮಗ, ಹಂದಾಡಿ ತೆಂಕುಮನೆ, P. O. ಬ್ರಹ್ಮಾವರ.	718	15	0
92/51	ಪಾವುಲ್ ಲೂವಿಸ್, ಸಲೋಂದರ ಲೂವಿಸರ ಮಗ, ಬೈಕಾಡಿ ಗ್ರಾಮ, P. O. ಬ್ರಹ್ಮಾವರ.	261	1	0
1024/51	ಕೆ. ತೇಜಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಮಗ, ಹನೆಹಳ್ಳಿ ಗ್ರಾಮ. P. O. ಕೊಕ್ಕರ್ಣೆ.	400	0	0
166/51	ಲೋರೆನ್ಸ್ ಗ್ರಿಗೋರಿ ಡಿಸೋಜ, ಫಿಲಿಪ್ ಡಿಸೋಜರ ಮಗ, ಬೈಕಾಡಿ ಗ್ರಾಮ, P. O. ಬ್ರಹ್ಮಾವರ.	59	9	0
815/51	ರಾಮ ಆಚಾರಿ, ಪದ್ಮಣ್ಣ ಆಚಾರಿಯ ಮಗ, ವಾರಂಬಳ್ಳಿ ಗ್ರಾಮ, P. O. ಸಾಲಿಕೇರಿ.	71	0	0
677/51	ಅಂತಯ್ಯ ಸೆಟ್ಟಿ, ಮಹಾಬಲ ಸೆಟ್ರ ಅಳಿಯ, ಹಂದಾಡಿ ಗ್ರಾಮದ ಹಳ್ಳಮನೆ, P. O. ಬ್ರಹ್ಮಾವರ.	73	9	0
1053/51	ಆನಂದ ಸೆಟ್ಟಿ, ವೆಂಕಪ್ಪ ಸೆಟ್ರ ಮಗ, ಕುಮ್ರಗೋಡು ದೊಡ್ಡಹಾಡಿ ಮನೆ, P. O. ಬ್ರಹ್ಮಾವರ.	73	8	0

Office of the Bank.- Brahmavar (Sd) B. BHASKAR SHETTY.
Dated 14—9—53 Agent.

ಸಾಮಾಜಿಕ ಜೀವನದ ಮೇಲೊಂದು ಸುಧಾರಣೆಯ ಘೋಷಣೆ

★ **ಬಾಗಿ** ★

ರಂಜನ್ ಮತ್ತು ನಾಸೀರ್

ತಾರೀಕು 16—9—1953ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ತಾ. 19—4—1953ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ

– ಕೊಲಂಬಿಯಾದವರ ವರ್ಣ ಚಿತ್ರ –

ಡೌನ್ ಟು ಅರ್ತ್

DOWN TO EARTH

ದಯಮಾಡಿ ನಿಮ್ಮ ಚಂದಾಹಣ ಕಳುಹಿಸಿರಿ

ಮಂಗಳೂರು

ವಿದ್ಯಾಮಂತ್ರಿಗಳ ಆಗಮನ— ಮದ್ರಾಸು ಸರಕಾರದ ವಿದ್ಯಾ ಸಚಿವ ಡಾ|| ಎಮ್. ವಿ. ಕೃಷ್ಣರಾಯರು ಇದೇ ತಾ ೧೦ರ ಸಂಜೆ ಮೈಲಿನಲ್ಲಿ ಮಂಗಳೂರಿಗೆ ಬಂದಾಗ ಜಿಲ್ಲಾ ಕಾಂಗ್ರೆಸ್ ಮತ್ತು ಎಮ್. ಎಲ್. ಎ. ಮೊದಲಾದವರಿಂದ ಸ್ವಾಗತಿಸಲ್ಪಟ್ಟು ಸೀದಾ ಉಡುಪಿಗೆ ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಅವರೊಂದಿಗೆ ತೆರಳಿ, ಮರುದಿನ ಉಡುಪಿಯ ಕಾರ್ಯಕ್ರಮ ಮುಗಿಸಿ ಸಾಯಂಕಾಲ ಮಂಗಳೂರಿಗೆ ಬಂದು ಸೈಂಟ್ ಆಗ್ನೇಸ್ ಮತ್ತು ಸೈಂಟ್ ಎಲೋಸಿಯಸ್ ಕಾಲೇಜುಗಳಿಗೆ ಸಂದರ್ಶನವಿತ್ತರು. ಬಳಿಕ ಸರಕಾರೀ ಕಾಲೇಜಿಗೆ ಬಂದಾಗ ಪ್ರಿನ್ಸಿಪಾಲ್ ಕುಮಾರಿ ಸೀತಾಂಬಾಲ್ ಅವರು ಸ್ವಾಗತವಿತ್ತರು. ಸಚಿವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗುವಂತೆ ತಮ್ಮನ್ನು ತಯಾರುಗೊಳಿಸಿಕೊಳ್ಳಬೇಕೆಂದರು. ನಂತರ ವಿದ್ಯಾರ್ಥಿಗಳ ಪರವಾಗಿ ಕುಮಾರಿ ರಾಧಾ ಶೆಣೈಯವರು ಮಂತ್ರಿಗಳಿಗೆ ಸ್ವಾಗತವಿತ್ತು ತಮ್ಮ ಕೆಲವು ಸಂಕಷ್ಟಗಳನ್ನು ನಿವೇದಿಸಿಕೊಂಡರು. ವಿದ್ಯಾರ್ಥಿಸಂಘದ ಅಧ್ಯಕ್ಷ ಶ್ರೀ ಸೂರ್ಯನಾರಾಯಣರಾಯರು ಧನ್ಯವಾದಗಳನ್ನೀಯುವ ಕಾಲದಲ್ಲಿ ಕೆಲವು ಕೋರಿಕೆಗಳನ್ನು ಮಂತ್ರಿಗಳ ಮುಂದಿಟ್ಟರು. ಸಚಿವರು ಪುನಃ ಮಾತನಾಡುತ್ತಾ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ಸಂಕಷ್ಟನಿವಾರಣೆಯಲ್ಲಿ ತನ್ನಿಂದಾಗುವ ಸಹಾಯಮಾಡುವೆನೆಂದರು.

ಬಳಿಕ ಸರಕಾರಿ ತರಬೇತಿ ಶಾಲೆಗೆ ಮಂತ್ರಿಗಳು ಭೆಟ್ಟಿಯಿತ್ತಾಗ ಪ್ರಿನ್ಸಿಪಾಲ್ ಶ್ರೀ ಬಿ ರಾಘವ ಬಾಳಿಗರು ಮಂತ್ರಿಗಳನ್ನು ಸ್ವಾಗತಿಸಿ, ಪರ್ಣಕುಟಿಯಂತಿರುವ ಈ ಕಾಲೇಜು, 'ಬಿದಿರು ತಟ್ಟಿ' ಕಾಲೇಜೆಂದು ಕರೆಯಲ್ಪಡುತ್ತಿದುದರಿಂದ ನಮಗೆ ಕಟ್ಟಡದ ಆಗತ್ಯವಿದೆ ಎಂದರು. ಮಂತ್ರಿಗಳು ಮಾತನಾಡುತ್ತಾ ಶಿಕ್ಷಣದಲ್ಲಿ ಕಟ್ಟಡವೇ ಪ್ರಾಮುಖ್ಯವಲ್ಲ. ಬಿದಿರು ತಟ್ಟಿಗಳು ಹಾಳಾದರೆ ಸುಲಭದಲ್ಲಿ ದುರಸ್ತಿಯಾಗಬಹುದು. ಅಲ್ಲದೆ ನಮ್ಮ ದೇಶದ ಬಿದಿರನ್ನು ನಾವು ಉಪಯೋಗಿಸಬೇಕಾಗಿದೆ ಎಂದು ನುಡಿದರಲ್ಲದೆ ಈ ಕಾಲೇಜಿನ ಕಟ್ಟಡವು ಆದಷ್ಟು ಬೇಗನೆ ಆಗುವುದೆಂದರು.

ಅಲ್ಲಿಂದ ಮಂತ್ರಿಗಳು ಮೆಡಿಕಲ್ ಎಸೋಸಿಯೇಶನಿಗೆ ಭೇಟಿಯಿತ್ತಾಗ ಡಾ|| ಯು. ಪಿ. ಮಲ್ಯರು ಸ್ವಾಗತವಿತ್ತರು. ಮಂತ್ರಿಗಳ ಭಾಷಣ ನಂತರ ಡಾ|| ಎಮ್. ಉಪೇಂದ್ರರಾಯರು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಬಿ. ಟಿ. ಕಾಲೇಜಿನ ಕಟ್ಟಡ ಸಮಿತಿಯವರು ಮಂತ್ರಿಗಳಿಗೊಂದು ಮನವಿಯನ್ನಿತ್ತರು. ಬಳಿಕ ಪತ್ರಿಕಾ ಪ್ರತಿನಿಧಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತರು.

ಪತ್ರಿಕಾ ಪ್ರತಿನಿಧಿಗಳನ್ನು ಸರಕಾರೀ ಸಲಹಾ ಸಮಿತಿಗಳ ಸಭೆಗಳಿಗೆ ಕರೆವುದೂ ಇಲ್ಲ, ಜಿಲ್ಲೆಯಲ್ಲಾಗುವ ಜನಹಿತ ಕಾರ್ಯಗಳ ಕುರಿತು ಪ್ರಕಟಣೆ ಕೊಡುವುದೂ ಇಲ್ಲವೆಂಬುದನ್ನು ಮಂತ್ರಿಗಳ ಗಮನಕ್ಕೆ ತಂದಾಗ 'ಪತ್ರಿಕೆ'ಗಳಿಗೆ ಸುದ್ದಿ ಕೊಡುವ ಬಗ್ಗೆ ಸರಕಾರವು ನಿಷೇಧ ಹಾಕಿಲ್ಲ. ಯೋಗ್ಯ ಸುದ್ದಿಗಳನ್ನು ಕೊಡಲು ಕಲೆಕ್ಟರುಗಳಿಗೆ ಸರಕಾರವು ಒಪ್ಪಿಗೆ ಕೊಟ್ಟಿದೆ. ನಿಮ್ಮಲ್ಲಿ ಈ ಸರ್ಕಲಾರು ಜ್ಯಾರಿಗೆ ಬಂದಿಲ್ಲವಾದರೆ ಜ್ಯಾರಿಮಾಡುವ ವ್ಯವಸ್ಥೆ ಮಾಡಲಾಗುವುದೆಂದರು. ಆ ಮೇಲೆ ಹೊಸ ಶಿಕ್ಷಣ ಯೋಜನೆಯ ಕುರಿತು "ಕೇಂದ್ರ ಸರಕಾರವೂ ಭಾರತದ ಎಲ್ಲಾ ರಾಜ್ಯ ಸರಕಾರಗಳೂ ಈ ಯೋಜನೆಯ ಫಲವನ್ನು ಆಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆಂದು" ತಿಳಿಸಿದರು. ಆಂಧ್ರದ ಕುರಿತು ಕೇಳಿದ ಕೆಲವು ಪ್ರಶ್ನೆಗಳಿಗೂ ಉತ್ತರವಿತ್ತರು. ಮಂತ್ರಿಗಳ ಜತೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗರೂ ಶ್ರೀ ಪಿ. ಆರ್. ಆರ್. ಪ್ರೊಂಸಿಸ್ ಇದ್ದರು. ತಾ 12ನೇ ಬೆಳಿಗ್ಗೆ ಮಂತ್ರಿಗಳು ಮದ್ರಾಸಿಗೆ ತೆರಳಿದರು.

ಜಿಲ್ಲೆಗೆ ಒಕ್ಕಲು ಹಿತ ಮಸೂದೆ— ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯು ಇದೇ ತಾ 5ರಲ್ಲು ಸೇರಿ 'ಸರಕಾರಕ್ಕೆ' ಹಲವು ಮನವಿಗಳನ್ನು ಆಗಾಗ್ಗೆ ಕಳುಹಿಸಿದ್ದರೂ ಈ ತನಕ ದ. ಕ. ಜಿಲ್ಲೆಗೆ ಅನ್ವಯಿಸಲಾಗುವ ಒಕ್ಕಲು ಹಿತ ಮಸೂದೆಯನ್ನು ತರದಿದ್ದುದಕ್ಕೆ ಈ ಸಭೆಯು ವಿಷಾದ ಸೂಚಿಸಿತು. ಮತ್ತು ಕೂಡಲೇ ಒಂದು ಒಕ್ಕಲು ಹಿತ ಮಸೂದೆಯನ್ನು ತಂದು ಈ ಜಿಲ್ಲೆಯಲ್ಲಿ ಒಕ್ಕಲೆಬ್ಬಿಸುವುದನ್ನು ತಡೆದು ಇಲ್ಲಿಯ ಗೇಣಿ ಒಕ್ಕಲುಗಳ ಕಷ್ಟವನ್ನು ನೀಗಿಸಬೇಕೆಂದು ಸರಕಾರವನ್ನು ಕೇಳಿಕೊಂಡಿತು. ಅಲ್ಲದೆ ಈಗ ಎಸೆಂಬ್ಲಿಯು ಸೇರಿಲ್ಲದಿದ್ದುದರಿಂದಲೂ ಮಸೂದೆಯು ಅತ್ಯಗತ್ಯವಾದದರಿಂದಲೂ ಸರಕಾರವು ಓರ್ಡಿನೆನ್ಸ್ ಮೂಲಕ ಕೂಡಲೇ ಈ ಮಸೂದೆಯನ್ನು ಜ್ಯಾರಿಗೆ ತರಬೇಕೆಂದೂ ಕೇಳಿಕೊಂಡಿತು. ಇದೇ ಸಭೆಯಲ್ಲಿ ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸಿಗರಾದ ಶ್ರೀ ಪತ್ತುಮುಡಿ ವಾಸುದೇವಯ್ಯ ಮತ್ತು ಶ್ರೀ ಕೋಟಿಣ್ಣ ಭಂಡಾರಿಗಳ ನಿಧನದ ಬಗ್ಗೆ ಸಂತಾಪ ಸೂಚಿಸಿತು.

ಬಂಟ್–ನಾಯರ್ ವಿವಾಹ— ಜಿಲ್ಲಾ ಮೆಡಿಕಲ್ ಆಫೀಸರರಾಗಿದ್ದ ದಿವಂಗತ ಡಾ|| ಬಿ. ರಾಮಣ್ಣ ಸೆಟ್ರ ಪುತ್ರ ಶ್ರೀ ಎಮ್. ಜಿನರಾಜ ಸೆಟ್ಟರು ಇದೇ ತಾ 9ರಲ್ಲು ಕಲಚೇರಿಯಲ್ಲಿ ಅಕ್ಷಯ ಡಾ|| ಟಿ. ವಿ. ಎನ್. ನಾಯರರ ಪುತ್ರಿ ಶ್ರೀಮತಿ ಪದ್ಮಾವತಿಯನ್ನು ಕಲಚೇರಿಯ ಆನಂದ ಭವನದಲ್ಲಿ ವಿವಾಹವಾದರೆಂದು ತಿಳಿದು ಬರುತ್ತದೆ.

ಕಿಲ್ಲೆ ಸ್ಮಾರಕ ಗ್ರಂಥದ ಉದ್ಘಾಟನೆ— ದಿವಂಗತ ಎನ್. ಎಸ್. ಕಿಲ್ಲೆಯವರ ಸ್ಮಾರಕ ಸಮಿತಿಯವರಿಂದ ಪ್ರಕಾಶಿಸಲ್ಪಟ್ಟ 'ಕಿಲ್ಲೆ ಸ್ಮಾರಕ ಗ್ರಂಥದ' ಉದ್ಘಾಟನಾ ಸಮಾರಂಭವನ್ನು ಇದೇ ತಾ 13ರಲ್ಲು ಪೂರ್ವಾಹ್ನ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈಗಳವರು ನೆರವೇರಿಸಿದರು.

ಶ್ರೀ ಕೆ. ಆರ್. ಆಚಾರ್ಯರು ಸಮಿತಿ ಪರವಾಗಿ ಸ್ವಾಗತವಿತ್ತ ಬಳಿಕ ಶ್ರೀ ಕೆ. ಕೆ. ಸೆಟ್ಟರು ರಾಷ್ಟ್ರಗೀತೆಯನ್ನು ಹಾಡಿದರು. ಶ್ರೀ ಕೆ. ಬಾಲಕೃಷ್ಣರಾಯರು ಸ್ಮಾರಕ ಸಮಿತಿಯ ಮುಂದಿನ ಕಾರ್ಯಕ್ರಮಾದಿಗಳನ್ನು ವಿವರಿಸಿದರು. ಡಾ|| ಯು. ಪಿ. ಮಲ್ಯರು ಸಂದೇಶಗಳನ್ನು ಓದಿದರು. ನಂತರ ಶ್ರೀಗಳಾದ ಕಯ್ಯಾರ ಕಿಞ್ಞಣ್ಣ ರೈ, ಕೆ. ಎಸ್. ಎನ್. ಅಡಿಗ, ಬಿ. ವೈಕುಂಠ ಬಾಳಿಗ, ತುಕ್ರಪ್ಪ ರೈ, ಬಿ. ಅಪ್ಪಯ್ಯ, ಬಿ. ಎಮ್. ಇದಿನಬ್ಬ, ಎಮ್. ಉಗ್ಗಪ್ಪ ಅಣ್ಣ, ಜೋಕ್ಯಾಡಿ ಸೀತಾರಾಮಯ್ಯ, ಕೃಷ್ಣಗೋಪಾಲ್, ಹರಿಶ್ಚಂದ್ರ ಬಾರ್ ಮೊದಲಾದವರು ದಿವಂಗತರ ಸೇವಾತತ್ಪರತೆ, ಹರಿಜನಸೇವೆ, ಯಕ್ಷಗಾನ ಪಟುತ್ವ, ಭಾಷಣ ವೈಖರಿ ಮತ್ತು ಬಹುಮುಖ ಸಾರ್ವಜನಿಕ ಕಾರ್ಯಗಳ ಕುರಿತು ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷ ಶ್ರೀ ಪೈಗಳು ಶ್ರೀ ಕಿಲ್ಲೆಯವರ ಮತ್ತು ತಮ್ಮ ಗೆಳೆತನದ ಸವಿಮಧುರದ ಸನ್ನಿವೇಶಗಳನ್ನು ಸ್ಮರಿಸಿ ದುಃಖಾಶ್ರುಗಳೊಡನೆ ಭಾಷಣಮಾಡಿ, ಸ್ಮಾರಕ ಗ್ರಂಥವನ್ನು ಉದ್ಘಾಟಿಸಿದರು. ಗ್ರಂಥದ ಒಂದು ಪ್ರತಿಯನ್ನು ದಿವಂಗತ ಕಿಲ್ಲೆಯವರ ಪತ್ನಿಯವರಿಗೆ, ಅವರ ಪ್ರತಿನಿಧಿಯಾಗಿ ಬಂದ ದಿವಂಗತರ ಮಾವ ಶ್ರೀ ತುಕ್ರಪ್ಪ ರೈಗಳ ಮುಖಾಂತರ ಸಮರ್ಪಿಸಲಾಯಿತು. ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ನಗರ ಸಭೆಯು— ಇದೇ ತಾ 11ರಲ್ಲು ಸಂಜೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾಲೆಗಳ ಸುಪರ್ ವೈಜರರು ಮುನಿಸಿಪಲ್ ಶಾಲೆಗಳಲ್ಲಿ ಉಪಾಧ್ಯಾಯರ ನೇಮಕಗಳಿಗೆ ಮತ್ತು ಭಡ್ತಿಗಳಿಗೆ, ಕೆಲವು ಸಂದರ್ಭಗಳಲ್ಲಿ ರೂಪಾಯಿ 50ರಿಂದ 100ರ ವರೆಗೂ, ಕೆಲವು ಸಂದರ್ಭಗಳಲ್ಲಿ ಒಂದರಿಂದ ಮೂರು ತಿಂಗಳುಗಳ ಸಂಬಳಗಳಷ್ಟು ಲಂಚವನ್ನು ಸ್ವೀಕರಿಸುವರೆಂಬ ಆಪಾದನೆಯಿರುವುದು ನಿಜವೇ ಎಂಬ ಶ್ರೀ ಕಾರ್ಯಪ್ಪನವರ ಪ್ರಶ್ನೆಗೆ ಆ ವಿಷಯ ತನ್ನ ಗಮನಕ್ಕೆ ಇನ್ನೂ ಬಂದಿಲ್ಲವೆಂದೂ, ಸರಿಯಾದ ದೂರುಗಳು ಆ ವಿಷಯದಲ್ಲಿ ಬಂದರೆ ಉಗ್ರ ಕ್ರಮ ಕೈಕೊಳ್ಳಲಾಗುವದೆಂದೂ ಅಧ್ಯಕ್ಷರು ಹೇಳಿದರು.

ಶ್ರೀ ಸಿ. ಮಹಮೂದರ ಹೆಸರಲ್ಲಿ ಶ್ರೀ ಸಿ. ಮಹಮೂದ ಎಂಡ್ ಸನ್ಸರವರು ದಾನವಾಗಿ ಕೊಟ್ಟ ಮರ್ಕ್ಯುರಿ ದೀಪವೊಂದು ಧನ್ಯವಾದ ಪೂರ್ವಕ ಸ್ವೀಕರಿಸಿ, ಅದನ್ನು ಗೋಳಿಕಟ್ಟೆ ಬಜಾರಿನಲ್ಲಿ ಮಾರ್ಗ ಕೂಡುವಲ್ಲಿ ಇಡಬೇಕೆಂದು ಕೌನ್ಸಿಲಿನ ನಿರ್ಧಾರವಾಯಿತು. ಮುನಿಸಿಪಲ್ ಗಡಿಯೊಳಗಣ ಯಾವ ಸರಕಾರೀ ಪ್ರೊಂಬೋಕು ಇತ್ಯಾದಿ ಸ್ಥ[illegible]ನ್ನು ಮುನಿಸಿಪಲ್ ಕೌನ್ಸಿಲಿನ ಒಪ್ಪಿಗೆ ಇಲ್ಲದೆ ಖಾಸಗಿದಾರರಿಗೆ ಕೊಡಬಾರದೆಂದೂ ಇರುವ ಒಪ್ಪಿಗೆ ಆರು ತಿಂಗಳೊಳಗೆ ಕೊಟ್ಟದ್ದಾಗಿರಬೇಕೆಂದೂ ಕಲೆಕ್ಟರರನ್ನು ಕೇಳಿಕೊಳ್ಳಬೇಕೆಂಬ ಶ್ರೀ ಎಮ್. ರಮಾನಾಥರ ನಿರ್ಣಯವು ಮಾನ್ಯವಾಯಿತು.

The Catholic Bank Limited, Udipi
ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರೀ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರಿಗೆ ಯಾ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು 1953ನೇ ಇಸವಿ ಸಪ್ಟಂಬರ ತಿಂಗಳ ತಾರೀಕು 26ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಯಾ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಸರಾರದಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು		
27/1307	ಅಬ್ದುಲ್ ಕಾದರ್, ಇಸ್ಮಾಯಿಲ್ ಸಾಹೇಬರ ಮಗ, ಸಂತೆಕಟ್ಟೆ, ಉಪ್ಪಿ P. O.	25	0	0
28/281	ಶೇಕ್ ಮುಗ್ದುಮ್ ಸಾಹೇಬ, ಶೇಕ್ ಉಸ್ಮಾನ ಸಾಹೇಬರ ಮಗ, ಪ್ರೋಸೆಸ್‌ಸರ್ವರ್ Dt. Munsif Court, Udipi, P. O.	20	0	0
28/330	ಪಕೀರ ಮೇಸ್ತ್ರಿ, ಬಾಬ ಪುಜಾರಿಯ ಮಗ, ಕಿದಿಯೂರು, ಕಡೆಕಾರು P. O.	75	0	0
28/578	ಅಂಬಲಿನ ರೋಜೊ, ಫೆಲಿಕ್ಸ್ ಮೆನೆಜಸರ ಹೆಂಡತಿ, ಪಿತ್ರೋಡಿ ಊರು, ಉದಿಯಾವರ P. O.	100	0	0
28/689	ಮಾನ್ಯ ರಾಮಾಚಾರ್ಯ, ನಾರಾಯಣ ಆಚಾರ್ಯರ ಮಗ, ಅಧಮಾರುಮಠ ಓಣಿ, ಉಡ್ಪಿ P. O.	20	0	0
28/810	ಕೆ. ಅನಂತ ಸೆಟ್ಟಿ, ಅಚ್ಚಣ್ಣ ಸೆಟ್ರ ಮಗ, ಜೀಕವ್, ಉಡ್ಪಿ ಪೋಸ್ಟ್ ಆಫೀಸು.	35	0	0
18/973	ಫ್ರಾನ್ಸಿಸ್ ಡಿಸೋಜ, ತೋಮಸ್ ಡಿಸೋಜರ ಮಗ, ಪೆರಂಪಳ್ಳಿ, ಕಲ್ಯಾಣಪುರ P. O.	27	0	0

V. J. Andrade,
The Catholic Bank, Ltd., Udipi. Agent.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಟೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನವಾಗುವುದಿಲ್ಲ.** ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ. ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomack pain) ನಿರ್ಮೂಲಿಸಿ, ಬಹಿಷ್ಟೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನು, ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನು, ನಿವಾರಿಸಿ, ನಪುಂಸಕತ್ವವನು, ಹೋಗಲಾಡಿಸಿ, ನಶಿಸಿದ ತಾರುಣ್ಯವನು ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ದಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ ಪಿ [illegible] ಪ್ಯಾಕಿಂಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ, ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.** (South India)

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ.
S. E. P. 128/53 in S. C. 378/1952
ಎ. ಆರ್. ಡಿಸೋಜ —ಅರ್ಜಿದಾರ
ಜುಸ್. ಬ್ರಯಣ್ಣ ಸೆಟ್ಟಿ —ರೆಸ್ಪೊಂಡೆಂಟ್.

ಜುಸ್ ಬ್ರಯಣ್ಣ ಸೆಟ್ಟಿ– ಗುರುಲಿಂಗಪ್ಪ ಸೆಟ್ಟಿಯವರ ಮಗ ಮಂಗ್ಳೂರು ತಾಲೂಕು ಕೆಳಗಿನ ಬೆಂಜನಪದವು.

ಯಾ ಮೂಲಕ ತಿಳಿಯಪಡಿಸುವದೇನಂದ್ರೆ.

ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ಜಪ್ತಾದ ಚರಸೊತ್ತುಗಳ ಕುರಿತು ಏಲಂ ಇಸ್ತಿಹಾರಿನಲ್ಲಿ ಬರೆವ ಶರ್ತಗಳನ್ನು ನಿರ್ಣಯಿಸುವದಕ್ಕೆ ತಾ 1-10-53ರಲ್ಲು ಇಟ್ಟಿರುತ್ತದೆ

ಆ ದಿವಸ ನೀವು ಹಾಜರಾಗಿ ನಿಮ್ಮ ಆಕ್ಷೇಪಣೆಯನ್ನು ದಾಖಲು ಮಾಡದಿದ್ದರೆ ನಿಮ್ಮ ಶಿವಾಯಿಂದ ತೀರ್ಮಾನಿಸಲಾಗುವದೆಂದು ತಿಳಿದಿರಲಿ

(B. O.)
John Gonsalves.
Vakil for Petitioner
ಮಂಗ್ಳೂರು, 12-9-53.

ಇದೂ ಒಂದು ಚಂದ

(೧ನೇ ಪುಟದಿಂದ)

ದರು. ಮಾನ್ಯ ಸದಸ್ಯರಲ್ಲಿ ಯಾರೋ ಒಬ್ಬರು "ಹಾಗಾದರೆ ಇನ್ನೊಬ್ಬ ಉಪಸಚಿವನನ್ನು ಏಕಾಗಿ ನೇಮಿಸಿಕೊಳ್ಳಕೂಡದು" ಎಂದು ಸಲಹೆ ಮಾಡಿದರು. ರಾಜ್ಯ ಪರಿಷತ್ತಿನಲ್ಲಿಯೂ ಇಂಥದೊಂದು ಘಟನೆ ನಡೆಯಿತು. ಕಾಂಗ್ರೆಸದ ಡಾ. ಸೀತಾ ಪರಮಾನಂದರು ಪ್ರಶ್ನೆಗಳಿಗೆ ಸಮರ್ಪಕ ಉತ್ತರಕೊಡಲು ಶಿಕ್ಷಣಮಂತ್ರಿ ಅಝಾದರು ಹಾಜರಿರಬೇಕೆಂದು ಕೇಳಿಕೊಂಡರು ಅಝಾದರ ಬದಲು ಶಿಕ್ಷಣ ಶಾಖೆಯ ಉಪಮಂತ್ರಿಗಳಾದ ಶ್ರೀ ಕೇಶವದೇವ ಮಾಲವೀಯರು ಪೂರಕ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡಲು ಅಸಮರ್ಥರಾದುದೇ ಇದಕ್ಕೆ ಕಾರಣ.

❀

ಗಂಭೀರ ವಿಚಾರದೊಂದಿಗೆ ಸಾಮಾನ್ಯ ತಂಟೆ ತಕರಾರುಗಳಿಗೆ ಶಾಸನಕರ್ತರ ಮನೋಭಾವ ಹರಿದಂತೆ ನಗೆಯಿಂದ ನೆಗೆದು ಹಾರುವುದೂ ಇಲ್ಲದಿಲ್ಲ. ರಾಜ್ಯ ಪರಿಷತ್ತಿನಲ್ಲಿ ಕಾಂಗ್ರೆಸ ಸದಸ್ಯ ರಾಮರಾಯರು ಈಚೆಗೊಂದು ವಿನೋದ ಮಾಡಿದರು. "ನೀವು ನನ್ನನ್ನು ಗಲ್ಲಿಗೇರಿಸದಿದ್ದರೆ ರಶಿಯಾದಲ್ಲಿ ನಡೆದಿರುವ ಚಟುವಟಿಕೆಗಳನ್ನೆಲ್ಲ ನಾನು ಪ್ರಶಂಸಿಸುತ್ತೇನೆಂದು ಅವರು ಕಮ್ಯೂನಿಸ್ಟ ಸದಸ್ಯ ಶ್ರೀ ಪಿ. ಸುಂದರಯ್ಯನವರಿಗೆ ಹೇಳಿದಾಗ "ನಿಮ್ಮನ್ನು ಯಾರೂ ಗಲ್ಲಿಗೇರಿಸುವುದಿಲ್ಲ" ಎಂಬ ಜವಾಬು ಬಂತು. ಅದಕ್ಕೆ ರಾಮರಾಯರು "ಹಾಗಾದರೆ ನಾನು ಆಂಧ್ರದಲ್ಲಿ ಸುರಕ್ಷಿತವಾಗಿ ಸಂಚರಿಸಬಲ್ಲೆ" ಎಂದುದು ತುಂಬ ಮೋಜೆನಿಸಿತು.

ಇದು ತುಸು ಹಳೆಯ ಘಟನೆ. ದಿನಾಂಕ ೯ ರಂದು ರಾಜ್ಯ ಪರಿಷತ್ತಿನಲ್ಲಿ ಇನ್ನೊಂದು ಸ್ವಾರಸ್ಯದ ಪ್ರಸಂಗ ನಡೆಯಿತು. ಪ್ರಶ್ನೋತ್ತರ ಸಮಯದಲ್ಲಿ ಓರ್ವ ಸದಸ್ಯರು "ತಾಪಿ ಕಣಿವೆಯ ರೈಲ್ವೆ ಮಾರ್ಗದಲ್ಲಿ ಮೂರನೇ ಪ್ರವಾಸಿಕರ ಗಾಡಿಯನ್ನು ಓಡಿಸುವ ಕುರಿತು ಸಲ್ಲಿಸಿದ ಅರ್ಜಿಯನ್ನು ಸಂಪೂರ್ಣ ವಿಚಾರಿಸುವ ಆಶ್ವಾಸನವನ್ನು ಕೊಟ್ಟಿರಲಿಲ್ಲವೆ?' ಎಂದು ರೈಲ್ವೆ ಉಪಮಂತ್ರಿ ಅಲಗೇಶನ್ನರನ್ನು ಕೇಳಿದರು. "ಈ ಬೇಡಿಕೆಯನ್ನು ಮನ್ನಿಸಿರುವುದಿಲ್ಲವೇ?" ಎಂದು ಸದಸ್ಯರು ಆತಂಕಿಸಿದಾಗ ಸಭಾಪತಿ ಡಾ. ರಾಧಾಕೃಷ್ಣನ್ನರು ನಗೆಗಡಲ ಮಧ್ಯದಲ್ಲಿ "ಮಂತ್ರಿಗಳು ಸಂಚಾರಕ್ಕೆ ಹೋದಾಗ ಮನವಿಗಳನ್ನೂ ಅರ್ಜಿಗಳನ್ನೂ ಸ್ವೀಕರಿಸುವರು. ಅದನ್ನು ಸಂಪೂರ್ಣ ವಿಚಾರಿಸುವ ಆಶ್ವಾಸನವನ್ನು ಕೊಡುವರು. ಆದರೆ ಅದನ್ನು ಕಾರ್ಯಗತ ಮಾಡುವ ಭರವಸೆಯನ್ನು ಮಾತ್ರ ಕೊಡಲಾರರು" ಎಂದು ತಿಳಿಸಿದರು.

ಪ್ರಧಾನಿ ನೆಹರೂರವರೂ ಒಮ್ಮೊಮ್ಮೆ ನಗೆಯ ಹುಯಿಲೆಬ್ಬಿಸುವುದುಂಟು--ಡಾ. ಚೋಯಿತರಾಮ ಗಿಡ್ವಾನಿಯವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ರಾಜಸ್ಥಾನದ ಬಾರಮಾರ ಜಲ್ಲೆಯಲ್ಲಿ ಪಾಕಿಸ್ತಾನಿಗಳ ಚಿಕ್ಕ ದಾಳಿಗಳು ಹೆಚ್ಚಾಗಿವೆಯೆಂದೂ ಈ ಕುರಿತು ಆ ಸರಕಾರವು ಕೊಟ್ಟ ಹೇಳಿಕೆಯ ಕಡೆಗೆ ಸರಕಾರದ ಗಮನ ಹರಿದಿದೆಯೆಂದೂ ತಿಳಿಸಿದರು. ಮುಂದುವರಿದು ಈ ದಾಳಿಗಳನ್ನು ತಡೆಗಟ್ಟಲು ಆವಶ್ಯಕ ಉಪಾಯಗಳನ್ನು ಕೈಕೊಳ್ಳಲಾಗಿದೆಯೆಂದೂ ಅವುಗಳನ್ನು ಬಹಿರಂಗ ಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಯೋಗ್ಯವಲ್ಲೆಂದೂ ಅಭಿಪ್ರಾಯ ಪಟ್ಟರು. ಈ ದಾಳಿಗಳು ಸಾಮಾನ್ಯತಃ ದನ ಹಾಗೂ ಒಂಟೆಗಳ ಕಳವಿಗಾಗಿ ನಡೆಯುತ್ತಾವೆಂದೂ ಹೇಳಿದರು. ಆಗ ಮುನಿಸ್ವಾಮಿಯವರು "ಈ ದಾಳಿಗಳ ವಿವರವನ್ನು ಕೊಡುವಿರಾ? ದಾಳಿಗಾರರು ಏಕಾಕಿಯಾಗಿ ಬರುವರೇ? ಅಥವಾ ಗುಂಪುಗಳಾಗಿಯೋ ಹೇಗೆ?" ಎಂದು ಕೇಳಿದರು. ನೆಹರೂರವರು "ನಾನು ಯಾವುದೇ ದಾಳಿಯಲ್ಲಿ ಭಾಗವಹಿಸಿರುವುದಿಲ್ಲವಲ್ಲ!" ಎಂದು ಉದ್ಗಾರವೆತ್ತಿದಾಗ, ಸಭೆ ಕುಲುಕುಲು ನಗುವಿನಿಂದ ತುಂಬಿತು.

❀

ರಾಜಕೀಯದಲ್ಲಿ ತುಂಬ ಆಸ್ಥೆಯುಳ್ಳವರಿಗೆ ಇದೂ ಒಂದು ಚಂದವಾಗಿ ಕಾಣಬಹುದು - ಮತ್ತು ಅಂದಚಂದಗಳಿಗೆ ಮಾರುಹೋಗುವುದು ಮನುಷ್ಯನ ಸ್ವಾಭಾವಿಕ ಪ್ರಕೃತಿಯೇ ಸೈ.

ದಿ ವಿಜಯಾ ಬೇಂಕ್, ಲಿ., ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡದ ಸಾಲವನ್ನು ಮರುಪಾವತಿಮಾಡುವರೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ; ಸದ್ರಿಯವರು ಈಡಿಟ್ಟ ನಗವನ್ನು ಇದೇ ತಿಂಗಳ ತಾ. 25ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾದಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ ನಂಬರು.	ಹೆಸರು ಮತ್ತು ವಿಳಾಸ	ಮೊಬಲಗು. ರೂ.	ಅ.	ಪೈ.
895 50	ಶ್ರೀ. ಮದ್ದೋಡಿ ವೆಂಕಟ್ರಮಣ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ ವ್ಯಾಪಾರಿ, ಮಯ್ಯಾಡಿ.	81	2	0
1182/50	ಶ್ರೀ. ಯು. ಮಂಜಯ್ಯ ಸೆಟ್ಟಿ, ಮಾದ್ಯ ಸೆಟ್ಟರ ಮನೆ ವೀರಣ್ಣ ಸೆಟ್ಟರ ಅಳಿಯ, ಉಪ್ಪುಂದ.	56	3	0
740/51	ಜ. ಗೋಳಿಹೊಳೆ ಮೀರಾ ಸಾಹೇಬ್, ಹೈದ್ರುಸ್ ಸಾಹೇಬರ ಮಗ, ಗೋಳಿಹೊಳೆ ಗ್ರಾಮ, ಯೇಳಜೀತ್.	288	4	0
1042/51	ಶ್ರೀ. ಸೋಮು ಮಂಜ, ಸೋಮು ಮಗ, ಮಡಿಕಲ್ಲು ಉಪ್ಪುಂದ	241	8	0
192/51	ಜ. ಜಿ. ಎಮ್. ಹಾಜಿ ಸಾಹೇಬ್, ಗೋಳಿಹೊಳೆ ಹಸನ್ ಸಾಹೇಬರ ಮಗ, ನಾಕಟ್ಟೆ ಯಡ್ತರೆಗ್ರಾಮ, ಬೈಂದೂರು.	130	11	0
361/52	—ಡಿ—	32	10	0
422/52	ಶ್ರೀ. ಕೆ. ದಾಸಪ್ಪ ಶ್ಯಾನುಭಾಗ, ಚರ್ಡಪ್ಪ ಶ್ಯಾನುಭಾಗರ ಮಗ, ವ್ಯಾಪಾರಿ, ಕೊಡಿಯೇರಿ, ಕಂಬದಕೋಣೆ.	77	8	0
460/51	ಶ್ರೀ. ಶಿರೂರು ಅರಮಕ್ಕಿ ಸುಬ್ಬಣ್ಣ ಸೆಟ್ಟಿ, ಶಿವಪ್ಪ ಸೆಟ್ಟರ ಅಳಿಯ, ಪೈವೇಸ್ ಮೇಸ್ತ್ರಿ, ಸೇರಂಜಾಲು, ಕಂಬದಕೋಣೆ.	39	1	0
1086/51	ಶ್ರೀಮತಿ ಮೇರಿ ಫೆರ್ನಾಂಡಿಸ್, ಜ್ಯುವಾಂ ಫೆರ್ನಾಂಡಿಸರ ಹೆಂಡತಿ ಬೀಯಾರ, ಯಡ್ತರೆ ಗ್ರಾಮ, ಬೈಂದೂರು.	12	6	0
786/51	ಶ್ರೀ. ಗಂಗೆ ಚಟ್ಟಿ, ವೆಂಕಮ್ಮನ ಮಗ, ತಾರಾಪತಿ, ಪಡುವರಿ.	28	6	0
787/51	ಶ್ರೀ. ವೆಂಕಟ್ರಮಣ ಸೇರುಗಾರ, ಮದ್ದೋಡಿ ಶೇಷಯ್ಯ ಸೇರುಗಾರರ ಮಗ, ಮಯ್ಯಾಡಿ.	34	2	0
135/52	ಶ್ರೀ. ಕೂರ್ಸಿ ನಾಗ್ಯ ಸೆಟ್ಟಿ, ವೆಂಕಪ್ಪ ಸೆಟ್ಟರ ಅಳಿಯ, ಕಾಲ್ತೋಡು ಗ್ರಾಮ, ಕಾಲ್ತೋಡು.	130	11	0

ಬೈಂದೂರು,
11-9-53

ಎಚ್. ರಾಜೀವ ಸೆಟ್ಟಿ,
ಏಜಂಟ್.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ-ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

(೩ನೇ ಪುಟದಿಂದ)

೪೦೦ ಹುಡುಗರು ಸರಹಿಂದ ಕಾಲುವೆಯನ್ನು ಅಗಲ ಮಾಡುವುದರಲ್ಲಿ ನಿರತರಾದರು. ಇದನ್ನು ಪ್ರಾಚೀನ ಕಾಲದಲ್ಲಿ ಪಂಜಾಬದ ಹುಲಿ ರಣಜಿತ ಸಿಂಗನು ರಚಿಸಿದ್ದನು. ಬಲದಂಡೆಯಲ್ಲಿ ಕಾಲುವೆಯನ್ನು ಇನ್ನೂ ೩೦ ಅಡಿ ಅಗಲವಾಗಿ ಒಂದು ಮೈಲು ದೂರದ ವರೆಗೆ ತೋಡುವ ನಿರ್ಧಾರ ಮಾಡಿ, ಕೆಲಸ ತೊಡಗಿದರು. ೧೮ ಅಡಿ ಆಳದಿಂದ ಮಣ್ಣು ಹೊತ್ತು ತರುವುದು ಸುಲಭದ ಕೆಲಸವಲ್ಲ. ಇಷ್ಟು ಪ್ರಯಾಸವಿದ್ದರೂ ಯುವಕರ ಉತ್ಸಾಹ ಕುಂದಲಿಲ್ಲ—ಕೆಲಸ ಸಲಾಗವಾಗಿ ನಡೆದು, ಪಂಜಾಬ ಸರಕಾರಕ್ಕೆ ೬೦೦೦೦ ರೂಪಾಯಿಗಳ ಉಳಿತಾಯವೇ ಆಯಿತು.

ಸಾಮಾನ್ಯವಾಗಿ ವಿದ್ಯಾರ್ಥಿಗಳ ಹಾಗೂ ಯುವಕರ ಚಟುವಟಿಕೆಗಳಿಗೆ ರಜಾ ಸಮಯವೇ ಅತ್ಯಂತ ಪ್ರಶಸ್ತವಾದ ಕಾಲ. "ಅಯ್ಯೋ--ಸುಖವಾಗಿ ಕಳೆಯಬಹುದಾಗಿದ್ದ ರಜೆ ಇಷ್ಟು ಕಷ್ಟ ಕೊಟ್ಟಿತಲ್ಲಾ" ಎಂಬ ಭಾವನೆಯೇ ವಿದ್ಯಾರ್ಥಿಗಳಿಗೆ ಬಂದಂತೆ ಕಾಣಲಿಲ್ಲ. ಇದು ವಾತಾವರಣವನ್ನು ಆರಾಮಯಮಾಡುವ ಶುಭ ಚಿಹ್ನೆ. ಡೇರೆಯ ಕೆಳಗೆ ಬರಿ ನೆಲದಲ್ಲಿ ಮಲಗಿಕೊಂಡಾಗಲಾಗಲೀ ಸೂರ್ಯನ ಬಿಸಿಲಿಗೆ ಮೈಬೆವರುತಿದ್ದಂತೆಯೇ ಶ್ರಮ ಮಾಡುತಿದ್ದಾಗಲಾಗಲೀ ಯಾರಿಗೂ ಬೇಸರವೆನಿಸದೆ-- ಎಲ್ಲರೂ ಸಂತೋಷಚಿತ್ತರಾಗಿ ರುವುದು ಕಂಡುಬಂತು—ನಮ್ಮ ಭವಿಷ್ಯ ಉಜ್ವಲವಾಗಿರುವುದು ನಿಜವೆಂಬ ಭರವಸೆ ಇದರಿಂದ ದೊರೆಯುತ್ತದೆ. ಇದು ಎಂದಿಗೂ ಹುಸಿ ಹೋಗದಿರಲಿ!

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಸುಂದರಿಗೆ. ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅತ್ಯಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಪೆನ್ನೆಜಬಾಣೆ ಪ್ರತ್ಯೇಕ]

Mrs. P. DEVEE, F.H.S.(N.J.)
CALCUTTA. 40

ಸ್ಟಾಕಿಸ್ಟರು: ಶಿವಾಕಂಪೆನಿ, ಮಂಗಳೂರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 471/1953.

ದಿ. ಮೊಡರ್ನ ಸ್ಟೋರ್ಸ್—ಇದರ ಪ್ರೊಪ್ರೈಟರ A. ಅನಂತ ನಾಯಕ್ —ವಾದಿ.

ಮತ್ತು

ಪದ್ಮನಾಭ ರಾವ್ ಕೂಡ 2 ಜನರು —ಪ್ರತಿವಾದಿಗಳು.

2ನೇ ಪ್ರತಿವಾದಿ ವಾಮನ್ ರಾಯರಿಗೆ:-

ನೀವು ಮತ್ತು ನಿಮ್ಮ ಅಣ್ಣ 1ನೇ ಪ್ರತಿವಾದಿ ಕೂಡ ನಿಮ್ಮ ಕುಟುಂಬದ ಪರವಾಗಿ ನಡಿಸುವ ವ್ಯಾಪಾರದ ಸಮ್ಮಂದ ವಾದಿಯ ಅಂಗಡಿಯಲ್ಲಿ ತಾ 30-8-50ರಿಂದ ತಾ 20-10-50ರ ವರೆಗೆ ನಡ್ಸಿದ ಲೇವಾದೇವಿ ಬಾಬ್ತು ನಿಮ್ಮಮೇಲೆ ಬಾಕಿಯಿರುವ ಅಸಲು, ಬಡ್ಡಿ ವಸೂಲು ಕೇಳಿ ದಾಖಲ್ಲುಮಾಡಿದ ಮೇಲ್ಕಂಡ ದಾವೆಯು ತಾ 29-9-53ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ತಾರೀಕು ಹಗಲು ಘಂಟೆ 10-45ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉಜ್ರು ಇದ್ದ ಪಕ್ಷದಲ್ಲಿ ಅದನ್ನು ದಾಖಲ್ಲುಮಾಡಬೇಕಾಗಿಯೂ, ತಪ್ಪಿದ್ರೆ ನಿಮ್ಮನ್ನು ಶಿಕ್ಯಾಮಾಡಿ ಸದ್ರಿದಾವೆಯನ್ನು ಸದ್ರಿ ದಿವಸ ತೀರ್ಮಾನ ಮಾಡಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

K. Vittal Nayak
Vakil for Plaintiff.
Udipi, Dated 11—9—1953.

ಸ್ವೀಕಾರ—ವಿಮರ್ಶೆ

ನಿಟ್ಟುಸಿರು (ಕಥಾಸಂಕಲನ) -

ಬರೆದವರು: ಸೂ. ವೆಂ. ಅರಗ. ಪ್ರಕಾಶಕರು: ಕನ್ನಡಕುಲ, ವಾಣೀವಿಲಾಸ ರಸ್ತೆ, ಮೈಸೂರು. ಬೆಲೆ: ಎಂಟಾಣೆ.

ತ್ಯಾಗ ಮತ್ತು ಕಷ್ಟಾನುಭವದ ಮೂರ್ತಿಯೇ ಹೆಂಗಸೆಂದು ಗಾಂಧೀಜಿಯವರು ಹೇಳಿದ ಮಾತು "ನಿಟ್ಟುಸಿರು" ಕಥಾಸಂಕಲನದ ಪ್ರತಿಯೊಂದೂ ಪುಟದಲ್ಲಿ ಕಲಾತ್ಮಕ ರೀತಿಯಲ್ಲಿ ವ್ಯಕ್ತಗೊಂಡಿದೆ. ಹೆಣ್ಣಿನ ಬಾಳ್ವೆಯ ನೋವು ಸಂಕಟಗಳನ್ನು ಸುಂದರವಾದ ವಾಸ್ತವಿಕತೆಗಳಲ್ಲಿ, ಸತ್ವಯುತವಾದ ಶೈಲಿಯಲ್ಲಿ ಹಾಗೂ ಕುತೂಹಲ ಜನಕ ಸನ್ನಿವೇಶಗಳ ಸೃಷ್ಟಿಯಲ್ಲಿ ಅರಗರ ಕುಶಲ ಕುಂಚ ಚಿತ್ರಿಸಿದೆ. ಯಾವುದೇ ಕಥೆಯೂ ಕಾಲ್ಪನಿಕವೆಂದು ತೋರದೆ. ನಿತ್ಯಜೀವನದಲ್ಲಿ ಸ್ವಾಭಾವಿಕವಾಗಿಯೇ ಘಟಿಸ ಬಂತವುಗಳೆಂದೂ ನಮ್ಮನೆರೆಕೆರೆಯಲ್ಲ, ಊರಿನಲ್ಲಿ ಇಂಥ ಕಥೆಗಳೆಷ್ಟೋ ನಡೆದು ಹೋಗಿ ಬರುದೆಂದೂ ನಮಗೆನಿಸುತ್ತದೆ. ಓದುಗರ ಮನ ವಿಕತೆಯೇ ಉಸಿರಾಗಿರುವುದರಿಂದ ಹೃದಯ ಸ್ಪರ್ಶಿಯಾಗಿ ಕಥೆಗಳು ಮೂಡಿವೆ, ಹೆಣ್ಣು ಮಕ್ಕಳು ಸಂಸಾರಕ್ಕೆ ದೊಡ್ಡ ಹೊರೆ ಎಂಬ ಗಂಡನ ಭಾವನೆ ಯಿಂದ ನೊಂದ ಹೆಂಡತಿಯ ಮನಸ್ಸಿನ ಆಂದೋಲನವು "ಹೆಣ್ಣು ಮಗು" ಎಂಬ ಪ್ರಥಮ ಕಥೆಯಲ್ಲಿ ಯಥಾರ್ಥವಾಗಿ ಬಂದಿದೆ. "ಮಾತೃಶಾಂತಿ" ಎನ್ನುವ ಎರಡನೆ ಕಥೆಯು ಹೆತ್ತತಾಯಿಯ ನಿಂದೆ ಮಾತುಗಳಿಂದ ಜುಗುಪ್ಸೆಪಟ್ಟು ಆತ್ಮಹತ್ಯೆ ಗಳಿಸಿದ ರಕ್ತ ತನ್ನನ್ನು ಹೊಂದಿಕೊಂಡಿರುವ ಅಕ್ಕಹಾಗೂ ಅವಳ ಮಗು ಅಶಾಳನ್ನು ಬಿಟ್ಟಿರಲಾರದೆ ಮರುಳುವ ದಾರುಣ ಪ್ರಸಂಗವನ್ನು ಕಂತಾಗಿದೆ. ಮೊದಲನೇ ದಾಂಪತ್ಯದಲ್ಲಿ ಆದರ್ಶ ಸ್ತ್ರೀಯ ಚಿತ್ರವನ್ನು ದರ್ಶಿಸಿದವನು, ಎರಡನೇ ಹೆಂಡತಿಯನ್ನು ಅದರೊಂದಿಗೆ ತೂಗಿ ನೋಡುವ ಮತ್ತು ಪರಿಣಾಮದಲ್ಲಿಮನದ ಶಾಂತಿಕಳೆದುಕೊಳ್ಳುವ ರೀತಿಯನ್ನು "ಶಾಂತಿ" ಯಲ್ಲಿ ಕಾಣುತ್ತೇವೆ. ವಿದ್ಯಾರ್ಥಿ ಜೀವನದಲ್ಲಿ ಕುಸುಮಳನ್ನು ಪ್ರೇಯಸಿಯೆಂದು ಮೆಚ್ಚಿ, ಅವಳು ಬಸುರಿಯಾಗಲು ಕೈ ಬಿಟ್ಟು ಓಡಿಹೋದ ಸ್ಮೃತಿಚಿತ್ರವೇ "ಹಿಂದಿನಪುಟ" ಅನ್ಯೋನ್ಯವಾದ ಪ್ರೀತಿಯಿದ್ದರೂ ತಾನು ಚರಿತ್ರ ಭ್ರಷ್ಟಳೆಂಬ ಸುಳ್ಳು ಅಪವಾದದ ಕೊಳ್ಳೆಯಾದ ಕಾರಣ, ಮೆಚ್ಚಿದ ಹುಡುಗನ ಮನೆ ಮುರಿಯ ಬಾರದೆಂಬ ಸದುದ್ದೇಶದಿಂದ ಮದುವೆ ನಿರಾಕರಿಸಿದ ಸ್ವಾಭಿಮಾನಿ ರತ್ನಳನ್ನು ಕುರಿತು "ಹೊಳೆದ ಮಿಂಚು" ಕಥೆಯಿದೆ, ಕೊನೆಯದಾದ "ಬಡೆದ ಕನಸು" ಗಂಡನ ಮನೆಯಲ್ಲಿ ಅತ್ತೆಯ ಅನಾದರಕ್ಕೆ ಗುರಿಯಾದ ಅರುಂಧತಿಯ ದುಃಖವನ್ನು ಕಣ್ಣಿಗೆ ಕಟ್ಟುವಂತೆ ತೋರಿಸುತ್ತದೆ. ಈ ಎಲ್ಲ ಕಥೆಗಳಲ್ಲೂ ಪಾತ್ರಸೃಷ್ಟಿ ಸಜೀವವಾಗಿರುವುದೂ, ಮನೋವಿಶ್ಲೇಷಣ ಸೈಖರಿ ಗೋಚರಿಸುವುದೂ ವೈಶಿಷ್ಟ್ಯ, ತರುಣ ಕಥೆಗಾರರಲ್ಲಿ ಉತ್ತಮ ಭವಿಷ್ಯವುಳ್ಳವರೆಂದು ಈ ಕಥಾಸಂಕಲನ ಎತ್ತಿತೋರಿಸುತ್ತದೆ. ಅರಗರಂಥ ಉದಯೋನ್ಮುಖ ಬರಹಗಾರರನ್ನು ಬೆಳಕಿಗೆ ತರುವ ಹಾಗೂ ಅತ್ಯಲ್ಪ ಬೆಲೆಗೆ ಪುಸ್ತಕಗಳನ್ನು ಒದಗಿಸಲು ಸಂಕಲ್ಪಿಸಿದ "ಕನ್ನಡಕುಲ" ಇನ್ನೂ ಅನೇಕ ಗ್ರಂಥಗಳ ಪ್ರಕಾಶನ ಮಾಡಲೆಂದು ಆಶಿಸುತ್ತೇವೆ. ಅಚ್ಚಿನ ದೋಷವಿಲ್ಲ ಸ್ಪಷ್ಟವಾದ ಮುದ್ರಣಹಾಗೂ ರಕ್ಷಾವರಣಕ್ಕೆ ಯಾವಿಗೂ ನಿಲುವ ಬೆಲೆ ಕನ್ನಡ ಕುಲದ ಆಕರ್ಷಣೆ ವೈಶಿಷ್ಟ್ಯ.

ವಾತ್ಸ್ಯಾಯನ ಮುನಿಕೃತ ಸಚಿತ್ರ ಕಾಮಸೂತ್ರ—

ಬರೆದವರು— ಎಂ. ಎಚ್. ಆರ್., ಪ್ರಕಾಶಕರು— ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ. ಅಷ್ಟದಳಾಕೃತಿಯ 108 ಪುಟಗಳು; ಬೆಲೆ 1-8-0

ಶ್ರೀ ಎಂ. ಎಚ್. ರಾಯರ ಸಂಪಾದಕ-ಪ್ರಕಾಶಕ ತ್ವದಲ್ಲಿ ಪ್ರಕಟವಾಗುತ್ತಿರುವ ಸರ್ವೋದಯ ಸಾಹಿತ್ಯಮಾಲೆಯ ಐದನೆಯ ವರ್ಷದ ಕೊನೆಯ ಪುಷ್ಪವಿದು. ಈ ಮಾಲೆಯಲ್ಲಿ ಈ ವರೆಗೆ ಕತೆ ಕಾದಂಬರಿ ಗಳೆಂದು, ನಾಟಕ ವಿಡಂಬನಗಳೆಂದು, ಜೀವನ ಚರಿತ್ರೆ ಪ್ರಬಂಧ, ರಾಜಕಾರಣಗಳೆಂದು ಸುಮಾರು ಇಪ್ಪತ್ತು ಪುಸ್ತಕಗಳು ಪ್ರಕಟವಾಗಿವೆ. ಈ ಬಾರಿ ಜನ ಕುತೂಹಲದಿಂದ ಓದುವ 'ಕಾಮಸೂತ್ರ' ವನ್ನು ಪ್ರಕಟಿಸುವುದರ ಮೂಲಕ ಸರ್ವೋದಯ ಸಾಹಿತ್ಯಮಾಲೆಯು ಪರಿಭೇದವಿಲ್ಲದೆ ಸರ್ವತರದ ಸಾಹಿತ್ಯಕ್ಕೂ ಎಡೆ ಕೊಡುತ್ತದೆ ಎಂಬುದನ್ನು ವ್ಯಕ್ತಪಡಿಸಿದೆ.

ಇತ್ತೀಚೆಗೆ ಕಾಮಸಾಹಿತ್ಯವನ್ನು ದಾಸ್ಮೀಯವಾಗಿ ಪ್ರಕಟಿಸಿದ ಮೊದಲ ಕೀರ್ತಿ ಪ್ರಾಯಃ ಡಾ। ಎಂ. ಗೋಪಾಲಕೃಷ್ಣ ರಾಯರಿಗೆ ಸಲಬೇಕು. ಅವರ 'ಕಲಿಯುಗ' ಪತ್ರಿಕೆ ಮತ್ತಿತರ ಪುಸ್ತಕಗಳು ವಿಪುಲವಾಗಿ ಪ್ರಚಾರವಾಗುತ್ತಿರುವುದನ್ನು ನೋಡಿಯೋ ಏನೊ ಈಗಲೀಗ ಕಾಮ ಶಾಸ್ತ್ರದ ಹೆಸರಲ್ಲಿ ಸುಂಬ 'ಬಜಾರ್' ಪುಸ್ತಕಗಳು ಹೊರಬೀಳುತ್ತಿವೆ. ಕೆಲವು ಚರ್ಪಿತ ಚರ್ವಣಗಳಾದರೆ ಇನ್ನು ಕೆಲವು ಕೆಳಮಟ್ಟದವು. ಆದರೆ ಪ್ರಸ್ತುತ ಈ ಪುಸ್ತಕವು ಅಶ್ಲೀಲಕ್ಕೆ ಎಡೆಕೊಡದೆ, ಸಾಕಷ್ಟು ಘನತೆ ಗಾಂಭೀರ್ಯವನ್ನು ಕಾಯ್ದುಕೊಂಡು, ಪಳಗಿದ ಕೈಯಿಂದ ಬರೆಯಲ್ಪಟ್ಟು ಹೊರಬಿದ್ದಿದೆ ಎನ್ನಬಹುದು.

ವೈವಾಹಿಕ ಜೀವನವನ್ನು ನಡೆಸಲಿರುವ ತರುಣ ತರುಣಿಯರಿಗೆ ಜ್ಞಾನದಾನ ಮಾಡುವುದಕ್ಕಾಗಿ ವಾತ್ಸ್ಯಾಯನ ಮುನಿಯು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಈ ಕಾಮಸೂತ್ರವನ್ನು ರಚಿಸಿದನು ಇಷ್ಟು ಕಾಲ ಕಳೆದರೂ ವಿಷಯ ವಿಚಾರಗಳಲ್ಲಿ ಅವನ ಗ್ರಂಥ ಈಗಲೂ ನಿತ್ಯ ನೂತನವಾಗಿದೆ. ವಧೂವರರ ಪರೀಕ್ಷೆಯ ಕುರಿತಾಗಿ ಅವನ ಸಲಹೆಯು ಇಂದಿನ ತರುಣ ತರುಣಿಯರಿಗೂ ಮಾರ್ಗದರ್ಶನವಾಗಿದೆ. ವಧೂವರರನ್ನು ಮೆಚ್ಚಿಸುವ ಯುಕ್ತ (ಕೋರ್ಟ್‌ಶಿಪ್) ಪ್ರೇಮವಿವಾಹ ಇವೇ ಯೋಗ್ಯವೆಂದು ಅವನ ಅಭಿಮತ. ಪತಿಪತ್ನಿಯರ ಜೀವನದಲ್ಲಿ ಅದು ಮುಖ್ಯ. ಅಲ್ಲದೆ ಶಾರೀರಿಕ ಹಾಗೂ ಮಾನಸಿಕ ಸಂಗತಿಗಳೂ ಗಮನಾರ್ಹ ಎಂದು ಎಚ್ಚರಿಸಿದ್ದಾನೆ. ಶಾರೀರಿಕ ಅಸಮಾನತೆ, ಮತ್ತು ಅಜ್ಞಾನಗಳಿಂದ ವೈವಾಹಿಕ ಜೀವನವು ವಿಫಲವಾಗುವುದಿದೆ. ಆದ್ದರಿಂದಲೇ ಯೋಗ್ಯ ವಧೂವರರಿರಬೇಕು, ಹಾಗೂ ಕಾಮಶಾಸ್ತ್ರ ಮತ್ತು ಕಲೆಗಳ ಯೋಗ್ಯ ಶಿಕ್ಷಣ ಅವರಿಗೆ ಅಗತ್ಯ ಎಂಬಾತ ಸಾರಿದನು.

ಈ ಕಾಮಸೂತ್ರವು ವಾತ್ಸ್ಯಾಯನನ ಕಾಲದ ಸಾಮಾಜಿಕ ಕೈಗನ್ನಡಿಯಾದರೂ ಅಂದಿನ ಹಲವು ಆಚಾರ ವಿಚಾರಗಳು ಇಂದಿಗೆ ಸರಿಹೋಗುವಂತಿಲ್ಲ.

ಸಂಸ್ಕೃತ ದಲ್ಲಿರುವ ಮೂಲಗ್ರಂಥವು ಇಂಗ್ಲೀಷ್ ಮತ್ತಿತರ ಪರದೇಶ ಭಾಷೆಗಳಲ್ಲಿ ಅನುವಾದವಾಗಿದೆ ಆದರೆ ಈ ಸಣ್ಣ ಪುಸ್ತಕದಲ್ಲಿ ಮೂಲ ಗ್ರಂಥದ ಕೇವಲ ಸಾರ ಸಂಗ್ರಹವನ್ನಷ್ಟೆ ಕ್ರೋಢೀಕರಿಸಿ ಕೊಡಲಾಗಿದೆ. ಸಾಮಾಜಿಕ ಜೀವನವು ಸ್ನೇಹ- ಸಂಯಮ ಪ್ರೀತಿ ತೃಪ್ತಿಗಳಿಂದ ಸುಗಮವೂ ಸುರಕ್ಷಿತವಾಗ ಬೇಕೆಂಬ ಉದ್ದೇಶದಿಂದ ಇದನ್ನು ಬರೆದುದೆಂದೂ ವಿಷಯೋಪಭೋಗಗಳ ದುರುಪಯೋಗ ಬುದ್ಧಿ ಯಿಂದಲ್ಲವೆಂದೂ ಲೇಖಕರು ಸೂಚಿಸಿದ್ದಾರೆ. ಓದುಗರೂ ಅದೇ ಬುದ್ಧಿಯಿಂದ ಓದಿದರೆ ಚೆನ್ನ. ಸಚಿತ್ರವಾದ, ಶಾಸ್ತ್ರೀಯವಾದ ಈ ಪುಸ್ತಕಕ್ಕೆ ಪ್ರೋತ್ಸಾಹ ದೊರಕುವುದರಲ್ಲಿ ಸಂದೇಹವಿಲ್ಲ.

ದಕ್ಷಿಣಕನ್ನಡ ಜಿಲ್ಲೆಯ ಒಕ್ಕಲು ಮಸೂದೆ ಮತ್ತು ಶ್ರೀ. ನರಸಪ್ಪಯ್ಯನವರ ಹೇಳಿಕೆ.

ನಿಮ್ಮ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ನರಸಪ್ಪಯ್ಯ ಯಂ.ಎಲ್.ಸಿ. ಯವರು ಕೊಟ್ಟ ಹೇಳಿಕೆಯನ್ನು ನೋಡಿ ಆನಂದಪಟ್ಟೆ. ಕಳೆದ 22 ವರ್ಷಗಳಿಂದ ಕಾಂಗ್ರೆಸ್ಸು ಭೂಸುಧಾರಣೆಯ ವಿಷಯದಲ್ಲಿ ಅಂಗೀಕೃತ ವಾರ್ಷಿಕ ಅಧಿವೇಶನಗಳಲ್ಲಿ ನಿರ್ಣಯಗಳನ್ನು ಮಾಡುತ್ತಾ ಬಂದಿದೆ. ಅನೇಕ ಕಮಿಟಿಗಳು ನೇಮಕ ಹೊಂದಿ ಅವುಗಳ ವರದಿಗಳು ಹೊರಬಿದ್ದು ಜನತೆ ಅವುಗಳನ್ನೆಲ್ಲಾ ಮರೆತು ಬಿಟ್ಟಿಯು. ಅನೇಕ ಚುನಾವಣಾ ಘೋಷಣೆಗಳಲ್ಲಿ ಈ ವಿಷಯ ಅಪ್ಪಣೆ ಕೊಟ್ಟದ್ದಾಯಿತು.

ಆದರೆ, ಕೆಲವು ತಿಂಗಳ ಹಿಂದೆ, ಶ್ರೀ ನರಸಪ್ಪಯ್ಯನವರ ಮುಂದಾಳುತ್ವದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳ ಸಭೆಯಲ್ಲಿ ಒಂದು ಅವಸರದ ಒಕ್ಕಲು ಮಸೂದೆ, ತಯಾರಾಗಿ ಮರುದಿನ ಅಧಿವೇಶನದಲ್ಲಿ ಅದನ್ನು ಮಂಡಿಸುತ್ತೇವೆಂತ ಪ್ರಕಟಿಸಿದ್ದನ್ನು ಕಂಡು ರೈತರು ಹಿಗ್ಗಿದರು.

ಜಿಲ್ಲೆಯ ಜನರೆಲ್ಲಾ ಕಾದಿದ್ದರೂ ಮಸೂದೆ ಬಂತಿಲ್ಲ ಎಂದರು. ನಂತರ ಎರಡು ಅಧಿವೇಶನಗಳು ದಾಟಿಹೋದವು. ಒಕ್ಕಲು ಮಸೂದೆ ಪ್ರಶ್ನೆಯೇ ಇಲ್ಲ ಅದರ ವಿಷಯ ಯಾರು ಉಸಿರೆತ್ತಿದಂತೆ ಕಂಡುಬರಲಿಲ್ಲ. ಪ್ರಾಯಶಃ ಈ ಕಾಂಗ್ರೆಸ್ ಧುರೀಣರಿಗೆ ಅಂತ ರಾಷ್ಟ್ರೀಯ ಸಮಸ್ಯೆಗಳಲ್ಲಿ ಈ ಚಿಲ್ಲರೆ ವಿಷಯ ನೆನಪು ಹೋಗಿರ ಬೇಕಂತ ತಿಳಿದೆವು, ಆದರೆ ಈಗ ಶ್ರೀ ನರಸಪ್ಪಯ್ಯನವರು ಒಂದು ಹೇಳಿಕೆಯನ್ನು ಹೊರಡಿಸಿ ಈ ವಿಷಯದಲ್ಲಿ ಅಭಿಪ್ರಾಯ ಕೊಡಲು ಇಚ್ಛಿಸುವವರು ದಯವಿಟ್ಟು ಕೂಡಲೇ ತನಗೆ ಬರೆದು ತಿಳಿಸಬೇಕಾಗಿ ಅಪೇಕ್ಷಿಸುತ್ತಾರೆ.

ಇಷ್ಟೊಂದು ಅವಸರ ಗಡಿಬಿಡಿ ಏಕೋ ತಿಳಿಯದು. ನಿಜವಾಗಿ ನಮಗೊಂದು ಒಕ್ಕಲು ಮಸೂದೆ ಬರುವುದೇ ಅದು ಯಾವಾಗ? ಯಾವ ಸ್ವರೂಪದ್ದು ನಿಜ್ವ ಮಸೂದೆಗೆ ಕಾಂಗ್ರೆಸ್ ಪಕ್ಷದ ಬೆಂಬಲ ಇದೆಯೇ ಮಸೂದೆಯನ್ನು ಪಾರ್ಟಿಯ ಮುಂದಿಡುವರು ಇವರು ಈ ವರೆಗ ಮಂಡಿಸಿರುವರೇ? ಹಾಗಾದರೆ ಈ ವಿಷಯದಲ್ಲಿ ಪಾರ್ಟಿಯ ಅಭಿಪ್ರಾಯವೇನು? ಇವುಗಳನ್ನು ಶ್ರೀ ನರಸಪ್ಪಯ್ಯನವರು ತಿಳಿಸಬೇಕಿಲ್ಲವೆ?

ಶ್ರೀ ನರಸಪ್ಪಯ್ಯನವರ ಹೇಳಿಕೆಯಿಂದ ಇವರು ಕೂಡಾ ನಮ್ಮಂತೆಯೇ ಒಬ್ಬ ಅಭಿಪ್ರಾಯ ಕೇಳುವವರೆಂದು ಗೊತ್ತಾಗುತ್ತದಲ್ಲವೆ?

ಇವರು—'ಮದ್ರಾಸ್ ಸರಕಾರದವರು ಬೇಗನೆ ಈ ವಿಷಯದಲ್ಲಿ ಕಾರ್ಯಕ್ರಮವನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ'ಎಂದು ಬಹಳ ಜಾಗ್ರತೆಯಿಂದ ಹೇಳಿದ್ದಾರೆ. ಹಾಗಾದರೆ ಇಷ್ಟು ಗಡಿಬಿಡಿ ಏಕೆ? ಈ ಆಶೆ ನಮ್ಮಲ್ಲಿ ಇಂದು ನಿರಾಶೆಯಾಗಿದೆ, ಇದಕ್ಕಿಂತ ಹೆಚ್ಚಿಗ ಏನೂ ಶ್ರೀ ನರಸಪ್ಪಯ್ಯನವರು ಹೇಳಲಾರರೇ?

ವಿ. ಶ್ರೀನಿವಾಸ ಶೆಟ್ಟಿ.
ವಕೀಲ್, ಕುಂದಾಪುರ.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. ಐಕ್ಕೆ ದೊರೆಯುತ್ತವ.

ಬೇಗನೆ ಬರೆಯಿರಿ:

American Swiss Watch Suppliers
Putlighar (N. U.) Amritsar.

ಶಾಸ್ತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯಮ್. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

'ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸ ಲ್ಪಟ್ಟ ಅಮೋಘವಾದಮ ಧುರದ್ರವರಸಾಯನ.

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೇಷ—ವ್ಯಾಪಾರ ವ್ಯವಹಾರಗಳಲ್ಲಿ ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದು. ನೌಕರಿ ಜನರು ಉದ್ಯೋಗದಲ್ಲಿ ಪ್ರಗತಿಯನ್ನೈದುವರು. ಆರ್ಥಿಕ ಭಾಗವು ಮುಂಚಿಗಿಂತ ಸುಧಾರಿಸಲಿದೆ. ಆದರೆ ಶತ್ರು ವರ್ಗದವರಿಂದ ನಿಮ್ಮ ಕಾರ್ಯ ಕಲಾಪಗಳಿಗೆ ನಾನಾ ತರದ ವಿಘ್ನಗಳು ಬರಬಹುದು. ಒಂದೊಮ್ಮೆ ಸ್ಥಾನಚಲನೆಯೂ ಆಗಬಹುದು. ಮಕ್ಕಳ ಅನಾರೋಗ್ಯದಿಂದಾಗಿ ಹೆಚ್ಚಿನ ಧನ ವ್ಯಯಿಸಬೇಕಾಗುವದು. ಪ್ರವಾಸದಲ್ಲೇ ಹೆಚ್ಚಿನ ಕಾಲ ಕಳೆವಿರಿ. ತಾ. 19. 20. 21. 22. ಈ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

(೨ನೇ ಪುಟದಿಂದ)

ತಿಂ, ಅಸ್ಪೃಶ್ಯತಾ ಪಟ್ಟಿಗೆ ಕ್ಷೇಮವಿದೆ, ಕಲ್ಯಾಣವಿದೆ. ಈ ಶತಮಾನದಲ್ಲಿ ಮಕ್ಕಳನ್ನು ದುಡಿಯಲು ಹಚ್ಚುವುದು ತೀರಾ ಅಯೋಗ್ಯವೆಂಬ ಭಾವನೆ ಬಲಗೊಳ್ಳುತ್ತಿದೆ. ಮಧ್ಯಯುಗೀನ ಕಾಲದ ಸಾಂಪ್ರದಾಯಿಕ ಇದೊಂದೆಂದು ಪಾಶ್ಚಾತ್ಯ ರಾಷ್ಟ್ರಗಳು ಹೇಳುತ್ತವೆ. ಭಾರತ ಸರಕಾರ ಸಹ ಇದನ್ನು ತತ್ವತಃ ಅಂಗೀಕರಿಸಿದೆ. ಕಾಯಿದೆ ಮೂಲಕ ಮಕ್ಕಳ ಹಿತ ಸಂರಕ್ಷಣೆಯನ್ನು ಆಗಲೇ ಇದನ್ನು ಸ್ವಲ್ಪ ಹಿಂದೆ ಕೈಗೊಂಡರು. ಕಾರಖಾನೆಗಳಲ್ಲಿ ಹುಡುಗ-ಹುಡುಗಿಯರನ್ನು ದುಡಿತಕ್ಕೆ ಇಡುವುದನ್ನು ಈ ಕಾಯಿದೆ ಪ್ರತಿಬಂಧಿಸಿತು. ೧೯೩೮ರಲ್ಲಿ ಮಾಡಿದೊಂದು ಕಾನೂನು ೧೫ ವರ್ಷ ವಯಸ್ಸು ಮೀರದವರನ್ನು ರೈಲ್ವೆಯಲ್ಲಿ ಹಾಗೂ ಬಂದರುಗಳಲ್ಲಿ ಸಾಮಾನು ಹೊರುವುದೇ ಮುಂತಾದ ಯಾವ ಕೆಲಸಕ್ಕೂ ನೇಮಿಸಬಾರದೆಂದು ಹೇಳಿತು. ಇದಕ್ಕೆ ೧೯೩೯ರಲ್ಲಿ ಮಾಡಿದ ತಿದ್ದುಪಡಿಯೊಂದು ೧೨ ವರ್ಷ ವಯಸ್ಸಿಗಿಂತ ಕಡಿಮೆಯಾದವರನ್ನು ಬೀಡಿಕಟ್ಟುವುದು, ಜಮಖಾನೆ ನೇಯುವುದು, ಬಟ್ಟೆಯ ಮುದ್ರಣ, ಬೆಂಕಿಪೆಟ್ಟಿಗೆ, ಸಿಮೆಂಟು, ಅಭ್ರಕ, ಅರಗು ಮುಂತಾದವುಗಳ ತಯಾರಿ ಇತ್ಯಾದಿಗಳಲ್ಲಿ ಉಪಯೋಗಿಸಕೂಡದೆಂದು ಸಾರಿತು. ಇವಲ್ಲದೆ ಕಾಯಿದೆಯ ಬೇರೆ ಬೇರೆ ಕ್ರಮಗಳು ಮಕ್ಕಳ ದುಡಿತವನ್ನು ನಿಷೇಧಿಸಲು ನೋಡಿರುತ್ತವೆ. ಆದರೆ ದುಡಿಮೆಯ ರಂಗದ ಬಹ್ವಂಶ ಭಾಗದಲ್ಲಿ ಕಾಯಿದೆಯ ನಿಯಮ ನಡೆಯುವುದಿಲ್ಲೆಂಬುದು ಅನುಭವಸಿದ್ಧವಾದ ಸಂಗತಿ. ಹುಡುಗರು ದುಡಿತಕ್ಕೆ ಬೀಳುವುದರಿಂದ ರಾಷ್ಟ್ರಶಕ್ತಿ ಕುಂದುತ್ತಿರುವುದೆಂದು ಎಲ್ಲರೂ ಈಗ ಒಪ್ಪಿದರೂ—ಕೆಲಸ ಮಾಡದಿದ್ದರೆ ದಿನ ಸಾಗುವುದು ಹೇಗೆಂಬುದಕ್ಕೆ ಸಮಾಧಾನವನ್ನೂ ಜನ ಅಪೇಕ್ಷಿಸುತ್ತಾರೆ. ಸರಕಾರ ಮಾಡಬಹುದಾದ ಕಾರ್ಯದ ಸ್ಥೂಲ ರೂಪರೇಷೆ ಮೇಲೆ ವಿವರಿಸಿದೆ—ಅದರಂತೆ ಉತ್ಪಾದಕ ವರ್ಗದವರೂ ಮಕ್ಕಳ ಶೈಕ್ಷಣಿಕ ಯೋಗ್ಯತೆ ಹೆಚ್ಚುವಂತೆ ಮತ್ತು ಸಂಸ್ಕಾರಗಳು ಬೆಳೆಯುವಂತೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವುದೂ ಅವರ ವಯೋಮಾನವನ್ನನುಸರಿಸಿಯೇ ಕೆಲಸ ನೀಡುವುದೂ ಸಾಮಾಜಿಕ ಕಲ್ಯಾಣಕ್ಕೆ ಮಾಡುವ ಸೇವೆ. ಕಾನೂನಿನ ಒಲಿಕ್ಕಿಂತಲೂ ಮಾನವತೆಯ ಕುರಿತು ಸಹಾನುಭೂತಿಯೇ ಇಂದಿನ ಅಗತ್ಯ. ರಾಷ್ಟ್ರದ ಉಜ್ವಲ ಭವಿಷ್ಯದ ಚಿಂತೆಯುಳ್ಳವರೆಲ್ಲರೂ ಇದರಲ್ಲಿ ಆಸ್ಥೆ ವಹಿಸಲಿ!

ವಾರದ ಒಳಿತು ಕೆಡುಕುಗಳು

ತಾ. ೧೭—೯—೫೩ರಿಂದ ತಾ. ೨೩—೯—೫೩ರ ವರೆಗೆ.

ವೃಷಭ—ಶುಭಾಶುಭಗ್ರಹ ಬಲ ಸಾಮ್ಯ ವಿರೋಧದಿಂದ ನಿಮಗೀವಾರದಲ್ಲಿ ಸುಖ ದುಃಖ ಲಾಭ ನಷ್ಟಗಳು ಸಮವಾಗಿ ಅನುಭವಕ್ಕೆ ಬರಲಿವೆ. ಶಕ್ತಿ ಯುಕ್ತಿಗಳಿಂದ ಕಾರ್ಯ ಸಾಧಿಸುವಿರಿ. ಪ್ರಯತ್ನವು ಸಫಲವಾಗುವದು. ಜನತೆಯ ಬೆಂಬಲವು ಚೆನ್ನಾಗಿರುವದು. ಆದರೆ ದಿನೇದಿನೇ ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಕೆಲವರ ಸಹವಾಸದಿಂದಾಗಿ ಸ್ಥಾನಮಾನ ಧನಗಳಿಗೆ ಧಕ್ಕೆ ತಗಲುವದು. ವಾರಾಂತ್ಯದ 3 ದಿನಗಳಲ್ಲಿ ನಾನಾ ತೆರದ ಲಾಭ ಸಂತೋಷಗಳಿವೆ.

ಮಿಥುನ—ನಿಮ್ಮ ಭವಿತವ್ಯವು ಹಿಂದಿನ ವಾರದಂತಿದ್ದರೂ ಚಿಂತೆಗವಕಾಶವಿಲ್ಲವು. ಸುಖ ಲಾಭ ಪತಿಗಳ ಅನುಗ್ರಹವು ಚೆನ್ನಾಗಿರುವುದರಿಂದ ದಿನಯಾಪನೆಯು ಸುಗಮವಾಗಿ ಪರಿಣಮಿಸುವದು. ಮನಸ್ಸಿಗೆ ನೆಮ್ಮದಿಯೂ ದೊರೆಯಲಿದೆ. ಪ್ರಬಲವಾದ ಶತ್ರುಗಳಿರುವರಾದರೂ ಸದ್ಯ ನಿಮಗವರಿಂದ ಏನೂ ಪೀಡೆಯುಂಟಾಗದು. ಕೆಲವೊಮ್ಮೆ ನಿಮ್ಮ ಇಷ್ಟ ವಸ್ತುಗಳೂ ಸಮಯಕ್ಕೆ ನಿಮಗೆ ಒದಗಲಾರವು. ಸೇವಕರು ಮತ್ತು ಮಕ್ಕಳ ಕೃತಿಯಿಂದಾಗಿ ಮನಸ್ಸಿಗೆ ತುಂಬಾ ಆಘಾತವಾಗಲಿದೆ. ತಾ. 17. 18. 23. ಈ ದಿನಗಳು ಇಷ್ಟಪ್ರದಗಳಿವೆ.

ಕರ್ಕಟ—ದುರ್ದೈವವು ನಿಮ್ಮನ್ನು ಬಲವಾಗಿ ಪೀಡಿಸುತ್ತಿರುವುದು. ಕ್ಷಣಗಾಲವೂ ನಿಮಗೆ ನಿಂತಲ್ಲಿ ನಿಲ್ಲಲು ಅವಕಾಶ ದೊರೆಯದು. ಅಧಿಕಾರಿ ವರ್ಗದವರಿಂದ ಒಂದಲ್ಲೊಂದು ತೆರನಾದ ಕಿರುಕುಳಗಳು ಇದ್ದೇ ಇರುವದು. ಪಿತ್ತೋಷ್ಣ ವಿಕಾರದಿಂದಾಗಿ ಆರೋಗ್ಯಕ್ಕೂ ಹಾನಿಯಿದೆ. ಚಂಚಲವಾದ ನಿಮ್ಮ ಚಿತ್ತವು ವಿಷಯಾದಿಗಳ ಬಲೆಗೆ ಸಿಲುಕಿ ಕಷ್ಟ ನಷ್ಟಗಳಿಗೀಡು ಮಾಡಲಿದೆ. ಆದರೂ ವಾರಾದಿಯ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸಲಾರವು.

ಸಿಂಹ—ಜನತೆಯ ಬೆಂಬಲ ಬಂಧುಗಳ ಸಹಕಾರ ಸ್ವಯಂ ಶಕ್ತಿ ಯುಕ್ತಿ ಸಂಪನ್ನರಾದ ನಿಮಗೆ ಸದ್ಯದ ದಿನಗಳು ಅತೀವ ಪ್ರಶಸ್ತವಿದೆ. ಯಾವ ಕಾರ್ಯವೇ ಇರಲಿ ಅನಾಯಾಸದಿಂದ ಸಾಧಿಸುವಿರಿ. ನೀಚ ಜನರಿಂದ ವಿಶೇಷವಾಗಿ ಲಾಭವಾಗಲಿದೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲ ಕಳೆವಿರಿ. ಆಕಸ್ಮಿಕ ಅಪಘಾತಗಳ ಸಂಭವವಿರುವುದರಿಂದ ತಾ. 17. 18 23ರಲ್ಲಿ ಸ್ವಲ್ಪ ಜಾಗರೂಕರಾಗಿರಿ.

ಕನ್ಯಾ—ದೈವವು ಸಂಪೂರ್ಣ ವಿಮುಖವಾಗಿದೆ. ಈ ವಾರದಲ್ಲಿ ಅದೇ ಕಾರಣ ನಿಮ್ಮ ಆತ್ಮೀಯರೂ ಕೂಡ ಸದ್ಯ ನಿಮ್ಮ ಬೆಂಬಲಕ್ಕೆ ನಿಲ್ಲಲೊಲ್ಲರು. ಆದಾಯವು ಅತ್ಯಲ್ಪವಾಗಿದ್ದು ಸರ್ವತೋಮುಖದಿಂದ ಖರ್ಚು ಪ್ರಾಪ್ತವಾಗುವುದರಿಂದ ಮರ್ಯಾದೆಯುಳಿಸಿಕೊಳ್ಳುವದು ದುರ್ಲಭವಾದೀತು. ಮಾತನಾಡಿದವರೊಡನೆ ಕಲಹ ಜನತೆಯ ತಿರಸ್ಕಾರ ಪರ್ಯಟನ ಉದರಶೂಲೆ ಇತ್ಯಾದ್ಯನಿಷ್ಟಗಳು ಅನಿವಾರ್ಯವಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮ.

ತುಲಾ—ನಿಮ್ಮ ಬಯಕೆಯಂತೆ ಪ್ರತಿಯೊಂದು ಕಾರ್ಯವು ನೆರವೇರಲಿದೆ. ಈ ವಾರದಲ್ಲಿ ಧನಧಾನ್ಯ ಪಶುಭೃತ್ಯಾದಿ ಗೃಹಪರಿವಾರಗಳು ಅನ್ಯೂನವಾಗಿರುವುದರಿಂದ ಕಾಲಯಾಪನೆಯು ಕಷ್ಟವಾಗದು. ಜನತೆಯಿಂದ ಗೌರವಾದರಗಳನ್ನು ಪಡೆವಿರಿ. ಸತ್ಕಾರ್ಯಗಳ ಸಲುವಾಗಿ ದುಡಿಮೆಯ ಬಹ್ವಂಶವನ್ನು ವ್ಯಯಿಸುವಿರಿ. ಆರೋಗ್ಯದ ಮಟ್ಟಿಗೆ ಈ ಕಾಲವು ಅಷ್ಟೊಂದು ಚೆನ್ನಾಗಿಲ್ಲವು. ವಾತಪ್ರಕೋಪವಲ್ಲಲ್ಲಿ ಕಾಣಿಸೀತು. ತಾ. 17. 18. 23. ಅನುಕೂಲ.

ವೃಶ್ಚಿಕ—ನಿಮ್ಮ ಲಾಭ ಸ್ಥಾನದಲ್ಲಿ ರವಿ ಮತ್ತು ಉಚ್ಚ ಬುಧರಿರುವುದರಿಂದ ಈ ವಾರದಲ್ಲಿ ಒಳ್ಳೆ ಧನ ಲಾಭವಾಗಲಿದೆಯಾದರೂ ಖರ್ಚು ಕೂಡ ಅಂತೆಯೇ ಹೆಚ್ಚಲಿದೆ. ವ್ಯಯದ ಶನಿಯು ಅನರ್ಥಗಳನ್ನು ಶೋಕ ಪರಂಪರೆಗಳನ್ನೂ ಕೊಡಲಿರುವನು. ಅಷ್ಟಮಸ್ಥ ಗುರುವು ಕೂಡ ಅನಾರೋಗ್ಯ ಪ್ರವಾಸಾದಿಗಳಿಗೆ ಕಾರಣನಾಗುವನು. ಮಿತ್ರಬಲ್ಲ ಜಾಣನಿಗಾದರೂ ಇಂದು ಕಲಹವಾಗದಿರದು. ತಾ. 19. 20. ಈ ದಿನಗಳು ಇಷ್ಟಪ್ರದಗಳಿವೆ.

ಧನು—ಇಂದು ನಿಮ್ಮ ಅದೃಷ್ಟದ ಕದವು ಸಂಪೂರ್ಣ ತೆರೆದಿರುವುದೆಂದರೂ ತಪ್ಪಾಗದು. ಯಾವ ಭಾಗದಲ್ಲಿ ನೋಡಿದರೂ ನಿಗೆ ಚಿಂತೆಗವಕಾಶವಿಲ್ಲವು. ಮನದಲ್ಲಿ ನೆನೆದ ಕಾರ್ಯವು ಅಲ್ಪಾವಕಾಶದಲ್ಲೇ ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿದೆ. ಜನತೆಯ ಸಹಕಾರ ಬಂಧುಮಿತ್ರರ ಬೆಂಬಲ ಸ್ವಯಂ ಶಕ್ತಿ ಯುಕ್ತಿ ಸಂಪನ್ನರಾದ ನೀವು ಇಂತಹ ಸುಸಂಧಿಯನ್ನು ನಿರುದ್ಯೋಗದಿಂದ ಹಾಳು ಮಾಡದಿರಿ. ತಾ. 17. 18. 21. 22. ಈ ದಿನಗಳು ನಿಮ್ಮ ಇಚ್ಛೆಯನ್ನು ಪೂರ್ತಿಗೊಳಿಸಲು ಶಕ್ತಗಳಾಗಿವೆ.

ಮಕರ ನಿಮ್ಮ ಅದೃಷ್ಟವಿಂದು ಅತೀವ ಹೀನ ಸ್ಥಿತಿಗೆ ಬಂದಿದೆ. ನಿಮ್ಮ ಆತ್ಮೀಯರಾಗಲಿ ಬಂಧುಗಳಾಗಲಿ ಯಾರೂ ನಿಮಗೆ ನೆರವಾಗರು, ಅಷ್ಟೇಕೆ ನಿಮ್ಮ ಕೈಹಿಡಿದ ಹೆಂಡತಿಯಾಗಲಿ ಹಡೆದ ಮಕ್ಕಳಾಗಲಿ ಸದ್ಯ ನಿಮಗೆ ವಿರೋಧಿಗಳಾಗಿಯೇ ಪರಿವರ್ತಿಸುವರು. ವ್ಯಾಪಾರ ವ್ಯವಹಾರ ನೌಕರಿ ಮುಂತಾದ ಭಾಗಗಳಲ್ಲಿ ನಿರಾಶೆ ನಷ್ಟ ಕಷ್ಟಗಳೇ ಎದ್ದು ಕಾಣಿಸಲಿವೆ. ದೇಹಾಲಸ್ಯ ಆರ್ಥಿಕ ಮುಗ್ಗಟ್ಟು ಇವುಗಳಿಂದಾಗಿ ನಿಮಗೆ ಸ್ವಪ್ನದಲ್ಲೂ ಸುಖವಿಲ್ಲದೆಂದರೂ ತಪ್ಪಾಗದು. ತಾ 19. 20. 23. ಇತರ ದಿನಗಳಿಗಿಂತ ಲೇಸು.

ಕುಂಭ—ಧನಲಾಭ ಪತಿಯಾದ ಬೃಹಸ್ಪತಿಯ ಅನುಗ್ರಹವೊಂದು ನಿಮಗೆ ಬಲವಾಗಿರುವುದು. ಅದೇ ಕಾರಣ ನೀವು ಕೈಗೊಂಡ ಕಾರ್ಯ ಕಲಾಪಗಳಲ್ಲಿ ಎಂದೂ ನಷ್ಟ ಸಂಭವಿಸದು. ವಿದ್ಯೋಪಜೀವಿ ಜನರಿಗೂ ವಿದ್ಯಾರ್ಥಿ ವರ್ಗಕ್ಕೂ ಸದ್ಯದ ದಿನಗಳು ಹಿತಾವಹವಿವೆ. ಆದರೆ ಸತಿಪತಿಗಳಲ್ಲಿ ನಿತ್ಯ ಕಲಹ ತಪ್ಪಲೊಲ್ಲದು. ವ್ಯಾಪಾರಿಗಳಿಗೂ ಶ್ರಮಜೀವಿ ವರ್ಗಕ್ಕೂ ಈ ವಾರವು ಚೆನ್ನಾಗಿಲ್ಲ. ತಾ. 17. 18. 21. 22. ಈ ದಿನಗಳಲ್ಲಿ ಲಾಭ ವಿಜಯ ಭೋಗಗಳು ಲಭಿಸುವವು.

ಮೀನ—ಒಂದೊಮ್ಮೆಗೇ ನಿಮ್ಮ ದೈನಂದಿನದ ವ್ಯವಹಾರಗಳಲ್ಲಿ ಪರಿವರ್ತನೆಯು ಕಂಡು ಬರಲಿದೆ. ತಾನೊಂದ ಬಗೆದರೆ ದೈವವೊಂದೆಣಿಸಿತೆಂಬಂತೆ ಹೆಚ್ಚಿನ ನಿಮ್ಮ ಕಾರ್ಯಗಳು ವಿಪರೀತ ಫಲವನ್ನು ಕೊಡಲಿವೆ ಬಂಧು ಜನರು ಕೈಬಿಡುವರು. ಆಪ್ತೇಷ್ಟರ ವಿಯೋಗವುಂಟಾಗಲಿದೆ. ಇಷ್ಟಾದರೂ ಧನ ಭಾಗ್ಯಪನಾದ ಅಂಗಾರಕನ ಬಲದಿಂದಾಗಿ ಬಂದುದೆಲ್ಲವನ್ನು ಸಹಿಸಿಕೊಂಡು ಮುಂದಡಿಯಿಡುವಿರಿ. ತಾ. 21. 22. ಮಾತ್ರ ಒಳ್ಳೆಯದಲ್ಲವು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೊಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೮-೦, ೨೪ ದಿನದ ಲೇಹ್ಯ ರೂ. ೩-೮-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment

ನವಯುಗ

Vol.33 No 4 24-9-1953 ವರ್ಷ ೩೩ ವಾರ ೪

ನಿಮಗೇನೆನಿಸುವುದು?

ವಿಶ್ವ ಸ್ವಾಸ್ಥ್ಯಸಂಘದ ಪ್ರಾದೇಶಿಕ ಕಾರ್ಯಾಲಯದಿಂದ ಪ್ರಕಟವಾಗಿರುವ ಒಂದು ವರದಿಯಲ್ಲಿ ಭಾರತದಲ್ಲಿ ಪ್ರತಿ ವರ್ಷವೂ ಸುಮಾರು ೬೦ ಲಕ್ಷ ೮೫ ಸಾವಿರ ಜನರು ಸ್ವಚ್ಛ ಹಾಗೂ ನಿರ್ಮಲ ವಾತಾವರಣದ ಅಭಾವದ ಕಾರಣದಿಂದ ಮೃತ್ಯುವಶರಾಗುತ್ತಿರುವರೆಂದು ಹೇಳಿದೆ. ಇವರಲ್ಲಿ ಮೈಲಿಗೆಯಿಂದ ಎರಡು ಲಕ್ಷ, ವಿಷಮ ಜ್ವರದಿಂದ ೩೬ ಲಕ್ಷ ಮತ್ತು ಅತಿಸಾರಾದಿ ರೋಗಗಳಿಂದ ಸುಮಾರು ೩ ಲಕ್ಷ ೫೦ ಸಾವಿರ ಜನರ ಮರಣ ಸಂಭವಿಸುತ್ತದೆ. ವರದಿಯು ರೋಗಗಳ ಔಷಧೋಪಚಾರಗಳಿಗೆಂದು ಪ್ರತಿ ಲಕ್ಷ ಜನಕ್ಕೆ [illegible] ರೂಪಾಯಿಗಳು ವೆಚ್ಚವಾಗುತ್ತದೆಂದು ತಿಳಿಸುತ್ತದೆ. ಇಷ್ಟು ಜನಕ್ಕೆ ಅವರವರು ವಾಸಿಸುವ ಸ್ಥಳಗಳ ನೈರ್ಮಲ್ಯ ಕಾಪಾಡಿಕೊಂಡು ಆರೋಗ್ಯವಾಗಿರುವಂತೆ ಯೋಗ್ಯ ವ್ಯವಸ್ಥೆ ಮಾಡಿಕೊಳ್ಳಬೇಕಾದರೆ ಸುಮಾರು ೬೫೦೦೦ ರೂಪಾಯಿಗಳು ಬೇಕಾದಾವು ಅಂದರೆ, ರೋಗಗಳ ಉಪಶಮನಕ್ಕಾಗಿ ಖರ್ಚು ಮಾಡುವ ಹಣದ ಮೂರರಪಾಲು ಮಾತ್ರ ಖರ್ಚು ಮಾಡಿದರೆ ನಾಲ್ಕು-ಹಿಡುಗುಗಳು ಹೇಳ ಹೆಸರಿಲ್ಲದಂತಾಗುತ್ತವೆ. ಆದರೆ ಈ ಕಡೆ ನಮ್ಮ ಗಮನವೇ ಹರಿದಿಲ್ಲವೆಂದು ಹೇಳಬಹುದು. ಪ್ರಾಯಶಃ ನಮಗೆ ರೂಢಿಯಾಗಿ ನಿರ್ಮಲವಾಗಿದ್ದುಕೊಳ್ಳುವುದು ಜೀವನದ ಅವಶ್ಯಕತೆಗಳಲ್ಲಿ ಒಂದೆಂಬ ಮತ್ತು ಬದುಕನ್ನು ಸುಂದರವಾಗಿಸುವ ಅನಿವಾರ್ಯ ವಿಧಾನವೆಂಬ ಜ್ಞಾನವೇ ಇಲ್ಲ.

❖

ನಮ್ಮ ಪಾರ್ಲಿಮೆಂಟಿನಲ್ಲಿ ಅಪೇಕ್ಷಿಸಬಹುದಾದುದಕ್ಕಿಂತಲೂ ಹೆಚ್ಚು ಜನಪ್ರಿಯ ಸದಸ್ಯರೊಬ್ಬರು ಇದ್ದರು. ಬಸ್ತರ ಪ್ರದೇಶದ ಆದಿವಾಸಿಗಳು ಕಳೆದ ಮಹಾಚುನಾವಣೆಯಲ್ಲಿ ಆರಿಸಿ ಕಳಿಸಿದ ಶ್ರೀ ಮುಚಾಕೀ ಕೋಸಾ ಎಂಬವನನ್ನು ಎಲ್ಲರೂ ತುಂಬ ಆಸ್ಥೆಯಿಂದ ಕಂಡು ಆದರಪೂರ್ವಕ ನಡೆಸಿಕೊಳ್ಳುತ್ತಿದ್ದರು. ಈಗ ಈ ಮಹಾಶಯರು ಪಾರ್ಲಿಮೆಂಟಿನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿದಿದೆ. ಶ್ರೀಮಾನ್ ಕೋಸಾರಿಗೆ ಓದು ಬರೆಹ ಬರುವುದಿಲ್ಲ- ಸಂಸತ್ತಿನ ಕಾಗದ ಪತ್ರಗಳಿಗೆ ಅವರು ತಮ್ಮ ಹೆಬ್ಬೆಟ್ಟಿನ ಮುದ್ರೆಯೊತ್ತಬೇಕಾಗುತ್ತದೆ. ಇದು ಅವರ ಆತ್ಮಾಭಿಮಾನವನ್ನು ಕಣಕಿರಬೇಕು. ಅದಲ್ಲದೆ ಈ ಸದಸ್ಯರಿಗೆ ದೆಹಲಿಯ ಹವೆಯೇ ಹಿಡಿಸುತ್ತಿರಲಿಲ್ಲ -ಏಕೆಂದರೆ ಬಸ್ತರ ಪ್ರದೇಶದ ಜಗದಲಪುರವನ್ನು ಬಿಟ್ಟು ಇವರು ಹೊರಗೆಲ್ಲಿಗೂ ಹೋಗುವುದೆಂದಿಲ್ಲ.

ಪಾರ್ಲಿಮೆಂಟಿನ ಉದ್ಘಾಟನೋತ್ಸವವು ಜರುಗಿದ ಕಾಲದಲ್ಲಿ ಇವರು ಜೀವನದಲ್ಲಿಯೇ ಮೊದಲ ಬಾರಿ ದೆಹಲಿಗೆ ಆಗಮಿಸಿದರು. ಆಗ ಇವರಿಗೆ ಬಾಹ್ಯ ಜಗತ್ತಿನೊಡನೆ ಯೋಗ್ಯ ಸಂಪರ್ಕ ಸ್ಥಾಪಿಸಿಕೊಳ್ಳಲು ಅನುಕೂಲವಾಗುವಂತೆ ಇಂಗ್ಲೀಷ ಬಲ್ಲ ದುಭಾಷಿ ಮುಂತಾದವರನ್ನು ಒದಗಿಸಿಕೊಟ್ಟಿದ್ದರು. ಭಾರತ ಸರಕಾರವು ಮಧ್ಯಪ್ರದೇಶ ಸರಕಾರಕ್ಕೆ ಒಂದು ಆದೇಶ ಕಳಿಸಿ, ಮಾನ್ಯ ಕೋಸಾರು ಸಂಸತ್ತಿನ ಅಧಿವೇಶನದಲ್ಲಿ ಭಾಗ ವಹಿಸಲು ಅಗತ್ಯವಿರುವ ಎಲ್ಲ ಅನುಕೂಲತೆಗಳನ್ನು ನೀಡಬೇಕೆಂದು ಹೇಳಿದ್ದರೂ ಮಾನ್ಯ ಸದಸ್ಯರು ಮತ್ತೆ ದೆಹಲಿಯ ಮುಖ ನೋಡಲಿಲ್ಲ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಬೇರೆ ಯಾವದೇ ಹುರಿಯಾಳುಗಳಿಗಿಂತ [illegible] ರದಷ್ಟು ಹೆಚ್ಚು ಮತ ([illegible]%) ಪಡೆದಿದ್ದ ಮಾನ್ಯ ಸದಸ್ಯರು ಸಂಸತ್ತಿನ ಬಿಳಿಗೋಡೆಯಲ್ಲಿ ಒಂದು ಕರಿಯ ಬೊಟ್ಟಿನಂತಿದ್ದರು. ಅಥವಾ ಕರಿಯ [illegible] ಮೇಲಿನ ಸಣ್ಣದ ಬಿಳಿಬೊಟ್ಟಿನಂತಿದ್ದರೆನ್ನೋಣವೆ? ಇದೇನೇ ಇರಲಿ ಸಂಸತ್ತಿಗೆ ಹಿಡಿದಿರುವ ಮಹಾಪ್ರಜಾರ ಮಹೀಪದ [illegible] ವಾರಣೆಗೆ ಮತ್ತು ಕೆಲ್ಲು ದೃಷ್ಟಿಯ ಮನ್ನಣೆ ಮನಗಿಸಲಿಕ್ಕೆ ಇಂಥವರೊಬ್ಬ ಸದಸ್ಯರು ಇರುವುದು ಯೋಗ್ಯವೆಂದು ತೋರುತ್ತದೆ. ಆದರೆ ಈಗ [illegible] ಟ್ಟಿದೆ.

❖

ಹೊಸ ದೆಹಲಿಯಲ್ಲಿ ಭಾರತ ಸರಕಾರದ [illegible] ಪ್ರದೇಶದಲ್ಲಿ ಹೊಸ ನಿರ್ವೇಶಿತರಿಗಾಗಿ [illegible] ರಾಜ್ಯಭಾರಿಗೆ [illegible] ಎತ್ತುಗಡೆಯಲ್ಲಿರುವರು. ಇದರ ವಿಕಾಸ ಕಾರ್ಯಕ್ರಮವು ಪೂರ್ತಿಗೊಂಡಾಗ ಸುಮಾರು ಒಂದುಕೋಟಿ [illegible] ರೂಪಾಯಿಗಳ ಖರ್ಚು ಬರುತ್ತದೆ. ರಾಜಧಾನಿಯ ಈ ಭಾಗವನ್ನು “ಚಾಣಕ್ಯಪುರಿ” ಎಂಬ ನೂತನ ಆದರೆ ಆಕರ್ಷಕವಾದ ಹೆಸರಿನಿಂದ ಕರೆಯಲು ಸರಕಾರವು ನಿರ್ಧರಿಸಿದೆ. ಅಧಿಕಾಂಶ ವಿದೇಶೀ ಮಂಡಳಿಗಳು ತಮ್ಮ ರಾಯಭಾರಿ ಕಚೇರಿ ಹಾಗೂ ವಸತಿಗೃಹಗಳಿಗೋಸ್ಕರ ಒಂದೊಂದು ತುಂಡು ನೆಲವನ್ನು ಇಷ್ಟರಲ್ಲಿಯೇ ತೆಗೆದುಕೊಂಡಿವೆ. ರಶಿಯಾದ ರಾಯಭಾರಿ ಕಛೇರಿಯೊಂದೇ ಸ್ಥಾನಾಂತರಕ್ಕೆ ಮನಸ್ಸು ಮಾಡಿದಂತಿಲ್ಲ. ಈ ಚಾಣಕ್ಯಪುರಿಯ ನಿರ್ಮಾಣಕ್ಕೆ ಕೆಲವು ವರ್ಷಗಳ ಅವಧಿ ಬೇಕಾದೀತು— ಹೊಸ ನಿವೇಶನದ ಹೊರಭಾಗದಲ್ಲಿ ಬಾಸಗಿ ಮನೆಗಳು ತಲೆ ಎತ್ತುತ್ತಿದ್ದರೂ, ಚಾಣಕ್ಯಪುರಿಯಲ್ಲಿ ವಿಶೇಷ ಕೆಲಸ ನಡೆದಿಲ್ಲ. ಮುಖ್ಯ ಮಾರ್ಗಗಳನ್ನು ರಚಿಸುವ ಹಾಗೂ ನೀರಿನ ನಳಗಳನ್ನು ನೆಲೆಗೊಳಿಸುವ ಕೆಲಸ ಮಾತ್ರ ಮುಗಿದಿದೆ. ಏನೇ ಇರಲಿ— ನಮ್ಮ ಊರುಕೇರಿಗಳ ಹೆಸರನ್ನು ಬದಲಾಯಿಸಿ ಅಜರಾಮರ ಮಾಡಲು ಇದೊಂದು ಹೊಸ ಪ್ರೇರಣೆಯಾಗಿ ಕಾಣುವುದು ಮಾತ್ರ ನಿಜ.

❖

ಬಾಷಾನುಗುಣ ರಾಜ್ಯರಚನೆಯ ಪ್ರಶ್ನೆ ಒಂದಾಗಲೆಲ್ಲ ಮನುಷ್ಯ ಸ್ವಾಭಾವಿಕವಾಗಿಯೇ ಸ್ವಜನಪ್ರಿಯ, ಸ್ವಭಾಷಾಪ್ರಿಯನೆಂದು ಮನೋವಿಜ್ಞಾನದ ಸಾಕ್ಷ್ಯವನ್ನು ಮುಂದಿಟ್ಟುಕೊಂಡು ವಾದಿಸುತ್ತೇವೆ—ಆದರೆ ಹಲವು [illegible] ವರ್ಷ ಕಾಲ ಗೋದಾವರಿಯಲ್ಲಿ ಕಟ್ಟಿ [illegible] ರ ಕನ್ನಡ ವ್ಯಾಪ್ತಿ ಸ್ವಭಾವ ಸಹಜವಾದ ಪ್ರವೃತ್ತಿಯನ್ನು [illegible] ಸಾಧ್ಯವೆಂದು [illegible] ಮುಂದೆ [illegible] ಪ್ರತಿಪಾದಿಸುವವರಿಗೂ ಕಡೆಯಲ್ಲಿ [illegible] ಸಂಸತ್ತಿನಲ್ಲಿ ನಡೆದ [illegible] ಶ್ರೀ [illegible] ಹಿಂದುಸ್ತಾನೀ [illegible] ಭಾಷಾಯ್ದಲ್ಲಿಯೇ ಪ್ರಶ್ನೆ ಕೇಳುವ ಹವ್ಯಾಸ. ಈ ಪ್ರಶ್ನೆಯನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿ ನಾನ ಮಂತ್ರಿಗಳೂ ಸಭಾಪತಿಗಳೂ ಉತ್ತರಿಸುತ್ತಿದ್ದು [illegible] ಹೇಳುವ ಪ್ರಸಂಗ ಪ್ರಧಾನಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಮೆನೋನ್ನರು ಹೊರುತ್ತಿದ್ದರು. ಆದರೆ ಮೊನ್ನೆ ಇಂಬೇಡೀ [illegible] ತಮ್ಮ ಪ್ರಶ್ನೆಯೊಂದನ್ನು ಕೇಳಿದಾಗ ಶ್ರೀಮತಿ ಮೆನೋನ್ನರು ಸಭೆಯಲ್ಲಿ ಇರಲಿಲ್ಲ. ಆಗ ಸಭಾಪತಿ ರಾಧಾಕೃಷ್ಣನ್ನರು ಆಗ ತಾನೆ ಪ್ರತಿಜ್ಞಾ ವಚನ ಸ್ವೀಕರಿಸಿ ಆಸನದಲ್ಲಿ ಕುಳಿತಿದ್ದ ಶ್ರೀ ಕೃಷ್ಣ ಮೆನೋನ್ನರನ್ನು ಪ್ರಶ್ನೆಯ ತರ್ಜುಮೆ ಮಾಡಿ ಹೇಳಲು ಕೇಳಿಕೊಂಡರು. ಮೆನೋನ್ನರು ಈ ಕೆಲಸ [illegible] ಚೆನ್ನಾಗಿಯೇ ನಿರ್ವಹಿಸಿದರು—ಮಂತ್ರಿಗಳ ಇಂಗ್ಲೀಷ ಭಾಷೆಯ ಉತ್ತರವನ್ನು ಮಲೆಯಾಳಿಗೆ ಅನುವಾದಿಸುವಾಗ ಮಾತ್ರ ತಡವರಿಸಿದರು. ‘ನನಗೆ ಮಲೆಯಾಳಿ ಅರ್ಥವಾಗುತ್ತದೆ - ಆದರೆ ಅದನ್ನು ಚೆನ್ನಾಗಿ ಮಾತನಾಡಲು ಬರುವುದಿಲ್ಲ” ಎಂದರು. ಕೊನೆಗೆ ಶ್ರೀ ಮುದ [illegible] ಮಂಜಾರನರೆಂಬ ಬೇರೊಬ್ಬ ಸದಸ್ಯರು ಸ್ವಯಂಪ್ರೇರಣೆಯಿಂದೆದ್ದು ಮಲೆಯಾಳಿ ಅನುವಾದ ಕೆಲಸವನ್ನು ಚೆನ್ನಾಗಿ ನಿರ್ವಹಿಸಿದರು. ಇದೇನೇ ಇರಲಿ ಶ್ರೀ ಕೃಷ್ಣ ಮೆನೋನ್ನರು ತಮ ಮಾತೃಭಾಷೆಯ ಅಪಮಾನಗೈದರೆಂದು ಸ್ವಭಾಷಾ ಪ್ರಿಯರು ಆಕ್ರೋಶಗೈಯುವುದರಲ್ಲಿ ಅಸಂಬದ್ಧವಾದುದು ಏನೂ ಇಲ್ಲ.

❖

ಲೋಕಸಭೆಯಲ್ಲಿ ಅಸ್ಪೃಶ್ಯತಾ ವಿಧೇಯಕದ ಮೇಲೆ ಚರ್ಚೆ ನಡೆಯುತ್ತಿದ್ದಾಗ— ಶ್ರೀ [illegible] ವರೊಂದು ತಿದ್ದುಪಡಿ ಮಂಡಿಸಿ ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹಗಳನ್ನು ಪ್ರೋತ್ಸಾಹದ ಮೂಲಕ ಪ್ರೋತ್ಸಾಹಿಸಿ ಸರಕಾರ ಬೆಂಬಲಿಸಬೇಕೆಂದು ಹೇಳಿದರು. ಇಂಥ ಮದುವೆಯಿಂದ ಹುಟ್ಟುವ ಮಕ್ಕಳಿಗೆ [illegible] ಯಿಂದ ವಿನಾಯಿತಿ ಮಾಡಬೇಕೆಂದೂ [illegible] ಬಂದ ದಂಪತಿಗಳ ಸಂತಾನಿಕರಿಗೆ ಬಹುಮಾನ ನೀಡಬೇಕೆಂದೂ ವಾದಿಸಿದರು. ಮಂಡಿಸಿದವರ ತಿದ್ದುಪಡಿಗೆ ತಮ್ಮ ನೈತಿಕ ಬೆಂಬಲವನ್ನು ಸೂಚಿಸುತ್ತಾ ಗಾಡ್ಗೀಳರು ಇನ್ನೂ ಒಂದು ಹೆಜ್ಜೆ ಮುಂದರಿದು ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹಗಳನ್ನು ಸರಕಾರ ಪ್ರೋತ್ಸಾಹಿಸುವುದಷ್ಟೇ ಅಲ್ಲ— [illegible] ಆರ್ಥಿಕ ನೆರವನ್ನೂ ಕೊಡ [illegible] ಯಿಸುವವರ ತಿದ್ದುಪಡಿಯನ್ನು ಘಟನಾತ್ಮಕವಾಗಿ ಮಾಡಲು ಮಾತ್ರ ಬರುವುದಿಲ್ಲೆಂದು ಅವರು ತಿಳಿಸಿದರು. ಆಗ ನೋರೆಯುವರು ತಮ್ಮ ತಿದ್ದುಪಡಿಯನ್ನು ಹಿಂದೆಗೆದುಕೊಂಡು “ನಮ್ಮ ಅರ್ಥ ಸಚಿವರು ಅಂತರ್ಜಾತೀಯ ವಿವಾಹವನ್ನು ಆಚರಣೆಯಲ್ಲಿ ತಂದು ತೋರಿಸಿದ್ದಾರೆ. ಆದರೆ ಎಲ್ಲರೂ ತಮ್ಮನ್ನು ಅನುಸರಿಸಬೇಕೆಂದು ಬೋಧಿಸುತ್ತಿಲ್ಲ’ ಎಂದು ವಿಷಾದ ಪಟ್ಟರೂ—ಸಭೆ ಮಾತ್ರ ಗೊಳ್ಳೆಂದು ನಕ್ಕುಬಿಟ್ಟಿತು. ‘ಈ ತಿದ್ದುಪಡಿಗೆ ನನ್ನ ವಿರೋಧವಿದೆ ಎಂದ ಪಕ್ಷಕ್ಕೆ ಯಾರೂ ನನ್ನನ್ನು ತಪ್ಪು ತಿಳಿಯಬೇಡಿ’ ಎಂದ ಶ್ರೀ ದೇಶಮುಖರು ವ್ಯಂಗ್ಯಾಮುಕ್ತಿ ರಚಿಕಲ್ಲವೆ?

— — —

ದಯಮಾಡಿ ನಿಮ್ಮ ಚಂದಾಹಣ ಕಳಿಸಿರಿ

ಮೇಷ—ವ್ಯಾಪಾರ ವ್ಯವಹಾರಗಳಲ್ಲಿ ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದು. ನೌಕರಿ ಜನರು ಉದ್ಯೋಗದಲ್ಲಿ ಪ್ರಗತಿಯನ್ನೈದುವರು. ಆರ್ಥಿಕ ಭಾಗವು ಮುಂಚಿಗಿಂತ ಸುಧಾರಿಸಲಿದೆ. ಆದರೆ ಶತ್ರು ವರ್ಗದವರಿಂದ ನಿಮ್ಮ ಕಾರ್ಯ ಕಲಾಪಗಳಿಗೆ ನಾನಾ ತರದ ವಿಘ್ನಗಳು ಬರಬಹುದು. ಒಂದೊಮ್ಮೆ ಸ್ಥಾನಚಲನೆಯೂ ಆಗಬಹುದು. ಮಕ್ಕಳ ಅನಾರೋಗ್ಯದಿಂದಾಗಿ ಹೆಚ್ಚಿನ ಧನ ವ್ಯಯಿಸಬೇಕಾಗುವದು. ಪ್ರವಾಸದಲ್ಲೇ ಹೆಚ್ಚಿನ ಕಾಲ ಕಳೆವಿರಿ. ತಾ. 19. 20. 21. 22. ಈ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

(೩ನೇ ಪುಟದಿಂದ)

ತೊ. ಅಷ್ಟರಮಟ್ಟಿಗೆ ಕ್ಷೇಮವಿದೆ, ಕಲ್ಯಾಣವಿದೆ. ಈ ಶತಮಾನದಲ್ಲಿ ಮಕ್ಕಳನ್ನು ದುಡಿಯಲು ಹಚ್ಚುವುದು ತೀರಾ ಅಯೋಗ್ಯವೆಂಬ ಭಾವನೆ ಬಲಿಯುತ್ತಿದೆ: ಮಧ್ಯಯುಗೀನ ಕಾಲದ ಸಾಂಪ್ರದಾಯಗಳಲ್ಲಿ ಇದೊಂದೆಂದು ಪಾಶ್ಚಾತ್ಯ ರಾಷ್ಟ್ರಗಳು ಹೇಳುತ್ತವೆ. ಭಾರತ ಸರಕಾರ ಸಹ ಇದನ್ನು ತತ್ವತಃ ಅಂಗೀಕರಿಸಿ-ಕಾಯಿದೆ ಮೂಲಕ ಮಕ್ಕಳ ಹಿತ ಸಂರಕ್ಷಣೆಯನ್ನು ೧೯೩೮ನೇ ಇಸವಿಯಷ್ಟು ಹಿಂದೆ ಕೈಗೊಂಡರು. ಕಾರಖಾನೆಗಳಲ್ಲಿ ಹುಡುಗ-ಹುಡುಗಿಯರನ್ನು ದುಡಿತಕ್ಕೆ ಇಡುವುದನ್ನು ಈ ಕಾಯಿದೆ ಪ್ರತಿಬಂಧಿಸಿತು. ೧೯೩೮ರಲ್ಲಿ ಮಾಡಿದೊಂದು ಕಾನೂನು ೧೫ ವರ್ಷ ವಯಸ್ಸು ಮೀರದವರನ್ನು ರೈಲ್ವೆಯಲ್ಲಿ ಹಾಗೂ ಬಂದರುಗಳಲ್ಲಿ ಸಾಮಾನು ಹೊರುವುದೇ ಮುಂತಾದ ಯಾವ ಕೆಲಸಕ್ಕೂ ನೇಮಿಸಬಾರದೆಂದು ಹೇಳಿತು. ಇದಕ್ಕೆ ೧೯೩೯ರಲ್ಲಿ ಮಾಡಿದ ತಿದ್ದುಪಡಿಯೊಂದು ೧೨ ವರ್ಷ ವಯಸ್ಸಿಗಿಂತ ಕಡಿಮೆಯಾದವರನ್ನು ಬೀಡಿಕಟ್ಟುವುದು, ಜಮಖಾನೆ ನೇಯುವುದು, ಬಟ್ಟೆಯ ಮುದ್ರಣ, ಬೆಂಕಿಪೆಟ್ಟಿಗೆ, ಸಿಮೆಂಟು, ಅಭ್ರಕ, ಅರಗು ಮುಂತಾದವುಗಳ ತಯಾರಿ ಇತ್ಯಾದಿಗಳಲ್ಲಿ ಉಪಯೋಗಿಸಕೂಡದೆಂದು ಸಾರಿತು. ಇವಲ್ಲದೆ ಕಾಯಿದೆಯ ಬೇರೆ ಬೇರೆ ಕ್ರಮಗಳು ಮಕ್ಕಳ ದುಡಿತವನ್ನು ನಿಷೇಧಿಸಲು ನೋಡಿರುತ್ತವೆ. ಆದರೆ ದುಡಿಮೆಯ ರಂಗದ ಬಹ್ವಂಶ ಭಾಗದಲ್ಲಿ ಕಾಯಿದೆಯ ನಿಯಮ ನಡೆಯುವುದಿಲ್ಲೆಂಬುದು ಅನುಭವಸಿದ್ಧವಾದ ಸಂಗತಿ. ಹುಡುಗರು ದುಡಿತಕ್ಕೆ ಬೀಳುವುದರಿಂದ ರಾಷ್ಟ್ರಶಕ್ತಿಗುಂದುತ್ತಿರುವುದೆಂದು ಎಲ್ಲರೂ ಈಗ ಒಪ್ಪಿದರೂ—ಕೆಲಸ ಮಾಡದಿದ್ದರೆ ದಿನ ಸಾಗುವುದು ಹೇಗೆಂಬುದಕ್ಕೆ ಸಮಾಧಾನವನ್ನೂ ಜನ ಅಪೇಕ್ಷಿಸುತ್ತಾರೆ. ಸರಕಾರ ಮಾಡಬಹುದಾದ ಕಾರ್ಯದ ಸ್ಥೂಲ ರೂಪರೇಷೆ ಮೇಲೆ ವಿವರಿಸಿದೆ—ಅವರಂತೆ ಉತ್ಪಾದಕ ವರ್ಗದವರೂ ಮಕ್ಕಳ ಶೈಕ್ಷಣಿಕ ಯೋಗ್ಯತೆ ಹೆಚ್ಚುವಂತೆ ಮತ್ತು ಸಂಸ್ಕಾರಗಳು ಬೆಳೆಯುವಂತೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವುದೂ ಅವರ ವಯೋಮಾನವನ್ನನುಸರಿಸಿಯೇ ಕೆಲಸ ನೀಡುವುದೂ ಸಾಮಾಜಿಕ ಕಲ್ಯಾಣಕ್ಕೆ ಮಾಡುವ ಸೇವೆ. ಕಾನೂನಿನ ಒಲಕ್ಕಿಂತಲೂ ಮಾನವತೆಯ ಕುರಿತು ಸಹಾನುಭೂತಿಯೇ ಇಂದಿನ ಅಗತ್ಯ. ರಾಷ್ಟ್ರದ ಉಜ್ವಲ ಭವಿಷ್ಯದ ಚಿಂತೆಯುಳ್ಳವರೆಲ್ಲರೂ ಇದರಲ್ಲಿ ಆಸ್ಥೆ ವಹಿಸಲಿ!

ವಾರದ ಒಳಿತು ಕೆಡುಕುಗಳು

ತಾ. ೧೭—೯—೫೩ರಿಂದ ತಾ. ೨೩—೯—೫೩ರ ವರೆಗೆ.

ವೃಷಭ—ಶುಭಾಶುಭಗ್ರಹ ಬಲ ಸಾಮ್ಯ ನಿರೀಕ್ಷಣದಿಂದ ನಿಮಗೀವಾರದಲ್ಲಿ ಸುಖ ದುಃಖ ಲಾಭ ನಷ್ಟಗಳು ಸಮವಾಗಿ ಅನುಭವಕ್ಕೆ ಬರಲಿವೆ. ಶಕ್ತಿ ಯುಕ್ತಿಗಳಿಂದ ಕಾರ್ಯ ಸಾಧಿಸುವಿರಿ. ಪ್ರಯತ್ನವು ಸಫಲವಾಗುವದು. ಜನತೆಯ ಬೆಂಬಲವು ಚೆನ್ನಾಗಿರುವದು. ಆದರೆ ದಿನೇದಿನೇ ಸಾಂಸಾರಿಕ ತಾಪತ್ರಯಗಳು ಹೆಚ್ಚಲಿವೆ. ಕೆಲವರ ಸಹವಾಸದಿಂದಾಗಿ ಸ್ಥಾನಮಾನ ಧನಗಳಿಗೆ ಧಕ್ಕೆ ತಗಲುವದು. ವಾರಾಂತ್ಯದ 3 ದಿನಗಳಲ್ಲಿ ನಾನಾ ತೆರದ ಲಾಭ ಸಂತೋಷಗಳಿವೆ.

ಮಿಥುನ—ನಿಮ್ಮ ಭವಿತವ್ಯವು ಹಿಂದಿನ ವಾರದಂತಿರದಿದ್ದರೂ ಚಿಂತೆಗವಕಾಶವಿಲ್ಲವು. ಸುಖ ಲಾಭ ಪತಿಗಳ ಅನುಗ್ರಹವು ಚೆನ್ನಾಗಿರುವುದರಿಂದ ದಿನಯಾಪನೆಯು ಸುಗಮವಾಗಿ ಪರಿಣಮಿಸುವದು. ಮನಸ್ಸಿಗೆ ನೆಮ್ಮದಿಯೂ ದೊರೆಯಲಿದೆ. ಪ್ರಬಲವಾದ ಶತ್ರುಗಳಿರುವರಾದರೂ ಸಧ್ಯ ನಿಮಗವರಿಂದ ಏನೂ ಪೀಡೆಯುಂಟಾಗದು. ಕೆಲವೊಮ್ಮೆ ನಿಮ್ಮ ಇಷ್ಟ ವಸ್ತುಗಳೂ ಸಮಯಕ್ಕೆ ನಿಮಗೆ ಒದಗಲಾರವು. ಸೇವಕರು ಮತ್ತು ಮಕ್ಕಳ ಕೃತಿಯಿಂದಾಗಿ ಮನಸ್ಸಿಗೆ ತುಂಬಾ ಆಘಾತವಾಗಲಿದೆ. ತಾ. 17. 18. 23. ಈ ದಿನಗಳು ಇಷ್ಟಪ್ರದಗಳಿವೆ.

ಕರ್ಕಟ—ದುರ್ದೈವವು ನಿಮ್ಮನ್ನು ಬಲವಾಗಿ ಪೀಡಿಸುತ್ತಿರುವುದು. ಕ್ಷಣಗಾಲವೂ ನಿಮಗೆ ನಿಂತಲ್ಲಿ ನಿಲ್ಲಲು ಅವಕಾಶ ದೊರೆಯದು. ಅಧಿಕಾರಿ ವರ್ಗದವರಿಂದ ಒಂದಲ್ಲೊಂದು ತೆರನಾದ ಕೀಟಲೆಗಳು ಇದ್ದೇ ಇರುವದು. ಪಿತ್ತೋದ್ರೇಕ ವಿಕಾರದಿಂದಾಗಿ ಆರೋಗ್ಯಕ್ಕೂ ಹಾನಿಯುಂಟು. ಚಂಚಲವಾದ ನಿಮ್ಮ ಚಿತ್ತವು ವಿಷಯಾದಿಗಳ ಬಲೆಗೆ ಸಿಲುಕಿ ಕಷ್ಟ ನಷ್ಟಗಳಿಗೀಡುಮಾಡಲಿದೆ. ಆದರೂ ವಾರದಿಯ 4 ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸಲಾರವು.

ಸಿಂಹ—ಜನತೆಯ ಬೆಂಬಲ ಬಂಧುಗಳ ಸಹಕಾರ ಸ್ವಯಂ ಶಕ್ತಿ ಯುಕ್ತಿ ಸಂಪನ್ನರಾದ ನಿಮಗೆ ಸಧ್ಯದ ದಿನಗಳು ಅತೀವ ಪ್ರಶಸ್ತವಿವೆ. ಯಾವ ಕಾರ್ಯವೇ ಇರಲಿ ಅನಾಯಾಸದಿಂದ ಸಾಧಿಸುವಿರಿ. ನೀಚ ಜನರಿಂದ ವಿಶೇಷವಾಗಿ ಲಾಭವಾಗಲಿದೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದ ಕಾಲ ಕಳೆವಿರಿ. ಆಕಸ್ಮಿಕ ಅಪಘಾತಗಳ ಸಂಭವವಿರುವುದರಿಂದ ತಾ. 17. 18 23ರಲ್ಲಿ ಸ್ವಲ್ಪ ಜಾಗರೂಕರಾಗಿರಿ.

ಕನ್ಯಾ—ದೈವವು ಸಂಪೂರ್ಣ ವಿಮುಖವಾಗಿದೆ. ಈ ವಾರದಲ್ಲಿ ಆದಕಾರಣ ನಿಮ್ಮ ಆತ್ಮೀಯರೂ ಕೂಡ ಸಧ್ಯ ನಿಮ್ಮ ಬೆಂಬಲಕ್ಕೆ ನಿಗಲೊಲ್ಲರು. ಆದಾಯವು ಅತ್ಯಲ್ಪವಾಗಿದ್ದು ಸರ್ವತೋಮುಖನಿಂದ ಖರ್ಚು ಪ್ರಾಪ್ತವಾಗುವುದರಿಂದ ಮರ್ಯಾದೆಯುಳಿಸಕೊಳ್ಳುವದು ದುರ್ಲಭವಾದೀತು. ಮಾತನಾಡಿದವರೊಡನೆ ಕಲಹ ಜನತೆಯ ತಿರಸ್ಕಾರ ಪರ್ಯಟನ ಉದರಶೂಲೆ ಇತ್ಯಾದನಿಷ್ಟಗಳು ಅನಿವಾರ್ಯವಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮ.

ತುಲಾ—ನಿಮ್ಮ ಬಯಕೆಯಂತೆ ಪ್ರತಿಯೊಂದು ಕಾರ್ಯವು ನೆರವೇರಲಿದೆ. ಈ ವಾರದಲ್ಲಿ ಧನಧಾನ್ಯ ಪಶುಭೃತ್ಯಾದಿ ಗೃಹಪರಿವಾರಗಳು ಅನ್ಯೂನವಾಗಿರುವುದರಿಂದ ಕಾಲಯಾಪನೆಯು ಕಷ್ಟವಾಗದು. ಜನತೆಯಿಂದ ಗೌರವಾದರಗಳನ್ನು ಪಡೆವಿರಿ. ಸತ್ಕಾರ್ಯಗಳ ಸಲುವಾಗಿ ದುಡಿಮೆಯ ಬಹ್ವಂಶವನ್ನು ವ್ಯಯಿಸುವಿರಿ. ಆರೋಗ್ಯದ ಮಟ್ಟಿಗೆ ಈ ಕಾಲವು ಅಷ್ಟೊಂದು ಚೆನ್ನಾಗಿಲ್ಲವು. ವಾತಪ್ರಕೋಪವಲ್ಲಲ್ಲಿ ಕಾಣಿಸೀತು. ತಾ. 17. 18. 23. ಅನುಕೂಲ.

ವೃಶ್ಚಿಕ—ನಿಮ್ಮ ಲಾಭ ಸ್ಥಾನದಲ್ಲಿ ರವಿ ಮತ್ತು ಉಚ್ಚ ಬುಧರಿರುವುದರಿಂದ ಈ ವಾರದಲ್ಲಿ ಒಳ್ಳೆ ಧನ ಲಾಭವಾಗಲಿದೆಯಾದರೂ ಖರ್ಚು ಕೂಡ ಅಂತೆಯೇ ಹೆಚ್ಚಲಿದೆ. ವ್ಯಯದ ಶನಿಯು ಅನರ್ಥಗಳನ್ನೂ ಶೋಕಪರಂಪರೆಗಳನ್ನೂ ಕೊಡಲಿರುವನು. ಅಷ್ಟಮಸ್ಥ ಗುರುವು ಕೂಡ ಅನಾರೋಗ್ಯ ಪ್ರವಾಸಾದಿಗಳಿಗೆ ಕಾರಣನಾಗುವನು. ಮಾತುಬಲ್ಲ ಜಾಣನಿಗಾದರೂ ಇಂದು ಕಲಹವಾಗದಿರದು. ತಾ. 19. 20. ಈ ದಿನಗಳು ಇಷ್ಟಪ್ರದಗಳಿವೆ.

ಧನು—ಇಂದು ನಿಮ್ಮ ಅದೃಷ್ಟದ ಕದವು ಸಂಪೂರ್ಣ ತೆರೆದಿರುವುದೆಂದರೂ ತಪ್ಪಾಗದು. ಯಾವ ಭಾಗದಲ್ಲಿ ನೋಡಿದರೂ ನಿಗೆ ಚಿಂತೆಗವಕಾಶವಿಲ್ಲವು. ಮನದಲ್ಲಿ ನೆನೆದ ಕಾರ್ಯವು ಅಲ್ಪಾವಕಾಶದಲ್ಲೇ ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿದೆ. ಜನತೆಯ ಸಹಕಾರ ಬಂಧುಮಿತ್ರರ ಬೆಂಬಲ ಸ್ವಯಂ ಶಕ್ತಿ ಯುಕ್ತಿ ಸಂಪನ್ನರಾದ ನೀವು ಇಂತಹ ಸುಸಂಧಿಯನ್ನು ನಿರುದ್ಯೋಗದಿಂದ ಹಾಳು ಮಾಡದಿರಿ. ತಾ. 17. 18. 21. 22 ಈ ದಿನಗಳು ನಿಮ್ಮ ಇಚ್ಛೆಯನ್ನು ಪೂರ್ತಿಗೊಳಿಸಲು ಶಕ್ತಗಳಾಗಿವೆ.

ಮಕರ—ನಿಮ್ಮ ಅದೃಷ್ಟವಿಂದು ಅತಿ ಹೀನ ಸ್ಥಿತಿಗೆ ಬಂದಿದೆ. ನಿಮ್ಮ ಆತ್ಮೀಯರಾಗಲಿ ಬಂಧುಗಳಾಗಲಿ ಯಾರೂ ನಿಮಗೆ ನೆರವಾಗರು. ಅಷ್ಟೇಕೆ ನಿಮ್ಮ ಕೈಹಿಡಿದ ಹೆಂಡತಿಯಾಗಲಿ ಪಡೆದ ಮಕ್ಕಳಾಗಲಿ ಸಧ್ಯ ನಿಮಗೆ ವಿರೋಧಿಗಳಾಗಿಯೇ ಪರಿವರ್ತಿಸುವರು. ವ್ಯಾಪಾರ ವ್ಯವಹಾರ ನೌಕರಿ ಮುಂತಾದ ಭಾಗಗಳಲ್ಲಿ ನಿರಾಶೆ ನಷ್ಟ ಕಷ್ಟಗಳೇ ಎದ್ದು ಕಾಣಿಸಲಿವೆ. ದೇಹಾಲಸ್ಯ ಆರ್ಥಿಕ ಮುಗ್ಗಟ್ಟು ಇವುಗಳಿಂದಾಗಿ ನಿಮಗೆ ಸ್ವಪ್ನದಲ್ಲೂ ಸುಖನಿದ್ದೆಯಿಂದಲೂ ತಪ್ಪಾಗದು. ತಾ 19 20. 23. ಇತರ ದಿನಗಳಿಗಿಂತ ಲೇಸು.

ಕುಂಭ—ಧನಲಾಭ ಪತಿಯಾದ ಬೃಹಸ್ಪತಿಯ ಅನುಗ್ರಹವೊಂದು ನಿಮಗೆ ಬಲವಾಗಿರುವುದು. ಆದ ಕಾರಣ ನೀವು ಕೈಗೊಂಡ ಕಾರ್ಯ ಕಲಾಪಗಳಲ್ಲಿ ಎಂದೂ ನಷ್ಟ ಸಂಭವಿಸದು. ವಿದ್ಯೋಪಜೀವಿ ಜನರಿಗೂ ವಿದ್ಯಾರ್ಥಿ ವರ್ಗಕ್ಕೂ ಸಧ್ಯದ ದಿನಗಳು ಹಿತಾವಹವಿವೆ. ಆದರೆ ಸತಿಪತಿಗಳಲ್ಲಿ ನಿತ್ಯ ಕಲಹ ತಪ್ಪಲೊಲ್ಲದು. ವ್ಯಾಪಾರಿಗಳಿಗೂ ಶ್ರಮಜೀವಿ ವರ್ಗಕ್ಕೂ ಈ ವಾರವು ಚೆನ್ನಾಗಿಲ್ಲ. ತಾ. 17. 18. 21. 22. ಈ ದಿನಗಳಲ್ಲಿ ಲಾಭ ವಿಜಯ ಭೋಗಗಳು ಲಭಿಸುವವು.

ಮೀನ—ಒಂದೊಮ್ಮೆಗೇ ನಿಮ್ಮ ದೈನಂದಿನ ವ್ಯವಹಾರಗಳಲ್ಲಿ ಪರಿವರ್ತನೆಯು ಕಂಡು ಬರಲಿದೆ. ತಾನೊಂದ ಬಗೆದರೆ ದೈವವೊಂದೆಣಿಸಿತೆಂಬಂತೆ ಹೆಚ್ಚಿನ ನಿಮ್ಮ ಕಾರ್ಯಗಳು ವಿಪರೀತ ಫಲವನ್ನು ಕೊಡಲಿವೆ. ಬಂಧು ಜನರು ಕೈಬಿಡುವರು. ಆಪ್ತೇಷ್ಟರ ವಿಯೋಗವುಂಟಾಗಲಿದೆ. ಇಷ್ಟಾದರೂ ಧನ ಭಾಗ್ಯಪನಾದ ಅಂಗಾರಕನು ಬಲದಿಂದಾಗಿ ಬಂದುದೆಲ್ಲವನ್ನೂ ಸಹಿಸಿಕೊಂಡು ಮುಂದಡಿಯಿಡುವಿರಿ. ತಾ. 21. 22. ಮಾತ್ರ ಒಳ್ಳೆಯದಲ್ಲವು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೦ ದಿನದ ಲೇಹ್ಯ ರೂ. ೫-೪-೦, ೨೦ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ, ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

Edited, Printed & Published By K. H. Shetty at the Navayuga Press, Udipi, S. India

Regd. No. M. [illegible]
Licence No [illegible]
Licensed to Post without Prepayment.

ನವಯುಗ

Vol.33 No 4 24-9-1953 ವರ್ಷ ೩೩ ವಾರ ೪

ನಿಮಗೇನೆನಿಸುವುದು?

ವಿಶ್ವ ಸ್ವಾಸ್ಥ್ಯಸಂಘದ ಪ್ರಾದೇಶಿಕ ಕಾರ್ಯಾಲಯದಿಂದ ಪ್ರಕಟವಾಗಿರುವ ಒಂದು ವರದಿಯಲ್ಲಿ, ಭಾರತದಲ್ಲಿ ಪ್ರತಿವರ್ಷವೂ ಸುಮಾರು ೪೦ ಲಕ್ಷ ೮೫ ಸಾವಿರ ಜನರ ಸ್ವಚ್ಛ ಹಾಗೂ ನಿರ್ಮಲ ವಾತಾವರಣದ ಅಭಾವದ ಕಾರಣದಿಂದ ಮೃತ್ಯುವಶರಾಗುತ್ತಿರುವರೆಂದು ಹೇಳಿದೆ. ಇದರಲ್ಲಿ ಮೈಲಿಗೆಯಿಂದ ಎರಡು ಲಕ್ಷ, ವಿಷಮ ಜ್ವರದಿಂದ ೩೩ ಲಕ್ಷ ಮತ್ತು ಅತಿಸಾರಾದಿ ರೋಗಗಳಿಂದ ಸುಮಾರು ೬ ಲಕ್ಷ ೫೦ ಸಾವಿರ ಜನರ ಮರಣ ಸಂಭವಿಸುತ್ತದೆ. ವರದಿಯು ರೋಗಗಳ ಔಷಧೋಪಚಾರಗಳಿಗೆಂದು ಪ್ರತಿ ಲಕ್ಷ ಜನಕ್ಕೆ ೨೫೧೫೦ ರೂಪಾಯಿಗಳು ವೆಚ್ಚವಾಗುತ್ತದೆಂದು ತಿಳಿಸುತ್ತದೆ. ಇಷ್ಟು ಜನಕ್ಕೆ ಅವರವರು ವಾಸಿಸುವ ಸ್ಥಳಗಳ ನೈರ್ಮಲ್ಯ ಕಾಪಾಡಿಕೊಂಡು ಆರೋಗ್ಯವಾಗಿರುವಂತೆ ಯೋಗ್ಯ ವ್ಯವಸ್ಥೆ ಮಾಡಿಕೊಳ್ಳಬೇಕಾದರೆ ಸುಮಾರು ೬೯೦೦೦ ರೂಪಾಯಿಗಳು ಬೇಕಾದಾವು ಅಂದರೆ ರೋಗಗಳ ಉಪಶಮನಕ್ಕಾಗಿ ಖರ್ಚು ಮಾಡುವ ಹಣದ ಮೂರುಪಾಲು ಮಾತ್ರ ಖರ್ಚು ಮಾಡಿದರೆ ನಾಲ್ಕು ಪಿಡುಗುಗಳು ಹೇಳ ಹೆಸರಿಲ್ಲದಂತಾಗುತ್ತವೆ. ಆದರೆ ಈ ಕಡೆ ನಮ್ಮ ಗಮನವೇ ಹರಿದಿಲ್ಲವೆಂದು ಹೇಳಬಹುದು. ಪ್ರಾಯಶಃ ನಮಗೆ ರುಚಿಯಾಗಿ ನಿರ್ಮಲವಾಗಿಟ್ಟುಕೊಳ್ಳುವುದು ಜೀವನದ ಆವಶ್ಯಕತೆಗಳಲ್ಲಿ ಒಂದೆಂಬ ಮತ್ತು ಬದುಕನ್ನು ಸುಂದರವಾಗಿಸುವ ಅಪೂರ್ವ ವಿಧಾನವೆಂಬ ಜ್ಞಾನವೇ ಇಲ್ಲ.

❖

ನಮ್ಮ ಪಾರ್ಲಿಮೆಂಟಿನಲ್ಲಿ ಅಪೇಕ್ಷಿಸಬಹುದಾದುದಕ್ಕಿಂತಲೂ ಹೆಚ್ಚು ಜನಪ್ರಿಯ ಸದಸ್ಯರೊಬ್ಬರು ಇದ್ದರು. ಬಸ್ತರ ಪ್ರದೇಶದ ಆದಿವಾಸಿಗಳು ಕಳೆದ ಮಹಾ ಚುನಾವಣೆಯಲ್ಲಿ ಆರಿಸಿ ಕಳುಹಿಸಿದ ಶ್ರೀ ಮುಚಾಕೀ ಕೋಸಾ ಎಂಬವರನ್ನು ಎಲ್ಲರೂ ತುಂಬ ಆಸ್ಥೆಯಿಂದ ಕಂಡು ಆದರಪೂರ್ವಕ ನಡೆಸಿಕೊಳ್ಳುತ್ತಿದ್ದರು. ಈಗ ಈ ಮಹಾಶಯರು ಪಾರ್ಲಿಮೆಂಟಿನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿದಿದೆ. ಶ್ರೀ ಮುಚಾಕ್ ಕೋಸಾರಿಗೆ ಓದು ಬರೆಹ ಬರುವುದಿಲ್ಲ— ಸಂಸತ್ತಿನ ಕಾಗದ ಪತ್ರಗಳಿಗೆ ಅವರು ತಮ್ಮ ಹೆಬ್ಬೆಟ್ಟಿನ ಮುದ್ರೆಯೊತ್ತಬೇಕಾಗುತ್ತದೆ. ಇದು ಅವರ ಆತ್ಮಾಭಿಮಾನವನ್ನು ಕೆಣಕಿರಬೇಕು. ಅದಲ್ಲದೆ ಈ ನಮ್ಮವರಿಗೆ ದೆಹಲಿಯ ಹವೆಯೇ ಹಿಡಿಸುವುದಿಲ್ಲ -ಏಕೆಂದರೆ ಬಸ್ತರ ಪ್ರದೇಶದ ಜಗದಲಪುರವನ್ನು ಬಿಟ್ಟು ಇವರು ಬೇರೆಲ್ಲಿಗೂ ಹೋದುದೆಂದಿಲ್ಲ. ಪಾರ್ಲಿಮೆಂಟಿನ ಉದ್ಘಾಟನೋತ್ಸವವು ಜರಗಿದ ಕಾಲದಲ್ಲಿ ಇವರು ಜೀವನದಲ್ಲಿಯೇ ಮೊದಲ ಬಾರಿ ದೆಹಲಿಗೆ ಆಗಮಿಸಿದರು. ಆಗ ಇವರಿಗೆ ಬಾಹ್ಯ ಜಗತ್ತಿನೊಡನೆ ಯೋಗ್ಯ ಸಂಪರ್ಕ ಸ್ಥಾಪಿಸಿಕೊಳ್ಳಲು ಅನುಕೂಲವಾಗುವಂತೆ ಇಂಗ್ಲೀಷ ಬಲ್ಲ ದುಭಾಷಿ ಮುಂತಾದವರನ್ನು ಒದಗಿಸಿಕೊಟ್ಟಿದ್ದರು. ಭಾರತ ಸರಕಾರವು ಮಧ್ಯಪ್ರದೇಶ ಸರಕಾರಕ್ಕೆ ಒಂದು ಆದೇಶ ಕಳುಹಿಸಿ, ಮಾನ್ಯ ಕೋಸಾರು ಸಂಸತ್ತಿನ ಅಧಿವೇಶನದಲ್ಲಿ ಭಾಗವಹಿಸಲು ಅಗತ್ಯವಿರುವ ಎಲ್ಲ ಅನುಕೂಲತೆಗಳನ್ನು ನೀಡಬೇಕೆಂದು ಹೇಳಿದ್ದರೂ ಮಾನ್ಯ ಸದಸ್ಯರು ಮತ್ತೆ ದಹಲಿಯ ಮುಖ ನೋಡಲಿಲ್ಲ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಬೇರೆ ಯಾವುದೇ ಹುರಿಯಾಳು ಗಳಿಸಿರದಷ್ಟು ಹೆಚ್ಚು ಮತ (೮೨%) ಪಡೆದಿದ್ದ ಮಾನ್ಯ ಸದಸ್ಯರು ಸಂಸತ್ತಿನ ಬಿಳಿಗೋಡೆಯಲ್ಲಿ ಒಂದು ಕರಿಯ ಬೊಟ್ಟಿನಂತಿದ್ದರು. ಅದಿನ್ನಾ ಕರಿಯ ಮಡಕೆಯ ಮೇಲಿನ ಸಣ್ಣದ ಬೊಟ್ಟಿನಂತಿದ್ದರೆನ್ನೋಣವೆ? ಇದೇನೇ ಇರಲಿ, ಸಂಸತ್ತಿಗೆ ಹಿಡಿದಿರಬಹುದಾದ ಗ್ರಹಚಾರ ದೋಷದ ನಿವಾರಣೆಗೆ ಮತ್ತು ಕೆಟ್ಟ ದೃಷ್ಟಿಯ [illegible] ಇಂಥದೊಬ್ಬ ಸದಸ್ಯರು ಇರುವುದೇ ಯೋಗ್ಯವೆಂದು ತೋರುತ್ತದೆ. ಆದರೆ ಈ [illegible]

❖

ಹೊಸ ದೆಹಲಿಯಲ್ಲಿ ಭಾರತ ಸರಕಾರದವರು [illegible] ನಿವೇಶನವೊಂದನ್ನು ಹಿಡಿದು ರಾಯಭಾರಿಗಳಿಗೋಸ್ಕರ ನಿರ್ಮಿಸುವ ಎತ್ತುಗಡೆಯಲ್ಲಿರುವರು. ಇದರ ವಿಕಾಸ ಕಾರ್ಯಕ್ರಮವು ಪೂರ್ತಿಗೊಂಡಾಗ ಸುಮಾರು ಒಂದು ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ರಾಜಧಾನಿಯ ಈ ಭಾಗವನ್ನು "ಚಾಣಕ್ಯಪುರಿ" ಎಂಬ [illegible] ಆದರೆ ಆಕರ್ಷಕವಾದ ಹೆಸರಿನಿಂದ ಕರೆಯಲು ಸರಕಾರವು ನಿರ್ಧರಿಸಿದೆ. ಆದಿ ಕಾಂಪ ವಿದೇಶೀ ಮಂಡಳಿಗಳು ತಮ್ಮ ರಾಯಭಾರಿ ಕಚೇರಿ ಹಾಗೂ ವಸತಿಗೃಹಗಳಿಗೋಸ್ಕರ ಬೇಕಾದ ತುಂಡು ನೆಲವನ್ನು ಇಷ್ಟರಲ್ಲಿಯೇ ತೆಗೆದುಕೊಂಡಿವೆ. ರಶಿಯಾದ ರಾಯಭಾರಿ ಕಚೇರಿಯೆಂದೇ ಸ್ಥಾನಾಂತರವನ್ನು [illegible] ಮಾಡಿದಂತಿಲ್ಲ. ಈ ಚಾಣಕ್ಯಪುರಿಯು ನಿರ್ಮಾಣಗೊಳ್ಳ ಕೆಲವು ವರ್ಷಗಳ ಅವಧಿ ಬೇಕಾದೀತು— ಹೊಸ ನಿವೇಶನದ ಹೊರಭಾಗದಲ್ಲಿ ವಾಸಗಿ ಮನೆಗಳು ತಲೆಯೆತ್ತುತ್ತಿದ್ದರೂ, ಚಾಣಕ್ಯಪುರಿಯಲ್ಲಿ ವಿಶೇಷ ಕೆಲಸ ನಡೆದಿಲ್ಲ. ಮುಖ್ಯ ಮಾರ್ಗಗಳನ್ನು ರಚಿಸುವ ಹಾಗೂ ನೀರಿನ ನಳಗಳನ್ನು ನೆಲೆಗೊಳಿಸುವ ಕೆಲಸ ಮಾತ್ರ ಮುಗಿದಿದೆ. ಏನೇ ಇರಲಿ— ನಮ್ಮ ಊರುಕೇರಿಗಳ ಹೆಸರನ್ನು ಬದಲಾಯಿಸಿ ಅಜರಾಮರ ಮಾಡಲು ಇದೊಂದು ಹೊಸ ಪ್ರೇರಣೆಯಾಗಿ ಕಾಣುವುದು ಮಾತ್ರ ನಿಜ.

❖

ಭಾಷಾನುಗುಣ ರಾಜ್ಯರಚನೆಯ ಪ್ರಶ್ನೆ ಬಂದಾಗಲೆಲ್ಲ ಮನುಷ್ಯ ಸ್ವಾಭಾವಿಕವಾಗಿಯೇ ಸ್ವಜನಪ್ರಿಯ, ಸ್ವಭಾಷಾಪ್ರಿಯನೆಂದು ಮನೋವಿಜ್ಞಾನದ ಸಾಕ್ಷ್ಯವನ್ನು ಮುಂದಿಟ್ಟುಕೊಂಡು ವಾದಿಸುವುದುಂಟು—ಆದರೆ ಹುಲಿಯನ್ನು ಹಲವು ವರ್ಷ ಕಾಲ ಗೋಶಾಲೆಯಲ್ಲಿ ಕಟ್ಟಿ ಸಾಕಿದರೆ ಕ್ರೂರ ವ್ಯಾಘ್ರ ಸ್ವಭಾವ ಸಹಜವಾದ ಪ್ರವೃತ್ತಿಯನ್ನು ಉದಾತ್ತೀಕರಿಸುವುದು ಸಾಧ್ಯವೆಂ[illegible] ಗುಣ ಮುಂದ [illegible] ಕೊಟ್ಟು ಪ್ರತಿಪಾದಿಸುವವರಿಗಾಗಿ ಕಡೆಯಲ್ಲಿ ಇಂಥದೊಂದು [illegible] ರಾಜ್ಯ ಸಂಸತ್ತಿನಲ್ಲಿ [illegible] ಶ್ರೀ [illegible] ಇಂಬೀಚೇ ಬಾವಾ [illegible] ಲಿಯಾಳ ಭಾಷೆಯಲ್ಲಿಯೇ ಪ್ರಶ್ನೆ ಕೇಳುವ ಹವ್ಯಾಸ. ಈ ಪ್ರಶ್ನೆಯನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿ ಮಾನ್ಯ ಮಂತ್ರಿಗಳಿಗೆ, ಸಭಾಪತಿಗಳಿಗೆ ಇತರರಿಗೂ ತಿಳಿಸಿ ಹೇಳುವ ಹೊಣೆಯನ್ನು ಪ್ರಧಾನ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಮೆನೋನ್ನರು ಹೊರುತ್ತಿದ್ದರು. ಆದರೆ ಮೊನ್ನೆ ಇಂಬೀಚೇ ಬಾವಾ ತಮ್ಮ ಪ್ರಶ್ನೆಯೊಂದನ್ನು ಕೇಳಿದಾಗ, ಶ್ರೀಮತಿ ಮೆನೋನ್ನರು ಸಭೆಯಲ್ಲಿರಲಿಲ್ಲ. ಆಗ ಸಭಾಪತಿ ರಾಧಾಕೃಷ್ಣನ್ನರು ಆಗ ತಾನೆ ಪ್ರತಿಜ್ಞಾ ವಚನ ಸ್ವೀಕರಿಸಿ, ಆಸನದಲ್ಲಿ ಕುಳಿತಿದ್ದ ಶ್ರೀ ಕೃಷ್ಣ ಮೆನೋನ್ನರನ್ನು ಪ್ರಶ್ನೆಯ ತರ್ಜುಮೆ ಮಾಡಿ ಹೇಳಲು ಕೇಳಿಕೊಂಡರು. ಮೆನೋನ್ನರು ಈ ಕೆಲಸ ಸಾಧಾರಣ ಚೆನ್ನಾಗಿಯೇ ನಿರ್ವಹಿಸಿದರೂ—ಮಂತ್ರಿಗಳ ಇಂಗ್ಲೀಷ ಭಾಷೆಯ ಉತ್ತರವನ್ನು ಮಲೆಯಾಳಿಗೆ ಅನುವಾದಿಸುವಾಗ ಮಾತ್ರ ತಡವರಿಸಿದರು. "ನನಗೆ ಮಲೆಯಾಳಿ ಅರ್ಥವಾಗುತ್ತದೆ - ಆದರೆ ಅದನ್ನು ಚೆನ್ನಾಗಿ ಮಾತನಾಡಲು ಬರುವುದಿಲ್ಲ" ಎಂದರು. ಕೊನೆಗೆ ಶ್ರೀ ಸುವಾಯಿಸಾ ಮಂಜೂರನವರೆಂಬ ಬೇರೊಬ್ಬ ಸದಸ್ಯರು ಸ್ವಯಂಪ್ರೇರಣೆಯಿಂದೆದ್ದು, ಮಲೆಯಾಳಿ ಅನುವಾದ ಕೆಲಸವನ್ನು ಚೆನ್ನಾಗಿ ನಿರ್ವಹಿಸಿದರು. ಇದೇನೇ ಇರಲಿ ಶ್ರೀ ಕೃಷ್ಣ ಮೆನೋನ್ನರು ತಮ್ಮ ಮಾತೃಭಾಷೆಯ ಅವಮಾನಗೈದರೆಂದು ಸ್ವಭಾಷಾ ಪ್ರಿಯರು ಆಕ್ರೋಶಗೈಯುವುದರಲ್ಲಿ ಅಸಂಬದ್ಧವಾದುದು ಏನೂ ಇಲ್ಲ.

❖

ಲೋಕಸಭೆಯಲ್ಲಿ ಆಸ್ತಿಕರ ವಿಧೇಯಕದ ಮೇಲೆ ಚರ್ಚೆ ನಡೆಯುತ್ತಿದ್ದಾಗ— ಶ್ರೀ ಮೋರೆಯವರೊಂದು ತಿದ್ದುಪಡಿ ಮಂಡಿಸಿ ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹೇಚ್ಛುಗಳನ್ನು ಪ್ರಸಾದದ ಮೂಲಕ ಪ್ರೋತ್ಸಾಹಿಸಿ ಸರಕಾರ ಬೆಂಬಲಿಸಬೇಕೆಂದು ಹೇಳಿದರು. ಇಂಥ ಮದುವೆಯಿಂದ ಹುಟ್ಟುವ ಮಕ್ಕಳಿಗೆ ಆಸ್ತಿ ತೆರಿಗೆಯಿಂದ ವಿನಾಯತಿ ಮಾಡಬೇಕೆಂದೂ ಮೇಲಾಗಿ ಅಂಥ ದಂಪತಿಗಳ ಸಂಬಂಧಿಕರಿಗೆ ಬಹುಮಾನ ನೀಡಬೇಕೆಂದೂ ವಾದಿಸಿದರು. ಮೋರೆಯವರ ತಿದ್ದುಪಡಿಗೆ ತನ್ನ ನೈತಿಕ ಬೆಂಬಲವನ್ನು ಸೂಚಿಸುತ್ತಾ ಗಾಡ್ಗೀಳರು ಇನ್ನೂ ಒಂದು ಹೆಜ್ಜೆ ಮುಂದರಿದು, ಅಂತರ್ಜಾತೀಯ ಮತ್ತು ಅಂತರ್ಮತೀಯ ವಿವಾಹಗಳನ್ನು ಸರಕಾರ ಪುರಸ್ಕರಿಸುವುದಷ್ಟೇ ಅಲ್ಲ— ಅವಕ್ಕೆ ಆರ್ಥಿಕ ಸಹಾಯವನ್ನೂ ಕೂಡ [illegible] ಮೋರೆಯವರ ತಿದ್ದುಪಡಿಯನ್ನು ಘಟನಾತ್ಮಕವಾಗಿ ಮಾಡಲು ಮಾತ್ರ ಬರುವುದಿಲ್ಲೆಂದು ಅವರು ತಿಳಿಸಿದರು. ಆಗ ಮೋರೆಯವರು ತಮ್ಮ ತಿದ್ದುಪಡಿಯನ್ನು ಹಿಂದೆಗೆದುಕೊಂಡು "ನಮ್ಮ ಅರ್ಥ ಸಚಿವರು ಅಂತರ್ಜಾತೀಯ ವಿವಾಹವನ್ನು ಆಚರಣೆಯಲ್ಲಿ ತಂದು ತೋರಿಸಿದ್ದಾರೆ. ಆದರೆ ಎಲ್ಲರೂ ತಮ್ಮನ್ನು ಅನುಸರಿಸಬೇಕೆಂದು ಬೋಧಿಸುತ್ತಿಲ್ಲ" ಎಂದು ವಿನೋದ ಚಟ್ಟರೂ—ಸಭೆ ಮಾತ್ರ ಗೊಳ್ಳೆಂದು ನಕ್ಕುಬಿಟ್ಟಿತು. "ಈ ತಿದ್ದುಪಡಿಗೆ ನನ್ನ ವಿರೋಧವಿದೆ ಎಂದ ಮಾತ್ರಕ್ಕೆ ಯಾರೂ ನನ್ನನ್ನು ತಪ್ಪು ತಿಳಿಯಬೇಡಿ" ಎಂದ ಶ್ರೀ ದೇಶಮುಖರು ವ್ಯಂಗ್ಯವಾಡುತ್ತಿರಬೇಕಲ್ಲವೆ?

ದಯಮಾಡಿ ನಿಮ್ಮ ಚಂದಾಹಣ ಕಳಿಸಿರಿ

ಕೊಲೊಂಬೋ ಯೋಜನೆಯ ಹೊರನೋಟ

ದಕ್ಷಿಣ ಹಾಗೂ ಆಗ್ನೇಯ ಏಶ್ಯಾದ ಅಭಿವೃದ್ಧಿ ಪ್ರಯತ್ನ

ದ್ವಿತೀಯ ಮಹಾ ಯುದ್ಧಾನಂತರ ಆರ್ಥಿಕ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಯಾಯಿತು. ಮುಖ್ಯತಃ ಹಿಂದುಳಿದ ದೇಶಗಳು ತಮ್ಮಲ್ಲಿಯ ಜನತೆಯ ಜೀವನಮಟ್ಟವನ್ನೆತ್ತರಿಸಲು ಪಣ ಕೈಗೊಂಡು, ದುಡಿಯಲು ತೊಡಗಿದವು.

ಇಂಥದೊಂದು ಪ್ರತಿಜ್ಞೆ ಕಾರ್ಯರೂಪಕ್ಕೆ ಇಳಿಯುತ್ತಿರುವ ಬಗೆಯನ್ನು ಪರಿಶೀಲಿಸಲು ಈ ಮಾಸಾಂತ್ಯದಲ್ಲಿ ಹೊಸ ದಿಹಲಿಯಲ್ಲಿ ಒಂದು ಸಭೆ ಸೇರಲಿದೆ—ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯೇ ಉದ್ದೇಶವಾಗಿರುವ ಕೊಲೊಂಬೋ ಯೋಜನೆಯ ಸಲಹಾಸಮಿತಿಯ ಈ ಸಭೆ ಹಲವಾರು ಕಾರಣಗಳಿಗೋಸ್ಕರ ಮಹತ್ವಪೂರ್ಣವೆನಿಸಿದೆ.

ಕೊಲೊಂಬೋ ಯೋಜನೆಯಿಂದ ಪ್ರಯೋಜನಹೊಂದುವ ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ರಾಷ್ಟ್ರಗಳು ಯುದ್ಧಾನಂತರ ರಾಜಕೀಯ ಕಾಲದ ದಾಸ್ಯದ ಸಂಕೋಲೆಯನ್ನು ಕಳಚಿ ಸ್ವಾತಂತ್ರ್ಯದ ವಾತಾವರಣದಲ್ಲಿ ಉಸಿರಾಡಲು ನೋಡಿವೆ. ರಾಷ್ಟ್ರೀಯ ಜಾಗೃತಿಯನ್ನು ಮೂಡಿಸಿದ ಈ ಮನೋವೃತ್ತಿ ಜನತೆಯ ಸುಖ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ, ಸಾರ್ವಜನಿಕ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲೂ ಪ್ರೇರಿಸಿದೆ.

ಬಡತನ ಹಾಗೂ ರೋಗಗಳು ನೀಡಿದ ರಣಾಹ್ವಾನವನ್ನು ಈ ಹಿಂದುಳಿದ ಪ್ರದೇಶದ ರಾಷ್ಟ್ರಗಳೂ ಜನತೆಯೂ ಒಟ್ಟಿಗೇ ಸ್ವೀಕರಿಸಿವೆ ಮತ್ತು ತಮ್ಮಲ್ಲಿ ಸಾಧನ ಸಂಪತ್ತುಗಳನ್ನು ಬಳಸಿಕೊಂಡು ಯೋಜನಾಬದ್ಧವಾದ ಸುವ್ಯವಸ್ಥಿತವಾದ ಆರ್ಥಿಕ ಪದ್ಧತಿಯನ್ನು ನೆಲೆಗೊಳಿಸಲು ಅನುಕೂಲವಾಗುವಂತೆ ಅಭಿವೃದ್ಧಿ ಪ್ರಯತ್ನಗಳಲ್ಲಿ ತೊಡಗಿವೆ.

ಆದರೆ ಈ ಪ್ರಯತ್ನಕ್ಕೂ ಒಂದು ಮಿತಿ ಇದೆ–ಯೋಜನೆಯು ಕಾರ್ಯರೂಪಕ್ಕೆ ಇಳಿಯಲು ಬೇಕಾದ ಬಂಡವಾಳವನ್ನು ಕೂಡಿಸುವುದು ಹಿಂದುಳಿದ ಈ ಪ್ರದೇಶದ ನಿವಾಸಿಗಳಿಗೆ ಪ್ರಾರಂಭದಲ್ಲಿ ಕಷ್ಟಸಾಧ್ಯವಾಗಿಯೇ ತೋರುತ್ತದೆ. ಇದು ಹೇಗೆ ಸ್ವಾಭಾವಿಕವೋ–ವಿದೇಶೀ ಸಹಾಯಕ್ಕೆ ಇಲ್ಲಿರುವ ಆಸ್ಪದವೂ ಅಷ್ಟೇ ಸ್ವಾಭಾವಿಕವೆಂದೆನ್ನಬಹುದು. ಸುದೈವದಿಂದ ಇಂಥ ಸಹಾಯನೀಡುವುದರ ಔಚಿತ್ಯವನ್ನು ಮುಂದುವರಿದ ಹಾಗೂ ಆರ್ಥಿಕ ದೃಷ್ಟಿಯಿಂದ ಸುಸಂಪನ್ನರಾದ ರಾಷ್ಟ್ರಗಳು ಮನವರಿಕೆಮಾಡಿಕೊಂಡು, ಕೂಡಿದಷ್ಟು ಹೆಚ್ಚು ಬಗೆಯಿಂದ ನೆರವಾಗುತ್ತಿವೆ. ಸಂಯುಕ್ತ ರಾಷ್ಟ್ರಸಂಘದ ಧೋರಣೆಯೂ ಇಂಥ ಸಹಾಯಕ್ಕೆ ಅನುಕೂಲ ರೂಪದಲ್ಲಿರುತ್ತದೆ

ಸಹಕಾರವೇ ಮೂಲ

ಅಂತಾರಾಷ್ಟ್ರೀಯ ಸಹಕಾರಕ್ಕೆ ಅವಕಾಶ ಮಾಡಿಕೊಡುವುದರಲ್ಲಿ ಕೊಲೊಂಬೋ ಯೋಜನೆ ಅನುಕರಣೀಯವಾದ ಪ್ರಯತ್ನ ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ಜನತೆಯ ಉದ್ಧಾರವೇ ಉದ್ದೇಶವಾಗಿರುವ ಈ ಯೋಜನೆಯ ವಿಚಾರವನ್ನು ಪ್ರಥಮತಃ ಜನವರಿ ೧೯೫೦ರಲ್ಲಿ ರಾಷ್ಟ್ರಕೂಟದ ವಿದೇಶಾಂಗ ಸಚಿವರು ಸಮ್ಮೇಲನದಲ್ಲಿ ಕೂಡಿದಾಗ ಪರಿಶೀಲಿಸಿ ಚರ್ಚಿಸಿದರು. ಲಂಡನ್ನಿನಲ್ಲಿ ಅದೇ ವರ್ಷ ಸಪ್ಟಂಬರ–ಅಕ್ಟೋಬರ ತಿಂಗಳಲ್ಲಿ ಸಲಹಾ ಸಮಿತಿಯು ಸಭೆಸೇರಿ ಈ ವಿಷಯಕ್ಕೆ ಕೊನೆಯ ರೂಪವನ್ನು ಕೊಟ್ಟಿತು. ಈ ಸಭೆಯಲ್ಲಿ ರಾಷ್ಟ್ರಕೂಟಕ್ಕೆ ಸೇರಿದ ದೇಶಗಳು ಭಾಗವಹಿಸಿದ್ದವು-- ಆದರೆ ಆ ಬಳಿಕ ಈ ಯೋಜನೆಯ ಪ್ರಯೋಜನವನ್ನರಿತು ಸೇರಿದ ಬೇರೆ ರಾಷ್ಟ್ರಗಳೂ ಇವೆ.

ಯೋಜನೆ ಆರು ವರ್ಷಗಳ ಕಾಲಾವಧಿಯಲ್ಲಿ ಮೂಲಭೂತವಾದ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೊಂಡು ನಡೆಸಲು ಉದ್ದೇಶಿಸಿದೆ. ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಸಂಪರ್ಕ, ರೈಲ್ವೆ, ಮಾರ್ಗ, ಬಂದರು ಹಾಗೂ ರೇವುಗಳು ಇತ್ಯಾದಿಯಲ್ಲಿದೆ ಸಾಮಾಜಿಕ ಜೀವನದ ಮುಖ ಬದಲಾಯಿಸಬಲ್ಲ ರೀತಿಯಲ್ಲಿ ಆರೋಗ್ಯ, ಶಿಕ್ಷಣ ವಸತಿಗೃಹ ಮುಂತಾದ ಸೌಲಭ್ಯಗಳನ್ನೊದಗಿಸಲೂ ಯೋಜನೆ ನೋಡುತ್ತದೆ.

೧೯೫೦ರಲ್ಲಿ ಪ್ರಥಮತಃ ಯೋಜನೆಯ ರೂಪರೇಷೆಯನ್ನು ಗೊತ್ತುಪಡಿಸಿದಾಗ ಅದರಲ್ಲಿ ಭಾರತ, ಪಾಕಿಸ್ತಾನ, ಸಿಂಹಳ, ಮಲಯಾ ಮತ್ತು ಬ್ರಿಟಿಷ್ ಬೋರ್ನಿಯೋಗಳ ಅಭಿವೃದ್ಧಿಯನ್ನು ಪ್ರಸ್ತಾಪಿಸಿದ್ದರು. ಇದಕ್ಕೆ ಆರು ವರ್ಷಗಳಲ್ಲಿ ಸುಮಾರು ೧೮೬೮೦ ಲಕ್ಷ ಪವನುಗಳಷ್ಟು ಹಣವನ್ನು ವೆಚ್ಚಮಾಡುವ ಅವಶ್ಯಕತೆ ಆಗ ಕಂಡುಬಂತು.

ದಕ್ಷಿಣ ಮತ್ತು ಆಗ್ನೇಯ ಏಶಿಯಾದ ಬೇರೆ ದೇಶಗಳೂ ಈ ಯೋಜನೆಯ ಲಾಭ ಪಡೆಯಲು ಬಯಸಿಯಾವೆಂದು ಆಗ ಆಶಿಸಿದ್ದರು–ಈ ಆಶೆ ಹುಸಿಹೋಗಲಿಲ್ಲ. ಪ್ರಕೃತ ಥೈಲೇಂಡೊಂದನ್ನುಳಿದು ಬೇರೆಲ್ಲ ರಾಷ್ಟ್ರಗಳು ಯೋಜನೆಯ ಪ್ರಯೋಜನವನ್ನನುಭವಿಸುತ್ತಿವೆ. ಥೈಲೇಂಡು ಮುಂಬರುವ ಸಭೆಗೆ ಒಬ್ಬ ನಿರೀಕ್ಷಕನನ್ನು ಕಳುಹಿಸಲು ನಿರ್ಣಯಿಸಿರುತ್ತದೆ,

ವ್ಯಾಪಕ ಸದಸ್ಯತ್ವ

ಅಭಿವೃದ್ಧಿಯ ತೀವ್ರ ಅವಶ್ಯಕತೆಯನ್ನನುಭವಿಸುವ ಪ್ರತಿಯೊಂದೂ ದೇಶದ ಪರಿಸ್ಥಿತಿಯನ್ನು ವಿಹಂಗಮ ದೃಷ್ಟಿಯಿಂದ ನೋಡಿಯೂ ತಾಂತ್ರಿಕ ಹಾಗೂ ಆರ್ಥಿಕ ವಿಚಾರಗಳಲ್ಲಿ ಆ ದೇಶವು ತನ್ನ ಅಭಿವೃದ್ಧಿಗೆ ಬಳಸಿಕೊಳ್ಳಬಹುದಾದ ಸಾಧನ ಸಂಪತ್ತಿನ ಪರಮಾವಧಿ ಪ್ರಮಾಣವನ್ನು ಗೊತ್ತುಪಡಿಸಿಯೂ ವಿದೇಶಗಳ ನೆರವು ಯಾವ ರೀತಿಯಲ್ಲಿರಬೇಕೆಂಬುದನ್ನು ನಿರ್ಣಯಿಸಲಾಗುವುದು. ಹೀಗೆ ಎಲ್ಲ ದೇಶಗಳೂ ತಮ್ಮ ಸ್ವಂತ ನಿರ್ಮಾಣ ಶಕ್ತಿಯನ್ನು ಪರಮಾವಧಿಯಾಗಿ ಬಳಸಿಕೊಳ್ಳಲು ಆತುರದಿಂದಿರುವಾಗ ಮುಂದುವರಿದ ದೇಶಗಳು ಕಷ್ಟಕಾಲಕ್ಕೆ ನೆರವಿಗೆ ಬರುವ ಸ್ನೇಹಿತನ ಪಾತ್ರವನ್ನು ವಹಿಸುತ್ತವೆ.

ಈ ನೆರವು ಮಿತವಾಗಿರುತ್ತದೆ-ಪ್ರತಿಯೊಂದು ದೇಶವು ಮೂಲಭೂತವಾದ ಆವಶ್ಯಕತೆಯಿಂದ ಕೂಡಿದ ಅಭಿವೃದ್ಧಿ ಪ್ರಯತ್ನಗಳು ಕೈಗೂಡಲು ಯಾವ ವಿಶಿಷ್ಟ ಕೊರತೆಯನ್ನು ಅನುಭವಿಸುತ್ತದೊ, ಅದನ್ನು ದೂರೀಕರಿಸುವುದಷ್ಟೇ ವಿದೇಶಗಳ ಹೊಣೆಗಾರಿಕೆಯೆಂದು ನಿರ್ಣೀತವಾಗಿದೆ.

ಈ ದೃಷ್ಟಿಯಿಂದ ನೀಡಬಹುದಾದ ನೆರವುಗಳಲ್ಲಿ ತಾಂತ್ರಿಕ ಸಲಹೆ ಮುಖ್ಯವಾದದ್ದು. ಅಭಿವೃದ್ಧಿ ಪ್ರಯತ್ನಗಳು ನಡೆಯುವ ದೇಶಗಳಲ್ಲಿ ನಿರುದ್ಯೋಗಕ್ಕೆ ಅವಕಾಶ ಮಾಡಿಕೊಡದಂತೆ ಜಾಗರೂಕತೆ ವಹಿಸುತ್ತಾ ದಕ್ಷರೀತಿಯ ತಾಂತ್ರಿಕ ಸಹಾಯವನ್ನು ಒದಗಿಸಿಕೊಡಲು ಮುಂದುವರಿದ ರಾಷ್ಟ್ರಗಳಿಗೆ ಸಾಧ್ಯವೆಂಟು. ಇದಕ್ಕೋಸ್ಕರ ಒಂದು ಸಮಿತಿಯು ರಚನೆಯಾಗಿದೆ ಮತ್ತು ೮೦ ಲಕ್ಷ ಪವನುಗಳ ವೆಚ್ಚದಲ್ಲಿ ತಾಂತ್ರಿಕ ಸಹಾಯವನ್ನೊದಗಿಸಿಕೊಡಲು ನಿರ್ಧರಿಸಲಾಗಿದೆ.

ಇನ್ನೊಂದು ಮುಖ್ಯವಾದ ಸಹಾಯ–ಬಂಡವಾಳದ ಪೂರೈಕೆ. ಯೋಜನೆಯು ಈ ವಿಷಯಕ್ಕೆ ತುಂಬ ಮಹತ್ವವನ್ನು ಕೊಟ್ಟಿದೆ. ಇದರನ್ವಯ, ವಿದೇಶಗಳಲ್ಲಿರುವ ಮೂಲಗಳ ಉಪಯೋಗ (ಉದಾ: ಸ್ಟರ್ಲಿಂಗ ಶಿಲ್ಕುಗಳು), ವಿದೇಶಗಳ ಖಾಸಗಿ ನಿಕ್ಷೇಪ, ಜಾಗತಿಕ ಬೇಂಕಿನಂಥ ವಿಶ್ವಸಂಸ್ಥೆಗಳಿಂದ ನೆರವು, ಮತ್ತು ಸರಕಾರಕ್ಕೆ ಸೇರಿ ಸರಕಾರವು ಕೊಡಬಲ್ಲ ಸಹಾಯ-ಇವುಗಳಿಗೆ ಅವಕಾಶವಿರಬೇಕೆಂದು ಒಪ್ಪಲಾಗಿದೆ. ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ವಿಶಿಷ್ಟ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡಲ್ಲಿ ನೆರವಿನ ಕೊನೆಯ ರೀತಿಗೆ ತುಂಬ ಪ್ರಾಶಸ್ತ್ಯಬರುತ್ತದೆ.

೧೯೫೧ನೇ ಜುಲೈ ೧ನೇ ದಿನಾಂಕ ಈ ಯೋಜನೆ ಅಸ್ತಿತ್ವಕ್ಕೆ ಬಂತು. ೧೯೫೭ನೇ ಜೂನ್ ೩೦ಕ್ಕೆ ಇದರ ಅವಧಿ ಪೂರ್ಣಗೊಳ್ಳುತ್ತದೆ. ಪ್ರಾರಂಭದಲ್ಲಿ ರಾಷ್ಟ್ರಕೂಟದ ಪ್ರದೇಶಗಳ ಸದಸ್ಯತ್ವವನ್ನು ಮಾತ್ರ ಪಡೆದಿದ್ದ ಈ ಯೋಜನೆ, ಈಗ ಅಮೇರಿಕಾದ ಪೂರ್ಣ ಸದಸ್ಯತ್ವವನ್ನು ಸಂಪಾದಿಸಿದೆ. ಪ್ರಕೃತ ನಡೆಯುವ ಮೂರನೇ ವರ್ಷದಲ್ಲಿ ಆಸ್ಟ್ರೇಲಿಯಾ, ಬರ್ಮಾ ಕೆನಡಾ, ಸಿಂಹಳ, ಕಂಬೋಡಿಯಾ, ಭಾರತ, ಇಂಡೋನೇಶಿಯಾ, ಲಾವೋಸ್, ಮಲಯಾ, ನೇಪಾಳ, ನ್ಯೂಜಿಲೇಂಡ ಪಾಕಿಸ್ತಾನ, ಬ್ರಿಟನ್, ಅಮೇರಿಕಾ ಮತ್ತು ವೀತನಾಮುಗಳು ಯೋಜನೆಯಲ್ಲಿ ಭಾಗವಹಿಸುತ್ತಿವೆ.

ಆರ್ಥಿಕ ನೆರವು

ಸಲಹಾ ಸಮಿತಿಯ ಸದಸ್ಯ ರಾಷ್ಟ್ರಗಳಲ್ಲಿ ಕೆಲವು ತುಂಬ ಪರಿಣಾಮಕಾರಿಯಾದ ರೀತಿಯಲ್ಲಿ ಆರ್ಥಿಕ ಸಹಾಯವನ್ನು ಕೊಟ್ಟಿವೆ. ಸಮಿತಿಯ ಎರಡನೆಯ ವರ್ಷದ ವರದಿಯಲ್ಲಿ ಮಾರ್ಚ ೧೯೫೭ರ ವರೆಗೆ ನೀಡಲಾದ ನೆರವಿನ ವಿವರಗಳು ಇದ್ದು-- ಸಂಕ್ಷಿಪ್ತವಾಗಿ ಅವುಗಳು ಹೀಗಿವೆ.

(೧೦ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸ್ ಹಂಚಿದ ಈ ಕಂಪೆನಿಯು ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ. ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸಂಸತ್ತಿನಲ್ಲಿ ಪ್ರಶ್ನೋತ್ತರಗಳು

ಮಹತ್ವದ ವಿಷಯಗಳ ಮೇಲೆ ಪ್ರಕಾಶ

ಪಾಸಪೋರ್ಟಿನ ನಿರಾಕರಣೆ

ಪರದೇಶಗಳಿಗೆ ಹೋಗಲು ಸಂಸತ್ ಸದಸ್ಯರಿಗೆ ಮತ್ತು ಬೇರೆಯವರಿಗೆ ಪಾಸಪೋರ್ಟುಗಳನ್ನು ಕೊಡುವುದರ ಕುರಿತು ಶ್ರೀ ಇಂಬೀಚಿ ಬಾಬಾರು ಪ್ರಶ್ನೆಯೊಂದನ್ನು ಕೇಳಿದಾಗ ಪ್ರಧಾನಮಂತ್ರಿಗಳು ಉತ್ತರಿಸುತ್ತಾ ರಾಷ್ಟ್ರದ ವಿರುದ್ಧ ಪ್ರಚಾರ ಮಾಡಲು ಪರದೇಶಕ್ಕೆ ಹೋಗಲಿರುವರೆಂದು ನಿಶ್ಚಿತವಾಗಿ ತಿಳಿದಿರುವಾಗ ಅವರಿಗೆ ಪಾಸಪೋರ್ಟನ್ನು ದಯಪಾಲಿಸುವುದು ಅಪೇಕ್ಷಣೀಯವಲ್ಲವೆಂದು ಹೇಳಿದರು. ಪಾಸಪೋರ್ಟನ್ನು ಕೊಡುವ ಅಂತಿಮ ಅಧಿಕಾರವು ಭಾರತ ಸರಕಾರಕ್ಕೆ ಸೇರಿದೆ—ಆದರೆ ಸಾಮಾನ್ಯತಃ ರಾಜ್ಯ ಸರಕಾರಗಳ ಅಭಿಮತವನ್ನದು ಒಪ್ಪಿಕೊಳ್ಳುತ್ತದೆ ಎಂದೂ ನೆಹರೂ ತಿಳಿಸಿದರು. ರಾಜ್ಯಪರಿಷತ್ತಿನ ಇಬ್ಬರು ಸದಸ್ಯರಿಗೆ ಈಚೆಗೆ ಪಾಸಪೋರ್ಟುಗಳನ್ನು ನಿರಾಕರಿಸಿಲ್ಲವೇ ಎಂದು ಕೇಳಿದುದಕ್ಕೆ ಉತ್ತರವಾಗಿ ಪಾಸಪೋರ್ಟು ಕೊಡುವ ಕೆಲಸ ಬಹಿರಂಗವಾಗಿ ನಡೆಯುವುದಿಲ್ಲ. ಮತ್ತದು ವ್ಯಕ್ತಿಯಂತೆ ಪ್ರಯಾಣೋದ್ದೇಶವನ್ನೂ ಹೊಂದಿಕೊಂಡಿದೆ ಎಂದರು. ಶ್ರೀ ಇಂಬೀಚಿ ಬಾಬರು ಪರದೇಶಕ್ಕೆ ಅಭ್ಯಾಸಕ್ಕೆಂದು ಹೋಗ ಬಯಸಿದಾಗ ಅವರಿಗೆ ಪಾಸಪೋರ್ಟು ನಿರಾಕರಿಸಲಿಲ್ಲವೇ ಎಂದು ಶ್ರೀ ಜಾರ್ಜರು ಕೇಳಲು, ಸಭಾಪತಿ ಡಾ॰ ರಾಧಾಕೃಷ್ಣನ್ನರು ನೆಹರೂರ ಕಡೆ ಹೊರಳಿ ವಿನೋದದಲ್ಲಿ 'ಆ ಸದಸ್ಯರು ಮೊದಲಾಗಿ ವಿದೇಶೀ ಭಾಷೆ ಕಲಿತುಕೊಂಡು ಬರಲಿ—ಎಂಬುದೇ ನಿಮ್ಮ ಉತ್ತರವಾಗಿದ್ದಿತ್ತು, ಅಲ್ಲವೇ?" ಎಂದು ನಗೆಗಡಲ ನಡುವೆ ನುಡಿದರು. ಶ್ರೀ ಇಂಬೀಚಿ ಬಾಬಾ ಸದಾ ಕಾಲ ಮಲೆಯಾಳಿಯಲ್ಲಿಯೇ ಮಾತಾಡುವರು, ನೆಹರೂರವರು ಈ ವಿಶಿಷ್ಟ ಪ್ರಕರಣದ ಅಭ್ಯಾಸ ಮಾಡದೆ, ಕಾರಣ ಹೇಳಲು ಬರುವುದಿಲ್ಲವೆಂದರು.

ಬೀಡಿಕಟ್ಟುವ ಯಂತ್ರ

ಬೀಡಿಗಳನ್ನು ಕಟ್ಟಲು ಯಂತ್ರಗಳ ಆವಿಷ್ಕಾರವಾಗಿದ್ದರೂ ಅದನ್ನುಪಯೋಗಿಸುವುದಕ್ಕೆ ಪ್ರೋತ್ಸಾಹ ಕೊಡದಿರಲು ಸರಕಾರ ಯೋಚಿಸುತ್ತಿದೆ ಎಂಬುದಾಗಿ ವಾಣಿಜ್ಯ ಹಾಗೂ ಉದ್ದಿಮೆ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಶ್ರೀ ಡಿ. ನಾರಾಯಣ ರಾಯರಿಗೆ ತಿಳಿಸಿದರು. ಬೀಡಿಗಳನ್ನು ಕಟ್ಟಲು ಕೆಲವು ಯಂತ್ರಗಳ ಶೋಧವಾಗಿವೆಯೆಂಬ ವಾರ್ತೆ ಬಂದಿದೆ—ಇದು ತಿಳಿದೊಡನೆಯೇ ಸಂಬಂಧಿಸಿದ ರಾಜ್ಯ ಸರಕಾರಗಳಿಗೆ ಪತ್ರಬರೆದು, ಈ ಯಂತ್ರಗಳ ಉಪಯೋಗದಿಂದ ಬೀಡಿ ಕಟ್ಟುವ ಕೆಲಸಗಾರರಲ್ಲಿ ಬಹ್ವಂಶ ನಿರುದ್ಯೋಗಿಗಳಾಗುವ ಸಂಭವವಿರುವುದರಿಂದ ಅಂಥ ಯಂತ್ರಗಳ ಉತ್ಪಾದನೆಗೆ ಉತ್ತೇಜನ ನೀಡಬಾರದೆಂದು ತಿಳಿಸಲಾಯಿತು. ಈ ಯಂತ್ರಗಳ ಉಪಯೋಗವನ್ನು ನಿರ್ಬಂಧಿಸುವ ಬೇರೆ ಉಪಾಯಗಳನ್ನೂ ಸರಕಾರ ವಿಚಾರಿಸುತ್ತಿದೆ ಎಂದು ಮಂತ್ರಿಗಳು ಹೇಳಿದರು. ಶ್ರೀ ಸಿಂಹಾರ, ನಿರುದ್ಯೋಗದ ಕಾರಣ ತೋರಿಸಿ ತಾಂತ್ರಿಕ ಪ್ರಗತಿಯನ್ನು ತಡೆಗಟ್ಟುವುದು ಸರಕಾರದ ಉದ್ದೇಶವೋ ಎಂದು ಕೇಳಿದರು. ಮಂತ್ರಿಗಳು ಮಾರ್ನುಡಿಯುತ್ತಾ ಬೀಡಿ ಕಟ್ಟುವ ಕೆಲಸವು ಪ್ರತಿಯೊಂದು ನಗರದಲ್ಲಿದೆ; ಮತ್ತು ಸಹಸ್ರಾರು ಜನರು ಅದರ ಮೇಲಿಂದ ಉದರ ಪೋಷಣೆ ಮಾಡುತ್ತಾರೆ. ಇಂಥ ಉದ್ದಿಮೆಯಲ್ಲಿ ಯಂತ್ರ ಪ್ರವೇಶವಾದರೆ, ಇವರೆಲ್ಲರೂ ಉದ್ಯೋಗ ಕಳೆದುಕೊಳ್ಳುವರು. ಆದುದರಿಂದಲೇ ಯಂತ್ರಕ್ಕೆ ಅವಕಾಶ ನೀಡಬಾರದೆಂದು ಸರಕಾರದ ಧೋರಣವಾಗಿರುತ್ತದೆ ಎಂದರು.

ನಿಯಮೋಲ್ಲಂಘನಕ್ಕೆ ಬಿಟ್ಟಿ

ಶ್ರೀ ಎಸ್. ಜಿ. ಪರೀಖರು ಧೋತರ ಉತ್ಪಾದನೆಯ ನಿಯಮಗಳನ್ನು ಉಲ್ಲಂಘಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವಾಗಿ ಶ್ರೀ ಕೃಷ್ಣಮಾಚಾರಿಯವರು ೪೫ ಗಿರಣಿಗಳ ಮೇಲೆ ಬಿಟ್ಟಿ ಹಾಕಲು ರಾಜ್ಯ ಸರಕಾರಗಳಿಗೆ ತಿಳಿಸಲಾಗಿದೆಯೆಂದು ಹೇಳಿದರು. ೧೯೫೩ನೇ ಫೆಬ್ರುವರಿಯಿಂದ ಮೇ ವರೆಗಿನ ನಾಲ್ಕು ತಿಂಗಳುಗಳಲ್ಲಿ ೧೪೯ ಗಿರಣಿಗಳು ಈ ನಿಯಮದ ಉಲ್ಲಂಘನೆ ನಡೆಸಿರುವುದು ತಿಳಿದಿದೆ. ಆದರೆ ಇವುಗಳಲ್ಲಿ ಕೆಲವು ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ಧೋತರಗಳನ್ನು ಹೆಚ್ಚು ಉತ್ಪಾದಿಸಿದುದರಿಂದ, ಮುಂದೆ ಅಷ್ಟರಮಟ್ಟಿಗೆ ಉತ್ಪಾದನೆಯನ್ನು ತಗ್ಗಿಸಬೇಕೆಂದು ವಿಧಿಸಲಾಯಿತು. ಹಾಗಲ್ಲದ ೪೫ ಗಿರಣಿಗಳ ಮೇಲೆ ಬಿಟ್ಟಿ ನಡೆಯುವುದು ಎಂದರು. ಮಂತ್ರಿಗಳು ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ಒಡಿಸಾ, ಬಂಗಾಲ ಮತ್ತು ಉತ್ತರ ಪ್ರದೇಶಗಳಲ್ಲಿ ಧೋತರಗಳ ಬೆಲೆ ಏರಿದೆ ಎಂದು ತಿಳಿಸಿದರು. ಈ ಪ್ರಯೋಗದ ಪರಿಣಾಮವನ್ನು ವಸ್ತುನಿಷ್ಠ ದೃಷ್ಟಿಯಿಂದ ನಿರ್ಣಯಿ[illegible]ವೇ ಎಂದು ಶ್ರೀ ಬನಸಾಲರು ಕೇಳಿದುದಕ್ಕೆ ಸರಕಾರದ ಧೋರಣೆ ಯಾವಾಗಲೂ ಹೀಗೆಯೇ ಇರುತ್ತದೆ ಎಂಬ ಉತ್ತರ ಬಂತು. ಇನ್ನೂ ಕೆಲವು ಪ್ರಶ್ನೆಗಳಿಗೆ ಉತ್ತರಕೊಡುತ್ತಾ ಬೇರೆ ರಾಜ್ಯಗಳಲ್ಲಿಯೂ ಧೋತರದ ವಿಶೇಷವಾಗಿ ನಯವಾದ ಧೋತರದ—ಬೆಲೆ ಹೆಚ್ಚಿಕೊಂಡಿದೆ ಎಂದು ನುಡಿದರು.

ಪತ್ರಿಕಾ ಪ್ರಕರಣ

ಬೆನೆಟ್ ಕೋಲ್‌ಮನ್ ಕಂಪೆನಿಯವರು ತಮ್ಮ ಟೈಮ್ಸ್ ಆಫ್ ಇಂಡಿಯಾ, ನವಭಾರತ ಟೈಮ್ಸ್ ಮತ್ತು ಸತ್ಯಯುಗ – ಈ ಮೂರು ಪತ್ರಿಕೆಗಳ ಕಲ್ಕತ್ತಾ ಮುದ್ರಣವನ್ನು ನಿಲ್ಲಿಸಿದ ಸಂಬಂಧದಲ್ಲಿ ಶ್ರೀ ದ್ವಿವೇದಿಯವರು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದಾಗ ಉದ್ಭೂತವಾದ ಪೂರಕ ಪ್ರಶ್ನೆಗಳಿಗೆ ಉತ್ತರಿಸುತ್ತಾ ಪ್ರಧಾನಮಂತ್ರಿಗಳು ಈ ಮುದ್ರಣಗಳನ್ನು ಒಮ್ಮೆಲೇ ನಿಲ್ಲಿಸಿದ್ದು ತುಂಬ ವಿಷಾದಕರವೆಂದೂ ಈ ಕುರಿತು ಪೂರ್ಣ ವಿಚಾರಣೆ ನಡೆಸುವುದು ಅಪೇಕ್ಷಣೀಯವೆಂದೂ ಹೇಳಿದರು. ಈ ವಿಷಯವು ಭಾರತ ಸರಕಾರಕ್ಕೆ ಸೇರಿದ್ದೆಂದು ಪಶ್ಚಿಮ ಬಂಗಾಲದ ಕೂಲಿಕಾರ ಮಂತ್ರಿಗಳು ನುಡಿದಿರುವರೆಂದು ಶ್ರೀ ಎಚ್. ಎನ್. ಮುಕರ್ಜಿಯವರು ಸೂಚಿಸಲು, ನೆಹರೂರವರು ಎದ್ದು ನಿಂತು "ಈ ವಿಷಯವು ಭಾರತ ಸರಕಾರಕ್ಕೆ ಸೇರಿದ್ದೊ ಅಥವಾ ಬಂಗಾಲ ಸರಕಾರಕ್ಕೊ ಎಂಬುದು ಮಹತ್ವದ್ದಲ್ಲ—ಏಕೆಂದರೆ ಈ ಎರಡೂ ಸರಕಾರಗಳ ನಡುವೆ ಮತಭೇದವಿಲ್ಲ. ಆದರೆ ಸದ್ಯಕ್ಕೆ ಬಂಗಾಲ ಸರಕಾರವು ಈ ವಿಷಯವನ್ನು ಔದ್ಯೋಗಿಕ ನ್ಯಾಯಾಲಯದ ವಶ ಒಪ್ಪಿಸಿಕೊಟ್ಟಿರುವುದರಿಂದ ಹೊಸ ವಿಚಾರಣೆ ನಡೆಸುವುದು ಪ್ರಸ್ತುತವಲ್ಲ ಎಂದು ಹೇಳಿದರು. ಔದ್ಯೋಗಿಕ ನ್ಯಾಯಾಲಯ ಕೈಕೊಂಡ ವಿಚಾರಣೆಯಲ್ಲಿ ಪತ್ರಿಕೋದ್ಯಮಿಗಳ ಪ್ರಶ್ನೆಯನ್ನೂ ಎತ್ತಿಕೊಳ್ಳಲಾಗುವುದೇ ಎಂದು ಮುಕರ್ಜಿಯವರು ಕೇಳಲು—ಈಗಿನ ಪರಿಸ್ಥಿತಿಯಲ್ಲಿ ಕಾರ್ಯವನ್ನು ಬದಲಿಸದ ಹೊರತು ಅದು ಸಾಧ್ಯವೆಂದು ತೋರುವುದಿಲ್ಲ. ನನ್ನ ಸಹೋದ್ಯೋಗಿಗಳು (ಕೂಲಿಕಾರ ಮಂತ್ರಿ, ಶ್ರೀ ಗಿರಿ) ಹೇಳಿದಂತೆ, ಕಾಯಿದೆ[illegible] ತಿದ್ದುಪಡಿ ಮಾಡುವ ವಿಚಾರವಿದೆ. ಆದರೆ ಅದು ದಿನ ಬೆಳಗಾಗುವುದರೊಳಗೆ ನೆರವಾಗಲಾರದು ಎಂದರು. ಆಗ ರೇಣು ಚಕ್ರವರ್ತಿಯವರು, ಪತ್ರಿಕೋದ್ಯಮಿಗಳ ವಿಷಯವನ್ನು ಈ ವಿಚಾರಣೆಯಲ್ಲಿ ಪ್ರತ್ಯಕ್ಷವಾಗಿ ಸೇರಿಸುವುದಾಗದಿದ್ದರೆ ಅವರ ಮಟ್ಟಿಗೆ ಪ್ರತ್ಯೇಕ ವಿಚಾರಣೆಯ ವ್ಯವಸ್ಥೆ ಮಾಡಲಾಗುವುದೇ ಎಂದು ಕೇಳಿದರು. ಈಗಿನ ವಿಚಾರಣೆಗೆ ಅಡ್ಡ ಬರದಂತೆ ಅದನ್ನು ಏರ್ಪಡಿಸುವುದು ಸಾಧ್ಯವಾದಲ್ಲಿ, ಈ ಸಲಹೆಯನ್ನು ವಿಚಾರಿಸುವ ಭರವಸೆಯನ್ನು ನೆಹರೂ ನೀಡಿದರು.

ರೈಲ್ವೆಯ ವಿಸ್ತರಣೆ

ಪೂರ್ವ ಪಂಜಾಬದ ನೂತನ ರಾಜಧಾನಿಯಾದ ಚಂಡೀಗಢವನ್ನು ಅಂಬಾಲಾ-ಕಾಲ್ಕಾ ರೈಲ್ವೆಗೆ ಜೋಡಿಸುವ ಮಾರ್ಗ ರಚನೆಯು ಈ ವರ್ಷಾಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆಯಾಗಿ ರೈಲ್ವೆಖಾತೆಯ ಉಪಮಂತ್ರಿ ಶ್ರೀ ಅಲಗೇಶನ್ನರು ಸರದಾರ ಹುಕುಂ ಸಿಂಗರಿಗೆ ತಿಳಿಸಿದರು. ಈಗ ಈ ಅಡ್ಡ ಮಾರ್ಗದ ಪರಿಶೀಲನೆ ಮುಗಿದಿದೆಯೆಂದೂ ಹಳಿಗಳನ್ನು ಹಾಕುವ ಕೆಲಸ ಆರಂಭಗೊಂಡಿದೆಯೆಂದೂ ಅವರು ಹೇಳಿದರು.

ಆಂಧ್ರದ ತಾತ್ಕಾಲಿಕ ರಾಜಧಾನಿಯಾದ ಕರ್ನೂಲಿಗೆ ಸಮೀಪದ ತುಂಗಭದ್ರಾ ನದಿಗೊಂದು ಸೇತುವೆ ಕಟ್ಟುವ ಸಂಬಂಧದಲ್ಲಿ ಶ್ರೀ ಗಾದಿ ಲಿಂಗನಗೌಡರು ಕೇಳಿದ ಪ್ರಶ್ನೆಗೆ ಅಲಗೇಶನ್ನರು ಉತ್ತರಕೊಡುತ್ತಾ ಬನಾರಸ ಕನ್ಯಾಕುಮಾರಿ ರಾಷ್ಟ್ರೀಯ ರಸ್ತೆಯ ಅನಂತಪುರ-ಮದನಪಲ್ಲಿ ವಿಭಾಗವು ಕರ್ನೂಲನ್ನು ಹಾಯ್ದು ಹೋಗಬೇಕೆಂದು ಮೊದಲು ನಿರ್ಣಯಿಸಿದಾಗ, ಕರ್ನೂಲಿಗೆ ಸಮೀಪ ಸೇತುವೆ ಕಟ್ಟುವ ಆಲೋಚನೆ ಇದ್ದಿತು. ಆದರೆ ಕೃಷ್ಣಾ-ಪೆನ್ನಾರ ಯೋಜನೆಯಿಂದ ಕರ್ನೂಲಿಕ್ಕೆ ಹತ್ತಿರದ ಈ ರಸ್ತೆಯ ಭಾಗವು ನೀರಿನಲ್ಲಿ ಮುಳುಗುವುದರಿಂದ ರಾಷ್ಟ್ರೀಯ ರಸ್ತೆಯನ್ನು ಮಾಧವರಂ-ರಾಯಚೂರ ಮಾರ್ಗವಾಗಿ ಒಯ್ಯಬೇಕೆಂದು ಹಿಂದಿನಿಂದ ನಿರ್ಣಯಿಸಲಾಯಿತು. ರಾಷ್ಟ್ರೀಯ ರಸ್ತೆಯನ್ನು

(೧೦ನೇ ಪುಟ ನೋಡಿರಿ)

ಚಂದಾದಾರ ಬಂಧುಗಳಲ್ಲಿ ವಿಶೇಷ ವಿಜ್ಞಾಪನೆ.

- ಪದೇ ಪದೇ ನೆನಪಿಸಿಕೊಂಡರೂ ನಮ್ಮ ಕೆಲವು ಚಂದಾದಾರ ಬಂಧುಗಳು ಬಾಕಿಯಾದ ಚಂದಾಹಣವನ್ನು ಇನ್ನೂ ಕಳುಹಿಸಿರುವುದಿಲ್ಲವೆನ್ನಲು ಬೇಸರವಾಗುತ್ತದೆ. ಅಂಥವರು ಇನ್ನಾದರೂ ತಮ್ಮ ಬಾಕಿಯನ್ನು ಆದಷ್ಟು ತ್ವರೆ ಕಳುಹಿಸಿಕೊಟ್ಟರೆ ತುಂಬ ಉಪಕಾರವಾಗುವುದು.
- ಇದೇ ಆಗೋಸ್ತಿಗೆ ಚಂದಾ ಅವಧಿ ಮುಗಿದವರು ತಮ್ಮ ಚಾಲ್ತಿ ವರ್ಷದ ಚಂದಾ ಹಣವನ್ನು ಬೇಗನೆ ಕಳುಹಿಸಿಕೊಡುವ ಕೃಪೆಮಾಡುವಂತೆಯೂ ಅಪೇಕ್ಷಿಸುತ್ತೇವೆ.
- ಅಂತೂ ಚಂದಾ ಹಣವಾಗಲೀ ಯಾವದೇ ತರದ ಉತ್ತರವಾಗಲೀ ಸಕಾಲದಲ್ಲಿ ಬಾರದಿದ್ದರೆ ನಾವು ಬಾಕಿಗಾಗಿ ಪತ್ರಿಕೆಯನ್ನು ವಿ. ಪಿ. ಮಾಡಿ ಕಳುಹಿಸಬೇಕಾಗುತ್ತದೆ. ಆದರೆ ಇಂತಹ ಪರಿಸ್ಥಿತಿಯನ್ನು ದಯಮಾಡಿ ಒದಗಿಸಬಾರದಾಗಿ ಕೇಳಿಕೊಳ್ಳುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮಾಡಬಹುದು, ಯಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಬಹುದು. ಇಲ್ಲವೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಯಾವುದೇ ಶಾಖೆಯಲ್ಲಿ "ನವಯುಗ"ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಕೊಡಬಹುದು. ಇತಿ ತಮ್ಮ ಪ್ರೋತ್ಸಾಹಾಭಿಲಾಷಿ,

ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ-ಸಂಪಾದಕ.

ವಿ. ಸೂ. ಯಾರಿಗಾದರೂ ಮುಂದೆ ಪತ್ರಿಕೆ ಬೇಡವೆಂದಿದ್ದರೆ, ಬಾಕಿಯನ್ನು ಕಳುಹಿಸಿಕೊಟ್ಟು ಹಾಗೆಯೇ ತಿಳಿಸಿದರೆ ಉಪಕಾರ.

Sub-Court of South Kanara.

O. S. No, 159 of 1953.

Between:—

Antony D'Mello —Plaintiff

and

A. Kalyani and others —Defendants.

NOTICE to defendants 1, 2, 3, 5 and 6, A Kalyani, M. Bhaskar, M. Devaraja, Shekara, and Vimalakara, respectively, 1st defendant being the widow and the rest being the children of Maroly Babu, all residing at Marcara Hill, Mangalore Town, is hereby given that the plaintiff's above suit for recovery of Rs 3,287—3—0 being the amounts due under registered mortgage dated 18—1—1943 executed by them in favour of the plaintiff and his wife Mrs. Suzanna D'Mello, since deceased, and costs of suit, stands posted to 8-10 1953 for their appearance in court. On their failure to appear in court on the said day at 11 A. M. either in person or by a duly authorized pleader, they will be declared ex-parte.

JOHN GONSALVES,
B.A., LL.B.,
Vakil for Plaintiff.

Mangalore, 16—9—1953

ಲೋಕಸಭೆಯ ಕಳೆದ ಅಧಿವೇಶನ

ಅತ್ಯಲ್ಪ ಅವಧಿಯದಾಗಿದ್ದರೂ ಮಹತ್ವ ಅತ್ಯಧಿಕ

ಮಹತ್ವದ ಹೆಜ್ಜೆ

ಅತ್ಯಲ್ಪ ಅವಧಿಯದಾಗಿದ್ದರೂ ಅತ್ಯಂತ ಮಹತ್ವಪೂರ್ಣವಾದ ಲೋಕಸಭೆಯ ನಾಲ್ಕನೇ ಅಧಿವೇಶನವು ಕಳೆದ ಶುಕ್ರವಾರ ದಿನ ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿದಿದೆ. ಆಗೋಸ್ತು ೩ನೇ ದಿನಾಂಕದಿಂದ ಸುಮಾರು ೬ಗು ವಾರಗಳವರೆಗೆ ಈ ಅಧಿವೇಶನ ನಡೆದರೂ ಸರಕಾರಕ್ಕೆ ಅಗತ್ಯದ ಎಲ್ಲ ವಿಧೇಯಕಗಳನ್ನು ಮಂಡಿಸುವುದಾಗಲಿಲ್ಲ. ಸುಮಾರು ೩೭ ಮಸೂದೆಗಳು ಸರಕಾರದ ಕೈಯಲ್ಲಿವೆ—ಈ ಶಾಸನಿಕ ಕಾರ್ಯವನ್ನು ಪೂರೈಸುವುದು ಲೋಕಸಭೆಯ ಕೈಯೊಳಗಿನ ಮಾತಾಗಲಿಲ್ಲ. ಆದರೂ ಎರಡು ಅತ್ಯಂತ ಮಹತ್ವದ ವಿಧೇಯಕಗಳನ್ನು ಈ ಅವಧಿಯಲ್ಲಿ ಲೋಕಸಭೆ ಅನುಮೋದಿಸಿದೆ —ಮತ್ತು ಭಾರತದ ಇತಿಹಾಸದಲ್ಲಿಯೇ ಚಿರಸ್ಥಾಯಿಯಾದ ನೆನಪನ್ನು ಈ ಅಧಿವೇಶನ ಮಾಡಿಕೊಡುವಂತಿದೆ. ಆಂಧ್ರರಾಜ್ಯ ನಿರ್ಮಾಣ ನಿರ್ಧಾರಕ್ಕೆ ಲೋಕಸಭೆಯು ಒಪ್ಪಿಗೆಕೊಟ್ಟು—ಭಾರತವನ್ನು ಭಾಷಾನುಗುಣ ರಾಜ್ಯಗಳನ್ನಾಗಿ ಪುನರ್ಘಟಿಸುವ ಕ್ರಮದ ನಾಂದಿ ಹಾಡಿದೆ. ಹಾಗೆಯೇ ಆಸ್ತಿಕರ ವಿಧೇಯಕವನ್ನು ಬೆಂಬಲಿಸಿ, ಆರ್ಥಿಕ ಕ್ಷೇತ್ರದಲ್ಲಿ ಅಹಿಂಸಾತ್ಮಕ ಕ್ರಾಂತಿಯ ಅಡಿಗಲ್ಲನ್ನು ದೃಢವಾಗಿ ಹಾಕಿರುತ್ತದೆ. ಆಂಧ್ರ ರಾಜ್ಯ ನಿರ್ಮಾಣ ವಿಧೇಯಕವು ರಾಜ್ಯ ಪರಿಷತ್ತಿನಲ್ಲಿ ಸ್ವೀಕಾರಗೊಂಡು, ರಾಷ್ಟ್ರಾಧ್ಯಕ್ಷರ ಸಹಿಬಿದ್ದು, ಇಷ್ಟರಲ್ಲೇ ಕಾಯಿದೆಯಾಗಿರುತ್ತದೆ. ಆಸ್ತಿಕರ ವಿಧೇಯಕ ಈಗ ರಾಜ್ಯ ಪರಿಷತ್ತಿನ ಚರ್ಚೆಯಲ್ಲಿದೆ. ಮತ್ತು ಈ ಸಂಚಿಕೆ ಹೊರಬರುವಷ್ಟರಲ್ಲಿಯೇ ರಾಜ್ಯ ಪರಿಷತ್ತು ಮುಂದೂಡಲ್ಪಡುವುದರಿಂದ, ಅಷ್ಟರೊಳಗಾಗಿ ರಾಜ್ಯಪರಿಷತ್ತಿನ ಒಪ್ಪಿಗೆ ದೊರೆಕೀತೆಂದು ನಿರೀಕ್ಷಿಸಿದ್ದೇವೆ

ಕೂಲಂಕಷ ಪರಿಶೀಲನೆ

ಲೋಕಸಭೆಯ ಹಿಂದಿನ ಯಾವ ಅಧಿವೇಶನವೂ ಈ ಸಲದಷ್ಟು ಕಳೆ ತುಂಬಿರಲಿಲ್ಲ—ಸದಸ್ಯರು ಅತ್ಯಂತ ಮಹತ್ವದ ಎರಡು ವಿಷಯಗಳನ್ನು ಗಂಭೀರವಾಗಿ ಪರಿಶೀಲಿಸುವುದರಲ್ಲಿಯೇ ಮಗ್ನರಾಗಿದ್ದರು. ಆಂಧ್ರರಾಜ್ಯ ವಿಧೇಯಕದ ಚರ್ಚೆ ತುಂಬ ತೊಡಕಿನದಾಗಿದ್ದಿತು—ಬೇರೆ ಭಾಷಾವಾದಿಗಳ ಮನಸ್ಸನ್ನು ಕೆರಳಿಸುವ ಅಥವಾ ನೋಯಿಸುವ ಗಳಿಗೆಗಳೂ ಬಂದಿದ್ದವು. ಆದರೆ ಸರಕಾರದ ಧೋರಣವನ್ನು ಮೇಲಿಂದ ಮೇಲೆ ಗೃಹಮಂತ್ರಿಗಳು ಸ್ಪಷ್ಟಪಡಿಸುತ್ತಾ ಬಂದ ಪ್ರಕಾರ, ಭಾಷಾ ರಾಜ್ಯದ ಕುರಿತು ಹಾಗೂ ಭಾಷಾವಾದಿಗಳ ನಿಲುವಿನ ಕುರಿತು ಯಾವುದೇ ದುರಭಿಪ್ರಾಯವುಂಟಾಗಲಿಲ್ಲ. ಮಾತ್ರವಲ್ಲ ಭಾಷಾನುಗುಣವಾಗಿ ಭಾರತವನ್ನು ಪುನರ್ಘಟಿಸುವ ತತ್ವವನ್ನು ಪಾರ್ಲಿಮೆಂಟಿನ ಉಭಯ ಸಭೆಗಳೂ ಸರ್ವಾನುಮತದಿಂದ ಬಂತಿ ಪುರಸ್ಕರಿಸಿದುವು, ಮತ್ತು ಅಕ್ಟೋಬರ ೧ನೇ ದಿನಾಂಕ ಉದಯವಾಗುವ ಆಂಧ್ರ ರಾಜ್ಯಕ್ಕೆ ಶುಭಕೋರಿದುವು

ಆಸ್ತಿಕರ ವಿಧೇಯಕದ ಸಂಗತಿ ಇನ್ನೂ ಜಟಿಲವಾಗಿದ್ದಿತು. ನಮ್ಮ ಜನಕ್ಕೆ ಈ ಕರದ ಕುರಿತು ವಿಶೇಷವಾದ ಪರಿಚಿತಿ ಇರುವುದಿಲ್ಲ. ಅಲ್ಲದೆ ಅರ್ಥ ಸಚಿವರು ಕೈಗೊಂಡ ಕೆಲವು ಕ್ರಮಗಳು ಘಟನೆಯ ಆದೇಶಕ್ಕೆ ಅನುಗುಣವಾಗಿಲ್ಲವೊ ಎಂಬಂತೆ ಭಾಸವಾಗುತ್ತಿದ್ದವು. ಈ ಲೋಪದೋಷಗಳ ನೆರಳಿನಲ್ಲಿಯೂ ವಿಧೇಯಕದ ಕೂಲಂಕಷ ಪರಿಶೀಲನೆಯು ನಡೆಯಿತು. ಜಿಗುಟಾದ ಕಾಯಿದೆಯ ಕಲಮುಗಳನ್ನು ಸದಸ್ಯರು ಹಿಂಜಿ ಹಿಂಜಿ ಪರಿಶೀಲಿಸಿದರು. ಅರ್ಥಸಚಿವರು ಪ್ರಾರಂಭದಿಂದ ಕೊನೆಯ ವರೆಗೂ ತಮ್ಮ ನಿಲುಮೆಗೆ ದೃಢವಾಗಿ ಅಂಟಿಕೊಂಡಿದ್ದರು. ಆಸ್ತಿಕರ ವಿಧೇಯಕದ ಎರಡು ಮುಖ್ಯ ಉದ್ದೇಶಗಳನ್ನು ಅವರು ಪದೇ ಪದೇ ಒತ್ತಿ ಹೇಳಿದರು—ಸಾಮಾಜಿಕ ಅಸಮತೆಯನ್ನು ನೀಗಿಸುವುದಕ್ಕೆ ಇದು ಪ್ರಾರಂಭಿಕ ಹೆಜ್ಜೆಯೆಂಬುದು ಮೊದಲನೇ ಅಂಶ, ನಮ್ಮ ಅಭಿವೃದ್ಧಿಯೋಜನೆಗಳಿಗೆ ಹಣ ಪೂರೈಸಲ್ಪಡಲು ಅನುಕೂಲವಾದ ಕ್ರಮವಿದೆಂಬುದು ಎರಡನೇ ಅಂಶ. ರಾಜ್ಯಪರಿಷತ್ತಿನಲ್ಲಿ ಶ್ರೀ ದೇಶಮುಖರು ಮಾತನಾಡುತ್ತಾ ಈ ಕರದಿಂದ ವರ್ಷಕ್ಕೆ ೧೪ ೧೫ ಕೋಟಿ ರೂಪಾಯಿಗಳು ದೊರೆತಾವೆಂದು ಆಶಿಸಿರುವರು. ಈ ಕರವನ್ನು ಹೇರುವಾಗ ಜನತೆಯ ತೊಂದರೆ ಕಿರುಕುಳಗಳು ಹೆಚ್ಚಾಗದಂತೆ ದಕ್ಷತೆವಹಿಸುವ ಆಶ್ವಾಸನವನ್ನೂ ಮಾನ್ಯ ಮಂತ್ರಿಗಳು ಕೊಟ್ಟಿರುವರು. ಹಿಂದೂ ಅವಿಭಕ್ತ ಕುಟುಂಬಗಳನ್ನು ಹೊರತು ಬೇರೆಯವರ ಸಂಗತಿಯಲ್ಲಿ ಕರಮುಕ್ತ ಆಸ್ತಿ ಪ್ರಮಾಣವನ್ನು ೭೫೦೦೦ ರೂಪಾಯಿಯಿಂದ ಒಂದು ಲಕ್ಷಕ್ಕೆ ಏರಿಸಿರುವರು. ಹೀಗೆಯೇ ಜೀವವಿಮೆ, ಹೆಣ್ಮಕ್ಕಳ ವಿವಾಹಕ್ಕೋಸ್ಕರ ನಿಧಿಯ ವ್ಯವಸ್ಥೆ, ಸಾರ್ವಜನಿಕ ಪ್ರಯೋಜನಕ್ಕೋಸ್ಕರ ದಾನ ಮುಂತಾದವುಗಳಲ್ಲಿ ಜನತೆಯ ಹಿತದ ಕಡೆ ಅರ್ಥಸಚಿವರು ಒಲಿದಿರುವರು. ಹಾಗೆಂದು ಕರಪ್ರಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆ ಮಾಡಲು ಒಡಂಬಡಲಿಲ್ಲ. ಈ ಪಟ್ಟಿಗೆ ಪಾಶ್ಚಾತ್ಯ ದೇಶಗಳ ಮಾದರಿಯನ್ನು ಅವರು ಇಟ್ಟುಕೊಂಡರೇ ಹೊರತು—ಭಾರತದ ಪರಿಸ್ಥಿತಿ ಅವುಗಳಿಗಿಂತ ಭಿನ್ನವಾಗಿದೆಯೆಂಬ ಅಂಶವನ್ನು ಅವರು ಮೆಚ್ಚಲಿಲ್ಲ

ನೂತನ ವೈಶಿಷ್ಟ್ಯ

ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಈ ಅಧಿವೇಶನದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಹಾಗೂ ಮಹತ್ವವುಳ್ಳ ಬೇರೆ ಕೆಲವು ವಿಷಯಗಳ ಕುರಿತು ಅರ್ಧ ತಾಸು ಅಥವಾ ಒಂದು ತಾಸು ಅವಧಿಯ ಚರ್ಚೆ ನಡೆಯಲು ಪದೇ ಪದೇ ಅವಕಾಶಮಾಡಿಕೊಟ್ಟದ್ದು ಈ ಅಧಿವೇಶನದ ವೈಶಿಷ್ಟ್ಯ. ಅಧಿವೇಶನವು ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ನಿಧನದ ಕುರಿತು ಸಂತಾಪ ಸೂಚನೆಯೊಂದಿಗೆ ಪ್ರಾರಂಭವಾಯಿತು, ಮತ್ತು ಅವರ ನಿಧನದ ಕುರಿತು ವಿಚಾರಣೆ ನಡೆಯಬೇಕೆಂಬ ಬೇಡಿಕೆಯ ಚರ್ಚೆಯೊಂದಿಗೆ ಕೊನೆಗೊಂಡಿತು. ಶ್ರೀ ಎನ್. ಸಿ ಚಟರ್ಜಿಯವರು ಶುಕ್ರವಾರ ದಿನ ಈ ಕುರಿತು ಮುಂದಿಸಿದ ಗೊತ್ತುವಳಿಯನ್ನು ಸ್ವೀಕರಿಸಲು ಗೃಹಸಚಿವ ಡಾ॥ ಕಟಜೂ ನಿರಾಕರಿಸಿದರು. ಮುಖರ್ಜಿಯವರ ಮರಣದ ಸಂಗತಿಯಲ್ಲಿ ಭಾರತ ಸರಕಾರವು ಕಾಶ್ಮೀರದೊಂದಿಗೆ ಕಾರಸ್ಥಾನ ನಡೆಸಿದೆ ಎಂಬ ಆರೋಪವನ್ನು ಅವರು ನಿರಾಕರಿಸಿದರು. ಕುತ್ಸಿತವಾದ ಈ ಟೀಕೆಗೆ ಆಸ್ಪದವೇ ಇಲ್ಲೆಂಬುದನ್ನು ಅವರು ಸುದೀರ್ಘವಾದ ಹೇಳಿಕೆಯಿಂದ ವಿವರಿಸಿದರು. ಇದಕ್ಕೆ ಮುಂಚೆ ಪ್ರಧಾನಿ ನೆಹರೂರವರು ಭಾರತ ಸರಕಾರದ ವಿದೇಶ ಧೋರಣವನ್ನು ವಿಶದೀಕರಿಸಿ ಮಾತನಾಡಿ, ಚರ್ಚೆಗೆ ಅವಕಾಶ ನೀಡಿದರು. ಭಾರತದ ಅಂತರಿಕ ರಾಜಕೀಯ ಚಟುವಟಿಕೆಗಳನ್ನು ಅಷ್ಟೊಂದು ಗೌರವದಿಂದ ನೋಡದ, ಮತ್ತು ಕಾಂಗ್ರೆಸ್ಸ ಸರಕಾರದ ಕ್ರಮಗಳನ್ನು ಆದರಿಸದ ವಿರೋಧೀ ಗುಂಪಿನ ವರ್ಚಸ್ವಿ ಧುರೀಣರು ವಿದೇಶಾಂಗ ನೀತಿಯ ಮಟ್ಟಿಗೆ ತುಂಬ ಸಮಾಧಾನವನ್ನು ವ್ಯಕ್ತಪಡಿಸಿ, ನೆಹರೂರ ಮುತ್ಸದ್ದಿತನವನ್ನು ಬೆಂಬಲಿಸಿದರು, ಭಾರತವು ರಾಷ್ಟ್ರಕೂಟದ ಸದಸ್ಯತ್ವವನ್ನು ಹೊಂದಿರುವುದರ ಹಾಗೂ ಅಮೇರಿಕದ ಬಂಡವಾಳವನ್ನು ಆಶ್ರಯಿಸಿರುವುದರ ಔಚಿತ್ಯವನ್ನು ಪ್ರೊ. ಹಿರೇನ್ ಮುಕರ್ಜಿಯಂಥ ಕಮ್ಯುನಿಸ್ಟ ಧುರೀಣರು ಪ್ರಶ್ನಿಸಿದರೂ ಶಾಂತಿಯನ್ನು ನೆಲೆಗೊಳಿಸಲು ಭಾರತ ಕೈಗೊಂಡ ಪ್ರಯತ್ನಗಳನ್ನು ಹೊಗಳಿದರು. ಆಚಾರ್ಯ ಕೃಪಲಾನಿಯವರೂ ಭಾರತದ ವಿದೇಶ ನೀತಿಗೆ ಅನುಮೋದನೆ ನೀಡಿದರು.

ಪೆಪ್ಸೂದ ಪರಿಸ್ಥಿತಿ

ಪೆಪ್ಸೂದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಇನ್ನೂ ಆರು ತಿಂಗಳ ವರೆಗೆ, ಅಂದರೆ ೧೯೫೪ನೇ ಮಾರ್ಚ ಅಖೈರ ತನಕ ಮುಂದುವರಿಸಲು ಉದ್ದೇಶಿಸಿ ಡಾ. ಕಟಜೂ ತಂದ ಸೂಚನೆಯನ್ನು ಪಾರ್ಲಿಮೆಂಟಿನ ಎರಡೂ ಸಭೆಗಳು ಅನುಮೋದಿಸಿವೆ. ಆದರೆ, ಪ್ರಜಾಪ್ರಭುತ್ವದ ಪದ್ಧತಿ ಜಾರಿಯಲ್ಲಿರುತ್ತಾ, ರಾಷ್ಟ್ರಾಧ್ಯಕ್ಷರ ನೇರಾದ ಆಡಳಿತ ಕಾಲವನ್ನು ಹೀಗೆ ಬೆಳೆಸುತ್ತಿರುವುದು ಸಲ್ಲಕ್ಷಣವಲ್ಲವೆಂಬುದನ್ನು ಅನೇಕ ಸದಸ್ಯರು ಒತ್ತಿ ಹೇಳಿದರು. ಗೃಹ ಸಚಿವರು ಇವರೆಲ್ಲರಿಗೂ ಯೋಗ್ಯ ವಿವರಣೆಯನ್ನು ಕೊಡಬೇಕಾಯಿತು. ಪೆಪ್ಸೂ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯು ಜನತೆಗೆ ಭಾರವಾಗಿರದೆ- ಸುಖಕರವಾಗಿ ಪರಿಣಮಿಸಿದೆ ರಾಜ್ಯ ಸರಕಾರದ ಅವ್ಯವಸ್ಥೆಯ ಪರಿಣಾಮದಿಂದ ತೊಂದರೆ ತಾಪತ್ರಯಗಳು ಹೆಚ್ಚಿಕೊಂಡವು--ಶಾಂತಿಯೂ

ಉಡುಪಿ ಡಿ. ಮು. ಕೋರ್ಟಿನಲ್ಲಿ

O P No 38/1953

ಉಮ್ಮಕ್ಕ ಪೂಜಾರ್ತಿ ನ್ವೆಂದ ಪೂಜಾರಿ ಹೆಂಡತಿ, ಉಡುಪಿ ತಾಲ್ಲೂಕು ಕಟ್ಟಿಂಗೇರಿ ಗ್ರಾಮದ ಕೆರೆಕಟ್ಟೆ —ಅರ್ಜಿದಾರಳು

ಮತ್ತು

ಸಿಂಧು ಬ್ಯಾ, ಶೀನ ಕೋಟ್ಯಾನ್‌ನ ವಿಧವೆ, ಉಡುಪಿ ತಾಲ್ಲೂಕು ಶಿರ್ವ ಗ್ರಾಮದ ಪಟ್ಟಿರು ದೇವಗುಡ್ಡೆ ಮನೆ —ಎದ್ರಿಳು

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದ್ರೆ:-

ಅರ್ಜಿದಾರಳ ಮಗನ ಎದ್ರಿಳ ಗಂಡ ತಾ 7—2—49ರಲ್ಲಿ ಮೃತಪಟ್ಟ ಶೀನ ಕೋಟ್ಯಾನ್‌ಗೆ "The Western India Automobile Association, Post Box No. 211, Fort, Bombay" ಇದರಿಂದ ಪ್ರೊವಿಡೆಂಟ್ ಫಂಡ್ ಬಾಬ್ತು ಬರತಕ್ಕ ಹಣ ರೂಪಾಯಿ 210-0-0ನ್ನು ವಸೂಲು ಪಡೆಯುವ ಅಧಿಕಾರಳೇ ಹಕ್ಕುದಾರಳೆಂತಲೂ ಆ ಬಗ್ಗೆ ಆವಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿಯೂ ಕೇಳಿ ಮಾಡಿಕೊಂಡ ಮೊಕದ್ದಮೆ ಅರ್ಜಿಯು ತಾ. 10-10-53ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲಿಚ್ಛೆವವರು ಸದ್ರಿ ತಾ 10-10-53ನೇ ದಿವಸ ಬೆಳಿಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಆಕ್ಷೇಪ ಮಾಡಿಕೊಳ್ಳತಕ್ಕದ್ದು.

P. V. Acharya,
Vakil for Petitioner

ಉಡುಪಿ ತಾ, 18—9—53

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಬಾಳಿ ಬದುಕಬೇಕಾದರೆ ನಾವು, ನಮ್ಮ ಮಕ್ಕಳು ಮಿತವ್ಯಯದ ಅಭ್ಯಾಸ ಮಾಡದೇ ಬೇಕು. ಕುಟುಂಬದ ಪ್ರತಿಯೊಬ್ಬನ ಹೆಸರಿನಲ್ಲಿಯೂ ಒಂದೊಂದು ಕ್ಯುಮಿಲೇಟಿವ್ ಡೆಪಾಜಿಟ್ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ತನ್ಮೂಲಕ ಸಾಧ್ಯವಿದ್ದಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL & BANKING SYNDICATE LTD.,

Estd: 1925 H O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

WANTED Assistant Development Officers at the following places (one in each region)

1 Mangalore Town, 2 Mangalore Taluk, 3. Udipi Town, 4 Udipi Taluk, 5. Kasaragode, 6 Puttur, 7 Karkala, 8 Kundapur

(Women also eligible) Salary Rs 125/- plus Rs 45/-,Cycle allowance.

Apply sharp to.

M C SHETTY,
Development Officer,
Indian Dominion Airways Ltd.,
22, Modern Hotel, Mangalore.

ಆಂಧ್ರದಲ್ಲಿ ಸ್ಥಿರ ಸರಕಾರ ಸ್ಥಾಪಿಸುವ ಯತ್ನ

ಕಾಂಗ್ರೆಸ್ಸಿನ ಸಹಕಾರದಿಂದ ಪ್ರಕಾಶಮರೇ ಮುಖ್ಯಮಂತ್ರಿಯಾಗುವರೆಂದು ಎಲ್ಲರ ನಿರೀಕ್ಷೆ

ದೂರಾಯಿತು. ಈಗ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದಿದ್ದು, ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಪೆಪ್ಸೂದ ಜನತೆ ಪ್ರಜಾಪ್ರಭುತ್ವ ಮಾದರಿಯ ಸರಕಾರಕ್ಕಿಂತ ರಾಷ್ಟ್ರಾಧ್ಯಕ್ಷರ ಆಡಳಿತವೇ ಲೇಸೆಂದು ಹೇಳುತ್ತಿದೆ. ಹಾಗೆ ನೋಡಿದರೆ, ರಾಷ್ಟ್ರಾಧ್ಯಕ್ಷರ ಆಡಳಿತಕ್ಕೂ ನಿರಂಕುಶಾಧಿಕಾರಕ್ಕೂ ಹೋಲಿಕೆಯೇ ಇಲ್ಲ. ಪೆಪ್ಸುವಲ್ಲಿ ರಾಜ್ಯ ಶಾಸನ ಸಭೆಯ ಅಧಿಕಾರವಿರುವ ಬದಲು ಕೇಂದ್ರ ಸಂಸತ್ತು ಆ ಜವಾಬ್ದಾರಿಯನ್ನು ಹೊತ್ತಿದೆ. ಹೊಸ ಚುನಾವಣೆ ಎಂದು ನಡೆಯಬಹುದೆಂದು ನಿಶ್ಚಿತವಾಗಿ ಹೇಳಲು ಬರದಿದ್ದರೂ ಮುಂದಿನ ಮಾರ್ಚಿಯೊಳಗೆ ಅದು ಮುಗಿದೀತು. ಪರಿಶೀಲನಾ ಸಮಿತಿಯ ವರದಿಯಲ್ಲದಿರುತ್ತಿದ್ದರೆ, ಕಳೆದ ಜೂನು ತಿಂಗಳಲ್ಲಿಯೇ ಚುನಾವಣೆಗಳನ್ನು ನಡೆಸಬಹುದಿತ್ತು ಎಂದು ಮುಂತಾಗಿ ಕಟಜೂ ಸಂಗತಿಗಳನ್ನು ಬಣ್ಣಿಸಿದುದರಿಂದ- ಸಂದೇಹಗಳು ದೂರಾದವು.

ಅರ್ಥಪೂರ್ಣ ರಾಜಕಾರಣ

ಮುಂದಿನ ಗುರುವಾರ ದಿನ ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂದು ತೆಲುಗರ ಬಹುದಿನಗಳ ಆಕಾಂಕ್ಷೆಯು ಪೂರ್ಣಗೊಳ್ಳುತ್ತದೆ. ಈ ಸಂಭ್ರಮದಲ್ಲಿ ಭಾರತದ ಮೂಲೆ ಮೂಲೆಯಿಂದಲೂ ಶುಭಾಶಯಗಳು ಆಂಧ್ರರ ಬಳಿಗೆ ಬರುವುವೆಂಬುದರಲ್ಲಿ ಸಂಶಯವಿಲ್ಲ. ಆದರೆ ಆಂಧ್ರರು ಈ ಮಂಗಲ ಸಮಯದಲ್ಲಿಯೂ ಸಂತೋಷ ಚಿತ್ತರಾಗಿರುವಂತೆ ಕಾಣುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣಗಳೂ ಇವೆ- ಪ್ರಥಮವಾಗಿ ಆಂಧ್ರದಲ್ಲಿ ಪ್ರಜಾಪ್ರಭುತ್ವ ಪದ್ಧತಿಗೆ ತಕ್ಕುದಾದ, ಭದ್ರ ಹಾಗೂ ಸ್ಥಿರವಾದ ಸರಕಾರದ ರಚನೆಯ ಪ್ರಶ್ನೆಯಲ್ಲಿ ಇನ್ನೂ ಐಕ್ಯಮತ್ಯವುಂಟಾಗಿರುವುದಿಲ್ಲ. ಪ್ರಮುಖ ಧುರೀಣರು ಈ ವಿಷಯದಲ್ಲಿ ಗಂಭೀರವಾಗಿ ಪರ್ಯಾಲೋಚಿಸುತ್ತಿದ್ದರೂ ಫಲಿತಾಂಶವು ಇನ್ನೂ ವರೆಗೆ ತಿಳಿದುಬಂದಿಲ್ಲ. ಭಾಷಾನುಗುಣ ಪ್ರಾಂತ್ಯವನ್ನು ಏರ್ಪಡಿಸುವುದಕ್ಕೆ ಕೇಂದ್ರ ಸರಕಾರವು ಹಿಂದು ಮುಂದು ನೋಡುತ್ತಿದ್ದ ಕಾಲದಲ್ಲಿ ಆಂಧ್ರರು ತಮ್ಮ ವರ್ಚಸ್ಸನ್ನು ಉಪಯೋಗಿಸಿ ಬೇಡಿಕೆಗೆ ಮನ್ನಣೆಯನ್ನು ಪಡೆಯಲು ಸಮರ್ಥರಾದರು- ಅವರ ಈ ಸಾಹಸದ ಪರಿಣಾಮವೇ ಇತರ ಭಾಷಾವಾದಿಗಳ ಪಾಲಿಗೆ ಸ್ಫೂರ್ತಿಯ ನೆಲೆಯಾಗಬೇಕು. ಇಂಥದರಲ್ಲಿ ಸರಕಾರ ರಚಿಸುವ ಪ್ರಶ್ನೆಯು ಇನ್ನೂ ಇತ್ಯರ್ಥಕ್ಕೆ ಬಾರದೆ ರಾಷ್ಟ್ರಾಧ್ಯಕ್ಷರ ಆಡಳಿತವೇ ಪ್ರಥಮದ ಕೆಲವು ದಿನಗಳ ವರೆಗಾದರೂ ನಡೆಯುವ ಅಪ್ರಿಯ ಸಂಭವ ತೋರುವುದು ಸಲ್ಲಕ್ಷಣವಲ್ಲ. ಇದರ ಜೊತೆಗೆ ಆಕಸ್ಮಿಕವೆಂದೇ ತಿಳಿದರೂ ಅಪೇಕ್ಷಣೀಯವಲ್ಲದ ರೀತಿಯಲ್ಲಿ ಗೋದಾವರೀ ನದಿಗೆ ಮಹಾಪೂರ ಬಂದು, ಆಂಧ್ರರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಮೇಲೆ ಪ್ರಬಲ ಆಘಾತವನ್ನುಂಟು ಮಾಡಿರುತ್ತದೆ. ಇವುಗಳು ಶುಭ ಸೂಚಕವಲ್ಲವೆಂದು ಹೇಳುತ್ತಾ ಸ್ವಾಮಿ ಸೀತಾರಾಮರು ಏಳು ದಿನಗಳ ತಪಸ್ಸನ್ನು ಕೈಗೊಂಡುದು ಅರ್ಥಪೂರ್ಣವಾಗಿರುತ್ತದೆ. ಸ್ವಾಮಿಜಿಯ ಈ ಆಚರಣೆ ಸಂಕೇತ ರೂಪದಲ್ಲಿರುತ್ತದೆಂಬುದನ್ನು ಈ ಪ್ರಸಂಗದಲ್ಲಿ ಅವಶ್ಯ ನೆನೆದುಕೊಳ್ಳಬೇಕು.

ಕಾಂಗ್ರೆಸಿನ ಇಚ್ಛೆ

ಆಂಧ್ರ ರಾಜ್ಯ ನಿರ್ಮಾಣಕ್ಕೋಸ್ಕರ ಅತುಲ ಸಾಹಸ ತೋರಿ ಹೋರಾಡಿದ ಆಂಧ್ರ ನಾಯಕರು ಇಂದು ಭದ್ರವಾದ ಸರಕಾರ ರಚಿಸಲು ಅಸಮರ್ಥರಂತೆ ತೊಳಲಾಡುತ್ತಿರುವುದು ಚಂದ ಕಾಣುತ್ತದೆಯೇ? ನೆರೆಯ ಪೀಡೆ ಆಕಸ್ಮಿಕವೆಂದಿಟ್ಟುಕೊಂಡರೂ ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೇಂದ್ರ ಸರಕಾರವು ಕೈಗೆತ್ತಿಕೊಂಡಕ್ಷಣದಿಂದ ಆಂಧ್ರಕ್ಕೊಂದು ಭದ್ರವಾದ ಸರಕಾರ ಬೇಕೆಂಬುದನ್ನು ಎಲ್ಲ ಪಕ್ಷಸಂಘಟನೆಗಳೂ ತಮ್ಮಲ್ಲಿಯೇ ವಿಚಾರಿಸಿ, ಪ್ರಯತ್ನಿಸಿ, ನಿರ್ಣಯಿಸಿಕೊಳ್ಳಬೇಕಾಗಿದ್ದಿತು. ತೀರ ಸ್ಪಷ್ಟವಾಗಿದ್ದ, ಮತ್ತು ಹಳೆಯದೆಂದೇ ಹೇಳಬಹುದಾದ ಈ ವಿಷಯ ಹತ್ತು ದಿನಗಳ ಅತ್ಯಲ್ಪ ಅವಧಿ ಉಳಿದಿರುವಾಗಲೂ ಕೊನೆಯ ಹಂತವನ್ನು ಮುಟ್ಟಲಿಲ್ಲವೆಂದರೆ, ಶೋಚನೀಯವೇ ಸರಿ. ಇದರ ಒಳಗುಟ್ಟೇನೆಂಬುದನ್ನು ಎಲ್ಲರೂ ಬಲ್ಲರು - ಕಾಂಗ್ರೆಸು ಆತ್ಮಾಭಿಮಾನದಿಂದ ಹಾಗೂ ಸ್ವಪ್ರತಿಷ್ಠೆಯಿಂದ ಕಾಂಗ್ರೆಸಿಗನಲ್ಲದ ಪರಪಕ್ಷೀಯನನ್ನು ಮುಖ್ಯ ಮಂತ್ರಿಯಾಗಿ ಸ್ವೀಕರಿಸಿ, ಮಂತ್ರಿಮಂಡಳ ರಚಿಸಲು ಒಪ್ಪದಿರುವುದು, ಅದೇ ಕಾಲಕ್ಕೆ ಪ್ರಕಾಶಮರು ತಾವು ನಾಯಕರಾಗಿರುವ ಪ್ರಜಾ ಸೋಶಲಿಸ್ಟ ಪಕ್ಷದ ನಿಯಮ ನಿಬಂಧನೆಗಳಿಂದ ತನ್ನನ್ನು ಮುಕ್ತ ಮಾಡಬೇಕೆಂದು ಪ್ರಾರ್ಥಿಸಿರುವುದು- ಆಂಧ್ರದಲ್ಲಿ ಅಧಿಕಾರದಾಹದಿಂದ ನಡೆಯುವ ಚಟುವಟಿಕೆಗಳ ದಿಗ್ದರ್ಶನ ಮಾಡುವಂತಿವೆ. ಕಾಂಗ್ರೆಸಿನ ನಿಲುವು ಏನೆಂಬುದನ್ನು ಕಾಂಗ್ರೆಸ ಕಾರ್ಯಕಾರೀ ಸಮಿತಿಯು ಮೊನ್ನೆ ತಾನೆ ಹೊಸ ದಿಲ್ಲಿಯಲ್ಲಿ ಸಭೆ ಸೇರಿದಾಗ ವ್ಯಕ್ತಗೊಳಿಸಿದೆ—ಪ್ರಕಾಶಮರನ್ನು ಮುಖ್ಯ ಮಂತ್ರಿಯಾಗಿ ಸ್ವೀಕರಿಸಲು ಕಾಂಗ್ರೆಸಿಗೆ ಆಕ್ಷೇಪವಿಲ್ಲ. ಅವರು ತಮ್ಮ ಸಂಸ್ಥೆಗೆ ಸೇರಬೇಕೆಂದೂ ಕಾಂಗ್ರೆಸು ಬಯಸುವುದಿಲ್ಲ. ಆದರೆ ಪ್ರಜಾ ಸಮಾಜವಾದಿ ಪಕ್ಷದ ಬಂಧನವನ್ನು ಮಾತ್ರ ಕಡಿದುಕೊಂಡು, ಅವರು ಸ್ವತಂತ್ರರಾಗಬೇಕಾಗುವುದು. ಅರ್ಥಾತ್ ಪ್ರಜಾ ಸಮಾಜವಾದಿ ಪಕ್ಷದ ಮೇಲಿನ ತನ್ನ ಅಧಿಕಾರಯುತ ವರ್ಚಸ್ಸನ್ನು ಅವರು ತ್ಯಜಿಸಲು ಸಿದ್ಧರಾಗಬೇಕು.

ಪ್ರಕಾಶಮರ ಒಲವು

ಪ್ರಕಾಶಮರು ಇದಕ್ಕೂ ತಯಾರಿದ್ದಾರೆಂದೂ ಆಂಧ್ರದ ಪ್ರಜಾ ಸಮಾಜವಾದಿ ಪಕ್ಷವೂ ಇದಕ್ಕೆ ಸಮ್ಮತಿಸುವುದೆಂದೂ ಬಂದ ವಾರ್ತೆ- ಪ್ರಕಾಶಮರ ರಾಜಕೀಯ ಅಂತರಂಗದ ಕುರಿತು ನೀತಿವಂತರಲ್ಲಿ ಜುಗುಪ್ಸೆಯನ್ನು ಹುಟ್ಟಿಸುವಂತಿದ್ದರೂ—ಪ್ರಕೃತ ಆಂಧ್ರದಲ್ಲಿರುವ ವಿಶಿಷ್ಟ ಪರಿಸ್ಥಿತಿಯ ದೃಷ್ಟಿಯಿಂದ ಸ್ವಾಗತಾರ್ಹವಿದ್ದಿತು. ಆದರೆ ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಹೊಸದಿಲ್ಲಿಯಲ್ಲಿ ಸಭೆಸೇರಿದಾಗ ಪ್ರಕಾಶಮರನ್ನು ಈ ರೀತಿ ಬಿಡುಗಡೆ ಮಾಡಲು ನಿರಾಕರಿಸಿತು. "ಪಕ್ಷದ ನಿಯಮ ನಿರ್ಬಂಧಗಳಿಂದ ಮುಕ್ತಿಯೆನ್ನುವ ಪ್ರಶ್ನೆಯೇ ಇಲ್ಲ" ಎಂಬುದಾಗಿ ಆಚಾರ್ಯ ಕೃಪಲಾನಿಯವರು ಖಂಡತುಂಡವಾಗಿ ಹೇಳಿದುದರಿಂದ, ಆಂಧ್ರದಲ್ಲಿ ವಿಪಂಚನೆಯುಂಟಾಯಿತು. ಪ್ರಕಾಶಮರ ಈಚಿನ ಹೇಳಿಕೆಗಳೂ ನಡವಳಿಕೆಯೂ ಅವರು ಮುಖ್ಯ ಮಂತ್ರಿತ್ವವನ್ನು ಬಹುವಾಗಿ ಅಪೇಕ್ಷಿಸುವರೆಂದೂ ಅದಕ್ಕೋಸ್ಕರ ಪ್ರಜಾ ಸಮಾಜವಾದೀ ಪಕ್ಷದ ಚೌಕಟ್ಟಿನ ಹೊರಗುಳಿಯಲೂ ಸಿದ್ಧರೆಂದೂ ವ್ಯಕ್ತಗೊಳಿಸುತ್ತವೆ. ಪ್ರಜಾ ಸಮಾಜವಾದೀ ಪಕ್ಷದ ಪರಿಷ್ಕಾರ ಮನವೊಲಿಸುವುದು ಅನಗತ್ಯವೆಂದು ಅವರು ಹೇಳಿರುವುದು ಈ ಅನುಮಾನವನ್ನು ದೃಢೀಕರಿಸುತ್ತದೆ. ಹಾಗೆಯೇ ಇನ್ನೊಂದು ಸಂಗತಿಯೂ ಸ್ಪಷ್ಟಗೊಂಡಿದೆ- ಕಮ್ಯೂನಿಸ್ಟರು ಪ್ರಜಾ ಸಮಾಜವಾದೀ ಹಾಗೂ ಕೃಷಿಕರ ಲೋಕ ಪಕ್ಷದ ಸಹಕಾರ ಪಡೆದು ಕಾಂಗ್ರೆಸಿಗೆ ವಿರೋಧವಾಗಿ ಮಂತ್ರಿ ಮಂಡಳ ರಚಿಸುವ ಪ್ರಯತ್ನಕ್ಕೆ ತೊಡಗಿ, ಪ್ರಕಾಶಮರ ನೆರವು ಕೇಳಿರುವರು. ಆದರೆ ಮದ್ರಾಸಿನಲ್ಲಿ ಕಮ್ಯೂನಿಸ್ಟರ ಸ್ನೇಹಸಂಬಂಧ ಪರಿಣಾಮದ ನೆನಪು ಇನ್ನೂ ಹಸಿರಾಗಿರುವ ಪ್ರಕಾಶಮರು ಈ ಸೂಚನೆಯತ್ತ ಕಿವಿಗೊಡಲು ಸಿದ್ಧರಿಲ್ಲ. ಹೇಗಾದರೂ ಮಾಡಿ ಕಾಂಗ್ರೆಸಿನ ಸಹಕಾರದಿಂದ ತಾನು ಮುಖ್ಯ ಮಂತ್ರಿಯಾಗಬೇಕೆಂದೂ, ತನ್ನ ವ್ಯಕ್ತಿತ್ವದ ವರ್ಚಸ್ಸು ಆಂಧ್ರದಲ್ಲಿ ಸ್ಥಿರವಾದ ಸರಕಾರವನ್ನು ನೆಲೆಗೊಳಿಸಬೇಕೆಂದೂ ಪ್ರಕಾಶಮರ ಯೋಜನೆ ಇದ್ದಂತಿದೆ.

ರಾಜಾಜಿಯ ಶಿಫಾರಸು

ಇದು ಯೋಗ್ಯವಾದುದೆಂದು—ಎಲ್ಲರೂ ತಿಳಿಯುತ್ತಾರೆ. ರಾಜಾಜಿಯವರು ಆಂಧ್ರ ರಾಜ್ಯದ ನಿಯೋಜಿತ ಗವರ್ನರರಾದ ಶ್ರೀ ತ್ರಿವೇದಿಯವರಿಗೆ ಏರ್ಪಡಿಸಿದ್ದ ಸತ್ಕಾರ ಕೂಟವೊಂದರಲ್ಲಿ ಮಾತನಾಡುತ್ತಾ ಪ್ರಕಾಶಮರನ್ನು ಬಿಟ್ಟರೆ, ಆಂಧ್ರ ಸರಕಾರದ ಧುರೀಣತ್ವಕ್ಕೆ ಯೋಗ್ಯರಾದ ಬೇರೆ ಜನರಿಲ್ಲವೆಂದು ಸಾರಿದ್ದಾರೆ. ಆಂಧ್ರದ ಈಗಿನ ಸ್ಥಿತಿಯಲ್ಲಿ ಭದ್ರ ಸರಕಾರದ ರಚನೆ ಅಸಾಧ್ಯವೆಂದಿರುವಾಗ—ಪಕ್ಷದ ನೀತಿಗಿಂತಲೂ ರಾಷ್ಟ್ರದ ಕ್ಷೇಮವೇ ಮಿಗಿಲಾದುದೆಂದು ತಿಳಿದು - ಪ್ರಕಾಶಮರು ಸಮ್ಮಿಶ್ರ ಸರಕಾರ ಕಟ್ಟಲು ಮುಂದೆ ಮಾಡಬೇಕೆಂದು ರಾಜಾಜಿ ಆಹ್ವಾನ ಕೊಟ್ಟಿದ್ದಾರೆ. ಪ್ರಾಯಶಃ ರಾಜಾಜಿಯ ಈ ಸಲಹೆಯೇ ಪ್ರಕಾಶಮರಿಂದ ಅನುಮೋದಿಸಲ್ಪಡುವುದು; ಮತ್ತು ಆಂಧ್ರಕ್ಕೆ ಇದರಿಂದ ಕಲ್ಯಾಣವುಂಟಾಗುವುದು. ಶ್ರೀ ಸಂಜೀವ ರೆಡ್ಡಿ ಹಾಗೂ ಪ್ರಕಾಶಮರು ಉಭಯರು ಸಮ್ಮತವಾದ ರೀತಿಯಲ್ಲಿ ಈ ಬಿಕ್ಕಟ್ಟನ್ನು ಬಗೆಹರಿಸಿ ರಾಷ್ಟ್ರಾಧ್ಯಕ್ಷರ ಆಡಳಿತೆಯ ಪ್ರಸಂಗವನ್ನು ಹೇಗಾದರೂ ಮಾಡಿ ತಪ್ಪಿಸುವುದವಶ್ಯವೆಂದು ಆಸೆಯುಳ್ಳ ಎಲ್ಲರ ಒಕ್ಕೊರಲಿನ ಅಭಿಪ್ರಾಯವಿರುತ್ತದೆ. ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಪರಿಷತ್ತಿಗೆ ಪ್ರಕಾಶಮರ ಈಗಿನ ನಡವಳಿಕೆ ನೀತಿಯುಕ್ತವಾಗಿ ಕಂಡು ಬರದಿರುವುದು ಸಾಧ್ಯವಾದರೂ- ತಮ್ಮ ಯೋಗಕ್ಷೇಮದ ಚಿಂತೆಯೇ ಹೆಚ್ಚಿರುವ ಆಂಧ್ರರು ಈ ವೃದ್ಧ ಪಿತಾಮಹನನ್ನು ಅಕ್ಕರೆಯಿಂದ ಬರಮಾಡಿಕೊಳ್ಳುವರೆಂಬಲ್ಲಿ ಪ್ರತಿ ಮಾತಿಲ್ಲ. ಇಷ್ಟರಲ್ಲಿಯೇ ಈ ಕುರಿತು ಶುಭ ವಾರ್ತೆಯನ್ನು ನಾವೆಲ್ಲರೂ ಕೇಳುವ ನಿರೀಕ್ಷೆ ಇದೆ - ಸದ್ಯ ಬೇರೇನೂ ಹೇಳುವಂತಿಲ್ಲ.

In the court of the District Judge of South Kanara

A. S. no. 61/1953.

Mani Shedthi............Appellent.

Vs.

Sesa Shetty etc......Respondents.

To,

The 3rd Respondent Sundari Shedthi, daughter of Koosu Shedthi and risiding at Pejatha—bettu of Bola village, Karkala Tq.

Notice is hereby given that the above appeal stands posted for your appearance on 8—10—1953 at 11 A. M. in the above court. You may appear in person or pleader and oppose the appeal; failing which it will be decided in your absence.

[illegible]

(Sd) A. Shanker Alva
B. A. B. L.,
Vakil for Appellant

Mangalore dated 19—9—1953.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.

ವಿವರಗಳಿಗೆ ಬರೆಯಿರಿ:

MUBARAK & CO.
Watch & Clock
Specialists,
MADRAS 3.

ಮುಬಾರಕ್ ಎಂಡ್ ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶ್ಯಲಿಸ್ಟ್ಸ್
ಮದ್ರಾಸು 3.

ಲೋಕಸಭೆಯ ಕಳೆದ ಅಧಿವೇಶನ

ಅತ್ಯಲ್ಪ ಅವಧಿಯದಾಗಿದ್ದರೂ ಮಹತ್ವ ಅತ್ಯಧಿಕ

ಮಹತ್ವದ ಹೆಜ್ಜೆ

ಅತ್ಯಲ್ಪ ಅವಧಿಯದಾಗಿದ್ದರೂ ಅತ್ಯಂತ ಮಹತ್ವಪೂರ್ಣವಾದ ಲೋಕಸಭೆಯ ನಾಲ್ಕನೇ ಅಧಿವೇಶನವು ಕಳೆದ ಶುಕ್ರವಾರ ದಿನ ಅನಿರ್ದಿಷ್ಟ ಅವಧಿಯವರೆಗೆ ಮುಂದುವರಿದಿದೆ. ಆಗೋಸ್ತು ೩ನೇ ದಿನಾಂಕದಿಂದ ಸುಮಾರು ಆರು ವಾರಗಳವರೆಗೆ ಈ ಅಧಿವೇಶನ ಸೇರಿದ್ದರೂ ಸರಕಾರಕ್ಕೆ ಅಗತ್ಯವ ಎಲ್ಲ ವಿಧೇಯಕಗಳನ್ನು ಮಂಡಿಸುವುದಾಗಲಿಲ್ಲ. ಸುಮಾರು ೨೭ ಮಸೂದೆಗಳು ಸರಕಾರದ ಕೈಯಲ್ಲಿವೆ — ಈ ಶಾಸನಿಕ ಕಾರ್ಯವನ್ನು ಪೂರೈಸುವುದು ಲೋಕಸಭೆಯ ಕೈಯೊಳಗಿನ ಮಾತಾಗಲಿಲ್ಲ. ಆದರೂ ಎರಡು ಅತ್ಯಂತ ಮಹತ್ವದ ವಿಧೇಯಕಗಳನ್ನು ಈ ಅವಧಿಯಲ್ಲಿ ಲೋಕಸಭೆ ಅನುಮೋದಿಸಿದೆ — ಮತ್ತು ಭಾರತದ ಇತಿಹಾಸದಲ್ಲಿಯೇ ಚಿರಸ್ಥಾಯಿಯಾದ ನೆನಪನ್ನು ಈ ಅಧಿವೇಶನ ಮಾಡಿಕೊಡುವಂತಿದೆ. ಆಂಧ್ರರಾಜ್ಯ ನಿರ್ಮಾಣ ವಿಧೇಯಕಕ್ಕೆ ಲೋಕಸಭೆಯು ಒಪ್ಪಿಗೆಕೊಟ್ಟು — ಭಾರತವನ್ನು ಭಾಷಾನುಗುಣ ರಾಜ್ಯಗಳನ್ನಾಗಿ ಪುನರ್ಘಟಿಸುವ ಕ್ರಮದ ನಾಂದಿ ಪೂಜೆ ಮಾಡಿದೆ; ಹಾಗೆಯೇ ಆಸ್ತಿಕರ ವಿಧೇಯಕವನ್ನು ಬೆಂಬಲಿಸಿ, ಆರ್ಥಿಕ ಕ್ಷೇತ್ರದಲ್ಲಿ ಅಹಿಂಸಾತ್ಮಕ ಕ್ರಾಂತಿಯ ಅಡಿಗಲ್ಲನ್ನು ದೃಢವಾಗಿ ಭದ್ರವಾಗಿ ಹಾಕಿರುತ್ತದೆ. ಆಂಧ್ರ ರಾಜ್ಯ ನಿರ್ಮಾಣ ವಿಧೇಯಕವು ರಾಜ್ಯ ಪರಿಷತ್ತಿನಲ್ಲಿ ಸ್ವೀಕಾರಗೊಂಡು, ರಾಷ್ಟ್ರಾಧ್ಯಕ್ಷರ ಸಹಿಬಿದ್ದು, ಇಷ್ಟರಲ್ಲೇ ಕಾಯಿದೆಯಾಗಿರುತ್ತದೆ. ಆಸ್ತಿಕರ ವಿಧೇಯಕ ಈಗ ರಾಜ್ಯ ಪರಿಷತ್ತಿನ ಚರ್ಚೆಯಲ್ಲಿದೆ ಮತ್ತು ಈ ಸಂಚಿಕೆ ಹೊರ ಬರುವಷ್ಟರಲ್ಲಿಯೇ ರಾಜ್ಯ ಪರಿಷತ್ತು ಮುಂದೂಡಲ್ಪಡುವುದರಿಂದ, ಅಷ್ಟರೊಳಗಾಗಿ ರಾಜ್ಯಪರಿಷತ್ತಿನ ಒಪ್ಪಿಗೆ ದೊರಕೀತೆಂದು ನಿರೀಕ್ಷಿಸಿದ್ದೇವೆ.

ಕೂಲಂಕಷ ಪರಿಶೀಲನೆ

ಲೋಕಸಭೆಯ ಹಿಂದಿನ ಯಾವ ಅಧಿವೇಶನವೂ ಈ ಸಲದಷ್ಟು ಕಳೆ ತುಂಬಿರಲಿಲ್ಲ — ಸದಸ್ಯರು ಅತ್ಯಂತ ಮಹತ್ವದ ಎರಡು ವಿಷಯಗಳನ್ನು ಗಂಭೀರವಾಗಿ ಪರಿಶೀಲಿಸುವುದರಲ್ಲಿಯೇ ಮಗ್ನರಾಗಿದ್ದರು. ಆಂಧ್ರರಾಜ್ಯ ವಿಧೇಯಕದ ಚರ್ಚೆ ತುಂಬ ತೊಡಕಿನದಾಗಿದ್ದಿತು — ಬೇರೆ ಭಾಷಾವಾದಿಗಳ ಮನಸ್ಸನ್ನು ಕೆರಳಿಸುವ ಅಥವಾ ನೋಯಿಸುವ ಗಳಿಗೆಗಳೂ ಬಂದಿದ್ದವು. ಆದರೆ ಸರಕಾರದ ಧೋರಣವನ್ನು ಮೇಲಿಂದ ಮೇಲೆ ಗೃಹಮಂತ್ರಿಗಳು ಸ್ಪಷ್ಟಪಡಿಸುತ್ತಾ ಬಂದ ಪ್ರಕಾರ, ಭಾಷಾ ರಾಜ್ಯದ ಕುರಿತು ಹಾಗೂ ಭಾಷಾವಾದಿಗಳ ನಿಲುವಿನ ಕುರಿತು ಯಾವುದೇ ದ್ವಂದ್ವಾಭಿಪ್ರಾಯವುಂಟಾಗಲಿಲ್ಲ. ಮಾತ್ರವಲ್ಲ, ಭಾಷಾನುಗುಣವಾಗಿ ಭಾರತವನ್ನು ಪುನರ್ಘಟಿಸುವ ತತ್ವವನ್ನು ಪಾರ್ಲಿಮೆಂಟಿನ ಉಭಯ ಸಭೆಗಳೂ ಸರ್ವಾನುಮತದಿಂದೆಂಬಂತೆ ಪುರಸ್ಕರಿಸಿರುವುವು; ಮತ್ತು ಅಕ್ಟೋಬರ ೧ನೇ ದಿನಾಂಕ ಉದಯವಾಗುವ ಆಂಧ್ರ ರಾಜ್ಯಕ್ಕೆ ಶುಭಕೋರಿರುವುವು.

ಆಸ್ತಿಕರ ವಿಧೇಯಕದ ಸಂಗತಿ ಇನ್ನೂ ಜಟಿಲವಾಗಿದ್ದಿತು. ನಮ್ಮ ಜನಕ್ಕೆ ಈ ಕರದ ಕುರಿತು ವಿಶೇಷವಾದ ಮಾಹಿತಿ ಇರುವುದಿಲ್ಲ. ಅಲ್ಲದೆ ಅರ್ಥ ಸಚಿವರು ಕೈಗೊಂಡ ಕೆಲವು ಕ್ರಮಗಳು ಘಟನೆಯ ಆದೇಶಕ್ಕೆ ಅನುಗುಣವಾಗಿಲ್ಲವೊ ಎಂಬಂತೆ ಭಾಸವಾಗುತ್ತಿದ್ದವು. ಈ ಲೋಪದೋಷಗಳ ನೆರಳಿನಲ್ಲಿಯೂ ವಿಧೇಯಕದ ಕೂಲಂಕಷ ಪರಿಶೀಲನೆಯು ನಡೆಯಿತು. ಜಿಗುಟಾದ ಕಾಯಿದೆಯ ಕಲಮುಗಳನ್ನು ಸದಸ್ಯರು ಹಿಂಜಿ ಹಿಂಜಿ ಪರಿಶೀಲಿಸಿದರು. ಅರ್ಥಸಚಿವರು ಪ್ರಾರಂಭದಿಂದ ಕೊನೆಯ ವರೆಗೂ ತಮ್ಮ ನಿಲುವಿಗೆ ದೃಢವಾಗಿ ಅಂಟಿಕೊಂಡಿದ್ದರು. ಆಸ್ತಿಕರ ವಿಧೇಯಕದ ಎರಡು ಮುಖ್ಯ ಉದ್ದೇಶಗಳನ್ನು ಅವರು ಪದೇ ಪದೇ ಒತ್ತಿ ಹೇಳಿದರು — ಸಾಮಾಜಿಕ ಅಸಮತೆಯನ್ನು ನೀಗಿಸುವುದಕ್ಕೆ ಇದು ಪ್ರಾರಂಭಿಕ ಹೆಜ್ಜೆಯೆಂಬುದು ಮೊದಲನೇ ಅಂಶ, ನಮ್ಮ ಅಭಿವೃದ್ಧಿಯೋಜನೆಗಳಿಗೆ ಹಣ ಪೂರೈಸಲ್ಪಡಲು ಅನುಕೂಲವಾದ ಕ್ರಮವಿದೆಂಬುದು ಎರಡನೇ ಅಂಶ. ರಾಜ್ಯಪರಿಷತ್ತಿನಲ್ಲಿ ಶ್ರೀ ದೇಶಮುಖರು ಮಾತನಾಡುತ್ತಾ ಈ ಕರದಿಂದ ವರ್ಷಕ್ಕೆ ೧೪ ೧೫ ಕೋಟಿ ರೂಪಾಯಿಗಳು ದೊರೆತಾವೆಂದು ಆಶಿಸಿರುವರು. ಈ ಕರವನ್ನು ಹೇರುವಾಗ ಜನತೆಯ ತೊಂದರೆ ಕಿರುಕುಳಗಳು ಹೆಚ್ಚಾಗದಂತೆ ದಕ್ಷತೆವಹಿಸುವ ಆಶ್ವಾಸನವನ್ನೂ ಮಾನ್ಯ ಮಂತ್ರಿಗಳು ಕೊಟ್ಟಿರುವರು. ಹಿಂದೂ ಅವಿಭಕ್ತ ಕುಟುಂಬಗಳನ್ನು ಹೊರತು ಬೇರೆಯವರ ಸಂಗತಿಯಲ್ಲಿ ಕರಮುಕ್ತ ಆಸ್ತಿ ಪ್ರಮಾಣವನ್ನು ೭೫೦೦೦ ರುಪಾಯಿಯಿಂದ ಒಂದು ಲಕ್ಷಕ್ಕೆ ಏರಿಸಿರುವರು. ಹೀಗೆಯೇ ಜೀವವಿಮೆ, ಹೆಣ್ಮಕ್ಕಳ ವಿವಾಹಕ್ಕೋಸ್ಕರ ನಿಧಿಯ ವ್ಯವಸ್ಥೆ, ಸಾರ್ವಜನಿಕ ಪ್ರಯೋಜನಕ್ಕೋಸ್ಕರ ದಾನ ಮುಂತಾದವುಗಳಲ್ಲಿ ಜನತೆಯ ಹಿತದ ಕಡೆ ಅರ್ಥಸಚಿವರು ಒಲಿದಿರುವರು. ಹಾಗೆಂದು ಕರಪ್ರಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆ ಮಾಡಲು ಒಡಂಬಡಲಿಲ್ಲ. ಈ ಮಟ್ಟಿಗೆ ಪಾಶ್ಚಾತ್ಯ ದೇಶಗಳ ಮಾದರಿಯನ್ನು ಅವರು ಇಟ್ಟುಕೊಂಡರೇ ಹೊರತು — ಭಾರತದ ಪರಿಸ್ಥಿತಿ ಅವುಗಳಿಗಿಂತ ಭಿನ್ನವಾಗಿದೆಯೆಂಬ ಅಂಶವನ್ನು ಅವರು ಮೆಚ್ಚಲಿಲ್ಲ.

ನೂತನ ವೈಶಿಷ್ಟ್ಯ

ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಈ ಅಧಿವೇಶನದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಹಾಗೂ ಮಹತ್ವ ಕಂಡ ಬೇರೆ ಕೆಲವು ವಿಷಯಗಳ ಕುರಿತು ಅರ್ಧ ತಾಸು ಅಥವಾ ಒಂದು ತಾಸು ಅವಧಿಯ ಚರ್ಚೆ ನಡೆಯಲು ಪದೇ ಪದೇ ಅವಕಾಶಮಾಡಿ ಕೊಟ್ಟದ್ದು ಈ ಅಧಿವೇಶನದ ವೈಶಿಷ್ಟ್ಯ. ಅಧಿವೇಶನವು ಡಾ. ಶ್ಯಾಮಪ್ರಸಾದ ಮುಖರ್ಜಿಯವರ ನಿಧನದ ಕುರಿತು ಸಂತಾಪ ಸೂಚನೆಯೊಂದಿಗೆ ಪ್ರಾರಂಭವಾಯಿತು; ಮತ್ತು ಅವರ ನಿಧನದ ಕುರಿತು ವಿಚಾರಣೆ ನಡೆಯಬೇಕೆಂಬ ಬೇಡಿಕೆಯ ಚರ್ಚೆಯೊಂದಿಗೆ ಕೊನೆಗೊಂಡಿತು. ಶ್ರೀ ಎನ್. ಸಿ. ಚಟರ್ಜಿಯವರು ಶುಕ್ರವಾರ ದಿನ ಈ ಕುರಿತು ಮಂಡಿಸಿದ ಗೊತ್ತುವಳಿಯನ್ನು ಸ್ವೀಕರಿಸಲು ಗೃಹಸಚಿವ ಡಾ. ಕಟಜೂ ನಿರಾಕರಿಸಿದರು. ಮುಕರ್ಜಿಯವರ ಮರಣದ ಸಂಗತಿಯಲ್ಲಿ ಭಾರತ ಸರಕಾರವು ಕಾಶ್ಮೀರದೊಂದಿಗೆ ಕಾರಸ್ಥಾನ ನಡೆಸಿದೆ ಎಂಬ ಆರೋಪವನ್ನು ಅವರು ನಿರಾಕರಿಸಿದರು. ಕುತ್ಸಿತವಾದ ಈ ಟೀಕೆಗೆ ಆಸ್ಪದವೇ ಇಲ್ಲೆಂಬುದನ್ನು ಅವರು ಸುದೀರ್ಘವಾದ ಹೇಳಿಕೆಯಿಂದ ವಿವರಿಸಿದರು. ಇದಕ್ಕೆ ಮುಂಚೆ ಪ್ರಧಾನಿ ನೆಹರೂರವರು ಭಾರತ ಸರಕಾರದ ವಿದೇಶ ಧೋರಣವನ್ನು ವಿಶದೀಕರಿಸಿ ಮಾತನಾಡಿ, ಚರ್ಚೆಗೆ ಅವಕಾಶ ನೀಡಿದರು. ಭಾರತದ ಅಂತರಿಕ ರಾಜಕೀಯ ಚಟುವಟಿಕೆಗಳನ್ನು ಅಷ್ಟೊಂದು ಗೌರವದಿಂದ ನೋಡದ, ಮತ್ತು ಕಾಂಗ್ರೆಸ್ಸು ಸರಕಾರದ ಕ್ರಮಗಳನ್ನು ಆದರಿಸದ ವಿರೋಧೀ ಗುಂಪಿನ ವರ್ಚಸ್ವಿ ಧುರೀಣರು ವಿದೇಶಾಂಗ ನೀತಿಯ ಮಟ್ಟಿಗೆ ತುಂಬ ಸಮಾಧಾನವನ್ನು ವ್ಯಕ್ತಪಡಿಸಿ, ನೆಹರೂರ ಮುತ್ಸದ್ದಿತನವನ್ನು ಬೆಂಬಲಿಸಿದರು. ಭಾರತವು ರಾಷ್ಟ್ರಕೂಟದ ಸದಸ್ಯತ್ವವನ್ನು ಹೊಂದಿರುವುದರ ಹಾಗೂ ಅಮೇರಿಕದ ಬಂಡವಾಳವನ್ನು ಆಶ್ರಯಿಸಿರುವುದರ ಔಚಿತ್ಯವನ್ನು ಪ್ರೊ. ಹಿರೇನ್ ಮುಕರ್ಜಿಯಂಥ ಕಮ್ಯುನಿಸ್ಟ ಧುರೀಣರು ಪ್ರಶ್ನಿಸಿದರೂ--ಶಾಂತಿಯನ್ನು ನೆಲೆಗೊಳಿಸಲು ಭಾರತ ಕೈಗೊಂಡ ಪ್ರಯತ್ನಗಳನ್ನು ಹೊಗಳಿದರು. ಆಚಾರ್ಯ ಕೃಪಲಾನಿಯವರೂ ಭಾರತದ ವಿದೇಶ ನೀತಿಗೆ ಅನುಮೋದನೆ ನೀಡಿದರು.

ಪೆಪ್ಸೂದ ಪರಿಸ್ಥಿತಿ

ಪೆಪ್ಸೂದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಇನ್ನೂ ಆರು ತಿಂಗಳ ವರೆಗೆ, ಅಂದರೆ ೧೯೫೪ನೇ ಮಾರ್ಚ ಅಖೈರಿ ತನಕ ಮುಂದುವರಿಸಲು ಉದ್ದೇಶಿಸಿ ಡಾ. ಕಟಜೂ ತಂದ ಸೂಚನೆಯನ್ನು ಪಾರ್ಲಿಮೆಂಟಿನ ಎರಡೂ ಸಭೆಗಳು ಅನುಮೋದಿಸಿವೆ. ಆದರೆ, ಪ್ರಜಾಪ್ರಭುತ್ವದ ಪದ್ಧತಿ ಜ್ಯಾರಿಯಲ್ಲಿರುತ್ತಾ, ರಾಷ್ಟ್ರಾಧ್ಯಕ್ಷರ ನೇರವಾದ ಆಡಳಿತ ಕಾಲವನ್ನು ಹೀಗೆ ಬೆಳೆಸುತ್ತಿರುವುದು ಸಲ್ಲಕ್ಷಣವಲ್ಲವೆಂಬುದನ್ನು ಅನೇಕ ಸದಸ್ಯರು ಒತ್ತಿ ಹೇಳಿದರು. ಗೃಹ ಸಚಿವರು ಇವರೆಲ್ಲರಿಗೂ ಯೋಗ್ಯ ವಿವರಣೆಯನ್ನು ಕೊಡಬೇಕಾಯಿತು. ಪೆಪ್ಸೂ ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳಿಕೆಯು ಜನತೆಗೆ ಭಾರವಾಗಿರದೆ ಸುಖಕರವಾಗಿ ಪರಿಣಮಿಸಿದೆ. ರಾಜ್ಯ ಸರಕಾರದ ಅವ್ಯವಸ್ಥೆಯ ಪರಿಣಾಮದಿಂದ ತೊಂದರೆ ತಾಪತ್ರಯಗಳು ಹೆಚ್ಚಿಕೊಂಡವು--ಶಾಂತಿಯೂ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 38/1953

ಉಮ್ಮಕ್ಕ ಪೂಜಾರ್ತಿ, ಸ್ವಂದ ಕೂಡಾರಿ ಹೆಂಡತಿ, ಉಡುಪಿ ತಾಲ್ಲೂಕ ಕಟ್ಟಂಗೇರಿ ಗ್ರಾಮದ ಕೆರೆಕಟ್ಟೆ. —ಅರ್ಜಿದಾರಳು.

ಮತ್ತು

ಸಿಂಧು ಬ್ಯಾ, ಶೀನ ಕೋಟ್ಯಾನ್‌ನ ವಿಧವೆ. ಉಡುಪಿ ತಾಲ್ಲೂಕ ಶಿರ್ವ ಗ್ರಾಮದ ಮಟ್ಟಾರು ದೇವಗುಡ್ಡೆ ಮನೆ —ಎದ್ರಿಳು.

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ:-

ಅರ್ಜಿದಾರಳ ಮಗ ವ ಎದ್ರಿಳ ಗಂಡ ತಾ. 7—2—49ರಲ್ಲು ಮೃತಪಟ್ಟ ಶೀನ ಕೋಟ್ಯಾನ್‌ಗೆ "The Western India Automobile Association, Post Box No. 211, Fort, Bombay" ಇದರಿಂದ ಪ್ರೊವಿಡೆಂಟ್ ಫಂಡ್ ಬಾಬ್ತು ಬರತಕ್ಕ ಸಾಲ ರೂಪಾಯಿ 210 0-0ನ್ನು ವಸೂಲು ಪಡೆಯುವರೆ ಅರ್ಜಿದಾರಳೇ ಹಕ್ಕುದಾರಳೆಂತಲೂ ಆ ಬಗ್ಗೆ ಅವಳ ಹೆಸರಿಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಕೇಳಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ. 10-10-53ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲಿಕ್ಕುಳ್ಳವರು ಸದ್ರಿ ತಾ. 10-10-53ನೇ ದಿವಸ ಬೆಳಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. V. Acharya,
Vakil for Petitioner

ಉಡುಪಿ ತಾ, 18—9—53

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಬಾಳಿ ಬದುಕಬೇಕಾದರೆ ನಾವು, ನಮ್ಮ ಮಕ್ಕಳು ಮಿತ ವ್ಯಯದ ಅಭ್ಯಾಸ ಮಾಡಲೇ ಬೇಕು. ಕುಟುಂಬದ ಪ್ರತಿಯೊರ್ವನ ಹೆಸರಿನಲ್ಲಿಯೂ ಒಂದೊಂದು ಕ್ಯುಮಿಲೇಟಿವ್ ಠೇವಣಾತಿ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ತನ್ಮೂಲಕ ಸಾಧ್ಯವಿದ್ದಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

WANTED Assistant Development Officers at the following places (one in each region.)

1. Mangalore Town, 2. Mangalore Taluk, 3. Udipi Town, 4. Udipi Taluk, 5. Kasaragode, 6. Puttur, 7. Karkala, 8. Kundapur.

(Women also eligible) Salary Rs. 125/- plus Rs.45/-,Cycle allowance.

Apply sharp to:

M. C. SHETTY,
Development Officer,
Indian Dominion Airways Ltd.,
22, Modern Hotel, Mangalore.

ಆಂಧ್ರದಲ್ಲಿ ಸ್ಥಿರ ಸರಕಾರ ಸ್ಥಾಪಿಸುವ ಯತ್ನ

ಕಾಂಗ್ರೆಸ್ಸಿನ ಸಹಕಾರದಿಂದ ಪ್ರಕಾಶಮರೇ ಮುಖ್ಯಮಂತ್ರಿಯಾಗುವರೆಂದು ಎಲ್ಲರ ನಿರೀಕ್ಷೆ

ದೂರಾಯಿತು. ಈಗ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದಿದ್ದು, ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ. ಪೆಪ್ಸುದ ಜನತೆ ಪ್ರಜಾಪ್ರಭುತ್ವ ಮಾದರಿಯ ಸರಕಾರಕ್ಕಿಂತ ರಾಷ್ಟ್ರಾಧ್ಯಕ್ಷರ ಆಡಳಿತವೇ ಲೇಸೆಂದು ಹೇಳುತ್ತಿದೆ. ಹಾಗೆ ನೋಡಿದರೆ, ರಾಷ್ಟ್ರಾಧ್ಯಕ್ಷರ ಆಡಳಿತಕ್ಕೂ ನಿರಂಕುಶಾಧಿಕಾರಕ್ಕೂ ಹೋಲಿಕೆಯೇ ಇಲ್ಲ. ಪೆಪ್ಸುದಲ್ಲಿ ರಾಜ್ಯ ಶಾಸನ ಸಭೆಯ ಅಧಿಕಾರವಿರುವ ಬದಲು ಕೇಂದ್ರ ಸಂಸತ್ತು ಆ ಜವಾಬ್ದಾರಿಯನ್ನು ಹೊತ್ತಿದೆ. ಹೊಸ ಚುನಾವಣೆ ಎಂದು ನಡೆಯಬಹುದೆಂದು ನಿಶ್ಚಿತವಾಗಿ ಹೇಳಲು ಬರದಿದ್ದರೂ ಮುಂದಿನ ಮಾರ್ಚಿಯೊಳಗೆ ಅದು ಮುಗಿದೀತು. ಪರಿಶೀಲನಾ ಸಮಿತಿಯ ವರದಿಯಲ್ಲಿದಿರುತಿದ್ದರೆ, ಕಳೆದ ಜೂನು ತಿಂಗಳಲ್ಲಿಯೇ ಚುನಾವಣೆಗಳನ್ನು ನಡೆಸಬಹುದಿತ್ತು ಎಂದು ಮುಂತಾಗಿ ಕಟಜೂ ಸಂಗತಿಗಳನ್ನು ಒಪ್ಪಿಸಿದುದರಿಂದ— ಸಂದೇಹಗಳು ದೂರಾದವು.

ಅರ್ಥಪೂರ್ಣ ರಾಜಕಾರಣ

ಮುಂದಿನ ಗುರುವಾರ ದಿನ ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂದು ತೆಲುಗರ ಬಹುದಿನಗಳ ಆಕಾಂಕ್ಷೆಯು ಪೂರ್ಣಗೊಳ್ಳುತ್ತದೆ. ಈ ಸಂಭ್ರಮದಲ್ಲಿ ಭಾರತದ ಮೂಲೆ ಮೂಲೆಯಿಂದಲೂ ಶುಭಾಶಯಗಳು ಆಂಧ್ರರ ಬಳಿಗೆ ಒದಗುವದೆಂಬುದರಲ್ಲಿ ಸಂಶಯವಿಲ್ಲ. ಆದರೆ ಆಂಧ್ರರು ಈ ಮಂಗಲ ಸಮಯದಲ್ಲಿಯೂ ಸಂತೋಷಚಿತ್ತರಾಗಿರುವಂತೆ ಕಾಣುವುದಿಲ್ಲ. ಇದಕ್ಕೆ ಮುಖ್ಯವಾದ ಕಾರಣಗಳೂ ಇವೆ- ಪ್ರಥಮವಾಗಿ ಆಂಧ್ರದಲ್ಲಿ ಪ್ರಜಾಪ್ರಭುತ್ವ ಪದ್ಧತಿಗೆ ತಕ್ಕುದಾದ, ಭದ್ರ ಹಾಗೂ ಸ್ಥಿರವಾದ ಸರಕಾರದ ರಚನೆಯ ಪ್ರಶ್ನೆಯಲ್ಲಿ ಇನ್ನೂ ಐಕ್ಯಮತ್ಯವುಂಟಾಗಿರುವುದಿಲ್ಲ. ಪ್ರಮುಖ ಧುರೀಣರು ಈ ವಿಷಯದಲ್ಲಿ ಗಂಭೀರವಾಗಿ ಪರ್ಯಾಲೋಚಿಸುತ್ತಿದ್ದರೂ ಫಲಿತಾಂಶವು ಇನ್ನೂ ವರೆಗೆ ತಿಳಿದುಬಂದಿಲ್ಲ. ಭಾಷಾನುಗುಣ ಪ್ರಾಂತ್ಯವನ್ನು ಏರ್ಪಡಿಸುವುದಕ್ಕೆ ಕೇಂದ್ರ ಸರಕಾರವು ಹಿಂದು ಮುಂದು ನೋಡುತ್ತಿದ್ದ ಕಾಲದಲ್ಲಿ ಆಂಧ್ರರು ತಮ್ಮ ವರ್ಚಸ್ಸನ್ನು ಉಪಯೋಗಿಸಿ ಬೇಡಿಕೆಗೆ ಮನ್ನಣೆಯನ್ನು ಪಡೆಯಲು ಸಮರ್ಥರಾದರು. ಅವರ ಈ ಸಾಹಸದ ಪರಿಣಾಮವೇ ಇತರ ಭಾಷಾವಾದಿಗಳ ಪಾಲಿಗೆ ಸ್ಫೂರ್ತಿಯ ನೆಲೆಯಾಗಬೇಕು. ಇಂಥದರಲ್ಲಿ ಸರಕಾರ ರಚಿಸುವ ಪ್ರಶ್ನೆಯು ಇನ್ನೂ ಇತ್ಯರ್ಥಕ್ಕೆ ಬಾರದೆ ರಾಷ್ಟ್ರಾಧ್ಯಕ್ಷರ ಆಡಳಿತವೇ ಪ್ರಥಮದ ಕೆಲವು ದಿನಗಳ ವರೆಗಾದರೂ ನಡೆಯುವ ಅಪ್ರಿಯ ಸಂಭವ ತೋರುವುದು ಸಲ್ಲಕ್ಷಣವಲ್ಲ. ಇದರ ಜೊತೆಗೆ ಆಕಸ್ಮಿಕವೆಂದೇ ತಿಳಿದರೂ ಅಪೇಕ್ಷಣೀಯವಲ್ಲದ ರೀತಿಯಲ್ಲಿ ಗೋದಾವರೀ ನದಿಗೆ ಮಹಾಪೂರ ಬಂದು, ಆಂಧ್ರರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಮೇಲೆ ಪ್ರಬಲ ಆಘಾತವನ್ನುಂಟು ಮಾಡಿರುತ್ತದೆ. ಇವುಗಳು ಶುಭ ಸೂಚಕವಲ್ಲವೆಂದು ಹೇಳುತ್ತಾ, ಸ್ವಾಮಿ ಸೀತಾರಾಮರು ಏಳು ದಿನಗಳ ತಪಸ್ಸನ್ನು ಕೈಗೊಂಡುದು ಅರ್ಥಪೂರ್ಣವಾಗಿರುತ್ತದೆ. ಸ್ವಾಮಿಜಿಯ ಈ ಆಚರಣೆ ಸಂಕೇತರೂಪದಲ್ಲಿರುತ್ತದೆಂಬುದನ್ನು ಈ ಪ್ರಸಂಗದಲ್ಲಿ ಅವಶ್ಯ ನೆನೆದುಕೊಳ್ಳಬೇಕು.

ಕಾಂಗ್ರೆಸಿನ ಇಚ್ಛೆ

ಆಂಧ್ರ ರಾಜ್ಯ ನಿರ್ಮಾಣಕ್ಕೋಸ್ಕರ ಅತುಲ ಸಾಹಸ ತೋರಿ ಹೋರಾಡಿದ ಆಂಧ್ರ ನಾಯಕರು ಇಂದು ಭದ್ರವಾದ ಸರಕಾರ ರಚಿಸಲು ಅಸಮರ್ಥರಂತೆ ತೊಳಲಾಡುತ್ತಿರುವುದು ಚಂದ ಕಾಣುತ್ತದೆಯೇ? ನೆರೆಯ ಪೀಡೆ ಆಕಸ್ಮಿಕವೆಂದಿಟ್ಟುಕೊಂಡರೂ ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೇಂದ್ರ ಸರಕಾರವು ಕೈಗೆತ್ತಿಕೊಂಡ ಕ್ಷಣದಿಂದ ಆಂಧ್ರಕ್ಕೊಂದು ಭದ್ರವಾದ ಸರಕಾರ ಬೇಕೆಂಬುದನ್ನು ಎಲ್ಲ ಪಕ್ಷ ಸಂಗಡಗಳೂ ತಮ್ಮಲ್ಲಿಯೇ ವಿಚಾರಿಸಿ, ಪ್ರಯತ್ನಿಸಿ, ನಿರ್ಣಯಿಸಿಕೊಳ್ಳಬೇಕಾಗಿದ್ದಿತು. ತೀರ ಸ್ಪಷ್ಟವಾಗಿದ್ದ, ಮತ್ತು ಹಳೆಯದೆಂದೇ ಹೇಳಬಹುದಾದ ಈ ವಿಷಯ ಹತ್ತು ದಿನಗಳ ಅತ್ಯಲ್ಪ ಅವಧಿ ಉಳಿದಿರುವಾಗಲೂ ಕೊನೆಯ ಹಂತವನ್ನು ಮುಟ್ಟಲಿಲ್ಲವೆಂದರೆ, ಶೋಚನೀಯವೇ ಸರಿ. ಇದರ ಒಳಗುಟ್ಟೇನೆಂಬುದನ್ನು ಎಲ್ಲರೂ ಬಲ್ಲರು - ಕಾಂಗ್ರೆಸು ಆತ್ಮಾಭಿಮಾನದಿಂದ ಹಾಗೂ ಸ್ವಪ್ರತಿಷ್ಠೆಯಿಂದ ಕಾಂಗ್ರೆಸಿಗನಲ್ಲದ ಪರಪಕ್ಷೀಯನನ್ನು ಮುಖ್ಯ ಮಂತ್ರಿಯಾಗಿ ಸ್ವೀಕರಿಸಿ, ಮಂತ್ರಿಮಂಡಳ ರಚಿಸಲು ಒಪ್ಪದಿರುವುದು, ಅದೇ ಕಾಲಕ್ಕೆ ಪ್ರಕಾಶಮರು ತಾವು ನಾಯಕರಾಗಿರುವ ಪ್ರಜಾ ಸೋಶಲಿಸ್ಟ ಪಕ್ಷದ ನಿಯಮ ನಿಬಂಧನೆಗಳಿಂದ ತನ್ನನ್ನು ಮುಕ್ತಮಾಡಬೇಕೆಂದು ಪ್ರಾರ್ಥಿಸಿರುವುದು— ಆಂಧ್ರರಲ್ಲಿ ಅಧಿಕಾರ ದಾಹದಿಂದ ನಡೆಯುವ ಚಟುವಟಿಕೆಗಳ ದಿಗ್ದರ್ಶನಮಾಡುವಂತಿವೆ. ಕಾಂಗ್ರೆಸಿನ ನಿಲುವೇನೆಂಬುದನ್ನು ಕಾಂಗ್ರೆಸ ಕಾರ್ಯಕಾರೀ ಸಮಿತಿಯು ಮೊನ್ನೆ ತಾನೆ ಹೊಸ ದೆಹಲಿಯಲ್ಲಿ ಸಭೆ ಸೇರಿದಾಗ ವ್ಯಕ್ತಗೊಳಿಸಿದೆ—ಪ್ರಕಾಶಮ್‌ರನ್ನು ಮುಖ್ಯ ಮಂತ್ರಿಯಾಗಿ ಸ್ವೀಕರಿಸಲು ಕಾಂಗ್ರೆಸಿಗೆ ಆಕ್ಷೇಪವಿಲ್ಲ. ಅವರು ತಮ್ಮ ಸಂಸ್ಥೆಗೆ ಸೇರಬೇಕೆಂದೂ ಕಾಂಗ್ರೆಸು ಬಯಸುವುದಿಲ್ಲ. ಆದರೆ ಪ್ರಜಾ ಸಮಾಜವಾದಿ ಪಕ್ಷದ ಬಂಧನವನ್ನು ಮಾತ್ರ ಕಡಿದುಕೊಂಡು, ಅವರು ಸ್ವತಂತ್ರರಾಗಬೇಕಾಗುವುದು. ಅರ್ಥಾತ್ ಪ್ರಜಾ ಸಮಾಜವಾದಿ ಪಕ್ಷದ ಮೇಲಿನ ತನ್ನ ಅಧಿಕಾರಯುತ ವರ್ಚಸ್ಸನ್ನು ಅವರು ತ್ಯಜಿಸಲು ಸಿದ್ಧರಾಗಬೇಕು.

ಪ್ರಕಾಶಮರ ಒಲವು

ಪ್ರಕಾಶಮರು ಇದಕ್ಕೂ ತಯಾರಿದ್ದಾರೆಂದೂ ಆಂಧ್ರದ ಪ್ರಜಾ ಸಮಾಜವಾದಿ ಪಕ್ಷವೂ ಇದಕ್ಕೆ ಸಮ್ಮತಿಸುವುದೆಂದೂ ಬಂದ ವಾರ್ತೆ— ಪ್ರಕಾಶಮರ ರಾಜಕೀಯ ಅಂತರ್ಭಾಗದ ಕುರಿತು ನೀತಿವಂತರಲ್ಲಿ ಜುಗುಪ್ಸೆಯನ್ನು ಹುಟ್ಟಿಸುವಂತಿದ್ದರೂ—ಪ್ರಕೃತ ಆಂಧ್ರದಲ್ಲಿರುವ ವಿಶಿಷ್ಟ ಪರಿಸ್ಥಿತಿಯ ದೃಷ್ಟಿಯಿಂದ ಸ್ವಾಗತಾರ್ಹವಿದ್ದಿತು. ಆದರೆ ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಹೊಸದೆಹಲಿಯಲ್ಲಿ ಸಭೆಸೇರಿದಾಗ ಪ್ರಕಾಶಮರನ್ನು ಈ ರೀತಿ ಬಿಡುಗಡೆ ಮಾಡಲು ನಿರಾಕರಿಸಿತು. "ಪಕ್ಷದ ನಿಯಮ ನಿಬಂಧಗಳಿಂದ ಮುಕ್ತಿಯನ್ನುವ ಪ್ರಶ್ನೆಯೇ ಇಲ್ಲ" ಎಂಬುದಾಗಿ ಆಚಾರ್ಯ ಕೃಪಲಾನಿಯವರು ಖಂಡತುಂಡವಾಗಿ ಹೇಳಿದುದರಿಂದ, ಆಂಧ್ರದಲ್ಲಿ ವಿವಂಚನೆಯುಂಟಾಯಿತು. ಪ್ರಕಾಶಮರ ಈಚಿನ ಹೇಳಿಕೆಗಳೂ ನಡವಳಿಕೆಯೂ ಅವರು ಮುಖ್ಯ ಮಂತ್ರಿತ್ವವನ್ನು ಬಹುವಾಗಿ ಅಪೇಕ್ಷಿಸುವರೆಂದೂ ಅದಕ್ಕೋಸ್ಕರ ಪ್ರಜಾ ಸಮಾಜವಾದೀ ಪಕ್ಷದ ಚೌಕಟ್ಟಿನ ಹೊರಗಿಳಿಯಲೂ ಸಿದ್ಧರೆಂದೂ ವ್ಯಕ್ತಗೊಳಿಸುತ್ತವೆ. ಪ್ರಜಾ ಸಮಾಜವಾದೀ ಪಕ್ಷದ ಪರಿಷ್ಟದ ಮನವೊಲಿಸುವುದು ಅನಗತ್ಯವೆಂದು ಇವರು ಹೇಳಿರುವುದು ಈ ಅನುಮಾನವನ್ನು ದೃಢೀಕರಿಸುತ್ತದೆ. ಹಾಗೆಯೇ ಇನ್ನೊಂದು ಸಂಗತಿಯೂ ಸ್ಪಷ್ಟಗೊಂಡಿದೆ- ಕಮ್ಯೂನಿಸ್ಟರು ಪ್ರಜಾ ಸಮಾಜವಾದೀ ಹಾಗೂ ಕೃಷಿಕರ ಲೋಕ ಪಕ್ಷದ ಸಹಕಾರ ಪಡೆದು ಕಾಂಗ್ರೆಸಿಗೆ ವಿರೋಧವಾಗಿ ಮಂತ್ರಿ ಮಂಡಳ ರಚಿಸುವ ಪ್ರಯತ್ನಕ್ಕೆ ತೊಡಗಿ, ಪ್ರಕಾಶಮರ ನೆರವು ಕೇಳಿರುವರು. ಆದರೆ ಮದ್ರಾಸಿನಲ್ಲಿ ಕಮ್ಯೂನಿಸ್ಟರ ಸ್ನೇಹದಿಂದ ಪರಿಣಾಮದ ನೆನಪು ಇನ್ನೂ ಹಸಿರಾಗಿರುವ ಪ್ರಕಾಶಮರು ಈ ಸೂಚನೆಯನ್ನೆತ್ತಿಕೊಳ್ಳಲು ಸಿದ್ಧರಿಲ್ಲ. ಹೇಗಾದರೂ ಮಾಡಿ ಕಾಂಗ್ರೆಸಿನ ಸಹಕಾರದಿಂದ ತಾನು ಮುಖ್ಯ ಮಂತ್ರಿಯಾಗಬೇಕೆಂದೂ, ತನ್ನ ವ್ಯಕ್ತಿತ್ವದ ವರ್ಚಸ್ಸು ಆಂಧ್ರದಲ್ಲಿ ಸ್ಥಿರವಾದ ಸರಕಾರವನ್ನು ನೆಲೆಗೊಳಿಸೀತೆಂದೂ ಪ್ರಕಾಶಮರ ಯೋಚನೆ ಇದ್ದಂತಿದೆ.

ರಾಜಾಜಿಯ ಶಿಫಾರಸು

ಇದು ಯೋಗ್ಯವಾದುದೆಂದು—ಎಲ್ಲರೂ ತಿಳಿಯುತ್ತಾರೆ. ರಾಜಾಜಿಯವರು ಆಂಧ್ರ ರಾಜ್ಯದ ನಿಯೋಜಿತ ಗವರ್ನರರಾದ ಶ್ರೀ ತ್ರಿವೇದಿಯವರಿಗೆ ಏರ್ಪಡಿಸಿದ್ದ ಸತ್ಕಾರ ಕೂಟವೊಂದರಲ್ಲಿ ಮಾತನಾಡುತ್ತಾ ಪ್ರಕಾಶಮರನ್ನು ಬಿಟ್ಟರೆ, ಆಂಧ್ರ ಸರಕಾರದ ಧುರೀಣತ್ವಕ್ಕೆ ಯೋಗ್ಯರಾದ ಬೇರೆ ಜನರಿಲ್ಲವೆಂದು ಸಾರಿದ್ದಾರೆ. ಆಂಧ್ರದ ಈಗಿನ ಸ್ಥಿತಿಯಲ್ಲಿ ಭದ್ರ ಸರಕಾರದ ರಚನೆ ಅಸಾಧ್ಯವೆಂದಿರುವಾಗ—ಪಕ್ಷದ ನೀತಿಗಿಂತಲೂ ರಾಷ್ಟ್ರದ ಕ್ಷೇಮವೇ ಮಿಗಿಲಾದುದೆಂದು ತಿಳಿದು - ಪ್ರಕಾಶಮರು ಸಮ್ಮಿಶ್ರ ಸರಕಾರ ಕಟ್ಟಲು ಮನಸ್ಸು ಮಾಡಬೇಕೆಂದು ರಾಜಾಜಿ ಆಹ್ವಾನ ಕೊಟ್ಟಿದ್ದಾರೆ. ಪ್ರಾಯಶಃ ರಾಜಾಜಿಯ ಈ ಸಲಹೆಯೇ ಪ್ರಕಾಶಮರಿಂದ ಅನುಮೋದಿಸಲ್ಪಡುವುದು; ಮತ್ತು ಆಂಧ್ರಕ್ಕೆ ಇದರಿಂದ ಕಲ್ಯಾಣವುಂಟಾಗುವುದು. ಶ್ರೀ ಸಂಜೀವ ರೆಡ್ಡಿ ಹಾಗೂ ಪ್ರಕಾಶಮರು ಉಭಯ ಸಮ್ಮತವಾದ ರೀತಿಯಲ್ಲಿ ಈ ಬಿಕ್ಕಟ್ಟನ್ನು ಬಗೆಹರಿಸಿ ರಾಷ್ಟ್ರಾಧ್ಯಕ್ಷರ ಆಡಳಿತೆಯ ಪ್ರಮೇಯವನ್ನು ಹೇಗಾದರೂ ಮಾಡಿ ತಪ್ಪಿಸುವುದಕ್ಕವೆಂದು ಆಸೆಯುಳ್ಳ ಎಲ್ಲರ ಒಕ್ಕೊರಲಿನ ಅಭಿಪ್ರಾಯವಿರುತ್ತದೆ. ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಪರಿಷತ್ತಿಗೆ ಪ್ರಕಾಶಮರ ಈಗಿನ ನಡವಳಿಕೆ ನೀತಿಯುಕ್ತವಾಗಿ ಕಂಡು ಬರದಿರುವುದು ಸಾಧ್ಯ. ಹಾಗಾದರೂ- ತಮ್ಮ ಯೋಗಕ್ಷೇಮದ ಚಿಂತೆಯೇ ಹೆಚ್ಚಿರುವ ಆಂಧ್ರರು ಈ ವೃದ್ಧ ಪಿತಾಮಹನನ್ನು ಆಕ್ಕರೆಯಿಂದ ಬರಮಾಡಿಕೊಳ್ಳುವರೆಂಬಲ್ಲಿ ಪ್ರತಿ ಮಾತಿಲ್ಲ. ಇಷ್ಟರಲ್ಲಿಯೇ ಈ ಕುರಿತು ಶುಭ ವಾರ್ತೆಯನ್ನು ನಾವೆಲ್ಲರೂ ಕೇಳುವ ನಿರೀಕ್ಷೆ ಇದೆ - ಸದ್ಯ ಹೆಚ್ಚೇನೂ ಹೇಳುವಂತಿಲ್ಲ.

In the court of the District Judge of South Kanara

A. S. no. 61/1953.

Mani Shedthi............Appellent.

Vs.

Sesa Shetty etc.......Respondents.

To,

The 3rd Respondent Sundari Shedthi, daughter of Koosu Shedthi and residing at Pejatha—bettu of Bola village. Karkala Tq.

Notice is hereby given that the above appeal stands posted for your appearance on 8—10—1953 at 11 A. M. in the above court. You may appear in person or pleader and oppose the appeal; failing which it will be decided in your absence.

By order of the court

(Sd) A. Shanker Alva
B. A. B. L.
Vakil for Appellant

Mangalore dated 19—9—1953.



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟೈಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:

MUBARAK & CO.
Watch & Clock Specialists,
MADRAS 3.

ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶೆಲಿಸ್ಟ್ಸ,
ಮದ್ರಾಸು 3.

NAVAYUGA
Popular Kannada Weekly.
Founder.—
Sri A. B. SHETTY,
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು.- ಶ್ರೀ. ಎ. ಬಿ. ಶೆಟ್ಟಿ, ಮದ್ರಾಸಿನ ಆರೋಗ್ಯಮಂತ್ರಿ.
ವಾರ್ಷಿಕ ಚಂದಾ: ರೂ. 5-12-0 ಬಿಡಿಪ್ರತಿ: 0-2-0

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಠೇವಣಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯಾ ಇನ್ನಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.
ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.
THE CANARA BANKING CORPORATION LTD.,
Estd: 1906] [H. O: UDIPI (S. India)

ನವಯುಗ

ಉಡುಪಿ, ಗುರುವಾರ ೨೪-೯-'೫೩

ಹೊಸ ದೆಹಲಿಯ ಸಭೆ

ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿಣಿಯು ಹೊಸದೆಹಲಿಯಲ್ಲಿ ಪದ್ಧತಿಯಂತೆ ಸಭೆ ಸೇರಿದ್ದರೂ - ಆ ವಿಶಿಷ್ಟ ಗಳಿಗೆಯಲ್ಲಿ ಅದರ ಮುಂದೆ ಮಹತ್ವದ ವಿಷಯಗಳು ಚರ್ಚೆಗೆ ಇದ್ದವು. ಎಲ್ಲಕ್ಕಿಂತಲೂ ತುರ್ತಾದುದು ಮತ್ತು ಅಗತ್ಯವಾಗಿ ಪರಿಶೀಲಿಸಲ್ಪಡಬೇಕಾಗಿದ್ದ ಪ್ರಶ್ನೆ ಆಂಧ್ರದಲ್ಲಿ ಭದ್ರವಾದ ಸರಕಾರದ ಸ್ಥಾಪನೆ. ಈ ವಿಷಯದಲ್ಲಿ ನೆಹರೂರವರು ಪ್ರಕಾಶಮರೊಡನೆ ನಡೆದ ಮಾತುಕತೆಗಳ ವಿವರವನ್ನು ತಿಳಿಸಿದರೆಂದೂ ಪ್ರಕಾಶಮರ ಧುರೀಣತ್ವವನ್ನು-ಅವರು ಸ್ವತಂತ್ರವಾದರೆ-ಒಪ್ಪಲು ಕಾಂಗ್ರೆಸು ಸಿದ್ಧವೆಂದು ನಿರ್ಣಯಿಸಿದುದಾಗಿಯೂ ತಿಳಿಯುತ್ತದೆ. ಈ ವಿಷಯದಲ್ಲಿ ಆಂಧ್ರ ಧುರೀಣದ್ವಯರಾದ ಪ್ರಕಾಶಂ-ಸಂಜೀವ ರೆಡ್ಡಿಯವರೇ ಸಂಧಾನ ನಡೆಸಿ, ಕೊನೆಯ ನಿರ್ಣಯ ಕೈಗೊಳ್ಳಲೆಂದೂ ಕಾಂಗ್ರೆಸು ಕಾರ್ಯಕಾರಿಣಿ ಅಭಿಪ್ರಾಯ ಪಟ್ಟಿತು. ಇದು ಉಚಿತವಾದ ನಿರ್ಧಾರವೇ ಸೈ. ಇದಕ್ಕಿಂತ ವ್ಯಾಪಕವಾದ ಮತ್ತು ಭಾಷಾವಾದಿಗಳು ಕುತೂಹಲದಿಂದ ನೋಡುವ ಇನ್ನೊಂದು ಪ್ರಾಮುಖ್ಯ ವಿಷಯವನ್ನೂ ಕಾಂಗ್ರೆಸು ಕಾರ್ಯಕಾರಿಣಿ ಚರ್ಚಿಸಿತು. ಸರಕಾರವು ಪರಿಪ್ಯಾಧಿಕಾರ ಸಂಪನ್ನವಾದ ಆಯೋಗವನ್ನು ಸದ್ಯದಲ್ಲಿಯೇ-ಅಂದರೆ ಇನ್ನೆರಡು ತಿಂಗಳುಗಳೊಳಗಾಗಿಯೇ — ನೇಮಿಸಲಿರುವುದರಿಂದ ಹೊಸ ರಾಜ್ಯಗಳ ಸ್ಥಾಪನೆಗಾಗಿಯಾಗಲೀ ಗಡಿಗಳ ಪುನಃ ವ್ಯವಸ್ಥೆಯ ಕುರಿತ ಗಲೀಚಳುವಳಿಯನ್ನು ನಡೆಸುವುದು ಅನಿಷ್ಟಪ್ರದವೆಂದೂ ಅನಾವಶ್ಯಕವಾದುದೆಂದೂ ಕಾರ್ಯಕಾರಿಣಿಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ-ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಆಂಧ್ರರಾಜ್ಯ ನಿರ್ಮಾಣದ ಬೆನ್ನಿಗೆ ಕರ್ನಾಟಕದ ಪ್ರಶ್ನೆಯನ್ನು ಬಗೆಹರಿಸುವುದಾಗಿ ನಿಶ್ಚಿತ ಭರವಸೆಗೋಸ್ಕರ ಆಗ್ರಹ ತಾಳಿರುವುದನ್ನು ಕಾಂಗ್ರೆಸು ಕಡೆಗಣಿಸಿದೆಯೆಂದೇ ತಿಳಿಯಬೇಕಾಗುವುದು. ಕರ್ನಾಟಕದ ಕಾಂಗ್ರೆಸ್ ಎಂ. ಪಿ. ಗಳು ಮೊನ್ನೆ ತಾನೆ ಪ್ರಧಾನಿ ನೆಹರೂರನ್ನು ಭೇಟಿಯಾಗಿ ಈ ಸಂಗತಿಯನ್ನು ಪ್ರಸ್ತಾಪಿಸಿದಾಗ—ನೆಹರೂರಿಂದ ಸಹಾನುಭೂತಿಪರವಾಗ ಮಾತುಗಳು ಕೇಳಿಬಂದುವೆಂದೂ ಪ್ರಾಯಶಃ ಪರಿಪ್ಯಾಧಿಕಾರ ಸಂಪನ್ನ ಆಯೋಗಕ್ಕೆ ನಡುಗಾಲದ ವರದಿಯೊಂದನ್ನು ಕಳಿಸಿಕೊಡಲು ಕೇಳಲಾಗುವುದೆಂದೂ, ಕರ್ನಾಟಕ ಏಕೀಕರಣದ ನಾಂದಿಯೇ ಇದಾದೀತೆಂದೂ ತಿಳಿದಿದೆ- ಕಾಂಗ್ರೆಸು ಕಾರ್ಯಕಾರಿಣಿಯು ಭಾರತದಲ್ಲಿ ರಾಜ್ಯಗಳ ಪುನರ್ಘಟನೆ ಮಾಡುವಾಗ ಸಾಂಸ್ಕೃತಿಕ ಮಹತ್ವವನ್ನು ಅವಶ್ಯ ಗಮನಿಸಬೇಕೆಂದು ಸೂಚಿಸಿದೆ-- ಇದು ಭಾಷಾನುಗುಣ ಪ್ರಾಂತ ರಚನೆಗೆ ಅನುಕೂಲವಾದ ಸಲಹೆಯಾಗಿರುತ್ತದೆ. ಅಲ್ಲದೆ "ಕ" ವರ್ಗದ ರಾಜ್ಯಗಳ ಭವಿತವ್ಯವನ್ನೂ ಈ ಆಯೋಗ ಪರಿಶೀಲಿಸಲಿದೆ. ಅಂತೂ ನಿಧಾನವಾಗಿಯೇ ಆದರೂ ದೃಢವಾಗಿ ಕಾಂಗ್ರೆಸು ಭಾಷಾ ರಾಜ್ಯಗಳ ನಿರ್ಮಾಣದಲ್ಲಿ ತಾನಿತ್ತಿದ್ದ ವಚನವನ್ನು ಪೂರೈಸಲು ಪ್ರಯತ್ನಿಸುತ್ತಿರುವುದಕ್ಕೆ ಈ ವಿಚಾರಗಳು ನಿದರ್ಶನ- ಕಾರ್ಯಕಾರಿಣಿ ವಿಚಾರಿಸಿದ ಮೂರನೇ ಮಹತ್ವದ ವಿಚಾರವೆಂದರೆ- ರಾಜಪ್ರಮುಖರ ಪದ್ಧತಿಯ ರದ್ದತಿ. ಹಿಂದಿನ ಸಂಸ್ಥಾನಗಳ ಆಳರಸರನ್ನೆ ರಾಜಪ್ರಮುಖರೆಂದು ನಾಮಕರಣ ಮಾಡಿದ್ದರೂ, ಅವರು ರಾಜಕೀಯ ತಂತ್ರಗಳನ್ನು ರಚಿಸಿ, ತೊಂದರೆ ಕೊಡುತ್ತಿರುವರೆಂದು ಮೂರು ವರ್ಷಗಳಿಂದಲೂ ಕೆಲವು ಕಾಂಗ್ರೆಸು ವರ್ಗಗಳು ದೂರುತ್ತಿವೆ. ಹಿಂದಿನ ಸಂಸ್ಥಾನಗಳ ವಿಲೀನೀಕರಣ ಕಾಲದಲ್ಲಿ ಆಪತ್ಕಾರ್ಯವೆಂಬಂತೆ ರಾಜಪ್ರಮುಖರ ಅಸ್ತಿತ್ವಕ್ಕೆ ಒಪ್ಪಿಗೆ ನೀಡಲಾಯಿತಾದರೂ-ಅದು ಪ್ರಜಾಪ್ರಭುತ್ವಕ್ಕೆ ಶೋಭೆ ನೀಡುವಂತಿಲ್ಲವೆಂಬುದು ಕಾಂಗ್ರೆಸಿಗರ ಹಾಗೂ ಇತರ ವಿವೇಕ ಶೀಲರ ಅಭಿಪ್ರಾಯ. ರಾಜ ಪ್ರಮುಖರ ಹುದ್ದೆ ರಾಜ ಮಹಾರಾಜರ ಹಾಗೂ ಗವರ್ನರರ ಆಳಿಕೆಯ ಮಧ್ಯಂತರ ಕಾಲದ ಒಂದು ಏರ್ಪಾಟಾಗಿ ನಶಿಸಿ ಹೋಗುವುದರಲ್ಲಿಯೇ ಎಲ್ಲರ ಹಿತವುಂಟು. ಇದು ಸಾಧ್ಯವಾಗಬೇಕಾದರೆ ಘಟನಾತ್ಮಕವಾದ ಬದಲಾವಣೆಗಳನ್ನು ತರುವುದವಶ್ಯ. ಸದ್ಯ ಈ ವಿಚಾರವನ್ನು ಬದಿಗೊತ್ತಿ, ಕಾಂಗ್ರೆಸದ ಬಲವನ್ನು ಹಿಂದಿನ ಸಂಸ್ಥಾನಗಳಲ್ಲಿ ಸಂವರ್ಧಿಸಲು ಪ್ರಯತ್ನಿಸಬೇಕೆಂದು ಕಾರ್ಯಕಾರಿಣಿ ನಿರ್ಧರಿಸಿದೆ. ರಾಜಪ್ರಮುಖರ ಹುದ್ದೆಯ ರದ್ದತಿಯಷ್ಟೇ ಆತುರದ ಬೇರೊಂದು ವಿಷಯವೆಂದರೆ ಮೇಲ್ಮನೆಗಳ ವಿಸರ್ಜನೆ — ಈ ವಿಷಯದಲ್ಲಿ ಘಟನೆಯಲ್ಲಿ ಹೇಳಿದಂತೆ ಕ್ರಮ ಕೈಗೊಳ್ಳಲು ಅಸ್ಪದವಿದೆ. ಕೆಳಮನೆಯು ಮೇಲ್ಮನೆ ಅನಗತ್ಯವೆಂದು ಬಹುಮತದಿಂದ ನಿರ್ಣಯಿಸಿದರೆ--ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳಲು ಕೇಂದ್ರ ಸರಕಾರ ಸಿದ್ಧವೇ ಇದೆ. ಕೆಳಮನೆಯ ಕಾಂಗ್ರೆಸು ಸದಸ್ಯರು ಈ ವಿಷಯದಲ್ಲಿ ತಮ್ಮಲ್ಲಿಯೇ ಪ್ರಥಮತಃ ಒಂದು ನಿರ್ಧಾರಕ್ಕೆ ಬಂದು-- ಕ್ರಮವಾಗಿ ಮುಂದೊತ್ತಬಹುದೆಂದು ಕಾರ್ಯಕಾರಿಣಿ ಸೂಚಿಸಿದೆ. ಕಾಂಗ್ರೆಸು ಕಾರ್ಯಕಾರಿಣಿಯು ಸಂಸ್ಥೆಗೆ ಮಾತ್ರ ಸಂಬಂಧಿಸಿದಂತಿರುವ ಬೇರೆ ಕೆಲವು ವಿಷಯಗಳನ್ನು ಪರಿಶೀಲಿಸಿತು--ಅದರಲ್ಲಿ ಈಚೆಗೆ ನಡೆದ ಉಪಚುನಾವಣೆಗಳ ಫಲಿತಾಂಶವೂ ಒಂದು.ಅಂಕೆ--ಸಂಖ್ಯೆಗಳ ಆಧಾರದ ಮೇಲಿಂದ--ಉಪಚುನಾವಣೆಗಳಲ್ಲಿ ಕಾಂಗ್ರೆಸು ಕೆಲವು ಸ್ಥಾನಗಳನ್ನು ಕಳೆದುಕೊಂಡರೂ ಒಟ್ಟಿನಲ್ಲಿ ದೊರೆತ ಮತಗಳ ಪ್ರಮಾಣವು ಮಹಾ ಚುನಾವಣೆಯ ಪಾಮಾಣಕ್ಕಿಂತ ಹೆಚ್ಚಾಗಿದೆ ಎಂದು ತಿಳಿದಿದೆ. ಸರಕಾರದ ಹೊಣೆ ಹೊತ್ತಿರುವ ಕಾಂಗ್ರೆಸು ಸ್ವಾಭಾವಿಕವಾಗಿ ಇದಿರಿಸಬೇಕಾಗಿರುವ ಜನ ವಿರೋಧವನ್ನು ಗಮನಿಸಿದರೆ ಚುನಾವಣಾ ಪರಿಣಾಮದ ಈ ಮುಖ ವಿಷಾದವನ್ನುಂಟುಮಾಡಬೇಕಾದ ಅಗತ್ಯವಿಲ್ಲೆಂದು ಕಾಂಗ್ರೆಸು ವರ್ಗಗಳು ಅಭಿಪ್ರಾಯಪಟ್ಟಿವೆ. ಆದರೆ ಈ ವಿಷಯದಲ್ಲಿ ಇಷ್ಟು ಮಾತ್ರಕ್ಕೆ ತೃಪ್ತಿಹೊಂದಲು ಬಾರದೆನ್ನುವುದು ಸ್ಪಷ್ಟ.

ಕಂಬನಿ

ಕನ್ನಡದ ಪ್ರಚಾರ ಕಾರ್ಯವು ಏನೇನೂ ನಡೆಯದಿದ್ದ ಮೂರು-ನಾಲ್ಕು ದಶಕಗಳ ಹಿಂದಿನ ಆ ಕಾಲದಲ್ಲಿ ಕರ್ನಾಟಕ ಮಾತೆಯ ಸೇವೆಗಾಗಿ ಕಟಿಬದ್ಧರಾದ ಕೆಲವೇ ಮಂದಿ ಹಿರಿಯರಲ್ಲಿ ಮೊನ್ನೆ ತಾನೆ ನಿಧನ ಹೊಂದಿದ ಶ್ರೀ ಎನ್. ರಾಜಗೋಪಾಲಕೃಷ್ಣ ರಾಯರೂ ಒಬ್ಬರು. ಶ್ರೀ ರಾಯರು ಅನೇಕಮುಖವಾದ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿ, ಶ್ರೀ ಕೃಷ್ಣಸೂಕ್ತಿಯೆಂಬ ನಿಯತ ಕಾಲಿಕವನ್ನು ಪ್ರಕಟಿಸಿ, ಅತ್ಯಂತ ಸ್ಫೂರ್ತಿ ಮತ್ತು ಉತ್ಸಾಹದಿಂದ ನಾಡನುಡಿಯ ಪ್ರಚಾರ ಮಾಡಿದರು. ಉಡುಪಿಯಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ, ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ, ಅದನ್ನು ಭದ್ರವಾಗಿಸಲು ಶ್ರಮಿಸಿದ ಅವರ ನಿರಾಡಂಬರವಾದ ವ್ಯಕ್ತಿತ್ವ ಹಾಗೂ ಓಜಸ್ವಿಯಾದ ಶೈಲಿಯು ಪಾಮರರನ್ನೂ ಪಂಡಿತರನ್ನೂ ತನ್ನೆಡೆಗೆ, ತನ್ನ ಸಾಹಿತ್ಯಿಕ ರಚನೆಗಳೆಡೆಗೆ ಆಕರ್ಷಿಸುತಿದ್ದುದು ಆಶ್ಚರ್ಯವಲ್ಲ. ದಿವಂಗತರು ಸಾರ್ವಜನಿಕ ಕೆಲಸದಲ್ಲಿಯೂ ತುಂಬ ಆಸ್ಥೆ ತೋರಿಸುತಿದ್ದರು. ಸ್ವಗ್ರಾಮವಾದ ಕಡೆಕಾರಿನಲ್ಲಿ ಪಂಚಾಯತು ಬೋರ್ಡಿನ ಸತತ ಅಧ್ಯಕ್ಷರಾಗಿ ಅವರು ನೆರೆಕರೆಯ ಹಳ್ಳಿಗಳ ಜನರ ಪ್ರೀತ್ಯಾದರಗಳನ್ನು ಸಂಪಾದಿಸಿದ್ದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಣ್ಣೆಲೆಗಳು ಒಂದೊಂದೇಯಾಗಿ ಉದುರುತ್ತಿರುವುದು ದೇವರಾಟವೇ ನಿಜವಾದರೂ-ಈ ಪುಣ್ಯ ಜೀವಿಗಳ ಕಾರ್ಯಕ್ಷಮತೆ ಮತ್ತು ಸ್ಫೂರ್ತಿ ಚೈತನ್ಯಗಳೂ ನಮ್ಮಿಂದ ಅಗಲುತ್ತಿರುವವಲ್ಲಾ ಎಂದು ವ್ಯಥೆಯಾಗುತ್ತಿದೆ. ಈ ಕಾರಣಕ್ಕಾಗಿಯೇ ಹೃದಯ ಭಾರವಾಗುತ್ತದೆ ಮತ್ತು ವಿಯೋಗ ಅಸಹನೀಯವೆನಿಸುತ್ತದೆ. ದಿವಂಗತರ ಆತ್ಮಕ್ಕೆ ಶಾಂತಿ ಕೋರುತ್ತಾ.. ಅವರ ಆದರ್ಶವನ್ನು ಅನುಸರಿಸುವ ಪ್ರತಿಜ್ಞೆಯನ್ನು ನಾವು ಕೈಗೊಳ್ಳೋಣ!

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 169/53

ಅಗೋಸ್ತಿನ್ ಸೆಬಸ್ತಿಯಾಂವಾಲ್ಮೆಡಿ
ವಾದಿ.

ರ್‍ಯಾಮಂಡ್ ಫೆರ್ನಾಂಡಿಸ್ ಕೂಡಾ
ಪ್ರತಿವಾದಿಗಳು.

1ನೇ ಪ್ರತಿವಾದಿ ರ್‍ಯಾಮಂಡ್ ಫೆರ್ನಾಂಡಿಸ್—ಲೋರೆನ್ಸ್ ಫೆರ್ನಾಂಡೀಸರ ಮಗ—ಶೊಡೆವೂರು ಗ್ರಾಮ.

ವಾದಿಗೆ 1ನೇ ಪ್ರತಿವಾದಿಯು ರೂ 1250/—ಕ್ಕೆ ತಾ 4-6-51ರಲ್ಲು ಬರಕೊಟ್ಟ ಈಡು ದಸ್ತಾವೇಜು ಪ್ರಕಾರ ಬರತಕ್ಕ ಅಸಲು ಮತ್ತು ತಾ 5-12-51ರಿಂದ ಬರತಕ್ಕ ಬಡ್ಡಿ; ರಿಜಿಸ್ಟ್ರ ನೋಟೀಸಿನ ಖರ್ಚು ಕೂಡಾ 1301—3—6ಕ್ಕೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು 1ನೇ ಪ್ರತಿವಾದಿಯ ನೋಟೀಸಿನ ಬಗ್ಗೆ ತಾ 29-9-53ಕ್ಕೆ ಇಟ್ಟದೆ. 1ನೇ ಪ್ರತಿವಾದಿಯು ಸ್ವತಃ ಅಥವಾ ವಕೀಲರ ದ್ವಾರಾ ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ನಂಬ್ರದಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗುವರೆ ತಪ್ಪಿದ್ದಿ 1ನೇ ಪ್ರತಿವಾದಿಯು ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ತೀರ್ಮಾನಿಸಲ್ಪಡುವದು.

Gratian C. Rego
Vakil for Plaintiff

ಉಡುಪಿ ತಾರೀಕು 14 9-53

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮಲಾನರ ಹಿಂಸಾಚಾರ

ರಾಷ್ಟ್ರಸಂಘದ ಅಧ್ಯಕ್ಷರೆಂದು ವಿಜಯಲಕ್ಷ್ಮಿಯವರ ಆಯ್ಕೆ

ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವು ಭಾರತೀಯ ಪ್ರತಿನಿಧಿ ಮಂಡಳದ ಧುರೀಣೆಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಎಂಟನೇ ವರ್ಷದ ಅಧ್ಯಕ್ಷಸ್ಥಾನಕ್ಕೆ ಆರಿಸಿರುವುದು--ಈ ವಾರದ ಶುಭವಾರ್ತೆ. ಓರ್ವ ಹೆಂಗಸು ರಾಷ್ಟ್ರಸಂಘದ ಈ ಸ್ಥಾನಕ್ಕೇರುವುದು ಇದು ಪ್ರಥಮ ಸಲವೆಂಬುದಕ್ಕಿಂತಲೂ ಭಾರತಕ್ಕೆ ಈ ಮಾನ ಸಂದುದು ಹೆಚ್ಚು ಮಹತ್ವದ ವಿಷಯ. ಜಾಗತಿಕ ರಾಜಕಾರಣವು ತಿರುಗಣಿ ಮಡುವಿನೋಪಾದಿಯಲ್ಲಿ ಯಾವುದೇ ಪ್ರಗತಿ ಮುಖವನ್ನು ಅವಲಂಬಿಸದೆ ಆತ್ಮಘಾತಕ ಪ್ರವೃತ್ತಿಯನ್ನು ವ್ಯಕ್ತಗೊಳಿಸುತ್ತಿರುವ ಈ ಉತ್ಕಟ ಪರಿಸ್ಥಿತಿಯಲ್ಲಿ--ಈ ಆಯ್ಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗುವುದು. ಶಾಂತಿಭಂಗವಾದ ಉದಾಹರಣೆಗಳು ರಾಷ್ಟ್ರಸಂಘದ ಮುಂದಿವೆ. ಸನಿಹದಲ್ಲಿಯೇ ಕೆಲವೊಂದು ಪ್ರದೇಶಗಳಲ್ಲಿ ಶಾಂತಿಭಂಗವಾಗುವ ದುಶ್ಚಿಹ್ನೆಗಳೂ ಅದಕ್ಕೆ ತೋರುತ್ತಿವೆ. ಪೂರ್ವ--ಪಶ್ಚಿಮ ಬಣಗಳೆಂದು ರಾಷ್ಟ್ರಸಂಘದಲ್ಲಿಯೇ ವೈಮನಸ್ಯ ಬೇರೂರುತ್ತಿದೆ. ಜಟಿಲ ಸಮಸ್ಯೆಗಳು ರಾಜಕಾರಣದ ತಂತಿಯನ್ನು ಸಿಕ್ಕಾಬಟ್ಟೆ ಮೀಂಟಿ ಅಪಸ್ವರತಿಯನ್ನು ಎಬ್ಬಿಸುತ್ತಿರುವಾಗ—ಏಕತಾನವನ್ನುಂಟುಮಾಡುವ ಜಾದೂಗಾರನ ಅಗತ್ಯವನ್ನು ವರ್ಣಿಸಲು ಬಾರದು. ಸದ್ಯದ ವಿಷಮ ಪರಿಸ್ಥಿತಿಯಲ್ಲಿ ರಾಜಕಾರಣದ ಗೊಂದಲಕ್ಕಿಂತಲೂ ಮಾನವತೆಯ ಮೇಲಿನ ಮಮತೆಗೆ ಮತ್ತು ರಾಷ್ಟ್ರಗಳ ಕಲ್ಯಾಣಕ್ಕೆ ಹೆಚ್ಚು ಮಹತ್ವ ಕೊಡುವ ಜನಾಂಗ ಭಾರತ ಮಾತ್ರ ಎಂಬುದು ನಮ್ಮ ಹೆಗ್ಗಳಿಕೆ. ಈ ದೃಷ್ಟಿಯಿಂದ ವಿಜಯಲಕ್ಷ್ಮಿಯವರ ಆಯ್ಕೆ ಎಲ್ಲ ವರ್ಗಕ್ಕೂ ಸಮಾಧಾನ ತಂದಿದೆ. ಅವರ ಕಾರ್ಯಭಾರವು ಹಗುರಾಗುವಂತೆ ಸಂಬಂಧಿಸಿದ ಎಲ್ಲರೂ ಸಹಕರಿಸುವುದು ಲೋಕಕಲ್ಯಾಣವನ್ನುಂಟುಮಾಡುವುದಕ್ಕೆ ಅಗತ್ಯ.

ಚೀನಾಕ್ಕೆ ಪ್ರಾತಿನಿಧ್ಯವಿಲ್ಲ

ಶ್ರೀಮತಿ ಪಂಡಿತರಿಗೆ ೩೭ ಮತಗಳೂ ಪ್ರತಿಸ್ಪರ್ಧಿಯಾದ ಥೈಲೇಂಡಿನ ರಾಜಕುಮಾರ ವಾನ್ ವೈಥಯಾಕನ್ನರಿಗೆ ೨೨ ಮತಗಳೂ ಬಿದ್ದವು. ಈ ಮತದಾನ ನಡೆಯುವುದಕ್ಕೆ ಮುಂಚೆ ರಶಿಯಾದ ವಿಶಿಂಸ್ಕಿಯವರು ರಾಷ್ಟ್ರಸಂಘದಲ್ಲಿ ಕಮ್ಯೂನಿಸ್ಟ ಚೀನಾಕ್ಕೆ ಪ್ರಾತಿನಿಧ್ಯ ಕೊಡುವ ಹಾಗೂ ರಾಷ್ಟ್ರೀಯ ಚೀನಾದ ಉಪಸ್ಥಿತಿಯನ್ನು ರದ್ದುಗೊಳಿಸುವ ಬೇಡಿಕೆಯನ್ನು ಮುಂದಿಟ್ಟರು. ರಾಷ್ಟ್ರಸಂಘದಲ್ಲಿ ಕಮ್ಯೂನಿಸ್ಟ ಚೀನಕ್ಕೆ ಅಧಿಕಾರಯುಕ್ತವಾದ ಸ್ಥಾನವಿದೆಯೆಂದೂ ರಾಷ್ಟ್ರೀಯ ಚೀನಾದ ಉಪಸ್ಥಿತಿಯು ಅಸತ್ಯವೆಂದೂ ಅವರು ಪ್ರತಿಪಾದಿಸಿದರು. ಆದರೆ ಅಮೇರಿಕಾದ ಡಲ್ಲೇಸರು ಕೂಡಲೇ ಮರುಸೂಚನೆಯೊಂದನ್ನು ಮಂಡಿಸಿ, ಈ ವರ್ಷದ ಮಟ್ಟಿಗೆ ಈ ಪ್ರಶ್ನೆಯನ್ನು ಹಿಂದೂಡಲು ಹೇಳಿದರು. ಬ್ರಿಟನು ಇದನ್ನು ಅನುಮೋದಿಸಿತು. ಮತಗಣನೆಯಲ್ಲಿ ಭಾರತ ಮುಂತಾದ ರಾಷ್ಟ್ರಗಳು ವಿಶಿಂಸ್ಕಿಯವರನ್ನು ಬೆಂಬಲಿಸಿದರೂ ಡಲ್ಲೇಸರೇ ಗೆದ್ದರು. ಇದು ಅನಿರೀಕ್ಷಿತವಾದ ಪ್ರಸಂಗವಲ್ಲ--ಆದರೆ ಉಚಿತವಾದ ನೀತಿಯೂ ಅಲ್ಲ. ಸಂಯುಕ್ತ ರಾಷ್ಟ್ರಸಂಘವು ತನ್ನ ಕೈಗೂಡಬೇಕೆನ್ನುವಷ್ಟರ ಮಟ್ಟಿಗೆ ಅಮೇರಿಕಾದ ಸರಕಾರ ಮುಂದರಿಯುವುದು ಶುಭವಲ್ಲ. ಈ ವಿಷಯದಲ್ಲಿ ರಾಷ್ಟ್ರಸಂಘದ ಮಹಾಕಾರ್ಯದರ್ಶಿ ಡಾಗ ಹೆಮ್ಮರಶೆಲ್ಡರು ಹೇಳಿದ ಮಾತು ಮನನೀಯವಾಗಿದೆ--ವಿಚಾರ ವೈವಿಧ್ಯವೇ ರಾಷ್ಟ್ರಸಂಘದ ಜೀವಾಳವೆಂದೂ ಅವುಗಳ ಸಮನ್ವಯವೇ ಎಲ್ಲರ ಕರ್ತವ್ಯವೆಂದೂ ಅವರು ಹೇಳಿರುವರು. ಪ್ರಪಂಚದಲ್ಲಿ ಐವರಲ್ಲಿ ಒಬ್ಬನಂತಿರುವ ಚೀನಿಯನು ಸ್ವರವೆತ್ತದಿರುವಂತೆ ನಿರ್ಬಂಧಿಸುವುದು ಸರ್ವಥಾ ಸರಿಯಲ್ಲ. ರಾಷ್ಟ್ರಸಂಘದ ಪ್ರತಿನಿಧಿ ಸಮಷ್ಟಿ ಇದರಿಂದ ಒಳ್ಳೆಯದನ್ನು ಸಂಪಾದಿಸಲಾರದು.

ಮಲಾನರ ಹಿಂಸಾಚಾರ

ದಕ್ಷಿಣ ಆಫ್ರಿಕೆಯ ವರ್ಣಭೇದ ಧೋರಣೆಯನ್ನು ರಾಷ್ಟ್ರಸಂಘ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿದೆ ಆದರೆ, ಇದು ಅಪೇಕ್ಷಿತ ಫಲಿತಾಂಶವನ್ನುಂಟುಮಾಡುವುದರಲ್ಲಿ ಸಂಶಯವಿದೆ. ವಿಶ್ವದೃಷ್ಟಿಯು ಮಲಾನ ಸರಕಾರದ ಈ ಧೋರಣೆಯನ್ನು ಜುಗುಪ್ಸೆಯಿಂದ ನೋಡುತ್ತಿದ್ದರೂ—ಸ್ವತಃ ಮಲಾನರು ತಮ್ಮ ರಾಕ್ಷಸ ಕೃತ್ಯಗಳಿಗೋಸ್ಕರ ಪರಿತಪಿಸುವುದಿಲ್ಲ. ಅವರ ಕಾರ್ಯಗಳ ಪರಿಣಾಮವು ಮಾನವ ಸಹಜವಾದ ಜೀವನಾದರ್ಶಕ್ಕೆ ಗಂಡಾಂತರವನ್ನುಂಟುಮಾಡುವಂತಿದೆ ಎಂಬುದಕ್ಕೆ ಲೋಕಸಭೆಯಲ್ಲಿ ನೆಹರೂರವರು ವರ್ಣಿಸಿದ ಒಂದು ನಿದರ್ಶನವೇ ಸಾಕು – ದಕ್ಷಿಣ ಆಫ್ರಿಕಾ ಸರಕಾರವು ಈಗ ಭಾರತೀಯ ವಲಸೆಗಾರರನ್ನು ನಿರ್ಬಂಧಿಸುವ ವಿಧೇಯಕಕ್ಕೊಂದು ತಿದ್ದುಪಡಿ ತಂದಿದೆ. ಇದರನ್ವಯ ೧೯೫೩ನೇ ಫೆಬ್ರವರಿ ೧೧ನೇ ತಾರೀಕಿನ ಮೇಲೆ ಮದುವೆಯಾದ ಸ್ತ್ರೀಯರೂ ಹುಟ್ಟಿದ ಮಕ್ಕಳೂ ದಕ್ಷಿಣ ಆಫ್ರಿಕಾವನ್ನು ಪ್ರವೇಶಿಸಲಾರರು. ಆ ತಾರೀಕಿನೊಳಗೆ ಮದುವೆಯಾದ ಪುರುಷರ ಪತ್ನಿಯರು ೧೯೫೪ನೇ ಫೆಬ್ರುವರಿ ೧೧ನೇ ತಾರೀಕಿನೊಳಗೆ ದಕ್ಷಿಣ ಆಫ್ರಿಕಾವನ್ನು ಬಂದು ಸೇರಬೇಕು. ಈ ತಾರೀಕಿನೊಳಗೆ ಹುಟ್ಟಿದ ಮಕ್ಕಳನ್ನು ೧೯೫೩ನೇ ಫೆಬ್ರವರಿಯೊಳಗೆ ಕರೆಸಿಕೊಳ್ಳಬೇಕು. ಆ ಮೇಲೆ ಯಾರಿಗೂ ಪ್ರವೇಶವಿಲ್ಲ. ಇದರ ಪರಿಣಾಮವಾಗಿ ಸಾವಿರಾರು ಭಾರತೀಯ ಸ್ತ್ರೀಯರು ತಮ್ಮ ಗಂಡಂದಿರೊಡನೆ ಬಾಳುವ ಅವಕಾಶವನ್ನು ಕಳೆದುಕೊಳ್ಳುವರು. ಪುರುಷರು ಭಾರತೀಯ ಮಹಿಳೆಯನು ಲಗ್ನವಾಗುವಂತಿಲ್ಲ. ಮಕ್ಕಳು ತಾಯಿ-ತಂದೆಯರ ಕೂಡೆ ಇರಲೂ ಆಸ್ಪದ ತಪ್ಪುವುದು. ಎಲ್ಲಿಯವರೆಗೆ ಇದು ಹೋಗುವುದೆಂದರೆ--ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ದಂಪತಿಗಳು ಹೊರ ಪ್ರಾಂತಕ್ಕೆ ವಿಹಾರಕ್ಕೋಸ್ಕರ ಪ್ರಯಾಣಿಸಿದ ಕಾಲದಲ್ಲಿ ಶಿಶು ಜನನವಾದರೆ ಆ ಮಗುವನ್ನು ದಕ್ಷಿಣ ಆಫ್ರಿಕೆಗೆ ತರುವಂತಿಲ್ಲ. ಹೀಗೆ ಹೆತ್ತವರಿಂದ ಮಕ್ಕಳನ್ನು, ಗಂಡನಿಂದ ಹೆಂಡತಿಯನ್ನು ಮಲಾನರು ಪ್ರತ್ಯೇಕಿಸುತ್ತಾರೆ! ಇದರ ಜೊತೆಗೆ ನ್ಯಾಯಾಲಯಗಳು ಕೂಡದೆಂದು ಹೇಳಿದ್ದ—ವರ್ಣೀಯರ ಪ್ರತ್ಯೇಕ ಮತದಾರ ಯಾದಿಗಳನ್ನು ತಯಾರಿಸಲು ಅವರೊಂದು ಮಸೂದೆ ತಂದರು. ವಿರೋಧಿ ಗುಂಪು ತನ್ನ ಸ್ವಾರ್ಥದ ಉದ್ದೇಶದಿಂದ ಮಲಾನರಿಗೆ ಇದಿರು ನಿಂತುದರಿಂದ ಅವರು ಘಟನಾ ತಿದ್ದುಪಡಿಗೆ ಅಧಿಕಾರ ಪಡೆಯದೆ ಮುಖಭಂಗ ಹೊಂದಿದರು. ಅದರೇನು? "ಬೇರೆ ಉಪಾಯವಿದೆ" ಎಂದವರು ಆತ್ಮವಿಶ್ವಾಸದ ಮಾತನ್ನಾಡುವುದು ನಿಲ್ಲಿಸಿಲ್ಲ.

ಉಡುಪಿ

ಬಿಗಮಿ ಸಿಕ್ಕಿದಂತೆ ಶಿಕ್ಷೆ—ಕಟಪಾಡಿ ಕಡೆಯ ಅಕ್ಕು ಪೂಜಾರ್ತಿ ಎಂಬವಳು ತನ್ನ ಗಂಡ ಮತ್ತು ಇತರ ಇವರ ಮೇಲೆ 1949ರ ಮದ್ರಾಸು ಹಿಂದೂ (ಬಿಗಮಿ ಪ್ರಿವೆನ್ಶನ್ ಮತ್ತು ಡೈವೋರ್ಸ್) ಏಕ್ಟ್ VIರ (ಅಂದರೆ ಮೊದಲನೆಯ ಹೆಂಡತಿ ಯಾ ಗಂಡನು ಇರುವಾಗಲೇ ಇನ್ನೊಬ್ಬ ಹೆಂಡತಿ ಯಾ ಗಂಡನನ್ನು ಮದುವೆ ಮಾಡಿಕೊಳ್ಳುವ ಅಪರಾಧ) ಸೆಕ್ಶನ್ 494 I.P.C. ಮತ್ತು 4(4)ರ ಅನ್ವಯ ಉಡುಪಿ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರಲ್ಲಿ ದೂರು ಕೊಟ್ಟದ್ದರ ವಿಚಾರಣೆಯಾಗಿ ಮೆಜಿಸ್ಟ್ರೇಟ್ ಕೆ. ಕೃಷ್ಣಯ್ಯನವರು 19-9-52ರಲ್ಲಿ ತೀರ್ಪುಕೊಟ್ಟು ಒಂದನೇ ಆರೋಪಿ(ಗಂಡ)ಗೆ 4 ತಿಂಗಳ ಕಠಿಣ ಸಜೆ ಮತ್ತು ರೂ 100 ಜುಲ್ಮಾನೆಯನ್ನೂ 3, 4, ಮತ್ತು 6ನೇ ಆರೋಪಿಗಳಿಗೆ ರೂ 100/-ರಂತೆ ಜುಲ್ಮಾನೆಯನ್ನು ವಿಧಿಸಿರುವರು.

ದುರ್ಮರಣ — ಇಲ್ಲಿಯ ಸರಕಾರಿ ಹೆಂಗುಸರ ತರಬೇತಿ ಶಾಲೆಯ ಶಿಕ್ಷಕಿ [illegible] ಎಂಬವರು ತಾ|6ನೇ ರಾತ್ರಿ ತಮ್ಮ ಮನೆಯ [illegible] ಕೆರೆಯೊಂದರಲ್ಲಿ ಬಿದ್ದು ಮೃತಪಟ್ಟಿರುವರು. ಮರುದಿನ ಸರಕಾರಿ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರಿಂದ ಶವಶೋಧನ ನಡೆದು ಆತ್ಮಹತ್ಯೆಯೆಂದು ತೀರ್ಮಾನವಾಗಿದೆ ಎಂದು ತಿಳಿದುಬರುತ್ತದೆ.

(ಉಡುಪಿಯ ಇತರ ಸುದ್ದಿಗೆ ಮುಂದಿನ ಪುಟದ 3ನೇ ಕಲಂ ನೋಡಿರಿ.)

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಶ್ರೀಕೃಷ್ಣಾರ್ಜುನರ ಮಾತುಗಾರಿಕೆಯ ಹುರುಳನ್ನು ತಿಳಿಯದೆ ಶ್ರೀಕೃಷ್ಣಾಷ್ಟಮಿಯನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಿದರೇನು?

ಬಲ್ಲಿರಾ?

“ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು.” — ವರಾಹಪುರಾಣ.

“ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು.” —ಲೋಕಮಾನ್ಯ ತಿಲಕ.

“ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿದ್ದಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು.” —ಮಹಾತ್ಮಾ ಗಾಂಧಿ.

“ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯಂತ ಮುಖ್ಯವು.” --ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಹೆಚ್ಚಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯು ಎಲ್ಲೆಲ್ಲಿಯೂ ಮಾರಾಟಕ್ಕೆ ಸಿಗುತ್ತದೆ. ಬೆಲೆ 0—12—0.

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿ. ಪಿ. ಮೂ. ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

NAVAYUGA

Popular Kannada Weekly

Founder.—

Sri **A. B. SHETTY**,

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.

ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ, ಮದ್ರಾಸಿನ ಆರೋಗ್ಯಮಂತ್ರಿ.

ವಾರ್ಷಿಕ ಚಂದಾ: ರೂ. **5-12-0** ಬಿಡಿಪ್ರತಿ: **0-2-0**

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯಾ ಅನ್ಯಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

THE CANARA BANKING CORPORATION LTD.,

Estd: 1906] [H. O. UDIPI (S. India)

ನವಯುಗ

ಉಡುಪಿ, ಗುರುವಾರ ೨೪-೯-'೫೩

ಹೊಸ ದೆಹಲಿಯ ಸಭೆ

ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿಣಿಯು ಹೊಸದೆಹಲಿಯಲ್ಲಿ ಪದ್ಧತಿಯಂತೆ ಸಭೆ ಸೇರಿದ್ದರೂ - ಆ ವಿಶಿಷ್ಟ ಗಳಿಗೆಯಲ್ಲಿ ಅವರ ಮುಂದೆ ಮಹತ್ವದ ವಿಷಯಗಳು ಚರ್ಚೆಗೆ ಇದ್ದವು. ಎಲ್ಲಕ್ಕಿಂತಲೂ ತುರ್ತಾದುದು ಮತ್ತು ಅಗತ್ಯವಾಗಿ ಪರಿಶೀಲಿಸಲ್ಪಡಬೇಕಾಗಿದ್ದ ಪ್ರಶ್ನೆ ಆಂಧ್ರದಲ್ಲಿ ಭದ್ರವಾದ ಸರಕಾರದ ಸ್ಥಾಪನೆ. ಈ ವಿಷಯದಲ್ಲಿ ನೆಹರೂರವರು ಪ್ರಕಾಶರೊಡನೆ ನಡೆದ ಮಾತುಕತೆಗಳ ವಿವರವನ್ನು ತಿಳಿಸಿದರೆಂದೂ ಪ್ರಕಾಶರ ಧುರೀಣತ್ವವನ್ನು-ಅವರು ಸ್ವತಂತ್ರವಾದರೆ-ಒಪ್ಪಲು ಕಾಂಗ್ರೆಸು ಸಿದ್ಧವೆಂದು ನಿರ್ಣಯಿಸಿದುದಾಗಿಯೂ ತಿಳಿಯುತ್ತದೆ. ಈ ವಿಷಯದಲ್ಲಿ ಆಂಧ್ರ ಧುರೀಣದ್ವಯರಾದ ಪ್ರಕಾಶಂ-ಸಂಜೀವ ರೆಡ್ಡಿಯವರೇ ಸಂಧಾನ ನಡೆಸಿ, ಕೊನೆಯ ನಿರ್ಣಯ ಕೈಗೊಳ್ಳಲೆಂದೂ ಕಾಂಗ್ರೆಸು ಕಾರ್ಯಕಾರಿಣಿ ಅಭಿಪ್ರಾಯ ಪಟ್ಟಿತು. ಇದು ಉಚಿತವಾದ ನಿರ್ಧಾರವೇ ಸೈ. ಇದಕ್ಕಿಂತ ವ್ಯಾಪಕವಾದ ಮತ್ತು ಭಾಷಾವಾದಿಗಳು ಕುತೂಹಲದಿಂದ ನೋಡುವ ಇನ್ನೊಂದು ಪ್ರಾಮುಖ್ಯ ವಿಷಯವನ್ನೂ ಕಾಂಗ್ರೆಸು ಕಾರ್ಯಕಾರಿಣಿ ಚರ್ಚಿಸಿತು. ಸರಕಾರವು ವರಿಷ್ಠಾಧಿಕಾರ ಸಂಪನ್ನವಾದ ಆಯೋಗವನ್ನು ಸದ್ಯದಲ್ಲಿಯೇ-ಅಂದರೆ ಇನ್ನೆರಡು ತಿಂಗಳುಗಳೊಳಗಾಗಿಯೇ — ನೇಮಿಸಲಿರುವುದರಿಂದ ಹೊಸ ರಾಜ್ಯಗಳ ಸ್ಥಾಪನೆಗಾಗಿಯಾಗಲೀ ಗಡಿಗಳ ಪುನಃ ವ್ಯವಸ್ಥೆಯ ಕುರಿತ ಗಲೀಬಿಳುವಳಿಯನ್ನು ನಡೆಸುವುದು ಅನಿಷ್ಟವೆಂದೂ ಅನಾವಶ್ಯಕವಾದುದೆಂದೂ ಕಾರ್ಯಕಾರಿಣಿಯು ಒಂದು ಗೊತ್ತುವಳಿಯನ್ನು ಅಂಗೀಕರಿಸಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ-ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಆಂಧ್ರರಾಜ್ಯ ನಿರ್ಮಾಣದ ಬೆನ್ನಿಗೆ ಕರ್ನಾಟಕದ ಪ್ರಶ್ನೆಯನ್ನು ಬಗೆಹರಿಸುವುದಾಗಿ ನಿಶ್ಚಿತ ಭರವಸೆಗೋಸ್ಕರ ಆಗ್ರಹ ತಾಳಿರುವುದನ್ನು ಕಾಂಗ್ರೆಸು ಕಡೆಗಣಿಸಿದೆಯೆಂದೇ ತಿಳಿಯಬೇಕಾಗುವುದು. ಕರ್ನಾಟಕದ ಕಾಂಗ್ರೆಸ್ ಎಂ. ಪಿ. ಗಳು ಮೊನ್ನೆ ತಾನೆ ಪ್ರಧಾನಿ ನೆಹರೂರನ್ನು ಭೇಟಿಯಾಗಿ ಈ ಸಂಗತಿಯನ್ನು ಪ್ರಸ್ತಾಪಿಸಿದಾಗ—ನೆಹರೂರಿಂದ ಸಹಾನುಭೂತಿಪರವಾಗ ಮಾತುಗಳು ಕೇಳಿಬಂದುವೆಂದೂ ಪ್ರಾಯಶಃ ವರಿಷ್ಠಾಧಿಕಾರ ಸಂಪನ್ನ ಆಯೋಗಕ್ಕೆ ನಡುಗಾಲದ ವರದಿಯೊಂದನ್ನು ಕಳಿಸಿಕೊಡಲು ಕೇಳಲಾಗುವುದೆಂದೂ, ಕರ್ನಾಟಕ ಏಕೀಕರಣದ ನಾಂದಿಯೇ ಇದಾದೀತೆಂದೂ ತಿಳಿದಿದೆ. ಕಾಂಗ್ರೆಸು ಕಾರ್ಯಕಾರಿಣಿಯು ಭಾರತದಲ್ಲಿ ರಾಜ್ಯಗಳ ಪುನರ್ಘಟನೆ ಮಾಡುವಾಗ ಸಾಂಸ್ಕೃತಿಕ ಮಹತ್ವವನ್ನು ಅವಶ್ಯ ಗಮನಿಸಬೇಕೆಂದು ಸೂಚಿಸಿದೆ- ಇದು ಭಾಷಾನುಗುಣ ಪ್ರಾಂತ ರಚನೆಗೆ ಅನುಕೂಲವಾದ ಸಲಹೆಯಾಗಿರುತ್ತದೆ. ಅಲ್ಲದೆ "ಕ" ವರ್ಗದ ರಾಜ್ಯಗಳ ಭವಿತವ್ಯವನ್ನೂ ಈ ಆಯೋಗ ಪರಿಶೀಲಿಸಲಿದೆ. ಅಂತೂ ನಿಧಾನವಾಗಿಯೇ ಆದರೂ ದೃಢವಾಗಿ ಕಾಂಗ್ರೆಸು ಭಾಷಾ ರಾಜ್ಯಗಳ ನಿರ್ಮಾಣದಲ್ಲಿ ತಾನಿತ್ತಿದ್ದ ವಚನವನ್ನು ಪೂರೈಸಲು ಪ್ರಯತ್ನಿಸುತ್ತಿರುವುದಕ್ಕೆ ಈ ವಿಚಾರಗಳು ನಿದರ್ಶನ- ಕಾರ್ಯಕಾರಿಣಿ ವಿಚಾರಿಸಿದ ಮೂರನೇ ಮಹತ್ವದ ವಿಚಾರವೆಂದರೆ- ರಾಜಪ್ರಮುಖರ ಪದ್ಧತಿಯ ರದ್ದತಿ. ಹಿಂದಿನ ಸಂಸ್ಥಾನಗಳ ಆಳರಸರನ್ನೆ ರಾಜಪ್ರಮುಖರೆಂದು ನಾಮಕರಣ ಮಾಡಿದ್ದರೂ, ಅವರು ರಾಜಕೀಯ ತಂತ್ರಗಳನ್ನು ರಚಿಸಿ, ತೊಂದರೆ ಕೊಡುತ್ತಿರುವರೆಂದು ಮೂರು ವರ್ಷಗಳಿಂದಲೂ ಕೆಲವು ಕಾಂಗ್ರೆಸು ವರ್ಗಗಳು ದೂರುತ್ತಿವೆ. ಹಿಂದಿನ ಸಂಸ್ಥಾನಗಳ ವಿಲೀನೀಕರಣ ಕಾಲದಲ್ಲಿ ಆಪತ್ಕಾರ್ಯವೆಂಬಂತೆ ರಾಜಪ್ರಮುಖರ ಅಸ್ತಿತ್ವಕ್ಕೆ ಒಪ್ಪಿಗೆ ನೀಡಲಾಯಿತಾದರೂ-ಅದು ಪ್ರಜಾಪ್ರಭುತ್ವಕ್ಕೆ ಶೋಭೆ ನೀಡುವಂತಿಲ್ಲವೆಂಬುದು ಕಾಂಗ್ರೆಸಿಗರ ಹಾಗೂ ಇತರ ವಿವೇಕ ಶೀಲರ ಅಭಿಪ್ರಾಯ. ರಾಜ ಪ್ರಮುಖರ ಹುದ್ದೆ ರಾಜ ಮಹಾರಾಜರ ಹಾಗೂ ಗವರ್ನರರ ಆಳಿಕೆಯ ಮಧ್ಯಂತರ ಕಾಲದ ಒಂದು ಏರ್ಪಾಟಾಗಿ ನಶಿಸಿ ಹೋಗುವುದರಲ್ಲಿಯೇ ಎಲ್ಲರ ಹಿತವುಂಟು. ಇದು ಸಾಧ್ಯವಾಗಬೇಕಾದರೆ ಘಟನಾತ್ಮಕವಾದ ಬದಲಾವಣೆಗಳನ್ನು ತರುವುದವಶ್ಯ. ಸದ್ಯ ಈ ವಿಚಾರವನ್ನು ಬದಿಗೊತ್ತಿ, ಕಾಂಗ್ರೆಸದ ಬಲವನ್ನು ಹಿಂದಿನ ಸಂಸ್ಥಾನಗಳಲ್ಲಿ ಸಂವರ್ಧಿಸಲು ಪ್ರಯತ್ನಿಸಬೇಕೆಂದು ಕಾರ್ಯಕಾರಿಣಿ ನಿರ್ಧರಿಸಿದೆ. ರಾಜಪ್ರಮುಖರ ಹುದ್ದೆಯ ರದ್ದತಿಯಷ್ಟೇ ಆತುರದ ಬೇರೊಂದು ವಿಷಯವೆಂದರೆ ಮೇಲ್ಮನೆಗಳ ವಿಸರ್ಜನೆ—ಈ ವಿಷಯದಲ್ಲಿ ಘಟನೆಯಲ್ಲಿ ಹೇಳಿದಂತೆ ಕ್ರಮ ಕೈಗೊಳ್ಳಲು ಅಸ್ಪದವಿದೆ. ಕೆಳಮನೆಯು ಮೇಲ್ಮನೆ ಅನಗತ್ಯವೆಂದು ಬಹುಮತದಿಂದ ನಿರ್ಣಯಿಸಿದರೆ--ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳಲು ಕೇಂದ್ರ ಸರಕಾರ ಸಿದ್ಧವೇ ಇದೆ ಕೆಳಮನೆಯ ಕಾಂಗ್ರೆಸು ಸದಸ್ಯರು ಈ ವಿಷಯದಲ್ಲಿ ತಮ್ಮಲ್ಲಿಯೇ ಪ್ರಥಮತಃ ಒಂದು ನಿರ್ಧಾರಕ್ಕೆ ಬಂದು -ಕ್ರಮವಾಗಿ ಮುಂದೊತ್ತಬಹುದೆಂದು ಕಾರ್ಯಕಾರಿಣಿ ಸೂಚಿಸಿದೆ. ಕಾಂಗ್ರೆಸು ಕಾರ್ಯಕಾರಿಣಿಯು ಸಂಸ್ಥೆಗೆ ಮಾತ್ರ ಸಂಬಂಧಿಸಿದಂತಿರುವ ಬೇರೆ ಕೆಲವು ವಿಷಯಗಳನ್ನು ಪರಿಶೀಲಿಸಿತು--ಅದರಲ್ಲಿ ಈಚೆಗೆ ನಡೆದ ಉಪಚುನಾವಣೆಗಳ ಫಲಿತಾಂಶವೂ ಒಂದು.ಅಂಕೆ--ಸಂಖ್ಯೆಗಳ ಆಧಾರದ ಮೇಲಿಂದ--ಉಪಚುನಾವಣೆಗಳಲ್ಲಿ ಕಾಂಗ್ರೆಸು ಕೆಲವು ಸ್ಥಾನಗಳನ್ನು ಕಳೆದುಕೊಂಡರೂ ಒಟ್ಟಿನಲ್ಲಿ ದೊರೆತ ಮತಗಳ ಪ್ರಮಾಣವು ಮಹಾ ಚುನಾವಣೆಯ ದಾಮಾಶಯಕ್ಕಿಂತ ಹೆಚ್ಚಾಗಿದೆ ಎಂದು ತಿಳಿದಿದೆ. ಸರಕಾರದ ಹೊಣೆ ಹೊತ್ತಿರುವ ಕಾಂಗ್ರೆಸು ಸ್ವಾಭಾವಿಕವಾಗಿ ಇದಿರಿಸಬೇಕಾಗಿರುವ ಜನ ವಿರೋಧವನ್ನು ಗಮನಿಸಿದರೆ ಚುನಾವಣಾ ಪರಿಣಾಮದ ಈ ಮುಖ ವಿಷಾದವನ್ನುಂಟುಮಾಡಬೇಕಾದ ಅಗತ್ಯವಿಲ್ಲೆಂದು ಕಾಂಗ್ರೆಸು ವರ್ಗಗಳು ಅಭಿಪ್ರಾಯಪಟ್ಟಿವೆ. ಆದರೆ ಈ ವಿಷಯದಲ್ಲಿ ಇಷ್ಟು ಮಾತ್ರಕ್ಕೆ ತೃಪ್ತಿಹೊಂದಲು ಬಾರದೆನ್ನುವುದು ಸ್ಪಷ್ಟ.

ಕಂಬನಿ

ಕನ್ನಡದ ಪ್ರಚಾರ ಕಾರ್ಯವು ಏನೇನೂ ನಡೆಯದಿದ್ದ ಮೂರು-ನಾಲ್ಕು ದಶಕಗಳ ಹಿಂದಿನ ಆ ಕಾಲದಲ್ಲಿ ಕರ್ನಾಟಕ ಮಾತೆಯ ಸೇವೆಗಾಗಿ ಕಟಿಬದ್ಧರಾದ ಕೆಲವೇ ಮಂದಿ ಹಿರಿಯರಲ್ಲಿ ಮೊನ್ನೆ ತಾನೆ ನಿಧನ ಹೊಂದಿದ ಶ್ರೀ ಎನ್. ರಾಜಗೋಪಾಲಕೃಷ್ಣರಾಯರೂ ಒಬ್ಬರು ಶ್ರೀ ರಾಯರು ಅನೇಕಮುಖವಾದ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿ, ಶ್ರೀ ಕೃಷ್ಣಸೂಕ್ತಿಯೆಂಬ ನಿಯತ ಕಾಲಿಕವನ್ನು ಪ್ರಕಟಿಸಿ, ಅತ್ಯಂತ ಸ್ಫೂರ್ತಿ ಮತ್ತು ಉತ್ಸಾಹದಿಂದ ನಾಡನುಡಿಯ ಪ್ರಚಾರ ಮಾಡಿದರು. ಉಡುಪಿಯಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ, ತಮ್ಮ ಅಸ್ವಾಸ್ಥ್ಯವನ್ನೂ ಲೆಕ್ಕಿಸದೆ, ಅದನ್ನು ಭದ್ರವಾಗಿಸಲು ಶ್ರಮಿಸಿದ ಅವರ ನಿರಾಡಂಬರವಾದ ವ್ಯಕ್ತಿತ್ವ ಹಾಗೂ ಓಜಸ್ವಿಯಾದ ಶೈಲಿಯು ಪಾಮರರನ್ನೂ ಪಂಡಿತರನ್ನೂ ತನ್ನೆಡೆಗೆ, ತನ್ನ ಸಾಹಿತ್ಯಿಕ ರಚನೆಗಳೆಡೆಗೆ ಆಕರ್ಷಿಸುತಿದ್ದುದು ಆಶ್ಚರ್ಯವಲ್ಲ. ದಿವಂಗತರು ಸಾರ್ವಜನಿಕ ಕೆಲಸದಲ್ಲಿಯೂ ತುಂಬ ಆಸ್ಥೆ ತೋರಿಸುತಿದ್ದರು. ಸ್ವಗ್ರಾಮವಾದ ಕಡೆಕಾರಿನಲ್ಲಿ ಪಂಚಾಯತು ಬೋರ್ಡಿನ ಸತತ ಅಧ್ಯಕ್ಷರಾಗಿ ಅವರು ನೆರೆಕರೆಯ ಹಳ್ಳಿಗಳ ಜನರ ಪ್ರೀತ್ಯಾದರಗಳನ್ನು ಸಂಪಾದಿಸಿದ್ದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಣ್ಣೆಲೆಗಳು ಒಂದೊಂದೇಯಾಗಿ ಉದುರುತ್ತಿರುವುದು ದೇವರಾಟವೇ ನಿಜವಾದರೂ-ಈ ಪುಣ್ಯ ಜೀವಿಗಳ ಕಾರ್ಯಕ್ಷಮತೆ ಮತ್ತು ಸ್ಫೂರ್ತಿ ಚೈತನ್ಯಗಳೂ ನಮ್ಮಿಂದ ಅಗಲುತ್ತಿರುವವಲ್ಲಾ ಎಂದು ವ್ಯಥೆಯಾಗುತ್ತಿದೆ. ಈ ಕಾರಣಕ್ಕಾಗಿಯೇ ಹೃದಯ ಭಾರವಾಗುತ್ತದೆ ಮತ್ತು ವಿಯೋಗ ಅಸಹನೀಯವೆನಿಸುತ್ತದೆ. ದಿವಂಗತರ ಆತ್ಮಕ್ಕೆ ಶಾಂತಿ ಕೋರುತ್ತ--ಅವರ ಆದರ್ಶವನ್ನು ಅನುಸರಿಸುವ ಪ್ರತಿಜ್ಞೆಯನ್ನು ನಾವು ಕೈಗೊಳ್ಳೋಣ!

ಉಡುಪಿ ಜಿ. ಮು. ಕೋರ್ಟಿನಲ್ಲಿ.

O. S. No 469/53

ಆಗೋಸ್ತಿನ್ ಸಿಬಸ್ತಿಯಾಂದಾಲ್ಮೆದಿ ವಾದಿ,

ದ್ಯಾಮಂಡ್ ಫೆರ್ನಾಂಡಿಸ್ ಕೂಡಾ ಪ್ರತಿವಾದಿಗಳು.

1ನೇ ಪ್ರತಿವಾದಿ ದ್ಯಾಮಂಡ್ ಫೆರ್ನಾಂಡಿಸ್—ಲೋರೆನ್ಸ್ ಫೆರ್ನಾಂದಿಸರ ಮಗ—ಕೊಡವೂರು ಗ್ರಾಮ

ವಾದಿಗೆ 1ನೇ ಪ್ರತಿವಾದಿಯು ರೂ 1250/—ಕ್ಕೆ ತಾ 4-6-51ರಲ್ಲಿ ಬರೆಕೊಟ್ಟ ಕುದು ದಸ್ತಾವೇಜು ಪ್ರಕಾರ ಬರತಕ್ಕ ಅಸಲು ಮತ್ತು ತಾ 5-12-51ರಿಂದ ಬರತಕ್ಕ ಬಡ್ಡಿ; ರಿಜಿಸ್ಟ್ರ ನೋಟೀಸಿನ ಖರ್ಚು ಕೂಡಾ 1301—3—6ಕ್ಕೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು 1ನೇ ಪ್ರತಿವಾದಿಯು ನೋಟೀಸಿನ ಬಗ್ಗೆ ತಾ 29-9-53ಕ್ಕೆ ಇಟ್ಟಿದೆ. 1ನೇ ಪ್ರತಿವಾದಿಯು ಸ್ವತಹಾ ವ ವಕೀಲರ ದ್ವಾರಾ ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ನಂಬ್ರದಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗುವರೆ ತಪ್ಪಿದಲ್ಲಿ 1ನೇ ಪ್ರತಿವಾದಿಯು ಗೈರು ಹಾಜ್ರಿಯಿಂದ ಸದ್ರಿ ದಾವೆಯನ್ನು ತೀರ್ಮಾನಿಸಲ್ಪಡುವದು.

Gratian C. Rego
Vakil for Plaintiff

ಉಡುಪಿ ತಾರೀಕು 14 9-53

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮಲಾನರ ಹಿಂಸಾಚಾರ

ರಾಷ್ಟ್ರಸಂಘದ ಅಧ್ಯಕ್ಷರೆಂದು ವಿಜಯಲಕ್ಷ್ಮಿಯವರ ಆಯ್ಕೆ

ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಅಧಿವೇಶನವು ಭಾರತೀಯ ಪ್ರತಿನಿಧಿ ಮಂಡಳದ ಧುರೀಣೆಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಎಂಟನೇ ವರ್ಷದ ಅಧ್ಯಕ್ಷಸ್ಥಾನಕ್ಕೆ ಆರಿಸಿರುವುದು--ಈ ವಾರದ ಶುಭವಾರ್ತೆ. ಓರ್ವ ಹೆಂಗಸು ರಾಷ್ಟ್ರಸಂಘದ ಈ ಸ್ಥಾನಕ್ಕೇರುವುದು ಇದು ಪ್ರಥಮ ಸಲವೆಂಬುದಕ್ಕಿಂತಲೂ ಭಾರತಕ್ಕೆ ಈ ಮಾನ ಸಂದುದು ಹೆಚ್ಚು ಮಹತ್ವದ ವಿಷಯ. ಜಾಗತಿಕ ರಾಜಕಾರಣವು ಶಿರುಗಣಿ ಮಡುವಿನೊಳಾಡಿಯಲ್ಲಿ ಯಾವುದೇ ಪ್ರಗತಿ ಮುಖವನ್ನು ಅವಲಂಬಿಸದೆ ಆತ್ಮಘಾತಕ ಪ್ರವೃತ್ತಿಯನ್ನು ವ್ಯಕ್ತಗೊಳಿಸುತ್ತಿರುವ ಈ ಉತ್ಕಟ ಪರಿಸ್ಥಿತಿಯಲ್ಲಿ--ಈ ಆಯ್ಕೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾಗುವುದು. ಶಾಂತಿಭಂಗವಾದ ಉದಾಹರಣೆಗಳು ರಾಷ್ಟ್ರಸಂಘದ ಮುಂದಿವೆ. ಸನಿಹದಲ್ಲಿಯೇ ಕೆಲವೊಂದು ಪ್ರದೇಶಗಳಲ್ಲಿ ಶಾಂತಿಭಂಗವಾಗುವ ಪರಿಸ್ಥಿತಿಗಳೂ ಅದಕ್ಕೆ ತೋರುತ್ತವೆ. ಪೂರ್ವ--ಪಶ್ಚಿಮ ಬಣಗಳೆಂದು ರಾಷ್ಟ್ರಸಂಘದಲ್ಲಿಯೇ ವೈಮನಸ್ಯ ಬೇರೂರುತ್ತಿದೆ. ಜಟಿಲ ಸಮಸ್ಯೆಗಳು ರಾಜಕಾರಣದ ತಂತಿಯನ್ನು ಸಿಕ್ಕಾಬಟ್ಟೆ ಬಿಗಿಯುವ ಪರಿಸ್ಥಿತಿಯನ್ನು ಎಬ್ಬಿಸುತ್ತಿರುವಾಗ—ಏಕತಾನವನ್ನುಂಟುಮಾಡುವ ಜಾದೂಗಾರನ ಅಗತ್ಯವನ್ನು ವರ್ಣಿಸಲು ಬಾರದು. ಸದ್ಯದ ವಿಷಮ ಪರಿಸ್ಥಿತಿಯಲ್ಲಿ ರಾಜಕಾರಣದ ಗೊಂದಲಕ್ಕಿಂತಲೂ ಮಾನವತೆಯ ಮೇಲಿನ ಮಮತೆಗೆ ಮಿತ್ರರಾಷ್ಟ್ರಗಳ ಕಲ್ಯಾಣಕ್ಕೆ ಹೆಚ್ಚು ಮಹತ್ವ ಕೊಡುವ ಜನಾಂಗ ಭಾರತ ಮಾತ್ರ ಎಂಬುದು ನಮ್ಮ ಹೆಗ್ಗಳಿಕೆ. ಈ ದೃಷ್ಟಿಯಿಂದ ವಿಜಯ ಲಕ್ಷ್ಮಿಯವರ ಆಯ್ಕೆ ಎಲ್ಲ ವರ್ಗಕ್ಕೂ ಸಮಾಧಾನ ತಂದಿದೆ. ಅವರ ಕಾರ್ಯಭಾರವು ಹಗುರಾಗುವಂತೆ ಸಂಬಂಧಿಸಿದ ಎಲ್ಲರೂ ಸಹಕರಿಸುವುದು ಲೋಕಕಲ್ಯಾಣವನ್ನುಂಟುಮಾಡುವುದಕ್ಕೆ ಅಗತ್ಯ.

ಚೀನಾಕ್ಕೆ ಪ್ರಾತಿನಿಧ್ಯವಿಲ್ಲ

ಶ್ರೀಮತಿ ಪಂಡಿತರಿಗೆ ೩೭ ಮತಗಳೂ ಪ್ರತಿಸ್ಪರ್ಧಿಯಾದ ಥೈಲೇಂಡಿನ ರಾಜಕುಮಾರ ವಾನ್ ವೈಥಯಾಕನ್ನರಿಗೆ ೨೨ ಮತಗಳೂ ಬಿದ್ದವು. ಈ ಮತದಾನ ನಡೆಯುವುದಕ್ಕೆ ಮುಂಚೆ ರಶಿಯಾದ ವಿಶಿಂಸ್ಕಿಯವರು ರಾಷ್ಟ್ರಸಂಘದಲ್ಲಿ ಕಮ್ಯೂನಿಸ್ಟ ಚೀನಾಕ್ಕೆ ಪ್ರಾತಿನಿಧ್ಯ ಕೊಡುವ ಹಾಗೂ ರಾಷ್ಟ್ರೀಯ ಚೀನಾದ ಉಪಸ್ಥಿತಿಯನ್ನು ರದ್ದುಗೊಳಿಸುವ ಬೇಡಿಕೆಯನ್ನು ಮುಂದಿಟ್ಟರು. ರಾಷ್ಟ್ರಸಂಘದಲ್ಲಿ ಕಮ್ಯೂನಿಸ್ಟ ಚೀನಕ್ಕೆ ಅಧಿಕಾರಯುಕ್ತವಾದ ಸ್ಥಾನವಿದೆಯೆಂದೂ ರಾಷ್ಟ್ರೀಯ ಚೀನಾದ ಉಪಸ್ಥಿತಿಯು ಅಸಹ್ಯವೆಂದೂ ಅವರು ಪ್ರತಿಪಾದಿಸಿದರು. ಆದರೆ ಅಮೇರಿಕಾದ ಡಲ್ಲೇಸರು ಕೂಡಲೇ ಮರುಸೂಚನೆಯೊಂದನ್ನು ಮಂಡಿಸಿ, ಈ ವರ್ಷದ ಮಟ್ಟಿಗೆ ಈ ಪ್ರಶ್ನೆಯನ್ನು ಹಿಂದೂಡಲು ಹೇಳಿದರು. ಬ್ರಿಟನು ಇದನ್ನು ಅನುಮೋದಿಸಿತು. ಮತಗಣನೆಯಲ್ಲಿ ಭಾರತ ಮುಂತಾದ ರಾಷ್ಟ್ರಗಳು ವಿಶಿಂಸ್ಕಿಯವರನ್ನು ಬೆಂಬಲಿಸಿದರೂ ಡಲ್ಲೇಸರೇ ಗೆದ್ದರು. ಇದು ಅನಿರೀಕ್ಷಿತವಾದ ಪ್ರಸಂಗವಲ್ಲ--ಆದರೆ ಉಚಿತವಾದ ನೀತಿಯೂ ಅಲ್ಲ. ಸಂಯುಕ್ತ ರಾಷ್ಟ್ರಸಂಘವು ತನ್ನ ಕೈಗೂಸಾಗಬೇಕೆನ್ನುವಷ್ಟರ ಮಟ್ಟಿಗೆ ಅಮೇರಿಕಾದ ಸರಕಾರ ಮುಂದರಿಯುವುದು ಶುಭವಲ್ಲ. ಈ ವಿಷಯದಲ್ಲಿ ರಾಷ್ಟ್ರಸಂಘದ ಮಹಾಕಾರ್ಯದರ್ಶಿ ಡಾಗ ಹೆಮ್ಮರಶೆಲ್ಡರು ಹೇಳಿದ ಮಾತು ಮನನೀಯವಾಗಿದೆ--ವಿಚಾರ ವೈವಿಧ್ಯವೇ ರಾಷ್ಟ್ರಸಂಘದ ಜೀವಾಳವೆಂದೂ ಅವುಗಳ ಸಮನ್ವಯವೇ ಎಲ್ಲರ ಕರ್ತವ್ಯವೆಂದೂ ಅವರು ಹೇಳಿರುವರು. ಪ್ರಪಂಚದಲ್ಲಿ ಐದರಲ್ಲೊಬ್ಬನಂತಿರುವ ಚೀನಿಯನು ಸ್ವರವೆತ್ತದಿರುವಂತೆ ನಿರ್ಬಂಧಿಸುವುದು ಸರ್ವಥಾ ಸರಿಯಲ್ಲ. ರಾಷ್ಟ್ರಸಂಘದ ಪ್ರತಿನಿಧಿ ಸಂಸ್ಥೆ ಇದರಿಂದ ಒಳ್ಳೆಯದನ್ನು ಸಂಪಾದಿಸಲಾರದು.

ಮಲಾನರ ಹಿಂಸಾಚಾರ

ದಕ್ಷಿಣ ಆಫ್ರಿಕೆಯ ವರ್ಣಭೇದ ಧೋರಣೆಯನ್ನು ರಾಷ್ಟ್ರಸಂಘ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯವಾಗಿದೆ. ಆದರೆ, ಇದು ಅಪೇಕ್ಷಿತ ಫಲಿತಾಂಶವನ್ನುಂಟುಮಾಡುವುದರಲ್ಲಿ ಸಂಶಯವಿದೆ. ವಿಶ್ವದೃಷ್ಟಿಯು ಮಲಾನ ಸರಕಾರದ ಈ ಧೋರಣೆಯನ್ನು ಜುಗುಪ್ಸೆಯಿಂದ ನೋಡುತಿದ್ದರೂ—ಸ್ವತಃ ಮಲಾನರು ತಮ್ಮ ರಾಕ್ಷಸ ಕೃತ್ಯಗಳಿಗೋಸ್ಕರ ಪರಿತಪಿಸುವುದಿಲ್ಲ. ಅವರ ಕಾರ್ಯಗಳ ಪರಿಣಾಮವು ಮಾನವ ಸಹಜವಾದ ಜೀವನಾದರ್ಶಕ್ಕೆ ಗಂಡಾಂತರವನ್ನುಂಟುಮಾಡುವಂತಿದೆ ಎಂಬುದಕ್ಕೆ ಲೋಕಸಭೆಯಲ್ಲಿ ನೆಹರೂರವರು ವರ್ಣಿಸಿದ ಒಂದು ನಿದರ್ಶನವೇ ಸಾಕು - ದಕ್ಷಿಣ ಆಫ್ರಿಕಾ ಸರಕಾರವು ಈಗ ಭಾರತೀಯ ವಲಸೆಗಾರರನ್ನು ನಿರ್ಬಂಧಿಸುವ ವಿಧೇಯಕಕ್ಕೊಂದು ತಿದ್ದುಪಡಿ ತಂದಿದೆ. ಇದರನ್ವಯ ೧೯೫೩ನೇ ಫೆಬ್ರವರಿ ೧೦ನೇ ತಾರೀಕಿನ ಮೇಲೆ ಮದುವೆಯಾದ ಸ್ತ್ರೀಯರೂ ಹುಟ್ಟಿದ ಮಕ್ಕಳೂ ದಕ್ಷಿಣ ಆಫ್ರಿಕಾವನ್ನು ಪ್ರವೇಶಿಸಲಾರರು. ಆ ತಾರೀಕಿನೊಳಗೆ ಮದುವೆಯಾದ ಪುರುಷರ ಪತ್ನಿಯರು ೧೯೫೩ನೇ ಫೆಬ್ರುವರಿ ೧೦ನೇ ತಾರೀಕಿನೊಳಗೆ ದಕ್ಷಿಣ ಆಫ್ರಿಕಾವನ್ನು ಬಂದು ಸೇರಬೇಕು. ಈ ತಾರೀಕಿನೊಳಗೆ ಹುಟ್ಟಿದ ಮಕ್ಕಳನ್ನು ೧೯೫೬ನೇ ಫೆಬ್ರವರಿಯೊಳಗೆ ಕರೆಸಿಕೊಳ್ಳಬೇಕು. ಆ ಮೇಲೆ ಯಾರಿಗೂ ಪ್ರವೇಶವಿಲ್ಲ. ಇದರ ಪರಿಣಾಮವಾಗಿ ಸಾವಿರಾರು ಭಾರತೀಯ ಸ್ತ್ರೀಯರು ತಮ್ಮ ಗಂಡಂದಿರೊಡನೆ ಬಾಳುವ ಅವಕಾಶವನ್ನು ಕಳೆದುಕೊಳ್ಳುವರು. ಪುರುಷರು ಭಾರತೀಯ ಮಹಿಳೆಯನು ಲಗ್ನವಾಗುವಂತಿಲ್ಲ. ಮಕ್ಕಳು ತಾಯಿ-ತಂದೆಯರ ಕೂಡೆ ಇರಲೂ ಅಸ್ಪದ ತಪ್ಪುವುದು. ಎಲ್ಲಿಯ ವರೆಗೆ ಇದು ಹೋಗುವುದೆಂದರೆ—ದಕ್ಷಿಣ ಆಫ್ರಿಕದಲ್ಲಿ ವಾಸಿಸುವ ದಂಪತಿಗಳು ಹೊರ ಪ್ರಾಂತಕ್ಕೆ ವಿಹಾರಕ್ಕೋಸ್ಕರ ಪ್ರಯಾಣಿಸಿದ ಕಾಲದಲ್ಲಿ ಶಿಶು ಜನನವಾದರೆ ಆ ಮಗುವನ್ನು ದಕ್ಷಿಣ ಆಫ್ರಿಕೆಗೆ ತರುವಂತಿಲ್ಲ. ಹೀಗೆ ಹೆತ್ತವರಿಂದ ಮಕ್ಕಳನ್ನು, ಗಂಡನಿಂದ ಹೆಂಡತಿಯನ್ನು ಮಲಾನರು ಪ್ರತ್ಯೇಕಿಸುತ್ತಾರೆ! ಇದರ ಜೊತೆಗೆ ನ್ಯಾಯಾಲಯಗಳು ಕೂಡದೆಂದು ಹೇಳಿದ್ದ—ವರ್ಣೀಯರ ಪ್ರತ್ಯೇಕ ಮತದಾರ ಯಾದಿಗಳನ್ನು ತಯಾರಿಸಲು ಅವರೊಂದು ಮಸೂದೆ ತಂದರು. ವಿರೋಧಿ ಗುಂಪು ತನ್ನ ಸ್ವಾರ್ಥದ ಉದ್ದೇಶದಿಂದ ಮಲಾನರಿಗೆ ಇದಿರು ನಿಂತುದರಿಂದ ಅವರು ಘಟನಾ ತಿದ್ದುಪಡಿಗೆ ಅಧಿಕಾರ ಪಡೆಯದೆ ಮುಖಭಂಗ ಹೊಂದಿದರು. ಆದರೇನು? "ಬೇರೆ ಉಪಾಯವಿದೆ" ಎಂದವರು ಆತ್ಮವಿಶ್ವಾಸದ ಮಾತನ್ನಾಡುವುದು ನಿಲ್ಲಿಸಿಲ್ಲ.

ಉಡುಪಿ

ಬಿಗಮಿ ಏಕ್ಟಿನಂತೆ ಶಿಕ್ಷೆ—ಕಟಪಾಡಿ ಕಸಬಾ ಅಕ್ಕು ಪೂಜಾರ್ತಿ ಎಂಬವಳು ತನ್ನ ಗಂಡ ಮತ್ತು ಇತರ ಐವರ ಮೇಲೆ 1949ರ ಮದ್ರಾಸು ಹಿಂದೂ (ಬಿಗಮಿ ಪ್ರಿವೆನ್ಶನ್ ಮತ್ತು ಡೈವೋರ್ಸ್) ಏಕ್ಟ್ VIರ (ಅಂದರೆ ಮೊದಲನೆಯ ಹೆಂಡತಿ ಯಾ ಗಂಡನು ಜೀವಂತರಾಗಿರುವಾಗಲೇ ಇನ್ನೊಬ್ಬ ಹೆಂಡತಿ ಯಾ ಗಂಡನನ್ನು ಮದುವೆ ಮಾಡಿಕೊಳ್ಳುವ ಅಪರಾಧ) ಸೆಕ್ಷನ್494 I.P.C. ಮತ್ತು 4(4)ರ ಅನ್ವಯ ಉಡುಪಿ ಸ್ಪೆಶಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಲ್ಲಿ ದೂರು ಕೊಟ್ಟುದುದರ ವಿಚಾರಣೆಯಾಗಿ ಮೆಜಿಸ್ಟ್ರೇಟ್ ಕೆ. ಕೃಷ್ಣಯ್ಯನವರು 19-9-52ರಲ್ಲಿ ತೀರ್ಪುಕೊಟ್ಟು ಒಂದನೇ ಆರೋಪಿ(ಗಂಡ)ಗೆ 4 ತಿಂಗಳ ಕಠಿಣ ಸಜೆ ಮತ್ತು ರೂ 100 ಜುಲ್ಮಾನೆ, ಯನ್ನೂ, 3, 4, ಮತ್ತು 6ನೇ ಆರೋಪಿಗಳಿಗೆ ರೂ 100/-ರಂತೆ ಜುಲ್ಮಾನೆಯನ್ನೂ ವಿಧಿಸಿರುವರು.

ದುರ್ಮರಣ—ಇಲ್ಲಿಯ ಸರಕಾರಿ ಹೆಂಗಸರ ತರಬೇತಿ ಶಾಲೆಯ ಶಿಕ್ಷಕಿ ಅ... ಎಂಬವರು ... ೧೬ನೇ ರಾತ್ರಿ ತಮ್ಮ ಮನೆಯ ... ಕಟ್ಟಡದಿಂದ ಬಿದ್ದು ಮೃತಪಟ್ಟಿರುವರು. ಮರುದಿನ ಸರಕಾರಿ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರಿಂದ ಶವಪರೀಕ್ಷೆ ನಡೆದು ಆತ್ಮಹತ್ಯೆಯೆಂದು ತೀರ್ಮಾನಿಸಲಾಗಿದೆ ಎಂದು ತಿಳಿದು ಬರುತ್ತದೆ.

(ಉಡುಪಿಯ ಇತರ ಸುದ್ದಿಗೆ ಮುಂದಿನ ಪುಟದ 3ನೇ ಕಲಂ ನೋಡಿರಿ.)

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಶ್ರೀಕೃಷ್ಣಾರ್ಜುನರ ಮಾತುಗಾರಿಕೆಯ ಹುರುಳನ್ನು ತಿಳಿಯದೆ ಶ್ರೀಕೃಷ್ಣಾಷ್ಟಮಿಯನ್ನು ಎಷ್ಟು ವಿಜೃಂಭಣೆಯಿಂದ ಆಚರಿಸಿದರೇನು?

ಬಲ್ಲಿರಾ?

'ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" — ಪದ್ಮಪುರಾಣ.

"ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

'ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಸಿಗದಿದ್ದರೆ ಮತ್ತೊಂದು ಸಿಕ್ಕುತ್ತದೆ." —ಮಹಾತ್ಮಾ ಗಾಂಧಿ.

'ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯವಶ್ಯವಾದದ್ದು." —ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯು ಎಲ್ಲೆಲ್ಲಿಯೂ ಮಾರಾಟಕ್ಕೆ ಸಿಗುತ್ತದೆ. ಬೆಲೆ 0—12—0

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಿ. ಸೂ.—ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.



ಬರೇ ರೂ-5ಕ್ಕೆ 15ಜ್ಯುವೆಲಿನ ರಿಸ್ಟ್ ವಾಚು

15 ವರ್ಷ ಗ್ಯಾರಂಟಿ ಇರುವ, 15 ಜ್ಯುವೆಲಿನ ರಿಸ್ಟ್ ವಾಚುಗಳು ರೂ. 5ಕ್ಕೆ ದೊರೆಯುತ್ತವೆ

ಬೇಗನೆ ಬರೆಯಿರಿ:

American Swiss Watch Suppliers,
Putlighar (N. U.) Amritsar.

ಉದ್ಯಾವರ—ಇದೇ ತಾ. 15ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಉದ್ಯಾವರದ ಬ್ರಾಂಚ್ ಪೋಸ್ಟ್ ಆಫೀಸನ್ನು ಸಬ್ ಆಫೀಸನ್ನಾಗಿ ತೆರೆಯುವ ಸಮಾರಂಭದ ಅಧ್ಯಕ್ಷತೆ ವಹಿಸಿ ಪಂಚವಾರ್ಷಿಕ ಯೋಜನೆ ಮೊದಲಾದ ವಿಷಯಗಳ ಕುರಿತು ಮಾತನಾಡಿದರು. ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟರು ಸ್ವಾಗತ ಮಾತುಗಳನ್ನಾಡಿದರು. ಉದ್ಯಾವರ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಯು. ಭಾಸ್ಕರ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹಿರೇ ಬೆಟ್ಟು—ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರ ನೇತೃತ್ವದಲ್ಲಿ ವ್ಯವಸ್ಥೆ ಮಾಡಲಾದ ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯನ್ನು ಇದೇ ತಾ 16ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಉದ್ಘಾಟಿಸಿದರು ಶ್ರೀ ಟಿ. ಎ ಪೈ, ಎಮ್. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಿಂದೆ ಬಿದ್ದ ಈ ಕ್ಷೇತ್ರಕ್ಕೆ ವಿದ್ಯೆಯ ಅನುಕೂಲತೆ ಒದಗಿದಂತಾಯಿತು.

ಬ್ರಹ್ಮಾವರ - ಸ್ಥಳೀಯ ಸಿರಿಯನ್ ಕಥೋಲಿಕ್ ಇಗರ್ಜಿಯ ಗುರುಗಳೂ ಸ್ವಂಟ್ ಮೇರಿ ಸಿರಿಯನ್ ಹೈಸ್ಕೂಲು ಸ್ಥಾಪಕರೂ ಆದ ರೆ| ಫಾ| ಪಿ ಜೆ. ಕೋಶಿಯವರು ರಕ್ತದ ಒತ್ತಡದಿಂದಾಗಿ ಹೃದಯ ಕ್ರಿಯೆ ನಿಂತು ಇದೇ ತಾ 14ರಲ್ಲು ಸಂಜೆ ತಮ್ಮ ನಿವಾಸದಲ್ಲಿ ನಿಧನ ಹೊಂದಿದರು.

ಮೂಲ್ಕಿ—ಇದೇ ತಾ 5ರಿಂದ 'ಶ್ರೀ ಕಾರ್ನಾಡ್ ಸದಾಶಿವ ರಾವ್ ವಾಚನಾಲಯ'ದ ಕಡೆಯಿಂದ ವಯಸ್ಕರ ಶಿಕ್ಷಣದ ಕ್ಲಾಸುಗಳೂ ಎಸ್. ಎಸ್. ಎಲ್. ಸಿ ಹಿಂದೀ ಪ್ರಾಥಮಿಕ ವಿದ್ಯಾರ್ಥಿಗಳಿಗೂ ಧರ್ಮಾರ್ಥ ಶಿಕ್ಷಣ ಕೊಡುವ ಕಾರ್ಯವು ಪ್ರಾರಂಭವಾಗಿದೆ.

ಅಯ್ಯನ ಕಟ್ಟೆ—ಶ್ರೀ ಕೆ. ರಾಮಚಂದ್ರ ನಾಯಕರ ಅಧ್ಯಕ್ಷತೆಯಲ್ಲಿ ಇದೇ ತಾ 16ರಲ್ಲು 'ಕುಮಾರ ವಿಜಯ' ಯಕ್ಷಗಾನ ಕಾಲಕ್ಷೇಪವು ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆ ಯಿಂದಜ ಗಿತು,

ಬೆಳ್ಳಾರೆ:—ಇದೇತಾ 13ರಲ್ಲು ಪಂಡಿತ ಶ್ರೀ ಶಂಕರ ನಾರಾಯಣ ಭಟ್ಟರು 63ನೆ ವಯಸ್ಸಿನಲ್ಲಿ, ಸ್ವಗೃಹದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದ ವೆನಿಸುತ್ತದೆ.

ಕುಂಬಳೆ—ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಬಿ. ನಾರಾಯಣ ಹೆಗ್ಡೆಯವರು ಇದೇ ತಾ 15 ಮತ್ತು 16 ರಲ್ಲೂ, ಜಿಲ್ಲಾ ಹರಿಜನ ವೆಲ್‌ಫೇರ್ ಆಫೀಸರ್ ಶ್ರೀ ಪಿ. ಎಸ್. ಶಿವಪ್ಪ ಸೆಟ್ಟರು ತಾ. 17ರಲ್ಲು ಮೊಕ್ಕಾಂ ಮಾಡಿದರು.

ಸ್ಥಳೀಯ ಫಿಶರೀ ಕೊಟೆಜ್ ಇಂಡಸ್ಟ್ರಿಯಲ್ ಫೆಡರೇಶನಿನ ಡೈರೆಕ್ಟರರ ಸಭೆಯು ಜರಗಿ ಶ್ರೀಗಳಾದ ಬಿ. ಶಾಂತಪ್ಪ ರೈ, ಕೆ. ಕಣ್ಣಪ್ಪ, ಕೆ. ಎಸ್ ಪೆರುಮಾಳನ್ನು ಅವರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಪುತ್ತೂರು—ತಾ. 2-10 53ರಲ್ಲು ಬೆಳಿಗ್ಗೆ 9—30ಕ್ಕೆ ಶ್ರೀ ಸ್ವಾಮಿ ವಿವೇಕಾನಂದ ಲೈಬ್ರೆರಿಯ ಆಶ್ರಿತ ಸಮಿತಿಯವರು ಸ್ವಾಮಿ ವಿವೇಕಾನಂದ ಲೈಬ್ರೆರಿ ಹಾಲಿನಲ್ಲಿ ಗಾಂಧೀಜಿಯವರ ಜನ್ಮದಿನವನ್ನು ಡಿಪ್ಯುಟಿ ಕಲೆಕ್ಟರ್ ಶ್ರೀ ಬಿ. ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಚರಿಸಲಿರುವರು.

ಪೆರ್ಡೂರು— ತಾ 19-9 53ರಲ್ಲಿ ಇಲ್ಲಿಯ ಜನ ಪ್ರಿಯರಾಗಿದ್ದ ಹಾಗೂ ಗೌರವಸ್ಥ ಮನೇತನದಲ್ಲಿ ಜನಿಸಿದ ಶ್ರೀ ಪದ್ಮನಾಭ ಭಂಡಾರಕರ್‌ರು ತಮ್ಮ 91ನೇ ವರ್ಷದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕಳೆದ 50, 60 ವರ್ಷಗಳಿಂದಲೂ ವ್ಯಾಪಾರೀ ಕ್ಷೇತ್ರದಲ್ಲೂ ಎಲ್ಲರ ಮನ್ನಣೆಗೆ ಪಾತ್ರರಾಗಿದ್ದರು. ವೃದ್ಧ ಪಡುವ ಮುಂಚಿನ ದಿವಸದ ವರೆಗೂ, ತನ್ನ ದೈನಂದಿನ ಕಾರ್ಯಗಳನ್ನು ತಾವೇ ಮಾಡುವಷ್ಟರ ಮಟ್ಟಿಗಿನ ದೇಹ ಧಾರ್ಢ್ಯತೆಯನ್ನು ಪಡೆದವರಾಗಿದ್ದರು.

ಉಡುಪಿ

ಶ್ರೀ ಕಡೆಕಾರು ಗೋಪಾಲಕೃಷ್ಣರಾಯರ ನಿಧನ–ಉಡುಪಿ ಹೆಸರಾಂತ ಸಾ

ಹಿತ್ಯಗಳೂ ಹಲವಾರು ಚಟುವಟಿಕೆಗಳನಾಯಕರೂ ಆಗಿದ್ದ ಶ್ರೀ ಕಡೆಕಾರು ರಾಜಗೋಪಾಲ ಕೃಷ್ಣ ರಾಯರು ಇದೇ ತಾ 17ರಲ್ಲು ಬೆಳಿಗ್ಗೆ ತಮ್ಮ 68ನೇ ವಯಸ್ಸಿನಲ್ಲಿ ಸ್ವಗೃಹದಲ್ಲಿ ಪರಲೋಕವಾಸಿಗಳಾದರೆನ್ನಲು ವಿಷಾದವೆನಿಸುತ್ತದೆ. ಶ್ರೀಯುತರ ನಿಧನದ ಸಂತಾಪ ಸೂಚಕವಾಗಿ ಕಡೆಕಾರು ಕುತ್ಪಾಡಿಯಲ್ಲಿ ಸರತಾಳ ಆಚರಿಸಲ್ಪಟ್ಟಿತು. ಪಂಚಾಯತ ಕ್ಷೇತ್ರದ ಎಲ್ಲಾ ಶಾಲೆ ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು. ಶ್ರೀ ರಾಯರ ಸ್ಮಶಾನ ಯಾತ್ರೆಯಲ್ಲಿ ಸರ್ವರೂ ಭಾಗವಹಿಸಿ ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು. ಸಾಹಿತ್ಯ ಪ್ರಚಾರವು ಏನೇನೂ ಇಲ್ಲದ ಹಿಂದಿನ ಕಾಲದಲ್ಲಿ ಇವರು "ಕೃಷ್ಣ ಸೂಕ್ತಿ" ಎಂಬ ಮಾಸ ಪತ್ರಿಕೆಯನ್ನು ಹೊರಡಿಸಿ ಕೆಲವು ವರ್ಷ ನಡೆಸಿದ್ದರು. ಸುಮಾರು 10 ವರ್ಷ ಕಾಲ ಪಂಚಾಯತ ಬೋರ್ಡಿನ ಅಧ್ಯಕ್ಷರಾಗಿ ಗ್ರಾಮಸ್ಥರ ಸೇವೆ ಸಲ್ಲಿಸಿದ್ದರು. ಏಳೆಂಟು ವರ್ಷಗಳ ಕೆಳಗೆ ಉಡುಪಿಯಲ್ಲಿ ಸ್ಥಾಪಿತವಾದ ಕರ್ನಾಟಕ ಸಂಘದ ಸ್ಥಾಪಕರಲ್ಲೊಬ್ಬರಾಗಿ ಕೆಲವು ವರ್ಷ ಅದರ ಅಧ್ಯಕ್ಷರಾಗಿದ್ದರು. ದಿವಂಗತರ ಆತ್ಮಕ್ಕೆ ಶಾಂತಿ ಕೋರುವೆವಲ್ಲದೆ ಅವರ ದುಃಖಿ ಕುಟುಂಬದ ಅಪಾರ ದುಃಖದಲ್ಲಿ ಸಹ ಸಂತಾಪ ಪಡುವೆವು

ಕರ್ನಾಟಕ ಸಂಘದ— ಕಾರ್ಯನಿರ್ವಾಹಕ ಸಭೆಯು ಇದೇ ತಾ 18ರಲ್ಲು ಸೇರಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಎಮ್. ಆರ್. ಶ್ರೀನಿವಾಸ ಮೂರ್ತಿ ಮತ್ತು ಶ್ರೀ ಕಡೆಕಾರು ಗೋಪಾಲಕೃಷ್ಣ ರಾಯರ ಅಕಾಲ ನಿಧನಗಳ ಬಗ್ಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿ ಅವರುಗಳ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯ ಮಾಡಿತು.

ಫ್ರೊಗ್ರೆಸ್ಸಿವ್‌ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು.

ಇವರ ಇನ್ಸ್‌ಪೆಕ್ಟರರ ಕಾರ್ಯಾಲಯದ ಆರಂಭೋತ್ಸವವು ಉಡುಪಿಯ ತೆಂಕಪೇಟೆಯಲ್ಲಿ ತಾ. 21ರಲ್ಲಿ ಜರಗಿತು. ಸಂಜೆ ಉಪಾಹಾರಕೂಟವಿತ್ತು. ನಗರದ ಹಲವು ಮಹನೀಯರು ಆಮಂತ್ರಿತರಾಗಿದ್ದರು.

ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಬಿ. ವಿಟ್ಠಲರಾಯರು ಹರ್ಷಚಿತ್ತದಿಂದ ಸರ್ವರನ್ನೂ ಸ್ವಾಗತಿಸಿದರು.



ಜನಪ್ರಿಯ ಇನ್ಸ್‌ಪೆಕ್ಟರ ಶ್ರೀ. ಎ. ಬಿ. ಕೃಷ್ಣರಾಜರು ತಮ್ಮ ಸ್ವಾಭಾವಿಕ ಮುಗುಳು ನಗುವಿನೊಂದಿಗೆ ಆಭಾರ ಸೂಚಿಸಿದರು.

ಯಕ್ಷಗಾನ ಕಲಾಮಂಡಲದ ಕಾರ್ಯ ಸಮಿತಿಯ ಅವಸರದ ಸಭೆಯು ತಾ 21ರಲ್ಲಿ ಶ್ರೀ ಕೆ. ಸಿ ರಾಮಕೃಷ್ಣ ತಂತ್ರಿಗಳ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳ ನಿವಾಸದಲ್ಲಿ ಜರಗಿ ಶ್ರೀ ಕಡೆಕಾರು ರಾಜಗೋಪಾಲಕೃಷ್ಣ ರಾಯರ ನಿಧನದ ಬಗ್ಗೆ ಸಂತಾಪ ಸೂಚಿಸುವ, ದಿವಂಗತರ ಪತ್ನೀ ಪುತ್ರಾದಿ ಶೋಕಿತ ಬಂಧುಗಳಿಗೆ ಸಹ ವೇದನೆ ವ್ಯಕ್ತಪಡಿಸುವ, ನೃತ್ಯರು ಯಕ್ಷಗಾನ ಮಂಡಲಿಯನ್ನು ಸ್ಥಾಪಿಸಿ ಪ್ರೋತ್ಸಾಹಿಸಿ ಆ ಕಲೆಗೆ ಸಲ್ಲಿಸಿದ ಸೇವೆಯ ನೆನಪಿಗಾಗಿ ಅವರ ಭಾವಚಿತ್ರವನ್ನು ಸಂಘದಲ್ಲಿ ಅನಾವರಣ ಮಾಡುವ ಹಾಗೂ ಅವರಿಗೆ ಯೋಗ್ಯ ಸ್ಮಾರಕ ರಚಿಸುವ ಕುರಿತು ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಶೆಟ್ಟರಿಂದ ಠರಾವುಗಳು ಮಂಡಿಸಲ್ಪಟ್ಟು ಸ್ವೀಕರಿಸಲ್ಪಟ್ಟವು.

ಕಿಲ್ಲೆ ಸ್ಮಾರಕ ಗ್ರಂಥ

ಕಿಲ್ಲೆಯವರ ಬಹುಮುಖ ಸಾರ್ವಜನಿಕ ಕಾರ್ಯಕ್ಷೇತ್ರ, ಯೋಗ್ಯತೆ ಮೊದಲಾದುವನ್ನು ವಿವರಿಸುವ 160 ಪುಟಗಳ ಸಚಿತ್ರ ಪುಸ್ತಕ

ಶ್ರೀಗಳಾದ ಎಚ್. ಆರ್. ಮಲ್ಯ ಮತ್ತು ಕೆ. ಕೆ. ಶೆಟ್ಟರಿಂದ ಸಂಗ್ರಹಿಸಲ್ಪಟ್ಟು ಕಿಲ್ಲೆಸ್ಮಾರಕ ಸಮಿತಿಯಿಂದ ಪ್ರಕಟಿಸಲ್ಪಟ್ಟುದು. ಬೆಲೆ ರೂ. 1 0 0

ಪ್ರತಿಗಳು ನವಯುಗ ಪ್ರೆಸ್, ಉಡುಪಿ, ಇಲ್ಲಿ ದೊರೆಯುತ್ತವೆ.

ವಿವೇಕಿಗಳು..........

ತಾವು ಚಿಕ್ಕಂದಿನಲ್ಲಿ ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸುತ್ತ ಕುಳಿತುಕೊಳ್ಳುವುದಿಲ್ಲ. ತಮಗೆ ಬಿಡುವಿದ್ದಾಗ 'ಸುಲಭದಲ್ಲಿ ಇಂಗ್ಲಿಷ್' ಎಂಬ ಆಂಗ್ಲ ಸ್ವಯಂಬೋಧಿನಿಯ ಸಹಾಯದಿಂದ ಸಾಕಷ್ಟು ಇಂಗ್ಲಿಷ್ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಅಲ್ಪಾವಧಿಯಲ್ಲಿಯೇ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಳ್ಳಬಹುದು. ಬೆಲೆ ರೂ. 1-8-0 ಮಾತ್ರ. ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ, ಇವರಿಗೆ ಬರೆಯಿರಿ.

ತಾರೀಕು 22—9—1953ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ತ್ರಿವೇದಿ ಪ್ರೊಡಕ್ಷನ್ಸರವರ

"ಜಲ್ ಪರಿ"

ಭೂಮಿಕೆಯಲ್ಲಿ: ಅಶೋಕ್ ಕುಮಾರ್, ನಳಿನಿ ಜಯವಂತ್, ತಿವಾರಿ, ಬಿಪಿನ್‌ಗುಪ್ತ, ಮತ್ತು ಗೀತಾಬಾಲಿ.

ಶೀಘ್ರದಲ್ಲಿಯೇ:

"ಹಮಾರಿ ದುನಿಯಾ"

ಕಿಶೋರ್‌ಸಾಹು, ಅಶಾ ಮಾಥುರ್, ಮೊದಲಾದವರು.

"ಜರ್ನಿ ಓಫ್ ಡಾಕ್ಟರ್ ಕೊಟ್ನೀಸ್" (ಇಂಗ್ಲಿಷ್ ಚಿತ್ರ)

ಶಾಂತಾರಾಂ, ಜಯಶ್ರೀ, ಮೊದಲಾದವರು.

ಉಡುಪಿ ಡಿ. ಮುನ್ಸಿಫ್. ಕೋರ್ಟಿನಲ್ಲಿ.

O. P. No. 37/ 1953.

ರಾಮಪ್ಪ ಕೆ. ಸುವರ್ಣ (ಕುಟುಂಬದ ಯಜಮಾನನಾಗಿ)–ಬಾರಾ ಎಮ್. ಸುವರ್ಣರ ಅಳಿಯ—ಉಡುಪಿ-ತಾಲ್ಲೂಕ-ತೆಂಕ ಗ್ರಾಮದಲ್ಲಿರುವವನು. ಅರ್ಜಿದಾರ.

ಈ ಮೂಲಕ ಸರ್ವ ಜನರಿಗೂ ತಿಳುಹಿಸುವುದೇನೆಂದರೆ.

ಅರ್ಜಿದಾರನ ಕುಟುಂಬದ ಮುಂಚಿನ ಯಜಮಾನನಾದ ಮೃತ ಬಾರಾ ಎಮ್. ಸುವರ್ಣರು ಸದ್ರಿ—ಕುಟುಂಬದ ಯಜಮಾನನಾಗಿ ಗಳಿಸಿದ ಈಸ್ಟ್ ಎಂಡ್ ವೆಸ್ಟ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ, ಎಂಬ ಸಂಸ್ಥೆಯ ಪೋಲಿಸಿ ನಂಬ್ರ—37058ರ ಬಾಬ್ತು ಬರತಕ್ಕ ಬ್ಯವೇಜನ್ನು—ವಸೂಲು ಮಾಡುವರೆ ಸದ್ರಿ—ಕುಟುಂಬದ ಈಗಿನ ಯಜಮಾನನಾದ ಅರ್ಜಿದಾರನ ಹೆಸರಿಗೆ ವಾರೀಸ್ ಸರ್ಟಿಫಿಕೇಟ್ ಕೊಡಬೇಕಾಗಿ ಅರ್ಜಿದಾರನು ಮಾಡಿದ ಅರ್ಜಿಯು ತಾ 10 10-1953 ಕ್ಕೆ ಇಟ್ಟದೆ. ಈ ಬಾಬಿನಲ್ಲಿ ಆಕ್ಷೇಪ ಉಳ್ಳವರು ಸದ್ರಿ—ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರನ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

U. B. Krishna Rao

ಅರ್ಜಿದಾರನ ಕಡೆ ಎಡ್ವೊಕೇಟ್

ಉಡುಪಿ ತಾ 18-9-1953

ಮಂಗಳೂರು

ಫಸ್ಟ್ ಎಯಿಡ್ ಸರ್ಟಿಫಿಕೇಟುಗಳ ಊರ್ಜಿತ—ಸ್ಯೆಂಟ್ ಜೋನ್ ಎಂಬುಲೆನ್ಸ್ ಎಸೋಸಿಯೇಶನ್, ಇದರ ಮಂಗಳೂರು ಜಿಲ್ಲಾ ಸೆಂಟರಿನಿಂದ ತಾ 1-1-1950ರ ನಂತರ ಕೊಡಲ್ಪಟ್ಟ ಸರ್ಟಿಫಿಕೇಟುಗಳು ಕೊಟ್ಟ ತಾರೀಕಿನಿಂದ ಮೂರು ವರ್ಷಗಳ ಅವಧಿಗೆ ಊರ್ಜಿತದಲ್ಲಿರುವವು. ಈ ಅವಧಿ ದಾಟಿದ ಬಳಿಕ ಎವಾರ್ಡ (ಸರ್ಟಿಫಿಕೇಟುಗಳ ಬಗ್ಗೆ ವೌಚರ್, ಮೆಡಲಿಯನ್ ಇತ್ಯಾದಿ ಅಥವಾ ಬ್ರಿಗೇಡಿಗೆ ಸೇರುವ ಅರ್ಹತೆ) ಅವನ್ನು ಹೊಂದುವುದು ಈ ಎಸೋಸಿಯೇಶನ್ ಪರಿಗಣಿಸಲಾಗದು. ಅಂಥ ಸರ್ಟಿಫಿಕೇಟುಗಳನ್ನು ಊರ್ಜಿತದಲ್ಲಿರಬೇಕಾದರೆ ಮೂರು ವರ್ಷಗಳ ಅವಧಿಯೊಳಗಾಗಿ ಪುನಹ ಪರೀಕ್ಷೆ ಕೊಟ್ಟು ವೌಚರ್ ಸರ್ಟಿಫಿಕೇಟನ್ನು ಪಡೆಯಬೇಕು. ವೌಚರ್ ಅಥವಾ ಮೆಡಲಿಯನ್ ಸರ್ಟಿಫಿಕೇಟುಗಳಿಗೆ ಯಾವ ಅವಧಿ ಬಾಧಕವೂ ಇಲ್ಲದೆ ಇರುವುದರಿಂದ ಅವು ಖಾಯಂ ಸರ್ಟಿಫಿಕೇಟುಗಳು ಎಂದು ಮಂಗಳೂರು ಜಿಲ್ಲಾ ಕೇಂದ್ರದ ಸ್ಯೆಂಟ್ ಜೋನ್ ಎಂಬುಲೆನ್ಸ್ ಎಸೋಸಿಯೇಶನ ಮತ್ತು ಇಂಡಿಯನ್ ರೆಡ್‌ಕ್ರೋಸ್ ಸೊಸೈಟಿಯ ಗೌರವ ಕಾರ್ಯದರ್ಶಿ ಹಾಗೂ ಖಜಾನ್ಚಿಗಳಾದ ಡಾ॥ ಕೆ. ಕೆ. ಹೆಗ್ಡೆಯವರು ತಿಳಿಸುತ್ತಾರೆ.

ಭಾಷಣ—ಜಪಾನಿನ ಸಮಾಜವಾದಿ ಪಕ್ಷದ ಸದಸ್ಯರೂ ಆಕ್ಷಿಯ ಪಾರ್ಲಿಮೆಂಟಿನ ಮಾಜಿ ಸದಸ್ಯರೂ ಆದ ಶ್ರೀ ಯೋಶಿಕಿ ಹೋಶಿನೊರವರು ಇದೇ ತಾ. 18ರಲ್ಲಿ ಸ್ಥಳೀಯ ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ಜಪಾನಿನ ರಾಜಕೀಯ ವಿಚಾರವಾಗಿ ಮಾತನಾಡಿದರು. ಕಳೆದ ಯುದ್ಧದಲ್ಲಿ ಜಪಾನನ್ನು ಅಮೇರಿಕವು ಆಕ್ರಮಿಸಿದ ಬಳಿಕ ಅಲ್ಲಿನ ಪ್ರಗತಿ, ರಾಜಕೀಯ ಪಕ್ಷಗಳ ಬೆಳವಣಿಗೆ ಇತ್ಯಾದಿಗಳನ್ನು ತಿಳಿಸಿ ಅಲ್ಲಿ ಈಗ ಸಮಾಜವಾದಿ ಪಕ್ಷವು ಬೆಳೆಯುತ್ತಿರುವುದನ್ನು ತಿಳಿಸಿದರು. ಅಂದಿನ ಸಭೆಗೆ ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷರಾಗಿದ್ದರು. ಜಪಾನಿನ ಸದ್ಯಸ್ಥಿತಿಯಲ್ಲಿ ಅವರ ಪಕ್ಷವು ಅಹಿಂಸಾತ್ಮಕ ಸತ್ಯಾಗ್ರಹವೆಂಬ ವಿಚಾರವನ್ನು ಪತ್ರಿಕಾ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದಾಗ ವಿವರಿಸಿದರು.

ಅಭಿನಂದನೆ—ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯ ಪಾರ್ಲಿಮೆಂಟಿನ ವಿಶೇಷ ಸಭೆಯೊಂದು ಇದೇ ತಾ 17ರಲ್ಲಿ ಸೇರಿ ಸಂಯುಕ್ತ ರಾಷ್ಟ್ರಸಂಘಕ್ಕೆ ಅಧ್ಯಕ್ಷೆಯಾಗಿ ಚುನಾಯಿತರಾದ ಶ್ರೀ ಮತಿ ವಿಜಯಲಕ್ಷ್ಮಿ ಪಂಡಿತೆಯನ್ನು ಅಭಿನಂದಿಸುವ ನಿರ್ಣಯವಾಯಿತು.

ಕಂಕನಾಡಿ ಭಕ್ತ ಪರಿಶೋಧನಾ ಕ್ಷೇತ್ರದಲ್ಲಿ ರೈತದಿನಾಚರಣೆಯು—ಇದೇ ತಾ 19ರಂದು ಶ್ರೀ ಆರ್. ಎಸ್. ಸಪ್ರೂರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ನಯಂಪಳ್ಳಿ ರಾಮರಾಯರು ಸ್ವಾಗತಭಾಷಣ ಮಾಡಿ ರೈತದಿನದ ಮಹತ್ವವನ್ನು ವಿವರಿಸಿದರು. ಕ್ಷೇತ್ರದ ಸೂಪರಿಂಟೆಂಡೆಂಟರಾದ ಶ್ರೀ ಕೆ. ಹನುಮಂತರಾಯರು ಪರಿಶೋಧನಾ ಕ್ಷೇತ್ರದಲ್ಲಿ ನಡೆಯುತ್ತಿರುವ ಪ್ರಯೋಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಜಿಲ್ಲಾ ಕೃಷಿ ಆಫೀಸರಾದ ಶ್ರೀ ಪಿ. ಎನ್. ನಾಯ್ಡುರವರು ತಮ್ಮ ಇಲಾಖೆಯ ಮತ್ತು ಪರಿಶೋಧನಾ ಕ್ಷೇತ್ರದ ಕಾರ್ಯಗಳನ್ನು ವಿವರಿಸಿ, ತಮ್ಮ ಇಲಾಖೆಯು ಯಾವಾಗಲೂ ರೈತರ ಸಹಾಯಕ್ಕೆ ಸಿದ್ಧರೆಂದೂ, ರೈತರು ಆಧುನಿಕ ಉಪಕರಣ ಮತ್ತು ವಿಧಾನಗಳನ್ನು ಅನುಸರಿಸಬೇಕೆಂದೂ ಕೇಳಿಕೊಂಡರು. ಜಿಲ್ಲಾ ಮಾರ್ಕೆಟ್ ಕಮಿಟಿ ಸೆಕ್ರೆಟರಿ ಶ್ರೀ ಕೆ. ತೇಜಪ್ಪಸೆಟ್ಟರು, ಬೆಳೆಗಳ ಮಾರಾಟದ ಕುರಿತು ವಿವರಿಸಿ ವ್ಯಾಪಾರದಲ್ಲಿ ಮಧ್ಯವರ್ತಿ ಜನರನ್ನು ಬಿಟ್ಟುಬಿಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಶ್ರೀಗಳಾದ ಆರ್. ಎಸ್. ಶಿ. ಎಸ್. ರಾಮರಾವ್, ಎಚ್. ನಾರಾಯಣರಾವ್ ಆನಂದರೈ ಮತ್ತು ಎಂ.ಜೆ. ಸೋನ್ಸ್‌ರು ಕೃಷಿಕ್ಷೇತ್ರದಲ್ಲಿ ತಮ್ಮ ಅನುಭವಗಳನ್ನು ವಿವರಿಸಿದರು. ಕೃಷಿ ಸುಧಾರಣೆ ಬೇಗನೆ ಸಾಧಿಸಬೇಕಾದರೆ ಒಕ್ಕಲು ಹೊಸ ಮಸೂದೆಯು ಬೇಗನೇ ಬರಬೇಕೆಂದೂ ಹೇಳಿದರು.

ಸಂತಾಪ ಸೂಚಕ ಸಭೆ—ಇದೇ ತಾ 20ರಲ್ಲಿ ಶ್ರೀ ಪಿ. ಕೆ. ನಾರಾಯಣನವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸಾಹಿತಿಗಳ ಸಭೆಯೊಂದು ಜರಗಿ ಶ್ರೀಗಳಾದ ಎಮ್. ಆರ್. ಶ್ರೀನಿವಾಸ ಮೂರ್ತಿ, ಕಡೆಕಾರು ರಾಜಗೋಪಾಲ ಕೃಷ್ಣ ರಾವ್, ರಾಜಪುರೋಹಿತ ಮಧುರ ಚೆನ್ನ—ಇವರುಗಳು ಅಕಾಲ ನಿಧನಹೊಂದಿದುದರ ಬಗ್ಗೆ ಸಂತಾಪಸೂಚಿಸಿತು.

ಗೈಡ್ ದಳದ ಉದ್ಘಾಟನೆ—ಸ್ಥಳೀಯ ಮಿಶನ್ ಹ್ಯಾಸ್ಕೂಲಿನಲ್ಲಿ ಇದೇ ತಾ 14ರಲ್ಲಿ ಭಾರತ ಗೈಡ್ ದಳದ ಉದ್ಘಾಟನೆಯನ್ನು ಆಂಧ್ರದ ಸಮಾಜ ಶಿಕ್ಷಣ ಯೋಜನೆ ಡೈರೆಕ್ಟರ್ ಆಗಿ ನೇಮಕಗೊಂಡ ಶ್ರೀ ಭಗವಾನ್ ದಾಸರು ನೆರವೇರಿಸಿದರು. ಶ್ರೀ ಕೆ ಸದಾನಂದ ಹೆಗ್ಡೆಯವರೂ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕೆ. ಎಸ್ ಆರ್. ಬಂಗೇರರ ನಿಧನ—ಮಂಗಳೂರು ನಗರದ ನೀರೇಶ್ವಾಲ್ಯ ಗ್ರಾಮದಲ್ಲಿ ಕಳೆದ ಹಲವು ವರುಷಗಳಿಂದ ಜನಸೇವೆ ಮಾಡುತ್ತಿದ್ದ ಶ್ರೀ ಕೆ. ಎಸ್. ರಾಮ ಬಂಗೇರರು ಇದೇ ತಾ 2?ಲ್ಲಿ ರಾತ್ರಿ ತಮ್ಮ ಸ್ವಗೃಹದಲ್ಲಿ ಪರಲೋಕ ವಾಸಿಗಳಾದುದು ವಿಷಾದಕರ ವಿಷಯ. ದಿವಂಗತರು ಪ್ರಾರಂಭದಲ್ಲಿ ಆರ್ಯ ಸಮಾಜ ಕೆಲಸಗಾರರಾಗಿ ನಂತರ ಕಾಂಗ್ರೆಸಿಗೆ ಸೇರಿ ಅಂತ್ಯ ಕಾಲದವರೆಗೂ ಕಾಂಗ್ರೆಸಿಗರಾಗಿದ್ದರು. ಅವರ ನಿಧನದಿಂದ ನೀರೇಶ್ವಾಲ್ಯ ಗ್ರಾಮಸ್ಥರು ಓರ್ವ ಸಾರ್ವಜನಿಕ ಕೆಲಸಗಾರರನ್ನು ಕಳೆದುಕೊಂಡಂತಾಯಿತು.

ಶ್ರೀ ಕೆ. ಹನುಮಂತಯ್ಯನವರಿಗೆ ಸತ್ಕಾರಕೂಟ—ಮದ್ರಾಸು ಮೊಡರ್ನ್ ಕೆಫೆಯ ಮಾಲೀಕರಾದ ಶ್ರೀ ಕೆ. ಸೀತಾರಾಮರಾಯರು ಇದೇ ತಾ 14ರಲ್ಲಿ ಮೈಸೂರು ಮುಖ್ಯ ಮಂತ್ರಿ ಮಾನ್ಯ ಶ್ರೀ ಕೆ. ಹನುಮಂತಯ್ಯನವರಿಗೆ ತಮ್ಮ ದಾಕ್ಷಪ್ರಸಾದ ಬಂಗ್ಲೆಯಲ್ಲಿ ಉಪಹಾರವಿತ್ತು ಗೌರವಿಸಿದರು. ಮದ್ರಾಸು ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸೀತಾರಾಮರಾಯರು ತಮ್ಮ ಸ್ವಾಗತ ಭಾಷಣದಲ್ಲಿ, ದಕ್ಷಿಣ ಹಿಂದೂಸ್ಥಾನದ ಇಬ್ಬರು ಮುಖ್ಯಮಂತ್ರಿಗಳನ್ನು ತಮ್ಮ ನಿವಾಸಕ್ಕೆ ಬರಮಾಡಿ ಕೊಳ್ಳುವ ಸುಯೋಗ ದೊರೆತುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮಾನ್ಯ ಅತಿಥಿಗಳಿಬ್ಬರೂ ಕಾಲೋಚಿತ ಮಾತುಗಳನ್ನಾಡಿ ಶ್ರೀ ಸೀತಾರಾಮರಾಯರ ಧರ್ಮಭಕ್ತಿಯನ್ನು ಕೊಂಡಾಡಿದರು. ಸಮಾರಂಭಕ್ಕೆ ಮದ್ರಾಸು ಹೈಕೋರ್ಟಿನ ನ್ಯಾಯಾಧೀಶರೂ, ಇತರ ಹೆಸರಾಂತ ಅಧಿಕಾರಿಗಳೂ ಆಮಂತ್ರಿಸಲ್ಪಟ್ಟಿದ್ದರು.

ಕೊಡ್ಲೂರು—(ಹೊಸ ನಗರ) ಇದೇ ತಾ 13ರಂದು ಆರ್. ಎಸ್. ಉಪ್ಪೂರರು, ಅವರ ಅಧ್ಯಕ್ಷತೆಯಲ್ಲಿ ಊರ ಹತ್ತು ಸಮಸ್ತರ ಸಹಯೋಗದಿಂದ 'ಶ್ರೀ ಶಂಕರೇಶ್ವರ ಯಕ್ಷಗಾನ ಕಲಾ ಮಂಡಲಿ' ಸ್ಥಾಪಿಸಲ್ಪಟ್ಟಿತು. ಮಂಡಳಿಗೆ ಶ್ರೀಗಳಾದ ಡಾ॥ ಆರ್. ಎಸ್. ಉಪ್ಪೂರು, ಹೋಟೆಲ್ ಬಚ್ಚ ಸೆಟ್ಟಿ ಮತ್ತು ಅಪ್ಪಿ ಮಹಾಬಲ ಸೆಟ್ಟಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಅನುಕ್ರಮದಿಂದ ಆರಿಸಲ್ಪಟ್ಟರು. ಅಂದು ರಾತ್ರಿ 'ಕರ್ಣಾರ್ಜುನರ ಕಾಳಗ ಮತ್ತು ಕೃಷ್ಣ ವಿವಾಹ' ಯಕ್ಷಗಾನ ತಾಳಮದ್ದಳೆಯು ಶ್ರೀ ಮಲ್ಲೇಶ್ವರ ಮಂಜಪ್ಪಯ್ಯನವರ ಹಾಡುಗಾರಿಕೆಯಿಂದ ನಡೆಯಿತು.

The Popular Insurance Co., Ltd.

HEAD OFFICE: MANGALORE.

ESTD. 1929.

ANNOUNCEMENT

We have pleasure to announce that an Inspector's Office has been opened on 21—9—1953 at Tenkapet, Udipi.

Policy-holders and Representatives will kindly avail themselves of the facilities offered at the new office.

A. B. KRISHNA RAJA, Inspector, Udipi.

B. VITTAL RAU, Managing Director.

ಪ್ರಕಟಣೆ

ಇದೇ ತಾರೀಕು 21—9—1953ರಲ್ಲಿ ಉಡುಪಿಯ ತೆಂಕಪೇಟೆಯಲ್ಲಿ ನಮ್ಮ ಇನ್ಸ್‌ಪೆಕ್ಟರರ ಆಫೀಸೊಂದನ್ನು ತೆರೆಯಲಾಗಿದೆ ಎಂದು ತಿಳಿಸಲು ನಮಗೆ ಸಂತೋಷವಾಗುತ್ತದೆ.

ನಮ್ಮ ಪೊಲಿಸಿದಾರರೂ ಪ್ರತಿನಿಧಿಗಳೂ ನಮ್ಮ ಹೊಸ ಆಫೀಸಿನಲ್ಲಿ ದೊರೆಯಬಹುದಾದ ಸೌಕರ್ಯಾನುಕೂಲತೆಗಳ ಪ್ರಯೋಜನ ಪಡೆಯಬೇಕಾಗಿ ವಿನಂತಿ.

ಎ. ಬಿ. ಕೃಷ್ಣರಾಜ, ಇನ್ಸ್‌ಪೆಕ್ಟರ್, ಉಡುಪಿ.

ಬಿ. ವಿಟ್ಠಲ ರಾವ್, ಮೆನೇಜಿಂಗ್ ಡೈರೆಕ್ಟರ್.

ಸ್ಥಾಪನೆ: 1929.

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಮಂಗಳೂರು.

ಕೊಲೊಂಬೋ ಯೋಜನೆಯ ಹೊರನೋಟ

(೨ನೇ ಪುಟದಿಂದ)

ಆಸ್ಟ್ರೇಲಿಯಾ ಸರಕಾರವು ಆರು ವರ್ಷಗಳ ಅವಧಿಯಲ್ಲಿ ೫೧೨ ಲಕ್ಷ ಪವನುಗಳ ನೆರವು ನೀಡುವ ಆಶ್ವಾಸನೆ ಕೊಟ್ಟಿದೆ; ಮತ್ತು ಪ್ರಥಮ ವರ್ಷದಲ್ಲಿ ೮೭ ಲಕ್ಷ ಪವನುಗಳಷ್ಟು ಸಹಾಯ ಮಾಡ್ಯಸಿದೆ.

ಕೆನಡಾವು ಪ್ರಥಮ ವರ್ಷದಲ್ಲಿ ಭಾರತ ಪಾಕಿಸ್ತಾನಗಳ ಅಭಿವೃದ್ಧಿ ಯೋಜನೆಗಳಿಗೋಸ್ಕರ ೨೫೦ ಲಕ್ಷ ಡಾಲರುಗಳ ನೆರವನ್ನು ನೀಡಿತಲ್ಲದೆ, ಇಂಥದೇ ಸಹಾಯವನ್ನು ೧೯೫೨--೫೩ನೇ ವರ್ಷಕ್ಕೂ ಕೊಡಬೇಕೆಂದು ಪಾರ್ಲಿಮೆಂಟಿಗೆ ಶಿಫಾರಸು ಮಾಡುವ ನಿರ್ಣಯವನ್ನು ಅದು ಪ್ರಕಟ ಪಡಿಸಿತು.

ಬ್ರಿಟನಿನಿಂದ ಸಾಮಾನ್ಯವಾಗಿ ಸ್ಟರ್ಲಿಂಗ ಶಿಲ್ಕುಗಳನ್ನು ರಾಷ್ಟ್ರಕೂಟದ ದೇಶಗಳ ಉಪಯೋಗಕ್ಕೆ ಬಿಡುವ ಸಹಾಯ ದೊರೆತಿದೆ; ಇದಲ್ಲದೆ ಬ್ರಿಟನಿನ ನೇರವಾದ ಆಡಳಿತಕ್ಕೊಳಪಟ್ಟಿರುವ ವಸಾಹತುಗಳ ಅಭಿವೃದ್ಧಿಯ ಹೊಣೆಯನ್ನೂ ಅದು ಹೊತ್ತಿದೆ. ರಾಷ್ಟ್ರಕೂಟಕ್ಕೆ ಸೇರಿರದ ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ರಾಷ್ಟ್ರಗಳು ಈ ಯೋಜನೆಯ ಲಾಭ ಪಡೆಯಬೇಕೆಂದು ಆಶಿಸಿದಾಗ, ಈ ವಿಚಾರವನ್ನು ಬ್ರಿಟನು ಸಹಾನುಭೂತಿಯಿಂದ ಕಂಡಿರುವುದು ಮಹದುಪಕಾರವೇ ನಿಜ.

ನ್ಯೂಜೀಲೇಂಡು ಯೋಜನೆಯ ಪ್ರಥಮದ ಮೂರು ವರ್ಷಗಳಲ್ಲಿ ವರ್ಷಂಪ್ರತಿ ೧೦ ಲಕ್ಷ ಪವನುಗಳ ನೆರವು ಕೊಡುವುದಾಗಿ ಹೇಳಿದೆ.

ಅಮೇರಿಕಾವು ೧೯೫೦-೫೧ರಲ್ಲಿ ಸಲಹಾ ಸಮಿತಿಯ ಸದಸ್ಯ ರಾಷ್ಟ್ರಗಳಿಗೆ ಸುಮಾರು ೭ ಕೋಟಿ ಡಾಲರುಗಳಷ್ಟು ಹಣವನ್ನು ನೀಡಿತು. ೧೯೫೨ನೇ ಜೂನ್ ಮಾಸಾಂತ್ಯಕ್ಕೆ ಮುಗಿದ ವರ್ಷದಲ್ಲಿ ನೇರಾಗಿ ಬೇರೆ ಬೇರೆ ಸರಕಾರಗಳಿಗೆ ನೀಡಿದ ಸಹಾಯಧನವು ೧೫ ಕೋಟಿ ಡಾಲರುಗಳಷ್ಟಾಗಿರುತ್ತದೆ. ಅದಲ್ಲದೆ ೧೯೫೦ನೇ ಜೂಲೈಯಿಂದ ೨೮ ಕೋಟಿ ಡಾಲರುಗಳಷ್ಟು ಹಣವನ್ನು ಈ ಪ್ರದೇಶದ ರಾಷ್ಟ್ರಗಳಿಗೆ ಸಾಲರೂಪದಲ್ಲಿ ಅಮೇರಿಕಾ ನೀಡಿದೆ. ಇದರಲ್ಲಿ ಭಾರತಕ್ಕೆ ಗೋದಿಯ ರೂಪದಲ್ಲಿ ಕೊಟ್ಟ ೧೯ ಕೋಟಿ ಡಾಲರುಗಳ ನೆರವೂ ಸೇರಿದೆ.

ಜಾಗತಿಕ ಬೇಂಕು ಈ ಪ್ರದೇಶದ ರಾಷ್ಟ್ರಗಳಿಗೆ ಅಭಿವೃದ್ಧಿ ಕಾರ್ಯಕ್ಕೋಸ್ಕರ ಸಾಲಗಳನ್ನು ಕೊಟ್ಟಿದೆ.

೧೯೫೨ನೇ ವರ್ಷದ ಬಳಿಕ ದೊರೆತ ನೆರವಿನ ಬಗ್ಗೆ ಏನೆಂಬುದನ್ನು ಮುಂದಿನ ಸಭೆಯಲ್ಲಿ ಸಲಹಾ ಸಮಿತಿ ಒಪ್ಪಿಸುವ ವರದಿಯಿಂದ ತಿಳಿದುಕೊಳ್ಳಬಲ್ಲೆವು.

ತಾಂತ್ರಿಕ ಸೌಲಭ್ಯ

ತಾಂತ್ರಿಕ ಕ್ಷೇತ್ರದಲ್ಲಿ ಯೋಜನೆಯ ಆರಂಭದಿಂದ ೧೯೫೨ರ ಆಖೈರಿಗೆ ೧೫೫ ತಜ್ಞರನ್ನು ಹಿಂದುಳಿದ ಪ್ರದೇಶಗಳಿಗೆ ಕಳಿಸಲಾಗಿದೆಯೆಂದೂ ಈ ಪ್ರದೇಶದ ೮೪೭ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವ ಏರ್ಪಾಡಾಗಿದೆಯೆಂದೂ ಗೊತ್ತಾಗುತ್ತದೆ ಇದಕ್ಕೆಲ್ಲ ಒಟ್ಟಿಗೆ ೧೭ ಲಕ್ಷ ಪವನುಗಳ ಕರ್ಚು ಬರುತ್ತದೆ.

ತಜ್ಞರನ್ನು ಸಿಂಹಳ, ಪಾಕಿಸ್ತಾನ,ಭಾರತ, ಮಲಯಾ, ಉತ್ತರ ಬೋರ್ನಿಯೋ ಮತ್ತು ಸಿಂಗಾಪುರಗಳಿಗೆ ಕಳಿಸಲಾಯಿತು. ಭಾರತ, ಪಾಕಿಸ್ತಾನ. ಸಿಂಹಳ, ಇಂಡೋನೇಶಿಯಾ, ಮಲಯಾ,ಥೈಲೇಂಡು, ಫಿಲಿಪ್ಪೈನ್ಸ್, ಸಾರವಾಕ, ಸಿಂಗಾಪುರ, ನೇಪಾಳ, ಉತ್ತರ ಬೋರ್ನಿಯೋ ಮತ್ತು ಬರ್ಮಾದ ವಿದ್ಯಾರ್ಥಿಗಳಿಗೆ ತರಬೇತಿಯ ಅನುಕೂಲತೆ ನೀಡಲಾಯಿತು ಇಂಥ ಸೌಕರ್ಯ ಒದಗಿಸಿದ ದೇಶಗಳು-ಆಸ್ಟ್ರೇಲಿಯಾ, ಬ್ರಿಟನು, ನ್ಯೂಜೀಲೇಂಡ್, ಕೆನಡಾ, ಭಾರತ ಮತ್ತು ಪಾಕಿಸ್ತಾನ. ತಜ್ಞರನ್ನು ಕಳಿಸಿ ನೆರವಾದ ರಾಷ್ಟ್ರಗಳು ಬ್ರಿಟನು, ಆಸ್ಟ್ರೇಲಿಯಾ, ನ್ಯೂಜೀಲೇಂಡ, ಕೆನಡಾ ಮತ್ತು ಭಾರತ.

ಸಲಹಾ ಸಮಿತಿಯು ಮುಂದಿನ ಸಭೆ ಈ ವರ್ಷದ ಜೂನ್ ಅಂತ್ಯದ ವರೆಗೆ ನಡೆದ ಪ್ರಗತಿಯನ್ನು ವಿವರವಾಗಿ ಪರಿಶೀಲಿಸಿ, ಕಾರ್ಯಕ್ರಮದ ಮುಂದಿನ ಸ್ವರೂಪವನ್ನು ಗೊತ್ತುಪಡಿಸುವುದು.

ಭೂಮಂಡಲದಲ್ಲಿ ದಕ್ಷಿಣ ಹಾಗೂ ಆಗ್ನೇಯ ಏಶಿಯಾ ಅತ್ಯಂತ ಹಿಂದುಳಿದ ಪ್ರದೇಶವೆಂದು ಸಂಯುಕ್ತ ರಾಷ್ಟ್ರ ಸಂಘದ ಸಂಶೋಧನೆಗಳು ಎತ್ತಿಹೇಳುತ್ತವೆ— ಇಲ್ಲಿ ಅಭಿವೃದ್ಧಿಯ ಪ್ರಯತ್ನ ಕೈಗೂಡುವ ಆವಶ್ಯಕತೆಯ-ಎಂಬಂಬಲ್ಲಿ ಭಿನ್ನಾಭಿಪ್ರಾಯವಿಲ್ಲ. ಕೊಲೊಂಬೋ ಯೋಜನೆ ಇಂಥ ಪ್ರಯತ್ನದಲ್ಲಿ ಆಸ್ಥೆ ವಹಿಸಿರುವುದು ಅನುಕರಣೀಯ ವಿಚಾರ.

(೩ನೇ ಪುಟದಿಂದ)

ಕರ್ನೂಲದ ಮಾರ್ಗವಾಗಿಯೇ ರಚಿಸಬೇಕೆಂಬ ನಿರ್ಣಯವಾದರೆ ಮಾತ್ರ, ಸೇತುವೆ ರಚನೆಯ ಪ್ರಶ್ನೆಯನ್ನು ಪುನಃ ವಿಮರ್ಶಿಸಬೇಕಾಗುವುದು. ಈ ವಿಷಯದಲ್ಲಿ ಆಂಧ್ರದ ಸರಕಾರವನ್ನು ಕೇಳಲಾಗುವುದು ಎಂದು ಮಂತ್ರಿಗಳು ತಿಳಿಸಿದರು.

ಮಂಗಳೂರು-ಹಾಸನ ರೈಲ್ವೆ ಮಾರ್ಗದ ಪ್ರಾರಂಭಿಕ ಇಂಜೀನಿಯರಿಂಗ್ ಮತ್ತು ಟ್ರಾಫಿಕ್ ಸರ್ವೇಗಳನ್ನು ಬರುವ ತಿಂಗಳಲ್ಲಿ ತೊಡಗಲಾಗುವುದೆಂದು ಶ್ರೀ ಸಿದ್ಧ ನಂಜಪ್ಪನವರಿಗೆ ಅಲಗೇಶನ್ನರು ತಿಳಿಸಿದರು. ವಿಮಾನಮೂಲಕ ಪರೀಶಿಲನೆ ನಡೆಸುವ ಸಾಧ್ಯಾಸಾಧ್ಯತೆಯನ್ನು ವಿಚಾರಾಧೀನವಾಗಿದೆಯೆಂದೂ ಸರ್ವೆ ವರದಿಗಳು ಬಂದನಂತರ ಅಂತಿಮ ನಿರ್ಣಯ ಕೈಗೊಳ್ಳಲ್ಪಡುವುದೆಂದೂ ಮಂತ್ರಿಗಳು ಹೇಳಿದರು

ಯಥೇಷ್ಟ ಪೂರೈಕೆ

ಈ ಆಗಸ್ಟ ತಿಂಗಳ ಮಧ್ಯದಿಂದ ಉತ್ತರ ಮತ್ತು ಪೂರ್ವ ರೈಲ್ವೆಗಳ ಬ್ರಾಡಗೇಜ ಮಾರ್ಗದಲ್ಲಿ ಹಾಗು ದಕ್ಷಿಣ ರೈಲ್ವೆಯ ಮೀಟರಗೇಜ ಮಾರ್ಗದಲ್ಲಿ ವಾಗಿನುಗಳ ಪೂರೈಕೆ ಬೇಡಿಕೆಯನ್ನು ಮೀರಿಸಿದೆ ಎಂದು ಅಲಗೇಶನ್ನರರು ಹೇಳಿದರು. ಕಲ್ಲಿದ್ದಲನ್ನು ಸಾಗಿಸಲು ಗಣಿಗಳಿಗೆ ಸಾಕಷ್ಟು ವಾಗೀನುಗಳು ಕೊಡಲಾಗಿವೆ. ದೇಶೀಯ ಉದ್ದಿಮೆಗಳಿಗೆ ಪ್ರತಿ ವರ್ಷ ೮೦೦೦ ಹೊಸ ವಾಗೀನುಗಳನ್ನು ಪೂರೈಸಲು ಹೇಳಿದ್ದು, ಅವುಗಳ ಪೂರೈಕೆಯೂ ಸರಾಗವಾಗಿ ನಡೆದಿದೆ ಎಂದವರು ವಿವರಿಸಿದರು.

ಶ್ರೀಮತಿ ವ್ಯಾಯೊಲೆಟ ಅಲ್ವ್ಟರ ಪ್ರಶ್ನೆಗುತ್ತರವಾಗಿ ಅಲಗೇಶನ್ನರು ರೈಲ್ವೆಗಳಲ್ಲಿ ವೈದ್ಯಕೀಯ ಚಿಕಿತ್ಸೆಯ • ನಿಯಮಗಳನ್ನು ಈಗ ಸ್ವಲ್ಪಮಟ್ಟಿಗೆ ಬದಲಿಸಲಾಗಿದೆಯೆಂದೂ ಮಹಿಳಾ ಕೆಲಸಗಾರರಿಗೆ ಅದರನ್ವಯ ಮೂರು ವರ್ಷಕ್ಕೊಮ್ಮೆ ಮಾತ್ರ ಹಿಂಗೆಯ ಸೌಲಭ್ಯ ದೊರಕುವುದೆಂದೂ ತಿಳಿಸಿದರು. ಸಿವಿಲ್ ವಿಭಾಗದಲ್ಲಿಯ ನಿಯಮಗಳಿಗೆ ಸರಿಹೋಗುವಂತೆ ಈ ಬದಲಾವಣೆ ಮಾಡಲಾಯಿತೆಂದರು. ಶ್ರೀ ಸಿ. ಜಿ. ಕೆ. ರೆಡ್ಡಿಯವರು ಇದು ಕುಟುಂಬ ಯೋಜನೆಯ ಪ್ರಯತ್ನವೋ ಎಂದು ಪ್ರಶ್ನಿಸಲು ಸಭಾಪತಿ ರಾಧಾಕೃಷ್ಣನ್ನರು "ಅಲ್ಲ ಸ್ತ್ರೀಯರು ಮತ್ತು ಮಕ್ಕಳ ಆರೋಗ್ಯದೃಷ್ಟಿಯೇ ಇಲ್ಲಿದೆ" ಎಂದರು. ಖಾಸಗಿ ಉದ್ದಿಮೆ ಮತ್ತು ಕಲ್ಲಿದ್ದಲಗಣಿಗಳಲ್ಲಿ ಹೆರಿಗೆಯ ಸೌಕರ್ಯಗಳನ್ನು ಅನಿರ್ಬಂಧವಾಗಿ ಕೊಡಬೇಕೆಂದು ಒತ್ತಾಯಿಸುವ ಸರಕಾರವು ರೈಲ್ವೆ ಶಾಖೆಯಲ್ಲಿ ಈ ತೆರನಾದ ನಿರ್ಬಂಧ ತಂದುದೇಕೆಂದೂ ಇಡೀ ರಾಷ್ಟ್ರದಲ್ಲಿ ಒಂದೇ ತರದ ನಿಯಮಗಳು ಏಕಿಲ್ಲವೆಂದೂ ಶ್ರೀ ಘೋಷರು ಕೇಳಿದರು. ಇದಕ್ಕೆ ಮಂತ್ರಿಗಳಿಂದ ಉತ್ತರ ಬರಲಿಲ್ಲ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ. C. ನಂಬ್ರ 481/1953
ಸಾಹೇಬ ದಿವಾನ ಕೂಡ 2 ಜನ ೧
ವಾದಿ ೨.

ಪ್ರತ್ತು

ತೇಜ ಪೂಜಾರಿ ಕೂಡ 8 ಜನರು
-ಪ್ರತಿವಾದಿರು.

1ನೇ ಪ್ರತಿವಾದಿ ತೇಜ ಪೂಜಾರಿ, 2ನೇ ಪ್ರತಿವಾದಿ ಕೃಷ್ಣಪ್ಪ ಪೂಜಾರಿ, 3ನೇ ಪ್ರತಿವಾದಿ ಸುಜೀವಿ ಪೂಜಾರಿ, 5ನೇ ಪ್ರತಿವಾದಿ ವೋಣಪ್ಪ ಪೂಜಾರಿ, 6ನೇ ಪ್ರತಿವಾದಿ ಸೀನಪ್ಪ ಪೂಜಾರಿ, 7ನೇ ಪ್ರತಿವಾದಿ ಫಾ ಪೂಜಾರಿ, 8ನೇ ಪ್ರತಿವಾದಿ ಕಾಂತಪ್ಪ ಪೂಜಾರಿ ಕೂಡ 7 ಜನರಿಗೆ:-

ವಾದಿಗಳು ದಾವಾ ಆಸ್ತಿಯ ಬಾಬ್ತು ಕಳೆದ ಸಂದಿನ ಸಂ... ದ ಮೂಲಗೇಣಿ ಮತ್ತು ಬಡ್ಡಿ ಕೂಡ ವಸೂಲು ಮಾಡುವ ಬಗ್ಗೆ ... ದಾಖಲು ಮಾಡಿದ ಮೋಕದ್ದಮೆಯು ತಾ 9-10 53 ಕ್ಕೆ ಅಮೀನರಿಗೆ ಇಟ್ಟಿರುವುದರಿಂದ, ಅದ್ರಿ ದಿನ ಹಗಲು ಘಂಟೆ 10 45ಕ್ಕೆ ಈ ಕೋರ್ಟಿನ ವಂತೆ ಹಾಜರಾಗಿ, ನಿಮ್ಮ ಆಕ್ಷೇಪಗಳಿದ್ದರೆ, ಅವುಗಳನ್ನು ಉದಕರಿಸಬೇಕಾಗಿಯೂ, ತಪ್ಪಿದ್ದ ನಿಮ್ಮನ್ನು ಏಕಪಕ್ಷವಾಗಿ ಸದ್ರಿ ದಾವೆಯನ್ನು ತೀರ್ಮಾನ ಮಾಡಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

(By order of Court)
K. Vittal Nayak.
Vakil for Plffs.
Udipi, 19-9-53.

Wanted two H. E. trained lady teachers to work in Kunjar Girija H. E. School and Ganapathi Ele. School Kurkal. The posts are temporary. Candidates must be prepared to live in the School Zones. Apply to the manager before 30-9-53. Copy of the application, to be sent to the deputy Inspector, Udipi South range.

Kunjargiri. K. G. SHETTY,
20-9-53. *Manager.*



Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**
ಜುಮ್ಲಾ ವಹಿವಾಟು .... ,, **60,50,000**

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ.ಎ.ಬಿ.ಯಲ್., ವಕೀಲ್,
ಬೇಂಕಿನ ಡೈರಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಮಿಶ್ರಣವುಳ್ಳ ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ. ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೪ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಲ್ಲಿ ಕೇಳಿರಿ.



ಅನಾದಿಕಾಲದಿಂದಲೂ ವರ್ಣವೆಂಬ ಶಬ್ದವು ಉಪಯೋಗಿಸಲ್ಪಟ್ಟಿದೆ. ಒಂದೊಂದು ಸಮಯ ಒಂದೊಂದು ಕಡೆಯಲ್ಲಿ ಒಂದೊಂದು ಅರ್ಥದಲ್ಲಿ ಜನರದನ್ನು ಉಪಯೋಗಿಸುತ್ತಿದ್ದರು. ಕೆಲವು ಸಮಯ ಒಂದು ಭಾಷೆ ಮಾತಾಡುವ ಅರ್ಥದಲ್ಲೂ ಕೆಲವು ಸಮಯ ಒಂದು ರಾಷ್ಟ್ರದವರೆಂಬ ಭಾವನೆಯಲ್ಲೂ ಕೆಲವು ಸಮಯ ಒಂದು ಜನಾಂಗವೆಂಬ ಅರ್ಥದಲ್ಲೂ ಕೆಲವು ಕಡೆಗಳಲ್ಲಿ ಒಂದು ಜಾತಿಯವರೆಂಬ ಅರ್ಥದಲ್ಲೂ ಹೀಗೆ ನಾನಾ ಅರ್ಥಗಳನ್ನು ಕಟ್ಟಿ ಉಪಯೋಗಿಸಿ ಅನರ್ಥವನ್ನು ಸಹಾ ಕೊಟ್ಟಿರುವರು. ಹೀಗಾಗಿ ಅರ್ಥಭೇದದ ವಾದ ವಿವಾದಕ್ಕೆ ಎಡೆಯಾಗಿ ಶಬ್ದವು ತರ್ಕದ ಪೋಷಣೆಗಳೊಳಗೆ ಮುಸುಕು ಇಡಕ್ಕೆ ಯಾವಾದರೊಂದು ನಿರ್ದಿಷ್ಟ ಅರ್ಥವಿದೆಯೊ ಇಲ್ಲವೊ ಎಂಬ ಸಂಶಯವು ನಮ್ಮಲ್ಲಿ ಮೂಡಿ ಬರುತ್ತದೆ.

ಈ ಶಬ್ದದ ನಿಜವಾದ ಸ್ಥಾನವು ಪ್ರಾಣಿಶಾಸ್ತ್ರ ಮಾನವ ವಿಜ್ಞಾನಗಳ ವಿಷಯವಾದರೂ ಇತರ ಸಮಾಜ ಶಾಸ್ತ್ರಗಳಲ್ಲಿ ಸಹಾ ತಲೆಹಾಕಿದೆ. ಕಾರಣಾಂತರದಿಂದ ಇತ್ತೀಚೆಗೆ ಕೆಲವು ರಾಷ್ಟ್ರಗಳಲ್ಲಿ ಮುಖ್ಯವಾಗಿ ಜರ್ಮನಿಯಲ್ಲಿ ರಾಜಕೀಯ ರಂಗದಲ್ಲಿ ಬೇರೂರಿ ತನಗೆ ಮಿಗಿಲಾದ ಪ್ರಾಮುಖ್ಯತೆಯನ್ನು ಹೊಂದಿ ಜನರಂಜನೆಗೆ ಪಾತ್ರವಾಗಿದೆ. ಇದರಿಂದುಂಟಾದ ಗೊಂದಲ ಮತ್ತು ಅಪಾಯದಿಂದ ಲೋಕವನ್ನು ತಲೆ ತಗ್ಗಿಸಿ ... ಈ ಕಾರಣದಿಂದ ವರ್ಣಭೇದ ... ಪರಿಶೀಲಿಸಬೇಕಾಗಿದೆ.

ಈ ಕುರಿತು ನಾವು ವಿಮರ್ಶಿಸುವಾಗ ಕೇವಲ ಶಾಸ್ತ್ರೀಯ ರೀತಿಯಿಂದ ಮತ್ತು ವರ್ಣಭೇದದ ಕಲ್ಪನೆಯ ತತ್ವದ ದೃಷ್ಟಿಯಿಂದ ಈಗೆ ಎರಡು ವಿಧದಿಂದ ಪ್ರತ್ಯೇಕಿಸಿ ನೋಡಬೇಕಾಗಿದೆ. ಎರಡನೆ ಹೇಳಿದ ರೀತಿಯಿಂದ ಪರೀಕ್ಷಿಸ ... ಕಷ್ಟ ಮತ್ತು ಸಾಪೇಕ್ಷ ಸಂದೇಹ ಹೇಳಬೇಕು. ಮಾನವರು ಪ್ರಥಮ 'ಯಾವ ವರ್ಣದವರು ಮತ್ತು ಯಾವಾಗ, ಎಲ್ಲಿ ಜನನಕ್ಕೆ ಬಂದರು ಎಂಬುವರ ಕುರಿತು ಶಾಸ್ತ್ರಜ್ಞರು ಒಂದು ನಿರ್ಣಯಕ್ಕೆ ಇನ್ನೂ ಬಂದಿಲ್ಲ. ಮಾನವರು ಒಂದೇ ಕಡೆಯಲ್ಲಿ ಹುಟ್ಟಿದರೋ ಅಥವಾ ಬೇರೆ ಬೇರೆ ಕಡೆಗಳಲ್ಲಿ ಹುಟ್ಟಿದರೋ ಒಂದೇ ಸಮಯದಲ್ಲಿ ಹುಟ್ಟಿದವರೋ ಅಥವಾ ಒಂದೇ ಕುಟುಂಬದಲ್ಲಿ ಹುಟ್ಟಿ ಇತರ ಕಡೆಗಳಿಗೆ ಸ್ಥಾನಾಂತರಿಸಿ ಅಲ್ಲಿ ಅವರಲ್ಲಿ ತೋರಿಬರುವ ಭಿನ್ನತೆಗಳನ್ನು ಹೊಂದಿದರೋ ಎಂಬುವರ ಕುರಿತು ಸಹಾ ಶಾಸ್ತ್ರಜ್ಞರು ಏಕಮತವಾದ ನಿರ್ಣಯಕ್ಕೆ ಬರಲಿಲ್ಲ.

ಅನೇಕ ತಜ್ಞರ ಅಭಿಪ್ರಾಯವು ಮಾನವ ಜಾತಿಯಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಸಂತಾನವಿರುವನು. ಕೆಲವು ಮತಗಳು ಸಹಾ ... ಮಾನವರ ಮೂಲಸ್ಥಾನವು ಮಧ್ಯ ಏಷ್ಯ ಪ್ರದೇಶದಲ್ಲಿ ಹೋ, ಇಂಡಿಯದಲ್ಲಿಯೋ ಅಥವಾ ಸಮುದ್ರಗತವಾದ "ಲೆಮೂರಿಯ" ವೆಂಬ ದೇಶದಲ್ಲಿಯೊ ಇದೆಯೆಂದೂ ಅಲ್ಲಿಂದ ಆಹಾರಕ್ಕಾಗಿ ತಮ್ಮ ವಸತಿಯನ್ನು ಬಿಟ್ಟು ಬೇರೆ ಕಡೆಗಳಿಗೆ ಹೋಗಿ ಅಲ್ಲಿಯ ಹವಾಗುಣ ವಾತಾವರಣಗಳಿಂದ ಬದಲಾವಣೆ ಹೊಂದಿ ವರ್ಣ ಭಿನ್ನತೆಯನ್ನು ಪಡೆದಿರುವರು. ಕೆಲವರು ಭೂಮಿಯ ಆದಾಪೂರ್ವದಲ್ಲಿ ಒಂದೇ ಖಂಡವಾಗಿದೆ. ... ಯುಗಾಂತರಗಳ ಒಂದೆ ಖಂಡ ತುಂಡಾಗಿ ಹೋಗಿದೆ ... ಅಸ್ಸವ ದಕ್ಷಿಣ ಮತ್ತು ಪೂರ್ವದ ದ್ವೀಪಗಳೆಲ್ಲಾ ಅದಕ್ಕೆ ಸೇರಿವೆ ಎನ್ನುವರು. ಹಾಗೆಯೇ ಆಫ್ರಿಕ ಮತ್ತು ಅಮೇರಿಕಗಳೂ ಇದಕ್ಕೆ ಸೇರಿದ್ದವು ಎನ್ನುವರು. ... ನಾಗರಿಕತೆ ಮತ್ತಿತರ ಕಾರಣಗಳಿಂದ ಇದಕ್ಕೆ ಆಧಾರವಾಗಿ ತೋರಿಸುವರು. ಅಟ್ಲಾಂಟಿಕ್ ಎಂಬ ರಾಷ್ಟ್ರವು ಸಮುದ್ರಗತವಾಗಿ ಐರೋಪ್ಯ ಮತ್ತು ಅಮೇರಿಕಕ್ಕಿರುವ ... ಉತ್ತರ ಅಮೇರಿಕದಲ್ಲಿ ... ರಷ್ಯ ಅಮೇರಿಕ ಜಾನಾಂಗಗಳು ಒಂದು ಕಾಲದಲ್ಲಿ ಕೂಡಿರುವವು ಎನ್ನುವರು. ಈ ವಿಷಯ ಹೇಗೆಂದು ನಮಗೆ ಹೇಳಲು ಸಾಧ್ಯವಿಲ್ಲ. ಮಾನವರ ಮೈಬಣ್ಣಗ

"ವರ್ಣಭೇದದಲ್ಲಿ ನಿಜಾಂಶವಿದೆಯೆ"?

ಸಿ. ಎಚ್. ಶೆಟ್ಟಿ.

ಳನ್ನು ಹೊಂದಿ ಮೂರು ವರ್ಣದವರಿರುವರೆಂದು ಹೇಳುವರು: ಕಪ್ಪುವರ್ಣದವರನ್ನು ನಿಗ್ರೋಯಿಡ್ (Negroid) ಬಿಳಿವರ್ಣದವರನ್ನು ಕೊಕೇಸ್ಯಿಯನ್ (Caucasion) ಹಳದಿ ವರ್ಣದವರನ್ನು ಮೊಂಗೊಲೋಯಿಡ (Mongoloid) ಎಂದು ಕರೆಯುವರು.

ಅಮೇರಿಕದ ನೆಚುರಲ್ ಹಿಸ್ಟ್ರಿ ಮ್ಯೂಸಿಯಮ್ಸ್‌ನ (Natural History Museum) ಪರವಾಗಿ ಮಧ್ಯ ಏಷ್ಯದ ಶೋಧಕ ಮಂಡಲದವರೊಡನೆ ಭಾಗ ವಹಿಸಿದ ರೋಯಿ ಚಾಪ ಮೇನ್ ಎಂಡ್ರೂಸರು (Roy chapman Andrews) ಮತ್ತು ಇದೇ ರೀತಿಯ ಶೋಧಕರಾದ ಹೆನ್ರಿ ಓರ್ಸ್‌ಬೋರ್ನ ಫೇಯರ್‌ಫೀಲ್ಡ (Henry Osborne Fairfield) ಇವರುಗಳ ಅಭಿಪ್ರಾಯವೆಂತೆಂದರೆ ಮಾನವರು ಒಂದೇ ಕಡೆಯಲ್ಲಿ ಉದ್ಭವಿಸಿದವರೆಂದು ಕಾಣುವದು. ಗೋಬಿಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಇವರ ಫಲಸತ್ತಾದ ಸ್ಥಳವಾಗಿದೆ. ಭೂಮಿಯ ಉಬ್ಬಿದ (Terrestrial Upheavel) ದೆಸೆಯಿಂದ ನದಿಗಳು ಕಾಣಿಸಿದವು. ಈ ರೀತಿ ಅನೇಕ ಸಲ ನಡೆದು ಒಂದು ಸಲ ಹಿಮಾಚಲವು ಮೇಲೆ ಬಂತು. ಇನ್ನೊಂದು ಸಲ ಅಲ್ಟಾಯಿ ಪರ್ವತ ಇನ್ನೊಂದು ಸಲ ಮೊಂಗೋಲಿಯ ಪರ್ವತಗಳು ಹೀಗೆ ಫಲಸತ್ತಾದ ಸ್ಥಳವೆಲ್ಲಾ ನಾಶವಾಗಿ ದೊಡ್ಡ ಪ್ರಾಣಿಗಳು ಬೇರೆ ಕಡೆಗೆ ಹೋಗಲಾರದೆ ಅಪಾಯವಿಲ್ಲದೆ ಸತ್ತುಹೋದವು ಎಂದು ಅಲ್ಲಿ ದೊರಕಿದ ಕುರುಹುಗಳಿಂದ ತಿಳಿದರು. ದೊಡ್ಡ ಜೀವಿಗಳ ಅಟ್ಟೆಗಳು ಮರಗಳ ತುಂಡುಗಳು ಮತ್ತು ನೆಲದಡಿಯಲ್ಲಿ ನದಿಗಳ ದಾರಿ ಇದ್ದುದನ್ನೆಲ್ಲಾ ಕಂಡರು. ಮಾನವರ ಮೂಲಸ್ಥಾನವು ಇಲ್ಲಿಯೇ ಇರಬೇಕು ಮತ್ತು ಎರಡು ನೂರು ಮಿಲಿಯ ವರುಷಗಳ ಹಿಂದೆ ಮಾನವರು ಇಲ್ಲಿ ವಾಸವಾಗಿರಬೇಕೆಂದು ಅಭಿಪ್ರಾಯಪಟ್ಟರು. ಸುಮಾರು ಆರು ಫೀಟು ಎತ್ತರದ ಒಬ್ಬ ಉದ್ದ ಹಿರಿದ ಪ್ರಾಚೀನ ಮಾನವನ ಶರೀರದ ಅಟ್ಟೆಯನ್ನು ಸಹಾ ಕಂಡರು. ಡಾಕ್ಟರ್ ಜಫ್ರೀಸ್ (Dr. Jeffreys) ಎಂಬ ಮಾನವ ವಿಜ್ಞಾನಿಯು ಆಫ್ರಿಕದ ಜೋಹನ್ಸ್‌ಬರ್ಗ್ ವಿಟ್‌ವಾಟರ್

ಸ್ರಾಂಡು ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವಾಗ ಪ್ರಾಚೀನದಲ್ಲಿ ಮಾನವರ ಮೈಬಣ್ಣವು ಕಪ್ಪು ಎಂದಿರುವರು.

ಇದು ಏನೇ ಇರಲಿ. ಎರಡು ಮುಖ್ಯ ಕಾರಣಗಳಿಂದ ನೋಡುವಾಗ ಮಾನವರು ಬಹುಶಃ ಆದಿಯಲ್ಲಿ ಒಂದೇ ಕುಟುಂಬದಿಂದ ಹುಟ್ಟಿ ಬೆಳೆದಿರಬೇಕೆಂಬುವಕ್ಕೆ ಆಧಾರಗಳಾಗಿ ಕಾಣುವವು. ಭೂಮಿಯ ಅನೇಕ ಕಡೆಗಳಲ್ಲಿ ದೊರೆತ ಪ್ರಾಚೀನ ಮಾನವರ ಎಲುಬಿನ ಅಟ್ಟೆಗಳನ್ನು ಪರೀಕ್ಷಿಸುವಾಗ ಅವುಗಳ ಅವಯವ ಮತ್ತು ವೈಶಿಷ್ಟ್ಯಗಳು ಒಂದೇ ಮಾದರಿಯಾಗಿರುವವು. ಈ ವಿವಿಧ ಯಾವ ವರ್ಣದವರಾದರೂ ಇನ್ನೊಂದು ವರ್ಣದವರೊಡನೆ ಸಂಯೋಗ ನಡೆಸಿದಲ್ಲಿ ಗರ್ಭೋತ್ಪತ್ತಿಯಾಗುವದು. ಪ್ರಾಣಿಶಾಸ್ತ್ರಜ್ಞರು ಮಾನವರೆಲ್ಲರೂ ಮೂಲದಲ್ಲಿ ಒಂದೇ ಕುಲದವರೆಂದರು.

ಎಲುಬಿನ ಅಟ್ಟೆಗಳಲ್ಲಿ ಕೆಲವು ಭೌತಿಕ ಗಳನ್ನು ನೋಡುವಾಗ ಕೆಲವು ಭಿನ್ನತೆಗಳನ್ನು ಮುಖ್ಯವಾಗಿ ತಲೆಬುರುಡೆಗಳ ಆಕೃತಿಯಲ್ಲಿ ಕಂಡರು. ಅಲ್ಲದೆ ಎಲುಬಿನ ಅಟ್ಟೆಗಳಿಂದ ಕೂದಲು ಬಣ್ಣ ಮೈಬಣ್ಣ ತಿಳಿಯಲಸಾಧ್ಯ. ಮತ್ತು ಪರೀಕ್ಷೆಗೆ ಸಿಕ್ಕಿದ ಅಟ್ಟೆಗಳು ಯಾವ ಮಾನವರವೆಂದು ಅಲ್ಲವೊ ಎಂದು ದೃಢೀಕರಿಸಿ ಹೇಳಲು ಸಹಾ ಸಾಧ್ಯವಿಲ್ಲ. ಅವರಿಂದ ಅಲ್ಲಿಯಲ್ಲಿ ಸಿಕ್ಕಿದ ಅಟ್ಟೆಗಳಿಗೆ ಆಯಾಯ ಪ್ರದೇಶದ ಹೆಸರನ್ನಿಟ್ಟು ಕರೆದರು.

ಹೀಗೆ ಸಿಕ್ಕಿದ ಅಟ್ಟೆಗಳಲ್ಲಿ ಕಂಡುಬಂದ ಲೋಪದೋಷಗಳಿಂದ ಐರೋಪ್ಯದ ಅನುತ ರಾಷ್ಟ್ರಾಭಿಮಾನಿಗಳು, ವರ್ಣಭೇದದ ಕಥೆಯನ್ನು ನೆಯ್ದರು. ಪ್ರೊಫೆಸ್ಸರ ಮೇಕ್ಸ್‌ಮ್ಯುಲ್ಲರ ಎಂಬವರು ಇಂಡಿಯ ಮತ್ತು ಐರೋಪ್ಯದ ಭಾಷಾಜ್ಞಾನ ಪರಿಚಯದಿಂದ ಆರ್ಯರೆಂಬ ನಾಮ ಒಂದೊದಗಿಸಿದರು. ... ಎಂಬವರು ಆರ್ಯರ ವಿಕಸನ The Evolution of the Aryan Race ಎಂಬ ಗ್ರಂಥವನ್ನು ಬರೆದರು. ಒಕೆಯ ರಾಜಧಾನಿಯಲ್ಲಿ ಫ್ರೆಂಚ್ ರಾಯಭಾರಿಯಾದ ಕೌಂಟ್ ದಿ ಗೋಬಿನೋ Comte De Gobineau ಎಂಬವರು ... Inequality of

Races) ಎಂಬ ಅದ್ಭುತ ಗ್ರಂಥವನ್ನು ಬರೆದರು. ಇವರ ಗ್ರಂಥವೇ ನೀಟ್ಷೆ ಎಂಬವರ "ಸೂಪರಮೇನ್" (Superman) ಎಂಬ ಗ್ರಂಥಕ್ಕೆ ಉತ್ತೇಜಕವಾಯಿತೆನ್ನುವರು. ಅವರೆ ಇತರರು ವರ್ಣಭೇದವನ್ನು ಪ್ರಚಾರಿಸಿದರಲ್ಲಿ ... ಗೋಬಿನೋರವರು ಈ ಪಕ್ಷದ ಗುರುವಾದರು. ಅವರ ಗ್ರಂಥವೇ ವರ್ಣಭೇದದವರ ಬೈಬಲ್ ಆಗಿರುವದು. ಗೋಬಿನೋರವರ ಮತ ... ಇತರ ವರ್ಣದವರಿಗಿಂತ ಶ್ರೇಷ್ಠರು. ಬೇರೆಯವರು ಕೂದಲು ಕಣ್ಣು ... ಪ್ರತಿಬಿಂಬವಾದ ಬಿಳಿ ಜನರನ್ನು ಸೃಷ್ಟಿಸಿದನೆಂದರು. ಮಾನಸಿಕ ಸ್ಥಿತಿ ಗುಣಗಳು ಶಾರೀರಿಕ ಲಕ್ಷಣವನ್ನು ಹೊಂದಿಯದೆ. ... ಇದನ್ನು ... ಸಾಧ್ಯವಿಲ್ಲವೆಂದರು. ಅವರೆ ಮಾನವರ ಮೂಲಭೂತ ಪಕ್ಷವನ್ನು ... ಫ್ರೆಂಚ್ ರಾಷ್ಟ್ರದಲ್ಲಿ ಇವರ ತತ್ವಕ್ಕೆ ಮನ್ನಣೆ ಸಿಕ್ಕಲಿಲ್ಲ.

ಜರ್ಮನಿಯಲ್ಲಿ ... ಇವರ ... ಇಂಗ್ಲಿಷ್ ... ಸ್ಟುವಾರ್ಟ ಚೇಂಬರ್ಲೇನ್ ಎಂಬವರು (Houston Stewart Chamberlain) ಈ ತತ್ವವನ್ನು ... Anthropologist ... [illegible]

... Relativity ... [illegible]

... ಡಾಕ್ಟರ್ ಗೋಕ್ ... (Missing Link)

(ಮುಂದುವರಿಯುವುದು)

ಖಾತಿಬಿ ಸ್ವಾದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಜಾಗ್ರತೆ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್.

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಕನ್ನಡ.

ಫೋನು ನಂಬ್ರ 66

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ ೧೯೧೧)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ.

ಇಂದ

ನವಜೀವಾಮೃತ ಎಂಬ ಸೂತಿಕಾರಸಾಯನ

ಬಾಣಂತಿಯರ ನಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಶ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅನುಭವಾದ ಧುರಂಧರ ರಸಾಯನ.

ಪಟ್ಟಿಯ ಮಾಹಿತಿಗೆ - ಡಾ|| ಯಂ. ಪಿ. ಶಾಸ್ತ್ರಿ, ಜಿ. ಸಿ. ಐ. ಎಂ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಶಾಖೆ:— ಡಾ|| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ

ಕನ್ನಡ ಪ್ರತಿ ಗೆ 0-8-0

ಇಂಗ್ಲಿಷ್ ಪ್ರತಿ ಗೆ 0-8-0

ನವಯುಗ ಪ್ರೆಸ್ ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೨೪—೯—೫೩ರಿಂದ ತಾ. ೩೦—೯—೫೩ರ ವರೆಗೆ.

ಮೇಷ— ದೈವಾನುಗ್ರಹವು ಸಾಕಷ್ಟಿರುವುದಾದರೂ ನಿಮ್ಮ ಹೆಚ್ಚಿನ ಕಾರ್ಯಕಲಾಪಗಳು ಕೊನೆಗೊಳ್ಳದೆ ಅರ್ಧದಲ್ಲೇ ನಿಂತುಹೋಗುವ ಸಂಭವವಿದೆ. ವಿದ್ಯೋಪಜೀವಿಗಳಿಗೆ ನೌಕರಿಯಲ್ಲಿ ಪ್ರಗತಿ ಅರ್ಥಲಾಭಗಳು ಚೆನ್ನಾಗಿವೆ. ವ್ಯರ್ಥ ಪರ್ಯಟನಗಳು ಹೆಚ್ಚಬಹುದು. ರಾಜಕೀಯ ಕ್ಷೇತ್ರದಲ್ಲಿನ ನಿಮ್ಮ ಕಾರ್ಯಗಳು ಎಣಿಕೆಯಂತೆ ಸಿದ್ಧಿ ಸಲಿವೆ. ವಾತ ಪ್ರಕೋಪದಿಂದ ಸಂದು ಗೊಂದುಗಳಲ್ಲಿ ನೋವು ಕಾಣಿಸೀತು.

ವೃಷಭ— ಸಾಧಿಸಿದರೆ ಸಬಳ ನುಂಗಬಹುದೆಂಬ ಲೋಕೋಕ್ತಿಯಂತೆ ನೀವು ಧೈರ್ಯ ಸಾಹಸಗಳಿಂದ ಮುಂದೊತ್ತಿ ಆದಾವ ಕಾರ್ಯವನ್ನು ಮುಂದುವರಿಸಲಪೇಕ್ಷಿಸುವದಾದರೂ ದೈವವು ನಿಮಗೆ ಅನುಕೂಲವಾಗಿಯೇ ಪರಿಣಮಿಸುವದು. ಧನ ಜನ ಬಲವೂ ಸಾಕಷ್ಟು ಚೆನ್ನಾಗಿರುವುದು. ಗೃಹತಾಪತ್ರಯಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದ ನಿಮಗೆ ತಾ 24, 27, 28 ಈ ದಿನಗಳು ಇಷ್ಟಸಾಧಕಗಳಾಗಿವೆ.

ಮಿಥುನ— ಈ ವಾರದಲ್ಲಿ ನಿಮ್ಮ ದೇಹ ಸುಖಸ್ಥಿತಿಯಾದ ಬುಧನು ಸುಖಸ್ಥಾನದಲ್ಲಿ ಉಚ್ಚನಾಗಿರುವಕಾರಣ ದೈಹಿಕ ಮಾನಸಿಕ ಸುಖಶಾಂತಿಗಳಿಗೆ ಏನೊಂದೂ ಕೊರತೆಯುಂಟಾಗದು. ಸಂಸದ್ವ್ಯಾಗವೂ ಕೂಡ ಸಾಕಷ್ಟು ಉತ್ತಮವಾಗಿರುವದು. ವಿನಾಕಾರಣ ಕೆಲವರೊಡನೆ ಜಗಳವಾದೀತು. ಗೃಹಕೃತ್ಯ ವಿಚಾರದಲ್ಲಿ ಕೊಂಚ ಅವ್ಯವಸ್ಥೆಯೂ ತಲೆದೋರೀತು. ತಾ 27, 28 ಹೊರತಾಗಿ ಮಿಕ್ಕುಳಿದ ದಿನಗಳು ಪ್ರಶಸ್ತವಿದೆ.

ಕರ್ಕಾಟ— ದೈವವು ಕೊಂಚ ದುರ್ಬಲವಾಗಿರುವ ಕಾರಣ ಆದಾಯವು ಕಡಿಮೆಯಾಗುವದಲ್ಲದೆ ಖರ್ಚು ಆಯಕ್ಕಿಂತ ದ್ವಿಗುಣವಾಗಲಿದೆ. ಅದ್ದರಿಂದಲೇ ನಿಮ್ಮ ಬಂಧುಗಳಾಗಲೀ ಮಿತ್ರರಾಗಲೀ ಸದ್ಯ ನಿಮ್ಮ ಕಣ್ಣಿಗೆ ದೂರವಾಗಲಿರುವರು. ದೇಹ ಮನಸ್ಸುಗಳಿಗೆ ಸುಖ ನೆಮ್ಮದಿಯಿರದು, ಪ್ರಯಾಣದಲ್ಲಿ ನಾನಾತರದ ಕಷ್ಟ ನಷ್ಟಗಳುಂಟಾದಾವು. ತಾ 25, 26, 27, 28 ಈ ದಿನಗಳು ಉಳಿದ ದಿನಗಳಿಗಿಂತ ಲೇಸಾಗಿವೆ.

ಸಿಂಹ— ನಿಮ್ಮ ಭಾಗ್ಯವಿಂದು ಉತ್ತಮವಿರುವುದು. ನಿಮ್ಮ ಮನಃ ಸಂಕಲ್ಪಗಳೆಲ್ಲವೂ ಇಂದು ಕಾರ್ಯರೂಪಕ್ಕೆ ಬರಲಿವೆ. ಶತ್ರುಗಳೂ ಮಿತ್ರರಾಗುವರು. ಎಂತಹ ಮಹತ್ಕಾರ್ಯವೇ ಇರಲಿ ನಿಮ್ಮ ಭಾಗಕ್ಕೆ ತೃಣಸಮವೆನಿಸೀತು ಧನಲಾಭಪತಿಯ ಅನುಗ್ರಹದಿಂದಾಗಿ ನಿಮ್ಮ ಸಂಪತ್ತು ಉಚ್ಚಮಟ್ಟಕ್ಕೆ ಬರಲಿದೆ. ವಾರಾಂತ್ಯದ 4 ದಿನಗಳಲ್ಲಿ ಸುಖ ಲಾಭ ಸಂತೋಷ ನಾನಾರೀತಿಯಿಂದ ಧನಾಪ್ತಿಯೂ ಆಗಲಿದೆ.

ಕನ್ಯಾ— ಪ್ರಕೃತದ ಗೃಹಸ್ಥಿತಿಯು ನಿಮಗೆ ತೀರಾ ಪ್ರತಿಕೂಲವಿದೆ. ಈ ಹಿಂದೆ ನೀವೆಲ್ಲಿ ಪುರಸ್ಕಾರವನ್ನು ಹೊಂದುತ್ತಿದಿರೋ ಅಲ್ಲೇ ಇಂದು ತಿರಸ್ಕಾರವನ್ನು ಹೊಂದುವಂತಹ ಪ್ರಸಂಗ ಒದಗೀತು. ಖರ್ಚು ಮಿತಿಮೀರುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕುವಿರಿ. ಪಿತ್ತ ಪ್ರಕೋಪದಿಂದಾಗಿ ಆರೋಗ್ಯವು ಕೆಡಲಿದೆ. ಮಾತು ಮಾತಿಗೆ ಬೆಳೆದು ಕಲಹದಲ್ಲಿ ಪರ್ಯವಸಾನ ಹೊಂದೀತು. ತಾ. 24, 29, 30 ಇತರ ದಿನಗಳಿಗಿಂತ ಉತ್ತಮವಿದ್ದೀತು.

ತುಲಾ — ನಿಮ್ಮ ಧನಪತಿಯು ಲಾಭಸ್ಥಾನಗತನಾಗಿದ್ದು ಭಾಗ್ಯದಲ್ಲಿ ಬೃಹಸ್ಪತಿಯಿರೋಣದರಿಂದ ನಿಮ್ಮ ಪ್ರತಿಯೊಂದೂ ಕಾರ್ಯಕಲಾಪಗಳು ನಿರ್ವಿಘ್ನದಿಂದ ಕೊನೆಹೊಂದುವವಲ್ಲದೆ ನೀವು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನ ಫಲಲಾಭವಾಗಲಿದೆ ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಸಾಕಷ್ಟು ಹಣವನ್ನು ಸಂಗ್ರಹಿಸುವಿರಿ. ಆಹಾರ ದೋಷದಿಂದ,ದೇಹಾಲಸ್ಯ ಅಪ್ತಜನ ವಿಯೋಗದಿಂದ ದುಃಖಿತರಾದ ನಿಮಗೆ ವಾರಾದಿಯ 3 ದಿನಗಳಲ್ಲಿ ಸುಖ ಸಂತಸಗಳು ಲಭಿಸುವವು

ವೃಶ್ಚಿಕ— ಏಳೂವರೆ ಶನಿಯು ವ್ಯಯಸ್ಥಾನದಲ್ಲಿದ್ದು ಹೆಚ್ಚಿನ ಶೋಕಾನರ್ಥಗಳಿಗೆ ಗುರಿಮಾಡಲಿರುವನು. ಮಿತಭಾಷಿಗೂ ಕೂಡ ವಾಕ್ಕಲಹವು ತಪ್ಪಲೊಲ್ಲದು. ಆದರೂ ಕರ್ಮ ಲಾಭಪತಿಗಳು ಲಾಭಗತರಿದ್ದು ಬುಧನು ಉಚ್ಚನಾಗಿರುವುದರಿಂದ ನಿಮ್ಮ ಪ್ರತಿಯೊಂದು ಕಾರ್ಯವೂ ಸಫಲವಾಗುವದು, ಹಣದ ಬಿಕ್ಕಟ್ಟು ಕಾಣಿಸಲಾರದು. ರಾಜಕೀಯ ರಂಗದಲ್ಲಿ ವಿಜಯವಿದೆ. ತಾ 25, 26, 27, 28 ಸುಖಭೋಗ ಲಾಭಗಳು ಲಭಿಸಲಿವೆ.

ಧನು— ಕುಜೇತರ ಸಕಲ ಗ್ರಹರ ಅನುಗ್ರಹ ಸಂಪನ್ನರಾದ ನಿಮಗೆ ಈ ವಾರದಲ್ಲಿ ಹಲವಾರು ಕೆಲಸದಿಂದ ಧನಲಾಭವಾಗುವದು, ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ. ರಾಜಕೀಯ ಕ್ಷೇತ್ರದಲ್ಲಿನ ಕಾರ್ಯಗಳು ತಮ್ಮಂತೆ ಕೊನೆಹೊಂದಲಿವೆ ಪಶುಭೃತ್ಯಧನ ಧಾನ್ಯ ಜನಸಂಪನ್ನರಿಂದ ನಿಮಗೆ ಯಾವ ಬಾಗದಲ್ಲೂ ಕೊರತೆ ಕಾಣಿಸದು. ವಾರಾಂತದ 4 ದಿನಗಳಲ್ಲಿ ನಿಮ್ಮ ಸರ್ವಾಭೀಷ್ಟಗಳು ಸಿದ್ಧಿಸಲಿವೆ.

ಮಕರ— ಸದ್ಯ ನಿಮ್ಮ ದುರ್ದೈವವು ವಿಶೇಷವಾಗಿ ಪೀಡಿಸಲಿವೆ. ಸುಖಲಾಭ ಪತಿಯಾದ ಅಂಗಾರಕನು ಅನಿಷ್ಟಸ್ಥಾನವಾದ ಅಷ್ಟಮದಲ್ಲಿ ರೋಣದರಿಂದ ನಿಮ್ಮ ಆರ್ಥಿಕಸ್ಥಿತಿಗಳೂ ಮನಶಾಂತಿಗೂ ವಿಶೇಷ ಹಾನಿಯಾಗುವುದಲ್ಲದೆ ಶತ್ರುಜನರಿಂದ ಹೆಚ್ಚಿನ ಪೀಡೆಗಳೂ ಬರಲಿವೆ. ಮನಶ್ಚಾಂಚಲ್ಯದಿಂದಾಗಿ ಯಾವ ಕಾರ್ಯವನ್ನು ಸಾಧಿಸಲಾರಿರಿ. ವಾತದೋಷದಿಂದ ಆರೋಗ್ಯ ಕೆಡಲಿದೆ. ತಾ 24, 29, 30 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲ.

ಕುಂಭ— ಹೆಚ್ಚಿನ ಗ್ರಹರು ಅನಿಷ್ಟಸ್ಥಾನದಲ್ಲಿದ್ದರೂ ಸುರಗುರುವಾದ ಬೃಹಸ್ಪತಿಯು ತ್ರಿಕೋಣದಲ್ಲಿದ್ದು ಸಂಪೂರ್ಣದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವುದರಿಂದ ನಿಮ್ಮ ಪ್ರತಿಯೊಂದು ಉದ್ಯಮ ವ್ಯವಹಾರಗಳೂ ನಿರ್ವಿಘ್ನದಿಂದ ಕೊನೆಹೊಂದುವವು. ದಿನಯಾಪನೆಗೆ ಬೇಕಷ್ಟು ಧನವನ್ನು ಸ್ವಯಂ ದುಡಿಯುವಿರಿ. ಲಾಟರಿ ಸಟ್ಟಾ ಮೊದಲಾದವುಗಳಿಂದ ಧನಪ್ರಾಪ್ತಿಯಾಗುವ ಯೋಗವಿದೆ ತಾ 25, 26 ಉಳಿದ ದಿನಗಳಿಗಿಂತ ಉತ್ತಮವಿವೆ

ಮೀನ— ನಿಮ್ಮ ತಲೆಗೆ ನಿಮ್ಮ ಕೈ ಎಂಬಂತೆ ಸದ್ಯ ನಿಮಗಾರ ಬೆಂಬಲವೂ ಲಭಿಸಲಾರದು. ಆದರೂ ಪರಾಶ್ರಯವಿಲ್ಲದೆ ಸ್ವಯಮೇವ ದುಡಿಯಲು ಶಕ್ತರಾದ ನಿಮಗೆ ಸಾಧಿಸಿದನ್ನ ಕಾರ್ಯಗಳಲ್ಲಿ ವಿಜಯವಿದೆ. ಬಂಧುವರ್ಗದವರ ಕೂಡೆ ಮನಸ್ತಾಪ ಹುಟ್ಟಾದೀತು. ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟವೊದಗೀತು. ಕಫ ದೋಷದಿಂದ ಆರೋಗ್ಯ ಕೆಡಲಿದೆ. ತಾ 24, 27, 28 ಈ ದಿನಗಳಲ್ಲಿ ಗೃಹಸುಖ ಭೋಗಲಾಭಗಳು ಲಭಿಸುವವು.

ಓದ ಬೇಕೆನಿಸಿದರೆ ಪೂರ್ತಿ ಓದದೆ ಬಿಡಲಾಗದ, ವಿನೋದದೊಡನೆ [illegible]ವನ್ನೂ ಹೆಚ್ಚಿಸುವ, ವಿವಿಧ [illegible] ಲೇಖಕರ ಓದಲೇ ಬೇಕಾದ [illegible] ಉತ್ತಮ ಪುಸ್ತಕಗಳು.

[illegible] ಕತೆಗಳು

[illegible] ವೈಚಿತ್ರ್ಯಗಳನ್ನು [illegible] ನಗಿಸುತ್ತಾ ನಿಮ್ಮನು [illegible] ಉತ್ತಮ ಕಥಾಸಂಗ್ರಹ ಬೆಲೆ ರೂ 1 4 0

ಪಂಚಕಜ್ಜಾಯ

[illegible] ಸಂಗ್ರಹ. ಬೆಲೆ ರೂ 1 8 0

[illegible]

[illegible] ಒಂದೊಂದು [illegible] ಬೆಲೆ ರೂ. 2 0 0

[illegible] ಕತೆಗಳು

[illegible] ಚಿತ್ತವೃತ್ತಿಯನ್ನು ಚಿತ್ರಿಸುವ [illegible] ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ ಬೆಲೆ ರೂ 2 0 0

ನಗೆನೋಟಗಳು

[illegible] ಬಿಡಿಸಿರುವ ವಿನೋದ ಚಿತ್ರಗಳ ಸಂಗ್ರಹ. ಬೆಲೆ ರೂ. 1 4 0

ಬಾಳಿನ ಬೆಡಗು

ಶ್ರೀ. ಯು. ನಾರಾಯಣ ಭಟ್ಟರು ಬರೆದ, ಬಾಳಿನ ಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ ಬೆಲೆ ರೂ. 1 4 0

[illegible] ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಷನ್ ಇದೆ.

ನವಭಾರತ ಪುಸ್ತಕ ಭಂಡಾರ,ಉಡುಪಿ [illegible] ನ್ಯೂಸ್ ಏಜೆಂಟ್ಸ್ ಬುಕ್ ಡಿಪ್ಪೊ, 6 E. ಪಿತಾ ಸ್ಟ್ರೀಟ್, ಫೋರ್ಟ್, ಮುಂಬೈ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು **ಈ ಹೊಟ್ಟೆನೋವನ್ನು** (Menstrual Stomack pain)ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ,ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಉಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ **ಕ್ಯಾಟಲಾಗ್ ಉಚಿತ.**

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ, ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.**(South India)

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೦-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪಡತಪ್ಪಿ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಖಾತರಾತು ಮುಂದಿಗೆ ಖಾತ್ರಿ ಗುಣವಾಗಿದೆ— ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, P.DS.(N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಇಲೆಕ್ಟ್ರಿಕ್ ಎಂಡ್ ರೇಡಿಯೋ ಕೈಪಿಡಿ

ರೂ. 15/-ಕ್ಕೆ ರೇಡಿಯೋ ತಯಾರಿಕೆಯನ್ನು ಕಲಿಯಿರಿ. ರೇಡಿಯೋ ರಿಪೇರಿ, ಮನೆಗಳಿಗೆ ವಾಯರಿಂಗ್ ಮಾಡುವ ಇತ್ಯಾದಿ ಇಲೆಕ್ಟ್ರಿಸಿಟಿಗೆ ಸಂಬಂಧಪ ಮಾಹಿತಿಯನ್ನು ಪಡೆದು ತಿಂಗಳಿಗೆ ರೂಪಾಯಿ 200/ ಸಂಪಾದಿಸಿರಿ. ಈ ಕೈಪಿಡಿಯ ಕ್ರಯ ರೂಪಾಯಿ 1/- ಟೈಲರಿಂಗ್ ಮತ್ತು ವಸ್ತ್ರಗಳನ್ನು ಕಟ್ ಮಾಡುವ ರೀತಿ ವಿಧಾನಗಳಿರುವ ಕೈಪಿಡಿಗೆ ರೂ. 3/-ಸುವಾಸನಾ ದ್ರವ್ಯ ತಯಾರಿಕೆಯ ಅನುಭವ ಕೈಪಿಡಿಗೆ ರೂ. 3-/- ಕಸೂತಿ ಎಂಬ್ರಾಯ್ಡರ್ ಮೆಶೀನಿಗೆ (ಮನೆಯ ಹೆಣ್ಣುಮಕ್ಕಳಿಗೆ ಪಾರಿತೋಷ) ರೂ. 6/- ಕಸೂತಿ ಚಿತ್ರಗಳಿರುವ ಪುಸ್ತಕಕ್ಕೆ ರೂ. 3/- ವಿ. ಪಿ. ಪಿ. ಖರ್ಚು ರೂ. 0-12-0 ಪ್ರತ್ಯೇಕ.

Hindustan Traders & Pablishers Ltd.,
(M. 2) KHURJA (city) E. I. Ry

Edited, Printed & Published By K. H. Shetty at the Navayuga Press, Udipi, S. India